KARNATAKA
STATE
ARCHIVES

ARS 34 APP 82

NAVAYUGA KANNADA WEEKLY

om 28/2/1952

Contd. from ROLL No 143

ARS 34 APP 82

NAVAYUGA KANNADA WEEKLY

om 28/8/1952

Contd. from ROLL No 143

ARS 34 APP 82

NAVAYUGA KANNADA
WEEKLY

rom 28/2/1952

Contd. from
ROLL No 143

Roll No. 144

Roll No

14Ä

ತಾರೀಕು 21-2-52 ರಿಂದ

ವಾರದ ಭವಿಷ್ಯ

ತಾರೀಕು 27-2-52 ವರೆಗೆ

ಮೇಷ:—ಮನೆಯಲ್ಲಿನ ಅವ್ಯವಸ್ಥೆಯಿಂದಾಗಿ ನಿಮ್ಮ ಕನವುನಗಳಿಗೆ ಸುಖ ನೆಮ್ಮದಿಗಳಿರವು. ಕಷ್ಟಪಟ್ಟು ದುಡಿದ ಹಣವು ದಿನಾಂತ್ಯದಲ್ಲಿ ಬರಿದಾಗುವದು. ಕೈಹಿಡಿದಾಕೆಯು ಜಗಳ ಗಂಟಿಯಾಗುವಳು. ಗುರುಹಿರಿಯರ ಅಗ್ರಹಕ್ಕೆ ಸಿಲುಕುವಿರಿ. ಕಾಯಕಷ್ಟ ಜೀವಿಗಳು ಹೆಚ್ಚಿನ ಫಲವನ್ನು ಪಡೆವರು ವಾರದ ಆದ್ಯಂತ ದಿನಗಳನ್ನು ಬಿಟ್ಟು ಉಳಿದ ದಿನಗಳಲ್ಲಿ ನಿಮ್ಮ ಇಷ್ಟಾರ್ಥವು ಬಂಧು ಜನರ ನೆರವಿನಿಂದಾಗಿ ನೆರವೇರಲಿದೆ.

ವೃಷಭ:—ಶನೈಶ್ವರನೊಬ್ಬನನ್ನುಳಿದು ಮಿಕ್ಕೆಲ್ಲಾ ಗ್ರಹರ ಅನುಗ್ರಹವು ದೊರೆತಿರುವದು ನಿಮಗೀವಾರದಲ್ಲಿ. ಆದ ಕಾರಣ ನಿಮ್ಮ ಇಷ್ಟಾರ್ಥ ಸಿದ್ಧಿಗೋಸ್ಕರ ಇಂದೇ ಪ್ರವರ್ತಿಸಿರಿ. ನಿಮ್ಮ ಬಯಕೆಯು ಏನೊಂದು ವಿಘ್ನ ವಿಡಂಬರಗಳಿಲ್ಲದೆ ನಿರಾತಂಕವಾಗಿ ನೆರವೇರುವದು ಸಾಮಾಜಿಕ ರಾಜಕೀಯ ಕ್ಷೇತ್ರದಲ್ಲಿ ವಿಜಯ ಶ್ರೀಯು ನಿಮ್ಮ ಪಾಲಿಗೆ ಕಟ್ಟಿಟ್ಟ ಗಂಟೆನಂತಿರುವದು. ವಾರಾಂತ್ಯದ 3 ದಿನಗಳು ಅತೀವ ಪ್ರಶಸ್ತವಿದೆ.

ಮಿಥುನ:—ಉದ್ಯೋಗಂ ಪುರುಷ ಲಕ್ಷಣಂ ॥ ಎಂಬ ಗಾದೆಯಂತೆ ಕಾರ್ಯವನ್ನು ಮಾಡುವದು ನರನ ಕರ್ತವ್ಯವು. ಫಲಾಫಲಗಳು ದೈವಾಯುಕ್ತವಾದವುಗಳು ಈ ವಾರದಲ್ಲಿ ಶುಕ್ರಾಚಾರ್ಯರನ್ನುಳಿದು ಮಿಕ್ಕೆಲ್ಲಾ ಗ್ರಹರೂ ನಿಮಗೆ ಪ್ರತಿಕೂಲರಿರುವ ಕಾರಣ ನಿಮ್ಮ ಯಾವತ್ತು ಪ್ರಯತ್ನಗಳು ನೀರಿನಲ್ಲಿ ಮಾಡಿದ ಹೋಮದಂತೆ ವಿಫಲವಾಗಲಿವೆ. ಹಾಗೆಂದು ಉದಸೀನನಾಗಿ ಕುಳಿತಿರುವದು. ನರನ ಧರ್ಮವಲ್ಲವು. ವಾರದ ಆದ್ಯಂತ ದಿನಗಳು ನಿಮಗೆ ಹೆಚ್ಚಿನ ಅನಿಷ್ಟವನ್ನುಂಟು ಮಾಡಲಾರವು.

ಕರ್ಕಟ:—ನಿಮ್ಮ ಭಾಗ್ಯಪತಿಯ ಅನುಗ್ರಹವೊಂದು ಬಲವತ್ತರವಾಗಿರುವ ಕಾರಣ ನೀವಾವ ಕಾರ್ಯಕ್ಕೂ ಹಿಂಜರಿಯ ಬೇಕಾದ ಅವಶ್ಯವಿಲ್ಲವು. ಸದ್ಯ ನಿಮಗೆ ಹಣದ ಕೊರತೆಯುಂಟಾಗದು. ಶತ್ರು ಜನರನ್ನು ಸ್ವಪರಿಶ್ರಮದಿಂದಲೇ ಪರಾಭವಗೊಳಿಸುವಿರಿ. ಅನಿರೀಕ್ಷಿತ ಧನಾಪ್ತಿಯ ಯೋಗವಿದೆ. ಆದರೆ ಸ್ತ್ರೀ ಜನರಿಂದಾಗಿ ಅನಿಷ್ಟ ಅಪವಾದಗಳೊದಗ ಬಹುದು. ವಾರಾಂತ್ಯದ 3 ದಿನಗಳಲ್ಲಿ ಕೊಂಚ ಜಾಗರೂಕರಾಗಿರಿ.

ಸಿಂಹ:—ಇಂದಿನ ನಿಮ್ಮ ಜೀವನವು ಕೊಂಚ ಕಠಿಣ ಪರಿಸ್ಥಿತಿಗೆ ಬರಲಿದೆ. ಕಾರಣ ಆತ್ಮೀಯರೂ ಬಂಧುಗಳೂ ದೂರ ಕೋಲಗುವರು. ಸ್ವಯಂ ಧೈರ್ಯ ಸಾಹಸಗಳು ಸಾಲದು ಕಾರ್ಯದಲ್ಲಿ ನಷ್ಟವಧಿಕವಾಗಲಿದೆ. ಮಾತ್ರವಲ್ಲ ದೇಹದಲ್ಲೂ ಆರೋಗ್ಯ ಚೆನ್ನಾಗಿರದು. ವಿದ್ಯೋದ್ಯೋಗ ಜೀವಿಗಳಿಗೆ ಮರ್ಯಾದೆಯಿಂದ ದಿನಗಳೆಯಲು ಅತೀವ ಕಷ್ಟವಾಗುವದು. ತಾ 23ರಿಂದ 26ರ ವರೆಗಿನ ದಿನಗಳಲ್ಲಿ ಅನಿಷ್ಟಗಳು ಬಹುತೇಕ ಕಡಿಮೆಯಾಗಲಿವೆ.

ಕನ್ಯಾ:—ಈ ವಾರದಲ್ಲಿ ನಿಮ್ಮ ಧನ ಸುಖ ಭಾಗ್ಯ ಪತಿಗಳು ಉತ್ತಮ ಸ್ಥಾನವನ್ನು ಹೊಂದಿರುವುದರಿಂದ ನಿಮಗೆ ಹಣದ ಕೊರತೆಯುಂಟಾಗದು. ಮನಸ್ಸಿಗೂ ನೆಮ್ಮದಿ ಲಭಿಸೀತು ಪಿತ್ಥ ದೋಷದಿಂದ ಆರೋಗ್ಯಕ್ಕೆ ಸ್ವಲ್ಪ ಹಾನಿ ತಗಲೀತು. ಮೇಲಧಿಕಾರಿಗಳ ಅವಕೃಪೆಗೆ ಪಾತ್ರರಾದೀರಿ. ಜನತೆಯ ಬೆಂಬಲವನ್ನು ಪಡೆದ ನಿಮಗೆ ಸಮಾಜದಲ್ಲಿ ಗೌರವ ಸ್ಥಾನಮಾನಗಳು ಲಭಿಸುವವು. ವಾರಾಂತ್ಯದ 3 ದಿನಗಳು ಅನುಕೂಲವಿವೆ.

ತುಲಾ:—ಕೃಷ್ಣಪಕ್ಷದ ಚಂದ್ರನಂತೆ ದಿನೇ ದಿನೇ ನಿಮ್ಮ ಅದೃಷ್ಟವು ಹ್ರಾಸವಾಗುತ್ತಾ ಬರುತ್ತಿದೆ. ಆದ ಕಾರಣ ನೀವಾವ ಕಾರ್ಯವನ್ನು ಮಾಡಿದರೂ ಫಲಾಪ್ತಿಗಿಂತ ಖರ್ಚೇ ಅಧಿಕವಾಗಿ ನಿಲ್ಲಲಿದೆ. ಆತವಷ ಹಣದ ಬಿಕ್ಕಟ್ಟಿನಿಂದಾಗಿ ಮರ್ಯಾದೆಯಿಂದ ದಿನಗಳೆವುದೂ ದುಸ್ತರವಾಗಿ ಕಾಣಿಸೀತು. ಗೃಹ ಕೃತ್ಯದಲ್ಲಿ ಸುಖವಿರದು. ತಂದೆ ಮಕ್ಕಳೊಳು ಗಂಡ ಹೆಂಡಿರೊಳು ಕಲಹವಾಗುವದು. ಗುರುಜನರ ಅಗ್ರಹಕ್ಕೆ ಗುರಿಯಾಗುವಿರಿ. ಆದ ಕಾರಣ ಈ ಕಾಲದಲ್ಲಿ ಯಾವುದಕ್ಕು ಮುಂದರಿಯದೆ ಹಿಂದಾಗಿರುವದೇ ಲೇಸು. ತಾ 21, 27 ಈ 2 ದಿನಗಳಲ್ಲಿ ಮೇಲೆ ಹೇಳಿದಷ್ಟು ಅನಿಷ್ಟಗಳು ಕಾಣಸವು.

ವೃಶ್ಚಿಕ:—ನಿಮ್ಮ ಕಷ್ಟ ಪರಂಪರೆಗಳು ದೂರ ಸರಿವವು. ಕೈಗೊಂಡ ಕಾರ್ಯದಲ್ಲಿ ವಿಜಯವನ್ನು ಹೊಂದುವಿರಿ. ಜನರ ಬೆಂಬಲವು ಮಿತ್ರರ ನೆರವು ಉತ್ತಮವಿರುವುದರಿಂದ ದಿನ ಯಾಪನೆಯು ಸುಗಮವಾಗುವದು ಧನಲಾಭ ಪತಿಗಳ ಅನುಗ್ರಹವನ್ನು ಪಡೆದ ನಿಮಗೆ ಹಣದ ಕೊರತೆಯುಂಟಾಗದು. ಕೆಲವೊಮ್ಮೆ ಪಿತ್ಥದೋಷದಿಂದ ದುಃಸ್ವಪ್ನ ನಿದ್ರಾ ಭಾವನೇತ್ರ ಪೀಡೆಗಳು ಕಾಣಿಸಬಹುದು. ತಾ 23, 24 ಇಷ್ಟ ಪ್ರದಗಳಿವೆ.

ಧನು:—ಸುಖ ದುಃಖ ಲಾಭ ನಷ್ಟಗಳು ಸಮತೂಕದಲ್ಲಿ ನಿಲ್ಲಲಿವೆ. ಶ್ರಮ ವಹಿಸಿ ದುಡಿಯುವವರಿಗೆ ಈ ವಾರದಲ್ಲಿ ಅಧಿಕ ಫಲ ಲಭಿಸುವದು ಬಂಧು ಜನರು ಮಿತ್ರ ವರ್ಗದವರು ನಿಮಗೆ ವಿಮುಖರಾದರೂ ಸ್ವಯಂ ಸಮರ್ಥರಾದ ನಿಮಗೆ ವ್ಯಾಪಾರ ರಾಜಕೀಯದಲ್ಲಿ ಒಳ್ಳೆಯ ಫಲವಿದೆ. ತಾ 21 25, 26 ಈ ಮೂರು ದಿನಗಳು ಸುಖ ಸಾಧಕಗಳಾಗಿವೆ

ಮಕರ:—ಉತ್ಪತ್ತಿಗಿಂತ ದ್ವಿಗುಣ ವ್ಯಯವಾದೀತು. ಹೆಚ್ಚಿನ ಕಾರ್ಯಗಳು ಅರ್ಧದಲ್ಲೇ ನಿಲ್ಲುವವು. ಸತತ ಪರ್ಯಟನದಲ್ಲೇ ಕಾಲಕಳೆವ ಪರಿಸ್ಥಿತಿಯೊದಗಲಿದೆ. ಆದರೆ ನಿಮ್ಮ ಸುಖಭೋಗಗಳಿಗೆ ಕೊರತೆಯಾಗದು. ಸಾಂಸಾರಿಕ ತಾಪತ್ರಯಗಳು ಕೊಂಚ ಹೆಚ್ಚಲಿವೆ. ರಾಜಕೀಯ ವಾ ಸಾಮಾಜಿಕ ಕ್ಷೇತ್ರದಲ್ಲಿ ಒಳ್ಳೆ ಹೆಸರು ಲಭಿಸದು. ಆದರೂ ತಾ 23, 24, 27, ಈ 3 ದಿನಗಳಲ್ಲಿ ನಿಮ್ಮ ಬಯಕೆಯು ಸಿದ್ಧಿಸಲಿದೆ.

ಕುಂಭ:—ಈ ಹಿಂದೆ ನೀವು ಎಲ್ಲಿ ಪುರಸ್ಕೃತರಾಗುತ್ತಿದ್ದಿರೋ ಅಲ್ಲಿ ನೀವಿಂದು ತಿರಸ್ಕೃತರಾಗುವ ಸಂಭವವಿದೆ. ಕಾರಣ ನಿಮ್ಮ ನಡತೆಯನ್ನ ಬಹುದು. ಏಕೆಂದರೆ ಸದ್ಯ ನಿಮ್ಮ ಬಾಯಲ್ಲಿ ನಯನುಡಿಗಳೇ ಬರಲಾರವು ಸಿಕ್ಕಸಿಕ್ಕವರೊಡನೆ ಕಲಹಗೈವಿರಿ. ನಿಮ್ಮವರೇ ನಿಮಗೆ ಪ್ರತಿಕೂಲರಾಗಿ ವರ್ತಿಸುವರು. ಆದಮೇಲೆ ಹೆರವರ ವಿಚಾರ ಕೇಳಬೇಕೇ ತಾ 23,24,27 ರಲ್ಲಿ ಬಹಳ ಜಾಗರೂಕರಾಗಿ ವರ್ತಿಸಿರಿ. ಕಷ್ಟನಷ್ಟಗಳು ಸಂಭವಿಸಲಿವೆ.

ಮೀನ:—ಕಾನೊಂದು ಬಗೆದರೆ ದೈವವೊಂದೆಣಿಸಿತೆಂಬಂತೆ ನಿಮ್ಮ ಇಂದಿನ ಪರಿಸ್ಥಿತಿಯಾಗಿರುವದು. ಜನ್ಮದಲ್ಲಿರತಕ್ಕ ಗುರು ಅಷ್ಟಮಸ್ಥ ಶುಜದ್ವಾದಶಸ್ಥ ರವಿಗಳು ನಾನಾ ತರದ ಪೀಡೆಗಳನ್ನು ಕೊಡುವರು. ನಿಮ್ಮ ಸಂಕಲ್ಪಗಳು ಗಗನ ಕುಸುಮಗಳಂತಾದವು. ದೇಹಾಲಸ್ಯ ಗೃಹ ತಾಪತ್ರಯ ಆರ್ಥಿಕ ಬಿಕ್ಕಟ್ಟು ಶತ್ರು ಜನರ ಪೀಡೆ ಇವುಗಳಿಂದ ಸಂತಪ್ತ ದುಃಖಿತರಾದ ನಿಮಗೆ ತಾ 21,22, 23, 24 ಈ ದಿನಗಳಲ್ಲಿ ಮಿತ್ರಪರಿಮಾಣದಿಂದ ಸಂತಸಕ್ಕವಕಾಶವಿದೆ.

● ತೃಪ್ತಿಕರವಾದ ವಸತಿ — ಹಿತಕರವಾದ ಊಟ
● ರುಚಿಕರವಾದ ಉಪಾಹಾರ ಇವುಗಳಿಗೆ

ಉಡುಪಿಯ ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಊರ ಪರವೂರ ಸನ್ಯಾಸ್ಯ ಸದ್ಗೃಹಸ್ಥರಿಂದ ಮುಕ್ತಕಂಠದಿಂದ ಹೊಗಳಿಸಿಕೊಂಡ ನಮ್ಮ ಹೋಟೆಲಿಗೆ

ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ.

ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯಾಗುವಂತೆ ನಗರದ ಕೇಂದ್ರ ಭಾಗದಲ್ಲಿದೆ.

WOODLANDS

Highclass Boarding & Lodging, **UDIPI S. Kanara**

ಖುತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ, ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ– ಬೆಲೆ; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]

Mrs. D. DEVEE, F. DB. (N. J.)
Tollygunge CALCUTTA.
ಸ್ಟಾಕಿಸ್ಟರು ಶಹಾಕಂಪೆನಿ, ಮಂಗಳೂರು

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯ ಪರ್ವತದಿಂದ ತೆಗೆಯಲ್ಪಡುವಂಥ ಅಪೂರ್ವ ವಸ್ತು, ...ಗಳ ರಾಜ; ಶಿಲಾಜಿತ್ತನ್ನು ಮೂಲಿಕೆಗಳೊಡನೆ ಸೇರಿಸಿ ಲೇಹ್ಯ ಮಾಡಿದೆ.

ಇದರ ಸೇವನೆಯಿಂದ ದೇಹ ದಾರ್ಢ್ಯವೂ ಶಕ್ತಿಯೂ ಉಂಟಾಗುತ್ತದೆ. ಮುಖ್ಯವಾಗಿ ಹೊಟ್ಟೆನೋವು, ಅನ್ನ ಸೇರದಿರುವಿಕೆ ಇವೇ ಮೊದಲಾದ ರೋಗಗಳಿಗೆ ಒಂದೆರಡು ದಿನಗಳಲ್ಲಿಯೇ ಗುಣಕೊಡತಕ್ಕ ಔಷಧವಿದು. ಕೆಮ್ಮು ಶ್ವಾಸ, ದಮ್ಮು, ಮೂಲ, ಒಳಮೂಲ, ರಕ್ತಮೂಲ, ಬಹುಮೂತ್ರ, ಹೊಟ್ಟೆಯಲ್ಲಿ ಗಡ್ಡೆ ಇರುವಿಕೆ ಮತ್ತು ವಾಯುವಿನಿಂದ ಉಂಟಾಗತಕ್ಕ ಸರ್ವ ವ್ಯಾಧಿಗಳಿಗೂ ದಿವ್ಯೌಷಧ. ವಿದ್ಯಾರ್ಥಿಗಳು ಸೇವಿಸುವುದರಿಂದ ಜ್ಞಾಪಕಶಕ್ತಿಯೂ ಮತ್ತು ಚಟುವಟಿಕೆಯೂ ಹೆಚ್ಚುತ್ತೆ. ವೃದ್ಧರು ಸೇವಿಸುವುದರಿಂದ ಶಕ್ತಿಯನ್ನು ಹೆಚ್ಚಿಸಿ; ಧಾರ್ಢ್ಯವನ್ನುಂಟುಮಾಡುತ್ತೆ

ಹೆಂಗಸರಿಗೆ— ಅತ್ರವ, ಬಿಳಿಸೆರಗು, ಕೈಕಾಲು ಸಿಡಿತ, ಕೀಲುವಾಯು, ಪಕ್ಕಶೂಲೆ ಮತ್ತು ಉಷ್ಣದಿಂದಾಗುವ ಇತರ ರೋಗಗಳಿಗೆ ದಿವ್ಯೌಷಧ. ದುರ್ಬಲರಾಗಿ ಕೇವಲ ಕೃಶರಾಗಿರುವ ಶಿಶುಗಳಿಗೆ ಈ ಔಷಧವನ್ನು ಪ್ರತಿ ಬೆಳಿಗ್ಗೆ, ಸಂಜೆ ಕೊಟ್ಟರೆ ಸ್ವಲ್ಪ ಕಾಲದಲ್ಲಿಯೇ ದೃಢಾಂಗರಾಗುವರು. ಪರೀಕ್ಷಿಸಿ ನೋಡಿ.

೪೫ ದಿನದ ಲೇಹ್ಯಕ್ಕೆ ರೂ. ೫–೪–೦ (ಪೋಸ್ಟೇಜು ಮಾಫಿ)
೨೨ ದಿನದ ಲೇಹ್ಯಕ್ಕೆ ರೂ ೩–೪–೦ (ಪೋಸ್ಟೇಜು ಮಾಫಿ)

ಎಲ್ಲಾ ನೋವುಗಳಿಗೂ ಅದ್ಭುತತೀಕ್ಷ್ಣ ಗುಣಕಾರಿ

ಮೆಂಥ್ಯಾಲ್ ಕೋನುಗಳು

(MENTHYAL CONES)

ಎಲ್ಲಾ ವಿಧವಾದ ಶೈತ್ಯದಿಂದಾಗಲೀ, ಉಷ್ಣದಿಂದಾಗಲೀ ಸಂಭವಿಸುವ ತಲೆ ನೋವು,

ತಲೆತಿರುಗುವಿಕೆ, ಬುದ್ಧಿಮಾಂದ್ಯ, ಕಣ್ಣುರಿ, ದೇಹಾದ್ಯಂತ ಕೀಲುಗಳ ನೋವು, ವಾಯುನೋವು ಮತ್ತಾನ ವಿಧವಾದ ನರಗಳ ನೋವಿಗೂ ತಕ್ಷಣದಲ್ಲಿಯೇ ಗುಣವನ್ನು ಕೊಡುತ್ತದೆ ೧ ಕೋನು ೧೦೦೦ ಸಲ ಉಪಯೋಗಿಸಬಹುದು

೧ ಪ್ಯಾಕೆಟ್ ರೂ. ೩—೧೨—೦
೨ ಪ್ಯಾಕೆಟ್ ರೂ ೬—೮—೦
೩ ಪ್ಯಾಕೆಟ್ ರೂ. ೯—೦—೦
(ಪೋಸ್ಟೇಜ್ ಮಾಫಿ)

ನೀಲಿಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ-

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

Edited, Printed & Published By K. H. Shetty at the Navayuga Press, Udipi, S. India.

ESTD. 1921 ಸ್ಥಾಪನೆ

LICENCE No. 31
Licensed to Post without Prepayment

31ನೆಯ ವರ್ಷ

28-2-1952

Founder: Sri A. B. Shetty,
Minister for Agriculture & Veterinary

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ.

ಕೃಷಿಮಂತ್ರಿ
ಶ್ರೀ.ಎ.ಬಿ. ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೨೫

NAVAYUGA WEEKLY Post Box No. 22 UDIPI.

Vol 31
No. 25

> ಮಾನವನಲ್ಲಿ ಪ್ರಜ್ವಲಿಸುವ ದೈವೀ ಸಂಪತ್ತೆಂದರೆ ನಿಷ್ಕಾಮ ಸೇವಾಬುದ್ಧಿ.

ತತ್ವನಿಷ್ಠೆಯ ಅಸಿಧಾರಾ ವ್ರತ

> ಮಾನವನ ಸರ್ವ ಸಂಸ್ಕಾರಗಳಲ್ಲಿ ಹಿರಿದಾದುದೆಂದರೆ ಆತನ ಜ್ಞಾನ

ತತ್ವನಿಷ್ಠೆ ಅಸಿಧಾರಾ ವ್ರತ. ಅತಿಶು ಕಠಿಣ ಆ ಬಾಳಿನ ದಾರಿ. ಆ ಬಾಳನ್ನು ಎದುರಿಸುವ ಎಡರು ತೊಡರುಗಳು ಬಹಳ. ಹೆಜ್ಜೆಹೆಜ್ಜೆಗೂ ವಿವಿಧ ರೂಪಗಳಿಂದ ಪ್ರತಿಕೂಲ ಪ್ರವಾಹಗಳ ಮಹಾಪೂರ ಬಂದು ತತ್ವನಿಷ್ಠನನ್ನು ಪ್ರವಾಹದೊಡನೆ ತೇಲಿಸಿಕೊಂಡು ಹೋಗಲು ಹೆಣಗುತ್ತವೆ. ಆ ಪ್ರತಿಕೂಲತೆ ಒಮ್ಮೆ ಬಂಧುಮಿತ್ರರಂತೆ ಗೆಳೆಯನಂತೆ ಮೋಹ ಮಮತೆಗಳ ಮಾಯಾರೂಪದಿಂದ ಬಂದರೆ ಇನ್ನೊಮ್ಮೆ ವೈರಿಯಂತೆ ಪಿಶಾಚಿಯಂತೆ ರೋಷ ಭೀಷಣಗಳ ಭೀಕರ ರೂಪದಿಂದ ಬರುತ್ತದೆ. ಒಮ್ಮೆ ಅಧಿಕಾರ, ಐಶ್ವರ್ಯ, ಕೀರ್ತಿಗಳಂತೆ ಭ್ರಾಮಕ ರೀತಿಯಲ್ಲಿ ಬಂದರೆ ಇನ್ನೊಮ್ಮೆ ಬಡತ, ಬಡತನ, ಅಪಕೀರ್ತಿಗಳಂತೆ ಘೋರ ರೂಪದಲ್ಲಿ ಬರುತ್ತವೆ. ಒಮ್ಮೆ ಸಮಾಜವಾಗಿ ವೈದೋರಿದರೆ ಇನ್ನೊಮ್ಮೆ ವ್ಯಕ್ತಿಯಾಗಿ ರೂಪುಗೊಳ್ಳುತ್ತದೆ. ಹೀಗೆ ತತ್ವನಿಷ್ಠನ ಬಾಳನ್ನು ಬೀಳಗೆಳೆಯುವ ರೂಪುಗಳು ಬಹಳ. ರೀತಿಗಳು ಅನೇಕ.

ಈ ಜಗತ್ತಿನಲ್ಲಿ ಹೆಚ್ಚಿನ ಜನರು ತಮ್ಮ ಸ್ವಾರ್ಥವನ್ನು ಸಾಧಿಸುವ ಸಮಯದಲ್ಲಿ ಸತ್ಯನ್ಯಾಯಗಳೆಡೆಗೆ ಕಣ್ಣೆತ್ತಿಕೂಡಾ ಕಾಣದೆ ಗಾಳಿಬಂದಂತೆ ತೂರಿಕೊಂಡು ಸಾಗುತ್ತಾರೆ. ಆ ಕಾಲದ ಅವರ ನಡೆ ಬಿರುಗಾಳಿಯಂತಿರುತ್ತದೆ. ಆಗ ಅವರ ಹಾದಿಯಲ್ಲಿ ಯಾರಾದರೂ ತತ್ವನಿಷ್ಠರು ಎದುರಾದರೆ ಅವರನ್ನು ತತ್ವಚ್ಯುತರನ್ನಾಗಿ ಮಾಡಿ ತಮ್ಮ ಪರವಾಗಿ ಸೆಣಸುವಂತೆ ಮಾಡಲು ಅಥವಾ ಕೊನೆಪಕ್ಷ ತಮ್ಮ ಹಾದಿಯ ತಡೆಯಾಗದಿರುವಂತಾದರೂ ಮಾಡಲು ಸಾಮ, ದಾನ, ಭೇದ, ದಂಡ ಈ ಚತುರೋಪಾಯಗಳನ್ನೂ ಉಪಯೋಗಿಸುತ್ತಾರೆ. ಆಗ ಅವರಿಗೆ ತಮ್ಮ ಸ್ವಾರ್ಥವೊಂದೇ ದೃಷ್ಟಿ. ಇದಕ್ಕಾಗಿ ಅವರು ತಮ್ಮನ್ನು ಮಾರಿಕೊಳ್ಳುವುದಲ್ಲದೆ ಸಮಾಜದ ಅಂಗಗಳಾದ ವ್ಯಕ್ತಿಗಳ ವ್ಯಕ್ತಿತ್ವವನ್ನೇ ಬಲಿಕೊಳ್ಳಲೆಳಸುತ್ತಾರೆ. ಜಾತಿ ಸಂಬಂಧ, ಹಣ, ಋಣ, ದಾಕ್ಷಿಣ್ಯ, ಬಲ ಇವೆಲ್ಲವುಗಳನ್ನೂ ಉಪಯೋಗಿಸಿ ತತ್ವನಿಷ್ಠ ಮಂದಿಯನ್ನು ಅಡ್ಡ ಹಾದಿಗೆಳೆಯುತ್ತಾರೆ. ಹೀಗೆ ತಮ್ಮ ಸ್ವಾರ್ಥಸಾಧನೆಗಾಗಿ ಸಮಾಜದ ನೈತಿಕ ಮಟ್ಟವನ್ನೇ ಕೆಳಗೆಳೆಯುತ್ತಾರೆ. ಆದರೆ ಇದೇ ಮಂದಿ ಬಹಿರಂಗವಾಗಿ ವೇದಿಕೆಯ ಮೇಲೆ ನಿಂತು ಸಾರುತ್ತಾರೆ. "ನಾವು ಸಮಾಜ ಸುಧಾರಕರು. ಸಮಾಜದ ಮಟ್ಟವನ್ನು ಸರ್ವತೋಮುಖವಾಗಿ ಎತ್ತರಿಸಲು ಹೆಣಗುವವರು" ಎಂದು ಹೀಗೆ ಮಾತುಕೃತಿಗಳಿಗೆ ತಾಳಮೇಳವಿಲ್ಲದ ಈ ಮಂದಿಯಿಂದ ನಮ್ಮ ಸಮಾಜದ ಭವಿಷತ್ತನ್ನು ಕತ್ತಲು ಕವಿಯುತ್ತಿದೆ.

ವ್ಯಕ್ತಿ ಸಮಾಜಗಳು ಪರಸ್ಪರಪೂರಕಗಳಾಗಿವೆ. ಆದರೆ ಕೆಲವೊಮ್ಮೆ ಈ ಪೂರಕಗಳೇ ಪರಸ್ಪರ ಮಾರಕಗಳಾಗಿ ಪರಿಣಮಿಸುತ್ತವೆ. ಇದಕ್ಕೆ ಕಾರಣ ಎರಡು. ಒಂದು ಪರಸ್ಪರ ಅರಿತುಕೊಳ್ಳದಿರುವದು. ಇನ್ನೊಂದು ಒಂದು ಇನ್ನೊಂದರಿಂದ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳಲೆಳಸುವುದು. ಹೀಗೆ ಅರಿಯದೆ ಅಜ್ಞಾನದಿಂದ ಮತ್ತು ಅರಿತು ಸ್ವಾರ್ಥದಿಂದ ಪರಸ್ಪರ ಪೂರಕಗಳಾದ ಆ ವ್ಯಕ್ತಿ ಸಮಾಜಗಳು ಪರಸ್ಪರ ಮಾರಕಗಳಾಗಿ ಪರಿಣಮಿಸುತ್ತವೆ. ತತ್ವನಿಷ್ಠನು ಈ ಎರಡೂ ಬಗೆಯ ವಿರೋಧಗಳನ್ನು ಎದುರಿಸಿ ಮುನ್ನುಗ್ಗಬೇಕಾಗುತ್ತದೆ.

ವ್ಯಕ್ತಿ ಸಮಾಜಕ್ಕೆ ವೈರಿಯಾಗುವಾಗ ಸಮಾಜದ ಅಜ್ಞ ಮಂದಿ ಅಡ್ಡಹಾದಿ ಹಿಡಿಯುತ್ತಾರೆ. ಕೆಲವೊಮ್ಮೆ ಸುಜ್ಞರಿಗೂ ಸಂಕಟಕ್ಕಿಟ್ಟುಕೊಳ್ಳುತ್ತದೆ. ಸಮಾಜ ವ್ಯಕ್ತಿಗೆ ವೈರಿಯಾಗುವಾಗ ವ್ಯಕ್ತಿ ನುಗ್ಗುನುರಿಯಾಗುತ್ತಾನೆ. ಇಲ್ಲಿ ಹೇಳಹೊರಟಿರುವುದು ಸಮಾಜದ ಕತೆಯನ್ನಲ್ಲ, ವ್ಯಕ್ತಿಯ ಗತಿಯನ್ನು.

ತತ್ವನಿಷ್ಠನಾಗಿ ಬಾಳಬೇಕೆಂದು ಒಯ್ಯಸಿ ಆದರ್ಶದೆಡೆಗೆ ಹೆಜ್ಜೆಯಿಕ್ಕಹತ್ತಿದ ಮೊದಮೊದಲಲ್ಲಿ ವ್ಯಕ್ತಿಯನ್ನು ಸಮಾಜ ಗಮನಿಸುವುದೇ ಇಲ್ಲ, ಆದರೆ ಮೆಲ್ಲಮೆಲ್ಲನೆ ವ್ಯಕ್ತಿ ಸಮಾಜವನ್ನು ಮೀರಿಹೋಗುತ್ತಿರುವಾಗ ಸಮಾಜದ ಬಸಿರಲ್ಲಿ ಅಸೂಯೆಯ ಕಿಚ್ಚು ತಲೆಯೆತ್ತುತ್ತದೆ. ಆಗ ವ್ಯಕ್ತಿಯ ಮೇಲೆ ಅದರ ಪ್ರತಿಕ್ರಿಯೆ ವ್ಯಂಗ ಮತ್ತು ಕೊಂಕು ನುಡಿಗಳ ರೂಪದಲ್ಲಿ ವ್ಯಕ್ತವಾಗುತ್ತದೆ. ಇದು ತತ್ವನಿಷ್ಠ ವ್ಯಕ್ತಿಗೆ ಬರುವ ಮೊದಲ ಪರೀಕ್ಷೆ. ಸಾಮಾನ್ಯರು ಇಲ್ಲೇ ಸೋಲುತ್ತಾರೆ. ಆ ಕೆಡುನುಡಿಗಳನ್ನು ಕಡೆಗಣಿಸಿ ವ್ಯಕ್ತಿ ಮುಂದುವರಿದನೆಂದರೆ ಸಮಾಜದ ಅಸೂಯೆ ಬಲಿಯುತ್ತದೆ. ಅದರೊಡನೆ ಸಿಟ್ಟೂ ಸೇರಿಕೊಳ್ಳುತ್ತದೆ. ಈ ಘಟ್ಟದಲ್ಲಿ ಸಮಾಜ ಸಿಟ್ಟನ್ನು ಹೊರತೋರಿಸದೆ, ತನ್ನ ಕೊಂಕು ನುಡಿಗಳನ್ನು ಲಕ್ಷಿಸದೆ ಮುನ್ನುಗ್ಗುತ್ತಿರುವ ವ್ಯಕ್ತಿಯನ್ನು ಉಪಾಯದಿಂದ ಹಿಂದೆಳೆಯಲು ಯತ್ನಿಸುತ್ತದೆ. ಅಧಿಕಾರ ಐಶ್ವರ್ಯ, ಕೀರ್ತಿಗಳ ಆಸೆಯನ್ನು ತೋರಿಸುತ್ತದೆ ಇದು ತತ್ವನಿಷ್ಠನ ಇನ್ನೊಂದು ಪರೀಕ್ಷಾಕಾಲ. ಹೆಚ್ಚಿನ ಮಂದಿ ಇಲ್ಲಿ ಜಾರಿಬೀಳುತ್ತಾರೆ; ತತ್ವಚ್ಯುತರಾಗುತ್ತಾರೆ ಈ ಮಾಯೆಯ ಬಂಗಾರದ ಬಲೆಯಲ್ಲಿ ಬಿದ್ದು ಬಿಡಿಸಿಕೊಳ್ಳಲಾರದೆ ಹುಳುವಿನಂತೆ ಒದ್ದಾಡಿಕೊಂಡಿರುತ್ತಾರೆ. ಆಶ್ಚರ್ಯವೆಂದರೆ ಆ ಮಂದಿ ಆ ಮಾಯೆಯ ಮೋಹಕ ಬಲೆಯೇ ಅತ್ಯಂತ ಸುಖದ ನಿಲ್ದಾಣವೆಂದು ಭ್ರಮಿಸಿಕೊಂಡಿರುವುದು ವಿವೇಕ ವಿಶ್ವಾಸಗಳ ಸಹಾಯದಿಂದ ಈ ಬಲೆಯನ್ನೂ ಹರಿದೊಗೆದು ವ್ಯಕ್ತಿ ಮುಂದುವರಿದನೆಂದರೆ ಸಮಾಜದ ಒಳಗಿಂದೊಳಗೆ ಉರಿಯುತ್ತಿದ್ದ ರೋಷದ ಕಿಡಿ ಭಗ್ಗೆಂದು ಉರಿದು ಹತ್ತಿ ಹೊರಗೂ ನಾಲಗೆ ನೀಡುತ್ತದೆ. ಈ ಉಗ್ರ ಸ್ವಾರ್ಥಪೂರಿತ ಅಸೂಯೆಯ ಇನ್ನೊಂದು ರೂಪ ಅಷ್ಟೆ! ಈ ಮಟ್ಟದಲ್ಲಿ ಸಮಾಜ ತನ್ನ ಸರ್ವಶಕ್ತಿಯಿಂದ ವ್ಯಕ್ತಿಯನ್ನು ಹಿಂದೆಳೆಯಲು ಯತ್ನಿಸುತ್ತದೆ. ಇದು ಪ್ರತ್ಯಕ್ಷ ಹೋರಾಟದ ಕಾಲ! ಬಹಳಷ್ಟು ಮಂದಿ ಇಲ್ಲಿ ಸೋತು ಹಿಂದಿರುಗುತ್ತಾರೆ. ಮುಂದ ಅವರ ಬಾಯಿಯಿಂದ ಬರುವುದು ಗತಕತೆ ಮಾತ್ರ ಈ ಮಂದಿ ಭೂತಕಾಲದಲ್ಲಿ ಸಜೀವವಾಗಿ ಬಾಳಿದ್ದವರು ಪ್ರಸ್ತುತಕಾಲ ಅವರಿಗೆ ಅರ್ಥಹೀನ; ವ್ಯರ್ಥ; ಆದರೆ ವಿವೇಕವುಳ್ಳ ಕೆಚ್ಚೆದೆಯ ವ್ಯಕ್ತಿಮಾತ್ರ ಇಲ್ಲಿ ಸೋಲನ್ನೊಪ್ಪಿಕೊಳ್ಳದೆ ಅವಿಚಲಿತ ಧೈರ್ಯದಿಂದ ಸಮಾಜದೊಡನೆ ಸೆಣಸಿ ಅನಂತಶ್ರದ್ಧೆ ಮತ್ತು ಅಪರಿಮಿತ ಉತ್ಸಾಹದೊಡನೆ ಮುನ್ನುಗ್ಗಲೆಳಸುತ್ತಾನೆ. ಈ ಮಹಾರಣದಲ್ಲಿ ಕೆಲಮಂದಿ ಹೋರಾಡುತ್ತ ಹೋರಾಡುತ್ತಾ ಸಾಯುತ್ತಾರೆ. ಇನ್ನು ಕೆಲಮಂದಿ ಸಮಾಜವನ್ನು ಸೋಲಿಸಿ ಮುಂದೆ ಸಾಗುತ್ತಾರೆ. ಈ ಮಹಾರಣದಲ್ಲಿ-ಧರ್ಮಯುದ್ಧದಲ್ಲಿ ಹೋರಾಡಿ ಸತ್ತರೆ ವ್ಯಕ್ತಿಗೆ ವೀರಸ್ವರ್ಗ. ಆತ ಇತಿಹಾಸ

[೬ನೇ ಪುಟ ನೋಡಿರಿ]

Our Pigmy Deposit Scheme

.... brings our bank to your door. You may save as small a sum as annas two Our collector will call on you every day to receive it

At the rate of annas two per day you save Rs. 650/- in 7 years because we allow interest at 3½% per annum At the rate of Re. 1/- per day your Savings are Rs. 2,800/- in 7 years At the rate of Rs. 10/- it is Rs. 28,000/-. Come in to-day and join the band of **Prudent Prosperous Pigmy People**.

The Canara Industrial & Banking Syndicate Ltd.

Estd: 1925. H. O: UDIPI.

ನ್ಯಾಯವಿಧಾಯಕ ಸಭೆಯಲ್ಲಿ ಶಾಸನಗಳನ್ನು ತಯಾರಿಸುವದು ಬಹು ಸುಲಭದ ಕೆಲಸವಲ್ಲ. ಒಂದು ಮಸೂದೆಯು ಶಾಸನರೂಪಕ್ಕೆ ಬರಬೇಕಾದರೆ ದೀರ್ಘಕಾಲವು ಬೇಕಾಗುತ್ತದೆ ಮತ್ತು ಅನೇಕ ಕೋದರಿಗಳಿಂದ ಪಾರಾಗಬೇಕಾಗುತ್ತದೆ. ಸಭೆಗಳಲ್ಲಿ ಎರಡು ಮೂರು ಸಲ ಮಂಜೂರಾಗಬೇಕು ಮತ್ತು ಅವುಗಳು ಸಮಿತಿಗಳಲ್ಲಿ ಪರಿಶೀಲಿಸಲ್ಪಡಬೇಕು. ಸದಸ್ಯರ ಟೀಕೆಗಳಿಗೊಳಪಡಬೇಕು ಅವರ ತಿದ್ದುಪಡಿ ದುರಸ್ತಿಗಳಿಗೆ ಸಿಲುಕಬೇಕು. ಆ ತರುವಾಯ ಅರಸನ ಅಥವಾ ಅಧ್ಯಕ್ಷನ ಸಹಿಯನ್ನು ಪಡೆದು ಶಾಸನವಾಗುವದು. ಒಂದು ಮಸೂದೆಯು ವಿರೋಧಪಕ್ಷದವರ ಸಹಾನುಭೂತಿಯನ್ನು ಪಡೆದು ಅವಸರದಿಂದ ಮಂಜೂರಾದರೂ ಅದು ಬಹಿರಂಗವಾಗಿ ಜನರ ಅವಗಾಹನೆಗೆ ಬಂದೇ ಬರುತ್ತದೆ. ಒಂದು ವೇಳೆ ಜನರ ವಿರೋಧವಿದ್ದು ಮಸೂದೆಯು ಮಂಜೂರಾದರೂ ಅವರದನ್ನು ಚರ್ಚಿಸಿ ಟೀಕೆ ಮಾಡಿ ಮುಂದೆ ಇಂಥಾ ಸಂದರ್ಭದಲ್ಲಿ ತಾವೇನು ಮಾಡಬೇಕೆಂತ ಆಲೋಚಿಸಬಹುದು ಮತ್ತು ಪ್ರಸ್ತುತ ಎದುರು ಬಂದ ಮಸೂದೆಯ ಪರಿಣಾಮ ಕಾದು ನೋಡಬಹುದು. ಕಾರ್ಯನಿರ್ವಾಹಕ ಮಂಡಲಿಯ ಕೆಲಸವು ಹೀಗಲ್ಲ. ಅದು ಯಾವ ಆತಂಕವೂ ಇಲ್ಲದೆ ತತ್ಕ್ಷಣವೇ ಆಗುವದು. ಇವರ ಕಾರ್ಯದ ಪರಿಣಾಮವು ಬಹು ದೀರ್ಘ ಕಾಲದವರೆಗೆ ಕಾಣಬರುವದಾದರೂ ಕೆಲಸವು ಮಾತ್ರ ಯಾರಿಗೂ ಗೊತ್ತಾಗದೆ ಥಟ್ಟನೆ ಆಗಿಬಿಡುವದು. ಒಬ್ಬ ಮಂತ್ರಿಯು ಅರಗಳಿಗೆಯೊಳಗೆ ಪರರಾಷ್ಟ್ರದೊಡನೆ ಯುದ್ಧ ಹೂಡಬಹುದು. ಎರಡು ಮಹಾಯುದ್ಧಗಳು ಇದೇ ರೀತಿಯಲ್ಲುಂಟಾದವು. ಯುದ್ಧಾರಂಭಿಸಿದ ಈ ಜನರಿಗೆ ಒಂದು ಚಿಕ್ಕಾಸಿನ ನಷ್ಟವೂ ಇಲ್ಲ ಮತ್ತು ಯುದ್ಧದಲ್ಲಿ ಒಂದು ದಿವಸವಾದರೂ ಭಾಗವಹಿಸಲಿಲ್ಲ. ಬಿಸ್ಮಾರ್ಕನು ಕೌಂಟ್ Moltke ಮತ್ತಿತರ ಸೈನ್ಯಾಧಿಕಾರಿಗಳೊಟ್ಟಿಗೆ ಊಟಕ್ಕೆ ಕುಳಿತಾಗ ಕೈಸರನು ಕಳುಹಿಸಿದ ಎಮ್ಸ ತಂತಿಯನ್ನು ತಿದ್ದಿ[illegible]ದೇ ಫ್ರಾಂಕೋ ಜರ್ಮನ್ ಯುದ್ಧಕ್ಕೆ ಕಾರಣವಾಗಿದೆ. ಕೈಸರನು ಎಮ್ಸ ಟೆಲಿಗ್ರಾಮನ್ನು ಇದ್ದಂತೆಯೇ ಅಥವಾ ಅದರ ಉಚಿತ ಭಾಗವನ್ನು ಪ್ರಕಟಿಸಬಹುದೆಂದು ತಿಳಿಸಿದನು. ಕೂಡಲೇ ತನಗೆ ಎಡೆಸಿಕ್ಕಿತೆಂದು ತಿಳಿದು ಕೌಂಟ್ ಮೋಲ್ಟನೊಡನೆ ಸೈನ್ಯದ ಕುರಿತು ವಿಚಾರಿಸಲಾಗಿ ಆತನು ಕೂಡಲೇ ಯುದ್ಧ ಹೂಡಿದರೆ ಜಯನಿಶ್ಚಯವೆಂದು ತಿಳಿಸಿದನು. ಬಿಸ್ಮಾರ್ಕನು ತಂತಿಯಲ್ಲಿರುವ ಕೆಲವು ಶಬ್ದಗಳನ್ನು ತೆಗೆದು ಹಾಕಿ ಅದಕ್ಕೆ ಬೇರೆ ಅರ್ಥವಾಗುವಂತೆ ಮಾಡಿ ಪ್ರಕಟಿಸಿದನು. ಇದರಿಂದ ಜನರು ಉದ್ವೇಗಗೊಂಡು ಸಿಟ್ಟಾದರು. ಹೀಗಾಗಿ ಯುದ್ಧವು ಆರಂಭವಾಯಿತು. ಹೀಗಲ್ಲದೆ ಇನ್ನೊಂದು ರೂಪದಲ್ಲಿಯೂ ಅನಾಹುತ ತರಬಹುದು. ಒಂದು ದೊಡ್ಡ ಯೋಜನೆಯನ್ನು ಮುಡುಕುತನದಿಂದ ಆರಂಭಿಸಿ ಕೋಟಿಗಟ್ಟಲೆ ಹಣವನ್ನು ನಿರರ್ಥಕವಾಗಿ ವ್ಯಯಿಸಬಹುದು. ಇಂಥಾ ಪ್ರಸಂಗ ನಮ್ಮ ದೇಶದಲ್ಲಿ ಅನೇಕ ನಡೆದಿವೆ. ಇವುಗಳೆಲ್ಲ ಜನರ ತಿಳುವಳಿಕೆಗೆ ಬರುವದು ಇವರದು ದುಷ್ಪರಿಣಾಮಗಳು

ಪ್ರಜಾಸತ್ತೆ

ಕಾರ್ಯನಿರ್ವಾಹಕ ಮಂಡಲಿ

THE EXECUTIVE

ಬೆಳಕಿಗೆ ಬಂದಮೇಲೆಯೇ ಸರಿ. ಚುನಾಯಿತರಾದ ಸದಸ್ಯರ ಕೆಚ್ಚೆದೆಯತನಕ್ಕೆ ಗಡಿಮಿತಿಯಿಲ್ಲವೆಂದು ವಾಲ್ಟ್ ವ್ಹಿಟ್ ಮೇನರು ಹೇಳಿದುದು ("The Never-ending audacity of elected person") ಪ್ರಜಾಸತ್ತೆಗೆ ಒಂದು ಕಟ್ಟೆಯಾಗಿರುವದು. ಕಾರ್ಯನಿರ್ವಾಹಕರನ್ನು ಅಂಕೆಯೊಳಗಿರಿಸಿಕೊಳ್ಳುವದು ಪ್ರಜೆಗಳಿಗೆ ಮುಳ್ಳಿನ ದಾರಿಯಾಗಿರುವದು.

ಪ್ರಜಾಮತ ಸರಕಾರಗಳಲ್ಲಿ ರೂಢಿಯಾಗಿರುವ ತತ್ವಗಳೇನೆಂದರೆ ಮಂತ್ರಿಗಳು ಶಾಸನ ಸಭೆಯ ವಿಶ್ವಾಸಹೊಂದಿ ಅದಕ್ಕೆ ಜವಾಬ್ದಾರರಾಗಿರುವದು; ಶಾಸನ ಸಭೆಯು ಜನರ ನಂಬಿಕೆಯನ್ನು ಹೊಂದಿ ಅವರಿಗೆ ಜವಾಬ್ದಾರರಾಗಿರುವದು; ಇದೆಲ್ಲಾ ಹಿತಕರವಾದ ತತ್ವವಾದರೂ ಕಾರ್ಯಾಚರಣೆಯಲ್ಲಿ ಇಷ್ಟು ಸುಲಭವಲ್ಲವೆಂಬ ಅನುಭವವು ನಮಗಿದೆ. ನ್ಯಾಯವಿಧಾಯಕ ಸಭೆಗೂ ಕಾರ್ಯನಿರ್ವಾಹಕ ಮಂಡಲಿಗೂ ಸರಪಣಿಯ ಗುಣಿಸಿನಂತಿರುವವನೇ ಮಂತ್ರಿಯಾಗಿರುವನು. ಆತನು ಸಭೆಯ ಒಬ್ಬ ಸದಸ್ಯನೂ ಕಾರ್ಯನಿರ್ವಾಹಕ ಮಂಡಲಿಯ ಒಂದು ಇಲಾಖೆಯ ಮುಖ್ಯಸ್ಥನೂ ಆಗಿರುವನು. ಆದ್ದರಿಂದ ಮಂತ್ರಿಯು ಸ್ವಿಜರ್‌ಲೇಂಡಿನಲ್ಲಿರುವಂತೆ ನೇರವಾಗಿ ಚುನಾಯಿತನಾದವನಲ್ಲ. ದೂರವರ್ತಿಯಿಂದ ಚುನಾಯಿತನಾದವನು (Elected from a remote degree) ಈತನನ್ನು ಮುಖ್ಯಮಂತ್ರಿಯು ನೇಮಕ ಮಾಡುವದಾಗಿದೆ. ಆತನು ಶಾಸನ ಸಭೆಯ ಬಹುಮತದ ಪಕ್ಷದ ಮುಂದಾಳು. ಹೇಗೆ ಆತನು ಮುಂದಾಳಾದನೆಂದು ಸ್ಪಷ್ಟ ವಿವರಿಸಲು ಸಾಧ್ಯವಿಲ್ಲ. ಅದನ್ನು ಶೋಧಿಸಲು ನಾವು ಹೋದರೆ ನದಿಮೂಲ ಹುಡುಕಿದಂತೆಯೇ ಸರಿ. ಮತ್ತು ಪ್ರಜಾಸತ್ತೆಯ ಕುರುಹುವೇ ತಪ್ಪಿಹೋಗುವದು. ಮಂತ್ರಿಯು ಬಹುಮತದಿಂದ ಚುನಾಯಿತವಾದ ಪಕ್ಷದ ಪರವಾಗಿ ನ್ಯಾಯಮಾರ್ಗದಿಂದಾಗಲೀ ಕೆಟ್ಟಮಾರ್ಗದಿಂದಾಗಲೀ ಸಭೆಯ ಸದಸ್ಯನಾಗಿ ಆರಿಸಿಬಂದ ಕಾರಣ ಆತನನ್ನು ಜನಮತದಿಂದ ಆರಿಸಿದಂತಾಗಿದೆ. ಆತನು ಯಾರೇ ಆಗಲಿ ಎಲ್ಲಿಂದಲೇ ಬರಲಿ ನಮಗೆ ವ್ಯಕ್ತಿಯು ಬೇಕಾಗಿಲ್ಲ ಮಸೂದೆಗಳೇ ಬೇಕಾಗಿವೆ. ತನ್ನ ಇಲಾಖೆಯ ಕಾರ್ಯಗಳ ಬಗ್ಗೆ ಶಾಸನ ಸಭೆಗೆ ಜವಾಬ್ದಾರನಾದರೆ ಸಾಕು.

ಈ ಜವಾಬ್ದಾರಿಕೆಯನ್ನು ಹೇರುವದ ಹೇಗೆ? ಸದಸ್ಯರು ಮಂತ್ರಿಯ ಶಾಖೆಯ ಕಾರ್ಯಗಳ ಕುರಿತು ಆತನ ವರ್ತನೆಗಳ ಕುರಿತು ಸಭೆಯಲ್ಲಿ ಪ್ರಶ್ನೆಗಳನ್ನು ಕೇಳಬಹುದು. ಕೀಟಕಾನನಾದ ಸದಸ್ಯನು ಬೇಜವಾಬ್ದಾರೀ ಪ್ರಶ್ನೆಗಳಿಂದ ಕೋಟಲೆ ಕೊಡುವವನಾಗಿ ಕಾಣಿಸಿಕೊಳ್ಳಲೂಬಹುದು. ಇಂಥವರು ನಮ್ಮ ಲೋಕಸಭೆಯಲ್ಲಿ ಸಹ ಇರುವರು. ಮಂತ್ರಿಗಳು ತಮ್ಮ ಇಲಾಖೆಯ ಸಣ್ಣದೊಡ್ಡ ತಪ್ಪುಗಳು ಮತ್ತು ದುರ್ವಿನಯಗಳು ಕುರಿತು ಛಲಹಿಡಿದು ಕೇಳುವ ಪ್ರಶ್ನೆಗಳನ್ನು ಉತ್ತರಿಸಲು ಭಯಪಡುವರು. ಸವಾಲುಗಳನ್ನು ಉತ್ತರಿಸುವಾಗ ಮಂತ್ರಿಗಳು ಕೌಶಲ್ಯದಿಂದ, ದಕ್ಷತೆಯಿಂದ ಮತ್ತು ತಮ್ಮ ರಾಜತಂತ್ರ ಪ್ರವೀಣತೆಯಿಂದ ಸಮರ್ಪಕವಾದ ಉತ್ತರ ಕೊಡಲಾರದ ಸವಾಲುಗಳಿಂದ ತಪ್ಪಿಸಿಕೊಳ್ಳುವರು. ಪ್ರಶ್ನೋತ್ತರಗಳು ಪತ್ರಿಕೆಗಳಲ್ಲಿ ಪ್ರಕಟವಾಗುವವು. ಎದುರುಗಡೆಯವರ ಗೋಚರಕ್ಕೆ ಮಾತ್ರವಲ್ಲ ಉದಾಸೀನರಾದವರ ಮತ್ತು ಬೇಸರದಿಂದಿರುವವರ ತಿಳುವಳಿಕೆಗೆ ಸಹ ಬರುವದು. ಕಾಲಕಳೆದ ಹಾಗೆ ಮಂತ್ರಿಗಳು ಕಷ್ಟದ ಮತ್ತು ಉಭಯಸಂಕಟದ ಸವಾಲುಗಳಿಗೆ ಉತ್ತರಕೊಡುವುದರ ಬದಲಿಗೆ ಮೌನವ್ರತವನ್ನಾಚರಿಸಿ ತಪ್ಪಿಸಿಕೊಳ್ಳುವರು. ಇನ್ನೊಂದು ರೀತಿಯಲ್ಲಿ ಅಂಕೆಯೊಳಗಿರಿಸಿಕೊಳ್ಳುವದು ಹೇಗೆಂದರೆ ಆತನ ಸಂಬಳದಲ್ಲಿ ಕಡಿತಮಾಡುವದಾಗಿದೆ. ಇದಕ್ಕೆ ಆಕ್ಷೇಪಣೆಯ ಮತವೆನ್ನುವರು. (Vote of censure) ಒಬ್ಬ ಮಂತ್ರಿಯಮೇಲೆ ಆಕ್ಷೇಪಣೆಯ ಠರಾವು ಮಂಜೂರಾದರೆ ಇಡೀ ಮಂತ್ರಿಮಂಡಲವೇ ರಾಜೀನಾಮೆ ಕೊಡಬೇಕಾಗುತ್ತದೆ. ಹೊಸ ಚುನಾವಣೆಯಾಗಬೇಕಾಗುತ್ತದೆ. ಇದಕ್ಕೆ ಪಾರ್ಲಿಮೆಂಟರಿ ಅಥವಾ ಕೆಬಿನೆಟ್ ಪದ್ಧತಿ ಎನ್ನುವರು. ಮಂತ್ರಿಗಳೆಲ್ಲರೂ ಸಭೆಗೆ ಸಾಮೂಹಿಕ ಜವಾಬ್ದಾರರಾದುದರಿಂದ ಒಬ್ಬನ ತಪ್ಪಿಗಾಗಿ ಎಲ್ಲರೂ ತಲೆಕೊಡಬೇಕಾಗುತ್ತದೆ. ಕಳೆದ ಎರಡು ಮಹಾಯುದ್ಧಗಳ ಸಮಯ ಇಂಗ್ಲಾಂಡಿನಲ್ಲಿ ಕೆಬಿನೆಟ್ ಪದ್ಧತಿಯು ಜಾರಿಯಲ್ಲಿಲ್ಲವೆಂದೇ ಹೇಳಬೇಕು. ಆಕ್ಷೇಪಣೆಯ ಠರಾವು ದೊಡ್ಡ ಸಂಗತಿ. ಹೊಸ ಚುನಾವಣೆಯಾಗಬೇಕಾದ್ದರಿಂದ ತುಂಬಾ ಖರ್ಚುನಷ್ಟಗಳವೆ. ಸದಸ್ಯರು ಇಂಥಾ ಪ್ರಸಂಗವದಗದಂತೆ ನೋಡಿಕೊಳ್ಳಬೇಕಾದ್ದರಿಂದ ಚುಪ್! ಎಂದು ಸದ್ದಿಲ್ಲದೆ ಅಡಗಿಸುವ ಪ್ರಯತ್ನ ಮಾಡುವರು. ಅವಿಶ್ವಾಸದ ಠರಾವು ಬಂತೆಂದರೆ ಯಾವ ಮಂತ್ರಿಯಮೇಲೆ ಆರೋಪ ಬಂದದೋ ಆತನ ಗೌರವವು ಕಡಮೆಯಾಗುವದು. ಆದರೆ ಹೆಚ್ಚು ಪೆಟ್ಟು ತಿಂದು ಉಳುವ ಎತ್ತುಗಳು ಪೆಟ್ಟಿಗೆ ಮೈಒರೆ ಮಾಡುವಂತೆ ಮಂತ್ರಿಗಳ ಚರ್ಮವು ದಪ್ಪವಾಗಿದೆ. ಆಕ್ಷೇಪಣೆಯ ಠರಾವು ಮಂಜೂರಾಗುವದು ಕಠಿಣ. ಮಂತ್ರಿಗಳು ಮಾಡುವ ತಪ್ಪುಗಳನ್ನು ಅಥವಾ ಅದರ ಅಸಾಮರ್ಥ್ಯತೆಯನ್ನು ನಿಲ್ಲಿಸಲು ಒಂದು ಬಲವಾದ ಹಾದಿಯಿಲ್ಲ.

— ಸಿ. ಯಚ್. ಶೆಟ್ಟಿ, ಬಿ. ಎ.

[ಮುಂದರಿಯುವುದು]

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."
—ಶ್ರೀ ಕೆ. ಎ. ಪಂಡಿತ್, B. Sc., F. I. A.
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು. ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ.

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಝಂಡುರವರ ZANDU'S
ಕೇಸರಿ ಜೀವನ KESARI JIVAN
ವನ್ನು ಉಪಯೋಗಿಸಲು ಒತ್ತಾಯಿಸಿರಿ.
ಕೆಮ್ಮು, ನೆಗಡಿ, ಅಸ್ತಮಾ, ಧ್ವನಿ ಒಡೆಯುವಿಕೆ ಮೊದಲಾದುವುಗಳಿಗೆ ಅತ್ಯುತ್ತಮ ಔಷಧಿ.
ಕೇಸರಿ ಜೀವನವು ತಾರುಣ್ಯವನ್ನೂ, ನವಚೈತನ್ಯವನ್ನೂ ಉಂಟುಮಾಡಿ ದೇಹದ ಅಂಗಾಂಗಗಳನ್ನೂ ಪುಷ್ಟಿಯಾಗಿ ಮಾಡಬಲ್ಲುದು. ಮೆದುಳಿನ ನಿತ್ರಾಣವಿರುವ ಅಧ್ಯಾಪಕರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಜಡ್ಜರಿಗೂ, ಹೆಚ್ಚಿಗೆ ಸರ್ವರಿಗೂ ಉತ್ತಮ ಪರಿಣಾಮಕಾರಿ ಔಷಧ.
ಕೇಸರಿ ಜೀವನ ದೊರಕುವ ಸ್ಥಳಗಳು:-
1. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿ., ಉಡುಪಿ, 2. ಪಿ. ಸಿ. ಶೆಣೈ, ಕೆಮಿಸ್ಟ್, ಕಾರ್ಕಳ, 3. ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು ಅಥವಾ ಕೆಳಗಿನ ಸೋಲ್ ಏಜಂಟರಲ್ಲಿ:-
ZANDU
ದಾಮೋದರ್ ಎಂಡ್ ಕೊ.
113, ನ್ಯಾನಿಯಪ್ಪ ನಾಯಕನ್ ಸ್ಟ್ರೀಟ್,
ಪಿ. ಟಿ. ಮದ್ರಾಸು.

ಬರ್ಥ ಕಂಟ್ರೋಲ್ ಸುಲಭ ಸಾಧ್ಯವಿದೆ. ಅಪಾಯವಿಲ್ಲ, 100% ಖಾತ್ರಿ ಗಂಡಸರಿಗೆ ರೂ. 3-8-0 ಹೆಂಗಸರಿಗೆ ರೂ. 5-8-0
PERUMAL TRADERS
Near Y. M. C. A. Madurai

[೧ನೇ ಪುಟದಿಂದ ಮುಂದರಿಸಿದ್ದು]

ದಾಗಸದಲ್ಲಿ ಆಳಿಯದುಳಿಯುವ ನಕ್ಷತ್ರ ಅತ ಮುಂದಿನ ಮಂದಿಗೆ ಮಾರ್ಗದರ್ಶಕ ಸ್ಫೂರ್ತಿಯ ಬತ್ತದ ಬುಗ್ಗೆ! ಈ ಮಹಾ ರಣದಲ್ಲಿ ಸಮಾಜವನ್ನು ಸೋಲಿಸಿ ಮುನ್ನುಗ್ಗಿದ ವ್ಯಕ್ತಿಯ ಬಾಳಿನಲ್ಲಂತೂ ಆನಂತಾನಂದವು ಅಸಂಖ್ಯವಾಗಿ ರೂಪುಗೊಳ್ಳುತ್ತದೆ. ಬಾಳಗುರಿಯ ಹಾದಿಯಲ್ಲಿ ಉಬ್ಬಿದೆದೆಯೊಡನೆ ಸಾಗುತ್ತದೆ. ಇಲ್ಲಿ ಒಂದು ಪವಾಡವು ಜರಗುತ್ತದೆ. ಇಷ್ಟರವರೆಗೆ ವ್ಯಕ್ತಿಯೊಡನೆ ಅವಿರತವಾಗಿ ಹೋರಾಡಿ ಹೋರಾಡಿದ ಸಮಾಜ ಈ ಮಟ್ಟದಲ್ಲಿ ಆತನಿಗೆ ತಲೆವಾಗುತ್ತದೆ. ಮಾತ್ರವಲ್ಲ ಆತನನ್ನು ಪೂಜಿಸಿ ಆತನ ಬೆನ್ನ ಹಿಂದೆ ಸಾಗಬಯಸುತ್ತದೆ. ಇದೇ ಸತ್ಯನಿಷ್ಠೆಯ ಹಿರಿಮೆ! ಸತ್ಯನಿಷ್ಠೆಯುಗಳ ಕೌತುಕ! ಹೀಗೆ ಸತ್ಯನಿಷ್ಠನಿಗೆ ಮೊದಲು ಎದುರಾಗುವುದು ಅಪಮಾನ ಒದೆತಗಳು; ಕೊನೆಗೆ ಕೀರ್ತಿ ಸನ್ಮಾನಗಳು! ಪ್ರಥಮದಲ್ಲಿ ಎದುರಾಗುವುದು ವಿಷದ ಬಟ್ಟಲು; ಕೊನೆಗೆ ಸಿಗುವುದು ಅಮೃತದ ಅಕ್ಷಯ ಸಾಗರ! ಹೀಗೆ ಮಾಯ, ಮೋಹ, ಮಮತೆಗಳಿಗಾವುದಕ್ಕೂ ಬಲಿಬೀಳದೆ, ಸಮಾಜದೊಡನೆ ಅವಿರತವಾಗಿ, ಅವಿಶ್ರಾಂತವಾಗಿ ಹೋರಾಡಿ, ಗೆದ್ದು ಸಮಾಜವನ್ನೇ ತನ್ನ ಬೆನ್ನ ಹಿಂದೆ ನಡೆಸಿಕೊಂಡು ಹೋಗುವ ಭಾಗ್ಯ ಬಲುಹಿರಿದು. ಅಂತಹ ಮಹಾತ್ಮರು ಶತಮಾನಕ್ಕೊಬ್ಬರು ಸಿಕ್ಕರೆ ಪುಣ್ಯ! ಆದರೂ ಈ ಅಲ್ಪ ಸಂಖ್ಯಾಕರೆ ಜಗತ್ತಿನ ಭೂತ, ವರ್ತಮಾನ ಭವಿಷ್ಯತ್ತುಗಳನ್ನು ರೂಪಿಸುವವರು.

ಸತ್ಯನಿಷ್ಠನಾಗಿ ಬಾಳಬಯಸುವ ವ್ಯಕ್ತಿಗೆ ಅಂತಹ ಮಹಾತ್ಮರ ಹಾದಿಯೇ ದಿವ್ಯ ಪಥವಾಗುತ್ತದೆ. ಆದರೆ ಅದು ಅಂಧ ವಿಶ್ವಾಸದ ಅಡ್ಡಹಾದಿಯಲ್ಲ; ವಿಮರ್ಶೆ ವಿವೇಚನೆಗಳ ರಾಜಮಾರ್ಗ. ಈ ಹಾದಿಯಲ್ಲಿ ಸಾಗುವಾಗ ಆ ಮಹಾತ್ಮರ ಬಾಳಿನಲ್ಲಿ ಎದುರಾದ ಅನ್ನಬವಣೆಗಳು ಅದನ್ನು ಅವರು ಎದುರಿಸಿ ಮುನ್ನುಗ್ಗಿದ ರೀತಿ ನೀತಿಗಳ ನೆನಪೇ ಧೈರ್ಯೋತ್ಸಾಹಗಳ ಬತ್ತದ ಬುಗ್ಗೆಯನ್ನು ಹೃದಯ ಸರಸ್ಸಿನಲ್ಲಿ ಪುಟಿಸುವ ದಿವ್ಯಸಾಧನವಾಗುತ್ತದೆ. ಈ ಬಲದಿಂದಲೇ ಸತ್ಯನಿಷ್ಠ ಸಮಾಜದ ಅಪಮಾನ ಒದೆತಗಳನ್ನು ನಗುಮೊಗದಿಂದ ಎದುರಿಸುತ್ತಾ ಗುರಿಯೆಡೆಗೆ ಮುನ್ನುಗ್ಗುತ್ತಾನೆ.

—ಏರ್ಯ ಲಕ್ಷ್ಮೀನಾರಾಯಣ ಆಳ್ವ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹಠಾತ್ತಾಗಿ ಋತುಸ್ರಾವವಾಗುವುದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ. ಖರ್ಚು ಪ್ರತ್ಯೇಕ.]

MRS. D. DEVEE, F. D8. (N. 3.)
Tollygunge CALCUTTA.
ಸ್ಟಾಕಿಸ್ಟರು ಕಲ್ಯಾಣಕಂಪೆನಿ, ಮಂಗಳೂರು

ಸಣ್ಣ ಬಂದರುಗಳ ಅಭಿವೃದ್ಧಿ

'ಸಂಜುಂಡಯ್ಯ ಸಮಿತಿ' ವರದಿಯ ಸಾರ

ಕೇಂದ್ರ ಸರಕಾರದ ಬಜೆಟ್ ಅಧಿವೇಶನ ಕಾಲದಲ್ಲಿ ಸಣ್ಣ ಬಂದರುಗಳ ಬೆಳವಣಿಗೆಯ ಕಾರ್ಯಕ್ಕಾಗಿ ಕೆಲವೊಂದು ಹಣವನ್ನೂ ಮಂಜೂರು ಮಾಡಲು ಒಂದು ಮಸೂದೆ ಬರಲಿರುವುದು. ಸದ್ಯದ ಎಲ್ಲಾ ಬಂದರುಗಳಲ್ಲಿಯೂ ಆಯಾತ- ನಿರ್ಯಾತವಾಗುವ ಸರಕುಗಳ ಮೇಲೆ ಪ್ರತಿಯೊಂದು ಟನ್ನಿಗೆ ಒಂದು ಆಣೆಯಂತೆ ತೆರಿಗೆ ವಸೂಲು ಮಾಡುವುದು; ಹಾಗೂ ಸಮುದ್ರ ತೀರವುಳ್ಳ ರಾಜ್ಯಗಳ ಸರಕಾರಗಳಿಂದ, ಅಲ್ಲಲ್ಲಿಯ ಪುಟ್ಟ ಬಂದರುಗಳ ಬೆಳವಣಿಗೆಗಾಗಿ ಖರ್ಚು ಮಾಡುವ ಹಣದಲ್ಲಿ ಅರ್ಧಾಂಶವನ್ನು ಪಡೆಯುವುದು. ಇವೇ ಈ ಮಸೂದೆಯಲ್ಲಿಯ ಧನವಿನಿಯೋಗ ವ್ಯವಸ್ಥೆಯ ಮುಖ್ಯ ಕಲಮುಗಳೆಂದು ತಿಳಿದುಬರುತ್ತದೆ.

ಬಂದರುಗಳ ಅಭಿವೃದ್ಧಿಯ ಬಗ್ಗೆ ತಕ್ಕ ಸಲಹೆ-ಶಿಫಾರಸುಗಳನ್ನು ಸೂಚಿಸುವ ಸಲುವಾಗಿ ನೇಮಿಸಲ್ಪಟ್ಟ "ನಂಜುಂಡಯ್ಯ ಸಮಿತಿ"ಯ ವರದಿಯು ಕೇಂದ್ರ ಸರಕಾರಕ್ಕೆ ಒಪ್ಪಿಸಲ್ಪಟ್ಟಿರುತ್ತದೆ. ಈ ಮಸೂದೆಯ ರಚನೆಯನ್ನು ಮಾಡುವಲ್ಲಿ ಆ ವರದಿಯ ತೀರ್ಮಾನಗಳಲ್ಲಿ ಕೆಲವನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ ಎಂದು ಹೇಳಲ್ಪಟ್ಟಿದೆ.

ಆ ವರದಿಯಲ್ಲಿ, ಸಣ್ಣ ಪುಟ್ಟ ಬಂದರುಗಳ ಆರ್ಥಿಕ ಪರಿಸ್ಥಿತಿಯು ಶೋಚನೀಯವಾಗಿರುವುದೆಂದು ವಿವರಿಸಲ್ಪಟ್ಟಿದೆ. ಪುಟ್ಟ ಬಂದರುಗಳ ಅಭಿವೃದ್ಧಿ ಕಾರ್ಯಕ್ಕೆ (ಆಳ ಅಗಿಸುವ ಖರ್ಚನ್ನುಳಿದು) ಒಟ್ಟು ಎರಡೂವರೆ ಕೋಟಿ ರೂಪಾಯಿಯಷ್ಟು ವೆಚ್ಚಮಾಡಬೇಕಾದೀತೆಂದು ವರದಿಯಲ್ಲಿ ಹೇಳಿದೆ. [illegible] ಗೆ ಎಷ್ಟೆಷ್ಟು ವೆಚ್ಚ ಮಾಡತಕ್ಕದ್ದೆಂಬ ವಿವರ ಹೀಗಿದೆ.

ಮದ್ರಾಸ್	100	ಲಕ್ಷ ರೂಪಾಯಿ
ಬೊಂಬಾಯಿ	25	,,
ಸೌರಾಷ್ಟ್ರಕ್ಕೆ	37	,,
ತ್ರಿವಾಂಕೂರ್- ಕೊಚ್ಚಿನ್	15	,,
ಕಚ್ಛಕ್ಕೆ	25	,,
ಒರಿಸ್ಸಾ(ಉತ್ಕಳ)ಕ್ಕೆ	10	,,
ಹುತ್ತಿಕೂಡಿಗೆ	18	,,
ಓಖಾಕ್ಕೆ	20	,,

ಒಟ್ಟು 250 ಲಕ್ಷ ರೂಪಾಯಿ

ಪುಟ್ಟ ಬಂದರುಗಳ ಅಭಿವೃದ್ಧಿ ಕಾರ್ಯಗಳ ಒಂದು ಪಂಚವಾರ್ಷಿಕ ಯೋಜನೆ ಮಾಡತಕ್ಕದ್ದೆಂದೂ, ಆ ಬಗ್ಗೆ 109 ಲಕ್ಷ ರೂಪಾಯಿಯಷ್ಟು ರಕಮನ್ನು ಮಂಜೂರು ಮಾಡುವ ವಿಧಾನವನ್ನೂ ವರದಿಯಲ್ಲಿ ವಿವರಿಸಲಾಗಿದೆ.

ಈ ಹಣವನ್ನು ಯಾವ್ಯಾವ ಪ್ರಾಂತಕ್ಕೆ ಎಷ್ಟೆಷ್ಟು ರಕಮಿನಂತೆ ಹಂಚಿ ಹಾಕತಕ್ಕದ್ದೆಂಬುದನ್ನು ಈ ರೀತಿ ಸೂಚಿಸಲಾಗಿದೆ:

ಬೊಂಬಾಯಿ	25	ಲಕ್ಷ ರೂಪಾಯಿ
ಒರಿಸ್ಸಾ(ಉತ್ಕಳ)ಕ್ಕೆ	1	,,
ಸೌರಾಷ್ಟ್ರಕ್ಕೆ	33	,,
ತ್ರಿವಾಂಕೋರ್- ಕೊಚ್ಚಿಗೆ	30	,,
ಕಚ್ಛಕ್ಕೆ	20	,,

ಒಟ್ಟು 109 ಲಕ್ಷ ರೂಪಾಯಿ

ಕನ್ನಡ ನಾಡಿಗೆ ಒಟ್ಟು 200 ಮೈಲುದ್ದದಷ್ಟು ಸಮುದ್ರ ತೀರವಿದೆ. ಸದ್ಯಕ್ಕೆ ಈ ನಾಡಿಗೆ ಒಂದಾದರೂ ದೊಡ್ಡ ಬಂದರ ಇರುವುದಿಲ್ಲ. ಕನ್ನಡ ನಾಡಿನ ಯಾವದೇ ಸಣ್ಣ ಬಂದರಿಗೆ ಎಷ್ಟು ಹಣ ಒದಗಿಸಲಾಗುವುದೆಂದೂ ತಿಳಿದಿಲ್ಲ. ಸಣ್ಣ ಪುಟ್ಟ ಬಂದರುಗಳ ಅಭಿವೃದ್ಧಿಗೆ ಈಗ ಸೂಚಿತವಾಗಿರುವ ಹಣವೂ ತೀರಾ ಅಲ್ಪವೆ ನಮ್ಮ ಪ್ರತಿನಿಧಿಗಳೂ ಜನತೆಯೂ ಎಚ್ಚರಗೊಂಡು ಈಗಿಂದೀಗಲೆ ಚಳವಳಿಸುವುದು ವಿಹಿತವೂ ಅವಶ್ಯವೂ ಆಗಿದೆ.

ಬ್ರೂಕ್ ಬಾಂಡ್ ಚಹಾ

ವನ್ನೇ ನೀವು ಏತಕ್ಕೆ ಒತ್ತಿ ಕೇಳಬೇಕೆಂಬುದಕ್ಕೆ

5

ಕಾರಣಗಳು

1. ಅದು ಮಲಿನವಾಗದ ಹಾಗೆ ಪೊಟ್ಟಣಗಳಲ್ಲಿ ಕಟ್ಟಿ ಮೊಹರು ಮಾಡಲ್ಪಟ್ಟಿರುತ್ತದೆ
2. ಬ್ರೂಕ್ ಬಾಂಡ್ ಎಂಬ ಹೆಸರೇ ಅದರ ಗುಣದ ಭರವಸೆ
3. ಶೀಘ್ರವಾಗಿ ತಲಪುವಿಕೆಯು ಅದರ ಪೂರ್ಣ ಸುವಾಸನೆಯನ್ನು ನಿಶ್ಚಯಿಸುತ್ತದೆ.
4. ಬ್ರೂಕ್ ಬಾಂಡ್ ಚಹಗಳು ಇತರ ಬೆರಕೆ ಪದಾರ್ಥಗಳಿಂದ ದೂರವಾಗಿವೆಯೆಂಬ ಭರವಸೆಯನ್ನು ಕೊಡುತ್ತವೆ.
5. ಉತ್ತಮ ಶಾಸ್ತ್ರೀಯ ಮಿಶ್ರಣವು ಉತ್ತಮ ರುಚಿಯನ್ನು ನಿರ್ಣಯಿಸುತ್ತದೆ.

ನಮ್ಮ ಚಂದಾದಾರರಲ್ಲಿ ಇನ್ನೊಮ್ಮೆ ವಿನಂತಿ

ನಮ್ಮ ಚಂದಾದಾರರೊಡನೆ ನಾವು ಈಗಾಗಲೇ ಹಲವುಬಾರಿ ಕಳಕಳಿಯ ವಿನಂತಿ ಮಾಡಿಕೊಂಡಿದ್ದೇವೆ. ಪ್ರತ್ಯೇಕ ಪತ್ರಗಳನ್ನೂ ಬರೆಕೊಂಡಿದ್ದೇವೆ ಆದರೂ ಹೆಚ್ಚಿನವರು ತಮ್ಮ ಚಂದಾ ಹಣವನ್ನು ಕಳಿಸಲಿಲ್ಲವೆಂಬುದಕ್ಕಾಗಿ ಅತ್ಯಂತ ವಿಷಾದಪಡುತ್ತೇವೆ ನಾವು ಆಗಾಗ್ಗೆ ಬರೆಯುವುದರಿಂದ ನಮಗೂ ಶ್ರಮ ಮತ್ತು ನಮ್ಮ ಚಂದಾದಾರರಿಗೂ ಬೇಸರಕ್ಕೆ ಕಾರಣ ಆದುದರಿಂದ ನಮ್ಮ ಚಂದಾದಾರ ಬಂಧುಗಳು ಪತ್ರಿಕೋದ್ಯಮದ ವಿಶೇಷ ಖರ್ಚು ಮತ್ತು ಪ್ರಯಾಸಗಳನ್ನು ಮನಗಂಡು ಇದು ಕನ್ನಡಕ್ಕಾಗಿ ತಮ್ಮ ಸೇವೆಯೆಂದಾಗಲೀ ನವಯುಗಕ್ಕೆ ಸಹಾಯವೆಂದಾಗಲೀ ತಮ್ಮ ತಮ್ಮ ಚಂದಾ ಹಣವನ್ನು ದಯಮಾಡಿ ಕೂಡಲೇ ಕಳುಹಿಸಕೊಟ್ಟು ನಮ್ಮೊಡನೆ ಸಹಕರಿಸಬೇಕಾಗಿ ತಿರುತಿರುಗಿ ವಿನಂತಿಸುತ್ತೇವೆ. ವಿ ಪಿ ಮಾಡಬೇಕೆಂದಿದ್ದರೆ ದಯವಿಟ್ಟು ಹಾಗೆಯೇ ತಿಳಿಸುವುದು. ಪತ್ರಿಕೆ ಬೇಡವೆಂದಿರುವವರೂ ಬಾಕಿಯನ್ನು ಕಳುಹಿಸಿಕೊಟ್ಟು ಹಾಗೆಯೇ ತಿಳಿಸಬಹುದು

ಮೆನೇಜರ್.

ಆಹಾರ ಮಂತ್ರಿಗಳ ಪರಿಷತ್ತು ಮತ್ತು ಪರಿಸ್ಥಿತಿ

1952ಕ್ಕೆ ಆಹಾರ ವಿಚಾರದಲ್ಲಿ ನಾವು ಸ್ವಾವಲಂಬಿಗಳಾಗುವೆವೆಂದು ಮುಖ್ಯ ಮಂತ್ರಿ ನೆಹ್ರೂರವರು ಹೇಳಿದ್ದಂಶವು ಕಾರ್ಯರೂಪದಲ್ಲಿ ಬರದೇ ಹೋದುದಕ್ಕೆ ವಿಷಾದ ಪ್ರದರ್ಶಿಸಿ ಸದ್ಯದ ಪರಿಸ್ಥಿತಿಯನ್ನು ಹೇಗೆ ಎದುರಿಸಬಹುದೆಂದು ಅವರು ನಿವೇದಿಸಿಕೊಂಡಿದ್ದಾರೆ. ವರ್ಷವರ್ಷಕ್ಕೆ ಭಾರತ ಆಹಾರ ಪರಿಸ್ಥಿತಿಯು ಕೆಡುತ್ತ ಬಂದಿದೆ. ವಿದೇಶದಿಂದ ಆಯಾತ ಮಾಡಿಕೊಳ್ಳುವದೂ ಅಧಿಕವಾಗಿದೆ. ಕಳೆದ ವರ್ಷ 47 ಲಕ್ಷ ಟನ್ ಆಯಾತ ಮಾಡಿದ್ದಾರೆ. ಈ ವರ್ಷ 68 ಲಕ್ಷ ಟನ್ನಿಗೂ ಮಿಕ್ಕಿ ಆಯಾತ ಮಾಡಿಕೊಳ್ಳಬೇಕಾಗಿದೆ. ಇಷ್ಟು ಮಾಡಿದರೂ ಬರಗಾಲದ ಭೀತಿ ತಪ್ಪಿದ್ದಲ್ಲ. ಬೆಳೆಯಲ್ಲಿ ಹೆಚ್ಚಿನ ಸುಧಾರಣೆಯಾಗದೆಯಿರುವದರಿಂದಲೂ- ಪ್ರಕೃತಿ ವಿಕೋಪದಿಂದಲೂ-ಎತ್ತುವಳಿಯ ಕಾರ್ಯ ಯಶಸ್ವಿಯಾಗಿರುವುದಿಲ್ಲ. ಪಾಕಿಸ್ತಾನದಿಂದ ಬರಬೇಕಾದ 60,000 ಟನ್ ಅಕ್ಕಿ ಬಂದಿರುವುದಿಲ್ಲ. ನೇಪಾಳವು ಹೊರಕ್ಕೆ ಅಕ್ಕಿ ಕಳಿಸಿರುವುದನ್ನು ನಿಲ್ಲಿಸಿರುತ್ತದೆ. ಹೀಗಾಗಿ ಆಯಾತ ಮಾರ್ಗದಲ್ಲೂ ಅನಿರೀಕ್ಷಿತವಾದ ಬಿಕ್ಕಟ್ಟುಂಟಾಗಿದೆ. ಹೆಚ್ಚಾಗಿ ಅಕ್ಕಿ ಬರುವ ಬರ್ಮಾದ ಪರಿಸ್ಥಿತಿ ನಾವೆಣಿಸಿದಷ್ಟು ಆಶಾದಾಯಕವಾಗಿರುವುದಿಲ್ಲ. ಹೀಗಾಗಿ ಮುಂದಿನ ದಿನಗಳು ಅತ್ಯಂತ ಕಠಿಣವಾಗಿವೆ. ತತ್ಕಾಲದ ಆಹಾರ ಸಂಗ್ರಹವು ತೃಪ್ತಿಕರವಾಗಿರುವದಾದರೂ ಮುಂದಿನ ದಿನಗಳಲ್ಲಿ ನಿರ್ದಿಷ್ಟ ಪರಿಮಿತಿಗಿಂತ ಹೆಚ್ಚಾಗಿ ಆಹಾರವು ಹೊರಗಿಂದ ಬರದೆ ಹೋದರೆ ಪರಿಸ್ಥಿತಿ ಗಂಭೀರವಾಗಬಹುದು. ಅದರಲ್ಲೂ ಅಕ್ಕಿಯ ಕೊರತೆ ಬಹಳವಾಗಿದೆ. ಅಕ್ಕಿ ತಿನ್ನುವವರು ತಮ್ಮ ಪ್ರಮಾಣದಲ್ಲಿ ಕಡಿತವನ್ನುಂಟು ಮಾಡಿ ಇತರ ಗೋಧಿ-ಜೋಳಗಳನ್ನು ಸೇವಿಸಬೇಕೆಂದು ಆಹಾರಮಂತ್ರಿಗಳೂ ಮುಖ್ಯ ಮಂತ್ರಿಗಳೂ ಪದೇ ಪದೇ ಹೇಳುತ್ತಲಿದ್ದಾರೆ. ಮದ್ರಾಸಿಗರಾದ ನಮ್ಮ ಪಾಲಿಗಂತೂ ಇದು ಬಹುಕಷ್ಟದ ಸಂಗತಿ! ಆಹಾರ ಮಂತ್ರಿ ರಫೀ ಕಿದ್ವಾಯಿಯವರು ಆಹಾರ ಸಂಗ್ರಹ ತೃಪ್ತಿಕರವಾಗಿದೆಂದು ಅಭಯವನ್ನು ನೀಡುತ್ತಿದ್ದ ಹಾಗೆಯೇ- ಮರುಕ್ಷಣದಲ್ಲಿಯೇ ಆಹಾರ ಪರಿಸ್ಥಿತಿ ಚಿಂತಾಜನಕವಾಗಿದೆ ಎಂದು ಹೇಳಲು ಹಿಂಜರಿಯುವುದಿಲ್ಲ. ಆಹಾರೋತ್ಪಾದನೆಯಿಂದ ನಮ್ಮ ಕೊರತೆಯನ್ನು ನೀಗುವದಕ್ಕೆ ಸಾಧ್ಯವಾಗದೆ ಹೋದರೂ ಸಾಧಿಸಿದ ಪ್ರಗತಿಯನ್ನು ನಾವು ಅಲ್ಲಗಳೆಯಲಾರೆವು. ಆದರೆ ಪ್ರಾಂತಿಕ ಹಾಗೂ ಕೇಂದ್ರ ಸರಕಾರಗಳ ಆಹಾರ ಹಂಚುವಿಕೆಯ ಪದ್ಧತಿಯು ದೋಷಪೂರ್ಣವಾಗಿದೆಂದು ವಿಷಾದದಿಂದ ಹೇಳಬೇಕಾಗಿದೆ. ಈ ಅಂಶ ಮುಖ್ಯಮಂತ್ರಿ ನೆಹ್ರೂರವರೇ ಒಪ್ಪಿಕೊಂಡಿದ್ದಾರೆ. ಪ್ರಾಂತಗಳಲ್ಲಿ ತಲೆದೋರುವ ಆಹಾರಾಭಾವಕ್ಕೆ ಅಂಕೆಸಂಖ್ಯೆಗಳ ಆಧಾರ ತೋರಿಸಿ ಕ್ಷಣಕ್ಷಣಕ್ಕೆ ಕೇಂದ್ರವನ್ನು ಮರೆಹೋಗುವದು ನಮಗೆ ಪರಿಪಾಠವಾಗಿದೆ. ಪ್ರಾಂತೀಯ ಸರಕಾರಗಳು ಈ ಪರಾವಲಂಬನ ಧೋರಣದಲ್ಲಿ ಬದಲಾವಣೆ ಮಾಡುವದು ಅವಶ್ಯ. ಪ್ರಾಂತದಲ್ಲಿ ಆಹಾರೋತ್ಪಾದನೆ- ಎತ್ತುವಳಿ- ಹಂಚುವಿಕೆಯ ಕ್ರಮವು ಸುಸೂತ್ರವಾಗಿ ಜರಗುತ್ತಿಲ್ಲವೆಂಬುದು ಇಲ್ಲಿನ ವಿದ್ಯಮಾನಗಳನ್ನರಿತವರಿಗೆಲ್ಲ ಅರ್ಥವಾಗದಿರದು. ಕ್ರಮಬದ್ಧತೆ ಇಲ್ಲದಲ್ಲಿ ಕಳ್ಳಸಂತೆ ನಡೆಯುವದು ಆಶ್ಚರ್ಯದ ಅಂಶವೇನಲ್ಲ! ಆಹಾರವು ಸರ್ವರಿಗೂ ದೊರಕುವಂತಾಗಬೇಕಾದರೆ ವಿತರಣೆ- ಹಾಗೂ ಧಾರಣೆಯ ಕ್ರಮದಲ್ಲಿ ಎಲ್ಲ ಪ್ರಾಂತಗಳಿಗೂ ಏಕಸೂತ್ರತೆ ಬೇಕೇ ಬೇಕು. ದಿಲ್ಲಿಯಲ್ಲೋ ಮದ್ರಾಸದಲ್ಲೋ ಸಮಾಲೋಚನೆ- ಪರಿಷತ್ತು ನಡಿಸಿದರೆ ಸಾಲದು. ಆಹಾರೋತ್ಪಾದನೆಯ ಕ್ಷೇತ್ರವಾದ ಹಳ್ಳಿಯಲ್ಲೂ ಈ ಸುಧಾರಣೆಯಾಗುವದು ಆದ್ಯ ಕರ್ತವ್ಯವಾಗಿದೆ.

ಪಂಚವಾರ್ಷಿಕ ಯೋಜನೆ ಮತ್ತು ವಿದೇಶೀ ಸಾಲ

ಭಾರತ ಸರಕಾರವು ಕೈಗೊಂಡಿರುವ ಪಂಚವಾರ್ಷಿಕ ಯೋಜನೆಗಳ ಕುರಿತು ಪಾರ್ಲಿಮೆಂಟಿನಲ್ಲಿ ಒಳ್ಳೆ ಹುರುಪಿನ ಮಾತುಕತೆಗಳು ನಡೆದಿವೆ. ವಿದೇಶೀಯ ಬಂಡವಲದಿಂದ ಯೋಜನೆಯನ್ನು ಕಾರ್ಯರೂಪದಲ್ಲಿ ತರಬೇಕಾದ ಅವಶ್ಯಕತೆಯಿದೆಯೆ? ಎನ್ನುವ ಪ್ರಶ್ನೆಯೂ ಬಂದಿದೆ. ಇದಕ್ಕೆ ಆರ್ಥಿಕ ಮಂತ್ರಿಗಳಾದ ಶ್ರೀ. ಸಿ. ದೇಶಮುಖರು ಸಮರ್ಪಕವಾದ ಉತ್ತರವನ್ನಿತ್ತಿದ್ದಾರೆ. ಪಂಚವಾರ್ಷಿಕ ಯೋಜನೆಗೆ ಪ್ರಥಮವಾರ್ಧಕ್ಕೆ ಎಷ್ಟು ಹಣ ಬೇಕಾಗುವದೆಂದು ಅಂದಾಜು ಮಾಡಲಾಗಿದ್ದು ಇದರಲ್ಲಿ ಭಾರತ ದೇಶದ ಬಂಡವಲು ಎಷ್ಟು ದೊರಕುವದೆಂಬುದೂ ನೋಡಲಾಗಿದೆ. ಈ ಯೋಜನೆಗಳಿಗಾಗಿ ಒಟ್ಟಿಗೆ 1500 ಕೋಟಿ ರೂ.ಗಳು ಬೇಕಾಗುವದು. ಇವಿಷ್ಟನ್ನೂ ಭಾರತವು ಪೂರೈಸಲಾರದು. ಅದಕ್ಕೆ ವಿದೇಶೀಯರ ನೆರವು ಅವಶ್ಯ ಬೇಕಾಗಿದೆ.

ಜಾಗತಿಕ ಬ್ಯಾಂಕಿನ ನಿಯೋಗವೊಂದು ಈ ಮೊದಲು ಭಾರತಕ್ಕೆ ಬಂದಿದ್ದು ಇಲ್ಲಿಯ ಯೋಜನೆಗಳನ್ನು ಪರಿಶೀಲಿಸಿ ಮುಂದಕ್ಕೆ ಎಷ್ಟು ಸಾಲ ಕೊಡಬಹುದೆನ್ನುವ ಕುರಿತು ವರದಿ ಮಾಡಿದೆ. ಬಳಿಕ ಜಾಗತಿಕ ಬ್ಯಾಂಕಿನ ಅಧ್ಯಕ್ಷ ಶ್ರೀ ಯುಜೀನ ಬ್ಲ್ಯಾಕರು ಭಾರತವನ್ನು ಸಂದರ್ಶಿಸಿ ಭಾರತ ಸರಕಾರವು ಕೈಗೊಂಡಿರುವ ಒಕ್ಕಲುತನ ಮತ್ತು ಔದ್ಯಮಿಕ ಉತ್ಪಾದನೆಯ ಕ್ರಮದಲ್ಲಿ ಅತ್ಯಂತ ವಿಶ್ವಾಸವನ್ನು ಪ್ರದರ್ಶಿಸಿದ್ದಾರೆ. ಪ್ರತಿಯೊಂದು ಯೋಜನೆಗಳೂ ಅತ್ಯಂತ ಬುದ್ಧಿಮತ್ತೆಯಿಂದ ತಯಾರಿಸಲಾಗಿದ್ದು ಆರ್ಥಿಕ ಸಹಾಯ ದೊರೆತರೆ ಇವು ಕಾರ್ಯರೂಪದಲ್ಲಿ ಬರುವದರಲ್ಲಿ ಸಂದೇಹವೇ ಇಲ್ಲವೆಂದು ಅವರು ಅಭಿಪ್ರಾಯ ಪಟ್ಟಿರುವರು. ದೇಶದಲ್ಲಿಯ ಸರಕಾರದ ಮತ್ತು ಖಾಸಗೀ ಉದ್ದಿಮೆಗಳಲ್ಲಿ ಅನೇಕ ಮೇಧಾವಿಗಳಿರುವದನ್ನು ಅವರು ಉಲ್ಲೇಖಿಸಿರುವರು. ಹಿಂದೀ ರೈಲ್ವೆಗಳು ಮಾಡುತ್ತಿರುವ ಕೆಲಸಗಳು ಅತ್ಯಂತ ತೃಪ್ತಿಕರವಿದ್ದು ಭಾರತದಲ್ಲಿಯ ರೈಲ್ವೆ ಮತ್ತು ರಸ್ತೆಗಳ ಆಡಳಿತ ಪದ್ಧತಿಯು ಉತ್ಕೃಷ್ಟವಾಗಿದೆಂದಿದ್ದಾರೆ. ಹಿಂದೀ ರೈಲ್ವೆಗಳ ಪುನರ್ನಿವೇಶನಕ್ಕಾಗಿ ಜಾಗತಿಕ ಬ್ಯಾಂಕು ನೀಡಿದ 6 ಕೋಟಿ ಡಾಲರುಗಳ ಸಾಲವು ಸದ್ವಿನಿಯೋಗವಾಗಿದೆಂದೂ ಅಭಿಪ್ರಾಯ ಪಟ್ಟಿರುವರು. ಅಂತೂ ಅಧ್ಯಕ್ಷ ಬ್ಲ್ಯಾಕರು ಭಾರತ ಸರಕಾರ ಕಾರ್ಯಕ್ಕೆ ತೊಡಗಿರುವ ಪಂಚವಾರ್ಷಿಕ ಯೋಜನೆಯನ್ನು ಹೃತ್ಪೂರ್ವಕ ಕೊಂಡಾಡಿದ್ದು ಮಾತ್ರವಲ್ಲದೆ ಜಾಗತಿಕ ಬ್ಯಾಂಕು ವಿಶಿಷ್ಟವಾದ ಆರ್ಥಿಕ ನೆರವನ್ನು ನೀಡುವಂತೆ ಶಿಫಾರಸು ಮಾಡುವರೆನ್ನುವದರಲ್ಲಿ ಸಂದೇಹವಿಲ್ಲ! ಅವರು ಪರಿಶೀಲನೆಯ ನಂತರ ಕೊಟ್ಟ ಹೇಳಿಕೆ ಹಾಗೂ ಸಲಹೆಗಳು ಅತ್ಯಂತ ಗಮನಾರ್ಹವೂ ಆಶಾದಾಯಕವೂ ಆಗಿವೆ.

ಕಾಸರಗೋಡು ಡಿ. ಮು.
ಕೋರ್ಟಿನಲ್ಲಿ
O. P. No 5/1952

1 ಮರಿಯುಮ್ಮ, ಮೃತಪಟ್ಟ B ಮಹಮ್ಮದ ಕುಂಞ ಪ್ಯಾರ ಬೇವುಂಜೆ ಅಬ್ಬಾಸ ಬ್ಯಾರಿ ಹೆಂಡ್ತಿ.

2 ಬೀ ಪಾತುಮ್ಮ, ... ಟ್ಟ ಬ್ಯಾರಿ ಮಗಳು ವ ಮೃತಪಟ್ಟ B ಮಹಮ್ಮದ ಕುಂಞಯ ಹೆಂಡ್ತಿ.

3 ಆಯಿಸು, 4, ನಫೀಸಾ 5, ಉಮ್ಮಾಲಿ, 6, ಮರಿಯುಮ್ಮ, 7 ಖದೀಜ, 8 ಅಬಬ 9 ಹಮೀದ್, 10 ಅಬ್ಬಾಸ, ಮೃತಪಟ್ಟ B. ಮಹಮ್ಮದ ಕುಂಞಯ ಮಕ್ಕಳು 6ರಿಂದ 10ನೇಯವರು ಮೈನರು ಇವರ ಕ್ಷೇಮ ಚಿಂತಕಳು ಶ್ರೀ 2ನೇ ಬೀ ಪಾತುಮ್ಮ,

ಕಾಸ್ರಗೋಡು ತಾಲ್ಲೂಕ ತಕ್ಕಿಲ ಗ್ರಾಮದಲ್ಲಿ ವಾಸವು, —ಅರ್ಜಿದಾರರು.

ಸದ್ರಿ ಅರ್ಜಿದಾರ್ರು ತಿಳಿಸುವದೇನಂದ್ರೆ 1ನೇ ಅರ್ಜಿದಾತಳ ಮಗ 2ನೇ ಅರ್ಜಿದಾರಳ ಗಂಡ ಮತ್ತು 3ರಿಂದ 10ನೇ ವರೇಗಿನ ಅರ್ಜಿದಾರರ ತಂದೆಯೂ ಆಗಿದ್ದ ಮೃತ B. ಮಹಮ್ಮದ ಕುಂಞಗೆ ಹೋಗಿನಿಂದ ಬರತಕ್ಕ ಸಾಲವನ್ನು ವಸೂಲು ಮಾಡುವರೆ ಸಕ್ಸೆಶ್ಯನ್ ಸರ್ಟಿಫಿಕೇಟಿನ ಬಗ್ಗೆ ಅರ್ಜಿದಾರರು ದಾಖಲ್ಲು ಮಾಡಿದ ಸದ್ರಿ ಅರ್ಜಿಯು ತಾರೀಕು 15-3-1952ಕ್ಕೆ ತನ್ನಿಗೆ ಇಟ್ಟಿರುವ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

Sd/ **P. Ahmad**
Advocate for Petitioners
Kasaragod 20-2-1952

THE MAHARASHTRA APEX BANK LTD., UDIPI
(Incorporated in India; Liability of Members Limited)

NOTICE

Notice is hereby given that the 500 shares numbered 3022 to 3271 and 16223 to 16472 comprised in Share Certificate Nos. 13 & 741 respy. fully paid at Rs. 5000/- in The Shankar Vittal Motor Co, Ltd., Mangalore standing in our name (transferred from Sri A. Bacha Marakala, Airody, Hungaroutta) will be sold by public auction at the Registered Office, Ramanjaneya Bldgs, Udipi, on Saturday, the 15th March, 1952 at 2 P. M. or at any other date & time convenient to the Bank.

Ramanjaneya Bldgs, Koladpet, **Udipi**, 21—2—1952.

K. R. V. Kamath, Cert. A.I.I.B.
Agent at H. O.



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಕೋಮಲಾಂಗಿಯರೆ- ನಿಮ್ಮ ಚಿಂತೆಗಳನ್ನು ಬಿಟ್ಟುಬಿಡಿರಿ. ಎಲ್ಲಾ ತರದ ಮುಟ್ಟು ದೋಷಗಳಿಗೂ ಮಹಾಮಾತ್ರೆಯನ್ನು ಸೇವಿಸಿರಿ. ಸಾಮಾನ್ಯ ಮಾತ್ರೆಗಳಿಗೆ ರೂ.7-8-0; ಸ್ಪೆಶಲ್ ರೂ. 10-8-0; ಅತೀ ಸ್ಪೆಶಲ್ ರೂ. 16-0-0; ವಿ ಪಿ ಚಾರ್ಜು ಪ್ರತ್ಯೇಕ

RAJA MART,
West Vedmapokki Street, MADURAI

ವಾರದ ವಾರ್ತೆ

ಈಜಿಪ್ತ ಬ್ರಿಟನ ಮಾತುಕತೆ

ಬ್ರಿಟನ ಈಜಿಪ್ತಗಳೊಳಗೆ ಮಹತ್ವದ ಮಾತುಕತೆಯು ಈ ವಾರದಲ್ಲಿ ನಡೆಯುವದೆಂದು ತಿಳಿದು ಬಂದಿದೆ. ಪಾಕಿಸ್ತಾನ, ಸೌದಿ ಅರೇಬಿಯಾ ಇರಾಕಗಳು ಮಧ್ಯಸ್ಥಿಕೆ ವಹಿಸುವದಾಗಿ ಮುಂಚೆ ಬಂದಿದ್ದರೂ ಈಜಿಪ್ತವು ಇಂದು ನೇರಾಗಿ ಬ್ರಿಟನ್ನದೊಡನೆ ಮಾತುಕತೆ ನಡೆಸಲು ಮುಂದೆ ಬಂದಿದೆ.

ಈಜಿಪ್ತ ರಶಿಯ ವ್ಯಾಪಾರೀ ಒಪ್ಪಂದ

ರಶಿಯ ಈಜಿಪ್ತಗಳೊಳಗೆ ವಿನಿಮಯ ವ್ಯಾಪಾರಿ ಒಪ್ಪಂದ ನಡೆದಿದ್ದು ಈ ಒಪ್ಪಂದದಂತೆ ರಶಿಯವು ಈಜಿಪ್ತದ ಹತ್ತಿಯ ಬದಲಾಗಿ ಗೋದಿಯನ್ನು ವಿನಿಮಯವಾಗಿ ಕೊಡಬೇಕೆಂದು ಗೊತ್ತಾಗಿದೆ.

ಅಮೇರಿಕೆಯ ಅಣು ಶಕ್ತಿ

ಅಮೇರಿಕೆಯು ಸಾಕಷ್ಟು ಅಣು ಬಾಂಬುಗಳನ್ನು ಸಂಗ್ರಹಿಸಿರುವದರಿಂದ ರಶಿಯವು ಜಗತ್ತಿನ ಯಾವುದೇ ಭಾಗದಲ್ಲಿ ಧಾಳಿ ಪ್ರಾರಂಭಿಸುವದು ತೀರ ಮೂರ್ಖತನವೆನಿಸುವದೆಂದೂ ಅಂತಹ ಪ್ರಸಂಗದಲ್ಲಿ ಅಣುಬಾಂಬನ್ನು ಪ್ರಯೋಗಿಸಲು ಅಮೇರಿಕೆಯು ಹಿಂಜರಿಯುವದಿಲ್ಲವೆಂದು ಅಮೇರಿಕೆಯ ಅಣುಶಕ್ತಿಯ ಸಮಿತಿಯ ಅಧ್ಯಕ್ಷರು ನುಡಿದರು.

ಕ್ಲಿಮೆಂಟ್ ಅ್ಯಟ್ಲಿಯವರ ಎಚ್ಚರಿಕೆ

ಬ್ರಿಟನ್ನದ ಹಿಂದಿನ ಮುಖ್ಯ ಮಂತ್ರಿ ಕ್ಲಿಮೆಂಟ ಅ್ಯಟ್ಲಿಯವರು ಬಾನುಲಿಯಲ್ಲಿ ಮಾತನಾಡುತ್ತಾ "ಅಮೇರಿಕೆಯಲ್ಲಿ ಕೆಲ ಪ್ರತಿಷ್ಠಿತ ಜನರು ಚಿಯಾಂಗ ಕೈಶೇಖರ ಲಂಚಗುಳಿ ಚಟವನ್ನು ಎತ್ತಿ ಹಿಡಿಯುವರು. ಪ್ರಧಾನ ಮಂತ್ರಿ ವಿನ್ಸಟನ್ ಚರ್ಚಿಲ್ಲರು ಕಾಂಗ್ರೆಸದಲ್ಲಿ ಮಾಡಿದ ಭಾಷಣದಲ್ಲಿ ಕಮ್ಯುನಿಸ್ಟ ಚೀನದೊಡನೆ ಯುದ್ಧ ಮಾಡಬೇಕೆಂದು ಪ್ರಚೋದಿಸುತ್ತಿರುವ ಈ ಭಾತುಕ ವ್ಯಕ್ತಿಗಳನ್ನು ತಾವು ಬೆಂಬಲಿಸುತ್ತಿರುವಂತೆ ಅಮೇರಿಕರಿಗೆ ಅನಿಸುವಂತೆ ಮಾಡಿದ್ದು ಶೋಚನೀಯ. ಚೀನದ ಮೇಲೆ ಯಾವುದೇ ಪಾಶ್ಚಿಮಾತ್ಯ ರಾಷ್ಟ್ರಗಳು ದಾಳಿ ಮಾಡಿದರೆ ಪೂರ್ವದಲ್ಲಿರುವ ಎಲ್ಲ ಏಶಿಯರಲ್ಲಿ ರಾಷ್ಟ್ರೀಯ ಭಾವನೆಯು ಜಾಗ್ರತೆಗೊಳ್ಳುವದರಿಂದ ಏಶಿಯದಲ್ಲಿ ಅಂತಹ ದೊಡ್ಡ ಯುದ್ಧದಲ್ಲಿ ತೊಡಗುವದು ಪಾಶ್ಚಿಮಾತ್ಯ ರಾಷ್ಟ್ರಗಳ ಮೂರ್ಖತನವೇ ಸರಿ" ಎಂದಿದ್ದಾರೆ.

ಕೊರಿಯ ಸಂಧಾನದಲ್ಲಿ ಬಿಕ್ಕಟ್ಟು

ಯುದ್ಧ ವಿರಾಮ ಮಾತುಕತೆಗಳಲ್ಲಿ ಯುದ್ಧ ಕೈದಿಗಳ ಸಂಧಿಯ ಬಿಡುಗಡೆಯ ವಿಷಯದ ಚರ್ಚೆ ಸಾಗಿಸಿದಾಗ ರಶಿಯವನ್ನು ತಟಸ್ಥ ರಾಷ್ಟ್ರವನ್ನಾಗಿ ಗ್ರಹಿಸಬೇಕೆಂದು ಕಮ್ಯುನಿಸ್ಟರು ಮಾಡಿದ ಸೂಚನೆಗೆ ಸಂ. ರಾ. ಪ್ರತಿನಿಧಿಗಳು ಅನವಶ್ಯವಾಗಿ ಆಕ್ಷೇಪವೆತ್ತಿರುವದರಿಂದ ಸಂಧಾನ ಮಾತುಕತೆಯಲ್ಲಿ ಮತ್ತೆ ಬಿಕ್ಕಟ್ಟುಂಟಾಗಿದೆಂದು ತಿಳಿಯುತ್ತದೆ

ಢಾಕಾದಲ್ಲಿ ಗಲಭೆ

ಬಂಗಾಲಿಯನ್ನು ಪಾಕಿಸ್ತಾನದ ರಾಷ್ಟ್ರಭಾಷೆಯೊಂದನ್ನಾಗಿ ಸ್ವೀಕರಿಸಬೇಕೆಂದು ಕಳೆದ ನಾಲ್ಕಾರು ದಿನಗಳಿಂದ ಪ್ರಾರಂಭವಾದ ವಿದ್ಯಾರ್ಥಿಗಳ ಸಂಪು ಕೊಂಚ ಭೀಕರ ಸ್ವರೂಪವನ್ನು ತಾಳಿದೆ. ವಿದ್ಯಾರ್ಥಿಗಳ ಮೇಲೆ ಪೋಲೀಸರು ನಡೆಸಿದ ಅತ್ಯಾಚಾರವನ್ನು ನಾಗರಿಕರೂ ಸಹಿಸದಾದರು. ಅಂತಲೆ ಹೆಚ್ಚಿನ ನಾಗರಿಕರೂ ವ್ಯಾಪಾರಸ್ಥರೂ ವಿದ್ಯಾರ್ಥಿಗಳ ಸಹಾನುಭೂತಿಯುಳ್ಳವರಾಗಿದ್ದಾರೆಂದು" ಗೊತ್ತಾಗಿದೆ. ವಿದ್ಯಾಲಯ ಪ್ರದೇಶಗಳಲ್ಲಿ ಬಲವಾದ ಪೋಲೀಸ ಕಾವಲು ಇಟ್ಟಿರುವದರಿಂದ ಈಚೆಗೆ ವಿಶೇಷ ಘಟನೆ ನಡೆದ ವಾರ್ತೆ ಬಂದಿರುವುದಿಲ್ಲ!

ಭಾರತ ಜನತೆಯ ಆರೋಗ್ಯರಕ್ಷಣೆ

ಮಲೇರಿಯಾ ನಿಯಂತ್ರಣ ಕ್ಷಯರೋಗ ಪ್ರತಿಬಂಧ ಬಿ. ಸಿ. ಜಿ. ವ್ಯಾಕ್ಸಿನೇಶನ್, ಡಿ. ಡಿ. ಟಿ. ತಯಾರಿಕೆ ಕಂಪೆನಿ, ಪೆನ್ಸಿಲಿನ್ ತಯಾರಿಕೆ ಕಾರಖಾನೆ ಇವುಗಳಿಗಾಗಿ ಭಾರತದಲ್ಲಿ 1952ರಲ್ಲಿ 17,00,000 ಡಾಲರುಗಳನ್ನು ವೆಚ್ಚಮಾಡಲು ಜಾಗತಿಕ ಆರೋಗ್ಯ ಸಂಸ್ಥೆ ಬಯಸಿದೆಯಂತೆ.

ಭಾರತ ರೈಲ್ವೆ ಶತ ಸಾಂವತ್ಸರಿಕ

1953ರಲ್ಲಿ ಭಾರತದಲ್ಲಿ ಅಂತರರಾಷ್ಟ್ರೀಯ ಕಾಂಗ್ರೆಸು ಸೇರಿಸುವದಕ್ಕೆ ಆಮಂತ್ರಣ ಕಳಿಸಲಾಗಿದೆಂದೂ ಇವೆರಡೂ ಸಮಾರಂಭಗಳನ್ನು ಸಾಧ್ಯವಾದರೆ 1953ರ ವಸಂತಋತುವಿನಲ್ಲಿ ಜರಗಿಸಲಾಗುವುದೆಂದೂ-ಒಂದು ವೇಳೆ ಎರಡೂ ಸಮಾರಂಭಗಳನ್ನು ಒಂದೇ ಕಾಲದಲ್ಲಿ ನಡೆಸಲಿಕ್ಕಾಗದೆ ಹೋದರೆ ಅಂತರರಾಷ್ಟ್ರೀಯ ಪರಿಷತ್ತಿನ ನಂತರ ಭಾರತ ರೈಲ್ವೆ ಶತ ಸಾಂವತ್ಸರಿಕ ಮಹೋತ್ಸವ ಜರುಗಿಸಲಾಗುವದೆಂದ ಶ್ರೀ ಗೋಪಾಲ ಸ್ವಾಮಿ ಅಯ್ಯಂಗಾರರು ಹೇಳಿದರು.

ವಿನೋಬಾ ಭಾವೆಯವರ ಭೂದಾನ ಯಜ್ಞ

ಆಚಾರ್ಯ ವಿನೋಬಾ ಭಾವೆಯವರಿಗೆ ಅವರ ಭೂದಾನ ಯಜ್ಞಕ್ಕಾಗಿ ಇದುವರೆಗೆ 7?,?00 ಎ[illegible]ಮಿ ದೊರೆತಿದೆಯೆಂದು ತಿಳಿಯುತ್ತದೆ.

ನ್ಯೂಯಾರ್ಕಿನಲ್ಲಿ ಸಾವಿತ್ರಿ ನಾಟಕದ ಪ್ರಯೋಗ

ನ್ಯೂಯಾರ್ಕದ ಭಾರತ ಸರಕಾರದ ಪ್ರತಿನಿಧಿಯ ಕಚೇರಿಯಲ್ಲಿ ಇಂಡೋ ಅಮೆರಿಕನ್ ವಿದ್ಯಾರ್ಥಿ ಸಂಘದವರು ಶ್ರೀ ಅರವಿಂದರ ಸಾವಿತ್ರಿ ಎಂಬ ನಾಟಕವನ್ನು ಆಡಿದರು. ಈ ಸಮಾರಂಭಕ್ಕೆ ಅಮೆರಿಕನ್ನರು ಏಶಿಯದ ಪ್ರಮುಖ ರಾಯಭಾರಿಗಳನ್ನೊಳಗೊಂಡು ಸುಮಾರು 3000 ಜನರು ಬಂದಿದ್ದರು. ಅಮೆರಿಕೆಯ ರಂಗಭೂಮಿಯ ಮೇಲೆ ಹೆಸರು ಗಳಿಸಿದ ಮಿಸ್. ಜೇನ್ ಹೀಸೋರ್ ಎಂಬ ನಟಿಯು ಸಾವಿತ್ರಿಯ ಪಾತ್ರವನ್ನೂ ಅಮೆರಿಕನ್ ನಿಗ್ರೋ ಥಿಯೇಟರದ ಮುಖ್ಯಸ್ಥನಾದ ಆಸ್ಟಿನ್ ಬ್ರಿಗ್ಸ ಯಮನ ಪಾತ್ರವನ್ನೂ ವಹಿಸಿದ್ದರು.

ಗಡಿನಾಡ ಗಾಂಧಿಯ ಬಿಡುಗಡೆಗಾಗಿ ಜನತೆಯ ಯತ್ನ

ಗಾಡಿನಾಡ ಗಾಂಧಿ ಖಾನ ಅಬ್ದುಲ್ ಗಫಾರಖಾನರು ಅಸ್ವಸ್ಥರಿರುವರೆಂದು ವರದಿಯಾಗಿದೆ. ಪಾಕಿಸ್ತಾನ ಸರಕಾರ ಸ್ಥಾಪಿತವಾದಂದಿನಿಂದ ಇವರನ್ನು ಕಾರಾಗೃಹದಲ್ಲಿಡಲಾಗಿದೆ. ಗಡಿನಾಡ ಪ್ರಾಂತದ ಸ್ವಾತಂತ್ರ್ಯ ಚಳುವಳಿಯ ಜನಕರಾದ ಇವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂಬ ತೀವ್ರ ಮನೋವೃತ್ತಿ ಪಾಕಿಸ್ತಾನ ಜನತೆಯಲ್ಲ ಮಾತ್ರವಲ್ಲ ಪತ್ರಿಕೆಗಳಲ್ಲೂ ಕಂಡುಬಂದಿದೆ. ಮೂರು ವರ್ಷಗಳ ಸ್ಥಾನಬದ್ಧತೆಯ ನಂತರ ಕೆಂಪಂಗಿ ಧುರೀಣರಾದ ಕಾಜಿ ಅತ್ತಾವುಲ್ಲಾ ಖಾನರು ಇತ್ತೀಚೆಗೆ ನಿಧನಹೊಂದಿರುವುದೇ ಈ ಚಳುವಳಿಗೆ ಮುಖ್ಯ ಕಾರಣವಾಗಿದೆ.

ತಿರುಕೊಚ್ಚಿಯಲ್ಲಿ ಸರಕಾರ ರಚನೆ

ತಿರುವಾಂಕೂರು- ಕೊಚ್ಚಿಯ ಕಾಂಗ್ರೆಸ್ ಧುರೀಣರು ದಿಲ್ಲಿಯ ಕಾಂಗ್ರೆಸ್ ವರಿಷ್ಠರೊಡನೆ ಮಾತುಕತೆ ನಡೆಸಿದ್ದು ಆ ಪ್ರಾಂತದಲ್ಲಿ ಭದ್ರವಾದ ಮತ್ತು ಶಾಂತಿಯುತ ಆಡಳಿತ ನೆಲೆಸಲು ಅವಶ್ಯವಿರುವಷ್ಟು ಕಾಂಗ್ರೆಸ್ಸೇತರರ ಹಾಗೂ ಸ್ವತಂತ್ರರ ಸಹಾಯದೊಂದಿಗೆ ಸರಕಾರವನ್ನು ಕಾಂಗ್ರೆಸು ರಚಿಸುವ ನಿರ್ಧಾರ ಮಾಡಿದೆಯೆಂದು ತಿಳಿಯುತ್ತದೆ. ಮದ್ರಾಸದ ಕಾಂಗ್ರೆಸದ ಧುರೀಣರಿಗೂ ದಿಲ್ಲಿ ಕಾಂಗ್ರೆಸ್ ವರಿಷ್ಠರಿಂದ ಆಮಂತ್ರಣ ಹೋಗಿದೆಯಂತೆ!

ವಿಲಾಸ ಜೀವನಕ್ಕಿಂತ ಶ್ರಮ ಜೀವನವೇ ಮೇಲು

ನಮ್ಮ ದೇಶದ ಜನರು ವಿಲಾಸಪ್ರಿಯರಾಗಿ, ಸ್ವೈರ ಜೀವನ ನಡೆಸುವದು ನನಗೆ ಬೇಕಾಗಿಲ್ಲ. ಯಾವ ದೇಶದ ಜನರು ಸುಖ ಲೋಲುಪರಾಗುವರೋ- ಅಂಥ ದೇಶವು ನಿಶ್ಚಿತವಾಗಿ ಹಾಳಾಗುವುದು. ನಮ್ಮನ್ನು ಬಾಗ್ಯಶರನ್ನಾಗಿಡಲು ಯಾವುದಾದರೊಂದು ಗಂಡಾಂತರ ಎದುರಬೇಕು. ಸದಾ ಪ್ರಗತಿಯತ್ತ ಧಾವಿಸಲು ನಾವು ಶ್ರಮ ಪಡುತ್ತಿರುವಂತೆ ಮಾಡಲು ಒಂದು ಕಾ[illegible] ಇರಬೇಕೆಂದು ಶ್ರೀ ಜವಾಹರಲಾಲರು ಕಾನಪುರದಲ್ಲಿ ಹೇಳಿದರು.

ಆಮಂತ್ರಣ

ಉಡುಪಿಯ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನ ತೃತೀಯ ವಾರ್ಷಿಕೋತ್ಸವವು ತಾ. ೨೯-೨-೫೩ನೆಯ ಶುಕ್ರವಾರ ಸಾಯಂಕಾಲ ೫ ಘಂಟೆಗೆ ನಡೆಯುವುದು. ಸಾರ್ವಜನಿಕರೆಲ್ಲರಿಗೂ ಸುಸ್ವಾಗತವಿದೆ

ಎಚ್. ಸುಂದರ ರಾವ್, ಎಮ್. ಎ.,
ಪ್ರಿನ್ಸಿಪಾಲ.

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಹೆಡ್ ಆಫೀಸು] ಇವರ ಸಲಹೆ ಕೇಳಿರಿ [ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಗೀತೆಯ ಸಮೂಲ ಭಾಷಾಂತರ

ತಿಳಿಗನ್ನಡದಲ್ಲಿ ಅನುಭವಸ್ಥರಿಂದ ಬರೆಯಲ್ಪಟ್ಟ ಇಂತಹ ಅನುವಾದ 'ಗೀತೆಯ ಕೈಗನ್ನಡಿ'ಯನ್ನು ಬಿಟ್ಟರೆ ಇನ್ನೊಂದಿಲ್ಲ. 'ಗೀತೆಯ ಕೈಗನ್ನಡಿ'ಯು ಹೊಸಕೆರೆ ಶ್ರೀ ಚಿದಂಬರಯ್ಯನವರ ಸರಳ ಭಾಷಾಂತರ. ಅತೀ ಅಗ್ಗವಾದ ಮತ್ತು ಪ್ರತಿಮನೆಯಲ್ಲೂ ಇರಬೇಕಾದ ಗೀತಾಪುಸ್ತಕ

ಬೆಲೆ: ಬರೇ 0-12-0 ಮಾತ್ರ.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ

ನವಯುಗ ಪ್ರೆಸ್, ಉಡುಪಿ

ಇವರಿಗೆ ಬರೆಯಿರಿ.

ಚಿತ್ತೂರಿನಲ್ಲಿ ನಮ್ಮ ಹೊಸ ಶಾಖೆ

ಇದೇ ಬರುವ ಮಾರ್ಚ ೬ರಂದು ಗುರುವಾರ ನಮ್ಮ ಬ್ಯಾಂಕಿನ
ಹೊಸತೊಂದು ಶಾಖೆ ಚಿತ್ತೂರಿನಲ್ಲಿ ತೆರೆಯಲ್ಪಡಲಿದೆಯೆಂದು
ತಿಳಿಸಲು ನಾವು ಸಂತೋಷಪಡುತ್ತೇವೆ.

ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್, ಲಿಮಿಟೆಡ್

ಪ್ರಧಾನ ಕಾರ್ಯಾಲಯ, ಉಡುಪಿ, (ದ. ಕ)

THE CANARA BANKING CORPORATION LIMITED.

ನವಯುಗ

ಚಂದಾ ವಿವರ

ವರ್ಷಕ್ಕೆ ರೂ. 5—12—0

6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೨೮-೨-'೫೨

ಪ್ರಾಂತರಚನೆಗೆ ಅಡ್ಡಿ ಯಾರದು?

ಭಾಷಾವಾರು ಪ್ರಾಂತರಚನೆಯನ್ನು ಕಾಂಗ್ರೆಸ್ ಮೊದಲಿನಿಂದಲೂ ಘಟನಾತ್ಮಕವಾಗಿ ಒಪ್ಪಿಕೊಂಡಿದೆ. ಮತ್ತು ಅದರ ಸಾಧ್ಯಾಸಾಧ್ಯತೆಯ ಕುರಿತು ನಮ್ಮ ಧುರೀಣರು ಆಗಿಂದಾಗ್ಗೆ ಹೇಳಿಕೆಯನ್ನು ಕೊಡುತ್ತಾ ಬಂದಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೂ ಇದು ಶಕ್ಯವಾಗಲಿಲ್ಲವೆನ್ನುವಂತ ಪ್ರಾಂತೀಯ ವಾದಿಗಳಿಗೆ ಮನಸ್ತಾಪವನ್ನುಂಟುಮಾಡಿದೆ. ಆದರೆ ಈ ಅಡ್ಡಿಗೆ ಕಾಂಗ್ರೆಸ್ ಕಾರಣವೋ— ಧುರೀಣರು ಕಾರಣರೋ— ಪ್ರಾಂತಾಭಿಮಾನಿಗಳು ಕಾರಣರೋ ಎಂಬುದನ್ನು ನಿರ್ವಿಕಾರ ಮನಸ್ಸಿನಿಂದ ನಾವಿಂದು ವಿವೇಚಿಸಬೇಕಾಗಿದೆ.

ಆಂಧ್ರ ಪ್ರಾಂತವು ಕೂಡಲೇ ರೂಪುಗೊಳ್ಳಬೇಕೆಂದು ಸ್ವಾಮಿ ಸೀತಾರಾಮರು ಉಪವಾಸಕ್ಕೈಗೊಂಡದ್ದು ವಿದಿತ ವಿಚಾರವೇ— ಆ ಬಳಿಕ ಪ್ರಾಂತವಾದದ ತೀವ್ರತೆಯನ್ನು ಕಂಡು ನಮ್ಮ ಧುರೀಣರು ಅನಕೂಲ ಪರಿಸ್ಥಿತಿಯನ್ನೊದಗಿಸಿ ಕೊಡಿ ಎಂದು ಪ್ರಾಂತವಾದಿಗಳೊಡನೆ ಕೇಳಿಕೊಂಡರು. ಒಂದು ವೇಳೆ ಕಾಂಗ್ರೆಸ್ ವರಿಷ್ಠರು ಇದಕ್ಕೆ ಒಪ್ಪುವುದಾದರೂ ಭಾಷಾವಾರು ಪ್ರಾಂತ ರಚನೆಗೆ ಹೊಂದಿಕೆಯಾದ ಪ್ರಾಂತೀಯರಲ್ಲಿ ನಿಶ್ಚಿತ ಧೋರಣೆ ಇದೆಯೇ? ಐಕ್ಯಮತ್ಯವಿದೆಯೇ? ಎಂಬುದನ್ನು ನಾವು ಲಕ್ಷಿಸಬೇಕು. ಸ್ವಾಮಿ ಸೀತಾರಾಮರು ಉಪವಾಸ ವ್ರತವನ್ನು ಕೈಗೊಂಡ ಸಮಯದಲ್ಲಿ ಕರ್ನಾಟಕ ಮತ್ತಿತರ ಪ್ರದೇಶದ ಕಾಂಗ್ರೆಸ್ ಅಧ್ಯಕ್ಷರು ಆಂಧ್ರ ಪ್ರಾಂತಕ್ಕೆ ತಮ್ಮಿಂದ ಅಡ್ಡಿಯಿಲ್ಲ. ಆದರೆ ಆಂಧ್ರ ಪ್ರಾಂತರಚನೆಯೊಂದಿಗೆ ಉಳಿದ ಪ್ರಾಂತಗಳ ರಚನೆಯೂ ಏಕಕಾಲದಲ್ಲಾಗಲೀ ಎಂದು ಸೂಚಿಸಿದ್ದರು. ಈ ವಾದವು ನ್ಯಾಯವೂ ಕೂಡಾ. ಆದರೆ ಆಂಧ್ರದ ಪ್ರಮುಖ ಪತ್ರಿಕೆಯೊಂದು "ಕನ್ನಡಿಗರು ಈ ಕಾಲದಲ್ಲೂ ತಮ್ಮ ಚಂಡಿತನ ಬಿಟ್ಟಿಲ್ಲ. ಒಂದು ಕಡೆ ತಮ್ಮಿಂದ ಅಡ್ಡಿಯಿಲ್ಲವೆಂದು ಹೇಳುತ್ತಾ, ತಮ್ಮ ಪ್ರಾಂತವೂ ಏಕಕಾಲದಲ್ಲಾಗಲಿ ಎಂದು ಒತ್ತಾಯಿಸಿ ಆಂಧ್ರ ಪ್ರಾಂತರಚನೆಗೆ ಅಡ್ಡಿ ಹಾಕುತ್ತಲಿದ್ದಾರೆ" ಎಂದು ಬರೆದಿದೆ. ಮುಖ್ಯವಾಗಿ ಈ ಜನಕ್ಕೆ ಆಂಧ್ರ ಪ್ರಾಂತರಚನೆಯಾಗಬೇಕು. ನೆರೆ ರಾಜ್ಯಗಳ ಹಲವು ಪ್ರದೇಶಗಳು ತಮ್ಮದಾಗಬೇಕು. ಸಾಧ್ಯವಾದರೆ ಮದ್ರಾಸ ರಾಜಧಾನಿಯೂ ತಮ್ಮದಾಗಬೇಕು. ಈ ಸ್ವಾರ್ಥ ಬುದ್ಧಿ ಇಂದು ನಿನ್ನೆಯದಲ್ಲ! ಸ್ವಾತಂತ್ರ್ಯ ಪ್ರಾಪ್ತವಾದ ನಾಲ್ಕು ವರ್ಷಗಳಲ್ಲಿ ತಮ್ಮ ಅಸ್ತಿತ್ವವನ್ನು ಭದ್ರಗೊಳಿಸಲು ಇವರು ಕಾರಸ್ಥಾನ ನಡೆಸಿದ್ದರು. ಆಂಧ್ರ ಪ್ರಾಂತದ ರಚನೆಗೆ ಈಚೆಗೆ ಅಂದರೆ ಧಾರ್ ಸಮಿತಿಯು ಬಂದ ನಂತರ ಯೋಗ್ಯ ಸಂದರ್ಭ ದೊರಕಿತ್ತು. ಮದ್ರಾಸದ ಹಲವು ಜನ ಮಂತ್ರಿಗಳೂ—ಇತರ ಅಧಿಕಾರಿಗಳೂ—ಕಾಂಗ್ರೆಸ್ ಕಾರ್ಯಕರ್ತರೂ ದಿಲ್ಲಿಗೆ ಓಡಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನ ಮಾಡಿದ್ದರು. ಮಾನ್ಯ ಮಂತ್ರಿ ಜವಾಹರಲಾಲರೂ— ಸರ್ದಾರ್ ವಲ್ಲಭಾಯಿ ಪಟೇಲರೂ ಆಂಧ್ರ ಪ್ರಾಂತ ಮೊದಲು ರಚನೆಯಾಗಲೆಂದು ಹಂಸಿದ್ದುಂಟು. ಶ್ರೀ ನೆಹ್ರೂ ಹಾಗೂ ಪಟೇಲರೂ ಆಂಧ್ರದವರು ಸಹಜವಾಗಿಯೂ ಬೇರೆಯವರಿಗೆ ಅನ್ಯಾಯವಾಗದ ರೀತಿಯಲ್ಲಿ ತಮ್ಮ ಪ್ರಾಂತವನ್ನು ನಿರ್ಮಿಸಿಕೊಳ್ಳಲೆಂದು ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾಗಿದೆ. ಆದರೆ ಆಂಧ್ರದ ಧುರೀಣರು ಕಾಂಗ್ರೆಸ್ ವರಿಷ್ಠರ ಆದೇಶದ ದುರುಪಯೋಗವನ್ನು ಆಗ ಚೆನ್ನಾಗಿ ಮಾಡಿಕೊಂಡರು. ಬಳ್ಳಾರಿ ಜಿಲ್ಲೆ ಹಾಗೂ ಇನ್ನಿತರ ನಾಲ್ಕು ತಾಲೂಕುಗಳು ನ್ಯಾಯವಾಗಿ ಆಂಧ್ರಕ್ಕೆ ಸೇರತಕ್ಕದ್ದೆಂದು ವಾದ ಹೂಡಿದರು. ಮಾತ್ರವಲ್ಲ, ಮಂತ್ರಿ ಗೋಪಾಲ ರೆಡ್ಡಿಯವರೇ ಆದಿಯಾಗಿ ಇನ್ನಿತರ ಹಲವು ಮಂತ್ರಿಗಳೂ ಅಧಿಕಾರಿಗಳೂ ಬಳ್ಳಾರಿಯ ನಗರಸಭೆ ಹಾಗೂ ಸಾರ್ವಜನಿಕ ಸಭೆಗಳಲ್ಲಿ ನಾಟಕ ನಡೆಸಿ ಬಳ್ಳಾರಿಯನ್ನು ನುಂಗುವ ಯತ್ನ ಮಾಡಿದ್ದರು. ಬಳಿಕ ಗಡಿನಿರ್ಣಾಯಕ ಸಮಿತಿಯ ರಚನೆಯಾಯಿತು. ಅದರಲ್ಲಿ ಆಂಧ್ರ ತಮಿಳರ ಪ್ರತಿನಿಧಿಗಳ ಹೊರತು ಒಬ್ಬನೇ ಒಬ್ಬ ಕನ್ನಡಿಗನಿದ್ದಿಲ್ಲ. ಚರ್ಚಾಸ್ಪದವಾದ ಕರ್ನಾಟಕ ಪ್ರದೇಶದ ಗಡಿ ನಿರೀಕ್ಷಣೆಯಲ್ಲಿ ಕನ್ನಡಿಗರ ಪ್ರಾತಿನಿಧ್ಯವಿಲ್ಲದೆ ಅದು ಹೇಗೆ ಶಕ್ಯವಾದೀತೆಂಬುದು ಮದ್ರಾಸದ ಆಂಧ್ರಾಭಿಮಾನಿಗಳಿಗೆ ತೋಚಲೇ ಇಲ್ಲ. ಕಾಂಗ್ರೆಸ್ ಕೊಟ್ಟ ಈ ಸುವರ್ಣ ಸಂಧಿಯನ್ನು ಆಂಧ್ರರು ತಮ್ಮ ಸ್ವಾರ್ಥ-ಸಂಕುಚಿತ ಮನೋವೃತ್ತಿಯಿಂದ ಸಂಪೂರ್ಣ ಕಳೆದುಕೊಂಡಿದ್ದಾರೆನ್ನುವದಕ್ಕೆ ಮೇಲಿನ ಉದಾಹರಣೆಗಳನ್ನು ಹೇಳಬೇಕಾಯಿತು. ಇದೇ ಸಂಧಿಯಲ್ಲಿ ಕನ್ನಡಿಗರು ತಮ್ಮ ಪಾಲಿಗಾಗುತ್ತಿರುವ ಅನ್ಯಾಯವನ್ನು ನೆಹ್ರೂ ಮತ್ತು ಪಟೇಲರಲ್ಲಿ ನಿವೇದಿಸಿಕೊಂಡರು. ಆಂಧ್ರರ ಸುಣ್ಣ ಬೆಣ್ಣೆಯ ನೀತಿ ಚೆನ್ನಾಗಿ ಅರ್ಥವಾಯಿತು. ಅಂತಲೇ ಅವರು ಆ ಪ್ರಶ್ನೆಯನ್ನು ಮುಂದೆ ತಳ್ಳಿದರು.

ಈಗ ಸ್ವಾಮಿ ಸೀತಾರಾಮರು ಆಂಧ್ರ ಪ್ರಾಂತರಚನೆಗಾಗಿ ಸತ್ಯಾಗ್ರಹ ಹೂಡುವದಾಗಿ ಸಾರಿದ್ದಾರೆ. ಸತ್ಯಾಗ್ರಹದ ಮೂಲಕ ಪ್ರಾಂತರಚನೆಯಾದೀತೆನ್ನುವದು ಹುಚ್ಚು ಕಲ್ಪನೆ; ಅದರಲ್ಲೂ ಆಂಧ್ರದ ಪರಿಸ್ಥಿತಿಯೇನೆಂಬುದು ಕಾಂಗ್ರೆಸ್ ಧುರೀಣರಿಗೆ ಚೆನ್ನಾಗಿ ತಿಳಿದಿದೆ. ಮದ್ರಾಸು ಶಾಸನ ಸಭೆಗೆ ಆರಿಸಿಬಂದ ಬಹುಸಂಖ್ಯಾಕ ಕಮ್ಯೂನಿಸ್ಟ ಪ್ರತಿನಿಧಿಗಳು ಆಂಧ್ರದವರು. ಪ್ರಾಂತರಚನೆಯಾಗುವದಾದರೆ ಅಲ್ಲಿನ ರಾಜಕಾರಣದಲ್ಲಿ ಬೇರೊಂದು ಕೈಯ ಕೈವಾಡ ನಡೆಯುವದು ನಿಶ್ಚಿತ. ಮದ್ರಾಸದ ರಾಜಕಾರಣ ಯಾವುದೇ ಒಂದು ಮೂರ್ತ ಸ್ವರೂಪಕ್ಕೆ ಬಾರದಿರುವುದರಿಂದ ಇಲ್ಲಿ ಇನ್ನೊಂದು ಪ್ರಮಾದವನ್ನುಂಟುಮಾಡುವದು ಸರಿಯಾಗದು. ಮದ್ರಾಸದ ರಾಜಧಾನಿಯ ಕುರಿತು ಆಂಧ್ರರಲ್ಲೇ ಭಿನ್ನಾಭಿಪ್ರಾಯವಿದೆ. ರಾಯಲಸೀಮಾದವರು ಮದ್ರಾಸವನ್ನು ಬಿಟ್ಟು ಆಂಧ್ರ ಪ್ರಾಂತ ನಮಗೆ ಬೇಡವೆನ್ನುತ್ತಾರೆ. ಬಳ್ಳಾರಿ ಮತ್ತು ಹೈದರಾಬಾದುಗಳಲ್ಲಿ ಆಂಧ್ರದವರು ಆಕ್ರಮಣ ಮನೋವೃತ್ತಿಯುಳ್ಳವರಾಗಿದ್ದಾರೆ. ಈ ತೊಡಕುಗಳನ್ನು ಮೊದಲಾಗಿ ಬಿಡಿಸುವದು ಮುಖ್ಯವಾಗಿದೆ. ಇದು ಸುಲಭವಾಗಿ ಬಗೆಹರಿಯುವುದನ್ನು ಸ್ವಾಮಿ ಸೀತಾರಾಮರು ಯತ್ನಿಸಿ ಕಾಂಗ್ರೆಸ್ ವರಿಷ್ಠರಿಗೆ ಸರಿಯಾದ ಪರಿಸ್ಥಿತಿಯನ್ನೊದಗಿಸಿಕೊಡುವದರಲ್ಲೇ ತಮ್ಮ ಸಾಂಘಿಕ ಶಕ್ತಿಯನ್ನು ಪಯೋಗಿಸಬೇಕಾಗಿದೆ. ಈಗ ಅವರೂ ಅವರ ಅನುಯಾಯಿಗಳೂ ಅನುಸರಿಸುತ್ತಿರುವ ಧೋರಣೆಯಿಂದ ಇಷ್ಟಕ್ಕಿಂತ ಅನಿಷ್ಟವೇ ಪ್ರಾಪ್ತವಾಗಬಹುದು. ತಮ್ಮನ್ನು ತಾವು ತಿದ್ದಿಕೊಳ್ಳದೆ ಬೇರೆಯವರನ್ನು ಬೆಟ್ಟಿಟ್ಟು ತೋರಿಸುವದು ಸರಿಯಲ್ಲ! ಇಂದು ಆಂಧ್ರ ಪ್ರಾಂತಕ್ಕೆ ಇರುವ ಅಡ್ಡಿ ಆತಂಕಗಳ ನಿರ್ಮಾಣಕರ್ತರು ಆಂಧ್ರರೇ ಹೊರತು ನೆಹ್ರೂಗಳೂ ಅಲ್ಲ— ಭಾರತ ಸರಕಾರವೂ ಅಲ್ಲ! ಬೇರೆಯವರನ್ನು ತಿಳಿದುಕೊಂಡು ಸೌಹಾರ್ದವನ್ನು ಬೆಳೆಸಿ ನ್ಯಾಯವಾದ ಮಾರ್ಗವನ್ನು ಆಂಧ್ರರು ಹಿಡಿಯುವ ವರೆಗೆ ನೆಹ್ರೂರವರಾದರೂ ಈ ಸಂಕುಚಿತ ಮನೋವೃತ್ತಿಗೆ ಮಣಿಯುವಂತಿಲ್ಲ. ಇಡಿಯ ದೇಶದ ಹಿತ ಮತ್ತು ರಕ್ಷಣೆಯ ದೃಷ್ಟಿಯಿಂದ ಇದು ನ್ಯಾಯವೂ ಅಲ್ಲ!

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಈ ಸಂಸ್ಥೆಯ ತಾ. 31-12-1951 ಕ್ಕೆ ಅಂತ್ಯವಾದ ಹದಿನೇಳನೆ ವರ್ಷದ ಪ್ರಗತಿಪರ ವರದಿ ನಮ್ಮ ಕೈ ಸೇರಿದೆ; ಅದನ್ನು ವಿಮರ್ಶಿಸಲು ಆತ್ಯಾನಂದವಾಗುತ್ತದೆ.

ವರದಿ ವರುಷದಲ್ಲಿ ರೂ. 59,56,150 ಮೌಲ್ಯದ ಪ್ರೊಪೋಸಲ್ ಬಂದಿದ್ದವು. ವರ್ಷಾರಂಭದಲ್ಲಿ ಇತ್ಯರ್ಥಕ್ಕೆ ಬಾಕಿ ಇದ್ದುದನ್ನು ಸೇರಿಸಿದನಂತರ ವರ್ಷಾಂತ್ಯದಲ್ಲಿ ರೂ. 52,10,550 ಮೌಲ್ಯದ ಪೋಲಿಸಿಗಳನ್ನು ಕೊಡಲಾಯಿತು. ಉಳಿದ ಪ್ರೊಪೋಸಲ್ಲುಗಳಲ್ಲಿ ಕೆಲವು ತಿರಸ್ಕರಿಸಲ್ಪಟ್ಟವು, ಮತ್ತೆ ಕೆಲವು ವರ್ಷಾಂತ್ಯದಲ್ಲಿ ತೀರ್ಮಾನಕ್ಕೆ ಬಾಕಿ ಇದ್ದುವು.

ವರದಿ ವರುಷದಲ್ಲಿ ಪ್ರೀಮಿಯಮ್ ಮತ್ತು ಇತರ ನಿಧಿಗಳ ಬಡ್ಡಿ ರೂ. 17,71,834—14—0 ಮತ್ತು ರೂ. 1,99,150—10—9 ಅನುಕ್ರಮವಾಗಿ ಜಮೆಯಾಗಿತ್ತು. ಇನ್ಶ್ಯೂರೆನ್ಸ್ ಕಂಪೆನಿಯ ನಿಯಮಗಳ 25ನೆ ಕ್ರಮದಂತೆ ಲೆಕ್ಕ ಹಾಕಲಾಗಿ ಪ್ರೀಮಿಯಮ್ ಉತ್ಪತ್ತಿಯ ನೂರಡ 10.83ರಷ್ಟು ಮಾತ್ರ ಆಡಳಿತ ಖರ್ಚಿಗೆ ತೆಗೆಯಲಾಗಿದೆ. ಇದು ಎತ್ತಿ ಹೇಳತಕ್ಕ ವಿಷಯ.

ಕ್ಷೇಮನಿಧಿಯಲ್ಲಿರಿಸಲ್ಪಟ್ಟ ರೂ. 2,77,600 ವಿನಹ ಲೈಫ್ ಫಂಡು ವರ್ಷಾಂತ್ಯದಲ್ಲಿ ರೂ. 71,62,553-1-[illegible] ಕ್ಕೇರಿತು.

ಕಂಪೆನಿಯ ಆಫೀಸು ಕಟ್ಟಡವೊಂದು ಬೆಂಗಳೂರಲ್ಲಿ ಪೂರ್ಣವಾಗುತ್ತಲಿರುವದು ಕಂಪೆನಿಯ ಭದ್ರತೆಗೊಂದು ನಿದರ್ಶನವಾಗಿದೆ. ವರದಿ ವರ್ಷದಲ್ಲಿ ಕಂಪೆನಿಗೆ ಹೊಸ ವ್ಯವಹಾರವು ಚೆನ್ನಾಗಿ ಆಗಿದ್ದು ಇತರ ಕಂಪೆನಿಗಳಿಗೆ ಮಾದರಿಯಾಗಿದೆ. ಉಡುಪಿಯಂತಹ ಸಣ್ಣ ನಗರದಲ್ಲಿ ಈ ಸಂಸ್ಥೆಯ ಪ್ರಧಾನ ಕಾರ್ಯಾಲಯವಿದ್ದರೂ ಅಖಿಲ ಭಾರತದ ವಿಮಾ ಜಗತ್ತಿನಲ್ಲಿ ಒಂದು ಗಣ್ಯ ಸ್ಥಾನವನ್ನು ಪಡೆದು ಮಾತಜ್ಞರ ಮೆಚ್ಚುಗೆಗೆ ಪಾತ್ರವಾಗಿರುವುದು ಉಡುಪಿಗೊಂದು ಹೆಮ್ಮೆಯ ಮಾತು. ಕನ್ನಡಿಗರಿಗೊಂದು ಗೌರವದ ವಿಚಾರ. ಆಡಳಿತ ವರ್ಗದ ಮುಖ್ಯತಃ ಏಕನಿಷ್ಠೆಯಿಂದ ಸತತವಾಗಿ ದುಡಿಯುತ್ತಿರುವ ಮೆನೇಜಿಂಗ್ ಡೈರೆಕ್ಟರ್ ಶ್ರೀ.ಟಿ.ಆರ್.ಎ.ಪೈಗಳ ಅತಿ ಜಾಗರೂಕತೆಯ ದಕ್ಷ ಮಾರ್ಗದರ್ಶನದಿಂದ "ಕೆನರಾ ಮ್ಯೂಚುವಲ್" ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯವಾಗಿರುವುದಲ್ಲದೆ ಹಿಂದುಸ್ಥಾನದ ಕೆಲವೇ ಉತ್ತಮ ಕಂಪೆನಿಗಳಲ್ಲಿ ಇದೊಂದಾಗಿದೆ ಎನ್ನಲು ನಮಗೆ ಅಭಿಮಾನವೆನಿಸುತ್ತದೆ. ಚೀಫ್ ಏಜಂಟರಾದ ಕಮರ್ಶಿಯಲ್ ಕೊರ್ಪರೇಶನ್ ಆಫ್ ಇಂಡಿಯ ಲಿ., ಇವರ ಪ್ರಯತ್ನಪೂರ್ಣ ಸಹಕಾರವೂ ಶ್ಲಾಘನೀಯ. ಕೆನರಾ ಮ್ಯೂಚುವಲ್ ಇನ್ನಷ್ಟು ಉನ್ನತ ಸ್ಥಿತಿಗೇರಿ ವಿಮಾ ಪ್ರಪಂಚದಲ್ಲಿ ಪ್ರಥಮ ಮನ್ನಣೆ ಪಡೆಯುವಂತಾಗಲೆಂದೇ ನಮ್ಮ ಹಾರೈಕೆ.

ತಾರೀಕು 26-2-52ರಿಂದ

ದಿಲ್‌ರುಬಾ

ಪಾತ್ರವರ್ಗ:-ರೆಹನಾ, ದೇವಾನಂದ್, ಯಾಕೂಬ್, ಕುಕ್ಕೂ, ಮೊದಲಾದವರು.

ಮುಂದಿನ ಚಿತ್ರ

ದೀದಾರ್

ⓡ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಒಕ್ಕಲುತನ ಮಸೂದೆ—ದಕ್ಷಿಣ ಕನ್ನಡದಲ್ಲಿ ಚಾಲಗೇಣಿ ಒಕ್ಕಲುಗಳ ಹಿತಕ್ಕಾಗಿ ಒಕ್ಕಲುತನ ಮಸೂದೆಯನ್ನು ಸರಕಾರ ಕೂಡಲೆ ಜ್ಯಾರಿಗೆ ತರುವುದರಿಂದ, ಕೃಷಿಕನು ತನ್ನ ಭೂಮಿಯಲ್ಲಿ ಆಸ್ಥೆಯಿಂದ ದುಡಿಯುವನು. ಇದರಿಂದ ಬಹುಮಟ್ಟಿಗೆ ಆಹಾರ ಪರಿಸ್ಥಿತಿಯು ಸುಧಾರಿಸಬಹುದು. ಭೂಮಿಯು ಸಾರ್ವಜನಿಕರ ಉಪಯೋಗಾರ್ಥವಾಗಿ ತಮ್ಮ ಕೈಯಲ್ಲಿರುವ ಒಂದು ನಿಕ್ಷೇಪವೆಂದು ಭೂಮಾಲಕರು ತಿಳಿದಿರಬೇಕು. ಒಕ್ಕಲುಗಳು ಉತ್ತಮ ಉತ್ಪತ್ತಿಯನ್ನು ತರಲು ಅನುಕೂಲವಾಗುವಂತೆ ನ್ಯಾಯವಾದ ಗೇಣಿ ನಿಶ್ಚಯ, ಗೇಣಿ ಸಂದಾಯವಾಗುತ್ತಿರುವಾಗ ಒಕ್ಕಲುತನ ರದ್ದಾಗದಿರುವಿಕೆ, ಸಲ್ಲಿಸಿದ ಗೇಣಿಗೆ ರಶೀದಿ ಕೊಡುವುದು—ಇವೇ ಮೊದಲಾದ ಸುಧಾರಣೆಗಳನ್ನು ಸರಕಾರ ಜ್ಯಾರಿಗೆ ತರಬೇಕು. ಅಂತೆಯೇ ಭೂಮಾಲಿಕರಿಗೆ ಯುಕ್ತ ಭದ್ರತೆಗಳನ್ನೂ ಒದಗಿಸಬೇಕು.

ಆಹಾರ ಸಮಸ್ಯೆ ಮತ್ತು ನಿಯಂತ್ರಣ—ಸರಕಾರ ಮತ್ತು ಜನತೆ ನಿಯಂತ್ರಣ ಬೇಕೇ, ಬೇಡವೇ ಎಂದು ಒಮ್ಮೆ ದೃಢ ನಿಶ್ಚಯ ಮಾಡುವುದು ಒಳ್ಳೆಯದು. ಅನಿಶ್ಚಿತ ಧೋರಣೆಯಿಂದ ಅಪಾರ ಹಾನಿಯಾಗುವುದು. ನಿಯಂತ್ರಣ ಬೇಕೆಂದಾದರೆ ಅದರೊಂದಿಗಿನ ಅನಾನುಕೂಲತೆ, ಅಸುಖಕ್ಕೆ ಜನರು ಸಿದ್ಧರಿರಬೇಕು. ಇದರೊಂದಿಗೆ ಲಂಚಗುಳಿತನವೇ ಮೊದಲಾದ ಅನಿಷ್ಟಗಳೂ ಇದ್ದೇ ಇವೆ. ನಿಯಂತ್ರಣ ಬೇಡವೆಂದಾದರೆ, ತಮ್ಮ ತಮ್ಮ ಹೊಣೆಗಾರಿಕೆಯನ್ನು ಪ್ರತಿಯೊಬ್ಬನೂ ತಿಳಿದೇ ಯೋಗ್ಯ ರೀತಿಯಲ್ಲಿ ವರ್ತಿಸಬೇಕು. ಇಂತಹ ಹೊಣೆಗಾರಿಕೆಯನ್ನು ಆದಷ್ಟು ಬೇಗ ಜನರ ಮೇಲೆ ಹೊರಿಸುವುದೇ ಯುಕ್ತವೆಂದು ಕಾಣುತ್ತದೆ.

ದಕ್ಷಿಣ ಕನ್ನಡದ ಮಟ್ಟಿಗೆ, ಕಾಸರಗೋಡು ತಾಲೂಕನ್ನು ಬಿಟ್ಟರೆ, ಆಹಾರ ಪದಾರ್ಥ ಅಲ್ಲಿಂದಲ್ಲಿಗಾಗಬಹುದು. 'ಲೆವ್ವಿ' ಪದ್ಧತಿಗೂ ಮಿಕ್ಕುಳಿದ ಅಕ್ಕಿಯು ಯೋಗ್ಯ ರೀತಿಯಲ್ಲಿ ವಿತರಣೆಯಾಗಬೇಕು, ಗುಪ್ತ ರೀತಿಯ ಸಂಗ್ರಹವಾಗದಂತೆ ನೋಡಿಕೊಳ್ಳಬೇಕು. ಈಗ ಲೈಸೆನ್ಸಿನ ಅಂಗಡಿ ಇಟ್ಟವರಿಗೆಲ್ಲ ಅಕ್ಕಿಕೊಂಡುಕೊಳ್ಳುವ ಮತ್ತು ಮುಡಿಗೆ ರೂ 21/ಕ್ಕೆ ಮಿಕ್ಕದಂತೆ ಮಾರುವ ಲೈಸೆನ್ಸ್‌ಗಳನ್ನು ಕೊಡುವುದರಿಂದ, ಭೂಮಾಲಕರು ಲೈಸೆನ್ಸುದಾರರಿಗೆ ಮಾತ್ರ ಮಾರಬೇಕೆಂಬ ನಿಯಮವಿಡುವುದರಿಂದ, ಅಗತ್ಯ ಬಿದ್ದಾಗ ಭೂಮಾಲಿಕರಿಂದ ಮುಡಿ ಒಂದರ ರೂ. 14/-ರಂತೆ ಅಕ್ಕಿಯನ್ನು ಪಡೆದುಕೊಳ್ಳುವ ಅಧಿಕಾರವನ್ನು ಸರಕಾರ ಇಟ್ಟುಕೊಳ್ಳುವುದರಿಂದ, ಜಿಲ್ಲೆಯೊಳಗೆ

ಆಹಾರ ಸಮಸ್ಯೆ ಮತ್ತು ನಿಯಂತ್ರಣ.

[ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಯವರನ್ನು ಪತ್ರಿಕಾ ಪ್ರತಿನಿಧಿಗಳು ಭೇಟಿಯಾದಾಗ ಕೇಳಿಗಿನ ಕೆಲವು ವಿಷಯಗಳಲ್ಲಿ ಅವರಿತ್ತ ಅಭಿಪ್ರಾಯಗಳ ಸಾರ]

ಒಂದು ಕಡೆಯಿಂದ ಇನ್ನೊಂದು ಕಡೆ ಅಕ್ಕಿ ಸಾಗಿಸಲು ನಿರಾತಂಕ ಮಾಡುವುದರಿಂದ ವಿತರಣೆಯು ಯೋಗ್ಯ ರೀತಿಯಲ್ಲಾಗಬಹುದೆಂದು ನನಗನಿಸುತ್ತದೆ. ಸರಕಾರಕ್ಕೆ ಮುಡಿ ಒಂದರ ರೂ. 14/-ರಂತೆ ಕೊಡುವುದಕ್ಕಿಂತ ಸ್ವಲ್ಪ ಹೆಚ್ಚಿನ ಕ್ರಯಕ್ಕೆ ಭೂಮಾಲಿಕನು ಇದ್ದ ಸ್ಟಾಕನ್ನು ಕೊಡಲು ತವಕಪಡುತ್ತಾರೆ. ಅಂತೆಯೇ ವರ್ತಕನಿಂದ ಸರಕಾರ ಅಕ್ಕಿ ಕೊಳ್ಳುವಾಗ ಮುಡಿಗೆ 21ಕ್ಕೆ ಮಿಕ್ಕಿ ಕ್ರಯಕೊಡದ ಕಾರಣ, ಕಳ್ಳತನದಲ್ಲಿ ಹೆಚ್ಚಿನ ಕ್ರಯಕ್ಕೆ ಅವನೂ ಕಳಕೊಳ್ಳುವಂತಿಲ್ಲ. ಕಡಿಮೆ ಕ್ರಯದಲ್ಲಿ ಎಲ್ಲಿ ಅಕ್ಕಿ ಸಿಗುವುದೆಂದು ವರ್ತಕನು ನಿರೀಕ್ಷಿಸುತ್ತ, ಅಕ್ಕಿಯ ಧಾರಣೆ ಕಡಿಮೆಯಾಗಿಯೇ ಇರುವಂತೆ ಅವನು ಪ್ರಯತ್ನಿಸುತ್ತಾನೆ. ಅಲ್ಲದೆ, ಉಡುಪಿ ಮತದಾರ ಕ್ಷೇತ್ರದಲ್ಲಿ ಆದ್ಯರ ಸ್ವಯಂ ಸಹಕಾರ ಕೋರಿ ಖಾಸಗಿ 'ರಿಲೀಫ್ ಅಂಗಡಿ'ಗಳನ್ನು ಪ್ರತೀ ಹಳ್ಳಿಯಲ್ಲಿ ತೆರೆಯುವಂತೆಯೂ ಕೃಷಿ ಇಲಾಖೆಯ ಸಹಕಾರ ಬಯಸಿ ಉತ್ತಮ ಬೀಜ, ಗೊಬ್ಬರಗಳ ವಿತರಣೆಗೆ, ಬೆಳೆ ಹೆಚ್ಚಿಸಲು ಪ್ರಚಾರ ಮಾಡಲು ಗ್ರಾಮ ಗ್ರಾಮದಲ್ಲಿ ಒಂದೊಂದು ಸಂಘವನ್ನು ನಿರ್ಮಿಸುವಂತೆಯೂ ಪ್ರಯತ್ನಿಸಬೇಕೆಂದಿರುವೆ.

ಮಾರಾಟ ತೆರಿಗೆ ಮತ್ತು ಜನಜೀವನ:—ಮದ್ಯಪಾನ ತೆಗೆದರೂ ಮಾರಾಟ ತೆರಿಗೆ ಹೋಗುವಂತಿಲ್ಲ. ಸರಕಾರ ಇದನ್ನು "ಕಾಮಧೇನು" ಎಂದು ತಿಳಿದಿರುವುದಾದರೂ, ಮಧ್ಯಮ ತರಗತಿಯ ಮತ್ತು ಬಡ ಜನರಿಗೆ ಇದೊಂದು ಬಲವಾದ ಹೊರೆ. ಮಾರಾಟ ತೆರಿಗೆಯನ್ನು ಒಂದು ಕಡೆಯಲ್ಲಿ ಮಾತ್ರ ಹೇರಬೇಕು; ಆಹಾರ ಪದಾರ್ಥಗಳ ಮೇಲೆ ಹೊರಿಸಕೂಡದು. ಮೊಗವೀರರ ಮೀನಿನ ಹಿಡಿತದ ಮೇಲೆ ಮಾರಾಟ ತೆರಿಗೆ ಹೊರಿಸುವುದರಲ್ಲಿ ನ್ಯಾಯವಿಲ್ಲ. ಈ ಸುಧಾರಣೆಗಳಿಂದ ಜನಜೀವನದ ವೆಚ್ಚ ಸ್ವಲ್ಪ ಕಳೆಗಿಳಿಯಬಹುದು.

ಮದ್ಯಪಾನ ನಿರೋಧ—ನನಗೆ ಈ ಕಾನೂನಿನಲ್ಲಿ ಅನುಕಂಪವಿದೆ. ಆದರೆ ಜನತೆಯಿಂದ ಸ್ವೀಕೃತವಾಗದ ಸುಧಾರಣಾ ಮಸೂದೆಯೂ ಯಶಸ್ವಿಯಾಗದು. ಮದ್ಯಪಾನ ನಿರೋಧವು ಎಣಿಸಿದಷ್ಟು ಜಯಪ್ರದವಾಗಿಲ್ಲ. ಜನರಲ್ಲಿ ಕಾನೂನಿನ ಮೇಲಣ ಗೌರವ ಕಡಿಮೆಯಾಗುತ್ತಿದೆ. ಇದರ ಪುನರ್ವಿಮರ್ಶೆಯಾಗಬೇಕಾದೀತು. ವಿಚಾರಣಾರ್ಥವಾಗಿ ಆರ್ಥಿಕ ತಜ್ಞರು ಮತ್ತು ನ್ಯಾಯಾಧಿಪತಿಗಳನ್ನೊಳಗೊಂಡ ಒಂದು ಸಮಿತಿಯನ್ನು ನಿರ್ಮಿಸಿ ಈ ಪ್ರಶ್ನೆಯನ್ನು ಅದಕ್ಕೆ ಒಪ್ಪಿಸುವುದು ಒಳ್ಳೆಯದು. ಈ ಮಟ್ಟಿಗೆ ಇದೇ ತಾರೀಕು 21ರ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಟರ್ಕಿಯ 'ಬತನ್' ಎಂಬ ದೈನಿಕದ ಸಂಪಾದಕರು ಕೊಟ್ಟ ಹೇಳಿಕೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಟರ್ಕಿ ಮತ್ತು ಅಮೇರಿಕಗಳಲ್ಲಿ ಮದ್ಯಪಾನ ನಿರೋಧ ಕಾನೂನನ್ನು ಕೈಗೂಡಿಸಿಕೊಳ್ಳಲು ಸಾಧ್ಯವಾಗದಿದ್ದುದು ಮತ್ತು ಇದರಿಂದ ಉಂಟಾದ ಅನರ್ಥಗಳನ್ನು ಅವರು ವಿವರಿಸಿದ್ದಾರೆ. ಅಂತೂ ಈ ಕಾನೂನನ್ನು ಸೂಕ್ಷ್ಮವಾಗಿ ಪರಿಶೀಲಿಸಿ ತಕ್ಕ ಬದಲಾವಣೆಗಳನ್ನು ಮಾಡಬೇಕಾದೀತು.

ಉಡುಪಿ

ಅನಿರೀಕ್ಷಿತ ಮಳೆ—23-24-25ರಲ್ಲಿ ವಿಶೇಷ ಗಾಳಿ, ಮೋಡ, ಮಿಂಚು ಇದ್ದು ಹಲ್ಲದೆ ಕೊನೆಗೆ ಸ್ವಲ್ಪ ಮಳೆ ಸುರಿದಿರುವುದು ಬಂಟವಾಳ ಮೊದಲಾದ ಕಡೆಗಳಲ್ಲಿ ಸರಿಯಾಗಿ ಮಳೆ ಬಿದ್ದಿರುವುದೆಂದು ತಿಳಿದು ಬರುತ್ತದೆ. ಈಗ ವಿಪರೀತ ಸೆಕೆ ಆರಂಭವಾಗಿರುವುದು.

ನಮಗೆ ಬಂದ ವಾರ್ತೆಗಳು— ಈಗ ಸ್ಕೂಲ್‌ಡೆಗಳ ಪರ್ವಕಾಲ, ಹೆಚ್ಚಿನ ಕಡೆಗಳಲ್ಲಿ ತುಂಬಾ ಕಾರ್ಯಕ್ರಮಗಳನ್ನು ತುರುಕಿಸಿಕೊಂಡು ನಾಲ್ಕೈದು ಗಂಟೆ ಕಾಲ ಅನಾವಶ್ಯಕ ಕಾಲಹರಣ ಮಾಡುತ್ತಾರೆ. ಹೆಚ್ಚೆಂದರೆ ಕಾರ್ಯಕ್ರಮ 2 ಗಂಟೆಗೆ ಮುಕ್ತಾಯವಾಗಬೇಕೆಂಬ ಅರ್ಥದ ವಾರ್ತೆಯೊಂದೂ ಶ್ರೀ ಶ್ರೀಪತಿ ನರಸಿಂಹ ಅಡಿಗರಿಂದ ಅ. ಕ. ಜ್ಯೋತಿಷಿಕ ಸಮ್ಮೇಳನದಲ್ಲಿ ಯಾವ ವಿಷ[illegible] ಸಾಲ್ಗೊಂಡ ಜ್ಯೋತಿಷಿಗಳು, ವ್ಯರ್ಥ [illegible] ಘೋಷಣೆ ಎಂಬರ್ಥದ ದೀರ್ಘ ವಾರ್ತೆಯೊಂದೂ ನಮ್ಮೆಡೆಗೆ ಬಂದಿದ್ದು ಸ್ಥಳಾಭಾವದಿಂದ ಪ್ರಕಟಿಸಲಿಲ್ಲ. ಸಂ ನ.

ಕಸ್ತೂರಿ ಮೆಡಿಕಲ್ ಕಾಲೇಜು—ಸ್ಥಾಪನೆಯ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಲು ಬಂದಿದ್ದ ಕರ್ನಾಟಕ ಯುನಿವರ್ಸಿಟಿ ಕಮಿಶನಿನ ಅಧ್ಯಕ್ಷರಿಂದ ಏಕಡೆಮಿಯ ರಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಗಳಿಗೆ ಒಂದು ಪರಿಪತ್ರವು ಬಂದಿದ್ದು ಅದರಲ್ಲಿ ಕಟ್ಟಡ ಕೆಲವು ಸಾಹಿತ್ಯ ಸಲಕರಣಾದಿಗಳನ್ನು ಒದಗಿಸಲು ಸಾಧ್ಯವಾದರೆ ಜೂನಿನಲ್ಲೇ ಕಾಲೇಜನ್ನು ಪ್ರಾರಂಭಿಸಲು ಅನುವು ಮಾಡಿಕೊಡುವುದಾಗಿ ತಿಳಿಸಿದ್ದಾರೆ. ಇದಕ್ಕೆ ಕಡಿಮೆ ಎಂದರೂ 10 ಲಕ್ಷ ರೂಪಾಯಿ ಬೇಕಾಗಬಹುದು. ಹಲವು ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ಜನರ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಂಡಿರುವ ನಿಮ್ಮಿಂದ ಇದು ಸಾಧ್ಯವಾಗಬಹುದೆಂದೂ ಸೂಚಿಸಿದ್ದಾರೆ. ಈ ವಿಚಾರವನ್ನು ರಿಜಿಸ್ಟ್ರಾರರು ಪ್ರವೇಶಾರ್ಥಿ ವಿದ್ಯಾರ್ಥಿಗಳ ಮತ್ತೂ ಜನತೆಯ ಮುಂದಿಟ್ಟು 10 ಲಕ್ಷ ರೂಪಾಯಿಗಳನ್ನೊದಗಿಸುವ ಸಾಧ್ಯಾಸಾಧ್ಯತೆಯನ್ನು ಸಾವಧಾನದಿಂದ ಪರಿಶೀಲಿಸಿ ಕೊನೆಗೆ ತಕ್ಕ ನಿರ್ಧಾರ ಮಾಡುವುದಾಗಿಯೂ ತಾ 24ರಲ್ಲಿ ಸೇರಿದ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ತಿಳಿಸಿದರು.

ಸೈಂಟ್ ಸಿಸಿಲಿ ಕಾನ್ವೆಂಟಿನ ವಾರ್ಷಿಕೋತ್ಸವ ವಿಶಾರದಾ ಸಮಾರಂಭವು ಜಿಲ್ಲಾ ಕಲೆಕ್ಟರರಾದ ಎ. ಆರ್. ರಾಜರತ್ನಂ ಇವರ ಅಧ್ಯಕ್ಷತೆಯಲ್ಲಿ ತಾ. 25ನೇ ಸಂಜೆ ನಾಟಕ, ನೃತ್ಯ ಮೊದಲಾದ ಮನೋರಂಜಕ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಜರಗಿತು.

ಮಂಗ್ಳೂರು ಬಂದರದಲ್ಲಿ ತುಫಾನು— ಇದೇ ತಾರೀಕು 22ರಂದು ಬೊಂಬಾಯಿಯಿಂದ ಬಂದ ಸ್ಟೀಮರು ಮಂಗಳೂರು ಬಂದರದಲ್ಲಿ ಲಂಗರು ಹಾಕಲು ತುಫಾನಿನಿಂದ ಸಾಧ್ಯವಾಗದೆ, ಪ್ರಯಾಣಿಕರ ಸಮೇತ ಹಾಗೆಯೇ ಸುರಕ್ಷಿತ ಬಂದರವಾದ ಮಲ್ಪೆಗೆ ಹಿಂದಿರುಗಿ ಬಂದು ನಿಂತಿತು. ಪ್ರಯಾಣಿಕರೆಲ್ಲ ಅಲ್ಲಿಂದ ಇಳಿದು ನೆಲಮಾರ್ಗವಾಗಿ ಮಂಗಳೂರನ್ನು ಸೇರುವಂತಾಯಿತು.

ಮದ್ರಾಸಿನಲ್ಲಿ ಸಮ್ಮಿಶ್ರ ಸರಕಾರ ರಚಿಸಲು ಕಾಂಗ್ರೆಸಿಗೆ ನೆರವಾಗಲು 70 ಮಂದಿ ಸ್ವತಂತ್ರ ಹಾಗೂ ಪ್ರಾಂತಿಕ ಪಕ್ಷಗಳ ಸದಸ್ಯರು ತಯಾರಿದ್ದಾರೆಂದು ಸಂಯುಕ್ತ ಪ್ರಜಾಪಕ್ಷದ ಧುರೀಣ ಶ್ರೀ ಮುತ್ತಯ್ಯ ಚೆಟ್ಟಿಯಾರರು ಕುಂಭಕೋಣದ ಸಭೆಯೊಂದರಲ್ಲಿ ಹೇಳಿದ್ದಾರೆ.

ರೈಲ್ವೆ ಕೆಲಸಗಾರರ ತುಟ್ಟಿಭತ್ಯೆಯನ್ನೆಲ್ಲ ಇಲ್ಲವೆ ಸ್ವಲ್ಪ ಭಾಗವನ್ನು ಸಂಬಳದಲ್ಲಿ ಸಮೀಕರಿಸುವ ಕುರಿತು ಪರ್ಯಾಲೋಚಿಸಿ ವರದಿಯೊಪ್ಪಿಸಲು ಸರಕಾರವು ಸಮಿತಿಯೊಂದನ್ನು ನೇಮಿಸಲಿದೆ ಎಂದು ಕೇಂದ್ರದ ರೈಲ್ವೆ ಮಂತ್ರಿ ಶ್ರೀ ಕೆ. ಸಂತಾನಂ ರು ಪಾರ್ಲಿಮೆಂಟಿನಲ್ಲಿ ಹೇಳಿದರು.

ಕೆಲಸಗಾರರ ವಿಮಾಯೋಜನೆಯನ್ನು ಪ್ರಧಾನ ಮಂತ್ರಿ ನೆಹರೂರವರು ತಾ 24ರಲ್ಲಿ ಕಾನಪುರದಲ್ಲಿ ಉದ್ಘಾಟಿಸುತ್ತ ಕೆಲಸಗಾರರು ಸುಸಂಘಟಿತರಾಗಿ ಕಾಲಕ್ಷೇಪಕ್ಕಾಗಿ ವರ್ತಿಸಬೇಕೆಂದೂ ಪ್ರತಿಯೊಂದಕ್ಕೂ ಮುಷ್ಕರ ಹೂಡಬಾರದೆಂದೂ ತಿಳಿಸಿದರು.

ಮದ್ರಾಸಿನ ಹೊಸ ಗವರ್ನರ್ ಶ್ರೀ ಪ್ರಕಾಶರು ಮಾರ್ಚ ತಾ 12ಕ್ಕೆ ಅಧಿಕಾರ ವಹಿಸಲಿರುವರು, ಅಂದೇ ಏಳಿಗ್ಗೆ ಈಗಿನ ಗವರ್ನರ್ ಭಾವನಗರದ ಮಹಾರಾಜರು ಸಪತ್ನೀಕರಾಗಿ ಬೊಂಬಾಯಿಗೆ ತೆರಳುವರು.

ಕರ್ನಾಟಕ ಸಂಘ ಬಾಳಿಕುದ್ರು

ದ. ಕ.

ಇದೇ ಬರುವ ತಾ 2—3—1952 ನೇ ಆದಿತ್ಯವಾರ ಸಂಜೆ ಗಂಟೆ ೪ಕ್ಕೆ ನಮ್ಮ ಕರ್ನಾಟಕ ಸಂಘದ ಮಹಾಸಭೆಯನ್ನು ಜರಗಿಸಲು ನಿಶ್ಚಯಿಸಿರುವುದರಿಂದ ಸದಸ್ಯರೆಲ್ಲರೂ ಸಂಘದ ಕಾರ್ಯಾಲಯದಲ್ಲಿ ಹಾಜರಾಗಬೇಕಾಗಿ ಕೇಳಿಕೊಳ್ಳುವ,

B A Udpa,
ಕಾರ್ಯದರ್ಶಿ

Balkudru, 26—2—52

ಶ್ರೀ ಬಿ. ಮಂಜಯ್ಯ ಹೆಗ್ಡೆ, ಬಿ. ಎ.-ಬಿ. ಎಲ್.
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಬೋರ್ಡು, ದ. ಕ.

ಟೆಂಡರ್ ನೋಟೀಸು

1-4-1952ರಿಂದ 31-3-1953ರ ವರೆಗೆ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ ಆಫೀಸು ಮತ್ತೂ ಇದರ ತಾಬೆಯಲ್ಲಿರುವ ಬೇರೆ ಆಫೀಸುಗಳ ಪ್ರಿಂಟಿಂಗ್, ಬೈಂಡಿಂಗ್ ಇತ್ಯಾದಿ ಕೆಲಸಾವಳಿಗಳ ಬಗ್ಗೆ ಸೀಲು ಟೆಂಡರುಗಳನ್ನು "1952-53ನೇ ವರ್ಷದ ಬಾಬ್ತು ಪ್ರಿಂಟಿಂಗ್, ಬೈಂಡಿಂಗ್ ವಗೈರೆ ಕೆಲಸಾವಳಿಗಳ ಬಾಬ್ತು ಟೆಂಡರು' ಎಂತ ಸೀಲು ಮಾಡಿದ ಲಕೋಟೆಯ ಮೇಲೆ ಪ್ರೆಸಿಡೆಂಟ್ ದ. ಕ. ಜಿಲ್ಲಾ ಬೋರ್ಡು ಮಂಗಳೂರು ಎಂತ ವಿಳಾಸ ಬರೆದು 1952ನೆ ಇಸವಿ ಮಾರ್ಚ ತಿಂಗಳ ತಾರೀಕು 15ನೆ ಶನಿವಾರ ಅಪರಾಹ್ನ ಘಂಟೆ 5ರ ವಳಗೆ ದ. ಕ. ಜಿಲ್ಲಾ ಬೋರ್ಡು ಆಫೀಸಿಗೆ ತಲ್ಪುವಂತೆ ಕಳುಹಿಸಿಕೊಡಬೇಕಾಗಿ ಕೇಳಿಕೊಳ್ಳಲಾಗುತ್ತದೆ. ಮೇಲ್ಕಾಣಿಸಿದ ತಾರೀಕಿನ ಸಾಯಂಕಾಲ 5 ಘಂಟೆಯ ನಂತರ ತಲಪುವ ಟೆಂಡರುಗಳನ್ನು ಅಂಗೀಕರಿಸಲಾಗಲಿಕ್ಕಿಲ್ಲ. ಟೆಂಡರುಗಳು ದ. ಕ. ಜಿಲ್ಲಾ ಬೋರ್ಡ ಪ್ರೆಸಿಡೆಂಟರಿಂದ ಅಥವಾ ಅವರಿಂದ ಅಧಿಕಾರ ಹೊಂದಲ್ಪಟ್ಟವರಿಂದ 1952ನೆ ಇಸವಿ ಮಾರ್ಚ ತಿಂಗಳ ತಾರೀಕು 17ನೇ ಸೋಮವಾರ ಅಪರಾಹ್ನ ಘಂಟೆ 4-30ಕ್ಕೆ ದ. ಕ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಆ ಸಮಯ ಹಾಜರಿರುವ ಟೆಂಡರುದಾರರ ಸಮಕ್ಷಮ ತೆರೆಯಲ್ಪಡಲಾಗುವುದು.

2 ಪ್ರಿಂಟಿಂಗ್ ಇತ್ಯಾದಿ ಕೆಲಸಗಳ ಕುರಿತು ಪ್ರಿಂಟ್ ಮಾಡಿದ ಟೆಂಡರು ಫೋರ್ಮನ್ನು ಮತ್ತೂ ಟೆಂಡರು ಕುರಿತಾದ ಕ್ರಮ ನಿಬಂಧನೆಗಳನ್ನು ಪ್ರತಿಯೊಂದು ಎರಡು ಫೋರ್ಮುಗಳ ಒಂದು ಸೆಟ್ಟಿಗೆ ರೂ[1-0-0] ದಂತೆ ರಸೀದಿ ಮಾಡಿ ಬರತು ಮಾಡಿದ ಕೇಳಿಕೆಯಲ್ಲಿ ಒದಗಿಸಿ ಕೊಡಲಾಗುವುದು.

ದ. ಕ. ಜಿಲ್ಲಾ ಬೋರ್ಡು ಆಫೀಸು
ಮಂಗಳೂರು 21-2-1952

Deju Uchil
For President

ಮುಲ್ಕಿ ಮತ್ಸ್ಯ ವ್ಯವಸಾಯ ಅಭಿವೃದ್ಧಿ ಯೋಜನೆ

ಸರಕಾರದ ಪ್ರತಿನಿಧಿಗಳ ಸ್ತುತ್ಯ ಕಾರ್ಯ

ನಮ್ಮೂರ ಎಸೆಂಬ್ಲಿ ಪ್ರತಿನಿಧಿಗಳಾದ ಶ್ರೀ ಟಿ. ಎ. ಪೈಗಳ ಕೋರಿಕೆಯಂತೆ ಮುಲ್ಕಿಯನ್ನು ಸಂದರ್ಶಿಸಲು ಬಂದ ಫಿಶರೀಸ್ ಡೆಪ್ಯುಟಿ ಡೈರೆಕ್ಟರ್ ಶ್ರೀ ಪೀಟರ್ ದೇವದಾಸ್ ಮತ್ತು ಅಸಿಸ್ಟೆಂಟ್ ಡೈರೆಕ್ಟರು ಶ್ರೀ ಮುಕುಂದನ್ ಉನ್ನಿಯವರು ತಾ. ೨೦ ರಂದು ಮುಲ್ಕಿಗೆ ಆಗಮಿಸಿ ಅಲ್ಲಿ ಮೀನಿನ ವ್ಯಯಸಾಯದ ಅಭಿವೃದ್ಧಿಗೆ ಶ್ರೀ ಪೈಗಳು ಕೊಟ್ಟ ಸಲಹೆಗಳನ್ನು ಕೇಳಿಕೊಂಡರು. ಮೀನಿನಸೀತಳ ಕಟ್ಟಡಕ್ಕೆ ಮಂಗಳೂರಿನಲ್ಲಿ ಈಗಾಗಲೇ ಲಕ್ಷ ರೂಪಾಯಿಗಳನ್ನು ವ್ಯಯಿಸುವುದಾಗಿಯೂ, ಈ ಕಟ್ಟಡದ ಶೇಕಡಾ 75 ಅಂಶ ಭಾಗ ತುಂಬಲು ಬರಬೇಕಾದುದು ಮುಲ್ಕಿಯ ಮೀನೆಂದೂ ಅವರು ತಿಳಿಸಿದರು. ಆದರೆ ಮಂಗಳೂರಿಲ್ಲೊಂದು, ಮುಲ್ಕಿಯಲ್ಲೊಂದು. ಹೀಗೆ ಎರಡು ಕಟ್ಟಡಗಳನ್ನು ಎನುಮಾಡುವುದರಿಂದ ಅದರಲ್ಲೊಂದು ನಷ್ಟಹೊಂದಬಹುದಾದುದರಿಂದ, ಮಂಗಳೂರಿನಲ್ಲಿರುವ ಈ ಕಟ್ಟಡದಲ್ಲಿ ಮುಲ್ಕಿಗಾಗಿ ರಿಯಾಯತಿ ದರದಲ್ಲಿ ಪ್ರತ್ಯೇಕ ಜಾಗ ಕಾದಿಡುವುದಲ್ಲದೆ ಸಮುದ್ರದಾರಿಯಾಗಿ ಮೀನನ್ನು ಇಲ್ಲಿಂದ ಮಂಗಳೂರಿಗೆ ಒಯ್ಯಲು ಶೀತಳ ಸೌಕರ್ಯವಿರುವ ವೇಗವಾಗಿ ಚಲಿಸುವ ಮೂರು ಹಡಗುಗಳು, ಮತ್ತು ನೆಲದ ಮಾರ್ಗವಾಗಿ ಮೈಸೂರು ಸಂಸ್ಥಾನದ ನೆರೆಕರೆಯ ಜಿಲ್ಲೆಗಳಿಗೆ ಮೀನನ್ನು ಒಯ್ಯಲು ಶೀತಳ ಸೌಕರ್ಯವಿರುವ ಲಾರಿಗಳನ್ನು ಕೊಡಲೆ ಒದಗಿಸುವುದಾಗಿ ಆಶ್ವಾಸನೆ ಇತ್ತರು. ಮೀನಿನ ವ್ಯವಸಾಯ ಹಾಗೂ ಸಮುದ್ರ ವಿಜ್ಞಾನದ ಕುರಿತು ಶಿಕ್ಷಣಕೊಡುವರೆ ಅಖಿಲ ಭಾರತ ಸಂಸ್ಥೆಯೊಂದನ್ನು ಮುಲ್ಕಿಯಲ್ಲಿ ತೆರೆಯಬೇಕೆಂದು ಸೂಚಿಸಿದ್ದಕ್ಕೆ, ಡೆಪ್ಯುಟಿ ಡೈರೆಕ್ಟರರು ಅಖಿಲ ಭಾರತದಲ್ಲಿ ಮೀನಿನ ವ್ಯವಸಾಯದ ಮಟ್ಟಿಗೆ ಮುಲ್ಕಿಯ ಶ್ರೇಷ್ಠಸ್ಥಾನವನ್ನು ಪಡೆದಿರುವ ಕಾರಣ, ಅಂತಹ ಸಂಸ್ಥೆ ಇಲ್ಲಿ ತೆರೆಯಲ್ಪಡುವುದು ಉಚಿತವೆಂದು ಅಭಿಪ್ರಾಯಪಟ್ಟರು. ಇಂತಹ ಸಂಸ್ಥೆಗೆ ಅಮೇರಿಕದ ಸಹಾಯ ದೊರಕುವುದು ಎಂಬುದು ಗಮನಾರ್ಹವಾದುದು. ಇಲ್ಲಿಯ ಫಿಶರೀಸ್ ಶಾಲೆಯಲ್ಲಿ IV ನೇ ಫಾರಮನ್ನು ಈ ವರ್ಷದಿಂದ ತೆರೆಯುವರೆ ಅನುಮತಿ ಕೊಡುವುದಾಗಿಯೂ ತಿಳಿಸಿದರು. ಅನಂತರ ಇವರಿಲ್ಲರು ಉಡಿಯಾವರಕ್ಕೆ ಹೋಗಿ ಅಲ್ಲಿಯೂ ವಿವಿಧ ಸಮಸ್ಯೆಗಳನ್ನು ಪರಿಶೀಲಿಸಿದರು. ಮಾರಾಟ ಹಂಗಿಯ ಕುರಿತು ಶ್ರೀ ಟಿ. ಎ. ಪೈಗಳು ಮದ್ರಾಸಿಗೆ ಹೋದಾಗ ಆರ್ಥಿಕ ಸಚಿವರನ್ನು ಕೇಳಿಕೊಳ್ಳಬೇಕೆಂದಾಯಿತು. ಅಲ್ಲದೆ ಶ್ರೀ ಪೈಗಳು ಈ ವಿಷಯದಲ್ಲಿ ತೋರಿಸುತ್ತಿರುವ ಆಸಕ್ತಿ ಮತ್ತು ಅವರ ಚಟುವಟಿಕೆಗಳನ್ನು ಪ್ರಶಂಸಿಸಿ ಅವರಿಗೆ ತನ್ನ ಇಲಾಖೆಯ ಸಂಪೂರ್ಣ ಸಹಕಾರವು ದೊರೆಯುವುದಾಗಿ ಡೆಪ್ಯುಟಿ ಮತ್ತು ಅಸಿಸ್ಟೆಂಟ್ ಡೈರೆಕ್ಟರರು ಆಶ್ವಾಸನೆ ಇತ್ತರು.

ಇದೇ ರೀತಿ ತಾ. 24ರಂದು ಟೆಲಿಫೋನಿನ ಸರ್ಕಲ್ ಡಿವಿಜನಲ್ ಆಫೀಸರರು ಇಲ್ಲಿಗೆ ಬಂದಾಗ, ಶ್ರೀ ಟಿ. ಎ. ಪೈಗಳು ಅವರೊಂದಿಗೆ ಸರ್ಕಲ ಪುರಜನರ ಕೋರಿಕೆಯನ್ನು ಮುಂದಿಟ್ಟು ಸಾರ್ವಜನಿಕರ ಉಪಯೋಗಕ್ಕಾಗಿ ಒಂದು ಟೆಲಿಫೋನನ್ನು ಸರ್ಕಲದಲ್ಲಿ ಸದ್ಯದಲ್ಲೇ ಇರಿಸುವ ಏರ್ಪಾಟು ಮಾಡಿಸಲು ಒಪ್ಪಿಗೆ ಪಡೆಕೊಂಡರು. ಇದೇ ರೀತಿ ಇನ್ನೂ ಹೆಚ್ಚಿನ ಜನೋಪಕಾರೀ ಕೆಲಸಗಳೂ ಶ್ರೀ ಪೈಗಳಿಂದ ಆಗಬಹುದೆಂದು ಜನರು ನಿರೀಕ್ಷೆಯಲ್ಲಿರುವರು. ತರುಣೋತ್ಸಾಹೀ ಪೈಗಳು ತಮ್ಮ ಜವಾಬ್ದಾರಿಯನ್ನು ಚೆನ್ನಾಗಿ ಅರಿತೇ ಈ ರೀತಿ ಹಲವಾರು ಕೆಲಸಗಳಲ್ಲಿ ಆಸಕ್ತಿಯಿಂದ ಮುನ್ನುಗ್ಗುತ್ತಿರುವುದು ನಿಜವಾಗಿಯೂ ಸ್ತುತ್ಯವೆನ್ನಬೇಕು.

ಪಣಂಬೂರು— ಪಣಂಬೂರು ಬೋರ್ಡ್ ಹಾ! ಎ! ಶಾಲಾ ಮಕ್ಕಳ ತಿಂಗಳ ಹಬ್ಬವು ಇದೇ ತಾ 20ರಲ್ಲು ಮೂಲ್ಕಿ ಗ್ರಾಮ ಸೇವಕ ಶ್ರೀ ಪಿ. ವಿ. ಮಂಜಪ್ಪರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂಧರ್ಭದಲ್ಲಿ ಮಕ್ಕಳ ವಿವಿಧ ಚಟುವಟಿಕೆಗಳಾದುದಲ್ಲದೆ, ಸಹಕಾರ ತತ್ವದ ಕುರಿತು ಒಂದು ಮಾದರಿ ಕರ್ಕ ಸಭೆಯೂ ಜರಗಿತು.

ಚೇಳಾರಡಿ—ಆರ್. ಕೆ. ಪಾಟ್ಕರ್ ಶಾರದಾ ಹ! ಎ! ಶಾಲೆಯ ವರ್ಧಂತ್ಯುತ್ಸವವು ಇದೇ ತಾ 17ರಲ್ಲು ಶ್ರೀ ಕು. ಕಿ. ದರಿದಾಸ ಭಟ್, ಲೆಕ್ಚರರ್, ಎಮ್. ಜಿ. ಎಮ್. ಕಾಲೇಜು ಅವರ ಅಧ್ಯಕ್ಷತೆಯಲ್ಲಿ ಜರಗಿತು. ದ. ಕ ಜಿಲ್ಲಾ ಗ್ರಾಮೋದ್ಯೋಗ ಸಂಘದ ಕಾರ್ಯದರ್ಶಿಗಳಾದ ಶ್ರೀ ಎಚ್. ನಾರಾಯಣ ರಾಯರು ಗ್ರಾಮಾಭಿವೃದ್ಧಿಯ ಕುರಿತು ಮಾತನಾಡಿದರು. ಬಹುಮಾನ ವಿತರಣ, ವಿವಿಧ ವಿನೋದ ಕಾಲಕ್ಷೇಪಗಳಾಗಿ ಸಭಾಂತ್ಯವಾಯಿತು

ಪಡುಪಣಂಬೂರು—ಇದೇ ತಾ 20ರಲ್ಲು ಪಾಡಾಜೆ ಗ್ರಾಮಕ್ಕೊಂದು ಹೊಸ ಪೋಸ್ಟಾಫೀಸು ತೆರೆಯುವ ಸಮಾರಂಭವು ಪೋಸ್ಟಲ್ ಇನ್ಸ್‌ಪೆಕ್ಟರರ ಅಧ್ಯಕ್ಷತೆಯಲ್ಲಿ ಶ್ರೀ ಕೆ. ಪಿ. ವೆಂಕಪ್ಪ ಸೆಟ್ರು ಮೊದಲಾದವರ ಕೂಡುವಿಕೆಯಿಂದ ಜರಗಿತು. ಇನ್ನು ಮುಂದೆ ನಿಧಿಸಿಕ್ಕೆ ಪೋಸ್ಟಾಫೀಸಿಗೆ ಕಳುಹಿಸಿ ಕೊಡುತ್ತಿದ್ದ ಪಾಡಾಜೆಯ ಎಲ್ಲಾ ಟಪ್ಪಾಲುಗಳನ್ನು ಪಾಡಾಜೆ ಟಪ್ಪಾಲು ಕಟ್ಟಿಗೇನೇ ಕಳುಹಿಸಿ ಕೊಡಬೇಕಾಗಿದೆ.

ಬಂಟಕಲ್— ಇತ್ತೀಚೆಗೆ ಇಲ್ಲಿಯ ಬಾಲವಿಲಾಸ ಸಾರಸ್ವತ ಬ್ರಾಹ್ಮಣ ಸಮಾಜದವರು ಶ್ರೀ ಪಾಂಗಾಳ ಗೋಪಾಲ ನಾಯ್ಕರ ಅಧ್ಯಕ್ಷತೆಯಲ್ಲಿ ಶ್ರೀ ಟಿ ಎ. ಪೈಗಳನ್ನು ಸತ್ಕರಿಸಿ ಗೌರವಿಸಿದ ಸಂದರ್ಭದಲ್ಲಿ ಶ್ರೀ ಗಳಾದ ಮಂಜುನಾಥ ನಾಯ್ಕ ಬಿ.ಎಸ್. ಹೆಗ್ಡೆ, ಕೇಳು ನಂಬಿಯಾರ್ ಡಾ! ಸುಂದರರಾಮ ಪೈ. ಮೊದಲಾದವರು, ಸಮಯೋಚಿತ ಭಾಷಣ ಮಾಡಿದರು. ಈ ಸಮಾಜದವರು ಸ್ವಬುದ್ಧಿಯಿಂದ ಮತದಾನ ಮಾಡಿ ರಾಜಕೀಯ ಪರಿಪಕ್ವತೆಯನ್ನು ವ್ಯಕ್ತಗೊಳಿಸಿದುದಕ್ಕೆ ಶ್ರೀ ಟಿ. ಎ. ಪೈಗಳು ಅವರನ್ನು ಪ್ರಶಂಸಿಸಿದರು. ದೇವಸ್ಥಾನದಲ್ಲಿ ದರ್ಶನಾದಿ ಕಾರ್ಯಕ್ರಮಗಳೂ ಇದ್ದುವು.

ಶಂಕರಪುರ—ಇದೇ ತಾ 18ರಲ್ಲಿ ಇಲ್ಲಿಯ ಅಧ್ಯಮಹನೀಯರು ಶ್ರೀ ಟಿ. ಎ. ಪೈಗಳಿಗೆ ಸತ್ಕಾರ ಕೂಟ ವೊಂದನ್ನು ಏರ್ಪಡಿಸಿದ್ದರು. ರಾತ್ರಿ ಭೋಜನ ಕೊಡಲಾದಿಗಳಿದ್ದವು.

ಮಣಿಪಾಲ—ತಾ 20ರಂದು ಶ್ರೀ ಪಿ. ಶ್ರೀಪತಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿದ ಶ್ರೀ ಟಿ. ಎ. ಪೈಗಳ ಸತ್ಕಾರ ಕೂಟದಲ್ಲಿ ಕೆ. ಎಸ್. ಆಚಾರ್ ಜಕನ್ನ ಮೊದಲಾದವರು ಮಾತನಾಡಿದರು. ಶ್ರೀ ಪೈಗಳು ತಮ್ಮ ಭಾಷಣದಲ್ಲಿ ಜನತಾ ಸರಕಾರವು ದೇಶದ ಅಭ್ಯುದಯಸಾಧಿಸಬೇಕಾದರೆಹೊಲದ ಕೃಷಿಕನೂ ಕಾರ್ಖಾನೆಯ ಕಾರ್ಮಿಕನೂ ತಮ್ಮ ತಮ್ಮ ಕರ್ತವ್ಯಗಳನ್ನು ಶ್ರದ್ಧಾನಿಷ್ಠೆಯಿಂದ ಮಾಡುವುದು, ಅನಿವಾರ್ಯವೆಂದರು

ಪಿರಿಯಡ್ಕ—ಸ್ಥಳೀಯ ಆರ್ಯ ಸಮಾಜ ಮಂದಿರದಲ್ಲಿ ತಾ. 24ರಂದು ಋಷಿ ಬೋಧೋತ್ಸವವು'ಯಜ್ಞದೊಂದಿಗೆ ಆಚರಿಸಲಾಯಿತು ಗಾಂಧಿ ಮೈದಾನದಲ್ಲಿ ಶ್ರೀ (ಮುದ್ರಾಡಿ ಕೃಷ್ಣಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಭಾಷಣಗಳಾದುವು.

ಇನ್ನಂಜೆ— ಇಲ್ಲಿ ಹೈಸ್ಕೂಲನ್ನು ಸ್ಥಾಪಿಸಿ ಮಹಾಧಿ ಪಕಗಳಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟ ಶ್ರೀ ಸೋದೆಮಠದ ಶ್ರೀ ಪಾದಂಗಳವರು ಇಲ್ಲೊಂದು ಹಿಂದೂ ಅನಾಥಾಲಯವನ್ನು ಸ್ಥಾಪಿಸಿದ್ದಾರೆ. ಆದರ ಸಹಾಯಾರ್ಥವಾಗಿ ಇತ್ತೀಚೆಗೆ ಕೊಳಲು ಆನಂದ ರಾಯರ ಮತ್ತು ಪಾರ್ಟಿಯವರ ಸಂಗೀತ ಜಲಸವು ನಡೆದಿತ್ತು. ಧಾರ್ಮಿಕ ಸಂಸ್ಥೆಗಳ ಗುರು ಪೀಠದಲ್ಲಿರುವ ಶ್ರೀ ಪಾದಂಗಳವರು ಇಂತಹ ಸಾರ್ವಜನಿಕ ಕೆಲಸದಲ್ಲಿ ಆಸಕ್ತಿತೋರಿಸುತ್ತಿರುವುದು ಅನುಕರಣೀಯವೂ ಶ್ಲಾಘನೀಯವೂ ಆಗಿದೆ.

ಫಲಿಮಾರು—ಸ್ಥಳೀಯ ಬೊ| ಹಾ| ಎ| ಶಾಲೆಯ ಶಿವಾಜಿ ಬಾಲವೀರ ದಳದವರ ಶಿಬಿರಾಗ್ನಿಯು ತಾ. 23ರಲ್ಲು ಶ್ರೀ ಕೆ. ವೆಂಕಟ್ರಾಯ ಪೈಗಳ ಅಧ್ಯಕ್ಷತೆಯಲ್ಲಿ ಜರಗಿ, ಸುಬ್ರಾಯ ಭಟ್, ಸೀತಾರಾಮ ಅಡಿಗ ಮೊದಲಾದವರ ಭಾಷಣಗಳಾದವು.

ಮಂಗಳೂರು

ಮುನಿಸಿಪಲ್ ಕೌನ್ಸಿಲು ಸಭೆಯ ಸ್ಪೆಶಲ್ ಮೀಟಿಂಗು ಇದೇ ತಾ. 22ರಲ್ಲು ಸಂಜೆ ಶ್ರೀ ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲಿ ಜರಗಿತು. ಲೋಕಲ್ ಬೋರ್ಡು ಮತ್ತು ಮುನಿಸಿಪಾಲಿಟಿಗಳ ಇನ್ಸ್‌ಪೆಕ್ಟರರಿಂದ ಬಂದ ಪತ್ರದಂತೆ ವಾರ್ಡುಗಳಿಗೆ ಪುನಹ ನಂಬರುಗಳನ್ನು ಕೊಡುವ ಕುರಿತು ಚರ್ಚೆ ನಡೆದು, ಸ್ತ್ರೀಯರಿಗೆ ಸ್ಥಾನವನ್ನು ಕಾದಿಡುವುದು ಘಟನೆಗೆ ವಿರೋಧವಾಗಿರುವುದರಿಂದ ಹಾಗೆ ಸ್ತ್ರೀಯರಿಗೆ ಸ್ಥಾನ ಕಾದಿಡುವುದು ಅಗತ್ಯವಿಲ್ಲವೆಂದೇ ಕೌನ್ಸಿಲಿನ ಅಭಿಪ್ರಾಯವಾಯಿತು. ಬಳಿಕ ಸಾಮಾನ್ಯ ಸಭೆ ಜರಗಿತು. ಕೇಂದ್ರ ಮೈದಾನಿನಲ್ಲಿರುವ ಶ್ರೀ ಡಾಮಂಟಪದ ಉಪಯೋಗದ ವಿಚಾರದಲ್ಲಿ ಕಮೀಶನರರ ಸೂಚನೆಯು ಚರ್ಚೆಯಾಗಿ ಅದನ್ನು ಅಭ್ಯೈರು ತೀರ್ಮಾನಕ್ಕಾಗಿ ಶ್ರೀಗಳಾದ ಎಸ್. ಎನ್. ಸುವರ್ಣ, ಕೆ. ಸೂರ್ಯ ನಾರಾಯಣ ಅಡಿಗ ಮತ್ತು ಬಿ. ಎಸ್ ಭಾಸ್ಕರ ರೈಗಳಿಂದ ಕೂಡಿದ ಕಮಿಟಿಗೆ ಒಪ್ಪಿಸಲಾಯಿತು.

ಶ್ರೀ ಕೆ. ಕೆ. ಸೆಟ್ಟರ ರಾಜಿನಾಮೆ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಕೆ. ಕೆ. ಸೆಟ್ಟರು ತಮ್ಮ ಕಾರ್ಯದರ್ಶಿ ಸ್ಥಾನಕ್ಕೆ ರಾಜಿನಾಮೆಯನ್ನು ಕೆ. ಪಿ. ಸಿ. ಸಿ. ಗೆ ಕಳುಹಿಸಿದ್ದು ಅದನ್ನು ಕೆ. ಪಿ. ಸಿ. ಯವರು ಅಂಗೀಕರಿಸಿದ್ದಾರೆ. ಈಗ ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷರಾಗಿ ಡಾ! ಯು. ಪಿ. ಮಲ್ಯರನ್ನೂ ಕಾರ್ಯದರ್ಶಿಗಳಾಗಿ ಶ್ರೀ ಬಿ. ಆರ್. ಕರ್ಕೇರರನ್ನೂ ಕೆ.ಪಿ.ಸಿ.ಸಿ.ಯು ನೇಮಿಸಿರುತ್ತಾರೆ.

ವಾರ್ಷಿಕೋತ್ಸವ— ಎಲೋಸಿಯಸ್ ಕಾಲೇಜಿನ ಕರ್ನಾಟಕ ಸಂಘದ ವಾರ್ಷಿಕೋತ್ಸವವು ಇದೇ ತಾ. 16ರಲ್ಲು ಸಂಜೆ ಮೈಸೂರ ಸಾಹಿತಿಗಳಾದ ಶ್ರೀ ವಿ. ಎಸ್. ಮೂರ್ತಿರಾವ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಟಿ. ಗೋಪಾಲಕೃಷ್ಣ ಭಟ್ಟರು ಸ್ವಾಗತ ಭಾಷಣವಿತ್ತರು. ಶ್ರೀ ಸೇಡಿಯಾಪು ಕೃಷ್ಣ ಭಟ್ಟರು ರನ್ನನ 'ಗದಾಯುದ್ಧ' ದ ಕಥಾ ನಾಯಕನು ಭೀಮನೇ ಎಂದು ಸಮರ್ಥಿಸಿ ಮಾತನಾಡಿದರು. ಕುಮಾರಿ ಸಿ. ಮಾಲತಿ ಮತ್ತು ಶ್ರೀನಿವಾಸ ಉಡುಪರಿಂದ ಕಾವ್ಯವಾಚನವಾದ ಬಳಿಕ ಅಧ್ಯಕ್ಷರು ಸಾಹಿತ್ಯವಿಮರ್ಶೆ ಎಂಬ ವಿಚಾರವಾಗಿ ಮಾತನಾಡಿದರು. ಅವರು ತಮ್ಮ ಮಾತಿನಲ್ಲಿ ಹೊಸಗನ್ನಡದಲ್ಲಿ ವಿಮರ್ಶೆ ಬೆಳೆಯಲಿಲ್ಲವೆಂದೂ ಇತ್ತೀಚೆಗೆ ನಾಲ್ಕೈದು ವರ್ಷಗಳಲ್ಲಿ ವಿಮರ್ಶೆಯು ಬಹಳ ಕೆಳಮಟ್ಟಕ್ಕಿಳಿದಿದೆ ಎಂದೂ ಹೇಳಿದರು.

ರಂಗಭೂಮಿಯ ಉದ್ಘಾಟನೆ:— ಸ್ಥಳೀಯ ಕೆನರಾ ಹೈಸ್ಕೂಲಿಗೆ, ದಿವಂಗತ ಕುಡ್ಪಿ ಗೋಪಾಲ ಶೆಣೈ ಸ್ಮಾರಕ ನಿಧಿಯಿಂದ ಅವರ ಸ್ಮರಣಾರ್ಥ ಕಟ್ಟಿಸಿಕೊಟ್ಟ ಶ್ರೀ ಸುಕೃತೀಂದ್ರ ತೀರ್ಥ ಸ್ವಾಮಿ ಸ್ಮಾರಕ ರಂಗಭೂಮಿಯ ಉದ್ಘಾಟನೆಯನ್ನು ಇದೇ ತಾ. 16ರಲ್ಲು ಕಾಶೀಮಠಾಧೀಶ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಜಿಯವರು ನೆರವೇರಿಸಿದರು. ಶ್ರೀ ಎಮ್. ಮಾಧವರಾಯರು ಸ್ವಾಗತ ಭಾಷಣ ಮಾಡಿದರು. ಡಾ! ಬಿ ಡಾ! ಎಮ್. ಕೇಶವ ಪೈಗಳು ಸ್ವಾಮಿಗಳವರಿಗೆ ಪಾದಪೂಜೆ ನಡೆಸಿ ಗೌರವಿಸಿದರು.

The Moolky Bank, Ltd., Mulki.

NOTICE

The Register of Members and Transfer Books of the Moolky Bank Ltd., Mulki will remain closed from 2-3-1952 to 18-3-1952, both days inclusive.

(Sd.) **M. R. H. Punja,**
Manager.

ಎ. ಸಿ. ಸಿ. ನಂಬ್ರ 902A

ಒಂದು ಅಪೂರ್ವ ಅತ್ಯಧಿಕ ಬಹುಮಾನ

ರೂ. 45,0000 ಪಡೆಯಿರಿ

ಪ್ರಥಮ ಇನಾಮು-ಸರ್ವಸಮ ರೂ. **310000**

ದ್ವಿತೀಯ ಬಹುಮಾನ ಪ್ರಥಮ ಎರಡು ಸಂಖ್ಯೆ ಸರಿಯಾದುದಕ್ಕೆ ರೂ **100000**

ತೃತೀಯ ಬಹುಮಾನ-ಪ್ರಥಮ ಒಂದು ಸಂಖ್ಯೆ ಸರಿಯಾದುದಕ್ಕೆ ರೂ. 40000

ವಿಶೇಷ ಬಹುಮಾನ ರೂ. 10000

ಒಂದು ಪ್ರವೇಶಕ್ಕೆ 2 ರೂಪಾಯಿ. ಉತ್ತರ ಸ್ವೀಕರಿಸುವ ಕೊನೆಯ ದಿನ 14-3-52. ಅಪೇಕ್ಷಿಸಿದ್ದಲ್ಲಿ ನಿಬಂಧನೆಗಳು ದೊರಕುವುವು.

				5	

ಚೌಕದಲ್ಲಿಯ ಕಣಗಳಲ್ಲಿಯ ಒಟ್ಟು ಮೊತ್ತವು 20 ಇಪ್ಪತ್ತು ಬರುವಂತೆ 7 ರಿಂದ 6ರ ವರೆಗಿನ ಅಂಕೆಗಳನ್ನು ಒಮ್ಮೆ ಮಾತ್ರ ಉಪಯೋಗಿಸಿರಿ. ಕಣದಲ್ಲಿ ತೋರಿಸಿದ 5 ಅಂಕೆಯನ್ನು ಬದಲಾಯಿಸಕೂಡದು

ನಿಯಮಗಳು: ಖಾಲಿ ಕಾಗದದ ಮೇಲೆ ಬರೆದು ಎಷ್ಟು ಪ್ರವೇಶಗಳನ್ನು ಬೇಕಾದರೂ ರಿಜಿಸ್ಟರ್ಡ್ ಪೋಸ್ಟು ದ್ವಾರಾ ಕಳುಹಿಸಬಹುದು. ಮನಿಯಾರ್ಡರ್ ರಶೀದಿಯನ್ನಾಗಲೀ, ಕ್ರಾಸ್ ಮಾಡದ ಪೋಸ್ಟಲ್ ಆರ್ಡರನ್ನಾಗಲೀ ಉತ್ತರದೊಂದಿಗೆ ಕಳುಹಿಸತಕ್ಕದ್ದು. ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಫಲಿತಾಂಶ ಅಪೇಕ್ಷಿಸುವವರು ಎರಡಾಣೆ ಟಪ್ಪಾಲು ಚೀಟು ಮುಂದಾಗಿ ಕಳುಹಿಸತಕ್ಕದ್ದು ಉತ್ತರ ಕಳುಹಿಸತಕ್ಕ ವಿಳಾಸ

The Manager, **A. C. Competitions (Govt. Regd.)**
(902-A19) MADURAI, S. India.

ಎ. ಸಿ. ಸಿ. ನಂಬ್ರ 895ನೇ ಸ್ಪರ್ಧೆಯ ಉತ್ತರ:-4—3—6—5—2ಈ ಸ್ಪರ್ಧೆಗೆ ಎಲ್ಲಾ ಸರಿಯಾದ ಉತ್ತರ ಬಂದಿಲ್ಲಾ. ಪ್ರಥಮ ಮೂರು ಅಂಕೆಗಳು ಸರಿಯಾದುದಕ್ಕೆ ಪ್ರಥಮ ಬಹುಮಾನ, ರೂ. 62,945-11-0 ಪ್ರಥಮ ಎರಡು ಅಂಕೆ ಸರಿಯಾದುದಕ್ಕೆ ದ್ವಿತೀಯ ಬಹುಮಾನ ರೂ. 29,761-9-0 ತೃತೀಯ ಬಹುಮಾನ ರೂ. 12,750-6-0.

ಕತಾಯಿ ಮಂಡಲ ರಚನೆ

ಶೋಷಣರಹಿತ ಸಮಾಜ ಸ್ಥಾಪನೆ.

ದೇಶದಲ್ಲೆಲ್ಲ ಗ್ರಾಮರಾಜ್ಯ-ರಾಮರಾಜ್ಯವನ್ನು ಸ್ಥಾಪಿಸಬೇಕೆಂದು ನಮ್ಮ ಮುಖಂಡರು ಪ್ರಯತ್ನಿಸುತ್ತಿದ್ದಾರೆ. ಅಂಥಾ ಗ್ರಾಮರಾಜ್ಯವನ್ನು ಸ್ಥಾಪಿಸಲು ಹಳ್ಳಿಯವರು ತಮ್ಮ ಆರ್ಥಿಕ ಆಯೋಜನೆಗಳನ್ನು ತಾವೇ ಮಾಡಬೇಕು. ಆದಕ್ಕಾಗಿ ಲಕ್ಷಾವಧಿ ಗ್ರಾಮಗಳನ್ನು ವಸ್ತ್ರಸ್ವಾವಲಂಬನೆಯ ಮೂಲಕ ಸ್ವಯಂಪೂರ್ಣತೆಯ ಕಡೆಗೊಯ್ಯಲು ಪ್ರಥಮ ಸೋಪಾನವಾಗಿ ಕತಾಯಿಮಂಡಲಗಳ ಕಾರ್ಯಕ್ರಮವನ್ನು ಅಖಿಲ ಭಾರತ ಚರಖಾ ಸಂಘದವರು ಕೈಕೊಂಡಿರುವರು. ಕತಾಯಿ ಮಂಡಲಗಳ ಯೋಜನೆಯನ್ನು ಮಹಾತ್ಮಾ ಗಾಂಧೀಜಿಯವರು ತನ್ನ ನಿಧನದ ಮೊದಲು ಕಲ್ಪಿಸಿದ್ದರು. ಕತಾಯಿ ಮಂಡಲಗಳನ್ನು ರಚಿಸುವುದರಿಂದ ದೇಶದಲ್ಲೆಲ್ಲ ಶೋಷಣಹೀನ ಸಮಾಜವನ್ನುಂಟುಮಾಡಲಿಕ್ಕೆ ಪ್ರಯತ್ನಿಸುವಂತಾಗುವುದು. ಜನರ ಸ್ವಯಂಪೂರ್ಣತೆಯು ಸಂಘಟಿತವಾಗದೆ, ಇನ್ನಾವ ವ್ಯಾಪಕವಾದ ರಾಷ್ಟ್ರೀಯ ಯೋಜನೆಗಳನ್ನು ನಾವು ತಯಾರಿಸಿದರೂ ಅವುಗಳಿಂದಲೇ ಜನತೆಯ ಸ್ವರಾಜ್ಯ ಸ್ಥಾಪನೆಯಾಗಬಹುದೆಂಬುದು ಅಸಂಭವನೀಯವಾದ ಮಾತಾಗಿದೆ.

ತಮ್ಮ ಕ್ಷೇತ್ರ ಸ್ವಾವಲಂಬನೆ ಮತ್ತು ಆರ್ಥಿಕ ಆಯೋಜನೆಗಳ ಸೂತ್ರವು ಜನರ ಕೈಯಲ್ಲಿರಬೇಕಾದರೆ ಅವರು ತಮ್ಮ ಜೀವನಕ್ಕೆ ಅನಿವಾರ್ಯವಾದ ವಸ್ತುಗಳನ್ನು ತಾವೇ ಹೆಚ್ಚುಹೆಚ್ಚಾಗಿ ಉತ್ಪನ್ನಮಾಡಬೇಕು. ಹಾಗಾದರೆ ಅವರು ಸ್ವಾವಲಂಬಿಗಳಾಗಬಹುದು. ಈ ಮುಖ್ಯೋದ್ದೇಶವನ್ನು ಜನರಿಗೆ ತಿಳಿಸಿ, ಚರಖಾ ಮತ್ತು ಗ್ರಾಮೋದ್ಯೋಗಗಳ ಮೂಲಕ ಅದನ್ನು ಕಾರ್ಯಗೊಳಿಸಿಕೊಡುವುದು ಕತಾಯಿ ಮಂಡಲಗಳ ಕೆಲಸವಾಗಿರುವುದು. ಈ ಕಾರ್ಯವು ಮಹತ್ವಾಗಿದೆ. ಕತಾಯಿ ಮಂಡಲಗಳು ಬಿನ್ನಬಿನ್ನವಾಗಿರುವವು. ಆದರೂ ಅವುಗಳೊಳಗೆ ಪರಸ್ಪರ ಸಂಬಂಧ, ಮತ್ತು ಅವುಗಳ ಕಾರ್ಯಕ್ರಮಗಳಲ್ಲಿ ಸುಸೂತ್ರತೆಯಿರಬೇಕು. ಅವುಗಳ ಸಂಚಾಲಕರ ಸದಸ್ಯರ ನಿಚಾರಗಳು ಸ್ಪಷ್ಟವಾಗಿರಬೇಕು. ಅವರ ಜೀವನ ಕ್ರಮವು ಮೇಲಿನ ಉದ್ದೇಶಕ್ಕನುಸಾರವಾಗಿ ಇತ್ತೆಂದರೆ ಇಷ್ಟು ದೊಡ್ಡ ಕೆಲಸವೂ ಸುಲಭವಾಗಿ ಪೂರೈಸಲಾಗಬಹುದಾಗಿದೆ.

ಚರಖಾದ ಮೂಲೋದ್ದೇಶವನ್ನು ಯಾವುದೊಂದು ದೊಡ್ಡ ಸಂಸ್ಥೆಯಾ ಜನಸಮೂಹವು ಪ್ರಯೋಗಗೊಳಿಸಬೇಕೆಂದಿದ್ದರೆ ಅದಕ್ಕಾಗಿ ಹಲವಾರು ಚಿಕ್ಕಚಿಕ್ಕ ಮಂಡಲಗಳು ಅಲ್ಲಲ್ಲಿ ಉತ್ಪನ್ನವಾಗಬೇಕು. ಅಂಥಾ ಪ್ರಯೋಗ ಮತ್ತು ಪ್ರಚಾರಕ ಮಂಡಲಗಳೇ ಕತಾಯಿ ಮಂಡಲಗಳೆನಿಸುತ್ತವೆ. ಸ್ವಾಭಾವಿಕ ರೀತಿಯಿಂದ ವಸ್ತ್ರಸ್ವಾವಲಂಬನೆಯ ವಾತಾವರಣವನ್ನು ದೇಶದಲ್ಲೆಲ್ಲ ಹಬ್ಬಿಸಿ, ವಸ್ತ್ರಸ್ವಾವಲಂಬನೆಗಾಗಿ ನೂಲುವ ಮತ್ತು ನೇಯುವ ಕಾರ್ಯಗಳಿಗೆ ಬೇಕಾದ ಸಲಕರಣೆಗಳನ್ನೊದಗಿಸಿ ಕೊಡುವುದು ಈ ಮಂಡಲಗಳ ಮುಖ್ಯ ಕಾರ್ಯವಾಗಿರುವುದು. ಶ್ರದ್ಧೆಯುಕ್ತ ನಿಷ್ಠಾವಂತ ಮತ್ತು ಸ್ವತಃ ಜೀವನದಲ್ಲಿ ಆಚರಿಸಲು ಉದ್ಯುಕ್ತರಾಗಿರುವ ಸಮಾಜ ಸೇವಕರು ಅದಕ್ಕೆ ಬೇಕಾಗುತ್ತಾರೆ.

ಕತಾಯಿ ಮಂಡಲಗಳು ಸ್ವಾವಲಂಬಿಗಳಾಗಿರಬೇಕು. ಸದಾ ಚರಖಾ ಸಂಘದ ಮೇಲೆಯೇ ಹೊಂದಿಕೊಂಡಿರ ಕೂಡದು. ಪ್ರತಿಯೊಂದು ಮಂಡಲವೂ ತನ್ನ ಕ್ಷೇತ್ರದಲ್ಲಿ ಸಾಧ್ಯವಾಗುವ ವ್ಯವಸ್ಥೆಗಳ ಮೂಲಕ ಅಲ್ಲಿನ ನೂಲುವವರಿಗೆ ಬೇಕಾಗುವ ಸಾಧನೆಗಳನ್ನು ಯಥಾ ಶಕ್ತಿ ಒದಗಿಸಿ ಕೊಡಲು ಪ್ರಯತ್ನಿಸಬೇಕು ಎಂದ ಮೇಲೆ ತಮ್ಮ ಸುತ್ತು ಮುತ್ತಲು ಹತ್ತಿಯನ್ನು ಬೆಳೆಸಲು ಪ್ರಯತ್ನಿಸುವುದು ಸರಂಜಾಮುಗಳನ್ನು ತಯಾರಿಸುವುದು. ಕೈನೂಲನ್ನು ಒದಗಿಸುತ್ತ ನೇಯಿಗೆಗಾರರನ್ನು ಸೃಷ್ಟಿಗೊಳಿಸುವುದು ಮೊದಲಾದ ಮುಖ್ಯ ವಿಷಯಗಳನ್ನು ಮಂಡಲಗಳು ಕೈಗೊಳ್ಳಬೇಕು. ಸ್ವಾವಲಂಬಿಗಳು ತಮಗೋಸ್ಕರವೇ ನೂಲುವುದು. ಮಾತ್ರವಲ್ಲದೆ ತಮ್ಮ ಸುತ್ತು ಮುತ್ತು ಹೆಚ್ಚಿನ ಖಾದಿಯ ಬಗ್ಗೆ ಯಥಾ ಶಕ್ತಿ ಹೆಚ್ಚೆಚ್ಚು ನೂಲು ಉಂಟುಮಾಡುವುದಕ್ಕೂ ಕತಾಯಿ ಮಂಡಲಗಳು ಪ್ರಯತ್ನಿಸತಕ್ಕದ್ದು.

ಈ ರೀತಿಯಿಂದ ಕ್ಷೇತ್ರ ಸ್ವಾವಲಂಬನೆಯ ಕಡೆಗೆ ಒಂದೊಂದು ಹೆಜ್ಜೆ ಮುಂದುವರಿ... ಮಂಡಲಗಳು ವಸ್ತ್ರದ ಮಟ್ಟಿಗೆ ಸ್ವಯಂ...ವಾಗಲು ಯತ್ನಿಸಿದ್ದಲ್ಲಿ, ಚರಖಾ ಸಂಘವೂ ಆ ಮಟ್ಟಿಗೆ ಮಂಡಲಗಳು ಸಹಾಯಮಾಡಲಿಕ್ಕಿರುವುದು.

ಕತಾಯಿ ಮಂಡಲಗಳನ್ನು ರಚಿಸುವ ನಿಯಮಗಳು ಈ ಕೆಳಗಿನಂತಿವೆ:-

ಕತಾಯಿ ಮಂಡಲಗಳ ಸ್ಥಾಪನೆ ಬಗ್ಗೆ ಕಡಿಮೆಯೆಂದರೆ ಐದು ಮಂದಿ ಸಹಾಯೋಗಿ ಮತ್ತು ಸ್ವಾವಲಂಬಿ ನೂಲುವವರಿರಬೇಕು. ಅವರು ಒಂದೇ ಪರಿವಾರದವರಾಗಿದ್ದ, ಪ್ರತ್ಯೇಕ ಮನೆಯವರಾಗಿರಬೇಕು.

ಸಹಯೋಗಿ ಸದಸ್ಯರೆಂದರೆ ೧೮ ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರಾಗಿದ್ದು ಸಂಪೂರ್ಣ ಖಾದಿಧಾರಿಗಳೂ ಆಗಿರುವವರು, ತಾವೇ ಸ್ವತಃ ನೂತ ಅರ್ಧಲಡಿ(೪೨೦ ಸುತ್ತು) ಸಮಾನವಾದ ನೂಲನ್ನು ಪ್ರತಿತಿಂಗಳಿಗೆ ಯಾ ವಾರ್ಷಿಕ ಆರು ಲಡಿ ನೂಲನ್ನೂ ಚರಖಾ ಸಂಘಕ್ಕೆ ದಾನವಾಗಿ ಕೊಡುವವರಾಗುತ್ತಾರೆ.

ವಸ್ತ್ರ ಸ್ವಾವಲಂಬಿಯೆಂದರೆ, ಸಂಪೂರ್ಣ ಖಾದಿಧಾರಿಗಳಾಗಿರುತ್ತ ಅಸ್ವಸ್ಥತೆ ಯಾ ಇನ್ನಿತರವಾದ ಯಾವುದಾದರೂ ಅನಿವಾರ್ಯ ಕಾರಣಗಳಿಂದ ಅಸಾಧ್ಯವಾದಾಗ ಹೊರತು ಮಿಕ್ಕ ಸಮಯಗಳಲ್ಲಿ ತಮ್ಮ ಮತ್ತು ತಮ್ಮ ಕುಟುಂಬದ ಉಪಯೋಗಾರ್ಥವಾಗಿ ಯಾ ದಾನಕ್ಕಾಗಿ ಪ್ರತಿತಿಂಗಳೂ ನಿಯಮ ಪೂರ್ವಕವಾಗಿ ಕಡಿಮೆಯೆಂದರೆ ನಾಲ್ಕುವರೆ ಲಡಿಯಾ ಸಂಯುಕ್ತ ಕತಾಯಿ [ಹತ್ತಿಯ ಬೀಜ ತೆಗೆಯುವುದರಿಂದ ತೊಡಗಿ ಹಿಂಜುವುದು ಇತ್ಯಾದಿಗಳನ್ನು ಮಾಡಿ ಐದು ಲಡಿ ನೂಲುವವರು.]

ಸಂಪೂರ್ಣ ಖಾದಿಧಾರಿಗಳೆಂದರೆ ತಮ್ಮ ಯಾ ತಮ್ಮ ಮನೆಯವರ ನೂಲಿನ ಚರಖಾ ಸಂಘದ ಯಾ ಚರಖಾ ಸಂಘದವರಿಂದ ಪ್ರಮಾಣಿತವನ್ನು ಪಡೆದಿರುವ ಖಾದಿಯನ್ನೇ ಸದಾ ಧರಿಸುವವರೆಂದರ್ಥ.

ಇನ್ನು ನೂಲುವವರಿಗೆ ಕತಾಯಿಮಂಡಲಗಳು ಈ ಕೆಳಗಿನ ಆವಶ್ಯಕತೆಗಳನ್ನು ಒದಗಿಸಿ ಕೊಡಲು ಪ್ರಯತ್ನಿಸುತ್ತಿರಬೇಕು?

೧ ಬೀಜವುಳ್ಳ ಅರಳೆ ಅಥವಾ ಬೀಜತೆಗೆದಿರುವ ಹತ್ತಿ. ೨ ಸರಂಜಾಮುಗಳನ್ನು ಒದಗಿಸಿಕೊಡುವುದೂ ಅವುಗಳನ್ನು ದುರಸ್ತಿ ಮಾಡುವುದು, ೩ ಹಂಜಿಗಳನ್ನು ತಯಾರಿಸಿ ನೂಲುವುದರಲ್ಲಿ ತರ್ಬೇತು ಮಾಡುವುದು. ೪ ವಸ್ತ್ರಗಳ ಜಾತಿ ಮತ್ತು ಅಗಲಗಳಿಗನುಸಾರವಾಗಿ ಅವಶ್ಯ ತಗಲಬಹುದಾದ ನೂಲಿನ ಪರೀಕ್ಷೆಯು, ೫ ನೂತ ನೂಲನ್ನೂ ನೇಯುವುದು, ೬ ವಸ್ತ್ರ ಸ್ವಾವಲಂಬಿಗಳಿಗೆ ಬೇಕಾಗುವ ಇತರ ಖಾದಿಯನ್ನು ಪೂರೈಸಿಕೊಡುವುದು.

ಕತಾಯಿ ಮಂಡಲಗಳು ಮೇಲಿನ ಕಾರ್ಯಗಳನ್ನು ಕೈಗೊಳ್ಳುವಾಗ ಚರಖಾ ಸಂಘವು ಅವುಗಳಿಗೆ ಈ ಕೆಳಗಿನ ನಿಯಮಕ್ಕನುಸಾರವಾಗಿ ಸಹಾಯಮಾಡಲು ಪ್ರಯತ್ನಿಸುವುದು:- ಚಂದಾ ಕೊಟ್ಟು ತಮ್ಮ ಹೆಸರುಗಳನ್ನು ರಿಜಿಸ್ಟ್ರಿ ಮಾಡಿದವರಿಗೆ ಕ್ರಯಕ್ಕೆ ಒಳ್ಳೆ ಹತ್ತಿಯನ್ನು ಒದಗಿಸಿಕೊಡುವುದು.

ಎಲ್ಲಾ ತರದ ಸರಂಜಾಮುಗಳನ್ನು ಕ್ರಯಕ್ಕೆ ವಿಕ್ರಯಿಸುವುದು:—

ಯಾವದೊಂದು ಮಂಡಲವು ಸರಂಜಾಮುಗಳನ್ನು ತಯಾರಿಸಲು ಸ್ಥಾನಿಕ ಕಾರ್ಯವನ್ನು ಕೈಕೊಳ್ಳುವುದಾದರೆ ಆ ಕಾರ್ಯಕ್ಕೆ ಬೇಕಾದ ಸಲಹೆ ಇತ್ಯಾದಿಗಳಿಂದ ಚರಖಾ ಸಂಘವು ಆ ಮಂಡಲಕ್ಕೆ ಯೋಗ್ಯ ಸಹಾಯವನ್ನು ಕೊಡುವುದು. ಒಂದು ವೇಳೆ ಮಂಡಲವು ತನ್ನ ಖರ್ಚಿನಿಂದ ಯಾರಿಗಾದರೂ ಸರಂಜಾಮದ ಕೆಲಸವನ್ನು ಕಲಿಸಲಿಚ್ಛಿಸುವುದಾದರೂ ಚರಖಾ ಸಂಘವು ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡುವುದು.

(ಬರುವ ವಾರದ ಸಂಚಿಕೆ ನೋಡಿರಿ.)



ಹೊಸ ಹುರುಪಿಗೂ ನವಜೀವನಕ್ಕೂ ಮಾನಸಿಕ ಬಲ ಸಂವರ್ಧನೆಗೂ
ದೇಹ ದಾರ್ಢ್ಯತೆಗೂ ಶಕ್ತಿ ಸಾಮರ್ಥ್ಯಕ್ಕೂ
ಕಾಳಿಕಮಾಲಿ
ಚ್ಯವನ ಪ್ರಾಶವನ್ನೇ
ಸದಾ ಸರ್ವದಾ ಉಪಯೋಗಿಸಿರಿ
ಹಿಮಾಲಯದ ತಪ್ಪಲಿನ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಹೆಸರಾಂತ ಆಯುರ್ವೇದೀಯ ದಿವ್ಯೌಷಧ. ಅಶಕ್ತ ನರಗಳಿಗೂ ಬಲಹೀನ ಎದೆಗುಂಡಿಗೆಗೂ ಚಲೋ ಟಾನಿಕ್.
ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಹಾಗೂ ಮೈಸೂರು ಸ್ಟೇಟಿನ ಸ್ಟಾಕಿಸ್ಟರು:—
ಎಲ್. ವಿನಾಯಕ ರಾವ್, ಬನ್ನಂಜೆ ರಸ್ತೆ, ಉಡುಪಿ, ದ. ಕ.
ಬೆಲೆ: 2 ಪೌಂಡಿನ ಟಿನ್ನಿಗೆ ರೂ. 10—0-0 (ಅಂಚೆವೆಚ್ಚ ಪ್ರತ್ಯೇಕ)
AYURVEDIC PHARMACY
Baba kali Kamali-Wala RISHIKESH.

ಶ್ರೀ ಬಿ. ಮಂಜಯ್ಯ ಹೆಗ್ಡೆ, ಬಿ.ಎ.ಬಿ.ಎಲ್.
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಬೋರ್ಡು, ದ. ಕ.

ಟೆಂಡರ್ ನೋಟೀಸು

1-4-1952ರಿಂದ 31-3-53ರ ವರೆಗೆ ದ. ಕ. ಜಿಲ್ಲಾ ಬೋರ್ಡು ಆಫೀಸಿನ ಮತ್ತು ಇದರ ಖಾತೆಯಲ್ಲಿರುವ ಇತರ ಆಫೀಸುಗಳ ಉಪಯೋಗದ ಬಗ್ಗೆ ಸ್ಟೇಶನರಿ ಸಾಮಾನುಗಳನ್ನು ಮತ್ತು ಜೆಸ್ಟೆಟನರ್ ಡುಪ್ಲಿಕೇಟರ್ ಮೆಶಿನ್ ಸಾಮಾನುಗಳನ್ನು ಒದಗಿಸುವ ಬಗ್ಗೆ ಸೀಲು ಟೆಂಡರುಗಳನ್ನು "1952-53ನೇ ವರ್ಷದಲ್ಲಿ ಸ್ಟೇಶನರಿ ವಗೈರೆ ಸಾಮಾನುಗಳನ್ನು ಒದಗಿಸುವ ಕುರಿತು ಟೆಂಡರ್ ಎಂತ ಸೀಲು ಮಾಡಿದ ಲಕೋಟೆಯ ಮೇಲೆ" ಪ್ರೆಸಿಡೆಂಟ್, ದ. ಕ. ಜಿಲ್ಲಾ ಬೋರ್ಡು ಮಂಗಳೂರು ಎಂತ ವಿಳಾಸ ಬರೆದು 1952ನೇ ಇಸವಿ ಮಾರ್ಚಿ ತಿಂಗಳ ತಾರೀಕು 15ನೇ ಶನಿವಾರ ಅಪರಾಹ್ನ 5 ಘಂಟೆ ಒಳಗೆ ದ. ಕ. ಜಿಲ್ಲಾ ಬೋರ್ಡು ಆಫೀಸಿಗೆ ತಲಪುವಂತೆ ಕಳುಹಿಸಬೇಕೆಂತ ಕೇಳಿಕೊಳ್ಳಲಾಗುತ್ತದೆ. ಮೇಲೆ ಕಾಣಿಸಿದ ತಾರೀಕಿನ ಸಾಯಂಕಾಲ 5 ಘಂಟೆಯ ನಂತರ ತಲಪುವ ಟೆಂಡರನ್ನು ಅಂಗೀಕರಿಸಲಾಗಲಿಕ್ಕಿಲ್ಲ.

2 ಸ್ಟೇಶನರಿ ವಗೈರೆ ಸಾಮಾನುಗಳನ್ನು ಒದಗಿಸುವ ಬಾಬ್ತು ಛಾಪ ಟೆಂಡರ ಫೋರ್ಮು ಮತ್ತು ಟೆಂಡರುಗಳ ಸ್ವೀಕಾರದ ಕುರಿತಾದ ಕ್ರಮ ನಿಬಂಧನೆಗಳ ಪ್ರತಿಯೊಂದು ಎರಡು ಫೋರ್ಮುಗಳ ಒಂದು ಸೆಟ್ಟನ್ನು ರೂ[1-0-0] ಒಂದರಂತೆ ಪಾವತಿ ಮಾಡಿ ಬರೆದ ಮೂಲಕ ಕೇಳಿಕೊಂಡಲ್ಲಿ ಒದಗಿಸಿ ಕೊಡಲಾಗುವದು. ಪ್ರತಿಯೊಂದು ಸಾಮಾನಿನ ಯಾ ಎಲ್ಲಾ ಸಾಮಾನುಗಳನ್ನು ಒಟ್ಟಾಗಿ ಸೇರಿಸಿಯಾ ಕೆಲವು ಸಾಮಾನುಗಳನ್ನು ಮಾತ್ರ ಸೇರಿಸಿ ಕಡಿಮೆ ಎಂತ ಕಂಡು ಬಂದ ಟೆಂಡರನ್ನು ಸ್ವೀಕರಿಸುವ ಅಧಿಕಾರವನ್ನು ಡಿಸ್ಟ್ರಿಕ್ಟ್ ಬೋರ್ಡು ಕಾದಿರಿಸಿಕೊಂಡಿದೆ.

3 ಟೆಂಡರುಗಳು ದ. ಕ. ಜಿಲ್ಲಾ ಬೋರ್ಡು ಪ್ರೆಸಿಡೆಂಟರಿಂದ ಅಥವಾ ಅವರಿಂದ ಅಧಿಕಾರ ಹೊಂದಲ್ಪಟ್ಟವರಿಂದ 1952ನೇ ಇಸ್ವಿ ಮಾರ್ಚ ತಿಂಗಳ ತಾರೀಕು 17ನೇ ಸೋಮವಾರ ಅಪರಾಹ್ನ ಘಂಟೆ 4-30ಕ್ಕೆ ದ. ಕ. ಜಿಲ್ಲಾ ಬೋರ್ಡು ಆಫೀಸಿನಲ್ಲಿ ಆ ಸಮಯ ಹಾಜರಿರುವ ಟೆಂಡರುದಾರರ ಸಮಕ್ಷಮ ತೆರೆಯಲ್ಪಡುವವು.

ದ. ಕ. ಜಿಲ್ಲಾ ಬೋರ್ಡು ಆಫೀಸು
ಮಂಗಳೂರು, 19-2-52

M SUNDER RAO
For President.



ಸಾದರ ಸ್ವೀಕಾರ

ಯೌವನ ರಕ್ಷಣೆ

ಲೇಖಕರು—ಕವಿರಾಜ ಹರನಾಮದಾಸ, ಬಿ. ಎ. ಪ್ರಕಾಶಕರು: ಪಂಡಿತ ಮಂಜುನಾಥ ಶಾಸ್ತ್ರಿ, ಗುರುಕುಲ, ಘಟಕೇಶ್ವರ N.S-R. ಕ್ರೌನ್ 39 ಪುಟಗಳು, ಬೆಲೆ 0–4–0

ಅಜ್ಞಾನವೇ ಸರ್ವದುಃಖಗಳ ಮೂಲಕಾರಣ. ಭಾರತವರ್ಷದ ಯುವಕ ಯುವತಿಯರ ಅಜ್ಞಾನ, ದೌರ್ಬಲ್ಯ ಮತ್ತು ದೋಷಗಳನ್ನು ಹೆಚ್ಚುಹೆಚ್ಚಾಗಿ ದೂರಮಾಡಿ ಅವರ ಪಾರಿವಾರಿಕ ಜೀವನವನ್ನು ಸುಖಮಯವಾಗಿ ಮಾಡಿದಲ್ಲಿ ಹಿರಿಯ ಕಿರಿಯರೆನ್ನದೆ, ಬಡವ ದೊಡ್ಡವರೆನ್ನದೆ, ಸರ್ವರೂ ಸುಖಮಯ ಶಾಂತಿ ಜೀವನವನ್ನು ನಡೆಸಬಲ್ಲರು. ಯೌವನ ರಕ್ಷಣೆ ಎಂಬೀ ಚಿಕ್ಕ ಪುಸ್ತಕದಲ್ಲಿ ವಿವಾಹಿತರಾದ ಅಥವಾ ಬೇಗನೆ ವಿವಾಹವಾಗಲಿರುವ ನವಯುವಕರಿಗೆ ಮಾರ್ಗದರ್ಶನ ಮಾಡುವ ಪ್ರಯತ್ನ ಮಾಡಲಾಗಿದೆ. ಆರೋಗ್ಯವನ್ನು ಕೆಡಿಸುವ ದೋಷಗಳೆಲ್ಲಾ ಹೇಗೆ ಯೌವನ ಪ್ರಾಯದಲ್ಲಿಯೇ ಬಂದುಸೇರಿ ಮಾನವನು ಜೀವನ ಸಾರಸತ್ವವನ್ನು ಕಳೆಕೊಂಡು ದೌರ್ಬಲ್ಯ ಹಾಗೂ ವ್ಯಾಧಿಗ್ರಸ್ತನಾಗುತ್ತಾನೆ ಎಂಬುದನ್ನು ಮೇಲಿಂದ ಮೇಲೆ ವಿವರಿಸಲಾಗಿದೆ. 'ವೀರ್ಯಪಾಲನೆಯೇ ಯೌವನ ರಕ್ಷಣೆ' ಎಂದು ಪ್ರತಿಪಾದಿಸುವ ಸರಳ ಭಾಷೆಯಲ್ಲಿ ಭಾಷಣರೂಪದಲ್ಲಿ ಬರೆಯಲ್ಪಟ್ಟಿರುವ ಈ ಪುಸ್ತಕವು ಯುವಕರ ಕೈಗನ್ನಡಿಯಂತಿದೆ. ಇದು ಎಷ್ಟು ಪ್ರಚಾರವಾಗುತ್ತದೋ ಅಷ್ಟು ಹಿತಕರ. ಬೆಲೆಯೂ ಕಡಿಮೆ. ಲೇಖಕರ ಪ್ರಯತ್ನವೂ ಸ್ತುತ್ಯ.

ಆ ಸುಂದರಿಯ ಗಂಡ ಮತ್ತು ಇತರ ಮಲೆಯಾಳಿ ಕತೆಗಳು.

ಸಂಗ್ರಾಹಕರು: ಎನ್. ಜಿ. ಕಾಮತ್, ಪ್ರಕಾಶಕರು: ಸರ್ವೋದಯ ಸಾಹಿತ್ಯಮಾಲೆ, ಹುಬ್ಬಳ್ಳಿ, ಕ್ರೌನ್ 63 ಪುಟಗಳು— ಬೆಲೆ 0–12–0.

ಕೇರಳದ ಮೂವರು ಪ್ರಸಿದ್ಧ ಕತೆಗಾರರ ಐದು ಚಿಕ್ಕ ಕತೆಗಳನ್ನು ಆಯ್ದುಕೊಂಡಿರುವ ಚಿಕ್ಕ ಕಥಾ ಸಂಗ್ರಹವಿದು. 'ಆ ಸುಂದರಿಯ ಗಂಡ' ಮತ್ತು 'ಕುರುಡನ ಸಂತೃಪ್ತಿ' ಎಂಬ ಎರಡು ಕತೆಗಳನ್ನು ಬರೆದವರು ತಿರುವಾಂಕೂರಿನ ಸುಪ್ರಸಿದ್ಧ ನ್ಯಾಯವಾದಿ ವಕೀಲ್ ಶ್ರೀ ತಕಳಿ ಶಿವಶಂಕರ ಪಿಳ್ಳೆ... ಯ ಕತೆ ಹಿಂದೂ ಸಮಾಜದ ಮಧ್ಯಮವರ್ಗದ ಕುಟುಂಬಗಳಲ್ಲಿ ತೋರುವ ವಿಷಮತೆಯ ರುದ್ರ ಚಿತ್ರವಾದರೆ ಎರಡನೆಯದು ದಲಿತವರ್ಗದ ಬಡಜನರ ... ಗೋಳಿನ ಕರುಣ ಕತೆ!

ಜನತೆಯ ಹೋರಾಟದ ಚಿತ್ರವನ್ನು ಚಿತ್ರಿಸುವ 'ರೇಷನ್' ಕತೆಯನ್ನು ಪ್ರೊಫೆಸರ್ ಪೊನ್‌ಕುನ್ನಂ ವರ್ಕಿಯವರು ಬರೆದಿದ್ದಾರೆ. ಜನತಾ ಹೋರಾಟದ ನೈಜ ಚಿತ್ರವನ್ನು ವಿವರಿಸುವ 'ವಿಜಯ ದಿನ' ಕತೆಯನ್ನೂ ಈ ವಿನಾಶಕಾರಿಯುದ್ಧಕ್ಕೆ ಕೊನೆಯೊಂದೊಂದು ಕರೆಕೊಡುತ್ತಿರುವ 'ಹುಟ್ಟುಹಬ್ಬ' ಕತೆಯನ್ನೂ ಬರೆದವರು ಕೇರಳದ ಪ್ರಗತಿಶೀಲ ಲೇಖಕರಾದ ಶ್ರೀ ಅಚ್ಯುತ ಕುರುಪ್ ಎಂಬವರು. ಒಂದೂ ಕಾಲು ಕೋಟಿ ಮಲೆಯಾಳಿ ಜನತೆಯ ಆಶೆ-ಆಕಾಂಕ್ಷೆಗಳ ಸಂಘರ್ಷಗಳ ಕೈಗನ್ನಡಿಯಾಗಿ ಪ್ರಗತಿಯ ಪಥದಲ್ಲಿ ಬೆಳಕು ಬೀರಿ ಏವಿಧರೀತಿಯಲ್ಲಿ ಬೆಳೆಯುತ್ತಿರುವ ಮಲೆಯಾಳಿ ಸಾಹಿತ್ಯದ ಪ್ರಗತಿಶೀಲ ಕೃತಿಗಳ ಪ್ರಾತಿನಿಧಿಕ ಸಂಕಲನವೊಂದು ಕನ್ನಡದಲ್ಲಿ ಬೆಳಕು ಕಾಣುವುದು ಇದೇ ಮೊದಲೆಂದು ಪ್ರಕಾಶಕರು ಹೇಳಿದ್ದಾರೆ. ಶ್ರೀ ಕಾಮತರ ಈ ಪ್ರಯತ್ನವು ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಗಲೆಂದು ಹಾರೈಕೆ.

ಸರ್ವಜ್ಞ ವಚನಗಳು

ಪ್ರಕಾಶಕರು: ಉಪಾಧ್ಯಾಯ ಪ್ರಕಟನಾಲಯ, ಚಿಕ್ಕಪೇಟೆ, ಬೆಂಗಳೂರು ಸಿಟಿ. 1/8 ಕ್ರೌನ್ 30 ಪುಟಗಳು: ಬೆಲೆ 0-6-0

ಸರ್ವಜ್ಞನ ವಚನಗಳು ಹಲವಾರು ಪ್ರಕಟವಾಗಿವೆ. ಇವುಗಳಲ್ಲಿ ವಿಸ್ತಾರವಾದ ಮುನ್ನುಡಿಯೊಡನೆ ಪ್ರಕಟನಾದ ಪರಿಶುದ್ಧವಾದ ದೊಡ್ಡ ಪ್ರಕಟಣೆಯೆಂದರೆ ಶ್ರೀ ಉತ್ತಂಗಿ ಚೆನ್ನಪ್ಪನವರದ್ದು. ಬರೇ ಹತ್ತಾರು ಶಬ್ದಗಳಿಂದ ವಿಸ್ತಾರವಾದ ವಿಚಾರವನ್ನು ಜನ ಸಾಮಾನ್ಯರ ಮನವನ್ನು ಮುಟ್ಟುವಂತೆ ಹೇಳುವದು ಸರ್ವಜ್ಞನ ವೈಶಿಷ್ಟ್ಯ. ಶೂನ್ಯ ಹೃದಯದಲ್ಲಿ ನವಚೈತನ್ಯವನ್ನು ತುಂಬಿ ನೈತಿಕ ಮಾರ್ಗದಿಂದ ಮಾನವನನ್ನು ಇನ್ನಷ್ಟು ಮೇಲಕ್ಕೆತ್ತುವ ಶಕ್ತಿ ಸರ್ವಜ್ಞ ವಚನಗಳಲ್ಲಿವೆ. ಅದ್ದರಿಂದ ಜನ ಸಾಮಾನ್ಯರ ಉಪಯೋಗಾರ್ಥವಾಗಿ ಕೆಲವು ವಚನಗಳನ್ನಷ್ಟು ಆಯ್ದು ಇಲ್ಲಿ ಪ್ರಕಟಿಸಲಾಗಿದೆ. ಇದಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆತರೆ ಮುಂದಿನ ಭಾಗಗಳನ್ನು ಪ್ರಕಟಿಸುವ ಆಶೆ ಶ್ರೀ ಉಪಾಧ್ಯಾಯರಿಗಿದೆ. ಜನತೆ ಪ್ರೋತ್ಸಾಹಿಸಿ ಸಹಕರಿಸಲಿ

ಚೆರಿಮಾ

(ಹಸ್ತಲಿಖಿತ ಪತ್ರಿಕೆ) ಸಂಪಾದಕ ಕೆ. ಎ. ದೇವದಾಸ, ಚಿತ್ರ ಸಂಪಾದಕ- ಕೆ. ಸತ್ಯೇಂದ್ರ ಶೆಣೈ, ಕ್ರೌನ್ ಆಕಾರದ ... ಪುಟಗಳು.

ಎರಡು ಮೂರು ವರ್ಷಗಳಿಂದ ನಡೆದುಕೊಂಡು ಬರುತ್ತಿರುವ ಉಡುಪಿಯ ಉತ್ತಮ ಹಸ್ತಲಿಖಿತ ಪತ್ರಿಕೆಯ ಪ್ರಜಾಪ್ರಭುತ್ವ ಸಂಚಿಕೆಯಿದು. ತರುಣ ಚಿತ್ರಕಲಾ ಪಟು ಕೆ. ಸತ್ಯೇಂದ್ರ ಶೆಣೈಯವರ ಕೈವಾಡದಿಂದಾಗಿ ಚಿತ್ತವನ್ನೆಳೆಯುವ ಹೊರಮೈ. ತೆರೆದೊಡನೆ ರಾಷ್ಟ್ರಕವಿ ಶ್ರೀ ಗೋವಿಂದ ಪೈಯವರ ತೆರೆದ ನೋಟದ ಫೊಟೋದೊಂದಿಗೆ ಹುರಿದುಂಬಿಸುವ ಶುಭಾಶಂಸೆ ಮತ್ತು ಹಲವು ತರುಣ ಲೇಖಕರ ಉತ್ತಮ ಕೃತಿಗಳಿಂದ ತುಂಬಿದ ಒಳಮೈ. ಯು. ಕೆ. ಶೀನನವರ ನೆಹರೂರ ಚಿತ್ರವೂ ಚಲೋದಿದೆ. ಅಂತೂ ಕೈಬರಹದ ಪತ್ರಿಕೆಯಾದರೂ ಎಷ್ಟೋ ಅಚ್ಚಿನ ಪತ್ರಿಕೆಗಳಿಗಿಂತ ಮೆಚ್ಚಿನದಾಗಿದೆ ಎನ್ನಲಡ್ಡಿಯಿಲ್ಲ. ತರುಣರ ಉತ್ಸಾಹವನ್ನಿಲ್ಲಿ ಕೊಂಡಾಡುವೆವಲ್ಲದೆ ಇದು ಬೇಗನೆ ಅಚ್ಚಿನಲ್ಲಿ ಮೂಡಲೆಂದೂ ಹಾರೈಸುವೆವು.

—ಪದ್ಮಾವತಿ ಯಚ್. ಯಸ್.

ಮದ್ರಾಸಿನ ಪಬ್ಲಿಕ್ ಇನ್ಸ್‌ಸ್ಟ್ರಕ್ಷನಿನ ಡೈರಕ್ಟರರಿಂದ ನವಯುಗ ವಾರಪತ್ರಿಕೆಯು ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಸೆಕೆಂಡರಿ ಶಾಲೆಗಳು ಅದನ್ನು ತರಿಸಿಕೊಳ್ಳಬಹುದಾಗಿದೆ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು, ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಕೊರಡ್ಕಲ್ ಶ್ರೀನಿವಾಸರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

ಅಂಗ್ಲ ಸ್ವಯಂಬೋಧಿನಿ.
ಬೆಲೆ ರೂ. 1 8 0
ನವಭಾರತ ಪುಸ್ತಕ ಭಂಡಾರ, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭವತಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ತಿನಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಖರ್ಚು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಹಾವನೂರ
ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಶಾಪಿಂಗ್,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ಬಿಜಾಪುರ—ಚನಪ್ಪ ಸಿದ್ದಲಿಂಗಪ್ಪ ಧಾರವಾಡಕರ ಬಿಜಾಪುರ ಸಂಗಮೇಶ್ವರ ಮೆಡಿಕಲ್ ಹಾವನೂರ ದಾವಣಗೇರಿ:—ದಾವಣಗೇರಿ ಕ್ರಿಶ್ಚನ್ ಆರ್ ಎಲ್ ಕೆಮಿಸ್ಟ್ಸ್, ಹಾವೇರಿ ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಠೇವಣಾತಿ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರೀತ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.

ದಿ. ಬ್ರಾಂಚ್ ಮೆನೇಜರ್;
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ.)

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್‌ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನ ಎ ರಾಮಸ್ವಾಮಿ ಅಯ್ಯರ್‌ರವರ

※ ಸಂತಾನ ಸಿಂಧೂರ ※

ಬಹಿಷ್ಠೆ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಠೆ ಸಂಬಂಧದ ಹೊಟ್ಟೆನೋವಿನ ಜೊತೆಗೆ ತಲೆನೋವು, ನಡುಸೆಳೆತ, ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ.

ಮೂರು ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ಒಂದು ಸೆಟ್ ಅನುಪಾನ ಪತ್ರಿಕೆ ಮೇರೆ ಇಟ್ಟರೂ ಸೇವಿಸಿರಿ ಸಾಕು. ಶೋಧನವಾದ 15–16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾಪತ್ರಗಳನ್ನು ಪಡೆದಿದೆ.

ಕ್ರಯ:—ಒಂದುಸೆಟ್ 5ರೂ. ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1ರೂ ವಿ. ಪಿ. ಇಲ್ಲ. ಕ್ಯಾಟಲಾಗ್ ಉಚಿತ 6ರೂ. ಮನಿಆರ್ಡರ್ ಮಾಡಿರಿ. ಕೂಡಲೆ ರಿಜಿಸ್ಟರ್ ಪಾರ್ಸಲ್ ರವಾನೆ.

ವಿಳಾಸ:—A. R. ವಿಶ್ವೇಶ್ವರಯ್ಯ (ಎ. ರಾಮಸ್ವಾಮಿ ಅಯ್ಯರ್ ಸನ್,)
Prop: ಸಂತಾನ ಸಿಂಧೂರ
ಅಂಬಳೆ ಪೋಸ್ಟ್, ಯಳಂದೂರು ತಾಲೂಕು ಮೈಸೂರು ಡಿಸ್ಟ್ರಿಕ್ಟ್.
ಮೈಸೂರು ಶಾಖೆ: 269 ಸೋನಾರ್ ಸ್ಟ್ರೀಟ್, ದಿವಾನ್ಸ್‌ರೋಡು, ಮೈಸೂರು.

ಪ್ರವಾಸಿಯ ಪತ್ರಗಳು ೨೫

ಸ್ವಿಸ್ ದೇಶ-ಜ್ಯೂರಿಕ್ ನಗರ

ಸ್ವಿಟ್ಸರ್‌ಲೇಂಡ್ ಸಂಕ್ಷೇಪವಾಗಿ ಹೇಳಬೇಕಾದರೆ ಸ್ವಿಸ್ ದೇಶವೆಂದರೆ ಭೂಲೋಕದಲ್ಲಿ ಒಂದು ಸ್ವರ್ಗವಿದ್ದರೆ ಅದು ಇದೇ ಎನ್ನಬಹುದು, ದೇಶ ನೋಡಲಿಕ್ಕೆ ಬಹು ರಮ್ಯ. ಜನರು ಬಹು ಕಷ್ಟಗಾರರು. ಬೇರೆ ಬೇರೆ ಜನಾಂಗಗಳ ಮತ್ತು ಭಾಷೆಗಳಿಗೆ ಒಳಪಟ್ಟರೂ ಒಂದೊಬ್ಬರು ಜಗಳ ಮಾಡಿಕೊಳ್ಳದೆ ಪ್ರಭುತ್ವವನ್ನು ಹೆಚ್ಚಿಗೆ ಅಕೇಂದ್ರಿಯಗೊಂಡು ಸರಕಾರವನ್ನು ಬಹು ಯೋಗ್ಯತೆಯಲ್ಲಿ ನಡೆಸುವರು. ಇಲ್ಲಿರುವ ಜನರ ಜೀವನದ ಮಟ್ಟವು (Standard of living) ಯುರೋಪಿನ ಇತರ ಎಲ್ಲಿಯೂ ಇಷ್ಟು ಏರುತಿಲ್ಲದ್ದು. ಈ ದೇಶದಲ್ಲಿ ನನ್ನ ಸಂಚಾರದ ವಿವರಗಳನ್ನು ಬರೆಯುವ ಮೊದಲು ಈ ದೇಶದ ವಿಚಾರದಲ್ಲಿ ಕೆಲವು ಮಾಹಿತಿಗಳನ್ನು ಪ್ರಥಮದಲ್ಲಿ ಬರೆಯುವುದು ಉಚಿತ.

ಈ ದೇಶವು ಬರೇ 16 ಸಾವಿರ ಚದುರ ಮೈಲು ವಿಸ್ತೀರ್ಣ. ಅಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ನಾಲ್ಕು ಪಾಲಷ್ಟು ಮಾತ್ರ. ಜನ ಸಂಖ್ಯೆ 4 ಮಿಲಿಯ, ಈ ವಿಸ್ತೀರ್ಣದಲ್ಲಿ ಹೆಚ್ಚಿನದ್ದು ಪರ್ವತ ಪ್ರದೇಶ. ಕೆಲವೆಡೆ ಶಿಲೆ ಕಲ್ಲು. ಖನಿಜಗಳು (Minerals) ಬಹು ಕಡಿಮೆ. ಭೂಮಿ ಕೂಡಾ ಹೆಚ್ಚು ಫಲವತ್ತಾದುದಲ್ಲ. ಆದರೂ ಕೂಡಾ ಸಣ್ಣ ಮತ್ತು ಇಂಥಾ ದೇಶವನ್ನು ವಿಶ್ವದಲ್ಲಿ ಸಂಪತ್ತುಳ್ಳದ್ದು ಮತ್ತು ಪ್ರಾಮುಖ್ಯ ಮಾಡಿದ್ದು ಅದರ ಜನರ ಒಳ್ಳೆ ಗುಣದಲೇ ಆಗಿರುತ್ತದೆ.

ಇಲ್ಲಿ ಯಾವಾಗಲೂ ಹರಿಯುವ ನೀರನ್ನು ಉಪಯೋಗಿಸಿ ಸುಮಾರು 6000 ವಿದ್ಯುಚ್ಛಕ್ತಿ ಉಂಟುಮಾಡುವ ನಿಲ್ದಾಣಗಳನ್ನು ಕಟ್ಟಿದ್ದಾರೆ. ಆದರಿಂದ ಪ್ರತಿಯೊಂದು ಗ್ರಾಮಕ್ಕೂ ವಿದ್ಯುಚ್ಛಕ್ತಿ ಬರುತ್ತದೆ. ಆದರಿಂದ ಇಲ್ಲಿ ಕೈಗಾರಿಕೆ, ಕಾರ್ಖಾನೆಗಳು ಮತ್ತು ದೇಶದ ಎಲ್ಲಾ ರೈಲುಗಳು ಕೂಡಾ ನಡೆಯುತ್ತವೆ. ಇಷ್ಟು ಸಣ್ಣ ದೇಶದಲ್ಲಿ 3645 ಮೈಲು ರೈಲುಮಾರ್ಗವಿದೆ 10,000 ಮೈಲಿಗೂ ಮಿಕ್ಕಿ ರಸ್ತೆಗಳು. ಇಲ್ಲಿಯ ಮುಖ್ಯ ಕೈಗಾರಿಕೆಗಳೆಂದರೆ ವಿದ್ಯುಚ್ಛಕ್ತಿಗೆ ಬೇಕಾದ ಸಾಮಾನು ತಯಾರಿಕೆ, ಸಣ್ಣ ಸಣ್ಣ ಸಾಮಾನುಗಳಿಂದ ದೊಡ್ಡ ಕಾರ್ಖಾನೆಗಳಿಗೆ ಬೇಕಾದ ವಸ್ತುಗಳು, ರೈಲ್ವೆ ಇಂಜಿನುಗಳು, ಮುಖ್ಯವಾಗಿ ವಿದ್ಯುಚ್ಛಕ್ತಿ ಇಂಜಿನುಗಳು, ಡೀಸಲ್ ಮತ್ತು ಹಡಗಿನ ಇಂಜಿನುಗಳು ಕೂಡಾ. ಹೀಗೆ ಕೂಡಿದ ಕೆಲಸ ಮಾಡುವ ಸಣ್ಣ ದೊಡ್ಡ ಕಾರ್ಖಾನೆಗಳು 18,000 ಇವೆ ಎನ್ನುವಾಗ ಎಷ್ಟು ಕೆಲಸ ನಡೆಯುತ್ತದೆಂತ ಊಹಿಸಬಹುದು, ವ್ಯವಸಾಯಕ್ಕೆ ಬೇಕಾದ ಕಬ್ಬಿಣದ ಯಂತ್ರಗಳು, ವಾಚು, ಟ್ಯಾಮ್ ಪೀಸ್ ಮತ್ತು ಗಡಿಯಾರಗಳು, ಚಿನ್ನಾಭರಣಗಳು ಹತ್ತಿ ಮತ್ತು ರೇಶ್ಮೆ ವಸ್ತ್ರಗಳು, ಚೀಸ್ (Cheese) ಚೊಕ್‌ಲೇಟ್ ಮುಂತಾದ ಆಹಾರ ಸಾಮಾನುಗಳು, ಪ್ರಸಿದ್ಧವಾದ ನೆಸ್ಲ (Nestle) ಮತ್ತು ಓವಲ್ಟಿನ್ (Ovaltine) ತಯಾರಾಗುವವು. ಅನೇಕ ತರದ ರಾಸಾಯನಿಕ ಮದ್ದಿನ ಮತ್ತು ಬಣ್ಣ ಹಾಕುವ ದ್ರವ್ಯಗಳು [Chemicals and dyes]. ಇವುಗಳನ್ನು ಪರದೇಶಕ್ಕೆ ಕಳುಹಿಸಿ ಮಾರಾಟ ಮಾಡಿ ಹೆಚ್ಚಿನ ಸಂಪತ್ತು ದೇಶ ದೇಶದಿಂದ ಇಲ್ಲಿಗೆ ಬರುತ್ತದೆ.

ಅದೇ ರೀತಿ ಇಲ್ಲಿಗೆ ಪರದೇಶಗಳಿಂದ ಬರುವ ಲಕ್ಷಗಟ್ಟಳೆ ಪ್ರವಾಸಿಗಳು ಬಂದು ಇಲ್ಲಿ ಮಾಡುವ ಖರ್ಚಿನಿಂದ ಬರುವ ಸಂಪತ್ತು. ದೇಶದಲ್ಲಿ ಎಲ್ಲೆಲ್ಲೂ ಸಾವಿರಾರು ಹೊಟೇಲುಗಳಿವೆ. ಬೇರೆ ಎಲ್ಲಿಯೂ ಯಾವುದೇ ದೇಶದ ಹೊಟೇಲುಗಳಲ್ಲಿಯೂ ಇಷ್ಟು ಚಲೋ ರೀತಿಯ ನಯನುಡಿಗಳಿಂದ ಜನರನ್ನು ಆಕರ್ಷಿಸುವುದಿಲ್ಲ. ದೇಶದಲ್ಲಿ ಹವೆಯು ಒಳ್ಳೆದಾದ ಕಾರಣ ಸೆಕೆ ಕಾಲದಲ್ಲಿ ಬೇರೆ ಅನೇಕ ದೇಶಗಳಿಂದ ಇಲ್ಲಿಗೆ ಜನರು ಬಂದು ಒಂದೆರಡು ತಿಂಗಳು ಇಲ್ಲಿ ಸುಖವಾಗಿದ್ದು ಹೋಗುವರು ಇದರಿಂದ ದೇಶಕ್ಕೆ ಬರುವ ಸಂಪತ್ತು ಅಪರಿಮಿತವಾದದ್ದು.

ದೇಶದ ರಾಜಕೀಯ ಚರಿತ್ರೆ ಕೂಡಾ ಬಹಳ ವಿಶೇಷವಾದದ್ದು. ದೇಶದ ಜನರಲ್ಲಿ ನೇಕಡಾ 57 ಪ್ರೊಟೆಸ್ಟಾಂಟರು, 41 ಕೆಥೊಲಿಕರು, ಯೆಹೂದ್ಯರು ಮತ್ತು ಇತರರು ಕೂಡಾ ಇದ್ದಾರೆ. ನಾಲ್ಕು ಭಾಷೆಗಳನ್ನು ಮಾತನಾಡುವ ಜನರು ಸೇರಿರುವ ಒಂದು ಜನಾಂಗ ಸುಮಾರು 3 ಮಿಲಿಯ ಜರ್ಮನ್ ಭಾಷೆ ಮಾತಾಡುವರು. 1 ಮಿಲಿಯ ಫ್ರೆಂಚ್, 2 ಲಕ್ಷ ಇಟೆಲಿಯನ್ ಮತ್ತು ಬರೇ ಅರ್ಧ ಲಕ್ಷ ರೋಮಾಂಚ್. ಈ ನಾಲ್ಕು ಭಾಷೆಗಳೂ ದೇಶದ ಸರಕಾರವು ಅಂಗೀಕರಿಸಿದ ಭಾಷೆಗಳು. ದೇಶದ ನ್ಯಾಯಸಭೆಗಳಲ್ಲಿ ನಾಲ್ಕು ಭಾಷೆಗಳಲ್ಲಿ ಮಾತಾಡುವರು. 22 ರಾಜ್ಯಗಳು ಸೇರಿದ ಒಂದು ಕೇಂದ್ರ ಸರಕಾರ. ಪ್ರಥಮತ 3 ಸಣ್ಣ ಪುಟ್ಟ ರಾಜ್ಯಗಳು (Cantons) 1291 ನೇ ಇಸವಿಯಲ್ಲಿ ಸೇರಿ ನಂತರ ಆಗಾಗ ಹತ್ತಿರವಿರುವ ಇತರ ರಾಜ್ಯಗಳು ಸೇರಿ ಒಂದೇ ರಾಜ್ಯವಾಯಿತು. ಈ ಸಣ್ಣ ಪುಟ್ಟ ರಾಜ್ಯಗಳ ಆಡಳಿತೆಯಲ್ಲಿಯ ಜನರೇ ಸಭೆ ಸೇರಿ ಪ್ರಜಾಪ್ರಭುತ್ವದಿಂದ ಸರಕಾರ ನಡೆಸುವರು. ಕೇಂದ್ರ ಸಭೆಯಲ್ಲಿ ಕೂಡಾ ಅನೇಕ ಪಕ್ಷಗಳಿದ್ದರೂ ಮಂತ್ರಿ ಮಂಡಳವನ್ನು ಎಲ್ಲ ಸದಸ್ಯರೂ ಸೇರಿ ಚುನಾಯಿಸುತ್ತಾರೆ. ಇದರಿಂದ ಮುಖ್ಯ ಎಲ್ಲಾ ಪಕ್ಷಗಳ ಮತ್ತು ಜಾತಿಗಳ ಜನರು ಆದರಲ್ಲಿರುವರು 20 ವರ್ಷಕ್ಕೆ ಮಿಕ್ಕಿದ ಎಲ್ಲಾ ಗಂಡಸರಿಗೆ ಓಟು ಇದೆ. ಯುರೋಪಿನಲ್ಲಿ ಹೆಂಗಸರಿಗೆ ಓಟಿಲ್ಲದ ದೇಶ ಇದೊಂದೇ. ಗಂಡಸರಿಗೆ 20 ವರ್ಷವಾದೊಡನೆ ಓಟಿನ ಹಕ್ಕು ಬಂದಂತೆಯೇ. ಆ ಪ್ರಾಯ ಬಂದವರು ಸೈನ್ಯದ ಕೆಲಸ ಕೂಡಾ ಮಾಡಬೇಕು. ಪ್ರಥಮತಾ ಒಂದೆರಡು ವರ್ಷ ಸೈನ್ಯದಲ್ಲಿದ್ದು ನಂತರ ವರ್ಷ ವರ್ಷವೂ ಒಂದೆರಡು ತಿಂಗಳು ಕೆಲಸ ಮಾಡಬೇಕು. ದೇಶದ ರಕ್ಷಣೆಗೆ ದೇಶೀಯರ ಸೈನ್ಯವೇ ಮುಖ್ಯ. ಅಂದರೆ ಖಾಯಂ ಆಗಿ ಸಂಬಳ ಪಡೆಯುವವರ ಸೈನ್ಯ ಬಹು ಕಡಿಮೆ. ಎಲ್ಲಕ್ಕೂ ಮುಖ್ಯವೆಂದರೆ ದೇಶವು ನೂರಾರು ವರ್ಷಗಳಿಂದ ಯುರೋಪಿನ ಯಾವ ಯುದ್ಧಕ್ಕೂ ಸೇರದೆ ತಟಸ್ಥವಿದ್ದುದರಿಂದ ನಷ್ಟಹೊಂದದೆ ಯಾವಾಗಲೂ ಸುಭಿಕ್ಷ ಮತ್ತು ಸಂಪತ್ತಿನಲ್ಲಿರುತ್ತದೆ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI. S. Kanara.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉರಿಮೂತ್ರ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕೆಂಪುಖಾರ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೆರಿ ಪ್ರೆಸ್. ನಂಜುಡೇಶ್ವರ ಮ.ಶೆಟ್ಟಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ, ದಾವಣಗೇರಿ.

ಆಯುರ್ವೇದ ಔಷಧಾಲಯ, ಗದಗ.

...ರ್ಲಿನ್ ನಿಂದ ಫ್ರಾಂಕ್‌ಫರ್ಟ್ ನ ಮಾರ್ಗವಾಗಿ ಈ ದೇಶದ ಒಳಕ್ಕೆ ಬರುವಾಗ ಅನೇಕ ಮೈಲುಗಳ ವರೆಗೆ ನಮ್ಮ ರೈಲು ಉತ್ತರದಿಂದ ದಕ್ಷಿಣಕ್ಕೆ ಬಂದು ತಿರುಗಿ ಪೂರ್ವದಿಂದ ಪಶ್ಚಿಮಕ್ಕೆ ಚಲಿಸಿತು. ಹೀಗೆ ಚಲಿಸುವಾಗ ಕೆಲವು ದೂರ ಈ ಮುಂಚೆ ನಾನು ಹೇಳಿದ ಕಾನ್‌ಸ್ಟೆನ್ಸ್ ಸರೋವರದ ಬದಿಯಲ್ಲಿ ಹೋಯಿತು. ರೈಲ್ ಗಾಡಿಯಿಂದ ಈ ಸರೋವರವನ್ನು ಕಾಣಬಹುದು. ವಿದ್ಯುಚ್ಛಕ್ತಿಯಿಂದ ರೈಲು ನಡೆಯುವ ಕಾರಣ ಅದರ ವೇಗವು ಬಹಳವಾದದ್ದು. ಅಂದರೆ ಗಂಟೆಗೆ 70-80 ಮೈಲು ಕೂಡಾ ಚಲಿಸುವುದು. ಮೂರನೇ ಕ್ಲಾಸ್ ಮರದ ಸೀಟುಗಳು, ಆಚೆ ಈಚೆ ಎರಡೆರಡು ಸೀಟಿದ್ದು ಮಧ್ಯ ಹೋಗಿಬರುವದಾರಿ. ರೈಲು ಸ್ಟೇಶನುಗಳೆಲ್ಲಾ ಬಹು ಸ್ವಚ್ಛ. ಇಂಗ್ಲೆಂಡಿನ ಸ್ಟೇಶನುಗಳು ಕಲ್ಲಿದ್ದಲ ಹೊಗೆ ಬಡಿದು ಎಲ್ಲೆಲ್ಲೂ ಕಪ್ಪು. ಇಲ್ಲಿ ಮನೆಗಳು ಮತ್ತು ಕಾಡುಗಳು ಜಾಸ್ತಿ. ದೇಶವು ಬಹಳ ಎತ್ತರವಿದ್ದು ಹವೆಯಲ್ಲಿ ತೇವವಿಲ್ಲದ ಒಂದು ತರದ ಲವಲವಿಕೆ ಇದೆ. [Crispness in the air] ಎಷ್ಟು ತಿರುಗಾಡಿದರೂ ಆಯಾಸವಿಲ್ಲ. ನಮ್ಮ ರೈಲು ಬರುತ್ತಿದ್ದಾಗ ಸೈಂಟ್ ಮಾರ್ಗರೆತ್ಸ್, ಸೈಂಟ್ ಗೊಲ್ಲನ್ ಮೊದಲಾದ ಅನೇಕ ಸ್ಟೇಶನುಗಳು ಒಂದೊಂದಾಗಿಯೇ ಬಂದವು. ಪ್ರವಾಸಿಗಳು ಹತ್ತಿ ಇಳಿದರು. ಸಾಯಂಕಾಲ ಗಂಟೆ 8-15ಕ್ಕೆ ಜ್ಯೂರಿಕ್ ನಗರಕ್ಕೆ ಸೇರಿದೆ. ಗಡಿಯಲ್ಲಿ ಹಣ ಬದಲಾಯಿಸುವಷ್ಟು ಸಮಯ ನನಗೆ ಸಿಕ್ಕದೆ ಮಧ್ಯಾಹ್ನದಿಂದ ಏನೂ ಫಲಹಾರವಿಲ್ಲದೆ ಬಹಳ ಹಸಿವೆಯಾದ್ದರಿಂದ ಇಳಿದ ಕೂಡಲೇ ಸ್ಟೇಶನಿನ ಹೊಟೇಲಿನಲ್ಲಿ ಆಹಾರ ತೆಗೆದುಕೊಂಡೆ ಸ್ಟೇಶನಿಗೆ ನನ್ನ ತಮ್ಮನ ಭಾವನಂಟ ಅಲ್ಲಿ ವಿಶ್ವವಿದ್ಯಾಲಯದಲ್ಲಿ ಕಲಿಯುವ ಶ್ರೀ ವೆಂಕಟಕೃಷ್ಣ ತೊಳ್ಪರು ಬಂದುದರಿಂದ ಈ ನಗರದ ಸಂಚಾರ ಬಹಳ ಸುಲಭವಾಯಿತು. ಫಲಹಾರ ಮಾಡಿ ಅಲ್ಲಿಂದ ಟ್ರಾಮು ಹತ್ತಿ ಸುಮಾರು 2 ಮೈಲು ದೂರವಿರುವ ಎಂಗೆ ಮೆಟೋಫ್ [Enge matthof] ಎಂಬ ಹೊಟೇಲಿಗೆ ಬಂದು ಸೇರಿದೆ. ಇದು ಬಹಳ ಚಲೋ ಹೊಟೇಲು.

[ಮುಂದುವರಿಯುವುದು]

(ವಿಚಾರವಾಣಿ) —ಕೆ. ಆರ್. ಕಾರಂತ

ಅಮೃತಾಂಜನ

ತಲೆವೇದನೆ, ಶಿರಃಶೂಲೆವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳವಿಷ ಮುಂತಾದವು, ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ,

ಐದು ವರುಷಗಳ ಗ್ಯಾರಂಟಿ - 18 ಕ್ಯಾರೆಟ್ ರೋಲ್ಡ್ ಗೋಲ್ಡ್ ಆಭರಣಗಳು. ಉದ್ದ ಚೈನಿಗೆ ರೂ. 5. ಚಿಕ್ಕ ಚೈನಿಗೆ ರೂ. 4. ತಂಪವಾದ ಬಳೆಗಳ ಸೆಟ್ಟಿಗೆ ರೂ. 7, ಹೊಸ ಪ್ಯಾಟರ್ನ ಉಂಗುರಕ್ಕೆ ರೂ. 3.

Dogulva Traders

West Vadmapokki Street, MADURAI

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,

Moolky, S. K.

ತಾರೀಕು 28-2-52 ರಿಂದ

ವಾರದ ಭವಿಷ್ಯ

ತಾರೀಕು 5-3-52 ವರೆಗೆ

ಮೇಷ—ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲವು ಸಿಕ್ಕಿಯೇ ತೀರುವದು. ಆದರೆ ಬಹುಮುಖವಾದ ಖರ್ಚುಗಳಿಂದಾಗಿ ನಿಮಗೀವಾರದಲ್ಲಿ ಹಣದ ಅಡಚಣೆಯು ತಪ್ಪಲಾರದು. ಮನೆಯಲ್ಲಿ ಪರಸ್ಪರ ಕಲಹ ಕಚ್ಚಾಟಗಳಾಗುವ ಸಂಭವವಿದೆ. ಬಂಧುಮಿತ್ರರೂ ನಿಮಗೀ ಸಮಯದಲ್ಲಿ ನೆರವಾಗಲೊಲ್ಲರು. ಹೆಚ್ಚಿನ ನಿಮ್ಮ ದುಡಿಮೆಯು ಸತ್ಕಾರ್ಯಗಳ ಸಲುವಾಗಿ ವ್ಯಯವಾಗಲಿದೆ. ತಾ. 29, 1, 5 ಈ ದಿನಗಳಲ್ಲಿ ನಿಮ್ಮ ಬಯಕೆಗಳು ನಿರ್ವಿಘ್ನದಿಂದ ನೆರವೇರಲಿವೆ.

ವೃಷಭ—ಗ್ರಹಮಾನವು ಅನುಕೂಲ ಸಂಸ್ಥಿತಿಗೆ ಬಂದಿರುವುದು. ಅನಾಯಾಸದಿಂದ ನಿಮ್ಮ ಸಕಲ ಇಷ್ಟಾರ್ಥಗಳೂ ನೆರವೇರಲಿವೆ. ಆರ್ಥಿಕ ಸಂಪತ್ತು ಅತೀವ ವೃದ್ಧಿಯನ್ನೈದುವದು. ಶತ್ರು ಜನರು ಪರಾಭೂತರಾಗುವರು. ಕುಟುಂಬ ನಿರಾಮಯವಾಗಿರುವದು. ಯಾವೊಂದೂ ಕುಂದುಕೊರತೆಗಳು ನಿಮ್ಮಲ್ಲಿ ಕಾಣಿಸವು. ತಾ. 29, 1 ಹೊರತಾಗಿ ಮಿಕ್ಕುಳಿದ ದಿನಗಳಲ್ಲಿ ಮಿತ್ರಸಮಾಗಮ ಮೃಷ್ಟಾನ್ನ ಭೋಜನ ಸುಖಲಾಭಗಳು ಪ್ರಾಪ್ತವಾಗುವವು.

ಮಿಥುನ— ನೀವೆಷ್ಟೇ ಪ್ರಯತ್ನಿಸಿದರೂ ಚಂಚಲವಾದ ನಿಮ್ಮ ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳಲಾಗದು. ಇಲ್ಲಸಲ್ಲದ ಖರ್ಚುಗಳು ಸುತ್ತಲಿಂದಲೂ ಬರಲಿವೆ. ವಿಶೇಷತಃ ವಿಷಯಾದಿಗಳ ಕಡೆಗೆ ನಿಮ್ಮ ಮನಸ್ಸು ಸೆಳೆಯಲಿದೆ. ಇದರಿಂದಾಗಿ ನಷ್ಟಕಷ್ಟ ಅಪವಾದಾದಿಗಳಿಗೂ ಗುರಿಯಾದೀರಿ ಶತ್ರುಜನ ಪೀಡೆ, ಉದ್ಯೋಗದಲ್ಲಿ ನಿರಾಶೆ ದೇಹಾಲಸ್ಯಾದಿಗಳಿಂದ ಕೂಡಿವೆ. ನಿಮಗೆ ತಾ. 28, 29, 1, 5 ಈ ದಿನಗಳು ಹೆಚ್ಚಿನ ತ್ರಾಸದಾಯಿಗಳಾಗಲಾರವು.

ಕರ್ಕಾಟ—ಈ ವಾರದಲ್ಲಿ ನಿಮ್ಮ ಪರಿಸ್ಥಿತಿಯು ಕಳೆದ ವಾರಕ್ಕಿಂತ ಸ್ವಲ್ಪ ಸುಧಾರಿಸಿರುವುದು. ಆರ್ಥಿಕ ಬಿಕ್ಕಟ್ಟು ಹಿಂದಿನಂತೆ ಇರಲಾರದು. ಶ್ರಮಜೀವಿಗಳಿಗೆ ಪರಿಶ್ರಮಕ್ಕೆ ಫಲ ಲಭಿಸುವದು. ಕೆಲವು ಮಿತ್ರರಿಂದಾಗಿ ಅನ್ಯಾಯ ಹೊಂದುವಿರಿ. ಅನಿರೀಕ್ಷಿತ ಪ್ರವಾಸ ತತ್ಸಂಬಂಧವಾಗಿ ಕಷ್ಟನಷ್ಟಾದಿಗಳೂ ಸಂಭವಿಸುವವು. ವ್ಯಾಪಾರಾದಿಗಳಲ್ಲಿ ಅಕಸ್ಮಾತ್ ನಷ್ಟವೊದಗಲಿದೆ. ಸ್ತ್ರೀ ಜನರಿಂದ ಕಲಹವಾಗುವದು. ವಾರದ ಅದ್ಯಂತ ದಿನಗಳು ಅರ್ಥನಾಶ ಅನಾರೋಗ್ಯಕಾರಿಗಳಾಗಿವೆ.

ಸಿಂಹ—ನಿಮ್ಮ ಸಾಹಸಕ್ಕೆ ತಕ್ಕಂತೆ ಕಾರ್ಯವು ನೆರವೇರುವದಾದರೂ ನಿರೀಕ್ಷಿಸಿದಷ್ಟು ಫಲಪ್ರಾಪ್ತಿಯಾಗಲಾರದು. ಉತ್ಪತ್ತಿಗಿಂತ ಖರ್ಚು ದ್ವಿಗುಣವಾಗಿ ಪರಿಣಮಿಸಲಿದೆ. ಕಫ ಪ್ರಕೋಪದಿಂದಾಗಿ ಆರೋಗ್ಯಕ್ಕೆ ಹಾನಿ ತಗಲೀತು. ಶತ್ರು ಜನರ ಪೀಡೆಯು ಆಗಾಗ ಸಂಭವಿಸಲಿದೆ. ವಿದ್ಯೋಪಜೀವಿಗಳಿಗೆ ದಿನಯಾಪನೆಯು ಕಷ್ಟಸಾಧ್ಯವೆನಿಸುದು. ವಾರಾಂತ್ಯದ 4 ದಿನಗಳಲ್ಲಿ ಇಷ್ಟಪ್ರಾಪ್ತಿಯಿಂದಾಗಿ ಸಂತೋಷ ನೆಮ್ಮದಿಗಳನ್ನು ಪಡೆವಿರಿ.

ಕನ್ಯಾ—ಸ್ವದೇಹಾರೋಗ್ಯದ ಸಲುವಾಗಿ ವಿಶೇಷ ಜಾಗರೂಕರಾಗಿರಿ. ಸಾಂಸಾರಿಕ ತಾಪತ್ರಯಗಳು ಬಹುವಾಗಿ ಪೀಡಿಸುವವು. ಖರ್ಚಿಗೆ ತಕ್ಕ ಆದಾಯವಿರುವುದರಿಂದ ಹಣದ ಅಡಚಣೆಯುಂಟಾಗದು. ಅಧಿಕಾರಿವರ್ಗದವರಿಂದ ಪೀಡೆಯುಂಟಾಗಲಿದೆ. ಆಪ್ತೇಷ್ಟರ ವಿಯೋಗವಾಗುವದು. ಆಹಾರ ದೋಷದಿಂದ ಆರೋಗ್ಯವು ಕೆಡಲಿದೆ. ವಾರದ ಅದ್ಯಂತ ದಿನಗಳು ಇದ್ದುದರಲ್ಲಿ ಉತ್ತಮವೆನಿಸುವವು.

ತುಲಾ— ಅನಿರೀಕ್ಷಿತವಾಗಿ ಸಂಪ್ರಾಪ್ತವಾಗತಕ್ಕ ವಿಪತ್ಪರಂಪರೆಗಳು ನಿಮ್ಮನ್ನು ಇಡಿ ಕರ್ತವ್ಯತಾಮೂಢರನ್ನಾಗಿ ಮಾಡಲಿವೆ. ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ವಿಪಕ್ಷೀಯರಿಂದ ಪರಾಜಿತರಾಗುವಿರಿ. ಪ್ರಯಾಣದಲ್ಲಿ ಅಕಸ್ಮಿಕ ಅಪಘಾತಗಳಿಗೆ ಸಿಲುಕುವ ಸಂಭವವಿದೆ. ಪಿತ್ತಪ್ರಕೋಪದಿಂದ ಆರೋಗ್ಯವೂ ಕೆಡುವದು. ವಾರಾದಿಯ 3 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

ವೃಶ್ಚಿಕ—ದಿನದಿಂದ ದಿನಕ್ಕೆ ನಿಮ್ಮ ಅದೃಷ್ಟವು ಕೃಷ್ಣಪಕ್ಷದ ಚಂದ್ರನಂತೆ ಕ್ಷೀಣಿಸುತ್ತಾ ಬರುತ್ತಿದೆ. ಆದರೂ ಈ ವಾರದಲ್ಲಿ ನೀವು ಅಷ್ಟೊಂದು ಗಾಬರಿಪಡಬೇಕಾದ ಆವಶ್ಯಕತೆಯಿಲ್ಲವಾದರೂ, ಗೃಹಕಲಹವು ನಿಮ್ಮನ್ನು ನೆಮ್ಮದಿಯಿಂದಿರಲು ಬಿಡಲೊಲ್ಲದು. ತಂದೆ ಮಕ್ಕಳಲ್ಲೂ ಗಂಡಹೆಂಡಿರಲ್ಲೂ ಜಗಳವಾದೀತು. ಅಕಸ್ಮಾತ್ತಾಗಿ ನೇತ್ರವೇದನೆಯು ಬಾಧಿಸಲಿದೆ. ಕಷ್ಟಪಟ್ಟು ದುಡಿದ ಧನವು ದಿನಾಂತ್ಯದಲ್ಲುಳಿಯಲಾರದು ತಾ 29 ರಿಂದ 4ರ ವರೆಗಿನ ದಿನಗಳು ಅನುಕೂಲವಾಗಿವೆ.

ಧನು:—ದುಃಖಸ್ಯಾನಂತರಂ ಸುಖಂ ॥ ಎಂಬ ಲೋಕೋಕ್ತಿಯಂತೆ ಹಲವು ಸಮಯದಿಂದ ನೀವು ಕಷ್ಟಪಡುತ್ತಿರುವಿರಾದರೂ ನಿಮ್ಮ ಪರಿಶ್ರಮದ ಫಲವೋ ಎಂಬಂತೆ ಗ್ರಹರೀಗ ನಿಮ್ಮ ಮೇಲೆ ಅನುಗ್ರಹ ದೃಷ್ಟಿಯನ್ನು ಬೀರಿರುವರು. ಹಿಂದಿನ ಸಾಲ ಕಿರುಕುಳಗಳಿಂದ ಮುಕ್ತರಾಗುವಿರಿ. ಕೋರ್ಟು ಕಛೇರಿಗಳ ಕಾರ್ಯಗಳಲ್ಲಿ ವಿಜಯವು ನಿಮ್ಮ ಪಾಲಿಗೆ ಕಟ್ಟಿಟ್ಟ ಗಂಟಿನಂತಿರುವದು. ವಾರಾಂತ್ಯದ 4 ದಿನಗಳು ಸುಖವಿಜಯ ಲಾಭದಾಯಿಗಳಾಗಿವೆ.

ಮಕರ:— ಮಿತ್ರವರ್ಗದವರಲ್ಲಿ ಮತಭೇದದಿಂದಾಗಿ ಮನಸ್ತಾಪ ವುಂಟಾಗುವದು. ಹೆಚ್ಚಿನ ಕಾರ್ಯಗಳು ವಿಘ್ನಗಳಿಂದಾಗಿ ನಿಷ್ಫಲವಾಗುವವು. ತ್ರಿದೋಷಗಳ ಪ್ರಕೋಪದಿಂದಾಗಿ ಆರೋಗ್ಯ ಕೆಡುವುದು. ಹಲವು ಮುಖದಿಂದ ಖರ್ಚುಗಳು ಪ್ರಾಪ್ತವಾಗಿ ನಿಮ್ಮನ್ನು ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿಸುವವು. ವಿದ್ಯೋಪಜೀವಿಗಳಿಗೂ ಶ್ರಮಜೀವಿವರ್ಗದವರಿಗೂ ದಿನಯಾಪನೆಯು ಕಷ್ಟತರವಾಗುವದು. ತಾ 28, 5, ಮಾತ್ರ ಕೊಂಚ ಉತ್ತಮವೆನಿಸುವದು.

ಕುಂಭ:—ನಿಸರ್ಗತಃ ಶುಭರಾದ ಬುಧ ಗುರು ಶುಕ್ರರ ಅನುಗ್ರಹವನ್ನು ಪಡೆದಿರುವ ನಿಮಗೆ ಈ ವಾರದಲ್ಲಿ ಆರಂಭಿಸಿದ ಕಾರ್ಯಗಳಲ್ಲಿ ವಿಜಯವು ಪ್ರಾಪ್ತವಾಗುವದು. ನಿಮ್ಮ ಆದಾಯವು ಉತ್ತಮಸ್ಥಿತಿಯಲ್ಲಿರುವದು. ಗೃಹತಾಪತ್ರಯಗಳಿಂದ ಮುಕ್ತರಾಗುವಿರಿ. ಆದರೆ ಪ್ರವಾಸ ಉದರ ಶೂಲೆಗಳಿಂದ ಪೀಡಿತರಾಗುವ ಸಂಭವವಿದೆ. ಇಡೀ ವಾರದಲ್ಲಿ ತಾ 29, 1 ಮಾತ್ರ ಉತ್ತಮವಿವೆ.

ಮೀನ:—ದೈವವು ಅತೀವ ಪ್ರತಿಕೂಲವಸ್ಥೆಗೆ ಬಂದಿರುವದು. ಇಲ್ಲಸಲ್ಲದ ಖರ್ಚುಗಳು ಪ್ರಾಪ್ತವಾಗುವುದರಿಂದ ಪರರ ಕೂಡೆ ಸಾಲಕಡಗಳನ್ನು ಮಾಡಬೇಕಾಗುವದು. ಮನಸ್ಸು ಅತೀವ ಚಂಚಲವಾಗುವದು. ಜನತೆಯೊಡನೆ ವೃಥಾಕಲಹ ನಿಷ್ಠುರಗಳಾಗುವವು. ಗೃಹಕೃತ್ಯದ ಅವ್ಯವಸ್ಥೆಯಿಂದಾಗಿ ಮನಸ್ಸಿಗೆ ಈಷತ್ತು ನೆಮ್ಮದಿಯಿರಲೊಲ್ಲದು ತಾ 28, 2, 3, 4, ಈ ದಿನಗಳಲ್ಲಿ ಮೇಲ್ಕಂಡ ಅನಿಷ್ಟಗಳು ಹೆಚ್ಚಾಗಿ ಕಾಣಿಸವು.

ಕವಿರಾಜ ಯನ್. ಯನ್. ಸೇನರ

ಶಾಸ್ತ್ರೀಯ ಔಷಧಿಗಳು

ಈಗಲೇ ಬಂದಿವೆ

ಬೃಹತ್ ಅಮೃತಬಳ್ಳಿ ಕಷಾಯ
ದ್ರಾಕ್ಷಾರಿಷ್ಟ
ಕಸ್ತೂರಿ ಕಲ್ಪ ರಸಾಯನ
ನೇತ್ರಬಿಂಧು
ಕಪರ್ದಾರಿಷ್ಟ
ದುರ್ಗಾ ಪುನರ್ನಾಸವ
ವಾಸಾರಿಷ್ಟ
ಕುಂಕುಮಾಸವ
ಮೃಗಾಂಕ ದ್ರಾವ

ದರವನ್ನು ವಿಚಾರಿಸುವದು.

ಏಜಂಟ್:—

ಶಾ. ಕಂಪೆನಿ, ಮಂಗಳೂರು ನಂ. 1

75

ಅಂತರಂಗದ ಕಥೆ, ಕಾದಂಬರಿ, ನಾಟಕ, ಕವಿತೆ, ಚಿತ್ರ ಪ್ರಬಂಧ ಮೊದಲಾದ ನಾನಾ ಬಗೆಯ 75 ಪುಸ್ತಕಗಳನ್ನು ಒಟ್ಟಿಗೆ ರೂ. 20ಕ್ಕೆ ಕೊಡಲಾಗುವುದು.

ಕಟಲಾಗಿಗೆಬರೆಯಿರಿ:—ಅಂತರಂಗ ಆಫೀಸ್ ಉಡುಪಿ, ಅಥವಾ ನವಭಾರತ ಬುಕ್ ಡಿಪೋ, ಉಡುಪಿ

● ತೃಪ್ತಿಕರವಾದ ವಸತಿ — ಹಿತಕರವಾದ ಊಟ
● ರುಚಿಕರವಾದ ಉಪಾಹಾರ ಇವುಗಳಿಗೆ

ಉಡುಪಿಯ ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಊರ ಪರವೂರ ಸನ್ಮಾನ್ಯ ಸದ್ಗೃಹಸ್ಥರಿಂದ ಮುಕ್ತಕಂಠದಿಂದ ಹೊಗಳಿಸಿಕೊಂಡ ನಮ್ಮ ಹೋಟೆಲಿಗೇ

ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ.

ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯಾಗುವಂತೆ ನಗರದ ಕೇಂದ್ರ ಭಾಗದಲ್ಲಿದೆ.

WOODLANDS

Highclass Boarding & Lodging, **UDIPI S. Kanara**

ಸರ್ ಜೇಮ್ಸನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯ ಪರ್ವತದಲ್ಲಿ ಸಿಕ್ಕುವಂಥ ಅಪೂರ್ವ ವಸ್ತು, ಔಷಧಿಗಳ ರಾಜ; ಶಿಲಾಜಿತ್ತನ್ನು ಮೂಲಿಕೆಗಳೊಡನೆ ಸೇರಿಸಿ ಲೇಹ್ಯ ಮಾಡಿದೆ.



ಇದರ ಸೇವನೆಯಿಂದ ದೇಹ ದಾರ್ಢ್ಯವೂ ಶಕ್ತಿಯೂ ಉಂಟಾಗುತ್ತದೆ. ಮುಖ್ಯವಾಗಿ ಹೊಟ್ಟೆನೋವು, ಅನ್ನ ಸೇರದಿರುವಿಕೆ ಇವೇ ಮೊದಲಾದ ರೋಗಗಳಿಗೆ ಒಂದೆರಡು ದಿನಗಳಲ್ಲಿಯೇ ಗುಣಕೊಡತಕ್ಕ ಔಷಧವಿದು. ಕೆಮ್ಮು, ಶ್ವಾಸ, ದಮ್ಮು, ಮೂಲ, ಒಳಮೂಲ, ರಕ್ತಮೂಲ, ಬಹುಮೂತ್ರ, ಹೊಟ್ಟೆಯಲ್ಲಿ ಗಡ್ಡೆ ಇರುವಿಕೆ ಮತ್ತು ವಾಯುವಿನಿಂದ ಉಂಟಾಗತಕ್ಕ ಸರ್ವ ವ್ಯಾಧಿಗಳಿಗೂ ದಿವ್ಯೌಷಧ. ವಿದ್ಯಾರ್ಥಿಗಳು ಸೇವಿಸುವುದರಿಂದ ಜ್ಞಾಪಕಶಕ್ತಿಯೂ ಮತ್ತು ಚಟುವಟಿಕೆಯೂ ಹೆಚ್ಚುತ್ತೆ. ವೃದ್ಧರು ಸೇವಿಸುವುದರಿಂದ ಶಕ್ತಿಯನ್ನು ಹೆಚ್ಚಿಸಿ; ಧಾರ್ಢ್ಯವನ್ನುಂಟುಮಾಡುತ್ತೆ.

ಹೆಂಗಸರಿಗೆ— ಅತ್ಯಮ ಬಹಿಷ್ಟೆ, ಕೈಕಾಲು ಹಿಡಿತ, ಕೀಲುವಾಯು, ಪಕ್ಕಶೂಲೆ ಮತ್ತು ಉಷ್ಣದಿಂದಾಗುವ ಇತರ ರೋಗಗಳಿಗೆ ದಿವ್ಯೌಷಧ. ದುರ್ಬಲರಾಗಿ ಕೇವಲ ಕೃಶರಾಗಿರುವ ಶಿಶುಗಳಿಗೆ ಈ ಔಷಧವನ್ನು ಪ್ರತಿ ಬೆಳಿಗ್ಗೆ, ಸಂಜೆ ಕೊಟ್ಟರೆ ಸ್ವಲ್ಪ ಕಾಲದಲ್ಲಿಯೇ ದೃಢಾಂಗರಾಗುವರು, ಹಣ ವಾಪಸ್ ಆಗದು.

೪೪ ದಿನದ ಲೇಹ್ಯಕ್ಕೆ ರೂ. ೫-೪-೦ (ಪೋಸ್ಟೇಜು ಮಾಫಿ)
೨೨ ದಿನದ ಲೇಹ್ಯಕ್ಕೆ ರೂ. [illegible] (ಪೋಸ್ಟೇಜು ಮಾಫಿ)

ಎಲ್ಲಾ ನೋವುಗಳಿಗೂ ಅದ್ಭುತತೀಕ್ಷ್ಣ ಗುಣಕಾರಿ:

ಮೆಂಥ್ಯಾಲ್ ಕೋನ್‌ಗಳು

(MENTHYAL CONES)

ಎಲ್ಲಾ ವಿಧವಾದ ಶೈತ್ಯದಿಂದಾಗಲೀ, ಉಷ್ಣದಿಂದಾಗಲೀ ಸಂಭವಿಸುವ ತಲೆ ನೋವು,



ತಲೆತಿರುಗುವಿಕೆ, ಬುದ್ಧಿ ಮಾಂದ್ಯ, ಕಣ್ಣುರಿ, ದೇಹಾದ್ಯಂತ ಕೀಲುಗಳ ನೋವು,ವಾಯುನೋವು ಮತ್ತಾವ ವಿಧವಾದ ನರಗಳ ನೋವಿಗೂ ತಕ್ಷಣದಲ್ಲಿಯೇ ಗುಣವನ್ನು ಕೊಡುತ್ತದೆ. ೧ ಕೋನು ೧೦೦೦ ಸಲ ಉಪಯೋಗಿಸಬಹುದು.

೧ ಪ್ಯಾಕೆಟ್ ರೂ. ೩-೧೨-೦
೨ ಪ್ಯಾಕೆಟ್ ರೂ. ೬-೮-೦
೩ ಪ್ಯಾಕೆಟ್ ರೂ. ೯-೦-೦
(ಪೋಸ್ಟೇಜ್ ಮಾಫಿ)

ನೀಲಿಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ-

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ

Edited, Printed & Published By K. H. Shetty at the Navayuga Press, Udipi, S. India.

Regd.No. M. 3618 | ESTD. 1921 ಸ್ಥಾಪನೆ | 6-3-1952

LICENCE No 31
Licensed to Post without Prepayment

31 ನೆಯ ವರ್ಷ

Founder: Sri A. B. Shetty,
Minister for Agriculture & Veterinary

ನವಯುಗ

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ.

ಕೃಷಿಮಂತ್ರಿ
ಶ್ರೀ.ಎ.ಬಿ. ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ
ಉಡುಪಿ, ದ. ಕ

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೨೬

NAVAYUGA WEEKLY | Post Box No. 22 | UDIPI. | Vol. 31 No. 26

ದುಡಿತವೇ ನಾಡಿನ ಸಂಪತ್ತು

"ದುಃಖಪಡಲು ವೇಳೆಯೇ ಇಲ್ಲದಷ್ಟು ಕಾರ್ಯನಿರತರಾಗಿರುವಾಗ ಮೂಡುವ ವಿಚಿತ್ರ ಅನುಭವವೇ ಸುಖ"

"ಚುನಾವಣೆಗಳಿಂದ ಎಬ್ಬ ಗೌಜಿಗದ್ದಲದ ಸದ್ದಡಗಿತು. ಈಗ ದೇಶಕಲ್ಯಾಣಕ್ಕಾಗಿ ಸರ್ವ ಸಂಘ, ಸಂಸ್ಥೆಗಳೂ, ಸ್ತ್ರೀಪುರುಷ, ಬಾಲಕರೂ ಒಕ್ಕಟ್ಟಿನಿಂದ ಹುರುಪಿನಿಂದ ದುಡಿಯಬೇಕು"

ಕಾನಪುರದಲ್ಲಿ ಪ್ರಧಾನ ಮಂತ್ರಿ
—ಶ್ರೀ ಜವಾಹರಲಾಲ ನೆಹರು

ನಮ್ಮ ನಾಡಿನ ಉಚ್ಛ್ರಾಯ ಸ್ಥಿತಿಯ ಬಗ್ಗೆ ನಾನಾ ರೀತಿಯ ಅಭಿವೃದ್ಧಿ ಯೋಜನೆಯನ್ನು ಕೈಗೊಳ್ಳಲಾಗಿದೆ. ಅಧಿಕ ಆಹಾರೋತ್ಪಾದನಾ ಯೋಜನೆಯು ಇವುಗಳಲ್ಲಿ ಮುಖ್ಯವಾದುದು. ಹೆಚ್ಚು ಆಹಾರ ಬೆಳೆಸಿರಿ—ವನಮಹೋತ್ಸವ ಆಚರಣೆ—ಇವೆಲ್ಲ ಆಹಾರೋತ್ಪಾದನೆಯ ಅಂಗವಾಗಿ ಕೈಕೊಂಡ ಕಾರ್ಯಕ್ರಮಗಳು. ಆದರೆ ನಾಲ್ಕು ವರ್ಷಗಳಲ್ಲಿ ಸರಕಾರ ವಿನಿಯೋಗಿಸಿದ್ದಷ್ಟು ಎಣಿಸಿದಷ್ಟು ಪ್ರಗತಿ ಅದರಿಂದಾಗಲಿಲ್ಲ. ಅಣೆಕಟ್ಟಿನ ಮೂಲಕ ನೀರಾವರಿ ಯೋಜನೆಯಿಂದ ಆಹಾರ ವಿಚಾರದಲ್ಲಿ ಸ್ವಾವಲಂಬಿಗಳಾಗಬಹುದೆಂದು ಹೇಳುವವರುಂಟು! ಈ ಯೋಜನೆ ಪರಿಪೂರ್ಣವಾಗಬೇಕಾದರೂ ವಿದೇಶೀಯ ಬಂಡವಳ ಸಹಕಾರವಿಲ್ಲದೆ ಶಕ್ಯವಿಲ್ಲ. ಮತ್ತು ಸುಲಭಸಾಧ್ಯವಾದ ಮಾತೂ ಅಲ್ಲ. ಆಹಾರ ಇಲ್ಲವೆ ಇನ್ನಾವ ಪರಿಸ್ಥಿತಿಯನ್ನೆದುರಿಸಬೇಕಾದರೂ ಸರಕಾರದ ಮುಖವನ್ನೇ ನೋಡುವದು ಹಿತವಲ್ಲ! ಸರಕಾರ ಮಾರ್ಗದರ್ಶನ ಮಾಡಬಲ್ಲುದು; ಆರ್ಥಿಕ ನೆರವನ್ನು ನೀಡಬಲ್ಲುದು. ಆದರೆ ಅದನ್ನು ಸದುಪಯೋಗಗೊಳಿಸಿ ಅಭಿವೃದ್ಧಿಗೊಳಿಸುವಂತಹ ಸಂಪೂರ್ಣ ಹೊಣೆ ಜನತೆಯದಾಗಿರುತ್ತದೆ. ಶ್ರಮಜೀವಿಗಳಿಂದ ಕೂಡಿದ ನಾಡು, ದುಡಿಮೆಯೇ ಸಂಪತ್ತೆಂದು ತಿಳಿದು ಎಡೆಬಿಡದೆ ದುಡಿಯುವ ಶ್ರಮಜೀವಿಗಳ ನಾಡು ಸುಖಶಾಂತಿಯನ್ನು ಪಡೆಯುವದೆನ್ನುವದರಲ್ಲಿ ಸಂದೇಹವಿಲ್ಲ.

ಕಾನಪುರದಲ್ಲಿ ಮಾತನಾಡುತ್ತಾ ಶ್ರೀ ಜವಾಹರಲಾಲ ನೆಹ್ರೂರವರು "ನಮ್ಮ ಸಂಪತ್ತೆಂದರೆ ಚಿನ್ನ ಬೆಳ್ಳಿಯಲ್ಲ; ನಮ್ಮ ಜನತೆ ಆಲಸಿಗರಾಗಿ ಇಲ್ಲವೆ ವಿಲಾಸಪ್ರಿಯರಾಗಿ ತಮ್ಮ ಹೊಣೆಯನ್ನು ಮರೆತರೆ ಆದೇಶ ಪ್ರಗತಿಯ ಬದಲಾಗಿ ಅಧೋಗತಿಯನ್ನು ಹೊಂದುವದು. ಕರ್ತವ್ಯ ಪರಿಪಾಲನೆ ಅತ್ಯುತ್ಕೃಷ್ಟವಾದ ಗುಣ. ಮಾನವ ಜೀವನದಲ್ಲಿ ಪ್ರತಿಯೊಂದು ಕ್ಷಣವೂ ಲಕ್ಷ್ಯಮೂಲ್ಯವಾದುದು. ದೇಶದ ಕಲ್ಯಾಣ ಸಾಧನಾಮಾರ್ಗದಲ್ಲಿ ಕಷ್ಟಜೀವಿಗಳು ಹೆಚ್ಚೆಚ್ಚು ಬೇಕಾಗಿದ್ದಾರೆ. ಕಷ್ಟಜೀವಿಗಳೆಂದರೆ ದುಃಖದಿಂದ—ಬಡತನದಿಂದ ಜೀವಿಸುವವರೆಂದರ್ಥವಲ್ಲ-ಹೆಚ್ಚು ಶ್ರಮವಹಿಸುವರು, ನಮಗೆ ಹೆಚ್ಚು ಅವಶ್ಯವೆಂದರ್ಥ. ಬಂಡವಳಗಾರರೂ, ಮಾಲಕರೂ ತಮ್ಮ ಹಳೆಯ ಸಂಪ್ರದಾಯಗಳನ್ನು ಬಿಟ್ಟುಕೊಟ್ಟು ಪ್ರಚಲಿತ ಕಾಲಮನೋಧರ್ಮವನ್ನು ಅರಿತುಕೊಂಡು ಪರಸ್ಪರ ಸಹಕರಿಸಿಕೊಂಡು ಮುಂದರಿಯಬೇಕಾಗಿದೆ. ದೇಶದ ಪ್ರಗತಿಯು ಕೆಲಸಗಾರರ ಮೇಲಿರುವುದರಿಂದ ಅವರು ಹೊಣೆಯರಿತು ವರ್ತಿಸಬೇಕಾಗಿದೆ" ಎಂದು ಹೇಳಿರುವರು. ಮೇಲಿನ ಮಾತಿನಲ್ಲಿ ದೇಶೋನ್ನತಿಯ ಮಾರ್ಗದಲ್ಲಿ ಜನತೆಯ ಮುಖ್ಯ ಕರ್ತವ್ಯವೇನೆಂಬುದು ಸುಸ್ಪಷ್ಟವೇ ಆಗಿದೆ. ನಮ್ಮಲ್ಲಿ ಬಂಡವಳಗಾರರ ಸಂಖ್ಯೆ ಅತಿ ವಿರಳ. ಮಾತ್ರವಲ್ಲ ಅವರ ವರ್ಚಸ್ಸೂ ಕುಗ್ಗಿದೆ. ಪ್ರತಿಯೊಂದು ಉದ್ಯಮಗಳಲ್ಲೂ ಮಾಲಕರು ಇಂದು ಸ್ಥಿತಿವಂತರಾಗಿರುವುದಿಲ್ಲ. ಧನಿಕರು—ಬಡವರು ಎನುವ ಭೇದಭಾವವನ್ನು ಬೆಳೆಸಿ ಅರಾಜಕತೆಯನ್ನುಂಟು ಮಾಡುವವರು ಯಥಾರ್ಥ ವಿಚಾರದಲ್ಲಿ ತೀರ ಅಜ್ಞಾನಿಗಳಾಗಿರುವರು. ಕೆಲಸಗಾರರ ಶ್ರಮಕ್ಕುಚಿತವಾದ ಸಂಬಳ—ತುಟ್ಟಿಭತ್ತೆ—ವಿಶ್ರಾಂತಿ ಮುಂತಾದ ಸೌಲಭ್ಯಗಳನ್ನು ಕಾಂಗ್ರೆಸ್ ಸರಕಾರ ಒದಗಿಸಿಕೊಟ್ಟಿದೆ. ಮಾತ್ರವಲ್ಲ ಹಲವಾರು ನೂತನ ಯೋಜನೆಗಳನ್ನು ಕಾರ್ಯರೂಪದಲ್ಲಿ ತರುವದರ ಸಲುವಾಗಿ ನೂರಾರು ಬಗೆಯ ಕರವನ್ನು ಬಂಡವಳಗಾರರ ಮೇಲೆ ಹೇರಿದೆಯೆ ಹೊರತು ಕೆಲಸಗಾರರಿಗೆ ಇದರಿಂದ ಬಾಧಕವಿಲ್ಲ. ಇಷ್ಟಿದ್ದರೂ ಕೆಲಸಗಾರರು ಸ್ವಾರ್ಜಿತದ ಮೇಲೆ ಸಂತೃಪ್ತರಾಗಿಲ್ಲ. ವಿಲಾಸಪ್ರಿಯರಾಗಿ, ವ್ಯಸನಿಗಳಾಗಿ ಗೊಣಗುತ್ತಲೇ ಇರುವುದುಂಟು. ದುಡಿಮೆಗೆ ತಕ್ಕ ಪ್ರಾಪ್ತಿ ಸಿಕ್ಕುತ್ತಿದ್ದರೂ ಕೆಲಸದ ಮೇಲೆ ಆತ್ಮೀಯತಾಭಾವ ಅವರಿಗಿಲ್ಲ! ಶಿಸ್ತು ನಿಯಮಗಳಂತೆ ವರ್ತಿಸುತ್ತಿಲ್ಲ. ಕೆಲಸಗಾರರು ಮೈಗಳ್ಳತನವಿಲ್ಲದೆ ಶಿಸ್ತು ನಿಯಮದಿಂದ ಕ್ರಮವಾಗಿ ವರ್ತಿಸಿದರೆ, ಒಡೆಯರು ಕಾಲಧರ್ಮಕ್ಕನುಸರಿಸಿ ನಡೆದರೆ ಪ್ರತಿಯೊಂದು ಉದ್ಯಮದಲ್ಲೂ ಪ್ರಗತಿಯನ್ನು ಸಾಧಿಸಲು ಶಕ್ಯವುಂಟು! ಇಲ್ಲಿನ

"ಗಿಡದ ಫಲ ತಾನಾಗಿ ದಡಬಡನೆ ಬಂದು ಬಾಯಿಗೆ ಬೀಳದು, ದುಡಿಯದೆ ದಣಿಯದೆ ಸುಖಪಡಲಾಗದು"

"ದೈವ ಸಹಾಯದಿಂದ ನಾನು ರಾಷ್ಟ್ರಾಧ್ಯಕ್ಷನಾಗಿದ್ದೇನೆ. ಆದರೆ ಪುಣೆ ನಗರದ ಬೀದಿಗಳನ್ನು ಗುಡಿಸಲು ಹೇಳಿದರೂ ನಾನು ಆ ಕೆಲಸವನ್ನು ಅಷ್ಟೇ ಭಕ್ತಿ ವಿಶ್ವಾಸಗಳಿಂದ ಮಾಡುವೆ"

ಪುಣೆಯಲ್ಲಿ ರಾಷ್ಟ್ರಾಧ್ಯಕ್ಷ
—ಬಾಬು ರಾಜೇಂದ್ರ ಪ್ರಸಾದ

ಹಲವು ಮಹನೀಯರು ನಮ್ಮ ದೇಶವನ್ನು ಇಂಗ್ಲೆಂಡ ಅಮೇರಿಕೆಗಳಿಗೆ ಹೋಲಿಸಿ ಟೀಕೆ ಮಾಡಿದ್ದುಂಟು! ಆದರೆ ಇಂಗ್ಲೆಂಡದ ಜನ ದಿನಕ್ಕೆ ಮತ್ತು ವಾರಕ್ಕೆ ಎಷ್ಟು ದಿನ ಶ್ರಮವಹಿಸುತ್ತಿದ್ದಾರೆ— ಅವರಲ್ಲಿ ಯಾವ ಬಗೆಯ ಶಿಸ್ತು-ಕರ್ತವ್ಯಶೀಲ ಗುಣವಿದೆಯೆಂಬುದನ್ನು ಹೇಳುತ್ತಿಲ್ಲ. ವಾರದಲ್ಲಿ 5½ ದಿನ ಅವಿಶ್ರಾಂತರಾಗಿ ದುಡಿದು ಉಳಿದ ಒಂದೆರಡು ದಿನವನ್ನು ಆತ್ಮಾನಂದದಿಂದ ಕಳೆಯುವರು. ಆದರೆ ನಮ್ಮ ದೇಶದಲ್ಲಿ ವಾರದಲ್ಲಿ ಸರಿಯಾಗಿ 4 ದಿನ ಶ್ರಮವಹಿಸುವವರು ಕಡಿಮೆ. 4 ದಿನದ ಸಂಬಳದಲ್ಲಿ ಉಳಿದ ಮೂರು ನಾಲ್ಕು ದಿನಗಳನ್ನು ಮೋಜಿಗಾಗಿ ಕಳೆಯುವರು. ಇದರಿಂದ ತನಗೆ ಹಾನಿ ಮಾತ್ರವಲ್ಲದೆ ಬಂಡವಳಗಾರನಿಗೂ ಹಾನಿ. ಈ ಬಗೆಯ ವರ್ತನೆಯಿಂದ ಬಂಡವಳಗಾರರಿಗಾಗಲೀ—ಬಡವರಿಗಾಗಲೀ—ದೇಶಕ್ಕಾಗಲೀ ಕ್ಷೇಮವಿಲ್ಲ! ಉತ್ಪಾದನೆ ಹೆಚ್ಚಬೇಕಾದರೆ 'ಹೊತ್ತೇ ಹೊನ್ನು' ಎಂದು ತಿಳಿದು ಪ್ರತಿಯೊಬ್ಬರೂ ದುಡಿಯುತ್ತಿರಬೇಕು.

ದೇಶದ ಉನ್ನತಿಯನ್ನು ಹಾರೈಸುವವರು "ಚಿನ್ನ ಬೆಳ್ಳಿ ನಮ್ಮ ಸಂಪತ್ತಲ್ಲ; ದುಡಿಮೆ" ಎಂದು ನೆಹ್ರೂ ಹೇಳಿದ ಮಾತನ್ನು ಲಕ್ಷಿಸಬೇಕು. ಪರಿಸ್ಥಿತಿಯನ್ನು ಚೆನ್ನಾಗಿ ಅರಿತುಕೊಂಡರೆ ನೆಹ್ರೂ ಹೇಳಿದ ಮಾತಿಗೂ ಜನತೆಯ ಕೃತಿಗೂ ಎಷ್ಟು ಅಂತರವಿದೆಯೆಂಬುದು ನಮಗೆ ವೇದ್ಯವಾಗದೆ ಇರದು. ಬಡ ಜನತೆಯನ್ನು ಹೀನಾಯವಾಗಿ ನಡೆಸಿಕೊಂಡು ಬಂಡವಳವನ್ನು ಕೂಡಿಡುವಷ್ಟು ದೊಡ್ಡ ಶ್ರೀಮಂತವರ್ಗ ನಮ್ಮಲ್ಲಿಲ್ಲ! ಅಥವಾ ಬಂಡವಳಗಾರರ ಬಂಡವಳದ ಮೇಲೆ ಸಾಮಾನ್ಯ ಜನತೆಯ ಜೀವನ ಹೊಂದಿಕೊಂಡಿಲ್ಲ; ಸಾಮಾನ್ಯ ಜನತೆಯ ಉನ್ನತಿ ಮಾರ್ಗವೆಂದರೆ ದುಡಿಯುವುದು ತನ್ನ ಅಮೂಲ್ಯ ಕರ್ತವ್ಯವೆಂದು ತಿಳಿದು ವರ್ತಿಸುವದರಲ್ಲಿ. ಈ ಭಾವನೆ ಇರಬೇಕಾದುದು ಇಂದು ಶ್ರಮಜೀವಿಗಳಲ್ಲಿ; ದುಡಿಮೆಗಾರರಲ್ಲಿ ಅವರೇ ನಮ್ಮ ದೇಶದ ಸಂಪತ್ತು, ಅವರಿಂದಲೇ ಸಮಾಜೋನ್ನತಿ, ರಾಷ್ಟ್ರೋನ್ನತಿ.

Our Pigmy Deposit Scheme

.... brings our bank to your door You may save as small a sum as annas two Our collector will call on you every day to receive it

At the rate of annas two per day you save Rs. 350 in 7 years because we allow interest at 3⅛% per annum At the rate of Re. 1/- per day your Savings are Rs 2,800 - in 7 years At the rate of Rs. 10/- it is Rs 28,000

Come in to-day and join the band of **Prudent Prosperous Pigmy People.**

The Canara Industrial & Banking Syndicate Ltd.

Estd: 1925. H. O: UDIPI.

[ಕಳೆದಸಂಚಿಕೆಯಿಂದ ಮುಂದುವರಿದುದು]

ಅಧಿಕಾರದ ದೊಡ್ಡದೊಡ್ಡ ಹುದ್ದೆಯಲ್ಲಿರುವವರು ಭದ್ರವಾದ ರಕ್ಷಣೆಯಲ್ಲಿರುವರು. ಆಯಾಯ ಶಾಖೆಯ ಮಂತ್ರಿಯು ಅವರಿಗೆ ಕವಚದಂತಿರುವನು, ಆತನಿಗೆ ಶಾಸನ ಸಭೆಯು ಕವಚದಂತಿರುವದು. ಆಕ್ಷೇಪಣೆ ತಪ್ಪುಗಳ ಗಂಡಾಂತರ ಮತ್ತು ಗೊಂದಲಗಳನ್ನು ತಪ್ಪಿಸಿಕೊಳ್ಳುವರೆ ಬೇಕಾದ ಜಾಗರೂಕತೆಯನ್ನು ವಹಿಸುವನು, ಮಂತ್ರಿಯು ಎದುರಿಗೆ ಬೀಳುವುದೇ ದುರ್ಲಭ. ದಾಖಲೆಗಳಿಂದ ತನ್ನ ಸ್ಥಾನವನ್ನು ಭದ್ರಮಾಗಿರಿಸಿಕೊಳ್ಳುವನು. ಇದರ ಅನುಭವವು ಸದಸ್ಯರಿಗೆ ಕಡಿಮೆ. ಶಾಸನ ಸಭೆಯಲ್ಲಾಗುವ ಚರ್ಚೆಗೆ ತಿರಸ್ಕರಣೆಯ ಮನೋವೃತ್ತಿಯನ್ನು ತೋರಿಸುವನು, ಅಗತ್ಯವಿದ್ದಾಗ ತನ್ನ ಕೆಳಗಿನ ಕಾರ್ಯದರ್ಶಿಯನ್ನು ಕಳುಹಿಸುವನು.

ಇನ್ನೊಂದು ದೃಷ್ಟಿಯಿಂದ ನಾವು ಅಧಿಕಾರೀ ಮಂಡಲಿಯನ್ನು ಪರೀಕ್ಷಿಸಬೇಕಾಗಿದೆ. ಲೋಕದಲ್ಲಿ ಯಾವಾಗಲೂ ಕೆಲವು ಜನರ ಸ್ವಭಾವವೇ ವಿರೋಧಿಸುವದು, ಆತಂಕಿಸುವದು, ನಿಷೇಧಿಸುವದು ಮತ್ತು ಕೋಟಲೆ ಕೊಡುವುದಾಗಿದೆ. ಇನ್ನು ಕೆಲವು ಜನರು ಕೃಪಾಳುಗಳು ದಯಾಳುಗಳಾಗಿರುವರು. ಇವರು ಎಲ್ಲಿ ಯಾರಿಗೆ ಏನು ಕೆಟ್ಟದಾದೀತೋ ಎಂದು ಅನುಮಾನಪಟ್ಟು ಪ್ರತಿಯೊಂದಕ್ಕೂ ಆತಂಕ ತಂದು ಪರೀಕ್ಷಿಸುವರು. ಇವರ ಧ್ಯೇಯ ಒಳ್ಳೇದಾದರೂ ಸಂಶಯ ಪಿಶಾಚಿಯ ಕಾಟದಿಂದ ಪ್ರತಿಯೊಂದಕ್ಕೂ ಅಡ್ಡ ಬರುವರು. ಹಟಾತ್ತಾಗಿ ಆತಂಕ ಮಾಡುವದರಿಂದ ರಕ್ಷಣೆಯನ್ನು ಕೇಳಲು ಮಂತ್ರಿಗಳಿಗೆ ನಿಜವಾದ ಹಕ್ಕಿದೆ. ಅತಿರೇಕ ತಡೆ ಮತ್ತು ನಿಲುವುಗಳಿಂದ ಪ್ರಜಾಸತ್ತೆಯ ತತ್ವವನ್ನು ಬಲಪಡಿಸಬಹುದೇ ಹೊರತು ಜನರ ಸೌಕರ್ಯವನ್ನು ಹೆಚ್ಚಿಸಲಸಾಧ್ಯ. ಪ್ರತಿನಿಧಿ ಸಭೆಯವರ ಉದ್ವೇಗವನ್ನು ತಡೆಗಟ್ಟುವರೆ ಕೆಲವು ಸಲಕರಣೆಗಳಿದ್ದಂತೆ ಅಧಿಕಾರ ಮಂಡಲಿಯ ಸ್ವೇಚ್ಛಾಧಿಕಾರಕ್ಕೆ ತಡೆಬೇಕೆಂಬುದೂ ಸಹಜ. ವಿದೇಶ ಶಾಖೆಯ ವ್ಯವಹಾರದಲ್ಲ ... ... ಇಲ್ಲ. ಆ ಇಲಾಖೆಯ ಕಾರ್ಯವು ಬಹಳ ಪರಿಣಾಮಕಾರಕವಾದುದರಿಂದ ಮೊದಲಾಗಿ ಅದನ್ನೆ ಅಂಕೆಯೊಳಗಿರಿಸಿಕೊಳ್ಳಬೇಕು. ಯುದ್ಧದ ಸಮಯದಲ್ಲಿ ವಿದೇಶ ಇಲಾಖೆಯವರು ಸ್ವೇಚ್ಛಾಧಿಕಾರ ನಡೆಸಿರುವರು. ವೈಯಕ್ತಿಕವಾಗಿ ಅಧಿಕಾರ ಮಂಡ

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ನೋವುಗಳಿಗೂ, ಎದೆ ನೋವು,ಗಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ,ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ



REGD

ಜುಳು ಕಡ್ಡಿ ಮತ್ತು ಸಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

ಪ್ರಜಾಸತ್ತೆ

ಕಾರ್ಯನಿರ್ವಾಹಕ ಮಂಡಳಿ
THE EXECUTIVE

ಲಿಯನ್ನು ಹತೋಟಿಯಲ್ಲಿರಿಸುವದು ಕಷ್ಟ. ಫ್ರಾನ್ಸಿನಲ್ಲಿದ್ದಂತೆ ಯಾವಾಗಲೂ ಮಂತ್ರಿಗಳ ಕಾರ್ಯಕ್ರಮವನ್ನು ಶೋಧಿಸಿ ಮೇಲ್ವಿಚಾರ ಮಾಡುವ ಸಮಿತಿಯು ಸಭೆಯಲ್ಲಿರುವುದು ಒಳ್ಳೇದು. ಇಂಥಾ ಸಮಿತಿಯು ಬೆಲೆಯು ಸಭೆಯನ್ನು ಹೊಂದಿರುವದು. ಸದಸ್ಯರನ್ನು ನಾವು ಆರಿಸುವಾಗ ಸರಿಯಾಗಿ ವಿವೇಚನಾ ಶಕ್ತಿಯನ್ನುಪಯೋಗಿಸಬೇಕು.

ಈ ದೃಷ್ಟಿಕೋನದಿಂದ ನೋಡುವುದಾದರೆ ಎಲ್ಲ ಜವಾಬ್ದಾರಿಕೆಯು ಜನರ ಮೇಲೆಯಿರುವುದು. ಚುನಾವಣೆ ಸಮಯ ಮತಗಟ್ಟೆಗೆ ಹೋಗಿ ಮತ ಕೊಡದವನಿಗೆ ಯಾವ ಹಕ್ಕೂ ಇಲ್ಲ. ರಸ್ತೆ ಬದಿಯಲ್ಲಿ ಮಲಗಿ ನಿದ್ದೆ ಮಾಡುವವರು ದಾರಿ ಹೋಕರಾದ ಮಕ್ಕಳ ಕುಚೇಷ್ಟೆಗಳನ್ನು ಸೈರಿಸಲೇ ಬೇಕು. ನಿದ್ದೆ ಮಾಡದೆ ಜಾಗರೂಕರಾಗಿರುವದು ನಮ್ಮ ಪ್ರಥಮ ಕರ್ತವ್ಯ. ಹಕ್ಕುಗಳನ್ನು ಕೇಳುವವರು ಕರ್ತವ್ಯಗಳನ್ನು ಹೊರಲೇಬೇಕು. ನಮ್ಮ ಕರ್ತವ್ಯವನ್ನು ನಾವು ಮಾಡದಿರುವಲ್ಲಿ ಅಧಿಕಾರಿಗಳನ್ನು ಅಂಕೆಯೊಳಗಿರಿಸಿಕೊಳ್ಳಲಾರೆವು ಯೋಗ್ಯ ಪ್ರತಿನಿಧಿಗಳನ್ನು ಚುನಾಯಿಸದಿದ್ದಲ್ಲಿ ಪ್ರಜಾಸತ್ತೆಯು ನೆಲೆಯಾಗಿ ನಿಲ್ಲದು. ಅವರು ಸಾರ್ವಜನಿಕರನ್ನು ಪ್ರತಿನಿಧಿಸುವಂತೆ ಮಾಡುವದೆ ಯಂತ್ರಗಳು ಬೇಕು. ಅಧಿಕಾರಿಗಳನ್ನು ಅವರ ಅಂಕೆಯೊಳಗಿರುವಂತೆ ಮಾಡಬೇಕು. ಈ ಕೆಲಸದಲ್ಲೇ ಪ್ರಜಾಸತ್ತೆಯು ಹಿಂದೆ ಬಿದ್ದಿರುವದು. ಪ್ರೌಢಮತದಿಂದ ಅಥವಾ ನಾಗರಿಕರ ಹಕ್ಕಿನಿಂದಲೇ ಯಾವ ಕಾರ್ಯವೂ ಆಗದು. ನಮಗೆ ಮತದ ಹಕ್ಕೂ ಬೇಕು ಮತ ಕೊಡುವರೆ ಯೋಗ್ಯತೆಯೂ ಬೇಕು. ಇವೆರಡೂ ಇಲ್ಲದವರು ಸ್ವತಂತ್ರರಾಗಲಾರರು. ಅವರು ಅಧಿಕಾರಿಗಳಿಂದ ಆಳಲ್ಪಡುವರು. ಹೆಸರಿಗೆ ಮಾತ್ರ ಪ್ರಜಾಸತ್ತೆಯು ಜನರೆಲ್ಲರೂ ದಾಸ್ಯರಾಗುವರು. ಒಂದು ಮತ ಅಥವಾ ಪಂಥದ ಯೋಗ್ಯತೆಯನ್ನು ನಿರ್ಣಯಿಸಬೇಕಾದರೆ ಅದರ ಪ್ರಭಾವವು ಎಷ್ಟು ಪರಿಣಾಮಕಾರಿಯಾಗುವುದು ಎಂದು ನೋಡುವೆವೋ ಹಾಗೆಯೇ ಒಂದು ಸರಕಾರದ ಯೋಗ್ಯತೆಯನ್ನು ಅಂದಾಜು ಮಾಡುವಾಗ ಅದು ಜನರಲ್ಲಿ ಶಾಂತಿ ನೆಮ್ಮದಿ ಮತ್ತು ಸುಖವನ್ನು ಎಷ್ಟರಮಟ್ಟಿಗೆ ತಂದಿರುವದು ಎಂದು ಪರೀಕ್ಷಿಸುವೆವು. ಜನರು ತಮ್ಮ ಸ್ವಾತಂತ್ರ್ಯವನ್ನು ಏಕಚಕ್ರಾಧಿಪತಿಗಳಿಂದ ಹೋರಾಡಿ ಪಡೆದದ್ದಾದ್ದರಿಂದ ಅಧಿಕಾರಿಗಳಲ್ಲಿ ಅವಿಶ್ವಾಸ ತುಂಬಿ ಅವರು ಸ್ವಾತಂತ್ರ್ಯ ವಿರೋಧಿಗಳೆಂಬ ಭಾವನೆಯು ಬಂತು. ಆದ್ದರಿಂದ ತಡೆ ಮತ್ತು ಪ್ರತಿಬಂಧಕಗಳನ್ನಿಡುವುದು ಪ್ರಜಾಸತ್ತೆಯು ಮುಂದುವರಿದು ಜನರ ಸ್ವಾತಂತ್ರ್ಯ ಮತ್ತು ಅಧಿಕಾರ ನೆಲೆಯಾಗಿ ನಿಂತಮೇಲೆ ಈ ಅಪನಂಬಿಕೆಯು ಮಾಯವಾದವು. ಈಗಿನ ಕಾಲದಲ್ಲಿ ಕಾರ್ಯನಿರ್ವಾಹಕ ಶಾಖೆಯೇ ಬಲಹೀನವಾದದ್ದೆಂದು ಕೆಲವರು ಅಭಿಪ್ರಾಯ ಪಡುವರು. ಶ್ರೀಮಂತರು ವರ್ಗದವರ ಸರಕಾರಗಳಲ್ಲಿ ಇದ್ದಂತೆ ಇದರ ಧ್ಯೇಯ ಧೋರಣೆಗಳು ಸರಾಗವಾಗಿ ಮುಂದೊತ್ತುವದು ಕಷ್ಟ. ಕಾರ್ಯಗಳನ್ನು ಚುರುಕಾಗಿ ಮಾಡಲು ಧೈರ್ಯವಿಲ್ಲ. ಅಧಿಕಾರಿಗಳನ್ನು ಆರಿಸುವಾಗ ವಿವೇಚನಾಶಕ್ತಿ ತಿಳುವಳಿಕೆಯು ಮತ್ತು ಕಾರ್ಯದಕ್ಷರನ್ನು ನೇಮಿಸುವುದಿಲ್ಲ. ಪಕ್ಷಗಳ ಪರವಾಗಿ ರಾಜಕೀಯ ಮುಂದಾಳುಗಳನ್ನು ನೇಮಕ ಮಾಡುವರು. ಸ್ವಿಜರ್‌ಲೇಂಡು ಒಂದನ್ನು ಬಿಟ್ಟು ಮಿಕ್ಕುಳಿದ ರಾಷ್ಟ್ರಗಳೆಲ್ಲ ಹೀಗೆ ಮಾಡುವವು. ಪಕ್ಷಗಳಿಂದ ಸರಕಾರವು ಕೈ ತಪ್ಪುವಾಗ ಇವರೂ ಅಧಿಕಾರಚ್ಯುತರಾಗುವರು. ಮುಖ್ಯ ಮಂತ್ರಿ ಅಥವಾ ಅಧ್ಯಕ್ಷನು ಸಾಧಾರಣ ಮಧ್ಯಮ ತರಗತಿಯವರನ್ನೇ ನೇಮಿಸುವರು. ಹೀಗೆ ಮಾಡುವಾಗ ಅನೇಕ ರಾಜಕಾರಣಗಳನ್ನು ಎಣಿಕೆಗೆ ತರುವರು. ದೇಶದ ಯಾವದಾದರೊಂದು ಭಾಗದಲ್ಲಿ ಒಬ್ಬನಿಗೆ ಜನಬೆಂಬಲವಿದ್ದರೆ ಯಾವನಾದರೊಂದು ಪಂಗಡದ ಮುಂದಾಳಾದರೆ ಸಾಕು. ಹೆಚ್ಚು ಬುದ್ಧಿವಂತಿಕೆ ಮತ್ತು ಆಡಳಿತೆಯ ಕ್ರಮದ ತಿಳುವಳಿಕೆ ಸಹ ಬೇಕೆಂತಿಲ್ಲ. ಪಕ್ಷಗಳ ಸಹಕಾರವಾದ್ದರಿಂದ ತಮ್ಮಪಕ್ಷದವರಿಗೆ ಹಂಚಿಕೊಡುವರು. ಇದಕ್ಕೆಸ್ಪೊಯಿಲ್ಸ ಸಿಸ್ಟಂ (Spoils System) ಎನ್ನುವರು. ಇನ್ನೊಂದು ಪಕ್ಷದವನು ಎಷ್ಟು ತಿಳುವಳಿಕೆಯುಳ್ಳವನಾದರೂ ಅಡ್ಡಿ ಇಲ್ಲವೆಂದು ತಮ್ಮ ಜನರನ್ನು ನೇಮಿಸುವರು ಈ ಕ್ರಮವು ಅಮೇರಿಕದಲ್ಲಿ ವಿಪರೀತ ಸ್ಥಿತಿಗೆ ಮುಟ್ಟಿದೆ. ಆದರೆ ಇತ್ತೀಚೆಗೆ ಇತರ ಪ್ರಜಾಸತ್ತೆಗಳಂತೆ ಸಿವಿಲ್ ಸರ್ವಿಸ್ ಎಂತ ಬೇರ್ಪಡಿಸಿ ಯೋಗ್ಯರಾದವರನ್ನು ಹುದ್ದೆಗಳಿಗೆ ನೇಮಿಸುವರು.

—ಸಿ. ಎಚ್. ಸೆಟ್ಟಿ ಬಿ. ಎ.

(ಮುಂದುವರಿಯುವುದು)

ಝಂಡುರವರ ಕೇಸರಿ ಜೀವನ

ZANDU'S KESARI JIVAN

ವನ್ನು ಉಪಯೋಗಿಸಲು ಒತ್ತಾಯಿಸಿರಿ.

ಕೆಮ್ಮು, ನೆಗಡಿ, ಅಸ್ತಮ, ಧ್ವನಿ ಒಡೆಯುವಿಕೆ ಮೊದಲಾದುವುಗಳಿಗೆ ಅತ್ಯುತ್ತಮ ಔಷಧಿ.

ಕೇಸರಿ ಜೀವನವು ತಾರುಣ್ಯವನ್ನೂ, ನವಚೈತನ್ಯವನ್ನೂ ಉಂಟುಮಾಡಿ ದೇಹದ ಅಂಗಾಂಗಗಳನ್ನೂ ಪುಷ್ಟಿಯಾಗಿ ಮಾಡಬಲ್ಲುದು. ಮೆದುಳಿನ ನಿತ್ರಾಣವಿರುವ ಅಧ್ಯಾಪಕರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಜಡ್ಜರಿಗೂ, ...ಷ್ಟಿಗೆ ಸರ್ವರಿಗೂ ಉತ್ತಮ ಪರಿಣಾಮಕಾರಿ ಔಷಧ.

ಕೇಸರಿ ಜೀವನ ದೊರಕುವ ಸ್ಥಳಗಳು:-

1. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್,ಲಿ.,ಉಡುಪಿ, 2. ವಿ. ವಿ. ಶೆಣೈ, ಕೆಮಿಸ್ಟ್, ಕಾರ್ಕಳ, 3. ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು. ಅಥವಾ ಕೆಳಗಿನ ಸೋಲ್ ಏಜಂಟರಲ್ಲಿ:—

ZANDU

ದಾಮೋದರ್ ಎಂಡ್ ಕೊ.

113, ನೈನಿಯಪ್ಪ ನಾಯಕನ್ ಸ್ಟ್ರೀಟ್,

ಜಿ. ಟಿ ಮದ್ರಾಸು.

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."

—ಶ್ರೀ ಕೆ. ಎ. ಪಂಡಿತ್, B. SC, F. I. A.

(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆಲೋದಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ. 9ರಂತೆ ಬೋನಸು ಹಂಚಲಾಗುವುದು. ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ.

— ದಿ ಕೆನರಾ ಮ್ಯೂಚುವಲ್ —

ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಪ್ರಧಾನ ಕಾರ್ಯಾಲಯ: **ಉಡುಪಿ**, ದ. ಭಾರತ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದ ಊ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,

Moolky, S K

ಐದು ವರುಷಗಳ ಗ್ಯಾರಂಟಿ – 18ಕ್ಯಾರೆಟ್ ರೋಲ್ಡ್‌ಗೋಲ್ಡ್ ಆಭರಣಗಳು. ದೊಡ್ಡ ಚೈನಿಗೆ ರೂ. 5- ಚಿಕ್ಕ ಚೈನಿಗೆ ರೂ. 4 ತರಹವಾರು ಬಳೆಗಳ ಸೆಟ್ಟಿಗೆ ರೂ. 7, ಹೊಸ ಫ್ಯಾಶನಿನ ಉಂಗುರಕ್ಕೆ ರೂ. 3.

Dogulva Traders

West Vedinpokki Street, MADURAI

ಮದ್ರಾಸ್ಸಿನಲ್ಲಿ ಕಾಂಗ್ರೆಸ ಮಂತ್ರಿಮಂಡಳದ ಸಂಭವ

ಚುನಾವಣೆಯಲ್ಲಿ ಗೆದ್ದು ಬರಲಾರದೆ ಬಿದ್ದುಹೋದರೂ ಕಾಂಗ್ರೇಸ್ಸೇತರ ಸರಕಾರ ರಚಿಸಿಯೇ ಸಿದ್ಧನೆಂದು ಎಲ್ಲ ಪಕ್ಷವನ್ನು ಕಟ್ಟಿಕೊಂಡು ಸರ್ಕಸ್ ಆಡತೊಡಗಿ ಒದ್ದಾಡುತ್ತಿರುವ ಮಾಜಿ ಪ್ರಧಾನ, ಮದ್ರಾಸ ಕಿಸಾನ ಮಜದೂರ ಪಕ್ಷದ ನಾಯಕ

ಟಿ. ಪ್ರಕಾಶಂ

ಮದ್ರಾಸದ ರಾಜಕಾರಣ ದಿನದಿಂದ ದಿನಕ್ಕೆ ಕುತೂಹಲಪೂರ್ಣವಾಗುತ್ತ ಬಂದಿದ್ದು ಈಗ ಅಲ್ಲಿ ಕಾಂಗ್ರೆಸ್ ಮಂತ್ರಿಮಂಡಳ ರಚನೆಯಾಗುವ ಶುಭಚಿನ್ಹೆ ತೋರುತ್ತದೆ. ಕಾಂಗ್ರೆಸ್ಸೇತರ ಸಂಯುಕ್ತರಂಗವೊಂದನ್ನು ರಚಿಸುವಲ್ಲಿ ಟಿ. ಪ್ರಕಾಶಂ ಮತ್ತು ಕಮ್ಯೂನಿಸ್ಟರು ಬಹಳವಾಗಿ ಒದ್ದಾಡಿದರೂ ಉಳಿದ ಪಕ್ಷಗಳು ಈ ಸಂಬಂಧವನ್ನು ಒಪ್ಪಿರುವದಿಲ್ಲ. ಸ್ವಸಾಮರ್ಥ್ಯದಿಂದ ಸಂಯುಕ್ತರಂಗದ ಸಂಘಟನೆ ಸಾಧ್ಯವಾಗದೆ ಹೋದ ಕಮ್ಯೂನಿಸ್ಟ ಹಾಗೂ ಕೆ. ಯಂ. ಪಿ. ಗಳು ಈಗ ಬೇರೆಯವರನ್ನು ಕುರಿದುಂಬಿಸಲಿದ್ದಾರಂತೆ! ಸಮಾಜವಾದಿ ಪಕ್ಷದ ಮುಖಂಡ ಜಯಪ್ರಕಾಶ ನಾರಾಯಣರು ಮದ್ರಾಸಕ್ಕೆ ಆಗಮಿಸಿದಾಗ ಕಮ್ಯೂನಿಸ್ಟ ಧುರೀಣರು ಅವರಿಗೆ ಕಾಂಗ್ರೆಸ್ಸೇತರ ವಿರುದ್ಧ ಪಕ್ಷವನ್ನು ಸಂಘಟಿಸುವದಕ್ಕಾಗಿ ಅವರ ಸಹಕಾರವನ್ನು ಯಾಚಿಸಿದ್ದರು. ಆದರೆ ಆದರ್ಶ ಸಾಧಕರಾದ ಸಮಾಜವಾದಿಗಳು ಈ ಆಹ್ವಾನವನ್ನು ಮನ್ನಿಸಿಲ್ಲ. ಇದರಿಂದಾಗಿ ಸಂಯುಕ್ತರಂಗದ ಪುರಸ್ಕರ್ತರಿಗೆ ಬಹುಮಟ್ಟಿನ ನಿರಾಶೆಯಾಯಿತು!

ಈಗ ಕಾಂಗ್ರೆಸ್ ಕಾರ್ಯಕರ್ತರ ಪ್ರಯತ್ನದಿಂದ ಕಾಂಗ್ರೆಸು ಮಂತ್ರಿಮಂಡಳ ರಚಿಸಬಹುದೆಂದು ತೋರುತ್ತದೆ. ಮಾರ್ಚ 7ಕ್ಕೆ ದಿಲ್ಲಿಯಲ್ಲಿ ಕಾಂಗ್ರೆಸ ಕಾರ್ಯಸಮಿತಿಯು ಕೂಡುವದು. ಈ ಕಾಲದಲ್ಲಿ ಮದ್ರಾಸದ ಮಂತ್ರಿಮಂಡಲ ಸ್ಥಾಪನೆಯ ಬಗ್ಗೆ ವಿಚಾರಮಾಡಲಾಗುವದೆಂದು ಗೊತ್ತಾಗಿದೆ. 70 ಜನ ಸ್ವತಂತ್ರ ಮುಂದಾಳುಗಳಾದ ರಾಜಾ ಸರ್ ಮುತ್ತಯ್ಯ ಚಿಟ್ಟಿಯಾರರು ಕಾಂಗ್ರೆಸ ಮಂತ್ರಿಮಂಡಲ ರಚನೆಯಲ್ಲಿ ಬೆಂಬಲ ಕೊಡುವವಾಗಿ ಹೇಳಿರುವರು. ಮದ್ರಾಸದಲ್ಲಿ ಕಾಂಗ್ರೆಸ್ಸಿಗೆ ಬಹುಮತಕ್ಕೆ ಬೇಕಾಗಿರುವದು ಕೇವಲ 36 ಸ್ಥಾನಗಳು ಮಾತ್ರ. ಈ ಮೊದಲೇ ಅವರ 375ರಲ್ಲಿ 152 ಸ್ಥಾನಗಳನ್ನು ಪಡೆದಿರುವರಷ್ಟೆ. ತಮ್ಮ ವ್ಯಕ್ತಿತ್ವವನ್ನು ಕಾಂಗ್ರೆಸ್ಸಿನಲ್ಲಿ ಲೀನಗೊಳಿಸಲು ಹಲವು ಸ್ವತಂತ್ರರು ಸ್ವೀಕರಿಸುತ್ತಿರುವರಾದರೂ 70ರಲ್ಲಿ 36 ಜನರು ದೊರಕುವದು ಅಸಂಭವೇನಲ್ಲ; ಭಾರತ ದೇಶದ 26 ಪ್ರಾಂತಿಕ ಸರಕಾರಗಳಲ್ಲಿ ಎಲ್ಲ ಕಡೆಯಲ್ಲೂ ಕಾಂಗ್ರೆಸ್ಸೇ ಬರಬೇಕೆಂಬ ಅಪೇಕ್ಷೆ ತನ್ನದಲ್ಲವಾದರೂ—ಸಮ್ಮಿಶ್ರ ಸರಕಾರ ಸ್ವಾಗತಾರ್ಹವಾದರೂ—ಒಂದೇ ಪಕ್ಷದ ಸರಕಾರ ರಚಿಸುವದು ಇಷ್ಟವಾದ ಸಂಗತಿಯೆಂದು ಶ್ರೀ ನೆಹರೂರವರು ಹೇಳಿರುವರು. ಸ್ವತಂತ್ರರ ಮನಸ್ಸು ಹೆಚ್ಚು ಅನುಕೂಲವಾಗಿರುವದರಿಂದ ಸಮ್ಮಿಶ್ರ ಸರಕಾರದ ಆವಶ್ಯಕತೆ ಬರಲಾರದೆಂದು ತೋರುತ್ತದೆ.

ಜನತೆಯ ಇಚ್ಛೆಗೆ ನಾನು ವಿರೋಧಿಯಲ್ಲ

ಆಂಧ್ರಪ್ರಾಂತದ ರಚನೆಯ ಬಗ್ಗೆ ಸ್ವಾಮಿ ಸೀತಾರಾಮರು ಕೈಗೊಂಡಿರುವ ಕಾರ್ಯದ ಬಗ್ಗೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಶ್ರೀ ನೆಹರೂರವರು- 'ಆಂಧ್ರ ಪ್ರಾಂತರಚನೆಗೆ ಶ್ರೀ ಪ್ರಕಾಶಂ ಮತ್ತು ಅವರ ಸಂಗಡಿಗರು ಕಾರಣರಾಗಿರುವರಲ್ಲದೆ ಮದ್ರಾಸ ಹಾಗೂ ರಾಯಲಶೀಮೆಯ ಪ್ರಶ್ನೆ ಬಿಟ್ಟು ಹೊರತು ಆಂಧ್ರ ಪ್ರಾಂತೀಕರಣ ಸಾಧ್ಯವಿಲ್ಲವೆಂದು ಹೇಳಿದರು. ಮದ್ರಾಸ ನಗರದ ಮತ್ತು ರಾಯಲಶೀಮೆಯ ಪ್ರಶ್ನೆಯು ಅತ್ಯಂತ ಗಂಭೀರವಾದದಾಗಿದ್ದು ಈ ಅಡಚಣೆಯು ಸರಕಾರದಿಂದ ಉದ್ಭವವಾಗಿರದೆ ಆಂಧ್ರಾಭಿಮಾನಿಗಳಿಂದುದ್ಭವಿಸಿವೆ. ಸತ್ಯಾಗ್ರಹದ ಬಗ್ಗೆ ಶ್ರೀ ನೆಹರೂರವರು ಮಾತನಾಡುತ್ತಾ ಮೇಲಿನ ಅಡಚಣೆಗಳು ದೂರವಾದ ಕೂಡಲೆ ನಾವು ಮುಂದಡಿಯಿಡಲು ಸಿದ್ಧರಿರುವೆವು. ನಮ್ಮ ಮೇಲೆ ಒತ್ತಾಯತರಲು ಸತ್ಯಾಗ್ರಹವನ್ನು ಹೂಡುವದು ಇಲ್ಲವೆ ಬೇರೆ ಕ್ರಮ ಕೈಕೊಳ್ಳುವದು ತಿಳಿಗೇಡಿತನದ್ದಾಗಿರುವದು. ನಾವು ಅಡ್ಡನಿಂತರೆ ತಾನೆ ಪ್ರತಿಕಾರ ಹೂಡಬೇಕು? ಅಂದ ಮೇಲೆ ನಮ್ಮ ಮೇಲೆ ಒತ್ತಾಯ ತರುವದರ ಉಪಯೋಗವೇನು? ಇದಕ್ಕೆ ತಮಿಳ ಹಾಗೂ ರಾಯಲಶೀಮೆಯ ಜನತೆಯ ಮನಃಪರಿವರ್ತನೆಯೇ ಯೋಗ್ಯವಾದ ಮಾರ್ಗ. ನನ್ನ ಮಟ್ಟಿಗೆ ಹೇಳಬೇಕಾದರೆ ಎಲ್ಲಿಯೇ ಆಗಲಿ ಹೊಸ ಪ್ರಾಂತ ನಿರ್ಮಿಸಲು ನಾನು ಅನುಕೂಲನಾಗಿರುವುದಿಲ್ಲ. ಆದರೆ ಜನತೆ ಆ ರೀತಿ ವರ್ತಿಸಿದರೆ—ಇಲ್ಲವೆ ಇಚ್ಛಿಸಿದರೆ ಮತ್ತು ಅದರಿಂದ ಘರ್ಷಣೆಯುಂಟಾಗದಿದ್ದರೆ ಮಾತ್ರ ನಾನು ಅಡ್ಡಿ ಬರಲಾರೆ." ಎಂದು ಹೇಳಿದರು.

ಸಕ್ಕರೆಯ ಉತ್ಪಾದನೆಯಲ್ಲಿ ಹೆಚ್ಚಳ

ಭಾರತ ಸಕ್ಕರೆ ಗಿರಣಿಗಳಲ್ಲಿ ಸಕ್ಕರೆಯ ಉತ್ಪಾದನೆ ಕಳೆದ ವರ್ಷ ಹೆಚ್ಚಾಗಿದ್ದು ಈ ವರ್ಷ 100ಕ್ಕೆ 10ರಷ್ಟು ಹೆಚ್ಚು ಪ್ರಮಾಣದಲ್ಲಿ ಹಂಚಲಾಗುವದೆಂದು ತಿಳಿಯುತ್ತದೆ. 1950-51ರಲ್ಲಿ 1 ½ ಲಕ್ಷ ಟನ್ನಿನಷ್ಟು ಸಕ್ಕರೆಯು ಹೆಚ್ಚು ಉತ್ಪಾದನೆಯಾಗಿದೆ. ಮತ್ತು 1951-52ರಲ್ಲಿ 12 ಲಕ್ಷ ಟನ್ನಿಗಿಂತಲೂ ಮಿಕ್ಕಿ ಉತ್ಪಾದನೆಯಾಗಬಹುದೆಂದು ಅಂದಾಜು ಮಾಡಲಾಗಿರುವದು. ಗ್ರಾಹಕರಿಗೆ

(೮ನೇ ಪುಟ ನೋಡಿರಿ.)

In the Court of the District Munsiff of Coondapur.

S. C. 708/1951

Between

G Krishna Rao .. Plaintiff

and

Ganapayya Somayaji .. Defendant

To

Ganapayya Somayaji, son of Vasteva Somayaji, Gudmi village, Udipi Taluk.

Sir,

Please take notice that the plaintiff abovenamed had filed the above suit for recovering arrears of rent, and that the same has been posted to 15-3-1952 at 11 A. M. before the above Court. If you fail to appear on that day before the above Court either in person or through a pleader duly instructed, you will be declared exparte and the suit will be decided in your absence.

(Sd.) K. Ramappayya, B.A.B.L.,
Advocate for Plaintiff.
Coondapur, 26-2-'52.



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಬಹುಕಾಲ ಬಾಳುವ ಶಕ್ತಿಯುಳ್ಳದ್ದಾಗಿದೆ

'ಎಸ್ಟ್ರೆಲಾ' ಬ್ಯಾಟರಿಗಳು ನಿಮಗೆ ಬೇಕಾದ ಪ್ರಕಾಶಮಾನವಾದ ಬೆಳಕನ್ನು ಕೊಡುವುದಲ್ಲದೆ ಇವು ತುಕ್ಕು ಹಿಡಿಯದೆ ಹೊಸದಾಗಿಯೇ ಇದ್ದು ಬಹುಕಾಲ ಬಾಳಿಕೆ ಬರುತ್ತವೆ.

ಎಸ್ಟ್ರೆಲಾ ಬ್ಯಾಟರಿಗಳು

ESTRELA REGD TRADE MARK

ಕತ್ತಲೆಯಲ್ಲಿ ನಿಮ್ಮ ಮಾರ್ಗದರ್ಶಿ.

ಎಸ್ಟ್ರೆಲಾ ಬ್ಯಾಟರಿಸ್ ಲಿಮಿಟೆಡ್,
ಬೊಂಬಾಯಿ ೧೯.

ಶಾಖೆಗಳು:
ಕಲ್ಕತ್ತಾ, ಡೆಲ್ಲಿ, ಮದ್ರಾಸು, ಕಾನ್‌ಪುರ್, ನಾಗಪೂರ್.



NAS-613

ಮದ್ರಾಸರಾಜ್ಯಕ್ಕೆ ಶ್ರೀಪ್ರಕಾಶರು ಗವರ್ನರರು

ಭಾರತ ಸರಕಾರದ ನೈಸರ್ಗಿಕ ಸಂಶೋಧನಾ ಖಾತೆಯ ಮಂತ್ರಿ ಶ್ರೀಶ್ರೀ ಪ್ರಕಾಶರನ್ನು ಮದ್ರಾಸು ರಾಜ್ಯದ ಗವರ್ನರರನ್ನಾಗಿ ನೇಮಕ ಮಾಡಿದ್ದು ಅವರು ಇದೇ ತಾ. 12ಕ್ಕೆ ಅಧಿಕಾರ ಸ್ವೀಕಾರ ಮಾಡಲಿರುವರು. ಮದ್ರಾಸಿನ ಈಗಿನ ಗವರ್ನರ್ ಭಾವನಗರದ ಮಹಾರಾಜ ಸರ್ ಕೃಷ್ಣಕುಮಾರ ಸಿಂಹಜಿ ಭಾವಸಿಂಹಜಿ, ಕೆ. ಸಿ. ಎಸ್. ಐ. ಅವರು ವೈಯಕ್ತಿಕ ಕಾರಣಗಳ ಮೇರೆಗೆ ನಿವೃತ್ತಿ ಹೊಂದಲಿದ್ದು 12ನೇ ಬೆಳಗ್ಗೆ ಬೆಂಗಳೂರಿಗೆ ಹೋಗಲಿರುವರು.

'ಮದ್ರಾಸು ರಾಜ್ಯವು ರಾಜಕೀಯ ಮತ್ತು ಆಧ್ಯಾತ್ಮಿಕ ಜೀವನಗಳಲ್ಲಿ ಮಹತ್ವದ ಪಾತ್ರ ವಹಿಸಿದೆ. ರಾಷ್ಟ್ರೀಯ ಜೀವನದಲ್ಲಿ ಮದ್ರಾಸು ಮಹಾ ವ್ಯಕ್ತಿಗಳನ್ನು ನಮಗೆ ಕೊಟ್ಟಿದೆ. ಅಂತಹ ಪ್ರಾಂತದ ಸೇವೆಗೈಯುವುದು ಸಂತೋಷದ ಕಾರ್ಯವಾಗಿದೆ. ಹಾಗೆ ಸೇವೆ ಮಾಡುವರೆ ನಾನು ಸದಾ ಸಿದ್ಧನಿದ್ದೇನೆ. ಪ್ರಾಂತದ ಸಾರ್ವಜನಿಕರ ಸಹಾಯ ಸಹಕಾರಗಳನ್ನೂ ಅಪೇಕ್ಷಿಸುತ್ತೇನೆ' ಎಂದು ಶ್ರೀಶ್ರೀ ಪ್ರಕಾಶರು ಇತ್ತೀಚೆಗಿನ ಪತ್ರಿಕಾ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಶ್ರೀ ಶ್ರೀ ಪ್ರಕಾಶರ ಮಹೋನ್ನತ ಜೀವನ

ಭಾರತದಲ್ಲಿ ಬ್ರಿಟಿಷರು ಸ್ಥಾಪಿಸಿದ ಈಸ್ಟ್ ಇಂಡಿಯಾ ಕಂಪೆನಿ ಸ್ಥಾಪಿತವಾದಂದಿನಿಂದ ಬೇಂಕರೆಂದು ಹೆಸರು ಹೊಂದಿದ ಬನಾರಸಿನ ಜಮೀನ್ದಾರಿ ಕುಟುಂಬವೊಂದರಲ್ಲಿ ಶ್ರೀ ಶ್ರೀ ಪ್ರಕಾಶರು ಜನಿಸಿದರು. ಅವರು ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಪದವೀಧರರಾಗಿ ಭಾರತಕ್ಕೆ ಮರಳಿದವರೇ ಡಾ| ಅನ್ನಿಬೆಸೆಂಟರ ನಾಯಕತ್ವದಲ್ಲಿ ಸ್ವರಾಜ್ಯ ಚಳವಳಿಯಲ್ಲಿ ಭಾಗವಹಿಸಿದರು. 1917ರಿಂದ 1945ರ ತನಕ ಅವರು ಅಖಿಲ ಭಾರತ ಕಾಂಗ್ರೆಸ್ ಕಮಿಟಿ [illegible]ರು. ರಾಷ್ಟ್ರೀಯ ಚಳವಳಿಯಲ್ಲಿ ಅವರು ಐದು ಸಲ ಕಾರಾಗೃಹಕ್ಕೆ ಹೋಗಿದ್ದರು. 1936ರಿಂದ ಮತ್ತು 1945ರಲ್ಲಿ ಕೇಂದ್ರ ಶಾಸನ ಸಭೆಯ ಗಣ್ಯ ಪ್ರತಿನಿಧಿಯಾಗಿದ್ದ ಅವರು 1947ರಲ್ಲಿ ಪಾಕಿಸ್ತಾನದಲ್ಲಿ ಪ್ರಥಮ ಭಾರತೀಯ ಹೈ ಕಮಿಶನರಾದರು. ನಂತರ ಅಸ್ಸಾಮ್ ಗವರ್ನರರಾಗಿದ್ದು 1948ರಲ್ಲಿ ಕೇಂದ್ರದ ಮಂತ್ರಿಮಂಡಲಕ್ಕೆ ಸೇರಿದರು. ಶ್ರೀ ಶ್ರೀ ಪ್ರಕಾಶರಿಗೆ ಇಬ್ಬರು ಪುತ್ರರೂ ಇಬ್ಬರು ಪುತ್ರಿಯರೂ ಇದ್ದಾರೆ. ದೊಡ್ಡ ಮಗನು ಇಂಗ್ಲಾಂಡಿನಲ್ಲಿ ವ್ಯಾಪಾರ ಸಂಸ್ಥೆಯೊಂದರಲ್ಲಿ ತರಬೇತಿಯಲ್ಲಿರುವನು. ಎರಡನೇಯವನು ವೈಮಾನಿಕನಿರುವನು. ಶ್ರೀ ಶ್ರೀ ಪ್ರಕಾಶರ ಧರ್ಮಪತ್ನಿ ಅನುಸೂಯಾ ದೇವಿಯವರು 1926ರಲ್ಲಿ ಮೃತಪಟ್ಟಿರುವರು.

ಶ್ರೀ ಶ್ರೀ ಪ್ರ[illegible] ಕುದುರೆ ಸವಾರಿಯಲ್ಲಿ ಬಹಳ ಆಸಕ್ತಿಯುಳ್ಳವರು. ಪ್ರತಿ ದಿವಸ ಮುಂಜಾನೆ ರಾಷ್ಟ್ರಪತಿಯವರು ರಾಷ್ಟ್ರಪತಿ ಭವನದ ಲಾಯದಿಂದ ಒಂದು ಕುದುರೆಯನ್ನು ಅವರಿಗೆ ಸವಾರಿ ಮಾಡಲು ಕಳುಹಿಸುತ್ತಿರುವರು.

ದನಗಳ ಅಭಿವೃದ್ಧಿಯ ಮಹತ್ವ

ಹೊಸದಿಲ್ಲಿಯಲ್ಲಿ ಇತ್ತೀಚೆಗೆ ಜರಗಿದ ಅಖಿಲ ಭಾರತ ದನಗಳ ಪ್ರದರ್ಶನದ ಬಹುಮಾನ ವಿತರಣೆ ಕಾಲದಲ್ಲಿ ಭಾರತದ ಒಕ್ಕಲತನ ಮಂತ್ರಿ ಶ್ರೀ ಕೆ. ಎಮ್. ಮುನ್ಶಿಯವರು ಮಾತನಾಡುತ್ತ, ಭಾರತ ದೇಶದಲ್ಲಿ ದನಗಳ ಅಭಿವೃದ್ಧಿ ಬಗ್ಗೆ ಜನತೆಯು ಹೆಚ್ಚಿನ ನಿಗಾ ಕೊಡಬೇಕಾದ ಅವಶ್ಯಕತೆಯನ್ನೆತ್ತಿ ತೋರಿಸಿದರು. ದನಗಳ ತಳಿ ಸುಧಾರಣೆ ಕೆಲಸ ಕೈಕೊಂಡವರು ದೇಶಕ್ಕೆ ಮಹತ್ವದ ಸೇವೆ ಸಲ್ಲಿಸುತ್ತಿರುವರು. ದನಗಳ ಅಭಿವೃದ್ಧಿಗೆ ಕೈಕೊಳ್ಳುವ ಪದ್ಧತಿಗಳನ್ನು ಸುಧಾರಿಸುವುದಕ್ಕಾಗಿ ಹಿಂದೂಸ್ಥಾನ ಸರಕಾರವು ಒಂದು ಸಂಸ್ಥೆಯನ್ನು ಸ್ಥಾಪಿಸುವುದರಲ್ಲಿ ಬೇಗನೇ ಯಶಸ್ವಿಯಾಗುವುದೆಂದೂ ನಿರೀಕ್ಷಿಸಿದರು. ದನಗಳ ಅಭಿವೃದ್ಧಿಗಾಗಿ ಹಿಂದುಗಳು ಪ್ರಾಚೀನ ಕಾಲದಿಂದಲೂ ಆಚರಿಸುತ್ತ ಬಂದಿರುವ ಎರಡು ಸಂಪ್ರದಾಯಗಳನ್ನು, ದೇವರ ಹೆಸರಲ್ಲಿ ಗೂಳಿ ಬಿಡುವುದು ಮತ್ತು ಗೋದಾನ ಪದ್ಧತಿ ಆಚರಣೆ ಇವನ್ನು ಪುನಹ ಪ್ರಾರಂಭಿಸಬೇಕಾಗಿದೆ ಎಂದರು- ದೇಶದಲ್ಲಿ ವಿದ್ಯಾವಂತ ಮಹಿಳೆಯರು ಕ್ಲಬ್, ಸತ್ಕಾರ ಕೂಟಗಳಿಗೆ ಹೋಗುವುದಕ್ಕಿಂತ ತಂತಮ್ಮ ಮನೆಯಲ್ಲಿಯೇ ಒಂದೊಂದು ದನವನ್ನು ಸಾಕಿ, ಸಲಹುವ ಕಾರ್ಯದಲ್ಲಿ ಪ್ರವರ್ತರಾಗಬೇಕೆಂದೂ ಅಪೇಕ್ಷಿಸಿದರು.

ಲೋಕ ಸುಂದರಿಯ ಅನ್ವೇಷಣೆ

1953ರಲ್ಲಿ 'ಲೋಕ ಸುಂದರಿ'ಯೊಬ್ಬಳ ಆರಿಸುವಿಕೆಯು ಅಮೇರಿಕದ ಕೆಲಿಫೋರ್ನಿಯಾದಲ್ಲಿ ಜರಗಲಿದೆ. ಈ ಸ್ಪರ್ಧೆಯಲ್ಲಿ ಜಗತ್ತಿನ ಸರ್ವ ರಾಷ್ಟ್ರಗಳ ಸುಂದರಿಯರೆಲ್ಲರೂ ಭಾಗವಹಿಸುವರು. ಲೋಕ ಸುಂದರಿಯ ಸ್ಪರ್ಧೆಗಾಗಿ ಅಮೇರಿಕಕ್ಕೆ ಕಳುಹಿಸುವ ಮೊದಲು ಆಯಾಯ ರಾಷ್ಟ್ರಗಳು ತಂತಮ್ಮ ರಾಷ್ಟ್ರದ ಸುಂದರಿಯನ್ನು ಆರಿಸಿ ಕಳುಹಿಸುವುದು. ಭಾರತದಲ್ಲಿ ಈ ಸ್ಪರ್ಧೆಯು ಯುನಿವರ್ಸಲ್ ಇಂಟರ್‌ನ್ಯಾಶನಲ್ ಮತ್ತು ಭಾರತದ ಅಫ್ಘಾನ್ ಸ್ನೊ ಸಂಸ್ಥೆಯ ಪಟೆನ್‌ವಾಲರಿಂದ ನಡೆಯುವುದು. ಲೇಡಿ ಧನವಂತಿ ರಾಮರಾಯರೂ (ಸರ್. ಬೆನಗಲ್ ರಾಮರಾಯರ ಪತ್ನಿ) ಈ ಸ್ಪರ್ಧಾ ಕಮಿಟಿಯ ಧುರೀಣರು. ಸ್ಪರ್ಧೆಯಲ್ಲಿ ಭಾಗವಹಿಸುವ ಹುಡುಗಿಯರು ಸತ್ಕುಲ ಜಾತೆಯರೂ ಸುಶಿಕ್ಷಿತೆಯರೂ ಲಾವಣ್ಯವತಿಯರೂ ಅಲ್ಲದೆ ಕಳಂಕವಿಲ್ಲದವರೂ ಆಗಿರಬೇಕು. ಪ್ರಾಯದಲ್ಲಿ 18ರಿಂದ 28ರೊಳಗಿನವರಾಗಿರಬೇಕು. ಡಿಲ್ಲಿ, ಬೊಂಬಾಯಿ, ಕಲಕತ್ತೆ, ಲಕ್ನೊ, ಬೆಂಗಳೂರು ಮತ್ತು ಮದ್ರಾಸಿನಲ್ಲಿ ಪ್ರಾದೇಶಿಕ ಸ್ಪರ್ಧೆ ನಡೆದು ಪ್ರತಿ ಕಡೆಗಳಲ್ಲಿಯೂ ಒಬ್ಬೊಬ್ಬರು ಸುಂದರಿಯರನ್ನು ಆರಿಸಿಕೊಂಡು ಅನಂತರ ಇವರೊಳಗೆ ಭಾರತದ ಅತ್ಯಂತ ಸುಂದರಿಯನ್ನು (ಮಿಸ್ ಇಂಡಿಯಾ) ಆರಿಸಿಕೊಂಡು ಅಮೇರಿಕಕ್ಕೆ ಕಳುಹಿಸಲಾಗುವುದು. ಹಾಗೆ ಹೋಗುವವಳು ಜತೆಯಲ್ಲಿ ಓರ್ವ ಸಖಿಯನ್ನು ಕರೆದುಕೊಳ್ಳಬಹುದು. ಪಾನ್ ಅಮೇರಿಕನ್ ಸಂಸ್ಥೆಯವರು ತಮ್ಮ ಖರ್ಚಿನಿಂದ ಇವರನ್ನು ಅಮೇರಿಕಕ್ಕೆ ಮುಟ್ಟಿಸುವರು. ಹಿಂತಿರುಗಿ ಬರುವ ಖರ್ಚನ್ನು ಪಟೆನ್‌ವಾಲರು ವಹಿಸುವರು. ಜಾಗತಿಕ ಸ್ಪರ್ಧೆಯು 1952ನೆ ಜೂನ್ 22ರಲ್ಲಿ ನಡೆಯುವುದು. "ಲೋಕಸುಂದರಿ" ಎಂದು ಆರಿಸಲ್ಪಡುವವಳಿಗೆ ಐದು ಸಾವಿರ ಡಾಲರಿನ ಹಾಗೂ ಅನಂತರದ ನಾಲ್ವರು ಸುಂದರಿಯರಿಗೆ ಸಾವಿರ ಡಾಲರಿನ ನೌಕರಿಯನ್ನು ಕೊಡಲಾಗುವುದು.

ವಿವರ ಮತ್ತು, ಕರಾರು ಪತ್ರಕ್ಕೆ ಈ. ಎಸ್. ಪಾಟನವಾಲಾ, 62, ಕ್ಯಾನಾಟ್ ರೋಡು, ಬೈಕುಲ, ಬೊಂಬಾಯಿ ಇವರಿಗೆ ಬರೆಯಬಹುದು.

1980ರಲ್ಲಿ ಇನ್ನೊಂದು ಸೂರ್ಯಗ್ರಹಣ

ಭಾರತ ದೇಶದಲ್ಲಿ ಕಳೆದ. ತಾ. 25ರಲ್ಲಿ ಸಂಭವಿಸಿದ ಸೂರ್ಯಗ್ರಹಣವು ಅಂಶತಃ ತೋರಿದರೂ ಮಧ್ಯ ಆಫ್ರಿಕಾ, ಇರಾಕ, ಅರಬಸ್ತಾನ ಮೊದಲಾದ ಭಾಗಗಳಲ್ಲಿ ಮೂರು ನಿಮಿಷಗಳ ವರೆಗೆ ಖಗ್ರಾಸ ಗ್ರಹಣವಾಗಿತ್ತು. ಭಾರತದಲ್ಲಿ ತೋರುವ ಇನ್ನೂ ಮುಂದಿನ ಸೂರ್ಯ ಗ್ರಹಣವು 1980ನೆ ಇಸವಿ ಫೆಬ್ರುವರಿ ತಾ. 16ಕ್ಕೆ ಸಂಭವಿಸುವುದು. ತನ್ಮಧ್ಯೆ 1970ರಲ್ಲಿ ಮತ್ತೊಂದು ಸೂರ್ಯಗ್ರಹಣವು ಜಗತ್ತಿನಲ್ಲಿ ಸಂಭವಿಸಲಿದ್ದರೂ ಅದು ಪಶ್ಚಿಮ ಗೋಲಾರ್ಧದಲ್ಲಿ ಅಂದರೆ ಅಮೇರಿಕಾ ಮೆಕ್ಸಿಕೊ ಮೊದಲಾದ ಭಾಗಗಳಲ್ಲಿ ಕಾಣುವುದು.

ಆರನೆ ಅಂತಸ್ತಿನಿಂದ ಬಿದ್ದರೂ ಗಾಯವಾಗಲಿಲ್ಲ

ನ್ಯೂಯಾರ್ಕದ ಮೂರು ವರುಷದ ಬಾಲಿಕೆಯೊಬ್ಬಳು ಆರನೆ ಅಂತಸ್ತಿನ ಕಿಟಕಿಯಿಂದ ಬಿದ್ದು ಟೆಲಿವಿಜನ್ ಏರಿಯಲ್ ಸಹಾಯ ದೊರೆತುದರಿಂದ ಕೆಳಗೆ ಹೋಗುತ್ತಿರುವಾಗ ಈ ಅಪಘಾತ ತಡೆಯಲ್ಪಟ್ಟು ಏರಿಯಲ್ ತುಂಡಾದ್ದರಿಂದ ಹುಲ್ಲಿನ ಮೇಲೆ ಬಿದ್ದಳು. ಅವಳಿಗೆ ಯಾವುದೇ ಗಾಯಗಳಾಗಲಿಲ್ಲ.

ಮದ್ರಾಸಿಗೆ 7 ಲಕ್ಷ ಟನ್ ಆಹಾರಧಾನ್ಯ

ಕೇಂದ್ರ ಸರಕಾರದಿಂದ ದೊರೆಯಬಹುದಾಗಿ ತಿಳಿಯುತ್ತದೆ. ಶ್ರೀ ಮುನಶಿಯವರು ಇಲ್ಲಿಗೆ ಬಂದ ನಂತರ ಅಕ್ಕಿಯ ಸೀದಾ ಪ್ರಮಾಣದ ಹೆಚ್ಚಳದ ಸಾಧ್ಯಾಸಾಧ್ಯತೆ ಪ್ರಕಟವಾಗಲಿರುವುದು.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಹೆಡ್ ಆಫೀಸು] ಇವರ ಸಲಹೆ ಕೇಳಿರಿ [ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4¼ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ವಿವಿಧ ಪಾತ್ರೆಗಳು

ನಾನಾ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು, ಮೊದಲಾದುವುಗಳ ವಿವಿಧ ಪಾತ್ರೆಗಳೂ ನಾವು ಹೇಳಿದ ದರಕ್ಕೆ ಅಗ್ಗದಲ್ಲಿ ಚಿಲ್ಲರೆಯಾಗಿಯೂ ದೊರೆಯುತ್ತವೆ.

**ಕಲ್ಯಾಂಜೆ ನಾರಾಯಣಾಚಾರ್ಯ,
ರಥಬೀದಿ, ಉಡುಪಿ**

ಚಿತ್ತೂರಿನಲ್ಲಿ ನಮ್ಮ ಹೊಸ ಶಾಖೆ

ಇದೇ ಬರುವ ಮಾರ್ಚ ೨೦ರಂದು ಗುರುವಾರ ನಮ್ಮ ಬ್ಯಾಂಕಿನ ಹೊಸತೊಂದು ಶಾಖೆ ಚಿತ್ತೂರಿನಲ್ಲಿ ತೆರೆಯಲ್ಪಡಲಿದೆಯೆಂದು ತಿಳಿಸಲು ನಾವು ಸಂತೋಷಪಡುತ್ತೇವೆ.

ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್, ಲಿಮಿಟೆಡ್

ಪ್ರಧಾನ ಕಾರ್ಯಾಲಯ, ಉಡುಪಿ, (ದ. ಕ)

THE CANARA BANKING CORPORATION LIMITED.

ನವಯುಗ

ಚಂದಾ ವಿವರ

ವರ್ಷಕ್ಕೆ ರೂ. 5—12—0

6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೬-೩-'೫೨

ಆಶಾದಾಯಕ ಮುಂಗಡ ಪತ್ರ

ಭಾರತ ಸರಕಾರದ ಅರ್ಥಿಕ ಮಂತ್ರಿ ಶ್ರೀ ಚಿಂತಾಮಣಿ ದೇಶಮುಖರು 1952-53ನೇ ವರ್ಷದ ಮುಂಗಡ ಪತ್ರವನ್ನು ಮಂಡಿಸಿದ್ದು ಈ ಮುಂಗಡ ಪತ್ರವು ಭಾರತದ ನಾನಾ ಬಗೆಯ ಔದ್ಯೋಗಿಕ-ಉದ್ಯಮಗಳ ಅಭಿವೃದ್ಧಿಗೆ ತುಂಬ ಸಹಕಾರಿಯಾಗಿದೆಯೆಂದು ಹೇಳುವದಕ್ಕೆ ಅತ್ಯಾನಂದವೆನಿಸುತ್ತದೆ. ದೇಶವು ಅನೇಕ ಕಷ್ಟಪರಂಪರೆಗಳನ್ನು ಎದುರಿಸಬೇಕಾದ ಪ್ರಸಂಗ ಬಂದರೂ ಅರ್ಥಿಕನೀತಿಯಲ್ಲಿ ದಕ್ಷತೆ-ದೂರದರ್ಶಿತ್ವವಿದ್ದುದರಿಂದ ಕಳೆದ ವರ್ಷದ ಬಜೆಟ್ಟಿನಲ್ಲಿ ಒಟ್ಟು 92·61 ಕೋಟಿ ರೂ. ಉಳಿತಾಯವಾಗಿದೆ. ಅತಿ ಪ್ರಸರಣ ಮತ್ತು ಬೆಲೆಗಳಲ್ಲಿಯ ಏರಿಕೆಯನ್ನು ತಡೆ ಹಿಡಿಯುವದಕ್ಕಾಗಿ ವ್ಯಾಪಾರಿಗಳಿಗೆ ಸುಲಭವಾಗಿ ಸಾಲಸಿಗದಂತೆ ಮಾಡಿದ್ದರಿಂದ ಸದ್ಯ ಮಾಲಿನ ಕ್ರಯಗಳು ತಗ್ಗುತ್ತ ಬರಲು ಕಾರಣವಾಗಿವೆ. ಕಳೆದ ವರ್ಷದ 93ಕೋಟಿ ರೂ. ಉಳಿತಾಯದ ಸಂತಸದ ಸುದ್ದಿಯಲ್ಲಿ ಸಣ್ಣಪುಟ್ಟ ಉದ್ಯಮ ಕೈಗಾರಿಕೆಗಳ ಮೇಲೆ ಕರಭಾರ ಹೊರಿಸಿದ್ದು ಅತಿಯಾಗಿದೆಂದು ಹೇಳಲೇಬೇಕಾಗಿದೆ. ಕಳೆದಸಲ ಮುಂದಿನ ವರ್ಷ ಸುಧಾರಣೆಯಾಗಬಹುದೆಂದು ನಿರೀಕ್ಷಿಸಿದ್ದರೂ-ಈ ವರ್ಷದ ಮುಂಗಡ ಪತ್ರದಲ್ಲಿ ಆ ಕರಭಾರದ ಪರಿಶೀಲನೆಯನ್ನು ಆರ್ಥಿಕ ಮಂತ್ರಿಗಳು ಮಾಡದೆ ಹೊಸತಾಗಿ ಯಾವ ಕರಭಾರವನ್ನೂ ಹೇರುವದಿಲ್ಲವೆಂದೂ-ಹಳೆಯದನ್ನು ಸಡಲಿಸುವದಿಲ್ಲವೆಂದೂ ಹೇಳಿರುವರು. ಈಗಿದ್ದ ಕರಭಾರದಂತೆ ಮುಂದಿನ ವರ್ಷದ ಒಟ್ಟು ಉತ್ಪನ್ನವು ರೂ. 424.98 ಕೋಟಿಯಾಗುವದೆಂದೂ ವೆಚ್ಚವು ರೂ. 406.25 ಕೋಟಿಯಾಗಿ ಮುಂದಿನ ವರ್ಷ 18·73 ಕೋಟಿ ಉಳಿಯುವದೆಂದೂ ಹೇಳಲಾಗಿದೆ ಪ್ರಾಂತಗಳಿಗೆ ಸಾಲರೂಪದಲ್ಲಿ ಕೊಡುವ ಮೊತ್ತವೂ-ಸಂರಕ್ಷಣಾ ಖಾತೆಯ ವೆಚ್ಚದ ಮೊತ್ತವೂ ಕಳೆದ ವರ್ಷಕ್ಕಿಂತ ಹೆಚ್ಚಾಗಿದೆ. ಕಳೆದ ವರ್ಷ ಸಂರಕ್ಷಣಾ ಖಾತೆಗೆ 181.21 ಕೋಟಿ ರೂಗಳನ್ನು ವಿನಿಯೋಗಿಸಿದ್ದು ಮುಂದಿನ ಮುಂಗಡ ಪತ್ರದಲ್ಲಿ 197.95 ಕೋಟಿ ರೂ. ಆಗಿರುತ್ತವೆ. ಪಾಕಿಸ್ತಾನದ ಸಂಬಂಧ ಇನ್ನೊಂದು ಆಶಾದಾಯಕವಾಗಿರದೆ ಇರುವದರಿಂದ ಇದರಲ್ಲಿ ವೆಚ್ಚ ಹೆಚ್ಚುವದು ಅನಿವಾರ್ಯವೆಂದು ಶ್ರೀದೇಶಮುಖರು ಹೇಳಿರುವರು. ನಿರ್ಯಾತ ವಸ್ತುಗಳ ಮೇಲೂ-ವನಸ್ಪತಿ ತುಪ್ಪದ ಮೇಲೆ ವಿಶೇಷ ಕರಹೆಚ್ಚಿಸಿದ್ದರಿಂದಲೂ-ಅಮೆರಿಕೆಯ ಗೋದಿಯ ಮಾರಾಟದಿಂದಲೂ ಹೆಚ್ಚಿನ ಲಾಭ ದೊರಕಿದೆಂದು ಹೇಳುವ ಮಾತಿನಲ್ಲಿ ಸತ್ಯಾಂಶವಿದೆಯಾದರೂ ಆಹಾರ ನೀತಿಯಲ್ಲಿ ಬಡಜನತೆಯ ಮೇಲೆ ವಿಶೇಷ ಪರಿಣಾಮವಾಗಿರುವದನ್ನು ನಾವಿಲ್ಲಿ ಮರೆಯಲಾರೆವು. ಬ್ಯಾಂಕಿನ ಬಡ್ಡಿಯಾಸ್ತಿ ವರ್ತಕರಿಗೆ ಸುಲಭವಾಗಿ ಸಾಲದೊರಕದಂತೆ ಮಾಡಿದುದರಿಂದ ಅತಿಪ್ರಸರಣವೂ ನಿಂತಿತು.

ಅಧಿಕ ಉತ್ಪಾದನೆಯಲ್ಲಿ ಒಳ್ಳೆಯ ಪ್ರಗತಿ ಸಾಗಿಸಿದ್ದು ಕಳೆದ ವರ್ಷದ ಅಂಕೆ ಸಂಖ್ಯೆಯಿಂದ ತಿಳಿದುಬರುತ್ತದೆ. ಸಣಬು, ಸಕ್ಕರೆ, ಬಟ್ಟೆ, ಕಬ್ಬಿಣ, ಸಿಮೆಂಟು, ಕಲ್ಲಿದ್ದಲು, ಮುಂತಾದ ವಸ್ತುಗಳ ಉತ್ಪಾದನೆಯು ಹಿಂದಿನ ವರ್ಷದಿಂದ ಅಧಿಕವಾಗಿರುತ್ತದೆ. ಈ ಬಗೆಯ ಹಳೆಯ ಉದ್ಯಮಗಳಲ್ಲಿ ಪ್ರಗತಿಮಾತ್ರವಲ್ಲದೆ ನೂತನ ಉದ್ಯೋಗಗಳನ್ನು ಸ್ಥಾಪಿಸಲಾಗಿದೆ.

ಮುಂದಿನ ಮುಂಗಡ ಪತ್ರದಲ್ಲಿ ಕಂಡು ಬರುವ ಮುಖ್ಯಾಂಶಗಳೆಂದರೆ ಬೇಸಾಯೋತ್ಪಾದನೆಯಲ್ಲಿ ವೆಚ್ಚಳ - ಆಹಾರ ಬಿಕ್ಕಟ್ಟನ್ನು ಶೀಘ್ರದಲ್ಲಿ ಬಗೆಹರಿಸುವದು -ವಿಶೇಷ ಉತ್ಪಾದಕ ನಿಧಿಯ ಏರ್ಪಾಡು ಇವೇ ಮೊದಲಾದವುಗಳು. ಸಾಗಣಿಕೆಯ ಸುಧಾರಣೆಯ ಬಗ್ಗೆ ಹೆಚ್ಚಿನ ನಿಗಾ ತೆಗೆದುಕೊಳ್ಳುವದನ್ನು ಅರ್ಥ ಮಂತ್ರಿಗಳು ಲಕ್ಷ್ಯಪೂರ್ವಕವಾಗಿ ನೋಡಿದ್ದಾರೆ. ಶ್ರೀ ದೇಶಮುಖರ ಈ ಮುಂಗಡ ಪತ್ರವು ಪರಿಪೂರ್ಣವೆಂತ ನಾವು ಹೇಳುವುದಿಲ್ಲ ಆದರೂ ಈ ಕಷ್ಟ ಪರಂಪರೆಗಳ ಮುಂದೆ ನಮ್ಮ ದೇಶದ ಆರ್ಥಿಕ ಸ್ಥಿತಿಯಲ್ಲಿ ಒಂದು ಬಗೆಯ ಸಂಯಮ--ವೆಚ್ಚದಲ್ಲಿ ಸರಿಯಾದ ವ್ಯವಸ್ಥೆ ಕಂಡು ಬರುತ್ತಿರುವದಕ್ಕೆ ಅಭಿಮಾನಪಡಬೇಕು. ಶ್ರೀ ದೇಶಮುಖರು ಉಜ್ವಲ ಭವಿಷ್ಯ ಉಳ್ಳ ಮಂತ್ರಿ ಇದ್ದು ಅವರ ಮುತ್ಸದ್ದಿತನದಿಂದ ದೇಶಕ್ಕೆ ತುಂಬ ಲಾಭವಾಗಬಹುದೆಂದು ನಿರೀಕ್ಷಿಸುತ್ತಿದ್ದುದು ಈಗ ಅಕ್ಷರಶಃ ನಿಜವೆಂದು ಮನವರಿಕೆಯಾಗುತ್ತಲಿದೆ. ಆಶಾದಾಯಕವಾದ ಮುಂಗಡಪತ್ರವನ್ನು ಸಾಗಿಸುವದರ ಜೊತೆಗೆ ಶ್ರೀ ದೇಶಮುಖರ ಕರ್ತವ್ಯನಿಷ್ಠೆ ಮುನ್ನೋಟ ಮತ್ತು ಜಾಣ್ಮೆಗಾಗಿ ಅವರನ್ನು ಅಭಿನಂದಿಸುತ್ತೇವೆ. ಉಳಿದೆಲ್ಲ ಇಲಾಖೆಗಳಲ್ಲೂ ಇಂತಹದೇ ಜಾಣ್ಮೆಯು ತೋರಬರಲೆಂದೂ ಹಾರೈಸುತ್ತೇವೆ.

ನೆಹರೂರವರಿಂದ ಸಿಂಧ್ರಿ ಕಾರ್ಖಾನೆಯ ಉದ್ಘಾಟನೆ

ಪಂಡಿತ ನೆಹರೂರವರು ಸಿಂಧ್ರಿಯಲ್ಲಿ ಸಿಂಧ್ರಿ ಗೊಬ್ಬರ ಕಾರ್ಖಾನೆಯ ಔಪಚಾರಿಕ ಉದ್ಘಾಟನೆ ಮಾಡುತ್ತ, ಇಂತಹ ಕಾರ್ಖಾನೆಯ ಸ್ಥಾಪನಾ ಕಾರ್ಯದಲ್ಲಿ ಅಮೇರಿಕಾ ಹಾಗೂ ಬ್ರಿಟನದ ತಜ್ಞರು ಕೊಟ್ಟ ಸಹಾಯವನ್ನು ಪ್ರಶಂಸಿಸಿ ಇಂತಹ ಸ್ನೇಹಬಾಂಧವ್ಯವು ಬೆಳೆದುಬಂದು ಘರ್ಷಣೆ ಮೊದಲಾದುವು ತೊಲಗುವಂತಾಗಲೆಂದು ಆಶಿಸಿದರು. ಆರಂಭದಲ್ಲಿ ನೆಹರೂರವರು ವಿದ್ಯುಚ್ಛಕ್ತಿಯ ಸೂಚಕವನ್ನು ಒತ್ತಿದೊಡನೆ 18 ವ್ಯಾಗಿನುಗಳಿಂದ ಕೂಡಿದ ಸಾಲಂಕೃತ ಗೂಡ್ಸಗಾಡಿಯು ಅಮೋನಿಯಂ ಸಲ್ಫೇಟನ್ನು ಹೇರಿಕೊಂಡು ಕಾರಖಾನೆಯಿಂದ ಹೊರ ಹೋಯಿತು. ಇದು ದಿನಂಪ್ರತಿ ಟನ್‌ಗಟ್ಲೆ ಗೊಬ್ಬರ ತಯಾರಿಸುವ ಅತಿ ದೊಡ್ಡ ಕಾರ್ಖಾನೆ.

ಟಿ. ಎಸ್. ಕೌಜಲಗಿಯವರ ನಿಧನ

ಕರ್ನಾಟಕದ ಪ್ರಮುಖ ಕಾರ್ಯಕರ್ತರಾಗಿದ್ದ ಶ್ರೀ ಟಿ ಎಸ್. ಕೌಜಲಗಿಯವರು ಕಳೆದ ತಾ. 29ರಂದು ಮುಂಜಾನೆ ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಕಾರ್ಯಾಲಯದ ಅತಿಥಿ ಗೃಹದಲ್ಲಿ ಹೃದಯ ವಿಕಾರದಿಂದ ಒಮ್ಮೆಲೆ ಸ್ವರ್ಗಸ್ಥರಾದರು. ಕರ್ನಾಟಕದ ಎಲ್ಲೆಡೆಗಳಲ್ಲೂ ಅವರ ಬಗ್ಗೆ ಶ್ರದ್ಧಾಂಜಲಿಗಳು ಅರ್ಪಿಸಲಾಗುತ್ತಿವೆ.

ಬೊಂಬಾಯಿ ಹೊಸ ಮಂತ್ರಿ ಮಂಡಲ

ಬೊಂಬಾಯಿ ನಿಯೋಜಿತ ಮುಖ್ಯಮಂತ್ರಿಗಳಾದ ಶ್ರೀ ಮೊರಾರಜಿ ದೇಸಾಯಿಯವರು ಅಹಮ್ಮದಾಬಾದ ನಗರ ಸಭೆಯಿಂದ ವಿಧಾನ ಪರಿಷತ್ತಿಗೆ ಅವಿರೋಧವಾಗಿ ಆರಿಸಿಬಂದಿರುವರು. ಬೊಂಬಾಯಿಯ ಹೊಸ ಮಂತ್ರಿಮಂಡಲವು ಈ ತಿಂಗಳಾಂತ್ಯದಲ್ಲಿ ಇಲ್ಲವೆ ಎಪ್ರಿಲ್ ತಿಂಗಳ ಮಧ್ಯದಲ್ಲಿ ರಚಿತವಾಗಬಹುದೆಂದು ಹೇಳಲಾಗಿದೆ.

ಕೇಂದ್ರ ಸರಕಾರದ ಮುಂಗಡಪತ್ರ

ಕೇಂದ್ರ ಸರಕಾರದ ಹಣಕಾಸಿನ ಮಂತ್ರಿಗಳಾದ ಶ್ರೀ ಚಿಂತಾಮಣಿ ದೇಶಮುಖರು ತಾ. 29ರಂದು 1952-53ನೆ ವರ್ಷದ ಅಂದಾಜುಪತ್ರಿಕೆಯನ್ನು ಮಂಡಿಸುತ್ತ ಸದ್ಯದ ತೆರಿಗೆ ಪಟ್ಟಿಯಲ್ಲಿ ಯಾವ ಬದಲಾವಣೆಯಿಲ್ಲವೆಂದು ಹೇಳಿದರು. ಬಜೆಟಿನ ಮುಖ್ಯಾಂಶಗಳು:- ಸರಕುಗಳ ಬೆಲೆಯ ಹೆಚ್ಚಳವನ್ನು ತಡೆಹಿಡಿದದ್ದು. ಸರಕುಗಳ ಬೆಲೆಯಲ್ಲಿಯ ಇತ್ತೀಚಿನ ಸಂಕೋಚದ ಇಳಿತ, ಉದ್ಯಮೋತ್ಪನ್ನ ಪ್ರಮಾಣದಲ್ಲಿ ಪ್ರಗತಿ, ಬೇಸಾಯೋತ್ಪಾದನೆಯಲ್ಲಿ ಬೆಳವಣಿಗೆ. ಆಹಾರದ ಬಿಕ್ಕಟ್ಟು. ಈ ವರ್ಷದ ಲೆಖ್ಖದಲ್ಲಿ 92·61 ಕೋಟಿ ರೂಪಾಯಿ ಉಳಿತಾಯ. ಮೂಲ ವೆಚ್ಚಕ್ಕಾಗಿ ಸಾರ್ವಜನಿಕ ಋಣದ ಪೂರೈಕೆ. ಆಹಾರ ಮತ್ತು ಉತ್ಪಾದನಾ ಕ್ಷೇತ್ರದಲ್ಲಿ ಪರದೇಶದವರ ಉದಾರ ಸಹಾಯ. ವಿಶೇಷ ಉತ್ಪಾದಕ ನಿಧಿಯ ಏರ್ಪಾಟು. ತೆರಿಗೆಯಲ್ಲಿ ಯಾವ ಬದಲಾವಣೆಯೂ ಇಲ್ಲ. ಮುಂದಿನ ವರ್ಷದ ಉತ್ಪನ್ನ 424·9 ಕೋಟಿ ರೂಪಾಯಿ, ವೆಚ್ಚ 406·25 ಕೋಟಿ, ಉಳಿತಾಯ 18·73 ಕೋಟಿ.

ಇಂಗ್ಲೀಷು ಅಂತರ್‍ರಾಷ್ಟ್ರೀಯಭಾಷೆ

ಬೊಂಬಾಯಿಯ "ಭೂಷಣ ಗ್ರಂಥ" ಮಂದಿರದ ಉದ್ಘಾಟನ ಮಾಡುತ್ತ, ಭಾರತ ಸರಕಾರದ ಆಹಾರ ಮಂತ್ರಿಗಳಾದ ಶ್ರೀ ಕೆ. ಎಮ್. ಮುನ್ಶಿಯವರು "ನಾವು ರಾಷ್ಟ್ರೀಯ ಭಾಷೆಯನ್ನು ಸದಾ ಪ್ರೋತ್ಸಾಹಿಸಿ ಅದನ್ನು ಪ್ರಸಾರಗೊಳಿಸಬೇಕು. ಅದರೊಂದಿಗೆ ಇಂಗ್ಲಿಷಿಗೂ ಮಹತ್ವಕೊಟ್ಟು ಅದನ್ನೂ ಅಭ್ಯಾಸಮಾಡಬೇಕು. ಇಂಗ್ಲೀಷು ಅಂತರ್‍ರಾಷ್ಟ್ರೀಯ ಭಾಷೆಯಾಗಿದೆ" ಎಂದರು.

ಲೋಕಸಭೆಯಲ್ಲಿ ಕಾಂಗ್ರೆಸಿನ ಪ್ರಬಲತೆ

ಹೊಸದಿಲ್ಲಿಯ ಲೋಕ ಸಭೆಯ 489 ಚುನಾಯಿತ ಸ್ಥಳಗಳಲ್ಲಿ ಕಾಂಗ್ರೆಸಿಗೆ 363 ಸ್ಥಳಗಳು ದೊರೆತಿವೆ. ಕಾಂಗ್ರೆಸ್ಸೇತರ ಮತ್ತು ಸ್ವತಂತ್ರ ಸಂಯುಕ್ತ ಬಲಕ್ಕಿಂತ ಕಾಂಗ್ರೆಸ್ಸು 247 ಸ್ಥಳಗಳನ್ನು ಹೆಚ್ಚಿಗೆ ಪಡೆದಂತಾಯಿತು.

ಆಂಧ್ರ ಪ್ರಾಂತ್ಯಕ್ಕಾಗಿ ಸತ್ಯಾಗ್ರಹ ಪ್ರಾರಂಭ

ಆಂಧ್ರ ಪ್ರಾಂತ್ಯ ನಿರ್ಮಾಣಕ್ಕಾಗಿ ಸ್ವಾಮಿ ಸೀತಾರಾಮರು ಕಳೆದ ತಾ. 27ರಲ್ಲಿ ವಿಲೂರಿನಿಂದ ಸತ್ಯಾಗ್ರಹ ಯಾತ್ರೆಯನ್ನು ಪ್ರಾರಂಭಿಸುತ್ತಾರೆ. ವಾದ್ಯ ವೈಭವದೊಂದಿಗೆ ಸತ್ಯಾಗ್ರಹಿಗಳ ಮೆರವಣಿಗೆ ಮಾಡಿ ಸರಕಾರಿ ಆಫೀಸುಗಳಿಗೆ ಹೋಗಿ ಸರಕಾರಿ ವ್ಯವಹಾರವನ್ನು ತೆಲುಗಿನಲ್ಲಿ ಮಾಡುವಂತೆ ನೌಕರರೊಡನೆ ವಿನಂತಿಸಿಕೊಂಡಿರುವರು. 10,000 ಸತ್ಯಾಗ್ರಹಿಗಳನ್ನೂ 1 ಲಕ್ಷ ರೂಪಾಯಿ ನಿಧಿಯನ್ನೂ ಸಂಗ್ರಹಿಸುವುದಾಗಿಯೂ ಸೀತಾರಾಮರು ಸಾರಿದ್ದಾರೆ. ಸತ್ಯಾಗ್ರಹವು ಯಶಸ್ವಿಯಾಗುವಂತೆ ಆಂಧ್ರರೆಲ್ಲಾ ವಿನಂತಿಸಿಕೊಂಡಿದ್ದಾರೆ.



ಉಡುಪಿ

ಸರ್ಕಲ್ ಕಾಂಗ್ರೆಸ್ ಕಮಿಟಿ

ಸಭೆಯು— ಇದೇ ತಾ 4ರಲ್ಲು ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಮಿಟಿ ಸದಸ್ಯರಾದ ಶ್ರೀ ಅಲಂಗಾರು ಕೃಷ್ಣಯ್ಯ ಹೆಗ್ಡೆಯವರ ಅಕಾಲ ನಿಧನದ ಬಗ್ಗೆ ದುಃಖ ಸೂಚಿಸುವ ನಿರ್ಣಯವಾಯಿತು. ಕಳೆದ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರಾಗಲಿ ಅಧಿಕಾರಿಗಳಾಗಲಿ ಕಾಂಗ್ರೆಸಿಗೆ ವಿರುದ್ಧವಾಗಿ ವರ್ತಿಸಿದುದು ಇದ್ದಲ್ಲಿ ಅಂತವರ ಮೇಲೆ ಶಿಸ್ತು ಜ್ಯಾರಿಮಾಡುವ ಬಗ್ಗೆ ಅಂತವರ ಪಟ್ಟಿಯನ್ನು ಕಳುಹಿಸಿಕೊಡಬೇಕಾಗಿ ಬಂದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ ನಿರ್ಣಯವನ್ನು ಮುಂದಿನ ಮಹಾ ಸಭೆಗೆ ಬಾಕಿ ಇಡಲಾಯಿತು. ಕಳೆದ ಮಹಾ ಚುನಾವಣೆಯಲ್ಲಿ ಕಾಂಗ್ರೆಸಿಗೆ ಬೆಂಬಲವಿತ್ತವರೆಲ್ಲರನ್ನು ಅಭಿನಂದಿಸಲಾಯಿತು. ದೇಶದಿಂಗ್ ಕ್ಷೇತ್ರದಲ್ಲಿ ಈಚೆಗೆ ಕಂಡಲಾಗುತ್ತಿರುವ ಗೋಧಿಯು ಆರೋಗ್ಯಕರವಿಲ್ಲವೆಂಬುದನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಯಿತು. ಪ್ರಿಕ್ಯೂರ್‌ಮೆಂಟ್ ಮತ್ತು ಲೆವಿಪದ್ಧತಿಯ ಗುಣದೋಷಗಳನ್ನು ಟೌನಿನಲ್ಲಿ ಮೋಟಾರ್ ವಾಹನಗಳ ಓಡಾಟದ ಮಿತಿಯನ್ನು ಸಂಬಂಧಿಸಿದ ಅಧಿಕಾರಿಗಳು ಹತೋಟಿಗೆ ತರಬೇಕೆಂಬ ನಿಚಾರವನ್ನೂ ಮುಂದಿನ ಸಭೆಯಲ್ಲಿ ಇತ್ಯರ್ಥಿಸುವುದೆಂದಾಯಿತು. ಮಹಾಜನರು ಕಾಂಗ್ರೆಸ್ ಮೆಂಬರಾಗಿ ಸೇರುವಂತೆ ವಿನಂತಿಸಲಾಯಿತು. ಮುಂದಿನ ಮಹಾ ಸಭೆಯು ತಾ. 11-3-52ನೆ ಮಂಗಳವಾರ ಸಂಜೆ 4ಗಂಟೆಗೆ ಕಾಂಗ್ರೆಸ್ ಆಫೀಸಿಯಲ್ಲಿ ಜರಗುವುದು.

ನಿಡಂಬೂರು ಪಂಚ್ಯಾತ್ ಬೋರ್ಡ್ ಏಲಂ ಪ್ರಕಟನೆ

ಈ ಬೋರ್ಡಿನ ಈ ಕೆಳಗಿನ ಗುತ್ತಿಗಳಲ್ಲಿ ಬರುವ[ತಾ 1-4 1952ರಿಂದ 31-3-1953ರ ವರೆಗಿನ] 1952 1953ನೇ ಒಂದು ವರ್ಷದ ಫೀಸು ವಸೂಲಿಯ ಅಧಿಕಾರವನ್ನು ಈ ಬೋರ್ಡಿನ ಪ್ರೆಸಿಡಂಟರು ಇದೇ ತಾ 13-3 1952ನೇ ಗುರುವಾರ ಸಂಜೆ 4 ಗಂಟೆಗೆ ಸರಿಯಾಗಿ ಈ ಬೋರ್ಡಿನ ಆಫೀಸಿನಲ್ಲಿ ಬಹಿರಂಗವಾಗಿ ಪ್ರತ್ಯೆ ಪ್ರತ್ಯೇಕ ಏಲಂ ಮಾಡುವರು.

(I) ಬಂಕೇರ ಕಟ್ಟ ಶಾಂಡಿಯು ಗುತ್ತೆ—[ಪ್ರಥಮವಾರು—ರೂ 100/-]

[II] ಕಿನ್ನಿಮೂಲ್ಕಿ ಮೀನುಮಾರ್ಕೆಟು ಗುತ್ತೆ—[ಪ್ರಥಮವಾರು—ರೂ. 30/-]

ಏಲಂ ಪ್ರಾರಂಭಿಸುವ ಮೊದಲೇ ಪ್ರತಿಯೊಬ್ಬ ಬಿಡ್ಡರನೂ ಪ್ರತಿಯೊಂದು ಗುತ್ತೆಯ ಕುರಿತು ರೂ 5/-ರಂತೆ ಪ್ರಥಮ ಠೇವಣಾತಿಯನ್ನೂ, ತನ್ನ ಅರ್ಹತೆಯ ಕುರಿತು ತನ್ನ ಗ್ರಾಮದ ಪಟೇಲರ ಒಂದು ಸರ್ಟಿಫಿಕೇಟನ್ನೂ ಹಾಜರುಮಾಡತಕ್ಕದ್ದು. ಅತ್ಯಂತ ಅಧಿಕ ಮೌಲ್ಯದ ಬಿಡ್ಡನ್ನು ಬೋರ್ಡಿನ ಮಂಜೂರಿಗೆ ಒಳಪಟ್ಟು ಪ್ರೆಸಿಡೆಂಟರು ಕಾಯಂ ಮಾಡುವರು, ಮತ್ತು ಸೋತ ಬಿಡ್ಡರರ ಠೇವಣಾತಿಗಳನ್ನೂ ರಿಫಂಡು ಮಾಡುವರು

ಏಲಂ ಕಾಯಂ ಆದೊಡನೆ ಕಾಯಂ ಆದ ಬಿಡ್ಡರನು ತನ್ನ ಹೆಸರಿನಲ್ಲಿ ಕಾಯಂ ಆದ ಆ ಬಿಡ್ಡಿನ ಸಂಪೂರ್ಣ ಹಣದ ಅರೆವಾಸಿಯನ್ನು ಪ್ರೆಸಿಡೆಂಟರಿಗೆ ಕೆತ್ತು ರಶೀದಿ ಪಡೆಯತಕ್ಕದ್ದು, ಬಾಕಿ ಉಳಿದ ಅರೆವಾಸಿಯ ಹಣದ ಕುರಿತು ಬೋರ್ಡಿನ ನಿರ್ಣಯಾನುಸಾರ ನಿರ್ದಿಷ್ಟವಾದ [illegible] ಬರತಕ್ಕದ್ದು. ಅಂತಹ ಸಂಗತಿಯಲ್ಲಿ ಆ ಕುರಿತು ತನ್ನ ಖರ್ಚಿನಿಂದ ತಕ್ಕ ದನಿಯಲ್ಲಿ ನಿರ್ದಿಷ್ಟವಾದ ಫಾರಮಿನಂತೆ ಬೋರ್ಡಿನ ಶರ್ತಗಳನ್ನು ಅನುಸರಿಸಿ ತಾ. 31—3—52ರ ಒಳಗೆ ಒಂದು ಕರಾರನ್ನು ಅತನು ಬರೆದು ಕೊಡತಕ್ಕದ್ದಲ್ಲದೆ, ತಾರೀಕು 31-3-1952ರ ಮಧ್ಯರಾತ್ರಿಯ ಮೇಲೆ ತನ್ನ ಗುತ್ತೆಯ ಸ್ವಾಧೀನತೆಯನ್ನೂ ವಹಿಸತಕ್ಕದ್ದು. ಈ ಮೇರೆಗೆ ನಡೆಯಲು ತಪ್ಪಿದಲ್ಲಿ ಕಟ್ಟಿದ ಠೇವಣಾತಿಗಳನ್ನು ಅತನು ಕಳೆದುಕೊಳ್ಳತಕ್ಕದ್ದಲ್ಲದೆ, ಬೋರ್ಡು ಆ ಮುಂದೆ ನಡೆಯಿಸ ಬಯುದಾದ ಆ ಗುತ್ತೆಯ ಪುನಃ ಏಲಮಿನ ಖರ್ಚು ನಷ್ಟಗಳನ್ನು ಬೋರ್ಡಿಗೆ ತೆರಲು ಬದ್ಧನಾಗಿರತಕ್ಕದ್ದು. ಬೋರ್ಡಿನ ಅನುಮತಿಯಿಲ್ಲದೆ ಗುತ್ತೆದಾರನು ತನ್ನ ಗುತ್ತೆಯನ್ನು ಒಂಭಾರೆ ಮಾಡಕೂಡದು; ಗುತ್ತೆಗೆ ಸಂಬಂಧಿಸಿದ ಕಟ್ಟಡಗಳನ್ನೂ ದೋಣಿ ಮೊದಲಾದ ಇತರ ಉಪಕರಣಗಳನ್ನೂ ತನ್ನ ಖರ್ಚಿನಿಂದಲೇ ಅತನು ಒದಗಿಸಿಕೊಳ್ಳತಕ್ಕದ್ದಲ್ಲದೆ, ಸ್ಥಳದ ತೀರ್ವ ಸೆಸ್ಸುಗಳನ್ನು ಕೊಡ ತೆತ್ತು ಬರತಕ್ಕದ್ದು.

ಸಹಿ) N. Rajagopalakrishna Rao
ನಿಡಂಬೂರು ಪಂಚಾಯತ ಬೋರ್ಡಿನ ಪ್ರೆಸಿಡೆಂಟ್

ಕಡೆಕಾರು. ತಾ. 4ನೇ ಮಾರ್ಚ 1952

ವಿದಾಯ ಸತ್ಕಾರ— ಡೇಮೊನ್‌ಸ್ಟ್ರೇಟರ್ ಶ್ರೀ ಕೆ ಶ್ರೀನಿವಾಸ ರಾಯರಿಗೆ ಮದ್ರಾಸಿಗೆ ವರ್ಗವಾದುದರಿಂದ ಅವರಿಗೊಂದು ವಿದಾಯ ಸತ್ಕಾರವನ್ನೀಯುವ ಸಮಾರಂಭವು ಕಳೆದ ಗುರುವಾರ ಜರಗಿತು. ಶ್ರೀ ರಾಯರು ಉಡುಪಿಗೆ ಬಂದು ಕೃಷಿ ಜಾಗೃತಿಯನ್ನುಂಟು ಮಾಡಿದುದೇ ಮೊದಲಾದ ವಿಷಯಗಳನ್ನೆತ್ತಿ ಶ್ರೀ ಬಿ ವಾಸುದೇವ ರಾಯರೂ ಶಿಬಂಧಿಯ ಪರವಾಗಿ ಎಡಿಶನಲ್ ಎಗ್ರಿಕಲ್ಚರಲ್ ಡೆಮೋನ್‌ಸ್ಟ್ರೇಟರ್ ಶ್ರೀ ವೈ. ವಿಠಲ ಹೆಗ್ಡೆಯವರೂ ಮಾತನಾಡಿದರು

ಕಾಲೇಜು ಡೇ ಸಮಾರಂಭ— ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು ಡೇ ಸಮಾರಂಭವು ಕಳೆದ ತಾ 29ರಂದು ಸಂಜೆ ಬಾಸೆಲ್ ಮಿಶನ್ ಆಸ್ಪತ್ರೆಯ ಡಾ। ಮಿಸ್ ಇ ಲೊಂಬಾರ್ಡ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾದ ಬಳಿಕ ಡಾ। ಟಿ. ಮಾಧವ ಪೈಗಳು ಸ್ವಾಗತ ಭಾಷಣವಿತ್ತರು. ಮಿಸ್. ಉಮಾವತಿ, ಅವರು ಕಾಲೇಜು ವಾರ್ಷಿಕ ವಾಚನ ಮಾಡಿದುದಕ್ಕೆ ಮಿಸ್ ಜಯಂತಿ ಅವರು ಉತ್ತರವಿತ್ತರು. ಶ್ರೀ ಜಿ ರೇಗೊ ಅವರು ಸೀನಿಯರ್ ತರಗತಿಯ ವಿದ್ಯಾರ್ಥಿಗಳ ಶ್ರೇಯಸ್ಸನ್ನು ಕೋರಿ ಮಾತನಾಡಿದರು. ಶ್ರೀ ಜಗನ್ನಾಥ ಹೆಗ್ಡೆಯವರು ಅದಕ್ಕೆ ಉತ್ತರವೀಯುತ್ತಾ ಆಭಾರ ಸೂಚಿಸಿದರು. ಬಳಿಕ ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಕಾಲೇಜ ವರದಿಯನ್ನೊಪ್ಪಿಸಿದರು. ಬಹುಮಾನ ವಿತರಣೆಯಾದನಂತರ ಸಭಾಧ್ಯಕ್ಷೆಯರು ಕಾಲೇಜು ಆಡಳಿತ ಮಂಡಳಿಯವರನ್ನೂ ಕಾಲೇಜು ಪಂಡಿತ ವರ್ಗದವರನ್ನೂ ಪ್ರಶಂಸಿಸಿ ಮಾತನಾಡಿದರು ಶ್ರೀ ಕೆ. ಬಿ ರಾಮಕೃಷ್ಣ ರಾಯರು ಧನ್ಯವಾದಗಳನ್ನರ್ಪಿಸಿದರು. ಕಾಲೇಜು ಪ್ರೊಫೆಸರರಿಂದಲೂ ವಿದ್ಯಾರ್ಥಿ ವೃಂದದವರಿಂದಲೂ ಇಂಗ್ಲಿಷ್ ಕನ್ನಡ ನಾಟಕ ಪ್ರದರ್ಶನಗಳಾಗಿ ಸುಮಾರು 11ಗಂಟೆಗೆ ಸಮಾರಂಭ ಕೊನೆಗೊಂಡಿತು. ಕಾಲೇಜಿನ ವರ್ಷಾವಧಿ ಆಟಗಳ ಸ್ಪರ್ಧೆಯು ಕಳೆದ ತಾ. 22ರಲ್ಲಿ ಜರಗಿ, ಡಾ। ಎಸ್ ಆರ್. ಪೈಗಳು ಬಹುಮಾನ ವಿತರಣೆ ಮಾಡಿದ್ದರು.

ಮೋಟಾರ್ ಕಾರ್ ಅಪಘಾತ— ಕಾಲೇಜು ಸಮಾರಂಭಕ್ಕೆ ಅಧ್ಯಕ್ಷ ಮಹಿಳೆಯರನ್ನು ಒಯ್ಯುತ್ತಿದ್ದ ಮೋಟಾರ್ ಕಾರೊಂದು ಕಡಿಯಾಳಿ ಸ್ಟ್ರೀಟ ದಾಟಿ ಸ್ವಲ್ಪ ದೂರದಲ್ಲಿ ಅಪಘಾತಕ್ಕೆ ಕಾರಣವಾಗಿ ಶ್ರೀ ಒಳಂಡೆ ರಾಮ ಭಟ್ಟರ ಒಬ್ಬನೇ ಮಗನಾದ ಒಂಭತ್ತು ವರುಷದ ವಾದಿರಾಜನೆಂಬ ಬಾಲಕನು ಗಾಯಗೊಳಗಾದನು. ಹುಡುಗನನ್ನು ಆಸ್ಪತ್ರೆಗೆ ತಂದು ಔಷಧೋಪಚಾರಗಳನ್ನು ನಡಿಸಿದಾಗ್ಯೂ ಪ್ರಯೋಜನವಾಗದೆ ರಾತ್ರಿ ಹುಡುಗನು ಮರಣಪಟ್ಟನು. ಕಾರ್ ಡ್ರೈವರನನ್ನು ದಸ್ತಗಿರಿ ಮಾಡಲಾಗಿದೆ ಅಲ್ಲದೆ ಅತನ ಮೇಲೆ ಕೇಸು ದಾಖಲು ಮಾಡಲಾಗಿದೆ. ಪೋಲೀಸ್ ಅಧಿಕಾರಿಗಳು ಹೆಚ್ಚಿನ ತಪಾಸಣೆ ನಡಿಸುತ್ತಿರುವರು.

ನೀರಿಗೆ ಬಿದ್ದು ಮರಣ— ದಿನಾಂಕ ೧ರಂದು ಪೂರ್ಣಪ್ರಜ್ಞ ಶ್ರೀ ಕೃಷ್ಣ ಮಠದ ಮಧ್ವ ಸರೋವರಕ್ಕೆ ಸ್ನಾನಮಾಡಲು ಹೋದ ನಾರಾಯಣ ಭಂಡಾರಿ ಎಂಬವರು ನೀರಿಗೆ ಬಿದ್ದು, ಅವರನ್ನು ಮೇಲಕ್ಕೆಳೆದು ತೆಗೆಯಲಾಯಿತು. ಅದರೆ ಕೆಲವೇ ತಾಸುಗಳಲ್ಲಿ ಅವರು ಪ್ರಾಣಬಿಟ್ಟರು

ನಿಧನ— ಶ್ರೀ ರಾಮಕೃಷ್ಣ ಥಿಯೇಟರಿನ ಮೆನೇಜರರೂ ಉತ್ತಮ ನಟ ಮತ್ತು ನಾಟಕ ಕರ್ತರೂ ಆದ ಶ್ರೀ ಪಿ. ಶೀನ ಸೆಟ್ಟರ ತಂದೆಯವರಾದ ಶ್ರೀ ಸೂರಪ್ಪ ಶೆಟ್ಟರು ಕಳೆದ ತಾ. 27ರಲ್ಲಿ ವೃದ್ಧಾಪ್ಯದ ದೆಸೆಯಿಂದ ಮೃತಪಟ್ಟಿರುವರೆನ್ನಲು ವಿಷಾದಪಡುತ್ತೇವೆ.

ದರಗಳು ಇಳಿಯುತ್ತಿವೆ— ಉಡುಪಿ ಪೇಟೆಯಲ್ಲೂ ಆಸುಪಾಸುಗಳಲ್ಲೂ ವ್ಯಾಪಾರ ಮಂದಿಯು ಈಗಾಗಲೇ ತಲೆ ದೋರಿರುವುದಲ್ಲದೆ ಸರ್ವ ಸಾಮಾನ್ಯ ಎಲ್ಲ ಸಾಮಾನುಗಳ ದರ ಇಳಿಯುತ್ತಿದೆ.

Approved from by the Govt of Mysore
Certificated by the Agent of the Govt of Cylone & Indian

For Protection and Provision
Consult
The New Guardian of India Life Insurance Co., Ltd.
Estd] Head office. **MADRAS** [1934
A Policy in this Progressive Life Office is good investment, its Agency is valuable business connection
Applications for representation are invited from influential persons.
Please apply to:
The Branch Manager,
Diamond Building, Hampankatta,
MANGALORE, S. K.

ತಾರೀಕು 3-3-52ರಿಂದ
ದೀದಾರ್
ಪಾತ್ರವರ್ಗ:- ಅಶೋಕ್ ಕುಮಾರ್, ಯಾಕೂಬ್, ದಿಲೀಪ್ ಕುಮಾರ್, ನಿಮ್ಮಿ, ನರ್ಗಿಸ್, ಬೇಬಿ ತಬಸಮ್,
ಮೊದಲಾದವರು.

ಮುಂದಿನ ಚಿತ್ರ
ಪಗಡಿ.
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಕುಂದಾಪುರ— ಕುಂದಾಪುರ ತಾಲೂಕಿನ ಗ್ರಾಮ ಉದ್ಯೋಗಸ್ಥರ ಸಭೆಯೊಂದು ಇತ್ತೀಚೆಗೆ ಕುಂದಾಪುರ ತಾಲೂಕು ಕಚೇರಿಯ ವಠಾರದಲ್ಲಿ, ಡಿವಿಜನಲ್ ಆಫೀಸರ್ ಶ್ರೀ ಎಚ್. ನರಸಿಂಹ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ವೈ ಮಂಜಯ್ಯ ಸೆಟ್ಟಿ, ಎಂ ಎಲ್ ಎ. ರವರು ಈ ಸಂದರ್ಭದಲ್ಲಿ ಅಭಿಭಾಷಣ ಮಾಡುತ್ತಾ ಗ್ರಾಮ ಉದ್ಯೋಗಸ್ಥರು ಸಣ್ಣ ನೌಕರರಾದರೂ, ಅವರಿಗೆ ಈಗಿನ ಕಾಲದಲ್ಲಿ ವಿಶೇಷ ಪರಿಶ್ರಮವಿರುವ ಸಂಗತಿ ತನಗೆ ಗೊತ್ತಿರುವುದಾಗಿಯೂ, ಈಗ ಅವರಿಗೆ ಕೊಡಲ್ಪಡುವ ವೇತನವು ಅವರು ಮಾಡತಕ್ಕ ಕೆಲಸಕ್ಕೆ ತಕ್ಕುದಾದ ಪ್ರತಿಫಲವಲ್ಲವೆಂದೂ ಮೊದಲಾಗಿ ಅಭಿಪ್ರಾಯವಿತ್ತರು. ಬಳಿಕ ಶ್ರೀ ಎಮ್. ಎಮ್. ಹೆಗ್ಡೆಯವರು ಮಾತನಾಡುತ್ತಾ ಗ್ರಾಮ ಉದ್ಯೋಗಸ್ಥರೊಳಗೆ ಸಂಘಟನೆ ಆಗತಕ್ಕದ್ದೆಂದೂ ಆ ಮೂಲಕ ಸರಕಾರಕ್ಕೆ ತಮ್ಮ ನ್ಯಾಯವಾದ ಕೋರಿಕೆಗಳನ್ನು ಮಂದಿ ಮಾಡಿದ್ದಲ್ಲಿ ಅದು ತಪ್ಪಾಗಲಾರದೆಂದೂ ಅಂತಹ ಮನವಿಯನ್ನು ಸರಕಾರವು ಮನ್ನಿಸಬೇಕಾದುದು ಅಗತ್ಯವೆಂದೂ, ಇಂತಹ ಗ್ರಾಮ ಉದ್ಯೋಗಸ್ಥರ ಸಂಘಟನೆಯನ್ನು ತಾಲೂಕಿನಲ್ಲಿ ಮಾತ್ರವಲ್ಲದೆ ಇಡೀ ಜಿಲ್ಲೆಯಲ್ಲಿ ಏರ್ಪಡಿಸುವಂತೆ ಮಾಡುವ ದಾರಿ ಒಳ್ಳೆಯದೆಂತಲೂ ಹೇಳಿದರು ಅಧ್ಯಕ್ಷರ ಉಪಸಂಹಾರ ಭಾಷಣವಾಗಿ ಸಭಾಂತ್ಯವಾಯಿತು

ಹಿರೇಬೆಟ್ಟು— ದಿನಾಂಕ 22ರಂದು ಇಲ್ಲಿ ಜರಗಿದ ಸತ್ಕಾರ ಕೂಟದಲ್ಲಿ ಸಭಿಕರ ಅಭಿನಂದನೀಯ ಭಾಷಣಗಳಿಗೆ ಶ್ರೀ ಟಿ ಎ. ಪೈಗಳು ಉತ್ತರ ಕೊಡುತ್ತಾ ತಮ್ಮೊಡನಿನಲ್ಲಿ ಇರಿಸಿಕೊಂಡ ತತ್ವಧ್ಯೇಯಗಳ ಮಟ್ಟಕ್ಕಿಂತ ಎಷ್ಟೋ ಕನಿಷ್ಠ ತಳದಲ್ಲಿ ಕಾಂಗ್ರೆಸ್ಸಿಗರೇ ಇರುವುದು ವಿಷಾಧಕರ ಕಾಂಗ್ರೆಸು ಯಾರೊಬ್ಬನ ಕಟ್ಟಿಟ್ಟ ಸಂಸ್ಥೆಯಲ್ಲ; ಅದರ ತತ್ವವನ್ನು ಒಪ್ಪಿ ನಡೆಯುವವರೆಲ್ಲಾ ಕಾಂಗ್ರೆಸಿಗರೆನ್ನಬಹುದು ಕಾಂಗ್ರೆಸ್ಸೆಂಡು ರಾಜಕೀಯ ಪಕ್ಷವಾಗಿರುವುದರಿಂದ ಪ್ರತಿಯೊಬ್ಬ ಕಾಂಗ್ರೆಸಿಗನೂ ತತ್ವನಿಷ್ಠೆಯಿಂದ, ಶಿಸ್ತು ನಿಯಮದಿಂದ ವರ್ತಿಸದಿದ್ದಲ್ಲಿ ಇಡೀ ಪಕ್ಷವೇ ಹೀನಾವಸ್ಥೆಗೆ ಇಳಿಯಬೇಕಾಗುವುದೆಂದು ಬೋಧಪ್ರದ ಭಾಷಣ ಮಾಡಿದರು

ಶ್ರೀ ಅನಂತ ಪದ್ಮನಾಭ ದೇವಸ್ಥಾನ
ಸ್ವಸ್ತಿ! ಶ್ರೀ ಖರನಾಮ ಸಂ।ದ ಕುಂಭಮಾಸ ೨೮ ಸಲುವ ಫಾಲ್ಗುಣ ಶು. ೧೫ಯು ಮಂಗಳವಾರ ತಾ 11-3-1952 ಮೊದಲ್ಗೊಂಡು ಫಾಲ್ಗುಣ ಬ ೬ಯು. ಸೋಮವಾರ ತಾ 18-3-52ರ ವರೆಗೆ ಶ್ರೀ ಅನಂತ ಪದ್ಮನಾಭ ಸ್ವಾಮಿಯ ಸನ್ನಿಧಿಯಲ್ಲಿ ಮಾಮೂಲು ಮೇರೆಗೆ ಶ್ರೀ ವಾರ್ಷಿಕ ಮಹೋತ್ಸವದ ಕಾರ್ಯಗಳು ಜರಗಲಿರುವವು ತತ್ಸಂಬಂಧ ತಾವುಗಳು ಪರಿವಾರ ಸಮೇತ ಬಂದು ಈ ಕಾರ್ಯವನ್ನು ಸಾಂಗವಾಡಿಸಿಕೊಟ್ಟು ಶ್ರೀಮುಡಿ ಗಂಧ ಪ್ರಸಾದಗಳನ್ನು ಸ್ವೀಕರಿಸಿ ಶ್ರೀದೇವತಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ
ತಮ್ಮ ಆಗಮನಾಭಿಲಾಷಿ.
ಕೋಲ್ಯಾರು ಭೋಜರಾಜ ಶೆಟ್ಟಿ
ಎಕ್ಸಿಕ್ಯೂಟಿವ್ ಆಫೀಸರ್.
ಪೆರ್ಡೂರು. ತಾ. 26-2 52.

ಕಟಪಾಡಿ— ಶ್ರೀ ವೆಂಕಟರಮಣ ಹೈಸ್ಕೂಲಿನ ಏಳನೇ ವರ್ಷಂತ್ಯುತ್ಸ ವ ತಾ 29—2—52ರಂದು ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫರಾದ ಶ್ರೀ ಟಿ. ವಿ. ಬಿ. ಸಿ. ಭಾಸೂರವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಗಿತು. ಶಾಲಾ ಬಾಲಕಿಯರಿಂದ ದೇವತಾ ರ್ಥನೆ, ಸ್ವಾಗತಗೀತವಾದ ಬಳಿಕ ಶಾಲೆ ಹಳೇ ವಿದ್ಯಾರ್ಥಿ ಶ್ರೀ ಬಿ ಕೃಷ್ಣಾನಂದ ರು ಶಾಲಾ ಸ್ವಸ್ತಿ ವಾಚನವನ್ನು ಮಾಡಿ . ಶ್ರೀ ಪಿ. ದಯಾನಂದ ನಾಯಕರು ಸಮಾರಂಭದ ಕುರಿತಾಗಿ ಬಂದ ಸಂದೇಶವನ್ನು ಓದಿದರು. ಶಾಲಾ ಮುಖ್ಯ ಅಧ್ಯಾಪಕ ಶ್ರೀ ಪಿ. ರಾಮದಾಸ ನಾಯಕರು ಲೆಯ ಸಂಕ್ಷಿಪ್ತ ವರದಿಯನ್ನು ಓದಿದರು. ವಾಯ ಶ್ರೀಮತಿ ಕುಲಾಸೂರವರಿಂದ ಲಾ ಮಕ್ಕಳಿಗೆ ಪಾರಿತೋಷಕ ವಿತರಣೆ ಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಲೆಯ ಚಟುವಟಿಕೆಗಳನ್ನು ಪ್ರಶಂಶಿಸಿದ್ದು ದೆ ವಿದ್ಯಾರ್ಥಿಗಳಲ್ಲಿ ಶಿಸ್ತು ಶಿಥಿಲವಾಗಿ ತ್ತಿರುವುದು ವಿಷಾದಕರವೆಂದೂ ಅದು ದಂತೆ ಶಾಲೆಯಲ್ಲಿ ಅಧ್ಯಾಪಕರು ಕೈಕೊ ವ ಕಾರ್ಯಕ್ರಮಗಳಲ್ಲಿ ಪಿತೃವರು ಸಹಕರಿಸುವುದು ಅತಿ ಅಗತ್ಯವೆಂದೂ, ಶಾಲೆಗಾ ಸ್ವಂತ ಕಟ್ಟಡ ಹಾಗೂ ಶಾಶ್ವತ ನಿಧಿಯ ರ್ಪಾಡಿನ ಬಗ್ಗೆ ಊರ ಮಹನೀಯರೆಲ್ಲ ಆಡಳಿತೆಯವರೊಂದಿಗೆ ಸಹಕರಿಸಬೇಕಾಗಿಯೂ ಕೇಳಿಕೊಂಡರು. ಶ್ರೀ ಕೆ. ಆರ್. ಕೃಯವರಿಂದ ಧನ್ಯವಾದಾರ್ಪಣೆಯಾದ ಬ ಶಾಲಾ ವಿದ್ಯಾರ್ಥಿಗಳಿಂದ "ಸತ್ಯ ಹರಿಶ್ಚಂದ್ರ" ಎಂಬ ನಾಟಕವು ಅಭಿನಯಿಸಲ್ಪಟ್ಟಿತು.

ಅಂದು ಮುಂಜಾನೆ ಶಾಲಾ ಮಕ್ಕಳಿಗೆ ಲಘು ಉಪಾಹಾರದ ಏರ್ಪಾಡೂ ಇದ್ದಿತು. 1–3–52ರಂದು ಶಾಲಾ ಅಧ್ಯಾಪಕ ವೃಂದವರು ಶಾಲೆಯ ನೂತನ ಕಟ್ಟಡ ನಿಧಿಯ ಸಹಾಯಾರ್ಥವಾಗಿ 'ಸಾಮಧಾರಿ' ಎಂಬ ಸಾಮಾಜಿಕ ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದರು.

ಕುಂಬಳೆ— ಕಳೆದ ತಾ. 24ರಂದು ಸ್ಥಳೀಯ ಟೌನ್ ಕೊಆಪರೇಟಿವ್, ಬೇಂಕಿನ ಮಹಾ ಸಭೆ ಜರಗಿ, ಡೈರೆಕ್ಟರರ ಚುನಾವಣೆ ನಡೆಯಿತು. ಜ| ಎಮ್. ಮಮ್ಮುಂಞ, ಅವರು ಅಧ್ಯಕ್ಷರಾಗಿಯೂ, ಶ್ರೀಗಳಾದ ಬಾಲಕೃಷ್ಣಯ ಭಟ್, ಕೆ. ಕಣ್ಣಪ್ಪ ಮತ್ತು ಎ. ರಾಮನ್ ವೈದ್ಯರ್, ಅವರು ಅನುಕ್ರಮವಾಗಿ ಉಪಾಧ್ಯಕ್ಷ, ಕಾರ್ಯದರ್ಶಿ, ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟರು.

ಬೆಳ್ಳಾರೆ— ಇದೇ ತಾ. 8ರಲ್ಲು ರಾತ್ರಿ 9 ಗಂಟೆಗೆ ಶ್ರೀಗಳಾದ ಕೆ. ಮಹಾಬಲ ಜೋಡ, ಪರಿಕ್ಕಳ ಈಶ್ವರಪ್ಪಯ್ಯ, ಕೆ. ಬಾಲಕೃಷ್ಣ ರಾವ್, ಎಸ್. ಎಸ್. ಶಿಲ್ಲೆ ಮೊದಲಾದವರ ಕೂಡುವಿಕೆಯಿಂದ 'ಉತ್ತರ ಗೋಗ್ರಹಣ ಮತ್ತು ಭೀಷ್ಮಾರ್ಜುನ' ಯಕ್ಷಗಾನ ಸಮಾರಂಭವು ಜರಗಲಿರುವುದು.

ಬ್ರಹ್ಮಾವರ — ಇಲ್ಲಿಯ ಸರ್ಕಲ್ ಕಾಂಗ್ರೆಸ್ ಕಮಿಟಿಯ ಸಭೆಯು ಕಳೆದ ತಾ. 28ರಂದು ಶ್ರೀ ಪಿ. ವೈ. ರಾಮನ್ ಗುರುಕಲ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮುಂದಿನ ವರ್ಷಕ್ಕೆ ಕಾಂಗ್ರೆಸ್ ಸದಸ್ಯರನ್ನು ಸೇರಿಸುವಿಕೆ ಮೊದಲಾದ ವಿಷಯಗಳ ಮೇಲೆ ನಿರ್ಣಯಗಳಾದುವು.

ಮಣಿಪಾಲ—ಸ್ಥಳೀಯ ಎಯಿಡೆಡ್ ಶಾಲಾ ಹೆತ್ತವರ ಸಭೆಯು ಈಚೆಗೆ ಉಡುಪಿ ನೋರ್ತ್ ರೇಂಜಿನ ಶಾಲೆಗಳ ಜೂನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಬಾಲಬಾಲಿಕೆಯರು 'ಮುತ್ತಿನ ನತ್ತು' ಎಂಬ ಕನ್ನಡ ನಾಟಕವನ್ನು ಅಭಿನಯಿಸಿದರು.

ಬರ್ಥ ಕಂಟ್ರೋಲ್ ಸುಲಭ ಸಾಧ್ಯವಿದೆ. ಅಪಾಯವಿಲ್ಲ, 100% ಖಾತ್ರಿ ಗಂಡಸರಿಗೆ ರೂ. 3-8-0 ಹೆಂಗಸರಿಗೆ ರೂ. 5-8-0

PERUMAL TRADERS
Near Y. M. C. A. Madurai

ಮಂಗಳೂರು

ಜಿಲ್ಲಾ ಆಹಾರೋತ್ಪತ್ತಿ ಕಮಿಟಿ ಸಭೆಯು ಕಳೆದ ತಾ. 27ರಲ್ಲು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ದುರಸ್ತಿ ಮಾಡಬಹುದಾದ ಹಳ್ಳಿ ಕೆರೆಗಳ ಪಟ್ಟಿಯನ್ನು ಓದಿಹೇಳಲಾಯಿತು. ಈ ವರೆಗೆ ಕುಂದಾಪುರದ ಪುನ್ನಮಕ್ಕಿ, ಮೊಳಹಳ್ಳಿಗಳಲ್ಲಿನ ರೂ 14323 ಮತ್ತು ರೂ 12890ರ ಕೆಲಸವಾಗಿದೆ. ಉಡುಪಿಯಲ್ಲಿಯ ಬಾಂತಾರಕ್ಕೆ ರೂ 3775 ಮತ್ತು ಬಾರ್ಕೂರು ಅಣೆಕಟ್ಟಿಗೆ ರೂ 6,81,730 ವೆಚ್ಚವಾಗಿದೆ. ಇವಿಷ್ಟು ಪೂರ್ಣವಾದ ಕೆಲಸಗಳು. ಇವುಗಳಿಂದ 1098 ಎಕ್ರೆಗಳಿಗೆ ನೀರೊದಗಿ ಒಟ್ಟು 5495 ಟನ್‌ಗಳಷ್ಟು ಅಧಿಕ ಆಹಾರ ಉತ್ಪತ್ತಿಯಾಗುವಂತಾಗಿದೆ, ಇನ್ನೂ ಕೆಲವು ಕೆಲಸಗಳು ಪ್ರಾರಂಭವಾಗಿವೆ, ಮತ್ತೆ ಕೆಲವು ಕೆಲಸಗಳ ಖರ್ಚು ಅಂದಾಜು ಮಾಡಲಾಗಿದೆ.

ಪಿತ್ರಾರ್ಜಿತ ಸ್ವಾತಂತ್ರ್ಯಗಳ ರಕ್ಷಣೆ ಕಳೆದ ತಾ 27ರಲ್ಲು ಸಂಚೆ ಜರಗಿತು. ಮನೆ ಸುಟ್ಟು ಹೋದ ಐದು ಮಂದಿಗೆ ೨೫ ಸ ತ್ತು ರೂಪಾಯಿ ಸಹಾಯ ಕೊಡಲಾಯಿತು. ಜನವರಿ ತಾ 16ರಿಂದ ಫೆಬ್ರವರಿ ತಾ 15ರ ತನಕ 78 ಮಂದಿಗೆ ಕೋವಿ ಲೈಸೆನ್ಸು ಕೊಡಲಾಯಿತು. 38,250 ರೂ ಪಾಯಿಗಳ 11 ಕೆರೆ ಬಾವಿ ದುರಸ್ತಿಯ ಕೆಲಸಗಳನ್ನು ಸಂಕ್ಷನ್ ಮಾಡಲಾಗಿದೆ ಎಂದೂ ಜಿಲ್ಲಾ ಕಲೆಕ್ಟರರು ತಿಳಿಸಿದರು.

ನೇಮಕ—ಜಿಲ್ಲೆಯಲ್ಲಿ ಭೂಸುಧಾರಣೆಗೆ ಸಂಬಂಧಪಟ್ಟ ಸರ್ವೆ ಹಾಗೂ ಮಾಹಿತಿ ಸಂಗ್ರಹಿಸುವ ಬಗ್ಗೆ ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಎಸ್. ಯು. ಪರಶುರಾಮ ನಾಯ್ಕರವರು ರಿಸೆಟ್ಲ್‌ಮೆಂಟ್ ಆಫೀಸರರಾಗಿ ನೇಮಕ ಹೊಂದಿದ್ದು, ಅವರು ಇದೇ ತಾ. 1ರಲ್ಲು ಅಧಿಕಾರ ವಹಿಸಿರುವರು.

ದಿ ಕಥೋಲಿಕ್ ಬೇಂಕ್ ಲಿಮಿಟೆಡ್
ಶಿರ್ವಾ ಶಾಖೆ, ದ. ಕನ್ನಡ.
ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ, ಸದರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದರಿಯವರು ಈಡಿಟ್ಟ ನಗಗಳನ್ನು ಇದೇ 1952ನೇ ಇಸವಿ ಮಾರ್ಚ್ 11ನೇ ಮಂಗಳವಾರದ ಒಳಗೆ ಬೇಂಕಿಗೆ ಸಲ್ಲತಕ್ಕ ಅಸಲು,ಬಡ್ಡಿ,ನೋಟೀಸ್ ಖರ್ಚು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದ ಪಕ್ಷದಲ್ಲಿ ಸದರಿಯವರು ಈಡಿಟ್ಟ ನಗಗಳನ್ನು 1952ನೇ ಇಸವಿ ಮಾರ್ಚ್ ತಿಂಗಳ ತಾ 15ನೇ ಶನಿವಾರ ಪೂರ್ವಾಹ್ನ ಗಂಟೆ 12ಕ್ಕೆ ಸರಿಯಾಗಿ ಯಾ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು.

ತಾರೀಕು	ನಂಬ್ರ	ಸಾಲ ಪಡೆದವರ ಹೆಸರು ಮತ್ತು ವಿಳಾಸ	[illegible]	[illegible]
			ರೂ.	ರೂ.
21-6-49	24/1645	ವಿಠಲ ಸೆಟ್ಟಿ, ಅಚ್ಚು ಸೆಟ್ಟಿರ ಮಗಳು ಪಿಲಾರು ಕೆಂಜನ, ಪಿಲಾರು ಪೋಸ್ಟ್.	200/	
11-7-49	25/55	ಸೂರಸೆಟ್ಟಿ, ನಂದ್ಯಪ್ಪ ಸೆಟ್ಟರ ಅಳಿಯ ನ್ಯಾರ್ಮ ಮೂಡುಮನೆ ಶಿರ್ವ ಪೋಸ್ಟ್.	10/-	
20-9-49	25/535	ಕೆ. ರಾಮಸೆಟ್ಟಿ, ತಮ್ಮಯ ಸೆಟ್ಟರ ಅಳಿಯ, ಕುತ್ಯಾರು ಗುತ್ತು, ಪಿಲಾರ್ ಪೋಸ್ಟ್.	18/-	12/
23-9-49	25/541	ಕರಿಯಸೆಟ್ಟಿ, ಮೋನ್‌ಸೆಟ್ಟಿ, ಅಳಿಯ ಕಲತ್ತೂರು ಮುಟ್ಟಿಗಲ್ಲು, ಪಾದೂರು, ಪೋಸ್ಟ್.	13/-	
24-10 49	25/674	ಅಬ್ದುಲ್ ಸಮದ್ ಸಾಹೇಬ್, ಈಸೂಬ್ ಸಾಹೇಬರ ಮಗ, ನ್ಯಾರ್ಮ ಶಿರ್ವಾ ಪೋಸ್ಟ್.	46/-	
28-10-49	25/698	ಯಚ್. ಅಮ್ಮನ್ನ, ವಿಲಿಯಮ್, ಅಮ್ಮನ್ನರ ಮಗ, ಟೀಚರ್ ಬಿ. ಇ. ಎಮ್ ಎಲಿಮೆಂಟರಿ ಶಾಲೆ ಶಿರ್ವ ಶಿರ್ವಾ ಪೋಸ್ಟ್.	15/-	

ಶಿರ್ವ
ತಾ 25-2-52

C. D'Souza,
ಏಜಂಟ್.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾನ್ಹಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ:—ಹರಮೀನವಲ್ಲ ಪಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧-೨ ಆಣೆ

ಮಾಲಕರು:—ಹಾಲಪ್ಪಾ ಫಕೀರಪ್ಪಾ ಹಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಧಾರವಾಡ—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ಬಸವಪ್ಪ ಸಿದ್ಧಲಿಂಗಪ್ಪ ಧಾರವಾಡಕರ ಸಿಡಾಫೂಲ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮಲಾಪುರ ,ಕೆಮಿಸ್ಟ, ಹಾವೇರಿ, ಬ್ಯಾಡಗಿ

ವಿದಾಯಕ ಸತ್ಕಾರ—ಮಂಗಳೂರಿನ ಸರಕಾರಿ ಕಾಲೇಜಿನ ... ಸತ್ಕಾರ ಸಮಾರಂಭವು ಕಳೆದ ತಾ. 26ರಲ್ಲು ಕುಮಾರಿ ಶೀಲಾ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಿನ್ಸಿಪಾಲ್ ಜ| ಎಮ್. ಬಿ ಹಸೀಮಿಯವರು ... ಗಳ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಚೆನ್ನ ಬಸಪ್ಪನವರು ಸಂಘದ ವರದಿ ವಾಚನ ಮಾಡಿದರು. ಕುಮಾರಿ ಎಮ್. ಮೀನಾಕ್ಷಿ, ಶ್ರೀ ಎಮ್. ತಿಮ್ಮಪ್ಪ ಹೆಗ್ಡೆ, ಶ್ರೀ ಗೋಪಾಲಕೃಷ್ಣ ಬಾಳಿಗರು ಹೊರಹೋಗುವ ವಿದ್ಯಾರ್ಥಿಗಳ ವಿದಾಯ ಬಯಸಿದರು. ಶ್ರೀಗಳಾದ ಸತ್ಯಪಾಲ, ಸುಬ್ರಹ್ಮಣ್ಯಂ, ಶ್ರೀನಿವಾಸ ಶರ್ಮರು ಉತ್ತರಿಸಿದ್ದರು ತದನಂತರ ಕಾಲೇಜುಗಳೊಳಗಣ ವಾಕ್ ಸ್ಪರ್ಧೆಯಲ್ಲಿ ಪ್ರಥಮಸ್ಥಾನ ಪಡೆದ ಕುಮಾರಿ ಸುನೀತಿ ಸೆಟ್ಟಿ ಮತ್ತು ಶ್ರೀ ಕರುಣಾಕರ ರಾವ್, ಇವರಿಗೆ ಶ್ರೀಮತಿ ರಾಧಾ ಎಲ್. ರಾವ್ ಬಹುಮಾನ ವಿತರಣೆ ಮಾಡಿದರು.

ಋಷಿ ಬೋಧೋತ್ಸವ— ಕಳೆದ ತಾ, 24ರಂದು ಮಂಗಳೂರಿನ ಆರ್ಯ ಸಮಾಜ ಮಂದಿರದಲ್ಲಿ ಋಷಿ ಬೋಧೋತ್ಸವವು ಬೆಳಗ್ಗೆ ಯಜ್ಞ, ಭಜನೆ, ಭಾಷಣಾದಿ ಕಾರ್ಯಕ್ರಮಗಳೊಂದಿಗೆ ಜರಗಿತು. ಶ್ರೀಗಳಾದ ಮೋಹನಪ್ಪ ತಿಂಗಳಾಯ ಮತ್ತು ಸದಾನಂದ ಸರಸ್ವತಿಯವರು ಅನುಕ್ರಮವಾಗಿ ಶಿವರಾತ್ರಿಯ ಮಹತ್ವ ಮತ್ತು ಹಿಂದೂ ಸಂಘಟನೆಯ ಕುರಿತು ಮಾತನಾಡಿದರು.

ದ. ಕ. ಜಿಲ್ಲೆಗೆ ಬಹುಮಾನ— 1950ನೆ ವರ್ಷದ ವನ ಮಹೋತ್ಸವದಲ್ಲಿ, ಪ್ರಾಂತದ ಜಿಲ್ಲೆಗಳಲ್ಲಿ ಅತಿ ಹೆಚ್ಚಿನ ಸಸಿಗಳನ್ನು ನೆಟ್ಟ ದಕ್ಷಿಣ ಕನ್ನಡ ಜಿಲ್ಲೆಗೆ, ಸಂಸ್ಥಾನೀಯ ಢಾಲು (State Sheild) ಬಹುಮಾನವಾಗಿ ಕೊಡಲ್ಪಡುವುದೆಂದು ಭಾರತ ಸರಕಾರವು ನಿಶ್ಚಯಿಸಿದೆ. ಪ್ರಾಂತದಲ್ಲಿ ಕೊಡಲ್ಪಡುವ ಇಂತಹ ಢಾಲುಗಳು ನಾಲ್ಕು—ಅದರಲ್ಲಿ 17, 37, 301, ಸಸಿಗಳನ್ನು ನೆಟ್ಟು [ಇವುಗಳಲ್ಲಿ 11, 56, 764 ಸಸಿಗಳು, ಬದುಕಿವೆ.] ದ. ಕ. ಜಿಲ್ಲೆಗೆ ಒಂದು ಢಾಲು ಕೊಡಲ್ಪಡುವುದು. ಈ ಢಾಲನ್ನು ಒಂದು ವಿಶೇಷ ಸಮಾರಂಭದಲ್ಲಿ,ಜಿಲ್ಲಾ ಕಲೆಕ್ಟರರಿಗೆ ಒಪ್ಪಿಸುವರು.

ಧಾರಣೆಗಳಲ್ಲಿ ಇಳಿತ:—ಬೆಲ್ಲ, ಮೆಣಸು, ತೆಂಗಿನಕಾಯಿ ಮತ್ತು ಎಣ್ಣೆ ಮೊದಲಾದ ಜೀವನಾವಶ್ಯಕ ವಸ್ತುಗಳು ಬಹುಮಟ್ಟಿಗೆ ಇಳಿದಿದೆ.

ಮಂಗಳೂರಲ್ಲಿ ಶ್ರೀ ಆನಂದನ್ ನಂಬಿಯಾರರು—ಕಮ್ಯೂನಿಸ್ಟ್ ನಾಯಕ ಶ್ರೀ ಆನಂದನ್ ನಂಬಿಯಾರರು ಕಳೆದ ತಾ. 28ರಂದು ಸಂಜೆ ಮಂಗಳೂರಿಗೆ ಬಂದು ಮೈದಾನಿನಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಭಾಷಣವಿತ್ತರು. ಮದ್ರಾಸ್ ಮಂತ್ರಿಮಂಡಳ ರಚನೆಯ ಕುರಿತು ಐಕ್ಯರಂಗ ಸಂಘಟನೆಯ ಕುರಿತೂ ಮಾತನಾಡಿದರು. ಶ್ರೀ ಕಕ್ಕಿಲ್ಲಾಯರು ಇವರ ಭಾಷಣವನ್ನು ಕನ್ನಡಿಸಿದರು. ಕೊನೆಗೆ ರಾಜಕೀಯ ಕೈದಿಗಳ ಬಿಡುಗಡೆಯಾಗಬೇಕು, ಐಕ್ಯರಂಗದವರು ಸರಕಾರ ರಚಿಸಬೇಕು ಮತ್ತು ಸಿ. ಎ. ಬಾಲನ್, ಅವರ ಜೀವದಾನ ಮಾಡಬೇಕು, ಎಂದು ಕೇಳಿಕೊಳ್ಳುವ ನಿರ್ಣಯಗಳಾದುವು ಮಂಜೇಶ್ವರದ ಶ್ರೀ ಸುಬ್ಬರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಶಾಂತಾರಾಮ ಪೈಗಳು ಧನ್ಯವಾದಗಳನ್ನರ್ಪಿಸಿದರು. ಮರುದಿನ ದ ಕ. ಜಿಲ್ಲಾ ಮತದಾರ ಸಂಘದಲ್ಲಿ ಜ ಎಮ್. ಸಿ, ಅಪ್ಪಯ್ಯ ಅವರ ಅಧ್ಯಕ್ಷತೆಯಲ್ಲಿ ಶ್ರೀ ನಂಬಿಯಾರರಿಗೆ ಚಹಾ ಸತ್ಕಾರ ಕೂಟ ನಡೆಯಿತು.

ಮದ್ರಾಸಿನ ಪಬ್ಲಿಕ್ ಇನ್‌ಸ್ಟ್ರಕ್ಷನಿನ ಡೈರೆಕ್ಟರರಿಂದ ನವಯುಗ ವಾರಪತ್ರಿಕೆಯು ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಸೆಕೆಂಡರಿ ಶಾಲೆಗಳು ಅದನ್ನು ತರಿಸಿಕೊಳ್ಳಬಹುದಾಗಿದೆ.

[೩ನೇ ಪುಟದಿಂದ ಮುಂದುವರಿದುದು]

ಮಾರ್ಚ ತಿಂಗಳಿನಿಂದ ಜೂನ್ ತಿಂಗಳ ವರೆಗೆ ಅರ್ಥಾತ್ 4 ತಿಂಗಳ ವರೆಗೆ ಸೀದಾ ಕೊಡಬೇಕೆಂದು ರಾಜ್ಯ ಸರಕಾರಗಳಿಗೆ ತಿಳಿಸಲಾಗಿದೆ. ಸಕ್ಕರೆಯ ಉತ್ಪಾದನೆಯು ಹೆಚ್ಚಿದ್ದು ಧಾರಣೆಯು ಇಳಿದುದನ್ನು ಲಕ್ಷಿಸಿ ಕೆಲವು ಹಿತಸಂಬಂಧಿಕರು ಸಕ್ಕರೆ ಹಾಗೂ ಬೆಲ್ಲದ ನಿರ್ಯಾತಕ್ಕೆ ಅನುಮತಿ ಕೊಡಬೇಕೆಂದೂ—ಸದ್ಯದ ಪ್ರತಿಬಂಧಿತವಾದ ಸ್ಥಳಗಳಲ್ಲಿ ಬೆಲ್ಲದ ಮಾರಾಟದ ವ್ಯಾಪಾರಕ್ಕೆ ಅನುಮತಿ ಕೊಡಬೇಕೆಂದೂ ಹಲವರು ಸರಕಾರವನ್ನು ಕೇಳಿಕೊಂಡಿರುವರು. ಆದರೆ ಸರಕಾರವು ಹಿಂದಿನ ದರವನ್ನೇ ತಗ್ಗಿಸಿ—ನಿರ್ಯಾತಕ್ಕೆ ಅಪ್ಪಣೆ ಕೊಡುವದನ್ನೂ ನಿರಾಕರಿಸುವದೇ ತನ್ನ ಧೋರಣವೆಂದು ಸಾರಿದೆ. ಸಕ್ಕರೆಯ ವ್ಯಾಪಾರವನ್ನು ಕೇವಲ ಆರ್ಥಿಕ ಲಾಭದ ದೃಷ್ಟಿಯಿಂದ ನೋಡದೆ ಕಬ್ಬನ್ನು ಬೆಳೆಸುವ ಒಕ್ಕಲಿಗನ ಹಿತಸಂರಕ್ಷಣೆಯ ಕಡೆಗೂ ಲಕ್ಷ್ಯಕೊಡಬೇಕೆಂದು ಶ್ರೀ ಕೆ. ಎಂ. ಮುನ್ಶಿಯವರು ಹೇಳಿದರು.

ಭಾರತದಲ್ಲಿ ಶ್ರೀಮತಿ ರೂಜವೆಲ್ಟರು

ಶ್ರೀಮತಿ ರೂಜವೆಲ್ಟರವರು ಭಾರತದಲ್ಲಿ ನಾಲ್ಕು ವಾರ ಸಂಚಾರ ಕೈಗೊಂಡು ಇಲ್ಲಿನ ಚಾರಿತ್ರಿಕ ಪ್ರದೇಶ ಹಾಗೂ ಕಲಾಪೂರ್ಣ ಚಿತ್ರಗಳನ್ನು ನೋಡಿ ಮೆಚ್ಚುಗೆಯನ್ನು ವ್ಯಕ್ತಪಡಿಸಿರುವರು. ಭಾರತಕ್ಕೆ ಬರಬೇಕೆಂದು ಶ್ರೀ ನೆಹ್ರೂರವರು ಬಹಳ ಕಾಲದ ಹಿಂದೆಯೇ ಅವರಿಗೆ ಆಮಂತ್ರಣವಿತ್ತಿದ್ದರು. ಮುಂದಿನ ಕೆಲವು ವರ್ಷಗಳಲ್ಲಿ ಅಮೇರಿಕೆಯ ಆರ್ಥಿಕ ಸ್ಥಿತಿಗತಿ ಹೇಗಾಗಬಹುದೆಂದು ಸಾಮಾನ್ಯ ವಿವೇಚನೆಯುಳ್ಳ ಹೊತ್ತಿಗೆಯೊಂದನ್ನು ಅವರು ಬರೆಯಲಿದ್ದಾರೆ. ಜಗತ್ತಿನ ಬೇರೆ ಬೇರೆ ದೇಶಗಳ ಆರ್ಥಿಕ ಪರಿಶೀಲನೆಯೂ ಇದಕ್ಕೆ ಅವಶ್ಯವಾಗಿರುವದರಿಂದ ಭಾರತದ ಆರ್ಥಿಕ ಪರಿಸ್ಥಿತಿಯನ್ನವರು ಅವಲೋಕಿಸುವವರಿದ್ದಾರೆ. ನಾಲ್ಕು ವಾರಗಳಲ್ಲಿಯೂ ಭಾರತ ಸರಕಾರದ ಅತಿಥಿಗಳಾಗಿ ಉಳಿಯುವ [illegible] ಅಭ್ಯಾಸಬಲದಿಂದ ಪ್ರಕಾಶಗೊಳ್ಳುವ ವಿಚಾರದಿಂದ ಭಾರತದ ಬಗ್ಗೆ ಅಮೇರಿಕನರಿಗೆ ಹೆಚ್ಚಿನ ಪರಿಚಯವಾಗುವದೆಂದೂ ಅವರು ಹೇಳಿದರು. ಅಂತೂ ಈಚೀಚೆ ಅಮೇರಿಕೆಯ ನಿಯೋಗಗಳು ಬಹಳವಾಗಿ ನಮ್ಮ ದೇಶಕ್ಕೆ ಬರುತ್ತಿವೆ. ಮಾತ್ರವಲ್ಲ ಪ್ರತಿಯೊಬ್ಬರೂ ನಮ್ಮ ದೇಶದ ಯೋಜನೆ ಹಾಗೂ ಆರ್ಥಿಕ ಸಂಬಂಧಗಳ ಕುರಿತಾಗಿ ಹೆಚ್ಚಿನ ಆಸ್ಥೆ ವಹಿಸುತ್ತಿರುವುದು ಶುಭಚಿಹ್ನೆಯೆಂದೇ ಹೇಳಬೇಕು. ಯಾರಿಂದ ನಾವು ಎಂತಹ ನೆರವು ಪಡೆದರೂ ರಾಜಕೀಯ ಆತ್ಮಹತ್ಯೆಯನ್ನೆಂದೂ ಮಾಡಿಕೊಳ್ಳಲಾರೆವೆಂದು ಶ್ರೀ ನೆಹ್ರೂರವರು ಹೇಳಿದಂಶವನ್ನು ನಾವು ಮರೆಯುವಂತಿಲ್ಲ.

ಸ್ವೀಕಾರ ವಿಮರ್ಶೆ

ಮದಾಂಬಾವರಿ

ಮೂಲ ಲೇಖಕ—ಗಸ್ಟಾವ್ ಫ್ಲಾಬೋ
ಅನುವಾದಕ— ತ. ರಾ. ಸು. ಪ್ರಕಾಶಕರು
—ಆನಂದ ಬ್ರದರ್ಸ ಬೆಂಗಳೂರು ಕ್ರೌನ್ ಅಷ್ಟದಳ ಆಕಾರದ ೧೯೭ ಪುಟಗಳು, ಬೆಲೆ ರೂ. ೨-೧೨-೦

ಜನಜೀವನದ ದರ್ಶನ ಮಾಡಿಕೊಡುವ ಸಾಹಿತ್ಯ ನಮಗೆ ತೀರ ಸಾಮಾನ್ಯವೆನಿಸಿದ ಅನುಭವಗಳನ್ನೆ ವಿವರಿಸುವುದರಿಂದ ಅದರಲ್ಲಿ ರಸೋದ್ರೇಕಕ್ಕೆ ಕೆಲವೊಮ್ಮೆ ಸ್ಥಾನಸಿಗದೆ ಹೋಗುವುದುಂಟು. ಆದರೆ ಕುಶಲ ಲೇಖಕನ ಕೈ ಕಸದಲ್ಲಿಯೂ ರಸತರುವಂಥದು. ಅದೇ ಮನೋವೈಜ್ಞಾನಿಕವಾಗಿ ಹೃದಯದಾಳಲನ್ನು ಪರಿಪರಿಯಾಗಿ ವಿಶ್ಲೇಷಿಸುವ ಸಾಮರ್ಥ್ಯವುಳ್ಳ ಬರಹಗಾರ ನಿಜಕ್ಕೂ ಓದುಗರೆಲ್ಲರ ಮೆಚ್ಚುಗೆಗೆ ಪಾತ್ರನಾಗುತ್ತಾನೆ. ಮನ್ನಣೆಯನ್ನು ಗಳಿಸುತ್ತಾನೆ. ಬಂಗಾಳದ ಶ್ರೇಷ್ಠಸಾಹಿತಿಗಳೆನಿಸಿರುವ ಶರಚ್ಚಂದ್ರರ ಕಾದಂಬರಿಗಳಲ್ಲಿ ಬರುವ ಅಂತರ್ ಮಥನವೇ ಅವರ ಕಲಾಸೃಷ್ಟಿಯನ್ನು ಅಜರಾಮರವಾಗಿಸಿವೆ. ಪಾತ್ರಗಳ ಬಾಹ್ಯ ವರ್ತನೆಗಳನ್ನಲ್ಲ—ಅವಕ್ಕೆ ಕಾರಣವಾದ ಆಂತರಿಕ ಸ್ವರೂಪಗಳನ್ನು ಕಲಾತ್ಮಕವಾಗಿ ಬಿಂಬಿಸುವುದು ಸಾಹಿತ್ಯಕ್ಕೆ ಸಾಧ್ಯವಾದರೆ ಅದು ಓದುಗರ ಮನಸ್ಸಿನ ಸುಪ್ತಭಾವೋದ್ರೇಕಗಳನ್ನು ಕೆಣಕಬಲ್ಲುದು ಮತ್ತು ಸಹಾನುಭೂತಿಯನ್ನು ಗಳಿಸಬಲ್ಲುದು ಪ್ರಸ್ತುತ ಕಾದಂಬರಿ ಇದಕ್ಕೊಂದು ಭವ್ಯ ನಿದರ್ಶನ. ಗಸ್ಟಾವ್ ಫ್ಲಾಬೋ ಅರಿಸಿದ ಕತೆ ಬಹಳ ಸಹಜವಾದುದು ನಮ್ಮ ಪ್ರವೃತ್ತಿಯು ಸುಖವನ್ನರಸುತ್ತಾ ಬಾಹ್ಯ ಗಮನಕ್ಕೆ ತೊಡಗಿದಾಗ ನೊಳಕ ಅತೃಪ್ತಿ ಹೇಗೆ ಆತ್ಮಹತ್ಯೆಯಲ್ಲಿ ಅಂತ್ಯವಾಗುವುದೆಂಬುದನ್ನು ಅವರು ಪೂರ್ಣವಾಗಿ ಬಿಡಿಸಿರುವರು. ಕಲ್ಪನೆಯು ಕುಮತಿಯನ್ನೇರಿ ಲಗಾಮು ಸಡಲಿಸಿ ನಾಗಾಲೋಟಕ್ಕೆ ತೊಡಗಿದರೆ, ನಮ್ಮ ಬಂಗಾರದಂಥ ಬದುಕು ಅತೃಪ್ತಿಯ ಮುಳ್ಳು ಗಂಟಿಗಳಿರುವ ಬೆಂಗಾಡಾಗಿ ಮಾರ್ಪಡುವುದು. ಸುಖಾನುಭವ ಬಾಹ್ಯ ಪ್ರತಿಕ್ರಿಯೆಯಿಂದ ಎಂದೆಂದಿಗೂ ಮನುಷ್ಯನಿಗೆ ಒದಗಿ ಬರಲಾರದು ಹೃದಯಾಂತರಾಳದಲ್ಲಿರುವ ತೃಪ್ತಿ ಹಾಗೂ ಸಮಾಧಾನದ ಭಾವನೆಗಳೇ ಬಾಳ್ವೆಯುದ್ದಕ್ಕೂ ಆನಂದವನ್ನು ತರಬಲ್ಲುವಲ್ಲದೆ, ಹೃದಯದ ಕೊರಗಿನಿಂದ ಇದು ಎಷ್ಟಕ್ಕೂ ಸಾಧ್ಯವಿಲ್ಲ. ಇಂದು ನಮ್ಮ ಜನ ಹಗಲು ಗನಸುಗಳಲ್ಲಿ ಆಸಕ್ತಿ ವಹಿಸಿ ಕರ್ತವ್ಯಪರಾಙ್ಮುಖರಾಗಿ ಕುಳಿತಿರುವ ಗಳಿಗೆಗೆ ಇಂಥ ಸಜೀವ ಸಾಹಿತ್ಯ ಸೃಷ್ಟಿ ವಿಪುಲವಾಗಿ ಬೇಕಾಗಿದೆ. ಕಾದಂಬರಿಯಲ್ಲಿ ಸೂಚಿತವಾದ ಪರಿಣಾಮ ಆದರ್ಶವಾಯುವಲ್ಲ.—ನಿಜ. ಆದರೆ ಅಂಥ ದುರಂತದಿಂದ ದೂರವಿರಬೇಕೆಂದೇ ಓದುಗನಿಗೆ ಈ ಕಾದಂಬರಿ ನೀಡುವ ಸಂದೇಶವಾದುದರಿಂದ, ನಮ್ಮೆಲ್ಲರ ಬದುಕನ್ನು ಸುಗಮವಾಗಿಸಲು ಇದು ನೆರವಾಗುವುದು. ಇಂಥಾ ಸಾಹಿತ್ಯದಲ್ಲಿ ಹಿತಮಿತವಾದ ಸಂಭಾಷಣೆ, ಯೋಗ್ಯ ವರ್ತನೆಗಳು, ಸನ್ನಿವೇಶಗಳ ಸೂಕ್ಷ್ಮ ಸಂಯೋಜನೆಗಳು ಕತೆಗೆ ಕಳೆಗಟ್ಟಿವೆ. ಕಥಾನಾಯಕಿ ಎಮ್ಮಾ [ಮದಾಂಬಾವರಿ]ಳ ಹೃದಯೋದ್ವೇಗವನ್ನು ವರ್ಣಿಸುವ ಲೇಖನಿ ತುಂಬ ಆಕರ್ಷಕವೆನಿಸುತ್ತದೆ. ಈ ಆಕರ್ಷಣೆಯನ್ನು ಕೆಡಿಸದ ಕೈಗುಣ ಅನುವಾದ ಮಾಡಿದ ತ. ರಾ. ಸು. ಅವರದು. ಫ್ರೆಂಚ ಭಾಷೆಯ ಶಬ್ದಗಳೂ ಹೆಸರುಗಳೂ ಇಲ್ಲವಾದರೆ, ಇದನ್ನು ಅನುವಾದವೆನ್ನುವುದೂ ಕಷ್ಟ—ಅಷ್ಟು ಮುದ್ದಾಗಿದೆ. ಭಾರತೀಯ ದೃಷ್ಟಿಯಿಂದ ಅಸಭ್ಯ ಹಾಗೂ ಅಶ್ಲೀಲವೆಂಬಂಥ ಸನ್ನಿವೇಶಗಳು ಕಾದಂಬರಿಯಲ್ಲಿವೆಯಾದರೂ ಮೂಲದೇಶದ ವಾತಾವರಣಕ್ಕನುಸಾರವಾಗಿ ಅದೊಂದು ನೈಜ ಚಿತ್ರ. ಸಾಹಿತ್ಯದಿಂದ ಸ್ಫೂರ್ತಿ ಪಡೆದು ಬದುಕು ನಡೆಸಲು ಉದ್ಯುಕ್ತರಾಗುವ ಈಗಿನ ತರುಣ ತರುಣಿಯರು ಈ ಕಾದಂಬರಿಯನ್ನು ಓದಿ ಜಾಗೃತರಾಗುವುದು ಒಳಿತು. ಮನಸ್ಸಿನ ರಾಗೋದ್ರೇಕಗಳನ್ನು ಸರಿಯಾದ ದಾರಿಗೆ ತಿರುಗಿಸಿಕೊಂಡು ಗುಣಧರ್ಮಗಳ ಸಹಜ ತೃಪ್ತಿಯಲ್ಲಿ ಆನಂದಗಾಣಬೇಕೆಂಬುದನ್ನು ಅವರು ಈ ಕಾದಂಬರಿಯಿಂದ ಕಲಿಯಬಹುದು. ತದ್ವಿರುದ್ಧ ಪಥಗಾಮಿಗಳಾದರೆ, ಎಮ್ಮಾಳ ದುರಂತ ಅವರಿಗೂ ಕಾದಿದೆ!

—ಕಾರ್ತಿಕೇಯ

ಶೋಚನೀಯ ನಿಧನ: —ಕತೆಗಾರರು— ರಾ. ಬಾ. ಶಿರೋಳ, ಸಂಪಾದಕರು: ಕುಲಕರ್ಣಿ ಬಿಂದು ಮಾಧವ, ಬಾದಾಮಿ, ಪ್ರಕಾಶಕರು ಶಾಂತಿ ಸಾಹಿತ್ಯಮಾಲೆ, ಬಾದಾಮಿ. 1/8 ಕ್ರೌ. ಆಕಾರದ 64 ಪುಟಗಳು ಬೆಲೆ 1-0-0

ಕಾಗದ ಕಳಚಿ ಬಿತ್ತು, ರಕ್ತದಾನ, ಆ ರಾಮು ಕುರ್ಚಿ, ಎ. ಆರ್. ಪಿ, ದುರ್ಲಭ, ಶೋಚನೀಯ ನಿಧನ ಎಂಬ ಆರು ಕತೆಗಳ ಸಂಗ್ರಹವಿದು ಮುನ್ನುಡಿಕಾರ ಶ್ರೀ ಜಿ ಆರ್ ಪಾಂಡೇಶ್ವರರವರು ಹೇಳಿರುವಂತೆ ಆರೂ ಕತೆಗಳು ಉತ್ತಮ ವರ್ಗಕ್ಕೆ ಸೇರುವ ಅರ್ಹತೆಯುಳ್ಳವು. ಪ್ರತಿಯೊಂದು ಕತೆಯು ಕುತೂಹಲಕಾರಿಯಾದ ಘಟನೆಯುಳ್ಳದ್ದು, ಶೈಲಿಯೂ ಭಾಷೆಯೂ ಮನೋಜ್ಞವಾಗಿವೆ. ಕಥಾ ಪ್ರೇಮಿಗಳು ಈ ಸಂಕಲನವನ್ನು ಆನಂದದಿಂದ ಸ್ವೀಕರಿಸಿ ಪ್ರೋತ್ಸಾಹಿಸಲಿ.

ಸ್ವೀಕಾರ

ಶ್ರೀಪತಿ ಪಂಚಾಂಗ:—ಶ್ರೀಪತಿ ನರಸಿಂಹ ಅಡಿಗರಿಂದ ಸೂರ್ಯ ಸಿದ್ಧಾಂತರೀತ್ಯಾ ಗುಣಿಸಿ ಪರಿಶೋಧಿಸಿ ಕೊಟ್ಟದ್ದರಿಂದ ಪ್ರಕಟಿಸಲ್ಪಟ್ಟದ್ದು.

ರಾಷ್ಟ್ರಭಾಷಾ ಶಿಕ್ಷಣ ಶಿಬಿರ ಉಡುಪಿ,—ಇದರ ಪಂಚಾಂಗ ಪತ್ರ 'ಪ್ರಕಾಶ' ವಾರಪತ್ರಿಕೆ, ಉಡುಪಿ, ಮದ್ರಾಸು ಟೈಪ್ ಫೌಂಡ್ರಿ, ಮದ್ರಾಸು ಗೇಂಜಸ್ ಪ್ರಿಂಟಿಂಗ್ ಇಂಕ್ ಫೇಕ್ಟರಿ, ಮುಂಬಾಯಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಧಾರವಾಡ, ಹಿಂದುಸ್ತಾನ್ ಪೇಪರ್ ಎಂಡ್ ಸ್ಟೇಶನರಿ ಮಾರ್ಟ್, ಉಡುಪಿ, ನೋರ್ಟನ್ ಎಂಡ್ ಕೊ, ಮದ್ರಾಸು ಎಗ್ರಿಕಲ್ಚರಲ್, ಇಂಡಸ್ಟ್ರೀಯಲ್ ರೈಸ್ ಎಂಡ್ ಓಯಿಲ್ ಮಿಲ್ಸ್ ಉದ್ಯಾವರ, ನಿಯೋರೋಯಲ್ ಕೆಫೆ, ಇವರ ಕೆಲಂಡರುಗಳು.

ಪ್ರಕಟಣೆ

ತೋನ್ಸೆ ಪಂಚಾಯತ ಬೋರ್ಡು

ಈ ಬೋರ್ಡು ವ್ಯವಹಾರ ಕ್ಷೇತ್ರಕ್ಕೆ ಒಳಪಟ್ಟ ಕೆಮ್ಮಣ್ಣು ಶುಕ್ರವಾರ ಸಂತೆ ದಿನಚರ್ಯದ ಮೀನು ಮಾರ್ಕೆಟು ಮತ್ತು ಪಡುಕುದ್ರು ಬಾರಿಯಲ್ಲಿ ಕೂಡಾ 1952ನೇ ಇಸವಿ ಎಪ್ರಿಲ್ ತಾರೀಕು 1ರಿಂದ 1953ನೇ ಇಸವಿ ಮಾರ್ಚ ತಾರೀಕು 31ರ ವರೆಗೆ ವಸೂಲು ಮಾಡುವ ಸ್ವಾತಂತ್ರ್ಯವನ್ನು ಇದೇ ಮಾರ್ಚತಿಂಗಳ ತಾರೀಕು 13ನೇ ಗುರುವಾರ ಸಾಯಂಕಾಲ ಘಂಟೆ 3ಕ್ಕೆ ಕೆಮ್ಮಣ್ಣು ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಪ್ರತಿ ಪ್ರತ್ಯೇಕ ಬಹಿರಂಗವಾಗಿ ಏಲಂ ಮಾಡಲಾಗುವುದು ಏಲಮಿನ ಶರತ ವಗೈರೆ ಇತರ ವಿವರಗಳನ್ನು ಸದರಿ ಬೋರ್ಡು ಆಫೀಸಿನಲ್ಲಿ ತಿಳಿದುಕೊಳ್ಳಬಹುದು. ಎಂತ ಈ ಮೂಲಕ ಎಲ್ಲಾ ಜನರಿ ತಿಳಿಯಪಡಿಸೋಣಾಗುತ್ತದೆ.

ಪಡುಕುದ್ರು ವೆಂಕಟಕೃಷ್ಣರಾವ್
ಪ್ರಸಿಡೆಂಟ್
ತೋನ್ಸೆ ಪಂಚಾಯತ ಬೋರ್ಡು
ಪಡುತೋನ್ಸೆ ತಾ. 3-3-1952

ಉಡುಪಿ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನ
O. S. No. 10/195
T. ರಾಮಚಂದ್ರರಾವ್ —ವಾ
ಮತ್ತು
ಶ್ರೀಧರ ಕಲ್ಕೂರ, ವೆಂಕಟ್ರಮಣ ಕಲ್ಕೂರರ ಮಗ, ಉಡುಪಿ ತಾಲೂಕು ತೆಂಕನಿಡಿಯೂರು ಗ್ರಾಮ —ಪ್ರತಿವಾ
ಯವರೊಳಗೆ—

ಸದರೀ ಪ್ರತಿವಾದಿಗೆ ಈ ಮೂಲಕ [illegible] ಸುವುದೇನಂದ್ರೆ:

ಪ್ರತಿವಾದಿಯು ಆತನ ಕುಟುಂಬಾ[illegible]ವಾದ ನರ್ಜನ ಉದ್ದಿಶ್ಯ ವಾದಿಗೆ ರೂ. 5[illegible]ಕ್ಕೆ ತಾ. 3-7-1950ರಲ್ಲು ದಿನಾಂ[illegible] ನೋಟು ಬರಕೊಟ್ಟು ಪಡದ ಸಾಲದ [illegible]ಟ್ಟು ಬಾಕಿ ಅಸಲು ಬಡ್ಡಿ ಖ್ಯವಜು [illegible] ರಜಿಸ್ಟ್ರಿ ನೋಟೀಸು ಖರ್ಚು ಕೂಡಾ ರ[illegible] 369-12-6ಕ್ಕೆ ಮಾಡಿದ ಮೇಲ್ಕಂಡ [illegible]ಜ್ಯವು ತಾ 21-3-1952ಕ್ಕೆ ನಿಮ್ಮ ನೋ[illegible]ಸು ಬಗ್ಗೆ ಇಟ್ಟಿದೆ. ಸದ್ರಿ ವ್ಯಾಜ್ಯದಲ್ಲಿ ನಿ[illegible]ಗೇನಾದರೂ ವ್ಯವಹರಿಸುವದಿದ್ದಲ್ಲಿ [illegible]ಲ್ಕಂಡ ತಾ 21-3-52ನೇ ದಿವ್ಸ ಬೆ[illegible] 10 ಘಂಟೆಗೆ ಮೇಲ್ಕಂಡ ಕೋರ್ಟು ಮು[illegible]ದೆ ಸ್ವತಹಾ ವ ವಕೀಲರ ಮುಖಾಂತರ [illegible] ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕ[illegible] ತಪ್ಪಿದ್ದಲ್ಲಿ ನಿಮ್ಮನ್ನು ಶಿಮ್ಮಾ ಮಾಡಿ [illegible] ವ್ಯಾಜ್ಯವು ಪೈಸಲು ಮಾಡಲ್ಪಡುವುದು.

P. V. Acharya,
Vakil for Plainti[ff]

ಉಡುಪಿ, ತಾ 1-3-52

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಹುಂಚಿಕಾಯಿ, ಒಳ್ಳೆಣ್ಣೆ ಬಿಡಬೇಕು.

ಡಾಬ್ಲಿ ೧ಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ಶಿವಬಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ಕೋಮಲಾಂಗಿಯರೆ— ನಿಮ್ಮ ಚಿಂತೆಗಳನ್ನು ಬಿಟ್ಟುಬಿಡಿರಿ. ಎಲ್ಲ [illegible] ಮುಟ್ಟು ದೋಷಗಳಿಗೂ ಮಹಾಮಾತ್ರೆಯನ್ನು ಸೇವಿಸಿರಿ. ಸಾಮಾನ್ಯ ಮಾತ್ರೆಗಳಿಗೆ ರೂ.7-8-0; ಸ್ಪೆಶಲ್ ರೂ. 10-8-0; ಅತೀ ಸ್ಪೆಶಲ್ ರೂ. 16-0-0; ವಿ. ಪಿ. ಚಾರ್ಜು ಪ್ರತ್ಯೇಕ

RAJA MART,
West Vadmapokki Street, MADURAI

ಬೆಳಗಿನ ಫಲಹಾರ ಬಹಳ ಚಲೋದಿತ್ತು. ಬಿಸಿ ಬಿಸಿ ಬ್ರೆಡ್, ಆದರೆ ಬಿಸಿ ಹೋಗದ ಹಾಗೆ ಟವೆಲ್ಲು ಕಾಗದದಲ್ಲಿ ಮುಚ್ಚಿದ್ದರು. ಅದೇ ರೀತಿ ಬಿಸಿ ಹಾಲಿನಪಾತ್ರೆ, ಮುಚ್ಚಳಿಕ್ಕೆ ಕೈಗೆ ಬಿಸಿ ತಾಗದಂತೆ ಟವೆಲ್ಲು ಕಾಗದ ಇಷ್ಟು ನಾಜೂಕಿನ ಕೆಲಸ [service] ನಾನು ಬೇರೆ ಎಲ್ಲೂ ನೋಡಲಿಲ್ಲ. ಕಾಫಿ ಕುಡಿಯುವ ದೊಡ್ಡ ಕೋಣೆಯ ಎದುರು ಹೂವಿನ ತೋಟ. ಸಮೀಪ ಟೆನ್ನಿಸ್ ಆಡುವ ಅಂಗಣ (Tennis court)

ಮರುದಿನ, ಜೂನ್ 7ನೇ ಬೆಳಗ್ಗೆ, ಶ್ರೀ ಹೊಳ್ಳರು ಬಂದೊಡನೆಯೇ ಬೇಂಕಿಗೆ ಹೋಗಿ ಹಣ ಬದಲು ಮಾಡಿದೆ. I ಪೌಂಡಿಗೆ [ರೂ. 13-5-4] 12. 23 ಫ್ರಾಂಕ್ಸು ಸಿಕ್ಕಿತು. ಅಂದರೆ 1 ಫ್ರಾಂಕಿಗೆ ಸುಮಾರು 1 ರೂಪ್ಯ 2 ಆಣೆ. ಪಟ್ಟಣದಲ್ಲಿ ಎಲ್ಲೆಲ್ಲೂ ವ್ಯಾಪಾರ. ಇಲ್ಲಿ ಬಹಳ ಒಳ್ಳೆ ವಾಚುಗಳು ಸಿಕ್ಕುತ್ತವೆ. ಹಾಗೆಯೇ ಒಂದು ವಾಚಿನ ಅಂಗಡಿಗೆ ಹೋಗಿ 2 ವಾಚುಗಳು ಮತ್ತು 1 ಟ್ಯಾಂಪೀಸು ತೆಗೆದುಕೊಂಡೆ. ಅಲ್ಲಿ ರೂಪಾಯಿ 125ಕ್ಕೆ ತೆಗೆದುಕೊಂಡದ್ದಕ್ಕೆ ನಮ್ಮ ದೇಶದಲ್ಲಿ ರೂಪ್ಯ 300ಕ್ಕೂ ಮಿಕ್ಕಿ ಕ್ರಯ. ಇದು ನಮ್ಮ ದೇಶಕ್ಕೆ ಬರುವಾಗ ಅದರ ಕ್ರಯದ ಮೇಲೆ ಸುಂಕ ಬೀಳುವುದರಿಂದ ಮತ್ತು ಮುನಾಫೆ ಸೇರುವುದರಿಂದ. ಆದರೆ ಪ್ರಯಾಣಿಕರಿಗೆ 2 ವಾಚು 1 ಟ್ಯಾಂಪೀಸಿನ ಮೇಲೆ ಸುಂಕವಿಲ್ಲ. ಹಾಗೆಯೇ ಈ ಪಟ್ಟಣದಲ್ಲಿ ಇನ್ನಿತರ ಅನೇಕ ಕೈಗಾರಿಕೆಗಳ ಸಾಮಾನುಗಳು ಸಿಕ್ಕುತ್ತವೆ. ಪಟ್ಟಣದ ಸಾಮಾನುಗಳು, ವಿಜ್ಞಾನದ ಉಪಕರಣಗಳು ವಗೈರೆ. ಜ್ಯೂರಿಕ್ ನಗರದಲ್ಲಿ ಅಲ್ಲಲ್ಲಿ ಗುಡ್ಡಗಳಿವೆ. ಹೀಗಿರುವ ಕಾರಣ ನೆಲವು ಎತ್ತರ ತಗ್ಗು, ಬಹಳ ಎತ್ತರವಾದ ಒಂದು ಗುಡ್ಡೆಯಲ್ಲಿ ನೂರಾರು ಮನೆಗಳಿವೆ. ಅದಕ್ಕೆ ಹೋಗಿ ಬರಲಿಕ್ಕೆ ವಿದ್ಯುಚ್ಛಕ್ತಿಯ ಮೂಲಕ ಮೇಲೆ ಕೆಳಗೆ ನಡೆಯುವ ಟ್ರಾಮುಗಳು, ಟ್ರಾಮುಗಳ ಎರಡೂ ಬದಿ ರೈಲು ಪಟ್ಟಿಗಳಿದ್ದು ಒಂದರಲ್ಲಿ ಮೇಲಕ್ಕೆ ಹೋಗುವಾಗ ಇನ್ನೊಂದರಲ್ಲಿ ಕೆಳಕ್ಕೆ ಇಳಿಯುವುದು. ಈ ಗುಡ್ಡಗಳಲ್ಲಿ ಐಶ್ವರ್ಯವಂತರ ಮನೆಗಳು. ಒಂದೊಂದಕ್ಕೆ ಲಕ್ಷಗಟ್ಟಲೆ ಮೌಲ್ಯ. ಆ ಗುಡ್ಡೆಯಿಂದ ನಗರದ ರಮ್ಯವಾದ ದೃಶ್ಯ. ನಗರದ ಮಧ್ಯದಲ್ಲೇ ದೊಡ್ಡ ಸರೋವರ. ಅದರಲ್ಲಿರುವ ಅನೇಕ ಲೋಂಚುಗಳಲ್ಲಿ ಜನರು ಸಂಚಾರ ಮಾಡುವರು. ಗುಡ್ಡೆಯಿಂದ ಇಳಿದು ಸರೋವರಕ್ಕೆ ಹೋಗುವ ದಾರಿಯಲ್ಲಿ ಶ್ರೀ ಹೊಳ್ಳರು ಕಲಿಯುತ್ತಿದ್ದ ರಸಾಯನ ಶಾಸ್ತ್ರದ ವಿಶ್ವವಿದ್ಯಾಲಯವಿದೆ. ವಿಶ್ವವಿದ್ಯಾಲಯದಲ್ಲಿ ನನ್ನ ತಮ್ಮನು ಮೂರು ವರ್ಷಗಳಲ್ಲಿ ಸಂಶೋಧನೆ (research) ಕಲಿತು ಕಳೆದ ವರ್ಷ ನಮ್ಮ ದೇಶಕ್ಕೆ ಬಂದಿರುತ್ತಾನೆ. ಇಲ್ಲಿ ಇರುವ ಪ್ರೊಫೆಸರರು ಬಹಳ ಬುದ್ಧಿವಂತರು ಮತ್ತು ಐಶ್ವರ್ಯವಂತರು ಕೂಡಾ. ಏಕೆಂದರೆ ಅವರು ವಿಜ್ಞಾನದಲ್ಲಿ ಪ್ರಸಿದ್ಧವಾದ ಕೂಡಲೇ ಅವರನ್ನು ದೊಡ್ಡ ದೊಡ್ಡ ಕಂಪೆನಿಯವರು ತಮ್ಮ ಆಡಳಿತ ವರ್ಗಕ್ಕೆ ತೆಗೆದುಕೊಂಡು ಅ

ಪ್ರವಾಸಿಯ ಪತ್ರಗಳು ೨೫

[ಕಳೆದ ಸಂಚಿಕೆಯಿಂದ ಮುಂದುವರಿದುದು]

ವರಿಗೆ ಮುನಾಫೆಯನ್ನು ಒದಗಿಸಿಕೊಡುವರು ನಮ್ಮ ದೇಶದಲ್ಲಿದ್ದಂತೆ ಅವರು ಬಡತನದಲ್ಲಿರುವುದಿಲ್ಲ.

ಈ ಊರಲ್ಲಿ ಒಂದು ಮೇಲು ತರಗತಿಯ ಸಸ್ಯಾಹಾರದ ರೆಸ್ಟೋರೆಂಟ್ ಇದೆ. ಅದಕ್ಕೆ ದಿನನಿತ್ಯವೂ ಸಾವಿರಾರು ಜನರು ಬರುತ್ತಾರೆ. ಅಲ್ಲಿಯೇ ನಾವು ಮಧ್ಯಾಹ್ನ ಊಟ ಮಾಡಿದೆವು ಇಬ್ಬರಿಗೆ ಸುಮಾರು 9 ರೂಪ್ಯ. ಅಲ್ಲಿ ತಿಂಡಿ ಬಡಿಸುವ ಹುಡುಗಿಯರಿಗೆ ತಿಂಗಳಿಗೆ ಸುಮಾರು 500 ರೂಪ್ಯಾಗೂ ಮಿಕ್ಕಿ ಸಂಬಳ.

ಈ ಊರಿನ ಮಕ್ಕಳು ಬಹು ಚಲೋದಾಗಿ ಕಾಣುತ್ತಾರೆ. ಸ್ವಚ್ಛವಾದ ದುಸ್ತು. ಬೇರೆ ಊರುಗಳಂತೆ ದೊಡ್ಡವರು ತಮ್ಮ ಐಶ್ವರ್ಯವನ್ನು ತೋರಿಸುವುದಿಲ್ಲ. ದೊಡ್ಡವರು ಕೂಡಾ ಟ್ರಾಮುಗಳಲ್ಲೇ ಹೋಗುವುದು ಜಾಸ್ತಿ

ಹೀಗೆ ಇಡೀ ದಿನ ಜ್ಯೂರಿಕಿನಲ್ಲಿದ್ದು ಮರುದಿನ ಬೆಳಗ್ಗೆ 7 ಗಂಟೆಗೆ ಹೊರಡುವ ರೈಲಲ್ಲಿ ಸ್ವಿಸ್ಸ್ ದೇಶದ ರಾಜಧಾನಿಯಾದ ಬರ್ನ್ ಎಂಬ ನಗರದ ಮುಖಾಂತರ ಇಂಟರ್ ಲಾಕನ್ ಎಂಬ ಪಟ್ಟಣಕ್ಕೆ ಹೊರಟೆನು. ಹೊರಡುವಾಗಲೇ ನೂರಾರು ಜನರು ಆರುವರೆ ಗಂಟೆಗೆ ಕೆಲಸಕ್ಕೆ ಟ್ರಾಮುಗಳಲ್ಲಿ ಬರುತ್ತಿದ್ದರು. ಅದೇ ರೀತಿಯಲ್ಲಿ ನಾನು ಸ್ಟೇಶನಿಗೆ ಬಂದಾಗ ಅಲ್ಲಿ ಕೂಡಾ ರೈಲಲ್ಲಿ ಸಾವಿರಾರು ಜನರು ಸಮೀಪದ ಊರುಗಳಿಂದ ಕೆಲಸಕ್ಕೆ ಬರುತ್ತಿದ್ದರು

ವಿಚಾರವಾಣಿ —ಕೆ. ಆರ್. ಕಾರಂತ.

ಕತಾಯಿ ಪ್ರಚಾರ

[ಕಳೆದ ಸಂಚಿಕೆಯಿಂದ]

ತುನಾಯಿ ಧುನಾಯಿ, ಕತಾಯಿಗಳ ಪ್ರಸಾರ ಮತ್ತು ಶಿಕ್ಷಣ

ತುನಾಯಿ, ಧುನಾಯಿ, ಮತ್ತು ಕತಾಯಿಗಳ ಪ್ರಾಸಂಗಿಕ ವರ್ಗ ಯಾ ಶಿಬಿರಗಳನ್ನು ಕತಾಯಿ ಮಂಡಲಗಳ ಕ್ಷೇತ್ರಗಳಲ್ಲಿ ಏರ್ಪಡಿಸಲು ಪ್ರಚಾರವನ್ನು ಚರಖಾ ಸಂಘವು ಕೊಡುವುದು. ಅಂಥಾ ಪ್ರಚಾರಕ ಪ್ರಯಾಣದ ಖರ್ಚನ್ನು ಚರಖಾ ಸಂಘವು ಕೊಡುವುದು. ಆದರೆ ಶಿಬಿರವು ನಡೆಯುವ ಕನಕ ಪ್ರಚಾರಕರಿಗೆ ಊಟ ಮತ್ತು ಇತರ ಏರ್ಪಾಡುಗಳನ್ನು ಮಾಡಲು ತಗಲಬಹುದಾದ ಖರ್ಚನ್ನು ಆಯಾಯ ಮಂಡಲದವರೇ ನೋಡಿಕೊಳ್ಳ ಬೇಕಾಗುವುದು.

ವಿಶಿಷ್ಟ ಪ್ರಸಂಗಗಳಲ್ಲಿ ಪ್ರಚಾರಕರನ್ನು ಚರಕ ಸಂಘವು ಕಳುಹಿಸಿ ಕೊಡುವುದು. ಸ್ಥಾನಿಕ ಸೇವಾಯೋಗಗಳ ಪ್ರಯೋಗವನ್ನು ನಡಿಸಲು ಚರಖಾ ಸಂಘವು ಉತ್ತೇಜನ ಕೊಡುವುದು:—

ಮಂಡಲದವರು ತಮ್ಮ ಸ್ಥಾನಗಳಲ್ಲಿ ನೇಯಿಗೆ ಕಾರ್ಯವನ್ನು ಪ್ರಾರಂಭಿಸುವ ಉದ್ದೇಶದಿಂದ ಯಾರಿಗಾದರೂ ನೇಯಿಗೆಯ ಶಿಕ್ಷಣವನ್ನು ಕೊಡಲಪೇಕ್ಷಿಸಿದರೆ ಅಂಥಾ ವಿದ್ಯಾರ್ಥಿಗಳಿಗೆ ನೇಯಿಗೆಯ ಶಿಕ್ಷಣವನ್ನು ಕೊಡಲು ಚರಖಾ ಸಂಘವು ಯೋಗ್ಯ ವ್ಯವಸ್ಥೆಯನ್ನು ಮಾಡುವುದು.

ನೂಲುವ ಕ್ಷೇತ್ರಗಳಲ್ಲೇ ಅಥವಾ ಅವುಗಳ ಸಮೀಪದಲ್ಲೇ ನೂತ ನೂಲನ್ನು ನೇಯುವುದು ಉತ್ತಮ. ಚರಖಾ ಸಂಘವು ಅಪೇಕ್ಷಿಸುತ್ತದೆ ಹಾಗಿಲ್ಲದಿದ್ದಲ್ಲಿ ಚರಖಾ ಸಂಘದ ಕೇಂದ್ರಗಳಲ್ಲಿ ವಸ್ತ್ರಸ್ವಾವಲಂಬಿಯರ ನೂಲನ್ನು ನೇಯು ಕೊಡುವ ಏರ್ಪಡನ್ನು ಕೇಂದ್ರಗಳ ನಿಯಮಕ್ಕನುಸಾರವಾಗಿ ಸಂಘವು ಮಾಡಿಕೊಡುವುದು.

ಮಂಡಲದ ಸದಸ್ಯರಿಗೆ ತಗಲಬಹುದಾದ ಖಾದಿಯನ್ನು ಒದಗಿಸಿ ಕೊಡಲು ಚರಖಾ ಸಂಘವು ಸಹಾಯವನ್ನು ಮಾಡುವುದು.

ಮಂಡಲದ ಸದಸ್ಯರಿಗೆ ಚರಖಾ ಸಂಘದ ನಿಯಮಗಳಿಗನುಸಾರವಾಗಿ ಖಾದಿಯನ್ನು ವಿಕ್ರಯಿಸಲು ಸಂಘವು ಯಥಾ ಶಕ್ತಿ ಪ್ರಯತ್ನಿಸುವುದು. ಮಂಡಲದವರು ವಸ್ತ್ರದ ಮಟ್ಟಿಗೆ ಸ್ವಾವಲಂಬಿಗಳಾಗ ಬೇಕೆಂಬುದು ಮುಖ್ಯೋದ್ದೇಶವು ಆದ ಕಾರಣ ಆ ವಿಚಾರವನ್ನು ಮರೆಯದೆ ಅಂಥಾ ಸದಸ್ಯರೆಲ್ಲರು ಖಾದಿಯನ್ನು ಕ್ರಯಕ್ಕೆ ಪಡೆಯುವುದನ್ನು ಕ್ರಮೇಣ ಕಡಿಮೆ ಮಾಡಬೇಕು. ಖರೀದಿ ಮಾಡುವುದಾದರೂ, ಚರಖಾ ಸಂಘದವರಿಂದ ಪ್ರಮಾಣಿತವಾದ ಖಾದಿಯನ್ನೇ ಮಂಡಲದ ಸದಸ್ಯರೆಲ್ಲರೂ ಕ್ರಯಕ್ಕೆ ಪಡೆಯಬೇಕು.

ಪ್ರತಿಯೊಂದು ಕತಾಯಿ ಮಂಡಲಕ್ಕೂ ನಿಯಮಾನುಸಾರವಾಗಿ ಚರಖಾ ಸಂಘದಿಂದ ಮಾಸ್ಯತಾ ಪತ್ರವು ಸಿಗಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು

ಅಖಿಲ ಭಾರತ ಚರಖಾ ಸಂಘ - ಕತಾಯಿ ಮಂಡಲ ದ. ಕ. ಮತ್ತು ಕೊಡಗು ರಾ.ಬಿ ರಥಬೀದಿ ಮಂಗಳೂರು.

For energetic and active living, for your mental and physical vigour and strength,

Always Use

KALI KAMALI

Chyavanprash.

A renowned Ayurvedic Medicine, prepared from rare Himalayan herbs and minerals. Useful fore men, women and Children alike. An ideal tonic for weak nerves and heart

Price per tin containing 80 tolas Rs. 10-0-0 Postage extra

Stockist for South & N. Kanara & Mysore state: { **M. Vinayaka Rao,** Bannanje Road, Udipi. S. K

AYURVEDIC PHARMACY

Baba kali Kamali-Wala RISHIKESH

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು.-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ್ಯ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಸಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಟಾಕಿಸ್ಟರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್‌ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನ ಎ ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂಧೂರ

ಬಹಿಷ್ಠೆ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಗರ್ಭವರಿಗೂ ಮುಟ್ಟು ಬಹಿಷ್ಠೆ ಸಂಬಂಧದ ಹೊಟ್ಟೆನೋವಿನಜೊತೆಗೆ ತಲೆನೋವು, ಸೊಂಟಶೂಲೆ, ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ.

ಮೂರು ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ಒಂದು ಸೆಟ್ ಅನುಪಾನ ಪತ್ರಿಕೆ ಮೇರೆ ಇಬ್ಬರೂ ಸೇವಿಸಿರಿ ಸಾಕು. ಶೋಭನವಾದ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾಪತ್ರಗಳನ್ನು ಪಡೆದಿದೆ.

ಕ್ರಯ:—ಒಂದುಸೆಟ್ 5ರೂ. ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1ರೂ ವಿ. ಪಿ. ಇಲ್ಲ. ಕ್ಯಾಟಲಾಗ್ ಉಚಿತ 6ರೂ. ಮನಿಆರ್ಡರ್ ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ,

ವಿಳಾಸ:—**A. R** ವಿಶ್ವೇಶ್ವರಯ್ಯ (ಎ. ರಾಮಸ್ವಾಮಿ ಅಯ್ಯರ್ ಸನ್,)

Prop: ಸಂತಾನ ಸಿಂಧೂರ

ಅಂಬಳೆ ಪೋಸ್ಟು, ಯಳಂದೂರು ತಾಲೂಕು ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಶಾಖೆ: 269 ಸೋನಾರ್ ಸ್ಟ್ರೀಟ್, ದಿವಾನ್ಸ್‌ರೋಡು, ಮೈಸೂರು.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ವಿಪುಲ ಸ್ನಾನ, ಊಟ, ಉಪಹಾರ, ಶೈಲಿ, ಶಯನ ಇವಕ್ಕೆಲ್ಲ ಶುದ್ಧತೆಯ ನ್ಯಾಯಕ್ಕೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇನ್ನೇನು ಬೇಕು? ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI. S. Kanara.

ತಾರೀಕು 6-3-52 ರಿಂದ

ವಾರದ ಭವಿಷ್ಯ

ತಾರೀಕು 12-3-52 ವರೆಗೆ

ಮೇಷ:—ನಿಮ್ಮ ಪ್ರಯತ್ನಗಳು ಸಫಲವಾಗುವವು. ಪರಿಶ್ರಮಕ್ಕಿಂತ ಅಧಿಕವಾಗಿ ಫಲ ಲಭಿಸುವದು. ಸ್ವಶಕ್ತಿಯಿಂದ ಜನತೆಯಲ್ಲಿ ಗಣ್ಯಸ್ಥಾನವನ್ನು ಸಂಪಾದಿಸುವಿರಿ. ಆದರೆ ಜನರೊಡನೆ ಕಲಹ ಹೆಚ್ಚುವದು. ಗುರುಹಿರಿಯರೊಡನೆ ಸೌಜನ್ಯದಿಂದಿರಲಾರಿರಿ. ದುಡಿದ ಹಣವು ಬಹುಮುಖದಿಂದ ವ್ಯಯವಾಗಿ ಕೈಬರಿದಾಗುವದು. ಆದರೂ ವಾರದ ಅದ್ಯಂತ ದಿನಗಳಲ್ಲಿ ಗೃಹ ಸುಖ, ಸ್ಥಾನಲಾಭ ಧನಾದಿಗಳೂ ಲಭಿಸುವವು.

ವೃಷಭ:—ದೈವವು ನಿಮ್ಮನ್ನು ಅಭೀಷ್ಟ ಶ್ರೇಣಿಗೆ ತಂದಿರುವದು. ನೀವು ಅಡಿದ್ದೇ ಮಾತು ಮಾಡಿದ್ದೇ ಕಾರ್ಯವು. ರಾಜಕೀಯ ರಂಗದಲ್ಲೂ ಸಾರ್ವಜನಿಕ ಕ್ಷೇತ್ರದಲ್ಲೂ ಒಳ್ಳೇ ಗೌರವ ಕೀರ್ತಿಗಳನ್ನು ಸಂಪಾದಿಸುವಿರಿ. ನಿಮ್ಮ ಆರ್ಥಿಕ ಭಾಗವಂತೂ ಪರಿಪೂರ್ಣವಾಗಿದ್ದು ಹಲವಾರು ಜನರಿಗೆ ಆಶ್ರಯದಾತರಾಗಲಿರುವಿರಿ. ನಿಮ್ಮ ಕಾರ್ಯಶಕ್ತಿ ಸಾಹಸಾದಿಗಳನ್ನು ಕಂಡು ಶತ್ರು ಜನರೂ ಕೂಡ ನಿಮ್ಮ ಮೈತ್ರಿಯನ್ನು ಬಯಸುವರು. ತಾ 7-8-9 ಅತ್ಯುತ್ತಮ ದಿನಗಳು.

ಮಿಥುನ:—ಅಪ್ರೇಷ್ಟರ ವಿಯೋಗ ದುಃಖಕ್ಕೆ ಸಿಗಲಿರುವಿರಿ. ಮಾತ್ರವಲ್ಲ ಪತ್ನಿ ಪುತ್ರರಿಂದಲೂ ದೂರವಿರಬೇಕಾದ ಪ್ರಸಂಗ ಪ್ರೊದಗುವದು. ಶತ್ರು ಜನರು ಪ್ರತೀಕಾರಾಸಕ್ತರಾಗುವರು. ಲೇವಾದೇವಿ ನಿಮಿತ್ತ ಜಗಳಗಳುಂಟಾಗಿ ಕೋರ್ಟಿಗೆ ಹೋಗುವ ಪ್ರಸಂಗ ಬರಲಿದೆ. ವಿನಾಕಾರಣ ಜನರೊಡನೆ ಕಲಹವಾದೀತು. ಆರ್ಥಿಕ ಸಮಸ್ಯೆಗೆ ಸಿಲುಕಿದ ನಿಮಗೆ ತಾ 6-10-11 ಈ ದಿನಗಳು ಕೊಂಚ ಇಷ್ಟದಾಯಗಳಾದಾವು.

ಕರ್ಕಾಟಕ:—ಕಷ್ಟಸಟ್ಟು ದುಡಿವ ಸ್ವಭಾವದವರಾದ ನಿಮ್ಮ ಇಷ್ಟವೂ ಬಹುಮಟ್ಟಿಗೆ ನೆರವೇರುವದು ಆರ್ಥಿಕ ಸಮಸ್ಯೆಯಿಂದ ದೂರವಾಗುವಿರಿ. ಆದರೆ ಸ್ತ್ರೀ ಜನರ ನಿಮಿತ್ತ ಕಲಹ ಅನಿಷ್ಟ ಅಪವಾದಗಳು ಬರಲಿವೆ. ದುರ್ಜನರ ಸಹವಾಸದಿಂದಾಗಿ ನಷ್ಟಕಷ್ಟಗಳನ್ನೂ ಅನುಭವಿಸುವಿರಿ. ಕಾಸರೋಗವು ಬಾಧಿಸಿಕೊಳ್ಳುವದು. ವಿವರ್ಣಿಯರೊಡನೆ ಕಲಹವಾಗುವ ಸಂಭವವಿದೆ. ತಾ 7-8-9 12 ಈ ದಿನಗಳು ಸುಖಲಾಭದಾಯಕಗಳಿವೆ.

ಸಿಂಹ:— ನಿರುದ್ಯೋಗದಿಂದ ಮುಕ್ತರಾಗುವಿರಿ. ನಿಮ್ಮ ಶ್ರಮಕ್ಕೆ ತಕ್ಕ ಫಲವು ಲಭಿಸಲಿದೆ. ಮಾತ್ರವಲ್ಲ ಅಕಸ್ಮಾತ್ತಾಗಿ ಧನ ಲಭಿಸುವ ಯೋಗವಿದೆ. ಆದರೂ ನಿಮ್ಮ ಖರ್ಚುವೆಚ್ಚಗಳನ್ನು ಪೂರೈಸಿಕೊಳ್ಳುವದು ದುರ್ಲಭವಾಗುವದು. ವ್ಯಾಪಾರಾದಿಗಳಲ್ಲಿ ಅನಿರೀಕ್ಷಿತ ನಷ್ಟವೊದಗಲಿದೆ. ನೌಕರಿ ವರ್ಗದವರಿಗೂ ವಿದ್ಯೋಪ ಜೀವಿಗಳಿಗೂ ಕಾಲಯಾಪನೆಯು ಕಷ್ಟಸಾಧ್ಯವಾಗುವದು. ತಾ 6-10 11 ಈ ದಿನಗಳಲ್ಲಿ ಸಾಕಷ್ಟು ಲಾಭವಿಜಯಗಳನ್ನು ಪಡೆವಿರಿ.

ಕನ್ಯಾ:— ಜನ್ಮಗತನಾದ ಶನಿಯು ಹಲವಾರು ತರದಿಂದ ಉಪದ್ರವಿಸುವನು. ಆಪ್ತೇಯರ ವಿಯೋಗ ಕುಟುಂಬ ವಿರಹಾದಿಗಳುಂಟಾಗಲಿವೆ, ಪಿತ್ಥೋಷ್ಣ ಪ್ರಕೋಪದಿಂದಾಗಿ ಆರೋಗ್ಯಕ್ಕೂ ಧಕ್ಕೆ ತಗಲೀತು. ನೌಕರಿ ಜನರಿಗೆ ಅಧಿಕಾರಿ ವರ್ಗದವರಿಂದ ಪೀಡೆಯು ಸಂಭವಿಸಲಿದೆ, ಆದರೂ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಲಾರಿರಿ. ವ್ಯಾಪಾರ ಉದ್ಯೋಗಗಳಲ್ಲಿ ನಿರೀಕ್ಷೆಗಿಂತ ಅಧಿಕ ಫಲಲಾಭವಿದೆ. ತಾ 10-11 ಬಿಟ್ಟು ಉಳಿದ ದಿನಗಳಲ್ಲವೂ ಹಿತಾವಹವಿವೆ.

ತುಲಾ:—ಕಳೆದ ದಿನಗಳಿಗಿಂತ ಆದೆಷ್ಟೊ ಸುಧಾರಿಸುವದು ನಿಮ್ಮ ಪರಿಸ್ಥಿತಿಯು ಆದರೂ ನಿಮ್ಮ ಬಯಕೆಯಂತೆ ಕಾರ್ಯಗಳೆಲ್ಲವೂ ಸಿದ್ಧಿಸಲಾರವು. ಬಂಧುಮಿತ್ರರ ಸಹಾಯ ಸಹಕಾರಗಳು ಚೆನ್ನಾಗಿರುವವು. ರಾಜಕೀಯ ರಂಗದಲ್ಲಿ ಫಲವು ಚೆನ್ನಾಗಿರದು. ಶ್ರಮಜೀವಿಗಳಿಗೆ ಕಾಲವು ಪ್ರತಿಕೂಲವಾಗಿರುವದು, ಸಮುದ್ರ ದಲೆಗಳಂತೆ ವಿಪತ್ತುಗಳು ಬರಲಿವೆ, ವಾರದ ಅದ್ಯಂತ ದಿನಗಳು ಚೆನ್ನಾಗಿರವು.

ವೃಶ್ಚಿಕ:—ಕೈ ಕೆಸರಾದರೆ ಬಾಯಿ ಮೊಸರಾದೀತೆಂಬಗಾದೆಯಂತೆ ನೀವು ಕಷ್ಟಪಟ್ಟು ದುಡಿದರೆ ಇಷ್ಟವನ್ನು ಹೊಂದಿಯೇ ತೀರುವಿರಿ, ಮಹತ್ತರ ಸ್ನೇಹ ಸವಲತ್ತುಗಳು ಲಭಿಸುವವು. ನೀಚ ಜನರಿಂದ ಧನಲಾಭವಾಗುವದು. ಮುಂಗೋಪದ ದೆಸೆಯಿಂದಾಗಿ ಕೆಲವರೊಡನೆ ಜಗಳವಾದೀತು. ಪಿತ್ಥದೋಷದಿಂದ ನಿದ್ರಾಭಂಗ ದುಃಸ್ವಪ್ನಗಳೂ ಬಾಧಿಸಲಿವೆ ವಾರಾಂತ್ಯದ 3 ದಿನಗಳು ಕ್ಷೇಮಕರಗಳಿವೆ.

ಧನು:—ನಿಮ್ಮ ತಾಪತ್ರಯಗಳೆಲ್ಲವೂ ಇಂದು ಮಾಯವಾಗುವವು. ಪರಿಜನ ಪುರಜನರ ಸಹಾಯವನ್ನು ಪಡೆದ ನಿಮಗೆ ಹಲವು ಕಾರ್ಯಗಳಲ್ಲಿ ವಿಜಯಲಾಭವಾಗಲಿವೆ, ಹಲವು ತೆರದಿಂದ ಧನವೂ ನಿಮ್ಮ ಕೈಸೇರಲಿದೆ. ಜನರಿಂದ ಗೌರವಾದರಗಳನ್ನು ಪಡೆವಿರಿ. ನಿಮ್ಮಿಂದ ದೂರವಾದ ಬಂಧು ವರ್ಗದವರೂ ಇಂದು ನಿಮ್ಮನ್ನಾಶ್ರೈಸುವರು. ನಿಮ್ಮ ವರ್ತನೆಯು ಕೆಲವೊಮ್ಮೆ ಜನನಿಂದೆಗೆ ಕಾರಣವಾದೀತು. ವಾರದ ಅದ್ಯಂತ ದಿನಗಳು ಹಿತಕರಗಳಿವೆ.

ಮಕರ:-ನಿಮ್ಮ ಪ್ರಯತ್ನಗಳು ನೀರಿನಲ್ಲಿ ಮಾಡಿದ ಹೋಮದಂತೆ ವಿಫಲಗಳಾಗುವವು. ನಿಂತಲ್ಲಿ ನಿಲ್ಲಲೂ ನಿಮಗೆ ಅವಕಾಶ ಲಭಿಸದು. ಧರ್ಮಕರ್ಮಗಳಲ್ಲಿ ಅನಾದರ ಗುರುಹಿರಿಯರೊಡನೆ ಮನಸ್ತಾಪ ಗೃಹಕೃತ್ಯದಲ್ಲಿನ ಅವ್ಯವಸ್ಥೆ ಇತ್ಯಾದಿಗಳಿಂದ ನಿಮ್ಮ ಮನಸ್ಸಿಗೆ ಶಾಂತಿಯಿರದು. ಆರ್ಥಿಕ ಬಿಕ್ಕಟ್ಟಂತೂ ಅಧಿಕವಾಗಿ ಪೀಡಿಸಲಿದೆ. ವಾರಾದಿಯ 4 ದಿನಗಳು ಅಷ್ಟೊಂದು ಅನಿಷ್ಟಕಾರಿಗಳಾಗವು.

ಕುಂಭ:—ಹಿಂದಿಗಿಂತ ಆದೆಷ್ಟೋ ಸುಧಾರಿಸುವಿರಿ. ನೀವೀವಾರದಲ್ಲಿ ಅನುಸರಿಸಿದ ಖರ್ಚಿಗಾಗಿ ಪರರ ಮುಖ ನೋಡುವ ಅವಶ್ಯಕತೆಯಿಲ್ಲ ಮಾತ್ರವಲ್ಲ ಅಪದ್ಧನವನ್ನು ಸಂಗ್ರಹಿಸುವಿರಿ ವ್ಯಾಪಾರಿಗಳಿಗೂ ವಿದ್ಯೋಪ ಜೀವಿಗಳಿಗೂ ಕಾಲವು ಅನುಕೂಲವಾಗಿದೆ. ಕಾರ್ಯಕಷ್ಟದಿಂದ ದಿನಗಳೆತ ಶ್ರಮಜೀವಿ ವರ್ಗಕ್ಕೆ ಮಾತ್ರ ಕಾಲವು ಚೆನ್ನಾಗಿರದು. ವಾರದ ಅದ್ಯಂತ ದಿನಗಳನ್ನುಳಿದು ಇತರ ದಿನಗಳು ಅತ್ಯುತ್ತಮವಿವೆ.

ಮೀನ:—ತಾನೊಂದು ಬಗೆದರೆ ದೈವವೊಂದೆಣಿಸಿಕೊಂಬಂತೆ ನಿಮ್ಮ ಪರಿಸ್ಥಿತಿಯಾಗಲಿದೆ. ಹೆಂಡತಿ ಮಕ್ಕಳಾದಿಯಾಗಿ ನಿಮ್ಮವರೆಲ್ಲರೂ ನಿಮಗೆ ಪ್ರತಿಕೂಲರಾಗಿ ವರ್ತಿಸುವರು ಶತ್ರು ಜನರ ಕಾಟದಿಂದಂತೂ ಮಾನವುಳಿಸಿ ಕೊಳ್ಳುವದು ಕಷ್ಟವಾಗುವದು ಹಣದ ಅಡಚಣೆ ದಿನದಿಂದ ದಿನಕ್ಕೆ ಹೆಚ್ಚುವದು ಇಷ್ಟರಲ್ಲಿ ಆರೋಗ್ಯವು ಕೂಡ ಕೆಡಲಿರುವದು ಅಂತೂ ಈ ವಾರದ ಆದಿಯ 4 ದಿನಗಳು ಹೆಚ್ಚಿನ ನಷ್ಟ ನಷ್ಟಕಾರಿಗಳಾಗಿ ಪರಿಣಮಿಸಲಿವೆ ಜಾಗ್ರರಾಗಿರಿ

● ತೃಪ್ತಿಕರವಾದ ವಸತಿ — ಹಿತಕರವಾದ ಊಟ
● ರುಚಿಕರವಾದ ಉಪಾಹಾರ ಇವುಗಳಿಗೆ

ಉಡುಪಿಯ ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಊರ ಪರವೂರ ಸನ್ಮಾನ್ಯ ಸದ್ಗೃಹಸ್ಥರಿಂದ ಮುಕ್ತಕಂಠದಿಂದ ಹೊಗಳಿಸಿಕೊಂಡ ನಮ್ಮ ಹೋಟೆಲಿಗೇ

ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ.

ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯಾಗುವಂತೆ ನಗರದ ಕೇಂದ್ರ ಭಾಗದಲ್ಲಿದೆ.

WOODLANDS

Highclass Boarding & Lodging, UDIPI S. Kanara

ಕವಿರಾಜ ಯನ್. ಯನ್. ಸೇನರ

ಶಾಸ್ತ್ರೀಯ ಔಷಧಿಗಳು ಈಗಲೇ ಬಂದಿವೆ

ಬೃತ್ ಅಮೃತಬಳ್ಳಿ ಕಷಾಯ
ಪ್ರಕೂಶಾರಿಷ್ಟ
ಕಸ್ತೂರಿ ಕಲ್ಪ ರಸಾಯನ
ನೇತ್ರಬಿಂಧು
ಕರ್ಪೂರಾರಿಷ್ಟ
ದುರ್ಗಾ ಪುನರ್ನವಾಸವ
ಬಾಸಾರಿಷ್ಟ
ಕುಂಕುಮಾಸವ
ಮೃಗಾಂಕ ದ್ರಾವ

ದರಪನ್ನು ವಿಚಾರಿಸುವದು.

ಏಜಂಟ್:—

ಶಾ· ಕಂಪೆನಿ, ಮಂಗಳೂರು ನಂ. 1

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯ ಪರ್ವತದಿಂದ ತೆಗೆಯಲ್ಪಡುವಂಥ ಅಪೂರ್ವ ವಸ್ತು, ಬಹುಫಗ... ..., ಶಿಲಾಜಿತ್ತನ್ನು ಮೂಲಿಕೆಗಳೊಡನೆ ಸೇರಿಸಿ ಲೇಹ್ಯ ಮಾಡಿದೆ.

ಇದರ ಸೇವನೆಯಿಂದ ದೇಹ ದಾರ್ಢ್ಯವೂ ಶಕ್ತಿಯೂ ಉಂಟಾಗುತ್ತದೆ. ಮುಖ್ಯವಾಗಿ ಹೊಟ್ಟೆನೋವು, ಅನ್ನ ಸೇರದಿರುವಿಕೆ ಇವೇ ಮೊದಲಾದ ರೋಗಗಳಿಗೆ ಒಂದೆರಡು ದಿನಗಳಲ್ಲಿಯೇ ಗುಣಕೊಡತಕ್ಕ ಔಷಧವಿದು ಕೆಮ್ಮು ಶ್ವಾಸ, ದಮ್ಮು, ಮೂಲ, ಒಳಮೂಲ, ರಕ್ತಮೂಲ, ಬಹುಮೂತ್ರ, ಹೊಟ್ಟೆಯಲ್ಲಿ ಗಡ್ಡೆ ಇರುವಿಕೆ ಮತ್ತು ವಾಯುವಿನಿಂದ ಉಂಟಾಗತಕ್ಕ ಸರ್ವ ವ್ಯಾಧಿಗಳಿಗೂ ದಿವ್ಯೌಷಧ. ವಿದ್ಯಾರ್ಥಿಗಳು ಸೇವಿಸುವುದರಿಂದ ಜ್ಞಾಪಕಶಕ್ತಿಯೂ ಮತ್ತು ಚಟುವಟಿಕೆಯೂ ಹೆಚ್ಚುತ್ತೆ. ವೃದ್ಧರು ಸೇವಿಸುವುದರಿಂದ ಶಕ್ತಿಯನ್ನು ಹೆಚ್ಚಿಸಿ; ಧಾರ್ಢ್ಯವನ್ನುಂಟುಮಾಡುತ್ತೆ

ಹೆಂಗಸರಿಗೆ— ಅಕ್ರಮ ಬಹಿಷ್ಟೆ, ಕೈಕಾಲು ಹಿಡಿತ, ಕೀಲುವಾಯು, ಪಕ್ಕಶೂಲೆ ಮತ್ತು ಉಷ್ಣದಿಂದಾಗುವ ಇತರ ರೋಗಗಳಿಗೆ ದಿವ್ಯೌಷಧ. ದುರ್ಬಲರಾಗಿ ಕೇವಲ ಕೃಶರಾಗಿರುವ ಶಿಶುಗಳಿಗೆ ಈ ಔಷಧವನ್ನು ಪ್ರತಿ ಬೆಳಿಗ್ಗೆ, ಸಂಜೆ ಕೊಟ್ಟರೆ ಸ್ವಲ್ಪ ಕಾಲದಲ್ಲಿಯೇ ದೃಢಾಂಗರಾಗುವರು, ಪಣ ಮುಂಗಡ.

೪೮ ದಿನದ ಲೇಹ್ಯಕ್ಕೆ ರೂ. ೫-೪-೦ (ಪೋಸ್ಟೇಜು ಮಾಫಿ)
೨೨ ದಿನದ ಲೇಹ್ಯಕ್ಕೆ ರೂ. ೩-೪-೦ (ಪೋಸ್ಟೇಜು ಮಾಫಿ)

ಎಲ್ಲಾ ನೋವುಗಳಿಗೂ ಅದ್ಭುತಶೀಘ್ರ ಗುಣಕಾರಿ:

ಮೆಂಥ್ಯಾಲ್ ಕೋನ್‌ಗಳು

(MENTHYAL CONES)

ಎಲ್ಲಾ ವಿಧವಾದ ಶೈತ್ಯದಿಂದಾಗಲೀ, ಉಷ್ಣದಿಂದಾಗಲೀ ಸಂಭವಿಸುವ ತಲೆ ನೋವು, ತಲೆತಿರುಗುವಿಕೆ, ಬುದ್ಧಿಮಾಂದ್ಯ, ಕಣ್ಣುರಿ, ದೇಹಾದ್ಯಂತ ಕೀಲುಗಳ ನೋವು, ವಾಯುನೊವು ಮತ್ಯಾವ ವಿಧವಾದ ನರಗಳ ನೋವಿಗೂ ತಕ್ಷಣದಲ್ಲಿಯೇ ಗುಣವನ್ನು ಕೊಡುತ್ತದೆ. ೧ ಕೋನು ೧೦೦೦ ಸಲ ಉಪಯೋಗಿಸಬಹುದು.

೧ ಪ್ಯಾಕೆಟ್ ರೂ. ೩—೧೨—೦
೨ ಪ್ಯಾಕೆಟ್ ರೂ. ೬— ೮—೦
೩ ಪ್ಯಾಕೆಟ್ ರೂ. ೯—೦—೦
(ಪೋಸ್ಟೇಜ್ ಮಾಫಿ)

ನೀಲಗಿರಿ ಡಿಪ್ಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ-

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವದು, ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾಸಿರಾರು ಮಂದಿಗೆ ಖಾತ್ರಿ ಗುಣದಾಗಿದೆ- ಬೆಲೆ; ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ ಖರ್ಚು ಪ್ರತ್ಯೇಕ.]

MRS. D. DEVEE, F· DB. (N. J.)
Tollygunge CALCUTTA,
ಸ್ಟಾಕಿಸ್ಟರು ಶಹಾ ಕಂಪನಿ, ಮಂಗಳೂರು

Edited, Printed & Published By K. H. Shetty at the Navayuga Press, Udipi, S. India.

Regd. No. M. 3010 ESTD. 1921 ಸ್ಥಾಪನ 13-3-1952
LICENCE No. 31
Licensed to Post without Prepayment
31 ನೆಯ ವರ್ಷ
Founder: Sri A. B. Shetty, Minister for Agriculture & Veterinary

ನವಯುಗ
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ
ಕೃಷಿಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿತವಾದುದು.

ನವಯುಗ

ನವಯುಗ, ಉಡುಪಿ. ದ. ಕ.
ವಾರ್ಷಿಕ ಚಂದಾ ರೂ 5-12-0
6 ತಿಂಗಳಿಗೆ ರೂ 3-0-0
ಬಿಡಿ ಪ್ರತಿಗೆ 0-2

ವರ್ಷ 31 ವಾರ 22 | NAVAYUGA WEEKLY Post Box No. 22 UDIPI. | Vol 31 No. 27

ರಾಷ್ಟ್ರೀಯ ಆತ್ಮಗೌರವ

"ಬರಿಯ ಬಾಯಿ ಹರಟೆ ಸಾಲದು; ಆಡಿದಂತೆ ಮಾಡಿತೋರಿಸುವಾತನನ್ನು ಜನ ಮೆಚ್ಚುತ್ತದೆ; ಗೌರವಿಸುತ್ತದೆ"

"ಮಾನವನ ಹಿರಿದಿನ ಇಂದಿನ ಕೃತಿ, ಮತಿಗಳು ಸ್ವಚ್ಛಂದವಾಗಿಯೂ ಮುಂದಿನ ಭವಿಷ್ಯವನ್ನು ಸೂಚಿಸುತ್ತವೆ"

"ಇಂದು ಇಡೀ ಜಗತ್ತು ಒಂದೇ ಜಗತ್ತಿನ ಗುರಿಯ ಕಡೆಗೆ ನಡೆದಿದೆ...ನಾವು ಹೆಚ್ಚು ವಿಕಾಸಕ್ಕೆ ಬಂದಂದೆ ಜಗಳಾಡಿಕೊಳ್ಳಬಹುದು; ಇಲ್ಲವೆ ಸ್ನೇಹದಿಂದಿರಬಹುದು, ಜೊತೆ ನಡಿದರೆ ಗಂಡಾಂತರ ಅದ್ದರಿಂದ ಪ್ರತಿಯೊಬ್ಬರೂ ಪ್ರತಿರಾಷ್ಟ್ರವೂ ನಿಷ್ಪಕ್ಷಪಾತದಿಂದ ಪರಾಮರ್ಶಿಸಿ ಸಹಕಾರದಿಂದಿರಬೇಕು.

ನಮ್ಮ ದೇಶದ ಉತ್ಪಾದನ ಶಕ್ತಿ ಹೆಚ್ಚಿಸಿ ಕೈತನ್ಯಗೊಳ್ಳಬೇಕು. ಸ್ವಾತಂತ್ರ್ಯವು ನಮಗೆ ಅನ್ನ, ಬಟ್ಟೆ, ವಸತಿ, ಸೌಕರ್ಯಗಳನ್ನು ಒದಗಿಸಿಕೊಡದಿದ್ದರೆ ನಮ್ಮ ಉದ್ದೇಶಗಳೆಲ್ಲವೂ ಬಾಳಲಾರವು"

ಪಂ। ನೆಹರು,

ಪ್ರತಿಯೊಂದು ರಾಷ್ಟ್ರಕ್ಕೆ ಆತ್ಮವುಂಟು. ರಾಷ್ಟ್ರದ ಆತ್ಮ ಗೌರವವನ್ನು ಕಾಪಾಡುವದು ಪ್ರತಿಯೊಬ್ಬ ರಾಷ್ಟ್ರೀಯನ ಆದ್ಯ ಕರ್ತವ್ಯವೆಂದು ಭಾವಿಸಲ್ಪಡಲಿಕ್ಕೆ ಬೇಕು. ವ್ಯಕ್ತಿಯು ತನ್ನ ಸಭ್ಯ ನಡೆನುಡಿಗಳಿಂದ ರಾಷ್ಟ್ರದ ಗೌರವವನ್ನು ರಕ್ಷಿಸಬಲ್ಲನು. ಅಸಭ್ಯ, ಅನಾಗರಿಕ ನಡಾವಳಿಯಿಂದ ರಾಷ್ಟ್ರದ ಕೀರ್ತಿಗೆ ಕಲಂಕ ಹಚ್ಚುವನು. ಈ ರಾಷ್ಟ್ರೀಯ ಅರಿವು ಜಾಗ್ರತವಾಗಿದ್ದ ದೇಶಗಳು ಜಗತ್ತಿನಲ್ಲಿ ಸ್ವಾತಂತ್ರ್ಯದೇವಿಯ ಪ್ರಸಾದದಿಂದ ಪ್ರಕಾಶಿಸಬಲ್ಲವು. ಫ್ರಾನ್ಸ, ಇಂಗ್ಲಂಡ, ಅಮೇರಿಕಾ ಮುಂತಾದ ದೇಶಗಳಲ್ಲಿ ಜನರು ಉಚ್ಚ ತರದ ಸಾಮಾಜಿಕ ಸಭ್ಯತೆಯಿಂದ ತಮ್ಮ ರಾಷ್ಟ್ರದ ಆತ್ಮ ಗೌರವವನ್ನು ರಕ್ಷಿಸುತ್ತಾರೆ. ಆತ್ಮ ಸಂಯಮನ, ಶಿಸ್ತು, ಸ್ವಚ್ಛತೆ, ಎದುರಿನವರ ಮನನೋಯದಂತೆ ಮಾತಾಡುವ ರೀತಿನೀತಿಗಳು, ಗಂಭೀರ ವರ್ತನ, ಇತ್ಯಾದಿಗಳು ಆ ದೇಶಗಳಲ್ಲಿ ಸಾಮಾಜಿಕ ಸಂಸ್ಕೃತಿಯನ್ನು ರೂಪಿಸಿ ಆತ್ಮ ಗೌರವದ ಅರಿವುಳ್ಳ ವ್ಯಕ್ತಿಗಳನ್ನು ನಿರ್ಮಾಣ ಮಾಡಿವೆ. ಪಾಶ್ಚಾತ್ಯ ದೇಶಗಳಿಗೆ ಹೋಗಿ ಶಿಕ್ಷಣ ಪಡೆದು ಬಂದ ನಮ್ಮ ಅನೇಕ ಭಾರತೀಯರು ಮೇಲಿನ ಮಾತುಗಳನ್ನು ಬಿಚ್ಚು ಮನಸ್ಸಿನಿಂದ ಹೇಳುತ್ತಿರುವದನ್ನು ನಾವು ಕೇಳುತ್ತೇವೆ. ಅವರ ಅನುಭವವು ನಿಜವಾಗಿಯೇ ಇದೆ.

ಸಾಮಾಜಿಕ ಸಭ್ಯತೆಯಲ್ಲಿ ಗಟ್ಟಿಗರಾದ ಜನರಿಂದ ರಾಷ್ಟ್ರದ ಶಕ್ತಿಯು ಅಭಿವೃದ್ಧಿ ಹೊಂದುತ್ತದೆ. ಒರಟು, ಜುಂಬು, ಕ್ಷುಲ್ಲಕ ಕ್ಷುದ್ರ, ಸ್ವಾರ್ಥ, ಅಹಂಕಾರ, ದರ್ಪ ಅಪ್ರಾಮಾಣಿಕತನ, ಹೊಣೆಗೆಟ್ಟ ನಡೆನುಡಿ, ಇತ್ಯಾದಿ ಅಸಂಸ್ಕೃತ ರೀತಿನೀತಿಗಳು ಳ್ಳ ರಾಷ್ಟ್ರಗಳು ಕೀಲುಬಲವಿಲ್ಲದೆ, ಸಂಘಟನೆಯಿಲ್ಲದೆ, ದಿನೇ ದಿನೇ ಕ್ಷೀಣ ಹೊಂದುತ್ತ ಅಮೂಲ್ಯ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತವೆ. ಜಗದಲ್ಲಿ ತಲೆಯೆತ್ತಿ ಮೆರೆಯುವ ಮಾತಂತೂ ದೂರವೇ ಉಳಿಯಿತು.

ಚಂದವಾಗಿ ಮಾತಾಡುವದು ಚಂದವಾದ ಮನಸ್ಸುಳ್ಳವರಿಗೇ ಸಾಧ್ಯ. ಅಸಭ್ಯ ಮಾತಾಡುವದು ಅಸಹ್ಯ ಮನಸ್ಸಿನ ಲಕ್ಷಣ. ತನ್ನ ಗೌರವವನ್ನು ಕಾಪಾಡಿಕೊಂಡು, ಅನ್ಯರಿಗೆ ನೋವಾಗದಂತೆ, ಸೌಮ್ಯ ಗಂಭೀರ ಶಬ್ದ ಸಂಪತ್ತಿಯನ್ನು ಪ್ರಯೋಗಿಸಿ ಸಮಯೋಚಿತವಾಗಿ ಮಾತಾಡುವದೇ ಚಂದವಾಗಿ ಮಾತಾಡುವ ರೂಢಿಯನ್ನು ಸಮಾಜದಲ್ಲಿ ನೆಲೆಗೊಳಿಸುವ ರೀತಿ. "ನುಡಿದರೆ ಮುತ್ತಿನ ಹಾರದಂತಿರಬೇಕು!! ಎಂದು ಬಸವಣ್ಣನು ಹಾಡಿದನು. ವ್ಯಕ್ತಿಯು ಮಾತಾಡುವ ಪ್ರತಿಯೊಂದು ಶಬ್ದದಲ್ಲಿ ಒಂದು ಭಾವ, ಒಂದು ಜೀವನದ ಛಾಯೆ ಸಂಸ್ಕೃತಿಯು ಅಚ್ಚು ಒಡಮೂಡಿರುತ್ತವೆಂದು ಹೇಳಿದರೆ ಅತಿಶಯೋಕ್ತಿಯಲ್ಲ; ಮನಸ್ಸಿನ ವಿಕಾಸಹ್ರಾಸಗಳಿಗನುಸರಿಸಿ ವಿಕಾಸವಾದ ಸಂಕುಚಿತ ಮಾತುಗಳು ಹೊರಬೀಳುತ್ತವೆಯೆಂದು ಹೇಳಬಹುದು.

ಹಾಸ್ಯದ ಮಾತುಗಳನ್ನು ಮನಸ್ಸಿಗೆ ಒಂದಂತೆ ಆಡಬಹುದೆಂದು ಅನೇಕರು ಭಾವಿಸಿದಂತೆ ತೋರುತ್ತದೆ. ನಮ್ಮ ಜನರು ಬಿಡುವಿನ ವೇಳೆಯಲ್ಲಿ ಅಶ್ಲೀಲ ಮಾತುಗಳನ್ನು ಆಡುವದು ಹಾಸ್ಯವೆಂದು ಭಾವಿಸುತ್ತಾರೆ. ಕ್ಷುಲ್ಲಕವಾದ ಅಸತ್ಯವಾಗ, ಅತಿಶಯೋಕ್ತಿಯು, ಅಶ್ಲೀಲ ವಾಗ್ಬಾಣಗಳನ್ನು ಬಿಡುತ್ತ, ಕುದುರೆ ಕೇಕರಿಸಿದಂತೆ ಗಟ್ಟಿಯಾಗಿ ಕಲಬಲದ ನೋಡದೇ ನಗುತ್ತ ವಿನೋದದ ರಭಸದಲ್ಲಿ ಅನ್ಯರ ಮನ ನೋಯಿಸುತ್ತ ಕಾಲಕಳೆಯುವದೇ ಆಧುನಿಕ ಸುಶಿಕ್ಷಿತ ಜನರ ಹಾಸ್ಯದ ಗಟ್ಟಾಗಿದೆ. ಮಧುರ ಸ್ವಭಾವ, ತತ್ವ ಪ್ರೀತಿ ಪ್ರಾಮಾಣಿಕತನ, ವಿಶಾಲ ದೃಷ್ಟಿ ವಿನಯ, ಗಂಭೀರತನ, ಇತ್ಯಾದಿ ಗುಣಗಳನ್ನು ಗಂಧದಂತೆ ಹೊರಸೂಸುವ ಬುದ್ಧಿಯ ತೇಜಸ್ಸಿಗೆ ಹಾಸ್ಯವೆಂದು ಹೇಳಬಹುದು. ನಿಜವಾದ ಹಾಸ್ಯದ ಲಕ್ಷಣಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಕಲಿಯಬೇಕು. ಯಾವ ಅಭ್ಯಾಸ, ತಿದ್ದುಪಡಿ, ಶಿಕ್ಷಣ ವಿಲ್ಲದೇ ಮಧುರ ಹಾಸ್ಯದ ಹನಿಗಳನ್ನು ಸುರಿಸಲಿಕ್ಕೆ ಬರಲಾರದು.

"ಜನರು ಮಾತ್ರ ದುರ್ಗಳಲ್ಲಿ. ಶ್ರೀಮಂತರೂ ಸಂಪತ್ತಿನ ಬಲದಿಂದ ದುರ್ಬಲರಾಗಿದ್ದಾರೆ.

ಜಮೀನ್ದಾರರು ತಮಗೆ ಅವಶ್ಯವಿದ್ದಷ್ಟು ಭೂಮಿಯನ್ನು ಇಟ್ಟುಕೊಂಡು ಉಳಿದುದನ್ನು ಭೂಮಿಯಿಲ್ಲದವರಿಗೆ ಬಿಟ್ಟುಕೊಡಬೇಕು. ಕಂಪನಿಗಳು ಕೂಡ ತಮ್ಮ ಲಾಭವನ್ನಷ್ಟೇ ಪರಿಗಣಿಸದೆ ಸಾಕೆ? ಸಮಾಜದ ಆಧಾರಸ್ತಂಭವಾದ ಬಡವರಿಗೆ ಸಹಾಯ ಮಾಡುವುದು ದೊಡ್ಡ ಕರ್ತವ್ಯವಲ್ಲವೆ?"

—ಆಚಾರ್ಯ ವಿನೋಬಾ ಭಾವೆ

ರಾಷ್ಟ್ರೀಯ ಆತ್ಮಗೌರವವು ವ್ಯಕ್ತಿಗಳ ಆತ್ಮ ಗೌರವವನ್ನೇ ಅವಲಂಬಿಸಿರುವುದರಿಂದ ಸಾಮಾಜಿಕ ಸಭ್ಯತೆಗೆ ಹೆಚ್ಚು ಲಕ್ಷ್ಯ ಕೊಡಬೇಕಾಗುವದು. ಸಂಘ, ಸಭೆ ಸಮ್ಮೇಲನಗಳಲ್ಲಿ ತರುಣ ಸುಂದರ ಸ್ತ್ರೀಯರಿಗೆ ನಾವು ಗೌರವ ತೋರಿಸುವಂತೆ ಸಂದರ್ಭೋಚಿತವಾಗಿ ಬಡವರು, ದಲಿತರು, ದೀನರು, ಕೆಳಗಿನ ಅಂತಸ್ತಿನವರು ಮುಂತಾದ ಅಶಿಕ್ಷಿತ ಬಾಂಧವರಿಗೆ ಪ್ರೀತಿ ಆದರಗಳನ್ನು ವ್ಯಕ್ತಪಡಿಸಲಿಕ್ಕೆ ನಮಗೆ ಶಕ್ಯವಾದರೆ ನಾವು ಆತ್ಮ ಗೌರವವುಳ್ಳವರೆಂದು ಹೇಳಬಹುದು. ಚಂದವಾದ ಬಟ್ಟೆ ಧರಿಸಲಿಕ್ಕೆ ಆಸಕ್ತಿ ತೋರಿಸುವಂತೆ ಸಮಾಜದಲ್ಲಿ ಹೇಗೆ ನಡೆಯಬೇಕೆಂಬ ಬಗ್ಗೆ ಆಸಕ್ತಿ ತೋರಿಸಿದರೆ ನಮ್ಮ ವೈಯಕ್ತಿಕ ಗೌ

[4ನೇ ಪುಟನೋಡಿರಿ]

Our Pigmy Deposit Scheme

.... brings our bank to your door. You may save as small a sum as annas two. Our collector will call on you every day to receive it.

At the rate of annas two per day you save Rs. 350 in 7 years because we allow interest at 3⅛% per annum. At the rate of Re 1/- per day your Savings are Rs 2,800/- in 7 years. At the rate of Rs. 10/- it is Rs 28,000/-. Come in to-day and join the band of **Prudent Prosperous Pigmy People**.

The Canara Industrial & Banking Syndicate Ltd.

ESTD: 1925. H. O: UDIPI

__ಪ್ರಜಾಸತ್ತೆ__

ಕಾರ್ಯನಿರ್ವಾಹಕ ಮಂಡಳಿ

[ಕಳೆದ ಸಂಚಿಕೆಯಿಂದ ಮುಂದುವರಿದುದು]

ಈ ಕ್ರಮದಲ್ಲಿ ಎರಡು ದೋಷಗಳು ಕಂಡು ಬರುವದು. ಅಯೋಗ್ಯನಾದವನನ್ನು ಮಂತ್ರಿಪದವಿಗೇರಿಸಬಹುದು ಮತ್ತು ಯೋಗ್ಯನಾದವನನ್ನು ನೇಮಿಸಿದರೂ ಆತನ ಅಧಿಕಾರ ಅವಧಿಯು ಪಕ್ಷವನ್ನು ಹೊಂದಿರುವದು. ಆದರೆ ಹೊಸಮಂತ್ರಿಯು ನವೀನ ಅನುಭವ ತರಬಹುದು. ಮತ್ತು ಜನಮತಕ್ಕನುಸಾರವಾಗಿರಬಹುದು ಸ್ವಿಜರ್‌ಲೇಂಡಿನಲ್ಲಿ ಮಂತ್ರಿಗಳನ್ನು ಐದು ವರುಷದ ತನಕ ಚುನಾಯಿಸುವರು. ಪುನಃ ಚುನಾಯಿಸುವದೂ ಉಂಟು. ಈ ಕಾರಣದಿಂದ ಏಕಚಕ್ರಾಧಿಪತ್ಯ ಮತ್ತು ವರ್ಗದವರ ಸರಕಾರಗಳಲ್ಲಿರುವಷ್ಟೇ ಯೋಗ್ಯರು ಪ್ರಜಾಸತ್ತೆಯಲ್ಲಿ ಇರುವುದಿಲ್ಲವೆಂತ ಹೇಳಲು ಬರುವುದಿಲ್ಲ. ರಾಜಕೀಯ ಕಾರಣಗಳಿಂದ ಪ್ರಜಾಸತ್ತೆಯಲ್ಲಿ ನೇಮಿಸುವದಾದರೆ ಇತರ ಸರಕಾರಗಳಲ್ಲಿ ಒಳಸಂಚು ಮತ್ತು ಕೂಟಗಳಿಂದ ನೇಮಿಸಲ್ಪಟ್ಟು ಅಯೋಗ್ಯನಾದವನು ದೊಡ್ಡಸ್ಥಾನಕ್ಕೆ ಬರಬಹುದು. ಇತರ ಸರಕಾರಗಳಲ್ಲಿ ಜನರಿಗೆ ಇವರ ಮೇಲೆ ಏನೂ ಅಧಿಕಾರವಿಲ್ಲ. ಇವರ ಕಾರ್ಯವನ್ನು ಪರಿಶೀಲಿಸಿ ಚರ್ಚಿಸಿ ಟೀಕಿಸುವವರೇ ಇಲ್ಲ. ಸಮಾನತೆಯ ಹಕ್ಕಿನ ಆಧಾರದ ಮೇಲೆ ಪ್ರತಿಯೊಬ್ಬನಿಗೂ ದೇಶಸೇವೆ ಮತ್ತು ನೌಕರಿಯಲ್ಲಿ ಅರ್ಹತೆಯಿರುವದಾದ್ದರಿಂದ ಒಳಸಂಚಿನಿಂದ ಹಿತವಂತರಿಗೆ ಸಹಾಯಮಾಡಲು ಎಡೆಕಡಿಮೆ. ಅಮೇರಿಕದಲ್ಲಿ ಈ ಕ್ರಮವು ಅಧಿಕವಾಗಿದ್ದರೂ ಇತ್ತೀಗೆಗೆ ಇತರ ಪ್ರಜಾಸತ್ತೆಯ ಸಾಲಿಗೆ ಬಂದಿರುವರು. ಪ್ರಜಾಸತ್ತೆಯು ಹೆಚ್ಚಾಗಿ ಯುದ್ಧವಿರೋಧಿಯಾದುದರಿಂದ ಯುದ್ಧಸನ್ನಾಹಕ್ಕೆ ಹೆಚ್ಚು ಹಣ ವ್ಯಯಿಸುವುದಿಲ್ಲ. ತೋಳ ಬಂತೆಂದೊಡನೆ ದಿಗಿಲುಬೀಳುವದಿಲ್ಲ. ತೋಳ ಬರುವದು ಅಪರೂಪ. ಆಸುಪಾಸಿನಲ್ಲಿ ತೋಳವಿಲ್ಲದಿರುವಾಗ ಕೂಗಿದರೆ ಕಿವಿಗೊಡುವದಿಲ್ಲ. ಆದರೆ ಈಗ ಲೋಕದಲ್ಲಿ ನಡೆಯುವ ಪ್ರಸಂಗಕ್ಕೆ ಈ ಮಾತು ಸರಿಹೋಲದು. ನಿಜವಾಗಿ ಅಪಾಯ ಉಂಟೆಂದು ಕಂಡರೆ ಎಲ್ಲರೂ ಒಟ್ಟುಕೂಡಿ ಸಹಕರಿಸುವರು ಪ್ರಜಾಸತ್ತೆಯಲ್ಲಿ ಸರಕಾರದ ಅಧಿಕಾರ ಅವಧಿ ಅನಿಶ್ಚಿತವಾದಕಾರಣ ದೀರ್ಘ ಕಾಲದ ಯೋಜನೆಯನ್ನು ಕೈಕೊಳ್ಳುವದು ಅಪರೂಪ. ತಾವು ಕೈಗೊಂಡ ಕೆಲಸವನ್ನು ತಮ್ಮ ಅವಧಿಯೊಳಗೆ ಮುಗಿಸುವಂತೆ ಮಾಡುವರು. ಯಾವದಾದರೊಂದು ಕೆಲಸವನ್ನು ಆರಂಭಿಸಿದರೆ ಚುನಾವಣೆಯ ಸಮಯ ಜನರು ತಮ್ಮ ಮೇಲೆ ತಪ್ಪುಭಾವನೆ ಮಾಡುವರು ಎಂಬ ಸಂಶಯ ಮತ್ತು ಹೆದರಿಕೆಯಿಂದ ಕೆಲವು ಸಮಯ ಮಾಡಬೇಕಾದ್ದನ್ನು ಮಾಡದೆ ಬಿಡುವರು. ವಿರೋಧ ಪಕ್ಷದವರು ಇವರಿಗೆ ವಿರೋಧಿಸುವಾಗ ಸಹ ಇದನ್ನೇ ತಮ್ಮ ದೃಷ್ಟಿಯಲ್ಲಿಟ್ಟುಕೊಳ್ಳುವರು. ಯುದ್ಧ ಮತ್ತಿತರ ಗಂಡಾಂತರಗಳು ಬಂದಾಗ ಎಲ್ಲರೂ ಸಹಕರಿಸಿ ನಡೆಯುವರು. ಆಗ ಅಧಿಕಾರಿ ಮಂಡಲಿಗೆ ಅಪೂರ್ವ ಮತ್ತು ಅಸಾಧಾರಣ ಅಧಿಕಾರ ಬರುವದು ಒಬ್ಬ ಯೋಗ್ಯ ಧೈರ್ಯಸ್ಥ ಕಾರ್ಯದಕ್ಷನಾದ ಮುಂದಾಳುವನ್ನು ಯಾವ ಸಮಯದಲ್ಲೂ ಹಿಂಬಾಲಿಸಿ ಸಹಕರಿಸುವರು.

ಸಿ. ಎಚ್. ಸೆಟ್ಟಿ, ಬಿ. ಎ.

ಉಡುಪಿ ಡಿ. ಮು. ಕೋರ್ಟಿನಲ್ಲಿ
O. S 17/1952.

ದಿ ... ಇಂಡಿಯಾ ಎಪೆಕ್ಸ್ ಬೇಂಕ್ ಲಿಮಿಟೆಡ್ ... ದ ಮೆನೇಜಿಂಗ್ ಡೈರೆಕ್ಟರ್ ಕೆ. ಕಮಲಾಕ್ಷ ಪೈ
—ವಾದಿ

ಮತ್ತು

ಕೆ. ಶ್ರೀನಿವಾಸ ಉಪಾಧ್ಯ-ಶ್ರೀ ಧನಲಕ್ಷ್ಮಿ ವೀವಿಂಗ್ ವರ್ಕ್ಸ್ ಯಿದ್ರ ಪ್ರೊಪ್ರೈಟರ್ —ಮೂಡನಿಡಂಬೂರು ಗ್ರಾಮದ ಅಲೆವೂರು
—ಪ್ರತಿವಾದಿ.

ಸದರಿ ಪ್ರತಿವಾದಿಗೆ—

ತಾರೀಖು 19-10-1951ರಲ್ಲಿ ರುಪಾಯಿ 588-10-0ಕ್ಕೆ ಪ್ರತಿವಾದಿಯು ಕಾರ್ಕಳ ಶ್ರೀನಿವಾಸ ರಾಯರ ಮೇಲೆ ಬರೆದ ಡಿಮಾಂಡ್ ಡ್ರಾಫ್ಟ್ [ಹುಂಡಿ]ಯಲ್ಲಿ ವಾದಿ ಬೇಂಕಿನಲ್ಲಿ ಪಟ್ಟಾಸಿ ಹಣ ಪಡೆದ್ರ ಬಾಬಿನಲ್ಲಿ ಪ್ರತಿವಾದಿಯಿಂದ ವಾದಿ ಬ್ಯಾಂಕಿಗೆ ಬರಬೇಕಾದ ಅಸಲು ಬಡ್ಡಿ ಕೂಡಾ ರೂಪಾಯಿ 607-9-10ಕ್ಕೆ ವಾದಿಯು ಪ್ರತಿವಾದಿಯ ಮೇಲೆ ಹೂಡಿದ ಸದ್ರಿ ದಾವೆಯು ತಾರೀಖು 21-3-1952ಕ್ಕೆ ಪ್ರಥಮ ತನಿಖೆ ಬಗ್ಗೆ ಇಡೋಣಾಗಿಯದೆ. ಅವತ್ತು ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗದಿದ್ದರೆ ಆತನ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಈ ಮೂಲಕ ತಿಳಿಯಪಡಿಸೋಣಾಗಿಯದೆ.

M Damoder Kamath,
Advocate for Plff.

ಉಡುಪಿ, ತಾ. 8-3-1952.

ರಾಟೆಯೇ ಕತಾಯಿ ಮಂಡಲದ ಕೇಂದ್ರವು

ವಸ್ತ್ರ ಸ್ವಾವಲಂಬನೆಯ ಕೆಲಸವನು ಹೆಚ್ಚಿಸುವುದೊಂದೇ ಕತಾಯಿಮಂಡಲಗಳ ಉದ್ದೇಶವೆಂದು ಯಾರೂ ಭಾವಿಸಬಾರದು. ಗಾಂಧೀ ವಿಚಾರ ಹಾಗೂ ಚರಖಾದ ವಿಚಾರವನ್ನು ತಿಳಿದಿರುವ ಅನೇಕ ಜನರು ಅಲ್ಲಲ್ಲಿ ಕಂಡುಬರುತ್ತಾರೆ. ದೇಶದ ಈಗಿನ ವಿಷಮ ಪರಿಸ್ಥಿತಿಯಲ್ಲಿ ತಾವೇನು ಮಾಡಬೇಕು- ಏನುಮಾಡಬಾರದು ಎಂಬುದನ್ನು ಸರಿಯಾಗಿ ತಿಳಿಯಲಸಮರ್ಥರಾಗಿ ವಾತಾವರಣದಿಂದ ಯಾವ ಪ್ರೋತ್ಸಾಹವೂ ಸಿಗದ ಕಾರಣ; ತಮಗೇನೂ ಕೆಲಸ ಮಾಡಲು ಸಾಧ್ಯವಿಲ್ಲವೆಂದು ಅಂಥವರು ತಿಳಿಯುವರು. ಅಂಥಾ ಮಿತ್ರರ ಸಂಘಟನೆಯಾಗಿ ಅವರಿಗೆ ಸರಿಯಾದ ಮಾರ್ಗದರ್ಶನ ಸಿಕ್ಕಿದರೆ ಅವರಿಂದ ನಾನಾ ಪ್ರಕಾರದ ಜನಸೇವೆಯಾಗಬಹುದು. ಹಾಗಾದರೆ ಚರಖಾದ ವಿಚಾರ ಶ್ರೇಣಿಯೂ ವೃದ್ಧಿಯಾಗುವುದು. ಈ ಕಾರ್ಯವು ಕತಾಯಿ ಮಂಡಲಗಳ ಮೂಲಕ ಸಾಧ್ಯವಾಗುವುದು. ಗಾಂಧೀಜಿಯವರು ನಮಗೆ ಅಹಿಂಸಾತ್ಮಕ ಸಮಾಜ ರಚನೆಯ ವಿಚಾರವನ್ನು ಕೊಟ್ಟಿರುತ್ತಾರೆ. ಅದನ್ನು ಕಾರ್ಯದಲ್ಲಿ ಮಾಡಿ ಲೋಕಕ್ಕೆ ತೋರಿಸುವುದು ಕತಾಯಿ ಮಂಡಲಗಳ ಧ್ಯೇಯವಿರಬೇಕು.

ಜನರಿಗೆ ನೂಲುವುದರಲ್ಲಿ ಈಗ ಹೆಚ್ಚಿನ ಆಸಕ್ತಿಯಿಲ್ಲವಾದ ಕಾರಣ, ಮೇಲಿನ ಕಾರ್ಯಗಳನ್ನೂ ಮಾಡಲಿಚ್ಛಿಸುವ ಮಂಡಲಗಳಿಗೆ 'ಕತಾಯಿ ಮಂಡಲ'ವೆಂಬುದರ ಬದಲಾಗಿ 'ಸರ್ವೋದಯ ಮಂಡಲ'ವೆಂಬ ಹೆಸರನ್ನೇಕೆ ಕೊಡಬಾರದೆಂದು ಕೆಲವರು ಪ್ರಶ್ನಿಸುತ್ತಾರೆ. ಹೆಸರು ಯಾವುದೇ ಇದ್ದರೂ, ಸದಸ್ಯರು ಸ್ವಲ್ಪವಾದರೂ ನೂಲಲು ಸಾಧ್ಯವಿಲ್ಲವೆಂದಾದರೆ, ಇತರ ಕಾರ್ಯಗಳೂ ಅವರಿಂದಾಗಬಹುದೆಂದು ಅಪೇಕ್ಷಿಸುವುದು ನಿಷ್ಪ್ರಯೋಜನವು. ನಾವು ಚರಖಾವನ್ನು ಕೇಂದ್ರವನ್ನಾಗಿಟ್ಟುಕೊಳ್ಳದಿದ್ದರೆ, ಮೆಲ್ಲಮೆಲ್ಲನೆ ಇತರ ವಿಷಯಗಳಲ್ಲಿಯೂ ಜಾಡ್ಯವುಂಟಾಗುವುದು. ಆದಕಾರಣ ಮುಖ್ಯ ವಿಷಯವನ್ನೆತ್ತಿ ಅದರ ನೆಟ್ಟಗಾದ ಪರಿಚಯವನ್ನುಂಟು ಮಾಡುವ ಹೆಸರನ್ನಿಡುವುದೇ ಯೋಗ್ಯವೆಂದು ನಾವು ತಿಳಿಯಬೇಕು.

ಕಳೆದ ಎರಡು, ಮೂರು ವರ್ಷಗಳಿಂದ ಚರಖಾ ಸಂಘದವರು ಕತಾಯಿ ಮಂಡಲಗಳನ್ನೂ ಸ್ಥಾಪಿಸಲುಪಕ್ರಮಿಸಿರುವರು. ನೂಲುವುದರೊಡನೆ ಇತರ ರಚನಾತ್ಮಕ ಕಾರ್ಯಗಳಾದ "ಗೋ ಸೇವೆ, ನೂತನ ಶಿಕ್ಷಣ, ಸಮಗ್ರ ಗ್ರಾಮ ಸೇವೆ ಮೊದಲಾದವುಗಳನ್ನೂ ಕತಾಯಿ ಮಂಡಲದ ಸದಸ್ಯರೆಲ್ಲರು ಕೈಕೊಳ್ಳಬೇಕು. ಅನೇಕ ಕಡೆಗಳಲ್ಲಿ ಜನರು ಹೀಗೆ ಕಾರ್ಯಗಳನ್ನೂ ಸಾಧಿಸುತ್ತಿದ್ದಾರೆ. ಆದ ಕಾರಣ ಹೆಚ್ಚುಹೆಚ್ಚು ಕತಾಯಿ ಮಂಡಲಗಳನ್ನು ಸ್ಥಾಪಿಸಿ ಇವೆಲ್ಲ ಕಾರ್ಯಗಳನ್ನೂ ಜನರು ಸುಸೂತ್ರವಾಗಿಯೂ ಉತ್ಸಾಹದಿಂದಲೂ ಮಾಡಲು ಯತ್ನಿಸಿದರೆ, ಗ್ರಾಮ ರಾಜ್ಯ—ರಾಮರಾಜ್ಯವು ನಮ್ಮ ದೇಶದಲ್ಲಿ ಬೇಗನೆ ನೆಲೆಗೊಳ್ಳುವುದೆಂಬುದರಲ್ಲಿ ಸಂದೇಹವಿರದು

ಅ. ಭಾ. ಚ. ಸ.—ಕತಾಯಿ ಮಂಡಲ
ಮಂಗಳೂರು ಶಾ.

"ನಿಮ್ಮ ಕಂಪೆನಿಯಲ್ಲಿ ವಿಮಾ ಪತ್ರದಾರರ ಹಿತಗಳಿಗೆ ಭದ್ರತೆ ತುಂಬಾ ಇರುವುದಲ್ಲದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಾಭವೂ ಸಿಗುವುದು."
—ಶ್ರೀ ಕೆ ಎ. ಪಂಡಿತ್, B 80, F. I. A.
(ಸಲಹೆಗಾರ ವಿಮಾಗಣಕರು)

"ಕೆನರಾ ಮ್ಯೂಚುವಲ್" ಕಂಪೆನಿಯ ಎಲ್ಲ ವ್ಯವಹಾರಗಳು ಹೀಗೆ ಚೆನ್ನಾಗಿ ನಡೆಸಲ್ಪಡುವುದರಿಂದ ಈ ಕಂಪೆನಿಯು ಜನರ ವಿಶ್ವಾಸಾದರಗಳಿಗೆ ಪಾತ್ರವಾಗಿದೆ. ಕಂಪೆನಿಯ ಚತುರ್ಥ ವಿಮಾಗಣನೆ (Valuation)ಯಂತೆ, ಆಜೀವ (Whole Life) ಮತ್ತು ಉಂಬಳಿ (Endowment) ವಿಮೆಗಳಿಗೆ ಕ್ರಮವಾಗಿ ಸಾಲಿಯಾನ ಸಾವಿರಕ್ಕೆ ರೂ. 12 ಮತ್ತು ರೂ 9ರಂತೆ ಬೋನಸು ಹಂಚಲಾಗುವುದು ಇದೇ ದರದಲ್ಲಿ ನಡುಗಾಲದ (Interim) ಬೋನಸನ್ನು ಸಹ ಇಡಲಾಗಿದೆ

— ದಿ ಕೆನರಾ ಮ್ಯೂಚುವಲ್ —
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ಹಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

__ಪ್ರಕಟಣೆ__

ಕಟಪಾಡಿ ಪಂಚಾಯತ ಬೋರ್ಡು

ಈ ಪಂಚಾಯತ ಬೋರ್ಡಿಗೆ ಸೇರಿ ಮಾರ್ಕೇಟು ಇಳಿಯುವ ಸ್ಥಳ [Jetty] ಮತ್ತು ಪಟ್ಟು ಕಡವು ಇವುಗಳಲ್ಲಿ 1952 ನೇ ಎಪ್ರಿಲ್ 1ರಿಂದ 1953ನೇ ಇಸವಿ ಮಾರ್ಚ್ 31ರ ವರೆಗೆ, ಒಂದು ವರ್ಷದ ವರಿವಸೂಲು ಮಾಡುವ ಸ್ವತಂತ್ರವನ್ನು ಇದೇ ಮಾರ್ಚ್ ತಿಂಗಳ ತಾರೀಖು 15ನೇ ಶನಿವಾರ ಮಧ್ಯಾಹ್ನ ಗಂಟೆ 3ಕ್ಕೆ ಪಂಚಾಯತ ಬೋರ್ಡು ಆಫೀಸಿನಲ್ಲಿ ಬಹಿರಂಗವಾಗಿ, ಪ್ರತ್ಯಪತ್ಯೇಕವಾಗಿ ಏಲಂ ನಿಶಿ ಮಾಡಲಾಗುವುದು.

ಅಗತ್ಯ ಕಂಡಲ್ಲಿ ಏಲಂ ಮುಂದರಿಸುವ ಯಾ ಪುನಃ ಏಲಂ ಮಾಡುವ ಅಧಿಕಾರ ಪ್ರೆಸಿಡೆಂಟರಿಗಿದೆ ಎಂಬುದು ತಿಳಿವಳಿ.

ಹೆಚ್ಚಿನ ಮಾಹಿತಿ ಬಗ್ಗೆ ಪಂಚಾಯತ ಬೋರ್ಡು ಆಫೀಸಿನಲ್ಲಿ ವಿಚಾರಿಸಿರಿ.

ವೈ ನಾರಾಯಣ ಹೆಗಡೆ,
President, Panchayat Board,
Katapadi S. Kanara

ಪಂಚಾಯತ ಬೋರ್ಡು, ಕಟಪಾಡಿ,
ತಾರೀಖು 8-3-52.

ಐದು ವರುಷಗಳ ಗ್ಯಾರಂಟಿ – 18ಕ್ಯಾರೆಟ್ ರೋಲ್ಡ್ ಗೋಲ್ಡ್ ಆಭರಣಗಳು. ಉದ್ದ ಚೈನಿಗೆ ರೂ. 5- ಚಿಕ್ಕ ಚೈನಿಗೆ ರೂ. 4. ತರಹವಾರು ಬಳೆಗಳ ಸೆಟ್ಟಿಗೆ ರೂ. 7, ಹೊಸ ಫ್ಯಾಶನಿನ ಉಂಗುರಕ್ಕೆ ರೂ. 3.

Dogulva Traders
West Vadmapokki Street, MADURAI

ಸುಭಾಸಬಾಬುಗಳು ಮರಣಪಟ್ಟಿದ್ದು ನಿಜ

ಪಾರ್ಲಿಮೆಂಟಿನಲ್ಲಿ ಪಂಡಿತ ನೆಹರೂರವರ ಘೋಷಣೆ.

ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಡಾ| ಎಚ್. ವಿ. ಕಾಮತರು ನೇತಾಜಿ ಸುಭಾಸ ಚಂದ್ರ ಬೋಸರ ನಿಧನದ ಕುರಿತು ಪ್ರಶ್ನಿಸಿದುದಕ್ಕೆ ಪ್ರಧಾನ ಮಂತ್ರಿ ಶ್ರೀ ನೆಹರೂರವರು ಉತ್ತರ ಕೊಡುತ್ತಾ, 1945ನೇ ಆಗೋಸ್ತು 18ಕ್ಕೆ ವಿಮಾನ ಅಪಘಾತ ಸಂಭವಿಸಿ ಸುಭಾಸ ಬಾಬುಗಳು ನಿಧನ ಹೊಂದಿದರೆಂಬ ಸತ್ಯಾಸತ್ಯತೆಯನ್ನು ಪರಿಶೀಲಿಸುವುದಕ್ಕಾಗಿ ಡಾ| ಎಸ್. ಎ. ಅಯ್ಯರರು ಕಳದ ವರ್ಷ ಮೇ ತಿಂಗಳ ಅಂತ್ಯಕ್ಕೆ ಜಪಾನಿಗೆ ಹೋಗಿದ್ದರೆಂದೂ ಅವರು ಒಪ್ಪಿಸಿರುವ ವರದಿಯಲ್ಲಿ ಟೋಕಿಯೊದಲ್ಲಿಯ ರಿ. ಕೋಜಿ ದೇವಾಲಯದಲ್ಲಿ ಇರಿಸಲ್ಪಟ್ಟಿರುವ ಚಿತಾಭಸ್ಮವು ನೇತಾಜಿಯವರದೇ ಎಂಬುದಕ್ಕೆ ನಮಗೆ ಎಳ್ಳಷ್ಟು ಸಂಶಯವಿಲ್ಲವೆಂದು ಹೇಳಿರುವರೆಂದೂ ನುಡಿದರು. ಅಲ್ಲದೆ ವಿಮಾನ ಅಪಘಾತದ ಬಗ್ಗೆ ಈ ವರೆಗೆ ದೊರೆತ ವರದಿಗಳಲ್ಲೆಲ್ಲಾ ಇದು ತೀರ ಇತ್ತೀಚಿನದೂ ಹೆಚ್ಚು ವಿವರಗಳುಳ್ಳದ್ದೂ ಆಗಿದೆ. ಕ್ಯಾಂಟನವನ್ನು ತಲಪಿದಾಗ ಅಯ್ಯರರ ಜೊತೆಯಲ್ಲಿಗೆ ಬಂದಿದ್ದ ಕರ್ನಲ್ ಟಾಡಾ ಅವರು ಅವರನ್ನು ಒಂದೆಡೆ ಕರೆದು ಮೊದಲನೆಯ ಸಲ ನೇತಾಜಿಯವರ ವಿಮಾನವು ಅಪ್ಪಳಿಸಿ ಅಪಘಾತಕ್ಕೀಡಾಯಿತು, ಫೋರ್ಮೋಸಾ ಬಳಿಯಲ್ಲಿ ಈ ಅಪಘಾತ ಸಂಭವಿಸಿತು, ನೇತಾಜಿಯವರಿಗೆ ತೀವ್ರ ಗಾಯಗಳಾಗಿದ್ದರಿಂದ ಅಂದೇ ರಾತ್ರಿ ಅವರು ಮರಣಹೊಂದಿದರು. ಕರ್ನಲ ರಹಮಾನರು ವಿಶೇಷ ಗಾಯಗಳಾಗಿದ್ದರಿಂದ ಆಸ್ಪತ್ರೆಯಲ್ಲಿರುವರೆಂದೂ ತಿಳಿಸಿದರು. ಕರ್ನಲ ರಹಮಾನರು ಕೊಟ್ಟ ವಿಮಾನ ಅಪಘಾತದ ವರ್ಣನೆಯು ಅಯ್ಯರರ ವರದಿಯಲ್ಲಿ ಈ ರೀತಿ ಹೇಳಲಾಗಿದೆ 'ನೇತಾಜಿ ಮತ್ತು ನಾವು ಉರಿಯುತ್ತಿರುವ ವಿಮಾನದಿಂದ ಹೊರಬಿದ್ದು ಬಂದರೆಂದೂ ನೇತಾಜಿಯ ಮುಖವು ಬಹಳ ಸುಟ್ಟಿತೆಂದೂ ಹೇಳಲಾಗಿದೆ. ಆ ದಿನ ರಾತ್ರಿ (1945 ಆಗೋಸ್ತು 17) ಒಂಭತ್ತು ತಾಸಿಗೆ ನೇತಾಜಿಯವರ ಅಂತ್ಯಕ್ರಿಯೆ ಜರಗಿತು ಮೂರು ವಾರಗಳ ನಂತರ ಅವರ ಅವಶೇಷಗಳನ್ನೂ ತಮ್ಮ ವಶಕ್ಕೆ ಕೊಡಲಾಯಿತೆಂದೂ ಬಳಿಕ 1945 ಸಪ್ಟಂಬರ 6ಕ್ಕೆ ಅಂಬುಲನ್ಸ್ ವಿಮಾನದಲ್ಲಿ ಟೋಕಿಯೋಕ್ಕೆ ಬಂದುದಾಗಿಯೂ ಕರ್ನಲ್ ರಹಮಾನರು ಹೇಳಿರುವರು, ಇನ್ನೂ ಕೆಲವು ವಿವರಗಳನ್ನು ಕೊಟ್ಟು ಪ್ರಧಾನ ಮಂತ್ರಿಗಳು ಶ್ರೀ. ಅಯ್ಯರರ ವರದಿಯು ನಂಬಲರ್ಹತೆಯುಳ್ಳದೆಂದೂ ಹೇಳಿ ನೇತಾಜಿಯವರು ಮರಣಹೊಂದಿದ ಬಗ್ಗೆ ಇನ್ನು ಸಂಕೋಚಪಡಲು ಕಾರಣವಿಲ್ಲವೆಂದೂ ಹೇಳಿದರು.

ಕಥೋಲಿಕ್ ಬೇಂಕ್ ಲಿಮಿಟೆಡ್, ಕಲ್ಯಾಣಪುರ

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ಮಾಯಿದೆಗೆ ಅಸಲು ಬಡ್ಡಿ ವೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ, ಸದರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ರಿಜಿಸ್ಟ್ರಿ ನೋಟೀಸು ಕಳುಹಿಸಲ್ಪಟ್ಟಲ್ಲಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದರಿಯವರು ಈಡಿಟ್ಟ ನಗಗಳನ್ನು ಇದೇ 22-3-52ರ ಒಳಗೆ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸ್ ಖರ್ಚು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದ ಪಕ್ಷದಲ್ಲಿ ಸದರಿಯವರು ಈಡಿಟ್ಟ ನಗಗಳನ್ನು ತಾ 27-3-52ನೇ ಗುರುವಾರ ಅಪರಾಹ್ನ ಗಂಟೆ 2ಕ್ಕೆ ಯಾ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಲಾದೀತು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು
		ರೂ.
25/935	ಬಿ. ಹಿರಿಯಣ್ಣ ಹೆಗ್ಡೆ, ತೇಜಪ್ಪ ಹೆಗ್ಡೆರ ಮಗ, ಕಲ್ಯಾಣಪುರ, ಕಲ್ಯಾಣಪುರ ಪೋಸ್ಟ್	280
26/20	ಟಿ ವಾಸುದೇವ ಪೈ, ಟಿ, ವಿಠಲ ಪೈಯ ಮಗ, ತೊಟ್ಟಮ್ ತೊಟ್ಟಮ್ ಪೋಸ್ಟ್	45
26/192	ಕೆ, ಶ್ರೀನಿವಾಸ, ಕೆ, ಪುರುಷಯ್ಯರ ಮಗ, ಕೋಟೆ, ಕಲ್ಯಾಣಪುರ ಪೋಸ್ಟ್	125
26/215	ಕ್ಲಿಫ್ರೆಡ್ ಅಂದ್ರಾದೆ, ಜೋಸೆಫ್ ಅಂದ್ರಾದೆರ ಮಗ, ಕಲ್ಯಾಣಪುರ ಪೋಸ್ಟ್	35
26/259	ಗಣೇಶ ಅಡಿಗ, ರಘುರಾಮ ಅಡಿಗರ ಮಗ, ಕುದ್ರುಬೆಟ್ಟು, ಉಪ್ಪೂರು ಪೋಸ್ಟ್	90
26/262	ಅಲ್ಫೊನ್ಸೊ ಕೊರ್ಡಾ, ಜೊನ್ ಕೊರ್ಡಾರ ಮಗ, ಕೆಲಾರ್ಕಳಬೆಟ್ಟು, ಕಲ್ಯಾಣಪುರ ಪೋಸ್ಟ್	125
26/290	ದೊಗ್ರ ಮರಕಾಲ, ಐತ ಮರಕಾಲನ ಅಳಿಯ, ಹಿರೆಬೆಟ್ಟು, ಉಪ್ಪೂರು ಪೋಸ್ಟ್	90
26/138 26/368 26/478	ಗೋಪಾಲ ನಾಯಕ್, ಮಂಜಪ್ಪ ನಾಯಕರ ಮಗ, ಕಲ್ಯಾಣಪುರ ಪೋಸ್ಟ್	10 22 20
26/1648	ಬಿ, ಫೆರ್ನಾಂಡಿಸ್, ಸೆಬೆಸ್ತಿನ್ ಫೆರ್ನಾಂಡಿಸರ ಮಗ, ಉದಿಯಾವರ, ಉದಿಯಾವರ ಪೋಸ್ಟ್	150
27/451	ಬೆಪ್ತಿಸ್ತ್ ಮೇಸ್ಕರೆನ್ಸ್, ಇನಾಸ್ ಮೇಸ್ಕರೆನ್ಸರ ಮಗ, ಉಪ್ಪೂರು, ಕೊಳಲಗಿರಿ ಪೋಸ್ಟ್	30

ಕಲ್ಯಾಣಪುರ,
ತಾ. 6-3-1952.

S. Rebello,
ಏಜಂಟ್.

ಕೃಷಿಗೆ ಸಮುದ್ರದ ನೀರಿನ ಉಪಯೋಗ

ಮಧ್ಯ ಪ್ರಾಂತ್ಯ ಮತ್ತು ಇತರ ಮರುಭೂಮಿಗಳಿರುವ ಪ್ರದೇಶಗಳಲ್ಲಿ ಸಮುದ್ರದ ನೀರಿನಿಂದ ಹೆಚ್ಚಿದ ಬೆಳೆಯನ್ನು ಬೆಳೆಯಬಹುದೆಂದು ಕಂಡು ಹಿಡಿಯಲಾಗಿದೆ. ಸಮುದ್ರದ ನೀರಿನಲ್ಲಿರುವ ಉಪ್ಪನ್ನು ಪ್ರತ್ಯೇಕಿಸುವ ವಿಧಾನವನ್ನು ಅಮೇರಿಕದಲ್ಲಿ ಕಂಡು ಹಿಡಿದಿದ್ದಾರೆ. ಅಮೇರಿಕದ ಭೂವ್ಯವಸಾಯ ತಜ್ಞರಾದ ಡಾ| ಆರ್ಥರ್ ಎಫ್. ಕೀಹರ್ ಎಂಬವರು ಮಧ್ಯ ಪ್ರಾಂತ್ಯದಲ್ಲಿ ಈ ಸಂಶೋಧನೆಯನ್ನು ನಡೆಸಿರುವರು. ಈ ಸಂಶೋಧನೆಯಿಂದ ನೀರಾವರಿ ಕೆಲಸಗಳನ್ನು ಬೇಗನೆ ಉಪಯೋಗಕರವಾಗುವಂತೆ ಕೈಕೊಳ್ಳಬಹುದಂತೆ ವಿದ್ಯುಚ್ಛಕ್ತಿಯನ್ನು ಮತ್ತು ಹೊಸ 'ಸಿಂತೆಟಿಕ್ ಮೆಂಬ್ರೇನ್ಸ್'ಗಳ ಪ್ರಯೋಗದಿಂದ ಸಮುದ್ರದ ನೀರಿನಿಂದ ಸಿಹಿ ನೀರು ತಯಾರಾಗುವುದು. ಉಪ್ಪು ನೀರನ್ನು ಉಪಯೋಗಿಸಲು ಹಿಂದೆ ಕಂಡುಹಿಡಿದ ವಿಧಾನಗಳಿಗಿಂತ ಕಡಿಮೆ ಖರ್ಚಿನಲ್ಲಿ ಈ ಹೊಸ ವಿಧಾನವು ಪ್ರಯೋಗಿಸಲ್ಪಡುವುವು. 1000 ಗ್ಯಾಲನ್ ಶುದ್ಧ ಸಿಹಿ ನೀರನ್ನು ತಯಾರು ಮಾಡಲು 10ರಿಂದ 20 ಸೆಂಟುಗಳ ವರೆಗೆ ಖರ್ಚಾಗುವುದಂತೆ

[೧ನೇ ಪುಟದಿಂದ ಮುಂದುವರಿದುದು]

ಮವರನ್ನೂ ಭಾರತದ ಗೌರವವನ್ನೂ ರಕ್ಷಿಸಬಲ್ಲೆವು ಸಾಮಾಜಿಕ ಸಭ್ಯತೆಯನ್ನು ಬಲ್ಲ ಸುಸಂಸ್ಕೃತ ರಾಯಭಾರಿಗಳು ತಮ್ಮ ದೇಶಗಳಿಗೆ ಕೀರ್ತಿಯನ್ನು ಸಹ ವನ್ನೂ ಉಂಟುಮಾಡಬಲ್ಲರು.

[ಶ್ರೀ ಅನ್ನದಾನೇಶ್ವರ ವಿರಕ್ತಮಠ ಬಾಗಲಕೋಟೆ ಇವರ ಲೇಖನದಿಂದ]

ಕೃತಕ ಅಕ್ಕಿ

ಮೈಸೂರಿನಲ್ಲಿರುವ ಆಹಾರ ಸಂಶೋಧನಾಲಯದಲ್ಲಿ ಭಾರತದ ವಿಜ್ಞಾನಿಗಳು ಮರಗೆಣಸಿ (ಟಾಪಿಯೋಕ)ನಿಂದ 'ಸಿಂತೆಟಿಕ್ ಅಕ್ಕಿ'ಯನ್ನು ತಯಾರು ಮಾಡುವ ವಿಧಾನವನ್ನು ಕಂಡುಹಿಡಿದಿದ್ದಾರೆ. ಭಾರತ ಸರಕಾರ ಮತ್ತು ಮೈಸೂರು ಸರಕಾರವು ಜೊತೆಗೂಡಿ 1953ರಲ್ಲಿ ಈ ಅಕ್ಕಿಯನ್ನು ಹೇರಳವಾಗಿ ತಯಾರು ಮಾಡುವ ಯೋಜನೆಯನ್ನು ಇಟ್ಟುಕೊಂಡಿವೆ

ಮೈಸೂರು ಶಾಸನ ಸಭಾ ಕಾಂಗ್ರೆಸ್ ಪಕ್ಷದ ಧುರೀಣತ್ವಕ್ಕೆ

ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರನ್ನು ಆರಿಸಬೇಕೆಂಬುದಕ್ಕೆ ಹೊಸ ದಿಲ್ಲಿಯಲ್ಲಿ ಕಾಂಗ್ರೆಸ್ ವರಿಷ್ಠರು ಸಮ್ಮತಿ ಕೊಟ್ಟಿರುವರೆಂದು ತಿಳಿದುಬರುತ್ತದೆ

ಹೊಸದಿಲ್ಲಿಯಲ್ಲಿ ಕಾಂಗ್ರೆಸ್ ಕಾರ್ಯ ಸಮಿತಿಯ ಅಧಿವೇಶನವು

ಇದೇ ತಾ 8 ಮತ್ತು 9ರಂದು ಜರಗಿ ಯಾವ ನಿರ್ಣಯವೂ ಇಲ್ಲದೆ ಮುಕ್ತಾಯವಾಯಿತು. ಕಲ್ಕತ್ತದಲ್ಲಿ ಸೇರಲಿರುವ ಅಧಿವೇಶನದ ಬಗ್ಗೆ ಕಾಂಗ್ರೆಸ್ ಅಧ್ಯಕ್ಷರೇ ರೂಪುಗಳನ್ನು ತಯಾರಿಸಲಿರುವರೆಂದು ಹೇಳಲಾಗಿದೆ. ಮದ್ರಾಸ್ ಮಂತ್ರಿಮಂಡಲದ ಕುರಿತ ಚರ್ಚೆ ನಡೆದರೂ ಅದು ಪ್ರಕಟವು ಆಗಿಯಾಗಿಲ್ಲ.

ಸರಕಾರಿ ಧ್ಯೇಯಧೋರಣೆಗಳ ಕುರಿತು ಸರಕಾರಿ ನೌಕರರು ಟೀಕೆ ಟಿಪ್ಪಣಿ ಮಾಡಕೂಡದು—ಮದ್ರಾಸ ರಾಜ್ಯದ ಸರಕಾರಿ ನೌಕರರು ಯಾವುದೇ ಸಮಾರಂಭಗಳಲ್ಲಿ ಸರಕಾರಿ ಧ್ಯೇಯಧೋರಣೆಗಳನ್ನು ಕ್ರಿ ಟೀಕೆಪಿಪ್ಪಣಿಗಳನ್ನು ಮಾಡಕೂಡದಾಗಿ ಮದ್ರಾಸ ಸರಕಾರವು ತನ್ನ ಅಂಕಿತದೊಳಗಿನ ನೌಕರರನ್ನು ಎಚ್ಚರಿಸಿಯದೆ ಎಂದು ತಿಳಿದುಬರುತ್ತದೆ.

ಚುನಾವಣೆಗಳು ಮುಗಿದವು. ಜನತೆಯ ಪ್ರತಿನಿಧಿಗಳು ತಮ್ಮ ಜವಾಬುದಾರಿಯನ್ನು ತಿಳಕೊಂಡು ಮುಂದಿನ ಕಾರ್ಯವನ್ನು ತೊಡಗಬೇಕಾಗಿದೆ. ಎಲ್ಲೆಡೆಯಲ್ಲಿಯೂ ಪ್ರತಿಸ್ಪರ್ಧೆಯಿದ್ದುದರಿಂದ ಉಮೇದ್ವಾರರಿಗೆ ಎಲ್ಲಾ ಪ್ರದೇಶಗಳ ಮತದಾರರನ್ನು ಸಂದರ್ಶಿಸುವ ಅವಕಾಶವು ದೊರಕಿತು. ಜನರ ಅಭಿಪ್ರಾಯಗಳನ್ನು ತಿಳಿಯುವ ಸಂದರ್ಭವೂ ಸಿಕ್ಕಿತು. ಕಾಂಗ್ರೆಸ್ ಪಕ್ಷದ ಎದುರಾಳಿಗಳ ಅಪಪ್ರಚಾರವು ನಿಷ್ಫಲವಾಯಿತು "ಕಾಂಗ್ರೆಸು ಸರಕಾರ ಜನಹಿತದ ಬಗ್ಗೆ ಸಾಕಷ್ಟು ದುಡಿದಿಲ್ಲವಾದರೂ ಮಹಾತ್ಮಾ ಗಾಂಧಿಯವರ ಮತ್ತು ಪಂಡಿತ ಜವಾಹರಲಾಲರ ಕಾಂಗ್ರೆಸ್ ನಮ್ಮ ಹಿತವನ್ನು ಸಾಧಿಸದೆ ಇರಲಾರದು. ಇನ್ನೊಮ್ಮೆ ಅದರ ಪ್ರತಿನಿಧಿಗಳಿಗೆ ಬೆಂಬಲವನ್ನು ಕೊಡುವುದು ನಮ್ಮ ಕರ್ತವ್ಯ" ಎಂದು ಬಹುಮತದವರ ತರ್ಕವಿದ್ದಿತು. ಈ ಜಿಲ್ಲೆಯಲ್ಲಿ ಅದ್ಭುತಶಕ್ತಿಗಳನ್ನೆದುರಿಸಿ ಕಾಂಗ್ರೆಸ್ ಜಯವನ್ನು ಪಡೆಯಿತು

ಕಾಂಗ್ರೆಸ್ ಪ್ರಾಂತವೆಂದೆನಿಸಿಕೊಂಡಿದ್ದ ತಮಿಳುನಾಡಿನಲ್ಲಿ ಹಲವೆಡೆಗಳಲ್ಲಿ ಕಾಂಗ್ರೆಸ್ ಪರಾಜಯವನ್ನು ಹೊಂದಿತು. ಆಂಧ್ರ ದೇಶದಲ್ಲಿ ಕಮ್ಯುನಿಸ್ಟರ ಪ್ರಾಬಲ್ಯವು ಕಂಡುಬರುತ್ತಿದೆ. ನೆರೆಜಿಲ್ಲೆಯಾದ ಮಲಬಾರ್ ಕಮ್ಯುನಿಸ್ಟ ಕ್ಷೇತ್ರವಾಗಿದೆಯೆನ್ನಬಹುದು. ಈ ಜಿಲ್ಲೆಯಲ್ಲಿ ಕೂಡಾ ಹೊಸದುರ್ಗ ಮತದಾರ ಕ್ಷೇತ್ರದಲ್ಲಿ ಕಾಂಗ್ರೆಸ್ ಉಮೇದ್ವಾರರ ವಿಶೇಷ ಪ್ರಯತ್ನವು ಫಲಿಸಲಿಲ್ಲ

ಮದ್ರಾಸ್ ಪ್ರಾಂತದಲ್ಲಿ ಬರುವ ಐದು ವರ್ಷಗಳಲ್ಲಿ ಆಡಳಿತೆ ನಡೆಸುವವರು ಯಾರೆಂದು ಈ ವರೆಗೆ ನಿಶ್ಚಯವಿಲ್ಲ.. ಕಾಂಗ್ರೆಸ್ಸೇತರರ ಐಕ್ಯರಂಗದ ಚಟುವಟಿಕೆಗಳು ಭರದಿಂದ ಸಾಗುತ್ತಿವೆ. ಆದರೂ ಕಾಂಗ್ರೆಸ್ ಆಡಳಿತವೇ ಬರಬಹುದೆಂಬ ನಿರೀಕ್ಷಣೆಯಿದೆ

ಒಕ್ಕಲುಹಿತ ಮಸೂದೆಯ ಆವಶ್ಯಕತೆ

ನಮ್ಮ ಪ್ರತಿನಿಧಿಗಳ ಹೊಣೆ

[ಶ್ರೀ ಎಂ. ಉಮೇಶರಾವ್, ವಕೀಲ್, ಕಾಸರಗೋಡು]

ಆಹಾರದ ಕೊರತೆಯೇ ಕಾಂಗ್ರೆಸ್ ಉಮೇದುವಾರರ ಪರಾಜಯಕ್ಕೆ ಕಾರಣವೆಂದು ನಮ್ಮ ಪ್ರಾಂತೀಯ ಮುಖಂಡರಲ್ಲಿ ಹಲವರು ಹೇಳುತ್ತಿದ್ದಾರೆ. ಈ ವಾದದಿಂದ ತಾವು ಕರ್ತವ್ಯ ಬಾಹಿರರಾಗಿಲ್ಲವೆಂದು ತೋರಿಸುವ ಹವ್ಯಾಸವು ಒಡೆದು ಕಾಣುತ್ತಿದೆ. ಈ ತರ್ಕಸರಣಿಯು ನ್ಯಾಯವೂ ಅಲ್ಲ, ಆಶಾಜನಕವೂ ಅಲ್ಲ. ಇನ್ನಾದರೂ ಜನತೆಯ ಕಷ್ಟ ಪರಿಹಾರಾರ್ಥವಾಗಿ ತಾವು ಕೈಕೊಳ್ಳಬೇಕಿದ್ದ ಯಾವ ಕಾರ್ಯವನ್ನು ಮಾಡಲು ಹಿಂಜರಿದೆವು ಎಂಬುದನ್ನು ಅವರು ಕಲಿಯುವುದು ಅಗತ್ಯ. ಇಲ್ಲದಿದ್ದಲ್ಲಿ ಪರಿಸ್ಥಿತಿಯು ಇನ್ನೂ ಕೆಟ್ಟು ಹೋಗಿ, ಯಾವ ಪರಿಹಾರಕ್ಕೂ ಆಸ್ಪದವಿಲ್ಲದಂತಾಗುವುದು.

ಕೃಷಿಕನ ಪ್ರಯತ್ನಗಳಿಗೆ ನ್ಯಾಯವಾದ ಪ್ರತಿಫಲವು ದೊರೆಯುವಂತೆ ಅವನು ಧನಿಗೆ ಕೊಡಬೇಕಾದ ಗೇಣಿಯನ್ನು ಸರಕಾರವು ನಿಶ್ಚಯಿಸತಕ್ಕದ್ದು. ಒಕ್ಕಲುಗಳಲ್ಲನೇಕರಿಗೆ ತಮ್ಮ ದುಡಿಮೆಗೆ ಸಮಯಾದ ಪ್ರತಿಫಲವು ದೊರೆಯುವುದಿಲ್ಲವೆಂಬುದು ನಿರ್ವಿವಾದ. ಹೀಗಿರುತ್ತಾ ಇದರ ಹೊಣೆಗಾರಿಕೆಯನ್ನು ಸರಕಾರವು ವಹಿಸಲೇ ಬೇಕಾಗಿದೆ. ಬಹುಸಂಖ್ಯಾಕರಾಗಿರುವ ಕೃಷಿಕರ ಮೇಲ್ಮೆಗೆ ಅವಶ್ಯವಿರುವ ಈ ಕಾಲದಲ್ಲಿ ಅಸಡ್ಡೆಯನ್ನು ತೋರಿಸುವುದೆಂದರೆ ಜನದ್ರೋಹವಲ್ಲದೆ ಮತ್ತೇನು?

ನ್ಯಾಯವಾದ ಗೇಣಿಯನ್ನು ಕೊಟ್ಟಲ್ಲಿ ಒಕ್ಕಲನ್ನು ಎಬ್ಬಿಸುವ ಅಧಿಕಾರವು ಧನಿಗೆ ಇರಕೂಡದು. ಒಕ್ಕಲುತನದಲ್ಲಿ ಸ್ಥಿರತೆಯೂ ಬೇಕಿದೆ. ನೂರಾರು ಧನಿಗಳನ್ನು ನಾನು ವಿಚಾರಿಸಿದಾಗ "ಗೇಣಿಕೊಡುವ ಒಕ್ಕಲುಗಳನ್ನು ಎಬ್ಬಿಸಲು ನಾವು ಎಂದಿಗೂ ಬಯಸುವುದಿಲ್ಲ. ಎಂದು ಹೇಳುದನ್ನು ಕೇಳಿರುತ್ತೇನೆ. ಹೀಗಿರುತ್ತಾ ಈ ಬಗ್ಗೆ ಒಂದು ಕಾನೂನನ್ನು ಮಾಡುವುದಕ್ಕೆ ಸಂಕೋಚವೇಕೆ. ಒಕ್ಕಲುಗಳನ್ನು ಎಬ್ಬಿಸಬಾರದಾಗಿ ಒಂದು ಸ್ಥಿರ ಮಸೂದೆಯನ್ನಾದರೂ ತರಬೇಕೆಂದು ಕೇಳಿಕೊಂಡರೆ ಸರಕಾರವು ಯಾಕೆ ಮೌನ ತಾಳಿದೆ! ಈ ರೀತಿಯ ವರ್ತನೆಯಿಂದ ಜನರಲ್ಲಿ ಜಿಗುಪ್ಸೆಯುಂಟಾಗಲಾರದೆ? ಕಳೆದ 15 ವರ್ಷಗಳಿಂದ ನಮ್ಮ ಜಿಲ್ಲೆಯಲ್ಲಿ ಒಕ್ಕಲು ಹಿತ ಮಸೂದೆಯ ಕುರಿತು ಚಳವಳ ನಡೆದಿದೆ. ಶ್ರೀ ರಾಜಗೋಪಾಲಾಚಾರಿಯವರು ಮುಖ್ಯ ಮಂತ್ರಿಯಾಗಿದ್ದು ಈ ಜಿಲ್ಲೆಯನ್ನು ಸಂದರ್ಶಿಸಿದಾಗ ಸುಧಾರಣೆಯ ಅವಶ್ಯಕತೆಯನ್ನು ಅರಿಕೆ ಮಾಡಿಕೊಂಡಿದ್ದೆವು. ಅದನ್ನು ಅವರು ಒಪ್ಪಿ, ಸ್ವಲ್ಪ ತಾಳ್ಮೆಯನ್ನು ಬೋಧಿಸಿದ್ದರು. ಶ್ರೀ ಪ್ರಕಾಶಮ್ ಮುಖ್ಯ ಮಂತ್ರಿಯಾಗಿದ್ದ ವೇಳೆ ಪ್ರಾಂತದ ಶ್ರಮಿಕರ ಸ್ಥಿತಿಯನ್ನು ವಿಮರ್ಶಿಸಿ ತಕ್ಕ ಯೋಜನೆಯನ್ನು ಮಾಡಿಸುವರೆ ಶ್ರೀ ರಾಘವೇಂದ್ರ ರಾಯರನ್ನು ನೇಮಿಸಲಾಗಿತ್ತು. ಯೋಗ್ಯ ಸುಧಾರಣೆಗಳಾಗುವುವೆಂಬ ಆಶೆಯುಂಟಾಯಿತು. ಆದರೂ ಈ ವರೆಗೂ ಏನೊಂದೂ ನಡೆಯದಿರುವುದು ವಿಷಾದಕರ

ನ್ಯಾಯವಾದ ನಿಶ್ಚಿತ ಗೇಣಿ ಶಾಶ್ವತವಾದ ಒಕ್ಕಲುತನದ ಹಕ್ಕು ಇವೆರಡು ಸುಧಾರಣೆಗಳು ಬೇಗನೆ ಆಗಲೇಬೇಕು. ಇವುಗಳಿಂದ ಅಸಂಖ್ಯಾತ ಜನರ ಅಸಮಾಧಾನವನ್ನು ನೀಗಿಸಲಾಗುವುದು. ನ್ಯಾಯವನ್ನು ಪಾಲಿಸಿದಂತೆಯೂ ಆಗುವುದು। ಆಹಾರದ ಕೊರತೆಯೂ ಹೆಚ್ಚು ಮಟ್ಟಿಗೆ ಕಡಿಮೆಯಾಗುವುದು ಜಿಲ್ಲೆಯಲ್ಲಿ ಇದಕ್ಕೆ ಸಂಪೂರ್ಣ ಬೆಂಬಲವಿದೆ. ನಮ್ಮ ಪ್ರತಿನಿಧಿಗಳು ಉತ್ಸಾಹದಿಂದಲೂ ಭರದಿಂದಲೂ ಈ ಕಾರ್ಯಕ್ರಮವನ್ನು ಕೈಕೊಳ್ಳಬೇಕಾಗಿ ವಿನಂತಿ. ಪ್ರಗ್ರಾಮದ ಕೃಷಿಕರು ಒಂದುಗೂಡಿ ಕುರಿತು ನಿರ್ಣಯಗಳನ್ನು ಯಂ. ಉಮೇಶರಾವ್, ಅಧ್ಯಕ್ಷ, ಜಿಲ್ಲಾ ಕೃಷಿಕ ಸಂಘ, ಕಾಸರಗೋಡು ಈ ವಿಳಾಸಕ್ಕೆ ಕಳುಹಿಸಬೇಕಾಗಿಯೂ ವಿನಂತಿ

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1920 ... ಸ್ಥಾಪಿತವಾಗಿ 21 ವರುಷಗಳಿಂದ ಊರ ... ಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ್ಯ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕರು.—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಕವಿರಾಜ ಯನ್. ಯನ್. ಸೇ...
ಶಾಸ್ತ್ರೀಯ ಔಷಧಿಗಳ
ಈಗಲೇ ಬಂದಿವೆ

ಬೃಹತ್ ಅಮೃತಬಳ್ಳಿ ಕಷಾಯ
ಪ್ರಸೂತಾರಿಷ್ಟ
ಕಸ್ತೂರಿ ಕಲ್ಪ ರಸಾಯನ
ನೇತ್ರಬಿಂದು
ಕರ್ಪೂರಾರಿಷ್ಟ
ಪುನರ್ನವಾಸವ
ಬಾಸಾರಿಷ್ಟ
ಕುಂಕುಮಾಸವ
ಮೃಗಾಂಕ ದ್ರಾವ
ದರವನ್ನು ವಿಚಾರಿಸುವದು.
ಏಜಂಟ್ಸ್:—
ಶಾ. ಕಂಪೆನಿ, ಮಂಗಳೂರು ನಂ...

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುದು, ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದುದು, ಯಾವ ಬಾಧಕವೂ ಇಲ್ಲ. ಸರಾರು ಮುಂದಿಗೆ ಖಾತ್ರಿ ಗುಣವಾಗಿ... ಬೆಲೆ ರೂ. 3-; ಸ್ಪೆಶ್ಯಲ್ ರೂ. ... ಅಧಿಕಾಧಿಕ ಸ್ಪೆಶ್ಯಲ್ ರೂ, 8- [ಪಿ. ಹನ್ನೆರಡಾಣೆ ಪ್ರತ್ಯೇಕ.]

Mr. D. DEVEE, F. DS. (N...
Tollygunge CALCUTTA,
ಸ್ಥಾನಿಕರು ಶಹಾ ಕಂಪೆನಿ, ಮಂಗಳೂ...

ಸಂರಕ್ಷಣೆ ಹಾಗೂ ಸಂಚಯಕ್ಕೆ
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.
ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934
ವಿಚಾರಿಸಿರಿ
ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಸೇವಡಾತ; ... ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭ। ದಾಯಕ ವ್ಯವಹಾರದ ಸಂಬಂಧ.
ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರಿಯ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.
ದಿ. ಬ್ರಾಂಚ್ ಮೆನೇಜರ್;
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ.)



BALLBEARING
-THE LIFEBLOOD OF THE INDUSTRY !
Dealers in:
ROTARY OIL MILLS
FLOUR MILLS
BALL, ROLLER & THRUST BEARINGS
TELEGRAMS —"CHEAPTRADE"
A. RAMSON AND CO.
6 B MISTRI BUILDING BALARAM ST BOMBAY

ಚಿತ್ತೂರಿನಲ್ಲಿ ನಮ್ಮ ಹೊಸ ಶಾಖೆ

ಇದೇ ಬರುವ ಮಾರ್ಚ ೨೦ರಂದು ಗುರುವಾರ ನಮ್ಮ ಬ್ಯಾಂಕಿನ ಹೊಸತೊಂದು ಶಾಖೆ ಚಿತ್ತೂರಿನಲ್ಲಿ ತೆರೆಯಲ್ಪಡಲಿದೆಯೆಂದು ತಿಳಿಸಲು ನಾವು ಸಂತೋಷಪಡುತ್ತೇವೆ.

ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್, ಲಿಮಿಟೆಡ್

ಪ್ರಧಾನ ಕಾರ್ಯಾಲಯ, ಉಡುಪಿ, (ದ. ಕ.)

THE CANARA BANKING CORPORATION LIMITED.

ನವಯುಗ

ಚಂದಾ ವಿವರ

ವರ್ಷಕ್ಕೆ ರೂ. 5—12—0

6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೧೩-೩-'೫೨

ಧಾರಣೆಗಳ ಇಳಿತ

ದೇಶದಲ್ಲೆಲ್ಲ ಧಾರಣೆ ಇಳಿತದ ಸುದ್ಧಿಯನ್ನಿಂದು ಕೇಳುತ್ತಲಿದ್ದೇವೆ. ಈ ಇಳಿತಾಯದಿಂದ ಕೆಲವರು ವ್ಯರ್ಥ ಹುಯಿಲೆಬ್ಬಿಸಿದ್ದಾರೆ. ದುಡ್ಡುಳ್ಳವರೂ ಮಧ್ಯಮ ತರಗತಿಯವರೂ ಕೆಲ ಒಡವರೂ ಈ ವಿಚಾರದಲ್ಲಿ ಕಳವಳಪಟ್ಟುಕೊಂಡಿದ್ದಾರೆ. ವಿಶೇಷತಃ ಬಂಡವಳಗಾರರಿಗೆ ಇದರಿಂದ ಹಾನಿ ಜಾಸ್ತಿ. ಹೆಚ್ಚು ಬೆಲೆಯನ್ನು ತೆತ್ತು ಸಂಗ್ರಹಿಸಿದ ವಸ್ತುಗಳಿಗೆ ಒಮ್ಮಿಂದೊಮ್ಮೆಯೇ ಧಾರಣೆ ತಗ್ಗುವದರಿಂದ ನಷ್ಟವು ಪರಿಮಿತವಾಗಬಹುದು. ಆದರೆ ಸಾಮಾನ್ಯ ಜನತೆ ಮತ್ತು ಮಧ್ಯಮ ತರಗತಿಯವರಿಗೆ ಇದರಿಂದಾಗಿ ಹೆಚ್ಚಿನ ಹಾನಿಯಾಗಲಾರದು. ಮಾತ್ರವಲ್ಲ ಅವರ ಜೀವನದಲ್ಲಿ ನೂತನವಾದ ಆಶಾಕಿರಣ ಮೂಡಬಹುದು. ಯುದ್ಧಕಾಲದಿಂದ ಹತ್ತು ಹನ್ನೆರಡು ವರ್ಷಗಳ ಏರಿದ ಧಾರಣೆಯಿಂದ ಮಧ್ಯಮ ವರ್ಗದ ಮತ್ತು ಸಾಮಾನ್ಯ ಜನತೆಯ ಜೀವನ ಕಷ್ಟದಾಯಕವಾಗಿತ್ತು! ಕೂಲಿಕಾರ ವರ್ಗವಾದರೂ ಚೇತರಿಸುತ್ತ ಬಂದಿದೆ. ಏಕೆಂದರೆ ದುಡಿಯುವವರಿಗೆ ಸಾಕಷ್ಟು ಹಣವು ಕೈಸೇರುತ್ತಿತ್ತು. ಮಧ್ಯಮ ತರಗತಿಯವರ ಸ್ಥಿತಿ ಹಾಗಲ್ಲ! ಸ್ಥಾನಮಾನಗಳನ್ನು ಕಾಪಾಡಿಕೊಳ್ಳಬೇಕು. ಸಂಸಾರದ ಹೊಣೆಯನ್ನು ದುಡಿಯುವ ಒಬ್ಬೊಬ್ಬರೇ ವಹಿಸಿಕೊಳ್ಳಬೇಕಾಗುವದು. ವಸ್ತುಗಳ ಧಾರಣೆ ದಿನದಿಂದ ದಿನಕ್ಕೆ ಹೆಚ್ಚಾಗಿ ಅದಾಯವೂ ಅದಕ್ಕೆ ಸರಿಯಾಗಿ ಹೆಚ್ಚದ್ದರಿಂದ ಅವರು ಜೀವಿಸುವದೇ ಕಷ್ಟಸಾಧ್ಯವಾಗಿತ್ತು! ಕೂಲಿಕಾರರ ಸ್ಥಿತಿ ಹಾಗಿರಲಿಲ್ಲ. ಅವರ ಸಾಂಸಾರಿಕ ಜೀವನದಲ್ಲಿ ಹಿಂದಿನದಕ್ಕೆ ಸುಧಾರಣೆ! ಯುದ್ಧಕಾಲದ ಅತಿಧಾರಣೆಯು ನಡೆಯುತ್ತಲಿಂದರೂ ಅವರ ದಿನಕೂಲಿಯೂ ಹಿಂದಿಗಿಂತ ಎಂಟುಪಾಲು ಹೆಚ್ಚಿದೆ. ಒಂದು ಮನೆಯಲ್ಲಿ ರೋಗಿಗಳು ಮಕ್ಕಳನ್ನು ಬಿಟ್ಟು ಎಲ್ಲರೂ ದುಡಿಯುವವರೇ. ಜೀವನವೂ ಆಡಂಬರವಿಲ್ಲದ್ದು. ಹೀಗಾಗಿ ಅವರು ಹಿಂದಿಗಿಂತ ಇಂದು ತುಂಬಾ ಸುಧಾರಿಸಿದ್ದಾರೆ. ಈಗಲೂ ಅವರಿಗೆ ಚಿಂತೆಯ ಕಾರಣವೇನೂ ಇಲ್ಲ.

ಕೂಲಿಕಾರ ವರ್ಗದವರ ಜೀವನದಲ್ಲಿ ಸ್ವಲ್ಪವಾದರೂ ಸ್ವಾವಲಂಬನವಿದೆ, ನಿಶ್ಚಿಂತತೆಯಿದೆ. ಸದಾ ಗೋಳಿನ ಬಾಳೆಂದರೆ ಮಧ್ಯಮ ತರಗತಿಯವರದು! ಧಾರಣೆಯು ಇಳಿದದ್ದರಿಂದ ಈ ವರ್ಗದ ಭವಿತವ್ಯದ ಕುರಿತು ತುಸು ಆಶಾಕಿರಣ ಮೂಡಬಹುದು. ಸುಮಾರು 7—8 ವರ್ಷಗಳಿಂದ ಜೀವನ ಯುದ್ಧದಲ್ಲಿ ಹೋರಾಟ ನಡೆಸಿದರೆಂದವರಿಇವರೇ ಸ್ವಮಂದಕ್ಕೆ ಈ ವರ್ಗ ಚೇತರಿಸಿಕೊಳ್ಳಬಹುದು. ಕೂಲಿಕಾರ ವರ್ಗ ಅರ್ಥಾತ್ ದುಡಿಯುವವರ ವರ್ಗಕ್ಕೆ ಪ್ರಮಾಣಿಕತನದಿಂದ ದುಡಿಯುದಿದ್ದರೆ ಹಿಂದಿನಷ್ಟೇ ಸುಖ ಮುಂದಾದೀತೆಂದು ಹೇಳುವದು ಕಷ್ಟ!

ಪರಿಸ್ಥಿತಿ ಹೀಗಿರುವದಾದರೂ, ಎಲ್ಲ ಪಕ್ಷ ಪಂಗಡದವರೂ ಗೊಂದಲವೆಬ್ಬಿಸಿದ್ದಾರೆ. «ಅತಿಧಾರಣೆ" ಎಂದು ಸಂತಾಪವನ್ನು ವ್ಯಕ್ತಪಡಿಸಿದ ಬಾಯಿಂದಲೇ— ಧಾರಣೆ ಇಳಿದಾಗ ಅದಕ್ಕೂ ಪರಿತಪಿಸುತ್ತಿಲಿದ್ದೇವೆ. ಏನು ಬದಲಾವಣೆಯಾದರೂ ನಮಗೆ ಕಷ್ಟ—ಏನು ಸುಧಾರಣೆಯಾದರೂ ನಮಗೆ ಕಷ್ಟ! ಇವುಗಳ ನಡುವೆ ಇಷ್ಟವಾವುದೆಂಬುದನ್ನು ನೋಡಿಕೊಳ್ಳುವ ಶಕ್ತಿ ಇನ್ನೂ ಹುಟ್ಟಿಲ್ಲ. ಮುಂದಿನ ದಿನಗಳು ಇಂತಹ ಬೌದ್ಧಿಕ ವಿಚಾರಗಳ ಒಳ್ಳೆ ಪರಿಣಾಮವನ್ನು ಮಾಡದಿರಲಾರವು. ಧಾರಣೆಯು ಒಂದು ಮಟ್ಟಕ್ಕೆ ಮುಟ್ಟಿ ಸ್ಥಿರವಾದೊಡನೆ ಗೊಂದಲವಡಗಿ ದೇಶದ ಆರ್ಥಿಕ ಸಾಮಾಜಿಕ ಸುಧಾರಣೆಯಾಗಬಹುದೆಂದು ನಿರೀಕ್ಷಿಸಬಹುದು.

ಸುದ್ಧಿ—ಸಾರ

ಧುರೀಣರ ಐಕ್ಯದಲ್ಲಿ ಒಮ್ಮತಬೇಕು

ಭದ್ರವಾದ ಮಂತ್ರಿಮಂಡಲವನ್ನು ರಚಿಸುವ ಆತ್ಮವಿಶ್ವಾಸವು ಧುರೀಣರಲ್ಲಿ ಇದ್ದರೇನೇ ಮಂತ್ರಿಮಂಡಲದ ರಚನೆಯ ಕುರಿತು ಆಲೋಚಿಸಬಹುದೆಂದೂ ಶಾಸನಸಭಾ ಕಾಂಗ್ರೆಸ್ ಪಕ್ಷದ ಧುರೀಣರ ಐಕ್ಯವು ಒಮ್ಮತದಿಂದ ಆಗಬೇಕೆಂದೂ ದಿಲ್ಲಿಯಲ್ಲಿ ಸೇರಿದ್ದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಮದ್ರಾಸು ಕಾಂಗ್ರೆಸ್ ಧುರೀಣರಿಗೆ ಸೂಚಿಸಿದೆ.

ಮುಂಬಯಿಯಲ್ಲಿ ಮೈಸೂರು ರಾಜಪ್ರಮುಖರು

ಮೈಸೂರು ರಾಜಪ್ರಮುಖರಾದ ಶ್ರೀ ಜಯ ಚಾಮರಾಜೇಂದ್ರ ಒಡೆಯರು ಮುಂಬಾಯಿಯ ಮೈಸೂರು ಸಂಘದ ರಜತೋತ್ಸವದ ಅಧ್ಯಕ್ಷತೆ ವಹಿಸಲು ಇಲ್ಲಿ ಬಂದಿದ್ದು ಕೋರ್ಪರೇಶನ್ ಮೊದಲಾದ ಸಂಸ್ಥೆ ಸಂಘಗಳಿಂದ ಸಂಭ್ರಮದ ಸ್ವಾಗತ ಪಡೆದರು. ರಾಜಪ್ರಮುಖರ ಹಸ್ತದಿಂದ ಸರ್. ಎಂ. ವಿಶ್ವೇಶ್ವರಯ್ಯನವರ ಛಾಯಾಚಿತ್ರ ಅನಾವರಣವೂ ನಡೆಯಿತು. ರಾಜಪ್ರಮುಖರು ಮಹಾಬಲೇಶ್ವರದಲ್ಲಿಯೂ ತಮ್ಮ ಕೇರಿಯ ಸಮಾಧಿಯ ದರ್ಶನ ಪಡೆದು ಪುಷ್ಪವನ್ನರ್ಪಿಸಿದರು.

ಬೆಲೆಗಳ ಇಳಿತದಿಂದ ದೇಶಕ್ಕೆ ಬಾಧಕವಿಲ್ಲ

ಬೆಲೆಗಳ ಅನಿರೀಕ್ಷಿತ ಇಳಿಕೆಯಿಂದ ಯಾವ ಅನಾಹುತವೂ ಆಗಲಾರದೆಂದೂ ಅದಕ್ಕೆ ನಾವು ಅವಕಾಶ ಕೊಡುವುದಿಲ್ಲವೆಂದೂ ಸರಕಾರವು ಸೂಕ್ಷ್ಮವಾಗಿ ಪರಿಶೀಲಿಸಿ ಎಲ್ಲವೂ ಸಾಮಾನ್ಯ ಮಟ್ಟಕ್ಕೆ ಬರುವ ಕ್ರಮವನ್ನು ಕೈಕೊಳ್ಳಲಾಗುವುದೆಂದೂ ಕೇಂದ್ರ ಸರಕಾರದ ವಾಣಿಜ್ಯ ಮಂತ್ರಿ ಶ್ರೀ ಹರೇ ಕೃಷ್ಣ ಮೆಹತಾಬರವರು ನಾಗಪುರದಲ್ಲಿ ಹೇಳಿದ್ದಾರೆ.

ಮದ್ರಾಸ್ ಮಾದರಿ ಪ್ರಾಂತವಾಗಲಿ

ಎಂದು ತನ್ನನ್ನು ಬೀಳ್ಕೊಳ್ಳಲು ಏರ್ಪಡಿಸಿದ ಸಮಾರಂಭದಲ್ಲಿ ಮದ್ರಾಸು ಗವರ್ನರ ಭಾವನಗರದ ಮಹಾ ರಾಜರು ಹಾರೈಸಿದರು. ತತ್ಪೂರ್ವದಲ್ಲಿ ಮುಖ್ಯಮಂತ್ರಿ ಶ್ರೀ ಪಿ. ಯಸ್. ಕುಮಾರ ಸ್ವಾಮಿ ರಾಜರವರು ಗವರ್ನರರು ತಮ್ಮ ದಕ್ಷತೆಯಿಂದ ಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿ ಆದರ್ಶರಾಗಿರುವರೆಂದರು.

ಪ್ರಾಂತ ನಿರ್ಮಾಣ ಮಹತ್ವವಲ್ಲ

ಮದ್ರಾಸದ ನಿಯೋಜಿತ ಗವರ್ನರರಾದ ಶ್ರೀ ಶ್ರೀ ಪ್ರಕಾಶರು ಆಂಧ್ರ ಪ್ರಾಂತ್ಯ ರಚನೆಗಿಂತ ಆಹಾರ, ಸುರಕ್ಷಿತತೆ ಮೊದಲಾದುವು ಅತಿ ಮುಖ್ಯ ಪ್ರಶ್ನೆಗಳೆಂದೂ ಮೊದಲು ಅವಕ್ಕೇ ಹೆಚ್ಚಿನ ಪ್ರಾಮುಖ್ಯತೆ ಕೊಡುವುದು ಅವಶ್ಯವೆಂದೂ ಪತ್ರಿಕಾ ಪ್ರತಿನಿಧಿಗಳ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಕೇಂದ್ರ ಮೇಲ್ಮನೆಗೆ ಸದಾನಂದ ಹೆಗ್ಡೆಯವರ ಆಯ್ಕೆ

ಕಾಂಗ್ರೆಸು ಕೇಂದ್ರ ಚುನಾವಣಾ ಸಮಿತಿಯು ದಕ್ಷಿಣ ಕನ್ನಡ ಜಿಲ್ಲೆಗಿರುವ ಒಂದು ಸ್ಥಾನಕ್ಕೆ ಪಬ್ಲಿಕ್ ಪ್ರೊಸಿಕ್ಯೂಟರ್ ಆಗಿದ್ದು ರಾಜಿನಾಮೆಯಿತ್ತಿದ್ದ ಶ್ರೀ ಕೆ. ಸದಾನಂದ ಹೆಗ್ಡೆಯವರನ್ನು ಕೇಂದ್ರ ಮೇಲ್ಮನೆಗೆ ಆರಿಸಿದೆ.

ಬರಗಾಲ ಪ್ರದೇಶಗಳಿಗೆ ಮುನ್ಷಿಯವರ ಭೆಟ್ಟಿ

ಮದ್ರಾಸು ರಾಜ್ಯದ ರಾಯಲಸೀಮೆಯ ಕೆಲವು ಹಳ್ಳಿಗಳಲ್ಲಿ 4—5 ವರ್ಷಗಳಿಂದ ಮಳೆಯಾಗದೆ ತೀವ್ರ ಬರಗಾಲ ಉಂಟಾಗಿ ಜನರು ವಿಶೇಷ ಪ್ರಯಾಸಕ್ಕೀಡಾಗಿ ಊರು ಬಿಡುತ್ತಿರುವರು.- ಬರಗಾಲ ಪ್ರದೇಶಗಳನ್ನು ಸ್ವತಃ ಪರಿಶೀಲಿಸುವುದಕ್ಕಾಗಿ ಕೇಂದ್ರದ ಆಹಾರ ಮಂತ್ರಿ ಮುನ್ಷಿಯವರು ಅಲ್ಲಿಯ ಸಂಚಾರ ಕೈಗೊಂಡಿದ್ದಾರೆ

ಕಲಕತ್ತೆಯಲ್ಲಿ ಎ. ಐ ಸಿ ಸಿ ಅಧಿವೇಶನವು

ಇದೇ 22 ಮತ್ತು 23ಕ್ಕೆ ಸೇರಲಿದ್ದು ತಕ್ಕ ಸಿದ್ಧತೆಗಳು ಭರದಿಂದ ಸಾಗುತ್ತಿವೆ.

ಉ ಡು ಪಿ

ಹೊಸ ವಾರ ಪತ್ರಿಕೆಯ ಉದ್ಘಾಟನೆ—ಶ್ರೀ ಮಹೇಂದ್ರ ನಿವಾಸ ಪ್ರಾವ್ಯದ ನಾಯಕತ್ವದಲ್ಲಿ ಶ್ರೀ ಪಿ. ಗಣೇಶ ನಾಯ್ಕರ ಸಂಚಾಲಕ ಸಂಪಾದಕತ್ವದಲ್ಲಿ, ಶ್ರೀ ಎಸ್. ಎಲ್. ರ ಸಂಪಾದಕತ್ವದಲ್ಲಿ ಉಡುಪಿಯಲ್ಲಿ ಸ್ಥಾಪಿಸಲ್ಪಟ್ಟ «ಸುಧಾರಕ» ಕನ್ನಡ ವಾರಪತ್ರಿಕೆಯ ಉದ್ಘಾಟನೆಯನ್ನು ಇದೇ ತಾ|೬ರಂದು ಸಂಜೆ ಸ್ಥಳೀಯ ಸಂಸ್ಕೃತ ಕಾಲೇಜಿನಲ್ಲಿ ಸೇರಿದ ಮಹಾ ಸಭೆಯಲ್ಲಿ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಪ್ರಿನ್ಸಿಪಾಲ್ ಕಾಲಗಿ ಕೇಶವಾಚಾರ್ಯರು ವಹಿಸಿದ್ದರು. ಪ್ರಾರ್ಥನೆಯಾದ ಬಳಿಕ ವಕೀಲ್ ಶ್ರೀ ಎನ್. ವಿ. ಕಾಮತರು ಸಂದೇಶಗಳನ್ನೋದಿದರು. ನಂತರ ಉದ್ಘಾಟಕರು ಪತ್ರಿಕೆಗಳ ಸ್ಥಿತಿಗತಿಗಳನ್ನು ವಿವರಿಸುತ್ತಾ ಕನ್ನಡ ಪತ್ರಿಕೆಗಳ ಧ್ಯೇಯ ಧೋರಣೆಗಳು ಹೇಗಿರಬೇಕೆಂಬುದನ್ನೂ ನಾಂಗಾಳ ನಾಯಕ ಬಂಧುಗಳ ಉದ್ಯಮವನ್ನು ಪ್ರಶಂಸಿಸಿ «ಸುಧಾರಕ»ದ ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಲೆಂದೂ ಪ್ರಾರ್ಥಿಸಿದರು. ಡಾ| ಪಿ. ಆರ್. ನಾಯಕ್ ವಕೀಲ್ ಶ್ರೀ ಬಿ. ಶೀನಪ್ಪ ಹೆಗ್ಡೆ, ಮತ್ತು ಶ್ರೀ ಕೆ. ವಿಠಲ ಶೆಟ್ಟಿಯವರು ನೂತನ ಪತ್ರಿಕೆಗೆ ಶುಭಕೋರಿ ಮಾತನಾಡಿದ ಬಳಿಕ ಅಧ್ಯಕ್ಷರ ಸಮಯೋಚಿತ ನುಡಿಗಳಾದುವು. ಸಂಪಾದಕ ಶ್ರೀ ಎಸ್. ಎಲ್. ನಾರಾಯಣ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ವಿವಾಹ:—ನಿವೃತ್ತ ಸಿವಿಲ್ ಸರ್ಜನ್ ಕೆಪ್ಟನ್ ಅನಂತಯ್ಯನವರ ಪುತ್ರ ಶ್ರೀ ಶಿವರಾಮ ರಾಯರು ಸರಕಾರಿ ಟ್ರೈನಿಂಗ್ ಶಾಲಾ ಹೆಡ್ಮಾಸ್ಟರ್ ಶ್ರೀ ಕೃಷ್ಣರಾಯರ ಪುತ್ರಿ ಶ್ರೀಮತಿ ನಳಿನಿಯನ್ನು ತಾ 10-3-52 ರಲ್ಲಿ ಶಂಕರ ನಾರಾಯಣ ದೇವಸ್ಥಾನದಲ್ಲಿ ವಿವಾಹವಾದರು. ನೂತನ ದಂಪತಿಗಳಿಗೆ ಶುಭಾಶಯಗಳು.

ಲೇಡಿ ಡಾಕ್ಟರರಿಲ್ಲ! ಕೆಲವು ವರ್ಷಗಳಿಂದ ಇಲ್ಲಿಯ ಸರಕಾರಿ ಆಸ್ಪತ್ರೆಯಲ್ಲಿ ಒಬ್ಬ ಪ್ರತ್ಯೇಕ ಲೇಡಿ ಡಾಕ್ಟರರು ಇರುತ್ತಿದ್ದರು. ಆದರೆ ಇತ್ತೀಚೆಗೆ ಇಲ್ಲಿಯ ಲೇಡಿ ಡಾಕ್ಟರರನ್ನು ತಾತ್ಕಾಲಿಕವೆಂದು ಮಂಗಳೂರಿಗೆ ವರ್ಗಾಯಿಸಿ 2-3 ತಿಂಗಳುಗಳಾದರೂ ಇನ್ನೂ ಯಾವ ವ್ಯವಸ್ಥೆಯೂ ಆದಂತೆ ತೋರುವುದಿಲ್ಲ. ರೋಗಿಗಳು ಹೆಚ್ಚಿ, ಡಾಕ್ಟರರ ಸಂಖ್ಯೆಯನ್ನು ಹೆಚ್ಚಿಸಬೇಕಾಗಿರುವಾಗ ಇದ್ದವರನ್ನು ವರ್ಗಾಯಿಸಿ ಹೊಸ ನೇಮಕ ಮಾಡದಿರುವುದು ಶೋಚನೀಯವಿದೆ ಎಂತ ಬಾತ್ಮಿ.

ನಗರ ಪುರಸಭೆಯ ಕಡೆಗೆ ಸಂಬಂಧಪಟ್ಟವರು ಹೆಚ್ಚಿನ ಗಮನ ಕೊಟ್ಟಂತೆ ತೋರುವುದಿಲ್ಲವೆಂದೂ ಇತ್ತೀಚೆಗೆ ತೋಟಿಗಳು ಕೂಡ ಸರಿಯಾಗಿ ಬರುತ್ತಿಲ್ಲವೆಂದೂ, ಪಾಯಖಾನೆಗಳನ್ನು ಸರಿಯಾಗಿ ಶುಚಿಗೊಳಿಸುತ್ತಿಲ್ಲವೆಂದೂ ಬಾತ್ಮಿದಾರರೊಬ್ಬರು ತಿಳಿಸುತ್ತಾರೆ; ಸಂಬಂಧಪಟ್ಟವರು ಈ ಕುರಿತು ನಿಗಾ ಕೊಡುವರೆ?

ಈ ಸಂಚಿಕೆಯಲ್ಲಿ

ಅನಿವಾರ್ಯ ತೊಂದರೆಯಿಂದ ಕೇವಲ 10 ಪುಟಗಳನ್ನು ಮಾತ್ರ ಕೊಡಲಾಗಿದೆ. ಪುಟ ಸಂಖ್ಯೆಗಳನ್ನು 12ರಂತೆ ಕೊಟ್ಟಿದ್ದರೂ 7 ಮತ್ತು 8 ನೇ ಪುಟಗಳನ್ನು ಪ್ರಕಟಿಸಿಲ್ಲ. ಇದರಿಂದಾಗಿ ಕೆಲವು ಬಾತ್ಮಿ ವಿಶೇಷ ವಾರ್ತೆಗಳನ್ನು ಪ್ರಕಟಿಸಲಾಗದುದಕ್ಕಾಗಿ ಬೇಸರಿಸುತ್ತೇವೆ

ಸಂ ಪಾ.

ತಾರೀಕು 11-3-52ರಿಂದ

ಘರ್ ಕೀ ಬಹೂ

ಪಾತ್ರವರ್ಗ:- ಪಾರೂ. ಉಮಾಕಾಂತ್, ಮೊದಲಾದವರು.

ಅನಂತರ— ಮೋಹನ್ ಚಿತ್ರ

ಪ್ರೇಮ್-ನೇನ್

ನಿರೂಪರಾಯ್, ದುರ್ಗಾಕೋಟೆ ತ್ರಿಲೋಕ್‌ಕಪೂರ್, ಮುಂತಾದವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಮಂಗಳೂರು

ವರ್ಧಂತಿ— ಮಂಗಳೂರ ಸರಕಾರಿ ಬುನಾದಿ ಶಿಕ್ಷಣ ತರಬೇತಿ ಶಾಲೆಯ ವರ್ಧಂತಿ ಸಮಾರಂಭವು ಇದೇ ತಾ. 3ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ. ಶ್ರೀನಿವಾಸಾಚಾರ್ಯರು ವರದಿಯನ್ನೋದಿದ ಬಳಿಕ ಶ್ರೀ. ಕೆ. ಬಾಮಪ್ಪನವರು ಸ್ವಸ್ತಿವಾಚನ ಮಾಡಿದರು. ಬಹುಮಾನವಿತರಣೆ ಮಾಡಿದ ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬುನಾದಿ ಶಿಕ್ಷಣವು ನಮ್ಮ ದೇಶಕ್ಕೆ ಯೋಗ್ಯವಾಗಿದೆ, ಎಂಬುದನ್ನು ವಿವರಿಸಿ ಮಾತನಾಡಿದರು. ವಿನೋದ ಕಾಲಕ್ಷೇಪಗಳಾಗಿ ಶ್ರೀ ಪಿ. ವಿಶ್ವನಾಥ ಭಂಡಾರಿಯವರ ಧನ್ಯವಾದರ್ಪಣೆಯೊಂದಿಗೆ ವರ್ಧಂತಿಯುತ್ಸವವು ಕೊನೆಗೊಂಡಿತು.

ಸಂಗೀತಕಚೇರಿ— ಇದೇ ತಾ. 2ರಲ್ಲು ಸಂಜೆ ಕೆನರಾ ಹೈಸ್ಕೂಲಿನ ಸುಬ್ರಾಯ ಸ್ಮಾರಕ ಮಂದಿರದಲ್ಲಿ ಶ್ರೀ. ಭೀಮಸೇನ ಜೋಶಿಯವರ ಸಂಗೀತ ಕಚೇರಿ ನಡೆಯಿತು. ಶ್ರೀ ಬಾಲಾಜಿ ಗೋಕರ್ಣ ಮೊದಲಾದವರು ಪಕ್ಕವಾದ್ಯಗಳಿದ್ದುವು. ಶ್ರೀ ಕೃಷ್ಣರಾಯಶೆಣೈಯವರು ಜೋಶಿಯವರಿಗೆ ಕಿಂಚಿತ್ ನಿಧಿಯನ್ನೊಪ್ಪಿಸಿದರು.

ಚಿಕ್ಕಮಕ್ಕಳಿಗೆ ಶಾಲೆ— ಮಂಗಳೂರಿನ ಭಗಿನೀ ಸಮಾಜದವರು ಕೊಡಿಯಾಲಬೈಲು ಮತ್ತು ಜೆಂಟ್ಲ್‌ಮೆಂಡ್ ಪೇಟೆಗಳಲ್ಲಿ ಎರಡು ಚಿಕ್ಕ ಮಕ್ಕಳ ಕ್ಲಾಸುಗಳನ್ನು ನಡೆಸುತಿದ್ದು ಈಗ ಸಾನೆ ಜಪ್ಪಿನಮೊಗರು ನಮ್ಮ ಶಿಶು ವಿಹಾರದಲ್ಲಿ ಮೂರನೇ ಶಾಲೆಯನ್ನು ತೆರೆದಿರುವರು. ನಾಲ್ಕರಿಂದ ಆರು ವರುಷದ ಮಕ್ಕಳನ್ನು ಈ ಶಾಲೆಗಳಲ್ಲಿ ಆಟಪಾಟಾದಿಗಳಿಂದ ನೋಡಿಕೊಳ್ಳಲಾಗುವುದು

ಜಿಲ್ಲಾಬೋರ್ಡಿನ ವಿಶೇಷ ಸಭೆಯು ಇದೇ ತಾ. 24ನೇ ಸೋಮವಾರ 11 ಗಂಟೆಗೆ ಮಂಗಳೂರಿನ ಬೋರ್ಡಿನ ಸಭಾಮಂದಿರದಲ್ಲಿ ಜರಗುವುದು. ಸಾರ್ವಜನಿಕ ಖಾತೆಯ ಉಪಸಮಿತಿಯ ಒಂದು ಸ್ಥಾನಕ್ಕೆ ಈ ಸಭೆಯಲ್ಲಿ ಚುನಾವಣೆ ನಡೆಯಲಿದೆ. ಶ್ರೀ ಯು. ಎಸ್ ನಾಯ್ಕರು ರಾಜಿನಾಮೆ ಕೊಟ್ಟುದುದರಿಂದ ಈ ಚುನಾವಣೆಗೆ ಅವಕಾಶ ಉಂಟಾಯಿತು.

ಡೈಲಿ ಚಿಟ್ ಫಂಡು ಗಡಿಬಿಡಿ— ಈಚೆಗೆ ಡೈಲಿ ಚಿಟ್‌ಫಂಡುಗಳು ಹೆಚ್ಚಿ ಬಹುಮಂದಿ ಇವುಗಳ ಗ್ರಾಹಕರಾಗಿರುವರು. ಈ ಪೈಕಿ ಆದೊಂದು ಚಿಟ್‌ಫಂಡಿನವರು ಆಕಸ್ಮಿಕವಾಗಿ ತಮ್ಮ ಆಫೀಸು ಬಾಗಿಲುಗಳನ್ನು ಬಂದು ಮಾಡಿ ಕಾಣೆಯಾಗಿರುವುದರಿಂದ ಅನೇಕರಿಗೆ ದಿಗಿಲುಂಟಾಗಿದೆ. ಪೋಲೀಸರು ಆಫೀಸಿಗೆ ಬೀಗಮುದ್ರೆ ಮಾಡಿರುವರೆಂದು ತಿಳಿದು ಬರುತ್ತದೆ.

ಧಾರಣೆಗಳಲ್ಲಿ ಇಳಿತ— ಈಚೆಗೆ ಒಂದು ತಿಂಗಳಿಂದ ತೆಂಗಿನೆಣ್ಣೆ, ಸಕ್ಕರೆ, ಬೆಲ್ಲ, ಮೆಣಸು, ಧಾನ್ಯ ಕಲೀ ಮೊದಲಾದುವುಗಳ ಧಾರಣೆಗಳು ಇಳಿಮುಖವಾಗಿವೆ. ವಾಣಿಜ್ಯ ಕ್ಷೇತ್ರದಲ್ಲಿ ಗಡಿಬಿಡಿಯುಂಟಾಗಿದೆ.

ಮಹಾಸಭೆ— ಜನಪದ ಕಲಾಮಂಡಳಿಯ ವರ್ಷಾವಧಿ ಮಹಾಸಭೆಯು ಇದೇ ತಾ 2ರಲ್ಲು ಪೂರ್ವಾಹ್ನ ಶ್ರೀ ಪಿ. ಎಸ್. ನಾರಾಯಣ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಕೆ. ತಿಮ್ಮಪ್ಪ ಭಂಡಾರಿಯವರು ವರದಿಯನ್ನೋದಿದರು. ಕಾರ್ಯಕಾರೀ ಮಂಡಳಿಯ ಚುನಾವಣೆ ನಡೆದು ಕೆಲವು ಠರಾವುಗಳಾದುವು.

ಆಗಮನ— ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಹಾಗೂ ಪಾರ್ಲಿಮೆಂಟ್ ಸದಸ್ಯ ಶ್ರೀ ಯು. ಶ್ರೀನಿವಾಸ ಮಲ್ಯರು ಕಳೆದ ವಾರ ಮಂಗಳೂರಿಗೆ ಬಂದಿದ್ದು, ಕೊಡಗಿಗೆ ಹೋಗಿ ಅಲ್ಲಿಂದ ಢಿಲ್ಲಿಗೆ ಹೋದರು. ಶ್ರೀ ಬೆನಗಲ್ ಶಿವರಾಯರು ಇದೇ ತಾ. 5ರಲ್ಲು ಮಂಗಳೂರಿಗೆ ಬಂದಿರುವರು.

ಪ್ರಜಾಪ್ರಭುತ್ವ ದಿನಾಚರಣೆ ಕಮಿಟಿ ಸಭೆಯು— ಇದೇ ತಾ. 1ರಲ್ಲು ಜರಗಿ ಲೆಖ್ಖಪತ್ರಗಳನ್ನು ಪರಿಶೀಲಿಸಿತು. ಒಟ್ಟು ವಾರು ರೂ. 422 3-6 ಸಂಗ್ರಹವಾಗಿ ಅಷ್ಟೇ ಖರ್ಚಾಗಿತ್ತು.

ಶೈಕ್ಷಣಿಕ ಪ್ರದರ್ಶನ— ಮಂಗಳೂರಿನ ಸಂಕಾರಿ ತರಬೇತಿ ಕಾಲೇಜಿನ ವರ್ಧಂತ್ಯುತ್ಸವದ ಅಂಗವಾಗಿ ಏರ್ಪಡಿಸಿದ ಶೈಕ್ಷಣಿಕ ಪ್ರದರ್ಶನದ ಉದ್ಘಾಟನೆಯನ್ನು ಗಣಪತಿ ಹೈಸ್ಕೂಲಿನ ಹೆಡ್ಮಾಸ್ತರ್ ಶ್ರೀ ಎಚ್. ಪಾಂಡುರಂಗರಾಯರು ಇದೇ 7ರಂದು ಬೆಳಿಗ್ಗೆ ಮಾಡಿದರು. ಶ್ರೀ ಒ. ಎಸ್. ಅಂಚನ್ ಅವರಿಂದ ಸ್ವಾಗತ ಮಾತುಗಳಾದ ಬಳಿಕ ಡಾ। ಎಸ್. ಕೂಪನ್ ಅವರು ಪ್ರದರ್ಶನದ ಕುರಿತು ಭಾಷಣವಿತ್ತರು. ಕಾಲೇಜು ಪ್ರಿನ್ಸಿಪಾಲ್ ಶ್ರೀ ಪಡುಕೋಣೆ ರಮಾನಂದ ರಾಯರು ಉದ್ಘಾಟಕರನ್ನು ಉದ್ಘಾಟಿಸಲು ಕೇಳಿಕೊಂಡರು. ಶ್ರೀ ಪಾಂಡುರಂಗರಾಯರು ತಮ್ಮ ಭಾಷಣದಲ್ಲಿ ಇಂದಿನ ವಿದ್ಯಾಭ್ಯಾಸದ ವಿಚಾರವಾಗಿ ಮಾತನಾಡಿದರು.

ಅಜೆಕಾರು— ಸ್ಥಳೀಯ ಬೋರ್ಡು ಹಾ। ಎ। ಶಾಲೆಯವರು ಪೆರ್ಡೂರಿಗೆ ವಿದ್ಯಾಪ್ರವಾಸಕ್ಕಾಗಿ ಬಂದಿದ್ದಾಗ, ಡಾ। ಎಸ್. ಪದ್ಮನಾಭ ಸೆಟ್ಟರು ಸತ್ಕಾರವನ್ನಿತ್ತು ಉಪಚರಿಸಿದರು.

ಪಡುಪಣಂಬೂರು— ಇಲ್ಲಿಯ ಬೋರ್ಡ್ ಹಾ। ಎ। ಶಾಲೆಯ ಮಕ್ಕಳು ತಿಂಗಳ ಹಬ್ಬ ಹಾಗೂ ಹೆತ್ತವರ ಕೂಟದ ದಿನಾಚರಣೆಯು ತಾ. 5ರಲ್ಲು ಪಂಚಾಯತ ಬೋರ್ಡು ಪ್ರೆಸಿಡೆಂಟ್ ಶ್ರೀ ಕೆ. ಭೂಪಾಲ ಸೆಟ್ಟರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಕೂಳೂರು— ಇದೇ ತಾ. 3ರಲ್ಲು ಬೆಳಿಗ್ಗೆ ಇಲ್ಲಿಯ ಪಂಡಿತ ಪಿ. ಎಲ್. ಮಂಜರವರ ಚರಕಚಿಕಿತ್ಸಾ ಮಂದಿರದ ಪ್ರಾರಂಭೋತ್ಸವವು ವೈದ್ಯಗುರು ಡಾ। ಎಮ್. ಆರ್. ಭಟ್ಟರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ಜರಗಿತು, ವೈದ್ಯ ಪಾವಮನ್, ಕೆ. ನಿ. ಜೋಶಿ ಮೊದಲಾದವರ ಕಾಲೋಚಿತ ಮಾತುಗಳಾಗಿ ಅಧ್ಯಕ್ಷರ ಮುಕ್ತಾಯ ಭಾಷಣ ಮತ್ತು ಧನ್ಯವಾದಾರ್ಪಣೆ ಉಪಹಾರ ಕಾರ್ಯಕ್ರಮಗಳಿಂದ ಸಮಾರಂಭ ಕೊನೆಗೊಂಡಿತು.

ಕುಂಬಳೆ— ಮಂಗಳೂರಿನಲ್ಲಿ ನಡೆಯುವ ಕೃಷ್ಣಪ್ಪ ಮೆಮೋರಿಯಲ್ ಬ್ಯಾಡ್ಮಿಂಟನ್ ಟೂರ್ನಮೆಂಟ್ ಆಟದಲ್ಲಿ ಇಲ್ಲಿಯ ಲಕ್ಕೀಸ್ಟಾರ್ ಟೀಮಿನವರೂ ಮಂಗಳೂರು ಓರಿಯಂಟಲ್ "ಬಿ" ಟೀಮಿನವರೂ ಸ್ಪರ್ಧಿಸಿ ಇಲ್ಲಿಯ ಟೀಮಿನವರು ಗೆದ್ದರು. ತಾ. 8ರಲ್ಲು ಇಲ್ಲಿಯ ಲಕ್ಕೀಸ್ಟಾರ್ ಟೀಮಿನವರೂ ಪೆಂಟಲೆಂಡ್‌ಪೆಟ್ ಫ್ರೆಂಡ್ಸ್‌ನವರೂ ಆಡಿದ್ದಲ್ಲಿ ಇಲ್ಲಿಯವರೇ ಗೆದ್ದಿರುವರು.

ಬುಡ್ನಾರು— ಉಪ್ಪಳದ ಕಾಂಗ್ರೆಸ್ ಕೆಲಸಗಾರ ಬುಡ್ನಾರ್ ಶ್ರೀ ತೇಜಪ್ಪ ಸೆಟ್ಟರ ಪುತ್ರಿ ಸಂಜೀವಿಯನ್ನು ಎಲ್ಲೂರು ಉಡುಪರಗುತ್ತು ಕೂಕ್ರ ಸೆಟ್ಟರ ಮಗ, ಚಿ। ರಘುರಾಮನು ಇದೇ ತಾ. 10ರಲ್ಲು ಪಾಂಗಾಳ ಬೆಟ್ಟು ಮನೆಯಲ್ಲಿ ವಿವಾಹ ಮಾಡಿಕೊಂಡನು. ನೂತನ ದಂಪತಿಗಳಿಗೆ ಶುಭಾಶಯಗಳು.

ಮಣಿಪಾಲ— ಸ್ಥಳೀಯ ಹೈಸ್ಕೂಲಿನ ವರ್ಧಂತಿಯು ತಾ. 3ರಲ್ಲಿ ಡಾ। ಸುಂದರರಾಮಯ್ಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಹೆ। ಮಾ। ಪುಂಡಲೀಕ ಶಣೈಯವರು ವರದಿ ಓದಿದರು. ಎನ್. ರಘುಚಂದ್ರ ಹೆಗ್ಡೆಯವರು ಸ್ವಸ್ತಿವಾಚನ ಮಾಡಿದರು. ಅಧ್ಯಕ್ಷರು ಸಂದರ್ಭೋಚಿತ ಭಾಷಣಮಾಡುತ್ತ ಶಾಲಾ ಮೆನೇಜರ್ ಡಾ। ಟಿ. ಎಂ. ಎ. ಪೈಗಳ ವಿದ್ಯಾಸೇವೆ ಸಮಾಜಸೇವೆಗಳನ್ನು ಕೊಂಡಾಡಿದರು. ವಿವಿಧವಿನೋದಾವಳಿಗಳಿಂದ ಸಮಾರಂಭವು ಸಮಾಪ್ತಿಯಾಯಿತು.

ಉದ್ಯಾವರ— ಬಿ. ಇ. ಎಂ. ಹಾ। ಪ್ರಾ। ಶಾಲೆಯ ವರ್ಧಂತ್ಯುತ್ಸವವು ತಾ. 4ರಲ್ಲು ಶಾಲಾ ಡಿಪ್ಯೂಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು ತಾ 5ರಲ್ಲು ರಾತ್ರಿ ಈ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ದಿನಾಚರಣೆಯು ತಹಸಿಲ್ದಾರ್ ಶ್ರೀ ವೆಂಕಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಪಟೇಲ್ ಭಾಸ್ಕರ ಸೆಟ್ಟರು ವರದಿ ವಾಚನ ಮಾಡಿದರು. ಸಭಿಕರ ಮಾತುಗಳಾದ ಬಳಿಕ 'ದ್ರೋಹಿ' ಎಂಬ ನಾಮಾಂಕಿತ ನಾಟಕವನ್ನು ಹಳೆ ವಿದ್ಯಾರ್ಥಿಗಳು ಅಭಿನಯಿಸಿದರು. ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು.

ಶಿರ್ವ— ಹಿಂದೂ ಪ್ರೌಢ ಶಾಲೆಯ ವರ್ಧಂತಿಯು ಕಾರ್ಕಳ ಡಿ। ಮುನ್ಸಿಫ್ ಶ್ರೀ ಚಂದ್ರಶೇಖರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ಜರಗಿತು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. 43/1951.

1 ವನಜಾಕ್ಷಿಯಮ್ಮ, 2 ಮಾಧವ, 3 ಶೀತಾರಾಮ, 4 ವಿಠಲದಾಸ, 5 ನರ್ಸಿಂಹ- 2ರಿಂದ 5 ಮೈನರರು ರಕ್ಷಕಳು 1ನೇಯವಳು— ಅರ್ಜಿದಾರರು.

1ನೇ ಅರ್ಜಿದಾರಳ ಗಂಡ ಮಿಕ್ಕವರ ತಂದೆ ಬೆಳ್ಮಣ್ಣು ರಾಮಚಂದ್ರಾಯರಿಗೆ ಉಡುಪಿ ಶ್ರೀ ಕಾಣೂರು ಮಠದ ಶ್ರೀ ವಿದ್ಯಾಸಮುದ್ರ ತೀರ್ಥ ಸ್ವಾಮಿಗಳು ತಾರೀಕು 17-2-51 ರಲ್ಲಿ ಬರಕೊಟ್ಟಡಿಮಾಂಡ ನೋಟಿನ ಅಸಲು ಬಡ್ಡಿ ಕೂಡಾ ರೂ 864 8-0 ವಸೂಲುಮಾಡುವ ಬಗ್ಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲ್ಲು ಮಾಡಿದ ಸದ್ರಿ ಅರ್ಜಿಯು ತಾರೀಕು 19-3 1952ಕ್ಕೆ ಇಟ್ಟಿದೆ. ಆಕ್ಷೇಪವುಳ್ಳವರು ಸದ್ರಿ ತಾರೀಕಿನ ಬೆಳಗ್ಗೆ 10 ಗಂಟೆಗೆ ಸದ್ರಿ ಕೋರ್ಟಿನ ... ದಾಗ್ಯೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸಿಯದೆ.

K. Laxminarayana Aithal,
Vakil for Petitioners.

ಉಡುಪಿ, 10 3-1952.

ಬರ್ಥ ಕಂಟ್ರೋಲ್ ಸುಲಭ ಸಾಧ್ಯವಿದೆ. ಅಪಾಯವಿಲ್ಲ, 100% ಖಾತ್ರಿ ಗಂಡಸರಿಗೆ ರೂ. 3-8 0 ಹೆಂಗಸರಿಗೆ ರೂ. 5-8-0

PERUMAL TRADERS
Near Y. M. C. A. Madurai

ವಿವಿಧ ಪಾತ್ರೆಗಳು



ನಾನಾ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ಲೋಹಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್; ಲಿಮಿಟೆಡ್, ಸಾಲಿಗ್ರಾಮ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬ್ಯಾಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ವ, ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಸರಿಯಾಗಿ ಕೊಡದೆ ಇರುವುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸುಗಳನ್ನು ಕೊಟ್ಟಲ್ಲಿ ಅದನ್ನು ಪಡೆದು ಹಣ ಪಾವತಿ ಮಾಡದೆಯೂ, ಅಸಾಮಿಗಳು ಆ ಅಡ್ರೆಸ್ಸಿನಲ್ಲಿ ಇಲ್ಲವೆಂತ ನೋಟೀಸು ವಾಪಾಸು ಬಂದಿರುವುದರಿಂದಲೂ, ಸದ್ರಿಯವರಿಗೆ ವ, ಅವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದ್ರೆ ಅವರಿಂದ ಅಸಲು ಬಡ್ಡಿ ವಗೈರೆ ಐವೇಜನ್ನು ಇದೇ ತಾ. 20-3-52ರೊಳಗೆ ಪಾವತಿ ಮಾಡದಿದ್ದಲ್ಲಿ ಇದೇ ತಾ. 29-3-52ನೇ ಶನಿವಾರ ಮಧ್ಯಾಹ್ನ ಗಂಟೆ 3ಕ್ಕೆ ಯಾ ಬ್ಯಾಂಕಿಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಬೇರೆ ನೋಟೀಸು ಕೊಡದೆ ಸಾಲದ ಬಾಬ್ತು ಚಿನ್ನಾಭರಣಗಳನ್ನು ಬ್ಯಾಂಕಿನಲ್ಲಿ ಹರ್‍ರಾಜು ಮಾಡಲಾದೀತು, ತಿಳಿದಿರಲಿ

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಸಾಲದ ಮೊಬಲಗು
		ರೂ.
410/50	ಬಿಲ್ಲ ಅಣ್ಣಯ್ಯ, ಸೋಮ ಪೂಜಾರಿ ಅಳಿಯ, ಕಾರ್ಕಡ ಗ್ರಾಮ, ಸಾಲಿಗ್ರಾಮ ಪೋಸ್ಟ್.	30
549/50	ಪಿ ಸದಾಶಿವಯ್ಯ ಹೂವಯ್ಯನ ಮಗ, ಸಾಲಿಗ್ರಾಮ ಪೋಸ್ಟು.	75
335/51	ಶಂಕ್ರನಾರಾಯಣ ಅಡಿಗ, ರಾಮಣ್ಣ ಅಡಿಗರ ಮಗ, ಕಾವಡಿ ಗ್ರಾಮ, ಸ್ಯಾಬರಕಟ್ಟೆ ಪೋಸ್ಟ್.	55
366/51	ಬಡಿಯ ಸೆಟ್ಟಿ, ಸೂರಪ್ಪ ಸೆಟ್ಟರ ಅಳಿಯ, ಕಾವಡಿ ಗ್ರಾಮ, ಸ್ಯಾಬರಕಟ್ಟೆ ಪೋಸ್ಟ್.	50
375/51	ಎಸ್. ದಾಸಪ್ಪ ಶ್ಯಾನುಭಾಗ, ಬಾಬಣ್ಣ ಶ್ಯಾನುಭಾಗರ ಮಗ, ಸಾಲಿಗ್ರಾಮ ಪೋಸ್ಟ್.	100

ಸಾಲಿಗ್ರಾಮ, 8-3-52.

K. P. Urala,
ಏಜಂಟ್.

ಕೋಮಲಾಂಗಿಯರೆ — ನಿಮ್ಮ ಚಿಂತೆಗಳನ್ನು ಬಿಟ್ಟುಬಿಡಿರಿ. ಎಲ್ಲಾ ತರದ ಮುಟ್ಟು ದೋಷಗಳಿಗೂ ಮಹಾಮಾತ್ರೆಯನ್ನು ಸೇವಿಸಿರಿ. ಸಾಮಾನ್ಯ ಮಾತ್ರೆಗಳಿಗೆ ರೂ.7-8-0; ಸ್ಪೆಶಲ್ ರೂ. 10 8 0; ಅತೀ ಸ್ಪೆಶಲ್ ರೂ. 16-0-0; ವಿ ಪಿ ಚಾರ್ಜು ಪ್ರತ್ಯೇಕ

RAJA MART,
West Vadmapokki Street, MADURAI



ನೋಟೀಸು

ದಕ್ಷಿಣ ಕನ್ನಡಾ ಸಬೋರ್ಡಿನೇಟ್ ಜಡ್ಜರವರ ಕೋರ್ಟಿನಲ್ಲಿ

ಕ್ರಮಸಂಖ್ಯೆ 321/50

ಮುತ್ತಯ್ಯ ಶೆಟ್ಟಿ ಕೂಡಾ ... . ವಾದಿರು.

ಮತ್ತು

ಪೊನ್ನಪ್ಪ ಶೆಡ್ತಿ ಕೂಡಾ .... ಪ್ರತಿವಾದಿರು.

ಇವರೊಳಗೆ

ಸಪ್ಲಿಮೆಂಟಲ್ ಪ್ರತಿವಾದಿರು 68ರಿಂದ 395ನೇಯವರಾದ ಈ ಕೆಳಗಿನವರಿಗೆ.

68 ವಿಜಾಕ ಶೆಡ್ತಿ, 69 ಶಾಂಕು ಶೆಟ್ಟಿ... 1ನೇ ಪ್ರತಿವಾದಿ ಮಕ್ಕಳು.

70 ಸೀತಾರಾಮ ಶೆಟ್ಟಿ, 71 ಲೀಲ ಶೆಡ್ತಿ, 72 ಸುಬ್ಬಯ್ಯ ಶೆಟ್ಟಿ...68ನೇ ಪ್ರತಿವಾದಿ ಮಕ್ಕಳು.

73 ಪೊನ್ನು, 74 ಗಂಡು ಮಗು... 71ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

75 ಕೊರಗ ಶೆಟ್ಟಿ, 76 ಕರಿಯ ಶೆಟ್ಟಿ– 4ನೇ ಪ್ರತಿವಾದಿಯ ಮಕ್ಕಳು.

77 ಕುಟ್ಟ ಶೆಟ್ಟಿ, 78 ತುಂಗ ಶೆಡ್ತಿ... 5ನೇ ಪ್ರತಿವಾದಿಯ ಮಕ್ಕಳು.

79 ವಸಂತ, 80 ಸುಮತಿ, 81 ಬೇಬಿ... 78ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

82 ರಾಮ ಶೆಟ್ಟಿ, 83 ದೇವಕಿ ಶೆಡ್ತಿ, 84 ಭವಾನಿ ಶೆಡ್ತಿ, 85 ಮುತ್ತಯ್ಯ ಶೆಟ್ಟಿ, 86 ಶ್ರೀಪರ್ವ, 87 ಪೊನ್ನು...7ನೇ ಪ್ರತಿವಾದಿಯ ಮಕ್ಕಳು.

88 ಲಕ್ಷ್ಮಿ, 89 ತಿಮ್ಮಪ್ಪ...83ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

90 ನಿತ್ಯಾನಂದ, 91 ಬೇಬಿ... 84ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

92 ಗುಲಾಬಿ ಶೆಡ್ತಿ, 93 ತಿಮ್ಮಪ್ಪಶೆಟ್ಟಿ, 94 ಪುಷ್ಪ...11ನೇ ಪ್ರತಿವಾದಿಯ ಮಕ್ಕಳು.

95 ವಾರಿಜ, 96 ನಾರಾಯಣ...11ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

97 ಲಕ್ಷ್ಮಿ, 98 ಪದ್ಮನಾಭ. .92ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

99 ರಾಘು ಶೆಟ್ಟಿ, 100 ಸಂಜೀವಿ, 101 ವಾಸು...14ನೇ ಪ್ರತಿವಾದಿಯ ಮಕ್ಕಳು.

102 ಅಣ್ಣಿ, 103 ದಿವಾಕರ... 100ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

104 ರಮೇಶ, 105 ಇಂದಿರ, 106 ಶಾಂತ, 16ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

107 ಮುತ್ತು ಶೆಡ್ತಿ, 108 ರುಕ್ಮಿಣಿ ಶೆಡ್ತಿ 109 ಕೃಷ್ಣಿ ಶೆಡ್ತಿ... 1ನೇ ಪ್ರತಿವಾದಿಯ ಮಕ್ಕಳು.

110 ಜೋಗಿ ಶೆಟ್ಟಿ, 111 ಸುಂದರ ಶೆಟ್ಟಿ, 112 ದೇವಮ್ಮ, 113 ಗುಲಾಬಿ... 107ನೇ ಪ್ರತಿವಾದಿಯ ಮಕ್ಕಳು.

114 ಪ್ರಫುಲ್ಲ, 115 ನಾರಾಯಣ, 116 ಸುವರ್ಣಲತಾ... 112ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

117 ಪದ್ಮನಾಭ, 118 ರಾಜೀವಿ, 119 ಸಂಜೀವಿ, 120 ಉಮಾ...108ನೇ ಪ್ರತಿವಾದಿಯ ಮಕ್ಕಳು.

121 ಸುಗಂಧಿ... 108ನೇ ಪ್ರತಿವಾದಿಯ ಮ್ಯಾನರ್ ಮೊಮ್ಮಗಳು.

122 ಮ್ಯಂದ ಶೆಟ್ಟಿ... 109ನೇ ಪ್ರತಿವಾದಿಯ ಮಗ.

123 ಮಂಜಪ್ಪ, 124 ಮೋಹು, 125 ರಾಜು ಶೆಟ್ಟಿ, 126 ಪೂವಪ್ಪ, 127 ಕಲ್ಯಾಣಿ...18ನೇ ಪ್ರತಿವಾದಿಯ ಮಕ್ಕಳು.

128 ಸಂಜೀವ ಶೆಟ್ಟಿ, 129 ಶಂಕರ್ ಶೆಟ್ಟಿ, 130 ರಾಮಕೃಷ್ಣ ಶೆಟ್ಟಿ, 131 ಅಮ್ಮಕ್ಕ, 132 ಆನಂದಿ, 133 ಅಚ್ಚು, 134 ಕಾರ... 123ನೇ ಪ್ರತಿವಾದಿಯ ಮಕ್ಕಳು.

135 ದಿವಾಕರ, 136 ಪ್ರಕಾಶ್, 137 ಜಗಜ್ಜೀವನ್‌ದಾಸ್...131ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

138 ಸುಗುಣ...ಮೋಹು ಮಗಳು.

139 ಮನಮೋಹಿನಿ... 138ನೇ ಪ್ರತಿವಾದಿಯ ಮಗಳು.

140 ಸೀತಮ್ಮ, 141 ಲಿಂಗಮ್ಮ... 127ನೇ ಪ್ರತಿವಾದಿಯ ಮಕ್ಕಳು.

142 ಕಸ್ತೂರಿ, 143 ಪ್ರೇಮ, 144 ಪ್ರಭಾವತಿ, 145 ಪ್ರಭಾಕರ... 127ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

146 ಮಂಜಯ್ಯ ಶೆಟ್ಟಿ, 147 ಶೇಷಿ ಶೆಡ್ತಿ 148 ಅಚ್ಚು ಶೆಡ್ತಿ... 19ನೇ ಪ್ರತಿವಾದಿಯ ಮಕ್ಕಳು.

149 ರಾಮ, 150 ಧನವಂತಿ... 147ನೇ ಪ್ರತಿವಾದಿಯ ಮಕ್ಕಳು.

151 ಶೀನಪ್ಪ, 152 ವಿಶ್ವನಾಥ... 147ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

153 ಜಯರಾಮ... ಅಚ್ಚು ಶೆಡ್ತಿಯ ಮಗ.

154 ಶಿವಾಜಿ, 155 ಸರಸ್ವತಿ, 156 ಧನಂಜಯ...148ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

157 ವೈಕುಂಠ ನಾಗಮ್ಮನ ಮಗಳು.

158 ಲೀಲ, 159 ಕಮಲ...157ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

160 ಸರಸ್ವತಿ, 161 ಲಕ್ಷ್ಮಿ, 162 ಕ್ಯಾತಪ್ಪ ಪೂಂಜ...27ನೇ ಪ್ರತಿವಾದಿಯ ಮಕ್ಕಳು.

163 ಸುಮತಿ, 164 ಸುವಾಸಿನಿ...160ನೇ ಪ್ರತಿವಾದಿಯ ಮಕ್ಕಳು.

165 ಸತೀಶ, 166 ಸೋಮಾವತಿ, 167 ಮಂಜಯ್ಯ...163ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

168 ಸುಬ್ಬಯ್ಯ ..ಲಕ್ಷ್ಮಿಯ ಮಗ

169 ಅಹಲ್ಯಾ, 170 ಮುತ್ತಣ್ಣ, 171 ವಸಂತ, 172 ದಯಾನಂದ, 173 ರತ್ನಾಕರ... 161ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

174 ವೆಂಕಪ್ಪ ಪೂಂಜ, 175 ಮೋಹನ, 176 ರಮೇಶ, 177 ಭಾಸ್ಕರ, 178 ಹರಿ, 179 ವಸಂತಿ, 180 ಮಾಲತಿ, 181 ಕುಸುಮ,. 30ನೇ ಪ್ರತಿವಾದಿಯ ಮಕ್ಕಳು.

182 ಸಾಧು ಶೆಡ್ತಿ, 183 ಸದಾಶಿವ.. 60ನೇ ಪ್ರತಿವಾದಿಯ ಮಕ್ಕಳು.

184 ಅನುಸೂಯ .. 182ನೇ ಪ್ರತಿವಾದಿಯ ಮ್ಯಾನರ್ ಮಗಳು.

185 ಜಗದೀಶ, 186 ಕೃಷ್ಣ, 187 ಬಾಬ ... 62ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

188 ಅನಂತರಾಮ, 189 ಶಿವರಾಮ, 190 ಶಾಂತ, 191 ಸದಾನಂದ, 192 ಲೀಲ, 193 ಸುಂದರ...34ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

194 ಭುಜಂಗ ಶೆಟ್ಟಿ... 35ನೇ ಪ್ರತಿವಾದಿಯ ಮಗ.

195 ಬಾಲಕೃಷ್ಣ, 196 ಶಾಂಟ ಶೆಟ್ಟಿ, 197 ಸೀತಾರಾಮ ಶೆಟ್ಟಿ, 198 ಸೀತ ಯಾನೆ ಭಾಗೀರಥಿ, 199 ಮಹಾಬಲ ಶೆಟ್ಟಿ, 200 ಜಲಜ ಶೆಡ್ತಿ... 36ನೇ ಪ್ರತಿವಾದಿಯ ಮಕ್ಕಳು.

201 ಶಾಂಭವಿ, 202 ಸ...ಯ್ಯ, 203 ಪ್ರಫುಲ್ಲ, 204 ಯಶೋಧ, 205 ರಾಮಚಂದ್ರ, 206 ರಾಘು... 198ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

207 ಮಹೇಶ, 208 ಪ್ರೇಮ...200ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

209 ಕಲ್ಯಾಣಿ, 210 ನಾರಾಯಣ... 37ನೇ ಪ್ರತಿವಾದಿಯ ಮಕ್ಕಳು.

211 ಗಿರಿಜ, 212 ಸುಲೋಚನ, 213 ಭೋಜ...37ನೇ ಪ್ರತಿವಾದಿಯ ಮಕ್ಕಳು.

214 ಶಿವಾಜಿ, 215 ರತ್ನಾಕರ, 216 ವಿಟ್ಠಲ. .209ನೇ ಪ್ರತಿವಾದಿಯ ಮಕ್ಕಳು.

217 ಶಶಿಪ್ರಭಾ, 218 ಕರುಣಾಕರ, 219 ವಿಶ್ವನಾಥ, 220 ಅನುಸೂಯ, 221 ರವಿ .. 209ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು

222 ಜಯರಾಮ, 223 ಪ್ರಭಾಕರ, 224 ಸದಾನಂದ, 225 ಗೋಪ, 226 ಶಾಂತ, 227 ದೀನನಾಥ, 228 ರಾಮ... 211ನೇ ಪ್ರತಿವಾದಿಯ ಮಕ್ಕಳು.

229 ವೇದಾವತಿ, 230 ಉಷಾವತಿ, 231 ರವಿಶಂಕರ್, 232 ಲಕ್ಷ್ಮಿ, 233 ರಮಾನಾಥ, 234 ರಮಾಕಾಂತ, .212ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

235 ಸಿದ್ದು ಶೆಟ್ಟಿ, 236 ನಾಗಮ್ಮ, 237 ನಾರಾಯಣ ... 38ನೇ ಪ್ರತಿವಾದಿಯ ಮಕ್ಕಳು.

238 ಜಯರಾಮ ಶೆಟ್ಟಿ, 239 ಪುಷ್ಪ, 240 ಬಸಪ್ಪ, 241 ಗುಲಾಬಿ, 242 ರಾಧ, 243 ಲೀಲ... 236ನೇ ಪ್ರತಿವಾದಿಯ ಮಕ್ಕಳು.

244 ಹೇಮ, 245 ಚಂದ್ರಶೇಖರ, 246 ಶಕುಂತಲಾ, 247 ಪ್ರತಾಪ್... 239ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

248 ಗುಣಾರತ್ನ, 249 ಬಾಲಕೃಷ್ಣ, 250 ಸರಳ, 251 ಜಲಜ ..239ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

252 ಭಾರತಿ... 241ನೇ ಪ್ರತಿವಾದಿಯ ಮ್ಯಾನರ್ ಮಗಳು

253 ಮಂಜುನಾಥ, 254 ರಘುನಾಥ... 242ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು

255 ರತಿ, 256 ಶಂಕರ, 257 ವಾರಿಜ, 258 ರಾಮ, 259 ಸುನೀತಿ ..40ನೇ ಪ್ರತಿವಾದಿಯ ಮಕ್ಕಳು.

260 ದಿವಾಕರ, 261 ಜಯಾ, 262 ಕೃಷ್ಣಿ, 263 ಸುಂದರಿ, 264 ಲಲಿತ... 255ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

265 ರಾಮ ಮೋಹನ, 266 ಗಣನಾಥ, 267 ಕಿಂಪಕ್ಕ, 268 ವಿಜಯ...257ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

269 ರಾಘವ, 270 ಪ್ರೇಮ . 258ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

271 ಶಾಂತಣ್ಣ, 272 ಶೀಲ, 273 ಉಜ್ವಣ್ಣ, 274 ಸರಸ್ವತಿ, 275 ರಘು... 41ನೇ ಪ್ರತಿವಾದಿಯ ಮಕ್ಕಳು.

276 ರಾಮ, 277 ಕಮಲ... 272ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

278 ರತಿ, 279 ವಿಟ್ಠಲ, 280 ಕುಂಞಪ್ಪ, 281 ಗಿರಿಜ, 282 ಶಾಂಬ ಶೆಟ್ಟಿ, 283 ಕಮಲ... 42ನೇ ಪ್ರತಿವಾದಿಯ ಮಕ್ಕಳು.

284 ಸುರೇಶ, 285 ವಸಂತಿ, 286 ವತ್ಸಲ, 287 ಲೀಲ... 281ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

[೧೦ನೆಯ ಪುಟ ನೋಡಿರಿ]

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ತಿಮ್ಮ ಸ್ನಾನ, ಊಟ, ಉಪಹಾರ, ಟ್ಯಾಂಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇನ್ನುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI, S. Kanara.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್‌ವೈದ್ಯ, ಅಂಬಳೆ ನರಸಿಂಹ ಪಂಡಿತರ ಮನೆತನ ಎ ರಾಮಸ್ವಾಮಿ ಅಯ್ಯರ್‌ರವರ

✻ ಸಂತಾನ ಸಿಂಧೂರ ✻

ಬಹಿಷ್ಠೆ ಸಂಬಂಧದ ಹೊಟ್ಟೆನೋವು ಉಂಟು. ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಠೆ ಸಂಬಂಧದ ಹೊಟ್ಟೆನೋವಿನಜೊತೆಗೆ ತಲೆನೋವು, ಸೊಂಟನೋವು, ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಬಿಳಿಮುಟ್ಟು ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ.

ಮೂರು ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ಒಂದು ಸೆಟ್ ಅನುಪಾನ ಪತ್ರಿಕೆ ಮೇರೆ ಇಬ್ಬರೂ ಸೇವಿಸಿರಿ ಸಾಕು. ಶೋಧನಮಾಡ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾಪತ್ರಗಳನ್ನು ಪಡೆದಿವೆ.

ಕ್ರಯ:— ಒಂದುಸೆಟ್ 5ರೂ. ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1ರೂ ವಿ. ಪಿ. ಇಲ್ಲ. ಕ್ಯಾಟಲಾಗ್ ಉಚಿತ 6ರೂ. ಮನಿಆರ್ಡರ್ ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ.

ವಿಳಾಸ:—A. R ವಿಶ್ವೇಶ್ವರಯ್ಯ (ಎ ರಾಮಸ್ವಾಮಿ ಅಯ್ಯರ್ ಸನ್,)

Prop: ಸಂತಾನ ಸಿಂಧೂರ

ಅಂಬಳೆ ಪೋಸ್ಟು, ಯಳಂದೂರು ತಾಲೂಕು ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಶಾಖೆ: 269 ಸೋನಾರ್ ಸ್ಟ್ರೀಟ್, ದಿವಾನ್ಸ್‌ರೋಡು, ಮೈಸೂರು.

(ಕನೇ ಪುಟದಿಂದ ಮುಂದುವರಿದುದು)

288 ಪ್ರೇಮ, 269 ದಿನೇಶ, 290 ಸುಬ್ಬಯ್ಯ 283ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು

291 ಮಹಾಬಲ, 292 ಸುಂದರಿ 293 ಜಲಜ 294 ಶ್ರೀಧರ 295 ಪುಷ್ಪ, 296 ಗಣನಾಥ, 297 ಲಕ್ಷ್ಮಿ, 298 ಲೀಲಾವತಿ, 299 ರಾಮಣ್ಣ 43ನೇ ಪ್ರತಿವಾದಿಯ ಮಕ್ಕಳು

300 ಅನುಸೂಯ, 292ನೇ ಪ್ರತಿವಾದಿಯ ಮ್ಯಾನರ್ ಮೊಮ್ಮಗಳು

301 ವಾರಿಜ, 302 ವೇದಾವತಿ, 303 ಜಯರಾಮ, 304 ಇಂದಿರ, 305 ರಘುರಾಮ 292ನೇ ಪ್ರತಿವಾದಿಯ ಮಕ್ಕಳು,

306 ಶಾಂತಾರಾಮ 292ನೇ ಪ್ರತಿವಾದಿಯ ಮ್ಯಾನರ್ ಮಗ,

307 ರವೀಂದ್ರ, 308 ಉಷಾವತಿ 301ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು

309 ರಾಮ, 310 ದಯಾನಂದ, 311 ರತ್ನಾ 312 ನಂದಿನಿ, 313 ಉಮಾವತಿ, 293ನೇ ಪ್ರತಿವಾದಿಯ ಮಕ್ಕಳು ಪ್ರತಿವಾದಿರು 312 & 313ನೇಯವರು ಮಾತ್ರ ಮ್ಯಾನರರು

314 ಪದ್ಮಾ, 315 ಸಾಬು, 316 ಸಟಿ, 43ನೇ ಪ್ರತಿವಾದಿಯ ಮ್ಯಾನರ್ ಮೊಮ್ಮಕ್ಕಳು

317 ಅಜಿತ, 318 ಸನತ್‌ಕುಮಾರ್, 319 ಉಷಾ, 320 ರಜನಿ, 297ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

321 ಸುಜಾತ, 322 ಶುಭಾಕರ, 298ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು

323 ರಾಧ, 324 ಫುಲ್ಲ, 44ನೇ ಪ್ರತಿವಾದಿಯ ಮಕ್ಕಳು

325 ಪ್ರಕಾಶ, 326 ಶೋಭ, 327 ಜಯಲಕ್ಷ್ಮಿ, 328 ಹೆಣ್ಣು ಮಗು 323ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು

329 ಮಹಾಬಲ, 330 ತಿಮ್ಮಪ್ಪ 331 ಕಮಲ, 46ನೇ ಪ್ರತಿವಾದಿಯ ಮಕ್ಕಳು

332 ಕುಟ್ಟಿ, 333 ಸುಬ್ಬಯ್ಯ, 334 ಸೀತ 47ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

335 ಸುಂದರ, 336 ಸೀತ, 337 ಗುಲಾಬಿ 338 ಜಲಜ, 339 ಸರೋಜಿನಿ 50ನೇ ಪ್ರತಿವಾದಿಯ ಮಕ್ಕಳು.

340 ಸಂಜೀವಿ, 341 ಪುಷ್ಪ, 342 ಕಮಲ, 343 ಗೋಪಾಲ 50ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು.

344 ರಾಮ, 34[illegible] [illegible] ೨೨೨ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು

346 ದಾಸಣ್ಣ 338ನೇ ಪ್ರತಿವಾದಿಯ ಮ್ಯಾನರ್ ಮಗ

347 ಸರಸು ಉಜ್ಜು ಮಗಳು, 348 ಮಧುಕರ, ... ಲೋಕೇಶ, 350 ಮೀನಾಕ್ಷಿ, 347ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು

351 ಸಂಜೀವ, 352 ಸುಂದರಿ, 353 ಲಕ್ಷ್ಮಿ, 354 ದೇವಕಿ, 355 ರಾಜು, 356 ತುಂಗ, 56ನೇ ಪ್ರತಿವಾದಿಯ ಮಕ್ಕಳು ಪ್ರತಿವಾದಿರು 355 ಮತ್ತು 356ನೇ ಪ್ರತಿವಾದಿರು ಮಾತ್ರ ಮ್ಯಾನರರು

357 ಗಂಡು ಮಗು, 358 ಗಂಡು ಮಗು, 359 ಗಂಡುಮಗು, 360 ಹೆಣ್ಣು ಮಗು 352ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು

361 ಗಂಡುಮಗು, 362 ಗಂಡು ಮಗು 363 ಹೆಣ್ಣು ಮಗು, 364 ಹೆಣ್ಣು ಮಗು 353ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು

365 ರಾಮ, 366 ಲಕ್ಷ್ಮಿ 354ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು

367 ಸುಬ್ಬಯ್ಯ, 368 ರಘು, 369 ಸದಾಶಿವ, 370 ಲಕ್ಷ್ಮಿ, 371 ರತ್ನಾ, 372 ಶಾಂತ 373 ಆನಂದ 58ನೇ ಪ್ರತಿವಾದಿಯ ಮಕ್ಕಳು, ಪ್ರತಿವಾದಿರು 371ರಿಂದ 373ನೇ ಯವರು ಮಾತ್ರ ಮ್ಯಾನರರು

374 ತುಂಬೆ ಶೆಡ್ತಿ, 375 ರುಕ್ಮಿಣಿ ಶೆಡ್ತಿ, ಕೊರಪೊಳು ಶೆಡ್ತಿ ಮಕ್ಕಳು,

376 ಕೊಲ್ಲು ಶೆಡ್ತಿ 377 ಶಿವಣ್ಣ ಸೆಟ್ಟಿ, 378 ಮುದ್ದು ಶೆಟ್ಟಿ, 379 ಸುಂದರ ಶೆಡ್ತಿ, 374ನೇ ಪ್ರತಿವಾದಿಯ ಮಕ್ಕಳು.

380 ಜಯರಾಮ 381 ವಿಶ್ವನಾಥ, 382 ಪ್ರೇಮ 376ನೇ ಪ್ರತಿವಾದಿಯ ಮಕ್ಕಳು

383 ಶ್ರೀದೇವಿ 384 ಬೇಬಿ . 379ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು .

385 ಜಲಜ ಶೆಡ್ತಿ, 386 ಪದ್ಮಾವತಿ ಶೆಡ್ತಿ, 387 ಮಂಜಯ್ಯ ಶೆಟ್ಟಿ, 388 ಲಿಂಗಮ್ಮ ಶೆಡ್ತಿ, 389 ಪುಷ್ಪಶೆಡ್ತಿ, . 375ನೇ ಪ್ರತಿವಾದಿಯ ಮಕ್ಕಳು

390 ಕರುಣಾಕರ ಶೆಟ್ಟಿ 375ನೇ ಪ್ರತಿವಾದಿಯ ಮ್ಯಾನರ್ ಮಗ

391 ಪ್ರಭಾಕರ, 392 ಪ್ರಭಾವತಿ 393 ಬೇಬಿ 394 ಬಾಬು 385ನೇ ಪ್ರತಿವಾದಿಯ ಮ್ಯಾನರ್ ಮಕ್ಕಳು,

395 ಸುಧಾಕರ 386 ನೇ ಪ್ರತಿವಾದಿಯ ಮ್ಯಾನರ್ ಮಗ

129ನೇ ಪ್ರತಿವಾದಿಯು ಕ್ರಿಸೆಂಟ್ ಇನ್ಶ್ಯೂರೆನ್ಸ್ ಕಂಪೆನಿಯ ಮೆನೇಜರನೂ, ಮಂಗಳೂರು ಟೌನ್ ಜೆಪ್ಪಿನಮೊಗರು ಗ್ರಾಮದ ಜಪ್ಪಿನಲ್ಲಿರುವವನೂ 131, 135ರಿಂದ 137ನೇ ಪ್ರತಿವಾದಿರು ಮಂಗಳೂರು ಎಡ್ವಕೇಟ್ ಶ್ರೀ ಬಿ. ಬಿ ಶೆಟ್ಟರಲ್ಲಿಯೂ, 148, 153ರಿಂದ 156ನೇ ಪ್ರತಿವಾದಿರು ಕಾರ್ಕಳ ತಾಲ್ಲೂಕು ಕಂತಾವರ ಗ್ರಾಮದ ಪಾಂಚದ ಬೈಲಲ್ಲಿರುವವರೂ, 157ರಿಂದ 173ನೇ ಪ್ರತಿವಾದಿರು ಮಂಗಳೂರು ತಾಲ್ಲೂಕು ಕರಿಯಂಗಳ ಗ್ರಾಮದ ಪಳ್ಳಿಪಾಡಿಯಲ್ಲಿಯೂ, ಪ್ರತಿವಾದಿರು 174ರಿಂದ 181ನೇ ವರೇಗಿನವರು ಮಂಗಳೂರು ತಾಲ್ಲೂಕು ಕಾಸರ್ಗೋಡ್ ಗ್ರಾಮದಲ್ಲಿಯೂ 185ರಿಂದ 187ನೇ ಪ್ರತಿವಾದಿರು ಮಂಗಳೂರು ತಾಲೂಕು ಕಿಲೆಂಜೂರು ಗ್ರಾಮದಲ್ಲಿಯೂ ಪ್ರತಿವಾದಿರು 188ರಿಂದ 193ನೇ ಯವರು ಮಂಗಳೂರು ತಾಲ್ಲೂಕು ಉಳಿಪಾಡಿ ಗ್ರಾಮದ ಮೂಡಬೆಟ್ಟಿನಲ್ಲಿಯೂ, ಪ್ರತಿವಾದಿರು 194 ಮತ್ತು 195ನೇ ಯವರು ಕಾರ್ಕಳ ತಾಲ್ಲೂಕು ಮೂಡಬಿದ್ರಿಪೇಟೆಯಲ್ಲಿರುವವರೂ, 196ನೇ ಪ್ರತಿವಾದಿರು ಕಾರ್ಕಳದಲ್ಲಿ ವಕೀಲರೂ, 197ನೇ ಪ್ರತಿವಾದಿಯು 196ನೇ ಪ್ರತಿವಾದಿ ಸಂಗಡವೂ, ಪ್ರತಿವಾದಿರು 198ರಿಂದ 210, 214, 213, 229ರಿಂದ 234 235, 237, 335ರಿಂದ 350ನೇ ಯವರು ಕಾರ್ಕಳ ತಾಲ್ಲೂಕು ಬೆಳ್ವಾಯಿ ಗ್ರಾಮದ ಪೆರೋಡಿ ಮನೆಯಲ್ಲಿ ಇರುವವರೂ, ಪ್ರತಿವಾದಿರು 214ರಿಂದ 220ನೇ ಯವರು ಉಡ್ಪಿ ತಾಲ್ಲೂಕು ಉಪ್ಪೂರು ಗ್ರಾಮದ ಹೊಸಮನೆಯಲ್ಲಿಯೂ, ಪ್ರತಿವಾದಿರು 211, 222ರಿಂದ 229ನೇಯವರು ಕಾರ್ಕಳ ತಾಲ್ಲೂಕು ಬೋಳಾ ಗ್ರಾಮದ ಕೊಲ್ಲೊಟ್ಟುಪಲ್ಲಾರಿಯಲ್ಲಿಯೂ, 236 239ರಿಂದ 254ನೇಯವರು ಮಂಗಳೂರು ತಾಲ್ಲೂಕು ಬಡಗಮಿಜಾರು ಗ್ರಾಮದ ಮಿಜಾರುಗುತ್ತಿನಲ್ಲೂ, 238ನೇಯವರು ಮಂಗಳೂರು ಶಹರ ವಿಜಯಬೇಂಕಿನ ಮೆನೇಜರೂ 255ರಿಂದ 270ನೇಯವರು ಮಂಗಳೂರು ತಾಲ್ಲೂಕು ಬಜ್ಪೆ ಗ್ರಾಮದಲ್ಲೂ, 271ರಿಂದ 277 ನೇಯವರು ಮಂಗಳೂರು ತಾಲ್ಲೂಕು ಕೋಲ್ನಾಡು ಗ್ರಾಮದ ಪಾದೆಮನೆಯಲ್ಲಿಯೂ, 68 ಮತ್ತು 72ನೇಯವರು ಮಂಗಳೂರು ತಾಲ್ಲೂಕು ನಡ್ಸಾಲ್ ಗ್ರಾಮದ ಕಾಪೆದ್ ಗುತ್ತಿನಲ್ಲೂ, 70ನೇ ಪ್ರತಿವಾದಿಯು ಉಡ್ಪಿ ತಾಲ್ಲೂಕು ನಂದಿಕೂರು ಗ್ರಾಮದ ಕೆಲ್ಲಾರ ಮನೆಯಲ್ಲೂ, 71,73,74ನೇಯವರು ಮಂಗಳೂರು ತಾಲ್ಲೂಕು ಎಕ್ಕಾರು ಗ್ರಾಮದಲ್ಲೂ, ಪ್ರತಿವಾದಿರು 69, 75, 76, 83, 88, 89, 85, to 87, 93ರಿಂದ 96, 99ರಿಂದ 111, 117, 121ರಿಂದ 124, 130, 132ರಿಂದ 134, 138, 139, 146, 147, 149ರಿಂದ 156, 182ರಿಂದ 185, ಮತ್ತು 361ರಿಂದ 395ನೇ ಯವರು ಕಾರ್ಕಳ ತಾಲ್ಲೂಕು ಕಡಂದಲೆ ಗ್ರಾಮದ ಕಡಂದಲೆ ಪರಾರಿ ಮನೆಯಲ್ಲೂ 77ರಿಂದ 82ನೇಯವರು ಮೈಸೂರುಸ್ಟೇಟಿನ ಕೊಪ್ಪ ತಾಲ್ಲೂಕು ಅಲಗೇಶ್ವರ ಕಾಫೀ ಎಸ್ಟೇಟಿನಲ್ಲೂ 84, 90 ಮತ್ತು 91ನೇಯವರು ಕಾರ್ಕಳ ತಾಲ್ಲೂಕು ಕಲ್ಲಮುಂಡ್ಕೂರು ಗ್ರಾಮದ ಪಿಮ್ಮಂಜೆ ಪರಾರಿ ಮನೆಯಲ್ಲೂ, 92, 97 ಮತ್ತು 98 ನೇಯವರು ಕಾರ್ಕಳ ತಾಲ್ಲೂಕು ನಿಡ್ಡೋಡಿ ಗ್ರಾಮದ ನಂದಬೆಟ್ಟು ಮನೆಯಲ್ಲೂ, 112, 114ರಿಂದ 116ನೇಯವರು ಉಡ್ಪಿ ಪ್ಪೇಟೆಯಲ್ಲಿರುವ ಸೇನಿಟರಿ ಇನ್ಸ್‌ಪೆಕ್ಟರ್ ಶೀನ ಶೆಟ್ರ ಸಂಗಡವೂ, 113ನೇ ಪ್ರತಿವಾದಿಯು ಉಡ್ಪಿ ತಾಲ್ಲೂಕು ಹೊನ್ನಾವರ ಗ್ರಾಮದಲ್ಲಿಯೂ 118ನೇ ಪ್ರತಿವಾದಿಯು ಮಂಗಳೂರು ತಾಲ್ಲೂಕು ಕಣ್ಣೂರು ಗ್ರಾಮದ ಕಂಬಟ್ರನಲ್ಲಿಯೂ, 119ನೇ ಪ್ರತಿವಾದಿಯು ಉಡ್ಪಿ ತಾಲೂಕು ಹಿರಿಯಡ್ಕ ಗ್ರಾಮದ ಪಾಲಜೆ ಬೀಡಿನಲ್ಲಿಯೂ, 120ನೇ ಪ್ರತಿವಾದಿಯು ಕಾರ್ಕಳ ತಾಲೂಕು ಕಂತಾವರ ಗ್ರಾಮದ ಬಂಡಬೆಟ್ಟು ಮನೆಯಲ್ಲಿಯೂ, 293, 309ರಿಂದ 313ನೇಯವರು ಮಂಗಳೂರು ತಾಲ್ಲೂಕು ಮುಂಡ್ಕೂರು ಗ್ರಾಮದ ನಡಿಗುತ್ತಿನಲ್ಲಿಯೂ, 125 ಮತ್ತು 126 ನೇ ಯವರು ಮಂಗಳೂರು ತಾಲೂಕು ಮೂಲ್ಕಿ ಪೇಟೆಯ ಜೆರ್ಕೈಟ್ಸ್ ಯಲ್ಲಿಯೂ, 127, 140ರಿಂದ 145ನೇಯವರು ಕಾರ್ಕಳ ತಾಲೂಕು ಪಾಲಡ್ಕ ಗ್ರಾಮದಲ್ಲಿಯೂ, 128ನೇ ಪ್ರತಿವಾದಿಯು ಮಂಗಳೂರು ಶಹರು ಎಗ್ರಿಕಲ್ಚರಲ್ ಆಫೀಸಿನಲ್ಲಿಯೂ, 278ರಿಂದ 290ನೇಯವರು ಮಂಗಳೂರು ತಾಲ್ಲೂಕು ಕೊಡೆತೂರು ಗ್ರಾಮದಲ್ಲಿಯೂ, 291, 292, 294ರಿಂದ 322ನೇಯವರು ಮಂಗಳೂರು ತಾಲ್ಲೂಕು ಮೆಣ್ಣಬೆಟ್ಟು ಗ್ರಾಮದ ಕುಡೆತೂರು ಗುತ್ತಿನಲ್ಲೂ, 323ರಿಂದ 328ನೇಯವರು ಮಂಗಳೂರು ತಾಲ್ಲೂಕು ಕೊಂಡೆಮೂಲ ಗ್ರಾಮದಲ್ಲಿಯೂ, 329ರಿಂದ 331, 332ರಿಂದ 345, 351ರಿಂದ 366ನೇ ಯವರು ಕಾರ್ಕಳ ತಾಲೂಕು ಪುತ್ತಿಗೆ ಗ್ರಾಮದ ಕೋಲಕಡಿ ಮನೆಯಲ್ಲಿಯೂ ಇರುವಂಥವರಾಗಿರುತ್ತಾರೆ.

ಈ ಮೇಲಿನ ದಾವೆಯಲ್ಲಿ ವಾದಿಯು ರು ಅವರ ಮತ್ತು ಪ್ರತಿವಾದಿಯರ ಕುಟುಂಬದ ಒಟ್ಟು ಯಾವತ್ತು ಸೊತ್ತುಗಳನ್ನು ಮದ್ರಾಸು ಅಳಿಯ ಸಂತಾನ ಆಕ್ಟು ಪ್ರಕಾರ ಹಿಸೆ ಸಿಗಬೇಕೆಂದು ವಗೈರೆ ನಿವೃತ್ತಿ ಕೇಳಿ ವಾದಿಯರು ಕುಟುಂಬದ ಎಲ್ಲಾ ಇತರ ಮೆಂಬರರನ್ನು ಕಕ್ಷಿಯಲ್ಲಿ ಸೇರಿಸಿ ದಾಖಲು ಮಾಡಿದ ದಾವೆಯು ತನಿಗೆ ತಾ 31-3-1952ಕ್ಕೆ ಮೇಲಿನ ಕೋರ್ಟಿನಲ್ಲಿ ಇಟ್ಟಿರುತ್ತದೆ ಆ ಕುರಿತು ಏನಾದರೂ ಆಕ್ಷೇಪಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟಿನ ಮುಂದೆ ಹಗಲು ಘಂಟೆ 11ಕ್ಕೆ ನೀವು ಖುದ್ದಾಗಲೀ ಯಾ ವಕೀಲರ ಮುಖಾಂತರವಾಗಲೀ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು

[ಕೋರ್ಟಿನ ಹುಕುಂ ಪ್ರಕಾರ]

Sd. **B. Manjayya Hegde,**
Advocate for Plaintiff

Mangalore, 1 3 52

ZANDU PHARMACEUTICAL WORKS LTD.
Manufacturers of Ayurvedic and Alopathic Medicines BOMBAY, 14

ಝಂಡೂ ಮಹಾಯೋಗರಾಜ ಗುಗ್ಗುಳ

ಸಂಧಿಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಪ್ರತಿಮ ದಿವ್ಯೌಷಧ 1 **ತೊಲಿಗೆ ರೂ 3/-** ಮಾತ್ರ

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ
2 ಶ್ರೀ ಎ ವಿ ಶೆಣೈ ಕೆಮಿಸ್ಟ್, ಕಾರ್ಕಳ
3 ... ಕಂಪೆನಿ, ಹಂಪನಕಟ್ಟೆ, ಮಂಗಳೂರು
4 ಎಲ್ ಎನ್ ಶರ್ಮ, ಹಜೂರು ರಸ್ತೆ ಮಂಗಳೂರು

ಮತ್ತಿತರ ಸೇಲ್ ಏಜಂಟರಲ್ಲಿ

DAMODAR & CO.,
Nainiappa Naicken Street, Park Town-**MADRAS** 3.

DO YOU KNOW?
THAT
THE VIJAYA BANK, LIMITED.
1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs. 10 lacks
3. Has granted an average dividend of 6% to the Shareholders for the past 20 years.
4. Has a net work of Branches in South Kanara and one each in Mercara and Fort, Bombay
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies

ADOPT IT AS
"MY BANK"
THE VIJAYA BANK, LIMITED,
H. O. MANGALORE

ಪ್ರವಾಸಿಯ ಪತ್ರಗಳು ೨೬

ಯುಂಗ್‌ಫ್ರೌ (ಸ್ವಿಟ್ಜರ್‌ಲೇಂಡ್ ದೇಶ)

ಕಳೆದ ಜೂನ್ ತಿಂಗಳ ತಾ. 8ನೇ ಶುಕ್ರವಾರ ಬೆಳಗ್ಗೆ 7 ಗಂಟೆಗೆ ಜ್ಯೂರಿಕ್ ನಗರದ ಹೊರಟು ರೈಲು ಎರಡೂ ಬದಿ ಗುಡ್ಡೆಯ ಮಧ್ಯೆ ಬಹು ವೇಗದಿಂದ ಬಂತು. ಕೆಲವು ಕಡೆ ಗಂಟೆಗೆ 70–80 ಮೈಲು ಕೂಡ ಬಂತು ಇದೆ. ಜ್ಯೂರಿಕ್‌ನಿಂದ 10-12 ಮೈಲು ಬಂದಾಗ ಬಹಳ ಪ್ರಸಿದ್ಧವಾದ ಬ್ರೌನ್ ಬೊವರಿ (Brown Bovari) ಎಂಬ ಕಾರ್ಖಾನೆ ರೈಲುದಾರಿಯ ಸಮೀಪ ಕಾಣುತ್ತದೆ. ಇದು ಎಲ್ಲಾ ತರದ ವಿದ್ಯುಚ್ಛಕ್ತಿ ಸಾಮಾನುಗಳನ್ನು ತಯಾರಿಸುವ ದೊಡ್ಡ ಕಾರ್ಖಾನೆ. ವಿದ್ಯುಚ್ಛಕ್ತಿಯಿಂದ ನಡೆಯುವ ರೈಲ್ವೇ ಇಂಜಿನುಗಳು ಕೂಡ ಇಲ್ಲಿ ತಯಾರಿಸುವರು. ಅವರು ತಯಾರಿಸಿದ ಸಾಮಾನುಗಳನ್ನು ಲೋಕದ ಅನೇಕ ದೇಶಗಳಲ್ಲಿ ಮಾರಾಟ ಮಾಡುವರು. ಮದ್ರಾಸಿನಲ್ಲಿ ಅವರ ಪ್ರತಿನಿಧಿಗಳು ವೊಲ್ಕಾರ್ಟ್ ಬ್ರದರ್ಸ್ ಎಂಬ ಕಂಪೆನಿಯವರು.

ರೈಲು ಬರುವ ಗುಡ್ಡೆಗಳಲ್ಲಿ ಅಲ್ಲಲ್ಲಿ ಮನೆಗಳು, ದಪ್ಪವಾದ ಹುಲ್ಲು, ಪೊಪ್ಲಾರ್ ಮಂತಾದ ಮರಗಳು ಇವೆ. ಕೆಲವು ಮನೆಗಳು ಬಹು ದೂರ. ಕೇವಲ 3 ಅಡಿ ಅಗಲವಿದ್ದು ಅದರ ಉಪ್ಪರಿಗೆ. ದೂರದಲ್ಲಿ ಹಿಮಗಡ್ಡೆ ಇರುವ ಬೆಟ್ಟಗಳನ್ನು ಕಾಣಬಹುದು. ನನ್ನ ರೈಲು ಗಾಡಿಯಲ್ಲಿ ಸುಮಾರು 70 ವರ್ಷ ಪ್ರಾಯದ ಇಬ್ಬರು ಇಂಗ್ಲಿಷ್ ಹೆಂಗಸರು ವಿಶ್ರಾಮಕ್ಕೆ ಈ ಊರಲ್ಲಿ ನಿಲ್ಲಲಿಕ್ಕೆ ಬಂದವರು ಇದ್ದರು. ಸ್ಪೀಝ್ (Spiez) ರೈಲ್ವೇ ಸ್ಟೇಷನ್‌ನಲ್ಲಿ ಅವರು ಇಳಿದರು.

ನಂತರ ಕೆಲವು ದೂರ ಬಂದಾಗ ಸ್ವಿಸ್ ದೇಶದ ರಾಜಧಾನಿಯಾದ ಬರ್ನ್ ಎಂಬ ನಗರಕ್ಕೆ ಸುಮಾರು 10 ಗಂಟೆಗೆ ಬಂತು. ಅಲ್ಲಿ ರೈಲು ಬದಲಾವಣೆ ಮಾಡಿ ಇಂಟರ್‌ಲಾಕನ್ ಎಂಬ ಪಟ್ಟಣಕ್ಕೆ ಬರುವ ರೈಲನ್ನು ಹತ್ತಬೇಕು. ಹೀಗೆ ಬದಲಾಯಿಸಿ ಸುಮಾರು 15-20 ಮೈಲು ದೂರ ಬಂದ ನಂತರ ಸುಮಾರು 10 ಮೈಲು ದೂರದ ವರೆಗೆ ನಮ್ಮ ರೈಲು ತೂನ್ (Thun) ಎಂಬ ಸರೋವರದ ಬದಿಯಲ್ಲೇ ಅಂದರೆ ನೀರಿನಿಂದ 20–30 ಅಡಿಯ ಒಳಗೆ ಗುಡ್ಡೆಗಳ ಬದಿಯಲ್ಲಿ ಸುತ್ತಿ ಸುತ್ತಿ ಬರುತ್ತಿದೆ ಆ ಸರೋವರದ ಅಗಲ ಕೆಲವು ಕಡೆ 2 ಫರ್ಲಾಂಗ್, ಕೆಲವು ಕಡೆ 4 ಫರ್ಲಾಂಗ್ ಇರಬಹುದು ಹೀಗೆ ನಾವು ಬರುವಾಗ ಮಳೆ ಕೂಡ ಬರುತ್ತಿತ್ತು.

ಸುಮಾರು 11 ಗಂಟೆಯ ಸಮಯ ಇಂಟರ್‌ಲಾಕನ್ ಎಂಬ ಪಟ್ಟಣವು ಬಂತು. ಈ ಊರಲ್ಲಿ ಸುಮಾರು 50 ಹೊಟೇಲುಗಳಿವೆ. ಆದೇಕೆಂದರೆ ಇಲ್ಲಿ ಪ್ರಯಾಣಿಕರು ಬಂದು ಉಳಿದುಕೊಂಡು ಸಮೀಪವಿರುವ ಅನೇಕ ಹಿಮಬೆಟ್ಟಗಳಿಗೆ ದಿನದಿನ ಪ್ರಯಾಣಮಾಡಿ ಹಿಂತಿರುಗಿ ಇಲ್ಲಿ ಬಂದು ಇರುವರು. ಅಂತೆಯೇ ಸಮೀಪವಿರುವ ಸರೋವರದಲ್ಲಿ ಕೂಡ ದೋಣಿಗಳಲ್ಲಿ ತಿರುಗಾಡುವರು.

ಇಲ್ಲಿ ಬರುವವರಲ್ಲಿ ಅನೇಕರು ಸುಮಾರು 20–30 ಮೈಲು ದೂರವಿರುವ ಯುಂಗ್‌ಫ್ರೌ ಎಂಬ 13,670 ಅಡಿ ಎತ್ತರದ ಹಿಮದ ಬೆಟ್ಟಕ್ಕೆ ಹೋಗಿಬರುವ ರೈಲಲ್ಲಿ ಸಂಚರಿಸಲಿಕ್ಕೆ ಬರುವರು. ಈ ರೈಲು ಪ್ರತ್ಯೇಕ ಒಂದು ಕಂಪೆನಿಯವರು ಸರಕಾರದ ಅನುಮತಿ ಪಡೆದು ಪರದೇಶದ ಪ್ರಯಾಣಿಕರನ್ನು ಇಲ್ಲಿಗೆ ಆಕರ್ಷಿಸುವ ಬಗ್ಗೆ ಕಟ್ಟಿದ್ದು ಭೂಲೋಕದಲ್ಲಿ ಈ ರೈಲು ಹೋದಷ್ಟು ಎತ್ತರ ಬೇರೆ ಎಲ್ಲೂ ಹೋಗಲಿಲ್ಲ. ಅದನ್ನು ನಡೆಸಲಿಕ್ಕೆ ಅಲ್ಲಿಯೇ ಹರಿಯುವ ನೀರಿನ ಪ್ರವಾಹದಿಂದ ವಿದ್ಯುಚ್ಛಕ್ತಿ ಉತ್ಪನ್ನಮಾಡಿ ಅದರಿಂದಲೇ ರೈಲು ನಡೆಸುವರು ಇದನ್ನು ಕಟ್ಟಲಿಕ್ಕೆ 1890ನೇ ಇಸವಿಯಲ್ಲಿ ಶುರುಮಾಡಿ 1912ರಲ್ಲಿ ಮುಗಿಸಿದರು. ಹೋಗಲಿಕ್ಕೆ ಸುಮಾರು 2 ಗಂಟೆ ಸಮಯ, ಬರಲಿಕ್ಕೂ ಅಷ್ಟೇ ಸಮಯ. ಮಧ್ಯೆ 2 ಸಾರಿ ರೈಲು ಬದಲುಮಾಡಿ ಅನೇಕ ಪರ್ವತಗಳನ್ನು ಹತ್ತಬೇಕು. ಹೋಗಿಬರುವಾಗ ನೋಡುವ ದೃಶ್ಯ ಬಹಳ ರಮ್ಯವಾದದ್ದು. ಹೋಗಿಬರಲಿಕ್ಕೆ ಸುಮಾರು 45 ರೂಪಾಯಿ ಚಾರ್ಜು.

ಈ ರೈಲು ಬಾಕಿ ರೈಲಿನಂತೆ ಉದ್ದವಲ್ಲ. ಇಲೆಕ್ಟ್ರಿಕ್ ಇಂಜಿನ್ ಎದುರಿಗಿದ್ದು ಅದರ ಹಿಂದೆ I ಮತ್ತು II ತರಗತಿ ಇರುವ 3 ಸಣ್ಣ ಗಾಡಿಗಳು ಮಾತ್ರ. ಒಂದೊಂದು ಗಾಡಿಯಲ್ಲಿ 40 ಸೀಟುಗಳು. ಮೇಲಕ್ಕೆ ಏರುವಾಗ ಅಥವಾ ಕೆಳಕ್ಕೆ ಇಳಿಯುವಾಗ ಉರುಳಿ ಹಿಂದೆ ಜಾರಿಬಾರದ ರೀತಿಯಲ್ಲಿ ರೈಲು ಮಧ್ಯ ಬಿಗಿ ಹಿಡಿಯುವಂತೆ ಪ್ರತ್ಯೇಕ ಹಲ್ಲುಗಳಿರುವ ಒಂದು ರೈಲು ಪಟ್ಟಿ. ಇಂತಹ ರೈಲನ್ನು ನಮ್ಮ ದೇಶದಲ್ಲಿ ಕೊಯಮುತ್ತೂರಿಂದ ಊಟಕಮಂಡಿಗೆ ಹೋಗುವಾಗ ಕಾಣಬಹುದು. ಹೀಗೆ ರೈಲು ಮೇಲಕ್ಕೆ ಹತ್ತುವಾಗ ಅಲ್ಲಲ್ಲಿ ಸುತ್ತಿ ಸುತ್ತಿ ಗುಡ್ಡೆಗಳ ಬದಿಯಲ್ಲೇ ಏರುವುದು. ಹೀಗೆ ಏರುವಾಗ ... ಎತ್ತರವಾದ ಮರಗಿಡಗಳು, ಹುಲ್ಲು ಬೆಳೆಯುವ ಇಳಿಜಾರುಗಳು, ಅಲ್ಲಲ್ಲಿ ಜಲಪಾತಗಳನ್ನು ಕಾಣಬಹುದು. ಹೀಗೆಯೇ ಅರ್ಧ ದಾರಿ ಹೋದ ಮೇಲೆ ಹಿಮಗಡ್ಡೆಗಳಿರುವ ಬೆಟ್ಟಗಳ ಮೇಲೆ ನಮ್ಮ ರೈಲು ಏರುವುದು. ಸುರು 1 ಮೈಲು ಸಣ್ಣ ಹಿಮಗಡ್ಡೆಯ ತುಂಡುಗಳು ಅಲ್ಲಲ್ಲಿ ಮಣ್ಣು ಮಿಶ್ರವಾಗಿ ಸಿಕ್ಕುತ್ತವೆ. ಅವುಗಳ ಮಧ್ಯೆ ಮರಗಿಡಗಳೂ ಕೂಡ ಇವೆ. ಆದರೆ ಬಹು ಬೇಗನೆ ಅಂದರೆ ಒಂದು ಮೈಲು ದೂರ ಹೋಗುವ ಮುಂಚೆ ಒಂದೇ ರೀತಿ ಹಿಮಗಡ್ಡೆ ಪ್ರದೇಶವೇ ಬಂದು ಅನಂತರ ಮರಗಿಡಗಳೇ ಇಲ್ಲ, ಎಲ್ಲಿ ನೋಡಿದರೂ ಶಿಲೆಕಲ್ಲಿನ ಗುಡ್ಡೆಗಳು, ಅವುಗಳ ಸುತ್ತುಮುತ್ತ ದಪ್ಪ ಹಿಮಗಡ್ಡೆ ಹೊದಿಕೆ. ಆ ಮೇಲೆ ರೈಲು ದಾರಿ ಎರಡೂ ಬದಿ 4–5 ಅಡಿ ಎತ್ತರವಾದ ಹಿಮಗಡ್ಡೆ. ಇಂಥ ಕಡೆ ರೈಲು ಸ್ಟೇಶನ್ ಉಪ್ಪರಿಗೆ ಇರುವ ಸಣ್ಣ ಮನೆಗಳಂತಿವೆ ಈ ಕಟ್ಟಡದ ಕೆಳಗಿನ ಭಾಗ ಸುತ್ತಮುತ್ತ 10-12 ಅಡಿ ಎತ್ತರ ಹಿಮ ತುಂಬಿದ್ದನ್ನು ಕೂಡ ಕಾಣಬಹುದು. ಈ ಪ್ರದೇಶದಲ್ಲಿ ದಿನನಿತ್ಯವೂ ರೈಲುದಾರಿಯ ಮೇಲೆ ಬೀಳುವ ಹಿಮವನ್ನು ತೆಗೆದು ದಾರಿಯನ್ನು ಬಿಡಿಸಲಿಕ್ಕೆ ಪ್ರತ್ಯೇಕ ಯಂತ್ರಗಳಿವೆ. ಹೀಗೆಯೇ ಮುಂದರಿಸುವಾಗ ಎಲ್ಲಿ ನೋಡಿದರೂ ಹಿಮದ ಬೆಟ್ಟಗಳು ಮಧ್ಯದಲ್ಲಿ ಮೈಲುಗಟ್ಟಲೆ ಹಿಮತುಂಬಿದ ಜಾಗ. ಇವುಗಳಲ್ಲಿ ಕೆಲವು ಹಿಮದ ನದಿಗಳು [Glaciers] ಅಂದರೆ ಮೆಲ್ಲಗೆ ಹರಿಯುವ ಹಿಮದ್ದೇ ನದಿಗಳು. ಕೆಲವು ಕಡೆ ಇಂಥಾ ನದಿಗಳು ಬಹು ಮೆಲ್ಲಗೆ ಹರಿಯುವುವು. ಕೆಲವು ಕಡೆ ಹೊಸತಾಗಿ ಉಂಟಾದಾಗ ಬಹು ಬೇಗನೇ ಹರಿದು ಮನೆಮಾರುಗಳನ್ನೇ ಮುಚ್ಚಿಕೊಂಡುಹೋಗಿ ಬಹಳ ಅಪಾಯ ಮಾಡುವುವು.

ರೈಲು ಹೀಗೆ ಹೋಗುವಾಗ ಅಲ್ಲಲ್ಲಿ ಬೆಟ್ಟದ ಬಂಡೆಕಲ್ಲನ್ನು ಕಡಿದು ಮಾಡಿದ ಸುರಂಗ

[೧೩ನೇ ಪುಟ ನೋಡಿರಿ]

ಶಿರ್ವಾ ಪಂಚಾಯತ್‌ಬೋರ್ಡ್ ಪ್ರೆಸಿಡೆಂಟರಿಂದ ನೋಟೀಸು

ಶಿರ್ವಾ ಪಂಚಾಯತ್ ಬೋರ್ಡಿಗೆ ಒಳಪಟ್ಟ ಸಂತೆಕಟ್ಟೆ ಸಂತೆಮಾರ್ಕೆಟಿನಲ್ಲಿ ಮತ್ತು ದಿನ ಮಾರ್ಕೆಟಿನಲ್ಲಿ ತಾ. 1-4-52ರಿಂದ 31-3-53ರ ವರೇಗೆ ಸುಂಕವಸೂಲು ಮಾಡುವ ಸ್ವತಂತ್ರವನ್ನು ಇದೇ ಮಾರ್ಚ ತಿಂಗಳ ತಾರೀಕು 22ರಲ್ಲು ಸಾಯಂಕಾಲ ಗಂಟೆ 4ಕ್ಕೆ ಪಂಚಾಯತ್‌ಬೋರ್ಡ್ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು. ವಿಲಂ ಶರ್ತ ಇತ್ಯಾದಿ ವಿವರಗಳನ್ನು ಆಫೀಸು ನೋಟೀಸು ಬೋರ್ಡಿನಲ್ಲಿ ಯಾ ಆಫೀಸಿನಲ್ಲಿ ತಿಳಿದುಕೊಳ್ಳಬಹುದು ಎಂಬ ಸಂಗ್ತಿ ಉಮೇದ್ವಾರ ಹಾಗೂ ಸಮಸ್ತ ಜನರೀಗೆ ಈ ಮೂಲಕ ತಿಳಿಸಲಾಗುತ್ತದೆ.

ಯುಸ್. ಅಣ್ಣಯ್ಯ ಹೆಗ್ಡೆ,
ಪ್ರೆಸಿಡೆಂಟ್,
ಪಂಚಾಯತ್ ಬೋರ್ಡ್ ಶಿರ್ವಾ.

ಶಿರ್ವಾ, 19-2-52

● ತೃಪ್ತಿಕರವಾದ ವಸತಿ — ಹಿತಕರವಾದ ಊಟ
● ರುಚಿಕರವಾದ ಉಪಾಹಾರ ಇವುಗಳಿಗೆ
ಉಡುಪಿಯ ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಊರ ಪರವೂರ ಸನ್ಮಾನ್ಯ ಸದ್ಗೃಹಸ್ಥರಿಂದ ಮುಕ್ತಕಂಠದಿಂದ
ಹೊಗಳಿಸಿಕೊಂಡ ನಮ್ಮ ಹೋಟೆಲಿಗೇ
ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ.
ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯಾಗುವಂತೆ
ನಗರದ ಕೇಂದ್ರ ಭಾಗದಲ್ಲಿದೆ.

WOODLANDS
Highclass Boarding & Lodging, UDIPI S. Kanara

ಹೊಸ ಹುರುಪಿಗೂ ನವಜೀವನಕ್ಕೂ ಮಾನಸಿಕ ಬಲ ಸಂವರ್ಧನೆಗೂ
ದೇಹ ದಾರ್ಢ್ಯತೆಗೂ ಶಕ್ತಿ ಸಾಮರ್ಥ್ಯಕ್ಕೂ
ಕಾಳಿಕಮಾಲಿ

ಛ್ಯವನ ಪ್ರಾಶವನ್ನೇ

ಸದಾ ಸರ್ವದಾ ಉಪಯೋಗಿಸಿರಿ
ಹಿಮಾಲಯದ ತಪ್ಪಲಿನ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಹೆಸರಾಂತ
ಆಯುರ್ವೇದೀಯ ದಿವ್ಯೌಷಧ ಅಶಕ್ತ ನರಗಳಿಗೂ
ಬಲಹೀನ ಎದೆಗುಂಡಿಗೆಗೂ ಚಲೋ ಟಾನಿಕ್.
ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಹಾಗೂ ಮೈಸೂರು ಸ್ಟೇಟಿನ ಸ್ಟಾಕಿಸ್ಟರು:—
ಎಂ. ವಿನಾಯಕ ರಾವ್, ಬನ್ನಂಜೆ ರಸ್ತೆ, ಉಡುಪಿ, ದ. ಕ.
ಬೆಲೆ: 2 ಪೌಂಡಿನ ಟಿನ್ನಿಗೆ ರೂ 10—0—0 (ಅಂಚೆವೆಚ್ಚ ಪ್ರತ್ಯೇಕ)

AYURVEDIC PHARMACY
Baba kali Kamali-Wala RISHIKESH.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ
S. C. S No. 357/1951
ದಿ ವಿಜಯ ಬೇಂಕ್ ಲಿಮಿಟೆಡ್ ಕಾರ್ಕಳ
—ವಾದಿ
ಮತ್ತು
ಕೆ. ಪಾಂಡುರಂಗ ನಾಯಕ—ಕೆ ರಮಾನಾತ ನ್ಯಾಕ್ರ ಮಗ, ಕಾರ್ಕಳ ತಾಲ್ಲೂಕು ಕಾರ್ಕಳ ಕಸಬಾ ಗ್ರಾಮಸ್ಥ
—ಪ್ರತಿವಾದಿ
ಇವರೊಳಗೆ
ಈ ಮೂಲಕ ತಿಳಿಯಪಡಿಸುವದೇನಂದ್ರೆ ನಿಂಮಿಂದ ಸದ್ರಿಬೇಂಕಿಗೆ ಬರಾ ಸಾಲದ ರೂಪಾ 272-7-6ರ ವಸೂಲಾತಿಗೆ ನಿಂಮ ಮೇಲೆ ಮಾಡಿದ ದಾವಾ ತಾ. 19-3-52ಕ್ಕೆ ಇಟ್ಟಿದೆ. ಸದ್ರಿದಿನ ನೀವು ಸ್ವತಹಾ ಯಾ ವಕೀಲು ದ್ವಾರಾ ಮೇಲ್ಕಂಡ ಕೋರ್ಟುಮುಂದೆ ಬೆಳಗ್ಗೆ 10ಗಂಟೆಗೆ ಹಾಜರಾಗಿ ಉದೆಹರಿಸತಕ್ಕದ್ದು, ತಪ್ಪಿದಲ್ಲಿ ನಿಂಮನ್ನು ಏಕ್ಪಾ ಮಾಡಿ ಸದ್ರಿ ದಾವಾ ತೀರ್ಮಾನಿಸಲಾದೀತು

By order of the Court
N. M. Adyanthaya,
Advocate for the Plaintiff
KARKALA 6 3 52

ಸುಲಭದಲ್ಲಿ ಇಂಗ್ಲಿಷ್

ಅತಿ ಸುಲಭದಲ್ಲಿ ತಮ್ಮಷ್ಟಕ್ಕೆ ತಾವೇ
ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ
ಅತಿ ಉಪಯುಕ್ತ ಪುಸ್ತಕ
ಬೆಲೆ ರೂ- 1-8-0, ವಿ. ಪಿ ದ್ವಾರ ರೂ- 2-0-0
ವಿಳಾಸ —
ನವಭಾರತ ಪುಸ್ತಕ ಭಂಡಾರ, ಉಡುಪಿ.

[೧೧ನೇ ಪುಟದಿಂದ ಮುಂದುವರಿದುದು]

ಗಳು (Tunnels) ಇವೆ ಒಂದೊಂದು 4-5 ಮೈಲುಗಳಷ್ಟು ಉದ್ದ ಕೂಡಾ ಇವೆ. ಅವುಗಳನ್ನು ಕಡಿದು ಮಾಡಲಿಕ್ಕೆ ಅನೇಕ ವರ್ಷಗಳು ತಾಗಿವೆ. ಹೀಗೆ ಯುಂಗ್‌ಫ್ರೊ ಬೆಟ್ಟದಲ್ಲಿರುವ ಅಮೇರಿ ಸುರಂಗವು 5½ ಮೈಲು ಉದ್ದ ಅದನ್ನು ಮಾಡಲಿಕ್ಕೆ 15 ವರ್ಷ ತಾಗಿದೆ. ಈ ಸುರಂಗದ ತಲೆಯಲ್ಲಿ ಸುರಂಗ ಕಡಿದು ರೈಲ್ವೆ ಸ್ಟೇಶನ್, ಅದರ ಮೇಲಕ್ಕೆ 3 ಉಪ್ಪರಿಗೆಗಳು ಹಾಕಿ ಅವುಗಳಲ್ಲಿ ಬಂದವರಿಗೆ ಉಳುಕೊಳ್ಳಲಿಕ್ಕೆ ಹೋಟೆಲು, ರೆಸ್ಟೋರೆಂಟ್, ಟಪ್ಪಾಲು ಆಫೀಸು, ಸಾಮಾನುಗಳ ಮಾರಾಟದ ಅಂಗಡಿ ಮೊದಲಾದ ಅನೇಕ ಸೌಕರ್ಯಗಳಿವೆ. ಸ್ಟೇಶನಿಗೆ ತಾಗಿರುವ ರೆಸ್ಟೋರೆಂಟಿನ ಬದಿಯಲ್ಲಿ ಒಂದು ವೇದಿಕೆ (Gallery) ಯಿದ್ದು ಅದರಲ್ಲಿ ನಿಂತು ದೂರದ ದೃಶ್ಯವನ್ನು ಕಾಣಬಹುದು.

ನಾನು ಹೋದ ದಿನ ಸ್ವಲ್ಪ ಮಳೆ ಇದ್ದುದರಿಂದ ಅಲ್ಲಿ ವಿಪರೀತ ಬಿರುಗಾಳಿ ಇದ್ದು ಅದರಲ್ಲಿ ಹಿಮವು ಬಿಳಿಹೂವಿನ ಮಳೆಯಂತೆ ಎಡೆಬಿಡದೆ ನೆಲಕ್ಕೆ ಬೀಳುತ್ತಿತ್ತು. ಇದಕ್ಕೆ ಇಂಗ್ಲಿಷಿನಲ್ಲಿ ಬ್ಲಿಸ್ಸಾರ್ಡ್ (blizzard) ಅನ್ನುತ್ತಾರೆ. 5 ನಿಮಿಷವಾದರೂ ಮುಖ ಹೊರಗೆ ಹಾಕಲಿಕ್ಕೆ ಕಷ್ಟ. ವಿಪರೀತ ಚಳಿಯಿಂದ ಮುಖಕ್ಕೆ ಒಂದು ತರದ ನೋವು ಬರುತ್ತದೆ. ಆದರೂ ಹೊರಗೆ ಈ ಬಿರುಗಾಳಿಯಲ್ಲಿ ಅನೇಕ ದೊಡ್ಡ ಕಾಗೆಗಳು [Ravens] ಹಾರಾಡುತ್ತಿದ್ದವು ಈ ಸ್ಟೇಶನಿನ ಬದಿ ರೈಲು ಕಂಪನಿಯವರಿಟ್ಟ ಅಲ್ಪೈನ್ ಕ್ಲಬ್ [Alpine club] ಇದೆ, ಅಲ್ಲಿ ಮಾರ್ಗದರ್ಶಕರಿದ್ದಾರೆ ಹಾಗೆಯೇ ಹಿಮಗುಡ್ಡೆ ಮೇಲೆ ಎಳಕೊಂಡು ಹೋಗುವ ನಾಯಿಗಳು [Polar Dogs] ಇಲ್ಲಿ ಬಂದ ಪ್ರವಾಸಿಗರು ಇಲ್ಲಿಯ ಮಾರ್ಗದರ್ಶಕರ ಸಹಾಯ ಪಡೆದು ಹಿಮಭಾಗದಲ್ಲಿ ಓಡಾಡಲಿಕ್ಕೆ ಹೆಂಗಸರು ಗಂಡಸರು ಹೋಗುತ್ತಾರೆ. ಈ ದಿನ ಮಳೆ ಇದ್ದರೂ ಕೂಡ ಕೆಲವರು ಹಾಗೆ ಹೋಗಿದ್ದರು ಇನ್ನೊಂದು ಕಡೆ 15-20 ವರ್ಷಗಳ ಹಿಂದೆ ಹಿಮದೊಳಗೆನೇ ಕಡಿದು ಮಾಡಿದ ಸುಮಾರು 60 ಅಡಿ ಉದ್ದ 40 ಅಡಿ ಅಗಲದ ದೊಡ್ಡ ಒಂದು ಕೋಣೆ ಇದೆ ಅದರ ಎಲ್ಲಾ ಭಾಗಗಳು ಹಿಮವೇ, ಅದು ಮುಂಚೆ ಮಾಡಿದ ಕಾಲದಲ್ಲಿ ಹೇಗಿತ್ತೋ ಈಗಲೂ ಹಾಗೆಯೇ ಇದೆ. ಏನೂ ಹಾಳಾಗಲಿಲ್ಲ. ಹೀಗೆಯೇ ಹಿಮದಲ್ಲಿ ಮನೆಗಳನ್ನು ಕಡಿದು ಪೋಲಾರ್ ಪ್ರದೇಶದಲ್ಲಿ ಅಲ್ಲಿರುವ ಎಸ್ಕಿಮೋ ಜನರು ವಾಸಿಸುವುದೆಂತ ನಾವು ಪುಸ್ತಕದಲ್ಲಿ ಓದಿದ್ದೇವೆ. ಈ ಕೋಣೆಯಲ್ಲಿ [Temperature] - 4° ಸೆಂಟಿಗ್ರೇಡ್. ಅಂದರೆ ಉಷ್ಣತೆ ಪೂಜ್ಯಕ್ಕೂ 4 ಡಿಗ್ರಿ ಕಡಿಮೆ ಈ ಬೆಟ್ಟಕ್ಕೆ ತಾಗಿರುವ ಗ್ಲೇಸಿಯರಿನಲ್ಲಿ ಅಂದರೆ ಹಿಮದ ನದಿಯಲ್ಲಿ ಇದನ್ನು ಕಡಿದು ಮಾಡಿದ್ದು. ಈ ಗ್ಲೇಸಿಯರ್ ವರ್ಷಕ್ಕೆ 1 ಇಂಚು ಮುಂದೆ ಮುಂದಕ್ಕೆ ಹೋಗುತ್ತದೆ ಸ್ಟೇಶನಿನ ಬದಿಕಲ್ಲಿಗೂ ಇವಕ್ಕೂ ಸಂಧಿ ಇರುವ ಎಡೆಯಿಂದ ಇದನ್ನು ಕಾಣಬಹುದು.

ಹೀಗೆ 2 ತಾಸು ಈ ಸ್ಟೇಶನಿನಲ್ಲಿ ಇದ್ದು ಸುತ್ತುಮುತ್ತಲಿನ ದೃಶ್ಯವನ್ನು ಕಂಡು ಹೋದ ದಾರಿಯಲ್ಲೇ ಹಿಂದೆ ಅದೇ ರೈಲಲ್ಲಿ ಬೆಟ್ಟದಿಂದ ಕೆಳಕ್ಕೆ ಬಂದೆ. ಬರುವಾಗ ನನ್ನಂತೆಯೇ ಅಲ್ಲಿಗೆ ಹೋದ ಸ್ಕೊಟ್‌ಲೆಂಡಿನ ಎಡಿನ್‌ಬರೋ ಪಟ್ಟಣದಲ್ಲಿರುವ ಬಿ. ಎಸ್‌ಸಿ. ಕಲಿತ ಟರ್ನರ್ ಎಂಬವರೊಬ್ಬರು ನನ್ನ ಒಟ್ಟಿಗೆ ಪ್ರಯಾಣಮಾಡಿದ ಕಾರಣ ಅವರ ಸ್ನೇಹವಾಯಿತು. ಅವರು ಅಲ್ಲಿಗೆ ರಜೆಗೆ ತಿರುಗಾಡಲಿಕ್ಕೆ ಬಂದವರು, ಊರಿಗೆಹೋದ ಅನಂತರ ಅವರು ನನಗೆ ಅವರ ಊರಿನ ವರ್ತಮಾನದ ವಿಷಯ ಬರೆಯುತ್ತಿದ್ದಾರೆ. ಸಾಯಂಕಾಲ 6 ಗಂಟೆಗೆ ಪುನಃ ನಾನು ಹೊರಟು ಇಂಟರ್‌ಲಾಕನ್ ನಗರಕ್ಕೆ ಹಿಂದೆ ಬಂದು ಅಲ್ಲಿರುವ ಮಕೋರ್ ಎಂಬ ಹೊಟೇಲಿನಲ್ಲಿ ರಾತ್ರಿ ಉಳಕೊಂಡೆ.

[ವಿಚಾರವಾಹ] —ಕೆ. ಆರ್. ಕಾರಂತ.

ತಾರೀಕು 13-3-52 ರಿಂದ

ವಾರದ ಭವಿಷ್ಯ

ತಾರೀಕು 19-3-52 ವರೆಗೆ

ಮೇಷ:-ಈ ವಾರದಲ್ಲಿ ನಿಮ್ಮ ಹಲವಾರು ತಗಾದೆಗಳು ನಿವೃತ್ತಿ ಹೊಂದುವವು. ಆರ್ಥಿಕ ಮುಗ್ಗಟ್ಟಿನಿಂದ ಮುಕ್ತರಾಗುವಿರಿ. ಜನತೆಯ ಬೆಂಬಲವಿಲ್ಲದಿದ್ದರೂ ವಿರೋಧ ಭಾವವು ಕಡಿಮೆಯಾಗುವದು. ಸಾಂಸಾರಿಕ ತಾಪತ್ರಯಗಳ ಸಲುವಾಗಿ ಹೆಚ್ಚಿನ ನಿಮ್ಮ ದುಡಿಮೆಯು ವ್ಯಯವಾಗುವದು. ವಿದ್ಯೋಪಜೀವಿಗಳಿಗೂ ನೌಕರಿ ವರ್ಗದವರಿಗೂ ಕಾಲವು ಹೆಚ್ಚಿನಂಶ ಪ್ರತಿಕೂಲವಿದೆ. ವಾರಾದಿಯ 4 ದಿನಗಳು ಇದ್ದುದರಲ್ಲಿ ಕ್ಷೇಮಕರಗಳಿವೆ.

ವೃಷಭ:-ನಿಮ್ಮ ಬಯಕೆಗಳನ್ನು ಪೂರ್ತಿಗೊಳಿಸುವ ದಿನಗಳಿಂದು ಸನ್ನಿಹಿತಗಳಾಗಿವೆ. ಸಾಮಾಜಿಕ ರಾಜಕೀಯಾದಿ ಕ್ಷೇತ್ರಗಳಲ್ಲಿ ನಿಮ್ಮ ಯತ್ನವು ಯಶಸ್ವಿಯಾಗುವದು. ಹಲವಾರು ಜನರಿಗೆ ಆಶ್ರಯದಾತರಾಗುವಿರಿ ಸಕಲ ಭಾಗಗಳಲ್ಲೂ ವೃದ್ಧಿ ಹೊಂದುವಿರಿ. ಅದರೂ ನಿಷ್ಕಾರಣವಾಗಿ ವಾಕ್ಕಲಹಕ್ಕೆ ಗುರಿಯಾಗುವ ಸಂಭವವಿರುವುದು, ವಾರದ ಆದ್ಯಂತ ದಿನಗಳನ್ನು ಬಿಟ್ಟು ಮಿಕ್ಕಿವ ದಿನಗಳೆಲ್ಲವೂ ಪ್ರಶಸ್ತವಾಗಿವೆ.

ಮಿಥುನ:-ಕಳೆದ ದಿನಗಳಿಗಿಂತ ಈ ಕಾಲವು ನಿಮ್ಮ ಭಾಗಕ್ಕೆ ಉತ್ತಮವಿದೆ. ಗೃಹತಾಪತ್ರಯಗಳು ಮಾಯವಾಗುವವು. ಹಿಡಿದ ಕಾರ್ಯದಲ್ಲಿ ಯಶಸ್ಸು ಲಾಭಗಳು ಲಭಿಸಲಿವೆ. ನೌಕರಿ ವ್ಯಾಪಾರಾದಿಗಳಲ್ಲಿ ನಿರೀಕ್ಷೆಗಿಂತ ಅಧಿಕ ಫಲ ಲಭಿಸುವದು. ಆದರೆ ಶತ್ರುಜನರ ಪೀಡೆಯಿಂದಲೂ ಇಷ್ಟಜನರ ವಿಯೋಗದಿಂದಲೂ ಮನಸ್ಸಿಗೆ ನೆಮ್ಮದಿಯಿರಲಾರದು. ವಾರಾಂತ್ಯದ 3 ದಿನಗಳಲ್ಲಿ ಗೃಹಸುಖಸ್ಥಾನಮಾನ ಲಾಭಗಳಿವೆ.

ಕರ್ಕಟಕ:-ಸ್ತ್ರೀವರ್ಗದಿಂದ ಪ್ರಾಪ್ತವಾದ ಆಪದನಿಷ್ಟಗಳಿಂದ ಮುಕ್ತರಾಗುವಿರಿ. ಪರಿಶ್ರಮಕ್ಕಿಂತಲೂ ಅಧಿಕವಾದ ಫಲವು ಕಾರ್ಯಗಳಲ್ಲಿ ಲಭಿಸಲಿದೆ ಗೃಹೋಪಕರಣಗಳೆಲ್ಲವೂ ಪರಿಪೂರ್ಣವಾಗಿರುವುದರಿಂದ ಗೃಹಕೃತ್ಯ ವಿಚಾರದಲ್ಲಿ ನಿಶ್ಚಿಂತರಿರುವಿರಿ. ಆರ್ಥಿಕ ಭಾಗವು ವೃದ್ಧಿ ಹೊಂದಲಿದೆ, ದೇಹಾರೋಗ್ಯವೂ ತೃಪ್ತಿಕರವಿರುವದು. ರಾಜಕೀಯ ಕ್ಷೇತ್ರದಲ್ಲಿ ಪರಿಸ್ಥಿತಿಯು ನಿಮಗನುಕೂಲವಿಲ್ಲವು. ವಾರದ ಆದ್ಯಂತ ದಿನಗಳು ಅನುಕೂಲಗಳು.

ಸಿಂಹ:-ವಿಘ್ನ ಪರಂಪರೆಗಳು ಮೇಲಿಂದ ಮೇಲೆ ಬಂದರೂ ಹಿಡಿದ ಕಾರ್ಯದಲ್ಲಿ ಸೋಲಿಲ್ಲವು ನೀಚ ಜನರ ಮುಖದಿಂದ ವಿಶೇಷತಃ ಧನಲಾಭವಾಗಲಿದೆ. ನೀವೆಷ್ಟೇ ದುಡಿದರೂ ದಿನಾಂತ್ಯದಲ್ಲಿ ರಿಕ್ತಹಸ್ತರಾಗುವಿರಿ ಸ್ತ್ರೀಯರಿಂದ ಕಲಹ ಅನಿಷ್ಟಾದಿಗಳು ಸಂಭವಿಸುವ ಯೋಗವಿದೆ. ದೇಹಾರೋಗ್ಯವು ಸ್ವಲ್ಪಮಟ್ಟಿಗೆ ಕೆಡುವದು. ವ್ಯಾಪಾರ ವ್ಯವಹಾರಗಳಲ್ಲಿ ಕೊಂಚ ಬಿಕ್ಕಟ್ಟಿನ ಪರಿಸ್ಥಿತಿಯೊದಗಲಿದೆ. ತಾ 14-15-16ರಲ್ಲಿ ಗೃಹಸುಖ ಧನಲಾಭ ವಿಜಯಗಳಿವೆ.

ಕನ್ಯಾ:-ದಿನದಿಂದ ದಿನಕ್ಕೆ ಪರಿಸ್ಥಿತಿಯು ಕೆಡುತ್ತಲಿದೆ. ನಿಮ್ಮಲ್ಲಿನ ಧೈರ್ಯೋತ್ಸಾಹಗಳು ಮಾಯವಾಗುವವು. ಪಿತ್ತಾಗ್ನಿ ಸಂಬಂಧವಾದ ಕಾಹಿಲೆಗೆ ಗುರಿಯಾಗುವ ಸಂಭವವಿದೆ. ಶತ್ರುಜನರ ಪೀಡೆಯಿಂದ ನಿಮ್ಮ ಇಷ್ಟಾರ್ಥಗಳು ನೆರವೇರವು ರಾಜಕೀಯ ಕ್ಷೇತ್ರದಲ್ಲಿ ಪರಾಭವವುಂಟಾದೀತು. ವಿನಾಕಾರಣ ಜನರೊಡನೆ ಕಲಹ ನಿಷ್ಠುರಗಳಾಗಲಿವೆ, ಗೃಹತಾಪತ್ರಯ ಪರ್ಯಟನಾದಿಗಳಿಂದ ಪೀಡಿತರಾದ ನಿಮಗೆ ತಾ 13-17 18 ಕೊಂಚ ಸುಖಕರಗಳಿವೆ.

ತುಲಾ:-ಈ ವಾರದಲ್ಲಿ ಹಿಂದಿಗಿಂತ ಅದೆಷ್ಟೋ ಸುಧಾರಿಸುವಿರಿ. ಹಣದ ಬಿಕ್ಕಟ್ಟು ಮಾಯವಾಗುವದು. ಉದ್ಯೋಗದಲ್ಲಿ ಪರಿಶ್ರಮಕ್ಕೆ ತಕ್ಕ ಫಲ ಲಭಿಸುವದು. ಗೃಹತಾಪತ್ರಯಗಳು ದೂರವಾಗಲಿವೆ, ಪರ್ಯಾಟನಕ್ಕೀ ಕಾಲವು ಒಳ್ಳೆಯದಲ್ಲ. ಅನಿರೀಕ್ಷಿತ ಕೋಶ ಪ್ರಾಪ್ತಿಗವಕಾಶವಿದೆ. ಗುರುಹಿರಿಯರಿಂದಲೂ ಆಪ್ತೇಷ್ಟರಿಂದಲೂ ವಿಯೋಗವುಂಟಾದೀತು ತಾ 14 15-16-19 ಈ ದಿನಗಳು ಇಷ್ಟದಾಯಿಗಳಿವೆ.

ವೃಶ್ಚಿಕ:-ಜನ್ಮ ಪರೆಂಬಾದ ಕುಜನು ವ್ಯಯದಲ್ಲಿದ್ದು ನಿಮ್ಮ ಆರೋಗ್ಯ ಮತ್ತು ಆರ್ಥಿಕ ಭಾಗಗಳಿಗೆ ಹೆಚ್ಚಿನ ಧಕ್ಕೆಯನ್ನುಂಟುಮಾಡುತ್ತಿರುವನು. ಮಾತ್ರವಲ್ಲ ನಿಮ್ಮ ಗೃಹಕೃತ್ಯದಲ್ಲೂ ಕೂಡಾ ಕಲಹ ಅವ್ಯವಸ್ಥೆಗಳು ಹೆಚ್ಚಲಿವೆ. ಆದರೂ ಶ್ರಮಸಹಿಷ್ಣುಗಳಾದ ನೀವು ಹೆಚ್ಚಿನ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ವ್ಯಯಕ್ಕೆ ತಕ್ಕ ಆಯವಿದ್ದ ಕಾರಣ ಹಣದ ಬಿಕ್ಕಟ್ಟಿರದು. ತಾ. 13 17-18 ಈ ದಿನಗಳು ಸುಖ ಭೋಗ ದಾಯಿಗಳಾಗಿವೆ.

ಧನು:-ನಿಮ್ಮ ಉದ್ಯೋಗವು ಯಶಸ್ವಿಯಾಗಿ ಮುಂದರಿವದು. ಜನತೆಯಿಂದ ಸ್ಥಾನಮಾನಗಳು ಲಭಿಸುವವು. ನಿಮ್ಮ ಪರಿಶ್ರಮವು ಸಫಲವಾಗುವದು. ಗೃಹಕೃತ್ಯದಲ್ಲಿ ಕೆಲವೊಮ್ಮೆ ಒಡಕು ಕಂಡು ಬಂದರೂ ಕಲಹಕ್ಕವಕಾಶ ಉಂಟಾಗದು. ಮನಸಿನ ಚಾಪಲ್ಯದಿಂದಾಗಿ ಕುಮಾರ್ಗಗಾಮಿಗಳಾಗಿ ಕೀರ್ತಿಗೆ ಕಳಂಕ ಬರುವ ಸಂಭವವಿದೆ. ತಾ. 17, 18 ಹೊರತಾಗಿ ಮಿಕ್ಕುಳಿದ ದಿನಗಳು ಲಾಭ ವಿಜಯಕಾರಿಗಳಾಗಿವೆ.

ಮಕರ:-ಆರ್ಥಿಕ ಭಾಗದಲ್ಲಿ ಹಿಂದಿಗಿಂತ ಕೊಂಚ ಸುಧಾರಣೆಯಾಗಲಿದೆ. ಆದರೆ ಶತ್ರುಜನರ ಉಪಟಳವು ಅಧಿಕವಾಗಿರುವುದರಿಂದ ಹೆಚ್ಚಿನ ನಿಮ್ಮ ಕಾರ್ಯಗಳು ಕೆಡನೆ ಹೊಂದವು. ವಿದ್ಯೋಪಜೀವಿ ಜನತೆಗೆ ದಿನ ಯಾಪನೆಯು ಕೊಂಚ ಕಷ್ಟಸಾಧ್ಯವೇ. ವಾತ ದೋಷದಿಂದಾಗಿ ಆರೋಗ್ಯಕ್ಕೆ ಧಕ್ಕೆಯುಂಟಾದೀತು. ಆಪ್ತೇಷ್ಟರ ವಿರಹದಿಂದ ದುಃಖಿತರಾದ ನಿಮಗೆ ತಾ 14ರಿಂದ 18ರವರೆಗಿನ ದಿನಗಳು ಸುಖವನ್ನೀಯಲು ಶಕ್ಯಗಳಾಗಿವೆ.

ಕುಂಭ:-ಆರೋಗ್ಯವು ಉತ್ತಮವಿರುವದು. ಯಾವ ಉದ್ಯಮದಲ್ಲೂ ನೀವು ಯಶಸ್ವಿಗಳಾಗುವಿರಿ. ಸಂಪನ್ನರ ಸ್ನೇಹ ಲಾಭವಾಗುವುದು. ನೀಚಜನರಿಂದ ಹೆಚ್ಚಿನ ಧನಾಗಮವಾಗಲಿದೆ ಬೇಕು ಬೇಕಾದ ಆಗ ಭೋಗಗಳನ್ನನುಭವಿಸುವಿರಿ. ಅನಿರೀಕ್ಷಿತ ಪ್ರವಾಸದಿಂದಾಗಿ ದೇಹಶ್ರಮ ಧನ ವ್ಯಯಗಳಾಗಲಿವೆ ವಾರಾಂತ್ಯದ 3 ದಿನಗಳು ಉತ್ತಮವಿವೆ.

ಮೀನ:-ವಿಪತ್ಪರಂಪರೆಗಳು ಸಮುದ್ರದ ತರಂಗಗಳಂತೆ ಮೇಲಿಂದ ಮೇಲೆ ಬಲಿವೆ ಆರ್ಥಿಕ ಮುಗ್ಗಟ್ಟು ಅಧಿಕವಾದರು ಸನ್ಮಿತ್ರರ ಸಹಾಯದಿಂದ ಪಾರಾಗುವಿರಿ ಶತ್ರುಜನರು ಪ್ರತೀಕಾರಾಸಕ್ತರಾಗುವರು ಸಂಸಾರದಲ್ಲಿ ಕಾಹಿಲೆಗಳು ಕಾಣಿಸಿಕೊಳ್ಳುವೆ. ವಿನಾಕಾರಣ ಕಲಹ ಆಹಾರ ದೋಷದಿಂದಾಗಿ ಉದರಶೂಲೆ ಇತ್ಯಾದಿಗಳುಂಟಾಗುವವು. ತಾ 13-19 ಇದ್ದುದರಲ್ಲಿ ಉತ್ತಮ ದಿನಗಳು

ಪಂಚಾಯತ ಬೋರ್ಡು,
ಗ್ರಾಮ ಕಮಿಟಿ, ಶಾಲಾ ಕೊಲೇಜು
ಮೊದಲಾದುವುಗಳ

ಲೈಬ್ರೆರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿರಿ: —

ನವಭಾರತಪುಸ್ತಕಭಂಡಾರ ಉಡುಪಿ.

ಬಾಲಚಂದ್ರ

ಶಿಕ್ಷಣ ಸಂಬಂಧವಾದ ಮಾಸಪತ್ರಿ

ಸ್ಥಾಪಕರು:
ಶ್ರೀ ಉಳ್ಳಾಲ ಮಂಗೇಶರಾವ್,
ಬಿ. ಎ. ಎಲ್. ಟಿ.

ಸಂಪಾದಕರು.
ಕೆ. ಆರ್ ಶೆಣೈ ಮತ್ತು ಕೆ. ಎಚ್. ಶೆಟ್ಟಿ

ಉಪಾಧ್ಯಾಯರಿಗೂ ಉಪಾಧ್ಯಾಯಿಯರಿಗೂ ಅತ್ಯಾವಶ್ಯಕವಾದ ಪತ್ರಿಕೆ
ವಾರ್ಷಿಕ ಚಂದಾ ರೂ 3-0-0

ಮೆನೇಜರ್,
ಬಾಲಚಂದ್ರ, ಉಡುಪಿ.

ಸರ್ ಜೀವನ್ ಶಿಲಾಜಿತ್ ಲೇಹ್ಯ



ಶಿಲಾಜಿತ್ ಹಿಮಾಲಯ ಪರ್ವತದಿಂದ ತೆಗೆಯಲ್ಪಡುವಂಥ ಅಪೂರ್ವ ವಸ್ತು, ಔಷಧಿಗಳ ರಾಜ; ಶಿಲಾಜಿತ್ತನ್ನು ಮೂಲಿಕೆಗಳೊಡನೆ ಸೇರಿಸಿ ಲೇಹ್ಯಮಾಡಿದೆ. ಇದು ಶೀತ, ಉಷ್ಣ, ಮಳೆ ಸರ್ವಕಾಲದಲ್ಲೂ ಒಂದೇಸಮನೆ ತನ್ನ ಶಕ್ತಿಯನ್ನು ತೋರಿಸುತ್ತದೆ, ಇದರ ಸೇವನೆಯಿಂದ ದೇಹ ದಾರ್ಢ್ಯವೂ, ಶಕ್ತಿಯೂ ಉಂಟಾಗುತ್ತದೆ. ಮುಖ್ಯವಾಗಿ ಹೊಟ್ಟೆನೋವು ಅನ್ನ ಸೇರದಿರುವಿಕೆ ಇವೇ ಮೊದಲಾದ ರೋಗಗಳಿಗೆ ಒಂದೆರಡು ದಿನಗಳಲ್ಲಿಯೇ ಗುಣಕೊಡತಕ್ಕ ಔಷಧವಿದು. ಕೆಮ್ಮು ಖಾಸದಮ್ಮು, ಮೂಲ, ಒಳಮೂಲ, ರಕ್ತಮೂಲ, ಬಹುಮೂತ್ರ, ಹೊಟ್ಟೆಯಲ್ಲಿ ಗಡ್ಡೆ ಇರುವಿಕೆ ಮತ್ತು ವಾಯುವಿನಿಂದ ಉಂಟಾಗತಕ್ಕ ಸರ್ವ ವ್ಯಾಧಿಗಳಿಗೂ ದಿವ್ಯೌಷಧ. ವಿದ್ಯಾರ್ಥಿಗಳು ಸೇವಿಸುವುದರಿಂದ ಜ್ಞಾಪಕಶಕ್ತಿಯೂ ಮತ್ತು ಚಟುವಟಿಕೆಯೂ ಹೆಚ್ಚುತ್ತೆ. ವೃದ್ಧರು ಸೇವಿಸುವುದರಿಂದ ಶಕ್ತಿಯನ್ನು ಹೆಚ್ಚಿಸಿ; ಧಾರ್ಢ್ಯವನ್ನುಂಟುಮಾಡುತ್ತೆ.

ಹೆಂಗಸರಿಗೆ—ಅಕ್ರಮ ಬಹಿಷ್ಠೆ, ಕೈಕಾಲು ಹಿಡಿತ, ಕೀಲುವಾಯು, ಪಕ್ಕಶೂಲೆ ಮತ್ತು ಉಷ್ಣದಿಂದಾಗುವ ಇತರ ರೋಗಗಳಿಗೆ ದಿವ್ಯೌಷಧ. ದುರ್ಬಲರಾಗಿ ಕೇವಲ ಕೃಶರಾಗಿರುವ ಶಿಶುಗಳಿಗೆ ಈ ಔಷಧವನ್ನು ಪ್ರತಿ ಬೆಳಿಗ್ಗೆ ಸಂಜೆ ಕೊಟ್ಟರೆ ಸ್ವಲ್ಪ ಕಾಲದಲ್ಲಿಯೇ ದೃಢಾಂಗರಾಗುವರು, ಹಣ ಮುಂಗಡ.

೪೮ ದಿನದ ಲೇಹ್ಯಕ್ಕೆ ರೂ. ೫-೮-೦, ೨೪ ದಿನದ ಲೇಹ್ಯಕ್ಕೆ ರೂ. ೩-೪-೦ (ಪೋಸ್ಟೇಜು ಮಾಫಿ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ

Edited, Printed & Published By K. H. Shetty at the Navayuga Press, Udipi, S. India.

Regd.No. M. 3618 | ESTD. 1921 ಸ್ಥಾಪಿತ | 20-3-1952

LICENCE No. 31 Licensed to Post without Prepayment

31ನೆಯ ವರ್ಷ

Founder: Sri A. B. Shetty, Minister for Agriculture & Veterinary

ನ ವ ಯು ಗ
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ

ಕೃಷಿಮಂತ್ರಿ ಶ್ರೀ.ಎ.ಬಿ ಶೆಟ್ಟರಿಂದ ಸ್ಥಾಪಿತವಾದುದು.

ನವಯುಗ

ನ ವ ಯು ಗ
ಉಡುಪಿ, ದ. ಕ

ವಾರ್ಷಿಕ ಚಂದಾ ರೂ 5-12-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ 0-2 0

ವರ್ಷ ೩೧ ವಾರ ೨೮ | NAVAYUGA WEEKLY | Post Box No. 22 | UDIPI. | Vol. 31 No 28

"ಬುದ್ಧಿವಂತರು ಇತರರ ಮಾತುಗಳ ಹೆಚ್ಚಾಗಿ ಕೇಳಿ ತಾವು ಸ್ವತಃ ಕಡಿಮೆ ಮಾತನಾಡುತ್ತಾರೆ"

"ಪ್ರಾಮಾಣಿಕನಾದವನೇ ಜಾಣನೂ ಸುರಕ್ಷಿತನೂ ಆಗಿರುತ್ತಾನೆ"

ಜಂಭಬಿಟ್ಟು ದುಡಿಯಿರಿ

ಮಧ್ಯಮವರ್ಗಕ್ಕೆ ಚಕ್ರವರ್ತಿ ರಾಜಗೋಪಾಲಾಚಾರ್ಯರ ಕರೆ!

ಮಧ್ಯಮ ವರ್ಗದ ದುರವಸ್ಥೆಯ ಬಗ್ಗೆ ...ಕರದ ಮಾತು ಈಚೆಗೆ ಬಹಳವಾಗಿ ...ಸುತ್ತಿದೆ. ಗತಕಾಲದಲ್ಲಿ ಮಧ್ಯಮವ... ನಾಗರಿಕತೆಯ ಪ್ರಗತಿಯಲ್ಲಿ ಮಹ... ಪಾತ್ರ ವಹಿಸಿತ್ತು. ಇನ್ನಾದರೂ ...ಧ್ಯಮ ವರ್ಗವು ದೊಡ್ಡ ಪಾತ್ರವನ್ನೇ ...ಸುವದು; ಆದರೆ ಆ ಮಧ್ಯಮವರ್ಗ ...ಕಪಾರಂಪರ್ಯವಾಗಿ ಬಂದ ಮಧ್ಯಮ... ...ವಾಗಿರದೆ ಹೊಸದೊಂದು ವರ್ಗ... ...ವುದು. ಆದರೆ ಸಾರ್ವಿಗ ಈ ಮಾತುಗ... ...ನ್ನ ಹೇಳುತ್ತಿರುವುದು ಹಳೇ ಪರಂಪ... ...ಗತ ಮಧ್ಯಮ ವರ್ಗಕ್ಕೆ.

...ಪ್ರಿಯವನ್ನು ನುಡಿಯುವ ಪ್ರಯತ್ನ ಬಿ... ಸತ್ಯವೆಂದು ನನಗನಿಸಿದ್ದನ್ನೇ ಹೇ... ...ನಾನು ಸಹಾನುಭೂತಿ ಶೂನ್ಯನೆಂ... ...ತೋರಬಹುದು; ಆದರೆ ಬರಿಬೆನ್ನು ತ... ...ರಿಸಿದರೇನು ಬಂತು? ಸತ್ಯ ಅಪ್ರಿಯ... ...ಗಿದ್ದರೂ ಅದರಿಂದ ಪ್ರಯೋಜನವಾ... ...ವ ಸಂಭವವಿದೆ. ಶಿಷ್ಟ ಕಾರ್ಪಣ್ಯಗ... ...ಳು ಮನುಷ್ಯನಲ್ಲಿ ಕ್ರೋಧವನ್ನು ಕೆ... ...ಸಿ ಸ್ಮರಣೆಯನ್ನು ಅಳಿಸಿ, ಅವಿವೇಕಕ್ಕ... ...ದರ ಫಲವಾದ ವಿಪತ್ತಿಗೂ ದಾರಿ ಮಾ... ...ಬಹುದು. ಇದು ತ್ರಿಕಾಲ ಸತ್ಯ; ಅನುಭ... ...ದಿಂದ ಸಿದ್ಧವಾದ ಸತ್ಯ. ಆದ್ದರಿಂದ ಸ... ...ನೆ ಬೇಕು, ತಿಳಿವಳಿಕೆ ಬೇಕು, ಕೃತಿಯ... ವಿವೇಕ ಬೇಕು, ಎಂದು ನಾನು ಮಧ್ಯ... ...ಮ ವರ್ಗಕ್ಕೆ ಸಾರಿ ಹೇಳುವೆ.

೦೦೦ ೦೦೦ ೦೦೦

ಅನೇಕ ವರ್ಗಗಳು ಇತರ ವರ್ಗಗಳ ...ದೈಹಿಕ ಶ್ರಮದ ಮೇಲೆ ಅವಲಂಬಿಸಿರು... ...ವಷ್ಟು ಕಾಲ, ಮತ್ತು ಆ ಅವಲಂಬನೆ ...ಜೀವನಕ್ಕೆ ಅತ್ಯವಶ್ಯವೆನಿಸಿದ ವಿಷಯಗ... ...ಳಲ್ಲಿಯೇ ಇರುವಷ್ಟು ಕಾಲ ಮತಗಳಿಗೆ ...ಜವಾದ ಸ್ವಂತ ಬಲವಿಲ್ಲ. ಅವಶ್ಯಕ ...ನೌಕರಿಗಳಲ್ಲಿ ದುಡಿಯುತ್ತಿರುವ ಜನರು ...ಸಾರ್ವತ್ರಿಕ ಹಿತಕ್ಕೇ ಇರಲಿ ಸ್ವಾರ್ಥಕ್ಕೇ ...ಇರಲಿ, ಕ್ರೋಧದಿಂದಲೇ ಆಗಲಿ ವಿವೇಕ ...ದಿಂದಲೇ ಆಗಲಿ, ಚೆನ್ನಾಗಿ ಸಂಘಟಿತ ...ರಾಗಿರುವಷ್ಟು ಕಾಲ, ಅವರೇ ನಿಜವಾಗಿ ...ಅಳುವರು. ಹೊರತು ಮತಗಳೂ ಅಲ್ಲ ...ಪ್ರಜಾಸತ್ತೆಯೂ ಅಲ್ಲ. ಕಾಯಿದೆಯಲ್ಲಿ ...ಹೇಳಿದಂತೆಯೇ ಮತದಾನ ನಡೆದರೂ ...ಪ್ರಕಟ ಅಥವಾ ಗುಪ್ತಭಯ ಮೂಲಕ ...ವಾಗಿ ಸಂಘಟಿತ ಶ್ರಮಜೀವಿ ವರ್ಗವು ಅ... ...ಪ್ಪಣೆ ಮಾಡಿದವರಿಗೇ ಮತ ಬೀಳುವು... ...ದು. ರಾಜಾಜ್ಞೆ ಹೇಗೋ ಹಾಗೆಯೇ ಪ್ರ...

...ಜಾಸತ್ತೆಯ ಆಜ್ಞೆಯೂ ಯಾವುದೊಂದು ದೈವೀ ಹಕ್ಕಿನ ಮೇರೆಗೆ ನಡೆಯುವುದಿಲ್ಲ; ಆರ್ಥಿಕ ಮತ್ತು ಸಾಮಾಜಿಕ ಸಂಘಟನೆಯ ಬಲದಿಂದಲೇ ಅದು ನಡೆಯಬೇಕಾಗುವುದು. ಜನರು ಅತ್ಯವಶ್ಯ ವಿಷಯಗಳಿಗಾಗಿ ಅನ್ಯರ ಶ್ರಮದ ಮೇಲೆ ನಿರ್ಭರರಾಗಿರುವಲ್ಲಿ, ಮತ್ತು ಆ ಶ್ರಮಿಕರು ತಮ್ಮ ಇಚ್ಛೆಯನ್ನು ಸಾಧಿಸಿಕೊಳ್ಳುವ ರೀತಿಯನ್ನು ಕಲಿತಿರುವಲ್ಲಿ, ಪ್ರಜಾಸತ್ತೆಯು ಪಾರ್ಲಿಮೆಂಟಿನ ಅಪ್ಪಣೆಯನ್ನನುಸರಿಸಿ ಸಾಗುವುದಿಲ್ಲ; ಕೇವಲ ಅವಶ್ಯಕ ಶ್ರಮಜೀವಿಗಳ ಇಚ್ಛೆಗನುಸಾರವಾಗಿಯೇ ನಡೆಯುವುದು.

೦೦ ೦೦ ೦೦

ರೈತರ ಅಥವಾ ಇತರ ಶ್ರಮಜೀವಿಗಳ ಹುಡುಗ–ಹುಡುಗಿಯರು, ತಮ್ಮ ಹೆತ್ತವರಿಗೆ ದೊರೆತ ಮಟ್ಟದಲ್ಲಿ ತಮಗೆ ಅವಕಾಶ ದೊರೆಯದಿದ್ದರೆ ಏನೂ ಸಂಕೋಚಪಟ್ಟುಕೊಳ್ಳದೆ ಕೆಳಗಿನ ಮಟ್ಟಕ್ಕಿಳಿದು ಸಿಕ್ಕಿದ ಕೆಲಸ ಕೈಕೊಳ್ಳುವರೆ ಹೊರತು ಪರೋಪಜೀವಿಗಳಾಗಿ ಬಾಳಲು ಪ್ರಯತ್ನಿಸುವುದಿಲ್ಲ. ಇತರರ ಕೈಕೆಳಗೆ ದುಡಿಯಲು ಅವರು ನಾಚುವುದಿಲ್ಲ. ವ್ಯವಸಾಯದಲ್ಲಿ ದುಡಿದು ಪುನಃ ತಲೆಯೆತ್ತಲು ಪ್ರಯತ್ನಿಸುವರು. ಆದರೆ ಪರಂಪರಾಗತ ಮಧ್ಯಮ ವರ್ಗದ ಹುಡುಗರು, ತಮಗೆ ಕುರ್ಚಿ ಮೇಜಿನ ಕೆಲಸ ಸಿಗದಿದ್ದರೇನು ಮಾಡುವರು? ಉಪವಾಸ ಬಿದ್ದಾರು, ಸಾಲಮಾಡಿಯಾರು, ಬೇಡಿ ತಿಂದಾರು, ದುಃಖವನ್ನು ಸಹಿಸಿಯಾರು; ಹೆಚ್ಚು ಭಾಗ್ಯವಂತರಾದ ಬಂಧು ಬಾಂಧವರು ನೆರವಾದರೆ ಮಾತ್ರ ಹೇಗೋ ಅವರ ಕಷ್ಟ ದೂರವಾಗುವುದು. ಮಧ್ಯಮ ವರ್ಗದ ಹೆಣ್ಣುಮಕ್ಕಳಿಗೆ ಮದುವೆಯು ಅನಿವಾರ್ಯ ಅವಶ್ಯಕತೆಯಿರುವುದರಿಂದ ಈ ಬಗೆಯ ನೆರವು ಹೆಣ್ಣುಗಳಿಗೆ ದೊರೆಯಲು ಸ್ವಲ್ಪ ಮಟ್ಟಿಗೆ ದಾರಿಯಾಗಿದೆ. ಆದರೆ ಇದು ಕಡೆತನಕ ಸಾಗುವ ಮಾತಲ್ಲ; ಸಾಗಿದಷ್ಟು ಕಾಲವಾದರೂ ಅದು ಅತ್ಯಂತ ಕ್ಲೇಶದ ಸ್ಥಿತಿ.

ಮಧ್ಯಮ ವರ್ಗದಲ್ಲಿ ನಿರುದ್ಯೋಗಿಯಾದವನಿಗೆ ದೈಹಿಕ ಶ್ರಮದಿಂದ ಹೊಟ್ಟೆಹೊರೆದುಕೊಳ್ಳಲು ನಮ್ಮ ಸಂಪ್ರದಾಯದಲ್ಲಿ ಎಡೆಯೇ ಇಲ್ಲ. ಈಚೆಗೆ ಈ ಭಾಗದಲ್ಲಿ ತುಸು ಸುಧಾರಣೆಯಾಗಿದೆ. ಆಗದೆ ವಿಧಿಯಿಲ್ಲ; ಏಕೆಂದರೆ ನಿರ್ವಹಣೆಗೆ ಕ್ಷೇತ್ರಕ್ಕೆ ಹೆಚ್ಚು ಉಳಿಗಾಲವಿಲ್ಲ. ಹಿಂದೆ ಯಾವುದ... ಅಬ್ರಾಹ್ಮಣ್ಯವೆನಿಸಿತ್ತೋ ಅಂಥ ವೃತ್ತಿಗಳನ್ನು ಕೈಕೊಳ್ಳಲು ಇಂದು ಯುವಕರು ಸಿದ್ಧರಾಗಿದ್ದಾರೆ. ಆದರೂ ಕುರ್ಚಿ ಮೇಜಿನ ಮೋಹ ಇನ್ನೂ ಹಿಂಗಿಲ್ಲ; ಹೊಸ ನೌಕರಿಗಳಲ್ಲಿಯೂ ಅದನ್ನು ಮಟ್ಟಿಗೆ ದೈಹಿಕ ಶ್ರಮದ ಅಂಶ ಹೆಚ್ಚಾಗಿರುವ ಕೆಲಸಗಳನ್ನೇ ಅವರು ಹುಡುಕುತ್ತಾರೆ. ಅಂಥವು ಸಿಗದಿದ್ದರೆ ಕ್ಲೇಶಗಳನ್ನು ಅನುಭವಿಸಲು ಮತ್ತು ಮುಂದಿಗೆ ಭಾರವಾಗಿ ಬಾಳಲು ಅವರು ಸಿದ್ಧರಾಗುವರೇ ಹೊರತು ಸಾಮಾನ್ಯ ಕೂಲಿನಾಲಿಮಾಡಿ ಆ ಕೆಲಸಕ್ಕೆ ತಕ್ಕ ಜೀವನದ ಮಟ್ಟವನ್ನು ಅಂಗೀಕರಿಸಲು ಅವರು ಮನಸ್ಸು ಮಾಡುವುದಿಲ್ಲ. ರಾಷ್ಟ್ರದಲ್ಲಿ ಸುಭಿಕ್ಷೆ ಹೆಚ್ಚಿತೆಂದರೆ ಮಧ್ಯಮ ವರ್ಗದವರಿಗೆ ಹೆಚ್ಚು ಹೆಚ್ಚು ನೌಕರಿ ದೊರೆಯುವವೆಂಬುದು ನಿಜ; ಆದರೆ ಮಧ್ಯಮ ವರ್ಗದ ದುರವಸ್ಥೆಯಿಂದ ಆ ಸುಭಿಕ್ಷೆಯೂ ವಿಳಂಬಿತವಾಗುತ್ತಿದೆ.

ಇತರರ ಶ್ರಮದ ಮೇಲಿನ ಅವಲಂಬನೆಯನ್ನು ಆದಷ್ಟು ಕಡಿಮೆ ಮಾಡಲು ಕೂಡಲೆ ಯತ್ನಿಸಬೇಕು. ಪ್ರಯತ್ನಗಳು ಬೇಕು. ಜೀವನವನ್ನು ಸರಳಗೊಳಿಸಿ ಎಲ್ಲವನ್ನೂ ಸ್ವತಃ ಮಾಡಿಕೊಳ್ಳಲು ಕಲಿಯಿರಿ. ಸ್ತ್ರೀಪುರುಷರಿಬ್ಬರೂ ಈ ನವಮಾರ್ಗವನ್ನು ಅಭಿರುಚಿಯಿಂದ ಅನುಸರಿಸಬೇಕು. ಈ ಬದಲಾವಣೆಯನ್ನು ಕೇವಲ

[೪ನೇ ಪುಟ ನೋಡಿರಿ]

Our Pigmy Deposit Scheme

.... brings our bank to your door. You may save as small a sum as annas two. Our collector will call on you every day to receive it.

At the rate of annas two per day you save Rs. 150 in 7 years because we allow interest at 3 1/8% per annum. At the rate of Rs 1/- per day your Savings are Rs 2,800 in 7 years. At the rate of Rs 10/ it is Rs 28,000.

Come in to-day and join the band of **Prudent Prosperous Pigmy People.**

The Canara Industrial & Banking Syndicate Ltd.

Estd: 1925. H O: UDIPI

ಕಡಿಮೆ ಬೆಲೆ
ಮೇಲಾದ ವೈಶಿಷ್ಟ್ಯ

ಸ್ಥಳದಲ್ಲಿ ...
ಎಲ್ಲಾ ಬ್ಯಾಟರಿಗಳು.

ಪ್ರಜಾಸತ್ತ

ನ್ಯಾಯಾಲಯ

ಒಂದು ರಾಷ್ಟ್ರದ ನ್ಯಾಯಾಲಯವು ಎಷ್ಟು ಉಚ್ಚ ತರಗತಿಯಲ್ಲಿರುವುದೆಂಬುದೇ ಆ ದೇಶದ ಸರಕಾರದ ಯೋಗ್ಯತೆಯನ್ನು ತಿಳಿಯುವ ಅಳತೆಯ ಮಟ್ಟವಾಗಿರುವುದು. ಜನರ ಆಸ್ತಿ, ಸೊತ್ತು, ಸ್ವಾತಂತ್ರ್ಯ ಮತ್ತು ನಾಗರಿಕರ ಮೂಲಭೂತ ಹಕ್ಕುಗಳನ್ನು ಪಕ್ಷಪಾತವಿಲ್ಲದೆ ಕಾಪಾಡುವರಿ ಇದಕ್ಕಿಂತ ಮಿಗಿಲಾದ ಆಧಾರ ಬೇರೊಂದಿಲ್ಲವೆಂಬ ವಿಶ್ವಾಸವು ಜನರಲ್ಲಿ ಬೇರೂರುವ್ರಪೇ ಇದರ ಪರೀಕ್ಷೆಯಾಗಿದೆ. ಪ್ರತಿಯೊಂದು ವ್ಯಕ್ತಿಯಲ್ಲೂ ತನಗಾದ ಅನ್ಯಾಯವನ್ನು ತಪ್ಪಿಸುವರೆ ಮತ್ತು ತನಗುಂಟಾಗುವ ಕೆಡುಕನ್ನು ತಪ್ಪಿಸುವರೆ ನ್ಯಾಯಾಲಯಗಳೇ ತನಗೊಂದು ಕೋಟೆಯಂತಿರುವುದೆಂಬ ದೃಢನಂಬಿಕೆಯೇ ಇದಕ್ಕೆ ಕಾರಣವಾಗಿದೆ. ನಿರಪರಾಧಿಗಳಿಗೆ ನ್ಯಾಯಾಲಯವು ಕವಚದಂತಿರುವುದೆಂಬ ವಿಶ್ವಾಸ ಹುಟ್ಟಿದರೆ ಕಾಯಿದೆ ಕಾನೂನುಗಳಿಗೆ ಮನ್ನಣೆ ಮರ್ಯಾದೆ ದೊರಕುವದು. ಇಂಥಾ ನಂಬಿಕೆಯು ನೈತಿಕ ಶಕ್ತಿಯ ಗುರಿಯನ್ನು ತೋರುವದಾದ್ದರಿಂದ ಜನರಲ್ಲಿ ಒಂದು ನೈತಿಕ ಮಟ್ಟವನ್ನು ಸ್ಥಾಪಿಸುವದು. ನ್ಯಾಯಾಲಯಗಳು ಕಾಯಿದೆಯನ್ನು ಯದ್ವಾತದ್ವ ಮತ್ತು ಅನ್ಯಾಯರೀತಿಯಲ್ಲಿ ಅಥವಾ ಬಲಹೀನವಾಗಿ ದುರುಪಯೋಗ ಮಾಡಿದರೆ ನಾವು ತಿನ್ನುವ ಉಪ್ಪು ಜದರ ಸಾರ ಮತ್ತು ಸತ್ವವನ್ನು ಕಳಕೊಂಡಂತೆಯೇ ಸರಿ ಎಂದು ಭಾವಿಸಬೇಕು. ಇಂಥಾ ರಾಷ್ಟ್ರದಲ್ಲಿ ಶಾಂತಿ, ನೆಮ್ಮದಿ ಮತ್ತು ಭದ್ರತೆ ಇಲ್ಲದಂತಾಗುವದು. ನ್ಯಾಯಾಲಯಗಳಿಗೆ ಮಾನ್ಯತೆ ದೊರೆಯದು. ಕಾನೂನುಗಳನ್ನುಲ್ಲಂಘಿಸುವರೆ ಜನರು ಹಿಂಜರಿಯರು. ನಿಷ್ಪಕ್ಷಪಾತದ ತೀರ್ಮಾನವು ನಿಶ್ಚಯವಾಗಿಯೂ ಸಿಕ್ಕುವುದೆಂಬ ಭರವಸೆಯಿಂದಲೇ ಹೊರತು ನ್ಯಾಯಾಲಯವು ವಿಧಿಸುವ ಕಠಿಣ ಶಿಕ್ಷೆಗಳಿಂದ ಕಾನೂನುಗಳಿಗೆ ಜನರ ಮನ್ನಣೆ ದೊರೆಯುವದಲ್ಲವೆಂಬುದನ್ನು ನಾವು ಮರೆಯಬಾರದು. ನಿಂದ್ಯಾಸ್ಪದವಾದ ಕಾನೂನುಗಳು ಎಷ್ಟು ಕಠಿಣ ಶಿಕ್ಷೆ ... ವಿಧಿಸುವದಾದರೂ ಜನರದನ್ನು ಮುರಿಯಲು ಹೆದರುವುದಿಲ್ಲ. ದೀಪವು ಕತ್ತಲೆಯಲ್ಲಿ ನೊಂದಿಹೋದರೆ ಆ ಕತ್ತಲೆಯು ಹೇಗೆ ಮತ್ತಷ್ಟು ಅಂಧಕಾರವಾಗಿ ಪರಿಣಮಿಸುವದೋ ಹಾಗೆಯೇ ನ್ಯಾಯಾಲಯಗಳಲ್ಲಾಗುವ ತೀರ್ಮಾನಗಳು ಅಷ್ಟ ದಾರಿಹಿಡಿದರೆ ನಮಗಾಗುವದು.

ಎಲ್ಲ ದೇಶಗಳಲ್ಲಿಯೂ ಸಿವಿಲ್ ಮತ್ತು ಕ್ರಿಮಿನಲ್ ವ್ಯವಹರಣೆ ಮತ್ತು ಮೊಕದ್ದಮೆಗಳು ರಾಜಕೀಯ ವಿಚಾರವನ್ನು ಹೊಂದಿ ಉಂಟಾಗುವವು. ಪಕ್ಷಗಳು ವಾತ್ಸಲ್ಯ ಮತ್ತು ಪಕ್ಷಪಾತಗಳನ್ನುಂಟುಮಾಡುವವು. ಅನೇಕಸಮಯ ಸರಕಾರ ಕಮ್ಯುನಿಸಂಘ, ಸೌಂಸ್ಥೆ, ಪಕ್ಷ ಮತ್ತು ವ್ಯಕ್ತಿಗಳಿಗೂ ಬಿಕ್ಕಟ್ಟ ಜಿಜ್ಞಾಸೆ ಬರುವದುಂಟು. ಇಂಥಾ ಸಂದರ್ಭಗಳಲ್ಲಿ ನ್ಯಾಯಾಧೀಶರು ತಮ್ಮ ಧೈರ್ಯ ಸ್ಥೈರ್ಯ ನೀತಿ ಪರತೆಯಿಂದ ರಾಷ್ಟ್ರಕ್ಕೆ ಪ್ರಯೋಜನಕಾರಿಯಾಗುವರು. ಕಾನೂನುಗಳ ಕುರಿತು ಅವರು ಮಾಡುವ ಟೀಕೆ ಟಿಪ್ಪಣಿ ಮತ್ತು ಅವರ ಭಾಷ್ಯ ವಿವರಣೆಯನ್ನು ಹೊಂದಿ ಕೊಡುವ ತೀರ್ಮಾನಗಳಿಗೆ ಜನರು ಮರ್ಯಾದೆ ಮತ್ತು ಗೌರವವನ್ನು ಕೊಡುವರು.

ಬರಹರೂಪದ ರಾಜ್ಯ ಶಾಸನವಿರುವ ರಾಷ್ಟ್ರಗಳಲ್ಲಿ ರಾಜ್ಯಾಂಗದ ಅಧಿಕಾರಗಳೆಷ್ಟೆಷ್ಟು ಇವೆ ಎಂಬ ವಿವರ ಸ್ಪಷ್ಟವಾಗಿರುವದು. ಅಲ್ಲಿ ನ್ಯಾಯಾಲಯವು ಸರಕಾರದ ಇತರ ಇಲಾಖೆಯಂತೆಯೇ ಸರಿಸಮಾನ ಹಕ್ಕಿರುವ ಒಂದು ಶಾಖೆಯಾಗಿರುವದು. ಸಂಯುಕ್ತ ರಾಷ್ಟ್ರ ಅಥವಾ ಇತರ ದ್ವೈತ ರಾಷ್ಟ್ರಗಳಲ್ಲಿ ರಾಜ್ಯಶಾಸನವನ್ನು ಭಾಷ್ಯಮಾಡಿ ನಿಬಂಧನೆಗಳ ನಿಜವಾದ ಅರ್ಥಮಾಡಿ ಅಧಿಕೃತವಾಗಿ ಹೇಳುವ ಹಕ್ಕು ಅದಕ್ಕಿದೆ. ಯಾವ ಯಾವ ಇಲಾಖೆಗೆ ಎಷ್ಟರಮಟ್ಟಿನ ಅಧಿಕಾರವಿದೆ ಯಾವ ಕಾನೂನು ರಾಜ್ಯ ಶಾಸನಕ್ಕೆ ವಿರೋಧವಾದ್ದು ಯಾವದು ನ್ಯಾಯ ಸಮ್ಮತವಾದ್ದು ಎಂದು ತೀರ್ಮಾನಿಸುವ ಹಕ್ಕು ಇದೆ ಮಾತ್ರವಲ್ಲ ಕರ್ತವ್ಯವೇ ಆಗಿದೆ.

ಯಾವ ರಾಷ್ಟ್ರದಲ್ಲಾದರೂ ನ್ಯಾಯಾಧೀಶರಲ್ಲಿ ತಿಳುವಳಿಕೆ, ಬುದ್ಧಿಸಾಮರ್ಥ್ಯ, ಧೈರ್ಯ, ಸ್ಥೈರ್ಯ, ಕಾರ್ಯನಿಷ್ಠತೆ ಮತ್ತು ಸ್ವಾತಂತ್ರ್ಯ ಇವೇ ಮೊದಲಾದ ಗುಣಗಳು ಬೇಕು. ಇಂಥಾ ಗುಣಗಳಿರಬೇಕಾದರೆ ಈ ಯೋಗ್ಯತೆಗಳುಳ್ಳ ಜನರು ... ದಕ್ಕೆ ಸೇರಿ ಬರುವಂತೆ ತಕ್ಕ ಅನುಕೂಲತೆಗಳು, ಸವಲತ್ತುಗಳು, ಪ್ರೋತ್ಸಾಹಗಳು ಬೇಕು. ಈ ಸ್ಥಾನಕ್ಕೆ ಯಾರೊಬ್ಬರ ಹಂಗೀಕರಣೂ ಅಲ್ಲದ ಯೋಗ್ಯನನ್ನು ಹುಡುಕಿ ಹೆಕ್ಕಿ ಆರಿಸುವರು. ಇತರರ ಸಹಾಯದಿಂದ ಉಚಿತ ಅಥವಾ ಉಡುಗರೆಯಾಗಿ ನೇಮಕಪಟ್ಟವರಾಗಬಾರದು. ನಿಷ್ಪಕ್ಷಪಾತದಿಂದ ಬರೇ ಯೋಗ್ಯತೆಯನ್ನೇ ಹೊಂದಿ ನೇಮಕಪಟ್ಟವರಾಗಬೇಕು. ನ್ಯಾಯಾಧೀಶರ ತಲಬು ಜಾಸ್ತಿಯಾಗಿರಬೇಕು ಮತ್ತು ನಿಶ್ಚಯವಾಗಿರಬೇಕು. ಅದನ್ನು ಖಂಡಿತ ಮಾಡಲಿಕ್ಕೆ ಯಾರಿಗೂ ಅಧಿಕಾರವಿರಬಾರದು. ಜಡ್ಜಿ ಮಾಡುವದರೆ ಯಾವ ಅಧಿಕಾರಿಯನ್ನೂ ಹೊಂದಿರಬಾರದು. ನ್ಯಾಯಾಧೀಶರ ಅಧಿಕಾರ ಸ್ಥಿರತೆ ಬೇಕು. ಪ್ರಾಯದಿಂದ ಮತ್ತು ಅನಾರೋಗ್ಯದ ನಿಮಿತ್ತಗಳೇ ಹೊರತು ಇತರ ಪ್ರತಿಬಂಧಕಗಳಿರಬಾರದು.

ಲೋಕದಲ್ಲಿ ನ್ಯಾಯಾಧೀಶರನ್ನು ಇ... ಕೆಳಗೆ ಹೇಳಿದ ಮೂರು ಕಾರಣಗಳಿಂದ ರಲ್ಲಿ ಯಾವದಾದರೊಂದನ್ನನುಸರಿಸಿ ಪ್ರಜಾಸತ್ತಾತ್ಮಕ ರಾಷ್ಟ್ರಗಳಲ್ಲಿ ನೇಮಿಸುವರು. ಅಧಿಕಾರಿ ಮಂಡಳಿಯ ಮುಖ್ಯಸ್ಥನಿಂದ ನೇಮಿಸಲ್ಪಡುವದೊಂದು ಕ್ರಮ. ಪ್ರತಿನಿಧಿ ಸಭೆಯವರಿಂದ ಚುನಾಯಿಸಲ್ಪಡುವದು ಇನ್ನೊಂದು ಕ್ರಮ. ಸಾರ್ವಜನಿಕ ಮತದಾರರಿಂದ ಚುನಾಯಿಸಲ್ಪಡುವದು ಮತ್ತೊಂದು ಕ್ರಮ. ಸ್ವಿಜರ್ಲೇಂಡಿನಲ್ಲಿ ಈ ಮೂರನೇ ಕ್ರಮವನ್ನೇ ಅನುಸರಿಸಿ ನಡೆಸುವರು ಮತ್ತು ಅಮೇರಿಕದ ಕೆಲವು ಪ್ರಾಂತಗಳಲ್ಲಿ ಸಹಾ ಚುನಾವಣಾ ಕ್ರಮವೇ ರೂಢಿಯಾಗಿರುವದು. ಈ ಎರಡು ಕಡೆಗಳ ಪೈಕಿ ಸ್ವಿಜರ್ಲೇಂಡಿನಲ್ಲಿ ಉತ್ತಮವೆನಿಸಿ ಜನರ ಮೆಚ್ಚುಗೆಗೆ ಆಸ್ಪದವಾಗಿರುವದು. ಸ್ವಿಜರ್ಲೇಂಡಿನಲ್ಲಿ ಉತ್ತಮವಾದ ಕ್ರಮವು ಅಮೇರಿಕದಲ್ಲಿ ನಿಕೃಷ್ಟವಾಗಲು ಕಾರಣವೇನೆಂದು ಸ್ವಲ್ಪ ಆಲೋಚಿಸಬೇಕಾಗಿದೆ.

ಸಿ. ಎಚ್. ಸೆಟ್ಟಿ ಬಿ. ...

[ಮುಂದರಿಯುವುದು]

ಶಿರ್ವ ಪಂಚ್ಯಾತ್ ಬೋರ್ಡ್ ಪ್ರೆಸಿಡೆಂಟರಿಂದ ನೋಟೀಸು

ಶಿರ್ವ ಪಂಚ್ಯಾತ್ ಬೋರ್ಡಿಗೆ ಒಳಪಟ್ಟ ಮಂಚಕಲ್ಲು ಸಂತೆಮಾರ್ಕೆಟನಲ್ಲಿ ಮತ್ತು ದಿನಚರಿ ಮಾರ್ಕೆಟನಲ್ಲಿ ತಾ. 1-4-52ರಿಂದ 31-3-53ರ ವರೇಗೆ ವಸೂಲು ಮಾಡುವ ಸ್ವತಂತ್ರವನ್ನು ಇದೇ ಮಾರ್ಚ ತಿಂಗಳ ತಾರೀಕು 22ರಲ್ಲು ಸಾಯಂಕಾಲ ಗಂಟೆ 4ಕ್ಕೆ ಪಂಚ್ಯಾತ್ ಬೋರ್ಡ್ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು. ಷರ್ತ ಇತ್ಯಾದಿ ವಿವರಗಳನ್ನು ಆಫೀಸು ನೋಟೀಸು ಬೋರ್ಡಿನಲ್ಲಿ ಯಾ ಆಫೀಸಿನಲ್ಲಿ ತಿಳಕೊಳ್ಳಬಹುದು ಎಂಬ ಸಂಗ್ರಿ ಉವೇದ್ದಾರ ಹಾಗೂ ಸಮಸ್ತ ಜನರಿಗೆ ಈ ಮೂಲಕ ತಿಳಿಸಲಾಗುತ್ತದೆ.

ಯಸ್. ಅಣ್ಣಯ್ಯ ಹೆಗ್ಡೆ,
ಪ್ರೆಸಿಡೆಂಟ್,
ಪಂಚ್ಯಾತ್ ಬೋರ್ಡ್ ಶಿರ್ವ.

ಶಿರ್ವ, 19-2-52

ZANDU PHARMACEUTICAL WORKS LTD.

Manufacturers of Ayurvedic and Alopathic Medicines BOMBAY, 14

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ 1 ತೊಲೆಗೆ ರೂ 3/- ಮಾತ್ರ.

ದೊರೆಯುವ ಸ್ಥಳಗಳು:

1. ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ
2. ಶ್ರೀ ವಿ ವಿ. ಶೆಣೈ, ಕೆಮಿಸ್ಟ್, ಕಾರ್ಕಳ.
3. ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು
4. ಎಲ್ ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

DAMODAR & CO.,

Nainiappa Naicken Street, Park Town-**MADRAS** 3.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಉತ್ತುಗೆ, ಭುಜ ಹಲ್ಲು ವೇದನೆಗಳಿಗೂ, ಎ... ನೋವು,ಘಾಯಗಳು, ಜಂತುಕೊಳ್ಳುವುದು ಚೇಳವಿಷಮುಂತಾದವು, ಪಕ್ಷವಾತ,ಮೊಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌ...

REGD

ಹುಳು ...
ಮುದ್ದು ...
ನಮ್ಮಲ್ಲಿ ...
ಸಿಕ್ಕುತ್ತ ...

ಅಮೃತಾಂಜನ ಲಿಮಿಟೆ...

ಮದರಾಸು, ಬೊಂಬಾಯಿ ಮತ್ತು ಕಲ್...

75

ಅಂತರಂಗದ ಕಥೆ, ಕಾದಂಬರಿ, ನಾಟ... ಕವಿತೆ, ಚಿತ್ರ ಪ್ರಬಂಧ ಮೊದಲ... ನಾನಾ ಬಗೆಯ 75 ಪುಸ್ತಕಗಳ ಒಟ್ಟಿಗೆ ರೂ. 20ಕ್ಕೆ ಕೊಡಲಾಗುವು...

ಕೆಟಲಾಗಿಗೆ ಬರೆಯಿರಿ:—ಅಂತರಂಗ ಆಫೀ... ಉಡುಪಿ, ಅಥವಾ ನವಭಾರತ ಬ... ಡಿಪೋ, ಉಡುಪಿ

ಆರ್ಥಿಕ ಅಡಚಣೆ ಭಾರತದಲ್ಲಿ ಮಾತ್ರವಲ್ಲ

ಆರ್ಥಿಕ ಅಡಚಣೆಯು ಭಾರತ ದೇಶದಲ್ಲಿ ಮಾತ್ರವಲ್ಲದೆ ಇಂಗ್ಲೆಂಡ ಮುಂತಾದ ರಾಷ್ಟ್ರಗಳಲ್ಲೂ ಉದ್ಭೂತವಾಗಿದೆ. ನಮ್ಮ ದೇಶದಲ್ಲುಂಟಾದ ಧಾರಣೆಯ ಇಳಿತದ ಪರಿಣಾಮವಾಗಿ ವಿದೇಶೀಯ ರಾಷ್ಟ್ರಗಳ ಧಾರಣೆಯಲ್ಲೂ ಆರ್ಥಿಕ ವಿಚಾರದಲ್ಲೂ ಪರಿಣಾಮ ಉಂಟಾಗಿದೆ. ಬ್ರಿಟನ್ನಿನ ಕಾಮನ್ಸ ಸಭೆಯಲ್ಲಿ ಮಂಡಿಸಿದ ಮುಂಗಡ ಪತ್ರದಲ್ಲಿ ಬ್ರಿಟನ್ನು ತನ್ನ ವೆಚ್ಚದಲ್ಲಿ ಹೆಚ್ಚಿನ ಕಡಿತವನ್ನುಂಟುಮಾಡಿಕೊಂಡು ಹಾಸಿಗೆಯಿದ್ದಷ್ಟೇ ಕಾಲು ಚಾಚಬೇಕೆಂಬ ನೀತಿಯನ್ನು ತೋರಿಸಿಕೊಟ್ಟಿದೆ. ಹಿಂದಿನ ವರ್ಷಕ್ಕಿಂತ 12 ಕೋಟಿ ಸ್ಟರ್ಲಿಂಗುಗಳನ್ನು ವೆಚ್ಚದಲ್ಲಿ ಕಡಿಮೆಮಾಡಿಕೊಳ್ಳಲಾಗಿದೆ. ಭಾರತದಲ್ಲಿ ವಸ್ತುಗಳ ಧಾರಣೆಯು ತಗ್ಗುತ್ತಿದ್ದರೆ ಇಂಗ್ಲೆಂಡದಲ್ಲಿ ವಸ್ತುಗಳ ಮತ್ತು ಜೀವನಾವಶ್ಯಕ ವಸ್ತುಗಳ ಕ್ರಯವು ಏರುತ್ತ ಬಂದಿದೆ. ಕಳೆದ ಜೂನದಿಂದ ಇಂಗ್ಲೆಂಡವು ತನ್ನ ಶಿಲ್ಕಿನಲ್ಲಿ ಸುಮಾರು 200 ಡಾಲರುಗಳನ್ನು ಕಳೆದುಕೊಂಡಿದೆ.

ಆಹಾರಕ್ಕಾಗಿ ಕೊಡುತ್ತಿದ್ದ ಸಹಾಯಧನವನ್ನು 25 ಕೋಟಿ ಪೌಂಡುಗಳಿಗೆ ಇಳಿಸಲಾಗುವದೆಂದು ಆರ್ಥಿಕ ಮಂತ್ರಿ ಬಟ್ಲರರು ಸಾರಿರುವರು. ಪೆಟ್ರೋಲ್ ಧಾರಣೆಯಲ್ಲಿ ಹೆಚ್ಚಳವಾಗಿದೆ. ಮಾಂಸ ಬ್ರೆಡ್, ಹಾಲಿನ ಬೆಲೆಯನ್ನು ಏರಿಸಿರುವದರಿಂದ ಒಂದು ವಾರಕ್ಕೆ ಬ್ರಿಟಿಶ ನಾಗರಿಕನ ಆಹಾರ ವೆಚ್ಚವು 1½ ಶಿಲ್ಲಿಂಗಿನಷ್ಟು ಹೆಚ್ಚಿದಂತಾಗುವದು.

ಬ್ರಿಟನ್ನಿನ ಆರ್ಥಿಕ ನೀತಿಯಲ್ಲಿ ಇಷ್ಟು ಬದಲಾವಣೆಯಾಗಲು ಏನು ಕಾರಣ? ಹೌದು ಬ್ರಿಟನ್ನು ವಾದರೋ ನಿರ್ಯಾತ ವಸ್ತುಗಳ ಮೇಲೆ ಹೆಚ್ಚಿನ ಧಾರಣೆಯನ್ನುಂಟುಮಾಡಿ ವಿದೇಶೀಯ ರಾಷ್ಟ್ರಗಳ ಸುಲಿಗೆಯನ್ನು ಮಾಡುತಿತ್ತು! ಇಂದು ಪ್ರತಿಯೊಂದು ರಾಷ್ಟ್ರಗಳೂ ಸ್ವಾವಲಂಬನ ಧೋರಣವನ್ನು ವಹಿಸುತ್ತಿದ್ದು ದೇಶದ ಜನ ಜೀವನ ಮಟ್ಟವನ್ನು ಏರಿಸುವಲ್ಲಿ ಜಾಗ್ರತೆಯನ್ನು ವಹಿಸಿವೆ. ಆಸ್ಟ್ರೇಲಿಯವು ಮೋಟಾರು ಬಟ್ಟೆ ಮೊದಲಾದ ಬ್ರಿಟನ್ ಸರಕುಗಳ ಆಯಾತದಲ್ಲಿ 20 ರಿಂದ 80 ರವರೆಗೆ ಕಡಿತವನ್ನುಂಟುಮಾಡಿದೆ. ಕಾಮನವೆಲ್ತ ರಾಷ್ಟ್ರಗಳಿಂದ ಬರಬೇಕಾದ ತವರು, ರಬ್ಬರು, ಉಣ್ಣೆ ಮುಂತಾದ ವಸ್ತುಗಳ ಧಾರಣೆ ಅತಿಯಾದ್ದರಿಂದಲೂ ಬ್ರಿಟನ್ನಿಕ್ಕೆ ಬಲವಾದ ಪೆಟ್ಟು ಬಿತ್ತು! ಈ ವಸ್ತುಗಳನ್ನು ನಿರ್ಯಾತ ಮಾಡುವ ಕಾಮನವೆಲ್ತ ರಾಷ್ಟ್ರಗಳಲ್ಲಿ ಭಾರತವು ಪ್ರಧಾನವಾಗಿದೆಂದು ನಾವು ಮರೆಯಬಾರದು! ಆಯಾತ ವಸ್ತುಗಳ ಧಾರಣೆ ಹೆಚ್ಚಿದಂತೆ ಬ್ರಿಟನ್ನಿನ ವಸ್ತುಗಳಾದರೋ ಎಣಿಸಿದಷ್ಟು—ಅಥವಾ ಆಯಾತ ಮಾಡಿಕೊಂಡ ವಸ್ತುಗಳ ಪರಿಮಿತಿಯನ್ನು ಹೊಂದಿಕೊಂಡು ನಿರ್ಯಾತವಾಗಲಿಲ್ಲ! ಎಲ್ಲಾ ರಾಷ್ಟ್ರಗಳೂ ಸ್ವಾವಲಂಬನ ಧೋರಣವನ್ನು ವಹಿಸಿದ್ದರ ದ್ಯೋತಕವಿದು! ಭಾರತದೇಶದ ಮಾರ್ಕೆಟಿನಲ್ಲಿ ಇಳಿಯುತ್ತಿರುವ ಧಾರಣೆಯ ಪರಿಣಾಮವೂ—ನಿರ್ಯಾತ ವಸ್ತುಗಳನ್ನು ಭಾರತವು ಅತಿಯಾಗಿ ಕಡಿಮೆ ಮಾಡಿಕೊಂಡದ್ದರಿಂದಲೂ ಬ್ರಿಟನಕ್ಕೆ ಭಾರತದಿಂದಾಗಿಯೂ ತುಂಬ ಆರ್ಥಿಕ ಹಾನಿಯಾದೆ.

> "ಶಿಕ್ಷಿತ ತರುಣಿಯರು ವಿವಾಹವಾಗುವ ಮೊದಲು ಶಿಕ್ಷಕಿಯಾಗಿ ಆಗಲಿ, ದಾದಿಯಾಗಿ ಆಗಲಿ, ಡಾಕ್ಟರರಾಗಿಯಾಗಲಿ ಮೂರು ವರ್ಷಗಳ ವರೆಗೆ ಸಮಾಜಕ್ಕೆ ಸೇವೆ ಸಲ್ಲಿಸಬೇಕು. ವಿವಾಹವೊಂದೇ ಜೀವನದ ಧ್ಯೇಯವಲ್ಲ. ಮದುವೆಯಾದ ಮೇಲೂ ಸ್ತ್ರೀಯರು ಶಕ್ತಿಯಿಂದಾದಷ್ಟು ಸಮಾಜಸೇವೆ ಮಾಡಲಿ"
>
> —ರಾಜಕುಮಾರಿ ಅಮೃತಕೌರ್

[೧ನೇ ಪುಟದಿಂದ ಮುಂದುವರಿದುದು]

ವಿಮಿಶ್ರ ಮಾತ್ರವಾಗಿ ಸ್ವೀಕರಿಸದೆ ಮನಃಪೂರ್ವಕವಾಗಿ ಕೈಕೊಂಡರೆ, ಮೊದಲು ಸ್ವಲ್ಪ ಕ್ಲೇಶವಾಗಬಹುದು. ಆದರೆ ಈ ಜೀವನಪಥದಲ್ಲಿ ಮುಂದರಿದಂತೆ ಈ ವರೆಗೆ ಕಾಣದಂಥ ಸುಖ ಸಂತೋಷಗಳು ಆದರಲ್ಲಿ ಗೋಚರಕ್ಕೆ ಬಂತೊದವು. ಪಾಶ್ಚಾತ್ಯ ದೇಶಗಳಲ್ಲಿ ಮಧ್ಯಮ ವರ್ಗದವರು ಈಗಲೂ ಈ ಪಥ್ಯವ ಸಂತೋಷದಿಂದಲೂ ಹೆಮ್ಮೆಯಿಂದ ಅನುಸರಿಸುತ್ತಿದ್ದಾರೆ.

ರಾಜಕೀಯ ಸ್ವಾತಂತ್ರ್ಯವಾಗಲಿ ರಾಜಕೀಯ ಪ್ರಜಾಸತ್ತೆಯಾಗಲಿ ನೈಜ ಸುಖಕ್ಕೆ ಸಾಲದು. ಎಲ್ಲ ರೀತಿಯಿಂದಲೂ ನಾವು ಸಮಾನತೆಯನ್ನು ಸಾಧಿಸಬೇಕು. ನಾವೆಲ್ಲರೂ ದೇಹಶ್ರಮಕ್ಕೆ ಅನುವಾದಲ್ಲದೆ ಪ್ರಜಾಸತ್ತೆಗೆ ಸ್ಥೈರ್ಯಬಾರದು. ಕೆಲಸದಲ್ಲಿ ಗೌರವ ತಾರತಮ್ಯವಿರಕೂಡದು. ಎಲ್ಲ ಕೆಲಸಗಳಿಗೂ ಸಮಗೌರವವಿರಬೇಕು; ಅವೆಲ್ಲ ಸಂಸಾರ ದೇವತೆಯ ಅರ್ಚನೆಯಲ್ಲಿ ವಿವಿಧಾಂಗಗಳೆಂದು ಬಗೆಯಬೇಕು. ಇಲ್ಲದಿದ್ದರೆ ದುಡಿಯಲು ಮನವೊಪ್ಪದರ ಆಳಿಕೆಗೆ ನಾವು ಬಗ್ಗಬೇಕು. ಆಗ ನಮ್ಮ ಜೀವನವೇ ಪರವಶವಾಗುತ್ತದೆ.

ಭಾವಿ ಮಧ್ಯಮ ವರ್ಗವು ಜನ್ಮ ಮೂಲಕ ಸಿದ್ಧವಾಗದೆ ಕರ್ಮಮೂಲಕ ಸಿದ್ಧವಾಗಲಿದೆ. ದೇಹಶ್ರಮ ಮಾಡುವವರಲ್ಲಿಯೇ ನೈಪುಣ್ಯದಿಂದ ಸ್ಥಾನ ಗೌರವವನ್ನು ಹೊಂದಿದವರು, ಜ್ಞಾನ ಸಂಪಾದನೆ ಮಾಡಿದವರು, ಯೋಚಿಸಿ, ದಾರಿದೋರಿಸಿ, ಕಲಿಸಬಲ್ಲವರು ಮುಂದಿನ ಮಧ್ಯಮ ವರ್ಗ; ತಮ್ಮ ಸ್ವಂತ ಯೋಗ್ಯತಾನುಗುಣವಾಗಿ, ಪ್ರತ್ಯಕ್ಷಫಲವಾಗಿ ಅವರು ಮೇಲೇರಬಹುದು, ಕೆಳಗಿಳಿಯಬಹುದು; ಆದರೆ ಜನ್ಮದಿಂದಲೇ ಸ್ಥಾನಗೌರವವನ್ನು ಸಂಪಾದಿಸುವುದು ಇನ್ನು ಸಾಧ್ಯವಿಲ್ಲ.

ಜನ್ಮಮೂಲವಾದ ಇಂದಿನ ಮಧ್ಯಮ ವರ್ಗದ ರಚನೆ ಹೋಗಬೇಕು. ಇದನ್ನು ಸ್ವೇಚ್ಛೆಯಿಂದ ಸಾಧಿಸಲು ಸಾಧ್ಯವಿದೆ; ಅದು ಇಷ್ಟವೂ ಹೌದು. ಇದು ನಮ್ಮ ಶಾಲೆ ಕಾಲೇಜುಗಳಲ್ಲಿ ಅಧ್ಯಾಪಕರ ನೇತೃತ್ವದಲ್ಲಿ ಪ್ರಾರಂಭವಾಗಲಿ ಡಂಭ ಮತ್ತು ದುರಹಂಕಾರಕ್ಕೆ ಅವರು ತಡೆ ಹಾಕಲಿ.

ಭಾರತದಲ್ಲಾದ ವಿಮಾನಾಪಘಾತಗಳೆಷ್ಟು?

ಭಾರತದ ನಾಗರಿಕ ವಿಮಾನ ಸಾರಿಗೆಯ 1951ನೇ ವರುಷದ ವರದಿ ಈಗ ಪ್ರಕಟಗೊಂಡಿದೆ. 51ನೇ ವರ್ಷದಲ್ಲಿ ಒಟ್ಟಿಗೆ 83 ವಿಮಾನಾಪಘಾತಗಳು ನಡೆದಿದ್ದು ಇದರಿಂದಾಗಿ 24 ಜನರು ಸಾವಿಗೆ ತುತ್ತಾಗಿರುವರು. 29 ವಿಮಾನಗಳು ಸಂಪೂರ್ಣ ನಾಶಗೊಂಡಿವೆ. ನಾಗರಿಕ ವಿಮಾನ ಸಾರಿಗೆ ಸೌಲಭ್ಯ ವಿಸ್ತರಣೆಗೆ 1952-53 ರಲ್ಲಿ 1850000 ರೂ ವೆಚ್ಚಮಾಡಬೇಕೆಂದು ಮುಂಗಡ ಪತ್ರದಲ್ಲಿ ಸೂಚಿಸಲಾಗಿದೆ. ಗತವರ್ಷದಲ್ಲಿ ಮಂಗಳೂರು ವಿಮಾನ ನಿಲ್ದಾಣವನ್ನೊಳಗೊಂಡು ಒಟ್ಟು ಆರು ವಿಮಾನ ನಿಲ್ದಾಣಗಳು ತೆರೆಯಲ್ಪಟ್ಟಿವೆ. ದಾವಣಗೆರೆ, ಹುಬ್ಬಳ್ಳಿ, ಮತ್ತು ಧರ್ಮ ನಗರದಲ್ಲಿ ವಿಮಾನ ನಿಲ್ದಾಣವನ್ನು ತೆರೆಯುವದರ ಸಲುವಾಗಿ ಮುಂಗಡದಲ್ಲಿ ಹಣವನ್ನು ತೆಗೆದಿಡಲಾಗಿದೆ.

ಚೀನಕ್ಕೆ ಭಾರತದ ಸದ್ಭಾವ ಶಿಷ್ಟಮಂಡಳ

ಭಾರತದ ಸದ್ಭಾವ ಮತ್ತು ಸಾಂಸ್ಕೃತಿಕ ಶಿಷ್ಟ ಮಂಡಳವೊಂದು ಚೀನಕ್ಕೆ ಎಪ್ರಿಲ್ ತಿಂಗಳ ಮಧ್ಯಕ್ಕೆ ತೆರಳಲಿರುವದು. ನಾಲ್ಕು ವಾರಗಳಲ್ಲಿ ಅಲ್ಲಿ ಸಂಚಾರ ಕೈಕೊಳ್ಳಲಿದೆ. ಈ ಶಿಷ್ಟ ಮಂಡಳದ ಧುರೀಣತ್ವವನ್ನು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ವಹಿಸುವರೆಂದು ಗೊತ್ತಾಗಿದೆ.

> "ದೇವರು ನಮಗೆ ಕಡಿಮೆ ಮಾತಾಡುವ ಮಂತ್ರಿಗಳನ್ನೂ, ಸವಿಯಾಗಿ ಮಾತಾಡುವ ಸ್ತ್ರೀಯರನ್ನೂ, ಅಲ್ಪ ಲಾಭದಿಂದ ಸಂತೃಪ್ತರಾಗುವ ವರ್ತಕರನ್ನೂ, ಇಷ್ಟಪಟ್ಟು ಕೆಲಸಮಾಡುವ ಕೆಲಸಗಾರರನ್ನೂ ಕೊಡಲೆಂದೇ ನನ್ನ ಪ್ರಾರ್ಥನೆ"
>
> —ಮಂತ್ರಿ ಗಾಡಗೀಳ

ಗ್ಯಾರಂಟೀಯಾದ ಶುಚಿತ್ವ

ಗ್ಯಾರಂಟೀಯಾದ ಶುದ್ಧತೆ

ಅಗ್ಗವಾಗಿ ಸಿಗುವ ಮತ್ತು ಪೊಟ್ಟಣಗಳಲ್ಲಿ ಕಟ್ಟಿಇಡುವ ಚಹಗಳನ್ನು ಕೊಂಡು ವೃಥಾ ಏಕೆ ನಷ್ಟಕ್ಕೆ ಒಳಗಾಗುವಿರಿ ಪ್ರತಿಯೊಂದು ಬ್ರೂಕ್ ಬಾಂಡ್ ಪೊಟ್ಟಣದಲ್ಲಿರುವ ಚಹವು ರುಚಿ ಮತ್ತು ಶುದ್ಧತೆಯ ಭರವಸೆ ಕೊಡುವುದಲ್ಲದೆ ಮಲಿನವಾಗದ ಹಾಗೆ ಕಾಪಾಡಲ್ಪಡುತ್ತದೆ. ಪ್ರತಿಯೊಂದು 2 ಔನ್ಸ್ ಪೊಟ್ಟಣದಿಂದ 30 ನೊರೆ ಕಪ್ಪುಗಳಿಗೆ ಆಗುವಷ್ಟು ಚಹ ಮಾಡಬಹುದು

ನೀವು ಉತ್ತಮ ಗುಣ ಮತ್ತು ಸ್ವಾದವನ್ನು ಅಪೇಕ್ಷಿಸುವಿರೇ ಆದರೆ ನೀವು ಕೊಳ್ಳಬೇಕಾದ್ದು

ಬ್ರೂಕ್ ಬಾಂಡ್ ಚಹಾ

BB 32/LOT/101

★ ಲೋಕಾಂತ ★

ಭಾರತದಲ್ಲಿ ಡಿ.ಡಿ.ಟಿ. ಕಾರಖಾನೆ

ಭಾರತದಲ್ಲಿ ಆರೋಗ್ಯ ಸಂಸ್ಥೆ, ಯು. ರಾ. ಸಂಘದ ಅಂತರ ರಾಷ್ಟ್ರೀಯ ಚಿಕ್ಕಮಕ್ಕಳ ನಿಧಿ ಮತ್ತು ಆಯಾ ಸರಕಾರಗಳ ಸಂಯುಕ್ತ ಪ್ರಯತ್ನದಿಂದ ಸಿಲೋನ, ಪಾಕಿಸ್ತಾನ, ಇಜಿಪ್ತ ಮತ್ತು ಭಾರತಗಳಲ್ಲಿ ಒಂದೊಂದು ಡಿ. ಡಿ. ಟಿ. ಕಾರಖಾನೆಗಳನ್ನು ಪ್ರಾರಂಭಿಸಲಿದ್ದು ಭಾರತದಲ್ಲಿ ಪ್ರಾರಂಭಿಸುವ ಬಗ್ಗೆ ಈಗಾಗಲೇ ಮಾತುಕತೆ ಪ್ರಾರಂಭವಾಗಿದೆಯೆಂದು ತಿಳಿಯುತ್ತದೆ. ಬಹ್ವಂಶ ಈ ಕಾರಖಾನೆಯು ಮುಂಬಯಿಯಲ್ಲಿ ಸ್ಥಾಪನೆಯಾಗಲಿರುವದು. ಭಾರತವು ಆರೋಗ್ಯ ಸಂಸ್ಥೆಯಿಂದ ಪ್ರತಿವರ್ಷ 700ಟನ್ ಡಿ. ಡಿ. ಟಿ. ಯನ್ನು ಪಡೆಯುತ್ತದೆ, ಭಾರತದಲ್ಲಿ ಈ ಕಾರಖಾನೆಯು ಸ್ಥಾಪನೆಯಾದನಂತರ ಇಷ್ಟನ್ನೂ ಅದೇ ಕಾರ್ಖಾನೆಯಿಂದ ಉತ್ಪಾದಿಸಬಹುದು. ಇದಕ್ಕೆ ಬೇಕಾಗುವ ಬೆಂಜೀನ್, ಕ್ಲೋರಿನ್ ಮತ್ತು ಗಂಧಕಗಳು ಭಾರತದಲ್ಲಿ ದೊರೆಯುತ್ತಿದ್ದು ಗಂಧಕಾಮ್ಲವನ್ನು ಮಾತ್ರ ವಿದೇಶದಿಂದ ತರಿಸಿಕೊಳ್ಳಬೇಕಾಗುವದು.

ಕೊಚ್ಚಿ ಕಾಂಗ್ರೆಸ್ ಮಂತ್ರಿ ಮಂಡಳದಲ್ಲಿ ಯಾರು ಯಾರು?

ತಿರುವಾಂಕೂರ ಕೊಚ್ಚಿ ಶಾಸನ ಸಭೆಯಲ್ಲಿ ಕಾಂಗ್ರೆಸ ಪಕ್ಷದ ಧುರೀಣರಾದ ಶ್ರೀ ಎ. ಜೆ. ಜಾನರು ತಮ್ಮ ಹೊಸಮಂತ್ರಿ ಮಂಡಳದ ಹೆಸರನ್ನು ರಾಜ ಪ್ರಮುಖರಿಗೆ ಒಪ್ಪಿಸಿರುವರು. 6 ನೂತನ ಮಂತ್ರಿಗಳ ಹೆಸರು ಇಂತಿವೆ. 1) ಎ. ಜೆ. ಜಾನ 2) ಟಿ. ಎಂ. ವರ್ಘೀಸ 3) ಪಾನಪಳ್ಳಿ ಗೋವಿಂದ ಮೆನನ್ 4) ಕಾಲಥಿಲ್ ವೇಲಾಯುಧನ್ ನಾಯರ 5) ವಿ. ಮಾಧವನ್ 6) ಕೊಚ್ಚುಕುಟ್ಟನ್.

ಕೊರಿಯ ಕಮ್ಯುನಿಸ್ಟರೊಡನೆ ರಶಿಯದ ಶಸ್ತ್ರಾಸ್ತ್ರಗಳು?

ಕೊರಿಯ ಯುದ್ಧರಂಗದಲ್ಲಿ ಹೋರಾಟ ನಡೆಸುತ್ತಿರುವ ಕಮ್ಯೂನಿಸ್ಟ ಯೋಧರ ಬಹುಮಟ್ಟಿನ ಯುದ್ಧೋಪಕರಣಗಳು ರಶಿಯದವುಗಳಾಗಿವೆಯೆಂದು ಸಂ. ರಾ. ಸಂ [illegible] ಒಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ.

ಭಾರತದಲ್ಲಿ ಜಾಪಾನೀ ಶಿಷ್ಟಮಂಡಳ

ಜಾಪಾನೀ ಶಿಷ್ಟಮಂಡಳವೊಂದ 5 ವಾರ ಭಾರತ ಸಂಚಾರ ಕೈಕೊಂಡಿದ್ದು ಭಾರತದ ಔದ್ಯೋಗೀಕರಣಕ್ಕೆ ಯಾವ

ರೀತಿಯ ಸಹಾಯ ನೀಡಬಹುದೆಂದು ಪರ್ಯಾಲೋಚಿಸುತ್ತಿದೆ. ಭಾರತದ ಪಂಚ ವಾರ್ಷಿಕ ಯೋಜನೆಯು ಯಶಸ್ವಿಯಾಗುವದರಲ್ಲಿ ನಮಗೆ ಆಸ್ಥೆಯಿದೆಂದು ಈ ನಿಯೋಗದವರು ಹೇಳಿರುವರು. ಜಪಾನವು ಭಾರತಕ್ಕೆ ವಿದ್ಯುಚ್ಛಕ್ತಿ ಉತ್ಪಾದನೆಯ ಉಪಕರಣಗಳು, ರೋಲಿಂಗ ಸ್ಟಾಕ ಸಂಪರ್ಕ ಉಪಕರಣಗಳು ಬಟ್ಟೆ ಗಿರಣಿಯ ಯಂತ್ರಗಳು ಉಕ್ಕು ಮತ್ತು ಕಣಿಯ ಯಂತ್ರಗಳು, ರಸಾಯನಗಳು ಮೊದಲಾದುವುಗಳನ್ನು ಕಳಿಸಲು ಸಿದ್ಧವಿದೆ

ಜಾಗತಿಕ ಕಥಾ ಸ್ಪರ್ಧೆಯಲ್ಲಿ ಭಾರತಕ್ಕೆ ವಿಜಯ

ಜಾಗತಿಕ ಕಥಾ ಸ್ಪರ್ಧೆಗೆ ಭಾರತದಿಂದ ಕಳಿಸಲ್ಪಟ್ಟ ಎರಡು ಕತೆಗಳಲ್ಲಿ ಮದ್ರಾಸದ ಭೀಮಾವರ ಶ್ರೀ ಪಿ ಪದ್ಮರಾಜು ಎಂಬವರ "ಸುಂಟರಗಾಳಿ" ಎನ್ನುವ ಕತೆಗೆ 800 ಡಾಲರುಗಳ ದ್ವಿತೀಯ ಬಹುಮಾನ ದೊರೆತಿದೆ. ಶ್ರೀ ಪದ್ಮರಾಜು ಅವರು ಭೀಮಾವರಂ ಕಾಲೇಜಿನಲ್ಲಿ ರಸಾಯನಶಾಸ್ತ್ರ ಪ್ರಾಧ್ಯಾಪಕರಾಗಿರುವರು. ಇವರ ವಯಸ್ಸು 36 ವರುಷ ಇದ್ದು ಕಥೆ, ನಾಟಕಗಳನ್ನು ಬರೆದು ಕೀರ್ತಿಗಳಿಸಿದ್ದಾರೆ.

ಬಂಗಾಳ ಮುಂಗಡ ಪತ್ರದಲ್ಲೂ ಕೊರತೆ

ಪಶ್ಚಿಮ ಬಂಗಾಳದ ಶಾಸನ ಸಭೆಯಲ್ಲಿ 1952-53ರ ಮುಂಗಡ ಪತ್ರಿಕೆಯನ್ನು ಅರ್ಥಮಂತ್ರಿಗಳಾದ ಶ್ರೀ ಎನ್. ಆರ್ ಸರಕಾರರು ಮಂಡಿಸಿದರು. ಈ ಮುಂಗಡ ಪತ್ರಿಕೆಯ ಪ್ರಕಾರ ಪ್ರಾಂತದ ಆದಾಯವು ರೂ 3590 ಲಕ್ಷ ರೂ. ಗಳಿದ್ದು ವೆಚ್ಚವು 4111 ಲಕ್ಷಗಳಷ್ಟಾಗುತ್ತದೆಂದು ತಿಳಿಯುತ್ತದೆ. ಆದುದರಿಂದ ಮುಂಗಡಪತ್ರವು 520 ಲಕ್ಷ ರೂ. ಗಳಷ್ಟು ಕೊರತೆ ತೋರಿಸುವದು.

ಗವರ್ನರ ರಾಜಪ್ರಮುಖರ ಪರಿಷತ್ತು

ಗವರ್ನರ ಹಾಗೂ ರಾಜಪ್ರಮುಖರ ದಿಲ್ಲಿಯ ಪರಿಷತ್ತು ರಾಜಕೀಯ ವರ್ಗಗಳಲ್ಲಿ ವಿಶೇಷ ಕುತೂಹಲವನ್ನುಂಟು ಮಾಡಿದೆ. ಹೈದರಾಬಾದದ ನಿಜಾಮರು ತನ್ನ ರಾಜಧಾನಿಯನ್ನು ಬಿಟ್ಟು ದಿಲ್ಲಿಗೆ ಬರುತ್ತಿರುವದು ಇದೇ ಮೊದಲನೆ ಸಾರಿ ಎಂದು ತೋರುತ್ತದೆ. ಈ ಅನಿರೀಕ್ಷಿತ ಸಂದರ್ಶನದಿಂದ ಹಲವು ತರಹದ ಕುತೂಹಲಪೂರ್ಣ ವಿಚಾರಗಳು ಹಬ್ಬಿವೆ. ನಿಜಾಮರಿಗೆ ಅತ್ಯಂತ ಗೌರವಾದರಗಳನ್ನು ಅರ್ಪಿಸಲಾಗುತ್ತಿದೆಂದು ತಿಳಿಯುತ್ತದೆ

ಕಲ್ಕತ್ತೆಯಲ್ಲಿ ಕಲಾಪೂರ್ಣ ಕಾಂಗ್ರೆಸ್ ಅಧಿವೇಶನದ ಸಿದ್ಧತೆ

ಇದೇ ತಿಂಗಳ 22ಕ್ಕೆ ಕಲ್ಕತ್ತೆಯಲ್ಲಿ ಜರಗಲಿರುವ ಅ. ಭಾ ಕಾಂಗ್ರೆಸ್ ಅಧಿವೇಶನವನ್ನು ಅತ್ಯಂತ ವೈಭವಪೂರ್ಣವಾಗಿಯೂ ಕಲಾತ್ಮಕವಾಗಿಯೂ ಜರಗಿಸಬೇಕೆಂದೂ 15ಜನ ಶಾಂತಿನಿಕೇತನದ ಕಲಾವಿದರು ನಿಶ್ಚಯಿಸಿ ಅಲ್ಲಿಗೆ ಆಗಮಿಸಿರುವರು. ಈಗ ಹಾಕಲಾಗುತ್ತಿರುವ ಈ ಭವ್ಯ ಮಂಟಪದಲ್ಲಿ 30000 ಜನರಿಗೆ ಸ್ಥಳಾವಕಾಶವನ್ನು ಒದಗಿಸಿ ಕೊಡಲಾಗುವದು.

ಹುಟ್ಟುವ ಮೊದಲೇ ಗಂಡೋ ಹೆಣ್ಣೋ ಹೇಳಲು ಸಾಧ್ಯ

ಹುಟ್ಟುವ ಮಗುವು ತಾಯಿಯ ಹೊಟ್ಟೆಯಲ್ಲಿರುವಾಗಲೇ ಅದು ಗಂಡೋ ಹೆಣ್ಣೋ ಎಂದು ಮುಂದಾಗಿ ಹೇಳುವುದು ರಾಸಾಯನಿಕ ಪರೀಕ್ಷಾ ಕ್ರಮದಿಂದ ಸಾಧ್ಯವಿದೆ ಎಂದು ಅಮೇರಿಕಾದ ವಿಜ್ಞಾನಿಗಳು ವರದಿ ಮಾಡಿರುತ್ತಾರೆ, ನವಶೋಧನೆಯಲ್ಲಿ ಸೇಕಡಾ 95.6ರಷ್ಟು ಜಯ ದೊರೆತಿರುವುದಾಗಿಯೂ ಅವರು ಹೇಳಿರುವರು.

ಗಂಡು ಶಿಶು ಹುಟ್ಟುವದಿದ್ದರೆ ಗರ್ಭಿಣಿಯ ಮೂತ್ರದಲ್ಲಿ ಗಂಡಿನ 'Harmone'ಗೆ ಸಂಬಂಧಿಸಿದ ರಾಸಾಯನಿಕ ದ್ರವ್ಯವು ಕಂಡು ಬರುವುದು, ಅದು ತೋರಬಂದಿದ್ದರೆ ಹೆಣ್ಣುಮಗು ಹುಟ್ಟುವುದು ಖಂಡಿತವೆಂದೂ ಅಮೇರಿಕೆಯ ವಿಜ್ಞಾನಿಗಳ ಸಂಘದ 'ಸಾಯನ್ಸ' ಪತ್ರಿಕೆಯಲ್ಲಿ ಈ ನೂತನ ಶೋಧದ ಕುರಿತು ವಿವರಗಳು ಕೊಡಲ್ಪಟ್ಟಿವೆ.

ಬಿಹಾರದಲ್ಲಿ ಕಾಂಗ್ರೆಸಿಗರ ಮೇಲೆ ಶಿಸ್ತಿನ ಕ್ರಮ

ಕಳೆದ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದವಾರರ ವಿರುದ್ಧ ಕೆಲಸ ಮಾಡಿದ್ದಕ್ಕೆ ಬಿಹಾರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಪೂರ್ಣಿಯಾ ಜಿಲ್ಲೆಯ ಆರು ಕಾಂಗ್ರೆಸಿಗರನ್ನು ಪಕ್ಷದ ಸದಸ್ಯತ್ವದಿಂದ ಅಮಾನತು ಮಾಡಿರುವರು. ಈ ಆರೋಪದ ಮೇರೆಗೆ ಈ ತನಕ 225 ಮಂದಿ ಕಾಂಗ್ರೆಸಿಗರನ್ನು ಅಮಾನತುಗೊಳಿಸಲಾಗುವುದು.

ಬರಗಾಲ ಪರಿಹಾರ ಸಹಾಯ

ದತ್ತ ಮಂಡಳ ಜಿಲ್ಲೆಗಳಲ್ಲಿ ಬರಗಾಲ ಪರಿಹಾರಾರ್ಥ ಮದ್ರಾಸು ಸರಕಾರದವರು ಕೈಗೊಂಡ ಯೋಜನೆಗಳಿಗೆ ಪೂರಕವೆಂದು ಪಂಡಿತ ನೆಹರೂರವರು ತಮ್ಮ ರಾಷ್ಟ್ರೀಯ ಆಹಾರ ಪರಿಹಾರ ನಿಧಿಯಿಂದ ರೂ. 25000 ಶ್ರೀಮತಿ ದುರ್ಗಾ ಬಾಯಿಯವರಿಗೆ ಒಪ್ಪಿಸಿ ಅವಶ್ಯಕ ಪರಿಹಾರ ಒದಗಿಸಲು ಕೇಳಿಕೊಂಡಿದ್ದಾರೆ

ಕವಿರಾಜ ಯಸ್ ಯನ್. ಸೇಸರ

ಶಾಸ್ತ್ರೀಯ ಔಷಧಿಗಳು ಈಗಲೇ ಬಂದಿವೆ

ಬೃಹತ್ ಅಮೃತಬಳ್ಳಿ ಕಷಾಯ
ಪ್ರಸೂತಾರಿಷ್ಟ
ಕಸ್ತೂರಿ ಕಲ್ಪ ರಸಾಯನ
ನೇತ್ರಬಿಂಧು
ಕರ್ಪೂರಾರಿಷ್ಟ
ದುರ್ಗಾ ಪುನರ್ನವಾಸವ
ದಂತಾರಿಷ್ಟ
ಕುಂಕುಮಾಸವ
ಮೃಗಾಂಕ ದ್ರಾವ
ದರವನ್ನು ವಿಚಾರಿಸುವದು.
ಏಜಂಟ್:—
ಶಾ• ಕಂಪೆನಿ, ಮಂಗಳೂರು ನಂ. 1

"ಗೋಪಾಲ ಭೇಷಜಾಶ್ರಮ" ಮಂಗಳೂರು
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ವಿಶೇಷ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕರು:—ಡಾ। ಎ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ತಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ
ಪ್ರೊಪ್ರೈಟರ್:—ಕೆ. ವೆಂಕಟಸುಬ್ರಮಣ್ಯಭಟ್ಟ

For up-to-date Lodging & Boarding
ROYAL MAHAL,
UDIPI. S. Kanara.

ವಿವಿಧ ಪಾತ್ರೆಗಳು

ಯಾವತರ್ಹ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಅಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಜಿ ವ್ಯಾಪಾರಾಲಯ,
ರಥಬೀದಿ, ಉಡುಪಿ
ಕೊಳ್ಳೂರು—ಇದೇ ತಾ• 3ರಲ್ಲು

ಕೆ. ಪಿ. ಸಿ. ಸಿ. ಯ ಗೊತ್ತುವಳಿ

ಕರ್ನಾಟಕ ಏಕೀಕರಣ ಪ್ರಶ್ನೆಯನ್ನು ಕುರಿತೂ ಭಾರತ ಸರಕಾರ ಕೈಗೊಂಡಿರುವ ಪಂಚವಾರ್ಷಿಕ ಯೋಜನೆಗಳಲ್ಲಿ ಕರ್ನಾಟಕವನ್ನು ಸಂಪೂರ್ಣ ಅಲಕ್ಷಿಸಿದ್ದರ ಕುರಿತೂ ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ ಸಮಿತಿ ಕೇಂದ್ರ ಹಾಗೂ ಪ್ರಾಂತಿಕ ಸರಕಾರಗಳ ದೃಷ್ಟಿಯನ್ನು ಆ ಕಡೆಗೆ ಹರಿಸುವದಕ್ಕೆ ಒಂದು ಸಮಿತಿಯನ್ನು ನೇಮಿಸಬೇಕೆಂದೂ ಆ ಸಮಿತಿಯು ಆದಷ್ಟು ಬೇಗನೆ ತನ್ನ ವರದಿಯನ್ನು ಕೆ. ಪಿ. ಸಿ. ಸಿ.ಗೆ ಒಪ್ಪಿಸಬೇಕೆಂದೂ ಒಂದು ಗೊತ್ತುವಳಿಯನ್ನು ಸ್ವೀಕರಿಸಿದೆ. ಈ ಎರಡಂಶಗಳೂ ಆಲೋಚ್ಯ ವಿಷಯಗಳಾಗಿವೆ. ಕರ್ನಾಟಕ ಪ್ರಾಂತವಾಗಲು ಆದಷ್ಟು ಶೀಘ್ರ ರೂಪುಗೊಳ್ಳಬೇಕು. ಕರ್ನಾಟಕ ಜನತೆಯು ಬಹಳ ಕಾಲದಿಂದ ಕಾಂಗ್ರೆಸ್ ಸರಕಾರದಿಂದ ನಿರೀಕ್ಷಿಸುತ್ತಿದ್ದ ಮತ್ತು ನಿರೀಕ್ಷಿಸುತ್ತಿರುವ ಕಳಕಳಿಯ ಪ್ರಶ್ನೆಯಿದು ಕಾಂಗ್ರೆಸ್ ವರಿಷ್ಠರಿಗೆ ಕನ್ನಡಿಗರ ಉತ್ಕಟಾಭಿಲಾಷೆಯ ಮೇಲೆ ದೃಷ್ಟಿ ಹರಿಯದೆ ಇಲ್ಲ! ಕಾಂಗ್ರೆಸ್ ಆವಾಗ್ಗೆ ಭಾಷಾವಾರು ಪ್ರಾಂತರಚನೆಯ ಆಶ್ವಾಸನೆಯನ್ನು ನೀಡುತ್ತ ಬಂದಿ[illegible]ಗಡಿ ನಿರ್ಣಯ ಪ್ರಶ್ನೆ– ರಾಜಧಾನಿಯ [illegible]–ಆರ್ಥಿಕ ಬಲಾಬಲ ಪ್ರಶ್ನೆಯನ್ನು ಮುಂದಾಗಿ ಪರಿಶೀಲಿಸಬೇಕಾಗುವ ಮಾತ್ರವಲ್ಲ ಇಂತಹ ಪ್ರಾಂತಗಳು [illegible]ನೆಗೊಳ್ಳುವಾಗ ತಲೆದೋರಬಹುದಾ ಘರ್ಷಣೆಯ. ನೂರಾರು ಪ್ರಸಂಗಗಳು [illegible]ಂಗ್ರೆಸ್ ಕಾರ್ಯಕರ್ತರ ಕಣ್ಣು ಕಟ್ಟಿ ಅಷ್ಟೇ ಅಲ್ಲದೆ ದುರ್ದೈವವೋ ಎಂ[illegible]ತೆ ಇದಕ್ಕಿಂತಲೂ ಮಹತ್ವದ ವಿಚಾರ[illegible] ಮತ್ತೆ ಮತ್ತೆ ತಲೆದೋರುತ್ತಿರುವ ಇನ್ನೊಂದು ಅಡಚಣೆಯಾಗಿದೆ.

ಆಂಧ್ರ ಪ್ರಾಂತರಚನೆಗಾಗಿ ಸ್ವಾಮಿ [illegible]ರಾಮುರು ಸತ್ಯಾಗ್ರಹ ಹೂಡುವ ತ[illegible]ನಿರ್ಧಾರದಿಂದ ದಿಲ್ಲಿಯ ಕಾಂಗ್ರೆಸ್ ವ[illegible]ಷ್ಠರನ್ನು ಹೆದರಿಸುವ ಸಾಹಸವಾದರೆ [illegible] ದಿಲ್ಲಿಯಿಂದ ಆಶಾದಾಯಕ ಸುದ್ದಿ [illegible]ನೂ ಈ ವರೆಗೆ ಕೇಳಬರುತ್ತಿಲ್ಲ. ಈಗ [illegible]ನಾವಣೆ ಮುಗಿದು ಪ್ರಾಂತೀಯ ಹಾ[illegible]ೂ ಕೇಂದ್ರ ಸರಕಾರಗಳು ಸಂಪೂರ್ಣ [illegible]ಧಿಕಾರವನ್ನು ವಹಿಸಿಕೊಳ್ಳುವ ಮೊದ[illegible] ಇಂತಹ ಪ್ರಾಂತ ರಚನೆಯನ್ನು ಕಾಂ[illegible]ಗ್ರೆಸ್ ಕೈಗೊಳ್ಳಲಿಲ್ಲವೆಂದು ದೂರಿದು [illegible]ದಾಗಲಿ- ಟೀಟಲೆಯನ್ನೀಯುವದಾಗಲೀ [illegible]ಷ್ಟೊಂದು ಸಮಂಜಸವೆಂದು ತೋರುವುದಿ[illegible]. ಚುನಾವಣೆ ಮುಗಿದು ಇಷ್ಟು ಸಮ[illegible]ಯವಾದರೂ ಕಾಂಗ್ರೆಸ್ ಭಾಷಾವಾರು [illegible]ಪ್ರಾಂತದ ಸುದ್ದಿಯನ್ನೆತ್ತದೆ ಇರುವದು. [illegible]ಷಾದದ ಸಂಗತಿಯೆಂದು ಕೆ. ಪಿ. ಸಿ. ಸಿ[illegible]ಯು ವ್ಯಕ್ತಪಡಿಸಿದೆ. ಆಂಧ್ರದ ಪ್ರಕರಣ[illegible]ಲ್ಲೇ ಕಾಂಗ್ರೆಸ ವರಿಷ್ಠರು ಅಸಂತೃಪ್ತ[illegible]ರಾಗಿರುವಾಗ ನಾವಾದರೂ ಇಂತಹ ಸಂ[illegible]ಯಲ್ಲಿ ಇನ್ನಷ್ಟು ಉಪದ್ರ ಕೊಡುವದ[illegible]ರಿಂತ ಬೇರೇನನ್ನಾದರೂ ಸಾಧಿಸಲು ಸಾ[illegible]ಧ್ಯವುಂಟೇ? ಇದರರ್ಥ ಕನ್ನಡಿಗರು ಕಾಂ[illegible]ಗ್ರೆಸ್ ವರಿಷ್ಠರಿಗೆ ಇದನ್ನು ಬಿಟ್ಟುಕೊ[illegible]ಟ್ಟು ತಟಸ್ಥರಾಗುಳಿಯ[illegible]ಬೇಕೆಂದಲ್ಲ! ಇನ್ನೂ ಸ್ವಲ್ಪ ಕಾದು [illegible]ನುಕೂಲ ಪರಿಸ್ಥಿತಿಯನ್ನು ಹೊಂದಿಕೊಂಡು ಒತ್ತಾಯಿಸುತ್ತಿದ್ದರೆ ಈ ಪ್ರಶ್ನೆಗೆ ತುಂಬ ಬೆಲೆ ಬರುತ್ತಿತ್ತು!

ಪಂಚವಾರ್ಷಿಕ ಯೋಜನೆಗಳಲ್ಲಿ ಕರ್ನಾಟಕವನ್ನು ಅಲಕ್ಷಿಸಿದಂತವನ್ನು ನಾವು ಆಗಾಗ ಟೀಕಿಸಿದ್ದೆವು. ಈಚೆಗೆ ಒಂದರ ಹಿಂದೆ ಇನ್ನೊಂದು ಯೋಜನೆಗಳು ಕೈಬಿಡುತ್ತಿರುವುದು ನಿಜವಾಗಿಯೂ ವಿಷಾದದ ಸಂಗತಿ! ಮಲೆನಾಡಿನ ಅಭಿವೃದ್ಧಿ— ಘಟಪ್ರಭಾಯೋಜನೆ— ಈಗ ಕೊಯನಾ ಅಣೆಕಟ್ಟಿನ ಪ್ರಶ್ನೆ ಇವು ಮಹತ್ವದವುಗಳಾಗಿರುತ್ತವೆ. ಇದನ್ನು ಪುಷ್ಟೀಕರಿಸಿ ಮಾತನಾಡುವವರಿಲ್ಲದೇ ಹೋದುದರಿಂದಲೋ ಏನೋ ಹಣದ ಅಡಚಣೆಯ ಕಾರಣದ ಮೇಲೆ ಮುಂದೂಡಲ್ಪಟ್ಟಿವೆ. ಮಲೆನಾಡಿನ ಅಭಿವೃದ್ಧಿಯ ಪ್ರಶ್ನೆಯೂ- ಕೊಯನಾ ಯೋಜನಾ ಪ್ರಶ್ನೆಯೂ ಇದೇ ಆರ್ಥಿಕ ತೊಡಕಿನ ಕಾರಣದಿಂದ ನಾಳೆಯ ಕತೆಯಾಗಿದೆ. ಇದು ಸಹನೀಯ ವಿಚಾರವಲ್ಲ. ಇದು ತಡೆದು ನೋಡಬೇಕಾದ ವಿಚಾರವೂ ಅಲ್ಲ. ಕೊಯನಾ ಯೋಜನೆಗೆ ಜೀವದಾನ ಮಾಡಲು ಮಹಾರಾಷ್ಟ್ರೀಯರು ಸಂಘಟಿತರಾದುದನ್ನು ನಾವು ಮಾದರಿಯಾಗಿಟ್ಟುಕೊಳ್ಳಬೇಕು.

ಇತ್ತ ಬಂದರ ಕರಾವಳಿಯಲ್ಲಿ ಪ್ರಬುದ್ಧ ಬಂದರ ರಚನೆಯಾಗಬೇಕೆಂಬ ವಿಚಾರದಲ್ಲೂ ನಮ್ಮ ನಮ್ಮೊಳಗೆ ಒಮ್ಮತವಿಲ್ಲದೆ--ಸಂಶೋಧನೆ—ತಿರುಗಿ ಪರಿಶೀಲನೆಯೆಂದು ಹಣವನ್ನು ವ್ಯರ್ಥ ಹಾಳು ಮಾಡುವದರ ಜೊತೆಗೆ ಕಾಲವನ್ನು ಮುಂದೆ ತಳ್ಳಲಾಗುತ್ತಿದೆ. ಪ್ರಗತಿ ಮಾರ್ಗದಲ್ಲಿ ಇವೆಲ್ಲ ಶುಭ ಚಿಹ್ನೆಯಲ್ಲಿ ಮಾತ್ರವಲ್ಲ ನೈಸರ್ಗಿಕ—ಪ್ರಾಕೃತಿಕ ಒಲವುಗಳನ್ನವಲಂಬಿಸಿಯೇ ಪ್ರಬುದ್ಧ ಬಂದರ ನಿರ್ಧಾರವಾಗಬೇಕಾದುದು ಅಗತ್ಯ ವಸ್ತುನ್ಯಾಯ. ಕೆ. ಪಿ. ಸಿ. ಸಿ ಯು ರೂಪಿಸಿರುವ ವಿಚಾರಣಾ ಸಮಿತಿಯು ಈ ವಿಚಾರಗಳನ್ನೆಲ್ಲ ಕೂಲಂಕಷವಾಗಿ ವಿಮರ್ಶೆ ಮಾಡಿ ಕರ್ನಾಟಕ ಇತ್ಯಾದಿಷ್ಟಗಳ ಮೇಲೆ ತನ್ನ ಪ್ರಭಾವವನ್ನು ಬೀರುವಂತಾಗಲಿ!

ಭಾರತ ಆಕಾಶವಾಣಿ

ಭಾರತ ಆಕಾಶವಾಣಿಯ ವರದಿಯೊಂದು ಪ್ರಕಟವಾಗಿದ್ದು ಅದರಲ್ಲಿ ಆಕಾಶವಾಣಿಯಲ್ಲಾದ ಪ್ರಗತಿ–ಅಚ್ಚುಕಟ್ಟುತನವನ್ನು ಪ್ರಕಟಿಸಲಾಗಿದೆ. ನಾಲ್ಕು ವರ್ಷಗಳಲ್ಲಿ ಸುದ್ದಿ ಮತ್ತು ಆಕಾಶವಾಣಿ ಕಾರ್ಯಕ್ರಮಗಳು ಜನತೆಯ ಅಭಿರುಚಿಯನ್ನು ಕೆರಳಿಸಿವೆಯೆಂದು ಧಾರಾಳವಾಗಿ ಹೇಳಬಹುದು. ರೇಡಿಯೊಗಳನ್ನು ಜನರು ಹೆಚ್ಚು ಹೆಚ್ಚಾಗಿ ಬಳಸುತ್ತಲಿದ್ದಾರೆ.

ಈಚೆಗೆ ಆಕಾಶವಾಣಿಯಲ್ಲಿ ಹಲವು ರೀತಿಯ ಸುಧಾರಣೆ ಬದಲಾವಣೆಗಳು ಕಂಡು ಬಂದ ಹಾಗೆ ತೋರುತ್ತದೆ. ಸಾಹಿತ್ಯ ಸಂಸ್ಕೃತಿಗಳಿಗೆ ತಕ್ಕ ಪ್ರೋತ್ಸಾಹವನ್ನು ಕೊಟ್ಟಿರುವುದು ಇಂತಹ ಪ್ರಗತಿ ಸಾಧನೆಗಳಲ್ಲೊಂದು. ಜನಪದ ಸಾಹಿತ್ಯಕ್ಕೆ ಪ್ರೋತ್ಸಾಹವನ್ನು ಕೊಡಲಾಗಿದೆ. ಹಳ್ಳಿಗರ ಕಾರ್ಯಕ್ರಮವನ್ನೂ ಕೈಕೊಳ್ಳಲಾಗಿದೆ. ಹಳ್ಳಿಗರ ಕಾರ್ಯಕ್ರಮವು ಹಳ್ಳಿನಾಡಿನ ಜನತೆಯ ಶಿಕ್ಷಣಕ್ಕೊಂದು ಮಾಧ್ಯಮವಾಗಿರುತ್ತದೆ.

1950–51ರಲ್ಲಿ ರೇಡಿಯೋವನ್ನು ಬಳಸುವವರ ಸಂಖ್ಯೆ ಹೆಚ್ಚಾಗಿದೆಂದು ತಿಳಿಯುತ್ತದೆ. ಕರ್ನಾಟಕದ ಧಾರವಾರದಲ್ಲಿ ಒಂದು ರೇಡಿಯೋ ನಿಲಯ ನಿರ್ಮಾಣಗೊಂಡಿದ್ದು ಸ್ವಾತಂತ್ರ್ಯ ಪ್ರಾಪ್ತವಾದ ಮೇಲೆಯೆ. ಆದರೆ ಇದು ಒಂದು ಪ್ರದೇಶದ ಜನತೆಯ ಕಲಾಸಾಹಿತ್ಯಗಳ ಪ್ರಸರಣಕ್ಕಾಗಿಯೋ—ಇಡಿ ಕರ್ನಾಟಕದ ಜನತೆಯ ಸಲುವಾಗಿಯೋ ಎಂಬಂತೆ ಭಾಸವಾಗುವದು. ಏಕೆಂದರೆ ಮೈಸೂರಿನ ಆಕಾಶವಾಣಿ ಮೈಸೂರಿನವರಿಗೆಂದಾದರೆ—ಮುಂಬಯಿಯವರಿಗೆ ಧಾರವಾರವೆಂದಾದರೆ ದಕ್ಷಿಣ ಕನ್ನಡ ಜಿಲ್ಲೆಯ ಜನತೆಯಾರ ಪಾಲಿಗೆ ಸೇರಬೇಕೆಂಬುದೊಂದು ಪ್ರಶ್ನೆಯೇ ಆಗಿದೆ. ಈ ಪಕ್ಷಪಾತದ ಕುರಿತು ತಾಸು ಗಂಭೀರವಾಗಿ ಪರ್ಯಾಲೋಚಿಸಬೇಕಾಗಿದೆ.

ಕರ್ನಾಟಕಸ್ಥರೇ ಇದರ ಮುಖ್ಯಾಧಿಕಾರಿಗಳಾಗಿದ್ದುಕೊಂಡು ಅವರೊಳಗೆ ಮತಭೇದ ಹುಟ್ಟುವಂತಹ ಸನ್ನಿವೇಶಕ್ಕೆ ಆಸ್ಪದ ಕೊಡುವಂತಾದ. ಮ ಇನ್ನಷ್ಟು ವಿಷಾದದ ಸಂಗತಿ! ಒಟ್ಟಿನ ಮೇಲೆ ಆಕಾಶವಾಣಿಯ ಕಾರ್ಯದಕ್ಷತೆಯನ್ನು ಶ್ಲಾಘಿಸುವೆವಾದರೂ-ಈ ಬಗೆಯ ಪ್ರಮಾದಗಳ ಬಗ್ಗೆ ನಾವು ವಿಷಾದವನ್ನು ವ್ಯಕ್ತಪಡಿಸದಿರಲಾರೆವು.

ಪಾಂಡಿಚೇರಿಯಲ್ಲಿ ಭಾರತೀಯ ನಾಣ್ಯಗಳ ಅಭಾವ

ಪಾಂಡಿಚೇರಿಯಲ್ಲಿ ಭಾರತೀಯ ನಾಣ್ಯಗಳ ಅಭಾವವಿದ್ದು ವ್ಯಾಪಾರಾದಿ ಚಟುವಟಿಕೆಗಳಿಗೆ ಧಕ್ಕೆ ತಗಲಿದೆ.

ಮದ್ರಾಸು ಸಂತ್ರಸ್ತರಿಗೆ ಪಂ। ನೆಹರೂರವರ ಸಹಾಯ

ಪಂಡಿತ ನೆಹರೂರವರು ತಮ್ಮ ಬರಗಾಲ ಪರಿಹಾರ ನಿಧಿ'ಯಿಂದ ಮದ್ರಾಸು ಪ್ರಾಂತದ ಸಂತ್ರಸ್ತರಿಗೆ ಸಹಾಯ ನೀಡಲೆಂದು ಒಂದೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಈ ಮೊದಲು ರೂ. 25,000 ಕೊಟ್ಟಿರುವರು

ಮದ್ರಾಸು ಕಾಂಗ್ರೆಸ್ ಪಕ್ಷದ ಚುನಾವಣೆ

ಮದ್ರಾಸು ಶಾಸನ ಸಭೆಗೆ ಹೊಸತಾಗಿ ಆರಿಸಿ ಬಂದ ಕಾಂಗ್ರೆಸ್ ಸದಸ್ಯರ ಸಭೆಯನ್ನು ಇದೇ ತಾ. 29ಕ್ಕೆ ಕರೆಯಲಾಗಿದ್ದು ಆ ಸಭೆಯಲ್ಲಿ ಪಕ್ಷದ ನಾಯಕರನ್ನು ಆರಿಸಲಾಗುವುದು.

ಒಡಿಸಾದಲ್ಲಿ

ನಿಯಂತ್ರಿತ ದರಕ್ಕಿಂತ ಕಡಿಮೆ ಕ್ರಯಕ್ಕೆ ಅಕ್ಕಿ ವಿಕ್ರಯವಾಗುತ್ತಿರುವುದೆಂದು ತಿಳಿದುಬರುತ್ತದೆ. ರೈತರಿಂದ ಸ್ವಯಂಪ್ರೇರಣೆಯಿಂದ ಧಾನ್ಯಸಂಗ್ರಹ ಮಾಡುವುದೂ ಅಲ್ಲಿಯ ಸರಕಾರದ ನೀತಿಯಾಗಿದೆ.

ಚತುರ್ಥ ವಿಮಾಗಣನೆಯ ಫಲಿತಾಂಶ
(1947ರಿಂದ 1950ರ ವರೆಗೆ)
* * * * * *
ತಾರೀಖು 31-12-1950ಕ್ಕೆ ನಡೆಸಿದ ವಿಮಾಗಣನೆಯಲ್ಲಿ ಆಜೀವ ಮತ್ತು ವಿಮಾ ಪೋಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ ಅನುಕ್ರಮವಾಗಿ ರೂ. 12/- ಮತ್ತು ರೂ 9/-ರಂತೆ ಬೋನಸನ್ನು ಘೋಷಿಸಿದೆ.
The Canara Mutual Assurance Co Ltd.
Head Office: UDIPI, S. India.
ಸ್ಥಾಪನೆಯಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ.





THE CANARA BANKING CORPORATION LIMITED.
ನಿಮ್ಮ ಎಲ್ಲಾ ಬ್ಯಾಂಕಿಂಗ್ ಸಮಸ್ಯೆಗಳಿಗೆ
೧೯೦೬ನೇ ಇಸವಿಯಲ್ಲಿ ಸ್ಥಾಪಿತವಾಗಿ,
ಎಲ್ಲಾ ಜನರ ಮೆಚ್ಚುಗೆಗೆ ಪಾತ್ರವಾಗಿರುವ
ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್, ಲಿಮಿಟೆಡ್
ಇವರನ್ನು ವಿಚಾರಿಸಿರಿ.
ಪ್ರಧಾನ ಕಾರ್ಯಾಲಯ, ಉಡುಪಿ, (ದ. ಕ.)

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೨೦-೩-'೫೨

ಮದ್ರಾಸದ ಮುಂಗಡ ಪತ್ರ

ಮದ್ರಾಸ ಜೋಡಿಸಾನಾ ಸರಕಾರದ ಆರ್ಥಿಕ ಮಂತ್ರಿ ಶ್ರೀ ಎ. ಬಿ. ಶೆಟ್ಟರು 195--53ರ ಮುಂಗಡ ಪತ್ರವನ್ನು ಶಾಸನ ಸಭೆಯ ಮುಂದೆ ಮಂಡಿಸಿರುವರು. ಪ್ರಾಂತದಲ್ಲಿ ಕೈಗೊಂಡಿರುವ ಮಹತ್ವದ ಯೋಜನೆಗಳನ್ನು ಅತ್ಯಂತ ಕುತೂಹಲದಿಂದ ನಿರೀಕ್ಷಿಸುವವರಿಗೆ ಈ ಮುಂಗಡ ಪತ್ರದಿಂದ ಕೊಂಚ ಖೇದವಾಗಬಹುದು. ಪ್ರಗತಿ ಮಾರ್ಗದಲ್ಲಿ ಅನಿರೀಕ್ಷಿತವಾಗಿ ಬಂದೊದಗಿದ ಅಡೆತಡೆಗಳಿಗಾಗಿ ನಾವು ವಿಷಾದಿಸಬೇಕಾಗಿದೆ. ಮುಂದಿನವರ್ಷದಲ್ಲಿ ಆಯವು 63.91 ಕೋಟಿಯಾಗಿದ್ದು ವ್ಯಯವು 64.79 ಕೋಟಿ ರೂಪಾಯಿಯೆಂದು ತಿಳಿಯುತ್ತದೆ. ಸದ್ಯದ ಕರಭಾರ ಸ್ಥಿತಿಯನ್ನು ಹೀಗೆಯೇ ಉಳಿಸಿದರೆ ಸರಕಾರಕ್ಕೆ ಸುಮಾರು 86ಲಕ್ಷ ರುಪಾಯಿಗಳ ಕೊರತೆ ಬೀಳುವದೆಂದು ಹೇಳಲಾಗಿದೆ. ಮದ್ರಾಸ ಪ್ರಾಂತದಲ್ಲಿ ತಲೆಯೆತ್ತಿರುವ ಬರಗಾ[illegible]ಮಗಳ ನಿಮಿತ್ತವೂ ನಾನಾ ಬಗೆಯ ಯೋಜನೆಗಳನ್ನು ಕಾರ್ಯರೂಪದಲ್ಲಿ ತರುವ ಮಹಾ ಪ್ರಯತ್ನದಿಂದಲೂ ಆರ್ಥಿಕ ತೊಂದರೆ ಬೀಳುವದು ಅನಿವಾರ್ಯ.

ಮದ್ರಾಸ ಪ್ರಾಂತದ ಕಡಪಾ, ಚಿತ್ತೂರ, ಚೆಂಗಲ್‌ಪೇಟೆ ಮತ್ತು ಉತ್ತರ ಆರ್ಕಾಟು ಜಿಲ್ಲೆಗಳಲ್ಲಿ ಬರಗಾಲವು ಸಂಪೂರ್ಣ ವ್ಯಾಪಿಸಿಕೊಂಡಿದೆ. ಗುಂಟೂರು, ನೆಲ್ಲೂರ, ಕರ್ನೂಲ, ಅನಂತಪುರ ತಿರುಚಿರಪಳ್ಳಿ, ಸೇಲಂ ಕೊಯಂಬತ್ತೂರ ಜಿಲ್ಲೆಗಳಲ್ಲಿ ಸಾವಧಾನವಾಗಿಯೂ ಹಬ್ಬುತ್ತ ತಲೆದೋರಿದೆ. ಬರಗಾಲ ಪೀಡಿತರಾದ ಜನಕ್ಕೆ ಪರಿಹಾರ ನೀಡುವದು ಸರಕಾರದ ಆದ್ಯ ಹೊಣೆಯಾಗಿರುವುದು. ಪರಿಹಾರ ಕೇಂದ್ರಗಳನ್ನು ಸ್ಥಾಪಿಸಿ ತನ್ಮೂಲಕ ಅವರಿಗೆ ನೆರವು ನೀಡುವ ಕಾರ್ಯವನ್ನು ಸರಕಾರ ಕೈಗೊಂಡಿರುವದನ್ನು ಮಾನ್ಯ ಮಂತ್ರಿಗಳು ಹೇಳಿರುವರು. ಇಂತಹ ಭೀಕರಪರಿಸ್ಥಿತಿಯನ್ನು ಎದುರಿಸುವುದು ಸುಲಭ ಸಾಧ್ಯವಾದ ಕೆಲಸವೇನಲ್ಲ! ಜೋಡಿಸಾನಾ ಸರಕಾರದ ಮೇಲೆಯೇ ಅತಿ ಮಹತ್ವದ ಹೊಣೆಬಿದ್ದಿದ್ದು ಅದನ್ನು ಒಳ್ಳೆಯ ಮುತುವರ್ಜಿಯಿಂದ ಅವರು ನಿರ್ವಹಿಸಬೇಕಾಗಿದೆ. ಕಾದಿಟ್ಟ ನಿಧಿಯ 65ಲಕ್ಷ ರೂ.ಗಳಿಂದ ಅದು ಶಕ್ಯವಿಲ್ಲೆಂದು 5ಕೋಟಿ ರೂ.ಗಳನ್ನು ತೆಗೆದಿಡಲಾಗಿದೆ. ಅನ್ನಾನ್ನಗತಿಕರ ಬಗ್ಗೆ ಮಾನ್ಯ ಮಂತ್ರಿಯವರು ತೆಗೆದುಕೊಂಡ ಮುಂಜಾಗ್ರತೆಯನ್ನು ನಾವು ನೆನೆಸುವದು ಅವಶ್ಯಕವಾಗಿದೆ.

62ಕೋಟಿ ರೂ.ಗಳಷ್ಟು ವೆಚ್ಚಮಾಡಿ ಕಾಪಾರ್ನೆಯೇ ಮುಂತಾದ ಯೋಜನೆಗಳನ್ನು ಕಾರ್ಯರೂಪದಲ್ಲಿ ತಂದುಕೊಂಡದ್ದರಿಂದ ಅದರಿಂದಲೂ ಲಾಭಾಂಶವನ್ನು ಪಡೆದುಕೊಳ್ಳಬಹುದಾಗಿದೆ. 62 ಕೋಟಿ ರೂ ಗಳಲ್ಲಿ ರೂ. 25ಕೋಟಿ ರೂ.ಗಳನ್ನು ನೀರಾವರಿಗಾಗಿಯೂ 30 ಕೋಟಿ ರೂ. ಗಳನ್ನು ವಿದ್ಯುಚ್ಛಕ್ತಿಗಾಗಿಯೂ ವಿನಿಯೋಗಿಸಲಾಗಿದೆ. ರೈತನ ಏಳಿಗೆಯೇ ಮುಖ್ಯ ಗುರಿಯಾಗುಳ್ಳ ಜಮೀನ್ದಾರೀ ನಿರ್ಮೂಲನಕ್ಕಾಗಿ ಜಮೀನದಾರರಿಗೆ ಪರಿಹಾರ ಧನವೆಂದು 70 ಲಕ್ಷ ರೂ. ಗಳನ್ನೂ, ವಿದ್ಯಾ ಸಾಮಗ್ರಿಗಾಗಿ ರೂ. 30 ಲಕ್ಷವನ್ನೂ ನೂತನ ಮಾರ್ಗರಚನೆ ಮತ್ತಿತರ ಸುಧಾರಣೆಗಳಿಗಾಗಿ 50ಲಕ್ಷ ರೂ.ಗಳನ್ನೂ ಮುಂದಿನ ಬಜೆಟಿನಲ್ಲಿ ತೆಗೆದಿಡಲಾಗಿದೆ.

ಈ ಎಲ್ಲ ಅಂಕೆ-ಸಂಖ್ಯೆಗಳೂ ಫಲಪ್ರಾಪ್ತಿಯುಳ್ಳಂತಹ ಯೋಜನೆಗಳೇನೋ ಆಗಿ ತುಂಬ ಆಶಾದಾಯಕವಾಗಿವೆ.ಆದರೆ ಸರಕಾರವು ಇಷ್ಟೇ ಆದಾಯದಿಂದ ತನ್ನ ಎಲ್ಲ ಇಷ್ಟಾರ್ಥವನ್ನು ಹೇಗೆ ಕೈಗೂಡಿಸಿಕೊಂಬುದೇ ಇಂದಿನ ಮಹತ್ವದ ಪ್ರಶ್ನೆ. ಕೇಂದ್ರ ಸರಕಾರವು ಈ ಸಂದರ್ಭದಲ್ಲಿ ತನ್ನ ಸಹಕಾರವನ್ನು ನೀಡದೇ ಹೋದರೆ ನಮ್ಮ ಸ್ಥಿತಿ ಇನ್ನಷ್ಟು ಕಠಿಣವಾಗಬಹುದೆಂದು ಮಂತ್ರಿಗಳು ಹೇಳಿದ ಮಾತು ಅಕ್ಷರಶಃ ನಿಜ. ಏಕೆಂದರೆ ಈಗ ಜನತೆಯ ಮೇಲೆ ಹೇರಿರುವ ಕರಭಾರವೇ ಅತಿಯಾಗಿರುವಾಗ ತಿರುಗಿ ಕರಭಾರವನ್ನು ಹೇರುವದು ಶಕ್ಯವಿಲ್ಲ ಪೇಟೆಯಲ್ಲಿ ಧಾರಣೆಗಳು ದಿನದಿಂದ ದಿನಕ್ಕೆ ಇಳಿಯುತ್ತ ಬರುವಾಗ ಸರಕಾರಕ್ಕೆ ಬಿಟಿಪಿಡಾದ ಕರದಲ್ಲೂ ಕತ್ತರಿ ಪ್ರಯೋಗವಾಗುವದು. ವ್ಯಾಪಾರ ವಹಿವಾಟಿನವರಿಗೆ ವಿಶೇಷ ಧಕ್ಕೆಯೂ ಉಂಟಾಗಬಹುದು.! ಪರಿಸ್ಥಿತಿ ಇಷ್ಟು ಸ್ಪಷ್ಟವಿರುವಾಗ ಸರಕಾರಕ್ಕೆ ಉಳಿದಿರುವಮಾರ್ಗವಾದರೂ ಏನು? ಒಂದೋ ಮುಂದಿರುವ ಮಹತ್ವದ ಯೋಜನೆಗಳನ್ನು ಬಿಟ್ಟುಕೊಡಬೇಕು. ಇಲ್ಲವೇ ಜನತೆಯ ಮೇಲೆ ತಿರುಗಿ ಕರಭಾರವನ್ನು ಹಾಕಬೇಕು ಇವೆರಡರಲ್ಲಿ ಯಾವುದೂ ಇಷ್ಟವಲ್ಲದ ಸಂಗತಿಗಳು. ಎರಡೂ ಮುಖ್ಯವಾದವುಗಳು. ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು “ಕರಭಾರವನ್ನು ಇದೇ ರೀತಿಯಿಂದ ಉಳಿಸಿಕೊಳ್ಳಲು ಸಾಧ್ಯವಿಲ್ಲ.......” ಎಂದು ಹೇಳುವರು. ಮುಂದಕ್ಕೆ ಇನ್ನೂ ಸ್ವಲ್ಪ ಕರಭಾರ ಹೇರುವ ಸಂಭವ ಉಂಟೆಂಬುದು ಅವರ ಮಾತಿನಿಂದ ಧ್ವನಿತವಾಗಿದೆ. ಇದು ಅನಿವಾರ್ಯವೆಂದಾದರೂ ಅನಿಷ್ಟ ಪರಂಪರೆಯನ್ನೇ ಉಂಟುಮಾಡುವ ಒಂದು ಪ್ರಸಂಗವೆಂದು ನಮಗನ್ನಿಸುತ್ತದೆ.

ಈ ಮುಂಗಡ ಪತ್ರವು ಒಂದು ದೃಷ್ಟಿಯಿಂದ ಸ್ವಾಗತಾರ್ಹವಾಗಿದೆ. ಇನ್ನೊಂದು ದೃಷ್ಟಿಯಿಂದ ನೋಡುವಾಗ ನಿರಾಶಾದಾಯಕವಾಗಿದೆ- ಆದರೆ ಇಂತಹ ಸ್ಥಿತಿಗೆ ನಾವು ಯಾರನ್ನೂ ದೂರುವಂತಿಲ್ಲ- ಸರಕಾರ ಜನತೆ ಇಬ್ಬರೂ ಹೊಣೆಗಾರರು ಮತ್ತು ಅಸಹಾಯಕರು ಎರಡೂ ಆಗಿದ್ದಾರೆ. ಆದರೂ ಸರಕಾರದ ವೆಚ್ಚದಲ್ಲಿ ಶಕ್ಯವಿದ್ದಷ್ಟು ಕಡಿಮೆಮಾಡಿಕೊಂಡು ಹೆಚ್ಚಿನ ಆರ್ಥಿಕ ಸಹಾಯವನ್ನು ಕೇಂದ್ರ ಸರಕಾರದಿಂದ ದೊರಕುವಂತೆ ಪತ್ಯಾಯಿಸುವದು ಯೋಗ್ಯ ದಾರಿಯಾಗಿದೆ. ಮಾನ್ಯ ಮಂತ್ರಿಗಳಾದರೋ ಕೇಂದ್ರದವರ ಸಹಕಾರ ಅತ್ಯಾವಶ್ಯಕವೆಂದು ಒತ್ತಿ ಹೇಳಿರುವರು. ಸದ್ಯದ ಪರಿಸ್ಥಿತಿಯಲ್ಲಿ ಸರಕಾರ ಮತ್ತು ಜನತೆ ನಮುಜಯಿಸಿಕೊಂಡು ಹೋಗಬೇಕಾದರೆ ಇದೊಂದೇ ಮಾರ್ಗ!

ವಸ್ತುಗಳ ಧಾರಣೆ ಅತಿಯಾಗಿದ್ದು ಕರರೂಪದಲ್ಲಿ ಸರಕಾರದ ಕಣಜಕ್ಕೆ ಹೆಚ್ಚುಹೆಚ್ಚು ಹಣ ಕೂಡಿ ಬರುತ್ತಿರುವಾಗ ಆರ್ಥಿಕ ಮುಂಗಡ ಪತ್ರವನ್ನು ರಚಿಸುವುದು ಸುಲಭಸಾಧ್ಯವಾಗಬಹುದು! ಆದರೆ ವಸ್ತುಗಳ ಧಾರಣೆ ಕ್ಷಣಕ್ಷಣಕ್ಕೆ ಕುಸಿಯುತ್ತ ಬಂದು ಆರ್ಥಿಕ ರಂಗದಲ್ಲಿ ಹಿಂದೆಂದೂ ಆಗದ ಬದಲಾವಣೆಗಳು ತಲೆದೋರುತ್ತಿರುವಾಗ ಮಾನ್ಯ ಮಂತ್ರಿಯವರು ಒಳ್ಳೆಯ ಜಾಣತನದಿಂದ ಪರಿಸ್ಥಿತಿಯನ್ನವಲೋಕಿಸಿದ್ದಾರೆ. ಈ ಮುಂಗಡ ಪತ್ರ ಸದ್ಯದ ಪರಿಸ್ಥಿತಿಗೆ ಹೊಂದಿಕೊಂಡದಂತೆ- ಭವಿತವ್ಯದ ಮೇಲೂ ವರ್ಚಸ್ಸನ್ನು ಬೀರುವಂತಹದಾಗಿದೆ. ರಾಜಕೀಯ ರಂಗದಿಂದ ನಿವೃತ್ತರಾಗ ಬಯಸಿದ್ದ ಶ್ರೀ ಶೆಟ್ಟರಿಗೆ ಮತ್ತೂ ಮತ್ತೂ ವಿಶೇಷ ಹೊಣೆ ಬೀಳುತ್ತಿದ್ದು ಅದರಿಂದಾಗಿ ಯೋಗ್ಯ ಫಲ ಜನಕ್ಕೆ ಮತ್ತು ದೇಶಕ್ಕೆ ಉಂಟಾಗುವಂತಾಗಲೆಂದು ಹಾರೈಸುತ್ತೇವೆ.

ಆಕಸ್ಮಿಕ ಮರಣಗಳ ಸವಲತ್ತುಗಳು

ಆಕಸ್ಮಿಕ ಗಂಡಾಂತರಗಳಿಂದ ಮರಣ ಸಂಭವಿಸಿದರೆ ಜಾಸ್ತಿ ಪ್ರೀಮಿಯಮ್ ಅಪೇಕ್ಷಿಸದೆ ಜೀವವಿಮಾ ಮಾಡಿದ ಮೊಬಲಗಿನ ಎರಡು ಪಾಲಷ್ಟು ಯಾ ಮೂರು ಪಾಲಷ್ಟು ಹಣವನ್ನು ಕಂಪೆನಿ ಮಾಹಿತಿ ಪತ್ರದಲ್ಲಿ ಸೂಚಿಸಿದಂತೆ ಕೊಡಲಾಗುವುದು. ಇಂತಹ ಸವಲತ್ತು ಅತ್ಯಮೂಲ್ಯವಿದ್ದು ಸರ್ವರೂ ಗಮನಿಸತಕ್ಕದ್ದಾಗಿದೆ

ಈ ಹೊಸ ಯೋಜನೆಗಳನ್ನು ಜನಾದರಣೀಯವಾಗ್ಗಿ ಮಾಡಲು ಉತ್ಸಾಹಿ ತರುಣ ಕೆಲಸಗಾರರು ಬೇಕಾಗಿದ್ದಾರೆ. ಇಚ್ಛಿತ ಉಮೇದ್ವಾರಿಗಳು ಕಂಪೆನಿಯ ಕೂಡೆ ಪತ್ರವ್ಯವಹಾರ ಮಾಡಬಹುದು.

ಕ್ರಿಸೆಂಟ್ ಇನ್ಶೂರೆನ್ಸ್ ಕೊ. ಲಿಮಿಟೆಡ್.
ಕ್ರಿಸೆಂಟ್ ಚೇಂಬರ್ಸ್, ಫೋರ್ಟ್, ಬೊಂಬಾಯಿ.
ಮೆನೇಜಿಂಗ್ ಡೈರೆಕ್ಟರ್:-
ಹಿರಾನಂದ ಗಿರಿ.

ಸೊಲ್ಲಾಪುರದಲ್ಲಿ

ಸುಮಾರು 25ಲಕ್ಷ ರೂಪಾಯಿ ಬೆಲೆಬಾಳುವ ಕೈಮಗ್ಗದ ವಸ್ತ್ರವು ಮುಖ್ಯವಾಗಿ ಸೀರೆಗಳು ಮಾರಾಟವಿಲ್ಲದೆ ಬಿದ್ದಿವೆ. ಕ್ರಯವೂ ಇಳಿದದ್ದರಿಂದ ನೇಕಾರರು ದುರವಸ್ಥೆಗೀಡಾಗಿದ್ದಾರೆ ಅಲ್ಲಿ 10ಸಾವಿರ ಮಗ್ಗಗಳಿದ್ದು 25ಸಾವಿರ ಕುಟುಂಬಗಳು ಅದರಿಂದ ಉಪಜೀವಿಸುತ್ತಿವೆ.

ಮದ್ರಾಸಿನಲ್ಲಿ ರೇಶನಿಂಗ್ ಅಕ್ಕಿ ಹೆಚ್ಚಿಸುವ ವಿಚಾರ

ಮದ್ರಾಸು ಸರಕಾರದ ಆಹಾರ ಮಂತ್ರಿ ಶ್ರೀ ರೋಚಿ ವಿಕ್ಟೋರಿಯಾ ಅವರು ಮದ್ರಾಸು ಪ್ರಾಂತದಲ್ಲಿ ಅಕ್ಕಿಯ ಸೇಡಾ ಪ್ರಮಾಣವನ್ನು ಹೆಚ್ಚಿಸುವ ಬಗೆ ಮುಂದಿನ ವಾರದ ಪ್ರಾರಂಭದಲ್ಲಿ ನಿರ್ಣಯವಾಗಲಿರುವುದೆಂದು ಹೇಳಿದರು.

ಶ್ರೀಮತಿ ರೂಜವೆಲ್ಟರಿಗೆ ಗೌರವ ಪದವಿ

ದಿಲ್ಲಿ ವಿಶ್ವವಿದ್ಯಾಲಯದ ವಿಶೇಷ ಪದವೀದಾನ ಸಮಾರಂಭದಲ್ಲಿ ಶ್ರೀಮತಿ ರೂಜವೆಲ್ಟರಿಗೆ ದಿಲ್ಲಿ ವಿಶ್ವವಿದ್ಯಾಲಯದ ಕುಲಗುರುಗಳಾದ ಡಾ। ಪ್ರಸಾದರು, ಡಾಕ್ಟರ್ ಒಫ್ ಲೆಟರ್ಸ್ ಗೌರವ ಪದವಿಯನ್ನು ಅರ್ಪಿಸಿದರು

ಗವರ್ನರರ ಪರಿಷತ್ತಿನ ಮುಕ್ತಾಯ

ಭಾರತದಲ್ಲಿಯ ಗವರ್ನರರ ಮತ್ತು ರಾಜಪ್ರಮುಖರ ಎರಡು ದಿವಸಗಳ ಪರಿಷತ್ತು ದಿನಾಂಕ 15ರಂದು ಸಾಯಂಕಾಲ ಮುಕ್ತಾಯಗೊಂಡಿತು. ರಾಷ್ಟ್ರಪತಿ ಭವನದಲ್ಲಿ ಸೇರಿದ ಈ ಪರಿಷತ್ತಿನ ಅಧ್ಯಕ್ಷತೆಯನ್ನು ಡಾ। ರಾಜೇಂದ್ರ ಪ್ರಸಾದರು ವಹಿಸಿದ್ದರು. ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹರೂ, ಸಂಸ್ಥಾನ ಮಂತ್ರಿ ಶ್ರೀ ಗೋಪಾಲ ಸ್ವಾಮಿ ಅಯ್ಯಂಗಾರ್, ಗೃಹಮಂತ್ರಿ ಕೈಲಾಸನಾಥ ಕಟಜು ಪುನರ್ನಿವೇಶ ಮಂತ್ರಿ ಶ್ರೀ ಅಜಿತ ಪ್ರಸಾದ ಜೈನ ಅವರು ಆಗಮಿಸಿದ್ದರು. ಪ್ರಧಾನ ಮಂತ್ರಿ ನೆಹರೂರವರು ಜಾಗತಿಕ ಪರಿಸ್ಥಿತಿ, ಭಾರತ ಪಾಕಿಸ್ತಾನ ಸಂಬಂಧ, ಕಾಶ್ಮೀರ ಪ್ರಶ್ನೆ, ಹಾಗೂ ನಿರಾಶ್ರಿತರ ಆಸ್ತಿಯ ಸಮಸ್ಯೆಗಳ ಬಗ್ಗೆ ಚುಟುಕಾಗಿ ಪರಿಷತ್ತಿಗೆ ತಿಳಿಸಿದರು.

ಮೇ ತಿಂಗಳಲ್ಲಿ ಕೇಂದ್ರ ಸರಕಾರ: ಕಾಂಗ್ರೆಸ ಪಕ್ಷ ನಾಯಕರ ಆಯ್ಕೆ

ಲೋಕ ಸಭೆಗೂ ಲೋಕ ವಿಧಾನ ಸಭೆಗೂ ಕಾಂಗ್ರೆಸ್ ಪಕ್ಷದಿಂದ ಆರಿಸಲ್ಪಟ್ಟ ಸದಸ್ಯರ ಸಭೆಯು ಬರುವ ಮೇ ತಿಂಗಳ ತಾ. 11ರ ಸುಮಾರಿಗೆ ಜರುಗಿ ಪಕ್ಷದ ನಾಯಕರ ಆಯ್ಕೆ ಆಗಲಿರುದಾಗಿ ವಿಶ್ವಾಸನೀಯ ವಾರ್ತೆ ಹೊರಟಿದೆ. ಕೇಂದ್ರದಲ್ಲಿ ಮಂತ್ರಿಗಳಾಗಿರುವ ರಾಜಕುಮಾರಿ ಅಮೃತ ಕೌರ್, ಶ್ರೀ ಹರೆಕೃಷ್ಣ ಮೆಹತಾಬ್ ಮತ್ತು ಶ್ರೀ ಕೆ. ಎಮ್. ಮುನ್ಷಿಯವರು ಪ್ರಾಂತ ಗವರ್ನರರಾಗಿ ನೇಮಕ ಹೊಂದುವ ಸಂಭವವಿದೆ.

ಬರುವವಾರ
ಪ್ರೋ. ಟಿ. ಎ. ಪೈ, ಎಂ. ಎಲ್. ಎ. ಅವರ
ಕರ್ನಾಟಕದ ಪ್ರಬುದ್ಧ ಬಂದರು ಯಾವುದು?
ಎಂಬ ಸಚಿತ್ರ ಲೇಖನ ಪ್ರಕಟವಾಗಲಿದೆ.

ಬೊಂಬಾಯಿ ಪೇಟೆಯಲ್ಲಿ ಸರಕುಗಳ ಬೆಲೆ ಇಳಿತ

ಬೊಂಬಾಯಿ ಪೇಟೆಯಲ್ಲಿ ದಿನೇ ದಿನೇ ಸರಕುಗಳ ಬೆಲೆ ಇಳಿಯುತ್ತಿದ್ದು, ವ್ಯಾಪಾರಿ ವೃಂದದಲ್ಲಿ ಕಳವಳವನ್ನುಂಟುಮಾಡಿದೆ.

ಆಡಳಿತಗಾರನಿಗೆ ಕ್ರಿಯಾ ಸ್ವತಂತ್ರ ಅಗತ್ಯ.

ಶ್ರೀ ಎ. ಡಿ. ಗೋರವಾಲರು ದಿನಾಂಕ 14ರಂದು ಪೂನೆಯ ಗೋಖಲೆ ಸಂಸ್ಥೆಯಲ್ಲಿ 'ಆಡಳಿತಗಾರನ ಪಾತ್ರ'ದ ಕುರಿತು ಭಾಷಣಮಾಡುತ್ತ "ದೇಶದ ಆಡಳಿತವನ್ನು ನಡೆಸಿಕೊಂಡು ಹೋಗುವವನ ದೈನಂದಿನ ಕಾರ್ಯ ಕಲಾಪಗಳಲ್ಲಿ ಶಾಸನಸಭೆಗಳನ್ನು ರಚಿಸುವವರು ಹಸ್ತಕ್ಷೇಪ ಮಾಡಬಾರದು; ಅಷ್ಟರಮಟ್ಟಿಗೆ ಅತನಿಗೆ ಸ್ವಾತಂತ್ರ್ಯವಿರಬೇಕು" ಎಂದು ಮುಂತಾಗಿ ಹೇಳಿದರು.

ಮಂಡ್ಯದಲ್ಲಿ ಸಕ್ಕರೆಗೆ ಗಿರಾಕಿಗಳಿಲ್ಲ

ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಂಪೆನಿಯಲ್ಲಿ ಗಿರಾಕಿಯಿಲ್ಲದ ನಿಮಿತ್ತ ಒಂದು ಲಕ್ಷದ ನಾಲ್ವತ್ತು ಸಾವಿರ ಚೀಲ ಸಕ್ಕರೆಯುಸಂಗ್ರಹ ಬಿದ್ದಿರುವುದಾಗಿ ವರದಿಯಾಗಿದೆ.

ಮದ್ರಾಸಿನಲ್ಲಿ ಹೊಸ ಗವರ್ನರರ ಅಧಿಕಾರ ಸ್ವೀಕಾರ

ಶ್ರೀಶ್ರೀ ಪ್ರಕಾಶರು ಇದೇ ತಾ.12ರಂದು ಪೂರ್ವಾಹ್ನ 10½ತಾಸಿಗೆ ಮೌಂಟ್‌ರೋಡಿನಲ್ಲಿರುವ ರಾಜಾಜಿ ಭವನದಲ್ಲಿ ಪ್ರತಿಷ್ಠಿತ ನಾಗರಿಕರ ಸಮ್ಮುಖದಲ್ಲಿ ಅಧಿಕಾರ ಸ್ವೀಕಾರ ಮಾಡಿದರು.

ಕಮ್ಯೂನಿಜಂ ಹತ್ತಿಕ್ಕಲು ಬಂದೂಕು ಮಾತ್ರವಲ್ಲ ಆಹಾರವೂ ಬೇಕು

ಎಂದು ಶ್ರೀಮತಿ ಎಲಿನಾ ರೂಜವೆಲ್ಟರು ಹೊಸ ಡಿಲ್ಲಿಯಲ್ಲಿ ತಮ್ಮ ಗೌರವಾರ್ಥವಾಗಿ ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ಹೇಳಿದರು.

ಪ್ರಕಟಣೆ

ಪಡುಬಿದ್ರೆ ಮಹಾಲಿಂಗೇಶ್ವರ ದೇವಸ್ಥಾನದ ಅಮೃತ ಪಡಿಅಕ್ಕಿಯಿಡುವ ಮ... ಆ ದೇವಕಾರ್ಯ ಕೆಲಸ ಮಾಡುವ ಶಿವಪ್ಪ ನಾರಾಯಣಯ್ಯನ ವಿಧವೆ ಚಂದ್ರಮ್ಮ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ ಮೊನ್ನೆ ತಾರೀಕು 12-3-52 ರಲ್ಲು ಪಡುಬಿದ್ರೆ ದೇವಸ್ಥಾನದ ಒಳ ಅಂಗಣದಲ್ಲಿ ನಾನು ಅಮೃತ ಪಡಿಅಕ್ಕಿ ಇಟ್ಟು ಹೊರಬರುವಾಗ ಲಕ್ಷ್ಮೀನಾರಾಯಣ ಆಚಾರ್ಯರ ಮಗ ರಾಮನಾಥ ಆಚಾರ್ಯ ಮತ್ತು ವೆಂಕಟಕೃಷ್ಣ ಎಂಬಿಬ್ಬರು ನನ್ನನ್ನು ತಡೆದು ನಿಕ್ಷಸಿ ಹೆಣ್ಣು ಹೆಂಗಸೂ ಅಲೆಯೂ ಆದ ನನ್ನ ಎಡಕೈಯನ್ನು ಬಲಾತ್ಕಾರದಲ್ಲಿ ಹಿಡಿದು ಎಡಹೆಟ್ಟಿಟ್ಟ ಮೊಹರನ್ನು ಒಂದು ಖಾಲಿಕಾಗದಕ್ಕೆ ತೆಗೆದುಕೊಂಡಿರುತ್ತಾರೆ. ನಾನು ಅಮೃತಪಡಿ ಅಕ್ಕಿ ಇಡುವ ಹಕ್ಕನ್ನು ಸ್ವಾಧೀನ ಮಾಡಿಕೊಳ್ಳುವದಕ್ಕಾಗಿ ಮೊಕ್ತೇಸರರಾದ ಎ. ರಾಮಚಂದ್ರ ಭಟ್ರ ದುರ್ಬೋಧನೆಯಿಂದ ಮಾಡಿದುದಾಗಿದೆ ಎಂದು ತಿಳಿಯುತ್ತೇನೆ. ಅನ್ಯಾಯ ಕುಹಕ ವಂಚನೆಯ ಕೆಲಸವನ್ನು ಮಾಡಿದ್ದಲ್ಲಿ ದೇವಸ್ಥಾನಕ್ಕೆ ಸಂಬಂಧಪಟ್ಟ ಯಾವತ್ತೂ ರಿಕಾರ್ಡುಗಳ ಸಿಂಧುವಾಗತಕ್ಕದ್ದಲ್ಲ ಈ ವಿಷಯವನ್ನು ನಾನು ಪೋಲೀಸು ಹೌಸ್ ಆಫೀಸರ್ ಉಡುಪಿಯವರ ಮುಂದೆಯೂ ಬರೆಕೊಂಡಿದ್ದೇನೆ.

... ಎಡಕೈ ಹೆಬ್ಬೆಟ್ಟಿನ ಗುರುತು ಮತ್ತು ... ರುಜು

ಚಂದ್ರಮ್ಮಳ ರುಜು.

ನಾಜೂಕು ಬಟ್ಟೆಯ ಬೆಲೆಯಲ್ಲಿ ಕಡಿತ

ಮುಂದಿನ ತಿಂಗಳಿಂದ ನಾಜೂಕು ಬಟ್ಟೆಯ ಮತ್ತು ಅತೀ ನಾಜೂಕು ಬಟ್ಟೆಯ ದರವು ಈಗ ಇರುವುದಕ್ಕಿಂತ ಸೇಕಡಾ 5 ಮತ್ತು 7ರಷ್ಟು ಅನುಕ್ರಮವಾಗಿ ಕಡಿಮೆಯಾಗಲಿರುವುದೆಂದು ಹೇಳಲಾಗಿದೆ. ಸಾಮಾನ್ಯ ಮತ್ತು ಮಧ್ಯಮ ತರಗತಿಯ ಬಟ್ಟೆ ದರವೂ ರೂಪಾಂತರ ಹೊಂದುವ ಸಂಭವವಿದೆ.

ಭಾರತದ ಪಂಚವಾರ್ಷಿಕ ಯೋಜನೆಗೆ ಪ್ರಶಸ್ತಿ

ಭಾರತದ ಕೃಷಿ ವ್ಯವಸಾಯದ ಪಂಚವಾರ್ಷಿಕ ಯೋಜನೆಯು ಭಾರತಸರಕಾರದಿಂದ ಹೂಡಲ್ಪಟ್ಟ ಬೃಹತ್ ಯೋಜನೆಗಳಲ್ಲಿ ಅತೀ ದೊಡ್ಡದೆಂದು ಯುನೈಟೆಡ್ ಸ್ಟೇಟ್ಸ್ ಕಾಂಗ್ರೆಸು ಪ್ರಶಸ್ತಿಯನ್ನಿತ್ತಿದೆ.

ಬಟ್ಟೆ ವಿತರಣೆ ನಿಯಂತ್ರಣ ಹೋಗಲಿ

ಬಟ್ಟೆಯ ಬೆಲೆಗಳೀಗ ಇಳಿಮುಖವಾಗಿರುವುದರಿಂದ ಬಟ್ಟೆವಿತರಣೆಯ ನಿಯಂತ್ರಣವನ್ನು ಸದ್ಯಕ್ಕೆ ಡಿಲ್ಲಿಯಲ್ಲಿ ತೆಗೆದುಹಾಕಿದಂತೆ ಭಾರತದ ಎಲ್ಲಾ ಸ್ಥಳಗಳಲ್ಲೂ ತೆಗೆದುಹಾಕಬೇಕೆಂದು ಕಲ್ಕತ್ತೆಯಲ್ಲಿ ಶ್ರೀ ಬಿರ್ಲಾರು ಹೇಳಿದರು.

ಬಳ್ಳಾರಿಯಲ್ಲಿ ಹೋಳಿ ಹಬ್ಬದ ದುರಂತ.

ತುಂಗಭದ್ರ ನೀರಾವರಿ ಯೋಜನೆಯ ಇಂಜಿನಿಯರರ ಜೀಪ್ ಕಾರು ಅವರ ಮಕ್ಕಳನ್ನು ಕೂಡಿಸಿಕೊಂಡು ಮನೆಗೆ ಬರುತ್ತಿದ್ದಾಗ ಕೆಲವರು ಆ ಜೀಪಿನ ಡ್ರೈವರನಮೇಲೆ ಹೋಳಿಹಬ್ಬದ ಓಕುಳಿಯನ್ನು ಚೆಲ್ಲಿದ್ದರಿಂದ ಅವನಿಗೆ ಸ್ಟಿಯರಿಂಗದ ಮೇಲಿನ ಹತೋಟಿ ತಪ್ಪಿ ಆ ಕಾರು ಬುಡಮೇಲಾಯಿತು. ಡ್ರೈವರನಿಗೆ ಅನೇಕ ಕಡೆ ಗಾಯಗಳಾದುವು. ಕಾರಿನಲ್ಲಿದ್ದ ಹುಡುಗರಿಗೆ ಮಾತ್ರ ಚಿಕ್ಕಪುಟ್ಟ ಗಾಯಗಳಾದುವು

ತಿರು-ಕೊಚ್ಚಿಯಲ್ಲಿ ಮಂತ್ರಿಗಳ ಅಧಿಕಾರ ಸ್ವೀಕಾರ.

ಶ್ರೀ ಎ. ಜೆ. ಜಾನರು ಮುಖ್ಯಮಂತ್ರಿಗಳಾಗಿರುವ ತಿರು-ಕೊಚ್ಚಿಯ ಕಾಂಗ್ರೆಸ್ ಮಂತ್ರಿಮಂಡಲವು ದಿನಾಂಕ 12ರಂದು ಮಧ್ಯಾಹ್ನ ಅಧಿಕಾರ ಸ್ವೀಕರಿಸಿತು.

... 'ಗುಬ್ಬಿಬಾಣ'

... ನಾಲ್ಕು ಮೈಲು ದೂರದಲ್ಲಿ ಶತ್ರುವಿಮಾನವನ್ನು ಕಂಡುಹಿಡಿದು ಅದನ್ನು ನಾಶಗೊಳಿಸಬಲ್ಲ ಅಸ್ತ್ರವೊಂದನ್ನು ಅಮೇರಿಕೆಯ ನೌಕಾಶಾಖೆಯು ಕಂಡುಹಿಡಿದಿರುವುದೆಂದು ತಿಳಿಯಲಾಗಿದೆ. ಈ ಅಸ್ತ್ರಕ್ಕೆ 'ಗುಬ್ಬಿಬಾಣ'ವೆಂದು ಹೆಸರಿಡಲಾಗಿದೆ.

ಬೆಲೆಗಳನ್ನು ಕೆಳಮಟ್ಟದಲ್ಲಿ ಸ್ಥಿರಗೊಳಿಸಲು ಅಹಮ್ಮದಬಾದ ಕಾಂಗ್ರೆಸು ಕಮಿಟಿಯ ಬಿನ್ನಹ

ಅಹಮದಬಾದ ನಗರ ಕಾಂಗ್ರೆಸ್ ಕಮಿಟಿಯು ಬೆಲೆಗಳು ಕೆಳಮಟ್ಟದಲ್ಲಿ ಸ್ಥಿರವಾಗುವಂತೆ ಸರಕಾರವು ಅವಶ್ಯಕ ಉಪಾಯ ಕೈಕೊಳ್ಳಬೇಕೆಂದು ಬಿನ್ನವಿಸುವ ನಿರ್ಣಯವನ್ನು ಪಾಸು ಮಾಡಿತು. ಔದ್ಯೋಗಿಕ ನಗರಗಳಿಗೆ ಮೊದಲಿನಂತೆ ಆಹಾರ ಬೆಲೆ ಪರಿಹಾರಧನ ಕೊಡಬೇಕೆಂದು ಇನ್ನೊಂದು ನಿರ್ಣಯ ಮೂಲಕ ವಿನಂತಿಸಲಾಯಿತು

65,000 ಸಹಾನುಭೂತಿ ಸಂದೇಶಗಳು

ಇಂಗ್ಲೆಂಡಿನ ರಾಜರ ನಿಧನದ ಬಗ್ಗೆ ಪ್ರಪಂಚದ ಬೇರೆ ಬೇರೆ ಕಡೆಗಳಿಂದ ಒಟ್ಟು 65,000 ಸಹಾನುಭೂತಿ ಸಂದೇಶಗಳು ಬಂದಿದ್ದು ಅವಕ್ಕೆಲ್ಲಾ ಸಾವಕಾಶದಲ್ಲಿ ತಕ್ಕ ಉತ್ತರ ಕೊಡಲಾಗುವುದೆಂದು ತಿಳಿದಿದೆ.

ಉಡುಪಿ

ಕಸ್ತೂರಿ ಬಾ ಮೆಡಿಕಲ್ ಕಾಲೇಜಿನ—ಯೋಜನೆಯ ಕುರಿತು ವಿಚಾರ ವಿನಿಮಯ ಮಾಡಲು ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್ ಇವರು, ಎಕೆಡೆಮಿಯ ರಿಜಿಸ್ಟ್ರಾರರಾದ ಡಾ। ಮಾಧವ ಪೈಗಳನ್ನು ಬರುವ ತಾರೀಖು 20ರಂದು ಮದ್ರಾಸಿನಲ್ಲಿ ಕಾಣಲು ಸಮ್ಮತಿಸಿದ್ದಾರೆ. ಡಾ। ಪೈಗಳು ಅಲ್ಲಿ ಮುಖ್ಯ ಮಂತ್ರಿಗಳನ್ನು, ಸಂಬಂಧಪಟ್ಟ ಇನ್ನಿತರರನ್ನೂ ಕಾಣಲಿದ್ದಾರೆ. ಅಲ್ಲದೆ ಅಗತ್ಯ ಕಂಡರೆ ಪ್ರಧಾನ ಮಂತ್ರಿಗಳಾದ ಪಂಡಿತ ನೆಹರುಗಳನ್ನು ಭೇಟಿಯಾಗಲು ನವದಿಲ್ಲಿಗೂ ಡಾ। ಪೈಗಳು ಹೋಗಬಹುದೆಂಬ ನಿರೀಕ್ಷೆ ಇದೆ.

ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್—ಈ ಸಂಸ್ಥೆಯ ಆರ್ಥಿಕ ಮತ್ತು ಸಂಘ ಶಕ್ತಿಯ ಅಭಿವೃದ್ಧಿಗಾಗಿ ಒಂದು ಲಕ್ಷ ಜನಸದಸ್ಯರನ್ನು ಸೇರಿಸಿಕೊಳ್ಳುವ ಪ್ರಯತ್ನವನ್ನು ಇದರ ರಿಜಿಸ್ಟ್ರಾರರು ಮಾಡುತ್ತಿದ್ದಾರೆ. ಈ ಸಂಸ್ಥೆಯ ಒಟ್ಟು ಸದಸ್ಯರು 650 ಮಂದಿ ಇತ್ತೀಚೆಗೆ ಹೊಸದಾಗಿ ಸೇರಿದವರು ಸುಮಾರು 1000 ಜನರಾಗಬಹುದು. ಸಂಸ್ಥೆಯನ್ನು ಒಂದು ಲಕ್ಷ ಜನ ಸೇರಿದುವಂತಾದರೆ ಇದರಿಂದ ಜನೋಪಕಾರೀ ಅನೇಕ ಚಟುವಟಿಕೆಗಳು ಆಗಲು ಸಾಧ್ಯವಾಗಬಹುದು.

ಪ್ರಕಟಣೆ

ಉಡುಪಿ ತಾಲೂಕು ಕಾಪು ಪಂಚಾಯತ್ ಬೋರ್ಡಿಗೆ ಒಪ್ಪಿದ ಹಪ್ತವಾರದ ವ, ದಿನದ ಮಾರ್ಕೆಟುಗಳಲ್ಲಿ ತಾ 1-4-52ರಿಂದ ತಾ 31-3-53ರವರೆಗೆವರೆವಸೂಲು ಮಾಡುವ ಮತ್ತು ಮಾರ್ಕೆಟು ಸ್ಟಾಲ್ಸುಗಳನ್ನು ಪೂರ್ವೋಕ್ತ ಅವಧಿಯ ವರ್ಷದಲ್ಲಿ ಸ್ವಾಧೀನತೆಯಿಂದ ಉಪಯೋಗಿಸುವ ಸ್ವತಂತ್ರವನ್ನು ಇದೇ ಬರುವ ತಾರೀಕು 26-3-52ನೇ ಬುಧವಾರ ಅಪರಾಹ್ನ ಗಂಟೆ 3ಕ್ಕೆ ಪಂಚಾಯತ್ ಬೋರ್ಡ್ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುತ್ತದೆ. ಸದ್ರಿ ಏಲಂ ಶರ್ತಗಳ ಕುರಿತು ಬೇಕಾದ ಅನುಭವವನ್ನು ಆ ಬೋರ್ಡ್ ಆಫೀಸಿನಲ್ಲಿ ತಿಳಿಕೊಳ್ಳಬಹುದು. ಏಲಂ ಸಂಗತಿಯನ್ನು ಈ ಮೂಲಕ ತಿಳಿಸಲಾಗುತ್ತದೆ.

ಕಾಪು ಮಂಜುನಾಥ ಶೆಣೈ,
ಪ್ರೆಸಿಡೆಂಟ್, ಪ. ಬೋ. ಕಾಪು

ಕಾಪು, 19-3-52

The Vijaya Bank Ltd. Udipi.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡಕೊಂಡು ಕ್ಲುಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ, ಸದರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದರಿಯವರು ಈಡಿಟ್ಟ ನಗಗಳನ್ನು ಇದೇ ತಾ 31-3-52ನೇ ಸೋಮವಾರ ಘಂಟೆ 3ಕ್ಕೆ ಸರಿಯಾಗಿ, ಅಥವಾ ಬೇಂಕಿಗೆ ಯುಕ್ತ ಕಂಡ ಇತರ ಯಾವದೇ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವದೆಂದು ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮತ್ತು ಬಡ್ಡಿ ಸಮೇತ 31-12-51 ವರೆಗೆ		
23/9-50	ಕೆ. ನಂದ್ಯಪ್ಪ ಸೆಟ್ಟಿ, ರಂಗಯ್ಯ ಸೆಟ್ರ ಮಗ, ಕುತ್ಯಾರು ಗ್ರಾಮ, ಪೋಸ್ಟು ಶಿರ್ವ.	44	3	0
213/9-50	ವಿ. ಶೀನ ಸೆಟ್ಟಿ, ನಂದ್ಯಪ್ಪ ಸೆಟ್ರ ಮಗ, ಟೈಲರ್, ಕಾರ್ಕಳ ಪೋಸ್ಟು, ಕಾರ್ಕಳ.	105	5	0
271/9-50	ಶ್ರೀ ಸರ್ಪ ಸೆಟ್ಟಿ, ಸುಬ್ಬಯ ಸೆಟ್ರ ಮಗ, ಅಜ್ಜರಕಾಡು, ಉಡುಪಿ.	199	11	0
287/9-50	ಕೆ. ನಂದ್ಯಪ್ಪ ಸೆಟ್ಟಿ, ರಂಗಯ್ಯ ಸೆಟ್ರ ಮಗ, ಬಡಗುಮನೆ, ಕಿದಿಯೂರು ಗ್ರಾಮ, ಪೋಸ್ಟು ಕಿದಿಯೂರು.	81	0	0
336/9-50	ಶ್ರೀ ಕೆ. ಕಿಟ್ಟಣ್ಣ, C/o M. F. S. ಉಡುಪಿ.	12	1	0
412/9-50	ಕೆ. ಗುಂಡು ಸೆಟ್ಟಿ, ನಾಗಯ್ಯ ಸೆಟ್ರ ಅಳಿಯ, ಕೊರಂಗ್ರಪಾಡಿ ಹೊಸ ಮನೆ, ಪೋಸ್ಟು ಕೊರಂಗ್ರಪಾಡಿ.	873	8	0
139/9-50	ಯು. ನಾರಾಯಣ ರಾವ್, ಸುಬ್ಬಪ್ಪಯ್ಯನವರ ಮಗ, ವಕೀಲ್ಸ್ ಕ್ಲಾರ್ಕ್, ಉಡುಪಿ.	25	2	0

ಉಡುಪಿ,
17-3-52.

B. S. S. Hegde,
Agent, Udipi.

ತಾರೀಕು 19-3-52ರಿಂದ

ಅಫಸಾನಾ

ಪಾತ್ರವರ್ಗ:-ವೀಣಾ, ಅಶೋಕ ಕುಮಾರ್, ಕುಲದೀಪ್, ಕೌರ್, ಮೊದಲಾದವರು.

ಅನಂತರ—

ವಫಾ

ನಿಮ್ಮಿ, ಕರನ್‌ದಿವಾನ್, ಮುಖ್ಯ ಭೂಮಿಕೆಯಲ್ಲಿ
ಬರುತ್ತದೆ;ಬಾಬುರ್ ಜಗನ್ಮೋಹಿನಿ, ಅವಾರಾ, ಕಾಲಿಘಾಟ್, ಇತ್ಯಾದಿ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಮಂಗಳೂರು

ಸತ್ಕಾರ ಕೂಟ—ಮಂಗಳೂರು ಬಂದರದಲ್ಲಿ ಈಚೆಗೆ ಕೆಲವು ತಿಂಗಳುಗಳಿಂದ ಮಾಡುತ್ತಿರುವ ಸರ್ವೆಯ ಮಾಹಿತಿ ಪಡೆಯಲು ಬಂದಿರುವ ಪೂನೆಯ ಜಲ ಮತ್ತು ವಿದ್ಯುಚ್ಛಕ್ತಿಯ ಸಂಶೋಧನಾ ಕೇಂದ್ರದ ಡ್ಯಾರೆಕ್ಟರ್ ಶ್ರೀ ಡಿ. ವಿ. ಜೋಗ್ಳೇಕರರನ್ನೂ, ಸಂಯುಕ್ತ ರಾಷ್ಟ್ರ ಸಂಘದ ನೌಕಾತಜ್ಞರಾದ ಮಿ। ಮೊಗನ್ ಸನ್, ಅವರನ್ನು ಮಂಗಳೂರಿನ ಕೆನರಾ ಚೇಂಬರ್ ಒಫ್ ಕೊಮರ್ಸನವರು ಇದೇ ತಾ. 10ರಲ್ಲು ತಮ್ಮ ಕಾರ್ಯಾಲಯಕ್ಕೆ ಸ್ವಾಗತೀಕರಿಸಿ ಚಹಾಸತ್ಕಾರವಿತ್ತರು. ಸಂಘದ ಅಧ್ಯಕ್ಷ ಶ್ರೀ ಎ. ಉಪೇಂದ್ರನಾಥರಾಯರು ಸ್ವಾಗತಮಾತುಗಳನ್ನಾಡಿದ ಬಳಿಕ ಮಂಗಳೂರಿನ ವಿಚಾರದಲ್ಲಿ ಪೂನೆಯಲ್ಲಾಗುತ್ತಿರುವ ಸಂಶೋಧನೆಯ ವಿಚಾರವಾಗಿ ಶ್ರೀ ಜೋಗ್ಳೇಕರರೂ ಮಿ। ಮೊಗನ್‌ಸನ್ನರೂ ಮಾತನಾಡಿದರು. ದ. ಕ. ಜಿಲ್ಲೆಯ ದಕ್ಷಿಣಭಾಗದ ಪಾರ್ಲಿಮೆಂಟ್ ಸದಸ್ಯ ಶ್ರೀ ಬೆನಗಲ್ ಶಿವರಾಯರೂ ಕಾಲೋಚಿತ ಮಾತುಗಳನ್ನಾಡಿದ ನಂತರ ಶ್ರೀ ವಿ. ಎಸ್. ಕುಡ್ವರು ಧನ್ಯವಾದಗಳನ್ನರ್ಪಿಸಿದರು.

ಜಿಲ್ಲಾ ಪ್ರಜಾಪಕ್ಷದ ಮಹಾಸಭೆಯು—ಇದೇ ತಾ. 9ರಂದು ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಇಂದಿನ ರಾಜಕೀಯ ಪರಿಸ್ಥಿತಿ ಹಾಗೂ ಪಕ್ಷದ ಮುಂದಿನ ಕಾರ್ಯಕ್ರಮದ ಕುರಿತು ನಡೆದ ಚರ್ಚೆಯಲ್ಲಿ ಡಾ। ಕೆ. ನಾಗಪ್ಪ ಆಳ್ವ, ಜಿ. ಕೆ. ಗೋವಿಂದ ಭಟ್ ಬಿ. ರಾಮಚಂದ್ರ ರಾವ್ ಮೊದಲಾದವರು ಭಾಗವಹಿಸಿದ್ದರು. ಮದ್ರಾಸು ರಾಜ್ಯದ ಲೆಜಿಸ್ಲೇಟಿವ್ ಕೌನ್ಸಿಲಿಗಾಗಲೀ ಕೇಂದ್ರದ ವಿಧಾನಸಭೆಗಾಗಲೀ ಕೆ. ಆರ್. ಕಾರಂತರು ಹುರಿಯಾಳಾಗಿ ನಿಲ್ಲಬೇಕೆಂದು ಸಭೆಯ ತೀರ್ಮಾನವಾಯಿತು. ಶ್ರೀಗಳಾದ ಕೆ. ಬಿ. ಜಿನರಾಜ ಹೆಗ್ಡೆಯವರೂ, ಕೆ. ಆರ್. ಕಾರಂತರೂ ಪ್ರಜಾಪಕ್ಷದ ಕಾರ್ಯಕ್ರಮಗಳ ಕುರಿತು ಮಾತನಾಡಿದರು.

ಶಾಲಾ ವರ್ಧಂತಿ—ಮಂಗಳೂರಿನ ಸರಕಾರಿ ತರಬೇತಿ ಶಾಲಾ ವರ್ಧಂತಿ ಸಮಾರಂಭವು ಇದೇ ತಾ. 8ರಲ್ಲು ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಲೇಜಿನ ಪ್ರಾಧ್ಯಾಪಕ ಡಾ। ಎಸ್. ಕುಪನ್ ಅವರು ಸ್ವಾಗತ ಭಾಷಣ ಮಾಡಿದರು. ಶ್ರೀ ಎಚ್. ಜಿ. ಹಂದೆಯವರು ಕಾಲೇಜಿನ ಸ್ವಸ್ತಿವಾಚನ ಮಾಡಿದರು. ಅದಕ್ಕೆ ರೆ। ಫಾ। ಎ. ಎಫ್. ಜಿ. ರೇಗೋರವರು ಉತ್ತರವಿತ್ತರು. ಸಭಾಧ್ಯಕ್ಷರು ಕಾಲೇಜಿಗೆ ಯಶಸ್ಸನ್ನು ಕೋರಿ ಮಾತನಾಡಿದ ಬಳಿಕ ಶ್ರೀ ಬಿ. ಎಸ್. ಅಂಚನರು ಧನ್ಯವಾದಗಳನ್ನರ್ಪಿಸಿದರು, ವಿವಿಧ ವಿನೋದಾವಳಿಗಳಾದ ನಂತರ ಸಮಾರಂಭವು ಕೊನೆಯಾಯಿತು.

ಜಿಲ್ಲಾ ಪರಿಷತ್ತು—ದಕ್ಷಿಣ ಕನ್ನಡ ಗಾಣಿಗ ಯಾನೆ ಸಪಲ್ಯರ ಜಿಲ್ಲಾ ಪರಿಷತ್ತು ಇದೇ ತಾ. 9ರಲ್ಲು ಮಂಜೇಶ್ವರದಲ್ಲಿ ಶ್ರೀ ಗಂಗಾಧರ ದಾಸರ ಅಧ್ಯಕ್ಷತೆಯಲ್ಲಿ ಜರಗಿತು.

ದ ಕ. ಜಿಲ್ಲಾ ಹಿಂದುಳಿದ ವರ್ಗದವರ ಸಂಘದ—ಕಾರ್ಯಕಾರೀ ಸಮಿತಿಯ ಸಭೆಯೊಂದು ಈಚೆಗೆ ಜರಗಿತು. ಜಿಲ್ಲಾ ಆಹಾರ ಸಮಿತಿಯಲ್ಲಿ ಸಂಘಕ್ಕೆ ಪ್ರಾತಿನಿಧ್ಯ ದೊರೆಯಬೇಕೆಂದು ಕಲೆಕ್ಟರರನ್ನೂ ಕೇಳಿಕೊಳ್ಳುವ ಸಂಘದ ಶಾಖೆಗಳನ್ನೂ ಜಿಲ್ಲೆಯ ಇತರ ಸ್ಥಳಗಳಲ್ಲೂ ತೆರೆಯಬೇಕೆನ್ನುವ ನಿರ್ಣಯಗಳಾದುವು.

ಕಮಿಶನರರ ವರ್ಗಾವರ್ಗಿ—ಮಂಗಳೂರು ಮುನಿಸಿಪಾಲಿಟಿಯ ಕಮಿಶನರರಾಗಿದ್ದ ಶ್ರೀ ಎಮ್. ಸಂಜೀವ ಶೆಟ್ಟರು ಉತ್ತರ ರೇಂಜಿನ ರೀಜನಲ್ ಇನ್ಸ್‌ಪೆಕ್ಟರ್ ಒಫ್ ಮುನಿಸಿಪಾಲಿಟೀಸ್ ಎಂಡ್ ಡಿಸ್ಟ್ರಿಕ್ಟ್ ಬೋರ್ಡ್ಸ್ ಆಗಿ ನೇಮಕಹೊಂದಿ ವಿಜಯವಾಡಕ್ಕೆ ಹೋಗಿ ಈಗಾಗಲೇ ಚಾರ್ಜ ವಹಿಸಿರುವರು. ಅವರ ಸ್ಥಾನದಲ್ಲಿ ಈರೋಡು ಮುನಿಸಿಪಾಲಿಟಿಯ ಕಮಿಶನರರಾಗಿದ್ದ [ಈಗ ರಜೆಯಲ್ಲಿರುವ] ಶ್ರೀ ವಿ. ಆರ್. ಕಾಮತರು ನೇಮಕಹೊಂದಿ ಸಧ್ಯದಲ್ಲೇ ಚಾರ್ಜು ವಹಿಸಲಿರುವರಾಗಿ ತಿಳಿದುಬರುತ್ತದೆ.

ಭಾಷಣ—ಗವರ್ನಮೆಂಟ್ ಬೇಸಿಕ್ ಟ್ರೈನಿಂಗ್ ಶಾಲೆಯಲ್ಲಿ ಇದೇ ತಾ. 10ರಲ್ಲು ಮೈಸೂರಿನ ಶ್ರೀ ಎಮ್. ಗಂಗಾಧರ ಮೂರ್ತಿಗಳೂ ಶ್ರೀ ಚಂದ್ರಶೇಖರಾಚಾರ್ಯರೂ 'ಭಾರತೀಯ ಸಂಸ್ಕೃತಿ' ಎಂಬ ವಿಷಯದಲ್ಲಿ ವಿದ್ಯಾರ್ಥಿ ಅಧ್ಯಾಪಕರಿಗೆ ಭಾಷಣವಿತ್ತರು.

ಭದ್ರಾವತಿಯಲ್ಲಿ ಶ್ರೀ ಟಿ. ಎ. ಪೈ.

ಇದೇ ತಾ 14ನೇ ಬೆಳಿಗ್ಗೆ ಪೌರಸಭಾ ಕಛೇರಿಯಲ್ಲಿ ಮದರಾಸು ಶಾಸನ ಸಭೆಗೆ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಕ್ಷೇತ್ರದಿಂದ ಚುನಾಯಿತರಾದ ಶ್ರೀ ಟಿ. ಎ. ಪೈಗಳಿಗೆ ಸತ್ಕಾರವೀಯಲಾಯಿತು. ಅನೇಕ ಪುರಪ್ರಮುಖರೂ ಪೌರ ಸಭಾ ಸದಸ್ಯರೂ ಮತ್ತು ಪತ್ರಿಕೋದ್ಯಮಿಗಳೂ ಜಯಮಾಡಿಸಿದ್ದರು. ಪೌರ ಸಭಾಧ್ಯಕ್ಷರಾದ ಶ್ರೀ ಬಿ. ಮಾಧವಾಚಾರ್ಯರು ಶ್ರೀಯುತರನ್ನು ಸ್ವಾಗತಿಸಿ ಸಭೆಗೆ ಪರಿಚಯಮಾಡಿಕೊಟ್ಟರು. ಶ್ರೀ ಪೈಯವರು ಪಶ್ಚಿಮ ಕರಾವಳಿಯ ಪ್ರಬುದ್ಧ ಬಂದರಿನ ನಿರ್ಮಾಣ ವಿಚಾರವಾಗಿ ನಡೆದ ಪ್ರಯತ್ನಗಳನ್ನೆಲ್ಲ ವಿವರಿಸಿ, ಮಲ್ಪೆಯ ವಿಶೇಷ ಅರ್ಹತೆಗಳನ್ನೂ ತಜ್ಞರ ಸಮಿತಿಯು ಮಲ್ಪೆಯನ್ನು ಆರಿಸಿರುವ ವಿಚಾರವನ್ನೂ ಸಭಿಕರ ಗಮನಕ್ಕೆ ತಂದರು. ಅಲ್ಲದೆ ಭದ್ರಾವತಿಯಿಂದ ಮಲ್ಪೆಗೆ ರೈಲ್ವೆಮಾರ್ಗ ಸೌಕರ್ಯ ಏರ್ಪಟ್ಟಲ್ಲಿ ಭದ್ರಾವತಿ ಮತ್ತು ದಾವಣಗೆರೆ ಮೊದಲಾದ ಕೈಗಾರಿಕಾ ಹಾಗೂ ವಾಣಿಜ್ಯ ಪ್ರದೇಶಗಳಿಗೆ ಬಹಳ ಪ್ರಯೋಜನವಿದೆ ಎಂಬ ಅಂಶವನ್ನು ವಿವರಿಸಿದರು. ನಂತರ ಶ್ರೀ ಬಿ. ಮಾಧವಾಚಾರ್ಯರು ಮಾತನಾಡಿ ಕರ್ನಾಟಕಕ್ಕೊಂದು ಪ್ರಬುದ್ಧ ಬಂದರಿನ ಬಗ್ಗೆ ಶ್ರೀ ಟಿ. ಎ. ಪೈಯವರು ನಡಿಸುತ್ತಿರುವ ಚಟುವಟಿಕೆಗಳನ್ನು ಪ್ರಶಂಸಿಸಿ ಮಲ್ಪೆ ಬಂದರಿನಿಂದ ಮೈಸೂರಿಗೆ ಬಹಳ ಸಹಾಯವಾಗುವುದೆಂದೂ ವಿಶೇಷವಾಗಿ ಮಲೆನಾಡಿನ ಅದರಲ್ಲೂ ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಯ ಮಹಾ ಜನರು ಮೈಸೂರು ಸರಕಾರದ ಮುಖಾಂತರ ಕೇಂದ್ರ ಸರಕಾರವನ್ನು ಒತ್ತಾಯಪಡಿಸಿ ಈ ಯೋಜನೆಯ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಮಾಡುವುದು ಆಗತ್ಯವಾಗಿದೆಯೆಂದೂ ಈ ಒಗೆ ಶ್ರಮಿಸುವುದು ತಮ್ಮ ಕರ್ತವ್ಯವೆಂದೂ ಮುಂತಾಗಿ ತಿಳಿಸಿದರು.

ಪೊಳಲಿ—ದ. ಭಾರತದಲ್ಲಿ ಪ್ರಖ್ಯಾತಿ ಹೊಂದಿದ ಪುಳಿನಪುರ ಶ್ರೀ ರಾಜರಾಜೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಎಪ್ರಿಲ್ 3ನೇ ಗುರುವಾರ ಚೆಂಡಾಟದ ಮಹೋತ್ಸವವು ಆರಂಭವಾಗಿ ವಿವಿಧ ಉತ್ಸವಗಳಿಂದ ತಾ 7 ಸೋಮವಾರ ಮಹಾ ರಥೋತ್ಸವ ಮೊದಲಾದ ಕಾರ್ಯಕ್ರಮಗಳಿಂದ ಜರಗಲಿರುವುದು.

ಹಂಗಾಮಿ ಟಪ್ಪಾಲು ಕಟ್ಟೆಯೊಂದು ಇದೇ ತಾ 8ರಲ್ಲು ಪೊಳಲಿಯಲ್ಲಿ ತೆರೆಯಲಾಗಿದೆ. ಇನ್ನು ಮುಂದೆ ಮಂಗಳೂರು ತಾಲೂಕು ಕರಿಯಂಗಳ ಗ್ರಾಮ ಬೆಳ್ಳೂರು ಪೋಸ್ಟು ಎಂಬುದರ ಬದಲಿಗೆ ಪೊಳಲಿ ಪೋಸ್ಟು ಎಂದು ಬರೆಯಬೇಕಾಗಿದೆ.

ಶ್ರೀ. ಎಸ್. ನರ್ಸಪ್ಪಯ್ಯನವರ ಆಯ್ಕೆ—ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿಗೆ ಪಶ್ಚಿಮ ಕರಾವಳಿ ಸ್ಥಳೀಕ ಸಂಸ್ಥೆಗಳ ಮತದಾರ ಕ್ಷೇತ್ರದಿಂದ ಕಾಂಗ್ರೆಸ್ ಉಮೇದ್ವಾರಿಯಾಗಿದ್ದ ವಕೀಲ್ ಎಸ್. ನರ್ಸಪ್ಪಯ್ಯನವರು ಚುನಾಯಿತರಾಗಿರುವರೆಂದು ತಿಳಿಯುತ್ತದೆ.

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು—ಇದೇ ತಾ. 15ರಂದು ಸಂಜೆ ಚೆಯರ್‌ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಹಲವು ಕೆಲವು ಸರಕಾರಿ ಆರ್ಡರುಗಳು ರಿಕಾರ್ಡುಮಾಡಲಾದುವು. 1952-53ನೆ ಹೊಸವರುಷದಲ್ಲಿ ರಸ್ತೆ ದುರಸ್ತಿ ಬಗ್ಗೆ ಅಂದಾಜು ಖರ್ಚ ಸೆಂಕ್ಷನ್ ಮಾಡಲಾಯಿತು.

ತಾಲೂಕು ಸೋಲ್ಜರ್ಸ್ ಕಮಿಟಿ ಸಭೆಯು—ಇದೇ ತಾ. 15ರಂದು ಸಂಜೆ ತಹಶಿಲ್ದಾರ್ ಶ್ರೀ ಕೆ. ವೆಂಕಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು ಮಾಜಿ ಸೈನಿಕರಿಗೆ ಕೋಳಿ ಸಾಕುವಿಕೆಯ ಫಾರ್ಮನ್ನು ತೆರೆಯುವರೆಯೂ ಸಹಕಾರಿ ಸಂಘವೊಂದನ್ನು ಸ್ಥಾಪಿಸುವರೆಯೂ ಸಹಕಾರವನ್ನೀಯುವಂತೆ ರಾ। ಬ। ರಿಜಿಸ್ಟ್ರಾರರನ್ನು ಕೇಳಿಕೊಳ್ಳಲಾಯಿತು. ವಿ. ಸಿ. ಒ. ಮಾಜಿ ಸೈನಿಕರ ಮಕ್ಕಳಿಗೆ ವಿದ್ಯಾಭ್ಯಾಸದ ಬಗ್ಗೆ ರಿಯಾಯಿತಿಗಳನ್ನು ಕೊಡುವಂತೆ ಸರಕಾರವನ್ನು ವಿನಂತಿಸಲಾಯಿತು.

ಕ್ಲಬ್ ದಿನಾಚರಣೆ—ಉಡುಪಿ ಸರಕಾರಿ ನೌಕರರ ಕ್ಲಬ್ ದಿನಾಚರಣೆಯು ತಾಲೂಕು ಕಚೇರಿಯಲ್ಲಿ ಇದೇ ತಾ. 16ರಂದು ಸಬ್ ಟ್ರೆ. ಡಿ. ಸಿ. ಕುಲಾಸೊ ಅವರ ಅಧ್ಯಕ್ಷತೆಯಲ್ಲಿ ಜರಗಿತು ವಕೀಲ್ ಜೆ. ಸಿ. ರೇಗೋರವರು ಕ್ಲಬ್ಬಿನ ಸ್ವಸ್ತಿವಾಚನ ಮಾಡಿದರು, ಸರಕಾರಿ ನೌಕರರಿಗೆಲ್ಲಾ ಇಂತಹ ಕ್ಲಬ್ಬಿನ ಅವಶ್ಯಕತೆಯನ್ನು ಮಾಡಿಸಿ ಎಲ್ಲಾ ಇಲಾಖೆಯ ಸರಕಾರಿ ನೌಕರರೂ ಈ ಕ್ಲಬ್ಬಿಗೆ ಸೇರಿ ಅದರ ಪ್ರಯೋಜನ ಪಡೆಯಬೇಕೆಂದು ಸಭಾಧ್ಯಕ್ಷರು ಹೇಳಿದರು. ಶ್ರೀ ಸೋಜರು ಧನ್ಯವಾದಗಳನ್ನರ್ಪಿಸಿದರು. ಸಭಾರಂಭದಲ್ಲಿ ಚಹಾಸತ್ಕಾರವಿತ್ತು.

ಏಲಂ ಆಗದ್ದರಿಂದ—ಬಂಕೇರ ಕಟ್ಟ ಖಾರಿಯ ಮತ್ತು ಚಿನ್ನಮೂಲ್ಕಿಯ ಪಿಾನುಮಾರ್ಕೆಟಿನ ಗುತ್ತಿಗಳಲ್ಲಿ ಈ ಎಪ್ರಿಲ್ 1, 1952ರಿಂದ ಅನುಕ್ರಮವಾಗಿ 1 ವರ್ಷದ ಮತ್ತು 3ವರ್ಷಗಳ ಫೀಸು ವಸೂಲಿಯ ಹಕ್ಕನ್ನು ರೂ.5 -ರ. ಪ್ರಥಮ ಠೇವಣಿಯೊಂದಿಗೆ ಟೆಂಡರುಗಳನ್ನು ತಾರೀಖು 24-3-1952ರ ಸಂಜೆ ಗಂಟೆ 4ರೊಳಗೆ ಮುಟ್ಟುವಂತೆ ನಿಡಂಬೂರು ಪಂಚಾಯತ ಬೋರ್ಡಿನ ಪ್ರೆಸಿಡೆಂಟರು ಕರೆದಿರುತ್ತಾರೆ.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No 9/1952

ಕಾವೇರಮ್ಮ, ಶಂಕರನಾರಾಯಣ ಕೆದಿಲಾಯರ ವಿಧವೆ, ಪ ಸುಬ್ರಾಯ ಕೊಡಂಚರ ಮಗಳು, ಪುತ್ತೂರು ... ಮುರುಳ್ಯ ಗ್ರಾಮ ಕೇರ ಎಂಬಲ್ಲಿ ... ಅರ್ಜಿ.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದ್ರೆ—

ಅರ್ಜಿದಾರಳ ಅಣ್ಣ ಮೃತ ಸೀತಾರಾಮ ಕೊಡಂಚರು ಬಾಬ್ತು ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಮಂಗಳೂರು ಇವರ ಪೊಲಿಸಿ ನಂಬ್ರ 2571ನೇಗೆ ಬರಲಿರುವ ರೂಪ್ಯಾ 405ನ್ನು ವಸೂಲು ಪಡಿಯಲಿಕ್ಕೆ ತಾನೊಬ್ಬಳೇ ಹಕ್ಕುದಾರಳೆಂದೂ, ವ ಆವನಿಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಿಸಬೇಕೆಂದೂ, ಸದ್ರಿ ಅರ್ಜಿದಾರಳು ಮೇಲ್ಕಂಡ ಅರ್ಜಿ ದಾಖ್ಲು ಮಾಡಿರುತ್ತಾಳೆ. ಅದಕ್ಕೆ ಯಾರಿಗಾದರೂ ಏನಾದರೂ ಆಕ್ಷೇಪಣೆಯಿದ್ದರೆ ಮೇಲ್ಕಂಡ ಅರ್ಜಿಯ ತನ್ಖಿ ವ್ಯಾದೆಯಾದ ತಾ 27-3-1952ನೇ ದಿನ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದೆಂತಲೂ, ಇಲ್ಲವಾದರೆ ಸದ್ರಿ ಹಣ ಪಡಕೊಳ್ಳುವದೆ ಅರ್ಜಿದಾರಳಿಗೆ ವಾರೀಸ್ ಸರ್ಟಿಫಿಕೇಟು ಕೊಡಲಾಗುವುದೆಂತಲೂ ಕೋರ್ಟು ಹುಕುಂ ಪ್ರಕಾರ ಈ ಮೂಲಕ ಸಮಸ್ತ ಜನರಿಗೆ ತಿಳಿಸಲಾಗಿದೆ.

(Sd) **N. V Kolathaya,**
Vakil for Petr.

Puttur, 16-3-52.

ಗೀತೆಯ ಸಮೂಲ ಭಾಷಾಂತರ

ತಿಳಿಗನ್ನಡದಲ್ಲಿ ಅನುಭವಸ್ಥರಿಂದ ಬರೆಯಲ್ಪಟ್ಟ ಇಂತಹ ಅನುವಾದ 'ಗೀತೆಯ ಕೈಗನ್ನಡಿ'ಯನ್ನು ಬಿಟ್ಟರೆ ಇನ್ನೊಂದಿಲ್ಲ. 'ಗೀತೆಯ ಕೈಗನ್ನಡಿ'ಯು ಕೂಸಕೆರೆ ಶ್ರೀ ಚಿದಂಬರಯ್ಯನವರ ಸರಳ ಭಾಷಾಂತರ. ಅತೀ ಅಗ್ಗವಾದ ಮತ್ತು ಪ್ರತಿಮನೆಯಲ್ಲೂ ಇರಬೇಕಾದ ಗೀತಾಪುಸ್ತಕ

ಬೆಲೆ: ಬರೇ 0-12-0 ಮಾತ್ರ.

ಪ್ರತಿಗಳು ಪ್ರಮುಖರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ

ನವಯುಗ ಪ್ರೆಸ್, ಉಡುಪಿ

ಇವರಿಗೆ ಬರೆಯಿರಿ.

For Protection and Provision

Consult

The New Guardian of India Life Insurance Co., Ltd.

Estd] Head office: **MADRAS** [1934

A Policy in this progressive Life Office is good investment: its Agency is valuable business connection.

Applications for representation are invited from influential persons.

Please apply to:

The Branch Manager,
Diamond Building, Hampankatta,
MANGALORE, S. K.

ಕರ್ನಾಟಕ ಚೇಂಬರ್ಸ್ ಒಫ್ ಎಗ್ರಿಕಲ್ಚರ್" ಮಂಗಳೂರು

ಮಂಗಳೂರಿನಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ಕರ್ನಾಟಕ ಚೇಂಬರ್ಸ್ ಓಫ್ ಎಗ್ರಿಕಲ್ಚರ್ ಎಂಬ ಕೃಷಿಕರ ಸಂಸ್ಥೆಯ ಘಟನೆಯು ರಚಿಸಲ್ಪಟ್ಟ ಸ್ಪೆಶಲ್ ಕಮಿಟಿಯಿಂದ ತಯಾರಿಸಲ್ಪಟ್ಟು, ತಾ. 29-2-1952ರಲ್ಲಿ ಪ್ರಿಪ್ ಕಮಿಟಿಯ ಮುಂದಿಟ್ಟು ಸ್ವೀಕರಿಸಲ್ಪಟ್ಟು, ಅದನ್ನು ಒಪ್ಪಿಕೊಳ್ಳುವರೇ ತಾ. 6—4—1952ನೇ ಸಂಜೆ ಗಂಟೆ 4ಕ್ಕೆ ಮಂಗಳೂರು ಹಂಪನ್ ಕಟ್ಟೆಯಲ್ಲಿರುವ ಡೈಮಂಡ್ ಬಿಲ್ಡಿಂಗಿನಲ್ಲಿ ಕೋಓಪರೇಟಿವ್ ಅಫೀಸಿನಲ್ಲಿ ಮಹಾಸಭೆಯು ಕೂಡಿಸಬೇಕೆಂದು ನಿರ್ಧರಿಸಲಾಯಿತು.

ಘಟನೆಯು ಬಹಳ ದೀರ್ಘವಿದ್ದು ಉತ್ತಮ ಉದ್ದೇಶಗಳನ್ನು ಮುಂದಿಟ್ಟುಕೊಂಡು ಸದಸ್ಯತನಕ್ಕೆ ವರ್ಷಾವಧಿ ರೂ. 2/ರಂತೆಯೂ ಜೀವಾವಧಿ ಮೆಂಬರಿಕೆಗೆ ರೂ. 25/ ಎಂದೂ ನಿರ್ಧರಿಸಿರುವುದು.

ಸಂಘದ ಮುಖ್ಯ ಉದ್ದೇಶಗಳು:— ಕೃಷಿಕರ ಯಾವತ್ತು ಹಿತಚಿಂತನೆಯು ಬೆಳವಣಿಗೆ ಮತ್ತು ಸಂರಕ್ಷಣೆ. ಬಂಜರು ಭೂಮಿಗಳನ್ನು ಸಾಗುವಳಿ ಮಾಡಿಸುವರೇ ಬೇಕಾದ ವಿಧಾನಗಳನ್ನು ಹುಡುಕಿ ಮುಂದೊತ್ತುವದು. ಪಶು ಪೋಷಣಾಲಯಗಳನ್ನು ಹಳ್ಳಿಗಳಲ್ಲಿ ನಿರ್ಮಿಸಿ, ಪಶು ಸಂಪತ್ತು ಅಭಿವೃದ್ಧಿಗೊಳಿಸುವರೇ ಸಾಧ್ಯವಿದ್ದ ಪ್ರಯತ್ನ ನಡೆಸುವುದು. ಕೃಷಿಯಲ್ಲಿ ನೂತನ ವಿಧಾನಗಳನ್ನು ಜನಸಾಮಾನ್ಯರಲ್ಲಿ ಪ್ರಸರಿಸುವುದು. ಪ್ರಚಾರ ಸಭೆಗಳು ಕೃಷಿಕರ ಮತ್ತು ಪಶು ಸಂಪತ್ತಿನ ಬೆಳವಣಿಗೆಗೆ ಮಾಡಬಹುದಾದ ಯಾವುದೇ ಕಾನೂನನ್ನು ಶಾಸನ ಸಭೆ ಯಾ, ಸರಕಾರಕ್ಕೆ ಸಲಹೆ ಮಾಡುವ ಸಕಲ ಪ್ರಯತ್ನವನ್ನು ಕೈಗೊಳ್ಳುವುದು. ಕೃಷಿ ಉತ್ಪತ್ತಿ ವಿಕ್ರಯದಲ್ಲಿ ರೀತಿಯುಕ್ತ ಉತ್ತಮ ಧೋರಣೆಗಳನ್ನೂ ತಂದೊಡ್ಡುವುದು. ಕೃಷಿ ಉತ್ಪತ್ತಿಗಳನ್ನು ಸಂಗ್ರಹಿಸಿ, ಅದರ ವಿಕ್ರಯಕ್ಕೆ ಬೇಕಾದ ಅನುಕೂಲತೆಗಳನೊಡ್ಡುವ ಪ್ರಯತ್ನ, ಆರ್ಥಿಕ ದುಸ್ಥಿತಿಗೆ ಸಿಕ್ಕಿ ಕೃಷಿಕಾರುಬಾರಿಕೆಯನ್ನು ನಡೆಯಿಸಲು ಸಾಧ್ಯವಿಲ್ಲದಿದ್ದವರಿಗೆ ಸಾಧ್ಯವಿದ್ದಷ್ಟು ಮಟ್ಟಿಗೆ ಆರ್ಥಿಕ ಅನುಕೂಲತೆಗಳನ್ನು ಏರ್ಪಡಿಸಿ ಕೊಡುವುದು.

ಕೃಷಿಕರಿಗೆ ಬೇಕಾದ ಗೊಬ್ಬರ ಮತ್ತು ಇತರ ಸಲಕರಣೆಗಳನ್ನು ಸುಲಭರೀತಿಯಿಂದ ಒದಗಿಸಿಕೊಡುವ ವ್ಯವಸ್ಥೆ ಮಾಡುವುದು. ಈ ಸಂಘಕ್ಕೆ ಮಹಾಜನರು ಕಾರ್ಯಕರ್ತರ ಪೆಟ್ಟಿನ ಪ್ರಯತ್ನವಿಲ್ಲದೆ ಅಧಿಕ ಸಂಖ್ಯೆಯಿಂದ ಮೆಂಬರರಾಗಿ ಸೇರಿ ಸಂಘದ ಉದ್ದೇಶಗಳನ್ನು ನಡೆಯಿಸಿಕೊಡುವರೇ ನೆರವಾಗಲೆಂದು ಕೋರಿಕೆ.

ಪ್ರಕೃತ ನಮ್ಮಲ್ಲಿ ಜ್ಯಾರಿಯಿರುವ ಲೆವಿ ಪದ್ಧತಿಯಿಂದ ಕೃಷಿಕರು ಬೆಟ್ಟದ ಕಷ್ಟಕ್ಕೀಡಾಗಿದ್ದಾರೆ ಎಂದು ಕೇಳಿಬರುವುದರಿಂದ, ನಾವು ಆ ವಿಷಯದಲ್ಲಿ ಜನರ ನ್ಯಾಯವಾದ ಗೋಳನ್ನು ನಿವಾರಿಸಲು ಪ್ರಯತ್ನಿಸಲಿರುವೆವು. ಜನರು ಅವರು ಹೊಂದುತ್ತಿರುವ ಕಷ್ಟಗಳ ರೀತಿಯನ್ನೂ, ಸಾಧ್ಯವಿದ್ದಷ್ಟು ಅದನ್ನು ಯಾವ ರೀತಿಯಲ್ಲಿ ಸಂಗೊಳಿಸಬಹುದು ಎಂಬ ಅವರದ್ದೇ ಆದ ಸೂಚನೆಗಳನ್ನೂ ನಮಗೆ ಕಳುಹಿಸಬಹುದು. ಅಲ್ಲದೆ ಸಂಸ್ಥೆಯು ಜನ್ಮವೆತ್ತುತ್ತಲೇ ಈಗ ಅಮೇರಿಕಾ ಸರಕಾರವು ಹಿಂದೂಸ್ಥಾನದ ಹಳ್ಳಿಗಳ ಬೆಳವಣಿಗೆಗೆ ನೀಡುತ್ತಿರುವ ಸಹಾಯವನ್ನು ಈ ಸಂಘದ ಮೂಲಕ ನಮ್ಮ ಜಿಲ್ಲೆಗೆ ಕೊಡಿಸಲು ಎಡೆಯಿಲ್ಲವೇ ಎಂಬ ಪ್ರಯತ್ನ ನಡೆಯಿಸಬೇಕೆಂದಿರುವುದು.

ಪಿ. ಬಿ. ಶೆಟ್ಟಿ, ಎಡ್ವಕೇಟ್.
ಲೈಟ್ ಹೌಸ್ ಹಿಲ್, ಮಂಗಳೂರು.
[ಕನ್ವೀನರ್.]

ದ. ಕ. ಜಿಲ್ಲಾ ತೆಂಗು ಮತ್ತು ಅಡಿಕೆ ಮಾರ್ಕೆಟ್ ಕಮಿಟಿ ಸಭೆಯ

ನಿರ್ಣಯದಂತೆ ಇದೇ ತಾ 15ರಿಂದ ಮಂಗಳೂರು ಬಂದರದ ನೀರೇಶ್ವಾಲ್ಯ ರಸ್ತೆಯಲ್ಲಿರುವ ಬೇಬಿ ಆಯಿಲ್ ಮಿಲ್ಸ್ ವರಾರದ ಕಟ್ಟಡದಲ್ಲಿ, ತೆಂಗಿನಕಾಯಿ, ಕೊಬ್ಬರಿ ಮತ್ತು ಅಡಿಕೆ ವಿಕ್ರಿತ ಮತ್ತು ಖರೀದಿಗಾಗಿ ಒಂದು ಮಾರ್ಕೆಟು ಯಾರ್ಡನ್ನು ತೆರೆಯಲಾಗಿದೆ. ಮಾರುವವರಿಗೂ, ಕೊಂಡುಕೊಳ್ಳುವವರಿಗೂ ಪ್ರಯೋಜನವಾಗುವಂತೆ ನಿಶ್ಚಿತ ಸಮಯದಲ್ಲಿ 'ಟೆಂಡರು' ಕ್ರಮದಲ್ಲಿ ಮಾರ್ಕೆಟ್ ಯಾರ್ಡಿನೊಳಗೆ ಮಾರಾಟವು ನಡೆಯುವುದು. ಯಾವತ್ತು ರೈತರಿಗೆ ಅವರ ಸರಕುಗಳನ್ನಿಡಲು ಯೋಗ್ಯ ಗೋದಾಮುಗಳ ಸೌಕರ್ಯವಿದೆ. ಈ ಗೋದಾಮುಗಳಿಗೆ ಬಾಡಿಗೆ ಕೂಡಾ ಇಲ್ಲ. ಯಾವ ತರದ ಕಮಿಶನೂ ಇಲ್ಲದೆ ಸರಕುಗಳಿಗೆ ಯೋಗ್ಯ ಬೆಲೆ ಸಿಕ್ಕುವಂತೆ ಮಾರಾಟದ ವ್ಯವಸ್ಥೆ ಮಾಡಲಾಗಿದೆ. ಕಮಿಟಿಗೆ ತಗಲಬಹುದಾದ ಸಾಗಮಜೂರಿ, ತೂಕ ಮಾಡುವ ಮಜೂರಿ ಇತ್ಯಾದಿಗಳನ್ನು ಮಾತ್ರ ರೈತರು ಕೊಡಬೇಕಾಗುವುದು. ಮಾರ್ಕೆಟು ಯಾರ್ಡಿನಲ್ಲಿ ಮಾರಾಟವು ನಗದಿಯಾಗಿಯೂ ಕೂಡಲೇ ಖಾಲಿ ಮಾಡುವ ಶರ್ತದ ಮೇಲೂ ನಡೆಸಲ್ಪಡುವುದರಿಂದ, ರೈತರಿಗೆ ಸರಕುಗಳು ಮಾರಾಟವಾದೊಡನೆಯೇ ಹಣವು ನಗದಿಯಾಗಿ ಸಿಕ್ಕುವುದು. ಹೆಚ್ಚಿನ ಮಾಹಿತಿಯನ್ನು ಅಪೇಕ್ಷಿಸುವ ರೈತರು 'ಸಕ್ರೆಟರಿ' ದ. ಕ. ಜಿಲ್ಲಾ ತೆಂಗು ಮತ್ತು ಅಡಿಕೆ ಮಾರ್ಕೆಟ್ ಕಮಿಟಿ, ಬಂದರ, ಮಂಗಳೂರು 1 ಇವರಿಗೆ ಬರೆದುಕೊಳ್ಳುವುದು.

ಗ್ರಾಮಾಭಿವೃದ್ಧಿ ಕ್ಷೇತ್ರದ ಮುಖ್ಯ ಕೆಲಸಗಳು— ಕಳೆದ ಪೆಬ್ರವರಿ ತಿಂಗಳಲ್ಲಿ ಕಂಬಳೆ ಕೊರಗರ ವಸತಿಯ ಐದು ಮನೆಗಳು ಕಟ್ಟಲ್ಪಟ್ಟು ತಾ 16ರಂದು ಮದ್ರಾಸು ಪ್ರಾಂತ್ಯದ ಹರಿಜನ ವೆಲ್ಫೇರ್ ಡೈರೆಕ್ಟರ್ ಶ್ರೀ ಭಾಷ್ಯಂ ಅಯ್ಯಂಗಾರರಿಂದ ಉದ್ಘಾಟಿಸಲ್ಪಟ್ಟವು ಈ ಸಮಾರಂಭಕ್ಕೆ ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ, ಅವರು ಅಧ್ಯಕ್ಷಸ್ಥಾನ ವಹಿಸಿದ್ದರು. ಕೊರಗರ ವಸತಿಯ ಸಹಾಯಾರ್ಥ ಪೆಂಡಾಲದ ಯುವಕರು ನಾಟಕವೊಂದನ್ನು ಅಭಿನಯಿಸಿ ಸಹಾಯ ಮಾಡಿರುತ್ತಾರೆ. ಅರ್ಧ ಎಕ್ರೆ ಭೂಮಿ ಸಮತಟ್ಟು ಮಾಡಲ್ಪಟ್ಟಿದೆ. ಮಂಗಲಪಾಡಿ ಹರಿಜನ ವಸತಿಯಲ್ಲಿ ಒಂದು ಬಚ್ಚಲು, ಪೈವಳಿಕೆಯಲ್ಲಿ ಎರಡು ಕಾಲು ಸಂಕಗಳು ಮತ್ತು ಮಂಜೇಶ್ವರ ಫಿರ್ಕಾದ ಇತರ ಗ್ರಾಮಗಳಲ್ಲಿ ಎರಡು ಶಾಲಾ ಕಟ್ಟಡಗಳು ಕಟ್ಟಲ್ಪಟ್ಟಿವೆ. ಗ್ರಾಮಸ್ಥರು ಸೇಕಡಾ 50ಕ್ಕೆ ಮೀರಿ ಧನಸಹಾಯ ಮಾಡಿರುತ್ತಾರೆ. ಮುಲ್ಕಿಯ ಹುಡುಗಿಯರ ಅನಾಥಾಲಯದಲ್ಲಿ ಒಂದು ಕೋಳಿ ಸಾಕುವ ಫಾರ್ಮನ್ನು ರೂಪಾಯಿ 500 ಧನಸಹಾಯದಿಂದ ತೆರೆಯಲಾಗಿದೆ. ಕಿಲ್ಪಾಡಿ ಗ್ರಾಮದ ಕೊರಗರ ಭಜನಾಮಂದಿರದ ಮಾಡಿಗೆ ಹಂಚು ಹಾಕಲಾಗಿದೆ. ಇನ್ನಾ ಗ್ರಾಮಕ್ಕೆ ಒಂದು ಬೀಜದ ಹೋರಿಯು ಕೊಡಲ್ಪಟ್ಟಿದೆ. ಈ ತಿಂಗಳಲ್ಲಿ ಗ್ರಾಮಾಭಿವೃದ್ಧಿ ಡೈರೆಕ್ಟರರು ಮೂರು ಫಿರ್ಕಾಗಳ ಅನೇಕ ಗ್ರಾಮಗಳನ್ನು ಸಂದರ್ಶಿಸಿ ಸ್ವಾವಲಂಬನದ ಕುರಿತು ಭಾಷಣಗಳನ್ನು ಕೊಟ್ಟಿರುವರು.

ಬನ್ನಡ್ಕ—ಸ್ಥಳೀಯ 'ಪರಮಹಂಸ' ಶಾಲೆಯ ವರ್ಧಂತ್ಯುತ್ಸವವು ಇದೇ ತಾ 22ರಂದು ಸಂಜೆ ದ. ಕ. ಜಿಲ್ಲಾ ಬೋರ್ಡ್ ವಿದ್ಯಾಧಿಕಾರಿ ಶ್ರೀ ದೇಜು ಉಬ್ಬಿಲ, ಅವರ ಅಧ್ಯಕ್ಷತೆಯಲ್ಲೂ ಮರುದಿನ ಸಂಜೆ ಈ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವರ್ಧಂತಿ ಸಮಾರಂಭವು ವಿವೇಕ ಹೈಸ್ಕೂಲಿನ ಅಧ್ಯಾಪಕ ಶ್ರೀ ಕೆ. ರಾಮಚಂದ್ರ, ಉಡುಪರ ಅಧ್ಯಕ್ಷತೆಯಲ್ಲೂ ಜರಗಲಿರುವುದು.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್‌ವೈದ್ಯ,
ಅಂಬಳೆ ನರಸಿಂಹ ಪಂಡಿತರ ಮನೆತನ ಎ. ರಾಮಸ್ವಾಮಿ ಅಯ್ಯಂಗಾರರವರ

ಸಂತಾನ ಸಿಂಧೂರ

ಬಹಿಷ್ಠೆ ಸಂಬಂಧದ ಹೊಟ್ಟೆನೋವು ಉಂಟು. ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಠೆ ಸಂಬಂಧದ ಹೊಟ್ಟೆನೋವಿನ ಜೊತೆಗೆ ತಲೆನೋವು, ನಡುಕೆಳತ, ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ **ಗ್ಯಾರಂಟೀ ಔಷಧ.**

ಮೂರು ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ಒಂದು ಸೆಟ್ ಅನುಪಾನ ಪತ್ರಿಕೆ ಮೇರೆ ಇಬ್ಬರೂ ಸೇವಿಸಿರಿ ಸಾಕು. ಶೋಧನೆಮಾನ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾಪತ್ರಗಳನ್ನು ಪಡೆದಿದೆ.

ಕ್ರಯ:— ಒಂದು ಸೆಟ್ 5ರೂ. ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1ರೂ ವಿ. ಪಿ. ... ಪ್ಯಾಕಿಂಗ್ ಉಚಿತ 6ರೂ ಮನಿಆರ್ಡರ್ ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ:—**A. R.** ವಿಶ್ವೇಶ್ವರೈಯ್ಯ (ಎ. ರಾಮಸ್ವಾಮಿ ಅಯ್ಯರ್ ಸನ್,)
Prop: ಸಂತಾನ ಸಿಂಧೂರ
ಅಂಬಳೆ ಪೋಸ್ಟು, ಯಳಂದೂರು ತಾಲೂಕು ಮೈಸೂರು ಡಿಸ್ಟ್ರಿಕ್ಟು
ಮೈಸೂರು ಶಾಖೆ: 269 ಸೋನಾರ್ ಸ್ಟ್ರೀಟ್, ದಿವಾನ್ಸ್‌ರೋಡು, ಮೈಸೂರು.

DO UOY KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs. 10 lacks.
3. Has granted an average dividend of 6% to the Shareholders for the past 20 years.
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies

ADOPT IT AS
"MY BANK"
THE VIJAYA BANK, LIMITED.

ಕಾರ್ಕಳ—... ಸ್ಥಳೀಯ ... ... ಮಿಶನ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಇದೇ ತಾ. 16ರಲ್ಲು ರಿ। ಮುನ್ಸಿಫ್ ಶ್ರೀ ಬಿ. ಚಂದ್ರಶೇಖರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ... ಕಾರ್ಯಕ್ರಮಗಳಿಂದ ಜರಗಿತು. ತಾ. 15ರಲ್ಲು ಬೆಳಗ್ಗೆ ವೇಷ ಸ್ಪರ್ಧೆ ಕಾರ್ಯಕ್ರಮವಿತ್ತು.

ಮಣಿಪಾಲ—ಸ್ಥಳೀಯ ಹೈಸ್ಕೂಲಿನಲ್ಲಿ ಇದೇ ತಾ. 13ರಂದು ದಕ್ಷಿಣ ವಿಭಾಗದ ರಿಕ್ರೂಟಿಂಗ್ ಅಫೀಸರ್, ಸಿ. ಮಂದಣ್ಣನವರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ, ಸೈನ್ಯಕ್ಕೆ ಸೇರುವುದರ ಕುರಿತಾಗಿ ಜನರಲ್ಲಿರುವ ತಪ್ಪು ಅಭಿಪ್ರಾಯಗಳನ್ನು ಹೋಗಲಾಡಿಸಿ ಅದರಿಂದಾಗುವ ಸೌಕರ್ಯಗಳ ಕುರಿತು ತನ್ನ ಸ್ವಂತ ಅನುಭವಗಳಿಂದ ಉದಾಹರಿಸಿ ಸೈನ್ಯಕ್ಕೆ ಸೇರುವುದರಿಂದ ದೇಶಸೇವೆ ದ್ವಾರ ಕಾರ್ಯವು ಸುಲಭವಾಗುವುದೆಂಬುದನ್ನು ವಿವರಿಸಿದರು ಮುಖ್ಯೋಪಾಧ್ಯಾಯರು ಧನ್ಯವಾದಗಳರ್ಪಿಸಿದರು.

ಕಟಪಾಡಿ—ಬ್ರಹ್ಮ ಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿಯ ನೇತೃತ್ವದಲ್ಲಿ ಕಟ್ಟಿಸುತ್ತಿರುವ ದೇವಸ್ಥಾನದ ಪ್ರಧಾನ ಗರ್ಭಗೃಹದ 'ಸಹಸ್ರಧಾರ ಪ್ರತಿಷ್ಠಾ' ಸಮಾರಂಭವು ಇದೇ ತಾ. 21ನೆ ಶುಕ್ರವಾರ ಬೆಳಗ್ಗೆ ಬ್ರಹ್ಮ ಶ್ರೀ ಶಂಕರಾನಂದ ಸ್ವಾಮಿಜೀಯವರ ದಿವ್ಯಹಸ್ತದಿಂದ ನೆರವೇರಲಿರುವುದು. ಅಂದು ಸಂಜೆ ಸಂಘದ ಮಹಾ ಸಭೆಯು ಕೂಡಾ ಜರಗಲಿರುವುದು.

ಮೈಸೂರಲ್ಲಿ ದ. ಕ ಜಿಲ್ಲಾ ವಿದ್ಯಾರ್ಥಿಗಳ ಸಭೆಯು ಇದೇ ತಾ. 7ರಲ್ಲು ಶ್ರೀ ಕೆ. ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹಲವು ಮಹನೀಯರ ಭಾಷಣಗಳಾದ ನಂತರ ದ. ಕ. ಜಿಲ್ಲಾ ವಿದ್ಯಾರ್ಥಿಗಳ ಸಾಂಸ್ಕೃತಿಕ ಸಂಘ ಸ್ಥಾಪಿಸುವುದೆಂಬ ನಿರ್ಧಾರವಾಯಿತು ಈ ಸಂಘವು ಯಾವ ರಾಜಕೀಯ ಸಂಸ್ಥೆಗಾಗಲೀ ಪ್ರಾಂತೀಯ ಗೊಂದಲಕ್ಕಾಗಲೀ ಒಳಗಾಗದೆ ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿಗೆ ಸಹಾಯ ಸೌಕರ್ಯಗಳನ್ನು ಒದಗಿಸಲು ಸಹಾಯವಾಗುವ ರೀತಿಯಲ್ಲಿ ಕೆಲಸ ಮಾಡಬೇಕೆಂದು ನಿಶ್ಚಯಿಸಲ್ಪಟ್ಟು ಸಂಘಕ್ಕೆ ತಾತ್ಕಾಲಿಕ ಕಾರ್ಯಕಾರೀ ಮಂಡಳಿಯ ಸದಸ್ಯರ ಚುನಾವಣೆ ನಡೆದು, ಶ್ರೀಗಳಾದ ಕೆ. ನಾರಾಯಣ ರಾವ್ (ಅಧ್ಯಕ್ಷ), ಗೋಪಾಲಕೃಷ್ಣ ಅಡಿಗ (ಉಪಾಧ್ಯಕ್ಷ), ರಾಮಚಂದ್ರ ರಾವ್ (ಕಾರ್ಯದರ್ಶಿ), ಚಂದ್ರಶೇಖರ್, ರಾಮಣ್ಣ, ತೇಜ ಸುಂದರ ರೈ, ರಾಜಗೋಪಾಲಾಚಾರ್, ಜೆ. ಜೆ. ಪಿಂಟೊ, ಎಮ್. ಎಲ್. ಶಾಸ್ತ್ರಿ— ಇವರು ಆರಿಸಲ್ಪಟ್ಟರು.

ಶಾಂತೂರು ಮುದರಂಗಡಿ—ಇಲ್ಲಿಯ ಭಾರತ ವಾಚನಾಲಯದ ಮೆಂಬರರ ಸಭೆಯು ಇದೇ ತಾ 9ರಲ್ಲು ಶ್ರೀ ಎಸ್. ನಾರಾಯಣ ಸೆಟ್ಟರ ಅಧ್ಯಕ್ಷತೆಯಲ್ಲಿ ಪಂಚಾಯತ ಬೋರ್ಡ್ ಅಫೀಸಿನಲ್ಲಿ ಜರಗಿತು. ವರದಿವಾಚನ ಮೊದಲಾದ ಕಾರ್ಯಕ್ರಮಗಳಾದ ನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ವಾಚನಾಲಯದಿಂದ ಹಳ್ಳಿಗರಲ್ಲಿ ಓದುಗರ ಸಂಖ್ಯೆಯು ಬೆಳೆದು ಬರುವಂತಾಗಲೆಂದು ಆಶಿಸಿದರು.

ಅವಶ್ಯವುಳ್ಳ ಎಲ್ಲಾ ಮಾಹಿತಿಯನ್ನೊಳಗೊಂಡ ಉತ್ತಮತರದ
ನಗ್ಗಿ ಪುಸ್ತಕಗಳು
ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ
ಬೆಲೆ: 0—1—0
ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.
...

ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣ

ಗ್ರಾಮಸ್ಥರಲ್ಲಿ ವಿನಂತಿ

ಜಿಲ್ಲಾ ಬೋರ್ಡಿನ ಆಡಳಿತ ವಲಯದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಪ್ರಸಾರ ಕಾರ್ಯವು ಅತ್ಯಂತ ಬೇಸರದಾಯಕವೂ ಅತಿ ಪ್ರಾಮುಖ್ಯವಾದುದೂ ಆಹುದು—ವಿಭಾಗದಲ್ಲಿ ಎಷ್ಟು ಪರಿಶ್ರಮ ಪಟ್ಟರೂ ಅದು ಸ್ವಲ್ಪವೆಂದೇ ತೋರುವುದು—ಅಂದರೆ ಅದರ ಕ್ಷೇತ್ರ ಅಷ್ಟು ವಿಶಾಲವಾಗಿದೆ-ಸಮಸ್ಯೆಗಳು ಅಷ್ಟು ದೊಡ್ಡದಾಗಿದೆ—ಇದ್ದ ಶಾಲೆಗಳನ್ನು ವ್ಯವಸ್ಥೆಯಿಂದ ನಡೆಯಿಸ ಬೇಕು—ಹೊಸ ಶಾಲೆಗಳನ್ನು ತೆರೆಯಬೇಕು. ಇದ್ದವುಗಳಿಗೆ ಕಟ್ಟಡಗಳಿಲ್ಲ ಸಾಕಷ್ಟು ಸಾಹಿತ್ಯ ಸಾಮಗ್ರಿಗಳಿಲ್ಲ ಇಷ್ಟಕ್ಕೆಲ್ಲ ಬೇಕಾದಷ್ಟು ಹಣದ ಅನುಕೂಲತೆಯೂ ಇಲ್ಲ. ಹಾಗಿದ್ದರೂ ಹೊಸ ಶಾಲೆಗಳನ್ನು ತೆರೆದು ವಿದ್ಯಾಪ್ರಚಾರ ಮಾಡುವುದು ಜಿಲ್ಲಾ ಬೋರ್ಡಿನ ಜವಾಬ್ದಾರಿ. ಆಡಳಿತ ಹಾಗೂ ನಾಡಿನ ಹಿತ ದೃಷ್ಟಿಯಿಂದ ಇದು ಬೋರ್ಡಿನ ಮುಖ್ಯ ಕರ್ತವ್ಯವೂ ಆಹುದು.

ನಮ್ಮ ಜಿಲ್ಲೆಯಲ್ಲಿ ಒಟ್ಟು ಸುಮಾರು 2 ಲಕ್ಷ 33ಸಾವಿರ ದಷ್ಟು ಶಾಲಾ ಪ್ರಾಯದ ಮಕ್ಕಳಿದ್ದಾರೆ. ಇವರಲ್ಲಿ ಹೆಚ್ಚುಕಡಿಮೆ 1ಲಕ್ಷ 26ಸಾವಿರದಷ್ಟು ಮಂದಿ ಮಾತ್ರ ವಿದ್ಯಾಭ್ಯಾಸ ಹೊಂದುತ್ತಿದ್ದಾರೆ ಉಳಿದ 1ಲಕ್ಷ 7 ಸಾವಿರದಷ್ಟು ಮಕ್ಕಳಿಗೆ ಯಾವ ವ್ಯವಸ್ಥೆಯೂ ಇಲ್ಲದಂತಾಗಿದೆ. ಇದು ಅತ್ಯಂತ ಶೋಚನೀಯ ವಿಚಾರ, ಜಿಲ್ಲೆಗೆ ಇದೊಂದು ದೊಡ್ಡ ಕೊರತೆಯೂ ಆಗಿದೆ—ವಿದ್ಯಾಪ್ರಚಾರಕ್ಕೆ ಅತ್ಯಗತ್ಯವಾದ ದ್ರವ್ಯಾನುಕೂಲತೆಯ ಅಭಾವವೇ ಇದಕ್ಕೆ ಕಾರಣವೆಂಬುದರಲ್ಲಿ ಸಂದೇಹವಿಲ್ಲ.

ಜಿಲ್ಲಾ ಬೋರ್ಡಿನ ಆಡಳಿತದಲ್ಲಿ ಈಗಾಗಲೇ 559 ಶಾಲೆಗಳಿವೆ- ಅವುಗಳಲ್ಲಿ ಒಟ್ಟು 2 ಸಾವಿರಕ್ಕೂ ಮಿಕ್ಕಿ ಅಧ್ಯಾಪಕರು ದುಡಿಯುತ್ತಿದ್ದಾರೆ. ಈ ಶಾಲೆಗಳಲ್ಲಿ ಒಟ್ಟು 69557 ಮಂದಿ ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣ ಪಡೆಯುತ್ತಿದ್ದಾರೆ.

ಜಿಲ್ಲೆಯ 81ಗ್ರಾಮಗಳಲ್ಲಿ ಕಡ್ಡಾಯ ಶಿಕ್ಷಣವು ಜಾರಿಯಲ್ಲಿದೆ. ಕಡ್ಡಾಯ ಶಿಕ್ಷಣದ ಯೋಜನೆಯಲ್ಲಿ 30 ಮಂದಿ ವಿದ್ಯಾರ್ಥಿಗಳ ಸ್ಥಳಾನುಕೂಲತೆಯ ಒಂದೊಂದು ಹಂಗಾಮಿ ಕಟ್ಟಡಕ್ಕೆ [Sheds] ರೂಪಾಯಿ 1000 ದಂತೆ ಸರಕಾರದ ಧನ ಸಹಾಯವಿದೆ, ಹಾಗಿದ್ದರೂ ಈ ಕಟ್ಟಡಗಳನ್ನು ಕಟ್ಟಿಸುವುದು ತೀರಾ ಕಷ್ಟದ ಕೆಲಸವಾಗಿದೆ. ಕಾರಣವಿಷ್ಟೆ ಅದರಲ್ಲಿ ಬಹಳ ಮಟ್ಟಿನ ಲಾಭಕ್ಕೆ ಅವಕಾಶವಿಲ್ಲ. ಆದುದರಿಂದ ಕಂಟ್ರಾಕ್ಟರರು ಮುಂದೆ ಬರುವುದಿಲ್ಲ, ಗ್ರಾಮಸ್ಥರೇ ತಲೆ ಕೊಡಬೇಕು. ಕೆಲವು ಕಡೆ ಸಧ್ಯ್ರ್ಹಸ್ಥರು ಜನಹಿತದ ದೃಷ್ಟಿಯಿಂದ [illegible] ನ್ನು ಕಟ್ಟಿಸಿದ್ದಾರೆ, ಬೇರೆ ಕೆಲವು ಗ್ರಾಮಗಳಲ್ಲಿ ಯಾರೂ ತಲೆ ಕೊಡುವ ಸಂಭವ ಕಾಣುವುದಿಲ್ಲ. ಅಂತಹ ಗ್ರಾಮಗಳ ಮುಂದಾಳುಗಳು ಮುಂದೆ ಬಂದು ಸರಕಾರದಿಂದ ದೊರೆಯುವ ಸಹಾಯಧನವನ್ನು ಪಡೆದು ಕಟ್ಟಡಗಳನ್ನು ಕಟ್ಟಿಸಿ ಗ್ರಾಮದ ಹಾಗೂ ಸಮಾಜದ ಸೇವೆಯನ್ನು ಮಾಡುವ ಮನಸ್ಸು ಮಾಡಬೇಕಾಗಿ ವಿನಂತಿ.

ಇನ್ನು ಒಂದು ಸಾವಿರಕ್ಕೆ ಮೇಲ್ಪಟ್ಟು ಜನ ಸಂಖ್ಯೆ ಇದ್ದು ಶಾಲೆಗಳಿಲ್ಲದ ಗ್ರಾಮಗಳಲ್ಲಿ ಹೊಸ ಶಾಲೆಗಳನ್ನು ತೆರೆಯುವ ಆದೊಂದು ಹೊಸ ಯೋಜನೆಯನ್ನು ಜಿಲ್ಲಾ ಬೋರ್ಡು ಕೈಕೊಂಡಿರುತ್ತದೆ. ಈ ಯೋಜನೆಯ ಮೇರೆಗೆ ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನ ಗ್ರಾಮಗಳಲ್ಲಿ ಹೊಸ ಶಾಲೆಗಳನ್ನು ತೆರೆಯಬೇಕೆಂದು ನಿರ್ಧಾರ ಮಾಡಿಯದೆ, ಗ್ರಾಮಗಳು ಯಾವುವೆಂದರೆ:—

ಮಂಗಳೂರು ತಾಲೂಕು:—1 ಪಂಜೆ, 2 ಕೊಡಮನ್ನೂರು, 3 ರಾಯಿ, 4 ಮೂಡನಡುಂಗೋಡು, 5 ಬಂಡೋಳಿ, 6 ಎಳಿಯನಡುಗೋಡು, 7 ಪಿಲಿಮೊಗ್ರು 8 ಇರ್ವತ್ತೂರು 9 ಕುಡಂಬೆಟ್ಟು 10 ಮೂಡ ಪಡುಕೋಡಿ 11 ದೇವಶ್ಯ ಮೂಡೂರು, 12 ಮುಕ್ರ್ರುಗು 13 ಕೆಂಕ ಎಕ್ಕಾರ್ 14ಕುಂಜತ ಬೈಲ್ 15 ಬೊಳಿಯಾರ್ 16ಬಾಳ್ತಿಲೆ 17 ನರಿಕೊಂಬು 18 ಮುನ್ನೂರು

ಕಾಸರಗೋಡು ತಾಲೂಕು:—1 ಕಳತ್ತೂರು 2 ಪೆರುಂಬಳೆ

ಪುತ್ತೂರು ತಾಲೂಕು:—1 ಲಾಯಿಲ 2 ಚಾರ್ಮಾಡಿ 3 ಬೇಲಾಲು 4 ಬಂದಾರು 5 ಇಳಂತಿಲ 6 ರಾಮಕುಂಜ 7 ಪುತ್ತಿಲ 8 ಶಾಂತಿಗೋಡು 9 ಕೋಡಿಂಬಳ 10 ಕುರಿಯ 11 ಚಾರ್ವಾಕ 12 ಪಡುವನ್ನೂರು

ಕುಂದಾಪುರ ತಾಲೂಕು:—1 ಅಲೂರು 2 ಬೆಳ್ವಾಲು 3 ಹೆಂಗವಳ್ಳಿ 4 ಉಳ್ತೂರು

ಉಡುಪಿ ತಾಲೂಕು:—1 ಬೈರಂಪಳ್ಳಿ 2 ಹಾಲುವಳ್ಳಿ

ಶಾಲೆಗಳನ್ನು ತೆರೆಯುವ ಸಂದರ್ಭದಲ್ಲಿ ಕಟ್ಟಡ ಮತ್ತು ಇತರ ಸಾಹಿತ್ಯ ಸಾಮಗ್ರಿಗಳನ್ನು ಗ್ರಾಮದ ಜನರು ಒದಗಿಸಿ ಕೊಡುವುದು ಅಗತ್ಯ, ಹಾಗೆ ಧರ್ಮಾರ್ಥ ಒದಗಿಸಿಕೊಟ್ಟರೆ ಜಿಲ್ಲಾ ಬೋರ್ಡು ಶಾಲೆಗಳನ್ನು ತೆರೆಯಲು ಅನುಕೂಲವಾಗುವದು.

ಈ ಯೋಜನೆಯ ಮೇರೆಗೆ ಜಿಲ್ಲಾ ಬೋರ್ಡು ಈಗಾಗಲೇ-1 ಹೆಂಗವಳ್ಳಿ ಕುಂದಾಪುರ 2 ರಾಮಕುಂಜ 3 ಇಳಂತಿಲ 4 ಕೋಡಿಂಬಳ 5 ಚಾರ್ವಾಕ [ಪುತ್ತೂರು] 6 ಬೇಕೂರು 7 ಬಂದಡ್ಕ [ಕಾಸರಗೋಡು] ಈ ಕಡೆಗಳಲ್ಲಿ ಹೊಸ ಶಾಲೆಗಳನ್ನು ತೆರೆದಿದೆ. ಇನ್ನು ಕುರಿಯ ಶಾಂತಿಗೋಡು, ಬೇಳಾಲು, ಲಾಯಿಲ, ಪುತ್ತಿಲ, ಬೆಳ್ವಾಲು, ಕಲತ್ತೂರು ಚಾರ್ಮಾಡಿ ಬೊಳಿಯಾರ್, ಹಾಲುವಳ್ಳಿ, ಮತ್ತು ಬೈರಂಪಳ್ಳಿ ಮುಂತಾದ ಸ್ಥಳಗಳಲ್ಲಿ ಶಾಲೆಗಳನ್ನು ತೆರೆಯುವ ನಿರ್ಣಯ ಆಗುತ್ತಾ ಇದೆ. ಪತ್ರವ್ಯವಹಾರ ನಡಿಯುತ್ತಿದೆ. ಶೀಘ್ರವೇ ಶಾಲೆಗಳು ತೆರೆಯಲ್ಪಡಬಹುದೆಂದು ಊಹಿಸಬಹುದಾಗಿ. ಉಳಿದ ಗ್ರಾಮಗಳ ಜನರು ತೀರಾ ತಟಸ್ಥರಾಗಿದ್ದಾರೆ, ಗ್ರಾಮದ ಹಾಗೂ ಆ ಪ್ರಾಂತ್ಯದ ಮುಂದಾಳುಗಳಿಗೆ ಬರೆದ ಪತ್ರಗಳಿಗೆ ಉತ್ತರವೇ ಬರುವುದಿಲ್ಲ. ಅತ್ಯಂತ ಶೋಚನೀಯ! ಇದೇನೂ ಪ್ರಗತಿಯ ಲಕ್ಷಣವಾಗಿ ತೋರುವುದಿಲ್ಲ. ಆದ್ದರಿಂದ ಗ್ರಾಮಾಂತರಗಳ ಜನರು ತಮ್ಮ ತಮ್ಮ ಗ್ರಾಮದ ಹಾಗೂ ನಾಡಿನ ಏಳಿಗೆಯನ್ನು ಮುಂದಿಟ್ಟುಕೊಂಡು ತಮ್ಮ ಮಟ್ಟಿನ ಜೊಬಾಬ್ದಾರಿಯನ್ನು ಅರಿತು ಅದಷ್ಟು ಪ್ರಯತ್ನಮಾಡಿ ಈ ಸಂದಿಗ್ಧ ಸಮಯದಲ್ಲಿ ತಮ್ಮ ಪಾಲಿನ ಕರ್ತವ್ಯವನ್ನು ನೆರವೇರಿಸುವುದು ಅತ್ಯಾವಶ್ಯಕವಿರುತ್ತದೆ, ಈ ವಿಚಾರವನ್ನು ಗಮನಕ್ಕೆ ತಂದುಕೊಂಡು ಗ್ರಾಮಸ್ಥರು ಸಹಾನುಭೂತಿಯಿಂದ ಸಹಕರಿಸಿ ತಮ್ಮ ಗ್ರಾಮಕ್ಕೊಂದು ಶಾಲೆಯನ್ನು ಕಂಡುಕೊಳ್ಳುವ ಪ್ರಯತ್ನವನ್ನು ಇನ್ನಾದರೂ ಮಾಡದೆ ಇರಲಾರರೆಂದು ನಂಬುತ್ತೇನೆ. ಅಗತ್ಯವಿರುವ ಕಟ್ಟಡಗಳನ್ನು ಒದಗಿಸಿಕೊಟ್ಟು ಶಾಲೆಗಳನ್ನು ತೆರೆಯುವಂತೆ ಮಾಡಿ ತನ್ಮೂಲಕ ತಮ್ಮ ಗ್ರಾಮದ ನೂರಾರು ಮಂದಿ ಮಕ್ಕಳ ಕಲ್ಯಾಣವನ್ನೂ ಅಭಿವೃದ್ಧಿಯನ್ನೂ ಹಾರೈಸಿ ತನ್ಮೂಲಕ ತಮ್ಮ ಅಮೂಲ್ಯ ಸೇವೆಯನ್ನು ಮಾಡಬೇಕಾಗಿ ವಿನಂತಿ.

ಒಂದು ವೇಳೆ ಗ್ರಾಮಸ್ಥರಿಂದ ಅಗತ್ಯಗಳ್ಳ ಸಹಾಯ ದೊರಕದಿದ್ದರೆ ಬೋರ್ಡಿನವರು ನಿರ್ಧರಿಸಿದ ಯೋಜನೆಯನ್ನು ಬಿಟ್ಟುಬಿಡುವ ಪ್ರಸಂಗ ಒದಗೀತು ಅಂಥ ಪ್ರಸಂಗ ಒದಗದ ಹಾಗೆ ಜನತೆಯು ಸಹಾಯ ಮಾಡಬೇಕಾಗಿ ಅಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಜಯಹಿಂದ

ಬಿ ಮಂಜಯ್ಯ ಹೆಗ್ಗಡೆ
ಜಿಲ್ಲಾ ಬೋರ್ಡು ಅಧ್ಯಕ್ಷ

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

O. S. No. 510/1947.
R. I. A. No 2803/1951.

ಪಾರ್ವತಿ ಅಮ್ಮ ಕೂಡಾ — ಅರ್ಜಿದಾರ್ರು

ಮತ್ತು

ನಾರಾಯಣ ಅಡಿಯೋಡಿ ಕೂಡಾ

—ರೆಸ್ಪಾಂಡೆಂಟರು.

ಇವರೊಳಗೆ—

ಸದ್ರಿ ಅರ್ಜಿದಾರರ ಕಡೆ ನೋಟೀಸು-ಮೇಲ್ಕಂಡ ವ್ಯವಹರಣೆಯಲ್ಲಾದ ಪ್ರಿಲಿಮಿನರಿ ಡಿಕ್ರಿ ಶರ್ತಪ್ರಕಾರ ಫ್ಯಾನಲ್ ಡಿಕ್ರಿ ಕೊಡಿಸಬೇಕಾಗಿ ಅರ್ಜಿದಾರ್ರು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 25-3-52ಕ್ಕೆ ಸನ್ನಿಗೆ ಇಟ್ಟಿ[illegible] ಆ ದಿವಸ ಹಾಜರಾಗದಿದ್ರೆ ಎಕ್ಸಪಾರ್ಟಿಯಾಗಿ ತೀರ್ಮಾನಿಸಲಾದೀತೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

K. P V. B. Ejman
Advocate for Petitioners
Kasaragod, 14—3—52.

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು. (ದ.ಕ.)

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ತ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸ್ಲು-ವ-ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿಯಿರುವುದರಿಂದ ಸದ್ರಿಯವರು ನಮ್ಮ ಬೇಂಕಿನಲ್ಲಿ ಈಡಿಟ್ಟಿರುವ ಚಿನ್ನಾಭರಣಗಳನ್ನು ಇದೇ ಏಪ್ರಿಲ್ ತಿಂಗಳ ತಾರೀಕು 5ನೇ ಶನಿವಾರ ಅಪರಾಹ್ನ ಗಂಟೆ 2ಕ್ಕೆ ಯಾ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬಹಿರಂಗವಾಗಿ ಬೇಂಕಿನ ವಠಾರದಲ್ಲಿ ಹರಾಜು ಮಾಡಲಾದೀತು. ತಿಳಿದಿರಲಿ.

ಸಾಲದ ಖಾತ್ರಾ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ರೂ. ಅ. ಪೈ
386/45-6	ಶ್ರೀ ಬೆಳ ಸೆಟ್ಟರ ಮನೆ ಸುಬ್ಬಯ್ಯ ಸೆಟ್ಟಿ, ಚಿಕ್ಕಮ್ಮ ಸೆಡ್ತಿಯ ಮಗ, ಉಪ್ಪುಂದ	219 13 0
89/47-8	ಜನಾಬ್ ಸೈಯದ್ ಮಹಮ್ಮದ್ ಸಾಹೇಬ್, ಸೈಯದ್ ಮೈದಿನ ಸಾಹೇಬರ ಮಗ, ಶಿರೂರು ಕೇರಿ, ಶಿರೂರು	218 9 0
845/47-8	ಜನಾಬ್ ಪಣಕಲ್ ಸುಲೇಮಾನ್ ಸಾಹೇಬ್, ಫಕೀರ್ ಸಾಹೇಬರ ಮಗ, ಕಳಿಹಿತ್ಲು, ಶಿರೂರು	54 0 0
869/47-8	ಶ್ರೀ ಸೂರ್ಕುಂದ ರಾಮ್ಯ ಸೇರುಗಾರ, ಅಂಗಡಿ ಮಂಜಯ್ಯ ಸೇರುಗಾರರ ಮಗ, ಸೂರ್ಕುಂದ, ಬೈಂದೂರು	10 8 0
1164/47-8	— do —	9 10 0
1087/47-8	ಜನಾಬ್ ಅಲ್ಲಿ ಅಹಮ್ಮದ್ ಸಾಹೇಬ್, ಅಹಮ್ಮದ್ ಸಾಹೇಬರ ಮಗ, ಕೆಸರುಕೋಡಿ, ಶಿರೂರು	31 1 0
1119/47-8	— do —	48 6 0
332/48-9	ಶ್ರೀ ಯು. ಶ್ರೀನಿವಾಸ್ ಸೇಟ್, ಸುಬ್ರಾಯ ಸೇಟರ ಮಗ, ಉಪ್ಪುಂದ	41 14 0
374/48-9	— do —	102 7 0
37/48-9	ಶ್ರೀ ಗುಂಡುಮಾಣಿ ನ್ಯೇಮಯ್ಯ ಸೆಟ್ಟಿ, ನಾಗಿ ಸೆಟ್ಟಿ ಮಗ [ಜೈನ] ಕಾಲ್ತೋಡು ಗ್ರಾಮ, ಕಾಲ್ತೋಡು	198 14 0
51/48-9	ಶ್ರೀ ಬುದ್ದಿ ಪೂಜ, ಅಣ್ಣಪ್ಪ ಬಿಲ್ಲವನ ಅಳಿಯ, ಬಾಡ, ಬೈಂದೂರು	6 6 0
393/48-9	ಶ್ರೀ ಗಣಪಯ್ಯ ಸೇರುಗಾರ, ನ್ಯಾಕನಕಟ್ಟೆ ಹನುಮಂತ ಸೇರುಗಾರರ ಮಗ, ಮಯ್ಯಾಡಿ, ಬೈಂದೂರು	48 7 0
658/48-9	ಶ್ರೀ ಸಿ. ಸುಬ್ಬಣ್ಣ ಸೆಟ್ಟಿ, ಚೀಕನಮಕ್ಕಿ ಮಾಧ್ವ ಸೆಟ್ಟರ ಅಳಿಯ, ಯರುಕೋಣೆ, ಕಿರಿಮಂಜೇಶ್ವರ	126 0 0
765/48-9	ಜನಾಬ್ S, ಅಬೂಬಕರ್ ಸಾಹೇಬ್, ಸೋಮುಕುಂಜ್ರ ಮಕ್ದುಮ್ ಸಾಹೇಬರ ಮಗ, ಬೈಂದೂರು	23 4 0
1046/48-9	ಮಿ. ಲಾದ್ರು ಲುದ್ರಿಕ್, ಇಸಾಕ್ ಲುದ್ರಿಕನ ಮಗ, ಕೋಟೆ ಬಾಗಿಲು, ಪಡುವರಿ	68 13 0
1045/48-9	ಮಿ. ಫ್ರಾನ್ಸಿಸ್ ಬೆರೆಟ್ಟೊ, ಸಲಾಧರ ಬೆರೆಟ್ಟೊರ ಮಗ, ತಾಮ್ರದ ಕೆಲಸದವರು, ಬೈಂದೂರು	12 2 0

Byndoor, 14-3-52.

ಎಚ್. ರಾಜೀವ ಸೆಟ್ಟಿ,
ಏಜಂಟ್.

ಮದ್ರಾಸಿನ ಪಬ್ಲಿಕ್ ಇನ್‌ಸ್ಟ್ರಕ್ಷನ್ ಡೈರೆಕ್ಟರರಿಂದ ನವಯುಗ ವಾರಪತ್ರಿಕೆಯು ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಸೆಕೆಂಡರಿ ಶಾಲೆಗಳು ಅದನ್ನು ತರಿಸಿಕೊಳ್ಳಬಹುದಾಗಿದೆ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ ರೂ. 3-4 ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8- [ಪಿ. ಪಿ ಸಹ್ನೆರವಾಚಿ ಪ್ರತ್ಯೇಕ]

Mrs. P. DEVEE, F. DB. (N. J.)
Tollygunge CALCUTTA.
ಸ್ಪಾಕಿಸ್ಟರು ಶಹಾಕಂಪೆನಿ, ಮಂಗಳೂರು

ಪ್ರವಾಸಿಯ ಪತ್ರಗಳು ೨೭

ಲುಗಾನೋ (LUGANO)

ಜೂನ್ ತಾರೀಖು 9ನೇ ಶನಿವಾರ ಇಂಟರ್‌ಲಾಕನಿನಿಂದ ಬೆಳಗ್ಗೆ 8 ಗಂಟೆಗೆ ರೈಲಲ್ಲಿ ಲುಗಾನೋ (Lugano) ಎಂಬ ಪಟ್ಟಣಕ್ಕೆ ಹೊರಟೆ ಎರಡು ಗಂಟೆ ಪ್ರಯಾಣ ಮಾಡಿದ ನಂತರ ಗಂಟೆ 10-15ಕ್ಕೆ ಲುಸರ್ನ (Lucerne) ಎಂಬ ಪಟ್ಟಣ ಬಂತು ಇದು ಕೂಡ ಲುಸರ್ನ ಎಂಬ ಹೆಸರಿನ 23 ಮೈಲು ಉದ್ದವಿರುವ ಸರೋವರದ ಬದಿಯಲ್ಲಿದ್ದು ಅನೇಕ ಪ್ರವಾಸಿಗಳು ಬಂದು ಉಳಕೊಳ್ಳುವ ಪಟ್ಟಣ ಅದರ ಜನಸಂಖ್ಯೆ ಸುಮಾರು 55,000. ಇಲ್ಲಿಗೆ ನಾನು ಹೋಗುವಾಗ ಕಲ್ಕತ್ತದ ಖಾನ್ ಎಂಬ ವರ್ತಕರೊಬ್ಬರು ನನ್ನ ಒಟ್ಟಿಗೆ ಪ್ರಯಾಣ ಮಾಡುತ್ತಿದ್ದರು ಅವರು ಅಲ್ಲಿ ಇಳಿದು ಜ್ಯೂರಿಕ್ ನಗರಕ್ಕೆ ಹೋದರು ನಾನು ಅಲ್ಲಿ ಇಳಿದು ಇನ್ನೊಂದು ರೈಲು ಹತ್ತಿ ಲುಗಾನೋ ಎಂಬಲ್ಲಿಗೆ ಬಂದೆ. ಲುಸರ್ನ ಎಂಬುದು ಜ್ಯೂರಿಕ್‌ನ ದಕ್ಷಿಣಕ್ಕಿದ್ದು, ಸ್ವಿಸ್ ದೇಶದ ಮಧ್ಯದಲ್ಲಿದೆ ಲುಗಾನೋ ಎಂಬುದು ಅಲ್ಲಿಂದ ಪೂರ್ವ-ದಕ್ಷಿಣಕ್ಕಿದೆ. ಅಲ್ಲಿಗೆ ಬರುವಾಗ ರೈಲು ಬಹಳ ದೂರ ಸೈಂಟ್ ಗೊಡಾರ್ಡ ಎಂಬ ಸಪೂರ ಮತ್ತು ಕಡಿದಾದ (Steep) ಬೆಟ್ಟಗಳ ಮಧ್ಯೆ ಇರುವ ಕಣಿವೆಯಲ್ಲಿ [Valley] ಬರುತ್ತದೆ ಇಲ್ಲಿ ನಾನು ಬಂದ 3, 4 ತಿಂಗಳು ಹಿಂದೆ ಹಿಮದ ನೆರೆ [avalanche] ಬಂದು ಗುಡ್ಡೆಯ ಬದಿಯ ನೂರಾರು, ಮನೆಗಳು, ಜನರು ಮತ್ತು ಜಾನುವಾರುಗಳು ಮುಳುಗಿ ಸತ್ತು ಹೋಗಿದ್ದವು. ಈ ಗುಡ್ಡೆಯ ಇಳಿಜಾರಿನಲ್ಲಿ ದೇಶದ ರಕ್ಷಣೆಗೆ ಅನೇಕ ಕಡೆಗಳಲ್ಲಿ ಗುಪ್ತ ಎಡೆಗಳಲ್ಲಿ ಸೈನ್ಯದ ಫಿರಂಗಿಗಳನ್ನು ಇಟ್ಟಿದ್ದಾರೆ ಹೀಗೆ ಕೆಲವು ದೂರ ಪ್ರಯಾಣ ಮಾಡಿದ ಬಳಿಕ ಬಹು ದೊಡ್ಡ ಒಂದು ಸುರಂಗ ಬರುತ್ತದೆ ಅದಕ್ಕೆ ಸೈಂಟ್ ಗೊಡಾರ್ಡ ಸುರಂಗ [St Goddard Tunnel] ಎಂಬ ಹೆಸರು. ಇದು 9½ ಮೈಲು ಉದ್ದ. ಇದನ್ನು ಇಲ್ಲಿರುವ ಆಲ್ಪ್ಸ [Alps] ಪರ್ವತಗಳಲ್ಲಿ ರೈಲ್ವೆ ಇರಾಖೆಯವರು ಮಾಡಿದ್ದು. ಈ ಸುರಂಗದ ಮೂಲಕ ರೈಲು ಸ್ವಿಸ್ ದೇಶದ ಎತ್ತರವಾದ ಒಂದು ಪ್ರದೇಶದಿಂದ ತಗ್ಗಾದ ಇನ್ನೊಂದು ಪ್ರದೇಶಕ್ಕೆ ಇಳಿಯುತ್ತದೆ ಕಳೆದ ಮಹಾಯುದ್ಧದ ಕಾಲದಲ್ಲಿ ಹಿಟ್ಲರನು ಈ ಸುರಂಗವನ್ನು ತನಗೆ ಬಿಟ್ಟು ಕೊಡಬೇಕಾಗಿ ಸ್ವಿಸ್ ಸರಕಾರಕ್ಕೆ ಬೆದರಿಸಿದನಂತೆ ಅದು ಅವನ ಕೈಗೆ ಸಿಕ್ಕಿದ್ದರೆ ಅವನ ಸೈನ್ಯಕ್ಕೆ ಜರ್ಮನಿಯಿಂದ ಇಟಲಿಗೆ ಬರಲಿಕ್ಕೆ ಬಹು ಸುಲಭವಾಗುತ್ತಿತ್ತು. ಆದರೆ ಸ್ವಿಸ್ ಸರಕಾರವು ಅದನ್ನು ಬಿಟ್ಟುಕೊಡಲು ನಿರಾಕರಿಸಿತು. ಮಾತ್ರವಲ್ಲ, ಬಲಾತ್ಕಾರ ಮಾಡಿದರೆ ಈ ಸುರಂಗಕ್ಕೆ ಬೋಂಬು ಹಾಕಿ ಅದನ್ನು ಉಪಯೋಗಿಸದಂತೆ ಮಾಡುವುದಾಗಿ ಹೇಳಿದರಂತೆ ಅವರ ಹತ್ತಿರ ಆಗ ಚೆನ್ನಾಗಿ ತರಬೇತು ಹೊಂದಿದ 5 ಲಕ್ಷ ಜನರ ಸೈನ್ಯ ಇತ್ತು. ಇದನ್ನು ನೋಡಿ ಹಿಟ್ಲರನು ಸುಮ್ಮನಾಗಿ ಸ್ವಿಸ್ ದೇಶದ ಮೇಲೆ ಕೈ ಹಾಕದೆ ಬಿಟ್ಟನು. ಈ ವಿಚಾರಗಳನ್ನು ನನ್ನ ಒಟ್ಟಿಗೆ ಆಗ ಪ್ರಯಾಣ ಬೆಳಸುತ್ತಿದ್ದ ಒಬ್ಬ ಜರ್ಮನ್ ಭಾಷೆ ಮಾತನಾಡುವ ಸ್ವಿಸ್ಸ ಮಹನೀಯರು ತಿಳಿಸಿದರು.

ಈ ಪರ್ವತವನ್ನು ದಾಟಲಿಕ್ಕೆ ರಸ್ತೆಗಳಿದ್ದರೂ ಮೋಟಾರು ಕಾರುಗಳನ್ನು ಈ ಸುರಂಗದ ಒಂದು ಕಡೆಯಿಂದ ಇನ್ನೊಂದು ಕಡೆಗೆ ರೈಲಿನ ಮೂಲಕವೇ ಒಯ್ಯುವರು. ಕೆಳಗಿನ ಪ್ರದೇಶದ ಹೆಸರು ಟಿಸಿನೋ [Ticino] ಎಂತ ಈ ಪ್ರದೇಶವು ಸ್ವಿಸ್ಸ ದೇಶಕ್ಕೆ ಕೂಡಿದ್ದಾದರೂ ಇಲ್ಲಿಯ ಜನರು ಇಟೇಲಿ ಭಾಷೆ ಮಾತನಾಡುವ ಇಟೇಲಿ ಜನಾಂಗಕ್ಕೆ ಸೇರಿದವರು. ಭೂಗೋಳ ಶಾಸ್ತ್ರ ಪ್ರಕಾರ [Geographically] ಈ ಊರು ಇಟೇಲಿ ದೇಶಕ್ಕೆ ಸೇರಿದ್ದಾಗಿ ತೋರುತ್ತದೆ ರೈಲು ಸುಮಾರು 1 ಮೈಲು ಅಗಲದ ಬೈಲುಸೀಮೆ ಪ್ರದೇಶದ ಬದಿಯಲ್ಲಿ ಬರುತ್ತದೆ. ಎರಡೂ ಬದಿ ಶೀತಳವಾದ ಬೆಟ್ಟದ ಸಾಲುಗಳು ಅಲ್ಲಲ್ಲಿ ಅರ್ಧ ಚಂದ್ರಾಕಾರದ ನಮ್ಮಲ್ಲಿ ಪುರಾತನದಲ್ಲಿ ಉಪಯೋಗಿಸುತ್ತಿದ್ದ ಓಡು ಹಂಚು ಹಾಕಿದ ಮನೆಗಳು ಗದ್ದೆಗಳಲ್ಲಿ ದ್ರಾಕ್ಷೆ ಗಿಡಗಳು [Vines] ಮತ್ತು ಇತರ ಪೈರುಗಳು ಕೂಡಾ ಬೆಳೆಯುತ್ತವೆ ಈ ಸೀಮೆಯಲ್ಲಿ ಕೆಲವು ದೂರ ಪ್ರಯಾಣ ಮಾಡಿ ಮಧ್ಯಾಹ್ನ ಸುಮಾರು 1 ಗಂಟೆಗೆ ಲುಗಾನೋ ಎಂಬ ನಗರವನ್ನು ತಲುಪಿದೆನು

ಇದು ಸುಂದರವಾದ ಪಟ್ಟಣ ಜನಸಂಖ್ಯೆ 17,000 ಪಟ್ಟಣವು ಲುಗಾನೋ ಎಂಬ ಹೆಸರಿನ ದೊಡ್ಡ ಸರೋವರದ ಬಳಿಯಲ್ಲಿ ಇರುತ್ತದೆ. ಸರೋವರವು 17 ಮೈಲು ಉದ್ದ ಈ ಪಟ್ಟಣವು ಗುಡ್ಡೆಬದಿಯಲ್ಲಿ ಕಟ್ಟಿದ್ದು ಮೇಲಿಂದ ಕೆಳಕ್ಕೆ ಇಳಿಯುವ ರಸ್ತೆಗಳು. ಪುರಾತನದ ರಸ್ತೆಗಳು ಸಪೂರವಾಗಿದ್ದು ಎರಡೂ ಬದಿ ವ್ಯಾಪಾರ ನಡೆಯುವ ಅಂಗಡಿಗಳು ಅನೇಕ ಅಂಗಡಿಗಳಲ್ಲಿ ವ್ಯಾಪಾರ ಮಾಡುವವರು ಹೆಂಗಸರು ಅಲ್ಲಿದ್ದ ಗಂಡಸರು ಸೌಮ್ಯ ಸ್ವಭಾವದವರಾಗಿ ನನಗೆ ಕಂಡಿತು. ಒಂದು ಅಂಗಡಿಯಲ್ಲಿ ನಾನು ಚಿಲ್ಲರೆ ವ್ಯಾಪಾರ ಮಾಡಿದೆ. ಸರೋವರದ ಬದಿ ಕಲ್ಲಿಂದ ಕಟ್ಟಿದ್ದು ಬದಿಯಲ್ಲಿ ಅಗಲವಾದ ಕಾಲುದಾರಿ ಅದರ ಬದಿಯಲ್ಲಿ ಸಾಲು ಮರ [avenue] ಅದಕ್ಕೆ ತಾಗಿ ರಸ್ತೆ ಅದರ ಒಂದು ತುದಿಯಲ್ಲಿ ಮುನ್ಸಿಪಾಲ್ಟಿಯ ಉದ್ಯಾನ ಇದೆ ಅಲ್ಲಿ ತಿರುಗಾಡಿ ಸ್ವಲ್ಪ ಸಮಯ ಕಳೆದೆ. ಸರೋವರದ ಎದುರು ಬದಿಯಲ್ಲಿ ಬೆಟ್ಟಗಳು. ಈ ಸರೋವರದ ಬದಿಯಿಂದ ಅನೇಕ ಲೋಂಚುಗಳು ಪ್ರಯಾಣಿಕರನ್ನು ಕರಕೊಂಡು ಆ ಬೆಟ್ಟಗಳ ಬದಿಗೆ ಹೋಗಿ ಬರುತ್ತವೆ. ಹಾಗೆ ಸಾಯಂಕಾಲ ಸಮಯ ಸುಮಾರು 1½ ಗಂಟೆ ಸಮಯ ಒಂದು ತಿರುಗಾಟ ಮಾಡಿದೆ. ಲೋಂಚು ಸುಮಾರು 2 ಮೈಲು ಸೀದಾ ಎದುರು ಕಾಣುವ ಬೆಟ್ಟದ ಬದಿಗೆ ಹೋಗಿ ಅಲ್ಲಿ ಸರೋವರದ ಬದಿಯಲ್ಲಿ ಅಲ್ಲಲ್ಲಿ ಇರುವ ಸಣ್ಣ ಸಣ್ಣ ಹೊಟೇಲುಗಳ ಸಮೀಪಕ್ಕೆ ಹೋಗುವುದು ಅಲ್ಲಿ ಕೆಲವು ಪ್ರಯಾಣಿಕರು ಇಳಿಯುವರು. ಕೆಲವರು ಹತ್ತುವರು, ಹಾಗೆ 4, 5, ಕಡೆಗೆ ಹೋಗಿ ಲೋಂಚು ಸರೋವರಕ್ಕೆ ಸುತ್ತು ತೆಗೆದು ಹಿಂತಿರುಗಿ ಹೊರಟಲ್ಲಿಗೆ ಬಂದು ಸೇರಿತು. ಈ ತಿರುಗಾಟಕ್ಕೆ ಒಬ್ಬರಿಗೆ 1-30 ಫ್ರೆಂಕ್ಸ [ರೂ. 1½] ಮಾತ್ರ ಚಾರ್ಜು.

ಈ ನಗರದಲ್ಲಿ ಅನೇಕ ದೊಡ್ಡ ದೊಡ್ಡ ಹೋಟೇಲುಗಳಿವೆ. ನಾನು ಕೊಂಟಿನೆಂಟಲ್ [Continental] ಎಂಬ ಒಂದು ದೊಡ್ಡ ಹೋಟೇಲಿನಲ್ಲಿ ಉಳಕೊಂಡಿದ್ದೆ ನನ್ನ ನಾಲ್ಕನೇ ಉಪ್ಪರಿಗೆಯ ಕೋಣೆಯು ಸರೋವರಕ್ಕೆ ಸಮೀಪವಿರುವ ಗುಡ್ಡೆಯ ಬಳಿಯಲ್ಲಿದ್ದು ಅಲ್ಲಿಂದ ವಿಸ್ತಾರವಾದ ಸರೋವರ ಅದರ ಹಿಂದೆ ಒಂದರ ಹಿಂದ ಕೊಂದು ಬೆಟ್ಟದ ಸಾಲು ಮತ್ತು ಒಂದು ಬದಿಯಲ್ಲಿ ದೂರದಲ್ಲಿ ಬಿಳೀ ಹಿಮ ಮುಚ್ಚಿದ ಆಲ್ಪ್ಸ ಬೆಟ್ಟಗಳ ಶಿಖರಗಳು ಬಹಳ ಸುಂದರವಾಗಿ ಕಾಣುತ್ತಿದ್ದವು

ಈ ಹೋಟೇಲಿನಲ್ಲಿ ರಾತ್ರಿ ಇದ್ದು ಮರುದಿನ, ಅಂದರೆ ಆದಿತ್ಯವಾರ ಜೂನ್ 10ನೇ ತಾರೀಕಿನ ಬೆಳಗ್ಗೆ, 9-21ರ ಘಂಟೆ ರೈಲಿನಲ್ಲಿ ದಕ್ಷಿಣ ಮುಖವಾಗಿ ಇಟೇಲಿ ದೇಶದ ಮಿಲಾನ್ (Milan) ಎಂಬ ಪ್ರಸಿದ್ಧ ನಗರಕ್ಕೆ ಪ್ರಯಾಣ ಬೆಳಸಿದೆ

ರೈಲಿನ 11ನೇ ಕ್ಲಾಸುಗಾಡಿಯಲ್ಲಿ ಜ್ಯೂರಿಕ್ ನಗರದಲ್ಲಿ ಕೆಲಸಮಾಡುವ ಇಬ್ಬರು ಉಪಾಧ್ಯಾಯಿನಿಯರು ರಜೆಯಲ್ಲಿ ಇಟೇಲಿ ದೇಶದ ... (...) ಎಂಬ ಸಮುದ್ರ ತೀರಕ್ಕೆ ಹೋಗುತ್ತಿದ್ದರು ... ಬೇರೆ ದೇಶದವರು ತಮ್ಮ ತಮ್ಮ ಊರನ್ನು ಬಿಟ್ಟು ಚಳಿಯಾದ ಸ್ವಿಸ್ಸ ದೇಶಕ್ಕೆ ಆತುರದಿಂದ ಹೋಗುತ್ತಿರುವಾಗ ಹಾಗೆಯೇ ಸ್ವಿಸ್ಸ ದೇಶದವರಾದ ಇವರು ತಮ್ಮ ಊರನ್ನು ಬಿಟ್ಟು ಬೆಚ್ಚಗಿರುವ ಇಟೇಲಿಗೆ ಹೋಗುತ್ತಿದ್ದರು ಅದೇ ಕೋಣೆಯಲ್ಲಿ ಸ್ವಿಸ್ಸ ದೇಶದ ಒಬ್ಬ ಬೇಂಕಿನ ಯೌವನಸ್ಥ ಉದ್ಯೋಗಸ್ಥನು ಕೂಡ ಇಟೇಲಿಗೆ ತಿರುಗಾಡಲಿಕ್ಕೆ ಹೊರಟವನು. ಇವನಿಗೆ ಇಂಗ್ಲಿಷ್ ಬರುತ್ತಿದ್ದ ಕಾರಣ ಸ್ವಿಸ್ಸ ದೇಶದ ಕೆಲವು ವಿಚಾರಗಳನ್ನು ನನಗೆ ತಿಳಿಯಲಿಕ್ಕೆ ಅವಕಾಶವಾಯಿತು

ಲುಗಾನೋ ಪಟ್ಟಣದ ಬಹು ಸಮೀಪವೇ ಇಟೇಲಿ ದೇಶದ ಗಡಿ ಬಂತು ನಂತರ ಇಟೇಲಿಯಲ್ಲೇ ನಮ್ಮ ಪ್ರಯಾಣ. ಇಟೇಲಿ ಒಳ ಹೋದೊಡನೆಯೇ ಬಗಸ್ತಿಕೆಯ ಕುರುಹುಗಳು ಕಾಣಕೊಡಗಿದವು ನಾನು ಈ ಮುಂಚೆ ಕಂಡ ಬೇರೆ ದೇಶಗಳಿಗಿಂತ ಇಟೇಲಿಯಲ್ಲಿ ಜನಸಂಖ್ಯೆ ಜಾಸ್ತಿ. ಬಡತನವೂ ಅದರಂತೆ ಹೆಚ್ಚು. ರೈಲು ಬರುವಾಗ ಬದಿಯಲ್ಲಿ ಬಡತನದ ಮನೆಗಳು. ಅವುಗಳಲ್ಲಿ ತೂಗಾಡುವ ಹರಕು ವಸ್ತ್ರಗಳು, ಊರು ... ಲದಲ್ಲಿ ಸಣ್ಣ ಸಣ್ಣ ಗದ್ದೆಗಳು. ಅಲ್ಲಿ ಕೆಲಸ ಮಾಡುತ್ತಿದ್ದ ಗಂಡಸರು ಮತ್ತು ಹೆಂಗಸರು ಕಟಾವುಮಾಡಿದ ಪೈರಿನ ಹುಲ್ಲನ್ನು ಒಣಗಿಸುತ್ತಿದ್ದರು. ಅನೇಕ ಕಡೆಗಳಲ್ಲಿ ಗುಡ್ಡೆ ಬದಿ ಕಡಿದು ನೆಲ ಸಮತಲಮಾಡಿ ಗದ್ದೆಗಳನ್ನು ಮಾಡಿದ್ದರು ಈ ಪ್ರದೇಶದಲ್ಲಿ ಮಳೆ ಕಡಿಮೆ ಆದಕಾರಣ ಈ ವರೆಗೆ ನಾನು ತಿರುಗಾಟ ಮಾಡಿದ್ದ ಊರುಗಳಲ್ಲಾ ಆಗಾಗ ಮಳೆ ಬರುತ್ತಿದ್ದು ಎಲ್ಲೆಲ್ಲಿಯೂ ಕಣ್ಣಿಗೆ ಹಸುರಾದ ನೋಟ ಆದರೆ ಇಲ್ಲಿ ಹುಲ್ಲು ಒಣಗಿತ್ತು, ಬಿಸಿಲು ಜಾಸ್ತಿ 9-21ಕ್ಕೆ ಲುಗಾನೋದಿಂದ ಹೊರಟ ರೈಲು ಇಟೇಲಿಯಲ್ಲಿ ಕೈಗಾರಿಕೆ ಪ್ರಸಿದ್ಧವಾದ ಮಿಲಾನ್ ಎಂಬ ನಗರಕ್ಕೆ ಗಂಟೆ 10-50ಕ್ಕೆ ಬಂದು ಸೇರಿತು. ಮಿಲಾನ್ ಬಹುದೊಡ್ಡ ನಗರ ಅದರ ಜನಸಂಖ್ಯೆ 1¼ ಮಿಲಿಯ

ಆದರೆ ನಗರದ ವಿಚಾರ ಹೇಳುವ ಮೊದಲು ನನ್ನ ವಿಚಾರ ತುಸು ಹೇಳುವುದು ಅವಶ್ಯ. ಇಟೇಲಿಗೆ ಬರುವ ಮುಂಚೆ ಅಲ್ಲಿ ಕಳ್ಳತನ ಜಾಸ್ತಿ, ಬಹಳ ಜಾಗ್ರತೆಯಲ್ಲಿರಬೇಕಾಗಿ ನನಗೆ ಒಬ್ಬರು ಎಚ್ಚರಿಸಿದ್ದರು. ಅದಕ್ಕೆ ಸರಿಯಾಗಿ ಮಿಲಾನ್ ರೈಲ್ವೆ ಸ್ಟೇಶನಿಗೆ ರೈಲು ಮುಟ್ಟಿದ ಕೂಡಲೇ ನನ್ನ ರೈಲು ಗಾಡಿಯ ಕೋಣೆಯ ಮೇಲಿನ ಅರೆಯಿಂದ ನನ್ನ ಕೈಪೆ

[೨೨ನೇ ಪುಟನೋಡಿರಿ]

ತೃಪ್ತಿಕರವಾದ ವಸತಿ — ಹಿತಕರವಾದ ಊಟ
ರುಚಿಕರವಾದ ಉಪಾಹಾರ ಇವುಗಳಿಗೆ
ಉಡುಪಿಯ ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಊರ ಪರವೂರ ಸನ್ಮಾನ್ಯ ಸದ್ಗೃಹಸ್ಥರಿಂದ ಮುಕ್ತಕಂಠದಿಂದ
ಹೊಗಳಿಸಿಕೊಂಡ ನವ್ಯ ಹೋಟೆಲಿಗೇ
ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ.
ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯಾಗುವಂತೆ
ನಗರದ ಕೇಂದ್ರ ಭಾಗದಲ್ಲಿದೆ
WOODLANDS
Highclass Boarding & Lodging, UDIPI S Kanara

For energetic and active living, for your mental and physical vigour and strength,
Always Use
KALI KAMALI
Chyavanprash.
A renowned Ayurvedic Medicine, prepared from rare Himalayan herbs and minerals Useful fore men, women and Children like An ideal tonic for weak nerves and heart
Price per tin containing 60 tolas Rs 10-0-0 Postage extra.
Stockist for South & N Kanara & Mysore state — M. Vinayaka rao, Bannanje Road, Udipi. S K
AYURVEDIC PHARMACY
Baba kali Kamali-Wala RISHIKESH

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ
1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.,
Moolky, S. K

ಕುಂದಾಪುರ ಡಿ. ಮು.
ಕೋರ್ಟಿನಲ್ಲಿ
S. C 779/51.

ಕೃಷ್ಣಪ್ಪ ಸೆಟ್ಟಿ —ವಾದಿ
ಕೊಲ್ಲಪ್ಪ ಸೆಟ್ಟಿ ಮಗ ಕುಂದಾಪುರ ತಾಲ್ಲೂಕು ಅಂಡಾರುಗ್ರಾಮದ ಕನ್ನಟ ಕಳುಬಿನಲ್ಲಿರುವವರು

ನೋನಪ್ಪ ಸೆಟ್ಟಿ —ಪ್ರತಿವಾದಿ
ಕುಪ್ಪಯ್ಯ ಸೆಟ್ರ ಅಳಿಯ ಕುಂದಾಪುರ ತಾಲ್ಲೂಕು ಅಂಡಾರುಗ್ರಾಮದ ಗೌಂಜಿಸಲ್ಲಿರುವವ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ವಾದಿಗೆ ಪ್ರತಿವಾದಿಯಿಂದ ಬರತಕ್ಕ ಡಿಮಾಂಡುನೋಟಿನ ಹಣ ಬಡ್ಡಿಯನ್ನು ಬರ ಮಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ದಾವೆಯು ತಾರೀಖು 31 3 52ಕ್ಕೆ ತನ್ನ ಬಗ್ಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ಇರೋಜಾಗಿಯದೆ ಆ ತಾರೀತು ನೀವು ಖುದ್ದಾ ... ಇಲ್ಲ ... ಜಾಹೀರಾಗಿ ಜವಾಬು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದೆ ಗೈರುಹಾಜರಿಯಿಂದ ತೀರ್ಮಾನಿಸಲಾಗುತ್ತದೆ ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ,

V S. Shetty
Advocate for Plaintiff
ಕುಂದಾಪುರ, ತಾ 14—3—52.

ಟ್ಟಿಗೆ ನಾನು ತೆಗೆಯುವಾಗಲೇ ಕೆಳಗೆ ಸೀಟಿನಲ್ಲಿದ್ದ ನನ್ನ ಇನ್ನೊಂದು ಪೆಟ್ಟಿಗೆಯು ಒಂದೇ ನಿಮಿಷದಲ್ಲಿ ಮಾಯವಾಯಿತು. ಕೋಣೆಯಲ್ಲಿದ್ದ ಪ್ರಯಾಣಿಕರೆಲ್ಲರೂ ಹೊರಟು ಹೋಗಿದ್ದರು. ಆ ಮಾಯವಾದ ಪೆಟ್ಟಿಗೆಯಲ್ಲಿ ಅನೇಕ ಕಡೆಗಳಲ್ಲಿ ನಾನು ಪಡೆಕೊಂಡಿದ್ದ ಮೌಲ್ಯದ ವಸ್ತುಗಳಿದ್ದ ಕಾರಣ ನಾನು ಬಹಳ ಗಾಬರಿಗೊಂಡೆ. ಸ್ಟೇಶನಿನಲ್ಲಿದ್ದ ಅಧಿಕಾರಸ್ಥರಿಗೆ ನನ್ನ ಫಿರ್ಯಾದು ಕೊಟ್ಟೆ. ಸ್ಟೇಶನಿನ ಎಲ್ಲಾ ಸಾಮಾನು ಹೊರುವ ಕೂಲಿಗಾರರಿಗೆ [Porters] ಧ್ವನಿವರ್ಧಕ ಯಂತ್ರದ ಮೂಲಕ ಅಧಿಕಾರಸ್ಥರು ಈ ವಿಚಾರವನ್ನು ತಿಳಿಸಿದರೂ ಫಲವಾಗಲಿಲ್ಲ. ಹೀಗೆ ನಾನು ಕಷ್ಟದ ಅವಸ್ಥೆಯಲ್ಲಿರುವಾಗ 10-15 ನಿಮಿಷದ ನಂತರ ಅದೇ ಸ್ಟೇಷನಿನ ಇನ್ನೊಂದು ಕಡೆಯಲ್ಲಿದ್ದ ಪೋಲೀಸು ಆಫೀಸಿನಿಂದ ನನಗೆ ಕರೆಬಂತು. ಅಲ್ಲಿ ನನ್ನ ಪೆಟ್ಟಿಗೆ ಇತ್ತು. ಅದನ್ನು ಅಲ್ಲಿಗೆ ನನ್ನ ಕೋಣೆಯಲ್ಲಿ ನನ್ನೊಟ್ಟಿಗೆ ಪ್ರಯಾಣಮಾಡಿದ್ದ ಮೇಲೆ ನಾನು ಪ್ರಸ್ತಾಪಿಸಿದ ಬೇಂಕಿನ ಉದ್ಯೋಗಸ್ಥರು ಅವರು ತಮಾಷಾ ಕೊಂಡಿದ್ದ ಉಪಾಧ್ಯಾಯಿನಿಯರಿಗೆ ಕುಮ್ಮಕ್ಕು ಮಾಡುವ ಬಗ್ಗೆ ಅವರದೆಂದು ಗ್ರಹಿಸಿ ಯಾರನ್ನೂ ವಿಚಾರಿಸದೆ ನನ್ನ ಪೆಟ್ಟಿಗೆಯನ್ನು ಸೀದಾ ತೆಗೆದುಕೊಂಡು ಹೋಗಿದ್ದರು. ಅನಂತರ ತನ್ನ ತಪ್ಪು ತಿಳಿದು ನನ್ನನ್ನು ಹುಡುಕಿಕೊಡುವ ಬದಲು ಸ್ಟೇಶನಿನಲ್ಲಿ ಕೊಟ್ಟುಹೋಗಿದ್ದರು. ಇಷ್ಟು ಅವರಿಂದ ನನಗೆ ಉಪಕಾರ. ಸಾಮಾನು ಕಳಕೊಂಡ ನನಗೆ ಅದು ಸಿಕ್ಕಿದ ಮೇಲೆ ಪುನರ್ಜೀವನವಾಯಿತು. ಇನ್ನು 5 ದಿವಸ ಇಟೇಲಿ ದೇಶದಲ್ಲಿ ಬೇರೆಬೇರೆ ಊರಿನಲ್ಲಿ ತಿರುಗಾಡಿದರೂ ಎಲ್ಲಿಯೂ ನನಗೆ ಕಳವು ಆಗಲಿಲ್ಲ. ನಾನು ಈ ಮುಂದೆ ಬರೆದ ಜರ್ಮನಿಯ ಕೊಲೋನ್ ನಗರದಲ್ಲಿ ರಸ್ತೆ ಬದಿ ನನ್ನ ಪೆಟ್ಟಿಗೆ ಇಟ್ಟು ಬಸ್ಸು ಕಾಯುತ್ತಿದ್ದಾಗ ಅಲ್ಲಿದ್ದ ಒಬ್ಬ ಜರ್ಮನರು ನನಗೆ ಅಲ್ಲಿ ಕಳ್ಳರು ಜಾಸ್ತಿ, ಪೆಟ್ಟಿಗೆಯ ವಿಷಯ ಜಾಗ್ರತೆ ತೆಗೆದುಕೊಳ್ಳಬೇಕೆಂದು ಸೂಚಿಸಿದ್ದರು. ಕಳ್ಳತನವು ಯಾವದೊಂದು ದೇಶಕ್ಕೂ ಅಂಟಿಕೊಂಡಿಲ್ಲ. ಸಾಮಾನ್ಯವಾಗಿ ಬಡತನ ಜಾಸ್ತಿಯಿದ್ದಲ್ಲಿ ಅದೂ ಜಾಸ್ತಿ. ಸುಖವಿದ್ದಲ್ಲಿ ಅದಕ್ಕೆ ಎಡೆ ಇಲ್ಲ. ಇನ್ನು ಮಿಲಾನ್ ಮತ್ತು ಅದರ ಮುಂದಿನ ವಿಚಾರ ಬರುವ ವಾರ.

[ವಿಚಾರವಾಣಿ] —ಕೆ. ಆರ್. ಕಾರಂತ.

ತಾರೀಕು 20-3-52 ರಿಂದ

ವಾರದ ಭವಿಷ್ಯ

ತಾರೀಕು 26-3-52 ವರೆಗೆ

ಮೇಷ:—ಬಹುಮುಖದಿಂದ ಅಪ್ರಸ್ತುತವಾಗತಕ್ಕ ಖರ್ಚುಗಳು ನಿಮ್ಮನ್ನು ದಿಗ್ಭ್ರಾಂತರನ್ನಾಗಿ ಮಾಡಲಿವೆ. ಗ್ರಹಸ್ಥಿತ್ಯದಲ್ಲಿನ ಅವ್ಯವಸ್ಥೆಯಿಂದಾಗಿ ಗಂಡಹೆಂಡಿರಲ್ಲಿ ನಿತ್ಯ ಜಗಳವಾದೀತು. ನೀಚ ಜನರ ಸಂಸರ್ಗದಿಂದಾಗಿ ಜನರಿಂದ ಕೆಟ್ಟ ಮಾತುಗಳನ್ನು ಕೇಳುವ ಪ್ರಸಂಗ ಬರಲಿದೆ. ಪ್ರಯಾಸಸಾಧ್ಯವಾದ ಕಾರ್ಯಗಳಲ್ಲಿ ನಿಮ್ಮ ಬಯಕೆಯು ಸಫಲವಾಗಲಿದೆ. ತಾ-21 ರಿಂದ 24ರ ವರೆಗಿನ ದಿನಗಳು ನಿಮ್ಮ ದೇಹ ಮನಸ್ಸುಗಳಿಗೆ ಸುಖನೆಮ್ಮದಿ ಯನ್ನೀಯುವವು.

ವೃಷಭ:—ನಿಮ್ಮ ಧನಲಾಭಪತಿಗಳೀರ್ವರೂ ಲಾಭಸ್ಥಾನದಲ್ಲಿರುವುದರಿಂದ ನಿಮಗೀ ವಾರವು ಅತ್ಯುತ್ತಮ ಫಲವನ್ನೀಯಲಿದೆ. ಉದ್ಯೋಗದಲ್ಲಿ ಪ್ರಗತಿಯೂ ಉದ್ಯಮದಲ್ಲಿ ಯಶಸ್ಸೂ ರಾಜಕೀಯ ಸಮಾಜಿಕ ರಂಗಗಳಲ್ಲಿ ವಿಜಯವು ದೊರೆಯಲಿದೆ. ಆದರೆ ಗ್ರಹಕೃತ್ಯ ವಿಚಾರದಲ್ಲಿ ಮಾತ್ರ ನಿಮಗೆ ನೆಮ್ಮದಿಯಿರದು ವಾರಾಂತ್ಯದ 4 ದಿನಗಳು ವಿಜಯ ಲಾಭ ಸ್ಥಾನ ಮಾನದಾಯಿಗಳಾಗಿವೆ.

ಮಿಥುನ:- ಆತ್ಮೀಯರ ವಿರಹದಿಂದ ದುಃಖಿಗಳಾದ ನಿಮಗೆ ವಿರೋಧಿಗಳಿಂದಲೂ ಮೇಲಿಂದ ಮೇಲೆ ಪ್ರತೀಕಾರಗಳುಂಟಾಗಲಿದೆ. ವ್ಯಾಪಾರಾದಿ ಉದ್ಯೋಗಗಳಲ್ಲಿ ಪರಿಶ್ರಮಕ್ಕೆ ತಕ್ಕುದಾದ ಫಲಪ್ರಾಪ್ತಿಯಾಗುವುದರಿಂದ ಹಣದ ತಗಾದೆಯುಂಟಾಗದು. ಗ್ರಹತಾಪತ್ರಯಗಳು ಬಾಧಿಸಿ ತೀವ್ರ ಚಿಕಿತ್ಸೆಯಾಗಲಿವೆ. ವಿದ್ಯಾರ್ಥಿಗಳಿಗೂ ವಿದ್ಯೋಪಜೀವಿ ಜನರಿಗೂ ದಿನಗಳು ಸುಖಮಯವಾಗಲಿವೆ. ತಾ-20.25.26 ಈ ದಿನಗಳಲ್ಲಿ ಧನಲಾಭ ಮಿತ್ರ ಸಮಾಗಮಾದಿಗಳು ಲಭಿಸಲಿವೆ.

ಕರ್ಕಟ:-ಎಷ್ಟೇ ವಿಘ್ನಗಳು ಬಂದರೂ ಹಿಡಿದ ಕಾರ್ಯವನ್ನು ಕೊನೆಗೊಳಿಸದೆ ಬಿಡಲಾರಿರಿ. ಜನರ ಕಪಟ ಬಲೆಗೆ ಸಿಲುಕಿ ಕಷ್ಟನಷ್ಟಗಳನ್ನನುಭವಿಸುವಿರಿ. ಲೇವಾದೇವಿ ನಿಮಿತ್ತವಾಗಿ ವೃಥಾ ಕಲಹಗಳುಂಟಾಗಲಿವೆ. ಮನೋರೋಗವು ವಿಶೇಷವಾಗಿ ಬಾಧಿಸಿದರೂ ಆರೋಗ್ಯವು ತೃಪ್ತಿಕರವಿರುವುದು. ಗೃಹಕೃತ್ಯ ವಿಚಾರದಲ್ಲಿ ಯಾವುದೊಂದು ತರದ ಲೋಪದೋಷಗಳೂ ಕಾಣಿಸವು. ವಾರಾದಿಯ 3 ದಿನಗಳು ಉತ್ತಮವಾಗುವವು.

ಸಿಂಹ:-ನಿರುದ್ಯೋಗದಿಂದ ಕಾಲಹರಣ ಮಾಡಲಾರಿರಿ. ನಿಮ್ಮ ಪ್ರಯತ್ನಕ್ಕಿಂತಲೂ ಅಧಿಕವಾದ ಫಲವನ್ನೀ ವಾರದಲ್ಲಿ ಪಡೆವಿರಿ. ಮಾತ್ರವಲ್ಲ ಅಕಸ್ಮಾತ್ ನೀಚ ಜನತೆಯ ದೆಸೆಯಿಂದ ಧನಾಗಮವಾಗುವದು. ಆದರೆ ದೇಹಾರೋಗ್ಯ ವಿಚಾರದಲ್ಲಿ ಸ್ವೇಚ್ಛಾಗಾಮಿಕತೆಯಿಂದಿದ್ದರೂ ಕಫದೋಷದಿಂದ ಕಾಹಿಲೆಯು ಕಾಣಿಸುವದು. ಕಷ್ಟಪಟ್ಟು ದುಡಿದ ಧನವು ಒನಾವಸ್ಥೆಯಲ್ಲಿ ಕೈಯಲ್ಲುಳಿಯದು. ವಾರಾದಿಯ 4 ದಿನಗಳಲ್ಲಿ ನಿಮ್ಮ ಬಯಕೆಯು ಈಡೇರಲಿವೆ.

ಕನ್ಯಾ:—ಅನಾಯಾಸದಿಂದ ನಿಮ್ಮ ಕಾರ್ಯಗಳು ನೆರವೇರುವವು. ಆದರೆ ಫಲವು ಮಾತ್ರ ನಿಮ್ಮ ಎಣಿಕೆಯಂತೆ ಲಭಿಸದು. ವಾತದೋಷದಿಂದ ಅಂಗಾಂಗಗಳಲ್ಲಿ ನೋವು ಕಾಣಿಸುವದು. ಸಂಸಾರಿ ಜನರಿಂದ ವಿಶೇಷ ತೊಂದರೆಗಳುಂಟಾಗುವವು. ಸ್ತ್ರೀಜನರ ಸಲುವಾದ ವ್ಯವಹಾರದಿಂದ ಕಷ್ಟನಷ್ಟ ಅನಿಷ್ಟಾಪವಾದಾದಿಗಳನ್ನು ಹೊಂದುವ ಸಂಭವವಿದೆಯಾದ ಕಾರಣ ವಾರಾದಿಯ 3 ದಿನಗಳನ್ನು ಜಾಗ್ರತೆಯಿಂದ ಕಳೆಯಿರಿ.

ತುಲಾ:-ನಿಮ್ಮ ಆರೋಗ್ಯಕ್ಕೆ ವಾರವು ಒಳ್ಳೆಯದಿಲ್ಲ ಕಫ ಪಿತ್ತಪ್ರಕೋಪಗಳ ದೆಸೆಯಿಂದ ಹೆಚ್ಚಿನ ನಷ್ಟಕ್ಕೆ ಸಿಲುಕುವಿರಿ ವಾಹನಾದಿಗಳಲ್ಲಿನ ಪ್ರಯಾಣಗಳಲ್ಲಿ ಆಕಸ್ಮಿಕ ಅಪಘಾತಗಳುಂಟಾಗಬಹುದು. ಗುರುಹಿರಿಯರ ಆಗ್ರಹಕ್ಕೆ ಗುರಿಯಾದ ನಿಮಗೆ ಮನೋರೋಗವು ಅಧಿಕವಾಗಲಿದೆ. ಉದ್ಯೋಗದಲ್ಲಿನ ಆಯವ್ಯಯವನ್ನು ಸರಿಗಟ್ಟುವುದರಿಂದ ಆರ್ಥಿಕ ತಗಾದೆ ಕಾಣಿಸದು. ತಾ-20. 25 ಅನುಕೂಲ.

ವೃಶ್ಚಿಕ:—ಧನಪತಿಯ ಅನುಗ್ರಹದಿಂದಾಗಿ ನೀವೀ ವಾರದಲ್ಲಿ ಹಿಂದಿನ ಸಾಲಗಳಿಂದ ಮುಕ್ತರಾಗುವಿರಿ. ಪಂಸ್ತ್ರೀಯರಿಂದ ಧನಲಭಿಸುವ ಯೋಗವಿದೆ. ಪತಿಭೃತ್ಯಾದಿ ಗೃಹಪರಿವಾರಗಳಲ್ಲಿ ನ್ಯೂನತೆಯಿಲ್ಲದಿದ್ದರೂ ಪತಿಗಳಲ್ಲೂ ತಂದೆ ಮಕ್ಕಳಲ್ಲೂ ಅನ್ಯೋನ್ಯವಿರದೆ ನಿತ್ಯ ಕಲಹ ದುಃಖಕ್ಕೀಡಾಗುವಿರಿ. ಆಪ್ತೇಷ್ಟರ ವಿರಹದಿಂದ ದುಃಖಿತರಾದ ನಿಮಗೆ ತಾ 21-22 ರಲ್ಲಿ ಕೊಂಚ ಸುಖಲಭಿಸುವದು.

ಧನು:—ಎಂತಹ ಕಷ್ಟಸಾಧ್ಯವಾದ ಕಾರ್ಯವು ಕೂಡಾ ನಿಮಗೆ ಸುಲಭಸಾಧ್ಯವಾಗಿ ಪರಿಣಮಿಸಲಿದೆ. ನಾನಾರೀತಿಯ ಕಾರ್ಯಗಳಲ್ಲಿ ನೀವು ವಿಜಯ ಧನಾದಿಗಳನ್ನು ಪಡೆವಿರಿ. ಯಾವೊಂದು ತರದ ವಿಪತ್ತಿಗೂ ಸಿಲುಕಲಾರಿರಿ. ಜನತೆಯಿಂದ ಗೌರವಾದರಗಳು ಲಭಿಸುವವು ತಾ-20-23-24 ಈ ದಿನಗಳು ಸುಖಕಾರಿಗಳಾಗಿವೆ.

ಮಕರ:—ನಿರಾಶರಾಗಬೇಡಿ. ನಿಮ್ಮ ಪರಿಶ್ರಮವನ್ನು ಕಂಡೋ ಎಂಬಂತೆ ದೈವವು ನಿಮ್ಮಮೇಲೆ ಕಿಂಚಿತ್ ಕೃಪಾದೃಷ್ಟಿಯನ್ನು ಬೀರಿರುವದು. ಶತ್ರುಜನರು ಮಿತ್ರರಾಗುವರು. ರಾಜಕೀಯ ರಂಗದಲ್ಲಿ ವಿಜಯವಿದೆ. ಚಂಚಲ ಮನಸ್ಕರಾದ ನಿಮಗೆ ಕೆಲವೊಮ್ಮೆ ಆಪ್ತೇಷ್ಟಜನರಲ್ಲೂ ಅವಿಶ್ವಾಸ ಮೊಳೆಯಲಿದೆ. ಹಣದ ತಾಪತ್ರಯ ಪರಿಹಾರವಾಗುವದು. ತಾ-21-22-25-26 ಈ ದಿನಗಳು ಇತರ ದಿನಗಳಿಗಿಂತ ಉತ್ತಮವಾಗುವವು.

ಕುಂಭ:—ವಾತಪಿತ್ತ ಪ್ರಕೋಪದಿಂದ ಆರೋಗ್ಯಕ್ಕೆ ಧಕ್ಕೆಯುಂಟಾದೀತು ಮನೋರೋಗವು ಸದಾ ನಿಮ್ಮನ್ನು ಬಾಧಿಸಲಿದೆ. ದಿನದಿಂದದಿನಕ್ಕೆ ದೇಹದಲ್ಲಿ ನಿಶಕ್ತಿ ಹೆಚ್ಚುವದರ ಕಾರಣ ಆರೋಗ್ಯದ ಬಗ್ಗೆ ಹೆಚ್ಚಿನ ನಿಗಾ ತಕ್ಕೊಳ್ಳಿರಿ. ಉದ್ಯೋಗದಲ್ಲಿ ಪ್ರಗತಿಯುಂಟಾಗುವದು. ವಿದ್ಯಾರ್ಥಿಗಳಿಗೀ ಕಾಲವು ಯಶೋದಾಯಿಯಾಗಿದೆ. ಸಮಾಜದಲ್ಲಿ ಗಣ್ಯಸ್ಥಾನವನ್ನು ಪಡೆವಿರಿ. ತಾ-20-23-24 ಈ ದಿನಗಳಲ್ಲಿ ತನುಮನಗಳಿಗೆ ಸುಖನೆಮ್ಮದಿಗಳಿವೆ.

ಮೀನ:—ಕಷ್ಟಪರಂಪರೆಗಳು ಮೇಲಿಂದಮೇಲೆ ಪ್ರಾಪ್ತವಾಗುವವು. ಜನ್ಮಗತಗುರು ರವಿ ಅಷ್ಟಮಸ್ಥ ಕುಜ ಇವರು ನಿಮ್ಮನ್ನು ಧನ ಆರೋಗ್ಯಾದಿಗಳಲ್ಲಿ ಹೆಚ್ಚಾಗಿ ಪೀಡಿಸುವರು ಮಾತ್ರವಲ್ಲ ಸದಾ ಮಾರ್ಗದಲ್ಲೇ ನಿಮ್ಮ ಕಾಲಂಬಂತಹ ಪರಿಸ್ಥಿತಿಯುಂಟಾಗಲಿದೆ. ಶತ್ರುಗಳು ವಿಶೇಷವಾಗಿ ಕಾಡುವರು. ಸ್ಥಾನಚ್ಯುತಿ ಮಾನಹಾನಿ ಮುಂತಾದ ಅನಿಷ್ಟಗಳಿಗವಕಾಶವಿದೆ. ತಾ-23-24 ಈ ದಿನಗಳು ವಿಶೇಷ ಅನಿಷ್ಟಕಾರಿಗಳಾಗಿವೆ.

ಪಂಚಾಯತ ಬೋರ್ಡು,

ಗ್ರಾಮ ಕಮಿಟಿ, ಶಾಲಾ ಕೊಲೇಜು ಮೊದಲಾದವುಗಳ

ಲೈಬ್ರೆರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿರಿ:—

ನವಭಾರತ ಪುಸ್ತಕ ಭಂಡಾರ ಉಡುಪಿ.

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯ ಪರ್ವತದಿಂದ ತೆಗೆಯಲ್ಪಡುವಂಥ ಅಪೂರ್ವ ವಸ್ತು, ಔಷಧಿಗಳ ರಾಜ; ಶಿಲಾಜಿತ್ತನ್ನು ಮೂಲಿಕೆಗಳೊಡನೆ ಸೇರಿಸಿ ಲೇಹ್ಯ ಮಾಡಿದೆ. ಇದು ಶೀತ, ಉಷ್ಣ, ಮಳೆ ಸರ್ವಕಾಲದಲ್ಲೂ ಒಂದೇ ಸಮನೆ ತನ್ನ ಶಕ್ತಿಯನ್ನು ತೋರಿಸುತ್ತದೆ.



ಇದರ ಸೇವನೆಯಿಂದ ದೇಹ ದಾರ್ಢ್ಯವೂ, ಶಕ್ತಿಯೂ ಉಂಟಾಗುತ್ತದೆ. ಮುಖ್ಯವಾಗಿ ಹೊಟ್ಟೆನೋವು ಅನ್ನ ಸೇರದಿರುವಿಕೆ ಇವೇ ಮೊದಲಾದ ರೋಗಗಳಿಗೆ ಒಂದೇ ದಿನಗಳಲ್ಲಿಯೇ ಗುಣಕೊಡತಕ್ಕ ಔಷಧವಿದು. ಕೆಮ್ಮು, ಶ್ವಾಸದಮ್ಮು, ಮೂಲ, ಒಳಮೂಲ, ರಕ್ತಮೂಲ, ಬಹುಮೂತ್ರ, ಹೊಟ್ಟೆಯಲ್ಲಿ ಗಡ್ಡೆ ಇರುವಿಕೆ ಮತ್ತು ವಾಯುವಿನಿಂದ ಉಂಟಾಗತಕ್ಕ ಸರ್ವ ವ್ಯಾಧಿಗಳಿಗೂ ದಿವ್ಯೌಷಧ. ವಿದ್ಯಾರ್ಥಿಗಳು ಸೇವಿಸುವುದರಿಂದ ಜ್ಞಾಪಕಶಕ್ತಿಯೂ ಮತ್ತು ಚಟುವಟಿಕೆಯೂ ಹೆಚ್ಚುತ್ತೆ. ವೃದ್ಧರು ಸೇವಿಸುವುದರಿಂದ ಶಕ್ತಿಯನ್ನು ಹೆಚ್ಚಿಸಿ; ಧಾರ್ಢ್ಯವನ್ನುಂಟುಮಾಡುತ್ತೆ.

ಹೆಂಗಸರಿಗೆ— ಅತ್ಯಮ ಬಿಳಿಪ್ಪೆ, ಕೈಕಾಲು ಹಿಡಿತ, ಕೀಲುವಾಯು, ಸೊಕ್ಕಶೂಲೆ ಮತ್ತು ಉಷ್ಣದಿಂದಾಗುವ ಇತರ ರೋಗಗಳಿಗೆ ದಿವ್ಯೌಷಧ ದುರ್ಬಲರಾಗಿ ಕೇವಲ ಕೃಶರಾಗಿರುವ ಶಿಶುಗಳಿಗೆ ಈ ಔಷಧವನ್ನು ಪ್ರತಿ ಬೆಳಿಗ್ಗೆ ಸಂಜೆ ಕೊಟ್ಟರೆ ಸ್ವಲ್ಪ ಕಾಲದಲ್ಲಿಯೇ ದೃಢಾಂಗರಾಗುವರು, ಹಣ ಮುಂಗಡ.

೪೮ ದಿನದ ಲೇಹ್ಯಕ್ಕೆ ರೂ. ೫-೪-೦, ೨೪ ದಿನದ ಲೇಹ್ಯಕ್ಕೆ ರೂ. ೩-೪-೦ (ಪೋಸ್ಟೇಜು ಮಾಫ಼)

ನೀಲಿಗಿರಿ ಡಿಪ್ಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ

ಸುಲಭದಲ್ಲಿ ಇಂಗ್ಲಿಷ್

ಅತಿ ಸುಲಭದಲ್ಲಿ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿಸಲ್ಪಟ್ಟ

ಅತಿ ಉಪಯುಕ್ತ ಪುಸ್ತಕ

ಬೆಲೆ ರೂ- 1-8-0, ವಿ. ಪಿ. ದ್ವಾರ ರೂ- 2-0-0

ವಿಳಾಸ—

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published By K. H. Shetty at the Navayuga Press, Udipi, S. India.

Regd.No. M. 3618

LICENCE No. 31
Licensed to post without Prepayment.

ESTD. 1921 ಸ್ಥಾಪಿತ
31ನೆಯ ವರ್ಷ

27-3-1952

Founder: Sri A. B. Shetty,
Minister for Agriculture & Veterinary

ನ ವ ಯು ಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಕೃಷಿಮಂತ್ರಿ
ಶ್ರೀ.ಎ.ಬಿ. ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನ ವ ಯು ಗ
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೨೯

NAVAYUGA WEEKLY Post Box No. 22 UDIPI.

Vol 31
No. 29

"ಅಸತ್ಯವನ್ನು ಆಡುವ, ಅನ್ಯಾಯವನ್ನು ಮಾಡುವ ಮಾನವನನ್ನು ಬಿಟ್ಟು ಬೇರೆಲ್ಲವನ್ನೂ ಸಹಿಸಬಹುದು"

"ತರುಣ ಪೀಳಿಗೆಯಲ್ಲಿ ಸಮಾಜಸೇವಾ ಪ್ರವೃತ್ತಿಯು ಬೆಳೆಯಬೇಕು. ನಮ್ಮ ಸಮಾಜದಲ್ಲಿ ತಲೆಯೆತ್ತಿರುವ ಕಳ್ಳಪೇಟೆ, ಲಂಚ ನೂಕಿಸನ, ಶಿಸ್ತುಗೇಡಿ ವರ್ತನೆಗಳಿಗೆ ನಮ್ಮ ರಾಷ್ಟ್ರೀಯ ಚಾರಿತ್ರ್ಯ ನಿರ್ಮಾಣವೇ ಪರಿಹಾರ ಮಾರ್ಗವಾಗಿದೆ"

—ರಾ. ಜ. ಪಾರ್ವತಿ ದೇವಿ

ಈ ಅಲಕ್ಷ ಭಾವವೇಕೆ?

ಭಾರತ ಸರಕಾರವು ಕೈಗೊಂಡಿರುವ ಹಲವಾರು ಯೋಜನೆಗಳಲ್ಲಿ ಕರ್ನಾಟಕವನ್ನು ಸಂಪೂರ್ಣ ಅಲಕ್ಷಿಸಲಾಗಿದೆಯೆಂದು ಈ ಮೊದಲೇ ಕೆ. ಪಿ. ಸಿ. ಸಿ. ಯು ವತಿಯಿಂದ ನಿಯೋಗ ಕಳಿಸಿದ್ದುಂಟು! ರೈಲ್ವೆ, ಬಂದರ, ನೀರಾವರಿ ಯೋಜನೆಗಳ ಪರಿಶೀಲನೆಯಾಗಬೇಕೆಂದು ಕರ್ನಾಟಕ ಜನತೆಯ ಅಭಿಪ್ರಾಯವಾಗಿತ್ತು. ಆದರೂ ಕೇಂದ್ರ ಸರಕಾರವು ಕರ್ನಾಟಕ ಜನತೆಯ ಇಂಗಿತವನ್ನರಿತುಕೊಳ್ಳಲಿಲ್ಲ. ಪಂಚವಾರ್ಷಿಕ ಯೋಜನೆಯು ಕರ್ನಾಟಕಕ್ಕರ ಪಾಲಿಗೊಂದು ಸುಂದರ ಚಿತ್ರವೇ ಆಗಿದೆ. ಮಲೆನಾಡಿನ ಅಭಿವೃದ್ಧಿಯಾಗಬೇಕೆಂದು ಕೇಂದ್ರದಲ್ಲಿ ಚಂಡಿ ಹಿಡಿದರೂ ಆರ್ಥಿಕ ದುಸ್ಥಿತಿಯ ನಿಮಿತ್ತ ಅದೂ ಮುಂದೆಬಿತ್ತು. ಬಳಿಕ ಈ 'ಕೋಯನಾ' ಯೋಜನೆಯೂ ಹಿಂದೆಬಿತ್ತೆಂದೂ ತಿಳಿಯುತ್ತದೆ. ಬೇರೆಬೇರೆ ಪ್ರಾಂತಗಳಲ್ಲೂ-ಪ್ರದೇಶಗಳಲ್ಲೂ ಈ ರೀತಿಯ ಪ್ರಗತಿಯಾಗುತ್ತಿರುವಾಗ ಕರ್ನಾಟಕ ಇದ್ದಹಾಗೆಯೆ ಇರಬೇಕೆ? ಎನಿಸುವದು. ತುಂಗಭದ್ರಾ ಮೊದಲಾದ ಅಣೆಕಟ್ಟಿನಲ್ಲಿ ಕರ್ನಾಟಕವು ಸ್ವಲ್ಪಮಟ್ಟಿಗೆ ಪಾಲುಗೊಳ್ಳುವದಾದರೂ ಅದರಿಂದ ವಿಶೇಷ ಲಾಭವಿಲ್ಲ. ಇನ್ನುಳಿದ ಕಡೆಗಳಲ್ಲಿ ಇಂತಹ ಯೋಜನೆಯಿಲ್ಲ. ಕರ್ನಾಟಕದಲ್ಲೊಂದು ಮಹಾಬಂದರ ರಚನೆಯಾಗಬೇಕೆಂದು 4 ವರ್ಷಗಳಿಂದ ನಡೆದ ಸಂಶೋಧನೆ-ಸ್ಪರ್ಧೆಗಳಿಂದ ಯಾವ ಪುರುಷಾರ್ಥವೂ ಈವರೆಗಾಗಿರುವುದಿಲ್ಲ. ಈಚೀಚೆಗಂತೂ ಹಲವಾರು ಬಂದರ ತಜ್ಞರು ಬಂದು ಮಂಗಳೂರಿನಲ್ಲೇ ತಂಗಿ ಮಂಗಳೂರನ್ನೇ ಮಹಾ ಬಂದರವನ್ನಾಗಿ ನಿರ್ಮಿಸಬೇಕೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದಂತಿದೆ. ಇಷ್ಟು ದೀರ್ಘ ಸಂಶೋಧನೆ-ಸಮಾಲೋಚನೆ ನಡೆಸಿದರೂ ಒಂದು ನಿರ್ಧಾರಕ್ಕೆ ಬರುವುದು ಶಕ್ಯವಾಗಲಿಲ್ಲ. ಇದಕ್ಕೆ ಮುಖ್ಯ ಕಾರಣ ಶ್ರೀ ಶ್ರೀನಿವಾಸ ಮಲ್ಯರಂತಹ ಹಲವು ಪ್ರಭಾವೀ ವ್ಯಕ್ತಿಗಳ ವರ್ಚಸ್ಸು ಆ ಕಡೆಗಿರುವುದೇ ಆಗಿರುವುದೆನ್ನಬಹುದು. ಇನ್ನಾದರೂ ಇಂತಹ ಹೆಚ್ಚು ಮತ್ತು ಅನುಚಿತ ಪ್ರಸಂಗದಿಂದ ನೈಸರ್ಗಿಕ- ಪ್ರಾಕೃತಿಕ ಗುಣವನ್ನಲ್ಲಗಳೆದು ಸಾರ್ವಜನಿಕ ಹಣವನ್ನು ವ್ಯರ್ಥ ಹಾಳು ಮಾಡದಂತಾಗಲಿ. ಪ್ರಬುದ್ಧ ಬಂದರ ತಜ್ಞ ಸಮಿತಿಯು ಶಿಫಾರಸು ಮಾಡಿದ ಮಲ್ಪೆಯಲ್ಲೇ ಪ್ರಬುದ್ಧ ಬಂದರು ಏಕಾಗಬೇಕು ಎಂಬ ಸುದೀರ್ಘ ಲೇಖನವು ಈ ಸಂಚಿಕೆಯಲ್ಲಿ ಬಂದಿದೆ. ಆ ಕಡೆಗೆ ನಮ್ಮ ವಾಚಕರ ಲಕ್ಷ್ಯವನ್ನೆಳೆಯುತ್ತೇವೆ.

ಈ ಮಾತು ಕರ್ನಾಟಕದ ಬಗ್ಗೆ ಆಗಬೇಕಾದ ಕಾರ್ಯಗಳಲ್ಲಿಯ ತೊಡಕುಗಳ ಕುರಿತಾಯಿತು. ಕೋಯನಾ ಯೋಜನೆಯನ್ನು ಜೀವಂತಗೊಳಿಸುವದರಿಂದ ಅದರ ಲಾಭದಲ್ಲಿ ಮಹಾರಾಷ್ಟ್ರದೊಂದಿಗೆ ಕರ್ನಾಟಕಕ್ಕೂ ಪಾಲು ಸಿಗುವದು. ಬೇರೆಯಾಗಿ ಕರ್ನಾಟಕದಲ್ಲಿ ಇಂತಹ ಯೋಜನೆ ರೂಪುಗೊಳ್ಳಲು ಶಕ್ಯವಿಲ್ಲದೆ ಹೋದರೂ ಒಂದಂಶವಾಗಿಯಾದರೂ ಅಲ್ಲಿ ರೂಪುಗೊಳ್ಳಲು ಅನುಕೂಲ ಪರಿಸ್ಥಿತಿಯುಳ್ಳ ಕೋಯನಾ ಯೋಜನೆಯು ಕಾರ್ಯರೂಪದಲ್ಲಿ ಬರುವ ಪಕ್ಷದಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕದ 410,000 ಎಕ್ರೆ ಭೂಮಿಗೆ ನೀರಾವರೀ ಲಾಭವೊದಗುವದು. ಇಷ್ಟೇ ಅಲ್ಲದೆ ಸುತ್ತುಮುತ್ತಲಿನ ಕೊಲ್ಹಾಪುರ, ಬಿಜಾಪುರ, ಸತಾರಾ, ಬೆಳಗಾಂವಿ ಮೊದಲಾದ ಜಿಲ್ಲೆಗಳಲ್ಲಿ ಬೇರೆ ಬೇರೆ ಉದ್ಯಮಗಳು ತಲೆಯೆತ್ತುವದು ಮಾತ್ರವಲ್ಲದೆ ಆಗಿಂದಾಗ್ಗೆ ತಲೆದೋರುವ ಬರಗಾಲ ಭೀತಿಯೂ ಕಡಿಮೆಯಾಗಬಹುದು. ಆದರೆ ಸದ್ಯ ಪಂಚವಾರ್ಷಿಕ ಯೋಜನೆಯಿಂದ ಇದನ್ನು ಹೊರತುಪಡಿಸಲಾಗಿದೆಯೆಂದು ಹೇಳಲಾಗಿದೆ. ಈ ಬಗ್ಗೆ ಪ್ರತಿಭಟನೆಯನ್ನು ವ್ಯಕ್ತಪಡಿಸಿ ಅದರ ಪುನರ್ರಚನೆಗೋಸುಗ ಮಹಾರಾಷ್ಟ್ರದಲ್ಲೊಂದು ಸಂಪರ್ಕವನ್ನು ಜರಗಿಸಬೇಕೆಂದು ನಿರ್ಣಯಿಸಲಾಗಿದೆ. ಇದು ಮಹಾರಾಷ್ಟ್ರೀಯ ಪ್ರಯತ್ನವಾಗಿದ್ದು ಜೊತೆಯಲ್ಲಿ ಕನ್ನಡಿಗರ ಸಹಕಾರವನ್ನೂ ಕೋರಲಾಗಿದೆ. ಮಹಾರಾಷ್ಟ್ರ ಹಾಗೂ ಕರ್ನಾಟಕಗಳೆರಡರ ಪ್ರಗತಿಸಾಧನೆಗೆ ಇದು ಮುಖ್ಯವಾಗಿದೆ. ಕಾಂಗ್ರೆಸ್ಸಿನ ಹಿರಿಯ ವರಿಷ್ಠರು ಇದನ್ನು ಮರೆತಿರುವರಾದರೂ ನಾವು ನಮ್ಮ ಕರ್ತವ್ಯ ನೆರವೇರಿಸುವದನ್ನು ನಾವು ಮರೆಯಲಾಗದು. ಕರ್ನಾಟಕ ಮಹಾರಾಷ್ಟ್ರಗಳೆರಡಕ್ಕೂ ಇದು ಲಾಭ ಸಿಗುವದರಿಂದ ಇಬ್ಬರ ಧ್ವನಿಯೂ ಒಕ್ಕೊರಳಿನಿಂದ ಹೊರಬರಬೇಕಾದುದು ಅವಶ್ಯ!

"ಮಹಾದೊಡ್ಡ ಸಮಸ್ಯೆಯೇ ಆಗಿರಲಿ, ಅದರಿಂದ ನುಣುಚಿಕೊಳ್ಳಲು ನೋಡದೆ ನೇರವಾಗಿ ಎದುರಿಸಿದರೆ ಅದು ಅತಿ ಸಣ್ಣದಾಗಿ ಬಿಡುವುದು"

"ಜನರ ಆರೋಗ್ಯಪಾಲನೆಗಾಗಿ ಪ್ರತಿಬಂಧಕ ಉಪಾಯಗಳನ್ನು ಕೈಕೊಳ್ಳದೆ ಆಸ್ಪತ್ರೆಗಳನ್ನು ನಿರ್ಮಿಸುತ್ತ ಹೋದರೆ ಪ್ರಯೋಜನವೇನು? ಆಸ್ಪತ್ರೆ ಕಟ್ಟಿಸಲು ವ್ಯಯಿಸುವ ಹಣವನ್ನು ರೋಗ ಹುಟ್ಟದಂತೆ ಮಾಡುವ ಕೆಲಸಗಳಿಗೆ ವಿನಿಯೋಗಿಸುವ"

—ಪಂ. ನೆಹರು.

Our Pigmy Deposit Scheme

.... brings our bank to your door. You may save as small a sum as annas two. Our collector will call on you every day to receive it.

At the rate of annas two per day you save Rs. 350 in 7 years because we allow interest at 3⅛% per annum. At the rate of Re. 1/- per day your Savings are Rs 2,800/- in 7 years At the rate of Rs. 10/- it is Rs. 28,000/-. Come in to-day and join the band of **Prudent Prosperous Pigmy People.**

The Canara Industrial & Banking Syndicate Ltd.

ESTD: 1925. H. O: UDIPI.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.



ಪ್ರಜಾಸಕ್ತಿ

ನ್ಯಾಯಾಲಯ

[ಕಳೆದ ಸಂಚಿಕೆಯಿಂದ ಮುಂದುವರಿದುದು]

ಸ್ವಿಜರ್‌ಲೇಂಡು ಸಣ್ಣ ರಾಷ್ಟ್ರವಾಗಿದೆ ಹೆಚ್ಚು ದೊಡ್ಡ ವಿಷಯಗಳು ನ್ಯಾಯಾಲಯಕ್ಕೆ ಬರುವದಿಲ್ಲ. ಅಮೇರಿಕದ ಪ್ರಾಂತಗಳಲ್ಲಿ ದೊಡ್ಡ ದೊಡ್ಡ ಕೋರ್ಪೋರೇಶನ್ನುಗಳ, ರೈಲುಕಂಪೆನಿಗಳು ಮತ್ತು ಟ್ರಸ್ಟುಗಳು ಪಕ್ಷಗಳ ಯಂತ್ರಗಳ ಮುಖಾಂತರ ತಮ್ಮ ಕೈವಾಡ ಚಾಲುಮಾಡಿ ಸ್ವಾರ್ಥದೃಷ್ಟಿಯಿಂದ ತಮಗೆ ಹಿತವಿರುವ ವ್ಯಕ್ತಿಗಳಿಗೆ ಇಂಥಾ ಸ್ಥಾನಗಳು ದೊರೆಯುವಂತೆ ಮೇನ್ನತು ಮಾಡುವವು. ಸ್ವಿಜರ್‌ಲೇಂಡು ಸಣ್ಣ ರಾಷ್ಟ್ರವಾದುದರಿಂದ ಪ್ರತಿಯೊರ್ವನ ಅನುಭವ ಮತ್ತು ಪರಿಚಯವು ಗುಶದಾರರಿಗೆ ಇರುವದಾದುದರಿಂದ ಯೋಗ್ಯವ್ಯಕ್ತಿಯನ್ನು ಹೆಕ್ಕಿ ಆರಿಸುವರಿ ಪಕ್ಷಗಳ ಸಲಹೆ ಸಹಾಯಗಳು ಅಗತ್ಯವಿರುವುದಿಲ್ಲ. ಮಿಲ್ಯಾಂತರ ಜನರಿರುವ ರಾಷ್ಟ್ರಗಳಲ್ಲಿ ಉಮೇದ್ವಾರರ ಪರಿಚಯವು ಜನರಿಗಿರುವದಿಲ್ಲ. ಪಕ್ಷಸಂಗಡಗಳು ಸಂಘಸಾಂಸ್ಥೆಗಳು ಸೂಚಿಸಿದಂತೆ ನಡೆಯಬೇಕಾಗುತ್ತದೆ. ಪ್ರತಿ ಪಕ್ಷಕ್ಕೂ ತನ್ನ ಬೇಳೆ ಬೇಯಿಸಲಿಕ್ಕಿರುವುದರಿಂದ ತಮ್ಮ ಇಷ್ಟಮಿತ್ರರಿಗೆ ಉಚಿತ ಉಡುಗರೆಯ ರೂಪದಲ್ಲಿ ಇಂಥಾ ಸ್ಥಾನವನ್ನು ಕೊಡಿಸಿ ಸಹಾಯಮಾಡುವರು. ವ್ಯಕ್ತಿಗಳ ಯೋಗ್ಯತೆಯನ್ನು ಪರೀಕ್ಷಿಸುವುದರ ಬದಲಿಗೆ ತಮ್ಮ ಹಂಗೀಕನಾಗಿ ತಮ್ಮ ಕೈಗೊಂಬೆಯಾಗಿ ತಮ್ಮ ಮನೋಗತದಂತೆ ವರ್ತಿಸುವವರನ್ನು ಹುಡುಕಿ ಆರಿಸುವರು. ಅಧಿಕಾರಿ ಮಂಡಳಿಯ ಮುಖ್ಯಸ್ಥನಿಂದ ನೇಮಿಸಲ್ಪಡುವ ನ್ಯಾಯಾಧೀಶನಿಗಿಂತ ಚುನಾಯಿತನಾದವನು ಉತ್ತಮನಾಗಲಾರನು ಎಂಬ ಭಾವನೆಯು ಕೆಲವರಲ್ಲಿರುವದು. ಅಧಿಕಾರಿ ಮಂಡಳಿಯು ಜನರಿಗೆ ಜವಾಬ್ದಾರಿಯಾಗಿರುವದು. ತಪ್ಪು ನೇಮಕ ಮಾಡಿದರೆ ಅದು ತನ್ನ ಬೆಲೆಯನ್ನು ಹಾಳುಮಾಡಿಕೊಳ್ಳುವದಲ್ಲದೆ ತನ್ನ ಪಕ್ಷದ ಗೌರವ ಮರ್ಯಾದೆಯನ್ನು ಕಡಿಸುವದು. ಜನರಿಂದ ಚುನಾಯಿತವಾಗುವದೆಂದರೆ ಪಕ್ಷಗಳು ಸ... ...ತಿ ನೇಮಕಮಾಡುವದಾಗಿದೆ. ಪಕ್ಷಗಳ ಯಂತ್ರ ... ವಿದಿನಯುಮಸ್ಥಾನವಿಲ್ಲ. ಒಂದು ವ್ಯಕ್ತಿಯನ್ನು ಪಕ್ಷದ ಯಂತ್ರವು ಸೂಚಿಸಿ ಶಿಫಾರಸು ಮಾಡಿದರೆ ಮತದಾರರು ಆ ವ್ಯಕ್ತಿಯನ್ನು ಚುನಾಯಿಸಿದರ ಆ ವ್ಯಕ್ತಿಯಲ್ಲಿ ಕಂಡುಬರುವ ಗುಣದೋಷಗಳಿಗೆ ಮತದಾರರೇ ಜವಾಬ್ದಾರರಲ್ಲದೆ ಪಕ್ಷವನ್ನು ಹೊಣೆಮಾಡಲು ಶಕ್ಯವಿಲ್ಲ. ಯೇಕಂದರೆ ಜನರು ಪಕ್ಷದ ಯಂತ್ರದ ಸೂಚನೆಯನ್ನು ಅಲ್ಲಗಳೆದು ಬೇರೊಬ್ಬನನ್ನು ನೇಮಿಸಬಹುದಿತ್ತು. ಪಕ್ಷದ ಸೂಚನೆಯಂತೆ ನಡೆಯಬೇಕೆಂತಿಲ್ಲ. ತಾವು ಮಾಡಿದ ತಪ್ಪಿಗೆ ತಪ್ಪು ಪ್ರಾರಬ್ಧವೆಂದು ತಮ್ಮ ಹಣೆಯನ್ನೆ ಬಡಿದುಕೊಳ್ಳಬೇಕಲ್ಲದೆ ಇನ್ನೊಬ್ಬರನ್ನು ದೂರಲು ಬರುವದಿಲ್ಲ.

ಫ್ರಾನ್ಸು ದೇಶದಲ್ಲಿ ಮೇಜಿಸ್ಟ್ರೇಟರನ್ನು ನೇಮಿಸುವಾಗ ಕೆಳತರಗತಿಯವರನ್ನು ಮೇಲ್ತರಗತಿಗೆ ಅಧಿಕಾರಿ ಮಂಡಳಿಯು ಕಳುವದಾಗಿದೆ. ಕೆಲವು ಮೇಜಿಸ್ಟ್ರೇಟರು ಅಧಿಕಾರಿ ಪಕ್ಷದವರ ಮನಸ್ಸನ್ನು ಒಲಿಸುವಂತೆ ಜಾಗರೂಕರಾಗಿರುವರು. ಅಧಿಕಾರಿಗಳು ನ್ಯಾಯಾಧೀಶರನ್ನು ನೇಮಿಸುವಾಗ ತಮ್ಮ ಹಿತಾಹಿತದ ಮನದೊಲವಿನ ವ್ಯಕ್ತಿಗಳನ್ನು ಉಚ್ಚ ಸ್ಥಾನಕ್ಕೇರಿಸುವರು. ಈ ರೀತಿ ಮುಂಚಿತವಾಗಿ ಮನದೊಲವನ್ನು ತಿಳಿದೇ ಒಬ್ಬ ವ್ಯಕ್ತಿಯನ್ನು ನೇಮಿಸಿದುದಾಗಿದೆ ಎಂದು ಜನರ ತಿಳುವಳಿಕೆಗೆ ಬಂದರೆ ಆ ವ್ಯಕ್ತಿಯ ನೈತಿಕ ಬಲವು ಕಡಮೆಯಾಗುವದು. ಸಾರ್ವಜನಿಕರಲ್ಲಿ ಶಾಂತತೆ ಮತ್ತು ನೆಮ್ಮದಿ ನೆಲೆಯಾಗುವರೆ ಪ್ರಜಾಸತ್ತೆಯ ಬೆಳವಣಿಗೆ ಮತ್ತು ವೃದ್ಧಿಯ ಬಗ್ಗೆ ವ್ಯಕ್ತಿಗಳೊಳಗೆ ಅಥವಾ ವ್ಯಕ್ತಿ ಮತ್ತು ಸರಕಾರಗಳೊಳಗೆ ತಿಕ್ಕಾಟ ಬಂದರೆ ನ್ಯಾಯಾಲಯದಲ್ಲಿ ನ್ಯಾಯವಿದ್ದಂತೆ ತೀರ್ಮಾನವಾದೀತೆಂಬ ಭರವಸೆ ಮತ್ತು ದೃಢ ವಿಶ್ವಾಸಕ್ಕಿಂತ ಹೆಚ್ಚಿನದು ಬೇರೊಂದೂ ಇಲ್ಲ. ಈ ಕಾರಣಗಳಿಂದ ನ್ಯಾಯಾಧೀಶರು ಪಕ್ಷಪಾತವಿಲ್ಲದೆ ಯಾರ ಹಂಗೀಕರೂ ಅಲ್ಲದೆ ನಿರ್ಭೀತರು ಮತ್ತು ಸ್ವತಂತ್ರರಾಗಿರುವದು ಉತ್ತಮ.

ಗವರ್ನರರಿಗೆ 500 ರೂ. ಸಂಬಳ! ಒಂದು ಔನ್ಸ್ ಅಕ್ಕಿಯು ಹೆಚ್ಚಿತು!

ಮದ್ರಾಸು ಪ್ರಾಂತದಲ್ಲಿ ಅಕ್ಕಿಯ ಸೀದಾ ಪ್ರಮಾಣ ಹೆಚ್ಚಳ

ಮದ್ರಾಸು ಪ್ರಾಂತ್ಯದ ಸೀದಾ ಭಾಗಗಳಲ್ಲಿ ಕೊಡಲಾಗುವ ಧಾನ್ಯಗಳಲ್ಲಿ ಅಕ್ಕಿಯ ಪ್ರಮಾಣವನ್ನು ಇದೇ ತಿಂಗಳ ತಾ 23ರಿಂದ ಆರು ಔನ್ಸುಗಳಿಂದ ಏಳು ಔನ್ಸುಗಳಿಗೆ ಏರಿಸಲಾಗಿದೆ. ಆದರೆ ಇದು ಪರಿಹಾರ ಅಂಗಡಿಗಳಿಗೆ ಅನ್ವಯಿಸುವುದಿಲ್ಲ.

ಬೆಲೆಗಳ ಇಳಿತಕ್ಕೆ ಡಾ। ಜಾನ್ ಮಥಾಯರ ಕಾರಣ

ಭಾರತದ ಮಾಜಿ ಅರ್ಥ ಸಚಿವರಾದ ಜಾನ್ ಮಥಾಯರು ಮುಂಬಯಿಯ ಪ್ರಜಾ ಪ್ರಭುತ್ವ ಮಂಡಲದ ಆಶ್ರಯದಲ್ಲಿ ದಿನಾಂಕ 17ರಂದು ಈಗಿನ ಆರ್ಥಿಕ ಪರಿಸ್ಥಿತಿ ಕುರಿತು ಮಾತನಾಡುತ್ತಾ, ಶಕ್ತಿ ಮೀರಿದ ಸಟ್ಟಾವ್ಯಾಪಾರವೇ ಬೆಲೆಗಳು ಒಮ್ಮೆಗೇನೇ ಇಳಿಯುವುದಕ್ಕೆ ಮುಖ್ಯ ಕಾರಣವೆಂದರು.

ಕೇವಲ ಐದು ನೂರು ವೇತನ ಪಡೆಯುವ ನಿರ್ಧಾರ

ಪಶ್ಚಿಮ ಬಂಗಾಳದ ಗವರ್ನರರಾದ ಡಾ। ಎಚ್. ಸಿ. ಮುಕರ್ಜಿಯವರು ತಮ್ಮ ಮಾಸಿಕ ವೇತನದಲ್ಲಿ ಕೇವಲ ಐದು ನೂರು ರೂಪಾಯಿಗಳನ್ನು ಪಡೆಯಲು ನಿರ್ಧರಿಸಿದ್ದು ಉಳಿದುದನ್ನು ರಾಜ್ಯಸರಕಾರಕ್ಕೆ ಕೊಡಮಾಡಿರುವರು. ಅವರ ವೇತನವು ಐದು ಸಾವಿರದ ಐನೂರು ರೂಪಾಯಿ ಇರುವುದು.

ಹಾಲು ಕೆಡದಂತೆ ಮಾಡುವ ವಿಧಾನಗಳ ಉಪಾಯ

ಅಮೇರಿಕದಲ್ಲಿ ಈಗ ನಾಲ್ಕು ವಿಧಗಳಲ್ಲಿ ಹಾಲನ್ನು ಕೆಡದಂತೆ ಇಡಲಾಗುತ್ತಿದೆ. ಅದು ಗಟ್ಟಿಮಾಡುವುದು, ಒಣಗಿಸುವುದು, ಕಾಸಿ ಕಡೆದಿಡುವುದು, ಮಂಜಿನಗಡ್ಡೆಯಂತೆ ಗಟ್ಟಿಮಾಡುವುದು. ಈ ನಾಲ್ಕು ವಿಧಾನಗಳಲ್ಲಿಯೂ ಮನಹ ಪ್ರಯೋಗಗಳು ನಡೆಯುತ್ತಿವೆ. ಈ ವಿಧಾನದಿಂದ ಕಾದಿಟ್ಟ ಹಾಲನ್ನು ಹಡಗುಗಳಲ್ಲಿಯೂ ಹಾಲು ಏನೂ ಸಿಕ್ಕದ ಸ್ಥಳಗಳಲ್ಲಿಯೂ ಉಪಯೋಗಿಸಲಾಗುತ್ತಿದೆ. ಗಟ್ಟಿಮಾಡಿದ ಹಾಲಿನಲ್ಲಿ ಮಜ್ಜಿಗೆ ಬೆಣ್ಣೆ ಎಲ್ಲ ವಸ್ತುವೂ ಇರುತ್ತದೆ. ಮುಕ್ಕಾಲು ಭಾಗ ನೀರನ್ನು ಮಾತ್ರ ತೆಗೆಯಲಾಗುತ್ತದೆ. ಭಾರತದಲ್ಲಿ ಇಂತಹ ಹಾಲು ಕಡಿಮೆಯಾಗಿರುತ್ತದೆ.

ಸಂಗೀತ ವಿದ್ವಾಂಸರಿಗೆ ಬಹುಮಾನ

ಕೇಂದ್ರ ಸರಕಾರದ ಶಿಕ್ಷಣ ಶಾಖೆಯು ಇನ್ನು ಮೇಲೆ ಪ್ರತಿವರುಷ ಭಾರತದ ನಾಲ್ವರು ಸಂಗೀತ ವಿದ್ವಾಂಸರಿಗೆ ಬಹುಮಾನ ಕೊಡಲು ನಿರ್ಣಯಿಸಿರುತ್ತದೆ. 1951--52ನೆ ವರುಷಕ್ಕಾಗಿ ಒಂದೊಂದು ಸಾವಿರ ರೂಪಾಯಿಯ ನಾಲ್ಕು ಬಹುಮಾನಗಳನ್ನು ಕೊಡಲಾಗುವುದು. ಹಿಂದುಸ್ತಾನಿ ಸಂಗೀತಗಾರನಿಗೆ ಒಂದುವೆ ಹಿಂದುಸ್ತಾನಿ ವಾದ್ಯಗಾರನಿಗೆ ಒಂದು ಕರ್ನಾಟಕ ಸಂಗೀತಗಾರನಿಗೆ ಒಂದು ಮತ್ತು ಕರ್ನಾಟಕ ವಾದ್ಯಗಾರನಿಗೆ ಒಂದು ಹೀಗೆ ಬಹುಮಾನಗಳನ್ನು ರಾಷ್ಟ್ರಪತಿ ಭವನದಲ್ಲಿ ಜರಗುವ ಸಂಗೀತ ಕಾರ್ಯಕ್ರಮದಲ್ಲಿ ಹಂಚಲಾಗುವುದು.

ಮುಂಬಯಿ ಗುಪ್ತ ಸಮಿತಿಯ ಶಿಫಾರಸು

'ಅಧಿಕ ಆಹಾರ ಬೆಳೆಯಿರಿ' ಚಳವಳಿಯನ್ನು ಮುಂಬಯಿ ರಾಜ್ಯದ ಒಕ್ಕಲತನ ಅಭಿವೃದ್ಧಿ ಯೋಜನೆಯಲ್ಲಿ ಲೀನಗೊಳಿಸಿ, ಆಹಾರಧಾನ್ಯದ ಬೆಲೆ ಧೋರಣೆಯನ್ನು ಬದಲಿಸಬೇಕೆಂದು ಮುಂಬಯಿ ಗುಪ್ತ ಸಮಿತಿಯು ಸರಕಾರಕ್ಕೆ ಸೂಚಿಸಿರುವುದು. ಆಹಾರಧಾನ್ಯದ ಎಲ್ಲ ಕಳೆಯ ಬೆಲೆಯನ್ನಿಳಿಸಿ, ಮಿಕ್ಕಿ ಉಳಿದ ಧಾನ್ಯವನ್ನು ಬಹಿರಂಗ ಪೇಟೆಯಲ್ಲಿ ಮಾರಲಿಕ್ಕೆ ಅವಕಾಶ ಕೊಡಬೇಕೆಂದೂ ಈ ಸಮಿತಿಯು ಅಭಿಪ್ರಾಯಪಟ್ಟಿರುತ್ತಲೆ.



30 ತೋಟಗಳಿಂದ ಸಂಗ್ರಹಿಸಿ ಬಂದ ಅತ್ಯುತ್ತಮವಾದ ಚಹ

ಪ್ರತಿಯೊಂದು ಬ್ರೂಕ್ ಬಾಂಡ್ ಚಹದ ಪೊಟ್ಟಣವೂ 30 ತೋಟಗಳಿಂದ ಬಂದ ಚಹದ ಎಲೆಯ ಮಿಶ್ರಣವಾಗಿರುವುದರಿಂದ ಚಹದ ಶಾಶ್ವತವಾದ ಉತ್ತಮ ಗುಣವನ್ನು ನಿಶ್ಚಯಿಸುವುದು. ಅಗ್ಗವಾಗಿ ಸಿಗುವ ಮತ್ತು ಶಾಸ್ತ್ರೀಯವಾಗಿ ಮಿಶ್ರಣ ಮಾಡದಿರುವ ಚಹವನ್ನು ಕೊಂಡು ವೃಥಾ ಏತಕ್ಕೆ ನಷ್ಟಕ್ಕೊಳಗಾಗುವಿರಿ. ಬ್ರೂಕ್ ಬಾಂಡ್ ಚಹವು ಮಲಿನವಾಗದ ಹಾಗೆ ಪೊಟ್ಟಣಗಳಲ್ಲಿ ಸುತ್ತಿ ಮೊಹರು ಮಾಡಲ್ಪಟ್ಟಿರುತ್ತದೆ.

ಗ್ಯಾರಂಟೀಯಾದ ಶುಚಿತ್ವ ಗ್ಯಾರಂಟೀಯಾದ ಶುದ್ಧತೆ

ಬ್ರೂಕ್ ಬಾಂಡ್ ಚಹಾ

BB/50/LOT/131

THE CANARA BANKING CORPORATION LIMITED.

ನಿಮ್ಮ ಎಲ್ಲಾ ಬ್ಯಾಂಕಿಂಗ್ ಸಮಸ್ಯೆಗಳಿಗೆ

೧೯೦೬ನೇ ಇಸವಿಯಲ್ಲಿ ಸ್ಥಾಪಿತವಾಗಿ,

ಎಲ್ಲಾ ಜನರ ಮೆಚ್ಚುಗೆಗೆ ಪಾತ್ರವಾಗಿರುವ

ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್, ಲಿಮಿಟೆಡ್

ಇವರನ್ನು ವಿಚಾರಿಸಿರಿ

ಪ್ರಧಾನ ಕಾರ್ಯಾಲಯ, ಉಡುಪಿ, (ದ. ಕ.)

ನವಯುಗ

ಚಂದಾ ವಿವರ

ವರ್ಷಕ್ಕೆ ರೂ 5—12—0

6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೨೭–೩–'೫೨

ಕಲ್ಕತ್ತಾ ಕಾಂಗ್ರೆಸ್ ಅಧಿವೇಶನ

ಮಹಾಚುನಾವಣಾ ನಂತರ ಪ್ರಥಮತಃ ನಡೆದಿರುವ ಕಲ್ಕತ್ತೆಯ ಅಧಿವೇಶನವು ಅತ್ಯಂತ ಮಹತ್ವದ್ದಾಗಿರುತ್ತದೆ. ಕಾಂಗ್ರೆಸ್ಸಿನ ಬಗ್ಗೆ ಜನತೆಗಿರುವ ತಪ್ಪು ಅಭಿಪ್ರಾಯಗಳೂ– ಚುನಾವಣಾ ಕಾಲದಲ್ಲಿ ಕಾಂಗ್ರೆಸ್ಸಿನಲ್ಲಿ ಬೆಳೆದ ಜಾತೀಯ ಮನೋವೃತ್ತಿಯೂ ಹಲವು ಧುರೀಣರನ್ನು ಬೇಸರಗೊಳಿಸಿದೆ. ಈ ವಿಚಾರದಲ್ಲಿ ಕಾಂಗ್ರೆಸ್ಸಿನ ಶುದ್ಧೀಕರಣವಾಗುವದು ಅತ್ಯಾವಶ್ಯಕವೆಂದು ನಮ್ಮ ನಾಯಕರು ಮನಗಂಡು ಕಲ್ಕತ್ತೆಯ ಅಧಿವೇಶನದಲ್ಲಿ ಅದನ್ನು ಗಂಭೀರವಾಗಿ ಪರ್ಯಾಲೋಚಿಸಿದ್ದಾರೆ. ಜಾತೀಯತೆಯ ನಿರ್ಮೂಲನದ ಒಮ್ಮತವಾದ ಧೋರಣೆ ಮತ್ತು ಕಾತುರತೆ ಎಲ್ಲ ಕಾರ್ಯಕರ್ತರಲ್ಲೂ ಕಂಡು ಬಂದಿದೆ. ಅದಕ್ಕೆಂತಲೇ ಜಾತೀಯತೆಯ ನಿರ್ಮೂಲಕ್ಕಾಗಿ ಗೊತ್ತುವಳಿಯನ್ನು ಸ್ವೀಕರಿಸಲಾಗಿದೆ. ಕಾಂಗ್ರೆಸ್ ಸದಸ್ಯತ್ವವನ್ನು 4 ಆಣೆಗೆ ಇಳಿಸಿ ಎಲ್ಲರೂ ಅದಕ್ಕೆ ಸೇರಿ ಸಂಸ್ಥೆಯನ್ನು ಬಲಪಡಿಸುವಂತೆ ಮಾಡಿದ್ದು ಸ್ವಾಗತಾರ್ಹ ಸಂಗತಿ. ಈ ಸಂದರ್ಭದಲ್ಲಿ ಪಂ. ನೆಹ್ರೂರವರು ಬಿಸಿ ರಕ್ತದ ತರುಣರು ಮುಂದೆ ಬರಬೇಕೆಂದು ಆಹ್ವಾನಕೊಟ್ಟಿರುವದಕ್ಕೆ ಈ ನಾಲ್ಕಾಣೆಯ ಸದಸ್ಯತನದ ಧೋರಣೆಯು ಇನ್ನಷ್ಟು ಸಹಾಯಕವಾಗಬಹುದು. ಕಾಂಗ್ರೆಸ್ಸೆಂದರೆ ಹಳಬರು ಮತ್ತು ಬಂಡವಳಶಾಹಿಗಳ ಒಂದು ಸಂಸ್ಥೆ ಎನ್ನುವ ಭಾವನೆ ಎಳೆಯರಲ್ಲಿ ಈಚೀಚೆ ಹೆಚ್ಚಾಗಿ ಬೆಳೆಯುತ್ತಲಿದ್ದು, ಅವರು ಬೇರೆಬೇರೆ ಪಕ್ಷಗಳಿಗೆ ಸೇರಿಕೊಂಡು ಕ್ರಾಂತಿಮಾರ್ಗವನ್ನು ಹಿಡಿಯುತ್ತಿರುವದು ವಿದಿತ ವಿಚಾರವೇ ಆಗಿದೆ. ಈಗ ತರುಣರನ್ನು ಒಳಬರುವಂತೆ ಆಹ್ವಾನಿಸಿ ಅನುಕೂಲ ಪರಿಸ್ಥಿತಿಯನ್ನು ಒದಗಿಸಿ ಕೊಡಲಾಗಿದೆ. ನಿಜವಾಗಿಯೂ ಇದು ಸ್ವಾಗತಾರ್ಹ ಸಂಗತಿ!

ಭಾರತದ ಅತಿ ದೊಡ್ಡ ಸಮಸ್ಯೆಯಾದ ಆಹಾರದ ಬಗ್ಗೆ ಕಾಂಗ್ರೆಸ್ ಸ್ವೀಕರಿಸಿದ ಇನ್ನೊಂದು ಗೊತ್ತುವಳಿಯೂ ಜನತೆಯ ದೃಷ್ಟಿಯನ್ನು ಕರ್ತವ್ಯದೆಡೆಗೆ ಎಳೆದಿರುತ್ತದೆ. ಪಂಚವಾರ್ಷಿಕ ಯೋಜನೆ ಹಾಗೂ ಇನ್ನಿತರ ನೀರಾವರೀ ಯೋಜನೆಯು ಭಾರತ ಸರಕಾರದ ದೃಷ್ಟಿಪಥದಲ್ಲಿ ಕುಳಿತಾಗಲೂ ವಿಧಾಯಕ ಕಾರ್ಯದ ಮೂಲಕ ಜನತೆಯೂ ಸರಕಾರದೊಡನೆ ಆಹಾರ ಸ್ವಾವಲಂಬನ ಘೋಷಣೆಯನ್ನು ವಹಿಸುವದು ಅವಶ್ಯ. ಈ ವಿಚಾರವನ್ನು ಕಾಂಗ್ರೆಸು ಅತ್ಯಂತ ಕಳಕಳಿಯಿಂದ ಬಿನ್ನವಿಸಿಕೊಂಡಿದೆ. ಆಹಾರ ಸಮಸ್ಯೆಯ ಬಗ್ಗೆ ಇತರ ಪಕ್ಷಗಳ ಸಹಕಾರವನ್ನು ಯಾಚಿಸಿದ್ದು ಕಾಂಗ್ರೆಸ್ಸಿನ ಇನ್ನೊಂದು ಔದಾರ್ಯ. ಭಾರತವು ತನ್ನ ಹಲವಾರು ಯೋಜನೆಗಳನ್ನು ಕಾರ್ಯರೂಪದಲ್ಲಿ ತರಬೇಕಾದರೆ ಹೇರಳ ಹಣಬೇಕಾಗುವದು. ಇದಕ್ಕಾಗಿ ಪರಕೀಯ ಸಹಕಾರವನ್ನು ಅಪೇಕ್ಷಿಸುವದು ಅನಿವಾರ್ಯ. ಈ ಸಂದರ್ಭದಲ್ಲಿ ತನ್ನ ಧ್ಯೇಯಧೋರಣೆಗೆ ಚ್ಯುತಿ ಬಾರದ ರೀತಿಯಲ್ಲಿ ಸಾಲಪಡೆಯುವಲ್ಲಿ ಶ್ರೀ ನೆಹ್ರೂರವರ ವಿದೇಶಾಂಗ ನೀತಿಯು ಸರ್ವಶ್ರೇಷ್ಠವಿದೆ. ಮಾತ್ರವಲ್ಲ ಜಾಗತಿಕರಂಗದಲ್ಲಿ ಭಾರತದ ಸ್ಥಾನಮಾನ ಅತ್ಯಂತ ಗೌರವಾಸ್ಪದವಾಗಿರುವದು. ನಮ್ಮ ಆಹಾರ ಕೊರತೆಯನ್ನು ಪರಿಹರಿಸುವಲ್ಲಿ ವಿದೇಶಾಂಗ ನೀತಿಯಲ್ಲಿ ನಾವು ತೋರಿದ ಸೌಹಾರ್ದಭಾವವೇ ಕಾರಣವಾಗಿದೆ ಇದನ್ನು ಪ್ರತಿಯೊಬ್ಬ ಭಾರತೀಯನೂ ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ

ಜನತೆಯನ್ನು ಪ್ರತಿನಿಧಿಸುವ ಏಕಮಾತ್ರ ಸಂಸ್ಥೆಯೆಂದರೆ ಕಾಂಗ್ರೆಸ್ಸೆಂಬುದನ್ನು ಚುನಾವಣಾ ಪರಿಗಳಲ್ಲಿಗೆ ಹಚ್ಚಿ ನೋಡಿದ್ದೇವೆ. ಆದರೂ ಕಾಂಗ್ರೆಸ್ಸು ಪರಿಪೂರ್ಣವಾಗಿದೆಂದು ಸ್ಪಷ್ಟ ಹೇಳುತ್ತಿಲ್ಲ. ಹಲವು ಜನ ಸ್ವಾರ್ಥಿಗಳ ಮತ್ತು ಜಾತೀಯವಾದಿಗಳಿಂದ ಕಾಂಗ್ರೆಸ್ಸು ಸ್ವಲ್ಪ ಮಟ್ಟಿಗೆ ಪ್ರತಿಗಾಮಿಯಿತೆ ಎಂಬುದು ಸಹಜ. ಆದರೆ ಇಂತಹ ವ್ಯಕ್ತಿಗಳನ್ನು ಅದರಲ್ಲೇ ಉಳಿಸಿಕೊಂಡರೆ ಆ ಮಹಾವ್ಯಾಧಿ ಇಡಿಯ ಸಂಸ್ಥೆಯನ್ನೇ ಕೆಡಿಸಿ ಬಿಡುವಷ್ಟು ವ್ಯಾಪಕತೆ ಹೊಂದಬಾರದು. ಇದನ್ನು ಕಲ್ಕತ್ತದ ಅಧಿವೇಶನ ಚೆನ್ನಾಗಿ ಮನಗಂಡು ಕಟ್ಟುನಿಟ್ಟಾದ ಆದೇಶ ಕೊಟ್ಟಿರುವದು. ಹಳ್ಳಿಯಿಂದ ದಿಲ್ಲಿಯ ವರೆಗಿನ ಕಾಂಗ್ರೆಸ್ ಸಮಿತಿಗಳು ಪುನರ್ಘಟಿಸಬೇಕೆಂದು ಯೋಚಿಸಿ ಅದಕ್ಕನುಕೂಲವಾಗಿ ಕಾರ್ಯಪ್ರವೃತ್ತವಾಗಿರುವದು ಶುಭ ಚಿಹ್ನೆ!

ಅಂತೂ ಕಲ್ಕತ್ತಾದ ಅಧಿವೇಶನ ಹಿಂದಿನ ಎಲ್ಲ ಅಧಿವೇಶನಕ್ಕಿಂತ ಮಹತ್ವಪೂರ್ಣವೂ—ವಿಧಾಯಕ ರೂಪವೂ ಆಗಿರುವದು. ಕಳೆದ ನಾಲ್ಕುವರ್ಷಗಳಲ್ಲಿ ಕಾಂಗ್ರೆಸ್ಸಿನಲ್ಲಿ ತಲೆದೋರಿದ ತಪ್ಪುದೋಷಗಳನ್ನು ನೆನೆದುಕೊಂಡು ನೂತನ ಎಂ. ಎಲ್. ಎ. ಗಳೂ ಮಂತ್ರಿಗಳೂ ಮುಂದಿನ ಐದು ವರ್ಷಗಳಲ್ಲಿ ತಿರುಗಿ ಅಂತಹ ಪ್ರಮಾದವಾಗದಂತೆ ಜಾಗ್ರತೆ ವಹಿಸಬೇಕು. ಕಲ್ಕತ್ತಾ ಅಧಿವೇಶನದಲ್ಲಿ ಸ್ವೀಕರಿಸಿದ ಗೊತ್ತುವಳಿಗಳಿಗೆ ಜೀವದಾನ ಮಾಡುವ ವಿಶೇಷ ಹೊಣೆ ಅವರ ಮೇಲಿದೆಯೆಂಬದನ್ನು ಮರೆಯಲಾಗದು.

ಬಟವಾಯಿತು.

ರೇಶನಿಂಗ್ ಎಡ್ವೈಸರಿ ಕಮಿಟಿ ಸಭೆಯು—ಇದೇ ತಾ 20ರಲ್ಲು ಶ್ರೀ ಕೆ. ಕೃಷ್ಣಯ್ಯ ರಿಟಾಯರ್ಡ್ ಜಿಲ್ಲಾ ರೇಶನಿಂಗ್ ಆಫೀಸರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಳೆದ ದಶಂಬರ ತಿಂಗಳಲ್ಲಿ ಈ ಸಭೆಯಲ್ಲಿ ಪಾಸಾದ ನಿರ್ಣಯಗಳ ಕುರಿತು ಯಾವುದೊಂದು ಉತ್ತರವೂ ಸರಕಾರದಿಂದ ಬಾರದಿದ್ದುದಕ್ಕಾಗಿ ವಿಷಾದ ಸೂಚಿಸಲಾಯಿತು. ಅಲ್ಲದೆ ಇನ್ನು ಮುಂದೆಯೂ ಇದೇ ರೀತಿಯಲ್ಲಿ ಸರಕಾರವು ವರ್ತಿಸುವುದಾದರೆ ಇಂತಹ ಸಲಹಾ ಸಮಿತಿಗಳ ಪ್ರಯೋಜನವಿಲ್ಲವೆಂದು ಕೂಡಾ ಸರಕಾರದ ಗಮನಕ್ಕೆ ತರಲಾಯಿತು. ಇತ್ತೀಚೆಗೆ ರೇಶನಿಂಗ್ ಕ್ಷೇತ್ರದಲ್ಲಿ ಕೊಡಲಾಗುತ್ತಿರುವ ಗೋಧಿಯು ಅತೃಪ್ತಿಕರವಿದ್ದುದರಿಂದ ಇನ್ನು ಮುಂದೆ ಒಳ್ಳೆಯ ಗೋಧಿ ವಿತರಣೆಯಾಗಬೇಕಾಗಿದೆ ಎಂದೂ ಈಗ ಇರುವ ಗೋಧಿಯ ಬೆಲೆಯನ್ನು ತಗ್ಗಿಸಬೇಕಾಗಿಯೂ ಜಿಲ್ಲಾ ಕಲೆಕ್ಟರರನ್ನು ವಿನಂತಿಸುವ ನಿರ್ಣಯವಾಯಿತು.

ಆಟದ ಹಬ್ಬ—ಉಡುಪಿ ಟೀಚರ್ಸ್ ಸೆಂಟರಿನ ಆಶ್ರಯದಲ್ಲಿ ದಿನಾಂಕ 22ರಲ್ಲು ಅಜ್ಜರಕಾಡು ಮೈದಾನದಲ್ಲಿ ಡಾ। ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಶಾಲಾ ಮಕ್ಕಳ ಆಟದ ಹಬ್ಬವು ಯಶಸ್ವಿಯಾಗಿ ಜರಗಿತು.

ಆಗಮನ—ತಾ. 18ರಂದು ಡಾ। ಅರುಣಾಚಲಂ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸ್ ಇವರು ಇಲ್ಲಿಗೆ ಆಗಮಿಸಿ ಮರುದಿನ ಸರಕಾರಿ ಆಸ್ಪತ್ರೆಯನ್ನು ಪರಿಶೀಲಿಸಿದರು. ಡಾ। ಸಂಜೀವನ ಸೆಟ್ಟಿ ಮತ್ತು ಡಾ। ಪಿ. ಆರ್. ನಾಯ್ಕರು ಇಲ್ಲಿಯ ಆಸ್ಪತ್ರೆಯ ಅವಶ್ಯಕತೆಗಳನ್ನು ನಿವೇದಿಸಿಕೊಂಡಿರುವರು. ಹೆಂಗಸರ ವಾರ್ಡನ್ನು ವಿಶಾಲವಾಗಿ ಕಟ್ಟುವ, ಎಕ್ಸ್‌ರೇ ವಗೈರೆಯನ್ನು ಸಂಯೋಜಿಸುವ, ಲೇಡಿ ಡಾಕ್ಟರರನ್ನು ಬೇಗನೆ ನೇಮಿಸುವ ಕುರಿತು ಭರವಸೆ ಕೊಟ್ಟಿರುವರೆಂದು ತಿಳಿದುಬರುತ್ತ

ಮೆಡಿಕಲ್ ಕಾಲೇಜಿನ ಸಾಧ್ಯಾಸಾಧ್ಯತೆಯ ಕುರಿತು ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸ್ ಇವರೊಡನೆ ಡಾ। ಮಾಧವ ಪೈಗಳು ವಿಚಾರವಿನಿಮಯ ಮಾಡಿರುವರೆಂದೂ, ಹೊಸ ಮಂತ್ರಿಮಂಡಳವು ನಿರ್ಮಾಣವಾದಾಗ ಡಾ। ಪೈಗಳನ್ನು ಮದ್ರಾಸಿಗೆ ಬರಹೇಳಿರುವರೆಂದೂ ತಿಳಿಯುತ್ತೇವೆ.

ಕುಂಬಳೆ—ಮತ ಪಂಡಿತರೂ ವಾಗ್ಮಿಗಳೂ ಆಗಿದ್ದ ಮೊಗ್ರಾಲ್ ಕೆ ಕುಂಞಿಹೈದರ್ ಮೌಲಲಿಯವರು ತಾ. 15ರಲ್ಲು ತೀರಿಹೋದುದು ವಿಷಾದಕರ. ಅನುಯಾಯಿಗಳಲ್ಲಿ ಹುಚ್ಚುನಾಯಿ ಕಾಟವಿರುವುದಾಗಿ ತಿಳಿದಿದೆ.

ಕಾಸರಗೋಡು—ಬೇಕ್ಕೂರು ಬೋರ್ಡ ಬುನಾದಿ ಶಾಲೆಯ ಅಧ್ಯಾಪಕ ಶ್ರೀ ಲಿಂಗಪ್ಪ ಸೆಟ್ರಿಗೆ ಇಷ್ಟಲ್ಲಿಂಪಾಯಿಗೆ ವರ್ಗವಾದುದರಿಂದ ತಾ. 22ರಲ್ಲು ವಿದಾಯಕ ಸತ್ಕಾರಕೂಟವೊಂದು ಶ್ರೀ ಜಿ. ವಿ. ಹೆಗ್ಡೇರ ಅಧ್ಯಕ್ಷತೆಯಲ್ಲಿ ಜರಗಿತು.

ಶೈಕ್ಷಣಿಕ ... ಸ್ಥಾಪಿತವಾದ ಬೋರ್ಡ ಪ್ರಸಿದ್ಧ ... ಬಾ. ಎ. ಶಾಲೆಗಳ ಸಂಯುಕ್ತ ವರ್ಧಂತಿ ಸಮಾರಂಭವು ನಿಯೋಜಿತ ಅಧ್ಯಕ್ಷ ಉಡುಪಿಯ ಶ್ರೀ ಟಿ ಎ. ಪೈ, ಎಂ ಎಲ್. ಎ. ಅವರು ಅನಿರೀಕ್ಷಿತವಾಗಿ ಮದ್ರಾಸಿಗೆ ಹೊರಟು ಹೋದುದರಿಂದ ಸಿಂಡಿಕೇಟ್ ಬ್ಯಾಂಕಿನ ಅಧಿಕಾರಾಧ್ಯಕ್ಷ ಡಾ। ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ತಾ. 24ರಲ್ಲಿ ಜರಗಿತು. ಹೈಸ್ಕೂಲ್ ಕಮಿಟಿಯ ಅಧ್ಯಕ್ಷ ಶ್ರೀ ಬಿ. ನಾರಾಯಣ ಶೇಕರು ಸ್ವಾಗತಿಸಿ ಕಮಿಟಿಯ ಕಾರ್ಯಕಲಾಪಗಳನ್ನು ವಿವರಿಸಿದರು. ಹೈಸ್ಕೂಲಿನ ಹೆ. ಮಾ. ಶ್ರೀ ಕೆ. ಸಂಕಪ್ಪ ರೈಗಳು ಡಾ। ಕೆ. ಎಂ. ರೈ, ಮದ್ರಾಸು, ಶ್ರೀ ಬಿ ಮಂಜಯ್ಯ ಹೆಗ್ಡೆ, ಡಾ। ಕೆ. ಬಿ. ಶೆಟ್ಟಿ, ಕೆ. ಬಿ. ಗೌಡ, ಎಂ. ಎಲ್. ಎ, ಶ್ರೀ ಎಂ. ಶಿವರಾವ್ ಮೊದಲಾದವರಿಂದ ಬಂದ ಶುಭಸಂದೇಶಗಳನ್ನೂ ಹೈಸ್ಕೂಲ್ ವರದಿಯನ್ನೂ, ಶ್ರೀ ವೃತ್ತಿಯರು ಹಾ। ಎ। ಶಾಲಾ ವರದಿಯನ್ನೂ ಓದಿದರು. ಬಹುಮಾನ ವಿತರಣೆಯಾದ ಮೇಲೆ ಶ್ರೀಗಳಾದ ಎ. ಜೆ. ಅಳ್ವ, ಕೆ. ಹೊನ್ನಯ್ಯ ಶೆಟ್ಟಿ, ಕೆ. ಆರ್. ಆಚಾರ್, ಮಾರಪ್ಪ ಶೆಟ್ರು ಸಂದರ್ಭೋಚಿತ ಭಾಷಣಗಳನ್ನಿತ್ತರು. ಅಧ್ಯಕ್ಷರು ಹೈಸ್ಕೂಲ್ ಕಮಿಟಿಯ ಕೆಲಸವನ್ನು ಶ್ಲಾಘಿಸಿ, ವಿದ್ಯಾಪ್ರಚಾರದ ಹಾಗೂ ಗ್ರಾಮಾಭಿವೃದ್ಧಿಯ ಅವಶ್ಯಕತೆಗಳನ್ನು ವಿವರಿಸಿ ಸ್ಫೂರ್ತಿದಾಯಕ ಭಾಷಣವನ್ನಿತ್ತರು ಶ್ರೀ ವೆಂಕಟಸುಬ್ಬರಾಯರು ಆಭಾರ ಸೂಚಿಸಿದ ಮೇಲೆ ನಾಟಕಾದಿ ವಿವಿಧ ವಿನೋದಾವಳಿಗಳು ಯಶಸ್ವಿಯಾಗಿ ಸಂದಿರ್ಘವಾಗಿ ಜರಗಿದವು.

ಬೊಂಬಾಯಿ—ಮುಂಬಯಿ ಹೋಬಿಕಲಾವು ಕನಾಕ್ ರೋಡ್, [ಜಿ. ಟಿ. ಆಸ್ಪತ್ರೆಯ ಹತ್ತಿರ] ಲೋರ್ಡ್ ಹಾರ್ಸ್ ಮರಾಠಿ ಶಾಲೆಯ ಕಟ್ಟಡದಲ್ಲಿ ಜನಾಪರಲಾಲ ಧರ್ಮಾರ್ಥ ರಾತ್ರಿ ಹ್ಯಾಸ್ಕೂಲು ಸ್ಥಾಪಿಸಿಯಾಗಿ ಸಂಪೂರ್ಣ ಹ್ಯಾಸ್ಕೂಲಾಗಿ ಮಂಜೂರಾತಿ ಹೊಂದಿ ಪ್ರಗತಿ ಪಥದಲ್ಲಿ ನಡೆಯುತ್ತಿರುವುದಾದರೂ ಸ್ಥಳದ ಅನಾನುಕೂಲತೆಯಿಂದಾಗಿ ಕೆಳತರಗತಿಗಳನ್ನು ತೆರೆಯಲಾಗಲಿಲ್ಲ. ಆದರೆ ಮುಂಬಯಿ ಮುನಿಸಿಪಾಲಿಟಿಯವರು ದಯಾಭಾವದಿಂದ ಈ ಕಟ್ಟಡದಲ್ಲೆ ಹೆಚ್ಚಿನ ಸ್ಥಳದ ಅನುಕೂಲತೆ ಒದಗಿಸಿ ಕೊಟ್ಟ ಕಾರಣ ಇದೇ ಮಾರ್ಚ ತಿಂಗಳಾರಂಭದಿಂದ ಒಂದರಿಂದ ನಾಲ್ಕರ ವರೆಗಿನ ಇಯತ್ತೆಗಳನ್ನು ತೆರೆಯಲಾಗಿದೆ. ವಿದ್ಯಾಲಾಭ ಪಡೆಯಲು ಆತುರಪಡುವ ವಿದ್ಯಾರ್ಥಿಗಳು ಬೇಗನೆ ಬಂದು ಸೇರಬೇಕಾಗಿ ಸಂಬಂಧಪಟ್ಟವರ ವಿನಂತಿಯಿದೆ

ಮಹಾಜನ ಸಂಘದ ಮಹಾಸಭೆ

ಬೊಂಬಾಯಿ ಶಾಖೆಯ ದಿ ಉಡಿಯಾವರದಲ್ಲಿನ ಮಹಾಜನ ಸಂಘದ ಏಳನೆ ವಾರ್ಷಿಕ ಮಹಾಸಭೆಯು ಇದೇ ತಾ, 20ರಲ್ಲು ಸಿಜೆ ಷಹ ಕಂಪೆನಿ, ವೀರ್ ನರಿಮಾನ್ ರೋಡ್, ಚರ್ಚ್ ಗೇಟ್ ಹಾಲಿನಲ್ಲಿ ಜರಗಿತು.

ಲಲಿತ ಕರ್ನಾಟಕ ನಾಟಕ ಸಭೆ

ಯವರು ತಾ 13-4-52ರಂದು 'ಸಂಸಾರ ನೌಕಾ' ನಾಟಕವನ್ನು ಬೊಂಬಾಯಿ ಥಿಯೇಟರ್‌ನಲ್ಲಿ ಆಡಲಿರುವರು.



ಮಾಲನ್‌ವಾದ ಮಣ್ಣು ಮುಕ್ಕಿತು!

ದ. ಆಫ್ರಿಕೆಯ ಮುಖ್ಯಮಂತ್ರಿ ಡಾ। ಮಾಲನ್ನರು ತಮ್ಮ ವರ್ಣದ್ವೇಷಕ್ಕನುಗುಣವಾಗಿ ವರ್ಣೀಯ ಮತದಾರರನ್ನು ಪ್ರತ್ಯೇಕ ಮತದಾರ ಯಾದಿಯಲ್ಲಿ ಸೇರಿಸಿ ಅವರಿಗೆ ಪ್ರತ್ಯೇಕ ಪ್ರಾತಿನಿಧ್ಯಕೊಟ್ಟಿದ್ದರು. ಇದನ್ನು ಪ್ರತಿಭಟಿಸಿ ನಾಲ್ವರು ವರ್ಣವಂತ ದಾರರು ಘಟನೆಯ ಪ್ರಕಾರ ವರಿಷ್ಠ ನ್ಯಾಯಾಲಯಕ್ಕೆ ತಮ್ಮ ದೂರನ್ನು ಹೊತ್ತಿದ್ದರು. ವರಿಷ್ಠ ನ್ಯಾಯಾಲಯವಾದರೋ ಡಾ। ಮಾಲನ್ನರ ವರ್ಣದ್ವೇಷ ಕಾಯಿದೆ ಅಕ್ರಮವೆಂದು ಸಾರಿತು. ಇದರಿಂದಾಗಿ ದ. ಆಫ್ರಿಕೆಯಲ್ಲಿ ವಿಚಿತ್ರ ಮನೋವೃತ್ತಿಗಳು ಕಂಡುಬರುತ್ತಿವೆ. ವರ್ಣೀಯರಿಗೆ ಪ್ರತ್ಯೇಕ ಹಾಗೂ ಔದಾರ್ಯದ ಪ್ರಾತಿನಿಧ್ಯ ಕೊಡಲಾಗಿದೆಯೆಂಬ ಸರಕಾರದ ವಾದವನ್ನು ನ್ಯಾಯಾಧೀಶರು ನಿರಾಕರಿಸಿ, ಬೇರೆ ಆಸ್ತಿಕೊಟ್ಟು ಈಗಿನ ಆಸ್ತಿ ಕಿತ್ತುಕೊಳ್ಳುವದಾಗಿಹೇಳಿದಂತೆ ಈ ವಾದದ ಅಭಿಪ್ರಾಯವಿದ್ದಂತಿದೆಯೆಂದು ಅಭಿಪ್ರಾಯಪಟ್ಟಿರುವರು.

ಡಾ। ಮಾಲನ್ನರು ವರಿಷ್ಠ ನ್ಯಾಯಾಲಯದ ನಿರ್ಣಯವನ್ನು ಕುರಿತು ವಾರ್ತೆಗಾರರೊಡನೆ ಮಾತಾಡುತ್ತಾ "ನಾವು ಒಪ್ಪಲಾರದಂಥ ಘಟನಾತ್ಮಕ ಬಿಕ್ಕಟ್ಟು ಈ ನಿರ್ಣಯದಿಂದ ಸೃಷ್ಟವಾಗಿದೆ. ಪ್ರಜಾಪ್ರತಿನಿಧಿಗಳ ಸಾರ್ವಭೌಮಾಧಿಕಾರದ ಮೇಲೆ ನ್ಯಾಯಾಲಯವು ಅಧಿಕಾರ ನಡೆಸುವದನ್ನು ಸಹಿಸಲಾರೆವು" ಎಂದಿರುವರು.

ವರಿಷ್ಠ ನ್ಯಾಯಾಲಯದ ತೀರ್ಮಾನದ ವೇಳೆ ಅಲ್ಲಿ ಉದ್ಭವಿಸಿರುವ ಘಟನಾತ್ಮಕ ತೊಡಕನ್ನು ಡಾ। ಮಾಲನ್ನರಗುಂಪಿನವರುಹೇಗೆ ಬಗೆಹರಿಸಬಹುದೆಂದು ಚಿಂತಿಸುತ್ತಿದ್ದಾರೆ. ಪಾರ್ಲಿಮೆಂಟಿನಲ್ಲಿ ಪಾಸಾದ ಕಾಯಿದೆಗಳು ಕ್ರಮಬದ್ಧವಿರುವವೋ ಇಲ್ಲವೋ ಎಂಬುದನ್ನು ನಿರ್ಣಯಿಸುವ ಅಧಿಕಾರವನ್ನು ವರಿಷ್ಠ ನ್ಯಾಯಾಲಯದಿಂದ ಹಿಂತೆಗೆದುಕೊಳ್ಳಬೇಕೆಂದು ಡಾ। ಮಾಲನ್ನರು ಅಭಿಪ್ರಾಯ ವ್ಯಕ್ತಪಡಿಸಿರುವರು. ವರಿಷ್ಠ ನ್ಯಾಯಾಲಯದ ಈ ನಿರ್ಣಯವನ್ನು ಜೋಹಾನ್ಸಬರ್ಗದ ಹೆಚ್ಚಿನ ಜನ ಸ್ವಾಗತಿಸುತ್ತಿರುವದು ಮಾತ್ರವಲ್ಲದೆ, 'ಕೇಪ್ ಟೈಮ್ಸ್' 'ಡೇಲಿಮೇಲ್' 'ಡೀಬರ್ಗರ್'ಮುಂತಾದ ಪತ್ರಿಕೆಗಳು ಈ ವಿಚಾರಕ್ಕೆ ಅತ್ಯಂತ ಮಹತ್ವವನ್ನು ಕೊಟ್ಟು ಮಾಲನ್ ವರ್ಣದ್ವೇಷ ಧೋರಣೆಯನ್ನು ಬಲವಾಗಿ ಟೀಕಿಸುತ್ತವೆ. 'ಕೇಪ್ ಟೈಮ್ಸ್' ತನ್ನಭಿಪ್ರಾಯವನ್ನು ವ್ಯಕ್ತಪಡಿಸುತ್ತ "ದಕ್ಷಿಣ ಆಫ್ರಿಕೆಯ ಸರಕಾರವು ಈಗ ಸೋಲನ್ನಪ್ಪಿ ಬಿದ್ದಿದ್ದು ಕಾಯಿದೆ ಆಳಿಕೆಯನ್ನು ಬದಿಗೊತ್ತಿ ದಬ್ಬಾಳಿಕೆಯನ್ನು ನಡೆಸಲು ಹೊರಟಿದೆ" ಎಂದು ವರಿಷ್ಠ ನ್ಯಾಯಾಲಯದ ನಿರ್ಣಯದವೇಳೆ ಮಾಲನ್ನರು ವಿವರಿಸುತ್ತಿರುವುದನ್ನು ಟೀಕಿಸುತ್ತದೆ. ವರಿಷ್ಠ ನ್ಯಾಯಾಲಯದ ನಿರ್ಣಯವನ್ನು ನಿರಾಕರಿಸಿ ಮುನ್ನಡೆಯುವ ಡಾ। ಮಾಲನ್ನರ ಈ ವರ್ಣದ್ವೇಷ ಎಷ್ಟರಮಟ್ಟಿಗೆ ಯಶಗೊಳ್ಳಲಿದೆಯೆಂದು ಪ್ರಚಲಿತ ರಾಜಕೀಯ ಸ್ಥಿತ್ಯಂತರದಿಂದ ಊಹಿಸಬಹುದಾಗಿದೆ.

ಪಶ್ಚಿಮ ರಾಷ್ಟ್ರಗಳ ಶಸ್ತ್ರೀಕರಣದಿಂದ ರಶಿಯ ಬೆದರೀತೇ?

ಪಶ್ಚಿಮ ರಾಷ್ಟ್ರಗಳು ಪುನಃಶಸ್ತ್ರೀಕರಣ ಕೈಗೊಂಡದ್ದರಿಂದ ರಶಿಯವು ಯುದ್ಧಪ್ರವೃತ್ತಿಯನ್ನು ವಹಿಸುವಂತಿಲ್ಲವೆಂದು ಹಲವು ಪಶ್ಚಿಮಾತ್ಯ ಧುರೀಣರು ಅಭಿಪ್ರಾಯಪಟ್ಟಿಂತಿವೆ. ರಶಿಯ ಹಾಗೂ ಕಮ್ಯೂನಿಸ್ಟರ ನಿರ್ಮಾಣಕ್ಕೆ ಧಕ್ಕೆಕೊಟ್ಟಿರುವ ಅಧ್ಯಕ್ಷ ಟ್ರೂಮನ್ನರ ಬೆಂಬಲಿಗರಾಗಿ ಚರ್ಚಿಲ್ ಸಾಹೇಬರೂ ಯುದ್ಧ ಶಸ್ತ್ರಾಸ್ತ್ರಗಳನ್ನು ಹೆಚ್ಚಿಸುವದರಲ್ಲಿ ತುಂಬ ಆಸ್ಥೆವಹಿಸಿರುವರು. ಯುರೋಪದ ಸಂರಕ್ಷಣೆಗಾಗಿ ಈ ವರ್ಷ 50 ಡಿವಿಜನ್ನುಗಳ ಸೈನ್ಯ ಹಾಗೂ 4000 ವಿಮಾನಗಳ ಒಂದು ದಳ ರಚಿಸಬೇಕೆಂದು ಲಿಸ್ಬನದಲ್ಲಿ ನಿರ್ಣಯಿಸಿದ್ದರಿಂದ ಪಶ್ಚಿಮರಾಷ್ಟ್ರಗಳಿಗೆ ಹಾಗೂ ಹಲವು ಮಿತ್ರರಾಷ್ಟ್ರಗಳಿಗೆ ಹೊಸ ಶಕ್ತಿ ಬಂದಂತಾಗಿರುವದು. ಅಧ್ಯಕ್ಷ ಟ್ರೂಮನ್ನರು 7900 ದಶಲಕ್ಷ ಡಾಲರುಗಳನ್ನು ವಿದೇಶೀಯ ಸಹಾಯಕ್ಕೆ ಕೊಡಲು ಮಂಜೂರುಮಾಡಬೇಕೆಂದು ಕರೆಸಿದ ಸಂದೇಶದಲ್ಲಿ ಅಟಲಾಂಟಿಕ ಸಂರಕ್ಷಣ ಸಂಸ್ಥೆಯ ಕಾರ್ಯವನ್ನು ಬಹುವಾಗಿ ಪ್ರಶಂಸಿಸಿದ್ದಾರೆ. ಅಧ್ಯಕ್ಷ ಟ್ರೂಮನ್ನರ 7900 ದಶಲಕ್ಷ ಡಾಲರುಗಳ ವಿದೇಶ ಸಹಾಯವು ಯುರೋಪದಲ್ಲಿ ಸುರಕ್ಷಿತತೆಯ ಆತ್ಮವಿಶ್ವಾಸವನ್ನು ಕುದುರಿಸಿದ್ದರೆ ಬ್ರಿಟನ್ನಿನ 4700 ದಶಲಕ್ಷ ಪೌಂಡುಗಳ ಶಸ್ತ್ರೀಕರಣ ಯೋಜನೆ ಹಾಗೂ ಅಧುನಿಕ ವಿಮಾನಗಳ ರಚನೆಯು ಸಹ ಈ ಆತ್ಮವಿಶ್ವಾಸವನ್ನು ಇನ್ನೂ ಬಲಪಡಿಸಲು ಕಾರಣವಾಗುತ್ತವೆ.

ಇಂಗ್ಲೆಂಡ್, ಅಮೇರಿಕ ಹಾಗೂ ಯುರೋಪದಲ್ಲಿಯೂ ಈ ಬಗೆಯ ಸುರಕ್ಷಿತತೆಯ ಜಾಗ್ರತಿ– ಹಾಗೂ ಬಲವಾದ ಶಸ್ತ್ರೀಕರಣದಿಂದ ರಶಿಯವು ಯುದ್ಧಕ್ಕಾಗಿ ಕೆಣಕುವದನ್ನು ನಿಲ್ಲಿಸಬಹುದೆಂಬ ನಂಬಿಕೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿದೆ. ರಶಿಯವು ಈ ವರ್ಷ ನೂರಕ್ಕೆ 23.8 ರಷ್ಟು ಮಾತ್ರ ಸಂರಕ್ಷಣೆಗೆ ವೆಚ್ಚಮಾಡುತ್ತಲಿರುವದರಿಂದ ಮೇಲಿನ ರಾಷ್ಟ್ರಗಳಿಗೆ ಇನ್ನಷ್ಟು ಹೆಮ್ಮೆಪಡುವಂತಾಗಿದೆ. ಈ ಭ್ರಮೆಯಿಂದಲೇ ಇನ್ನು ಯುದ್ಧವಾಗಲಾರದೆಂದು ಹೇಳಲಾಗುತ್ತಿದೆ. ಹೀಗೆ ಶಕ್ತಿಯನ್ನು ವಾಸಿಸುತ್ತಾ ಜಂಭ ಕೊಚ್ಚಿಕೊಳ್ಳುತ್ತಿರುವ ರಾಷ್ಟ್ರಗಳ ಕುಚೇಷ್ಟೆಯಿಂದ ರಶಿಯ ಇಲ್ಲವೆ ಕಮ್ಯೂನಿಷ್ಟ ರಾಷ್ಟ್ರಗಳು ಕುಗ್ಗುವವೋ–ಕುಪಿತಗೊಳ್ಳುವವೋ ಹೇಗೆಂಬುದನ್ನು ಮುಂದಕ್ಕೆ ನೋಡಬೇಕು.

ಸಿಲೋನ ಮುಖ್ಯ ಮಂತ್ರಿಯ ನಿಧನ

ಸಿಲೋನದ ಮುಖ್ಯ ಮಂತ್ರಿ ಸೇನಾನಾಯಕೆಯವರು ಗಾಳಿ ಸಂಚಾರಾರ್ಥವಾಗಿ ತನ್ನಿತರ ಮಂತ್ರಿಗಳೊಡನೆ ಕುದುರೆ ಸವಾರರಾಗಿ ಹೊರಟಾಗ ಕುದುರೆಯಿಂದ ಬಿದ್ದು ಗಾಯಗೊಂಡಿದ್ದರು. ಕೂಡಲೇ ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿ ಬಹು ಜಾಗ್ರತೆಯಿಂದ ಶುಶ್ರೂಷೆಯನ್ನು ನಡೆಸಲಾಯಿತು. ಪ್ರಥಮತಃ ದೈಹಿಕ ಸ್ಥಿತಿಯಲ್ಲಿ ಕೊಂಚ ಸುಧಾರಣೆ ಕಂಡುಬಂದರೂ ಮತ್ತೆ ಉಲ್ಬಣಾವಸ್ಥೆಗೆ ಮುಟ್ಟಿ ಮೇಲಿನ ದಿನ ಅವರು ನಿಧನಹೊಂದಿದರು.

ಚತುರ್ಥ ವಿಮಾಗಣನೆಯ ಫಲಿತಾಂಶ

(1947ರಿಂದ 1950ರ ವರೆಗೆ)

* * * * * * *

ತಾರೀಕು 31-12-1950ಕ್ಕೆ ನಡೆಸಿದ ವಿಮಾಗಣನೆಯಲ್ಲಿ ಅಜೀವ ಮತ್ತು ಉಂಬಳಿ ವಿಮಾ ಪೋಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ ಅನುಕ್ರಮವಾಗಿ ರೂ. 12/- ಮತ್ತು ರೂ 9/- ರಂತೆ ಬೋನಸನ್ನು ಘೋಷಿಸಿದೆ.

The Canara Mutual Assurance Co. Ltd.

Head Office: **UDIPI**, S. INDIA.

ಸ್ಥಾಪನೆಯಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು. ಯಾವ ಬಾಧಕವೂಯಿಲ್ಲ. ... ಗುಣವಾಗಿದೆ– ಬೆಲೆ; ರೂ. 3-, ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ. ಖರ್ಚು ಪ್ರತ್ಯೇಕ]

MIS D. DEVEE, F. DS. (N. J.)

Tollygunge CALCUTTA

ಸ್ಟಾಕಿಸ್ಟರು ಕಾ. ಕಂಪೆನಿ, ಮಂಗಳೂರು

ಕವಿರಾಜ ಯನ್. ಯನ್. ಸೇನರ

ಶಾಸ್ತ್ರೀಯ ಔಷಧಿಗಳು ಈಗಲೇ ಬಂದಿವೆ

ಬೃಹತ್ ಅಮೃತಬಳ್ಳಿ ಕಷಾಯ
ಪ್ರಸೂತಾರಿಷ್ಟ
ಕಸ್ತೂರಿ ಕಲ್ಪ ರಸಾಯನ
ನೇತ್ರಬಿಂಧು
ಕರ್ಪೂರಾರಿಷ್ಟ
ದುರ್ಗಾ ಪುನರ್ನಾಸವ
ಬಾಸಾರಿಷ್ಟ
ಕುಂಕುಮಾಸವ
ಮೃಗಾಂಕ ದ್ರಾವ

ದರವನ್ನು ವಿಚಾರಿಸುವದು.

ಏಜಂಟ್—

ಕಾ. ಕಂಪೆನಿ, ಮಂಗಳೂರು ನಂ. 1

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ (ಜಿ. ಐ. ಪಿ.) ಮುಂಬಯಿ, ೧೪

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. S. No. 564/1951.

N. ಚಂದ್ರಹಾಸ ಅಡ್ಯಂತಾಯ —ವಾದಿ

ಮತ್ತು

ಹುಕ್ಕಿಯಾನೆ ಚೆನ್ನಮ್ಮ ಕೂಡಾ —ಪ್ರತಿವಾದಿಯು

ಈ ಮೊಕದ್ದಮೆ ದಾವೆಯ ಪ್ರತಿವಾದಿ ನಂ. 2 ಸದ್ದು ಪೂಜಾರಿ, 5 ಬಿರ್ಮಯ ಹೆಂಗಸು. 6 ಮೋನಮ್ಮ ಹೆಂಗಸು ಕೂಡಾ ಇವರಿಗೆ ತಿಳಿಸುವದೇನೆಂದರೆ,

ವಾದಿಯು ನೀವು ವಗೈರರ ಮೇಲೆ ಮಾಡಿದ ಮೇಲ್ಕಂಡ ದಾವಾ ನಿಮ್ಮ ಹಾಜರಾಗಲಿಕ್ಕೆ ತಾರೀಕು 12-4-52ಕಿಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10ಗಂಟೆಗೆ ನೀವು ಸ್ವತಹಾ ಯಾ ವಕೀಲರದ್ವಾರಾ ಹಾಜರಾಗಿ ಮೇಲ್ಕಂಡ ಕೋರ್ಟಿನಲ್ಲಿ ಉತ್ತರಿಸತಕ್ಕದ್ದು ತಪ್ಪಿದ್ದಲ್ಲಿ ದಾವೆಯನ್ನು ರಿವಾಜುಮಾಡಿ ಸದ್ರಿ ದಾವಾ ಏಕಪಕ್ಷವಾಗಿ ತೀರ್ಮಾನಿಸಲಾದೀತು.

[By order of the court]

N. Mohandas Adyanthaya
Advocate for Plaintiff
Karkala, 22—3—52.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಯಾ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಣ್ಪೂ ಸ್ಟೋರ್ಸ್,
ರಥಬೀದಿ, ಉಡುಪಿ

ಕೂಳೂರು—ಇನೇ ತಾ। 3ರ

ಕರ್ನಾಟಕದ ಪ್ರಬುದ್ಧ ಬಂದರು ಯಾವುದು? ಮಲ್ಪೆ

ವಿಚಾರದ ವಿವೇಕವೇ ಪ್ರಾಮುಖ್ಯವಾಗಿರಲಿ. ಭಾವನೆಯ ಆವೇಗ ಮಾತ್ರ ಬೇಡ.

ಲೇಖಕರು—ಶ್ರೀ ಟಿ. ಎ. ಪೈ, ಎಂ. ಎಲ್. ಎ.



ಮಲ್ಪೆಯ ಬಹದರಗಡ ಮತ್ತು ದರಿಯಾಗಾದಾರ ದ್ವೀಪಗಳ ವಿಹಂಗಮ ನೋಟ.

ನಮ್ಮ ದೇಶ ದೊಡ್ಡ ದೇಶ. ನಮ್ಮ ಸಮಸ್ಯೆಗಳೂ ದೊಡ್ಡವೇ. ಇವುಗಳಲ್ಲಿ ನಮ್ಮ ನಾಡಿನ ಆರ್ಥಿಕ ಸಮಸ್ಯೆ ಬಲು ದೊಡ್ಡದು ಎಂಬುದನ್ನು ಇಂದು ಜಾಣರೂ, ಕೋಣರೂ ಕೂಡಿ ಐಕ್ಯಮತ್ಯದಿಂದ ಒಪ್ಪುತ್ತಾರೆ. ಆರ್ಥಿಕ ಸಮಸ್ಯೆಯನ್ನು ಜಟಿಲತರವಾಗಿ ಮಾಡಲು ಯಾವ ಎಲ್ಲ ನೈಸರ್ಗಿಕ, ಮಾನವ ನಿರ್ಮಿತ, ದೈವಪ್ರೇರಿತ ಸನ್ನಿವೇಶಗಳು ಬೇಕೋ ಅವನ್ನೆಲ್ಲ ಈ ದೇಶದಲ್ಲಿ ಕಾಣಬಹುದು. ಎಂಥ ಸರಳವಾದ ಪ್ರಶ್ನೆಯನ್ನೂ ವಿಚಾರದ ತಕ್ಕಡಿಯಲ್ಲಿಟ್ಟು ತೂಗುವುದರ ಬದಲು ಭಾವನೆಯ ಆವೇಶದಿಂದಲೇ ವಿಮರ್ಶಿಸುವವರು ಹೆಚ್ಚಾಗಿರುವುದರಿಂದ ಒಂದು ಪ್ರಶ್ನೆ ನೂರು ಪ್ರಶ್ನೆಗಳ ರೂಪ ತಾಳುತ್ತದೆ. ಮುಳ್ಳು ಬೇಲಿಯ ಒಂದು ಮುಳ್ಳಿಗೆ ಬಟ್ಟೆ ಅಂಟಿದಾಗ ಸಾವಧಾನಿಸದೆ ಮುಳ್ಳನ್ನು ಕೊಡಹಿಕೊಳ್ಳಲು ಯತ್ನಿಸಿದರೆ ಹೇಗೆ ಇನ್ನೂ ನಾಲ್ಕು ಕಡೆ ಮುಳ್ಳುಗಳು ಚುಚ್ಚುತ್ತವೋ ಹಾಗೆ.

ನಮ್ಮ ಕರಾವಳಿ ದೊಡ್ಡ ಕರಾವಳಿ. ಕಾಥೇವಾಡದ ಲಖ್ಪತ ಬಂದರದಿಂದ ಮುಂಬಯಿಯ ವರೆಗಿನ ೯೫೦ ಮೈಲುಗಳಷ್ಟು; ಮರ್ಮಗೋವಾದಿಂದ ಕೊಚ್ಚಿಯ ವರೆಗೆ ೪೦೦ ಮೈಲುಗಳಷ್ಟು. ಅಂದರೆ ಒಟ್ಟು ನಮ್ಮ ಪಶ್ಚಿಮ ಕರಾವಳಿ ೧೫೦೦ ಮೈಲಿಗೂ ದೀರ್ಘವಾದ ಸಾಗರದ ಕರೆ ಎಂದಾಯಿತು. ಇಷ್ಟುದ್ದದ ಕರಾವಳಿಗೆ ಮುಂಬೈ, ಮರ್ಮಗೋವೆ, ಕೊಚ್ಚಿ ಮೂರು ಬಂದರಗಳು. ನಾಲ್ಕನೆಯದು ಕಾಂಡ್ಲಾ ಇನ್ನೂ ನಿರ್ಮಾಣದಲ್ಲಿದೆ. ದಕ್ಷಿಣ ಪೀಠಭೂಮಿಯ ಫ[illegible]ದ ಕನ್ನಾಡಿನ, ಬಯಲುಸೀಮೆಯ ವ್ಯಾಪಾರವೆಲ್ಲ ಸಾಗಬೇಕಾದುದು ಹೆಚ್ಚು ಮಟ್ಟಿಗೆ ಈ ನಾಲ್ಕು ಬಂದರಗಳಿಂದಲೇ. ಇನ್ನೂ ನಮ್ಮ ದೇಶ ಆರ್ಥಿಕ ಅಭಿವೃದ್ಧಿಯಲ್ಲಿ ಹಿಂದಾಗಿದ್ದೂ ಈ ಪ್ರಬುದ್ಧ ಬಂದರುಗಳು ಆಮದು ರಫ್ತಿನ ಸರಕುಗಳ ಒತ್ತಡದಿಂದ ವಿಹ್ವಲವಾಗುತ್ತಿರುವ ವೇಳೆ ನಮ್ಮ ಆರ್ಥಿಕ ಅಭ್ಯುದಯವು ಜರಗಿದಾಗ ಇನ್ನಷ್ಟು ಬಂದರುಗಳು— ಪ್ರಬುದ್ಧವಾದುದು, ಕಿರಿದಾದುವು ಎರಡೂ ಬೇಕಾಗುವ ಪ್ರಮೇಯವಿದೆ ತಾನೆ. 'ಸಾಕಪ್ಪಾ ಬಂದರಿನ ಸುಖ ಸಾಕು' ಎನ್ನುವ ಕಾಲ ಇನ್ನೈವತ್ತು ವರುಷ ನಮ್ಮ ದೇಶಕ್ಕೆ ಬರಲಾರದು.

ಕಾಥೇವಾಡ ಕಚ್ಛಗಳ ನಡುವೆ ಪ್ರಬುದ್ಧ ಬಂದರನ್ನು ರಚಿಸುವ ಮುನ್ನ ಭಾರತದ ಕೇಂದ್ರ ಸರಕಾರವು ನಿಯಮಿಸಿದ ಬಂದರ ಸಮಿತಿಯವರು ಹೊಸ ಪ್ರಬುದ್ಧ ಬಂದರುಗಳ ಅವಶ್ಯಕತೆಗೆ ಎರಡು ಕಾರಣಗಳನ್ನು ಒತ್ತಿ ಹೇಳಿರುವರು.

(೧) ಇರುವ ನಾಲ್ಕು ಬಂದರುಗಳನ್ನು ಹಿನ್ನಾಡಿನೊಡನೆ ಸಂಬಂಧಿಸುವ ರೈಲು ದಾರಿಗಳ ಮೇಲೆ ವಾಹನಗಾಡಿಗಳ ಓಡಾಟವು ಮಿತಿಮೀರಿ ನಡೆಯುವುದನ್ನು ಹೊಸ ಬಂದರುಗಳ ನಿರ್ಮಾಣದ ದೆಸೆಯಿಂದ ಸ್ವಲ್ಪ ಮಟ್ಟಿಗೆ ತಡಗಟ್ಟಬಹುದು. ನಮ್ಮ ನಾಡಿನ ಅರ್ಥವ್ಯವಸ್ಥೆಯಲ್ಲಿ ಸಾರಿಗೆ ಸೌಕರ್ಯವು ವಹಿಸುವ ಪಾತ್ರ ಚಿರಪ್ರಧಾನವಾದುದು. ಹೆಚ್ಚು ಬಂದರುಗಳಿದ್ದರೆ ವಾಗಿನುಗಳನ್ನು ಉಪಯೋಗಿಸುವ ವೇಗವು ಅತಿಶಯವಾಗುವುದು. ನಾಲ್ಕು ವಾಗಿನುಗಳಿಂದ ಎಂಟರ ಕೆಲಸ ಮಾಡಿಸಬಹುದು. ಇದರಿಂದ ಹೆಚ್ಚು ಸರಕುಗಳನ್ನು ಕಳಿಸುವುದಕ್ಕೂ ಅನುಕೂಲವಾಗುವುದು

(೨) ಭಾರತವು ಸ್ವತಂತ್ರವಾದ ಬಳಿಕ ದೇಶದ ವರ್ಚಸ್ಸು ಬೆಳೆಯುವುದಕ್ಕೆ ಅವಕಾಶವಾಗಿದೆ. ಹಿಂದೂ ಮಹಾಸಾಗರದ ಭೂಖಂಡಗಳೊಡನೆ ನಮ್ಮ ಬಾಂಧವ್ಯವೂ, ಆಸ್ಟ್ರೇಲಿಯಾ, ಆಗ್ನೇಯ ಏಶಿಯ ಮತ್ತು ಆಫ್ರಿಕಗಳೊಡನೆ ವಾಣಿಜ್ಯವ್ಯವಹಾರಗಳೂ ವಿಶಾಲವಾಗಿ ವ್ಯಾಪಿಸುವುದಕ್ಕೆ ಈಗ ನಮಗೆ ಯಾವ ಅವರೋಧವೂ ಇಲ್ಲ. ಈ ದೇಶಗಳೊಡನೆ ವ್ಯಾಪಾರಿಸಲು ಬ್ರಿಟಿಶ ಆಡಳಿತೆಯಲ್ಲಿದ್ದಷ್ಟೇ ಬಂದರುಗಳು ಸಾಲವು. ಏಕೆಂದರೆ ಅವರ ಕಾಲದಲ್ಲಿ ಹುಟ್ಟಿನ ವ್ಯಾಪಾರವನ್ನು ಅವರ ದಲ್ಲಾಲಿಗಳೂ, ಅವರ ಹಡಗುಗಳೂ ನಡೆಯಿಸುತ್ತಿದ್ದುವು. ನಮ್ಮ ಜೀವನದ ಮಟ್ಟವು ಏರಿದ ಹಾಗೆ, ನಮ್ಮ ಕೃಷಿ ವಿಧಾನಗಳೂ ಸುಧಾರಿಸಿ ಕೃಷಿ ಉತ್ಪಾದನೆಯು ವ್ಯಾಕೋಚನಗೊಂಡ ಹಾಗೆ, ನಮ್ಮ ಔದ್ಯಮಿಕ ಚಟುವಟಿಕೆಯು ದ್ರುತಗತಿಯಿಂದ ಮುಂಬರಿದ ಹಾಗೆ, ದೇಶದ ಖನಿಜ ಸಂಪತ್ತು ವೃದ್ಧಿಯಾಗಿ ಜನಸಂಖ್ಯೆಯು ಬೆಳೆದು ಇದಕ್ಕನುಗುಣವಾಗಿ ನಮ್ಮ ಯಾನಸೌಕರ್ಯಗಳು ಸುಲಲಿತವಾಗಿ, ಒಟ್ಟಾರೆಮೇಲೆ ನಮ್ಮ ಆರ್ಥಿಕ ಮಂಡಲದ ವಿವಿಧ ಅಂಗಗಳ ಕಾರ್ಯಕ್ರಮಗಳು ಸಮನ್ವಯವಾಗಿ ದೇಶವು ಸಂಪನ್ನವಾದರೆ–ಹೆಚ್ಚು ಮಾಲು ಗಾಡಿಗಳು ಬೇಡವೆ? ಆಯಾತ ನಿರ್ಯಾತ ವ್ಯಾಪಾರಕ್ಕೋಸ್ಕರ ಹೆಚ್ಚು ಹೆಚ್ಚು ಬಂದರುಗಳು ಬೇಡವೆ?

ಈ [illegible] ಪ್ರಶ್ನೆಗಳಿಗೂ ವಿಚಾರವಂತರ ಉತ್ತರ ಒಂದೇ–ಬೇಕು, ಬೇಕು, ಬೇಕು.

ದೇಶದ ಈ ದರಿದ್ರಾವಸ್ಥೆಯಲ್ಲಿ ಈ ತೆರನಾದ ವಿಪುಲ ಬಂಡವಾಳವು ಬೇಕಾಗುವ ಯೋಜನೆಗಳನ್ನು ಸ್ವಲ್ಪ ಮುಂದೂಡಿ ಜನರಿಗೆ ಸದ್ಯ ಜೀವನಾಂಶಕ್ಕೆ ಬೇಕಾಗುವಷ್ಟನ್ನೇ ಉತ್ಪಾದಿಸೋಣ ಎನ್ನುವ ಒಂದು ತರ್ಕಕ್ಕೆ ಒಂದೇ ಸಮಾಧಾನ. ಯಾವ ಸಮಾಜವು ಅದೂರದರ್ಶಿತ್ವದಿಂದ ಅನುಭೋಗ ಸರಕುಗಳಿಗೆ ಪ್ರಾಧಾನ್ಯ ಕೊಟ್ಟು ಬಂಡವಾಳದ ಸಂಚಯವನ್ನು ಬಂಡವಾಳದ ಅವಶ್ಯವಿರುವ ಯೋಜನೆಗಳನ್ನು ಮರೆತು ಬಿಡುವುದೋ, ಅದು ಕ್ಷಿಪ್ರದಲ್ಲೇ ವಿನಾಶವಾಗುವುದು ಎಂಬ ಅಭಿಪ್ರಾಯಕ್ಕೆ ಅಮೇರಿಕದ ಅರ್ಥಶಾಸ್ತ್ರಗಳೂ, ರಶಿಯದ ತಜ್ಞರೂ ಒಮ್ಮತವಾಗಿ ಸೈಗುಡುತ್ತಾರೆ. ದೇಶ ಸಂಪನ್ನವಾದ ಮೇಲೆ ಬಂದರುಗಳ ಯೋಜನೆ ಕೈಗೊಳ್ಳಬಹುದಲ್ಲ? ಎಂದರೆ ಬಂದರಗಳು ನಮ್ಮ ಮುಖ್ಯಧ್ಯೇಯವಲ್ಲ, ಸಂಪತ್ತಿನ ಅಭಿವೃದ್ಧಿ ಎಂಬುದನ್ನು ಲಕ್ಷ್ಯದಲ್ಲಿಡುವ. ಹಾಗಾದರೆ ಬಂದರುಗಳು ಸಂಪತ್ತಿನ ಅಭಿವೃದ್ಧಿಗೆ ಹೇತು. ಅನೇಕ ಮಾರ್ಗಗಳ ಪೈಕಿ ಇವೂ ಒಂದು ಸಾಧನಾ ಮಾರ್ಗವೆನ್ನು ತೋರಿಸುವುವು ಎಂಬುದನ್ನು ನಾವು ತಿಳಿದಿರಬೇಕು. ಅಂತಲ್ಲವಾದರೆ "ಹುಚ್ಚು ಬಿಡದೆ ಮದುವೆಯಾಗದು; ಮದುವೆಯಾಗದೆ ಹುಚ್ಚು ಬಿಡದು." ಎಂಬ ಗಾದೆ ಸತ್ಯ

ZANDU PHARMACEUTICAL WORKS LTD.

Manufacturers of Ayurvedic and Alopathic Medicines BOMBAY, 14.

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನರಮಸೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ 3/- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್ ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.

2 ಶ್ರೀ ವಿ ವಿ ಸೆಟ್ಟಿ, ಕೆಮಿಸ್ಟ್, ಕಾರ್ಕಳ.

3 ರಾ ಕಂಪೆನಿ, ಹಂಪನಕಟ್ಟೆ, ಮಂಗಳೂರು

4 ಎಲ್. ಎಸ್. ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರು

DAMODAR & CO.,

Namiappa Naicken Street, Park Town-**MADRAS** 3.

ಪ್ರಬುದ್ಧ ಬಂದರು ಎಲ್ಲಿರಬೇಕು ಗೊತ್ತೇ?

ಕಾರವಾರದಲ್ಲಿ? ಭಟ್ಕಳದಲ್ಲಿ? ಮಂಗಳೂರಲ್ಲಿ?

ಪ್ರಬುದ್ಧ ಬಂದರು ಎಲ್ಲಿರಬೇಕು?

ಪ್ರಬುದ್ಧ ಬಂದರಿಗೆ ಅನುಕೂಲವಾದ ಸ್ಥಳವನ್ನು ಆಯ್ದುಕೊಳ್ಳುವಾಗ ಸಕಲ ಪ್ರದೇಶದ ಬೇಡಿಕೆಗಳನ್ನು ಈ ಸ್ಥಳವು ಪೂರೈಸುತ್ತದೋ? ಬಂದರಿನ ಸಂರಕ್ಷಣೆಗೆ ಬೇಕಾದ ನೈಸರ್ಗಿಕ ಸನ್ನಿವೇಶಗಳೇನಾದರೂ ಇವೆಯೋ? ಬಂದರಿನ ಸುತ್ತಲೂ ಬಂದರಿಗೆ ಸಂಬಂಧಪಟ್ಟ ಕಟ್ಟಡಗಳನ್ನು ನಿರ್ಮಿಸುವುದಕ್ಕೆ ಸಾಲುವಷ್ಟು ಖಾಲಿ ಜಾಗಗಳಿವೆಯೋ? ಬಂದರಿನ ರಚನೆಗೂ ಅದನ್ನು ನಡೆಯಿಸಿಕೊಂಡು ಹೋಗುವುದಕ್ಕೂ ಎಷ್ಟು ವೆಚ್ಚ ತಗಲುವುದು? ಹಿನ್ನಾಡಿಗೆ ಈಗಾಗಲೇ ರೈಲು ಸಂಪರ್ಕ ಇದೆಯೇ? ಹೊಸತಾದ ರೈಲುಮಾರ್ಗಗಳನ್ನು ಹಾಕುವುದಾದರೆ ಎಷ್ಟು ಮೈಲು? ಎಂದು ಮೊದಲಾದ ವಿಚಾರಗಳನ್ನು ಪರಾಮರ್ಶಿಸಬೇಕು. ಕೊನೆಯ ಸವಾಲನ್ನು ಮೊದಲಾಗಿ ಎತ್ತಿಕೊಂಡು, ಉಳಿದುವುಗಳ ವಿಚಾರ ಪ್ರಸಂಗಾವಧಾನದಿಂದ ಹೇಳುವುದಾದರೆ ಕೇಂದ್ರ ಭದ್ರಾವತಿಯಿಂದ ಮರ್ಮಗೋವೆ ಕೊಚ್ಚಿಗಳ ನಡುವಣ ನಾಲ್ಕು ಕಿರಿಬಂದರುಗಳ ದೂರದ ವಿವರ:-

	ಹಾದಿ	ಒಟ್ಟು ದೂರ (ಮೈಲು)	ಕಟ್ಟಲಾಗುವ ಹೊಸ ರೈಲು ಹಾದಿಯುದ್ದ	ಕಟ್ಟುವ ವೆಚ್ಚ (ಲಕ್ಷ ರೂ.)
೧	ಕಾರವಾರ-ತಾಳಗುಪ್ಪ-ಭದ್ರಾವತಿ	೧೫೩	೯೦	೪೩೧
೨	ಭಟ್ಕಳ-ತಾಳಗುಪ್ಪ-ಭದ್ರಾವತಿ	೧೧೪	೫೭	೭೮೬
೩	ಮಲ್ಪೆ-ಭದ್ರಾವತಿ-ಹುಲಿಕಲ್ ದಾರಿಯಾಗಿ	೧೦೮	೧೦೮	೫೮೪
೪	ಮಂಗಳೂರು-ಭದ್ರಾವತಿ ,,	೧೫೦	೧೫೦	೭೧೧

ಕಾರವಾರ, ಭಟ್ಕಳಗಳಿಗೆ ಹಾಕುವ ಹೊಸ ಹಾದಿಯ ಉದ್ದವು ಕಡಿಮೆಯಾದರೂ, ಭದ್ರಾವತಿಗೂ ಈ ಎರಡು ಸ್ಥಳಗಳಿಗೂ ನಡುವಣ ದೂರವು ಹೆಚ್ಚಾಗಿರುವುದರಿಂದ ರೈಲು ಹಾಕುವ ವೆಚ್ಚದಲ್ಲಾದ ಉಳಿತಾಯವು ಸಂಪೂರ್ಣವಾಗಿ ನಮಗೆ ದಕ್ಕುವುದಿಲ್ಲ. ಭದ್ರಾವತಿ ಮಲ್ಪೆಯ ಹಾದಿ ಹೊಸತಾದರೂ ಭದ್ರಾವತಿಯಿಂದ ತೀರ್ಥಹಳ್ಳಿಗೆ ಬಂದು ಅಲ್ಲಿಂದ ಹುಲಿಕಲ್ ಘಟ್ಟವನ್ನಿಳಿದು ಹೊಸಂಗಡಿ ಬ್ರಹ್ಮಾವರ ಮಾರ್ಗವಾಗಿ ಮಲ್ಪೆಯನ್ನು ಸೇರಲು ಕೇವಲ ೧೦೮ ಮೈಲು ಹಿಡಿಯುವುದು. ಮಲ್ಪೆ ಮಂಗಳೂರುಗಳ ನಡುವಿನ ೪೨ ಮೈಲು ದೂರವನ್ನು ಸೇರಿದರೆ ಭದ್ರಾವತಿಯಿಂದ ಮಂಗಳೂರಿಗೆ ತಲಪಲು ೧೫೦ ಮೈಲು ಹೊಸ ರೈಲ್ವೆ ಬೇಕಾಗಿದೆ.

ಕಾರವಾರ ಯಾಕಾಗದು?

ಇಂಜನಿಯರುಗಳ ದೃಷ್ಟಿಯಿಂದ ಕಾರವಾರದಲ್ಲಿ ಬಂದರುಗಳು ಬೇಕಾದ ಶ್ರೇಷ್ಠ ಗುಣಗಳಿದ್ದರೂ, ಅವು ಕಾಳಿನದಿಯ ತೆಂಕಲಿಗಿರುವ ಇನ್ನೊಂದು ಸ್ಥಳ(ಮಲ್ಪೆ) ದಷ್ಟು ಉತ್ತಮವಾಗಿಲ್ಲ. ಕಾರವಾರು ಈ ಪ್ರದೇಶದ ಹಿನ್ನಾಡಿನ ಔಚಿತ್ಯವನ್ನು ಹೊಂದಿಕೊಂಡು ಇರಬೇಕಾದ ಸ್ಥಳದಲ್ಲಿ ಇರುವುದಿಲ್ಲ. ಮರ್ಮಗೋವೆಗೆ ಬರಿಯ ನಲ್ವತ್ತು ಮೈಲುಗಳ ಸಮೀಪದಲ್ಲಿರುವುದು. ಈಗಾಗಲೇ ಘಟ್ಟದ ರೈಲ್ವೇಯ ಅನುಕೂಲತೆಯುಳ್ಳ ಗೋವೆಯಾದರೇನು? ಕಾರವಾರದಲ್ಲಿ ಏನಿದೆ ಮಹತ್ವ? ಎಂಬ ಸಮಸ್ಯೆಯನ್ನು ನಮ್ಮ ಮುಂದಿರಿಸುತ್ತದೆ. ಮೂರನೆಯದಾಗಿ ಕಾಳೀ ನದಿಯು ಕಾರವಾರಕ್ಕೆ ಸಮೀಪದಲ್ಲಿರುವುದರಿಂದ ಜಮೆಯಾಗುವ ಹೊಯಿಗೆ ಮಣ್ಣನ್ನು ಕಾಲಕಾಲಕ್ಕೆ ತೋಡುವ ಸಮಸ್ಯೆಯೂ ಸಣ್ಣದಲ್ಲ. ಮಾಲು ಗಾಡಿಗಳು ಮಲ್ಪೆಗಿಂತ ೪೪ ಮೈಲೂ, ಭಟ್ಕಳಕ್ಕಿಂತ ೩೮ ಮೈಲೂ ದೂರ ಸಾಗಬೇಕಾದುದು ನಿಲ್ಬನೆಯ ದೋಷ. ಕೊನೆಯದಾಗಿ ಕಾರವಾರದ ಸಧ್ಯದ ವಟವಾಟು ಬರೀ ೪೮೦೦೦ ಟನ್ನಿನಷ್ಟಿದ್ದು, ಇದು ಯಾವ ರೀತಿಯಿಂದಲೂ ಹೊಸಸಾಗಣೆ (traffic) ಯನ್ನು ಆಕರ್ಷಿಸಲು ಪ್ರತಿಕೂಲವಾದ ಭೌಗೋಳಿಕ ಸನ್ನಿವೇಶದಲ್ಲಿದೆ. ಇಂತು, ಕಾರವಾರವು ಪ್ರಬುದ್ಧ ಬಂದರಾಗಲು ಯೋಗ್ಯವಲ್ಲವೆಂದು "ಪತುಕರಾವಳಿಯ ಪ್ರಬುದ್ಧ ಬಂದರು ಅಭಿವೃದ್ಧಿಯ ಸಮಿತಿಯವರು" ಸಕಾರಣವಾಗಿ ತೀರ್ಮಾನಿಸಿದ್ದಾರೆ?

ನಿಸ್ಸಂಕೋಚವಾಗಿಯೂ ಭಟ್ಕಳವು ಬೇಡ

ಭಟ್ಕಳವು ಬೇಡವೇ ಬೇಡ ಎಂದು ತೀರ್ಮಾನಿಸಲು ಸಮಿತಿಯವರಿಗೆ ಯಾವ ಸಂಕೋಚವೂ ಆಗುವುದಿಲ್ಲವಂತೆ, ಸ್ವಾಭಾವಿಕವೆ. ಇಡಿ ವರ್ಷವೂ ಮುಸೂಮು ಗಾಳಿಗಳ ಹೊಡೆತಕ್ಕೂ, ಮಳೆಗೂ ಸಿಲುಕಿ ಹುಯ್ದಾಡುವ ಭಟ್ಕಳವನ್ನು ಎಲ್ಲ ಹವಾಮಾನಗಳಿಗೂ ಯೋಗ್ಯವೆನಿಸುವ ಬಂದರಾಗಿ ಮಾಡುವುದಕ್ಕೆ ಯಾವ ನೈಸರ್ಗಿಕ ಸಹಾಯಗಳೂ ಇಲ್ಲದಿದ್ದರೆ ಮತ್ತೇನು ಮಾಡೋಣ. ಅಷ್ಟು ಮಾತ್ರವಲ್ಲ ಭಟ್ಕಳವು ಬಂದರವಾದರೆ ಎಷ್ಟು 'ಬರ್ಥ್' ಗಳನ್ನು ಕಟ್ಟುತ್ತೇವೋ ಅಷ್ಟು ಸಂಖ್ಯೆಯ ಹಡಗುಗಳು ಮಾತ್ರವಲ್ಲದೆ ಸಮಯೋಚಿತಸಾರ ಹೆಚ್ಚು ಹಡಗುಗಳನ್ನು ನಿಲ್ಲಿಸುವಂತಿಲ್ಲ. ಹಡಗುಗಳು ಸಾಲುಗಟ್ಟಿ (in convoy) ಬರುವುದಕ್ಕೂ ಇಲ್ಲ. ಬಂದರಿನ ಸುರಕ್ಷಿತ ಸ್ಥಾನ ಒಂದನ್ನು ಹೊರತು ಬೇರೆ ಹೊರವಲಯದಲ್ಲಿ ಹಡಗುಗಳು ತಂಗುವಂತೆಯೇ ಇಲ್ಲ. ದಡದಿಂದ ಬಲು ದೂರದ ವರೆಗೆ ಆಳವಾದ ಸಮುದ್ರದಲ್ಲಿ ಅಡ್ಡ ಗೋಡೆ (Break waters)ಗಳನ್ನು ಕಟ್ಟಬೇಕು. ಹೀಗೆ ಆಳವಾದ ಸಮುದ್ರದ ತಳವನ್ನು ಮುಟ್ಟುವ ಮೊದಲೇ ಕಂಡ, ಕಾಣದ ಕಡೆಗಳಲ್ಲಿ ಅಡಗಿಕೊಂಡಿರುವ ಶಿಲೆಗಳನ್ನು ಒಡೆದು ತೆಗೆದು ಹಡಗು ಒಳಗೆ ಪ್ರವೇಶಿಸಲು ನೀರುದಾರಿ (Channels) ಗಳನ್ನು ನಿರ್ಮಿಸುವುದಷ್ಟೇ ಅಲ್ಲ. ನೀರಿನ ಆಳವನ್ನು ತೋರಿಸುವ ಬೋಯ (Buoy) ಗಳನ್ನು ಇರಿಸಿ ಒಳಬರುವ ಹಡಗಿಗೆ ದೀಪ ದಿಗ್ದರ್ಶನವನ್ನು ಚೆನ್ನಾಗಿಯೇ ಮಾಡಬೇಕಾಗುವುದು. ಭಟ್ಕಳ ಬಂದರದ ಸುತ್ತಲೂ ಶಿಲೆಗಳು ತಳ್ಳ ಮಟ್ಟಕ್ಕೆ ಎತ್ತರವಾಗಿಯೇ ನೀರಿನಲ್ಲಿರುವುದು ಕಂಡುಬರುತ್ತದೆ. ನೀರುದಾರಿಯ ನಿರ್ಮಾಣವೂ ಬರ್ಥ್ ಗಳನ್ನು ಕಟ್ಟುವುದಕ್ಕೂ, ಈ ಶಿಲೆಗಳನ್ನು ತೆಗೆಯಲೇ ಬೇಕು. ಈ ಎಲ್ಲಾ ಅನಾವಶ್ಯಕ ಕಷ್ಟನಷ್ಟಗಳನ್ನು ಇದಿರಿಸುವ ಅಗತ್ಯ ಕಾಣುವುದಿಲ್ಲ.



ದಕ್ಷಿಣಭಾರತದಲ್ಲಿ ಇರುವ ಮತ್ತು ಆಗಲಿರುವ ರೈಲ್ಮಾರ್ಗಗಳು.

ಮಲ್ಪೆಯೇ ಪ್ರಬುದ್ಧ ಬಂದರು ಏಕಾಗಬೇಕು?



ಪ್ರಬುದ್ಧ ಬಂದರ ಸಮಿತಿಯವರು ಸೂಚಿಸಿದ ಮಲ್ಪೆ ಪ್ರಬುದ್ಧ ಬಂದರ.

ಮಂಗಳೂರು ಪ್ರಯೋಜನವಿಲ್ಲ

ಮರ್ಮಗೋವಾದಿಂದ ೧೯೬ ಮೈಲು ದೂರದಲ್ಲಿರುವ ಮಂಗಳೂರು ನಗರವನ್ನೂ, ಅಲ್ಲಿಯ ಕಿರಿಬಂದರಿನಲ್ಲಿ ಈಗಾಗಲೇ ನಡೆಯುತ್ತಿರುವ ತಕ್ಕಷ್ಟು ಪ್ರಮಾಣದ ವ್ಯಾಪಾರ ಸಾಗಣೆಯನ್ನೂ (೧೮೩,೦೦೦ ಟನ್ನು ೧೯೬೬-೬೭ರಲ್ಲಿ) ಮಂಗಳೂರನ್ನು ಆರಿಸೋಣವೋ ಎಂಬ ಮನಸ್ಸಾಗುತ್ತದೆ. ಅಲ್ಲದೆ ಆಳವಾದ ನೀರುದಾರಿಯೊಂದನ್ನು ಐದು ಫಾದಮ್ ಆಳದ ಸಮುದ್ರದಿಂದ ಸುಮಾರು ೧½ ಮೈಲುಗಳಷ್ಟು ದೂರ ಸಮುದ್ರ ತಳದಲ್ಲಿ ತೋಡಿ, ಕೊರೆದು, ಅಗೆದು ಕೊಟ್ಟರೆ ಸಾಕು, ಅಡ್ಡಗೋಡೆ (Breakwaters) ಇಲ್ಲದೆಯೇ ಕೊಚ್ಚಿಯ ಹಾಗೆ ಮಂಗಳೂರನ್ನೂ ಒಂದು ದೊಡ್ಡ ಬಂದರಾಗಿ ಮಾಡಲು ಸಾಧ್ಯವಿಲ್ಲವೆ? ಎಂಬ ಪ್ರಶ್ನೆಯನ್ನು ಸಮಿತಿಯವರು ಕೂಲಂಕುಷವಾಗಿ ಪರಿಶೀಲಿಸಿದರು. ಅಡ್ಡಗೋಡೆಗಳು ಕಟ್ಟುವ ಪ್ರಶ್ನೆ ಇಲ್ಲದಿದ್ದರೆ ಬಂದರಿನ ವೆಚ್ಚ ಅದೆಷ್ಟೋ ಕಡಿಮೆಯಾಗುತ್ತದೆ ಎಂಬ ಆಸೆಯಿಂದ ಅಡಿಮಣ್ಣಿನ ಪರಿಶೋಧನೆಗೆ (Sub-soil Investigation) ತಜ್ಞರನ್ನು ಕರೆಯಿಸಿ ವಿವರವಾಗಿ ಸ್ಥಳ ಪರಾಮರ್ಶೆಯನ್ನು ನಡೆಯಿಸಿದರು. ಭೂಮಿಯ ಮಟ್ಟಕ್ಕಿಂತ ೭೫ ಅಡಿಗಳಷ್ಟು ಆಳಕ್ಕೂ ಮರಳದಿಣ್ಣೆಯನ್ನು ಕೊರೆದು ನೀರುದಾರಿಯನ್ನು ರಚಿಸಿದರೆ ಅಷ್ಟು ಆಳದ ನೀರುದಾರಿ ಕೃತಕ ಸಂರಕ್ಷಣೆಯಿಲ್ಲದೆ ನಿಲ್ಲಲಾರದೆಂದೂ, ಶೀಘ್ರದಲ್ಲೇ ಮತ್ತೆ ಮರಳಿನಿಂದ ತುಂಬುವುದೆಂದೂ ತಜ್ಞರು ತಿಳಿಸಿದರು. ನೇತ್ರಾವತಿ ಹೊಳೆಯೂ ಹತ್ತಿರವೇ ಹರಿಯುವುದರಿಂದ ನೀರುದಾರಿಯನ್ನು ಸಮರ್ಪಕವಾಗಿ ವರ್ಷವೆಲ್ಲ ಉಪಯೋಗಿಸಿಕೊಳ್ಳುವಂತೆ ಇಟ್ಟಿರುವುದು ಸಂಶಯಾಸ್ಪದವಾದ ವಿಚಾರವಾಗುತ್ತದೆ. ಎರಡನೆಯದಾಗಿ ಭದ್ರಾವತಿಯಿಂದ ಮಂಗಳೂರಿಗೆ ಭದ್ರಾವತಿ–ಉಡುಪಿಗಿಂತ 8 ಮೈಲು ಹೆಚ್ಚು ರೈಲುಹಾದಿ ಹಾಕಬೇಕು. ಮೂರನೆಯದಾಗಿ, ಕಿರಿಬಂದರಾದ ಬಳಿಕ ಬಂದರಿನ ಸಮೀಪದಲ್ಲಾಗುವ ಬೆಳವಣಿಗೆಗೆ ಸಮುದ್ರಕ್ಕೂ ಗುರುಪುರ ಹೊಳೆಗೂ ನಡುವಿರುವ ಮರಳು ದಿಣ್ಣೆಯನ್ನು ಬಿಟ್ಟರೆ ಬೇರೆ ಹೆಚ್ಚು ಖಾಲಿ ಜಾಗ ಇರುವುದಿಲ್ಲ. ಕಾಲಕ್ರಮೇಣ ಉದ್ಯಮಗಳ ಕಟ್ಟೋಣಕ್ಕೂ, ಹಡಗುಗಳನ್ನು ರಚಿಸುವ ಅಂಗಳಕ್ಕೂ ಬೇಕಾದ ಜಾಗವಲ್ಲಿ ಇಲ್ಲವೇ ಇಲ್ಲ. ಈ ಮೂರು ಕಾರಣಗಳಿಂದಾಗಿ ಮಂಗಳೂರು ಬಂದರಾಗಲು ಅನರ್ಹವಾಗಿದೆ.

ಮಲ್ಪೆಯೇ ಯಾಕಾಗಬೇಕು?

ಉಡುಪಿಯ ಪಶ್ಚಿಮಕ್ಕೆ 3 ಮೈಲು ದೂರದಲ್ಲಿರುವ ಮಲ್ಪೆ ಚಿಕ್ಕದೊಂದು ಬೆಸ್ತರ ಹಳ್ಳಿ. ಮರ್ಮಗೋವೆಯಿಂದ ೧೭೪ ಮೈಲು ದೂರದಲ್ಲಿ ಚಿಕ್ಕ ಹೊಳೆಯ ಅಳಿವೆ ಬಾಗಿಲಲ್ಲಿದೆ. ಮಲ್ಪೆಯ ಕಡಲ್ಕರೆಯಿಂದ ಒಂದು ಮೈಲು ದೂರದಲ್ಲಿ ಸಾಂತ ಮೇರಿ ದ್ವೀಪಗಳೆಂಬ ಶಿಲಾದ್ವೀಪಸ್ತೋಮಗಳು ಭದ್ರವಾಗಿ ಕಾವಲು ನಿಂತಿವೆ. ಈ ದ್ವೀಪ ಸ್ತೋಮಗಳನ್ನು ಒಂದಕ್ಕೊಂದು ಸರಪಣಿಯ ಕೊಂಡಿಯ ಹಾಗೆ ಜೋಡಿಸಿ, ಆ ಮೇಲೆ ಈ ಇಡೀ ದ್ವೀಪಸ್ತೋಮಕ್ಕೆ ತೆಂಕಲು ಬಡಗಲಿನ ಕರಾವಳಿಗೆ ಅಡ್ಡ ಗೋಡೆಯನ್ನು ಕಟ್ಟಿ ನಿಲ್ಲಿಸಿದರೆ ಪ್ರಶಸ್ತವಾದ ಕಿರಿಬಂದರನ್ನು ನಿರ್ಮಿಸಲಾಗುವುದೆಂದು ಸಮಿತಿಯು ಪ್ರಥಮ ನೋಟದಿಂದಲೇ ಕಂಡುಕೊಂಡಿತು. ಈ ಅಡ್ಡ ಗೋಡೆಗಳನ್ನು ಸಮುದ್ರವು ಆಳವಾಗಿಲ್ಲದ ಕಡೆಯಲ್ಲೇ ಕಟ್ಟಿದರೆ ಸಾಕು ಏಕೆಂದರೆ ಆಳವಾದ ಕಡೆ ನಿಸರ್ಗವೇ ನಿಲ್ಲಿಸಿದ ಶಿಲಾದ್ವೀಪಗಳು ಅಡ್ಡಗೋಡೆಯ ಕೆಲಸ ಮಾಡುತ್ತವೆ. ನಡುವಿನ ಶಿಲಾದ್ವೀಪಕ್ಕೂ ಬಡಗಲಿನ ಒಂದು ದ್ವೀಪಕ್ಕೂ ಮಧ್ಯೆ ೨೫ ಅಡಿ ಆಳದ ನೀರುದಾರಿ (channel) ನೈಸರ್ಗಿಕವಾಗಿಯೇ ನಿರ್ಮಿತವಾದುದಿದ್ದು ಅದರ ಮುಖಾಂತರ ಹಡಗುಗಳು ಒಳಗೆ ಪ್ರವೇಶಿಸಬಹುದು. ಅದರೂ ಮಲ್ಪೆ ಬಂದರಿನ ಸಮೀಪದ ಸಮುದ್ರದ ನೀರಿನಡಿಯಲ್ಲಿ ಮಂಗಳೂರಿನಂತೆಯೇ ಶಿಲೆಗಳು ಇರಬಹುದೆಂಬ ಸಂದೇಹ ಸಮಿತಿಯವರನ್ನು ಮೊದಮೊದಲು ಕಾಡಿಸಿತು. ಕೂಡಲೇ ಅಡಿಮಣ್ಣಿನ ಸಂಶೋಧನೆ (sub-soil investigation) ಆರಂಭವಾಯಿತು. ಈ ಸಂಶೋಧನೆಯ ಪರಿಣಾಮವು ಸಮಿತಿಯವರಿಗೆ ಧಾರಾಳ ತೃಪ್ತಿಯನ್ನು ಕಂಡುಕೊಟ್ಟಿದೆ. ಬಂದರದ ಹೊಯಿಗೆಯನ್ನು ತೋಡುವ ಸಂದರ್ಭ ಬಂದಾಗ ಎಲ್ಲಿಯೂ ಶಿಲೆ ಸಂಧಿಸುವ ಸಂಭವವಿಲ್ಲ. ಇಷ್ಟಲ್ಲದೆ ಮೊದಲೇ ಸೂಚಿಸಿದಂತೆ ಮಧ್ಯ ದ್ವೀಪ ಹಾಗೂ ಬಡಗಣ ದ್ವೀಪಗಳ ಈ ತನ್ಮಧ್ಯೆ ಇರುವ ನೈಸರ್ಗಿಕ ನೀರುದಾರಿಯು ಮರಳಿನ ಅಗೆತ (Dredging) ವನ್ನು ತೀರ ಸುಲಭಕರವಾಗಿ ಮಾಡುತ್ತದೆ.

ಆದುದರಿಂದ ಮಲ್ಪೆಯಲ್ಲಿ ಕಿರಿಬಂದರಾಗಲು ಆವಶ್ಯಕವಾಗುವ ಎಲ್ಲ ಪರಿಸ್ಥಿತಿಗಳೂ ಕೂಡಿ ಬಂದಿವೆ ಎಂದರೂ ತಪ್ಪಾಗಲಾರದು.

ಮಲ್ಪೆಯ ಅನುಕೂಲತೆಗಳನ್ನು ತಜ್ಞರ ಸಮಿತಿಯು ಈ ಕೆಳಗೆ ಕಂಡಂತೆ ಕ್ರೋಢೀಕರಿಸಿದೆ:–

ಮಲ್ಪೆಯ ನೈಸರ್ಗಿಕ ಸೌಕರ್ಯ ಇನ್ನೆಲ್ಲಿಯೂ ಇಲ್ಲ

ಸರ್ವಾನುಕೂಲತೆಗಳಿರುವ ಮಲ್ಪೆಯನ್ನೇ ತಜ್ಞಸಮಿತಿ ಶಿಫಾರಸು ಮಾಡಿದೆ.

೧) ಕಡಲ್ಕರೆಗೆ ಸಮಾನಾಂತರವಾಗಿ ಒಂದು ಮೈಲು ದೂರದಲ್ಲಿ ನಿಂತಿರುವ ಶಿಲಾದ್ವೀಪಗಳು ಬಂದರಿಗೆ ನಿಸರ್ಗ ಕೃಪಾಪೋಷಿತ ಕಾವಲುಗಾರರಂತೆ ನಿಂತಿರುವವು. ಈ ದ್ವೀಪಗಳನ್ನೂ ಕಡಲ್ಕರೆಯನ್ನೂ ಜೋಡಿಸಲು ಅಡ್ಡಗೋಡೆ (Break Waters) ಗಳನ್ನು ನಿರ್ಮಿಸುವ ಪ್ರಸಕ್ತಿಯಿರುವುದು ನಿಜವಾದರೂ ಆಳವಾದ ಸಮುದ್ರದಲ್ಲಿ ದ್ವೀಪಗಳೇ ನಿಂತಿರುವುದರಿಂದ ಗೋಡೆ ಕಟ್ಟುವ ಕೆಲಸವು ಸುಲಭದ್ದಾಗುತ್ತದೆ.

೨) ಅಡಿಮಣ್ಣಿನ ಸಂಶೋಧನೆಯಿಂದ ಕಂಡುಬರುವುದೇನೆಂದರೆ ನೀರಿನಡಿಯಲ್ಲಿರುವ ಶಿಲೆಗಳನ್ನು ಸಂಧಿಸದೆಯೇ ಮರಳನ್ನು ಅಗೆಯಲು ಸಾಧ್ಯವುಂಟು.

೩) ಸಮುದ್ರದಿಂದ ಬಂದರಿನೊಳಗೆ ಬರುವ ಹೆಬ್ಬಾಗಿಲು ಪ್ರಶಸ್ತವಾಗಿದೆ.

೪) ಬಂದರಿನ ೪೦೦ ಎಕರೆ ವಿಸ್ತೀರ್ಣವು ಬಲುದೊಡ್ಡ ಪ್ರಬುದ್ಧ ಬಂದರಿಗೂ ಸಾಲುವಷ್ಟಿದೆ.

೫) ಕೇವಲ ಚಿಕ್ಕ ನದಿಯೊಂದು ಬಂದರಿನ ಸ್ಥಳದಲ್ಲಿ ಸಮುದ್ರದೊಡನೆ ಸಂಗಮಿಸುವುದರಿಂದ ಇದನ್ನು ಹೆಚ್ಚು ವೆಚ್ಚವಿಲ್ಲದೆ ಬೇರೆ ದಾರಿಯಾಗಿ ಕೊಂಡೊಯ್ಯಬಹುದು. ಹೀಗಿರುವುದರಿಂದ ಮಲ್ಪೆಯಲ್ಲಿ ಮರಳನ್ನು ಅಗೆಯುವ (Dredging) ಸಮಸ್ಯೆ ಇಲ್ಲವೇ ಇಲ್ಲ.

೬) ಹಿನ್ನಾಡಿಗೆ ಸಾಪೇಕ್ಷವಾಗಿರುವ ಮಲ್ಪೆಯ ಭೌಗೋಲಿಕ ಸನ್ನಿವೇಶವು ಅನುಕೂಲವಾಗಿದೆ. ಭದ್ರಾವತಿಯಿಂದ ಮಲ್ಪೆಗೆ ರೈಲು ಹಾಕುವುದು ಮಂಗಳೂರಿಗೆ ಹಾಕುವುದಕ್ಕಿಂತ ೪೪ ಮೈಲು ಕಡಿಮೆ.

೭) ಬಂದರಿನ ಕೆಲಸಕ್ಕೂ, ಹೊಸ ಉದ್ಯಮಗಳಿಗೂ ಬೇಕಾದಷ್ಟು ಖಾಲಿಸ್ಥಳ ಮಲ್ಪೆಯಲ್ಲಿ ಸಾವಿರಾರು ಎಕರೆಯಷ್ಟಿದೆ.

೮) ಜಲವಿದ್ಯುಚ್ಛಕ್ತಿ ಸ್ಥಾನವಾದ ಜೋಗವು ಮಲ್ಪೆಗೆ ಕೇವಲ ೬೦ ಮೈಲು ದೂರದಲ್ಲಿರುತ್ತದೆ.

ಭಟ್ಕಳಕ್ಕಿಂತ ಮಲ್ಪೆಗೆ ೨೫೮ ಲಕ್ಷ ರೂಪಾಯಿ ಹೆಚ್ಚುವೆಚ್ಚದಲ್ಲಿ ರೈಲು ಹಾಕಬೇಕೆಂಬುದಾಗಲೀ, ಮಲ್ಪೆಯು ಪ್ರಬುದ್ಧ ಬಂದರಾದರೆ ಮಂಗಳೂರಿಗಿಂತ ೨೭೭೦೦೦ ಟನ್ನು ಕಡಿಮೆ ಸರಕಿನ ಆಯಾತ ನಿರ್ಯಾತ ನಡೆಯುವುದಾಗಲೀ ಸಮಿತಿಯವರಿಗೆ ಯಾವ ತೆರದ ಅಂಜಿಕೆಯನ್ನೂ ಉಂಟುಮಾಡಲಿಲ್ಲ. ಮಲ್ಪೆಗಿರುವ ನೈಸರ್ಗಿಕ ಅನುಕೂಲತೆಗಳು ಈ ಕ್ಷುಲ್ಲಕ ಅನನುಕೂಲತೆಗಳನ್ನು ಮೆಟ್ಟಿ ನಿಲ್ಲುವದರಿಂದ ಸಮಿತಿಯು ಮಲ್ಪೆಯಲ್ಲಿಯೇ ಹಿರಿಬಂದರಿನ ರಚನೆಯಾಗತಕ್ಕದೆಂದೂ, ಅದಕ್ಕೋಸ್ಕರ ಆರಂಭದಲ್ಲಿ ೩೫೦ ಲಕ್ಷ ರೂಪಾಯಿಗಳನ್ನು ತೆಗೆದಿಡಬೇಕೆಂದೂ ಶಿಫಾರಸು ಮಾಡಿದೆ.

ಮಲ್ಪೆಯ ಬಗ್ಗೆ ವಿಶೇಷ ಮಾಹಿತಿ.

೧೯೫೧-೫೨ರಲ್ಲೇ ಮಲ್ಪೆಯು ಪ್ರಬುದ್ಧ ಬಂದರಾಗಿ ಕೆಲಸ ಮಾಡುತ್ತಿದ್ದರೆ ಅಲ್ಲಿನ ಆಯಾತ ನಿರ್ಯಾತಸಾಗಣೆಯು ಈ ಮೇಲಿನಂತಿರುತ್ತಿತ್ತು.

	[illegible]	[illegible]	[illegible]
(೧) [illegible]	೨,೫೫,೦೦೦	೩೫,೦೦೦	೨,೫೫,೦೦೦
(೨) [illegible]	೫೦,೦೦೦	೫೦,೦೦೦	೫೦,೦೦೦
(೩) [illegible]	೯೫,೦೦೦	೩೫,೦೦೦	೯೦,೦೦೦
(೪) [illegible]	೩೦,೦೦೦	..	೩೦,೦೦೦
ಒಟ್ಟು:	೪,೩೫,೦೦೦ + [illegible]	೭೦,೦೦೦	೪,೨೫,೦೦೦

೧೯೬೭ರ ಸುಮಾರಿಗೆ ಕರಾವಳಿಯ ಜಿಲ್ಲೆಗಳ ಬೆಳವಣಿಗೆಯನ್ನೂ, ಜೋಗದ ವಿದ್ಯುಚ್ಛಕ್ತಿಯ ಸಹಾಯದಿಂದ ಹೊಸದಾಗಿ ಸ್ಥಾಪಿತವಾಗುವ ಉದ್ಯಮಗಳ ಉತ್ಪನ್ನವನ್ನೂ, ಅಲ್ಲದೆ ಕೇಂದ್ರ ಸರಕಾರವು ಈಗಾಗಲೇ ಹೊರಡಿಸಿರುವ, ಹಡಗು ನಿರ್ಮಾಣದ ಉದ್ಯಮಕ್ಕೆ ಉತ್ತೇಜನೆ ಕೊಡುವ ಮುನ್ಸೂಚನೆಯನ್ನು ಗಮನಿಸಿದರೆ ಮಲ್ಪೆಯಿಂದ ಹೊರ ಹೋಗುವ ಒಳಸಾಗುವ ಸರಕುಗಳ ಮೊತ್ತವು ಒಟ್ಟು ೮,೦೦,೦೦೦ ಟನ್ನುಗಳಾಗಬಹುದು

ಹಡಗು ನಿರ್ಮಾಣದ ಉದ್ಯಮದ ಕುರಿತು ಪ್ರಸ್ತಾಪಿಸುತ್ತ ಸಮಿತಿಯು ಮಲ್ಪೆಯೇ ಹಡಗಿನ ನಿರ್ಮಾಣ ಕೇಂದ್ರಕ್ಕೂ ಅತ್ಯಂತಾನುಕೂಲವಾದ ಸ್ಥಳವೆಂದು ಘೋಷಿಸಿದೆ. ಮೈಸೂರಿನ ಔದ್ಯಮಿಕ ಕೇಂದ್ರಕ್ಕೆ ಸಮೀಪವಾಗಿಯೂ, ದಟ್ಟವಾದ ಅರಣ್ಯಗಳಿಗೆ ಅನತಿದೂರದಲ್ಲಿಯೂ, ಅಗ್ಗದ ವಿದ್ಯುಚ್ಛಕ್ತಿಗೆ ಅರುವತ್ತು ಮೈಲು ದೂರದಲ್ಲಿಯೂ ಇರುವ ಮಲ್ಪೆಯನ್ನು ಬಿಟ್ಟರೆ ಹಡಗು ನಿರ್ಮಾಣಕ್ಕೆ ಬೇರೆ ಯಾವ ಪ್ರಶಸ್ತ ಸ್ಥಳ ಇದ್ದೀತು? ಎಂದು ಸಮಿತಿಯು ಪ್ರಶ್ನಿಸುತ್ತದೆ.

ಪ್ರಬುದ್ಧ ಬಂದರು ಮಲ್ಪೆಯ ಆರ್ಥಿಕ ಭದ್ರತೆ ಎಷ್ಟಿದೆ?

ಪ್ರಬುದ್ಧ ಬಂದರನ್ನು ನೋಡುವ ಆರ್ಥಿಕ ದೃಷ್ಟಿ ಎರಡು ಬಗೆಯಾಗಿದೆ. (೧) ಅದನ್ನು ರಚಿಸುವ ಮತ್ತು ನೋಡಿಕೊಳ್ಳುವ ಕೆಲಸ. (೨) ಅದರ ಮೂಲಕ ಹಾದು ಹೋಗುವ ಸಾಮಾನುಗಳಿಂದ ಬರುವ ಆದಾಯ. ಬಂದರಿನ ರಚನೆಗೆ ೩೫೦ ಲಕ್ಷ ರೂಪಾಯಿಗಳು ಬೇಕಾಗಬಹುದು. ಯಾವುದೇ ಪ್ರಬುದ್ಧ ಬಂದರಿನ ಮುಖಾಂತರ ಹೋಗುವ ಒಂದು ಟನ್ ಸರಕಿಗೆ ರೂ. ೨-೦-೦ ನಿವ್ವಳ ಆದಾಯವು ಲಭ್ಯವಾದರೆ ಆ ಬಂದರಿಗೆ ಶಾಶ್ವತ ಆರ್ಥಿಕ ಭದ್ರತೆ ಇದೆ ಎಂದು ನಾವೆಣಿಸಬಹುದು. ಮಲ್ಪೆಯಲ್ಲಿ ಕೆಲವಂಶ ಸಾಗಣೆ ಹಾಯಿಹಡಗಗಳಲ್ಲಿ ನಡೆಯುವುದರಿಂದ ಈ ಆದಾಯವು 1½ ರುಪಾಯಿಗಿಂತ ಹೆಚ್ಚು ಇರಲಾರದು.

ವರ್ಷ [ಟನ್]	ಬಂಡವಾಳದ ಮೇಲಿನ ಶೇಕಡ ಆದಾಯ
೫,೫೫,೦೦೦ ([illegible])	೧.೫%
೬,೨೫,೦೦೦ ([illegible])	೧.೭%
೮,೦೬,೦೦೦ ([illegible])	೩.೯%

ಭದ್ರಾವತಿಯಿಂದ ಸರಕುಗಳು ಮರ್ಮಗೋವೆಗೆ ಹೋಗುವುದನ್ನು ಬಿಟ್ಟು ಮಲ್ಪೆಗೆ ಬಂದರೆ ೨೨೪ ಮೈಲುಗಳಷ್ಟು ಉದ್ದದ ಉಳಿತಾಯವಾಗುವುದು ಮಾತ್ರವಲ್ಲ. ೧೯೫೫ರ ಅಂದಾಜು ಸಾಗಣೆಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ ವರ್ಷಕ್ಕೆ ಈ ಒಂದು ಬಾಬಿನಿಂದಲೇ ೬.೨ ಲಕ್ಷ ರೂಪಾಯಿಗಳ ಉಳಿತಾಯವಿರುತ್ತದೆ.

ಒಂದು ಪಕ್ಷಕ್ಕೆ ಇನ್ನು ಹತ್ತು ಹನ್ನೆರಡು ವರುಷಗಳ ಕಾಲ ಮಲ್ಪೆಯು ತನ್ನ ವೆಚ್ಚವನ್ನು ತಾನೇ ನಿರ್ವಹಿಸಬಲ್ಲ ಸ್ವಯಂಪೂರ್ಣ ಪ್ರಬುದ್ಧ ಬಂದರವಾಗಿದ್ದರೂ ಚಿಂತಿಲ್ಲ ಎಂದು ಸಮಿತಿಯು ಅಭಿಪ್ರಾಯಪಡುತ್ತದೆ.

ಕರಾವಳಿಯ ಜಿಲ್ಲೆಯ ಸಂಚಾರ ಸೌಕರ್ಯಗಳು ಬಹಳ ಅಲ್ಪವಾದುದರಿಂದ, ಮಲ್ಪೆಯು ಸಕಲ ಹವಾಮಾನಗಳಲ್ಲಿಯೂ ತೆರೆದಿರುವ ಸರ್ವಋತು ಬಂದರಾದಾಗ ಪ್ರಯಾಣಿಕರ ಗೋಳೂ ಸ್ವಲ್ಪಮಟ್ಟಿಗೆ ಕಡಿಮೆಯಾಗುವುದು.

ಸಮಿತಿಯ ಶಿಫಾರಸುಗಳೇನು

೧. ಬಂದರನ್ನು ಮಲ್ಪೆಯಲ್ಲಿ ಕಟ್ಟಬೇಕು.

೨. ಮಲ್ಪೆಯಿಂದ ಭದ್ರಾವತಿಗೆ ರೈಲುಹಾದಿ ನಿರ್ಮಿಸಬೇಕು.

೩. ಮದರಾಸಿನಿಂದ ಬರುವ ಬ್ರಾಡ್‌ಗೇಜ್ ರೈಲನ್ನು ಮಂಗಳೂರಿನಿಂದ ಮಲ್ಪೆಯವರೆಗೆ ಮುಂದುವರಿಸಬೇಕು.

ಸಂ॥ ಶಿಫಾರಸು ನಡೆಯಲಿ ವಾಸ್ತವವಾಗಿ ಸರಕಾರೀ ಚೆಕ್ಕನ್ನು ಒತ್ತಾಯಿಸಿ ಪಡೆಯುವುದು ಹೇಗೆ ಸಾಧ್ಯ? ತಜ್ಞರ ಮತವನ್ನು ಮೀರುವ ಧಾರ್ಷ್ಟ್ಯವನ್ನು ತೋರಿಸಲಾರದ ಪ್ರಜಾ ಪ್ರತಿನಿಧಿಗಳ ಕೆಲಸವೇ ಮುಖ್ಯವಾಗಿದೆ. ನಮ್ಮ ಜಿಲ್ಲೆಯ ಮತದಾರ ಸಂಘದಿಂದ ನಾವು ಆಯ್ದು ಕಳುಹುವಂಥ ಪ್ರತಿನಿಧಿಗಳು ಮಲ್ಪೆಯ ವಿಷಯದಲ್ಲಿ ಮನಃಪೂರ್ವಕ ಹೋರಾಡುವವರಾದರೆ ಮಾತ್ರ ತಜ್ಞರ ಶಿಫಾರಸು ಕಾರ್ಯರೂಪಕ್ಕೆ ಇಳಿಯಬಲ್ಲುದು ಎಂದು ಮೊದಲೇ ಹೇಳಲಾಗಿದೆ. ಇದು ಕೇವಲ ಸ್ವಗ್ರಾಮಾಭಿಮಾನ ಎಂಬ ಅಪಾರ್ಥವನ್ನು ಯಾರೂ ಮಾಡಿಕೊಳ್ಳಬಾರದು. ವಿಚಾರಪೂರಿತ ಸ್ವಾಭಿಮಾನವೂ ಕೂಡ ದೇಶದ ಅಭ್ಯುದಯವನ್ನು ಸಾಧಿಸುವಂತಿದ್ದರೆ ಅಂಥ ಸ್ವಾಭಿಮಾನ, ಅಂಥ ಸ್ವಾರ್ಥ ಇರಲೇಬೇಕೆಂದು ಸುಪ್ರಸಿದ್ಧ ತತ್ವಜ್ಞಾನಿ ಬಂಟ್ರೆಂಡ್ ರಸ್ಸೆಲ್ ಕೂಡ ಹೇಳಿರುತ್ತಾನೆ. ಕಾಂಡ್ಲಾದ ಬಗ್ಗೆ ನಮ್ಮ ಧುರೀಣರು ತೋರಿಸಿದ ಕಾತರವನ್ನೂ ಉತ್ಸಾಹವನ್ನೂ ಮಲ್ಪೆಯ ಬಗ್ಗೆ ತಳೆಯಬಾರದು. ಸಮಿತಿಯ ಶಿಫಾರಸು ಮಾಡಿ ಒಂದು ವರ್ಷವಾಯಿತು. ಹಣಕಾಸಿನ ಅಡಚಣೆಯಿಂದ ಕೆಲಸವನ್ನು ಮುಂದಕ್ಕೆ ಹಾಕಲಾಗಿದೆ. ಎಂದು ಸರಕಾರ ಹೇಳುತ್ತದೆ. ಆರ್ಥಿಕ ಅಭ್ಯುದಯ ಇಂಥ ಯೋಜನೆಗಳಿಗೆ ಹಣಕಾಸನ್ನು ಎಲ್ಲಿಂದಲಾದರೂ ಹೇಗಾದರೂ ತರುವುದು ಅಗತ್ಯ. ಹುಡುಕುವುದು, ಹೊಡೆಯುವುದು ಇಂಥ ಮುಗ್ಗಟ್ಟಿನ ಕಾಲದಲ್ಲಿಯೂ ಅನುಚಿತವಾಗಲಾರದು. ಮನಸ್ಸಿದ್ದರೆ ಮಾದೇವನಿದ್ದಾನೆ, ಬಂಗಾರ ಉಂಟು ಎಂದು ಹೇಳಬಹುದು.

DO YOU KNOW?
THAT
THE VIJAYA BANK, LIMITED
1 Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs. 10 lacks
3. Has granted an average dividend of 6% to the Shareholders for the past 20 years
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7 Does afford full protection and rich return to all your monies
ADOPT IT AS
"MY BANK"
THE VIJAYA BANK, LIMITED,
H. O., MANGALORE

ದಿ ವಿಜಯಾ ಬೇಂಕ್ ಲಿಮಿಟೆಡ್,

ಕುಂದಾಪುರ (ದ. ಕ.)

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ಮಾಯುದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ, ಸದರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ರಿಜಿಸ್ತ್ರಿ ನೋಟೀಸು ಬಿಟ್ಟದ್ದರಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದರಿಯವರು ಈಡಿಟ್ಟ ನಗಗಳನ್ನು ಇದೇ ತಾ7-4-52ನೇ ಸೋಮವಾರ ಅಪರಾಹ್ನ ಘಂಟೆ 2ಕ್ಕೆ ಸರಿಯಾಗಿ, ಅಥವಾ ಬೇಂಕಿಗೆ ಯುಕ್ತ ಕಂಡ ಇತರ ಯಾವದೇ ದಿನಗಳಲ್ಲಿ ಪುನಹ ನೋಟೀಸು ಕೊಡದೇನೇ ಬ್ಯಾಂಕಿನ ಅಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡುವುದಲ್ಲದೆ ಏಲಂನಲ್ಲಿ ಹುಟ್ಟಿಬಂದ ಐವೇಜು ಸಾಲದ ಮೊಬಲಗಿಗೆ ಕಡಿಮೆಯಾದ ಪಕ್ಷದಲ್ಲಿ ಸಂಬಂಧಪಟ್ಟವರ ದೇಹಜವಾಬ್ದಾರಿಯಿಂದಲೂ ಬೇಂಕಿನ ಐವೇಜನ್ನು ವಸೂಲುಮಾಡಿಕೊಳ್ಳಲಾದೀತೆಂಬುದನ್ನು ಈ ಮೂಲಕ ತಿಳಿಸಲಾಗಿಯದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮತ್ತು ಬಡ್ಡಿ 31-12-51ಕ್ಕೆ ರೂ.	ಅ.
307/48-49	ಬಿ. ರಘುರಾಮ ಹೆಗ್ಡೆ, ಸುಬ್ಬಣ್ಣ ಹೆಗ್ಡೆಯವರ ಅಳಿಯ, ಬಿಳ್ಳಾಡಿ ಗ್ರಾಮ, ಪೋಸ್ಟ್ ಸ್ಯಾಬರ್‌ಕಟ್ಟೆ, ದ ಕ.	201	0
315/48-49	ಕೃಷ್ಣಯ್ಯ ಶೆಟ್ಟಿ, ಅಂತಯ ಶೆಟ್ಟರ ಅಳಿಯ, ಅಲ್ಪಾಡಿ ಗ್ರಾಮ, ಪೋಸ್ಟ್ ಹಾಲಾಡಿ, ದ. ಕ.	126	13
396/48-49	ಎಚ್. ಸಂಜೀವ ಶೆಟ್ಟಿ, ಹಾರ್ದಳ್ಳಿ ಹೊನ್ನಯ ಶೆಟ್ಟರ ಮಗ, ಕೊರ್ಗಿ ಹೊಸಮಠ, ಪೋಸ್ಟ್ ತೆಕ್ಕಟ್ಟೆ, ದ. ಕ.	176	12
649 ,,	— ಡಿ —	181	12
700 ,,	— ಡಿ —	101	7
·18 ,,	ಕೆ. ಸುಂದರರಾಮ ಶೇಟ್, ಅನಂತ ಶೇಟರ ಮಗ, ಜ್ಯುವೆಲರು, ಕುಂದಾಪುರ, ದ. ಕ.	74	0
449 ,,	— ಡಿ —	60	6
350/51	— ಡಿ —	64	1
482/48-49	ಕರ್ಕುಂಜೆ ಪಟೇಲ್ ನಾಗಯ್ಯ ಶೆಟ್ಟಿ, ರಂಗಯ ಶೆಟ್ಟರ ಅಳಿಯ, ಪೋಸ್ಟ್ ಕರ್ಕುಂಜೆ, ದ. ಕ.	116	12
483 ,,	ಮಿಸೆಸ್. ಯಶೋದ ಬಾಯಿ, ಮುಖ್ಯೋಪಾಧ್ಯಾಯಿನಿ, ಬೋರ್ಡ್ ಎಲಿಮೆಂಟರಿ ಶಾಲೆ, ಗಂಗೊಳ್ಳಿ, ದ. ಕ.	256	0
543 ,,	ಟಿ. ಮಹಾಬಲ ಶೆಟ್ಟಿ, ಸುಬ್ಬಯ ಶೆಟ್ರ ಮಗ, ಬಸ್ರೂರು, ಪೋಸ್ಟ್ ಕಂಡ್ಲೂರು, ದ ಕ.	232	6
635 ,,	ಬಿ. ಮಂಜಯ್ಯ ಶೆಟ್ಟಿ, ಸೂರಮ್ಮ ಶೆಡ್ತಿಯವರ ಮಗ, ಕೊರ್ಗಿ ಗ್ರಾಮ, ಪೋಸ್ಟ್ ಸಾಲ್ಪಾಡಿ, ದ. ಕ.	115	7
119/49-50	— ಡಿ —	111	9
542/50	— ಡಿ —	69	10
706 ,,	— ಡಿ —	113	9
645/48-49	ಬಿ. ಶ್ರೀನಿವಾಸ ಹೆಗ್ಡೆ, ರಾಮಣ್ಣ ಶೆಟ್ಟರ ಮಗ, ಎಡಾಡಿ ಮತ್ಯಾಡಿ ಗ್ರಾಮ, ಪೋಸ್ಟ್ ಸ್ಯಾಬರಕಟ್ಟೆ, ದ. ಕ.	128	9
783/50	— ಡಿ —	222	13
819/50	— ಡಿ —	90	0
699/18-49	ಅಂತಯ್ಯ ಶೆಟ್ಟಿ, ಸುಬ್ಬಯ ಶೆಟ್ರ ಮೊಮ್ಮಗ, ದೇವಲ್ಕುಂದ ಗ್ರಾಮ, ಪೋಸ್ಟ್ ಹಕ್ಲಾಡಿ, ದ. ಕ.	372	3
741 ,,	ಕಟ್ಟೆ ಬೆಲ್ತೂರು ಉಪ್ಪುಂದ ಶಿವರಾಮ ಶೆಟ್ಟಿ, ದಾರಮ್ಮ ಶೆಡ್ತಿಯರ ಮಗ, ಪೋಸ್ಟ್ ಹಕ್ಲಾಡಿ, ದ. ಕ.	45	8
753 ,,	ಕೆ. ಗೋವಿಂದ ಸೇರೆಗಾರ, ಮಂಜಯ ಸೇರೆಗಾರರ ಮಗ, ಪೇಡೆ, ಎಗ್ರಿಕಲ್ಚರ್ ಆಫೀಸು, ಕುಂದಾಪುರ, ದ. ಕ.	18	4
769 ,,	ಎಚ್. ಗೋಪಾಲ ಕೃಷ್ಣ ಹೆಗ್ಡೆ, ನಂದ್ಯಪ್ಪ ಹೆಗ್ಡೆಯವರ ಮಗ, ಹಿಲಿಯಾಣ ಗ್ರಾಮ, ಪೋಸ್ಟ್ ಹಾಲಾಡಿ, ದ. ಕ.	146	6
849 ,,	ಗೋವಿಂದ ಶೆಟ್ಟಿ, ಕೃಷ್ಣಪ್ಪ ಶೆಟ್ಟರ ಅಳಿಯ, ಅಕ್ಕರಮನೆ, ದೇವಲ್ಕುಂದ ಗ್ರಾಮ, ಪೋಸ್ಟ್ ಹಕ್ಲಾಡಿ, ದ. ಕ.	30	11
21/49-50	ನಿಡ್ಲಾಡಿ ಪುಟ್ಟಯ ಶೆಟ್ಟಿ, ಸುಬ್ಬಯ ಸೆಟ್ಟರ ಅಳಿಯ, ಅವಲಕ್ಕಿ ಕೇರಿ, ಕುಂದಾಪುರ (ಹಾಲಿ ತಲ್ಲೂರು ದೊಡ್ಡ ಮನೆಯಲ್ಲಿರುವವರು) ಪೋಸ್ಟ್ ತಲ್ಲೂರು, ದ. ಕ	1145	6
25/49-50	ಕೆ. ಶೀನಪ್ಪ ಶೆಟ್ಟಿ, ಕೊರಗಯ ಶೆಟ್ಟರ ಅಳಿಯ, ವಕೀಲರ ಗುಮಾಸ್ತ, ಕುಂದಾಪುರ, ದ. ಕ.	125	13
138/50	ಬಾಳಿಕೆರೆ ಕೃಷ್ಣಪ್ಪ ಶೆಟ್ಟಿ, ರಾಮಣ್ಣ ಶೆಟ್ಟರ ಅಳಿಯ, ದೇವಲ್ಕುಂದ ಗ್ರಾಮ, ಪೋಸ್ಟ್ ಹಕ್ಲಾಡಿ, ದ. ಕ.	89	12
513 ,,	ವಿಟ್ಠಲದಾಸ ಪಡಿಯಾರ, ರಂಗ ಪಡಿಯಾರರ ಮಗ, ಗಂಗೊಳ್ಳಿ, ಪೋಸ್ಟ್, ಗಂಗೊಳ್ಳಿ, ದ. ಕ.	46	11
729 ,,	ರಾಮ, ಗೋವಿಂದನವರ ಅಳಿಯ, ಹೊಸೂರು ಗ್ರಾಮದ ರಾಯರ ಮಕ್ಕಿಯಲ್ಲಿರುವವರು, ಪೋಸ್ಟ್ ಕೊಲ್ಲೂರು, ದ. ಕ.	11	9
875 ,,	ಹಸನ್ ಸಾಹೇಬರು, ಅಬ್ದುಲ್ ಖಾದರ್ ಸಾಹೇಬರ ಮಗ, ಸೇನಾಪುರ, ಪೋಸ್ಟ್ ಗಂಗೊಳ್ಳಿ, ದ. ಕ.	16	13

ಕುಂದಾಪುರ, 22-3-'52.

B. J. Bhandary, B. Com., ಏಜಂಟ, ಕುಂದಾಪುರ.

ಮಂಗಳೂರು

ದ. ಕ. ಜಿಲ್ಲಾ ಮಜೂರ ಸಮ್ಮೇಳನವು-ಎಪ್ರಿಲ್ ತಿಂಗಳ ತಾ 6 ಮತ್ತು 7ರಲ್ಲಿ ಜರಗಬಹುದಾಗಿ ತಿಳಿದುಬರುತ್ತದೆ.

ಕುಸ್ತಿ ಪಂದ್ಯಾಟ—ಘಲಿಮಾರು ಸಂಕಪ್ಪ ಜಿ. ಸುವರ್ಣ ಪೈಲ್ವಾನರಿಗೂ ಮೈಸೂರು ಸ್ಟಾರ್ ಅನಿಸಾರ್ ಜಾನ್ ಪೈಲ್ವಾನರಿಗೂ ಕುಸ್ತಿಪಂದ್ಯಾಟವು ಇದೇ ತಾ. 30ನೆ ಆದಿತ್ಯವಾರ ಕೇಂದ್ರ ಮೈದಾನಿನ ನಾಟಕ ಥಿಯೇಟರಿನಲ್ಲಿ ನಡೆಯಲಿರುವುದು.

ನಾಟ್ಯ ಪ್ರದರ್ಶನ—ತಿರುವಾಂಕೂರು ಸಹೋದರಿಯರಾದ ಲಲಿತಾ, ಪದ್ಮಿನಿ, ರಾಗಿಣಿ ಮತ್ತು ಪಾರ್ಟಿಯವರ ನೃತ್ಯ ಪ್ರದರ್ಶನವು ಇದೇ ತಾ 16ರಂದು ರಾತ್ರಿ ವಿಂಶನ್ ಹ್ಯಾಕ್ಸ್ಟ್ಯೂಲ್ ಪಟಾಂಗದಲ್ಲಿ ನಡೆಯಿತು.

ಬಿಲ್ಲವ ಸಮಾಜದ ಸ್ವಾಗತೋಪಚಾರ—ಬ್ರಹ್ಮ ಶ್ರೀ ನಾರಾಯಣ ಗುರುಸ್ವಾಮಿಯವರ ಪಟ್ಟಶಿಷ್ಯ ಶ್ರೀ ಶಂಕರಾನಂದ ಸ್ವಾಮಿ-ಜಿ (ಶಿವಗಿರಿ) ಅವರು ತಾ. 18ರಲ್ಲಿ ಮಂಗಳೂರಿಗೆ ಬಂದಿದ್ದು ಸ್ಥಳೀಯ ಬಿಲ್ಲವ ಸಮಾಜದವರಿಂದ ಸ್ವಾಗತೋಪಚಾರ ಪಡೆದರು.

ಪ್ರಾರಂಭೋತ್ಸವ—ಬೆಸರ್ಕಟ್ಟೆ ಪದವು ವಸಂತ ಭವನದ ಬಳಿಯಿರುವ ಕಟ್ಟಡದಲ್ಲಿ ಸರ್ವೋದಯ ಭಜನಾ ಮಂಡಳಿಯ ಪ್ರಾರಂಭೋತ್ಸವವು ಇದೇ ತಾ. 26ರಲ್ಲಿ ವಿವಿಧ ಕಾರ್ಯಕ್ರಮಗಳಿಂದ ಬೆಳಿಗ್ಗೆ ಪ್ರಾರಂಭವಾಗಿ ಸಂಜೆ ಮಂಗಲಾಚರಣೆ ನಡೆಯಿತು.

ಹಾಲಾಡಿ—ಸ್ಥಳೀಯ ಊರ ಮಹನೀಯರ ಪ್ರೋತ್ಸಾಹದಿಂದ ಇದೇ ತಾ. 17ರಲ್ಲಿ ಡಾ। ಕೆ. ಹಿರಿಯಣ್ಣ ಸೆಟ್ಟರು 'ಪ್ರೇಮಾ ಮೆಡಿಕಲ್ ಹಾಲ್' ಎಂಬ ಔಷಧಾಲಯವನ್ನು ತೆರೆದಿರುವರು.

ಹಿರಿಯಡ್ಕ—ಸ್ಥಳೀಯ ಆರ್ಯ ಸಮಾಜದ ಹದಿನೇಳನೇ ವಾರ್ಷಿಕೋತ್ಸವವು ತಾ. 16ರಲ್ಲಿ ಶ್ರೀ ಟಿ.ಎ. ಪೈ. ಎಮ್. ಎಲ್. ಎ; ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಬೆಳಿಗ್ಗೆ ಶ್ರೀಮತಿ ಪ್ರೇಮಾಬಾಯಿ ಎ. ಪೈಯವರು ಧ್ವಜಾರೋಹಣ ಮಾಡಿದ ನಂತರ ಶ್ರೀ ಸ್ವಾಮಿ ಸದಾನಂದ ಸರಸ್ವತಿಯವರು ವೇದೋಪದೇಶ ಮಾಡಿದರು. ಅಪರಾಹ್ನ ಸಭೆ ಜರಗಿ ಹಲವಾರು ಭಾಷಣಗಳಾದುವು.

ಕೆಮ್ಮಣ್ಣು:—ಗ್ರಾಮಾಭಿವೃದ್ಧಿಯನ್ನು ಹೇಗೆ ಸಾಧಿಸಬಹುದೆಂಬಬಗ್ಗೆ ಇದೇ ತಾ–23ರಲ್ಲಿ ಡಾ। ಟಿ. ಮಾಧವಪೈಗಳ ನೇತೃತ್ವದಲ್ಲಿ 'ಭಾರತ ವಿದ್ಯಾಮಂದಿರ' ಸೋದರರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಮಹಾಸಭೆಯೊಂದು ಜರಗಿತು. ಡಾ। ಪೈಗಳು ರಸ್ತೆ, ಹೈಸ್ಕೂಲ್ ವಿದ್ಯುಚ್ಛಕ್ತಿ, ಟೆಲಿಫೋನ್ ಮೊದಲಾದುವನ್ನು ಏರ್ಪಡಿಸಿ ಹೇಗೆ ಗ್ರಾಮಾಭಿವೃದ್ಧಿಗೊಳಿಸಬಹುದೆಂಬುದನ್ನು ವಿವರಿಸಿ ಭಾಷಣವಿತ್ತರು. ಅನಂತರ ಅವನ್ನು ಸಮರ್ಥಿಸಿ ಶ್ರೀಗಳಾದ ಕೆ. ಹೊನ್ನಯ್ಯ ಶೆಟ್ಟಿ, ರಾವ್ ಬಹದ್ದೂರ್ ಕೆ. ಕೃಷ್ಣಯ್ಯ, ರೋಕ್ಕಿ ಫೆರ್ನಾಂಡಿಸ್, ಶ್ರೀ ಸಿವಾಸರಾವ್, ಉಡುಪಿ ಇಲೆಕ್ಟ್ರಿಕ್ ಇಂಜಿನೀಯರ್ ಶ್ರೀ ಎಸ್. ವಿ ಶ್ಯಾನುಭಾಗರೂ ಮಾತನಾಡಿದರು. ಬಳಿಕ ನಾದುರಸ್ತಿಯಾಗಿ ಪ್ರಯಾಣಕ್ಕೆ ಅಸಾಧ್ಯವಾಗಿರುವ ಕಾಪು ಕೆಮ್ಮಣ್ಣು ರಸ್ತೆಯನ್ನು ಜಿಲ್ಲಾ ಬೋರ್ಡಿನವರು ದುರಸ್ತಿಪಡಿಸಬೇಕೆಂದು ನಿರ್ಣಯಿಸಿ ಆ ಬಗ್ಗೆ ಕಾರ್ಯ ಮುಂದೊತ್ತಲು ಕ್ರಿಯಾಸಮಿತಿಯೊಂದನ್ನು ರಚಿಸಲಾಗಿ, ಅಧ್ಯಕ್ಷರ ಭಾಷಣ, ಶ್ರೀ ಬಿ. ವೆಂಕಟ ಕೃಷ್ಣಯ್ಯನವರಿಂದ ಧನ್ಯವಾದಗಳಾಗಿ ಸಭಾಂತ್ಯವಾಯಿತು.

ಪಂಜ—ತಾ 15-3-52ರಲ್ಲಿ ಪಂಜ ಬೋರ್ಡು ಹೈಸ್ಕೂಲಿನ ಪ್ರಥಮ ವಾರ್ಷಿಕೋತ್ಸವವು ಹಾಸನ ಜಿಲ್ಲಾಬೋರ್ಡ್ ಅಧ್ಯಕ್ಷರಾದ ಶ್ರೀ ವೈ ಧರ್ಮಪ್ಪ, ಬಿ. ಎ. ಬಿ, ಎಲ್. ಇವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಹಾಗೂ ಶ್ರೀ ಕೆ. ವೆಂಕಟ್ರಮಣಗೌಡ ಎಂ. ಎಲ್. ಎ ರವರೂ ಸಭೆಯಲ್ಲಿ ಉಪಸ್ಥಿತರಿದ್ದರು. ಶಾಲಾವರದಿಯನ್ನು ಮುಲೆನಾಡು ವಿದ್ಯಾಸಂಘದ ವರದಿಯನ್ನೂ ಮಾನ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರು ಮೊದಲಾದವರಿಂದ ಬಂದ ಶುಭ ಸಂದೇಶಗಳನ್ನೂ ಓದಲಾಯಿತು. ಸುಳ್ಯ ಬೋರ್ಡ್ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ ಕೆ. ಸುಬ್ಬಣ್ಣ ಗೌಡರು ಸ್ವಸ್ತಿವಾಚನವನ್ನು ಮಾಡಿದರು.

ಪ್ರಮುಖ ಅತಿಥಿಗಳ ಹಾಗೂ ಅಧ್ಯಕ್ಷರ ಭಾಷಣಗಳಾದ ತರುವಾಯ ಶಾಲಾ ಮಕ್ಕಳ ವಿವಿಧ ವಿನೋದಾವಳಿಗಳು ಪ್ರದರ್ಶಿಸಲ್ಪಟ್ಟು ಬಹುಮಾನ ವಿತರಣೆಯಾದ ಬಳಿಕ ರಾಷ್ಟ್ರಗೀತೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಕಟಪಾಡಿ— "ಬ್ರಹ್ಮ ಶ್ರೀ ನಾರಾಯಣ ಗುರುಸ್ವಾಮಿ ಸೇವಾಸಮಿತಿ" ಯವರು ರಚಿಸುತ್ತಿರುವ ಗರ್ಭಗೃಹದ 'ಷಡಾಧಾರ ಪ್ರತಿಷ್ಠಾ' ಸಮಾರಂಭವು ತಾ. 21-3-1952ರಲ್ಲಿ ಬ್ರಹ್ಮ ಶ್ರೀ ಶಂಕರಾನಂದ ಸ್ವಾಮಿಜಿಯವರ ಅಮೃತ ಹಸ್ತದಿಂದ ವಿಜೃಂಭಣೆಯಲ್ಲಿ ಜರಗಿತು. ದ. ಕ. ಜಿಲ್ಲೆಗೆ ಇದೀಗ ಮೊದಲಬಾರಿ ಚಿತ್ತೈಸಿರುವ ಬ್ರಹ್ಮಶ್ರೀಯವರ ಸ್ವಾಗತ ಮೆರವಣಿಗೆಯು ಸಂಭ್ರಮದ ಬಿರುದಾವಳಿಗಳೊಡನೆ ಮಂಗಳೂರು ರೈಲ್ವೆ ನಿಲ್ದಾಣದಲ್ಲಿ ತಾ. 18ನೇ ಸಂಜೆಗೆ ಆರಂಭವಾಗಿ ತಾ 20ನೇ ಸಂಜೆಗೆ ಕಟಪಾಡಿಯಲ್ಲಿ ಅಂತ್ಯವಾಯಿತು. ರೈಲ್ವೆ ಸ್ಟೇಶನಿನಿಂದ ಶ್ರೀ ಗೋಕರ್ಣನಾಥ ಕ್ಷೇತ್ರ-ಕುದ್ರೋಳಿಗೆ, ಆ ಮೇಲೆ ಕ್ರಮವಾಗಿ ಕೂಳೂರು, ಸುರತ್ಕಲ್, ಪಾವಂಜೆ, ಹಳೆಯಂಗಡಿ, ಮೂಲ್ಕಿ, ಹೆಜಮಾಡಿ, ಪಡುಬಿದ್ರಿ, ಎರ್ಮಾಳ, ಮೂಳೂರು ಮಾರ್ಗವಾಗಿ ಸ್ವಾಮಿಜಿಯವರು ಕಟಪಾಡಿಗೆ ಆಗಮಿಸುವಾಗ ಅಲ್ಲಲ್ಲಿ ಭಕ್ತ ಸಮಾಜದವರಿಂದ ಭಕ್ತಿ ಪ್ರದರ್ಶನಗಳೂ, ಗುರುಪೂಜೆ ಮತ್ತು ಫಲಾಹಾರಾದಿಗಳೂ ಇದ್ದುವು. ಸುಮಾರು ಐದು ಸಾವಿರ ಜನರ ಸಂತರ್ಪಣೆ ಸಮೇತವಾಗಿ ಸಮಾರಂಭವು ಸಂಭ್ರಮದಿಂದ ಶಾಸ್ತ್ರೋಕ್ತವಾಗಿ ಜರಗಿರುವುದು.



ತಾರೀಕು 28—3—1952ರಿಂದ

ಕನ್ನಡನಾಡಿನ ಹೆಮ್ಮೆಯ ಜನಪ್ರಿಯ ಚಿತ್ರ

ಜಗನ್ಮೋಹಿನಿ

(ಕನ್ನಡಚಿತ್ರ)

ಉಡುಪಿಯ ಇಬ್ಬರು ತಾರೆಯರ ಸಮ್ಮೇಳನ.

ಹರಿಣಿ ಮತ್ತು ಪ್ರತಿಮಾ.

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್ ಉಡುಪಿ.

ಪ್ರವಾಸಿಯ ಪತ್ರಗಳು ೧೨

ಮಿಲಾನ್ ಮತ್ತು ವೇನಿಸ್

ಮಿಲಾನಿಗೆ ಬಂದು ಸೇರಿದ ವಿಷಯ ಹಿಂದಿನ ಪತ್ರದಲ್ಲಿ ಬರೆದಿದ್ದೆ. ಅಲ್ಲಿಯ ಸ್ಟೇಶನ್ ನಾನು ಯುರೋಪಿನಲ್ಲಿ ನೋಡಿದ ಎಲ್ಲಾ ಸ್ಟೇಶನುಗಳ ಪೈಕಿ ಬಹಳ ಮಹತ್ತು (Grand) ಮತ್ತು ಚಂದವಾದದ್ದು. ಇದನ್ನು ಕಟ್ಟಿ 30 ವರ್ಷವಾಗಬಹುದು. ಇದರ ನಂತರ ಹೊಸತಾಗಿ ಸಿಮೆಂಟಿನಲ್ಲಿ ಕಟ್ಟಿದ ರೋಮಿನ ಸ್ಟೇಶನ್ ಇದಕ್ಕಿಂತಲೂ ದೊಡ್ಡದು. ಆದರೆ ಇಷ್ಟು ಚಂದವಿಲ್ಲ. ಇದರಲ್ಲಿ ರೈಲು ಬಂದು ನಿಲ್ಲುವ ಭಾಗ ಮತ್ತು ಪ್ಲೇಟ್ ಫೋರ್ಮ್ ಸ್ಟೇಶನಿನ ಎದುರು ಇರುವ ರಸ್ತೆಗಿಂತ ಸುಮಾರು 30 ಫೀಟು ಎತ್ತರ. ಈ ಮಧ್ಯ ಸ್ಟೇಶನಿನ ದೊಡ್ಡ ಕಟ್ಟಡ. ಅದರಲ್ಲಿ ಅನೇಕ ಕೋಣೆಗಳು. ಮೇಲಿಂದ ಕೆಳಗೆ ಇಳಿಯಲಿಕ್ಕೆ ಅನೇಕ ಮೆಟ್ಟಲುಗಳು. ಸ್ಟೇಶನ್ ಎದುರು ಬಹಳ ಅಗಲವಾದ ರಸ್ತೆ ಮತ್ತು ಉದ್ಯಾನ. ಅಲ್ಲಿಂದಲೇ ಪಟ್ಟಣದ ಬೇರೆಬೇರೆ ಕಡೆಗಳಿಗೆ ಹೋಗುವ ಟ್ರಾಮುಗಳು.

ಅವುಗಳ ಪೈಕಿ ಒಂದನ್ನು ಹತ್ತಿ ನಗರದ ಮಧ್ಯದಲ್ಲಿರುವ ಮತ್ತು ಪ್ರಸಿದ್ಧವಾದ ಇಗರ್ಜಿಗೆ (Cathedral) ಹೋದೆ. ಅದಕ್ಕೆ ಸುಮಾರು 2 ಮೈಲು ದೂರ. ಅದರಲ್ಲಿ ವಿಶೇಷವಾದ ಕೆಲಸವೆಂದರೆ ಬಣ್ಣಬಣ್ಣದ ಗಾಜಿನ ಕಿಟಿಕಿಗಳು. ಅವುಗಳಲ್ಲಿ ಹಲವಾರು ಚಿತ್ರಗಳು (Stained glass) ಇಗರ್ಜಿಯ ಮಧ್ಯ. ಬಹು ಎತ್ತರವಾದ ಅನೇಕ ಕಂಬಗಳು. ಆ ದಿನ ಆದಿತ್ಯವಾರವಾಗಿತ್ತು. ಅಲ್ಲಿ ಸುಮಾರು ಒಂದು ಸಾವಿರ ಜನರು ನೆರೆದಿದ್ದು ಇಟೇಲಿ ಭಾಷೆಯಲ್ಲಿ ಪಾದ್ರಿಗಳು ಬೋಧನೆ ಕೊಡುತ್ತಿದ್ದರು. ಅದನ್ನು ಸಂದರ್ಶಿಸಿದ ಮೇಲೆ ಅಲ್ಲಿಯೇ ಸಮೀಪವಿರುವ ಒಂದು ರೆಸ್ಟೋರೆಂಟಿನಲ್ಲಿ ಫಲಾಹಾರ ಮಾಡಿ ರೈಲ್ವೆ ಸ್ಟೇಶನಿಗೆ ಪುನಹ ಹಿಂತಿರುಗಿ ನಡೆಯಲಿಕ್ಕೆ ಪ್ರಾರಂಭಿಸಿದೆ. ಟ್ರಾಮಿನಲ್ಲಿ ರಭಸದಲ್ಲಿ ಹೋಗುವಾಗ ಊರನ್ನು ಸರಿಯಾಗಿ ಕಾಣಲಿಕ್ಕೆ ಕಷ್ಟ. ಆದರೆ ನಡೆದು ಬಂದರೆ ಮಾತ್ರ ಸರಿಯಾಗಿ ಕಾಣಲಿಕ್ಕೆ ಆಗುತ್ತದೆ.

ದಾರಿಯಲ್ಲಿದ್ದ ಕಟ್ಟೋಣಗಳು 3-4 ಉಪ್ಪರಿಗೆಗಳುಳ್ಳವು. ಆದಿತ್ಯವಾರವಾದ ಕಾರಣ ಅಂಗಡಿಗಳೆಲ್ಲಾ ಮುಚ್ಚಿದ್ದವು. ಮಧ್ಯಾಹ್ನ ಬಿಸಿಲು ಕಾಲವಾದ್ದರಿಂದ ರಸ್ತೆಯ ಬದಿಯಲ್ಲಿದ್ದ ಒಂದು ಉದ್ಯಾನದಲ್ಲಿ ಕೂತು ಕೆಲವು ಸಮಯ ಕಳೆದೆ. ಉದ್ಯಾನವನ್ನು ಒಳ್ಳೆ ರೀತಿಯಲ್ಲಿ ಇಟ್ಟಿರಲಿಲ್ಲ. ರಸ್ತೆಯಲ್ಲಿ ತಿರುಗಾಡುವ ಜನರಲ್ಲಿ ಅನೇಕರು ಬಡತನದಲ್ಲಿದ್ದ ಕುರುಹುಗಳು ಕಂಡಿತು. ಹರಕು ದುಪ್ಪಟ್ಟಿಗಳು. ಕಾಲಿಗೆ ಪಾದರಕ್ಷೆ ಇಲ್ಲ. ಅಪರೂಪದಲ್ಲಿ ಒಬ್ಬಳು ಮಗು ಸಮೇತ ಹಿಡಿದುಕೊಂಡು ಬೇಡುವುದು ಕಂಡಿತು. ಹೀಗೆ ಬೇಡುವುದು ಈ ಯುರೋಪಿನ ತಿರುಗಾಟದಲ್ಲಿ ಇದು ಮೊದಲನೇ ದೃಶ್ಯ.

ಈ ನಗರವು ಅನೇಕ ಕೈಗಾರಿಕೆಗಳಿಗೆ ಪ್ರಸಿದ್ಧವಾದದ್ದು. ಇಲ್ಲಿ ಒಂದು ವಿಶ್ವವಿದ್ಯಾಲಯವಿದೆ. ಕೈಗಾರಿಕೆಗಳಲ್ಲಿ ವಸ್ತ್ರದ ಕಾರ್ಖಾನೆಗಳು, ಯಂತ್ರಗಳು (Mechinery), ಮೋಟಾರು ಕಾರು ಮತ್ತು ಬಸ್ಸುಗಳು, ರಾಸಾಯನಿಕ ಪದಾರ್ಥಗಳು (Chemicals) ಪಿಂಗಾಣಿ (Porcelain) ಮುಂತಾದ ಹಲವು ತರದ ಕೈಗಾರಿಕೆಗಳಿವೆ. ಆದರೆ ಆ ದಿನ ರಜಾದಿನವಾದ ಕಾರಣ ಯಾವುದನ್ನು ನೋಡಲಿಕ್ಕೂ ಎಡೆಯಿರಲಿಲ್ಲ.

ಹೀಗೆ ಕೆಲವು ಕಾಲ ತಿರುಗಾಡಿ ಪುನಃ ಸ್ಟೇಶನಿಗೆ ವಾಪಾಸು ಬಂದೆ. ಮಧ್ಯದಲ್ಲಿ ದಾರಿ ತಪ್ಪಿದ್ದೂ ಉಂಟು. ಆದರೆ ನೆಂಟ್ರಲ್ ರೈಲ್ವೆ ಸ್ಟೇಶನ್ ಮುಖ್ಯವಾದ ಸಂಸ್ಥೆಯಾದ್ದರಿಂದ ಅಲ್ಲಲ್ಲಿ ಕೇಳಿ ಬಂದದ್ದು. ಆದರೆ ಇಂಗ್ಲಿಷ್ ಭಾಷೆ ಗೊತ್ತಿದ್ದವರು ಎಲ್ಲಿಯೂ ಸಿಕ್ಕುವುದಿಲ್ಲ. ಅಲ್ಲಿಯ ಜನರು ಮಾತಾಡುವ ಇಟೇಲಿ ಭಾಷೆ ನನಗೆ ಗೊತ್ತಾಗದು. ಆದರೆ ಕೆಲವೇ ಶಬ್ದಗಳು ಅಲ್ಲಲ್ಲಿ ಕೇಳಿ ಅವುಗಳ ಅರ್ಥ ಹಿಡಿಯಬಹುದು. ಹೀಗೆ ಸ್ಟೇಶನಿಗೆ ಇಟೇಲಿ ಭಾಷೆಯಲ್ಲಿ "ಸ್ಟೇಶಿಯೂನೇ" ಎನ್ನುತ್ತಾರೆ.

ಮಿಲಾನಿನಿಂದ ಸಾಯಂಕಾಲ 4-45ಕ್ಕೆ ರೈಲು ವೆನಿಸಿಗೆ ಬಿಡುತ್ತದೆ. ಅದರಲ್ಲಿ ಹೊರಟೆ. ಮಿಲಾನ್ ಎಂಬುದು ಉತ್ತರ ಇಟೇಲಿಯ ಮಧ್ಯದಲ್ಲಿದೆ. ಅಲ್ಲಿಂದ ಪೂರ್ವ ಸುಮಾರು 150 ಮೈಲು ದೂರ ಇರುವುದು ವೆನಿಸ್. ಅದಕ್ಕೆ ತಾಗಿ ಇರುವ ಎಡ್ರಿಯಟಿಕ್ ಎಂಬ ಸಮುದ್ರದ ಬದಿಯಲ್ಲಿರುವ ಬಂದರು. ಈ 150 ಮೈಲು ಸಮತಟ್ಟಿನ ಬೈಲುಸೀಮೆಯಾಗಿದ್ದು ಅದರ ಹೆಸರು ಲೊಂಬಾರ್ಡಿ [Plain of Lombardy] ಎಂತ. ಇದರ ಮಧ್ಯ ಅನೇಕ ನದಿ ಮತ್ತು ಕಾಲಿವೆಗಳಿದ್ದು ಸೀಮೆಯು ಬಹಳ ಫಲವತ್ತಾಗಿದ್ದು. ರೈಲು ಹೋಗುವಾಗ ಎಲ್ಲೆಲ್ಲೂ ಕೃಷಿ ಮತ್ತು ಪೈರುಗಳನ್ನು ನೋಡಬಹುದು. ಅಷ್ಟು ಸಮೃದ್ಧಿಯಾದ ಊರು ಮಧ್ಯ ಮತ್ತು ದಕ್ಷಿಣ ಇಟೇಲಿಯಲ್ಲಿ ಇಲ್ಲ. ಅಲ್ಲಿ ಅನೇಕ ಗುಡ್ಡೆಗಳಿದ್ದು ಕೃಷಿಭೂಮಿ ಕಡಿಮೆ. ಇಲ್ಲಿ ಹಾಗಲ್ಲ. ಎಲ್ಲೆಲ್ಲೂ ಸಮತಟ್ಟಿನ ಜಾಗವಿದ್ದು ಕೃಷಿ ಮಾಡುವ ಜಾಗಗಳು. ಮಿಲಾನಿನಿಂದ ಹೊರಟ ಮೇಲೆ ರೈಲು ನಡೆಯುವುದು ಕಲ್ಲಿದ್ದಲಿನಿಂದ; ವಿದ್ಯುಚ್ಛಕ್ತಿಯಿಂದಲ್ಲ. ಆದರೂ ವೇಗದಿಂದ ಹೋಗುತ್ತದೆ. ಕಳೆದ ಯುದ್ಧಕಾಲದಲ್ಲಿ ಅದ ಹೇರಳ ನಷ್ಟದ ಸಂಬಂಧ ರೈಲು ಗಾಡಿಗಳು ಅನೇಕ ಹಳತು. ಮತ್ತು ಅಲ್ಲಲ್ಲಿ ಬೋಂಬು ಬಿದ್ದು ಪುಡಿಯಾಗಿದ್ದವು.

ಹಳ್ಳಿ ಪ್ರದೇಶದಲ್ಲಿ 3 4 ಫರ್ಲಾಂಗಿಗೆ ಒಂದೊಂದು ಕೃಷಿಗಾರರ ಮನೆ ಬರುತ್ತದೆ. ಅವುಗಳು ಹೆಚ್ಚಾಗಿ ಒಂದೇ ನಮೂನೆ. ಮತ್ತು ಎಲ್ಲೆಲ್ಲಿಯೂ ಬಹು ಹಳತು. ಅವುಗಳು ಗೋಡೆ ಹಾಕಿದ್ದ ಹಿತ್ತಲುಗಳ ಮಧ್ಯ ಇದ್ದು ಉದ್ದವಾಗಿ 5-6 ಕೋಣೆಗಳಿದ್ದವು. ಒಂದೆರಡಕ್ಕೆ ಎದುರು ಗೋಡೆಯಿಲ್ಲದೆ ಖಾಲಿ, ಹರಕು ಮುರುಕು ಸಾಮಾನು ತುಂಬಿದ್ದವು. ಇನ್ನುಳಿದವು ಬಾಗಿಲುಗಳಿದ್ದು ಉಳಕೊಳ್ಳಲಿಕ್ಕೆ. ಮೇಲೆ ಸಾಮಾನು ಹಾಕಲಿಕ್ಕೆ ಅಟ್ಟ, ಹಂಚಿನ ಮಾಡು. ಇದನ್ನು ನೋಡುವಾಗ ಕೃಷಿಗಾರರ ಬಡತನದ ಸ್ಥಿತಿ ಕಾಣುತ್ತದೆ. ನಮ್ಮ ಜಿಲ್ಲೆಯ ಹಳ್ಳಿಗಳ ಕೆಲವು ಮನೆಗಳು ಅವುಗಳಿಗಿಂತ ಒಳ್ಳೇದೆಂತ ಹೇಳಬಹುದು. ಆದರೆ ಭೂಮಿಯು ಬಹಳ ಫಲವತ್ತಾದದ್ದು. ಅಲ್ಲಿ ಅನೇಕ ತರದ ಪೈರುಗಳು. ಮುಂದೆ ಗದ್ದೆಗಳು ಸಣ್ಣದಾಗಿದ್ದು ಪೂರ್ವಕ್ಕೆ ಪ್ರಯಾಣ ಮಾಡಿದ ಹಾಗೆ ದೊಡ್ಡದಾಗುತ್ತಾ ಬಹಳ ಸಪೂರ ಮತ್ತು ಉದ್ದವಾಗಿದ್ದವು. ಕೆಲವು ಸುಮಾರು 100 ಗಜ ಉದ್ದ 20 ಗಜ ಅಗಲವಿರಬಹುದು. ಇವುಗಳ ಮಧ್ಯೆ ಅಲ್ಲಲ್ಲಿ ಕಾಫಿಗಿಡಗಳಂತೆ 4-5 ಅಡಿ ಎತ್ತರದಲ್ಲಿ ಕತ್ತರಿಸಿದ ಹೊಂಗಾರಿದಂತಿನ ಆಧಾರ ಕ್ರಮೇಸ್ವರವಾಗಿ ಬೆಳೆಸಿದ ಗಿಡಗಳು. ಅವುಗಳು 6-8 ಅಡಿ ಒಂದರಿಂದ ಒಂದಕ್ಕೆ ದೂರವಿದ್ದು ಮಾಲೆಯಂತೆ ಅವುಗಳ ಮೇಲೆ ಹಸುರಾದ ದ್ರಾಕ್ಷೆಬಳ್ಳಿಗಳು ನೇತಾಡುತ್ತಿರುವುವು. ಗದ್ದೆ ಉಳಲಿಕ್ಕೆ ಇಲ್ಲಿ ಎತ್ತುಗಳನ್ನು ಕಟ್ಟುವರು. ಇದು ಪ್ರಥಮ ಕಂಡದ್ದು. ಏಕೆಂದರೆ ಈ ಮುಂಚೆ ನಾನು ಸಂದರ್ಶಿಸಿದ ದೇಶಗಳಲ್ಲಿ ಕುದುರೆಗಳ ಉಪಯೋಗ. ಊರಿನ ಮರಗಳು ಸಣ್ಣ ತರದವು. ನಮ್ಮ ಊರಿನಲ್ಲಿದ್ದಂತೆ ದೊಡ್ಡ ಮತ್ತು ಎತ್ತರವಾದ ಮರಗಳಲ್ಲ.

ಕೆ. ಜಿ. ಕಾರಂತ] [ವಿಟಾರವಾಣ

[ಮುಂದರಿಯುವುದು]

ಅಂದವಾದ ಮತ್ತು
ಅಚ್ಚುಕಟ್ಟಾದ ಮುದ್ರಣಕ್ಕೆ
ನವಯುಗ ಪ್ರೆಸ್ ಉಡಪಿ.

ಮೈಸೂರು ಶ್ರೀಮನ್ಮಹಾರಾಜ ಮಾಮಾ ... ಆಯುರ್ವೇದ,
ಅಂಬಳೆ ... ಪಂಡಿತ ... ಎ. ರಾಮಸ್ವಾಮಿ ಅಯ್ಯಂಗಾರ್.

*** ಸಂತಾನ ಸಿಂಧೂರ ***

ಬಸಿಸ್ವ ಸಂಬಂಧದ ಹೊಟ್ಟೆನೋವು ಉಂಟು. ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಸಿಸ್ವ ಸಂಬಂಧದ ಹೊಟ್ಟೆನೋವು ಹಾಗೆ ತಲೆನೋವು, ನಡುಕಳೆತ, ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ.

ಮೂರು ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ಒಂದು ಸೆಟ್ ಅನುಪಾನ ಪತ್ರಿಕೆ ಮೇರೆ ಇಟ್ಟರೂ ಸೇವಿಸಿರಿ ಸಾಕು. ಶೋಧನವಾದ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾಪತ್ರಗಳನ್ನು ಪಡೆದಿದೆ.

ಕ್ರಯ:— ಒಂದು ಸೆಟ್ 5 ರೂ. ಪ್ಯಾಕಿಂಗ್ ಮತ್ತು ಟಪಾಲು ಖರ್ಚು [ರೂ ೧ ೩. ಇಲ್ಲ ಕ್ಯಾಟಲಾಗ್ ಉಚಿತ. 6 ರೂ ಮನಿಆರ್ಡರ್ ಮಾಡಿರಿ. ಕೂಡಲೆ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ:—**A. R.** ವಿಶ್ವೇಶ್ವರಯ್ಯ (ಎ. ರಾಮಸ್ವಾಮಿ ಅಯ್ಯಂಗಾರ್ ಸನ್ಸ್,)
Prop: ಸಂತಾನ ಸಿಂಧೂರ
ಅಂಬಳೆ ಪೋಸ್ಟು, ಯಳಂದೂರು ತಾಲೂಕು ಮೈಸೂರು ಡಿಸ್ಟ್ರಿಕ್ಟ್
ಮೈಸೂರು ಶಾಖೆ: 269 ಸೋನಾರ್ ಸ್ಟ್ರೀಟ್, ದಿವಾನ್ಸ್ ರೋಡು, ಮೈಸೂರು.

THE BOMBAY LIFE ASSURANCE COMPANY, LTD.
ದಿ ಬೊಂಬೆ ಲ್ಯಾಫ್ ಎಶ್ಶೂರೆನ್ಸ್ ಕೋ., ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ
ಇವರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾಗಿ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ ಎಂ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಶಾಖೆ:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಸಂರಕ್ಷಣೆ ಹಾಗೂ ಸಂಚಯಕ್ಕೆ
ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.
ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934
ವಿಚಾರಿಸಿರಿ
ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಠೇವಣಾತಿ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.
ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರೀತ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.
ಬಿ. ಬ್ರಾಂಚ್ ಮೆನೇಜರ್;
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ.

ವಾರದ ಭವಿಷ್ಯ

ತಾರೀಕು 27-3-52 ರಿಂದ | ತಾರೀಕು 2-4-52 ವರೆಗೆ

ಮೇಷ:— ಶನಿ ಕ್ಷೇತ್ರಂ ಸಹಕಾರದಿಂದಾಗಿ ನೀವೀ ವಾರದಲ್ಲಿ ಉದ್ಯೋಗದಲ್ಲಿ ಪ್ರಗತಿಯನ್ನು ಆರ್ಥಿಕ ಭಾಗದಲ್ಲಿ ಅಭಿವೃದ್ಧಿಯನ್ನೂ ಭೋಗಭಾಗ್ಯಗಳನ್ನೂ ಪಡೆಯಲಿರುವಿರಿ ಆದರೂ ನಿಮ್ಮ ದೇಹಾರೋಗ್ಯವು ಕೆಡುವುದರಿಂದಲೂ ಗೃಹಕೃತ್ಯದಲ್ಲಿನ ಅವ್ಯವಸ್ಥೆಯಿಂದಲೂ ಕನಸುಮನಗಳಿಗೆ ಸುಖನೆಮ್ಮದಿಯಿರದು. ಅನಿರೀಕ್ಷಿತವಾಗಿ ಪರ್ಯಟನವು ಗಂಟುಬೀಳಲಿದೆ. ತಾ 30-31 ಬಿಟ್ಟು ಉಳಿದ ದಿನಗಳು ಇಷ್ಟಾರ್ಥ ಪ್ರದಗಳಿವೆ.

ವೃಷಭ:— ಆದಾವ ಭಾಗದಲ್ಲೂ ನಿಮಗೆ ಕುಂದು ಕೊರತೆಗಳು ಕಾಣಿಸಲಾರವು ವಿದ್ಯಾರ್ಥಿಗಳಿಗೂ ನೌಕರಿ ವರ್ಗದವರಿಗೂ ಕಾಲವು ಪ್ರಗತಿದಾಯಿಯಾಗಿರುವದು. ಪ್ರತ್ಯಕ್ಷ ವ್ಯವಹಾರದಿಂದಲೂ ಪತ್ರವ್ಯವಹಾರವು ಸುಗಮವಾಗಿ ಪರಿಣಮಿಸಲಿದೆ. ಪುತ್ರಭೃತ್ಯಾದಿಗಳು ಅವಿಧೇಯರಾಗಿ ವರ್ತಿಸುವ ಕಾರಣ ಸಾಂಸಾರಿಕ ಸುಖವು ಲಭಿಸದು ತಾ 30-31 ಈ ದಿನಗಳಲ್ಲಿ ಅನಾಯಾಸದಿಂದ ವಾಂಛಿತಾರ್ಥಗಳು ಫಲಿಸುವವು.

ಮಿಥುನ:— ಚಂಚಲವಾದ ನಿಮ್ಮ ಚಿತ್ತವು ಶುಕ್ರವರ್ಗಗಳೆಡೆಗೆ ನಿಮ್ಮನ್ನು ಸೆಳೆಯಲಿದೆ ವ್ಯಾಪಾರ ವ್ಯವಹಾರಗಳಲ್ಲಿ ದಿನಮಾನಸಗೆ ತಕ್ಕುದಾದ ಪ್ರತಿಫಲವು ಲಭಿಸುವದು ಮಕ್ಕಳು ಮಂದಿಗಳ ಅನಾರೋಗ್ಯದ ಬೆಸೆಯಿಂದಾಗಿ ಮನಸ್ಸಿಗೆ ಶಾಂತಿಯಿರದು ಅಪ್ರೇಷ್ಟರ ವಿಯೋಗ ದುಃಖದಿಂದ ಪೀಡಿತರಾದ ನಿಮಗೆ ತಾ 30-31ರಲ್ಲಿ ಅನಿರೀಕ್ಷಿತ ಖರ್ಚುಗಳು ಪ್ರಾಪ್ತವಾಗುವವು ಆರೋಗ್ಯವು ಕೆಡಲಿದೆ.

ಕರ್ಕಾಟಕ:— ಅಪಮಾನಗಳೂ ಸುಖದುಃಖಗಳೂ ನಿಮಗೀವಾರದಲ್ಲಿ ಸಮನಾಗಿರುವವು. ಶ್ರಮ ಸಾಧ್ಯವಾದ ಕಾರ್ಯಗಳಲ್ಲಿ ನಿರೀಕ್ಷೆಗಿಂತ ಅಧಿಕವಾದ ಫಲಪ್ರಾಪ್ತಿಯಿದೆ. ಸಾಂಸಾರಿಕ ತಾಪತ್ರಯಗಳು ಬಹುಮಟ್ಟಿಗೆ ದೂರವಾಗಲಿವೆ. ಆರ್ಥಿಕ ವ್ಯವಹಾರದಲ್ಲಿ ಕುಹಕರ ಬಲೆಗೆ ಸಿಲುಕಿ ಕಷ್ಟನಷ್ಟಗಳನ್ನು ಅನುಭವಿಸುವಿರಿ. ನಿನಾಕಾರಣ ವಿಜಾತಿಯವರೊಡನೆ ಕಲಹವಾದೀತು. ವಾರಾದಿಯ 5 ದಿನಗಳು ಸುಖವಿಜಯಲಾಭಕಾರಿಗಳಾಗಿವೆ.

ಸಿಂಹ:— ನಿಮ್ಮ ಪರಿಶ್ರಮಕ್ಕೆ ತಕ್ಕುದಾದ ಫಲವು ನಿಮಗೀವಾರದಲ್ಲಿ ಲಭಿಸಲಿದೆ ಶತ್ರುಜನರು ಪರಾಜಿತರಾಗುವರು. ನೀಚ ಜನರಿಂದ ಧನಲಾಭವಾಗಲಿದೆ ಆದರೆ ನಿಮ್ಮ ಆರೋಗ್ಯವು ಕಫದೋಷದಿಂದ ಕೆಡಲಿದೆ. ವ್ಯಾಪಾರಾದಿಗಳಲ್ಲಿ ಅನಿರೀಕ್ಷಿತ ನಷ್ಟವುಂಟಾಗುವದು. ಹೆಚ್ಚಿನ ಸಮಯವನ್ನು ಪರ್ಯಟನದಲ್ಲೇ ಕಳೆವಿರಿ. ಹಣದ ತಗಾದೆಯು ಯಾವಾಗಲೂ ತಪ್ಪಲಾರದು. ವಾರಾಂತ್ಯದ 4 ದಿನಗಳಲ್ಲಿ ಸ್ವಲ್ಪ ಸುಖನೆಮ್ಮದಿ ದೊರಕೀತು.

ಕನ್ಯಾ:— ಸುಂಗುರ-ಗಳೆರಬ್ಬರನ್ನುಳಿದು ಇತರ ಎಲ್ಲಾ ಗ್ರಹರೂ ನಿಮ್ಮ ಮೇಲೆ ವಿಮುಖರಾಗಿರುವುದರಿಂದ ಈ ವಾರವನ್ನು ಅತೀವ ಕಷ್ಟದಿಂದ ಕಳೆಯಬೇಕಾಗುವದು. ಸಾಂಸಾರಿಕ ತಾಪತ್ರಯಗಳು ದಿನೇ ದಿನೇ ಹೆಚ್ಚುವವು. ಅಪ್ರೇಷ್ಟರ ವಿಯೋಗ ವಾಗಲಿದೆ ಮನಸ್ಸು ಸದಾ ಚಂಚಲವಾಗಿದ್ದು ಯಾವ ಕಾರ್ಯವನ್ನೂ ಕೊನೆ ಗೊಂಡಿಸುವ ಧೈರ್ಯ ಸ್ಥೈರ್ಯಗಳು ನಿಮಗಿಲ್ಲದಾಗುವದು. ಆದರೂ ಗುರ್ವನುಗ್ರಹದಿಂದಾಗಿ ತಾ 1-2 ಹೆಚ್ಚಿನ ದೋಷಕಾರಿಯಾಗದು.

ತುಲಾ:— ನಿಮ್ಮ ಯಾವತ್ತೂ ಕಾರ್ಯಕಲಾಪಗಳು ನಿರ್ವಿಘ್ನದಿಂದ ಕೊನೆಗೊಳ್ಳುವವು. ದಿನದ ಖರ್ಚಿಗೆ ತಕ್ಕುದಾದ ಆಯವೂ ನಿಮಗಿದೆ ಶನಿ ಕ್ಷೇತ್ರರ ಬೆಂಬಲವೂ ಸಾಕಷ್ಟು ದೊರಕೀತು. ಆದರೆ ಗುರುಹಿರಿಯರು ನಿಮ್ಮ ಮೇಲೆ ಸದಾ ವಕ್ರರಾಗಿರುವರು. ಅಕಸ್ಮಾತ್ತಾಗಿ ಪ್ರಾಪ್ತವಾಗತಕ್ಕ ವಿಪತ್ಪರಂಪರೆಗಳು ನಿಮ್ಮನ್ನು ಇತಿಕರ್ತವ್ಯತಾ ಮೂಢರನ್ನಾಗಿ ಮಾಡಲಿವೆ. ಪ್ರಯಾಣಕ್ಕೀಕಾಲವು ಚೆನ್ನಾಗಿರದು. ವಾರಾದಿಯ 3 ದಿನಗಳು ಸುಖನೆಮ್ಮದಿಕಾರಿಗಳಾಗಿವೆ.

ವೃಶ್ಚಿಕ:— ನಿಮ್ಮ ಅಭೀಷ್ಟದಂತೆ ಕಾರ್ಯವು ನೆರವೇರುವದು. ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆವಿರಿ ಆರ್ಥಿಕ ವಿಭಾಗದಲ್ಲೂ ನಿಶ್ಚಿಂತರಾಗುವಿರಿ. ಆದರೆ ಗೃಹಕೃತ್ಯದಲ್ಲಿನ ಅವ್ಯವಸ್ಥೆಯಿಂದಾಗಿ ನಿಮಗೆ ಸುಖವಿಲ್ಲದಂತಾಗುವುದು. ಪಿತ್ತಪ್ರಕೋಪದಿಂದಾಗಿ ಆರೋಗ್ಯವೂ ಕೆಡಲಿದೆ. ಮನೆಯ ಜನರಲ್ಲಿ ನಿಷ್ಕಲಹ ತಪ್ಪದು. ವಾರಾದಿಯ 5 ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಿಸವು.

ಧನು:— ಸುದಿನಗಳು ಸನ್ನಿಹಿತವಾಗುತ್ತಿವೆ. ನಿಮ್ಮ ತಾಪತ್ರಯಗಳು ದಿನದಿಂದ ದಿನಕ್ಕೆ ಮಾಯವಾಗುತ್ತಲಿರುವವು. ಮಹಾತ್ಮರ ಸ್ನೇಹ ಶನಿ ಕ್ಷೇತ್ರರ ಬೆಂಬಲ ಬಂಧುಗಳ ಸಹಕಾರ ಇವುಗಳಿಂದಾಗಿ ನೀವು ನಿಮ್ಮ ಸಂಕಲ್ಪಗಳನ್ನು ಕಾರ್ಯರೂಪದಲ್ಲಿ ಕಾಣುವಿರಿ. ಜನತೆಯ ಆದರಾನುಗ್ರಹಗಳನ್ನು ಪಡೆದ ನಿಮಗೆ ನಷ್ಟವಾದ ದ್ರವ್ಯ ಪುನಃ ಲಭಿಸುವದು ಹಲವಾರು ವಿಧಾನದಿಂದ ಸಂಪತ್ತು ವೃದ್ಧಿ ಹೊಂದಲಿದೆ. ವಾರಾಂತ್ಯದ 4 ದಿನಗಳಲ್ಲಿ ಇಷ್ಟಾರ್ಥಗಳು ನಿರ್ವಿಘ್ನದಿಂದ ನೆರವೇರುವವು.

ಮಕರ:— ಅಲಸ್ಯದ ನಿಮಿತ್ತದಿಂದಾಗಿ ಯಾವೊಂದು ಕಾರ್ಯವನ್ನೂ ಮನಸಿಟ್ಟು ಮಾಡಲಾರಿರಿ. ಮಿತ್ರಜನರೆನಿಸುವ ಸಾಕಷ್ಟು ದೊರೆಯರೂ ಗುರುಹಿರಿಯರು ಬಂಧುಗಳು ನಿಮ್ಮಿಂದ ದೂರವಾಗುವರು. ಶತ್ರುಜನರಿಂದ ತುಂಬಾ ಪೀಡೆಯುಂಟಾಗುವದು. ಹಣದ ಅಡಚಣೆಯು ಮುಂಚಿನಷ್ಟು ಇರಲಾರದು. ಶ್ರಮಜೀವಿಗಳಿಗೂ ನೌಕರಿವರ್ಗದವರಿಗೂ ದಿನ ಯಾಪನೆಯು ಕಷ್ಟಸಾಧ್ಯವಾಗುವದು ತಾ 1-2 ಇತರ ದಿನಗಳಿಗಿಂತ ಉತ್ತಮವಿದ್ದೀತು.

ಕುಂಭ:— ನಿಮ್ಮ ಯಾವತ್ತೂ ಕಾರ್ಯಗಳೂ ಸಫಲಗಳಾಗಲಿವೆ. ಪ್ರಯತ್ನಕ್ಕೆ ತಕ್ಕುದಾದ ಫಲವು ಲಭಿಸುವುದು. ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆವಿರಿ. ಕೋರ್ಟು ಕಚೇರಿಗಳ ಕಾರ್ಯಗಳಲ್ಲಿ ಮುಂದೊತ್ತಬೇಡಿರಿ. ಕಾಲವು ಕೊಂಚ ಪ್ರತಿಕೂಲವಿದೆ. ಆ ಭಾಗದಲ್ಲಿ ನಿಮ್ಮ ಮನಶ್ಚಾಂಚಲ್ಯ ದೆಸೆಯಿಂದಾಗಿ ಮಿತ್ರಜನರಲ್ಲೂ ಅವಿಶ್ವಾಸವುಂಟಾದೀತು. ವಾರಾದಿಯ 3 ದಿನಗಳಲ್ಲಿ ಧನಲಾಭ ಕಾರ್ಯವಿಜಯ ಸುಖಗಳು ಪ್ರಾಪ್ತವಾಗುವವು.

ಮೀನ:— ವಿಪತ್ಪರಂಪರೆಗಳು ಸಮುದ್ರ ದಲೆಗಳಂತೆ ಮೇಲಿಂದಮೇಲೆ ಬರಲಿವೆ ನಿಮ್ಮ ಪ್ರಯತ್ನಗಳು ನೀರಿನಲ್ಲಿ ಮಾಡಿದಹೋಮದಂತೆ ವಿಫಲಗಳಾಗುವವು. ಆರ್ಥಿಕದುರವಸ್ಥೆ ದೇಹಾಲಸ್ಯ ಅಪ್ರೇಷ್ಟರವಿರಹ ಕಾರ್ಯಹಾನಿಗಳಿಂದಾಗಿ ಸತತ ಚಿಂತಾಕುಲರಾದ ನಿಮಗೆ ತಾ. 30-31 ಈ ದಿನಗಳಲ್ಲಿ ಬಾಲ್ಯಮಿತ್ರರ ಸಹಕಾರವು ದೊರೆತು ಸ್ವಲ್ಪಮಟ್ಟಿಗೆ ಸುಖನೆಮ್ಮದಿಗಳನ್ನು ಕೊಡಲಿದೆ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ. ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಡಿಸ್ಪೆನ್ಸರಿ ಮತ್ತು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತೆ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇನ್ನೇನು ಬೇಕು ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI S. Kanara.

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯ ಪರ್ವತದಿಂದ ತೆಗೆಯಲ್ಪಡುವಂಥ ಅಪೂರ್ವ ವಸ್ತು, ಔಷಧಿಗಳ ರಾಜ; ಶಿಲಾಜಿತ್ತನ್ನು ಮೂಲಿಕೆಗಳೊಡನೆ ಸೇರಿಸಿ ಲೇಹ್ಯ ಮಾಡಿದೆ. ಇದು ಶೀತ, ಉಷ್ಣ, ಮಳೆ ಸರ್ವಕಾಲದಲ್ಲೂ ಒಂದೇ ತೆರನಾದ ತನ್ನ ಶಕ್ತಿಯನ್ನು ತೋರಿಸುತ್ತದೆ, ಇದರ ಸೇವನೆಯಿಂದ ದೇಹ ದಾರ್ಢ್ಯವೂ, ಶಕ್ತಿಯೂ ಉಂಟಾಗುತ್ತದೆ. ಮುಖ್ಯವಾಗಿ ಹೊಟ್ಟೆನೋವು

ಅನ್ನ ಸೇರದಿರುವಿಕೆ ಇವೇ ಮೊದಲಾದ ರೋಗಗಳಿಗೆ ಒಂದೆರಡು ದಿನಗಳಲ್ಲಿಯೇ ಗುಣಕೊಡತಕ್ಕ ಔಷಧವಿದು. ಕೆಮ್ಮು, ಕ್ಷಯ, ಮೂಲ, ಒಳಮೂಲ, ರಕ್ತ ಮೂಲ, ಬಹುಮೂತ್ರ, ಹೊಟ್ಟೆಯಲ್ಲಿ ಗಡ್ಡೆ ಇರುವಿಕೆ ಮತ್ತು ವಾಯುವಿನಿಂದ ಉಂಟಾಗತಕ್ಕ ಸರ್ವ ವ್ಯಾಧಿಗಳಿಗೂ ದಿವ್ಯೌಷಧ. ವಿದ್ಯಾರ್ಥಿಗಳು ಸೇವಿಸುವುದರಿಂದ ಜ್ಞಾಪಕಶಕ್ತಿಯೂ ಮತ್ತು ಚಟುವಟಿಕೆಯೂ ಹೆಚ್ಚುತ್ತೆ. ವೃದ್ಧರು ಸೇವಿಸುವುದರಿಂದ ಶಕ್ತಿಯನ್ನು ಹೆಚ್ಚಿಸಿ, ದಾರ್ಢ್ಯವನ್ನುಂಟುಮಾಡುತ್ತೆ.

ಹೆಂಗಸರಿಗೆ— ಅಕಾಲ ಬಹಿಷ್ಠೆ, ಕೈಕಾಲು ಹಿಡಿತ, ಕೀಲುವಾಯು, ಪಕ್ಕಶೂಲೆ ಮತ್ತು ಉಷ್ಣದಿಂದಾಗುವ ಇತರ ರೋಗಗಳಿಗೆ ದಿವ್ಯೌಷಧ. ದುರ್ಬಲರಾಗಿ ಕೇವಲ ಕೃಶರಾಗಿರುವ ಶಿಶುಗಳಿಗೆ ಈ ಔಷಧವನ್ನು ಪ್ರತಿ ಬೆಳಗ್ಗೆ, ಸಂಜೆ ಕೊಟ್ಟರೆ ಸ್ವಲ್ಪ ಕಾಲದಲ್ಲಿಯೇ ದೃಢಾಂಗರಾಗುವರು. ಪಣ ಮುಂಗಡ.

೪೮ ದಿನದ ಲೇಹ್ಯಕ್ಕೆ ರೂ. ೫-೪-೦, ೨೪ ದಿನದ ಲೇಹ್ಯಕ್ಕೆ ರೂ. ೩-೪-೦ (ಪೋಸ್ಟೇಜು ಮಾಫಿ)

ನೀಲಿಗಿರಿ ಡಿಪ್ಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ-

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋದಿನಲ್ಲಿ ಕೇಳಿರಿ

ಸಾಂಭಾಷಣೆ ಇಂಗ್ಲಿಷ್

ಅತಿ ಸುಲಭದಲ್ಲಿ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿಸಲ್ಪಟ್ಟ

ಅತಿ ಉಪಯುಕ್ತ ಪುಸ್ತಕ

ಬೆಲೆ ರೂ- 1-8-0, ವಿ- ಪಿ ದ್ವಾರ ರೂ- 2-0-0

ವಿಳಾಸ—

ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published by K. H. Shetty at the Navayuga Press, Udipi, S. India.

Regd No. M. 36'8

LICENCE No. 31
Licensed to Post without Prepayment

ಸ್ಥಾಪನೆ 1921 ಸ್ಥಾಪನೆ
31ನೆಯ ವರ್ಷ

3—4—1952

Found... Sri A. B. Shetty
Minister for Agriculture & Veterinary

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಕೃಷಿಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೩೦

NAVAYUGA WEEKLY Post Box No. 22 UDIPI.

Vol. 31
No. 30

ಪುನರ್ಘಟನೆಯಾಗಲಿ!

> "ನೂರು ಆದರ್ಶಗಳನ್ನು ಬರೆದಿಡುವುದಕ್ಕಿಂತ ಒಂದನ್ನಾದರೂ ಅನುಸರಿಸುವುದು ಲೇಸು"

"ಉದ್ದಿಮೆದಾರರು ತಮ್ಮ ಸರ್ವ ಚಟುವಟಿಕೆಗಳಲ್ಲಿಯೂ ಭಾರತದ 36 ಕೋಟಿ ಜನತೆಯ ಹಿತಸಾಧಿಸುವ ಉದ್ದೇಶವನ್ನಿಟ್ಟುಕೊಳ್ಳಬೇಕು"

ಪಂ| ನೆಹರು.

ಸಾರ್ವತ್ರಿಕ ಚುನಾವಣೆಯ ನಂತರ ಕಲ್ಕತ್ತೆಯಲ್ಲಿ ಕೂಡಿದ ಅ. ಭಾ. ಕಾಂಗ್ರೆಸ್ ಅಧಿವೇಶನಕ್ಕೆ ನೂತನ ಶಕ್ತಿ ಪ್ರಾಪ್ತವಾಗಿದೆ. 30 ಸಾವಿರ ಪ್ರೇಕ್ಷಕರಿಂದ ಅತ್ಯಂತ ವೈಭವಪೂರ್ಣವಾದ ಈ ಅಧಿವೇಶನವು ೨೨ನೇ ದಿನಾಂಕ 3 ತಾಸಿಗೆ ಸರಿಯಾಗಿ ಆರಂಭವಾಯಿತು. ಕಾಂಗ್ರೆಸ್ ಅಧ್ಯಕ್ಷ ಶ್ರೀ. ನೆಹ್ರೂರವರ ಭಾಷಣವನ್ನು ಕೇಳಲು ಜನಸಮೂಹ ನಭಸಬಂದ ಮುನ್ನುಗ್ಗಿದ್ದರ ಫಲವಾಗಿ ಅಲ್ಪಸ್ವಲ್ಪ ಗಾಯವಾಗಿದೆಂದು ತಿಳಿಯುತ್ತದೆ. 30 ಸಹಸ್ರಕ್ಕೂ ಮಿಕ್ಕಿದ ಪ್ರೇಕ್ಷಕವೃಂದವನ್ನು ಕುರಿತು ಶ್ರೀ ನೆಹ್ರೂರವರು ಹೀಗೆ ಹೇಳಿದರು:

"ಭಾರತವು ನಾಲ್ಕೈದು ವರುಷಗಳಿಂದ ಸ್ವತಂತ್ರವಾಗಿದೆ. ತತ್ಪರಿಣಾಮವಾಗಿ ಕಾಂಗ್ರೆಸಿನ ಮೇಲೆ ಅಪಾರ ಹೊಣೆ ಬಿದ್ದಿರುವದು. ನಾವು ಸ್ವಾತಂತ್ರ್ಯಕ್ಕಾಗಿ ಪರದೇಶಿ ಸರಕಾರದೊಡನೆ ಹೋರಾಡಬೇಕಾಯಿತು. ಈಗ ಆಂತರಿಕ ಅಡಚಣೆಗಳನ್ನು ಎದುರಿಸಬೇಕಾಗಿರುತ್ತದೆ. ಅದಕ್ಕೆ ನಾವು ಕಾರ್ಯ ಮಾಡಬೇಕು. ಮೊನ್ನೆ ಮೊನ್ನೆ ಜರುಗಿದ ಚುನಾವಣೆಗಳು ನಮ್ಮ ದೌರ್ಬಲ್ಯ ಹಾಗೂ ಶಕ್ತಿಯನ್ನು ತೋರಿಸಿ ಕೊಟ್ಟಿರುತ್ತವೆ. ಈಗ ನಾವು ಪೂರ್ಣ ವಿಚಾರ ಮಾಡಿ ಮುಂದೆ ಸಾಗದಿದ್ದರೆ ಹಾದಿ ತಪ್ಪುವ ಸಂಭವವಿರುವದು.

ಕೆಲವರು ಚುನಾವಣೆಗಳಲ್ಲಿ ಸೋತುದದಕ್ಕೆ ಚಿಂತಾತುರರಾಗಿ ಪರರನ್ನು ದೂಷಿಸುತ್ತಿರುವರು. ವಿಜಯಿಗಳಾದವರು ಆನಂದದ ಉನ್ಮಾದದಲ್ಲಿ ತಮ್ಮ ದೌರ್ಬಲ್ಯವನ್ನೇ ಮರೆಯುತ್ತಿದ್ದಾರೆ. ನಾವು ವಿಜಯದ ಬಗ್ಗೆ ಹೆಮ್ಮೆಪಟ್ಟರೂ ದೋಷವನ್ನು ತಿದ್ದಿಕೊಳ್ಳಲು ಮರೆಯಬಾರದು.

ಚುನಾವಣೆಯಲ್ಲಿ ನಮಗೆ ಒಂದು ಅದ್ಭುತ ಜಯ ಸಿಕ್ಕಿರುವದು. ಜಾತೀಯತೆಯ ವಿರುದ್ಧ ದೊರೆತ ವಿಜಯವೇ ಅದಾಗಿರುತ್ತದೆ. ಜಾತೀಯತೆಯು ಹೆಚ್ಚಾಗಿ ಅಡಗಿದ್ದರೂ ಒಳ ಜಾತಿ ವಾದವು ತಲೆ ಎತ್ತಿರುತ್ತದೆ. ಇದರಿಂದಲೂ ನಮ್ಮ ರಾಜ್ಯದ ಅಡಿಗಲ್ಲು ಸರಿಯಬಹುದು.

ಚುನಾವಣೆಗಾಗಿ ನಾವು ನಾಲ್ಕು ಸಾವಿರ ಹುರಿಯಾಳುಗಳನ್ನು ಆರಿಸಬೇಕಾಯಿತು. ಕಾಂಗ್ರೆಸ ಕಾರ್ಯಕರ್ತರಲ್ಲಿ ಚುನಾವಣೆಗೆ ನಿಲ್ಲುವ ರೋಗ ಹಬ್ಬಿದ್ದು ನೋಡಿ ನನಗೆ ಆಶ್ಚರ್ಯವಾಯಿತು. ಚುನಾವಣೆಯಲ್ಲಿ ಆರಿಸಿ ಬಂದವರ ಜೀವನ ಸಾರ್ಥಕವಾಯಿತೆಂದೂ ಉಳಿದವರ ಜೀವನ ವ್ಯರ್ಥವಾಯಿತೆಂದೂ ತಿಳಿಯಬಾರದು. ಚುನಾವಣೆಗೆ ನಿಲ್ಲಲು ಕೆಲವರು ಅಯೋಗ್ಯರನ್ನು ಕೈತಪ್ಪಿ ಆರಿಸಿರಬಹುದು. ಅಂಥ ಕೆಲವರು ಚುನಾಯಿತರಾಗಿರುತ್ತಾರೆ.

ಒಕ್ಕಲಿಗರು ನಮ್ಮ ನಾಡಿನ ಬೆನ್ನೆಲುಬು ಆದುದರಿಂದ ನಮ್ಮ ನಾಡು ಪ್ರಗತಿ ಹೊಂದಬೇಕಾದರೆ ಒಕ್ಕಲಿಗರ ಆರ್ಥಿಕ ಪರಿಸ್ಥಿತಿಯ ಸುಧಾರಣೆ ಮೊದಲು ಅವಶ್ಯ. ಇದಕ್ಕಾಗಿ ನಾವು ಕೆಲವು ಪ್ರಾಂತಗಳಲ್ಲಿ ರೂಢಿಯಲ್ಲಿದ್ದ ಜಮೀನದಾರೀ—ಜಹಗೀರದಾರಿ ಪದ್ಧತಿಗಳನ್ನು ನಿರ್ಮೂಲ ಮಾಡಿರುತ್ತೇವೆ. ಇನ್ನು ಕೆಲವು ಪ್ರಾಂತ್ಯಗಳಲ್ಲಿ ನ್ಯಾಯಾಲಯದ ನಿರ್ಣಯದ ಮೂಲಕ ಈ ಸುಧಾರಣೆ ತಡೆಹಿಡಿಯಲ್ಪಟ್ಟಿರುವದು. ಜಮೀನದಾರಿ ನಿರ್ಮೂಲನ ಪ್ರಗತಿಯ ಮಾರ್ಗದಲ್ಲಿರುವ ಕಂಟಕವನ್ನು ಕಿತ್ತು ಹಾಕಿದಂತೆ ಮಾತ್ರ. ನಿಜವಾದ ಪ್ರಗತಿಯಾಗಬೇಕಾದರೆ ಉತ್ಪಾದನೆ ಹೆಚ್ಚಬೇಕು.

ಕಾಂಗ್ರೆಸ್ಸಿನ ಹೊರತು ಇನ್ನೊಂದು ಪಕ್ಷವು ರಾಷ್ಟ್ರದ ಆಡಳಿತ ಹಾಗೂ ಸಾಧನೆಯ ಹೊಣೆ ಹೊರಬಲ್ಲದೆಂದು ನನಗನ್ನಿಸುವುದಿಲ್ಲ. ಮದ್ರಾಸ, ಬಂಗಾಲ ರಾಜ್ಯಗಳಲ್ಲಿ ಕೆಲವು ಪಕ್ಷಗಳು ವಿಧವಿಧದ ಘೋಷಣೆ ಮಾಡುತ್ತವೆ- ಆದರೆ ರಾಜ್ಯ ನಡೆಸುವ ಶಕ್ತಿ ಅವುಗಳಿಗಿರುವುದಿಲ್ಲ. ಜನರು ಕಾಂಗ್ರೆಸ್ಸಿಗೆ ಬೆಂಬಲ ಕೊಟ್ಟಿದ್ದಾರೆ. ರಾಷ್ಟ್ರದ ಆಡಳಿತ ನಿರ್ವಹಿಸಬೇಕೆಂದು ಕಾಂಗ್ರೆಸು ನನಗೆ ಆದೇಶವಿತ್ತಿರುವುದು. ಅದನ್ನು ನಾನು ತಪ್ಪಿಸಿಕೊಳ್ಳಲಾರೆ. ನಾನು ನಿಮಗೆ ಬೇಡವಾಗಿದ್ದರೆ ಪ್ರಧಾನ ಮಂತ್ರಿ ಪದವಿಗೆ ರಾಜೀನಾಮೆ ಕೊಡುವೆ.

ಕಾಂಗ್ರೆಸು ತನ್ನ ಮೇಲಿನ ಹೊಣೆ ನಿರ್ವಹಿಸುವಷ್ಟು ಸಮರ್ಥ ಸಂಸ್ಥೆಯಾಗಬೇಕಾದರೆ ಅದರಲ್ಲಿ ಹೊಸ ರಕ್ತದ ಚಲನೆಯಾಗಬೇಕು. ಇದಕ್ಕೆ ಕಾಂಗ್ರೆಸ್ಸಿನ ಆದರ್ಶದಲ್ಲಿ ವಿಶ್ವಾಸವಿದ್ದವರಿಗೆಲ್ಲ ನಮ್ಮ ಸಂಸ್ಥೆಯಲ್ಲಿ ಪ್ರವೇಶವಿರಬೇಕು. ಕಾಂಗ್ರೆಸ್ಸಿನಲ್ಲಿ ಎಲ್ಲರಿಗೂ ಪ್ರವೇಶಕೊಟ್ಟು ಅದನ್ನು ಧರ್ಮಶಾಲೆಯನ್ನಾಗಿ ಪರಿವರ್ತಿಸಲಾರೆವೆಂದು ಕೆಲವರು ಹೇಳುತ್ತಿರುವರು. ವಿವಿಧ ಅಭಿಪ್ರಾಯದವರಿಂದ ತುಂಬಿದ ಧರ್ಮಶಾಲೆಗಳಿಂದ ರಾಜಕೀಯ ನಡೆಸುವದು ಶಕ್ಯವಿಲ್ಲ. ಆದರೆ ಯೋಗ್ಯ ಜನರಿಗೆ ಪ್ರವೇಶ ಕೊಟ್ಟರೆ ಸಂಸ್ಥೆಗೆ ಹಿತವಾಗದಿರದು. ಕಾಂಗ್ರೆಸ್ಸಿನ ಮೂಲ ಧ್ಯೇಯದ ಬಗ್ಗೆ ಭಿನ್ನಾಭಿಪ್ರಾಯವಿದ್ದವರು ಪ್ರಾಂತ್ಯದ ಒಕ್ಕಟ್ಟಿನಲ್ಲಿ ವಿಶ್ವಾಸವಿಲ್ಲದವರು ಪರಕೀಯರ ಆದೇಶದಂತೆ ನಡೆದುಕೊಳ್ಳುವವರು—ಇವರಿಗೆ ನಿಶ್ಚಯವಾಗಿಯೂ ಪ್ರವೇಶ ಕೊಡತಕ್ಕದಲ್ಲ. ಕಾಂಗ್ರೆಸ್ಸಿನ ಧ್ಯೇಯದಲ್ಲಿ ವಿಶ್ವಾಸವಿದ್ದವರ ಕಾಂಗ್ರೆಸ್ಸಿನ ಕಾರ್ಯದಲ್ಲಿ ರಾಷ್ಟ್ರರಚನೆಯ ಮಹಾ ಕಾರ್ಯದಲ್ಲಿ ಸಹಕರಿಸಬೇಕೆಂದು ಬಿನ್ನವಿಸುತ್ತೇನೆ. ಅಂಥವರು ಅಲ್ಪ ಭಿನ್ನಾಭಿಪ್ರಾಯದಿಂದ ತಮ್ಮ ಉತ್ಸಾಹವನ್ನು ಹಾಳು ಮಾಡಿಕೊಳ್ಳಬಾರದು. ಅನೇಕ ದೇಶಗಳಲ್ಲಿ ಜನರು ತಮ್ಮ ಚಿಕ್ಕ ಪುಟ್ಟ ಭಿನ್ನಾಭಿಪ್ರಾಯಗಳನ್ನು ಮರೆತು ರಾಷ್ಟ್ರಕಾರ್ಯದಲ್ಲಿ ಸಹಕರಿಸುತ್ತಾರೆ. ನಾವು ಇಲ್ಲಿ ಹಾಗೆ ಮಾಡದಿದ್ದರೆ ಪ್ರಗತಿಪರ ಜಗತ್ತಿನೊಡನೆ ಹೇಗೆ ಹೆಜ್ಜೆ ಹಾಕಬಲ್ಲೆವು?

ಅಧಿವೇಶನದ ಮುಂದೆ ಬಂದಿರುವ ಮಹತ್ವಪೂರ್ಣ ಗೊತ್ತುವಳಿಗಳ ಸಾರಾಂಶ:

(1) ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಮೇಲೆ ವಿಶ್ವಾಸವನ್ನು ವ್ಯಕ್ತಪಡಿಸಿ—ಮಹತ್ವದ ಹೊಣೆಯನ್ನು ಹೊರಿಸಿರುವುದರಿಂದ ಕಾಂಗ್ರೆಸ್ ಅದಕ್ಕೆ ತನ್ನ ವಿಶ್ವಾಸವನ್ನು ಪಡಿಸಿತು. ಕಾಂಗ್ರೆಸ ತನ್ನ ಪಾಲಿನ ಈ ಹೊಣೆಗಾರಿಕೆಯನ್ನು

[4ನೇ ಪುಟ ನೋಡಿರಿ]

> "ಸಣ್ಣ ಮನೆಯಲ್ಲಿದ್ದರೇನು? ದೊಡ್ಡ ಮನವಿದ್ದರೆ ಅವನೇ ದೊಡ್ಡವನು."

"ಹಳ್ಳಿಯಲ್ಲಿ ಒಬ್ಬ ಕಲಿತನೆಂದರೆ ಅವನು ನೆಟ್ಟನೆ ಸರಳ ಪಟ್ಟಣಕ್ಕೆ ಹೋಗಿಬಿಡುತ್ತಾನೆ. ಶಿಕ್ಷಣ ಪಡೆದವರು ಶ್ರಮದ ಕೆಲಸವನ್ನು ಮಾಡಬಾರದೆಂಬ ಭ್ರಮೆ ತೊಲಗಬೇಕು. ಹಳ್ಳಿಯ ಬುದ್ಧಿ, ಸಂಪತ್ತು ಹಳ್ಳಿಯಲ್ಲಿಯೇ ಉಳಿಯಬೇಕು ಒಕ್ಕಲತನ ಮಾಡುವವರ ಬುದ್ಧಿ ಬೆಳೆಯಬೇಕು.

—ಶ್ರೀ ಅಣ್ಣಾ ಸಾಹೇಬ ಸಹಸ್ರಬುದ್ಧೆ.

Our Pigmy Deposit Scheme

.... brings our bank to your door. You may save as small a sum as annas two. Our collector will call on you every day to receive it.

At the rate of annas two per day you save Rs. 560 in 7 years because we allow interest at 3⅛% per annum. At the rate of Re. 1/- per day your Savings are Rs. 2,800/- in 7 years. At the rate of Rs. 10/- it is Rs 28,000/-. Come in to-day and join the band of **Prudent Prosperous Pigmy People**.

The Canara Industrial & Banking Syndicate Ltd.

ESTD: 1925. H. O: UDIPI

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

ಇದರ ಮಹಾ ಸಭೆಯಲ್ಲಿ ತಾರೀಕು 23-2-1952ರಂದು ಬೇಂಕಿನ ಚೇರ್‌ಮೇನ್‌ರಾದ ಡಾ। ಟಿ. ಮಾಧವ ಪೈ, ಎಮ್. ಬಿ., ಬಿ. ಎಸ್., ಇವರು ಮಾಡಿದ ಭಾಷಣ.

ಭಾರತದಲ್ಲಿ ನಮ್ಮ ಸುತ್ತ ಮುತ್ತ ವೇಗವಾಗಿ ರೂಪಿತವಾಗುತ್ತಿರುವ ಆರ್ಥಿಕ ಮತ್ತು ರಾಜಕೀಯ ಘಟನೆಗಳನ್ನು ಪರಿಶೀಲಿಸಬೇಕಾದ ಸಮಯ ನಮಗೀಗ ಬಂದೊದಗಿದೆ. ಪ್ರೌಢ ಮತದಾನ ಪದ್ಧತಿಯ ಮೇರೆಗೆ ಸುಮಾರು 18 ಕೋಟಿ ಜನರಿಂದೊಡಗೂಡಿದ ಮತಕ್ಷೇತ್ರದ ಮೂಲಕ ತಮ್ಮ ಬಯಕೆಯ ಸರಕಾರದ ಆಯ್ಕೆಗಾಗಿ ಭಾರತದ ಹೆಂಗಸರು, ಗಂಡಸರು ಭಾಗವಹಿಸಿ ನಡೆದ ಪ್ರಥಮ ಮಹಾ ಚುನಾವಣೆಯು ದೇಶದ ಪ್ರಜಾ ಪ್ರಭುತ್ವದ ಚರಿತ್ರೆಯಲ್ಲೇ ಒಂದು ಮಹತ್ವದ ಘಟನೆ ಎನ್ನಬೇಕು. ಇದರಲ್ಲಿ ಜನಸಾಮಾನ್ಯರು ತೋರಿಸಿದ ರಾಜಕೀಯ ಪರಿಪಕ್ವತೆ ಮತ್ತು ಉತ್ಸಾಹ ನಮ್ಮ ಎಳೆಯ ಪ್ರಜಾಪ್ರಭುತ್ವದ ಉತ್ತಮ ಭವಿಷ್ಯದ ಸಂಕೇತವಾಗಿರುವುದು. ಪ್ರಾಂತ್ಯಗಳಲ್ಲೂ, ಕೇಂದ್ರದಲ್ಲೂ ಇದೀಗ ಹೊಸ ಸರಕಾರ ರಚನೆಯಾಗುತ್ತಿರುವುದು. ದೇಶದಲ್ಲಿ ಜನಜೀವನದ ಪರಿಸ್ಥಿತಿಯನ್ನು ಸುಧಾರಿಸಬಲ್ಲ ಹಿಂದೆಂದೂ ನಡೆಯದ ರೀತಿಯಲ್ಲಿ ಜನಸಾಮಾನ್ಯರ ಪಾಡನ್ನು ಅಭಿವೃದ್ಧಿಗೊಳಿಸಬಲ್ಲ ಉತ್ತಮ ಸರಕಾರವನ್ನು ಜನರು ನಿರೀಕ್ಷಿಸುತ್ತಿರುವರು ಎಂಬುದು ಖಂಡಿತ. ಈ ನಿರೀಕ್ಷೆ ಆರಿಸಿ ಬಂದ ನಮ್ಮ ಪ್ರಜಾ ಪ್ರತಿನಿಧಿಗಳ ಮೇಲೆ ಬಲವಾದ ಹೊರೆಯನ್ನು ಹೇರಿರುವುದು. ಮತದಾನ ಪೆಟ್ಟಿಗೆಯ ಮೂಲಕ ಸರಕಾರದ ಆಯ್ಕೆಯಲ್ಲಿ ಜನಸಾಮಾನ್ಯರಿಗೆ ಶ್ರದ್ಧೆ ಉಳಿಯಬೇಕಾದರೆ, ಅವರ ಪ್ರಯೋಜನ ಅವರಿಗೆ ಖಚಿತವಾಗಬೇಕು. ಆರಿಸಿ ಬಂದ ಪ್ರತಿನಿಧಿಗಳು ಜನರ ಹಿತಕ್ಕಾಗಿ ದುಡಿಯದಿರುವಲ್ಲಿ, ಜನರು ಪ್ರಜಾಪ್ರಭುತ್ವದ ರೀತಿಯಲ್ಲಿ ವಿಶ್ವಾಸವಿಟ್ಟು ಇತರ ನಿಷ್ಫಲಕಾರೀ ಸಲ್ಲದ ಮಾರ್ಗಾವಲಂಬಿಗಳಾಗಬಹುದು. ಪ್ರಜಾ ಪ್ರಭುತ್ವದ ಘಟನೆಯನ್ನು ಸ್ವೀಕಾರ ಮಾಡಿರುವ ನಮ್ಮಂತಹ ದೇಶಗಳಲ್ಲಿ ಇಂತಹ ಆಪತ್ತು ಬರಬಹುದು, ಬಂದರೆ ಪರಿಸ್ಥಿತಿ ಕಠಿಣವಾಗುವುದು. ಆದುದರಿಂದ ನಮ್ಮ ಹೊಸ ಸರಕಾರಗಳು ತಮ್ಮ ಕ[illegible]ಗಳನ್ನು ಹೇಗೆ ನಿರ್ವಹಿಸುವುವು ಎಂಬುದನ್ನು ಮ[illegible]ನ ಐದು ವರುಷಗಳು ಉತ್ತರಿಸಬೇಕು.

ಆರ್ಥಿಕ ಸ್ವಾವಲಂಬನದ ಸಮರದಲ್ಲಿ ನಾವು ಕಾದಾಡಿ ಗೆಲ್ಲಬೇಕು. ಸಾಕಷ್ಟು ಆಹಾರ ಸಂಗ್ರಹ ಕಾರ್ಯದಲ್ಲಿ ನಾವು ಬಹುದೂರ ಇರುವೆವು. ಆದರೆ ಆಹಾರದ ಬಿಕ್ಕಟ್ಟೆಂಬುದು ಪ್ರತಿಯೊಬ್ಬನೂ ಇದು ತನ್ನದೇ ಒಂದು ಸಮಸ್ಯೆ ಎಂದು ತಿಳಿದು ಅದನ್ನು ಬಗೆಹರಿಸಲು ಪ್ರಯತ್ನಿಸುವಂತಹ ವಿಷಯ. ಉತ್ಪತ್ತಿಗಿಂತ ಅಧಿಕವಾಗಿ ಜನಸಂಖ್ಯೆ ಏರುತ್ತಿರುವುದರಿಂದ, ಉತ್ಪಾದನೆಯ ಸಂಗತಿಯಲ್ಲಿ ಸುಧಾರಣೆಯಾಗಬೇಕು. ಈಗ ಬೆಳೆಯುವುದಕ್ಕಿಂತ ದುಪ್ಪಟ್ಟಾಗಿ ಪ್ರತಿಯೊಂದು ಎಕ್ರೆಯಲ್ಲೂ ಬೆಳೆ ಬೆಳೆಯಬೇಕು. ಜನತೆಯ ಹಾರ್ದಿಕ ಹಾಗೂ ದೃಢ ಪ್ರಯತ್ನವಿಲ್ಲದೆ ಯಾವ ಸರಕಾರವೂ ಇದನ್ನು ಸಾಧಿಸುವಂತಿಲ್ಲ. ಇಂತಹ ದೇಶಸೇವೆಯಲ್ಲಿ ನಾವು ನೇವಾಗದಿರುವಲ್ಲಿ, ನಮ್ಮ ರಾಜಕೀಯ ಸ್ವಾತಂತ್ರ್ಯವು ಅರ್ಥಶೂನ್ಯವಾಗುವುದು. ಆದುದರಿಂದ ಆಹಾರದ ಸಂಗ್ರಾಮದಲ್ಲಿ ಜನತೆಯ ಸಹಕಾರವನ್ನು ಒದಗಿಸಿಕೊಳ್ಳುವುದರಲ್ಲಿ ಸರಕಾರ ಅತ್ಯಂತ ಭಾವನಾ ವಿಶೇಷತೆಯನ್ನು ತೋರಿಸಬೇಕು. ಉಚ್ಚ ಶ್ರೇಣಿಯವರೂ ಪಂಚವಾರ್ಷಿಕ ಯೋಜನೆಯನ್ನು ದೃಷ್ಟ ಹಾಗೂ ಸ್ಪಷ್ಟವಾಗಿದೆ ಎಂದು ಸ್ವಾಗತೀಕರಿಸಿದ್ದಾರೆ. ಸಿಂಖುದ ಪ್ರಜಾಪ್ರಭುತ್ವದಂತಿರದೆ, ಪ್ರಜಾಪ್ರಭುತ್ವದಲ್ಲಿ ಯಾವುದೇ ಒಂದು ಯೋಜನೆಯ ಜಯಪ್ರದವು ಜನತೆಯನ್ನು ಹೊಂದಿಕೊಂಡಿರುವುದು. ಪಂಚವಾರ್ಷಿಕ ಯೋಜನೆಯ ಪಟ್ಟಿನಂತೆ ಕಾರ್ಯಗತವಾದೊಡನೆ, ಆರ್ಥಿಕ ರಂಗದಲ್ಲಿ ನಾವು ವಿಶೇಷ ಮುನ್ನಡೆ ಇಟ್ಟಂತಾಗುವುದು ಎಂಬುದರಲ್ಲಿ ನನಗೆ ಅನುಮಾನವಿಲ್ಲ. ಆದುದರಿಂದ ಈ ಕಾರ್ಯದಲ್ಲಿ ಜನತೆಯ ಉಳಿತಾಯದ ಆಗರದಂತಿರುವ ಹಣಕಾಸಿನ ಸಂಸ್ಥೆಗಳಾದ ಬೇಂಕುಗಳು ಆಸ್ಥೆಯನ್ನು ವಹಿಸಬೇಕು.

ಕೊರಿಯಾ ಯುದ್ಧ ತೊಡಗಿಹುದರಿಂದ ಎರಡನೆಯ ಜಾಗತಿಕ ಮಹಾಯುದ್ಧದ ಬಳಿಕ ಇಂಡಿಯಾ ಮತ್ತು ಇತರ ದೇಶಗಳಲ್ಲಿ ಸ್ಥಿಮಿತಕ್ಕೆ ಬರಬೇಕಿದ್ದ ಬೆಲೆ-ಚನೆ ಹಾಗಾಗಲಿಲ್ಲವೆಂಬುದು ಸಾಮಾನ್ಯವಾಗಿ ತಿಳಿದ ವಿಷಯವೆ. ಬಯಲ ಮಾತು ಹೇಗಿದ್ದರೂ ಜಗತ್ತು ಯುದ್ಧದತ್ತ ಜಿಗುಪ್ಸೆಗೊಂಡಿಲ್ಲ. ಪ್ರಪಂಚದ ಯಾವ ಕಡೆಯಲ್ಲೂ ಯುದ್ಧ ಪ್ರಾರಂಭವಾಗಬಹುದೆಂಬ ಅರಿವನ್ನು ಇಟ್ಟುಕೊಂಡಿರುವುದು. ಕಳೆದ ಯುದ್ಧಾನಂತರ ಎಲ್ಲಾ ದೇಶಗಳ ಮುಂಗಡ ಪತ್ರಗಳಲ್ಲೂ ಭದ್ರತಾ ವಿನಿಯೋಗಕ್ಕಾಗಿ ಹೆಚ್ಚಿನ ಹಣ ಅಣಿಮಾಡಲ್ಪಟ್ಟಿವೆ. ಬೇರೆ ಬೇರೆ ದೇಶಗಳಲ್ಲಿ, ಮುಖ್ಯವಾಗಿ ಅಮೇರಿಕದಲ್ಲಿ ಕಚ್ಚಾ ಪದಾರ್ಥಗಳ ಶೇಖರಣೆಯ ಒಂದೇ ಒಂದು ಕಾರಣದಿಂದ ಇಂಡಿಯಾದಂತಹ ಮೂಲ ಉತ್ಪಾದಕ ದೇಶಗಳಲ್ಲಿ ಬೆಲೆಯ ಉಬ್ಬರ ಇನ್ನಷ್ಟು ಹೆಚ್ಚಿತು. ಹೀಗೆ ಬೆಲೆಗಳ ಸೂಚಿ ಏರುತ್ತಿದ್ದಂತೆ, ಅದನ್ನು ಹತೋಟಿಗೆ ತರುವ ಪ್ರಯತ್ನ ನಿಜವಾಗಿಯೂ ನಿಷ್ಫಲವಾಯಿತು. ಬೆಲೆಗಳ ಪ್ರವಾಹದಲ್ಲಿ ಸರಕಾರವೂ ತೇಲಾಡಿದುದಿದೆ. ಆದರೆ ಇತ್ತೀಚೆಗೆ ಕೆಲವು ದಿನಗಳಿಂದ ಪರದೇಶಗಳ ಕೇಳಿಕೆಗಳು ಕಡಿಮೆಯಾಗಲು, ಎಲ್ಲಾ ಸರಕುಗಳ ಬೆಲೆಯೂ ಮುಗ್ಗರಿಸಿ ಬೀಳುವಂತಾಯಿತು. ಸರಕಾರದ ಕಾರ್ಯಕ್ರಮಗಳಿಂದ ಆಗದ ಕೆಲಸ ಅನಿವಾರ್ಯ ಕಾರಣಗಳಿಂದಾಯಿತು. ಧಾರಣೆ ಯಾವಾಗಲೂ ಏರುತ್ತಲೇ ಹೋಗಲು ಸಾಧ್ಯವಿಲ್ಲ. ನಮ್ಮ ದೇಶದಿಂದ ರಫ್ತಾಗುತ್ತಿದ್ದ ಮೆಣಸಿನ ಕಾಳು, ಎಣ್ಣೆಯ ಕಾಳು ಮತ್ತು ನಾರಿನ ಕ್ರಯದ ಏರಿಕೆಯಲ್ಲಿ ಇಂಡಿಯಾಕ್ಕೆ ಪ್ರಯೋಜನವಿದ್ದರೂ ವಿದೇಶಗಳು ಈ ಪದಾರ್ಥಗಳ ಅಗ್ಗದ ಬದಲಿಯ ಶೋಧನೆಯಲ್ಲಿದ್ದುದರಿಂದ ಇವುಗಳ ಕಾಯಂ ವ್ಯಾಪಾರ ಕ್ಷೇತ್ರಕ್ಕೊಂದು ಬೇರೆಯಾದ ಅಪಾಯ ಬರುವಂತಿತ್ತು. ಅಂಗಡಿಯಿಂದ ತಪ್ಪಿಸಿಕೊಂಡ, ಅಧಿಕ 'ಬಿಸಿ' ದುಡ್ಡು, ಧಾರಣೆ ಏರುತ್ತಿದ್ದ ವ್ಯಾಪಾರ ಕ್ಷೇತ್ರದ ಆಕರ್ಷಣೆಯಿಂದ ಸರಕುಗಳಲ್ಲಿ ಸಿಕ್ಕಿಕೊಂಡಿತ್ತು. ಇದರಿಂದಲೇ ಸರಕುಗಳ ಮೇಲಿನ ದ್ಯೂತಾತ್ಮಕ ಚಟುವಟಿಕೆಗಳು ಹುಟ್ಟಲು ಮುಖ್ಯ ಕಾರಣವಾಯಿತು ಎಂದು ನಾನು ನೆನಸುತ್ತೇನೆ. ವ್ಯಾಪಾರಿಗಳೂ, ಹಣವಂತರೂ ತಮ್ಮ ಮುಖ್ಯ ವ್ಯವಹಾರದ ಸರಕಿನ ಮೇಲೆ ಮಾತ್ರವಲ್ಲದೆ ಇತರ ಕ್ಷೇತ್ರಗಳಲ್ಲೂ ಊಹಾತ್ಮಕ ಬೆಲೆಯನ್ನು ಒಡ್ಡಿದರು. ಹೀಗಾಗಿ ಯಾವುದಾದರೊಂದು ಸರಕಿನ ಬೆಲೆ ಸಿಡಿಯಿತೆಂದರೆ, ಈ ಸಿಡಿತದಿಂದ ಹುಟ್ಟಿದ ಹೆದರಿಕೆ ಇತರ ವಾಣಿಜ್ಯ ಕ್ಷೇತ್ರಗಳಿಗೂ ಹರಡುವಂತಾಯಿತು. ಕಳೆದ ವರುಷದ ಅಂತಿಮದಲ್ಲಿ ಬೇಂಕಿನ ಬಡ್ಡಿಯ ದರ ಹೆಚ್ಚಿದ ಒಂದೇ ಕಾರಣದಿಂದ ಧಾರಣೆ ಇಳಿದುದಲ್ಲ. ಏಕೆಂದರೆ ಇಂಡಿಯಾದ ಬೇಂಕುಗಳ ಸಾಲದ ಬಡ್ಡಿಯ ದರ ಬೇಂಕು ದರದೊಂದಿಗೆ ಸಂಬಂಧ ಇಟ್ಟುಕೊಂಡಿರುವುದು ಬಹಳ ಅಪೂರ್ವ. ಹಾಗೂ ಮೊದಲಾಗಿ ಬೇಂಕುಗಳು ತಾವಾಗಿಯೇ ಹಣದ ಅಡಚಣೆಯ ಧೋರಣೆಯನ್ನು ಕಲ್ಪಿಸಿಕೊಂಡದ್ದಲ್ಲ. ಬೆಲೆ ಇಳಿಮುಖವಾದೊಡನೆ ಕೆಲವು ಬೇಂಕುಗಳು ಸಾಲವನ್ನು ಹಿಂದೆ ಕೇಳತೊಡಗಿದಾಗ, ಇತರ ಬೇಂಕುಗಳಿಗೆ ಸಾಲದ ವ್ಯವಹಾರವನ್ನು ಮತ್ತೂ ಮತ್ತೂ ವಿಸ್ತರಿಸಲು ಸರ್ವ ಸಾಧಾರಣವಾಗಿ ಅಸಾಧ್ಯವಾಯಿತು. ಸಾಲಕೊಡುವ ಧೋರಣೆಯಲ್ಲಿ ಜಾಗ್ರತೆ ವಹಿಸಬೇಕಾಯಿತು. ಆದರೆ ಇಂದಿಗೆ ಕೊಟ್ಟ ಸಾಲಗಳ ಪರಿಮಾಣ ಏರಿಕೆಯ ಅಂತಸ್ತಿನಲ್ಲೇ ಇದೆ; ಭದ್ರತೆಯ ಉತ್ತಮ ಮಾದರಿಗಳನ್ನು ಪರಿಶೀಲಿಸಲು ಬೇಂಕುಗಳು ಸದಾ ಸಿದ್ಧವಿವೆ. ತಮ್ಮ ಸ್ವಂತ ಸುರಕ್ಷತೆಯನ್ನು ಬೇಂಕುಗಳು ಬಗೆದರೆ, ಆ ವಿಷಯದಲ್ಲಿ ತಪ್ಪು ಗ್ರಹಿಕೆಯನ್ನು ಇಟ್ಟುಕೊಳ್ಳಬಾರದು.

ಬೆಲೆಗಳ ಏರಿಕೆ ಅಥವಾ ಇಳಿತದ ಓಲಾಟ ವಿಪರೀತ ಮಟ್ಟದಲ್ಲಿ, ಅದರ ಹಿಂದೆ ಯಾವಾಗಲೂ ಆರ್ಥಿಕ ಸಂಭವ ಬಂದೇ ಬರುವುದು. ಆರ್ಥಿಕ ಸುಧಾರಣೆಗೆ ಸ್ಥಿರವಾದ ಧಾರಣೆ ಅಗತ್ಯ. ಇದಿಲ್ಲದೆ ಯಾವ ಯೋಜನೆಯೂ ಸಾಧಿತವಾಗುವಂತಿಲ್ಲ. ಈಗ ಬೆಲೆಯು ಇಳಿಯುತ್ತಿರುವುದರಿಂದ, ಯುದ್ಧಕಾಲದ ಅನೇಕ ನಿಯಂತ್ರಣಗಳನ್ನು ತೆಗೆದುಹಾಕುವುದು ಪ್ರಯೋಜನಕರ ಎಂದು ಸರಕಾರ ಪರಿಶೀಲಿಸಬೇಕು. ಧಾರಣೆ ಜಗ್ಗಿದುದನ್ನು ಜನರು ಸ್ವಾಗತೀಕರಿಸಿದ್ದಾರೆ. ಆದರೆ ಅದು ಇನ್ನೂ ಜಗ್ಗಬಹುದೆಂದು ನಾನು ನೆನಸುವುದಿಲ್ಲ. ಕೈಗಾರಿಕೆಯ ವಸ್ತುಗಳ ಕನಿಷ್ಠ ಬೆಲೆ ಕೂಲಿಗಾರರ ಸಂಬಳದ ದರದಿಂದ ನಿಷ್ಕರ್ಷೆಯಾಗುವುದು; ಸಂಬಳದ ದರ ಸ್ಥಾವರವಾಗಿದೆ. ಅಲ್ಲದೆ ಯುದ್ಧಕಾಲದಲ್ಲಿ ಮೇರೆ ಮೀರಿ ಕೆಲಸ ಮಾಡುತ್ತಿದ್ದ, ಶಾಂತಿ ಕಾಲದಲ್ಲಿ ಸವೆತವದ ಬದಲಿಯಾಗದ, ಉದ್ಯಮದಲ್ಲಿ ಹೊಸರೀತಿಯ ವಿದೇಶಗಳ ಇದಿರಲ್ಲಿ ಸ್ಪರ್ಧಿಸಲು ಅಶಕ್ತವಾದ, ಹೆಚ್ಚಿನ ತೆರಿಗೆಗಳಿಗೆ ತುತ್ತಾಗಿ ಕ್ಷೀಣವಾದ ಸಹಾಯನಿಧಿ, ಕ್ಷೇಮ ನಿಧಿಗಳುಳ್ಳ, ದೇಶ ವಿದೇಶ ವ್ಯಾಪಾರ ಪೋಷಣೆಯಲ್ಲಿ ಅಶ್ರದ್ಧೆ, ಅಜಾಗ್ರತೆ ವಹಿಸಿದ್ದ ನಮ್ಮ ಕೈಗಾರಿಕೆಗಳ ಮುಂದಿರುವ ದುರ್ದಿನಗಳ ನೆನಪು ನಮಗಾಗುತ್ತದೆ. ವಿಶೇಷ ಹಾನಿಯಾಗುವ ಮುಂಚೆ ಕೈಗಾರಿಕೆಗಳು ತಮ್ಮ ಈ ಸಮಸ್ಯೆಗಳ ಕಡೆಗೆ ಗಮನ ಕೊಡುವುದು ಒಳ್ಳೆಯದು. ಕೃಷಿಯ ಅಭಿವೃದ್ಧಿಯ ನಮ್ಮ ಚಿಂತನೆಯಲ್ಲಿ ನಾವು ಕೈಗಾರಿಕೆಗಳನ್ನು ಮರೆಯುವಂತಿಲ್ಲ. ದೇಶದಲ್ಲಿರುವ ಸಕಲ ಸಂಪತ್ತನ್ನೂ ಜಾಗರೂಕತೆಯಿಂದ ಸಂಚಯಿಸಬೇಕಾದ ಕಾಲ ಬಂದಿದೆ. ಆ ದೃಷ್ಟಿಯಲ್ಲಿ ಸರಕಾರದ ಖಜಾನೆಯ ಒಡಲಿಗೆ ಅಮಲಿನ ನ್ಯಾಯವಿರುದ್ಧ ವ್ಯಾಪಾರದ ಮೂಲಕ ಹಣ ಶೀಘ್ರ ಸೇರುವಂತೆ ಮಾಡಿದ, ಹಾಗೂ ಆಚರಣೆಯಲ್ಲಿ ಯಶಸ್ವಿಯಾಗದ, ಮಧ್ಯಪಾನ ನಿರೋಧದಂತಹ ಭಾವನಾತ್ಮಕ ಯೋಜನೆಗಳನ್ನು ಸರಕಾರ ಬಿಟ್ಟುಬಿಡಲು ಅಥವಾ ತಿದ್ದುಪಡಿ ಮಾಡಲು ಸಂದೇಹ ಮಾಡದು. ನೇಶನಲ್ ಪ್ಲಾನಿಂಗ್ ಕಮಿಶನ್‌ನವರು ಇಂತಹ ನಷ್ಟಗಳನ್ನು ಗಮನಿಸಿ, ಇಂತಹ ಯೋಜನೆಗಳಲ್ಲಿ ತಕ್ಕ ಬದಲಾವಣೆ ಹೊರಿಸಬೇಕೆಂದು ನಾನು ಆಶಿಸುತ್ತೇನೆ.

ಭರತ ಖಂಡವು ಮುಂದಿನ ಐದು ವರುಷಗಳಲ್ಲಿ ಅಭಿವೃದ್ಧಿಯ ಕಡೆಗೆ ಕಾಲಿಡಬೇಕು. ರಾಷ್ಟ್ರ ರಚನೆಯ ಅಥವಾ ಜನಜೀವನದ ಮಟ್ಟವನ್ನು ಸುಧಾರಿಸುವ ಸಂಪತ್ತಿನ ಪ್ರತಿಯೊಂದು ಅಂಶವೂ ಶ್ರಮ ವಹಿಸಬೇಕು. ಇದೇ ಹಿಂದಿನ ಸಿಂಹಾವಲೋಕನ-ಮುಂದಿನ ಪ್ರತೀಕ್ಷೆ.

ಸಿಂಡಿಕೇಟು ತನ್ನ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿದೆ. ವರದಿಯ ವರುಷದಲ್ಲಿ ಇದರ ತೆತ್ತ ಭಂಡವಾಳ ರೂ. 23,55,876 ರಿಂದ 24,37,642ಕ್ಕೂ, ಕ್ಷೇಮನಿಧಿ ರೂ. 1,00,000 ಪ್ರಮಾಣದಲ್ಲಿ ರೂಪಾಯಿ 10,00,000ಕ್ಕೂ ಏರಿರುತ್ತದೆ. ಗತವರುಷದ ಠೇವಣಾತಿಯಾದ ರೂ. 3,68,99,244ರಿಂದ ಈ ವರುಷ ರೂ 3,61,70,961ಕ್ಕೆ ಇಳಿಯಿತೆಂದು ಲೆಕ್ಕದಲ್ಲಿ ಕಂಡರೂ, ಗತವರುಷದ ಠೇವಣಾತಿಯ ಸಂಖ್ಯೆಯಲ್ಲಿ ಇತರ ಬೇಂಕುಗಳಿಂದ ಬಂದ ಠೇವಣಾತಿಯೂ ಕೂಡಿತ್ತು, ಈ ಸಲ ಅದು ಕೂಡಿಲ್ಲ. ವಾಸ್ತವಿಕವಾಗಿ ಸಾರ್ವಜನಿಕ ಠೇವಣಾತಿ ಸುಮಾರು 16 ಲಕ್ಷದಷ್ಟು ಹೆಚ್ಚಿದೆ. ವಸೂಲಿಗಾಗಿ ಬಂದ ಬಿಲ್ಲುಗಳ ಮೊತ್ತ ರೂ. 40,01,769 ಆಗಿತ್ತು. ನಗದಿ ಶಿಲ್ಕು ಅಥವಾ ಇತರ ಬೇಂಕುಗಳಲ್ಲಿ ಇಟ್ಟಿದ್ದ ಹಣ ರೂ. 77,18,144 ಆಗಿದ್ದಾಗ ವಜಾಯಿಸಿದ ಬಿಲ್ಲುಗಳ ಮೊತ್ತ ರೂ. 48,60,2[illegible]1, ಹೂಡಿದ ಬಂಡವಾಳ 1,28,68,656 ಹಾಗೂ ತೆತ್ತ ಸಾಲದ ಮೊತ್ತ ರೂ. 2,0[illegible],92,930 ಆಗಿತ್ತು. ಗತ ವರುಷಕ್ಕಿಂತ ಲಾಭ ಹೆಚ್ಚಿದ್ದರೂ, ಸರಕಾರದ ಸಾಲಪತ್ರಗಳ ಮೇಲಣ ನಷ್ಟವಾದ 2½ ಲಕ್ಷ ರೂಪಾಯಿಗಳನ್ನು ಪೂರೈಸಿದ್ದಲ್ಲದೆ, ಅನುಮಾನಕರ ಸಾಲಗಳನ್ನು ವಜಾಪಡಿಸಿದುದರಿಂದ, ಈ ವರುಷದ ನೆಟ್ ಮುನಾಫೆ ರೂ. 4,00,693 ಆಗುವಂತಾಯಿತು.

ಬೇಂಕಿನ ಸಂಘಟನೆಯು ಮುಂದೊತ್ತುತ್ತಿದೆ. ಹಣಕಾಸಿನ ವ್ಯವಹಾರದ ಹೆಚ್ಚುತ್ತಿರುವ ಬೇಡಿಕೆಗಳನ್ನು ಪೂರೈಸಲು ತುಂಬಾ ಪ್ರಯತ್ನ ಮಾಡುತ್ತಿದೆ. ಸಿಬ್ಬಂದಿಯ ಸೇವಾಶಕ್ತಿಯನ್ನು ವೃದ್ಧಿಗೊಳಿಸಲು ಅವರಿಗೆ ವಿಶೇಷ ತರದ ತರಬೇತಿಯನ್ನು ಕೊಡಲು ಆರಂಭಿಸಿಯದೆ. ಎಲ್ಲಾ ಶಾಖೆಗಳು ಉತ್ತಮ ತರದಲ್ಲಿ ಕೆಲಸ ಮಾಡುತ್ತಿವೆ. ಪಶ್ಚಿಮ ಕರಾವಳಿಯ ಶಾಖೆಗಳ ಸರಪಳಿಗೊಂದು ಉಪಯುಕ್ತ ಗೊಣಸಿನ ರೂಪದಲ್ಲಿ ಗೋಕರ್ಣದಲ್ಲಿ ಒಂದು ಹೊಸ ಶಾಖೆಯನ್ನು ತೆರೆಯಲಾಗಿದೆ. ಸೀಡೆಡ್ ಡಿಸ್ಟ್ರಿಕ್ಟ್‌ಗಳಲ್ಲಿ ಅತೀ ಹೆಚ್ಚಿನ ಶಾಖೆಗಳುಳ್ಳ ಈ ಪ್ರಾಂತ್ಯದ ಬೇಂಕು ನಮ್ಮದೊಂದೇ ಎಂಬುದು ನಿಮಗೆ ತಿಳಿದಿರಬಹುದು. ದುರಾದೃಷ್ಟವಶಾತ್ ಈ ಭಾಗದಲ್ಲಿ ಕಠಿಣ ತರದ ಕ್ಷಾಮ ತಲೆದೋರಿರುವುದು ಹೆಚ್ಚಿಗೆ ರಾಯಲಸೀಮ ಪ್ರಕೃತಿ ದೇವಿಯ ಕ್ರೋಧಾಗ್ನಿಗೆ ತುತ್ತಾಗುತ್ತಿರುವ ಪ್ರಾಂತ್ಯವನ್ನಬೇಕು. ಅಲ್ಲಿಯ ಜನರ ಕಷ್ಟ ಪರಿಹಾರಕ್ಕಾಗಿ ಪ್ರಾಂತೀಯ ಸರಕಾರ ಕೈಗೊಳ್ಳುವ ಯಾವುದೇ ಕಾರ್ಯಕ್ರಮವನ್ನು ನೀವು ಸ್ವಾಗತೀಕರಿಸುವಂತೆ, ಇಂತಹ ದುರಾದೃಷ್ಟ ಘಟನೆಗಳು ಇನ್ನು ಮುಂದೆ ಆಗದಂತೆ ನೋಡಿಕೊಳ್ಳಲು ಕೇಂದ್ರ ಸರಕಾರ ಕ್ಷಾಮ ನಿವಾರಣಾ ರೂಪದಲ್ಲಿ ಶಾಶ್ವತವಾದ ನೀರಾವರಿ ಯೋಜನೆಯನ್ನು ಕಾರ್ಯರೂಪದಲ್ಲಿ ಇಲ್ಲಿ ಒದಗಿಸುವ ಅಗತ್ಯವಿದೆ.

ಮಹನೀಯರೆ, ಕೊನೆಯದಾಗಿ ನಮ್ಮ ಜನರಲ್ ಮೇನೇಜರ್ ಶ್ರೀ ಟಿ ಎ ಪೈ ಮತ್ತು ಅವರ ಕೆಳಗಿನ ಇತರ ಹುದ್ದೇದಾರರು ಇತ್ತ ಸಾರ್ಥಕ ಸೇವೆಯನ್ನು ಮೆಚ್ಚಬೇಕು, ಪ್ರತಿಯೊಬ್ಬರೂ ಶ್ರೀ ಪೈಗಳ ಮೇಲೆ ಇಟ್ಟ ಪ್ರೀತಿ ವಿಶ್ವಾಸದಿಂದ ಈ ಸಲ ಪ್ರಾಂತೀಯ ಎಸೆಂಬ್ಲಿಗೆ ಅವರು ಆರಿಸಲ್ಪಟ್ಟಿರುವರು. ಮಾತೃಭೂಮಿಗೆ ಅವರಿಂದ ಪ್ರಯೋಜನಕಾರೀ ಸೇವೆಯು ಸಲ್ಲುವಂತಾಗಲಿ ಎಂದು ನಾವೆಲ್ಲರೂ ಬಯಸೋಣ. ವರುಷ ವರುಷ ಅಭಿವೃದ್ಧಿಯತ್ತ ಸಾಗುತ್ತಿರುವ ನಮ್ಮ ಮುನ್ನಡೆಯಲ್ಲಿ ತಮ್ಮೆಲ್ಲರ ಸಹಕಾರ ಸಹಾನುಭೂತಿಯನ್ನು ನಾವು ನಿರೀಕ್ಷಿಸುತ್ತೇವೆ. ಜಯ್ ಹಿಂದ್!

ಮುಂಬಯಿ ರಾಜ್ಯದಲ್ಲಿ ಆಹಾರ ಧಾನ್ಯದ ಬೆಲೆ

ಭಾರತ ಸರಕಾರ ಹಾಗೂ ಪ್ರಾಂತೀಯ ಸರಕಾರಗಳಲ್ಲಿ ಆಹಾರ ಧೋರಣೆ ಮತ್ತು ಹಂಚುವಿಕೆಯ ವಿಧಾನದಲ್ಲಿ ಏಕಮುಖತೆ ಇಲ್ಲವೆಂಬುದನ್ನು ನಾವು ಆಗಿಂದಾಗ್ಗೆ ಟೀಕಿಸುತ್ತ ಬಂದಿದ್ದೇವೆ. ನಿತ್ಯ ವ್ಯಾಧಿಯೆಂಬಂತೆ ಈ ಆಹಾರ ಕೊರತೆಯು ಅನುಭವ ಮಾಯಾಮಾರೀಚಿಕೆಯಂತೆ ನಾಲ್ಕು ವರ್ಷದಿಂದಲೂ ಕಾಣಿಸುತ್ತಲಿದೆ. ಮುಂಬಯಿ ರಾಜ್ಯದಲ್ಲಿ ಆಹಾರ ಧಾನ್ಯಗಳ ಮೇಲೆ ನೂರಕ್ಕೆ 50ರಷ್ಟು ಬೆಲೆಯನ್ನು ಹೆಚ್ಚಿಸಿರುವದು ಅತ್ಯಂತ ವಿಚಿತ್ರ ಹಾಗೂ ವಿಷಾದದ ಸಂಗತಿಯಾಗಿದೆ. ವಸ್ತುಗಳ ಬೆಲೆಯು ತಗ್ಗುತ್ತ ಜನತೆಯ ಜೀವನ ನಿರ್ವಹಣ ಕಾರ್ಯದಲ್ಲಿ ಆಶಾಕಿರಣ ಮೂಡುವಾಗಲೇ ಇಂತಹ ವಿಪರೀತ ಬೆಲೆಯ ಭಾರ ಬೀಳುವಂತಾದುದು ನಿಜವಾಗಿಯೂ ಶೋಚನೀಯವೆನ್ನಬೇಕು. ಭಾರತ ಸರಕಾರವು ಸಹಾಯಧನ ನಿಲ್ಲಿಸಿದ್ದು ಹಾಗೂ ಆಯಾತವಾದ ಧಾನ್ಯಗಳ ಮೂಲ ದರಗಳಲ್ಲಿ ಬದಲಾವಣೆಯಾದುದೇ ಇದಕ್ಕೆ ಕಾರಣವೆಂದು ಪೂರೈಕೆ ಮಂತ್ರಿ ದಿನಕರ ರಾವ ದೇಸಾಯಿಯವರು ಹೇಳಿರುವರು. ಗೋದಿಯ ಬೆಲೆಯು ಮಣಕ್ಕೆ 16-0-8 ಇದ್ದುದನ್ನು 23-3-8 ರೂ. ಗೆ ಏರಿಸಲಾಗಿದೆ. ಅಂದರೆ ಸುಮಾರು ನೂರಕ್ಕೆ 45ರಷ್ಟು ಏರಿಸಿದಂತಾಯಿತು. ರೂ. 18-2-0 ಅಕ್ಕಿಯ ಧಾರಣೆಯನ್ನು 28-2-0ಕ್ಕೆ ಏರಿಸಲಾಗಿದೆ. ನೂರಕ್ಕೆ 55ರಷ್ಟು ಏರಿಸಿದಂತಾಯಿತು. ಹೀಗೆ ವಿಪರೀತ ಏರಿದ ಧಾರಣೆಯಿಂದ ಜನತೆಯಲ್ಲಿ ಕಳವಳ ಉಂಟಾದರೆ ಆಶ್ಚರ್ಯಪಡುವಂತೇನಿಲ್ಲ. ಆಹಾರಾಭಾವವೊಂದೇ ಇದಕ್ಕೆ ಕಾರಣವೆನ್ನುವದು ಸಹಜವಾದ ಮಾತಲ್ಲ. ಕೇಂದ್ರ ಸರಕಾರ ಹಾಗೂ ಪ್ರಾಂತಿಕ ಸರಕಾರಗಳಲ್ಲಿ ಆಹಾರ ಧೋರಣೆ ಅಂದರೆ ಆಯಾತ ವಿಕ್ರಯಗಳಲ್ಲಿ ಒಮ್ಮುಖವಾದ ಕ್ರಮವಿಲ್ಲದಿರುವದೇ ಆಗಿರುವದು. ಒಂದು ಕಡೆಯಲ್ಲಿ ಕಷ್ಟವಿರುವಾಗ ಇನ್ನೊಂದು ಸ್ವೈರವಾಗಿರುವದು ಸರಿಯಲ್ಲ. ಎಲ್ಲವರೂ ಸುಖದುಃಖಗಳಲ್ಲಿ ಪಾಲ್ಗೊಂಡು ಪರಿಸ್ಥಿತಿಯನ್ನೆದುರಿಸಬೇಕಾದುದು ಶ್ರೇಷ್ಠ ಧರ್ಮವೆಂದೇ ನಮ್ಮ ಅಭಿಪ್ರಾಯ.

ಹೊಸ ದಿಲ್ಲಿಯಲ್ಲಿ ಸೂರ್ಯ ಪಾಕ ಪಾತ್ರೆಯ ಪ್ರಯೋಗ

ಕೇವಲ ಸೂರ್ಯನ ಕಿರಣಗಳಿಂದಲೇ

ಸಂಪೂರ್ಣ ಅಡಿಗೆಯನ್ನು ತಯಾರಿಸುವ 'ಸೂರ್ಯ ಪಾಕ ಪಾತ್ರೆ'ಯೊಂದನ್ನು ಹೊಸ ದಿಲ್ಲಿಯ ರಾಷ್ಟ್ರೀಯ ಭೌತ ವಿಜ್ಞಾನ ಸಂಶೋಧನಾ ಪ್ರಯೋಗ ಶಾಲೆಯವರು ತಯಾರಿಸಿದುದನ್ನು ಕಳೆದ ತಾ. 18ರಲ್ಲು ಪ್ರಧಾನ ಮಂತ್ರಿ ನೆಹರೂರವರು ತಮ್ಮ ಮನೆಯಲ್ಲಿ ಅದರ ಪ್ರಯೋಗ ಮಾಡಿದರು. ಈ ಪಾತ್ರೆಯಲ್ಲಿ ಅಟ್ಟ ಸೋಯಾಬೀಜ ಮತ್ತು ಕಾಯಿಪಲ್ಲೆಗಳನ್ನು ಅವರು ಸೇವಿಸಿದರು.

ಈ ಸೂರ್ಯ ಪಾಕ ಪಾತ್ರೆಗಳನ್ನು ಭಾರತವು ಬೇಗನೆ ದೊಡ್ಡ ಪ್ರಮಾಣದಲ್ಲಿ ತಯಾರಿಸಲಿದೆ ಎಂದು ತಿಳಿದು ಬರುತ್ತಿದೆ. ಈ ಪಾತ್ರೆಯ ಬೆಲೆಯು ಸಾಧಾರಣ 50 ರೂಪಾಯಿಗಳಷ್ಟಾಗಬಹುದಲ್ಲದೆ ನಿಶ್ಚಿತ ಬಿಸಿಲಿನ ಹೊರತು ಬೇರೆ ಯಾವ ಕಟ್ಟಿಗೆಯ ವೆಚ್ಚವೂ ಇಲ್ಲ. 30 ವ್ಯಾಟ್ ಶಕ್ತಿಯ ವಿದ್ಯುತ್ ಅಡಿಗೆ ಪಾತ್ರೆಗಳಷ್ಟು ಕೆಲಸಗಳನ್ನು ಈ ಪಾತ್ರೆಗಳು ಕೊಡುತ್ತವೆ. ಹಿಂದೂಸ್ಥಾನದಲ್ಲಿ ಇಡೀ ವರುಷದಲ್ಲಿ ಸಾಕಷ್ಟು ಬಿಸಿಲಿರುವುದರಿಂದ ಸೂರ್ಯ ಪಾಕ ಪಾತ್ರೆಗಳ ಉಪಯೋಗದಿಂದ ಗ್ರಾಮಾಂತರಗಳಲ್ಲಿ ಕಟ್ಟಿಗೆಯು ಉಳಿತಾಯವಾಗುವುದಲ್ಲದೆ ಗೊಬ್ಬರಕ್ಕಾಗಿ ಸೆಗಣಿಯ ಉಳಿತಾಯವೂ ಆಗುವುದು. ಈ ಪಾಕ ಪಾತ್ರೆಯನ್ನು ಸಿದ್ಧಪಡಿಸಿದ ಉಷ್ಣತೆ ಮತ್ತು ವಿದ್ಯುತ್ ವಿಭಾಗವು ಎಮ್. ಎಲ್. ಘಾಯ್ ಎಂಬ 28 ವರುಷದ ಅಮೇರಿಕನ್ ತರುಣ ವಿಜ್ಞಾನಿಯ ನೇತೃತ್ವದಲ್ಲಿ ಕೆಲಸ ಮಾಡುತ್ತಿದೆ.

ಶ್ರೀಮತಿ ಉಮಾಬಾಯಿ ಕುಂದಾಪುರರವರ ಷಷ್ಟ್ಯಬ್ದ ಪೂರ್ತಿ ಸನ್ಮಾನ

ಸಮಾರಂಭವು ಕಳೆದ ತಾ 25ರಲ್ಲು ಡಾ। ಕರ್ವೆಯವರ ಅಧ್ಯಕ್ಷತೆಯಲ್ಲಿ ಹುಬ್ಬಳ್ಳಿಯಲ್ಲಿ ನಡೆಯಿತು. ಕರ್ನಾಟಕದ ಈ ಆದರ್ಶ ಮಹಿಳೆಗೆ ದೀರ್ಘಾಯುರಾರೋಗ್ಯವನ್ನು ಕೋರಿ ಕರ್ನಾಟಕದ ಎಲ್ಲೆಡೆಗಳಿಂದಲೂ ಶುಭಸಂದೇಶಗಳು ಬಂದಿದ್ದವು. ಕರ್ನಾಟಕದ ಮಹಿಳಾ ಕಾರ್ಯಕರ್ತರಲ್ಲಿ ಅಗ್ರಗಣ್ಯರಾದ ಶ್ರೀಮತಿಯವರು ದಕ್ಷಿಣಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಗೋಳಿಕೇರಿ ಎಂಬ ಹೆಸರಿನ ಕುಟುಂಬದಲ್ಲಿ ತಾ 25-3-1892ರಲ್ಲು ಜನಿಸಿದರು. ಶ್ರೀಮತಿಯವರು ಇನ್ನು ಹೆಚ್ಚಿನ ನಾಡಿನ ಸೇವೆ ಮಾಡುವಂತೆ ಭಗವಂತನು ಅನುಗ್ರಹಿಸಲಿ.

ಮಂಗಳೂರು

ಗೋ ಪ್ರದರ್ಶನ— ದ. ಕ. ಗೋ ಸಂರಕ್ಷಣಾ ಸಂಘದ ಹಾಗೂ ಸರಕಾರ ಖಾತೆಯ ನೇತೃತ್ವದಲ್ಲಿ ಗೋಪ್ರದರ್ಶನವೊಂದು ಕಳೆದ ತಾ. 26ರಲ್ಲು ಮಂಗಳೂರು ತಾಲೂಕು ಕಚೇರಿಯ ವಠಾರದಲ್ಲಿ ಜರಗಿತು. ಜಿಲ್ಲಾ ಜಡ್ಜ್ ಶ್ರೀ ಸಿ. ಟಿ ರಾಮನ್ ನಾಯರರು ಪ್ರದರ್ಶನವನ್ನು ತೆರೆದರು. ಜಿಲ್ಲಾ ಕಲೆಕ್ಟರ್ ಶ್ರೀ ರಾಜರತ್ನಂ, ಅವರ ಪತ್ನಿಯು ಸಮಾರಂಭದ ಅಧ್ಯಕ್ಷತೆ ವಹಿಸಿದ್ದು ಬಹುಮಾನ ವಿತರಣೆ ಮಾಡಿದರು. ಶ್ರೀಗಳಾದ ಪಿ. ಆರ್. ಆರ್. ಸೂರಜ, ಎಮ್. ಗಿರಿಯಪ್ಪ, ಬಿ. ದಾಮೋದರ ಬಾಳಿಗ ಮೊದಲಾದವರು ಸಾಲೋಚಿತ ಮಾತುಗಳನ್ನಾಡಿದರು. ಶ್ರೀ ಎಮ್. ಕೆ. ದೇವರಾಜರು ಧನ್ಯವಾದಗಳನ್ನರ್ಪಿಸಿದ್ದರು.

ಬಿಡುಗಡೆ— ಈಗ ನಾಲ್ಕು ವರುಷಗಳ ಕೆಳಗೆ ದಸ್ತಗಿರಿಯಾಗಿ ವೆಲ್ಲೂರು ಜೈಲಿಗೊಯ್ಯುತ್ತಿರುವಾಗ ಮಂಜೇಶ್ವರ ರೈಲ್ವೆ ಸ್ಟೇಶನಿಂದ ತಪ್ಪಿಸಿಕೊಂಡು ತಾ 14-6-51ರಲ್ಲು ಹೈದರಾಬಾದಿನಲ್ಲಿ ಬಂಧಿಸಲ್ಪಟ್ಟು ವಿಚಾರಣೆಗೊಳಗಾದ ಶ್ರೀ ಎಸ್. ಎನ್. ಹೊಳ್ಳರನ್ನು ಜಿಲ್ಲಾ ಜಡ್ಜರು ಬಿಡುಗಡೆ ಮಾಡಿರುತ್ತಾರೆ. ಅವರೊಡನೆ ಅಪರಾಧಿಯಾದ ಶ್ರೀ ಸಿಂಪ್ಸನ್ ಸೋನ್ಸರನ್ನೂ ಬಿಡುಗಡೆ ಮಾಡಿದ್ದಾರೆ ತಾ 25ರಂದು ಶ್ರೀ ಸೋನ್ಸರನ್ನು ಸ್ವಾಗತಿಸುವ ಸಾರ್ವಜನಿಕ ಸಭೆಯು ಶ್ರೀ ಬಿ ವಿ. ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ಜರಗಿತು.

ದ. ಕ ಜಿಲ್ಲಾ ಬೋರ್ಡಿನ ಸಭೆಯು— ಈಚೆಗೆ ಜರಗಿದಾಗ ಸ್ಥಾನಿಕ ಸಂಸ್ಥೆಗಳ ಕ್ಷೇತ್ರದಿಂದ ಕಾಂಗ್ರೆಸ್ ಉಮೇದ್ವಾರಿಯಾಗಿ ಮದ್ರಾಸು ರಾಜ್ಯಶಾಸನ ಸಭೆಯ ಮೇಲ್ಮನೆಗೆ ಆರಿಸಲ್ಪಟ್ಟುದಕ್ಕಾಗಿ ಶ್ರೀ ಎಸ್. ನರಸಪ್ಪಯ್ಯನವರನ್ನು ಅಭಿನಂದಿಸಲಾಯಿತು. ಸಭೆಗಳಿಗೆ ಗೈರುಹಾಜರಾಗಿ ಮೆಂಬರಿಕೆಯನ್ನು ಕಳಕೊಂಡ ಶ್ರೀ ಧರ್ಮ [illegible]ನವರ ಸದಸ್ಯತನವನ್ನು ಅವರ ಪ್ರಾರ್ಥನೆಯಂತೆ ಊರ್ಜಿತಗೊಳಿಸಲಾಯಿತು. ಶ್ರೀ ಎಮ್. ಎಸ್. ಅಧಿಕಾರಿಗಳು ಕೇಳಿದ ಪ್ರಶ್ನೆಗಳಿಗೆ ಅಧ್ಯಕ್ಷರು ಉತ್ತರವೀಯುತ್ತಾ ಈ ಕೆಳಗಿನ ವಿಚಾರವನ್ನು ತಿಳಿಸಿದರು.

ಜಿಲ್ಲೆಯಲ್ಲಿ 33 ಹಿಂದುಸ್ಥಾನಿ ಶಾಲೆಗಳಿವೆ. ಆ ಶಾಲೆಗಳಲ್ಲಿ ಕುರಾನು ಕಲಿಸಲು ವ್ಯವಸ್ಥೆಯಿಲ್ಲ. ಮಿಯಾರು ಸೇತುವೆಯ ಕುರಿತು ಸರಕಾರಕ್ಕೆ ತಿಳಿಸಲಾಗಿದೆ, ಸರಕಾರವು ರೂ. 60,000ವನ್ನು ಈ ಕೆಲಸಕ್ಕಾಗಿ ಕೊಡಲು ಒಪ್ಪಿದರೂ ಅದು 1952-53ನೆ ಮುಂಗಡಪತ್ರದಲ್ಲಿ ಸೇರಿಸಲ್ಪಡುವ ಭರವಸೆ ಕೊಟ್ಟಿಲ್ಲ. ಜಿಲ್ಲಾ ಬೋರ್ಡಿನ ಆಫೀಸು ನೌಕರರಿಗೆ ತಿಂಗಳ ಪ್ರಥಮ ವಾರದಲ್ಲೇ ಸಂಬಳ ಕೊಡುತ್ತಾರೆ. ಆದರೆ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರಿಗೆ ಪ್ರತಿ ತಿಂಗಳ ತಾ. 15ರಿಂದ 25 ತಾರೀಕಿನೊಳಗೆ ಕೊಡುತ್ತಿದೆ. ಜಿಲ್ಲಾ ಕೇಂದ್ರ ಹಾಗೂ ಸಬ್ ಟ್ರೆಜರಿಯಿರುವ ಕೇಂದ್ರಗಳಿಂದ ಐದು ಮೈಲುಗಳ ಪರಿಧಿಯೊಳಗಿರುವ ಶಾಲೆಗಳ [illegible] ಮೂಲಕ ಸಂಬಳ ಕೊಡಲಾಗುವುದು. ಉಳಿದವರಿಗೆ ಮನಿಯಾರ್ಡರ್ ಮೂಲಕ ಕಳುಹಿಸಲಾಗುವುದು. ಪ್ರತಿಯೊಂದು ಶಾಲೆಗೂ ಒಂದೊಂದು ಚಲಚ್ಚಿತ್ರದ ಯಂತ್ರವೊದಗಿಸಲು ಈಗ ಹಣದ ಕೊರತೆಯಿದೆ.

ಬಳಿಕ ಶಂಕರನಾರಾಯಣದ ಡಿಸ್ಪೆನ್ಸರಿ, ಕಿನ್ನಿ ಶಾಲೆಯ ಬಾವಿ ದುರಸ್ತಿಗೂ ರೂ. 750 ಮತ್ತು 1190 ಮಂಜೂರು ಮಾಡಲಾಯಿತು. ಹ್ಯಾಸ್ಕೂಲುಗಳಲ್ಲಿ 1ನೇ ಫಾರಮಿನಿಂದಲೇ ಸಂಸ್ಕೃತವನ್ನು ಎರಡನೆ ಭಾಷೆಯ ಸ್ಥಳಕ್ಕೆ ಬದಲಾಗಿ ಐಚ್ಛಿಕವಾಗಿ ಕಲಿಯಲು ಏರ್ಪಾಡು ಮಾಡಬೇಕೆಂಬ ಶ್ರೀ ಎಮ್. ಎಸ್. ಅಧಿಕಾರಿಗಳ ನಿರ್ಣಯ ಸ್ವೀಕರಿಸಲಾಯಿತು.

ಸಮಾಜವಾದಿಗಳ ನೇತೃತ್ವದಲ್ಲಿ

ಕಳೆದ ತಾ. 23ರಲ್ಲು ಸಂಜೆ ಸಾರ್ವಜನಿಕ ಸಭೆಯೊಂದು ಶ್ರೀ ಎಂ. ಬಾಲಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಕಣ್ಣಾನೂರಿನ ಶ್ರೀ ಟಿ. ಕುಂಞಂಬು, ಅವರು ಚುನಾವಣೆಯ ನಂತರದ ರಾಜಕೀಯ ಪರಿಸ್ಥಿತಿಯನ್ನು ವಿಮರ್ಶಿಸಿದರು. ಡಾ। ಸಂಜೀವನಾಥ, ಶ್ರೀಗಳಾದ ಡಿ. ಮೋಹನ ರಾವ್ ಮತ್ತು ಎ. ಶಿವನ್ ನಾಯರರೂ ಮಾತನಾಡಿದರು.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

ಸ್ಮಾಲ್ ನಂಬ್ರ. 8/52

ಅಂದು ಮಾನೆ ಯಾನೆ ಅಬ್ದುಲ್ ರಹಿಮಾನ್ —ವಾದಿ.

ದೈನಬಾ ಮಾಣಿಕೋತ್ತ ಪಾತುಮ್ಮನ ಮಗಳು, ಕಾಸರಗೋಡು ತಾಲೂಕು ಚೆತ್ತಾರಿ ಗ್ರಾಮದಲ್ಲಿರುವವಳು —ಪ್ರತಿವಾದಿಳು.

ಪ್ರತಿವಾದಿಯಿಂದ ವಾದಿಗೆ ಬರಬೇಕಾದ ಡಿಮಾಂಡ್ ಪ್ರೋನೋಟು ಪ್ರಕಾರದ ಅಸಲು ಬಡ್ಡಿ ಬಾಬ್ತಿಗೆ ವಾದಿಯು ವಾಜ್ಯ ಮಾಡಿದ ಸದ್ರಿ ವ್ಯಾಜ್ಯವು ತಾರೀಕು 10-4-1952ಕ್ಕೆ ಕನ್ನಿಗೆ ಇಟ್ಟಿರುವ ಸಂಗ್ತಿ ತಿಳಿಸೋಣಾಗಿಯದೆ.

Sd/ **P. Ahmad,**
Advocate for Plaintiff.
ಕಾಸರಗೋಡು, 28-3-1952

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No 9/1952

1 ಯು. ಪರದಬಾಯಿ

2 ಶ್ರೀಪತಿ, 3 ರಾಘವೇಂದ್ರ, 4 ಸರಿಥಾ, 5 ಕೃಷ್ಣಂ ಇವ್ಯನರು ರಕ್ಷಕಳು ತಾಯಿ 1ನೆಯವಳು — ಅರ್ಜಿದಾರರು.

1ನೆ ಅರ್ಜಿದಾರಳ ಗಂಡ ಮತ್ತು ಅರ್ಜಿದಾರರ ತಂದೆ ತಾರೀಕು 2-5-1951ರಲ್ಲಿ ಉಳಿಯಾರಗೋಳಿ ಗ್ರಾಮದಲ್ಲಿ ಮೃತಪಟ್ಟಿಯು. ನಸಿರಂಗ್ರಾಯಿರೀಗೆ ಪ್ರೊಸ್ಪೆರಿಟಿಯನ್ಶ್ಯೂರೆನ್ಸ ಕಂಪೆನಿ ಲಿಮಿಟೆಡ್ ಮಂಗಳೂರು ಇವರ ಪೋಲಿಸಿ ನಂಬ್ರ 3795ನೇ ಪೋಲಿಸಿ ಪ್ರಕಾರ ಬರತಕ್ಕ ರೂಪಾಯಿ 510 1ನೇ ಅರ್ಜಿದಾರಳು ವಸೂಲು ಮಾಡುವ ಹಾಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರ ಕಡೆಯಿಂದ ದಾಖಲು ಮಾಡಲ್ಪಟ್ಟ ಅರ್ಜಿಯು ತಾರೀಕು 12 4 1952ಕ್ಕೆ ಕನ್ನಿಗೆ ಇಟ್ಟಿದೆ. ಆಕ್ಷೇಪ ಉಳ್ಳವರು ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಸದರಿ ಕೋರ್ಟಿನ ಮುಂದೆ ಖುದ್ದಾಗಿ ಹಾಜರಾಗಿ ಜ್ಞಾಪಿಸಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸಿಯದೆ.

K. Laxminarayana Ajthal,
Vakil for Petitioners
ತಾರೀಕು 25-3-1952

ನೋಟೀಸು

ಶ್ರೀ ಕೃಷ್ಣಾಪುರಮಠದ ಎಲ್ಲಾ ವಕ್ಕಲುಗಳಿಗೆ ಮತ್ತು ಅದರ ಬಾಬ್ತು ಹಣಕೊಡುವ ಎಲ್ಲಾ ಬೇಂಕರುಗಳಿಗೆ, ಈ ಮೂಲಕ ಸದ್ರಿ ಮಠದ ಕಾರ್ಯದರ್ಶಿ ಟಿ. ಶ್ರೀಪತಿ ಬಿ. ಎ., ಇವರು ತಿಳಿಸುವದೇನಂದ್ರೆ—

ಸದ್ರಿ ಮಠದ ಬಾಬ್ತು ಗೇಣಿ ಯಾ ಬಾಡಿಗೆ ಹಣವನ್ನು ವಸೂಲು ಮಾಡುವರೇ ಅದರ ಎಕ್ಸಿಕ್ಯೂಟಿವ್ ಆಫೀಸರೆಂತ ಹೇಳಿಕೊಳ್ಳುವ ಶ್ರೀ ಅರೂರು ಕೃಷ್ಣಮೂರ್ತಿರಾಯರಿಗೆ ಯಾವತರದ ಹಕ್ಕು ಇರುವದಿಲ್ಲ. ಸಂಪೂರ್ಣ ಹಕ್ಕು ಅದರ ಮಠಾಧಿಪತಿಗಳಿಗೇನೆ ಇರುತ್ತದೆ. ಆದಕಾರಣ ಸದ್ರಿ ಕೃಷ್ಣಮೂರ್ತಿರಾಯರು ಆ ಬಾಬ್ತು ವಸೂಲು ಮಾಡಕೂಡದಾಗಿ ಮಾನ್ಯ ಮದ್ರಾಸ್ ಹೈಕೋರ್ಟಿನವರು C. M. P. No 3126/52 ಇದೇ ತಾರೀಕು 24ರಲ್ಲು ಇಂಜಂಕ್ಷನ್ ಹುಕ್ಕುಂ ಕೊಡಾಕೊಟ್ಟಿರುತ್ತಾರೆ. ಆದಕಾರಣ ಯಾವತ್ತು ಗೇಣಿ ಯಾ ಹಣವನ್ನು ಮಠಕ್ಕೇನೇ ಸೀದಾ ಸಲ್ಲಿಸಿ ಕ್ರಮವಾದ ರಶೀದಿ ಪಡೆಯತಕ್ಕದ್ದು ಎಂತ ಈ ಮೂಲಕ ಸರ್ವರಿಗೂ ತಿಳಿಸಿರುತ್ತದೆ.

ಕೃಷ್ಣಾಪುರ, ತಾ 31 3 1952 — **T Sripathy,** Secretary

● ತೃಪ್ತಿಕರವಾದ ವಸತಿ — ಹಿತಕರವಾದ ಊಟ
● ರುಚಿಕರವಾದ ಉಪಾಹಾರ ಇವುಗಳಿಗೆ
ಉಡುಪಿಯ ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಊರ ಪರವೂರ ಸನ್ಮಾನ್ಯ ಸದ್ಗೃಹಸ್ಥರಿಂದ ಮುಕ್ತಕಂಠದಿಂದ
ಹೊಗಳಿಸಿಕೊಂಡ ನಮ್ಮ ಹೋಟೆಲಿಗೆ
ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ.
ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯಾಗುವಂತೆ
ನಗರದ ಕೇಂದ್ರ ಭಾಗದಲ್ಲಿದೆ
WOODLANDS
Highclass Boarding & Lodging, UDIPI S. Kanara

ಆಯುರ್ವೇದ ಸಂಸ್ಕೃತಿ

ರೋಗವೇ ಇಲ್ಲದಂತೆ ಮಾಡುವ ಶಾರೀರಿಕ ಬೌದ್ಧಿಕ ಸಾಧನೆ ಬೆಳೆಯಲಿ!

ಈ ನಮ್ಮ ಸಂಸ್ಥೆಯ ಚಟುವಟಿಕೆಯು ಆಯುರ್ವೇದದ ಅಭ್ಯಾಸ ಮತ್ತು ಸೇವೆ. ಆಯುರ್ವೇದವೆಂದರೆ ಕೇವಲ ಚಿಕಿತ್ಸಾ ಪದ್ಧತಿಯಲ್ಲ; ಒಂದು ಸಾಂಪ್ರದಾಯಿಕ ಶಾಸ್ತ್ರವೂ ಅಲ್ಲ; ಅಥವಾ ಉಪಜೀವನಕ್ಕಾಗಿ ಕಲಿತಿದ್ದ ಒಂದು ಉದ್ಯಮದ ಮಾರ್ಗವೂ ಅಲ್ಲ– ಆಯುರ್ವೇದವು ಯಾವುದೇ ದೇಶ ಧರ್ಮ ಸಂಪ್ರದಾಯಕ್ಕೆ ಸೇರಿದ ಜೀವಿಯ ಸರ್ವಾಂಗ ಸಂಪೂರ್ಣ ಸುಂದರ ಸಂಸ್ಕೃತಿಯ ಭಂಡಾರ. ಪಿಂಡ ಬ್ರಹ್ಮಾಂಡಗಳ ಪ್ರಕೃತಿ ವಿಕೃತಿ ಸ್ಥಿತಿಯನ್ನು ಸಮಗ್ರವಾಗಿಯೂ, ಸತ್ಯವಾಗಿಯೂ, ತಿಳಿಸಿಕೊಡುವ ಶಾಸ್ತ್ರ ಸಾಹಿತ್ಯ; ಆರ್ಯ ಸಂಸ್ಕೃತಿಯ ವಿವಿಧಾಂಗಗಳಾದ ವೇದ-ಉಪನಿಷತ್ತು ಯೋಗಾದಿಗಳ ವಿಶಿಷ್ಟ ಪ್ರಯೋಗ ದರ್ಶನವೇ ಇದು! ...ಶಾಸ್ತ್ರ ವ್ಯಾಸಂಗದ ಅಭ್ಯಾಸದಿಂದ ದೊರೆ ದಿದ ಪರಿಶುದ್ಧ ಅಭಿಪ್ರಾಯವು.

ಆಯುರ್ವೇದದ ಯಾವುದೇ ಮಹಾ ಗ್ರಂಥವನ್ನು ತೆಗೆದು ನೋಡಿದರೂ ನಿತ್ಯ ನೈಮಿತ್ತಿಕ ಅನುಷ್ಠಾನಗಳಿಗೆ ಪ್ರಧಾನತೆಯಿತ್ತುದನ್ನು ಕಾಣುತ್ತೇವೆ. ಧರ್ಮಾರ್ಥ ಕಾಮ ಮೋಕ್ಷಾದಿ ಪುರುಷಾರ್ಥಗಳ ಸಿದ್ಧಿಗೆ ...ಕರ್ಮಗಳ ವ್ಯಾಖ್ಯಾನವನ್ನು, ಹೇಗೆ ಹೇಗೆ ಮಾಡಬೇಕು ಮತ್ತು ಕಾಲಾದಿಗಳಿಗೆ ಅನುಸಾರವಾಗಿ ಆ ವಿಧಿಗಳಲ್ಲಿ ಏನೇನು ಬದಲಾವಣೆಗಳು ಬೇಕು ಎಂಬುದನ್ನು ಸಾಂಗವಾಗಿ ಹೇಳುವುದಲ್ಲದೆ ಆಯುರ್ವೇದದ ಮುಖ್ಯ ಉದ್ದೇಶ ಈ ಎಲ್ಲಾ ವಿಧದಿಂದ ಪಡೆಯಬೇಕಾದ ಪರಮೋತ್ಕೃಷ್ಟ ಲಾಭವು ಶರೀರಮಾಧ್ಯಮ ಸ್ಥಿತಿ ಅಥವಾ ಪುರುಷೋತ್ತಮತೆ ಎಂಬುದು ಆಯುರ್ವೇದದ ಮತ. ಈ ನಮ್ಮ ಮಾನವ ಅರ್ಥಾತ್ ಜೀವಿಗೆ ಕಾಲ, ಅರ್ಥ ಮತ್ತು ಕರ್ಮಗಳ ಹೀನ ಮಿಥ್ಯಾ ಮತ್ತು ಅತಿಯೋಗಗಳ ದೆಸೆಯಿಂದ ರೋಗಾದಿಗಳು ಪ್ರಾಪ್ತವಾಗ ಬಹುದು. ಅವುಗಳ ಸಮಯೋಗದಿಂದ ಸಮ ಧಾತು ಸ್ವಾಸ್ಥ್ಯ ಸಿದ್ಧಿಸುವುದು ಎಂಬುದನ್ನು ಹೇಳಿ ಈ ಹೀನ ಮಿಥ್ಯಾತಿಯೋಗಗಳ ದೆಸೆಯಿಂದ ಅಥವಾ ಆಗಂತುಕ ಕಾರಣಗಳಿಂದ ಸಂಭವಿಸ ಬಹುದಾದ ವಿಕೃತಿಗಳಿಗೆ ತಕ್ಕ ಉಪಚಾರ ಅರ್ಥಾತ್ ಚಿಕಿತ್ಸೆಯನ್ನು ಅನುಷಂಗಿಕವಾಗಿ ಹೇಳಿದೆ. ಅದರ ಜೀವನಮಾನದಲ್ಲಿ ಮೇಲಿಂದ ಮೇಲೆ ಬರುವ ಅನೇಕ ಪ್ರಶ್ನೆಗಳಿಗೆ ಅರ್ಥಾತ್ ನಿಷ್ಠೆಯ ಕುರಿತಲ್ಲ; ಶಾರೀರಿಕ ಮಾನಸಿಕ ಯೋಗಗಳ ನಿವಾರಣೆಯ ಕುರಿತು! ಇದು ಉತ್ತಮವೇ ಆಯುರ್ವೇದದ ಚಿಕಿತ್ಸಾಂಗವಾದುದರಿಂದ ಅದರ ಬಳಕೆಯೇ ಹೆಚ್ಚು ನಡೆಯಿತು. ಅದು ವ್ಯವಸಾಯಕ್ಕೆ ಬಳೆದ್ದುದು. ಅದು ಪ್ರಧಾನಕ್ಕೆ ಬೇಕು ಬದಲು ... ಗೌಣವಾಗಿ ಉಳಿಯಿತು. ಆದುದರಿಂದ ... ಆಯುರ್ವೇದವು ಚಿಕಿತ್ಸೆಯ ಹೆಸರಿನಿಂದಲೇ ಪರಿಚಯಗೊಂಡಿತು.

ಈಗ ಕೇವಲ ಚಿಕಿತ್ಸಾ ದೃಷ್ಟಿಯಿಂದಲೇ ಆಯುರ್ವೇದದ ಜ್ಞಾನ, ಸ್ಥಿತಿ, ಮತ್ತು ವ್ಯಾಪ್ತಿಯನ್ನು ಸ್ವಲ್ಪ ಅವಲೋಕಿಸೋಣ. ಆಯುರ್ವೇದವು ತ್ರಿದೋಷ ಸಿದ್ಧಾಂತದ ತಳಹದಿಯ ಮೇಲೆ ನಿಂತಿದೆ. ಅದ ಚಿಕಿತ್ಸೆಗೆ ಆಧಾರವಾದ ಸಿದ್ಧಾಂತವೇ ಮುಖ್ಯ ಪ್ರಸ್ತಾನ. ಪಂಚ ವಿಂಶತಿ ತತ್ವಗಳೇ ಇದರ ಪ್ರವೃತ್ತಿ ಮತ್ತು ವಿಭಜನೆಗಳಿಗೆ ಮುಖ್ಯ ಸೂತ್ರ. ಆದರೆ ಈ ಸಿದ್ಧಾಂತಗಳ ಸಹಸ್ರಾರು ವರ್ಷಗಳ ಹಳೆಯದಿದ್ದು ಈ ಉಗ್ರ ವಿಜ್ಞಾನ ಯುಗದಲ್ಲಿ ಇದರ ಸ್ಥಾನವು ತೀರಾ ಕೆಳಗಿನದೆಂದು ವಾದಿಸುವವರೂ ಇದ್ದಾರೆ. ಆಧುನಿಕ ವಿಜ್ಞಾನದ ತಳಹದಿಗೆ ಸೇರಿಯಲ್ಪಟ್ಟು ಪ್ರಾಚೀನ ಆಯುರ್ವೇದ ಸಿದ್ಧಾಂತದ ಬೆಳಕನ್ನೇ ಅರಿಯದ ಈ ಪ್ರೌಢರಲ್ಲಿ ಈ ಬಗೆಯ ಅಭಿಪ್ರಾಯ ತೋರುವುದು ... ಪಾಶ್ಚಾತ್ಯ ವಿಜ್ಞಾನ ಮತ್ತು ಸಂಸ್ಕೃತಿಗಳ ಹುಟ್ಟು ಬೆಳವಣಿಗೆ ಕ್ರಮವೇ ಬೇರೆ. ಆಧುನಿಕ ವಿಜ್ಞಾನ ನಾನಾತ್ವದಲ್ಲಿ ಹುಟ್ಟಿ ಏಕತ್ವದ ಕಡೆಗೆ ಸಾಗುತ್ತಾ ಇದೆ. ಆಯುರ್ವೇದವು ಹಾಗೂ ಆರ್ಯ ಸಂಸ್ಕೃತಿಯು, ಏಕತ್ವದಲ್ಲಿ ಹುಟ್ಟಿ ನಾನಾತ್ವದ ಕ್ಷೇತ್ರದಲ್ಲಿ ಸಾಗುತ್ತಿವೆ. ಇದನ್ನು ಒಂದೇ ವಾಕ್ಯದಲ್ಲಿ ಹೇಳುವುದಾದರೆ ಆರ್ಯ ಸಂಸ್ಕೃತಿ ಮತ್ತು ದರ್ಶನಗಳು ಎಲ್ಲಿ ಹುಟ್ಟಿವೆಯೋ ಅಲ್ಲಿಗೆ ಪಾಶ್ಚಾತ್ಯ ವಿಜ್ಞಾನ ಶೋಧಗಳು ಸಾಗುವ ಪ್ರಯತ್ನದಲ್ಲಿದೆ ಹೀಗೆ ಎರಡು ವಿರುದ್ಧ ದಿಕ್ಕುಗಳಿಂದ ಹೊರಟ ಎರಡು ಸಂಸ್ಕೃತಿ ಅಥವಾ ಜ್ಞಾನಗಳನ್ನು ಒಂದೇ ದೃಷ್ಟಿಯಿಂದ ನೋಡಿ ತುಲನೆ ಮಾಡುವುದು ತೀರಾ ತಪ್ಪು. ಆದುದರಿಂದ ಆಯುರ್ವೇದದ ಸಿದ್ಧಾಂತ ಮತ್ತು ಪ್ರಯೋಗಗಳನ್ನು ಹಳೆಯ ಮತ್ತು ಕಳಸಿದವು ಎಂದು ಹೇಳುವವರಿಗೆ ನನ್ನ ಉತ್ತರ ಇಷ್ಟೇ: ಅದರ ನಿಜತ್ವವನ್ನು ತಿಳಿದಾಗ ತ್ರಿಕಾಲದಲ್ಲಿಯೂ ಅದು ನವ್ಯ ಮತ್ತು ನಿತ್ಯನವೀನವಾಗಿ ಹಳಸುವುದಕ್ಕೆ ಸಂಭವವೇ ಇಲ್ಲವೆಂದು ತಿಳಿಯುವುದು.

ಈ ಆಳವಾದ ವಿವೇಚನೆಯನ್ನು ಕೇವಲ ಅಲಂಕಾರಕ್ಕಾಗಿ ಇಲ್ಲಿ ತಂದಿಲ್ಲ. ಇತ್ತೀಚೆಗೆ ಜಗತ್ತನ್ನೇ ಅಲ್ಲೋಲಕಲ್ಲೋಲವಾಗಿ ಮಾಡುತ್ತಿರುವ ವಿವಿಧ ರೋಗರಾಶಿಗಳ ನಮ್ಮ ಮುಂದಿನ ಭಯಂಕರ ಪ್ರಶ್ನೆಗಳಿಗಾಗಿ ನಿಂತಿವೆ. ಅವನ್ನು ಪರಿಹರಿಸಬೇಕಾದರೆ ... ಈ ವಿಜ್ಞಾನಯುಗದ ಔಷಧಿಗಳೂ ಮಾನವನ ಬುದ್ಧಿಯನ್ನು ಬೆರಗುಗೊಳಿಸುವಂತೆ ಇವೆ. ಅಷ್ಟೇ ಅಲ್ಲ ಅದ್ಭುತ ಮತ್ತು ವಿಶಿಷ್ಟ ಪರಿಣಾಮಕಾರಿ ವಿಚಿತ್ರ ಶಸ್ತ್ರಚಿಕಿತ್ಸಾ ಪ್ರಗತಿಯು ಮಿಂಚಿನ ವೇಗದಿಂದ ಸಾಗುತ್ತಿದೆ. ಇತ್ತ ಆಯುರ್ವೇದದ ಚಿಕಿತ್ಸಾ ಭಾಗದ ಶೋಧ ಪ್ರಯೋಗಗಳು ಅಷ್ಟು ಪ್ರಗತಿ ಮುಖದಿಂದ ನಡೆದಿಲ್ಲವೆಂಬುದನ್ನು ವ್ಯಸನ ಮುಖದಿಂದ ಒಪ್ಪಬೇಕಾಗಿದೆ. ಇದಕ್ಕೆ ಕಾರಣಗಳು ಬೇರೆಯೇ ಇವೆ. ಇರಲಿ. ಈ ಬೆಳೆಯುತ್ತಿರುವ ಸಿದ್ಧೌಷಧಿ ಶಸ್ತ್ರಚಿಕಿತ್ಸಾ ಪ್ರಗತಿಗಳಾದರೂ ಆಳಿಸುತ್ತಿರುವ ರೋಗಗಳನ್ನು ತೊಲಗಿಸಿ ಜಗತ್ತಿಗೆ ಶಾಶ್ವತ ಕ್ಷೇಮವನ್ನು ನೀಡುವುದಕ್ಕೆ ಸಮರ್ಥವಾಗುವವೋ ಎಂಬ ದೊಂದು ಪ್ರಶ್ನೆ. ವಿವೇಕವು ಇದು ಸರ್ವಥಾ ಶಕ್ಯವಿಲ್ಲವೆಂಬುದನ್ನು ಸ್ಪಷ್ಟವಾಗಿ ಹೇಳುತ್ತದೆ.

ರೋಗಗಳು ಬೆಳೆದಂತೆ ಅದರ ನಿವಾರಣೋಪಾಯಗಳು ಬೆಳೆಯುತ್ತಾ ಹೋಗಬಹುದು ಅಷ್ಟೇ ಅಲ್ಲದೆ ಇಂಥ ತೀವ್ರ ಪರಿಣಾಮಕಾರಿ ಚಿಕಿತ್ಸೆ ಅಥವಾ ಪ್ರಯೋಗವು ಮಾನವನ ಬುದ್ಧಿಯ ವ್ಯಾಧಿಯ ಕಡೆಗಿರುವ ಭೀತಿಯನ್ನು ತಗ್ಗಿಸಿ ಅವನನ್ನು ಇನ್ನಷ್ಟು ಸ್ವೇಚ್ಛಾಚಾರಿಯನ್ನಾಗಿ ಮಾಡುತ್ತದೆ; ಎಂಬುದನ್ನು ವಿಚಾರದಿಂದಲೂ ಅನುಭವದಿಂದಲೂ ನಾವು ಕಾಣಬಹುದು. ಉದಾಹರಣೆಗಾಗಿ ಈಗ ಕೆಲವು ವರ್ಷಗಳಿಂದ ಬಳಕೆಗೆ ಬಂದ ‘ಕೆಮೊ ಥೆರಪಿ’ [Chemo-Therapy] ಮತ್ತು ‘ಎಂಟಿಬಯೋಟಿಕ್ಸ್’ [Antibiotics] ಮುಂತಾದುಗಳ ದುಷ್ಪ್ರಯೋಗ ಮತ್ತು ಅನಪೇಕ್ಷಿತ ಪ್ರಯೋಗಗಳ ಪ್ರಾಬಲ್ಯವನ್ನು ಕಾಣಬಹುದು. ಆಯುರ್ವೇದದ ಚಿಕಿತ್ಸೆಯು ಇತಿಹಾಸದಲ್ಲಿಯೂ ಇಂತಹ ಶೋಧ ಪ್ರಯೋಗ ಮತ್ತು ಹಾವಳಿಗಳ ಸಂಭವಿಸಿದ ಸಂದರ್ಭಗಳನ್ನು ನಾವು ಕಾಣುತ್ತೇವೆ. ಧಾತು ರಸೌಷಧಿಯೋಗಗಳ ಕಾಲದಿಂದ ರಸೌಷಧಿ ಪ್ರಯೋಗಗಳ ಕಾಲಕ್ಕೆ ಬಂದಾಗ ಈ ಬಗೆಯ ಗಲಭೆ ಮತ್ತು ಹಾವಳಿಯಾಗಿತ್ತು. ಆದ್ದರಿಂದ ಇಂದಿನ ಜಗತ್ತನ್ನು ಕಳವಳಿಸುತ್ತಿರುವ ರೋಗರಾಶಿಗಳನ್ನು ಇಲ್ಲದಂತೆ ಮಾಡುವುದು ಔಷಧಿ ಚಿಕಿತ್ಸಾ ಪ್ರಯೋಗಾದಿ ಪ್ರತಿಕ್ರಿಯಾ ಕ್ರಮದಿಂದ ಶಕ್ಯವಿಲ್ಲವೆಂಬುದು ನನ್ನ ತರ್ಕ, ಯಾವ ಆಂಶಿಕ ದೃಷ್ಟಿಯ ರೋಗ ನಿವಾರಕ ಉಪಕ್ರಮ ಯೋಜನಾ ಸಮಿತಿಯೇ ಬರಲಿ ಕೇವಲ ಚಿಕಿತ್ಸೆಯಿಂದ ರೋಗ ನಿರ್ಮೂಲನವು ಶಕ್ಯವಲ್ಲ. ಸರ್ವಾಂಗ ಸಾಧನೆಯಿಂದಲೇ ಅದು ಶಕ್ಯ. ಇದೇ ಆಯುರ್ವೇದವು ಸನಾತನ ಕಾಲದಿಂದ ಸಾರಿದ ವಿಷಯ. ಅನ್ಯ ಚಿಕಿತ್ಸಾ ಸಂಪ್ರದಾಯಗಳು ದಿಸಿಲ್ಲದರಿಯಿಂದ ಕೃಷ್ಣ ಯದಗಿಸುವ ಸಾಧನೆಯಂತೆ ಬಳಸಿ ಬಳಸಿ ಈಗೀಗ ಈ ಮತಕ್ಕೆ ಶರಣು ಬರುತ್ತಿವೆ.

ಆದ್ದರಿಂದ ಇವತ್ತು ನಮ್ಮೆದುರು ಮುಂದಿರುವುದು ಕೇವಲ ಔಷಧಿಕೊಟ್ಟು ಬಂದ ರೋಗಗಳನ್ನು ನಿವಾರಣೆಮಾಡುವ ಚಿಕಿತ್ಸೆಯ ಪ್ರಶ್ನೆಯಲ್ಲ. ರೋಗವನ್ನೇ ಇಲ್ಲದಂತೆ ಮಾಡುವ ಶಾರೀರಿಕ ಸಾಧನೆ ಮತ್ತು ಬೌದ್ಧಿಕ ಸಾಧನೆಗಳನ್ನು ಜನರಲ್ಲಿ ಬೆಳಸುವ ಪ್ರಶ್ನೆ– ಇವನ್ನು ಬೆಳಸುವವನೇ ನಿಜವಾದ ವೈದ್ಯನು. ವ್ಯಾಧಿಯಲ್ಲಿ ಬಂದ ವೈದ್ಯನೆಂದರೆ ಔಷಧಿ ಕೊಡುವವನೆಂಬ ಅರ್ಥವು ಗೌಣ ಅಷ್ಟೇ ಅಲ್ಲ ಅಪಾರ್ಥ! ‘ವಿದ್’ ಧಾತುವಿನಿಂದ ‘ವೈದ್ಯ’ ಶಬ್ದ ಹುಟ್ಟಿದೆ “ವಿದ್” ಎಂದರೆ ತಿಳಿಯೆಂದು, ‘ವೈದ್ಯ’ನೆಂದರೆ ತಿಳಿದವನೆಂದು.

ಚರಕಾಚಾರ್ಯರು

“......ಪರ್ಯವದಾತಶ್ರುತಂ- ಪರಿದೃಷ್ಟ ಕರ್ಮಾಣಂ- ಪ್ರತ್ಯತಿಜ್ಞಂ- ಪ್ರತಿ ಪತ್ತಿಜ್ಞಂ.. ದಕ್ಷಂ, ದಕ್ಷಿಣಂ ಸರ್ವೇಂದ್ರಿಯೋಪಪನ್ನಂ. ಶಿಷ್ಯವತ್ಸಲಂ......” ಎಂದು ವೈದ್ಯನಲ್ಲಿರಬೇಕಾದ ಸಹಜ ಗುಣಧರ್ಮಗಳನ್ನು ಹೇಳಿದ್ದಾರೆ.

ಇದರಂತೆ ನಮಗೆ ವೈದ್ಯನಲ್ಲಿರಬೇಕಾದ ಗುಣ ಸ್ವಭಾವ, ಸಾಂಪತ್ತಿಕತೆ ಮತ್ತು ತ್ಯಾಗದ ಅಭಾವವಾಗುತ್ತದೆ. ಆದುದರಿಂದ ಜಗತ್ತಿನ ನಿರೋಗದ ಸ್ಥಿತಿ, ಈ ಬಗೆಯ ಸಂಸ್ಕೃತ ಬೌದ್ಧಿಕ ಮತ್ತು ದೈಹಿಕ ಸಾಧನೆಯಿಂದಾಗುವುದಲ್ಲದೆ ಯಾವುದೇ ಇತರ ವಸ್ತುವನ್ನು ಅವಲಂಬಿಸಿಲ್ಲ. ಒಂದಲ್ಲೊಂದು ದಿನ ನಿಜವಾದ ಕ್ಷೇಮದಾಯಕವು ಜಗತ್ತಾಗುವುದಿದ್ದರೆ ಅದು ಆಯುರ್ವೇದದ ನಿಜ ಸಂಸ್ಕೃತಿಯ ಬಲದಿಂದಲ್ಲದೆ ಬೇರೊಂದರಿಂದ ಶಕ್ಯವಿಲ್ಲ. ಈ ಮಹತ್ವದ ಉದ್ದೇಶ ಮತ್ತು ಆದರ್ಶದಿಂದಲೇ ಪೂಜ್ಯ ಪಂಡಿತ ತಾರಾನಾಥಜೀಯವರು ತಮ್ಮ ಪ್ರೇಮ ಚಿಕಿತ್ಸಾ ಸೇವೆಯು ಸಮಾಜವನ್ನು (mission) ಆರಂಭಿಸಿದರು. ವಿಧಿಯು ನಿರ್ದಯತೆಯಿಂದ ದಿವ್ಯಲೋಕಕ್ಕೆ ಅವರನ್ನು ಕರೆದೊಯ್ದರೂ ಅದರ ಅಮರ ಆ ಮಹಾ ವ್ಯಕ್ತಿಯು ಕೇವಲ ಸಾಮಾನ್ಯರಾದ ನಮ್ಮ ಎಡೆಯಲ್ಲಿ ತೋರಿದ ಆದರ್ಶದ ದಿವ್ಯ ಸ್ಫೂರ್ತಿಯು ಕುಂಟು-ನಡೆಯಿಂದಾದರೂ ಅವರ ಕೃತಿಯನ್ನು ಮುಂದುವರಿಸದೆ ಬಿಡದಂತೆ ನಮ್ಮನ್ನು ನಡೆಸಿತು! ನಮ್ಮಲ್ಲಿ ಅವರ ಪಾಂಡಿತ್ಯವಿಲ್ಲ, ಅವರ ಸಾಹಿತ್ಯವಿಲ್ಲ, ಅವರ ಓಜಸ್ಸಿಲ್ಲ, ಅವರ ಔದಾರ್ಯವಿಲ್ಲ, ಅವರ ನೈರ್ಮಲ್ಯವಿಲ್ಲ, ಸೇವಾಭಾವವಿಲ್ಲ, ತ್ಯಾಗವಿಲ್ಲ, ಪ್ರತಿಭೆಯಿಲ್ಲ, ಆ ಪವಿತ್ರ ಶಿಷ್ಯವಾತ್ಸಲ್ಯವಿಲ್ಲ. ಆದರೆ ಆ ಗುಣಗಳ ಮೇಲೆ ಆದರವಿದೆ. ಆದರವೇ ನಮ್ಮ ಭಾವ, ಸೇವೆ ಮತ್ತು ಶ್ರಮಗಳು ಆ ಪವಿತ್ರಗುಣಗಳ ಛಾಯೆ!

ನಿಮ್ಮ ನೆರವಿಯ ನಂಬಿಕೆಯಿಂದ ಉಪಸ್ಥಿತವಾದ ಈ ಸಂಸ್ಥೆಯು ಆಯುರ್ವೇದದ ದುಂದುಭಿಯನ್ನು ದಿಕ್ಕು ದಿಕ್ಕಿಗೂ ಮೊಳಗಿಸುವ ಸಂಸ್ಥೆಯಾಗಿ ಮಾಡುವ ಭಾರ ನಿಮ್ಮದು.

[ತಾ 22-3-52ಕ್ಕೆ ಜರುಗಿದ ತಾರಾನಾಥ ಆಯುರ್ವೇದ ವಿದ್ಯಾಪೀಠ-ಬಳ್ಳಾರಿ ಇದರ 5ನೇ ವರ್ಧಂತಿಯಲ್ಲಿ ಶ್ರೀ ಬಿ.ಕೆ. ಮಾಳಗಿಯವರು ಮಾಡಿದ ಸ್ವಾಗತ ಭಾಷಣದ ಸಾರಾಂಶ.—]

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital
2. Has now increased its Paid up Capital and reserves to Rs 10 lacks
3. Has granted an average dividend of 6% to the Shareholders for the past 20 years
4. Has a net work of Branches in South Kanara and one each in Mercara and Fort, Bombay
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies.

ADOPT IT AS
"MY BANK"
THE VIJAYA BANK, LIMITED,
H. O., MANGALORE.



BALLBEARING
—THE LIFEBLOOD OF THE INDUSTRY!
Dealers in:
ROTARY OIL MILLS
FLOUR MILLS
BALL, ROLLER & THRUST BEARINGS
TELEGRAMS —'CHEAPTRADE'
A. RAMSON AND CO.
68 PESTRI BUILDING BAJARAM S. BOMBAY 7

THE CANARA BANKING CORPORATION LIMITED.

ನಿಮ್ಮ ಎಲ್ಲಾ ಬ್ಯಾಂಕಿಂಗ್ ಸಮಸ್ಯೆಗಳಿಗೆ

ಗ್ಗಂಟನೇ ಇಸವಿಯಲ್ಲಿ ಸ್ಥಾಪಿತವಾಗಿ, ಎಲ್ಲಾ ಜನರ ಮೆಚ್ಚುಗೆಗೆ ಪಾತ್ರವಾಗಿರುವ

ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್, ಲಿಮಿಟೆಡ್

ಇವರನ್ನು ವಿಚಾರಿಸಿರಿ.

ಪ್ರಧಾನ ಕಾರ್ಯಾಲಯ, ಉಡುಪಿ, (ದ. ಕ.)

ನವಯುಗ

ಚಂದಾ ವಿವರ

ವರ್ಷಕ್ಕೆ ರೂ. 5—12—0

6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೩-೪-'೫೨

ರಾಜಾಜಿಯ ಧುರೀಣತ್ವ

ಮದ್ರಾಸಿನಲ್ಲಿ ಯಾವ ಪಕ್ಷ ಆಡಳಿತವನ್ನು ವಹಿಸಿಕೊಳ್ಳಬಹುದೆನ್ನುವ ಕುರಿತು ಬಹಳ ಕಾಲದಿಂದ ಸಮಾಲೋಚನೆ ನಡೆದಿತ್ತು. ಮಾರ್ಚ 29ರಲ್ಲಿ ಕಾಂಗ್ರೆಸ್ ಪಕ್ಷವು ಒಂದು ನಿರ್ಧಾರಕ್ಕೆ ಬರುವದೆಂದು ನಮಗೆ ಗೊತ್ತಾಗಿದ್ದರೂ ಅದು ಯಾವ ತೀರ್ಮಾನವನ್ನು ಕೈಗೊಂಡರೂ ಭವಿಷ್ಯದಲ್ಲಿ ಒಂದಲ್ಲ ಒಂದುರೀತಿಯಿಂದ ಮುರಿದುಬೀಳಬಹುದೆಂಬ ಶಂಕೆ ನಮ್ಮಲ್ಲಿತ್ತು. ಮದ್ರಾಸಿನ ಮರ್ಜಿಯನ್ನರಿತವರೆಲ್ಲರೂ ಇದು 'ಸ್ಥಿರವಲ್ಲ'ವೆಂದು ನಂಬಿದ್ದರು. ಇದಕ್ಕೆ ಸರಿಯಾಗಿ ವಿರುದ್ಧ ಪಕ್ಷದವರು ಸಂಯುಕ್ತ ಪ್ರಜಾರಂಗವನ್ನು ನಿರ್ಮಿಸಿ ಶ್ರೀ. ಟಿ. ಪ್ರಕಾಶಮರನ್ನು ಎತ್ತಿ ಕಟ್ಟಿದ್ದರು. ಅವರ ಬಲವೂ ಸುಮಾರು 166 ಎಂದು ಗೊತ್ತಾಗಿದೆ. ಹೋಪರಿ ಒಂದುಕಲ್ಲು; ಬಿದ್ದರೆ ಹಣ್ಣು ಎನ್ನುವಂತೆ ಸಂಯುಕ್ತ ಪ್ರಜಾರಂಗದವರು ಅಧಿಕಾರವನ್ನು ವಹಿಸಿಕೊಳ್ಳುವ ಇಚ್ಛೆಯನ್ನು ಗವರ್ನರರಿಗೆ ತಿಳಿಸಿರುವರು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸಿಗರೆಲ್ಲರೂ ಒಂದು ಯೋಗ್ಯವಾದ ಮಾರ್ಗವನ್ನನುಸರಿಸಿದ್ದಾರೆ. ವಿರುದ್ಧಾಭಿಪ್ರಾಯ-ಭಿನ್ನ ಧೋರಣೆಯೇ ಮದ್ರಾಸಿನ ರಾಜಕೀಯ ವೈಶಿಷ್ಟ್ಯವಾದರೂ ಈ ಸಂದರ್ಭದಲ್ಲಿ ಒಮ್ಮುಖವಾದ ಧೋರಣೆಯನ್ನು ವಹಿಸಿದ್ದು ಒಳ್ಳೆಯ ಬುದ್ಧಿಯೆಂದೇ ಹೇಳಬೇಕು.

ಸಮ್ಮಿಶ್ರ ಸರಕಾರ ರಚನೆಯಾಗಬೇಕೆಂದು ಲೋಕ ಪಕ್ಷದ ರಂಗಾರವರು ಅಪೇಕ್ಷಿಸಿದ ಕಾಂಗ್ರೆಸ್ ಸರಕಾರ ರಚನೆಯಾದರೆ ಅದು ಸ್ಥಿರವಾಗುಳಿಯದೆಂದು ಭವಿಷ್ಯ ನುಡಿದದ್ದೂ ಈಗಿನ ಪಕ್ಷಗಳ ಬಲಾಬಲಗಳ ದೆಸೆಯಿಂದ! ಒಂದು ವೇಳೆ ಸಮ್ಮಿಶ್ರ ಸರಕಾರವಾದರೂ ಅದು ತಾತ್ಕಾಲಿಕವಾಗಿ ರೂಪುಗೊಳ್ಳು, ತ್ರಿತ್ರೀ ವಿವಾಹ ಸ್ಥಿರವಾಗಿ ಎಂದೂ ಉಳಿಯುತ್ತಿರಲಿಲ್ಲ. ಆದರೆ ಕೊನೆಯದಾಗಿ ಇದರ ಪರಿಹಾರವೇನೆಂದು ಲಕ್ಷ್ಯ ಹಾಕಿದವರಿಲ್ಲ ಮರುಚುನಾವಣೆಯೊಂದೇ ಸರಿಯಾದ ಪ್ರತಿಕ್ರಿಯೆಯೆನ್ನುವ ತೀರ್ಮಾನಕ್ಕೆ ಬಂದಿದ್ದರು. ಹಲವರು ಮುಂದೆ ಆರು ತಿಂಗಳಲ್ಲೋ-ಒಂದು ವರ್ಷದಲ್ಲೋ ಇಂತಹ ಚುನಾವಣೆ ನಡೆದು ಅದರಲ್ಲಿ ತಮ್ಮ ಬಲಾಬಲವನ್ನು ತಿರುಗೊಮ್ಮೆ ಪ್ರದರ್ಶಿಸಬೇಕೆಂಬ ಕುತೂಹಲವನ್ನು ತಾಳಿದವರೂ ಇದ್ದರು! ಆದರೆ ಈ ಶಂಕೆ ಅನುಮಾನ- ಆಶೆಯನ್ನು ಆಟ್ಟಕೊಂಡವರಿಗಿಲ್ಲ ಮದ್ರಾಸದ ನೂತನ ಕಾಂಗ್ರೆಸ್ ಪಕ್ಷ ಸರಿಯಾದ ಮದ್ದನ್ನೇ ಅರೆಯಿತೆಂದು ಹೇಳುತ್ತೇವೆ.

ರಾಜಾಜಿ ಇಂದು ಈ ಅಧಿಕಾರವನ್ನು ವಹಿಸಿಕೊಂಡದ್ದು ಯೋಗಾಯೋಗ! ಇಲ್ಲಿನ ಸದಸ್ಯರ ಕಳಕಳಿಯ ಬಿನ್ನಹವೊಂದೇ ಈ ಚಾಣಾಕ್ಷ್ಯನನ್ನು ಇರಿಸಿಕೊಂಡಿತೆಂಬ ಭಾವನೆ ಸರಿಯಲ್ಲ. ಕಾಂಗ್ರೆಸ್ ಅಧ್ಯಕ್ಷ ನೆಹ್ರೂರವರಿಗೆ ಮದ್ರಾಸಿನ ಬಗ್ಗೆ ಚಿಂತೆಯುಂಟಾಗಿತ್ತು! ರಾಜಾಜಿ ಮುಂದೆಬಾರದಿದ್ದರೆ ಪ್ರಕಾಸಂರ ರಾಜ್ಯಭಾರದ ಕ್ರಮ ಇಲ್ಲಿ ಆಲದೋಲಿತೆಂಬುದು ಅವರಿಗೆ ಖಚಿತವಾಗಿತ್ತು! ಅದರಿಂದಲೇ ಅವರು ರಾಜಾಜಿಯನ್ನು ಒಲಿಸಿಕೊಂಡು ಆ ಹೊಣೆಗಾರಿಕೆಯನ್ನು ಅವರಮೇಲೆಯೇ ಹಾಕುವ ಸಾಹಸಮಾಡಿದರು. ರಾಜಾಜಿ ತಾವು ವಹಿಸಿಕೊಳ್ಳುವ ಅಧಿಕಾರ ಸ್ವಲ್ಪಮಟ್ಟಿಗೆ ಚಿಕ್ಕದಾದರೂ ದೇಶದ ಹಿತದ ದೃಷ್ಟಿಯಿಂದ ಇದು ಮಹತ್ವದುದು. ದ. ಭಾರತದಲ್ಲಿ ಕಾಂಗ್ರೆಸ್ಸಿನ ಅಸ್ತಿತ್ವವನ್ನು ಭದ್ರ[illegible]ಸಲು ರಾಜಾಜಿಯ ಸಾರಥ್ಯ ಅತ್ಯಂತ ಅವಶ್ಯವಾಗಿದೆ.

ಪ್ರಜಾಪ್ರಭುತ್ವ ಕ್ರಮದಂತೆ ರಾಜ್ಯಭಾರ ನಡೆಸುವಲ್ಲಿ ಇಂತಹ ಮುತ್ಸದ್ದಿಗಳನ್ನು ಆರಿಸಿಕೊಂಡು ಅವರ ಮುಂದಾಳ್ತನದ ಲಾಭಪಡೆಯುವುದು ಮುಖ್ಯವಾದ ಕರ್ತವ್ಯವಾಗಿದೆ. ರಾಷ್ಟ್ರಾಭಿವೃದ್ಧಿ-ರಾಜಕೀಯ ಪ್ರಗತಿಯ ದೂರದೃಷ್ಟಿಯುಳ್ಳ ಕೃತಿಯೊಬ್ಬರೂ ಇಂತಹ ಧುರೀಣತ್ವದ ಆವಶ್ಯಕತೆಯನ್ನು ತಿರಸ್ಕರಿಸಲಾರರು. ಮದ್ರಾಸದ ಎಲ್ಲ ಪಕ್ಷ ಪಂಗಡದವರಲ್ಲಿ ಈ ಪ್ರವೃತ್ತಿ ಇದೆಯಾದರೆ ರಾಜಾಜಿಯ ಧುರೀಣತ್ವದ ಲಾಭ ನಮಗುಂಟು. ಇದಕ್ಕೆ ವ್ಯತಿರಿಕ್ತವಾದ ಜನ್ಮ ಧೋರಣೆ ಅಲ್ಲಿ ಕಂಡುಬರುವಂತಾದರೆ ಅದು ನಮ್ಮ ದೌರ್ಭಾಗ್ಯವೆಂದೇ ಹೇಳಬೇಕು

ಮದ್ರಾಸ ಕಾಂಗ್ರೆಸ್ ಪಕ್ಷದ

ಧುರೀಣತ್ವ [illegible]

ಶ್ರೀ ರಾಜಾಜಿಯವರ ಸಮ್ಮತಿ

ಮದ್ರಾಸಿನ ಶಾಸನ ಸಭೆಯ ಕಾಂಗ್ರೆಸ್ ಪಕ್ಷವು ಕಳೆದ ತಾ 29ರಲ್ಲು ಸಭೆ ಸೇರಿ ಶಾಸನ ಸಭೆಯ ಧುರೀಣತ್ವವನ್ನು ವಹಿಸಲು ಶ್ರೀ ಸಿ. ರಾಜಗೋಪಾಲಾಚಾರಿಯವರನ್ನು ಭಿನ್ನವಿಸಿಕೊಳ್ಳಬೇಕೆಂದು ಒಮ್ಮತದಿಂದ ನಿರ್ಣಯಿಸಿತು. ಕಾಂಗ್ರೆಸ್ ಪಕ್ಷದ ಆದೇಶದ ಮೇರೆಗೆ ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ಕುಮಾರಸ್ವಾಮಿ ರಾಜರ ಧುರೀಣತ್ವದಲ್ಲಿ ಏಳು ಜನರ ಶಿಷ್ಟ ಮಂಡಳವು ಶ್ರೀ ರಾಜಾಜಿಯವರನ್ನು ಕಂಡು ಪಕ್ಷದ ನಿರ್ಣಯವನ್ನು ತಿಳಿಸಿತು. ಶಿಷ್ಟ ಮಂಡಳದಲ್ಲಿ ಶ್ರೀ ಕುಮಾರ ಸ್ವಾಮಿ ರಾಜರಲ್ಲದೆ ಆಂಧ್ರ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಸಂಜೀವ ರೆಡ್ಡಿ, ಕೇರಳ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮತಿ ಕುಟ್ಟಿಮಾಳ್ ಅಮ್ಮ, ಮದ್ರಾಸಿನ ಕೃಷಿ ಮಂತ್ರಿ ಶ್ರೀ ಎ. ಬಿ. ಸೆಟ್ಟಿ, ಶ್ರೀಮತಿ ಸುಂದ್ರಂ ರಾಮಚಂದ್ರನ್, ಶ್ರೀ ಸಿ. ಸುಬ್ರಹ್ಮಣ್ಯಂ, ಶ್ರೀ ಪಟ್ಟಾಭಿ ರಾಮರಾವ್ ಕೂಡಾ ಇದ್ದರು. ಮರುದಿನ ಸಂಜೆ ಕೂಡಾ ಶ್ರೀ ರಾಜಾಜಿಯವರ ಮನೆಗೆ ಶ್ರೀಗಳಾದ ಪಿ. ಕುಮಾರ ಸ್ವಾಮಿ ರಾಜಾ, ಎ. ಸಿ. ಪಾಲಿನಿ ಸ್ವಾಮಿ [illegible] ಎಸ್. ಬಿ. ಪಟ್ಟಾಭಿ ರಾಮರಾಯರು, ಶ್ರೀ ರಾಜಾಜಿಯನ್ನು ಪುನಹ ಭೆಟ್ಟಿಯಾದರು.

ಪಂಡಿತ ನೆಹರೂರವರಿಂದ ಶ್ರೀ ಕುಮಾರಸ್ವಾಮಿ ರಾಜರಿಗೆ ಮತ್ತು ಶ್ರೀ ರಾಜಗೋಪಾಲಾಚಾರ್ಯರಿಗೆ ಬಂದ ಪತ್ರಗಳನ್ನು ಶ್ರೀ ರಾಜಾಜಿಯವರಿಗೆ ಕೊಡಲಾಯಿತು ಶ್ರೀ ರಾಜಾಜಿಯವರು ಈ ಪತ್ರಗಳನ್ನು ಓದಿ ತಮ್ಮ ನಿರ್ಧಾರವನ್ನು ಮರುದಿನ ತಿಳಿಸುವುದಾಗಿ ಹೇಳಿದರು. ಈ ಕಾರಣದಿಂದ ಧುರೀಣರ ಆಯ್ಕೆಗಾಗಿ ತಾ. 30ರಲ್ಲು ಸ[illegible] ದ ಸಭೆಯ[illegible] ಮುಂದೂಡಲ್ಪಟ್ಟಿತು. ಮರುದಿನ ಸಂಜೆ ಸೇರಿದ ಪಕ್ಷದ ಸಭೆಯಲ್ಲಿ ಶ್ರೀ ರಾಜಗೋಪಾಲಾಚಾರ್ಯರವರು ಮದ್ರಾಸು ಶಾಸನಸಭೆಯ ಪಕ್ಷದ ಧುರೀಣರಾಗಿ ಒಮ್ಮತದಿಂದ ಆರಿಸಲ್ಪಟ್ಟರು. ಶ್ರೀ ಕುಮಾರಸ್ವಾಮಿ ರಾಜರು ಶ್ರೀ ರಾಜಾಜಿಯವರು ಒಪ್ಪಿಗೆಯನ್ನಿತ್ತ ಸುದ್ದಿಯನ್ನು ಸಾರಿದೊಡನೆ ಸಭೆಯು ಹರ್ಷೋದ್ಗಾರದಿಂದ ಅದನ್ನು ಸ್ವಾಗತಿಸಿತು. ಶ್ರೀ ರಾಜಾಜಿಯವರು ಧುರೀಣರಾಗಬೇಕೆಂಬ ನಿರ್ಣಯವನ್ನು ಶ್ರೀ. ಕೆ. ಕಾಮರಾಜನಾಡರು ಮಂಡಿಸಲಾಗಿ ಶ್ರೀ ಎನ್. ಸಂಜೀವ ರೆಡ್ಡಿಯವರು ಅದನ್ನು ಅನುಮೋದಿಸಿದರು. ಶ್ರೀಮತಿ ಕುಟ್ಟಿಮಾಳ್ ಅಮ್ಮ ಮತ್ತು ಶ್ರೀ ಎ. ಬಿ. ಸೆಟ್ಟಿ ಅದಕ್ಕೆ ಬೆಂಬಲವಿತ್ತರು.

ಶ್ರೀ ರಾಜಾಜಿಯವರು ಮದ್ರಾಸ್ ಮೇಲ್ಮನೆಗೆ

ಮದ್ರಾಸು ಗವರ್ನರರು 171 (1) (E) ಕಲಮಿನ ಪ್ರಕಾರವಾಗಿ ತಾ. 31ರಲ್ಲು ಶ್ರೀ ರಾಜಗೋಪಾಲಾಚಾರ್ಯ, ಜನಾಬ್ ಡಾ। ಮಹಮ್ಮದ್ ಉಸ್ಮಾನ್, O. P. ರಾಮಸ್ವಾಮಿ ರೆಡ್ಡಿಯಾರ್ ಮತ್ತು ವಿ. ಬಾಷ್ಯಂ ಅಯ್ಯಂಗಾರ್ ಇವರನ್ನು ಮದ್ರಾಸ್ ಮೇಲ್ಮನೆಗೆ ಸದಸ್ಯರನ್ನಾಗಿ ನಾಮಕರಣ ಮಾಡಿ ಆಜ್ಞಾಪಿಸಿದ್ದಾರೆ.

ಜೋಪಾಸನಾ ಸರಕಾರದ ರಾಜೀನಾಮೆಯನ್ನು ನಾಳೆ ಕೊಡಬಹುದಾಗಿ ಕಾಂಗ್ರೆಸ್ ಪಕ್ಷದ ಸಭೆಯು ತಾ 31ರಲ್ಲು ಮುಗಿದನಂತರ ಶ್ರೀ ಕುಮಾರ ಸ್ವಾಮಿ ರಾಜಾರವರು ಪತ್ರಿಕಾಕರ್ತರಿಗೆ ಹೇಳಿದರು.

ಮುಂಬೈ ಹೊಸ ಮಂತ್ರಿಮಂಡಲವು ಇದೇ ತಾ. 21ಕ್ಕೆ ಅಧಿಕಾರ ವಹಿಸುವ ನಿರೀಕ್ಷೆಯಿದೆ. ಶ್ರೀ ಮುರಾರಜಿ ದೇಸಾಯಿಯವರ ಮುಖ್ಯ ಮಂತ್ರಿತ್ವದಲ್ಲಿ 11 ಜನರ ಮಂತ್ರಿಮಂಡಳ ರಚನೆಯಾಗುವುದು. ಇದರಲ್ಲಿ ಐವರು ಮಹಾರಾಷ್ಟ್ರೀಯರು, ಮೂವರು ಗುಜರಾತಿಗರು, ಇಬ್ಬರು ಕನ್ನಡಿಗರು, ಓರ್ವನು ಮ[illegible] ನಗರದಿಂದ ಮಂತ್ರಿಗಳಾಗಬಹುದೆಂದು ತಿಳಿದುಬಂದಿದೆ.

ಬಟ್ಟೆ ನಿಯಂತ್ರಣದಲ್ಲಿ ಬದಲಾವಣೆ:- ವಿಶೇಷ ನಯ ಮತ್ತು ನಯ ಬಟ್ಟೆಯ ನಿರ್ಯಾತ ಹಾಗೂ ಒಳನಾಡಿನಲ್ಲಿ ವಸ್ತ್ರ ಮತ್ತು ನೂಲಿನ ಹಂಚಿಕೆಯಲ್ಲಿ ಕೇಂದ್ರ ಸರಕಾರವು ನಿಯಂತ್ರಣವನ್ನು ಸಡಿಲಿಸಿ ಪ್ರಕಟಣೆ ಹೊರಡಿಸಲಾಗಿದೆ. ಎಪ್ರಿಲ್ ಒಂದರಿಂದ ಗಿರಣಿಗಳಲ್ಲಿ ತಯಾರಾಗುವ ಬಟ್ಟೆಯಲ್ಲಿ ಅರೆಪಾಲನ್ನು ರಾಜ್ಯಗಳಿಗೆ ಕೊಡಲಾಗುವುದು. ಉಳಿದ ಅರ್ಧವನ್ನು ಗಿರಣಿಗಳು ತಮಗೆ ಬೇಕಾದ ಲೈಸೆನ್ಸಿದ್ದ ವರ್ತಕರಿಗೆ ನಿರ್ಬಂಧವಿಲ್ಲದೆ ಮಾರಬಹುದು ರಾಜ್ಯ ಸರಕಾರಗಳಿಗೆ ನಯ ಬಟ್ಟೆಯ ಕೋಟ ಕೊಡಲ್ಪಡುವುದಿಲ್ಲ.

ಈ ಸಂಚಿಕೆಯಲ್ಲಿ 12 ಪುಟಗಳಂತೆ ಪುಟಸಂಖ್ಯೆ ಕೊಡಲಾಗಿದ್ದರೂ ಬರೇ 10 ಪುಟಗಳನ್ನೇ ಕೊಡಲಾಗಿದೆ

ಅತ್ಯಪೂರ್ವ! ಅತ್ಯಮೋಘ!! ಅತ್ಯಾಧುನಿಕ!!!

ಪ್ರಚಂಡ ಭಾರತೀಯ ನೃತ್ಯ ಅಭಿನಯಗಳು.

ಇದೇ ತಾ 11ನೇ ಶುಕ್ರವಾರ ಮತ್ತು ತಾ 12ನೇ ಶನಿವಾರ ರಾತ್ರಿ ಗಂಟೆ 9 30ಕ್ಕೆ ಮತ್ತು ತಾ. 13ನೇ ಆದಿತ್ಯವಾರ ಸಂಜೆ ಗಂಟೆ 6-30ಕ್ಕೆ

ಉಡುಪಿ ಎಲ್ಲು ಭಂಡಾರಿ ಗದ್ದೆಯಲ್ಲಿ ಹಾಕಿರುವ ನೂತನ ಥಿಯೇಟರಿನಲ್ಲಿ

ಶಾಸ್ತ್ರೀಯ ಹಾಗೂ ಆಧುನಿಕ ನಾಟ್ಯ ಪ್ರದರ್ಶನ

ಶ್ರೀ ರಾಜನ್ ಅಯರ್ ಇವರ ನವನವೀನ ನರ್ತನಗಳು!

ಪ್ರಸಿದ್ಧ ನರ್ತಕಿಯರ ಮನಮೋಹಕ ನೃತ್ಯಗಳು!

ಲಲಿತ ಕಲಾ ಕೇಂದ್ರದ ಕಲಾವಿದರ ಹಾಗೂ ಶ್ರೀಮತಿಗಳಾದ ಸರೋಜ, ಪ್ರೇಮ, ವಿಮಲಾ ಮೊದಲಾದವರ ಸಂಗೀತ, ನೃತ್ಯ, ಅಭಿನಯಗಳು

ಸರಸ್ವತಿ ಪೂಜಾ, ಸತ್ಕಾರ, ನಂದಗೋಕುಲ, ಭಸ್ಮಾಸುರ ಮೋಹಿನಿ, ಶಿವಪಾರ್ವತಿ ಮೊದಲಾದ ಅತ್ಯಾಹ್ಲಾದಕರ ನೃತ್ಯಾಭಿನಯಗಳನ್ನು ನೋಡಲು ಮರೆಯದಿರಿ

—ಕಂಟ್ರಾಕ್ಟರ್ಸ್

ಉಡುಪಿ.

ಉಡುಪಿ ಮುನಿಸಿಪಲ್ ಕೌನ್ಸಿಲಿನ ಸ್ಪೆಶಲ್ ಸಭೆಯು—ಕಳೆದ ತಾ. 29ರಲ್ಲು ಚೇರ್ಮನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿದಾಗ ಲೋಕಲ್ ಬೋರ್ಡು ಇನ್ಸ್‌ಪೆಕ್ಟರರ ಸೂಚನೆಯಂತೆ ಮುನಿಸಿಪಲ್ ಬಸ್ ಸ್ಟೇಂಡಿನ ಪಾರ್ಸೆಲ್ ಮತ್ತು ಬುಕ್ಕಿಂಗ್ ಆಫೀಸುಗಳನ್ನು ಏಲಂ ಮಾಡಲು ಕೌನ್ಸಿಲು ತಯಾರಿಲ್ಲವೆಂದು ಕಾರಣಗಳನ್ನು ತೋರಿಸಿ, ಕೌನ್ಸಿಲಿನ ಹಿಂದಿನ ನಿರ್ಣಯವನ್ನು ಬದಲಾಯಿಸಲು ಶಕ್ಯವಿಲ್ಲವೆಂದು ಅವರಿಗೆ ತಿಳಿಸುವ ನಿರ್ಣಯವಾಯಿತು.

ಬಳಿಕ ಸಾಮಾನ್ಯ ಸಭೆಯು ಸೇರಿತು. ಉಡುಪಿ ಕೂಡಾ ಪದು ಮುನಿಸಿಪಾಲಿಟಿಗಳಿಗೆ ಇದೇ ಎಪ್ರಿಲ್ ತಿಂಗಳಿಂದ ಒಂದು ವರ್ಷದ ತನಕ ಹೆಲ್ತ್ ಆಫೀಸರರ ಇಲಾಖೆಯನ್ನು ಇಡಲಾಗಿದೆ ಎಂದು ಸೂಚಿಸಿದ ಸರಕಾರಿ ಆರ್ಡರನ್ನು ರಿಕಾರ್ಡು ಮಾಡಲಾಯಿತು. ಮುನಿಸಿಪಲ್ ಕ್ಷೇತ್ರದಲ್ಲಿಯ ಸರಕಾರಿ ಖಾಲಿ ಜಾಗದ ಟೇಕ್ಸನ್ನು ವಿನಾಯತಿ ಪಡಿಸಲಾದ್ದರಿಂದ ಮುನಿಸಿಪಾಲಿಟಿಯು ನೋಟೀಸಿನಂತೆ ಟೇಕ್ಸ್ ಕೊಡಲಾಗುವುದಿಲ್ಲವೆಂದು ಸೂಚಿಸಿದ ಜಿಲ್ಲಾ ಕಲೆಕ್ಟರರ ಪತ್ರ ಓದಲ್ಪಟ್ಟಿತು. ಅಂತಹ ವಿನಾಯತಿಯು ಜಾರಿಯಾದ ತಾರೀಕಿನವರೆಗಿನ ಟೇಕ್ಸ್ ಕೊಡಬೇಕೆಂದು ಜಿಲ್ಲಾ ಕಲೆಕ್ಟರರಿಗೆ ತಿಳಿಸಬೇಕೆಂದಾಯಿತು. ಸರಕಾರದ ಶರ್ತಗಳಿಗೊಳಪಟ್ಟು ಮುನಿಸಿಪಲ್ ಕ್ಷೇತ್ರದಲ್ಲಿ ಪಶುವೈದ್ಯರನ್ನು ಇರಿಸಿಕೊಳ್ಳಲು ಸಾಧ್ಯವಿದೆಯೋ ಎಂದು ಪ್ರಶ್ನಿಸಿದ ಪಶು ಇಲಾಖಾ ಡೈರೆಕ್ಟರರ ಪತ್ರವನ್ನು ರಿಕಾರ್ಡು ಮಾಡಲಾಯಿತು.

ವಿವಾಹ ಸಮಾರಂಭ—ದಿವಂಗತ ಯೇಣಗುಡ್ಡೆ ಹೊಸಮನೆ ತೇಜಪ್ಪ ಶೆಟ್ಟರ ಪುತ್ರಿ (ಶ್ರೀ ಕೆ. ಅನಂತ ಸೆಟ್ರ ಸೊಸೆ) ಶ್ರೀಮತಿ ಉಮಾವತಿಯನ್ನು ಪಡುಬಿದ್ರೆ ಹೊಸಮನೆ ನಾಗಪ್ಪ ಸೆಟ್ಟರ ಪುತ್ರ ಶ್ರೀ ಸೀತಾರಾಮ ಸೆಟ್ರರು ಕಳೆದ ತಾ 27ರಂದು ಪೂರ್ವಾಹ್ನ ಮೊದರ್ನ ಹಾ। ವಿ। ಶಾಲೆಯಲ್ಲಿ ವಿವಾಹವಾದರು, ನೂತನ ದಂಪತಿಗಳಿಗೆ ಶುಭಾಶಯಗಳು.

ಸತ್ಕಾರಕೂಟ—ಉಡುಪಿ ನಗರ ಸಭಾಧ್ಯಕ್ಷರಾದ ಶ್ರೀ ಯು. ಎಸ್. ನಾಯ್ಕರು ತಾವು ಕಟ್ಟಿಸಿದ ಶ್ರೀ ನಿವಾಸ,ಎಂಬ ಎರಡಂತಸ್ತಿನ ಭವ್ಯ ನವ ಕಟ್ಟಡದ ಪ್ರವೇಶೋತ್ಸವದ ನಿಮಿತ್ತ ಕಳೆದ ತಾ 30, 31 ಮತ್ತು 1ರಲ್ಲು ಭಾರೀ ಉಪಾಹಾರವನ್ನಿತ್ತರು,

ಸ್ಥಳೀಯ ಸರಕಾರಿ ಆಸ್ಪತ್ರೆ-ಯಲ್ಲಿಯ ನರ್ಸಮ್ಮನವರ ವರ್ತನೆ ಮತ್ತು ಶಿಸ್ತಿನ ವಿಚಾರದಲ್ಲಿ ದಿನ ಹೋಗುತ್ತ ಜನಾಪವಾದಗಳು ಜಾಸ್ತಿಯಾಗಿ ಕೇಳಬರುತ್ತಿದೆ. ಇವರು ತಮ್ಮ ಕಾರ್ಯಗಳನ್ನು ರೋಗಿಗಳ ಮನವೊಲಿಯುವ ರೀತಿಯಲ್ಲಿ ಮಾಡುವುದಿಲ್ಲವೆಂದೂ ಹೇಳಲಾಗುತ್ತದೆ. ಪರಿಣಾಮವಾಗಿ ರೋಗಿಗಳು ಒಳರೋಗಿಗಳಾಗಿ ಆಸ್ಪತ್ರೆಯಲ್ಲಿ ನಿಲ್ಲಲು ಕೂಡಾ ಅಂಜುತ್ತಾರೆ ಎನ್ನಲಾಗಿದೆ. ಡಾಕ್ಟರರು ಜನಪ್ರಿಯರಾಗಿದ್ದರೂ ನರ್ಸಮ್ಮನವರು ಸ್ವೇಚ್ಛಾಚಾರಿಗಳಾಗಿರುವುದು ಶೋಚನೀಯ. ಇನ್ನಾದರೂ ಇವರನ್ನು ವರ್ಗಾಯಿಸುವುದು ಕ್ಷೇಮಕರವೆನ್ನಲಾಗಿದೆ.

ಕೌನ್ಸಿಲ್ ಒಫ್ ಸ್ಟೇಟಿಗೆ—ದ. ಕ. ಜಿಲ್ಲೆಯ ವಕೀಲ್ ಶ್ರೀ ಕೆ. ಸದಾನಂದ ಹೆಗ್ಡೆಯವರು ಕಾಂಗ್ರೆಸ್ ಪಕ್ಷದಿಂದಲೂ ಶ್ರೀ ಬಿ. ವಿ. ಕಕ್ಕಿಲ್ಲಾಯರು ಕಮ್ಯೂನಿಸ್ಟ್ ಪಕ್ಷದಿಂದಲೂ ಆರಿಸಲ್ಪಟ್ಟಿರುವರು.

ಮೂಡಬಿದರೆ—ಇಲ್ಲಿಯ 'ತ್ರಿಭುವನ ತಿಲಕ ಚೂಡಾಮಣಿ ಬಸದಿ'ಯ ರಥೋತ್ಸವದ ಸುಸಂದರ್ಭದಲ್ಲಿ ಎಪ್ರಿಲ್ ದಿನಾಂಕ 9 ಮತ್ತು 10ರಲ್ಲು ಶ್ರೀ ಶೃಂಗಾರಕವಿ ರತ್ನಾಕರ ವರ್ಣಿಯ ಜಯಂತ್ಯುತ್ಸವವು ವಿವಿಧ ಕಾರ್ಯಕ್ರಮಗಳಿಂದ ಜರಗುವುದು.

ಕುಂಬಳೆ—ಜಿಲ್ಲಾ ಬೋರ್ಡಿನ ಪರವಾಗಿ ಕಳೆದ ತಾ. 26ರಂದು ಇಚ್ಲಂಪಾಡಿ ಗ್ರಾಮಕ್ಕೆ ಸೇರಿದ ಕೊಡಿಯಮ್ಮ ಎಂಬ ಸ್ಥಳದಲ್ಲಿ ಒಂದು ಶಾಲೆ ತೆರೆಯಲಾಗಿದೆ. ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಬಿ. ದೇವಪ್ಪ ಆಳ್ವರು ವಹಿಸಿದ್ದರು.

ಹಿರಿಯಡಕ—ಕಳೆದ ತಾ 26ರಂದು ಸಂಜೆ ಯುಗಾದಿ ಹಬ್ಬ ಮತ್ತು ಆರ್ಯ ಸಮಾಜ ಸ್ಥಾಪನಾ ದಿನಾಚರಣೆಯು ಗಾಂಧಿ ಮೈದಾನದಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಆಚರಿಸಲಾಯಿತು. ಶ್ರೀ ಕೆ. ಮಹಾಬಲ ಹೆಗ್ಡೆಯವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಬಿ. ಎಲ್. ನೆಲ್ಲಿ, ಎಮ್. ಅನಂತಪ್ಪ ಕಿಣಿ, ಹಿ. ಕೆ ಅನಂತಯ್ಯ, ಎಮ್. ಗೋವಿಂದ ಸಟ್ಟಿ ಮೊದಲಾದವರು ಸಮಯೋಚಿತ ಮಾತುಗಳನ್ನಾಡಿದರು.

ಕಾಪಿನಲ್ಲಿ ಜಿಲ್ಲಾ ಬೋರ್ಡು ಪ್ರೆಸಿಡೆಂಟ್— ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಕಳೆದ ತಾ 23ರಲ್ಲು ಬೆಳಿಗ್ಗೆ ಮೊಕ್ಕಾಂ ಮಾಡಿ ಅಲ್ಲಿಯ ಹಾ। ವಿ। ಶಾಲಾ ವಿಸ್ತರಣ ಸಮಿತಿಯವರು ಸಾಧಾರಣ ರೂ. 14000 ವೆಚ್ಚ ಮಾಡಿ ಕಟ್ಟಿಸಿದ ಸದ್ರಿ ಶಾಲೆಯ ಹೊಸ ಕಟ್ಟಡವನ್ನು ತೆರೆಯುವ ಸಮಾರಂಭವನ್ನು ನೆರವೇರಿಸಿದರು. ಬೋರ್ಡಿನ ಪರವಾಗಿ ಹೊಸ ಕಟ್ಟಡವನ್ನು ದಾನವಾಗಿ ಸ್ವೀಕರಿಸುತ್ತಾ ಊರ ಮಹನೀಯರೂ ಇತರರೂ ಸೇರಿ ಪ್ರಾಥಮಿಕ ವಿದ್ಯಾಭ್ಯಾಸದ ಸಫಲತೆಗಾಗಿ ಕಟ್ಟೋಣವನ್ನು ಕಟ್ಟಿಸಿ ಬೋರ್ಡಿನೊಡನೆ ಸಹಕರಿಸಿದ ಬಗ್ಗೆ ಅವರೆಲ್ಲರ ಉಪಕಾರ ಸ್ಮರಣೆ ಮಾಡಿದರು.

ದ. ಕ. ಜಿಲ್ಲೆಯ ರಸ್ತೆ ಸೇತುವೆ- ಮೊದಲಾದವುಗಳು ಜನವಾಹನ ಸಂಚಾರಕ್ಕೆ ಇನ್ನಷ್ಟು ಸುಗಮವಾಗುವಂತೆ ದ. ಕ. ಜಿಲ್ಲಾ ಬೋರ್ಡು ಪ್ರೆಸಿಡೆಂಟರು ಕೊಯಮುತ್ತೂರಿನ ಸುಪರಿಂಟೆಂಡಿಂಗ್ ಎಂಜಿನಿಯರ್ (ಹ್ಯಾವೇಸ್) ಅವರ ಕೂಡೆ ವಿಚಾರ ವಿನಿಮಯ ಮಾಡಿ ಹಲವಾರು ಸೂಚನೆಗಳನ್ನು ಕೊಟ್ಟಿರುವರು. ಜಿಲ್ಲೆಯ ಹೆಚ್ಚಿನ ನದಿಗಳಲ್ಲಿ ಇಳಿತದ ವೇಳೆ ನೀರಿನ ಅಭಾವದಿಂದಾಗಿ ಗಾಡಿ ವಾಹನಗಳನ್ನು ಒಯ್ಯಲು ತಡೆಯಾಗುತ್ತಿರುವುದಕ್ಕೆ ಆಯಾಯ ವೇಳೆಯಲ್ಲಿ ವಾಹನ ಒಯ್ಯುವ ದೋಣಿ ಜಂಗಲುಗಳು ಹೋಗಲು ಬೇಕಾಗುವಷ್ಟು ನೀರು ನಿಲ್ಲುವಂತಹ ಒಂದು ಭಾಗವನ್ನು ತಯಾರಿಸುವುದು. ಈ ಕೆಲಸದ ವೆಚ್ಚವನ್ನು ಟೋಲ್ ಗೇಟ್ ಮೂಲಕ ಜನರಿಂದ ವಸೂಲು ಮಾಡುವುದು, ಮಂಗಳೂರು ಹೋಡು ಮಾರ್ಗಕ್ಕೆ ಸಿಮೆಂಟ್ ಕಾಂಕ್ರೀಟ್ ಹಾಕುವುದು ಇತ್ಯಾದಿ. ಈ ವಿಚಾರಗಳಲ್ಲಿ ಜಿಲ್ಲಾ ಎಮ್. ಎಲ್. ಎ.ಗಳು ನಿಗಾ ಕೊಡುವುದು ಉತ್ತಮ.

ಹೊಸ ಪಕ್ಷ ಪತ್ರಿಕೆ ಶ್ರೀ ಅಮ್ಮೆಂಬಳ ಬಾಳಪ್ಪನವರ ಸಂಪಾದಕತ್ವದಲ್ಲಿ 'ಮಿತ್ರ' ನಾಮಸಂಕಿತ ಕನ್ನಡ ಪಕ್ಷಪತ್ರಿಕೆಯೊಂದು ಜನ್ಮತಾಳಿದೆ.

ಋತುಸ್ರಾವ ನಿಂತಿತು

ಕುಮಾರಿ ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು. ಹಠೋಟಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ– ಬೆಲೆ; ರೂ. 3-; ಸ್ಪೆಶ್ಯಲ್ ರೂ. 5– ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ ಹನ್ನೆರಡಾಣೆ ಪ್ರತ್ಯೇಕ]

Mrs. D. DEVEE, F. D8. (N. J.)
Tollygunge CALCUTTA.
ಸ್ಟಾಕಿಸ್ಟರು ಶಹಾ ಕಂಪೆನಿ, ಮಂಗಳೂರು

ಕವಿರಾಜ ಯನ್. ಯನ್. ಸೇನರ
ಶಾಸ್ತ್ರೀಯ ಔಷಧಿಗಳು ಈಗಲೇ ಬಂದಿವೆ

ಬೃಹತ್ ಅಮೃತಬಳ್ಳಿ ಕಷಾಯ
ಪ್ರಸೂತಾರಿಷ್ಟ
[illegible] ರಸಾಯನ
ನೇತ್ರಬಿಂಧು
ಕರ್ಪೂರಾರಿಷ್ಟ
ದುರ್ಗಾ ಪುನರ್ನಾಸವ
ಬಾಸಾರಿಷ್ಟ
ಕುಂಕುಮಾಸವ
ಮೃಗಾಂಕ ದ್ರಾವ

ದರವನ್ನು ವಿಚಾರಿಸುವದು.
ಏಜಂಟ್:—
ಕಂಪೆನಿ, ಮಂಗಳೂರು ನಂ. 1ಶಾ.

ZANDU PHARMACEUTICAL WORKS LTD.
Manufacturers of Ayurvedic and Alopathic Medicines BOMBAY, 14.

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ 3/- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.
2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎಸ್. ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

DAMODAR & CO.,
Nainiappa Naicken Street, Park Town-**MADRAS** 3.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K



ತಾರೀಕು 4—4—1952ರಿಂದ
ಪ್ರಚಂಡ 2ನೇ ವಾರ
ಮನರಂಜನೆಯ ಚಿತ್ರ

ಜಗನ್ಮೋಹಿನಿ

ಹರಿಣಿ, ಪ್ರತಿಮಾದೇವಿ, ಮರಿರಾವ್

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್ ಉಡುಪಿ.

For Protection and Provision
Consult
The New Guardian of India Life Insurance Co., Ltd.
Estd] Head office: **MADRAS** [1934

A Policy in this progressive Life Office is good investment; its Agency is valuable business connection.

Applications for representation are invited from influential persons.

Please apply to:
The Branch Manager,
Diamond Building, Hampankatta,
MANGALORE, S. K.

ಕಾಂಗ್ರೆಸ್ ಕಾರ್ಯಗಳಲ್ಲಿ ವಿದ್ಯುತ್ಸಂಚಾರ

ಮಹಾ ಚುನಾವಣಾ ನಂತರ ಕಾಂಗ್ರೆಸ್ ಕಾರ್ಯಕರ್ತರಲ್ಲೂ—ಪ್ರಾಗತಿಕ ಕಾರ್ಯಗಳಲ್ಲೂ ತ್ವರಿತದ ಆವೇಗ ಉಂಟಾಗಿರುವದು ಕಾಂಗ್ರೆಸ್ಸಿಗರು ತಮ್ಮ ಹೊಣೆಯನ್ನರಿತುಕೊಂಡದ್ದರ ನೈತಿಕವಾಗಿದೆ. ಈಚೆಗೆ ಆಹಾರಾಭಾವವು ತಲೆದೋರಿದ್ದು ಅದಕ್ಕೆ ಸೂಕ್ತವಾದ ಕಾರ್ಯ ಕೈಗೊಳ್ಳಲು ಭಾರತ ಸರಕಾರವು ವಿಧಾಯಕ ಕಾರ್ಯಕ್ರಮಗಳ ಮೂಲಕ ತೊಡಗಿರುವದು. ಪಂಚವಾರ್ಷಿಕ ಯೋಜನೆ ಮತ್ತು ಇನ್ನಿತರ ನೀರಾವರೀ ಪ್ರಯೋಗಗಳಲ್ಲಿ ಇಂಡೋ ಅಮೇರಿಕನ್ ತಾಂತ್ರಿಕ ಸಹಕಾರ ಒಡಂಬಡಿಕೆಯ ವಿಧ್ಯುಕ್ತ ಸಮಿತಿಯವರಾದ ಯೋಜನಾ ಆಯೋಗ ಸಮಿತಿಯವರು ಕೈಗೊಂಡಿರುವ 'ಸಮಾಜ ವಿಕಾಸ ಯೋಜನೆ'ಯೂ ಒಂದಾಗಿರುತ್ತದೆ.

ನೀರಾವರೀ ಸೌಕರ್ಯ—ಮಳೆಬೆಳೆಯ ಅನುಕೂಲತೆಯನ್ನು ನೋಡಿಕೊಂಡು ಒಟ್ಟು 15,610 ಹಳ್ಳಿಗಳಲ್ಲಿ ಈ ಯೋಜನೆಯನ್ನು ಕೈಗೊಳ್ಳುವರು. ಒಟ್ಟು 46 ವಿಭಾಗಗಳನ್ನು ಹಾಗೂ 19 ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಮೂರು ವರ್ಷಗಳಲ್ಲಿ ಈ ಯೋಜನೆಯನ್ನು ಮುಕ್ತಾಯಗೊಳಿಸುವ ನಿಶ್ಚಿತ ಧೋರಣೆಯನ್ನಿಟ್ಟುಕೊಳ್ಳಲಾಗಿದೆ. ಇದೀ ಕಾರ್ಯಕ್ರಮಕ್ಕಾಗಿ 38 ಕೋಟಿ ರೂ. ತಗಲಬಹುದೆಂದು ಅಂದಾಜು ಹಾಕಲಾಗಿದೆ.

ಈ ಕಾರ್ಯಕ್ರಮದಲ್ಲಿ ಆಹಾರಾಭಿವೃದ್ಧಿಯ ನಂತರ, ಗ್ರಾಮೋದ್ಯೋಗ, ಸಣ್ಣ ಸಣ್ಣ ಕೈಗಾರಿಕೆ ಶಿಕ್ಷಣ, ಆರೋಗ್ಯ ದನಗಳ ಸಂರಕ್ಷಣೆ ಮೊದಲಾದವುಗಳು ಸಮಾವೇಶಗೊಂಡಿರುವವು. ಅಮೇರಿಕೆಯು ತಾಂತ್ರಿಕ ಸಹಕಾರ ನಿಧಿಯಿಂದ 25 ಕೋಟಿ ರೂ ಸಹಾಯ ಮಾಡಲಿರುವದು. ಕೇಂದ್ರ ಸರಕಾರವು ಅಷ್ಟೇ ಹಣವನ್ನು ವಿನಿಯೋಗಿಸುವದೆಂದು ಗೊತ್ತಾಗಿದೆ.

ಪಾಕಿಸ್ತಾನಿಗಳ ಪಶ್ಚಾತ್ತಾಪ– ಉದ್ದಿಮೆಗಾರರ ಉದ್ದೇಶ ಜನತೆಯ ರಕ್ತಹೀರುವದಲ್ಲ

ಯೋಜನೆಯನ್ನು ಕಾರ್ಯಗತ ಮಾಡಲು ಆಯೋಗ ಸಮಿತಿಯವರು ಕೇಂದ್ರದಲ್ಲಿ ಮಧ್ಯವರ್ತಿ ಸಮಿತಿ, ಸಲಹೆಗಾರ ಮಂಡಳಿ ಹಾಗೂ ಆಡಳಿತೆಗಾರ ಈ ಏರ್ಪಾಟನ್ನು ಸೂಚಿಸಿದ್ದು ರಾಜ್ಯಗಳಲ್ಲಿ ರಾಜ್ಯವಿಕಾಸ ಸಮಿತಿ, ವಿಕಾಸಕಮೀಶನರ, ಜಿಲ್ಲಾ ವಿಕಾಸ ಅಧಿಕಾರಿಗಳು ಮೊದಲಾದವರನ್ನು ಏರ್ಪಾಟು ಮಾಡಲಾಗುವದು.

ಭಾರತ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ರೂಪುಗೊಳ್ಳುತ್ತಿರುವ ಈ ಯೋಜನೆಯಲ್ಲಿ ಮದ್ರಾಸದ್ದೂ ನಮ್ಮ ಜಿಲ್ಲೆಯೂ ಅದರಲ್ಲಿ ಪಾಲ್ಗೊಳ್ಳುವದು. ಮದ್ರಾಸದಲ್ಲಿ 28 ಲಕ್ಷ ಜನಸಂಖ್ಯೆ ಹಾಗೂ 1274 ಹಳ್ಳಿಗಳಿಂದ ಯುಕ್ತವಾದ ಕೆಳಗಿನ 6 ವಿಭಾಗಗಳು ವಿಕಾಸಕ್ಕಾಗಿ ಆರಿಸಲ್ಪಟ್ಟವು. 1 ಕರ್ನೂಲು ಕಡಪಾ ಕಾಲ್ವೆ ಪ್ರದೇಶ 2 ಗೋಬಿ ಈರೋಡ–ಭವಾನಿ–ಧರ್ಮಪುರಿ ತಾಲೂಕುಗಳು. 3 ಮಲಬಾರ ಜಿಲ್ಲೆಯ ಪಾಲಘಾಟ, 4 ಪೂರ್ವ ಗೋದಾವರೀ ಜಿಲ್ಲೆಯ ಕಾಕಿನಾಡ-ಪೆದ್ದಾಪುರಂ ಪ್ರದೇಶ- 5 ದಕ್ಷಿಣಕನ್ನಡ ಜಿಲ್ಲೆಯ ಕಾರ್ಕಳ-ಮಂಗಳೂರ ಪ್ರದೇಶ 6 ಮಧುರಾಯಿ ಜಿಲ್ಲೆಯ ನೀಲಕೋಟ್ಟೈ ವೇಲೂರ—ಮಧುರಾಯಿ ಪ್ರದೇಶವಿರುವವು.

ಪಾಕಿಸ್ತಾನಿಗಳ ಪಶ್ಚಾತ್ತಾಪ

ಸಂ. ರಾ. ಸಂಘದ ಕಾಶ್ಮೀರ ಪ್ರತಿನಿಧಿ ಡಾ| ಗ್ರಾಹ್ಯಾಮರು ಭಾರತ ಪಾಕಿಸ್ತಾನಗಳೊಡನೆ ತತ್ಸಂಬಂಧವಾಗಿ ಮಾತುಕತೆ ನಡೆಸುತ್ತಿದ್ದು ಸಮಸ್ಯೆಯು ಸೌಹಾರ್ದಮಯವಾಗಿ ಬಗೆಹರಿಯಬಹುದೆಂಬ ಭವಿಷ್ಯ ನುಡಿದಿರುವರು. ಪಾಕಿಸ್ತಾನಗಳಿಗೆ ಇದು ಸಹನೀಯವಾಗಲಿಲ್ಲ. ರಕ್ತಪಾತವಿಲ್ಲದೆ ಸಂಧಾನ—ಸೌಹಾರ್ದ ಸಾಧ್ಯವೇ ಇಲ್ಲವೆಂಬ ಧ್ವನಿ ಅವರದು. ಮಾತ್ರವಲ್ಲ ಈಚೆಗೆ ಅಮೇರಿಕಾನರು ಭಾರತದ ನಾನಾ ಯೋಜನೆಗಳಿಗೆ ಆರ್ಥಿಕ ಸಹಾಯವನ್ನು ನೀಡುತ್ತಿರುವದೂ—ತನ್ನ ಪ್ರತಿನಿಧಿಗಳನ್ನು ಭಾರತಕ್ಕೆ ಕಳಿಸುತ್ತಿರುವದೂ ಪಾಕಿಸ್ತಾನಿಗಳಿಗೆ ಸಹನೀಯವಾಗಿರುವದಿಲ್ಲ. ಅಂತಲೇ ಆಂಗ್ಲೋ ಅಮೇರಿಕನ್ ಪ್ರತಿನಿಧಿಯಾದ ಡಾ| ಗ್ರಾಹ್ಯಾಮರ ಮಧ್ಯಸ್ಥಿಕೆಯಲ್ಲಿ ಗೌರವ ಇಲ್ಲವಂತೆ. ಕಾಶ್ಮೀರದ ಮೇಲೆ ಭಾರತದ ಪ್ರಭುತ್ವವು ಭದ್ರವಾಗುವಂತೆ ಅಮೇರಿಕೆಯು ನೆರವಾಗುತ್ತಿದೆಂದೂ, ಭಾರತ ಅಮೇರಿಕೆಗಳಲ್ಲಿ ಗುಪ್ತ ಒಪ್ಪಂದವಾಗಿದ್ದು ಈ ಒಪ್ಪಂದಕ್ಕೆ ಬ್ರಿಟನ್ನದ ಚರ್ಚಿಲ್ ಸರಕಾರವೂ ತನ್ನ ಬೆಂಬಲ ನೀಡಿದೆಂದೂ ಪಾಕಿಸ್ತಾನದ ಮುಖಪತ್ರವಾದ ಡಾನವು ಬರೆದಿದೆ. ಭಾರತ ಅಮೇರಿಕೆಯೊಳಗೆ ಬೆಳೆಯುತ್ತಿರುವ ಸೌಹಾರ್ದದ ಮೇಲೆ ಈ ಬಗೆಯ ತಪ್ಪು ಅಭಿಪ್ರಾಯಗಳನ್ನು ಕಲ್ಪಿಸಿ ದ್ವೇಷ ಭಾವನೆಯನ್ನು ಹುಟ್ಟಿಸುವದನ್ನು ಪಾಕಿಸ್ತಾನಿಗಳು ಕೈಗೊಂಡಿರುವರು. ಸಂಧಿಕಾಲದಲ್ಲಿ ಗುಲ್ಲೆಬ್ಬಿಸುವದೇ ಅವರ ವೈಶಿಷ್ಟ್ಯವೆಂದಾದ ಮೇಲೆ ಭಾರತ ಸರಕಾರವಾಗಲೀ ಆಂಗ್ಲೋ ಅಮೇರಿಕನರಾಗಲೀ ಈ ಕುರಿತು ಚಿಂತಿಸಬೇಕಾಗಿಲ್ಲ.

ಉದ್ದಿಮೆಗಾರರ ಉದ್ದೇಶ ಜನತೆಯ ರಕ್ತ ಹೀರುವದಲ್ಲ

ದಿಲ್ಲಿಯಲ್ಲಿ ಕೂಡಿದ ಹಿಂದೀ ವರ್ತಕ ಸಂಘಗಳ ಮಹಾಮಂಡಲದ ರಾಪ್ಯ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಉದ್ದಿಮೆದಾರರ ಬಗ್ಗೆ ಶ್ರೀ ಜವಾಹರಲಾಲ ನೆಹರೂರವರು ಸ್ಪಷ್ಟ ಮತ್ತು ನೇರವಾದ ಆದೇಶವನ್ನಿತ್ತಿರುವರು. ತಮ್ಮ ಲಾಭವನ್ನು ಚಿಂತಿಸುವಲ್ಲಿ ಜನತೆಯ ಹಿತವನ್ನು ಮುಖ್ಯವಾಗಿ ಲಕ್ಷಿಸತಕ್ಕದ್ದೆಂದು ಹೇಳಿರುವ ಅಂಶ ಮಹತ್ವದ್ದಾಗಿದೆ ಶ್ರೀ ನೆಹರೂರವರು ತಮ್ಮ ಭಾಷಣದಲ್ಲಿ: "ಜನತೆಯ ಹಿತಸಂಬಂಧಗಳನ್ನು ರಕ್ಷಿಸುವ ಮಟ್ಟಿಗೆ ಖಾಸಗಿ ಉದ್ದಿಮೆಗಳಿಗೆ ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿ ಸ್ಥಾನವಿರುವದು. ಖಾಸಗಿ ಉದ್ದಿಮೆಗಳು ಜನತೆಯ ಹಿತಕ್ಕೆ ಮಾರಕವಾದಕ್ಷಣಕ್ಕೆ ಅದ ಬೇರು ಸಹಿತ ನಿರ್ಮೂಲನವಾಗಬೇಕಾಗುವದು. ಜಗತ್ತಿನಲ್ಲಿ ಇಂದು ಪ್ರಭಾವ ಬೀರುವ ಹೊಸ ಶಕ್ತಿಗಳನ್ನು ಉದ್ದಿಮೆದಾರರು ಸರಿಯಾಗಿ ತಿಳಿದುಕೊಳ್ಳದಿದ್ದರೆ ದೇಶವು ಪ್ರಗತಿ ಹೊಂದಲಾರದ. ದೇಶದ ಮುಂದಿರುವ ಮುಖ್ಯ ಸಮಸ್ಯೆಯೆಂದರೆ ಜನತೆಯ ಸ್ಥಿತಿ ಸುಧಾರಿಸುವದೇ ಆಗಿದೆ. ಇದನ್ನು ಸಾಧಿಸಲು ಜನತೆಯ ಸಹಕಾರ ಎಂತು ಪಡೆಯಬಹುದು? ಭವಿಷ್ಯದ ಬಗ್ಗೆ ಅವರಲ್ಲಿ ಆಶಾವಾದವನ್ನು ಎಂತು ಹುಟ್ಟಿಸಬಹುದು? ಇವು ಮಹತ್ವದ ಪ್ರಶ್ನೆಗಳಾಗಿವೆ. ಜನತೆಯಲ್ಲಿ ಉಜ್ವಲ ಭವಿಷ್ಯದ ಆಶಾವಾದವನ್ನು ಹುಟ್ಟಿಸಲು ಸಮರ್ಥರಾಗದಿದ್ದರೆ ಪ್ರಗತಿಗೆ ಅಗತ್ಯವಿರುವ ಜನತೆಯ ಹೃತ್ಪೂರ್ವಕ ಸಹಕಾರವು ದೊರೆಯಲಾರದು. ಜನತೆಯಲ್ಲಿ ಭವಿಷ್ಯದ ಬಗ್ಗೆ ಆಶಾವಾದ ಜಾಗೃತವಾದರೆ ಅವರು ಅನೇಕ ತಾತ್ಕಾಲಿಕ ತೊಂದರೆಗಳನ್ನು ಸಂತೋಷದಿಂದ ಸಹಿಸಿಕೊಂಡು ರಾಷ್ಟ್ರದ ಪುನರ್ರಚನೆಯ ವಿವಿಧ ಚಟುವಟಿಕೆಗಳಲ್ಲಿ ತಮ್ಮ ಪಾಲಿನ ಕಾರ್ಯವನ್ನು ಸಂತೋಷದಿಂದ ಮಾಡಲು ಮುಂದೆ ಬರುವರು" ಎಂದು ಹೇಳಿದರು.

(೧ನೇ ಪುಟದಿಂದ ಮುಂದುವರಿದುದು.)

ಕಾಂಗ್ರೆಸಿನ ಉಚ್ಚ ಧ್ಯೇಯ, ಶಿಸ್ತುಗಳನ್ನು ಪರಿಪಾಲಿಸುವದರ ಮೂಲಕ ತೋರಿಸಿ ಕೊಡಬೇಕು. ಜಾಗತಿಕ ರಂಗದಲ್ಲಿ ಭಾರತವು ಗೌರವಾನ್ವಿತ ಸ್ಥಾನಮಾನವನ್ನು ಪಡೆಯುವಂತೆ ಅದನ್ನು ಸಂಘಟಿಸಬೇಕು. (2) ದಕ್ಷಿಣ ಆಫ್ರಿಕೆಯಲ್ಲಿಯ ಭಾರತೀಯರ ಸಮಸ್ಯೆಯನ್ನು ಅಲ್ಲಿಯ ಸರಕಾರವು ಸಂ. ರಾ. ಸಂಘದ ಆದೇಶದಂತೆ ನಡೆದುಕೊಳ್ಳದೆ ವರ್ಣದ್ವೇಷದ ಮೂಲಕ ದಬ್ಬಾಳಿಕೆಯನ್ನು ನಡೆಸುತ್ತಿರುವದು ವಿಷಾದ ಪೂರ್ವಕ ನೆನಸಿ ಆಫ್ರಿಕೆಯಲ್ಲಿ ಆಫ್ರಿಕನ್ನರ ಹಿತಸಂಬಂಧಗಳಿಗೆ ಪ್ರಥಮ ಪ್ರಾಶಸ್ತ್ಯವೀಯಬೇಕು. ಅವನ್ನು ಶೋಷಿಸಿ ತಮಗಾಗಿ ಅಧಿಕ ಸವಲತ್ತನ್ನು ಪಡೆಯುವ ಯಾವುದೇ ಪ್ರಯತ್ನದಲ್ಲಿ ಭಾರತೀಯರು ಸಹಕರಿಸತಕ್ಕದ್ದಲ್ಲವೆಂಬ ಸೂಚನೆ. (3) ಭಾರತ ವಿದೇಶಾಂಗ ನೀತಿಯು ಯಾವುದೇ ರಾಷ್ಟ್ರದನ್ನು ಹತ್ತಿ ಸಾಮ್ರಾಜ್ಯಶಾಹಿಗೆ ಬೆಂಬಲವನ್ನೀಯುವದಾಗಿರದೆ, ಶಾಂತಿ ಸಮಾನತೆಗಾಗಿ ಹೋರಾಡುವ ಧೋರಣೆಯುಳ್ಳದ್ದಾಗಿರಬೇಕು. (4) ಆಹಾರ ಸ್ವಾವಲಂಬನ ಧೋರಣವನ್ನು ವಿಧಾಯಕ ಕಾರ್ಯಕ್ರಮಗಳ ಮೂಲಕ ಅಧಿಕೋತ್ಪನ್ನಕ್ಕೆ ಪ್ರೋತ್ಸಾಹ ಕೊಡುವದು

"ಅಕ್ಕ ನೀನು ಏತಕ್ಕಾಗಿ ಬ್ರೂಕ್ ಬಾಂಡ್ ಚಹವನ್ನೇ ಒತ್ತಿಕೇಳುವೆ, ಎಂಬುದನ್ನು ನನಗೆ ತಿಳಿಸು"

"ನಾನು ಅದನ್ನು ಏತಕ್ಕಾಗಿ ಕೊಂಡುಕೊಳ್ಳುವೆನೆಂದರೆ ಅದು ನನ್ನ ಹಣಕ್ಕೆ ಉತ್ತಮ ಪ್ರತಿಫಲವನ್ನು ಕೊಡುತ್ತದೆ. ಒಂದು 2 ಔನ್ಸ್ ಪೊಟ್ಟಣದಲ್ಲಿ 30 ಕಪ್ಪುಗಳಾಗುವಷ್ಟು ಚಹವನ್ನು ಮಾಡಬಹುದು. ಇದಲ್ಲದೆ ಬ್ರೂಕ್ ಬಾಂಡ್ ಚಹದ ಶುದ್ಧತೆ ಮತ್ತು ಗುಣದ ಬಗ್ಗೆ ನನಗೆ ಯಾವಾಗಲೂ ನಂಬಿಕೆಯಿದೆ."

ಬ್ರೂಕ್ ಬಾಂಡ್ ಚಹಾ

★ ಲೋಕಾಂತ ★

ಟ್ಯೂನಿಸಿಯಾ ಪ್ರಶ್ನೆ ಭದ್ರತಾಮಂಡಳಿಗೆ?

ಟ್ಯೂನಿಸಿಯಾದಲ್ಲಿಯ ನಾಲ್ವರು ಮಂತ್ರಿಗಳು ಬಂಧಿಸಲ್ಪಟ್ಟದ್ದನ್ನು ಕೇಳಿ ಪ್ಯಾರಿಸದಲ್ಲಿದ್ದ ಇನ್ನಿಬ್ಬರು ಮಂತ್ರಿಗಳು ಜಿನೇವಾ ಮುಖಾಂತರ ಇಲ್ಲಿಗೆ ಆಗಮಿಸಿದ್ದು ಫ್ರೆಂಚ ಸರಕಾರವು ಟ್ಯೂನಿಸಿಯಾದಲ್ಲಿ ನಡೆಸಿದ ದಬ್ಬಾಳಿಕೆಯ ವಿಚಾರಣೆ ನಡೆಸಬೇಕೆಂದು ಭದ್ರತಾಮಂಡಳಿಕ್ಕೆ ತಂತಿ ಕಳಿಸಿರುವರು. ಭಾರತ ಸರಕಾರವು ಟ್ಯೂನಿಸಿಯಾದಲ್ಲಿ ನಡೆದ ಘಟನೆಗಾಗಿ ವಿವಂಚನೆ ವ್ಯಕ್ತಮಾಡಿರುವದು.

ಅಮೇರಿಕೆಯ ಪ್ರಳಯ ಬಾಂಬು

ಅಮೇರಿಕೆಯು ಇನ್ನು 5 ವರ್ಷಗಳ ಅವಧಿಯಲ್ಲಿ ಜಗತ್ತಿನಲ್ಲಿಯ ಪ್ರತಿಯೊಬ್ಬರನ್ನು ಸಂಹರಿಸಲು ಬೇಕಾಗುವಷ್ಟು ಅಣುಬಾಂಬುಗಳಿಂದ ಯುಕ್ತವಾದುದಾಗುವದೆಂದು ಅಣುವಿಜ್ಞಾನಿಗಳಾದ ಯುಯಿ ಬಿಡೆನಾರ ಅವರು ಹೇಳಿದರು.

ಕೊರಿಯಾ ಯುದ್ಧ ಇನ್ನೂ ನಾಗುವದು?

ಕೊರಿಯ ಯುದ್ಧ ಬೇಗ ಮುಕ್ತಾಯವಾಗುವದೆಂಬ ಬಗ್ಗೆ ತಮಗೆ ಆಶೆ ಇಲ್ಲವೆಂದು ಟ್ರಿಗಿಲೀ ಅವರ ಸಹಾಯಕರಾದ ಅಂಡ್ರ್ಯು ಕಾರ್ಡಿಯವರು ಅಭಿಪ್ರಾಯಪಟ್ಟರು.

ಇರಾಣಕ್ಕೆ ಅಮೇರಿಕೆಯ ಸಾಲ ಅಗತ್ಯವಿಲ್ಲ.

ಇರಾಣವು ಅಮೇರಿಕೆಯಿಂದ ಸಾಲ ಕೇಳಿದ 15 ಕೋಟಿ ಡಾಲರುಗಳನ್ನು ನಿರಾಕರಿಸುವದೆಂದೂ ಇರಾಣಕ್ಕೆ ತನ್ನ ಉದ್ದಿಮೆಯಿಂದ ರಾಷ್ಟ್ರೀಯ ಇತಿಹಾಸಗಳಿಗೆ ಭಂಗ ಬಾರದಂತೆ ಸಾಕಷ್ಟು ಗಳಿಸುವ ಯೋಗ್ಯತೆಯಿದೆಯೆಂದೂ ವಿದೇಶ ವಕ್ತಾರನು ಹೇಳಿರುವನು.

ಕಾಶ್ಮೀರದ ಬಗ್ಗೆ ಆತುರ?

ಭಾರತ ಮತ್ತು ಪಾಕಿಸ್ತಾನದ ನಡುವೆ ವೈರವ್ಯವು ಕಡಿಮೆಯಾಗುತ್ತಿದ್ದು ಕಾಶ್ಮೀರದ ಬಗ್ಗೆ ಒಪ್ಪಂದವಾದರೂ ಆಗಬಹುದೆಂದು ಇಲ್ಲಿಗೆ ಆಗ[illegible]ದ ಡಾ। ಘ್ರಾಂಕ ಪ್ರಮಾನುರು ಹೇಳಿದರು. ಭದ್ರ[illegible]ಕ್ಕೆ ಒಪ್ಪಿಸುವ ವರದಿಯನ್ನು ಜಿನೇವಾದಲ್ಲೀಗ ಡಾ। ಗ್ರಾಹ್ಯಾಮರು ಸಿದ್ಧಗೊಳಿಸುತ್ತಲಿದ್ದಾರೆ.

ಗಂಗಾ ನದಿಗೆ ರೈಲ್ವೆ ಪೂಲು

ಗಂಗಾನದಿಯ ಮೇಲೆ ಬ್ರಾಡ್‌ಗೇಜ ರೇಲ್ವೆಯ ಸಲುವಾಗಿ ಎಲ್ಲಿ ಪೂಲು ಕಟ್ಟಬೇಕೆಂಬ ಸಲುವಾಗಿ ಸರ್, ವಿಶ್ವೇಶ್ವರಯ್ಯನವರು ಭಾರತ ಸರಕಾರಕ್ಕೆ ಸಲಹೆ ಕೊಡಲಿರುವರು. ಸರ್. ವಿಶ್ವೇಶ್ವರಯ್ಯನವರ ಸಹಾಯಕ್ಕೆ ಮೂವರು ಆಸೆಸ್ಸರನ್ನು ಕೊಡಲಾಗಿದೆ. ಇವರೆಲ್ಲರೂ ಮಾರ್ಚ 24ಕ್ಕೆ ದಿಲ್ಲಿಯಿಂದ ಸ್ಥಳದ ಪರೀಕ್ಷೆಗೆ ಹೊರಟಿರುವರು.

ಸುಪ್ರಸಿದ್ಧ ಸಂಗೀತಗಾರರಿಗೆ ಗೌರವ

ರಾಷ್ಟ್ರಾಧ್ಯಕ್ಷ ಶ್ರೀ ರಾಜೇಂದ್ರ ಪ್ರಸಾದರು ದೇಶದಲ್ಲಿಯ ಸುಪ್ರಸಿದ್ಧ ನಾಲ್ವರು ಸಂಗೀತಗಾರರಿಗೆ ಅವರ ಸಂಗೀತ ಸೇವೆಗೆ ಸರಕಾರದ ಮೆಚ್ಚುಗೆಯೆಂದು ತಲಾ 1000 ರೂ. ಬಹುಮಾನ ಕೊಟ್ಟಿರುವರು. ಶಿಕ್ಷಣ ಇಲಾಖೆಯವರು ಇದರ ಪುರಸ್ಕರ್ತರಿಂದು ಪ್ರತಿ ವರ್ಷವೂ ಇಂತಹ ಬಹುಮಾನವನ್ನು ಸಂಗೀತಗಾರರಿಗೆ ಕೊಡುವದೆಂತ ನಿಶ್ಚಯಿಸಲಾಗಿದೆ.

32 ಕಾಶ್ಮೀರೀ ಮುಸ್ಲಿಮರ ಬಂಧನ

ಪರಿಮಿಟಿಲ್ಲದೆ ಹಿಂದಿ ಗಡಿಯನ್ನು ಪ್ರವೇಶಿಸಿದ 32 ಕಾಶ್ಮೀರಿ ಮುಸ್ಲಿಮರನ್ನು ಬಂಧಿಸಲಾಗಿದೆ. ಹಿಂದೀ ಪ್ರದೇಶವನ್ನು ಅಕ್ರಮವಾಗಿ ಪ್ರವೇಶಿಸಿದರಕ್ಕಾಗಿ ಅವರ ಮೇಲೆ ಖಟ್ಲೆ ಹಾಕಲಾಗ ವದ.

ಪಾಕಿಸ್ತಾನಕ್ಕೆ ಅಮೇರಿಕೆಯ ಸಹಾಯ

ಅಂತರರಾಷ್ಟ್ರೀಯ ಬ್ಯಾಂಕು ಪಾಕಿಸ್ತಾನಕ್ಕೆ 27200000 ಡಾಲರು ಅಭಿವೃದ್ಧಿ ಸಾಲ ಕೊಟ್ಟಿರುವದು.

ವಿದ್ಯಾರ್ಥಿಯೋರ್ವನ ಅನುಕಂಪ

ಮದ್ರಾಸದ ಬರಗಾಲ ಪರಿಹಾರ ದ್ರವ್ಯವೆಂದು ಬಾಲ ವಿದ್ಯಾರ್ಥಿಯೊಬ್ಬನು ಒಂದು ರೂಪಾಯಿಯನ್ನು ಗವರ್ನರರಿಗೆ ಕಳಿಸಿರುವನು. ಬರಗಾಲ ಪರಿಹಾರ ನಿಧಿಗೆ ಕೊಡಬೇಕೆಂದು ಬಿನ್ನವಿಸಿದ್ದಾನೆ ಶಾಲೆಗೆ ನಿತ್ಯದಂತೆ ಬಸ್ಸಿನಲ್ಲಿ ಹೋಗದೆ ನಡೆಯುತ್ತ ಹೋಗಿ ಈ ರೂಪಾಯಿ ಉಳಿಸಿರುವದಾಗಿ ಆ ಬಾಲಕನು ಬರೆದಿರುತ್ತಾನೆ.

ತೆಲಂಗಾಣದಲ್ಲಿ ಕಮ್ಯುನಿಸ್ಟರು ಗೈದ ಕೊಲೆಗಳೆಷ್ಟು?

ತೆಲಂಗಾಣದಲ್ಲಿ ಸರಕಾರವು ದಬ್ಬಾಳಿಕೆ ನಡೆಸುತ್ತಿದೆಂದು ಆರೋಪಿಸುವ ವಿರೋಧಿ ಪಕ್ಷವು 3800 ಕೊಲೆ ಹಾಗೂ 8000 ದರೋಡೆ ಮತ್ತು ಇತರ ಹಿಂಸಾತ್ಮಕ ಕೃತಿಯನ್ನು ನಡೆಸಿರುವರೆಂದು ಹೈದರಾಬಾದದ ಮುಖ್ಯ ಮಂತ್ರಿಗಳು ವಿಧಾನ ಸಭೆಯಲ್ಲಿ ಹೇಳಿದರು.

ಮದ್ರಾಸ ಬರಗಾಲ ಪರಿಹಾರ ನಿಧಿ

ಮದ್ರಾಸ ಬರಗಾಲ ಪರಿಹಾರ ನಿಧಿಗೆ ಈ ವರೆಗೆ 1,29,466 ರೂ. ಕೂಡಿದೆಂದು ಗೊತ್ತಾಗಿದೆ. ಶ್ರೀ ನೆಹ್ರೂರವರಿಂದ ಒಂದು ಲಕ್ಷ, ಟಾಟಾ ನಿಧಿಯಿಂದ 25,000 ರಾಷ್ಟ್ರಾಧ್ಯಕ್ಷರಿಂದ ರೂ. 1000.

ಡಾ। ನಂದೀಮಠರ ಕ. ಸಾ. ಸ. ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ

ಮೂವತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನ ಇದೇ 1952ನೆಯ ಮೇ ತಾ. 8, 9 ಮತ್ತು 10ನೇ ತಾರೀಕುಗಳಲ್ಲಿ ಇತಿಹಾಸ ಪ್ರಸಿದ್ಧವಾದ ಹಾಸನ ಜಿಲ್ಲೆಯ ಬೇಲೂರಿನಲ್ಲಿ ನಡೆಯಲಿದ್ದು ಸುಪ್ರಸಿದ್ಧ ಸಾಹಿತಿಗಳೂ— ಸಂಶೋಧಕರೂ ಬಾಗಲಕೋಟೆಯ ಬಸವೇಶ್ವರ ಆರ್ಟ್ಸ ಕಾಲೇಜಿನ ಪ್ರಿನ್ಸಿಪಾಲರೂ ಆಗಿರುವ ಡಾ। ಎಸ್. ಸಿ. ನಂದೀಮಠ, ಎಂ. ಎ. ಪಿ. ಎಚ್. ಡಿ. ಅವರು ಸರ್ವಾನುಮತ ಮತದಿಂದ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆಂದು ತಿಳಿದು ಬರುತ್ತದೆ.

ದಕ್ಷಿಣ ಆಫ್ರಿಕೆಯ ದಿನಾಚರಣೆ

ಎಪ್ರಿಲ್ 6ನೇ ದಿನಾಂಕವನ್ನು "ದಕ್ಷಿಣ ಆಫ್ರಿಕೆಯ ದಿನ"ವೆಂದು ಆಚರಿಸುವ ಒಂದು ಪರಿಪತ್ರ ಹೊರಡಿಸಿ ಎಲ್ಲ ಸದಸ್ಯರಿಗೂ ತಿಳಿಸಿರುವರು. ಕಮ್ಯೂನಿಸ್ಟೇತರ ಪಕ್ಷದವರೊಂದಿಗೆ ಕೂಡಿಕೊಂಡು ಈ ದಿನವನ್ನಾಚರಿಸಲು ಸದಸ್ಯರಿಗೆ ಸೂಚಿಸಲಾಗಿದೆ.

ಟಿ. ಪ್ರಕಾಶಮರು ವಿರೋಧಿ ಪಕ್ಷದ ಧುರೀಣರು!

ಮದ್ರಾಸ ಶಾಸನ ಸಭೆಯ ಸಂಯುಕ್ತ ಪ್ರಜಾರಂಗದ ಸಭೆಯಲ್ಲಿ ಟಿ. ಪ್ರಕಾಶಮರನ್ನು ಪಕ್ಷದ ನಾಯಕರೆಂದು ಸರ್ವಾನುಮತದಿಂದ ಆರಿಸಲಾಯಿತು. ಈ ಗರಂಗದ ಬಲವು 166 ಇದ್ದು ಇನ್ನು ಹೆಚ್ಚು ಸದಸ್ಯರು ಸೇರಲಿರುವರು. ರಂಗದ ಧುರೀಣರು ತಮ್ಮ ಪಕ್ಷವು ಮಂತ್ರಿಮಂಡಳ ರಚಿಸಲು ಅರ್ಹವಿದೆಯೆಂದು ಗವರ್ನರರಿಗೆ ತಿಳಿಸಲಿರುವದಾಗಿ ಕಾರ್ಯದರ್ಶಿಗಳು ತಿಳಿಸಿದರು.

ಮೈಸೂರಲ್ಲಿ ನೂತನ ಮಂತ್ರಿ ಮಂಡಲ

ಮೈಸೂರಿನ ಮುಖ್ಯಮಂತ್ರಿಯೆಂದು ಆಯ್ಕೆ ಹೊಂದಿದ ಶ್ರೀ ಕೆ. ಹನುಮಂತಯ್ಯನವರು ರಾಜಪ್ರಮುಖರೊಡನೆ ಮಾತುಕತೆ ನಡೆಸಿ, ಮಂತ್ರಿಮಂಡಲದ ಹೆಸರನ್ನು ಕೂಡಲೇ ಸೂಚಿಸುವದಾಗಿ ಸಾಂದರು.

ಚತುರ್ಥ ವಿಮಾಗಣನೆಯ ಫಲಿತಾಂಶ

(1947ರಿಂದ 1950ರ ವರೆಗೆ)

* * * * * * *

ತಾರೀಕು 31-12-1950ಕ್ಕೆ ನಡೆಸಿದ ವಿಮಾಗಣನೆಯಲ್ಲಿ ಅಜೀವ ಮತ್ತು ಉಂಬಳಿ ವಿಮಾ ಪೋಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ ಅನುಕ್ರಮವಾಗಿ ರೂ. 12/- ಮತ್ತು ರೂ. 9/-ರಂತೆ ಬೋನಸನ್ನು ಘೋಷಿಸಿದೆ.

The Canara Mutual Assurance Co. Ltd.

Head Office: **UDIPI**, S. INDIA.

ಸ್ಥಾಪನೆಯಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಕಂಪನಿ.



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತಿದೆ, ಬಕ್ಕ ಮಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಜಿ. ಐ. ಪಿ.) ಮುಂಬಯಿ, ೧೪

75

ಅಂತರಂಗದ ಕಥೆ, ಕಾದಂಬರಿ, ನಾಟಕ ಕವಿತೆ, ಚಿತ್ರ ಪ್ರಬಂಧ ಮೊದಲಾದ ನಾನಾ ಬಗೆಯ 75 ಪುಸ್ತಕಗಳನ್ನು ಒಟ್ಟಿಗೆ ರೂ. 20ಕ್ಕೆ ಕೊಡಲಾಗುವುದು. ಕಟಲಾಗಿಗೆ ಬರೆಯಿರಿ:— ಅಂತರಂಗ ಆಫೀಸು ಉಡುಪಿ, ಅಥವಾ ನವಭಾರತ ಬುಕ್ ಡಿಪೊ, ಉಡುಪಿ

ದ. ಕ ಜಿಲ್ಲಾ ಬಂಟರ ಯಾನೆ ನಾಡವರ ಸಂಘ, ಮಂಗಳೂರು.

ಮಹಾಶಯರೇ,

ನಮ್ಮ ಸಂಘದ ವಾರ್ಷಿಕ ಮಹಾಸಭೆಯು
ತಾ. 13-4-1952ನೇ ಆದಿತ್ಯವಾರ ಸಂಜೆ ಘಂಟೆ 4ಕ್ಕೆ
ಶ್ರೀ । ಜಾರ್ಕಳ ನಾಗಣ್ಣ ಹೆಗ್ಗಡೆ ಇವರ ಅಧ್ಯಕ್ಷತೆಯಲ್ಲಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ
ಜರಗುವುದಾಗಿ ನಿಶ್ಚಯಿಸಿರುವುದರಿಂದ ತಾವು ದಯವಿಟ್ಟು ಸಭೆಗೆ ಬರಬೇಕಾಗಿ ಪ್ರಾರ್ಥಿಸುತ್ತೇನೆ,

ಮಂಗಳೂರು, } ಕೆ. ಸದಾನಂದ ಹೆಗ್ಡೆ
20-3-1952 } ಕಾರ್ಯದರ್ಶಿ.

ಕಾರ್ಯಕ್ರಮ:

1 ಅಧ್ಯಕ್ಷರ ಆರಿಸುವಿಕೆ. 2 ಸಂಘದ ಮತ್ತು ಉಪಸಂಸ್ಥೆಗಳ ವರದಿ ಮತ್ತು ಪರಿಶೋಧಿಸಲ್ಪಟ್ಟ ಲೆಖ್ಖಪತ್ರಗಳ ಮಂಜೂರಾತಿ. 3 ಅಧ್ಯಕ್ಷರ ಭಾಷಣ 4. ಸಂಘದ ಹೊಸ ಕಾರ್ಯನಿರ್ವಾಹಕ ಕಮಿಟಿ ಮೆಂಬರರ ಚುನಾವಣೆ, 5 ವಿದ್ಯಾರ್ಥಿನಿ ಭವನದ ಕಟ್ಟೋಣ ಫಂಡಿಗೆ ಧನಸಹಾಯ ವಸೂಲಿ ಮಾಡುವ ಪ್ರಯತ್ನದ ಕುರಿತು ಆಲೋಚನೆ. 6 ಅಧ್ಯಕ್ಷರ ಅನುಮತಿಯಿಂದ ಇತರ ವಿಷಯುಗಳು. 7 ಆಭಾರ ಸೂಚನೆ.

ಚರಖಾದಿಂದ ವಸ್ತ್ರ ಸ್ವಾವಲಂಬನೆ

ಚರಖಾದ ಗತಿಯು ಬಹಳ ಮಂದವಾಗಿ ಬುವ ಕಾರಣ ಅದರಿಂದ ನಮ್ಮ ಜನರ ವಸ್ತ್ರ ಪೂರ್ತಿ ಸ್ವಾವಲಂಬನೆಯಾಗಲಾರದೆಂದು ಚರಖಾ-ವಿರೋಧಿಗಳು ಹೇಳುವುದುಂಟು. ಚರಖಾಕ್ಕೆ ಅಷ್ಟೊಂದು ಸಮಯವನ್ನು ಕೊಟ್ಟರೆ ನಮ್ಮ ರಾಷ್ಟ್ರವು ಸದಾ ಕಾಲವೂ ಹಿಂದುಳಿಯುವುದೆಂದು ಅವರ ವಾದವು.

ಚರಖಾದ ಗತಿವೇಗವನ್ನು ಹೆಚ್ಚಿಸುವುದಕ್ಕಾಗಿ ಹೊಸ ಹೊಸ ಪ್ರಯೋಗಗಳಾಗಿವೆ; ಅನೇಕ ಸಂಘಾಟಗಳೂ ಆಗಿವೆ. ನೂಲುವುದರಲ್ಲಿ ಸಹಜವಾದ ಸಮಾನತೆಯನ್ನೂ ಸರಳತೆಯನ್ನೂ ಕಾಯುವದಕ್ಕಾಗಿ ಈಗಲೂ ಪ್ರಯೋಗಕಾರರು ಸಾಧಿಸುತ್ತಿದ್ದಾರೆ.

ಆದರೂ ಯಂತ್ರದ ವೇಗವನ್ನು ನೋಡುತ್ತ ಆ ವೇಗದ ಪಂದ್ಯಾಟದಲ್ಲಿ ನಾವೂ ಸಿಲುಕಿಕೊಳ್ಳುತ್ತೇವೆ. ಜಪಾನಿನ ಚರಖವು ಗಂಟೆಗೆ ಸುಮಾರು ಎರಡು ಸಾವಿರ ಸುತ್ತು ನೂಲು ಬಿಡುತ್ತದೆಂದು ಕೆಲವರು ಹೇಳಿದರು. ನಿಜವಾಗಿಯೂ ಅದು ಅಷ್ಟೊಂದು ವೇಗದಿಂದ ನಡೆಯುತ್ತದೋ ಇಲ್ಲವೋ ಎಂಬುದನ್ನು ಪರೀಕ್ಷಿಸುವಷ್ಟು ನನಗೆ ತಾಳ್ಮೆಯಿಲ್ಲದೆ ನಾವು ಆ ಚರಖಾವನ್ನು ಪ್ರಯೋಗಿಸಲೆತ್ನಿಸಿದೆವು. ಕೊನೆಗೆ ಜಪಾನಿ ಚರಖವು ತಾಸಿಗೆ ೩೫೦ರಿಂದ ೪೦೦ ಸುತ್ತು ನೂಲು ಕೊಡುತ್ತದೆಂದೂ, ನಮ್ಮೀಗಿನ ಚರಖವೂ ಅಷ್ಟು ನೂಲು ಬಿಡಬಲ್ಲುದೆಂದು ಸಿದ್ಧಪಡಿಸಿದ ಬಳಿಕ ಜಪಾನಿ ಚರಖಾದ ಆಗ್ರಹವನ್ನು ನಾವು ಹಿಂತೆಗೆದೆವು. ಎರಡು ಸಾವಿರ ಸುತ್ತಿನ ಆಕರ್ಷಕ ವೇಗದಿಂದ ಮೋಹಗೊಂಡು ನಾವು ದಿಗ್ಭ್ರಮೆಗೊಂಡೆವು.

ತಾಸಿಗೆ ಒಂದುವರೆ ಸಾವಿರ ಸುತ್ತು ನೂಲು ತೆಗೆಯಬಹುದೆಂದು ನಮ್ಮ ಪ್ರಯೋಗಕರ್ತರು ಕೆಲವರು ವಾದಿಸುತ್ತಾರೆ. ನೂತ ನೂಲು ತನ್ನಷ್ಟಕ್ಕೆ ಸುತ್ತುವ [Automatic Winding] ಪ್ರಯೋಗವನ್ನೂ ಮಾಡಿರುತ್ತಾರೆ. ಆದರೂ ಎಲ್ಲ ಕಾರ್ಯಗಳನ್ನು ಮಾಡುವ ಚಾಲಕ ಶಕ್ತಿಯು ಮಾತ್ರ ಮಾನವನದಾಗಿರುತ್ತದೆ. ಅವನಿಗೆ ಸರಿಸ್ರಮವೆಷ್ಟು ದೀರ್ಘ? ಬಹಳ ವೇಗವಾಗಿ ಕಾಲುಗಳನ್ನು ಚಲಿಸಬೇಕಾಗುವುದು. ಅವನ ದೃಷ್ಟಿಗೂ ಬಹಳ ಪರಿಶ್ರಮವಿರುವುದು. ಹೀಗಿರುವಲ್ಲಿ ಸಾಧಕ, ಸಾಧನೆಗಳ ಸಮನ್ವಯವಾಗಬೇಕೆಂಬುದನ್ನು ನಾವು ಮರೆಯಬಾರದು.

ಪ್ರಯೋಗ ಮತ್ತು ಸಂಜಾನು ಕಲೆಯ ದೃಷ್ಟಿಯಿಂದ, ಗತಿ ವೇಗದ ಚರಖಾವನ್ನು ನಿರ್ಮಿಸಬಹುದು; ಆದರೂ ನೂಲುವುದು ಸಾರ್ವತ್ರಿಕವಾಗಬೇಕೆಂಬುದು ನಮ್ಮ ಉದ್ದೇಶವು. ಅದಕ್ಕಾಗಿ ಸಾಧನೆಗಳೂ ಸುಲಭವಾಗಿ ದೊರೆಯುವಂತಿರಬೇಕೆಂಬುದೂ ಅಗತ್ಯ. ನಾವು ವೇಗವನ್ನು ವಿರೋಧಿಸುತ್ತೇವೆಂದು ಯಾರೂ ಭಾವಿಸಬಾರದು; ಆದರೂ ೧೫೦೦ ಸುತ್ತು ನೂಲುವ ನಾಲ್ಕೈದು ಸ್ಪಿಂಡಲುಗಳು ಳ್ಳ ಜಟಿಲವಾದ ಹೊಸ ರಾಟೆಯ ಮೋಹದಲ್ಲಿ ಸಿಲುಕದೆ, ನಮ್ಮ ವರ್ತಮಾನ ನಿಮ್ಮ ಈಗಿನ ರಾಟೆಗಳನ್ನೂ ಶೇಕಡಾ ೨೦ ರಷ್ಟಾದರೂ ಸುಧಾರಿಸಿದರೆ ಅದೊಂದು ಮಹತ್ವದ ಕ್ರಾಂತಿಯನ್ನುಂಟುಮಾಡುವ ಹೆಜ್ಜೆಯಾದೀತು.

ಚರಖಾದ ಸಾಧಾರಣ ವೇಗದಿಂದಲೂ ನೂಲುವವನ ಮನಸ್ಸಿಗೆ ಎಂಥಾ ಪ್ರಯೋಜನಕರವಾದ ಪರಿಣಾಮವಾಗಬಹುದೆಂಬುದನ್ನು ಶ್ರೀ ಸೋವಾನಿಯೆಂಬವರು ಈ ರೀತಿಯಲ್ಲಿ ಹೇಳಿರುವರು. ಒಮ್ಮೆ ಅವರು ಸಾತಾರಾ ರೋಡ ಸ್ಟೇಶನನಲ್ಲಿದ್ದು ಸತಾರೆಗೆ ಹೋಗಲು ಮೋಟಾರಿನ ಹಾದಿ ನೋಡುತ್ತಿದ್ದರಂತೆ. ಒಬ್ಬ ಆಂಗ್ಲ ಇಂಜೀನಿಯರನು ಆವರಂತೆಯೆ ಗಾಡಿಯನ್ನು ಕಾಯುತ್ತಿದ್ದನು. ಗಾಡಿಗೆ ಬಹಳ ಸಮಯವಿದ್ದ ಕಾರಣ ಶ್ರೀ ಸೋವಾನಿಯವರು ತನ್ನ ಪೆಟ್ಟಿಗೆ ಚರಖಾವನ್ನು ಬಿಡಿಸಿ ನೂಲಲಾರಂಭಿಸಿದರು. ಆ ಆಂಗ್ಲ ಮಿತ್ರನೂ ತನ್ನ ಬಳಿಯಲ್ಲಿದ್ದ ಪೆಟ್ಟಿಗೆ ಚರಖಾವನ್ನು ತೆಗೆದು ನೂಲಲು ಪ್ರಾರಂಭಿಸಿದನು. ಸಾಧಾರಣ ೩೮ರಿಂದ ೪೦ ಅಂಕೆಯಷ್ಟು ಉತ್ತಮ ನೂಲು ತೆಗೆಯುತ್ತಿದ್ದನು. ಅತನ ವೇಗವು ೩೦೦ರಿಂದ ೩೫೦ ಸುತ್ತಿನಷ್ಟಿತ್ತು. ಅವನ ಮೈಮೇಲೆಲ್ಲ ಗಾಢಿಯ ವಸ್ತ್ರವೇ ಇತ್ತು. ಅವನ ಎಲವಸ್ತ್ರ ಕೂಡ ಗಿರಣಿ ವಸ್ತ್ರದ್ದಿತ್ತು. ಆದರೂ ಅತನು ಅಷ್ಟೊಂದು ಉತ್ತಮವಾದ ನೂಲನ್ನು ರಾಟೆಯಿಂದ ಹೇಗೆ ತೆಗೆಯುತ್ತಾನೆಂದು ಶ್ರೀ ಸೋವಾನಿಯವರು ಬಹಳ ವಿಸ್ಮಯಪಟ್ಟು, ಅತನನ್ನು ಪ್ರಶ್ನಿಸಿದರು. ಅವರಿಗೊಂದು ಹೊಸ ವಿಚಾರವು ತಿಳಿದು ಬಹಳ ಆನಂದವಾಯಿತು.

ಆ ಆಂಗ್ಲ ಮಿತ್ರನು ಶ್ರೀ ಸೋವಾನಿಯರಿಗೆ ಹೀಗೆಂದನು. "ಗೆಳೆಯನೇ, 'ಲೇಥ್ ಮೆಶಿನ್' ಮಾಡುವ ಕಾರಖಾನೆಯಲ್ಲಿ ನಾನೊಬ್ಬ ಇಂಜೀನಿಯರನು. ಹಗಲೆಲ್ಲ ಯಂತ್ರದೊಡನೆ ವೇಗವಾಗಿ ಕೆಲಸ ಮಾಡಬೇಕಾಗುತ್ತದೆ. ಅದರಿಂದ ನನ್ನ ಮನಸ್ಸಿನಲ್ಲಿ ಗಲಿಬಿಲಿಯುಂಟಾಗುತ್ತದೆ. ಹಾಗೆ ಚಂಚಲವಾಗುವ ಮನಸ್ಸನ್ನು ಸ್ಥಿರಗೊಳಿಸಲು ಗಾಂಧೀಜಿಯವರ ಈ ಚರಖಾವು ಒಂದು ಉತ್ತಮ ಉಪಾಯವು. ಆದಕಾರಣವೇ ನಾನು ದಿನಂಪ್ರತಿ ನೂಲಬೇಕೆಂದು ನಿಶ್ಚಯಿಸಿ ಎತ್ತೇನೆ. ಮಾತ್ರವಲ್ಲದೆ, ಪ್ರತಿಯೊಬ್ಬ ಮೋಟಾರು ನಡೆಸುವವನು ದಿನಕ್ಕೆ ಅರ್ಧ ತಾಸು ಚರಖಾದಿಂದ ನೂಲಬೇಕೆಂಬ ಕಾನೂನು ಮಾಡಿದರೆ, ಕಡಿಮೆಯೆಂದರೆ ಶೇಕಡಾ ಐವತ್ತರಷ್ಟು ಈಗ ಸಂಭವಿಸುವ ದುರ್ಘಟನೆಗಳು ದೂರವಾಗಬಹುದೆಂದು ನಾನು ಖಂಡಿತವಾಗಿಯೂ ಹೇಳಬಲ್ಲೆನು."

ಆ ಆಂಗ್ಲ ಇಂಜೀನಿಯನ ಮಾತಿನಲ್ಲೇನಾದರೂ ಕಥ್ಯವಿದೆಯೆ? ಹಾಗಿದ್ದರೆ, ಚರಖಾದ ಈ ದೃಷ್ಟಿ ವಿಚಾರವು ನಮಗೇಕೆ ರುಚಿಸುವುದಿಲ್ಲ? ಚೆನ್ನಾಗಿ ಆಲೋಚಿಸಿ ನೋಡಿಕೊಂಡರೆ, ವರ್ತಮಾನ ಪರಿಸ್ಥಿತಿಯಲ್ಲಿ ಚರಖಾದ ಈ ಪ್ರಶ್ನೆಯ ಮೌಲ್ಯವು ಇನ್ನಷ್ಟು ಸ್ಪಷ್ಟವಾಗಿ ನಮ್ಮ ದೃಷ್ಟಿಗೆ ಗೋಚರವಾಗುವುದು.

[ಅ. ಭಾ. ಚರಖಾ ಸಂಘ-
ಕರ್ನಾಟಕ ಮಂಡಲ, ಮಂಗಳೂರು]

ಪ್ರವಾಸಿಯ ಪತ್ರಗಳು ೨೭

[ಕಳೆದ ಸಂಚಿಕೆಯಿಂದ ಮುಂದುವರಿದುದು]

ಸುಮಾರು 2 ಗಂಟೆ ಸಮಯ ಪ್ರಯಾಣ ಮಾಡಿದ ನಂತರ ನಮ್ಮ ರೈಲು ದಾರಿಯ ಉತ್ತರಕ್ಕೆ ಲಾ ಗಾರ್ಡ (La Garda) ಎಂಬ ದೊಡ್ಡ ಸರೋವರದ ಬದಿ ಬರುತ್ತದೆ. ಆ ಸರೋವರದ ಬಹು ಉತ್ತರಕ್ಕೆ ಆಲ್ಪ್ಸ ಪರ್ವತಗಳ ಸಾಲು. ಅವುಗಳ ಕೆಲವು ಶಿಖರಗಳ ಮೇಲೆ ಹಿಮ. ರೈಲಿನ ನನ್ನ ಕೋಣೆಯಲ್ಲಿ ಇಬ್ಬರು ಗಂಡಸರು ಮೂವರು ಹೆಂಗಸರಿದ್ದು ಹೆಚ್ಚು ದೂರ ನನ್ನೊಡನೆ ಪ್ರಯಾಣ ಮಾಡಿದರು. ಅವರ ಪೈಕಿ ಒಬ್ಬಳ ಬಟ್ಟೆಗೆ ಅವಳ ಸುಮಾರು ನಾಲ್ಕು ವರ್ಷದ ಮಗು. ಇವರ ಪೈಕಿ ಇಂಗ್ಲಿಷ ಭಾಷೆ ಸ್ವಲ್ಪವಾದರೂ ಗೊತ್ತಿದ್ದುದು ಇವಳಿಗೆ ಮಾತ್ರ. ಆದರೆ ಬೇಕಾದ ಶಬ್ದಗಳು ಬಾರದ ಕಾರಣ ಅಲ್ಲಲ್ಲಿ ಫ್ರೆಂಚ್ ಶಬ್ದಗಳನ್ನೂ ಉಪಯೋಗಿಸುತ್ತಿದ್ದಳು. ಹೀಗೆ ನನ್ನ ಹೊರತಾದ ಇಬ್ಬರು ದುಃಸ್ಥ ನೋಡಿ ನಾನು ನವನಾಗರಿಕನು (Modern) ಆದರೆ ಗಾಂಧಿ [ಮಹಾತ್ಮಾ] ಚಿತ್ರದಲ್ಲಿ ಅರ್ಧ ಬಟ್ಟೆ [ಮೊಣಕಾಲುಷ್ಟು] ವಸ್ತ್ರ. ಅದೇನು? ಇಂಡಿಯದಲ್ಲಿ ಹೀಗೆ ಎಲ್ಲರೂ ಅರೆ ಬಟ್ಟೆಯವರಲ್ಲವೇ? ನಿಮ್ಮಂತೆ "ಮೊಡರ್ನ್" ಜನರು ಇದ್ದಾರೆಯೇ? ಎಂದು ಕೇಳಿದ್ದಕ್ಕೆ ಅನೇಕರು ಅರ್ಧ ಬಟ್ಟೆಯವರಾದರೂ ಅನೇಕ ಗಂಡಸರು ಮತ್ತು ಹೆಂಗಸರು ಸರಿಯಾಗಿ ಮುಸ್ತು ಹಾಕಿ ಚೆನ್ನಾಗಿ ಕಲಿತವರು ಇಟೇಲಿಯಂತೆಯೇ ನಮ್ಮಲ್ಲಿ ಕೂಡಾ ಇದ್ದಾರೆಂದು ತಿಳಿಸಿದೆ. ಹಾಗೆಯೇ ಕೆಲವು ದೂರ ಹೋದ ಮೇಲೆ "ವೆರೋನಾ" (Verona) ಎಂಬ ಪಟ್ಟಣವು ಬಂತು. ಅದನ್ನು ತೋರಿಸಿ ಶೇಕ್ಸ್‌ಪೀಯರನು ರೋಮಿಯೋ ಮತ್ತು ಜೂಲಿಯಟ್ ಎಂಬ ನಾಟಕದಲ್ಲಿ ಬರೆದ ವೆರೋನ ಇದೇ ಎಂದು ಹೇಳಿದಳು. ಇನ್ನು ಸ್ವಲ್ಪ ಮುಂದಕ್ಕೆ ಹೋದಾಗ "ಪದುವಾ" [Padua] ಎಂಬ ಪಟ್ಟಣವು ಬರುತ್ತದೆ. ಆ ಹೆಸರು ಕೂಡಾ ಶೇಕ್ಸ್‌ಪೀಯರನ ಇತರ ಕೆಲವು ನಾಟಕಗಳಲ್ಲಿ ಬರುತ್ತವೆ. ಹೀಗೆಯೇ ಆ ರೈಲು ಗಾಡಿಯಲ್ಲಿದ್ದು ನಾವು ಹಲವು ವಿಷಯಗಳನ್ನು ಸಂಭಾಷಣೆ ಮಾಡಿಕೊಂಡು ಪಯಣವನ್ನು ಬೆಳಸಿದೆವು.

ರೈಲಿನ ಪ್ರಯಾಣ ಬೆಳಸುತ್ತಿದ್ದವರು ಮಧ್ಯ ತರಗತಿಯ ಜನರಾಗಿದ್ದು ಸಾಧಾರಣ ಚೊಕ್ಕಟವಾದ ಉಡುಪುಗಳನ್ನು ಹಾಕಿದ್ದರು. ಹೆಂಗಸರು ಮಕ್ಕಳು ಹಲವು ಬಣ್ಣಗಳಿರುವ 'ಚಕ್' ವಸ್ತ್ರಗಳನ್ನು ಉಪಯೋಗಿಸುವರು. ಜನರು ಸಾಧಾರಣ ಕಪ್ಪು ಮತ್ತು ದಪ್ಪ. ಅವರ ವರ್ಣವು ಉತ್ತರ ದೇಶಗಳಲ್ಲಿದ್ದಂತೆ ಬರೇ ಸುಟ್ಟು ಹೋದ ಚರ್ಮದ ಬಿಳಿಯಂತಲ್ಲದೆ ಸೊಗಸಾದ ವರ್ಣ. ಹೆಚ್ಚಾಗಿ ಯೌವನ ಪ್ರಾಯದವರು, ಮುಖ್ಯವಾಗಿ ಮಕ್ಕಳು, ಬಹಳ ಸುಂದರ ಮಾಗಿರುವರು. ಇದು ಇಟೇಲಿಯಲ್ಲಿ ದಕ್ಷಿಣ ದಕ್ಷಿಣಕ್ಕೆ ಹೋದಂತೆ ಜಾಸ್ತಿ.

ಸುಮಾರು 9 ಗಂಟೆಗೆ ರೈಲು ಅನೇಕ ಸ್ಟೇಶನುಗಳಲ್ಲಿ ನಿಂತು ವೆನಿಸ್ ನಗರಕ್ಕೆ ಬಂದು ಸೇರಿತು. ಹೊರಗೆಲ್ಲಾ ಕತ್ತಲೆ. ಅಲ್ಲಿ ನನಗೆ ಕಾದಿಟ್ಟ ಹೊಟೇಲಿನ ಜನ ನನ್ನನ್ನು ಕರಕೊಂಡು ಹೋಗಲಿಕ್ಕೆ ಬಂದಿದ್ದರು. ಸ್ಟೇಶನಿನಿಂದ ಇಳಿದ ಕೂಡಲೇ ಅಲ್ಲಿಯೋ ಸಮುದ್ರದ ಲೋಕವು. ಅದರಲ್ಲಿ ಹತ್ತಿ ಅನೇಕ ಕಾಲುವೆಗಳ ಮೂಲಕ ಸುಮಾರು ಎರಡು ಮೈಲು ಪ್ರಯಾಣ ಮಾಡಿ ಮುಖ್ಯ ದ್ವೀಪಕ್ಕೆ ಬಂದೆವು. ರಾತ್ರಿಯಾದ ಕಾರಣ ನಗರವು ಎಲ್ಲೆಲ್ಲಿಯೂ ಸಾವಿರಾರು ವಿದ್ಯುದ್ದೀಪಗಳ ಬೆಳಕಿನಿಂದ ಬೆಳಗುತ್ತಿತ್ತು. ಅದೇ ಕಾರಣವೇ ಈ ನಗರಕ್ಕೆ ಎಡ್ರಿಯಾಟಿಕ್ ಸಮುದ್ರದ ರಾಣಿ [Queen of the Adriatic] ಎಂಬ ನಾಮಾಂಕಿತವು ಬಂದಿದೆ. ಇದರ ಜನಸಂಖ್ಯೆ 3 ಲಕ್ಷ.

ಬೋಟಿನಿಂದ ಇಳಿದು 6-8 ಅಡಿ ಮಾತ್ರ ಅಗಲವಿರುವ ಸುತ್ತಿ ಸುತ್ತಿ ಹೋಗುವ ಓಣಿಗಳಲ್ಲಿ ನಡೆದು "ಪಾನಾಡಾ" [Panada] ಎಂಬ ಹೊಟೆಲಿಗೆ ಸೇರಿದೆ. ನಗರದ ಮರುದಿನದ ತಿರುಗಾಟದ ವಿಷಯ ಮುಂದಿನ ಪತ್ರದಲ್ಲಿ.

—ಕೆ. ಆರ್. ಕಾರಂತ.
[ವಿಚಾರವಾಣಿ]

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್‌ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ ಎ. ರಾಮಸ್ವಾಮಿ ಅಯ್ಯರ ರವರ

※ ಸಂತಾನ ಸಿಂಧೂರ ※

ಬಹಿಷ್ಠೆ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಠೆ ಸಂಬಂಧದ ಹೊಟ್ಟೆನೋವಿನ ಜೊತೆಗೆ ತಲೆನೋವು, ನಡುಕಳಿತ, ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ.

ಮೂರು ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ಒಂದು ಸೆಟ್ ಅನುಪಾನ ಪತ್ರಿಕೆ ಮೇರೆ ಇಬ್ಬರೂ ಸೇವಿಸಿರಿ ಸಾಕು. ಶೋಭನವಾದ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾಪತ್ರಗಳನ್ನು ಪಡೆದಿದೆ.

ಕ್ರಯ:— ಒಂದು ಸೆಟ್ 5ರೂ ಪ್ಯಾಕಿಂಗ್ ಮತ್ತು ಟಪಾಲು ಖರ್ಚು ರೂ ೧. ಇಲ್ಲ ಕ್ಯಾಟಲಾಗ್ ಉಚಿತ 6ರೂ ಮನಿಆರ್ಡರ್ ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ:—**A. R** ವಿಶ್ವೇಶ್ವರಯ್ಯ (ಎ ರಾಮಸ್ವಾಮಿ ಅಯ್ಯರ್ ಸನ್,)
Prop: ಸಂತಾನ ಸಿಂಧೂರ
ಅಂಬಳೆ ಪೋಸ್ಟು, ಯಳಂದೂರು ತಾಲೂಕು ಮೈಸೂರು ಡಿಸ್ಟ್ರಿಕ್ಟ್
ಮೈಸೂರು ಶಾಖೆ: 269 ಸೋನಾರ್ ಸ್ಟ್ರೀಟ್, ದಿವಾನ್ ರೋಡು, ಮೈಸೂರು.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್ ಐ ಎಂ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕರು:—ಡಾ। ಪಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ
ಕೊಳೂರು—ಇದೇ ತಾ. ತಿರಲ್ಲು

ತಾರೀಕು 3-4-52 ರಿಂದ

ವಾರದ ಭವಿಷ್ಯ

ತಾರೀಕು 9-4-5_ ವರೆಗೆ

ಮೇಷ—ವ್ಯಯಗತನಾಗಿದ್ದ ಗುರು ವು ನಿಮ್ಮ ಜನ್ಮರಾಶಿಗೆ ಬರುವನೀವಾರದಲ್ಲಿ. ಆದಕಾರಣ ನಿಮ್ಮ ತನುರೋಗ ಮನೋದುಃಖಗಳು ಬಹುಮಟ್ಟಿಗೆ ದೂರವಾಗಲಿವೆ. ಸಾಂಸಾರಿಕ ತಾಪತ್ರಯಗಳು ಕಡಿಮೆಯಾಗವು. ಶ್ರಮಪಟ್ಟು ದುಡಿದ ಧನವು ಹೆಚ್ಚಿನಂಶ ವ್ಯರ್ಥಕಾರ್ಯಗಳಿಗೆ ವ್ಯಯವಾಗುವದು ವ್ಯಾಪಾರಿಗಳಿಗೂ ಸೇವಕವರ್ಗದವರಿಗೂ ದಿನಗಳು ಸುಖದಾಯಿಗಳಾಗಲಿವೆ ವಾರಾಂತ್ಯದ 2ದಿನಗಳಲ್ಲಿ ಸುಖವಾದ ಲಾಭಗಳು ದೊರೆಯುವವು.

ವೃಷಭ—ನಿಮ್ಮ ಪ್ರಯತ್ನವೂ ಅದಕ್ಕನುಗುಣವಾದ ಫಲಪ್ರಾಪ್ತಿಯೂ ಉತ್ತಮತೇನಾಗಿರುವದು. ದುಡಿಮೆಯ ಬಹ್ವಂಶವನ್ನು ಸತ್ಕಾರ್ಯಗಳಿಗಾಗಿ ವಿನಿಯೋಗಿಸಿ ಕೀರ್ತಿಭಾಗಿಗಳಾಗುವಿರಿ. ಜನತೆಯಲ್ಲಿನ ವೈಮನಸ್ಯವು ದೂರವಾಗಿ ಅನ್ಯೋನ್ಯವಾಗಿರುವಿರಿ. ಶತ್ರುಜನರೂ ನಿಮ್ಮ ಕಾರ್ಯಕುಟಿತ್ವಕ್ಕೆ ಮೆಚ್ಚಿ ನಿಮ್ಮ ನೆರವನ್ನು ಬಯಸುವರು. ವಾರಾದಿಯ 3ದಿನಗಳು ಅತ್ಯಂತ ಪ್ರಶಸ್ತ್ಯಗಳವೆ

ಮಿಥುನ—ನಿಮ್ಮ ವಿಪತ್ತುಗಳು ದೂರವಾಗುವವು ಸುರಗುರುಗಳ ಅನುಗ್ರಹ ಯುಕ್ತರಾದ ನಿಮಗೆ ಸಾಮಾಜಿಕ ರಾಜಕೀಯ ಕ್ಷೇತ್ರದಲ್ಲಿ ಗಣ್ಯಸ್ಥಾನ ಮಾನಗಳು ಲಭಿಸುವವು. ಚಂಚಲವಾದ ಮನಸ್ಸನ್ನು ಬಿಗಿಹಿಡಿದು ಕಾರ್ಯರಂಗದಲ್ಲಿ ಮುನ್ನುಗ್ಗಿರಿ. ಕೆಲವೊಮ್ಮೆ ವೃಥಾ ವಾಕ್ಕಲಹಕ್ಕೆ ಗುರಿಯಾಗುವ ಯೋಗವಿದೆ. ಅದ್ದರಿಂದ ತಾ. 3, 4, 5, 8, 9 ಈ ದಿನಗಳಲ್ಲಿ ಜಾಗರೂಕತೆಯಿಂದ ವರ್ತಿಸಿರಿ.

ಕರ್ಕಟ—ದಿನಹೋದಂತೆ ನಿಮ್ಮ ಅದೃಷ್ಟವು ಹ್ರಾಸವಾಗುತ್ತಾ ಬರುತ್ತಿದೆ. ಆದಾಯದ ಮಾರ್ಗಗಳು ಕಡಿಮೆಯಾಗಿ ಖರ್ಚಿನ ಭಾಗಗಳು ಹೆಚ್ಚುವವು. ಆದರೂ ಈ ವಾರದಲ್ಲಿ ನಿಮ್ಮ ಲಾಭಪತಿಯಾದ ಶುಕ್ರನು ಉಚ್ಚಸ್ಥಾನವಾದ ಭಾಗ್ಯವನ್ನು ಪ್ರವೇಶಿಸುವುದರಿಂದ ಆರ್ಥಿಕ ಬಿಕ್ಕಟ್ಟುಂಟಾಗದು. ಹಣದ ನಿಮಿತ್ತವಾಗಿ ಕಲಹಗಳುದ್ಭವಿಸಲಿವೆ, ಗುರುಹಿರಿಯರಲ್ಲೂ ಬಂಧುಜನತೆಯಲ್ಲೂ ಮನಸ್ತಾಪವುಂಟಾಗುವದು. ತಾ. 6, 7ರಲ್ಲಿ ಧನವ್ಯಯ ದೇಹಾಲಸ್ಯಗಳು ಕಾಣಿಸುವವು

ಸಿಂಹ—ಸಾಕಷ್ಟು ದೈವಾನುಗ್ರಹವನ್ನು ಸಂಪಾದಿಸಿರುವಿರಿ. ಯಾವತ್ತೂ ನಿಮ್ಮ ಮನೋರಥಗಳು ಅಲ್ಪಾಯಾಸದಿಂದ ನೆರವೇರುವವು. ನಿಮ್ಮ ಆರ್ಥಿಕ ಸಂಪತ್ತು ಬಹುಮಟ್ಟಿಗೆ ವೃದ್ಧಿಹೊಂದುವದು. ಧನಧಾನ್ಯಾದಿಗಳು ವಿಪುಲವಿರುವುದರಿಂದ ಸಾಂಸಾರಿಕ ತಾಪತ್ರಗಳಾವವು ಕಾಣಿಸಲಾರವು. ನಷ್ಟವಾದ ದ್ರವ್ಯವಸ್ತು ಮೊದಲಾದವುಗಳೂ ಪುನಃ ಕೈಸೇರುವವು. ಕೆಲವೊಮ್ಮೆ ಅರ್ಧಾಂಗಿಯ ಕೂಡೆ ಕಲಹವಾದೀತು ತಾ. 6, 7 ಅಶುಭ್ರತ್ತಮವಿವೆ.

ಕನ್ಯಾ—ಕನಸುಮನಸುಗಳಲ್ಲೂ ನೆನಸದ ವಿಪತ್ತುಗಳು ಸನ್ನಿಹಿತವಾಗುವವು. ಯಾವಕಡೆ ನೋಡಿದರೂ ನಿರಾಶೆಯು ಗಾಢಾಂಧಕಾರವೇ ಕಣ್ಣಿಗೆ ಗೋಚರಿಸಲಿದೆ ನಿಮ್ಮ ಧೈರ್ಯಸಾಹಸಗಳು ಲುಪ್ತವಾಗಿ ಯಾವ ಅಲ್ಪಕಾರ್ಯವನ್ನೂ ಮಾಡುವ ಶಕ್ತಿಯು ನಿಮ್ಮಲ್ಲಿರದು. ಆರ್ಥಿಕ ಬಿಕ್ಕಟ್ಟು ದೇಹಾಲಸ್ಯ ಸಾಂಸಾರಿಕ ತಾಪತ್ರಯ ಇತ್ಯಾದಿ ಅನಿಷ್ಟ ಶತಗಳಿಂದ ಆವೃತವಾದ ನಿಮ್ಮ ಮನಸ್ಸಿಗೆ ವಾರಾದಿಯ 3ದಿನಗಳು ಕೊಂಚ ಸುಖವನ್ನೀಯುವವು

ತುಲಾ—ನೀವೀವಾರದಲ್ಲಿ ಅನೇಕ ಕಾಲದಿಂದ ಪ್ರಾಪ್ತವಾಗಿದ್ದ ಮನೋರೋಗದಿಂದ ಮುಕ್ತರಾಗಿ ಇಷ್ಟಾರ್ಥಗಳನ್ನು ಪಡೆವಿರಿ. ನಿಮ್ಮ ಸಾಕಷ್ಟು ಕಾರ್ಯಕ್ಕೆ ಮೆಚ್ಚಿದ ಜನತೆಯು ನಿಮ್ಮನ್ನು ಸನ್ಮಾನದಿಂದ ಗೌರವಿಸುವರು. ಉದ್ಯೋಗದಲ್ಲಿ ಪ್ರಗತಿಯುಂಟಾಗುವದು. ವಿದ್ಯಾರ್ಥಿಗಳಿಗೂ ಉದ್ಯೋಗಜೀವಿಗಳಿಗೂ ಈ ಕಾಲವು ಅನುಕೂಲವಾಗಿದೆ. ವಾರಾದಿಯ 5ದಿನಗಳಲ್ಲಿ ನಿಮ್ಮ ಬಯಕೆಗಳು ನಿರ್ವಿಘ್ನದಿಂದ ನೆರವೇರುವವು.

ವೃಶ್ಚಿಕ—ಇಷ್ಟಕ್ಕಿಂತ ದ್ವಿಗುಣವಾಗಿ ಅರಿಷ್ಟಗಳು ಕಾಣಿಸಲಿವೆ. ಶ್ರಮಪಟ್ಟು ಧನವನ್ನು ಸಂಪಾದಿಸಿದರೂ ಅದು ನಿಮ್ಮ ಸ್ವಾರ್ಥಕ್ಕೆ ವ್ಯಯವಾಗದೆ ವ್ಯರ್ಥವಾಗಿ ಹೋಗುವವು. ಗೃಹತಾಪತ್ರಯಗಳ ದೆಸೆಯಿಂದಾಗಿ ಕೆಲವೊಮ್ಮೆ ಸಂಸಾರದಲ್ಲಿ ವಿರಕ್ತಿ ಹುಟ್ಟಿ ಸನ್ಯಾಸಿಯಾಗಿದ್ದರೇನೇ ಒಳ್ಳೆತಾಗುತ್ತಿತ್ತೆಂಬ ಭಾವನೆಯೂ ಉಂಟಾಗಲಿದೆ. ದೇಹಾಲಸ್ಯ ಮನೋರೋಗದಿಂದಾಗಿ ಸುಖವೆಂಬುದು ನಿಮ್ಮಿಂದ ಬಹಳ ದೂರವಾಗುವದು—ವಾರಾಂತ್ಯದ 4ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳನ್ನು ಕಾಣಲಿರಿ.

ಧನು:—ದೇಹಸಿ ಖಪತಿಯಾದ ಬೃಹಸ್ಪತಿಯು ನಿಮ್ಮಮೇಲೆ ಪೂರ್ಣಾನುಗ್ರಹವನ್ನು ಬೀರುವನೀವಾರದಲ್ಲಿ. ಆದಕಾರಣ ನಿಮ್ಮದೇಹಕ್ಕೆ ಸುಖವೂ ಮನಸ್ಸಿಗೆ ನೆಮ್ಮದಿಯೂ ದೊರೆಯಲಿವೆ. ರಾಜಕೀಯಮತ್ತು ಸಾಮಾಜಿಕರಂಗದಲ್ಲಿ ಕೀರ್ತಿಭಾಗಿಗಳಾಗುವಿರಿ. ಆದರೂ ಮನೋದೌರ್ಬಲ್ಯವು ನಿಮ್ಮ ಕಾರ್ಯದಲ್ಲಿ ಮುಂದರಿವ ಧೈರ್ಯವನ್ನು ಕೊಡಲಾರದು. ವಾರಾಂತ್ಯದ 2ದಿನಗಳು ನಿಮ್ಮ ಇಷ್ಟಾರ್ಥಗಳನ್ನು ಪೂರೈಸುವವು

ಮಕರ:—ಸುಖಲಾಭಗಳಿಗಿಂತ ಹೆಚ್ಚಾಗಿ ದುಃಖನಷ್ಟಗಳು ಕಾಣಿಸುವವು. ಸನ್ಮಿತ್ರರ ಬೆಂಬಲದಿಂದಾಗಿ ಕೆಲವೊಂದು ಕಾರ್ಯಗಳಲ್ಲಿ ವಿಜಯಿಗಳಾಗಿ ಸಾಕಷ್ಟು ಧನ ಸಂಪಾದಿಸಿದರೂ ಬಹುಮುಖದಿಂದ ಖರ್ಚುಗಳು ಪ್ರಾಪ್ತವಾಗುವುದರಿಂದಹಣದ ಬಿಕ್ಕಟ್ಟಿಗೆಸಿಲುಕಿ ಸಾಲಮಾಡುವ ಪ್ರಸಂಗ ಬರಲಿದೆ. ಬಂಧುಜನರೊಳಗೆ ವೈಮನಸ್ಯ ವಿರೋಧಗಳುಹೆಚ್ಚುವವು. ಅತ್ತೀಸ್ಪರ್ಧಿಗಳ ದುಃಖದಿಂದ ತಂದಾದ ನಿಮಗೆ ತಾ. 3 4-5ರಲ್ಲಿ ಸ್ವಲ್ಪಸುಖ ನೆಮ್ಮದಿದೊರೆತೀತು.

ಕುಂಭ:—ನಿಮ್ಮ ಧನಲಾಭಪತಿಯಾದ ಗುರುವು ಅನೇಕಕಾಲದಿಂದ ನಿಮ್ಮಮೇಲೆ ತನ್ನ ಅನುಗ್ರಹವನ್ನುಬೀರಿ ಅನಿಷ್ಟಶತಗಳಿಂದ ಪಾರುಮಾಡಿದ್ದನು. ಅತನೀವಾರದಲ್ಲಿ ವಿಮುಖನಾಗುವುದರಿಂದ ನಿಮಗೆ ಒಮ್ಮೆಂದೊಮ್ಮೆ ವಜ್ರಾಘಾತವಾದಂತಾದೀತು. ಶತ್ರುಗಳ ಪೀಡೆಯಿಂದ ಧನಮಾನಗಳಿಗೆ ಕೊರತೆಯುಂಟಾದೀತು. ಕಾರ್ಯಗಳಲ್ಲಿ ಹೆಚ್ಚಿನವು ಸಂಕಲ್ಪ ರೂಪದಲ್ಲೇ ಉಳಿಯಲಿವೆ. ಆದರೂ ವಾರಾದಿಯ 5 ದಿನಗಳು ಹೆಚ್ಚಿನ ಕಷ್ಟದಾಯಿಗಳಾಗವು.

ಮೀನ:—ಮಹದ್ವಿಪತ್ತಿನಿಂದ ನೀವು ಒಮ್ಮೆ ಪಾರಾದಿರೆಂದರೆ ಅತಿಶಯೋಕ್ತಿಯಾಗದು. ಸದ್ಯ ನಿಮ್ಮ ಆರ್ಥಿಕ ಭಾಗವು ತೃಪ್ತಿಕರವಾಗಿ ನಿಲ್ಲುವದು. ನಿಮ್ಮ ಬಯಕೆಗಳು ಬಹ್ವಂಶ ಸಫಲಗಳಾಗಲಿವೆ. ಬೇಕಾದ ಸುಖಭೋಗಗಳನ್ನು ಅನುಭವಿಸುವಿರಿ. ಪಿತ್ತಪ್ರಕೋಪದಿಂದ ಆರೋಗ್ಯ ಕೆಟ್ಟೀತು, ಮತ್ತು ಶತ್ರುಗಳಿಂದ ಹಲವಾರು ತೊಂದರೆಗಳೂ ಬರಲಿವೆ. ಆದರೆ ವಾರಾಂತ್ಯದ 4 ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಸಫಲವಾಗುವವು

ಉಡುಪಿಗೆ ಹೋಗಬೇಕೆ! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಶುಚಿತನವು, ಇವುಗಳ ರುಚಿಸುಟಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI S. Kanara.

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯ ಪರ್ವತದಿಂದ ತೆಗೆಯಲ್ಪಡುವಂಥ ಅಪೂರ್ವ ವಸ್ತು, ಔಷಧಿಗಳ ರಾಜ; ಶಿಲಾಜಿತ್ತನ್ನು ಮೂಲಿಕೆಗಳೊಡನೆ ಸೇರಿಸಿ ತಯಾರಿಸಿದೆ. ಇದು ಶೀತ, ಉಷ್ಣ, ಮಳೆ ಸರ್ವಕಾಲದಲ್ಲೂ ಒಂದೇಸಮನೆ ತನ್ನ ಶಕ್ತಿಯನ್ನು ತೋರಿಸುತ್ತದೆ, ದೇಹ ದಾರ್ಢ್ಯವೂ, ಶಕ್ತಿಯೂ ಉಂಟಾಗುತ್ತದೆ. ಮುಖ್ಯವಾಗಿ ಹೊಟ್ಟೆನೋವು

ಅನ್ನ ಸೇರದಿರುವಿಕೆ ಇವೇ ಮೊದಲಾದ ರೋಗಗಳಿಗೆ ಒಂದೆ ಮೂ ದಿನಗಳಲ್ಲಿಯೇ ಗುಣಕೊಡತಕ್ಕ ಔಷಧವಿದು. ಕೆಮ್ಮು ಶ್ವಾಸದಮ್ಮು, ಮೂಲ, ಒಳಮೂಲ, ರಕ್ತ ಮೂಲ, ಬಹುಮೂತ್ರ, ಹೊಟ್ಟೆಯಲ್ಲಿ ಗಡ್ಡೆ ಇರುವಿಕೆ ಮತ್ತು ವಾಯುವಿನಿಂದ ಉಂಟಾಗತಕ್ಕ ಸರ್ವ ವ್ಯಾಧಿಗಳಿಗೂ ದಿವ್ಯೌಷಧ ವಿದ್ಯಾರ್ಥಿಗಳು ಸೇವಿಸುವುದರಿಂದ ಜ್ಞಾಪಕಶಕ್ತಿಯೂ ಮತ್ತು ಚಟುವಟಿಕೆಯೂ ಹೆಚ್ಚುತ್ತೆ. ವೃದ್ಧರು ಸೇವಿಸುವುದರಿಂದ ಶಕ್ತಿಯನ್ನು ಹೆಚ್ಚಿಸಿ; ಧಾರ್ಢ್ಯವನ್ನುಂಟುಮಾಡುತ್ತೆ.

ಹೆಂಗಸರಿಗೆ— ಅತಿ ಮುಟ್ಟು, ಕೈಕಾಲು ಹಿಡಿತ, ಕೀಲುವಾಯು, ಹಳ್ಳದೂಲೆ ಮತ್ತು ಉಷ್ಣದಿಂದಾಗುವ ಇತರ ರೋಗಗಳಿಗೆ ದಿವ್ಯೌಷಧ. ದುರ್ಬಲರಾಗಿ ಕೇವಲ ಕೃಶರಾಗಿರುವ ಶಿಶುಗಳಿಗೆ ಈ ಔಷಧವನ್ನು ಪ್ರತಿ ಬೆಳಿಗ್ಗೆ, ಸಂಜೆ ಕೊಟ್ಟರೆ ಸ್ವಲ್ಪ ಕಾಲದಲ್ಲಿಯೇ ದೃಢಾಂಗರಾಗುವರು ಇದು ಮುಂಗಡ.

೪೮ ದಿನದ ಲೇಹ್ಯಕ್ಕೆ ರೂ. ೫-೮-೦, ೨೪ ದಿನದ ಲೇಹ್ಯಕ್ಕೆ ರೂ ೩-೮-೦ (ಪೋಸ್ಟೇಜು ಮಾಫಿ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ-

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಕೀಳವಿಷಮುಂತಾದವು, ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳುಕಡ್ಡಿ, ಸುಡ್ಡು, ನಮ್ಮೆ, ಸಿಬ್ಬುಗಳಿಗೆ

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

ಸುಲಭದಲ್ಲಿ ಇಂಗ್ಲಿಷ್

ಅತಿ ಸುಲಭದಲ್ಲಿ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿಸಲ್ಪಟ್ಟ

ಅತಿ ಉಪಯುಕ್ತ ಪುಸ್ತಕ

ಬೆಲೆ ರೂ- 1-8-0, ವಿ. ಪಿ. ದ್ವಾರ ರೂ- 2-0-0

ವಿಳಾಸ—

ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published by K. H. Shetty at the Navayuga Press, Udipi, S. India.

Regd. No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪನೆ

10-4-1952

Founder: Sri A. B. Shetty, Minister for ...

ನವಯುಗ
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ

ಕೃಷಿಮಂತ್ರಿ ಶ್ರೀ ಎ.ಬಿ. ಶೆಟ್ಟರಿಂದ ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ, ದ. ಕ.

ವಾರ್ಷಿಕ ಚಂದಾ ರೂ. 5-12-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ 0-2-0

ವರ್ಷ ೩೧ ವಾರ ೩೧ | NAVAYUGA WEEKLY | Post Box No. 22 | UDIPI. | Vol. 31 No 31

"ಅನುಭವವಿಲ್ಲದ ಜ್ಞಾನ ಎಷ್ಟಿದ್ದರೇನು! ಅದು ಕೊಡವಿಲ್ಲದಲ್ಲಿ ನೀರು ಇದ್ದಂತೆ"

"ಜಮೀನ್ದಾರರು ತಮ್ಮ ಯೋಗ್ಯತಾನುಸಾರ ಭೂದಾನ ಮಾಡದಿದ್ದರೆ ನಾನದನ್ನು ಸ್ವೀಕರಿಸಲಾರೆ. ನಾನು ಭಿಕ್ಷೆ ಬೇಡಲು ಬಂದವನಲ್ಲ, ಹಾಗೆ ಅವರು ತಿಳಿದು ದಾನಕೊಟ್ಟದ್ದು ಗೊತ್ತಾದರೆ ಅಂಥ ದಾನವೂ ನನಗೆ ಬೇಕಾಗಿಲ್ಲ"

—ಆಚಾರ್ಯ ವಿನೋಬಭಾವೆ.

ಜನತೆಗೆ ಉತ್ತಮ ಆಡಳಿತಬೇಕು

ಮದ್ರಾಸು ವಿಧಾನಸಭೆಯ ಕಾಂಗ್ರೆಸ್ ಪಕ್ಷದ ಧುರೀಣರಾಗಿ ಹೊಸತಾಗಿ ಆರಿಸಲ್ಪಟ್ಟ ಶ್ರೀ. ಸಿ. ರಾಜಗೋಪಾಲಾಚಾರ್ಯರು ದಿನಾಂಕ 1ರಂದು ಪಕ್ಷದ ಸದಸ್ಯರೊಡನೆ ಔಪಚಾರಿಕವಾಗಿ ಮಾತನಾಡುತ್ತಾ, "ನಾನು ಪರಿಸ್ಥಿತಿ ಸುಧಾರಿಸುವುದಕ್ಕೆ ಮಾಯ ಅಥವಾ ಚಮತ್ಕಾರ ಮಾಡಿ ತೋರಿಸುವೆನೆಂದು ಯಾರೂ ನಂಬಕೂಡದು. ಹಾಗೆ ನಂಬಿದರೆ ಅದು ಮೂರ್ಖತನವೆಂದೆನಿಸುವುದು. ಹಂಗು, ದಾಕ್ಷಿಣ್ಯ, ಹೆದರಿಕೆಗಳಿಗೆಲ್ಲಾ ತಿಲಾಂಜಲಿಯನ್ನಿತ್ತು ಏಕನಿಷ್ಠೆಯಿಂದ ಒಗ್ಗಟ್ಟಿನಿಂದ ಕೆಲಸಮಾಡಬೇಕಾಗಿದೆ" ಎಂದು ಉಪದೇಶಿಸಿದರು.

ಅವರು ಮತ್ತೂ ಹೇಳಿದುದೇನೆಂದರೆ ಮಂತ್ರಿಗಳಿಗೆ ಮಹತ್ವವಿಲ್ಲ. ಶಾಸನಕರ್ತರಿಗೆ ಮಹತ್ವವಿರುತ್ತದೆ. ಶಾಸನಕರ್ತರು ಹಾಕಿದ ಮಟ್ಟವನ್ನು ಮಂತ್ರಿಗಳು ಅನುಸರಿಸಬೇಕಾಗುವುದು. ನೀವೆಲ್ಲರೂ ನನ್ನ ನಡತೆಯನ್ನು ನಿರೀಕ್ಷಿಸುತ್ತಿರುವುದರಿಂದ ತಪ್ಪುಮಾಡಲು ನನಗೆ ನಾಚಿಕೆಯಾಗುತ್ತದೆ. ಅದರಂತೆ ಪ್ರತಿಯೊಬ್ಬನೂ ತನ್ನ ನೈತಿಕಮಟ್ಟ ಹಾಗೂ ಉಚ್ಚ ನಡತೆಯನ್ನು ಕಾಯ್ದುಕೊಳ್ಳಲು ಪ್ರಯತ್ನಿಸಬೇಕು. ಅದು ಎಲ್ಲದಕ್ಕಿಂತಲೂ ಶ್ರೇಷ್ಠವಾದುದು.

ಜನತೆಗೆ ಈಗ ಏನು ಬೇಕೆಂಬುದು ನಿಮಗೆ ಗೊತ್ತಿದೆ. ನನ್ನ ಅನುಭವದಿಂದ ಹೇಳುವುದಾದರೆ ಜನರಿಗೆ ಹೊಸ ವಸ್ತು ಹೊಳಪಿನ ಧೋರಣೆ ಬೇಕಾಗುವುದಿಲ್ಲ. ನಿಮ್ಮ ಬುದ್ಧಿ ಕೌಶಲವೂ ಅವರಿಗೆ ಬೇಡ. ಹೊಸ ತೆರಿಗೆಗಳನ್ನಾಗಲೀ ಹೊಸ ಹೊಸ ಧೋರಣೆಗಳನ್ನಾಗಲೀ ಅವರು ಅಪೇಕ್ಷಿಸುವುದಿಲ್ಲ. ಅವರಿಗೆ ಬೇಕಾದುದು ಉತ್ತಮ ಆಡಳಿತ. ಸರಕಾರ ಕಚೇರಿಗಳಲ್ಲಿಯ ಕೆಲಸವು ಸುಸೂತ್ರವಾಗಿ ನಡೆದು, ಅಲ್ಲಿ ಹಂಗು, ಬೆದರಿಕೆ, ದಾಕ್ಷಿಣ್ಯದ ಭಯವಿಲ್ಲದಂತಾಗಬೇಕು. ಅದನ್ನು ಸಾಧಿಸುವುದು ಹೇಗೆ? ಅದೇ ಉದ್ದೇಶದಿಂದ ನೀವು ನನ್ನನ್ನು ನಾಯಕನನ್ನಾಗಿ ಆರಿಸಿರುವಿರಿ. ನಾನು ಈ ಕಾರ್ಯ ಸಾಧಿಸುವೆನೆಂದೇ ಕೆಲವರು ನಂಬಿದ್ದಾರೆ. ಅದು ಕೂಡ ವಿಶ್ವಾಸದ ಮಾತು. ಆದರೆ ಅದರ ಬೀಜ ಮಂತ್ರ ಇಲ್ಲಿದೆ. ನೀವೀಗ ಕಾರ್ಯ ನಿರ್ವಾಹಕ ಶಾಖೆಯನ್ನು ನ್ಯಾಯ ಶಾಖೆಯಿಂದ ಬೇರ್ಪಡಿಸಿರುವಿರಿ. ಇನ್ನೂ ನೀವು ಶಾಸನ ವಿಭಾಗವನ್ನು ಕಾರ್ಯ ನಿರ್ವಾಹಕ ಭಾಗದಿಂದ ಪ್ರತ್ಯೇಕಿಸಬೇಕೆಂದು ಸೂಚಿಸುತ್ತೇನೆ. ಆಡಳಿತವು ನ್ಯಾಯ ಸಮ್ಮತವಾಗಿ ಸಾಗಬೇಕಾದರೆ ಶಾಸನ ವಿಭಾಗವನ್ನು ಕಾರ್ಯ ನಿರ್ವಾಹಕ ಭಾಗದಿಂದ ದೂರವಿಡಬೇಕು. ಇದೇನು ಹೊಸ ತತ್ವ? ಇದು ಪ್ರಜಾಪ್ರಭುತ್ವವೆ? ಎಂದು ಕೆಲವರು ನಿಮ್ಮನ್ನು ಪ್ರಶ್ನಿಸಬಹುದು. ಅಂತಹವರಿಗೆ ನನ್ನ ಉತ್ತರವಿಷ್ಟೆ. ಅವರ ವಿಚಾರಧಾರೆ ಕೆಲವು ಮಟ್ಟಿಗೆ ಸತ್ಯವಿರುತ್ತದೆ. ಶಾಸನ ಸಭೆಯ ಪ್ರತಿಯೊಬ್ಬ ಸದಸ್ಯನಿಗೆ ಕಾರ್ಯ ನಿರ್ವಾಹಕ ಶಾಖೆಯ ಮೇಲೆ ನಿಯಂತ್ರಣ ವಿರಬೇಕೆಂಬ ವಿಚಾರವು ತಪ್ಪು. ಶಾಸನ ಸಭೆಯಲ್ಲಿ ಕಾಯಿದೆಗಳನ್ನು ಮಾಡಲಾಗುತ್ತದೆ. ಅಲ್ಲಿ ನಾವು ನಮ್ಮ ಧೋರಣವನ್ನು ರೂಪಿಸಬೇಕಾಗುವುದು. ನೀವು ರೂಪಿಸಿದ ಧೋರಣೆಗಳನ್ನು ಕಾರ್ಯಕಾರಿ ಮಾಡುವ ಹೊಣೆ ಮಂತ್ರಿಮಂಡಲ ಹಾಗೂ ಕಾರ್ಯ ನಿರ್ವಾಹಕ ಶಾಖೆಯದು. ಈ ಕಾರ್ಯಕಾರಿಣಿಯ ಅಧಿಕಾರದಲ್ಲಿ ಪ್ರತಿಯೊಬ್ಬ ಸದಸ್ಯನು ಹಸ್ತಕ್ಷೇಪಮಾಡಿದರೆ ಕಾರ್ಯಗಳ ಮಹತಿ ಕಡಿಮೆಯಾಗುತ್ತದೆ. ಆದುದರಿಂದ ಶಾಸನಕರ್ತರು ಆಡಳಿತದಲ್ಲಿ ಹಸ್ತಕ್ಷೇಪ ಮಾಡದಂತಹ ಹೊಸ ವಾತಾವರಣವನ್ನು ನಿರ್ಮಿಸಬೇಕಾಗಿದೆ. ಇನ್ನು ನಮ್ಮ ಪಕ್ಷದ ಸಾಮರ್ಥ್ಯದ ಬಗ್ಗೆ ಹೇಳುವುದಾದರೆ, ನಮ್ಮ ಪಕ್ಷಕ್ಕೆ ನಾವೇ ಕಾರ್ಯ ನಿರ್ವಹಿಸುವುದು ಶಕ್ಯವಿಲ್ಲ. ಬೇರೆಯವರ ಬೆಂಬಲಪಡೆಯ

ಬೇಕಾಗುತ್ತದೆ. ನಾವೀಗ ಎರಡನೆಯವರಿಗೆ ನಮ್ಮಲ್ಲಿ ಆಶೆಯುಕೊಟ್ಟು ನಮ್ಮದು ಒಂದೇ ಪಕ್ಷವಾಗಿ ತೋರುವಂತೆ ಮಾಡಬೇಕು. ಮಂತ್ರಿಗಳ ವಿಷಯದಲ್ಲಿ ಹೇಳುವುದಾದರೆ ಅವರು ಶಾಸನಸಭೆಗಳಲ್ಲಿ ಯೋಗ್ಯರೀತಿಯಿಂದ ವರ್ತಿಸಬೇಕು ಹಾಗೂ ಸಂಯಮಿಗಳಾಗಿರಬೇಕು. ಇವೆರಡು ವಿಷಯಗಳನ್ನು ಕಲಿತರೆ ಇನ್ನು ಕೆಲವೇ ತಿಂಗಳುಗಳಲ್ಲಿ ಮುಖ್ಯಮಂತ್ರಿಯನ್ನು ಸೃಷ್ಟಿಸಬಲ್ಲೆನು. ಆಗ ನೀವು ನನ್ನನ್ನು ವಿಶ್ವಾಸದಿಂದ ಈ ಜವಾಬ್ದಾರಿ ಹೊಣೆಯಿಂದ ಮುಕ್ತಮಾಡುವಿರೆಂದು ಆಶಿಸುತ್ತೇನೆ. ಶ್ರೀ ಟಿ. ಪ್ರಕಾಶಮರ ಕುರಿತು ಪ್ರಸ್ತಾಪಮಾಡುವಿರಿ. ಅವರು ವಿರೋಧ ಪಕ್ಷದಲ್ಲಿರಲಿ ಅಥವಾ ಸರಕಾರದ ಪಕ್ಷದಲ್ಲಿರಲಿ. ನಾವು ಸಹೋದರರಿಗಳೇ. ಇಂಗ್ಲೆಂಡಿನಲ್ಲಿದ್ದಂತೆ ವಿರೋಧಿ ಹಾಗೂ ಸರಕಾರಿ ಪಕ್ಷಗಳು ಒಂದಕ್ಕೊಂದು ಸಹಾಯಮಾಡಬೇಕು.

ಕಮ್ಯೂನಿಸ್ಟರು ಯಾವಾಗಲೂ ಭೂಗತರಾಗಿರುತ್ತಾರೆ. ಅವರೀಗ ಮೇಲಕ್ಕೆದ್ದು ಬಂದಂತೆ ಕಾಣುತ್ತಿದ್ದರೂ ಮನಸ್ಸು ಭೂಮಿಯೊಳಗೇ ಇರುತ್ತದೆ. ಕಾಯಿದೆ, ನೀತಿ ಮತ್ತು, ಧರ್ಮ, ಪರಮಾತ್ಮ ಇವುಗಳಲ್ಲಿ ನಂಬಿಕೆಯಿದೆ ಎಂದು ಕಮ್ಯೂನಿಸ್ಟರು ಸಾರಿದರೆ ಯಾವ ತೊಂದರೆಯೂ ಇಲ್ಲ. ಅವರನ್ನು ಇಡೀ ಜಗತ್ತೇ ಸ್ವಾಗತಿಸುವುದು. ಪರಸ್ಪರ ವಿಶ್ವಾಸ ಹಾಗೂ ಸಹಕಾರ ಜೀವನದ ತಳಹದಿ ವಿಚಾರವನ್ನು ಕಮ್ಯೂನಿಸ್ಟರು ಮರೆತಿರುವುದರಿಂದ ಜಗತ್ತಿನಲ್ಲೆಲ್ಲ ಶತ್ರುಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ಆದಾಗ್ಯೂ ನೀತಿಗೆ ಮಹತ್ವವನ್ನೀಯುತ್ತಿಲ್ಲ. ಭೌತಿಕ ಲಾಭವನ್ನಷ್ಟೇ ನೋಡುವದು. ನೀವೆಲ್ಲರೂ ಬಹಳ ಮುಂಜಾಗ್ರತೆಯಿಂದಿದ್ದು ಒಗ್ಗಟ್ಟಿನಲ್ಲಿರಬೇಕೆಂದು ಇಷ್ಟನ್ನೆಲ್ಲ ಹೇಳಬೇಕಾಯಿತು" ಎಂದರು.

Our Pigmy Deposit Scheme

.... brings our bank to your door. You may save as small a sum as annas two. Our collector will call on you every day to receive it.

At the rate of annas two per day you save Rs. 650 in 7 years because we allow interest at 3½% per annum. At the rate of Re. 1/- per day your Savings are Rs 2,800/- in 7 years. At the rate of Rs 10/- it is Rs 28,000/-. Come in to-day and join the band of **Prudent Prosperous Pigmy People.**

The Canara Industrial & Banking Syndicate Ltd.

Estd: 1925. H. O. UDIPI.

ತಾರೀಕು 3-4-52 ರಿಂದ

ವಾರದ ಭವಿಷ್ಯ

ತಾರೀಕು 9-4-52 ವರೆಗೆ

ಮೇಷ—ವ್ಯಯಗತನಾಗಿದ್ದ ಗುರು ವು ನಿಮ್ಮ ಜನ್ಮರಾಶಿಗೆ ಬರುವನೀವಾರದಲ್ಲಿ. ಆದಕಾರಣ ನಿಮ್ಮ ತನುರೋಗ ಮನೋ ದುಃಖಗಳು ಬಹುಮಟ್ಟಿಗೆ ದೂರವಾಗಲಿವೆ. ಸಾಂಸಾರಿಕ ತಾಪತ್ರಯಗಳು ಕಡಿಮೆಯಾ ಗವು. ಶ್ರಮಪಟ್ಟು ದುಡಿದ ಧನವು ಹೆಚ್ಚಿನಂ ಶ ವ್ಯರ್ಥಕಾರ್ಯಗಳಿಗೆ ವ್ಯಯವಾಗುವದು. ವ್ಯಾಪಾರಿಗಳಿಗೂ ಸೇವಕವರ್ಗದವರಿಗೂ ದಿ ನಗಳು ಸುಖದಾಯಿಗಳಾಗಲಿವೆ. ವಾರಾಂತ್ಯ ದ 2ದಿನಗಳಲ್ಲ ಸುಖಮಾನ ಲಾಭಗಳು ದೊರೆಯುವವು.

ವೃಷಭ—ನಿಮ್ಮ ಪ್ರಯತ್ನವೂ ಅದ ಕ್ಕನುಗುಣವಾದ ಫಲಪ್ರಾಪ್ತಿಯೂ ಉತ್ತಮ ಕೇನಾಗಿರುವದು. ದುಡಿಮೆಯ ಬಹ್ವಂಶವ ನ್ನು ಸತ್ಕಾರ್ಯಗಳಿಗಾಗಿ ವಿನಿಯೋಗಿಸಿ ಕೀ ರ್ತಿಭಾಗಿಗಳಾಗುವಿರಿ. ಜನತೆಯಲ್ಲಿನ ವೈಮ ನಸ್ಯವು ದೂರವಾಗಿ ಅನ್ಯೋನ್ಯವಾಗಿರುವಿರಿ. ಶತ್ರುಜನರೂ ನಿಮ್ಮ ಕಾರ್ಯಪಟುತ್ವಕ್ಕೆ ಮೆಚ್ಚಿ ನಿಮ್ಮ ನೆರವನ್ನು ಬಯಸುವರು. ವಾರಾದಿಯ 3ದಿನಗಳು ಅತ್ಯಂತ ಪ್ರಶಸ್ತ್ಯಗ ಳವೆ.

ಮಿಥುನ—ನಿಮ್ಮ ವಿಪತ್ತುಗಳು ದೂರವಾಗುವವು. ಸುರಗುರುಗಳ ಅನುಗ್ರ ಹ ಯುಕ್ತರಾದ ನಿಮಗೆ ಸಾಮಾಜಿಕ ರಾಜ ಕೀಯ ಕ್ಷೇತ್ರದಲ್ಲಿ ಗಣ್ಯಸ್ಥಾನ ಮಾನಗಳು ಲಭಿಸುವವು. ಚಂಚಲವಾದ ಮನಸ್ಸನ್ನು ಬಿ ಗಿಹಿಡಿದು ಕಾರ್ಯರಂಗದಲ್ಲಿ ಮುನ್ನುಗ್ಗಿರಿ. ಕೆಲವೊಮ್ಮೆ ವೃಥಾ ಮಾತ್ಸರಳಕ್ಕೆ ಗುರಿಯಾ ಗುವ ಯೋಗವಿದೆ. ಆದ್ದರಿಂದ ತಾ. 3, 4, 5, 8, 9 ಈ ದಿನಗಳಲ್ಲಿ ಜಾಗರೂಕತೆಯಿಂ ದ ವರ್ತಿಸಿರಿ.

ಕರ್ಕಟ—ದಿನಹೋದಂತೆ ನಿಮ್ಮ ಅ ದೃಷ್ಟವು ಹ್ರಾಸವಾಗುತ್ತಾ ಬರುತ್ತಿದೆ. ಆದಾ ಯದ ಮಾರ್ಗಗಳು ಕಡಿಮೆಯಾಗಿ ಖರ್ಚಿನ ಭಾಗಗಳು ಹೆಚ್ಚುವವು. ಆದರೂ ಈ ವಾರ ದಲ್ಲಿ ನಿಮ್ಮ ಲಾಭಪತಿಯಾದ ಶುಕ್ರನು ಉ ಚ್ಚಸ್ಥಾನವಾದ ಭಾಗ್ಯವನ್ನು ಪ್ರವೇಶಿಸುವುದ ರಿಂದ ಆರ್ಥಿಕ ದಿಕ್ಕಟ್ಟುಂಟಾಗದು. ಹಣದ ನಿಮಿತ್ತವಾಗಿ ಕಲಹಗಳುದ್ಭವಿಸಲಿವೆ. ಗುರು ಹಿರಿಯರಲ್ಲೂ ಬಂಧುಜನತೆಯಲ್ಲೂ ಮನ ಸ್ತಾಪವುಂಟಾಗುವದು. ತಾ. 6, 7ರಲ್ಲಿ ಧನ ವ್ಯಯ ದೇಹಾಲಸ್ಯಗಳು ಕಾಣಿಸುವವು.

ಸಿಂಹ—ನೀಕಷ್ಟ ದೈವಾನುಗ್ರಹವ ನ್ನು ಸಂಪಾದಿಸುವಿರಿ. ಯಾವತ್ತೂ ನಿಮ್ಮ ಮನೋರಥಗಳು ಅಲ್ಪಾಯಾಸದಿಂದ ನೆರ ವೇರುವವು. ನಿಮ್ಮ ಆರ್ಥಿಕ ಸಂಪತ್ತು ಬ ಹುಮಟ್ಟಿಗೆ ವೃದ್ಧಿಹೊಂದುವದು. ಧನಧಾ ನ್ಯಾದಿಗಳು ವಿಪುಲವಿರುವುದರಿಂದ ಸಾಂಸಾ ರಿಕ ತಾಪತ್ರಗಳಾವವೂ ಕಾಣಸಲಾರವು. ನ ಷ್ಟವಾದ ದ್ರವ್ಯವಸ್ತು ಮೊದಲಾದವುಗಳೂ ಪುನಃ ಕೈಸೇರುವವು. ಕೆಲವೊಮ್ಮೆ ಅಧಾರ್ಂ ಗಿಯ ಕೂಡೆ ಕಲಹವಾದೀತು. ತಾ. 6, 7 ಅತ್ಯುತ್ತಮವಿವೆ.

ಕನ್ಯಾ—ಕನಸುಮನಸುಗಳಲ್ಲೂ ನೆ ನಸದ ವಿಪತ್ತುಗಳು ಸನ್ನಿಹಿತವಾಗುವವು. ಯಾವಕಡೆ ನೋಡಿದರೂ ನಿರಾಶೆಯ ಗಾ ಢಾಂಧಕಾರವೇ ಕಣ್ಣಿಗೆ ಗೋಚರಿಸಲಿದೆ ನಿ ಮ್ಮ ಧೈರ್ಯಸಾಹಸಗಳು ಲುಪ್ತವಾಗಿ ಯಾ ವ ಅಲ್ಪಕಾರ್ಯವನ್ನೂ ಮಾಡುವ ಶಕ್ತಿ ಯು ನಿಮ್ಮಲ್ಲಿರದು. ಆರ್ಥಿಕ ದಿಕ್ಕಟ್ಟು ದೇ ಹಾಲಸ್ಯ ಸಾಂಸಾರಿಕ ತಾಪತ್ರಯ ಇತ್ಯಾದಿ ಅನಿಷ್ಟಶತಗಳಿಂದ ಅವ್ಯತವಾದ ನಿಮ್ಮ 4 ನುಮಾನಗಳಿಗೆ ವಾರಾದಿಯ 3ದಿನಗಳು ಕೊಂಚ ಸುಖವನ್ನೀಯುವವು

ತುಲಾ—ನೀವೀವಾರದಲ್ಲಿ ಅನೇಕ ಕಾಲದಿಂದ ಪ್ರಾಪ್ತವಾಗಿದ್ದ ಮನೋರೋಗ ದಿಂದ ಮುಕ್ತರಾಗಿ ಇಷ್ಟಾರ್ಥಗಳನ್ನು ಪಡೆ ವಿರಿ. ನಿಮ್ಮ ಪಾತ್ರಾತ್ಕಾರ್ಯಕ್ಕೆ ಮೆಚ್ಚಿದ ಜ ನತೆಯು ನಿಮ್ಮನ್ನು ಸನ್ಮಾನದಿಂದ ಗೌರ ವಿಸುವರು. ಉದ್ಯೋಗದಲ್ಲಿ ಪ್ರಗತಿಯುಂ ಟಾಗುವದು. ವಿದ್ಯಾರ್ಥಿಗಳಿಗೂ ವಿದ್ಯೋಪ ಜೀವಿಗಳಿಗೂ ಈ ಕಾಲವು ಅನುಕೂಲವಾಗಿ ದೆ. ವಾರಾದಿಯ 5ದಿನಗಳಲ್ಲಿ ನಿಮ್ಮ ಬಯ ಕೆಗಳು ನಿರ್ವಿಘ್ನದಿಂದ ನೆರವೇರುವವು.

ವೃಶ್ಚಿಕ—ಇಷ್ಟಕ್ಕಿಂತ ದ್ವಿಗುಣವಾಗಿ ಅರಿಷ್ಟಗಳು ಕಾಣಿಸಲಿವೆ. ಶ್ರಮಪಟ್ಟು ಧನ ವನ್ನು ಸಂಪಾದಿಸಿದರೂ ಅದು ನಿಮ್ಮ ಸ್ವಾ ರ್ಥಕ್ಕೆ ವ್ಯಯವಾಗದೆ ವ್ಯರ್ಥಖರ್ಚಿಗೆ ಹೋ ಗುವದು. ಗೃಹತಾಪತ್ರಯಗಳ ದೆಸೆಯಿಂದಾ ಗಿ ಕೆಲವೊಮ್ಮೆ ಸಂಸಾರದಲ್ಲಿ ವಿರಕ್ತಿ ಹುಟ್ಟಿ ಸನ್ಯಾಸಿಯಾಗಿದ್ದರೇನೇ ಒಳ್ಳೆತಾಗುತ್ತಿತ್ತೆಂಬ ಭಾವನೆಯೂ ಉಂಟಾಗಲಿದೆ. ದೇಹಾಲಸ್ಯ ಮನೋರೋಗದಿಂದಾಗಿ ಸುಖವೆಂಬುದು ನಿಮ್ಮಿಂದ ಬಹಳ ದೂರವಾಗುವದು—ವಾ ರಾಂತ್ಯದ 4ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳ ನ್ನು ಕಾಣಲಾರಿರಿ.

ಧನು:—ದೇಹಸಿ ಖಪತಿಯಾದ ಬೃಹ ಸ್ಪತಿಯು ನಿಮ್ಮಮೇಲೆ ಪೂರ್ಣಾನುಗ್ರಹವ ನ್ನು ಬೀರುವನೀವಾರದಲ್ಲಿ, ಆದಕಾರಣ ನಿ ಮ್ಮದೇಹಕ್ಕೆ ಸುಖವೂ ಮನಸ್ಸಿಗೆ ನೆಮ್ಮದಿ ಯೂ ದೊರೆಯಲಿವೆ. ರಾಜಕೀಯ ಮತ್ತು ಸ ಮಾಜಿಕರಂಗದಲ್ಲಿ ಕೀರ್ತಿಭಾಗಿಗಳಾಗುವಿರಿ ಆದರೂ ಮನೋದೌರ್ಬಲ್ಯವು ನಿಮ್ಮ ಕಾ ರ್ಯದಲ್ಲಿ ಮುಂದರಿವ ಧೈರ್ಯವನ್ನು ಕೊಡ ಲಾರದು. ವಾರಾಂತ್ಯದ 2ದಿನಗಳು ನಿಮ್ಮ ಇ ಷ್ಟಾರ್ಥಗಳನ್ನು ಪೂರೈಸುವವು

ಮಕರ:—ಸುಖಲಾಭಗಳಿಗಿಂತ ಇ ಮ್ಮಡಿ ದುಃಖನಷ್ಟಗಳು ಕಾಣಿಸುವವು. ಸ್ನೇಹಿ ತ್ರರಿಂ ಬೆಂಬಲದಿಂದಾಗಿ ಕೆಲವೊಂದು ಕಾ ರ್ಯಗಳಲ್ಲಿ ವಿಜಯಿಗಳಾಗಿ ಸಾಕಷ್ಟು ಧನ ಸಂಪಾದಿಸಿದರೂ ಬಹುಮುಖದಿಂದ ಖರ್ಚು ಗಳು ಪ್ರಾಪ್ತವಾಗುವುದರಿಂದಹಣದ ಬಿಕ್ಕಟ್ಟಿ ಗೆಸಿಲುಕಿ ಸಾಲಮಾಡುವ ಪ್ರಸಂಗ ಬರಲಿದೆ. ಬಂಧುಜನರೊಳಗೆ ವೈಮನಸ್ಸು ವಿರೋಧಗ ಳು ಹೆಚ್ಚುವವು. ಅಷ್ಟಮಸ್ಥರವಿಯಿಂದ ದುಃಖಪೀಡಿ ತರಾದ ನಿಮಗೆ ತಾ. 3. 4-5ರಲ್ಲಿ ಸ್ವಲ್ಪಸುಖ ನೆಮ್ಮದಿದೊರೆತೀತು.

ಕುಂಭ:—ನಿಮ್ಮ ಧನಲಾಭಪತಿಯಾದ ಗುರುವು ಅನೇಕಕಾಲದಿಂದ ನಿಮ್ಮಮೇಲೆ ತ ನ್ನ ಅನುಗ್ರಹವನ್ನು ಬೀರಿ ಅನಿಷ್ಟಶತಗಳಿಂದ ಪಾರುಮಾಡಿದ್ದನು. ಆತನೀವಾರದಲ್ಲಿ ವಿ ಮುಖನಾಗುವುದರಿಂದ ನಿಮಗೆ ಬಹುವಿಧದ ವ್ಯಾ ಪಾರ ಭಂಗವಾದಂತಾದೀತು. ಶತ್ರುಗ ಳ ಪೀಡೆಯಿಂದ ಧನಮಾನಗಳಿಗೆ ಕೊರತೆ ಯುಂಟಾದೀತು. ಕಾರ್ಯಗಳಲ್ಲಿ ಹೆಚ್ಚಿನವು ಸಂಕಲ್ಪ ರೂಪದಲ್ಲೇ ಉಳಿಯಲಿವೆ. ಆದ ರೂ ವಾರಾದಿಯ 5 ದಿನಗಳು ಹೆಚ್ಚಿನ ಕಷ್ಟ ದಾಯಿಗಳಾಗವು.

ಮೀನ:—ಮಹದ್ವಿಪತ್ತಿನಿಂದ ನೀವು ಒಮ್ಮೆ ಪಾರಾದಿರೆಂದರೆ ಅತಿಶಯೋಕ್ತಿಯಾ ಗದು. ಸದ್ಯ ನಿಮ್ಮ ಆರ್ಥಿಕ ಭಾಗವು ಸ್ಥಿ ರವಾಗಿ ನಿಲ್ಲುವದು. ನಿಮ್ಮ ಬಯಕೆಗಳು ಬಹ್ವಂಶ ಸಫಲಗಳಾಗಲಿವೆ. ಬೇಕಾದ ಸು ಖಭೋಗಗಳನ್ನು ಅನುಭವಿಸುವಿರಿ. ಪಿತ್ತ ಪ್ರಕೋಪದಿಂದ ಆರೋಗ್ಯ ಕೆಟ್ಟೀತು, ಮ ತ್ತು ಶತ್ರುಗಳಿಂದ ಹಲವಾರು ತೊಂದರೆಗ ಳೂ ಬರಲಿವೆ. ಆದರೆ ವಾರಾಂತ್ಯದ 4 ದಿನಗ ಳಲ್ಲಿ ನಿಮ್ಮ ಸಂಕಲ್ಪಗಳು ಸಫಲವಾಗುವವು

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವೆಲ್ಲಕ್ಕೆ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಶಿರದೀಕ್ಷಾ, ಇವುಗಳ ರುಚಿರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI S. Kanara.

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯ ಪರ್ವತದಿಂದ ತೆಗೆಯಲ್ಪಡುವಂಥ ಅಪೂರ್ವ ವಸ್ತು, ಔಷಧಿಗಳ ರಾಜ; ಶಿಲಾಜಿತ್ತನ್ನು ಮೂಲಿಕೆಗ ಳೊಡನೆ ಸೇರಿಸಿ ... ಶೀತ, ಉಷ್ಣ, ಮಳೆ ಸರ್ವಕಾಲದಲ್ಲೂ ಒಂದೇಸಮನೆ ತನ್ನ ಶಕ್ತಿಯನ್ನು ತೋರಿಸುತ್ತದೆ, ಇದರ ಸೇವನೆಯಿಂದ ದೇಹ ದಾರ್ಢ್ಯವೂ, ಶಕ್ತಿಯೂ ಉಂಟಾಗುತ್ತದೆ. ಮುಖ್ಯವಾಗಿ ಹೊಟ್ಟೆನೋವು ಅನ್ನ ಸೇರದಿರುವಿಕೆ ಇವೇ ಮೊದಲಾದ ರೋಗಗಳಿಗೆ ಒಂದೆರಡು ದಿನಗಳಲ್ಲಿಯೇ ಗುಣಕೊಡತಕ್ಕ ಔಷಧವಿದು. ಕೆಮ್ಮು ಶ್ವಾಸದಮ್ಮು, ಮೂಲ, ಒಳಮೂಲ, ರಕ್ತಮೂಲ, ಬಹುಮೂತ್ರ, ಹೊಟ್ಟೆಯಲ್ಲಿ ಗಡ್ಡೆಇರುವಿಕೆ ಮತ್ತು ವಾಯುವಿ ನಿಂದ ಉಂಟಾಗತಕ್ಕ ಸರ್ವ ವ್ಯಾಧಿಗಳಿಗೂ ದಿವ್ಯೌಷಧ. ವಿದ್ಯಾರ್ಥಿಗಳು ಸೇವಿಸುವುದರಿಂದ ಜ್ಞಾಪಕಶಕ್ತಿಯೂ ಮತ್ತು ಚಟುವಟಿಕೆಯೂ ಹೆಚ್ಚುತ್ತೆ. ವೃದ್ಧರು ಸೇವಿಸುವುದರಿಂದ ಶಕ್ತಿಯನ್ನು ಹೆಚ್ಚಿಸಿ; ಧಾರ್ಢ್ಯವನ್ನುಂಟುಮಾಡುತ್ತೆ.

ಹೆಂಗಸರಿಗೆ— ಅಳ ಮ ಬಿಳಿಪು, ಕೈಕಾಲು ಹಿಡಿತ, ಕೀಲುವಾಯು, ಪಕ್ಕಶೂಲೆ ಮತ್ತು ಉಷ್ಣದಿಂದಾಗುವ ಇತರ ರೋಗಗಳಿಗೆ ದಿವ್ಯೌಷಧ. ದುರ್ಬಲರಾಗಿ ಕೇವಲ ಕೃಶರಾಗಿರುವ ಶಿಶುಗಳಿಗೆ ಈ ಔಷಧವನ್ನು ಪ್ರತಿ ಬೆಳಿಗ್ಗೆ, ಸಂಜೆ ಕೊಟ್ಟರೆ ಸ್ವಲ್ಪ ಕಾಲದಲ್ಲಿಯೇ ದೃಢಾಂಗರಾಗುವರು, ಹಣ ಮುಂಗಡ.

೪೮ ದಿನದ ಲೇಹ್ಯಕ್ಕೆ ರೂ. ೫-೮-೦, ೨೪ ದಿನದ ಲೇಹ್ಯಕ್ಕೆ ರೂ ೩-೮-೦ (ಪೋಸ್ಟೇಜು ಮಾಫಿ)

ನೀಲಿಗಿರಿ ಡಿಪ್ಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಉತ್ತಿಗೆ, ಭುಜ ಹಲ್ಲು ನೋವುಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ

REGD

ಸಾಟಿಯಿಲ್ಲ

ಮದ್ದು

ನಮ್ಮಲ್ಲಿ

ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

ಸ್ಪೋಕನ್ ಇಂಗ್ಲಿಷ್

ಅತಿ ಸುಲಭದಲ್ಲಿ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿಸಲ್ಪಟ್ಟ

ಅತಿ ಉಪಯುಕ್ತ ಪುಸ್ತಕ

ಬೆಲೆ ರೂ- 1-8-0, ವಿ. ಪಿ. ದ್ವಾರ ರೂ- 2-0-

ವಿಳಾಸ—

ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published by K. H. Shetty at the Navayuga Press, Udipi, S. India.

Regd. No. M 3618

LICENCE No. 31
Licensed to Post without Prepayment

ESTD. 1921 ಸ್ಥಾಪನೆ
31 ನೆಯ ವರ್ಷ

10-4-1952

Sri A. B. Shetty,
Minister for Agriculture & Veter..

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಕೃಷಿಮಂತ್ರಿ
ಎ.ಬಿ ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ, ದ. ಕ

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೩೧

NAVAYUGA WEEKLY Post Box No. 22 UDIPI.

Vol. 31
No. 31

"ಅನುಭವವಿಲ್ಲದ ಜ್ಞಾನ ಎಷ್ಟಿದ್ದರೇನು! ಅದು ಕೊಡವಿಲ್ಲದಲ್ಲಿ ನೀರು ಇದ್ದಂತೆ"

"ಜಮೀನ್ದಾರರು ತಮ್ಮ ಯೋಗ್ಯತಾನುಸಾರ ಭೂದಾನ ಮಾಡದಿದ್ದರೆ ನಾನವನ್ನು ಸ್ವೀಕರಿಸಲಾರೆ. ನಾನು ಅಕ್ಕಿ ಬೇಡಲು ಬಂದವನಲ್ಲ. ಹಾಗೆ ಅವರು ತಿಳಿದು ದಾನಕೊಟ್ಟದ್ದು ಗೊತ್ತಾದರೆ ಅಂಥ ದಾನವೂ ನನಗೆ ಬೇಕಾಗಿಲ್ಲ"

—ಆಚಾರ್ಯ ವಿನೋಬಭಾವೆ.

ಜನತೆಗೆ ಉತ್ತಮ ಆಡಳಿತಬೇಕು

ಮದ್ರಾಸು ವಿಧಾನಸಭೆಯ ಕಾಂಗ್ರೆಸ್ ಪಕ್ಷದ ಧುರೀಣರಾಗಿ ಹೊಸತಾಗಿ ಆರಿಸಲ್ಪಟ್ಟ ಶ್ರೀ. ಸಿ. ರಾಜಗೋಪಾಲಾಚಾರ್ಯರು ದಿನಾಂಕ 1ರಂದು ಪಕ್ಷದ ಸದಸ್ಯರೊಡನೆ ಔಪಚಾರಿಕವಾಗಿ ಮಾತನಾಡುತ್ತಾ, "ನಾನು ಪರಿಸ್ಥಿತಿ ಸುಧಾರಿಸುವುದಕ್ಕೆ ಮಾಯೆ ಅಥವಾ ಚಮತ್ಕಾರ ಮಾಡಿ ತೋರಿಸುವೆನೆಂದು ಯಾರೂ ನಂಬಕೂಡದು. ಹಾಗೆ ನಂಬಿದರೆ ಅದು ಮೂರ್ಖತನವೆಂದೆನಿಸುವುದು. ಹಂಗು, ದಾಕ್ಷಿಣ್ಯ, ಹೆದರಿಕೆಗಳಿಗೆಲ್ಲಾ ತಿಲಾಂಜಲಿಯನ್ನಿತ್ತು ಏಕನಿಷ್ಠೆಯಿಂದ ಒಗ್ಗಟ್ಟಿನಿಂದ ಕೆಲಸಮಾಡಬೇಕಾಗಿದೆ" ಎಂದು ಉಪದೇಶಿಸಿದರು.

ಅವರು ಮತ್ತೂ ಹೇಳಿದುದೇನೆಂದರೆ ಮಂತ್ರಿಗಳಿಗೆ ಮಹತ್ವವಿಲ್ಲ. ಶಾಸನಕರ್ತರಿಗೆ ಮಹತ್ವವಿರುತ್ತದೆ. ಶಾಸನಕರ್ತರು ಹಾಕಿದ ಮಟ್ಟವನ್ನು ಮಂತ್ರಿಗಳು ಅನುಸರಿಸಬೇಕಾಗುವುದು. ನೀವೆಲ್ಲರೂ ನನ್ನ ನಡತೆಯನ್ನು ನಿರೀಕ್ಷಿಸುತ್ತಿರುವುದರಿಂದ ತಪ್ಪುಮಾಡಲು ನನಗೆ ನಾಚಿಗೆಯಾಗುತ್ತದೆ. ಅದರಂತೆ ಪ್ರತಿಯೊಬ್ಬರೂ ತನ್ನ ನೈತಿಕಮಟ್ಟ ಹಾಗೂ ಉಚ್ಚ ನಡತೆಯನ್ನು ಕಾಯ್ದುಕೊಳ್ಳಲು ಪ್ರಯತ್ನಿಸಬೇಕು. ಅದು ಎಲ್ಲದಕ್ಕಿಂತಲೂ ಶ್ರೇಷ್ಠವಾದುದು.

ಜನತೆಗೆ ಈಗ ಏನು ಬೇಕೆಂಬುದು ನಿಮಗೆ ಗೊತ್ತಿದೆ. ನನ್ನ ಅನುಭವದಿಂದ ಹೇಳುವುದಾದರೆ ಜನರಿಗೆ ಹೊಸ ಮತ್ತು ಕೋಪಿಸಿನ ಧೋರಣೆ ಬೇಕಾಗುವುದಿಲ್ಲ. ನಿಮ್ಮ ಬುದ್ಧಿ ಕೌಶಲವೂ ಅವರಿಗೆ ಬೇಡ. ಹೊಸ ತಿಂಗಗಳನ್ನಾಗಲೀ ಹೊಸ ಹೊಸ ಧೋರಣೆಗಳನ್ನಾಗಲೀ ಅವರು ಅಪೇಕ್ಷಿಸುವುದಿಲ್ಲ. ಅವರಿಗೆ ಬೇಕಾದುದು ಉತ್ತಮ ಆಡಳಿತ. ಸರಕಾರಿ ಕಚೇರಿಗಳಲ್ಲಿಯ ಕೆಲಸವು ಸುಸೂತ್ರವಾಗಿ ನಡೆದು, ಅಲ್ಲಿ ಹಂಗು, ಹೆದರಿಕೆ, ದಾಕ್ಷಿಣ್ಯದ ಭಯವಿಲ್ಲದಂತಾಗ ಬೇಕು. ಅದನ್ನು ಸಾಧಿಸುವುದು ಹೇಗೆ? ಅದೇ ಉದ್ದೇಶದಿಂದ ನೀವು ನನ್ನನ್ನು ನಾಯಕನನ್ನಾಗಿ ಆರಿಸಿರುವಿರಿ. ನಾನು ಈ ಕಾರ್ಯ ಸಾಧಿಸುವೆನೆಂದೇ ಕೆಲವರು ನಂಬಿದ್ದಾರೆ. ಅದು ಕೂಡ ವಿಶ್ವಾಸದ ಮಾತು. ಆದರೆ ಅದರ ಬೀಜ ಮಂತ್ರ ಇಲ್ಲಿದೆ. ನೀವೀಗ ಕಾರ್ಯ ನಿರ್ವಾಹಕ ಶಾಖೆಯನ್ನು ನ್ಯಾಯ ಶಾಖೆಯಿಂದ ಬೇರ್ಪಡಿಸಿರುವಿರಿ. ಇನ್ನು ನೀವು ಶಾಸನ ವಿಭಾಗವನ್ನು ಕಾರ್ಯ ನಿರ್ವಾಹಕ ಭಾಗದಿಂದ ಪ್ರತ್ಯೇಕಿಸಬೇಕೆಂದು ಸೂಚಿಸುತ್ತೇನೆ. ಅದೇತವು ನ್ಯಾಯ ಸಮ್ಮತವಾಗಿ ಸಾಗಬೇಕಾದರೆ ಶಾಸನ ವಿಭಾಗವನ್ನು ಕಾರ್ಯ ನಿರ್ವಾಹಕ ಭಾಗದಿಂದ ದೂರವಿಡಬೇಕು. ಇದೇನು ಹೊಸ ತತ್ವ? ಇದು ಪ್ರಜಾಪ್ರಭುತ್ವವೆ? ಎಂದು ಕೆಲವರು ನಿಮ್ಮನ್ನು ಪ್ರಶ್ನಿಸಬಹುದು. ಅಂತಹವರಿಗೆ ನನ್ನ ಉತ್ತರವಿಷ್ಟೆ. ಅವರ ವಿಚಾರಧಾರೆ ಕೆಲವು ಷ್ಟಿಗೆ ಸತ್ಯವಿರುತ್ತದೆ. ಶಾಸನ ಸಭೆಯ ಪ್ರತಿಯೊಬ್ಬ ಸದಸ್ಯನಿಗೆ ಕಾರ್ಯ ನಿರ್ವಾಹಕ ಶಾಖೆಯ ಮೇಲೆ ನಿಯಂತ್ರಣ ವಿರಬೇಕೆಂಬ ವಿಚಾರವು ತಪ್ಪು. ಶಾಸನ ಸಭೆಯಲ್ಲಿ ಕಾಯಿದೆಗಳನ್ನು ಮಾಡಲಾಗುತ್ತದೆ. ಅಲ್ಲಿ ನಾವು ನಮ್ಮ ಧೋರಣವನ್ನು ರೂಪಿಸಬೇಕಾಗುವುದು. ನೀವು ರೂಪಿಸಿದ ಧೋರಣೆಗಳನ್ನು ಕಾರ್ಯಕಾರಿ ಮಾಡುವ ಹೊಣೆ ಮಂತ್ರಿಮಂಡಲ ಹಾಗೂ ಕಾರ್ಯ ನಿರ್ವಾಹಕ ಶಾಖೆಯದು. ಈ ಕಾರ್ಯಕಾರಿಯು ಅಧಿಕಾರದಲ್ಲಿ ಪ್ರತಿಯೊಬ್ಬ ಸದಸ್ಯನು ಹಸ್ತಕ್ಷೇಪಮಾಡಿದರೆ ಕಾರ್ಯಕ್ಷಮತೆ ಕಡಿಮೆಯಾಗುತ್ತದೆ. ಆದುದರಿಂದ ಶಾಸನಕರ್ತರು ಆಡಳಿತದಲ್ಲಿ ಹಸ್ತಕ್ಷೇಪ ಮಾಡದಂತಹ ಹೊಸ ವಾತಾವರಣವನ್ನು ನಿರ್ಮಿಸಬೇಕಾಗಿದೆ. ಇನ್ನು ನಮ್ಮ ಪಕ್ಷದ ಸಾಮರ್ಥ್ಯದ ಬಗ್ಗೆ ಹೇಳುವುದಾದರೆ, ನಮ್ಮ ಪಕ್ಷ ನಾವೇ ಕಾರ್ಯ ನಿರ್ವಹಿಸುವುದು ಶಕ್ಯವಿಲ್ಲ. ಬೇರೆಯವರ ಬೆಂಬಲಪಡೆಯಬೇಕಾಗುತ್ತದೆ. ನಾವೀಗ ಎರಡನೆಯವರಿಗೆ ನಮ್ಮಲ್ಲಿ ಆಶೆಯಿಕೊಟ್ಟು ನಮ್ಮದು ಒಂದೇ ಪಕ್ಷವಾಗಿ ತೋರುವಂತೆ ಮಾಡಬೇಕು. ಮಂತ್ರಿಗಳ ವಿಷಯದಲ್ಲಿ ಹೇಳುವುದಾದರೆ ಅವರು ಶಾಸನಸಭೆಗಳಲ್ಲಿ ಯೋಗ್ಯರೀತಿಯಿಂದ ವರ್ತಿಸಬೇಕು ಹಾಗೂ ಸಂಯಮಿಗಳಾಗಿರಬೇಕು. ಇವೆರಡು ವಿಷಯಗಳನ್ನು ಕಲಿತರೆ ಇನ್ನು ಕೆಲವೇ ತಿಂಗಳುಗಳಲ್ಲಿ ಮುಖ್ಯಮಂತ್ರಿಯನ್ನು ಸೃಷ್ಟಿಸಬಲ್ಲೆನು. ಆಗ ನೀವು ನನ್ನನ್ನು ವಿಶ್ವಾಸದಿಂದ ಈ ಜವಾಬ್ದಾರಿ ಹೊಣೆಯಿಂದ ಮುಕ್ತಮಾಡುವಿರೆಂದು ಆಶಿಸ ಕ್ಕೇನೆ. ಶ್ರೀ ಟಿ ಪ್ರಕಾಶಮ್ ಅವರ ರಿತು ಪ್ರಸ್ತಾಪಮಾಡುವಿರಿ. ಅವರು ವಿರೋಧ ಪಕ್ಷದಲ್ಲಿರಲಿ ಅಥವಾ ಸರಕಾರದ ಪಕ್ಷದಲ್ಲಿರಲಿ. ನಾವು ಸಹಕಾರಿಗಳೇ. ಇಂಗ್ಲಂಡಿನಲ್ಲಿದ್ದಂತೆ ವಿರೋಧಿ ಹಾಗೂ ಸರಕಾರಿ ಪಕ್ಷಗಳು ಒಂದಕ್ಕೊಂದು ಸಹಾಯಮಾಡಬೇಕು.

ಕಮ್ಯೂನಿಸ್ಟರು ಯಾವಾಗಲೂ ಭೋಗತರಾಗಿರುತ್ತಾರೆ. ಅವರೀಗ ಮೇಲಕ್ಕೆದ್ದು ಬಂದಂತೆ ಕಾಣುತ್ತಿದ್ದರೂ ಮನಸ್ಸು ಭೂಮಿಯೊಳಗೇ ಇರುತ್ತದೆ. ಕಾಯಿದೆ, ನೀತಿ ಮತ್ತು ಧರ್ಮ, ಪರಮಾತ್ಮ ಇವುಗಳಲ್ಲಿ ನಂಬಿಕೆಯಿದೆ ಎಂದು ಕಮ್ಯೂನಿಸ್ಟರು ಸಾರಿದರೆ ಯಾವ ತೊಂದರೆಯೂ ಇಲ್ಲ. ಅವರನ್ನು ಇಡೀ ಜಗತ್ತೇ ಸ್ವಾಗತಿಸ ವುದು. ಪರಸ್ಪರ ವಿಶ್ವಾಸ ಹಾಗೂ ಸಹಕಾರ ಜೀವನದ ತಳಹದಿ ವಿಚಾರವನ್ನು ಕಮ್ಯೂನಿಸ್ಟರು ಮರೆತಿರುವುದರಿಂದ ಜಗತ್ತಿನಲ್ಲಿ ಶತ್ರುಗಳನ್ನು ಸೃಷ್ಟಿಸಿಕೊಂಡಿರುತ್ತಾರೆ ಅವರು ನೀತಿಗೆ ಮಹತ್ವವನ್ನೀಯುತ್ತಿಲ್ಲ ಭೌತಿಕ ಲಾಭವನ್ನಷ್ಟೆ ನೋಡುವರು. ನೀವೆಲ್ಲರೂ ಬಹಳ ಮುಂಜಾಗ್ರತೆಯಿಂದಿದ್ದು ಒಗ್ಗಟ್ಟನಲ್ಲಿರಬೇಕೆಂದು ಇಷ್ಟನ್ನೆಲ್ಲ ... ಎಂದರು.

Our Pigmy Deposit Scheme

.... brings our bank to your door. You may save as small a sum as annas two. Our collector will call on you every day to receive it

At the rate of annas two per day you save Rs. 350 in 7 years because we allow interest at 3⅛% per annum At the rate of Re. 1/- per day your Savings are Rs 2,800/- in 7 years At the rate of Rs. 10/- it is Rs. 28,000/-. Come in to-day and join the band of **Prudent Prosperous Pigmy People.**

The Canara Industrial & Banking Syndicate Ltd.

Estd: 1925. H. O. UDIPI.

* ಯುಗಾದಿ-ಪಂಚಾಂಗ-ಕೆಲೆಂಡರು *

ಈ ವರ್ಷದ ಚಾಂದ್ರ ಯುಗಾದಿಯು ಕಳೆದ ಬುಧವಾರ ಬಿದ್ದುದರಿಂದ ವರ್ಷ, ಮಾಸ, ವಾರ, ದಿನ, ಗಂಟೆಗಳಿಗೆಗಳನ್ನು ಅಳೆಯುವುದರಲ್ಲಿ ವಿವಿಧ ಜನಾಂಗಗಳು ಅನುಸರಿಸಿದ ರೀತಿಯ ಅಲ್ಪ ಪರಿಚಯವನ್ನು ಮಾಡಿಕೊಂಡು ಇನ್ನೂ ಸುಧಾರಣೆಯಾಗಬೇಕಾಗಿರುವ ಅಂಶಗಳನ್ನು ತಿಳಿಯುವುದು ಉಚಿತ.

ಕಾಲಗಣನೆಯಲ್ಲಿ ಅತಿ ಪ್ರಾಚೀನವೂ ಅತಿ ಸುಲಭವೂ ಆಗಿದ್ದುದು, ದಿನ ಹಗಲು, ರಾತ್ರಿ ಅವುಗಳ ಪರ್ಯಾಯವೇ ದಿನಗಳು. ದಿನದ ಆರಂಭ ಸೂರ್ಯೋದಯದಿಂದ ಎಂದು ನಮ್ಮ ದೇಶದಲ್ಲೂ ಇತರ ಅನೇಕ ದೇಶಗಳಲ್ಲೂ ಎಣಿಸಿದರೆ ಅರಬಸ್ತಾನ, ಇಟೆಲಿ ಮೊದಲಾದ ಕಡೆಗಳಲ್ಲಿ ಸಂಜೆಯಿಂದೆಂದೂ ಕಾನೂನುಗಳ ಅನುಕೂಲತೆಗೂ ಕ್ರೈಸ್ತರಿಗಳಲ್ಲೂ ನಡುರಾತ್ರಿಯಿಂದೆಂದೂ ಜ್ಯೋತಿಷಿಗಳು ನಡು ಮಧ್ಯಾಹ್ನದಿಂದೆಂದೂ ಗಣಿಸುತ್ತಾರೆ. ದಿನವನ್ನು ವಿಭಾಗಮಾಡುವಾಗ ಆರಂಭದಲ್ಲಿ ಒರೇ ಸೂರ್ಯೋದಯ, ಮಧ್ಯಾಹ್ನ, ಸಂಜೆ ಮೊದಲಾದ ಸ್ಥೂಲವಿಭಾಗಗಳಿದ್ದುದು ನಮ್ಮಲ್ಲಿ 60 ಘಳಿಗೆಗಳಾಗಿಯೂ ಪಾಶ್ಚಾತ್ಯರಲ್ಲಿ 24 ತಾಸುಗಳಾಗಿಯೂ ವಿಭಾಗವಾಯಿತು.

ಏಳು ದಿನಗಳ ಗುಂಪಾದ ವಾರವೆಂಬುದು ನಮ್ಮ ದೇಶದಲ್ಲಿ ಪ್ರಾಚೀನ ಕಾಲದಲ್ಲಿ ಬಳಕೆಯಲ್ಲಿದ್ದಿಲ್ಲ. ಪ್ರಾಚೀನ ಗ್ರೀಕರಿಗೂ ಅದು ಗೊತ್ತಿದ್ದಿಲ್ಲ. ವಾರಗಳ ಹೆಸರುಗಳು ಐಗುಪ್ತ (ಇಜಿಪ್ಟ್) ದೇಶದಲ್ಲಿ ಆರಂಭವಾಯಿತೆಂಬುದಕ್ಕೆ ಆಧಾರಗಳಿವೆ. ಪ್ರಾಚೀನ ಐಗುಪ್ತದವರು ಸಪ್ತಗ್ರಹಗಳನ್ನು ಶನಿ, ಬುಧ, ರವಿ, ಗುರು, ಚಂದ್ರ ಶುಕ್ರ ಕುಜರೆಂಬ ಕ್ರಮದಲ್ಲಿ ಬರೆದಿಟ್ಟು ಪ್ರತಿ ದಿನವನ್ನು 24 ವಿಭಾಗಮಾಡಿದ್ದರಿಂದ ಮೊದಲನೆಯ ದಿನ ಮೊದಲನೆಯ ತಾಸು ಶನಿ, ಎರಡನೇ ತಾಸು ಗುರು ಹೀಗೆ ಗಣಿಸುತ್ತ ಹೋದಾಗ ಎರಡನೇ ದಿನದ ಮೊದಲನೇ ತಾಸು [illegible] ಮೂರನೆಗಿನ ಮೊದಲನೆ ತಾಸು ಕುಜನಿಗೂ ಏಳನೇ ದಿನದ ಮೊದಲನೇ ತಾಸು ಶುಕ್ರನಿಗೂ ಒಪ್ಪಿತವಾಗಿ ಆಯಾ ದಿನಗಳ ಹೆಸರುಗಳು ಸ್ಥಿರವಾದುವಂತೆ. ಗ್ರೀಕರಲ್ಲಿಯೂ ರೋಮನರಲ್ಲಿಯೂ ನಮ್ಮಲ್ಲಿಯೂ ಆದೇ ಹೆಸರುಗಳು ಅದೇ ಕ್ರಮದಲ್ಲಿ ರೂಢಿಗೆ ಬಂದಿವೆ. ಇಂಗ್ಲೀಷರ ಹಿರಿಯರು ಮಾತ್ರ ಅವುಗಳಲ್ಲಿನ ಕೆಲವು ಹೆಸರುಗಳನ್ನು ಬಿಟ್ಟು ತಮ್ಮ ದೇವದೇವಿಯರ ಹೆಸರುಗಳನ್ನು ಸೇರಿಸಿದ್ದರಿಂದ ಇಂಗ್ಲಿಷು ಭಾಷೆಯನ್ನು ಮಾತ್ರ ಕಲಿತವರು ಯುರೋಪಿನಲ್ಲೆಲ್ಲ ವಾರನಾಮಗಳು ಗ್ರಹನಾಮಗಳಾಗಿಯೇ ಇವೆಯೆಂಬುದನ್ನು ಮರೆಯುತ್ತಾರೆ.

ವಾರವೆಂಬ ಗುಂಪು ರಚಿಸುವುದಕ್ಕೆ ಆಕಾಶದಲ್ಲಿ ತೋರಿ ಬರುವ ಯಾವುದರದರೊಂದು ಬದಲಾವಣೆಯು ಕಾರಣವಲ್ಲ, ಆದರೆ ತಿಂಗಳೆಂಬುದು ಎಲ್ಲರ ಗಮನಕ್ಕೂ ಬರುವ ಚಂದ್ರನ ವೃದ್ಧಿಕ್ಷಯಗಳಿಗೆ ಹೊಂದಿ ಬಂದ ಅಳತೆ. ಕನ್ನಡದಲ್ಲಿ ತಿಂಗಳು ಎಂಬ ಪದವನ್ನು ಚಂದ್ರನಿಗೂ ಸಾಧಾರಣ 30 ದಿನಗಳ ಗುಂಪಿಗೂ ಅನ್ವಯಿಸುವಂತೆ ಇಂಗ್ಲಿಷಿನಲ್ಲೂ ಚಂದ್ರನಿಗ ಮೂನ್ ಎಂದೂ ತಿಂಗಳಿಗೆ ಮನ್ತ್ (=ಮೂನ್ ಅಳತೆ) ಎಂದಿವೆ.

ಚಾಂದ್ರಮಾನ ತಿಂಗಳ ಆರಂಭ ಅಮಾವಾಸ್ಯೆಯಿಂದ ಕೆಲವರೂ ಹುಣ್ಣಿಮೆಯಿಂದ ಕೆಲವರೂ ಗಣಿಸುತ್ತಾರೆ. ಮುಸಲ್ಮಾನರಲ್ಲಿ ಎಲ್ಲಾ ಹಬ್ಬಗಳು ಚಾಂದ್ರಮಾನಕ್ಕನುಸಾರವಾಗಿಯೇ ಇವೆ; ಹಿಂದು; ಬೌದ್ಧ, ಜೈನರಲ್ಲಿ ಅನೇಕ ಹಬ್ಬಗಳು ಚಾಂದ್ರಮಾನವನ್ನು ಅನುಸರಿಸಿವೆ; ಕ್ರೈಸ್ತರಲ್ಲಿ ಕ್ರಿಸ್ತನ ಮರಣ ಹಬ್ಬವೊಂದು ಮಾತ್ರ ಸ್ವಲ್ಪ ಮಟ್ಟಿಗೆ ಚಾಂದ್ರಮಾನದ ಮೇಲೂ ಹೊಂದಿದೆ.

ಚಂದ್ರನ ಚಲನೆಯಿಂದ ಆಗುವ ವ್ಯತ್ಯಾಸ ಇಳೆತ ಭರತದಲ್ಲಿ ಕಾಣಬಹುದಾದರೆ ಸೂರ್ಯನ ಅಯನದಿಂದ ಋತುಭೇದಗಳು ಉಂಟಾಗುತ್ತವೆ. ಕೃಷಿಯೇ ಸಕಲ ಜನಾಂಗಗಳ ಜೀವನಾಧಾರವಾದ ನಂತರ ಬಿತ್ತುವ ಕೊಯ್ಯುವ ಕಾಲದ ಹಬ್ಬಗಳೂ ಸಹಜವಾಗಿ ಬಂದುವು; ಸೂರ್ಯನ ಗತಿಯನ್ನು ನೋಡಿ ಅಳೆದ ವರ್ಷವೇ ಮುಖ್ಯವಾಯಿತು.

ಚಾಂದ್ರಮಾನದ ವರ್ಷವನ್ನೂ ಸೌರಮಾನದ ವರ್ಷವನ್ನೂ ಸರಿತೂಗಿಸಲಿಕ್ಕೆ ಅಧಿಕ ಮಾಸವನ್ನು ಕೂಡಿಸುವ ಸಂಪ್ರದಾಯ ನಮ್ಮಲ್ಲೂ ಚೀನೀಯರಲ್ಲೂ ಇದೆ. ಪ್ರಾಚೀನ ರೋಮದಲ್ಲಿ ಆಗಾಗ್ಗೆ ಪುರೋಹಿತರು ಹೇಳಿದ ಸಮಯದಲ್ಲಿ ಅಧಿಕ ದಿನಗಳನ್ನು ಕೂಡಿಸುತ್ತಿದ್ದರು, ವರ್ಷಾರಂಭದಲ್ಲಿ ಜನರನ್ನು ಕರೆದು ಆ ವರ್ಷದ ದಿನಗಳು ಹಬ್ಬಗಳ ದಿನಗಳು— ಇವನ್ನು ಪ್ರಕಟಿಸುತ್ತಿದ್ದರು. ಹೀಗೆ ಕರೆಯುವ ದಿನ (Calends) ದಿಂದಲೇ ಕೆಲೆಂಡರು ಎಂಬ ಪದ ಉತ್ಪನ್ನವಾಯಿತು.

ರೋಮನದ ಕೆಲೆಂಡರಿನ ಅವ್ಯವಸ್ಥೆಯನ್ನು ಸರಿಪಡಿಸಿ ಸೌರಮಾನಕ್ಕೆ ಸರಿಯಾಗುವಂತೆ ಜ್ಯೂಲಿಯಸ್ ಸೀಸರನೆಂಬವನ ಕಾಲದಲ್ಲಿ ಪ್ರಯತ್ನಗಳಾಗಿ ಅವನ ನಂತರದ ಒಗಸ್ಟಸನ ಕಾಲದಲ್ಲಿ ಇನ್ನಿಷ್ಟು ಬದಲಾಗಿ ಪೋಪ್ ಗ್ರೆಗರಿಯ ಕಾಲದಲ್ಲಿ ನಿಶ್ಚಿತವಾಯಿತು.

ಭೂಮಿಯು ಸೂರ್ಯನ ಸುತ್ತು ಬರಲು 365 ದಿನ 5 ತಾಸು 29 ಮಿನಿಟುಗಳಷ್ಟು ಬೇಕಾಗುವುದರಿಂದ ಕೆಲೆಂಡರಿನ ವರ್ಷಕ್ಕೂ ಸೃಷ್ಟಿಸಹಜವರ್ಷಕ್ಕೂ ಹೊಂದಿಕೆ ಬರುವಂತೆ 4ರಿಂದ ಭಾಜ್ಯವಾದ ವರ್ಷದಲ್ಲಿ ಫೆಬ್ರವರಿಗೆ 29 ದಿನ ಆದರೆ ಶತಮಾನಗಳ ವರ್ಷಗಳಾದ 1800, 1900 ಇವು ಅಧಿಕವಲ್ಲ; ಹಾಗೆಂದು 1600, 2000, 2400, ಇವು ಅಧಿಕವೆಂದು ಗಣಿಸಲ್ಪಡಬೇಕಾಗಿದೆ.

ನಮ್ಮಲ್ಲೂ ಬಳಕೆಯಲ್ಲಿರುವ ಸೌರಮಾನ ವರ್ಷವು ಸೃಷ್ಟಿಸಹಜವರ್ಷಕ್ಕೆ ಹೊಂದಿಬರುವುದಿಲ್ಲವಾದುದರಿಂದ ಹಿಂದೆ ಒಂದೆರಡು ಸಲ ಉತ್ತರಾಯಣಾರಂಭದ ದಿನವನ್ನು ಬದಲಾಯಿಸಿದರು. ಕಳೆದ ಕೆಲ ಶತಮಾನಗಳಲ್ಲಿ ಭಾರತೀಯ ಪಂಚಾಂಗ ಕರ್ತರೆಲ್ಲ ಮನ್ನಣೆಕೊಡುವ ತೀರ್ಮಾನ ಕೊಡಮಾಡಿಲ್ಲದೆ ಉತ್ತರಾಯಣಾರಂಭಕ್ಕೂ ಪಂಚಾಂಗದ ಉತ್ತರಾಯಣಾರಂಭಕ್ಕೂ ಸುಮಾರು 20 ದಿನಗಳ ವ್ಯತ್ಯಾಸ ಕಂಡುಬರುತ್ತದೆ. ಅದನ್ನು ತಿದ್ದುವುದು ಅಗತ್ಯ.

ಹಬ್ಬ ಹುಣ್ಣಿಮೆಗಳ ಗೊಡವೆಯಿಲ್ಲದೆ ಬರೇ ಕಾಲಗಣನೆಗೆ ರೋಮನ್ ಕೆಲೆಂಡರು ಎಲ್ಲ ಕಡೆಗಳಲ್ಲಿ ಬಳಕೆಯಲ್ಲಿರುವುದರಿಂದ ನಾವೂ ಅನುಸರಿಸುತ್ತಿದ್ದೇವೆ.

ಇದರಲ್ಲಿ ತಿಂಗಳುಗಳ ದಿನಗಳ ಅವ್ಯವಸ್ಥೆ, ಯಾವ ತಾರೀಕು ಯಾವ ದಿನವೆಂದು ಕಂಡು ಹಿಡಿಯುವುದು ಕಷ್ಟವಾದುದರಿಂದ ಕೆಲವು ಸುಧಾರಣೆಗಳನ್ನು ಸೂಚಿಸಿದ್ದಾರೆ.

ಏಳು ದಿನಗಳ ನಾಲ್ಕು ವಾರಗಳಿರುವ ಅಂದರೆ 28 ದಿನಗಳ 13 ತಿಂಗಳುಗಳಾಗಿ ವರ್ಷವನ್ನು ವಿಭಾಗಿಸಿದರೆ ಪ್ರತಿ ತಿಂಗಳು ಪ್ರತಿ ತಾರೀಕು ನಿಶ್ಚಿತವಾರವಾಗುವುದು. ಆದರೆ ವರ್ಷಕ್ಕೆ 364 ದಿನಗಳಾಗುವುದರಿಂದ 13 ತಿಂಗಳಾದೊಡನೆ ವರ್ಷದಿನವೆಂದು ಒಂದು ಕೂಡಿಸಿ ಅದಕ್ಕೆ ವಾರನಾಮ ಕೊಡಬಾರದೆಂದೂ ಅಧಿಕ ವರ್ಷ ಅಧಿಕ ದಿನವೆಂದು ಇನ್ನೊಂದು ದಿನ ಕೂಡಿಸಿ ಅದಕ್ಕೂ ವಾರನಾಮ ಕೊಡಬಾರದೆಂದೂ ಒಂದು ಸೂಚನೆ. 13 ಎಂಬ ಸಂಖ್ಯೆಯ ವಿಷಯ ಮೂಢನಂಬಿಕೆಯುಳ್ಳವರು ಇದನ್ನು ವಿರೋಧಿಸುತ್ತಾರೆ. ಕ್ರೈಸ್ತರ ಹಬ್ಬಗಳ ದಿನವನ್ನು ಇತ್ಯರ್ಥಿಸುವಲ್ಲೂ ಒಮ್ಮತವಿಲ್ಲದೆ ಗಲಭೆಯುಂಟಾಗುವುದು.

ಇನ್ನೊಂದು ಸೂಚನೆ ಹೀಗಿದೆ. 30 ದಿನಗಳ ಎರಡು ತಿಂಗಳು, 31 ದಿನಗಳ ಒಂದು ತಿಂಗಳಿರುವ ಮೂರು ಮೂರು ತಿಂಗಳುಗಳ ನಾಲ್ಕು ವಿಭಾಗಗಳಿದ್ದರೆ ಪ್ರತಿ ವಿಭಾಗದಲ್ಲಿ 91 ದಿನ, ವರ್ಷದಲ್ಲಿ 364 ದಿನಗಳು ಪ್ರತಿ ತಿಂಗಳ ಪ್ರತಿ ತಾರೀಕಿನ ದಿನ ಒಂದೇ ನಿಲ್ಲುವುದಿಲ್ಲವಾದರೂ ನಾಲ್ಕು ವಿಭಾಗಗಳು ಒಂದೇ ರೀತಿಯಿದ್ದು ವರ್ಷ ವರ್ಷ ಬದಲಾವಣೆಯಿಲ್ಲ. ಮೂರು ತಿಂಗಳ ಕೆಲೆಂಡರನ್ನು ಅಚ್ಚು ಹಾಕಿದರೆ ಯಾವಾಗಲೂ ಅದನ್ನೇ ಉಪಯೋಗಿಸಬಹುದು. ಇದರಲ್ಲೂ ವರ್ಷದದಿನ ಮತ್ತು ಅಧಿಕದಿನಗಳಿದ್ದು ವಾರನಾಮಗಳಿಲ್ಲದೆ ಇರಬೇಕಾಗುವುದು.

[ವಿ. ವಾ.]

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಸೇವಜಾತಿ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರಿಯ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.

ದಿ. ಬ್ರಾಂಚ್ ಮೆನೇಜರ್;

ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ.

ಕವಿರಾಜ ಯನ್. ಯನ್. ಸೇನರ

ಶಾಸ್ತ್ರೀಯ ಔಷಧಿಗಳು

ಈಗಲೇ ಬಂದಿವೆ

ಬ್ರಿಹತ್ ಅಮೃತಬಳ್ಳಿ ಕಷಾಯ
ಪ್ರಸೂತಾರಿಷ್ಟ
ಕಸ್ತೂರಿ ಕಲ್ಪ ರಸಾಯನ
ನೇತ್ರಬಿಂದು
ಕರ್ಪೂರಾರಿಷ್ಟ
ದುರ್ಗಾ ಪುನರ್ನವಾಸವ
ಜಾಸಾರಿಷ್ಟ
ಕುಂಕುಮಾಸವ
ಮೃಗಾಂಕ ದ್ರಾವ

ದರವನ್ನು ವಿಚಾರಿಸುವದು.

ಏಜಂಟ್—

ಕಂಪೆನಿ, ಮಂಗಳೂರು ನಂ. 1 ಶಾ.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಚಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಮದ್ರಾಸಿನ ಪಬ್ಲಿಕ್ ಇನ್ಸ್ಟ್ರಕ್ಷನ್ನಿನ ಡೈರೆಕ್ಟರರಿಂದ ನವಯುಗ ವಾರಪತ್ರಿಕೆಯು ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಸೆಕೆಂಡರಿ ಶಾಲೆಗಳು ಅದನ್ನು ತರಿಸಿಕೊಳ್ಳಬಹುದಾಗಿದೆ.

ಮಹಾತ್ಮರು ಬಿಟ್ಟುಹೋದ ತತ್ವಾದರ್ಶ

ಲಂಡನ್ನಿನ 'ಇಕೊನೊಮಿಸ್ಟ್' ಪತ್ರಿಕೆಯ ಲೇಖನದ ಮುಖ್ಯಾಂಶಗಳು.

ಗಾಂಧೀಜಿಯವರ ಕೊಲೆಯಾಗಿ ನಾ ವರ್ಷ ಸಂದಿತಷ್ಟೆ. ಆದರೂ, ಅವರು ಸಿ ಹೋದ ಕಾರ್ಯಗಳ ಫಲ ಪಂಜಾ ಳನ್ನ ಕೆಯಲು ಸಾಕಷ್ಟು ಸಮಯ ಗ ದಂತಾಗಿದೆ. ಯಾಕೆಂದರೆ, ಅವರು ಇ ಲ್ಲಿಯೇ ಜೀವತ್ಕಲ್ಯ ಸ್ಮಾರಕ ಪುರು ಂತಾಗಿರುವರು. ಅಂದಿನ ಹಿಂದುಸ್ಥಾನ ರರಿಗಿಂತಲೂ ಅವರಿಂದಲೇ ಹೆಚ್ಚು ಪಿತಗೊಂಡುದಾಗಿದೆ. ನೈತಿಕವಾಗಿ, ದಿನ ಹಿಂದುಸ್ಥಾನವಾಗಲೀ ಹಿಂದೀ ಧ್ಯಕಾರಣಿಗಳಾಗಲೀ ಗಾಂಧಿಯವರು ಕಿಕೊಟ್ಟ ಆದರ್ಶದಂತೆ ನಡೆದುಕೊ ವುದು ದುಸ್ತರವಾಗಿರುತ್ತದೆ. ಸಾಮಾ ವಾಗಿ, ಗಾಂಧಿಯವರು ತೀರ ಕಟ್ಟಾರ ಾಗಿರುವರು. ಹಿಂದೂ ಧರ್ಮದ ಇತಿ ಸದಲ್ಲಿ, ಅವರು ಅದ್ವಿತೀಯ "ಸನಾತ ಧರ್ಮ" ವಿರೋಧಿಗಳಾಗಿದ್ದು, ಅವರ ಮಾಜಿಕ ಕಾರ್ಯಗಳಿಗೆ ಪೂರ್ಣಸ್ವ ಪ ಬರಲು ಸುರುವಾಗುವಷ್ಟರಲ್ಲೇ ಅ ಮರಣ ಹೊಂದಿದಂತಾಯಿತು! ಅ ಸುರುಮಾಡಿದ್ದ ಸಾಮಾಜಿಕ ಕ್ರಾಂ ಯು ಮುಂದವಾಗಿಯೂ, ತಿರುವುಮುರು ಮಾಡಲು ಬಾರದಂತೆಯೂ ಸಾಗುತ್ತ ಇದೆ.

ರಾಜ್ಯಕಾರಣದಲ್ಲಿ ಗಾಂಧಿಯವರು ಕೃಷ್ಣ ತೀವ್ರಗಾಮಿಗಳಂತಿದ್ದವರು. ಭಾ ವಾದ ಹಳೆಯ ಸಂಪ್ರದಾಯಗಳ ಬ ಅವರಿಗೆ ಆದರವಿದ್ದಿಲ್ಲ. ವ್ಯಾಯಿಸ ರಾ ರುಗಳ ವೈಭವ ವಿಜೃಂಭಣೆಗಳನ್ನು ವರು ತೀರ ಕಡೆಗಣಿಸಿದ್ದರು; ಅಂತಹ ಂಭಕ್ಕೆ ಅವರು ಎಂದಿಗೂ ಸೊಪ್ಪುಹಾ ರಿಲ್ಲ. ಶ್ರೀಮಂತಿಕೆಯೆಂಬುದು ಬಡ ವರಿಗಾಗಿ ಕಾದಿಡಲ್ಪಟ್ಟ ವಿಶ್ವಸ್ತ ನಿಧಿ ಯುದೇ ಅವರ ಭಾವನೆಯಾಗಿತ್ತು. ಆ ಯೂ ಅವರೊಬ್ಬ ವಿಗ್ರಹ ವಿಚ್ಛೇದಕ ಳಗಾರರಾಗಿದ್ದಿಲ್ಲ; ಶ್ರೀಮಂತ ದರಿದ್ರ ಡೆಯ, ಒಕ್ಕಲ ಎಂಬ ಬಿನ್ನಭೇದದ ವ ಕಲಹವು ಒಂದು ಪಾಪಕೃತ್ಯವೆಂದೇ ವರು ತಿಳಿದಿದ್ದರು. ಸತ್ಯ, ಪ್ರೇಮ, ಮ , ಕರ್ತವ್ಯ ಹಾಗೂ ಮಾನವ ಜೀವನ ಆತ್ಮಗೌರವಗಳನ್ನವರು ರಾಜಕೀಯ ಲಭ್ಯಗಳಿಗಾಗಿ ಎಂದೂ ಬಿಟ್ಟು ಕೊ ಕೊಡದೆಂದು ಸಾರಿದರು.

ರೊಚ್ಚಿಗೆದ್ದ ಜನಜಂಗುಳಿ ಚೌರಿ ಚೌರಾದಲ್ಲಿ ಪೋಲಿಸರನ್ನು ಸಜೀವ ಸುಡು ಲೇ ಅವರು ಸವಿನಯ ಕಾಯಿದೆ ಭಂಗ ಳವಳಿಗೆ ತಡೆ ಹಾಕಿಬಿಟ್ಟರು. ರಶಿಯ ಲೆನಿನನಾಗಿದ್ದರೆ ಆ ಕೃತಿಗಾಗಿ ಜನ ಂಗುಳಿಯನ್ನು ಹೊಗಳಿ ಹರಸಿ ಬಿಡು ದ್ದನು. ರಾಜ್ಯಕಾರಣವನ್ನವರು ಸತ್ಯ ರ್ಮದ ದೃಷ್ಟಿಯಿಂದ ನೋಡುತ್ತಿದ್ದು ರಿಂದ, ಅದನ್ನವರು ಬಹು ಸರಳವಾಗಿ ಾಡಿಬಿಟ್ಟರು. ಅವರೊಬ್ಬ ಪ್ರಜಾಸತ್ತಾ ಾದ ಹಾಗೂ ಸ್ವತಂತ್ರವಾದಿಗಳಾಗಿ ರು. ಆದ್ದರಿಂದಲೇ ಅವರು, ಒಂದು ನಾಂಗವು ಇನ್ನೊಂದು ಜನಾಂಗವ ಳುವುದು ಆಳಲ್ಪಡುವ ಜನಾಂಗದ ಭಿಮಾನಕ್ಕೂ ಆತ್ಮಿಕ ಅಭಿವೃದ್ಧಿಗೂ ಹಾನಿಕರವೆಂದು ದೃಢವಾಗಿ ನಂಬಿದ್ದರು.

ಅನ್ಯರ ಆಳಿಕೆಯು ಭೌತಿಕ ಸುಖಸಂಪತ್ತಿನ ದೃಷ್ಟಿಯಿಂದ ಲಾಭದಾಯಕವೋ, ನಷ್ಟದಾಯಕವೋ ಎಂಬ ಪ್ರಶ್ನೆಯು ಅವರಿಗೆ ಬಿಡ ಮಟ್ಟಿಗೆ ಅಪ್ರಾಸಂಗಿಕವಾಗಿತ್ತು. ಒಬ್ಬರು ಇನ್ನೊಬ್ಬರನ್ನಾಳುವುದು ದೊಡ್ಡ ತಪ್ಪೆಂದೇ ಅವರು ಗಣಿಸಿದ್ದರು.

ಇದರಿಂದ ಇಬ್ಬಗೆಯ ಪರಿಣಾಮವಾಯಿತು. ಜನಾಂಗದ ಆತ್ಮಗೌರವ ರಕ್ಷಣೆ ಮತ್ತು ಮಾನವೀ ಅಭ್ಯುದಯವನ್ನು ಸಾಧಿಸುವುದೇ ಅವರ ಗುರಿಯಾದ್ದರಿಂದ, ಜನತೆಯನ್ನವರು ರಾಜಕೀಯಕ್ಕೆ ಎಳೆದು ತರಬೇಕಾಯಿತು, ಈ ಕಾರ್ಯವನ್ನವರು ಯಶಸ್ವಿಯಾಗಿ ಮಾಡಲು ಶಕ್ತರಾದರು! ಯಾಕೆಂದರೆ, ಜನತೆಗೆ ತಿಳಿಯುವ ರೀತಿಯಲ್ಲಿಯೇ ರಾಜಕಾರಣವನ್ನು ವಿವರಿಸಲು ಅವರೊಬ್ಬರೇ ಸಮರ್ಥರಾಗಿದ್ದರು. ಭಾರತೀಯ ಗ್ರಾಮವಾಸಿಯು ಶತಶತಮಾನದಿಂದಲೂ ಧರ್ಮಭಾವನೆಯಲ್ಲೇ ತನ್ನ ಸುಖಸಮಾಧಾನಗಳನ್ನು ಕಂಡುಕೊಳ್ಳುತ್ತ ಬಂದಿದ್ದನು; ಇದನ್ನು ಅರಿತ ಗಾಂಧಿಯವರು ಹಳ್ಳಿಗನನ್ನು ಧಾರ್ಮಿಕ ರೀತಿಯಿಂದಲೇ ಮಾತಾಡಿಸಿದರು. ಅವರಿಗಿಂತ ಮೊದಲಿನ ರಾಜ್ಯಕಾರಣಿಗಳು ಸರಕಾರಿ ಉಚ್ಚಾಧಿಕಾರ ಸ್ಥಾನಗಳ ಹಿಂದೀಕರಣವಾಗಬೇಕೆಂದೂ, ಶಾಸನ ಸಭೆಗಳಲ್ಲಿ ಹಿಂದೀಯರಿಗೆ ಇಂತಿಷ್ಟು ಸ್ಥಾನಗಳಿರಬೇಕೆಂದೂ, ವಾದಿಸುತ್ತಿದ್ದರು. ಗಾಂಧಿಯವರು ಅಹಿಂಸೆ-ಸತ್ಯ ನ್ಯಾಯ ನೀತಿಯ ರಾಮರಾಜ್ಯ ಸರಕಾರ ಸ್ಥಾಪನೆ, ಹಾಗೂ ಸತ್ಯ ಈ ವಿಷಯಗಳನ್ನೆತ್ತಿ ಮಾತಾಡುತ್ತಿದ್ದರು. ಗಾಂಧಿಯವರು ಜಗತ್ತಿನಲ್ಲೇ ಅತ್ಯಂತ ದೊಡ್ಡದಾದ ರಾಷ್ಟ್ರೀಯ ಚಳವಳಿಯನ್ನು ಸತತ ೩೦ ವರ್ಷ ನಡೆಸಿದರಾದರೂ "ಸೈತಾನೀ ಬ್ರಿಟಿಷ್ ಸರಕಾರವನ್ನು" ಪ್ರೀತಿಯಿಂದ ಇದಿರಿಸಬೇಕೇ ಹೊರತು ದ್ವೇಷ ಮಾಡಬಾರದೆಂದು ಅವರು ಬೋಧಿಸಿದ ತತ್ವದಿಂದ ಸ್ವಲ್ಪವೂ ಕದಲದಂತೆ ಚಳವಳಿ ನಡೆಸಿದರು.

ಸಾಮಾನ್ಯ ಹಳ್ಳಿಗರಾದ ಜನತೆಯನ್ನೇ ಗಾಂಧಿಯವರು ಹಿಂದೀ ರಾಜ್ಯಕಾರಣದ ಮುಖ್ಯ ವಿಷಯವಾಗಿ ಮಾಡಿಬಿಟ್ಟರು. ಹಿಂದುಸ್ತಾನವೆಂದರೆ ಹೈಕೋರ್ಟ ವಕೀಲರ ಹಾಗೂ ಸರಕಾರಿ ಉಚ್ಚಾಧಿಕಾರಿಗಳ ರಾಜ್ಯವಲ್ಲ; ಅದರ ಹೃದಯವು ೭ ಲಕ್ಷ ಹಳ್ಳಿಗಳಲ್ಲಿ ಸ್ಪಂದಿಸುತ್ತಿದ್ದು, ಅಲ್ಲಿರುವ ಜನತೆಗೆ ಹೊಟ್ಟೆ ಬಟ್ಟೆಗೆ ಕೊಡಿಸುವ ಹಾಗೂ ಉದ್ಯೋಗ ದಂಧೆಗಳನ್ನೊದಗಿಸಿಕೊಡುವ ಸಮಸ್ಯೆಯನ್ನುಳ್ಳ ದೇಶವಾಗಿದೆ ಎಂದೂ, ಎಲ್ಲರೂ ತನ್ನಂತೆಯೇ ಈ ದೃಷ್ಟಿಯಿಂದಲೇ ಹಿಂದುಸ್ತಾನವನ್ನು ನೋಡಬೇಕೆಂದೂ ಅವರು ಮೇಲಣವರ್ಗಗಳ ಜನರಿಗೆ ಬೋಧಿಸಿದರು. ಶಾಸನ ಸಭೆಗಳಿಗೆ ದೊರೆಯುವ ಅಧಿಕಾರಕ್ಕಿಂತ, ಹಳ್ಳಿಗನಿಗೂ ಹಳ್ಳಿ ಪಂಚಾಯತಕ್ಕೂ ದೊರೆಯುವ ಅಧಿಕಾರದ ಬಗ್ಗೆಯೇ ಅವರು ಹೆಚ್ಚು ಆಸಕ್ತಿ ಉಳ್ಳವರಾಗಿದ್ದರು. ಹಳ್ಳಿಗಳು ಸಂಪೂರ್ಣ ಭಾರತೀಯವಾಗಿರುವುದರಿಂದ, ವಿಶೇಷ ವೆಚ್ಚದ ಪಾಶ್ಚಿಮಾತ್ಯ ಶಿಕ್ಷಣ-ಸಂಸ್ಕೃತಿ, ರೀತಿ-ನೀತಿಗಳು ಬಡ ಭಾರತಕ್ಕೆ ಅನುಕರಣ ಯೋಗ್ಯವಲ್ಲವೆಂದೂ, ಆದ್ದರಿಂದ ಭಾರತೀಯ ಪದ್ಧತಿಯಿಂದಲೇ ದೇಶದ ಏಳಿಗೆ ಆಗಬೇಕೆಂದೂ ಅವರು ಒತ್ತಾಯಿಸಿದ್ದರು.

× × ×

ನೈತಿಕವಾಗಿ ಅವರು ಕೊಟ್ಟಿರುವ ಕೊಡಿಗೆಯೆಂದರೆ, ಒಂದೇ ಒಂದು ತತ್ವಸೂತ್ರವಾಗಿದೆ. ವ್ಯಕ್ತಿಗೆ ಹಿತಕರವಾದದ್ದು ರಾಷ್ಟ್ರಕ್ಕೂ ಹಿತಕರ. ಹಿಂಸೆಯ ತಪ್ಪು, ಸತ್ಯವು ಒಪ್ಪು ಎಂಬುದೇ ಅವರ ನಂಬಿಗೆ ಅವರ ಮಟ್ಟಿಗೆ, ಹಿಂದುಸ್ತಾನಕ್ಕೆ ಸಶಸ್ತ್ರ ಸೈನ್ಯವೇ ಬೇಕಾಗಿಲ್ಲ; ಆದರೂ, ಅವರು ತಮ್ಮ ಈ ನಿಶ್ಚಿತಾಭಿಪ್ರಾಯವನ್ನು ಅನ್ಯರ ಮೇಲೆ ಹೇರಲು ಯತ್ನಿಸಲಿಲ್ಲ;

× × ×

ಹಾಗಿಲ್ಲದಿಗ, ಸಾರ್ವಜನಿಕರು ಗಾಂಧಿಯವರಿಂದ ಮೊತ್ತಮೊದಲು ಹಾಕಿ ಕೊಡಲ್ಪಟ್ಟ ಉಚ್ಚ ನೈತಿಕಾದರ್ಶವನ್ನು ಇಂದಿಗೂ ಮುಂದಿಟ್ಟುಕೊಂಡಿರುವುದೇ ಎಲ್ಲಕ್ಕಿಂತಲೂ ಮುಖ್ಯವಾಗಿದೆ. ತಮ್ಮ ಸರಕಾ[ರ] ಗಾಂಧೀಜಿಯವರ ಸಿದ್ಧಾಂತಗಳಾದ ಸರಳತೆ, ಸ್ವಾರ್ಥತ್ಯಾಗಗಳಂತೆ ನಡೆದುಕೊಳ್ಳುವುದೆಂದು ಸಾರ್ವಜನಿಕರು ನಿರೀಕ್ಷಿಸುತ್ತಾರೆ.

× × ×

ಗಾಂಧಿಯವರ ಅತ್ಯಂತ ದೊಡ್ಡ ಕಾರ್ಯವೆಂದರೆ ಧರ್ಮವನ್ನು ಆಚರಣೆಯ ಕ್ಷೇತ್ರಕ್ಕೆ ಅನ್ವಯಿಸಿರುವುದೇ ಆಗಿದೆ. ಹಿಂದೂ ಧರ್ಮವು ಅಂಧ ಶ್ರದ್ಧೆಯಿಂದ ಒಜ್ಜೆಯಾಗಿ, ಜಾತಿಗಳಿಂದ ಛಿದ್ರವಿಚ್ಛಿದ್ರವಾಗಿ (ಚೂರು ಚೂರಾಗಿ) ಮೂಲತಃ ತಪ್ಪಾಗಿಯೋ ಅಥವಾ ಇಸ್ಲಾಮಿನ ಆಘಾತದ ನಿಮಿತ್ತವಾಗಿಯೋ ಹುಟ್ಟಿದ ರೀತಿ ರೂಢಿಗಳಿಗೆ ಅಂಟಿಕೊಂಡು ಕೂಪಮಂಡೂಕದಂತಿದ್ದುದು ಗಾಂಧಿಯವರಿಗೆ ಸ್ವಲ್ಪವೂ ಸರಿಹೋಗಲಿಲ್ಲ. ಅವರು ೧೬ ವರ್ಷದವರಿದ್ದಾಗ ಭಂಗಿಯು ತಮ್ಮ ಮನೆ ಒಳಗೆ ಬರಕೂಡದೆಂಬುದನ್ನು ತಿಳಿದಾಗಿನಿಂದಲೇ ಜಾತಿತತ್ವವನ್ನವರು ಕುಸುಕುಸುವಾಗಿ ಬಿಡುತ್ತ ಬಂದು, ಮುಂದೆ ತಮ್ಮ ಆಶ್ರಮಗಳಲ್ಲಿ ಎಲ್ಲರಿಗೂ ಪ್ರವೇಶವಿರುವ ಒಂದೇ ಅಡಿಗೆ ಕೋಣೆ ಇರತಕ್ಕದ್ದೆಂದೂ, ತಮ್ಮ ಮಗನನ್ನು ಬ್ರಾಹ್ಮಣ ಕನ್ಯೆ ಮದುವೆ ಮಾಡಿಕೊಳ್ಳತಕ್ಕದ್ದೆಂದೂ ನಿಬಂಧಿಸಿದರು. ಹಾಗೂ, ದಿಲ್ಲಿಯಲ್ಲಿ ಅಸ್ಪೃಶ್ಯರ ವಸತಿಗಳ ನಡುವೆಯೇ ವಾಸಮಾಡುವ ಹಟ ಹಿಡಿದರು.

× × ×

ಅದೇ ರೀತಿಯಲ್ಲಿ, ಗಂಡಸರಂತೆ ಹೆಂಗಸರನ್ನೂ ತಮ್ಮ ಶಿಷ್ಯೆಯರಾಗಿ ಸ್ವೀಕರಿಸಿ, ಮೇಲ್ದರಗತಿಯ ಕೆಲಸಗಳೆಲ್ಲವೂ ಗಂಡಸರಿಗಾಗಿ ಕಾದಿಡಲ್ಪಡತಕ್ಕದೆಂಬ ಪರಂಪರಾಗತವಾಗಿ ಬಂದ ಸಂಪ್ರದಾಯವನ್ನವರು ಮುರಿದರು. ಗಾಂಧಿಯವರು ಹಿಂದೂ ಧರ್ಮವನ್ನು ಅದರ ನಿಜವಾದ ಸನಾತನ ಮತ್ತು ಪುರಾತನ ಸತ್ವದ ಕಡೆಗೆ ಒಯ್ದರು. ಅವರು ಸ್ವತಃ ಒಬ್ಬ ಕರ್ಮಯೋಗಿಯಾಗಿದ್ದು, ಕೆಲಸಮಾಡುತ್ತ ಹೋಗುವುದೇ ದೇವರ ಸಾಕ್ಷಾತ್ಕಾರದ ದಾರಿಯಾಗಿದೆಂದು ಬೋಧಿಸುತ್ತಿದ್ದರು. ಸತ್ಯವನ್ನು ಹುಡುಕುವವರಿಗೆ ಕರ್ಮಯೋಗವು ಬಹು ಮುಖ್ಯವಾದ ಸಾಧನವಾಗಿದೆಂಬುದೇ ಅವರ ನಂಬಿಗೆಯಾಗಿತ್ತು. ಜ. ಕ.

ZANDU PHARMACEUTICAL WORKS LTD.

Manufacturers of Ayurvedic and Alopathic Medicines BOMBAY, 14

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲಿಗೆ ರೂ 3/- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.
2 ಶ್ರೀ ವಿ ವಿ. ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸ್ಟೇಲ್ ಏಜಂಟರಲ್ಲಿ.

DAMODAR & Co.,

Nainiappa Naicken Street, Park Town-MADRAS 3.

ಉಳಿಯಾರಗೋಳಿ ಪಂಚಾಯತ ಬೋರ್ಡ್ ಪ್ರೆಸಿಡೆಂಟರಿಂದ ನೋಟೀಸು

ಮೇಲ್ಕಾಣಿಸಿದ ಪಂಚಾಯತ ಬೋರ್ಡಿಗೆ ಸಂಬಂಧಪಟ್ಟ ಉಳಿಯಾರ ಗೋಳಿಯಲ್ಲಿರುವ ಕಾಲು ಸೇತುವೆಯನ್ನು ದಕ್ಷಿಣ ಕನ್ನಡ ಡಿವಿಜನಲ್ ಇಂಜಿನಿಯರ್ ಹೈವೇಸ್ ಇವರ ನಂಬ್ರ 18052/B./48 ತಾರೀಕು 8-11-49 ನೇ ಎಸ್ಟಿಮೇಟ್ ಮೇರಿಗೆ ಕಟ್ಟುವರೇ ಟೆಂಡರ್ ಆಹ್ವಾನಿಸಲಾಗಿದೆ, ಹೆಚ್ಚಿನ ಮಾಹಿತಿ ಬಗ್ಗೆ ಪ್ರೆಸಿಡೆಂಟ್, ಪಂಚಾಯತ ಬೋರ್ಡ ಉಳಿಯಾರಗೋಳಿ ಇವರನ್ನು ವಿಚಾರಿಸುವುದು.

ಟೆಂಡರುಗಳು ತಾರೀಕು 25-4-52ನೇ ಸಾಯಂಕಾಲ ಗಂಟೆ 5ರ ವಳಗೆ ತಲಪುವುದು.

Sd. ರಾಮಚಂದ್ರಯ್ಯ
ಪ್ರೆಸಿಡೆಂಟ್, ಪಂಚಾಯತ ಬೋರ್ಡ
ಉಳಿಯಾರಗೋಳಿ; ಕಾಪು, ದ. ಕ.

3-4-52

ರಾಷ್ಟ್ರೀಯ ಸಪ್ತಾಹದಲ್ಲಿ ಕಾಂಗ್ರೆಸ್ ಸದಸ್ಯರನ್ನು ಮಾಡಿರಿ

ವಿನೋಬಾಭಾವೆಯವರಿಗೆ ಇಡೀ ಹಳ್ಳಿಯ ದಾನ.

ರಾಷ್ಟ್ರೀಯ ಸಪ್ತಾಹವು

ಇದೇ ತಾ. 6ರಿಂದ 13ರ ತನಕ ಆಚರಿಸಲ್ಪಡುವ ವೇಳೆಯಲ್ಲಿ ಕಾಂಗ್ರೆಸ್ಸಿಗರು ಈಚೆಗೆ ನಡೆದ ಸಾರ್ವತ್ರಿಕ ಚುನಾವಣೆಯನ್ನು ಸ್ಮರಿಸಿಕೊಂಡು ಆತ್ಮನಿರೀಕ್ಷಣೆ ಮಾಡಿಕೊಂಡು ಆತ್ಮಶುದ್ಧಿಯನ್ನು ಮಾಡಿಕೊಳ್ಳಬೇಕು. ಎರಡನೆಯದಾಗಿ ಕಾಂಗ್ರೆಸ್ ಪ್ರಾಥಮಿಕ ಸದಸ್ಯರನ್ನು ಮಾಡುವ ಕಾರ್ಯವನ್ನು ನಡೆಸಬೇಕು ಎಂದು ಅಖಿಲಭಾರತ ಕಾಂಗ್ರೆಸ್ ಕಾರ್ಯದರ್ಶಿಗಳಾದ ಲಾಲಬಹದ್ದೂರ್ ಶಾಸ್ತ್ರಿಯವರು ಪ್ರದೇಶ ಕಾಂಗ್ರೆಸ್ ಕಮಿಟಿಗಳಿಗೆ ತಿಳಿಸಿದ್ದಾರೆ.

'ಮಿಸ್ ಇಂಡಿಯಾ' ಸ್ಪರ್ಧೆಯಲ್ಲಿ

ಕಲ್ಕತ್ತೆಯ ಇಪ್ಪತ್ತುಮೂರು ವರುಷ ಪ್ರಾಯದ ಶ್ರೀಮತಿ ಇಂದ್ರಾಣಿ ರಹಮಾನಳು ಬೊಂಬಾಯಿಯ ಕ್ರೀಡಾಂಗಣದಲ್ಲಿ ನಡೆದ ಸೌಂದರ್ಯ ಸ್ಪರ್ಧೆಯಲ್ಲಿ ವಿಜಯ ಹೊಂದಿ 'ಮಿಸ್ ಇಂಡಿಯಾ' ಎಂದು ಆರಿಸಲ್ಪಟ್ಟಿರುವಳು. ಮದ್ರಾಸಿನ ಮಿಸ್. ಟಿ. ಸೂರ್ಯ ಕುಮಾರಿಯು ದ್ವಿತೀಯ ಸ್ಥಾನ ಪಡೆದಿರುವಳು.

ಆಚಾರ್ಯ ವಿನೋಬಾರವರಿಗೆ ಭೂದಾನವಾಗಿ

1725 ಎಕ್ರೆ ಭೂಮಿಯಿರುವ, ಮಧ್ಯಪ್ರದೇಶದ ಗುಣಾಜಿಲ್ಲೆಯ ರಾಜಾ ಸಾಹೇಬ ಗಂಗಾ ಸಿಂಗರು, ಒಂದು ಇಡೀ ಹಳ್ಳಿಯನ್ನೇ ಕೊಟ್ಟಿರುವರು.

ಕೇಂದ್ರ ವಿಧಾನ ಪರಿಷತ್ತಿಗೆ

ರಾಷ್ಟ್ರಾಧ್ಯಕ್ಷರು ರಾಜ್ಯಘಟನೆಯ 80ನೇ ಕಲಮಿನನ್ವಯ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಡಾ| ಜೆ. ಎಮ್. ಕುಮಾರಪ್ಪ, ಶ್ರೀ ಪೃಥ್ವಿರಾಜ ಕಪೂರ್, ಶ್ರೀಮತಿ ರುಕ್ಮಿಣಿದೇವಿ ಮೊದಲಾದ 12 ಜನರನ್ನು ನಾಮಕರಣ ಮಾಡಿರುವರು.

ಯುರೋಪದ ಸಂರಕ್ಷಣೆಯ ಕುರಿತು ಐಸೆನಹಾವರರ ಮತ

ಪಶ್ಚಿಮ [illegible]ದ ರಾಷ್ಟ್ರಗಳಲ್ಲಿ ಕಳೆದ ವರುಷವು ಶಸ್ತ್ರೀಕರಣ ಯೋಜನೆಯು ಭರದಿಂದ ಪ್ರಗತಿ ಹೊಂದಿದ್ದರೂ ರಶಿಯದ ಆಕ್ರಮಣ ತಡೆಯುವಷ್ಟು ಸಮರ್ಥವಾಗಿಲ್ಲವೆಂದೂ ಯುರೋಪದ ಸಂರಕ್ಷಣೆ ಇನ್ನೂ ಬಲಿಷ್ಠವಾಗಬೇಕೆಂದೂ ಅಭಿಪ್ರಾಯಪಟ್ಟರು.

ಸ್ಟಾಲಿನ್ನರ ಸಂದೇಶ

ಬಂಡವಲವಾದ ಹಾಗೂ ಕಮ್ಯೂನಿಜಮುಗಳಲ್ಲಿ ಪರಸ್ಪರ ಸಹಕಾರದ ಇಷ್ಟವಿದ್ದರೆ, ಕೈಕೊಂಡ ನಿರ್ಣಯವನ್ನೂ ಪೂರೈಸುವ ಸಿದ್ಧತೆಯಿದ್ದರೆ ಹಾಗೂ ಉಳಿದ ರಾಷ್ಟ್ರಗಳ ಅಂತರಿಕ ವ್ಯವಹಾರಗಳಲ್ಲಿ ಕೈಹಾಕದಿದ್ದರೆ ಈ ಎರಡೂ ವಾದಗಳು ಶಾಂತರೀತಿಯಲ್ಲಿ ಕೂಡಿ ಬಾಳುವುದು ಸಾಧ್ಯವಿದೆ ಎಂದು ಮಾರ್ಶಲ್ ಸ್ಟಾಲಿನ್ನರು ಅಮೇರಿಕನ್ ಪತ್ರಿಕಾಕಾರರಿಗೆ ಕೊಟ್ಟ ಸಂದೇಶದಲ್ಲಿ ಹೇಳಿರುವರು.

ಕಾಮರಾಜ ನಾಡರರು

ತಮಿಳುನಾಡು ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಕಾಮರಾಜ ನಾಡರರು ತಮ್ಮ ಅಧ್ಯಕ್ಷತನಕ್ಕೆ ಈ ತಿಂಗಳ ಮೂರನೆ ವಾರದಲ್ಲಿ ರಾಜಿನಾಮೆ ಸಲ್ಲಿಸತಕ್ಕವರಿದ್ದಾರೆಂದು ಹೇಳಲಾಗಿದೆ.

ಮೈಸೂರಿನ ಹೊಸ ಮಂತ್ರಿ ಮಂಡಲಕ್ಕೆ ಶ್ರೀಗಳಾದ ಟಿ. ಸಿದ್ಧಲಿಂಗಯ್ಯ, ಎ. ಜಿ. ರಾಮಚಂದ್ರರಾವ್, ಟಿ. ಚೆನ್ನಯ್ಯ, ಕಡಿದಾಳ ಮಂಜಪ್ಪ ಮತ್ತು ಎಚ್. ಸಿದ್ಧವೀರಪ್ಪನವರನ್ನು ಮುಖ್ಯ ಮಂತ್ರಿಗಳಾದ ಶ್ರೀ. ಕೆ. ಹನುಮಂತಯ್ಯನವರು ಆರಿಸಿರುವರು.

ಟಾಟಾರವರ ಉದಾರ ಸಹಾಯ: ಸರ ದೊರಾಬ ಟಾಟಾ ಟ್ರಸ್ಟಿನಿಂದ ಬೆಂಗಳೂರಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಾಯನ್ಸ ಸಂಸ್ಥೆಗೆ ಮೂರು ಲಕ್ಷ ರೂಪಾಯಿ ದಾನ ಕೊಡುವ ನಿರ್ಧಾರವಾಗಿದೆ ಎಂದು ಟಾಟಾ ಕಂಪೆನಿಯ ಡೈರೆಕ್ಟರರಾದ ಡಾ| ಜಾನ ಮಥಾಯರು ಹೇಳಿದರು.

ಶ್ರಮಜೀವಿಗಳ ಸಾಕ್ಷರತಾ ಸಪ್ತಾಹವು ಹುಬ್ಬಳ್ಳಿಯಲ್ಲಿ ಇದೇ ತಾ. 3ರಂದು ಮುಕ್ತಾಯವಾಗುವಾಗ್ಗೆ ಶ್ರೀ ನಾಯಕ ವೆಂಕಟರಾಯರು ಭಾಷಣ ಮಾಡುತ್ತಾ, ದೇಶದ ಅಭಿವೃದ್ಧಿಯಲ್ಲಿ ಸಾಮಾಜಿಕ ಶಿಕ್ಷಣಕ್ಕೆ ಮಹತ್ವದ ಸ್ಥಾನವಿದೆ ಜನರು ಸಾಕ್ಷರರಾದರೆ ಸುಶಿಕ್ಷಿತರಾದಂತೆ ಎಂದು ಭಾವಿಸಲಾಗದು. ಇಂದಿನ ಸುಶಿಕ್ಷಿತರೂ ಅನೇಕ ವಿಷಯಗಳಲ್ಲಿ ಅಜ್ಞಾನಿಗಳಿರುವರು. ಜ್ಞಾನಪ್ರಸಾರವೇ ಸಾಮಾಜಿಕ ಶಿಕ್ಷಣದ ಗುರಿಯಾಗಿರಬೇಕು. ಅಕ್ಷರ ಜ್ಞಾನವು ಜ್ಞಾನ ಪ್ರಸಾರದ ಒಂದು ಸಾಧನ ಮಾತ್ರವೆಂದರು.

ಬಟ್ಟೆಯ ನಿಯಂತ್ರಣದ ರದ್ದತಿ

ಭಾರತ ಸರಕಾರವು ಬಟ್ಟೆಯ ಮಾರ್ಕೆಟಿನಲ್ಲುಂಟಾದ ಬಿಕ್ಕಟ್ಟಿನ ಪರಿಸ್ಥಿತಿಯ ಬಗ್ಗೆ ಮುಂಜಾಗ್ರತೆಯಿಂದಿದ್ದು ಬಳಕೆಗಾರರ ಹಿತವನ್ನು ಲಕ್ಷಿಸಿ ಎಲ್ಲಾ ನಿಯಂತ್ರಣಗಳನ್ನು ತೆಗೆದುಹಾಕಲು ಆತುರ[illegible]ಯೆಂದು ದಿಲ್ಲಿಗೆ ಹೋಗಿಬಂದ ಅಹಮದಾಬಾದಿನ ಗಿರಣಿಯೊಡೆಯರ ಸಂಘದ ಅಧ್ಯಕ್ಷ ಶ್ರೀ ಚಂದೂಲಾಲಶೇಠರು ಹೇಳಿದರು.

ಗವರ್ನರರ ಆಳಿಕೆಯಿಂದ ಲಾಭ

ಸಿಮಲಾ ಪರ್ವತ ಪ್ರದೇಶಗಳಿಗೆ ಮುಖದ್ವಾರದಂತಿರುವ ಕಾಲದಲ್ಲಿ (ಅಂಬಾಲಾ) ದಿನಾಂಕ 3ರಂದು ಭಾರತಸರಕಾರದ ಮುಖ್ಯಮಂತ್ರಿ ಪಂಡಿತ ನೆಹರೂರವರು ಪ್ರಚಂಡ ಸಾರ್ವಜನಿಕಸಭೆಯಲ್ಲಿ ಭಾಷಣಮಾಡುತ್ತಾ, ಗವರ್ನರರ ಆಳ್ವಿಕೆಯಿಂದ ಪಂಜಾಬ ಪ್ರಾಂತಕ್ಕೆ ಒಳ್ಳೆಲಾಭವಾಗಿದೆ ಎಂದೂ ಕಳೆದ ಹತ್ತು ತಿಂಗಳಲ್ಲಿ ಗವರ್ನರರು ಚೆನ್ನಾಗಿ ಕೆಲಸ ಮಾಡಿರುವರೆಂದೂ ಅಭಿಪ್ರಾಯಪಟ್ಟರು.

ಏಶಿಯಾದಲ್ಲೇ ದೊಡ್ಡ ಮೋಟಾರ್ ವರ್ಕ್ಸಶಾಪ್

ಬೊಂಬಾಯಿ ರಾಜ್ಯದಲ್ಲಿ ಸ್ಟೇಟ್ ಟ್ರಾನ್ಸಪೋರ್ಟಿನ ಕೇಂದ್ರ ವರ್ಕ್ಸ ಶಾಪನ್ನು ದಾಪೋಡಿಯಲ್ಲಿ ಕಟ್ಟಲಾಗುತ್ತಿದ್ದು ಇದು ಏಶಿಯಾದಲ್ಲಿಯೇ ಅತಿ ದೊಡ್ಡ ಮೋಟಾರ್ ದುರಸ್ತಿ ಕಾರ್ಖಾನೆಯಾಗುವುದು. ಈ ಕಾರ್ಖಾನೆಯನ್ನು 1949ರಿಂದ ಕಟ್ಟಲು ಪ್ರಾರಂಭಿಸಿದ್ದು ಇದಕ್ಕೆ ಒಟ್ಟು ಮೂವತ್ತೆಂಟು ಲಕ್ಷ ರೂಪಾಯಿ ವೆಚ್ಚ ತಗಲುವುದು.

ಕಮ್ಯೂನಿಸ್ಟರ ಕಾರ್ಯಕ್ರಮದ ಕುರಿತು ಭಾವೆಯವರ ಹೇಳಿಕೆ

ಕಮ್ಯೂನಿಸ್ಟರ ಕಾರ್ಯಪದ್ಧತಿಯು ದ್ವೇಷದ ಮೇಲೆ ಆಧರಿಸಿಯದೆ ಎಂದೂ ವರ್ಗ ಕಲಹಕ್ಕೆ ಪ್ರೋತ್ಸಾಹವೀಯುವ ಮತ್ತು ಹಿಂಸಾ ಪ್ರಚೋದಕವಿರುವುದೆಂದೂ ಆಚಾರ್ಯ ವಿನೋಬಾ ಭಾವೆಯವರು ಬಾಲಿಯಾದಲ್ಲಿಯ ಯಮುನಾ ಪಾಠಶಾಲೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತ ಹೇಳಿದರು. ಕಮ್ಯುನಿಸ್ಟರ ಕಾರ್ಯಕ್ರಮವು ಭಾರತಕ್ಕೆ ಹೇಳಿದುದಲ್ಲವೆಂದು ಕೂಡಾ ಸೂಚಿಸಿದರು.

ಹಕ್ಕು ಮತ್ತು ಹೊಣೆ

ಜನತೆಗೆ ವಸತಿಯ ಕೊರತೆಯಿರುವಾಗ ಸಿನೆಮಾ ಮಂದಿರಗಳನ್ನು ಕಟ್ಟುತ್ತಾ ಹೋಗುವುದು ಒಳ್ಳೆತಲ್ಲವೆಂದು ಪಂಡಿತ ನೆಹರೂರವರು ನಾಂಗ್ರಾಲದಲ್ಲಿ ಭಾಕ್ರಾ ನಾಂಗ್ರಾಲ ಯೋಜನೆಗಳಲ್ಲಿ ತೊಡಗಿದ ಇಂಜಿನಿಯರರು ಹಾಗೂ ಕೆಲಸಗಾರರನ್ನುದ್ದೇಶಿಸಿ ಮಾತನಾಡುತ್ತಾ ಹೇಳಿದರು. ಮುಂದುವರಿಯುತ್ತಾ ಕೆಲಸಗಾರರು ಕೇವಲ ಕೂಲಿಗಾಗಿ ಕೆಲಸ ಮಾಡುತ್ತಿರದೆ ದೇಶದ ಏಳ್ಗೆಗಾಗಿ ಕೂಡಾ ಕೆಲಸಮಾಡುತ್ತಿರುವುದಾಗಿ ತಿಳಿಯಬೇಕು. ನಮ್ಮಲ್ಲಿಯ ಬಡತನವನ್ನು ನಾವು ನಿರ್ಮೂಲನಗೊಳಿಸಬೇಕಾಗಿದೆ. ದೇಶದ ಪ್ರಗತಿಗೆ ಅದು ಅತ್ಯಾವಶ್ಯಕವಾಗಿದೆ. ಹಲವರು ಹಕ್ಕುಗಳ ಬಗ್ಗೆ ಮಾತನಾಡುತ್ತಿರುವರು. ಹಕ್ಕಿನ ಜೊತೆಗೆ ಹೊಣೆಯಿದೆ ಎಂಬುದನ್ನು ಮರೆಯಬಾರದು. ಕರ್ತವ್ಯಚ್ಯುತರಿಗೆ ಯಾವ ಹಕ್ಕು ದೊರೆಯಲಾರದು. ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದು ನಮ್ಮ ಪ್ರಥಮ ಕರ್ತವ್ಯವಾಗಿದ್ದು ದೇಶದ ಪ್ರಗತಿ ಸಾಧಿಸುವುದು ನಂತರದ ಕರ್ತವ್ಯವಾಗಿದೆ ಎಂದರು.

ದಿ ವಿಜಯಾ ಬೇಂಕ್ ಲಿಮಿಟೆಡ್,

ಬೈಂದೂರು, ದ. ಕ.

ಲಿಲಾಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸ್ಲು-ವ ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿ ಮಾಡಿ ಕೊಂಡಿರುವುದರಿಂದ ಸದ್ರಿಯವರು ನಮ್ಮ ಬೇಂಕಿನಲ್ಲಿ ಈಡಿಟ್ಟಿರುವ ಚಿನ್ನಾಭರಣಗಳನ್ನು ಇದೇ ಏಪ್ರಿಲ್ ತಿಂಗಳ ತಾರೀಕು 19ನೇ ಶನಿವಾರ ಅಪರಾಹ್ನ ಗಂಟೆ 2ಕ್ಕೆ ಯಾ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬೇಂಕಿನ ಆವಾರದಲ್ಲಿ ಬಹಿರಂಗವಾಗಿ ಲಿಲಾಂ ಮಾಡಲಾಗುವುದು. ತಿಳಿದಿರಲಿ,

ಸಾಲದ ಜಂಜ್ರಾ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ರೂ, ಆ.
656/50	ಶ್ರೀ. ಬೇಲೆಮನೆ ಕೃಷ್ಣ ಸೇರುಗಾರ, ಮಂಜಯ್ಯ ಸೇರುಗಾರರ ಮಗ, ಕೋಟೆ ಬಾಗಿಲು, ಪಡುವರಿ	6—6
48/50	ಜನಾಬ್ ಮಹಮ್ಮದ್ ಬ್ಯಾರಿ, ಪಳ್ಳಿಯಾನ್ ಬ್ಯಾರಿಯ ಮಗ, ಹೊಗೆಸೊಪ್ಪು ವ್ಯಾಪಾರಿ, ಶಿರೂರು,	124—9
455/48.9	ಶ್ರೀಮತಿ ಕಾರ್ಮಿನ್ ಫೆರ್ನಾಂಡಿಸ್, ಸಲ್ದಾಧರ ಫೆರ್ನಾಂಡಿಸರ ಹೆಂಡತಿ, ದೀವಾರ, ಬೈಂದೂರು	12—5
444/48.9	ಜನಾಬ್ ತಿಂಗೇರಿ ಅಲ್ಲಿ ಸಾಹೇಬ್, ಮಹಮ್ಮದ ಸಾಹೇಬರ ಮಗ, ಮುಸಲ್ಮಾನ ಕೇರಿ, ಬೈಂದೂರು	12—5
258/50	— do —	10—8
337/50	— do —	13-14
299/50	ಮಿ. ಸಿಲ್ವಾ ಲೋಬೊ, ಪೇದೆ, ಬೋರ್ಡ್ ಹೈಸ್ಕೂಲು, ಕುಂದಾಪುರ.	13-15
601/48 9	ಶ್ರೀ. ರಾಮಕೃಷ್ಣ ಸೇರುಗಾರ, ಮಲ್ಲಯ್ಯ ಸೇರುಗಾರರ ಮಗ, ಮಯ್ಯಾಡಿ, ಬೈಂದೂರು.	78—9
736/48 9	,, ಮಂಜ, ಮಾಸ್ತಿಯ ಮಗ, ಉಪ್ಪುಂದ.	86-10
1147/47 8	,, ಕೆ. ಮಂಜುನಾಥ ನ್ಯಾಕ, ಕೃಷ್ಣಪ್ಪ ನ್ಯಾಕರ ಮಗ, ಕಂಬದಕೋಣೆ.	388—7
829/47 8	,, ಮಾಸಿರಾಮ ಕೃಷ್ಣಯ್ಯ, ತಿಮ್ಮಪ್ಪಯ್ಯನವರ ಮಗ, ನಾಗೋಡಿ ಗ್ರಾಮ, ಕೊಲ್ಲೂರು.	951-12
1024/50	— do —	561—3
649/48 9	,, M. K. ಸುಬ್ಬರಾವ್, ಮಾಸಿ ಕೃಷ್ಣಯ್ಯನವರ ಮಗ, ಶೇಂಡ್ ಲೋಡ್, ನಾಗೋಡಿ, ಕೊಲ್ಲೂರು.	607— 4
692/48.9	— do —	838—4
419/50	,, ಜಕ್ಕಲ್ ವಾಮನ ರಾವ್, ಜನರಲ್ ಮರ್ಚಂಟ್, ಕಂಬದಕೋಣೆ.	388-10
1087/48.9	ಸಬ್ಬು ಶಾಂತನ ಶೇಷಮ್ಮ. ಅಣ್ಣಪ್ಪ ಸೇರುಗಾರರ ವಿಧವೆ, ಕೋಟೆಬಾಗಿಲು, ಪಡುವರಿ.	5-10
891/50	ಶ್ರೀ. ಗಣಪಯ್ಯ ಸೇರುಗಾರ, ನ್ಯಾಕನಕಟ್ಟೆ ಹನುಮಂತ ಸೇರುಗಾರರ ಮಗ. ಮಯ್ಯಾಡಿ, ಬೈಂದೂರು.	18—3

ಬೈಂದೂರು,
3-4-1952.

ಎಚ್. ರಾಜೀವ ಶೆಟ್ಟಿ,
ಏಜಂಟ್

ರಾಜಾಜಿಯ ಧುರೀಣತ್ವಕ್ಕೆ ಅಪೂರ್ವ ಸ್ವಾಗತ

ಮದ್ರಾಸದಲ್ಲಿ ಯಾವ ಪಕ್ಷ ಅಧಿಕಾರ ವಹಿಸಬಹುದೆಂಬ ಕುರಿತು ಇದ್ದ ಶಂಕೆ ಇಂದು ರಾಜಾಜಿ ಮುಂದಾಳ್ತನ ವಹಿಸಿದ್ದರಿಂದ ಬಗೆಹರಿದಂತಾಯಿತು. ಆ ಶಂಕೆ ಸಂದರ್ಭವನ್ನು ಸಾಧಿಸಿ ಬೇರೆ ಬೇರೆ ಪಕ್ಷಗಳು ತಮ್ಮ ಸ್ವಾರ್ಥವನ್ನು ಸಾಧಿಸಲು ಹವಣಿಸಿದ್ದವು. ಕೆ. ಎಂ. ಪಿ. ಪಾರ್ಟಿಯ ಮುಖ್ಯ ಧುರೀಣರಾದ ಶ್ರೀ ಟಿ. ಪ್ರಕಾಶಂರವರು ಸಂಯುಕ್ತ ಪ್ರಜಾರಂಗವನ್ನು ರಚಿಸಿ ತನ್ಮೂಲಕ ಸರಕಾರವನ್ನು ನಡೆಸುವದಾಗಿ ತಿಳಿಸಿದ್ದರು. ಇದೇ ಕಾಲಕ್ಕೆ ಕಾಂಗ್ರೆಸ್ ಪಕ್ಷವಾದರೂ ಪ್ರಾಂತದ ಆಡಳಿತೆಯು ಅಪಕ್ವಮನೋವೃತ್ತಿಯ ಜನರ ಕೈಸೇರುವದನ್ನು ತಪ್ಪಿಸಿ ಯೋಗ್ಯ ಧುರೀಣನ ಕೈಗೆ ವಹಿಸಿಕೊಡುವ ಸಾಹಸಮಾಡಿದ್ದು ಅತ್ಯಂತ ಯೋಗ್ಯವೇ ಆಗಿದೆ, ಶ್ರೀ ರಾಜಗೋಪಾಲಾಚಾರ್ಯರು ಮದ್ರಾಸದಲ್ಲಿಯ ರಾಜಕಾರಣವನ್ನು ತನ್ನ ರಾಜಕೀಯ ಚಾಣಾಕ್ಷ ನೀತಿಯಿಂದ ಬಗೆಹರಿಸಲು ಒಳ್ಳೆಯ ಸಮರ್ಥರಿರುವರು. ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹ್ರೂರವರೂ ರಾಜಾಜಿಯನ್ನು ಬಲವಂತ ಮಾಡಿದ್ದರಿಂದೂ ಕೇಳಲಾಗಿದೆ. ರಾಜಾಜಿ ಪಕ್ಷ ಸದಸ್ಯರ ಹಾಗೂ ನೆಹ್ರೂರವರ ಆದೇಶವನ್ನು ಮನ್ನಿಸಿದ್ದ ಪ್ರಕೃತ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸಿನ ಅಸ್ತಿತ್ವಕ್ಕೆ ಒಳ್ಳೆಯ ಬಲವನ್ನು ಕೊಟ್ಟಂತಾಯಿತು.

ರಾಜಗೋಪಾಲಾಚಾರ್ಯರು ಒಪ್ಪಿದ್ದರಿಂದ ಮದ್ರಾಸದ ಒಂದು ಚಿಂತೆ ಕೇಂದ್ರದವರಿಗೆ ಪರಿಹಾರವಾದಂತಾಯಿತು. ಅಧಿಕಾರಕ್ಕಾಗಿ ಹೊಂಚು ಹಾಕುತ್ತಿರುವ ಬೇರೆ ಬೇರೆ ಪಕ್ಷಗಳ ಪ್ರಾಬಲ್ಯ ಇದರಿಂದ ಸಂಪೂರ್ಣ ಕುಂದುವದು ಸ್ವಾಭಾವಿಕ. ಕಾಂಗ್ರೆಸ್ಸನ್ನು ವಿರೋಧಿಸುವ ಒಂದೇ ಛಲದಿಂದ ಸಂಯುಕ್ತ ಪ್ರಜಾರಂಗದಲ್ಲಿ ಬೇರೆ ಬೇರೆ ಪಕ್ಷಗಳ 166 ಸದಸ್ಯರು ಸೇರಿಕೊಂಡಿದ್ದರೂ ಅಧಿಕಾರ ಬಂದಮೇಲೆ ಈ ವಿಷಮ ಮೈತ್ರಿಯು ದಷ್ಟ ಕಾಲ ಬಾಳದೆ ಇರುತ್ತಿದ್ದಿಲ್ಲ. ರಾಜಾಜಿ ಮುನ್ನಾರಿಸಿದ್ದರ ಬಗ್ಗೆ ಟಿ. ಪ್ರಕಾಶಂ ಬಹಳವಾಗಿ ಹಾರಾಟ ನಡೆಸುತ್ತಲಿದ್ದಾರೆ.

ಕೆ. ಎಂ. ಪಿ. ಒಲಗ್ಗೆ ಒಂಟಿಯಾದ ಕಮ್ಯುನಿಸ್ಟರು ಕಾಯಿದೆಬದ್ಧವಾಗಿ ಇದು ಅಕ್ರಮವೆಂದು ಸಾಧಿಸಲು ಹೈಕೋರ್ಟನ್ನು ಹತ್ತಿದ್ದರೂ ಅವರ ಅರ್ಜಿಯು ತಿರಸ್ಕರಿಸಲ್ಪಟ್ಟಿದೆ. ರಂಗಾರವರು ರಾಜಾಜಿಯ ಮುಂದಾಳ್ತನವನ್ನು ಪ್ರೋತ್ಸಾಹಿಸುವ ನಿರ್ಧಾರ ಮಾಡಿರುವರು. ಅವರ ನೇತೃತ್ವದಲ್ಲಿ ರಚಿತವಾಗುವ ಕಾಂಗ್ರೆಸ್ಸು ಮಂತ್ರಿಮಂಡಳಕ್ಕೆ ಸಕ್ರಿಯ ಸಹಾಯ ನೀಡುವ ಈ ಭರವಸೆಯಿಂದ ವಿರೋಧಿ ಪಕ್ಷಗಳಿಗೆ ಅತೀವ ನಿರಾಶೆಯಾಗಿರಬೇಕು.

ರಾಜಾಜಿ ತನ್ನ ಮಂತ್ರಿಮಂಡಳದಲ್ಲಿ ಬೇರೆ ಬೇರೆ ಪಕ್ಷಗಳ ಜನರನ್ನು ಆರಿಸಿಕೊಂಡು ಸಮ್ಮಿಶ್ರ ಸರಕಾರ ನಡೆಸುವ ಮನಸ್ಸುಳ್ಳವರಾಗಿದ್ದಾರೆಂಬ ಸುದ್ದಿಯು ಹಬ್ಬಿತ್ತು. ಮಾತ್ರವಲ್ಲ ಮೊದಲು ಕಾಂಗ್ರೆಸ್ ಸದಸ್ಯರೊಡನೆ ಔಪಚಾರಿಕವಾಗಿ ಮಾತನಾಡುವಾಗ ವಿರೋಧಿ ಗುಂಪಿನವರ ಬಗ್ಗೆ ಗೌರವಪೂರ್ಣವಾದ ಮಾತನ್ನಾಡಿ ಅವರ ಮನವೊಲಿಸುವ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದ ಮೊದಲಿನ ಮಾತಿಗೆ ಅದು ಗುಣವಾಗಿಯೇ ಒಂದಂತಿತ್ತು. ಲೋಕಪಕ್ಷದ ರಂಗಾರವರು ಸಮ್ಮಿಶ್ರ ಪಕ್ಷದ ಪ್ರಶ್ನೆಯೇ ಇಲ್ಲಿ ಉದ್ಭೂತವಾಗುವಂತಿಲ್ಲ. ಕಾಂಗ್ರೆಸ್ಸೊಂದೇ ಆ ಹೊಣೆಯನ್ನು ಹೊರುವದೆಂದು ಹೇಳಿದ್ದರಿಂದ ಬೇರೆ ಬೇರೆ ಪಕ್ಷಗಳ ಪ್ರತಿನಿಧಿಗಳಿಗೆ ಸ್ಥಾನವಿಲ್ಲವೆಂಬುದು ಸುಸ್ಪಷ್ಟವೆಂದಾಯಿತು.

ಅಂತೂ ರಾಜಾಜಿ ಈ ವರೆಗೆ ಮಂತ್ರಿಗಳ ಯಾದಿಯನ್ನು ತಯಾರಿಸಿರುದಿಲ್ಲ. ಮಂತ್ರಿಮಂಡಳದಲ್ಲಿ ಯಾರ್‍ಯಾರಿರಬಹುದೆನ್ನುವ ಕುರಿತು ನಾನಾರೀತಿಯ ಊಹಾಪೋಹ ನಡೆದಿದ್ದರೂ- ರಾಜಾಜಿಯ ಆಯ್ಕೆ ಕುತೂಹಲದಾಯಕವಾದದ್ದೆಂಬುದು ನಿರ್ವಿವಾದ. 9 ಜನ ಮಂತ್ರಿಗಳೂ 18 ಜನ ಉಪಮಂತ್ರಿಗಳೂ ಇರಬಹುದೆಂದು ಕೆಲವರ ಊಹೆಯಿದೆ ಒಂದೆರಡು ದಿನಗಳಲ್ಲಿ ಫಲಿತಾಂಶ ಪ್ರಕಟಗೊಳ್ಳಲಿರುವದು. ಚುನಾವಣೆಯಲ್ಲಿ ಪಕ್ಷದ ಪ್ರಾಬಲ್ಯ ಕುಂದಿಬೇಡದ ಪಕ್ಷದ ಕೈಯಲ್ಲಿ ಮದ್ರಾಸಿನ ರಾಜಕೀಯ ಸಿಕ್ಕಿ ನರಳಾಡಬಹುದೆ ಎಂದೂ ಊಹಿಸಿದ್ದರೂ ರಾಜಾಜಿಯ ಮುಂದಾಳ್ತನದಿಂದಾಗಿ ಪ್ರಬಲವಾದ ಸರಕಾರವನ್ನು ಸ್ಥಾಪಿಸುವದು ಶಕ್ಯವಾಗಿದೆ. ಇದು ಅಭಿಮಾನದ ಸಂಗತಿ!

ಮಾಲನ್ ಸರಕಾರದ ವಿರುದ್ಧ ಸತ್ಯಾಗ್ರಹ.

ದ. ಆಫ್ರಿಕೆಯ ವರ್ಣದ್ವೇಷದ ವಿರುದ್ಧ ಬಿಳಿಯ ಹೊರತು ಉಳಿದೆಲ್ಲವರು ಪ್ರಚಂಡ ಸತ್ಯಾಗ್ರಹವನ್ನು ಹೂಡುವ ನಿರ್ಧಾರವನ್ನು ಮಾಡಿರುವರು ಅವರ ಈ ಹೋರಾಟಕ್ಕೆ ಬ್ರಿಟನ್ ಯೂರೋಪಿಯನ್, ಅಮೇರಿಕಾ, ಆಸ್ಟ್ರೇಲಿಯಾ, ಮಧ್ಯಪೂರ್ವ ಮತ್ತು ರಶಿಯದ ದೇಶಗಳಲ್ಲಿ ಜನರು ಸಭೆ ಸೇರಿ ಈ ಸತ್ಯಾಗ್ರಹ ಚಳುವಳಿಗೆ ತಮ್ಮ ಬೆಂಬಲಕೊಟ್ಟಿರುವರು. ಬಿಳಿಯರಲ್ಲದೆ ಇತರರು ಈ ಹೋರಾಟದಲ್ಲಿ ಸೇರಿದ್ದು ಅವರು ಹೀಗೆ ಒಟ್ಟಾದುದು ದ. ಆಫ್ರಿಕೆಯ ಇತಿಹಾಸದಲ್ಲಿ ಇದೇ ಮೊದಲನೆಯ ಸಲವಾಗಿರುವದು. ದಕ್ಷಿಣ ಆಫ್ರಿಕೆಯ ನ್ಯಾಶನಲ್ ಕಾಂಗ್ರೆಸ್, ದ. ಆಫ್ರಿಕೆಯ ಇಂಡಿಯನ್ ಕಾಂಗ್ರೆಸ್ ಆಫ್ರಿಕನರ ಸಂಘ ಮೊದಲಾದ ಪ್ರಾತಿನಿಧಿಕ ಸಂಘಗಳ ಸತ್ಯಾಗ್ರಹದಲ್ಲಿ ಭಾಗವಹಿಸಿರುವವು- ಆಫ್ರಿಕೆಯ ನಿವಾಸಿಗಳು ಪಾಸುಗಳ ಕಾಯಿದೆ ಮುರಿಯಲಿದ್ದಾರೆ. ಆಫ್ರಿಕನ್ನರು ತಮ್ಮ ದೇಶದಲ್ಲಿ ಎಲ್ಲಿಗೆ ಹೋದರೂ ಹತ್ತು ಪಾಸುಗಳನ್ನು ಸಂಗಡ ಒಯ್ಯಬೇಕಾಗುವದು. ಈ ಪಾಸುಗಳು ಅವರ ಚಲನವಲನದ ಸ್ವಾತಂತ್ರ್ಯವನ್ನು ಅಪಹರಿಸಿರುತ್ತವೆ. ಅವನ್ನು ಪ್ರತಿಬಂಧಿತ ಬೀದಿಯಲ್ಲಿ ಹೋಗುವದು ಕ್ರಿಮಿನಲ್ ಅಪರಾಧವಾಗುವದು ಈ ಕಾಯಿದೆ ಪ್ರಕಾರ ವರ್ಷಂಪ್ರತಿ ಒಂದು ಲಕ್ಷ ಆಫ್ರಿಕನ್ನರಿಗೆ ಶಿಕ್ಷೆಯಾಗುತ್ತದೆ ಮತ್ತು ಅನೇಕರನ್ನು ಹೊಡೆದು ಬಿಡುತ್ತಾರೆ.

ವರ್ಣದ್ವೇಷದ ಕಾಯಿದೆಗಳು ಮಕ್ಕಳನ್ನು ಅವರ ಮನೆ ಮಾರುಗಳಿಂದ ಹೊಡೆದೋಡಿಸಿ, ನಾಗರಿಕ ಹಕ್ಕುಗಳನ್ನು ಕಸಿದುಕೊಂಡು, ನಾಶನ ಮಾಡುವಂಥವುಗಳಾಗಿವೆ. ಪ್ರತ್ಯೇಕವಾಗಿರಿಸುವಂಥವುಗಳಾಗಿವೆ. ಸತ್ಯಾಗ್ರಹಿಗಳ ಅಭಿಪ್ರಾಯವಿದೆ ಈ ಸತ್ಯಾಗ್ರಹವು ಶಾಂತ ಹಾಗೂ ಅಹಿಂಸಾತ್ಮಕವಾಗಿ ನಡೆದು ಮಹಾತ್ಮಾ ಗಾಂಧಿಜಿಯ ಆದರ್ಶವನ್ನು ಎತ್ತಿ ಹಿಡಿಯುವಂತಹದಾಗಿರುವದು. ಇದನ್ನು ಸಂಪೂರ್ಣ ಮರ್ದಿಸಲು ಮಾಲನ್ನರು ತನ್ನ ಸರಕಾರದ ಪಾಶವಿಕ ಕ್ರಿಯಾ ಮೂಲಕ ಹವಣಿಸುತ್ತಿದ್ದಾರೆಂದು ತಿಳಿದುಬರುತ್ತದೆ.

ಗ್ಯಾರಂಟೀಯಾದ ಶುಚಿತ್ವ

ಗ್ಯಾರಂಟೀಯಾದ ಶುದ್ಧತೆ

ಅಗ್ಗವಾಗಿ ಸಿಗುವ ಮತ್ತು ಪೊಟ್ಟಣಗಳಲ್ಲಿ ಕಟ್ಟಿರದ ಚಹಗಳನ್ನು ಕೊಂಡು ವೃಥಾ ಏಕೆ ನಷ್ಟಕ್ಕೆ ಒಳಗಾಗಬೇಕು. ಬ್ರೂಕ್ ಬಾಂಡ್ ಪೊಟ್ಟಣದಲ್ಲಿರುವ ಚಹವು ರುಚಿ ಮತ್ತು ಶುದ್ಧತೆಯ ಭರವಸೆ ಕೊಡುವುದಲ್ಲದೆ ಮಲಿನವಾಗದ ಹಾಗೆ ಕಾಪಾಡಲ್ಪಟ್ಟಿರುತ್ತದೆ. ಪ್ರತಿಯೊಂದು 2 ಔನ್ಸ್ ಪೊಟ್ಟಣದಿಂದ 30 ಪೇಲ್ಯ ಕಪ್ಪುಗಳಿಗೆ ಆಗುವಷ್ಟು ಚಹ ಮಾಡಬಹುದು

ನೀವು ಉತ್ತಮ ಗುಣ ಮತ್ತು ಪರಿಮಳವನ್ನು ಅಪೇಕ್ಷಿಸುವದೇ ಆದರೆ ನೀವು ಕೊಳ್ಳಬೇಕಾದ್ದು

ಬ್ರೂಕ್ ಬಾಂಡ್ ಚಹಾ

ವಿವಿಧ ಪಾತ್ರೆಗಳು



ಯಾವತರ್‍ಹ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಜಿ ವ್ಯಾಸಾಚಾರ್ಯ,

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,

Moolky S. K

THE CANARA BANKING CORPORATION LIMITED.
ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್, ಲಿಮಿಟೆಡ್
ಸ್ಥಾಪನೆ : 1906. : : ಪ್ರಧಾನ ಕಾರ್ಯಾಲಯ: ಉಡುಪಿ, (ದ.ಕಾ.)
ವಿಶೇಷ ಸವಲತ್ತುಗಳಿದ್ದು,
ಸಾಲಿಯಾನ್ ಶೇಕಡಾ 4ರಂತೆ ಬಡ್ಡಿಗಳಿರುವ ನಮ್ಮ
"ಪಂಚವಾರ್ಷಿಕ ಸುವರ್ಣ ಠೇವಣಾತಿಗಳ"
ಮೇಲೆ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.
ವಿಶೇಷ ಮಾಹಿತಿಗೆ, ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.
ವಿ. ಆರ್. ಕಾಮತ್, ಬಿ ಎ; ಎಲ್ ಎಲ್, ಬಿ;
ಜನರಲ್ ಮೆನೇಜರ್.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೧೦-೪-'೫೧

ಭಾರತ ಸರಕಾರದ ಸ್ತುತ್ಯಕಾರ್ಯ

ದಿವಂಗತ ಸರದಾರ ವಲ್ಲಭಾಯಿ ಪಟೇಲರು ಭಾರತ ದೇಶದ ರಾಜರು ಹಾಗೂ ರಾಜಸ್ಥಾನಗಳನ್ನು ಭಾರತ ಸರಕಾರದ ಅಧೀನಕ್ಕೆ ಬರುವಂತೆ ಮಾಡಿದಾಗ ಸಂಗೀತ, ಸಾಹಿತ್ಯಕಲೆಗಳು ಮೂಲೆ ಪಾಲಾದವೆಂಬ ಒಂದು ಅಪವಾದ ಬಂದಿತ್ತು. ರಾಜರುಗಳನ್ನು ಇಲ್ಲವೆ ರಾಜಸ್ಥಾನಗಳನ್ನಾಶ್ರಯಿಸಿ ಹಲವು ಕಲಾಭಿಜ್ಞರು ಇದ್ದರು. ಹಿಂದಿನ ಶ್ರೇಷ್ಠ ವಿದ್ವಾಂಸರು ಇಂತಹ ಆಶ್ರಯವನ್ನು ಪಡೆದು ತಮ್ಮ ಕಲೆಯನ್ನು ಬೆಳಗಿದರು. ಸುಮಾರು 600 ರಾಜರುಗಳನ್ನು ಸರಿಮಾರ್ಗಕ್ಕೆ ಹಚ್ಚಿ ಭಾರತ ಅನನ್ಯತೆಯನ್ನು ನಿರ್ಮಿಸಿದ್ದಕ್ಕೆ ಜನತೆ ತುಂಬಾ ಅಭಿಮಾನದಿಂದ ಗೌರವಿಸಿದೆ. ಆದರೂ ಸಂಸ್ಥಾನದಲ್ಲಿ ಲಲಿತಕಲೆಗಳಿಗಿರಬೇಕಾದ ಆದರ-ಪುರಸ್ಕಾರ ಇದರಿಂದಾಗಿ ಸ್ವಲ್ಪಮಟ್ಟಿಗೆ ಕಡಿಮೆಯಾಯಿತೆಂಬುದು ಸಹಜವೇ.

ನಮ್ಮ ... ಕಲಾಕುಶಲತೆಯು ಜಾಗತಿಕರಂಗದಲ್ಲಿ ಉನ್ನತ ಸ್ಥಾನವನ್ನು ಪಡೆದಿರುವುದಾದರೂ—ನಮ್ಮಲ್ಲಿಯ ಕಲಾವಂತರು ವಿದೇಶಗಳಲ್ಲಿ ತಮ್ಮ ಖ್ಯಾತಿಯನ್ನು ಬೆಳಗಿದರೂ—ದೇಶದೊಳಗೆ ಸಲ್ಲಬೇಕಾದ ಗೌರವವು ಏನೇನೂ ಸಾಲದೆಂಬುದು ಸುಸ್ಪಷ್ಟ ವಿಚಾರ. ಈಚೆಗೆ ಭಾರತ ಸರಕಾರ ಈ ದಿಶೆಯಲ್ಲಿ ತನ್ನ ಲಕ್ಷ್ಯವನ್ನು ಹರಿಸಿದಂತಿದೆ. ಕಲಾಪ್ರದರ್ಶನಗಳನ್ನು ನೆರವೇರಿಸಿ ಉತ್ತಮ ಚಿತ್ರಕಾರರಿಗೆ ಪ್ರೋತ್ಸಾಹನವನ್ನಿತ್ತಿತ್ತು. ಏಶಿಯದಲ್ಲೇ ಪ್ರಥಮವಾದ ಚಲಚಿತ್ರ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಮುಖ್ಯ ಮುಖ್ಯ ನಗರಗಳಲ್ಲಿ ಜರಗಿಸಲಾಯಿತು. ಮೊನ್ನೆ ಮೊನ್ನೆ ರಾಷ್ಟ್ರಾಧ್ಯಕ್ಷರು ಸಂಗೀತ ವಿದ್ವಾಂಸರಿಗೂ—ವಾದನಗಾರರಿಗೂ ಯೋಗ್ಯ ಸಂಭಾವನೆಯನ್ನಿತ್ತು ಗೌರವಿಸುವುದರ ಮೂಲಕ ಹೊಸ ಅಧ್ಯಾಯವನ್ನೇ ಆರಂಭಿಸಿದರು. ಬೇರೆ ಬೇರೆ ಭಾಷೆ ಹಾಗೂ ಸಂಗೀತ ಪದ್ಧತಿಯ ವಿದ್ವಾಂಸರು ಹಾಗೂ ವಾದನಗಾರರಿಗೆ ಈ ಬಹುಮಾನ ಸಂಭಾವನೆಯಾಗಿದೆ. ಪ್ರತಿ ವರ್ಷವೂ ಇದೇ ಪದ್ಧತಿಯನ್ನು ರಾಷ್ಟ್ರಾಧ್ಯಕ್ಷರು ಮುಂದೆ ವರಿಸುವದಾಗಿ ಸಾರಿದ್ದಾರೆ. ನಿಜವಾಗಿಯೂ ಕಲೆ ಸಾಹಿತ್ಯ ಸಂಗೀತಗಳಿಗೆ ಉತ್ತೇಜನ ಕೊಡುವ ಯೋಗ್ಯ ಸಂಭಾವನೆ ಇದಾಗಿದೆ.

ಈ ಅನುಕರಣೆಯು ಕೇವಲ ಕೇಂದ್ರ ಸರಕಾರದಲ್ಲಿ ಮಾತ್ರವಲ್ಲದೆ ಪ್ರಾಂತೀಯ ಸರಕಾರಗಳಲ್ಲೂ ಆಗುವದು ಅವಶ್ಯವಿದೆ. ಸಂಗೀತ, ಸಾಹಿತ್ಯ, ಚಿತ್ರಕಲೆಗಳಿಗೂ ಬಹುಮಾನ ದೊರಕುವಂತಾಗಬೇಕು. ಸಂಭಾವನೆಯು ಕೇವಲ ಸಂಭಾವನೆಯ ಸ್ವರೂಪದ್ದಾಗಿರದೆ ಸ್ವಲ್ಪಮಟ್ಟಿಗೆ ಜೀವನ ನಿರ್ವಹಣಕ್ಕೂ ಅನುಕೂಲವಾಗುವಂತಹ ದೊಡ್ಡ ಮೊತ್ತವಾದರೆ ಅವನ ಜೀವನವೂ ತುಸು ಉತ್ತಮವಾದೀತು. ಬಡತನ, ದಾರಿದ್ರ್ಯಗಳ ನಡುವೆ ಕಲೆಗಳನ್ನು ಸೇವಾದೃಷ್ಟಿಯಿಂದ ನೋಡುವ ಕಾಲವಿದಲ್ಲ. ಆದುದರಿಂದ ಕಲಾವಂತನಿಗೆ ತಕ್ಕ ಪ್ರೋತ್ಸಾಹ ದೊರಕುವದು ದೇಶದ ಸಂಸ್ಕೃತಿಯ ಪುನರುತ್ಥಾನದ ದೃಷ್ಟಿಯಿಂದ ಯಥಾಯೋಗ್ಯವಾಗಿದೆ. ಭಾರತ ಸರಕಾರವಾದರೋ ತನ್ನ ಕರ್ತವ್ಯವೆಂದು ತಿಳಿದು ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿರುವದು ಶ್ಲಾಘನೀಯ.

ಮದ್ರಾಸು ಸರಕಾರವು ಕೆಲವರ್ಷಗಳ ಹಿಂದೆ ಭಾಷಾ ಸೇವಕರಲ್ಲಿ ಹಿರಿಯನೊಬ್ಬನನ್ನು ರಾಷ್ಟ್ರಕವಿಯೆಂದು ಸಾರಿ ಬಹುಮಾನವನ್ನು ಸಲ್ಲಿಸುತ್ತಲಿದೆ. ಮಾತ್ರವಲ್ಲ ಹಲವು ಪುಸ್ತಕಗಳಿಗೆ ಬಹುಮಾನ ಹಣವನ್ನೂ ನೀಡಿ ಪ್ರೋತ್ಸಾಹಿಸುತ್ತಿರುವದು. ಈಚೆಗೆ ಕರ್ನಾಟಕ ಸಂಗೀತ ವಿದ್ಯಾಲಯವನ್ನು ಸ್ಥಾಪಿಸುವಲ್ಲಿ ಮದ್ರಾಸ್, ಮೈಸೂರು, ಹೈದರಾಬಾದ ಸರಕಾರಗಳು ಸಮಾಲೋಚನೆ ನಡೆಸುತ್ತವೆ.

ವಿಧಾನ ಪರಿಷತ್ತಿಗೆ ಸಾಹಿತ್ಯ, ವಿಜ್ಞಾನ, ಕಲೆ ಮುಂತಾದುವುಗಳಲ್ಲಿ ನಿಷ್ಣಾತರಾದ 12 ಜನರನ್ನು ಆರಿಸುವ ಕ್ರಮವ ನ್ನು ರಾಷ್ಟ್ರಾಧ್ಯಕ್ಷರು ನೆರವೇರಿಸಿದರು. ಈ ಸಂದರ್ಭದಲ್ಲಿ ಪೃಥ್ವಿರಾಜರಂತಹ ಶ್ರೇಷ್ಠ ನಟರನ್ನು ಅದರಲ್ಲಿ ಆರಿಸಿರುವದು ಗಮನಾರ್ಹ ಸಂಗತಿ.

ಭಾರತ ಬಾನುಲಿ ಕೇಂದ್ರವನ್ನು ಹಲವು ವಿಲಾಸಪ್ರಿಯರು ಟೀಕೆಮಾಡುತ್ತಿರುವರಾದರೂ ಉತ್ಕೃಷ್ಟ ಸಾಹಿತ್ಯ ಕಲೆಗಳಿಗೆ ತಕ್ಕ ಅವಕಾಶವನ್ನು ಅಲ್ಲಿ ಕಲ್ಪಿಸಿಕೊಡಲಾಗಿದೆ. ಸಿನೇಮ-ಗೋಷ್ಠಿ-ಮುಂತಾದರೆ ರೇಡಿಯೋ ನಿಲಯಗಳು ವ್ಯಾಪಾರೀ ಜಾಹೀರಾತುಗಳನ್ನು ಕೈಗೊಂಡು ಜನತೆಯ ಅಭಿರುಚಿಯನ್ನು ಕೇವಲ ಸಿನೇಮಾ ಪದ್ಯಗಳಿಂದ ಕೀಳುಮಟ್ಟಕ್ಕಿಳಿಸುವದು ವಿದಿತ ವಿಚಾರವೇ. ಭಾರತ ಸರಕಾರವಾದರೋ ತನ್ನ ಸ್ಥಾನಮಾನಕ್ಕೆ ಚ್ಯುತಿಬರದ ರೀತಿಯಲ್ಲಿ ಮರ್ಯಾದಾರೀತಿಯಲ್ಲಿ ನಡೆದು ಬರುತ್ತಲಿದ್ದು ಈ ನಾಲ್ಕು ವರ್ಷಗಳಲ್ಲಿ ಸಾಹಿತ್ಯ-ಸಂಗೀತ-ಜನಪದ ಗೀತ- ಮುಂತಾದವುಗಳಿಗೆ ಸಾಕಷ್ಟು ಮನ್ನಣೆಯನ್ನಿತ್ತಿರುವದು. ಆದರೆ ಪ್ರೋತ್ಸಾಹ ನೀಡುವಲ್ಲಿ ಪ್ರಗತಿ ಇನ್ನೂ ಹೆಚ್ಚಬೇಕಾಗಿದೆ. ಸರಕಾರವೇ ಇದರಲ್ಲಿ ಆಸ್ಥೆವಹಿಸಿದ್ದರಿಂದ ರಾಷ್ಟ್ರೀಯ ಮನೋವೃತ್ತಿ ಇನ್ನಷ್ಟು ವೃದ್ಧಿಗೊಳ್ಳುವಂತಾಯಿತು. ಈ ಸ್ತುತ್ಯ ಕಾರ್ಯವು ಅಭಿನಂದನೀಯ.

ಮಂಗಳೂರು

ಬಂದರ ಮಜೂರರ ಮುಷ್ಕರವು ಇದೇ ತಾ 5ರಂದು ಪ್ರಾರಂಭವಾಗಿದೆ. ಯುವಕರು, ಮುದುಕರು ಎಂದೆನ್ನದೆ ಎಲ್ಲಾ ವ್ಯಾಪಾರಸ್ಥರೂ ಕಾರ್ಯರಂಗಕ್ಕಿಳಿದು ಸರಕಿನ ಸಾಗಾಟ, ಹೇರುವುದು, ಇಳಿಸುವುದು ಮೊದಲಾದ ಕೆಲಸಗಳನ್ನು ತಾವೇ ಮಾಡುತ್ತಲಿರುವರು. ಜಾತಿಮತ ಭೇದವೆಣಿಸದೆ ತರುಣ ಸ್ವಯಂಸೇವಕರು ವ್ಯಾಪಾರಸ್ಥರೊಡನೆ ಸಹಕರಿಸುತ್ತಲಿದ್ದಾರೆ. ಈ ಪರಿಸ್ಥಿತಿಯನ್ನು ಕಂಡು ಗಾಬರಿಗೊಂಡ ಕೆಲವು ಕೂಲಿಗಳು ಗೋದಾಮುಗಳಲ್ಲಿ ಕೆಲಸಮಾಡಲೊಪ್ಪಿದರೂ ಅದನ್ನು ವ್ಯಾಪಾರಸ್ಥರು ನಿರಾಕರಿಸಿರುವರು. ಮುಖ್ಯತಃ ಮುಸ್ಲಿಂ ಕೆಲಸಗಾರರು ಮಾರಳಿ ಕೆಲಸಕ್ಕೆ ಬರಲು ಆತುರತೆಯನ್ನು ವ್ಯಕ್ತಪಡಿಸಿರುವರು. ಅಂತೂ ಮಜೂರ ಸಂಘದ ಸದಸ್ಯರಲ್ಲಿ ಒಡಕುಂಟಾಗಿದೆ ಎಂದು ತಿಳಿದುಬರುತ್ತದೆ. ಆದುದರಿಂದ ಮುಷ್ಕರ ಮುರಿದುಹೋಗುವ ಸಂಭವವಿದೆ. ಸುಮಾರು 200 ಕೆಲಸಗಾರರು ನಿಶ್ಶರ್ತವಾಗಿ ತಾ. 7 ರಲ್ಲು ಕೆಲಸಕ್ಕೆ ಆರಂಭಿಸಿದ್ದಾರೆ.

ಉಡುಪಿ

ಎಕೆಡಮಿ ಒಫ್ ಜನರಲ್ ಎಜ್ಯುಕೇಶನ್ ಮಣಿಪಾಲ್. ಈ ಸಂಸ್ಥೆಯ ನೇತೃತ್ವದಲ್ಲಿ ತೆರೆಯಬೇಕೆಂದಿದ್ದ ಕಸ್ತೂರಿಬಾ ಮೆಡಿಕಲ್ ಕಾಲೇಜು ಯೋಜನೆಯ ಕುರಿತು ಎಕೆಡಮಿ ರಿಜಿಸ್ಟ್ರಾರರಿಗೂ ಯುನಿವರ್ಸಿಟಿ ಅಧಿಕಾರಿಗಳಿಗೂ ನಡೆದ ಪತ್ರವ್ಯವಹಾರವು ಫಲದಾಯಕವಾಗಿಲ್ಲವಾದುದರಿಂದ ಇದೇ ಜೂನ್ ತಿಂಗಳಲ್ಲಿ ತೆರೆಯಲಸಾಧ್ಯವೆಂಬುದನ್ನು ವಿಷಾದಪೂರ್ವಕ ತಿಳಿಸಲಾಗಿದೆ. ಈ ಯೋಜನೆಯು 1953ನೆ ಇಸವಿ ಜೂನ್ ತಿಂಗಳಲ್ಲಾದರೂ ಅಮಲಿನಲ್ಲಿ ಬರುವಂತೆ ಸಾಧ್ಯವಿದ್ದ ಪ್ರಯತ್ನಗಳೆಲ್ಲವನ್ನೂ ಮಾಡಲಾಗುವುದೆಂದು ಹೇಳಲಾಗಿದೆ. ಈ ಯೋಜನೆಯ ಸಫಲತೆಗೆ ಹಣವು ಪ್ರಾಧಾನ್ಯವಿರುವುದರಿಂದ ಮಹಾಜನರೆಲ್ಲರೂ ಮೂವತ್ತು ರೂಪಾಯಿಗಳಂತೆ ಎಕೆಡಮಿಗೆ ಪಾವತಿಮಾಡಿ ಸದಸ್ಯರಾಗಿ ಪ್ರೋತ್ಸಾಹಿಸಬೇಕಾಗಿದೆ. ಇಂತಹ ಒಂದು ಲಕ್ಷ ಮಂದಿ ಸದಸ್ಯರನ್ನು ಎಕೆಡಮಿಗೆ ಸೇರಿಸುವ ಚಳವಳಿಯನ್ನು ಈಗಾಗಲೇ ಪ್ರಾರಂಭಿಸಲಾಗಿದೆ.

ಕಾಲೇಜು ಪ್ರವೇಶಕ್ಕಾಗಿ ಈ ಮೊದಲೇ ಹಣವನ್ನು ಮುಂಗಡಕೊಟ್ಟ ವಿದ್ಯಾರ್ಥಿಗಳು ಅಪೇಕ್ಷಿಸಿದಲ್ಲಿ ಅವರ ಹಣ ವಾಪಾಸು ಕೊಡಲಾಗುವುದು. ಆದರೆ ಈ ಯೋಜನೆಯ ಸಫಲತೆಗಾಗಿ ಅವರೂ ಪ್ರತ್ಯಕ್ಷಾಪ್ರತ್ಯಕ್ಷರೂಪದಿಂದ ನೆರವಾಗಬೇಕೆಂದು ರಿಜಿಸ್ಟ್ರಾರ್ ಡಾ. ಟಿ. ಮಾಧವ ಪೈಗಳು ಅಪೇಕ್ಷಿಸುತ್ತಾರೆ.

ಶ್ರೀರಾಮನವಮಿ ಮಹೋತ್ಸವವು ಶ್ರೀಕೃಷ್ಣಮಠದಲ್ಲಿ ಪರ್ಯಾಯ ಪೇಜಾವರಮಠದ ಶ್ರೀ ವಿಶ್ವೇಶತೀರ್ಥ ಸ್ವಾಮಿಗಳವರ ನೇತೃತ್ವದಲ್ಲಿಯೂ ಮಹತೋಭಾರ ಶ್ರೀಮದನಂತೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಬಾದ್ಯ ಸಹೋದರರ ಮುಂದಾಳ್ತನದಲ್ಲಿಯೂ ಅದಿ ಶೀರೂರು ಗ್ರಾಮದಲ್ಲಿ ಶೀರೂರು ಮಠದ ಶ್ರೀಲಕ್ಷ್ಮೀಂದ್ರತೀರ್ಥ ಸ್ವಾಮಿಗಳವರ ನೇತೃತ್ವದಲ್ಲಿಯೂ ಯಥಾಶಕ್ತಿಯಾಗಿ ಜರಗಿತು.

ಮಂಗಳೂರು ಮುಷ್ಕರಸಂದರ್ಭ ಪರಿಸ್ಥಿತಿಯನ್ನು ಅವಲೋಕಿಸಿ ಉಡುಪಿಯ ಸಾಹುಕಾರ ಬಂಧುಗಳು ಅಲ್ಲಿಯ ಸಾಹುಕಾರರ ನೆರವಿಗಾಗಿ ಇದೇ ತಾ 8ರಲ್ಲು ಬೆಳಗ್ಗೆ ಇಪ್ಪತ್ತು ಮಂದಿಯ ಸ್ವಯಂಸೇವಕ ದಳವನ್ನು ಕಳುಹಿಸಿರುವರು.

ಸತ್ಕಾರ ಕೂಟ— ಉಡುಪಿ ನಗರ ಸಭೆಯ ಉಪಾಧ್ಯಕ್ಷರಾದ ಶ್ರೀ. ಎ. ಬಿ. ಕೃಷ್ಣರಾಜರು ತಾ 9ರಲ್ಲಿ ಶ್ರೀ. ಟಿ. ಎ. ಪೈ, ಎಂ. ಎಲ್. ಎ. ಇವರ ಗೌರವಾರ್ಥ ಸತ್ಕಾರಕೂಟವೊಂದನ್ನು ಏರ್ಪಡಿಸಿದ್ದರು. ಹಲವು ಆಹ್ವಾನಿತರು ಆಮಂತ್ರಿತರಾಗಿದ್ದರು.

ರಸ್ತೆಗೆ ಡಾಮರು— ಡಾಮರಿನ ಕೆಲಸವು ಈಗಾಗಲೇ ಆರಂಭವಾಗಿದ್ದು ಈ ತಿಂಗಳೊಳಗೆ ಮುಗಿಯಬಹುದು. 1951ನೇ ಮಾರ್ಚಿಯೊಳಗೇ ಇದು ಮುಗಿಯಬೇಕಾಗಿತ್ತು.

ರೇಶನ್ ಆಫೀಸು—ಎರಡನೆ ಸಲ ರೇಶನ್ ಜಾರಿಗೆ ಬಂದಾಗ ರೇಶನ್ ಅಫೀಸನ್ನು ನಗರದ ಒಂದು ಮೂಲೆಯಲ್ಲಿ ಏರ್ಪಡಿಸಲಾಯಿತು. ಇದನ್ನು ನಗರದ ಕೇಂದ್ರ ಸ್ಥಳಕ್ಕೆ ವರ್ಗಾಯಿಸಬೇಕೆಂದು ನಾಗರಿಕರು ಸಾಕಷ್ಟು ಚಳವಳಿಸಿದ್ದರು. ಆದರೆ ಆಗಿನ ಅಫೀಸರರು ಇದನ್ನು ಅಲಕ್ಷಿಸಿದ್ದರು. ಈಗ ರೇಶನ್ ರದ್ದತಿಯ ಗಾಳಿ ಬೀಸುತ್ತಿರುವಾಗ ಆಫೀಸನ್ನು ಮುನ್ಸಿಫ್ ಕೋರ್ಟಿನ ಸಮೀಪದ ಹೊಸ ಕಟ್ಟಡವೊಂದಕ್ಕೆ ತರಲಾಗಿದೆ.

ದಾರಣೆಗಳು—ಕ್ರಮೇಣ ಏರತೊಡಗಿವೆ. ವ್ಯಾಪಾರಿಗಳು ಹೆಚ್ಚು ಸಾಮಾನು ಸಂಗ್ರಹಿಸುತ್ತಿಲ್ಲ. ಗ್ರಾಹಕರೂ ಹೆಚ್ಚಾಗಿ ಕೊಳ್ಳುತ್ತಿಲ್ಲವೆಂದು ತಿಳಿದುಬರುತ್ತದೆ.

ದಿ ಈಸ್ಟ್ ಎಂಡ್ ವೆಸ್ಟ್ ಇನ್ಶ್ಯೂರೆನ್ಸ್ ಕಂಪೆನಿ
ಲಿಮಿಟೆಡ್
ಈಸ್ಟ್ ಎಂಡ್ ವೆಸ್ಟ್ ಬಿಲ್ಡಿಂಗ್ಸ್, ಬೊಂಬಾಯಿ.
[ಸ್ಥಾಪನೆ: 1913]
ಉದಾರ ಮಾರಿಯಾಯತಿ ಶರ್ತಗಳಿರುವ ಪುರಾತನ ಮತ್ತು ಮುಂದುವರಿದ ಕಂಪೆನಿಗಳಲ್ಲೊಂದಾಗಿರುತ್ತದೆ.
ವಿಮೆಯ ಸಕಲ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು ಆ ಬಾಬಿನ ಎಲ್ಲಾ ಕೆಲಸಗಳಲ್ಲಿ ಭಾಗಿಯಾಗಿ ಸಹಕರಿಸಿ ಸಲಹೆಗಳನ್ನೀಯುತ್ತಾ, ಜನಸೇವೆಗೈಯುವುದೇ ನಮ್ಮ ಧ್ಯೇಯ.
ನಮ್ಮ ಚೀಫ್ ಏಜನ್ಸಿ ವಿಸ್ತೀರ್ಣದೊಳಗೆ ಪ್ರತೀ ಜಿಲ್ಲೆಗೊಬ್ಬರಂತೆ ಇನ್ಸ್ಪೆಕ್ಟರುಗಳೂ, ಸ್ಪೆಶಲ್ ಏಜಂಟರೂ, ಏಜಂಟರೂ ಬೇಕಾಗಿದ್ದಾರೆ.
ಹೆಚ್ಚಿನ ವಿವರಕ್ಕೆ ಬರೆಯುವದು.
ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್,
ಚೀಫ್ ಏಜಂಟರು,
ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಮೈಸೂರು ಸ್ಟೇಟ್,
ಪೋಸ್ಟ್ ಶಿರ್ವಾ, ದ. ಕ.

ನಾಗರೀಕ ಕರ್ತವ್ಯ ಬೋಧನೆಯ ಅವಶ್ಯಕತೆ

ರಾಜಾಜಿಯವರ ನಾಮಕರಣ ಕ್ರಮಬದ್ಧವಿದೆ.

ನಾಗರೀಕ ಕರ್ತವ್ಯಗಳ ಬೋಧನೆಯ ಅವಶ್ಯಕತೆ

ಮದ್ರಾಸ್ ಕಾರ್ಪರೇಶನ್ ಕಡೆಯಿಂದ ಇದೇ ತಾ. 5ರಂದು ಮದ್ರಾಸಿನ ಗವರ್ನರ್ ಶ್ರೀ ಪ್ರಕಾಶರಿಗೆ ಮಾನಪತ್ರವೊಂದು ಅರ್ಪಿಸಲಾಯಿತು. ಗವರ್ನರರು ಉತ್ತರವೀಯುತ್ತ, ಮುನಿಸಿಪಾಲಿಟಿ, ಕಾರ್ಪರೇಶನುಗಳಂತಹ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಜನರಲ್ಲಿ ನಾಗರೀಕತೆಯು ಬೆಳೆದುಬರುವಂತೆ ತಕ್ಕ ಕಾರ್ಯಕ್ರಮಗಳನ್ನು ಕರಪತ್ರಗಳ, ವಾಲ್‌ಪೋಸ್ಟರುಗಳ ಇಲ್ಲವೆ ಭಾಷಣಗಳ ಮೂಲಕ, ಕೈಕೊಳ್ಳುವುದು ಅತ್ಯಾವಶ್ಯಕವೆಂಬುದನ್ನು ಒತ್ತಿ ಹೇಳಿದರು.

ಮದ್ರಾಸ್ ಹೈಕೋರ್ಟಿನ ತೀರ್ಪು

ಮದ್ರಾಸು ವಿಧಾನ ಪರಿಷತ್ತಿಗೆ ಶ್ರೀ ಸಿ. ರಾಜಗೋಪಾಲಾಚಾರ್ಯರನ್ನು ಗವರ್ನರರು ನಾಮಕರಣ ಮಾಡಿದ್ದು ಕ್ರಮಬದ್ಧವಾಗಿಲ್ಲವೆಂದು ಕಮ್ಯೂನಿಸ್ಟ್ ಎಂ. ಎಲ್. ಎ. ಗಳಾದ ಶ್ರೀ ಪಿ. ರಾಮಮೂರ್ತಿಯವರು ಹೈಕೋರ್ಟಿಗೆ ಅರ್ಜಿ ಸಲ್ಲಿಸಿದ್ದು, ಅದೀಗ ಕಿತ್ತು ಹಾಕಲ್ಪಟ್ಟಿದೆ.

ಮದ್ರಾಸು ಮಂತ್ರಿ ಮಂಡಳ

ಮಂತ್ರಿಗಳ ಪಟ್ಟಿಯನ್ನು ಈ ವರೆಗೂ ರಾಜಾಜಿಯವರು ಸಿದ್ಧ ಪಡಿಸಲಿಲ್ಲ. ಈ ದಿನ ಅದು ತಯಾರಾಗುವುದು.

ಪ್ರೊ. ಕೆ. ಟಿ. ಶಹಾ

ಇವರು ರಾಷ್ಟ್ರಾಧ್ಯಕ್ಷ ಪದವಿಗೆ ಉಮೇದ್ವಾರರಾಗಿ ತಮ್ಮ ನಾಮಪತ್ರವನ್ನು ಸಲ್ಲಿಸಿರುತ್ತಾರೆ.

ರಾಧಾಕೃಷ್ಣನ್–ಸ್ಟಾಲಿನ್ ಭೆಟ್ಟಿ

ಭಾರತ ರಾಯಭಾರಿ ಡಾ| ಎಸ್. ರಾಧಾಕೃಷ್ಣನ್, ಅವರಿಗೆ ದಿನಾಂಕ 5ರಂದು ರಶಿಯಾದ ಮುಂದಾಳು ಸ್ಟಾಲಿನ್ನರು ಅರ್ಧ ತಾಸಿನ ವರೆಗೆ ಭೆಟ್ಟಿ ಕೊಟ್ಟರು. ಎರಡು ವರುಷಗಳಲ್ಲಿ ಎರಡು ಸಲ ಸ್ಟಾಲಿನ್ನರನ್ನು ಸಂದರ್ಶಿಸಿದವರಲ್ಲಿ ಡಾ| ರಾಧಾಕೃಷ್ಣನವರೇ ಮೊದಲಿನವರು. ಸಂದರ್ಶನ ಕಾಲದಲ್ಲಿ ಮುಖ್ಯ ಮಂತ್ರಿ ಸ್ಟಾಲಿನ್ನರು ಎಂದಿನಂತೆ ಮಾರ್ಶಲ್ಲನ ಸಮವಸ್ತ್ರ ಧರಿಸಿದ್ದರೆಂದೂ ಹಸನ್ಮುಖಿಗಳಾಗಿದ್ದರೆಂದೂ ಹೇಳಲಾಗಿದೆ. ಡಾ| ರಾಧಾಕೃಷ್ಣನ್ನರು ತಮ್ಮ ಹುದ್ದೆಯನ್ನು ಸ್ವೀಕರಿಸಲು ಬಂದ ಕೂಡಲೆ ಮತ್ತು ಅವರು ಹೊರಟಾಗ ಎರಡೂ ಸಲ ಅವರಿಗೆ ಸ್ಟಾಲಿನ್ನರ ಭೆಟ್ಟಿ ದೊರೆಯಿತು. ಮಾಸ್ಕೋದಲ್ಲಿಯ ಇತರ ಯಾವ ರಾಯಭಾರಿಗಳಿಗೂ ಈ ಭಾಗ್ಯ ದೊರೆತಿಲ್ಲ. ಡಾ| ರಾಧಾಕೃಷ್ಣನ್ನರು ತಮ್ಮ ಅಧಿಕಾರಾವಧಿಯಲ್ಲಿ ಭಾರತ ಸೋವಿಯಟ್ ಸ್ನೇಹ ಅಭಿವೃದ್ಧಿಗಾಗಿ ಮಾಡಿದ ಕಾರ್ಯಗಳು ಫಲದಾಯಕವಾಗಿವೆ ಎಂದು ಹೇಳಬಹುದಾಗಿದೆ. ಟ್ರೂಮನ್-ಸ್ಟಾಲಿನ್-ಚರ್ಚಿಲ್-ನೆಹರು ಇವರು ಸಭೆ ಜರಗಿಸಬಹುದೆಂದೂ ಇದು ರಶ್ಯದ ಶಾಂತಿಯತ್ನವೆಂದೂ ಹೇಳಲಾಗಿದೆ.

ಅಮೇರಿಕೆಯು 1951ರಲ್ಲಿ ಕೊಟ್ಟ ಸಹಾಯವು

ಭಾರತಕ್ಕೆ 110 ದಶಲಕ್ಷ ಡಾಲರು, ಕೊರಿಯಾಕ್ಕೆ 108 ದಶಲಕ್ಷ ಡಾಲರು ಫಿಲಿಪ್ಪಾಯಿನ್ಸ್ 17 ದಶಲಕ್ಷ ಡಾಲರು ಎನ್ನಲಾಗಿದೆ. ಯುದ್ಧ ಮುಕ್ತಾಯದಿಂದ 1952ನೆ ವರುಷದ ಪ್ರಾರಂಭದ ವರೆಗೆ ಸ್ವತಂತ್ರ ರಾಷ್ಟ್ರಗಳ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಹಾಗು ಸಂರಕ್ಷಣಾ ವ್ಯವಸ್ಥೆಯನ್ನು ಬಲಪಡಿಸಲು 39000 ದಶಲಕ್ಷ ಡಾಲರುಗಳನ್ನು ಅಮೇರಿಕೆಯು ವೆಚ್ಚ ಮಾಡಿರುವುದು.

ಶ್ರೀ ಟಿ. ಪ್ರಕಾಶಮ್ಮರೂ ರಾಜಾಜಿಯ ಪಕ್ಷವೂ

ಸಂಯುಕ್ತ ಪ್ರಜಾರಂಗದ ಸಾರ್ವಜನಿಕ ಸಭೆಯೊಂದು ಇದೇ ತಾ-6ರಂದು ಮದ್ರಾಸಿನಲ್ಲಿ ಜರಗಿದಾಗ ಅಧ್ಯಕ್ಷಸ್ಥಾನ ವಹಿಸಿದ ಶ್ರೀ ಟಿ ಪ್ರಕಾಶಮ್ಮರು ತಾವು ರಾಜಾಜಿಯ ಪಕ್ಷವನ್ನು ಸೇರುವುದಿಲ್ಲವಾಗಿ ಹೇಳಿದರು. ರಾಜಾಜಿಯವರೂ ತಾವು ಮಿತ್ರರಾದರೂ ಇಬ್ಬರ ನಡುವೆ ಇಂದು ಒಮ್ಮತದ ವಿಷಯವಿಲ್ಲವೆಂದೂ ರಾಜಾಜಿಯವರು ಮುಂದಾಳ್ತನ ಸ್ವೀಕರಿಸಿ ಪ್ರಮಾದ ಮಾಡಿದ್ದಾರೆಂದೂ ತಿಳಿಸಿದರು.

ಕ್ಯಾನ್ಸರ ರೋಗನಿವಾರಣಾ ಸಪ್ತಾಹ

ಮದ್ರಾಸಿನ ಗವರ್ನರರಾದ ಶ್ರೀ ಪ್ರಕಾಶರು ಮದ್ರಾಸಿನ ಮಹಿಳಾ ಸಂಘದವರು ಇದೇ ತಾ. 6ರಂದು ಏರ್ಪಡಿಸಿದ ಜಾಗತಿಕ ಕ್ಯಾನ್ಸರ ಸಪ್ತಾಹವನ್ನು ಉದ್ಘಾಟಿಸುತ್ತ, ಜನರು ಆ ರೋಗವನ್ನು ಬೇಗನೆ ಕಂಡುಹಿಡಿದು ಔಷದೋಪಚಾರ ಹೊಂದಿ ಅದರ ಪ್ರಸಾರವನ್ನು ತಡೆಗಟ್ಟಲು ಸಹಾಯ ಮಾಡಬೇಕೆಂದು ಬಿನ್ನವಿಸಿದರು. ಈ ರೋಗದ ನಿವಾರಣೆಯಲ್ಲಿ ಬೊಂಬಾಯಿಯ ಟಾಟಾ ಆಸ್ಪತ್ರೆಯು ಸಲ್ಲಿಸುತ್ತಿರುವ ಸೇವೆಯನ್ನು ಗವರ್ನರರು ಪ್ರಶಂಸಿಸಿದರು. ಡೈರೆಕ್ಟರ್ ಒಫ್ ಮೆಡಿಕಲ್ ಸರ್ವಿಸಸ್ ಡಾ| ಆರ.ನಾಚಲಂ ಅವರು ಮಾತನಾಡುತ್ತ ಪ್ರತಿವರುಷ 10 ಲಕ್ಷ ಜನಸಂಖ್ಯೆಯಲ್ಲಿ ಒಂದು ಸಾವಿರಕ್ಕಿಂತ ಹೆಚ್ಚು ಜನರು ಕ್ಯಾನ್ಸರದಿಂದ ಸಾಯುತ್ತಾರೆಂದು ಹೇಳಿದರು.

ಚೀನಕ್ಕೆ ಶಿಷ್ಟಮಂಡಲ

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ನಾಯಕತ್ವದಲ್ಲಿ ಭಾರತದ ಒಂದು ಸಾಂಸ್ಕೃತಿಕ ಪ್ರತಿನಿಧಿ ಮಂಡಲವು ಇದೇ ತಾ-27ರಂದ ಚೀನದಲ್ಲಿ ನಾಲ್ಕು ವಾರಗಳವರೆಗೆ ಸಂಚರಿಸಲಿದೆ ಎಂದು ಭಾರತ ಸರಕಾರದ ವಿದೇಶ ಶಾಖೆಯು ಪ್ರಕಟಣೆ ಹೊರಡಿಸಿದೆ.

ಬಿಹಾರದಲ್ಲಿ ಬರಗಾಲ

ಬಿಹಾರದ ಸಂತಾಲ ಪರಗಣ ಜಿಲ್ಲೆಯ ಮಹಾಗಾಮಾ ರಾಣೆಯಲ್ಲಿ ಬರಗಾಲ ಪರಿಸ್ಥಿತಿಯು ತಲೆದೋರಿದೆಂದು ಆ ಜಿಲ್ಲೆಯ ನಾಲ್ವರು ಕಾಂಗ್ರೆಸ್ ಪ್ರಮುಖರು ಪ್ರಕಟಣೆ ಹೊರಡಿಸಿರುವರು. ಭತ್ತ ಹಾಗೂ ಹಿಂಗಾರಿಯ ಬೆಳೆಗಳು ಈ ಸಲ ಬಹಳ ಕೆಟ್ಟಿವೆ. ಒಕ್ಕಲಿಗರು ಹಸಿವಿನ ತಾಪವನ್ನು ಸಹಿಸಲಾರದೆ ಗಡ್ಡೆಗೆಣಸುಗಳನ್ನು ತಿಂದು ಜೀವನಮಾಡುತ್ತಿರುವರು. ಸರಕಾರವು ಕೂಡಲೇ ಪರಿಹಾರ ಕಾರ್ಯಕ್ರಮ ಕೈಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ

ಹೊಸ ರಾಷ್ಟ್ರಾಧ್ಯಕ್ಷರ ಅಧಿಕಾರ ಸ್ವೀಕಾರ

ಭಾರತದ ಹೊಸ ರಾಷ್ಟ್ರಾಧ್ಯಕ್ಷರು ಮುಂದಿನ ಮೇ ತಿಂಗಳ ತಾ. 12ರಲ್ಲಿ ಅಧಿಕಾರ ಸ್ವೀಕಾರ ಮಾಡುವ ಸಂಭವವಿದೆಯೆಂದೂ ಮರುದಿನ ಕೇಂದ್ರದ ಹೊಸ ಮಂತ್ರಿಮಂಡಲವು ಅಧಿಕಾರಸ್ವೀಕಾರ ಮಾಡಬಹುದೆಂದೂ ತಿಳಿದು ಬರುತ್ತದೆ. ರಾಷ್ಟ್ರಾಧ್ಯಕ್ಷರ ಆಯ್ಕೆಯ ನಾಮಪತ್ರವನ್ನು ಇದೇ ತಿಂಗಳ ತಾ. 12ರಲ್ಲಿ ಒಪ್ಪಿಸಬೇಕಾಗಿದೆ. ತಾ. 14ರಲ್ಲಿ ನಾಮಪತ್ರಗಳ ಪರಿಶೀಲನೆ ಮುಗಿದು ಮೇ ತಿಂಗಳ ತಾ. 2ರಲ್ಲಿ ಮತದಾನವಾಗುವುದು. ಮೇ ತಿಂಗಳ ತಾ. 13 ಮತ್ತು 14 ರಲ್ಲಿ ಪಾರ್ಲಿಮೆಂಟಿನ ಸದಸ್ಯರ ಪ್ರತಿಜ್ಞಾ ವಿಧಿ ಜರಗುವುದು. ಹೊಸ ರಾಷ್ಟ್ರಾಧ್ಯಕ್ಷರು ಮೇ ತಾ 16ರಲ್ಲಿ ಲೋಕ ಸಭೆ ಮತ್ತು ಕೇಂದ್ರ ಪ್ರಧಾನ ಸಂಪತ್ತನ್ನು ಉದ್ದೇಶಿಸಿ ಭಾಷಣ ಮಾಡುವರು.

ಚಂದಾದಾರರಲ್ಲಿ

ಎರಡು ಮೂರಾವೃತ್ತಿ ಬರೆದರೂ ಚಂದಾಹಣ ಬಾರದ್ದರಿಂದ ನಾವು ಇತ್ತೀಚೆಗೆ ಕೆಲವರಿಗೆ ಪತ್ರಿಕೆಯನ್ನು ವಿ. ಪಿ ಮಾಡಿ ಕಳುಹಿಸಿದ್ದೆವು ಹೆಚ್ಚಿನವರು ಅದನ್ನು ಸ್ವೀಕರಿಸಿ ಪ್ರೋತ್ಸಾಹಿಸಿರುತ್ತಾರೆ. ಆದರೆ ಕೆಲವರು ಅದನ್ನು ಇನ್ಕಾರ್ ಮಾಡಿರುವುದು ವಿಷಾದಕರವಿದೆ. ಅಂಥವರು ಈ ಮೊದಲೇ ತಿಳಿಸಿರುವಂತೆ ತಮ್ಮ ಬಾಕಿ ಚಂದಾ ಹಣವನ್ನು ದಯಮಾಡಿ ಇನ್ನಾದರೂ ಒಡನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಈ ಮೂಲಕ ವಿನಂತಿಸಲಾಗುತ್ತದೆ.

ಮೆನೇಜರ್.



ತಾರೀಕು 10—4—1952ರಿಂದ
ಹರಿಶ್ಚಂದ್ರ ಪಿಕ್ಚರ್ಸ್‌ನವರ ತಯಾರಿಕೆ—
ಬಹುರಾಣಿ
ಸುಲೋಚನ ಚಟರ್ಜಿ, ಮುಬಾರಿಕ್ ಮತ್ತು ಗೋಪ್
ಅನಂತರ:— ವೆಂಟ್ರೊ ಚಿತ್ರ "ಚಿಕ್ಕಿ" ಕಾಲಿಘಟ ಕೈದಿ—ಇತ್ಯಾದಿ.
ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್ ಉಡುಪಿ.

ಎಸ್ಟ್ರೆಲಾ
ಬ್ಯಾಟರಿಗಳು

ESTRELA
REGD TRADE MARK

ಕತ್ತಲೆಯಲ್ಲಿ ನಿಮ್ಮ ಮಾರ್ಗದರ್ಶಿ.

ಎಸ್ಟ್ರೆಲಾ ಬ್ಯಾಟರೀಸ್ ಲಿಮಿಟೆಡ್, ಬೊಂಬಾಯಿ ೧೯.

ಶಾಖೆಗಳು:
ಕಲ್ಕತ್ತಾ, ಡೆಲ್ಲಿ, ಮದ್ರಾಸು, ಕಾನ್‌ಪೂರ್, ನಾಗಪೂರ್.

ಮಂಗಳೂರು

ಜಿಲ್ಲಾ ಕಲೆಕ್ಟರರ ಪತ್ರಿಕಾ ಪರಿಷತ್ತು— ಕಳೆದ ತಾ 27ರಲ್ಲಿ ಜರಗಿತು. ತಾ 28-2-52ರಿಂದ 13 3 52ರ ತನಕ ಬೆಂಕಿಗೆ ಆಹುತಿಯಾದ ಮನೆಯವರಿಗೆ ರೂಪಾಯಿ 65 ಸಹಾಯ ಕೊಡಲಾಗಿದೆ ಮತ್ತು 29-2 52ರಿಂದ 10-3-52ರ ವರೆಗೆ ಒಟ್ಟು 96 ಕೋವಿ ಲೈಸೆನ್ಸು ಕೊಡಲಾಗಿದೆ ಎಂದು ತಿಳಿಸಲಾಯಿತು.

ಭಾಷಣ— ಮಂಗಳೂರಿನ ಲೇಡಿ ಗೋಷನ್ ಆಸ್ಪತ್ರೆಯ ಗೌರವ ಡಾಕ್ಟರಾಗಿರುವ ಡಾ। ಮಿಸ್ ಲಿಡಿಯಾ ಕೊಲಸೋ ಅವರು ಕಳೆದ ತಾ. 29ರಲ್ಲಿ ಮಂಗಳೂರಿನ ಮಹಿಳಾ ಸಭೆಯಲ್ಲಿ 'ಗರ್ಭಿಣಿಯರು ತೆಗೆದುಕೊಳ್ಳಬೇಕಾದ ಜಾಗ್ರತೆ'ಯ ವಿಚಾರದಲ್ಲಿ ಭಾಷಣವಿತ್ತರು. ಶ್ರೀಮತಿ ರಾಜಲಕ್ಷ್ಮಿ ಅಚಾರ್, ಅವರು ಸಭಾಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಆಹಾರೋತ್ಪಾದನಾ ಸಮಿತಿ ಸಭೆಯು— ಕಳೆದ ತಾ 27ರಂದು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯಲ್ಲಿ ಕೃಷಿಕೂಟ್ಟು ಪಂಪು ಸೆಟ್ಟುಗಳನ್ನು ಪಡೆಯುವವರು ಕಡಿಮೆ ದರದ ಬಾಡಿಗೆಗೆ ಹೆಚ್ಚು ಹೆಚ್ಚಾಗಿ ಒದಗಿಸಬೇಕೆಂಬ ನಿರ್ಣಯವಾಯಿತು. ಪೈಲೊಟ್ ಯೋಜನೆಯ ಪ್ರಕಾರ ನದಿಗಳಿಂದ ನೀರು ಹಾಯಿಸುವ ವ್ಯವಸ್ಥೆಗಳನ್ನು ಹೆಚ್ಚಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳಲಾಯಿತು. ಮೂರನೇ ಬೆಳೆಯಿಂದಲೂ ರೈತರು ಅಕ್ಕಿ ಒಪ್ಪಿಸಬೇಕೆಂಬ ಸರಕಾರದ ಹುಕುಮನ್ನು ಸಭೆಯು ಮಂಡಿಸಲಾಯಿತು. ತಾವು ಒಪ್ಪಿಸಬೇಕಾದುದು ಸ್ಟೋರಿಗೆ ಹಾಕಿದಮೇಲೆ ಉಳಿದ ಅಕ್ಕಿಯನ್ನು ಬಹಿರಂಗವಾಗಿ ಮಾರುವಂತಾಗಬೇಕೆಂಬ ಸೂಚನೆಗೆ ಕಲೆಕ್ಟರರು ತಕ್ಕ ದಾದ ಸರ್ಕಾರ ಹೊರಡಿಸುವೆನೆಂದರು.

ಗ್ರಾಮ ಕೈಗಾರಿಕೆಗಳ ಅಭಿವೃದ್ಧಿ

ಗ್ರಾಮಾಂತರದಲ್ಲಿರುವ ಕಸುಬಿನವರಿಗೆ ಆಧುನಿಕ ಉಪಕರಣಗಳನ್ನೊದಗಿಸುವ ಸರಕಾರದ ಯೋಜನೆಯಂತೆ ಜಿಲ್ಲೆಯ ಅಭಿವೃದ್ಧಿ ಫಿರ್ಕಾದಿಂದ 140 ಮಂದಿಯನ್ನು ಆರಿಸಲಾಗಿದೆ. ಬಡಗಿ, ಅಕ್ಕಸಾಲಿಗ, ಚಮ್ಮಾರ, ಕುಂಬಾರ ಮೊದಲಾದ ಕೆಲಸದವರಿಗೆ ರೂ 10,307 ಬೆಲೆಬಾಳುವ ಉಪಕರಣಗಳನ್ನು ಒದಗಿಸಲಾಗಿದೆ 1949ರಿಂದ ತರಬೇತಿಯೊಂದಿದ ಹಲವು ಮಂದಿ ಈಗ ತಮ್ಮ ಸ್ವತಂತ್ರ ಅಂಗಡಿಗಳಲ್ಲಿ ಕೆಲಸಮಾಡುತ್ತಿದ್ದಾರೆ.

ಮಂಗಳೂರು ನಗರಸಭೆಯು— ಕಳೆದ ತಾ 29ರಲ್ಲಿ ಉಪಾಧ್ಯಕ್ಷ ಶ್ರೀ ಬಿ. ಗಂಗಾಧರ ಭಾಸಂ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರಿನ ಊರಿನ ಸಂಬಂಧಾಯಿಗಾಗಿ ಪಂಪುಗಳನ್ನು ತೆಗೆದುಕೊಳ್ಳಲು 1952-53ನೆ ಬಜೆಟಿನಲ್ಲಿ ಹತ್ತು ಲಕ್ಷ ರೂಪಾಯಿ ಪ್ರತ್ಯೇಕಿಸಿಡಬೇಕೆಂಬ ಸೂಚನೆ ಮಾಡಿದೆ ಎಂದೂ ನಗರಸಭೆಯು ರೂ 4 ಲಕ್ಷ 10 ಸಾವಿರದಷ್ಟು ಹಣ ಅದಕ್ಕಾಗಿ ತೆಗೆದಿಡಬೇಕೆಂದೂ ತಿಳಿಸುವ ಸರಕಾರಿ ಆರ್ಡರನ್ನು ರಿಕಾರ್ಡ್ ಮಾಡಲಾಯಿತು. ಡಿ. ಡಿ. ಟಿ ಯ ಖರ್ಚಿನ ಮೂರು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡುವಾಗ ಹಲವು ಸದಸ್ಯರು ಡಿ. ಡಿ. ಟಿ ಯನ್ನು ಹಾಕುವವರು ಸರಿಯಾಗಿ ವಾರ್ಡುಗಳಿಗೆ ಹೋಗುವುದಿಲ್ಲ ಎಂಬುವುದನ್ನು ಸಭೆಯ ಗಮನಕ್ಕೆ ತಂದು ಈ ಕುರಿತು ಹೆಚ್ಚಿನ ನಿಗಾ ತೆಗೆದುಕೊಳ್ಳಬೇಕೆಂದು ಸೂಚಿಸಲಾಯಿತು ಕನ್ನಡ ಮುನ್ಸಿಪಲ್ ಶಾಲೆಯನ್ನು ಹೈಸ್ಕೂಲಿಯನ್ನಾಗಿ ಮಾಡಬೇಕೆಂಬ ಶ್ರೀ ಕೆ ಸೂರ್ಯನಾರಾಯಣ ಅಡಿಗರ ನಿರ್ಣಯವು ಪಾಸಾಯಿತು.

ಗ್ರಾಮಾಭಿವೃದ್ಧಿ ಕ್ಷೇತ್ರದಲ್ಲಿ ಮಾರ್ಚಿ ತಿಂಗಳಲ್ಲಾದ ಕೆಲಸಗಳ ಮುಖ್ಯಾಂಶ- ಕುಂಬಳೆ ಫಿರ್ಕಾದಲ್ಲಿ ಇಂದ್ರಂಪಾಡಿ ಗ್ರಾಮದ ಕೆಡ್ಡವು ಎಂಬಲ್ಲಿ ಒಂದು ಪ್ರಾಥಮಿಕ ಶಾಲೆಯು ತೆರೆಯಲ್ಪಟ್ಟಿತು. ಬಡ ರೈತರಿಗೆ ಉತ್ತಮ ರೀತಿಯ ಬೀಜ ಮತ್ತು ಗೊಬ್ಬರವನ್ನು ಸೇಕಡಾ 20ರಷ್ಟು ಕಡಿಮೆ ದರದಲ್ಲಿ ಒದಗಿಸಿಕೊಡಲಾಯಿತು ಕೊಂಗು ಅಭಿವೃದ್ಧಿಗಾಗಿ ನೆಬ್ಬಂಗಿ ಗ್ರಾಮಸೇವಾ ಸಂಘದವರು ಸಹಾಯಾರ್ಥ ನಾಟಕವೊಂದನ್ನು ಅಭಿನಯಿಸಿದರು. ಮೂರು ಕಾಲುಸಂಕ ಮತ್ತು ಒಂದು ರಸ್ತೆಯ ಕೆಲಸವು ಪೂರ್ಣಗೊಳಿಸಲಾಗಿದೆ

ಮಂಜೇಶ್ವರ ಫಿರ್ಕಾದಲ್ಲಿ ಎರಡು ಶಾಲೆಗಳ ಕಟ್ಟೋಣಗಳು ದುರುಸ್ತಿ ಮಾಡಲ್ಪಟ್ಟಿವೆ

ಮೂಲ್ಕಿ ಫಿರ್ಕಾದಲ್ಲಿಯ ಗೋಳಿಜೋರಿನಲ್ಲಿ ಹರಿಜನರಿಗಾಗಿ ಭಜನಾಮಂದಿರವೊಂದು ಕಟ್ಟಿಸಲಾಗಿದೆ. ಐಕಳದಲ್ಲೊಂದು ಪುಸ್ತಕಭಂಡಾರ ತೆರೆಯಲಾಗಿದೆ

"ಲೇಶ್ಮಾ" ಕೇಂದ್ರದಲ್ಲಿಯೂ ಕೊಟ್ಟ ಮಾತದಲ್ಲಿ ಮಾಜಿ ಮುತ್ಸದ್ದಿ 20 ಜಂಗಮರಿಗೆ ನೂಲುವತರಗತಿ ತೆರೆಯಲಾಗಿದೆ. 19 ಚರ್ಕಗಳು ಒದಗಿಸಲ್ಪಟ್ಟಿವೆ

ಜಿಲ್ಲಾ ಸೋಶಲಿಸ್ಟ್ ಪಾರ್ಟಿಯ ಸಮ್ಮೇಳನವೊಂದು ಇದೇ ತಿಂಗಳ ತಾ. 13ರಂದು ಬೆಳಿಗ್ಗೆ 9 30 ಗಂಟೆಗೆ ಮಂಗಳೂರಿನ ಫೆಲಿಕ್ಸ್ ಪೈ ಬಜಾರಿನಲ್ಲಿ ಜರಗಲಿರುವುದು ಅದೇ ದಿನ ಸಂಜೆ ಕೇಂದ್ರ ಮೈದಾನಿನಲ್ಲಿ ಸಾರ್ವಜನಿಕ ಸಭೆ ಜರಗಿ ಭಾಷಣಗಳಾಗುವುವು.

ಹಾಲಾಡಿ—ನಮ್ಮ ಜಿಲ್ಲೆಯ ಪ್ರಸಿದ್ಧ ಬಂಟ ಮನೆತನಗಳಲ್ಲೊಂದಾದ ಹಾಲಾಡಿ ಮನೆಯ ಯಜಮಾನರಾದ ಹಾಲಾಡಿ ದುಗ್ಗಪ್ಪ ಭಂಡಾರರು ತಾ 28-3 52ನೇ ಶುಕ್ರವಾರ, ತಮ್ಮ 85ನೇ ವರ್ಷ ಪ್ರಾಯದಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರು ಅತ್ಯಂತ ಜನಪ್ರಿಯರೂ, ಧರ್ಮನಿರತರೂ ಪರೋಪಕಾರಿಗಳೂ ಆಗಿದ್ದರಲ್ಲದೆ ನುರಿತ ಪಂಚಾಯತಿದಾರರಾಗಿದ್ದರು. ಅವರ ಮರಣದಿಂದ ಹಿರಿಯ ಹಿರಿಯ ಮುಂದಾಳುಗಳು ಕಣ್ಮರೆಯಾದಂತಾಯಿತು. ಅವರ ಪತ್ನಿ, ಪುತ್ರ, ಮಿತ್ರ, ಬಂಧುಗಳ ದುಃಖದಲ್ಲಿ ಸಹತಾಪವನ್ನು ವ್ಯಕ್ತಪಡಿಸುವುದಲ್ಲದೆ, ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಹಾರೈಸುವೆವು.

ನೀಲಾವರ:— ಮಹಿಷ ಮರ್ದಿನಿ ದೇವಸ್ಥಾನದ ರಥೋತ್ಸವವು ತಾ 9-4-52ರಿಂದ 15ರ ವರೆಗೆ ಜರಗಲಿದೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P No. 11/1952,

T. K. ಉಸ್ಮಾನ ಸಾಹೇಬ— ಅರ್ಜಿದಾರ

ಇವರೊಳಗೆ

ಸದ್ರಿ ಅರ್ಜಿ ವ್ಯವಹರಣೆಯ ಅರ್ಜಿದಾರನ ತಂದೆ ಮೃತ ಅಹಮ್ಮದ ಸಾಹೇಬರು M ಮೀರಾ ಸಾಹೇಬರ ಮೇಲೆ ಹಾಕಿದ ಕುಂದಾಪುರ ಡಿ. ಮು. ಕೋರ್ಟು O. S. No. 245/48ನೆ ಡಿಕ್ರಿ ಬಾಬ್ತು ರೂಪಾಯಿ 188 0-0 ಮತ್ತು ಸದ್ರಿಯವರ ಪೂಜಾರಿಯ ಮೇಲೆ ಹಾಕಿದ ಉಡುಪಿ ಡಿ. ಮು. ಕೋರ್ಟ O.S. No. 121/46 ನ್ನು, ಇದರ ಮೇಲೆ ನಡೆದ A. S. No 3/49ನೆ ಅಪೀಲು ಡಿಕ್ರಿಗಳ ಪ್ರಕಾರ ಬರ ರೂಪಾಯಿ 50-0-0 ಕೂಡಾ ಅರ್ಜಿದಾರನು ಒಬ್ಬನೇ ಮಗನ ಹಕ್ಕುದಾರನಾಗಿ ಸದ್ರಿ ಹಣ ವಸೂಲಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡುವಂತೆ ಕೊಟ್ಟ ಸದ್ರಿ ಅರ್ಜಿಯು ತಾರೀಕು 21-5-52ಕ್ಕೆ ಇಟ್ಟಿರುವದ್ರಿಂದ ಆಕ್ಷೇಪ ಹೇಳತಕ್ಕವರು ಆ ದಿನ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಞಾಹೀರು ಮಾಡಿಕೊಳ್ಳತಕ್ಕದ್ದು.

P. Padmanabha Rao,

Vakil for Petitioner

Udipi, Dated 8 4-52.

DO YOU KNOW?

THAT

THE VIJAYA BANK, LIMITED.

1 Was established in the year 1931 with Rs Eight thousand as its Paid up Capital.
2 Has now increased its Paid up Capital and reserves to Rs 10 lacks
3 Has granted an average dividend of 6% to the Shareholders for the past 20 years
4 Has a ... in South Kanara and one each in Mercara and Fort, Bombay.
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7 Does afford full protection and rich return to all your monies

ADOPT IT AS

"MY BANK"

THE VIJAYA BANK, LIMITED,

H. O MANGALORE

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ

ಇತರ ಶಾಖಾ ಕಚೇರಿಗಳು:

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ವಹಿಸಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

● ತೃಪ್ತಿಕರವಾದ ವಸತಿ — ಹಿತಕರವಾದ ಊಟ

● ರುಚಿಕರವಾದ ಉಪಾಹಾರ ಇವುಗಳಿಗೆ

ಉಡುಪಿಯ ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಊರ ಪರವೂರ ಸನ್ಮಾನ್ಯ ಸದ್ಗೃಹಸ್ಥರಿಂದ ಮುಕ್ತಕಂಠದಿಂದ ಹೊಗಳಿಸಿಕೊಂಡ ನವ ಹೋಟೆಲಿಗೆ

ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ.

ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯಾಗುವಂತೆ ನಗರದ ಕೇಂದ್ರ ಭಾಗದಲ್ಲಿದೆ.

WOODLANDS

Highclass Boarding & Lodging, UDIPI S. Kanara

ಚತುರ್ಥ ವಿಮಾಗಣನೆಯ ಫಲಿತಾಂಶ

(1947ರಿಂದ 1950ರ ವರೆಗೆ)

* * * * * *

ತಾರೀಕು 31-12 1950ಕ್ಕೆ ನಡೆಸಿದ ವಿಮಾಗಣನೆಯಲ್ಲಿ ಆಜೀವ ಮತ್ತು ಉಂಬಳಿ ವಿಮಾ ಪೋಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ ಅನುಕ್ರಮವಾಗಿ ರೂ. 12/- ಮತ್ತು ರೂ 9/- ರಂತೆ ಬೋನಸನ್ನು ಘೋಷಿಸಿದೆ.

The Canara Mutual Assurance Co. Ltd.

Head Office: UDIPI, S. INDIA.

ಸ್ಥಾಪನೆಯಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ.

ದ. ಕ. ಕೃಷಿಕರ ಸಹಕಾರಿ ಮಾರಾಟ ಸಂಘ

ಲಿಮಿಟೆಡ್.

ನೋಟೀಸು

ಈ ಸಂಘದ ಬರುವ ಮಹಾಸಭೆಯನ್ನು ತಾರೀಕು 19-4-1952ರಲ್ಲು ಶನಿವಾರ ಅಪರಾಹ್ನ 1 ಘಂಟೆಗೆ ಮಂಗಳೂರಲ್ಲಿ ದ. ಕ. ಸೆಂಟ್ರಲು ಕೋಓಪರೇಟಿವ್ ಬೇಂಕಿನ ವಠಾರದಲ್ಲಿ ಜರಗಿಸುವುದಾಗಿ ನಿರ್ಣಯಿಸಿದೆ. ಎಲ್ಲಾ ಮೆಂಬರರು ಹಾಜರಾಗಬೇಕಾಗಿ ವಿನಂತಿ. ಕಾರ್ಯಕ್ರಮವನ್ನು ಈ ಕೆಳಗಡೆ ಕಾಣಿಸಲಾಗಿದೆ

ವಿ. ಸೂ. ಸಂಘದ ಪ್ರತಿನಿಧಿಗಳು ಆಯಾಯ ಸಂಘದ ಮಹಾಸಭೆ, ಡ್ಯಾರೆಕ್ಟರರ ಅಥವಾ ಪಂಚಾಯತ ಸಭೆಯ ನಿರ್ಣಯದ ಮಂಜೂರು ನಕಲನ್ನು ಮುಂದಾಗಿ ಕಳುಹಿಸಿಕೊಡಬೇಕು. ಅಥವಾ ಬರುವಾಗ್ಯೆ ಅವರೊಡನೆ ತಂದು ಹಾಜರುಪಡಿಸಬೇಕಾಗಿ ಅಪೇಕ್ಷೆ.

(ಅಪ್ಪಣೆ ಪ್ರಕಾರ)

ಮಂಗಳೂರು, (Sd.) ಪಿ ಲಕ್ಷ್ಮೀನಾರಾಯಣ ರಾವ್,
25-3-1952. ಕಾರ್ಯದರ್ಶಿ.

ಕಾರ್ಯಕ್ರಮ

1. 1950-51ನೇ ವರ್ಷದ ಬಾಬ್ತು ಡಿ. ರಿಜಿಸ್ಟ್ರಾರರವರ ಆಡಿಟು ಸರ್ಟಿಫಿಕೇಟು ಮತ್ತು ಆಡಳ್ತೆ ಮಂಡಳಿಯವರ ವರದಿ

2. 1951-52ನೇ ವರ್ಷದ ಬಾಬ್ತು ದುರಸ್ತಿಪಡಿಸಿದ ಆಯವ್ಯಯದ ಪಟ್ಟಿ ಮತ್ತು 1952-53ನೇ ವರ್ಷದ ಬಾಬ್ತು ಅಂದಾಜು ಆಯವ್ಯಯದ ಪಟ್ಟಿ.

3. ಸಂಘಕ್ಕೆ ಬರತಕ್ಕ ರೂಪಾಯಿ 12,086-9-5ರಷ್ಟು ಕೆಟ್ಟ ಸಾಲಗಳನ್ನು ವಜಾ ಬರೆಯುವದರ ಕುರಿತು. (ಇದರ ಬಗ್ಗೆ ಹಣವನ್ನು ಈ ಮುಂಚೆಯೇ ಪ್ರತ್ಯೇಕ ಇರಿಸಲಾಗಿದೆ.)

4. 1950-51ರಲ್ಲು ರೂ. 8396-8-6ರಷ್ಟು ಬಜೆಟಿಗಿಂತ ಮಿಕ್ಕಿ ಆದ ಖರ್ಚನ್ನು ಮಂಜೂರು ಮಾಡುವುದು

5. 1950-51ರಲ್ಲು ಆಫೀಸು ಸಾಮಾನು ಬಗ್ಗೆ ರೂಪಾಯಿ 1027-14-9 ಮತ್ತು ಖಾಲಿ ಚೀಲಗಳ ಬಗ್ಗೆ ರೂ. 4230-14-9 ಪಾವತಿ ಮಾಡಿದ್ದನ್ನು ಮಂಜೂರು ಮಾಡುವುದು

6. ಉಡುಪಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಸಿಂಡಿಕೇಟಿನ ಬಾಬ್ತು ಪಾಲು ಹಣ ಬಾಕಿ ರೂಪಾಯಿ 3-12-2ನ್ನು ಲೆಕ್ಕದಿಂದ ವಜಾ ಬರೆಯುವದರ ಕುರಿತು.

7. ಕೆಳಗಡೆ ಕಾಣಿಸಿದಂತೆ ಉಪನಿಬಂಧನೆಗಳ ತಿದ್ದುಪಡಿ.

a) ಉಪನಿಬಂಧನೆ 2— ಈ ಕೆಳಗಿನದ್ದನ್ನು 7ನೇ ಕಲಂ ಆಗಿ ಸೇರಿಸುವುದು.

"ಸಂಘದ, ಸಂಘದ ಮೆಂಬರರ ಮತ್ತು ಇತರ ಸಹಕಾರಿ ಸಂಘಗಳ ವಸ್ತುಗಳನ್ನು ಸಾಗಿಸುವ ಬಗ್ಗೆ ಲಾರಿಗಳನ್ನು ಇಟ್ಟುಕೊಳ್ಳುವುದು."

b) ಉಪನಿಬಂಧನೆ 8—"ಪುನರುದ್ಧಾರದ ಫಂಡು ಬಗ್ಗೆ ಪಾಲು ಭಂಡವಾಳವನ್ನು ವಾಪಾಸು ಕೊಡಬಹುದು" ಎಂಬ ಅಂಶವನ್ನು ಲೋಪ ಪಡಿಸುವುದು.

c) ಉಪನಿಬಂಧನೆ 14— ಈ ಕೆಳಗಿನದ್ದನ್ನು ಆಖೈರಿಗೆ ಸೇರಿಸುವುದು.

41—Aನೇ ಉಪನಿಬಂಧನೆಯಲ್ಲಿ ಪ್ರತಿಪಾದಿಸಿದಂತೆ ಕೃಷಿ ಬಗ್ಗೆ ಅಗತ್ಯವುಳ್ಳ ಸಲಕರಣೆಗಳನ್ನು ಖರೀದಿಸುವ ಬಗ್ಗೆ ಸಹ ಸೆಂಟ್ರಲು ಬೇಂಕಿನಿಂದ ಡ್ಯಾರೆಕ್ಟರರು ಸಾಲ ಪಡೆಯಬಹುದು."

d) ಉಪನಿಬಂಧನೆ 14—A ಯನ್ನು ಲೋಪಪಡಿಸುವುದು.

e) ಉಪನಿಬಂಧನೆ 19— ಈ ಕೆಳಗಿನದ್ದನ್ನು ಸೇರಿಸುವುದು.

"ಶಿಬಂದಿಯವರ ನೇಮಕದ ಕುರಿತು ಈ ಉಪನಿಬಂಧನೆಗಳಿಗೆ ಲಗ್ತೀಕರಿಸಿದ ಶೆಡ್ಯೂಲಿನಲ್ಲಿ ಕಾಣಿಸಿದ ಸ್ಪೆಶಲ್ ಉಪನಿಬಂಧನೆಗಳ ಪ್ರಕಾರ ನಡೆದುಕೊಳ್ಳುವುದು" (ಇದರ ವಿವರವನ್ನು ಸಂಘದ ಹೆಡ್ಡಾಫೀಸಿನ ಮತ್ತು ಶಾಖೆಗಳ ನೋಟೀಸು ಬೋರ್ಡಿನಲ್ಲಿ ಕಾಣಬಹುದು)

f) ಉಪನಿಬಂಧನೆ 24—ಈಗ ಇರುವ ಉಪನಿಬಂಧನೆಯನ್ನು ವಜಾ ಮಾಡಿ ಈ ಕೆಳಗೆ ಕಾಣಿಸಿದಂತೆ ಸೇರಿಸುವುದು.

"ರಿಜಿಸ್ಟ್ರಾರರು ನಿರ್ಣಯಿಸುವ ಪ್ರಕಾರ ಶಿಬಂದಿಯವರಿಂದ ಜ್ಯಾಮೀನು ಪಡಕೊಳ್ಳಬೇಕು."

g) ಉಪನಿಬಂಧನೆ 25— ಈಗ ಇರುವ "ಸಬಸಿಡಿಯರಿ ಉಪನಿಬಂಧನೆಗಳು" ಎಂಬುದರ ಬದಲಾಗಿ "ಕ್ರಮಗಳು" ಎಂದು ಸೇರಿಸುವುದು.

h) ಉಪನಿಬಂಧನೆ 38—ಈ ಕೆಳಗಿನದ್ದನ್ನು ಸೇರಿಸುವುದು.

"ಹೆಡ್ಡಾಫೀಸಿನಲ್ಲಿ ಕಾರ್ಯದರ್ಶಿಗಳು ಎಡ್ವಾನ್ಸು ಕೊಡುವರೆ ಅಧಿಕಾರ ಹೊಂದಲ್ಪಟ್ಟವರು" ಮತ್ತು "ಪ್ರತಿಯೊಬ್ಬ ಮೆಂಬರನು ಅತನು ಇಡಟ್ಟ ಸಂಪೂರ್ಣ ಮಾಲನ್ನು ಸಂಘಕ್ಕೇನೇ ವಿಕ್ರಿತಕ್ಕೆ ಕಳಿಸಬೇಕು. ತಪ್ಪಿದಲ್ಲಿ ಡ್ಯಾರೆಕ್ಟರರು ನಿರ್ಣಯಿಸುವ ದರಗಳಲ್ಲಿ ರಿಲೀಸು ಕಮಿಶನನ್ನು ತೆರಬೇಕು "ಮಹಾಸಭೆ" ಎಂಬ ಶಬ್ದವನ್ನು ಲೋಪಪಡಿಸಿ "ಡ್ಯಾರೆಕ್ಟರರು" ಎಂದು ಸೇರಿಸುವುದು.

i) ಉಪನಿಬಂಧನೆ 42 (4)—ಶೇಕಡಾ 5 ಎಂಬುದನ್ನು ಲೋಪಪಡಿಸಿ ಶೇಕಡಾ 6¼ ಎಂದು ಸೇರಿಸುವುದು.

ಪೋಲೀಸರಿಗೆ ಬಹುಮಾನ

ದೇಶದ ಶಾಂತಿ ಮತ್ತು ಶಿಸ್ತು ರಕ್ಷಣೆಗಾಗಿ ಪೋಲೀಸರು ಕರ್ತವ್ಯನಿಷ್ಠರಾಗಿ ಧೈರ್ಯ, ಸಾಹಸ, ಪ್ರಾಮಾಣಿಕತನದಿಂದ ವರ್ತಿಸಬೇಕು, ಹೀಗೆ ನಡೆಯುವ ಯೋಗ್ಯ ಪೋಲೀಸರಿಗೆ ಸರಕಾರವು ಬಹುಮಾನಗಳನ್ನು ಕೊಟ್ಟು ಪ್ರೋತ್ಸಾಹಿಸುವುದುಂಟು. ನಮ್ಮ ಪ್ರಾಂತ್ಯದಲ್ಲಿ ಈ ಬಾರಿ ಅಂತಹ ಬಹುಮಾನಗಳು ಭಾವನಗರದ ಮಹಾರಾಜರ ಹಸ್ತದಿಂದ ಕೊಡಲ್ಪಟ್ಟವು. ಹಾಗೆ ಬಹುಮಾನ ಪಡೆದ (ಪೊಲಿಸ್ ಪದಕ) ನಮ್ಮ ಜಿಲ್ಲೆಯವರಾದ ಶ್ರೀ ಮಜೂರು ಕೃಷ್ಣ ಶೆಟ್ಟರ ಪರಿಚಯವನ್ನು ಇಲ್ಲಿ ಕೊಡಲಾಗಿದೆ.

ಮಜೂರು ಕೃಷ್ಣಯ್ಯ ಶೆಟ್ಟರು

ಡಿಪ್ಯುಟಿ ಇನ್ಸ್‌ಪೆಕ್ಟರ್-ಜನರಲ್ ಆಫ್ ಪೋಲೀಸ್, ಮದ್ರಾಸು ಸಂಸ್ಥಾನ

ಈ ಅಧಿಕಾರಿಗಳು ಮದ್ರಾಸ ವಿಶ್ವವಿದ್ಯಾಲಯದ ಮಾಸ್ಟರ್ ಆಫ್ ಆರ್ಟ್ಸ್ ಡಿಗ್ರಿಯನ್ನು ಪಡೆದ ನಂತರ 1947ನೇ ನವಂಬ್ರದಲ್ಲಿ ಡಿಪ್ಯುಟಿ ಸುಪರಿಂಟೆಂಡೆಂಟ್ ಆಫ್ ಪೋಲೀಸ್ ಆಗಿ ಪ್ರಥಮತಃ ನೇಮಿಸಲ್ಪಟ್ಟರು ಕಾರ್ಯಕಲಿಕೆ ಮುಗಿದ ನಂತರ ಇವರನ್ನು ಸೇಲಂ ಸಬ್ ಡಿವಿಜನಿಗೆ ನೇಮಿಸಲಾಯಿತು. ಅಲ್ಲಿ ಇವರು ಪ್ರತ್ಯೇಕವಾಗಿ ಭಯಂಕರ ತಕ್ಷೀರುಗಳನ್ನು ನಿಲ್ಲಿಸುವುದರಲ್ಲಿ ಧೈರ್ಯೋತ್ಸಾಹಗಳಿಂದ ಕೆಲಸ ಮಾಡಿದರು. ಈ ಸಬ್ ಡಿವಿಜನಿನಲ್ಲಿ ಸುಮಾರು ಮೂರು ವರ್ಷಕ್ಕಿಂತಲೂ ಹೆಚ್ಚು ಕಾಲ ಮಾಡಿದ ಕೆಲಸವನ್ನು ಇವರ ಮೇಲಾಧಿಕಾರಿಗಳೆಲ್ಲರೂ ಮೆಚ್ಚಿರುವರು. ನಂತರ ಇವರು ಹೊಸ್ಪೇಟೆ, ಶಿವಕಾಸಿ, ಇರೋಡು, ತಿರುಚಿರಪಳ್ಳಿ ಸಬ್ ಡಿವಿಜನುಗಳ ಚಾರ್ಜಿನಲ್ಲಿದ್ದರು. ಈ ಎಲ್ಲಾ ಕಾರ್ಯಗಳಲ್ಲೂ ಇವರು ಹುಂಬ ಸಾಮರ್ಥ್ಯ ಧೈರ್ಯ-ಸಾಹಸಗಳನ್ನು ತೋರಿಸಿದ್ದಾರೆ. ಯುದ್ಧಕಾಲದಲ್ಲಿ ಇವರನ್ನು ಪ್ರತ್ಯೇಕವಾಗಿ ಮದ್ರಾಸಿನಲ್ಲಿ ಇನ್ಸ್‌ಪೆಕ್ಟರ್-ಜನರಲ್ ಇವರ ಆಫೀಸಿನಲ್ಲಿ ಡಿಪ್ಯುಟಿ ಸುಪರಿಂಟೆಂಡೆಂಟ್ ಆಫ್ ಪೋಲೀಸ್ ಆಗಿ ನೇಮಿಸಲಾಯಿತು ಸ್ಥಳಾಂತರದ ಸಮಯದಲ್ಲಿ ಪ್ರಾಮುಖ್ಯ ರಿಕಾರ್ಡುಗಳನ್ನೂ ನೌಕರ ವರ್ಗವನ್ನೂ ವೆಲ್ಲೂರಿಗೆ ಸಾಗಿಸುವ ಜೊಬಾಬ್ದಾರಿಕೆಯನ್ನು ಇವರು ವಹಿಸಿದ್ದರು. ಆಗ ಸರಕಾರವು ಇನ್ಸ್‌ಪೆಕ್ಟರ್-ಜನರಲ್ ಆಫೀಸು ಅಲ್ಲಿಗೆ ಸ್ಥಳಾಂತರಿಸಬೇಕೆಂದು ಅಪ್ಪಣೆ ಕೊಟ್ಟಿತು. ನಂತರ ಇವರು ಕೆಲವೇ ನೌಕರರೊಡನೆ ಮದ್ರಾಸಿಗೆ ಹಿಂದಿರುಗಿ, ದಕ್ಷತೆಯಿಂದ ಕೆಲಸ ಮಾಡಿದ್ದರು 1943ರಲ್ಲಿ ಇವರನ್ನು ಜಿಲ್ಲಾ ಸುಪರಿಂಟೆಂಡೆಂಟನ್ನಾಗಿ ನೇಮಿಸಿ ಪಶ್ಚಿಮ ಗೋದಾವರಿ ಜಿಲ್ಲೆಗೆ ಕಳುಹಿಸಲಾಯಿತು 1945ರಲ್ಲಿ ಎಡಿಶನಲ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರ್-ಜನರಲರ ಹುದ್ದೆಯನ್ನು ರಚಿಸಿದಾಗ ಈ ಪ್ರಾಮುಖ್ಯ ಹುದ್ದೆಗೆ ಇವರು ನೇಮಿಸಲ್ಪಟ್ಟರು. ಅನಂತರ ಇವರು ಅನಂತಪುರಕ್ಕೂ ಅಲ್ಲಿಂದ ಸೇಲಮಿಗೂ ವರ್ಗಾಯಿಸಲ್ಪಟ್ಟರು. 1947ರಲ್ಲಿ ಶ್ರೀ ಕೃಷ್ಣಯ್ಯ ಶೆಟ್ಟಿಯವರು ಡಿಪ್ಯುಟಿ ಕಮಿಶನರ್ ಆಫ್ ಪೋಲೀಸ್, ಕ್ರೈಮ್ ಬ್ರಾಂಚ್, ಮದ್ರಾಸು ನಗರ. ಈ ಹುದ್ದೆಗೆ ನೇಮಿಸಲ್ಪಟ್ಟರು. ಈ ಪದವಿಯಲ್ಲಿ ಇವರು ತನ್ನ ಕೆಲಸವನ್ನು ಪ್ರಶಂಸನೀಯವಾಗಿ ನಿರ್ವಹಿಸಿದ್ದಾರೆ. ಇದಲ್ಲದೆ ಅತಿ ತೊಡಕಿನ ಸಾವುನೋವು ಅನೇಕ ಮುಖ್ಯ ವಿಚಾರಣೆಗಳನ್ನು ಜಯಪ್ರದವಾಗಿ ನಡೆಸಿದ್ದಾರೆ 1949ನೇ ಆಗೋಸ್ತಿನಿಂದ 1950ನೇ ಮೇ ವರೆಗೆ ಇವರು ಮದ್ರಾಸಿನಲ್ಲಿ 'X' ಬ್ರಾಂಚ್, ಸಿ.ಐ.ಡಿ; ಸುಪರಿಂಟೆಂಡೆಂಟಾಗಿದ್ದು ವಿಶೇಷ ಯೋಗ್ಯತೆ-ದಕ್ಷತೆಗಳಿಂದ ತನ್ನ ಕರ್ತವ್ಯ ನೆರವೇರಿಸಿರುವರು. 1950ನೇ ಜೂನ್‌ನಲ್ಲಿ ಇವರಿಗೆ ಡಿಪ್ಯುಟಿ ಇನ್ಸ್‌ಪೆಕ್ಟರ್-ಜನರಲರ ಪದವಿಗೆ ಬಡ್ತಿ ದೊರೆಯಿತು. ಕಳೆದ ತಿಂಗಳ ಅಂತ ವರೆಗೆ ಇವರು ಸ... -ರೇಂಜಿನ [illegible] ಸ್ಥಾನ ಖಾಲಿ ಇಲ್ಲದುದರಿಂದ ತಿರುಗಿ ತನ್ನ ಮುಂಚಿನ ಪದವಿಗೆ ಹಿಂದಿರುಗಿದಾದ ಇವರು 1951ನೇ ಜನವರಿಯಿಂದ ಆಗೋಸ್ತುವರೆಗೆ ಸುಪರಿಂಟೆಂಡೆಂಟ್, ಸ್ಪೆಶಲ್ ಬ್ರಾಂಚ್, ಸಿ.ಐ.ಡಿ; ಈ ಸ್ಥಾನದಲ್ಲಿದ್ದು ಮುಂಚಿನಂತೆ ದಕ್ಷತೆಯಿಂದ ಕೆಲಸ ಮಾಡಿರುವರು. ಈಗ ಇವರು ಡಿಪ್ಯುಟಿ ಇನ್ಸ್‌ಪೆಕ್ಟರ್-ಜನರಲ್, ಸ್ಪೆಶಲ್ ಆರ್ಮ್ಡ್ ಪೋಲೀಸ್ ಯೂನಿಟ್, ಮದ್ರಾಸ್, ಎಂಬ ಅತಿ ಜವಾಬ್ದಾರಿಕೆಯ ಸ್ಥಾನವನ್ನು ವಹಿಸಿಕೊಂಡಿದ್ದಾರೆ.

ತಾರಾನಾಥ ಆಯುರ್ವೇದ ವಿದ್ಯಾಪೀಠದ ವರ್ಧಂತಿ ಮತ್ತು ಹಳೆ ವಿದ್ಯಾರ್ಥಿಗಳ ಸಮ್ಮೇಳನ

ಬಳ್ಳಾರಿ ತಾರಾನಾಥ ಆಯುರ್ವೇದ ವಿದ್ಯಾಪೀಠದ 5ನೆ ವರ್ಧಂತಿಯು ಕಳೆದ ತಾ 22ರಲ್ಲಿ ಜರಗಿತು. ಪ್ರಾತಃಕಾಲ ವಕೀಲ್ ಶ್ರೀ ವೇದಾ ಗೋಪಾಲಾಚಾರ್ಯರಿಂದ ಧ್ವಜಾರೋಹಣವಾಗಿ ಹಳೆ ವಿದ್ಯಾರ್ಥಿಗಳ ಸಮ್ಮೇಳನವು ಶ್ರೀ ಟಿ. ಸುಬ್ರಹ್ಮಣ್ಯಂ (ಲೋಕ ಸಭೆಯ ಸದಸ್ಯರು) ಇವರಿಂದ ಉದ್ಘಾಟಿಸಲ್ಪಟ್ಟಿತು. ಸಭಾಧ್ಯಕ್ಷತೆಯನ್ನು ಡಾ। ರಾಮಕೃಷ್ಣ ರಾಯಚೂರು ಅವರು ವಹಿಸಿದ್ದರು ಶ್ರೀ ಬಿ. ಕೆ. ಮಾರ್ಲರ ಸ್ವಾಗತ ಭಾಷಣವಾಗಿ ಮುಂದಿನ ಕೆಲಸ ನಿರ್ವಹಣೆಗಾಗಿ ಡಾ। ರಾಮಕೃಷ್ಣ (ಅಧ್ಯಕ್ಷ) ಡಾ। ಲಕ್ಷ್ಮಣ ಸೆಟ್ಟಿ (ಉಪಾಧ್ಯಕ್ಷ) ಶ್ರೀಗಳಾದ ವೆಂಕಟರಮಣ (ಕಾರ್ಯದರ್ಶಿ) ರಾಮಣ್ಣ ಹೆಗ್ಡೆ, ಜತೆಕಾರ್ಯದರ್ಶಿ, ಮತ್ತು ಬಿ. ಕೆ ಮಾರ್ಲ, ಕೆ. ಶಂಕರ ಸೆಟ್ಟಿ, (ಸದಸ್ಯರು) ಇವರು ಕಾರ್ಯಕಾರಿ ಸಮಿತಿಗೆ ಆರಿಸಲ್ಪಟ್ಟರು.

ಬಳಿಕ ಹೊಸ 'Drug Act' ನಿಂದ ತಾರಾನಾಥ ಸ್ನಾತಕರಿಗಾಗುವ ತೊಂದರೆಯನ್ನು ನಿವಾರಿಸುವುದಕ್ಕಾಗಿ ಸರಕಾರವನ್ನು ವಿನಂತಿಸಿಕೊಳ್ಳುವ, ಹಾಗೂ ಯೋಗ್ಯ ಸೌಕರ್ಯಗಳನ್ನು ಒದಗಿಸಬೇಕೆನ್ನುವ, ಪ್ರೇಮ ವಿದ್ಯಾಪೀಠ, ಕೆಂಗಭದ್ರ ಇಲ್ಲಿ ಅರ್ಧ ಅವಧಿಯ ಶಿಕ್ಷಣ ಪಡೆದು ಉಳಿದುದನ್ನು ಬಳ್ಳಾರಿಯ ತಾರಾನಾಥ ಆಯುರ್ವೇದ ವಿದ್ಯಾಪೀಠದಲ್ಲಿ ಅಭ್ಯಾಸಹೊಂದಿ ಸದ್ಯ ರಿಜಿಸ್ಟರ್ ಆಗದಿರುವ ಕೆಲವು ವಿದ್ಯಾರ್ಥಿಗಳ ರಜಿಸ್ಟ್ರೇಶನಿಗಾಗಿ ಸರಕಾರಕ್ಕೆ ಮನವಿ ಮಾಡಿಕೊಳ್ಳಬೇಕೆನ್ನುವ ಹಾಗೂ Central Board of Indian System of Medicines ನಲ್ಲಿ ರಜಿಸ್ಟರ್ಡ್ ಮಾಡಿಸಿಕೊಳ್ಳಬೇಕೆನ್ನುವ ತಾರಾನಾಥ ಆಯುರ್ವೇದ ವಿದ್ಯಾಪೀಠದ ಖಾಯಂ ಸದಸ್ಯರಾಗಿ ಸೇರಿಕೊಳ್ಳುವಂತೆ ಪ್ರತಿಯೊಬ್ಬ ಹಳೆ ವಿದ್ಯಾರ್ಥಿಯನ್ನು ಕೇಳಿಕೊಳ್ಳುವ ನಿರ್ಣಯಗಳಾದುವು.

ಸಂಜೆ ಕಾರ್ಯಕ್ರಮವು ಶ್ರೀ ಬಿ. ಕೆ; ಮಾರ್ಲರ ಸ್ವಾಗತ ಭಾಷಣದೊಂದಿಗೆ ಪ್ರಾರಂಭವಾಯಿತು. ಪ್ರಿನ್ಸಿಪಾಲ್ ಡಾ। ಕೆ. ಅಚ್ಯುತ್ಯನವರು ವಿದ್ಯಾಪೀಠದ ಗತ ವರುಷದ ವರದಿಯನ್ನು ಓದಿದರು. ಅದರಲ್ಲಿ ವಿದ್ಯಾಪೀಠದ ಇಂದಿನ ಸ್ಥಾನಮಾನ ಪ್ರಗತಿಗಳು ಸೂಚಿಸಲ್ಪಟ್ಟಿದ್ದವು. ನಿವೃತ್ತ ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ವಿಠೂಬಾನ್ ಅವರು ಅಧ್ಯಕ್ಷ ಸ್ಥಾನ ವಹಿಸಿದ್ದರು. ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀ ಕೆ. ನಾರಾಯಣ ಸೆಟ್ಟರು ಸಂಘದ ವರದಿಯನ್ನೋದಿದರು. ಡಿ। ಮುನ್ಸಿಫ್ ಶ್ರೀ ರವಿರಾಜ ಬಲ್ಲಾಳರು ವಿದ್ಯಾರ್ಥಿಗಳಿಗೆ ಹಿತವಚನವನ್ನಿತ್ತರು. ಮುನ್ಸಿಪಲ್ ಚೇರ್‌ಮನ್ ಶ್ರೀ ಮುಂಡಪ್ಪರು ಗಂಗಪ್ಪನವರು ಪಾರಿತೋಷಕ ವಿತರಣೆ ಮಾಡಿದರು. ಅಧ್ಯಕ್ಷರ ಭಾಷಣದೊಂದಿಗೆ ಸಭಾಂತ್ಯವಾಯಿತು.

5 ವರುಷ ಗ್ಯಾರಂಟಿಯುಳ್ಳ
ರೋಲ್ಡ್ ಗೋಲ್ಡ್
ಚಿನ್ನಾಭರಣಗಳು
ಕುತ್ತಿಗೆಗೆ ಹಾಕುವ ಚೈನ್ ರೂ. 12 ಉದ್ದ ಚೈನ್ ರೂ. 7 ಚಿಕ್ಕ ಚೈನ್ ರೂ 5 ಬಳೆ ಜೊತೆಗೆ ರೂ. 5.
Gemini Gold Covering Works
Main Guard Sq. MADIIDAI.

ಸ್ವೀಕಾರ ವಿಮರ್ಶೆ

ಮರ್ಯಾದೆ ಮಹಾಲ್—

ಬರೆದವರು: "ಅಶ್ವತ್ಥ" ಪ್ರಕಾಶಕರು: ಮನೋಹರ ಗ್ರಂಥ ಪ್ರಕಾಶನ ಸಮಿತಿ ಧಾರವಾಡ. ಪುಟ: ೩೫೦ ಬೆಲೆ ರೂ, ೩-೮-೦

ಮನೋಹರ ಗ್ರಂಥ ಮಾಲೆಯವರು ನಿರ್ಮಿಸಿದ್ದ ಸ್ಪರ್ಧೆಗಳಲ್ಲಿ ಸಾಹಿತ್ಯದ ಪ್ರತಿಯೊಂದು ವಿಭಾಗದಲ್ಲಿಯೂ ಬಹುಮಾನ ಪಡೆದು ಹೆಸರಾದ ಶ್ರೀ ಅಶ್ವತ್ಥ ನಾರಾಯಣ ರಾಯರು ತಮ್ಮ ಈ ಕಾದಂಬರಿಯಲ್ಲಿ ಆಧುನಿಕ, ಅದೂ ಸ್ವಾತಂತ್ರ್ಯ ಪ್ರಾಪ್ತಿಯ ಈಚಿನ ನಮ್ಮ ಸಾಮಾಜಿಕ ರಂಗದಲ್ಲಿ ಪ್ರಾದುರ್ಭಾವ ಹೊಂದಿದ ಕೆಲ್ಲ ಜನರ "ಢೋಂಗೀ" ಮನೋವೃತ್ತಿಯನ್ನು ವಿಡಂಬನಾತ್ಮಕವಾಗಿ ಚಿತ್ರಿಸಿದ್ದಾರೆನ್ನಬಹುದು. ಮರುಳೂರಿನ ಸಾಹುಕಾರ್ ವಿಶ್ವೇಶ್ವರಯ್ಯನವರು ಅತುಲೈಶ್ವರ್ಯ ಸಂಪನ್ನರು. ಮೇಲಾಗಿ ಮಂತ್ರಿ ಮಹೋದಯರನ್ನು ಬುಟ್ಟಿಯೊಳಗೆ ಹಾಕಿಕೊಂಡೂ ತಮ್ಮ ಸ್ವಂತ ಚಾಣಾಕ್ಷ ಬುದ್ಧಿಯಿಂದಲೂ ನೂರಾರು ಎಕರೆ ಭೂಮಿ ನುಂಗಿದವರು, ಮರ್ಯಾದೆ ಮಹಲು ವಂಶದ ಕೀರ್ತಿ ಶಿಖರಕ್ಕೆ ಕಳಸದೋಪಾದಿ ಬಾಳಿದವರು, ಬೇರೆಯವರಿಂದ ಬರೆಸಿದ ಸುದೀರ್ಘ ಭಾಷಣಗಳನ್ನು ಪ್ರಚಂಡ ಸಭೆ ಸಮಾರಂಭಗಳಲ್ಲಿ ಓದುತ್ತಲೂ ವೃತ್ತಪತ್ರ ಸುದ್ದಿಗಾರರಿಗೆ ದುಡ್ಡು ತಿನ್ನಿಸಿ ಅವನಿಂದ ಚೆಲುವಾದ ಪ್ರಶಂಸಾತ್ಮಕ ವರದಿ ಬರೆಸಿಯೂ ಊರಿನ ಮುಖಂಡರಾಗುವರು. ಪ್ರತಿಯೊಂದು ಸಂಘದ ಪೋಷಕರೂ ಅವರೇ, ಸಮಿತಿಯ ಅಧ್ಯಕ್ಷರೂ ಅವರೇ ಪ್ರತಿಯೊಂದೂ ಸಮಾರಂಭಗಳಲ್ಲಿ ಅಗ್ರಪೂಜೆಯೂ ಅವರಿಗೇನೇ ಹೀಗೆ ದುಡ್ಡಿನ ಬಲದಿಂದ ದೊಡ್ಡಪ್ಪನೆನಿಸಿದ ಈ ಸಾಹುಕಾರರು ಊರಿಗೆ ಮಾಡಿದ ಸೇವಾ ಕಾರ್ಯಗಳ ಸನ್ಮಾನಾರ್ಥವಾಗಿ ಮುನಿಸಿ ಪಾಲಿಟಿಯವರು ಸ್ವತಃ ವಿಶ್ವೇಶ್ವರಯ್ಯನವರೇ ಕೊಟ್ಟ ಹಣದಿಂದ ಅವರದೊಂದು ಪುತ್ಥಳಿ ಮಾಡಿಸುವರು. ಅದರ ಅನಾವರಣ ಕಾರ್ಯವನ್ನು ಪೂಜ್ಯ ಮಂತ್ರಿಗಳೇ ನೆರವೇರಿಸುವರು. ಹೀಗಿರುವಾಗ ಸಾಹುಕಾರರ ಆಶ್ರಯಾಣ್ಯ ಮಗ ಗುರುಪ್ರಸಾದ ತಂದೆಯ ಢೋಂಗಿನ ಜೀವನಕ್ಕೆ ಬೇಸರಿಸಿಯೂ ಅವರೆದುರು ತುಟಿ ಬಿಚ್ಚಲಾರದ ಅಸಹಾಯತೆ ಮತ್ತು [illegible] ದಿಂದಲೂ ಹುಚ್ಚನಂತಾಗಿ ವೈಭವದಿಂದ ತಲೆ [illegible] ಮರ್ಯಾದೆ ಮಹಲನ್ನು ತನ್ನ ಕೈಯಿಂದ ಬೆಂಕಿಕೊಟ್ಟು ಸುಟ್ಟು ಬಿಡುವನು. ತಾನೂ ಸುಟ್ಟು ಬೂದಿಯಾಗುವನು ಇದನ್ನು ಕಂಡ ವಿಶ್ವೇಶ್ವರಯ್ಯನವರ ಎದೆ ಧಸಲ್ಲೆನ್ನುವುದು. "ತಮ್ಮದೇ ಮರ್ಯಾದೆ ಮಹಲಿನ ಉರಿಯ ಹೊನ್ನೆಲೆಯಲ್ಲಿ" ಅವರ ಪ್ರಾಡೋಕ್ಯಮಣವಾಗುವುದು. ಇದಿಷ್ಟು ಕತೆ. ಇದರ ನಡುವೆ ಚೆಲುವ ಗುರುಪ್ರಸಾದನ ತಂಗಿ ಕುಸುಮೆಯ ಪ್ರೇಮ ದುರಂತ ಹರಿಕತೆಯ ನಡುವಿನ ಉಪಕತೆಯಂತೆ ತೋರಿ, ಓದುಗರನ್ನು ಇನ್ನಷ್ಟು ಆಕರ್ಷಿಸುವುದು.

ಓದುವಾಗ ಕಾದಂಬರಿ ಮನಸ್ಸಿಗೆ ಹಿಡಿಸಿದರೂ ಓದಿ ಮುಗಿಸಿದ ಮೇಲೆ ನಾವೇನು ಪಡೆದೆವು ಎಂಬ ಪ್ರಶ್ನೆ ನಿರುತ್ತರವಾಗಿ ನಿಂತುಬಿಡುವುದು. ವಿಶ್ವೇಶ್ವರಯ್ಯನವರ ಢೋಂಗಿ ವ್ಯಕ್ತಿತ್ವಕ್ಕೆ ಹೇಸುವ ಗುರು ಪ್ರಸಾದನು ತಾನೂ ಬೆಂಕಿಯಲ್ಲಿ ಸುಟ್ಟುಕೊಂಡು ಸಾಧಿಸಿದ ಪುರುಷಾರ್ಥವೇನೋ ತಿಳಿಯದಾಗಿದೆ. ಈ ಗುಂಡು ತನ್ನ ಬಾಳಿನಲ್ಲಿ ಒಂದೇ ಕಡೆಯೂ ಯಶಸ್ವಿಯಾದವನಲ್ಲ. ಮನಸ್ಸಿನಲ್ಲಿ ಮುಂದಿಗೆ ತಿಂದು ನಾಶ್ಯವಾಗಿ ಸೋಲುವ ಮನಃಪ್ರವೃತ್ತಿ ಗುರುವಿನದಾಗಿದ್ದರೆ ಅವನ ಚರಿತ್ರ ಆದರ್ಶದ ನೇರಿಗೂ ದೂರ-ಮಾತ್ರವಲ್ಲ ಆಪಾಯಕಾರಿಯೋ ಸರಿ ಎನ್ನದೆ ನಿರ್ವಾಹವಿಲ್ಲ. ಯುದ್ಧದಲ್ಲಿ, ಎಂದರೆ ಕೆಟ್ಟದರ ಎದುರು ಒಳ್ಳೆಯದು ಹೂಡಿದ ಪ್ರಕಟ ಹೋರಾಟ [illegible] "ಮುಖಪುಟದ ಮಾದರಿ"ಯನ್ನು ನೋಡಬಹುದು) ಸತ್ತು, ಸ್ವರ್ಗ ಸೇರಿದರೆ ಕೇಡಿಲ್ಲ-ಆದರೆ ಆತ್ಮಹತ್ಯೆಗೆಳಸಿ ಸಾವನ್ನಪ್ಪುವುದು ಪುರುಷಲಕ್ಷಣವಲ್ಲ. ದುರಂತ ಚಿತ್ರಿಸುವಾಗ ಈ ಮಾತಿನ ಕಡೆಗೂ ಸ್ವಲ್ಪ ಲಕ್ಷಣವಿದ್ದರೆ ಚೆನ್ನ. ಉತ್ತಮ ಶೈಲಿಯನ್ನು ಕರಗತಮಾಡಿಕೊಂಡಿರುವ ಹಾಗೂ ಜನಮನ ರಂಜಕವಾಗುವಂತೆ ಬರೆಯಬಲ್ಲ ಅಶ್ವತ್ಥರು ಜನಸಾಮಾನ್ಯಕ್ಕೆ ರುಚಿಸುವಂತಷ್ಟೆ ಅಲ್ಲ-ವಿದ್ವಜ್ಜನರ ಮನಸ್ಸಿನ ಮೇಲೂ ಪರಿಣಾಮಕಾರಿಯಾಗುವಂತೆ ಬರೆಯುವ ಪ್ರಾಮಾಣಿಕ ಪ್ರಯತ್ನವನ್ನೂ ಮಾಡಬಹುದಿತ್ತು. ಅವರು ಮುಂದಕ್ಕೆ ಹಾಗೆ ಮಾಡದಿರಲಾರರೆಂದು ಆಶೆಯಿದೆ.

ಕತ್ತಲ ಬೆಳಕು

ಬರೆದವರು: ಹ. ವೆಂ. ನಾಗರಾಜರಾಯ. ಪ್ರಕಾಶಕರು: ಆನಂದ ಬ್ರದರ್ಸ್, ಬೆಂಗಳೂರು ೨. ಪುಟ: ೮೬. ಬೆಲೆ: ರೂ, ೧-೪-೦.

"ಪ್ರಗತಿಶೀಲ" ಸಾಹಿತ್ಯದ ಕುರಿತು ಉದ್ದುದ್ದ ಮಾತುಗಳನ್ನು ಅ. ನ. ಕೃ. ಈ ಕಥಾ ಸಂಗ್ರಹಕ್ಕೆ ಬರೆದ ಮುನ್ನುಡಿಯಲ್ಲಿ ಬರೆದಿದ್ದರೂ ಆ ಜಾತಿಗೆ ಸ್ಪಷ್ಟವಾಗಿ ಸೇರುವ "ನಮ್ಮಿಬ್ಬರ ನಡುವೆ", ಮತ್ತು "ಕತ್ತಲ ಬೆಳಕು" ಎಂಬ ಮೊದಲಿನೆರಡು ಕತೆಗಳು ತೀರ ಸಪ್ಪೆಯಾಗಿವೆ. ಕತೆ ಎಂದರೆ ಲೇಖನವಲ್ಲ-ಅದರಲ್ಲಿ ವಿಷಯವನ್ನು ಪ್ರತಿಪಾದಿಸುವಾಗ ಕಲಾತ್ಮಕ ದೃಷ್ಟಿಇರಬೇಕು ಎಂಬುದನ್ನು ಹೇಗೆ ಮರೆಯೋಣ? ಈ ದೃಷ್ಟಿಯಿಂದ ಪ್ರಾರಂಭದ ಕತೆಯಲ್ಲಿ ಬರುವ ರಾಜನ ಸುದೀರ್ಘ ಪತ್ರವನ್ನು ಮಾರ್ಕ್ಸ್‌ವಾದದ ಕಡೆಗಿರುವ ಒಲವಿನ ಕುರಿತು ಬರೆದೊಂದು ಪ್ರಬುದ್ಧ ಲೇಖನವಾಗಿ ಗಣಿಸಬಹುದಲ್ಲದೆ, ಕತೆಯ ತಿರುಳಾಗಿ ತೆಗೆದುಕೊಳ್ಳಲಾರೆವು. ಹಾಗೆಯೇ ಎರಡನೇ ಕತೆಯ ಕೊನೆಗೆ ಕಾಣಸುವ ಒಂದು ಕವನವೂ ಕತೆಯ ಚೌಕಟ್ಟಿಗೆ ಹೊಂದಿಕೊಳ್ಳಲಾರದ ನೀರಸ ವಸ್ತುವಾಗಿದೆ. ಹಾಗೆಂದು, "ರಂಗಸ್ವಾಮಿ" ಎಂಬ ಕೊನೆಯ ಕತೆ ಓದಿದಾಗ ನಾವು ಶ್ರೀ. ನಾಗರಾಜರಾಯರ ಲೇಖನಿಯಲ್ಲಿರುವ ಅದ್ಭುತ ರಸ ಶಕ್ತಿಯನ್ನು ಮನಗಾಣುತ್ತೇವೆ. ವಸ್ತುವಿನ ಐಕ್ಯತೆಯ ದೃಷ್ಟಿಯಿಂದ, ತಂತ್ರ ಮತ್ತು ಶೈಲಿಯ ದೃಷ್ಟಿಯಿಂದ ಇದು ಈ ಸಂಗ್ರಹದ ಉತ್ತಮ ಕತೆ ಎನ್ನಲು ಅಡ್ಡಿಯಿಲ್ಲ. ಶ್ರೀನಿವಾಸರ ಕಥನ ಕಲೆಯ ನೆನಪನ್ನು ಮಾಡಿಸುವಷ್ಟು ಈ ಕತೆ ಮೋಹಕವಾಗಿದೆ. ಹಾಗೆಯೇ ಗಾರ್ಕಿಯ 'ವಿಷಾ'ವನ್ನು ಆಧರಿಸಿ ಬರೆದ "ರಾಮಿಯ ದ್ವೇಷ" ಕೂಡ ಚೆಲೋದಾದ ಕತೆ. ಮಗುವಿನ ಮನಸ್ಸಿನ ಭಾವನೆಗಳ ಸೂಕ್ಷ್ಮ ಚಿತ್ರವನ್ನು ಇದರಲ್ಲಿ ಕಾಣಬಹುದು. ಉಳಿದೆರಡು ಕತೆಗಳು "ಆ ಜೀವನ" ಮತ್ತು "ಚಿತೆಯ ಮೇಲೆ" ಹೆಣ್ಣು ಬಾಳಿನ ವಸ್ತುವನ್ನೊಳಗೊಂಡಿವೆ. ಆದರೆ ಆಕರ್ಷಕವೆನಿಸುವುದಂತೂ ಅಷ್ಟರಲ್ಲೇ ಇದೆ. "ಚಿತೆಯ ಮೇಲೆ"ಯಲ್ಲಿ ಮುಖ್ಯ ಪಾತ್ರಗಳ ಪೋಷಣೆಯ ಕೊರತೆ ಬಲವಾಗಿದೆ ಈ ಕುಂದುಗಳನ್ನು ನಿವಾರಿಸಲು ನಾಗರಾಜರಾಯರು ಪ್ರಯತ್ನಿಸುವರೆಂದು ಹಾರೈಕೆ.

—"ಕಾರ್ತಿಕೇಯ"

ನಂದನ ಸಂವತ್ಸರದ ಪಂಚಾಂಗಗಳು

ಉಡುಪಿ ಪಂಚಾಂಗ

ಅತ್ತೂರು ಶ್ರೀ ಲಕ್ಷ್ಮಿನಾರಾಯಣ ಉಡುಪ ಮತ್ತು ಬಡಾನಿಡಿಯೂರು ಶ್ರೀ ಕೃಷ್ಣದಾಸ ಭಟ್ಟ-ಇವರಿಂದ ಗುಣಿಸಿ ಆಲೆವೂರು ಶ್ರೀ ಸೀತಾರಾಮಾಚಾರ್ಯ ಮತ್ತು ಅತ್ತೂರು ಶ್ರೀ ವಾಸುದೇವ ಉಡುಪರಿಂದ ಪರಿಶೋಧಿಸಿ ಶ್ರೀ ರವಿ ಪ್ರಸಾದ ಜ್ಯೋತಿಷಾಲಯ-ಕೊಯಮುತ್ತೂರು, ಇಲ್ಲಿಂದ ಪ್ರಕಟಿಸಲ್ಪಟ್ಟಿದ್ದು. ಇದರಲ್ಲಿ ನೂತನ ವರುಷದ ರಾಶಿ ಭವಿಷತ್ ಫಲಗಳನ್ನು ಮಾಸಂಪ್ರತಿಯಾಗಿ ಕೊಡಲಾಗಿದೆ. ಹಲವು ವರುಷಗಳಿಂದ ವಿಶೇಷ ಪ್ರಚಾರದಲ್ಲಿದ್ದು ಜನಪ್ರಿಯವಾಗಿರುವ ಪಂಚಾಂಗವಿದು. ಬೆಲೆ 0-6-0. ಸಿಗುವ ಸ್ಥಳ: ಉಡುಪಿ ಪಂಚಾಂಗ ಕೊಯಮುತ್ತೂರು ಮತ್ತು ಮಾಲ್ಕಿ.

ಶಾಸ್ತ್ರಸಿದ್ಧ ಶ್ರೀ ಕೃಷ್ಣ ಪಂಚಾಂಗ

ಕರಿಂಕ ಶ್ರೀ ಕೃಷ್ಣ ಬನ್ನಿಂತಾಯ ಮತ್ತು ಮಂಗಳೂರು ಶ್ರೀ ರಾಮಚಂದ್ರಾಚಾರ್ಯರಿಂದ ನೂತನ ದೃಕ್ ಸಿದ್ಧಾಂತ ಪ್ರಕಾರ ಸಂಪಾದಿಸಲ್ಪಟ್ಟು ಎಡಪದವು ಶ್ರೀ ಶಂಕರ ಜೋಯಿಸರಿಂದ ಪರಿಶೋಧಿಸಲ್ಪಟ್ಟ ರಾಶಿ ಭವಿಷ್ಯ ಫಲಸಹಿತವಾದ ಪಂಚಾಂಗ-ಬೆಲೆ 0-6-0 ಸಿಗುವ ಸ್ಥಳ-ಕರಿಂಕ ಶ್ರೀ ಕೃಷ್ಣ ಬನ್ನಿಂತಾಯ ಪೋಸ್ಟ್ ವಿಟ್ಲ [ದ. ಕ.]

ಶ್ರೀಪತಿ ಪಂಚಾಂಗ—ಶ್ರೀ ಶ್ರೀಪತಿ ನರಸಿಂಹ ಅಡಿಗರಿಂದ ಸೂರ್ಯ ಸಿದ್ಧಾಂತ ರೀತ್ಯಾ ಗುಣಿಸಿ ಪರಿಶೋಧಿಸಿ ಪ್ರಕಟಿಸಲ್ಪಟ್ಟಿದೆ. ರಾಶಿಭವಿಷ್ಯವೂ ಕೊಡಲ್ಪಟ್ಟಿದೆ. ಹಲವು ವರ್ಷಗಳಿಂದ ಚಾಲ್ತಿಯಲ್ಲಿದ್ದು ಜನಪ್ರಿಯವಾಗಿದೆ. ಬೆಲೆ 0-8-0 ಸಿಗುವ ಸ್ಥಳ-ಶ್ರೀಪತಿ ಪಂಚಾಂಗ ಕಾರ್ಯಾಲಯ, ಪೋಸ್ಟ್ ಕೋಟ. [ದ.ಕ.]

ಶ್ರೀಕೃಷ್ಣ ಪಂಚಾಂಗ

ಶ್ರೀ ಲಕ್ಷ್ಮೀನಾರಾಯಣ ಅಡಿಗರಿಂದ ಗುಣಿಸಿ ಪರಿಶೋಧಿಸಲ್ಪಟ್ಟು, ಶ್ರೀ. ಧಂ. ನಾರಾಯಣಾಚಾರ್ಯರಿಂದ ವಿಮರ್ಶಿಸಲ್ಪಟ್ಟ ಮೆಜೆಸ್ಟಿಕ್ ಪ್ರೆಸ್ಸಿನಿಂದ ಪ್ರಕಟಿಸಲ್ಪಟ್ಟ ಉಡುಪಿ ಪಂಚಾಂಗವಿದು. ಆರ್ಯಭಟವಾಕ್ಯಕರಣರೀತ್ಯಾ ತಿಥ್ಯಸಂಚಾಂಗ, ನವೀನದೃಕ್ಸಿದ್ಧಾಂತರೀತ್ಯಾ ಗ್ರಹಣ ಗ್ರಹಸ್ಫುಟಾದಿಗಳನ್ನೊಳಗೊಂಡಿರುವುದಲ್ಲದೆ. ವಿಸ್ತಾರ ವರ್ಷ ಭವಿಷ್ಯವೂ ಕೊಡಲ್ಪಟ್ಟಿದೆ. ಬೆಲೆ 0-6-0 ಸಿಗುವ ಸ್ಥಳ, ಮೆಜೆಸ್ಟಿಕ್ ಪ್ರೆಸ್, ಉಡುಪಿ,

---

ಸಕಲ ಪುಸ್ತಕ ಭಂಡಾರಗಳಿಗೆ ಬೇಕಾಗುವ ಸರ್ವವಿಧದ ಪುಸ್ತಕಗಳು!

ಕಥೆ, ಕಾದಂಬರಿ, ನಾಟಕ, ಕವಿತೆ, ಚಿತ್ರ, ಪ್ರಬಂಧ ಮೊದಲಾದ ನಾನಾ ಬಗೆಯ ಅಮೂಲ್ಯ ಕೃತಿಗಳು!

ಅಂತರಂಗದ ಪ್ರಕಟಣೆಗಳು:

ಬಿರುದಾವಳಿ	0	3	0
ಹೈದರಾಬಾದ್ ವಿಜಯ	0	4	0
ಗಾದೆಯ ಗಾಂಧಿ	0	3	0
ಶಾಂತಿಯ ಮಡಿಲಿನಲ್ಲಿ	0	3	0
ಬಲಿಪೀಠದಲ್ಲಿ	0	5	0
ಅಗಲಿದ ಅಕ್ಕ ಸರೋಜಿನಿ	0	3	0
ಚಿನ್ನ ಹೆಂಡತಿ	0	3	0
ಪುಣ್ಯಫಲ	0	4	0
ಸುಖದದಾರಿ	0	3	0
ಸುಶಾಂತ	0	3	0
ಪಂಚಮುಖಿ	0	4	0
ಜಾತೀಭೂತಕ್ಕೆ ಬಲಿ	0	3	0
ಜನಸೇವೆಯ ಸೋಗಿನಲ್ಲಿ	0	3	0
ನಾ ಕಂಡ ಅವಳು	0	3	0
ತ್ರಿವೇಣಿ	0	3	0
ನಿಲುವಂಗಿ	0	4	0
ಬಾಡಿಗೆಯ ಮನೆ	0	3	0
ವರ್ತಮಾನಕಾಲದ ನಾಲ್ವರು			
ಮಹಾನುಭಾವರು	0	4	0
ದೇವರ ನಾಮ ಮತ್ತು ಸಾಧನೆ	0	3	0
ಎರಡು ಕತೆಗಳು	0	4	0
ಸರಸ-ವಿರಸ	0	3	0
ಹೃದಯೇಶ್ವರಿ	0	4	0
ವಿವಿಧ ವಿಷಯ ಕೋಶ ಭಾಗ೧,೨	0	6	0
ನುಡಿಮುತ್ತುಗಳು ೧, ೨, ೩	0	12	0
ಕುಲವಿಲ್ಲದ ಹೆಣ್ಣು	1	8	0
ತವರು ಮನೆಯಿಂದ	0	4	0
ಭಾಗ್ಯಲಕ್ಷ್ಮಿ	1	4	0
ಯುಗವಾಣಿ	0	8	0
ಸ್ತ್ರೀ ಹೃದಯ	0	4	0
ದ್ವೇಷ	0	3	0
ಎರಡು ಏಕಾಂಕ ನಾಟಕಗಳು	0	4	0
ಪ್ರಜಾಪ್ರಭುತ್ವವನ್ನು ಕುರಿತು	0	8	0
ಕಲಾವಿದನ ದಿನಚರಿ	0	3	0
ಆಧುನಿಕ ಭಾರತ	0	4	0
ಕಾಲವೇ ಬದಲಾಗಿದೆ	0	4	0

ಭಾರತದ ಸಾಹಿತ್ಯ ಕಲೆಗಳು	0	4	0
ಸ್ತ್ರೀಸ್ವಾತಂತ್ರ್ಯ ಬೇಕೆ?	0	4	0
ಹಂಬಲ	0	4	0
ಭಾರತಚಿತ್ರದ ಅಂಚೆಟಿಕೇಟುಗಳು	0	3	0
ತ್ರಿಶೂಲ	0	5	0
ಪುಸ್ತಕಪುರಾಣ	0	4	0
ಹಳ್ಳಿಯಲ್ಲಿ ನಡೆದ ನಾಟಕ	0	3	0
ನೆರೆಯ ಗಾಂಧಾರ	0	3	0
ಮಾತಿನಯುಗದ ಮಹಾಪ್ರಭಾವ	0	3	0
ವಿಜ್ಞಾನದ ಬೆಳವಣಿಗೆ	0	4	0
ಡಾ। ಹರ್ಡೀಕರ್	0	5	0
ತೆಂಗಿನ ತವರು	0	6	0
ಪ್ರಾಯಶ್ಚಿತ್ತ	0	3	0
ಪ್ರಭಾ	0	3	0
ಶವಗಳ ಸಾಗಾಟ	0	12	0
ಸ್ವಪ್ನಲೋಕ	0	6	0
ಮನೆಹೊರಗಿನಮಹಾಜೀವಿಗಳು	0	5	0
ಘಂಟನಾದ ೪ಭಾಗಗಳು	2	0	0
ಮಾರ್ಪಾಟ	0	4	0
ಭಾರತದ ರಾಷ್ಟ್ರಗೀತ	0	3	0
ನಮ್ಮ ಬಹು ದೊಡ್ಡ ಶತ್ರು	0	4	0
ಕೈಲಾಸ	0	3	0
ಚೌತಿ	0	4	0
ಕೆತ್ತಿ ಕೊಯ್ದವರಾರು?	0	5	0
ಸಮಾಜದ ಅಗ್ನಿಕುಂಡ	0	4	0
ಬೆಳ್ಳಿಹಬ್ಬ	0	4	0
ಉಷಾ	0	4	0
ವಿಧಿಲೀಲೆ	0	4	0
ಪರಮಾಣು ಪ್ರಪಂಚ	0	4	0
ನೀತಿ ವಿನೋದ ಕತೆಗಳು	0	12	0
ಸಾಹಸ ಭೀಮ ವಿಜಯ	0	8	0
ಭಾರತದ ಗುರುಕುಲ	0	6	0
ಲಕ್ಷ್ಮಪಗಡೆ	0	6	0
ಭರತೇಶ ದಿಗ್ವಿಜಯ	0	8	0
ಮನೋಪದೇಶ	0	8	0
ಜೀವನ ಕಲೆ	0	10	5
ಸೇವಾಪಥ	0	8	0

ಕಿರಿಯರಪ್ರಪಂಚದ ಪ್ರಕಟಣೆಗಳು:

ಸ್ವತಂತ್ರ ಜೀವನೋಪಾಯ	0	3	0
ಸಂಶಯ ಪಿಶಾಚಿ	0	10	0
ನಾಡಕತೆಗಳು	0	4	0
ಕುಶಲವ	0	7	0
ಕಾವ್ಯಸಾಮ್ರಾಜ್ಯ	1	8	0
ಮಧುವನ	3	0	0
ಮುಂದಿನ ದೇವರು	0	4	0
ವ್ಯಭಿಚಾರಿಣಿ ಯಾರು	1	4	0
ಹೆಂಡ್ತಿ ಗಂಡನಾದರೆ	0	4	0
ಪುರುಷ ವಧು	0	4	0
ಸನ್ಯಾಸಿಯ ಸೋಗಿನಲ್ಲಿ	0	10	0
ನಂದಾದೀಪ	1	0	0
ದೇಶಭಕ್ತ	1	8	0
ಪ್ರೇಮವಿಜಯ	1	0	0
ಪ್ರಕಾಶ	2	8	0
ಮೂರು ಪ್ರಹಸನಗಳು	1	0	0
ಅನ್ನದೇವರು ಕತೆಗಳು	1	0	0
ಭಾರತದಲ್ಲಿ ಜಾತಿಭೇದ	1	0	0
ವಿಷ್ಣುವಿನ ದಶಾವತಾರಗಳು	0	12	0
ಆಕಾಶ ಗಂಗೆ	2	4	0
ಸ್ವಾತಂತ್ರ್ಯವೀರ ಸಾವರಕರರು	1	4	0
ಜೀವನ ಸಂಗ್ರಾಮ	1	8	0
ಕದಂಬ	1	4	0
ಕವಿತಾಕಾಮಿನಿ	2	0	0
ಸ್ವರಾಜ್ಯ ವಿಜಯ	0	8	0
ಸಪ್ತಸಾಗರ	0	12	0
ಜಮೀನ್ದಾರ	1	12	0
ಮನೆಮಗ್ಗ	2	0	0

ಇಷ್ಟೇ ಅಲ್ಲ-ಸಮಗ್ರ ಕರ್ನಾಟಕದ ಇನ್ನೆಷ್ಟೋ ಪುಸ್ತಕಗಳು ದೊರೆಯುತ್ತವೆ.

ವಿಚಾರಿಸಿದ್ದಲ್ಲಿ ಕೆಟಲಾಗನ್ನು ಕಳಿಸಬಹುದು.

ವಿಳಾಸ:

ನವಭಾರತ ಬುಕ್ ಡಿಪೊ, ಉಡುಪಿ.
ನವಯುಗ ಪ್ರೆಸ್, ಉಡುಪಿ.

(ಗ್ರಾಹಕರಿಗೆ ವಿಶೇಷ ಸವಲತ್ತು ಇಲಿವೆ.)

ವೆನಿಸ್ ನಗರ

ಬವರಾರು 1200ನೇ ಇಸವಿಯಿಂದ ೧೯ನೇ ಇಸವಿ ವರೆಗೆ 7 ಶತಮಾನಗಳ ಇ ದೆ ದೇಶದ ಚರಿತ್ರೆಯು ಅಸ್ತರುವ ಮುಖ್ಯ ನಗರಗಳ ಚರಿತ್ರೆಎನ್ನಬಹುದು ಆ ಪೈಕಿ ೦೦ಂದ 1550ರ ವರೆಗೆ, 2 ಶತಮಾನಗ ಚರಿತ್ರೆಯು ಇಟೇಲಿ ದೇಶದ ಪುನರ್ಜೀವ ನ (Renaissance) ಆಗ ದೇಶವು ಕಲ , ಸಾಹಿತ್ಯ, ಗಾಯನ, ವ್ಯಾಪಾರ ವಗೈರೆಯಲ್ಲಿ ವಿಶೇಷವಾಗಿ ಅಭಿವೃದ್ಧಿಗೆ ಬಂದು ಅಲ್ಲಿಂದ ಈ ಪುನರ್ಜೀವನವು ಯೂರೋಪಿನ ಇತರ ಎಲ್ಲಾ ದೇಶಗಳಿಗೆ ಹರಡಿತು. ಆ ಕಾಲದಲ್ಲಿ ಇಟೇಲಿಯಲ್ಲಿ ಡೆಂಟೇ (Dante), ಲಿಯೊನಾರ್ಡೊ ಡಾ ವಿನ್ಸಿ (Leonardo da Vinci), ಮೈಕೇಲ್ ಏಂಜಲೋ (Michael Angelo) ಮೊದಲಾದ ಅನೇಕ ಲೋಕ ಪ್ರಸಿದ್ಧ ಜನರು ಹುಟ್ಟಿ ಬೆಳೆದದ್ದು.

ಈ 5 ನಗರಗಳು ಯಾವುವೆಂದರೆ ಉತ್ತರ ಇಟೇಲಿಯಲ್ಲಿ ತ್ರಿಕೋಣದಂತಿರುವ ಮಿಲಾನ್, ವೆನಿಸ್ ಮತ್ತು ಫ್ಲೊರೆನ್ಸ್ ಮತ್ತು ದಕ್ಷಿಣ ಇಟೇಲಿಯಲ್ಲಿರುವ ರೋಮ್ ಮತ್ತು ನೇಪಲ್ಸ್. ಇವುಗಳ ಪೈಕಿ ರೋಮಿನಲ್ಲಿ ಪೋಪರ ರಾಜ್ಯ, ನೇಪಲ್ಸಿನಲ್ಲಿ ಅಲ್ಲಿಯ ಒಬ್ಬ ರಾಜನ ಸಂಸಾರ. ಬಾಕಿ ಉಳಿದ 3 ನಗರಗಳ್ಳ ಅಲ್ಲಿಯ ಜನರದ್ದೇ ಸರಕಾರ. ಈ ಸರಕಾರಗಳು ತಮ್ಮ ತಮ್ಮ ನಗರಗಳನ್ನು ಅಲ್ಲದೆ ಕೊಂಡದ್ದಲ್ಲದ ಬೇರೆ ಊರುಗಳ ಮೇಲೆ ಯುದ್ಧ ಮಾಡಿ ಅವುಗಳನ್ನು ಜಯಿಸಿ ತಮ್ಮ ಕೈವಶ ಮಾಡಿಕೊಂಡವು. ಆ ಬಗ್ಗೆ ಅವುಗಳಿಗೆ ದೊಡ್ಡ ಸೈನ್ಯ, ಯುದ್ಧ ಹಡಗುಗಳ ಪಡೆ (Navy) ಕೂಡ ಇತ್ತು. ಇವೆಲ್ಲಾ ಮುಖ್ಯ ಕಾರಣ-ಅಲ್ಲಿಯ ಜನರ ನಡೆಸುತ್ತಿದ್ದ ವ್ಯಾಪಾರ. ಆ ಮೂಲಕ ಸಂಪಾದಿಸಿದ ಐಶ್ವರ್ಯ.

ಹಾಗೆ 13ನೇ ಶತಮಾನದಲ್ಲಿ ಮಿಲಾನಿನ ಜನಸಂಖ್ಯೆ 2 ಲಕ್ಷ ಎಂತ ಕೇಳುವಾಗ ಆ ನಗರವು ಆಗ ಎಷ್ಟು ದೊಡ್ಡದು ಎಂತ ತಿಳಿಯಬಹುದು. ಆ 2 ಲಕ್ಷ ಜನರ ಪೈಕಿ ಅರ್ಧ ಲಕ್ಷ ಜನರು ಯುದ್ಧ ಮಾಡಲಿಕ್ಕೆ ಶಕ್ತರು. 400 ವಕೀಲರು (Notaries), 200 ಡಾಕ್ಟರರು, 1000 ವ್ಯಾಪಾರಸ್ಥರು, ಗವರ್ನರನಾಗಿ ಆಳುತ್ತಿದ್ದ ವಿಸ್ಕೊಂಟಿ ಎಂಬ ಕುಟುಂಬದವರು ಯೂರೋಪಿನ ಅನೇಕ ರಾಜರಿಗೆ ಸಾಲಕೊಡುತ್ತಿದ್ದರಂತೆ.

ಮಿಲಾನಿಗಿಂತ ಬಲವಾದದ್ದು ವೆನಿಸ್, ಅದು ಪೂರ್ವ ಸಮುದ್ರದ ಬದಿಯಲ್ಲಿದ್ದು ಅಲ್ಲಿಂದ ಗ್ರೀಸ್, ಈಜಿಪ್ಟ್, ಟರ್ಕಿ ಮೊದಲಾದ ದೇಶಗಳೊಡನೆ ವ್ಯಾಪಾರ ... ಅಲ್ಲಿಯ ವರ್ತಕರು ನಡೆಸುತ್ತಿದ್ದರು. ಅನೇಕ ಯುದ್ಧಗಳನ್ನು ಮಾಡಿ ಗ್ರೀಸ್ ದೇಶದ ಅಂಶ ಕೂಡಾ ಕೆಲವು ಕಾಲ ವೆನಿಸ್ ಸರಕಾರದ ಅಧೀನವಾಗಿತ್ತು. 12ರಿಂದ 18ನೇ ಶತಮಾನಗಳಲ್ಲಿ ವಿಶೇಷವಾದ ವ್ಯಾಪಾರ, ವ್ಯಾಪಾರ, ಸಂಪತ್ತು, ಅಭಿವೃದ್ಧಿ ಹೊಂದಿ ಕಲೆ ಮತ್ತು ಸಾಹಿತ್ಯ ಕೂಡಾ ಶೋಭಿಸಿದವು.

ವೆನಿಸಿನ ಸರಕಾರದ ಆಡಳಿತೆ ನಡಿಸಲಿಕ್ಕೆ 1000ಕ್ಕೂ ಮಿಕ್ಕಿ ಸದಸ್ಯರನ್ನು ಪಾರ್ಲಿಮೆಂಟಿಗೆ ಅಲ್ಲಿಯ ಜನರೇ ವರ್ಷ ವರ್ಷ ಚುನಾಯಿಸುತ್ತಿದ್ದರು. ಅವರ ಪೈಕಿ ಒಬ್ಬ ವಕೀಲನನ್ನು ಗವರ್ನರನ್ನಾಗಿ (Doge), ಚುನಾಯಿಸಿ ಅವನು ಅವನ ಜೀವಮಾನ ಕಾಲ ಆ ಕೆಲಸವನ್ನು ನೋಡುತ್ತಿದ್ದನು. ಇಂಥಾ ಅನೇಕ ಡೋಜರು 10-20-30 ವರ್ಷ ಆಳುತ್ತಿದ್ದರು. ಅವರ ಚಿತ್ರ ಮತ್ತು ಗೋರಿಗಳನ್ನು ಈಗಲೂ ವೆನಿಸಿನಲ್ಲಿ ಕಾಣಬಹುದು.

ಈ ರೀತಿ ಪ್ರಜಾ ಸರಕಾರವು ಜನರಿಗೆ ತೃಪ್ತಿಕರವಾಗಿತ್ತು. ಶೀಘ್ರ ಮತ್ತು ಸುಲಭವಾದ ನ್ಯಾಯ-ಯೋಗ್ಯವಾದ ಕಾನೂನು. ಅಭಿವೃದ್ಧಿಕರವಾದ ವ್ಯಾಪಾರ ಮತ್ತು ವ್ಯಾಪಾರಗಳಲ್ಲಿ ಮಕ್ಕಳನ್ನು ಉಪಯೋಗವಾದಕಾರಣ ಬೇರೆ ಕಾನೂನು ಬಾಕಿ ದೇಶಗಳಿಗಿಂತ ಇಲ್ಲಿ ನೂರಾರು ವರ್ಷಗಳ ಹಿಂದೆಯೇ ಮಾಡಿದ್ದರು. ಈ ಕಾಲದ ಚಂದವಾದ ಕಟ್ಟಡಗಳು ಮತ್ತು ನೂರಾರು ತೈಲಚಿತ್ರಗಳನ್ನು ಸರಿ ...

ಪ್ರವಾಸಿಯ ಪತ್ರಗಳು ೨೮

ರೂ 4-5 ಗಂಟೆ ನಾನು ಸಂದರ್ಶಿದ್ದನ್ನು ಇಲ್ಲಿ ಸಂಕ್ಷೇಪವಾಗಿ ಮತ್ತು ನನ್ನ ಕೈಲಾದ ಮಟ್ಟಿಗೆ ಬರೆಯುತ್ತೇನೆ. ವೆನಿಸಿನ ಸ್ವಾತಂತ್ರ್ಯವನ್ನು 1797ರಲ್ಲಿ ಫ್ರಾನ್ಸಿನ ನೆಪೋಲಿಯನ್ ಬೊನೆಪಾರ್ಟನು ಈ ನಗರದ ಮೇಲೆ ಯುದ್ಧ ಹೂಡಿ ಅಪಹರಿಸಿದನು. ಆಗ ಡೋಜರ ಯುಗವು ಮುಗಿಯಿತು.

ಜೂನ್ 11ನೇ ಸೋಮವಾರ ಬೆಳಗ್ಗಿನಿಂದ ಮಧ್ಯಾಹ್ನದ ವರೆಗೆ ವೆನಿಸ್ ನಗರವನ್ನು ಸಂದರ್ಶಿಸಿದೆ. ವೆನಿಸಿಗೆ ಇಟೇಲಿ ಭಾಷೆಯಲ್ಲಿ ವೆನಿಸಿಯಾ ಅನ್ನುತ್ತಾರೆ. ಅದು ಒಂದೇ ಊರ ಲ್ಲ. 115 ಸಣ್ಣ ಸಣ್ಣ ಕೆಸರಿನ ದ್ವೀಪಗಳನ್ನು ಕೂಡಿಸಿ ಕಟ್ಟಿದ ಒಂದು ಊರು. ಸುತ್ತುಮುತ್ತಲೂ ಆಳವಿಲ್ಲದ ಸಮುದ್ರವು ಒಳಗೆ ಬಂದ ನೀರಿನ ಜಾಗಗಳು (Lagoons) ಸಮುದ್ರ ಬದಿಯಲ್ಲಿ ಇರುವ ಮೈಗೆ ಚೆಂಗರಿಗೆ (beach) 'ಲಿಡೋ' (Lido) ಎಂಬ ಹೆಸರು. ಒಳಗಿರುವ ಈ 115 ದ್ವೀಪಗಳಲ್ಲಿ ಒಂದರಿಂದ ಇನ್ನೊಂದಕ್ಕೆ ಹೋಗಲಿಕ್ಕೆ 420 ಸಂಕಗಳು. ಮಧ್ಯವಿರುವ ನೀರಿನ ಕಾಲುವೆಗಳಲ್ಲಿ ನೂರಾರು ದೋಣಿಗಳು ಮತ್ತು ಮೋಟಾರು ಬೋಟುಗಳು.

ಮುಂಚಿನ ರಾತ್ರೆ ವಾನಾಡಾ ಹೋಟೇಲಿನಲ್ಲಿದ್ದ ವಿಚಾರ ಈ ಮುಂಚೆ ಬರೆದಿದ್ದೆ. ರಾತ್ರಿಕಾಲದಲ್ಲಿ ಊರಿನ ರಮ್ಯ ದೃಶ್ಯದ ವಿಚಾರ ಕೂಡಾ ಬರೆದಿದ್ದೆ. ಆದರೆ ಇನ್ನೂ ಕೆಲವು ವಿಚಾರಗಳಂತೆ ರಾತ್ರಿಯ ರಮ್ಯ ಬೆಳಗಾದ ಮೇಲೆ ಇಲ್ಲ. ಹೊಟೇಲು ಮತ್ತು ಆಸುಪಾಸಿನ ಮನೆಗಳೆಲ್ಲಾ ಬಹು ಹಳಿಯ ಮತ್ತು ಬಹಳ ನಿಬಿಡವಾಗಿ ಕಟ್ಟಿದ್ದು. ಈ ಮುಂಚೆ ಇದ್ದ ದೇಶಗಳಲ್ಲಿ ನೋಡಿದಷ್ಟು ಗಟ್ಟಿ ಅಥವಾ ಚಂದವಲ್ಲ. ನನ್ನ 4ನೇ ಉಪ್ಪರಿಗೆಯ ಕೋಣೆಯ ಕಟಕಿಯ ಬಾಗಿಲುಗಳು ಸರಿಯಾಗಿ ತೆಗಿಯಲಿಕ್ಕೆ ಬಾರದು. ಕೆರೆದರೂ ಎದುರಿನ ಮನೆ ಮಧ್ಯ ಇರುವ ಓಣಿ ಬರೇ 6, 8 ಅಡಿ ಮಾತ್ರ ದೂರವಿದ್ದ ಕಾರಣ ಅಲ್ಲಿಯ ಏಣಾರಗಳು ಬಹು ಹತ್ತಿರವಾಗಿ ಕಾಣುವುದರಿಂದ ಗೋಪ್ಯತೆಯು [Privacy] ಕಡಿಮೆ. ಹೊಟೇಲಿಗೆ ಬೇರೆ ಕಡೆಯಲ್ಲಿ ಇದ್ದಂತೆ ಮೇಲೆ ಕೆಳಗೆ ವಿದ್ಯುಚ್ಛಕ್ತಿಯಿಂದ ನಡೆಯುವ ಲಿಫ್ಟ್ [Lift] ವಿಲವಾಂ ಇಲ್ಲ. ಊರು ಬಹಳ ಪುರಾತನದ್ದು. ಇಲ್ಲಿಯ ಅನೇಕ ಮನೆಗಳಿಗೆ 300-400 ವರ್ಷಗಳಾಗಬಹುದು. ನನ್ನ ಹೊಟೇಲಿನ ಕೆಳಗೆ ಒಂದು ಫಲಹಾರ ಮಾಡಿದೆ. ತಿಂಡಿಯ ಮಟ್ಟಿಗೆ ಯಾವ ಕೊರತೆಯೂ ಇಲ್ಲ. ಇಟೇಲಿ ಜನರು ಅಡಿಗೆ ಕೆಲಸದಲ್ಲಿ ಬಹಳ ನಿಪುಣರೆಂಬುದನ್ನು ಅನೇಕ ಇಂಗ್ಲಿಷ್ ಕಾದಂಬರಿಗಳಲ್ಲಿ ನಾವು ಓದಿದ್ದೇವೆ. ಇದು ನಿಜ.

ಹೊಟೇಲಿನಿಂದ ಹೊರಟು ಒಂದು ಫರ್ಲಾಂಗ್ ದೂರವಿರುವ ನಗರದ ಮುಖ್ಯ ಸ್ಥಳವಾದ ಸೆನ್ (ಸೈಂಟ್) ಮಾರ್ಕೋ ಸ್ಕ್ವಯರ್ ಅಥವಾ ಚೌಕಿ (San Marco Square) ಎಂಬ ಜಾಗಕ್ಕೆ ಬಂದೆ. ಇದರ ಹತ್ತಿರ ಅನೇಕ ಮುಖ್ಯ ಕಟ್ಟಡಗಳಿವೆ. ಈ ಚೌಕಿಯು ಸುಮಾರು 2-3 ಎಕ್ರೆಯಷ್ಟು ವಿಸ್ತೀರ್ಣವಿದ್ದು 3 ಬದಿಯಲ್ಲಿ, ಪೂರ್ವ, ದಕ್ಷಿಣ ಮತ್ತು ಪಶ್ಚಿಮದಲ್ಲಿ 2 ಮಾಳಿಗೆ ಇರುವ ಒಂದೇ ತರದ ಮತ್ತು ಒಂದೇ ಸಾಲಾಗಿ ಕಟ್ಟಿದ ಕಟ್ಟಡಗಳು. ಇದು ಮುಂಚೆ ಇಲ್ಲಿಯ ಪಾರ್ಲಿಮೆಂಟು ಸದಸ್ಯರು ಬಂದು ಇರುವ ಕಟ್ಟಡಗಳಂತೆ. ಉತ್ತರ ಬದಿಯಲ್ಲಿ ಪ್ರಸಿದ್ಧ ಚಟ್ಸ ಸೆನ್ ಮಾರ್ಕೋ ಎಂಬ ಹೆಸರಿನ ಇಗರ್ಜಿ. ಅದಕ್ಕೆ ತಾಗಿ ಪೂರ್ವಕ್ಕೆ ಹೆಸರು ಹೋದ ಇಲ್ಲಿಯ ಮುಂಚಿನ ಡೋಜರ ಅರಮನೆ ಮೊದಲಾಗಿ ಸೆನ್ ಮಾರ್ಕೋ ಇಗರ್ಜಿಯನ್ನು ನೋಡಿದೆ. ಅದರ ಎದುರು ಕಡೆ ಬಹಳ ಚೆನ್ನಾಗಿ ಕಟ್ಟಿತ್ತು. 830ರಿಂದ 1484ರ ವರೆಗೆ ಈ ಕಟ್ಟಡವು ಕಟ್ಟಿದ್ದಾಗಿ ತಿಳಿಯಿತು. ಹಾಗೆ ಕಟ್ಟುವಾಗ ಕೆಲವು ಮಟ್ಟದಲ್ಲಿ ಬಂದ ಕಂಬಗಳನ್ನು ಹುಗಿದು ಅದರ ಮೇಲೆ ಕಟ್ಟಿದ್ದಾದ ಕಾರಣ ನೆಲವು ಗೋಡೆಯಿಂದ ಬಿಟ್ಟು ಕೆಳಗೆ ಕುಸಿಯುವುದೇ ಕುರುಹು ಕಾಣುತ್ತದೆ. ಈ ಇಗರ್ಜಿಯಲ್ಲಿ ಅಲೋಚಿಸಾದ "ಮೊಸ್ಯಕ್" (Mosaic) ಕೆಲಸವಿದೆ. ಈ ಮುಂಚೆ ನಾನು ತಿರುಗಾಡಿದ ದೇಶಗಳಲ್ಲಿ ಚಿತ್ರಗಳನ್ನು ಕೈಯಿಂದ ಬಿಡಿಸಿದ್ದು (Paintings), ಕಲ್ಲಿನಿಂದ ಕೆತ್ತಿದ ಕೆಲಸ, ಗಾಜಿನಿಂದ ಬಿಡಿಸಿದ ಚಿತ್ರಗಳನ್ನು ಮಾತ್ರ ಕಂಡದ್ದು. ಇದು ಇನ್ನೊಂದು ರೀತಿಯ ಕಲಾವಿದ್ಯೆ. ಗೋಡೆ ಅಥವಾ ಮಾಳಿಗೆಯಲ್ಲಿ (Ceiling) ಕಲ್ಲಿನ ತುಂಡುಗಳನ್ನು ಸುಣ್ಣದಲ್ಲಿ ಅಂಟಿಸಿ ಚಿತ್ರ ಬಿಡಿಸುವುದು ಇದು ಸುರುವಿನಲ್ಲಿ ಕಲ್ಲಿನಲ್ಲಿ, ಆ ಮೇಲೆ ಅಮೃತಶಿಲೆ [marble] ಅಲ್ಲದೆ ಗಾಜಿನ ತುಂಡುಗಳ ಮೇಲೆ ಚಿನ್ನದ ಎಲೆಯನ್ನು ಲಗಾಯಿಸಿ ಅದರಿಂದ ಬಿಡಿಸಿದ ಚಿತ್ರಗಳು ಈ ಚಿನ್ನದ ಚಿತ್ರಗಳನ್ನು ಇಲ್ಲಿ ಕಾಣಬಹುದು. ಇವು 12ನೇ ಶತಮಾನದ್ದು. ಇಂಥಾ ಗಾಜಿನ ಚಿತ್ರಗಳು ಇಲ್ಲಿ 5000 ಚದರ್ಚ್ ಗಜದಷ್ಟು ಇವೆ. ಈ ಇಗರ್ಜಿಯ ಹೊರಗಿನ ಸುತ್ತಿನಲ್ಲಿ ವೆನಿಸಿನ ಮುಂಚಿನ ಡೋಜರನ್ನು ಹುಗಿದ ಅನೇಕ ಗೋರಿಗಳಿವೆ.

1918ರಲ್ಲಿ ಮರಣಹೊಂದಿದ ವೆನಿಸ್ ನಗರದವನಾದ ಪೋಪ್ Xನೇ ಪ್ಯಾಯಸ್‌ರ ದೊಡ್ಡ ಶಿಲಾ ಪ್ರತಿಮೆಯು ಈ ಇಗರ್ಜಿ ಒಳಗೆ ಇಟ್ಟಿದೆ. ಸೆನ್ ಮಾರ್ಕರ ಗೋರಿ ಕೂಡಾ ಒಳಭಾಗದಲ್ಲಿದೆ.

ಈ ಇಗರ್ಜಿಗೆ ಸಮೀಪದ ಒಂದು ಕಟ್ಟಡದಲ್ಲಿ ಬಹಳ ಪುರಾತನದ ಒಂದು ಗಡಿಯಾರ ಉಪ್ಪರಿಗೆಯ ಮೇಲಿದೆ. ಅದೇ ಉಪ್ಪರಿಗೆಯ ತಲೆಯ ಮೇಲೆ 8 10 ಅಡಿ ಎತ್ತರದ ಕಂಚಿನ ಗಂಟೆ [Bell] ಮತ್ತು ಅದರ ಎರಡು ಬದಿಯಲ್ಲಿ ಅದನ್ನು ಹೊಡೆಯುವ ಎರಡು ಮನುಷ್ಯರ ದೊಡ್ಡ ಕಂಚಿನ ಪ್ರತಿಮೆಗಳು ಗಂಟೆ ಗಂಟೆಗೆ ಈ ಪ್ರತಿಮೆಗಳಲ್ಲಿ ಒಂದು ಕೈಯಲ್ಲಿ ಹಿಡಿದ ದೊಡ್ಡ ಸುತ್ತಿಗೆಯಿಂದ ಗಂಟೆಯ ಮೇಲೆ ಹೊಡೆದು ಬಾರಿಸುತ್ತದೆ ಹಾಗೆ 12 ಗಂಟೆಯಾದರೆ 12 ಪೆಟ್ಟು ಅದು ಮುಗಿದ ಕೂಡಲೇ ಇನ್ನೊಂದು ಹಾಗೆಯೇ ಪುನಹ 12 ಪೆಟ್ಟು ಹೊಡೆದು ಗಂಟೆ ಬಾರಿಸುತ್ತದೆ. ಇದು ವಿಚಿತ್ರವಾಗಿದ್ದು 16ನೇ ಶತಮಾನದಲ್ಲಿ ಮಾಡಿದ್ದಾಗಿರುತ್ತದೆ.

ಈ ಇಗರ್ಜಿಯ ಎದುರು ಇರುವ ಚೌಕಿಯಲ್ಲಿ ಸಾವಿರಾರು ಪಾರಿವಾಳಗಳು ಯಾವಾಗಲೂ ಇವೆ. ಅವುಗಳಿಗೆ ಅಲ್ಲಿ ಒಂದುವರ್ಕಿ ಯಿಂದ ತಿಂಡಿ ತಿನ್ನುವ ಅಭ್ಯಾಸ. ಅಲ್ಲದೆ ಅಲ್ಲಿಯ ಮುನಿಸಿಪಾಲಿಟಿಯವರ ಖರ್ಚಿನಿಂದ ಮಧ್ಯಾಹ್ನ ತಿಂಡಿ ಬೇರೆ ಇದೇ ರೀತಿ ಲಂಡನಿನ ಟ್ರಫಾಲ್ಗರ್ ಚೌಕಿಯಲ್ಲಿ ಯಾವಾಗಲೂ ಪಾರಿವಾಳಗಳ ಗುಂಪು.

(ವಿಚಾರವಾಣಿ) —ಕೆ. ಆರ್. ಕಾರಂತ.

ಮುಂದುವರಿಯುವುದು.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್‌ವೈದ್ಯ, ಅಂಬಳೆ ನರಸಿಂಹ ಪಂಡಿತರ ಮನೆತನದ ಎ. ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಸ್ಟೆ ಸಂಬಂಧದ ಹೊಟ್ಟೆನೋವಿನಿಂದ ತಲೆನೋವು, ನಡುಕೆಳಕೆ, ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ-

ಮೂರು ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ಒಂದು ಸೆಟ್ ಅನುಪಾನ ಪತ್ರಿಕೆ ಮೇರೆ ಇಟ್ಟು ಸೇವಿಸಿದರೆ ಸಾಕು. ಶೋಧನವಾದ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾಪತ್ರಗಳನ್ನು ಪಡೆದಿದೆ.

ಕ್ರಯ:—ಒಂದುಸೆಟ್ 5ರೂ. ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1ರೂ ವಿ. ಪಿ. ಇಲ್ಲ. ಕ್ಯಾಟಲಾಗ್ ಉಚಿತ 6ರೂ ಮನಿಆರ್ಡರ್ ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ:—**A. R.** ವಿಶ್ವೇಶ್ವರಯ್ಯ (ಎ. ರಾಮಸ್ವಾಮಿ ಅಯ್ಯರ್ ಸನ್,)

Prop: ಸಂತಾನ ಸಿಂಧೂರ

ಅಂಬಳೆ ಪೋಸ್ಟು, ಯಳಂದೂರು ತಾಲೂಕು ಮೈಸೂರು ಡಿಸ್ಟ್ರಿಕ್ಟ್,
ಮೈಸೂರು ಶಾಖೆ: 269 ಸೋನಾರ್ ಸ್ಟ್ರೀಟ್, ದಿವಾನ್ಸ್‌ರೋಡು, ಮೈಸೂರು.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**



ಹೆಚ್ಚಿನ ಮಾಹಿತಿಗೆ—ಡಾ॥ ಯಂ. ಸಿ. ಶಾಸ್ತ್ರೀ, ಯಲ್. ಐ ಎಂ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಪ್ರಾತಿಶ್ರಯರು:—ಡಾ॥ ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಋತುಸ್ರಾವ ನಿಂತಿತು

'ಶುಮಾರ್' ಪಿಲ್ಸುಗಳನ್ನು ಉಪಯೋಗಿಸಿದರೆ ಹಡೆತಪ್ಪಿ ಋತುಸ್ರಾವವಾಗುವುದು, ಹೊಟ್ಟೆಗೆ ಬಲವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ. ಖರ್ಚು ಬೇರೆ]

MIS. D. DEVEE, F. DS. (N. J.)
Tollygunge CALCUTTA.

ಮೇಷ—ಶ್ರಮಪಟ್ಟು ದುಡಿವ ಶಕ್ತಿಯುಳ್ಳ ನಿಮಗೆ ಪರಿಶ್ರಮಕ್ಕುಚಿತವಾದ ಫಲ ಕಾಣಿಸದು. ಕಾರಣ "ಉದ್ಯಮೇನ ಹಿ ಸಿಧ್ಯಂತಿ ಕಾರ್ಯಾಣಿ ನ ಮನೋರಥೈಃ" ಎಂಬ ಆರ್ಯೋಕ್ತಿಯಂತೆ ಯುಕ್ತಿಯಿಂದ ಸಾಧ್ಯವಾಗತಕ್ಕ ಕಾರ್ಯಗಳು ಪರಾಕ್ರಮದಿಂದಾಗವು. ಸದ್ಯ ನಿಮ್ಮಲ್ಲಿ ಅಂತಹ ವಿವೇಕ ಶಕ್ತಿಯ ಕೊರತೆಯಿರುವುದರಿಂದಲೂ ಬೆಂಬಲಿಗರಿಲ್ಲದಿರುವುದರಿಂದಲೂ ನಿಮ್ಮಣಿಕೆಯು ಸಫಲವಾಗದು. ಸಾಂಸಾರಿಕ ಅಪತ್ತ್ಯಗಳು ಹೆಚ್ಚುವವು. ಪಿತ್ತದೋಷದಿಂದ ಆರೋಗ್ಯಕ್ಕೆ ಹಾನಿಯಿದೆ. ವಾರಾದಿಯ 3 ದಿನಗಳಲ್ಲಿ ಸ್ತ್ರೀ ಧನ ಯಾನ ಸುಖಭೋಜನಾದಿಗಳ ಲಾಭವಿದೆ.

ವೃಷಭ:—ಇತ್ತೀಚೆಗೆ ನಿಮ್ಮ ಅದೃಷ್ಟವು ದಿನದಿಂದ ದಿನಕ್ಕೆ ಹ್ರಾಸವಾಗುತ್ತಿರುವದು. ಅದರೂ ನಿಮ್ಮ ಅನುದಿನದ ಖರ್ಚುವೆಚ್ಚಗಳಿಗೂ ಕಾರ್ಯಕಲಾಪಗಳಿಗೂ ಹಾನಿ ತಟ್ಟದು. ದೈಹಿಕ ಶ್ರಮ ಶಕ್ಯವಾದ ಕಾರ್ಯಗಳಿಂದಲೂ ವ್ಯಾಪಾರಾದಿ ವ್ಯವಹಾರಗಳಿಂದಲೂ ಹೆಚ್ಚಿನ ಲಾಭಪಡೆವಿರಿ. ನೀಚಜನರಿಂದ ಧನಲಾಭವಾಗುವದು. ನಿಮ್ಮ ದುಡಿಮೆಯು ಬಹ್ವಂಶ ಶತ್ರುವರ್ಗಗಳ ಫಲವಾಗಿಯೂ ರಾಜಕೀಯ ವ್ಯಾಪಾರದಲ್ಲೂ ವ್ಯಯವಾಗಲಿದೆ. ತಾ 11, 12, 13, 14 ಈ ದಿನಗಳಲ್ಲಿ ನಿಮ್ಮ ಬಯಕೆಯು ಸಿದ್ಧಿಸುವದು.

ಮಿಥುನ:—ನಿಮ್ಮ ಕಷ್ಟದ ದಿನಗಳು ದೂರವಾದವು, ಆರ್ಥಿಕ ದುರವಸ್ಥೆಯಿಂದ ಮುಕ್ತರಾಗುವಿರಿ, ಮಾತ್ರವಲ್ಲ ಸಮಾಜದಲ್ಲಿ ಗಣ್ಯಸ್ಥಾನವನ್ನು ಗಳಿಸುವಿರಿ ಸಂಸಾರದಲ್ಲಿ ಸುಖನೆಮ್ಮದಿಗಳು ಲಭಿಸುವವು ಆದರೂ ನಿಮ್ಮ ಮನಸ್ಸಿಗೆ ಶಾಂತಿಯಿಲ್ಲವು. ಸದಾ ಹೆದರಿದ ಹುಲ್ಲೆಯೋಪಾದಿ ಚಂಚಲವಾಗಿರುವದು. ವ್ಯಾಪಾರ ವ್ಯವಹಾರಗಳಲ್ಲಿ ಕಲಹನಿಷ್ಠುರ ನಷ್ಟಗಳೂ ಪ್ರಾಪ್ತವಾಗಲಿವೆ. ವಾರಾಂತ್ಯದ 4 ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಕಾರ್ಯರೂಪಕ್ಕೆ ಒದಗಿವೆ.

ಕರ್ಕಾಟಕ:—ನಿಮ್ಮ ಧನಲಾಭ ಪತಿಗಳಾದ ರವಿ ಶುಕ್ರರು ಎಚ್ಚರಾಗಿ ನಿಮಗನುಕೂಲರಾಗಿರುವುದರಿಂದ ನೀವೀ ವಾರದಲ್ಲಿ ಹಲವಾರು ಮುಖದಿಂದ ಧನವನ್ನು ಗಳಿಸುವಿರಿ. ಹಿಂದಿನ ಸಾಲ ಕಡಗಳಿಂದ ಮುಕ್ತರಾಗಿ ಕೈಯಲ್ಲಿ ಸಾಕಷ್ಟು ಧನಸಂಗ್ರಹವಾಗುವದು. ನಿಮ್ಮ ಸಂಪತ್ತಿನಮೇಲೆ ದುರ್ಜನರ ದೃಷ್ಟಿ ಬೀಳಲಿದೆ. ಮಾತ್ರವಲ್ಲ ಅವರ ಕೈವಾಡಕ್ಕೆ ಸಿಲುಕಿ ಕೆಲವಂಶ ನಷ್ಟ ಅಪವಾದಗಳಿಗೂ ಸಿಲುಕುವ ಯೋಗವಿದೆ. ತಾ 10, 15, 16 ಈ ದಿನಗಳಲ್ಲಿ ವಿಜಯ ಲಾಭಗಳನ್ನು ಪಡೆವಿರಿ.

ಸಿಂಹ:—ದೈವವು ಬಹುತೇಕ ನಿಮಗನುಕೂಲವಾಗಿರುವುದು. ಅತವಹ ನಿಮ್ಮ ಹಲವಾರು ತಾಪತ್ರಯಗಳೂ ಶತ್ರುವೃಂದವೂ ಕೂಡ ಮೃಗರಾಜನಂ ಕಂಡಜಿಂಕೆಗಳಂತೆ ಮಾಯವಾಗುವವು. ನಿಮ್ಮ ಮನೋರಥಗಳು ನಿರ್ವಿಘ್ನದಿಂದಲೂ ನಿರಾಯಾಸದಿಂದಲೂ ನೆರವೇರುವವು ಸಂಸಾರದಲ್ಲಿ ಯಾವೊಂದು ತರದ ನ್ಯೂನತೆಗೂ ಅವಕಾಶವಿಲ್ಲವು. ತಾ 11, 12 ಅತ್ಯುತ್ತಮ ದಿನಗಳು.

ಕನ್ಯಾ:—ಗ್ರಹಮಂಡಲವೇ ನಿಮಗಿಂದು ಪ್ರತಿಕೂಲವಾಗಿನಿಂತಿರುವುದು. ಎರಡು ಶನಿಗಳು ಕೂಡ ನಿಮ್ಮ ಭಾಗಕ್ಕೆ ಸರ್ಪವಾಗಿ ಪರಿಣಮಿಸುವದು. ತಾನೊಂದು ಬಗೆದರೆ ದೈವವೊಂದಬಗೆಯಿತೆಂಬಂತೆ ನಿಮ್ಮ ಕಾರ್ಯಗಳು ನಿರೀಕ್ಷಿತಫಲವನ್ನು ಕೊಡಲಾರವು. ವಿಪತ್ಪರಂಪರೆಗಳು ಸಮುದ್ರದಲೆಗಳಂತೆ ಮೇಲಿಂದ ಮೇಲೆ ಬರಲಿವೆ ಜನತೆಯೊಡನೆ ನಿಷ್ಠುರ ಕಲಹ ಶತ್ರುಗಳ ಪ್ರತೀಕಾರ ಗೃಹ ತಾಪತ್ರಯ ದೇಹಾಲಸ್ಯ ಆರ್ಥಿಕ ದಿಕ್ಕಟ್ಟು ಇತ್ಯಾದಿ ಅನಿಷ್ಟ ಫಲಗಳಿಂದಾವೃತರಾದ ನಿಮಗೆ ತಾ. 10, 13, 14 ಕೊಂಚ ಉತ್ತಮವೆನಿಸುವವು

ತುಲಾ:—ಯುಕ್ತಿಯಿಂದಲೇ ಕಾರ್ಯ ಸಾಧಿಸುವಿರಿ. ನಿಮ್ಮ ನಿರೀಕ್ಷೆಯಂತೆ ಫಲವೂ ಲಭಿಸುವದು. ಆದರೆ ಖರ್ಚಿನಭಾಗವು ವಿಶೇಷವಾಗುವುದರಿಂದಲೂ ತ್ರಿದೋಷಾಧಿಕ್ಯದಿಂದ ಆರೋಗ್ಯ ಕೆಡುವುದರಿಂದಲೂ ನಿಮ್ಮ ತನುಮನಗಳಿಗೆ ಸುಖಶಾಂತಿಇರದು. ರಾಜಕೀಯ ಕ್ಷೇತ್ರದಲ್ಲಿ ವಿರೋಧಿಗಳಿಂದ ಪರಾಭವವುಂಟಾಗುವದು. ಶ್ರಮಜೀವಿಗಳಿಗೂ ವ್ಯಾಪಾರೀ ಜನತೆಗೂ ಈ ಕಾಲವು ಚೆನ್ನಾಗಿಲ್ಲವು. ತಾ. 11, 12, 15, 16 ಈ ದಿನಗಳು ಸಾಕಷ್ಟು ಉತ್ತಮವಿವೆ.

ವೃಶ್ಚಿಕ:—ನಿಮ್ಮ ಕಾರ್ಯ ಕಲ್ಪಾಪಗಳು ಯಾವೊಂದು ತರದ ವಿಘ್ನ ವಿಡಂಬರಗಳಿಲ್ಲದೆ ಕೊನೆ ಹೊಂದುವವು. ಆದರೆ ಪ್ರತಿಫಲವು ಮಾತ್ರ ಖರ್ಚನ್ನತಿಕ್ರಮಿಸದು. ಮನೆಯ ಜನರೊಳು ಪರಸ್ಪರ ಕಲಹ ಮನಸ್ತಾಪಗಳು ಹೆಚ್ಚಿ ಚಿತ್ತ ದುಃಖಕ್ಕೆ ಗುರಿಯಾಗುವಿರಿ. ಟಿಕೋಪಿಷ್ಟ ವಿಕಾರದಿಂದ ಆರೋಗ್ಯವು ಕೆಡಲಿದೆ. ತಾ 10-13-14 ಈ ದಿನಗಳಲ್ಲಿ ಮಿತ್ರಜನರ ಬೆಂಬಲವು ಲಭಿಸುವದು, ಸುಖಭೋಜನಗಳನ್ನು ಹೊಂದುವಿರಿ.

ಧನುಃ—ಭಾಗ್ಯಲಾಭ ಪತಿಗಳು ಉಚ್ಚರಾಗಿದ್ದು ದೇಹಸುಖ ಪತಿಯಾದ ಗುರುವು ಪೂರ್ಣ ದೃಷ್ಟಿಯಿಂದ ನಿಮ್ಮನ್ನು ನೋಡುತ್ತಿರುವುದರಿಂದ ನೀವು ಹಿಂದಿನ ದುಃಖಗಳೆಲ್ಲವನ್ನು ಮರೆತು ಇಂದು ಸುಖಜೀವನ ಮಾಡಲಿರುವಿರಿ. ಯಾವ ತರದ ನ್ಯೂನಾತಿರಿಕ್ತಗಳೂ ನಿಮ್ಮಲ್ಲಿ ಕಾಣಿಸಲೊಲ್ಲವು. ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ಸ್ಥಾನ ಮಾನಾದಿಗಳನ್ನು ಪಡೆವಿರಿ. ಸದ್ಯ ನಿಮ್ಮಲ್ಲಿನ ಕೊರತೆಯೊಂದರೆ ಮಾನಸಿಕ ದೌರ್ಬಲ್ಯವೊಂದೇ ತಾ 13-14 ಬಿಟ್ಟುಳಿದ ದಿನಗಳು ಉತ್ತಮವಿರುವವು.

ಮಕರ:—ನೀರಿನಲ್ಲಿ ಗೈದ ಹೋಮದಂತೆ ವ್ಯರ್ಥವಾಗುವದು ನಿಮ್ಮ ಪರಿಶ್ರಮವು. ಅಪ್ತೇಷ್ಟರ ವಿರಹ ಬಂಧು ಜನರೊಳಗಿನ ಮನಸ್ತಾಪ ಸಾಂಸಾರಿಕ ತಾಪತ್ರಯ ಇವುಗಳಿಂದ ಬಳಲಿದ ನಿಮಗೆ ಅಧಿಕಾರಿ ವರ್ಗದಿಂದಲೂ ಭಯವುಂಟಾಗಲಿದೆ. ವಿದ್ಯೋಪಜೀವಿ ನೌಕರ ವರ್ಗಕ್ಕೂ ಶ್ರಮಜೀವಿಗಳಿಗೂ ವಿದ್ಯಾರ್ಥಿ ವೃಂದಕ್ಕೂ ಈ ವಾರವು ಅನಿಷ್ಟಕರವಿದೆ. ತಾ 11-12-13-14 ಈ ದಿನಗಳು ಹೆಚ್ಚಿನ ಅನಿಷ್ಟದಾಯಿಗಳಾಗವು.

ಕುಂಭ—ವ್ಯಾಪಾರ ವಹಿವಾಟುಗಳಲ್ಲಿ ಅತ್ಯಧಿಕವಾದ ಫಲಪ್ರಾಪ್ತಿಯಿದೆ. ಉದ್ಯೋಗದಲ್ಲಿ ಮತ್ತು ಶ್ರಮಸಿದ್ಧ ಕಾರ್ಯಗಳಲ್ಲೂ ನಿರೀಕ್ಷೆಗಿಂತ ಅಧಿಕ ಫಲಲಾಭವಿದೆ, ಆದರೆ ಆರೋಗ್ಯ ಭಾಗದಲ್ಲಿ ಕಫಪಿತ್ತ ಪ್ರಕೋಪದಿಂದಾಗಿ ಜೆಮ್ಮಿದಿಯಿಂದು ಅನಿರೀಕ್ಷಿತ ಪ್ರವಾಸವು ಗಂಟುಬೀಳುವದು. ಹೆಂಡತಿ ಮಕ್ಕಳ ವಿರಹವುಂಟಾದೀತು. ಸುಖ ಭಾಗ್ಯಾಧಿಪನ ಅನುಗ್ರಹದಿಂದಾಗಿವಾರಾಂತ್ಯದ4ದಿನಗಳು ಸುಖಕರಗಳಾಗಿ ಪರಿಣಮಿಸಲಿವೆ.

ಮೀನ—ಯಾವುದೇ ಏನೇ ಆಗಲಿ ನಿಮ್ಮ ಸ್ವಂತ ಉಪಭೋಗಕ್ಕೆ ಯಾವೊಂದು ತರದ ನ್ಯೂನತೆ ಬರದು. ಶತ್ರುಗಳ ಪೀಡಾಧಿಕ್ಯದಿಂದಾಗಿ ಕಾರ್ಯವು ನೆನೆದಂತೆ ಆಗಲಾರದು. ಬಂಧುಮಿತ್ರರಲ್ಲೂ ಅವಿಶ್ವಾಸವುಂಟಾಗಲಿದೆ. ಶ್ರಮಜೀವಿಗಳಿಗೆ ದಿನಯಾಪನೆಯು ದುಸ್ತರವಾಗಲಿದೆ. ದೇವ ಗುರುಗಳ ಅನುಗ್ರಹದಿಂದಾಗಿ ನೀವು ತಾ. 10, 15, 16 ಈ ದಿನಗಳನ್ನು ಸುಖದಿಂದ ಕಳೆವಿರಿ.

ವಾರದ ಭವಿಷ್ಯ

ತಾರೀಕು 10-4-52 ರಿಂದ — ತಾರೀಕು 16-4-52 ವರೆಗೆ

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಶುಂಠಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ, ನೋವಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹಾಳುಕಡ್ಡಿ, ಮದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI. S. Kanara.

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯ ಪರ್ವತದಿಂದ ತೆಗೆಯಲ್ಪಡುವಂಥ ಅಪೂರ್ವ ವಸ್ತು, ಔಷಧಿಗಳ ರಾಜ; ಶಿಲಾಜಿತ್ತನ್ನು ಮೂಲಿಕೆಗಳೊಡನೆ ಸೇರಿಸಿ ಲೇಹ್ಯಮಾಡಿದೆ. ಇದು ಶೀತ, ಉಷ್ಣ, ಮಳೆ ಸರ್ವಕಾಲದಲ್ಲೂ ಒಂದೇಸಮನೆ ತನ್ನ ಶಕ್ತಿಯನ್ನು ತೋರಿಸುತ್ತದೆ. ಇದರ ಸೇವನೆಯಿಂದ ದೇಹ ದಾರ್ಢ್ಯವೂ, ಶಕ್ತಿಯೂ ಉಂಟಾಗುತ್ತದೆ. ಮುಖ್ಯವಾಗಿ ಹೊಟ್ಟೆನೋವು ಅನ್ನ ಸೇರದಿರುವಿಕೆ ಇವೇ ಮೊದಲಾದ ರೋಗಗಳಿಗೆ ಒಂದೆರಡು ದಿನಗಳಲ್ಲಿಯೇ ಗುಣಕೊಡತಕ್ಕ ಔಷಧವಿದು. ಕೆಮ್ಮು, ಶ್ವಾಸದಮ್ಮು, ಮೂಲ, ಒಳಮೂಲ, ರಕ್ತಮೂಲ, ಬಹುಮೂತ್ರ, ಹೊಟ್ಟೆಯಲ್ಲಿ ಗಡ್ಡೆ ಇರುವಿಕೆ ಮತ್ತು ವಾಯುವಿನಿಂದ ಉಂಟಾಗತಕ್ಕ ಸರ್ವ ವ್ಯಾಧಿಗಳಿಗೂ ದಿವ್ಯೌಷಧ. ವಿದ್ಯಾರ್ಥಿಗಳು ಸೇವಿಸುವುದರಿಂದ ಜ್ಞಾಪಕಶಕ್ತಿಯೂ ಮತ್ತು ಚಟುವಟಿಕೆಯೂ ಹೆಚ್ಚುತ್ತೆ. ವೃದ್ಧರು ಸೇವಿಸುವುದರಿಂದ ಶಕ್ತಿಯನ್ನು ಹೆಚ್ಚಿಸಿ; ದಾರ್ಢ್ಯವನ್ನುಂಟುಮಾಡುತ್ತೆ.

ಹೆಂಗಸರಿಗೆ— ಅಕಾಲ ಬಹಿಷ್ಟೆ, ಕೈಕಾಲು ಹಿಡಿತ, ಕೀಲುವಾಯು, ಹೊಕ್ಕಳು ಶೂಲೆ ಮತ್ತು ಉಷ್ಣದಿಂದಾಗುವ ಇತರ ರೋಗಗಳಿಗೆ ದಿವ್ಯೌಷಧ. ದುರ್ಬಲರಾಗಿ ಕೇವಲ ಕೃಶರಾಗಿರುವ ಶಿಶುಗಳಿಗೆ ಈ ಔಷಧವನ್ನು ಪ್ರತಿ ಬೆಳಿಗ್ಗೆ, ಸಂಜೆ ಕೊಟ್ಟರೆ ಸ್ವಲ್ಪ ಕಾಲದಲ್ಲಿಯೇ ದೃಢಾಂಗರಾಗುವರು, ಇದು ಖಂಡಿತ.

೪೪ ದಿನದ ಲೇಹ್ಯಕ್ಕೆ ರೂ. ೫-೪-೦, ೨೨ ದಿನದ ಲೇಹ್ಯಕ್ಕೆ ರೂ. ೩-೪-೦ (ಪೋಸ್ಟೇಜು ಮಾಫಿ)

ನೀಲಿಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ

ಸುಲಭದಲ್ಲಿ ಇಂಗ್ಲಿಷ್

ಅತಿ ಸುಲಭದಲ್ಲಿ ತನ್ನಷ್ಟಕ್ಕೆ ತಾನೇ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿಸಲ್ಪಟ್ಟ

ಅತಿ ಉಪಯುಕ್ತ ಪುಸ್ತಕ

ಬೆಲೆ ರೂ- 1-8-0, ವಿ- ಪಿ. ದ್ವಾರ ರೂ- 2-0-0

ವಿಳಾಸ—

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published By K. H. Shetty at the Navayuga Press, Udipi, S. India.

Regd.No. M. 3618
LICENCE No. 31
Licensed to Post without Prepayment

ESTD. 1921 ಸ್ಥಾಪನೆ
31 ನೆಯ ವರ್ಷ

17-4-1952

Founder: Sri A. B. Shetty,
Minister for Medical & Public Health

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಸಾರ್ವಜನಿಕ
ಆರೋಗ್ಯ ಮಂತ್ರಿ
ಎ.ಬಿ.ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ, ದ. ಕ

ವಾರ್ಷಿಕ ಚಂದಾ
ರೂ 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೩೨

NAVAYUGA WEEKLY Post Box No. 22 UDIPI. Vol 31 No 32

> "...ಸಮಸ್ಯೆಗಳ ತಿರುಳನ್ನು ಕಂಡುಕೊಳ್ಳುವ ಜಾಣ್ಮೆಯೇ ಪ್ರತಿಭೆಯೆನ್ನಬಹುದು"

> "ನಾವು ಭಾಗ್ಯದ ಹಿಂದೆ ಓಡುತ್ತೇವೆ, ಭಾಗ್ಯವೂ ನಮ್ಮ ಹಿಂದೆ ಓಡಿಬರುತ್ತದೆ"

ಸರ್ವೋದಯ ಸಂಸ್ಕೃತಿ

ಸಮಾಜದ ಸರ್ವ ಅಂಗಗಳಿಗೂ ಮಾರ್ಗದರ್ಶನಗೊಟ್ಟು ಬೆಳೆದು ಮುಂಬರುತ್ತಿರಬೇಕಾದ ಒಂದು ಸಂಸ್ಕೃತಿಯು ಯಾವುದೇ ಆತಂಕ, ಸಂಕೀರ್ಣತೆಗಳ ದಿಸೆಯಿಂದ ಇತರ ಸಂಸ್ಕೃತಿ, ಕಲೆಗಳೊಡನೆ ಮಿಳಿತವಾಗದೆ ಹಿಂಜರಿಯಲಾರದು. ಕಲೆ ಸಂಸ್ಕೃತಿಗಳು ಅಖಂಡವಾದುವು. ಅವುಗಳ ಇತಿಮಿತಿಗೆ ನಿರ್ಬಂಧವಿಲ್ಲ. ಅವುಗಳ ನಿಯಮವು ಸರ್ವಾತೀತವಾದುದು. ಪ್ರತಿಯೊಂದು ವಸ್ತುವಿಗೂ ಒಂದು ವೈಶಿಷ್ಟ್ಯತೆ ಇದ್ದರೂ ಹೇಗೆ ಒಂದು ವಸ್ತುವು ಮತ್ತೊಂದರಿಂದ ಭಿನ್ನವೆಂದು ತೋರಿದರೂ ಅವುಗಳಲ್ಲಿ ಸಾಮರಸ್ಯವಿದ್ದೇ ಇದೆ. ಅದರಂತೆಯೇ ಸಂಸ್ಕೃತಿಯೂ ಕೂಡ. ಒಂದು ಉದಾಹರಣೆಯನ್ನು ಕೊಟ್ಟು ಹೇಳುವುದಾದರೆ ಕಲ್ಕತ್ತ, ಡೆಲ್ಲಿ ಇವು ಎರಡು ನಗರಗಳು. ಪ್ರತಿಯೊಂದಕ್ಕೂ ಒಂದೊಂದು ವೈಶಿಷ್ಟ್ಯವಿದೆ ಪ್ರತಿಯೊಂದರ ಜೀವನದಲ್ಲೂ ವೈವಿಧ್ಯತೆ ಇದೆ. ಕಲ್ಕತ್ತಾದ ಜನರ ಜೀವನ, ನಡತೆ, ರೀತಿಯಲ್ಲೂ ಡೆಲ್ಲಿಯ ಜನರ ಜೀವನ ನಡತೆಯಲ್ಲೂ ವ್ಯತ್ಯಾಸವಿದೆ ಹೀಗೆ ಎರಡು ನಗರಗಳಲ್ಲಿ ಭಿನ್ನತೆ ಇದ್ದರೂ ಗಾಳಿಯು ಈ ಎರಡು ನಗರಗಳಲ್ಲೂ ನಿರ್ಬಾಧಕವಾಗಿ ಹೇಗೆ ಬೀಸುವುದೋ, ಸೂರ್ಯನ ಬೆಳಕು ಎರಡು ನಗರಗಳಿಗೂ ಯಾವ ರೀತಿ ಆತಂಕವಿಲ್ಲದೆ ಬೀಳುವದೋ ಅದೇ ರೀತಿ ಸಂಸ್ಕೃತಿಯೂ ಕೂಡ. ಸಂಸ್ಕೃತಿಯು ಹಿಡಿದು ಒಂದೆಡೆ ಕಟ್ಟಿಡಲು ಸಾಧ್ಯವಾದ ವಸ್ತುವಲ್ಲ. ಯಾವ ರೀತಿ ಗೋಡೆಗಳನ್ನು ನಿರ್ಮಿಸಿ ಗಾಳಿಯನ್ನು ತಡೆದು ನಿಲ್ಲಿಸಲು ಯತ್ನಿಸಿದರೆ ಗಾಳಿಯು ತನ್ನಿಂದ ತಾನೇ ಕೆಟ್ಟು ಹೋಗಿ ತನ್ನ ಪವಿತ್ರತೆಯನ್ನೂ ಜೀವದಾಯಕ ಶಕ್ತಿಯನ್ನೂ ಕಳೆದುಕೊಳ್ಳುವದೋ ಅದೇರೀತಿ ವಿಶಾಲದೃಷ್ಟಿಯಿರದ ಸಂಸ್ಕೃತಿಯು ಉನ್ನತಿಯನ್ನು ಹೊಂದಲಾರದು. ನಿಂತ ನೀರು ಕೆಡುವದು. ಬೀಸದ ಗಾಳಿಯು ಹಾಳೆನಿಸುವದು ಅದರಂತೆ ಪ್ರಗತಿಶೀಲವಲ್ಲದ ಸರ್ವಾಂಗೀಣವಲ್ಲದ, ಗಡಿ, ಮೇರೆಗಳನ್ನು ಮೀರದ ಸಂಸ್ಕೃತಿಯೂ ಕಲುಬಿ ಕಳೆಗುಂದುವದು. ಅಂತರೀಕ ವಿವಾಹದಿಂದ, ಅಂತರ್ಭೋಜನದಿಂದ ನಮ್ಮ ಸಂಸ್ಕೃತಿ ಹಾಳಾಗುವದೆಂದು ಹೇಳುವದು ತಪ್ಪಭಿಪ್ರಾಯ. ಇಂಥಾ ಮಿಲನದಿಂದ ಹೊಸ ಜೀವನ ಸ್ಫುರಿಸುತ್ತದೆ. ಪರಸ್ಪರ ಮಿಲನ, ಪರಸ್ಪರ ಸಹಕಾರ, ಪರಸ್ಪರ ಹೊಂದಿ ನಡೆಯುವ ಬುದ್ಧಿಯು ಸಂಸ್ಕೃತಿಗೆ ಕಳೆಕೊಟ್ಟು, ತಪ್ಪಭಿಪ್ರಾಯಗಳನ್ನು ದೂರಮಾಡಿ ಜೀವನವನ್ನು ಆರಾಧ್ಯವನ್ನಾಗಿ ಮಾಡುತ್ತದೆ. ಭಾರತೀಯರ ವೈದಿಕ ಧರ್ಮವು ಇತರ ಧರ್ಮಗಳಿಗೂ ಆಸರೆಯಾಗಿ ಸರ್ವಮತಗಳ ಜನನಿ ಎನಿಸಿದುದರಿಂದಲೇ ಇಂದೂ ಅದು ಶಕ್ತಿಶಾಲಿನಿಯಾಗಿದೆ.

೦೦ ೦೦ ೦೦

ದಬ್ಬಾಳಿಕೆಯ ಕಾಲ ಮುಗಿಯಿತು, ಜಯಿಸಿ ಹಿಡಿತದಲ್ಲಿಟ್ಟು ತನ್ನಿಚ್ಛೆಯಂತೆ ನಡೆಸುವ ಆ ಕಾಲವೂ ಮುಗಿಯಿತು. ಇದೀಗ ಸೇವೆಯ ಕಾಲ ಮಾನವ ಗಣದ ಸೇವೆಯೇ ಇಂದಿನ ಯೋಗ್ಯಾಯೋಗ್ಯತೆಯನ್ನು ಅಳೆಯುವ ಅಂತೆ ಕೋಲು. ಅನಾದಿ ಕಾಲದ ಸಂಪ್ರದಾಯಗಳನ್ನೇ ಹಿಡಿದು, ಅವು ಪರಮ ಪೂಜ್ಯವೆಂದೂ, ಓಬೀರಾಯನ ಕಾಲದ ಪದ್ಧತಿಗಳೇ ಸರ್ವಮಾನ್ಯವಾಗಬೇಕೆಂದೂ ವಾದಿಸುವ ಸನಾತನಿಗಳ ಹಾಗು ಹಿನ್ನೆಯ ವೈಭವವನ್ನು ನೆನಸಿ ಅದರ ಹೆಗ್ಗಳಿಕೆಯನ್ನು ಕೊಚ್ಚುತ್ತಾ ಇಂದಿನ ಪರಿಸ್ಥಿತಿಯನ್ನು ಮರೆತಿರುವ ಪ್ರತಿಗಾಮಿಗಳನ್ನು ಗಣಿಸದೆ ಮುಂದೆ ಸಾಗಬೇಕು. ಗತ ಕಾಲದ ವಿಚಾರಗಳು ಈ ಕಾಲಕ್ಕೆ ಯೋಗ್ಯವಾಗಿದ್ದರೆ ಮಾತ್ರ ಅವುಗಳಿಗೆ ಮಾನ್ಯತೆ. ಆದ್ದರಿಂದ ಗತಕಾಲದ ಪದ್ಧತಿ ಸಿದ್ಧಾಂತಗಳನ್ನು ಪರಿಶೀಲಿಸಿ ಯೋಗ್ಯವಾದುವನ್ನು ಎತ್ತಿಕೊಂಡು ಅಯೋಗ್ಯವಾದವುಗಳನ್ನು ಕಿತ್ತೆಸೆಯಬೇಕು. ಇಂದಿನ ಯುಗದ ವಾಣಿಯು ಮಂತ್ರವೆಂದರೆ ಮಾನವತೆ ಮತ್ತು ಸೇವೆ' ವಿವಿಧ ಜಾತಿಗಳು, ವಿವಿಧ ಸಂಘಗಳು, ವಿವಿಧ ಪದ್ಧತಿಗಳು, ವಿವಿಧ ಆಚರಣೆಗಳು ಮಾನವ ಸಮೂಹವನ್ನು ವಿವಿಧ ದಿಕ್ಕುಗಳಿಗೆ ಎಳೆದು ಐಕ್ಯತೆಯನ್ನು ಕೆಡಿಸಿ ಹರಿದು ಹಂಚಿ ಹಾಕುತ್ತಿರುವ ಇಂದಿನ–ಸಮಯದಲ್ಲಿ ಐಕ್ಯತೆಯನ್ನು ಸಾಧಿಸುವುದೇ ಸರ್ವರ ಪರಮ ಗುರಿಯಾಗಬೇಕು. ಚರಿತ್ರೆಯಲ್ಲಿ ಹರಡಿ ಹಂಚಿರುವ ವಿವಿಧ ಸಾರಗಳಿಂದ ಅನುಭವವನ್ನು ಪಡೆದು ಅವುಗಳನ್ನು ಮಾನವ ಜೀವನದಲ್ಲಿ ಹೆಣೆದು ಸರ್ವೋದಯ ಸಂಸ್ಕೃತಿಯ ರಚನೆ ಮಾಡಬೇಕು.

ಇದನ್ನು ಸಾಧಿಸಲು ಮಿತಿ ಇಲ್ಲದ ಸಹನ, ಸತತ ಪ್ರಯತ್ನ ಮತ್ತು ಮೇರೆಯಿರದ ಶಾಶ್ವತವಾದ ಪ್ರೇಮವು ಅಗತ್ಯ. ಇದು ಸರ್ವೋದಯ ಸಂಸ್ಕೃತಿಯ ಪೂರ್ಣ ಅರಿವು ಜನರಿಗಾಗದಿರಬಹುದು. ಅರಿವಾದ ಕೆಲವರೂ ಇದು ಸಾಧ್ಯವೇ ಎಂದು ಇಂದಿನ ಕೃತ್ರಿಮ ನಾಗರಿಕತೆಯನ್ನೇ ಸರ್ವಸ್ವವೆನ್ನಬಹುದು. ಆದರೆ ಸರ್ವೋದಯವು ನಾಳೆ ಜಾರಿಯಲ್ಲಿ ಬರುವ ಹೊಸ ಸಂಸ್ಕೃತಿ ಯಾರು ದೀನರಲ್ಲಿ, ದಲಿತರಲ್ಲಿ, ಪತಿತರಾದವರಲ್ಲಿ ತನ್ನ ಸಹೋದರತೆಯನ್ನು ಕಂಡು ಅವರ ಹಿತಕ್ಕಾಗಿ ದುಡಿಯುವ ಎದೆಗಾರಿಕೆಯನ್ನು ತಂದುಕೊಳ್ಳುವರೋ ಅಂಥವರು ನಾಳೆಯ ಈ ನವ ಸಂಸ್ಕೃತಿಯ ಪಥದರ್ಶಕರಾಗುವರು. ಅಂಥವರ ಪಥದರ್ಶನವನ್ನು ಒಪ್ಪಿ ಅದನ್ನು ಜಗತ್ತು ಅನುಸರಿಸುವದು. ಯಾರು ನಮ್ಮ ಹಿಂದಿನ ಚರಿತ್ರೆಯನ್ನು ಚೆನ್ನಾಗಿ ಅಭ್ಯಸಿಸಿರುವನೋ ಅವನೇ ವರ್ತಮಾನ ಪರಿಸ್ಥಿತಿಯನ್ನು ಚೆನ್ನಾಗಿ ಅರಿಯಬಲ್ಲನಲ್ಲದೆ ನಾಳೆಯ ಭವ್ಯ ಭವಿಷ್ಯದ ದೃಷ್ಟಿಯಿಟ್ಟು ಆ ಬಗ್ಗೆ ಮುಂದಾಳ್ತನದ ಭಾರವನ್ನು ಹೊತ್ತು ದುಡಿಯುವನು. ಧೈರ್ಯದಿಂದ ವಿಶ್ವಾಸದಿಂದ ತನ್ನ ಜೀವನವನ್ನು ಮಾನವ ಗಣದ ಸೇವೆಗೆ ಮುಡಿಪಿಟ್ಟು ದುಡಿದು, ಸಾಮಾನ್ಯ ಜನಜಂಗುಳಿಯ ನರ ನಾಡಿಗಳಲ್ಲೂ ಅಸಾಮಾನ್ಯ ಚೇತನವನ್ನು ತುಂಬಿ ಗಾಂಧೀಜಿಯವರ ಆಶ್ರಯವನ್ನು ಸಾಧಿಸುವನು.

೦೦ ೦೦ ೦೦

ಇದಕ್ಕಾಗಿ ನಮ್ಮ ಹಿಂದಿನ ಸಂಪ್ರದಾಯ, ನಂಬಿಕೆ, ವಿಶ್ವಾಸಗಳನ್ನು ಪರಿಶೀಲಿಸಿ ಅಹಿತವಾದುವನ್ನು ದೂರತಳ್ಳಿ ಹೊಸ ವಿಚಾರಗಳಿಗೆ ಆಸ್ಪದ ಮಾಡಬೇಕು. ಹೊಸ ವಿಚಾರಗಳನ್ನು ಅರಿತು, ಅವುಗಳಂತೆ ಕಾರ್ಯಮಾಡಲು ತಯಾರಾಗಬೇಕು. ಗಾಂಧೀಜಿಯವರು ಇಂಥಾ ಒಂದು ಕಾರ್ಯಕ್ಕಾಗಿ ನಮಗೆಲ್ಲರಿಗೂ ದೀಕ್ಷೆ ಕೊಟ್ಟಿದ್ದಾರೆ. ಅನೇಕರಲ್ಲಿ ಸತತ ದುಡಿಯುವ ಫಲವನ್ನೂ ಹುಟ್ಟಿಸಿದ್ದಾರೆ ಈ ಫಲವು ಸರ್ವ ಎಡೆ ಹಬ್ಬಬೇಕು. ಸರ್ವ ಮಾಲೆ

[[illegible]ನೇ ಪುಟ ನೋಡಿರಿ.]

Our Pigmy Deposit Scheme

.... brings our bank to your door. You may save as small a sum as annas two. Our collector will call on you every day to receive it.

At the rate of annas two per day you save Rs. 50 in 7 years because we allow interest at 3⅛% per annum. At the rate of Re. 1/- per day your Savings are Rs 2,800/- in 7 years. At the rate of Rs. 10/- it is Rs. 28,000/-. Come in to-day and join the band of **Prudent Prosperous Pigmy People.**

The Canara Industrial & Banking Syndicate Ltd.

Estd: 1925. H. O. UDIPI

ಹಿಂದುಸ್ಥಾನದಲ್ಲಿ ನಾಣ್ಯ ತಯಾರಿಕೆ

ಒಂದು ದೇಶದ ನಾಣ್ಯ ಚಲಾವಣೆಯು ಆದರ ಸರ್ವ ಸ್ವಾತಂತ್ರ್ಯತೆಯ ಪ್ರಾಮುಖ್ಯ ಚಿಹ್ನೆಯೆಂದು ತಿಳಿಯಲಾಗಿದೆ. ನಾಣ್ಯ ಚಲಾವಣೆಯು ಜನತೆಯು ಸ್ಪರ್ಧಿಸಲಾಗದ ಒಂದು ವ್ಯಾಪಾರ ವಹಿವಾಟು. ಅರಸನಿಗೆ ಮತ್ತು ಸರಕಾರಕ್ಕೆ ಮಾತ್ರವೇ ನಾಣ್ಯ ಹೊರಡಿಸುವ ಹಕ್ಕಿದೆ. ಹಿಂದುಸ್ಥಾನದಲ್ಲಿ ನಾಣ್ಯ ತಯಾರಿಕೆಯು 1757ರಿಂದ ಆರಂಭವಾಗಿದೆ. ಈ ಆಧುನಿಕ ಕಾಲದ ನಾಣ್ಯ ತಯಾರಿಕೆಯ ಚರಿತ್ರೆಯಲ್ಲಿ ಈ ವರ್ಷ ಕಲ್ಕತ್ತದ ಆಲಿಪುರದಲ್ಲಿ ಹೊಸ ಟಂಕಶಾಲೆಯು ಸ್ಥಾಪಿತವಾದುದು ಒಂದು ಪ್ರಾಮುಖ್ಯ ಹಾಗೂ ಹೊಸ ಘಟ್ಟವೆನ್ನಬಹುದು. ಈ ಟಂಕಸಾಲೆಯ ಉದ್ಘಾಟನಾ ಕಾರ್ಯವು ಹಿಂದುಸ್ಥಾನ ಸರಕಾರದ ಆರ್ಥಿಕ ಮಂತ್ರಿ ಮಾನ್ಯ ಶ್ರೀ ಚಿಂತಾಮಣಿ ದೇಶಮುಖರವರಿಂದ ಜರಗಿದೆ. ಈ ಹೊಸ ಸಾಲೆಯಲ್ಲಿ, ಈಗ ಸಾಕಷ್ಟು ನಾಣ್ಯಗಳನ್ನು ತಯಾರಿಸುವುದಕ್ಕೆ ಬೇಕಾದ ಏರ್ಪಾಡಿದೆ. ಕ್ರಮೇಣ ಹಿಂದುಸ್ಥಾನಕ್ಕೆ ಬೇಕಾದ ನಾಣ್ಯಗಳನ್ನು ತಯಾರಿಸುವುದು ಮಾತ್ರವಲ್ಲದೆ, ಪರದೇಶಗಳಿಗೆ ಸಹ ನಾಣ್ಯಗಳನ್ನು ತಯಾರಿಸಿ ಕಳುಹಿಸಿಕೊಡುವಂತೆ ಇದನ್ನು ವೃದ್ಧಿಗೊಳಿಸಲಾಗುವುದು.

ಟಂಕಸಾಲೆಯಲ್ಲಿ ನಾಣ್ಯಗಳು ತಯಾರಿಸಲ್ಪಡುತ್ತವೆ. ಇಲ್ಲಿ ನೋಟುಗಳು ತಯಾರಾಗುವುದಿಲ್ಲ. ಜನತೆಗೆ ಬೇಕಾದ ನಾಣ್ಯಗಳ ಸರಬರಾಯಿ ಸಾಕಷ್ಟಿರುವಂತೆ ನೋಡಿಕೊಳ್ಳುವುದು ಸರಕಾರದ ಕರ್ತವ್ಯ. ಸರಕಾರದ ಪರವಾಗಿ ಈ ಕಾರ್ಯವನ್ನು ಟಂಕಸಾಲೆಯು ನಿರ್ವಹಿಸುತ್ತದೆ.

ಹಿಂದುಸ್ಥಾನದ ಪ್ರಥಮ ರೂಪಾಯಿ ನಾಣ್ಯವು 1757ನೇ ಆಗೋಸ್ತು 29ರಂದು ಕಲ್ಕತ್ತಾದಲ್ಲಿ ತಯಾರಿಸಲ್ಪಟ್ಟಿತು. ಇಂಡಿಯಾ ಕಂಪೆನಿಯು ನವಾಬ್ ಸಿರಾಜ್-ಉದ್-ದೌಲನೊಡನೆ ಒಪ್ಪಂದ ನಡೆಸಿ, ದೇಶದಲ್ಲಿ ಟಂಕಸಾಲೆ ಸ್ಥಾಪಿಸುವ ಅಧಿಕಾರವನ್ನು ಪಡೆದು ನಂತರ ರೂಪಾಯಿ ನಾಣ್ಯ ತಯಾರಿಸಿದುದು. ಪ್ರಥಮದ ಟಂಕಸಾಲೆ ಎಲ್ಲಿತ್ತೆಂದು ತಿಳಿದಿಲ್ಲ. ನಾಣ್ಯಗಳನ್ನು ಅಚ್ಚುಗಳ ನಡುವೆಯಿಟ್ಟು ಗುದ್ದಲಿಯಿಂದ ಹೊಡೆದ ತಯಾರಿಸಲಾಗುತ್ತಿತ್ತು. ಅವು ಅಷ್ಟೊಂದು ನಾಜೂಕಿನ ಕೆಲಸಗಳಾಗಿರಲಿಲ್ಲ. ಆ ನಾಣ್ಯಗಳು ನಿಜವಾಗಿಯೂ ಆಗ ಚಲಾವಣೆಯಲ್ಲಿದ್ದ ಮೊಗಲರ ನಾಣ್ಯಗಳ ಪ್ರತಿ ರೂಪಗಳಾಗಿದ್ದುವು. ಈ ಕೆಲಸವನ್ನು ಸುಮಾರು 40 ಕೂಲಿಗಳಿಂದ ಎಳೆಯಲ್ಪಡುವ ರೋಲಿಂಗ್ ಮಿಲ್‌ಗಳು ಮಾಡುತ್ತಿದ್ದುವು. ಲೋಹವನ್ನು ಇದ್ದಲಿಯಿಂದ ಉರಿಯುತ್ತಿದ್ದ ದೊಡ್ಡ ಬೆಂಕಿಯಲ್ಲಿ ಕರಗಿಸಲಾಗುತ್ತಿತ್ತು. ಈ ಬೆಂಕಿಯಿಂದ ಹೊರಡುತ್ತಿದ್ದ ಉಷ್ಣತೆಯೂ ಹೊಗೆಯೂ ಅತಿ ಎಚ್ಚರಿಕೆಯಿಂದ ಕೆಲಸಮಾಡುವ ಇನ್ಸ್‌ಪೆಕ್ಟರನ್ನು ಹೆದರಿಸಿ ದೂರ ತಳ್ಳುತ್ತಿದ್ದುವು. ಆ ಕಾಲದಲ್ಲಿ ಲೋಹ ಕರಗಿಸುವವರ ಕೆಲಸವು ಅತಿ ಲಾಭದಾಯಕವಾಗಿತ್ತು!

ಸಾಕಷ್ಟು ಯಂತ್ರೋಪಕರಣಗಳಿಂದ ಕೂಡಿದ ಒಂದು ಯೋಗ್ಯ ಟಂಕಸಾಲೆಗೆ ಅಸ್ತಿವಾರ ಹಾಕಿದುದು 1824ರಲ್ಲಿ. ಬಂಗಾಳದ ಇಂಜಿನಿಯರರಾಗಿದ್ದ ವಿಲ್ಲಿಯಂ ನೈರನ್ ಫೋರ್ಬೆಸ್ ಮೊದಲನೆಯ ಮಿಂಟ್ ಮಾಸ್ಟರಾಗಿದ್ದರು. ಮೇಜರ್ ಜನರಲ್ ಫೋರ್ಬೆಸ್ 1885ನೇ ಮೇ ತಿಂಗಳಲ್ಲಿ ಏಡನಿನ ಸಮೀಪ ಸಮುದ್ರದಲ್ಲಿ ಬಿದ್ದು ಮೃತರಾದರು. ಇವರು ಹಿಂದುಸ್ಥಾನದ ಟಂಕಸಾಲೆಯ ಚರಿತ್ರೆಯಲ್ಲಿ ಅತಿ ಪ್ರಖ್ಯಾತ ಮಿಂಟ್ ಮಾಸ್ಟರರ ಪೈಕಿ ಒಬ್ಬರೆಂದು ಎಣಿಸಲಾಗಿದೆ. ಇವರು ಹಿಂದುಸ್ಥಾನದಲ್ಲಿ ಹೊತ್ತ ಮೊದಲನೆಯ ಟಂಕಸಾಲೆಯನ್ನು ಸ್ಥಾಪಿಸಲು ಸಹಾಯವಿತ್ತರು ಮಾತ್ರವಲ್ಲದೆ, ಟಂಕಸಾಲೆಯ ಕೆಲಸವನ್ನು ಕ್ರಮಬದ್ಧ ಹಾಗೂ ಶಾಶ್ವತ ತಳಹದಿಯಲ್ಲಿ ಕೂಡ ಇರಿಸಿದರು. ಕಲ್ಕತ್ತದ ಟಂಕಸಾಲೆಯು 1829ನೇ ಆಗೋಸ್ತು 1ನೇ ದಿನ ನಾಣ್ಯ ತಯಾರಿಸಲು ಆರಂಭಿಸಿದುದಾಗಿದೆ. ಅದು ಇಂದಿಗೂ ಕಲ್ಕತ್ತದ ಸ್ಟ್ರೇಂಟ್ ರಸ್ತೆಯಲ್ಲಿದ್ದು ನಾಣ್ಯ ತಯಾರಿಸುತ್ತಿದೆ.

ಈ ಟಂಕಸಾಲೆಯಿರುವ ಸ್ಥಳದಲ್ಲಿ ಮಣ್ಣು ಗಟ್ಟಿಯಾಗಿಲ್ಲದಿರುವುದರಿಂದ ಇದರ ಕಟ್ಟಡಕ್ಕೆ ಅತಿ ಗಾತ್ರವಾದ ಅಸ್ತಿವಾರವನ್ನು ಹಾಕಲಾಗಿದೆ. ಅಸ್ತಿವಾರವು ನೆಲಮಟ್ಟದಿಂದ ಕೆಳಗೆ 26 ಅಡಿ ಆಳದಿಂದ ಆರಂಭವಾಗಿದೆ. ನೆಲದ ಮೇಲೆ ತೋರುವ ಪ್ರತೀ ಇಟ್ಟಿಗೆ ಕೆಲಸವು ಅಡಿಯಲ್ಲಿದೆ.

ಕ್ರಮವಾದ ರೂಪದಲ್ಲಿರುವ ನಾಣ್ಯಗಳ ಕಾಲವು ಈಗಿನದಲ್ಲ; ಅತಿ ಪ್ರಾಚೀನದ್ದು. ಗ್ರೀಸಿನಲ್ಲಿಯೂ ಏಸಿಯಾ ಮೈನರಿನಲ್ಲಿಯೂ ಕ್ರಿಸ್ತಪೂರ್ವ 700ರಷ್ಟು ಹಿಂದೆ ನಾಣ್ಯಗಳು ಇದ್ದವುಗಳೆಂದು ಗ್ರಹಿಸಲಾಗುತ್ತದೆ. ಹಿಂದುಸ್ಥಾನದಲ್ಲಿ ಸಹ ವಿವಿಧ ನಮೂನೆಗಳ ನಾಣ್ಯಗಳು ಪ್ರಾಚೀನ ಕಾಲದಲ್ಲಿ ಹಾಗೂ ಮಧ್ಯಕಾಲಗಳಲ್ಲಿ ಚಲಾವಣೆಯಲ್ಲಿದ್ದುವು. ಮೊಗಲರ ಕಾಲದಲ್ಲಿ "ಅಸ್ರಾಫಿ" ನಾಣ್ಯ ಪ್ರಖ್ಯಾತವಾಗಿತ್ತು.

ನಾಣ್ಯ ತಯಾರಿಸುವ ಕ್ರಮಗಳು ಕಾಲ ಕಳೆದಂತೆಯೇ ಸುಧಾರಣೆ ಹೊಂದುತ್ತಾ ಬಂದಿವೆ. ನಾಣ್ಯ ಅಚ್ಚಿನಲ್ಲಿಟ್ಟು ಹೊಡೆದು ತಯಾರಿಸುವ ಈಗಿನ ಕ್ರಮವು 18ನೆಯ ಶತಮಾನದಲ್ಲಿ ಆರಂಭವಾಯಿತು. ಆಗ ಬರ್ಮಿಂಗಾಮ್‌ನಲ್ಲಿ ಬೌಲ್ಟನ್ ಎಂಬವನು ಪ್ರಖ್ಯಾತ ಶೋಧನಗಾರ ಜೇಮ್ಸ್ ವಾಟ್ ಎಂಬವನೊಡನೆ ಸೇರಿಕೊಂಡು ನಾಣ್ಯ ತಯಾರಿಸುವ ಯಂತ್ರೋಪಕರಣಗಳನ್ನು ನಡೆಸುವುದಕ್ಕೆ ಪ್ರಥಮತಃ ಉಗಿಯನ್ನು ಉಪಯೋಗಿಸಿದಂದಿನಿಂದ ನಾಣ್ಯಗಳ ತಯಾರಿಕೆಯ ಆಧುನಿಕ ಕ್ರಮವು ಪ್ರಾರಂಭವಾಯಿತೆನ್ನಬಹುದು.

ನಾಣ್ಯ ತಯಾರಿಸುವ ಬೌಲ್ಟನ್ ಯಂತ್ರೋಪಕರಣವು ಕಲ್ಕತ್ತದ ಟಂಕಸಾಲೆಯಲ್ಲಿದೆ. ಈ ಯಂತ್ರೋಪಕರಣಕ್ಕೆ 13 ಲಕ್ಷ ರೂಪಾಯಿ ಬೆಲೆಯಿದೆ. ಇದರ ಉಪಯೋಗವು ತೊಡಗುವುದರ ಪೂರ್ವದಲ್ಲಿ ಆ ದಿನಕ್ಕೆ ಎರಡು ಲಕ್ಷ ಬೆಳ್ಳಿ ನಾಣ್ಯಗಳನ್ನು ಮಾತ್ರ ತಯಾರಿಸಲಾಗುತ್ತಿತ್ತು. ಇಂದಿಗೆ ಕಲ್ಕತ್ತದ ಟಂಕಸಾಲೆಯಲ್ಲಿ ಮೂಲ ಲೋಹಗಳಲ್ಲೂ ಮಿಶ್ರ ಲೋಹಗಳಲ್ಲೂ ಬೆಳ್ಳಿ, ಬಂಗಾರಗಳಲ್ಲೂ ನಾಣ್ಯ ಹೊಡೆಯಲಾಗುತ್ತದೆ. ನಾಣ್ಯ ತಯಾರಿಸುವ ಲೋಹವಾಗಿ ಬಂಗಾರದ ಉಪಯೋಗವು ಹೆಚ್ಚುಕಡಿಮೆ ನಿಂತು ಹೋಗಿದೆ. ಬೆಳ್ಳಿಯ ಬದಲಿಗೆ ಸಹ ತಾಮ್ರ, ನಿಕ್ಕಲ್, ಸತುವು ಮುಂತಾದ ಮೂಲ ಲೋಹಗಳು ಉಪಯೋಗಿಸಲ್ಪಡುತ್ತವೆ. ವೆಚ್ಚ ತಗ್ಗಿಸುವುದೇ ಇದಕ್ಕೆ ಮುಖ್ಯ ಕಾರಣ.

ನಾಣ್ಯ ತಯಾರಿಸುವುದಕ್ಕೆ ಉಪಯೋಗಿಸುವ ಮಿಶ್ರ ಲೋಹಗಳನ್ನು ಆರಿಸುವಾಗ ಅನೇಕ ವಿಷಯಗಳನ್ನು ಗಮನಿಸಿಕೊಳ್ಳಬೇಕಾಗಿದೆ. ಅವುಗಳಲ್ಲಿ ಮುಖ್ಯವಾದವುಗಳು:

(ಅ) ಮಿಶ್ರ ಲೋಹದಲ್ಲಿ ಉಪಯೋಗಿಸುವ ಮೂಲ ಲೋಹಗಳ ಪೂರೈಕೆ ಮತ್ತು ಬೆಲೆ. (ಆ) ಮಿಶ್ರಲೋಹವನ್ನು ಎಷ್ಟು ಸುಲಭವಾಗಿ ತಯಾರಿಸಿಕೊಳ್ಳಬಹುದೆಂಬುದು. (ಇ) ಮಿಶ್ರಲೋಹವು ಸವೆದು ಹೋಗದಂತೆ ಅದರಲ್ಲಿರುವ ಗುಣಗಳು. (ಈ) ವರ್ಣವು ಕೆಟ್ಟುಹೋಗುವುದನ್ನು ತಡೆಯುವ ಗುಣ. (ಉ) ಕಳ್ಳ ನಾಣ್ಯ ತಯಾರಿಸದಂತೆ ಅದರ ಭದ್ರತೆ.

ಹಿಂದುಸ್ಥಾನದಲ್ಲಿ ಈಗ ಚಲಾವಣೆಯಲ್ಲಿರುವ ವಿವಿಧ ಬಗೆಯ ನಾಣ್ಯಗಳಿಗೆ ಈ ಕೆಳಗಿನಂತೆ ಲೋಹಗಳೂ, ಮಿಶ್ರ ಲೋಹಗಳೂ ಉಪಯೋಗಿಸಲ್ಪಡುತ್ತವೆ.

ರೂಪಾಯಿ, ಅರ್ಧ ರೂಪಾಯಿ ಕಾಲು ರೂಪಾಯಿ = ಶುದ್ಧ ನಿಕ್ಕಲ್.

ಎರಡಾಣೆ, ಒಂದಾಣೆ, ಅರ್ಧಾಣೆ = ಕುಪ್ರೊ ನಿಕ್ಕಲ್ (75% ತಾಮ್ರ ಮತ್ತು 25% ನಿಕ್ಕಲ್).

ಕಾಲಾಣೆ = ಕಂಚು (97% ತಾಮ್ರ, 2½% ಸತುವು ಮತ್ತು ½% ತವರ).

ನಾಣ್ಯ ತಯಾರಿಸುವುದರಲ್ಲಿ ಉಪಯೋಗಿಸಲ್ಪಡುವ ತಾಮ್ರದಲ್ಲಿ ಅಕ್ಷೇಪಣೀಯವಾದ ಅಶುದ್ಧ ಪದಾರ್ಥಗಳಿಲ್ಲದಿರುವುದು ಅವಶ್ಯ. 0.005%ರಷ್ಟು ಬಿಸ್ಮತ್ ಲೋಹವಿರುವುದು ಕೂಡ ಅಪಾಯಕರವೆಂದು ಅನುಭವದಿಂದ ತಿಳಿದುಬಂದಿದೆ.

ನಮ್ಮ ದೇಶದಲ್ಲಿ ನಾಣ್ಯ ತಯಾರಿಸುವುದಕ್ಕೆ ಶುದ್ಧ ನಿಕ್ಕಲ್ (ಅಂದರೆ ಯಾವ ಲೋಹವೂ ಮಿಶ್ರವಾಗಿರಕೂಡದು) ಉಪಯೋಗಿಸುವ ಕ್ರಮವು ಇತ್ತೀಚೆಗೆ ಬಳಕೆಗೆ ಬಂದುದಾಗಿದೆ. ಶುದ್ಧ ನಿಕ್ಕಲ್ ಕರಗಲು ಅತ್ಯಧಿಕ ಉಷ್ಣ (1452°C) ಬೇಕಾಗುವುದರಿಂದಲೂ ಅತಿ ವಿಶೇಷ ಸಲಕರಣೆಯನ್ನು ಉಪಯೋಗಿಸಿ ಮಾತ್ರವೇ ಅದನ್ನು ಹದಗೊಳಿಸ ಬೇಕಾಗಿರುವುದರಿಂದಲೂ ನಿಕ್ಕಲ್ ನಾಣ್ಯದಂತಹ ಕಳ್ಳ ನಾಣ್ಯ ತಯಾರಿಸುವುದು ಕಷ್ಟ. ಶುದ್ಧ ನಿಕ್ಕಲಿನ ಇನ್ನೊಂದು ಪ್ರತ್ಯೇಕ ಗುಣವೆಂದರೆ, ಅದರ ಯಥಾರ್ಥತ್ವವನ್ನು ಸೂಜಿಕಾಂತದಿಂದ ಪರೀಕ್ಷಿಸ ಬಹುದು.

1944-45 ರಲ್ಲಿ ಕಲ್ಕತ್ತದ ಟಂಕಸಾಲೆಯಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಅಂದರೆ 1, 04,87,27,300 ನಾಣ್ಯಗಳು ತಯಾರಾಗಿವೆ. ಈ ಉತ್ಪಾದನೆಯು ಹೆಚ್ಚುಕಡಮೆ ಪ್ರಪಂಚದ ದಾಖಲೆಗೆ ಸರಿಸಮಾನವಾಗಿದೆ.

ಹಿಂದುಸ್ಥಾನವು ಈಗ ಪರದೇಶಗಳಿಗೆ ಬೇಕಾದ ನಾಣ್ಯಗಳನ್ನು ಸಹ ತಯಾರಿಸಿ ಒದಗಿಸುವ ಸ್ಥಿತಿಯಲ್ಲಿದೆ. 1914 ರಿಂದ ಕಲ್ಕತ್ತದ ಟಂಕಸಾಲೆಯಲ್ಲಿ ಆಸ್ಟ್ರೇಲಿಯಾ, ಭೂತಾನ್, ಸಿಲೋನ್, ಈಜಿಪ್ಟ್, ಪಾಕಿಸ್ಥಾನ್, ಸೌದಿ ಅರೇಬಿಯಾ, ಸ್ಟ್ರೈಟ್ಸ್ ಸೆಟಲ್‌ಮೆಂಟುಗಳು ಮೊದಲಾದ

ZANDU PHARMACEUTICAL WORKS LTD.
Manufacturers of Ayurvedic and Alopathic Medicines BOMBAY, 14.

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ 3/- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್ ಉಡುಪಿ.
2 ಶ್ರೀ ವಿ ವಿ. ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

DAMODAR & CO.,
Nainiappa Naicken Street, Park Town-**MADRAS** 3.

For Protection and Provision

Consult

The New Guardian of India Life Insurance Co., Ltd.

Estd] Head office: **MADRAS** [1934

A Policy in this progressive Life Office is good investment; its Agency is valuable business connection.

Applications for representation are invited from influential persons.

Please apply to:

The Branch Manager,
Diamond Building, Hampankatta,
MANGALORE, S. K.

ಮದ್ರಾಸಿನಲ್ಲಿ ರಾಜಾಜೀ ಮಂತ್ರಿಮಂಡಳ

ಶ್ರೀ ಸಿ. ರಾಜಗೋಪಾಲಾಚಾರಿಯರು ಕೂಡಿ 15 ಮಂದಿಯುಳ್ಳ ಮದ್ರಾಸ ರಾಜ್ಯದ ನೂತನ ಮಂತ್ರಿಮಂಡಲವು ಇದೇ ತಾ 10ರಂದು ಅಧಿಕಾರ ಸ್ವೀಕರಿಸಿತು. ಮದ್ರಾಸ ಗವರ್ನರ್ ಶ್ರೀ. ಶ್ರೀಪ್ರಕಾಶರು ಮಂತ್ರಿಗಳ ಪ್ರತಿಜ್ಞಾವಿಧಿಯನ್ನು ನೆರವೇರಿಸಿದರು. ಮದ್ರಾಸ ಸೆಕ್ರೆಟೇರಿಯಟ್ಟಿನ ಮಂತ್ರಿಮಂಡಲದ ಕೋಣೆಯಲ್ಲಿ ಜರಗಿದ ಈ ಸಮಾರಂಭ ನೋಡಲು ಪತ್ರಿಕಾ ಪ್ರತಿನಿಧಿಗಳೂ ಬಹುಮಂದಿ ಮಹಾಜನರೂ ಕಿಕ್ಕಿರಿದು ನೆರೆದಿದ್ದರು.

ಮಂತ್ರಿಗಳು ಮತ್ತು ಅವರು ವಹಿಸಿಕೊಂಡ ಶಾಖೆಗಳು

1. ಮುಖ್ಯ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು:- ಸರಕಾರಿ ಆಡಳಿತ (ಮನೆಬಾಡಿಗೆ ನಿಯಂತ್ರಣ ಬಿಟ್ಟು) ಮತ್ತು ಗೃಹ ಶಾಖೆಯುಳ್ಳಯ ಪೋಲಿಸ್ ಶಾಖೆ.

2. ಶ್ರೀ ಎ. ಬಿ. ಸೆಟ್ಟಿ:-ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ.

3. ಶ್ರೀ ಸಿ. ಸುಬ್ರಹ್ಮಣ್ಯಂ:- ಆರ್ಥಿಕ, ಆಹಾರ ಮತ್ತು ಚುನಾವಣೆ.

4. ಶ್ರೀ ಕೆ. ವೆಂಕಟಸ್ವಾಮಿ ನಾಯಡು:-ಧಾರ್ಮಿಕ ಉಂಬಳಿ ಮತ್ತು ರಿಜಿಸ್ಟ್ರೇಶನ್.

5. ಶ್ರೀ ಎನ್. ರಂಗರೆಡ್ಡಿ:- ಲೋಕೋಪಯೋಗಿ.

6 ಡಾ| ಎಂ. ವಿ. ಕೃಷ್ಣರಾವ್:- ಶಿಕ್ಷಣ, ಹರಿಜನ ಸುಧಾರಣೆ ಮತ್ತು ಸುದ್ದಿ.

7. ಶ್ರೀ ಪಿ. ಸಿ. ಕಳಕಿಸ್ವಾಮಿ ಗೌಂಡರ್:- ಮದ್ಯಪಾನ ಪ್ರತಿಬಂಧ.

8 ಡಾ| ಯು. ಕೃಷ್ಣರಾವ್:- ಉದ್ದಿಮೆ ಮತ್ತು ಕೂಲಿಕಾರ, ಮೋಟರ್ ಸಾರಿಗೆ ನಿವೃತ್ತ ಸೈನಿಕರ ಪುನರ್ನಿವೇಶನ, ರೈಲ್ವೇ ಅಂಚೆ ಮತ್ತು ತಂತಿ ಹಾಗೂ ವಿಮಾನ ಸಾರಿಗೆ.

9 ಡಾ| ಆರ್. ನಾಗನಗೌಡ:- ಒಕ್ಕಲತನ, ಅರಣ್ಯ, ಪಶುಸಂಗೋಪನ, ಮೀನುಗಾರಿಕೆ ಮತ್ತು ಸಿಂಕೋನಾ.

10. ಶ್ರೀ ಎನ್. ಶಂಕರರೆಡ್ಡಿ:- ಸ್ಥಾನಿಕ ಆಡಳಿತ.

11. ಶ್ರೀ ಎಸ್. ಎ. ಮಾಣಿಕ್ಯವೇಲು ನಾಯಕರ್:- ಭೂಕಂದಾಯ.

12. ಶ್ರೀ ಕೆ. ಪಿ. ಕುಟ್ಟಿಕೃಷ್ಣನ್ ನಾಯರ್:- ನ್ಯಾಯಾಲಯ, ಜೈಲುಗಳು ಮತ್ತು ಕಾಯಿದೆ.

13. ರಾಜಾ ಷಣ್ಮುಖ ರಾಜೇಶ್ವರ ಸೇತುಪತಿ:- ಮನೆ ಬಾಡಿಗೆ ನಿಯಂತ್ರಣ.

14. ಶ್ರೀ ಡಿ. ಸಂಜೀವಯ್ಯ:- ಸಹಕಾರ ಮತ್ತು ಪಾಳಿ ನಿವಾರಣ.

15 ಶ್ರೀ ಎಸ್. ಬಿ. ಪಟ್ಟಾಭಿರಾಮರಾವ್:- ಗ್ರಾಮ ಸುಧಾರಣೆ, ವಾಣಿಜ್ಯ ಕೇರಿಗಳು ಮತ್ತು ಹಿಂದುಳಿದ ಪ್ರದೇಶಗಳು.

ಸಂಕ್ಷಿಪ್ತ ಪರಿಚಯ

ಮದ್ರಾಸ ಪ್ರಾಂತದಲ್ಲಿ ಈವರೆಗೆ ರಚಿತವಾದ ಮಂತ್ರಿಮಂಡಲಗಳಲ್ಲಿ ಈಗಿನ ಮಂತ್ರಿಮಂಡಲವೇ ಎಲ್ಲಕ್ಕೂ ದೊಡ್ಡದು. ಹಿಂದಿನ ಯಾವುದೇ ಮಂತ್ರಿಮಂಡಲದಲ್ಲಿ 15 ಮಂತ್ರಿಗಳು ಇದ್ದಿಲ್ಲ. ಇನ್ನು ಉಪಮಂತ್ರಿಗಳಾಗಲಿ, ಕಾರ್ಯದರ್ಶಿಗಳಾಗಲೀ ನೇಮಕವಾಗುವ ಸಂಭವವಿಲ್ಲ.

ಹಳೆ ಮಂತ್ರಿಮಂಡಲದ ಶ್ರೀ ಎ. ಬಿ. ಸೆಟ್ಟಿಯೊಬ್ಬರೇ ಹೊಸ ಮಂತ್ರಿಮಂಡಲದಲ್ಲಿರುವವರು. ಅರವತ್ತು ಸದಸ್ಯರಿರುವ ಕಾಮನವೀಲ ಪಕ್ಷದ ಶ್ರೀ ಎಸ್. ಎ. ಮಾಣಿಕ್ಯವೇಲು ನಾಯಕರೊಬ್ಬರು ಮಾತ್ರ ಕಾಂಗ್ರೆಸ್ಸೇತರರಿರುವರು.

ರಾಜಾ ಶ್ರೀ ಷಣ್ಮುಖ ರಾಜೇಶ್ವರ ಸೇತುಪತಿಯವರು ರಾಮನಾಡದ ರಾಜರಿದ್ದಾರೆ. ಶ್ರೀ ಸಂಜೀವಯ್ಯನವರು ಹರಿಜನರಿದ್ದು ಮಂತ್ರಿಮಂಡಲದಲ್ಲಿ ಅತ್ಯಂತ ಕಿರಿಯರು.

1. ಶ್ರೀ. ಸಿ. ರಾಜಗೋಪಾಲಾಚಾರಿಯವರು 73ವರ್ಷದ ಜ್ಞಾನವೃದ್ಧ ರಾಜಕಾರಣ ಪಟು. ಸೇಲಂ ಜಿಲ್ಲೆಯ ಹೊಸೂರಿನ ಸಮೀಪದ ಹಳ್ಳಿಯೊಂದರಲ್ಲಿ ಜನನ. ಆರಂಭದಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಶಿಕ್ಷಣ, ತರುವಾಯ ಪ್ರೆಸಿಡೆನ್ಸಿ ಕಾಲೇಜ್, ಲಾ ಕಾಲೇಜಿಗೆ ಸೇರಿ 1920ರಲ್ಲಿ ವಕೀಲಿ ವೃತ್ತಿಗಾರಂಭ. ದಿವಂಗತ ಸಿ. ವಿಜಯರಾಘವಾಚಾರ್ಯರ ಕಾಲದಲ್ಲಿ ನಾಗರಿಕ ಆಡಳಿತದಲ್ಲಿ ಪ್ರಮುಖ ಭಾಗ ವಹಿಸಿದ್ದಲ್ಲದೆ ಸೇಲಂ ನಗರ ಸಭಾಧ್ಯಕ್ಷರಾಗಿದ್ದರು. 1919ರಲ್ಲಿ ಸತ್ಯಾಗ್ರಹ ಚಳವಳಿಗೆ ಸೇರಿ 1920ರಲ್ಲಿ ಮಹಾತ್ಮರಿಂದ ಆರಂಭಿಸಲ್ಪಟ್ಟ ಅಸಹಕಾರ ಚಳವಳಿಗೆ ಧುಮುಕಿದರು. ಮಹಾತ್ಮರು ಸೆರೆಮನೆ ಸೇರಿದಾಗ "ಯಂಗ್ ಇಂಡಿಯ" ಪತ್ರಿಕಾ ಸಂಪಾದಕರಾಗಿದ್ದರು 1921—22ರಲ್ಲಿ ಅಖಿಲ ಭಾರತ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಗಳಾಗಿದ್ದರು. 1922ರಿಂದ ಸುಮಾರು 20ವರ್ಷ ಕಾಲ ಕಾಂಗ್ರೆಸ್ಸ ಕಾರ್ಯಸಮಿತಿ ಸದಸ್ಯರಾಗಿದ್ದರು. ಅಖಿಲ ಭಾರತ ಸ್ಪಿನ್ನರ್ಸ್ ಎಸೋಸಿಯೇಶನಿನ ಕಮಿಟಿ ಸದಸ್ಯರೂ, ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಉಪಾಧ್ಯಕ್ಷರೂ ಆಗಿದ್ದರು. 1937ರಲ್ಲಿ ಮದ್ರಾಸಿನ ಕಾಂಗ್ರೆಸ್ ಮಂತ್ರಿಮಂಡಳದ ಮುಖ್ಯ ಮಂತ್ರಿಗಳಾಗಿದ್ದು ಗೃಹ ಮತ್ತು ಆರ್ಥಿಕ ಶಾಖೆಗಳನ್ನು ವಹಿಸಿದ್ದರು. ಪಾನನಿರೋಧ ಮತ್ತು ಮಾರಾಟ ತೆರಿಗೆಗಳನ್ನು ಜಾರಿಗೆ ತರುವದರಲ್ಲಿ ಅಗ್ರಭಾಗವಹಿಸಿದರು. ದ್ವಿತೀಯ ಮಹಾಯುದ್ಧ ಕಾಲದಲ್ಲಿ 1939ರಲ್ಲಿ ಮಂತ್ರಿಮಂಡಳಕ್ಕೆ ರಾಜಿನಾಮೆಯಿತ್ತು ಹೊರಬಂದರು. 1940ನೇ ದಶಂಬರದಲ್ಲಿ ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನಂತೆ ಬಂಧಿಸಲ್ಪಟ್ಟು ಒಂದು ವರ್ಷ ಕಾರಾಗೃಹವಾಸವನ್ನು ಅನುಭವಿಸಿದರು. 1947ರಲ್ಲಿ ಪಶ್ಚಿಮ ಬಂಗಾಳದ ಗವರ್ನರರಾಗಿ ನೇಮಕ ಹೊಂದಿ ಕಷ್ಟಗಳನ್ನು ಸಹಿಸಿ ಅಗಾಧ ಕಾರ್ಯಗಳನ್ನು ಸಾಧಿಸಿದರು. ಭಾರತದ ವೈಸರಾಯರಾಗಿ ತನ್ನ ಕಾರ್ಯವನ್ನು ದಕ್ಷತೆಯಿಂದ ನೆರವೇರಿಸಿದರು. ಭಾರತದ ಗೃಹ ಮಂತ್ರಿಗಳಾಗಿಯೂ ಜನತಾ ಸೇವೆ ಮಾಡಿ ಕೆಲವೇ ತಿಂಗಳ ಹಿಂದೆ ನಿವೃತ್ತರಾಗಿ ಮದ್ರಾಸಿಗೆ ಬಂದು ನೆಲಸಿದ್ದರು. ಇವರು ಹಲವು ಪುಸ್ತಕಗಳನ್ನೂ ಬರೆದಿರುತ್ತಾರೆ.

2. ಶ್ರೀ ಎ. ಬಿ. ಶೆಟ್ಟರು ಹಳೆ ಮಂತ್ರಿಗಳಲ್ಲಿ ಹೊಸ ಮಂತ್ರಿಮಂಡಲದಲ್ಲಿ ಸೇರಿಸಲ್ಪಟ್ಟವರು. ಇವರೊಬ್ಬರೇ. ಸಾರ್ವಜನಿಕ ಸೇವಾಸಕ್ತರು ಸುಧಾರಕ ಮನೋವೃತ್ತಿಯವರು 1921ರಲ್ಲಿ 'ನವಯುಗ' ವಾರಪತ್ರಿಕೆಯನ್ನು ಸ್ಥಾಪಿಸಿ ಕೆಲವು ವರ್ಷ ಕಾಲ ಅದರ ಸಂಪಾದಕರಾಗಿ ನಾಡಿನ ಸೇವೆ ಗೈದವರು. ಎರಡು ಬಾರಿ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ ಜನಪ್ರಿಯತೆಯನ್ನು ಗಳಿಸಿದವರು. 1926ರಿಂದ 1936ರ ವರೆಗೆ ಲೆಜಿಸ್ಲೇಟಿವ್ ಕೌನ್ಸಿಲಿನ ಸದಸ್ಯರಾಗಿದ್ದರು. ಎರಡು ಬಾರಿ ಅವಿರೋಧವಾಗಿ ಆರಿಸಲ್ಪಟ್ಟಿದ್ದಾರೆ. ರಾಜಾಜಿಯವರ ಪ್ರಥಮ ಮಂತ್ರಿಮಂಡಲದಲ್ಲಿ ಆರೋಗ್ಯಶಾಖಾ ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿದ್ದರು. 1940ರಲ್ಲಿ ವೈಯಕ್ತಿಕ ಸತ್ಯಾಗ್ರಹ ಹೂಡಿ 9 ತಿಂಗಳ ಕಾರಾಗೃಹವಾಸವನ್ನು ಅನುಭವಿಸಿದ್ದರು. ಓಮಂದೂರು ಮಂತ್ರಿಮಂಡಲದಲ್ಲಿ ಆರೋಗ್ಯ ಶಾಖೆ, ಕುಮಾರಸ್ವಾಮಿ ರಾಜಾರ ಮಂತ್ರಿಮಂಡಲದಲ್ಲಿ ಕೃಷಿ ಶಾಖೆಯ ಮಂತ್ರಿಗಳಾಗಿದ್ದರು. ದ. ಕನ್ನಡದ ಕಾರ್ಕಳ ಮತದಾರ ಕ್ಷೇತ್ರದಿಂದ ಬಹುಮತಗಳಿಸಿ ಕಳೆದ ಚುನಾವಣೆಯಲ್ಲಿ ಆರಿಸಿ ಬಂದವರು, ಶ್ರೀ. ಕುಮಾರಸ್ವಾಮಿ ರಾಜರ ಹೋದಸಾರಿನ ಸರಕಾರದಲ್ಲಿ ಪ್ರಸ್ತುತ ನಾಯರಿದ್ದರು. ಪ್ರಾಯ 68

3. ಶ್ರೀ ಸಿ. ಸುಬ್ರಹ್ಮಣ್ಯಂರು ವಕೀಲವೃತ್ತಿಯವರಿದ್ದು ಹಿಂದಿನ ಪಾರ್ಲಿಮೆಂಟಿನ ಸದಸ್ಯರಾಗಿದ್ದರು. 1930ರಿಂದ ಕಾಂಗ್ರೆಸಿಗರಾಗಿದ್ದುಕೊಂಡು ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿದ ಬಗ್ಗೆ ನಾಲ್ಕುಬಾರಿ ಶಿಕ್ಷೆಯನ್ನು ಅನುಭವಿಸಿದವರು ತಮಿಳುನಾಡು ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಮತ್ತು ಅಖಿಲಭಾರತ ಕಾಂಗ್ರೆಸಿನ ಸದಸ್ಯರು ಈ ಬಾರಿಯ ಚುನಾವಣೆಯಲ್ಲಿ ಕೊಯಮುತ್ತೂರು ನಗರ ಮತದಾರ ಕ್ಷೇತ್ರದಿಂದ ಎಸೆಂಬ್ಲಿಗೆ ಆರಿಸಿ ಬಂದವರು.

4. ಶ್ರೀ. ಕೆ. ವೆಂಕಟಸ್ವಾಮಿ ನಾಯಡುರವರು ಮದ್ರಾಸಿನ ಮಾಜಿ ಮೇಯರು. ಹತ್ತು ವರ್ಷಗಳ ವರೆಗೆ ಮದ್ರಾಸ್ ಕಾರ್ಪೊರೇಶನಿನ ಕಾಂಗ್ರೆಸ್ ಪಕ್ಷದ ನಾಯಕರಾಗಿದ್ದರು. ಹಿಂದಿನ ಲೆಜಿಸ್ಲೇಟಿವ್ ಕೌನ್ಸಿಲಿನ ಉಪಾಧ್ಯಕ್ಷರಾಗಿದ್ದರು. ಮದ್ರಾಸು ಸಹಕಾರಿ ಗೃಹನಿರ್ಮಾಣ ಸಂಘ, ಪಚಯಪ್ಪನವರ ಟ್ರಸ್ಟ್ ಬೋರ್ಡ್, ನಗರಾಭಿವೃದ್ಧಿ ಟ್ರಸ್ಟ್ ಮೊದಲಾದ ಹಲವಾರು ಸಾರ್ವಜನಿಕ ಸಂಘಟನೆಗಳ ಉತ್ಸಾಹಿ ಸದಸ್ಯರು ಪ್ರಾಯ 56 ವರ್ಷ. ಮದ್ರಾಸ್ ನಗರದ 'ಧೌಸಂಡ್ ಲೈಟ್ಸ್' ಎಂಬ ಸಾಮಾನ್ಯ ಮತದಾರ ಕ್ಷೇತ್ರದಿಂದ ಎಸೆಂಬ್ಲಿಗೆ ಚುನಾಯಿತರಾದವರು.

5. ಶ್ರೀ ಎನ್ ರಂಗಾರೆಡ್ಡಿಯವರು ವಕೀಲರು. 1927ರಿಂದ ೬ ವರ್ಷದ ವರೆಗೆ ಕಡಪಾ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿದ್ದರು. 1940ರಲ್ಲಿ ವೈಯಕ್ತಿಕ ಸತ್ಯಾಗ್ರಹ ಮಾಡಿದುದಕ್ಕಾಗಿ ೬ ತಿಂಗಳ ಶಿಕ್ಷೆಯನ್ನು ಅನುಭವಿಸಿದರು, ಅವರು ಸರಕಾರದ ಪ್ರಾಮುಖ್ಯ ಕಮಿಟಿ

[೧ನೇ ಪುಟದಿಂದ ಮುಂದುವರಿದುದು]

ದೇಶಗಳಿಗೆ ನಾಣ್ಯ ತಯಾರಿಸಿ ಕೊಟ್ಟಿದೆ. ಮುಂಚೆ ಹಿಂದೂಸ್ಥಾನದ ದೇಶೀಯ ಸಂಸ್ಥಾನಗಳೂ, ಪೋರ್ಚುಗೀಸ ಇಂಡಿಯಾ, ಬ್ರಿಟಿಷ್ ಈಸ್ಟ್ ಆಫ್ರಿಕ, ಇವೂ ಕೆಲವು ಬೇರೆ ನಾಣ್ಯ ತಯಾರಿಸಲು ಕಳುಹಿಸಿದ್ದುವು ಪ್ರಥಮ. ಪ್ರಪಂಚ ಯುದ್ಧದ ಸಮಯದಲ್ಲಿ ಆಸ್ಟ್ರೇಲಿಯಾ ಸರಕಾರದ ಪೆನ್ನಿ ಮತ್ತು ಅರ್ಧ ಪೆನ್ನಿಗಳನ್ನು ಕಲ್ಕತ್ತದ ಟಂಕಸಾಲೆಯಲ್ಲಿ ತಯಾರಿಸಲಾಗಿತ್ತು.

ಟಂಕಸಾಲೆಗಳಲ್ಲಿ ನಾಣ್ಯಗಳು ಮಾತ್ರ ತಯಾರಾಗುವುದಲ್ಲ ಇತರ ಅನೇಕ ಕೆಲಸಗಳೂ ನಡೆಯುತ್ತವೆ. ಪದಕಗಳೂ ಇತರ ಬಹುಮಾನ ಚಿಹ್ನೆಗಳೂ ಇಲ್ಲಿ ತಯಾರಾಗುತ್ತವೆ. ಸ್ವತಂತ್ರ ಹಿಂದುಸ್ಥಾನದ ಪರಮವೀರ ಚಕ್ರ, ಮಹಾವೀರ ಚಕ್ರ ಹಾಗೂ ಇತರ ಬಹುಮಾನ ಚಿಹ್ನೆಗಳನ್ನು ಕಲ್ಕತ್ತದ ಟಂಕಸಾಲೆಯಲ್ಲಿ ಮಾಡಲಾಗುತ್ತದೆ. ಬ್ರಿಟಿಷ್ ಸರಕಾರದ ವಿವಿಧ ಪದಕಗಳನ್ನೂ ಬಹುಮಾನ ಚಿಹ್ನೆಗಳನ್ನೂ ಮುಂಚೆ ಹಿಂದುಸ್ಥಾನದಲ್ಲಿಯೇ ತಯಾರಿಸಲಾಗುತ್ತಿತ್ತು.

ಟಂಕಸಾಲೆಯಲ್ಲಿ ನಿರ್ವಹಿಸಬೇಕಾದ ಇನ್ನೊಂದು ಕೆಲಸವೆಂದರೆ ಜನತೆಗೋಸ್ಕರ ತೂಕದ ಕಲ್ಲುಗಳನ್ನೂ ಅಳತೆಯ ಪಾತ್ರೆಗಳನ್ನೂ ಪರೀಕ್ಷಿಸುವುದು.

ಜನತೆಗೋಸ್ಕರ ನಾಣ್ಯ ತಯಾರಿಸಿ ಕೊಡುವುದು ಟಂಕಸಾಲೆಯ ಕೆಲಸವಾದರೂ, ಕಳ್ಳನಾಣ್ಯ ತಯಾರಿಸಿ ಸರಕಾರದೊಡನೆ ಸ್ಪರ್ಧಿಸುವ ಜನರ ಗುಂಪು ಸಹ ಅದರ ಕಳ್ಳ ವ್ಯಾಪಾರ ಕೈಕೊಳ್ಳಬೇಕಾಗಿದೆ.

ಚತುರ್ಥ ವಿಮಾಗಣನೆಯ ಫಲಿತಾಂಶ

(1947ರಿಂದ 1950ರ ವರೆಗೆ)

* * * * * * *

ತಾರೀಕು 31-12-1950ಕ್ಕೆ ನಡೆಸಿದ ವಿಮಾಗಣನೆಯಲ್ಲಿ ಆಜೀವ ಮತ್ತು ಉಂಬಳಿ ವಿಮಾ ಪೋಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ ಅನುಕ್ರಮವಾಗಿ ರೂ. 12/- ಮತ್ತು ರೂ 9/-ರಂತೆ ಬೋನಸನ್ನು ಘೋಷಿಸಿವೆ.

The Canara Mutual Assurance Co Ltd.

Head Office: UDIPI, S. India

ಸ್ಥಾಪನೆಯಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ.

ರಾಜಾಜಿ ಮಂತ್ರಿಮಂಡಲ

ಜಿಸ್ಲೇಟಿವ್ ಎಸೆಂಬ್ಲಿಯಿಂದ ಲೆಜಿಸ್ಲೇಟಿವ್ ಕೌನ್ಸಿಲಿಗೆ ಚುನಾಯಿಸಲ್ಪಟ್ಟವರು.

6. ಡಾ। ಎಂ ವಿ ಕೃಷ್ಣ ರಾವ್, ಎಂ. ಬಿ; ಬಿ. ಸ್- ಇವರು ವಿಶಾಖಪಟ್ಟಣದ ಡಾಕ್ಟರು. ಪಶ್ಚಿಮ ಗೋದಾವರಿಯ ಉಂಡಿ ಎಂಬಲ್ಲಿಯವರು. ಆಂಧ್ರ ವಿಶ್ವವಿದ್ಯಾಲಯದ ಸೆನೆಟ್ ಮೆಂಬರು, ಅಖಿಲ ಭಾರತ ಮೆಡಿಕಲ್ ಕೌನ್ಸಿಲಿನ ಆಂಧ್ರ ಶಾಖೆಯ ಅಧ್ಯಕ್ಷರಾಗಿ ಚಳವಳಿಸಿ ಆಂಧ್ರ ವಿಶ್ವ ವಿದ್ಯಾಲಯದ ಮೆಡಿಕಲ್ ಡಿಗ್ರಿಗಳ ಅಂಗೀಕಾರ ಪಡೆಯಲು ಕಾರಣರಾದವರು. ಪ್ರಾಯ 45ವರ್ಷ, ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿಗೆ ಉತ್ತರ ಮದ್ರಾಸು ಪದವೀಧರರ ಮತದಾರ ಕ್ಷೇತ್ರದಿಂದ ಆರಿಸಲ್ಪಟ್ಟವರು.

7. ಶ್ರೀ. ವಿ. ಸಿ. ಪಳನಿಸ್ವಾಮಿ ಗೌಂಡರ್—ಇವರು ಹಿಂದಿನ ಎಸೆಂಬ್ಲಿ ಸದಸ್ಯರು. ಬಹುಕಾಲದಿಂದ ಕಾಂಗ್ರೆಸಿಗರಾಗಿದ್ದುಕೊಂಡು ಸತ್ಯಾಗ್ರಹ ಚಳವಳಿಯಲ್ಲಿ ಭಾಗ ವಹಿಸಿದ್ದರು. ಕೊಯಮುತ್ತೂರು ಜಿಲ್ಲಾ ಕಾಂಗ್ರೆಸ್ ಕಮಿಟಿಯ, ಮತ್ತು ಜಿಲ್ಲಾ ಬರ ನಿವಾರಣಾ ಸಮಿತಿಯ ಅಧ್ಯಕ್ಷ ಕೊಯಮುತ್ತೂರು ಜಿಲ್ಲೆಯ ಕೊಂಡಮುತ್ತೂರು ಮತದಾರ ಕ್ಷೇತ್ರದಿಂದ ಎಸೆಂಬ್ಲಿಗೆ ಚುನಾಯಿತರಾದ ಜಮೀನ್ದಾರರು.

8 ಡಾ। ಯು. ಕೃಷ್ಣರಾವ್, ಎಂ. ಬಿ. ಬಿ. ಎಸ್. ಇವರು ಮದ್ರಾಸು ನಗರದ ಸುಪ್ರಸಿದ್ಧ ಡಾಕ್ಟರು. 1930ರಿಂದ 1948ರ ವರೆಗೆ ಮದ್ರಾಸ್ ಕಾರ್ಪೊರೇಶನಿನ ಸದಸ್ಯರಾಗಿಯೂ 1948-49ರಲ್ಲಿ ಮೇಯರರಾಗಿಯೂ ಇದ್ದರು. ಮದ್ರಾಸ್ ಮೆಡಿಕಲ್ ಕೌನ್ಸಿಲಿನಲ್ಲಿ ಐದುವರ್ಷ ಕಾಲ ಇದ್ದರು. ಇಂಡಿಯನ್ ಮೆಡಿಕಲ್ ಕೌನ್ಸಿಲ್ ಎಸೋಸಿಯೇಶನಿನ ಉಪಾಧ್ಯಕ್ಷರಾಗಿದ್ದರು. 'ಸ್ಪೋರ್ಟ್'ನಲ್ಲಿ ವಿಶೇಷ ಅಭಿರುಚಿಯ್ಳ್ಳ [illegible] ಎಸೋಸಿಯೇಶನಿನ ಅಧ್ಯಕ್ಷ, ಟೇಬಲ್ ಟೆನ್ನಿಸ್ ಎಸೋಸಿಯೇಶನ್ ಮತ್ತು ಎಂ. ಯು. ಸಿ. ಯ ಉಪಾಧ್ಯಕ್ಷರಾಗಿದ್ದರು. ಎರಡು ಆರೋಗ್ಯ ಪತ್ರಿಕೆಗಳ ಸಂಪಾದಕರು ಮದ್ರಾಸಿನ ಹಾರ್ಬರ್ ಮತದಾರಕ್ಷೇತ್ರದಿಂದ ಪ್ರಜಾಪಕ್ಷದ ಮುಂದಾಳ ಶ್ರೀ ಟಿ. ಪ್ರಕಾಶಮ್‌ರನ್ನು ಸೋಲಿಸಿ ಎಸೆಂಬ್ಲಿಗೆ ಆರಿಸಿಬಂದವರು.

9. ಡಾ| ಆರ್. ನಾಗಣ್ಣ ಗೌಡರು ಬಳ್ಳಾರಿ ಜಿಲ್ಲೆಗೆ ಸೇರಿದವರು. ಪ್ರಾಯ 57 ಅಮೇರಿಕನ್ ವಿದ್ಯಾ ಪೀಠದಲ್ಲಿ ಕೃಷಿ ಮತ್ತು, ಇತರ ಶಿಕ್ಷಣ ಪಡೆದವರು. 1927ರಲ್ಲಿ ಮದ್ರಾಸ್ ಕೌನ್ಸಿಲಿಗೆ ನಾಮಕರಣ ಹೊಂದಿರುವರು. 1928ರಲ್ಲಿ ಸೈಮನ್ ಕಮಿಶನಿನ ವಿರುದ್ಧ ಹೋರಾಡಲು ವಿರುದ್ಧ ಪಕ್ಷಕ್ಕೆ ಸೇರಿದರು. ಬಳ್ಳಾರಿ ಜಿಲ್ಲಾ ಬೋರ್ಡಿನ ಮತ್ತು ಬಳ್ಳಾರಿ ಎಗ್ರಿಕಲ್ಚರಲ್ ಕೋಪರೇಟಿವ್ ಸೊಸೈಟಿಯ ಅಧ್ಯಕ್ಷರಾಗಿದ್ದರು. 1941-42ರಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದರು. 1942ರಲ್ಲಿ ರಾಜಿಯಿತ್ತು ಆಗಿನ ಚಳವಳದಲ್ಲಿ ತಟಸ್ಥರಾಗಿದ್ದರು. ಹೊಸಪೇಟೆ ಮತದಾರ ಕ್ಷೇತ್ರದಿಂದ ಎಸೆಂಬ್ಲಿಗೆ ಚುನಾಯಿತರು.

10. ಎನ್ ಶಂಕರ ರೆಡ್ಡಿಯವರು ಕರ್ನೂಲು ಜಿಲ್ಲೆಯ ಹಿರಿಯ ಕಾಂಗ್ರೆಸಿಗರಿದ್ದು ಹಲವುಸಲ ಜೈಲುವಾಸವನ್ನು ಅನುಭವಿಸಿದವರು ಉಪ್ಪಿನ ಸತ್ಯಾಗ್ರಹದ ವೇಳೆ ಕಾಲೇಜ್ ಬಿಟ್ಟು ಶ್ರೀ. ಸಿ. ರಾಜಗೋಪಾಲಾಚಾರಿಯವರಿಂದ ಸ್ಥಾಪಿತವಾದ ಸ್ವದೇಶಿ ವಿದ್ಯಾಪೀಠದಲ್ಲಿ ತರಬೇತಾದವರು. ಪ್ರಕಾಶಂ ಮಂತ್ರಿ ಮಂಡಲದಲ್ಲಿ ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿದ್ದರು. ಪ್ರಾಯ 53. ಕರ್ನೂಲಿನ ಸಾಮಾನ್ಯ ಮತದಾರ ಕ್ಷೇತ್ರದಿಂದ ಆರಿಸಿ ಬಂದವರು.

11 ಶ್ರೀ ಎಂ. ಎ. ಮಾಣಿಕ್ಯವೇಲು ನಾಯ್ಕರ್ ಇವರು ಎಡ್ವಕೇಟರು ಮತ್ತು ಹಿರಿಯ ರಾಜಕಾರಣಿ. ಉತ್ತರ ಆರ್ಕಾಟು ಜಿಲ್ಲೆಯವರು, ಶ್ರೀ ಎಸ್. ಶ್ರೀನಿವಾಸ ಐಯ್ಯಂಗಾರರ ಸ್ವರಾಜ್ಯ ಪಕ್ಷದಲ್ಲಿ ಪ್ರಮುಖ ಭಾಗವಹಿಸಿ ಲೆಜಿಸ್ಲೇಟಿವ್ ಕೌನ್ಸಿಲಿಗೆ ಆರಿಸಲ್ಪಟ್ಟಿದ್ದರು. ಕೊನೆಗವರು ರಾಷ್ಟ್ರೀಯ ಚಳವಳಿಯಲ್ಲಿ ದೂರವಾಗಿ ಹಿಂದುಳಿದ ಹಿಂದುಗಳ ಅಭಿವೃದ್ಧಿಯಲ್ಲಿ ವಿಶೇಷ ಆಸಕ್ತಿ ವಹಿಸಿದ್ದರು. ಕೋಮನ್ ವ್ವೀಲ್ ಪಕ್ಷದಿಂದ ಅಸೆಂಬ್ಲಿಗೆ ಚುನಾಯಿತರಾದವರು.

12. ಶ್ರೀ ಕೆ ಪಿ. ಕುಟ್ಟಿ ಕೃಷ್ಣನ್ ನಾಯರರು ಎಡ್ವಕೇಟರಾಗಿ 1930ರಿಂದ ಕೋಜಿಕೋಡೆಯಲ್ಲಿ ವಕಾಲತ್ ಮಾಡುತ್ತಿದ್ದರು. 1952ರ ಚಳವಳದಲ್ಲಿ ವಿಶಿಷ್ಟ ಭಾಗ ವಹಿಸಿ ಜೈಲುವಾಸವನ್ನು ಅನುಭವಿಸಿದ್ದರು. ಕೂಲಿ ಮತ್ತು ಕಿಸಾನ್ ಕ್ಷೇತ್ರದಲ್ಲಿ ಕೆಲಸ ಮಾಡಿದ್ದರು 1947ರಿಂದ ಕೋಜಿಕೊಡೆಯ ನಗರ ಸಭಾಧ್ಯಕ್ಷರು.

13. ರಾಜಾ ಶ್ರೀ ಷಣ್ಮುಗ ರಾಜೇಶ್ವರ ಸೇತುಪತಿಯವರು ರಾಮನಾಡಿನ ರಾಜರು. ಹಲವುಬಾರಿ ರಾಮನಾಡ್ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ ವಿಶೇಷ ಅಡಳಿತಾನುಭವವುಳ್ಳವರು. ಕಾಂಗ್ರೆಸ್ ಕಾರ್ಯಕ್ರಮದಲ್ಲಿ ನಂಬಿಕೆಯಿದ್ದು ಹಿಂದಿನ ಎಸೆಂಬ್ಲಿಯಲ್ಲಿ ಜಮೀನ್ದಾರರ ಪ್ರತಿನಿಧಿಯಾಗಿದ್ದರೂ ಜಮೀನ್ದಾರಿ ಪದ್ಧತಿ ನಿರ್ಮೂಲನಕ್ಕೆ ಸಮ್ಮತಿಯಿತ್ತವರು.

14. ಶ್ರೀ ಡಿ ಸಂಜೀವಯ್ಯನವರು ಹರಿಜನರಿದ್ದು ಮಂತ್ರಿಮಂಡಲದಲ್ಲಿ ಕಿರಿಯವರು ಪ್ರಾಯ 30, ಹಿಂದಿನ ಪಾರ್ಲಿಮೆಂಟ್ ಸದಸ್ಯರು. ವೃತ್ತಿಯಲ್ಲಿ ವಕೀಲರು. ಸ್ವಲ್ಪಕಾಲ ಸಿವಿಲ್ ಸಪ್ಲೈಸಿನ ಇನ್ಸ್‌ಪೆಕ್ಟರಾಗಿದ್ದರು. ಕಾಂಗ್ರೆಸ್ ಟಿಕೇಟಿನಿಂದ ಕರ್ನೂಲು (ರಿಸರ್ವ್) ಮತದಾರ ಕ್ಷೇತ್ರದಿಂದ ಆರಿಸಲ್ಪಟ್ಟವರು.

15. ಶ್ರೀ ಎಸ್ ಬಿ. ಪಿ. ಪಟ್ಟಾಭಿರಾಮರಾವ್ ಇವರು ಜಮೀನ್ದಾರರು. ಆಂಧ್ರ ವಿದ್ಯಾಪೀಠದ ಸಿನೆಟ್ ಮೆಂಬರು ವಯಸ್ಸು 35. ಪೂರ್ವಗೋದಾವರಿಯ ಸಾಮಾನ್ಯ ಮತದಾರ ಕ್ಷೇತ್ರದಿಂದ ಎಸೆಂಬ್ಲಿಗೆ ಆರಿಸಿಬಂದವರು.

—————

ರಾಜಾಜಿ ರೇಡಿಯೊ ಭಾಷಣ

ಚಕ್ರವರ್ತಿ ರಾಜಗೋಪಾಲಾಚಾರ್ಯರು ತಮ್ಮ ಮಂತ್ರಿಮಂಡಳದ ಪ್ರತಿಜ್ಞಾ ವಿಧಿ ನಡೆಸಿದ ವೇಳೆ ಉದ್ಘೋಷಕ ಮಾಡಿದ ಭಾಷಣವನ್ನು ಆಕಾಶವಾಣಿಯ ಮೂಲಕ ಪ್ರಚಾರಪಡಿಸಿದ್ದಾರೆ. ಮದ್ರಾಸು ಪ್ರಾಂತದಲ್ಲಿ ನೂತನ ಅಧ್ಯಾಯವೊಂದನ್ನು ತೆರೆಯುವಲ್ಲಿ ತನ್ನ ಧ್ಯೇಯ ಧೋರಣೆಯೇನೆಂಬುದನ್ನು ಅವರು ವ್ಯಕ್ತಪಡಿಸಿರುವರು.

ಪತ್ರಿಕಾ ಪಂಕ್ತಿನಲ್ಲಿ ಶ್ರೀ ಆಚಾರ್ಯರು ಮದ್ಯಪಾನ ನಿರೋಧದ ಕುರಿತು ತಮ್ಮ ಧೋರಣೆಯೇನೆಂಬುದನ್ನು ಸ್ಪಷ್ಟೀಕರಿಸಿದ್ದಾರೆ. ನಾಲ್ಕು ವರ್ಷಗಳಲ್ಲಿ ಮದ್ಯಪಾನ ನಿರೋಧವು ಮದ್ರಾಸು ಪ್ರಾಂತದಲ್ಲಿ ಅಷ್ಟೊಂದು ಯಶಸ್ವಿಯಾಗಿರುವುದಿಲ್ಲವೆಂಬುದೇನೊ ನಿಜ. ಈ ಒಂದಾದರ್ಶದಿಂದ ಸರಕಾರಕ್ಕೆ ತುಂಬಿಬಾರದ ಹಾನಿಯೆಂಬುದೊಂದೇ ಪ್ರಶ್ನೆ ಮಾತ್ರವಲ್ಲದೆ; ಜನತೆಗೂ ಅದಿಂದ. ಪೀಡಾಗಿದೆಂಬುದೂ ಸರಕಾರಕ್ಕೆ ಚೆನ್ನಾಗಿ ಮನವರಿಕೆಯಾಗಿದೆ ಆದುದರಿಂದಲೇ ಈ ಹಿಂದೆ ಮದ್ರಾಸು ಶಾಸನಸಭೆಯಲ್ಲಿ ಮದ್ಯಪಾನದ ಕುರಿತು ತೀವ್ರ ಅಸಮಾಧಾನ ಕಂಡುಬಂದಿತ್ತು. ಮಾನ್ಯ ಸದಸ್ಯರುಗಳ ಅಭಿಪ್ರಾಯವನ್ನು ಅತ್ಯಂತ ಕುತೂಹಲದಿಂದ ನಿರೀಕ್ಷಿಸುತ್ತಿದ್ದ ಜನ ಮುಂದಕ್ಕೆ ಮದ್ರಾಸದಲ್ಲಿ ಮದ್ಯಪಾನ ನಿರೋಧ ಕಾನೂನು ಹೋಗಬಹುದು. ಇಲ್ಲವೆ ಸ್ವಲ್ಪ ಸಡಿಲಾಗಬಹುದು ಎಂಬುದಾಗಿಯೂ ಲೆಕ್ಕ ಹಾಕಿದ್ದರು. "ನಾನಿರುವತನಕ ಕುಡಿಯುವದನ್ನು ಸ್ವಾಗತಿಸಲಾರೆ" ಎಂದು ರಾಜಾಜಿ ಸ್ಪಷ್ಟವಾಗಿ ಹೇಳಿದ್ದರಿಂದ ಅಂತಹ ಜನಕ್ಕೆ ತುಂಬ ನಿರಾಶೆಯಾಗುವದು ಸ್ವಾಭಾವಿಕ.

ರಾಜಾಜಿಯು ತಮ್ಮ ರೇಡಿಯೋ ಭಾಷಣದಲ್ಲಿ "ನಮ್ಮ ಸುತ್ತಲಿರುವ ನೈತಿಕ ವಾತಾವರಣವು ಸುಧಾರಿಸುವದನ್ನು ನಾನು ಕಣ್ಣಿನಿಂದ ನೋಡಿದ್ದಾದರೆ—ನನಗೆ ಅತ್ಯಂತ ಆನಂದವಾಗುವದು. ನನ್ನ ಜೀವನದಲ್ಲಿಯ ಈ ವಿಚಿತ್ರ ಹಾಗೂ ಆಕಸ್ಮಿಕ ಘಟನೆಯಿಂದ ಎಷ್ಟು ತೊಂದರೆಯಾದರೂ ನಾನು ಅವುಗಳನ್ನು ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲ. ಪ್ರತಿಯೊಬ್ಬರೂ ದುಷ್ಟ ವಿಚಾರಗಳು, ಹೇಯವಾದ ಭಾಷಣ ಇಲ್ಲವೆ ಕೃತಿಗಳು ಮನರಂಜನೆಗಳು ಹಾಗೂ ಸ್ವಾರ್ಥ ಸಾಧನೆಗಾಗಿ ನಡೆಸುವ ಎಲ್ಲ ಬಗೆಯ ಶೋಷಣೆಗಳು ಇವುಗಳ ವಿರುದ್ಧ ಯುದ್ಧ ಸಾರಬೇಕು. ಮದ್ರಾಸಿಗೆ ಒಳ್ಳೆ ಹೆಸರು ದೊರೆತರೆ ಮುಂದೆ ತಮ್ಮ ಮಕ್ಕಳಿಗೆ ಬಹಳ ಲಾಭವಿದೆಂಬುದನ್ನು ಪ್ರತಿಯೊಬ್ಬ ತಂದೆ ತಾಯಿಯು ಅರಿತುಕೊಳ್ಳಬೇಕು. ದುರ್ದೈವದಿಂದ ನಮ್ಮ ಪ್ರಾಂತವು ಒಳ್ಳೆ ಹೆಸರನ್ನು ಕಳೆದುಕೊಂಡಿದೆ. ಅದನ್ನು ಪುನಃ ಸಂಪಾದಿಸಲು ನಾವೆಲ್ಲರು ಪ್ರಯತ್ನಿಸಬೇಕು.

ನಾನು ಅಧಿಕಾರ ಸ್ವೀಕರಿಸಿರುವದಕ್ಕೆ ಕೆಲಗುಂಪುಗಳ ಧುರೀಣರು ಒಳ್ಳೆ ಜಾಗ್ರತೆ ವಹಿಸಿ ಇಲ್ಲವೆ ಮನಸ್ಸಿನಲ್ಲಿಯೆ ನೊಂದುಕೊಂಡು ತಮ್ಮ ಒಪ್ಪಿಗೆಯನ್ನು ಕೊ

ಸ್ವಚ್ಛತೆ ಸೌಂದರ್ಯತೆ ವೈವಿಧ್ಯತೆ

ಪ್ರಾಮಾಣಿಕತೆ ವಿನಯಶೀಲತೆ

ಇವೇ ನಮ್ಮ ಪ್ರಾಮುಖ್ಯ ಧ್ಯೇಯಗಳಾಗಿವೆ

ಇವುಗಳಿಂದಲೇ ನಾವು ಜನಪ್ರಿಯತೆ ಗಳಿಸಿದ್ದೇವೆ

ಈ ವಿಚಾರದಲ್ಲೇ ನಮಗೆ ಅಪೂರ್ವ ಅಭಿಮಾನವಿದೆ

ತಾಜಮಹಾಲ್. ಉಡುಪಿಯ ಆದರ್ಶ ಉಪಹಾರ ಮಂದಿರ ಸಿನೆಮಾ ಥಿಯೇಟರಿನ ಬಳಿ ಉಡುಪಿ.

Please Note—*We always cater in Sterilised Vessels.*

ಲೋಕಾಂತ

ಅಬ್ದುಲ್ಲಾರ ಭಾಷಣ

ಕಾಶ್ಮೀರದ ಮುಖ್ಯ ಮಂತ್ರಿ ಶೇಖ್ ಅಬ್ದುಲ್ಲಾರವರು ವೈಶಾಖಿ ದಿನೋತ್ಸವ ಸಭೆಯಲ್ಲಿ ಮಾತನಾಡುತ್ತಾ "ಭಾರತದಲ್ಲಿ ಜಾತೀಯತೆಯನ್ನು ಪೂರ್ಣ ಉಚ್ಚಾಟನೆ ಮಾಡಲು ನೆಹರೂ ಸರಕಾರವು ಕಂಕಣಬದ್ಧವಾಗಿದೆ. ಕಾಶ್ಮೀರವು ನಾಲ್ಕು ವರ್ಷಗಳ ಹಿಂದೆ ಭಾರತದ ಬೆನ್ನು ಬಿದ್ದಿದೆ. ಅದರ ಐತಿಹಾಸಿಕ ಸ್ವರೂಪಕ್ಕೆ ಮನ್ನಣೆ ಕೊಟ್ಟಿರುವುದು. ಅದರೆ ಭಾರತವು ದಾಕ್ಷಿಣ್ಯದಿಂದ ಮತ್ತು ವಾಸ್ತವಿಕ ಪರಿಸ್ಥಿತಿಯನ್ನು ಗಮನಿಸಿದರೆ ಮಾತ್ರ ಈ ಸಂಬಂಧವು ಧೃಢವಾಗಬಹುದು." ಎಂದು ಹೇಳಿದರು.

ಜನರಲ್ ಐಸೆನ್‌ಹಾವರ ರಾಜೀನಾಮೆ

ಯುರೋಪದ ಸೇನಾಧಿಪತಿಯಾದ ಜನರಲ್ ಐಸೆನ್‌ಹಾವರು ತನ್ನ ಸೇನಾಧಿಪತ್ಯಕ್ಕೆ ರಾಜಿನಾಮೆಯನ್ನಿತ್ತಿದ್ದು ಜೂನ್ ಒಂದಕ್ಕೆ ಅದು ಸ್ವೀಕೃತವಾಗುವದೆಂದು ಹೇಳಲಾಗಿದೆ. ಅಮೆರಿಕದ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಬೇಕಾಗುವ ಪ್ರಯುಕ್ತ ಈ ರಾಜಿನಾಮೆಯನ್ನು ಸಲ್ಲಿಸಲಾಗಿದೆಂದು ಹೇಳಲಾಗಿದೆ.

ಮುಸಾದಿಕರ ಆರೋಪ

ಇರಾಣದ ಮುಖ್ಯ ಮಂತ್ರಿ ಡಾ| ಮುಸಾದಿಕರು ಮಜಲೀಸ ಸಭೆಗೆ ಹೊಸತಾಗಿ ಆರಿಸಿ ಬಂದಿರುವ 60 ಸದಸ್ಯರನ್ನುದ್ದೇಶಿಸಿ ಮಾತನಾಡುತ್ತಾ, ಬ್ರಿಟಿಶರ ಹಸ್ತಕರು ತಮ್ಮನ್ನು ಕೊಲ್ಲಲು ಪ್ರಯತ್ನಿಸಿದರು ಈಗ ತಮ್ಮ ಯೋಜನೆಗಳನ್ನು ನಾಶಮಾಡಲು ಪ್ರಯತ್ನಿಸುತ್ತಿದ್ದಾರೆಂದು ಹೇಳಿದರು.

ಇಜಿಪ್ತದ ಚುನಾವಣೆ ಮುಂದೆಬಿತ್ತು

ಚುನಾವಣೆ ನಡೆಸಲು ಯೋಗ್ಯ ಪರಿಸ್ಥಿತಿ ನಿರ್ಮಿಸುವ ಅಗತ್ಯವಿದೆಂಬ ಕಾರಣದಿಂದ ಇಜಿಪ್ತದಲ್ಲಿ ಮೇ 18ಕ್ಕೆ ನಡೆಯಬೇಕಾಗಿದ್ದ ಚುನಾವಣೆಗಳನ್ನು ಅನಿರ್ದಿಷ್ಟ ಅವಧಿಯವರೆಗೆ ಮುಂದೂಡಲು ಇಜಿಪ್ತ ಮಂತ್ರಿಮಂಡಳವು ನಿರ್ಧರಿಸಿದೆ.

ಆಂಗ್ಲೋ ಇಜಿಪ್ತ ಮಾತುಕತೆ

ಬ್ರಿಟಿಶ ರಾಯಭಾರಿ ಸರ್ ಸ್ಟೀವನ್ಸನ್ನರು ಇಜಿಪ್ತದ ವಿದೇಶ ಮಂತ್ರಿಗಳೊಂದಿಗೆ ಭಾರೀ ಮಾತುಕತೆ ನಡೆಸಿರುವರು. ಬ್ರಿಟಿಶ ವಿದೇಶಮಂತ್ರಿ ಈಡನ್ನರಿಂದ ಬಂದ ಪತ್ರವನ್ನು ಶಾಸನಪ್ರಾಕಾರವರಿಗೆ ಒಪ್ಪಿಸಲಾಯಿತೆಂದು ತಿಳಿಯುತ್ತದೆ.

ಭಾರತ ಪಾಕಿಸ್ತಾನ ಆರ್ಥಿಕ ಸಂಬಂಧ ಚರ್ಚೆ

ಹಿಂದೂಸ್ಥಾನ ಹಾಗೂ ಪಾಕಿಸ್ತಾನ ಸರಕಾರಗಳ ನಡುವಿನ ಹಣಕಾಸಿನ ಅಂಶಗಳ ಕುರಿತು ಪಾಕಿಸ್ತಾನ ಅಧಿಕಾರಿಗಳೊಂದಿಗೆ ಅನೌಪಚಾರಿಕ ಚರ್ಚೆ ನಡೆಸಲು ಆರ್ಥಿಕ ಶಾಖೆಯ ಜೊತೆ ಕಾರ್ಯದರ್ಶಿಗಳಾದ ಎಂ. ವಿ. ರಂಗಾಚಾರಿ ಹಾಗೂ ಉಪ ಕಾರ್ಯದರ್ಶಿಗಳಾದ ಎಚ್. ಎಸ್. ನೇಗಿಯವರು ಕರಾಚಿಗೆ ತೆರಳಿದರು.

ವಿದೇಶೀ ವಸಾಹತುಗಳ ಸತ್ಯಾಗ್ರಹ?

ಆರು ತಿಂಗಳೊಳಗೆ ಭಾರತದಲ್ಲಿಯ ಫ್ರೆಂಚ ಹಾಗೂ ಪೋರ್ತುಗೀಸ ವಸಾಹತುಗಳ ಪ್ರಶ್ನೆಯು ಸರಕಾರೀ ಮಟ್ಟದಲ್ಲಿ ಬಗೆಹರಿಯದಿದ್ದರೆ ಪ್ರಜಾಪಕ್ಷಗಳ ಜನರ ಸತ್ಯಾಗ್ರಹ ಚಳುವಳಿಯನ್ನು ಪ್ರಾರಂಭಿಸುವರೆಂದು ಮಾಹೆಯ ಧುರೀಣರಾದ ಶ್ರೀ ಸಿ. ಇ. ಭರತನ್ನರು ಹೇಳಿದರು. ಈ ವಸಾಹತುಗಳು ಕಳ್ಳಪೇಟೆ ಹಾಗೂ ಸರಕುಗಳ ಕಳ್ಳ ಸಾಗಾಟದ ತವರು ಮನೆಗಳಾಗಿವೆ. ವಿದೇಶೀಯರ ಆಳಿಕೆಯು ಹಾಗೆಯೆ ಸಾಗುವದು. ಇಂಥವರಿಗೆ ಮಾತ್ರ ಬೇಕಾಗಿದೆ. ಬಂಗಾರ, ಬೆಳ್ಳಿ ಮತ್ತು ಮೆಣಸು ಇವುಗಳು ಕಳ್ಳತನದಿಂದ ಭಾರತಕ್ಕೆ ಸಾಗಿಸಲ್ಪಡುತ್ತವೆ".

ಚೀನ ಇಗ್ಲಂಡ ಖಾಸಗೀ ಜನರ ಒಪ್ಪಂದ

ಬ್ರಿಟಿಷ ಉದ್ಯಮೆದಾರರು ಚೀನಿ ಪ್ರತಿನಿಧಿಗಳೊಡನೆ ಕಳೆದ ವಾರ ಮಾಡಿಕೊಂಡ ವಾಣಿಜ್ಯ ಒಪ್ಪಂದಕ್ಕೆ ಅರ್ಥಿಕ ಸಂಪತ್ತಿಗೆ ಬಂದ ಇಬ್ಬರು ಬ್ರಿಟಿಶ ಪ್ರತಿನಿಧಿಗಳಲ್ಲೊಬ್ಬರಾದ ಲಾರ್ಡ ಬಾಯಿಡ ಓರರು ಇಂದು ಅಂಕಿತ ಹಾಕಿದರು. ಅಂಕಿತ ಹಾಕುವ ಸಮಾರಂಭದ ಚಲಚಿತ್ರವನ್ನು ರಶಿಯನ್ನರು ಮುದ್ರಿಸಿರುತ್ತಾರೆ. ಎರಡೂ ಪಕ್ಷಗಳು 10 ದಶಲಕ್ಷ ಪೌಂಡುಗಳಷ್ಟು ವ್ಯವಹಾರ ಮಾಡಲಿವೆಯೆಂದು ತಿಳಿದು ಬರುತ್ತದೆ.

ಪತ್ರಿಕೋದ್ಯಮಿಗಳ ಜೀವನ

ಶ್ರೀ ಚಲಪತಿರಾಯರ ಅಧ್ಯಕ್ಷತೆ ಹಾಗೂ ಬಂಗಾಳ ಗವರ್ನರರಾದ ಡಾ| ಎಚ್. ಸಿ. ಮುಖರ್ಜಿಯವರ ಉದ್ಘಾಟನಾ ಕಾರ್ಯಕ್ರಮದ ಮೂಲಕ ಪತ್ರಿಕೋದ್ಯಮಿ ಸಂಘಗಳ ಮಹಾಮಂಡಳದ ವಾರ್ಷಿಕಾಧಿವೇಶನವು ಕಲ್ಕತ್ತೆಯಲ್ಲಿ ಜರಗಿತು. ಅಧ್ಯಕ್ಷ ಶ್ರೀ ಚಲಪತಿರಾಯರು ತಮ್ಮ ಭಾಷಣದಲ್ಲಿ "ಹೊಸ ಪಾರ್ಲಿಮೆಂಟು ಸೇರಿದ ಕೂಡಲೇ ಪತ್ರಿಕಾ ಸಮಿತಿ ನೇಮಿಸಬೇಕೆಂದು ಬಿನ್ನವಿಸುತ್ತೇನೆ. ಕಾರ್ಯನಿರತ ಪತ್ರಿಕೋದ್ಯಮಿಗಳು ರೀತಿ ನೀತಿಗಳ ನಿಯಮಾವಳಿಯನ್ನು ತಾವೇ ಮಾಡಿಕೊಳ್ಳಬೇಕು. ವಿದೇಶೀ ಸುದ್ದಿಗಳಿಗಾಗಿ ಹಿಂದಿ ಪತ್ರಿಕೋದ್ಯಮವು ತಮ್ಮದೇ ಸ್ವಂತ ಸಂಸ್ಥೆ ನಿರ್ಮಿಸಿಕೊಳ್ಳಬೇಕು. ಅವರ ಮೂಲಸಂಬಳ, ಕೆಲಸದ ಅವಧಿ ನಿರ್ಣಯಿಸಲು ಶಾಸನ ಮಾಡಬೇಕು. ಅದರಿಂದ ಹೆಚ್ಚು ಸುಲಭವಾಗಿ ಕಾರ್ಯವಾಡಬಹುದಾಗಿದೆ. ಕೇವಲ ಗೊತ್ತುವಳಿಗಳ ಸ್ವೀಕಾರದಿಂದ ಕಾರ್ಯವಾಗದು. ಪತ್ರಿಕೋದ್ಯಮಿಗಳ ಜೀವನ ಬಹಳ ನಿಕೃಷ್ಟವಾಗಿರುವದು; ಅದು ಸುಧಾರಿಸಲೇ ಬೇಕು" ಎಂಬುದಾಗಿ ಹೇಳಿದರು.

ಟ್ಟಿರುವರು. ಕೆಲವರ್ಗಗಳಂತೂ ನನ್ನ ವಿರುದ್ಧ ಬೊಬ್ಬೆಯಿಡಲು ಪ್ರಾರಂಭಿಸಿವೆ. ಇದು ನಿಜವಾಗಿಯೂ ಉತ್ತೇಜನಕಾರಿಯಾಗಿದೆ. ಇದನ್ನು ನೋಡಿದರೆ ನಾನು ಅಧಿಕಾರ ಸ್ವೀಕರಿಸಿದ್ದುದು ಒಳಿತೇ ಆಯಿತೆಂದು ನನಗನಿಸುತ್ತದೆ.

ತಮ್ಮಲ್ಲಿಯ ಕೋಪತಾಪಗಳನ್ನು ಹಾಗೂ ದ್ವೇಷವನ್ನು ಬದಿಗಿರಿಸಿ ಮನಸ್ಸಿನಲ್ಲಿ ದೇಶಪ್ರೇಮಕ್ಕೆ ಅವಕಾಶ ಕೊಡಬೇಕೆಂದು ನಾನು ಪ್ರತಿಯೊಬ್ಬರನ್ನೂ ಬಿನ್ನವಿಸುವೆ. ಒಳ್ಳೆ ಸರಕಾರ ಹಾಗೂ ಸುಭದ್ರವಾದ ಪ್ರಾಂತ ಇವೇ ನಾವು ಮುಂದಿನ ಪೀಳಿಗೆಯವರಿಗೆ ಬಿಟ್ಟು ಕೊಡಬೇಕಾದ ಸಂಪತ್ತು ಆಗಿರುವದೆಂಬುದನ್ನು ಯಾರೂ ಮರೆಯಬಾರದು. ಶಾಸನ ಸಭೆಯು ಕಾಂಗ್ರೆಸ ಪಕ್ಷದ ಒಕ್ಕೊರಲಿನ ಬೇಡಿಕೆ ಹಾಗೂ ಅದರ ಹಿರಿ ಸದಸ್ಯರ ಬಿನ್ನಹವುಗಳನ್ನು ನೋಡಿಯೆ ನಾನು ಧುರೀಣತ್ವವನ್ನು ನಿರಾಕರಿಸುವದು ಸರಿಯಲ್ಲವೆಂದು ಭಾವಿಸಿದೆ.

ನನಗೆ ಹಾಗೂ ನನ್ನ ಹೊಸ ಸಹೋದ್ಯೋಗಿಗಳಿಗೆ ನಿಮ್ಮೆಲ್ಲರ ಸಹಾಯ ಸಹಕಾರಗಳು ಬೇಕಾಗಿವೆ. ಜಾತಿ, ಪಂಗಡ, ರಾಜಕೀಯ ವೃತ್ತಿ, ಮೊದಲಾದ ದೃಷ್ಟಿಕೋನಗಳಿಂದ ನೀವು ನೋಡಬಾರದು. ನಾನು ಈ ಅಪಾಯಕಾರೀ ಕಾರ್ಯದಲ್ಲಿ ಕೈ ಹಾಕಿದ್ದರೂ ನನ್ನಲ್ಲಿ ನೀವುಗಳೆಲ್ಲ ವ್ಯಕ್ತಪಡಿಸಿರುವ ವಿಶ್ವಾಸವು ನನಗೆ ಧೈರ್ಯ ತಂದುಕೊಟ್ಟಿದೆ.

ಬಂಧುಗಳೇ, ಭಗಿನಿಯರೇ, ಮಳೆಗಾಗಿ, ಮತ್ತು ಬಡ ಸಂತ್ರಸ್ತ ಜನತೆ ಸಂಕಷ್ಟ ನಿವಾರಣೆಗಾಗಿ ಶ್ರೀ ದೇವರನ್ನು ಪ್ರಾರ್ಥಿಸಿರಿ, ಬಡತನ—ದಾರಿದ್ರ್ಯಕ್ಕಿಂತ ಮಿಗಿಲಾದ ರಾಜಕೀಯವಿಲ್ಲ; ಇದಕ್ಕಿಂತ ಹೆಚ್ಚಿನ ಸಮಸ್ಯೆಯೂ ಅದಲ್ಲ. ಆಸುಪಾಸಿನ ಜನ ಕಷ್ಟ ಪರಂಪರೆಗಳಿಂದ ದುಃಖಿಸುತ್ತಿರುವಾಗ ಯಾರೂ ಸುಖಿಗಳಾಗುವಂತಿಲ್ಲ".

ಬ್ರೂಕ್ ಬಾಂಡ್ ಚಹಾ
ವನ್ನೇ ನೀವು ಏತಕ್ಕೆ
ಒತ್ತಿ ಕೇಳಬೇಕೆಂಬುದಕ್ಕೆ
5
ಕಾರಣಗಳು

1. ಅದು ಮಲಿನವಾಗದ ಹಾಗೆ ಪೊಟ್ಣಗಳಲ್ಲಿ ಕಟ್ಟಿ ಮೊಹರು ಮಾಡಲ್ಪಟ್ಟಿರುತ್ತದೆ
2. ಬ್ರೂಕ್ ಬಾಂಡ್ ಎಂಬ ಹೆಸರೇ ಅದರ ಗುಣದ ಭರವಸೆ.
3. ಶೀಘ್ರವಾಗಿ ತಲುಪುವಿಕೆಯು ಅದರ ಪೂರ್ಣ ಶುದ್ಧತೆಯನ್ನು ನಿಶ್ಚಯಿಸುತ್ತದೆ
4. ಬ್ರೂಕ್ ಬಾಂಡ್ ಚಹಾ ಇತರ ಬೆರಕೆ ಪದಾರ್ಥಗಳಿಂದ ದೂರವಾಗಿವೆಯೆಂಬ ಭರವಸೆಯನ್ನು ಕೊಡುತ್ತವೆ.
5. ಉತ್ತಮ ಶಾಸ್ತ್ರೀಯ ಮಿಶ್ರಣವು ಉತ್ತಮ ರುಚಿಯನ್ನು ನಿರ್ಮಿಸುತ್ತದೆ.

ಕವಿರಾಜ ಯನ್. ಯನ್. ಸೇನರ
ಶಾಸ್ತ್ರೀಯ ಔಷಧಿಗಳು
ಈಗಲೇ ಬಂದಿವೆ

ಬೃಹತ್ ಅಮೃತಬಳ್ಳಿ ಕಷಾಯ
ಪ್ರಸೂಕಾರಿಷ್ಟ
ಕಸ್ತೂರಿ ಕಲ್ಪ ರಸಾಯನ
ನೇತ್ರಬಿಂದು
ಕರ್ಪೂರಾರಿಷ್ಟ
ಸುಗಾರ್ ಪುನರ್ನಾಸವ
ದಾಸಾರಿಷ್ಟ
ಕುಂಕುಮಾಸವ
ಮೃಗಾಂಕ ದ್ರಾವ
ದರವನ್ನು ವಿಚಾರಿಸುವದು.
ಏಜಂಟ್:—

THE CANARA BANKING CORPORATION LIMITED.
ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್, ಲಿಮಿಟೆಡ್
ಸ್ಥಾಪನೆ : 1906. : ಪ್ರಧಾನ ಕಾರ್ಯಾಲಯ: ಉಡುಪಿ, (ದ ಕಾ)
ವಿಶೇಷ ಸವಲತ್ತುಗಳಿದ್ದು,
ಸಾಲಿಯಾನ್ ಶೇಕಡಾ 4ರಂತೆ ಬಡ್ಡಿಗಳಿಸುವ ನಮ್ಮ
"ಪಂಚವಾರ್ಷಿಕ ಸುವರ್ಣ ಠೇವಣಾತಿಗಳ"
ಮೇಲೆ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ
ವಿಶೇಷ ಮಾಹಿತಿಗೆ, ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.
ವಿ. ಆರ್. ಕಾಮತ್, ಬಿ ಎ; ಎಲ್ ಎಲ್, ಬಿ;
ಜನರಲ್ ಮೆನೇಜರ್.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ 5—12—0
6 ತಿಂಗಳಿಗೆ ರೂ 3—0—0

ಗುರುವಾರ ಉಡುಪಿ, ೧೭-೪-'೫೨

ಮದ್ರಾಸದ ರಾಜಕಾರಣ

ಚಕ್ರವರ್ತಿ ಶ್ರೀ ರಾಜಗೋಪಾಲಾಚಾರ್ಯರು ತಮ್ಮ ಮಂತ್ರಿ ಮಂಡಳವನ್ನು ರಚಿಸಿದ್ದು ಈ ನೂತನ ಮಂತ್ರಿ ಮಂಡಳದಲ್ಲಿ ನಮ್ಮ ಜಿಲ್ಲೆಯವರಾದ ಇರ್ವರು ಮಹಾಶಯರಿಗೆ ಸ್ಥಾನವನ್ನು ಕಲ್ಪಿಸಿಕೊಟ್ಟಿರುವರು. ಅದರಲ್ಲಿ ಒಬ್ಬರು ಶ್ರೀಮಾನ್ ಎ. ಬಿ. ಶೆಟ್ಟರು. ಇನ್ನೊಬ್ಬರು ಡಾ| ಯು ಕೃಷ್ಣರಾಯರು. ಡ| ಕೃಷ್ಣರಾಯರು ದ. ಕನ್ನಡ ಜಿಲ್ಲೆಯ ಪ್ರತಿನಿಧಿಗಳು ಅಲ್ಲದೆ ಹೋದರೂ ನಮ್ಮ ಜಿಲ್ಲೆ ಅವರ ಹುಟ್ಟೂರಾದ ಪ್ರಯುಕ್ತ ನಾವವರನ್ನು ನಮ್ಮ ಪ್ರತಿನಿಧಿಗಳೆಂದು ಹಾರೈಸಿದರೆ ತಪ್ಪಲ್ಲ. ಇವರು ಮದ್ರಾಸ್ ಮೇಯರರಾಗಿ ಆಡಳಿತಾನುಭವವುಳ್ಳ, ಜನಪ್ರಿಯ ವ್ಯಕ್ತಿ. ಚುನಾವಣೆಯಲ್ಲಿ ಗೆದ್ದು ಬಂದ ಕೆಲವೇ ಮಂತ್ರಿಗಳಲ್ಲಿ ಶ್ರೀ ಎ ಬಿ ಶೆಟ್ಟರಿಗೆ ಮಾತ್ರ ಮಂತ್ರಿ ಪದವನ್ನು ಕೊಡಲಾಗಿದೆ. ಮಾತ್ರವಲ್ಲ ರಾಜಾಜಿಯು ಇಲ್ಲದೆ ಹೋಗಿದ್ದರೆ ಪಕ್ಷದ ಧುರೀಣತ್ವ ಶ್ರೀ ಎ. ಬಿ ಶೆಟ್ಟರಿಗೋ—ಶ್ರೀ ಸಿ. ಸುಬ್ರಹ್ಮಣ್ಯರಿಗೋ—ಎಂಬ ವಿಚಾರ ತಲೆದೋರಿತ್ತು. ಆದರೆ ಇಂದು ರಾಜಾಜಿ ಧುರೀಣತ್ವವನ್ನು ಒಪ್ಪಿ ಮಂತ್ರಿ ಮಂಡಳವನ್ನು ರಚಿಸಿದ್ದಾರೆ ಇದರಲ್ಲಿಯ ಸದಸ್ಯರುಗಳೆಲ್ಲ ಹೆಚ್ಚಿನ ಖ್ಯಾತಿಯನ್ನು ಪಡೆಯದೆ ಇದ್ದರೂ ಒಳ್ಳೆಯ ಕಾರ್ಯದಕ್ಷತೆಯುಳ್ಳವರನ್ನೇ ಆರಿಸಲಾಗಿದೆ ಎಂದು ಹೇಳಲಾಗಿದೆ. ದೀರ್ಘಕಾಲದ ಅನುಭವ-ಸ್ಥಾನಮಾನವನ್ನು ಗಳಿಸಿಕೊಂಡಿರುವ ಶ್ರೀಮಾನ್ ಎ. ಬಿ ಶೆಟ್ಟರು ಈ ಬಾರಿ ನಮ್ಮ ಜಿಲ್ಲೆಯ ಪಾಲಿಗೆ ಹೆಚ್ಚಿನ ಲಕ್ಷ್ಯಕೊಡಲು ಶಕ್ತರಾಗಬಹುದೆಂದು ಜನ ನಿರೀಕ್ಷಿಸುತ್ತದೆ. ಏಕೆಂದರೆ ಜೊತೆಯಲ್ಲಿ ಡಾ| ಯು. ಕೃಷ್ಣರಾಯರೂ ಅವರಿಗೆ ಬೆಂಬಲವನ್ನೀಯಬಹುದು. ಕಳೆದಬಾರಿ ತಮಿಳಾಂಧ್ರರ ನಡುವೆ ಅವರ ಧ್ವನಿ ಸಾಕಷ್ಟು ಕೇಳುತ್ತಿಲ್ಲವೆಂಬ ಅಪವಾದವಿತ್ತು. ಆದರೆ ಇಂದಿನ ಸ್ಥಿತಿ ಹಾಗಲ್ಲ. ಮಂತ್ರಿ ಮಂಡಳದಲ್ಲಿಯೇ ರಾಜಾಜಿಯನ್ನು ಬಿಟ್ಟರೆ ಹಿರಿಯ ಸ್ಥಾನ ಶ್ರೀ ಶೆಟ್ಟರದೇ. ಅವರು ಪ್ರಾಮಾಣಿಕರೂ ಕರ್ತವ್ಯಶೀಲರೂ ಸಮರ್ಥರೂ ಆಗಿರುವುದರಿಂದ ಇವರ ಘೋಷಣೆಗೆ ಹೆಚ್ಚಿನ ಬೆಂಬಲ ಸಿಗುವದು ಸ್ವಾಭಾವಿಕ. ಜಿಲ್ಲೆಯ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಈ ಮಹನೀಯರೀರ್ವರೂ ತಮ್ಮ ಕೈಲಾದಷ್ಟು ಅಮೂಲ್ಯ ಸೇವೆಯನ್ನು ಸಲ್ಲಿಸಿಯಾರೆಂದು ನಂಬಬಹುದು.

ಮದ್ರಾಸ ರಾಜಕಾರಣದಲ್ಲಿ ಅತ್ಯಂತ ಬಿಕ್ಕಟ್ಟಿನ ಕಾಲದಲ್ಲಿ ರಾಜಾಜಿ ಧುರೀಣತ್ವವನ್ನು ವಹಿಸಿದ್ದು ಮಹತ್ವಪೂರ್ಣ ಆಶಾದಾಯಕ ಸಂಗತಿಯೇ ಸರಿ. ಆದರೆ ಇದೇ ಕಾಲಕ್ಕೆ ರಾಯಲಸೀಮಾದಲ್ಲಿ ತಲೆದೋರಿರುವ ಬಡತನ-ಕ್ಷಾಮಗಳ ಸ್ಥಿತಿಯು ಅತ್ಯಂತ ಶೋಚನೀಯವಾಗಿದೆ. ಅನ್ನವಿಲ್ಲದಿರುವುದೊಂದೇ ಕಷ್ಟವಲ್ಲ ಕುಡಿಯಲು ನೀರೂ ಇಲ್ಲದ ಹೀನ ಪರಿಸ್ಥಿತಿ ಅಲ್ಲಿ ಉಂಟಾಗಿದೆ. ಈ ವಿಚಾರದಲ್ಲಿ ಮದ್ರಾಸು ಸರಕಾರವು ಒಳ್ಳೆಯ ಮುತವರ್ಜಿಯನ್ನು ವಹಿಸಿರತ್ತದೆ ಆದರೆ ಇದು ತಾತ್ಕಾಲಿಕೋಪಶಮನವೇ, ಇಂತಹ ಭೀಕರ ಪರಿಸ್ಥಿತಿಯನ್ನು ಮದ್ರಾಸ ಸರಕಾರವೊಂದೇ ಎದುರಿಸಲು ಸಮರ್ಥವಾಗಿರುವದಿಲ್ಲ. ಆರ್ಥಿಕವಾಗಿಯೂ—ದೈಹಿಕವಾಗಿಯೂ ಬೇರೆಯವರ ಸಹಕಾರ ಅತ್ಯಗತ್ಯ ಎಂಬುದರಿಂದಲೇ ಕೇಂದ್ರ ಸರಕಾರದವರು ಒಳ್ಳೆಯ ಮುತ್ಸದ್ದಿತನದಿಂದ ವರ್ತಿಸಿದ್ದು ಕಂಡು ಬರುತ್ತದೆ. ಭಾರತ ಸರಕಾರದ ಸೈನಿಕರು ಮದ್ರಾಸದ ರಾಯಲಸೀಮಾ ಪ್ರದೇಶಕ್ಕೆ ಬಂದಿದ್ದು ಬಾವಿಯನ್ನಗೆಯುವದೂ—ದೂರದೂರದಿಂದ ನೀರನ್ನು ತಂದುಕೊಡುವದೂ—ಅನ್ನ ನೀರುಗಳಿಂದ ಅದೆಷ್ಟು ಸಂತ್ರಸ್ತರ ದುಃಖಗಳನ್ನು ಪರಿಹಾರ ಮಾಡುವದೂ ಅವರ ಇಂದಿನ ಪ್ರಯತ್ನವಾಗಿದೆ. ಮಿಲಿಟರಿ ಇಂಜಿನಿಯರೂ ಒಂದು ಸೈನಿಕರೊಂದಿಗೆ ತನ್ನ ಕೈಲಾದ ಕಾರ್ಯವನ್ನು ಮಾಡುತ್ತಲಿದ್ದಾರೆ. ಭಾರತ ಸೇನಾ ನಾಯಕ ಜನರಲ್ ಕಾರ್ಯಪ್ಪನವರೂ ಈ ಪ್ರದೇಶವನ್ನು ಸಂದರ್ಶಿಸುವ ಮನಸ್ಸು ಮಾಡಿದ್ದಾರೆ. ಇವೆಲ್ಲ ಜನತೆಯ ಬಗ್ಗೆ ಸರಕಾರವು ವಹಿಸುತ್ತಿರುವ ವಿಶೇಷ ಹೊಣೆಯೆಂದಾದರೂ ಸೈನಿಕರ ಸೇವೆ ಇಲ್ಲಿ ಅತ್ಯಮೂಲ್ಯವಾಗಿದೆ. ಕೇಂದ್ರ ಸರಕಾರದ ಈ ವಿಧಾಯಕ ಕಾರ್ಯಕ್ರಮವು ನಾವು ಪ್ರಸಂಗಾವಧಾನತೆಯನ್ನು ವ್ಯಕ್ತಪಡಿಸುತ್ತದೆ.

ಆರ್ಥಿಕ ನೆರವನ್ನು ಕೇಂದ್ರಸರಕಾರವು ಹಿಂದಿಗಿಂತ ಹೆಚ್ಚಿಸುವ ಮನಸ್ಸು ಮಾಡಿರುವುದೆಂದು ತಿಳಿಯುತ್ತದೆ ಪರಿಸ್ಥಿತಿಯು ಇಷ್ಟು ಗಂಭೀರವಾಗಿರುವಾಗಲೇ ರಾಜಾಜಿ ಧುರೀಣತ್ವ ವಹಿಸಿಕೊಂಡಿರುವರು. ಇಂತಹ ಭೀಕರ ಪರಿಸ್ಥಿತಿ ಪ್ರಾಂತದ ಬೇರೆಡೆಯಲ್ಲಿ ತಲೆಯೆತ್ತದಂತೆ ಮುಂಜಾಗ್ರತೆ ವಹಿಸುವದು ರಾಜಾಜಿ ಮಂತ್ರಿಮಂಡಳದ ಕರ್ತವ್ಯವಾಗಿದೆ. ರಾಜಾಜಿ ತನ್ನ ರೇಡಿಯೋ ಭಾಷಣದಲ್ಲಿ ಹೇಳಿದ ನಾಳೆಗಾಗಿ ಪ್ರಾರ್ಥಿಸಿರಿ. ಸುತ್ತಮುತ್ತಲಿನವರು ದುಃಖಿಗಳಾಗಿರುವಾಗ ಯಾರೂ ಸುಖಿಗಳಾಗುವಂತಿಲ್ಲ. "ಬಡತನ ದಾರಿದ್ರ್ಯಕ್ಕಿಂತ ಅನ್ಯ ರಾಜಕೀಯ ಇರುವುದಿಲ್ಲ" ಎಂಬ ಮಾತು ಜನದ ಸುಖ ದುಃಖಗಳಲ್ಲಿ ತಾವು ಎಂತಹ ಜಾಗ್ರತೆಯನ್ನು ವಹಿಸಬೇಕೆಂಬುದರ ಕುರಿತು ಇದು ಮುನ್ಸೂಚನೆಯಾಗಿದೆ. ಈಚೆಗೆ ಹಲವು ವರ್ಷಗಳಿಂದ ಒಂದಲ್ಲ ಒಂದು ರೀತಿಯಿಂದ ಕ್ಷುದ್ರ ವಿಚಾರಗಳು ತಲೆಯೆತ್ತಿ ಮದ್ರಾಸದ ರಾಜಕಾರಣದಲ್ಲಿ ಕಲುಷಿತ ವಾತಾವರಣವುಂಟಾಯಿತೆನ್ನಬಹುದು. ಆದರೆ ರಾಜಾಜಿಯ ಮಂತ್ರಿಮಂಡಳ ಈ ಕೊಳೆಯನ್ನು ತೊಳೆದು ಶುಭ್ರ, ನೂತನ ಹಾಗೂ ಚೇತನದಾಯಿ ವಾತಾವರಣವನ್ನುಂಟುಮಾಡುವಂತಾಗಲಿ.



ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳೂ ಅಗಾಧ ವ್ಯಕ್ತಿ-ಶಕ್ತಿಗಳೂ ಆದ
ಶ್ರೀ ಕೆ. ಶಿವರಾಮ ಕಾರಂತರು
ಇದೇ ತಾ 18ಕ್ಕೆ ಮುಂಬಯಿಯಿಂದ ಬ್ಯಾಟರಿ ಹಡಗದ ಮೂಲಕ ಯುರೋಪಿಗೆ ಪ್ರಯಾಣ ಬೆಳೆಸುವರು. ಅವರು ಮೂರು ತಿಂಗಳವರೆಗೆ ಪಶ್ಚಿಮ ಯುರೋಪಿನ ಸಂಚಾರ ಕೈಗೊಳ್ಳುವರು.

ಉಡುಪಿ

ಕೋರಮ್ ಇಲ್ಲ:—ಇದೇ ತಾ. 10ರಲ್ಲು ಕರೆಯಲಾಗಿದ್ದ ಉಡುಪಿ ತಾಲೂಕು ಪಾನನಿರೋಧ ಸಭೆಯು ಕೋರಂ ಇಲ್ಲದಿದ್ದುದರ ದೆಸೆಯಿಂದಾಗಿ ಮುಂದರಿಸಲಾಯಿತು.

ತಾಲೂಕು ಆಹಾರ ಉತ್ಪಾದನಾ ಸಭೆಯು—ಇದೇ ತಾ 10ರಂದು ಶ್ರೀ ಪಿ. ಗೋಪಾಲ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳ್ಳಂಪಳ್ಳಿ ಗ್ರಾಮದ ಕೆರೆಯೊಂದನ್ನು ದುರಸ್ತಿಪಡಿಸಬೇಕೆಂದು ಶ್ರೀ ಬಿ ಕರುಣಾಕರ ಹೆಗ್ಡೆಯವರು ತಂದ ಸೂಚನೆಯನ್ನು ಮನ್ನಿಸಿ ಅದಕ್ಕಾಗಿ ಸಾಲ ಕೊಡಬೇಕೆಂದಾಯಿತು. ಹಳ್ಳಿ ಗ್ರಾಮ ಪ್ರದೇಶಗಳಲ್ಲಿ ವೈಯಕ್ತಿಕವಾಗಿ ಜಾಸ್ತಿಗೊಬ್ಬರವನ್ನು ತಯಾರಿಸಿದ ಹಿರಿಯಡ್ಕದ ಶ್ರೀ ಕೆ. ವಿಠಲ ಶೆಟ್ಟಿಗೆ ಕೃಷಿ ಇಲಾಖೆಯ ಕಡೆಯಿಂದ ಇಪ್ಪತ್ತಾರು ರೂಪಾಯಿ ಮೌಲ್ಯದ ಕೃಷಿ ಪುಸ್ತಕ ಹಾಗೂ ಉಪಕರಣಗಳನ್ನು ಬಹುಮಾನ ಕೊಡಲಾಯಿತು.

ಸತ್ಕಾರ ಕೂಟ—ಕಳೆದ ಬಾರಿ ಪ್ರಕಟಿಸಿದಂತೆ ತಾ. 9ರಂದು ಶ್ರೀ ಎ. ಬಿ ಕೃಷ್ಣರಾಜರು ಏರ್ಪಡಿಸಿದ ಶ್ರೀ ಟಿ. ಎ ಪೈಗಳ ಸತ್ಕಾರ ಕೂಟದ ಅಧ್ಯಕ್ಷತೆಯನ್ನು ಡಾ| ಎಸ್. ಆರ್ ಪೈಗಳು ವಹಿಸಿದ್ದರು ಡಾ| ಕೆ. ಎಲ್ ಐತಾಳ್ ಮತ್ತು ಶ್ರೀ ಬೋಳ ವಿಠಲ ರಾಯರು ಸಮಯೋಚಿತ ಮಾತುಗಳನ್ನಾಡಿದರು. ಅತಿಥಿ ಶ್ರೀ ಪೈಗಳು ಮದ್ರಾಸದ ರಾಜಕೀಯವನ್ನು ಯಥಾವತ್ತಾಗಿ ವಿವರಿಸಿದ ಮೇಲೆ ಅಧ್ಯಕ್ಷರ ಭಾಷಣ, ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ರಾಷ್ಟ್ರೀಯ ಸಪ್ತಾಹ—ಆಚರಣೆಗಾಗಿ ತಾ. 6ರಿಂದ 13ರ ವರೆಗೆ ಪ್ರತಿದಿನಕ್ಕೊಂದು ಗಂಟೆಯ ಕಾಲ ಸಾಮೂಹಿಕ ನೂಲುವ ಕಾರ್ಯಕ್ರಮವನ್ನು ಸ್ಥಳೀಯ ಕತಾಯಿ ಮಂಡಳದಲ್ಲಿ ಜರಗಿಸಲಾಯಿತೆಂದು ಅದರ ಕಾರ್ಯದರ್ಶಿಯವರು ತಿಳಿಸುತ್ತಾರೆ.

ರಥೋತ್ಸವ—ಕಡಿಯಾಳಿ ಶ್ರೀ ಮಹಿಷಮರ್ದಿನಿ ದುರ್ಗಾ ದೇವಸ್ಥಾನದ ರಥೋತ್ಸವವು ತಾ 11ರಿಂದ 14ರ ತನಕ ವಿಜೃಂಭಣೆಯಿಂದ ಜರಗಿತು.

ವಿದಾಯ ಸತ್ಕಾರಗಳು—ಉಡುಪಿ ಬೋರ್ಡ್ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದು ಈಗ ತಾನೆ ನಿವೃತ್ತರಾದ ಶ್ರೀಗಳಾದ ಕೆ. ಎಮ್. ಮಾಧ್ಯಸ್ಥ ಮತ್ತು ಕೆ. ಗೋಪಾಲ ಕೃಷ್ಣಾಚಾರ್ಯರನ್ನು ವಿದ್ಯಾರ್ಥಿಗಳೂ, ಅಧ್ಯಾಪಕರೂ ಪ್ರತ್ಯಪ್ರತ್ಯೇಕ ವಿದಾಯ ಸತ್ಕಾರಗಳನ್ನಿತ್ತು ಗೌರವಿಸಿದರು.

ಮುನಿಸಿಪಲ್ ಕೌನ್ಸಿಲು ಸಭೆಯು ಇದೇ ತಾ. 12ರಲ್ಲು ಅಧ್ಯಕ್ಷ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಜಮೀನು ತೆರಿಗೆ ಶಾಖೆಗೆ ಮೂರು ತಿಂಗಳ ಮಟ್ಟಿಗೆ ಮಾತ್ರ ಒಬ್ಬ ಗುಮಾಸ್ತನನ್ನು ನೇಮಿಸಬಹುದೆಂದು ತುಂಬಾ ಚರ್ಚೆಯ ನಂತರ ತೀರ್ಮಾನಿಸಿತು ಇಲೆಕ್ಟ್ರಿಕ್ ಕಂಪೆನಿಯಿಂದ ಹೊರಿಸಲಾದ ಯುದ್ಧಕಾಲದ ಸರ್‌ಚಾರ್ಜನ್ನು ಇದೇ ತಿಂಗಳಿನಿಂದ ಹಿಂತೆಗೆದುಕೊಳ್ಳಬೇಕೆಂದು ಮದ್ರಾಸು ಸರಕಾರವನ್ನು ಕೇಳಿಕೊಳ್ಳಬೇಕೆನ್ನುವ ಶ್ರೀ ಯು. ವಾಸುದೇವ ಪ್ರಭುಗಳ ನಿರ್ಣಯವು ಬಹುಮತದಿಂದ ಅಂಗೀಕಾರ ಪಡೆಯಿತು. ಮುನಿಸಿಪಲ್ ಹೆಂಗಸು ಶಾಲಾಕಟ್ಟಡದ ಬಾಬ್ತು ಆ ಕಟ್ಟಡ ನಿರ್ಮಾಣ ಕಮಿಟಿಗೆ ರೂ. 10,700/- ಕೊಡಬಹುದೆಂದಾಯಿತು. ಆರೋಗ್ಯ ಇಲಾಖೆಯ ಹಲವಾರು ಬೆಚ್ಚಗಳನ್ನು ಮಂಜೂರು ಮಾಡಲಾಯಿತು.

ಹವಾಮಾನ:—ಕೆಲದಿನಗಳಿಂದ ವಿಪರೀತ ಸೆಕೆಯಿದ್ದು ತಾ-15ರಲ್ಲಿ ಸ್ವಲ್ಪ ಮಳೆ ಬಿದ್ದಿರುವುದು.

ಸಾಂತೂರು—ಮುದರಂಗಡಿ:—ಸ್ಥಳೀಯ ಭಾರತ ವಾಚನಾಲಯದ ಮೆಂಬರರ ಸಭೆಯೊಂದು ತಾ 6-4-52ರಲ್ಲು ಶ್ರೀ ಎಸ್ ಸುಂದರ ಸೆಟ್ಟರವರ ಅಧ್ಯಕ್ಷತೆಯಲ್ಲಿ ಜರಗಿತು ನೆರೆದ ಸಭಿಕರು ಅನೇಕ ಹಿತಸೂಚನೆಗಳನ್ನಿತ್ತರು ಅಧ್ಯಕ್ಷರು ಸಮೀಪದ ಹಳ್ಳಿಗಳಲ್ಲಿ ವಾಚನಾಭಿರುಚಿ ಬೆಳೆದು ಈ ವಾಚನಾಲಯದಿಂದ ತುಂಬಾ ಪ್ರಯೋಜನವಾಗಲೆಂದೂ ಸರ್ವರೂ ಯತ್ನಿಸಿ, ಗ್ರಾಮದ ಏಳಿಗೆ ಮಾಡಬೇಕೆಂದೂ ಹೇಳಿದರು



ಮುಂಬಯಿಯ ಕಾಂಗ್ರೆಸ ಪಕ್ಷದ ಮುಖಂಡರಿಗೆ

ಮುಂಬಯಿ ವಿಧಾನ ಸಭೆಯ ಹೊಸ ಕಾಂಗ್ರೆಸ ಪಕ್ಷದ 31 ಸದಸ್ಯರು ಮುಂಬಯಿ ಗೃಹಮಂತ್ರಿ ಶ್ರೀ ಮುರಾರಜಿ ದೇಸಾಯಿಯವರ ಹೆಸರನ್ನು ಪಕ್ಷದ ಧುರೀಣತ್ವಕ್ಕೆ ಸೂಚಿಸಿರುವದಾಗಿ ತಿಳಿಯುತ್ತದೆ. ಮಹಾರಾಷ್ಟ್ರದ 2 ಸದಸ್ಯರು ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ ಸಮಿತಿ ಅಧ್ಯಕ್ಷರಾದ ಶ್ರೀ ಬಿ. ಎಸ್. ಹಿರೆಯವರ ಹೆಸರನ್ನು ಪಕ್ಷದ ಧುರೀಣತ್ವಕ್ಕೆ ಸೂಚಿಸಿರುವರು. ಆದರೆ ಹಿರೆಯವರು ತನ್ನ ಹೆಸರನ್ನು ಹಿಂತೆಗೆದುಕೊಳ್ಳುವ ಸಂಭವವಿರುವದರಿಂದ ಧುರೀಣತ್ವಕ್ಕೆ ಸ್ಪರ್ಧೆಇರದು.

ರಾಷ್ಟ್ರಾಧ್ಯಕ್ಷ ಪದಕ್ಕೆ ಐವರ ಸ್ಪರ್ಧೆ

ರಾಷ್ಟ್ರಾಧ್ಯಕ್ಷರ ಪದಕ್ಕೆ ಒಟ್ಟು 5 ಜನರ ನಾಮಪತ್ರವನ್ನು ಸಲ್ಲಿಸಿದ್ದು ಅವು ಸ್ವೀಕೃತವಾಗಿವೆ. ಅವರಾರೆಂದರೆ, 1) ಡಾ| ರಾಜೇಂದ್ರ ಪ್ರಸಾದರು. 2) ಪ್ರೊ|. ಕೆ. ಟಿ. ಶಹಾ. 3) ಶ್ರೀ ಹರಿರಾಮ. 4) ಕೃಷ್ಣಕುಮಾರ ಚಟರ್ಜಿ ಕಲ್ಕತ್ತಾ. 5) ಶ್ರೀ ಎಲ್. ಜಿ. ಥತ್ತೆ, ಸಮಾಜವಾದೀ ಹುರಿಯಾಳುವಿನ ಪತ್ರ ನಿರಾಕರಿಸಲ್ಪಟ್ಟಿದೆ.

ಕಾಂಗ್ರೆಸ ಅಧ್ಯಕ್ಷ ಶ್ರೀ ನೆಹರೂರವರು ಪ್ರಾಂತೀಯ ಶಾಸನಸಭೆಗಳಲ್ಲಿಯ ಕಾಂಗ್ರೆಸ ಪಕ್ಷಗಳ ಧುರೀಣರನ್ನುದ್ದೇಶಿಸಿ ಒಂದು ಪರಿಪತ್ರವನ್ನು ಹೊರಡಿಸಿರುವರು. ಅದರಲ್ಲಿ ಕಾಂಗ್ರೆಸ ಪಕ್ಷಗಳ ಪ್ರತಿಯೊಬ್ಬ ಸದಸ್ಯನೂ ರಾಷ್ಟ್ರಾಧ್ಯಕ್ಷ ಪದಕ್ಕೆ ಸ್ಪರ್ಧಿಸುತ್ತಿರುವ ಡಾ| ರಾಜೇಂದ್ರ ಪ್ರಸಾದರಿಗೆ ಮತಗಳನ್ನು ಕೊಡಬೇಕೆಂದು ಕೇಳಿಕೊಂಡಿರುವರು.

ಕಾಂಗ್ರೆಸ್ಸಿನ ಸೋಲಿಗೆ ಯಾವುದು ಕಾರಣ?

ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸು ಸೋಲಲು ಮದ್ಯಪಾನ ನಿರೋಧ ಕಾನೂನು ಕಾರಣವೆಂದು ಹಲವರು ಆರೋಪಿಸುತ್ತಿರುವದನ್ನು ನೂತನ

ವಾರದ ವಾರ್ತೆ

ಮದ್ಯಪಾನ ನಿರೋಧ ಮಂತ್ರಿ ಪಿ. ಸಿ. ವೆಳನಿ ಸ್ವಾಮಿ ಗೌಂಡರು ಅಲ್ಲಗಳೆದರು. ಕೊಯಂಬತ್ತೂರು ಜಿಲ್ಲೆಯು ಮೊದಲು ಎಲ್ಲಕ್ಕೂ ಹೆಚ್ಚು ಅಬಕಾರಿ ಹಣವನ್ನು ಸರಕಾರಕ್ಕೆ ಸಲ್ಲಿಸುತ್ತಿದ್ದು ಪಾನ ನಿರೋಧವು ಜ್ಯಾರಿಗೆ ಬಂದ ನಂತರ ಈ ಜಿಲ್ಲೆಯು ಹೆಚ್ಚು ಶಾಂತಮಯವಾಗಿ ಕುಡುಕರ ಹಾವಳಿ ತಗ್ಗಿರುವದನ್ನು ಅವರು ಉದಾಹರಿಸಿದರು. ಮತ್ತು, ಪಾನನಿರೋಧ ಧೋರಣೆಯಲ್ಲಿ ಬದಲಾವಣೆ ಮಾಡುವದು ಶಕ್ಯವೇ ಇಲ್ಲವೆಂದೂ ಹೇಳಿದರು.

ಮದ್ರಾಸನಲ್ಲಿ 4 ಹೊಸ ಸಕ್ಕರೆ ಕಾರಖಾನೆಗಳು

ಮದ್ರಾಸು ಸಂಸ್ಥಾನದಲ್ಲಿ ಯುದ್ಧಾನಂತರ ಯೋಜನೆಯಂತೆ ನಾಲ್ಕು ಖಾಸಗಿ ಸಕ್ಕರೆ ಕಾರಖಾನೆಗಳನ್ನು ಸ್ಥಾಪಿಸಲು ಸಹಾಯ ಮಾಡಲು ಸರಕಾರವು ಪರ್ಯಾಲೋಚಿಸುತ್ತಿದೆ. ಇವುಗಳಲ್ಲಿ ಒಂದು ಉತ್ತರ ಅರ್ಕಾಟು ಜಿಲ್ಲೆಯಲ್ಲಿ ಸ್ಥಾಪಿಸಲಾಗುವದು- ಇದು ದಿನಕ್ಕೆ 200 ಟನ್ನು ಕಬ್ಬನ್ನು ಜಜ್ಜಬಲ್ಲುದು. ಇನ್ನೊಂದನ್ನು ದಕ್ಷಿಣ ಅರ್ಕಾಟು ಜಿಲ್ಲೆಯಲ್ಲಿ ಸ್ಥಾಪಿಸಲಾಗುವದು. ಇದರಲ್ಲಿ 800 ಟನ್ನು ಕಬ್ಬನ್ನು ಜಜ್ಜಲಾಗುವದು. ಅಲ್ಲದೆ ಕ್ರಮವಾಗಿ ದಿನಕ್ಕೆ 450 ಮತ್ತು 500 ಟನ್ನು ಕಬ್ಬು ಹಿಂಡುವ ಎರಡು ಕಾರಖಾನೆಗಳಲ್ಲಿ ಒಂದು ಕೊಯಂಬತ್ತೂರು ಪ್ರದೇಶದಲ್ಲಿಯೂ ಇನ್ನೊಂದು ತಿರುಚಿನಾಪಳ್ಳಿ ತಂಜಾವೂರು ಪ್ರದೇಶದಲ್ಲಿಯೂ ಸ್ಥಾಪಿಸಲ್ಪಡುವದು.

ರಾಷ್ಟ್ರಾಧ್ಯಕ್ಷ ಪದಕ್ಕೆ ಸ್ಪರ್ಧೆ ಬೇಡ

ಭಾರತ ಸಂವಿಧಾನ ಸಂಘದ ಜನರಲ್ ಸೆಕ್ರೆಟರಿಗಳಾದ ಶ್ರೀ ಪ್ರಾಣನಾಥ ಮೆಹತಾರವರು ದಿನಾಂಕ 13ರಲ್ಲು ಹೊಸದಿಲ್ಲಿಯಿಂದ ಒಂದು ಪ್ರಕಟಣೆಯನ್ನು ಹೊರಡಿಸಿ ರಾಷ್ಟ್ರಾಧ್ಯಕ್ಷ ಪದಕ್ಕೆ ಡಾ| ರಾಜೇಂದ್ರ ಪ್ರಸಾದರನ್ನು ಅವಿರೋಧವಾಗಿ ಆರಿಸುವುದು ಸಾಧ್ಯವಾಗುವಂತೆ, ರಾಷ್ಟ್ರಾಧ್ಯಕ್ಷ ಪದಕ್ಕೆ ಹುರಿಯಾಳಾಗಿ ನಾಮಪತ್ರ ಸಲ್ಲಿಸಿದವರು ತಮ್ಮ ನಾಮಪತ್ರಗಳನ್ನು ಹಿಂತೆಗೆದುಕೊಳ್ಳಬೇಕೆಂದು ಕೇಳಿಕೊಂಡರು.

ಪಾನನಿರೋಧ ಯಶಸ್ವಿಯಾಗಿದೆ

ಮುಂಬಯಿ ಸರಕಾರದ ಗೃಹಮಂತ್ರಿಗಳಾದ ಶ್ರೀ ಮುರಾರಜಿ ದೇಸಾಯಿಯವರು ದಿನಾಂಕ 12ರಂದು ಮುಂಬಯಿಯ ಪಾನನಿರೋಧ ಸಮಿತಿಯ ಮನರಂಜನ ಗೃಹದ ಉದ್ಘಾಟನೆಯನ್ನು ಮಾಡುತ್ತ ಪಾನನಿರೋಧದಿಂದ ಮುಂಬಯಿ ಪ್ರಾಂತದಲ್ಲಿ ಲಕ್ಷಗಟ್ಟಲೆ ಜನರು ಸುಖಿಗಳಾಗಿರುವರೆಂದು ಹೇಳಿದರು. ಮುಂಬಯಿ ಜನತೆಗೆ ಪಾನನಿರೋಧವು ಬೇಕಾಗಿದೆ ಎಂಬುದು ಜೊನ್ನೆ ಈಗ ನಡೆದ ಸಾರ್ವತ್ರಿಕ ಚುನಾವಣೆಗಳ ಪರಿಣಾಮದಿಂದ ತಿಳಿಯಬಹುದೆಂದು.

ಸಂಪೂರ್ಣ ಜವಳಿ ವಿನಿಯಂತ್ರಣವಿಲ್ಲ

ಸದ್ಯದ ಪರಿಸ್ಥಿತಿಯಲ್ಲಿ ಸಂಪೂರ್ಣ ಜವಳಿ ವಿನಿಯಂತ್ರಣ ಮಾಡಬಾರದೆಂದು ಜವಳಿ ನಿಯಂತ್ರಣ ಸಮಿತಿಯು ಭಾರತ ಸರಕಾರಕ್ಕೆ ಸೂಚನೆ ಮಾಡಿದೆ ಎಂದು ತಿಳಿದು ಬರುತ್ತದೆ.

ಮೈಸೂರು ರಾಜ್ಯದ ಹಳ್ಳಿಗಳಲ್ಲಿ ಸೀದಾ ರದ್ದತಿ

ಮೈಸೂರು ರಾಜ್ಯದ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಆಹಾರ ಧೋರಣೆಯ ಬದಲಾವಣೆ ಬಗ್ಗೆ ಕೊಟ್ಟ ಹೇಳಿಕೆಯನ್ನು ಸ್ಪಷ್ಟೀಕರಿಸುವ ಪ್ರಕಟಣೆಯು ಇದೇ ತಾ 10ರಂದು ಸರಕಾರದಿಂದ ಹೊರಬಿದ್ದಿರುವುದು. ನಾಲ್ಕು ಪ್ರಮುಖ ಪಟ್ಟಣಗಳಾದ ಬೆಂಗಳೂರು ಮೈಸೂರು, ಕೋಲಾರ ಚಿನ್ನದ ಗಣಿ ಮತ್ತು ದಾವಣಗೆರೆ ಹಾಗೂ ಭದ್ರಾವತಿಯ ಔದ್ಯೋಗಿಕ ನಗರಗಳನ್ನು ಹೊರತುಪಡಿಸಿ ರಾಜ್ಯದ ಇನ್ನಿತರ ಭಾಗಗಳಲ್ಲಿ ಈಗ ಜಾರಿಯಲ್ಲಿರುವ ಔಪಚಾರಿಕ ಸೀದಾ ಪದ್ಧತಿಯು ಇದೇ ಡಿಸೆಂಬರ್ ತಿಂಗಳಿಂದ ರದ್ದು ಮಾಡಲ್ಪಡುವುದು. ಒಮ್ಮೆಲೆ ಬದಲು ಮಾಡಿದರೆ ಬಡವರಿಗೆ ತೊಂದರೆಯಾಗುವುದೆಂಬ ನಿರೀಕ್ಷೆಯಿಂದ ದಶಂಬರದಿಂದ ರದ್ದು ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಹೊಸ ಎಸೆಂಬ್ಲಿ ಸಭೆ

ಮದ್ರಾಸಿನ ಹೊಸ ಎಸೆಂಬ್ಲಿಯ 375 ಸದಸ್ಯರೆಲ್ಲರ ಸಭೆಯು ಬರುವ 3ಕ್ಕೆ ಜರಗಲಿದೆ ಸದಸ್ಯರ ಪ್ರತಿಜ್ಞಾ ವಿಧಿಗೇನೇ ಒಂದೂವರೆ ದಿವಸ ಬೇಕಾಗುವುದು. ಇದಾದ ಮೇಲೆ ಎಸೆಂಬ್ಲಿಯ ಸ್ಪೀಕರರ ಮತ್ತು ಅಧ್ಯಕ್ಷರ ಚುನಾವಣೆ ನಡೆಯುವುದು. ತಾ 6ಕ್ಕೆ ಗವರ್ನರ್ ಶ್ರೀ ಪ್ರಕಾಶರು ಎಸೆಂಬ್ಲಿಯಲ್ಲಿ ಭಾಷಣಮಾಡಲಿರುವರು.

ಡಾ| ಪ್ರಸಾದರಿಗೆ ವಿದ್ಯಾಮಾರ್ತಾಂಡ ಪದವಿ

ಬಿಹಾರ ಸಂಸ್ಕೃತಸಂಘದವರು ರಾಷ್ಟ್ರಾಧ್ಯಕ್ಷರಾದ ಡಾ| ರಾಜೇಂದ್ರ ಪ್ರಸಾದರಿಗೆ 'ವಿದ್ಯಾ ಮಾರ್ತಾಂಡ' ಎಂಬ ಪದವಿಯನ್ನು ದಯಪಾಲಿಸಲು ನಿರ್ಣಯಿಸಿರುವರು.

ಕೊರಿಯ ಯುದ್ಧ ವಿರಾಮದ ಆಶಾಕಿರಣ

ಕೊರಿಯ ಯುದ್ಧ ವಿರಾಮ ಒಪ್ಪಂದದ ಸಂಧಾನದ ಮಾರ್ಗದರ್ಶಕರಾದ ಅ[illegible] ವಿರಾಮ ಒಪ್ಪಂದವು ಬೇಗನೆ ಆಗುವ ಸಂಭವನೀಯತೆ ಕಂಡುಬರುತ್ತಿದೆ. ಬಹುತರವಾಗಿ ಮೇ ತಿಂಗಳ ಒಳಗಾಗಿ ಕೊರಿಯಾ ಯುದ್ಧವಿರಾಮ ಒಪ್ಪಂದಕ್ಕೆ ಉಭಯಪಕ್ಷಗಳ ಸಹಿ ಬೀಳಬಹುದು.

ಖಾನ್ ಅಬ್ದುಲ್ ಗಫರಖಾನರಿಗೆ ಶಸ್ತ್ರಕ್ರಿಯೆ

ಈಗ ಸೆರೆಯಲ್ಲಿರುವ ಗಡಿನಾಡಿನ ಕೆಂಪಂಗಿ ಧುರೀಣರಾದ ಖಾನ್ ಅಬ್ದುಲ ಗಫರಖಾನರು ಮೂತ್ರ ವಿಕಾರದಿಂದ ಬಳಲುತ್ತಿದ್ದುದರಿಂದ ಅವರಿಗೆ ಶಸ್ತ್ರಕ್ರಿಯೆ ಮಾಡಲಾಗಿದ್ದು ಅದು ಯಶಸ್ವಿಯಾಗಿರುವುದೆಂದು ದಿನಾಂಕ 13ರಲ್ಲು ಸರಕಾರದ ಪ್ರಕಟಣೆ ಹೊರಟಿದೆ. ವೃದ್ಧಾಪ್ಯದ ಮೂಲಕ ಅವರಿಗೆ ಈ ವಿಕಾರ ಉಂಟಾಗಿದ್ದು ಅವರನ್ನು ಇತ್ತೀಚೆಗೆ ಲಾಹೋರಿಗೆ ಕರೆದುಕೊಂಡು ಬರಲಾಗಿದೆ.

ಚಂದಾದಾರರಲ್ಲಿ

ಎರಡು ಮೂರಾವೃತ್ತಿ ಬರೆದರೂ ಚಂದಾ ಹಣ ಬಾರದ್ದರಿಂದ ನಾವು ಇತ್ತೀಚೆಗೆ ಕೆಲವರಿಗೆ ಪತ್ರಿಕೆಯನ್ನು ವಿ. ಪಿ. ಮಾಡಿ ಕಳುಹಿಸಿದ್ದೆವು ಹೆಚ್ಚಿನವರು ಅದನ್ನು ಸ್ವೀಕರಿಸಿ ಪ್ರೋತ್ಸಾಹಿಸಿರುತ್ತಾರೆ ಆದರೆ ಕೆಲವರು ಅದನ್ನು ಇನ್ಕಾರ್ ಮಾಡಿರುವುದು ವಿಷಾದಕರವಿದೆ. ಅಂಥವರು ಈ ವರೆವಲೇ ತಿಳಿಸಿರುವಂತೆ ತಮ್ಮ ಬಾಕಿ ಚಂದಾ ಹಣವನ್ನು ದಯಮಾಡಿ ಇನ್ನಾದರೂ ಒಡನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಈ ಮೂಲಕ ವಿನಂತಿಸಲಾಗುತ್ತದೆ.

ಮೆನೇಜರ್

ಶಾಲೆ, ಕಾಲೇಜುಗಳಿಗೂ ಸಹಕಾರಿ ಸಂಘ, ಮುನ್ಸಿಫ್ ಕೋರ್ಟುಗಳಿಗೂ ಕೃಷಿಕ, ವರ್ತಕಾರ, ವ್ಯಾಪಾರಿಗಳಿಗೂ

ಬೇಕಾಗುವ ಉತ್ತಮ ಕಾಗದದಲ್ಲಿ ತಯಾರಿಸಿದ

ತರತರದ ಫಾರ್ಮುಗಳು, ರಶೀದಿ ಪುಸ್ತಕಗಳು, ಎಕೌಂಟ್ ಪುಸ್ತಕಗಳು, ಮಾಗ್ನಿ ಪುಸ್ತಕಗಳು ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ

ತಿಳಿಗನ್ನಡದಲ್ಲಿ ಅನುಭವಸ್ಥರಿಂದ ಬರೆಯಲ್ಪಟ್ಟ ಇಂತಹ ಅನುವಾದ 'ಗೀತೆಯ ಕೈಗನ್ನಡಿ'ಯನ್ನು ಬಿಟ್ಟರೆ ಇನ್ನೊಂದಿಲ್ಲ. 'ಗೀತೆಯ ಕೈಗನ್ನಡಿ'ಯು ಹೊಸಕೆರೆ ಶ್ರೀ ಚಿದಂಬರಯ್ಯನವರ ಸರಳ ಭಾಷಾಂತರ. ಅತೀ ಅಗ್ಗವಾದ ಮತ್ತು ಪ್ರತಿಮನೆಯಲ್ಲೂ ಇರಬೇಕಾದ ಗೀತಾಪುಸ್ತಕ.

ಬೆಲೆ: ಬರೇ 0-12-0 ಮಾತ್ರ.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ

ನವಯುಗ ಪ್ರೆಸ್, ಉಡುಪಿ

ಇವರಿಗೆ ಬರೆಯಿರಿ.

ಕುಲವಿಲ್ಲದ ಹೆಣ್ಣು

ತೆಲುಗಿನಿಂದ ಅನುವಾದಿತ ಕಾದಂಬರಿ.

ಅನುವಾದಕರು:- ಶ್ರೀ. ಪಿ. ವೆಂಕೋಬಾಚಾರ್ಯರು, ಬಿ. ಎ. ಬಿ, ಟಿ, ಹುಬ್ಬಳ್ಳಿ

"ಮಿಶ್ರಸಂತತಿಯ ಹೆಣ್ಣೊಂದು ಧರ್ಮದ ಸೋಗಿನ ಜಾಲ. ಧನದ ಜಾಲ, ವೃದ್ಧರ ಕಾಮಜಾಲದಿಂದ ಪಾರಾಗಿ ಆಧುನಿಕ ಯುವಕ ಸಂತತಿಯ ಉದಾರತೆಯ ಕೈಹಿಡಿದು ಸುಖವಾಗಿ ಬಾಳಿತೆಂಬುದನ್ನು ಸೂಚಿಸುವ ಈ ಕಾದಂಬರಿಯಲ್ಲಿ ಪ್ರಾಸಂಗಿಕವಾಗಿ ನಾಟಕ ಕಲೆಯ ಮೇಲೆಯೂ ಕೆಲವು ಅಭಿಪ್ರಾಯಗಳನ್ನು ಸೂಚಿಸಿದ್ದಾರೆ.

ಕುಲವಿರಲಿ ಇಲ್ಲದಿರಲಿ, ವೈಯಕ್ತಿಕ ಶೀಲವೊಂದಿದೆ; ಅದರ ಬೆಳಕಿನಲ್ಲಿ ವ್ಯಕ್ತಿಯು ಎಂತಹ ಸಾಮಾಜಿಕ, ಧಾರ್ಮಿಕ ಎಡರುತೊಡರುಗಳನ್ನು ದಾಟಿ ಮನಮೆಚ್ಚಿದ ಶಾಂತಿಸುಖ ಸಮಾಧಾನಗಳ ಬಾಳನ್ನು ಬಾಳಬಲ್ಲುದು ಎಂಬುದೇ ಈ ಕಾದಂಬರಿಯ ನೀತಿ"—ಜೈಹಿಂದ್

ಓದಲೇ ಬೇಕಾದ ಸಾಮಾಜಿಕ ಕಾದಂಬರಿ—ಬೆಲೆ ರೂ. 1 8-0

ಪ್ರತಿಗಳಿಗೆ—

ಅಂತರಂಗ ಕಾರ್ಯಾಲಯ, ಉಡುಪಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಂಗಳೂರು

ಕಳ್ಳಸಾಗಾಟ ಪತ್ತೆ:—ಗೋವೆಯಿಂದ ಮಂಗಳೂರಿಗೆ ಬರುತ್ತಿದ್ದ ಸಾಧಾರಣ ಇಪ್ಪತ್ತೈದು ಸಹಸ್ರ ರೂಪಾಯಿ ಬೆಲೆಯ ಸೌಂದರ್ಯ ವರ್ಧಕ ವಸ್ತುಗಳು ಹಾಗೂ ವಿದೇಶಿ ಶರಾಬು ಮೊದಲಾದುವನ್ನು ಸುಂಕದ ಕಲೆಕ್ಟರ್ ಶ್ರೀ ಎಮ್. ಸಿ. ನಾರಾಯಣ ಅವರು ಪತ್ತೆ ಹಚ್ಚಿ ಜಪ್ತಿ ಮಾಡಿರುವರು. ಹೆಚ್ಚಿನ ತನಿಖೆ ನಡೆಯುತ್ತಲಿದೆ.

ಭಾವಚಿತ್ರ ಅನಾವರಣ ಸಮಾರಂಭ:—ಮಂಗಳೂರಿನ ಸರಕಾರಿ ತರಬೇತಿ ಕಾಲೇಜಿನ ಪ್ರಿನ್ಸಿಪಾಲರಾಗಿದ್ದು ನಿವೃತ್ತರಾಗುವ ಶ್ರೀ ಪಡುಕೋಣೆ ರಮಾನಂದ ರಾಯರ ಭಾವಚಿತ್ರ ಅನಾವರಣ ಸಮಾರಂಭವು ಇದೇ ತಾ. 5ರಲ್ಲಿ ಶ್ರೀ ಬಿ. ರಾಘವ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ಎಚ್. ಜಿ. ಹಂದೆಯವರು ಸ್ವಾಗತ ಮಾತುಗಳನ್ನಾಡಿದರು. ಶ್ರೀಯುತರನ್ನು ಬೀಳ್ಕೊಡುವ ಸಮಾರಂಭವೂ ಅದೇ ದಿನ ಸಂಜೆ ಶ್ರೀ ಸಿ. ಟಿ. ಚಂಬು, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಅವರಿಗೊಂದು ಬಿನ್ನವತ್ತಳೆ ಅರ್ಪಿಸಲಾಯಿತು. ಶ್ರೀ ರಮಾನಂದ ರಾಯರ ಸ್ಥಾನಕ್ಕೆ ಶ್ರೀ ಬಿ. ರಾಘವ ಬಾಳಿಗರು ನೇಮಕ ಹೊಂದಿದ್ದಾರೆ.

ಮಾಜಿ ಸೈನಿಕರ ಸಭೆಯು—ಇದೇ ತಾ 5ರಂದು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿದಾಗ ಮಾಜಿ ಸೈನಿಕರಿಗಾಗಿ ಸಹಕಾರಿ ಮೋಟಾರ್ ಸರ್ವಿಸ್ ತೆರೆಯುವ ವಿಚಾರ ಚರ್ಚಿಸಲ್ಪಟ್ಟಿತು.

ಸತ್ಕಾರ ಕೂಟ—ಕೇಂದ್ರ ಪಾರ್ಲಿಮೆಂಟಿನ ಮೇಲ್ಮನೆಗೆ ಚುನಾಯಿಸಲ್ಪಟ್ಟ ಶ್ರೀ ಬಿ. ವಿ. ಕಕ್ಕಿಲ್ಲಾಯರನ್ನು ಸತ್ಕರಿಸಿ ಗೌರವಿಸುವ ಸಭೆಯು ಇದೇ ತಾ. 8ರಲ್ಲು ಸಂಜೆ ಮೋಹಿನಿ ವಿಲಾಸದ ಉಪ್ಪರಿಗೆಯಲ್ಲಿ ಜರಗಿತು ಈ ಸಮಾರಂಭಕ್ಕೆ ಶ್ರೀಗಳಾದ ಕೆ. ಆರ್. ಕಾರಂತ, ಕೆ. ಎಸ್. ಅಡಿಗ, ಬಿ. ಎಸ್. ಭಾಸ್ಕರ ರೈ, ಡಾ। ಕೆ. ನಾಗಪ್ಪ ಆಳ್ವ ಮೊದಲಾದವರು ಬಂದಿದ್ದರು. ಸಭಿಕರ ಭಾಷಣಗಳಾದ ಬಳಿಕ ಮುಖ್ಯ ಅತಿಥಿಯು ಉತ್ತರವೀಯುತ್ತ ಹಿರಿಯರ ಸೂಚನೆಗಾಗಿ ಮತ್ತು ಗೆಳೆಯರು ಏರ್ಪಡಿಸಿದ ಸತ್ಕಾರಕ್ಕಾಗಿ ವಂದನೆಗಳನ್ನರ್ಪಿಸಿದರು.

ವಸಂತೋತ್ಸವ—ಮಂಗಳೂರು ಬಿಸೆಂಟ್ ಬಾಲಿಕಾ ಪ್ರೌಢಶಾಲೆಯ ವಸಂತೋತ್ಸವವು ಇದೇ ತಾ 9ಮತ್ತು 10ರಲ್ಲು ವಸಂತ ರಾಣಿಯಾಗಿ ಚುನಾಯಿಸಲ್ಪಟ್ಟ ಕುಮಾರಿ ಪಿ. ೨೦೩೨, ... ಜರಗಿತು. ಕುಮಾರಿ ಬಿ. ತಾರಾಬಾಯಿಯವರು ಸ್ವಾಗತ ಭಾಷಣ ಮಾಡಿದರು. ಬಹುಮಾನ ವಿತರಣೆಯಾದ ಬಳಿಕ ಶ್ರೀಗಳಾದ ಪಡುಕೋಣೆ ರಮಾನಂದ ರಾವ್, ಕೇಡಿಯೂರು ಕೃಷ್ಣ ಭಟ್, ಎಮ್. ಎಸ್. ಎಕ್ಕಾಂಬ

ದರಾಯರು ವಸಂತ ರಾಣಿಯನ್ನು ಅಭಿನಂದಿಸುತ್ತ, ಈ ಶಾಲೆಯು ಕಲಾ ಕೇಂದ್ರವಾಗಿದ್ದು ಇಲ್ಲಿಂದ ಕೋಶ ... ವನೆಯು ಕಾರ್ಯಕ್ರಮ ಹೊರಡುತ್ತಿದೆ ಎಂದೂ, ಇತರ ಶಾಲೆಗಳಿಗೆ ಇದು ಮಾದರಿ ಎಂದೂ ಮಾಂತಾಗಿ ಹೇಳಿದರು, ಸಂಗೀತ, ನಾಟಕ, ನರ್ತನ ಮೊದಲಾದ ಕಾರ್ಯಕ್ರಮಗಳಾಗಿ ವಸಂತೋತ್ಸವವು ಕೊನೆಗೊಂಡಿತು.

ವಿದ್ಯಾರ್ಥಿವೇತನ ಅರ್ಜಿ—ವಿಕ್ಟೋರಿಯಾ ಜುಬಿಲಿ ವಿದ್ಯಾರ್ಥಿವೇತನ ನಿಧಿಯಿಂದ ಕೊಡುವ ವಿದ್ಯಾರ್ಥಿವೇತನದ ಚುನಾವಣಾ ಪರೀಕ್ಷೆಯು ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಜೂನ್ ತಿಂಗಳ ತಾ. 21 ಮತ್ತು 22ರಲ್ಲಿ ಜರಗುವುದು. ಈ ಬಗ್ಗೆ ಬೇಕಾಗುವ ಫಾರ್ಮುಗಳು ಜಿಲ್ಲಾ ಜಡ್ಜರ ಕಚೇರಿಯಲ್ಲಿ ದೊರೆಯುತ್ತವೆ ಜೂನ್ ತಾ. 9ರೊಳಗಾಗಿ ಅರ್ಜಿಗಳು ತಲ್ಪಬೇಕು. ಈ ನಿಧಿಯಿಂದ ಎಸ್. ಎಸ್. ಎಲ್. ಸಿ ಪರೀಕ್ಷೆಯಲ್ಲಿ ಪಾಸಾದ ಮೂವರಿಗೆ ಮಾಸಿಕ ವಿದ್ಯಾರ್ಥಿವೇತನ ದೊರೆಯುವುದು. ಒಂದು ಹಿಂದು ಬ್ರಾಹ್ಮಣರಿಗೆ, ಒಂದು ಹಿಂದು ಬ್ರಾಹ್ಮಣೇತರರಿಗೆ ಮತ್ತು ಒಂದು ಕ್ರೈಸ್ತರಿಗೆ ದೊರೆಯುವುದು. ಹೆಚ್ಚಿನ ಮಾಹಿತಿಯನ್ನು ನಿಧಿಯ ಆಫೀಸಿನಿಂದ ಪಡೆಯಬಹುದು.

ದ. ಕ. ಜಿಲ್ಲಾ ಮಜೂರರ ಸಮ್ಮೇಳನವು—ಇದೇ ತಾ 6ಮತ್ತು 7ರಲ್ಲಿ ಶ್ರೀಮತಿ ಪಾರ್ವತಿ ಕುಮಾರ ಮಂಗಲಂ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ವಿ. ಕಕ್ಕಿಲ್ಲಾಯರು ಉದ್ಘಾಟನೆ ಮಾಡುತ್ತ ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು ಶ್ರೀ ಎ ಶಾಂತಾರಾಂ ಪೈಗಳು ಕೆಲವು ನಿರ್ಣಯಗಳನ್ನು ಸಭೆಯ ಮುಂದಿಟ್ಟರು. ಅಧ್ಯಕ್ಷೆಯರು ತಮ್ಮ ಭಾಷಣದಲ್ಲಿ ಮಹಿಳೆಯರ ಸಮಸ್ಯೆಗಳನ್ನು ವಿವರಿಸಿದರಲ್ಲದೆ ಸ್ವಾತಂತ್ರ್ಯ ಹೋರಾಟದಲ್ಲಿ ಅವರು ದೊಡ್ಡ ಭಾಗ ವಹಿಸಿದರೂ, ಸ್ವಾತಂತ್ರ್ಯ ದೊರೆತ ಬಳಿಕ ಅವರ ಕಲ್ಯಾಣದ ಕಾರ್ಯಕ್ರಮವನ್ನು ಕಾಂಗ್ರೆಸ್ ಸರಕಾರ ಕೈಕೊಂಡಿಲ್ಲವೆಂದು ತಿಳಿಸಿದರು. ಎರಡನೆ ದಿನವೂ ಸಭೆ ಭಾಷಣಗಳಾದುವು ಈ ಸಂದರ್ಭದಲ್ಲಿ ಮಜೂರ ಮಕ್ಕಳ ಸಮ್ಮೇಳನವೂ ಮಜೂರ ಮಹಿಳೆಯರ ಪ್ರತಿನಿಧಿ ಸಭೆಯೂ ಜರಗಿತು.

ಶ್ರೀರಾಮನವಮಿ ಮಹೋತ್ಸವ—ಸ್ಥಳೀಯ ಶ್ರೀ ಶಿವಾನಂದ ಭಜನೆಯಲ್ಲಿ ಇದೇ ತಾ. 5ಕ್ಕೆ ಪ್ರಾರಂಭವಾಗಿ ತಾ 10ರಂದು ಯಶಸ್ವಿಯಾಗಿ ಕೊನೆಗೊಂಡಿತು. ಸ್ಥಳೀಯ ಕಲಾವಿದರೂ ಕಲಾ ಕೂಟದವರೂ ವಿಶೇಷತಃ ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ದಿನಾಲೂ ನಾಟಕ, ನೃತ್ಯ ಮೊದಲಾದ ಜನಮನರಂಜನ ಕಾರ್ಯಕ್ರಮಗಳಿದ್ದುವು.

ವಾರ್ಷಿಕೋತ್ಸವ— ಮಂಗಳೂರಿನ ಶ್ರೀ ಮಂಜುನಾಥ ಕೃಪಾಪೋಷಿತ ನಾಟಕ ಸಭೆಯ ವಾರ್ಷಿಕೋತ್ಸವವು ಇದೇ ತಾ. 6ರಲ್ಲಿ 'ಡೊನ್‌ಬೊಸ್ಕೊ' ಹಾಲಿನಲ್ಲಿ ಶ್ರೀ ಸಿ. ಗಂಗಾಧರ ದಾಸರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ಸಂದೇಶವಾಚನ, ಸಭಿಕರ ಭಾಷಣ, ಅಧ್ಯಕ್ಷ ಭಾಷಣ, ಮನರಂಜನ ಕಾರ್ಯಕ್ರಮಗಳು ಸಾಂಗವಾಗಿ ನೆರವೇರಿದವು.

ಶಿರೂರು—ಹೆಗ್ಗುಂಜೆ ಬಿ. ಟಿ. ಶಿರೂರು, ಕುದಿ ಮತ್ತು ಬಂಡಾರು ಶಾಲೆಗಳ "ಮಕ್ಕಳ ಹಬ್ಬ"ವು ತಾ. 7-4 1952ರಲ್ಲು ಶ್ರೀ. ಎಮ್. ರಾಮಕೃಷ್ಣ ಅಡಿಗಳ ಅಧ್ಯಕ್ಷತೆಯಲ್ಲಿ ಮಕ್ಕಳ ವಿವಿಧ ಚಟುವಟಿಕೆ ಸೆಂಟರ್ ಶಾಲಾ ಮೇನೇಜರ್. ಎಚ್. ಮಹಾಬಲ ಶೆಟ್ರ "ಸಿಹಿ ತಿಂಡಿ" ಹಂಚುವಿಕೆಯಿಂದ ಜರಗಿತು.

ರಾಮಕುಂಜ—ಎಡ್ವಾನ್ಸ್‌ಡ್ ಸಂಸ್ಕೃತ ಪಾಠ ಶಾಲೆಯಲ್ಲಿ ಶಾಲೆಯ ಶ್ರೀ ರಾಮ ಕುಂಜೇಶ್ವರ ಭಜನ ಸಂಘದ ಆಶ್ರಯದಲ್ಲಿ ಕಳೆದ ತಾ. 3ಮತ್ತು 4ರಲ್ಲು ಶ್ರೀ ರಾಮ ನವಮೀ ಮಹೋತ್ಸವವು ಬಹು ವಿಜೃಂಭಣೆಯಿಂದ ಜರಗಿತು ತಾ. 3ನೇ ಅಪರಾಹ್ನ ದಕ್ಷ ಶ್ರೀ. ಜ. ಮೋಶ್ವರ ಶಾಸ್ತ್ರೀ, ಮಹೋಪಾಧ್ಯಾಯ ಇವರ ಅಧ್ಯಕ್ಷತೆಯಲ್ಲಿ ಸಂಘದ ವರ್ಧಂತ್ಯುತ್ಸವವೂ ನಡೆಯಿತು.

ಸುರತ್ಕಲ್—ಮುಕ್ಕ ಮಿತ್ರಪಟ್ಟ ಗಂಗಯ ಸ್ಮಾರಕ ಫಂಡಿನ ವಾರ್ಷಿಕೋತ್ಸವವು ತಾ. 27-4-52ನೇ ಆದಿತ್ಯವಾರ ಅಪರಾಹ್ನ 2-30ಕ್ಕೆ ಶ್ರೀ ಯಸ್. ಸೀತಾರಾಮ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಲಿದೆ.

ಅಗ್ಗಿದ ಕರಿಯ ಹಾ। ಪ್ರಾ। ಶಾಲೆಯಲ್ಲಿ ತಾ 11ರಲ್ಲಿ ತಿಂಗಳ ಹಬ್ಬವು ಶ್ರೀ. ಲಕ್ಷ್ಮಣ ಶೈ ಗಾರಿಕಾರರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ಸಂಪಾಜೆ—31-3-52ರಲ್ಲು ಕೊಡಗು ಜಿಲ್ಲಾ ಚೀಫ್ ಕಮಿಶನರಾದ ಲೆಫ್ಟನೆಂಟ್ ಕರ್ನಲ್ ದಯಾ ಸಿಂಗ್ ಬೇಡಿಯವರ ಅಧ್ಯಕ್ಷತೆಯಲ್ಲಿ ಹೊಸ ಪ್ರಾಥಮಿಕ ಶಾಲೆಯ ಪ್ರವೇಶ ಉತ್ಸವ ಸಮಾರಂಭವು ಜರಗಿತು, ಈ ಸಮಾರಂಭಕ್ಕೆ ಕೊಡಗಿನ ಪಾರ್ಲಿಮೆಂಟ್ ಮೆಂಬರರಾದ ಯನ್ ಸೋಮಣ್ಣ, ಶ್ರೀ ಕೆ. ಮಲ್ಲಪ್ಪ (ವಿದ್ಯಾಮಂತ್ರಿ) ರೆವಿನ್ಯೂ ಜಡ್ಜರಾದ ಶ್ರೀಮಾನ್ ಯನ್ ಮುದ್ದಪ್ಪ, ಅಸಿಸ್ಟೆಂಟ್ ಕಮಿಶನರಾದ ಐ. ಸಿ, ಸುಬ್ಬಯ್ಯನವರೇ ಮೊದಲಾದ ಪ್ರಮುಖರು ಆಗಮಿಸಿದ್ದರು, ಈ ಶಾಲಾ ಕಟ್ಟಡಕ್ಕೆ ರೂಪಾಯಿ 10,000 ದಷ್ಟನ್ನು ಇಲ್ಲಿಯ ಪ್ರಮುಖರೂ ವಿದ್ಯಾಭಿಮಾನಿಗಳೂ ಆದ ಶ್ರೀ ಯನ್ ಸಣ್ಣಯ್ಯನವರೇ ಸ್ವತ ಖರ್ಚುಮಾಡಿ, ಸಂಪೂರ್ಣಗೊಳಿಸಿ, ಸರಕಾರಕ್ಕೆ ಬಿಟ್ಟು ಕೊಟ್ಟಿರುವುದು ಸ್ತುತ್ಯವಿದೆ

ಮಾನ್ಯ ಅಧ್ಯಕ್ಷರು ಈ ಶಾಲೆಗೆ ರೂಪಾ 4,000 ವನ್ನು ಸಹಾಯ ಧನವಾಗಿ ಸರಕಾರದಿಂದ ಕೊಡಿಸುವರಾಗಿಯೂ, ಶ್ರೀ ಯನ್ ಸಣ್ಣಯ್ಯನವರ ಕಾರ್ಯವನ್ನು ಕೊಂಡಾಡಿಯೂ ಊರ ಸರ್ವತೋಮುಖವಾದ ಪ್ರಗತಿಗೆ ಶಾಲೆಗಳ ಹೆಚ್ಚಳ ಮತ್ತು ಊರ ಮಂದಿಯರುಗಳ ಒಂಟಲ ತೀರಾ ಅಗತ್ಯವೆಂದಾಗಿಯೂ ಹೇಳಿದರು. ಲಘು ಉಪಹಾರದೊಂದಿಗೆ ಸಭೆಯು ಅಂತ್ಯವಾಯಿತು.

ಕುಂಬಳೆ— ತಾ 10ರಂದು ಮಾಯಿಪಾಡಿ ಬುನಾದಿ ಶಿಕ್ಷಣ ತರಬೇತು ಶಾಲೆಯಲ್ಲಿ ಅಲ್ಪಕಾಲದ ಅಧ್ಯಾಪಕರಿಗಾಗಿ ತರಬೇತ ತರಗತಿಯನ್ನು ತೆರೆಯಲಾಗಿದೆ. ತರಗತಿಯಲ್ಲಿ, ಸರಕಾರಿ, ಖಾಸಗಿ, ಬೋರ್ಡು, ಲೋಕಲ್ ಶಾಲೆಗಳ ಅಧ್ಯಾಪಕರೂ, ಕೆಲವು ಜೂನಿಯರ್ ಡಿಪ್ಯುಟಿ ಇನ್‌ಸ್ಪೆಕ್ಟರುಗಳೂ ಹಾಜರಿರುವರು.

ಕಡಂದಲೆ- ಬೋರ್ಡು ಹಾ। ಪ್ರಾ। ಶಾಲೆಯ ವರ್ಧಂತ್ಯುತ್ಸವವು 6-4-52ರಲ್ಲಿ ಯಸ್. ಬಾಸ್ಕರ ರೈಗಳ ಅಧ್ಯಕ್ಷತೆಯಲ್ಲಿಯೂ, ಬಹುಮಾನ ವಿತರಣೆಯು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ ಹೆಗ್ಡೆ ಇವರ ಅಧ್ಯಕ್ಷತೆಯಲ್ಲಿಯೂ ಜರಗಿತು. ಶ್ರೀ ಕೆ. ರವಿರಾಜ ಹೆಗ್ಡೆಯವರು ಸ್ವಾಗತ ವಾಚನ, ಮುಖ್ಯೋಪಾಧ್ಯಾಯರಿಂದ ವರದಿ ವಾಚನ, ಅಧ್ಯಕ್ಷರ ಭಾಷಣಗಳಾದ ಮೇಲೆ ವಿನೋದಗಳಾದುವು.

ಹೊಸ ಪತ್ರಿಕೆ-ಬೊಂಬಾಯಿಯಿಂದ ಶ್ರೀ ಎಸ್. ಹೆಜಮಾಡಿಯವರ ಸಂಪಾದಕತ್ವದಲ್ಲಿ "ಚೇತನ" ಎಂಬ ಕನ್ನಡ ಮಾಸಪತ್ರಿಕೆಯು ಸದ್ಯಕ್ಕೆ ಹೊರಡಲಿದೆ

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಘಾಯಗಳು, ಬಾತುಕೊಳ್ಳುವುದು, ಚೇಳ ವಿಷಮುಂತಾದವು, ಪಕ್ಷವಾತ, ಮೊಡವೆ. ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹಾಳುಕಡ್ಡಿ, ಮದ್ದು ಸಹ್ಯಾದ್ರಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್
ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

ದಿ ಈಸ್ಟ್ ಎಂಡ್ ವೆಸ್ಟ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಸ್ಥಾಪನೆ:] ಈಸ್ಟ್ ಎಂಡ್ ವೆಸ್ಟ್ ಬಿಲ್ಡಿಂಗ್ಸ್, ಬೊಂಬಾಯಿ. [1913

ಉದಾರ ಯಾ ರಿಯಾಯಿತಿ ಶರ್ತಗಳಿರುವ ಪುರಾತನ ಮತ್ತು ಮುಂದುವರಿದ ಕಂಪೆನಿಗಳಲ್ಲೊಂದಾಗಿರುತ್ತದೆ.

ವಿಮೆಯ ಸಕಲ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು ಆ ಬಾಬಿನ ಎಲ್ಲಾ ಕೆಲಸಗಳಲ್ಲಿ ಭಾಗಿಯಾಗಿ ಸಹಕರಿಸಿ ಕಲಹೆಗಳನ್ನೀಯುತ್ತಾ ಜನಸೇವೆಗೈಯುವುದೇ ನಮ್ಮ ಧ್ಯೇಯ

ನಮ್ಮ ಚೀಫ್ ಏಜನ್ಸಿ ವಿಸ್ತೀರ್ಣದೊಳಗೆ ಪ್ರತೀ ಜಿಲ್ಲೆಗೊಬ್ಬರಂತೆ ಇನ್ಸ್‌ಪೆಕ್ಟರುಗಳೂ, ಸ್ಪೆಶಲ್ ಏಜಂಟರೂ, ಏಜಂಟರೂ ಬೇಕಾಗಿದ್ದಾರೆ ಹೆಚ್ಚಿನ ವಿವರಕ್ಕೆ ಬರೆಯುವುದು.

ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್,
ಚೀಫ್ ಏಜಂಟರು,
ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಮೈಸೂರು ಸ್ಟೇಟ್,
ಪೋಸ್ಟ್ ಶಿರ್ವಾ, ದ. ಕ.

ತಾರೀಕು 16—4—1952 ರಿಂದ

ಮೆಟ್ರೊ ಗೋಲ್ಡ್‌ವಿನ್‌ನವರ ವರ್ಣಚಿತ್ರ-

ಕಿಸ್ಮತ್

ಅನಂತರ: ಕಾಲಿಫೂಟ್ ಕಿಶೋರ್‌ಸಾಹು, ಬನಾರ್ಸಿ,

ಬರುತ್ತದೆ: ಆವಾರಾ, ಕೈದಿ, ಹೌಗ್ರೀನ್ ಹೀಸ್ ಮೈವೆಲ್ಲಿ ಇತ್ಯಾದಿ.

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್ ಉಡುಪಿ.



DO YOU KNOW?
THAT
THE VIJAYA BANK. LIMITED.
Was established in the year 1931 with Rs Eight thousand as its Paid up Capital.
Has now increased its Paid up Capital and reserves to Rs. 10 lacks
Has granted an average dividend of 6% to the Shareholders for the past 20 years
Has a net work of Branches in South Kanara and one each in Mercara and Fort. Bombay.
. Offers attractive rates of interest on Deposits and Cash Certificates
Grants loans on easy terms to approved parties or on approved securities
. Does afford full protection and rich return to all your monies.
ADOPT IT AS
"MY BANK"
THE VIJAYA BANK. LIMITED,
H. O., MANGALORE

● ತೃಪ್ತಿಕರವಾದ ವಸತಿ — ಹಿತಕರವಾದ ಊಟ
● ರುಚಿಕರವಾದ ಉಪಾಹಾರ ಇವುಗಳಿಗೆ
ಉಡುಪಿಯು ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಊರ ಪರವೂರ ಸನ್ಮಾನ್ಯ ಸದ್ಗೃಹಸ್ಥರಿಂದ ಮುಕ್ತಕಂಠದಿಂದ
ಹೊಗಳಿಸಿಕೊಂಡ ನಮ್ಮ ಹೋಟೆಲಿಗೇ
ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ.
ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯಾಗುವಂತೆ
ನಗರದ ಕೇಂದ್ರ ಭಾಗದಲ್ಲಿದೆ.
WOODLANDS
Highclass Boarding & Lodging, **UDIPI S Kanara**

ರಾಮತೀರ್ಥ
ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಗಾಢನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಟಾಕಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0
ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಂಜಿ ಮ್ಯಾನುಫಾಕ್ಚರರ್,
ರಥಬೀದಿ, ಉಡುಪಿ

ಋತುಸ್ರಾವ ನಿಂತಿತು
'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹಸೋಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಪ್ರಾಪ್ತಿ ಗುಣವಾಗಿದೆ- ಬೆಲೆ; ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]
Mis. D. DEVEE, F DS. (N. J.)
Tollygunge CALCUTTA.
ಪ್ರತಿನಿಧಿ ಶಹಾಳಂಪೆನಿ, ಬೆಂಗಳೂರು

ಸಂಗೀತದ ಮಹತ್ವ ಮತ್ತು ಸ್ತ್ರೀಯರಿಗದರ ಅವಶ್ಯಕತೆ.

ಲೇಖಕಿ: ಪಿಯರ್ ಚಂದ್ರಭಾಗಿ ಕೆ. ರೈ

ಸಂಗೀತವೆಂದರೆ ಸಮಸ್ತ ಜಗತ್ತನ್ನೇ ತನ್ನ ಲೀಲಾ ಜಾಲದಲ್ಲಿ ಸೆರೆ ಹಿಡಿಯುವ ದಿವ್ಯ ಮಂತ್ರ. ಸಂತಸದ ಸವಿಗಡಲಿನಲ್ಲಿ ನಲಿಸಿ, ಮೈ ಮರೆಸುವ ಮಹಾಮಧು. ಮಾನವನಿಂದ ಪ್ರಾಣಿ ವರ್ಗಗಳ ವರೆಗೂ ನವಚೇತನವನ್ನು ತುಂಬುವ ದಿವ್ಯ ಔಷಧ

ಮಹಾ ಕ್ರೂರ ವಿಷಭರಿತ ಸರ್ಪವಾಗಲೀ ಪುಂಗಿಯ ನಾದಕ್ಕೆ ಹೆಡೆ ಎತ್ತಿ ತಲೆ ಅಲ್ಲಾಡಿಸುವದು. ಕೊಳಲಿನ ಸ್ವರಕ್ಕೆ ಮರುಳಾದ ದನಗಳು ಹಾಲನ್ನು ಹೆಚ್ಚು ಕೊಡುವವು. ಬಂಡಿ ತುಂಬಾ ಭಾರ ಹೇರಿ ಅಥವಾ ಗದ್ದೆಯಲ್ಲಿ ಉತ್ತು ಉತ್ತು ದಣಿವ ಎತ್ತುಗಳು ಕಮ್ಮೊಡೆಯನ "ಓ ಓ" ಎಂಬ ಒಂದು ವಿಧದ ರಾಗಕ್ಕೆ ಉಲ್ಲಾಸದಿಂದ ಹೆಜ್ಜೆ ಇಡುವವು. ದಿನವಿಡೀ ಗದ್ದೆಯಲ್ಲಿ ಬಿಸಿಲು ಮಳೆ ಎನ್ನದೆ ದುಡಿಯುವ ಕೂಲಿಗಳು "ದಿಮ್ಮಿಸಾಲೆ, ಓಬೇಲೆ" ಮುಂತಾದ ಜಾನಪದಗಳಿಂದ ತಮ್ಮ ದಣಿವನ್ನು ಮರೆತು ಉಲ್ಲಸಿತರಾಗುವರು. ಹಟಹಿಡಿದು ಕೂಗುವ ಮಗುವಾಗಲೀ ತೊಟ್ಟಿಲಲ್ಲಿ ಹಾಕಿ ಜೋಜೋ ಎಂದು ಹಾಡಿದರೆ ಸುಖನಿದ್ರೆಗೈಯುವದು.

ಭಕ್ತಿ ಮಾರ್ಗದಲ್ಲಿ ಕೂಡ ಸಂಗೀತ ಮೇಲು. ಪುರಂದರದಾಸ, ತ್ಯಾಗರಾಜ, ಕನಕದಾಸ, ಕಬೀರದಾಸ, ಮೀರಾಬಾಯಿ, ಸಖೂಬಾಯಿ ಮೊದಲಾದವರೆಲ್ಲ ಸಂಗೀತದಿಂದಲೇ ಭಗವಂತನನ್ನು ಒಲಿಸಿಕೊಂಡಿರುವರು. "ನಾನು ಎಲ್ಲಿಯೂ ಇಲ್ಲ, ಎಲ್ಲಿ ಭಕ್ತರು ಭಜನೆ ಮಾಡುವರೋ ಅಲ್ಲಿ ನಾನಿರುವೆ" ಎಂದು ಭಗವಂತನು ನಾರದನಿಗೆ ಹೇಳಿರುವನು.

ಸಂಗೀತವು ಆಯುರ್ವೇದದ ಒಂದು ಅಂಗವೆಂದು ಸಮರ್ಥ ತಾರನಾಥರು ಭಾಷಣವಿತ್ತಿರುವರು. ಅಕ್ಬರನ ಮಗಳ ಕಾಯಿಲೆಯು ತಾನಸೇನನ ಗಾಯನದಿಂದ ವಾಸಿಯಾಯಿತೆಂದು ಕಥೆಯಿದೆ. ಸಂಗೀತ ನರ್ತನಗಳು ತನುಮನಗಳೆರಡಕ್ಕೂ ವ್ಯಾಯಾಮವೆಂದು ಬೇರೆ ಹೇಳಬೇಕಾಗಿಲ್ಲ.

"ಸಂಗೀತದಿಂದ ಆತ್ಮದಲ್ಲಿ ಒಂದು ಬಗೆಯ ಸಮಂಜಸವೂ ಲಯವೂ ಉದ್ಭವಿಸುವದು, ಆದರಿಂದ ನ್ಯಾಯ ಬುದ್ಧಿ ಕೂಡಾ ಉಂಟಾಗುವದೆಂದು ಹೇಳಬಹುದು. ಏಕೆಂದರೆ "ಸಮಂಜಸ ಹೃದಯಿಯಾದವನು ಅನ್ಯಾಯಕ್ಕೆ ಹೇಗೆ ಎಳಸಲಾಪನು" ಎಂದು ಪ್ಲೇಟೋ ಕವಿಯು ಹೇಳಿದ್ದಾನೆ. ಮಳೆಯಿಲ್ಲದ ಸಮಯದಲ್ಲಿ ಮಳೆಯನ್ನು ಬರಿಸುವ ಸಂಧ್ಯಾಕಾಲದಲ್ಲಿ ದೀಪವನ್ನು ಉರಿಸುವ ಸಂಗೀತಗಾರರೂ ಇರುವರಂತೆ. ಕಠಿಣವಾದ ಯೋಗಾಭ್ಯಾಸಗಳನ್ನು ಸಾಧಿಸಿ, ಬ್ರಹ್ಮನಲ್ಲಿ ಐಕ್ಯ ಹೊಂದುವ ಸ್ಥಿತಿಯನ್ನು ಗಾಯನದಲ್ಲಿಯೂ ಸಾಧಿಸಬಹುದಂತೆ. ಆದುದರಿಂದ ಸಂಗೀತದ ಮಹತ್ವವನ್ನು ಎಷ್ಟು ವರ್ಣಿಸಿದರೂ ಸ್ವಲ್ಪವೇ.

ಗಾಯನ ಕಲೆಯು ಪುರುಷರಿಗಿಂತಲೂ ಸ್ತ್ರೀಯರಿಗೆ ಅಧಿಕ ಫಲವನ್ನು ಕೊಡಬಲ್ಲುದು. ದೇವರ ಭಜನೆಗೆ, ಮಕ್ಕಳನ್ನು ಸಮಾಧಾನಿಸಲಿಕ್ಕೆ ಮುಖ್ಯವಾಗಿ ಮನಃಶಾಂತಿಗೂ ಸಂಗೀತದಷ್ಟು ಹಿತಕಾರಿ ಬೇರೆ ಯಾವುದೂ ಇಲ್ಲ. ಮಹಿಳೆಯರ ಮಕ್ಕಳನ್ನು ಜೋಗುಳದಿಂದಲೇ ಯೋಗ್ಯ ಮಾರ್ಗಕ್ಕೆಳೆದರು. ಸಂಸಾರ ತಾಪತ್ರಯಗಳಲ್ಲಿ ನೊಂದು ಬೆಂದ ಹೃದಯವಾಗಲೀ ಒಂದು ಗಳಿಗೆ ಸಂಗೀತವನ್ನು ಹಾಡುವದರಿಂದಲೋ ನೆಮ್ಮದಿಯನ್ನೈದುವದು

ಶಾಸ್ತ್ರರೀತಿಯಲ್ಲಿ ಕೀರ್ತನೆಗಳನ್ನು ಕಲಿತರೆ ಒಳ್ಳೇದು. ಇದು ಎಲ್ಲರಿಗೂ ಸಾಧ್ಯವಾಗುವದಿಲ್ಲ. ಆದುದರಿಂದ ಸುಲಭ ರೀತಿಯ ಭಕ್ತಿ ಪದ್ಯಗಳನ್ನಾದರೂ ಹಾಡಬಹುದು. ಕೆಲಸ ಮಾಡುತ್ತಿರುವಾಗ ಕೆಲವರಿಗೆ ಬಾಯಲ್ಲಿ ಸೂ ಸೂ, ಲಲ್ಲಲ್ಲಾ ... ಅಥವಾ ನನ್ನನಾ... ಎಂಬ ಏನೇನೋ ಅಕ್ಷರಗಳನ್ನು ರಾಗವಾಗಿ ಉಚ್ಚರಿಸುವ ಅಭ್ಯಾಸವಿರುವದು. ಹೀಗೆಲ್ಲಾ ಅಕ್ಷರಗಳನ್ನು ಉಚ್ಚರಿಸುವ ಬದಲಿಗೆ ರಾಮಾ, ರಾಮಾ ಅಥವಾ ಜೈ ವಿಠಲಾ ಪಾಂಡುರಂಗ ಮುಂತಾದ ಭಗವನ್ನಾಮಗಳನ್ನು ಹಾಡಬಹುದು. ರಾಗ ತಾಳ ತಿಳಿಯದಿದ್ದರೂ ಜಾನಪದಗಳಂತೆ ತಮ್ಮದೇ ಆದ ರಾಗದಿಂದ ನಿಧಾನವಾಗಿ ರಾಗ ಎಳೆಯಬಹುದು. ಹೀಗೆ ಹಾಡುತ್ತಾ ಕೆಲಸ ಮಾಡುವಾಗ ನಾವು ಮಾಡುವ ಕೆಲಸಗಳೇ ಅದಕ್ಕೆ ಕೆಲವು ಸಲ ತಾಳರೂಪವಾಗಿ ದೊರೆತು ಹರ್ಷವೂ ಭಕ್ತಿಯೂ ಇಮ್ಮಡಿಯಾಗುವದು. ಪ್ರತಿಯೊಬ್ಬರಿಗೆ ಈ ವಿಧದ ಭಕ್ತಿಗೆ ಅವಕಾಶ ಬೇಕಾದಷ್ಟಿದ್ದರೂ ಅವನ್ನು ಸೂ, ತ, ರ, ನ, ಮುಂತಾದ ಏನೇನೊ ಶಬ್ದ ಮಾಡಿ ಸಮಯ ಕಳೆದುಕೊಳ್ಳುವದು ಮೂರ್ಖತನವಲ್ಲವೇ? ಸ್ನಾನಕ್ಕಾಗಿ ನೀರಿಗಿಳಿದವನೂ ಅಕಸ್ಮಾತ್ ನೀರಿಗೆ ಬಿದ್ದವನೂ ಹೇಗೆ ಇಬ್ಬರೂ ಒಂದೇ ರೀತಿಯಲ್ಲಿ ಒದ್ದೆಯಾಗುವರೋ ಅಂತೆಯೇ ತಿಳಿದೋ ತಿಳಿಯದೆಯೋ ಮಾಡಿದ ಭಗವನ್ನಾಮದ ಫಲವು ಲಭಿಸುವದರಲ್ಲಿ ಸಂದೇಹವಿಲ್ಲ" ಎಂದು ರಾಮಕೃಷ್ಣ ಪರಮಹಂಸರು ಉಪದೇಶಿಸಿರುವರು. ಮರಣ ಕಾಲದಲ್ಲಿ ಮಗನನ್ನು ಕರೆದ ಅಜಾಮಿಳನು ಮುಕ್ತಿಯನ್ನೈದಲಿಲ್ಲವೇ? ಗೃಹಕೃತ್ಯಗಳಲ್ಲಿರುವ ಸ್ತ್ರೀಯರಿಗೆ ದಣಿವು ಬೇಸರಗಳನ್ನು ಕಳೆದು ಭಕ್ತಿಯನ್ನು ಹೆಚ್ಚಿಸಲು ಸುಲಭ ಮಾರ್ಗ ಸಂಗೀತ.

"ಸಾಹಿತ್ಯವೂ ಸಂಗೀತವೂ ಮನುಷ್ಯನಿಗೆ ಎರಡು ಕಣ್ಣುಗಳಿದ್ದಂತೆ" ಎಂದು ಚಂಪೆ ವೈದ್ಯನಾಥ ಭಾಗವತರು ಹೇಳಿದ್ದಾರೆ. ಹೆಣ್ಣುಕ್ಕಳಿಗೆ ಶಾಸ್ತ್ರೀಯ ಸಂಗೀತ ಶಿಕ್ಷಣವು ಸಿಗಬೇಕಾದುದು ಅತೀ ಅವಶ್ಯ. ಆದರೆ ನಮ್ಮ ದೇಶದಲ್ಲಿ ಇದಕ್ಕೆ ಹೆಚ್ಚಿನ ಪ್ರೋತ್ಸಾಹವಿಲ್ಲ. ಇನ್ನು ಮುಂದಾದರೂ ಜನತಾ ಸರಕಾರ ಇದಕ್ಕೆ ಗಮನ ಕೊಟ್ಟರೆ ಬಹಳ ಒಳ್ಳೇದಿತ್ತು.

WANTED
Applications are invited from persons professing the Hindu Religion and possessing at least the minimum educational qualifications prescribed for public service for appointment as Executive officer of Sri Hiriadka Veerabhadra temple Bommarbettu village, Udipi tq, S Kanara Dt. on a salary not exceeding Rs 100/-plus D. A. The applicants should not be more than 50 years of age. Applications in the prescribed form which can be had from the Asst. commissioner Hindu Religious & Charitable Endowments Manglore should be forwarded to the Asst-Commissioner so as to reach him not later than 25—5—1952.
(By order of the Asst. Commissioner)
A Jaganjiva Alva
Mg. Trustee
11-4-1952

ಸ್ವೀಕಾರ ವಿಮರ್ಶೆ

ಸತಿ.

ಬರೆದವರು: ಬಿ. ಸದಾಶಿವಯ್ಯ. ಪ್ರಕಾಶಕರು: ಆನಂದ ಬ್ರದರ್ಸ್, ಬೆಂಗಳೂರು ೨. ಪುಟ: xvii+೨೧೩+12 ಬೆಲೆ: ರೂ ೨-೧೫-೦.

ಕನ್ನಡದಲ್ಲಿ ಕಾದಂಬರಿಗಳು ಪುಷ್ಕಳವಾಗಿ ಹುಟ್ಟಿಕೊಂಡಿರುವುದು ಬಂಗಾಳೀ ಲೇಖಕರಾದ ಸ್ವರ್ಗೀಯ ಬಂಕಿಮ್‌ಚಂದ್ರ ಚಟರ್ಜಿಯವರ ಐತಿಹಾಸಿಕ ಕಾದಂಬರಿಗಳ ಅನುವಾದದಿಂದಲೇ ಎಂದರೆ ತಪ್ಪಾಗದು. ಜೊತೆಗೆ ಮರಾಠೀ ಮತ್ತಿತರ ಭಾಷೆಗಳಲ್ಲಿನ ಗ್ರಂಥಗಳಿಂದ ಶ್ರೀ ಗಳಗನಾಥರು ಬರೆದ ಐತಿಹಾಸಿಕ ಕಾದಂಬರಿಗಳನ್ನೂ ನಾವು ಸೇರಿಸಬಹುದು. ಅಂದಿನಿಂದ ತೊಡಗಿದ ಕಾದಂಬರಿ ಸಾಹಿತ್ಯವು ಇಂದು ಮುಖ್ಯವಾಗಿ ಸಾಮಾಜಿಕ ಕ್ಷೇತ್ರವನ್ನೇ ತನ್ನ ಹಿನ್ನೆಲೆಯಾಗಿಟ್ಟುಕೊಂಡಿದೆಯಾದರೂ ಸಮರ್ಥ ಲೇಖಕರ ಕೈಗಳಿಂದ ಪೌರಾಣಿಕ [ಉದಾ: ದೇವುಡು ಬರೆದ "ಮಹಾ ಬ್ರಾಹ್ಮಣ" ಮತ್ತು ಐತಿಹಾಸಿಕ [ಉದಾ: ಶ್ರೀನಿವಾಸರು ಬರೆದ "ಚೆನ್ನಬಸವನಾಯಕ"] ಹಿನ್ನೆಲೆಯುಳ್ಳವೂ ಸ್ವತಂತ್ರವಾಗಿ ಯಶಸ್ವಿಯಾಗಿ ಕಾದಂಬರಿಗಳು ರಚಿತವಾಗಿವೆ. ಪುಸ್ತಕ ವಿಮರ್ಶೆಯ ಪುಸ್ತಕವು ಸ್ವರ್ಗೀಯ ಚಂಡೀಚರಣ ಸೇನರ "ಮಹಾರಾಜ ನಂದಕುಮಾರನಿಗೆ ಫಾಸಿ" ಎಂಬ ದೊಡ್ಡ ಬಂಗಾಳೀ ಕಾದಂಬರಿಯಿಂದ ಆಯ್ದುಕೊಂಡ ಕಥಾಭಾಗವನ್ನೊಳಗೊಂಡಿದೆ. ವಿಲಾಯತಿಯಿಂದ ಭಾರತಕ್ಕೆ ವ್ಯಾಪಾರಿಗಳಾಗಿ ಬಂದ ಈಸ್ಟ್ ಇಂಡಿಯಾ ಕಂಪೆನಿಯ ಇಂಗ್ಲಿಷರು 1757ರಲ್ಲಿ ಪ್ಲಾಸೀ ಕದನಾನಂತರ ಬಂಗಾಳ, ಬಿಹಾರ ಮತ್ತು ಒರಿಸಾಗಳಲ್ಲಿ ಹೇಗೆ ಅತ್ಯಾಚಾರಗಳನ್ನೂ ರಾಕ್ಷಸೀ ಕೃತ್ಯಗಳನ್ನೂ ಹೆಣ್ಣು ಮತ್ತು ಹೊನ್ನುಗಳಾಶೆಯಿಂದ ಮಾಡತೊಡಗಿದರೆಂಬುದನ್ನು ಈ ಕಾದಂಬರಿಯಲ್ಲಿ ಮರ್ಮಭೇದಕವಾಗಿ ಚಿತ್ರಿಸಲಾಗಿದೆ. ಸಾವಿತ್ರಿ ಎಂಬ ಕುಲೀನ ನಿಯೋಗಿ ಮನೆತನದ ಹೆಣ್ಣು ಇಂಗ್ಲಿಷರು ಜೈಲಿನಲ್ಲಿ ಅನ್ಯಾಯದಿಂದ ತನ್ನ ಅಣ್ಣ ಮತ್ತು ಪತಿಯನ್ನು ಇಟ್ಟಾಗ ಅವರನ್ನು ಬಿಡಿಸಿ ತರಬೇಕೆಂದು ಕಲ್ಕತ್ತೆಗೆ ಹೋಗುವಳು. ತನ್ನ ಊರಿನಲ್ಲಿ ಅವಳ ಶೀಲ ಮತ್ತು ಚರಿತ್ರವನ್ನು ಭ್ರಷ್ಟಮಾಡಲು ರಾಮುಹರಿ ಎಂಬ ಇಂಗ್ಲೀಷರ ನೌಕರನು ನೋಡುವಾಗ, ಅವಳು ಅಮೀರ್‌ಸಿಮ್ಬನ್ ವ್ಯಾಪಾರಿ ಅಂಟಾಬಿನ್ ಸಾಹೇಬನ "ನೋಮನ್" [illegible] ಹಾಗೂ ಅವಳ [illegible] ಬದುಕು [illegible] ಸ್ನೇಹಿತ ಕೃಪೆಯಿಂದ ರಕ್ಷಿಸಲ್ಪಡುವಳು. ತನ್ನ ತಂದೆಯ ಮೃತ್ಯುಕಾಲದಲ್ಲಿ ರಾಮಾ ಎಂಬ ಭಾರತೀಯ ಮಹಿಳೆಯ ಸಹಾಯದಿಂದ [illegible] ಮಾಡಿಕೊಳ್ಳುವಳು. ಕಲ್ಕತ್ತೆಗೆ ಹೊರಟಾಗ ದಾರಿಯಲ್ಲಿಯೂ ಅವಳಿಗೆ ವಿಪತ್ತುಗಳು ಎದುರಿಸಬೇಕಾಗುವುದು ಧರ್ಮ ಹಾಗೂ ಚಾರಿತ್ರ್ಯ ರಕ್ಷಣೆಗಾಗಿ ಹೋರಾಡುವ ಅವಳ ರಕ್ಷಣೆಗೆ ವಿಕ್ರಮ ಅನಾಥ ಬಾಲಿಕೆ [illegible] ರು ಇಂಗ್ಲಿಷರೆಂದರೇನು-ಇಂಗ್ಲಿಷರಿಗೆ [illegible] ಮುಂದಾದ ದೇಶೀಯರೂ ಪಕ್ಷಪಾತ ರೋಗ ಹಾಕಿದ ವಿಲಾಸಿಗಳೂ ಹೆಂಗುಸನ್ನು ಬುಟ್ಟಿಯೊಳಗೆ ಹಾಕಲು ಹೋರಾಡುತ್ತಿದ್ದ ಆ ಕಾಲದಲ್ಲಿ ಸಾವಿತ್ರಿಗೆ "ವೃದ್ಧ ನವಾಬನ ಪಂಡಿತ" ನೆಂದು ಹೆಸರಾದ ವಾಸುದೇವ ಶಾಸ್ತ್ರಿಯು ಆಶ್ರಯ ನೀಡುವನು. ಮತ್ತನನ ಮಗಳು ಪ್ರಮದೆಯು ನೋವಿನಿಂದ ಜೇಲುಕಂಡ ಸಾವಿತ್ರಿಯ ಬಂಧುವರು ಬಿಡುಗಡೆಯಾಗುವ [illegible] ಮೋಮ್ ಸಾಹೇಬ ಉಪ್ಪಾರಳ ಮತ್ತು ವಾಸುದೇವ ಶಾಸ್ತ್ರಿಯ ಪಾತ್ರಗಳನ್ನು ತೂಗಿ ನೋಡುವಾಗ ಉತ್ತಮರು. ಎಲ್ಲಕ್ಕಿಂತಲೂ ಇರುವವು-ಮುಖ್ಯವಾದ ಜಾತಿವಂಶ ಮತ್ತು ಜನಾಂಗ ಭೇದವನ್ನು ಮೀರಿನಿಂತು ದೀನ ಹೀನರ ಉದ್ಧಾರಕ್ಕಾಗಿ ಶ್ರಮಿಸುವರು ಎಂಬುದು ಗೋಚರವಾಗುವುದು.

ಕಥಾ ಭಾಗವು ಬಹಳ ಉತ್ತಮವಾಗಿದೆ-ಮಾತ್ರವಲ್ಲದೆ ಪೀಠಿಕೆಯಲ್ಲಿಯೂ ಕೊನೆಗೆ ಪರಿಶಿಷ್ಟದಲ್ಲಿಯೂ ಕಾಣಿಸಿದ ವಿವರಗಳು ಕತೆಗೆ ಐತಿಹಾಸಿಕ ಸಾಕ್ಷ್ಯವನ್ನೂ ಒದಗಿಸಿವೆ. ಕಥನ ಶೈಲಿಯು ಚೆಲೋದಿದೆ. ಆದರೂ ಮೂಲ ಬಂಗಾಳೀ ಕತೆಯು ಬಹಳ ಹಿಂದೆ ರಚಿತವಾಗಿರುವ ಕಾರಣದಿಂದ ಕಥನ ತಂತ್ರವು ಬಹಳ ಹಳೆಯದಾಗಿ ತೋರುವುದು. ಲೇಖಕರು ಮೂಲವನ್ನು [illegible] ಆಧುನಿಕ ಕ್ರಮಕ್ಕನುಸಾರವಾಗಿ ಆ ಮೂಲಾಗ್ರ ಪರಿವರ್ತನೆಯನ್ನು ಕಥನ ತಂತ್ರದ ಮಟ್ಟಿಗೆ ಮಾಡ [illegible] ಅದು ಸಚ್ಚ ಮನೋಹರವೆನಿಸುತ್ತಿತ್ತು. ಈಗಿದ್ದಂತೆ ನಡುನಡುವೆ ಹೊಸ ಪಾತ್ರಗಳು ಬಂದಂತೆ ಅವುಗಳ ಹಿಂದಿನ ಚರಿತ್ರೆಯನ್ನು ವಿವರಿಸುತ್ತಾ ಪುಟ ಪುಟಗಳೇ ಸರಿಯುವುದರಿಂದ ಕತೆಯ ಓಟಕ್ಕೆ ಪೆಟ್ಟುಬಿದ್ದಿದೆ. ಅಲ್ಲದೆ ಕೊನೆಯ ನಾಲ್ಕು ಪರಿಚ್ಛೇದಗಳನ್ನು ಸೇರಿಸಿದುದರಿಂದ ಕಾದಂಬರಿಯು ಅಪರ್ಯವಸಾಯಿಯಾಗಿ ಭಾಸವಾಗಲು ಅಸ್ಪದ ಒದಗಿದೆ. ಕಥನ ತಂತ್ರದ ಪರಿವರ್ತನೆಯಿಂದ ಈ ಮಹತ್ವದ ಭಾಗಗಳನ್ನು ಮುಖ್ಯ ಕತೆಯ ಚೌಕಟ್ಟಿನಲ್ಲಿಯೇ ಹೊಂದಿಸಲು ಅನುಕೂಲವಾಗುವುದು. ಹೇಗಿದ್ದರೂ ಇದು ಒಂದು ಒಳ್ಳೆಯ ಪುಸ್ತಕವೆಂಬುದನ್ನು ಮರೆಯುವಂತಿಲ್ಲ.

—ಕಾರ್ತಿಕೇಯ

ಜೀವನ ದರ್ಶನ

ಬರೆದವರ—ವಿವಿಧ ಕತೆಗಾರರು—ಪ್ರಕಾಶಕ: [illegible]-ಶಾಂತಿ ಸಾಹಿತ್ಯ ಮಾಲೆ, ಬಾದಾಮಿ. 1/8 ಕ್ರೌನ್. 125 ಪುಟ. ಬೆಲೆ ರೂ. 1 8-0

ಈ ಕಥಾ ಸಂಕಲನದಲ್ಲಿ ಶ್ರೀಮತಿ [illegible] ಯವರ ನಿಯೋಗ, ಎಲ್. ಎಸ್. ಶೇಷಗಿರಿರಾಯರ [illegible] ವಿಮಾನ, ಕೃಷ್ಣಮೂರ್ತಿ ಪುರಾಣಿಕರ-ಮೋಚಿಯಾನಿ, ಬಸವರಾಜ ಕಟ್ಟೀಮನಿಯವರ-ಬೂಟ್ ಪಾಲೀಶ್, ಶ್ರೀ ಶಂಕರನ [illegible]-ಮರುಳು ದೋಣಿಯ ಹುಡುಗಿ, ಸಿ. ಕೆ. ನಾಗರಾಜ ರಾಯರ-[illegible] ಮೆಡಲ್, ಎನ್. [illegible] ಯವರ ಸಾಹಿತ್ಯ ಪ್ರಚಾರ, ಐದನೆ ಶ್ರೀನಿವಾಸರ-ಪೂರ್ಣಸಖಿ, ದೇಸಾಯಿ ದತ್ತಮೂರ್ತಿಯವರ ನಡು ಬೀದಿ ನಡು ಮನೆ, ಚದುರಂಗರ-ಎರಡು ಜೀವನ ಎಂಬ ಹತ್ತು ಕತೆಗಳಿವೆ. ಕತೆಗಳೊಂದಿಗೆ ಕತೆಗಾರರ ಪರಿಚಯವೂ ಕೊಡಲ್ಪಟ್ಟಿದೆ. ಹಳೆ ಕತೆಗಾರರೊಂದಿಗೆ ಹೊಸಬರಿಗೂ ಇಲ್ಲಿ ಸಂದರ್ಭವನ್ನು ಕೊಡಲಾಗಿದೆ. ಎಲ್ಲ ಕತೆಗಾರರು ಜೀವನದ ಆಗುಹೋಗುಗಳನ್ನು ನೂತನ ದೃಷ್ಟಿಯಿಂದ ಕಂಡು, ತಮ್ಮ ಕತೆಗಳನ್ನು ಪೋಣಿಸಿರುವರೆನ್ನಬಹುದು. ಕಥನ ಶೈಲಿ, ರಚನೆ, ಬೆಳವಣಿಗೆ ಚೆಲುವಾಗಿವೆ. ಜೀವನದರ್ಶನ ಮಾಡುವ ಕತೆಗಳೆಂಬುದರಿಂದಲೇ ಪುಸ್ತಕಕ್ಕೆ ಆ ಹೆಸರನ್ನು ಕೊಡಲಾಗಿದೆ. ಸಂಪಾದಕರ ಸಾಹಸ ಅಭಿನಂದನೀಯ.

[೧ನೇ ಪುಟದಿಂದ ಮುಂದುವರಿದುದು]

ಮನೆಗಳಲ್ಲೂ ಪ್ರಸರಿಸಬೇಕು ಏಕೆಂದರೆ ಇದು ಹೊಸಯುಗ. ಬ್ರಾಹ್ಮಣರ ದರ್ಪದ ಯುಗ ಮುಗಿಯಿತು. ಕ್ಷತ್ರಿಯರ ತೋಳ್ಬಲದ ಯುಗವೂ ಮುಗಿಯಿತು. ವೈಶ್ಯರ ವಾಣಿಜ್ಯ ಯುಗವೂ ಮುಗಿಯಿತು. ದರ್ಪದ ದಬ್ಬಾಳಿಕೆಯ ಯುಗಗಳ ಯುಗವಿದಲ್ಲ. ಇದೀಗ ಸರ್ವೋದಯ ಯುಗ. ಈ ಯುಗವೇ ಸರ್ವರ ಸಮೃದ್ಧಿಯನ್ನೂ ಸರ್ವರಿಗೆ ಶಾಂತಿಯನ್ನೂ ತರಬಲ್ಲುದು. ಅಂಥ ಯುಗ ರಚನೆಯಲ್ಲಿ ಭಾಗಿಯಾಗುವುದು ಸರ್ವರ ಕರ್ತವ್ಯವಾಗಿದೆ

[ಶ್ರೀ ಕಾಕಾ ಕಾಲೇಲ್ಕರರ ಲೇಖನದಿಂದ]

"ಕೊ"

ಕೆಥೋಲಿಕ್ ಬೇಂಕ್ ಲಿಮಿಟೆಡ್, ಕಲ್ಯಾಣಪುರ

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲಪಡೆ ಕೊಂಡು ಸ್ವಲ್ಪ ಸಮಯದಿಂದ ಅಸಲು ಬಡ್ಡಿ ಸಂದಾಯ ಕೊಡದೆ ಬಾಕಿ ಮಾಡಿ ಇರುವುದರಿಂದಲೂ ಸದ್ರಿ ಸಾಲವನ್ನು ಬರಮಾಡಿ ಕೊಳ್ಳುವರೆ ಅವರಿಗೆ ರಿಜಿಷ್ಟ್ರ ನೋಟೀಸು ಬಿಟ್ಟಲ್ಲಿಯೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ 21-4-52ನೇ ಒಳಗೆ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದ ಪಕ್ಷದಲ್ಲಿ ಸದರಿಯವರು ಈಡಿಟ್ಟ ನಗಗಳನ್ನು ತಾ 25-4-52ನೇ ಶನಿವಾರ ಮಧ್ಯಾಹ್ನ ಗಂಟೆ 12ಕ್ಕೆಯೂ ಅನಂತರ ಸಮಯಕ್ಕೆ ಯುಕ್ತಕಂಡ ತಾರೀಕಿನಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು
26/849	ಸಿರಿಲ್ ಎಸ್ ಬಾನ್ಸ್, ಲೂಯಿಸ್ ಬಾನ್ಸರ ಮಗ, ಉಗ್ಗೆಲಬೆಟ್ಟು, ಮೂಡು ತೋನ್ಸೆ ಕಲ್ಯಾಣಪುರ, ಪೋಸ್ಟ್.	675
26/915	— do —	95
26/960	— do —	85
26/1003	— do —	90
27/318	— do —	18
28/174	— do —	170
26/800	ಕೆ. ಗಣೇಶ ಭಟ್ಟ, ಪಕ್ಷೀಶ ಭಟ್ಟರ ಮಗ, ವ್ಯಾಪಾರಿ, ಕಲ್ಯಾಣಪುರ, ಪೋಸ್ಟ್.	128
26/869	ರಘುನಾಥ ಶೇಟ್ ಕೃಷ್ಣ ಶೇಟ್ರ ಮಗ, ಸಂತೆಕಟ್ಟೆ ಕಲ್ಯಾಣಪುರ, ಕಲ್ಯಾಣಪುರ ಪೋಸ್ಟ್.	100
26/678	ಕೆ. ಲಕ್ಷ್ಮಯ್ಯ, ಬಾಲಯ್ಯರ ಮಗ, ಟೈಲರ್ ಸ್ಟೋರ್, ಪೊಸ್ಟ್ ಆಫೀಸ್ ರೋಡು, ಕಲ್ಯಾಣಪುರ ಪೋಸ್ಟ್.	26
26/512	ಚಂದು ಪೂಜಾರಿ, ತೋಡ ಪೂಜಾರಿಯ ಮಗ, ಬನ್ನಲ, ಬ್ರಹ್ಮಾವರ ಪೋಸ್ಟ್.	34
26/767, 27/888	ಫಿಲಿಪ್ ಡಿಸೋಜ, ಸಂತಾನ ಡಿಸೋಜರ ಮಗ ಅಮ್ಮುಂಜೆ ಗ್ರಾಮ, ಕೊಳಲಗಿರಿ ಪೋಸ್ಟ್.	90
	Do	35
27/884	ಕೆ. ರಾಮಚಂದ್ರ ಶೆಟ್ಟಿ, ಶ್ರೀನಿವಾಸ ಶೆಟ್ಟರ ಮಗ, ಕಲ್ಯಾಣಪುರ, ಕಲ್ಯಾಣಪುರ ಪೋಸ್ಟ್.	160
26/578	ಅಣ್ಣಯ ಪೂಜಾರಿ, ಬಾಬು ಪೂಜಾರಿಯವರ ಅಳಿಯ, ತೆಂಕುಬೆಟ್ಟು, ಕಲ್ಯಾಣಪುರ ಪೋಸ್ಟ್.	280
26/735	ಆಲ್ಬರ್ಟ್ ಡಿಸೋಜ, ಅಂತೋನಿ ಡಿಸೋಜರ ಮಗ, ಅಮ್ಮುಂಜೆ, ಕೊಳಲಗಿರಿ ಪೋಸ್ಟ್.	101
26/1045	ಎಚ್. ಮಂಜುನಾಥ, ಹೊಯ್ಗೆ ಕುದ್ರು, ಮೂಡು ತೋನ್ಸೆ, ಕಲ್ಯಾಣಪುರ ಪೋಸ್ಟ್.	185
27/1811	ಲಿಯಾಂ ಪಿಂಟೊ, ದಾವಿದ ಪಿಂಟೊರ ಮಗ, ಹೂಡೆ, ಪಡುತೋನ್ಸೆ, ಕೆಮ್ಮಣ್ಣು ಪೋಸ್ಟ್.	110
27/2170	ಎಗ್ನೆಸ್ ರೆಬೆಲ್ಲೊ, ಸಾವೇರ್ ರೆಬೆಲ್ಲೊರ ಹೆಂಡತಿ, ಹೇರೆಬೆಟ್ಟು, ಉಪ್ಪೂರು ಪೋಸ್ಟ್.	195
28/45	ಮಾತಾಯಸ್ ಲೂವಿಸ್, ಡೇನಿಸ್ ಲೂವಿಸರ ಮಗ, ತೆಂಕುಬೆಟ್ಟು, ಉಪ್ಪೂರು, ಕಲ್ಯಾಣಪುರ ಪೋಸ್ಟ್.	110
27/2148	ಎಚ್. ಡಿ. ಮೆಂಡನ್, ದೊಡ್ಡಮನೆ ಉಪ್ಪೂರು, ಉಪ್ಪೂರು ಪೋಸ್ಟ್.	150

Kallianpur
10-4-1952

S. Rebello
Agent

WANTED

For the National High School, Barkur (S-K) Canarese knowing L. T or B. T (Mathematics & Science prefered) Scale of pay Rs 85-5-145 + D. A. Graduates may also apply Pay Rs. 65 + D. A. Craft Instructors in agriculture- Minimum qualification- Secondary Grade Trained with Pass in Technical examination in agriculture Lower Grade Pay Rs 45-2-85 + D. A.

Dearness allowance at Govt. rates Apply before 30-4 52.

Manager & Correspondent,
NATIONAL HIGH SCHOOL
BARKUR, S. K.

Copy to be submitted to the District Educational Officer, South Kanara, Mangalore, S. K.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

5 ವರುಷ ಗ್ಯಾರಂಟಿಯುಳ್ಳ ರೋಲ್ಡ್ ಗೋಲ್ಡ್ ಚಿನ್ನಾಭರಣಗಳು

ಕುತ್ತಿಗೆಗೆ ಹಾಕುವ ಚೈನ್ ರೂ. 12 ಉದ್ದ ಚೈನ್ ರೂ. 7 ಚಿಕ್ಕ ಚೈನ್ ರೂ 5 ಬಳೆ ಜೊತೆಗೆ ರೂ. 5.

Gemini Gold Covering Works
Main Guard Sq. MADURAI.

ಪ್ರವಾಸಿಯ ಪತ್ರಗಳು ೨೮

ಸೆನ್‌ಮಾರ್ಕ್ ಇಗರ್ಜಿ

ಈ ಇಗರ್ಜಿಗೆ ತಾಗಿ ಇನ್ನೊಂದು ಬದಿಯಲ್ಲಿ ಡೋಜರ ಅರಮನೆ (Doges' Palace) ಹೆಸರು ಹಾಗಿದ್ದರೂ ಈ ಕಟ್ಟೋಣವು 12 ನೇ ಶತಮಾನದಲ್ಲಿ ಕಟ್ಟಲ್ಪಟ್ಟದ್ದು. ಅದರಲ್ಲಿ 1800 ಇಸವಿ ವರೆಗೆ ನಡೆದ ಡೋಜರ ಸರಕಾರದ ಪಾರ್ಲಿಮೆಂಟು, ಕೋರ್ಟು, ವಸ್ತುಸಂಗ್ರಹ ಗೃಹ ಮೊದಲಾದ ಅನೇಕ ವಿಷಯಗಳಿರುವ 2 ಉಪ್ಪರಿಗೆಗಳಿರುವ ದೊಡ್ಡ ಕಟ್ಟಡ. ಇದರಲ್ಲಿ ಕೆಲವು ಭಾಗ 1594ರಲ್ಲಿ ಸುಟ್ಟುಹೋಗಿ ಪುನಃ ಕಟ್ಟಿದ್ದು. ಈ ಕಟ್ಟಡದಲ್ಲಿ ಅನೇಕ ತೈಲಚಿತ್ರಗಳನ್ನು ಗೋಡೆಯಲ್ಲಿ ಅಲ್ಲಿಯ ಪ್ರಸಿದ್ಧ ಚಿತ್ರಗಾರರು ಬಿಡಿಸಿದ್ದಾರೆ. ಅಂಥಾ ನೂರಾರು ಚಿತ್ರಗಳು ಇಲ್ಲಿ ಇರುವುದಾದರೂ ಅವುಗಳ ಪೈಕಿ ಕೆಲವೇ ಚಿತ್ರಗಳ ವಿಷಯ ಇಲ್ಲಿ ಬರೆಯಲಿಕ್ಕೆ ಸಾಧ್ಯ.

ಮೇಲೆ ಉಪ್ಪರಿಗೆ ಹತ್ತುವಲ್ಲಿ ದೈತ್ಯರ ಮೆಟ್ಟಲು (Giants Stair case) ಎಂತ ಇದೆ, ಅಲ್ಲಿ ಎರಡೂ ಬದಿಯಲ್ಲಿ ದೊಡ್ಡ ಅಮೃತ ಶಿಲೆಯಿಂದ ಮಾಡಿದ ದೈತ್ಯರ ಪ್ರತಿಮೆಗಳು. ಇಲ್ಲಿಯೇ ಸಮೀಪ ತೈಲಚಿತ್ರವನ್ನು ಮೊದಲಾಗಿ ಪ್ರಸಿದ್ಧ ಮಾಡಿದ ಜೊವಾನಿ ಬೆಲೀನಿ ಎಂಬವನು ಬಿಡಿಸಿದ ಏಸುಕ್ರಿಸ್ತನ ತೈಲಚಿತ್ರ ಇಟ್ಟಿದೆ. ಹತ್ತಿರ 6 ಗಂಟೆಗಳು ಮಾತ್ರವಿರುವ ಒಂದು ದೊಡ್ಡ ಗಡಿಯಾರ. ಸಮೀಪ ಶ್ರೀಮಂತ ವರ್ಗದವರು (Nobility) ಮಾತ್ರ ಉಪ್ಪರಿಗೆ ಮೇಲಕ್ಕೆ ಬರುವ ಉಪ್ಪರಿಗೆ ಮೆಟ್ಟಲು. ಇನ್ನೊಂದು ಕಡೆಯಲ್ಲಿ ಸಾಮಾನ್ಯ ಜನರು ಬರುವ ಮೆಟ್ಟಲು. ನಾಲ್ಕು ಗೋಪುರಗಳಿರುವ ದೊಡ್ಡ ಸಭಾಂಗಣ. ಇಲ್ಲಿ ಮುಂಚಿನ ಕಾಲದ ಸೆನೆಟ್ ಮತ್ತು ಹತ್ತು ಜನ ಜಡ್ಜರು (Council of Ten) ಕೂಡುವುದಿತ್ತು. 12, 13ನೇ ಶತಮಾನದಲ್ಲಿ ಪೇಲೆಸ್ಟೈನನ್ನು ಮಹಮದೀಯರಿಂದ ಕೈವಶಮಾಡಿಕೊಳ್ಳಲಿಕ್ಕೆ ಯೂರೋಪಿನ ಕ್ರಿಸ್ತ ಜನಾಂಗಗಳು ಮಾಡಿದ ಧರ್ಮಯುದ್ಧದಲ್ಲಿ (Crusade) ವೆನೀಸಿನ ಡೋಜರು ಯುದ್ಧ ಕಾಲದಲ್ಲಿ ಸೈನ್ಯ ಸಮೇತ ಹೊರಡುವಾಗ ಪ್ರಾರ್ಥನೆ ಮಾಡಿದ ತೈಲಚಿತ್ರ. ಅದನ್ನು ಖ್ಯಾತಿಪಟ್ಟ ಟಿಟಿಯನ್ (Titian) ಎಂಬವನು ಬಿಡಿಸಿದ್ದು. ಹೀಗೆ ಇನ್ನೊಂದು ಫ್ರೆಂಚ್ ಅರಸ III ನೇ ಹೆನ್ರಿಯು ವೆನೀಸಿಗೆ ಬಂದ ಚಿತ್ರ, ಸಮೀಪ ಪರದೇಶದಿಂದ ಬರುತ್ತಿದ್ದ ರಾಯಭಾರಿಗಳನ್ನು ಸ್ವಾಗತಿಸುವ ಕೋಣೆ. ಅಲ್ಲಿ ಪಾಲೋ ವೆರೊನೀಸಿ ಎಂಬವನು ಅವನ ಹೆಂಡತಿ ಯುರೋಪಾ ಎಂಬವಳ ಅಪಹರಣ (Rape of Europa) ವಿಷಯವಾಗಿ ಬಿಡಿಸಿದ ಪ್ರಸಿದ್ಧ ತೈಲಚಿತ್ರವಿದೆ. ಈ ಕೋಣೆಯಲ್ಲಿ ಇವನು ಬಿಡಿಸಿದ ಇತರ ಚಿತ್ರಗಳೂ ಕೂಡಾ ಇವೆ.

ಈ ಕೋಣೆಗೆ ತಾಗಿ ಸೆನೆಟಿನವರು ಕೂಡುತ್ತಿದ್ದ ದೊಡ್ಡ ಕೋಣೆ ಇದೆ. ಇದರಲ್ಲಿ ಒಂದು ಬದಿ ವೇದಿಕೆಯಲ್ಲಿ ಜಡ್ಜರ 10 ಕುರ್ಚಿ ಮಧ್ಯ ಇನ್ನೊಂದು ಡೋಜರಿಗೆ. 1925ರಲ್ಲಿ ಈ ಕೋಣೆಯಲ್ಲಿ ನೋಬೆಲ್ ಇನಾಮು ಪಡೆದವರೆಲ್ಲ ಇಲ್ಲಿ ಸೇರಿ ಅವರಿಗೆ ಸ್ವಾಗತ ನಡೆದಿತ್ತಂತೆ. ಕೆಳಗೆ 120 ಕುರ್ಚಿಗಳು ಸೆನೆಟಿನ ಸದಸ್ಯರಿಗೆ. ಈ ಕೋಣೆಯಲ್ಲಿ ಚಿತ್ರ ಬಿಡಿಸಿದವನು ಪ್ರಸಿದ್ಧ ಚಿತ್ರಗಾರ ಟಿಂಟರೆಟ್ಟೊ (Tinteretto) ಮತ್ತು ಅವನ ಶಿಷ್ಯರು. ಹಾಗೆ ಮೇಲೆ ಮುಚ್ಚಿಗೆಯಲ್ಲಿ ಅವರು ಬಿಡಿಸಿದ ಚಿತ್ರದಲ್ಲಿ ವೆನಿಸನ್ನು ಎಡ್ರಿಯಾಟಿಕ್ ಸಮುದ್ರದ ರಾಣಿಯಾಗಿ ತೋರಿಸಿದ್ದಾರೆ.

ಇದಕ್ಕೆ ತಾಗಿ ಪೂರ್ವಕ್ಕೆ ಜಡ್ಜರು ದೇಶದ್ರೋಹದ ನಂಬರುಗಳಲ್ಲಿ ತೀರ್ಪುಕೊಡುವ ಕೋಣೆ (Council Room). ಅದರ ಒಂದು ಬದಿ ಗೋಡೆಯಲ್ಲಿ ಸಣ್ಣ ಬಾಗಿಲಿದ್ದು ಅದರ ಮುಖಾಂತರ ಸುಮಾರು 25-30 ಗಜ ದೂರವಿರುವ ಜೈಲಿನಿಂದ ಕೈದಿಗಳನ್ನು ಒಂದು ಸಪೂರವಾದ ದಾರಿಯಲ್ಲಿ ಇಲ್ಲಿಗೆ ತಂದು ಅವರಿಗೆ ಶಿಕ್ಷೆ ವಿಧಿಸುವುದು. ಆ ದಾರಿಯ ಕೆಳಗೆ ಎರಡೂ ಕಟ್ಟಡಗಳ ಮಧ್ಯ ಇರುವ ನೀರಿನ ಕಾಲುವೆ ಇದ್ದು ಅದರ ಮೇಲೆ ಒಂದು ಸಪೂರ ಸಂಕವಿರುತ್ತದೆ. ಅದರ ಹೆಸರು "ಗೋಳಿನ ಸಂಕ" (Bridge of Sighs) ನಾನು ಈ ಸಂಕದ ಮೇಲೆ ಹೋಗಿ ಆ ಜೈಲಿನ ಪುರಾತನದ ಕೋಣೆಗಳನ್ನು ಸಂದರ್ಶಿಸಿದೆ. ಈ ಕೌನ್ಸಿಲ್ ಕೋಣೆಯಲ್ಲಿ ಫ್ರಾನ್ಸ್ ದೇಶದ ಐದನೇ ಚಾರ್ಲ್ಸ್ ರಾಜನಿಗೂ ಆಗಿನ ಪೋಪ್ ಸಾಹೇಬರಿಗೂ ಆದ ಒಪ್ಪಂದವನ್ನು ಬಿಡಿಸಿದ ಚಿತ್ರ. ಈ ಕೋಣೆಯಲ್ಲಿ ಇರುವ ಇನ್ನೊಂದು ವಿಚಿತ್ರವೇನೆಂದರೆ ಊರಿನವರು ತಳ್ಳಿ ಅರ್ಜಿಗಳನ್ನು ಹಾಕಲಿಕ್ಕೆ ಇರುವ ಒಂದು ಪೆಟ್ಟಿಗೆ. ಅದರ ಬಾಯಿಯು ಈಗಿನ ಟಪ್ಪಾಲು ಪೆಟ್ಟಿಗೆಯಂತಿದ್ದು ಆ ಅರ್ಜಿಗಳ ಮೇಲೆ ಕಣ್ಣಿ ನಡಿಸುತ್ತಿದ್ದರಂತೆ.

ಇದರ ಹತ್ತಿರದ ಕೋಣೆಯಲ್ಲಿ ಬೇರೆ ಬೇರೆ ಸಮಯದಲ್ಲಿ ತಯಾರಾದ ಪುರಾತನ ಕಾಲದ ನಾನಾತರದ ಉತ್ಕೃಷ್ಟ ಶಸ್ತ್ರಗಳನ್ನು ಸಂಗ್ರಹಿಸಿಟ್ಟಿದ್ದಾರೆ. ಅವುಗಳಲ್ಲಿ 16ನೇ ಶತಮಾನದಲ್ಲಿ ಮಾಡಿದ್ದ, ಚಕ್ರದ ಮೇಲೆ ಹೋಗಬಹುದಾದ ಸಣ್ಣ ಒಂದು ಫಿರಂಗಿ. ಇಸ್ವಿ 1571ರಲ್ಲಿ ಕ್ರೈಸ್ತರು ಟರ್ಕಿಯವರ ಮೇಲೆ ನಡೆಸಿ ಗೆದ್ದ ಲಾಪಾಂಟೋ (Lapanto) ಎಂಬ ಯುದ್ಧದಲ್ಲಿ ಸೆಳಕೊಂಡ ಬಹುದೊಡ್ಡ ಪತಾಕೆ ಇದೆ. ಹಿಂದಿನ ಕಾಲದಲ್ಲಿ ಯೂರೋಪಿನ ಕೆಲವು ಕಡೆಯಲ್ಲಿ ಹೆಂಗಸರು ಉಪಯೋಗಿಸುತ್ತಿದ್ದ ಒಂದು ಕಬ್ಬಿಣದ ಪತಿವ್ರತಾ ಸೊಂಟದ ಪಟ್ಟಿ (Chastity Belt) ಕೂಡಾ ಇಲ್ಲಿ ಇತ್ತು. ಇದರ ಉಪಯೋಗವು ಎಷ್ಟು ಕಠಿಣವಾದದ್ದು ಎಂಬುದನ್ನು ಅದನ್ನು ನೋಡಿಯೇ ತಿಳಿಯಬೇಕು.

ಇದಕ್ಕೆ ತಾಗಿದ ದೊಡ್ಡ ಕೋಣೆಯು ಬೆಂಕಿಯಲ್ಲಿ ಸುಟ್ಟದ್ದನ್ನು ಇನ್ನೂ ಸರಿಪಡಿಸಲಿಲ್ಲ. ಅದರ ಹತ್ತಿರದ ಪಾರ್ಲಿಮೆಂಟು ಕೋಣೆ. ಇದು ಇಲ್ಲಿರುವ ಎಲ್ಲಾ ಕೋಣೆಗಳ ಪೈಕಿ ದೊಡ್ಡದು. ಅಂದಾಜ 180 ಅಡಿ ಉದ್ದ ಮತ್ತು 75 ಅಡಿ ಅಗಲ. ಅದರ ಎಲ್ಲಾ ಕಡೆಗಳಲ್ಲಿಯೂ ತೈಲಚಿತ್ರಗಳನ್ನು ಬಿಡಿಸಿರುತ್ತಾರೆ. ಇಲ್ಲಿಯೇ ವರ್ಷ ವರ್ಷ ಚುನಾವಣೆ ಮೂಲಕ ಬರುವ ಶ್ರೀಮಂತ ಮತ್ತು ಸಾಮಾನ್ಯ ಪ್ರತಿನಿಧಿಗಳು (ಸುಮಾರು 100ಕ್ಕೂ ಮಿಕ್ಕಿ) ಸೇರಿ ರಾಜ ಕಾರ್ಯವನ್ನು ಮಾಡುತ್ತಿದ್ದರು. 1797ರಲ್ಲಿ ಜನತಾ ಸರಕಾರವು ಬಿದ್ದುಹೋಗಿ ಪುನಹ ಇದೇ ಕೋಣೆಯಲ್ಲಿ 1848ರಲ್ಲಿ ರಚಿಸಿದಾಗ ಅದನ್ನು ಇಲ್ಲಿಂದಲೇ ಡೆನಿಯಲ್‌ಮೆನಿನ್ ಎಂಬವನು ಘೋಷಿಸಿದನು.

ಈ ಕೋಣೆಯಲ್ಲಿ ಅನೇಕ ಚಿತ್ರಗಳಿವೆ. ಅದೆಲ್ಲಾ 1577ರ ನಂತರ ಬಿಡಿಸಿದವು. ಮುಂಚಿನವು ಬೆಂಕಿಯಲ್ಲಿ ಹಾಳಾದುವು. ಈಗ ಇದ್ದ ಚಿತ್ರಗಳ ಪೈಕಿ ಒಂದು ಬಡಗು ಬದಿ ಗೋಡೆಯಲ್ಲಿ ಡೋಜರು ಕೂತುಕೊಳ್ಳುವ ಸಿಂಹಾಸನದ ಹಿಂದೆ ಟಿಂಟರೆಟ್ಟೊ ಎಂಬವನು ಬಿಡಿಸಿದ ಸ್ವರ್ಗ (Paradise) ಎಂಬ ಚಿತ್ರವು ಬಹಳ ವಿಶೇಷವಾದದ್ದು. ಅವನ ಮಗಳು ಸತ್ತು ಹೋದ ವ್ಯಥೆಯಿಂದ ಇನ್ನು ಚಿತ್ರ ಬಿಡಿಸುವುದಿಲ್ಲವೆಂತ ಅವನು ನಿರ್ಣಯಿಸಿದಾಗ ಅವನ ಶಿಷ್ಯರು ಅವನಿಗೆ ಹೇಳಿ ಸತ್ತು ಹೋದ ಮಗಳು ಸ್ವರ್ಗದಲ್ಲಿರುವುದನ್ನು ಕಾಣಿಸಬೇಕೆಂತ ಇದನ್ನು ಅವನೂ ಆ ಶಿಷ್ಯರೂ ಕೂಡಿ ಬಿಡಿಸಿದ್ದು. ಅದರಲ್ಲಿ 1500 ಜನರ ಚಿತ್ರವಿದೆ. ಮಧ್ಯ ಅವನ ಮಗಳನ್ನು ಬಿಡಿಸಲಿಕ್ಕೆ 4 ವರ್ಷ ಅವನಿಗೆ ತಾಗಿತು. ಅದಕ್ಕೆ ಎದುರು ಗೋಡೆಯಲ್ಲಿ ಅನೇಕ ಹಿಂದಿನ ಡೋಜರ ಚಿತ್ರಗಳು. ಒಬ್ಬನದ್ದು ಮಾತ್ರ ಮುಚ್ಚಿದ್ದಾರೆ ಅದು ಅವನು ದೇಶ ದ್ರೋಹ ಮಾಡಿ ಪಾಶಿ ಹೊಂದಿದ ಕಾರಣ.

ಇದಕ್ಕೆ ತಾಗಿ [illegible] ಕೋಣೆಯಲ್ಲಿ ಚುನಾವಣೆ ಆ[illegible]ವ ಮುಂಚೆ [illegible] ಕೂಡುತ್ತಿದ್ದರು. ಇದಕ್ಕೆ ತಾಗಿದ ಪಡುಕೋಣೆ ದೊಡ್ಡದು. ಅದರಲ್ಲಿ ಚುನಾವಣೆ ನಡಿಯುತ್ತಿತ್ತು. ಇದರಲ್ಲಿ ಪಾಮಾ (Palma) ಎಂಬ ಪ್ರಸಿದ್ಧ ಚಿತ್ರಕಾರನು ತನ್ನ ಹೆಂಡತಿಯು ಸ್ವರ್ಗದಲ್ಲಿರುವ ಚಿತ್ರ ಒಂದು, ನಂತರ ಅವಳ ಕೆಟ್ಟ ನಡತೆ ತಿಳಿದು, ಅವಳು ನರಕದಲ್ಲಿರುವ ಚಿತ್ರ ಒಂದು ಹೀಗೆ ಎರಡನ್ನೂ ಬಿಡಿಸಿರುತ್ತಾನೆ. ಇಲ್ಲಿಯೇ 1571ರಲ್ಲಿ ನಡೆದ ಮೇಲೆ ಹೇಳಿದ ಲಾಪಾಂಟೋ ಎಂಬ ಯುದ್ಧವನ್ನು ಬಿಡಿಸಿದೆ.

ಇನ್ನೂ ಅನೇಕ ಚಿತ್ರಗಳಿವೆ. ಅವುಗಳ ಪೈಕಿ ಒಂದರ ವಿಷಯ ಮಾತ್ರ ಬರೆಯುತ್ತೇನೆ. ಅದು ಮಾರ್ಕೊ ಪೋಲೋ ಎಂಬವನದ್ದು. ಆವನು 1324ರಲ್ಲಿ ಚೀನಾ ದೇಶಕ್ಕೆ ಹೋಗಿ ಅಲ್ಲಿಂದ ಇಟೇಲಿಗೆ ಸ್ಪೆಗೆಟ್ಟಿ ಎಂಬ ತಿಂಡಿಯನ್ನು ಮಾಡಲಿಕ್ಕೆ ಕಲಿತು ಬಂದವನು. ಅದಕ್ಕೆ ಮಕರೋನಿ ಕೂಡಾ ಅನ್ನುತ್ತಾರೆ. ಇಟೇಲಿಯವರಿಗೆ ಸ್ಪೆಗೆಟ್ಟಿ ಅಂದರೆ ಪ್ರಾಣ. ನಮ್ಮ ಕನ್ನಡ ನಾಡಿನವರಿಗೆ ಕಡುಬು ಇದ್ದ ಹಾಗೆ. ತಮಿಳರಿಗೆ ಇಡ್ಲಿಯಂತೆ. ಅದು ನಾವು ಇಲ್ಲಿ ಕಡುಬಿನಿಂದ ಮಾಡುವ ಶಾವಿಗೆಯಂತಿದೆ, ಆದರೆ ಶಾವಿಗೆಯಷ್ಟು ರುಚಿ (ಅಲ್ಲಿಗೆ ಹೊಸಬನಾದ) ನನಗೆ ಕಾಣಲಿಲ್ಲ.

ಈ ಅರಮನೆ ಸಂದರ್ಶಿಸಿದ ಬಳಿಕ ಹತ್ತಿರವಿರುವ ದಕ್ಕೆಯ ಬದಿಯಲ್ಲಿ ಸ್ವಲ್ಪ ತಿರುಗಾಟ ಮಾಡಿದೆವು. ಅಲ್ಲಿಯೇ ಸಮೀಪ ಆಗ ಇಂಗ್ಲಾಂಡಿನಿಂದ ಬಂದ ಪ್ರಿನ್‌ಸೆಸ್ ಎಲಿಸಬೆತ್ ಮತ್ತು ಅವಳ ಗಂಡನನ್ನು ಅಲ್ಲಿ ತಿರುಗಾಟಕ್ಕೆ ತಂದ ಯುದ್ಧದ ಹಡಗು (Cruiser) ಇತ್ತು. ಹಾಗೆಯೇ ಸಮೀಪದ ನೀರಿನಲ್ಲಿ ಇತರ ಹಡಗುಗಳು, ಲೋಂಚುಗಳು ಹೋಗಿ ಬರುತ್ತಿದ್ದವು. ದೂರದಲ್ಲಿ ಮೇಲೆ ಹೇಳಿದ ಲಿಡೋ (Lido) ಎಂಬ ಸಮುದ್ರದ ದಡವು (Beach) ಕಾಣುತ್ತಿತ್ತು.

ಅನಂತರ ಸಮೀಪವಿರುವ ಪೇಟೆಯ ಅಂಗಡಿಗಳನ್ನು ಕಂಡೆವು. ಎಲ್ಲಿಯೂ ಅಂಗಡಿ ತುಂಬ ಸಾಮಾನುಗಳು. ಒಂದು ಅಂಗಡಿಯಲ್ಲಿ ಗಾಜಿನ ಸಾಮಾನಿನಲ್ಲಿ ಚಿನ್ನದ ಎಲೆಯನ್ನು ಸೇರಿಸಿ ಮಾಡುವ ಕೆಲಸವನ್ನು ಕಂಡೆವು. ಅಂಗಡಿಯೊಳಗೆ ಹೆಂಗಸರು ಕೂತುಕೊಂಡು ಗೇಸಿನ ಬೆಂಕಿಯಿಂದ ಗಾಜಿನ ಮಣಿಗಳನ್ನು ಕರಗಿಸಿ ಅದಕ್ಕೆ ಸುತ್ತಲೂ ಬಹು ತೆಳ್ಳಗಿನ ಚಿನ್ನದ ಎಲೆ ಇಟ್ಟು ಪುನಹ ಬಿಸಿ ಮಾಡಿ ಎರಡನ್ನೂ ಒಂದೇ ಆಗಿ ಮಾಡುವರು. ಈ ಕೆಲಸಕ್ಕೆ ಈ ಊರು ಬಹಳ ಪ್ರಸಿದ್ಧ. ಇಂಥಾ ಹಲವು ತರದ ನಾಜೂಕಿನ ಚಿನ್ನ ಮಿಶ್ರಣ ಸಾಮಾನುಗಳನ್ನು ತಯಾರಿಸಿ ಅಲ್ಲಿಯೇ ಅಂಗಡಿಯಲ್ಲಿ ಮಾರಾಟಮಾಡುವರು. ಹೀಗೆ ಸುಮಾರು 4 ಘಂಟೆ ಸಮಯ ತಿರುಗಾಡಿ ಹೋಟೆಲಿಗೆ ಬಂದೆ. ನಂತರ ವಿಶ್ರಾಂತಿ.

ಸಾಯಂಕಾಲ ವೆನಿಸಿನ ದಕ್ಷಿಣ ಸುಮಾರು 165 ಮೈಲು ದೂರವಿರುವ ಇನ್ನೊಂದು ಪ್ರಸಿದ್ಧ ಪಟ್ಟಣವಾದ ಫ್ಲೋರೆನ್ಸ್ ಎಂಬಲ್ಲಿಗೆ ಹೊರಟೆ. ಬರುವಾಗ 2 ಮೈಲು ಲೋಂಚಿನಲ್ಲಿ ಅಗಲವಾದ ಕಾಲುವೆಗಳ ಮೂಲಕ ಸುತ್ತಿ ಸುತ್ತಿ ಬರುವುದು. ಅಲ್ಲಲ್ಲಿ ಚಂದವಾದ ಸಂಕಗಳ ಅಡಿ ಪ್ರಯಾಣ. ಕಾಲುವೆಗಳ ಎರಡೂ ಬದಿ ಚಂದವಾದ 3 4 ಮಾಳಿಗೆಯ ಸಾಲು ಸಾಲಾದ ಮನೆಗಳು. ನೀರಲ್ಲಿ ಅನೇಕ ಅತ್ತಿತ್ತ ಹೋಗುವ ಲೋಂಚುಗಳು ಮತ್ತು ಗೊಂಡಾಲಾ (Gondola) ಎಂಬ ದೋಣಿಗಳು. ಅವುಗಳು ಸಪೂರವಾಗಿದ್ದು ಎರಡೂ ತಲೆ ಎತ್ತರವಾಗಿ ಹಂಸದ ಕುತ್ತಿಗೆಯಂತೆ ಮೇಲಕ್ಕೆ ಇರುವವು. ಹೀಗೆ ಬಂದು ಮುಂಚಿನ ರಾತ್ರಿ ಇಳಿದ ರೈಲ್ವೇ ಸ್ಟೇಶನಿಗೆ ಪುನಹ ಬಂದು ಸೇರಿ ಸಾಯಂಕಾಲ ಘಂಟೆ 4-40ರ ರೈಲಲ್ಲಿ ಹೊರಟೆ. ಪ್ರಯಾಣದ ವಿಷಯ ಬರುವ ಪತ್ರದಲ್ಲಿ

ವಿಚಾರವಾಣಿ — ಕೆ. ಆರ್. ಕಾರಂತ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:- ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ವನಜೀನಾತು

ಎಂಬ

ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ ಎಂ.

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಟಾಕಿಸ್ಟರು:—ಡಾ। ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನ ಎ ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂಧೂರ

ಬಹಿಷ್ಠೆ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಸ್ಥೆ ಸಂಬಂಧದ ಹೊಟ್ಟೆನೋವಿನ ಜೊತೆಗೆ ತಲೆನೋವು, ನಡುಕಲೆತ, ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ.

ಮೂರು ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ಒಂದು ಸೆಟ್ ಅನುಪಾನ ಪತ್ರಿಕೆ ಮೇರೆ ಇಟ್ಟರೂ ಸೇವಿಸಿರಿ ಸಾಕು. ಶೋಭನವಾದ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾಪತ್ರಗಳನ್ನು ಪಡೆದಿದೆ.

ಕ್ರಯ:— ಒಂದುಸೆಟ್ 5ರೂ. ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1ರೂ ವಿ. ಪಿ. ಇಲ್ಲ ಕ್ಯಾಟಲಾಗ್ ಉಚಿತ 6ರೂ ಮನಿಆರ್ಡರ್ ಮಾಡಿರಿ ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ:—A. R ವಿಶ್ವೇಶ್ವರೈಯ್ಯ (ಎ. ರಾಮಸ್ವಾಮಿ ಅಯ್ಯರ್ ಸನ್,)

Prop: ಸಂತಾನ ಸಿಂಧೂರ

ಅಂಬಳೆ ಪೋಸ್ಟು, ಯಳಂದೂರು ತಾಲೂಕು ಮೈಸೂರು ಡಿಸ್ಟ್ರಿಕ್ಟು

ಮೈಸೂರು ಶಾಖೆ: 259 ಸೋನಾರ್ ಸ್ಟ್ರೀಟ್, ದಿವಾನ್ಸ್‌ರೋಡು, ಮೈಸೂರು.

ವಾರದ ಭವಿಷ್ಯ

ತಾರೀಕು 17-4-52 ರಿಂದ | ತಾರೀಕು 23-4-52 ವರೆಗೆ

ಮೇಷ— ... ಫಲ ದೊರೆವುದಾದರೂ ಈ ವಾರದಲ್ಲಿ ನಿಮ್ಮ ಖರ್ಚುಗಳು ಹೆಚ್ಚುವುದರಿಂದ ... ಸಾಲ ಕಡ ಮಾಡುವ ಪ್ರಸಂಗ ಬರಲಿದೆ. ಗೃಹ ತಾಪತ್ರಯಗಳು ಬರುವುದಕ್ಕೆ ಕಟಿಬದ್ಧರಾದರೂ ಸತಿಪತಿಗಳೊಳಗೆ ನಿತ್ಯ ಕಲಹ ತಪ್ಪದು. ನೌಕರ ವರ್ಗದಲ್ಲಿ ಮನಸ್ತಾಪ ವುಂಟಾಗಲಿದೆ. ವಿದ್ಯೋದ್ಯೋಗಿ ಜನತೆಗೆ ಈ ವಾರವು ದುಃಖದಾಯಿಯಾಗಿ ಪರಿಣಮಿಸಲಿದೆ. ವಾರಾದಿಯ 4 ದಿನಗಳಲ್ಲಿ ಗ್ರಹಮಾನವು ತಕ್ಕಮಟ್ಟಿಗೆ ಅನುಕೂಲವಿರುವುದರಿಂದ ಸುಖ ಇಷ್ಟಸಿದ್ಧಿ ಮಿತ್ರ ಜನರಿಂದ ಲಾಭ ವುಂಟಾಗಲಿದೆ.

ವೃಷಭ— ಎಂತಹ ಮಹತ್ಕಾರ್ಯವೇ ಇರಲಿ ನೀವು ನಿರಾಪೇಕ್ಷೆಯಿಂದ ಸ್ವಯಂ ನಿರ್ವಹಿಸಲು ಶಕ್ತರಿರುವಿರಿ ವಿರೋಧಿಗಳಿಂದ ... ವಿಘ್ನಗಳನ್ನೊಡ್ಡುವ ಶತ್ರು ಸಾಹಸಗಳು ನಿಷ್ಫಲಕವಾಗುವುದರಿಂದ ನಿಮ್ಮ ಅಭೀಷ್ಟದಂತೆ ಫಲವು ನೆರವೇರುವುದರಲ್ಲಿ ಸಂದೇಹವಿಲ್ಲ. ಕಫ ಪ್ರಕೋಪದಿಂದ ಆರೋಗ್ಯವು ಕೆಡಲಿದೆ. ಆಕಸ್ಮಿಕ ಪ್ರವಾಸ ಮಾಡಬೇಕಾದೀತು. ತನುಮನಗಳ ಸುಖ ಶಾಂತಿಗೆ ಭಂಗವಿದೆ. ವಾರಾಂತ್ಯದ 5 ದಿನಗಳಲ್ಲಿ ನಿಮ್ಮ ಸಂಕಲ್ಪವು ಸಿದ್ಧಿಸಲಿದೆ.

ಮಿಥುನ— ನಿಮ್ಮ ಮನ... ಧೈರ್ಯದಿಂದ ನೆರವೇರುವ ಅಧಿಕ ... ಗೃಹದಲ್ಲಿ ಮಂಗಲ ... ನೌಕರ ಜನರು ಉನ್ನತ ... ವಿದ್ಯಾರ್ಥಿ ... ಮಕ್ಕಳ ಅನಾರೋಗ್ಯ ... ವಾರಾಂತ್ಯದ ... ದಿನಗಳಲ್ಲಿ ... ಸುಖಗಳುಂಟಾಗಲಿವೆ.

ಕರ್ಕಟ— ... ನಾನಾ ತರದ ಕಷ್ಟನಷ್ಟಗಳು ... ಅಧಿಕ ಬಲವುಳ್ಳ ... ಶತ್ರುಗಳ ... ಆಯವ್ಯಯಗಳು ... ಗೃಹ ಕಲಹ ... ಸಾಂಸಾರಿಕ ತಾಪತ್ರಯಗಳು ದೂರವಾಗುವವು. ... ತಾ. 17-18-ರ ... ಧನಲಾಭ ಮತ್ತು ನವವಸನಾದಿಗಳ ಲಾಭವೂ ಇದೆ.

ಸಿಂಹ— ... ಯಾವ ಭಾಗದಲ್ಲೂ ನಿಮ್ಮ ... ನಿಮ್ಮ ಅಭೀಷ್ಟದಂತೆ ಕಾರ್ಯಗಳು ಸಿದ್ಧಿಸುವವು. ಪಶುಭೃತ್ಯ ಧನಧಾನ್ಯಗಳಿಂದೊಡಗೂಡಿದ ನಿಮ್ಮ ಗೃಹ ಪರಿವಾರದಲ್ಲಿ ಯಾವ ತರದ ಕುಂದು ಕೊರತೆಯೂ ಕಾಣದು. ಆಕಸ್ಮಿಕವಾಗಿ ಧನಾಗಮನವಾಗಲಿದೆ. ನಾತ ... ಕೈಬಿಟ್ಟು ಹೋದ ನಷ್ಟವೆಂದೆಣಿಸಿದ ವಸ್ತುಗಳು ಒದಗಿ ... ಪುನಃ ಅನಾಯಾಸದಿಂದ ನಿಮ್ಮ ಕೈ ಸೇರಲಿವೆ. ಹಣದ ವ್ಯವಹಾರ ನಿಮಿತ್ತ ಕಲಹಗಳೇಳುವ ಸಂಭವವಿರುವುದರಿಂದ ವಾ...

ರಾಂತ್ಯದ 3 ದಿನಗಳಲ್ಲಿ ಸ್ವಲ್ಪ ಜಾಗರೂಕತೆಯಿಂದ ವರ್ತಿಸಿರಿ.

ಕನ್ಯಾ— ವಿವಿಧ ಧೈರ್ಯ ... ದಯೋಕ್ಷವಾದ್ ... ಲೋಕೋಕ್ತಿಯನ್ನು ನೀವೀಗ ಅನುಭವಿಸಬೇಕಾಗಿ ಬಂದಿದೆ. ಕಾರಣ ಈ ವಾರದಲ್ಲಿ ನೀವು ಸ್ವಪ್ನದಲ್ಲೂ ನೆನೆಸದ ಕಷ್ಟಾನಿಷ್ಟಗಳು ಬರಲಿವೆ. ಬಂದದ್ದೆಲ್ಲಾ ಬರಲಿ ಗೋವಿಂದನ ದಯೆಯೊಂದಿರಲಿ ಎಂಬಂತೆ ದೇವರ ಮೇಲೆ ಭಾರ ... ನೀವು ನಿಮ್ಮ ಕರ್ತವ್ಯವನ್ನು ... ಇಂದಲ್ಲದಿದ್ದರೆ ಮುಂದಾದರೂ ಇದರ ಫಲವು ಲಭಿಸಲಿದೆ. ತಾ. 17-18 ಈ ... ಅತೀವ ಕೋಪ ... ಧನನಾಶವುಂಟಾಗಲಿದೆ.

ತುಲಾ— ಪ್ರಬಲರಿಂದ ಶತ್ರುಗಳ ಪೀಡೆಯು ದಿನೇ ದಿನೇ ಹೆಚ್ಚುತ್ತಿರುವದು ಮೇಲಿಂದ ಮೇಲೆ ಕೋರ್ಟಾನರ್ಥಗಳು ಬರಲಿವೆ ಯಾದರೂ ಉಪಾಯದಿಂದ ಅವಾಯಗಳನ್ನು ತಪ್ಪಿಸಿಕೊಳ್ಳಲು ಶಕ್ತರಿರುವಿರಿ. ಕಫ ವಾತದೋಷದಿಂದ ಆರೋಗ್ಯಕ್ಕೆ ಹಾನಿ ಸಂಭವಿಸಲಿದೆ. ವ್ಯಾಪಾರದಲ್ಲಿ ಆಕಸ್ಮಿಕ ನಷ್ಟ ಹೊಂದುವದು. ವಿದ್ಯೋದ್ಯೋಗ ಜೀವಿಗಳಿಗೂ ನೌಕರ ಜನರಿಗೂ ಈ ವಾರವು ಶ್ರಮುಕ್ತ ... ಫಲವೀಯಲಿದೆ. ವಾರಾಂತ್ಯದ 3 ದಿನಗಳು ಉತ್ತಮವಿವೆ.

ವೃಶ್ಚಿಕ— ಸುಖದುಃಖಗಳು ಸಮಿಶ್ರವಾಗಿರುವವು. ಶ್ರಮಜೀವಿಗಳಿಗೆ ಮತ್ತು ವ್ಯಾಪಾರಿ ಜನರಿಗೂ ಈ ವಾರದಲ್ಲಿ ಉತ್ತಮ ಫಲ ಲಭಿಸುವದು. ಹೆಚ್ಚಿನ ನಿಮ್ಮ ಬಯಕೆಗಳು ಸಿದ್ಧಿಸಲಿವೆ. ಸಾಂಸಾರಿಕ ತಾಪತ್ರಯಗಳು ಹೆಚ್ಚುವವು ತಂದೆ ಮಕ್ಕಳೊಳು ... ಕಲಹ ... ಆದರೂ ... ನಿದ್ರಾ ರಾಹಿತ್ಯ ದುಃಸ್ವಪ್ನ ಇತ್ಯಾದಿಗಳು ಕಾಣಿಸಲಿವೆ. ವಾರಾದಿಯ 2 ದಿನಗಳಲ್ಲಿ ವಿಜಯ ಧನಪ್ರಾಪ್ತಿ ಗೃಹ ಸುಖಗಳು ಲಭಿಸುವವು.

ಧನು— ದೈವವು ಸಂಪೂರ್ಣ ಅನುಗ್ರಹ ದೃಷ್ಟಿಯನ್ನು ನಿಮ್ಮ ಮೇಲೆ ನೀಡಿರುವದು. ಈ ಸುಸಂದರ್ಭದಲ್ಲಿ ನೀವು ಆಲಸಿಗರಾಗದೆ ಕಾರ್ಯರಂಗದಲ್ಲಿ ಮುನ್ನಡೆಯಿರಿ. ಮುಂದಿಟ್ಟ ಹೆಜ್ಜೆಯನ್ನು ಹಿಂದಿಗೂ ಹಿಂದಿಡುವ ಪ್ರಸಂಗ ಬರಲಾರದು. ನಿಮ್ಮ ಆರ್ಥಿಕ ಸಮಸ್ಯೆಗಳು ಬಗೆಹರಿದು ಕೈಯಲ್ಲಿ ನಾಲ್ಕು ಕಾಸನ್ನು ಸಂಗ್ರಹಿಸಿಕೊಳ್ಳುವಿರಿ. ಜನತೆಯ ಬೆಂಬಲವುಳ್ಳ ನಿಮಗೆ ಸಮಾಜದಲ್ಲಿ ಯೋಗ್ಯ ಸ್ಥಾನವು ಲಭಿಸುವದು. ತಾ 19-20 ಈ ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಅನಾಯಾಸದಿಂದ ನೆರವೇರುವವು.

ಮಕರ— ಕೃಷ್ಣಪಕ್ಷದ ಚಂದ್ರನಂತೆ ದಿನೇ ದಿನೇ ಹ್ರಾಸವಾಗುತ್ತಿರುವದು. ನಿಮ್ಮ ಅದೃಷ್ಟವು ಆದಾಯವು ಅತ್ಯಲ್ಪವಿದ್ದು ಬಹುಮುಖದಿಂದ ಖರ್ಚುಗಳು ನಿಮ್ಮನ್ನು ಪೀಡಿಸುವುದರಿಂದ ದಿನಯಾಪನೆಯ ಸಲುವಾಗಿ ಬಹಳ ಪೇಚಾಟ ಪಡುವಿರಿ. ರಾಜಕೀಯ ಕ್ಷೇತ್ರದಲ್ಲಿ ಶತ್ರುಜನರಿಂದ ಪರಾಭವ ಉಂಟಾದೀತು. ಆಪ್ತೇಷ್ಟರ ವಿಯೋಗದಿಂದ ದುಃಖಿತರಾದ ನಿಮಗೆ ತಾ 17-18-21-22-23 ಈ ದಿನಗಳು ಕೊಂಚ ಸುಖದಾಯಿಗಳಾಗಿ ಪರಿಣಮಿಸಲಿವೆ.

ಕುಂಭ— ನಿಮ್ಮ ಧನಸ್ಥಾನದಲ್ಲಿ ಸುಖ ಭಾಗ್ಯಪನೆಂದ ಶುಕ್ರನು ಉಚ್ಚನಾಗಿರುವುದರಿಂದಲೂ ಸಪ್ತಮ ಪತಿಯಾದ ರವಿಯು ವಿಕ್ರಮದಲ್ಲಿ ಉಚ್ಚನಾಗಿರುವುದರಿಂದಲೂ ನೀವೀವಾರವನ್ನು ಆರ್ಥಿಕ ದುರವಸ್ಥೆಗಳಿಗೆ ಸಿಲುಕದೆ ಸುಖದಿಂದ ಕಳೆಯಲಿರುವಿರಿ. ಶತ್ರುಗಳಿಂದ ಪ್ರಾಪ್ತವಾದ ಪ್ರತೀಕಾರವನ್ನು ಕಾರ್ಯ ಶಕ್ತಿಯನ್ನು ಕುಗ್ಗಿಸಲಿದೆ. ವಾತದೋಷದಿಂದ ಆರೋಗ್ಯ ಕೆಡಲಿದೆ. ತಾ 19-20 ನ್ನುಳಿದು ಇತರ ದಿನಗಳು ಸುಖದಾಯಿಗಳಾಗಲಾರವು.

ಮೀನ— ಆಪ್ತೇಷ್ಟರು ಸ್ನೇಹಿತರು ಇವರುಗಳ ವಿಯೋಗ ದುಃಖದಿಂದ ಪೀಡಿತರಾಗಲಿರುವಿರಿ. ಶತ್ರುಜನರ ಒಳಸಂಚಿನ ವಿರೋಧದಿಂದಾಗಿ ಧನಮಾನಗಳನ್ನು ರಕ್ಷಿಸುವದು ದುಸ್ಸಾಧ್ಯವೆನಿಸುವದು. ಆದರೂ ನಿಮ್ಮ ಸ್ವಂತ ಉಪಭೋಗಕ್ಕೆ ಬೇಕಾದ ವಸ್ತುವಡವೆಗಳು ನಿರಾಯಾಸದಿಂದ ಲಭಿಸುವವು. ವೃಥಾ ವಾಕ್ಕಲಹಕ್ಕೆ ಸಿಲುಕುವ ಸಂಭವವಿದೆ. ತಾ 19-20 ಬಿಟ್ಟುಳಿದ ದಿನಗಳು ಹೆಚ್ಚು ಕಷ್ಟದಾಯಿಗಳಾಗವು.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ನ್ಯಾಯೋಚಿತ ವ್ಯವಹಾರದ ಪಿಶಾಲ ... ಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ... ಕ್ಕೆ ... ವ್ಯವಸ್ಥೆ ... ನೋಡಿ ವರ್ಗ!

ಮೇಲಾಗಿ ಉಡುಪಿ ... ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI S. Kanara

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯ ಪರ್ವತದಿಂದ ತೆಗೆಯಲ್ಪಡುವಂಥ ಅಪೂರ್ವ ವಸ್ತು, ಔಷಧಿಗಳ ರಾಜ; ಶಿಲಾಜಿತ್ತನ್ನು ಮೂಲಿಕೆಗಳೊಡನೆ ಸೇರಿಸಿ ಲೇಹ್ಯವಾಗಿದೆ. ... ಶೀತ, ಉಷ್ಣ, ... ಸರ್ವಕಾಲದಲ್ಲೂ ಒಂದೇಸವನೆ ತನ್ನ ಶಕ್ತಿಯನ್ನು ತೋರಿಸುತ್ತದೆ. ಇದರ ಸೇವನೆಯಿಂದ ದೇಹ ದಾರ್ಢ್ಯವೂ, ಶಕ್ತಿಯೂ ಉಂಟಾಗುತ್ತದೆ. ಮುಖ್ಯವಾಗಿ ಹೊಟ್ಟೆನೋವು

ಅನ್ನ ಸೇರದಿರುವಿಕೆ ಇವೇ ಮೊದಲಾದ ರೋಗಗಳಿಗೆ ಒಂದೆರಡು ದಿನಗಳಲ್ಲಿಯೇ ಗುಣಕೊಡತಕ್ಕ ಔಷಧವಿದು. ... ಹೊಟ್ಟೆಯಲ್ಲಿ ಗಡ್ಡೆ ಇರುವಿಕೆ ಮತ್ತು ವಾಯು ... ವಿದ್ಯಾರ್ಥಿಗಳು ಸೇವಿಸುವುದರಿಂದ ಜ್ಞಾಪಕಶಕ್ತಿಯೂ ... ಶಕ್ತಿಯನ್ನು ಹೆಚ್ಚಿಸಿ; ಬ್ರಹ್ಮಚರ್ಯವನ್ನುಂಟುಮಾಡುತ್ತದೆ. ಹೆಂಗಸರಿಗೆ— ... ಕೀಲುವಾಯು, ಸಕ್ಕರೆ ರೋಗ ಮತ್ತು ಉಷ್ಣದಿಂದಾಗುವ ಇತರ ರೋಗಗಳಿಗೆ ... ಶಿಶುಗಳಿಗೆ ಈ ಔಷಧವನ್ನು ಪ್ರತಿ ಬೆಳಗ್ಗೆ ... ಕೊಟ್ಟರೆ ... ಹಣ ಮುಂಗಡ.

... ದಿನದ ಲೇಹ್ಯಕ್ಕೆ ರೂ. ... ದಿನದ ಲೇಹ್ಯಕ್ಕೆ ರೂ ...-0 (ಪೋಸ್ಟೇಜು ಮಾಫಿ)

ನೀಲಿಗಿರಿ ಡಿಪ್ಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ-

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ

ಸುಲಭದಲ್ಲಿ ಇಂಗ್ಲಿಷ್

ಅತಿ ಸುಲಭದಲ್ಲಿ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ

ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿಸಲ್ಪಟ್ಟ

ಅತಿ ಉಪಯುಕ್ತ ಪುಸ್ತಕ

ಬೆಲೆ ರೂ. 1-8-0, ವಿ. ಪಿ. ದ್ವಾರ ರೂ. 2-0

ವಿಳಾಸ—

ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published by K. D. Shetty at the Navayuga Press, Udipi, S. India.

Regd.No. M. 3618
LICENCE No. 31
Licensed to Post without Prepayment

ESTD. 1921 ಸ್ಥಾಪನೆ
31ನೆಯ ವರ್ಷ

24-4-1952

Founder: Sri A. B. Shetty
Minister for Medical & Public Health

ನವಯುಗ
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ

ಸಾರ್ವಜನಿಕ ಆರೋಗ್ಯ ಮಂತ್ರಿ ಶ್ರೀ ಎ.ಬಿ. ಶೆಟ್ಟರಿಂದ ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ. ದ. ಕ.

ವಾರ್ಷಿಕ ಚಂದಾ ರೂ. 5-12-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ 0-2-0

ವರ್ಷ ೩೧ ವಾರ ೩೩

NAVAYUGA WEEKLY Post Box No. 22 UDIPI. Vol 31 No. 33

"ಮನೆಗಿಂತ ಮನ, ಧನಕ್ಕಿಂತ ಗುಣ ದೊಡ್ಡದಾಗಿರಲಿ"

"ಎಲ್ಲರೂ ಭೂಮಾತೆಯ ಮಕ್ಕಳು. ಮಕ್ಕಳಿಗೆ ತಾಯಿಯು ಸೇರುವಂತೆ ಭೂಮಿಯು ಜನಕ್ಕೆ ಸೇರಬೇಕು ಆದ್ದರಿಂದ ಪ್ರತಿಯೊಂದು ಕುಟುಂಬಕ್ಕೆ ಕನಿಷ್ಠ ಐದು ಎಕ್ರೆ ಭೂಮಿಯಾದರೂ ಸಿಗುವಂತಾಗಬೇಕು. ಭಾರತಾದ್ಯಂತ ಭೂದಾನ ಯಜ್ಞ ಪ್ರಾರಂಭವಾಗಬೇಕು.

— ವಿನೋಬಾಭಾವೆ

ಹುಡುಗಿಯರ ವಿವಾಹದ ಸಮಸ್ಯೆ

ಜಗತ್ತು ಪರಿವರ್ತನ ಹೊಂದುತ್ತಿರುತ್ತದೆ. ನಿನ್ನೆ ಇದ್ದದ್ದು ಇಂದೆ ಇರುವದಿಲ್ಲ, ಮತ್ತು ಇಂದು ಇದ್ದದ್ದು ನಾಳೆ ಇರಲಿಕ್ಕಿಲ್ಲ. ಬಹು ಕಾಲದ ತರುವಾಯ ನಮ್ಮ ಜಾತಿಯೂ ತನ್ನ ನಿದ್ರಾವಸ್ಥೆಯಿಂದ ಎಚ್ಚತ್ತಿದೆ. ಧರ್ಮದ ಹೆಸರಿನಿಂದ ನಿರ್ಮಾಣ ಮಾಡಿದ ಎಷ್ಟೋ ಬಂಧನಗಳನ್ನು ಕಳಚಿದ್ದರೂ, ಎಷ್ಟೋ ಊರುಗಳಲ್ಲಿ ಅವರಿಗೆ ಸಿಗಬೇಕಾದ ಆದರ ದೊರೆತಿಲ್ಲ. ಕೆಲವು ಜನಸ್ತರಗಳಂತೂ ಇನ್ನೂ ಶವಸ್ಥೆಯಾಗಿಯೇ ಉಳಿದಿವೆ. ಆದರೆ ಆವುಗಳ ಕಡೆಗೆ ನೋಡದೆ ಮುಖ ತಿರುವಿಕೊಂಡರೆ ಸಮಸ್ಯೆ ಇನ್ನೂ ಜಟಿಲವಾಗುತ್ತದೆ. ಎಷ್ಟೋ ದೋಷಗಳನ್ನು ದೋಷವೆಂದು ತಿಳಿದೂ ಅದೇ ಹಾದಿಯಲ್ಲಿ ನಡೆಯುವುದರಲ್ಲಿಯೇ ತಮ್ಮ ಗೌರವವಿದೆ ಎಂದು ತಿಳಿದುಕೊಳ್ಳುವ ಜನ ಇರುವದರಿಂದ ಇವೇ ಸ್ಥಿತಿಯು ಸ್ವಲ್ಪ ನಮ್ಮ ಸಮಾಜದಲ್ಲಿಯೂ ಉಳಿದಿದೆ.

ಈಗಿನ ಯುಗದಲ್ಲಿ ಹುಡುಗಿಯರ ವಿವಾಹದ ಸಮಸ್ಯೆ ಅತ್ಯಂತ ಗಂಭೀರ ರೂಪತಾಳಿ ತಾಯಿ–ತಂದೆಗಳ ಎದುರಿಗೆ ನಿಂತಿದೆ. ಅವರಿಂದು ತಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ಕೊಡಬೇಕೋ ಅಥವಾ ಕೊಡಬಾರದೋ ಎಂಬುದು ಯಾವ ತರದಿಂದಲೂ ನಿರ್ಣಯಿಸಲು ಬಾರದವರಾಗಿದ್ದಾರೆ. ಎರಡೂ ಸ್ಥಿತಿಯಲ್ಲೂ ಅವರಿಗೆ ಕಠಿಣತೆಗಳನ್ನು ಎದುರಿಸಬೇಕಾಗುತ್ತದೆ. ಇದೇ ಕಾರಣದಿಂದಲೇ ಇಂದು ಹೆಣ್ಣು ಹುಟ್ಟಿದ ಕೂಡಲೇ ಒಂದು ಹುಣ್ಣು ಹುಟ್ಟಿತೆಂದು ತಿಳಿದುಕೊಳ್ಳುವ ಮನಗಳನ್ನು ನೋಡುತ್ತೇವೆ.

ತಮ್ಮ ಹೆಣ್ಣು ಮಕ್ಕಳಿಗೆ ಅತ್ಯಂತ ಉಚ್ಚ ಶಿಕ್ಷಣವನ್ನು ಕೊಡಿಸಿದರೂ ವರಪಕ್ಷದ ಬೇಕಾದ ಬೇಡಿಕೆಗಳನ್ನು ಪೂರೈಸುವ ಸಾಮರ್ಥ್ಯವನ್ನು ಇಟ್ಟುಕೊಂಡವರ ವರ್ಗವೊಂದು ನಮ್ಮ ಸಮಾಜದಲ್ಲಿ ಇದೆ. ಇಂಥ ವರ್ಗದ ಜನರಿಗೆ ನಾವು ಈ ಚಿಂತೆಯಿಂದ ದೂರವಿದ್ದವರು ಎಂದು ಹೇಳುತ್ತೇವೆ. ಆದರೆ ಇಂಥ ಜನರ ಸಂಖ್ಯೆ ಈ ನಿರ್ಧನ ದೇಶದಲ್ಲಿ ಬಹಳ ಅಪರೂಪ.

ಕನ್ಯೆಯ ದುಃಸ್ಥಿತಿ

ಮಧ್ಯಮ ವರ್ಗದ ಜನರ ಎದುರಿಗೆ ಈ ಸಮಸ್ಯೆ ಬಹಳ ಗಂಭೀರ ರೂಪದಿಂದ ಬರುತ್ತದೆ. ಅವರು ತಮ್ಮ ಮಕ್ಕಳನ್ನು ಅವಶ್ಯವಾಗಿ ಶಿಕ್ಷಿತರನ್ನಾಗಿ ಮಾಡುತ್ತಾರೆ, ಆದರೆ ಅವರ ಉದ್ದೇಶ ಬೇರೆ ಇರುತ್ತದೆ. ಅದೇನೆಂದರೆ ವಿವಾಹದ ಪೇಟೆಯಲ್ಲಿ ತಮ್ಮ ಮಕ್ಕಳನ್ನು ಎಲ್ಲರಿಗಿಂತ ಹೆಚ್ಚು ಎಂದು ಜನರು ತಿಳಿದುಕೊಳ್ಳಬೇಕೆಂದೇ ಹೊರತು ಬೇರೇನೂ ಇರುವದಿಲ್ಲ. ಹೆಣ್ಣು ಮಕ್ಕಳು ತಮ್ಮ ವಿವಾಹವಾಗುವವರೆಗೆ ಶಿಕ್ಷಣ ಪಡೆಯುತ್ತಾರೆ. ವಿವಾಹದ ವ್ಯವಸ್ಥೆ ನಡೆದ ಕೂಡಲೇ ಶಿಕ್ಷಣವನ್ನು ಮುಕ್ತಾಯಗೊಳಿಸುತ್ತಾರೆ.

ಒಳ್ಳೆಯ ವರ ಮತ್ತು ಒಳ್ಳೆಯ ಮನೆತನ ಹುಡುಕುವವರ ಜತೆಗೆಯೇ ತಾಯಿ–ತಂದೆಗಳ ಎದುರಿಗೆ ಹಣದ ಪ್ರಶ್ನೆಯೊಂದು ಬರುತ್ತದೆ. ವರನ ಯೋಗ್ಯತೆಯ ಪ್ರಕಾರ ಅವನ ಕ್ರಯ ವಿಕ್ರಯಗಳನ್ನು ವರಪಕ್ಷದ ಜನರು ಮಾಡುತ್ತಾರೆ. ಕೆಲಕೆಲವು ಜಾತಿಗಳಲ್ಲಿ ಬಹಳ ಜನರಿಗೆ ನಗದಿ ಹಣವನ್ನೇ ಒಪ್ಪಿಸಬೇಕಾಗುತ್ತದೆ. ಕೆಲವರು ಸಭ್ಯತೆಯ ಸೋಗಿನಿಂದ ತಮ್ಮ ಮಕ್ಕಳನ್ನು ವಿಲಾಯತಿಗೆ ಕಳಿಸಬೇಕು ಅದಕ್ಕೆ ಹಣಕೊಡಿರಿ ಎಂದು ಕೇಳುತ್ತಾರೆ. ಕೆಲವರು ವ್ಯಾಪಾರಕ್ಕೆ ಕೇಳುತ್ತಾರೆ. ಮತ್ತೆ ಕೆಲವರು ತಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ಪೂರ್ತಿಗೊಳಿಸಬೇಕೆಂದು ಹಣ ಬೇಡುತ್ತಾರೆ.

ಮದುವೆ ಮಾಡಿಕೊಂಡು ಹುಡುಗಿಯ ಮೇಲೆ ಮತ್ತು ಆಕೆಯ ಮನೆತನದ ಮೇಲೆ ಒಂದು ದೊಡ್ಡ ಕೃಪೆ ಮಾಡಿದಂತೆ ಇರುತ್ತಾರೆ. ಬಹಳೇ ನಾಚಿಕೆಪಡುವಂಥಹ ವಿಷಯವಿದು. ಇಂದು ನಮ್ಮ ಸುಶಿಕ್ಷಿತ ಪುರುಷ ಸಮಾಜವು ಸಭ್ಯತೆಯ ಡಂಗುರವನ್ನು ಹೊಡೆದೂ, ಈ ಪರಿಗೂ ಅಸಭ್ಯರಾಗಿಯೇ ಇದ್ದಾರೆ.

Our Pigmy Deposit Scheme

.... brings our bank to your door. You may save as small a sum as annas two. Our collector will call on you every day to receive it.

At the rate of annas two per day you save Rs. 350 in 7 years because we allow interest at 3⅛% per annum. At the rate of Re. 1/- per day your Savings are Rs 2,800 - in 7 years At the rate of Rs. 10/- it is Rs 28,000/-. Come in to-day and join the band of **Prudent Prosperous Pigmy People.**

The Canara Industrial & Banking Syndicate Ltd.

Estd: 1925. H. O: UDIPI.

"ಅಪಪ್ರಚಾರಗಳಿಗೆ ಅತ್ಯುತ್ತಮ ಉತ್ತರವೆಂದರೆ ಕರ್ತವ್ಯ ನಿಷ್ಠರಾಗಿ ಮೌನವಾಗಿದ್ದು ಬಿಡುವುದೇ ಆಗಿದೆ"

"ಫಲಕೊಟ್ಟ ಮೇಲೆ ಗಿಡದ ಹೂಗಳು ಉದುರಿ ಬಿಡುವಂತೆ ಪ್ರಜಾಪ್ರಭುತ್ವವನ್ನು ಒದಗಿಸಿ ಕೊಟ್ಟಮೇಲೆ ಕಾಂಗ್ರೆಸಿನ ಶಕ್ತಿ ಕುಗ್ಗಿದೆ. ಆದ್ದರಿಂದ ಪ್ರಜೆಗಳ ಆಡಳಿತಾಭಿವೃದ್ಧಿಗಾಗಿ ಪ್ರಯತ್ನಿಸುವ."

— ರಾಜಾಜಿ.

ಮತ್ತೊಂದು ಕಡೆಗೆ ಹೆಣ್ಣು ಮಕ್ಕಳ ವಿವಾಹವಾಗದೇ ಇದ್ದರೆ, ಅನೇಕ ಪರೀಕ್ಷೆಗಳಲ್ಲಿ ಅವಶ್ಯವಾಗಿ ಉತ್ತೀರ್ಣರಾಗಬೇಕಾಗುತ್ತದೆ. ಅವರನ್ನು ಕರೆಸಿ, ನಡೆಸಿ, ಕುಣಿಸಿ, ಹಾಡಿಸಿ, ಮತ್ತು ಓದಿಸಿ ನೋಡುವುದಲ್ಲದೆ. ಅವರ ಮನೆಯ ಕೆಲಸ ಮತ್ತು ಎತ್ತರ, ಅಗಲ, ದಪ್ಪ ಬಣ್ಣ ಇವುಗಳೆಲ್ಲವನ್ನು ಒರೆಗಲ್ಲಿಗೆ ಹಚ್ಚಿ ನೋಡುತ್ತಾರೆ. ಇದಲ್ಲದೆ ಇವೆಲ್ಲವುಗಳ ಕಡೆಗೆ ಲಕ್ಷ್ಯಕೊಡದ ವರ ಮಹಾಶಯನು ಹಣದ ಕಡೆಗೇ ನೋಡಿದರೆ, ಹಂಗಿನ ಈ ಅವಸ್ಥೆ ಪೇಟೆಯಲ್ಲಿ ಮಾರಲಿಕ್ಕೆ ಸಿದ್ಧವಾಗಿ ನಿಂತ ಪಶುಗಳಿಗಿಂತ ಏನೂ ಕಡಿಮೆಯಾಗಿಲ್ಲ. ಹುಡುಗಿಯನ್ನು ನೋಡಿ ಕೇಳಿ ಆ ಮೇಲೆ ಬೇಡವೆಂದು ಹೇಳಿದಾಗ ಅವಳ ಹೃದಯಕ್ಕೆ ಆಗುವ ನೋವನ್ನು ಯಾರೂ ತಿಳಿದುಕೊಳ್ಳಲಾರರು. ಇಷ್ಟೇ ಅಲ್ಲ ವಿವಾಹವಾದ ನಂತರ ಅವಳ ಮರ್ಯಾದೆ ಅವಳ ತಂದೆಯ ಹಣದಿಂದ ಅಳೆಯಲಾಗುತ್ತದೆ. ಅವರಿಗೆ ತೃಪ್ತಿಯಾಗುವಷ್ಟು ವರದಕ್ಷಿಣೆ ದೊರೆಯದಿದ್ದರೆ ಆಕೆಯನ್ನು ಬಿಟ್ಟು ಬಿಡುವದೇನೂ ದೊಡ್ಡ ಮಾತಲ್ಲ. ಇಷ್ಟಾದ ನಂತರವೂ ಅವಳ ಜೀವನದ ಅರಿವು ಅವಳಿಗೆ ತಿಳಿಯುತ್ತದೆ. ತಾಯಿ–ತಂದೆ ಅವಶ್ಯವಾಗಿ ಅವರಾತನನ್ನು ಕಲ್ಪಿಸಿಕೊಡುತ್ತಾರೆ. ಹುಡುಗಿಗೆ ಸ್ವಲ್ಪ ವಯಸ್ಸಾಗಿದ್ದರೆ, ಅವಳ ವಿವಾಹದ ಸಂಗಿನಲ್ಲಿಯೇ ಮಗ್ನರಾದ ತಾಯಿ–ತಂದೆಗಳು ಅವಳನ್ನು ಒಬ್ಬ ಕುಪಾತ್ರನಿಗೆ ಒಪ್ಪಿಸಲೂ ಹಿಂದೆ, ಮುಂದು ನೋಡುವದಿಲ್ಲ.

ವಿವಾಹ ಸ್ವಾತಂತ್ರ್ಯ

ಆದರೆ ಹೀಗೆಲ್ಲ ಆಗುವದು ಏಕೆ? ಏಕೆಂದರೆ ಹೆಚ್ಚಾಗಿ ಹೆಣ್ಣುಮಕ್ಕಳು ತಮ್ಮ ವಿವಾಹದ ವಿಷಯದಲ್ಲಿ ಕೈಹಾಕುವದಿಲ್ಲ. ತಾಯಿ ತಂದೆಗಳ ಮೇಲೆ ತಮ್ಮ ಭಾರ ಹಾಕದಂತಹ ಮತ್ತು ವಿವಾಹಕ್ಕೆ ಅನುಕೂಲರಾಗುವಂತಹರು ಬರುವವರೆಗೆ ಸ್ವ

(೩ನೇ ಪುಟ ನೋಡಿರಿ)

ಪಾನ ಪ್ರತಿಬಂಧಕಾಜ್ಞೆಯು ರದ್ದತಿಯಾಗಲೇ ಬಾರದು.

ನಮ್ಮ ಪ್ರಾಂತ್ಯದಾದ್ಯಂತ ಮದ್ಯಪಾನನಿಷೇಧವು ಜ್ಯಾರಿಯಲ್ಲಿರುವ ವಿಷಯವು ಸರ್ವರಿಗೂ ತಿಳಿದುದಾಗಿದೆ. ಆದರೆ ಇದರ ಕುರಿತು ಜನರಲ್ಲಿ ತುಂಬಾ ಅಸಮಾಧಾನವಿದೆಯೆಂಬ ಸೊಲ್ಲು ಅಲ್ಲಲ್ಲಿ ಕೇಳಿ ಬರುತ್ತಿದೆ. ಹೀಗೆ ಒಂದು ಕಡೆಯಲ್ಲಿ ಪಾನನಿರೋಧ ಕ್ರಮ ಬೇಕು. ಇನ್ನೊಂದೆಡೆಯಲ್ಲಿ ರದ್ದತಿಯಾಗಬೇಕು ಎಂದು ಹೇಳುವ ಸೊಲ್ಲವಿಯು ಕೇಳಿ ಬರುತ್ತಿದೆ. ಇಂತಹ ಸಂದರ್ಭದಲ್ಲಿ ಇದರ ವಿಷಯ ವಿಮರ್ಶಿಸಿದ್ದಲ್ಲಿ ಅಸಂಗತ ವಿಷಯವೇನೂ ಆಗಲಾರದಷ್ಟೆ! ಇಲ್ಲಿ ನಾನು ಪಾನಪ್ರತಿಬಂಧಕ ಕಾನೂನು ಎಷ್ಟು ಮಾತ್ರಕ್ಕೂ ರದ್ದತಿಯಾಗಲೇ ಬಾರದು ಎಂದು ತಿಳಿಸಲು ಬಯಸುತ್ತೇನೆ.

ಪ್ರಸ್ತುತ ಯಾವುದೊಂದು ಸರಕಾರವು ಸ್ಥಿರವಾಗಿ ಬಾಳಬೇಕಾದರೆ ಅದರೊಂದಿಗೆ ಜನತೆಯು ಸಹಕರಿಸಬೇಕಾದುದು ಅತ್ಯಗತ್ಯ. ಜನತೆ—ಸರಕಾರ ಇವೆರಡು ರಾಷ್ಟ್ರವೆಂಬ ರಥದ ಗಾಲಿಗಳೆಂದರಂತಿರುವವುಗಳಾಗಿವೆ. ಹೀಗಿರುವಾಗ ಈ ಹಿಂದೆ ಅಮಲು ಪದಾರ್ಥ ಸೇವನೆ ಇರಬಾರದು ಎಂದು ಇಡೀ ದೇಶದ ಜನತೆಯೇ ಅಂದಿನ ಬ್ರಿಟಿಷ್ ಸರಕಾರದೆದುರು ಬೇಡಿಕೆಯ ನೆಟ್ಟಿಸಿದ್ದರು. ಜನತಾ ಸರಕಾರ ಬಂದ ನಂತರ ನಮ್ಮ ಪ್ರಾಂತ್ಯದಲ್ಲಿಯೂ ಅಮಲು ಪದಾರ್ಥ ಸೇವನೆಯು ರದ್ದಾಯಿತು. ಸರಕಾರವು ಇದರಿಂದ ಕೋಟಿಗಟ್ಟಲೆ ತೆರಿಗೆಯನ್ನು ಕಳಕೊಂಡಿತು. ಯಾರಿಗಾಗಿ? ಜನತೆಯ ಹಿತಕ್ಕಾಗಿ ಬಡ ಕುಟುಂಬದ ಉದ್ಧಾರಕ್ಕಾಗಿ—ಆದರೆ ಬರಬರುತ್ತಾ ಸರಕಾರದ ಯಾವುದೊಂದು ಘೋಷಣೆಯನ್ನಾಗಲೀ, ಯೋಜನೆಯನ್ನಾಗಲೀ ಟೀಕಿಸುವುದೇ ಮೂಲ ಮಂತ್ರವಾಗಿರುವಾಗ ಅದರ ಸಾರಾಸಾರ ವಿಚಾರವನ್ನು ಮಾಡುವ ತಿಳುವಳಿಕೆಯಿಲ್ಲದೆ, ತಾಳ್ಮೆಯಿಲ್ಲದೆ ಈ ಹಿಂದೆ ಮಿತಿಮೀರಿ ಅಮಲು ಸೇವಿಸಿದ್ದ ಜನರು ಟೀಕಾಕಾರರ ಬೆಂಬಲಿಗರಾಗಿ ಪಾನ ನಿರೋಧ ಕ್ರಮವನ್ನು ಯಶಸ್ವಿಯಾಗಿ ಜರಗಿಸಲು ಬ[illegible] ಇಂತಹ ಸಂದರ್ಭವನ್ನು ಜನತೆಯೇ ಮಾಡಿಕೊಂಡು ಸರಕಾರವನ್ನು ದೂರಿದರೆ ಏನ ಫಲ! ನಿರೋಧಕ್ಕಾಗಿ ಬೇಕಾದ ಸಿಬಂದಿಯನ್ನು ಸರಕಾರ ಏರ್ಪಡಿಸಿದರೆ ಅವರಿಗೆ ಲಂಚ ತಿನ್ನಲು ಜನತೆಯೇ ಕಲಿಸಿ (ಒತ್ತಾಯ ಪೂರ್ವಕವಾಗಿ ತಿನ್ನಿಸಿ) ಪಾನ ಪ್ರತಿಬಂಧಕವನ್ನು ಅಯಶಸ್ವಿಯಾಗಿ ಮಾಡಲು ಜನತೆಯೇ ಕಾರಣವಾಗಿರುವಾಗ ನಿಷ್ಕಾರಣವಾಗಿ ಸರಕಾರವನ್ನು 'ಲಂಚಗೊಳಿತನವನ್ನು ನಿರ್ಮೂಲ ಮಾಡದ ಸರಕಾರವು ಸರಕಾರವೇ' ಎಂದು ದೂರುವುದು ಯಾವ ನ್ಯಾಯ? ಹೀಗಿರುವಾಗ ಇನ್ನಾದರೂ ಜನತೆಯು ಕಣ್ತೆರೆದು ಮಾಜಿ ಹೆಂಡ ಕುಡುಕರ ಕುಟುಂಬವು ಪುನಃ ಗೋಳಾಡುವಂತೆ ಅವಕಾಶವನ್ನು ಕಲ್ಪಿಸಿ ಕೊಡದಿರಲಿ, ಅಮಲು ಪದಾರ್ಥ ಸೇವನೆಯು ಬರಬೇಕೆಂದು ಸರಕಾರವನ್ನು ಒತ್ತಾಯಿಸದಿರಲಿ. ಇದು ಸಾರ್ವತ್ರಿಕ ಜನತೆಯ ಒಳ್ಳೇದಕ್ಕೇ ಎಂದು ತಿಳಿಯಲಿ.

ಇಂದು ಅಮಲು ಪದಾರ್ಥ ಸೇವನೆಯು ಬೇಕು, ಸರಕಾರ ಒದಗಿಸಿ ಕೊಡಬೇಕು ಎಂದು ಹೇಳುವವರಿಗೊಂದು ಮಾತು. ಈಗ ಪ್ರಾಂತ್ಯದ ಪ್ರತಿಯೊಂದು ವಯಸ್ಕನೊಡನೆಯೂ ಪಾನ ನಿರೋಧ ಕ್ರಮ ಬೇಕೋ ಬೇಡವೋ ಎಂದು ಮತಗಣನೆಯಾದಲ್ಲಿ (ವಾಸ್ತವಿಕವಾಗಿ ಒಂದು ಹಳ್ಳಿಯಲ್ಲಿ ಮಾಡಿದ ಅಂದಾಜು ಗಣನೆ ಪ್ರಕಾರ) ಕೆಟ್ಟೆಂದರೆ ನೂರಕ್ಕೆ 25-30 ಮಂದಿ ಕಳ್ಳು ಸಾರಾಯಿ ಬೇಕೆಂದು ಹೇಳುವವರಲ್ಲದೆ ಉಳಿದವರೆಂದೂ ಹೇಳಲಿಕ್ಕಿಲ್ಲ. ಕೇವಲ 25-30 ಮಂದಿಗಳ ಅಭಿಲಾಷೆಗಾಗಿ ಉಳಿದ 70-75 ಮಂದಿ ಬಲಿ ಬೀಳಬೇಕೆ? ಇದೇತರ ನ್ಯಾಯ?

ಆದ್ದರಿಂದ ನಮ್ಮ ಪ್ರಾಂತ್ಯದ ಜನರು ಇನ್ನಾದರೂ, ಜನರ ಹಿತಕ್ಕಾಗಿ ತಮ್ಮ ತಮ್ಮ ಸ್ವಾರ್ಥಗಳನ್ನು ಬಿಟ್ಟು ಅಮಲು ಪದಾರ್ಥ ಸೇವನೆಗಾಗಲೀ, ಕಳ್ಳಾಟಿಕೆಯಿಂದ ಕಳ್ಳು ಸಾರಾಯಿ ತಯಾರಿಕೆಗಾಗಲೀ ಪ್ರೋತ್ಸಾಹ ಕೊಡಲಾಗದು. ಹೀಗೆ ಮಾಡಿದ್ದಲ್ಲಿ ಎಷ್ಟೋ ಬಡ ಕುಟುಂಬದಲ್ಲಿರುವ ಗೃಹಸ್ಥರ ಹೆಂಡಿರು ಮಕ್ಕಳನ್ನು ಉದ್ಧಾರ ಮಾಡಿದಂತಾಗುವುದು. ಕಳ್ಳು ಕುಡಿದು ಮತ್ತನೇರಿ ಹೆಂಡಿರು ಮಕ್ಕಳನ್ನು ಶಿಕ್ಷಿಸುವ ಪರಿಪಾಠವು ನಿಲ್ಲುವುದು. ಹೀಗಿರುವಾಗ ಒಮ್ಮೆ ನಿಂತಿರುವ ಇಂತಹ ಸನ್ನಿವೇಶಗಳನ್ನು ಪುನಃ ಬೇಕೆಂದೇ ನಾವು ಬರಮಾಡಿಕೊಳ್ಳುವುದು ಸರಿಯಲ್ಲ. ಕೊಲೆ ದರೋಡೆಯು ಮಿತಿಮೀರಿ ಹೋಗುವುದೂ ಜುಗಾರಿಯು ವೃದ್ಧಿಯಾಗುವುದೂ ಮದ್ಯ ರಾಕ್ಷಸನ ಉಪಟಳದಿಂದಲೇ ಎಂದು ಎಲ್ಲರೂ ತಿಳಿದಿರುವಾಗ ಪುನಃ ಪಾನ ಕ್ರಮವನ್ನು ಬರ ಮಾಡುವರೆ ಅತಿಸುವುದು ಯಾವ ಸುಖಕ್ಕಾಗಿ? ಅಂತಿರುವಾಗ ಈ ಪಾನ ನಿರೋಧ ಕ್ರಮವು ರದ್ದತಿಯಾಗಲೇ ಬಾರದು. ಇಂದು ಮನೆ ಮನೆಗಳಲ್ಲಿ (ಅಡಿಗೆ ಮನೆಗಳಲ್ಲಿ) ಸಾರಾಯಿ ತಯಾರಿಸುವುದಿದ್ದರೆ ಅದು ಮದ್ರಾಸು ಸರಕಾರ ಬಂದು ತಯಾರಿಸುವುದಿಲ್ಲ ನಮ್ಮ ಜನರೇ—ಇಂತಹ ಸಂದರ್ಭದಲ್ಲಿ ನಾವೇನು ಮಾಡಬೇಕು? ನಮ್ಮ ಊರಿನಲ್ಲಿ ಇಂತಹ ಕಳ್ಳಾಟಿಕೆ ಸಾರಾಯಿಯನ್ನು ಸರಕಾರಕ್ಕೆ ಪತ್ತೆ ಹಚ್ಚಿಕೊಟ್ಟಲ್ಲಿ ಎಷ್ಟು ಸುಗಮವಾಗಿ ಸಾರಾಯಿ ತಯಾರಿಕೆಯು ನಿಲ್ಲಲಿಕ್ಕಿಲ್ಲ? ಅದನ್ನು ಕೊಂಡುಕೊಳ್ಳುವ ಗ್ರಾಹಕರೇ ಕಡಿಮೆಯಾದಾಗ ಉದ್ಯಮವು ತನ್ನಷ್ಟಕ್ಕೇ ನಿಲ್ಲುವುದು. ಇಂದು ಮದ್ಯಪಾನ ನಿಷೇಧದಿಂದ ಸರಕಾರಕ್ಕೆ ಹಣದ ಕೊರತೆ ಬಂದರೆ ಇನ್ನಿತರ ಮಾರಾಟ, ಸಾರಿಗೆ ಮೊದಲಾದ ತೆರಿಗೆಗಳ ಮೂಲಕ ಭರ್ತಿ ಮಾಡಿಕೊಂಡಿರುವರು. ಇಂತಹ ತೆರಿಗೆಯಿಂದ ಬಡ ಜನತೆಗೇನೂ ಬಾಧಕ ಬಂದಿಲ್ಲ. ಸಾರಿಗೆ ಕರವೇರಿಸಿದ್ದರೆ ಅದು ಶ್ರೀಮಂತರ ಕೈಯಿಂದ ಹೋಗುತ್ತದೆ. ಕಾರಣ ಬಡಜನವೇನೂ ಯಾವಾಗಲೂ ಮೋಟಾರು ಕಾರು ಮೊದಲಾದ ವಾಹನಗಳ ಮೂಲಕ ಓಡಾಡುತ್ತಿಲ್ಲ. ಅದು ಶ್ರೀಮಂತರ ಪಾಲಿಗೆ ಬಿದ್ದಂತೆಯೇ ಆಗುವುದು. ಇಂತಹ ಸಂದರ್ಭದಲ್ಲಿ ಪುನಃ ಅಮಲು ಪದಾರ್ಥ ಸೇವನೆಯು ಜ್ಯಾರಿಗೆ ಬರಬೇಕು ಎಂದು ಜನತೆಯಿಂದ ಬೊಬ್ಬಿಡುವಂತೆ ಮಾಡುವುದು ಶ್ರೀಮಂತರ ಕೈವಾಡವೋ' ಎಂಬ ಸಂದೇಹವು ಬರುತ್ತದೆ ಎಂದಲ್ಲಿ ಕಳ್ಳು ಸಾರಾಯಿ ಸೇವನೆಗೋಸ್ಕರ ಗುತ್ತಿಗೆ ಗಡಂಗುಗಳು ಹುಟ್ಟಿ ಅವುಗಳನ್ನು ಏಲಂನಲ್ಲಿ ವಹಿಸಿಕೊಂಡು ಬಡ (ಸೇವಿಸುವವರನ್ನು) ಜನತೆಯನ್ನು ವಂಚಿಸಿ ತುಂಬಾ ಹಣ ಸಂಪಾದಿಸುವ ಸುಲಭೋಪಾಯವಾಗಬಹುದೆಂದು ಹೊಂಚಿಕೆಯುಳ್ಳವರಾಗಿದ್ದಾರೆಂಬುದನ್ನು ಊಹಿಸಲು ಎಡೆ ಇದೆ.

ಅಂತೂ ಬಡ ಜನತೆಯು ಮದ್ಯರಾಕ್ಷಸನ ಉಪಟಳದಿಂದ ಪಾರಾಗಬೇಕಾದರೆ, ದೇಶಕ್ಕೆ ಶಾಂತಿ ಬೇಕಾದರೆ ಉಗ್ರರೀತಿಯಲ್ಲಿ ಪಾನ ಪ್ರತಿಬಂಧಕಾಜ್ಞೆಯನ್ನು ಊರ್ಜಿತದಲ್ಲಿರುವಂತೆ ಮಾಡಬೇಕು. ಈ ವಿಷಯದಲ್ಲಿ ನಮ್ಮ ಹೊಸ ಮಂತ್ರಿಮಂಡಳವು ಹಿಂದು ಮುಂದ ನೋಡದೆ ಕಳ್ಳಾಟಿಕೆಯಿಂದ ಕಳ್ಳು ಸಾರಾಯಿ ತಯಾರಿಸುವುದನ್ನು ನಿಲ್ಲಿಸುವಂತೆಯೂ, ನಿಷೇಧಾಜ್ಞೆಯು ಇನ್ನಷ್ಟು ಬಿಗಿಯಾಗಿ ನೆರವೇರಿಸಲ್ಪಡುವಂತೆಯೂ ಈಗಿಂದೀಗಲೇ ಕಾರ್ಯೋನ್ಮುಖವಾಗಲಿ. ಈ ನಿಷೇಧಾಜ್ಞೆಯಲ್ಲಿ ಏನೊಂದು ತರದ ವಿನಾಯಿತಿಯು ಅನಗತ್ಯವೆಂದು ಕಾಣುತ್ತದೆ. ಆದರೆ ಆಸವ ಅರಿಷ್ಟ ಮೊದಲಾದ ಅತ್ಯಗತ್ಯವುಳ್ಳ ಮದ್ದನ್ನು ತಯಾರಿಸುವರಿಗೆ ಬೇಕಾದ ಸಾರಾಯಿ, ವಗೈರೆಯನ್ನು ವಿಶಿಷ್ಟರೀತಿಯ ಲೈಸೆನ್ಸ್ ಪಡೆದವರು ತಯಾರಿಸಿ ವಿತರಣೆ ಮಾಡುವಂತೆ ಮಾತ್ರ ಆಸ್ಪದ ಕಲ್ಪಿಸಿಕೊಡುವಂತಾಗಲಿ ಹಾಗೂ ಹೇಗೂ ಅದನ್ನು ಪ್ರಯತ್ನದಿಂದ ಕಷ್ಟ ನಿಷ್ಠುರದಿಂದ ಮದ್ಯ ರಾಕ್ಷಸನನ್ನು ನಮ್ಮ ನಾಡಿನಿಂದ ಸಾಗರದಾಚೆ ಓಡಿಸುವಂತೆ ನಾವೆಲ್ಲರೂ ಪ್ರಯತ್ನಿಸ ಬೇಕಾದುದು ಅತ್ಯಗತ್ಯವೆಂದು ಒತ್ತಿ ಹೇಳಬೇಕಾಗುವುದಿಲ್ಲ.

— ಬಿ. ಯಸ್. ಶೆಟ್ಟಿ,

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ
1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.,
Moolky, S. K

ಸಂರಕ್ಷಣೆ ಹಾಗೂ ಸಂಚಯಕ್ಕೆ
ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ
ಲೈಫ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.
ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934
ವಿಚಾರಿಸಿರಿ
ಈ ಪ್ರಗತಿಪರ ಕಂಪೆನಿಯಬ್ಬೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಠೇವಣಾತಿ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.
ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರೀತ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.
ದಿ. ಬ್ರಾಂಚ್ ಮೆನೇಜರ್;
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ.

ZANDU PHARMACEUTICAL WORKS LTD.
Manufacturers of Ayurvedic and Alopathic
Medicines BOMBAY, 14.
ಝೂಂಡೂ ಮಹಾಯೋಗರಾಜ ಗುಗ್ಗುಳ
ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ಸಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ 3/- ಮಾತ್ರ.
ದೊರೆಯುವ ಸ್ಥಳಗಳು:
1 ದಿ ಜೆನರಲ್ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.
2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎನ್ ಶರ್ಮ, ಹಜೂರು ರಸ್ತೆ, ಮಂಗಳೂರು.
ಮತ್ತಿತರ ಸೇಲ್ ಏಜಂಟರಲ್ಲಿ.
DAMODAR & CO.,
Nainiappa Naicken Street, Park Town-MADRAS 3.

5 ವರುಷ ಗ್ಯಾರಂಟಿಯುಳ್ಳ
ರೋಲ್ಡ್ ಗೋಲ್ಡ್
ಚಿನ್ನಾಭರಣಗಳು
ಕುತ್ತಿಗೆಗೆ ಹಾಕುವ ಚೈನ್ ರೂ. 12 ಉದ್ದ ಚೈನ್ ರೂ. 7 ಚಿಕ್ಕ ಚೈನ್ ರೂ 5 ಬಳೆ ಜೊತೆಗೆ ರೂ. 5.
Gemini Gold Covering Works
Main Guard Sq. MADURAI.

ಸಮಾಚಾರ ಸಮಾಲೋಚನೆ

ಮುಂಬಯಿ ಮಂತ್ರಿಮಂಡಲದಲ್ಲಿ ಪ್ರಾದೇಶಿಕ ಪ್ರಾತಿನಿಧ್ಯದ ಸಮಸ್ಯೆ

ಮುಂಬಯಿ ಕಾಂಗ್ರೆಸ್ ಪಕ್ಷದ ಧುರೀಣ ಶ್ರೀ ಮುರಾರಜಿ ದೇಸಾಯಿಯವರು ಮಂತ್ರಿ ಮಂಡಲವನ್ನು ರಚಿಸುವಲ್ಲಿ ಪ್ರಾದೇಶಿಕ ಕಾಂಗ್ರೆಸ ಅಧ್ಯಕ್ಷರ ಪ್ರಾದೇಶಿಕ ಪ್ರಾತಿನಿಧ್ಯದ ಸಮಸ್ಯೆ ತೊಡಕಾಗಿ ನಿಂತಿದೆಂದು ತಿಳಿಯುತ್ತದೆ. ಮಂತ್ರಿಮಂಡಲದಲ್ಲಿ ಒಟ್ಟಿಗೆ ಒಂಭತ್ತು ಜನರ ತಕ್ಕದ್ದೆಂದೂ—ದಕ್ಷತೆ—ಯೋಗ್ಯತೆ—ಪ್ರಾಮಾಣಿಕತೆಯೇ ಆಯಿಕೆಯ ವಿಚಾರದಲ್ಲಿ ಗಮನಿಸಬೇಕಾದಂಶವೆಂದೂ ಶ್ರೀ ಮುರಾರಜಿಯವರು ಅಭಿಪ್ರಾಯ ಪಡುತ್ತಿದ್ದಾರೆ. ಆದರೆ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷರು ತಂತಮ್ಮ ಪ್ರಾತಿನಿಧ್ಯವನ್ನು ಕೆಚ್ಚಿಸುವದರಲ್ಲಿ ಸ್ಪರ್ಧೆಗೆ ನಿಂತಂತಿದೆ ಶ್ರೀ ಮುರಾರಜಿ ದೇಸಾಯಿ, ಶ್ರೀ ಹಿರೆ ಮತ್ತು ನಿಜಲಿಂಗಪ್ಪನವರು ಸುದೀರ್ಘ ಮಾತುಕತೆ ನಡೆಸಿದರೂ ಸಮಸ್ಯೆ ಬಗೆಹರಿಯಲಿಲ್ಲವೆಂದು ತಿಳಿಯುತ್ತದೆ. ಬೃಹನ್ಮುಂಬಯಿಯ ಪ್ರತಿನಿಧಿಯಾಗಿ ಒಬ್ಬ ಮಂತ್ರಿಯಾಗಿರಬೇಕೆಂದು ಮುಂಬಯಿ ಕಾಂಗ್ರೆಸ್ ಅಧ್ಯಕ್ಷರೂ ತಮ್ಮ ಬಗ್ಗೆ 5 ಜನ ಮಂತ್ರಿಗಳಿರಬೇಕೆಂದು ಮಹಾರಾಷ್ಟ್ರವೂ—ಹಲವಾರು ವಿಚಾರಗಳಲ್ಲಿ ಕರ್ನಾಟಕವೂ ಮೊಲೆ ಬಿದ್ದಿರುವದರಿಂದ ಕರ್ನಾಟಕಕ್ಕೆ ಹೆಚ್ಚಿನ ಪ್ರಾತಿನಿಧ್ಯಬೇಕೆಂದು ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷರೂ, ಬಲವಾಗಿ ವಾದಿಸುತ್ತಿರುವರಂತೆ. ಮುಂಬಯಿಯಲ್ಲಿ ಬಗೆಹರಿಯದ ಈ ಪ್ರಶ್ನೆ ದಿಲ್ಲಿಯಲ್ಲಿ ಶ್ರೀ ನೆಹರೂರವರ ಸಮ್ಮುಖದಲ್ಲೇ ಇತ್ಯರ್ಥವಾಗಲೆಂದು ಶ್ರೀ ಮುರಾರಜಿ ಮತ್ತು ಶ್ರೀ ಹಿರೇ ದಿಲ್ಲಿಗೆ ತೆರಳಿರುವರು. ಶ್ರೀ ನಿಜಲಿಂಗಪ್ಪನವರೂ ಈ ಮಾತುಕತೆಯಲ್ಲಿ ಭಾಗವಹಿಸುವರೆಂದು ತಿಳಿಯುತ್ತದೆ. ನೆಹ್ರುಗಳು ಈ ಕುರಿತು ಸರ್ವ ಜವಾಬ್ದಾರಿಯನ್ನೂ ದೇಸಾಯಿಯವರಿಗೆ ಬಿಟ್ಟುಕೊಟ್ಟವರೆಂದು ಗೊತ್ತಾಗಿದೆ.

ಭಾರತ ಸೈನ್ಯದ ಕರ್ತವ್ಯ ಪರಾಯಣತೆ

ರಾಯಲ ಸೀಮೆಯಲ್ಲಿ ತಲೆಯೆತ್ತಿರುವ ಬರಗಾಲವನ್ನು ಪರಿಹರಿಸುವದಕ್ಕೆ ಇಂದು ಕೇಂದ್ರ ಸರಕಾರವು ಬಹಳವಾಗಿ ಶ್ರಮಿಸುತ್ತಿದೆ. ಕೇಂದ್ರ ಸರಕಾರದ ಸೈನಿಕರೂ -ಮಿಲಿಟರಿ ಇಂಜಿನಿಯರರೂ ಬರಗಾಲ ಪ್ರದೇಶದಲ್ಲಿ ಸಂತ್ರಸ್ತರಿಗೆ ನೀರನ್ನೂ ಆಹಾರವನ್ನೂ ದೂರದ ಊರಿನಿಂದ ತಂದುಕೊಡುವುದೂ ಭೂಗರ್ಭ ಶೋಧನೆ ಮಾಡಿ ಬಾವಿಯನ್ನಗೆಯುವದೂ—ಮತ್ತು ಭೂಸುಧಾರಣೆಯನ್ನು ಕೈಗೊಳ್ಳುವದೂ ಮುಂತಾದ ಕಾರ್ಯಗಳಲ್ಲಿ ಪ್ರವೃತ್ತರಾಗಿದ್ದಾರೆ. ಭಾರತದ ಮುಖ್ಯ ಸೇನಾನಿ ಶ್ರೀ ಜನರಲ್ ಕರಿಯಪ್ಪನವರೇ ಬರಗಾಲಪೀಡಿತ ಪ್ರದೇಶವನ್ನೂ ಸಂದರ್ಶನ ಮಾಡಿ ಸೈನಿಕರ ಕಾರ್ಯದಲ್ಲಿ ಜನತೆಯೂ ಸಹಕರಿಸಬೇಕೆಂದು ಕೇಳಿಕೊಂಡರು. ಹಲವಾರು ಲೋರಿಗಳೂ ಇತರ ಯಂತ್ರಗಳೂ ಈ ಕಡೆಗೆ ಬಂದಿದ್ದು ಭಾರತ ಸರಕಾರದ ಸೈನಿಕರು ಇಪ್ಪತ್ತನಾಲ್ಕು ತಾಸೂ ಜನತೆಯ ಪರವಾಗಿ ದುಡಿಯುತ್ತಲಿದ್ದಾರೆ. ಈ ರೀತಿಯ ವಿಧಾಯಕ ಕಾರ್ಯಕ್ರಮವನ್ನು ಕಂಡು ಸಂತ್ರಸ್ತ ಜನರಿಗೆ ಭಾರತ ಸರಕಾರದ ಸಿಲುಮೆಯ ಬಗ್ಗೆ- ಸೈನಿಕರ ಕರ್ತವ್ಯ ಪರಾಯಣತೆಯ ಬಗ್ಗೆ ತುಂಬ ಅಭಿಮಾನ ಉಂಟಾಗಿದೆ.

ರಾಷ್ಟ್ರಾಧ್ಯಕ್ಷ ಪದ ಮತ್ತು ಅಧಿವೇಶನ

ರಾಷ್ಟ್ರಾಧ್ಯಕ್ಷ ಪದಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸಲು ಹುರಿಯಾಳಾಗಿ ನಾಮಪತ್ರ ಸಲ್ಲಿಸಿದ ಐದುಜನರಲ್ಲಿ ಯಾರೂ ತಮ್ಮ ನಾಮಪತ್ರವನ್ನು ಹಿಂತೆಗೆದುಕೊಂಡಿರುವುದಿಲ್ಲ. ನಾಮಪತ್ರ ಸಲ್ಲಿಸಿದವರ ಹೆಸರು ಈ ರೀತಿಯಿದೆ. 1. ಡಾ| ರಾಜೇಂದ್ರ ಪ್ರಸಾದ, 2. ಪ್ರೊ| ಕೆ. ಟಿ. ಶಹಾ, 3. ಶ್ರೀ ಹರಿರಾಮ. 4 ಶ್ರೀ ಕೃಷ್ಣ ಕುಮಾರ ಚಟರ್ಜಿ ಮತ್ತು 5. ಶ್ರೀ ಎಲ್. ಜಿ ಥತ್ತೆ ಈ ಐದೂ ಹುರಿಯಾಳುಗಳ ಹೆಸರುಗಳನ್ನು ಅಕ್ಷರಾನುಕ್ರಮವಾಗಿ ಮತಚೀಟಿಗಳಲ್ಲಿ ಮುದ್ರಿಸಲಾಗುವದು ಮತದಾನವು 1952ನೇ ಮೇ 2ನೇ ದಿನಾಂಕ ನಡೆಯುವದು.

ಅಧ್ಯಕ್ಷ ಪದವು ಪಕ್ಷಾತೀತವಾಗಿರುವದರಿಂದ ರಾಜೇಂದ್ರ ಪ್ರಸಾದರು ಕಾಂಗ್ರೆಸ್ ನಿಯಮಾವಳಿಗೆ ಒಳಗಾಗುವುದಿಲ್ಲ ಚುನಾವಣೆಯಲ್ಲಿ ಯಾರ- ಒಟ್ಟಿಗೆ ಐವರು ಸ್ಪರ್ಧಿಸುವರಾದರೂ ಅಧ್ಯಕ್ಷರಾಗಿ ಆಯಿಕೆ ಹೊಂದಬಲ್ಲ ದಕ್ಷತೆ ಯೋಗ್ಯತೆ ಇರುವದು ಶ್ರೀ ರಾಜೇಂದ್ರ ಪ್ರಸಾದರಲ್ಲೇ. ಕಮ್ಯೂನಿಸ್ಟ ಪಕ್ಷದ ಹೃತ್ಪೂರ್ವಕ ಬೆಂಬಲದ ಮೇಲೆ ನಿಂತಿರುವ ಶ್ರೀ ಪ್ರೊ| ಕೆ. ಟಿ. ಶಹಾರಿಗೆ ಯಶ ದೊರಕುವಂತೆ ಬಹಳ ಪ್ರಯತ್ನ ನಡೆಯುತ್ತಿದೆಯಾದರೂ ರಾಜೇಂದ್ರ ಪ್ರಸಾದರ ಮಟ್ಟಿಗೆ ಅಧ್ಯಕ್ಷ ಪದ ಸ್ಥಿರವಾಗಬಹುದು ಐದು ವರ್ಷಗಳಲ್ಲಿ ಅವರು ಅಧ್ಯಕ್ಷರಾಗಿ ಸಲ್ಲಿಸಿದ ಸೇವೆ ಅತ್ಯಮೂಲ್ಯವಾದುದು.

ಅಧ್ಯಕ್ಷರ ಚುನಾವಣೆಯ ನಂತರ ಮೇ 15ಕ್ಕೆ ಲೋಕ ಸಭೆಯ ಅಧಿವೇಶನ ಸೇರಿಸುವ ನಿರ್ಧಾರವಾಗಿದೆ. ಮೇ 13ನೇ ದಿನಾಂಕ ಹೊಸದಿಲ್ಲಿಯಲ್ಲಿ ಲೋಕಸಭೆ ಮತ್ತು ಕೇಂದ್ರವಿಧಾನಮಂಡಲ್ದ ಸಭೆಯು ಸೇರಬೇಕೆಂದು ರಾಷ್ಟ್ರಾಧ್ಯಕ್ಷರು ಆಜ್ಞೆ ಹೊರಡಿಸಿರುವರಾದರೂ ಮೇ 13 ಮತ್ತು 14 ಈ ಎರಡು ದಿನಗಳು ಸದಸ್ಯರ ಪ್ರತಿಜ್ಞಾವಿಧಿ ಪೂರೈಸುವದರಲ್ಲಿಯೇ ಕಳೆಯುವವು. ಮೇ 15ನೇ ದಿನಾಂಕ ನಿಜವಾಗಿಯೂ ಲೋಕ ಸಭೆಯ. ಔಪಚಾರಿಕ ಸಭೆಯು ಸೇರಿ ಸಭಾಪತಿಯನ್ನು ಆರಿಸುವದು.

ಸಿಂಹಳದಲ್ಲಿ ಭಾರತೀಯರ ಮತಾಧಿಕಾರ ಪ್ರಶ್ನೆ

ಸಿಲೋನದ ಹಿಂದಿನ ಮುಖ್ಯ ಮಂತ್ರಿ ಡಾನ್ ಸ್ಟೀಫನ್ ಸೇನಾನಾಯಕೆಯವರ ಅನಿರೀಕ್ಷಿತ ಮರಣದಿಂದ ಚುನಾವಣೆಗಳನ್ನು ಬೇಗನೆ ನಡೆಸ ಬೇಕಾದ ಅವಸರದ ಪರಿಸ್ಥಿತಿಯುಂಟಾಗಿದೆ. ಈ ಸಂದಿಗ್ಧ ಪರಿಸ್ಥಿಯಲ್ಲಿ ನಡೆಯಬೇಕಾದ ಚುನಾವಣೆಯಲ್ಲಿ ಹೊಸದೊಂದು ಕಾಯಿದೆ ದೋಷದಿಂದ ಸಿಲೋನದ ಜನಸಂಖ್ಯೆಯಲ್ಲಿ 1/10 ಅಂಶದಷ್ಟಿದ್ದ ಇನ್ನು ಜನರೂ ಮತಾಧಿಕಾರವನ್ನು ಕಳೆದುಕೊಳ್ಳುವಂತಾಗಿದೆ. ಜಿ. [illegible] ಮುಖ್ಯ ಉದ್ದೇಶವು ಸರಕಾರಕ್ಕೆ ಜನತೆಯ ಬೆಂಬಲವಿರುವುದನ್ನು ಮನವರಿಕೆ ಮಾಡಿಕೊಳ್ಳುವುದೇ ಆಗಿದೆಂದ: ಈಗಿನ ಹೊಸ ಮಂತ್ರಿಗಳು ಹೇಳುವರು ಒಟ್ಟು ಜನಸಂಖ್ಯೆಯ ಹತ್ತನೇ ಒಂದಂಶ ಜನರು ಇಂತಹ ವಿಶಿಷ್ಟ ಮತದಾನ ಪದ್ಧತಿಯಲ್ಲಿ ಭಾಗವಹಿಸದಂತಾದರೆ ಅದು ಸಹಜವಾದ ಪ್ರಜಾ ಪ್ರಭುತ್ವ ಕ್ರಮ ಹೇಗಾಗುವದೆಂಬುದೇ ಇಂದಿನ ಸಮಸ್ಯೆಯಾಗಿದೆ. ಸಿಂಹಳದಲ್ಲಿರುವ ಭಾರತೀಯರ ನ್ಯಾಯವಾದ ಹಕ್ಕುಗಳನ್ನು ಕಸಿದುಕೊಂಡ ಪರಿಣಾಮವಾಗಿ ಸಿಂಹಳ ಭಾರತೀಯರಲ್ಲಿ ಅಸಂತೋಷವು ಬೆಳೆಯಹತ್ತಿದೆ. ಈ ಪರಿಸ್ಥಿತಿ ಮುಂದೆ ಸಹಿಸುವುದು ಆತ್ಮ ಘಾತಕವೇ ಸೈ. "ಸಿಂಹಳದಲ್ಲಿಯ ಹಿಂದೀಯರ ಕಾಂಗ್ರೆಸ್ ನಾಗರಿಕತ್ವದ ಹಕ್ಕುಗಳಿಗಾಗಿ ಹೋರಾಡುವದು. ಅದು ಯಾರ ವಿರುದ್ಧವೂ ವೈಯಕ್ತಿಕ ದ್ವೇಷ ಭಾವನೆಯಿಂದ ವರ್ತಿಸುವುದಿಲ್ಲ. ಉದಾತ್ತ ತತ್ವದನ್ವಯ ದೊರೆಯ ಬೇಕಾದ ನ್ಯಾಯವಾದ ಹಕ್ಕು ಬಾಧ್ಯತೆಗಳು ಸಿಂಹಳದಲ್ಲಿರುವಹಿಂದೀಯರಿಗೆ ದೊರೆಯುವಂತೆ ನೋಡಿಕೊಳ್ಳುವದು ಹಿಂದೀಯರ ಕರ್ತವ್ಯವಾಗಿದೆ. ಅಂಥವರ ಸಹಾನುಭೂತಿಯನ್ನು ಸಿಂಹಳದ ಹ್ಲಯ. ಹಿಂದೀಯ ಕಾಂಗ್ರೆಸು ಸ್ವಾಗತಿಸುವದು. ಸಿಂಹಳದ ಹಿಂದೀಯ ಕಾಂಗ್ರೆಸ್ಸಿನ ಧ್ಯೇಯವನ್ನು ಒಪ್ಪುವ ಎಲ್ಲರಿಗೆ ಜಾತಿ ಮತ ಪಂಥವಿಲ್ಲದೆ ಸಿಂಹಳ ಕಾಂಗ್ರೆಸ್ಸನಲ್ಲಿ ಪ್ರವೇಶ ಸಿಕ್ಕುವಂತೆ ಈ ಸಂಸ್ಥೆಯ ಘಟನೆಯನ್ನು ತಿದ್ದುಪಡಿಮಾಡಬೇಕು" ಎಂಬುದಾಗಿ ಸಿಂಹಳದ ಹಿಂದೀ ಕಾಂಗ್ರೆಸ್ಸಿನ ಅಧ್ಯಕ್ಷ ಸಿನೇಟರ ಸುಂದರಮ್‌ರವರು ಸಿಂಹಳ ಭಾರತೀಯ 12ನೇ ಅಧಿವೇಶನದ ಅಧ್ಯಕ್ಷಸ್ಥಾನದಿಂದ ಹೇಳಿದರು

ಚತುರ್ಥ ವಿಮಾಗಣನೆಯ ಫಲಾಂಶ

(1947ರಿಂದ 1950ರ ವರೆಗೆ)

* * * * * * *

ತಾರೀಕು 31 12-1950ಕ್ಕೆ ನಡೆಸಿದ ವಿಮಾಗಣನೆಯಲ್ಲಿ ಆಜೀವ ಮತ್ತು ಉಂಬಳಿ ವಿಮಾ ಪೋಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ ಅನುಕ್ರಮವಾಗಿ ರೂ. 12/- ಮತ್ತು ರೂ 9/-ರಂತೆ ಬೋನಸನ್ನು ಘೋಷಿಸಿದೆ.

The Canara Mutual Assurance Co. Ltd.

Head Office: UDIPI, S. India

ಸ್ಥಾಪನೆಯಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತಿದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ, ದಾದರ (ಜಿ. ಐ. ಪಿ.) ಮುಂಬಯಿ, ೧೪

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಲೋಹಗಳ ನಾನಾ ವಿವಿಧ ಪಾತ್ರೆಗಳು ಸಾಮಾನು ಗಳು ರಖಂ ಆಗಿ ಯೋಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ, ರಥಬೀದಿ, ಉಡುಪಿ

ಪಕ್ಷಪಂಗಡ ಬಿಟ್ಟು ಪ್ರಜಾಪ್ರಭುತ್ವ ಬೆಳೆಸಿರಿ.

ಮದ್ರಾಸಿನಲ್ಲಿ ಮುಖ್ಯಮಂತ್ರಿಗಳ ಸದುಪದೇಶ

ರಾಷ್ಟ್ರೀಯ ಸಪ್ತಾಹದ ಕೊನೆಯ ದಿನವಾದ ತಾ. 13ರಲ್ಲಿ ಮದ್ರಾಸು ಜಿಲ್ಲಾ ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಸಾಧಾರಣ ಎರಡು ಲಕ್ಷ ಜನರು ಸೇರಿದ ಸಾರ್ವಜನಿಕ ಸಭೆಯಲ್ಲಿ ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರ್ಯರು ಭಾಷಣ ಪ್ರಾರಂಭದಲ್ಲಿ ನಂದನ ಸಂವತ್ಸರದ ಶುಭ ಸಂದೇಶ ಹಾಗೂ ಆಶೀರ್ವಚನಗಳನ್ನಿತ್ತು, ಪ್ರಜಾಪ್ರಭುತ್ವವು ಸರಿಯಾಗಿ ಬೆಳೆದುಬಂದು ಫಲಕಾರಿಯಾಗಬೇಕಾದರೆ ಜನತೆಯು ತಮ್ಮಲ್ಲಿರುವ ಪಕ್ಷ, ಪಂಗಡಗಳ ಅನಪೇಕ್ಷಿತ ಮನೋವೃತ್ತಿಗೆ ತಿಲಾಂಜಲಿಯನ್ನೀಯಬೇಕೆಂದು ಉಪದೇಶ ಮಾಡಿದರು. ಅವರು ಮತ್ತೂ ಹೇಳಿದುದೇನೆಂದರೆ 'ಒಂದು ಕಾಲದಲ್ಲಿ ಎಲ್ಲ ಪಕ್ಷಗಳೂ ಏಕ ರಥದಲ್ಲಿದ್ದುವು. ಆಗ ಬ್ರಿಟಿಷ್ ಪಕ್ಷ ಮಾತ್ರ ನಮ್ಮ ವಿರುದ್ಧ ಪದ್ದಿತು. ಸ್ವರಾಜ್ಯ ಲಭಿಸಿತು. ಬ್ರಿಟಿಷರು ಭಾರತವನ್ನು ಬಿಟ್ಟು ಹೋದರೂ ಇಂದು ಅವರು ನಮ್ಮ ಸ್ನೇಹಿತರಿದ್ದು ನಮ್ಮ ಹಿತಕಾಂಕ್ಷಿಗಳಾಗಿದ್ದಾರೆ. ಗಾಂಧೀಜಿಯವರು ಕಾಂಗ್ರೆಸ್ ಸಂಸ್ಥೆಯನ್ನು ವಿಸರ್ಜಿಸಬೇಕೆಂಬುದಕ್ಕೆ ಕೆಲವರ ಆಕ್ಷೇಪವೂ ಮುಂದೆ ಬಂತು. ಅಂದಿನಿಂದ ಪಕ್ಷಪಂಗಡಗಳು ತಲೆಯೆತ್ತತೊಡಗಿದವು. ಇಂತಹ ವಿಷಮ ಪರಿಸ್ಥಿತಿಯಲ್ಲಿ ದಕ್ಷಿಣ ಭಾರತದಲ್ಲಿ ಕಾಂಗ್ರೆಸು ಕೃಷ್ಣಪಕ್ಷದ ಚಂದ್ರನಂತಾಗತೊಡಗಿತು. ಕಾಂಗ್ರೆಸು ದೇಶಕ್ಕೆ ಪ್ರಜಾಪ್ರಭುತ್ವದ ಫಲಗಳನ್ನೊದಗಿಸಿಕೊಟ್ಟಿತು. ಆದುದರಿಂದ ನಾವದನ್ನು ಬೆಳೆಸಿಕೊಂಡು ಬರಬೇಕು. ಪ್ರಜಾಪ್ರಭುತ್ವದಲ್ಲೇ ರಾಷ್ಟ್ರದ ಏಳಿಗೆಯಾಗಿ ಜನತೆಯಲ್ಲಿ ಸುಖ, ಸಮೃದ್ಧಿಯಾಗಬೇಕಾಗಿದೆ.

ಜನರು ತಂತಮ್ಮ ಪಾಲಿನ ಕರ್ತವ್ಯವನ್ನು ತ್ರಿಕರಣ ಶುದ್ಧಿಯಿಂದ ಮಾಡುತ್ತ ಬರಬೇಕು. [illegible] ವರೊಳಗೆ ಪರಸ್ಪರ ಬಡಿದಾಟವಿದೆ. ಇದರಿಂದಾಗಿ ನನ್ನಮೇಲೆ ಹೆಚ್ಚಿನ ಜವಾಬ್ದಾರಿ ಬಿದ್ದಿರುತ್ತದೆ. ಈಗ ನನಗೆ ಕೇಡುಗಾಲ ಬಂದಿರುವುದಾದರೂ ಅದರಿಂದ ರಾಷ್ಟ್ರದ ಉನ್ನತಿಯಾಗುವುದಿದ್ದರೆ, ನಾನದಕ್ಕೆ ಹೆಚ್ಚಿನ ಮಹತ್ವ ಕೊಡುವುದಿಲ್ಲ. ಜಗತ್ತಿನ ಆಗುಹೋಗುಗಳೆಲ್ಲವನ್ನು ನಿಯಂತ್ರಿಸತಕ್ಕ ಕರ್ತನೊಬ್ಬನಿದ್ದಾನೆ. ಆ ಶಕ್ತಿಯ ಅನುಗ್ರಹದಿಂದಲೇ ನಾನು ಅಧಿಕಾರ ಸ್ವೀಕರಿಸಿದ್ದಲ್ಲದೆ ಅದರಿಂದ ರಾಜ್ಯದ ಕಲ್ಯಾಣವಾಗುವುದೆಂದು ನನಗೆ ವಿಶ್ವಾಸವಿದೆ.

ಸಭಾರಂಭದ ಪೂರ್ವದಲ್ಲಿ ಶ್ರೀ ಎಸ್. ಪಿ ಸಬ್ಬಯ್ಯ ಮೊದಲಾದವರು ಮಾತನಾಡಿ, ಸ್ವಾಮಾನ ವರ್ಷಾರಂಭದಲ್ಲಿ ಮಂತ್ರಿಮಂಡಲ ಸ್ಥಾಪಿತವಾದುದು ಮದ್ರಾಸುರಾಜ್ಯದ ಭಾಗ್ಯೋದಯ [illegible] ಯೆಂದರು.

ಕಾಂಗ್ರೆಸ್ ಅಧಿಕಾರಿ ವರ್ಗದ ಚುನಾವಣೆ

ಭಾರತದಲ್ಲಿಯ ಎಲ್ಲ ಪ್ರದೇಶ ಹಾಗೂ ಜಿಲ್ಲಾ ಕಾಂಗ್ರೆಸ್ ಕಮಿಟಿಗಳು ಇದೇ ಮೇ ತಿಂಗಳ ತಾ 31ರೊಳಗಾಗಿ ವಿಶೇಷ ಸಭೆ ಸೇರಿ ತಂತಮ್ಮ ಅಧಿಕಾರಿ ವರ್ಗವನ್ನು ಚುನಾಯಿಸಿಕೊಳ್ಳಬೇಕು ಎಂದು ಅಖಿಲ ಭಾರತ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಶಾಸ್ತ್ರಿಗಳು ಹೊಸ ದಿಲ್ಲಿಯಿಂದ ಒಂದು ಸರ್ಕಲರು ಹೊರಡಿಸಿರುತ್ತಾರೆ. ಕಾಂಗ್ರೆಸ್ ಕಾರ್ಯದಲ್ಲಿ ಹೊಸ ಉತ್ಸಾಹ, ಹುರುಪು ಉಂಟಾಗುವಂತೆ ಸಾಧ್ಯವಿದ್ದಷ್ಟು ಹೊಸಬರನ್ನು ಅಧಿಕಾರಿಗಳನ್ನಾಗಿ ಆರಿಸಬೇಕು. ಪ್ರದೇಶ ಕಾಂಗ್ರೆಸ್ ಸಮಿತಿಗಳು ಹಾಗೂ ಪ್ರಾಂತಿಕ ಕಾಂಗ್ರೆಸ್ ಮಂತ್ರಿಮಂಡಗಳಲ್ಲಿ ಸಂಪೂರ್ಣವಾದ ಸಹಕಾರವಿರಬೇಕಾಗಿದೆ. ಕಾಂಗ್ರೆಸ್ಸಿಗರು ಸರಕಾರದ ಅಥವಾ ಸಂಸ್ಥೆಯ ಟೀಕೆಯಲ್ಲಿ ತೊಡಗಬಾರದು. ಪಕ್ಷದ ಅಥವಾ ಸಮಿತಿಯ ಸಭೆಗಳಲ್ಲಿ ಒಮ್ಮೆ ನಿರ್ಣಯವನ್ನು ಕೈಕೊಂಡ ನಂತರ ಆ ವಿಚಾರದಲ್ಲಿ ಸಂಸ್ಥೆಯ, ಸರಕಾರದ ಅಪಮಾನವಾಗುವಂತೆ ಯಾವ ಗುಲ್ಲನ್ನೂ ಎಬ್ಬಿಸಬಾರದು. ಹಾಗೆ ಮಾಡುವವರ ವಿರುದ್ಧ ಪ್ರದೇಶ ಕಾಂಗ್ರೆಸ್ ಕಮಿಟಿಗಳು ನಿರ್ದಾಕ್ಷಿಣ್ಯದಿಂದ ಶಿಸ್ತು ಭಂಗದ ಕ್ರಮವನ್ನು ಕೈಕೊಳ್ಳಬೇಕು. ಕಾಂಗ್ರೆಸ್ ಕಮಿಟಿಗಳೂ ಕಾಂಗ್ರೆಸ್ ಕೆಲಸಗಾರರೂ ಪ್ರತಿ ತಿಂಗಳಲ್ಲೂ ಸಭೆ ಸೇರಿ ಕಾಂಗ್ರೆಸ್ ಪ್ರಚಾರಮಾಡಿ ಜನಜಾಗೃತಿಯನ್ನುಂಟುಮಾಡಬೇಕು—ಇತ್ಯಾದಿ ವಿಷಯಗಳು ಸರ್ಕಲರಿನಲ್ಲಿವೆ.

ಮದ್ರಾಸು ಪ್ರಾಂತಕ್ಕೆ ಜಾಗತಿಕ ಆರೋಗ್ಯ ಸಂಸ್ಥೆಯ ಸಹಾಯ

ಮದ್ರಾಸು ಪ್ರಾಂತದಲ್ಲಿಯ ಪ್ರಸೂತಿಗೃಹ ಮತ್ತು ಮಕ್ಕಳ ಆರೋಗ್ಯ ಅಭಿವೃದ್ಧಿಗಾಗಿ ಜಾಗತಿಕ ಆರೋಗ್ಯ ಸಂಸ್ಥೆಯು ಒಂದು ಯೋಜನೆಯನ್ನು ಸಿದ್ಧಪಡಿಸಿ ಪರಿಶೀಲನೆಗಾಗಿ ಮದ್ರಾಸು ಸರಕಾರಕ್ಕೆ ಕಳುಹಿಸಿ ಕೊಟ್ಟಿದೆ.

ಜಾಗತಿಕ ಆರೋಗ್ಯ ಸಂಸ್ಥೆ ಮತ್ತು ಯು. ರಾ. ಸಂಘದ ಅಂತರಾಷ್ಟ್ರೀಯ ಚಿಕ್ಕ ಮಕ್ಕಳ ಸಹಾಯನಿಧಿ ಕಮಿಟಿಗಳು ಮದ್ರಾಸು ಸರಕಾರಕ್ಕೆ ಈ ಯೋಜನೆಗನುಸಾರವಾಗಿ ತಜ್ಞರ ಮತ್ತು ಸಲಕರಣೆಗಳ ಸಹಾಯವನ್ನು ಕೊಡುವವು.

ಜಾಗತಿಕ ಆರೋಗ್ಯ ಸಂಸ್ಥೆಯ ಆಗ್ನೇಯ ಏಶಿಯಾ ಪ್ರಾದೇಶಿಕ ಕಚೇರಿಯ ಸಾರ್ವಜನಿಕ ಕಚೇರಿಯ ಸಾರ್ವಜನಿಕ ಆರೋಗ್ಯದ ಸಲಹೆಗಾರರಾದ ಡಾ| ಆರ್. ಎಲ್. ಟರ್ಲೀ ವರು ಇದೇ ತಾ 15ರಂದು ಮುಖ್ಯ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರ್ಯರನ್ನು ಸಾರ್ವಜನಿಕ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರನ್ನು ಭೆಟ್ಟಿಯಾಗಿ ಈ ಯೋಜನೆಯ ಕುರಿತು ವಿಚಾರ ವಿನಿಮಯ ನಡೆಸಿದರೆಂದು ಹೇಳಲಾಗಿದೆ.

ಸೇಕಡಾ 80ರಷ್ಟು ಜನರು ಗ್ರಾಮಾಂತರಗಳಲ್ಲಿ ವಾಸಿಸುವರೆಂದು ಅಂದಾಜು ಮಾಡಲಾಗಿದ್ದು ಅದರಂತೆ ಪ್ರಸೂತಿಗೃಹ ಮತ್ತು ಮಕ್ಕಳ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು. ಈ ಯೋಜನೆಯು 1953ನೆ ವರ್ಷಾರಂಭದಲ್ಲಿ ಸುರುವಾಗಬಹುದೆಂದು ತಿಳಿಯಲಾಗಿದೆ.

ಅಖಿಲ ಭಾರತ ಸರ್ವೋದಯ ಸಮ್ಮೇಳನ

ಕಾಶಿಯಿಂದ ಇಪ್ಪತ್ತು ಮೈಲು ದೂರದಲ್ಲಿರುವ ಸೇವಾಪುರ ಆಶ್ರಮದಲ್ಲಿ ಅಖಿಲ ಭಾರತ ಸರ್ವೋದಯ ಸಮ್ಮೇಳನವು ಮೂರು ದಿವಸಗಳ ತನಕ ನಡೆದು ಇದೇ ತಾ. 15ರಂದು ಮಹತ್ವದ ನಿರ್ಣಯಗಳನ್ನು ಸ್ವೀಕರಿಸಿತು. ಅವುಗಳಲ್ಲಿ ಮುಂದಿನ ಎರಡು ವರುಷಗಳಲ್ಲಿ ಇಪ್ಪತ್ತೈದು ಲಕ್ಷ ಎಕ್ರೆ ಭೂಮಿಯನ್ನು ಆಚಾರ್ಯ ವಿನೋಬಾ ಭಾವೆಯವ ಭೂದಾನಯಜ್ಞಕ್ಕೆ ಅಖಿಲ ಭಾರತದಲ್ಲಿ ಸಂಗ್ರಹಿಸಲು ಸರ್ವೋದಯ ಕಾರ್ಯಕರ್ತರು ದೀಕ್ಷಾಬದ್ಧರಾಗಬೇಕು. ಸರ್ವೋದಯ ಕಾರ್ಯಕರ್ತರು ಕೈಗಾರಿಕೆಯ ಮತ್ತು ಗ್ರಾಮೋದ್ಯೋಗದ ವಸ್ತುಗಳನ್ನೇ ಉಪಯೋಗಿಸಬೇಕು, ಭಾರತೀಯರ ಅನ್ನ ವಸ್ತ್ರ ಸ್ವಾವಲಂಬನೆಗೆ ವಿಘ್ನವಾಗಿರುವ ಕೇಂದ್ರೀಕೃತ ಉದ್ಯೋಗಗಳನ್ನು ಬಹಿಷ್ಕರಿಸಿ ಗ್ರಾಮೋದ್ಯೋಗಗಳನ್ನೇ ಬೆಳೆಸಬೇಕು—ಇತ್ಯಾದಿ ಮುಖ್ಯವಾದುವು.

ಸಮ್ಮೇಳನಕ್ಕೆ ಭಾರತದ ಎಲ್ಲಾ ಭಾಗಗಳಿಂದಲೂ ಸಾಧಾರಣ ಎರಡು ಸಹಸ್ರ ವಿಭಾಗಗಳ ಕಾರ್ಯಕರ್ತರು ಬಂದಿದ್ದರು. ಉತ್ತರ ಪ್ರದೇಶದ ಮುಖ್ಯಮಂತ್ರಿಗಳಾದ ಪಂಡಿತ ಗೋವಿಂದ ವಲ್ಲಭಪಂತ, ಕೇಂದ್ರ ಸರಕಾರದ ಉದ್ದಿಮೆ ಮತ್ತು ವಾಣಿಜ್ಯ ಮಂತ್ರಿಗಳಾದ ಶ್ರೀ ಹರೇಕೃಷ್ಣ ಮಹತಾಬ, ಅಖಿಲಭಾರತ ಕಾಂಗ್ರೆಸ್ ಕಮಿಟಿ ಕಾರ್ಯದ ಶ್ರೀ ಲಾಲಬಹಾದ್ದೂರ ಶಾಸ್ತ್ರಿ, ಶ್ರೀ ಪುರುಷೋತ್ತಮದಾಸ ಟಂಡನ, ಶ್ರೀಗಳಾದ ಶಂಕರರಾವ್ ದೇವ ಆರ್. ಕೆ ಪಾಟೀಲ, ಕಾಕಾ ಕಲೇಲ್ಕರ್ ಮೊದಲಾದವರು ಆಗಮಿಸಿದ್ದರು.

ಕರ್ನಾಟಕ ವಕೀಲರ ಪರಿಷತ್ತು-

ಎರಡನೇ ಕರ್ನಾಟಕದ ವಕೀಲರ ಪರಿಷತ್ತು ಇದೇ ತಾ 24 ಹಾಗೂ 25ರಲ್ಲು ವಿಜಾಪುರದಲ್ಲಿ ಬೆಳಗಾವಿಯ ಸುಪ್ರಸಿದ್ಧ ವಕೀಲರೂ ಪಾರ್ಲಿಮೆಂಟ್ ಸದಸ್ಯರೂ ಆದ ಶ್ರೀ ದಾತಾರ ಬಳವಂತ ರಾಯರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಬೊಂಬಾಯಿ ಹೈಕೋರ್ಟಿನ ನ್ಯಾಯಾಧೀಶರಾದ ನ್ಯಾ. ಮೂ. ಗಜೇಂದ್ರಗಡಕರು ಪರಿಷತ್ತನ್ನು ಉದ್ಘಾಟಿಸುವರು.

ದಿ ಈಸ್ಟ್ ಎಂಡ್ ವೆಸ್ಟ್
ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಸ್ಥಾಪನೆ:] ಈಸ್ಟ್ ಎಂಡ್ ವೆಸ್ಟ್ ಬಿಲ್ಡಿಂಗ್ಸ್, ಬೊಂಬಾಯಿ. [1913

ಉದಾರ ಸೌ ರಿಯಾಯತಿ ಶರ್ತಗಳಿರುವ ಪುರಾತನ ಮತ್ತು ಮುಂದುವರಿದ ಕಂಪೆನಿಗಳಲ್ಲೊಂದಾಗಿರುತ್ತದೆ.

ವಿಮೆಯ ಸಕಲ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು ಆ ಬಾಬಿನ ಎಲ್ಲಾ ಕೆಲಸಗಳಲ್ಲಿ ಭಾಗಿಯಾಗಿ ಸಹಕರಿಸಿ ಸಲಹೆಗಳನ್ನೀಯುತ್ತಾ ಜನಸೇವೆಗೈಯುವುದೇ ನಮ್ಮ ಧ್ಯೇಯ

ನಮ್ಮ ಚೀಫ್ ಏಜನ್ಸಿ ವಿಸ್ತೀರ್ಣದೊಳಗೆ ಪ್ರತೀ ಜಿಲ್ಲೆಗೊಬ್ಬರಂತೆ ಇನ್ಸ್‌ಪೆಕ್ಟರುಗಳೂ, ಸ್ಪೆಶಲ್ ಏಜಂಟರೂ, ಏಜಂಟರೂ ಬೇಕಾಗಿದ್ದಾರೆ ಹೆಚ್ಚಿನ ವಿವರಕ್ಕೆ ಬರೆಯುವದು.

ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್,
ಚೀಫ್ ಏಜಂಟರು,
ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಮೈಸೂರು ಸ್ಟೇಟ್,
ಪೋಸ್ಟ್ ತಿವಾರ್, ದ. ಕ.

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs. 10 lacks.
3. Has granted an average dividend of 6% to the Share-holders for the past 20 years
4. Has a net work of Branches in South Kanara and one each in Mercara and Fort. Bombay
5. Offers attractive rates of interest on Deposits and Cash Certificates
6. Grants loans on easy terms to approved parties or on approved securities.
7. Does afford full protection and rich return to all your monies.

ADOPT IT AS
"MY BANK"
THE V JAYA BANK, LIMITED,
H. O., MANGALORE.

ಲೋಕಾಂತ

ಹಲ್ಲುಗಳ ರಕ್ಷಣೆ

ಹುಬ್ಬಳ್ಳಿಯಲ್ಲಿ ಈಚೆಗೆ ಕೆಲವು ದಿವಸಗಳಿಂದ ಧರ್ಮಾರ್ಥ ದಂತಯಜ್ಞವನ್ನು ನಡೆಸುತ್ತಿರುವ ಮುಂಬಾಯಿಯ ಪ್ರಸಿದ್ಧ ದಂತವೈದ್ಯರಾದ ಶ್ರೀ ಕಿಶೋರದಾಸಜಿ ಗುಪ್ತಾರವರು ಇದೇ ತಾ. 18ರಂದು ಸಂಜೆ ಸ್ಥಳೀಯ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ದಂತವಿಜ್ಞಾನದ ಕುರಿತು ಹೀಗೆಂದರು—

"ಪಯೋರಿಯಾ, ಕ್ರಿಮಿದಂತ ಮೊದಲಾದ ಹಲ್ಲಿನ ರೋಗಗಳು ಸಿಹಿ ಹಾಗು ಆಮ್ಲರಸಗಳಿಂದ ಹುಟ್ಟುವವು. ಸಿಹಿ ಪದಾರ್ಥಗಳು, ಬಾಳೆಹಣ್ಣು, ಚಹಾ, ಐಯಿಸ್‌ಕ್ರೀಮ್, ಮೊಸರು, ಟೊಮೆಟೊಗಳನ್ನು ಹೆಚ್ಚಾಗಿ ಸೇವಿಸುವುದರಿಂದ ಈ ರೋಗಗಳು ತಲೆದೋರುವವು. ಸಿಹಿ ಹಾಗು ಚಹಾವನ್ನು ವಿಶೇಷವಾಗಿ ಉಪಯೋಗಿಸುತ್ತಿರುವ ಗುಜರಾಥದ ಜನರಲ್ಲಿ ಪಯೋರಿಯಾವು ಹೆಚ್ಚಾಗಿ ಕಂಡುಬರುತ್ತದೆ. ಕರ್ನಾಟಕದಲ್ಲಿ ಹಲ್ಲು ಹುಳ್ಳುಬೀಳುವುದು ಬಹಳ. ಈ ರೋಗ ನಿವಾರಣೆಯಾಗಬೇಕಾದರೆ ಹಸಿರುಕಾಳಿನ ಪದಾರ್ಥ ವಿಶೇಷವಾಗಿ ಬಳಸಬೇಕು. ಮತ್ತು ಹಲ್ಲನ್ನು ಉಜ್ಜಲು ಕರಬೇಟ್ಟು, ತ್ರಿಫಲ, ಎಳ್ಳಿನ ಎಣ್ಣೆ ಮೊದಲಾದುವನ್ನು ಉಪಯೋಗಿಸಬೇಕು. 1 ತೊಲೆ ಎಳ್ಳಿನ ಎಣ್ಣೆ, 1 ತೊಲೆ ಲಿಂಬೆಹಣ್ಣಿನ ರಸ ಮತ್ತು ಸೈಂಧ್ರ ಲವಣದಿಂದ ಪುಡಿ ಸಣ್ಣಗೆ ಮಾಡಿ ಕಲಿಸಿ ಬಳಸಬಹುದು. ಇಲ್ಲವೆ ಸಮುದ್ರಫಳ ಮತ್ತು ಜೇನು ತುಪ್ಪವನ್ನು ಕಲಿಸಿ ಉಪಯೋಗಿಸಬಹುದು" ಎಂದರು.

ಮಧ್ಯ ಪ್ರದೇಶದ ಗವರ್ನರರು

ಕೇಂದ್ರ ವಾಣಿಜ್ಯ ಮಂತ್ರಿಗಳಾದ ಶ್ರೀ ಹರೇಕೃಷ್ಣ ಮೆಹತಾಬರು ಮಧ್ಯ ಪ್ರದೇಶದ ಗವರ್ನರರಾಗಿ ನೇಮಕ ಹೊಂದುವರೆಂದು ತಿಳಿಯುತ್ತದೆ.

ಅಧ್ಯಕ್ಷಪದಕ್ಕೆ ಹ್ಯಾರಿಮನ್ನರ ಸ್ಪರ್ಧೆ?

ಅಮೇರಿಕೆಯ ಅಧ್ಯಕ್ಷಪದದ ಸ್ಪರ್ಧೆಯಲ್ಲಿ ಹ್ಯಾರಿಮನ್ನರ ಉಮೇದವಾರಿಕೆಗೆ ನ್ಯೂಯಾರ್ಕ ರಾಜ್ಯದ 45 ಕೌಂಟಿಗಳ ಅಧ್ಯಕ್ಷರು ಬೆಂಬಲಕೊಟ್ಟಿರುತ್ತಾರೆ.

ಈಜಿಪ್ತ್ ಬ್ರಿಟಿಷ ಮಾತುಕತೆ

ಕಾಯರೋದಲ್ಲಿಯ ಬ್ರಿಟಿಶ ರಾಯಭಾರಿಯು ಈಜಿಪ್ತ ಸರಕಾರದೊಂದಿಗೆ ನಡೆಸಿದ ಮಾತುಕತೆ ವಿವರಗಳನ್ನು ತಿಳಿಸುವದಕ್ಕಾಗಿ ಇಲ್ಲಿಗೆ ಕರೆಸಿಕೊಳ್ಳಬೇಕೆಂದು ವಿದೇಶ ಮಂತ್ರಿ ಈಡೆನ್ನರು ನಿರ್ಧರಿಸಿದ್ದಾರೆಂದು ವಿದೇಶ ಶಾಖೆಯು ಪ್ರಕಟಣೆ ಹೊರಡಿಸಿದೆ. ಸುಡಾನದಲ್ಲಿಯ ಇತ್ತೀಚಿನ ಘಟನೆಗಳಿಂದ ಉದ್ಭವಿಸಿದ ಸಮಸ್ಯೆಗಳ ಅಭ್ಯಾಸಕ್ಕಾಗಿ ಬರಲು ಸುಡಾನ ಗವರ್ನರ ಜನರಲ್‌ರಿಗೆ ಈಡನ್ನರು ಆಮಂತ್ರಿಸಿದ್ದಾರೆ.

ವರ್ಣದ್ವೇಷದ ಮೇಲೆ ಚುನಾವಣೆ

ದ. ಆಫ್ರಿಕೆಯ ವರ್ಣದ್ವೇಷದ ಬಗ್ಗೆ ವರಿಷ್ಠ ನ್ಯಾಯಾಲಯವು ವರ್ಣೀಯರ ಪ್ರತ್ಯೇಕ ಮತಾಧಿಕಾರದ ಕಾಯದೆ ಅಕ್ರಮಗೊಳಿಸಿದ್ದನ್ನು ಸರಕಾರವು ನಿರಾಕರಿಸಿರುವದಷ್ಟೆ. ಆದರೆ ಇದೇ ವಿಷಯದ ಮೇಲೆ ತಾವು ಸಾರ್ವತ್ರಿಕ ಚುನಾವಣೆಯಲ್ಲಿ ಹೋರಾಡುವದಾಗಿ ಮುಖ್ಯಮಂತ್ರಿ ಡಾ| ಮಾಲನ್ನರು ಸಾರಿದರು.

ಬ್ರಿಟಿಷ ಭಾರತ ಡಾಕ್ಟರರಲ್ಲಿ ಪರಸ್ಪರ ಸಹಕಾರ

ಬ್ರಿಟಿಷ ಮೆಡಿಕಲ್ ಅಸೋಸಿಯೇಶನ್ನು ಹಿಂದೀ ಮೆಡಿಕಲ್ ಅಸೋಸಿಯೇಶನ್ನಿನೊಂದಿಗೆ ಪರಸ್ಪರ ಮನ್ನಣೆಯ ಒಪ್ಪಂದ ಮಾಡಿಕೊಳ್ಳಲಿದೆ. ಎರಡೂ ಸಂಘಗಳ ನಡುವೆ ಸಹಕಾರ ಬೆಳೆಸುವದೇ ಇದರ ಉದ್ದೇಶ.

ಯುದ್ಧಕೈದಿಗಳ ಮಾತುಕತೆ.

ಎಪ್ರಿಲ್ 4ರಿಂದ ಮುಂದೂಡಲ್ಪಟ್ಟಿರುವ ಕೈದಿಗಳ ವಿನಿಮಯದ ಬಗ್ಗೆ ನಡೆದಿದ್ದ ಗುಪ್ತ ಮಾತುಕತೆಗಳನ್ನು ಪುನಃ ಪ್ರಾರಂಭಿಸಲು ಸಿದ್ಧರಿರುವದಾಗಿ ಸಂ. ರಾ. ಸಂಘದ ಪ್ರತಿನಿಧಿಗಳು ಕಮ್ಯೂನಿಸ್ಟರಿಗೆ ತಿಳಿಸಿರುವರು.

ಹೆಂಡಂದಿರ ಕೈಯಲ್ಲಿ ಗಂಡಸರ ಜುಟ್ಟು

ಮಾರ್ಫ ದೀಟಾದಲ್ಲಿ ಆಲ್ಲಿಯ ಚಹದ ತೋಟಗಳಲ್ಲಿ ಹಾಗೂ ಕಲ್ಲಿದ್ದಲಿ ಗಣಿಗಳಲ್ಲಿ ದುಡಿಯುವ ಕೂಲಿಕಾರರ ಹೆಂಡಂದಿರು ತಾಳ್ಮೆಗೆಟ್ಟು ಗಂಡಂದಿರನ್ನು ದಾರಿಗೆ ತರಲು ಒಂದು ಸಂಘವನ್ನು ಸ್ಥಾಪಿಸಿರುವರು. ತಮ್ಮ ಗಂಡಂದಿರು ಇನ್ನು ಮುಂದೆ ಮಾಡುವ ಅಪಮಾನ ಅವಹೇಳನವನ್ನೆಂದಿಗೂ ಸಹಿಸತಕ್ಕದ್ದಲ್ಲ. ಮತ್ತು ಯಾವನಾದರೂ ತನ್ನ ಹೆಂಡತಿಯನ್ನು ಹೊಡೆದರೆ ಎಲ್ಲ ಸ್ತ್ರೀಯರು ಸೇರಿ ಆತನನ್ನು ದಂಡಿಸಬೇಕು. ಕೂಲಿಕಾರರು ಕೆಲಸ ತಪ್ಪಿಸಿದರೆ ಅವರಿಗೆ ಅಂಬಲಿಕೂಡ ಕುಡಿಸಿ ಹಾಕತಕ್ಕದ್ದಲ್ಲವೆಂದೂ ಈ ಮಹಿಳೆಯರು ತಮ್ಮಲ್ಲಿ ನಿರ್ಧರಿಸಿರುವರು.

ಮದ್ರಾಸದ ವಿಧಿಮಂಡಳದ 12 ಸದಸ್ಯರು

ಮದ್ರಾಸದ ಗವರ್ನರರಾದ ಶ್ರೀ ಪ್ರಕಾಶರು ಹಿಂದುಸ್ತಾನದ ಘಟನೆಯ 171ನೇ ಕಲಮಿನ ಮೇರೆಗೆ ಈ ಕೆಳಗಿನ 12 ಜನರನ್ನು ರಾಜ್ಯದ ಮಂಡಳಕ್ಕೆ ನಿಯುಕ್ತರನ್ನಾಗಿ ಮಾಡಿದ್ದಾರೆ.

1) ಶ್ರೀ ಸಿ. ರಾಜಗೋಪಾಲಾಚಾರಿ. 2) ಪಿ. ಶಿ. ರಾಮಸ್ವಾಮಿ ರೆಡ್ಡಿಯಾರ, 3) ಶ್ರೀ ವಿ. ಭಾಷ್ಯಂ 4) ಮಹಮ್ಮದ ಉಸ್ಮಾನ, 5) ಡಾ| ಎಸ್. ಮುತ್ತು ಲಕ್ಷ್ಮಿರೆಡ್ಡಿ, 6) ಶ್ರೀ ಟಿ. ಎಂ. ದೈವಶಿಖಾಮಣಿ ಆಚಾರಿಯಾರ. 7) ಶ್ರೀಮತಿ ಆರ್. ಎಸ್. ಸುಬ್ಬು ಲಕ್ಷ್ಮಿ ಅಮ್ಮಾಳ್, 8) ಶ್ರೀ ವಿ. ಎಸ್. ಮಾರ್ತಾಂಡಂ ಪಿಳ್ಳೈ. 9) ಶ್ರೀ ಜಿ. ವೆಂಕಟಾಚಲಂ, 10) ಶ್ರೀ ನರಸಿಂಹದೇವ ಸತ್ಯನಾರಾಯಣ, 11) ಶ್ರೀಮತಿ ಎಂ. ಎಸ್. ಕ್ಲಬ್‌ವಾಲಾ, 12) ಶ್ರೀ ಎಂ ಸತ್ಯನಾರಾಯಣ,

20 ಲಕ್ಷ ರೂ. ವಜ್ರದ ಸಾಗಾಟ.

ಹೈದರಾಬಾದದ ನವಾಬ ಜಹೀರಯಾರ ಜಂಗರು ಕಾಯರೊಕ್ಕೆ ವಿಮಾನದಲ್ಲಿ ಸಪತ್ನೀಕರಾಗಿ ಹೊರಟಾಗ ವಿಮಾನ ನಿಲ್ದಾಣದಲ್ಲಿ ಸುಂಕದ ಅಧಿಕಾರಿಗಳು ಸಂಶಯಗೊಂಡು ಅವರನ್ನು ಶೋಧಿಸಲಾಗಿ ಸುಮಾರು 20 ಲಕ್ಷ ರೂ ಬೆಲೆ ಬಾಳುವ ವಜ್ರಗಳು ಸಿಕ್ಕಿದವು. ಅವನ್ನು ಕೈರೋಗೆ ಕಳ್ಳ ರೀತಿಯಲ್ಲಿ ಒಯ್ಯುವ ಪ್ರಯತ್ನ ನಡೆದಿತ್ತು.

ಮೇ 3ಕ್ಕೆ ಮದ್ರಾಸ ಪ್ರಥಮ ಶಾಸನ ಸಭೆ

ಮದ್ರಾಸ ಶಾಸನ ಸಭೆ ಹಾಗೂ ವಿಧಿಮಂಡಳಗಳ ಪ್ರಥಮ ಅಧಿವೇಶನವನ್ನು ಗವರ್ನರ ಶ್ರೀ ಪ್ರಕಾಶರು ಮೇ 3 ಹಾಗೂ 5ಕ್ಕೆ ಕರೆದಿರುವರು. ಆಗ ಸದಸ್ಯರ ಪ್ರತಿಜ್ಞಾ ವಿಧಿ ಜರಗುವದು. ಗವರ್ನರರ ಭಾಷಣದ ಮೇಲೆ ಶಾಸನ ಸಭೆಯಲ್ಲಿ ಮೇ 8 ಹಾಗೂ 9ನೇ ತಾರೀಕಿನ ದಿನಗಳಲ್ಲಿಯೂ ವಿಧಿಮಂಡಳದಲ್ಲಿ ಮೇ 10ನೇ ದಿನ ಚರ್ಚೆ ನಡೆಯುವದು. ಮದ್ರಾಸ ಶಾಸನ ಸಭೆಯ ತಾತ್ಪೂರ್ತಿಕ ಅಧ್ಯಕ್ಷರೆಂದು ಶ್ರೀ ಸಿ. ಪಿ. ರಾಮಸ್ವಾಮಿರನ್ನು ಹಾಗೂ ವಿಧಿಮಂಡಳದ ಚೇರಮೇನರೆಂದು ಡಾ| ಪಿ. ವಿ. ಚೇರಿಯನ್ನರನ್ನು ಗವರ್ನರರು ನೇಮಿಸಿರುವರು.

ಕರ್ನಾಟಕದ ಪರವಾಗಿ ನಿಯೋಗ

ಪಂಚವಾರ್ಷಿಕ ಯೋಜನೆಯಲ್ಲಿ ಘಟಪ್ರಭಾ ನೀರಾವರಿಯ ಪೂರ್ಣ ಯೋಜನೆ ಸೇರಿಸುವಂತೆ ಪತ್ಯಾಯ ಮಾಡುವದರ ಸಲುವಾಗಿ ಕರ್ನಾಟಕದ ಶಿಷ್ಟ ಮಂಡಳವೊಂದು ದಿಲ್ಲಿಗೆ ತೆರಳಲಿರುವದು. ಈ ನಿಯೋಗದಲ್ಲಿ ಶ್ರೀಗಳಾದ ನಿಜಲಿಂಗಪ್ಪ, ಬಳವಂತರಾವ ದಾತಾರ, ರಾಮಚಂದ್ರ ಹುಕ್ಕೇರಿಕರ ಮುಂತಾದವರು ಇರುವರು.

ಹೈದರಾಬಾದಿನಲ್ಲಿ

ಕಮ್ಯೂನಿಸ್ಟರ ಮೇಲಿನ ನಿರ್ಬಂಧವನ್ನು ಹೈದರಾಬಾದ ಸರಕಾರವು ಬೇಗನೆ ರದ್ದುಗೊಳಿಸಲಿದೆಯೆಂದೂ ಹೈದರಾಬಾದ ಕಾಂಗ್ರೆಸ್ ಅಧ್ಯಕ್ಷ ಪದಕ್ಕೆ ಸ್ವಾಮಿ ರಮಾನಂದ ತೀರ್ಥರನ್ನು ನಾಮಕರಣ ಮಾಡುವುದು ನಿಶ್ಚಯವೆಂದೂ ಹೈದರಾಬಾದಿನ ಮುಖ್ಯ ಮಂತ್ರಿ ಶ್ರೀ ಬಿ. ರಾಮಕೃಷ್ಣ ರಾಯರು ಹೊಸ ದಿಲ್ಲಿಯಲ್ಲಿ ಇದೇ ತಾ 16ರಂದು ಪತ್ರಿಕಾ ಸಂದರ್ಶನದಲ್ಲಿ ಹೇಳಿದರು.

ಗ್ಯಾರಂಟೀಯಾದ ಶುಚಿತ್ವ

ಗ್ಯಾರಂಟೀಯಾದ ಶುದ್ಧತೆ

ಅಗ್ಗವಾಗಿ ಸಿಗುವ ಮತ್ತು ಪೊಟ್ಟಣಗಳಲ್ಲಿ ಕಟ್ಟದಿರುವ ಚಹಗಳನ್ನು ಕೊಂಡು ವೃಥಾ ಏಕೆ ನಷ್ಟಕ್ಕೆ ಒಳಗಾಗುವಿರಿ. ಪ್ರತಿಯೊಂದು ಬ್ರೂಕ್ ಬಾಂಡ್ ಪೊಟ್ಟಣದಲ್ಲಿರುವ ಚಹವು ರುಚಿ ಮತ್ತು ಶುದ್ಧತೆಯ ಭರವಸೆ ಕೊಡುವುದಲ್ಲದೆ ಮಲಿನವಾಗದ ಹಾಗೆ ಕಾಪಾಡಲ್ಪಟ್ಟಿರುತ್ತದೆ. ಪ್ರತಿಯೊಂದು 2 ಔನ್ಸ್ ಪೊಟ್ಟಣದಿಂದ 30 ದೊಡ್ಡ ಕಪ್ಪುಗಳಿಗೆ ಆಗುವಷ್ಟು ಚಹ ಮಾಡಬಹುದು.

ನೀವು ಉತ್ತಮ ಗುಣ ಮತ್ತು ಪ್ರತಿಫಲವನ್ನು ಅಪೇಕ್ಷಿಸುವುದೇ ಆದರೆ ನೀವು ಕೊಳ್ಳಬೇಕಾದ್ದು

ಬ್ರೂಕ್ ಬಾಂಡ್ ಚಹಾ

THE CANARA BANKING CORPORATION LIMITED.
ದಿ ಕೆನರಾ ಬೇಂಕಿಂಗ್ ಕೋಪ್ರೊರೇಶನ್, ಲಿಮಿಟೆಡ್
ಸ್ಥಾಪನೆ : 1906. : : ಪ್ರಧಾನ ಕಾರ್ಯಾಲಯ: ಉಡುಪಿ, (ದ.ಕಾ.)
ವಿಶೇಷ ಸವಲತ್ತುಗಳಿದ್ದು,
ಸಾಲಿಯಾನ್ ಶೇಕಡಾ 4ರಂತೆ ಬಡ್ಡಿಗಳಿಸುವ ನಮ್ಮ
"ಪಂಚವಾರ್ಷಿಕ ಸುವರ್ಣ ಠೇವಣಾತಿಗಳ"
ಮೇಲೆ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.
ವಿಶೇಷ ಮಾಹಿತಿಗೆ, ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.
ವಿ. ಆರ್. ಕಾಮತ್, ಬಿ. ಎ; ಎಲ್ ಎಲ್, ಬಿ;
ಜನರಲ್ ಮೆನೇಜರ್.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೨೩-೪-'೫೩

ಮುಂಬಯಿ ಮಂತ್ರಿಮಂಡಳ

ಮುಂಬಯಿ ಮಂತ್ರಿಗಳ ಯಾದಿಯ ಬಗ್ಗೆ ಈಚೆಗೆ ಹಲವು ದಿನಗಳಿಂದ ಪ್ರಾದೇಶಿಕ ಕಾಂಗ್ರೆಸ್ಸಿನ ಅಧ್ಯಕ್ಷರುಗಳಿಗೂ ಕಾಂಗ್ರೆಸ್ ಪಕ್ಷದ ಧುರೀಣ ಶ್ರೀ ಮುರಾರಜಿ ದೇಸಾಯಿಯವರಿಗೂ ಸುದೀರ್ಘವಾದ ಚರ್ಚೆ ನಡೆದ. ಕೊನೆಯ ತೀರ್ಮಾನಕ್ಕೆ ದಿಲ್ಲಿಗೆ ಧಾವಿಸುವ ಪ್ರಸಂಗ ಕೂಡಾ ಬಂದಿತ್ತು. ಮಂತ್ರಿಮಂಡಲದಲ್ಲಿ 5 ಸ್ಥಾನ ಮಹಾರಾಷ್ಟ್ರಕ್ಕಿರಬೇಕೆಂದು ಶ್ರೀ ಬಿ. ಎಸ್. ಹಿರೆಯವರೂ– 2 ಸ್ಥಾನ ಕರ್ನಾಟಕಕ್ಕಿರಬೇಕೆಂದು ಶ್ರೀ ನಿಜಲಿಂಗಪ್ಪನವರೂ ಚಂಡಿಹಿಡಿದಿದ್ದರಿಂದ ಶ್ರೀ ದೇಸಾಯಿಯವರು ನೆಹ್ರೂರವರನ್ನು ಕಾಣಬೇಕಾಯಿತು. ಶ್ರೀ ನೆಹ್ರೂರವರಾದರೋ ಆದರ ಹೊಣೆಯನ್ನು ಮುರಾರಜಿಗೆ ಬಿಟ್ಟುಕೊಟ್ಟರೆಂದು ತಿಳಿಯುತ್ತದೆ. ಈಗ ಮುರಾರಜಿ ತಯಾರಿಸಿದ ಯಾದಿಯಲ್ಲಿ ಹಿಂದೆಂದಿಗಿಂತಲೂ ಕಡಿಮೆ ಸಂಖ್ಯೆಯಲ್ಲಿ ಮಂತ್ರಿಗಳಿದ್ದು ಅವರ ಸಂಖ್ಯೆ ಕೇವಲ ಒಂಭತ್ತು ಆಗಿರುತ್ತದೆ. ಐದು ಸ್ಥಾನ ಬೇಕೆಂಬ ಮಹಾರಾಷ್ಟ್ರೀಯರ ವಾದವೂ ಗೆಲ್ಲಲಿಲ್ಲ—ಎರಡು ಸ್ಥಾನ ಸಿಗಬೇಕೆಂಬ ನಿಜಲಿಂಗಪ್ಪನವರ ವಾದಕ್ಕೂ ಬೆಲೆ ಬರಲಿಲ್ಲ ಕೊನೆಗೂ ದಕ್ಷತೆ ಪ್ರಾಮಾಣಿಕತೆಯುಳ್ಳವರನ್ನೇ ಆರಿಸಲಾಗಿದೆಂದು ಹಿಂದೆ ಮಂತ್ರಿಯಾಗಿದ್ದ ಶ್ರೀ ಎಂ.ಪಿ. ಪಾಟೀಲರೊಬ್ಬರನ್ನೇ ಕರ್ನಾಟಕ ಪ್ರತಿನಿಧಿಯನ್ನಾಗಿ ಆರಿಸಲಾಗಿದೆ. ಬೃಹನ್ಮುಂಬಯಿಯ ಪ್ರತಿನಿಧಿಯನ್ನಾಗಿ ಇನ್ನೊಬ್ಬರನ್ನು ಆರಿಸಬೇಕೆಂಬುದನ್ನು ಶ್ರೀ ಮುರಾರಜಿಯವರು ಒಪ್ಪಿದ್ದಾರೆ.

ಮುಂಬಯಿ ರಾಜ್ಯದಲ್ಲಿ ಕರ್ನಾಟಕದ ಸ್ಥಾನಮಾನ ಬಹಳ ನಿಕೃಷ್ಟವಾಗುತ್ತ ಬಂದಿರುವದನ್ನು ನಮ್ಮಲ್ಲನೇಕರು ಆಗಾಗ್ಗೆ ಸರಕಾರದ ಗಮನಕ್ಕೆ ತರುತ್ತಿದ್ದುದು ವಿದಿತ ವಿಚಾರವೇ. ಉತ್ತರ ಕರ್ನಾಟಕದ ಸ್ಥಿತಿಯು ಅತ್ಯಂತ ಶೋಚನೀಯವಾಗಿರುವುದು. ತಿರಸ್ಕೃತವಾದಂತೆ ಅಲ್ಲಿನ ಕರ್ನಾಟಕಸ್ಥರ ಪಾಡಾಗಿದೆ. ಪಂಚವಾರ್ಷಿಕ ಯೋಜನೆ– ಇತರ ಅಭಿವೃದ್ಧಿ ವಿಚಾರಗಳು ಉತ್ತರ ಕರ್ನಾಟಕದಲ್ಲಿ ತಲೆಯೆತ್ತುವಂತೆ ಪ್ರಯತ್ನಿಸಿದ್ದು ಕಂಡು ಬರುವುದಿಲ್ಲ. ಆಹಾರಾಭಾವದ ಈ ಕಾಲದಲ್ಲಿ ಅಲ್ಲಿ ಹಾಳುಬಿದ್ದ ಭೂಮಿಯನ್ನು ನೀರಾವರಿ ಯೋಜನೆಯ ಮೂಲಕ ಕೃಷಿಗೆ ಹದಗೊಳಿಸಬಹುದು- ಅಲ್ಲಿ ಮರಮಟ್ಟುಗಳೂ– ಅರಣ್ಯ ಸಂಪತ್ತುಗಳೂ ಹೇರಳವಾಗಿವೆ- ಮಾತ್ರವಲ್ಲ ಕಾರವಾರ ಜಿಲ್ಲೆಯಲ್ಲಿ ಹಲವು ಖನಿಜ ವಸ್ತುಗಳು ಇರುತ್ತವೆಂದು ಈಚೆಗೆ ತಿಳಿದುಬಂದಿದೆ- ಇಷ್ಟೆಲ್ಲ ನೈಸರ್ಗಿಕ ಅನುಕೂಲತೆಗಳಿರುವದಾದರೂ ಮುಂಬಯಿ ಸರಕಾರವು ಉತ್ತರ ಕರ್ನಾಟಕವನ್ನು ಸಂಪೂರ್ಣ ಅಲಕ್ಷಿಸಿದೆಂದೇ ಹೇಳಬೇಕು-

"ನಾವು ಕರ್ನಾಟಕಸ್ಥರು." ಎನ್ನುವ ಅಭಿಮಾನ ಅಲ್ಲಿನ ಜನರಲ್ಲಿ ಶೂನ್ಯವಾಗುತ್ತ ಬಂದಿದೆ. ಏಕೆಂದರೆ ಮಹಾರಾಷ್ಟ್ರೀಯರ ಹೊಂಚು ಅಲ್ಲಿ ಬಲವಾಗುತ್ತ ಬಂದಿದೆ. ಹೊನ್ನಾವರ, ಕಾರವಾರ, ಬೆಳಗಾಂವಿ ಮುಂತಾದ ಜಿಲ್ಲೆ ತಾಲೂಕುಗಳನ್ನೆಲ್ಲ ಮಹಾರಾಷ್ಟ್ರಕ್ಕೆ ಸೇರಿಸಿಬಿಡಬೇಕೆಂಬ ಚಳುವಳಿ ಭಯಂಕರವಾಗಿದೆ. ರಾಜಕೀಯ ವಿಚಾರದಲ್ಲಿ ಕೈ ಹಾಕಿ ಇಂತಹ ಪ್ರದೇಶಗಳನ್ನೆಲ್ಲ ತಮ್ಮದೆಂದು ವಾದಿಸಲು ಹತ್ತಿದ್ದಾರೆ ಮಹಾರಾಷ್ಟ್ರೀಯರು. ಕೋರ್ಟ ಭಾಷೆ ಮರಾಠಿಯಾಗಲಿ ಎಂದು ಚಂಡಿ ಹಿಡಿದಿದ್ದಾರೆ. ಹೀಗೆ, ಒಂದು ಕಡೆ ಸರಕಾರದ ಅಲಕ್ಷ್ಯಭಾವ ಇನ್ನೊಂದು ಕಡೆ ಮಹಾರಾಷ್ಟ್ರದಲ್ಲಿ ಐಕ್ಯಗೊಂಡರೆ ಯೋಗ್ಯ ಸುಧಾರಣೆಯಾಗಬಹುದೆಂಬ ಹಂಬಲ—ಕರ್ನಾಟಕದ ಹೆಸರನ್ನೇ ಮರೆ ಮಾಚುವಂತಿದೆ. ಇದನ್ನೆಲ್ಲ ಲಕ್ಷಿಸಿಯೇ ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಕರ್ನಾಟಕದ ಬಗ್ಗೆ ಹೆಚ್ಚಿನ ಸ್ಥಾನವನ್ನು ಕಲ್ಪಿಸಿ ಕೊಡುವಂತೆ ಯತ್ನ ಮಾಡಿದ್ದಾಗಿದೆ. ಆದರೆ ಕರ್ನಾಟಕದ ಪಾಲಿಗ ಹಿಂದಿನ ಸ್ಥಾನಕ್ಕಿಂತ ಹೆಚ್ಚಿನದೇನೂ ಪ್ರಾಪ್ತವಾಗಲಿಲ್ಲ. ಮಹಾರಾಷ್ಟ್ರದ ಪರವಾಗಿ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಿ. ಎಸ್. ಹಿರೇಯವರೇ ಅದಿಯಾಗಿ ಇನ್ನು ಮೂರು ಜನ ಆರಿಸಿ ಬಂದಿದ್ದಾರೆ.

ಶ್ರೀಮಾನ್ ಪಾಟೀಲರೂ ಮತ್ತು ಉತ್ತರ ಕರ್ನಾಟಕದಿಂದ ಲೋಕ ಸಭೆಗೆ ಆರಿಸಿ ಹೋಗಿರುವ ಶ್ರೀ ಜೋಕಿಂ ಆಳ್ವರೇ ಮೊದಲಾದವರೂ ಕಳೆದ ನಾಲ್ಕು ವರ್ಷಗಳಲ್ಲಿ ಕರ್ನಾಟಕವು ಹೀಗೆ ಮೂಲೆಬಿದ್ದು ತನ್ನತನವನ್ನು ಕಳೆದ ಕೊಳ್ಳುವ ಮಟ್ಟಕ್ಕೆ ಬಂದದ್ದನ್ನು ಗಂಭೀರವಾಗಿ ಪರ್ಯಾಲೋಚಿಸಬೇಕು. ಮುಂಬಯಿಯ ಮಂತ್ರಿ ಮಂಡಲದಲ್ಲಿ ಇಬ್ಬರು ಸಚಿವರು ಬಂದಾಕ್ಷಣ ಕರ್ನಾಟಕದ ಸ್ಥಿತಿ ಒಮ್ಮೆಯೇ ಸುಧಾರಿಸೀತೆಂದು ನಮ್ಮ ವಾದವಲ್ಲ. ಅಥವಾ ಒಬ್ಬರಿಂದಲೇ ಅದು ಅಸಾಧ್ಯವೆಂದೂ ನಾವು ಹೇಳುತ್ತಿಲ್ಲ. ಮುಖ್ಯವಾಗಿ ಈ ಹಿಂದಿನವರಲ್ಲಿ ಕರ್ನಾಟಕ ಪ್ರದೇಶದ ಅಭಿವೃದ್ಧಿ–ಪುನರ್ರಚನೆಯ ಬಗ್ಗೆ ಹೆಚ್ಚಿನ ಆಸ್ಥೆ ಇಲ್ಲದೆ ಇದ್ದುದರಿಂದ ಇಂದಿನವರ ಹೊಣೆ ಹೆಚ್ಚಿನದಾಗಿದೆಂದು ಹೇಳುತ್ತೇವೆ. ಮಾತ್ರವಲ್ಲ ಈ ದಿಶೆಯಲ್ಲಿ ಮುಂಬಯಿ ಹಾಗೂ ಕೇಂದ್ರ ಸರಕಾರದ ಮನಸ್ಸನ್ನು ಒಲಿಸುವ ಕಾರ್ಯವನ್ನು ನಮ್ಮ ಪ್ರತಿನಿಧಿಗಳೂ- ಮಂತ್ರಿಗಳೂ ಅವಶ್ಯವಾಗಿ ಮಾಡಲೆಂದು ಸೂಚಿಸುತ್ತೇವೆ.

ಕಿಡಿ— ಕಿಡಿ

ತಾ. 22ನೇ ರಾತ್ರಿ ಉಡುಪಿಯಲ್ಲಿ ಚೆನ್ನಾಗಿ ಮಳೆಬಂದು ನಮ್ಮ ಮಹಾ ನಗರ ಸಭೆಯಿಂದ ಅಲಕ್ಷಿಸಲ್ಪಟ್ಟ ನಗರ ನೈರ್ಮಲ್ಯ ಕೆಲಸವೇನೋ ಚೆನ್ನಾಗಿ ಆಗುವಂತಾಯಿತು. ಇನ್ನು ಭಿನ್ನಭೇದ, ಕ್ಷುದ್ರಪಕ್ಷಪಂಗಡ, ಸಂಕುಚಿತ ಮನೋಭಾವಗಳಿಂದ ಹೊಲಸಾಗಿರುವ ನಗರ ಸಭೆ ಸಿಬಂದಿಯಲ್ಲೂ ಶುಭ ಕಾಲಭಾವ ತಲೆದೋರಿ ಒಮ್ಮೆ ಶುದ್ಧೀಕರಣವಾಗಿ ಬಿಟ್ಟರೆ ನಗರಕ್ಕೆ ಹಿತ, ಜನತೆಗೆ ಕ್ಷೇಮವಾದೀತು.

೦೦ ೦೦ ೦೦

ನಗರದಲ್ಲಿ ಮೋಟಾರು ವಾಹನಗಳ ವೇಗದ ಮಿತಿಯೇ ಇಲ್ಲವೆಂಬಂತೆ ಅವುಗಳು ಓಡಾಡುತ್ತಿವೆ, ರಾತ್ರಿ ಸರಿಯಾದ 'ಲೈಟ್' ಇಲ್ಲದೆಯೋ ಒಂದು ಲೈಟಿನಿಂದಲೋ ಧಾವಿಸುತ್ತಿರುವುದೂ ಉಂಟು, ಅವುಗಳ ಪ್ರಾಲಕರೂ ಕಾನೂನು ಪಾಲಕರೂ ಈ ಕಡೆಗೆ ಗಮನವೀಯುವುದು ಅಗತ್ಯ.

೦೦ ೦೦ ೦೦

ಕೆಲವು ಸರಕಾರಿ ಆಫೀಸುಗಳಲ್ಲಿ ಅವಶ್ಯವುಳ್ಳ ಫಾರ್ಮುಗಳು ಸಕಾಲದಲ್ಲಿ ದೊರೆಯದೆ ತೊಂದರೆಯಾಗುವುದುಂಟು. ಕೇಳಿದರೆ ಮೇಲಿನಿಂದ ಬರಲಿಲ್ಲವೆನ್ನುವುದುಂಟು, ಅದನ್ನು ಸಕಾಲದಲ್ಲಿ ತರಿಸಿಟ್ಟುಕೊಳ್ಳುವ ತಮ್ಮ ಜವಾಬ್ದಾರಿಯನ್ನು ಮರೆಯುವುದರಿಂದಲೇ ಜನರಿಗೆ ಈ ಅನಾನುಕೂಲತೆಗಳು.

೦೦ ೦೦ ೦೦

ಅಧಿಕಾರಿಗಳೂ, ಸಿಬಂದಿಯವರೂ ಜನಸೇವೆಯು ತಮ್ಮ ಕರ್ತವ್ಯವೆಂಬುದನ್ನೂ ಮರೆತಂತಿದೆ. ಜನರಿಗೆ ತಡೆ, ತೊಂದರೆಗಳಾಗದಂತೆ ನೆರವಾಗುವುದನ್ನು ಬಿಟ್ಟು ತದ್ವಿರುದ್ಧವಾಗಿ ವರ್ತಿಸುವುದೂ ಇದೆ.

೦೦ ೦೦ ೦೦

ಉಡುಪಿಯ ವಿದ್ಯುದ್ದೀಪಗಳ ಕಂಬಗಳೇನೋ ಇತ್ತೀಚೆಗೆ ಚೆನ್ನಾಗಿ ಬೆಳಗಿವೆ. ಆದರೆ ದೀಪಗಳೂ ಹೆಚ್ಚು ಬೆಳಗುವಂತಾಗಿದ್ದರೆ ಎಷ್ಟು ಶೋಭೆ, ಪ್ರಭೆ ಇತ್ತು?

೦೦ ೦೦ ೦೦

ವಿದ್ಯುಚ್ಛಕ್ತಿನ ರಾಷ್ಟ್ರೀಕರಣವಾದಮೇಲೆ ಸಾಕರ್ಯ ಸೌಂದರ್ಯಗಳು ವಿದ್ಯುದ್ವೇಗದಲ್ಲಿ ಆಗ ಬಹುದೆಂದು ಜನರು ತಪ್ಪು ತಿಳಿದು ಮೋಸ ಹೋಗಿದ್ದಾರೆನ್ನಬಹುದು.

೦೦ ೦೦ ೦೦

ತಾ 19ರಲ್ಲಿ ಕೆಟ್ಟ ವಿದ್ಯುತ್ ಯಂತ್ರ ಎರಡು ದಿನ ಮೌನ ವ್ರತವನ್ನಾಚರಿಸಿತು. ಮನೆಗಳಿಗೆ ದೀಪಗಳಿಲ್ಲ! ಪಾಪ, ನಂಬಿಯೂ ಕೆಟ್ಟರಲ್ಲ.

೦೦ ೦೦ ೦೦

ಮುಂಜಾಗ್ರತೆಯ ಅಭಾವವೇ? ದಕ್ಷತೆಯ ಲೋಪವೆ ಎಂಬುವನ್ನು ಸಂಬಂಧಪಟ್ಟವರು ವಿಚಾರಿಸಿಕೊಳ್ಳುವುದೊಳ್ಳಿತು.

೦೦ ೦೦ ೦೦

ಒಹು ಸಮಯದಿಂದ ಬರುತ್ತದೆಂದಿದ್ದ ಹೊಸ ಯಂತ್ರೋಪಕರಣಗಳು ಬಂದು ಹಿಂದು ತಿಂಗಳೇ ಕಳೆದಿರಬಹುದು. ಆದರೂ ನಮ್ಮ ದಕ್ಷ ಅಧಿಕಾರಿಗಳಿಗೆ ಸಂಮುಹೂರ್ತವಿನ್ನೂ ಸಿಕ್ಕದಂತೆ ತೋರುವುದಿಲ್ಲ.

೦೦ ೦೦ ೦೦

ಆರೆ ಲೈಟಾದರೂ, ಅನೇಕಾವರ್ತಿ ಲೈಟಿಗೇ ಬರ ಆದರೂ ಏರಿದ (ಸರ್, ಚಾರ್ಜ್) ದರ ಸರಾಗವಾಗಿ ವಸೂಲಾಗುತ್ತಲೇ ಇದೆ.

೦೦ ೦೦ ೦೦

ಉಡುಪಿ ಸರಕಾರಿ ಆಸ್ಪತ್ರೆಯ ನರ್ಸುಗಳ ನಡತೆಯ ಕುರಿತು 2-3 ತಿಂಗಳ ಹಿಂದೆಯೇ ವಿಚಾರಣೆ ನಡೆದು ರಿಪೋರ್ಟ್ ಹೋಗಿತ್ತಂತೆ ಅದರ ಫಲಿತಾಂಶವಾಗಿಯೋ ಎಂಬಂತೆ ಈಗ ನರ್ಸುಗಳ ವರ್ಗವಾಗಿರುವುದಾಗಿ ವದಂತಿ

೦೦ ೦೦ ೦೦

ಇಷ್ಟು ವಿಳಂಬವಾದುದರಿಂದ ರಿಪೋರ್ಟ್ ಸಕಾಲದಲ್ಲಿ ಮಂಗಳೂರಿಂದ ಮದ್ರಾಸಿಗೆ ಹೋಗಿರುವುದೆ ಇಲ್ಲವೆ ಎಂಬ ಅನುಮಾನಕ್ಕೆಡೆಯಿದೆ.

—ಅಜ್ಞಾತ

ಉಡುಪಿ

ಕೋರಂ ಇಲ್ಲ—ಇದೇ ತಾ. 24ಕ್ಕೆ ಕರೆಯಲ್ಪಟ್ಟಿದ್ದ ತಾಲೂಕು ಪ್ರೊಹಿಬಿಷನ್ ಮತ್ತು ತಾಲೂಕು ಆಹಾರ ಉತ್ಪಾದನಾ ಕಮಿಟಿ ಸಭೆಗಳೆರಡೂ ಕೋರಂ ಇಲ್ಲದ್ದರಿಂದ ಜರಗದೆ ಮುಂದಿನ ತಿಂಗಳಿಗೆ ಮುಂದರಿಸಲ್ಪಟ್ಟವೆ.

ಮಹಾ ಸಭೆಗಳು—ಉಡುಪಿ ಲೋಕಲ್ ಕೋಅಪರೇಟಿವ್ ಯೂನಿಯನ್ ಮತ್ತು ಉಡುಪಿ ಕೋಅಪರೇಟಿವ್ ಸ್ಟೋರ್ಸ್ಸು ಇವುಗಳ ಮಹಾಸಭೆಗಳು ಇದೇ 26 ಮತ್ತು 27ರಲ್ಲಿ ಅನುಕ್ರಮವಾಗಿ ಜರಗುವವು.

ವರ್ಗಾವರ್ಗಿ—ಕುಂದಾಪುರ ಡಿವಿಜನಿನ ಸಬ್ ಕಲೆಕ್ಟರ್ ಶ್ರೀ ಎಚ್. ನರಸಿಂಹನವರಿಗೆ ವರ್ಗವಾದುದರಿಂದ ಅವರ ಸ್ಥಾನದಲ್ಲಿ ಶ್ರೀ ರಂಗನಾಥ ರಾವ್ ನಾಯುಡು ಅವರು ನೇಮಕ ಹೊಂದಿದ್ದು ಚಾರ್ಜು ವಹಿಸಿಕೊಂಡಿರುವರು.

ವಸಂತ ಸಾಹಿತ್ಯೋತ್ಸವವು—ಪರ್ಯಾಯ ಸ್ವಾಮಿಗಳ ಆಶ್ರಯದಲ್ಲಿ ಬರುವ ತಾ 1ರಿಂದ 4ರ ವರೆಗೆ ಜರಗಲಿದ್ದು ಈ ಸಂಬಂಧ ಶ್ರೀಗಳಾದ ವಿ. ಸೀತಾರಾಮಯ್ಯ, ಯಾಮುನಾಚಾರ್ಯ, ಬೆಟಗೇರಿ ಕೃಷ್ಣ ಶರ್ಮ ನಗರೂರು ರಂಗನಾಥ ಮೊದಲಾದವರು ಆಮಂತ್ರಿತರಾಗೀವರೆಂದೂ ತಿಳಿದು ಬರುತ್ತದೆ.

ಶ್ರೀ ಶಂಕರ ಜಯಂತೀ ಮಹೋತ್ಸವ—ದ. ಕ. ಜಿಲ್ಲೆಯ ಬಾಳೇಕುದುರು ಮಠಾಧೀಶ್ವರ ಶ್ರೀ ಮದಾನಂದಾಶ್ರಮ ಸ್ವಾಮಿಗಳವರಿಂದ ಸಂಸ್ಥಾಪಿಸಲ್ಪಟ್ಟ ಶ್ರೀ ಶಂಕರ ಜಯಂತೀ ಸಭೆಯ ಕಡೆಯಿಂದ ವಾಡಿಕೆಯಂತೆ ಶಂಕರ ಜಯಂತೀ ಮಹೋತ್ಸವವು ಇದೇ ತಾ 28 ಮತ್ತು 29ಕ್ಕೆ ಜರಗಲಿರುವುದೆಂದೂ ಸರ್ವರೂ ಭಾಗವಹಿಸಬೇಕೆಂದೂ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಚಂದಾದಾರರಲ್ಲಿ

ಎರಡು ಮೂರಾವೃತ್ತಿ ಬರೆದರೂ ಚಂದಾಹಣ ಬಾರದ್ದರಿಂದ ನಾವು ಇತ್ತೀಚೆಗೆ ಕೆಲವರಿಗೆ ಪತ್ರಿಕೆಯನ್ನು ವಿ. ಪಿ ಮಾಡಿ ಕಳುಹಿಸಿದ್ದೆವು ಹೆಚ್ಚಿನವರು ಅದನ್ನು ಸ್ವೀಕರಿಸಿ ಪ್ರೋತ್ಸಾಹಿಸಿರುತ್ತಾರೆ. ಆದರೆ ಕೆಲವರು ಅದನ್ನು ಇನ್ಕಾರ್ ಮಾಡಿರುವುದು ವಿಷಾದಕರವಿದೆ- ಅಂಥವರು ಈ ಮೊದಲೇ ತಿಳಿಸಿರುವಂತೆ ತಮ್ಮ ಬಾಕಿ ಚಂದಾ ಹಣವನ್ನು ದಯಮಾಡಿ ಇನ್ನಾದರೂ ಒಡನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಈ ಮೂಲಕ ವಿನಂತಿಸಲಾಗುತ್ತದೆ- ಅಂತೂ ಸಕಾಲದಲ್ಲಿ ಚಂದಾ ಹಣ ಬಾರದಿದ್ದರೆ ನಾವು ಪುನಃ ಮಾಡುವ ವಿ. ಪಿ ಯನ್ನಾದರೂ ಸ್ವೀಕರಿಸಬೇಕಾಗಿ ಅಪೇಕ್ಷಿಸುತ್ತೇವೆ.

ಪೆಪ್ಸುವಿನಲ್ಲಿ ಹೊಸ ಮಂತ್ರಿಮಂಡಲ

ಪೆಪ್ಸುವಿನಲ್ಲಿ ಕಾಂಗ್ರೆಸ್ ಮಂತ್ರಿಮಂಡಳ ರಾಜಿನಾಮೆ ಕೊಡಬೇಕಾಯಿತು. ರಾಜಪ್ರಮುಖರ ಮತ್ತು ವಿರೋಧೀ ಗುಂಪಿನೊಂಗೆ ಒಪ್ಪಂದವಿಲ್ಲದೆ ರಾಜಪ್ರಮುಖರ ಭಾಷಣ ನಡೆಯುತ್ತಿರುವಾಗಲೇ ವಿರೋಧೀ ಪಕ್ಷದ 32 ಜನರು ಸಭಾತ್ಯಾಗ ಮಾಡಿದರು. ಸಂಯುಕ್ತರಂಗದಲ್ಲಿ 39 ಸದಸ್ಯರೂ ಇರುವರು. ವಿರೋಧಿ ಪಕ್ಷದ ಧುರೀಣರು ಒಂದು ಹೇಳಿಕೆಯನ್ನು ಕೊಡಿಸಿ ಅದರಲ್ಲಿ "ನಿನ್ನಿನ ದಿನ ಶಾಸನ ಸಭೆಯ ಅಧ್ಯಕ್ಷರ ಚುನಾವಣೆಯಲ್ಲಿ ಕಾಂಗ್ರೆಸ ಪಕ್ಷವು ಸೋತಿದೆ. ಕೂಡಲೇ ನಾನು ರಾಜಪ್ರಮುಖರಿಗೆ ಈ ವಿಷಯವನ್ನು ತಿಳಿಸಿದ್ದರೂ ರಾಜಪ್ರಮುಖರ ಭಾಷಣವನ್ನು ಶಾಸನ ಸಭೆಯಲ್ಲಿ ಅಲ್ಪಸಂಖ್ಯಾಕರ ಪಕ್ಷವಾದ ಕಾಂಗ್ರೆಸ್ಸು ಸಮರ್ಥಿಸಲು ಶಕ್ಯವಿಲ್ಲದ ಪರಿಸ್ಥಿತಿ ಇದ್ದರೂ ಶಾಸನ ಸಭೆಯಲ್ಲಿ ಭಾಷಣ ಮಾಡಲು ಬಂದುದನ್ನು ನೋಡಿ ಸಭಾತ್ಯಾಗದ ಹೊರತು ನಮಗೆ ಅನ್ಯ ಮಾರ್ಗವೇ ಇರಲಿಲ್ಲ. ಶಾಸನ ಸಭೆಯಲ್ಲಿ ಬಹುಸಂಖ್ಯಾಕ ಪಕ್ಷವು ನಮ್ಮದಿದ್ದರೂ ನಾವು ಅಲ್ಪಸಂಖ್ಯಾಕ ಪಕ್ಷವಾದ ಕಾಂಗ್ರೆಸಿಗೆ ತಲೆಬಾಗುವದು ಅವಮಾನಜನಕ ಕಾಂಗ್ರೆಸ ಪಕ್ಷಕ್ಕೆ ನಿಚ್ಚಳ ಬಹುಮತವಿದ್ದರೆ ಆಗ ಈ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ" ಎಂದರು.

ಪೆಪ್ಸು ರಾಜಪ್ರಮುಖರು ಪರಿಸ್ಥಿತಿಯನ್ನು ಚೆನ್ನಾಗಿ ಅರಿತುಕೊಂಡು ಸಂಯುಕ್ತರಂಗ ಪಕ್ಷದ ಧುರೀಣರಾದ ಸರದಾರ ಗಿಯಾನಸಿಂಗ ರೇರವಾಲರನ್ನು ಮಂತ್ರಿಮಂಡಳ ರಚಿಸಲು ಆಮಂತ್ರಿಸಿರುವರು. ಶ್ರೀ ರೇರವಾಲರು ರಾಜಪ್ರಮುಖರೊಡನೆ ಎರಡು ಗಂಟೆ ಮಾತುಕತೆಯಾಡಿ ಮಂತ್ರಿಮಂಡಳ ರಚಿಸಲು ಒಪ್ಪಿಕೊಂಡಿರುವರು. ಕಾಂಗ್ರೆಸ್ಸಿನ ಮುಖ್ಯ ಮಂತ್ರಿ ಕರ್ನಲ ರಘುವೀರ ಸಿಂಗರು ತಾ 18ರಲ್ಲಿ ತಮ್ಮ ಮಂತ್ರಿಮಂಡಳದ ರಾಜೀನಾಮೆಯನ್ನು ಒಪ್ಪಿಸಲಾಗಿ ಅದನ್ನು ರಾಜಪ್ರಮುಖರು ಸ್ವೀಕರಿಸಿದರು.

ಪೆಪ್ಸು ರಾಜಪ್ರಮುಖರು ಮತ್ತು ಪೆಪ್ಸು ಶಾಸನ ಸಭೆಯಲ್ಲಿಯ ಸಂಯುಕ್ತರಂಗದ ಧುರೀಣರಾದ ಸರ್ದಾರ ಜ್ಞಾನಸಿಂಗರು ರೇರವಾಲರು ತಾ 20ರಂದು ಸಂಸ್ಥಾನ ಶಾಖೆಯ ಮಂತ್ರಿ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಮತ್ತು ಕಾರ್ಯದರ್ಶಿ ಶ್ರೀ ಸಿ ಎಸ್. ವೆಂಕಟಾಚಾರಿಯವರನ್ನು ಭೇಟಿಯಾದರು. ಶ್ರೀ ರೇರವಾಲರಿಂದ ರಚಿಸಲ್ಪಡುವ ಮಂತ್ರಿ ಮಂಡಳದ ಸದಸ್ಯರ ಸಂಖ್ಯೆ ಮತ್ತು ಅದರ ಸ್ವರೂಪದ ಕುರಿತು ಚರ್ಚೆ ನಡೆಯಿತೆಂದು ಹೇಳಲಾಗಿದೆ. ಮೊನ್ನೆ ಸರದಾರ ಜ್ಞಾನಸಿಂಗರು ಮುಖ್ಯ ಮಂತ್ರಿಯಾಗಿ 4 ಜನರ ಮಂತ್ರಿ ಮಂಡಲ ರಚಿಸಿ ಅಧಿಕಾರ ಸ್ವೀಕಾರ ಮಾಡಿರುತ್ತಾರೆ.

ಕೋಲಾರ ಚಿನ್ನದ ಗಣಿಯಲ್ಲಿ

ಇದೇ ತಾ 19ರಂದು ಭಯಂಕರ ಸ್ಫೋಟವೊಂದು ಸಂಭವಿಸಿದ್ದು ಇಪ್ಪತ್ತು ಮಂದಿ ಕೆಲಸಗಾರರು ಮರಣ ಪಟ್ಟರೆಂದು ವರದಿಯಾಗಿದೆ.

ಲಂಡನಿನಲ್ಲಿ ಗಾಂಧಿ ಚಟುವಟಿಕೆ ಪ್ರದರ್ಶನ

ಅಲ್ಬರ್ಟ್ ಪೇಟೆನ ಬರ್ಕ ಕಾಯರನಲ್ಲಿರುವ ಅಣುಶಕ್ತಿ ಕಾರಖಾನೆಯ ಸಮೀಪದಲ್ಲಿ ಶಾಂತಿ ಸಾಧಕರ ತಂಡವೊಂದು ಇದೇ ತಾ 19ರಲ್ಲು 'ಗಾಂಧಿ ಚಟುವಟಿಕೆ' ಗಳೆಂಬ ಪ್ರದರ್ಶನವನ್ನು ನಡೆಸಿ ತೋರಿಸಿದರು

ಕೆಲಸಗಾರರಿಗೆ ಪ್ರೊವಿಡೆಂಟ್ ಫಂಡ್ ಯೋಜನೆ

ಜವಳಿ, ಸಿಗರೇಟ್, ಕಬ್ಬಿಣ ಮತ್ತು ಉಕ್ಕು, ಸಿಮೆಂಟ್, ಕಾಗದ, ಎಂಜನಿಯರಿಂಗ್, ಈ ಉದ್ದಿಮೆಗಳಲ್ಲಿ ದುಡಿಯುವ ಕೆಲಸಗಾರರಿಗೆ ಪ್ರೊವಿಡೆಂಟ್ ಫಂಡ್ ಕಾನೂನನ್ನು ಮುಂಬರುವ ಜುಲೈ ತಿಂಗಳಾರಂಭದಿಂದ ಅನ್ವಯಿಸುವ ಕುರಿತು ತಯಾರಿಸಿದ ಯೋಜನೆಯ ಕರಡು ಸಿದ್ಧವಾಗಿದೆ ಎಂದು ತಿಳಿದುಬರುತ್ತದೆ.

50 ಕೆಲಸಗಾರರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸಗಾರರಿರುವ ಫ್ಯಾಕ್ಟರಿಗಳಿಗೆ ಈ ಯೋಜನೆಯು ಅನ್ವಯಿಸುವುದು. ಒಂದು ವರುಷ ನೌಕರಿ ಮಾಡಿದ ಹಾಗೂ ತಿಂಗಳಿಗೆ ರೂ. 300ಕ್ಕಿಂತ ಕಡಿಮೆ ಮೂಲ ವೇತನವಿರುವ ಕೆಲಸಗಾರರಿಗೆ ಈ ಯೋಜನೆಯು ಅನ್ವಯಿಸುವುದು. ಕಾರಖಾನೆಯ ಒಡೆಯನು ಪ್ರೊವಿಡೆಂಟ್ ಫಂಡಿಗೆ ಕೊಡುವ ವಂತಿಗೆಯ ಹಣವು ಕೆಲಸಗಾರನಿಗೆ ದೊರೆಯಬೇಕಾದರೆ ಅವನು ಒಂದೇ ಕಾರಖಾನೆಯಲ್ಲಿ ಕಾಯದೆಯಲ್ಲಿ ನಿರ್ದಿಷ್ಟ ಪಡಿಸಿದಷ್ಟು ವರ್ಷ ಕೆಲಸ ಮಾಡಬೇಕೆಂಬ ನಿರ್ಬಂಧವಿಲ್ಲ. ನೌಕರಿಯಿಂದ ನಿವೃತ್ತನಾದ ನಂತರ ಕೆಲಸಗಾರನಿಗೆ ಪೂರ್ತಿಯಾಗಿ ಪ್ರೊವಿಡೆಂಟ್ ಫಂಡ್ ಸಿಗುವುದು ಅವನು ಐದು ವರ್ಷ ಕನಿಷ್ಟ ಕೆಲಸ ಮಾಡಿರಬೇಕು. ಶಾರೀರಿಕ ಮಾನಸಿಕ ದುರ್ಬಲತೆಯಿಂದ ಅವನು ಐದು ವರ್ಷಗಳ ಅವಧಿಯ ಮೊದಲೇ ಕೆಲಸದಿಂದ ನಿವೃತ್ತನಾದರೆ ಅಂಥ ಪ್ರಸಂಗದಲ್ಲಿ ಅವನಿಗೆ ಪ್ರೊವಿಡೆಂಟ್ ಫಂಡು ತಾನು ಇಟ್ಟದ್ದು ಕಾರಖಾನೆಯ ಒಡೆಯನು ಕೊಟ್ಟ ಮೊಟ್ಟಿಗೆ ಸಹಿತ ಪಡೆಯಲು ಬರುವುದು.

ಮಂತ್ರಿಗಳೇ ಗುಡಿಸಿದರು.

ಹೈದರಾಬಾದು ಸಮಾಜ ಸೇವಾಸಂಘದ ಶ್ರೀ ಶಂಕರದೇವರು ಸಿಕಂದರಾಬಾದಿನ ಖಾಮಾವತ್ ಹರಿಜನ ಕೊಲನಿಯನ್ನು ತಾ 18ರಂದು ಸಂದರ್ಶಿಸಿ, ಕೊಲನಿಯನ್ನು ಶುಚಿ ಇಡಸುವುದು ಹೇಗೆಂಬುದನ್ನು ತಾನೇ ಸ್ವತಹಾ ಒಂದು ಓಣಿಯನ್ನು ಗುಡಿಸಿ ತೋರಿಸಿದರು.

ಭಾರತ ವೈದ್ಯಕೀಯ ಮಂಡಳದ ಬೇಡಿಕೆ

ಭಾರತದಲ್ಲಿ ಒಂದೇ ಒಂದು ಆಧುನಿಕ ಔಷಧ ಪದ್ಧತಿ ಇರಬೇಕೆಂದೂ ವೈದ್ಯಕೀಯ ಮಂಡಳವು ಹಾಕಿ ಕೊಟ್ಟ ಕನಿಷ್ಟ ಪ್ರಮಾಣವುಳ್ಳದ್ದಾದರೂ ಆಗಿರಬೇಕೆಂದು ಹೊಸ ದಿಲ್ಲಿಯಲ್ಲಿ ಭಾರತ ವೈದ್ಯಕೀಯ ಮಂಡಳವು ಡಾ| ಸಿ. ಎಸ್. ಪಾಟೀಲರ ಅಧ್ಯಕ್ಷತೆಯಲ್ಲಿ ಸೇರಿ ಒಂದು ನಿರ್ಣಯವನ್ನು ಸ್ವೀಕರಿಸಿರುವುದು. ವೈದ್ಯಕೀಯ ಶಿಕ್ಷಣ ಕೊಡುವಾಗ ದೇಶಿ ಔಷಧ ಪದ್ಧತಿ ಇಲ್ಲವೇ ಹೋಮಿಯೋಪಥಿ ಶಿಕ್ಷಣ ಕೊಡಬೇಕೆಂಬುದನ್ನು ವಿರೋಧಿಸಲಾಯಿತು.

ಸೇಲಂಗೆ ಕಾವೇರಿ ನದಿಯ ನೀರು

ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರ್ಯರು ಇದೇ ತಾ. 20ರಂದು ಮೆಟ್ಟೂರಿನಿಂದ ಸೇಲಂ ಟಾನಿಗೆ ಕಾವೇರಿ ನದಿಯ ನೀರನ್ನೊದಗಿಸುವ ಸಮಾರಂಭವನ್ನು ಮಹಾಜನ ಸಮುದಾಯದ ಮುಂದೆ ನೆರವೇರಿಸಿದರು. ಅಂದು ಪೂರ್ವಾಹ್ನ ಜರಗಿದ ಸಮಾರಂಭಕ್ಕೆ ರಾಜಾಜಿಯವರು ಒಂದು ಸಂದೇಶವನ್ನು ಕಳುಹಿಸಿ ಈ ರೀತಿ ಹೇಳಿರುವರು. 'ಕಾವೇರಿಯಮ್ಮನನ್ನು ಪ್ರಾರ್ಥಿಸಿ ಸೇಲಮಿಗೆ ಸ್ವಾಗತಿಸಿರಿ. ನೀರು ದೇವರು, ಅತನೆ ನೀರಿನ ರೂಪದಲ್ಲಿ ನಮ್ಮೆಲ್ಲರನ್ನು ಜೀವಿಸುವಂತೆ ಮಾಡುವವನು. ಆದುದರಿಂದ ನೀರನ್ನು ಕುಡಿಯುವಾಗಲೂ, ಸ್ನಾನ ಮಾಡುವಾಗಲೂ ಜಲಾಮಯ ಪರಮಾತ್ಮನನ್ನು ಧ್ಯಾನಿಸಿರಿ.

ಪಡೆದ ಭೂದಾನವನ್ನು ಹಿಂದೆಕೊಡಿರಿ

ಶ್ರೀ ರಾಜಗೋಪಾಲಾಚಾರ್ಯರು ಇದೇ ತಾ. 20ರಂದು ಸೇಲಂನಿನ ಕಾಂಗ್ರೆಸ್ ಕಾರ್ಯಕರ್ತರೊಡನೆ ಮಾತುಕಥೆ ನಡೆಸುತ್ತಾ ಸರಕಾರದಿಂದ ರಾಜಕೀಯ ಸಂತ್ರಸ್ತರಾಗಿ ಭೂದಾನ ಪಡೆದವರು ಅತ್ಯಂತ ಸಂತೋಷದಿಂದ ಅದನ್ನು ಹಿಂತಿರುಗಿ ಕೊಡುವುದೊಳ್ಳಿತೆಂದೂ, ಬಡಜನರ ಸ್ವಾಧೀನವಿದ್ದುದನ್ನು ಕಿತ್ತುಕೊಂಡು ರಾಜಕೀಯ ಸಂತ್ರಸ್ತರಿಗೆ ಕೊಡಲಾಗಿದೆ ಎಂಬ ಅಪವಾದವನ್ನು ತೊಳೆದು ಕಾಂಗ್ರೆಸ್ ಪ್ರತಿಷ್ಠೆಯನ್ನೇ ಹೆಚ್ಚಿಸಬೇಕೆಂದು ವಿನಂತಿಸಿದರಾಗಿಯೂ ಹೇಳಲಾಗಿದೆ.

ಕಳ್ಳ ಸಾಗಾಟದಲ್ಲಿ ಹೆಂಗಸರ ಬುದ್ಧಿವಂತಿಕೆ

ರತ್ನಾಗಿರಿ ಎಂಬ ಹಡಗದಲ್ಲಿ ಗೋವೆಯಿಂದ ಮುಂಬಯಿಗೆ ಬಂದ ಇಬ್ಬರು ಮಹಿಳೆಯರಲ್ಲಿ [illegible] 500 ತೊಲೆ ಚಿನ್ನ ದೊರಕಿದೆ. ಈ ಚಿನ್ನವನ್ನು ಎಲೆ ಎಲೆಯಾಗಿ ಬಡಿದು ವಿಮಾನದ ಉಪ್ಪಿನ ಕಾಯಿಯಲ್ಲಿ ಬಚ್ಚಿಡಲಾಗಿದ್ದಿತು.

ಟಂಡನ್ನರು ಲೋಕ ಸಭೆಗೆ ಸ್ಪರ್ಧಿಸುವರು?

ಶ್ರೀ ಪ್ರಕಾಶರು ಮದ್ರಾಸದ ಗವರ್ನರರಾಗಿ ನೇಮಕ ಹೊಂದಿದ್ದರಿಂದ ತೆರವಾದ ಅಲಹಾಬಾದ ಪಶ್ಚಿಮ ಲೋಕ ಸಭೆಯ ಮತದಾರ ಸಂಘದಿಂದ ಶ್ರೀ ಪುರುಷೋತ್ತಮದಾಸ ಟಂಡನ್ನರು ಉಪ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ ಬಾಬು ಪುರುಷೋತ್ತಮದಾಸ ಟಂಡನ್ನರು ಸಾರ್ವತ್ರಿಕ ಚುನಾವಣೆಯಲ್ಲಿ ಒಂದು ಸ್ಥಳ ಕೊಡ ಮಾಡಿದ್ದಾಗ್ಯೂ ಸ್ಪರ್ಧಿಸಲು ನಿರಾಕರಿಸಿದ್ದರು. ಈಗ ಸ್ಪರ್ಧಿಸುವ ಮುಖ್ಯ ಉದ್ದೇಶವನ್ನು ವ್ಯಕ್ತಪಡಿಸುತ್ತಾ "ತಾವು ಲೋಕ ಸಭೆಗೆ ಹೋದರೆ ತಮಗೆ ಪ್ರೀತ್ಯಾಸ್ಪದವಿರುವ ವಿಷಯಗಳ ಸಾಧನೆಗೆ ಸಹಾಯ ಸಾಧ್ಯತೆಂದು ನನಗನ್ನಿಸುತ್ತದೆ" ಎಂದು ಹೇಳಿದರು.

ಭಾರತೀಯರಿಗೆ ಶ್ರೀಮತಿ ರೂಜವೆಲ್ಟರ ಪ್ರಶಸ್ತಿ

ಭಾರತದ ಸಂಚಾರವನ್ನು ಕೈಕೊಂಡಿದ್ದ ಶ್ರೀಮತಿ ಎಲಿನಾ ರೂಜವೆಲ್ಟರು ನ್ಯೂಯಾರ್ಕದಲ್ಲಿ ಇದೇ ತಾ 15ರಂದು ತಮ್ಮ ಪ್ರವಾಸದ ಅನುಭವಗಳ ಕುರಿತು ಮಾತನಾಡುತ್ತ, ಅಮೇರಿಕನರಾದ ನಾವು ಭಾರತೀಯರಿಂದ ಕಲಿಯಬೇಕಾದುದು ಬಹಳವಿದೆ ಎಂದರು.

ಡಾ| ರಾಧಾಕೃಷ್ಣನ್ ಉಪರಾಷ್ಟ್ರಪತಿ

ಭಾರತದ ಉಪರಾಷ್ಟ್ರಪತಿ ಪದವಿಗಾಗಿ ಡಾ| ರಾಧಾಕೃಷ್ಣನ್ ಉಮೇದ್ವಾರಿ ಅರ್ಜಿ ಸಲ್ಲಿಸಿದ್ದು ಬೇರೆ ಯಾರೂ ಉಮೇದ್ವಾರರಿಲ್ಲದ್ದರಿಂದ ಇವರು ಉಪರಾಷ್ಟ್ರಪತಿಗಳಾಗಿ ಆಯ್ಕೆಗೊಂಡಿದ್ದಾರೆ. ಇವರ ಉಮೇದ್ವಾರಿಕೆಯನ್ನು ಪಂ. ನೆಹರುಗಳು ಸೂಚಿಸಿದ್ದು ಶ್ರೀ ನಂದಾರವರು ಅನುಮೋದಿಸಿದ್ದರು. ಉಪರಾಷ್ಟ್ರಪತಿಗಳು ಮೇ 13ಕ್ಕೆ ಅಧಿಕಾರ ಸ್ವೀಕರಿಸಲಿರುವರು.

ಬೊಂಬಾಯಿ ಪ್ರಾಂತದ ಹೊಸ ಮಂತ್ರಿಮಂಡಳ

ಬೊಂಬಾಯಿಯ ನಿಯೋಜಿತ ಮುಖ್ಯಮಂತ್ರಿಗಳಾದ ಶ್ರೀ ಮೊರಾರಜಿ ದೇಸಾಯಿಯವರು 9ಜನರ ಮಂತ್ರಿಮಂಡಲವನ್ನು ರಚಿಸಿದ್ದಾರೆ. ಅದರಲ್ಲಿ ಶ್ರೀಗಳಾದ ಬಿ ಎಸ್. ಹಿರೆ, ದಿನಕರರಾವ್ ದೇಸಾಯಿ, ಡಾ| ಜಿವರಾಜ ಮೆಹ್ತಾ, ಎಮ್. ಪಿ. ಪಾಟೀಲ, ಜಿ ಡಿ ತಪಸೆ, ಎಮ್. ಎಮ್. ನಾಯಕ ನಿಂಬಾಳಕರ, ಶಾಂತಿಲಾಲ ಶಹಾ ಮತ್ತು ವೈ. ಬಿ. ಚವ್ಹಾಣ. ಅಂತು ಮುಖ್ಯ ಮಂತ್ರಿ ಕೂಡಾ ಒಂಭತ್ತು ಮಂತ್ರಿಗಳಿರುವರು. ಇವರ ಪೈಕಿ ಶ್ರೀ ಎಮ್. ಪಿ ಪಾಟೀಲರು ಕರ್ನಾಟಕದವರಿರುವರು.

ಸರ್ ಸ್ಟ್ಯಾಫರ್ಡ ಕ್ರಿಪ್ಸರ ಮರಣ

ಬ್ರಿಟನಿನ ಲೇಬರ್ ಪಕ್ಷದ ಶ್ರೇಷ್ಠ ಮುತ್ಸದ್ದಿಗಳೂ ಅರ್ಥಿಕ ತಜ್ಞರೂ ಉಕ್ಕಿನ ಅರ್ಥಿಕ ಮಂತ್ರಿಗಳೆಂದು ವಿಖ್ಯಾತರಾದವರೂ ಮಹಾಯುದ್ಧದ ಬಳಿಕ ಬ್ರಿಟನಿನ ಪುನಾರಚನೆಗಾಗಿ ಅವಿರತನಾಗಿ ಹೋರಾಡಿದವರೂ ಆದ ಸರ್ ಸ್ಟ್ಯಾಫರ್ಡ ಕ್ರಿಪ್ಸರು ತಾ 21ರಲ್ಲಿ ನಿಧನಗೊಂಡರು.

5ವರ್ಷ ಗ್ಯಾರಂಟಿಯ
ರೋಲ್ಡ್ ಗೋಲ್ಡ್ ಆಭರಣಗಳು

ಕಾತ್ತಿಗೆಯ ಸರ ರೂ. 12,
ಉದ್ದ ಚೈನು ರೂ. 7;
ಮ್ಯಾನರ್ ಚೈನ್ ರೂ. 5;
ಬಳೆ ಜೊತೆಗೆ ರೂ. 5.
Gemini Gold Covering Works
Main Guard Square. MADURAI. (5-1.)

ನಡಿಯುವ ಚಿತ್ರ
ಕಾಲಿಫುಟಾ
ಕಿಶೋರ್ ಸಾಹು, ಬಿನಾಕ್ಶಿ, ಆಶಾಮಥೂರ್, ಗೋಪ್,
ಬರುವ ಚಿತ್ರ— ಗಾವು
ಬರುತ್ತದೆ— ಜಾದು, ಅವಾರಾ. ಕೈದಿ,
ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್ ಉಡುಪಿ.

ಮಂಗಳೂರು

ರಾಷ್ಟ್ರೀಯ ಸಪ್ತಾಹದ ಮುಕ್ತಾಯ—ದಿನದಂದು ಶ್ರೀ ಕೆ. ಸದಾನಂದ ಹೆಗ್ಡೆಯವರ ಅಧ್ಯಕ್ಷತೆಯಲ್ಲೊಂದು ಸಭೆ ಜರಗಿ ಡಾ। ಯು. ಪಿ ಮಲ್ಯ, ಶ್ರೀಗಳಾದ ಎಚ್. ಎಸ್. ಶೆಟ್ಟಿ, ಎಸ್. ಎನ್. ಹೊಳ್ಳ, ಪಿ ಎಮ್. ಇದಿನಬ್ಬ ಮೊದಲಾದವರ ಸಾಂದರ್ಭೋಚಿತ ಭಾಷಣಗಳಾದುವು.

ವಾರ್ಷಿಕೋತ್ಸವ—ನವಭಾರತ ರಾತ್ರಿ ಶಾಲೆಯ ವಾರ್ಷಿಕೋತ್ಸವವು ಇದೇ ತಾ 13ರಲ್ಲು ಸಂಜೆ ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ತರರು ಶಾಲಾ ವರದಿಯನ್ನು ಓದಿದ ನಂತರ ಶ್ರೀ ಕೆ. ಎಲ್. ಎನ್. ರಾಯರು ಶಾಲೆಗೆ ಶುಭವನ್ನು ಕೋರಿ ಭಾಷಣವಿತ್ತರು. ಶ್ರೀ ಕೆ. ಎಮ್. ಆಳ್ವರೂ ಮಾತನಾಡಿದರು. ಬಳಿಕ ಕಲೆಕ್ಟರರ ಪತ್ನಿಯು ಬಹುಮಾನ ವಿತರಣೆ ಮಾಡಿದರು. ಈ ರಾತ್ರಿ ಶಾಲೆಯು ಮಾಡುತ್ತಿರುವ ಸೇವೆಯನ್ನು ಶ್ಲಾಘಿಸಿ ವಯಸ್ಕರ ಶಿಕ್ಷಣದ ಕುರಿತು ವಿದೇಶಗಳಲ್ಲಿ ಮಾಡಿದ ಪ್ರಯೋಗ—ಪ್ರಯೋಜನಗಳನ್ನು ವಿವರಿಸಿ ನಮ್ಮ ಜಿಲ್ಲೆಯಲ್ಲಿ ಈ ಕಾರ್ಯಕ್ರಮ ಸಫಲವಾಗಿಲ್ಲವೆಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಿಳಿಸಿದರು.

ಸಮಾಜವಾದಿ ಕಾರ್ಯಕರ್ತರ ಸಮ್ಮೇಳನವು—ಇದೇ ತಾ 13ರಲ್ಲು ಶ್ರೀ ಟಿ. ಮೋಹನ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಬಂದರ ಮಜೂರರ ಮುಷ್ಕರಕ್ಕೆ ಬೆಂಬಲವೀಯುವ, ಒಕ್ಕಲಿಗರ ಮಸೂದೆಯನ್ನೂ ತಕ್ಷಣದಲ್ಲಿ ಒಂದು ಸ್ತಂಭನ ಮಸೂದೆಯನ್ನೂ ತರಬೇಕೆಂದು ಸರಕಾರದವರನ್ನು ಕೇಳುವ, ಬಂಧನದಲ್ಲಿರುವ ಶ್ರೀ ಡಿ. ಮುಲ್ಲೋರವರ ಬಿಡುಗಡೆಯಾಗಬೇಕೆನ್ನುವ ಠರಾವುಗಳಾದುವು.

ಸಾರ್ವಜನಿಕ ಸಭೆಯು—ತಾ 13ರಂದು ಕೇಂದ್ರ ಮೈದಾನದಲ್ಲಿ ಜರಗಿದಾಗ ಮೈಸೂರಿನ ಶ್ರೀ ಗೋಪಾಲ ಗೌಡ, ಎಮ್. ಎಲ್. ಎ, ಶಿವಮೊಗ್ಗದ ಶ್ರೀ ಡಿ. ಪುಟ್ಟಪ್ಪ ಒಡೆಯರ, ಹಾಸನದ ಶ್ರೀ ಗರೂಡ ಶರ್ಮ ಮತ್ತು ಮಂಗಳೂರಿನ ಶ್ರೀ ಎ. ಬಾಲಪ್ಪನವರು ಇಂದಿನ ರಾಜಕೀಯ ಪರಿಸ್ಥಿಯ ವಿಚಾರವಾಗಿಯೂ ಸಮಾಜವಾದಿ ಪಕ್ಷದ ಧೋರಣೆಯ ವಿಚಾರವಾಗಿಯೂ ಮಾತನಾಡಿದರು.

ಜನ್ಮ ದಿನಾಚರಣೆ—ಶ್ರೀ ರಾಮಕೃಷ್ಣ ಪರಮ[illegible] ನಂತರ ಜನ್ಮ ದಿನಾಚರಣೆಯು ಇದೇ ತಾ 13ರಲ್ಲು ಸಂಜೆ ಶ್ರೀ ರಾಮಕೃಷ್ಣ ಮಠದಲ್ಲಿ ಶ್ರೀ ಕೆ ಪರಮೇಶ್ವರ ಮಯ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಸೇಡಿಯಾಪು ಕೃಷ್ಣ ಭಟ್ ಮತ್ತು ವೈದ್ಯಗುರು ಎಮ್. ಆರ್. ಭಟ್ಟರು, ಪರಮ ಹಂಸ ಮತ್ತು ವಿವೇಕಾನಂದರಿಂದ ಭಾರತಕ್ಕೆ ಲಭಿಸಿದ ಗೌರವಾದಿಗಳನ್ನೆತ್ತಿ ಭಾಷಣವಿತ್ತರು.

ಬಂದರ ಮುಷ್ಕರ—ಕೆಲವು ಬಂಡಸಾಲೆಗಳ ಕೆಲಸಗಾರರು ಕೆಲಸಕ್ಕೆ ಹಾಜರಾಗಲು ಒಪ್ಪಿರುವುದಾದರೂ ಮುಷ್ಕರ ಸಂಪೂರ್ಣ ನಿಂತಿಲ್ಲ. ಇದೇ ತಾ 18ರಂದು ಕೆಲಸ ಮಾಡಲು ಒಪ್ಪಿಗೆ ಇದ್ದವರನ್ನು ಅತಂಕಪಡಿಸಿದರೆಂಬ ಕಾರಣದಿಂದ ಸುಮಾರು ಐವತ್ತು ಮಂದಿಯನ್ನು ಬಂಧಿಸಲಾಯಿತೆಂದೂ ಅವರಲ್ಲಿ ಕಮ್ಯುನಿಸ್ಟ್ ಮುಖಂಡ ಶ್ರೀ ಕೃಷ್ಣ ಸೆಟ್ಟರು ಒಬ್ಬರೆಂದೂ ತಿಳಿಯುತ್ತದೆ. ಬಂಧಿಸಲ್ಪಟ್ಟವರಲ್ಲಿ ಇಪ್ಪತ್ತನಾಲ್ಕು[illegible] ಜನರನ್ನು ಅದೇ ದಿನ ಬಿಡುಗಡೆ ಮಾಡಲಾಗಿದೆ ಎಂದು ತಿಳಿದು ಬರುತ್ತದೆ. ಮಜೂರರ ಮೇಲಣಗಿಯಾಗಿ ಮೈದಾನಿನಲ್ಲಿ ಸಾರ್ವಜನಿಕ ಸಭೆ ಜರಗಿ ಬಂಧಿಸಲ್ಪಟ್ಟವರನ್ನೆಲ್ಲಾ ಬಿಡುಗಡೆ ಮಾಡಬೇಕೆಂಬ ನಿರ್ಣಯವಾಯಿತು.

ಮಂಗಳೂರಲ್ಲಿ ಪಿ. ಟಿ. ಐ. ಸುದ್ದಿ ಸಂಸ್ಥೆಯ ಶಾಖೆಯೊಂದು—ಇತ್ತೀಚೆಗೆ ತೆರೆಯಲ್ಪಟ್ಟಿದ್ದು ಅದರ ಸಂಚಾಲಕರಾದ ಶ್ರೀ ಪಿ. ಸಿ. ಎ. ಅಡಿಯೋಡಿಯವರು ಇದೇ ತಾ. 18ರಂದು ಸಂಜೆ ಪತ್ರಿಕೋದ್ಯಮಿಗಳನ್ನು ಇತರ ಅಭ್ಯರನ್ನೂ ತಮ್ಮಲ್ಲಿಗೆ ಸ್ವಾಗತಿಸಿ 'ಟೆಲಿಪ್ರಿಂಟರ್' ಯಂತ್ರದ ಕೆಲಸ ಕಾರ್ಯದ ಪ್ರದರ್ಶನ ಮಾಡಿದರು. ಕೊಡಗಿನ ಚೀಫ್ ಕಮಿಶನರ್ ಶ್ರೀ ದಯಾಸಿಂಗ್ ಬೇಡಿ, ಶ್ರೀಗಳಾದ ಐ. ಸಿ. ಸುಬ್ಬಯ್ಯ, ಎನ್. ಮುಪ್ಪಪ್ಪ, ಜಿಲ್ಲಾ ಕಲೆಕ್ಟರ್ ಎ. ಆರ್., ರಾಜರತ್ನಂ, ಜಿಲ್ಲಾ ಜಡ್ಜ ಓ. ಟಿ. ರಾಮನ್ ನಯರ್, ಡಿ. ಎಸ್. ಪಿ. ಪಿ। ಸ್ವಾಮಿಯವರು ಹಾಜರಿದ್ದರು. ಉಪಾಹಾರವಾದ ಬಳಿಕ ಶ್ರೀ ಅಡಿಯೋಡಿಯವರು ಬೊಂಬಾಯಿಂದ ಪಿ. ಟಿ. ಐ. ಸಂಸ್ಥೆಯ ಸಂಚಾಲಕ ಶ್ರೀ ಭರತನ್, ಅವರು ಕಳುಹಿಸಿದ ಸಂದೇಶವನ್ನು ಅದಕ್ಕೆ ಶ್ರೀ ಬೇಡಿಯವರಿತ್ತ ಉತ್ತರವನ್ನು ಓದಿಹೇಳಿದರು ಆ ಮೇಲೆ ಶ್ರೀ ಪಿ. ಎಸ್. ಕಾಮತರು ಮಾತನಾಡುತ್ತಾ ಪಿ. ಟಿ. ಐ. ಸಂಸ್ಥೆಯಿಂದ ಜಿಲ್ಲೆಗೆ ಪ್ರಯೋಜನ ಸಿಗಲೆಂದೂ ತನ್ನ 'ನವಭಾರತ' ದೈನಿಕವು ಮುಂದಿನ ತಿಂಗಳಿಂದ ಇಂಗ್ಲಿಷ್ ದೈನಿಕಗಳ ಮಾದರಿಯಲ್ಲೇ ಹೊರಡುವುದೆಂದೂ ತಿಳಿಸಿದರು

'ಭಾರತದ ಭವಿಷ್ಯ'—ಎಂಬ ವಿಷಯದಲ್ಲಿ ಇದೇ ತಾ 21ರಂದು ಮಂಗಳೂರಿನ ಕೇಂದ್ರ ಸಹಕಾರಿ ಬೇಂಕಿನ ಕಟ್ಟಡದಲ್ಲಿ ದ. ಕ. ಜಿಲ್ಲೆಯಿಂದ ಲೋಕಸಭೆಗೆ ಸದಸ್ಯರಾಗಿ ಆಯ್ಕೆ ಹೊಂದಿದ ಶ್ರೀ ಬೆನಗಲ್ ಶಿವರಾಯರು ಭಾಷಣ ಮಾಡಿದರು.

ಗಾಯನ ಕಚೇರಿ—ಗ್ವಾಲಿಯರದ ಸಂಗೀತ ತಜ್ಞ ಶ್ರೀ ತುಳಪುಳೆಯವರು ಮಂಗಳೂರಿಗೆ ಆಗಮಿಸಿದ್ದು ಇದೇ ತಾ. 18ರಂದು ಸಂಜೆ ರಾವ್ ಬಹದ್ದೂರ್ ಎನ್. ಎಸ್. ಅಧ್ಯಂತಾಯರಲ್ಲಿ ಅವರ ಸುಶ್ರಾವ್ಯ ಗಾಯನ ಕಚೇರಿ ನಡೆಯಿತು. ಅನೇಕ ಸಂಗೀತ ಪ್ರಿಯರು ಆಹ್ವಾನಿಸಲ್ಪಟ್ಟಿದ್ದರು

ಶರಾಬಿನ ಪತ್ತೆ—ಕಸ್ಟಮ್ಸ್ ಪ್ರಿವೆಂಟಿವ್ ಇನ್ಸ್‌ಪೆಕ್ಟರ್ ಶ್ರೀ ಕೊಟ್ಟಾರಿ ಮಾಧವ ಪೈ ಮತ್ತು ಅವರ ಸಿಪಾಯಿಗಳು ಇದೇ ತಾ. 17ನೆ ನಡುರಾತ್ರೆ, ಬೆಂಗರೆಯಲ್ಲಿ ಚಿಕ್ಕ ದೋಣಿಯಿಂದಿಳಿಸಲ್ಪಡುತ್ತಿರುವ ಇಪ್ಪತ್ತೈದು ಬಾಟ್ಲಿ ಶರಾಬನ್ನು ವಶಪಡಿಸಿಕೊಂಡರು ಇನ್ಸ್‌ಪೆಕ್ಟರರು ತಮ್ಮ ಸಿಪಾಯಿಗಳೊಂದಿಗೆ ಆ ಘಟನೆ ನಡೆದ ಸ್ಥಳದಲ್ಲಿ ಅವಿತು ಕೊಂಡಿದ್ದು, ದೋಣಿಯು ದಡ ಮುಟ್ಟುತ್ತಲೇ ಎದುರಿಂದ ಬಂದು ಮುತ್ತಿದರು. ಶರಾಬು ಮರ್ಮಗೋವೆಯಿಂದ ಕಳ್ಳಸಾಗಣೆಯಿಂದ ಸಾಗಿಸಿ ತಂದುದೆಂದು ತಿಳಿಯಲಾಗಿದೆ.

ಮುಷ್ಟಿಯುದ್ಧ— ಮಣ್ಣಗುಡ್ಡೆಯ 'ಟಿಪ್ ಟೊಪ್' ಗ್ರೌಂಡ್ಸಿನಲ್ಲಿ ಇದೇ ತಾ. 16ರಂದು ರಾತ್ರೆ ಮಂಗಳೂರಿನ ಶ್ರೀ ಮಹಾಬಲ ಸೆಟ್ಟಿ ಮತ್ತು ಬೆಂಗಳೂರಿನ ಶ್ರೀ ಉಮರ್ ಗಾರು ಇವರಿಗೂ ಬೊಕ್ಸಿಂಗ್ ಪಂದ್ಯಾಟ ನಡೆದಾಗ ಶ್ರೀ ಮಹಾಬಲ ಸೆಟ್ಟರು ಗೆದ್ದರು.

ಬಂಟರ ಯಾನೆ ನಾಡವರ ಸಂಘದ ಮಹಾ ಸಭೆಯು — ತಾರೀಕು 13-4-52ರಲ್ಲಿ ಜರಗಿದಾಗ ದಿವಂಗತ ವಕೀಲ್ ಶ್ರೀ ಕೆ. ರಾಮ ಸೆಟ್ರು ಸಂಘಕ್ಕೆ ದೀರ್ಘಕಾಲದಿಂದ ಮಾಡಿದ ಸೇವೆಗಾಗಿ ಕೆಲವು ಸ್ವಜಾತಿ ಗೃಹಸ್ಥರು ಸಂಘದ ಪ್ರೆಸಿಡೆಂಟರಿಗೆ ಸ್ವಜಾತಿ ಉಪಯೋಗದ ಫಂಡ್ [Community Purse] ಆಗಿ ಕಳುಹಿಸಿದ 1500/– ರೂಪಾಯಿಗಳನ್ನು ಸ್ವೀಕರಿಸಿತು. ಈ ಫಂಡ್ ಸ್ಥಾಪಿತವಾದ ವಿಷಯ ಪತ್ರಿಕೆಗಳಲ್ಲಿ ಪ್ರಕಟಿಸಿ ವಂತಿಕೆಗಳನ್ನು ಪಡೆದು ಫಂಡನ್ನು ವರ್ಧಿಸಬೇಕಾಗಿ ನಿಶ್ಚೈಸಿತು. ಈ ನಿಧಿಗೆ ಶ್ರೀ ಕೆ. ಸುಂದರರಾಮ ಶೆಟ್ರು ತಾನು ರೂಪಾಯಿ 250/–ನ್ನು ಕೊಡುತ್ತೇನಾಗಿ ವಾಗ್ದಾನವಿತ್ತಿದರು.

ಮೇಲಿನ ಫಂಡಿಗೆ ವಂತಿಕೆ ಕೊಡಲಿಕ್ಕೆ ಇಷ್ಟವಿರುವವರು ಸಂಘದ ಪ್ರೆಸಿಡೆಂಟ್ ಇಲ್ಲವೆ ಕೋಶಾಧಿಕಾರಿಗಳಿಗೆ ಕಳುಹಿಸಬಹುದು ಎಂದು ಸಂಘದ ಕಾರ್ಯದರ್ಶಿ ಶ್ರೀ ಕೆ. ಸುಂದರರಾಮ ಶೆಟ್ಟಿ, ಎಡ್ವೋಕೇಟ್ ಬಂಟರ ಯಾನೆ ನಾಡವರ ಸಂಘ, ಇವರು ತಿಳಿಸುತ್ತಾರೆ.

ಕೋಟಾಡಿ—ಸ್ಥಳೀಯ ಮಹಾತ್ಮಾ ಗಾಂಧಿ ಹಿಂದೀ ಶಾಲೆಯಲ್ಲಿ ಇದೇ ತಾ. 20ರಲ್ಲು ಹಿಂದೀ ಪ್ರೇಮಿಗಳ ಸಭೆ ಸೇರಿ 'ಹಿಂದೀ ಪ್ರೇಮಿ ಮಂಡಲ'ದ ಸ್ಥಾಪನೆಯಾಯಿತು. ಶ್ರೀಗಳಾದ ಬಿ. ಎಲ್. ಅಡಿಗರು ಅಧ್ಯಕ್ಷರಾಗಿಯೂ ವಿ. ನಾರಾಯಣ ಸೆಟ್ಟಿ ಮತ್ತು ಬಿ. ಲಕ್ಷ್ಮೀನಾರಾಯಣ ಭಟ್ಟರು ಜತೆಕಾರ್ಯದರ್ಶಿಗಳಾಗಿಯೂ, ಎ. ಕೃಷ್ಣ ಮೂರ್ತಿ ಭಟ್ಟ, ಬಿ. ಪರಮೇಶ್ವರ ಭಟ್ಟ, ಶ್ರೀನಿವಾಸ ನಾಯಕ, ಕೆ. ಶ್ಯಾಮ ಬಾಯರಿ, ಕೆ. ರಾಮ ನಾಯಕ, ಬಿ ಶಂಕರ ಸೆಟ್ಟಿ—ಇವರು ಸದಸ್ಯರಾಗಿಯೂ ಇರುವ ಕಾರ್ಯ ನಿರ್ವಾಹಕ ಮಂಡಳಿಯ ರಚನೆಯಾಯಿತು.

ಎಳಜಿತ—ಬೋರ್ಡು ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಇದೇ ತಾ. 13ರಲ್ಲು ಕುಂದಾಪುರ ರೇಂಜಿನ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಬಿ. ಪಿಂಟೋರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಸಿ. ಪಟ್ವಾಧಿ ಸೀತಾರಾಮಯ್ಯನವರು ಸ್ವಸ್ತಿವಾಚನ ಮಾಡಿದರು. ಸಭಿಕರ ಪರವಾಗಿ ಶ್ರೀ ನಾರಾಯಣ ಕಾಮತರು ಮಾತನಾಡಿದರು.

ಪಡುಕಳ್ತೂರು—ಇಲ್ಲಿಯ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಇದೇ ತಾ. 11ರಲ್ಲು ಜರಗಿದಾಗ, ಕುಶಲವ, ಕನ್ನಡ ಸಂಗೀತ ನಾಟಕ, 'ವಿದ್ಯೆದ ತಾದಿ' ತುಳುನಾಟಕಗಳ ಅಭಿನಯಿಸಲಾಯಿತು. ಶ್ರೀ ಕೆ. ಎಲ್ಲಪ್ಪ ಹೆಗ್ಡೆಯವರು ಸಾಂದರ್ಭೋಚಿತ ಮಾತುಗಳನ್ನಾಡಿದರು.

ಹೇರೂರು—ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯ ವರ್ಧಂತಿ ಸಮಾರಂಭವು ಇದೇ ತಾ 12ರಲ್ಲು ಉಡುಪಿ ಟ್ರೈನಿಂಗ್ ಶಾಲಾ ಹೆಡ್ಮಾಸ್ತರ್ ಶ್ರೀ ಯು. ಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನ, ಸಭಿಕರ ಮಾತುಗಳಾದ ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಶಾಲೆಯು ಇನ್ನು ಮೂರು ವರುಷಗಳೊಳಗೆ ಹೈಯರ್ ಪ್ರಾಥಮಿಕ ಶಾಲೆಯಾಗಿ ಪರಿಣಮಿಸುವಂತೆ ಶ್ರೀ ದೇವರನ್ನು ಪ್ರಾರ್ಥಿಸಿದರು. ಶಾಲಾ ಬಾಲಕರು "ಮಾರ್ಕಂಡೇಯ ಚರಿತ್ರೆ" ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸಿದರು. ಪಾರಿತೋಷಕ ವಿತರಣೆಯೊಂದಿಗೆ ಸಭೆಯು ಕೊನೆಗೊಂಡಿತು.

ಫಲಿಮಾರು—ಇಲ್ಲಿಯ ಬೋರ್ಡು ಹಾ। ಎ। ಶಾಲೆಯ ವರ್ಷಾವಧಿ ಪರೀಕ್ಷೆಯು ಕಳೆದ ತಾ 9 ಮತ್ತು 10ರಲ್ಲು ಉಡುಪಿ ದಕ್ಷಿಣ ಶ್ರೇಣಿ ಡೆಪ್ಯುಟಿ ಇನ್ಸ್‌ಪೆಕ್ಟರರಿಂದ ಜರಗಿಸಲ್ಪಟ್ಟಿತು. ಫಲಿಮಾರು ಕೇಂದ್ರವು ಹೈಸ್ಕೂಲು ತೆರೆಯುವರೆ ಯೋಗ್ಯ ಕೇಂದ್ರವಾಗಿರುವುದೆಂದು ಪರೀಕ್ಷಾಧಿಕಾರಿಗಳು ಅಭಿಪ್ರಾಯ ಪಟ್ಟಿರುವರೆಂದು ಓರ್ವ ಬಾತ್ಮಿದಾರರು ಬರೆಯುತ್ತಾರೆ.

ಹಿರಿಯಡಕ—ಸ್ಥಳೀಯ ಮಹತೋಭಾರ ಶ್ರೀ ವೀರಭದ್ರ ಸ್ವಾಮಿ ಸನ್ನಿಧಿಯಲ್ಲಿ ಇದೇ ತಾ 9-5-52 ಮೊದಲ್ಗೊಂಡು ತಾ 11-5-52 ಬುಧವಾರದ ವರೆಗೆ ಸಂಪ್ರದಾಯ ಪ್ರಕಾರ ಶ್ರೀ ಮನ್ಮಹಾ ರಥೋತ್ಸವ ಕಾರ್ಯಕ್ರಮಗಳು ಜರುಗುವವು.

ಸುಬ್ರಹ್ಮಣ್ಯ—ಶ್ರೀ ಸುಬ್ರಹ್ಮಣ್ಯ ಸಂಪುಟ ನರಸಿಂಹ ದೇವರ ಸನ್ನಿಧಿಯಲ್ಲಿ ವರ್ಷಂಪ್ರತಿ ನಡೆಯುವ ಶ್ರೀ ನರಸಿಂಹ ಜಯಂತಿ ಮಹೋತ್ಸವವು ತಾ 6-5-52ರಲ್ಲಿ ಪ್ರಾರಂಭವಾಗಿ ತಾ 10-5-52ರಲ್ಲು ಅವಭೃತೋತ್ಸವ, ವಸಂತ ಪೂಜೆಯೊಂದಿಗೆ ಮುಕ್ತಾಯವಾಗಲಿರುವುದು.

ಕುಂಬಳೆ—ಇದೇ ತಾ 17ರಂದು ರಾತ್ರಿ ಮಾಯಿಪಾಡಿ ಬುನಾದಿ ತರಬೇತಿ ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಬೀಳ್ಕೊಡು ಸಮಾರಂಭವು ಶ್ರೀ ಕೆ. ರಾಮಕೃಷ್ಣ ಶೆಟ್ಟಿ ಅಧ್ಯಕ್ಷತೆಯಲ್ಲಿಯೂ ಯಕ್ಷಗಾನ ಕೂಟವೊಂದು ಶ್ರೀ ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿಯೂ ಜರಗಿದವು.

ಕಡೇಕಾರು—ಶ್ರೀ ಮಹಾಗಣಪತಿ ಶಾಲೆಯ ರಜತೋತ್ಸವವು ತಾ. 19ರಲ್ಲಿ ಶ್ರೀ ಎಚ್. ಸಂಜೀವ ರಾವ್, ಬಿ. ಎ. ಎಲ್.ಟಿ. ಯವರ ಅಧ್ಯಕ್ಷತೆಯಲ್ಲಿಯೂ ಹಳೆ ವಿದ್ಯಾರ್ಥಿ ಸಂಘದ ವರ್ಧಂತಿಯು ತಾ. 20ರಲ್ಲಿ ಡಾ. ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲೂ ವಿಜೃಂಭಣೆಯಿಂದ ಜರಗಿದವು.

ಕುಂದಾಪುರ—ಬೋರ್ಡ್ ಹೈಸ್ಕೂಲಿನ ಹಳೆವಿದ್ಯಾರ್ಥಿ ಸಂಘದ ವರ್ಧಂತಿಯು ತಾ 20ರಲ್ಲಿ ಶ್ರೀ. ಟಿ. ಎ. ಪೈ, ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಜರಗಿ ಹಳೆವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ. ವೈ. ಮಂಜಯ್ಯ ಶೆಟ್ಟಿ ಎಂ. ಎಲ್. ಎ. ರವರು ಸ್ವಾಗತ ಭಾಷಣ ಮಾಡಿದರು. ಶ್ರೀ. ಎಂ. ಎ ಹೆಗ್ಡೆಯವರು ವರದಿ ಓದಿದರು. ಭವಾನ್ಯವತಿ ಶ್ರೀ. ಮಾಧವಾಚಾರ್ಯ ಎಂ. ಎಲ್. ಎ. ವರು ಅಭಿಭಾಷಣ ಮಾಡಿದರು. ಶ್ರೀಮತಿ ಪ್ರೇಮಾ ಎ. ಪೈಯವರು ಬಹುಮಾನ ವಿತರಣೆ ಮಾಡಿದ ಮೇಲೆ ಅಧ್ಯಕ್ಷರ ಸ್ಫೂರ್ತಿದಾಯಕ ಭಾಷಣದೊಂದಿಗೆ ಸಭೆ ಮುಕ್ತಾಯವಾಯಿತು.

ಮದುವೆಯಾದ ಸ್ತ್ರೀಪುರುಷರ ಸಲುವಾಗಿ
ಬರೆಯಲ್ಪಟ್ಟ ಪುಸ್ತಕ

ಮಿತಸಂತತಿ

ಹುಟ್ಟುವ ಮಕ್ಕಳು ಆರೋಗ್ಯ ಸಂಪತ್ತು ಸೌಭಾಗ್ಯ ಮೊದಲಾದುವನ್ನು ಸಾಕಷ್ಟು ಪಡೆಯುವ ಹಾಗೆ ಹೆತ್ತವರು ಸಾಧಿಸಲಾಗುವಂತೆ ಅತ್ಯನುಕೂಲವಾದ ಪರಿಸ್ಥಿತಿ ಯಾವುದೋ ಅದರಂತೆ ದಂಪತಿಗಳು ಮಕ್ಕಳನ್ನು ಹೆರುವ ಹಾಗೆ ಅವಶ್ಯವಾದ ತತ್ವಗಳನ್ನು ಬೋಧಿಸುವ ನವೀನ ಪುಸ್ತಕ ಬೆಲೆ **0-6-0**

ಗುಪ್ತರೋಗ ನಿವಾರಣೆ

ಜನನೇಂದ್ರಿಯಗಳಿಗೆ ಸಂಬಂಧಿಸಿರುವ ರೋಗಗಳು ಹಳ್ಳಿಹಳ್ಳಿಗಳಲ್ಲಿ ಪಸರಿಸುತ್ತಲೇ ಇವೆ. ಇಂತಹ ರೋಗಗಳಿಂದ ನರಳುವ ಸ್ತ್ರೀಪುರುಷರ ಆರೋಗ್ಯ ರಕ್ಷಣೆಗಾಗಿ ಪ್ರಪಂಚದಲ್ಲಿನ ವಿದ್ವಾಂಸ ವೈದ್ಯರುಗಳ ಅನುಕೂಲ್ಯ ಸಿದ್ಧಾನುಭವ ಸೂಚಕ ಪುಸ್ತಕ ಬೆಲೆ **0-8-0**

ಪ್ರತಿಗಳಿಗೂ, ಪುಸ್ತಕಗಳ ಯಾದಿಗೂ, ಬರೆಯಿರಿ.
ನವಭಾರತ ಪುಸ್ತಕ ಭಂಡಾರ ಉಡುಪಿ.

ಹುಡುಗಿಯರ ವಿವಾಹದ ಸಮಸ್ಯೆ

(೧ನೇ ಪುಟದಿಂದ ಮುಂದುವರಿದುದು)

ತೀರ್ಮಾನಿಸಲು ಏತರ ಬಲದಿಂದ ಸಾಧ್ಯವಿದೆಯೋ ಅಂತಹ ಆರ್ಥಿಕ ರೂಪದಿಂದಲೂ ಅವರು ಸ್ವತಂತ್ರರಿರುವದಿಲ್ಲ.

ಈ ಎಲ್ಲ ಕಠಿಣ ಪರಿಸ್ಥಿತಿಯನ್ನು ನೋಡುತ್ತಿದ್ದರೂ, ಕೆಲ ಜನರು ಹುಡುಗಿಯರ ಶಿಕ್ಷಣದ ಹೆಸರನ್ನೇ ಎತ್ತುವದಿಲ್ಲ. ಶಿಕ್ಷಣಕ್ಕಾಗಿ ಅವರು ದುಡ್ಡನ್ನು ಖರ್ಚು ಮಾಡುವದಿಲ್ಲ. ಶಿಕ್ಷಣಕ್ಕೆ ಖರ್ಚಾಗುವಷ್ಟು ಹಣವನ್ನು ಅವರು ವಿವಾಹದ ಸಮಯಲ್ಲಿ ಹಾಳುಮಾಡಿ ತಮ್ಮ ಹೆಸರನ್ನು ಉಳಿಸಿಕೊಳ್ಳುತ್ತಾರೆ.

ಮಹಿಳಾ ಸಮಾಜದ ಇಂಥ ಕೇಡುಗಳನ್ನು ನೋಡಿ ಪ್ರಾಚೀನತೆಯ ಮತ್ತು ನವೀನತೆಯ ಜನರು ಕಂಡೂ ಕಾಣದವರಂತೆ ಮುನ್ನುಗ್ಗುತ್ತಾರೆ. ವರಪಕ್ಷದವರಿಗಂತೂ ಏನನ್ನೂ ಮಾಡುವ ಅವಶ್ಯಕತೆ ಇರುವದಿಲ್ಲ. ಏಕೆಂದರೆ ಅದರಿಂದ ಅವರಿಗೆ ಲಾಭವೇ ಆಗುತ್ತದೆ. ಇದರ ವಿಷಯಕ್ಕೆ ಕನ್ಯೆ ಪಕ್ಷದವರೇ ಉತ್ತರ ರೂಪವಾಗಿರುತ್ತಾರೆ. ಅವರು ವಿವಾಹಕ್ಕೆ ಇಷ್ಟೊಂದು ಮಹತ್ವಕೊಡುತ್ತಾರೆ. ಯಾವ ಬೆಲೆಯ ಮೇಲಾದರೂ ಕನ್ಯೆಯರನ್ನ ವಿವಾಹಿತರನ್ನಾಗಿ ಕಾಣಬಯಸುತ್ತಾರೆ. ಇದೇ ಪ್ರಕಾರ ವರಗಳ ಬೇಡಿಕೆಯನ್ನು ಪೂರೈಸಿ ಅವರು ಅನ್ಯಜನರಿಗೆ ಎಷ್ಟು ದೊಡ್ಡ ಕಂದಕವನ್ನು ತೋಡುತ್ತಾರೆಂಬ ವಿಚಾರವನ್ನು ಅವರು ಮಾಡುವದಿಲ್ಲ. ಕೊಡುವ ಸಾಮರ್ಥ್ಯವಿದ್ದ ಜನರು ಕೊಡುತ್ತಾರೆ. ಆದರೆ ಪಾಪ ಸಾಮರ್ಥ್ಯವಿಲ್ಲದ ಜನರು ಯಾರಯಾರಿಂದಲೋ ಸಾಲ ತೆಗೆದು ಅವರ ಬೇಡಿಕೆಯನ್ನು ಪೂರೈಸಲು ಪ್ರಯತ್ನಿಸುತ್ತಾರೆ. ಆದರೆ ಇದು ಪರಿಣಾಮವೇನಾಗುವದೆಂದರೆ ಒಂದು ಭಾರವನ್ನು ತಲೆಯ ಮೇಲಿಂದ ಇಳಿಸಿ ಮತ್ತೊಂದು ಭಾರವನ್ನು ತಲೆಯಮೇಲೆ ಹೇರಿಕೊಳ್ಳುತ್ತಾರೆ. ಇದೆಲ್ಲದಕ್ಕಾಗಿಯೇ ಬಹುಶಃ ಹುಡಿಗಿಯರು ತಾಯಿತಂದೆಗಳ ಭಾರವನ್ನು ಕಡಿಮೆ ಮಾಡುವದಕ್ಕಾಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳುವದು ಕಾಣುತ್ತಿರುತ್ತಿದೆ. ಆದರೆ ಈ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕು?

ಪ್ರತಿಯೊಬ್ಬ ನಾರಿಯೂ ತನ್ನ ತನ್ನ ಕರ್ತವ್ಯವನ್ನು ತಿಳಿದು, ಸ್ವಾರ್ಥವನ್ನು ತ್ಯಜಿಸಿ, ಧೈರ್ಯ ಮತ್ತು ಸಾಹಸದಿಂದ ಕೆಲಸಮಾಡಿದರೆ ಅಸಾಧ್ಯವಾಗಲಾರದು. ಮೊದಲು ತಾಯಿತಂದೆಗಳು ತಮ್ಮ ದೃಷ್ಟಿಕೋನವನ್ನು ಬದಲಿಸಿ ಮದುವೆಗೆ ಇಷ್ಟೊಂದು ಮಹತ್ವ ಕೊಡಬಾರದು. ವಿವಾಹವೇನೊ ಅವಶ್ಯಕವಿದೆ ಆದರೆ ಅದಕ್ಕೆ ಇಷ್ಟು ಬೆಲೆಕೊಡುವದು ಮಾತ್ರ ಯಾವ ತರದಿಂದಲೂ ಸರಿಯಾಗಲಾರದು.

ಶಿಕ್ಷಣ ಅವಶ್ಯವೆಂದು ತಿಳಿಯಲಾರದ ತಾಯಿ-ತಂದೆಗಳು ಬಹಳ ದೊಡ್ಡ ತಪ್ಪು ಮಾಡುತ್ತಾರೆ. ತಮಗೆ ಸಾಧ್ಯವಿದ್ದಷ್ಟು ತಮ್ಮ ಕನ್ಯೆಯರನ್ನು ಶಿಕ್ಷಿತರನ್ನಾಗಿ ಮಾಡುವದು ಅವರ ಕರ್ತವ್ಯ. ಅವರು ಕನ್ಯೆಯರಿಗೆ ಹೆಚ್ಚಿನ ಶಿಕ್ಷಣವನ್ನು ಕೊಡಿಸಿ ಹೆಚ್ಚು ಸ್ವತಂತ್ರರನ್ನಾಗಿ ಮಾಡಿದರೆ ಇನ್ನೂ ಒಳ್ಳೆಯದು.

ಸ್ತ್ರೀಯರೇ ರಾಷ್ಟ್ರ ನಿರ್ಮಾಪಕರೆಂಬುದನ್ನು ಅವರು ತಿಳಿದುಕೊಳ್ಳಬೇಕು. 'ನೆಪೋಲಿಯನ್'ನೂ ಹೇಳಿದ್ದನು- "ಒಳ್ಳೆಯ ತಾಯಂದಿರೇ ರಾಷ್ಟ್ರ ನಿರ್ಮಾಣವನ್ನು ಮಾಡಬಲ್ಲರೆಂದು." ಕೆಲಕೆಲವು ಅಶಿಕ್ಷಿತ ಸ್ತ್ರೀಯರು ರಾಷ್ಟ್ರದುನ್ನತಿಗೆ ಕಂಟಕ ಪ್ರಾಯರಾಗುತ್ತಾರೆ.

ತಾಯಿ ತಂದೆಗಳ ಜತೆಗೇ ವಿವಾಹ ಯೋಗ್ಯರಾದ ಕನ್ಯೆಯರು ಪುರುಷರ ಅನುಚಿತ ಬೇಡಿಕೆಗಳ ಎದುರಿಗೆ ತಲೆ ಬಗ್ಗಿಸಲಾರೆವೆಂದು ಪ್ರತಿಜ್ಞೆ ಮಾಡಬೇಕು. ಈ ಪ್ರತಿಜ್ಞೆಯನ್ನು ಪೂರ್ಣಮಾಡಲು ಶಿಕ್ಷಣವು ಅವರಿಗೆ ಸಹಾಯ ಮಾಡಲಾರದೆ? ಕನ್ಯೆಯ ತಂದೆ-ತಾಯಿಗಳು ವರಪಕ್ಷದವರ ಅನುಚಿತ ಬೇಡಿಕೆಯನ್ನು ತಿರಸ್ಕರಿಸಿದರೆ ಕನ್ಯೆಯು ತನ್ನ ಸ್ವಂತ ಬಲದಿಂದ ತನ್ನ ತಾಯಿ-ತಂದೆಗಳಿಗೆ ಸಹಾಯ ಮಾಡಿದರೆ ಒಳ್ಳೆಯದಾಗಲಾರದೆ! ಮತ್ತು ಇಂತಹ ಕೆಟ್ಟ ನಡತೆಯು ಅಂತ್ಯವಾಗಬಾರದೆ?

—"ನೈನಾ" ಜ ಕ

ರಾಜಕೀಯ ಸಂತ್ರಸ್ತರ ಭೂದಾನ—ಅವಧಾನತು ಪಡಿಸಲು ಸರಕಾರದ ಆಜ್ಞೆ

ರಾಜಕೀಯ ಸಂತ್ರಸ್ತರಿಗೆ ಕೊಡಲಾದ ಭೂಮಿಯ ಕೊಡುಗೆಯನ್ನು ರದ್ದುಗೊಳಿಸಬೇಕು ಮತ್ತು ಈ ತನಕ ಮಂಜೂರಾಗದಿದ್ದ ಈ ಭೂಮಿಗಳನ್ನು ಸಂಬಂಧಪಟ್ಟ ಅರ್ಜಿಗಳು ಕೈಸೇರುವ ತನಕ ತಡೆಹಿಡಿಯಬೇಕು ಎಂದು ಎಲ್ಲಾ ಜಿಲ್ಲಾ ಕಲೆಕ್ಟರಿಗೂ ಆಜ್ಞೆಗಳನ್ನು ಕಳುಹಿಸಲಾಗಿದೆ ಎಂದು ಮದ್ರಾಸು ಸರಕಾರದ ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರ್ಯರು ಹೇಳಿದರು.

ಉಡುಪಿಯ ಜನರು ಒಂದೇ ಸವನೆ ಸಂತೋಷಪೂರ್ವಕವಾಗಿ 'ತಾಜಮಹಾಲ್' ಕಡೆಗೇ ಧಾವಿಸುತ್ತಿರುವುದನ್ನು ಕಂಡು ಕೆಲವರಿಗೆ ಆಶ್ಚರ್ಯವಾಗಬಹುದು..........

ಅದಕ್ಕೆ ಕಾರಣ—

- ಪತ್ರಿಕೆಗಳಲ್ಲಿ ಪ್ರಚಾರಮಾಡಿದಂತೆಯೇ ಸಂಪೂರ್ಣ ಸಂತೃಪ್ತಿಗೊಳಿಸುವ ದಕ್ಷತೆ.
- ಸೌಲಭ್ಯಪೂರ್ಣ ನಿರ್ಪಾಡು ಮಾಡುವ ಸಾಮರ್ಥ್ಯ.
- ವಿನಯಪೂರ್ವಕ ಪ್ರಾಮಾಣಿಕ ಸೇವೆ ಸಲ್ಲಿಸುವ ಔದಾರ್ಯ.

ಇವೇ ನಮ್ಮ ಜನಪ್ರಿಯತೆಯ ಒಳಗುಟ್ಟು

ತಾಜಮಹಾಲ್.

ಉಡುಪಿಯ ಆದರ್ಶ ಉಪಹಾರ ಮಂದಿರ

ಸಿನೆಮಾ ಥಿಯೇಟರಿನ ಬಳಿ

ಉಡುಪಿ.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಶಾಲೆ, ಕಾಲೇಜುಗಳಿಗೂ ಸಹಕಾರಿ ಸಂಘ, ಮುನ್ಸಿಫ್ ಕೋರ್ಟುಗಳಿಗೂ ವೃಷಿಕ, ವರ್ತದಾರ, ವ್ಯಾಪಾರಿಗಳಿಗೂ ಬೇಕಾಗುವ ಉತ್ತಮ ಕಾಗದದಲ್ಲಿ ತಯಾರಿಸಿದ

ತರತರದ ಫಾರ್ಮುಗಳು, ರಶೀದಿ ಪುಸ್ತಕಗಳು, ಎಕೌಂಟ್ ಪುಸ್ತಕಗಳು, ಮಾಗ್ಗಿ ಪುಸ್ತಕಗಳು ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಟೆಂಡರ್ ನೋಟೀಸು

ಪುತ್ತೂರು ಔಟ್ ಏಜನ್ಸಿ

(ದ. ಕನ್ನಡ)

ಸದರ್ನ್ ರೈಲ್ವೆ ಖಾತೆಯು ಮಂಗಳೂರು ರೈಲ್ವೆ ನಿಲ್ದಾಣದಿಂದ ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ರೈಲ್ವೆ ಔಟ್ ಏಜನ್ಸಿಯನ್ನು ತೆರೆದು ಅದುದು ಮತ್ತು ರವಾನಾಗುವ ಪಾರ್ಸೆಲು ಹಾಗೂ ಸಾಮಾನು ಸಾಗಾಟಗಳ ಕಾರ್ಯವನ್ನು ಕೈಕೊಳ್ಳಲಿದ್ದು ಆ ಬಗ್ಗೆ ಟೆಂಡರುಗಳನ್ನು ಕರೆಯಲಾಗಿದೆ.

ಯಾವ್ಯಾವ ಕೆಲಸಗಳನ್ನು ನಿರ್ವಹಿಸತಕ್ಕದ್ದು ಮತ್ತು ಯಾವ ಶರ್ತಗಳನ್ನು ಪಾಲಿಸತಕ್ಕದು ಎಂಬಿತ್ಯಾದಿ ಕುರಿತು ಪೂರ್ಣ ವಿವರಗಳನ್ನು ಮತ್ತು ಟೆಂಡರ್ ಅರ್ಜಿ ಫಾರ್ಮುಗಳನ್ನು ಚೀಫ್ ಕಮರ್ಶಿಯಲ್ ಸುಪರಿಂಟೆಂಡೆಂಟ್, ಸದರ್ನ್ ರೈಲ್ವೆ, ಮದ್ರಾಸು—3, ಇವರ ಆಫೀಸಿನಿಂದ ಪಡೆಯಬಹುದು. ಈ ಬಗ್ಗೆ ಹತ್ತು ರೂಪಾಯಿಯನ್ನು ರವಾನಿಸತಕ್ಕದು. ಈ ಹಣವು ಎಂತಹ ಸಂದರ್ಭದಲ್ಲೂ ವಾಪಾಸು ಸಿಗಲಾರದು. ಇಂಪೀರಿಯಲ್ ಬೇಂಕಿನ ಯಾವುದೇ ಬ್ರಾಂಚಿನಲ್ಲಾಗಲೀ, ರಿಜರ್ವ್ ಬೇಂಕಿನಲ್ಲಾಗಲೀ ಅಥವಾ ಮದ್ರಾಸಿನ ಸದರ್ನ್ ರೈಲ್ವೆಯ ಫೈನಾನ್ಸಿಯಲ್ ಎಡ್ವೈಜರ್ ಎಂಡ್ ಚೀಫ್ ಎಕೌಂಟ್ಸ್ ಆಫೀಸರ್ ಕೂಡೆಯಾಗಲೀ ಸದರ್ನ್ ರೈಲ್ವೆ ಲೆಕ್ಕಕ್ಕೆ ಐದುನೂರು ರೂಪಾಯಿ ಮುಂಗಡ ಕೇವನ್ನಿಟ್ಟ ರಶೀದಿಯನ್ನು ಇನ್‌ಕಮ್ ಟೇಕ್ಸ್ ಕ್ಲಿಯರೆನ್ಸ್ ಸರ್ಟಿಫಿಕೇಟನ್ನೂ ಟೆಂಡರ್ ಫಾರ್ಮಿನೊಂದಿಗೆ ಲಗ್ತೀಕರಿಸತಕ್ಕದ್ದು.

'ಪುತ್ತೂರು ಔಟ್ ಏಜನ್ಸಿ ಬಗ್ಗೆ ಟೆಂಡರು' ಎಂದು ಕವರಿನ ಮೇಲೆ ಬರೆದು ಟೆಂಡರನ್ನು ತಾ 7-5-1952ನೆ ದಿನ ಸಂಜೆ ನಾಲ್ಕು ಗಂಟೆಯೊಳಗೆ ತಲ್ಪುವಂತೆ ಕಳುಹಿಸತಕ್ಕದ್ದು.

ಮೇಲೆ ಸೂಚಿಸಿದ ಸಮಯದ ನಂತರ ಬರುವ ಮತ್ತು ಮುಂಗಡ ಡಿಪೊಜಿಟ್ ಐದುನೂರು ರೂಪಾಯಿಗಳ ರಶೀದಿ ಮತ್ತು ಇನ್‌ಕಮ್ ಟೇಕ್ಸ್ ಕ್ಲಿಯರೆನ್ಸ್ ಸರ್ಟಿಫಿಕೇಟುಗಳಿಲ್ಲದ ಟೆಂಡರುಗಳನ್ನು ಪರಿಶೀಲಿಸಲಾಗುವುದಿಲ್ಲ.

ಸದರ್ನ್ ರೈಲ್ವೆಯ ಜನರಲ್ ಮೆನೇಜರು ಕಂಟ್ರಾಕ್ಟರನ್ನು ಆರಿಸುವರು ಮತ್ತು ಅವರ ತೀರ್ಮಾನವೇ ಅಖೈರು ತೀರ್ಮಾನವೆಂದು ಪರಿಗಣಿಸಲಾಗುವುದು. ಸ್ವೀಕರಿಸಲ್ಪಡದ ಟೆಂಡರುಗಳ ಡಿಪೊಜಿಟ್ ಹಣ ವಾಪಾಸು ಕೊಡಲಾಗುವುದು. ಸ್ವೀಕೃತವಾದ ಟೆಂಡರಿನ ಡಿಪೊಜಿಟನ್ನು ಆತನು ಕಂಟ್ರಾಕ್ಟು ಕೆಲಸಗಳನ್ನು ನಿರ್ವಹಿಸುವ ಬಗ್ಗೆ ಕೊಡಬೇಕಾದ ಸೆಕ್ಯೂರಿಟಿ ಡಿಪೊಜಿಟ್ ರೂಪಾಯಿ 2000/-ದ ಲೆಕ್ಕದಲ್ಲಿ ಜಮಾ ಖರೆಕೊಳ್ಳಲಾಗುವುದು.

ಟೆಂಡರ್ ಹಾಕುವ ಉಮೇದ್ವಾರಿಗೆ ಕನಿಷ್ಠಪಕ್ಷ ಆತನ ಹೆಸರಲ್ಲಿ ರಿಜಿಸ್ಟ್ರಿಯಾದ ಎರಡು ಲಾರಿಗಳಿದ್ದು ಮಂಗಳೂರು ರೈಲ್ವೆ ಸ್ಟೇಶನಿನಿಂದ ಪುತ್ತೂರು ತನಕ ಲಾರಿಗಳನ್ನು ಓಡಾಡಿಸಲು ಮದ್ರಾಸು ಸರಕಾರದಿಂದ ಅಧಿಕೃತವಿರತಕ್ಕದ್ದು. ಈ ಶರ್ತಕ್ಕೆ ವ್ಯತಿರಿಕ್ತವಾದ ಟೆಂಡರುಗಳನ್ನು ತೆಗೆದು ಹಾಕಲಾಗುವುದು.

ಚೀಫ್ ಕಮರ್ಶಿಯಲ್ ಸುಪರಿಂಟೆಂಡೆಂಟ್

ಮದ್ರಾಸು. 12-4-1952.

ಸ್ವೀಕಾರ ವಿಮರ್ಶೆ

ಋಷಿಪುಂಗವನ ಜೀವನ ಕಥನ

ಮಹಾ ಬ್ರಾಹ್ಮಣ—ದೇವುಡು ಬರೆದುದು. ಪ್ರಕಾಶಕರು—ಆನಂದ ಬ್ರದರ್ಸ್, ಬೆಂಗಳೂರು, ಕ್ರೌನ್, ಅಷ್ಟದಳಾಕಾರದ ೩೬೯ ಪುಟಗಳು, ಬೆಲೆ: ರೂಪಾಯಿ ೩-೮-೦

ನವಭಾರತದ ಹಿರಿಮೆ ಅರ್ವಾಚೀನ ವೈಭವಗಳು ಗಳಿಸಿದುದಲ್ಲ. ಪ್ರಾಚೀನ ಋಷಿಪುಂಗವರ ಜ್ಞಾನ ಸಂಪತ್ತು ಸಂಪಾದಿಸಿದುದು. ಜಗತ್ತಿನಲ್ಲಿ ಭಾರತಕ್ಕೊಂದು ಉಚ್ಚಸ್ಥಾನ-ಮಾನವಿದ್ದರೆ, ಅದು ನಮ್ಮ ಪುರಾತನ ಋಷಿಮುನಿಗಳು ಪಡೆದ ಆತ್ಮಾನುಭವ ದೀರಿದ ಸಂದೇಶದ ಕಾರಣಕ್ಕಾಗಿಯೆ. ವೈದಿಕ ಕಾಲದ ನಮ್ಮ ನಾಡು ಹೇಗಿದ್ದಿರಬಹುದೋ, ಅದರ ವಿವರಣೆ ಇತಿಹಾಸಜ್ಞರ ಪಾಲಿನ ಕೆಲಸ, ಆದರೆ ಆಗಿನಿಂದ ನಮಗೆ ಪರಂಪರೆಯಾಗಿ ಬಂದ ಜ್ಞಾನದ ಚಳುವಳಿಯನ್ನು ಅಲಕ್ಷಿಸುವುದು ಭೂಷಣವಲ್ಲ. ನಮ್ಮ ಸಂಸ್ಕೃತಿಯಲ್ಲಿ ಅಭಿರುಚಿ ಇಟ್ಟುಕೊಳ್ಳದವರಾಗಿ ನಾವು ಉಳಿದರೆ, ನಮ್ಮ ಭವಿತವ್ಯ ಶೂನ್ಯವೆನಿಸುವುದು. ಅಹಂಕಾರದ ಮಟ್ಟಕ್ಕೆ ಏರಿದ ಅಭಿಮಾನ ನಮಗೆ ಮಾತೃಭೂಮಿಯ ಮೇಲೆ, ಹಿರಿಯರ-ಗುರುಗಳ ಮೇಲೆ ಅವಶ್ಯ ಇರಬೇಕು. ಈ ದೃಷ್ಟಿಯಿಂದ ಗತವೈಭವಗಳ ವರ್ಣನೆಯೊಡನೆ ವಿಚಾರದರ್ಶನದಿಂದ ಪರಿಪೂರ್ಣವಾದ ಐತಿಹಾಸಿಕ ಬರವಣಿಗೆಗಳು ನಮಗೆ ಬೇಕಾಗಿವೆ. ದೇವುಡು ಬರೆದಿರುವ “ಮಹಾ ಬ್ರಾಹ್ಮಣ” ನಿಜಕ್ಕೂ ಒಂದು ಅದ್ಭುತ ಸೃಷ್ಟಿ ಎನಿಸುವುದು. ಮಾನವೀಯ ಪ್ರವೃತ್ತಿಯು ಅಂತರ್ಮುಖಿಯಾದಾಗ ಅದು ಪಡೆಯುವ ಅನಂತ ಸುಖಕ್ಕೆ, ಶಾಶ್ವತ ಆನಂದಕ್ಕೆ ಮಹಾಬ್ರಾಹ್ಮಣ ವಿಶ್ವಾಮಿತ್ರನ ಬದುಕು ನಿದರ್ಶನ. ನಿರಾಶೆಯ ನಡುವೆಯೂ ಆಶಾವಾದಿಯಾಗಿ, ಸದ್ಭಾವ, ಸುಚಾರಿತ್ರ್ಯದಿಂದ ಪೋಷಿತನಾಗಿ, ಗುಣಧರ್ಮಗಳ ಫಲವಾಗಿ ಬ್ರಹ್ಮರ್ಷಿ ಪದ ಪಡೆದ ವಿಶ್ವಾಮಿತ್ರ ಜಗದ್ವಂದ್ಯ ವ್ಯಕ್ತಿ. ಕ್ಷತ್ರಿಯರಾಜ ಕೌಶಿಕನು ವಸಿಷ್ಠನ ಹೋಮಧೇನು ನಂದಿನಿಯನ್ನು ಬಯಸಿ ನಿರಾಶನಾಗಿ, ಅದೇ ನಿರಾಶೆಯಿಂದಲೂ ಬ್ರಹ್ಮರ್ಷಿ ವಸಿಷ್ಠನ ಮೇಲಿನ ದ್ವೇಷದಿಂದಲೂ ಪ್ರೇರಣೆಗೊಂಡು ತಪಸ್ಸನ್ನಾಚರಿಸುವನು. ತಪಸ್ಸು ನಡೆದಂತೆ, ಮನಸ್ಸು ಉನ್ನತವಾಗುವುದು. ಅಂತಶ್ಚೈತನ್ಯ ಪ್ರಜ್ವಲಿಸುವುದು. ದ್ವೇಷ ಪ್ರೇಮವಾಗುವುದು. ಸೇಡಿಗಾಗಿ ಆಶ್ರಯಿಸಿದ ಪಥ ಮುಕ್ತಿ ಮಾರ್ಗವಾಗುವುದು. ಉಚ್ಚ ಸಂಸ್ಕಾರದಿಂದ ಅಭಿಭೂಷಿತನಾಗಿರುವ ರಾಜಾ ಕೌಶಿಕನು ವಿಶ್ವದ ಜನಜೀವಿಗಳಿಗೆಲ್ಲ ಮಿತ್ರನಾಗಿ ಬಾಳ್ವೆ ನಡೆಸಲು ಸಂಕಲ್ಪಿಸಿ ವಿಶ್ವಾಮಿತ್ರನಾಗುವನು. ಲೋಕ ಕಲ್ಯಾಣವನ್ನು ಹಾರೈಸಿ ಗಾಯತ್ರಿಯ ಸ್ವರೂಪ ದರ್ಶನಕ್ಕೆಳಸುವನು. ಮುಖ್ಯವಾಗಿ ಜಾತಿಯಿಂದ ಬಂದ ಗುಣವನ್ನು ದೀಕ್ಷೆಯಿಂದಲೂ ಪಡೆಯಬಹುದೆಂಬುದನ್ನು ನಿದರ್ಶನಪೂರ್ವಕವಾಗಿ ತೋರಿಸಿ, ವಸಿಷ್ಠರಿಗೆ ಸರಿಸಾಟಿ ಎನಿಸಿದ ಬ್ರಹ್ಮರ್ಷಿಯಾಗುವನು. ಇಂಥ ರೋಮಾಂಚಕ ಕತೆ, ಪೌರುಷ ಪ್ರೇರಕವಾದ ಕತೆ, ಅಭಿಮಾನಾಸ್ಪದವಾದ ಕತೆ ದೇವುಡು ಅವರ ಕಲಾವಂತಿಕೆಯಿಂದ ಕಾದಂಬರಿಯಾಗಿ ರೂಪಿತವಾಗಿದೆ. ರಾಮಾಯಣ ಮಹಾಭಾರತ, ಪುರಾಣ, ವೇದ ಮುಂತಾದ ಗ್ರಂಥಗಳಲ್ಲಿ ತುಂಡು ತುಂಡಾಗಿ ಉಪಲಬ್ಧವಿರುವ ಸಾಮಗ್ರಿಗಳನ್ನು ರಸವತ್ತಾಗಿ ಪೋಣಿಸಿಕೊಂಡು ವಿಶ್ವಾಮಿತ್ರನ ಬದುಕಿಗೆ ಒಂದು ಮೂರ್ತ ಸ್ವರೂಪವನ್ನೂ, ಸತ್ಯಾರ್ಥವನ್ನೂ ಕೊಡಲು ದೇವುಡು ಸಮರ್ಥರಾಗಿದ್ದಾರೆ, ಅವರ ಶೈಲಿ ಹೃದಯಂಗಮವಾಗಿದೆ. ಸರಳವೂ ಆಗಿದೆ. ಮಾತುಕತೆಗಳು ಪದಮೂರದೆ, ಆಪ್ತಾಯಮಾನವಾಗಿವೆ. ಮಾನವೀಯ ಅಂತರಂಗವನ್ನು ಪೃಥಕ್ಕರಿಸುವಲ್ಲಿ “ಅಂತರಂಗ”ದ ಕತ್ತಲವಾದ ದೇವುಡು ಅವರದು ಎತ್ತಿದ ಕೈ. ಇದು ರಸಿಕರ ದಾಹವನ್ನು ತಣಿಸುತ್ತದೆ. ಆದರೂ ನಡುನಡುವೆ ಬರುವ ವೇದ ಉಪನಿಷತ್ತುಗಳ ಹಾಗೂ ಯೌಗಿಕ ಗ್ರಂಥಗಳ ಪರಿಭಾಷೆಯಲ್ಲಿ ವರ್ಣಿತವಾಗುವ ಸನ್ನಿವೇಶಗಳು ಸಾಮಾನ್ಯವಾಚಕನಿಗೆ ರುಚಿಸುವಂತೆ ತೋರುವುದಿಲ್ಲ. ಅವುಗಳಿಂದ ಕತೆಯ ಓಟಕ್ಕೆ ತಡೆಯಾದಂತೆನಿಸುವುದು. ಹಾಗೆಂದು ದೇವುಡು ಅವರ ಶ್ರಮ ವ್ಯರ್ಥವೆನ್ನುವ ಸಾಹಸ ಮಾಡುವುದೂ ಸರಿಯಲ್ಲ. ಆಧ್ಯಾತ್ಮಿಕ ಉನ್ನತಿಯಲ್ಲಿ ಜಿಜ್ಞಾಸೆಯುಳ್ಳ ಜನಕ್ಕೆ ಇಂಥ ತುಣುಕುಗಳಿಂದ ಬಹಳಷ್ಟು ಪ್ರಯೋಜನವು ಸಿಗುವುದು. ಇದರಿಂದ ದೊರೆತ ಜ್ಞಾನವನ್ನು ವೃದ್ಧಿಸಿಕೊಂಡು, ಆತ್ಮಕಲ್ಯಾಣವನ್ನು ಅಂಥವರು ಸಾಧಿಸಲೂ ಬಹುದು. ವಿಶ್ವಾಮಿತ್ರನ ಅಂತರಂಗದಲ್ಲಿ ರೂಪಿತವಾಗುವ ಬದಲಾವಣೆಯನ್ನು ಚಿತ್ರಿಸುವ ಲೇಖನಿಯು ಅದ್ವಿತೀಯವೆಂದೇ ಹೇಳಬೇಕು. ಮೇನಕೆಯ ಆಗಮನಕ್ಕೆ ಮೊದಲಿಗೆ ವಿಶ್ವಾಮಿತ್ರನ ಹೃದಯದಲ್ಲಿ ಏಳುವ ಭಾವನೆಗಳು, ವಸಿಷ್ಠನ ಪುತ್ರಶೋಕವನ್ನು ನೀಗಿಸಲು ತಾನೂ ಅದರಲ್ಲಿ ಪಾಲುಪಡೆಯಬೇಕಾದುದು ಧರ್ಮ ಎನ್ನುವಾಗ ವಿಶ್ವಾಮಿತ್ರನ ಹೃದಯ ತಳೆಯುವ ವೈಶಾಲ್ಯ. ಮನೋದಾರ್ಢ್ಯ ಹಾಗೂ ನಿರಂತರ ಸಾಧನೆ ಇವೆಲ್ಲ ಅನುಕರಣೀಯವಾದ ಮಾನವೀಯ ಭಾವಗಳು. ತ್ರಿಶಂಕು, ಶಕುಂತಲೆ, ಶುನಃಶೇಪನ, ನರಮೇಧ ಮುಂತಾದ ಆಖ್ಯಾನಗಳಿಗೂ ವಾಮದೇವ, ಜಮದಗ್ನಿ ಮೊದಲಾದ ಋಷಿಗಳಿಗೂ ಸಂಚಾಗ್ನಿಹೋತ್ರ, ಆಕಾಶಗಮನ, ಇತ್ಯಾದಿ ಆಗಿನ ಧರ್ಮಭಾವಕ್ಕೂ ಈ ಕಾದಂಬರಿಯಲ್ಲಿ ಸ್ಥಾನವಿದೆ, ಕನ್ನಡದ ಕಲಾ ಸಂಪತ್ತನ್ನು, ಆಧ್ಯಾತ್ಮಿಕ ಸಂಪತ್ತನ್ನೂ, ಸಾಹಿತ್ಯ ಸಂಪತ್ತನ್ನೂ ಹೀಗೆ ರಮ್ಯವಾಗಿ ಸಮರ್ಥವಾಗಿ ಪೋಷಿಸಲು ಪರಿಶ್ರಮಿಸಿದ ದೇವುಡು ಧನ್ಯರು!

—ಕಾರ್ತಿಕೇಯ.

ಹಿಮಾಚಲ ಪ್ರವಾಸ—ಬರೆದವರು ಶ್ರೀ ಎಚ್. ಆರ್. ನಾಗರಾಜರಾವ್, ಪ್ರಕಾಶಕರು-ಪ್ರಸಾದ್ ಪಬ್ಲಿಕೇಶನ್, 51 ಉತ್ತರಾದಿ ಮಠದ ಬೀದಿ, ಚಿಕ್ಕಪೇಟೆ ಬೆಂಗಳೂರು 2 ಕ್ರೌನ್ ಕ್ವನ 103 ಪುಟಗಳು. ಬೆಲೆ ರೂ 1—8—0

ಲೇಖಕರು ಹಿಂದುಸ್ಥಾನದ ಹಲವು ತೀರ್ಥಯಾತ್ರೆಗಳನ್ನು ಮಾಡಿದವರು. 1952 ರಲ್ಲಿ ಬದರೀಕ್ಷೇತ್ರವನ್ನು ಸುತ್ತಾಡಿ ಬಂದವರು. ಯಾತ್ರಾರ್ಥಿಗಳಿಗೆ ತಮ್ಮ ಅನುಭವವು ಕೈದೀವಿಗೆಯಾಗಲೆಂಬ ಉದ್ದೇಶದಿಂದ ಸರ್ವರಿಗೂ ಅರ್ಥವಾಗುವ ಸರಳಶೈಲಿಯಲ್ಲಿ ಇದನ್ನು ಬರೆದಿದ್ದಾರೆ. ತಮ್ಮ ಅಮೂಲ್ಯ ಯಾತ್ರಾನುಭವವನ್ನು ಸರಿಯಾಗಿ ಚಿತ್ರಿಸಿದ್ದಾರೆ. ಬದರಿಗೆ ಹೋಗಲಿಚ್ಛಿಸುವವರು ಇದನ್ನು ಓದುವುದರಿಂದ ನಿಜಕ್ಕೂ ತುಂಬ ಪ್ರಯೋಜನ ಪಾದೀತು.

ಕೆರೆಗೆ ಹಾರ

ಕಾದಂಬರಿಕಾರರು: ಕುಲಕರ್ಣಿ ಬಿಂದು ಮಾಧವ ಪ್ರಕಾಶಕರು—ಶಾಂತಿ ಸಾಹಿತ್ಯ ಮಾಲೆ, ಬಾದಾಮಿ, 1/8ಕ್ರೌನ್ 129 ಪುಟಗಳು. ಬೆಲೆ ರೂ. 1-12-0.

ಶ್ರೀ ಬೆಟಗೇರಿ ಕೃಷ್ಣ ಶರ್ಮರು ಸಂಪಾದಿಸಿ ಪ್ರಕಟಿಸಿದ್ದ ‘ಕೆರೆಗೆ ಹಾರ’ ಎಂಬ ಜಾನಪದ ಕಥನ ಕವನದ ಆದರ್ಶ, ಸುಂದರ ನಿರೂಪಣೆ ಹಾಗೂ ಕಥನ ತಂತ್ರಕ್ಕೆ ಮನಸೋತಿದ್ದ ಶ್ರೀ ಬಿಂದು ಮಾಧವರು ಆ ಹಳೆಯ ಕತೆಯ ಆಧಾರದಿಂದ ನವೀನ ರೀತಿಯಲ್ಲಿ ಈ ಕಾದಂಬರಿಯನ್ನು ರಚಿಸಿದ್ದಾರೆ. ಹಳ್ಳಿಗರ ಜೀವನ, ಆದರ್ಶ, ಕಲ್ಪನೆ, ಸಂಪ್ರದಾಯ ಬದ್ಧತೆ, ಭಕ್ತಿಭಾವ ಮೊದಲಾದುವು ಈ ಕಾದಂಬರಿಯಲ್ಲಿ ಸಂದರ್ಭೋಚಿತವಾಗಿ, ವಾಸ್ತವಿಕವಾಗಿ ಬಂದಿವೆ. ಪಾತ್ರಗಳಿಗೆಲ್ಲ ಎಚ್ಚತ್ತ ಹೃದಯ, ಆದರ್ಶಕ್ಕಾಗಿ ಹೋರುವ ಬುದ್ಧಿ ಎದ್ದು ಕಾಣುತ್ತದೆ.

“ಈ ವಿಷಾದಾಂತ ಕತೆಯಲ್ಲಿಯ ಉದಾತ್ತಭಾವದ ನಾಯಕ, ನಾಯಿಕೆಯರ ಮರಣದಿಂದ ನಾವು ದುಃಖಿಸುವೆವಾದರೂ ಆ ದುಃಖಕ್ಕೆ ಕಾರಣವಾವುದೆಂದು ಯಾವುದೇ ಒಂದು ವ್ಯಕ್ತಿಯ ಮೇಲೆ ದೋಷವನ್ನು ಆರೋಪಿಸಿ ಆ ವ್ಯಕ್ತಿಯನ್ನು ಬಿಟ್ಟುಬಿಡುವಂತಿಲ್ಲ. ಸಾಹಿತ್ಯದಲ್ಲಿಯ ರಸ ಪುಷ್ಟಿಯ ಒಳ್ಳೆಯ ಲಕ್ಷಣಗಳಲ್ಲಿ ಇದೊಂದು” ಎಂಬ ಮುನ್ನುಡಿಗಾರರ ಮಾತು ಯಥಾರ್ಥವಾಗಿದೆ.

ಪಾತ್ರಗಳ ಭಾಷೆ ಪ್ರಾದೇಶಿಕವಾದರೂ ಅದರಲ್ಲಿ ಶಕ್ತಿ, ಓಟ ಇದೆ, ಬಿಂದು ಮಾಧವರ ಈ ನೂತನ ಸಾಹಸ ಪ್ರಶಂಸನೀಯವೂ ಪ್ರೋತ್ಸಾಹವೂ ಆಗಿದೆ.

—‘ಅಭ್ಯಾಸಿ’

ಹಂಸ (ಲಿಖಿತ ಪತ್ರಿಕೆಯ ಯುಗಾದಿ ಸಂಚಿಕೆ.)

ಸಂಪಾದಕರು: ಕೆ. ರಾಮಕೃಷ್ಣ ಸೋಮಯಾಜಿ, ಕೃಷ್ಣರಾಜ ನಗರ.

ಚಿಕ್ಕದಾದರೂ ಚೊಕ್ಕವಾಗಿರುವ ಈ ಮುದ್ದಾದ ಸಂಚಿಕೆಯು ಕೃಷ್ಣರಾಜ ನಗರ ತರುಣರ ಉತ್ಸಾಹದ ಪ್ರತೀಕವಾಗಿದೆ, ಚಿತ್ರಗಳೂ ಆಕರ್ಷಕವಾಗಿವೆ, ಲೇಖನಗಳೂ ಓದಲರ್ಹವಾಗಿವೆ, ಅಂತೂ ಗರಿಕೆದರಿ ಹಾರ ಹೊರಟಿರುವ ಹಂಸವು ಅಚ್ಚಿನ ಮನೆಯಿಂದ ಹೊರಬಂದು ಕನ್ನಡಿಗರ ಕರಗಳೆಲ್ಲವನ್ನು ಅಲಂಕರಿಸುವಂತಾಗಲಿ.

—ಎಸ್ಸೆಸ್

ಮದ್ರಾಸಿನ ಪಬ್ಲಿಕ್ ಇನ್‌ಸ್ಟ್ರಕ್ಷನಿನ ಡೈರೆಕ್ಟರರಿಂದ ನವಯುಗ ವಾರಪತ್ರಿಕೆಯು ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಸೆಕೆಂಡರಿ ಶಾಲೆಗಳು ಅದನ್ನು ತರಿಸಿಕೊಳ್ಳಬಹುದಾಗಿದೆ.

ಪ್ರಕಟಣೆ

ಈ ಮೂಲಕ ಯಾವತ್ತು ಜನರಿಗೆ ತಿಳಿಯಪಡಿಸುವುದೇನೆಂದರೆ:—

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ತಾಲೂಕು ಕವಲಮುಡೂರು ಗ್ರಾಮದ ಸೀಲವ್ವ ಎಂಬಾಕೆಯು ನಿಸ್ಸಂತತಿಯಾಗಿ ಮರಣಹೊಂದಿರುವುದರಿಂದ, ಅವಳ ಬಾಬ್ತು ಈ ಕೆಳಗೆ ನಮೂದಿಸಿದ ಆಸ್ತಿಯನ್ನು ಸರಕಾರಕ್ಕೆ ಎಸ್ಚೀಟು ಮಾಡಿರುವುದಾಗಿ, ಮದ್ರಾಸ್ ಸರಕಾರದ ಗೃಹ ಇಲಾಖೆಯ ಹುಕುಂ ನಂಬ್ರ 4582, ತಾರೀಖು 29-11-51 ಬಂದಿರುತ್ತದೆ. ಸದ್ರಿ ಎಲ್ಲಾ ಆಸ್ತಿಗಳು ಮಂಗಳೂರು ತಾಲೂಕು ಕವಲಮುಡೂರು ಗ್ರಾಮದಲ್ಲಿರುತ್ತವೆ.

ಆಸ್ತಿಗಳ ವಿವರ

ಪಟ್ಟಾ ನಂಬ್ರ	ಸ. ನಂಬ್ರ ಮತ್ತು ಸಬ್ ಡಿವಿಜನ	ವಿವರ	ವಿಸ್ತೀರ್ಣ (ಎಕ್ರೆಗಳಲ್ಲಿ)	ತೀರ್ವೆ
1	2	3	4	5
62	32- 5 A	ನಂಜ	0-65	5 - 8—0
	32-14	,,	1-20	10— 2—0
	32- 3 A	,,	1-80	3— 1—0
	32- 6	,,	0-20	0— 7—0
	32- 7	,,	0-94	3— 3—0
	32- 8	ಬಾಗಾಯ್ತ	0-27	0—10—0
	32- 3	,,	0-58	1— 5—0
	32- 4	,,	0-44	2— 0—0
	32-12	ಪುಂಜ	0-60	0— 7—0
	32- 5B	ನಂಜ	1-80	15— 3—0
	32- 9	,,	3-96	17—13—0
	32- 1	,,	0-32	0—12—0
	32- 2B	,,	10-65	18— 0—0
	32-11	,,	0-48	0—13—0

ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರ ಆಫೀಸು
ಮಂಗಳೂರು
ತಾರೀಖು 8ನೇ ಎಪ್ರಿಲ್ 1952

(Sd.) A R Rajaratnam.
Collector,
(By order) K. Lingappayya,
Huzur Sarishtadar.

● ತೃಪ್ತಿಕರವಾದ ವಸತಿ — ಹಿತಕರವಾದ ಊಟ
● ರುಚಿಕರವಾದ ಉಪಾಹಾರ ಇವುಗಳಿಗೆ
ಉಡುಪಿಯ ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಊರ ಪರವೂರ ಸನ್ಮಾನ್ಯ ಸದ್ಗೃಹಸ್ಥರಿಂದ ಮುಕ್ತಕಂಠದಿಂದ
ಹೊಗಳಿಸಿಕೊಂಡ ನಮ್ಮ ಹೋಟೆಲಿಗೇ
ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ.
ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯಾಗುವಂತೆ
ನಗರದ ಕೇಂದ್ರ ಭಾಗದಲ್ಲಿದೆ.
WOODLANDS
Highclass Boarding & Lodging, UDIPI S. Kanara

ಋತುಸ್ರಾವ ನಿಂತಿತು

‘ಕುಮಾರಿ’ ಟಿಕ್ಕಿಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು. ಹಕೋಟೆಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಶಾಶ್ವತ ಗುಣವಾಗಿದೆ— ಬೆಲೆ; ರೂ. 3-। ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8- [ಪೋ. ಖ ಹನ್ನೆರಡಾಣೆ ಪ್ರತ್ಯೇಕ]

Mrs. D. DEVEE, F. D8. (N. J.)
Tollygunge CALCUTTA.
ಸ್ಟಾಕಿಸ್ಟರು ಕರ್ನಾಟಕ ಕಂಪನಿ, ಮಂಗಳೂರು

ಪ್ರವಾಸಿಯ ಪತ್ರಗಳು ೨೯

ಫ್ಲೋರೆನ್ಸ್

ಜೂನ್ 11ನೇ ಸೋಮವಾರ ಸಾಯಂಕಾಲ ಗಂಟೆ 4-40ರ ರೈಲಿನಲ್ಲಿ ವೆನಿಸಿನಿಂದ ಫ್ಲೋರೆನ್ಸಿಗೆ ಹೊರಟಿದ್ದಾಗಿ ಬರೆದಿದ್ದೆ. ಆ ರೈಲು ಸಾಮಾನ್ಯವಾದ ರೈಲಲ್ಲ. ಅದಕ್ಕೆ 'Rapido' ಎಂದರೆ ವೇಗದ್ದು ಎಂತ ಹೆಸರು. ಅದು ಡೀಸಲ್ ಇಂಜಿನಿನಿಂದ ನಡೆಯುವುದಾಗಿದ್ದು ಅದರಲ್ಲಿ I ಮತ್ತು II ನೇ ಕ್ಲಾಸುಗಳು ಮಾತ್ರ. ಎರಡೇ ಗಾಡಿಗಳು, ಒಂದೊಂದರಲ್ಲಿ 88 ಸೀಟುಗಳು. ಮಧ್ಯದಲ್ಲಿ ಹೋಗಿ ಬರುವ ದಾರಿ. ಎರಡೂ ಬದಿಯಲ್ಲಿ ಎರಡೆರಡು ಸೀಟುಗಳು. ಸೀಟುಗಳು ಮೆತ್ತಗಾಗಿ, ಸುಖಕರವಾಗಿದ್ದು, ಹಿಂದೆ ಎತ್ತರವಾಗಿ ಒರಗಲಿಕ್ಕಿದೆ. ಚಾರ್ಜು ಸಾಮಾನ್ಯ ರೈಲಿಗಿಂತ 165 ಮೈಲಿಗೆ ಸುಮಾರು 3 ರೂಪಾಯಿ ಮಾತ್ರ ಜಾಸ್ತಿ. ನಾನು ಹೋಗುವಾಗ ಚೆನ್ನಾಗಿ ಬಿಸಿಲಿತ್ತು. ರೈಲು ಗಟ್ಟಿಯಾಗಿ ಸೀಟಿ ಹಾಕುತ್ತಾ ಬರುತಿತ್ತು. ಅದು ಏಕೆಂದರೆ ಅಲ್ಲಲ್ಲಿ ಅಡ್ಡ ರಸ್ತೆಗಳಿದ್ದು ಅವುಗಳಿಗೆ ಗೇಟುಗಳಿದ್ದ ಕಾರಣ ರಸ್ತೆಗಳಲ್ಲಿರುವ ಜನರಿಗೆ ಎಚ್ಚರಿಕೆಗಾಗಿ ಹಾಗೆ ಶಬ್ದ ಮಾಡುವುದಾಗಿ ತಿಳಿಯಿತು. ರೈಲು ಸಾಧಾರಣ ಗಂಟೆಗೆ 60 ಮೈಲಿಗೂ ಮಿಕ್ಕಿದ ವೇಗದಲ್ಲಿ ಬರುತ್ತಿತ್ತು. ಕಳೆದ ಯುದ್ಧದಲ್ಲಿ ಸೋತ ಇಟೇಲಿಯ ರೈಲು ಮಲ್ಲಮತ್ತು ಬಹಳ ನಾದುರುಸ್ತಿ ಎಂತ ಮುಂಚಿನ ದಿನದಲ್ಲಿ ನನಗೆ ಆದ ಅಭಿಪ್ರಾಯವು ಈ ದಿನ ತಪ್ಪೆಂದು ಕಂಡಿತು. ಇಂಥಾ ಅನೇಕ ವೇಗವಾದ ಮತ್ತು ಚಲೋದಾದ ರೈಲುಗಳು ಇಲ್ಲಿ ಇವೆ. ಇಂಥಾ ರೈಲು-ಗಾಡಿಗಳನ್ನು ನಮ್ಮ ದೇಶದಲ್ಲೂ ಇಟ್ಟಿದ್ದರೆ ದೂರದೂರದ ಪ್ರಯಾಣ ಬಹಳ ಶೀಘ್ರವಾಗಿ ಮಾಡಬಹುದು. ಅವುಗಳ ಭಾರವು ಕಡಿಮೆಯಾದುದರಿಂದ ಸಣ್ಣ ಲೈನಿಯ ರೈಲು ಪಟ್ಟಿಯ ಮೇಲೆ ಹೆಚ್ಚಿನ ವೇಗದಲ್ಲಿ ಹೋಗಲು ಸಾಧ್ಯ.

ವೆನಿಸನ್ನು ಬಿಟ್ಟು ಬರುವಾಗ ದಾರಿಯಲ್ಲಿ ದೊಡ್ಡ ಕಾರ್ಖಾನೆಗಳು ಇದ್ದವು. ಬಹು ಬೇಗನೇ ಇವು ಮುಗಿದು ಗದ್ದೆ ಮತ್ತು ಪೈರುಗಳು, ಮುಂಚಿನ ದಿನ ಕಂಡಂತೆ ಅನೇಕ ದೊಡ್ಡದಾದ ಮತ್ತು ಸಪೂರದ ಗದ್ದೆಗಳು. ಅವುಗಳಲ್ಲಿ ಸಮೃದ್ಧಿಯಾದ ಪೈರುಗಳು ಮತ್ತು ಅಲ್ಲಲ್ಲಿ ದ್ರಾಕ್ಷೆ ಬಳ್ಳಿಗಳು. ಗದ್ದೆಗಳಲ್ಲಿ ಕೆಲಸಮಾಡುವವರಲ್ಲಿ ಹೆಚ್ಚಿನವರು ಹೆಂಗಸರು. ಮಧ್ಯಮಧ್ಯ ಹೊಲಗಳು ಮತ್ತು ಕಾಲುವೆಗಳು. ಚೆನ್ನಾಗಿ ನೀರಿದ್ದ ಪ್ರದೇಶವಾಗಿ ಕಂಡಿತು. ಇಲ್ಲಿಯೇ ಪೋ (Po) ಎಂಬ ನದಿ ಹರಿಯುತ್ತದೆ.

ಅಲ್ಲಲ್ಲಿ ಅಂದರೆ 8-10 ಮೈಲಿಗೆ ಒಂದೊಂದು ಸಣ್ಣ ಪಟ್ಟಣ, ಅಲ್ಲಿ ಕಾರ್ಖಾನೆಗಳು. ರೈಲು ದಕ್ಷಿಣ ಮುಖವಾಗಿ ಬರುವಾಗ ಅನೇಕ ಗುಡ್ಡೆಗಳು ಮತ್ತು ಸುರಂಗಗಳು ಸಿಕ್ಕುತ್ತವೆ. ಮೊನ್‌ಸೆಲಿಸ್, ರೋವಿಗೊ, ಫೆರಾರಾ ಮೊದಲಾದ ಅನೇಕ ರೈಲ್ವೆ ಸ್ಟೇಷನುಗಳು. ಕೆಲವು ಕಡೆಗಳಲ್ಲಿ ನಮ್ಮಲ್ಲಿನಂತೆ ಗದ್ದೆಗಳಲ್ಲಿ ಸಣ್ಣ ಕರೆಗಳನ್ನು ಕಾಣಬಹುದು. ಕೃಷಿಕರ ಮನೆಗಳು ಮುಂಚಿನ ದಿನ ಕಂಡುದಕ್ಕಿಂತ ಒಳ್ಳೆಯವು. ಉಪ್ಪರಿಗೆ ಇದ್ದ ಹೊಸದಾಗಿ ಕಟ್ಟಿದ ಒಂದು ಮನೆ, ರಸ್ತೆಬದಿ ಎತ್ತರವಾದ ತಲೆ ಕತ್ತರಿಸಿದ್ದ ಪೊಪ್ಲಾರ್ ಮರಗಳು.

ಹೀಗೆ 2 ಗಂಟೆ ಸಮಯ 105 ಮೈಲು ದೂರ ಪ್ರಯಾಣ ಮಾಡಿದಮೇಲೆ ಬೊಲೋನಾ [Bologna] ಎಂಬ ಪುರಾತನದ, ಚಂದವಾದ ನಗರವು ಬರುತ್ತದೆ. ಇಟೇಲಿ ಭಾಷೆಯಲ್ಲಿ ಬೊಲೊನಿಯಾ ಅನ್ನುತ್ತಾರೆ. ಇದರ ಜನಸಂಖ್ಯೆ ಸುಮಾರು 3½ ಲಕ್ಷ. ಇಲ್ಲಿ ಸಕ್ಕರೆ ಮತ್ತು ಮಕರೋನಿ ಕಾರ್ಖಾನೆಗಳಿವೆ. ಒಂದು ವಿಶ್ವವಿದ್ಯಾಲಯ ಕೂಡ ಇದೆ. ಇದು ಒಂದು ರೈಲ್ವೆ ಜಂಕ್ಷನ್ ಆದ ಕಾರಣ ನಾನು ಪ್ರಯಾಣ ಮಾಡಿದ ರೈಲನ್ನು ಇಲ್ಲಿ ಬಿಟ್ಟು ಮಿಲಾನಿನಿಂದ ರೋಮಿಗೆ ಹೋಗುವ ಸೀದಾ ಇಂಥಾದ್ದೇ "ರಪಿಡೊ" ರೈಲಲ್ಲಿ ಹತ್ತಬೇಕಾಯಿತು. ಅದರಲ್ಲಿ ಒಂದನೇ ಕ್ಲಾಸಿನಲ್ಲಿ ಕೂಡಾ ಸ್ಥಳವಿಲ್ಲದೆ ಅನೇಕರು ನಿಂತುಕೊಂಡೇ ಪ್ರಯಾಣಮಾಡಿದರು. ನನಗೆ ಕಂಡಕ್ಟರನು ತನ್ನ ಸೀಟನ್ನು ಕೊಟ್ಟ ಕಾರಣ ಅದರಲ್ಲಿ ಕೂತುಕೊಳ್ಳಬಹುದಾಯಿತು. ಇಲ್ಲಿ 14 ನಿಮಿಷ ಮಾತ್ರ ನಿಂತು ರೈಲು 6-58ಕ್ಕೆ ಪುನಃ ದಕ್ಷಿಣಕ್ಕೆ ಪ್ರಯಾಣ ಮಾಡಿತು. ನಗರದ ಸುತ್ತುಮುತ್ತಲೂ ಗುಡ್ಡೆ ಮತ್ತು ಪೈರಿನ ಭೂಮಿಗಳಿವೆ. ಅನಂತರ ಹೆಚ್ಚಾಗಿ ಗುಡ್ಡೆ ಪ್ರದೇಶವೇ ಜಾಸ್ತಿ. ಬಂಡೆಕಲ್ಲಿರುವ ಹೆಚ್ಚು ಏರು-ತಗ್ಗಿನ ಪ್ರದೇಶ. ಅಲ್ಲಲ್ಲಿ ಸುರಂಗಗಳ ಮೂಲಕ ಪ್ರಯಾಣ. ಇಷ್ಟು ಗುಡ್ಡೆ ಪ್ರದೇಶಗಳಲ್ಲಿ ಕೂಡ 8-10 ಮೈಲಿಗೆ ಕಾರ್ಖಾನೆಗಳಿರುವ ಒಂದೊಂದು ಪಟ್ಟಣ ಬರುತ್ತದೆ.

ಹೀಗೆ ರೈಲು ಬರುತ್ತಿರುವಾಗ ಸುಮಾರು ಮೈಲು ದೂರವಿರುವ ಗಡ್ಡೆಯ ತುದಿಯಲ್ಲಿ ಗಂಟೆ 7-45ಕ್ಕೆ ಸೂರ್ಯನು ಬಂಗಾರದ ಬಣ್ಣದಂತಿದ್ದು ಮುಳುಗಿದನು. ಅದನ್ನೂ ಗದ್ದೆಗಳಲ್ಲಿ ಒಬ್ಬೊಬ್ಬ ಕೃಷಿಗಾರನು ಕೆಲಸ ಮಾಡುವುದನ್ನು ಕಾಣಬಹುದು. ಹೀಗೆ ಪ್ರಯಾಣ ಮಾಡಿ ಗಂಟೆ 8-2ಕ್ಕೆ ಫ್ಲೋರೆನ್ಸ್ ನಗರವು ಬಂತು. ಬೊಲೋನಿನಿಂದ ಇಲ್ಲಿಗೆ 60 ಮೈಲು ದೂರ. 60 ಮೈಲು 1 ಘಂಟೆ 4 ನಿಮಿಷದಲ್ಲಿ ಪ್ರಯಾಣ ಮಾಡುವುದು ವಿಶೇಷವೇ ಸರಿ.

ಇಲ್ಲಿ ಸ್ಟೇಷನು ಕೂಡಾ ದೊಡ್ಡದು ಮತ್ತು ಹೊಸತಾಗಿ ಕಟ್ಟಿದ್ದು. ನನಗೆ ಉಳಕೊಳ್ಳಲಿಕ್ಕೆ ಸ್ಟೇಷನಿನಿಂದ 1 ಫರ್ಲಾಂಗ್ ದೂರವಿರುವ ಬೊಂಚಿಯಾನಿ ಎಂಬ ಹೋಟೇಲು ಮುಂಚೆಯೇ ನಿಶ್ಚಯವಾಗಿತ್ತು. ಅದು ಪುರಾತನದ ಹೋಟೇಲು. ದೊಡ್ಡದೇ ಆಗಿದ್ದು ಸ್ವಿಸ್ಸ್ ದೇಶದಷ್ಟು ಚಲೋದಲ್ಲವಾದರೂ ಯೋಗ್ಯರೀತಿಯಲ್ಲಿ ನಡೆಸುತ್ತಿದ್ದರು. ಕೋಣೆ, ಸ್ನಾನ, ಊಟ ಎಲ್ಲ ಯೋಗ್ಯರೀತಿಯಲ್ಲೇ ಇವೆ.

ಮರುದಿನ ಬೆಳಗ್ಗೆ 9 ಗಂಟೆಯಿಂದ ಸುಮಾರು ಮಧ್ಯಾಹ್ನ 1 ಗಂಟೆಯ ವರೆಗೆ ನಗರ ತಿರುಗಾಟದ ಟಿಕೇಟು ಪಡಕೊಂಡು ಬೇರೆಯವರ ಒಟ್ಟಿಗೆ ಬಸ್ಸಿನಲ್ಲಿ ತಿರುಗಾಡಿದೆ. ಬೇರೆ ದೇಶಗಳಲ್ಲಿ ಅಲ್ಲಲ್ಲಿ ದೇಶೀಯ ಕಂಪೆನಿಯಂತೆ ಇಟೇಲಿಯಲ್ಲಿ ಎಲ್ಲಾ ದೊಡ್ಡ ನಗರದಲ್ಲಿ ಸಿ. ಐ. ಟಿ (C. I. T.) ಎಂಬ ಕಂಪೆನಿ ಬಹಳ ಪ್ರಸಿದ್ಧವಾದುದು. ಆಯಾಯ ಪಟ್ಟಣಗಳಲ್ಲಿ ಮಾತ್ರವಲ್ಲದೆ ಅವರು ಇಡೀ ಇಟೇಲಿಯಲ್ಲಿ ಒಂದು ಕಡೆಯಿಂದ ಇನ್ನೊಂದಕ್ಕೆ ಬಸ್ಸುಗಳನ್ನು ನಡಿಸುತ್ತಾರೆ. ಅವರ ಮೂಲಕವೇ ಇಡೀ ಇಟೇಲಿಯನ್ನು ತಿರುಗಾಡಬಹುದು. ಈ ಕಂಪೆನಿಯ ... ಈ ದಿನದ ತಿರುಗಾಟ. ನಾನು ಇಲ್ಲಿ ಮಾಡಿದ್ದು. ಈ ನಗರವು ಇಟೇಲಿಯ ಮಧ್ಯಭಾಗದಲ್ಲಿದೆ. ಈ ಭಾಗಕ್ಕೆ ಟಸ್ಕನಿ [Tuscany] ಎಂತ ಕರೆಯುತ್ತಾರೆ. ಫ್ಲೋರೆನ್ಸ್ ಬಹಳ ಚಂದವಾದ ಪಟ್ಟಣ. ಇಟೇಲಿ ಭಾಷೆಯಲ್ಲಿ 'ಫಿರೆನ್ಜೆ' [Firenze] ಅನ್ನುತ್ತಾರೆ. ನಗರದ ಮಧ್ಯದಲ್ಲಿ ಆರ್ನೋ ಎಂಬ ಸಣ್ಣ ಹೊಳೆ ಹರಿಯುತಿದ್ದು ನಗರವು ಅದರ ಎರಡೂ ಬದಿಯಲ್ಲಿ ಎತ್ತರ ತಗ್ಗಿರುವ ಪ್ರದೇಶದಲ್ಲಿ ಕಟ್ಟಿದ ಬಹು ಪುರಾತನದ ಊರು. ಸುತ್ತುಮುತ್ತಲೂ ಗುಡ್ಡೆಗಳು. ಆ ನದಿಯ ಮೇಲೆ ದಾಟಲಿಕ್ಕೆ ಅಲ್ಲಲ್ಲಿ ಸಂಕಗಳು. ಅವುಗಳಲ್ಲಿ ಒಂದರ ಮೇಲೆ ಕಳೆದ ಯುದ್ಧಕಾಲದಲ್ಲಿ ಬಾಂಬು ಬಿದ್ದು ಇನ್ನೂ ದುರಸ್ತಿ ಆಗಲಿಲ್ಲ. ಹೀಗಾಗಿ ನಾವು ಸುತ್ತಿ ಹೋಗಬೇಕಾಯಿತು. ಈ ನಗರವು ಮುಂಚೆ ಬರದಂತೆ, ಡಂಟೇ, ಮೈಕೆಲ್ ಎಂಜಲೋ, ಲಿಯನಾರ್ಡೊ ಡಾ ವಿನ್ಸಿಯಂತ ಅನೇಕ ಪ್ರಸಿದ್ಧ ಪುರುಷರು ಹುಟ್ಟಿ ಕೆಲಸಮಾಡಿದ ಊರು. ಈ ಮೂವರು ಹೆಸರುಗಳಿಗೆ ಇನ್ನೂ ಕೆಲವನ್ನು ಸೇರಿಸಬಹುದು. ಬೊಕ್ಕಸಿಯೊ, ಸವೊನರೋಲ, ಮಕಿಯವೆಲ್ಲಿ ಗೆಲಿಲೋ, ಇವರೆಲ್ಲರೂ ಲೋಕಪ್ರಸಿದ್ಧರು. ಅನೇಕ ಶತಮಾನಗಳಲ್ಲಿ ಇಲ್ಲಿ ನಗರದ ಪ್ರಜಾರಾಜ್ಯವು ನಡೆದು ಜನ ... ಹಳ ನಾಗರಿಕತೆಯನ್ನು ಪಡೆದಿದ್ದಾರೆ. ... ನ ಜನಸಂಖ್ಯೆ ಸುಮಾರು 4 ಲಕ್ಷ. ಇಲ್ಲಿ ... ಡಾ ವೆನಿಸಿನಲ್ಲಿ ಕಂಡಂತೆ ಅನೇಕ ಮ್ಯೂಸಿಯಂಗಳು ಕಲಾಗಾರಗಳು. "ಫ್ಲೋರೆಂಟೈನ್ ಆರ್ಟ" [Florentine Art] ಎಂದರೆ ... ಪ್ರಸಿದ್ಧ ಅಂಗಡಿಗಳಲ್ಲಿ ಎಲ್ಲೆಲ್ಲೂ ವ್ಯಾಪಾರ, ಜನರು ಚಲೋ ಡುಸ್ತನ್ನು ಹಾಕಿ ತಿರುಗಾಡುವರು. ಎಲ್ಲಕ್ಕೂ ಮಿಗಿಲಾಗಿ ಇಲ್ಲಿ ಈಗಲೂ ಕಾಣಬಹುದಾದ ಹಿಂದಿನ ಮೊಸೈಕ್ ಮತ್ತು ತೈಲ ಚಿತ್ರಗಳು, ಶಿಲ್ಪ ಪ್ರತಿಮೆಗಳು ಮತ್ತು ಪ್ರಸಿದ್ಧವಾದ ಕೆಲವು ಕಟ್ಟೋಣಗಳು.

ಅವುಗಳಲ್ಲಿ ಪ್ರಥಮ ನಾವು ಸಂದರ್ಶಿಸಿದ್ದು ಒಂದು ದೊಡ್ಡ ಇಗರ್ಜಿ. ಇದಕ್ಕೆ ಮೆಡಿಸಿ ಚೇಪಲ್ [Medici Chapel] ಅನ್ನುತ್ತಾರೆ. 'ಮೆಡಿಸಿ' ಎಂದರೆ ಇಲ್ಲಿ ಪುರಾತನದಲ್ಲಿ ಆಳಿದ ಕುಟುಂಬ. ಈ ಇಗರ್ಜಿಯಲ್ಲಿ ಮೈಕಲ್ ಎಂಜಲೋ ಕೆತ್ತಿದ ದೊಡ್ಡ ಪ್ರತಿಮೆಗಳು. ಒಂದು ಕೋಣೆಯಲ್ಲಿ ಅವುಗಳನ್ನು ಇಟ್ಟಿವೆ. ಬಿಳಿ ಅಮೃತಶಿಲೆಯಲ್ಲಿ ಮಾಡಿದ Thinker Day and Night ಮತ್ತು Charity ಎಂಬ ಮೂರು ಪ್ರತಿಮೆಗಳು ಲೋಕಪ್ರಸಿದ್ಧವಾದವುಗಳು. ಅವುಗಳನ್ನು ಅವನು 16ನೇ ಶತಮಾನದಲ್ಲಿ ಮಾಡಿದ್ದು. ಇನ್ನೊಂದು ದೊಡ್ಡ ಸಭಾಂಗಣದಲ್ಲಿ ಅವನು ತೀರಿದ ಸುಮಾರು 40 ವರ್ಷಗಳ ನಂತರ [1600ರಲ್ಲಿ] ಒಂದು ಮೇಜಿನ ಮೇಲೆ ಅನೇಕ ತರದ ಬಣ್ಣದ ಕಲ್ಲಿನ ತುಂಡುಗಳನ್ನು ಕೂಡಿಸಿ ಮಾಡಿದ 'ಮೊಸೈಕ್' ಚಿತ್ರ. ಅಲ್ಲಿಯೇ ಮೇಲೆ ಅದೇ ಸಮಯ ಮಾಡಿದ ಗೋಪುರ.

ಈ ಇಗರ್ಜಿಯನ್ನು ನೋಡಿ ಇನ್ನೊಂದು ಕಡೆಯಲ್ಲಿರುವ ಸ್ಯಾಂಟ್ ಜೋನ್ ಬೆಪ್ಟಿಸ್ಟರ ಇಗರ್ಜಿಗೆ ಹೋಗುವಾಗ ದಾರಿಯಲ್ಲಿ ಆಗ ತಾನೆ ಅಲ್ಲಿ ನಡೆದ ಮುಗಿದಿದ್ದ ಮುನಿಸಿಪಲ್ ಚುನಾವಣೆಯ ಬೋರ್ಡುಗಳು ರಸ್ತೆಯಲ್ಲಿ ಕಾಣುತ್ತಿದ್ದವು. ಅವುಗಳಲ್ಲಿ ಹೀಗೆ ಬರೆದಿತ್ತು.

Per Firenzia } Vota
Per Italia } Communistal

ಅಂದರೆ ಫ್ಲೋರೆನ್ಸ್‌ಗಾಗಿ, ಇಟೇಲಿಗಾಗಿ ಕಮ್ಯುನಿಸ್ಟರಿಗೆ ಓಟು ಕೊಡಿರಿ!

[ಮುಂದರಿಯುವುದು.]

[ವಿಟಾವಾಣಿ] ... ಕೆ. ಆರ್ ಕಾರಂತ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ
ಅಂಬಳೆ ನಂಜುಂಡ ಪಂಡಿತರ ಮನೆತನ ಎ. ರಾಮಸ್ವಾಮಿ ಅಯ್ಯಂಗಾರರವರ

ಸಂತಾನ ಸಿಂಧೂರ

ಬಹಿಷ್ಠ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಠ ಸಂಬಂಧದ ಹೊಟ್ಟೆನೋವಿನ ಜೊತೆಗೆ ತಲೆನೋವು, ನಡುಕೆಳಕ, ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ.

ಮೂರು ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ಒಂದು ಸೆಟ್ ಅನುಪಾನ ಪತ್ರಿಕೆ ಮೇರೆ ಅಭ್ಯಾಸ ಸೇವಿಸಿರಿ ಸಾಕು. ಶೋಭನವಾದ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾಪತ್ರಗಳನ್ನು ಪಡೆದಿದೆ.

ಕ್ರಯ:— ಒಂದುಸೆಟ್ 5 ರೂ. ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1 ರೂ ವಿ. ಪಿ. ... ಕ್ಯಾಪಿಟಲ್ ಜೊತೆ 6 ರೂ ಮನಿಆರ್ಡರ್ ಮಾಡಿರಿ. ಕೂಡಲೇ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ:—A. R. ವಿಶ್ವೇಶ್ವರಯ್ಯ (ಎ. ರಾಮಸ್ವಾಮಿ ಅಯ್ಯರ್ ಸನ್,)
Prop: ಸಂತಾನ ಸಿಂಧೂರ
ಅಂಬಳೆ ಪೋಸ್ಟು, ಯಳಂದೂರು ತಾಲೂಕು ಮೈಸೂರು ಡಿಸ್ಟ್ರಿಕ್ಟು
ಮೈಸೂರು ಶಾಖೆ: 269 ಸೋನಾರ್ ಸ್ಟ್ರೀಟ್, ದಿವಾನ್ಸ್‌ರೋಡು, ಮೈಸೂರು.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ಬೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ॥ ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ॥ ಬಿ. ಕೆ. ಶಿವರಾಮರಾವ್, ಉಂಚಿಬೆಟ್ಟು, ಉಡುಪಿ.

ಕವಿರಾಜ ಯನ್. ಯನ್. ಸೇನರ
ಶಾಸ್ತ್ರೀಯ ಔಷಧಿಗಳು
ಈಗಲೇ ಬಂದಿವೆ

ಬೃಹತ್ ಅಮೃತಬಳ್ಳಿ ಕಷಾಯ
ದ್ರಾಕ್ಷಾರಿಷ್ಟ
ಕಸ್ತೂರಿ ಕಲ್ಪ ರಸಾಯನ
ನೇತ್ರಬಿಂದು
ಕರ್ಪೂರಾರಿಷ್ಟ
ದುರ್ಗಾ ಪುನರ್ನವಾಸವ
ದಶಮೂಲಾರಿಷ್ಟ
ಕುಂಕುಮಾಸವ
ಮೃಗಾಂಕ ದ್ರಾವ
ದರವನ್ನು ವಿಚಾರಿಸುವದು.
ವಿಳಾಸ:—
ಶಾ ಕಂಪೆನಿ, ಮಂಗಳೂರು ನಂ. 1.

ತಾರೀಖು 24-4 ರಿಂದ | **ವಾರದ ಭವಿಷ್ಯ** | ತಾರೀಖು 30-4-5 ವರೆಗೆ

ಮೇಷ—ನಿಮ್ಮ ಬಗ್ಗೆ ನಿರ್ಲಕ್ಷ್ಯದಿಂದ ನೆರವೇರುವವು ಪ್ರಯತ್ನಕ್ಕೆ ತಕ್ಕ ಫಲಲಾಭವಾಗಲಿದೆ. ಹೆಚ್ಚಿನ ಕಾರ್ಯಗಳು ಅಡಿಮೆಯಾಗುವವು ಸ್ವಂತ ಉಪಯೋಗಕ್ಕೆ ಬೇಕಾದ ವಸ್ತು ಒಡವೆಗಳಿಗೆ ಕೊರತೆಯಾಗದು. ಆದರೆ ಆರೋಗ್ಯಕ್ಕೆ ಮಾತ್ರ ಈ ಕಾಲವು ಒಳ್ಳೆಯದಿಲ್ಲ, ಪರ್ಯಟನವು ಹೆಚ್ಚುವದು. ಸತಿಪತಿಗಳೊಳಗೆ ಮನಸ್ತಾಪ ಹುಟ್ಟಲಿದೆ. ತಾ. 26, 27ರಲ್ಲಿ ಧನವಾನಗಳಿಗೆ ಹಾನಿಯಿದೆ.

ವೃಷಭ—ಆಯುಷ್ಯ ಯೋಗಗಳು ಸರಿತೂಕದಲ್ಲಿ ನಿಲ್ಲಲಿವೆ. ಕಷ್ಟಸಾಧ್ಯವಾದ ಕಾರ್ಯವಾದರೂ ನಿಮ್ಮ ಭಾಗಕ್ಕೆ ಸುಖಕರವೆನಿಸೀತು. ಬಂಧು ವರ್ಗದವರ ಬೆಂಬಲವು ಚೆನ್ನಾಗಿರುವದು. ಆಕಸ್ಮಿಕ ಪ್ರವಾಸದಿಂದ ಕಷ್ಟನಷ್ಟಗಳುಂಟಾದಾವು ತನ. ಮನಗಳಿಗೆ ಸುಖ ಶಾಂತಿಗಳು ಮರ್ಲಭವೆನಿಸುವವು. ತಾ. 26, 27ರಲ್ಲಿ ಸುಖಭೋಗಗಳಿಗೆ ಕೊರತೆಯಾಗದು

ಮಿಥುನ—ದಿನದಿಂದ ದಿನಕ್ಕೆ ನಿಮ್ಮ ಅದೃಷ್ಟವು ಉತ್ತಮ ಹೊಂದುತ್ತಾ ಬರುತ್ತಿದೆ. ಅಲ್ಪಾಯಾಸದಿಂದ ಮಹತ್ಕಾರ್ಯವನ್ನು ಸಾಧಿಸುವಿರಿ. ನಿಮ್ಮ ನಿರೀಕ್ಷೆಗಿಂತಲೂ ಅಧಿಕವಾದ ಫಲವು ಲಭಿಸುವದು, ಹಿಂದಿನ ಸಾಲ ಕಡಗಳಿಂದ ಮುಕ್ತರಾಗಿ ನಿಶ್ಚಿಂತೆಯಿಂದ ಕಾಲಕಳೆವಿರಿ ತಾ. 24-25-28-29-30 ಈ ದಿನಗಳಲ್ಲಿ ನಾನಾ ತೆರದ ಲಾಭ ಭೋಗ ಸಂತಸಗಳು ಲಭಿಸುವವು.

ಕರ್ಕಾಟಕ—ಅಪಾತತಃ ಆಪ್ತರಿಯರೆಂತ ಕಾಣಿಸಿಕೊಂಡು ಅಂತಃ ನಿಮಗೆ ಎರಡೆಂಟು ಬಗೆವ ಜನರು ಹೆಚ್ಚಲಿರುವರು. ನಾಲಗೆಯನ್ನು ಹಿಗಿಹಿಡಿದ ಊ ಜನತೆಯೊಡನೆ ಕಲಹ ತಪ್ಪದು. ಹೆಚ್ಚಿನ ನಿಮ್ಮ ಪ್ರಯತ್ನಗಳು ವಿಫಲಗಳಾಗಲಿವೆ. ಆದರೂ ವಿರೋಧಿಗಳನ್ನು ಪರಾಭವಗೊಳಿಸುವಿರಿ. ಗೃಹೋಪಕರಣಗಳಲ್ಲಿ ನ್ಯೂನತೆ ಕಾಣಿಸಬಹುದು. ವಾರಾಂತ್ಯದ 3 ದಿನಗಳಲ್ಲಿ ಆರೋಗ್ಯ ಸಂಪತ್ತುಗಳಿಗೆ ಧಕ್ಕೆಯಿದೆ.

ಸಿಂಹ—ನಿಮ್ಮ ಅದೃಷ್ಟವು ಉತ್ತಮಸ್ಥಿತಿಗೆ ಬಂದಿದೆ. ಬಯಕೆಯಂತೆ ಕಾರ್ಯಗಳೂ ನಿರ್ವಿಘ್ನದಿಂದಲೂ ಅಲ್ಪಾಯಾಸದಿಂದಲೂ ಕೊನೆ ಹೊಂದಲಿವೆ. ಸಂಪದ್ಭಾಗವು ವೃದ್ಧಿ ಹೊಂದುವದು. ಅನಿರೀಕ್ಷಿತ ಲಾಭಗಳಾಗಲಿ ಎವಡು ಸನ್ನಿಹಿತ ಬಂಧು ಭಾಂಧವರ ಮತ್ತು ಗುರು ಹಿರಿಯರ ಕೃಪಾಕಟಾಕ್ಷವನ್ನು ಪಡೆವ ನಿಮಗೆ ವಾರಾಂತ್ಯದ 5 ದಿನಗಳು ಸುಖ ಲಾಭದಾಯಿಗಳಾಗಿವೆ.

ಕನ್ಯಾ—ಕಾಲವು ಅತೀವ ಪ್ರತಿಕೂಲಾವಸ್ಥೆಗೆ ಬಂದಿರುವದಾದರೂ ಕಳೆದ ದಿನಗಳಂತಹ ದುರ್ದಿನಗಳು ಇನ್ನು ಬರಲಾರವು. ಹಿಡಿದಿಗಿಂತ ಮುಮ್ಮಡಿ ಖರ್ಚುಗಳು ಪ್ರಾಪ್ತವಾಗುವವು. ಚಿಕ್ಕೊಡೆಷ್ಟದಿಂದ ಆರೋಗ್ಯ ಕೆಡಲಿದೆ ಸರಕಾರಿ ಜನರ ಪೀಡೆಯು ನಿಮಗೆ ತಪ್ಪದು. ವಾರಾಂತ್ಯದ 3 ದಿನಗಳು ಇತರ ದಿನಗಳನ್ನು ದುಃಖದಾಯಿಗಳಾಗವು.

ತುಲಾ—ಶತ್ರುಜನರ ಉಪಟಳವು ದಿನೇ ದಿನೇ ಹೆಚ್ಚುತ್ತಾ ಬರುವದು, ಅನಿರೀಕ್ಷಿತ ಅನರ್ಥ ಪರಂಪರೆಗಳನ್ನು ಅನುಭವಿಸಲಿರುವಿರಿ ಸ್ತ್ರೀವರ್ಗದವರಿಂದ ನಾನಾ ತರದ ಕಷ್ಟನಷ್ಟ ಅಪವಾದಗಳೂ ಕೂಡ ಪ್ರಾಪ್ತವಾಗಲಿವೆ. ಆದರೂ ಗುರ್ವನುಗ್ರಹವು ಉತ್ತಮವಿರುವುದರಿಂದ ವಾರಾದಿಯ 2 ದಿನಗಳು ಹೆಚ್ಚಿನ ದುಃಖದಾಯಿಗಳಾಗವು.

ವೃಶ್ಚಿಕ—ಓಷ್ಣ ಪ್ರಕೋಪದಿಂದ ನೇತ್ರರೋಗ ರೋಗಗಳು ಕಾಣಿಸುವವು. ಗೃಹ ಕೃತ್ಯದಲ್ಲಿ ಅವ್ಯವಸ್ಥೆಯು ಹೆಚ್ಚಿ ತಂದೆ ಮಕ್ಕಳೊಳು ಗಂಡ ಹೆಂಡಿರೊಳು ಕಲಹವುಂಟಾಗಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ಕಷ್ಟನಷ್ಟಗಳು ಹೆಚ್ಚುತ್ತ ಬರುವವು. ಮನೊರೋಗಗಳು ಸದಾ ಪೀಡಿಸುವವು ವಾರಾಂತ್ಯದ 3 ದಿನಗಳು ಅನಿಷ್ಟಕಾರಿಗಳಾಗಿವೆ.

ಧನು—ದಿನಗಳು ಸುಖದಾಯಿಗಳಾಗಿವೆ ಮನೋರಥಗಳು ಸಫಲಗಳಾಗುವವು ಶತ್ರುಜನರು ಪಾದಾಕ್ರಾಂತರಾಗುವರು. ಗೃಹ ತಾಪತ್ರಯಗಳಿಂದ ಮುಕ್ತರಾಗಿ ಸುಖದಿಂದ ಕಾಲ ಕಳೆವಿರಿ. ಆರೋಗ್ಯ ಸಂಪತ್ತು ಇತ್ಯಾದಿ ಭಾಗಗಳು ಚೆನ್ನಾಗಿರುವವು. ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ಗಣ್ಯ ಸ್ಥಾನವನ್ನು ಪಡೆವಿರಿ. ವಾರಾಂತ್ಯದ 5 ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಅನಾಯಾಸದಿಂದ ನೆರವೇರುವವು.

ಮಕರ—ಶಾನಿನಿಂದ ಬಗೆದರೆ ದೈವವೊಂದೆಡೆ ಸಿಕ್ಕಿದಂತೆ ನಿಮ್ಮ ಪರಿಸ್ಥಿತಿಯುಂಟಾಗಲಿದೆ. ಪ್ರತಿಯೊಂದು ಕಾರ್ಯದಲ್ಲೂ ಫಲ ಲಾಭಕ್ಕಿಂತ ಖರ್ಚೇ ಹೆಚ್ಚಾಗುವದು. ವಿದ್ಯೋಪಜೀವಿಗಳಿಗೂ ಕಾಯಕಷ್ಟವನ್ನು ಮಾಡತಕ್ಕ ಸೇವಕ ವರ್ಗದವರಿಗೂ ಈ ಕಾಲವು ಅತೀವ ಕಷ್ಟದಾಯಿಯಾಗಿ ಪರಿಣಮಿಸಲಿದೆ. ಬಂಧು ಮಿತ್ರರ ವಿಯೋಗ ದುಃಖ ಪೀಡಿತರಾದ ನಿಮಗೆ ವಾರಾಂತ್ಯದ 3 ದಿನಗಳು ಸ್ವಲ್ಪ ಉತ್ತಮವೆನಿಸುವವು.

ಕುಂಭ—ಗ್ರಹ ಬಲವು ನಿಮಗೆ ಕಲ್ಲನಾದರೂ ಸಾಕಷ್ಟು ಉತ್ತಮವಿದೆ, ನೀಚಜನರ ಮೂಲಾಂತರ ಹೆಚ್ಚಿನ ಧನವನ್ನು ಪಡೆವಿರಿ. ಧೈರ್ಯೋತ್ಸಾಹಗಳಿಂದ ಕೂಡಿದ ನಿಮಗೆ ಮಿತ್ರರ ಬಲವೂ ಇರುವುದರಿಂದ ರಾಜಕೀಯದಲ್ಲಿ ವಿಜಯಿಗಳಾಗುವಿರಿ. ಸ್ಥಾನ ಚಲನೆ ದೇಹಾಲಸ್ಯ ಆಪ್ತರ ವಿರಹದಿಂದ ಸ್ವಲ್ಪ ಚಿಂತೆಗವಕಾಶವಿದೆ. ವಾರಾದಿಯ 2 ದಿನಗಳು ಇತರ ದಿನಗಳಿಗಿಂತ ಉತ್ತಮ.

ಮೀನ—ವ್ಯಥಾ ವಾಕ್ಕಲಹಕ್ಕೆ ಗುರಿಯಾಗುವಿರಿ. ಪ್ರತೀಕಾರಾಸಕ್ತರಾದ ಶತ್ರುಜನರಿಂದ ಹೆಚ್ಚಿನ ಧನ ಮಾನಗಳಿಗೆ ಹಾನಿಯಿದೆ. ಉಷ್ಣ ಪ್ರಕೃತಿಯಿಂದ ಆರೋಗ್ಯ ಕೆಡಲಿದೆ. ಹೆಚ್ಚಿನ ಕಾಲವನ್ನು ಪರ್ಯಟನದಲ್ಲಿ ಕಳೆಯ ಬೇಕಾದೀತು. ಆಪ್ತ ಮಿತ್ರರಲ್ಲೂ ಅವಿಶ್ವಾಸವುಂಟಾಗಲಿದೆ, ಆದರೂ ಸರ್ವಾನುಗ್ರಹದಿಂದಾಗಿ ಹೆಚ್ಚಿನ ದುಃಖಗಳು ದೂರವಾಗುವವು. ತಾ. 26-27 ಅನುಕೂಲವಿವೆ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷವುಂಟಾದದ್ದು, ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳುಕಡ್ಡಿ,

ಮುದ್ದು

ನಮ್ಮಲ್ಲಿ

ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರ ವರ್ಗ!

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI. S. Kanara

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯ ಪರ್ವತದಿಂದ ತೆಗೆಯಲ್ಪಡುವಂಥ ಅಪೂರ್ವ ವಸ್ತು, ಔಷಧಿಗಳ ರಾಜ; ಶಿಲಾಜಿತ್ತನ್ನು ಮೂಲಿಕೆಗಳೊಡನೆ ಸೇರಿಸಿ ಲೇಹ್ಯ ಮಾಡಿದೆ. ಇದು ಶೀತ, ಉಷ್ಣ, ಮಳೆ ಸರ್ವಕಾಲದಲ್ಲೂ ಒಂದೇಸಮನೆ ತನ್ನ ಶಕ್ತಿಯನ್ನು ತೋರಿಸುತ್ತದೆ. ಇದರ ಸೇವನೆಯಿಂದ ದೇಹ ದಾರ್ಢ್ಯವೂ, ಶಕ್ತಿಯೂ ಉಂಟಾಗುತ್ತದೆ. ಮುಖ್ಯವಾಗಿ ಹೊಟ್ಟೆನೋವು

ಅನ್ನ ಸೇರದಿರುವಿಕೆ ಇವೇ ಮೊದಲಾದ ರೋಗಗಳಿಗೆ ಒಂದೇ ದಿನಗಳಲ್ಲಿಯೇ ಗುಣಕೊಡತಕ್ಕ ಔಷಧವಿದು. ಕೆಮ್ಮು ಶ್ವಾಸದಮ್ಮು, ಮೂಲ, ಒಳಮೂಲ, ರಕ್ತಮೂಲ, ಬಹುಮೂತ್ರ, ಹೊಟ್ಟೆಯಲ್ಲಿ ಗಡ್ಡೆ ಇರುವಿಕೆ ಮತ್ತು ವಾಯುವಿನಿಂದ ಉಂಟಾಗತಕ್ಕ ಸರ್ವ ವ್ಯಾಧಿಗಳಿಗೂ ದಿವ್ಯೌಷಧ. ವಿದ್ಯಾರ್ಥಿಗಳು ಸೇವಿಸುವುದರಿಂದ ಜ್ಞಾಪಕಶಕ್ತಿಯೂ ಮತ್ತು ಚಟುವಟಿಕೆಯೂ ಹೆಚ್ಚುತ್ತೆ. ವೃದ್ಧರು ಸೇವಿಸುವುದರಿಂದ ಶಕ್ತಿಯನ್ನು ಹೆಚ್ಚಿಸಿ ಭಾಗ್ಯವನ್ನುಂಟುಮಾಡುತ್ತೆ.

ಹೆಂಗಸರಿಗೆ— ಅಕ್ರಮ ಋತು, ಕೈಕಾಲು ಹಿಡಿತ, ಕೀಲುವಾಯು, ಪಕ್ಕಶೂಲೆ ಮತ್ತು ಉಷ್ಣದಿಂದಾಗುವ ಇತರ ರೋಗಗಳಿಗೆ ದಿವ್ಯೌಷಧ. ದುರ್ಬಲರಾಗಿ ಕೇವಲ ಕೃಶರಾಗಿರುವ ಶಿಶುಗಳಿಗೆ ಈ ಔಷಧವನ್ನು ಪ್ರತಿ ಬೆಳಗ್ಗೆ, ಸಂಜೆ ಕೊಟ್ಟರೆ ಸ್ವಲ್ಪ ಕಾಲದಲ್ಲಿಯೇ ದೃಢಾಂಗರಾಗುವರು. ಪಣ ಮುಂಗಡ.

೪೮ ದಿನದ ಲೇಹ್ಯಕ್ಕೆ ರೂ. ೫-೪-೦, ೨೪ ದಿನದ ಲೇಹ್ಯಕ್ಕೆ ರೂ. ೩-೪-೦ (ಪೋಸ್ಟೇಜು ಮಾಫಿ)

ನೀಲಿಗಿರಿ ಡಿಪ್ಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ-

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ



ಅತಿ ಸುಲಭದಲ್ಲಿ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿಸಲ್ಪಟ್ಟ

ಅತಿ ಉಪಯುಕ್ತ ಪುಸ್ತಕ

ಬೆಲೆ ರೂ. 1-8-0, ವಿ. ಪಿ. ದ್ವಾರ ರೂ. 2-0-0

ವಿಳಾಸ —

ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published by K. B. Shetty at the Navayuga Press, Udipi, S. India.

Regd. No. M. 3618
LICENCE No. 31
Licensed to Post without Prepayment

ESTD. 1921 ಸ್ಥಾಪನೆ
31 ನೆಯ ವರ್ಷ

1—5—1952

Founder: Sri A. B. Shetty
Minister ... Medical & Public Health

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಸಾರ್ವಜನಿಕ
ಆರೋಗ್ಯ ಮಂತ್ರಿ
ಶ್ರೀ ಎ. ಬಿ. ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ 5-12-0
6 ತಿಂಗಳಿಗೆ
ರೂ 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೩೪

NAVAYUGA WEEKLY Post Box No. 22 UDIPI.

Vol 31
No. 34

ಸಿಡ್ನಿವೆಬ್ ಯುದ್ಧ ರಂಗದಲ್ಲಿ ದಾಹದಿಂದ ಬಳಲಿ ಬಿದ್ದಿರುವಾಗ ಯಾರೋ ಪುಣ್ಯಾತ್ಮರು ಒಂದು ಲೋಟ ನೀರು ತಂದುಕೊಟ್ಟರು. ಅದನ್ನು ಕುಡಿಯಲೆಂದು ತುಟಿಯ ಬಳಿ ಕೊಂಡುಹೋಗುವಷ್ಟರಲ್ಲಿ ಅವನಿಗೆ ಹತ್ತಿರದಲ್ಲಿಯೇ ಇನ್ನೊಬ್ಬ ಸೈನಿಕನು ಶಸ್ತ್ರಹತನಾದ ಸ್ಥಿತಿಯಲ್ಲಿ ನೀರಿಗಾಗಿ ಚಡಪಡಿಸುವುದು ತೋರಿತು. "ತೆಗೆದುಕೋ ತಮ್ಮಾ, ನನಗಿಂತ ನಿನಗೇನೇ ಈ ನೀರಿನ ಆವಶ್ಯಕತೆ ಹೆಚ್ಚು"— ಎಂದು ವೆಬ್ ತನ್ನ ಕೈಯ ಲೋಟವನ್ನು ಆ ಸೈನಿಕನಿಗೆ ಕೊಡಮಾಡಿದ.

ಸ್ವಾರ್ಥಕ್ಕೆ ಮೊದಲು ಪರಾರ್ಥವೆಂದರೆ ಇದೇ.

ನೊಂದವರಿಗೆ ಭರವಸೆ

ಮನುಷ್ಯನ ವ್ಯಕ್ತಿತ್ವದ ಎರಡು ಮುಖಗಳು—ಸ್ವಾರ್ಥ ಮತ್ತು ಪರಾರ್ಥ. ಮಹತ್ವಾಕಾಂಕ್ಷೆ ಮತ್ತು ಅಭಿವೃದ್ಧಿಯ ಉತ್ಕಟಾಭಿಲಾಷೆಗಳು ಸ್ವಾರ್ಥಕ್ಕೆ ಪ್ರೇರಣೆ ಒದಗಿಸಿದರೆ, ತ್ಯಾಗಬುದ್ಧಿ ಮತ್ತು ಸೇವಾ ಪರಾಯಣತೆಗಳು ಪರಾರ್ಥದ ಕಡೆಗೆ ಮನಸ್ಸನ್ನು ಹರಿಯಗೊಡುವುವು.

ಪ್ರಾಮಾಣಿಕವಾಗಿ ಹೇಳುವುದಾದರೆ ಈ ಎರಡೂ ವೈಶಿಷ್ಟ್ಯಗಳನ್ನು ಮನುಷ್ಯನು ಕಾಪಾಡಿಕೊಂಡು ಬರುವುದು ಅಗತ್ಯ. ಸ್ವಂತ ಶಕ್ತಿ—ಸಾಮರ್ಥ್ಯಗಳನ್ನು ಸಾತ್ವಿಕ ಮಾರ್ಗದಿಂದ ನ್ಯಾಯವಾದ ರೀತಿಯಲ್ಲಿ ಬೆಳೆಸಿಕೊಂಡು, ಹಾಗೆ ಸಂಪಾದಿಸಿದುದನ್ನು ವಿವಶರಾಗಿ, ಅಸಹಾಯರಾಗಿ ಇರುವ ಜನರಿಗೆ ಪ್ರತಿಫಲಾಪೇಕ್ಷೆ ಇಲ್ಲದೆ ದಾನಮಾಡುವುದು ಧರ್ಮಸಮ್ಮತವಾಗಿದೆ.

ಕಳೆದ ಒಂದೆರಡು ತಲೆಮಾರುಗಳಲ್ಲಿಯೇ ಕಾಣದ ಭೀಕರ ಬರಗಾಲವು ನಮ್ಮ ರಾಜ್ಯದಲ್ಲೀಗ ಬಂದೊದಗಿದೆ. ರಾಯಲಸೀಮೆಯ ಕಡಪಾ, ಅನಂತಪುರ, ಚಿತ್ತೂರು ಜಿಲ್ಲೆಗಳಲ್ಲಲ್ಲದೆ ಈಚೆಗೆ ಕೊಯಮುತ್ತೂರು ಮುಂತಾದೆಡೆಗಳಲ್ಲಿ ಕೂಡ ಆಹಾರ ವಸ್ತುಗಳ ಅಭಾವವೂ ಅದಕ್ಕೂ ಕಠಿಣವಾದ ನೀರಿನ ಕೊರತೆಯೂ ಜನರನ್ನು ದಿಕ್ಕುಗೆಡಿಸಿವೆ.

ದಾರ್ಶನಿಕ ರಾಜಕಾರಣಿ ಎನಿಸಿದ ಶ್ರೀ ಸಿ. ರಾಜಗೋಪಾಲಾಚಾರ್ಯರು ತಾವು ಮದ್ರಾಸಿನ ಮುಖ್ಯಮಂತ್ರಿಪದವನ್ನು ಸ್ವೀಕರಿಸುವ ಸಂದರ್ಭದಲ್ಲಿ ಹೇಳಿದ ಮಾತುಗಳನ್ನು ಈಗ ಸ್ಮರಿಸಿಕೊಳ್ಳಬಹುದು— "ರಾಜ್ಯದಲ್ಲಿ ತಲೆದೋರಿರುವ ನೀರಿನ ಅಭಾವವನ್ನು ದೂರಮಾಡುವಂತೆ ಪರಮಾತ್ಮನನ್ನು ಶ್ರದ್ಧೆಯಿಂದ ಪ್ರಾರ್ಥಿಸಿರಿ. ಕೇವಲ ದೇವರಿಂದ ಮಾತ್ರವೇ ಮಳೆಬರಿಸುವುದು ಸಾಧ್ಯ." ಅವರೇ ಮೊನ್ನೆ ಸೇಲಂ—ಮೆಟ್ಟೂರು ನೀರಿನ ಪೂರೈಕೆ ಯೋಜನೆಯ ಪ್ರಾರಂಭೋತ್ಸವವನ್ನು ನೆರವೇರಿಸುತ್ತಾ "ಜಲವೆಂದರೆ ದೇವರು; ದೇವರು ನೀರಿನ ರೂಪ ಧರಿಸಿ ನಮ್ಮ ಪ್ರಾಣರಕ್ಷಣೆ ಮಾಡುತ್ತಿರುವನು." ಎಂದಿರುವರು.

ಕುಡಿಯುವ ನೀರಿನ ಬರವು ಜನರ ಪಾಲಿಗೆ ಸಂಕಷ್ಟ ಪರಂಪರೆಯನ್ನೇ ತಂದೊಡ್ಡಿದೆ. ಸರಕಾರಕ್ಕೆ ಸಹ ಇದು ಬಿಡಿಸಲಾರದ ಸಮಸ್ಯೆಯಾಗಿದೆ. ಅನ್ನದ ಅಭಾವವಾಗಿದ್ದರೆ, ಪರದೇಶಗಳಿಂದ ಆಹಾರ ಸಾಮಗ್ರಿಯನ್ನು ತರಿಸಿಯಾದರೂ ಹಂಚಬಹುದು—ಆದರೆ, ನೀರನ್ನು ಹಾಗೆ ಪೂರೈಸಲು ಬಂದೀತೇ? ಸ್ವತಃ ಜನರೇ ತಮ್ಮ ತಮ್ಮ ಊರಿನಲ್ಲಿ ಪರಿಶ್ರಮದಿಂದ ನೀರನ್ನು ದೊರಕಿಸಲು ಹೆಣಗಬೇಕಾಗುವುದು. ಈ ಶುಭಕಾರ್ಯದಲ್ಲಿ ರಾಜಾಜಿ ಹೇಳಿದಂತೆ, ದೈವ ಬಲವನ್ನು ನಾವು ಯಾಚಿಸಬೇಕು. ಈಗೀಗ ಮದ್ರಾಸಿನಲ್ಲಿಯೂ ಮತ್ತಿತರ ಕಡೆಗಳಲ್ಲಿಯೂ ಜನರು ಸಾಮೂಹಿಕವಾಗಿ ಇಂದ್ರನನ್ನು ಮಳೆಗರೆಸೆಂದು ವಿಹ್ವಲ ಚಿತ್ತದಿಂದ ಪ್ರಾರ್ಥಿಸತೊಡಗಿರುವರು.

ರಾಯಲಸೀಮೆಯಲ್ಲಿ ಕಳೆದ ಐದಾರು ವರ್ಷಗಳಿಂದ ಸರಿಯಾಗಿ ಮಳೆಬೀಳದಿದ್ದುದರಿಂದ ಈ ಕಷ್ಟನಷ್ಟವನ್ನು ಎದುರಿಸಬೇಕಾಗಿ ಬಂತು. ಹಾಗೆಂದು, ಜನರು ಸ್ವಲ್ಪ ಮುಂಜಾಗರೂಕತೆಯಿಂದ ವರ್ತಿಸುತ್ತಿದ್ದರೆ ನೀರಿನ ಬರವು ಇಷ್ಟು ವಿಸ್ತೃತ ಪ್ರಮಾಣದಲ್ಲಿ ಹರಡುವುದನ್ನು ತಡೆಗಟ್ಟಬಹುದಿತ್ತು. ವರ್ಷಂಪ್ರತಿ ಕುಡಿಯುವ ನೀರಿನ ಕೆರೆ—ಬಾವಿಗಳ ಕೆಸರನ್ನು ತೆಗೆದೂ ಅವುಗಳ ಆಳವನ್ನು ಹೆಚ್ಚಿಸಿದೂ ಇರುತ್ತಿದ್ದರೆ ನೀರಿನ ಸೆಲೆ ಬತ್ತಲು ಆಸ್ಪದವಿರುತ್ತಿರಲಿಲ್ಲ. ಹಾಗೆಯೇ ಬಟ್ಟೆಬರೆಗಳನ್ನು ಒಗೆಯಲೂ, ಸ್ನಾನಕ್ಕೂ ಪೈರಿನ ಗಿಡಗಳಿಗೆ ಪೂರೈಸಲೂ ಕುಡಿಯುವ ನೀರನ್ನು ಉಪಯೋಗಿಸದೆ ಕೆರೆ—ಕುಂಟೆಗಳ ನೀರನ್ನೇ ಉಪಯೋಗಿಸುತ್ತಿದ್ದರೆ ಇಂದು ಬಾಯೊಣಗಿದ ಕಾಲಕ್ಕಾದರೂ ಒಂದು ಹನಿ ನೀರು ನಾಲಿಗೆಯಲ್ಲಿ ಬಿದ್ದು, ಹಸಿಯಾಗುತಿತ್ತು. ಆದರೆ ನಮ್ಮ ಆಲಸ್ಯವು ಎಣಿಕೆ ಮೀರಿ ಬೆಳೆದ ಕಾರಣದಿಂದ ಸಮಸ್ಯೆಯು ವಿಕೃತ ಸ್ವರೂಪವನ್ನು ತಳೆದು ಬೆದರಿಸುತ್ತದೆ.

ಈ ವಿಷಮ ಪರಿಸ್ಥಿತಿಯಲ್ಲಿ ಸರಕಾರವಾಗಲೀ ರಾಷ್ಟ್ರದ ಉಳಿದೆಡೆಯ ಜನತೆಯಾಗಲೀ ಅಕರ್ಮಣ್ಯರಾಗಿ ಕೈಕಟ್ಟಿ ತೆಪ್ಪಗೆ ಕುಳಿತಿರುವಂತಿಲ್ಲ. ನಮ್ಮ ನೆಮ್ಮದಿ—ಸೌಖ್ಯಗಳನ್ನೇ ಬಲವಾಗಿ ನಚ್ಚಿಕೊಂಡು ಉದಾಸೀನರಾಗಿರುವ ಕಾಲವೂ ಇದಲ್ಲ. ನೆರೆಯ ಮನೆಗೆ ಬೆಂಕಿಬಿದ್ದಿರುವಾಗ—ಅದು ನಮ್ಮ ಮನೆಮಾತ್ರ ಉರಿನಾಲಗೆ ಚಾಚುವುದು ತಪ್ಪಬೇಕು, ಎಂಬ ಇರಾದೆಯಿಂದಲೇ ಆದರೂ ಎದುರಿನ ವ್ಯಕ್ತಿಗಳ ಭೋಜನವನ್ನೂ ಕಡೆಗಣಿಸಿ ಕೈಯಲ್ಲಿ ನೀರಿನ ಕೊಡಪಾನ ಹಿಡಿದು ನಾವು ಧಾವಿಸುವುದಿಲ್ಲವೆ? ಈಗ ನಮಗೆ ಇಂಥ ಸ್ಫೂರ್ತಿ ಅಗತ್ಯವೆನಿಸಿದೆ.

ದೇಶದ ಮೇಲೆ ಪರಕೀಯರ ಧಾಳಿಯಾದಾಗ ಆ ವಿಪತ್ತನ್ನು ಪರಿಹಾರ ಮಾಡಲು ಹೋರಾಡುವ ಕೆಲಸ ಸೈನ್ಯಕ್ಕೆ ಸೇರಿದುದು ತಾನೆ! ಈಗ ಅದೇ ಸೈನ್ಯವನ್ನು ನೀರಿನ ಬರ ಮತ್ತು ಅನ್ನಕ್ಷಾಮಗಳೆದುರು ಯುದ್ಧ ಹೂಡಲೆಂದು ದಕ್ಷಿಣಕ್ಕೆ ಕಳುಹಿಸುವರು. ಬಾವಿ—ಕೆರೆಗಳನ್ನು ಆಳವಾಗಿ ತೋಡಬಲ್ಲ ಆಧುನಿಕ ಯಂತ್ರ ಸಲಕರಣೆಗಳೊಡನೆ ಇಂಜೀನಿಯರರೂ ಬಂದಿರುವರು. ಭೂತಳದಲ್ಲಿ ೯೦ ಅಡಿ ಆಳದವರೆಗೆ ತೋಡಿದರೂ ನೀರು ಸಿಗದಿರುವ ಶೋಚನೀಯ ಪರಿಸ್ಥಿತಿ ಇದ್ದಿದೆ. ಕಾರಣ ಮದ್ದುಗುಂಡುಗಳ ಮೂಲಕ ಬಾವಿಯ ತಳದ ಬಂಡೆಗಲ್ಲನ್ನೊಡೆದು ನೀರಿನ ಒರತೆ ಒಸರುವಂತೆ ಮಾಡುವ ಸಾಹಸ ನಡೆದಿದೆ. ನಿರುದ್ಯೋಗಿಗಳಾಗಿರುವ ಕೂಲಿಕಾರರನ್ನು ಈ ಲೋಕೋಪಯೋಗಿ ಕೆಲಸಕ್ಕೆ ಹಚ್ಚುವ ಮೂಲಕ, ಉದ್ಯೋಗವನ್ನು ಕಲ್ಪಿಸಿಕೊಡುವ ಪ್ರಯತ್ನವೂ ನಡೆದಿದೆ. ಹಾಗೆಯೇ ಮಕ್ಕಳು, ಮುದುಕರು, ಅಶಕ್ತರು ಮುಂತಾದವರಿಗೆ ಗಂಜಿನೀಡುವ ಕೇಂದ್ರಗಳನ್ನು ತೆರೆಯಲಾಗಿದೆ. ನೀರನ್ನು ಮೋಟಾರು, ಲಾರಿ, ಹಾಗೂ ಟ್ಯಾಂಕಿಗಳ ಮೇಲಿಂದ ಜನರವರೆಗೆ ಮುಟ್ಟಿಸುವ ಮಹತ್ವದ ಕೆಲಸವೂ ಸಾಗಿದೆ.

ಇದು ಒಂದೆರಡು ತಿಂಗಳುಗಳಿಂದ ಮುಗಿಯುವ ಕೆಲಸವೇ? ಇದಕ್ಕೆ ನಾಡಿನ ಕಡೆಯಿಂದ ಜನಬಲ ಹರಿದು ಬರಬೇಕು: ವಿಪುಲ ಸಹಾಯ ಮತ್ತು ಪ್ರೋತ್ಸಾಹ

(೨ನೇ ಪುಟ ನೋಡಿರಿ)

Our Pigmy Deposit Scheme

.... brings our bank to your door. You may save as small a sum as annas two. Our collector will call on you every day to receive it.

At the rate of annas two per day you save Rs. 550 in 7 years because we allow interest at 3⅛% per annum. At the rate of Re. 1/- per day your Savings are Rs 2,800/- in 7 years. At the rate of Rs. 10/- it is Rs. 28,000/-. Come in to-day and join the band of **Prudent Prosperous Pigmy People.**

The Canara Industrial & Banking Syndicate Ltd.

Estd: 1925. H. O: UDIPI.

ಪ್ರಜಾಪ್ರಭುತ್ವದ ಶಿಲ್ಪಿ

ಪತ್ರಿಕೋದ್ಯಮದ ಕಷ್ಟನಿಷ್ಠುರಗಳು

—೧—

ಪ್ರಜಾ ಪ್ರಭುತ್ವದ ಶಕ್ತಿಯಾಗುವಲ್ಲಿ ಪತ್ರಿಕೋದ್ಯಮದ ಪ್ರಭಾವವು ಬಹಳ ಹೆಚ್ಚು. ಜನತೆಯ ಸುಖ—ಕಷ್ಟಗಳ ಪ್ರಾಮಾಣಿಕವಾದ ವಿಮರ್ಶೆಯೇ ಪತ್ರಿಕೆಗಳ ಜೀವಾಳವಾದುದರಿಂದ ಜನತಾ ಕಲ್ಯಾಣವನ್ನೇ ಧ್ಯೇಯವಾಗುಳ್ಳ ಸರಕಾರವು ಪತ್ರಿಕೆಗಳ ಅಭಿಪ್ರಾಯವನ್ನು ಕಡೆಗಣಿಸುವುದು ಸಾಧ್ಯವಿಲ್ಲ. ಸರಕಾರಕ್ಕೂ ಜನಸಾಮಾನ್ಯಕ್ಕೂ ಮಧ್ಯವರ್ತಿಯಾಗಿ ಕರ್ತವ್ಯ ನಿರ್ವಹಿಸುವ ಅದ್ಭುತ ವ್ಯವಹಾರವಾಗಿ ಪತ್ರಿಕಾ ವ್ಯವಸಾಯವು ಬೆಳೆದು ಬಂದಿದೆ. ಇಂದು ಅದರ ಮಹತ್ವ ಎಷ್ಟರ ಮಟ್ಟಿಗೆ ವಿಸ್ತೃತವಾಗಿದೆ ಎಂದರೆ, ನಾವು ಪ್ರತಿಯೊಂದೂ ವಿಷಯವನ್ನು ಪತ್ರಿಕೆ ಓದುವುದರಿಂದಲೇ ಕಲಿತುಕೊಳ್ಳುತ್ತೇವೆ. ಒಂದು ವಿನೋದದ ಪ್ರಸಂಗದ ಉಲ್ಲೇಖವನ್ನು ಈ ಸಂದರ್ಭದಲ್ಲಿ ಸಾಮಾನ್ಯವಾಗಿ ಮಾಡುವುದುಂಟು—ಮಗಳು ತಾಯಿಯೊಡನೆ ಕೇಳಿದಳಂತೆ,—"ಅಮ್ಮಾ, ರಾಜಕುಮಾರಿ ಎಲಿಜಬೇಥಳಿಗೆ ತನಗೊಂದು ಮಗು ಹುಟ್ಟುವುದೆಂದು ಹೇಗೆ ಗೊತ್ತು?" ಆದಕ್ಕೆ ತಾಯಿಯ ತೀರ ಸಮರ್ಪಕವಾದ ಉತ್ತರ—"ಹಾಗೆಂದು ಆವಳು ವೃತ್ತ ಪತ್ರಿಕೆಗಳಲ್ಲಿ ಓದಿದಳು, ಮಾಗೂ, ಪೂರ ವಾರಗಳವರೆಗೆ ಈ ಸುದ್ದಿ ಬಿಟ್ಟರೆ ಬೇರೇನೂ ಇರಲಿಲ್ಲ." ಪ್ರಾಯಶಃ ಇದಕ್ಕೇ ಇರಬೇಕು—"ರಾಷ್ಟ್ರದ ನಾಲ್ಕನೇ ಸೊತ್ತು" ಎಂಬ ಅಭಿಧಾನ ಈ ಉದ್ಯಮಕ್ಕೆ ದೊರೆತಿದೆ. ಎಷ್ಟೆಂದರೂ ಸಿ. ಐ. ಡಿ.ಗಳು ರಾಷ್ಟ್ರಾಧೀನರು ತಾನೆ.

ಭಾರತದಲ್ಲಿ ಪತ್ರಿಕೆಗಳನ್ನೋದುವ ಜನ ಬಹಳ ಕಡಮೆ ಎಂದು ದೂರುವುದುಂಟು. ಇದಕ್ಕೇ ನಮ್ಮಲ್ಲಿ ವಿದ್ಯಾವಂತರ ಸಂಖ್ಯಾ ಪ್ರಮಾಣ ಅಲ್ಪವಿರುವುದೇ ಕಾರಣ ಆದರೂ, ಸ್ವಾತಂತ್ರ್ಯ ಪ್ರಾಪ್ತಿಯ ಮೊದಲು ಜನಕ್ಕೆ ಪತ್ರಿಕೆಗಳಲ್ಲಿ ಎಷ್ಟರ ಮಟ್ಟಿನ ಆಸ್ಥೆ ಇತ್ತೋ—ಇಂದು ಅದು ಅನಿರೀಕ್ಷಿತ ಪ್ರಮಾಣದಲ್ಲಿ ವೃದ್ಧಿಯಾಗಿದೆ ಎಂಬುದು ಗಮನಿಸಬೇಕಾದ ಅಂಶ. ಜನರಲ್ಲಿ ಸ್ವಾಭಾವಿಕವಾಗಿ ವಿದ್ಯಮಾನ ವಿಮರ್ಶಾ ಸ್ವತಂತ್ರ ಯೋಚನಾ ಬಲವನ್ನೂ ವಿವೇಕಪೂರ್ಣ ವಿವೇಚನಾ ಸಾಮರ್ಥ್ಯವನ್ನೂ ಪೋಷಿಸಿಕೊಂಡು ಹೋಗುವುದು ಪತ್ರಿಕೆಗಳ ಪ್ರಥಮ ಕರ್ತವ್ಯವಾಗಿದೆ. ಅನಪೇಕ್ಷಿತವಾದ ಉದ್ವೇಗ ಮತ್ತು ಉಚ್ಛೃಂಖಲ ಪ್ರವೃತ್ತಿಗೆ ಉತ್ತೇಜನವನ್ನೀಯದಿರುವುದೂ ಹೊಲಸು ಮತ್ತು ಹೇಯ ವ್ಯಾಪಾರಗಳಿಗೆ ಪ್ರೋತ್ಸಾಹವನ್ನು ಕೊಡದಿರುವುದೂ ಪತ್ರಿಕೆಗಳ ಘನವಾದ ಕಾರ್ಯವಾಗಿದೆ. ಪ್ರತಿಯೊಂದು ಸಂದರ್ಭದಲ್ಲಿಯೂ ಹದವರಿತು ವರ್ತಿಸುವುದು, ಅಭಿಪ್ರಾಯ ಭೇದವಿರುವಾಗ ರಚನಾತ್ಮಕ ಸಲಹೆಗಳನ್ನೇ ಮುಂದಿಡುವುದು, ಜನರಲ್ಲಿ ಐಕ್ಯ ಭಾವನೆಯು ಬೆಳೆದು ಬರುವಂತೆಯೂ ತ್ಯಾಗಬುದ್ಧಿ ಮತ್ತು ಮನುಷ್ಯತ್ವವು ವಿಕಸಿತ ಹೊಂದುವಂತೆಯೂ ನೋಡಿಕೊಳ್ಳುವುದು ಹಾಗೂ ನಾಗರಿಕರ ಹಕ್ಕು ಬಾಧ್ಯತೆಗಳ ಹಿತರಕ್ಷಣೆ ಮಾಡಿ ಕಲ್ಯಾಣಕ್ಕೆ ಕಾರಣವಾಗುವುದೂ ಪತ್ರಿಕೋದ್ಯಮದ ಘನತೆಗೆ ಹೇಳಿಸಿದ ಧರ್ಮ.

—೨—

ಹೊಟ್ಟೆಗೆ ಹಿಟ್ಟು ಬೇಕಿರುವಂತೆ ಮನಸ್ಸಿಗೂ ಪೋಷಣೆಯ ಅವಶ್ಯಕತೆ ಇದ್ದೇ ಇದೆ. ಸರಿಯಾದ ರೀತಿಯಲ್ಲಿ ಬೆಳವಣಿಗೆಯನ್ನು ಹೊಂದದ ಮನಸ್ಸು ಸ್ತಿಮಿತದಲ್ಲಿ ನಿಲ್ಲದೆ, ಅಡ್ಡದಾರಿಯನ್ನು ಹಿಡಿಯುವುದರಲ್ಲಿಯೇ ಶ್ರೇಯಸ್ಸಿದೆ ಎಂದು ತಪ್ಪಾಗಿ ತಿಳಿಯುವುದು. ನಮ್ಮ ಮೈಯ ಮೇಲಿನ ಕೊಳೆಯನ್ನು ದಿನಾಲೂ ಸ್ನಾನ ಮಾಡಿ, ಉಜ್ಜಿ, ತೆಗೆಯುವಂತೆ, ಮನದ ಮಾಲಿನ್ಯವನ್ನೂ ಯೋಗ್ಯ ಪತ್ರಿಕೆಗಳ ಪಠನದಿಂದ ಕಳೆಯಲು ಬರುವುದು. ಎಷ್ಟೋ ಮಂದಿ ವಿದ್ವಾಂಸರು ಕೂಡ, ತಮ್ಮ ಅಭಿಮತಕ್ಕೆ ಅನುಸಾರವಾಗಿಯೇ ರೂಪುಗೊಂಡಿರುವುದನ್ನು ಸ್ವಾನುಭವ ಸಿದ್ಧಾಂತವಾಗಿ ಹೇಳಿರುವರು. ಇದನ್ನು ಪರಿಶೀಲಿಸುವಾಗ, ಪತ್ರಿಕೋದ್ಯಮದ ಮೇಲೆ ಗುರುತರವಾದ ಹೊಣೆಗಾರಿಕೆ ಇದೆ ಎಂಬುದು ಸ್ಪಷ್ಟವಾಗುವುದು. ಒಬ್ಬ ಅಧ್ಯಾಪಕನು ತರಗತಿಯಲ್ಲಿ ಕಲಿಯುವ ೪೦–೫೦ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಮಾತ್ರ ಅಧಿಕಾರ ನಡೆಸುವವನಾದರೆ, ಪತ್ರಿಕಾ ವ್ಯವಸಾಯಿಯು ತನ್ನ ಸಾವಿರಗಟ್ಟಲೆ ಓದುಗರ ಮೇಲೆ ಪ್ರಭಾವವನ್ನು ಬೀರುವವನಲ್ಲವೆ? ಉದಾತ್ತವಾದ ತತ್ವಗಳಿಗೂ ಉಚ್ಚ ಆದರ್ಶಗಳಿಗೂ ಹೊಂದಿಕೊಂಡು ಪತ್ರಿಕಾ ವ್ಯವಸಾಯಿಯು ನಡೆಯದೆ ಹೋದಲ್ಲಿ ಪತ್ರಿಕೋದ್ಯಮದಂಥ ಘನವಾದ ಜನಪ್ರಿಯ ಆಯುಧದ ದುರುಪಯೋಗವು ಸಂಭವನೀಯವಾಗುವುದು. ಕೀರ್ತಿ—ಅಭಿಲಾಷೆಗಳು ಸ್ವಾಭಾವಿಕವಾಗಿ ಮನುಷ್ಯನಲ್ಲಿ ನೆಲೆಸಿರುವುವಾದರೂ ರಾಕ್ಷಸೀ ಕಾಂಕ್ಷೆಗಳಿಗೆ ಸರ್ವಥಾ ಉತ್ತೇಜನ ದೊರಕದಂತೆ ನೋಡಿಕೊಳ್ಳುವ ಕೌಶಲ್ಯವೂ ಮಾನವೀಯ ಸದ್ಭಾವಗಳಿಗೆ ನೋವುಂಟಾಗದಂತೆ ಹತ್ತು ಜನ ಸದ್ಗೃಹಸ್ಥರು ಹೌದೆನ್ನುವಂತೆ ಸರಿತೂಗಿಸಿಕೊಂಡು ಹೋಗುವ ನೈಪುಣ್ಯ ಮತ್ತು ವಿದ್ವತ್ತೂ ಕೆಲವೇ ಜನರ ಭಾಗ್ಯ. ಅಂಥವರ ಕೈಯಲ್ಲಿ ಜಡವಾದ ಕಲ್ಲು ಕೂಡಾ ಮಾಣಿಕ್ಯವೆನಿಸಿ ಬೆಳಗಿ ನಾಲ್ದೆಸೆಗೆ ಪ್ರಭೆ ಮಿಂಚಬಹುದು. ಅನ್ಯಥಾ ಮಂಗನ ಕೈಯ ಮಾಣಿಕ್ಯವೇ ಸರಿ!

—೩—

ಪತ್ರಿಕೋದ್ಯಮದಲ್ಲಿಯೂ ಕಷ್ಟ—ನಿಷ್ಠುರಗಳು ಅನೇಕ—ಪತ್ರಿಕಾ ವ್ಯವಸಾಯಿಯು ಕವಿಯಂತೆ ಕೇವಲ ಕನಸುಗಾರನಲ್ಲ. ರಾಜಕೀಯ ಧುರೀಣನಂತೆ ಮಾತಾಳಿಯೂ ಅಲ್ಲ. ಅತ್ತ ಸಮಾಜ ಸೇವಕನೂ ಅಲ್ಲ—ಇತ್ತ ಸರ್ವಾಧಿಕಾರಿಯೂ ಅಲ್ಲ. ಅವನು ಎಲ್ಲರ ಸದ್ಗುಣಗಳನ್ನೂ ಸದಾಶಯವನ್ನೂ ಸಂಪಾದಿಸಿಕೊಂಡು ಎಲ್ಲರಲ್ಲೂ ಅದನ್ನು ಸಮರ್ಪಕವಾಗಿ ವಿತರಿಸುವ ಒಂದು ಹೊಣೆಗಾರ ಸಂಘದ ಸಂಚಾಲಕ. ಅವನ ಅನುಭವ ಏಕಮುಖವಾದುದಲ್ಲ—ಅವನನ್ನು ಸರ್ವಜ್ಞ ಎಂಬದಾಗಿ ಕರೆಯುವುದೇ ವಿಹಿತ. ಒಬ್ಬ ಪ್ರಾಧ್ಯಾಪಕನು ತಾನು ಕಲಿಸುವ ಒಂದು ನಿಶ್ಚಿತ ವಿಷಯದಲ್ಲಿ ಮಾತ್ರ ನೈಪುಣ್ಯ ಪಡೆದಿದ್ದರೆ ಸಾಕು—ಆದರೆ, ಪ್ರಜಾ ಪ್ರಭುತ್ವದ ಶಿಲ್ಪಿ ಎನಿಸಿದ ಪತ್ರಿಕೋದ್ಯಮಿಗೆ ಬದುಕಿನ ಪ್ರತಿಯೊಂದು ಬಗೆಯಲ್ಲಿಯೂ ನುರಿತ ಅನುಭವ ಬೇಕೇ ಬೇಕು.

ಭಾರತದಲ್ಲಿ ತಾಂಡವವಾಡುವ ಬಡತನದ ಕಾರಣದಿಂದ ಪತ್ರಿಕೆಗಳಿಗೂ ಬಡಸ್ತಿಕೆಯ ಅಸ್ತಿವಾರವಿರುವುದು ಅನಿವಾರ್ಯವೆನಿಸಿದೆ. ಒಂದು ವೃತ್ತ ಪತ್ರಿಕೆಯ ಉತ್ಪಾದನಾ ವೆಚ್ಚವನ್ನು ದೃಷ್ಟಿಯಲ್ಲಿಟ್ಟುಕೊಂಡರೆ, ಅದರ ಪ್ರತಿಗೆ ಇಟ್ಟಿರುವ ಮುಖಬೆಲೆ ಬಹಳ ಅಲ್ಪವೆಂದು ಗೋಚರಿಸುವುದು. ಹೀಗಿದ್ದರೂ ನಮ್ಮ ಪತ್ರಿಕೋದ್ಯಮಕ್ಕೆ ಸಾಕಷ್ಟು ಪ್ರೋತ್ಸಾಹ ದೊರೆಯುವುದಿಲ್ಲ. ನಮ್ಮಲ್ಲಿರುವ ಮೂರು ಸಾವಿರ ದೈನಿಕ ವೃತ್ತಪತ್ರಿಕೆಗಳಲ್ಲಿ ಕೇವಲ ಇನ್ನೂರಕ್ಕೆ ಆರ್ಥಿಕ ದೃಷ್ಟಿಯಿಂದ ಚಿಂತಿಸಬೇಕಾದ ಪ್ರಮೇಯ ತಪ್ಪಿದೆ ಎಂದು ಅಂದಾಜು ಮಾಡಿದ್ದಾರೆ. ಸಾಮಾನ್ಯವಾಗಿ ಅವುಗಳ ಆದಾಯವೆಲ್ಲವೂ ವ್ಯಾಪಾರೀ ಸರಕುಗಳ ಜಾಹೀರಾತಿನಿಂದಲೇ ಬರುವುದು. ಹೀಗೆ ಒಂದುಕಡೆ ದುಡ್ಡಿನ ದುಸ್ಥಿತಿಯಿಂದ ಕಂಗೆಡುವ ಕಾಲದಲ್ಲಿ ಸರಕಾರದ ಕಾನೂನಿನ ಗದಾಪ್ರಹಾರವನ್ನು ತಪ್ಪಿಸಿಕೊಂಡು ಬಾಳುವ ಜಾಣ್ಮೆಯೂ ಜಾಗರೂಕ ಬುದ್ಧಿಯೂ ಪತ್ರಿಕೋದ್ಯಮಿಗೆ ಅವಶ್ಯ. ರಾಜ್ಯ ಘಟನೆಯಲ್ಲಿ ವಿಚಾರ ಸ್ವಾತಂತ್ರ್ಯವು ಮೂಲಭೂತಹಕ್ಕೆಂದು ಪರಿಗಣಿಸಲ್ಪಟ್ಟಿದ್ದರೂ ಆಯಕಟ್ಟಿನ ಸಂದರ್ಭದಲ್ಲಿ ಮುತ್ಸದ್ದಿತನದಿಂದ ಪತ್ರಿಕೋದ್ಯಮಿಯು ನಡೆಕೊಳ್ಳಬೇಕಾಗುತ್ತದೆ. ರಾಷ್ಟ್ರದ ಗೌರವ ರಕ್ಷಣೆಗೂ ನಾಗರಿಕರ ಅಧಿಕಾರದ ಕಾವಲಿಗೂ ಲೋಕಕಲ್ಯಾಣವೆಂಬ ಸಾಮಾನ್ಯ ಸೂತ್ರಕ್ಕೂ ಯಾವೊಂದೂ ಬಗೆಯ ವ್ಯತ್ಯಯ ವುಂಟಾಗದಂತೆ ಜಾಗರೂಕತೆಯಿಂದ ನಡವಳಿಕೆ ಇಟ್ಟುಕೊಂಡಿರುವುದು ಪತ್ರಿಕೋದ್ಯಮಿಯ ಪಾಲಿನ ಅಗ್ನಿ ಪರೀಕ್ಷೆ.

—ಕಾರ್ತಿಕೇಯ.

೧ನೇ ಪುಟದಿಂದ ಮುಂದರಿಸಿದ್ದು

ಸ್ತದ ಸಹಕಾರ ನೀಡಬೇಕು. ಹೆಚ್ಚಿನ ಧೈರ್ಯ-ಸ್ಥೈರ್ಯದಿಂದ, ದೃಢಸಂಕಲ್ಪದಿಂದ ಜನ ದುಡಿಯಲು ಮುಂಬರಬೇಕು. ಇದೆಲ್ಲವನ್ನೂ ಕೈಗೂಡಿಸಿ, ಕರುಣೆ ಸುಖ ಜೀವನವನ್ನು ನಾವೆಲ್ಲರೂ ಕೈಮುಗಿದು ಪ್ರಾರ್ಥಿಸೋಣ—ನೊಂದ ಜೀವಿಗಳಿಗೆ ಬದುಕುವ ಭರವಸೆ ಕೊಡಲಿ!—

ಓಂತತ್ಸತ್.

ಮದ್ರಾಸಿನ ಪಬ್ಲಿಕ್ ಇನ್ಸ್ಟ್ರಕ್ಷನಿನ ಡೈರೆಕ್ಟರರಿಂದ ನವಯುಗ ವಾರಪತ್ರಿಕೆಯು ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಸೆಕೆಂಡರಿ ಶಾಲೆಗಳು ಅದನ್ನು ತರಿಸಿಕೊಳ್ಳಬಹುದಾಗಿದೆ.

ಚತುರ್ಥ ವಿಮಾಗಣನೆಯ ಫಲಿತಾಂಶ

(1947ರಿಂದ 1950ರ ವರೆಗೆ)

* * * * * * *

ತಾರೀಖು 31-12-1950ಕ್ಕೆ ನಡೆಸಿದ ವಿಮಾಗಣನೆಯಲ್ಲಿ ಆಜೀವ ಮತ್ತು ಉಂಬಳಿ ವಿಮಾ ಪೋಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ ಅನುಕ್ರಮವಾಗಿ ರೂ. 12/- ಮತ್ತು ರೂ. 9/-ರಂತೆ ಬೋನಸನ್ನು ಘೋಷಿಸಿದೆ.

The Canara Mutual Assurance Co. Ltd.

Head Office: **UDIPI**, S. India.

ಸ್ಥಾಪನೆ[illegible]ಯಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ.

ZANDU PHARMACEUTICAL WORKS LTD.

Manufacturers of Ayurvedic and Alopathic Medicines BOMBAY, 14.

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ಸಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ಔಷಧ. 1 ತೊಲೆಗೆ ರೂ 3/- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.
2 ಶ್ರೀ. ವಿ. ವಿ. ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

DAMODAR & CO.,

Nainiappa Naicken Street, Park Town-**MADRAS** 3.

ನಮ್ಮ ಔದ್ಯೋಗಿಕ ಮುನ್ನಡೆಯ ಸುದೃಢ ಸ್ವರೂಪ

ಈಚೆಗೆ ಭಾರತವು ಸಾಧಿಸಿದ ಅಂಶಗಳ ವಿವರಣೆ

ಯೋಜನಾತ್ಮಕ ಔದ್ಯೋಗೀಕರಣ

ಜಗತ್ತಿನ ಪ್ರಥಮ ಶ್ರೇಣಿಯ ಏಳು ಔದ್ಯೋಗಿಕ ರಾಷ್ಟ್ರಗಳಲ್ಲಿ ಭಾರತವೂ ಒಂದು. ನಮ್ಮ ಜನಸಂಖ್ಯೆಯಲ್ಲಿ ಅತ್ಯಧಿಕರು ಹಳ್ಳಿಗಳಲ್ಲಿ ಇದ್ದುಕೊಂಡು, ಕೃಷಿಯನ್ನೇ ಮುಖ್ಯ ಉದ್ಯಮವಾಗಿಟ್ಟುಕೊಂಡಿರುವವರು. ಹಾಗಿದ್ದರೂ ಯೋಜನಾತ್ಮಕವಾದ ಔದ್ಯೋಗೀಕರಣವು ರಾಷ್ಟ್ರದ ಪುರೋಭಿವೃದ್ಧಿಯ ದೃಷ್ಟಿಯಿಂದ ಅತ್ಯಗತ್ಯವೆನಿಸಿದೆ. ಅಲ್ಲೊಂದು ಹೊಸ ಗಿರಣಿಯನ್ನೋ ಇಲ್ಲೊಂದು ಹೊಸ ಕಾರಖಾನೆಯನ್ನೋ ತೆರೆಯುವುದೆಂದರೇನೆ ಔದ್ಯೋಗೀಕರಣವಲ್ಲ—ಅದು ಕೇವಲ ವ್ಯಾಪಾರ ವ್ಯವಹಾರವೂ ಅಲ್ಲ. ಬದಲಿಗೆ ಸಾಮಾಜಿಕ ಪುರೋಗತಿಯ ಜೀವಂತ ರೂಪ. ಲಾಭದ ಹಂಚಿಕೆಯೊಂದೇ ಔದ್ಯೋಗೀಕರಣದ ಧ್ಯೇಯವಲ್ಲ. ದೇಶದ ಸರ್ವಾಂಗೀಣ ಉನ್ನತಿಗೆ ನೆರವಾಗುವುದೇ ಅದರ ಮುಖ್ಯ ಲಕ್ಷಣ.

ಕಳೆದ ಮೂರು ದಶಕಗಳಿಂದೀಚೆಗೆ ಭಾರತದ ಔದ್ಯೋಗಿಕ ಕ್ಷೇತ್ರ ಭೂಮಿಯ ಸ್ವರೂಪ ತುಂಬ ಪರಿವರ್ತನೆಗೊಂಡಿದೆ, ಆರ್ಥಿಕ ಮತ್ತು ಸಾಮಾಜಿಕ ರಂಗಗಳ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರುತ್ತಾ ದೇಶದ ಉದ್ಯಮವು ಭರದಿಂದ ಬೆಳೆಯುತ್ತಿದೆ. ಖಾಸಗಿ ಜನರಿಂದ ತೊಡಗಿದ ಅಸಂಖ್ಯ ಚಿಕ್ಕ ಪುಟ್ಟ ಉದ್ದಿಮೆಗಳಷ್ಟೇ ಅಲ್ಲ—ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಸರಕಾರದ ಕಡೆಯಿಂದಲೂ ದೀರ್ಘಾವಧಿಯಲ್ಲಿ ಫಲನೀಡುವ ಬೃಹತ್ ಯೋಜನೆಗಳನ್ನು ಕಾರ್ಯಗತ ಮಾಡಲಾಗುತ್ತಿದೆ. ಪಂಚವಾರ್ಷಿಕ ಯೋಜನೆಯು ಕೇವಲ ಕೃಷಿ ಕ್ಷೇತ್ರವನ್ನು ವಿಸ್ತರಿಸಿ ಅನ್ನಾಭಾವವನ್ನು ಹೋಗಲಾಡಿಸುವುದಷ್ಟಕ್ಕೆ ಸೀಮಿತವಾಗಿರದೆ, ಬಹಳ ದೊಡ್ಡ ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಪೂರೈಕೆಯನ್ನೂ ಹತ್ತಿ—ಸಣಬು ಮುಂತಾದ ಕಚ್ಚಾ ಸರಕುಗಳ ಉತ್ಪಾದನೆಯನ್ನೂ ನೂರಾರು ಜನ ನಿರುದ್ಯೋಗಿಗಳಿಗೆ ಕೈ ತುಂಬ ಕೆಲಸವನ್ನೂ ಒದಗಿಸಿಕೊಡುವುದು.

ಉತ್ಪಾದನೆಯ ನಿಲುವು

ದ್ವಿತೀಯ ಮಹಾಯುದ್ಧವು ಆರಂಭವಾಗುವವರೆಗಿನ ಅವಧಿಯಲ್ಲಿ ರಾಷ್ಟ್ರದ ಔದ್ಯೋಗಿಕ ಕ್ಷೇತ್ರದ ನಿಲುವು ಒಂದು ತೆರನಾಗಿದ್ದರೆ, ಮಹಾಯುದ್ಧವು ಅದರ ಬಣ್ಣವನ್ನೇ ಬದಲಾಯಿಸಿತು. ಅಂದಿನವರೆಗಿದ್ದ ಪ್ರಬಲ ಸ್ಪರ್ಧೆಯೂ ಬೆಲೆಗಳ ಇಳಿತವೂ ಒಮ್ಮೆಲೆ ತಮ್ಮ ಗತ್ತು ಬದಲಾಯಿಸಿದುವು. ವಿದೇಶಗಳಿಂದ ಉತ್ಪಾದಿತ ಸರಕುಗಳ ಪೂರೈಕೆಯು ನಿಂತುಹೋದುದರಿಂದಲೂ ದೇಶದ ಆಂತರಿಕ ಬೇಡಿಕೆ ಒಂದೇಸಮನೆ ಹೆಚ್ಚತೊಡಗಿತು. ಇದರೊಡನೆಯೇ ಯುದ್ಧ ಮುಖಕ್ಕೆ ಎಷ್ಟು ಸರಕುಗಳನ್ನು ಪೂರೈಸಿದರೂ ಕಡಿಮೆ ಎಂದೇ ತೋರುತ್ತಿದುದರಿಂದ, ಉತ್ಪಾದನೆಯ ವೇಗವನ್ನೂ ಪ್ರಮಾಣವನ್ನೂ ಬಹಳಷ್ಟು ಹೆಚ್ಚಿಸಬೇಕಾಗಿ ಬಂತು. ಅಷ್ಟೊಂದು ಗಟ್ಟಿಮುಟ್ಟಲ್ಲದ ಸಾಧನ—ಸಲಕರಣೆಗಳಿಂದಲೂ ಯೋಗ್ಯತೆ ಮೀರಿ ಕೆಲಸವನ್ನು ತೆಗೆದುಕೊಳ್ಳಲಾಯಿತು. ಹೀಗೆ ಒಮ್ಮೆಲೇ ಶಿಖರಕ್ಕೇರಿದ ಉತ್ಪಾದನೆಯ ಮಟ್ಟವು ಯುದ್ಧ ಸಮಾಪ್ತಿಯೊಂದಿಗೆ ಕುಸಿಯತೊಡಗಿತು. ಅವಿರತ ಪರಿಶ್ರಮದ ಕಾರಣದಿಂದ ಯಂತ್ರಗಳು ಸವಕಳಗೊಂಡವು. ಅವುಗಳ ಉತ್ಪಾದನಾ ಸಾಮರ್ಥ್ಯವೂ ತಗ್ಗಿತು. ಯುದ್ಧ ನಿಂತುದರಿಂದ ಇಷ್ಟರವರೆಗೆ ಯುದ್ಧ ಮುಖಕ್ಕೊಂದೇ ಬೇಕಾದ ಸಲಕರಣೆಗಳನ್ನು ಪೂರೈಸುತ್ತಿದ್ದ ಕಾರಖಾನೆಗಳು ಈಗ ಮರಳಿ ತಮ್ಮ ಲಕ್ಷ್ಯವನ್ನು ನಾಗರಿಕರ ಆವಶ್ಯಕತೆಯ ಕಡೆಗೆ ತಿರುಗಿಸಬೇಕಾಯಿತು. ಕೂಡಲೇ ಪರಿವರ್ತನೆಯನ್ನು ಒಗ್ಗಿಸಿಕೊಂಡು ಚೇತರಿಸಿಕೊಳ್ಳಲು ಸ್ವಲ್ಪ ಕಾಲಾವಧಿಯು ಅವಶ್ಯವೆನಿಸಿತು.

ಸ್ವತಂತ್ರ ರಾಷ್ಟ್ರವಾಗಿ ಭಾರತವು ರೂಪುಗೊಂಡ ಬಳಿಕ, ಔದ್ಯೋಗಿಕ ಸಮಸ್ಯೆಗೆ ರಾಷ್ಟ್ರೀಯ ಸ್ವರೂಪವು ಬಂದಿತೆನ್ನಬಹುದು. ಪಾಕಿಸ್ತಾನದಲ್ಲಿ ತೊಡಗಿದ್ದ ಉದ್ಯಮಗಳು ನಮ್ಮ ಮಟ್ಟಿಗೆ ಪ್ರತ್ಯೇಕಿಸಲ್ಪಟ್ಟುದರಿಂದ ನಮ್ಮ ಜನರ ಬೇಡಿಕೆ ಪೂರೈಸಲು ಹೊಸ—ಹೊಸ ಸ್ಥಳಗಳಲ್ಲಿ ವಿಧ ವಿಧದ ಉದ್ಯಮ ಕ್ಷೇತ್ರಗಳನ್ನು ಸೃಷ್ಟಿಸುವ ಕಾರ್ಯ ತೊಡಗಿತು. ಮುಖ್ಯವಾಗಿ ಯಂತ್ರ, ಸರಕುಗಳೂ ರಾಸಾಯನಿಕ ಮತ್ತು ಔಷಧಿ ಸಾಮಗ್ರಿಗಳೂ ಹೊಸತಾಗಿ ಬೆಳೆಯತೊಡಗಿರುವ ಉದ್ದಿಮೆಗಳು. ಚಿತ್ತರಂಜನದಲ್ಲಿ ರೈಲ್ವೇ ಕಾರಖಾನೆ, ಸಿಂದ್ರಿಯ ಗೊಬ್ಬರ ಕಾರಖಾನೆ, ಮೊನ್ನೆ ತಾನೆ ಬುಲ್ಸಾರದಲ್ಲಿ ತೆರೆದ ರಂಗಿನ ಮತ್ತು ಔಷಧಿಯ ಕಾರಖಾನೆ—ಇವು ಸಮಗ್ರ ಏಶಿಯದಲ್ಲಿಯೇ ದೊಡ್ಡ ಪ್ರಮಾಣದ ಔದ್ಯಮಿಕ ಕೇಂದ್ರಗಳಾಗಿವೆ. ಹೀಗೆ ರಾಷ್ಟ್ರದ ಔದ್ಯೋಗಿಕ ಪ್ರಗತಿಯು ವಿರಾಮವಿಲ್ಲದೆ ನೆರವೇರುತ್ತಿದ್ದರೂ ಕೂಡ ಹಳೆಯ ಉದ್ಯಮಗಳಿಗೆ ಯುದ್ಧ ಕಾಲದ ಉತ್ಪಾದನೆಯ ಮಟ್ಟವನ್ನು ಇನ್ನೂ ಏರಿಗೆ ಮುಟ್ಟಲು ಸಾಧ್ಯವಾಗಿಲ್ಲ.

ಸಂರಕ್ಷಣೆಯಿಂದ ಪ್ರೋತ್ಸಾಹ

ಸರಕಾರವು ಕೆಲವೊಂದು ಉದ್ದಿಮೆಗಳಿಗೆ ಸಂರಕ್ಷಣೆಯನ್ನು ನೀಡುವ ಧೋರಣ ವಹಿಸುವುದರಿಂದ ಅವುಗಳು ವಿದೇಶೀ ಸ್ಪರ್ಧೆಯ ಚಿಂತೆ ಇಲ್ಲದೆ, ಅಭಿವೃದ್ಧಿಯೊಂದನ್ನೇ ಕುರಿತು ಯೋಚಿಸಲು ಸಹಾಯವಾಗುತ್ತದೆ. ಇಗ್ಗೆ ಮೂರು ದಶಕಗಳ ಹಿಂದಿನಿಂದಲೇ ಸರಕಾರವು ಸಾಮಾನ್ಯವಾಗಿ ಈ ಧೋರಣವನ್ನು ಕೆಲವು ನಿರ್ದಿಷ್ಟ ಉದ್ಯಮಗಳ ಮಟ್ಟಿಗೆ ಅನುಸರಿಸಹತ್ತಿದ್ದು, ಆ ಕಾಲದಲ್ಲಿ ದೇಶದ ಉದ್ಯಮಗಳು ಬೆಳೆಯುವುದಕ್ಕೆ ಇದು ಉತ್ತೇಜನ ಕೊಟ್ಟಿತು. ಮುಖ್ಯವಾಗಿ ಬೆಂಕಿಪೆಟ್ಟಿಗೆ ತಯಾರಿ, ಸಕ್ಕರೆ, ಸಿಮೆಂಟು, ಜವುಳಿ, ಕಾಗದ, ಕಬ್ಬಿಣ ಮತ್ತು ಉಕ್ಕು ಮುಂತಾದುವುಗಳ ಉತ್ಪಾದನೆಗೆ ಇದರಿಂದ ತುಂಬ ಪ್ರೋತ್ಸಾಹ ದೊರೆತಿದೆ. ಅದರಲ್ಲೂ ಸಕ್ಕರೆಯ ಉದ್ಯಮಕ್ಕೆ ದೊರೆತಷ್ಟು ಪ್ರೋತ್ಸಾಹ ಬಹುಶಃ ಬೇರಾವುದಕ್ಕೂ ಸಿಕ್ಕಿಲ್ಲವೇನೋ—ಈ ಶತಮಾನದಾದಿಯಲ್ಲಿ ವಿದೇಶದಿಂದ ಆಮದಾಗುತ್ತಿದ್ದ ಸಕ್ಕರೆಯ ಪೂರೈಕೆಯನ್ನು ಎದುರಿಸಲಾರದೆ ದೇಶದ ಇತರ ಗುಡಿ ಕೈಗಾರಿಕೆಗಳಂತೆ ಇದು ನಶಿಸಿ ಹೋಗುವುದರಲ್ಲಿತ್ತು. ಮೊದಲನೇ ಮಹಾಯುದ್ಧದ ಬಳಿಕ ವಿದೇಶಗಳಿಂದ ಆಯಾತವಾಗುವ ಸಕ್ಕರೆಯ ಮೇಲೆ ಹೆಚ್ಚಿನ ಸುಂಕ ಹೇರಿದ್ದರಿಂದ, ಚಿಕ್ಕ ಪುಟ್ಟ ಪ್ರಮಾಣದಲ್ಲಿ ಸಕ್ಕರೆಯನ್ನು ದೇಶದಲ್ಲಿಯೇ ಉತ್ಪಾದಿಸುವ ಪ್ರಯಾಸವು ಅಲ್ಲಲ್ಲಿ ನಡೆಯಿತು. ೧೯೩೦ ವರೆಗೂ ಈ ಪರಿಸ್ಥಿತಿ ಇತ್ತು. ಆಗ ಭಾರತ ಸರಕಾರದ ಕೃಷಿ ಸಂಶೋಧನ ಖಾತೆಯು ಈ ವಿಷಯದಲ್ಲಿ ಪ್ರವೇಶಿಸಿ, ದೇಶದ ಸಕ್ಕರೆ ತಯಾರಿಯ ಉದ್ಯಮಕ್ಕೆ ೧೫ ವರ್ಷ ಕಾಲ ಸಂರಕ್ಷಣೆಯನ್ನು ನೀಡುವ ನಿರ್ಣಯ ಕೈಗೊಂಡಿತು. ಆ ಕೂಡಲೇ ಒಂದೇ ಒಂದು ವರ್ಷದೊಳಗಾಗಿ ಈ ಉದ್ಯಮ ಎಷ್ಟು ವಿಸ್ತೃತ ಸ್ವರೂಪಧಾರಣ ಮಾಡಿತೆಂದರೆ—೧೯೩೧ ರಲ್ಲಿ ಇದ್ದ ೩೧ ಕಾರಖಾನೆಗಳ ಸಂಖ್ಯೆ ೧೯೩೪ರಲ್ಲಿ ೧೩೦ಕ್ಕೆ, ೧೯೩೭ರಲ್ಲಿ ೧೩೭ಕ್ಕೆ ಏರಿತು. ಸಕ್ಕರೆಯ ಉತ್ಪಾದನೆಯೂ ಈ ಅವಧಿಯಲ್ಲಿ ಕ್ರಮವಾಗಿ ಎರಡೂಕಾಲು ಲಕ್ಷ ಟನ್ನುಗಳಿಂದ ಆರೂಕಾಲು ಲಕ್ಷ ಟನ್ನಿಗೆ, ಅಲ್ಲಿಂದ ಹನ್ನೊಂದೂಕಾಲು ಲಕ್ಷ ಟನ್ನಿಗೆ ಮುಟ್ಟಿತು. ಇದರ ಫಲವಾಗಿ ೧೯೩೧ರಲ್ಲಿ ಆಮದಾಗುತ್ತಿದ್ದ ನಾಲ್ಕು ಲಕ್ಷ ಟನ್ನು ಸಕ್ಕರೆಯ ಪ್ರಮಾಣವು ೧೯೩೭ರಲ್ಲಿ ಕೇವಲ ಹದಿನಾಲ್ಕು ಸಾವಿರ ಟನ್ನಿಗೆ ಕುಸಿದುಹೋಯಿತು.

ಸಕ್ಕರೆಯಂತೆ ಸಿಮೆಂಟಿನ ಉತ್ಪಾದನೆ ಸಹ ೧೯೨೭ರಲ್ಲಿ ನಾಲ್ಕೂ ಮುಕ್ಕಾಲು ಲಕ್ಷ ಟನ್ನಿದ್ದುದು ೧೯೩೭ರಲ್ಲಿ ಹನ್ನೊಂದೂ ಮುಕ್ಕಾಲು ಲಕ್ಷ ಟನ್ನುಗಳಿಗೇರಿತು.

ದಿ ಈಸ್ಟ್ ಎಂಡ್ ವೆಸ್ಟ್
ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಸ್ಥಾಪನೆ:] ಈಸ್ಟ್ ಎಂಡ್ ವೆಸ್ಟ್ ಬಿಲ್ಡಿಂಗ್ಸ್, ಬೊಂಬಾಯಿ 1. [1913

ಉದಾರ ಮತ್ತು ರಿಯಾಯತಿ ಶರ್ತಗಳಿರುವ ಪುರಾತನ ಮತ್ತು ಮುಂದುವರಿದ ಕಂಪೆನಿಗಳಲ್ಲೊಂದಾಗಿರುತ್ತದೆ.

ವಿಮೆಯ ಸಕಲ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು, ಆ ಬಾಬಿನ ಎಲ್ಲಾ ಕೆಲಸಗಳಲ್ಲಿ ಭಾಗಿಯಾಗಿ ಸಹಕರಿಸಿ ಸಲಹೆಗಳನ್ನೀಯುತ್ತಾ, ಜನಸೇವೆಗೈಯುವುದೇ ನಮ್ಮ ಧ್ಯೇಯ

ನಮ್ಮ ಚೀಫ್ ಏಜನ್ಸಿ ವಿಸ್ತೀರ್ಣದೊಳಗೆ ಪ್ರತೀ ಜಿಲ್ಲೆಗೊಬ್ಬರಂತೆ ಇನ್ಸ್‌ಪೆಕ್ಟರುಗಳೂ, ಸ್ಪೆಶಲ್ ಏಜಂಟರೂ, ಏಜಂಟರೂ ಬೇಕಾಗಿದ್ದಾರೆ. ಹೆಚ್ಚಿನ ವಿವರಕ್ಕೆ ಬರೆಯುವದು.

ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್,
ಚೀಫ್ ಏಜಂಟರು,
ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಮೈಸೂರು ಸ್ಟೇಟ್,
ಪೋಸ್ಟ್ ಶಿರ್ವಾ, ದ. ಕ.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತಿದೆ, ಬಕ್ಕ ಬಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

ಅಂತರಾಷ್ಟ್ರೀಯ
ರಾಜಕೀಯ ಚದುರಂಗದ

ಸಿಂಹಳದ ಭಾರತೀಯರು

ಭಾರತದ ಪಾಲಿಗೆ ರಾವಣನ ಲಂಕೆ ಎಂಬುದಾಗಿ ಹೆಸರಾದ ಸೀಲೋನಿನಲ್ಲಿ ಮತಾಧಿಕಾರದ ಪ್ರಶ್ನೆಯನ್ನು ತೆಗೆದುಕೊಂಡು ಸಿಲೋನು ಸರಕಾರಕ್ಕೂ ಸಿಂಹಳದ ಭಾರತೀಯರಿಗೂ ನಡುವೆ ಬಿಕ್ಕಟ್ಟು ಉಂಟಾಗಿದೆ. ಅಲ್ಲಿ ನೆಲಸಿದ್ದ ಭಾರತೀಯರು ೧೯೪೮ರವರೆಗೂ ನಿರಾತಂಕವಾಗಿ ಅನುಭವಿಸುತ್ತಿದ್ದ ಮತಾಧಿಕಾರದ ಮೇಲೆ ಸಿಂಹಳ ಸರಕಾರವು ಈಗ ಗದಾಪ್ರಹಾರವನ್ನು ಮಾಡಿದೆ. ಹಾಗೆ ಮತಾಧಿಕಾರ ದೊರೆಯಬೇಕಾದರೆ ತಾವು ಸಿಂಹಳದ ನಾಗರಿಕರಿರುವುದಾಗಿ ಹಕ್ಕು ಸ್ಥಾಪಿಸಬೇಕೆಂದು ಭಾರತೀಯರನ್ನು ನಿರ್ಬಂಧಿಸುವ ಮಸೂದೆಯೊಂದನ್ನು ಸಿಂಹಳದ ಹಿಂದಿನ ಮುಖ್ಯ ಮಂತ್ರಿ ಡಾನ್ ಸ್ಟೀವನ್ ಸೇನಾನಾಯಕೆಯವರು ಪ್ರಬಲವಾದ ವಿರೋಧವನ್ನೂ ಲೆಕ್ಕಿಸದೆ ಪಾಸು ಮಾಡಿಸಿಕೊಂಡಿದ್ದರು. ಈ ಕಾನೂನಿನನ್ವಯವಾಗಿ ಮತಾಧಿಕಾರದ ಹಕ್ಕನ್ನು ಗಳಿಸಬೇಕೆಂಬ ಇರಾದೆಯಿಂದ ಸುಮಾರು ಎರಡೂವರೆ ಲಕ್ಷಕ್ಕೂ ಮೀರಿದ ಸಂಖ್ಯೆಯಲ್ಲಿ ಭಾರತೀಯರು ಅರ್ಜಿ ಹಾಕಿಕೊಂಡರು. ಆದರೆ ಅವುಗಳನ್ನು ಪೂರ್ಣ ವಿಚಾರಿಸಿ ನೋಡಿಕೊಳ್ಳಲು ಪುರಸೊತ್ತು ಸಿಂಹಳ ಸರಕಾರಕ್ಕೆ ಸಿಗಲಿಲ್ಲವೇನೋ—ಹೀಗೆ ಅರ್ಜಿ ಹಾಕಿಕೊಳ್ಳಲು ಕೊನೆಯ ನಿರ್ದಿಷ್ಟ ದಿನವಾದ ೫ನೇ ಆಗೋಸ್ತು ೧೯೫೧ರೊಳಗೇನೇ ಈ ಎಲ್ಲ ಅರ್ಜಿಗಳೂ ಸರಕಾರಕ್ಕೆ ಒಪ್ಪಿಸಲ್ಪಟ್ಟವಾದರೂ, ಕೇವಲ ಎರಡೂವರೆ ಸಾವಿರ ಅರ್ಜಿಗಳನ್ನು ಮಾತ್ರ ಪರಿಶೀಲಿಸಿತು. ಈಗ ಮುಂದಿನ ತಿಂಗಳಲ್ಲಿ ಚುನಾವಣೆಗಳು ನಡೆಯಬೇಕಿದ್ದು ಅಷ್ಟು ಸ್ವಲ್ಪ ಅವಧಿಯಲ್ಲಿ ಈ ಅರ್ಜಿಗಳ ರಾಶಿಯನ್ನು ಪರ್ಯಾಲೋಚಿಸಲು ಸಾಧ್ಯವಿಲ್ಲವಾದುದರಿಂದ ಸಿಂಹಳದ ಸರಕಾರವು ಭಾರತೀಯರಿಗೆ ಮತಾಧಿಕಾರವೇ ದೊರೆಯದಂತೆ ಮಾಡಿದೆ. ಪುನರ್ವಿಮರ್ಶಿತ ಮತದಾರರ ಯಾದಿಯಲ್ಲಿ ಭಾರತೀಯರ ಹೆಸರನ್ನು ಹೊಡೆದು ಹಾಕಿ, ಅವರು ಮತದಾನ ಮಾಡಲು ಅಸ್ಪದವಿಲ್ಲದಂತೆ ಪ್ರಸಂಗವನ್ನು ತಂದೊಡ್ಡಿದೆ.

ಇಂಥ ಘೋರ ಅನ್ಯಾಯವು ಪ್ರಜಾಪ್ರಭುತ್ವದ ಮೂಲ ಭೂತ ತಳಹದಿಗೆ ವಿರುದ್ಧವಿದೆ, ಆದುದರಿಂದ ಸಿಂಹಳದ ಭಾರತೀಯ ಕಾಂಗ್ರೆಸು ತನ್ನ ಶಿಷ್ಟ ಮಂಡಳವೊಂದನ್ನು ಮುಖ್ಯ ಮಂತ್ರಿ ಡಡ್ಲೆಯವರಲ್ಲಿಗೆ ಕಳುಹಿಸಿ ಈ ರೀತಿ ಭಾರತೀಯರನ್ನು ಮತಾಧಿಕಾರದಿಂದ ವಂಚಿಸಲು ನೋಡಕೂಡದೆಂದು ಕೇಳಿ ಕೊಂಡಿತು. ಭಾರತ ಸರಕಾರ ಕೂಡ ಈ ವಿಷಯದಲ್ಲಿ ಆಸ್ಥೆ ವಹಿಸಿ, ಸಿಲೋನಿನಲ್ಲಿ ತನ್ನ ರಾಯಭಾರಿಯಾಗಿರುವ ಶ್ರೀ ಕೇಶವ ಮೆನನ್ನರ ಮೂಲಕ ತಕ್ಕ ಬುದ್ಧಿವಾದವನ್ನು ಹೇಳಿಸಿತು. ಸಿಂಹಳದ ಒಟ್ಟು ಜನಸಂಖ್ಯೆಯಲ್ಲಿ ನೂರಕ್ಕೆ ಹತ್ತರಷ್ಟು ಪ್ರಮಾಣದಲ್ಲಿರುವ ಭಾರತೀಯರಿಗೆ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಅತ್ಯಮೂಲ್ಯವೆಂದು ಪರಿಗಣಿತವಾಗಿರುವ ಮತಾಧಿಕಾರವನ್ನು ಕೊಡಲೇ ಬೇಕೆಂದೂ ಈ ಬಗ್ಗೆ ಪಾರ್ಲಿಮೆಂಟು ಕಾನೂನು ಮಾಡುವ ಅಗತ್ಯವಿರುವುದರಿಂದ, ಅದು ಸದ್ಯಕ್ಕೆ ವಿಸರ್ಜಿಸಲ್ಪಟ್ಟಿದ್ದರೂ ಒಂದು ವಿಶೇಷಾಜ್ಞೆಯನ್ನು ಹೊರಡಿಸಿ, ಪಾರ್ಲಿಮೆಂಟನ್ನು ಪುನಃ ಸಭೆಸೇರಿಸಬೇಕೆಂದೂ ಭಾರತ ಸರಕಾರವು ಕೇಳಿಕೊಂಡಿತು. ಸಿಲೋನು ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ಪೆರಿಸುಂದರಂ ಅವರು ಸಿಂಹಳ ಸರಕಾರಕ್ಕೆ ಎಚ್ಚರಿಕೆಯನ್ನೀಯುತ್ತಾ ನ್ಯಾಯ ಬದ್ಧವಾದ ಮತದಾನದ ಹಕ್ಕನ್ನು ಸಿಂಹಳ ಸರಕಾರವು ಕೊಡದೆ ಹೋದಲ್ಲಿ ಪರಿಸ್ಥಿತಿಯು ಗಂಭೀರವಾಗುವುದು ಎಂದರು.

ಆದರೆ ಇದೆಲ್ಲ ಆಕ್ಷೇಪಗಳನ್ನು ಸಿಂಹಳ ಸರಕಾರವು ಮೂಲೆಗೆ ತಳ್ಳಿ ಬಿಟ್ಟು, ಮಹಾ ಪ್ರಮಾದವನ್ನು ಮೈ ಮೇಲೆ ತಂದುಕೊಂಡಿದೆ. ಮತದಾರರ ಯಾದಿಯನ್ನು ಕೊನೆಯದಾಗಿ ತಯಾರಿಸಿ, ಮಂಜೂರು ಮಾಡಿಯಾಗಿರುವುದರಿಂದ ಅದರಲ್ಲಿ ಒಂದು ಸಲ ತೆಗೆದು ಹಾಕಿದ ಭಾರತೀಯರ ಹೆಸರನ್ನು ಸೇರಿಸಲು ಸಾಧ್ಯವೇ ಇಲ್ಲವೆಂದೂ ಗವರ್ನರ ಜನರಲ್ಲರು ವಿಶೇಷಾಜ್ಞೆ ಹೊರಡಿಸಿ ವಿಸರ್ಜಿತ ಪಾರ್ಲಿಮೆಂಟನ್ನು ಮರಳಿ ಕೂಡಿಸುವಷ್ಟರ ಮಟ್ಟಿನ ಗಂಭೀರ ಪರಿಸ್ಥಿತಿ ಉತ್ಪನ್ನವಾಗಿಲ್ಲೆಂದೂ ಸಿಂಹಳದ ಮುಖ್ಯ ಮಂತ್ರಿಗಳು ಬಹಳ ಸುಲಭದಲ್ಲಿ ಪ್ರಶ್ನೆಯನ್ನು ಹಾರಿಸಿ ಬಿಟ್ಟಿರುವರು. ಹೀಗೆ ಸಧ್ಯದ ಪರಿಸ್ಥಿಯಲ್ಲಿ ಪ್ರತಿಯೊಬ್ಬರ ಧಮನಿಯಲ್ಲೂ ಹರಿಯುತ್ತಿರುವ ಪ್ರಜಾಪ್ರಭುತ್ವದ ತತ್ವಕ್ಕೇನೇ ಎಳ್ಳುನೀರು ಬಿಟ್ಟು ನಿಶ್ಚಿಂತೆಯಿಂದಿರುವ ಸಿಂಹಳ ಸರಕಾರದ ವರ್ತನೆಯಿಂದ ಈ ವಿಷಯದಲ್ಲಿ ಸ್ವಲ್ಪ ಮಟ್ಟಿನ ಆಸಕ್ತಿ ವಹಿಸಿದ ರಾಷ್ಟ್ರಗಳಿಗೆ ವಿವಂಚನೆ ಉಂಟಾಗಿದೆ. ಇದರ ಹೊರತು, ಹಿಂದೊಮ್ಮೆ ಇದ್ದ ಮತಾಧಿಕಾರವನ್ನು ಭಾರತೀಯರಿಂದ ಕಸಿದುಕೊಂಡು, ಉಳಿದವರ ಓಟುಗಳ ಬಲದಿಂದ ಚುನಾವಣೆ ನಡೆಸಿ ಹೊಸ ಪಾರ್ಲಿಮೆಂಟನ್ನು ಕೂಡಿಸುವುದಕ್ಕೆ ಘಟನಾತ್ಮಕ ಮನ್ನಣೆ ದೊರೆಯುವುದೂ ಕಷ್ಟವೆಂದು ತಿಳಿದು ಬರುತ್ತದೆ. ಹಾಗೆಯೇ ಇನ್ನೊಂದು ಊಹೆಯಂತೆ, ಅಲ್ಪಸಂಖ್ಯಾತರಾದ ಭಾರತೀಯರನ್ನು ಯೋಗ್ಯ ರೀತಿಯಲ್ಲಿ ಪ್ರತಿನಿಧಿಸುವ ಜನರು ಪಾರ್ಲಿಮೆಂಟಿನಲ್ಲಿ ಇಲ್ಲದೆ ಹೋದರೆ ಸರಕಾರವೇ ಕೆಲವು ಮಂದಿ[illegible]ನ್ನು ನಾಮಕರಣ ಮಾಡಿ, ಭಾರತೀಯರ ಹಿತಸ[illegible] ರಕ್ಷಣೆಗೆ ಅನುವು ಮಾಡಿಕೊಡುವುದು. ಆದರೆ ಇಂಥ ಯಾವ ಕ್ರಮವೂ ನ್ಯಾಯ ಬದ್ಧವಾದ ಒಂದು ಬೇಡಿಕೆಯನ್ನು ನಿರಾಕರಿಸಿದ ತಪ್ಪಿಗೆ ಪ್ರಾಯಶ್ಚಿತ್ತವಾಗಲಾರದೆಂಬುದು ಸ್ಪಷ್ಟವಿದೆ. ಕಾರಣ, ಇವೆಲ್ಲ ಕುಟಿಲ ತಂತ್ರಗಳನ್ನು ಎದುರಿಸಿ, ಮತಾಧಿಕಾರದ ಪ್ರಾಪ್ತಿಗಾಗಿ ಸತ್ಯಾಗ್ರಹವನ್ನೇ ಹೂಡಬೇಕೆಂದು ಸಿಂಹಳ ಕಾಂಗ್ರೆಸು ನಿರ್ಧರಿಸಿ, ಈ ವಿಷಯದಲ್ಲಿ ರಣಾಹ್ವಾನವನ್ನೇ ಕೊಟ್ಟಿದೆ.

ದಕ್ಷಿಣ ಆಫ್ರಿಕೆಯಲ್ಲಿ

ಸ್ವರೂಪ ಮಾತ್ರ ಸ್ವಲ್ಪ ಹೆಚ್ಚು ಕಡಿಮೆ ಇದ್ದರೂ ಇಂಥದೇ ಭೇದ ನೀತಿಯ ಕಾಟಲ್ಯಕ್ಕೆ ಹೆಸರಾದ ದಕ್ಷಿಣ ಆಫ್ರಿಕೆಯ ಯೂನಿಯನ್ ರಾಜ್ಯಗಳ ಮುಖ್ಯ ಮಂತ್ರಿ ಡಾ|| ಮಲಾನರು ಇನ್ನೊಂದು ಚದುರಂಗದಾಟ ಅಥವಾ ಅಂತರ್ಲಾಗ ಹೊಡೆದಿದ್ದಾರೆ—ದಕ್ಷಿಣ ಆಫ್ರಿಕೆಯಲ್ಲಿ ಬಹಳ ಸಮಯದಿಂದ ನೆಲೆಸಿದ್ದು ಅಲ್ಲಿನ ಪ್ರಜೆಗಳಾಗಿರುವ ಭಾರತೀಯರನ್ನು ವರ್ಣ ಭೇದದ ಹೆಳೆಯನ್ನು ಮುಂದೊತ್ತಿ ಮರ್ದಿಸಲಾಗುತ್ತಿರುವ ವಿಷಯ ಸ್ವಲ್ಪ ಸಮಯದ ಹಿಂದೆ ಉಗ್ರಸ್ವರೂಪ ತಳೆದಿತ್ತು. ವರ್ಣೀಯ ಮತದಾರರಿಗಾಗಿ ಪ್ರತ್ಯೇಕ ಯಾದಿಯನ್ನು ಸಿದ್ಧಪಡಿಸಿ, ಪ್ರಜಾಜನರಲ್ಲಿ ಅನಪೇಕ್ಷಿತ ಭೇದ ಭಾವನೆಯನ್ನು ಸರಕಾರವು ಮಾಡಿತು. ಇದನ್ನು ಪ್ರತಿಭಟಿಸಿ, ನ್ಯಾಯದಾನಕ್ಕಾಗಿ ದಕ್ಷಿಣ ಆಫ್ರಿಕೆಯ ಶ್ರೇಷ್ಠ ನ್ಯಾಯಾಲಯವನ್ನೇ ಶರಣು ಹೊಕ್ಕಾಗ, ಮಲಾನ ಸರಕಾರದ ಈ ಭೇದನೀತಿ ಎಷ್ಟು ಮಾತ್ರಕ್ಕೂ ಸರಿಯಲ್ಲವೆಂದು ಅದು ತೀರ್ಪನ್ನು ಹೇಳಿತು. ಇದರಿಂದ ಕೇವಲ ಭಾರತೀಯರಿಗಷ್ಟೇ ಅಲ್ಲ—ಆಫ್ರಿಕೆಯಲ್ಲಿ ಪಾರ್ಲಿಮೆಂಟಿನಲ್ಲಿರುವ ಮಲಾನ ಸರಕಾರದ ವಿರೋಧಿಗಳಿಗೂ ಬಹಳ ಸಂತೋಷವಾಯಿತು. ಆದರೆ ತನ್ನ ಕುದುರೆಗೆ ಮೂರೇ ಕಾಲು ಎಂಬುದಾಗಿ ವ್ಯರ್ಥ ಸಾಧನೆಯಲ್ಲಿ ತೊಡಗುವ ಹುಡುಗಾಟವನ್ನು ಮಾತ್ರ ಮಲಾನರು ಬಿಟ್ಟುಗೊಡಲಿಲ್ಲ. ಪಾರ್ಲಿಮೆಂಟು ಸ್ವೀಕರಿಸಿದ ಗೊತ್ತುವಳಿಗಳ ಮೇಲೆ ನಿರ್ಣಯವನ್ನು ಹೇರುವ ಅಧಿಕಾರವು ವರಿಷ್ಠ ನ್ಯಾಯಾಲಯದ ಕಕ್ಷೆಯಲ್ಲಿ ಬರುವುದನ್ನೇ ತಡೆಗಟ್ಟಲು ಮಲಾನರು ಹೊಸತೊಂದು ಹೈಕೋರ್ಟನ್ನು ತೆರೆಯುವುದಕ್ಕೆ ಉದ್ಯುಕ್ತರಾಗಿದ್ದಾರೆ. ಇದರಲ್ಲಿ ಪಾರ್ಲಿಮೆಂಟಿನ ಎರಡೂ ಮನೆಗಳ ಸದಸ್ಯರು ಇದ್ದು ಅವರ ಬಹುಮತದ ನಿರ್ಣಯದಂತೆ ರಾಜಕೀಯ ವಿವಾದಗಳನ್ನು ತೀರ್ಮಾನಿಸಲಾಗುವುದು. ಈ ಮಸೂದೆಯನ್ನು ಈಗಾಗಲೇ ಪಾರ್ಲಿಮೆಂಟಿನಲ್ಲಿ ಮಂಡಿಸಲಾಗಿದೆ. ಮಸೂದೆಯ ಪ್ರಥಮ ವಾಚನದ ಕಾಲದಲ್ಲಿ ವಿರೋಧಿದಳದ ನಾಯಕರಾದ ಮಿ. ಸ್ಟ್ರಾಸರು ಬಲವಾದ ಪ್ರತಿಭಟನೆಯನ್ನು ಹೂಡಿದರೂ ಅವರಿಗೆ ಗೆಲವು ಸಿಗಲಿಲ್ಲ. ಮಲಾನರು ಮುಂದಿಟ್ಟ ದುಷ್ಟ ಹೆಜ್ಜೆಯಿಂದಾಗಿ ನ್ಯಾಯಾನ್ಯಾಯದ ವಿಮರ್ಶೆಗೆ ಆಸ್ಪದವೇ ಇಲ್ಲವಂತೆ ಕಾನೂನುಗಳನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಿ ಸ್ವೀಕಾರ ಮಾಡಿಸಿಕೊಳ್ಳುವ ಪ್ರವೃತ್ತಿಗೆ ಪ್ರೋತ್ಸಾಹ ದೊರೆಯುವುದು ಸಾಧ್ಯ. ಈಚೆಗೆ ಕೆಲ ಸಮಯದಿಂದ ತೀರ ಛಲವಾದಿಯಂತೆ ಮಲಾನರು ನಡೆದುಕೊಳ್ಳುತ್ತಿರುವುದು ಶೋಚನೀಯವಾದರೂ ಸಾಮಾನ್ಯ ಸಂಗತಿ ಎನಿಸಿದೆ. ಸಂಯುಕ್ತ ರಾಷ್ಟ್ರ ಸಂಘದಂಥ ಮೇಲ್ಪಟ್ಟ ಸಂಸ್ಥೆಯ ಆದೇಶಗಳಿಗೆ ಮನ್ನಣೆಯನ್ನು ಕೊಡುವುದಕ್ಕೂ ಅವರು ಒಡಂಬಡದೆ ನಿರಾಕರಿಸುತ್ತಿರುವರು. ಅದರ ಪ್ರತಿಯೊಂದೂ ಆಜ್ಞೆಯನ್ನು ಉಲ್ಲಂಘಿಸಿ ನಡೆಯುತ್ತಿರುವಾಗ, ಭಾರತೀಯ ನಿವಾಸಿಗಳು ಇಂಥ ಅನ್ಯಾಯವನ್ನು ಎಷ್ಟು ಮಾತ್ರಕ್ಕೂ ಸಹಿಸುವಂತಿಲ್ಲ. ಮಹಾತ್ಮಾ ಗಾಂಧೀಜಿಯವರ ಪ್ರಥಮ ಕಾರ್ಯಕ್ಷೇತ್ರವಾಗಿದ್ದ ರಾಷ್ಟ್ರವ್ಯಾಪೀ ದಕ್ಷಿಣ ಆಫ್ರಿಕೆಯಲ್ಲಿ ಪುನಃ ವರ್ಣ ಪ್ರಭೇದವನ್ನು ಚಳವಳಿಯ ಮೂಲಕ ಭಂಗಿಸುವ ಸಿದ್ಧತೆಗಳು ಭರದಿಂದ ನಡೆಯುತ್ತಿವೆ. ಭಾರತೀಯ ಕಾಂಗ್ರೆಸಿನ ಅಧ್ಯಕ್ಷ ಯುಸುಫ್ ದಾದೂ ಅವರು, ತಮಗೆ ಸ್ವತಃ ಆಫ್ರಿಕನ್ನರಿಂದಲೂ ಐರೋಪ್ಯ ಬಣದವರನ್ನು ಬಿಟ್ಟುಳಿದವರಿಂದಲೂ ಸಿಗುತ್ತಿರುವ ನೈತಿಕ ಬೆಂಬಲವು ಪ್ರೋತ್ಸಾಹಕರವಿದೆ ಎಂದಿರುವರು.

ಟ್ಯುನಿಸೀಯದ ಬಿಕಟ್ಟು

ಜಗತ್ತಿನಲ್ಲಿ ನ್ಯಾಯವಾದ ಹಕ್ಕು ಬಾಧ್ಯತೆಗಾಗಿ ಹೋರಾಟವನ್ನೇ ಹೂಡಬೇಕಾಗಿ ಬಂದಿರುವುದು ನಿಜಕ್ಕೂ ಆಶ್ಚರ್ಯದ ಮತ್ತು ದುರ್ದೈವದ ಸಂಗತಿ. ಧರ್ಮಮಾರ್ಗದಲ್ಲಿ ನಡೆಕೊಳ್ಳುವುದಕ್ಕೆ ಯಾರೊಬ್ಬರೂ—ಅವರು ವ್ಯಕ್ತಿಯಾಗಿರಲಿ, ಬಣಗಳಾಗಿರಲಿ, ಅಥವಾ ರಾಷ್ಟ್ರವೇ ಆಗಲಿ—ಸುಲಭದಲ್ಲಿ ಒಪ್ಪಲು ಸಿದ್ಧವಿಲ್ಲವೆಂಬಂತೆ ತೋರುತ್ತದೆ. ಎಲ್ಲೆಲ್ಲಿಯೂ ಸ್ವಾರ್ಥಸಾಧನೆಯು ಒಳಸಂಚಿಗೆ ಗುಟ್ಟಿನಿಂದ ಪ್ರೋತ್ಸಾಹಕೊಟ್ಟು, ತಮ್ಮ ಬೇಳೆ ಬೇಯಿಸಿಕೊಳ್ಳುವ ಅವಾಂಛನೀಯ ಮನೋವೃತ್ತಿ ಒಡೆದು ಕಾಣುತ್ತಿದೆ. ಫ್ರೆಂಚ ಸಾಮ್ರಾಜ್ಯವಾದದ ಪ್ರಭಾವಕ್ಕೆ ಒಳಗಾಗಿರುವ ಟ್ಯುನೀಸಿಯದ ಬಿಕ್ಕಟ್ಟಿನ ಮೂಲದಲ್ಲಿರುವುದಾದರೂ ಇಂಥದೇ ಅನ

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs. 10 lacks.
3. Has granted an average dividend of 6% to the Share-holders for the past 20 years.
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates.
6. Grants loans on easy terms to approved parties or on approved securities.
7. Does afford full protection and rich return to all your monies.

ADOPT IT AS
"MY BANK"
THE VIJAYA BANK, LIMITED,
H. O., MANGALORE.

ರಂಗಮಂಟಪದಲ್ಲಿ

ವಿವಿಧ ಭಂಗಿಗಳು

ಪೇಕ್ಷಿತ ವಿಚಾರಗಳು—ಈ ಯುಗ ಧರ್ಮಕ್ಕೆ ತಕ್ಕಂತೆ ಪೌರ್ವಾತ್ಯ ಜನಾಂಗಗಳಲ್ಲಿ ಸ್ವಾಭಾವಿಕವಾಗಿ ಅಂಕುರಿಸಿರುವ ರಾಷ್ಟ್ರೀಯ ಭಾವನೆಯನ್ನು ಕಳೆದ ಶತಮಾನದ ಸಾಮ್ರಾಜ್ಯವಾದಿ ಕುಚಕ್ರದಿಂದ ಅಘಾತಕ್ಕೀಡುಮಾಡಲು ಈಗಲೂ ಹವಣಿಸುವುದು ಮೂರ್ಖತನವಲ್ಲವೆ? ಟ್ಯುನೀಸಿಯದಲ್ಲಿ ಸುಧಾರಣೆಯ ಸೋಗಿನಲ್ಲಿ ಫ್ರೆಂಚರು ವಸಾಹತಿನ ಮೇಲೆ ಭದ್ರಮುಷ್ಟಿಯನ್ನು ಹಿಡಿದುಕೊಳ್ಳಲು ನೋಡುತ್ತಿದ್ದರೆ, ರಾಷ್ಟ್ರೀಯತ್ವದಿಂದ ಉತ್ತೇಜನಗೊಂಡ ಮುಖಂಡರು ಈ ಉಪಕ್ರಮವನ್ನು ಸಹಿಸದೆ, ಪ್ರತಿಭಟಿಸುತ್ತಿರುವರು.

ಒಂದು ರಾಷ್ಟ್ರದ ಮೇಲೆ ಜನರ ಇಚ್ಛೆಗೆ ತೀರ ವಿರುದ್ಧವಾಗಿ ಜುಲುಮೆಯನ್ನೂ ದಬ್ಬಾಳಿಕೆಯನ್ನೂ ನಡೆಸುವ ಅಪಾಯಕಾರಿ ಚಟುವಟಿಕೆಯಲ್ಲಿ ಫ್ರಾನ್ಸು ತೊಡಗಿದೆಯಾಗಿ, ಇದನ್ನು ನಿವಾರಿಸಲು ಭದ್ರತಾಮಂಡಲಕ್ಕೆ ದೂರನ್ನು ಕೊಟ್ಟರೆ ಒಳ್ಳೆಯದೆಂದು ಎಚ್ಚತ್ತ ಏಶಿಯಾ ಹಾಗೂ ಅರಬ ರಾಷ್ಟ್ರಗಳು ಒಕ್ಕಟ್ಟಿನಿಂದ ಪ್ರಯತ್ನಿಸಿದುವು. ಆದರೆ, ಭದ್ರತಾಮಂಡಲದಲ್ಲಿ ಸಾಮ್ರಾಜ್ಯವಾದಿಗಳದೇ ಕೈಮೇಲಾದುದರ ಪರಿಣಾಮವಾಗಿ, ಭದ್ರತಾಮಂಡಲದ ಕಾರ್ಯಕ್ರಮ ಪಟ್ಟಿಯಲ್ಲಿ ಕೂಡ ಈ ವಿಷಯದ ಚರ್ಚೆಯನ್ನು ಸೇರಿಸಲು ಅನುಮತಿ ದೊರೆಯಲಿಲ್ಲ. ಅರ್ವಾಚೀನ ನಾಗರಿಕ ಭಾವನೆಯ ಉಜ್ವಲ ಪರಂಪರೆಯುಳ್ಳ ಹಾಗೂ ಪ್ರಜಾಪ್ರಭುತ್ವದ ಸಂರಕ್ಷಕನೆಂದು ಬೂಟು ಕೊಚ್ಚಿಕೊಳ್ಳುವ ಸಂಯುಕ್ತರಾಜ್ಯ ಅಮೇರಿಕ ಕೂಡ ಈ ವಿಷಯದಲ್ಲಿ ತಟಸ್ಥವುಳಿದು ತನ್ನ ನೆಂಟರಾದ ಬ್ರಿಟನ್ನು ಮತ್ತು ಫ್ರಾನ್ಸುಗಳಿಗೆ ಒಳತನ್ನೇ ಮಾಡಿತು. ಹಾಗೆಯೇ ಉಗ್ರ ಸುಧಾರಣೆಗಳಿಗೆ ಹೆಸರಾಂತ ತುರ್ಕಿಸ್ತಾನವು ಸಹ ಈ ವಿಷಯದಲ್ಲಿ ಅನುಕೂಲಾಭಿಪ್ರಾಯವನ್ನು ತಳೆಯದೆ ಕುಳಿತಿತು. ಇದು ಕೇವಲ ಪೌರ್ವಾತ್ಯ ರಾಷ್ಟ್ರಗಳಿಗಷ್ಟೇ ಅಲ್ಲ—ಸ್ವಾತಂತ್ರ್ಯ ಭಾವನೆಯ ಪೋಷಕ ಮನೋವೃತ್ತಿಯುಳ್ಳ ಎಲ್ಲ ಜನರನ್ನೂ ನೋಯಿಸಿತು. ಮೊನ್ನೆ ತಾನೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಕೂಲಿಕಾರ ಪಕ್ಷದ ಸದಸ್ಯರೊಬ್ಬರು ವಿದೇಶ ಮಂತ್ರಿ ಈಡನ್ನರನ್ನು ಈ ವಿಷಯದ ಪ್ರಶ್ನೆಗಳಿಂದ ದಂಗು ಬಡಿಸಿದರು. ಟ್ಯುನೀಸಿಯ ಪ್ರಕರಣದಲ್ಲಿ, ಬೆಳೆಯುತ್ತಿರುವ ರಾಷ್ಟ್ರೀಯ ಭಾವನೆಗೆ ಘಾತುಕವಾಗಿ ವರ್ತಿಸಿದುದರ ದೆಸೆಯಿಂದ ಬ್ರಿಟನ್ನಿಗೆ ಕಾಮನವೆಲ್ತ್ ರಾಷ್ಟ್ರಗಳ ಸಹಾನುಭೂತಿ ತಪ್ಪಲು ಎಡೆದೊರೆಯಲಿಲ್ಲವೆ?—ಎಂದವರು ಸ್ಪಷ್ಟವಾಗಿ ಕೇಳಿದರು. ಆದರೆ ಈಡನ್ನರು ಮಾತ್ರ ಸರಕಾರದ ಧೋರಣೆಯನ್ನು ಸಮರ್ಥಿಸಿಕೊಂಡರು: ಟ್ಯುನೀಸಿಯಾ ಪ್ರಶ್ನೆಗೆ ಅಂತಾರಾಷ್ಟ್ರೀಯ ಮಹತ್ವವೇ ಇಲ್ಲ. ಅದೊಂದು ಮನೆಜಗಳ—ಅದರಲ್ಲಿ ಹೊರಗಿನ ಶಕ್ತಿಗಳು ಕೈಹಾಕಿ ಇತ್ಯರ್ಥಮಾಡುವಂಥದೇನೂ ಇಲ್ಲ. ಭದ್ರತಾಮಂಡಲದಲ್ಲಿ ಈ ಪ್ರಶ್ನೆಯನ್ನು ಒಪ್ಪಿಕೊಂಡಿದ್ದರೆ ಫ್ರೆಂಚ ಸರಕಾರ ಮತ್ತು ಟ್ಯುನಿಸಿಯ ಜನತೆ ಪರಸ್ಪರ ವಿಚಾರ ವಿನಿಮಯದಿಂದ ಒಂದು ನಿರ್ಣಯಕ್ಕೆ ಬರಲು ಬೇಕೆಂದೇ ಆತಂಕವನ್ನು ಒಡ್ಡಿದಂತಾಗುತ್ತಿತ್ತು, ಇದು ನಿಶ್ಚಯವಾಗಿಯೂ ಟ್ಯುನೀಸಿಯಾ ಜನತೆಯ ಬಯಕೆಯಲ್ಲ—ಎಂಬುದರ ಅಭಿಪ್ರಾಯವಾಗಿತ್ತು.

ಭಾರತೀಯ ಧುರೀಣ ಪಂಡಿತ ನೆಹರೂ ಈ ವಿಷಯದಲ್ಲಿ ಹೆಚ್ಚಿನ ಸತ್ವಶಾಲಿ ಮತ್ತು ಸತ್ಯದರ್ಶಿ ಕೂಡ. ಅವರು ಒಳ್ಳೆ ಸಮಯದಲ್ಲಿಯೇ ಎಚ್ಚರಿಕೆಯನ್ನು ಕೊಟ್ಟು ಏಶಿಯ, ಆಫ್ರಿಕ ಅಥವಾ ಯಾವುದೇ ಭೂಮಿಯಲ್ಲಿ ಜನತಾ ಸ್ವಾತಂತ್ರ್ಯಾಂದೋಲನವನ್ನು ಹತ್ತಿಕ್ಕುವ ಪ್ರಯತ್ನವು ಆಧುನಿಕ ವಿಚಾರಧಾರೆಗೆ ಒಪ್ಪುವಂಥದಲ್ಲ ಎಂದು ಪ್ರತಿಪಾದಿಸಿರುವರು. ಅದೂ ಅಲ್ಲದೆ, ಭಾರತ ಸರಕಾರವು ಸಂಯುಕ್ತರಾಷ್ಟ್ರ ಸಂಘದಲ್ಲಿ ತನ್ನ ಪ್ರತಿನಿಧಿಯಾಗಿರುವ ಶ್ರೀ ರಾಜೇಶ್ವರ ದಯಾಳರಿಗೆ, ಈ ಪ್ರಶ್ನೆಯಲ್ಲಿ ಸಹಾನುಭೂತಿಯನ್ನು ವ್ಯಕ್ತಗೊಳಿಸುವ ಅರ್ಜೆಂಟೀನಾ, ಬ್ರೆಜಿಲ್ ಮುಂತಾದ ಲ್ಯಾಟಿನ್ ಅಮೇರಿಕೆಯ ರಾಷ್ಟ್ರಗಳೊಡನೆ ಸಹಕಾರವನ್ನು ಯಾಚಿಸಬೇಕೆಂದೂ ಅವುಗಳ ಹಾಗೂ ಏಶಿಯಾ—ಅರಬ ರಾಷ್ಟ್ರಗಳ ನೆರವಿನಿಂದ ಟ್ಯುನೀಸಿಯದ ತಂಟೆಯನ್ನು ಸಂಯುಕ್ತರಾಷ್ಟ್ರ ಸಂಘದ ಸಾಮಾನ್ಯ ಸಭೆಯಲ್ಲಿ ಬೇಗನೇ ಚರ್ಚೆಗೆ ಬರುವಂತೆ ಕೂಡಲೇ ಪ್ರಯತ್ನಿಸಬೇಕೆಂದೂ ಆದೇಶವಿತ್ತಿದೆ. ಶ್ರೀ ದಯಾಳರು ಈಗಾಗಲೇ ತಕ್ಕ ಕಾರ್ಯಕ್ರಮಗಳನ್ನು ಕೈಕೊಂಡಿದ್ದು, ಈ ಪ್ರಯತ್ನಕ್ಕೆ ಸಾಕಷ್ಟು ಬೆಂಬಲ ದೊರೆತು ಅದು ಫಲಿಸಬಹುದಾಗಿದೆ. ಇದಕ್ಕೆ ಪೂರ್ವಭಾವಿ ಎಂಬಂತೆ, ಸಂಯುಕ್ತರಾಷ್ಟ್ರಗಳ ಮಾನವೀಯ ಹಕ್ಕು ಬಾಧ್ಯತಾ ಮಂಡಲವು ಭಾರತವು ಮಂಡಿಸಿದ ಗೊತ್ತುವಳಿಯೊಂದನ್ನು ಅಂಗೀಕರಿಸಿ "ವಿದೇಶೀ ಆಧಿಪತ್ಯಕ್ಕೆ ಒಳಪಟ್ಟಿರುವ ರಾಷ್ಟ್ರಗಳಿಗೂ ತಮಗೆ ಅಂಥ ಆಳಿಕೆ ಸೇರುವುದೇ ಇಲ್ಲವೇ ಎಂಬುದನ್ನು ಮತಗಣನೆಯ ಮೂಲಕ ನಿರ್ಣಯಿಸುವ ಅಧಿಕಾರವಿದೆ" ಎಂದು ಸಾರಿದೆ. ಇಲ್ಲಿಯೂ ಯಥಾಪ್ರಕಾರ ಫ್ರಾನ್ಸು ಮತ್ತು ಬ್ರಿಟನ್ನುಗಳ ಜೊತೆಗೆ ಆಸ್ಟ್ರೇಲಿಯಾ ಮತ್ತು ಸಂಯುಕ್ತ ರಾಜ್ಯ ಅಮೇರಿಕೆಗಳು ಸೇರಿ ವಿರುದ್ಧ ಮತಕೊಟ್ಟವು. ಈ ಎಲ್ಲ ಸಂಗತಿಗಳನ್ನು ಮನಗಾಣುವಾಗ, ಇದೊಂದು ಮೋಜಿನ ಪ್ರಸಂಗದಂತೆ ತೋರುವುದು—ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವಗಳಿಗಾಗಿ ಕ್ರಾಂತಿಯ ಮಡುವೆಬ್ಬಿಸಿದ, ರಕ್ತದ ಹೊಳೆಹರಿಸಿದ ಫ್ರೆಂಚ ಜನರೇ ಈಗ ಟ್ಯುನೀಸಿಯಾ ಜನರ ಗಂಟಲೊತ್ತುತ್ತಿರುವರೆಂದರೆ ಯಾರಿಗಾದರೂ ಪರಮಾಶ್ಚರ್ಯವೇ ಸೈ. ಈಯೊಂದು ಮುದ್ದೆಯಲ್ಲಿ ಭಾರತದ ನಿಲುಮೆಯನ್ನು ಅರ್ಥಮಾಡಿಕೊಳ್ಳುವುದರಲ್ಲಿ ಫ್ರಾನ್ಸು ತಪ್ಪಿದೆ ಎಂಬುದಾಗಿ ಅಲ್ಲಿ ಭಾರತೀಯ ರಾಯಭಾರಿಗಳಾಗಿರುವ ಸರ್ದಾರ ಮಲಿಕರು ನುಡಿದುದು ಅಕ್ಷರಶಃ ಸತ್ಯ.

30 ತೋಟಗಳಿಂದ ಸಂಗ್ರಹಿಸಿ

ಬಂದ ಅತ್ಯುತ್ತಮವಾದ ಚಹ

ಪ್ರತಿಯೊಂದು ಬ್ರೂಕ್ ಬಾಂಡ್ ಚಹದ ಪೊಟ್ಟಣವೂ 30 ತೋಟಗಳಿಂದ ಬಂದ ಚಹದ ಎಲೆಗಳ ಮಿಶ್ರಣವಾಗಿರುವುದರಿಂದ ಚಹದ ಶಾಶ್ವತವಾದ ಉತ್ತಮ ಗುಣವನ್ನು ನಿಶ್ಚಯಿಸುವುದು. ಅಗ್ಗವಾಗಿ ಸಿಗುವ ಮತ್ತು ಶಾಸ್ತ್ರೀಯವಾಗಿ ಮಿಶ್ರಣ ಮಾಡದಿರುವ ಚಹವನ್ನು ಕೊಂಡು ವೃಥಾ ಪಿತಕ್ಕೆ ನಷ್ಟಕ್ಕೊಳಗಾಗುವಿರಿ. ಬ್ರೂಕ್ ಬಾಂಡ್ ಚಹವು ಮಲಿನವಾಗದ ಹಾಗೆ ಪೊಟ್ಟಣದಲ್ಲಿ ಸುತ್ತಿ ಮೊಹರು ಮಾಡಲ್ಪಟ್ಟಿರುತ್ತದೆ.

ಗ್ಯಾರಂಟೀಯಾದ ಶುಚಿತ್ವ
ಗ್ಯಾರಂಟೀಯಾದ ಶುದ್ಧತೆ

ಬ್ರೂಕ್ ಬಾಂಡ್ ಚಹಾ

ರೂ. 1000 ದ ಬಹುಮಾನ

ಕಳೆದ ನವಂಬರ [1951] ತಿಂಗಳಲ್ಲಿ ಉಡುಪಿಯ ಅಜ್ಜರಕಾಡಿನಲ್ಲಿ ಕಟ್ಟಿಸಿದ ಅಶೋಕ ಟೂರಿಂಗ್ ಟಾಕೀಸ್ ಎಂಬ ಹೆಸರಿನ ಟೂರಿಂಗ್ ಸಿನಿಮಾ ಬೆಂಕಿಯಿಂದ ಸುಟ್ಟು ಹೋದ ಸಂಗತಿ ಸಾವಜನಿಕರಿಗೆ ವಿದಿತವಿದೆ. ಈ ದುರ್ಘಟನೆ ಕಾರಣಕರ್ತರಾದ ಅಪರಾಧಿಗಳ ಪತ್ತೆ ಇನ್ನೂ ಆಗಿಲ್ಲ.

ಜನಜೀವನವು ಸುರಕ್ಷಿತವಾಗಬೇಕಾದರೆ ಇನ್ನು ಮುಂದೆ ಇಂತಹ ಅನರ್ಥಗಳಾಗಬಾರದಾದರೆ, ಮೇಲೆ ಹೇಳಿದ ಟೂರಿಂಗ್ ಸಿನಿಮಾವನ್ನು ಸುಡಿಸಿದ ವ, ಸುಟ್ಟ ಘಾತಕಿಗಳ ಪತ್ತೆಯಾಗುವುದು ಅಗತ್ಯ. ಆದುದರಿಂದ ಮಹಾಜನರು ಈ ವಿಚಾರದಲ್ಲಿ ತಮ್ಮ ಅಪೂರ್ವ ಸಹಕಾರವನ್ನು ನೀಡುವರಾಗಿ ನಂಬಿಕೆಯಿದೆ.

ಅಪರಾಧಿಗಳ ಪತ್ತೆ ಹಚ್ಚಲು ಬೇಕಾದ ರುಜುವಾತು ಮತ್ತು ವಿವರಗಳನ್ನು ಕೊಟ್ಟು ತನ್ಮೂಲಕ ಅವರಿಗೆ ತಕ್ಕ ಶಿಕ್ಷೆಯಾಗುವಂತೆ ಮಾಡಿ ಸಹಕರಿಸಿ ಸಹಾಯ ಮಾಡುವ ಮಹಾನುಭಾವರಿಗೆ **ಒಂದು ಸಾವಿರ ರೂಪಾಯಿಯ** ಬಹುಮಾನಕೊಡುವುದಾಗಿ ನಿರ್ಣಯಿಸಿದೆ. ಈ ವಿಷಯದಲ್ಲಿ ಕೊಡಲ್ಪಡುವ ವರ್ತಮಾನ ಅಥವಾ ವಿವರಗಳನ್ನು ಗೋಪ್ಯವಾಗಿಟ್ಟುಕೊಳ್ಳಲಾಗುವುದು. ಮತ್ತು ಅವುಗಳನ್ನು ತಕ್ಕರೀತಿಯಲ್ಲೇ ಉಪಯೋಗಿಸಿಕೊಳ್ಳಲಾಗುವುದು. ಮಹಾಜನರು ಸಹಕರಿಸಬೇಕಾಗಿ ವಿನಂತಿ.

ವಿವರಗಳಿಗೆ—
ಮ್ಯಾನೇಜಿಂಗ್ ಡೈರೆಕ್ಟರ್,
ಶ್ರೀ ರಾಮಕೃಷ್ಣ ಥಿಯೇಟರ್ ಲಿ,
ಉಡುಪಿ.

ಉಡುಪಿ, 23-4-52

Read

'NAVAYUGA'
Weekly

Voice of the people
Excellent Media and
Reading Value.

THE CANARA BANKING CORPORATION LIMITED.
ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್, ಲಿಮಿಟೆಡ್
ಸ್ಥಾಪನೆ : 1906. : : ಪ್ರಧಾನ ಕಾರ್ಯಾಲಯ: ಉಡುಪಿ, (ದ.ಕಾ.)
ವಿಶೇಷ ಸವಲತ್ತುಗಳಿದ್ದು,
ಸಾಲಿಯಾನ್ ಶೇಕಡಾ 4ರಂತೆ ಬಡ್ಡಿಗಳಿಸುವ ನಮ್ಮ
"ಪಂಚವಾರ್ಷಿಕ ಸುವರ್ಣ ಠೇವಣಾತಿಗಳ"
ಮೇಲೆ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.
ವಿಶೇಷ ಮಾಹಿತಿಗೆ, ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ
ವಿ ಆರ್. ಕಾಮತ್, ಬಿ ಎ; ಎಲ್ ಎಲ್, ಬಿ;
ಜನರಲ್ ಮೆನೇಜರ್.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೧-೫-'೫೨

ಕಾಶ್ಮೀರ ಪ್ರಶ್ನೆ

ಕಾಶ್ಮೀರ ಸಮಸ್ಯೆಯ ಪರಿಹಾರ ಕಾರ್ಯದಲ್ಲಿ ಉಂಟಾಗಿರುವ ಪ್ರಗತಿಯು ಆಶಾದಾಯಕ ವಾತಾವರಣವನ್ನು ನಿರ್ಮಿಸಿದೆ ಎಂಬುದಾಗಿ ಮಧ್ಯಸ್ತಿಕೆ ವಹಿಸಿ ಮಾತುಕತೆಗೆ ಬಂದಿದ್ದ ಫ್ರಾಂಕ ಗ್ರಹಾಮರು ಭದ್ರತಾ ಮಂಡಲಕ್ಕೆ ಇದೀಗ ಮೂರನೇ ಬಾರಿ ವರದಿಯನ್ನು ಒಪ್ಪಿಸಿರುವರು. ಹನ್ನೆರಡು ಮುದ್ದೆಗಳಿಂದ ಕೂಡಿದ ಮೂಲ ಸೂಚನೆಗಳಲ್ಲಿ ಎಂಟರ ಮಟ್ಟಿಗೆ ಕಳೆದ ದಶಂಬರಾಂತ್ಯದಲ್ಲಿ ಭಾರತ-ಪಾಕಿಸ್ತಾನಗಳು ಒಮ್ಮತಗೊಂಡಿದ್ದುವು. ಈಗ ಉಳಿದ ನಾಲ್ಕು ಮುದ್ದೆಗಳ ಬಗ್ಗೆ ಪಾಕಿಸ್ತಾನವು ಕೆಲವೊಂದು ಉಪಸೂಚನೆಗಳಿಗೊಳಪಟ್ಟು ಸಂಧಾನಕ್ಕೆ ಸಿದ್ಧವಿದೆ. ಆದರೆ ಭಾರತದ ನಿಲುವು ಒಂದು ಇಂಚಿನಷ್ಟೂ ಕದಲುವುದಿಲ್ಲ. ಮುಖ್ಯ ಭಿನ್ನಾಭಿಪ್ರಾಯವು ಯುದ್ಧ ವಿರಾಮ ರೇಖೆಯ ಎರಡೂ ಬದಿಗಳಲ್ಲಿ ನಿಲ್ಲಬೇಕಾಗಿರುವ ಸೈನ್ಯದ ಸಂಖ್ಯೆ ಮತ್ತು ಸ್ವರೂಪದ ಕುರಿತಾಗಿದೆ. ಸರ್ ಡಿಕ್ಸನ್ನರ ವರದಿಯಲ್ಲಿ ಪಾಕಿಸ್ತಾನವನ್ನು ಆಕ್ರಮಕ ರಾಷ್ಟ್ರವೆಂದು ಸ್ಪಷ್ಟವಾಗಿ ನಮೂದಿಸಲ್ಪಟ್ಟಿರುವಾಗ ಸಂಧಾನದ ಮಾತುಕತೆಗಳಲ್ಲಿ ಇದನ್ನು ಕಡೆಗಣಿಸುವುದು ಸಾಧ್ಯವಿಲ್ಲ. ಪಾಕಿಸ್ತಾನವನ್ನು ಈ ದೃಷ್ಟಿಯಿಂದ ನೋಡಬೇಕಾದುದು ಅಗತ್ಯವಿರುವುದರಿಂದ, ಅದಕ್ಕೆ ಭಾರತದಷ್ಟೇ ಸಮಾನ ಸ್ಥಿತಿಯ ಸದವಕಾಶಗಳನ್ನು ಕಲ್ಪಿಸಿಕೊಡುವುದಕ್ಕೆ ಅರ್ಥವಿಲ್ಲ. ಹೀಗಿದ್ದರೂ ಈಗ ಗ್ರಹಾಮರು ಸಂಧಾನ ಪ್ರಯತ್ನವನ್ನು ಇನ್ನೂ ಮುಂದರಿಸುವ ಶಿಫಾರಸು ಮಾಡಿದ್ದು, ತಮ್ಮ ಕೆಲಸದಲ್ಲಿ ನಿಯೋಜಿತ ಮತ ಗಣನಾಧಿಕಾರಿಯ ನೆರವನ್ನು ಅಪೇಕ್ಷಿಸಿದ್ದಾರೆ. ಇದಕ್ಕೆ ಭದ್ರತಾ ಮಂಡಲವು ಒಪ್ಪುವ ಲಕ್ಷಣವಿದೆ. ಗ್ರಹಾಮರು ನಿಯೋಜಿತ ಮತ ಗಣನಾಧಿಕಾರಿಯಾದ ಎಡ್ಮಿರಲ್ ನಿಮಿಟ್ಜರ ಪದವಿಯ ವರ್ಚಸ್ಸನ್ನು ಉಪಯೋಗಿಸಿ, ಕಾಶ್ಮೀರ ಸಮಸ್ಯೆ ಬಿಡಿಸುವುದರಲ್ಲಿ ಉಂಟಾಗಿರುವ ಬಿಕ್ಕಟ್ಟನ್ನು ಬಗೆಹರಿಸಲು ಬರುವುದೆಂದು ಯೋಚಿಸಿರುವರು. ಅವರ ಹೇಳಿಕೆಯಂತೆ, ಕಾಶ್ಮೀರ ಕ್ಷೇತ್ರದಿಂದ ಈಗಾಗಲೇ ಇಕ್ಕಡೆಯವರೂ ಅರ್ಧದಷ್ಟು ಸೈನ್ಯವನ್ನು ಹಿಂದಕ್ಕೆ ಕರೆಸಿಕೊಂಡಿರುವರು. ಇನ್ನೂ ಸೈನ್ಯ ವಿಸರ್ಜನೆ ಮಾಡುವ ಅಗತ್ಯವಿದೆಯೋ ಎಂಬುದನ್ನು ಮತಗಣನಾಧಿಕಾರಿಯ ಸಲಹೆ ಪಡೆದೇ ನಿರ್ಧರಿಸಬೇಕಾಗಿದೆ ಎಂಬುದವರ ಅಭಿಪ್ರಾಯ. ಏಕೆಂದರೆ ಒಂದು ಕಡೆ ನಿಃಸ್ಸೈನೀಕರಣವು ಪ್ರಗತಿಯನ್ನು ಹೊಂದಿ ಕೊನೆಯ ಘಟ್ಟ ಮುಟ್ಟಿರುವಾಗ, ಇನ್ನೊಂದು ಕಡೆ ಮತಗಣನೆಗೆ ಅನುಕೂಲವೆನಿಸಿದ ವಾತಾವರಣ ಅರುಣೋದಯಗೊಂಡಂತೆ ಗ್ರಹಾಮರ ಕಣ್ಣಿಗೆ ಗೋಚರಿಸುತ್ತದೆ. ಈ ಸಂಕ್ರಾಂತಿ ಕಾಲದಲ್ಲಿ ಏನೊಂದು ತೊಂದರೆ ತಕರಾರುಗಳಿಲ್ಲದೆ ಮತಗಣನೆಯು ನಡೆಯುವುದಕ್ಕೂ, ಹೊರಗಿನ ಆಕ್ರಮಣಗಳಿಂದ ಕಾಶ್ಮೀರವನ್ನು ಸಂರಕ್ಷಿಸುವುದಕ್ಕೂ ಎಷ್ಟು ಸೈನ್ಯವಿರಬೇಕೆಂಬುದನ್ನು ನಿರ್ಧರಿಸುವುದು ಅಗತ್ಯ. ಭಾರತ ಸರಕಾರದ ಅಭಿಪ್ರಾಯದಂತೆ ಪಾಕಿಸ್ತಾನೀ ಸೇನೆಗೆ ಕಾಶ್ಮೀರದ ನೆಲದಲ್ಲಿ ನಿಲ್ಲಲಿಕ್ಕೇ ಅಧಿಕಾರವಿಲ್ಲ. ಅಜಾದ ಕಾಶ್ಮೀರ ಪ್ರದೇಶದಲ್ಲಿಯೇ ಆದರೂ ನಾಲ್ಕು ಸಾವಿರ ಪೋಲೀಸು ದಳವನ್ನು ಧೈರ್ಯಕ್ಕೋಸ್ಕರ ಇಟ್ಟುಕೊಳ್ಳಬಹುದು, ಅಷ್ಟೇ ಎಂದಿವೆ ಅದು. ಈ ಪ್ರಸಂಗದಲ್ಲಿ ಗ್ರಹಾಮರು ಯಾವ ಆಶೆ ಇಟ್ಟುಕೊಂಡು ಸಂಧಾನ ಪ್ರಯತ್ನವನ್ನು ಮುಂದುವರಿಸಲು ಕೇಳಿಕೊಂಡಿರುವರೆಂಬುದು ಸ್ಪಷ್ಟವಿಲ್ಲ. ಈ ಕಾರಣದಿಂದ ಹನ್ನೆರಡೂ [illegible] ನ್ಯತೆ ಒಪ್ಪುವ ಪಾಕಿಸ್ತಾನಕ್ಕೆ ವಿವಂಚನೆ ಉಂಟಾಗಿದೆ. ಭಾರತ ಸರಕಾರವನ್ನು ಹೇಗಾದರೂ ಮಾಡಿ ಪುಸಲಾಯಿಸಿ, ಒಲಿಸಿಕೊಂಡು ಮತಗಣನೆ ನಡೆಸಲು ಪೂರ್ವ ಸಿದ್ಧತೆಗಳನ್ನು ನಡೆಸುವ ಉತ್ಕಟ ಹಂಬಲ ಮಾತ್ರ ಗ್ರಹಾಮರಿಗಿದೆ. ಅವರ ಸಂಧಾನ ಪ್ರಯತ್ನದಲ್ಲಿ ಬೇಗನೇ ಯಶಸ್ಸು ಸಿಗಬೇಕೆಂದು ಕೋರುವುದು ನಲುವತ್ತು ಲಕ್ಷ ಕಾಶ್ಮೀರಿಗಳ ಭವಿಷ್ಯದ ಚಿಂತೆಯೊಂದರಿಂದಷ್ಟೇ ಅಲ್ಲ—ಭಾರತ ಪಾಕಿಸ್ತಾನಗಳ ನಲುವತ್ತು ಕೋಟಿ ಜನರ ಹಿತಸಂಬಂಧದ ದೃಷ್ಟಿಯಿಂದಲೂ ಅಪೇಕ್ಷಣೀಯವಾಗಿದೆ; ಅಗತ್ಯವೆನಿಸಿದೆ. ಭಾರತದ ನಿಲುವಿನ ತಳಹದಿಯನ್ನು ಸರಿಯಾಗಿ ಅರ್ಥಮಾಡಿಕೊಂಡು ಮುಂದುವರಿಯದೆ ಹೋದರೆ, ಗ್ರಹಾಮರ ಪ್ರಾಮಾಣಿಕ ಉದ್ದೇಶವು ಫಲಿಸುವ ಭರವಸೆ ಅಸ್ಪಷ್ಟ.

ಎಲ್ಲೆಲ್ಲಿ ಏನೇನು?

ಚೀನಕ್ಕೆ ಸದ್ಭಾವ ಮಂಡಲ

ಕಮ್ಯೂನಿಸ್ಟ ಚೀನದೊಡನೆ ಭಾರತಕ್ಕೆ ಅನಾದಿ ಕಾಲದಿಂದಿರುವ ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಆರ್ಥಿಕ ಬಾಂಧವ್ಯವನ್ನು ಇನ್ನಷ್ಟು ಸ್ಥಿರಗೊಳಿಸುವ ಉದ್ದೇಶದಿಂದ ಭಾರತ ಸರಕಾರವು ಒಂದು ಶಿಷ್ಟಮಂಡಳವನ್ನು ಪೀಕಿಂಗಿಗೆ ಕಳಿಸಿದೆ. ಒಟ್ಟು ಹದಿನಾಲ್ಕು ಸದಸ್ಯರಿರುವ ಶಿಷ್ಟಮಂಡಳದ ಧುರೀಣತ್ವವನ್ನು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ವಹಿಸಿರುವರು. ಶಿಷ್ಟಮಂಡಳದ ಸದಸ್ಯರಲ್ಲಿ ಓರ್ವರಾದ ಕುಮಾರಿ [illegible] ರಾವ್ ಉಡುಪಿಯವರಿದ್ದು, ನಮ್ಮ ಜಿಲ್ಲೆಗೆ ಇದು ಹೆಮ್ಮೆಯ ಸಂಗತಿ. ಚೀನದ ಜನಜೀವನವನ್ನು ಅಭ್ಯಸಿಸುವುದಲ್ಲದೆ ಭಾರತದ ಸ್ನೇಹ ಸೌಹಾರ್ದಗಳನ್ನು ಚೀನೀ ಜನತೆಗೆ ಮನವರಿಕೆ ಮಾಡಿ ಕೊಡಲು ಶಿಷ್ಟಮಂಡಳವು ಪ್ರಯತ್ನಿಸುವುದು. ಒಟ್ಟು ಒಂದು ತಿಂಗಳ ಕಾಲ ಅದು ಚೀನದಲ್ಲಿ ಉಳಿಯುವುದು.

ಜಪಾನದೊಡನೆ ಶಾಂತಿ ಸಂಬಂಧ

ಇನ್ನು ಮುಂದೆ ಭಾರತವು ಜಪಾನದೊಡನೆ ಶಾಂತಿ ಕಾಲದ ಧೋರಣವನ್ನು ಅನುಸರಿಸುವುದು. ಇಷ್ಟರವರೆಗೆ ಜಪಾನಿನಲ್ಲಿ ಭಾರತದ ವ್ಯಾಪಾರೀ ಆಯೋಗದ ಮುಖ್ಯಸ್ಥರಿದ್ದವರು ಈಗ ಭಾರತ ಸರಕಾರದ ರಾಯಭಾರಿ ಎಂದು ಕೆಲಸ ನಿರ್ವಹಿಸುವರು.

ಬೋಪಾಲದಲ್ಲಿ ಹೊಸ ಶಾಸನ ಸಭೆಯನ್ನು ಉದ್ಘಾಟಿಸುತ್ತಾ ಸಂಸ್ಥಾನ ಶಾಖೆಯ ಮಂತ್ರಿ ಎನ್. ಗೋಪಾಲಸ್ವಾಮಿ ಅಯ್ಯಂಗಾರರು ಶಾಸನಸಭೆಗಳಲ್ಲಿ ಜನತೆಯ ಹಿತ ಸಾಧಿಸುವ ಮುಖ್ಯ ಧ್ಯೇಯದಿಂದ ಒಕ್ಕಟ್ಟಿನ ಪ್ರಯತ್ನಗಳು ಸಾಗಬೇಕು ಎಂದರು.

ಬಿಹಾರದಲ್ಲಿ ಮುಖ್ಯ ಮಂತ್ರಿ ಶ್ರೀ ಕೃಷ್ಣ ಸಿಂಹರನ್ನೊಳಗೊಂಡ ಹದಿಮೂರು ಮಂತ್ರಿಗಳಿರುವ ಮಂತ್ರಿ ಮಂಡಲವು ರಚಿಸಲ್ಪಟ್ಟಿದೆ.

ಮುಂಬಯಿಯ ಹೊಸ ಶಾಸನ ಸಭಾಧಿವೇಶನವು ಮೇ ತಿಂಗಳ ಮೂರನೇ ತಾರೀಕಿಗೆ ಕೂಡುವುದು.

ಭಾರತ ಪಾರ್ಲಿಮೆಂಟಿನಲ್ಲಿ ಬಲವಾದ ವಿರೋಧೀ ಪಕ್ಷವನ್ನು ಸಂಘಟಿಸುವ ಪ್ರಯತ್ನವನ್ನು ಕಮ್ಯೂನಿಸ್ಟ ಧುರೀಣರು ಮಾಡುತ್ತಿದ್ದು, ಕಾಂಗ್ರೆಸಿಗರಲ್ಲದ ಹೆಚ್ಚಿನ ಸದಸ್ಯರಿಗೆ ಒಂದು ಕಾರ್ಯಕ್ರಮದ ಕರಡನ್ನು ಅವಗಾಹನೆಗೆ ಕಳಿಸಿರುವರು.

ಹೈದರಾಬಾದ ಸರಕಾರವು ಅಸ್ಪಷ್ಟ ಕಾರಣಗಳಿಗಾಗಿ ಸ್ಥಾನಬದ್ಧತೆಯಲ್ಲಿಟ್ಟಿರುವ ಜನರನ್ನು ಬಿಡುಗಡೆ ಮಾಡುವುದಕ್ಕೆ ನೋಡುತ್ತಿದೆ. ಕಮ್ಯೂನಿಸ್ಟ ಪಕ್ಷದ ಮೇಲಿನ ನಿರ್ಬಂಧವನ್ನು ಹೋಗಲಾಡಿಸಿದ ಪರಿಣಾಮವಾಗಿ ಈ ಹೊಸ ಕ್ರಮವನ್ನು ಕೈಗೊಳ್ಳಲಾಗಿದೆ.

ಭಾರತದ ಈಶಾನ್ಯ ಸೀಮಾ ಪ್ರಾಂತಗಳಾದ ಡಾರ್ಜಿಲಿಂಗ್, ಸಿಕ್ಕಿಂ, ಕಾಲಿಂಪಾಂಗ್ ಮುಂತಾದ ಮಹತ್ವದ ಸ್ಥಳಗಳಲ್ಲಿ ಪಂಡಿತ ನೆಹರೂ ಸಂಚಾರ ಕೈಗೊಂಡಿರುವರು. ಅಲ್ಲಿಯ ಸ್ಥಿತಿಗತಿಗಳ ಪರಿಶೀಲನೆಯನ್ನು ಅವರು ನಡೆಸುವರು.

ನೇಪಾಳದ ಆಂತರಿಕ ಅಭಿವೃದ್ಧಿ ಯೋಜನೆಯ ಕರಡನ್ನು ನಿರ್ಮಿಸುವಲ್ಲಿ ಭಾರತವು ಸಹಾಯ ಮಾಡುವುದಲ್ಲದೆ, ಆರ್ಥಿಕ ನೆರವನ್ನೂ ನೀಡುವುದೆಂದು ತಿಳಿದು ಬಂದಿದೆ.

ದೇಶದ ಸಂರಕ್ಷಣಾ ವಿಧಾನಗಳಲ್ಲಿ ಒಂದು ಕ್ರಮವನ್ನು ಅನುಸರಿಸುವ ಉದ್ದೇಶದಿಂದ ಸಂರಕ್ಷಣಾ ಶಾಸ್ತ್ರದ ಪುನರ್ಘಟನೆ ಮಾಡುವ ವಿಚಾರವಿದೆ.

ಕೃಷಿ ಶಿಕ್ಷಣದ ಪದ್ಧತಿಯಲ್ಲಿ ಯೋಗ್ಯ ಬದಲಾವಣೆಗಳು ಜರಗಿ, ಹಳ್ಳಿಯ ಮೂಲೆ ಮೂಲೆಗೂ ಸುಶಿಕ್ಷಿತ ಜನರ ನೆರವು ಹರಿದು ಬರುವಂತೆ ನೋಡಿಕೊಳ್ಳುವುದವಶ್ಯವೆಂದು ಶ್ರೀ ಮುನ್ಶಿ ಹೇಳಿದ್ದಾರೆ. ಅವರು ಭೂಸೈನ್ಯ ಎಂಬ ಹೊಸತೊಂದು ಯೋಜನೆ ತಯಾರಿಸಿದ್ದು, ದೇಶದ ಪ್ರಾಮುಖ್ಯ ಉದ್ದಿಮೆಯಾಗಿರುವ ಕೃಷಿಯ ಸರ್ವಾಂಗೀಣ ಉನ್ನತಿಗೆ ಪ್ರೋತ್ಸಾಹವಿದೆ.

ಮದ್ರಾಸು ಸರಕಾರವು ತಿಂಗಳಿಗೆ ಮುನ್ನೂರು ರೂಪಾಯಿಗೂ ಕಡಿಮೆ ವೇತನ ಪಡೆಯುವ ಸರಕಾರೀ ನೌಕರರ ಮಕ್ಕಳಿಗೆ ಪ್ರಾಥಮಿಕ ಶಾಲಾ ಶಿಕ್ಷಣವನ್ನು ನಿಃಶುಲ್ಕವಾಗಿಯೂ ಹೈಸ್ಕೂಲು ತರಗತಿಗಳಲ್ಲಿ ಅರ್ಧ ಶುಲ್ಕದ ಮೇಲೂ ನೀಡಲು ನಿಶ್ಚಯಿಸಿದೆ.

ಜಪಾನಿನಲ್ಲಿ ಯುದ್ಧ ಕಾಲದ ಆಳಿಕೆಯು ಈ ಸೋಮವಾರದಿಂದ ಮುಕ್ತಾಯಗೊಂಡಿದೆ. ಅಮೇರಿಕೆಯ ಸಂಯುಕ್ತ ರಾಜ್ಯದ ನೇತೃತ್ವದಲ್ಲಿ ಸ್ವೀಕೃತವಾದ ಶಾಂತಿ ಒಪ್ಪಂದದ ಅನುಸಾರವಾಗಿ ಈಗ ಜಪಾನಿಗೆ ಸ್ವತಂತ್ರ ಸ್ಥಾನಮಾನಗಳು ದೊರೆತಿವೆ. ಅದರ ಆಂತರಿಕ ಹಾಗೂ ವಿದೇಶೀ ವ್ಯವಹಾರಗಳಲ್ಲಿ ಇನ್ನು ಮುಂದೆ ಪರರಾಷ್ಟ್ರಗಳು ಹಸ್ತಕ್ಷೇಪ ಮಾಡಲಾರವು. ಹೀಗಿದ್ದರೂ ಪರಕೀಯರ ಸಂಭಾವ್ಯ ಆಕ್ರಮಣಗಳಿಂದ ತನ್ನ ರಕ್ಷಣೆಯನ್ನು ಸ್ವಂತ ಬಲದಿಂದ ಮಾಡಿಕೊಳ್ಳಲು ಶಕ್ತವಾಗುವ ವರೆಗೆ ಜಪಾನ್ ಅಮೇರಿಕೆಯ ಸಹಾಯ ಯಾಚಿಸುತ್ತಿದೆ ಎಂದೂ ಈ ಕುರಿತು ಪರಸ್ಪರ ಒಡಂಬಡಿಕೆಯಾಗಿದೆ ಎಂದೂ ಪ್ರಧಾನಿ ಯೋಶಿದಾ ಸಾರಿದ್ದಾರೆ. ನೆರೆಯ ರಾಷ್ಟ್ರಗಳಾದ ಕೊರಿಯಾ, ರಶಿಯಾ, ಕಮ್ಯೂನಿಸ್ಟ ಚೀನಾ, ಫಿಲಿಪಾಯಿನ್ಸ ಮುಂತಾದುವುಗಳೊಡನೆ ಇನ್ನೂ ಮೈತ್ರಿಯುಂಟಾಗುವುದು ಜಪಾನಿಗೆ ಸಾಧ್ಯವಿಲ್ಲವೆಂಬುದೇ ಸದ್ಯದ ದುಃಖ. ಇದಕ್ಕೆ ಪರಿಸ್ಥಿತಿಯ ವಿಷಮತೆಯೇ ಹೇತು.

ತಾ. 27—4—52ರಿಂದ
ಜ್ಯುಪಿಟರ್‌ನವರ
ಕೈದಿ. (ತಮಿಳು)
ಬಾಲಚಂದ್ರನ್ ರೇವತಿ, ಮೀನಾಕ್ಷಿ-
ಬರುವ ಚಿತ್ರಗಳು—
ಟಾರ್ಜನ್, ಎಂಡ್ ದಿ ಶಪ್ ಮೋನ್, ಜಾದು, ಸಗಾಯಿ,
ಲೌನ್ ಓಫ್ ಕಾರ್ ಮೆನ್ ಇತ್ಯಾದಿ.
ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್ ಉಡುಪಿ.

ಕೋರಿಯಾ ಕದನದ ವಿರಾಮ ಮಾತು ಕತೆಗಳಲ್ಲಿ ಪ್ರಗತಿಯ ಸುದ್ದಿ ಏನಿಲ್ಲ. ಬಹಿರಂಗ ಮಾತುಕತೆಗೆ ಕಮ್ಯೂನಿಸ್ಟ ಚೀನ ಮತ್ತು ಕೊರಿಯಾದ ಪ್ರತಿನಿಧಿಗಳು ಒಪ್ಪಿದರೂ ಈ ಬಗ್ಗೆ ಅಧಿವೇಶನವನ್ನು ಅನಿರ್ದಿಷ್ಟ ಅವಧಿಯವರೆಗೆ ಮುಂದೂಡಿರುವರು. ಜನರಲ್ ರಿಜ್ವೆಯವರ ಅಭಿಪ್ರಾಯದಂತೆ, ಸಂಯುಕ್ತ ರಾಷ್ಟ್ರ ಸಂಘವು ತನ್ನ ಮೂಲಭೂತ ತತ್ವಗಳಿಗೆ ತಿಲಾಂಜಲಿ ಕೊಡದೆ ಒಪ್ಪಂದ ಉಂಟಾಗುವುದು ಕನಸಿನ ಮಾತು.

ಸಿಲೋನಿನಲ್ಲಿ ಹಿಂದೆ ಭಾರತದ ರಾಯಭಾರಿಗಳಾಗಿದ್ದ ಶ್ರೀ ವಿ.ವಿ.ಗಿರಿಯವರು ಮತಾಧಿಕಾರ ಪ್ರಶ್ನೆಯನ್ನು ಬಿಡಿಸುವುದಕ್ಕೆ ಸಹಾಯವಾಗುವಂತೆ ಭಾರತ-ಸಿಲೋನು ಸರಕಾರಗಳ ಚರ್ಚಾಗೋಷ್ಠಿಯೊಂದು ಸೇರುವುದು ಒಳ್ಳೆಯದೆಂದು ಸೂಚಿಸುವರು.

ಗೋವೆಯ ಹಾಗೂ ಇತರ ಪೋರ್ಚುಗೀಜ ವಸಾಹತುಗಳನ್ನು ಭಾರತದಲ್ಲಿ ಸೇರಿಸಬೇಕೆಂದು ಬಲವಾದ ಚಳವಳಿ ನಡೆಸುವ ಉದ್ದೇಶವಿದೆ. ಬರುವ ತಿಂಗಳ ಎರಡನೇ ವಾರದಲ್ಲಿ ಮುಂಬಯಿಯಲ್ಲಿ ಈ ಕುರಿತೊಂದು ಸಮ್ಮೇಳನ ಸೇರಲಿದೆ.

ಕೇಂದ್ರ ಸರಕಾರದ ಸಚಿವರಾದ ಗಾಡಗೀಳರು ಮುಂಬೈಯಿಂದ ರೈಲಿನಲ್ಲಿ ಪ್ರಯಾಣಿಸುತ್ತಿದ್ದಾಗ ಯಾರೋ ದುಂಡಾಕ್ತರು ಅವರನ್ನು ಹಣಕ್ಕಾಗಿ ಬೆದರಿಸುತ್ತಾ ಆಕ್ರಮಣ ಮಾಡಿದರು. ಗಾಡಗೀಳರಿಗೆ ಅಲ್ಪ ಸ್ವಲ್ಪ ಗಾಯವಾಗಿದೆ.

ಪ್ರಧಾನಿ ನೆಹರೂ ಒಂದು ಭಾಷಣದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡುತ್ತಾ ಗಡಿ ರಕ್ಷಣೆಯನ್ನು ಮಾಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವೆಂದರು. ವಿಶ್ವಶಾಂತಿಯ ದಾರಿಯಲ್ಲಿ ಇರುವ ಒಂದೇ ಪ್ರಾಮುಖ್ಯ ಅಡ್ಡಿಯೆಂದರೆ, ಪರಸ್ಪರರನ್ನು ಸಂಶಯದಿಂದ ನೋಡುವ ಪ್ರವೃತ್ತಿಯೇ ಆಗಿದೆ ಎಂದವರು ಅಭಿಪ್ರಾಯಪಟ್ಟರು.

ಪಂಜಾಬದ ಗವರ್ನರ್ ಚಂದೂಲಾಲ ತ್ರಿವೇದಿಯವರು ಕಳೆದ ತಾ 27ರಲ್ಲಿ ಹಿಂದೀ ಲಿಪಿ, ಕಾಂಗ್ರೆಸಿನ 17ನೇ ಪರಿಷತ್ತನ್ನು ಉದ್ಘಾಟಿಸುತ್ತಾ ರಾಷ್ಟ್ರದ ಪ್ರಗತಿಗೆ ರಸ್ತೆಗಳೇ ಸಾಧನವೆಂದರು.

ಅನಂತಪುರ ಜಿಲ್ಲೆಯಲ್ಲಿ ಐದು ವರ್ಷಗಳಿಂದ ಮಳೆ ಇಲ್ಲದೆ ಬರಗಾಲ ಪ್ರಾರಂಭವಾಗಿ ಸುಮಾರು 8 ಲಕ್ಷ ಜನರು ನಿರುದ್ಯೋಗಿಗಳಾಗಿದ್ದಾರೆ. ಬರಗಾಲ ಪೀಡಿತರಿಗೆ ಸರಕಾರ ಸರ್ವ ಸಹಾಯಗಳನ್ನು ಒದಗಿಸುತ್ತಿದೆ.

ಮದ್ರಾಸ ಗವರ್ನರ್ ಶ್ರೀ ಶ್ರೀಪ್ರಕಾಶರು ತಾ 26ರಲ್ಲಿ ದ. ಭಾ. ಹಿಂದೀ ಪ್ರಚಾರ ಸಭೆಯ ಪದವೀದಾನ ಸಮಾರಂಭದಲ್ಲಿ ಭಾಷಣ ಮಾಡುತ್ತಾ ಹಿಂದೀ ಭಾಷೆಯ ಪ್ರಚಾರವು ಮಹಾತ್ಮರ ಮಾರ್ಗದಿಂದ ಸಾಗಬೇಕಲ್ಲದೆ ಒತ್ತಾಯದಿಂದಲ್ಲವೆಂದರು. ತಾ 26ರಲ್ಲಿ ಮುಂಬಯಿಯಲ್ಲಿ ಸೇರಿದ ಮುಂಬೈ ಆಂಧ್ರರ ಪರಿಷತ್ತಿನಲ್ಲಿ ಆಂಧ್ರ ಪ್ರಾಂತವನ್ನು ಕೂಡಲೇ ರಚಿಸಬೇಕೆಂಬ ಗೊತ್ತುವಳಿಯಾಗಿದೆ.

ಸಿಂಹಳದಲ್ಲಿ ಭಾರತೀಯರು ತಮ್ಮ ಮತಾಧಿಕಾರದ ಹಕ್ಕಿಗಾಗಿ ತಾ 28ರಿಂದ ಸತ್ಯಾಗ್ರಹವನ್ನು ಆರಂಭಿಸಿದ್ದಾರೆ. 41 ಸತ್ಯಾಗ್ರಹಿಗಳನ್ನು ಸೆರೆಹಿಡಿಯಲಾಗಿದೆ.

ಗೋರಖಪುರದಲ್ಲಿ 2000 ಕಾರಕೂನರ ಸಹಿತ 16,000 ರೈಲ್ವೆ ಕೆಲಸಗಾರರು ಕೆಲಸಕ್ಕೆ ಬಾರದೆ ಮುಷ್ಕರ ಹೂಡಿದ್ದಾರೆ.

The Catholic Bank Ltd. Udipi.

ಏಲಂ ನೋಟೀಸು

ಈ ಕೆಳಗೆ ಹೇಳಿದ ತಾರೀಖಿನ ಮುಕ್ತಾಯದ ಮೇಲ್ಕಾಣಿಸಿದ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಯಾ ಅದಕ್ಕಾಗುವ ಈ ತನಕದ ಬಡ್ಡಿಯನ್ನಾಗಲೀ ಕೊಡದೆ ಇರುವುದರಿಂದಲೂ ಅಲ್ಲದೆ ಕ್ರಮಪ್ರಕಾರ ರಿಜಿಸ್ಟರ್ ನೋಟೀಸು ಕೊಟ್ಟಲ್ಲಿ ಕೆಲವರು ಊರಿನಲ್ಲಿ ಇಲ್ಲವೆಂತಲೂ ಕೆಲವರು ನೋಟೀಸನ್ನು ಪಡೆಕೊಂಡು ಅವರವರ ನಗಗಳನ್ನು ಬಿಡಿಸಿಕೊಂಡು ಹೋಗದಿರುವುದರಿಂದಲೂ ಮತ್ತು ಇನ್ನಿತರರು ನೋಟೀಸನ್ನು ವಾಪಾಸು ಮಾಡಿರುವುದರಿಂದಲೂ, ಸಹರಿಸುವರಿಗೆ ಯಾ ಸದರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸಲ್ಪಡುವುದೇನೆಂದರೆ ಸದರಿಯವರು ಈ ಒಡ್ಡೆ ನಗಗಳನ್ನು ಇದೇ ಮೇ ತಿಂಗಳ ತಾರೀಖು ೯ರ ವರೆಗೆ ಬಿಡಿಸಿಕೊಂಡು ಹೋಗದಿದ್ದಲ್ಲಿ ತಾರೀಖು 10-5-1952ರಲ್ಲಿ ಘಂಟೆ 3 P. M ಕ್ಕೆ ಯಾ ಬ್ಯಾಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಹ ನೋಟೀಸು ಕೊಡದೆ ಬ್ಯಾಂಕಿನ ಆವರಣದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ತಾರೀಖು	J. L. No	Name And Address of The Borrower	Amt. with Int. Upto 31-3-'52.		
27-2-50	26/425	ಬಚ್ಚ ಶೆಟ್ಟಿ, ಗಣಪಯ್ಯ ಶೆಟ್ಟಿ ಅವರ ಮಗ, ಅಗ್ರಿ ಗ್ರಾಮ, ಉಡುಪಿ P.O	120	8	0
15-3-50	26/560	U. ಮಹಮ್ಮದ್ S/o ಮುಗ್ಗುದುರ್ ಸಾಹೇಬ್, C/o ಕೊಟ್ಟಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.	24	10	0
24-3-50	26/633	N. ದಾಸಪ್ಪ S/o ಬಾಬು ಪೂಜಾರಿ, ನಯಂಪಳ್ಳಿ ಪುತ್ತೂರು ಗ್ರಾಮ, ಕಲ್ಯಾಣಪುರ P. O.	129	10	6
1-4-50	26/694	ಶ್ರೀನಿವಾಸ ಮಲ್ಯ S/o ರಾಮಚಂದ್ರ ಮಲ್ಯ C/o ಪ್ರಭಾಕರ ಪ್ರೆಸ್ ಉಡುಪಿ.	24	14	0
5-4-50	26/715	ಅಬ್ದುಲ್ ಗಫಾರ್ S/o ಅಬ್ದುಲ್ ಖಾದರ್, ಉಡುಪಿ ಯಾವರಿ ಪೋಸ್ಟ್.	15	3	0
5-4-50	26/718	B. K. ಹುಸೇನ್ S/o ಮೊಹಿದ್ದಿನ್ ಬ್ಯಾರಿ, ಕಂಚಿಬೆಟ್ಟು ಉಡುಪಿ	460	4	0
6-4-50	26/733	ಹಿಲರಿ ಮಿನೇಜಸ್ S/o ಇಗ್ನೇಶಿಯಸ್ ಮಿನೇಜಸ್, ಮೂಡುಬೆಳ್ಳೆ P. O.	280	13	0
10-4-50	26/754	ಗುರುವ ಪೂಜಾರಿ N/o ಚಂದು ಪೂಜಾರಿ, ಪ್ಯೂನ್ ಸರ್ವರ್, D. M. C. Udipi.	126	14	0
24-4-50	26/851	ಸೇಠ್ ಮುಗ್ದುಮ್ ಸಾಹೇಬ್ S/o ಉಮ್ಮರ್ ಸಾಹೇಬ್, ಪೊನ್ಸರ್ವರ್, D. M. C. Udipi	104	14	0
24-4-50	26/862	ಟಿಕ್ಕಿ ಮಲ್ಯ ಕಾಲ್ಪಿ, ಅಪ್ಪಕ್ಕೆ ಮಾರಾಳ್ಪಿ ಮಗಳು, ಶ್ರೀನಿವಾಸ ಕೊಳ, ಮಲ್ಪೆ	244	12	9
28-4-50	26/897	ಮಾತಾಯಸ್ ಡಿ'ಸೋಜ, ಲೋರೆನ್ಸ್ ಸೋಜಾರ ಮಗ, ಕೊಲಾಲಗಿರಿ ಪೋಸ್ಟ್	232	15	0
3-5-50	26/950	K. ಲಕ್ಷ್ಮೀನಾರಾಯಣ ಆಚಾರ್ಯ Representative ಓರಿಯಂಟಲ್ ಲೈಫ್ ಆಫೀಸು, ಉಡುಪಿ	290	12	0
9-5-50	26/997	ಲಿಯೊನಾರ್ಡ್ ಪಿರಿ, ಎಮ್ಮಾನ್ಯುವೇಲ್ ಪಿರಿಯರ ಮಗ, ಅಜ್ಜರಕಾಡು, ಉಡುಪಿ.	60	5	0
15-5-50	26/1055	U. ವಾಸುದೇವ್ ಶೇಟ್, S/o ಕೃಷ್ಣ ಶೇಟ್, ತೆಂಕಪೇಟೆ, ಉಡುಪಿ	117	14	6
17-5-50	26/1077	ದಾವೂದ್ ಸಾಹೇಬ, ಯಾಕೂಬ್ ಸಾಹೇಬರ ಮಗ, ಅಂಬಲಪಾಡಿ, ಉಡುಪಿ	60	2	0
29-5-50	26/1174	ಲಕ್ಷ್ಮೀನಾರಾಯಣ ಪಿಂಜಾರ, S/o ಶ್ರೀನಿವಾಸ ಪಿಂಜಾರ, ಲಕ್ಷ್ಮೀನಿವಾಸ, ಉಡುಪಿ	65	1	6
1-6-50	26/1203	ಜೆರೋಮ್ ಡಿ'ಸೋಜ, ದಾವಿದ್ ಡಿ'ಸೋಜರ ಮಗ, ಮೂಡುಬೆಳ್ಳೆ ಪೋಸ್ಟ್	87	1	9
3-6-50	26/1221	H. ಜನಾರ್ಧನ ನಾಯಕ್, S/o H. ರಾಮಚಂದ್ರ ನಾಯಕ್, ಸಂತೆಕಟ್ಟೆ, ಉಡುಪಿ	54	7	0
5-6-50	26/1241	ಸಾಲ್ವದೋರ್ ಮೆಂಡೋನ್ಸ, S/o ಮನುವೆಲ್ ಮೆಂಡೋನ್ಸ ಮೂಡಬೆಳ್ಳೆ P. O.	204	8	0
11-6-51	27/944	U. ವಾಸುದೇವ್ ಶೇಟ್ S/o ಶ್ರೀನಿವಾಸ ಶೇಟ್, ಸೋದೆ ಮಠ ರೋಡು, ಉಡುಪಿ	108	1	0
19-11-51	27/1992	— Do —	62	8	0
13-2-5[illegible]	28/267	ಸಯ್ಯದ್ ಹುಸೇನ್ ಸಾಹೇಬ್ S/o ಸಯ್ಯದ್ ಮೊಹಿದ್ದಿನ್ ಸಾಹೇಬ್, ಬಡಗಬೆಟ್ಟು ಗ್ರಾಮ, ಉಡುಪಿ	61	6	3
3-12-51	27/2075	B. M. ಅಮೀರ್ S/o H. ಚಾಂದ್ ಸಾಹೇಬ್, ಉಡುಪಿ ಪೋಸ್ಟ್	26	5	0
6-11-51	27/1922	K. S. ಅಬ್ದುಲ್ ಗಫಾರ್, S/o K. ಹುಸೇನ್ ಸಾಹೇಬ್ P.C 361 Udipi.	78	8	3
29-11-51	27/2055	— Do —	77	7	0

V. J. Andrade,

ಉಡುಪಿ

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ ಸಭೆಯು—ಕಳೆದ ತಾ 28ರಲ್ಲಿ ಶ್ರೀ ಬಾಳ್ಕಟ್ಟ ಬಾಬು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿ ಕ್ಷೇತ್ರದಿಂದ ಮದ್ರಾಸು ಎಸೆಂಬ್ಲಿಗೆ ಆರಿಸಲ್ಪಟ್ಟ ಶ್ರೀ ಟಿ. ಎ. ಪೈಗಳನ್ನು ಸ್ವಾಗತಿಸಿ ಗೌರವಿಸಲಾಯಿತು. ಮೂನ್ನ ಅತಿಥಿಯು ಅಭಾರ ಮನ್ನಿಸಿದರು. ರಾಜಾಜಿ ಮಂತ್ರಿ ಮಂಡಳದಲ್ಲಿ ವಿಶ್ವಾಸವನ್ನು ಪ್ರದರ್ಶಿಸಿ ಜನತೆಯು ಬೆಂಬಲವೀಯಬೇಕೆಂದು ವಿನಂತಿಸುವ ನಿರ್ಣಯವಾಯಿತು. ಸ್ಥಳೀಯ ಹೆಂಗಸರ ಟ್ರೈನಿಂಗ್ ಶಾಲೆಯಲ್ಲಿ ಮುಂದಿನ ಜೂನ್ ತಿಂಗಳಿಂದ IV ಫಾರ್ಮು ತೆರೆಯುವಂತೆ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಅವರನ್ನು ಕೇಳಿಕೊಳ್ಳಲಾಯಿತು. ಬಳಿಕ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಅಧ್ಯರ ಸಭೆಯೊಂದು ವಕೀಲ್ ಶ್ರೀ ಎಮ್. ವಿಠಲ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರು-ಉಡುಪಿ ರೈಲ್ವೆ ಆಗಬೇಕೆನ್ನುವ ಉದ್ಯಾವರ ಹೊಳೆಗೆ ಸೇತುವೆ ಪ್ರಥಮತಃ ಆಗಬೇಕೆನ್ನುವ, ಪ್ರಬುದ್ಧ ಬಂದರು ನಿರ್ಮಾಣ ಕಾರ್ಯದಲ್ಲಿ ತಜ್ಞರು ಒಪ್ಪಿಸಿದ ವರದಿಯನ್ನು ಕೇಂದ್ರ ಸರಕಾರವು ಮನ್ನಿಸುವಂತೆ ಕೇಳಿಕೊಳ್ಳುವ ನಿರ್ಣಯಗಳಾದುವು. ಈ ಕುರಿತು ಶ್ರೀಗಳಾದ ಬೆನಗಲ್ ಶಿವರಾವ್ ಯು ಶ್ರೀನಿವಾಸ ಮಲ್ಯ ಮತ್ತು ಕೆ. ಎಸ್. ಹೆಗ್ಡೆಯವರು ತಮ್ಮ ಪಾಲಿನ ಕರ್ತವ್ಯ ಸಲ್ಲಿಸುವಂತೆ ಅವರನ್ನು ವಿನಂತಿಸಲಾಯಿತು.

ನಗರ ಸಭೆಯು—ಕಳೆದ ತಾ. 26ರಂದು ಸಂಜೆ ಶ್ರೀ ಎ. ಬಿ. ಕೃಷ್ಣರಾಜರ ಅಧ್ಯಕ್ಷತೆಯಲ್ಲಿ ಜರಗಿತು. ಡಾ। ರಾಮಚಂದ್ರರಾಯರನ್ನು ನಗರಸಭೆಯ II ಕ್ಲಾಸ್ ಹೆಲ್ತ್ ಆಫೀಸರರಾಗಿ ಇನ್ನೊಂದು ವರ್ಷದ ವರೆಗೆ ನೇಮಿಸಲಾಗಿದೆ ಎಂದು ಸೂಚಿಸಿದ ಸರಕಾರಿ ಹುಕುಮನ್ನು ರಿಕಾರ್ಡು ಮಾಡಲಾಯಿತು. 1951-52ನೆ ಸಾಲಿನ ಬಾಬ್ತು ಲ್ಯಾಟ್ರಿನ್ ಗ್ರಾಂಟನ್ನು ಸೆಂಕ್ಷನ್ ಮಾಡಲಿಲ್ಲವೆಂದು ತಿಳಿಸಿದ ವಿದ್ಯಾಂಗದ ಡೈರೆಕ್ಟರರ ಪತ್ರ ಓದಲಾಗಿ ಆ ಕುರಿತು ಸುದೀರ್ಘ ಚರ್ಚೆ ನಡೆಯಿತು. ಮುನಿಸಿಪಲ್ ಲ್ಯಾಟ್ರಿನ್‌ಯಲ್ಲಿ ಉಂಟಾದ ದೋಷಗಳನ್ನು ಕಂಡುಹಿಡಿದು ಕೌನ್ಸಿಲಿಗೆ ವರದಿ ಮಾಡುವಂತೆ ಕಮಿಶನರರನ್ನು ಕೇಳಿಕೊಳ್ಳಲಾಯಿತು. ವಿದ್ಯಾಂಗದ ಡೈರೆಕ್ಟರರು ತನ್ನ ನಿರ್ಧಾರವನ್ನು ಪುನರಾಲೋಚಿಸುವಂತೆ, ಅವರನ್ನು ವಿನಂತಿಸುವ ನಿರ್ಣಯವಾಯಿತು.

I ಕ್ಲಾಸ್ ಬೆಂಚ್ ಕೋರ್ಟಿನ—ವೈಸ್ ಪ್ರೆಸಿಡೆಂಟರಾಗಿ ಶ್ರೀ ಬಿ. ಕರುಣಾಕರ ಹೆಗ್ಡೆಯವರು ಆರಿಸಲ್ಪಟ್ಟಿರುವರು. ಶ್ರೀ ಕಲ್ಯಾಡಿ ರಾಮರಾಯರು ರಾಜಿನಾಮೆ ಕೊಟ್ಟದ್ದರಿಂದ ಈ ಸ್ಥಾನ ತೆರವಾಗಿತ್ತು.

ಆಗಮನ—ಮದ್ರಾಸ್ ಫಿಶ್ಶರೀಸ್ ಖಾತೆಯ ಡೈರೆಕ್ಟರ್ ಶ್ರೀ ಕೆ. ಎನ್. ಅನಂತ ರಾಮನವರು ಕಳೆದ ತಾ. 22ರಲ್ಲಿ ಆಗಮಿಸಿದಾಗ ಉದ್ಯಾವರದಲ್ಲಿ ಶ್ರೀ ಸದಿಯ ಸಾಹುಕಾರರಲ್ಲಿ ಸೇರಿದ ಸಭೆಯಲ್ಲಿ ಮೊಗವೀರರ ಬೇಡಿಕೆಗಳ ಬಿನ್ನವತ್ತಳೆಯೊಂದನ್ನು ಕೊಡಲಾಯಿತು. ಶ್ರೀ ಟಿ. ಎ. ಪೈಗಳು ಸರಕಾರದ ವಿಶೇಷ ಸವಲತ್ತುಗಳನ್ನು ಮೊಗವೀರರು ಪಡೆದು ತಮ್ಮ ವ್ಯವಸಾಯಾಭಿವೃದ್ಧಿ ಮಾಡಿಕೊಳ್ಳಬೇಕೆಂದರು. ಮರುದಿನ ಡೈರೆಕ್ಟರರು ಮಲ್ಪೆಗೆ ಹೋಗಿ ಬಂದರಿನ ಯೋಗ್ಯತೆಯನ್ನು ತಿಳಕೊಂಡರು. ಈ ವರ್ಷದಿಂದಲೇ ಫಿಶರೀಸ್ ಹೈಸ್ಕೂಲಿನಲ್ಲಿ ಮೇಲಿನ ಕ್ಲಾಸು ತೆರೆಯುವಂತೆ ವ್ಯವಸ್ಥೆ ಮಾಡುವುದಾಗಿ ಸೂಚಿಸಿದರೆಂದು ತಿಳಿದುಬರುತ್ತದೆ.

ಆಟದ ಹಬ್ಬ—ಕಡಿಯಾಳಿ ಕೇಂದ್ರದ ವಿಧ್ಯಾರ್ಥಿ ಸಂಘದ ಆಟದ ಹಬ್ಬವು ಕಳೆದ ತಾ. 26ರಲ್ಲಿ ಶ್ರೀ ಕು. ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ಯು. ವಾದಿರಾಜ ಆಚಾರ್ಯರ ನಿರ್ವಾಹಕತ್ವದಲ್ಲಿ ವಿವಿಧ

ಮಂಗಳೂರಲ್ಲಿ ಜಿಲ್ಲಾ ಸಹಕಾರಿ ಪರಿಷತ್ತು

ದಕ್ಷಿಣ ಕನ್ನಡ ಜಿಲ್ಲಾ ಆರನೇ ಸಹಕಾರಿ ಪರಿಷತ್ತು ಕಳೆದ ತಾ 19 ಮತ್ತು 20ರಲ್ಲಿ ಸ್ಯೆಂಟ್ ಎಲೋಸಿಯಸ್ ಕಾಲೇಜ್ ಹಾಸ್ಟೆಲಿನ ಪಠಾರದಲ್ಲಿಯೂ ಸೆಂಟ್ರಲ್ ಬ್ಯಾಂಕಿನ ಸಭಾಭವನದಲ್ಲಿಯೂ ಯಶಸ್ವಿಯಾಗಿ ಜರಗಿತು. ಜಿಲ್ಲೆಯ ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳು ಆಗಮಿಸಿದ್ದರು. ಸಹಕಾರಿ ಮತ್ತು ವಿಜ್ಞಾನಗಾರಿಕೆ ಇಲಾಖೆಗಳ ನೌಕರರೂ ಅಧಿಕಾರಿಗಳೂ ಹಾಜರಿದ್ದರು. ಊಟ, ಉಪಾಹಾರಾದಿಗಳ ವ್ಯವಸ್ಥೆಯನ್ನು ಕಾಲೇಜು ಹಾಸ್ಟೆಲ್ ಕಟ್ಟಡದಲ್ಲಿ ಚಲೋರೀತಿಯಲ್ಲಿ ಮಾಡಲಾಗಿತ್ತು.

ಆರಂಭದ ದಿನ ಪರಿಷತ್ತಿನ ವಿಷಯ ನಿಯಾಮಕ ಸಭೆ ಜರಗಿ ವಿವಿಧ ಮಾದರಿ ಸಂಘಗಳವರು ತಮ್ಮ ತಮ್ಮ ಮುಂದಿರುವ ವಿಶಿಷ್ಟ ಸಮಸ್ಯೆಗಳನ್ನು ಚರ್ಚಿಸಿ ಅವಶ್ಯವುಳ್ಳ ಸಲಹೆ ಸೂಚನೆಗಳನ್ನು ನಿರ್ಣಯರೂಪದಲ್ಲಿ ತಯಾರಿಸಲಿಕ್ಕೆ 14 ಉಪಸಮಿತಿಗಳನ್ನು ನೇಮಿಸಲಾಯಿತು. ಆ ಸಮಿತಿಗಳು ಪ್ರತ್ಯೇಕವಾಗಿ ಕುಳಿತು ಸಮಸ್ಯೆಗಳನ್ನು ಚರ್ಚಿಸಿ ಬಹಿರಂಗ ಅಧಿವೇಶನಕ್ಕೆ ಠರಾವುಗಳನ್ನು ನಿರ್ಣಯಿಸಿದವು.

ಚಿತ್ರರ ಸಮ್ಮೇಳನ—ಪರಿಷತ್ತಿನ ಅಂಗವಾಗಿ ಚಿತ್ರರ ಸಮ್ಮೇಳನವು ತಾ 20ರಲ್ಲು ಬೆಳಿಗ್ಗೆ ಶ್ರೀ ಬೆನಗಲ್ ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ವಿಜ್ಞಾನಗಾರಿಕೆಯ ಅಸಿಸ್ಟಾಂಟ್ ಡ್ಯಾರೆಕ್ಟರ್ ಶ್ರೀ ಎಮ್. ಮುಕುಂದನ್ ಉಣ್ಣಿಯವರು ಸ್ವಾಗತ ಭಾಷಣ ಮಾಡಿ ಚಿತ್ರರ ಸಹಕಾರಿ ಸಂಘಗಳ ಪ್ರಗತಿಯನ್ನೂ ಇಲಾಖೆಯ ಕಾರ್ಯ ಸಾಧನೆಯನ್ನೂ ವಿವರಿಸಿದರು.

ಬಳಿಕ ಸಮ್ಮೇಳನದ ಉದ್ಘಾಟನೆ ಮಾಡುತ್ತ ವಿಜ್ಞಾನಗಾರಿಕೆಯ ಡ್ಯಾರೆಕ್ಟರ್ ಶ್ರೀ ಅನಂತ ರಾಮನ್ ಅವರು ವಿಜ್ಞಾನಗಾರಿಕೆಯ ಭವಿಷ್ಯವನ್ನು ಸೂಚಿಸಿ ಚಿತ್ರರ ಇಂದಿನ ಜೀವನದಲ್ಲಿ ಸರಕಾರವು ಮಾಡಲಿರುವ ಸುಧಾರಣೆಗಳನ್ನು ತಿಳಿಸಿದರು. ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಮಂಗಳೂರು ಕಾರ್ಕಳದಲ್ಲಿ ಕೇಂದ್ರ ಸರಕಾರವು ತೆರೆಯಲಿರುವ ಸಾಮಾಜಿಕ ಕೇಂದ್ರದ ಕುರಿತು ತಿಳಿಸಿ, ಈ ಕೇಂದ್ರದಲ್ಲಿ ವಿಜ್ಞಾನಗಾರಿಕೆಗೂ ಒಂದು ವಿಶಿಷ್ಟ ಸ್ಥಾನವಿದೆ. ಎಂಬುದನ್ನು ತಿಳಿಸಿದರು. ಬಳಿಕ ಉಪ ಸಮಿತಿಯು ಚರ್ಚಿಸಿ ನಿರ್ಣಯಿಸಿದ 27 ನಿರ್ಣಯಗಳನ್ನು ಶ್ರೀ ಯು ಪರಮೇಶ್ವರನವರು ಓದಿ ವಿವರಿಸಿದರು.

ಭಾಷಣಗಳು:—ಮದ್ರಾಸು ಫಿಶರೀಸ್ ಖಾತೆಯ ದಕ್ಷಿಣಭಾಗದ ಡಿ. ಡೈರೆಕ್ಟರ್ ಶ್ರೀ ಕೆ. ಚಿದಂಬರಂ, ಅವರು ಮಾತನಾಡುತ್ತ ಆಧುನಿಕ ವಿಜ್ಞಾನಗಾರಿಕೆಯ ವಿಚಾರಗಳನ್ನೆಲ್ಲ ವಿವರಿಸಿದರು. ಆಳ ಸಮುದ್ರದಲ್ಲಿ ಮೀನು ಹಿಡಿಯುವ ಕ್ರಮವನ್ನು ಜಾರಿಗೆ ತಂದರೆ ಈ ಜನಾಂಗದವರಲ್ಲಿರುವ ಅನೇಕ ರೂಢಿಗಳು ಬದಲಾಗುವುವು. ಆರ್ಥಿಕ ಜೀವನವೂ ಸುಧಾರಿಸುವುದೆಂದು ತಿಳಿಸಿದರು. ಕಾಸರಗೋಡು ಡಿ. ಮುನ್ಸಿಫ್ ಶ್ರೀ ಎಚ್. ಲಕ್ಷ್ಮಣ ಸಾಲಿಯಾನರು ಮಾತನಾಡುತ್ತ, ಜಿಲ್ಲೆಯಲ್ಲಿ ಕಾರ್ವೆಯವರು, ಮೊಗವೀರ, ಬೋವಿಗಳು, ಮುಕ್ಕವರೆಂದು ನಾಲ್ಕು ವರ್ಗಗಳವರು ವಿಜ್ಞಾನಗಾರಿಕೆಯಲ್ಲಿ-ವಿವಿಧ ಭಾಷೆ-ಸಂಸ್ಕೃತಿಗೊಳಗಾದರೂ—ಜೀವನ ಮಾಡುತ್ತಿದ್ದಾರೆಂಬುದನ್ನು ತಿಳಿಸಿ ಅವರು ತಮ್ಮಲ್ಲಿರುವ ಭಯವನ್ನು ಬಿಟ್ಟುಕೊಟ್ಟು ಮುಂದೆಬರಬೇಕೆಂದರು. ಬೊಂಬಾಯಿ ಮೊಗವೀರ ಪತ್ರಿಕಾ ಸಂಪಾದಕ ಶ್ರೀ ಆರ್ ಡಿ ಮೆಂಡನರು ಸಹಕಾರ ತತ್ವವು ಚಿತ್ರರ ಜೀವನದಲ್ಲಿ ಹುಟ್ಟು ಬಳಕೆಯಾದುದೆಂದು ಹೇಳುತ್ತಾ ಮೀನು ಹಿಡಿಯುವಾಗ ಆಗುವ ಅಪಘಾತಗಳಿಗೆ ಪರಿಹಾರ ದ್ರವ್ಯ ಕೊಡುವಂತೆ ಒಂದು ನಿಧಿಯನ್ನೇರ್ಪಡಿಸಬೇಕೆಂದರು. ಮದ್ರಾಸಿನ ಸಹಕಾರಿ ಪತ್ರಿಕೆಯ ಸಹ ಸಂಪಾದಕ ಶ್ರೀ ಟಿ. ವಿಶ್ವನಾಥನ್ ಅವರು ಮಾತನಾಡುತ್ತ ಚಿತ್ರರ ಸಂಘಗಳು ಕೈಕೊಳ್ಳಬೇಕಾದ ಹಲ ಕೆಲವು ಕಾರ್ಯಗಳನ್ನು ಸೂಚಿಸಿದರು. ಅಧ್ಯಕ್ಷರು ಉಪಸಂಹಾರ ಭಾಷಣ ಮಾಡುತ್ತ ಈ ಪ್ರಾಂತದಲ್ಲೊಂದು ನೌಕಾ ವಿದ್ಯಾಲಯ ಸಂಬಂಧಿಸಿದ ಶಾಲೆಯಾಗುವ ವಿಚಾರವಾಗಿ ರಕ್ಷಣಾ ಮಂತ್ರಿಗಳೊಂದಿಗೆ ತಾವು ಮಾತನಾಡಿದ ವಿಷಯಗಳನ್ನು ತಿಳಿಸಿ, ಚಿತ್ರರು ವಿಶಾಲವಾದ ದೇಶದ ಅಭಿವೃದ್ಧಿಯ ಕಡೆಗೂ ಗಮನವೀಯಬೇಕೆಂದು ತಿಳಿಸಿದರು.

ಬಹಿರಂಗ ಅಧಿವೇಶನವು ಶ್ರೀ ಕೆ. ಸದಾನಂದ ಹೆಗ್ಡೆಯ ಅಧ್ಯಕ್ಷತೆಯಲ್ಲಿ ಅದೇ ದಿನ ಸಂಜೆ ಪ್ರಾರಂಭವಾಯಿತು. ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಮೊಳಹಳ್ಳಿ ಶಿವರಾಯರು ತಮ್ಮ ಸ್ವಾಗತ ಭಾಷಣದಲ್ಲಿ, 1909ರಲ್ಲು ಈ ಜಿಲ್ಲೆಯ ಮೊದಲ ಸಹಕಾರಿ ಸಂಘವು ಹುತ್ತೂರಲ್ಲಿ ಹುಟ್ಟಿತೆಂದು ತಿಳಿಸಿ, ಅಂದಿನಿಂದ ಇಂದಿನ ವರೆಗಿನ ಸಹಕಾರಿ ಚಳವಳಿಯ ಚರಿತ್ರೆಯನ್ನು ಸಭೆಯ ಮುಂದಿಟ್ಟರು, ಈಗ ಇರುವ 694 ಸಹಕಾರಿ ಸಂಘಗಳಲ್ಲಿ 441 ಕೃಷಿ ಲೇವಾದೇವಿ ಸಂಘಗಳು ಇವುಗಳಲ್ಲಿ 3 ಭೂವಿ ಅಡವಿನ ಬೇಂಕುಗಳು, 10 ಧಾನ್ಯದ ಬೇಂಕುಗಳು, 71 ಹರಿಜನರ ಬಗ್ಗೆ ಇರುವ ಸಂಘಗಳು, 101 ಬೆಲ್ಲದ ಸಂಘಗಳು ಮತ್ತು 256 ಗ್ರಾಮ ಲೇವಾದೇವಿ ಸಂಘಗಳೆಂದು ತಿಳಿಸಿದರು.

ಬಳಿಕ ಅಧ್ಯಕ್ಷ ಶ್ರೀ ಕೆ ಸದಾನಂದ ಹೆಗ್ಡೆಯವರು ಜಿಲ್ಲೆಯ ಸಹಕಾರಿ ಪದ್ಧತಿಯ ಪ್ರಗತಿ ಶ್ರೀ ಮೊಳಹಳ್ಳಿ ಶಿವರಾಯರ ಅವಿರತ ಸೇವೆಗಳನ್ನು ಕೊಂಡಾಡಿ ನಾವು ಇಂದು ಒಂದು ಸಂಪೂರ್ಣ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದೇವೆ. ಇದರೊಂದಿಗೆ ನಾವು ಇತರ ಅನೇಕ ವಿಚಾರಗಳೊಡನೆ ವೈಯಕ್ತಿಕ ಘನತೆ, ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ನ್ಯಾಯ ಸಮಾನತೆ ಮತ್ತು ಅವಕಾಶಗಳ ಸಮಾನತೆಗಳೂ ಇರುವಂತೆ ನಿರ್ಧರಿಸಿದ್ದೇವೆ. ಇವು ಅತ್ಯುಚ್ಚ ಧ್ಯೇಯಗಳು ಆರ್ಥಿಕ ಭವಿಷ್ಯವನ್ನು ಯೋಚಿಸಿದರೆ ಈ ಧ್ಯೇಯಗಳನ್ನು ಸಾಧಿಸುವುದಾಗಲೀ ವೈಯಕ್ತಿಕ ಆರ್ಥಿಕ ಅಂತಸ್ತನ್ನು ಹೆಚ್ಚಿಸುವುದಾಗಲೀ ಸಾಧ್ಯವಿಲ್ಲ ಸಾಮಾಜಿಕ ಮತ್ತು ಆರ್ಥಿಕ ಶ್ರೇಯಸ್ಸು ಸಂವಿಧಾನದಿಂದ ಹೆಚ್ಚುವಂತಿದ್ದರೆ ಮಾತ್ರ ಅದರಿಂದ ಸಂವಿಧಾನದಿಂದ ಗುಣವನ್ನು ಅಳೆಯಬಹುದು.

ಹಳ್ಳಿಗಳಲ್ಲಿ ಸಾಲಕೊಡುವ ಸಂಸ್ಥೆಗಳಿಗೆ ವಿಶೇಷ ಪ್ರಾಮುಖ್ಯವನ್ನು ಕೊಟ್ಟಿದೆ. ನಮ್ಮ ಜಿಲ್ಲೆಯಲ್ಲಿ ಸುಮಾರು 256 ಇಂತಹ ಸಾಲ ಕೊಡುವ ಸಂಸ್ಥೆಗಳಿರುವುದಾಗಿ ತಿಳಿದುಬರುತ್ತದೆ. ಇವುಗಳಲ್ಲಿ ಹಲವುಗಳ ಆಡಳಿತೆಯು ಅವ್ಯವಸ್ಥಿತವಾಗಿದೆ. ಸಾಲವನ್ನು ಹಿಂದೆ ಕೊಡದವರ ಸಂಖ್ಯೆ ಹೆಚ್ಚು. ಕೊಟ್ಟ ಸಾಲಗಳು ಕೇವಲ ಉತ್ಪಾದನೆಗಾಗಿ ಮಾತ್ರ ಕೊಡಲ್ಪಟ್ಟವುಗಳಲ್ಲ. ಹಲವೊಮ್ಮೆ ಸಾಲಗಳನ್ನು ಕೊಡುವಾಗ ಪಕ್ಷ ವಹಿಸಿದಂತೆ ತೋರುತ್ತದೆ ಈ ಸಾಲ ಸಂಸ್ಥೆಗಳನ್ನು ಉತ್ತಮ ರೀತಿಯಲ್ಲಿ ರೂಪುಗೊಳಿಸಬೇಕು ಅವುಗಳನ್ನು ಹೇಗೆ ರೂಪಿಸಬಹುದು ಮತ್ತು ಅವುಗಳಿಂದ ರಾಷ್ಟ್ರಕ್ಕೆ ಆಗುವ ಲಾಭ ಪ್ರಯೋಜನಗಳನ್ನು ಪಡೆದುಕೊಳ್ಳಬಹುದು ಎಂಬುದು ಸಹಕಾರಿಗಳ ಪರಿಶ್ರಮವನ್ನವಲಂಬಿಸಿಕೊಂಡಿದೆ ಎಂದಿತ್ಯಾದಿಯಾಗಿ ಹೇಳಿದರು. ಬಳಿಕ ನಿರ್ಣಯಗಳಿಗಾಗಿ ಶ್ರೀ ಎಸ್. ನರ್ಪಪ್ಪಯ್ಯನವರಿಂದ ಧನ್ಯವಾದಗಳಾಗಿ ಸಭಾಂತ್ಯವಾಯಿತು.

ಮಟ್ಟು—ಇದೇ ತಾ. 5ರಿಂದ 13ರ ತನಕ ಮಟ್ಟು ಶ್ರೀ ಮಹಾವಿಷ್ಣು ಮೂರ್ತಿ ದೇವಸ್ಥಾನದಲ್ಲಿ ಕಾಲಂಪ್ರತಿ ನಡೆಯುವ ಶ್ರೀ ಮನ್ಮಹಾ ರಥೋತ್ಸವ ಕಾರ್ಯಕ್ರಮಗಳು ಜರಗಲಿರುವುವು.

ಕುಂಬಳೆ—ಕಳೆದ ತಾ. 20ರಂದು ಮಂಗಲಪಾಡಿಯ ಟೀಮಿನವರೂ ಮೊಗ್ರಾಲ್ ಟೀಮಿನವರೂ ಕುಟಲಪುಟ್‌ಬಾಲ್ ಪಂದ್ಯಾಟವನ್ನಾಡಿದರು, ಮೊಗ್ರಾಲ್ ಟೀಮಿನವರು ಗೆದ್ದರು.

ನಾವುಂದ—ಗವರ್ನಮೆಂಟು ಫಿಶರೀಸ್ ಹ್ಯಾಯರ್ ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು, ಕಳೆದ ತಾ 25ರಲ್ಲಿ ಶ್ರೀ ವೈ. ಮಂಜಯ್ಯ ಶೆಟ್ಟಿ, M.L.A. ಇವರ ಅಧ್ಯಕ್ಷ ಸ್ಥಾನದಲ್ಲಿ ಬಹಳ ವಿಜೃಂಭಣೆಯಿಂದ ಜರಗಿಸಲ್ಪಟ್ಟಿರು.

ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್,

ಶಿರ್ವ ಶಾಖೆ, ದ. ಕ.

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಅಡವಿನ ಮೇಲೆ ಸಾಲವನ್ನು ಕೊಂಡು ಕ್ಲಪ್ತವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ ಸದ್ರಿಸಾಲವನ್ನು ಚುಕ್ತಾ ಮಾಡಿ ಕೊಳ್ಳುವರೆ ಅವರಿಗೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ತಾ 12-5-52ರ ಒಳಗೆ ಬೇಂಕಿಗೆ ಸಲ್ಲತಕ್ಕ ಅಸಲು,ಬಡ್ಡಿ, ನೋಟೀಸು ಖರ್ಚು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದ ಪಕ್ಷದಲ್ಲಿ ಸದರಿಯವರು ಅಡವಿಟ್ಟ ನಗಗಳನ್ನು ತಾ 17-5-52ನೇ ಶನಿವಾರ ಮಧ್ಯಾಹ್ನ ಗಂಟೆ 12ಕ್ಕೆಯೂ ಅನಂತರ ನಮಗೆ ಯುಕ್ತಕಂಡ ತಾರೀಕಿನಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾರಲಾಗಾದೀತು.

ಸಾಲದ ನಂ	ಹೆಸರು ಮತ್ತು ವಿಳಾಸ	ಅಸ್ಸಲು ನೋಬಲಗು		
26/229	ಬೋಜರಾಜ ಹೆಗ್ಡೆ, . ಹೆಗ್ಡೆ ಅಳಿಯ, ಶಿರ್ವ ನಡಿಬೆಟ್ಟು, ಶಿ... ಪೋಸ್ಟ್	50	0	0
26/261	ಲೋರೆನ್ಸ್ ಫಿಂಟೊ, ಪೀಟರ್ ಫಿಂಟೊರ ಮಗ, ಟೀಚರ್, ಶಿಂಬರ್ ಕಥೋಲಿಕ್ ಎಲಿಮೆಂಟರಿ ಶಾಲೆ, ಮೂಡುಬೆಳ್ಳೆ ಪೋಸ್ಟ್	45	0	0
26/318	ಕರಿಯ ಶೆಟ್ಟಿ, ಚೋಗಿ ಸೆಟ್ಟಿ ಮಗ, ಕುತ್ಯಾರ್ ಮುಟ್ಟೆಗಲ್ಲು, ಪಾದೂರು ಪೋಸ್ಟ್	320	0	0
26/497	ಅಣ್ಣಯ ಪೂಜಾರಿ, ಬಾಬ ಪೂಜಾರಿ ಅಳಿಯ, ಉಪ್ಪೂರು ಗ್ರಾಮ, ಕಲ್ಯಾಣಪುರ ಪೋಸ್ಟ್	150	0	0
26/628	ಫ್ರಾನ್ಸಿಸ್ ಬರ್ಬೋಜ, ಅಂತೋನಿ ಬರ್ಬೋಜರ ಮಗ, ಕಲತ್ತೂರು ಸಾಗು, ಪಾದೂರು ಪೋಸ್ಟ್	250	0	0
26/759	ಗಿರಿ ಶೆಡ್ತಿ, ಕಾಳಿ ಶೆಡ್ತಿರ ಮಗಳು, ಅಟ್ಟಿಂಜ ಶಿರ್ವ ಪೋಸ್ಟ್	365	0	0
26/1124	ಲೋಕಯ ಸೆಟ್ಟಿ, ರಾಮಯ ಸೆಟ್ರ ಅಳಿಯ, ಕಲತ್ತೂರು ಅಂಗಡಿ ಮನೆ, ಪಾದೂರು ಪೋಸ್ಟ್	55	0	0
26/1612	ಮಾರ್ಸೆಲ್ ಮಿನೇಜು, ಜಾಕೋಬ್ ಮಿನೇಜರ ಮಗ, ದಡ್ಡಕಟ್ಟ, ಸೊರ್ಕಳ ಶಿರ್ವ ಪೋಸ್ಟ್	230	0	0
26/1635	ಕೆ. ಕೃಷ್ಣ ಶೆಟ್ಟಿ, ಲೋಕಯ ಸೆಟ್ರ ಮಗ, ಮುದುಮಲ್ ದಡ್ಡು, ಕುಡ ಪೋಸ್ಟ್	325	0	0
26/1537	ಕೆ ವಾಸುದೇವ ಶೆಣೈ, ವಾಸುದೇವ ಶ್ಯಾನುಭಾಗರ ಮಗ, ಮಂಚಕಲ್ಲು, ಶಿರ್ವ ಪೋಸ್ಟ್	50	0	0
26/1541	ರಘುನಾಥ ಶೆಟ್ಟಿ, ಬಾಬು ಸೆಟ್ರಮಗ ಕಲತ್ತೂರು ಪೊಸಮನೆ, ಪಾದೂರು ಪೋಸ್ಟ್	30	0	0
26/1295	—Do—	150	0	0
26/2168	ವಾಸು ಸೆಟ್ಟಿ ಅಚ್ಚಣ್ಣ ಸೆಟ್ರಅಳಿಯ, ಕಲತ್ತೂರು ಅಕ್ಷತ್ತಗುತ್ತು ಪಾದೂರು ಪೋಸ್ಟ್	40	0	0

ಶಿರ್ವ,
ತಾ. 26-4-1952

C. D'Souza,
ಏಜಂಟ್

ಲಗ್ನಪತ್ರಿಕೆಗಳನ್ನು

ಅಗ್ಗದರದಲ್ಲಿ ಶೀಘ್ರದಲ್ಲಿ ಮುದ್ರಿಸಿಕೊಡಲಾಗುವುದು.

ಎಲ್ಲ ತರದ ಮುದ್ರಣ ಕಾರ್ಯಗಳನ್ನು ಮಾಡಿಕೊಡಲಾಗುವುದು.

ನವಯುಗ ಪ್ರೆಸ್, ಪಾಲುಕೊಟ್ಟೆ, ಉಡುಪಿ.

ಪ್ರಕಟಣೆ

ಇನ್ನಂಜೆಯ ಗ್ರಾಮಸೇವಾ ಸಮಿತಿ—ವ. ತ್ತು ಹಳೆವಿದ್ಯಾರ್ಥಿ ಸಂಘ-ಇವುಗಳ ಸಂಯುಕ್ತ ವಾರ್ಷಿಕೋತ್ಸವವು ಇದೇ ತಾ. 6-5-52ನೇ ರಾತ್ರಿ ಗಂಟೆ 8-30ಕ್ಕೆ ಜರಗುವುದು. ಅಲ್ಲದೆ ಹಳೆವಿದ್ಯಾರ್ಥಿ ಸಂಘದ ವಾರ್ಷಿಕ ಮಹಾಸಭೆಯೂ ಅದೇದಿನ ಪೂರ್ವಾಹ್ನ 9ಗಂಟೆಗೆ ಸಂಘದ ಕಾರ್ಯಾಲಯದಲ್ಲಿ ಜರಗುವುದು

ಇದನ್ನೇ ಆಮಂತ್ರಣವೆಂದು ಸ್ವೀಕರಿಸಿ ಸದಸ್ಯರೆಲ್ಲರೂ ಎರಡೂ ಸಭೆಗಳಿಗೂ ಚಿತ್ತಯಿಸಿ ಸಹಕರಿಸಬೇಕಾಗಿ ಈ ಮೂಲಕ ಅಮಂತ್ರಣವೀಯುತ್ತೇವೆ.

ರಾತ್ರಿಗೆ ಸ್ಥಳೀಯ ನಾಟ್ಯವಿಲಾಸಿಗಳು "ಶಾಡುಚೆಲ್ವ" ಎಂಬ ನಾಟಕವನ್ನೂ ಅಭಿನಯಿಸುವರು. ಸರ್ವರಿಗೂ ಸುಸ್ವಾಗತವಿದೆ.

ಕಾರ್ಯದರ್ಶಿಗಳು.
ಗೋವಿಂದ ಮಿತ್ತಂತಾಯ.
ಪಿ. ವಿಟ್ಠಲ ಶೆಟ್ಟಿ.

ಋತುಸ್ರಾವ ನಿಂತಿತು

'ಶುವಾರಾ' ಬಿಳ್ಲೆಗಳನ್ನು ಉಪಯೋಗಿಸಿದರೆ ಪಡೆತಪ್ಪಿ ಋತುಸ್ರಾವವಾಗದು. ಪಕೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾಧಾರಣ ಮುಂದಿಗೆ ಖಾತ್ರಿ ಗುಣವಾಗಿದೆ; ರೂ. 3-; ಸ್ಪೆಶಲ್ ರೂ. 5-ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ. ಖರ್ಚು ಪ್ರತ್ಯೇಕ]

Mrs. D. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು ಶಹಾ ಕಂಪೆನಿ, ಮಂಗಳೂರು

5ವರ್ಷ ಗ್ಯಾರಂಟಿಯ
ರೋಲ್ಡ್ ಗೋಲ್ಡ್ ಆಭರಣಗಳು

ಚುತ್ರಿಗೆಯ ಸರ ರೂ. 12
ಉದ್ದ ಚೈನು ರೂ. 7;
ಮ್ಯಾನರ್ ಚೈನ್ ರೂ. 5;
ಬಳೆ ಜೋತೆಗೆ ರೂ. 5-

Gemini Gold Covering Works
Main Guard Square. MADURAI- (S-I)

ಮಂಗಳೂರು

ಬಾಲಿಕಾಶ್ರಮಕ್ಕೆ ವಿದ್ಯುದ್ದೀಪ— ಸ್ವಾಮೀ ಈಶ್ವರಾನಂದ ಮಹಿಳಾ ಸೇವಾ ಸಂಘದವರು ನಡೆಸಿಕೊಂಡುಬರುವ ಕಂಕನಾಡಿಯ ಬಾಲಿಕಾಶ್ರಮಕ್ಕೆ ವಿದ್ಯುದ್ದೀಪಗಳನ್ನು ಒದಗಿಸಿದ್ದು ಅದನ್ನು ಬೆಳಗಿಸುವ ಸಮಾರಂಭವನ್ನು ಕಳೆದ ತಾ. 20ರಲ್ಲು ಸಂಜೆ ಬೆನಗಲ್ ಶಿವರಾಯರು ನೆರವೇರಿಸಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ, ಅವರು ವಹಿಸಿದ್ದರು. ಆಶ್ರಮದ ಅಧ್ಯಕ್ಷೆ ಶ್ರೀಮತಿ ರತ್ನಾಬಾಯಿ ಸುಜೀರ್ ಅವರು ಸ್ವಾಗತ ಭಾಷಣಮಾಡಿದರು. ಶ್ರೀಮತಿ ಮುಕ್ತಾ. ಜಿ. ಪಂಡಿತರು ಧನ್ಯವಾದಗಳನ್ನರ್ಪಿಸಿದರು.

ಭಾಷಣ— ಮಂಗಳೂರು ಥಿಯಾಸಾಫಿಕಲ್ ಸೊಸೈಟಿಯ ಆಶ್ರಯದಲ್ಲಿ ಕಳೆದ ತಾ. 21ರಲ್ಲು ಶ್ರೀ ಬೆನಗಲ್ ಶಿವರಾಯರು 'ಭಾರತದ ಭವಿಷ್ಯ'ದ ಕುರಿತು ಮಾತನಾಡಿದರು. ಶ್ರೀ ಬಿ. ಅನಂತರಾಯರು ಅಭಿನಂದಿಸಿದರು.

ವಾರ್ಷಿಕೋತ್ಸವ— ಕಂಕನಾಡಿ ಉಪಾಧ್ಯಾಯ ಕೇಂದ್ರದ ವಾರ್ಷಿಕೋತ್ಸವವು ಕಳೆದ ತಾ. 19ರಂದು ಸರಕಾರಿ ಬುನಾದಿ ಶಿಕ್ಷಣ ತರಬೇತಿ ಶಾಲೆಯ ಶ್ರೀಮತಿ ಪಿ. ಕೃಷ್ಣವೇಣಿ, ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಮುಷ್ಕರ ಮುಕ್ತಾಯ— ಕಳೆದ ತಾ. 5ರಂದು ಪ್ರಾರಂಭವಾದ ಬಂದರ ಕೆಲಸಗಾರರ ಮುಷ್ಕರವು ತಾ. 22ರಲ್ಲು ನಿಲ್ಲಿಸಲಾಯಿತು.

ಎಮ್. ಎನ್. ಕಾಮತ ಸ್ಮಾರಕ— ದಿವಂಗತ ಎಮ್. ಎನ್. ಕಾಮತರ ಸ್ಮಾರಕವೊಂದನ್ನು ರಚಿಸುವ ಬಗ್ಗೆ ಅವರ ಶಿಷ್ಯರೂ ಹಿತಚಿಂತಕರೂ ಸೇರಿ ಒಂದು ಕಮಿಟಿಯನ್ನು ಸ್ಥಾಪಿಸಿರುವರು. ಈ ಸ್ಮಾರಕಕ್ಕೆ ಬೇಕಾಗುವ ಹಣವನ್ನು ಶೇಖರಿಸುವರೆ ಇದೇ ತಾ 17ರಿಂದ 23ರ ವರೆಗೆ ಮಂಗಳೂರಲ್ಲಿ ಏಳು ದಿವಸಗಳಲ್ಲಿ ಏಳು ನಾಟಕಗಳನ್ನು ಪ್ರದರ್ಶಿಸಲಾಗುವುದು.

ಶೋಚನೀಯ ನಿಧನ— ಸೈಂಟ್ ಎಲೋಸಿಯಸ್ ಕಾಲೇಜಿನ ಹೈಸ್ಕೂಲು ಶಾಖೆಯ ವಿದ್ಯಾರ್ಥಿಗಳು ಉಪಾಧ್ಯಾಯರ ಸಹಿತ ಮಂಗಳೂರಿಗೆ ಸಮೀಪದ ಫರಂಗಿಪೇಟೆಗೆ ವಿಹಾರಕ್ಕಾಗಿ ಹೋಗಿದ್ದು ಅಲ್ಲಿ ಸ್ನಾನಕ್ಕಾಗಿ ಹೊಳೆಗೆ ಹೋಗಿದ್ದಾಗ ಮೂವರು ವಿದ್ಯಾರ್ಥಿಗಳು ಸುಳಿಕಕ್ಕೆ ಸಿಕ್ಕಿ ಇಬ್ಬರನ್ನು ಬದುಕಿಸಲಾದರೂ ಚಾರ್ಲ್ಸ ನರೋನ್ಹ ಎಂಬಾತನು ಮಾತ್ರ ನೀರು ಪಾಲಾದನೆಂದು ತಿಳಿದು ಬರುತ್ತದೆ.

ಸರಕಾರಿ ಆಸ್ಪತ್ರೆಯ— ಕಟ್ಟಡದ ಕೆಲಸವು ನಡೆಯುತ್ತಿದ್ದು ಬರುವ ವರ್ಷ ಕೊನೆಗೊಳ್ಳುವದಾಗಿ ತಿಳಿದು ಬರುತ್ತದೆ.

ಮೆಡಿಕಲ್ ಎಸೋಸಿಯೇಶನಿನ— ಜಿಲ್ಲಾ ಶಾಖೆಯ ಆಶ್ರಯದಲ್ಲಿ ಶ್ರೀ ಬೆನಗಲ್ ಶಿವರಾಯರು ಪಂಚವಾರ್ಷಿಕ ಯೋಜನೆಯಲ್ಲಿ ವೈದ್ಯಕೀಯ ಹಾಗೂ ಸಾರ್ವಜನಿಕ ಆರೋಗ್ಯ ಹಂಚಿಕೆ ಎಂಬ ಕುರಿತು ಕಳೆದ ತಾ 26ರಲ್ಲಿ ಸಹಕಾರಿ ಬ್ಯಾಂಕಿನ ಮಹಡಿಗೆಯಲ್ಲಿ ಶ್ರೀ ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಭಾಷಣ ಮಾಡಿದರು

ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಮಹಾ ಸಭೆಯು— ಶ್ರೀ ಕಾರ್ಕಳ ನಾಗಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಕಳೆದ ತಾ. 13ರಲ್ಲು ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗಿತು. ಸಂಘದ ಅಧ್ಯಕ್ಷ ರಾವ್‌ಬಹದೂರ್ ಕೆ. ಟಿ. ಆಳ್ವರು ಸ್ವಾಗತ ಭಾಷಣ ಮಾಡಿದರು. ಬಳಿಕ ಶ್ರೀಮತಿಯರಾದ ಹೇಮಲತ ಸೆಟ್ಟಿ, ಕಡಂದಲೆ ಗುತ್ತು ಅಕ್ಕಮ್ಮ ಶೆಡ್ತಿ ಮತ್ತು ಶ್ರೀ ಹಾಲಾಡಿ ದುಗ್ಗಪ್ಪ ಭಂಡಾರಿಗಳ ಅಕಾಲ ನಿಧನದ ಬಗ್ಗೆ ದುಃಖಸೂಚಕ ನಿರ್ಣಯಗಳಾದುವು ಶ್ರೀ ಕೆ. ಸದಾನಂದ ಹೆಗ್ಡೇರು ಬಂದ ಶುಭ ಸಂದೇಶಗಳನ್ನು ಓದಿದರು. ನಂತರ ಮಂಗಳೂರಿನ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ ಭವನಗಳ ಮತ್ತು ಬಡ ವಿದ್ಯಾರ್ಥಿ ಫಂಡಿನ ವರದಿಗಳನ್ನು ಓದಿ ಮಂಜೂರು ಮಾಡಲಾಯಿತು. ಕೀರ್ತಿಶೇಷ ವಕೀಲ್ ಶ್ರೀ ಕೆ. ಶ್ಯಾಮ ಸೆಟ್ಟರ ಸ್ಮಾರಕಾರ್ಥವಾಗಿ ಸ್ವಜಾತಿ ಗ್ರಹಸ್ಥರು ಏರ್ಪಡಿಸಿದ ಸ್ವಜಾತಿ ಉಪಯೋಗದ ಫಂಡಿಗೆ ಜಾತಿಗ್ರಹಸ್ಥರು ಕೊಟ್ಟ ರೂ. 1500ನ್ನು ಸ್ವೀಕರಿಸಲಾಯಿತು. ಅಧ್ಯಕ್ಷರ ಸೂಚನೆ ಮೇರೆಗೆ ಮುದ್ರಾಸು ಎಸೆಂಬ್ಲಿಗೆ ಆರಿಸಲ್ಪಟ್ಟ ಶ್ರೀಗಳಾದ ಎ. ಬಿ. ಸೆಟ್ಟಿ, ವೈ. ಮಂಜಯ್ಯ ಸೆಟ್ಟಿ ಮತ್ತು ಕೆ. ಸಂಜೀವ ಸೆಟ್ಟಿ ಹಾಗೂ ಕೌನ್ಸಿಲ್ ಒಫ್ ಸ್ಟೇಟಿಗೆ ಚುನಾಯಿಸಲ್ಪಟ್ಟ ಶ್ರೀ ಕೆ. ಸದಾನಂದ ಹೆಗ್ಡೆಯವರನ್ನೂ ಸಂಘದ ಪರವಾಗಿ ಅಭಿನಂದಿಸಲಾಯಿತು. ವಿದ್ಯಾರ್ಥಿ ಭವನದ ಕಟ್ಟಡಕ್ಕೆ ಮಾಡಿದ ಸಾಲವನ್ನು ಸಂದಾಯ ಮಾಡುವರೆ ಧನಸಂಗ್ರಹ ಕಾರ್ಯಕ್ಕಾಗಿ ಉಪಸಮಿತಿಯೊಂದು ರಚಿಸಲಾಯಿತು.

ಅಧ್ಯಕ್ಷರ ಭಾಷಣ— ಶ್ರೀ ಹೆಗ್ಡೆಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ 'ನಮ್ಮ ಸಮಾಜವು ಆಷ್ಟರ ತನಕ ಎಲ್ಲಿಯ ವರೆಗೆ ಮುಂದರಿದಿದೆ, ಇತರ ಸಮಾಜಗಳ ಚಲನೆಗೆ ಸರಿಯಾಗಿ ಎಷ್ಟರ ಮಟ್ಟಿಗೆ ನಾವಿರುವೆವು, ಇನ್ನು ಮುಂದಕ್ಕೆ ನಾವು ಅವಲಂಬಿಸತಕ್ಕ ಕೆಲಸಗಳು ಯಾವುವು ಎಂಬಿತ್ಯಾದಿ ವಿಷಯಗಳ ಪರಿಶೀಲನೆಗಾಗಿ ಇಂತಹ ವರ್ಷಾವಧಿ ಕೂಟದಲ್ಲಿ ಸೇರಿ ವಿಚಾರ ವಿನಿಮಯ ಮಾಡುವುದು ನಮ್ಮೆಲ್ಲರ ಆದ್ಯಂತ ಕರ್ತವ್ಯವಾಗಿದೆ' ಎಂದು ಹೇಳಿದರು. ಮುಂದುವರಿಸುತ್ತಾ ಇಂತಹ ಸಮಾರಂಭಗಳಲ್ಲಿ ಸಂಕುಚಿತ ಮನೋಭಾವನೆಗಳನ್ನು ದೂರೀಕರಿಸಬೇಕು ಎಂದು ಸೂಚಿಸಿದರು. ಸ್ತ್ರೀ ವಿದ್ಯಾಭ್ಯಾಸದ ಕುರಿತು ಮಾತನಾಡುತ್ತಾ, ಮಹಿಳೆಯರು ಬರೇ ವಿದ್ಯಾವಂತರಾಗಿ ಯಾವುದೊಂದು ಉತ್ಪತ್ತಿಯೂ ಆದರಿಂದ ಲಭಿಸದೆ ತಮ್ಮ ನೂತನ ವಿದ್ಯಾಕ್ರಮಗಳಿಂದ ತಮ್ಮ ಗಂಡಂದಿರ ಜೀವನವನ್ನು ಖರ್ಚಿನ ದೃಷ್ಟಿಯಿಂದ ಇನ್ನಷ್ಟು ಕಷ್ಟಕ್ಕೀಡುಮಾಡುವುದಾದರೆ ಅಂತಹ ವಿದ್ಯಾಭ್ಯಾಸದಿಂದ ಪ್ರಯೋಜನವಾಗಲಾರದು. ವಿದ್ಯಾವತಿಯರು ಸಮಾಜದ ಬೇರೆ ವ್ಯವಹಾರ ಸಂಸ್ಥೆಗಳಲ್ಲಿ ಉದ್ಯೋಗವನ್ನು ಪಡೆದು ಜೀವನನಿರ್ವಹಣವನ್ನು ಸಾಗಿಸಲು ಅನುಕೂಲ ವಾತಾವರಣವನ್ನು ಕಲ್ಪಿಸಿಕೊಡಬೇಕೆಂದೂ ವಿದ್ಯಾರ್ಥಿನಿ ಭವನದಲ್ಲಿ ನರ್ಸಿಂಗ್ ಮತ್ತು ಹೊಲಗಿತ್ತಿತನ ಬೇಕಿಶಿಕ್ಷಣ ಕೈಕೊಳ್ಳುವುದು ಉತ್ತಮವೆಂದೂ ಸೂಚಿಸಿದರು. ವಿಜಯಬ್ಯಾಂಕು ಇನ್ನಷ್ಟು ಪುಷ್ಟೀಕರಿಸುವಂತಾಗಿ ಸಾರ್ವಜನಿಕರ ಸಂಪರ್ಕವನ್ನಿಟ್ಟು ಕೊಂಡು ಬೆಳೆದು ಬರುವಂತಾಗಬೇಕೆಂದರು.

ಅಳಿಯ ಸಂತಾನ ಕಾನೂನು— ರಾಷ್ಟ್ರದ ಸ್ಥಿತಿಯೇ ಬದಲಾವಣೆ ಹೊಂದುತ್ತಿರುವ ಈ ಸಮಯದಲ್ಲಿ ನಮ್ಮ ಸಮಾಜವು ಕಾಲಕ್ಕೆ ಸರಿಯಾಗಿ ಹೆಜ್ಜೆಯನ್ನಿಡತಕ್ಕದ್ದು. ಅಳಿಯ ಸಂತಾನ ಕಾಯಿದೆ ಕುರಿತು ಸಮಾಜಬಂಧುಗಳಲ್ಲಿ ಹಲವಾರು ಮಂದಿಗಳಿಗೆ ಹಲವಾರು ವಿಧದಲ್ಲಿ ಅತೃಪ್ತಿಯುಂಟಾಗಿದೆ. ಈ ಕಾನೂನಿನಲ್ಲಿರುವ ಕುಂದು ಕೊರತೆಗಳನ್ನು ಹೋಗಲಾಡಿಸಿ, ಸಮಾಜದ ಹಿಂದಿನ ಬಲ ಮತ್ತು ಮುಂದಿನ ಏಳಿಗೆಗೆ ಅನುಕೂಲವಾಗುವಂತೆ ಇಡೀ ಆಕ್ಟನ್ನು ಪುನರಾಲೋಚಿಸಿ ತಿದ್ದುಪಡಿ ಗೊಳಿಸುವ ಕೆಲಸವನ್ನು ಈ ಸಂಘವಾದರೂ ಏತಕ್ಕೆ ತೆಗೆದುಕೊಳ್ಳಬಾರದು, ಎಂದು ಪ್ರಶ್ನಿಸಿದರು. ಹಳ್ಳಿಯ ಸುಧಾರಣೆಗಳ ಕುರಿತು ಸಮಾಜವು ಲಕ್ಷ್ಯ ಕೊಡಬೇಕೆಂದೂ ಸೂಚಿಸಿದರು.

ವಿಜಯಾ ಬೇಂಕ್ ಲಿಮಿಟೆಡ್— ಇದರ ಮಡಿಕೇರಿ ಶಾಖೆ ಸಲಹೆಗಾರ ಸಮಿತಿ ಸದಸ್ಯರಾದ ಕೊಡಗಿನ ಮಾನ್ಯಮಂತ್ರಿ ಶ್ರೀ ಕೆ. ಮಲ್ಲಪ್ಪ ಮತ್ತು ಪಾರ್ಲಿಮೆಂಟ್ ಸಭ್ಯ ಶ್ರೀ ಎನ್. ಸೋಮಣ್ಣನವರನ್ನು ಗೌರವಿಸುವ ಸತ್ಕಾರ ಸಮಾರಂಭವು ಬೇಂಕಿನ ಮಡಿಕೇರಿ ಶಾಖೆಯ ವಟಾರದಲ್ಲಿ ಕಳೆದ ತಾ. 20ರಂದು ಸಂಜೆ ಜರಗಿತು. ಬೇಂಕಿನ ಅಧ್ಯಕ್ಷ ಹಾಗೂ ದ. ಕ. ಜಿಲ್ಲಾ ಬೋರ್ಡಿನ ಪ್ರೆಸಿಡೆಂಟ್ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದು ಮಾನ್ಯ ಅತಿಥಿಗಳನ್ನು ಸ್ವಾಗತೀಕರಿಸಿ ಅವರು ಬೇಂಕಿನ ಅಧ್ಯಕ್ಷ ಹಾಗೂ ದ. ಕ. ಜಿಲ್ಲಾ ಬೋರ್ಡಿನ ಪ್ರೆಸಿಡೆಂಟ್ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದು ಮಾನ್ಯ ಅತಿಥಿಗಳನ್ನು ಸ್ವಾಗತೀಕರಿಸಿ ಅವರು ಬೇಂಕಿನ ಸಲಹೆಗಾರ ಸದಸ್ಯರಾಗಿ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿದರು. ಮಾನ್ಯ ಅತಿಥಿಗಳು ಉತ್ತರ ಕೊಡುತ್ತಾ ಕೊಡಗಿನ ಜನತೆಗೆ ಈ ಬೇಂಕಿನಿಂದಾದ ಉಪಕಾರವನ್ನು ಪ್ರಶಂಶಿಸಿ ಮುಖ್ಯತಃ ಹಳ್ಳಿ ವಲಯದಲ್ಲಿ ಜನತೆಗಾದ ಪ್ರಯೋಜನವನ್ನು ಎತ್ತಿ ಮಾತನಾಡಿದರು. ಕೊಡಗಿನ ಜಿಲ್ಲಾ ಮೆಜಿಸ್ಟ್ರೇಟ್ ಶ್ರೀ ಐ ಸಿ. ಸುಬ್ಬಯ್ಯನವರೂ ಬೇಂಕಿನ ಸೇವೆಯನ್ನು ಕೊಂಡಾಡಿ ಮಾತನಾಡಿದರು.

ಎಸ್. ಆರ್. ಎಸ್. ಜೋಮ್ ಹಳೆ ನಿವಾಸಿಗರ ಸಂಘದ— ವಾರ್ಷಿಕ ಮಹಾ ಸಭೆಯು ತಾ 4-5-52ನೇ ಆದಿತ್ಯವಾರ ಸಂಜೆ 7 ಗಂಟೆಗೆ ಎಸ್. ಆರ್. ಎಸ್. ಹೋಮಿನಲ್ಲಿ ಜರಗಲಿರುವುದರಿಂದ ಹಳೆ ನಿವಾಸಿಗರೆಲ್ಲ ಅದಕ್ಕೆ ಬರಬೇಕೆಂದೂ ಪ್ರತ್ಯೇಕ ಆಮಂತ್ರಣ, ತಲಪದವರು ಇದನ್ನೇ ಆಮಂತ್ರಣವೆಂದು ತಿಳಿಯಬೇಕೆಂದೂ ಕಾರ್ಯದರ್ಶಿ ಡಾ। ಕೆ. ಬಿ. ಶೆಟ್ಟರು ತಿಳಿಸುತ್ತಾರೆ.

ಬ್ರಹ್ಮ ಶ್ರೀ ನಾರಾಯಣ ಗುರು ಸ್ವಾಮಿ ಸೇವಾ ಸಮಿತಿ ಕಟಪಾಡಿ ದ. ಕ.— ಇದರ ಮುಂಬಾಯಿ ಸದಸ್ಯರುಗಳ ಮಹಾಸಭೆಯು ತಾ 20-4-1952 ರಲ್ಲು ದಿ. ಬಾಟ್ಲಿಭಾಯಿ ಎಕೌಂಟೆನ್ಸಿ ಟ್ರೈನಿಂಗ್ ಇನ್ಸ್ಟಿಟ್ಯೂಟಿನಲ್ಲಿ ಜರಗಿ ಗತವರುಷದ ವರದಿ ಮತ್ತು ಲೆಕ್ಕ ಮಂಜೂರಾತಿಯಾಗಿ ಚಾಲ್ತಿವರುಷದ ಕಮಿಟಿ ಹದಿನಾರು ಮಂದಿ ಸದಸ್ಯರುಗಳ ಚುನಾವಣೆಯಾಯಿತು. ಶ್ರೀಗಳಾದ ರುಕ್ಮ ಟಿ ಕೋಟ್ಯಾನ್ ಯಸ್. ವೈ. ದ ಪಿ. ಕೆ. ಸುವರ್ಣ ಮತ್ತು ಇನ್ನೂ ಹಲವರ ಸುಂದರ ಭಾಷಣಗಳಾಗಿ ಗುರುಪೂಜೆ ಪ್ರಸಾದ ಸ್ವೀಕಾರದೊಂದಿಗೆ ಸಭಾಂತ್ಯವಾಯಿತು.

ಮದ್ರಾಸ ವಿಶ್ವವಿದ್ಯಾಲಯದ ಮೆಡಿಕಲ್ ಪರೀಕ್ಷೆಯ ಫಲಿತಾಂಶ— ಇದೇ ತಿಂಗಳಲ್ಲಿ ನಡೆದ ಯಂ. ಡಿ. ಪರೀಕ್ಷೆಯಲ್ಲಿ, ದಕ್ಷಿಣ ಕನ್ನಡದವರಾಗಿದ್ದು ಈಗ ಮದ್ರಾಸಿನಲ್ಲಿ ಸ್ವಂತ ಉದ್ಯೋಗ ಮಾಡಿಕೊಂಡಿರುವ ಡಾ। ಕೆ. ವೆಂಕಟ್ರಾಯರು ಮೆಡಿಸಿನ್ ವಿಷಯ ಕಲಿತು ಯಂ. ಡಿ. ಡಿಗ್ರಿಯನ್ನು ಪಡೆದಿರುತ್ತಾರೆ. ಈ ರೀತಿ ಯಂ. ಡಿ. ಡಿಗ್ರಿ ಪಡೆದವರ ಪೈಕಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಇವರೇ ಪ್ರಥಮದವರಾಗಿರುತ್ತಾರೆ.

ದಿ। ಶೀ। ಡಾ। ಪಿ. ವಿ. ಗಿರಿಯವರು ಮಿಡ್‌ವೈಫರಿ ಯಂ. ಡಿ. ಡಿಗ್ರಿಯನ್ನು ಹೊಂದಿದವರಾಗಿದ್ದು ಡಾ। ಕೆ. ವೆಂಕಟ್ರಾಯರು ಅವರ ವಿದ್ಯಾರ್ಥಿಯಾಗಿದ್ದರು.

ಡಾ। ವೆಂಕಟ್ರಾಯರು ಪ್ರಥಮತಃ 1926 ರಲ್ಲಿ ಯಲ್. ಯಮ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅನಂತರ 1938ನೇ ಇಸ್ವಿಯಲ್ಲಿ ಅವರು ಯಮ್. ಬಿ. ಬಿ. ಎಸ್. ಡಿಗ್ರಿಯಲ್ಲಿ ಪಾಸಾಗಿ ಈಗ ಯಮ್. ಡಿ. ಡಿಗ್ರಿಯನ್ನು ಪಡೆದರು.

ಮದುವೆ, ಉಪನಯನ ಮತ್ತಿತರ ಯಾವತ್ತೂ
ಶುಭ ಸಮಾರಂಭಗಳ ಕಾಲದಲ್ಲಿ ಏರ್ಪಡಿಸುವ
ಟೀಪಾರ್ಟಿ ಸತ್ಕಾರ ಸಮಾರಂಭಗಳು
ಎಷ್ಟೇ ದೊಡ್ಡ ಪ್ರಮಾಣದಲ್ಲಿದ್ದರೂ ತೃಪ್ತಿಕರವಾಗಿ
ಯೋಗ್ಯ ವ್ಯವಸ್ಥೆಯೊಂದಿಗೆ ನಾವು ಪೂರೈಸಿ ಕೊಡುತ್ತೇವೆ.
ಮಹಾ ಜನರು ಗಮನಿಸಬೇಕು.
ತಾಜಮಹಾಲ್, ಸಿನೆಮಾ ಥಿಯೇಟರಿನ ಬಳಿ ಉಡುಪಿ.

ಸ್ವೀಕಾರ—ವಿಮರ್ಶೆ

ಅರ್ಥಶಾಸ್ತ್ರ

ಬರೆದವರು: ಕೆ. ಶಿ. ಹರಿದಾಸ ಭಟ್ಟ, ಎಂ. ಎ. ಪ್ರಕಾಶಕರು: ಕಾವ್ಯಾಲಯ, ಮೈಸೂರು. ಬೆಲೆ: ರೂ. ೫ ಪುಟಗಳು, xiii+೩೦೫.

ಮೈಸೂರು ವಿಶ್ವವಿದ್ಯಾನಿಲಯವು ಕೆಲವು ವರ್ಷಗಳ ಹಿಂದೆ ಕನ್ನಡದಲ್ಲಿ ವೈಜ್ಞಾನಿಕ ಹಾಗೂ ಶಾಸ್ತ್ರೀಯ ಗ್ರಂಥಗಳನ್ನು ಪರಿಣತರಿಂದ ಬರೆಯಿಸಿ, ಸಾಮಾನ್ಯ ವಿದ್ಯಾಬುದ್ಧಿಯ ಕನ್ನಡಿಗರಿಗೆ ಅಗ್ಗದರದಲ್ಲಿ ಪ್ರತಿಯನ್ನು ಪೂರೈಸಿ ಜ್ಞಾನವರ್ಧಕ ಕಾರ್ಯದಲ್ಲಿ ನೆರವಾಗುವ ಒಂದು ಯೋಗ್ಯ ಪರಂಪರೆಯನ್ನು ಆರಂಭಿಸಿತು. ಅದರೇಕೋ, ಈಗ ಈ ಉದ್ಯಮ ಅರ್ಧಕ್ಕೆ ನಿಲ್ಲಿಸಲ್ಪಟ್ಟಂತಿದೆ. ಕನ್ನಡದಲ್ಲಿ ವಿವಿಧ ಶಾಸ್ತ್ರಗಳ ಬಗೆಗಿನ ತಿಳುವಳಿಕೆಯನ್ನು ಮಾಡಿಕೊಡುವ ಪುಸ್ತಕಗಳ ಕೊರತೆ ತುಂಬ ಇದೆ ಎಂಬುದು ನಿರ್ವಿವಾದ. ಹಾಗೆ ಬರೆಯಬಲ್ಲವರಿಗೆ ದೊರೆಯುವ ಪ್ರೋತ್ಸಾಹದ ಪ್ರಮಾಣವೂ ಉಪೇಕ್ಷಣೀಯವಿರುವುದೂ ಶಿಕ್ಷಣ ಮಾಧ್ಯಮವಾಗಿ ವಿದೇಶೀ ಭಾಷೆಯೊಂದನ್ನು ಇನ್ನೂ ಆಶ್ರಯಿಸಿರುವುದೂ ರಾಷ್ಟ್ರ ಸರಕಾರಗಳ ನಿರ್ಲಕ್ಷ್ಯತನವೂ ಇದಕ್ಕೆ ಕಾರಣಗಳಿರಬಹುದು. ಈ ಪರಿಸ್ಥಿತಿಯಲ್ಲಿ ಕನ್ನಡಿಗರಿಗೊಂದು ನವೀನ ಶಾಸ್ತ್ರಗ್ರಂಥವನ್ನು ಕಾಣಿಕೆಯಾಗಿ ನೀಡಬಯಸುವ ದಿಸೆಯಲ್ಲಿನ ಗ್ರಂಥಕರ್ತರು ಅಪಾರ ಕಷ್ಟನಷ್ಟಗಳನ್ನು ಎದುರಿಸಬೇಕಾಗಿವೆ. ಶ್ರೀ ಶಿವರಾಮ ಕಾರಂತರಂಥ ನುರಿತ ಸಾಹಿತಿಗಳು ಕನ್ನಡಕ್ಕೊಂದು ವಿಜ್ಞಾನ ಕೋಶ ಬೇಕು ಎಂಬ ಇರಾದೆಯಿಂದ ಬರೆದ "ಬಾಲಪ್ರಪಂಚ"ದ ಮೊದಲ ಮುದ್ರಣದ ಪ್ರತಿಗಳೇ ಇನ್ನೂ ತೀರಿಲ್ಲವಂತೆ! ಇಂಥ ಗ್ರಂಥಗಳು ಅಪೂರ್ವವಾದರೂ ಅವುಗಳ ಉಪಯುಕ್ತತೆ ಹೆಚ್ಚಿದ್ದರೂ ದೊರೆಯುವ ಮಾರಾಟ ಬಹಳ ಕಡಿಮೆ ಇರುತ್ತದೆ; ಮತ್ತು ಅವುಗಳ ರಚನೆಯನ್ನು ಬಹಳ ವ್ಯಯವೂ ಬೇಕಾಗುತ್ತದೆ. ಈ ಕಾರಣದಿಂದ ಬೆಲೆ ಕೂಡ ಅನಿವಾರ್ಯವಾಗಿ ಸ್ವಲ್ಪ ಹೆಚ್ಚಾಗುತ್ತದೆ. ಹೀಗಿರುವಾಗ ಇತ್ತೀಚೆಗೆ ಸಂಘವು ಈ ವಿಷಯದಲ್ಲಿ ಕೈಹಾಕಿ, ಅಲಿಖಿತ ವಾಙ್ಮಯಕ್ಕೂ, ವಿವಿಧ ಶಾಸ್ತ್ರ ವಿಷಯಕ ಪ್ರಗಲ್ಭ ಗ್ರಂಥಗಳ ಯೋಗ್ಯ ಪುಸ್ತಕಗಳನ್ನು ಹೊರಡಿಸುವ ಕಾರ್ಯವನ್ನಿಟ್ಟುಕೊಂಡಿರುವುದು ಶ್ಲಾಘನೀಯ. ಇಂಥ ಪ್ರೋತ್ಸಾಹದ ಮೊತ್ತವನ್ನು ಇನ್ನಷ್ಟು ಏರಿಸಬೇಕಾದುದೂ ಅವಶ್ಯವೇ.

ಹೀಗೆ ಕಾಲವೇ ಇದಿರು ನಿಂತಿರುವಾಗಲೂ ಅದನ್ನು ಆತ್ಮಬಲದಿಂದ ಪ್ರತಿಭಟಿಸಿ ಮುನ್ನಡೆಯುವ ಘನವಾದ ಸಾಹಸ ಕಾರ್ಯಕ್ಕೆ ಶ್ರೀ ಹರಿದಾಸ ಭಟ್ಟರು ಧುಮುಕಿರುವರು. ಮದರಾಸು ವಿಶ್ವವಿದ್ಯಾನಿಲಯದವರು ಪುರಸ್ಕರಿಸಿರುವ ಈ ಪುಸ್ತಕವನ್ನು ಎಸ್. ಎಸ್. ಎಲ್. ಸಿ. ವರೆಗೆ ಓದಿದ ಸಾಮಾನ್ಯ ಜನಕ್ಕೆ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಪ್ರಾಥಮಿಕ ಜ್ಞಾನವಾಗುವಂತೆ ತಿಳಿಯಾಗಿ ಬರೆದಿರುವರು. ಒಟ್ಟು ಇಪ್ಪತ್ತೊಂಭತ್ತು ಅಧ್ಯಾಯಗಳಲ್ಲಿ ಸರಕು, ವಿನಿಮಯ, ಮೌಲ್ಯ ನಿರ್ಧಾರದ ಬಗ್ಗೆ, ಉದ್ಯಮಗಳು ಬೆಳೆಯುವ ರೀತಿ, ಉತ್ಪಾದನೆಯ ವಿವಿಧ ಅವಯವಗಳು, ಬಂಡವಾಳ ಮತ್ತು ದಂ ಪೂರೈಕೆ ಹಾಗೂ ವಿನಿಯೋಗ, ಜನಸಂಖ್ಯೆ, ನಿರುದ್ಯೋಗ, ಗೇಣಿ, ಕೂಲಿ ಮುಂತಾದ ಸಮಸ್ಯೆಗಳ ವಿವೇಚನೆ, ತೆರಿಗೆ, ಬಡ್ಡಿ, ಮುದ್ರಾನೀತಿ, ಬ್ಯಾಂಕಿಂಗ್ ವ್ಯವಹಾರ ಮತ್ತು ಅಂತರರಾಷ್ಟ್ರೀಯ ವ್ಯಾಪಾರ ಇತ್ಯಾದಿ ನಾನಾ ಉಪಯುಕ್ತ ವಿಷಯಗಳನ್ನು ಬಹಳ ದಕ್ಷತೆಯಿಂದ ಚರ್ಚಿಸಿರುವರು. ಜಟಿಲವಾದ ತಾತ್ವಿಕ ವಿವೇಚನೆಯನ್ನು ಬಹಳ ಸುಲಭವಾದ ರೀತಿಯಲ್ಲಿ ಮಂಡಿಸಲು ಪ್ರಯತ್ನಿಸಿರುವುದರಿಂದ ಹೆಚ್ಚಿನ ಕಷ್ಟವಿಲ್ಲದೆ ವಿಷಯ ಗ್ರಹಣವು ಸಾಧ್ಯವಾಗಿದೆ. ಅಲ್ಲಲ್ಲಿ ಉಚಿತ ರೇಖಾ ಚಿತ್ರಗಳನ್ನು ಕೊಟ್ಟೂ, ನಮ್ಮದೇ ವಾತಾವರಣದಲ್ಲಿ ಕಂಡುಕೊಳ್ಳಬಹುದಾದ ಸಾಮಾನ್ಯ ಉದಾಹರಣೆಗಳನ್ನು ಬಳಸಿಯೂ ಓದುಗರಿಗೆ ಹೆಚ್ಚಿನ ತ್ರಾಸ ಉಂಟಾಗದಂತೆ ನೋಡಿಕೊಂಡಿರುವರು. ನಿರೂಪಣಾ ಶೈಲಿಯು ಹೃದಯಂಗಮವಾಗಿರುವುದನ್ನು ಲೇಖಕರ ವೈಶಿಷ್ಟ್ಯವೆಂದೇ ಹೇಳಬೇಕು. ಹೆಚ್ಚಾಗಿ ಇಂಥ ಒಣಟು ವಿಷಯವನ್ನು ಬರೆಯುವ ಲೇಖನಿ ಸ್ವಾಭಾವಿಕವಾಗಿ ಶುಷ್ಕವಿರುವುದೇ ವಾಡಿಕೆ. ಆದರೆ ಶ್ರೀ ಹರಿದಾಸ ಭಟ್ಟರು ಇದಕ್ಕೊಂದು ಅಪವಾದ—ಅವರ ಶೈಲಿಯಲ್ಲಿ ಆಗಾಗ ವಿಡಂಬನೆ ಇದೆ. ಎನ್ನುವ ಚಟ್ಟುಮೊನೆ ಮಾತಿನಲ್ಲಿ ಬರ್ನಾರ್ಡ್ ಶಾನ ಪ್ರತಿಭೆ ಇದೆ ಎನ್ನುವ ಭಕ್ತರೂ ನಮ್ಮಲ್ಲಿರುವರು. ಅವರ ಹೇಳಿಕೆಯನ್ನು ಅಲ್ಲಗಳೆಯುವುದೂ ಸಾಧ್ಯವಿಲ್ಲದಂತೆ ತೋರುತ್ತದೆ: ಉದಾಹರಣೆ, ಬಂಡವಾಳದ ವಿವಿಧ ರೂಪಗಳನ್ನು ಸೋದಾಹರಣವಾಗಿ ವಿವರಿಸುತ್ತಾ ಸ್ವಕ್ಕಿನ ಎಕ್ಕ ವೈಯಕ್ತಿಕ ಬಂಡವಾಳವನ್ನು "ಹಾಂಗೆ ದಾಸರ ತಾಳ ನೊಡಲಿನ ಜಾತಿಗೂ ಅವರ ಕಂಠಧ್ವನಿ ಎತನೆ ಜಾತಿಗೂ ಸೇರುವುವು" (ಪುಟ: ೧೫೭) ಎಂದಿರುವರು. ಇಂಥ ನಗೆ ಬರಿಸುವ ಸನ್ನಿವೇಶಗಳು ಪುಟಪುಟದಲ್ಲಿಯೂ ಪುಟಿಯುತ್ತಿವೆ; ಮತ್ತು ಓದುಗನ ಮನಸ್ಸಿನ ಭಾರವನ್ನು ಇಳಿಸಿ, ಹಗುರಾಗಿಸುತ್ತವೆ. ಇಂಗ್ಲಿಷ್ ಮೂಲದಲ್ಲಿರುವ ಶಬ್ದಗಳಿಗೆ ಕನ್ನಡದಲ್ಲಿ ಸಮರ್ಪಕವಾದ ಪದಗಳನ್ನು ಹೆಕ್ಕಿಕೊಂಡುದರಿಂದ ನಿಶ್ಚಯವಾಗಿಯೂ ನಮ್ಮ ವಾಗ್ದೇವಿಯ ಭಂಡಾರ ಸಂಪತ್ತು ಹೆಚ್ಚಿರುವುದು. ಮುದ್ರಣವು ಸುಂದರವಿರುವುದೂ ಅಚ್ಚಿನ ತಪ್ಪುಗಳು ಬಹಳ ಕಡಿಮೆ ಇರುವುದೂ ಪುಸ್ತಕದ ಇನ್ನೊಂದು ಆಕರ್ಷಣೆ.

ಗ್ರಂಥದ ಕೊನೆಯಲ್ಲಿ ಲೇಖಕರು "ಸಮಾಜವಾದಿ ಅರ್ಥಮಂಡಲ" ಎಂಬ ಅಧ್ಯಾಯದಲ್ಲಿ ಮಾರ್ಕ್ಸ್ ಸಿದ್ಧಾಂತದ ಸಮನ್ವಯವನ್ನು ಚರ್ಚಿಸುತ್ತಾ "ಜನಶಕ್ತಿಯು ಹೊಂದಿರುವ ಭೂಮಿ, ಬಂಡವಾಳ, ಸಾಹಸ ಎಂಬ ಮೂರು ಅವಯವಗಳನ್ನು ಆದಷ್ಟು ಮಿತವಾಗಿ ಸಮಾಜದ ಸಾಮೂಹಿಕ ಹಿತಕ್ಕಾಗಿ ಬಳಸಿಕೊಳ್ಳುವಂಥ" ಯೋಜನಾತ್ಮಕ ಅರ್ಥಮಂಡಲಕ್ಕೆ "ಸಂಪೂರ್ಣ ಸದವಕಾಶವನ್ನು ಕಲ್ಪಿಸುವ ಸಮಾಜವಾದಿ ರಾಜನೈತಿಕ ಹಾಗೂ ಆರ್ಥಿಕ ವ್ಯವಸ್ಥೆಗೆ ನಮ್ಮ ಹಾರ್ದಿಕ ಸ್ವಾಗತ ಇರಬಾರದೆ?" ಎಂದಿರುವರು. ಇದು ನಿಜಕ್ಕೂ ವಿಚಾರಣೀಯವಾದ ಅಂಶವಾಗಿದೆ. ಯೋಜನೆ ಇಲ್ಲದೆ ರಾಷ್ಟ್ರದ ಉದ್ಧಾರವಾಗುವುದಿಲ್ಲವೆಂಬುದು ನಿಜವಾದರೂ "ಸಮಾಜವಾದಿ" ರಾಜನೈತಿಕ ಹಾಗೂ ಆರ್ಥಿಕ ವ್ಯವಸ್ಥೆಗೇನೇ ಭಾರತೀಯರು ಶರಣಾಗುವುದು ಹಿತ ಎಂಬ ಅಭಿಪ್ರಾಯವನ್ನು ಇನ್ನಷ್ಟು ವಿಶದೀಕರಿಸುವುದೂ ಪುಷ್ಟೀಕರಿಸುವುದೂ ಆವಶ್ಯವಿದೆ. ಪ್ರಸ್ತುತ ಲೇಖಕರು ಗಾಂಧಿಯನ್ನು ಅಥವಾ ರಾಷ್ಟ್ರೀಯ ಜಾತಿಗೆ ಸೇರಿಸಿಕೊಳ್ಳಲು ಒಡಂಬಡುವರೋ, ಇಲ್ಲವೋ—ತಿಳಿಯದು. ಹಾಗಿದ್ದರೂ ಗಾಂಧೀಯೋಜನೆ ಎಂಬುದೊಂದಿತ್ತು; ಮತ್ತದು ಭಾರತೀಯರ ಮಟ್ಟಿಗೆ ವ್ಯವಹಾರ್ಯ ಕೂಡ ಆಗಿದೆ ಎಂದೆನ್ನುವ ಜನರು ಈಗ ಬಹಳಮಂದಿ ಇರುವರು. ಅದರ ಉಪಯುಕ್ತತೆಯನ್ನು ಇಂದಿನ ಸರಕಾರ ನಿರ್ಲಕ್ಷಿಸಿದೆ ಎನ್ನುವಂತಿಲ್ಲ ಎಲ್ಲರೂ ಕುತೂಹಲದಿಂದ ಈ ವಿಷಯದಲ್ಲಿ ವಿಚಾರಿಸುತ್ತಿರುವಾಗ, ಲೇಖಕರು ವಿಶದವಾಗಿ ಇದರ ಪ್ರಸ್ತಾಪ ಮಾಡುವುದನ್ನು ಬಿಟ್ಟರೋ. ಅದರಿಂದ ಅವಕಾಶ ಒದಗಿಸಿಕೊಂಡು ಉಪಸಂಹಾರ ರೂಪದಲ್ಲಿ ಒಂದು ಅಧ್ಯಾಯವನ್ನು ಬರೆದು ಈ ಚರ್ಚೆಗೆ ಆಸ್ಪದ ಕೊಡಬಾರದೇಕೆ? ಇದರಂತೆ ಸಮಾಜ ಶಾಸ್ತ್ರ, ಸಂಖ್ಯಾ ಶಾಸ್ತ್ರ, ಮುಂತಾದವುಗಳು ಅರ್ಥ ಶಾಸ್ತ್ರದ ಬೆಳವಣಿಗೆಗೆ ಸಹಕಾರಿಯಾದ ರೀತಿ ಮತ್ತು ಅರ್ಥ ಶಾಸ್ತ್ರವು ಉಳಿದ ಶಾಸ್ತ್ರಗಳ ಮೇಲೆ ಬೀರಿದ ಪ್ರಭಾವಗಳ ವಿವೇಚನೆಗಾಗಿ ಒಂದು ಅಧ್ಯಾಯವಿರುತ್ತಿದ್ದರೆ ಈ ಗ್ರಂಥವು ಅರ್ಥ ಶಾಸ್ತ್ರದ ಅಧ್ಯಯನಕ್ಕೆ ಹೆಚ್ಚು ಉಪಯುಕ್ತವಾಗುವುದು. ಮುಂದಿನ ಮುದ್ರಣದಲ್ಲಿ ಲೇಖಕರು ಇತ್ತ ಗಮನಿಸುವರೆಂದು ಆಶಿಸೋಣ.

ಹತೀಮ್ ತಾಯ್

ಶ್ರೀ ಟಿ. ಎಸ್. ರಾಮಸ್ವಾಮಿ ಅಯ್ಯಂಗಾರರು ಈ ಕಿರುನಾಟಕವನ್ನು "ಶಾಲಾ ರಂಗಕ್ಷೇತ್ರಗಳಿಗೂ ವಿಜ್ಞಾನ ವರ್ಧಕ ಚಲಚಿತ್ರ ತಯಾರಿಕೆಗೂ ಅನುಕೂಲವಾಗಲೆಂಬ ಉದ್ದೇಶ"ದಿಂದ ಬರೆದಿರುತ್ತಾರೆ. ಪ್ರಖ್ಯಾತಿಯಾದ ಕಥಾ ವಸ್ತುವನ್ನು ಆರಿಸಿ, ಮಕ್ಕಳ ಮನಸ್ಸಿಗೆ ಆಕರ್ಷಕವಾಗಿರುವಂತೆ ಮಾಡಲು ಯತ್ನಿಸಿರುವುದು ಪ್ರಶಂಸನೀಯ. ಆದರೆ ಸಾಮಾನ್ಯವಾಗಿ ಎಲ್ಲಾ ದೃಶ್ಯಗಳಲ್ಲಿಯೂ ಸ್ವಗತ ಭಾಷಣಗಳು ಮಿತಿಮೀರಿ ಬೆಳೆದಿರುವುದನ್ನು ಒಂದು ದೋಷವೆಂದೇ ಗಣಿಸಬೇಕಾಗುವುದು. ನಾಟಕದಲ್ಲಿ ಚೆಲುವು ಒಡಮೂಡುವುದು ಸತ್ಪರಿಣಾಮವಾದ ಚಿಕ್ಕ ಚೊಕ್ಕ ಸಂಭಾಷಣೆಗಳಿಂದ ತಾನೆ.

ನವೋದಯ

ನಮ್ಮ ಜಿಲ್ಲೆಯ ಸುಸಂಸ್ಕೃತರಾದ ವಿದ್ಯಾದಾಯಿನೀ ಹೈಸ್ಕೂಲಿನ ವಿದ್ಯಾರ್ಥಿ ಸಂಸ್ಥೆಯವರು ತಮ್ಮ ಬಳಗದವರ ಬರಹಗಳಿಂದ ಈ ಸುಂದರ ಸಂಚಿಕೆಯನ್ನು ತಂದಿರುವರು. ತುಳು ಜಾನಪದ ಕಥೆ, ಪ್ರವಾಸ ಪ್ರಬಂಧ, ಕಥೆ-ಕವನಗಳು ಮಾತ್ರವಲ್ಲದೆ ಪ್ರಜಾಧರ್ಮ, ಕಲೆ ಮುಂತಾದವುಗಳ ಕುರಿತೂ ಶಾಲಾ ಮಕ್ಕಳು ಲೇಖನಗಳನ್ನು ಬರೆದಿರುವರು. ಕನ್ನಡವಲ್ಲದೆ ಇಂಗ್ಲೀಷು, ಹಿಂದೀ ವಿಭಾಗಗಳನ್ನೂ ಈ ವಿಶೇಷ ಸಂಚಿಕೆ ಒಳಗೊಂಡಿದೆ.

ಜಯಹಿಂದ (ಯುಗಾದಿ ಸಂಚಿಕೆ)

ವಿವಿಧ ಉಪಯುಕ್ತ ವಿಚಾರಗಳ ಮೇಲೆ ಸಮರ್ಥ ಲೇಖಕರು ಬರೆದ ಬರಹಗಳಿಂದ ಸಂಗ್ರಾಹ್ಯ ಸಂಚಿಕೆಯಾಗಿ ಇದು ಪ್ರಕಟವಾಗಿದೆ. "ಜಯಹಿಂದ"ದ ಎಂದಿನ ವೈಶಿಷ್ಟ್ಯವನ್ನು ಇದು ಕಾಪಾಡಿಕೊಂಡು ಬಂದಿದೆ ಎನ್ನಬಹುದು.

—ಕಾರ್ತಿಕೇಯ.

ಚೇತನಾ (ತ್ರೈಮಾಸಿಕ ಲಿಖಿತ ಪತ್ರಿಕೆ.)

ಸಂ. ಎಂ. ಎಸ್. ಕಾಮತ್. ಮಂಗಳೂರು.

ಮಂಗಳೂರಿನ ತರುಣ ಲೇಖಕರ ಉತ್ಸಾಹದ ಪ್ರತೀಕವೇ ಚೇತನ. ಸಂಚಿಕೆಯು ಸುಂದರವಾದ ಚಿತ್ರಗಳಿಂದಲೂ, ಬರಹಗಳಿಂದಲೂ ಕಣ್ಮನ ಸೆಳೆಯುತ್ತದೆ. ಅಚ್ಚಿನ ಪತ್ರಿಕೆಯ ಮಾದರಿಯಲ್ಲೇ ಹಲವು ವಿಭಾಗಗಳನ್ನು ವಿಂಗಡಿಸಿ ಕೊಡಲಾಗಿದೆ. ಕನ್ನಡ ನಾಡಿನ ಬೇರೆ ಬೇರೆ ವಿಭಾಗದ ತರುಣರ ಸ್ನೇಹ ಬಾಂಧವ್ಯವನ್ನು ಈ ಹಸ್ತಾಕ್ಷರ ಪತ್ರಿಕೆಯ ಮಾಧ್ಯಮದಿಂದ ಸಾಧಿಸಿಕೊಂಡಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಚೇತನದ ಭವಿಷ್ಯ ಉಜ್ವಲತೆಯಿಂದ ಕೂಡಲಿ.

—ಎಸ್ಕೆ.

For Protection and Provision
Consult
The New Guardian of India Life Insurance Co., Ltd.
Estd] Head office: MADRAS [1934
A Policy in this progressive Life Office is good investment; its Agency is valuable business connection.
Applications for representation are invited from influential persons.
Please apply to:
The Branch Manager,
Diamond Building, Hampankatta,
MANGALORE, S. K.

ಮದುವೆಯಾದ ಸ್ತ್ರೀಪುರುಷರ ಸಲುವಾಗಿ
ಬರೆಯಲ್ಪಟ್ಟ ಪುಸ್ತಕ
ಮಿತಸಂತತಿ
ಹುಟ್ಟುವ ಮಕ್ಕಳು ಆರೋಗ್ಯ ಸಂಪತ್ತು ಸೌಭಾಗ್ಯ ಪಡೆಯಬೇಕಾದರೆ, ಅವರನ್ನು ಹೆರುವ ತಾಯಂದಿರಿಗೆ ಯಾವ ತೊಂದರೆಯೂ ಆಗದಂತೆ ದಂಪತಿಗಳು ಮಕ್ಕಳನ್ನು ಹೆರುವ ಹಾಗೆ ಆವಶ್ಯವಾದ ತತ್ವಗಳನ್ನು ಬೋಧಿಸುವ ನವೀನ ಪುಸ್ತಕ ಬೆಲೆ 0-6-0
ಗುಪ್ತರೋಗ ನಿವಾರಣೆ
ಜನನೇಂದ್ರಿಯಗಳಿಗೆ ಸಂಬಂಧಿಸಿರುವ ರೋಗಗಳು ಹಳ್ಳಿ ಪಟ್ಟಣಗಳಲ್ಲಿ ಪಸರಿಸುತ್ತಲೇ ಇವೆ. ಇಂತಹ ರೋಗಗಳಿಂದ ನರಳುವ ಸ್ತ್ರೀಪುರುಷರ ಆರೋಗ್ಯ ರಕ್ಷಣೆಗಾಗಿ ಪ್ರಪಂಚದಲ್ಲಿನ ವಿದ್ವಾಂಸ ವೈದ್ಯರುಗಳ ಅನುಭವ ಸಿದ್ಧ ಸೂಚಕ ಪುಸ್ತಕ ಬೆಲೆ 0-8-0
ಪ್ರತಿಗಳಿಗೂ, ಪುಸ್ತಕಗಳ ಯಾದಿಗೂ, ಬರೆಯಿರಿ.
ನವಭಾರತ ಪುಸ್ತಕ ಭಂಡಾರ ಉಡುಪಿ.



ಈ ಇಗರ್ಜಿಯಲ್ಲಿ ಮುಂಚೆ ನಾನು ವೆನಿಸಿನಲ್ಲಿ ಕಂಡ ಸೇನ್ ಮಾರ್ಕೊ ಇಗರ್ಜಿಯಲ್ಲಿದ್ದಂತೆ ಬಹಳ ಪುರಾತನದ ಬ್ಯಾಸೆಂಟೈನ್ ಪದ್ಧತಿಯ ಚಿನ್ನದ ಗಾಜಿನ ಚೂರಿನಿಂದ ಜೋಡಿಸಿ ಮಾಡಿದ ಚಿತ್ರಗಳು, (mosaic) ಬಹಳ ವಿಶೇಷ. ಇಗರ್ಜಿಯ ಗೋಪುರದಲ್ಲಿ 12ನೇ ಶತಮಾನದಲ್ಲಿ ಜೊನೆಟಿಲ್ಲೊ ಎಂಬವನು ಬಿಡಿಸಿದ ಸ್ವರ್ಗ ಮತ್ತು ನರಕದ ದೊಡ್ಡ ಚಿತ್ರಗಳು, ನರಕದಲ್ಲಿ ಸಾಧಾರಣ ನಮ್ಮಲ್ಲಿ ರಾಕ್ಷಸರ ಆಕಾರದಲ್ಲಿ ಬಿಡಿಸಿದ ಚಿತ್ರಗಳು. ಈ ಇಗರ್ಜಿಯಲ್ಲಿ ಇದೇ ರೀತಿ ಅನೇಕ ಚಿತ್ರಗಳಿವೆ. ಮಾತ್ರವಲ್ಲ ಡೊನಿಸ್ ಗಿಲ್‌ಬರ್ಟಿಸ್ (Donis De Ghilbertis) ಎಂಬವನು 27 ವರ್ಷ ಕೆಲಸಮಾಡಿ 1322ರಲ್ಲಿ ಮುಗಿಸಿದ ಚಿನ್ನದ ಗಿಲಿಟುಕೊಟ್ಟ ಕಂಚಿನ ಬಾಗಿಲು, ಅದರಲ್ಲಿ ಕೆತ್ತಿದ ಚಿತ್ರಗಳ ಕೆಲಸ ಎಷ್ಟು ಪ್ರಶಸ್ತವೆಂದರೆ, ಆ ಬಾಗಿಲಿಗೆ ಮೈಕಲ್ ಎಂಜಲೋ ಸ್ವರ್ಗದ ಬಾಗಿಲು (Gates of Paradise) ಎಂಬ ಹೆಸರನ್ನಿಟ್ಟಿದ್ದು ಈಗಲೂ ಅದೇ ಹೆಸರಿನಿಂದ ಕರೆಯುತ್ತಾರೆ.

ಮೇಲೆ ಬರೆದ ಇಗರ್ಜಿಯ ಎದುರು ಅದಕ್ಕೂ ದೊಡ್ಡದಾದ ಮತ್ತು ಹೆಸರು ಹೋದ ದೊಡ್ಡ ಇಗರ್ಜಿ (Cathedral) ಇದೆ. ಅದು ಸೈಂಟ್ ಮೇರಿಯಾ ಇಗರ್ಜಿ ಮತ್ತು ಈ ನಗರಕ್ಕೆ ಪ್ರಾಮುಖ್ಯವಾದದ್ದು. ಅದಕ್ಕೆ ತಾಗಿ ಒಂದು ಮೂಲೆಯಲ್ಲಿ ಗಂಟೆ ಇರುವ ಗೋಪುರ [Bell Tower]. ಈ ಇಗರ್ಜಿಯನ್ನು 1298ರಲ್ಲಿ ಕಟ್ಟಲಿಕ್ಕೆ ಸುರುಮಾಡಿ 1887ರಲ್ಲಿ ಮಾತ್ರ ಮುಗಿಸಿದ್ದು. ತನ್ಮಧ್ಯದ ಅನೇಕ ಶತಮಾನಗಳಲ್ಲಿ ಇಟೇಲಿ ದೇಶದ ಮತ್ತು ಈ ನಗರದ ಅನೇಕ ಪ್ರಸಿದ್ಧ ಕಲೆಗಾರರು ಇಲ್ಲಿ ಕೆಲಸಮಾಡುತ್ತಿದ್ದರು. ಈ ಇಗರ್ಜಿಯ ಒಳಗೆ 457 ಅಡಿ ಉದ್ದ 274 ಅಡಿ ಅಗಲವೆನ್ನುವಾಗ ಎಷ್ಟು ದೊಡ್ಡದೆಂತ ತಿಳಿಯಬಹುದು. ಮಧ್ಯದಲ್ಲಿ ಮೇಲೆ ಮಾಡಿನಲ್ಲಿರುವ ಗುಂಬಜು [Cupola] ನೆಲದಿಂದ 283 ಅಡಿ ಎತ್ತರಕ್ಕೆ ಏರುತ್ತದೆ. ಅದರ ಮಧ್ಯದ ಅಳತೆ 140 ಅಡಿ. ಇಷ್ಟು ದೊಡ್ಡದಾದರೂ ಅದಕ್ಕೆ ಕೆಳಗೆ ಕಂಬವಿಲ್ಲದೆ ಮಾಡಿನ ಮೇಲೆ ನಿಂತಿದೆ ಇದನ್ನು ಬಹಳ ಪ್ರಸಿದ್ಧನಾ

ಪ್ರವಾಸಿಯ ಪತ್ರಗಳು ೨೯

ದ ಒಬ್ಬ ಶಿಲ್ಪಿಯು 1420ರಿಂದ 1436ರ ವರೆಗೆ ಕಟ್ಟಿದ್ದು. ಈ ಕಟ್ಟೋಣದಲ್ಲಿ ಎಲ್ಲಿ ನೋಡಿದರೂ ಕಲಾ ಕೆಲಸ. ಅನೇಕ ಬಣ್ಣದ ಗಾಜಿನ ಕಿಟಕಿಗಳ ಕೆಲಸ. [Stained glass windows]. ಮೈಕಲ್ ಎಂಜಲೋ ಮತ್ತು ಅವನ ಶಿಷ್ಯರು ಬಿಡಿಸಿದ ಅನೇಕ ತೈಲ ಚಿತ್ರಗಳು. ಅವನು 80 ವರ್ಷ ಪ್ರಾಯದಲ್ಲಿ [1555] ಅಷ್ಟೈರಿಯಾಗಿ ಕೆತ್ತಿದ ಕ್ರಿಸ್ತರ ಶಿಲೆಕಲ್ಲಿನ ಪ್ರತಿಮೆ. 1300ರಲ್ಲಿ ಪ್ರಥಮವಾಗಿ [illegible]ಬಿಯಾ ಎಂಬವನು ಮಾಡಿದ ಗಟ್ಟಿಮಣ್ಣಿನ ಗೊಂಬೆಕೆಲಸ [Terra Cotta]. ಈ ಇಗರ್ಜಿಯೊಳಗೆ ಒಂದು ಕೋಣೆಯ ಬಾಗಿಲಿನ ಬದಿಯಲ್ಲಿ 1478ರಲ್ಲಿ ಜೂಲಿಯಾನೋ ಎಂಬವನನ್ನು ಆಗ ಅಲ್ಲಿ ನಡೆದ ಪಿತೂರಿಯಲ್ಲಿ ಕಡಿದು ಕೊಂದಾಗ ಅವನ ಸಹೋದರನಾದ ಲೊರೆನ್ಸಿಯೋ [Lorenzio the Magnificent] ಎಂಬವನು ಕೋಣೆಯೊಳಗೆ ಅಡಗಿಕೊಂಡು ಬಚಾವಾದನಂತೆ. ಈ ಇಗರ್ಜಿಯೊಳಗೆ ಡಾಂಟೆಯ ತೈಲಚಿತ್ರ ಕೂಡಾ ಇದೆ. ಇನ್ನು ಇಲ್ಲಿರುವ ನೂರಾರು ಕಲಾ ಚಿತ್ರಗಳನ್ನು ವರ್ಣಿಸಲು ನಾನು ಕೇವಲ ಅಶಕ್ತನು.

ಇಲ್ಲಿಂದ ಆರ್ನೋ ನದಿಯ ಬದಿಯಲ್ಲಿ ಕೆಲವು ದೂರ ಬಸ್ಸಿನಲ್ಲಿ ಪ್ರಯಾಣಮಾಡುವಾಗ ಮುಸ್ಸೊಲೀನಿಯು ಹೊಸತಾಗಿ ಕಟ್ಟಿದ ಪುಸ್ತಕ ಭಂಡಾರದ ಹೊಸ ಕಟ್ಟೋಣವನ್ನು ಕಾಣಬಹುದು. ಅಲ್ಲಿಂದ ಪ್ಯಾನ್ ಸಾಲುಮರಗಳಿರುವ ರಸ್ತೆಯ ಮೂಲಕ ಹೋಗಿ ಮೈಕೇಲ್ ಎಂಜಲೋ ಹೆಸರಿನ ಚೌಕಿಗೆ. ಅಲ್ಲಿಂದ ರೋಮನರ ಕಾಲದ ನಗರಕ್ಕೆ ಪ್ರವೇಶಮಾಡುವ ಬಾಗಿಲು [Old Roman Gate), ಆಂಗ್ಲೇಯ ಕವಿ ಎಲಿಜಬೆತ್ ಬೆರೆಟ್ ಬ್ರೌನಿಂಗಳು (Elizabeth Barret Browning) ರೊಬರ್ಟ ಬ್ರೌನಿಂಗನನ್ನು ಮದುವೆಯಾದ ನಂತರ 1846 ಇಲ್ಲಿ ಹೆಚ್ಚಾಗಿ ವಾಸಮಾಡುತ್ತಿದ್ದ ಮನೆ, ಇವನ್ನೆಲ್ಲ ಸಂಚರಿಸಿ 'ಪಿಟ್ಟಿ' ಅರಮನೆಗೆ(Pitti Palace) ಬಂದೆವು ಇದು ದೊಡ್ಡ ಅರಮನೆ. ಇಲ್ಲಿ 1458ನೇ ವರ್ಷದಿಂದ ಈ ಪ್ರದೇಶದ ಗವರ್ನರರು [Grand Dukes of Tuscany] ಮತ್ತು ಅನಂತರ ಇಟೇಲಿಯ ಅರಸರು ವಾಸಿಸುತ್ತಿದ್ದರು, ಈಗ ಇಲ್ಲಿ ಅಪೂರ್ವ ಕಲಾಕೃತಿಗಳ ಸಂಗ್ರಹವನ್ನು ಸರಕಾರದವರು ಇಟ್ಟಿರುತ್ತಾರೆ ಈ ಮುಂಚೆ ನಾನು ವೆನಿಸಿನ ಡೋಜರ ಅರಮನೆಯಲ್ಲಿ ಕಂಡಂತೆ ಇಲ್ಲಿ ಅವಕ್ಕಿಂತಲೂ ಹೆಚ್ಚಿನ ತೈಲ ಚಿತ್ರಗಳು ಮತ್ತು ಕಲಾಕೃತಿಗಳು ಇವೆ. ಇವುಗಳಲ್ಲಿ ಅನೇಕ ಈ ನಗರದಲ್ಲಿ ಹಿಂದಿನ ಕಾಲದಲ್ಲಿ ಜೀವಿಸಿದ ಚಿತ್ರಗಾರರ ಕೆಲಸ. ಅವುಗಳ ವಿಷಯ ಬಹು ಸಂಕ್ಷೇಪವಾಗಿ ಬರೆಯುತ್ತೇನೆ.

ಇಲ್ಲಿಯ ಹಲವು ಕೋಣೆಗಳಲ್ಲಿ ರಫೆಲೋ, ವೆಲಾಸ್ಕಸ್ ರೂಬನ್ಸ್, ಮ್ಯೂರೆಲ್ಲೊ, ವೆನ್‌ಡ್ಯಾಕ್ ಟಿಸಿಯಾನೋ ಮೊದಲಾದ ಅನೇಕ ಶ್ರೇಷ್ಠ ಕಲೆಗಾರರ ತೈಲಚಿತ್ರಗಳಿವೆ. ಇನ್ನೊಂದು ಕೋಣೆಯಲ್ಲಿ 19ನೇ ಶತಮಾನದಲ್ಲಿ ಮಾಡಿದ ಒಂದು ಉರುಟು ಕಲ್ಲಿನ ಮೇಜಿನ ಮೇಲೆ ಚಕ್ಕೆಗಳಿಂದ ಮಾಡಿದ ಮೊಸೈಕ್ ಚಿತ್ರಗಳು, ಈ ಕೋಣೆಯ ಹಿಂದೆ ಮೈಕೆಲ್ ಎಂಜಲೋವಿನ ಶಿಷ್ಯರು ಸಾರುವ ಇಡಿದ ದೊಡ್ಡ ಹೂವಿನ ಪೋಟಿವಿದೆ. ಇದಕ್ಕೆ ತಾಗಿದ ಇನ್ನೊಂದು ಕೋಣೆಯಲ್ಲಿ ಗಯೊವಾನಿ ಬೆಲೀನಿಯೆಂಬವನು 15-16 ನೇ ಶತಮಾನಗಳಲ್ಲಿ ಪೆನ್ಸಿಲಿನಿಂದ ಬಿಡಿಸಿದಂತಹ ಚಿತ್ರಗಳು, ಮೇಲೆ ಬರೆದ ಮೇಜಿನಂತೆ 16ನೆ ಶತಮಾನದಲ್ಲಿ ಈ ನಗರದವಳಾಗಿದ್ದು ಆಗ ಫ್ರಾನ್ಸಿನ ರಾಣಿಯಾಗಿದ್ದ ಕೆಥೆರಿನ್ ಡಿ ಮೆಡಿಸಿ ಎಂಬವಳಿಗೆ ಇನಾಮಾಗಿ ಕೊಡಲಿಕ್ಕೆ ತಯಾರಿಸಿದ ಮೊಸೈಕ್ ಕೆಲಸದ ಉದ್ದುರುಟಾದ (Oblong) ಮೇಜು, ಅದರ ಮಧ್ಯದಲ್ಲಿರುವ ಬಣ್ಣ ಬಣ್ಣದ ಚಕ್ಕೆ ಚೂರುಗಳಿಂದ ಬಿಡಿಸಿದ ಚಿತ್ರಗಳ ಮಧ್ಯದಲ್ಲಿ ಪೂರ್ವದೇಶದ ಮುತ್ತುಗಳನ್ನು [Orient pearls] ಇಟ್ಟಿರುತ್ತಾರೆ. ಇನ್ನು ಮುಂದಿನ ಕೋಣೆಗಳಲ್ಲಿ ಟಿಷ್ಯು, ಗ್ಯಾಲಿಯೋ, ರೊಮಾನೋ, ರೆಫಲೊ, ಕಾರ್ಲೊ ಮೊದಲಾದ ಕಲೆಗಾರರ ಅನೇಕ ತೈಲ ಚಿತ್ರಗಳು ಇವೆ.

ಒಂದು ಕೋಣೆಯಲ್ಲಿ ನೆಪೋಲಿಯನನ ತಂಗಿಗೆ ಸ್ನಾನಕ್ಕೋಸ್ಕರ ಅಮೃತಶಿಲೆಯಿಂದ ಫ್ರಾನ್ಸ್‌ದೇಶದಲ್ಲಿ ತಯಾರಿಸಿದ ಮರಿಗೆ [Bath tub] ಇದು ಕೇವಲ 4 ಅಡಿ ಮಾತ್ರ ಉದ್ದ. ಇದು 19ನೇ ಶತಮಾನದ ಶುರುವಿನದ್ದು ಆ ಕಾಲದಲ್ಲಿ ಇಲ್ಲಿ ಮೈ ಇಡೀ ಸ್ನಾನಮಾಡುವವರು ಕಡಿಮೆ.

ಹೀಗೆ ಈ ಅರಮನೆಯಲ್ಲಿದ್ದ ಅಮೂಲ್ಯವಾದ ಕಲಾ ಕೃತಿಗಳ ಸಂಗ್ರಹವನ್ನು ಸಂದರ್ಶಿಸಿ ನಮ್ಮ ತಿರುಗಾಟವನ್ನು ಮುಗಿಸಿದೆವು. ಈ ನಗರವನ್ನು ಅರ್ಧದಿನ ಮಾತ್ರ ಸಂಚರಿಸಿ ನೋಡಲಿಕ್ಕೆ ನನಗೆ ಸಾಧ್ಯವಾಯಿತು. ಆದರೆ ಎಲ್ಲವನ್ನೂ ಸರಿಯಾಗಿ ನೋಡುವುದಾದರೆ 3 ದಿನಗಳಾದರೂ ಬೇಕು. ನಾನು ನೋಡಿದ ಇಟೇಲಿಯ ಎಲ್ಲಾ ನಗರಗಳಿಗಿಂತಲೂ ಇದು ಅತೀ ರಮ್ಯವಾದುದು.

ಸಾಯಂಕಾಲ 4-42ಕ್ಕೆ ರೆಪಿಡೋ ರೈಲಿನಲ್ಲಿ ಪುನಹ ಸ್ವಲ್ಪ ಜಾಸ್ತಿ ಹಣಕೊಟ್ಟು ಇಲ್ಲಿಂದ 198 ಮೈಲು ದೂರವಿರುವ ರೋಮ್ ನಗರಕ್ಕೆ ದಕ್ಷಿಣಾಭಿಮುಖವಾಗಿ ಹೊರಟೆವು. ಇದರ ವಿಚಾರ ಬರುವ ಪತ್ರದಲ್ಲಿ.

[ವಿಚಾರವಾಣಿ] —ಕೆ. ಆರ್. ಕಾರಂತ.

● ತೃಪ್ತಿಕರವಾದ ವಸತಿ — ಹಿತಕರವಾದ ಊಟ
● ರುಚಿಕರವಾದ ಉಪಾಹಾರ ಇವುಗಳಿಗೆ
ಉಡುಪಿಯ ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಊರ ಪರವೂರ ಸನ್ಮಾನ್ಯ ಸದ್ಗೃಹಸ್ಥರಿಂದ ಮುಕ್ತಕಂಠದಿಂದ ಹೊಗಳಿಸಿಕೊಂಡ ನಮ್ಮ ಹೋಟೆಲಿಗೇ
ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ.
ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯಾಗುವಂತೆ ನಗರದ ಕೇಂದ್ರ ಭಾಗದಲ್ಲಿದೆ.

WOODLANDS
Highclass Boarding & Lodging, UDIPI S. Kanara

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ, ಅಂಬಳೆ ನರಸಿಂಹ ಪಂಡಿತರ ಮನೆತನ ಎ. ರಾಮಸ್ವಾಮಿ ಅಯ್ಯರ್‌ರವರ
※ ಸಂತಾನ ಸಿಂಧೂರ ※
ಬಹಿಷ್ಟೆ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಟೆ ಸಂಬಂಧದ ಹೊಟ್ಟೆನೋವಿನ ಜೊತೆಗೆ ತಲೆನೋವು, ನಡುಕಳಿತ, ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ-
ಮೂರು ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ಒಂದು ಸೆಟ್ ಅನುಪಾನ ಪತ್ರಿಕೆ ಮೇರೆ ಇಟ್ಟರೂ ಸೇವಿಸಿರಿ ಸಾಕು. ಶೋಧನವಾದ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾಪತ್ರಗಳನ್ನು ಪಡೆದಿದೆ.
ಕ್ರಯ:— ಒಂದು ಸೆಟ್ 5ರೂ. ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1ರೂ ವಿ. ಪಿ. ಇಲ್ಲ ಕ್ಯಾಟಲಾಗ್ ಉಚಿತ. 6ರೂ ಮನಿಆರ್ಡರ್ ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ
ವಿಳಾಸ:—A. R. ವಿಶ್ವೇಶ್ವರಯ್ಯ (ಎ. ರಾಮಸ್ವಾಮಿ ಅಯ್ಯರ್ ಸನ್,)
Prop: ಸಂತಾನ ಸಿಂಧೂರ
ಅಂಬಳೆ ಪೋಸ್ಟು, ಯಳಂದೂರು ತಾಲೂಕು ಮೈಸೂರು ಡಿಸ್ಟ್ರಿಕ್ಟು
ಮೈಸೂರು ಬ್ರಾಂಚ್: 269 ಸೋನಾರ್ ಸ್ಟ್ರೀಟ್, ದಿವಾನ್ಸ್ ರೋಡು, ಮೈಸೂರು.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:- ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ವೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ| ಯಂ ಸಿ. ಶಾಸ್ತ್ರೀ, ಯಲ್. ಐ ಎಂ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ವಾಕಿಸ್ಟರು:— ಡಾ| ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಕವಿರಾಜ ಯನ್. ಯನ್. ಶೆಣೈರ
ಶಾಸ್ತ್ರೀಯ ಔಷಧಿಗಳು
ಈಗಲೇ ಬಂದಿವೆ

ಬೃಹತ್ ಅಮೃತಬಳ್ಳಿ ಕಷಾಯ
ಪ್ರಸೂತಾರಿಷ್ಟ
ಕಸ್ತೂರಿ ಕಲ್ಪ ರಸಾಯನ
ನೇತ್ರಬಿಂಧು
ಕರ್ಪೂರಾರಿಷ್ಟ
ದುರ್ಗಾ ಪುನರ್ನಾಸವ
ಬಾಸಾರಿಷ್ಟ
ಕುಂಕುಮಾಸವ
ಮೃಗಾಂಕ ದ್ರಾವ
ದರವನ್ನು ವಿಚಾರಿಸುವದು.
ಏಜಂಟ್:—
ಶಾ ಕಂಪೆನಿ, ಮಂಗಳೂರು ನಂ. 1.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಣಜಿ ವ್ಯಾಪಾರಾರ್ಯ,
ರಥಬೀದಿ, ಉಡುಪಿ

ಅಂತರಂಗದ ಕಥೆ, ಕಾದಂಬರಿ, ನಾಟಕ, ಕವಿತೆ, ಚಿತ್ರ ಪ್ರಬಂಧ ಮೊದಲಾದ ನಾನಾ ಬಗೆಯ 75 ಪುಸ್ತಕಗಳನ್ನು ಒಟ್ಟಿಗೆ ರೂ. 20ಕ್ಕೆ ಕೊಡಲಾಗುವುದು.
ಕಳಿಸಲಾಗಿಗೆ ಬರೆಯಿರಿ:— ಅಂತರಂಗ ಆಫೀಸು ಉಡುಪಿ, ಅಥವಾ ನವಭಾರತ ಬುಕ್ ಡಿಪೊ, ಉಡುಪಿ

ಮೇಷ—ಧೈರ್ಯೋತ್ಸಾಹಗಳು ಕುಂದುವವು. ಶತ್ರುಗಳ ಭಯವು ದಿನದಿನಕ್ಕೆ ಅಧಿಕವಾಗುವದು ಸದಾ ಪರ್ಯಟನದಲ್ಲೇ ಇರಬೇಕಾದ ಪ್ರಸಂಗ ಬರಲಿದೆ. ಉತ್ಪತ್ತಿಗಿಂತ ದ್ವಿಗುಣ ವ್ಯಯವಾಗುವುದರಿಂದ ದಿನಯಾಪನೆಯು ಕಷ್ಟಸಾಧ್ಯವಾಗುವದು. ಗೃಹದಲ್ಲಿ ನಿತ್ಯ ಜಗಳ ತಪ್ಪದು. ಆದರೂ ನಿಮ್ಮ ಸ್ವಂತ ಉಪಭೋಗಕ್ಕೆ ಬೇಕಾದ ವಡವೆಗಳನ್ನು ಸ್ವಯಂ ದುಡಿಯುಗು ಶಕ್ತರಿರುವಿರಿ. ವಾರಾಂತ್ಯದ 2 ದಿನಗಳು ಬೇರೆ ದಿನಗಳಿಗಿಂತ ಉತ್ತಮವಿವೆ

ವೃಷಭ—ಅನುದಿನದ ಖರ್ಚುವೆಚ್ಚಗಳಿಗೆ ಬೇಕಾಗುವಷ್ಟು ಧನಧಾನ್ಯಗಳನ್ನು ಸಂಪಾದಿಸಲು ಶಕ್ತರಿರುವಿರಿ ಹೆಚ್ಚಿನ ಭಾಗವು ಸತ್ಕಾರ್ಯಗಳ ಪಾಲಾಗಿ ವ್ಯಯವಾಗುವದು ಹಿಡಿದ ಕಾರ್ಯವನ್ನು ಕೊನೆಗಾಣಿಸದೆ ಮಧ್ಯದಲ್ಲೇ ಕೈಬಿಡಲಾರಿರಿ. ಸೇವಕ ಜನರು ವಿರೋಧವಾಗಿ ವರ್ತಿಸಲಿರುವರು. ಬಂಧುಜನರೊಡನೆ ಮನಸ್ತಾಪವುಂಟಾದೀತು. 1, 2 ಈ ದಿನಗಳಲ್ಲಿ ಸಾಕಷ್ಟು ಲಾಭವಿಜಯ ಸಂಭವಿಸಲಿವೆ.

ಮಿಥುನ—ಕಾಲವು ಅನುಕೂಲಸ್ಥಿತಿಗೆ ಬಂದಿರುವುದು ಯಾವ ಕಾರ್ಯವೇ ಇರಲಿ ನಿಮ್ಮ ಭಾಗಕ್ಕದು ಸುಲಭಸಮವೆನಿಸೀತು ನಿಮ್ಮ ನಿರೀಕ್ಷೆಗಿಂತ ದ್ವಿಗುಣ ಫಲವು ಲಭಿಸುವದು ಜನತೆಯ ಮನ್ನಣೆಗಳನ್ನು ಪಡೆದ ನಿಮಗೆ ರಾಜಕೀಯದಲ್ಲೂ ವಿಜಯ ಲಭಿಸಿದೆ ವಿದ್ಯೋಪಜೀವಿಗಳಿಗೆ ದಿನವು ಸುಖಮಯವಾಗಲಿದೆ ತಾ 3, 4, 5 ಈ ದಿನಗಳಲ್ಲಿ ನಿಮ್ಮ ಇಷ್ಟಾರ್ಥಗಳು ಅನಾಯಾಸದಿಂದ ನೆರವೇರುವವು

ಕರ್ಕಟಕ—ಆರ್ಥಿಕ ಬಿಕ್ಕಟ್ಟಿನಿಂದ ಶತ್ರುಗಳೂ ಇಂದು ತಮ್ಮಡಿಗೆ ಬರಲಾರರು. ಹಿಡಿದ ಕಾರ್ಯದಲ್ಲಿ ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಲಾರಿರಿ. ಆದರೆ ಪ್ರಯತ್ನಕ್ಕೆ ತಕ್ಕ ಫಲವು ಕಾಣಸಲಾರದು. ವಿನಾಕಾರಣ ಜನತೆಯೊಡನೆ ಕಲಹ ನಿಷ್ಠುರಗಳಾಗಲಿವೆ ಸುಜನರ ಬಲೆಗೆ ಸಿಲುಕಿ ಕಷ್ಟನಷ್ಟಗಳನ್ನು

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷವುಂಟಾದವು, ಪಕ್ಷವಾತ, ನೆಗಡಿ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕುಳುಕಡ್ಡಿ, ಮದ್ದು ನಮ್ಮಲ್ಲಿ ಸಿಕ್ಕುತ್ತದೆ,

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ

ತಾರೀಕು 1-5-52 ರಿಂದ	**ವಾರದ ಭವಿಷ್ಯ**	ತಾರೀಕು 7-5-52 ವರೆಗೆ

ಹೊಂದುವ ಯೋಗವಿದೆ ತಾ 1, 2, 6, 7 ಈ ದಿನಗಳಲ್ಲಿ ಭೋಗಲಾಭ ವಿಜಯಗಳು ತೃಪ್ತಿಕರವಿವೆ

ಸಿಂಹ—ಎಂತಹ ಸತ್ಕಾರ್ಯವೇ ಇರಲಿ ನಿಮ್ಮ ಭಾಗಕ್ಕೆ ಅದು ತೃಣಸದೃಶವಾಗುವದು. ಬಂಧುಮಿತ್ರರ ನೆರವಿನಿಂದ ಕೂಡಿದ ನಿಮಗೆ ದಿನಗಳೆದುದೇ ತಿಳಿಯಲೊಲ್ಲದು. ಕಳ್ಳಕಾಕರೇ ಮೊದಲಾದ ನೀಚಜನತೆಯಿಂದ ಧನಲಭಿಸುವ ಯೋಗವಿದೆ. ನೌಕರಿಜನರೂ ಶ್ರಮಜೀವಿಗಳೂ ಸುಖದಿಂದ ಕಾಲಯಾಪನೆ ಮಾಡುವರು. ತಾ. 3, 4, 5ರಲ್ಲಿ ಧನಲಾಭ ಗೃಹಸುಖ ಮಿತ್ರ ಸಮಾಗಮವಾಗಲಿದೆ.

ಕನ್ಯಾ—ನಿಮ್ಮ ಬಯಕೆಗಳು ಗಗನಕುಸುಮದಂತಾಗಲಿವೆ. ಶ್ರಮಕ್ಕೆ ತಕ್ಕ ಫಲ ಲಭಿಸದು. ಶತ್ರುಗಳು ಪ್ರತೀಕಾರಾಸಕ್ತರಾಗುವರು. ಆಪ್ತೇಷ್ಟರ ವಿಯೋಗ ದುಃಖಕ್ಕೀಡಾಗುವಿರಿ, ಆಕಸ್ಮಿಕ ಪ್ರಯಾಣ ತನ್ನಿಮಿತ್ತ ಕಷ್ಟನಷ್ಟಗಳು ಅಧಿಕವಾಗುವವು. ಆರೋಗ್ಯವು ತೀರಾ ಕೆಡಲಿದೆ. ಆದರೂ ತಾ. 1, 2, 6, 7 ಈ ದಿನಗಳಲ್ಲಿ ಕೊಂಚ ನಿಮ್ಮ ಬಯಕೆಗಳು ಫಲಿಸುವವು.

ತುಲಾ:—ಪ್ರಯಾಣದಲ್ಲಿ ಆಕಸ್ಮಿಕ ಅಪಘಾತಗಳುಂಟಾದಾವು. ಕನಸಿನಲ್ಲೂ ನೆನಸದ ವಿಪತ್ತುಗಳು ಬರಲಿವೆ ಎಷ್ಟೇ ದುಡಿದರೂ ದಿನಾಂತ್ಯದಲ್ಲಿ ಕೈಯಲ್ಲಿ ಕಾಸಿರಲಾರದು ವಿದ್ಯೋಪಜೀವಿಗಳಿಗೂ ನೌಕರಿ ಜನರಿಗೂ ಈ ಕಾಲವು ಒಳ್ಳೆಯ ಫಲವನ್ನೀಯಲಿದೆ ಸ್ತ್ರೀಜನರಿಂದಾಗಿ ಅನಿಷ್ಟ ಅಪವಾದಗಳುಂಟಾಗಲಿರುವವು. ವಾರಾದಿಯ 5 ದಿನಗಳಲ್ಲಿ ಜನತೆಯಲ್ಲಿ ಗೌರವ ಆದರಗಳೂ ಕಾರ್ಯಗಳಲ್ಲಿ ಫಲಸಿದ್ಧಿಯನ್ನೂ ಪಡೆವಿರಿ.

ವೃಶ್ಚಿಕ—ಗೃಹ ತಾಪತ್ರಯಗಳು ದಿನೇ ದಿನೇ ಹೆಚ್ಚುತ್ತಾ ಹೋಗುವವು ಸೋದರರೊಳು ಐಕಮತ್ಯವಿದ್ದರೂ ತಂದೆಮಕ್ಕಳೊಳೂ ಗಂಡಹೆಂಡಿರೊಳೂ ಪರಸ್ಪರ ಕಲಹ ಕಚ್ಚಾಟಗಳಾಗಲಿವೆ. ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತ ನಷ್ಟ ಗುರುಹಿರಿಯರೊಡನೆ ಮನಸ್ತಾಪಗಳುಂಟಾದಾವು ಆರೋಗ್ಯದ ಬಗ್ಗೆ ಹೆಚ್ಚು ಜಾಗ್ರತೆಯಿಂದಿರಬೇಕು ವಾರಾಂತ್ಯದ 5 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗವು.

ಧನು:—ಅನೇಕ ಕಾಲದಿಂದ ಕಷ್ಟಪರಂಪರೆಗಳನ್ನನುಭವಿಸಿ ಕಂಗಾಲಾಗಿದ್ದ ನಿಮಗೆ ಈಗ ದೈವಾನುಗ್ರಹವು ಲಭಿಸಿರುವದು ನಿಮ್ಮ ಬಯಕೆಯಂತೆ ಪ್ರತಿಯೊಂದು ಕಾರ್ಯವು ನೆರವೇರುವದು ಹಿಂದೆ ಮಾಡಿದ ಸಾಲಾದಿಗಳಿಂದ ಮುಕ್ತ ಕೈಯಲ್ಲಿ ಸ್ವಧನವನ್ನು ಸಂಗ್ರಹಿಸಿಟ್ಟುಕೊಳ್ಳುವಿರಿ. ಬಹುಮುಖದಿಂದ ಧನಾಗಮವಾಗಲಿದೆ. ವಾರಾಂತ್ಯದ 2 ದಿನಗಳು ಅತ್ಯುತ್ತಮವಿರುವವು.

ಮಕರ—ಸದ್ಯದ ದಿನಗಳು ಪ್ರತಿಕೂಲವಿರುವವು. ಉದ್ಯೋಗದಲ್ಲಿ ನಿರಾಶೆ ಹೆಚ್ಚುವದು ಬಂಧು ಜನರೊಡನೆ ಕಲಹ ಮನಸ್ತಾಪಗಳುಂಟಾಗಲಿವೆ. ಸ್ತ್ರೀಪುತ್ರರ ವಿರಹ ದುಃಖಕ್ಕೀಡಾಗುವಿರಿ. ವಿದ್ಯೋಪಜೀವಿಗಳಿಗೆ ದಿನಯಾಪನೆಯು ಅತೀವ ಕಷ್ಟವಾಗುವದು. ವಾತ ಪ್ರಕೋಪದಿಂದಾಗಿ ಆರೋಗ್ಯವು ಕೆಡುವುದು ಆದರೂ ವ್ಯಾಪಾರಿ ವರ್ಗದವರಿಗೆ ತಾ. 1-2ರಲ್ಲಿ ಬಯಕೆಯು ಸಿದ್ಧಿಸುವದು.

ಕುಂಭ:—ನಿಮ್ಮ ಧನಸ್ಥಾನದಲ್ಲಿ ನೀಚನಾದ ಬುಧನಿದ್ದು ಕ್ರೂರ ಶೂದ್ರರು ನೀಚರು ಇತ್ಯಾದಿ ವರ್ಗದವರಿಂದ ಧನ ಪ್ರಾಪ್ತಿಯಾಗುವದು ಉದ್ಯೋಗದಲ್ಲಿ ಸರಿಯಾದ ಫಲವು ಲಭಿಸುವದು. ವ್ಯಾಪಾರ ವ್ಯವಹಾರಗಳಲ್ಲಿ ಒಳ್ಳೇ ಯಶಸ್ಸು ಧನಲಾಭವೂ ಇದೆ. ಆದರೆ ಉಷ್ಣ ವಾತಪ್ರಕೋಪದಿಂದ ದೇಹಾಲಸ್ಯವೂ, ಸ್ಥಾನ ಚಲನೆಯೂ, ಇವುಗಳ ಯೋಗವಿದೆ, ವಾರಾದಿಯ 5 ದಿನಗಳು ಇಷ್ಟಾರ್ಥಪ್ರದಗಳಿವೆ.

ಮೀನ.—ತ್ರಿದೋಷ ಜನಿತ ದೇಹಾಲಸ್ಯದಿಂದ ಪೀಡಿತರಾದ ನಿಮಗೆ ಶತ್ರುಜನರ ಪೀಡೆಯು ಅಸಹನೀಯವೆನಿಸುವದು ಆಪ್ತೇಷ್ಟರ ವಿರಹ ದುಃಖವನ್ನು ಹೊಂದಲಿರುವಿರಿ. ಆದರೂ ಈ ವಾರದಲ್ಲಿ ಆರ್ಥಿಕ ತಾಪತ್ರಯ ಮೊದಗದು. ಗುರುಹಿರಿಯರ ಅನುಗ್ರಹವನ್ನು ಪಡೆದ ನಿಮಗೆ ವಾರಾಂತ್ಯದ 5 ದಿನಗಳಲ್ಲಿ ಧನಲಾಭ ರಾಜವಿಜಯ ಸುಖಯಾನಮಾನಗಳು ಲಭಿಸುವವು.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರ ವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರ ವರ್ಗ!

ನೇರವಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI. S. Kanara

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯ ಪರ್ವತದಿಂದ ತೆಗೆಯಲ್ಪಡುವಂಥ ಅಪೂರ್ವ ವಸ್ತು, ಔಷಧಿಗಳ ರಾಜ, ಶಿಲಾಜಿತ್ತನ್ನು ಮೂಲಿಕೆಗಳೊಡನೆ ಸೇರಿಸಿ ಲೇಹ್ಯಮಾಡಿದೆ ಇದು ಶೀತ, ಉಷ್ಣ, ಮಳೆ ಸರ್ವಕಾಲದಲ್ಲೂ ಒಂದೇಸವನೆ ತನ್ನ ಶಕ್ತಿಯನ್ನು ತೋರಿಸುತ್ತದೆ ಇದರ ಸೇವನೆಯಿಂದ ದೇಹ ದಾರ್ಢ್ಯವೂ, ಶಕ್ತಿಯೂ ಉಂಟಾಗುತ್ತದೆ ಮುಖ್ಯವಾಗಿ ಹೊಟ್ಟೆನೋವು

ಅನ್ನ ಸೇರದಿರುವಿಕೆ ಇವೇ ಮೊದಲಾದ [illegible] ದಿನಗಳಲ್ಲಿಯೇ ಗುಣಕೊಡತಕ್ಕ ಔಷಧವಿದು. ಕೆಮ್ಮು ಬಾಸದಮ್ಮು, ಮೂಲ, ಒಳಮೂಲ, ರಕ್ತಮೂಲ, ಬಹುಮೂತ್ರ, ಹೊಟ್ಟೆಯಲ್ಲಿ ಗಡ್ಡೆ ಇರುವಿಕೆ ಮತ್ತು ವಾಯುವಿನಿಂದ ಉಂಟಾಗತಕ್ಕ ಸರ್ವ ವ್ಯಾಧಿಗಳಿಗೂ ದಿವ್ಯೌಷಧ ವಿದ್ಯಾರ್ಥಿಗಳು ಸೇವಿಸುವುದರಿಂದ ಜ್ಞಾಪಕಶಕ್ತಿಯೂ ಮತ್ತು ಚಟುವಟಿಕೆಯೂ ಹೆಚ್ಚುತ್ತೆ ವೃದ್ಧರು ಸೇವಿಸುವುದರಿಂದ ಶಕ್ತಿಯನ್ನು ಹೆಚ್ಚಿಸಿ ದಾರ್ಢ್ಯವನ್ನುಂಟುಮಾಡುತ್ತೆ.

ಹೆಂಗಸರಿಗೆ— ಅಕಾಲ ರಕ್ತಸ್ರಾವ, ಕೈಕಾಲು ಹಿಡಿತ, ಕೀಲುವಾಯು, ಬಿಳಿಶೂಲೆ ಮತ್ತು ಉಷ್ಣದಿಂದಾಗುವ ಇತರ ರೋಗಗಳಿಗೆ ದಿವ್ಯೌಷಧ ದುರ್ಬಲರಾಗಿ ಕೇವಲ ಕೃಶರಾಗಿರುವ ಶಿಶುಗಳಿಗೆ ಈ ಔಷಧವನ್ನು ಪ್ರತಿ ಬೆಳಿಗ್ಗೆ ಸಂಜೆ ಕೊಟ್ಟರೆ ಸ್ವಲ್ಪ ಕಾಲದಲ್ಲಿಯೇ ದೃಢಾಂಗರಾಗುವರು, ಹಣ ಮುಂಗಡ

೪೪ ದಿನದ ಲೇಹ್ಯಕ್ಕೆ ರೂ. ೫-೪-೦, ೨೨ ದಿನದ ಲೇಹ್ಯಕ್ಕೆ ರೂ. ೩-೪-೦ (ಪೋಸ್ಟೇಜು ಮಾಫಿ)

ನೀಲಿಗಿರಿ ಡಿಪ್ಪೋ, ಅಕ್ಕಿಪೇಟೆ ಚೌಕ, ಬೆಂಗಳೂರ ಸಿಟಿ-

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ

ಸುಲಭದಲ್ಲಿ ಇಂಗ್ಲಿಷ್

ಅತಿ ಸುಲಭದಲ್ಲಿ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿಸಲ್ಪಟ್ಟ

ಅತಿ ಉಪಯುಕ್ತ ಪುಸ್ತಕ

ಕ್ರಯ ರೂ. 1-8-0, ವಿ. ಪಿ. ದ್ವಾರ ರೂ. 2-0-0

ವಿಳಾಸ—

ನವಭಾರತ ಪುಸ್ತಕ ಭಂಡಾರ, ಉಡುಪಿ.

Regd. No. M. 3618

ESTD. 1921 ಸ್ಥಾಪಿತ

31ನೆಯ ವರ್ಷ

8-5-1952

LICENCE No. 31
Licensed to Post without Prepayment

Founder: Sri A. B. Shetty
Minister for Medical & Public Health

ನವಯುಗ
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ

ಸಾರ್ವಜನಿಕ ಆರೋಗ್ಯ ಮಂತ್ರಿ ಶ್ರೀ.ಎ.ಬಿ.ಶೆಟ್ಟರಿಂದ ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೩೫

NAVAYUGA WEEKLY Post Box No. 22 UDIPI.

Vol 31
No. 35

ಮಧುಪರ್ಕ

ಸ್ಯಾಂಟ್ ಹೆಲೀನಾ ದ್ವೀಪದಲ್ಲಿ ನೆಪೋಲಿಯನ್ ಬೋನಪಾರ್ಟೇ ಇದ್ದ. ಒಂದು ದಿನ ಶ್ರೀಮತಿ ಬಾಲ್ಕೊಂಬೋ ರೀವಿಯೊಂದಿಗೆ ಮಹಡಿ ಇಳಿದು ಬರುವಾಗ ಎದುರಿಗೆ ತಲೆ ತುಂಬ ಭಾರವಾದ ಹೊರೆ ಹೊತ್ತು ತರುವ ನೌಕರ ಅಡ್ಡವಾಗಿ ಬಂದ. "ಛೀ, ದೂರ ಸರಿ—ಅನಿಷ್ಟ" ಎಂದವಳು ಸಿಡುಕಿನಿಂದ ಬೈದಳು. ಆಗ ನೆಪೋಲಿಯನ್ ಮರುಕಗೊಂಡು ನುಡಿದ—"ಶ್ರೀಮತೀ ಜೀ, ನೌಕರನನ್ನು ಆದರಿಸದಿದ್ದರೂ, ಅವನು ತಲೆಯ ಮೇಲೆ ಹೊತ್ತಿರುವ ಭಾರವನ್ನು ಅವಶ್ಯ ಗೌರವಿಸಬೇಕು."

ಸಹಕಾರ ಭಾವನೆಯಲ್ಲಿ ಹುದುಗಿರುವ ಮರ್ಮ ಇದೇ.

ಈಗೇನು ಬೇಕು?

ಮನುಷ್ಯ ಚೈತನ್ಯದ ಎರಡು ಪ್ರವೃತ್ತಿ ಮುಖಗಳು—ಒಂದು ರಚನಾತ್ಮಕವಿದ್ದರೆ, ಇನ್ನೊಂದು ವಿರೋಧಾತ್ಮಕ. ಇವು ಪರಸ್ಪರ ಪ್ರತಿಕೂಲ ಭಾವಗಳು. ಒಬ್ಬ ವ್ಯಕ್ತಿಯಲ್ಲಿ ಇವುಗಳ ನಡುವೆ ನಡೆಯುವ ಸಂಘರ್ಷದ ಪರಿಣಾಮವಾಗಿಯೇ ಅವನ ಬದುಕಿನಲ್ಲಿ ಏರಿಳಿತಗಳುಂಟಾಗುತ್ತವೆ. ಇದನ್ನು ರಾಷ್ಟ್ರಕ್ಕೂ ಅನ್ವಯಿಸಬಲ್ಲೆವು.

ಈ ಭಿನ್ನ ಭಿನ್ನ ಪ್ರವೃತ್ತಿಗಳ ಸಮುಚಿತವಾದ ಉಪಯೋಗವನ್ನು ಮಾಡುವುದರಲ್ಲಿ ನಮ್ಮ ಕೌಶಲ್ಯವಿದೆ. ರಚನಾತ್ಮಕ ಮಾರ್ಗವನ್ನು ಅವಲಂಬಿಸಬೇಕಾದಾಗ ಮತ್ತು ವಿರೋಧಾತ್ಮಕ ಧೋರಣೆಯನ್ನು ಆಶ್ರಯಿಸಬೇಕಾದುದೆಂದು—ಇದರ ಜ್ಞಾನ ಮನುಷ್ಯನಿಗಿದ್ದರೆ, ಅವನ ಬುದ್ಧಿ ಪರಿಮಾರ್ಜನಗೊಂಡಿದೆ ಎನ್ನಬಹುದು. ಸಾಧಾರಣ ಮಾತಿನಲ್ಲಿ ಈ ಪ್ರವೃತ್ತಿ ವಿಶೇಷಗಳನ್ನೇ ಸಹಕಾರ—ಅಸಹಕಾರ ಮನೋಭಾವಗಳೆಂದು ಕರೆಯುತ್ತೇವೆ.

ದೇಶ-ಕಾಲ-ಪರಿಸ್ಥಿತಿಗಳಿಗನುಸಾರವಾಗಿ, ನಾವು ಆಚರಿಸಬೇಕಾದ ಸಂಗತಿಗಳು ಸ್ವಾಭಾವಿಕವಾಗಿ ಬದಲಾಗುತ್ತವೆ. ಒಮ್ಮೆ ಅಸಹಕಾರ ಸರಿ ಎಂದಿದ್ದರೆ, ಇನ್ನೊಂದು ಸಂದರ್ಭದಲ್ಲಿ ಅದರಿಂದ ಉದ್ದೇಶ ಸಾಧನೆಗೆ ಆತಂಕ ಒದಗಿ ಬಂದೀತು. ಸಾಮಾನ್ಯ ಉದಾಹರಣೆಯಾಗಿ, ಬ್ರಿಟಿಷರ ಆಳಿಕೆಇದ್ದಾಗ, ಸರಕಾರದ ಪ್ರತಿಯೊಂದು ಕಾರ್ಯವನ್ನೂ ಬಹಿಷ್ಕರಿಸುವುದು ಯೋಗ್ಯ ಮಾರ್ಗವಿತ್ತು. ಆದರಿಂದ ವಿದೇಶೀಯರನ್ನು ಭಾರತದಿಂದ ಓಡಿಸುವ ನಮ್ಮ ಉದ್ದೇಶಕ್ಕೆ ಸಹಾಯ ದೊರೆಯುವಂತಿತ್ತು. ಅದೇ ಅಸ್ತ್ರದ ಪ್ರಯೋಗವನ್ನು ಈಗಲೂ ಮಾಡುವ ಪಕ್ಷದಲ್ಲಿ ದೇಶದ್ರೋಹೀ ಕೆಲಸಕ್ಕೆ ಉದ್ಯುಕ್ತರಾದಂತೆ-ಎಂಬುದು ಸ್ಪಷ್ಟ

ಇಂದು ನಮಗೆ ಬೇಕಾದುದು ಸರಕಾರದೊಡನೆ ಹೊಂದಿಕೊಂಡು ಹೋಗುವ ಮನೋವೃತ್ತಿ. ಅದರ ತಪ್ಪು ಕಡೆಗಳನ್ನು ನಯವಾಗಿ ತಿದ್ದಿ, ನಮ್ಮ ಹಿತ ಸಂವರ್ಧಿಸಿಕೊಳ್ಳಬೇಕಾದುದು ಈಗಿನ ಧರ್ಮ, ಹೊರತು, ಬಹಿಷ್ಕಾರದ, ಉಗ್ರ ಟೀಕೆಗಳ, ಇಲ್ಲದ ಕಿರುಕುಳ ಒತ್ತುವ—ಅಡ್ಡದಾರಿ ಈ ಕಾಲಮಾನಕ್ಕೆ ಹೇಳಿಸಿದುದಲ್ಲ.

ಒಂದು ಸಂಸಾರ ನಡೆಸುವಾಗಲೂ ನಮಗೆ ಸಹಕಾರದ ಆವಶ್ಯಕತೆ ಬಹಳಷ್ಟು ಒದೆದು ಕಾಣುತ್ತದೆ—ಗಂಡ ಹೆಂಡಿರು ಸುಸೂತ್ರದಿಂದ ಮನೆತನ ನಿರ್ವಹಿಸುವಾಗ ಪರಸ್ಪರರನ್ನು ಪ್ರೀತಿಯಿಂದ, ಸಹಾನುಭೂತಿಯಿಂದ ತಿಳಿದುಕೊಳ್ಳದೆ ಹೋದರೆ, ಮನ ಮುದುಡುವ, ಮನೆ ಮುರಿಯುವ ಪ್ರಸಂಗವೇ ಬರಬಹುದು. ವ್ಯಕ್ತಿಗತ ಆಸೆ—ಆಕಾಂಕ್ಷೆಗಳೇನಿದ್ದರೂ ಇಡೀ ಮನೆವಾರ್ತೆಯ ಭಾರವನ್ನು ಸುಸೂತ್ರವಾಗಿ ಸಾಗಿಸಬೇಕೆಂಬ ಲವಲವಿಕೆ ಇದನ್ನು ಕಡೆಗಣಿಸಿ ನಿಲ್ಲುವಂತಾಗಬೇಕು.

ಸಹಕಾರ ಭಾವನೆಯ ಮೂಲದಲ್ಲಿ ಸ್ನೇಹವಿದೆ—ತ್ಯಾಗವಿದೆ. ತನ್ನಿಂದ ಯಾರಿಗೂ ಕೇಡುಂಟಾಗದೆ, ಒಳ್ಳೆಯದಾಗಬೇಕೆಂಬ ಉತ್ಕಟ ಅಭಿಲಾಷೆ ಇದೆ. ಆದುದರಿಂದ ಅದರಲ್ಲಿ ದೈವಿಕ ಚೈತನ್ಯ ತುಂಬಿದೆ. ವ್ಯಷ್ಟಿಯ ಹಿತಗಳನ್ನು ಸಮಷ್ಟಿಯ ಉನ್ನತಿಗಾಗಿ ಬಲಿದಾನ ಮಾಡುವ ಮಹಾ ಪುಣ್ಯಕ್ಕೆ ಪ್ರೇರೇಪಣೆಯೊದಗಿಸುವುದೇ ಸಹಕಾರ ಭಾವನೆ.

ಅಭ್ಯುದಯ ಹೊಂದಬೇಕೆಂದು ಬಯಸುವುದು ವ್ಯಕ್ತಿಯ, ಹಾಗೆಯೇ ಜನಾಂಗದ ಸ್ವಾಭಾವಿಕವಾದ ಅಭಿಲಾಷೆ. ಉತ್ಕರ್ಷಕ್ಕಾಗಿ ನಿರಂತರ ಹಂಬಲಿಸುವುದೇ ಪ್ರಗತಿಯ ಮುಖ್ಯ ಲಕ್ಷಣ. ನಿನ್ನೆ ಇದ್ದುದಕ್ಕಿಂತ ಹೆಚ್ಚು ಉತ್ತಮ ಸ್ಥಿತಿ ಇಂದಿನದಾಗಬೇಕು—ಮತ್ತು ನಾಳಿನ ಮಟ್ಟವು ಇಂದಿಗಿಂತಲೂ ಬಹಳ ಉನ್ನತವಿರಬೇಕು—ಎಂಬ ನ್ಯಾಯವಾದ ಕಾಂಕ್ಷೆ ಮನುಷ್ಯನಲ್ಲಿಲ್ಲದೆ ಹೋದರೆ, ಅವನ ವ್ಯಕ್ತಿತ್ವವಿಕಸನಗೊಂಡುವುದು ಸಾಧ್ಯವಿಲ್ಲ.

ಇದನ್ನು ಕೈಗೂಡಿಸಲು ನೋಡುವಾಗ ಮುಖ್ಯವಾಗಿ, ಒಳ್ಳೆಯ ಸಂಗತಿಗಳೊಡನೆ ಸಹಕಾರವನ್ನೂ ಕೆಟ್ಟ ವಿಷಯಗಳ ಮಟ್ಟಿಗೆ ಅಸಹಕಾರವನ್ನೂ ತೋರಿಸುವುದು ಧರ್ಮ. ನಮ್ಮ ಪುಟ್ಟಮಗು ತಪ್ಪು ತಪ್ಪಾಗಿಯೇ ಆದರೂ ಬಾಲಕ ದರ್ಶೆಯ ಮೊದಲನೇ ಪುಸ್ತಕ ಓದಲು ಉತ್ಸುಕತೆಯಿಂದ ಹವಣಿಸುವಾಗ, ಅದರೊಡನೆ ಸಹಕರಿಸಿ, ಪ್ರೋತ್ಸಾಹಿಸುವುದು ಚಂದ. ಹಾಗೆಂದು, ಅದೇ ಮಗು ನೆರೆಮನೆಯ ರಾಮುವಿನೊಡನೆ ಜಗಳಕ್ಕೆ ಕಾಲು ಕೆರೆದು ನಿಂತಾಗ, ನಾವು ಕೊಡಬೇಕಾದುದು ನಿರುತ್ಸಾಹವನ್ನು, ಎಂದರೆ ಅಸಹಕಾರವನ್ನು. ರಾಮುವಿನೊಡನೆ ಜಗಳಾಡುವುದು ಪರಸ್ಪರ ವೈಮನಸ್ಸಿಗೆ ಕಾರಣವಾಗುವುದಲ್ಲವೆ?

ಸದ್ಯ ನಮ್ಮ ದೇಶದ ರಾಜಕೀಯವನ್ನು ಪರಿಶೀಲಿಸಿದರೆ, ಟೀಕೆಯ ಮೇಲೆ ಟೀಕೆಗಳ ಅಬ್ಬರವೇ ಗೋಚರಿಸುವುದು. ನಾನಾರು ಪಕ್ಷ ಪಂಗಡಗಳಾಗಿ ಜನರೆ ಒಡೆದುಕೊಂಡು ಪರಸ್ಪರರು ಕ್ಷುಲ್ಲಕ ಕಾರಣಗಳಿಗಾಗಿ ಬೈದುಕೊಳ್ಳುವುದೂ ಅಪ್ರಯೋಜಕ ಟೀಕೆಗಳಿಂದ ಜನಮನವನ್ನು ಉದ್ರೇಕಿಸುವುದೂ ನಡೆದಿದೆ. ದೇಶದ ಆಡಳಿತ ಸೂತ್ರವನ್ನು ವಹಿಸಿಕೊಂಡಿರುವ ಸರಕಾರವನ್ನು ಸಹಾನುಭೂತಿಯ ದೃಷ್ಟಿಯಿಂದ ನೋಡದೆ, ಅದರ ಪ್ರತಿಯೊಂದು ಉಪಕ್ರಮದಲ್ಲಿಯೂ ಆತಂಕ ವೊಡ್ಡುವುದರಲ್ಲಿಯೇ ಪೌರುಷ ವ್ಯಯ ಮಾಡುವ ಹುಚ್ಚು ಈಗ ನಮ್ಮಲ್ಲಿ ಮೊಳೆತು, ಬಲಿತಿದೆ. ಸರಕಾರವಾದರೋ ಜನತೆಯನ್ನು ತನ್ನೆಲ್ಲ ಕಾರ್ಯಗಳಲ್ಲಿ ಬಿಟ್ಟು ಮನಸ್ಸಿನ ಸಹಕಾರ ನೀಡಿ—ಉತ್ತಮ ಧ್ಯೇಯಗಳನ್ನು ಶೀಘ್ರಾತಿಶೀಘ್ರ ಸಾಧಿಸುವ ತೀವ್ರ ಹಂಬಲದಿಂದ ತೊಡಗಿದ ಅಸಂಖ್ಯ ಯೋಜನೆಗಳಲ್ಲಿ ಜನರೆ ಸಹಕರಿಸುವುದು ತುಂಬ ಅಗತ್ಯ—ಎಂದು ದೈನ್ಯ ಬುದ್ಧಿಯಿಂದ ಅಂಗಲಾಚುತ್ತಿದೆ.

ಹೊಟ್ಟೆಯು ತಿಂಡಿ ಬಾಕನೆಂಬ, ಮತ್ತು ತಾವು ಮಾತ್ರ ದುಡಿದು ದಣಿವವರೆಂಬ ತಪ್ಪು ತಿಳುವಳಿಕೆಯಿಂದ ಶರೀರದ ಉಳಿದೆಲ್ಲ ಅವಯವಗಳು "ಸಂಪ" ಹೂಡಿದ ಕತೆ ಕೇಳಿದ್ದೀರಿ. ಪರಿಣಾಮವೇನಾಯಿತು? ಎಲ್ಲ ಅಂಗಗಳೂ ನಿಷ್ಕ್ರಿಯವಾಗಿ, ಸಾಯಲನುವಾದುವು. ಸಕಾಲದಲ್ಲಿಯೇ ಎಚ್ಚರವಾದುದು. ಅವುಗಳ ಪುಣ್ಯ—ಹೊಟ್ಟೆಯು ಎಲ್ಲರೂ ಕೊಟ್ಟುದನ್ನು ತೆಗೆದುಕೊಂಡು,

[೬ನೇ ಪುಟ ನೋಡಿರಿ]

Our Pigmy Deposit Scheme

.... brings our bank to your door. You may save as small a sum as annas two. Our collector will call on you every day to receive it.

At the rate of annas two per day you save Rs. 550 in 7 years because we allow interest at 3 1/8% per annum. At the rate of Re. 1/- per day your Savings are Rs 2,800/- in 7 years. At the rate of Rs. 10/- it is Rs 28,000/-.

Come in to-day and join the band of **Prudent Prosperous Pigmy People.**

The Canara Industrial & Banking Syndicate Ltd.

Estd: 1925. H. O: UDIPI.

ನಮ್ಮ ಔದ್ಯೋಗಿಕ ಮುನ್ನಡೆಯ ಸುದೃಢ ಸ್ವರೂಪ

ಲೇಖಾಂಕ ೨

ಈಚೆಗೆ ಭಾರತವು ಸಾಧಿಸಿದ ಅಂಶಗಳ ವಿವರಣೆ

ಕಬ್ಬಿಣ ಮತ್ತು ಉಕ್ಕು

ಮಹಾಯುದ್ಧ ತೊಡಗುವ ಪೂರ್ವದಲ್ಲಿ ಔದ್ಯೋಗಿಕ ರಂಗವನ್ನು ಆಕ್ರಮಿಸಿದ್ದ ಉದ್ದಿಮೆಗಳಲ್ಲಿ ಹತ್ತಿ, ಸಣಬು, ಚಾ, ಇದ್ದಲು ಮತ್ತು ಕಬ್ಬಿಣ ಮತ್ತು ಉಕ್ಕುಗಳು ಪ್ರಾಮುಖ್ಯವಾಗಿದ್ದುವು. ಜವುಳಿ ಉದ್ದಿಮೆಯು ಹೆಚ್ಚು ಕಡಿಮೆ ಶೇಕಡಾ ಮೂವತ್ತೈದರಷ್ಟು ೧೯೩೯ರಿಂದ ೧೯೪೭ರ ಅವಧಿಯಲ್ಲಿ ಹೆಚ್ಚಿಕೊಂಡಿತು. ದುಡ್ಡಿನ ಪರಿಮಾಣದ ದೃಷ್ಟಿಯಿಂದ ಗಳಿಕೆಯು ಕಡಿಮೆ ಎಂದು ತೋರಿದರೂ ಸಣಬಿನ ಉದ್ಯಮದಲ್ಲಿ ತೊಡಗಿದ ಗಿರಣಿಗಳು ೧೯೩೯ರಲ್ಲಿ ೯೩ ಇದ್ದದ್ದರೆ, ಅವೇ ೧೯೪೭ರಲ್ಲಿ ೧೦೫ಕ್ಕೆ ಏರಿದುವು. ಆದರೆ ಇದೆಲ್ಲಕ್ಕಿಂತಲೂ ಗಮನೀಯವಾದ ಪ್ರಗತಿಯು ಕಬ್ಬಿಣ ಮತ್ತು ಉಕ್ಕಿನ ಉತ್ಪಾದನೆಯಲ್ಲಿ ಕಂಡುಬಂದಿತು. ಟಾಟಾ ಕಂಪೆನಿಯವರ ಸಾಹಸದ ಯಶಸ್ವೀ ಪರಿಣಾಮವು ಇಂಡಿಯನ್ ಆಯರ್ನ್ ಎಂಡ್ ಸ್ಟೀಲ್ ಕಂಪೆನಿ, ಮೈಸೂರ್ ಸ್ಟೇಟ್ ಆಯರ್ನ್ ವರ್ಕ್ಸ್ ಮುಂತಾದ ಹೊಸ ಕೇಂದ್ರಗಳಿಗೆ ಸ್ಫೂರ್ತಿಯ ನೆಲೆಯಾಯಿತು. ೧೯೩೯ರಲ್ಲಿ ಒಟ್ಟು ಹನ್ನೊಂದೂವರೆ ಲಕ್ಷ ಟನ್ನು ಸಾಡಕಬ್ಬಿಣ ಉತ್ಪಾದಿತವಾಗಿದ್ದರೆ ೧೯೪೭ರ ಸುಮಾರಿಗೆ ಈ ಪ್ರಮಾಣ ಹದಿನಾರೂ ಕಾಲು ಲಕ್ಷದ ಮಿತಿಯನ್ನು ಮುಟ್ಟಿತು. ಉಕ್ಕಿನ ಉತ್ಪಾದನೆಯ ಪ್ರಮಾಣ ಕೂಡ ನಾಲ್ಕೂಕಾಲು ಲಕ್ಷ ಟನ್ನಿನಿಂದ ಆರೂವರೆಲಕ್ಷ ಟನ್ನಿಗೂ ಮಿಕ್ಕಿ ಏರಿತು.

ಇದರ ಜೊತೆಗೆ ಕಲ್ಲಿದ್ದಲಿನ ಉತ್ಪಾದನೆಯು ರೈಲ್ವೆಗಳ ಬೇಡಿಕೆ ಹೆಚ್ಚಿದಂತೆ ಏರುತ್ತಾಹೋಯಿತು. ೧೯೩೯ರ ಪೂರ್ವದಲ್ಲಿ ಕೆಯು ೨೧೦ಲಕ್ಷ ಟನ್ನಿದ್ದರೆ ೧೯೪೭ರ ಸುಮಾರಿಗೆ ೩೦೨ಲಕ್ಷಲಕ್ಷಟನ್ನಾಯಿತು.

ಪರ್ವಕಾಲ—

ದ್ವಿತೀಯ ಮಹಾಯುದ್ಧವು ದೇಶದ ಔದ್ಯೋಗಿಕ ಕ್ಷೇತ್ರದ ಸ್ವರೂಪವನ್ನೇ ಬದಲಾಯಿಸಿತು. ಉತ್ಪಾದನಾ ಸಾಮಗ್ರಿಗಳ ಪ್ರಮಾಣ ಒಂದೆಡೆ ಮಿತಿಮೀರಿದಂತೆ, ಮಿತಿಮೀರಿದ ದುಡಿಮೆಯಿಂದ ಉತ್ಪಾದನೆಯೇ ಕುಸಿಯುವ ಭಯ ಆವರಿಸಿತು. ಯುದ್ಧಕಾಲದಲ್ಲಿ ಗಳಿಕೆಯ ಪ್ರಮಾಣವು ಬಹಳ ಹೆಚ್ಚಿದ್ದರೂ, ಹೊಸ ಉದ್ಯಮವನ್ನು ತೊಡಗಲು ಬಂಡವಲಾಗಿ ಅದನ್ನು ಬಳಸುವುದು ಅವಶ್ಯವಾಗಿತ್ತು. ಸರಕಾರದ ಭಾರೀ ತೆರಿಗೆಯಿಂದ ಚೇತರಿಸುವುದು ಅಷ್ಟು ಸುಲಭದಲ್ಲಿರಲಿಲ್ಲ. ಏರುತ್ತಿರುವ ಜೀವನವೆಚ್ಚ, ಕಚ್ಚಾವಸ್ತುಗಳ ಕೊರತೆ, ದೇಶದೊಳಗಿನ ಅತೃಪ್ತಿಯ ವಾತಾವರಣ ಮುಂತಾದ ಕಾರಣಗಳಿಂದ ಉತ್ಪಾದನೆಗೆ ಸಾಕಷ್ಟು ಉತ್ತೇಜನವು ಯುದ್ಧ ಮುಗಿದಾಗ ದೊರೆಯಲಿಲ್ಲ. ಹಾಗೆಂದು ಯುದ್ಧಕಾಲದಲ್ಲಿ ಸಾಧಿಸಿದ ಉತ್ಪಾದನೆಯ ಚಿತ್ರವನ್ನು ಪರೀಕ್ಷಿಸಿದಾಗ ಅದು ತುಂಬ ಆಕರ್ಷಕವೆನಿಸುವುದು:—ಕಬ್ಬಿಣ ಮತ್ತು ಉಕ್ಕಿನ ಉದ್ಯಮ ೩೮%ದಷ್ಟು ಬೆಳೆದರೆ, ಸಿಮೆಂಟು ೪೫%, ಕಾಗದ ೫೮%, ಸಕ್ಕರೆ ೩೦%, ಜವುಳಿ ೨೦% ಹೆಚ್ಚಿತು.

ಯುದ್ಧ ಮುಗಿದೊಡನೆಯೇ ಉತ್ಪಾದನಾ ಮಟ್ಟವು ಒಮ್ಮಿಂದೊಮ್ಮೆ ಇಳಿಮುಖವಾಯಿತು. ೧೯೪೫ರಲ್ಲಿ ಉತ್ಪಾದನಾ ಮಟ್ಟವು ೧೦೦% ಇದ್ದದ್ದರೆ, ಉಕ್ಕಿನ ಉತ್ಪಾದನೆಯು ೧೯೪೬ರಲ್ಲಿ ೧೩೮%, ೧೯೪೭ರಲ್ಲಿ ೧೧೮%, ೧೯೪೮ರಲ್ಲಿ ೧೧೩%ಕ್ಕೆ ಇಳಿಯಿತು. ಹಾಗೆಯೇ ಸಿಮೆಂಟು ೧೯೪೬ರಲ್ಲಿ ೧೨೦% ಇದ್ದದ್ದು ೧೯೪೭ರಲ್ಲಿ ೧೦೩%ಕ್ಕೆ ತಗ್ಗಿತು. ೧೯೪೪ರಲ್ಲಿ ಬಟ್ಟೆಯ ಉತ್ಪಾದನೆ ೧೧೮% ಇದ್ದದ್ದು ೧೯೪೭ರಲ್ಲಿ ೯೩%ಕ್ಕೂ ಕಲ್ಲಿದ್ದಲು ೧೯೪೬ರಲ್ಲಿ ೧೦೭% ಇದ್ದುದು ೧೯೪೭ರಲ್ಲಿ ೯೨%ಕ್ಕೂ ಇಳಿದುಹೋಯಿತು. ಆದರೆ ಇವುಗಳ ನಡುವೆ ಒಂದು ಸಮಾಧಾನದ ಸಂಗತಿಯೂ ನಡೆದಿದೆ. ತಾಂತ್ರಿಕ ಹಾಗೂ ರಾಸಾಯನಿಕ ಉದ್ಯಮಕ್ಕೆ ಮಹಾಯುದ್ಧದಿಂದ ಪ್ರೋತ್ಸಾಹ ದೊರೆತಿದ್ದು, ಆ ಕ್ಷೇತ್ರಗಳಲ್ಲಿ ಉತ್ಪಾದನೆಯು ಹೆಚ್ಚಿನ ಪ್ರಮಾಣದಲ್ಲಿ ನಡೆದಿರುವುದು.

ನವರಂಗದ ಚಟುವಟಿಕೆಗಳು

ಈಗ ಭಾರತದಲ್ಲಿ ವರ್ಷಂಪ್ರತಿ ೯೦ ಕೋಟಿ ರೂಪಾಯಿಗಳಷ್ಟು ಹಣವನ್ನು ಉದ್ದಿಮೆಗಳಿಗಾಗಿ ವಿನಿಯೋಗಿಸಲಾಗುತಿದ್ದು ಈ ರಕಮು ಒಟ್ಟು ಉತ್ಪಾದನೆಯ ಮೌಲ್ಯಕ್ಕೆ ೧೫%ದ ಪ್ರಮಾಣದಲ್ಲಿದೆ. ಹೆಚ್ಚಾಗಿ ಹೊಸ ಹೊಸ ತೆರನಾದ ಉದ್ಯಮಕ್ಕೆ ಈ ಬಂಡವಲು ಹರಿಯುತ್ತದೆ. ಡೀಸೆಲ್ ಎಂಜಿನುಗಳು, ವಿದ್ಯುಚ್ಛಕ್ತಿಯ ಪಂಪುಗಳು, ವಿದ್ಯುಚ್ಛಕ್ತಿ ಉತ್ಪಾದಕ ಸಲಕರಣೆಗಳು, ಮೋಟರುಗಳು, ಹೊಲಿಗೆ ಯಂತ್ರಗಳು, ರೇಡಿಯೋ ಗ್ರಾಹಕಗಳು, ಸೈಕಲುಗಳು, ಲಾಟೀನುಗಳು ಒಂದಕ್ಕೆ ಹತ್ತು ಪಾಲಿನಷ್ಟು ಬೆಳೆದಿವೆ. ಭಾರತದ ಇತಿಹಾಸದಲ್ಲಿಯೇ ಪ್ರಥಮಬಾರಿ ರೈಲ್ವೇ ಎಂಜಿನುಗಳನ್ನೂ ವಾಗೀನುಗಳನ್ನೂ ಸಿದ್ಧಪಡಿಸಲಾಗುತ್ತಿದೆ. ಮೋಟಾರುಕಾರುಗಳ ತಯಾರಿ ನಡೆದಿದೆ. ಅಲ್ಲದೆ ವಿಶಾಖಪಟ್ಟಣದಲ್ಲಿ ಸಾಗರದ ಮೇಲೆ ಪ್ರಯಾಣಿಸಬಲ್ಲ ಭಾರೀ ಹಡಗುಗಳನ್ನು ಕೂಡ ಕಟ್ಟಲಾಗುತ್ತಿದೆ. ಬೆಂಗಳೂರಿನಲ್ಲಿ ಮೊದಲಿನಿಂದಲೂ ವಿಮಾನ ಕಾರ್ಖಾನೆ ಪ್ರಶಂಸನೀಯ ಕೆಲಸ ನಡೆಸಿಕೊಂಡು ಬಂದಿದೆ. ಸಂಖ್ಯೆ ರಾಸಾಯನಿಕ ವಸ್ತುಗಳ ತಯಾರಿಯನ್ನು ಈಗ ನಮ್ಮ ದೇಶದಲ್ಲಿಯೆ ಮಾಡುವ ಪ್ರಯತ್ನಗಳು ಸಾಗಿವೆ. ಇನ್ನು ಬಿಟ್ಟರೆ ಪ್ಲಾಸ್ಟಿಕ್, ಪ್ಲಾಯಿವುಡ್, ಪೈಂಟು ಮತ್ತು ವಾರ್ನೀಸುಗಳು, ವನಸ್ಪತಿ ಎಣ್ಣೆ, ಬೆಂಕಿಪೆಟ್ಟಿಗೆ, ಸಕ್ಕರೆ, ಕಾಗದ ಮುಂತಾದವುಗಳ ಉತ್ಪಾದನೆಯೂ ಹೆಚ್ಚಿಕೊಂಡಿದೆ.

ಯುದ್ಧಾಂತ್ಯದೊಡನೆ ಕುಸಿಯ ಹತ್ತಿದ ದೊಡ್ಡ ಬಂಡವಲಿನ ಉದ್ದಿಮೆಗಳು ಈಗ ಒಂದೆರಡು ವರ್ಷಗಳಲ್ಲಿ ಪುನಃ ಚೇತರಿಸಿಕೊಂಡು, ಚಟುವಟಿಕೆಯಿಂದ ಕಾರ್ಯ ನಿರ್ವಹಿಸುತ್ತಿವೆ. ಅವುಗಳ ಉತ್ಪಾದನಾ ಶಕ್ತಿಯು ಭರದಿಂದ ಹೆಚ್ಚುತಿದ್ದು ಈ ವೇಗವನ್ನೇ ಇನ್ನೂ ಕೆಲವರ್ಷಗಳ ಕಾಲ ಮುಂದುವರಿಸುವುದಾದರೆ, ನಮ್ಮ ರಾಷ್ಟ್ರದ ಔದ್ಯೋಗೀಕರಣ ಸಮಸ್ಯೆಯು ತನ್ನಿಂದತಾನೇ ನಿವಾರಣೆ ಹೊಂದಬಲ್ಲುದು. ಸರಕಾರವಾಗಲೀ ಖಾಸಗೀ ಜನಂಗಳೀ ದೇಶದ ಆಂತರಿಕ ಅವಶ್ಯಕತೆಯನ್ನು ಪೂರೈಸುವ ಮಟ್ಟಿಗಾದರೂ ಉತ್ಪಾದನೆಯನ್ನು ಹೆಚ್ಚಿಸಲು ಪರಿಶ್ರಮಿಸಬೇಕಾದುದು ನ್ಯಾಯ. ಈ ದಿಸೆಯಲ್ಲಿ ಸದ್ಯ ಇಟ್ಟಿರುವ ಹೆಜ್ಜೆ ಸುದೃಢವಿದೆ ಎಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ.

ಕುಂದಾಪುರ ಡಿ. ಮು ಕೋರ್ಟಿನಲ್ಲಿ

O P 30/52.

ಅರ್ಜಿದಾರಳು:—ದಾರಮ್ಮ ಶೆಟ್ತಿ, ತುಂಗಮ್ಮ ಶೆಟ್ತೀರ ಮಗಳು. ಉಪ್ಪಿನಕುದ್ರು ಹೊಸಾಳಗ್ರಾಮದ ಹೊಸಿಮನೆ

ಎದ್ರಿಳು.—ಗಿರಿಯಮ್ಮ ಶೆಟ್ತಿ, ತುಂಗಮ್ಮ ಶೆಟ್ತೀರ ಮಗಳು, ಉಪ್ಪಿನಕುದ್ರು ಹೊಸಾಳಗ್ರಾಮದ ಹೊಸಿಮನೆ

ಸದ್ರಿ ಎದ್ರಿಳಿಗೂ ಮತ್ತು ಇತರ ಸಮಸ್ತರಿಗೂ ಸಹಾ ತಿಳಿಯಪಡಿಸಿದ್ದು,

ಅರ್ಜಿದಾರಳು ಮತ್ತು ಎದ್ರಿಳು ಕೂಡಾ ಇವರ ಮಾವ ಹೊಸಾಳ ಹೊಸಿಮನೆ ಜಗನ್ನಾಥ ಶೆಟ್ಟಿಯು ಉಪ್ಪಿನಕುದ್ರು ಹೊಸಾಳಗ್ರಾಮದಲ್ಲಿ ಕಾಯಂ ನಿವಾಸಿಕನಾಗಿದ್ದು ಆತನು ತಾ. 8-8-1949ರಲ್ಲಿ ಮೃತಪಟ್ಟಿರುತ್ತಾನೆ. ಆತನು "ಸನ್ ಲೈಫ್ ಎಶ್ಯೂರೆನ್ಸ್ ಕಂಪೆನಿ ಆಫ್ ಕೆನಡಾ" [ಮದ್ರಾಸ್ ಬ್ರಾಂಚ್] ಜೀವವಿಮಾ ಕಂಪೆನಿಯಲ್ಲಿ ರೂಪಾಯಿ 3000-0-0ಕ್ಕೆ ನಂಬ್ರ 3440831ನೇ ಇನ್ಶೂರೆನ್ಸ್ ಪೋಲಿಸಿ ಪಡೆದಿರುತ್ತಾನೆ. ಸದ್ರಿ ಪೋಲಿಸಿ ಬಾಬ್ತು ಅರ್ಜಿದಾರಳಿಗೆ ಸಿಗತಕ್ಕ ಅರ್ಜಿಯಲ್ಲಿ ಕಾಣಿಸಿದ ರೂಪಾಯಿ 1285-10-0ನ್ನು ಪಡಕೊಳ್ಳುವರೇ ಅರ್ಜಿದಾರಳ ಹೆಸರಿಗೇ ವಾರೀಸು ಸರ್ಟಿಫಿಕೇಟು ಕೊಡಿಸಬೇಕೆಂತ ವಗೈರೆ ಕಾಣಿಸಿ ಅರ್ಜಿದಾರಳು ದಾಖಲು ಮಾಡಿದ ಸದ್ರಿ ಅರ್ಜಿ ತಾ. 20-5-52ಕ್ಕೆ ಇಟ್ಟಿದೆ, ಈ ಕುರಿತು ನಿಮ್ಮ ಆಕ್ಷೇಪವಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಿಳಿಸತಕ್ಕದ್ದು.

Y. Manjaya Shetty.
Advocate for Peter.

ಕುಂದಾಪುರ. ತಾ. 25—4—52.

ಚತುರ್ಥ ವಿಮಾಗಣನೆಯ ಫಲಿತಾಂಶ

(1947ರಿಂದ 1950ರ ವರೆಗೆ)

* * * * * * *

ತಾರೀಕು 31-12-1950ಕ್ಕೆ ನಡೆಸಿದ ವಿಮಾಗಣನೆಯಲ್ಲಿ ಆಜೀವ ಮತ್ತುಉಂಬಳಿ ವಿಮಾ ಪೋಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ ಅನುಕ್ರಮವಾಗಿ ರೂ. 12/- ಮತ್ತು ರೂ. 9/-ರಂತೆ ಬೋನಸನ್ನು ಘೋಷಿಸಿದೆ.

The Canara Mutual Assurance Co. Ltd.

Head Office: **UDIPI**, S. India.

ಸ್ಥಾಪನೆಯಿಂದಲೂ ಎಲ್ಲಾ ವರ್ಷಗಳಿಗೂ

ಬೋನಸು ಹಂಚಿದ ಕಂಪೆನಿ.

ZANDU PHARMACEUTICAL WORKS LTD.

Manufacturers of Ayurvedic and Alopathic Medicines BOMBAY, 14

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗವಾತ, ಪಕ್ಷವಾತ, ಗೃಧ್ರಸೀ ಸಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ 3/- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.
2 ಶ್ರೀ ವಿ. ವಿ. ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

DAMODAR & CO.,

Nainiappa Naicken Street, Park Town-**MADRAS** 3.



ಉತ್ಪಾದನೆ ಹೆಚ್ಚಿಸುವ ಉದ್ಯಮಗಳ ಅಗತ್ಯ.

ಅಧಿಕ ಆಹಾರ ಬೆಳೆಯುವ ಆಚರಣೀಯ ಉಪಾಯಗಳು.

(ಲೇಖಾಂಕ ೧)

ನಮಗೆ ದೊರೆತಿರುವ ಸ್ವಾತಂತ್ರ್ಯವು ಒಂದು ವಿಮಾ ಪತ್ರವಿದ್ದಂತೆ—ಎಂದರೆ, ಸ್ವಾತಂತ್ರ್ಯ ಪ್ರಾಪ್ತಿಯ ವರೆಗಿನ ನಮ್ಮೆಲ್ಲ ಹೋರಾಟಗಳು ವಿಮೆ ಇಳಿಸುವ ಮುಂಚೆ ನಡೆಯುವ ವ್ಯವಹಾರಗಳಿಗೆ ಸಮಾನ. ಸ್ವಾತಂತ್ರ್ಯಕ್ಕಾಗಿ ಸುರಿಸಿದ ನೆತ್ತರು ಇತ್ಯಾದಿ ಮೊದಲನೇ ಪ್ರೀಮಿಯಂ ಹಣ. ಪಾಲಿಸಿಗೆ ದೊರೆಯುತ್ತಿರುವ ಸ್ವಾತಂತ್ರ್ಯವೆಂದರೇನೇ ವಿಮಾ ಪಾಲಿಸಿ. ಆ ಪಾಲಿಸಿ ಒಂದು ಭದ್ರತೆ ಮಾತ್ರ—ಅದರ ಪ್ರಕಾರ ಪೂರ್ಣ ಮೊಬಲಗು ಸಿಗಬೇಕಾದರೆ, ವರ್ಷ ವರ್ಷವೂ ಕಂತಿನ ಹಣವನ್ನು ನಿಯಮಿತ ರೂಪದಲ್ಲಿ ಕಟ್ಟುತ್ತ ಬರಬೇಕು. ಇದೇ ರೀತಿ, ರಾಷ್ಟ್ರದ ವ್ಯವಹಾರದಲ್ಲಿ— ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ವೈಜ್ಞಾನಿಕ ಮುಂತಾದ ಪ್ರತಿಯೊಂದೂ ಕ್ಷೇತ್ರದಲ್ಲಿ ಸ್ವಾತಂತ್ರ್ಯ ಲಭ್ಯವಾಗಲು ವರ್ಷ ವರ್ಷವೂ ನಿರ್ದಿಷ್ಟ ಯೋಜನೆಗಳನ್ನು ಕಾರ್ಯಗತ ಮಾಡಬೇಕಾಗುವುದು. ರಾಷ್ಟ್ರದ ಸ್ವಾತಂತ್ರ್ಯದಲ್ಲಿ ಸರ್ವ ಜನರಿಗೂ ಸಮನಾದ ಅವಕಾಶವಿರುವುದರಿಂದ, ಎಲ್ಲರೂ ಅಖಿಲ ಭಾರತಕ್ಕೆ ಅನ್ವಯವಾಗುವ ಉದ್ಯಮಗಳಲ್ಲಿ ತಮ್ಮ ಪಾಲಿನ ಕರ್ತವ್ಯ ನಿರ್ವಹಿಸುವುದು ನ್ಯಾಯಕ್ಕೆ ಸರಿಯಾಗಿಯೇ ಇದೆ. ಈ ದೃಷ್ಟಿಯಿಂದ, ಭಾರತ ಸರಕಾರದವರು ಮುಂದಿನ ಆರು ವರ್ಷಗಳಲ್ಲಿ ಪೂರೈಸಬೇಕೆನ್ನುವ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಆಚರಣೆಯಲ್ಲಿ ತರಲು ಶಕ್ತಿಮೀರಿ ಪ್ರಯತ್ನಿಸುವುದು ನಮ್ಮೆಲ್ಲರ ಧರ್ಮ. ಒಡೆಯರೂ ಕೂಲಿಕಾರರೂ, ಇಂಜನಿಯರರೂ ಶಿಕ್ಷಕರರೂ, ಅಧಿಕಾರಿಗಳೂ ಗುಮಾಸ್ತರೂ—ಎಲ್ಲರೂ ಒಂದಾಗಿ, ತಾರತಮ್ಯ ಭಾವವಿಲ್ಲದೆ ದೇಶದ ಏಳಿಗೆಯ ಕಡೆಗೇನೆ ಗಮನವಿತ್ತು ದುಡಿಯುವುದು ಅಪೇಕ್ಷಣೀಯ.

ಕೃಷಿ ಕ್ಷೇತ್ರ ವಿಸ್ತರಣೆ

ಸರಕಾರದ ಮುಂದಿರುವ ಅಭಿವೃದ್ಧಿ ಯೋಜನೆಗಳು ವಿವಿಧ ಬಗೆಯಾಗಿವೆಯಾದರೂ ಅವೆಲ್ಲವುಗಳ ಮುಖ್ಯ ಧ್ಯೇಯ ಮಾತ್ರ ಒಂದೇ—ಉತ್ಪಾದನೆಯನ್ನು ಹೆಚ್ಚಿಸುವ ಉದ್ಯಮಗಳನ್ನು ಕೈಗೊಳ್ಳುವುದೇ ಅವುಗಳ ಪ್ರಥಮ ಲಕ್ಷ್ಯವಾಗಿದೆ. ವಿಪುಲ ಆಹಾರ ಸಾಮಗ್ರಿ, ವಿವಿಧ ಔದ್ಯಮಿಕ ಸಲಕರಣೆಗಳು, ತರತರದ ದಿನಬಳಕೆಯ ಉಪಕರಣಗಳು ಎಲ್ಲವೂ ನಮಗೆ ಹೆಚ್ಚಿನ ಪ್ರಮಾಣದಲ್ಲಿ ಅಗತ್ಯವಿವೆ. ಇದರಲ್ಲೂ ಅನ್ನ ಬ್ರಹ್ಮನ ಎಚ್ಚರಿಕೆಯ ಬೊಬ್ಬೆಯನ್ನು ಗಮನಿಸಲು ತಡಮಾಡಿದ್ದಾದರೆ, ಕ್ಷಾಮ ರಾಕ್ಷಸಿಯ ಭೈರವ ನೃತ್ಯದ ರಂಗ ಮಂಟಪವಾಗಿ ನಮ್ಮ ದೇಶ ನಿಜಕ್ಕೂ ಪರಿಣಮಿಸೀತು—ಎಂಬ ಭಯವಿದೆ. ಆದುದರಿಂದ, ಸರಕಾರ ಕೈಗೊಳ್ಳಲು ಬಯಸುವ ಉದ್ಯಮಗಳ ಸ್ವರೂಪವೇನಿದ್ದರೂ ಆಹಾರದ ಉತ್ಪಾದನೆಯನ್ನು ಭರದಿಂದ ಏರಿಸುವ ಪ್ರಯತ್ನಗಳಿಗೆ ಪ್ರಥಮ ಪ್ರಾಶಸ್ತ್ಯವನ್ನು ಕೊಡಲಾಗಿದೆ. ಸುಮಾರು ೨೩೦೦ ಕೋಟಿ ರೂಪಾಯಿ ವ್ಯಯಬರಬಹುದೆಂದು ಅಂದಾಜು ಮಾಡಿರುವ ಆರು ವರ್ಷಗಳ ಅಭಿವೃದ್ಧಿ ಯೋಜನೆಯಲ್ಲಿ ಕೃಷಿ ಕ್ಷೇತ್ರದ ವಿಸ್ತರಣಕ್ಕೆ ಸಂಬಂಧಪಟ್ಟ ವಿವಿಧ ಉದ್ಯಮಗಳಿಗಾಗಿ ೪೦೦ ಕೋಟಿ ರೂಪಾಯಿಯನ್ನು ಮೀಸಲಿರಿಸಿದೆ, ಇಷ್ಟು ವೆಚ್ಚದಿಂದ ಸುಮಾರು ಎಪ್ಪತ್ತು ಲಕ್ಷ ಟನ್ನುಗಳಷ್ಟು ಆಹಾರ ಅಧಿಕ ಬೆಳೆದೀತು ಎಂಬ ಆಶೆ ಇಟ್ಟುಕೊಂಡಿದ್ದಾರೆ.

ಸಾಧನೆಯ ಬಗೆ

ಕೃಷಿ ಸಮಸ್ಯೆಯು ಜನರನ್ನು ಮಾತ್ರವಲ್ಲ—ಸರಕಾರವನ್ನು ಕೂಡ ಈಗ್ಗೆ ಕೆಲ ವರ್ಷಗಳಿಂದ ಬಿಟ್ಟೂ ಬಿಡದೆ ಕಾಡುತ್ತಿದೆ. ಸಮಸ್ಯೆಯ ಬಾಹುಲ್ಯವೂ ಎಣಿಕೆ ಮೀರಿದ್ದು ವೈಜ್ಞಾನಿಕ ಅನುಸಂಧಾನದಿಂದ ತೊಡಗಿ, ಪ್ರತ್ಯಕ್ಷ ರೀತಿಯಲ್ಲಿ ಉತ್ತು ಬೆಳೆಯುವವರೆಗೂ ಇದರ ವ್ಯಾಪ್ತಿ ಇದೆ. ಈಚೆಗೆ ಸಮಸ್ಯಾ ನಿವಾರಣೆಗಾಗಿ ಕೆಲವೊಂದು ಅಮೂಲ್ಯ ನಿರ್ಣಯಗಳನ್ನು ಕೈಗೊಂಡಿದ್ದು ಉದ್ದೇಶಾನುಗುಣವಾಗಿ ಅವುಗಳನ್ನು ಹೀಗೆ ವಿಂಗಡಿಸಬಹುದು — (೧) ದೇಶವನ್ನು ಬರಗಾಲದ ದವಡೆಯಿಂದ ರಕ್ಷಿಸುವುದು. (೨) ವಿದೇಶಗಳು ನೀಡುವ ಭಿಕ್ಷೆಯಿಂದ ಮುಕ್ತಿ ಪಡೆಯುವುದು (೩) ಸಾಧ್ಯವಿದ್ದಷ್ಟೂ ಹೆಚ್ಚು ಪ್ರಮಾಣದಲ್ಲಿ ಉತ್ಪಾದನೆ ಕೈಗೆ ಬರುವಂತೆ ಭೂಲಕ್ಷಣವನ್ನು ಪರಿವರ್ತಿಸುವುದು. ಇವು ಮೂರು ಪರಸ್ಪರ ಹೊಂದಿಕೊಂಡಿರುವುವಾದರೂ ಕೊನೆಯ ಕಾರ್ಯಕ್ರಮದ ಯಶಸ್ಸಿನ ಮೇಲೆಯೇ ಆಹಾರ ಸಮಸ್ಯೆಯ ನಿವಾರಣೆ ಪೂರ್ಣ ಅವಲಂಬಿಸಿದೆ ಎನ್ನುವುದು ಸ್ಪಷ್ಟವಿದೆ. ಇದಕ್ಕಾಗಿ ಭೂಮಿಯ ಸತ್ವವನ್ನು ಹೆಚ್ಚಿಸುವುದು, ವೈಜ್ಞಾನಿಕ ಕೃಷಿ ಕ್ರಮಗಳನ್ನು ಅನುಸರಿಸುವುದು, ಚಿಕ್ಕ ಪುಟ್ಟ ನೀರಾವರಿಗಳನ್ನು ಕೈಗೊಂಡು ಬೆಳೆಯನ್ನು ಹೆಚ್ಚಿಸುವುದು, ಹೊಸತಾಗಿ ಗಿಡ ಮರಗಳನ್ನು ನಟ್ಟು ಕಾಡುಗಳನ್ನು ಬೆಳೆಸುವುದು—ಮುಂತಾದ ಉಪಕ್ರಮಗಳು ತೀರ ಅವಶ್ಯ.

ವನ ಮಹೋತ್ಸವ

ಕಾಡುಗಳನ್ನು ಬೆಳೆಯಬೇಕು ಎಂದಾಕ್ಷಣ ಶ್ರೀ ಮುನ್ಶಿಯವರ ವನ ಮಹೋತ್ಸವದ ಕುರಿತು ನಗೆ ಉಕ್ಕಿ ಬರುವುದಲ್ಲವೆ?—ಇದಕ್ಕೆ ನಮ್ಮ ಮಂಕು ಬುದ್ಧಿಯೇ ಕಾರಣ. ಭಾರತದ ಋಷಿ ಮುನಿಗಳು ಕಾಡಿನಲ್ಲಿಯೇ ವಾಸವಾಗಿರುವುದು ಮುಖ್ಯ ವೈಶಿಷ್ಟ್ಯವಾಗಿತ್ತು. ಅದಕ್ಕೆ ಆಧ್ಯಾತ್ಮಿಕ ಮಹತ್ವವಿದ್ದಂತೆ ಸಾಮಾಜಿಕವಾಗಿಯೂ ಉಚ್ಚಸ್ಥಾನವಿತ್ತು. ವನ ಪ್ರದೇಶಗಳು ಸುಭಿಕ್ಷಕ್ಕೆ ನೆಲೆಯಾಗುವುವೆಂಬ ತತ್ವ ಅವರಿಗೆ ಪೂರ್ಣ ಮನವರಿಕೆಯಾಗಿತ್ತು, ಇಂದಿಗೂ ರಶಿಯದಲ್ಲಿ, ಅಮೇರಿಕೆಯಲ್ಲಿ ಕಾಡುಗಳನ್ನು ಬೆಳೆಸುವ ವಿಸ್ತೃತ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ ನಮ್ಮ ದೇಶದಲ್ಲಿಯೂ ರಾಜಪುತಾನದ ಥಾರ್ ಮರುಭೂಮಿ ಒತ್ತರದಿಂದ ಉತ್ತರ ಪ್ರದೇಶದ ಕಡೆಗೆ ವ್ಯಾಪಿಸುತ್ತಿರುವುದನ್ನು ತಪ್ಪಿಸಲು ಮರ ಬೆಳೆಸುವ ಮಹೋತ್ಸವವನ್ನು ಆಚರಿಸಲೇ ಬೇಕಾಗಿ ಬಂದಿದೆ. ಇಲ್ಲದಿದ್ದರೆ, ಗಂಗಾನದಿಯ ಫಲವತ್ತಾದ ಬಯಲು ಭೂಮಿ ಬಂಜರು ಬೀಳುವ ಸಂಭವವಿದೆ. ಇದಲ್ಲದೆ, ಗಿಡ ಮರಗಳು ದಟ್ಟವಾಗಿಲ್ಲದ ಕಡೆ ಫಲವತ್ತಾದ ಮಣ್ಣಿನಂಶವು ಕೊಚ್ಚಿಕೊಂಡು ಹೋಗಿ, ವ್ಯರ್ಥವಾಗಿ ಸಮುದ್ರವನ್ನು ಸೇರುವುದು. ಇದನ್ನು ತಡೆಗಟ್ಟಲು ವನ ಮಹೋತ್ಸವವನ್ನು ಅತ್ಯಂತ ಭಕ್ತಿ—ಶ್ರದ್ಧೆಯಿಂದ ಆಚರಿಸುವುದೊಂದೇ ಪರಿಣಾಮಕಾರಿ ಉಪಾಯ.

ನೀರಾವರಿಯಿಂದ ನೆರವು

ನೀರಾವರಿ ಕ್ಷೇತ್ರದಲ್ಲಿಯಾದರೂ ತೀವ್ರ ಹೆಚ್ಚಳದ ಅಗತ್ಯವಿದೆ—ಮತ್ತದಕ್ಕೆ ಸಾಕಷ್ಟು ಅವಕಾಶವೂ ಇದೆ. ಒಟ್ಟು ಕೃಷಿ ಕ್ಷೇತ್ರದ ೨೩% ಪ್ರದೇಶ ಮಾತ್ರ ಈಗ ನೀರಾವರಿಯ ಪ್ರಯೋಜನವನ್ನು ಪಡೆಯುತ್ತಿದೆ ಬೃಹತ್ ನೀರಾವರಿ ಯೋಜನೆಗಳು ಪೂರೈಸಲ್ಪಡಬೇಕಾದರೆ ತುಂಬ ಸಮಯ ತಗಲುವುದು. ಮಾತ್ರವಲ್ಲದೆ ಅವುಗಳ ಉದ್ದೇಶವು ನೆರೆಯ ಹಾವಳಿ ತಡೆದು, ನೀರನ್ನು ಸಂಗ್ರಹಿಸಿ ಹೊಲಗಳಿಗೆ ಪೂರೈಸುವುದಷ್ಟೇ ಆಗಿರದೆ, ವಿದ್ಯುಚ್ಛಕ್ತಿ ಉತ್ಪಾದನೆಯ ಪ್ರಮುಖ ಧ್ಯೇಯವೂ ಜೊತೆಯಲ್ಲಿದೆ. ಆದ್ದರಿಂದ ಈಗ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ತ್ವರಿತವೇ ಮುಂದೆ ಬಂದು ಕೈಗೊಂಡು, ಉತ್ಪಾದನೆಯನ್ನು ಸಾಧ್ಯವಿದ್ದಷ್ಟು ಹೆಚ್ಚಿಸುವುದು ಅಗತ್ಯವಾಗಿದೆ. ಈ ಸಣ್ಣ ಪುಟ್ಟ ನೀರಾವರಿ ಯೋಜನೆಗಳು ಸ್ವರೂಪದಲ್ಲಿ ಚಿಕ್ಕದಾಗಿ ಕಂಡರೂ ಒಟ್ಟಿನಲ್ಲಿ ಅವುಗಳ ಪರಿಣಾಮ ಅದ್ಭುತವಾಗುತ್ತದೆ. ಜನರಲ್ಲಿ ಸ್ವಾವಲಂಬನದ ಹೊಸ ಹುರುಪನ್ನು ಹುಟ್ಟಿಸಲಿಕ್ಕೂ ಇದು ಚೆನ್ನಾದ ಮಾರ್ಗ—ಎಂದು ಶ್ರೀ ಮುನ್ಶಿ ಇದನ್ನು ಪ್ರಶಂಸಿಸಿದ್ದಾರೆ. ಬೃಹತ್ ನೀರಾವರಿ ಯೋಜನೆಗಳಿಂದ ೧೬ ಲಕ್ಷ ಟನ್ನು ಆಹಾರ ದೊರೆತರೆ, ೧೫ ಕೋಟಿ ರೂಪಾಯಿ, ವೆಚ್ಚಕ್ಕೆ ಬರುವ ಕೃತಕ ಕೂಪ ಬಾವಿಗಳ ನೀರಿನ ಪೂರೈಕೆಯೊಂದರಿಂದಲೇ ಎರಡೂವರೆ ಲಕ್ಷ ಟನ್ನುಗಳಷ್ಟು ಆಹಾರ ಬೆಳೆಯಬಹುದು. ಹೀಗಿರುವಾಗ ಈಗಿರುವ ಬಾವಿಗಳು, ಕೆರೆಗಳು, ಮದಗಗಳು—ಮುಂತಾದುವನ್ನು ಆಳವಾಗಿ ಅಗೆದೂ ದುರಸ್ತಿ ಮಾಡಿಸಿಯೂ ಬೆಳೆ ಹೆಚ್ಚಿಸಲು ಉಪಯೋಗಿಸಿದರೆ, ಅದು ಅದ್ಭುತ ಫಲವನ್ನು ನೀಡುವುದರಲ್ಲಿ ಸಂಶಯವಿಲ್ಲ. ಕಾರಣ, ಸಣ್ಣ ನೀರಾವರಿ ಉಪಕ್ರಮಗಳನ್ನು ಅಲಕ್ಷಿಸುವುದು ಸಾಧ್ಯವೇ ಇಲ್ಲ. ನಮ್ಮ ರೈತರು ಈ ಕುರಿತು ಆಸಕ್ತಿ ತೋರಿ, ಕಾರ್ಯೋನ್ಮುಖರಾಗಲೆಂದು ಹಾರೈಸೋಣ.



ರಾಮತೀರ್ಥ
ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಠೇವಣಾತಿ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರಿಯ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.

ದಿ. ಬ್ರಾಂಚ್ ಮೆನೇಜರ್;
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು; ಯಾವ ಬಾಧಕವೂ ಇಲ್ಲ. ಸಾಧಾರಣ ಮುಂದಿಗೆ ಖಾತ್ರಿ ಗುಣವಾಗಿದೆ— ಬೆಲೆ; ರೂ. 3; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs. D. DEVEE, F. DS. (N. J.)
Tollygange CALCUTTA.
ಸ್ಟಾಕಿಸ್ಟರು ಶಹಾ ಕಂಪೆನಿ, ಮಂಗಳೂರು

ಭಾರತದ ಅರುಣೋದಯದ

ಈ ವಾರ ಭಾರತದ ರಾಜಕೀಯ ಚಟುವಟಿಕೆಗಳ ಮಟ್ಟಿಗೆ ತುಂಬ ಆಶಾದಾಯಕ ವಾತಾವರಣ ಕಂಡುಬಂದಿದೆ. ಮಹಾ ಚುನಾವಣೆಗಳು ನಡೆದು ಹೊಸ ಶಾಸನ ಸಭೆಗಳು ಕೆಲವು ರಾಜ್ಯಗಳಲ್ಲಿ ಈಗ ತಾನೆ ರೂಪುಗೊಂಡಿವೆ. ಇನ್ನು ಕೆಲವು ಕಡೆ ಸದ್ಯದಲ್ಲಿಯೇ ಅಸ್ತಿತ್ವಕ್ಕೆ ಬರಲಿವೆ. ಅಲ್ಲದೆ, ಕೇಂದ್ರದಲ್ಲಿ ಕೂಡ ಹೊಸ ಪಾರ್ಲಿಮೆಂಟು ಈ ತಿಂಗಳ ೧೩ನೇ ತಾರೀಕಿಗೆ ಸೇರಬೇಕೆಂದು ನಿಶ್ಚಯಿಸಲಾಗಿದೆ. ಈ ಎಲ್ಲ ಮನೆವಾರ್ತೆಯ ಸುದ್ದಿಗಳ ಜೊತೆಗೆ, ದೇಶದ ಉತ್ಪಾದನೆಯನ್ನು ಹೆಚ್ಚಿಸುವ ಅಭಿವೃದ್ಧಿಯೋಜನೆಗಳ ಕುರಿತು ಯಶಸ್ವೀ ಫಲಿತಾಂಶದ ವರದಿಯೂ ಕೈಸೇರಿದೆ. ಹೀಗಾಗಿ ತುಂಬ ಗೆಲವು, ಉತ್ಸಾಹ.

ಕೊಲೊಂಬೋ ಯೋಜನೆ

ಆಗ್ನೇಯ ಏಶಿಯಾದ ಹಿಂದುಳಿದ ರಾಷ್ಟ್ರಗಳು ಶೀಘ್ರಾತಿಶೀಘ್ರ ಅಭಿವೃದ್ಧಿ ಯೋಜನೆಗಳನ್ನು ಕೈಕೊಂಡು ಸ್ವಾವಲಂಬನ ಹೊಂದುವುದಲ್ಲದೆ, ಜನತೆಯ ಸಾಮಾನ್ಯ ಜೀವನ ಮಟ್ಟವನ್ನು ಉತ್ತರಿಸಲೂ ನೆರವಾಗಬೇಕೆಂಬ ಸದುದ್ದೇಶದಿಂದ ತೊಡಗಿದ ಕೊಲೊಂಬೋ ಯೋಜನೆಯ ಪ್ರಥಮ ವರ್ಷದ ಪ್ರಗತಿಯು ಶುಭಪ್ರದವಿರುತ್ತದೆ. ೧೯೫೦ನೇ ಸಪ್ಟಂಬರದಲ್ಲಿ ಮೊದಲಾಗಿ ಈ ಕುರಿತು ಮಾತುಕತೆಯನ್ನು ಲಂಡನಿನಲ್ಲಿ ಸೇರಿ ಚರ್ಚಿಸಲಾಯಿತು. ಪರಿಣಾಮವಾಗಿ, ಭಾರತ, ಸಿಲೋನು, ಪಾಕಿಸ್ತಾನ ಮತ್ತು ಮಲಯಾ ದೇಶಗಳ ಪ್ರಾಮುಖ್ಯ ಅವಶ್ಯಕತೆಗಳನ್ನು ಗಮನಿಸಿ, ಅಭಿವೃದ್ಧಿ ಯೋಜನೆಗಳ ರೂಪುರೇಷೆ ಗೊತ್ತುಪಡಿಸಲಾದುವು. ಕಳೆದ ವರ್ಷ ಜುಲೈಯಿಂದ ಆ ಯೋಜನೆಗಳನ್ನು ಕಾರ್ಯಗತ ಮಾಡುವುದು ನಡೆದಿದ್ದು, ಇಂದಿನವರೆಗಿನ ಪ್ರಗತಿಯು ಬಹಳ ಪ್ರೋತ್ಸಾಹಕರವಾದ ವಾತಾವರಣವನ್ನು ನಿರ್ಮಿಸಿದೆ. ಯೋಜನೆಯ ಕರಡನ್ನು ಸಿದ್ಧಗೊಳಿಸುವಾಗ್ಗೆ ಅದನ್ನು ವ್ಯವಹಾರ್ಯವಾಗಿ ಮಾಡಲು ಸಾಕಷ್ಟು ಹಣವು ಹರಿದುಬರುವುದೋ ಇಲ್ಲವೋ ಎಂಬ ಶಂಕೆ ಒಡಮೂಡಿತ್ತಾದರೂ, ಅನಿರೀಕ್ಷಿತವಾಗಿ ೧೯೫೦-೫೧ರಲ್ಲಿ ದೇಶದ ವ್ಯಾಪಾರ-ವಹಿವಾಟು ನಷ್ಟದ ಸ್ಥಾನದಲ್ಲಿ ಹೆಚ್ಚು ಲಾಭವನ್ನೇ ತಂದಿತು. ಇದಕ್ಕೆ ಪೂರಕವೆಂಬಂತೆ, ಹೊರದೇಶಗಳಿಂದ—ಮುಖ್ಯವಾಗಿ ಅಮೇರಿಕಾ ಮತ್ತು ಕೆನಡಾ-ಆಸ್ಟ್ರೇಲಿಯಾಗಳಿಂದಲೂ ತಕ್ಕ ಸಹಾಯ ದೊರೆತುವು. ಭಾರತವು ಆಹಾರೋತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ಕೊಟ್ಟಿದ್ದರೂ ವಿವಿಧ ದೇಶಗಳೊಡನೆ ಸಂಪರ್ಕ ಬೆಳೆಸಿ, ಬೇರೆಬೇರೆ ಉದ್ಯಮಗಳಲ್ಲಿ ತಜ್ಞರ ಆದಾನ-ಪ್ರದಾನಗಳ ಮೂಲಕ ವಿಪುಲ ತಾಂತ್ರಿಕ ಸಹಾಯವನ್ನು ಪಡೆಯುತ್ತಿದೆ. ಜಾಗತಿಕ ಬ್ಯಾಂಕು ಸಹ ಭಾರತದ ಅಭಿವೃದ್ಧಿ ಯೋಜನೆಗಳನ್ನು ಸಹಾನುಭೂತಿಯಿಂದ ನೋಡಿ, ಸಾಲಕೊಡಲು ಮುಂಬಂದಿದೆ.

ಆಯಾತ—ನಿರ್ಯಾತ ಧೋರಣೆ

ಇಷ್ಟು ಸಂತೋಷಜನಕವಾದ ಪರಿಸ್ಥಿತಿಯಲ್ಲಿ ಕೂಡ ಒಂದುಬಗೆಯ ಶಂಕೆ ಮನೆಮಾಡಿಕೊಂಡಿರಲು ಎಡೆಯುಂಟಾಗಿದೆ. ೧೯೫೧-೫೨ರ ಆಯಾತ ನಿರ್ಯಾತ ಅಂಕೆ ಸಂಖ್ಯೆಗಳ ಮೇಲಿಂದ ಭಾರತವು ೧೫೦ ಕೋಟಿ ರೂಪಾಯಿಗಳ ನಷ್ಟಕ್ಕೆ ಗುರಿಯಾದುದು ತೋರಿಬಂದಿದೆ. ಇದಕ್ಕೆ ಜಾಗತಿಕ ವ್ಯಾಪಾರಕ್ಷೇತ್ರದಲ್ಲಿ ಕಚ್ಚಾವಸ್ತುಗಳ ಬಳಕೆ ಮತ್ತು ಧಾರಣೆ ಒಮ್ಮೆಲೇ ಇಳಿಮುಖವಾದುದು ಮುಖ್ಯ ಕಾರಣ. ಕೇಂದ್ರ ಸರಕಾರದ ವಾಣಿಜ್ಯಮಂತ್ರಿ ಮಹತಾಬರು ಈ ಕುರಿತು ಎಚ್ಚರಿಕೆಯ ಧೋರಣವನ್ನು ಅನುಸರಿಸುವುದು ಅನಿವಾರ್ಯವೆಂದಿರುವರು. ಬೆಲೆಗಳ ಇಳಿಮುಖದಿಂದ ನಿರ್ಯಾತಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯುವುದಿಲ್ಲ. ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ಹಣದನ್ನು ದೇಶದೊಳಗೇನೇ ಉತ್ಪಾದಿಸದಿದ್ದರೆ, ಕೊರತೆ ತುಂಬಿಸಿಕೊಳ್ಳುವುದು ತುಂಬ ಕಷ್ಟಕ್ಕಿಟ್ಟುಕೊಳ್ಳುವುದು. ಈ ಪರಿಸ್ಥಿತಿಯಲ್ಲಿ ಜಾಗರೂಕತೆಯಿಂದಲೂ ಮುಂಧೋರಣೆಯ ಜಾಣಾಕ್ಷಬುದ್ಧಿಯಿಂದಲೂ ವರ್ತಿಸುವುದು ಅಗತ್ಯ.

ಮದ್ರಾಸಿನ ರಾಜಕಾರಣ

ಈ ಸಂದರ್ಭದಲ್ಲಿ ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರು, ಈಚೆಗೆ ಒಂದು ಪತ್ರಿಕಾ ಸಮ್ಮೇಳನದಲ್ಲಿ ಸರಕಾರದ ಧೋರಣದ ಕುರಿತು ವಿವರವಾಗಿ ಆಡಿದ ಮಾತುಗಳು ಸಾಂತ್ವನದಾಯಕವಾಗಿವೆ ಎಂದು ಸ್ಮರಿಸಬಹುದು—ಕಡಿಮೆ ಸಂಬಳ ಪಡೆಯುವ ಸರಕಾರಿ ಹಾಗೂ ಸ್ಥಾನಿಕ ಸಂಸ್ಥೆಗಳ ನೌಕರರ ಮಕ್ಕಳಿಗೆ ಶಿಕ್ಷಣ ಶುಲ್ಕದಲ್ಲಿ ರಿಯಾಯಿತಿಯನ್ನು ತೋರಿಸಿದಂತೆ, ವಿವಿಧ ವಿದ್ಯಾ ಸಂಸ್ಥೆಗಳಲ್ಲಿ ಕೆಲಸಕ್ಕಿರುವ ಶಿಕ್ಷಕರ ಮಕ್ಕಳಿಗೂ ಇದನ್ನು ಅನ್ವಯಿಸುವ ಕುರಿತು ಆಲೋಚಿಸಲಾಗುತ್ತದೆ ಎಂದವರು ತಿಳಿಸಿದರು. ರಾಜ್ಯದಲ್ಲಿ ಅನ್ನ ಕ್ಷಾಮ ಮತ್ತು ನೀರಿನ ಕೊರತೆ ಉಲ್ಬಣಾವಸ್ಥೆ ಮುಟ್ಟಿದೆ. ಮತ್ತು ಪರಿಹಾರ ಕಾರ್ಯಗಳನ್ನು ಭರದಿಂದ ಕೈಗೊಳ್ಳಲಾಗುತ್ತಿದೆ. ಜನರ ಕಷ್ಟ ಪರಂಪರೆಗಳು ಹೀಗೆ ಮಿತಿಮೀರಿ ಬೆಳೆಯುತ್ತಿರುವುದರಿಂದ ಹೊಸತಾಗಿ ಕರಭಾರವನ್ನು ಹೇರಲು ತಾವು ಬಯಸುತ್ತಿಲ್ಲವಾಗಿಯೂ ಮುಖ್ಯ ಮಂತ್ರಿಗಳು ಸ್ಪಷ್ಟಪಡಿಸಿರುವರು. ನಿಯಂತ್ರಣಗಳು ಇರಬೇಕೆಂದು ಯಾರೂ ಬಯಸುವುದಿಲ್ಲ. ಜನರು ಆಹಾರ ಉತ್ಪಾದನೆ ಮಾಡಿ ಯೋಗ್ಯ ಬೆಲೆಗೆ ಹಂಚುವರಾದರೆ, ನಮಗೆ ನಿಯಂತ್ರಣಗಳೇ ಬೇಕಿಲ್ಲ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಪೂರ್ಣವಾಗಿ ನಿಯಂತ್ರಣ ಸಡಲಿಸಬೇಕೆನ್ನುವುದು ಗಂಡಾಂತರಪ್ರಾಯ ಎಂದೂ ಅವರು ಹೇಳಿದ್ದಾರೆ.

ನೂತನ ಶಾಸನ ಸಭಾಭವನ

ಒಟ್ಟು ೩೭೫ ಮಂದಿ ಸದಸ್ಯರಿರುವ ಮದ್ರಾಸಿನ ಶಾಸನಸಭೆಯ ಕಾರ್ಯಕಲಾಪಗಳು ಸ್ಥಳಾಭಾವವನ್ನು ಅನುಭವಿಸದೆ, ಸುಸೂತ್ರವಾಗಿ ನಡೆಯಬೇಕೆಂಬ ಉದ್ದೇಶದಿಂದ ಮೌಂಟರೋಡಿನ ಸರಕಾರೀ ಸ್ಥಳದಲ್ಲಿ ಹೊಸತಾಗಿ ಶಾಸನ ಸಭಾಭವನವೊಂದನ್ನು ಕಟ್ಟಿಸಲಾಗಿದೆ. ಮೊನ್ನೆ ಎರಡನೇ ತಾರೀಕಿಗೆ ಅದರ ಉದ್ಘಾಟನೆಯನ್ನು ಗವರ್ನರ ಶ್ರೀಪ್ರಕಾಶರು ಮಾಡಿದರು. ಈ ಸಭಾಭವನ ನಿರ್ಮಾಣ ಕಾರ್ಯದಲ್ಲಿ ಸುಮಾರು ೧೧.೫ ಲಕ್ಷ ರೂ. ವೆಚ್ಚ ಬಂದಿದ್ದು, ಕೇವಲ ಧ್ವನಿ ಪ್ರಸಾರದ ಏರ್ಪಾಡಿಗಾಗಿಯೇ ೩.೫ ಲಕ್ಷ ರೂಪಾಯಿಗಳನ್ನು ವ್ಯಯಿಸಿದೆ. ಮೊದಲು ಶಾಸನಸಭೆ ಸೇರುತ್ತಿದ್ದ ಸೆಕ್ರೆಟೇರಿಯಟಿನ ಚೇಂಬರಿನಲ್ಲಿ ಅತ್ಯಧಿಕವೆಂದರೆ ೨೭೩ ಮಂದಿ ಕೂಡಬಹುದಿತ್ತು. ಈಗ ಉದ್ಘಾಟಿಸಿದ ನೂತನ ಭವನದಲ್ಲಿ ಅಗತ್ಯ ಬಂದರೆ ೬೫೦ ಮಂದಿ ಒಟ್ಟಾಗಿ ಕುಳಿತಿರಲು ತಕ್ಕ ಅನುಕೂಲತೆಗಳಿವೆ.

ತಾತ್ಕಾಲಿಕ ಶಾಸನಸಭಾಧ್ಯಕ್ಷರಾಗಿ ಗವರ್ನರರಿಂದ ನೇಮಕಗೊಂಡ ಶ್ರೀ ಟಿ. ಟಿ. ರಾಜನ್ ಅವರು ಮದ್ರಾಸು ಶಾಸನ ಸಭಾ ಸದಸ್ಯರ ಪ್ರತಿಜ್ಞಾವಿಧಿಯನ್ನು ಮೂರನೇ ತಾರೀಕಿಗೆ ನೆರವೇರಿಸಿದರು. ಮೊದಲಾಗಿ ಪ್ರತಿಜ್ಞೆಯನ್ನು ಸ್ವೀಕರಿಸುವ ಭಾಗ್ಯವು ಮಾನ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರದ್ದಾಯಿತು. ಸದಸ್ಯರ ಪ್ರತಿಜ್ಞಾವಿಧಿಯು ಒಂದೇ ದಿನದಲ್ಲಿ ಮುಗಿಯಲಿಲ್ಲವಾದುದರಿಂದ ಸೋಮವಾರವೂ ಆ ಕೆಲಸ ಮುಂದುವರೆಯಿತು.

ಪ್ರಥಮ ರಾಷ್ಟ್ರಾಧ್ಯಕ್ಷ ಚುನಾವಣೆ

ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷ ಪದಕ್ಕೆ ಹುರಿಯಾಳಾಗಿ ನಿಂತಿದ್ದ ಐವರು (೧ ಹರಿರಾಮ ೨. ಕೃಷ್ಣಕುಮಾರ ಚಟರ್ಜಿ ೩ ಡಾ| ರಾಜೇಂದ್ರ ಪ್ರಸಾದ ೪. ಕೆ. ಟಿ ಶಹಾ, ಮತ್ತು ೫. ಲಕ್ಷ್ಮಣ ಗಣೇಶ ಥತ್ತೆ.) ಮಹಾನುಭಾವರಲ್ಲಿ ತಮಗೆ ಇಷ್ಟಬಂದವರಿಗೆ ಮತದಾನ ಮಾಡುವ ಘನವಾದ ಕಾರ್ಯವನ್ನು ಬೇರೆ ಬೇರೆ ರಾಜ್ಯ ಶಾಸನಸಭೆಗಳ ಹಾಗೂ ವಿಧಾನ ಮಂಡಲಗಳ ಸದಸ್ಯರೂ, ಮತ್ತು ಕೇಂದ್ರ ಪಾರ್ಲಿಮೆಂಟಿನ ಎರಡೂ ಮನೆಗಳ ಸದಸ್ಯರೂ ಕಳೆದ ಎರಡನೇ ದಿನಾಂಕ ನೆರವೇರಿಸಿದರು. ಎಲ್ಲೆಡೆಯಲ್ಲಿಯೂ ತುಂಬ ಉತ್ಸಾಹದಿಂದ ಮತದಾನವು ನಡೆಯಿತು. ಸಮಗ್ರ ಭಾರತದಲ್ಲಿ ೨೩ ರಾಜ್ಯ ಕೇಂದ್ರಗಳಲ್ಲಿ ಮತ್ತು ದಿಲ್ಲಿಯ ಪಾರ್ಲಿಮೆಂಟ ಭವನದಲ್ಲಿ ಮತದಾನಕ್ಕಾಗಿ ಏರ್ಪಾಡು ಮಾಡಿತ್ತು. ಮತಗಳ ಎಣಿಕೆ ಮಂಗಳವಾ

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs. 10 lacks.
3. Has granted an average dividend of 6% to the Shareholders for the past 20 years
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies

ADOPT IT AS
"MY BANK"
THE VIJAYA BANK, LIMITED,
H O, MANGALORE.

ದಿ ಈಸ್ಟ್ ಎಂಡ್ ವೆಸ್ಟ್
ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಸ್ಥಾಪನೆ:] ಈಸ್ಟ್ ಎಂಡ್ ವೆಸ್ಟ್ ಬಿಲ್ಡಿಂಗ್ಸ್, ಬೊಂಬಾಯಿ 1 [1913

ಉದಾರ ಯಾ ರಿಯಾಯತಿ ಶರ್ತಗಳಿರುವ ಪುರಾತನ ಮತ್ತು ಮುಂದುವರಿದ ಕಂಪೆನಿಗಳಲ್ಲೊಂದಾಗಿರುತ್ತದೆ.

ವಿಮೆಯ ಸಕಲ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು ಆ ಬಾಬಿನ ಎಲ್ಲಾ ಕೆಲಸಗಳಲ್ಲಿ ಭಾಗಿಯಾಗಿ ಸಹಕರಿಸಿ ಸಲಹೆಗಳನ್ನೀಯುತ್ತಾ ಜನಸೇವೆಗೈಯುವುದೇ ನಮ್ಮ ಧ್ಯೇಯ.

ನಮ್ಮ ಚೀಫ್ ಏಜನ್ಸಿ ವಿಸ್ತೀರ್ಣದೊಳಗೆ ಪ್ರತೀ ಜಿಲ್ಲೆಗೊಬ್ಬರಂತೆ ಇನ್ಸ್‌ಪೆಕ್ಟರುಗಳೂ, ಸ್ಪೆಶಲ್ ಏಜಂಟರೂ, ಏಜಂಟರೂ ಬೇಕಾಗಿದ್ದಾರೆ. ಹೆಚ್ಚಿನ ವಿವರಕ್ಕೆ ಬರೆಯುವದು

ಮೆಸ್ಸರ್ಸ್ ಹೆಗ್ಡೆ ಎಂಡ್ ಶಾಸ್ತ್ರಿ,
ಚೀಫ್ ಏಜಂಟರು,
ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಮೈಸೂರು ಸ್ಟೇಟ್,
ಪೋಸ್ಟ್ ಶಿವಾರ, ದ. ಕ.

ದಿಗಂತದಲ್ಲಿ

ಮುಂಬೆಳಕು

ರ ಪೂರ್ವಾಹ್ನ ೧೧ ಗಂಟೆಗೆ ತೊಡಗಿ, ಇಷ್ಟರಲ್ಲೇ ಪರಿಣಾಮ ತಿಳಿಯಬಹುದು.

ಉಸ್ಮಾನಿಯಾ ವಿಶ್ವವಿದ್ಯಾಲಯ

ಹೈದರಾಬಾದ ಸರಕಾರವು ನಡೆಸಿಕೊಂಡು ಬರುತ್ತಿದ್ದ ಉಸ್ಮಾನಿಯಾ ವಿಶ್ವವಿದ್ಯಾಲಯವನ್ನು ಕೇಂದ್ರ ಸರಕಾರವು ತನ್ನ ವಶಕ್ಕೆ ತೆಗೆದುಕೊಳ್ಳುವ ಯೋಚನೆಯಲ್ಲಿದೆ. ರಾಜ್ಯ ಘಟನೆಯಂತೆ ಹಿಂದಿಯನ್ನು ರಾಷ್ಟ್ರ ಭಾಷೆಯ ರೂಪದಲ್ಲಿ ಅತ್ಯಲ್ಪ ಕಾಲದಲ್ಲಿ ವಿಸ್ತರಿಸುವ ಪ್ರಯತ್ನಗಳು ನಡೆಯಬೇಕಾಗಿವೆ. ಮುಖ್ಯವಾಗಿ ಹಿಂದೀ ಪ್ರಚಾರ ನಡೆಯ ಬೇಕಾಗಿರುವ ದಕ್ಷಿಣ ಪಥದಲ್ಲಿ ಅದಕ್ಕೆ ಯೋಗ್ಯ ಕೇಂದ್ರ ಸ್ಥಾನವೂ ಬೇಕಿರುವುದರಿಂದ ಮೊದಲಿನಿಂದಲೂ ದೇಶ ಭಾಷೆಯೊಂದನ್ನು (ಉರ್ದು) ಶಿಕ್ಷಣ ಮಾಧ್ಯಮವಾಗಿಟ್ಟುಕೊಂಡು ಯಶಸ್ಸನ್ನು ಗಳಿಸಿದ ಉಸ್ಮಾನಿಯಾ ವಿಶ್ವವಿದ್ಯಾಲಯದ ಕಡೆಗೆ ಕೇಂದ್ರದ ಕಣ್ಣು ಹೊರಳಿದುದು ಸ್ವಾಭಾವಿಕ. ವಿಶ್ವವಿದ್ಯಾಲಯವನ್ನು ಹಸ್ತಾಂತರಿಸುವುದರಲ್ಲಿ ಬಹುಭಾವ ತೊಂದರೆಗಳು ಮತ್ತು ಸಂಬಂಧಿಸಿದ ಬೇರೆ ಬೇರೆ ವಿಚಾರಗಳನ್ನು ಪರ್ಯಾಲೋಚಿಸಿ ವರದಿ ಮಾಡಲು ಒಂದು ಸಮಿತಿ ನೇಮಕಗೊಂಡಿದೆ. ಇದರಲ್ಲಿ ಒಟ್ಟು ಒಂಭತ್ತು ಮಂದಿ ಸದಸ್ಯರಿದ್ದು ಸಂಸ್ಥಾನ ಶಾಖೆಯ ಕಾರ್ಯದರ್ಶಿ ಶ್ರೀ ವೆಂಕಟಾಚಾರ್ಯರು ಅಧ್ಯಕ್ಷರು. ಸದ್ಯ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿರುವ ಡಾ| ಸೈಯದ ಹುಸೇನರೂ ಈ ಸಮಿತಿಯಲ್ಲಿರುವರು. ಸಮಿತಿಯು ಪ್ರಥಮವಾಗಿ ಸಭೆ ಸೇರಿದ ಎರಡು ತಿಂಗಳೊಳಗೆ ವರದಿ ಒಪ್ಪಿಸಬೇಕಾಗಿದೆ.

ಭೂ ಸುಧಾರಣೆಗಳು

ಭಾರತದಲ್ಲಿ ಭೂ ಸುಧಾರಣಾ ಚಳುವಳಿಗೆ ಈಗ ಪ್ರಾಶಸ್ತ್ಯಬಂದಿದೆ. ಆಚಾರ್ಯ ವಿನೋಬಾ ಭಾವೆಯವರು ಅಖಿಲಭಾರತದಲ್ಲಿ ತಮ್ಮ ಭೂದಾನ ಯಜ್ಞದ ಆಂದೋಲನವನ್ನು ನಡೆಸಲು ಬದ್ಧ ಕಂಕಣರಾಗಿದ್ದಾರೆ. ಭಾರತೀಯರ ಹೃದಯ ಪರಿವರ್ತನೆಗಷ್ಟೇ ಅಲ್ಲದೆ, ವಿದೇಶೀಯರ ಆಸಕ್ತಿಯನ್ನೂ ಈ ಅಪೂರ್ವ ಯಜ್ಞದ ಕಲ್ಪನೆ ಕೆರಳಿಸಿದೆ ಎಂಬುದಕ್ಕೆ "ಮೆಂಚೆಸ್ಟರ್ ಗಾರ್ಡಿಯನ್" ದಂಥ ಪತ್ರಿಕೆಗಳು ಈಚೆಗೆ ಈ ಕುರಿತು ಅಗ್ರಲೇಖ ಬರೆದು ಪ್ರಶಂಸಿಸುತ್ತಿರುವುದು ಸಾಕ್ಷಿ. ಮುಂದಿನೆರಡು ವರ್ಷಗಳಲ್ಲಿ ೨೫ಲಕ್ಷ ಎಕರೆ ಭೂಮಿಯನ್ನು ದಾನವಾಗಿ ಸ್ವೀಕರಿಸಿ, ಸ್ವಂತ ಭೂಮಿ ಇಲ್ಲದ ಒಕ್ಕಲಿಗರಿಗೆ ಕೃಷಿ ಮಾಡಲಿಕ್ಕೆ ಕೊಡಬೇಕೆಂಬ ಅಚಲ ನಿರ್ಧಾರವನ್ನು ಸೇವಾಪುರಿಯಲ್ಲಿ ಸೇರಿದ ಸರ್ವೋದಯ ಸಮ್ಮೇಲನವು ಕೈಗೊಂಡಿದೆ. ಕನ್ನಡ ನಾಡಿನಲ್ಲಿ ಕೂಡ ಕಡಿಮೆಎಂದರೂ ೫೦ ಸಾವಿರ ಎಕರೆ ಭೂಮಿಯನ್ನು ಭೂದಾನ ಯಜ್ಞಕ್ಕೇ ದಾನವಾಗಿ ದೊರಕಿಸಲು ಪ್ರಯತ್ನಗಳು ಹುರುಪಿನಿಂದ ತೊಡಗಿವೆ. ಹೀಗೆ ಸ್ವಯಂ ಪ್ರೇರಣೆಯಿಂದ ರಚನಾತ್ಮಕ ಕಾರ್ಯಕರ್ತರು ಆಂದೋಲನಕ್ಕೆ ಧುಮುಕಿರುವಾಗ, ಕೆಲವು ರಾಜ್ಯ ಸರಕಾರಗಳೂ ಭೂಧಾರಣಾ ಪದ್ಧತಿಯಲ್ಲಿ ತೀವ್ರ ಮಾರ್ಪಾಟು ಉಂಟು ಮಾಡಲಿಕ್ಕೆ ಕಾಯಿದೆಗಳ ಮೂಲಕ ಪ್ರಯತ್ನಿಸುತ್ತೇವೆ. ಜಾಗೀರುದಾರಿ, ಜಾಮೀನುದಾರಿಗಳನ್ನು ನಿರ್ಮೂಲಗೊಳಿಸಿ ಬೇಸಾಯ ಮಾಡುವ ರೈತರಿಗೇನೆ ತಮ್ಮ ಹೊಲದ ಪೂರ್ಣ ಒಡೆತನವನ್ನು ನೀಡುವುದು. ಅವುಗಳು ಮಾಡಿದ ಕಾಯಿದೆಶೀರ ಸುಧಾರಣೆಗಳ ಉದ್ದೇಶ. ಈಚೆಗೆ ಹೈದರಾಬಾದ, ಭೋಪಾಳ, ಪೆಪ್ಸು ಇತ್ಯಾದಿಗಳಲ್ಲಿ ಹೊಸತಾಗಿ ರೂಪಿತವಾದ ಮಂತ್ರಿಮಂಡಳಗಳು ಈ ವಿಷಯವನ್ನು ವಿಶೇಷ ಶ್ರದ್ಧೆಯಿಂದ ವಿಚಾರಿಸುತ್ತಿವೆ. ಅಂಥದರಲ್ಲಿ ಬಿಹಾರ, ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶ ಸರಕಾರಗಳು ಈಗಾಗಲೇ ಪಾಸು ಮಾಡಿರುವ ವಿವಿಧ ಭೂಸುಧಾರಣಾ ಕಾಯಿದೆಗಳ ಕ್ರಮಬದ್ಧತೆಯನ್ನು ಪ್ರಶ್ನಿಸಿ ಕೆಲವು ಜಮೀನುದಾರರು ಮಾಡಿಕೊಂಡ ಅರ್ಜಿಯು ಸದ್ಯ ವಾತಾವರಣದ ಸ್ಫೂರ್ತಿಗೆ ಒಗ್ಗುವುದಿಲ್ಲ. ವರಿಷ್ಠ ನ್ಯಾಯಾಲಯದ ವರೆಗೂ ಹೋದ ಈ ಪ್ರಕರಣಗಳಲ್ಲಿ ಕೊನೆಗೂ ರೈತರಿಗೆ ಹಿತಕರವಾದ ತೀರ್ಪು ಬಂದಿರುವುದು ಸಂತೋಷದ ವಿಚಾರ.

ವಿಮಾನ ಅಪಘಾತ

ಭಾರತವು ಹೀಗೆ ವಿವಿಧ ಕ್ಷೇತ್ರಗಳಲ್ಲಿ ಪ್ರಗತಿ ತೋರಿಸುತ್ತಿರುವಾಗ ಅಲ್ಲಲ್ಲಿ ವಿಮಾನ ದುರ್ಘಟನೆಗಳು, ರೈಲು ಅಪಘಾತಗಳು ನಡೆಯುತ್ತಿರುವ ಸುದ್ದಿ ಕೇಳಬೇಕಾಗುವುದು ಅಪೇಕ್ಷಣೀಯವಲ್ಲ. ಮೊನ್ನೆ ಮೊನ್ನೆ ಡೆಕ್ಕನ್ ಏರ್‌ವೇಸ್ ಕಂಪೆನಿಯ ಪ್ರಯಾಣಿಕ ವಿಮಾನವೊಂದು ಹೊಸದಿಲ್ಲಿಯ ವಿಲಿಂಗ್ಡನ್ ವಿಮಾನನಿಲ್ದಾಣದ ಬಳಿ ಅಪಘಾತಕ್ಕೀಡಾದ ವಾರ್ತೆ ಬಂದಿದೆ. ಅದರಲ್ಲಿದ್ದ ಐವರು ಪ್ರಯಾಣಿಕರೂ ನಾಲ್ಕು ಮಂದಿ ವಿಮಾನ ಕೆಲಸಗಾರರೂ ಪ್ರಾಣಕ್ಕೆ ಎರವಾದರು. ಮದ್ರಾಸಿನಿಂದ ಬೆಂಗಳೂರು– ಹೈದರಾಬಾದ ಮಾರ್ಗವಾಗಿ ದಿಲ್ಲಿಗೆ ಹೊರಟಿದ್ದ ವಿಮಾನವು ನಿಲ್ದಾಣದ ಮೇಲೆ ಸುತ್ತುತ್ತಾ ಇದ್ದಂತೆ, ದೂಗದ ಹೊಲದಲ್ಲಿ ಬಿದ್ದುಹೋಯಿತು. ಆ ಸಮಯದಲ್ಲಿ ದೂಳಿನಿಂದ ಗಗನ ಮಂಡಲವೆಲ್ಲ ಮುಚ್ಚಿಹೋಗಿದ್ದುದರಿಂದ ವಿಮಾನವು ನಿಲ್ದಾಣದಲ್ಲಿ ಇಳಿಯಲು ಅವಕಾಶ ಸಿಗದಾಯಿತೆಂದು ಹೇಳುತ್ತಿರುವರು. ಕೆಲ ಸಮಯಗಳಿಂದ ಇಂಥ ಅವಘಡಗಳು ಭಾರತದಲ್ಲಿ ಹೆಚ್ಚಿಕೊಂಡಿರುವುದಕ್ಕೆ ಪ್ರಾಯಶಃ ನಮ್ಮ ವೈಮಾನಿಕರಲ್ಲಿ ದೀರ್ಘ ಉಡ್ಡಾಣಕ್ಕೆ ಬೇಕಾಗಿರುವ ನೈಪುಣ್ಯ ಮತ್ತು ಚಾಣಾಕ್ಷಬುದ್ಧಿಯ ವಿಶೇಷ ಕೊರತೆ ಇರುವುದೇ ಕಾರಣವಿರಬಹುದು. ಅಲ್ಲದೆ ಭಾರತದ ವಿಮಾನಗಳ ರಚನೆಯಲ್ಲಿ ಕೂಡ ಕೆಲವು ಹೆಚ್ಚುಕಡಮೆಗಳಾಗುತ್ತಿರಬಹುದು. ಏನಿದ್ದರೂ, ಇವನ್ನೆಲ್ಲ ಕೂಲಂಕಶವಾಗಿ ಪರಿಶೀಲಿಸಿ, ತಕ್ಕ ನಿವಾರಣೋಪಾಯಗಳನ್ನು ಕೈಗೊಳ್ಳುವುದು ಆವಶ್ಯವಿದೆ. ಈ ಉದ್ದೇಶದಿಂದ ಈ ಬಾರಿ ಕೇಂದ್ರ ಸರಕಾರದವರು ವರಿಷ್ಠ ನ್ಯಾಯಾಲಯದ ನ್ಯಾಯಮೂರ್ತಿ ಚಂದ್ರಶೇಖರ ಅಯ್ಯರರ ಅಧ್ಯಕ್ಷತೆಯಲ್ಲಿ ಒಂದು ವಿಚಾರಣಾ ಸಮಿತಿಯನ್ನು ನೇಮಿಸಿದ್ದು, ಅದು ಇಷ್ಟರಲ್ಲೇ ಕಾರ್ಯಾರಂಭ ಮಾಡಿದೆ.

ಮೇ ದಿನಾಚರಣೆ

ದೇಶದ ಶ್ರಮಜೀವಿಗಳು ಬಹಳ ವಿಜೃಂಭಣೆಯಿಂದ ಮೇ ದಿನಾಚರಣೆಯನ್ನು ಆಚರಿಸಿದರು. ಕಮ್ಯೂನಿಸ್ಟ ಪಕ್ಷ, ಸೋಶಲಿಸ್ಟ ಪಕ್ಷ ಮತ್ತು ಕಾಂಗ್ರೆಸ ಮುಂತಾದವುಗಳ ವತಿಯಿಂದ ವಿವಿಧ ಸಭೆ ಸಮಾರಂಭಗಳು ಜರುಗಿದುವು. ಹೊಸದಿಲ್ಲಿಯಲ್ಲಿ ಸೇರಿದ ಸಭೆಯಲ್ಲಿ ಪ್ರಧಾನಿ ನೆಹರೂ ಕೆಲಸಗಾರರನ್ನು ಉದ್ದೇಶಿಸಿ ಮಾತನಾಡಿದರು. ಮೇ ದಿನಾಚರಣೆಗೆ ಇತರ ರಾಷ್ಟ್ರಗಳಲ್ಲಿ ವಿಶಿಷ್ಟ ಮಹತ್ವವಿರಬಹುದಾದರೂ ಅದನ್ನು ಭಾರತದಲ್ಲಿಯೂ ಆಚರಿಸುವಷ್ಟರ ಮಟ್ಟಿನ ರಾಷ್ಟ್ರೀಯ ಮಹತ್ವದ ಕಾರಣಗಳು ಅದಕ್ಕೆ ಇಲ್ಲವೆಂದು ಅವರು ಅಭಿಪ್ರಾಯಪಟ್ಟರು. ಕೆಲಸಗಾರರು ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಶಾಂತ ಮಾರ್ಗವನ್ನು ಅನುಸರಿಸಬೇಕಾಗಿ ಅವರು ಕೇಳಿಕೊಂಡರು.

ಮದ್ರಾಸಿನ ಪಬ್ಲಿಕ್ ಇನ್‌ಸ್ಟ್ರಕ್ಷನಿನ ಡೈರೆಕ್ಟರರಿಂದ ನವಯುಗ ವಾರಪತ್ರಿಕೆಯು ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಸೆಕೆಂಡರಿ ಶಾಲೆಗಳು ಅದನ್ನು ತರಿಸಿಕೊಳ್ಳಬಹುದಾಗಿದೆ.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಶೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ

ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ

ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಮದುವೆ, ಉಪನಯನ ಮತ್ತಿತರ ಯಾವತ್ತೂ

ಶುಭ ಸಮಾರಂಭಗಳ ಕಾಲದಲ್ಲಿ ಏರ್ಪಡಿಸುವ

ಟೀಪಾರ್ಟಿ ಸತ್ಕಾರ ಸಮಾರಂಭಗಳು

ಎಷ್ಟೇ ದೊಡ್ಡ ಪ್ರಮಾಣದಲ್ಲಿದ್ದರೂ ತೃಪ್ತಿಕರವಾಗಿ

ಯೋಗ್ಯ ವ್ಯವಸ್ಥೆಯೊಂದಿಗೆ ನಾವು ಪೂರೈಸಿ ಕೊಡುತ್ತೇವೆ.

ಮಹಾ ಜನರು ಗಮನಿಸಬೇಕು.

ತಾಜಮಹಾಲ್, ಸಿನೆಮಾ ಥಿಯೇಟರಿನ ಬಳಿ ಉಡುಪಿ.

THE CANARA BANKING CORPORATION LIMITED.
ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್, ಲಿಮಿಟೆಡ್
ಸ್ಥಾಪನೆ : 1906. : : ಪ್ರಧಾನ ಕಾರ್ಯಾಲಯ: ಉಡುಪಿ, (ದ.ಕಾ.)
ವಿಶೇಷ ಸವಲತ್ತುಗಳಿದ್ದು,
ಸಾಲಿಯಾನ್ ಶೇಕಡಾ 4ರಂತೆ ಬಡ್ಡಿ ಗಳಿಸುವ ನಮ್ಮ
"ಪಂಚವಾರ್ಷಿಕ ಸುವರ್ಣ ಠೇವಣಾತಿಗಳ"
ಮೇಲೆ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.
ವಿಶೇಷ ಮಾಹಿತಿಗೆ, ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ
ವಿ. ಆರ್. ಕಾಮತ್, ಬಿ ಎ; ಎಲ್ ಎಲ್, ಬಿ;
ಜನರಲ್ ಮೆನೇಜರ್.

ನವಯುಗ

ಚಂದಾ ವಿವರ

ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೮-೫-'೫೨

ಅಭಿನಂದನೆಗಳು

ರಾಷ್ಟ್ರಾಧ್ಯಕ್ಷ ಹುದ್ದೆಗೆ ಅನುಚಿತವಾದ ರೀತಿಯಲ್ಲಿ ಸ್ಪರ್ಧೆ ಎದ್ದಾಗ ಅದನ್ನು ಹುಡುಗಾಟಕ್ಕೆ ಹೋಲಿಸಿದವರು ನಮ್ಮಲ್ಲಿ ಸ್ವಲ್ಪ ಮಂದಿ ಇದ್ದರು. ದೇಶದ ಗತವೈಭವಗಳ ಪರಂಪರೆಗೆ ಚ್ಯುತಿ ಇಲ್ಲದಂತೆ ಗೌರವಾಸ್ಪದ ರೀತಿಯಲ್ಲಿಯೂ ಸದ್ಯದ ಕಷ್ಟ-ನಷ್ಟಗಳ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಗೊಂದಲಕ್ಕೆಡೆಕೊಡದೆ ಅಸಾಮಾನ್ಯ ಧೈರ್ಯಸ್ಥೈರ್ಯಗಳಿಂದಲೂ ಭವಿತವ್ಯವನ್ನು ತೂಗಿಸಿಕೊಂಡು ಹೋಗಬಲ್ಲ ಅನುಪಮ ಸಾಮರ್ಥ್ಯವುಳ್ಳ ಮುತ್ಸದ್ದಿಗೇನೆ ಸರ್ವಶ್ರೇಷ್ಠವಾದ ರಾಷ್ಟ್ರಾಧ್ಯಕ್ಷ ಸ್ಥಾನವು ದೊರೆಯಬೇಕೆಂಬುದು ವಿವೇಕ ಸಮ್ಮತವೂ ನ್ಯಾಯವೂ ಆಗಿದೆ. ತೇಜೋವಿಭೂತಿಯಾದ ಡಾ॥ ರಾಜೇಂದ್ರ ಪ್ರಸಾದರ ಹೆಸರನ್ನು ಭಾರತದ ಮಂತ್ರಿಮಂಡಲಿ ನೆಹರೂ ಸೂಚಿಸಿದಾಗ ಅವರ ಆಯ್ಕೆಗೆ ಎಲ್ಲೆಡೆಯಿಂದಲೂ ಮುಕ್ತ ಸ್ವಾಗತ ದೊರೆಯಿತು. ಅದರಲ್ಲೂ ಪ್ರಸಾದರನ್ನು ಕಾಂಗ್ರೆಸಿನ ಹುರಿಯಾಳೆಂದು ನಿಲ್ಲಿಸಿರದೆ "ಸ್ವತಂತ್ರದ ವಿಭೂತಿ ಪುರುಷನೆಂಬ ಕಾರಣದಿಂದ ಸೂಚಿಸಲಾಗಿದೆ ಎಂದು ನೆಹರೂ ಸ್ಪಷ್ಟಪಡಿಸಿದಾಗ, ಇದ್ದ ಅಲ್ಪ ಸ್ವಲ್ಪ ಶಂಕೆ ಕೂಡ ಅಳಿದು ಹೋಯಿತು. ಪರಿಷ್ಕೃತ ಸ್ಥಾನವಾದ ರಾಷ್ಟ್ರಾಧ್ಯಕ್ಷ ಪದವಿಗೆ ಪ್ರಸಾದರು ಸರ್ವರೀತಿಯಿಂದಲೂ ಅರ್ಹರಿರುವರು ಎಂಬುದನ್ನು ಅವರ ಈ ವರೆಗಿನ ಜೀವನಾವಲೋಕನದಿಂದ ಯಾರೂ ಮನಗಾಣಬಹುದಾಗಿದೆ. ಅಸಹಕಾರ ಚಳುವಳಿಯು ಈ ಪವಿತ್ರ ಭೂಮಿಯಲ್ಲಿ ತೊಡಗಿದ ಕ್ಷಣದಿಂದ ಬಾಬು ರಾಜೇಂದ್ರ ಪ್ರಸಾದರು ಗಾಂಧೀಯ ನಿಕಟಾನುವರ್ತಿಯಾಗಿ ಪರಿಣಮಿಸಿದರು. ಮೂರುಸಲ ಕಾಂಗ್ರೆಸಿನ ಅಧ್ಯಕ್ಷ ಪೀಠವನ್ನೇರಿ, ಸಮಯೋಚಿತ ಮಾರ್ಗದರ್ಶನ ನೀಡಿರುವರು. ಚಂಪಾರಣ್ಯ ಸತ್ಯಾಗ್ರಹ ಕಾಲದಲ್ಲಿ ಅವರೇ ಅನಿಸ್ಪರ್ಧ ಅಹಿಂಸಾವಾದಿ ಎಂದು ಸಿದ್ಧವಾದರೆ, ಬಿಹಾರ ಭೂಕಂಪದ ದಿನಗಳಲ್ಲಿ ಅವರ ಸೇವಾ ನಿರ್ಭರ ವ್ಯಕ್ತಿತ್ವವು ಪ್ರದರ್ಶಿತವಾಯಿತು. ರಾಷ್ಟ್ರ ಹಿತ ಸಂವರ್ಧನೆಗೆ ವಿವಿಧ ರೀತಿಯಲ್ಲಿ ಪ್ರೋತ್ಸಾಹ ಕಾರ್ಯನಿರ್ವಹಿಸಿಸಗುವ ಅನೇಕ ಸಂಘ-ಸಂಸ್ಥೆಗಳು ಈಗಲೂ ರಾಜೇಂದ್ರ ಪ್ರಸಾದರ ಸಂಪರ್ಕ ಲಾಭವನ್ನು ಗಳಿಸಿಕೊಂಡಿವೆ ಭಾರತದ ರಾಜ್ಯ ಘಟನೆಯನ್ನು ಸಿದ್ಧಗೊಳಿಸುವ ಸಮಯ ಘಟನಾ ಸಮಿತಿಯ ಅಧ್ಯಕ್ಷರಾಗಿ ಪ್ರಸಾದರು ತೋರಿದ ತಾಳ್ಮೆ ಜಾಣ್ಮೆಗಳು ಅನುಕರಣೀಯವಿವೆ. ಗಾಂಧೀಯ ತ್ಯಾಗ ಜೀವನ, ನೆಹರೂವಿನ ಸೇವಾ ಮನೋವೃತ್ತಿ ಮತ್ತು ರಾಜಾಜಿಯ ಚಾಣಾಕ್ಷ ಬುದ್ಧಿ—ಇವು ಮೂರೂ ವಿಶೇಷ ಗುಣಗಳ ಸುಂದರ ಸಮನ್ವಯ ರಾಜೇಂದ್ರ ಪ್ರಸಾದರ ವ್ಯಕ್ತಿತ್ವದಲ್ಲಿ ರೂಪುಗೊಂಡಿದೆ. ಈ ಕಾರಣದಿಂದಲೇ ಭಾರತ ಪ್ರಜಾ ರಾಜ್ಯದ ಪ್ರಥಮ ಅಧ್ಯಕ್ಷರಾಗಿ ಅವರು ಆರಿಸಲ್ಪಟ್ಟರು. ಅಂದಿನಿಂದ ಕಳೆದ ಈ ಎರಡು ವರ್ಷಗಳ ಸಂಕ್ರಮಣ ಕಾಲದಲ್ಲಿ ಅವರು ರಾಜ್ಯ ಸೂತ್ರಗಳನ್ನು ನಿರ್ವಹಿಸಿಕೊಂಡು ಬಂದಿರುವ ಬಗೆಯಿಂದಲೂ ಪ್ರಜಾ ಜನರ ಕಲ್ಯಾಣಕ್ಕೆ ಪರಿಶ್ರಮಿಸಿದ ರೀತಿಯಿಂದಲೂ ಇನ್ನು ಮುಂದೆಯೂ ಅವರು ರಾಷ್ಟ್ರಾಧ್ಯಕ್ಷಸ್ಥಾನದಲ್ಲಿ ಉಳಿಯುವುದು ಇಷ್ಟವಾಗಿತ್ತು. ಹೀಗಿರುವಾಗ—ಕೇವಲ ಒಣ ಜಂಭದ ಹೊಲಸು ಮನೋವೃತ್ತಿಯಿಂದ ಪ್ರಸಾದರನ್ನು ವಿರೋಧಿಸಿದ ಉಮೇದುವಾರರು ಕೈಬೆರಳೆಣಿಸಬಹುದಾದಷ್ಟು ಅಲ್ಪ ಮತಗಳನ್ನು—ಅದೂ ಅಪ್ಪಿ ತಪ್ಪಿಯೋ ಇರಬೇಕು—ಪಡೆದು, ಜನತೆಯ ತಿರಸ್ಕಾರಕ್ಕೆ ಬಲಿಯಾದುದು ಚೆನ್ನಾಯಿತು. ರಾಷ್ಟ್ರದ ಸರ್ವಾಂಗೀಣ ಉನ್ನತಿಯನ್ನೂ ಹಿತಸಂವರ್ಧನೆಯನ್ನೂ ಧ್ಯೇಯವಾಗಿಟ್ಟುಕೊಂಡ ನಿಃಸ್ವಾರ್ಥತೆಯಿಂದ ದುಡಿಯಬೇಕಿರುವ ಈ ದಿನಮಾನಗಳಲ್ಲಿ ಅನುಚಿತ ಧ್ಯೇಯೋದ್ದೇಶಗಳಿಗೆ ಬಲಿಯಾಗುವುದು ಅಥವಾ ಅವಿಚಾರದ ಸ್ಪರ್ಧೆಗೆ ಇಳಿವ ಕ್ಷೇತ್ರ ದಕ್ಷರಾಯೇ ಆಗಲಿ—ಎಡೆಕೊಡುವುದು ತರವಲ್ಲ. ಜನತೆ ಇದನ್ನು ಸಂಪೂರ್ಣ ಮನಗಂಡು ಯಾವಾಗಲೂ ಒಳ್ಳೆಯ ರೀತಿಯಲ್ಲಿ ನಡೆಕೊಳ್ಳುವುದೂ ಸತ್ಯವನ್ನೂ ನ್ಯಾಯವನ್ನೂ ಎತ್ತಿಹಿಡಿಯುವುದೂ ಅಪೇಕ್ಷಣೀಯ. ಇದಕ್ಕೊಂದು ನಿರ್ಮಲ ಉದಾಹರಣೆ—ಭಾರತದ ರಾಷ್ಟ್ರಾಧ್ಯಕ್ಷರೆಂದು ರಾಜೇಂದ್ರ ಪ್ರಸಾದರ ಪುನರಾಯ್ಕೆ. ಈ ಸಂದರ್ಭದಲ್ಲಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುವುದು ನಮ್ಮ ಕರ್ತವ್ಯ

"ಮಧುವನ" "ಕಾವ್ಯಸಾಮ್ರಾಜ್ಯ" ಮೊದಲಾದ ಕರ್ನಾಟಕದ ಪ್ರಾತಿನಿಧಿಕ ಕಥಾಸಂಗ್ರಹ, ಕವನ ಸಂಗ್ರಹಗಳನ್ನು ಪ್ರಕಟಿಸಿ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕ್ರಾಂತಿಯನ್ನೆಬ್ಬಿಸಿದ ಉಡುಪಿಯ ಕಿರಿಯರ ಪ್ರಪಂಚದ ಉತ್ತಮ ಪುಸ್ತಕಗಳನ್ನು ಓದಿರಿ

ಲೋಕದ ನಡತೆ

ಮತಾಧಿಕಾರದ ಪುನಃ ಪ್ರಾಪ್ತಿಗಾಗಿ ಸತ್ಯಾಗ್ರಹ ಹೂಡಿರುವ ಸಿಂಹಳೀ ಭಾರತೀಯರ ವಿಚಾರದಲ್ಲಿ ಭಾರತ ಸರಕಾರವು ಸಹಾನುಭೂತಿಯಿಂದ ವರ್ತಿಸಿದೆ. ಬೇಕೆಂದೇ ಅಪಾಯಕರ ಸನ್ನಿವೇಶಗಳಲ್ಲಿ ಧುಮುಕಿದ ಸತ್ಯಾಗ್ರಹಿಗಳ ಸಂರಕ್ಷಣೆಗೆ ಸರಕಾರವು ಬದ್ಧವಿಲ್ಲವೆಂದು ಸಿಲೋನಿನ ಗೃಹಮಂತ್ರಿ ಗುಣತಿಲಕ ಉದ್ಗರಿಸಿದುದನ್ನು ಖಂಡಿಸಿ, ಭಾರತ ಸರಕಾರವು ಪತ್ರ ಬರೆಯಿತು. ಸಿಂಹಳೀ ಭಾರತೀಯರು ಶಾಂತವಾದ ಸತ್ಯಾಗ್ರಹದಲ್ಲಿ ಪ್ರವೃತ್ತರಾದಷ್ಟು ಕಾಲ, ಅವರ ಸಂರಕ್ಷಣೆಯ ಭಾರ ಸಿಲೋನು ಸರಕಾರದ ಮೇಲಿದೆ ಎಂದು ಅದರಲ್ಲಿ ಸ್ಪಷ್ಟಪಡಿಸಲಾಗಿತ್ತು. ಇದಕ್ಕೆ ಉತ್ತರ ರೂಪವಾಗಿ, ಸತ್ಯಾಗ್ರಹವನ್ನು ಭಾರತೀಯರು ಹಿಂದೆಗೆದುಕೊಳ್ಳುವಂತೆ ಭಾರತ ಸರಕಾರವು ತನ್ನ ವರ್ಚಸ್ಸನ್ನು ಉಪಯೋಗಿಸಬೇಕೆಂದು ಸಿಲೋನು ಸೂಚಿಸಿತು. ಈ ಅನುಚಿತ ಸಲಹೆಯನ್ನು ಭಾರತವು ಧಿಕ್ಕರಿಸಿದ್ದು, ನ್ಯಾಯವಾದ ಹಕ್ಕಿಗಾಗಿ ಹೋರಾಡುವ ಸತ್ಯಾಗ್ರಹಿಗಳನ್ನು ಹೀಗೆ ನಿರುತ್ಸಾಹಗೊಳಿಸಲು ತಾನೆಂದಿಗೂ ಸಿದ್ಧವಿಲ್ಲವೆಂದು ಸ್ಪಷ್ಟಪಡಿಸಿದೆ. ಭಾರತೀಯ ಸತ್ಯಾಗ್ರಹಿಗಳೀಗ ಉಪವಾಸಕ್ಕೆ ಅಂಟಿಕೊಂಡಿರುವರು. ಇವರಿಗೆ ಕಮ್ಯೂನಿಸ್ಟರ ಬೆಂಬಲವಿದೆ ಎಂದೂ ಅವರೆಲ್ಲರೂ ಪರಕೀಯರೆಂದೂ ದೇಶದ್ರೋಹಿಗಳೆಂದೂ ಸಿಲೋನು ಸರಕಾರ ಆಪಾದಿಸಿದೆ.

ಂಂ ಂಂ

ಅಮೇರಿಕಾಧ್ಯಕ್ಷ ಟ್ರೂಮನ್ನರು ಹೊರಡಿಸಿದ ಉಕ್ಕಿನ ಕಾರ್ಖಾನೆಗಳನ್ನು ಸರಕಾರವು ವಶಪಡಿಸಿಕೊಳ್ಳುವ ಆಜ್ಞೆಯು ಅಕ್ರಮವೆಂದು ಕೆಳಗಿನ ಕೋರ್ಟು ನಿರ್ಣಯಿಸಿದುದರಿಂದ, ಈಗ ವರಿಷ್ಠ ನ್ಯಾಯಾಲಯದ ಮುಂದೆ ಈ ಪ್ರಶ್ನೆ ಬಂದಿದೆ. ಅಧ್ಯಕ್ಷರ ಘಟನಾತ್ಮಕ ಅಧಿಕಾರದ ಬಗ್ಗೆ ನಿರ್ಣಯವು ಬೇಕಾಗಿದ್ದು, ಮೇ ೧೨ನೇ ತಾರೀಕಿಗೆ ಕೋರ್ಟು ಈ ಸಂಗತಿ ವಿಚಾರಿಸಲು ಒಪ್ಪಿಕೊಂಡಿದೆ. ಈ ನಡುವೆ ಹೆಚ್ಚು ಸಂಬಳದ ಬೇಡಿಕೆಯನ್ನು ಮುಂದಿಟ್ಟುಕೊಂಡು ಸಂಪು ಹೂಡಿರುವ ಉಕ್ಕಿನ ಕೆಲಸಗಾರರ ಕೇಳಿಕೆಗೆ ಅಧ್ಯಕ್ಷ ಟ್ರೂಮನ್ನರು ಸಮ್ಮತಿ ಸೂಚಿಸಿದ್ದಾರು. ಆದರೆ ನ್ಯಾಯಾಲಯವು ಈಗ ಉಕ್ಕಿನ ಉದ್ದಿಮೆದಾರರ ಸಮ್ಮತಿ ಇಲ್ಲದೆ ಸರಕಾರದ ವೇತನ ಮಂಡಳಿಯ ಶಿಫಾರಸಿನಂತೆ ಸಂಬಳ ಏರಿಸಲು ಬರುವುದಿಲ್ಲ—ಎಂದು ತೀರ್ಪು ನೀಡಿದೆ.

ಂಂ ಂಂ

ಆಂಗ್ಲೊ—ಈಜಿಪ್ಶಿಯನ್ ವೈಮನಸ್ಯ ಈಗ ಸುಯೇಜ ಕಾಲುವೆಯ ಪ್ರಕರಣದಿಂದ, ಸುಡಾನಿನ ಭವಿತವ್ಯದ ಕಡೆಗೆ ತಿರುಗಿಕೊಂಡಿದೆ. ಸುಡಾನೀ ಜನರ ಇಚ್ಛೆಗೆ ವಿರುದ್ಧವಾಗಿ ಅರಸ ಫರೂಕರ ಸಾರ್ವಭೌಮಾಧಿಕಾರವನ್ನು ಹೇರಲು ತಾನು ಒಡಂಬಡುವುದಿಲ್ಲವೆಂದೂ ಸ್ವಾತಂತ್ರ್ಯ ಸ್ವಯಂ ನಿರ್ಣಯಕ್ಕೆ ಸುಡಾನಿನ ಜನತೆಗೆ ನೀಡುವ ತನ್ನ ವಾಗ್ದಾನಕ್ಕೆ ಬದ್ಧವಿರುವುದಾಗಿಯೂ ಬ್ರಿಟನು ಹೇಳಿದೆ. ಈ ಕುರಿತು ಸುದೀರ್ಘ ವಿಚಾರವಿನಿಮಯಗಳನ್ನು ಲಂಡನ್ನಿನಲ್ಲಿ ವಿದೇಶ ಮಂತ್ರಿ ಈಡನ್ನರು ನಡೆಸಿದರು. ಫಲಶ್ರುತಿ ಎಂಬಂತೆ ಇದೀಗ ಬ್ರಿಟನಿನ ರಾಯಭಾರಿ ಸರ್ ರಾಲ್ಫ್ ಸ್ಟೀವನ್‌ಸನ್ನರು ಹೊಸ ಸೂಚನೆಯೊಂದಿಗೆ ಕೈರೋಗೆ ಬಂದು ಮುಖ್ಯಮಂತ್ರಿ ಹಿಲಾಲಿ ಪಾಶಾ ಮುಂತಾದವರನ್ನು ಕಂಡರು. ಹಾಗೆಯೇ ಸುಡಾನಿ ಜನರಿಗೆ ಬ್ರಿಟನದ ಒಸಗೆಯನ್ನು ತಿಳಿಸಲು ಗವರ್ನರ ಜನರಲ ಸರ್ ರಾಬರ್ಟ ಹೋ ಲಂಡನಿನಿಂದ ಖಾರ್ಟೂಮಕ್ಕೆ ಹೋಗಿರುವರು. ಸುಡಾನೀ ಜನರಲ್ಲಿ ಪಕ್ಷಪಂಗಡಗಳು ಒಡೆದುಕೊಂಡಿದ್ದು, ಸುಡಾನಿನ ಭಾವೀ ಸ್ಥಾನಮಾನದ ಬಗ್ಗೆ ಭಿನ್ನಾಭಿಪ್ರಾಯಗಳು ಒಡಮೂಡಿವೆ. ಹೀಗಿದ್ದರೂ ಬ್ರಿಟನಿನ ಹೊಸ ಕೊಡುಗೆಯ ಸ್ವರೂಪವೇನೆಂಬುದನ್ನು ತಿಳಿದುಕೊಳ್ಳಲು ಅವು ಆತುರವಿವೆ.

ಂಂ ಂಂ

ದ್ವಿತೀಯ ಮಹಾಯುದ್ಧದಲ್ಲಿ ಸೋಲಾಗಿ ಶರಣಾಗತವಾದ ಜರ್ಮನಿಯು ಅಸ್ತಿ ಇನ್ನೂ ಒಂದು ನೆಲೆಗಡೆಗೆ ಬಂದಿಲ್ಲ. ಪೂರ್ವ ಮತ್ತು ಪಶ್ಚಿಮ ಎಂದು ಎರಡು ತುಂಡಾಗಿ ಒಡೆದು ರಶಿಯಾ ಮತ್ತು ಆಂಗ್ಲೊ-ಅಮೇರಿಕನ್ ಬಣಗಳೊಳಗೆ ಹಂಚಿಹೋದ ಈ ರಾಷ್ಟ್ರದ ಭವಿಷ್ಯ ಇನ್ನೂ ಅನಿಶ್ಚಿತ ರೂಪದಲ್ಲಿದೆ. ಅಧ್ಯಕ್ಷರ ಆಯ್ಕೆಯ ಕಾರಣದಿಂದ ಮುಂದಿನ ಜೂನಿನಿಂದ ಆರು ತಿಂಗಳ ಕಾಲ ಅಮೇರಿಕನ್ ಕಾಂಗ್ರೆಸು ಮುಂದರೆಯುವುದರಿಂದ ಅಷ್ಟರೊಳಗಾಗಿ ಜರ್ಮನಿಯ ಕುರಿತೊಂದು ಒಡಂಬಡಿಕೆ ಮಾಡಿಕೊಳ್ಳಲು ಪಾಶ್ಚಾತ್ಯ ರಾಷ್ಟ್ರಗಳು ಉತ್ಸುಕವಿವೆ. ಮುಖ್ಯ ಬಿಕ್ಕಟ್ಟು ಅಟ್ಲಾಂಟಿಕ ರಾಷ್ಟ್ರದ ಗುಂಪಿನಲ್ಲಿ ಏಕೀಕೃತ ಜರ್ಮನಿಯ ಸ್ಥಾನಮಾನದ ಕುರಿತು ಮತ್ತು ಜರ್ಮನಿಯ ಪುನಃ ಶಸ್ತ್ರೀಕರಣ ಸಂಬಂಧದಲ್ಲಿ ಉಂಟಾಗಿದೆ. ಪೂರ್ವ ಮತ್ತು ಪಶ್ಚಿಮ ವಿಭಾಗಗಳಲ್ಲಿ ನಿಷ್ಪಕ್ಷಪಾತ ಮತಗಣನೆ ನಡೆಯಬೇಕೆಂದು ಸೂಚನೆ ಇದ್ದರೂ ರಶಿಯಾದ ಮನೋವೃತ್ತಿ ಪಾಶ್ಚಾತ್ಯರಿಗೆ ಆಶಾದಾಯಕವೆಂದು ತೋರಿಲ್ಲ.

ಂಂ ಂಂ

ಟ್ಯುನೀಶಿಯಾ ಪ್ರಕರಣವನ್ನು ವಿಚಾರಿಸಲು ಭದ್ರತಾ ಮಂಡಳಿವು ನಿರಾಕರಿಸಿದುದರಿಂದ, ಸಂಯುಕ್ತ ರಾಷ್ಟ್ರ ಸಂಘದ ಅಸ್ತಿತ್ವಕ್ಕೆ ಧಕ್ಕೆ ತಗಲಿದೆ ಎಂದು ಪಾಶ್ಚಾತ್ಯ ಪತ್ರಿಕೆಗಳೂ ಅಭಿಪ್ರಾಯಗೊಂಡಿವೆ. ಸಂಯುಕ್ತ ರಾಷ್ಟ್ರ ಸಂಘದ ಕಾರ್ಯಕಲಾಪಗಳು ಯಶಸ್ವಿಯಾಗಬೇಕಿದ್ದರೆ, ಚಿಕ್ಕ ಪುಟ್ಟ ರಾಷ್ಟ್ರಗಳ ಅಭಿಪ್ರಾಯಕ್ಕೂ ಬೆಲೆಕೊಡಬೇಕಾಗುವುದೆಂದು ಅವು ಉಚ್ಚರಿಸಿವೆ. ದೊಡ್ಡ ರಾಷ್ಟ್ರಗಳ ಮನಸ್ಸಿಗೆ ಬರುವುದಿಲ್ಲವೆಂದಷ್ಟಕ್ಕೆ ಸಣ್ಣ ರಾಷ್ಟ್ರಗಳ ಸೂಚನೆಗಳಿಗೆ ತಾತ್ಸಾರ ಮನ್ನಣೆಯನ್ನು ಕೊಡದೆ ಹೋಗುವುದು ವಿಶ್ವಕಲ್ಯಾಣ ದೃಷ್ಟಿಯಿಂದ ಘಾತಕ ಮನೋವೃತ್ತಿ ಎಂದವು ದರಿವೆ. ಸದ್ಯಕ್ಕೆ ಲಾಟೀನ—ಅಮೇರಿಕೆಯ ರಾಷ್ಟ್ರಗಳ ಪ್ರತಿನಿಧಿಗಳೂ ಏಶಿಯಾ-ಅರಬ ರಾಷ್ಟ್ರ ಪ್ರತಿನಿಧಿಗಳೂ ಒಂದು ಸಮ್ಮೇಳನದಲ್ಲಿ ಸೇರಿ, ಸಹಾನುಭೂತಿಯ ಪದ ಮುಂದಿನ ಹೆಜ್ಜೆಯ ಕುರಿತು ವಿಚಾರ ನಡೆಸಿವೆ.

ರಾಷ್ಟ್ರಾಧ್ಯಕ್ಷರೆಂದು ಪ್ರಸಾದರ ಪುನರಾಯ್ಕೆ

ಶಾಸನ ಸಭಾ ಕಾರ್ಯಕಲಾಪಗಳು

ಭಾರತ ಪ್ರಜಾರಾಜ್ಯದಲ್ಲಿ ಪ್ರಥಮ ಬಾರಿ ಮಹಾ ಚುನಾವಣೆಗಳು ನಡೆದಬಳಿಕ ಇದೀಗ ರಾಜೇಂದ್ರ ಪ್ರಸಾದರು ಪುನಃ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಅತ್ಯಧಿಕ ಬಹುಮತದಿಂದ ಆಯ್ಕೆ ಹೊಂದಿರುವರು. ಈ ಸಂಗತಿಯನ್ನು ನಿರ್ವಾಚನಾಧಿಕಾರಿ ಶ್ರೀ ಎಂ. ಎನ್. ಕೌಲರು ಮಂಗಳವಾರ ಅಪರಾಹ್ನ ಮೂರು ಗಂಟೆಗೆ ಸಾರಿದರು. ಒಟ್ಟು ೩೪೫೯ ಮತದಾರರಲ್ಲಿ ರಾಜೇಂದ್ರ ಪ್ರಸಾದರಿಗೆ ೩೪೫೬ ಜನರ ಬೆಂಬಲ ದೊರೆತಿದೆ. ಉಳಿದ ಹುರಿಯಾಳುಗಳಲ್ಲಿ ಪ್ರೊ. ಕೆ. ಟಿ. ಶಹಾರಿಗೆ ೫೬೧, ಶ್ರೀ ಲಕ್ಷ್ಮಣ ಗಣೇಶ ಥತ್ತೆಯವರಿಗೆ ೧೪, ಹರಿರಾಮರಿಗೆ ೧೧, ಮತ್ತು ಕೃಷ್ಣಕುಮಾರ ಚಟರ್ಜಿಅವರಿಗೆ ಹರಂತೆ ಸಿಕ್ಕಿವೆ. ೬೩ ಜನರ ಮತಗಳು ರದ್ದಾದುವು.

ಮದ್ರಾಸಿನಲ್ಲಿ ಶಾಸನಸಭೆಯ ಅಧ್ಯಕ್ಷರಾಗಿ ಶ್ರೀ ಜೆ. ಶಿವಷಣ್ಮುಖಂ ಪಿಳ್ಳೆ ಆರಿಸಿ ಬಂದಿರುವರು. ಶ್ರೀಯುತರು ಶಾಸನಸಭೆಯ ಮಾಜಿ ಅಧ್ಯಕ್ಷರಾಗಿದ್ದರು. ಕಳೆದ ಚುನಾವಣೆಯಲ್ಲಿ ಸ್ವತಂತ್ರ ರೀತಿಯಲ್ಲಿ ಸ್ಪರ್ಧಿಸಿ, ಶಾಸನಸಭೆಗೆ ಚುನಾಯಿತರಾದರು. ಇವರಿಗೆ ಕಾಂಗ್ರೆಸ ಪಕ್ಷದ ಬೆಂಬಲವಿದ್ದು ೨೦೬ ಮತಗಳು ದೊರೆತರೆ, ಸಂಯುಕ್ತ ಪ್ರಜಾರಂಗದ ಉಮೇದುವಾರ ಶ್ರೀ ಸ್ವಯಂ ಪ್ರಕಾಶರಿಗೆ ೧೬೩ ಮತಗಳು ಸಿಕ್ಕಿವೆ. ಉಪಾಧ್ಯಕ್ಷರಾಗಿ ಶ್ರೀ ಭಕ್ತವತ್ಸಲಂ ನಾಯುಡು ಆಯ್ಕೆ ಹೊಂದಿದ್ದಾರೆ. ಇವರಿಗೂ ಕಾಂಗ್ರೆಸ ಪಕ್ಷದ ಬೆಂಬಲವಿದ್ದು, ಒಟ್ಟು ೧೯೮ ಮತಗಳು ದೊರೆತಿವೆ. ವಿಧಾನ ಮಂಡಳದ ಅಧ್ಯಕ್ಷ ಸ್ಪರ್ಧೆಯಲ್ಲಿ ಕೂಡ ಕಾಂಗ್ರೆಸ್ ಪಕ್ಷದ ಬೆಂಬಲವುಳ್ಳ ಡಾ. ಚೆರಿಯನ್‌ರಿಗೆ ಜಯ ಲಭಿಸಿತು. ಕಾಂಗ್ರೆಸಿನ ಶ್ರೀ ಅಲ್ಲಪೆಚ್ಚಿ ಉಪಾಧ್ಯಕ್ಷರಾಗಿ ಚುನಾಯಿತರಾದರು.

ಗವರ್ನರ ಶ್ರೀ ಪ್ರಕಾಶರು ಮಂಗಳವಾರ ಮದ್ರಾಸಿನ ಎರಡೂ ಮನೆಗಳ ಸಂಯುಕ್ತಾಧಿವೇಶನದಲ್ಲಿ ಭಾಷಣಮಾಡುತ್ತಾ ಉತ್ತಮ ಸಂಪ್ರದಾಯಗಳನ್ನು ಪೋಷಿಸಿಕೊಂಡು ಬರುವುದು ಶಾಸನಸಭೆಗಳ ಕರ್ತವ್ಯ ಎಂದರು. ಬರಗಾಲದ ದೆಸೆಯಿಂದ ಈ ವರ್ಷ ಅಕ್ಕಿಯ ಬೆಳೆಯು ೧೧ ಲಕ್ಷ ಟನ್ನುಗಳಷ್ಟೂ, ನವಣೆ ಮುಂತಾದ ಆಹಾರ ಧಾನ್ಯಗಳು ೪ ಲಕ್ಷ ಟನ್ನುಗಳಷ್ಟು ಕಡಿಮೆಯಾಗುವ ಸಂಭವವಿದೆ. ನನ್ನ ಸರಕಾರ ಈ ಗಂಭೀರ ಪರಿಸ್ಥಿತಿಯಲ್ಲಿಯೂ ಶಕ್ಯವಿದ್ದಷ್ಟು ಪರಿಹಾರ ನೀಡಲು ಪ್ರಯತ್ನಿಸುವುದು—ಎಂದವರು ಹೇಳಿದರು.

ಗವರ್ನರರು ಭಾಷಣಮಾಡುವುದಕ್ಕೆ ಎದ್ದಾಗ ಸಂಯುಕ್ತ ಪ್ರಜಾರಂಗದ ಧುರೀಣರಾದ ಶ್ರೀ ಟಿ. ಪ್ರಕಾಶಂ ಒಂದು ಹೇಳಿಕೆ ಕೊಡಬಯಸಿದರು. ಹತ್ತುನಿಮಿಷ ಕಾಲ ಅವರು ಮಾತನಾಡಿ ಜನತೆಯ ಇಚ್ಛೆಗೆ ವಿರುದ್ಧವಾಗಿ ಗವರ್ನರರು ವಿಧಾನ ಮಂಡಳಕ್ಕೆ ನೇಮಿಸಿದ ಸದಸ್ಯನೊಬ್ಬನನ್ನು (= ರಾಜಾಜಿ) ಸಭೆಯ ಧುರೀಣನೆಂದು ಮನ್ನಿಸುವುದೂ ಅವರು ರಚಿಸಿದ ಮಂತ್ರಿ ಮಂಡಳವನ್ನು ಸರಕಾರವೆನ್ನುವುದೂ ಪ್ರಜಾಪ್ರಭುತ್ವ ತತ್ವಕ್ಕೆ ಸಮ್ಮತವಾದುದಲ್ಲ ಎಂದರು. ಬಳಿಕ, ಗವರ್ನರರಿಗೆ ಸಭ್ಯಕ್ಕೆ ಭಾಷಣಮಾಡುವ ಅಧಿಕಾರವೇ ಇಲ್ಲವೆಂದು ಘೋಷಿಸಿ, ತನ್ನೆಲ್ಲ ಬೆಂಬಲಿಗರೊಡನೆ ಸಭಾತ್ಯಾಗ ಮಾಡಿದರು.

ಇಂಥದೇ ಘಟನೆಯು ಪಂಜಾಬದಲ್ಲಿಯೂ ಜರುಗಿತು:- ಗವರ್ನರ ಚಂದೂಲಾಲ ತ್ರಿವೇದಿಯವರು ಭಾಷಣ ಮಾಡಿದಾಗ ಕಮ್ಯೂನಿಸ್ಟರು, ಅಕಾಲಿದಳದ ಸದಸ್ಯರು, ಕೆಲವು ಸ್ವತಂತ್ರರು ಮುಂತಾಗಿ ೩೦ ಮಂದಿ ಸಭಾತ್ಯಾಗ ಮಾಡಿದರು ತ್ರಿವೇದಿಯವರು ತಮ್ಮ ಭಾಷಣದಲ್ಲಿ ಆಡಳಿತ ವ್ಯವಸ್ಥೆಯನ್ನು ವಿಕೇಂದ್ರೀಕರಿಸಿ, ಗ್ರಾಮಾಭಿವೃದ್ಧಿ ಯೋಜನೆಗಳಲ್ಲಿ ಉದ್ಯುಕ್ತರಾಗುವುದು ಸರಕಾರದ ಧೋರಣೆ ಎಂದು ಹೇಳಿದರು

ಮುಂಬಯಿ ವಿಧಾನ ಮಂಡಳದ ಅಧ್ಯಕ್ಷರಾಗಿ ಕನ್ನಡಿಗರಾದ ಶ್ರೀ ಹುಕ್ಕೇರಿಕರ ರಾಮರಾಯರೂ ಶಾಸನ ಸಭೆಯ ಉಪಾಧ್ಯಕ್ಷರಾಗಿ ಶ್ರೀ ಎಸ್. ಆರ್. ಕಂಠಿಯವರೂ ಆಯ್ಕೆ ಹೊಂದಿರುವರು. ಗವರ್ನರ ರಾಜಮಹಾರಾಜ ಸಿಂಗರು ಸಂಯುಕ್ತಾಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಾ ಪಾನ ನಿರೋಧ ಕ್ರಮವನ್ನು ಮುಂದುವರಿಸಲು ತಮ್ಮ ಸರಕಾರ ಬದ್ಧಕಂಕಣವಿರುವುದಾಗಿ ಸಾರಿದರು.

ಧಿಲ್ಲಿ ಶಾಸನ ಸಭೆಯ ಉದ್ಘಾಟನೆಯನ್ನು ಕೇಂದ್ರದ ಗೃಹಮಂತ್ರಿ ಕೈಲಾಸನಾಥ ಕಟಜೂ ನೆರವೇರಿಸಿದರು. ದಿಲ್ಲಿಯನ್ನು ಜಗತ್ತಿನಲ್ಲಿಯೇ ಸರ್ವಶ್ರೇಷ್ಠವಾದ ನಗರವಾಗಿ ಪುನರ್ಘಟಿಸಲು ಪ್ರಯತ್ನಿಸಬೇಕೆಂದು ಅವರು ಕೇಳಿಕೊಂಡರು.

ಭಾರತದಲ್ಲಿ ಪ್ರಥಮ ಕಾಂಗ್ರೆಸ್ಸೇತರ ಮಂತ್ರಿ ಮಂಡಳಕ್ಕೆ ಅನಿವಾರ್ಯವಾಗಿ ಅಸ್ಪದಕೊಡಬೇಕಾಗಿ ಬಂದ ಪೆಪ್ಸು ರಾಜ್ಯದಲ್ಲಿ ಪುನಃ ಬಿಕ್ಕಟ್ಟು ತಲೆದೋರಿದೆ. ಸಂಸ್ಥಾನ ಶಾಖೆಯ ಆದೇಶಗಳು ಮತ್ತು ತಮ್ಮ ಪಕ್ಷದ ಅಭೀಷ್ಟಗಳು— ಇವನ್ನು ಜೊತೆಯಾಗಿ ಪಾಲಿಸಲು ಮುಖ್ಯಮಂತ್ರಿ ರಾರೇವಾಲಾರು ಅಸಮರ್ಥರಾಗಿ ಕಾಣುವರು. ಸಧ್ಯಕ್ಕೆ ಮಂತ್ರಿಮಂಡಳ ಸದಸ್ಯರೆಂದು ಒಬ್ಬರು ಮಂತ್ರಿಗಳನ್ನೂ ಇನ್ನಿಬ್ಬರು ಉಪಮಂತ್ರಿಗಳನ್ನೂ ನೇಮಿಸಲಾಗಿದೆ. ಹರಿಜನ ಸದಸ್ಯರೊಬ್ಬರನ್ನು ಮಂತ್ರಿಯಾಗಿ ನೇಮಿಸುವ ವಿಚಾರ ಕೂಡ ಇವೆ.

ತಮಿಳುನಾಡು ಪ್ರಾದೇಶಿಕ ಕಾಂಗ್ರೆಸಿನ ಅಧ್ಯಕ್ಷರಾಗಿ ಡಾ ಪಿ ಸುಬ್ಬರಾಯನ್ನರು ಆಯ್ಕೆಯಾಗಿದ್ದಾರೆ. ಶ್ರೀ ಕುಮಾರಸ್ವಾಮಿ ರಾಜಾ ಈ ಹೆಸರನ್ನು ಸೂಚಿಸಿದರು. ಮತ್ತು ನಿವೃತ್ತ ಅಧ್ಯಕ್ಷ ಶ್ರೀ ... ರು ರಾಜಾಜಿಯ ಮಂತ್ರಿಮಂಡಳಕ್ಕೆ ಎಲ್ಲ ವಿಧದಲ್ಲಿಯೂ ಸಹಕಾರ ನೀಡಬೇಕೆಂದು ಸುಬ್ಬರಾಯನ್ನರು ವಿನಂತಿಸಿರುವರು.

ಆಂಧ್ರ ಪ್ರಾದೇಶಿಕ ಕಾಂಗ್ರೆಸಿನ ಅಧ್ಯಕ್ಷಸ್ಥಾನವು ಶ್ರೀ ಸಂಜೀವ ರೆಡ್ಡಿಯವರಿಗೇ ಮರಳಿ ಗಂಟುಬಿದ್ದಿದೆ.

ತಿರುಕೊಚ್ಚಿಯಲ್ಲಿ ಶಾಸನಸಭಾ ಕಾಂಗ್ರೆಸ್ ಪಕ್ಷವನ್ನು ಬಲಪಡಿಸಲು ಮಂತ್ರಿಮಂಡಳದಲ್ಲಿ ತಮಿಳುನಾಡು ಪಕ್ಷದ ಒಬ್ಬ ಸದಸ್ಯರನ್ನು ಸೇರಿಸಿಕೊಳ್ಳುವ ಆಲೋಚನೆ ಇದೆ

ಪಾರ್ಲಿಮೆಂಟಿನ ಮುಂಬರುವ ಅಧಿವೇಶನದಲ್ಲಿ ಪಂಡಿತ ನೆಹರೂ ಸಭಾ ಧುರೀಣರಾಗಿ ಆರಿಸಿ ಬರುವುದು ನಿಶ್ಚಿತ. ಆದುದರಿಂದ ಈಗ ಅವರು ನೂತನ ಮಂತ್ರಿಗಳ ಯಾದಿಯನ್ನು ಸಿದ್ಧಗೊಳಿಸುತ್ತಿರುವರೆಂದೂ ಈಗಿರುವ ಮಂತ್ರಿಗಳನ್ನುಳಿದು ಹೊಸತಾಗಿ ಐದಾರು ಮಂದಿಯ ಹೆಸರು ಕೇಳಬರುತ್ತಿದೆ. ಎಂದೂ ಸುದ್ದಿ.

ಭೂದಾನ ಯಜ್ಞಕ್ಕೆ ಕಾನೂನು ರೀತ್ಯಾ ಮನ್ನಣೆ ಕೊಡುವ ವಿಷಯವನ್ನೀಗ ರಾಜ್ಯ ಸರಕಾರಗಳು ಪರ್ಯಾಲೋಚಿಸುತ್ತಿವೆ.

ದಿ ಪ್ರೊಪ್ಯುಲರ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್—1929ರಲ್ಲು ಜನ್ಮತಾಳಿದ ದಿ ಪ್ರೊಪ್ಯುಲರ್ ಇನ್ಸೂರೆನ್ಸ್ ಕಂಪನಿಯ 1951ನೆ ಇಸವಿಯ 22ನೆ ವರುಷದ ವರದಿಯನ್ನು ಆದರದಿಂದ ಸ್ವೀಕರಿಸಿದ್ದೇವೆ. ವರದಿ ವರುಷದಲ್ಲಿ ಅಂಗೀಕರಿಸಿ ಕೊಟ್ಟ ಹೊಸ ವಿಮಾ ವ್ಯವಹಾರಗಳ ಮೊಬಲಗು ರೂಪಾಯಿ 31,08,500, ವರ್ಷದಲ್ಲಿ ಪ್ರೀಮಿಯಮ್ ಬಡ್ಡಿ ಇತ್ಯಾದಿ ಮೂಲಕ ಜಮೆ ರೂಪಾಯಿ 7,40,394-7-6ರ ಕ್ಕೇರಿದೆ 1950ರಲ್ಲಿ ಇದು ರೂ 6,75,554-7-5 ಆಗಿತ್ತು. 'ರಿನ್ಯೂವಲ್' ಖರ್ಚು 1950ರಲ್ಲಿ 18 81% ಇದ್ದುದು ವರದಿ ವರುಷದಲ್ಲಿ 18·07%ಕ್ಕಿಳಿದುದು ಎತ್ತಿ ಹೇಳತಕ್ಕದಾಗಿದೆ ಜೀವ ವಿಮಾನಿಧಿಯು ವರದಿ ವರ್ಷಾಂತ್ಯದಲ್ಲಿ ರೂಪಾಯಿ 22,70,096-7-11 ಮುಟ್ಟಿಕ್ಕೇರಿದೆ ಬೇರಿಕಿನ ದರ ಜಾಸ್ತಿಯಾಗಿ ವಿನಿಯೋಗಗಳ ಬೆಲೆ ಕಳೆಪು ಕವಿಸುವ ಮುದರ ಮೊಬಲಗಿನ ಭರ್ತಿಗಾಗಿ ರೂಪಾಯಿ 56,000ವನ್ನು 'ವಿನಿಯೋಗ ಕ್ಷೇಮನಿಧಿ'ಗೆ ವರ್ಗಾಯಿಸಿರುವುದು ಗಮನೀಯ. ವಿಷಯಃ ಇದೆ. ದಕ್ಷಿಣ ಕನಡ ಜಿಲ್ಲೆಯಿಂದ ವಿದೇಶಿ ವಿಮಾ ಕಂಪೆನಿಗಳಿಗೆ ಪ್ರೀಮಿಯಮ್ ರೂಪದಲ್ಲಿ ಹೋಗುವ ಹೇರಳ ಹಣದಲ್ಲಿ ಸ್ವಲ್ಪಂಶವಾದರೂ ಈ ಜಿಲ್ಲೆಯಲ್ಲೆ ಉಳಿಯುವಂತಾಗಬೇಕೆಂಬ ಮಹತ್ವಾಕಾಂಕ್ಷೆ ಹಾಗೂ ದೂರದೃಷ್ಟಿಯಿಂದ ವ್ಯವಹಾರ ನಿಪುಣ ಶ್ರೀ ಬೋಳಾರ ವಿಟ್ಠಲ ರಾಯರಿಂದ ಸ್ಥಾಪಿಸಲ್ಪಟ್ಟ ಈ ಸಂಸ್ಥೆಯು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಲೆಂದು ಹಾರೈಸುವೆವು ಸ್ಥಾಪನೆಯಾದಂದಿನಿಂದ ಕಂಪೆನಿಯು ಸರ್ವತೋಮುಖ ಅಭಿವೃದ್ಧಿಗಾಗಿ, ಅವಿರತವಾಗಿ ದುಡಿಯುತ್ತಿರುವ ಮೇನೇಜಿಂಗ್ ಡೈರೆಕ್ಟರ್ ಶ್ರೀ ಬೋಳಾರ ವಿಠಲ ರಾಯರ ಸೇವಾ ತತ್ಪರತೆಯು ಅಭಿನಂದನೀಯವಿದೆ ಅಂತೆಯೇ ಇವರೊಡನೆ ಹೆಗಲಿಗೆ ಹೆಗಲು ಕೊಟ್ಟು ಸಹಕರಿಸುತ್ತಿರುವ ಚೇರ್‌ಮೇನ್ ಶ್ರೀ ... ಉಪಾಧ್ಯಕ್ಷ ... ಮೊದಲಾದ ಡೈರೆಕ್ಟರರು ಹಾಗೂ ಸಿಬ್ಬಂದಿಯು ... ಈ ಜನಪ್ರಿಯ ವಿಮಾ ಸಂಸ್ಥೆಯು 1950ರಲ್ಲಿ ಒಂದನೇ ... ಕಟ್ಟಡವನ್ನು ನಿರ್ಮಿಸಿಕೊಂಡಿರುವುದು ... ಈ ಸಂಸ್ಥೆಯು ಇನ್ನಷ್ಟು ...

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ. ಉಡುಪಿ

ಉಡುಪಿ

ವಸಂತ ಸಾಹಿತ್ಯೋತ್ಸವಃ—ಪರ್ಯಾಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮಿಗಳವರ ನೇತೃತ್ವದಲ್ಲಿ ಶ್ರೀಕೃಷ್ಣಮಠದ ವಸಂತ ಮಹಲಿನಲ್ಲಿ ವಸಂತೋತ್ಸವದ ಅಂಗವಾಗಿ ಇದೇ ತಾ ೧೦ರ 4 ದಿವಸಗಳಲ್ಲಿ ಉಪನ್ಯಾಸ ಗೋಷ್ಠಿ ನಡೆಯಿತು ಕನ್ನಡದ ನವೀನ ಕಾವ್ಯಮಾರ್ಗದ ಕುರಿತು ಶ್ರೀ ಕು. ಶಿ ಹರಿದಾಸ ಭಟ್ಟರೂ, 'ಸಮಾಜದಲ್ಲಿಯ ಧರ್ಮದೃಷ್ಟಿ ಮತ್ತು ಧರ್ಮದಲ್ಲಿಯ ಸಮಾಜದೃಷ್ಟಿ'ಯ ಕುರಿತು ಧಾರವಾಡದ ಶ್ರೀ ನೆಗಳೂರು ರಂಗನಾಥರೂ, 'ಪಂಪನ ಹಿತವಚನಗಳ' ಕುರಿತು ಬೆಂಗಳೂರಿನ ಶ್ರೀ ಎಲ್. ಗುಂಡಪ್ಪನವರೂ, 'ಸಾಹಿತ್ಯ ವೈಭವದ' ಕುರಿತು ಶ್ರೀ ರಾಮಚಂದ್ರ ರಾಯರೂ 'ಭೌತಿಕ ವಿಜ್ಞಾನದ ಸ್ವರೂಪದ' ಕುರಿತು ಪಸ್ಟೈಟ್ ಲೆಫ್ಟಿನೆಂಟ್ ಶ್ರೀ ಯು ಆರ್. ಆಚಾರ್ಯರೂ, 'ಕನ್ನಡ ಸಾಹಿತ್ಯದಲ್ಲಿ ಮೂಡಿದ ಸಮಾಜ ಧರ್ಮ ಮತ್ತು ಕನ್ನಡ ಜನತೆಯ ಭಾವ ವಿಲಾಸದ' ಕುರಿತು ಶ್ರೀ ಬೆಟಗೇರಿ ಕೃಷ್ಣಶರ್ಮರೂ, 'ನ್ಯಾಯ ಮತ್ತು ಧರ್ಮದ' ಕುರಿತು ಬೆಂಗಳೂರು ಸೆಂಟ್ರಲ್ ಕಾಲೇಜಿನ ಶ್ರೀ ವಿ. ಸೀತಾರಾಮಯ್ಯನವರೂ ವಿಚಾರಪರ ಉಪನ್ಯಾಸಗಳನ್ನಿತ್ತರು ಶ್ರೀ ಮಂತ್ರಿಗೆ, ಶ್ರೀ ಅಧಮಾರು, ಶ್ರೀ ಭಂಡಾರಕೇರಿ ಮತ್ತು ಶ್ರೀ ಶೀರೂರು ಮಠದ ಸ್ವಾಮಿಗಳವರು ಅನುಕ್ರಮವಾಗಿ ಸಭಾಧ್ಯಕ್ಷತೆ ವಹಿಸಿದ್ದರು ಪ್ರಥಮದ ಎರಡು ದಿವಸಗಳಲ್ಲಿ ಶ್ರೀ ನಾದಯೋಗಿ ದತ್ತಾತ್ರೇಯ ಪರ್ವತೀಕರರ ಸಂಪ್ರದಾಯ ವಾದ್ಯಗೋಷ್ಠಿ ಮತ್ತು ಇಂತಹ ವಸಂತ ಸಾಹಿತ್ಯೋತ್ಸವವು 1938ರಲ್ಲಿ ಪಲಿಮಾರು ಸ್ವಾಮಿಯವರ ಪರ್ಯಾಯ ಕಾಲದಲ್ಲೊಮ್ಮೆ ಜರಗಿತ್ತು.

ವಸಂತ ಸಾಹಿತ್ಯೋತ್ಸವಕ್ಕೆ ಬಂದಿದ್ದ ಅತಿಥಿಗಳನ್ನು ಶ್ರೀ ಕು ಶಿ. ಹರಿದಾಸ ಭಟ್ಟರು ತಮ್ಮ ಕುಂಜಿಬೆಟ್ಟು ನಿವಾಸದಲ್ಲಿ ತಾ 4ರಲ್ಲಿ ಉಪಾಹಾರವಿತ್ತು ಸತ್ಕರಿಸಿದರು.

ದ್ವಾರಕಾ ಪೀಠದ ಶ್ರೀ ಶಂಕರಾಚಾರ್ಯರ ಆಗಮನ—ಶ್ರೀ ದ್ವಾರಕಾ ಪೀಠದ ಶ್ರೀ ಶಂಕರಾಚಾರ್ಯರು ತಾ. 30ರಂದು ಬೆಳಗ್ಗೆ ದಿಗ್ವಿಜಯ ಮಾಡಿದ್ದು ಶ್ರೀ ಕೃಷ್ಣ ಮಠದ ವಸಂತ ಮಹಲಿನಲ್ಲಿ ಮಾನಪತ್ರ ನೀಡುವ ಸಮಾರಂಭ ನಡೆಯಿತು ದ್ವೈತಾದ್ವೈತ ಪೀಠಾಧಿಪತಿಗಳ ನವೀನ ಸಮ್ಮೇಳನವು ಯೋಗ್ಯ ಉಪಕ್ರಮವಿದ್ದು ಈ ಬಗ್ಗೆ ಪರ್ಯಾಯ ಪೀಠಾಧಿಪತಿಗಳು ಅಭಿನಂದನೀಯರಿದ್ದಾರೆ.

ವೇಗ ಮಿತಿಯೇ ಇಲ್ಲವೆಂಬಂತೆ ಕೆಲವು ಕಾರುಗಳೂ ಬಸ್‌ಗಳೂ ನಗರದಲ್ಲಿ ಓಡಾಡುತ್ತಿರುವುದರಿಂದ ಸಂಬಂಧಪಟ್ಟವರು ಈ ಕುರಿತು ನಿಗಾ ಕೊಡುವುದು ಸೂಕ್ತ

ಬಾಳೆಕುದುರು ಮಠದಲ್ಲಿ ಶ್ರೀ ಶಂಕರ ಜಯಂತಿಯುತ್ಸವ—ಹಂಗಾರಕಟ್ಟೆ ಬಾಳೆಕುದುರು ಮಠದಲ್ಲಿ ಶ್ರೀ ಮದಾನಂದಾಶ್ರಮ ಸ್ವಾಮಿಗಳವರ ನೇತೃತ್ವದಲ್ಲಿ ಶ್ರೀ ಶಂಕರ ಜಯಂತಿ ಉತ್ಸವವು ತಾ. 28 ಮತ್ತು 29ರಲ್ಲು ಶ್ರೀ ದ್ವಾರಕಾ ಶಾರದಾ ಪೀಠಾಧಿಪತಿ ಶ್ರೀ ಶಂಕರಾಚಾರ್ಯ ಶ್ರೀ ಮದಭಿನವ ಸಚ್ಚಿದಾನಂದ ತೀರ್ಥರ ಅಧ್ಯಕ್ಷತೆಯಲ್ಲಿ ಉಪನ್ಯಾಸ ಸಂಗೀತ ಹರಿಕಥಾದಿ ಕಾರ್ಯಕ್ರಮಗಳಿಂದ ಜರಗಿತು. ವಿದ್ಯಾರ್ಥಿ, ಪಂಡಿತ ಮೊದಲಾದವರಿಗೆ ಸಂಭಾವನೆಗಳೂ ಕೊಡಲ್ಪಟ್ಟವು.

ಶಾಲೆ, ಕಾಲೇಜುಗಳಿಗೂ
ಸಹಕಾರಿ ಸಂಘ, ಮುನ್ಸಿಫ್
ಕೋರ್ಟುಗಳಿಗೂ ಕೃಷಿಕ,
ವರ್ತಕ, ವ್ಯಾಪಾರಿಗಳಿಗೂ
ಬೇಕಾಗುವ ಉತ್ತಮ ರೀತಿ ಗಡವರ
ತಯಾರಿಸಿದ
ತರತರದ ಫಾರ್ಮುಗಳು,
ದೊರೆಯುತ್ತವೆ.
ನವಯುಗ ... ಉಡುಪಿ.

ದ. ಕ. ಜಿಲ್ಲಾ ರಾಜಕೀಯ ಪರಿಷತ್ತು

ದಕ್ಷಿಣ ಕನ್ನಡ ಜಿಲ್ಲೆಯ ಕಿಸಾನ ಮಜದೂರ ಪಕ್ಷದ ನೇತೃತ್ವದಲ್ಲಿ ರಾಜಕೀಯ ಪರಿಷತ್ತೊಂದು ಮಂಗಳೂರಿನಿಂದ ಹತ್ತು ಮೈಲು ದೂರದ ಗುರುಪುರ ಕೈಕಂಭದಲ್ಲಿ ಇದೇ ತಾ. 10ರಂದು ಜರಗಲಿರುವುದು. ಆಚಾರ್ಯ ಜೆ. ಬಿ. ಕೃಪಲಾನಿಯವರು ಅದನ್ನು ಉದ್ಘಾಟಿಸಲಿರುವರು. ಬೊಂಬಾಯಿ ಎಸೆಂಬ್ಲಿಯ ಮಾಜಿ ಉಪಾಧ್ಯಕ್ಷರೂ ಬೆಳಗಾವಿ ಪ್ರಜಾಪಕ್ಷದ ಅಧ್ಯಕ್ಷರೂ ಆದ ಶ್ರೀ ಎಸ್. ಎನ್. ಅಂಗಡಿಯವರು ಈ ಪರಿಷತ್ತಿನ ಅಧ್ಯಕ್ಷತೆ ವಹಿಸುವರು. ಆಹಾರ ನಿಯಂತ್ರಣ ಧೋರಣೆ ಮೊದಲಾದ ಅನೇಕ ಸಮಸ್ಯೆಗಳು ಈ ಸಭೆಯಲ್ಲಿ ಚರ್ಚಿಸಲ್ಪಡುವವು. ಕರ್ನಾಟಕದಲ್ಲಿಯ ಪ್ರಜಾಪಕ್ಷದ ಸಂಘಟನೆಯನ್ನು ಬಲಪಡಿಸುವ ಉದ್ದೇಶದಿಂದ ಆಚಾರ್ಯ ಕೃಪಲಾನಿಯವರು ಮೈಸೂರು ಮತ್ತು ಕರ್ನಾಟಕ ಪ್ರಜಾಪಕ್ಷದ ಕಾರ್ಯಕರ್ತರ ವಿಶೇಷ ಸಭೆಯೊಂದರಲ್ಲಿ ಮಾತನಾಡಲಿರುವರು.

ಕರ್ನಾಟಕ ಏಕೀಕರಣ ಪರಿಷತ್ತು ಇದೇ ತಾ. 11ರಲ್ಲು ಪ್ರಸಿದ್ಧ ಸಾಹಿತಿ ಹಾಗೂ ರಾಜನೀತಿಜ್ಞರಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಕರ್ನಾಟಕದ ಮಹಾಜನರು ಪರಿಷತ್ತಿಗೆ ಬಂದು ಭಾಗವಹಿಸಿ, ಬೆಂಬಲ ಮತ್ತು ಸಹಕಾರ ನೀಡಬೇಕಾಗಿ ಶ್ರೀ ಕೋಟಿ ರಾಮಕೃಷ್ಣ ಕಾರಂತ [ಜಿಲ್ಲಾ ಕಿ. ಮ. ಪ್ರ. ಪ. ಅಧ್ಯಕ್ಷ] ಡಾ। ಕೆ. ನಾಗಪ್ಪ ಆಳ್ವ (ಸ್ವಾ. ಸ. ಅಧ್ಯಕ್ಷ) ಇವರು ಕೋರುತ್ತಾರೆ.

ರಿಟಾಯರ್ಡ್ ನೌಕರರ ಸಂಘದ ಯೋಜನೆಗೆ ಸಲಹೆಗಳ ಬೇಡಿಗೆ

ಸೀದಾ ಕ್ಷೇತ್ರದ ಸರಹದ್ದಿನ ಹೊರಗೆ ವಾಸಿಸುವ ರಿಟಾಯರ್ಡ್ ಆದ ಲೋಕಲ್ ಬೋರ್ಡು ನೌಕರರು ಅಕ್ಕಿರೇಷನ್ ಕಾರ್ಡಿಗೆ ಅರ್ಹರಲ್ಲವೇ? ಪ್ರಕೃತ ಉದ್ಯೋಗದಲ್ಲಿರುವ ಸರಕಾರಿ ವ ಲೋಕಲ್ ಬೋರ್ಡು ನೌಕರರ ಮಕ್ಕಳಿಗೆ ಸ್ಕೂಲ್‌ಫೀಸ್ ರಿಯಾಯತಿಯು ಸರಕಾರಿ ಹುಕುಮು ರಿಟಾಯರ್ಡ್ ಆದ ಲೋಕಲ್ ಬೋರ್ಡು ನೌಕರರ ಮಕ್ಕಳಿಗೆ ಲಗಾವು ಆಗಲಾರದೇ? ಎಂಬೆರಡು ಜೀವನದ ಪ್ರಾಮುಖ್ಯ ವಿಷಯಗಳ ಕಡೆಗೆ ಸಂಬಂಧಪಟ್ಟ ರಿಟಾಯರ್ಡ್ ನೌಕರರು ಗಮನ ಕೊಡುವುದು ಅತೀ ಅಗತ್ಯ.

ರಿಟಾಯರ್ಡ್ ಹೊಂದಿದ ಸರಕಾರಿ ನೌಕರರಂತೆ ರಿಟಾಯರ್ಡ್ ಆದ ಲೋಕಲ್ ಬೋರ್ಡು ನೌಕರರು ಸಹ ತಮ್ಮ 30 ವರ್ಷಗಳ ಸರ್ವಿಸನ್ನು ಸರಕಾರಕ್ಕೆ ಅರ್ಪಿಸಲಿಲ್ಲವೇ? ರಿಟಾಯರ್ಡ್ ಆದ ಸರಕಾರಿ ನೌಕರರು ರೇಶನ್ ಅಕ್ಕಿ ಕಾರ್ಡಿಗೆ ಅರ್ಹತೆಯುಳ್ಳವರು, ರಿಟಾಯರ್ಡ್ ಆದ ಲೋಕಲ್ ಬೋರ್ಡು ನೌಕರರು ಮಾತ್ರ ಅರ್ಹತೆ ಇಲ್ಲದವರು ಎಂದು ನಮ್ಮ ಮಾನ್ಯ ಸರಕಾರವು ಎಣಿಸಲು ಕಾರಣವೇನು? ಇಂತಹ ವಿಷಯಗಳಲ್ಲಿ ಈ ಸಂಗದಕ್ಕೆ ಸೇರಿದವರು ಎಲ್ಲರೂ ಒಟ್ಟಾಗಿ 'ರಿಟಾಯರ್ಡ್ ನೌಕರರ ಸಂಘ'ವನ್ನು ಸ್ಥಾಪಿಸಿ ಆ ಮೂಲಕ ತಮ್ಮ ಸ್ಥಾನಮಾನಗಳನ್ನು ಭದ್ರಗೊಳಿಸಬೇಕು ಹಾಗೂ ಸಂಕಷ್ಟಗಳನ್ನು ಪರಿಹರಿಸಿಕೊಳ್ಳಬೇಕು. ಇಂತಹ ಯೋಜನೆ ಬಗ್ಗೆ ಸದ್ಯವೇ ಮಂಗಳೂರಲ್ಲಿ ಮಹಾಸಭೆಯೊಂದನ್ನು ಕರೆಯಬೇಕಾಗಿದೆ. ಸಂಬಂಧಪಟ್ಟವರು ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕಾಗಿ ಶ್ರೀ ವಿ. ಬಾಬು ಶೆಟ್ಟಿ, ರಿಟಾಯರ್ಡ್ ಟೀಚರ್, ವಿಟ್ಲ, ದ. ಕ. ಅವರು ಬರೆಯುತ್ತಾರೆ.

ಎಮ್. ಎಸ್. ಕಾಮತ್ ಸ್ಮಾರಕ ಕಲಾ ಮಂದಿರದ ಸಹಾಯಾರ್ಥ—ವಾಗಿ ಮಂಗಳೂರಿನಲ್ಲಿ ಇದೇ ತಾ 17ರಿಂದ 23ರ ತನಕ ಏಳು ದಿವಸಗಳಲ್ಲಿ ನಾಟಕ ಸಪ್ತಾಹ ಜರಗಿಸುವ ಏರ್ಪಾಡು ಆಗಿರುವುದು. ತಾ 17ರಲ್ಲು ಶ್ರೀ ಜೈಹಿಂದ್ ನಾಟಕ ಸಭೆಯವರಿಂದ 'ಸ್ವಾತಂತ್ರ್ಯ ಸಂಗ್ರಾಮ' ತಾ 18ರಲ್ಲು ಶ್ರೀ ಮಂಜ-ನಾಥ ಕೃಪಾ ಪೋಷಿತ ನಾಟಕ ಸಭೆಯವರಿಂದ 'ರಾಧಾ' 19ರಲ್ಲು ಸಮರ್ಥ ನಾಟಕಮಂಡಳಿಯವರಿಂದ 'ಸಿಂಹಗಡ' 20ರಲ್ಲು ನವಯುಗ ನಾಟ್ಯ ನಿಕೇತನ ಇವರಿಂದ 'ಮಂಗಳ ಸೂತ್ರ', ತಾ 21ರಲ್ಲು ಶ್ರೀ ಸೋಮಪ್ಪ ಮತ್ತು ಗೆಳೆಯರಿಂದ 'ಜೀವನ ಯಾತ್ರೆ' ತಾ. 22ರಲ್ಲು ಶ್ರೀ ಗಜಾನನ ಬಾಳಿಗ ಮತ್ತು ಗೆಳೆಯರಿಂದ ದಿ। ಎಮ್. ಎಸ್. ಕಾಮತರ 'ಉದ್ಧಾರಾನಂದ' ತಾ 23ರಲ್ಲು ಶ್ರೀ ಬಿ. ಅಪ್ಪಯ್ಯ ವಿದ್ವಾನ್ ಮತ್ತು ಗೆಳೆಯರಿಂದ 'ಗಣಪತಿ ಮದುವೆ' ಎಂಬ ನಾಟಕಗಳು ಅಭಿನಯಿಸಲ್ಪಡುವವು. ದಿವಂಗತ ಕಾಮತರ ಅಭಿಮಾನಿಗಳಾಗಿ ಸರ್ವರೂ ಈ ಸತ್ಕಾರ್ಯಕ್ಕೆ ಸಹಾಯವನ್ನಿತ್ತು ಪ್ರೋತ್ಸಾಹಿಸುವರೆಂದು ನಿರೀಕ್ಷಿಸಲಾಗಿದೆ.

ಬೇಲೂರಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಲನ

ಬೇಲೂರಿನಲ್ಲಿ ಮೇ ೧೬, ೧೭, ಮತ್ತು ೧೮ನೆಯ ತಾರೀಖುಗಳಲ್ಲಿ ಡಾ। ಎಸ್. ಸಿ. ನಂದೀಮಠ ಎಂ.ಎ. ಪಿ.ಎಚ್. ಡಿ. ಯವರ ಅಧ್ಯಕ್ಷತೆಯಲ್ಲಿ ನಡೆಯುವುದು. ಮೈಸೂರು ಮುಖ್ಯಮಂತ್ರಿಗಳ ಶ್ರೀ ಕೆಂಗಲ್ ಹನುಮಂತಯ್ಯ ಬಿ.ಎ., ಎಲ್. ಎಲ್. ಬಿ.ಯವರು ಸಮ್ಮೇಳನದ ಉದ್ಘಾಟನೆ ಮಾಡುವರು.

ಸಂಘಗಳ ಮತ್ತು ಇತರ ಪ್ರತಿನಿಧಿಗಳಿಗೆ ಪ್ರವೇಶಧನ ೩ ರೂ.ಗಳೆಂದೂ ಊಟವಸತಿಗಳಿಗಾಗಿ ಪ್ರತಿಯೊಬ್ಬರಿಗೂ ದಿನ ಒಂದಕ್ಕೆ ಎರಡೂವರೆ ರೂ.ಗಳೆಂದೂ ನಿಶ್ಚಯಿಸಲಾಗಿದೆ. ಪ್ರತಿನಿಧಿ ಶುಲ್ಕವನ್ನು ಮೇ ೧೦ನೆಯ ತಾರೀಖಿನೊಳಗಾಗಿ ಸ್ವಾಗತಸಮಿತಿಯ ಕಾರ್ಯದರ್ಶಿಗಳಿಗೆ ಕಳುಹಿಸಿಕೊಡಬೇಕು.

ಸಮ್ಮೇಳದ ಅಂಗವಾಗಿ ಮಹಿಳಾಗೋಷ್ಠಿ, ವಿಜ್ಞಾನಗೋಷ್ಠಿ, ಮತ್ತು ಗಮಕಗೋಷ್ಠಿಗಳು ನಡೆಯುವ ಏರ್ಪಾಡಾಗಿದೆ. ಈ ಗೋಷ್ಠಿಗಳಲ್ಲಿ 10 ನಿಮಿಷಗಳಲ್ಲಿ ಓದಿ ಮುಗಿಸಬಹುದಾದ ಲೇಖನಗಳನ್ನು ಸ್ವಂತ ವೆಚ್ಚದಲ್ಲಿ ಭಾಗವಹಿಸಿ ಓದಬಯಸುವವರು ಪರಿಷತ್ತಿನ ಕಾರ್ಯದರ್ಶಿಗಳಿಗೆ ಬರೆಯಬಹುದು.

ಬೊಂಬಾಯಿ ಮೊಗವೀರ ವ್ಯವಸ್ಥಾಪಕ ಮಂಡಳಿಯ ಮಹಾ ಸಭೆಯು—ಕಳೆದ ತಾ 27ರಂದು ಮಂಡಳಿಯ ಕಾರ್ಯಾಲಯದಲ್ಲಿ ಶ್ರೀ ಯು. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು, ಜತೆ ಕಾರ್ಯದರ್ಶಿಗಳಾದ ಶ್ರೀ ಆರ್. ಬಿ. ಕರುಣಾಕರ್, ಅವರು ಸ್ವಾಗತ ಮಾತುಗಳನ್ನಾಡಿ ಮಂಡಳಿಯ ಗತ ವರುಷದ ವರದಿಯನ್ನೋದಿದರು. ಶ್ರೀಗಳಾದ ಎಮ್. ಪಿ. ಕರ್ಕೇರ, ಪಿ. ಕೆ. ಪುತ್ರನ್, ಎಸ್, ಆರ್, ಕುಂದರ್, ಬಿ. ಎ, ಕರ್ಕೇರ, ಲಿಂಗಪ್ಪ ಪುತ್ರನ್, ಮೋಹನ್ ಬಿ. ಪುತ್ರನ್, ಕೇಶವ. ಕೆ. ಸಾಲಿಯಾನ್, ಅಚ್ಯುತ. ವಿ. ಪುತ್ರನ್ ಮೊದಲಾದವರು ಮಾತನಾಡಿದರು, ಅಧ್ಯಕ್ಷರು ಮಾತುಗಳಾದ ನಂತರ ಜತೆಕಾರ್ಯದರ್ಶಿ ಶ್ರೀ ಎಸ್. ಎ. ಕೋಟ್ಯಾಯನ್‌ರವರು ವಂದಿಸಿದರು.

ರಾಶಿಭವಿಷ್ಯ

ತಾ. 8-5-52ರಿಂದ 14-5-52ರ ವರೆಗೆ

ಮೇಷ—ನಿಮ್ಮ ಜನ್ಮರಾಶಿಯಲ್ಲಿ ಗ್ರಹಚತುಷ್ಟಯರ ಸಮಾಗಮವಾಗಿರುವದು. ತನ್ನಿಮಿತ್ತವಾಗಿ ಧನಮಾನಗಳಿಗೆ ಹಾನಿಯೂ ವ್ಯಥಾವಾಳ್ಗಲಹಗಳೂ ಪರ್ಯಟನವೂ ಹೆಚ್ಚಲಿದೆ. ವಾರಾದಿಯ 2 ದಿನಗಳಲ್ಲಿ ಧನಲಾಭ ಕಾರ್ಯವಿಜಯಗಳಿವೆ.

ವೃಷಭ—ಶ್ರಮಪಟ್ಟು ದುಡಿಯುವಿರಾದರೂ ಆಯಕ್ಕಿಂತ ದ್ವಿಗುಣ ವ್ಯಯವಾಗಲಿದೆ. ಸನ್ಮಿತ್ರರ ಬೆಂಬಲದಿಂದಾಗಿ ಪ್ರಬಲರಾದ ಪ್ರತಿಶಕ್ತಿಗಳೂ ಶರಣು ಬರಲಿರುವರು.

ಮಿಥುನ—ನಿಮ್ಮ ದೈವವಿಂದು ಬಹಳ ಉತ್ತಮ ಸ್ಥಿತಿಗೆ ಬಂದಿರುವದು. ಅಲ್ಪಾಯಾಸದಿಂದ ಅಧಿಕ ಪ್ರಯೋಜನವನ್ನು ಪಡೆವಿರಿ. ಸಂಸಾರದಲ್ಲಿ ಕಾಹಿಲೆ ಕಸಾಲೆಗಳು ಕಾಡಿಸುವವು. ವಾರಾಂತ್ಯದ 5 ದಿನಗಳಲ್ಲಿ ದೇಶ ಮನಸ್ಸುಗಳಿಗೆ ಸುಖಶಾಂತಿಯೂ ಅಧಿಕ ಆದಾಯವು ಲಭಿಸಲಿದೆ.

ಕರ್ಕಟ—ಆಯವ್ಯಯಗಳು ಸರಿತೂಕದಲ್ಲಿ ನಿಲ್ಲುವುದರಿಂದ ಹಣದ ಬಿಕ್ಕಟ್ಟು ಕಾಣಿಸದು. ಶ್ರಮಜೀವಿಗಳಿಗೆ ನಿರೀಕ್ಷೆಗಿಂತ ಅಧಿಕ ಫಲ ಸಿಗಲಿದೆ. ವಾರಾಂತ್ಯದ 3 ದಿನಗಳಲ್ಲಿ ಶುಭ.

ಸಿಂಹ—ಭಾಗ್ಯಗತರಾದ ಗುರು ಶುಕ್ರರು ನಿಮ್ಮನ್ನು ಆರ್ಥಿಕ ಅಡಚಣೆಯಿಂದ ದೂರಮಾಡುವರು. ವಾತಪ್ರಕೋಪದಿಂದ ಆರೋಗ್ಯಕ್ಕೆ ಕೊಂಚ ಹಾನಿ ತಗಲೀತು. ವಾರಾದಿಯ 2 ದಿನಗಳು ಉತ್ತಮ.

ಕನ್ಯಾ—ದೇಹಾಲಸ್ಯ ಮನೋರೋಗಗಳ ಬಿಸೆಯಿಂದಾಗಿ ತನುಮನಗಳಿಗೆ ಸುಖಶಾಂತಿಯಿರದು. ಆಕಸ್ಮಿಕ ಪ್ರಯಾಣಗಳ ದೆಸೆಯಿಂದ ಅಧಿಕ ವ್ಯಯವಾಗಲಿದೆ. ತಾ. 10, 11ರಲ್ಲಿ ಆಕಸ್ಮಿಕ ಲಾಭಕಾರ್ಯ ವಿಜಯಗಳುಂಟಾಗುವವು.

ತುಲಾ—ಇಲ್ಲಸಲ್ಲದ ಖರ್ಚುಗಳು ನಿಮ್ಮ ಪಾಲಿಗೆ ಬರಲಿವೆ. ಪ್ರಯಾಣದಲ್ಲಿ ಅಪಘಡಗಳುಂಟಾದಾವು. ಗುರ್ವನುಗ್ರಹದಿಂದ ತಾ 8-9-12-13 ಈ ದಿನಗಳಲ್ಲಿ ಅನಿಷ್ಟಗಳು ಕಡಿಮೆಯಾದಾವು.

ವೃಶ್ಚಿಕ—ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿಯುಂಟಾಗಲಿದೆ. ವ್ಯಾಪಾರದಲ್ಲಿ ಆಕಸ್ಮಿಕ ನಷ್ಟ ಉಂಟಾದೀತು. ತಾ 10-11 ಸುಖಭೋಗ.

ಧನು—ನಿಮ್ಮ ಬಯಕೆಯಂತೆ ಸಕಲ ಕಾರ್ಯಗಳೂ ಸಿದ್ಧಿಸುವವು. ಸಮಾಜದಲ್ಲಿ ಗಣನೀಯಸ್ಥಾನವನ್ನು ಪಡೆವಿರಿ. ತಾ 10-11 ಬಿಟ್ಟು ಉಳಿದ ದಿನಗಳು ಶ್ರೇಯಸ್ಕರ

ಮಕರ—ಸದಾ ಹಣದ ಅಡಚಣೆ ತಪ್ಪದು. ಬಂಧು ಜನರೊಡನೆ ಕಲಹವಾದೀತು. ಅಸ್ತ್ರೀಷ್ಟಂ ವಿಯೋಗದಿಂದ ದುಃಖಭಾಗಿಗಳಾಗುವಿರಿ. ಮನಸ್ಸಿಗೆ ನೆಮ್ಮದಿಯಿರದು.

ಕುಂಭ—ಸದಾ ಪರ್ಯಟನದಲ್ಲಿ ಕಾಲ ಕಳೆವಿರಿ. ವಾರಾಂತ್ಯದ 5 ದಿನಗಳಲ್ಲಿ ಸನ್ಮಿತ್ರರ ಸಮಾಗಮವಾಗಲಿದೆ. ಕೆಲವೊಂದು ಬಯಕೆಗಳು ಸಿದ್ಧಿಸುವವು.

ಮೀನ—ಸದುದ್ಯಮದಲ್ಲಿ ಉತ್ತಮ ಫಲ ದೊರೆಯುವದು. ಮಹಾ ಜನರ ಸ್ನೇಹಲಾಭ ಸಹಾಯಗಳು ಲಭಿಸಲಿವೆ. ವಾರಾಂತ್ಯದ 3 ದಿನಗಳು ಇಷ್ಟಾರ್ಥ ಪ್ರದಗಳಿವೆ.

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ



ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Mad Easy

ಆಂಗ್ಲ ಸ್ವಯಂಬೋಧಿನಿ ಪುಸ್ತಕ
ಅತ್ಯುಪಯುಕ್ತವಾದುದು.

ಬೆಲೆ ರೂ. 1-8-0.
ವಿ. ಪಿ. ದ್ವಾರ ರೂ. 2-0-0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ನಡಿಯುವ ಚಿತ್ರ
ವರ್ಣ ರಂಜಿತ ಚಿತ್ರ
ಲೌವ್ಸ್ ಒಫ್ ಕಾರ್‌ಮೆನ್
ರೀಟಾ ಹೇವರ್ತ್, ಗ್ಲೆನ್‌ಫೋರ್ಡ್
ನಟಿಸಿದ ಚಿತ್ರ.
ಬರುವ ಚಿತ್ರಗಳು—
ನಂದಿ ಕಿಶೋರ್, ನಳಿನಿ ಜಯಂತ್
ಬರುತ್ತದೆ- ಸಗಾಯಿ, ಆವಾರಾ,
ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್ ಉಡುಪಿ.

● ತೃಪ್ತಿಕರವಾದ ವಸತಿ — ಹಿತಕರವಾದ ಊಟ
● ರುಚಿಕರವಾದ ಉಪಾಹಾರ ಇವುಗಳಿಗೆ
ಉಡುಪಿಯ ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಊರ- ಪರವೂರ ಸನ್ಮಾನ್ಯ ಸದ್ಗೃಹಸ್ಥರಿಂದ ಮುಕ್ತಕಂಠದಿಂದ
ಹೊಗಳಿಸಿಕೊಂಡ ನಮ್ಮ ಹೋಟೆಲಿಗೇ
ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ.
ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯಾಗುವಂತೆ
ನಗರದ ಕೇಂದ್ರ ಭಾಗದಲ್ಲಿದೆ.
WOODLANDS
Highclass Boarding & Lodging, UDIPI S. Kanara

ಲಗ್ನಪತ್ರಿಕೆಗಳನ್ನು
ಅಗ್ಗದರದಲ್ಲಿ ಶೀಘ್ರದಲ್ಲಿ
ಮುದ್ರಿಸಿಕೊಡಲಾಗುವುದು.
ಎಲ್ಲ ತರಹ ಮುದ್ರಣ ಕಾರ್ಯ
ಗಳನ್ನು ಮಾಡಿಕೊಡಲಾಗುವುದು.
ನವಯುಗ ಪ್ರೆಸ್, ಪಾಲುಕೋಟೆ,
ಉಡುಪಿ.

ಮಂಗಳೂರು

ಕಲೆಕ್ಟರರ ಪತ್ರಿಕಾ ಪರಿಷತ್ತು- ಕಳೆದ ತಾ 28ರಲ್ಲಿ ಕಲೆಕ್ಟರರ ಪತ್ರಿಕಾ ಪರಿಷತ್ತು ಜರಗಿದಾಗ ಮನೆಗಳಿಗೆ ಬೆಂಕಿ ತಗಲಿ ಕಷ್ಟಕ್ಕೀಡಾದ ಎಂಟು ಮಂದಿಗೆ ತೊಂಭತ್ತು ರೂಪಾಯಿ ಸಹಾಯ ಕೊಡಲಾಯಿತೆಂದು ತಿಳಿಸಲಾಯಿತು. ಉಡುಪಿ ತಾಲೂಕಿನ ಶಂಕರಪುರ ಹರಿಜನ ಕೇರಿಯಲ್ಲಿ ಬಾವಿ ತೋಡಲು ರೂಪಾಯಿ 1550ನ್ನು ಮಂಜೂರು ಮಾಡಲಾಯಿತೆಂದೂ ಇತರ ಐದು ಕೆರೆ ಬಾವಿ ದುರಸ್ತಿಗಾಗಿ ರೂಪಾಯಿ 16,190 ಮಂಜೂರು ಮಾಡಿರುವುದಾಗಿಯೂ ತಿಳಿಸಲಾಯಿತು.

ಕೆನರಾ ಟೆಕ ಪೊಲಿಟೆಕ್ನಿಕ್ ಕಾಲೇಜಿನ ವಾರ್ಷಿಕ ಸತ್ಕಾರ ಕೂಟವು ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಿನ್ಸಿಪಾಲ್ ಶ್ರೀ ಎಸ್. ಕೃಷ್ಣಸ್ವಾಮಿ ರಾಯರು ಸ್ವಾಗತ ಮಾತುಗಳನ್ನಾಡಿದರು. ಪಾರ್ಲಿಮೆಂಟ್ ಮೆಂಬರರಾದ ಶ್ರೀ ಬಿ. ಶಿವರಾಯರು ಕಾಲೇಜಿನ ಸ್ನಾತಕರಿಗೆ ಹಿತೋಕ್ತಿಗಳನ್ನೀಯುತ್ತ, ಆದರ್ಶ ಜೀವನದಿಂದ, ಸಮರ್ಥ ಕೆಲಸದಿಂದ ದೇಶಕ್ಕೆ ಕೀರ್ತಿ ತರಬೇಕೆಂದು ಕೇಳಿಕೊಂಡರು.

ದ.ಕ.ಜಿ ಭಾ.ವೈದ್ಯ ಸಂಘದ ಮಹಾಸಭೆಯು—ಕಳೆದ ತಾ 27ರಲ್ಲಿ ಜರಗಿತು. ರೋಗ ನಿವಾರಣೆ ಮೂಲಕ ಜನ ಸೇವೆಗಾಗಿ ಅಸವಾರಿಷ್ಟಗಳನ್ನು ಮಾಡಿ ಉಪಯೋಗಿಸಲಿಕ್ಕೂ, ಬಂಗಿ, ಅಫೀಮುಗಳನ್ನು ದೊರಕಿಸಿ ಔಷಧಿಗಳನ್ನು ಮಾಡಿ ಉಪಯೋಗಿಸಲಿಕ್ಕೂ ಪಾನನಿರೋಧ ಶಾಸನದಿಂದ ವೈದ್ಯರಿಗುಂಟಾದ ತೊಂದರೆಗಳನ್ನು ತಿಳಿಸಿ, ಅವುಗಳನ್ನು ನಿವಾರಿಸಿಕೊಡಬೇಕಾಗಿ ಈಗಿನ ಮಂತ್ರಿ ಮಂಡಲಕ್ಕೆ ಮನವಿ ಮಾಡಬೇಕೆಂದು ವಿಶೇಷ ನಿರ್ಣಯವಾಯಿತು.

ಆಹಾರೋತ್ಪತ್ತಿ ಕಮಿಟಿ ಸಭೆಯು ಕಳೆದ ತಾ. 28ರಲ್ಲಿ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿ ತಾಲೂಕಿನ ಹೊಸಾಳೆ ಗ್ರಾಮದ ಅರಸಿನಕೆರೆಯ ಕೆಲಸವನ್ನು ಬಿಟ್ಟುಕೊಡಬಾರದೆಂದು ಶ್ರೀ ಜೆ. ಸಿ. ಸಿಕೇರರು ಸೂಚಿಸಿದ್ದಕ್ಕೆ ಆ ಕೆಲಸವು ಹೊಸ ಯೋಜನೆಯಂತೆ ಆಗಲಿರುವುದೆಂದು ಕಲೆಕ್ಟರರು ತಿಳಿಸಿದರು. ಕಳ್ಳಿನಲ್ಲಿರುವ ಆಹಾರಾಂಶವನ್ನು ಗಮನಿಸಿ ಕಳ್ಳನ್ನು ಒದಗಿಸಬೇಕೆಂದು ಶ್ರೀ ಎಲ್. ಸಿ. ಪಾಯಿಸರು ತಂದ ನಿರ್ಣಯದ ಕುರಿತು ಚರ್ಚೆಯಾಗಿ, ಸರಕಾರವು ನಿಯಂತ್ರಿತ ಸಿಹಿ ಕಳ್ಳನ್ನು ಒದಗಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು.

ಪಾನ ನಿರೋಧ ಸಲಹಾ ಸಮಿತಿ ಸಭೆಯು ಬಳಿಕ ಜರಗಿತು ಗೋವೆಯಂತ ಪರದೇಶಿ ಶರಾಬು ವಿಪರೀತವಾಗಿ ಬರುವುದೆಂದೂ, ಅತ್ಯಂತ ಪ್ರಭಾವಶಾಲಿಗಳೇ ಈ ಕಳ್ಳ ವ್ಯಾಪಾರ ಮಾಡುವುದರಿಂದ ಪತ್ತೆಹಚ್ಚುವ ಮತ್ತು ನ್ಯಾಯಪರಿಸುವ ಕೆಲಸಗಳು ಬಹಳ ಕಷ್ಟವಾಗುತ್ತದೆಂದು ಶ್ರೀ ಸಿ. ಆರ್. ಕೃಷ್ಣ ಅಯ್ಯರ್‌ರವರು ತಿಳಿಸಿದರು. ಒಲೆಬೆಲ್ಲದ ಕ್ರಯವು ಕಡಿಮೆಯಾಗುವುದರಿಂದ ಆ ಬೆಲ್ಲಕ್ಕೊಂದು ವ್ಯಾಪಾರ ಸಂಘವಾಗಬೇಕೆಂಬ ಶ್ರೀ ಸುಬ್ಬಣ್ಣ ಸೆಟ್ಟರ ಸೂಚನೆಗೆ ಆ ಕುರಿತು ಪರ್ಯಾಲೋಚನೆ ನಡೆದಿದೆ ಎಂದು ಉತ್ತರ ದೊರೆಯಿತು.

ದಕ್ಷಿಣ ಕನ್ನಡ ಗ್ರಾಮ ಕೈಗಾರಿಕೆ ಸಂಘಕ್ಕೆ—ಕೇಂದ್ರ ಸರಕಾರದ ವಾಣಿಜ್ಯ ಮತ್ತು ಕೈಗಾರಿಕೆಯ ಖಾತೆಯವರು ಮದ್ರಾಸು ಸರಕಾರದ ಗ್ರಾಮ ಕ್ಷೇಮಾಭಿವೃದ್ಧಿ ಖಾತೆಯ ಮೂಲಕ ರೂಪಾಯಿ 3,750 ಗ್ರಾಂಟು ಕೊಟ್ಟಿರುವರು. ಜಿಲ್ಲೆಯಲ್ಲಿ ಉತ್ಪಾದನಾ ಮತ್ತು ತರಬೇತಿಯ ಕೇಂದ್ರಗಳನ್ನು ತೆರೆಯಲು, ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಬೇಕಾದ ಸಾಧನ ಸಲಕರಣೆಗಳನ್ನೂ ಯಂತ್ರಗಳನ್ನೂ ಕೊಂಡು ಕೊಳ್ಳಲು ಈ ಸಹಾಯ ಕೊಡಲಾಗಿದೆ. ಖಾದಿ ತಯಾರಿಸುವ ಮತ್ತು ಮಾರಾಟ ಮಾಡುವ ಇಂತಹ ಸಂಸ್ಥೆಯು ನಮ್ಮ ಜಿಲ್ಲೆಯಲ್ಲಿ ಇದೊಂದೇ ಇದ್ದು ಅಖಿಲ ಭಾರತ ಚರಕಾ ಸಂಘದಿಂದ ಮಂಜೂರಾತಿ ಹೊಂದಿದೆ.

'ನವಭಾರತ' ದೈನಿಕವು—ಪಿ. ಟಿ. ಐ. ಸುದ್ದಿ ಸಂಸ್ಥೆಯವರು ಟೆಲಿಪ್ರಿಂಟರ್ ಮೂಲಕ ಒದಗಿಸುವ ವಾರ್ತೆಗಳಿಂದ ದೊಡ್ಡ ಆಕಾರದ ನಾಲ್ಕು ಪುಟಗಳಲ್ಲಿ ಇದೇ ತಾ 1ರಿಂದ ಪ್ರಕಟಿಸಲ್ಪಡುತ್ತಿದೆ. ಇದರ ಉದ್ಘಾಟನವು ಇದೇ ತಾ 1ರಲ್ಲಿ ದ. ಕ. ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ವಿ. ಎಸ್. ಕುಡ್ವರು ಸ್ವಾಗತ ಮಾತುಗಳನ್ನಾಡುತ್ತ ಪತ್ರಿಕೆಯ ಬೆಳವಣಿಗೆ ಕುರಿತು ತಿಳಿಸಿದರು. ಶ್ರೀ ಆರ್. ಕೆ. ಪ್ರಭುಗಳು ಪತ್ರಿಕೆಯ ಉದ್ಘಾಟನೆ ಮಾಡಿದರು. ಡಾ। ಯು. ಪಿ. ಮಲ್ಯ ಹಾಗೂ ಶ್ರೀಗಳಾದ ಎಂ. ಉಮಾನಾಥ ರಾವ್ ಮತ್ತು ಎಚ್. ಭೀಮರಾಯರು ಮಾತನಾಡಿದರು.

ಮುನಿಸಿಪಲ್ ಕೌನ್ಸಿಲಿನ ಸಭೆಯು ಶ್ರೀ ಎಲ್. ಸಿ. ಪಾಯಿಸರ ಅಧ್ಯಕ್ಷತೆಯಲ್ಲಿ ಜರಗಿದಾಗ ನಳ್ಳಿನೀರು ಸರಬರಾಯಿಯ ತಿದ್ದಿದ ಅಂದಾಜು ವೆಚ್ಚದ ಕುರಿತು ಮದ್ರಾಸು ಸರಕಾರದಿಂದ ಬಂದ ವಿವರಗಳನ್ನು ಪರಿಶೀಲಿಸಲಾಯಿತು. ಈ ಯೋಜನೆಯ ಅಂದಾಜು ವೆಚ್ಚ ರೂಪಾಯಿ ಎಂಭತ್ತು ಲಕ್ಷ ಅದನ್ನು ಕಾಪಾಡುವ ವೆಚ್ಚ 1966ನೆ ಇಸವಿಯಲ್ಲಿ ಒಂದೂಕಾಲು ಲಕ್ಷ ರೂಪಾಯಿ. 1981ರಲ್ಲಿ ರೂಪಾಯಿ ಒಂದುಲಕ್ಷದ ಅರುವತ್ತೆರಡು ಸಾವಿರ. ಈ ಸಂಬಂಧ ಸಾಲ ಇಪ್ಪತ್ತೆರಡು ಲಕ್ಷದ ಐದು ಸಾವಿರ ಮತ್ತು ಅದರ ರಕ್ಷಣೆಯ ವೆಚ್ಚಕ್ಕಾಗಿ ನೀರು ಸರಬರಾಯಿ ತೆರಿಗೆಯನ್ನು ದರ್ಪಕ್ಕೆ ಸೇಕಡಾ $4\frac{1}{2}$ಯಿಂದ 9ಕ್ಕೇರಿಸತಕ್ಕದ್ದು. ಈ ವಿಷಯದಲ್ಲಿ ನಗರಸಭೆಯು ತನ್ನ ಅಭಿಪ್ರಾಯವನ್ನು ತಿಳಿಸಬೇಕು ಎಂದು ಸರಕಾರವು ತನ್ನ ಆರ್ಡರಿನಲ್ಲಿ ತಿಳಿಸಿದೆ. ಈ ಕುರಿತು ಸರಕಾರದೊಡನೆ ಹೇಳಿಕೊಳ್ಳಲು ಶ್ರೀಗಳಾದ ಪಾಯಿಸ್, ನರಸಪ್ಪಯ್ಯ ಮತ್ತು ಸುವರ್ಣರನ್ನೊಳಗೊಂಡ ಕಮಿಟಿಯನ್ನು ನೇಮಿಸಲಾಯಿತು. ಬುದ್ಧಾಯ ಉಚಿತ ಶಿಕ್ಷಣಯೋಜನೆಗೆ ಅಗತ್ಯವಿರುವ ಪೂರ್ಣ ಖರ್ಚಿನ ಹಣ ಕೊಡಲು ಕೌನ್ಸಿಲಿಗೆ ಶಕ್ತಿಯಿಲ್ಲ ಎಂದು ಸೂಚಿಸಲಾಯಿತು.

ದ. ಕ. ಜಿಲ್ಲಾ ಅಡಿಕೆ ಮತ್ತು ತೆಂಗು ಮಾರ್ಕೆಟ್ ಕಮಿಟಿಯ ಸಭೆಯು—ಕಳೆದ ತಾ 29ರಲ್ಲಿ ಶ್ರೀ ಯು. ನಾರಾಯಣ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಅಡಿಕೆ ಮತ್ತು ತೆಂಗು ಇವುಗಳ ಬೆಲೆಯು ಫಕ್ಕನೆ ಇಳಿಮುಖವಾಗದಂತೆ ಪ್ರತಿಬಂಧಕ ನಿಗಾ ತೆಗೆದುಕೊಳ್ಳುವಂತೆ ಕೇಂದ್ರ ಅಡಿಕೆ ಮತ್ತು ತೆಂಗು ಸಮಿತಿಗಳನ್ನು ವಿನಂತಿಸುವ ಇತ್ಯಾದಿ ನಿರ್ಣಯಗಳಾದುವು.

ಪೆರ್ಡೂರು—ಬಿ. ಇ. ಎಮ್. ಹಾ। ಎ। ಶಾಲೆಯ ವರ್ಧಂತಿಯು ಕಳೆದ ತಾ 28ರಲ್ಲಿ ಎಮ್. ಜಿ. ಎಮ್. ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ವಿ. ಉಮಾನಾಥ ಹೆಗ್ಗಡೆಯವರು ರಾಷ್ಟ್ರಧ್ವಜವನ್ನೇರಿಸಿದರು. ವರದಿ ವಾಚನ, ನಾಟಕಾಭಿನಯಾದಿ ಕಾರ್ಯಕ್ರಮಗಳಾದುವು. ತಾ 29ರಲ್ಲಿ ರಾತ್ರಿ ಶ್ರೀ ಕಾ. ಶಿ ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಪೆರ್ಡೂರು ಕಲಾ ಮಂಡಳಿಯವರು 'ಟಿಪ್ಪು ಸುಲ್ತಾನ್' ಐತಿಹಾಸಿಕ ನಾಟಕವನ್ನಭಿನಯಿಸಿದರು.

ಹಿರಿಯಡಕ—ಸ್ಥಳೀಯ ಆರ್ಯ ಸಮಾಜದ ನೇತೃತ್ವದಲ್ಲಿ ತಾ 1ರಲ್ಲಿ ಕೋಡಿಬೆಟ್ಟನಲ್ಲಿ ಆರ್ಯ ಸಮಾಜ ಪ್ರಚಾರ ಸಭೆಯು ಶ್ರೀ ಮುದ್ರಾಡಿ ಕೃಷ್ಣಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಹಲವರ ಭಾಷಣಗಳಾದುವು.

ಕೋಟೆ—ಕಳೆದ ತಾ 30ರಲ್ಲಿ ಕೋಟದಲ್ಲಿ ಹರಿಜನ ದಿನಾಚರಣೆಯು ಉಡುಪಿ ತಹಶಿಲ್ದಾರ್ ಶ್ರೀ ಎಮ್. ಪಿ. ಕೃಷ್ಣನ್ ನಾಯರರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ಬೆಳಗ್ಗೆ ಮಣೂರು, ಗಿಳಿಯಾರು ಗ್ರಾಮಗಳಲ್ಲಿರುವ ಹರಿಜನ ಕೇರಿಗಳನ್ನು ಸಂದರ್ಶಿಸಿ ಶುಚಿತ್ವದ ಕುರಿತು ಉಪದೇಶ ಕೊಡಲಾಯಿತು. ಸಂಜೆ ಹಾ। ಎ। ಶಾಲಾ ವಠಾರದಲ್ಲಿ ಜರಗಿದ ಸಭೆಯಲ್ಲಿ ತಹಶಿಲ್ದಾರ್ ಅಧ್ಯಕ್ಷರು ಮಾತನಾಡುತ್ತಾ ಈ ಪಟ್ಟಣದಲ್ಲಿ ಹರಿಜನರಿಗೆ ಹೋಟೆಲು ಪ್ರವೇಶ ದೇವಸ್ಥಾನ ಪ್ರವೇಶ ಇತ್ಯಾದಿಗಳಾಗಲಿಲ್ಲವೆಂಬ ಬಗ್ಗೆ ವಿಷಾದಪಟ್ಟರು. ರಾಷ್ಟ್ರಗೀತೆಯೊಂದಿಗೆ ಸಭಾಂತ್ಯವಾಯಿತು.

ಸುರತ್ಕಲ್— ಸ್ಥಳೀಯ ಮುಕ್ಕ, ಮಿತ್ರ ಪಟ್ಣ ಗಂಗಯ ಸ್ಮಾರಕ ಫಂಡಿನ ವಾರ್ಷಿಕೋತ್ಸವವು ಕಳೆದ ತಾ 28ರಂದು ಶ್ರೀ ಸೀತಾರಾಮ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಿ ಹರಿಕಥೆ, ಭಾಷಣ ಮೊದಲಾದ ಕಾರ್ಯಕ್ರಮಗಳಾದುವು.

ಕಲ್ಯಾಣಪುರು—ಬೋರ್ಡ್ ಹಾ। ಎ। ಶಾಲಾ ವರ್ಧಂತಿಯುತ್ಸವವು ಕಳೆದ ತಾ 28ರಂದು ಶ್ರೀ ಕೊಳ್ಕೆಬೈಲ್ ಸೂರಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು. ಶ್ರೀ ಎಚ್. ಗೋಪಾಲಕೃಷ್ಣ ರಾಯರು ಸ್ವಸ್ತಿ ವಾಚನ ಮಾಡಿದರು ಶ್ರೀಗಳಾದ ಎಚ್. ಕೋಟಿಯಣ್ಣ ಸೆಟ್ಟಿ, [illegible] ಮೊದಲಾದವರು ಭಾಷಣವಿತ್ತರು.

ಹಾರ್ದಳ್ಳಿ, ಮಂಡಳ್ಳಿ—ಶಾಲೆಯ ವರ್ಧಂತಿಯು ಕಳೆದ ತಾ 27ರಲ್ಲಿ ಕಾರ್ಕಳ ಡಿ. ಮುನ್ಸಿಫ್ ಶ್ರೀ ಕೆ ಚಂದ್ರ ಶೇಖರ ಹೆಗ್ಗೇರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಕೆ. ಕೊರಗಯ್ಯ ಶೆಟ್ರಿಂದ ವಂದಿವಾಚನ ಶ್ರೀ ಶಂಕರ ಶೆಟ್ರಿಂದ ಸ್ವಸ್ತಿ ವಾಚನ ವಿವಿಧ ವಿನೋದಾವಳಿ ಮೊದಲಾದ ಕಾರ್ಯಕ್ರಮಗಳಿದ್ದವು

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು ದ. ಕ.

ಯೋಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಯಾ ಅದಕ್ಕಾಗುವ ಈ ತನಕದ ಬಡ್ಡಿಯನ್ನಾಗಲೀ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಈ ವರೆಗೆ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ ಸದರಿಯವರು ಈಡಿಟ್ಟ ನಗಗಳನ್ನು ಇದೇ ಮೇ ತಿಂಗಳ ತಾ 16ನೇ ಶುಕ್ರವಾರ ಮಧ್ಯಾಹ್ನ ಘಂಟೆ 2ಕ್ಕೆ-ಯಾ-ಬ್ಯಾಂಕಿಗೆಯುಕ್ತ ಕಂಡ ಇತರ ದಿವಸಗಳಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ವಠಾರದಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು, ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬ್ಲಗು ರೂ.	ಅ.
123/50	ಜನಾಬ್ ಯು. ಎಸ್. ಗಫೂರ್ ಸಾಹೇಬ ಪೋಲೀಸು ಕೊನ್‌ಸ್ಟೇಬಲ್, P. C. No. 263, ಕಾರ್ಕಳ	12	15
124/50	ಶ್ರೀ ಬಟ್ವಾಡಿ ಅಣ್ಣಪ್ಪ ಸೇರುಗಾರ, ವೆಂಕಟರಮಣ ಸೇರುಗಾರರ ಮಗ, ಬಾಡ ಬೈಂದೂರು	27	13
1083/47-8	ಜನಾಬ್ ಮೈದಿನ್ ಸಾಹೇಬ್, ಹಸನ್ ಸಾಹೇಬರ ಮಗ, ಕೇರಿ ಬೈಂದೂರು	12	0
753/48-9	ಜನಾಬ್ ಮೈದಿನ್ ಬ್ಯಾರಿ, ಕಾದಿರ್ ಬ್ಯಾರಿಯ ಮಗ, ಕಳುವಿನ ಬಾಗಿಲು, ಬೈಂದೂರು.	25	5
879/48-9	ಶ್ರೀ ಗೋವಿಂದ ಕಾರ್ವಿ ಮಂಜ ಕಾರ್ವಿಯ ಮಗ ಕೊಡಿಯೇರಿ ಕಿರಿಮಂಜೇಶ್ವರ ಗ್ರಾಮ ಕಂಬದಕೋಣೆ	18	5
744/47-9	ಶ್ರೀ ಕೆ. ಮಂಜುನಾಥ ನ್ಯಾಕ್ ಕೃಷ್ಣಪ್ಪ ನ್ಯಾಕರ ಮಗ ಕಂಬದ ಕೋಣೆ	356	7
12/48-9	—Do—	97	4
54/49	ಶ್ರೀ ಮದ್ದೋಡಿ ಸುಬ್ರಾಯ ಸೇರುಗಾರ, ಹನುಮಂತ ಸೇರುಗಾರರ ಮಗ, ಮಯ್ಯಾಡಿ ಬೈಂದೂರು	16	2
209/49	ಕುಪ್ಪಮ್ಮ, ಹೊನ್ನಯ್ಯನ ಗೋವಿಂದ ಸೇರುಗಾರರ ವಿಧವೆ, ಕೋಟೆಬಾಗಿಲು, ಪಡುವರಿ	125	1
142/ 9	ಶ್ರೀ ದಾರ ಪೂಜಾರಿ, ದುರ್ಗಿ ಹೆಂಗಸಿನ ಮಗ ಬೇಲ್ಯಂಗ್ರಿ, ಶಿರೂರು	51	12
214/49	ಜನಾಬ್ ಎಸ್. ಅಬೂಬಕರ್ ಸಾಹೇಬ್, ಸೋಮ ಕುದುರು ಮಗದುಮ ಸಾಹೇಬರ ಮಗ ಕೇರಿ ಬೈಂದೂರು.	38	5
234/49	ಶ್ರೀ ಪಾಂಡುರಂಗ ಸೇಟ್, ಕಾಸನ್ಗಾಡಿ ಮಂಜುನಾಥ ಸೇಟರ ಮಗ, ಉಪ್ಪುಂದ	100	14
270/49	ಜನಾಬ್ ಅಲ್ಲಿ ಅಬ್ದುಲ್ ರಹಿಮಾನ್, ಅಬ್ದುಲ್ ರಹಿಮಾನ್ ಸಾಹೇಬರ ಮಗ, ಹಡವಿನ ಕೋಣೆ ಶಿರೂರು	40	6
109/50	ಶ್ರೀ ಯು. ರಘುನಾಥ ಸೇಟ್, ನಾಗಪ್ಪ ಸೇಟರ ಮಗ, ದೋಣಿ ಬಾಗಿಲು ಉಪ್ಪುಂದ	33	9
138/50	ಶ್ರೀ M. G. ರಾಮ ಸೇಟ್, ನಾರಾಯಣ ಸೇಟರ ಮಗ ಗದ್ದೆಮನೆ ಮಯ್ಯಾಡಿ ಬೈಂದೂರು.	71	9
220/50	ಶೀ ಜೋಬಳಿದಾರ ತಿಮ್ಮಪ್ಪ ಸೇರುಗಾರ, ಅಣ್ಣಪ್ಪ ಸೇರುಗಾರರ ಮಗ, ಪಡುವರಿ	15	6
265/50	ಶ್ರೀಮತಿ ಮೇರಿ ಫೆರ್ನಾಂಡಿಸ್, ಜೋನ್ ರೆಬೆಲ್ಲೋರ ಹೆಂಡತಿ, ಪುಂಕೇಶ್ವರ ಬೈಂದೂರು	12	12
326/50	ಶ್ರೀ ವೆಂಕ್ಟ ದಿಲ್ಲವ, ಚಿಕ್ಕನ ಅಳಿಯ, ಬಿಜೂರು ಗ್ರಾಮ ಬಿಜೂರು	18	13

ಬೈಂದೂರು 1—5—1952 } ಎಚ್. ರಾಜೀವ ಸೆಟ್ಟಿ, ಏಜಂಟ್

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ನೆಗಡಿ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ



REGD

ಸುಳುಕದ್ದಿ,

ಮದ್ದು

ನಮ್ಮಲ್ಲಿ

ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

ಸ್ವೀಕಾರ ವಿಮರ್ಶೆ

ಉಮಾಬಾಯಿ ಕುಂದಾಪುರ.

(ಷಷ್ಟ್ಯಬ್ದಿ ಸ್ಮಾರಕ ಗ್ರಂಥ) — ಭಗಿನಿ ಮಂಡಳ ಹುಬ್ಬಳ್ಳಿ.

ತಮ್ಮ ಬದುಕಿನಿಂದ ಜನತೆಯ ಮುಂದೊಂದು ಆದರ್ಶ ಪರಂಪರೆಯನ್ನು ಹಾಕಿಕೊಟ್ಟ ಮಹಾ ಜೀವಗಳನ್ನು ನೆನೆಯುವುದು ಒಂದು ಉತ್ತಮ ಸಂಪ್ರದಾಯ. ಸೇವಾ ಜೀವನದಿಂದ ಸಮಾಜವನ್ನುದ್ಧರಿಸಲು ಹೆಣಗಿದ ಜೀವಗಳು ಮೃತರಾದ ಬಳಿಕ ನಾವು ಮಾಡಬಹುದಾದ ಸ್ಮಾರಕಗಳಿಗಿಂತ, ತೋರುವ ಮನ್ನಣೆಗಿಂತ ಬದುಕಿರುವಾಗ ಅವರ ಶುಭಕಾರ್ಯಗಳನ್ನು ಪ್ರಶಂಸಿಸಿ, ಪ್ರೋತ್ಸಾಹಿಸಿ ನೆರವಾಗುವುದು ಇನ್ನಷ್ಟು ಒಳ್ಳೆಯ ಪರಂಪರೆಯಾಗಿದೆ. ಅನವರತ ಪರಿಶ್ರಮದಿಂದಲೂ ಸತತ ಉದ್ಯಮಶೀಲತೆಯಿಂದಲೂ, ನಿಷ್ಕಾಮ ಬುದ್ಧಿಯಿಂದಲೂ ಕಳೆದ ಮೂವತ್ತು ವರ್ಷಕ್ಕೂ ಮೇಲ್ಪಟ್ಟು ಹುಬ್ಬಳ್ಳಿಯನ್ನು ಕೇಂದ್ರವಾಗಿಟ್ಟುಕೊಂಡು ಕರ್ನಾಟಕದಲ್ಲಷ್ಟೇ ಅಲ್ಲ-ಭಾರತದಲ್ಲೆಲ್ಲಾ ತಮ್ಮ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸಿದ ಶ್ರೀಮತಿ ಉಮಾಬಾಯಿ ಕುಂದಾಪುರ ಇವರಿಗೆ ಕಳೆದ ೩೧ ಮಾರ್ಚ ೧೯೫೨ರಂದು ಅರುವತ್ತು ವಯಸ್ಸು ತುಂಬಿತು. ಈ ಸಂದರ್ಭದಲ್ಲಿ ಹುಬ್ಬಳ್ಳಿಯ ಭಗಿನೀ ಮಂಡಳದವರು ಶ್ರೀಮತಿಯವರ ಜೀವನ, ವಿವಿಧ ಚಟುವಟಿಕೆಗಳು, ಮಹಿಳೆಯರ ಪ್ರಗತಿ ಮುಂತಾದ ಉಪಯುಕ್ತ ವಿಷಯಗಳನ್ನು ಕುರಿತಾದ ಲೇಖನಗಳನ್ನು ಈ ಚಿಕ್ಕ ಹೊತ್ತಿಗೆಯಲ್ಲಿ ಸಂಗ್ರಹಿಸಿ, ಶ್ರದ್ಧಾಪೂರ್ವಕ ಸಮರ್ಪಿಸಿರುವರು. ಉಮಾಬಾಯಿಯವರ ಬಗೆಗೆ ಅಧಿಕಾರಯುಕ್ತವಾಗಿ ಹೇಳಬಲ್ಲವರ ಬರಹಗಳಿರುವವಲ್ಲದೆ ಅವರ ಜೀವನಕ್ಕೆ ಸಂಬಂಧಿಸಿದ ಹಲವಾರು ಸುಂದರ ಚಿತ್ರಗಳನ್ನೂ ಜೋಡಿಸಿರುವುದರಿಂದ ಪುಸ್ತಕದ ಉಪಯುಕ್ತತೆ ಬಹಳಷ್ಟು ಹೆಚ್ಚಿದೆ.

ಅರುಳು ಮರುಳು

(ಸಾಮಾಜಿಕ ಕಾದಂಬರಿ)—ಬರೆದವರು: ಅ. ನ. ಕೃಷ್ಣರಾಯ, ಪ್ರಕಾಶಕರು: ಆನಂದ್ ಬ್ರದರ್ಸ್ ಬೆಂಗಳೂರು ೨. ಬೆಲೆ: ರೂ ೪-೮-೦

ಧರ್ಮದರ್ಶಿಗಳ ಪೊಳ್ಳುತನವನ್ನು ಬಯಲಿಗೆಳೆಯುವ ಪ್ರಯತ್ನವನ್ನು ಅ. ನ. ಕೃ. ಈ ಕಾದಂಬರಿಯಲ್ಲಿ ಮಾಡಿದ್ದಾರೆ. ಪವಿತ್ರವಾದ ಧರ್ಮದ ಹೆಸರಿನಲ್ಲಿ ದಂಭಾಚಾರ ಮಠಮೋಸಗಳು ಅನೇಕವಾಗಿ ಮೆರೆಯುತ್ತಿವೆ ಎಂಬ ದೂರು ಕೇಳಿಬರುವ ಈ ದಿನಗಳಲ್ಲಿ ಅದನ್ನು ಪ್ರತಿಭಟಿಸುವ ಸ್ಪಷ್ಟ ಮನೋವೃತ್ತಿ ಈ ಕಾದಂಬರಿಕಾರರಲ್ಲಿ ಒಡಮೂಡಿರುವುದನ್ನು ಕಾಣಬಹುದು. ಕಾದಂಬರಿಯ ನಾಯಕ ವಾಸು ವಿಮಾ ವ್ಯವಹಾರದಲ್ಲಿ ತೊಡಗಿ ಕೈಸೋಲಿದ್ದುಕೊಂಡಲ್ಲಿಂದ ಈ ಕತೆಯು ಆರಂಭವಾಗುತ್ತದೆ. ಅವನ ಪ್ರೇಯಸಿಯಾಗಿ ಪ್ರಮೀಳೆ ಗಂಟು ಬಿದ್ದಿರುತ್ತಾಳೆ. ಮುಂದೆ, ದುಡ್ಡು ಸಂಪಾದನೆಯ ಸುಲಭ ಮಾರ್ಗವೆಂದು ಪ್ರಮೀಳೆಗೆ ರಾಜಯೋಗಿನಿಯ ವೇಷತೊಡಿಸಿ, ಸಾಪೇಕ್ಷ್ಯಕ್ಕಾಗಿ ಹಾತೊರೆಯುವ ಧರ್ಮಲಂಪಟರಾದ ಧನಿಕರನ್ನು ಸೆಳೆಯುವ ಹಂಚಿಕೆ ಹೂಡುತ್ತಾನೆ. ಈ ಸಂದರ್ಭದಲ್ಲಿ ವಾಸು ಹೇಳುವುದು—"ಧರ್ಮಕ್ಕೆ ತಲೆಬಾಗುವಷ್ಟು ನಮ್ಮ ಜನ ಬೇರೆ ಯಾವುದಕ್ಕೂ ತಲೆಬಾಗುವುದಿಲ್ಲ. ಸಮಾಜದ ರಾಷ್ಟ್ರದ ಪ್ರಗತಿಗೆ ಸಹಾಯವಾಗುವ ಯಾವ ಕಾರ್ಯಕ್ಕೂ ಅವರು ಒಂದು ಬಿಡಿಕಾಸು ಕೊಡಲು ಮನಸ್ಸು ಮಾಡುವುದಿಲ್ಲ. ದೇವರ ಹೆಸರು ಹೇಳಿದರೆ—ಪುಣ್ಯಸಂಪಾದನೆಯೆಂದರೆ—ಸ್ವಾಮಿ ಸನ್ಯಾಸಿ ಎಂದರೆ ಸುವರ್ಣವೃಷ್ಟಿಯಾಗುತ್ತದೆ. ನಮ್ಮ ದೇಶದ ಅತ್ಯಂತ ಲಾಭಕರ ವೃತ್ತಿಯೆಂದರೆ ಧರ್ಮವೃತ್ತಿ." ಈ ಮಾತು ನಮ್ಮ ಸಮಾಜದ ಸತ್ತ ಬುದ್ಧಿಗೊಂದು ಆಹ್ವಾನವಾಗಿದೆ. ಮುಂದಂತೂ ಇದ್ದೇ ಇದೆಯಲ್ಲ—ಊರುಗಳ ಹಾಗೆ ಜನ ಸನ್ಯಾಸಿನಿಯನ್ನು ಸುತ್ತುವರಿಯುತ್ತಾರೆ. ದುಡ್ಡಿನ ಸುರಿಮಳೆಯಾಗುತ್ತದೆ. ಪರದೆಯ ಹಿಂದೆ ವಾಸು ಪ್ರಮೀಳೆಯರ [illegible] ವಿಭ್ರಮ ಚುಕ್ಕಿಲ್ಲದೆ ಸಾಗುತ್ತದೆ. ವಾಸುವಿನ ಗೆಳೆಯ ಶಂಕರ ಸ್ವಾಮಿಜಿಯ ಸೀರಕ್ಕೇರುತ್ತಾನೆ. ಭಾರತದ ಧರ್ಮತತ್ವದಿಂದ ಆಕರ್ಷಿತರಾದ ಮೇಜರ್ ಸ್ಕಿನ್ನರ್ ಮತ್ತು ಮಿಸ್ ಎಮಿಲಿ ಈ ಧರ್ಮದರ್ಶಿಗಳ ಕೀರ್ತಿಯನ್ನು ದಿಗ್ದಿಗಂತದವರೆಗೂ ಪಸರಿಸಲು ಹೆಣಗುತ್ತಾರೆ. ನೂರಾರು ಕಡೆ ಉಪನ್ಯಾಸ, ಉಪದೇಶಗಳು ನಡೆಯುತ್ತವೆ. ಆಶ್ರಮ ನಿರ್ಮಾಣದ ಕಾರ್ಯಕ್ಕಾಗಿ ದೊಡ್ಡದೊಂದು ಪ್ಲಾಟು ತೆಗೆದುಕೊಂಡು, ಭವ್ಯ ಬಂಗಲೆ ರೂಪುಗೊಳ್ಳುತ್ತದೆ. ಕೊನೆಗೆ, ಯೋಗಿನಿ ಆದ ಪ್ರಮೀಳೆ ಹಾಗೂ ಸ್ವಾಮಿಜಿ ಶಂಕರ—ಇವರ ಮನಸ್ಸು ಸತತ ಅಭ್ಯಾಸದ ಬಲದಿಂದೆಂಬಂತೆ ಪರಿವರ್ತನೆಗೊಂಡು, ಇಬ್ಬರೂ ದಿವ್ಯಜ್ಯೋತಿಯ ದರ್ಶನಾಕಾಂಕ್ಷೆಯಿಂದ ನಿಷ್ಕ್ರಮಿಸುತ್ತಾರೆ. ಹೋಗುವ ಮೊದಲು ಪ್ರಮೀಳೆ—"ಬೇಕು ಎನ್ನುವುದು ಪ್ರೇಮವಲ್ಲ—ಭೋಗ, ಬೇಡ ಎನ್ನುವುದು ಪ್ರೇಮ—ತ್ಯಾಗ. ಪ್ರೇಮಕ್ಕೆ ನಿಮ್ಮ ಲಾಲಸೆಯನ್ನು ಬಲಿದಾನವಾಗಿ ಅರ್ಪಿಸಬಲ್ಲಿರಾ?" ಎಂದು ಕೇಳಿ ಇದುವರೆಗೂ ತನ್ನಲ್ಲಿ ಅನುರಕ್ತನಾಗಿ ಕಾಮಪಿಪಾಸೆ ಹಿಂಗಿಸಿಕೊಳ್ಳುತ್ತಿದ್ದ ವಾಸುವಿಗೆ ದಿಗ್ಭ್ರಮೆ ಹಿಡಿಸುತ್ತಾಳೆ. "ಈ ಆಶ್ರಮ ನಿಮ್ಮ ಕೈಗೊಪ್ಪಿಸು—ಅದರ ರಕ್ಷಣೆ, ಪೋಷಣೆ ನಿಮ್ಮ ಮೇಲೆ ಬಿದ್ದಿದೆ" ಎನ್ನುತ್ತಾಳೆ.

ಓದುಗರ ಮನಸ್ಸನ್ನು 'ಸೆರೆಹಿಡಿಯುವುದರಲ್ಲಿ ಕಾದಂಬರಿ ಮೋಹಿನಿಯ ಕೆಲಸ ಮಾಡುತ್ತದೆ. ಅನಕೃ ಶೈಲಿಯ ವೈಶಿಷ್ಟ್ಯವೆಂದರೆ ಇದೇ. ಇಲ್ಲಿ ಚಿತ್ರಿಸಿರುವ ಬದುಕು ಮಾತ್ರ ಬೀಭತ್ಸ ಭಾವವನ್ನು ಹುಟ್ಟಿಸುವುದರಿಂದ ಸಮಸ್ಯೆಯ ಚಿಂತನೆಯ ಕಡೆಗೆ ಗಮನಕೊಡಲಾಗುವುದಿಲ್ಲ. ಧರ್ಮದ ಹೆಸರಿನಲ್ಲಿ ಡೊಂಗಿ ನಡೆಯುವುದೆಂಬುದು ಅರ್ಧ ಸತ್ಯ. ಧರ್ಮತತ್ವದ ಯಥಾರ್ಥ ಜ್ಞಾನಕ್ಕೆ ಅದರ ಇನ್ನೊಂದು ಮುಖದ ನಿರೀಕ್ಷಣೆ ಕೂಡ ಅಗತ್ಯವಿದ್ದ್ಯ. ಆದರೆ ಇಲ್ಲಿ ಅದಕ್ಕೆ ಎಳ್ಳಷ್ಟೂ ಆಸ್ಪದ ಕೊಟ್ಟಿಲ್ಲದಿರುವುದೊಂದು ಕೊರತೆ. ಸಾಮಾಜಿಕ ಆಚಾರಗಳ ಕೊಳೆ, ದೋಷಗಳನ್ನು ಬಯಲಿಗೆಳೆಯುವಾಗ ಜನರ ವಿಚಾರ ಬುದ್ಧಿಗೆ ಅನ್ನವನ್ನೊದಗಿಸುವುದೂ ಅಗತ್ಯ. ಮತ್ತು ಧರ್ಮಭ್ರಷ್ಟ ಆಚಾರಣೆಯಲ್ಲಿರುವ ಅಶಾಶ್ವತ ಸುಖ ಮತ್ತು ವಿಲಾಸಗಳ ಕಡೆಗೆ ಇರುವ ಭೋಗದ ಆಕರ್ಷಣೆಯನ್ನು ದೂರಮಾಡಬೇಕಾದುದೂ ಲೇಖಕರ ಕರ್ತವ್ಯ. ಈ ದೃಷ್ಟಿಯಿಂದ ಸದ್ಯದ ರಚನೆ ಯಶಸ್ವಿಯಾಗಿಲ್ಲ. ಕಾರಂತರ "ಸನ್ಯಾಸಿಯ ಬದುಕು" ಎಂಬ ಕೃತಿಯ ಜೊತೆಗೆ ಇದನ್ನು ತೂಗಿ ನೋಡುವಾಗ, ಅದರ ಭಾರಕ್ಕೆ ಇದು ಮಣಿಯುವುದು ಅಗತ್ಯವಾಗಿರುತ್ತದೆ. ಅಲ್ಲಿ ಬಾಳ್ವೆಯೊಡನೆ ಹೋರಾಟ ಮತ್ತು ಧರ್ಮಸತ್ಯಗಳೊಡನೆ ಸೆಣಸಾಟ ಜೊತೆಜೊತೆಯಾಗಿ ನಡೆಯುತ್ತದೆ. ಇಲ್ಲಿ ಧರ್ಮದ ವ್ಯಾಪಾರ ಮಾತ್ರ ನಡೆದಿದೆ. ಆದರೂ "ಅರುಳು ಮರುಳು" ಭಾವಕ್ಕೆ ಬಲಿಬಿದ್ದೋ ಅಥವಾ ಪ್ರಭಾವೀ ವಾತಾವರಣದ ಪರಿಣಾಮವಾಗಿಯೋ ಕೊನೆಯಲ್ಲಿ ಧರ್ಮಜ್ಯೋತಿಯೆಡೆಗೇ ಯೋಗಿನಿ ಮತ್ತು ಸ್ವಾಮಿಜಿ ತಿರುಗುವುದೊಂದು ಸಮಾಧಾನ.

—ಕಾರ್ತಿಕೇಯ.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ! ಯಂ ಸಿ. ಶಾಸ್ತ್ರೀ, ಯಲ್. ಐ ಎಂ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ। ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಮದುವೆಯಾದ ಸ್ತ್ರೀಪುರುಷರ ಸಲುವಾಗಿ
ಬರೆಯಲ್ಪಟ್ಟ ಪುಸ್ತಕ
ಮಿತಸಂತತಿ
ಹುಟ್ಟುವ ಮಕ್ಕಳು ಆರೋಗ್ಯ ಸಂಪತ್ತು ಸೌಭಾಗ್ಯ ಮೊದಲಾದುವನ್ನು ಸಾಕಷ್ಟು ಪಡೆಯುವ ಹಾಗೆ ಶಕ್ತವರು ಸಾಧಿಸಲಾಗುವಂತೆ ಅತ್ಯನುಕೂಲವಾದ ಪದ್ಧತಿ ಯಾವುದೋ ಅದರಂತೆ ದಂಪತಿಗಳು ಮಕ್ಕಳನ್ನು ಹೆರುವ ಹಾಗೆ ಅವಶ್ಯವಾದ ತತ್ವಗಳನ್ನು ಬೋಧಿಸುವ ನವೀನ ಪುಸ್ತಕ ಬೆಲೆ **0-6-0**
ಗುಪ್ತರೋಗ ನಿವಾರಣೆ
ಜನನೇಂದ್ರಿಯಂಗಳಿಗೆ ಸಂಬಂಧಿಸಿರುವ ರೋಗ[illegible] ಪರಿಸಿ ತ್ತಲೀ ಇವೆ ಇಂತಹ ರೋಗಗಳಿಂದ ನರಳುವ ಸ್ತ್ರೀಪುರುಷರ ಆರೋಗ್ಯ ರಕ್ಷಣೆಗಾಗಿ ಪ್ರಪಂಚದಲ್ಲಿನ ವಿದ್ವಾಂಸ ವೈದ್ಯರುಗಳ ಅಮೂಲ್ಯ ಸಿದ್ಧಾನುಭವ ಸಂಚಿಕೆ ಪುಸ್ತಕ ಬೆಲೆ **0-8-0**
ಪ್ರತಿಗಳಿಗೂ, ಪುಸ್ತಕಗಳ ಯಾದಿಗೂ, ಬರೆಯಿರಿ.
ನವಭಾರತ ಪುಸ್ತಕ ಭಂಡಾರ ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
[illegible] ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್
For up-to-date Lodging & Boarding
ROYAL MAHAL,
UDIPI. S. Kanara.

IN THE COURT OF THE SUBORDINATE JUDGE OF SOUTH KANARA
O. S. No 283/1951

Between:-
Hazran Bi and another
—PLAINTIFFS
Rukhya Bi and others
--DEFENDANTS

To,
21st Defendant, Flavia Pasca Louis Bai, Wife of Salvador Louis, Residing at Uppoo village, Udipi Taluk.
22nd Defendant, Krishna Kamthi Land-holder, residing at Udipi Kasba, Udipi Taluk.

NOTICE.

Please take Notice that the abovenamed Plaintiffs have filed a suit for partition against you and now the said suit stands posted to 9-6-1952 for hearing. You are hereby informed that if you fail to appear on the said date either in person or by pleader the suit will be decided in your absence.

[By order of the Court]
Sd / **G. Somasheker Rao**
Vakil for Plaintiff
Mangalore, 2— —

The Catholic Bank Ltd, Coondapur.

ದಿ ಕಥೋಲಿಕ್ ಬೇಂಕ್ ಲಿಮಿಟೆಡ್, ಕುಂದಾಪುರ

ಯೇಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ಮೇಲ್ಕಾಣ್ಸಿದ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಯಾ ಅದಕ್ಕಾಗುವ ಈ ಕನಕದ ಬಡ್ಡಿಯನ್ನಾಗಲೀ ಕೊಡದೆ ಇರುವುದರಿಂದಲೂ ಅಲ್ಲದೆ ಕ್ರಮವಾದ ರಿಜಿಸ್ಟರ್ಡ್ ನೋಟಿಸು ಕೊಟ್ಟಲ್ಲಿ ಕೆಲವರು ಊರಿನಲ್ಲಿ ಇಲ್ಲವೆಂತಲೂ ಕೆಲವರು ನೋಟಿಸನ್ನು ಪಡಕೊಂಡು ಅವರವರ ನಗಗಳನ್ನು ಬಿಡಿಸಿಕೊಂಡು ಹೋಗದಿರುವುದರಿಂದಲೂ ಮತ್ತು ಇನ್ನಿತರರು ನೋಟಿಸನ್ನು ವಾಪಾಸು ಮಾಡಿರುವುದರಿಂದಲೂ, ಸದರಿಯವರಿಗೆ ಯಾ ಸದರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸಪಡಿಸುವುದೇನೆಂದರೆ ಸದರಿಯವರು ಈ ಇಟ್ಟ ನಗಗಳನ್ನು ಇದೇ ಮೇ ತಿಂಗಳ ತಾರೀಕು 15ಕ್ಕೆ ಮಧ್ಯಾಹ್ನ ಘಂಟೆ 2ಕ್ಕೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಯಾವ ಕಾರಣದಿಂದಲಾದರೂ ಏಲಂ ಅದೇ ದಿವಸ ಮಾಡಲು ಅನಾನುಕೂಲವಾದರೆ ಬ್ಯಾಂಕಿಗೆ ಯುಕ್ತ ಕಂಡ ದಿವಸಕ್ಕೆ ಪುನಃ ನೋಟೀಸು ಕೊಡದೆನೇ ಮುಂದರಿಸಲಾಗುವುದು, ತಿಳಿದಿರಲಿ.

ಸಾಲದನಂಬ್ರ	ಸಾಲ ಪಡಕೊಂಡವರ ಹೆಸರು	ಸಾಲದ ಅಸಲು ಐವೇಜು Rs.	As.	Ps.
26/195	ಕೃಷ್ಣಪ್ಪ ಮೇಸ್ತ್ರಿ, ಕುಂದಾಪುರ	35	0	0
26/139	ಮಾಣಿಬೈಲು ಕೃಷ್ಣಪ್ಪ ಸೆಟ್ಟಿ, ಅಂತ್ಯ ಸೆಟ್ರ ಅಳಿಯ ಕರ್ಕುಂಜೆ ಗ್ರಾಮ–ಕುಂದಾಪುರ	200	0	0
26/208	ನರ್ಸ್ಯಾಣ ಸೆರೆಗಾರ, ಪುಟ್ಟ ಸೆರೆಗಾರರ ಮಗ, ಕುಂದಾಪುರ ಕಸಬಾ	90	0	0
26/295	ಎಮ್. ಗಣಪತಿ ಸೇಟ್– ದೇವಪ್ಪ ಸೆಟ್ರ ಮಗ ಕುಂದಾಪುರ.	15	0	0
26/301	ವಿಠಲ್ ಮೇಸ್ತ್ರಿ, ರಾಮ ಮೇಸ್ತ್ರರ ಮಗ ಮಡ್ಡು ಗುಡ್ಡೆ–ಕುಂದಾಪುರ	15	0	0
26/325	ಕೋಡಿ ಇಬ್ರಾಹಿಮ್ ಮೊಹಿದ್ದಿನ್ ಸಾಹೇಬ್ ಕೋಡಿ ಕುಂದಾಪುರ	500	0	0
26/354	H. ಸಂಜೀವ ಸೆಟ್ಟಿ, ಹೊನ್ನಯ್ಯ ಸೆಟ್ರ ಮಗ, ಕೋಟ ಗ್ರಾಮ,	300	0	0
26/537	ಅಂಡಾಜೆ ಯಾನೆ ಅನಂತಯ್ಯ ಹೆಬ್ಬಾರ, ಹಂಗ್ಲೂರು, ಕುಂದಾಪುರ.	165	0	0
26/367	ಕೆ. ಮಂಜಿ ನಾಯ್ಕ, ಪದ್ಮ ನಾಯ್ಕರ ಮಗ, ಶ್ಯಾರ್ಕ್, ಕುಂದಾಪುರ.	70	0	0
26/380	ಅಬ್ದುಲ್ಲಾ ಸಾಹೇಬ, ಹೊಟೆಲ್ ಅಬ್ದುಲ್ ಖಾದರ ಮಗ, ಕೋಡಿ, ಕುಂದಾಪುರ.	50	0	0
26/399	M. K. ಸುಬ್ಬರಾವ್, ಮಾಣಿ ಕೃಷ್ಣಯ್ಯರ ಮಗ, ಕೊಲ್ಲೂರು, ಕುಂದಾಪುರ	600	0	0
26/403	ದೇವರಾಯ ಕಾಮತ್, ಗಣಪಯ್ಯ ಕಾಮತರ ಮಗ, ಕೋಟೇಶ್ವರ.	80	0	0
26/576	G. ಕಾಜೊಜಿ ಕಾಂಡೆಲ್, ಗೋವಿಂದ ಕಾಂಡೆಲ ಮಗ, ಗಂಗೊಳ್ಳಿ.	1572	0	0
26/595	A. ನಾರ್ಸ್ಯಾಣ ಸೆಟ್ಟಿ, ನಂದಿಯಪ್ಪ ಸೆಟ್ರ ಮಗ, ಕುಂದಾಪುರ.	350	0	0
26/598	ಕಲ್ಲಹಟ್ಟಿ ಶೀನಪ್ಪ ಹೆಗ್ಡೆ, ಮಾದಯ್ಯ ಸೆಟ್ರ ಅಳಿಯ, ಬಾಲಾಡಿ.	600	0	0
26/662	ಮಾಣಿ ಬೈಲು ಕೃಷ್ಣಪ್ಪ ಸೆಟ್ಟಿ, ಅಂತ್ಯ ಸೆಟ್ರ ಅಳಿಯ, ಕರ್ಕುಂಜೆ.	150	0	0
27/701	ಮಾಣಿ ಬೈಲು ಕೃಷ್ಣಪ್ಪ ಸೆಟ್ಟಿ, ಅಂತ್ಯ ಸೆಟ್ರ ಅಳಿಯ, ಕರ್ಕುಂಜೆ.	485	0	0
26/677	ಗಂಗು ಖಾರ್ವಿ, ಪಟೇಲ ದೇವು ಖಾರ್ವಿ, ಖಾರ್ವಿ ಕೇರಿ, ಕುಂದಾಪುರ.	10	0	0
26/693	M. K. ಸುಬ್ಬರಾವ್, ಮಾಣಿ ಕೃಷ್ಣಯ್ಯರ ಮಗ, ಕೊಲ್ಲೂರು.	1050	0	0
26/695	ಚಿಕ್ಕ ಹೆಂಗಸು, ಮಂಜಿ ಪೂಜಾರ್ತಿ ಮಗಳು, ಗಂಗೊಳ್ಳಿ.	80	0	0
26/697	ಸೀನ ಶೇಟ್, ಸುಬ್ರಾಯ ಸೇಟರ ಮಗ, ಕುಂದಾಪುರ ಕಸಬಾ.	50	0	0
26/895	ತಿಮ್ಮಪ್ಪ ಭಂಡಾರಿ, ನಾಗಪ್ಪ ಭಂಡಾರಿ ಮಗ, ಮಡ್ಡು ಗುಡ್ಡೆ, ಕುಂದಾಪುರ.	50	0	0
26/910	ರಾಮ ಪೂಜಾರಿ, ಓಣಿಮನೆ ಸುಬ್ಬ ಪೂಜಾರಿ ಅಳಿಯ, ವಡೇರಹೋಬಳಿ.	25	0	0
26/936	ವೆಂಕಟ್ರಮಣ ಶಾಸ್ತ್ರಿ, ಸುಬ್ರಾಯ ಶಾಸ್ತ್ರಿ ಮಗ, ಮೊಳಹಳ್ಳಿ.	60	0	0
26/941	ಅಚ್ಯುತ ಕೃಷ್ಣ ಹೆಬ್ಬಾರ, ರಾಮಪ್ಪ ಹೆಬ್ಬಾರರ ಮಗ, ಹಂಗ್ಲೂರ್.	300	0	0
26/966	ಜುವಾಂವ್ ರಿಬೆಲ್ಲೊ, ರ್‍ಯಾಮಂಡ್ ರಿಬೆಲ್ಲರ ಮಗ, ಉಪ್ಪಿನಕುದ್ರು.	60	0	0
26/1038	ಗೋವಿಂದ ಸೆಟ್ಟಿ, ಚಿಕ್ಕಮ್ಮ ಸೆಟ್ಟಿ ಮಗ, ಹೆರಿಕುದ್ರು.	10	0	0
26/1058	M. ರತ್ನಾಕರ, M. ಪಕೀರ ಮಗ, ವಡೇರಹೋಬಳಿ, ಕುಂದಾಪುರ.	90	0	0
26/1123	M. ರತ್ನಾಕರ, M. ಪಕೀರ ಮಗ, ವಡೇರಹೋಬಳಿ, ಕುಂದಾಪುರ.	40	0	0
26/1124	ಗಿಲ್ಬರ್ಟ್ ರಿಬೆಲ್ಲೊ, ಜುವಾಂವ್ ರಿಬೆಲ್ಲರ ಮಗ, ಉಪ್ಪಿನಕುದ್ರು.	140	0	0
26/1365	ಆನಂದ ಆಚಾರಿ, ಪುಟ್ಟಯ್ಯ ಆಚಾರಿ, ಅಂಕದಕಟ್ಟೆ.	130	0	0
26/1400	M. K. ಸುಬ್ಬರಾವ್, ಮಾಣಿ ಕೃಷ್ಣಯ್ಯರ ಮಗ, ಕೊಲ್ಲೂರು.	200	0	0
27/411	ಜಿ. ಕೃಷ್ಣ ಮಯ್ಯ, ನರಸಿಂಹ ಮಯ್ಯರ ಮಗ, ಕುಂದಾಪುರ.	300	0	0
27/945	ಕಲ್ಲಾಡಕಿಲ್ಸ್ ಅಸ್ಸಾನಾರ್, ಇಬ್ರಾಹಿಮ್‌ರ ಮಗ, ಕೋಡಿ.	550	0	0

Office of the Catholic Bank Ltd,
Coondapoor–Dated 1-5-'52

I. Menezes,
Agent

ಪ್ರವಾಸಿಯ ಪತ್ರಗಳು ೩೦

ನೇಪಲ್ಸ್

ಜೂನ್ 12ನೇ ಶುಕ್ರವಾರ ಸಾಯಂಕಾಲದ ರೈಲಲ್ಲಿ ರೋಮ್ ನಗರಕ್ಕೆ ಹೊರಟ ವಿಷಯ ಮುಂಚಿನ ಪತ್ರದಲ್ಲಿ ಬರೆದಿದ್ದೆ. ರೈಲು ಇಟೇಲಿಯ ಮಧ್ಯ ಪ್ರದೇಶವಾದ ಟಸ್ಕನಿ ಎಂಬ ಊರಿನಲ್ಲಿ ದಕ್ಷಿಣ ಮುಖವಾಗಿ ಚಲಿಸುತ್ತಿತ್ತು. ಇದು ಹೆಚ್ಚಾಗಿ ಗುಡ್ಡಪ್ರದೇಶ. ಒಳ್ಳೇ ದ್ರಾಕ್ಷೆ ಬೆಳೆಯುವ ಊರು. ಇಡೀ ಇಟೇಲಿಯಲ್ಲಿ ಇಲ್ಲಿಯಷ್ಟು ಒಳ್ಳೇ ದ್ರಾಕ್ಷೆ ಮತ್ತು ಅದರಿಂದ ತಯಾರಾಗುವ ದ್ರಾಕ್ಷಾರಸವು (Wine) ಬೇರೆ ಎಲ್ಲಿಯೂ ಇಲ್ಲವೆಂದು ಅಲ್ಲಿಯ ಜನರಿಂದ ನನಗೆ ತಿಳಿಯಿತು. ಬೈಲು ಭೂಮಿಯಲ್ಲಿ ಒಳ್ಳೇ ಗೋಧಿ ಮತ್ತು ಮುಸುಕಿನ ಜೋಳ (Maize) ಬೆಳೆಯುತ್ತವೆ.

ಫ್ಲೋರೆನ್ಸಿನಿಂದ ರೋಮಿನ ವರೆಗೂ 4 ಗಂಟೆ ಸಮಯ ನನ್ನ ಜೊತೆಗೆ ಸುಮಾರು 35 ವರ್ಷ ಪ್ರಾಯದ ಒಬ್ಬ ರೈಲ್ವೆ ಆಫೀಸರನು ಪ್ರಯಾಣ ಮಾಡುತ್ತಿದ್ದು ಅವನಿಗೆ ಇಂಗ್ಲಿಷ್ ಗೊತ್ತಿದ್ದ ಕಾರಣ ಆ ದೇಶದ ಅನೇಕ ವಿಷಯಗಳು ಅವನಿಂದ ತಿಳಿಯಲಿಕ್ಕೆ ಸಾಧ್ಯವಾಯಿತು. ಅವನು ಸೋಶಿಯಲಿಸ್ಟ್ ಪಾರ್ಟಿಗೆ ಸೇರಿದವನು. ಅವನಿಗೆ ಲಗ್ನವಾಗಲಿಲ್ಲ. ಇಟೇಲಿಯಲ್ಲಿ ಸಾಮಾನ್ಯ 32–35 ವರ್ಷ ಪ್ರಾಯದ ವರೆಗೆ ಲಗ್ನವಾಗುವುದು ದುರ್ಲಭವೆಂತ ಅವನಿಂದ ತಿಳಿಯಿತು. ಇತರ ಯುರೋಪ ದೇಶಗಳಲ್ಲೂ ಹಾಗೆಯೇ ಎನ್ನಬಹುದು. ಅದೇಕೆಂದರೆ ಅಷ್ಟರ ವರೆಗೆ ಒಂದು ಕುಟುಂಬವನ್ನು ಸಾಕುವಷ್ಟು ಸಂಪಾದನೆ ಒಬ್ಬನಿಗೆ ಆಗುವುದಿಲ್ಲ. ಅವನಿಂದ ನನಗೆ ಸಿಕ್ಕಿದ ಅನುಭವವು ಕೆಲವು ಮಟ್ಟಿಗೆ ಅವನ ರಾಜಕೀಯ ಒಲವಿಗೆ ಹೊಂದಿರಬಹುದಾದರೂ ಅವನು ಹೇಳಿದ್ದರಲ್ಲಿ ಹೆಚ್ಚಿಗೆ ಸತ್ಯವಿದೆ ಎಂಬುದು ನಾನು ಸ್ವತಃ ಕಂಡದ್ದರಿಂದ ನನಗೆ ತಿಳಿಯಬಂತು. ಅವನ ಸಂಭಾಷಣದ ತಾತ್ಪರ್ಯ:–

"ಮುಸಲೋನಿಯ ಕಾಲದ ವಿಚಾರ ಕೇಳಬಾರದು. ಅವನು ದೊಡ್ಡ ಭಂಡವಾಳದವರ ಪ್ರಭಾವಕ್ಕೆ ಸೇರಿದವನಾಗಿದ್ದನೆಂತಲೂ ಈಗ ನಡೆಯುವ ಸರಕಾರ ಕೂಡ ಭೂಮಾಲೀಕರು ಮತ್ತು ಪಾದ್ರಿಗಳ ಸಂಗಡದ್ದೆಂತಲೂ ತಿಳಿಯಿತು. ಕೃಷಿಕರ ಸ್ಥಿತಿಯು ಬಹಳ ಕಠಿಣ. ಅವರಿಗೆ ಭೂಮಿಯಲ್ಲಿ ಶಾಶ್ವತವಿಲ್ಲ. ಭೂಮಿಯ ಉತ್ಪತ್ತಿಯಲ್ಲಿ ಸೇಕಡ 50 ಗೇಣಿ ಕೊಡಬೇಕು. ಆದರೆ ಉಳುವ ಮಿರ್ಜಾ ಧನಿಯದ್ದು. ಸಣ್ಣಸಣ್ಣ ಒಕ್ಕಲುಗಳು (ಕಿಸಾನರು) ಬಹಳ ಬಡವರು ಮತ್ತು ಹೆದ್ದರು. ಅವರ ಮನೆಗಳನ್ನು ಕಾಣುವಾಗ ಇದು ನಿಜವೆಂತ ಕಾಣುತ್ತದೆ. ಇಂಥ ಜನರ ಮೇಲೆ ಪಾದ್ರಿಗಳ ಪ್ರಭಾವ ಜಾಸ್ತಿ. ಈಗ ತಾನೆ ನಡೆದ ಚುನಾವಣೆಯಲ್ಲಿ ಅವರು ಒಳಗಿಂದೊಳಗೆ ಕೆಲಸಮಾಡಿದ್ದಾರೆ. ಕೆಥೋಲಿಕ್ ಪಾರ್ಟಿ ಎಂಬ ಒಂದು ರಾಜಕೀಯ ಪಕ್ಷವಿದೆ. ಸೇಕಡಾ 51ಕ್ಕೆ ಮಿಕ್ಕಿ ಓಟು ಸಿಕ್ಕಿದರೆ ಮೂರನೇ ಎರಡರಷ್ಟು ಸೀಟುಗಳು ಸಿಕ್ಕುವಂತೆ ಒಂದು ವಿಶೇಷ (Special) ಕಾನೂನು ಮಾಡಿಸಿ ಅದರಿಂದ ಆ ಪಕ್ಷದವರು ಹೆಚ್ಚಿನ ಸೀಟುಗಳನ್ನು ಅಪಹರಿಸಿರುತ್ತಾರೆ. (ಇದೇ ರೀತಿ ಕಳೆದ ವರ್ಷ ಫ್ರಾನ್ಸಿನಲ್ಲಿಕೂಡ ಒಂದು ಕಾನೂನು ಆಗಿದೆ.) ಸಮಾಜವಾದಿ ಮತ್ತು ಸಮತಾವಾದಿಗಳಿಗೆ ಮುನಿಸಿಪಾಲಿಟಿ ಮತ್ತು ಲೋಕಲ್ ಬೋರ್ಡಿನ ಚುನಾವಣೆಗಳಲ್ಲಿ ಸಿಕ್ಕಿದ ಓಟುಗಳು ಜಾಸ್ತಿ. ಆದರೆ ಈ ಕಾನೂನಿನಿಂದಾಗಿ ಅವರಿಗೆ ಸಿಕ್ಕಿದ ಸೀಟುಗಳು ಕಡಿಮೆ. ಭಂಡವಾಳ ಪಕ್ಷದ ಸರಕಾರವು ಅಮೇರಿಕದ ಸರಕಾರದಿಂದ ಹೇರಳ ಸಹಾಯ ಪಡೆದು ಕೆಲಸಮಾಡುತ್ತಿದೆ. ಬಡವರು ಮತ್ತು ಮಧ್ಯಮ ತರಗತಿಯವರ ಸ್ಥಿತಿ ಬಹಳ ಕಠಿಣ. ಸಾಮಾನುಗಳಿಗೆ ಧಾರಣೆ ಬಹಳ ಜಾಸ್ತಿಯಾಗಿ, ದೇಶದ ಹಣದ ಬೆಲೆ ಬಹಳ ಕಡಿಮೆಯಾಗಿ ಜೀವನವು ಬಹಳ ಕಷ್ಟ. ಇವರ ಉನ್ನತಿಗಾಗಿ ಸರಕಾರವು ಬೇಕಾದ ಕೆಲಸಮಾಡುವುದಿಲ್ಲ"

ಹಣದ ವಿಷಯ ಅವನು ಹೇಳಿದ್ದೇನೂ ನಿಜ. ಇಟೇಲಿಯ ಸಾಮಾನ್ಯ ನಾಣ್ಯ "ಲೀರಾ" ಎಂತ. ಕಳೆದ ಯುದ್ಧದ ಮೊದಲು 1 ಪೌಂಡಿಗೆ [ರೂ. 13-5-4] ಸರಾಸರಿ 93 ಲೀರಾ ಸಿಕ್ಕುತ್ತಿತ್ತು. ಆದರೆ ಕಳೆದ ವರ್ಷ ಅಲ್ಲಿ ನಾನು ಸಂಚರಿಸುತ್ತಿದ್ದಾಗ 1 ಪೌಂಡಿಗೆ 1738 ಲೀರಾಗಳು. ಎಂದರೆ ದುಡ್ಡು ಎಷ್ಟು ಅಗ್ಗವೆಂದು ವಾಚಕರು ಆಲೋಚಿಸಿರಿ. ಒಂದು ಊಟಕ್ಕೆ 700 ಲೀರಾ. ಮೋಟರಿನಲ್ಲಿ 2 ಮೈಲು ಹೋದರೆ 500 ಲೀರಾ. ಒಂದು ಕ್ಷೌರ ಮಾಡಿಸಿಕೊಂಡರೆ 200 ಲೀರಾ. ಪ್ರತಿಯೊಬ್ಬರ ಕೈಯಲ್ಲೂ ದಪ್ಪದಪ್ಪವಾದ ಲೀರಾ ನೋಟುಗಳ ಕಟ್ಟುಗಳು. ಆದರೂ ಬೇಕಾದ ಆಹಾರ ಪದಾರ್ಥಗಳು ಸಿಕ್ಕಲಿಕ್ಕೆ ಕಷ್ಟವಿಲ್ಲ. ರುಚಿಯಾದ ಬ್ರೆಡ್ಡು, ಸಮೃದ್ಧಿಯಾಗಿ ತರಕಾರಿಗಳು, ನಾನಾತರದ ಹಣ್ಣು ಹಂಪಲುಗಳು, ಇನ್ನು ಇಟೇಲಿ ಜನರಿಗೆ ಪ್ರಿಯಕರವಾದ ಪಾನೀಯಗಳು. ತುಂಬಿದ ಊರಿದೆ ಇಟೇಲಿಯಲ್ಲಿ ನಾನು ಈ ಮುಂಚೆ ನೋಡಿದ ಯುರೋಪ್ ದೇಶಗಳಿಗಿಂತ ಬಡತನ ಜಾಸ್ತಿ. ಆದರೂ ಜನರು ಬುದ್ಧಿವಂತರು, ಶ್ರಮಜೀವಿಗಳು, ಮೈಗಳ್ಳರಲ್ಲ. ಯುದ್ಧದಲ್ಲಿ ಸೋತುದರಿಂದ ಈಗ ಕಷ್ಟಪಡ್ಡಿದ್ದಾರೆ.

ಹೀಗೆಯೇ ಮಾತನಾಡಿಕೊಂಡು ರೈಲಿನಲ್ಲಿ ಬರುತ್ತಿರುವಾಗ ರೋಮಿನಿಂದ ಸುಮಾರು 40 ಮೈಲಿನಿಂದ ಅಲ್ಲಲ್ಲಿ ಟ್ಯಾಬರ್ (Tiber) ಎಂಬ ನದಿಯು ರೈಲು ಮಾರ್ಗಕ್ಕೆ ಸಮೀಪವಾಗಿ ಹರಿದುಬರುತ್ತದೆ. ಈ ನದಿಯ ವಿಷಯ ಹಿಂದಿನ ರೋಮನರ ಚರಿತ್ರೆಯಲ್ಲಿ ಓದಬಹುದು. ನಮ್ಮ ದೇಶದ ನದಿಗಳಷ್ಟು ದೊಡ್ಡದಲ್ಲ. ಆದರೆ ಸ್ವಚ್ಛವಾದ ನೀರು. ಆದರ ಎರಡೂ ದಡಿಗಳಲ್ಲಿ ಚೆನ್ನಾಗಿ ಪೈರು ಬೆಳೆಯುತ್ತಿರುವ ಭೂಮಿ. ಸಾಯಂಕಾಲ ಘಂಟೆ 8-20ಕ್ಕೆ ಸರಿಯಾಗಿ ರೈಲು ರೋಮ್ ನಗರವನ್ನು ಮುಟ್ಟಿತು. 4-42ಕ್ಕೆ ಹೊರಟ ರೈಲು 8-20ಕ್ಕೆ 198 ಮೈಲು ಬಂತು. ಘಂಟೆಗೆ ಸರಾಸರಿ 54½ ಮೈಲು ವೇಗ. ಎಷ್ಟು ಸುಲಭ ಪ್ರಯಾಣ! ಈ ಮುಂಚೆ ಬರೆದಂತೆ ರೋಮಿನ ಸ್ಟೇಶನ್ ಬಹಳ ದೊಡ್ಡದು. ಹೊಸತಾಗಿ ಸಿಮೆಂಟಿನಿಂದಲೇ ಕಟ್ಟಿದ್ದು. ಅಲ್ಲಿಂದ 1 ಫರ್ಲಾಂಗ್ ದೂರ ಸೆನ್ ರೆಮೋ (San Remo) ಎಂಬ ಹೊಟೇಲಿಗೆ ನಡೆದೆ. ಅಲ್ಲಿಗೆ ನನ್ನ ಜೊತೆಗೆ ನನ್ನ ಕೈಪೆಟ್ಟಿಗೆ ಹಿಡಿದುಕೊಂಡು ಹೋಗುತ್ತಿದ್ದ ಹೊಟೇಲ್ ಕೆಲಸಗಾರರೊಡನೆ ಇದು ಎಷ್ಟು ಚಲೋ ಸ್ಟೇಶನ್ ಎಂತ ನಾನು ಹೇಳಿದಾಗ ಅವನು ಕೊಟ್ಟ ಉತ್ತರ:–"ಹೌದು, ಸಾವಿರಾರು ಬಡ ಕುಟು

ಕವಿರಾಜ ಯುನ್. ಯುನ್. ಸೇನರ

ಶಾಸ್ತ್ರೀಯ ಔಷಧಿಗಳು ಈಗಲೇ ಬಂದಿವೆ

ಬೃಹತ್ ಅಮೃತಬಳ್ಳಿ ಕಷಾಯ
ದ್ರಾಕ್ಷಾರಿಷ್ಟ
ಕಸ್ತೂರಿ ಕಲ್ಪ ರಸಾಯನ
ನೇತ್ರಬಿಂಧು
ಕರ್ಪೂರಾರಿಷ್ಟ
ದುರ್ಗಾ ಪುನರ್ನವಾಸವ
ದಾಸಾರಿಷ್ಟ
ಕುಂಕುಮಾಸವ
ಮೃಗಾಂಕ ದ್ರಾವ

ದರವನ್ನು ವಿಚಾರಿಸುವುದು.

ಏಜಂಟ್:–
ಶಾ ಕಂಪೆನಿ, ಮಂಗಳೂರು ನಂ. 1.

ಂಬಗಳಿಗೆ ಸರಿಯಾದ ಮನೆಯಿಲ್ಲದಾಗ ಈ ಆಡಂಬರವೇಕೆ? ಬಡಜನರನ್ನು ಕೇಳುವವರಿಲ್ಲ" ನನ್ನೊಟ್ಟಿಗೆ ಪ್ರಯಾಣಮಾಡಿದ ಸಮಾಜವಾದಿಯು ಹೇಳಿದ ಮಾತುಗಳು ನಿಜ.

ಸಿನ್ ರಿವೋ ದೊಡ್ಡ ಹೊಟೇಲು. 5 ಉಪ್ಪರಿಗೆ ಬಿಲ್ಡಿಂಗ್. ಊಟ. ಅಲ್ಲಿ ಆ ರಾತ್ರಿ ಇದ್ದು ಮರುದಿನ ಬೆಳಗ್ಗೆ 9 ಘಂಟೆಯ ರೈಲಿನಲ್ಲಿ ಇನ್ನೂ ದಕ್ಷಿಣಕ್ಕೆ ಹೊರಟೆ. ಅಲ್ಲಿಂದ 155 ಮೈಲು ದೂರವಿರುವ ನೇಪಲ್ಸ್ ಎಂಬ ನಗರವನ್ನು ನೋಡಿ ಪುನಹ ರೋಮಿಗೆ ಬಂದು ಅಲ್ಲಿ ಎರಡು ದಿನ ಇದ್ದು ಸಂಚರಿಸಿ ಅಲ್ಲಿಂದ ಬೊಂಬಾಯಿಗೆ ವಿಮಾನದಲ್ಲಿ ಬರುವುದೆಂತ ಮುಂಚೆಯೇ ನಿಶ್ಚಯಿಸಿದ ಕಾರಣ ಸೀದಾ ಹಾಗೆ ಹೊರಡಲಿಕ್ಕೆ ಕಾರಣ. ರೈಲು ಬರುತ್ತಿರುವಾಗ ಅನೇಕ ಮೈಲುಗಳ ದೂರ ರೋಮನರ ಕಾಲದ ಹಾಳುಬಿದ್ದ ಎತ್ತರವಾಕಲ್ಲಿನ ಕಂಬಗಳ ಮೇಲೆ ನೆಲದಿಂದ ಇಪ್ಪತ್ತು ಅಡಿ ಮೇಲೆ ಕಲ್ಲಿನಿಂದ ಕಟ್ಟಿದ ನೀರು ಹರಿವ ಕಾಲುವೆ (Aqueduct) ಅಲ್ಲಲ್ಲಿ ಹೊಸತಾಗಿ ಕಟ್ಟಿದ ಕಾರ್ಖಾನೆಗಳು ಮತ್ತು ಮನೆಗಳು. ಗುಡ್ಡೆಯ ಇಳಿಜಾರಿನಲ್ಲಿ ಕೂಡ ಕಡಿದು ಸಮತಟ್ಟುಮಾಡಿ ಪೈರು ಬೆಳೆಸುವ ಗದ್ದೆಗಳು. ಇನ್ನು ಕೆಲವು ಕಡೆ ಅವುಗಳಲ್ಲಿ ಒಲೀವ್ ಮರಗಳು ಗುಡ್ಡೆಯ ಬದಿ ಕುಸಿದು ಬೀಳದಂತೆ ಕಪ್ಪು ಕಲ್ಲಿನಿಂದ ಕಟ್ಟಿದೆ. ಈ ದೇಶದಲ್ಲಿ ಜನರು ಆಹಾರಕ್ಕೆ ಹೆಚ್ಚಾಗಿ ಉಪಯೋಗ ಮಾಡುವುದು ಒಲೀವ್ [Olive] ಎಣ್ಣೆ ಗದ್ದೆಗಳನ್ನು ಉಳಲಿಕ್ಕೆ ಕುದುರೆಯ ನೇಗಿಲು ಅದನ್ನು ಎಳೆಯುವುದು ಎತ್ತುಗಳು. ಅಲ್ಲಲ್ಲಿ ಗುಡ್ಡಗಳಿದ್ದ ಕಾರಣ ಅನೇಕ ಸುರಂಗಗಳ ಮೂಲಕ ರೈಲು ಓಡುತ್ತದೆ. ಇಟೇಲಿಯಲ್ಲಿ ದಕ್ಷಿಣಕ್ಕೆ ಬಂದಂತೆ ಕೃಷಿಕರ ಮನೆ ಉತ್ತರ ಪ್ರದೇಶಕ್ಕಿಂತ ಒಳ್ಳೆಯದಾಗಿ ಕಾಣುತ್ತದೆ. ಅಲ್ಲಲ್ಲಿ ಹೊಸತಾಗಿ ಕಟ್ಟಿದ ಮನೆಗಳನ್ನು ಕಾಣಬಹುದು ಸ್ವಲ್ಪ ದೂರ ರೈಲು ಹಟ್ಟಿ ಎರಡುಹೋಳಿ ಇದ್ದು ರೈಲು ಬಹಳ ವೇಗದಲ್ಲಿ ಬರುತ್ತದೆ. ಈ ದಿನದ ರೈಲು ಸಾಮಾನ್ಯ ರೈಲು. ರೆಪಿಡೋ ರೈಲಲ್ಲ. ಆದರೂ ಬಹು ವೇಗದಲ್ಲಿ ಬಂತು. ಇಲ್ಲಿ ಮಳೆ ಬಂದು ಕೆಲವು ತಿಂಗಳಾದ ಕಾರಣ ರೈಲು ಬರುವ ರಭಸಕ್ಕೆ ಹಿಂದೆ ವಿಪರೀತ ಧೂಳು ಏಳುತ್ತಿತ್ತು. ಉತ್ತರ ದೇಶಗಳಲ್ಲಿ ಧೂಳೇ ಇಲ್ಲ. ಅದು ಆಗಾಗ ಮಳೆ ಬರುವ ಕಾರಣ ರೈಲು ಘಂಟೆ 11-55ಕ್ಕೆ ಸರಿಯಾಗಿ ನೇಪಲ್ಸಿಗೆ ಬಂದು ಸೇರಿತು. 2-55 ಮಿನಿಟುಗಳಲ್ಲಿ 155 ಮೈಲು ಘಂಟೆಗೆ 50 ಮೈಲಿಗಿಂತಲೂ ಜಾಸ್ತಿ!

ಕೆ. ಆರ್. ಕಾರಂತ —[ವಿಚಾರವಾಣಿ]

ಮುಂದುವರಿಯುವುದು

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

Read

'NAVAYUGA'
Weekly

Voice of the people Excellent Media and Reading Value.

ದಿ ವಿಜಯಾ ಬೇಂಕ್ ಲಿಮಿಟೆಡ್ ಕಾಪು

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಆಸಾಮಿಗಳು ಈ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡಕೊಂಡ ಈ ಕೆಳಗೆ ನಮೂದಿಸಿದ ಸಾಲಗಳ ಅಸಲು ವ ಬಡ್ಡಿ ಇತ್ಯಾದಿಗಳನ್ನು ಬೇಂಕಿನ ಕ್ರಮಪ್ರಕಾರ ನೋಟೀಸು ವ ರಿಜಿಸ್ಟ್ರಿ ನೋಟೀಸು ಕೊಟ್ಟಾಗ್ಯೂ ಕೂಡ, ಬಾಕಿಮಾಡಿಕೊಂಡು ಇರುವುದರಿಂದಲೂ ಕೆಲವರಿಗೆ ಕೊಟ್ಟ ನೋಟೀಸು ವ ರಿಜಿಸ್ಟ್ರಿ ನೋಟೀಸು ಕಾರಣಾಂತರದಿಂದ ವಾಪಾಸು ಬಂದಿರುವುದರಿಂದಲೂ, ಸದ್ರಿ ಸಾಲಗಳ ಸಂಬಂಧ ಬೇಂಕಿಗೆ ಸಲ್ಲತಕ್ಕ ಸಂಪೂರ್ಣ ಐವೇಜುಗಳನ್ನು ಇದೇ ಬರುವ ತಾರೀಕು 12-5-1952ನೇ ಸೋಮವಾರದ ಒಳಗೆ ಸಲ್ಲಿಸದೆ ಇದ್ದಲ್ಲಿ ಸದ್ರಿ ಸಾಲಗಳಲ್ಲಿ ಅಡವಿಟ್ಟ ಆಭರಣಗಳನ್ನು ಇದೇ ತಾರೀಕು 15-5-1952ನೇ ಗುರುವಾರ ಪೂರ್ವಾಹ್ನ ಘಂಟೆ 11ಕ್ಕೆ ಯಾ ಬ್ಯಾಂಕಿಗೆ ಯುಕ್ತ ತೋರುವ ಅನ್ಯತರ ದಿನಗಳಲ್ಲಿ ಪುನಃ ನೋಟೀಸು ಕೊಡದೆನೇ ಈ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು. ತಿಳಿದಿರುವುದು.

ಸಾಲದ ತಾರೀಕು	ಸಾಲದ ನಂಬ್ರ	ಸಾಲ ಪಡೆದವರ ಹೆಸರು	ಬಾಕಿ ಹಣ
25- 8-49	1313/48-9	ಕೂಕ್ರ ಸೇರಿಗಾರ ಮಲ್ಲಾರು ಚಂದು ಸೇರಿಗಾರರ ಮಗ ಮಲ್ಲಾರು ಪೋಸ್ಟ್.	31 4
19-11-49	224/49-50	ರಾಮ ನಾಯ್ಕ, ಸೂರಪ್ಪ ನಾಯ್ಕರ ಮಗ, ಪಯ್ಯಾರು ಕಳತ್ತೂರು ಪೋಸ್ಟ್ ಪಾದೂರು	5 12
3- 7 50	967/50	ಕುಡುಮ ಪೂಜಾರಿ ಪೆಗ್ಗು ಪೂಜಾರಿಯ ಅಳಿಯ, ಉಳಿಯಾರಗೋಳಿ ಗ್ರಾಮ, ಪೋಸ್ಟ್, ಕಾಪು	153 8
23- 6-51	665/51	—Do—	32 1
29- 8-50	1481/50	ಕೊಗ್ಗ ಪೂಜಾರಿ, ಲಿಂಗಪ್ಪ ಪೂಜಾರಿ ಅಳಿಯ, ಕಮ್ಮನ್ ತೋಟ ಮಜೂರು ಗ್ರಾಮ ಇನ್ನಂಜೆ	77 10
6-12-50	2089/50	ಕಟ್ಟರ ಪೂಜಾರಿ, ಅಪ್ಪು ಪೂಜಾರಿ ಅಳಿಯ, ಪಾಂಗಾಳ ಗ್ರಾಮ ಪಾಂಗಾಳ ಪೋಸ್ಟ್.	45 15
28- 4-50	550/50	ಎಮ್. ಉಮ್ಮರ್ ಮುತ್ತಿ, ಅಬ್ದುಲ್ಲಾ ಬ್ಯಾರಿಯ ಮಗ, ಮೂಲೂರು ಗ್ರಾಮ, ಪೋಸ್ಟ್ ಮೂಳೂರು	164 10
2- 6-50	764/50	ರಾಜು ಪೂಜಾರಿ, ಚಿಕ್ಕ ಪೂಜಾರಿಯ ಮಗ, ಪಾದೂರು ಗ್ರಾಮ, ಪೋಸ್ಟ್ ಪಾದೂರು	30 0
30- 6-50	954/50	ದೊಂಬ ಪೂಜಾರಿ, ಚಿಂಗು ಪೂಜಾರಿಯ ಅಳಿಯ, ಬೆಳಪು ಗ್ರಾಮ, ಪೋಸ್ಟ್ ಉಚ್ಚಿಲ	68 3
16- 2-51	152/51	ರಾಮ ಎಮ್. ಶ್ರೀ ಯನ್, ಮುಸ್ಸ ಮಾರ್ಕಾಲರ ಮಗ, ಕೈಪುಂಜಾಲ್ ಉಳಿಯಾರಗೋಳಿ.	128 5
12- 4-51	319/51	ವೈ. ನಾರಾಯಣ ಸೆಟ್ಟಿ, ಪಕೀರ್ ಶ್ಯಾಮ ಸೆಟ್ಟಿ ಕಮ್ಮ, ಬಡಾಗ್ರಾಮ, ಪೋಸ್ಟ್ ಉಚ್ಚಿಲ	753 8
17- 4-51	336/51	ಚಂದು ಪೂಜಾರಿ, ಅಂಣಪ್ಪ ಪೂಜಾರಿ ಹೊಟೇಲ್ ಕೀಪರ್, ಪೋಸ್ಟ್ ಪಾಂಗಾಳ	44 8

Office, Kaup
Date 2-5-1952

K. Seetharama Shetty,
Agent, KAUP.

ಸಾರ್ವಜನಿಕರ ಉಪಯೋಗಕ್ಕಾಗಿ ಅಮೂಲ್ಯ ರತ್ನ ಪ್ರಯೋಗ!

ಸರ್ ಜೀ... ... ಶ್ರೀ... ಲೇಹ್ಯ

ಶಿಲಾಜಿತ್ ಹಿಮಾಲಯದ್ದು ಔಷಧಿ... ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಲುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೮ ದಿನದ ಲೇಹ್ಯ ರೂ. ೫/೮, ೨೪ ದಿನದ ಲೇಹ್ಯ ರೂ ೩/೮
(ಪೋಸ್ಟೇಜು ಮಾಫ್)

ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನ ಎ. ರಾಮಸ್ವಾಮಿ ಅಯ್ಯರ್‌ರವರ

❋ಸಂತಾನ ಸಿಂಧೂರ❋

ಬಹಿಷ್ಟೆ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಸ್ಟೆ ಸಂಬಂಧದ ಹೊಟ್ಟೆನೋವಿನ ಜೊತೆಗೆ ತಲೆನೋವು, ನಡುಕೆಳಕ್ಕೆ ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ.

೩ ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ೧ ಸೆಟ್ ಅನುಪಾನಪತ್ರಿಕೆ ಮೇರೆ ಇಟ್ಟರೂ ಸೇವಿಸಿರಿ ಸಾಕು. ಶೋಭನವಾದ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾ ಪತ್ರಗಳನ್ನು ಪಡೆದಿವೆ.

ಕ್ರಯ:—೧ ಸೆಟ್ 5ರೂ. ಪ್ಯಾಕಿಂಗ್ ಮತ್ತು ಟಪಾಲು ಖರ್ಚು ೧ರೂ ವಿ. ಪಿ. ಇಲ್ಲ ಕ್ಯಾಟಲಾಗ್ ಉಚಿತ 6ರೂ ಮನಿಆರ್ಡರ್ ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ:—**A. R. ವಿಶ್ವೇಶ್ವರಯ್ಯ (ಎ. ರಾಮಸ್ವಾಮಿ ಅಯ್ಯರ್ ಸನ್,)**

Prop: ಸಂತಾನ ಸಿಂಧೂರ, ಅಂಬಳೆ ಪೋಸ್ಟ್, ಯಳಂದೂರು ತಾ. ಮೈಸೂರು ಡಿ.
ಮೈಸೂರು ಶಾಖೆ: 269 ಸೋನಾರ್ ಸ್ಟ್ರೀಟ್, ದಿವಾನ್ಸ್‌ರೋಡು, ಮೈಸೂರು.

ಈಗೇನು ಬೇಕು?

(೧ನೇ ಪುಟದಿಂದ ಮುಂದರಿಸಿದ್ದು)

ಎಲ್ಲರಿಗೂ ಬೇಕಿರುವ ಅಂತಃ ಶಕ್ತಿಯನ್ನು ದಯಪಾಲಿಸುತ್ತದೆ ಎಂಬ ದಿವ್ಯ ಜ್ಞಾನ ಬಗ ಅವುಗಳಿಗೆ ಹೊಳೆಯಿತು. ಅದರೆ, ನಾವು—ಪ್ರಜೆಗಳು—ಇಷ್ಟು ತಡವಾಗಿ ಜೀಕರಿಸುವುದು ಬೇಡ. ನಮ್ಮಿಂದ ಸರಕಾರವು ತೆರಿಗೆಯನ್ನು, ಶಾಂತಿ—ಸಹಕಾರವನ್ನು, ಧರ್ಮ ನ್ಯಾಯದ ನಡವಳಿಕೆಯನ್ನು ಅಪೇಕ್ಷಿಸುತ್ತದೆ, ನಿಜ. ಅದಕ್ಕೆ ಪ್ರತಿಯಾಗಿ ತಾನು ಕಲ್ಯಾಣಕಾರಿ ಯೋಜನೆಗಳನ್ನು ಕೈಕೊಂಡು, ಪ್ರಜಾ ಜನರ ಉತ್ಕರ್ಷಕ್ಕೆ ಪಂಶ್ರಮಿಸುವುದೆಂಬುದೂ ಸತ್ಯ. "ಕೆರೆಯ ನೀರನು ಕೆರೆಗೆ ಚೆಲ್ಲಿ" ಎಂದು ದಾಸರು ಹೇಳಿದ ಹಾಗೆ ಸರಕಾರದ ಎಲ್ಲ ವಹಿವಾಟು. ನಾವು ಒಂದು ರೀತಿಯಾಗಿ ಕೊಟ್ಟುದನ್ನು ನಮಗೇನೆ ಇನ್ನೊಂದು ರೂಪದಲ್ಲಿ ಹಿಂದಿರುಗಿ ನೀಡುವುದು ಸರಕಾರದ ಔದಾರ್ಯ.

ರಾಜಾಜಿ ಇತ್ತೀಚೆಗೆ ಹೇಳಿದೊಂದು ಮಾತು ಮನನೀಯವಾದುದು—ಜನರು ಧರ್ಮ ಭಯದಿಂದ ನಡೆದುಕೊಂಡರೆ, ರಾಷ್ಟ್ರ ನಿಷ್ಠರಾಗಿ ಉಳಿದರೆ, ಸರಕಾರಕ್ಕೆ ನಿರಂತರ ಸಹಕಾರ ಕೊಡುತ್ತಾ ಬಂದರೆ, ಲೋಕ ಕ್ಷೇಮ, ಸುಭದ್ರತೆಯಲ್ಲಿ ಭಂಗ ಬರುವುದಿಲ್ಲ. ಹಿಂದೆ, ಶಾಂತಿ ವ ತಪ್ಪು ನ್ಯಾಯ ಪಾಲನೆ ಮಾಡುವುದಷ್ಟೇ ಸರಕಾರದ ಕೆಲಸವಿದ್ದರೆ, ಇಂದು ಅನ್ನ ಬಟ್ಟೆಗಳನ್ನು ಪ್ರಜಾ ಜನರಿಗೆ ಒದಗಿಸುವುದೂ ಸಾಮಾಜಿಕ ಉನ್ನತಿಯನ್ನು ಸಾಧಿಸುವುದೂ ಸರಕಾರದ ಪಾಲಿಗೆ ಬಂದ ಹೆಚ್ಚಿನ ಕರ್ತವ್ಯಗಳಾಗಿವೆ. ನ್ಯಾಯ ಶಾಂತಿಗಳ ಪಾಲನೆಯಲ್ಲಿ ನೆರವಾದಂತೆ, ಅವುಗಳಿಗಿಂತಲೂ ಮಹತ್ವದ ಉಳಿದೆಂದು ವಿಷಯಗಳಲ್ಲಿ ಕೂಡ ಸಹಕಾರ ಅಪೇಕ್ಷಣೀಯವಾಗಿದೆ. ಭಿನ್ನಾಭಿಪ್ರಾಯಗಳಿದ್ದರೂ ಅವುಗಳನ್ನು ಸೌಮ್ಯ ರೀತಿಯಿಂದ ಮುಂದಿಡಬೇಕು—ಅಥವಾ ರಾಷ್ಟ್ರ ಕಲ್ಯಾಣದ ದೃಷ್ಟಿಯಿಂದ ಅವನ್ನು ತ್ಯಜಿಸಿ, ಸರ್ವಹಿತಸಾಧಕವಾದ ಒಂದು ಸಾಮಾನ್ಯ ಸಿದ್ಧಾಂತವನ್ನು ಆಶ್ರಯಿಸಬೇಕು. ಅದನ್ನು ಬಿಟ್ಟುಕೊಟ್ಟು ವ್ಯರ್ಥ ರೇಗಾಡಿದರೆ, ಸರಕಾರವಾದರೂ ನಿರುಪಾಯವಾಗಿ ಉಳಿಯುವುದು.

ಆರ್ಥಿಕ ಮುಗ್ಗಟ್ಟಿನಿಂದ ಕಂಗೆಟ್ಟಿದ್ದರೂ ಜಗತ್ತಿನ ಧರ್ಮದಾನಿ ರಾಷ್ಟ್ರಗಳ ಬೆಂಬಲದಿಂದ ರಾಷ್ಟ್ರ ಪುನರ್ನಿರ್ಮಾಣದ ಉದ್ಯಮಗಳಲ್ಲಿ ಸರಕಾರ ತೊಡಗಿದೆ. ಕಾರಣ, ಆಡಳಿತ ಯಂತ್ರವನ್ನು ನಿಷ್ಕ್ರಿಯವೆಂದು, ಅಪ್ರಯೋಜಕವೆಂದು ವ್ಯರ್ಥ ದೂರಬಾರದು. ಆದರ ಮೇಲೆ ಬಿದ್ದಿರುವ ಭಾರ ಪ್ರಚಂಡ-ಆಡಳಿತ ನಡೆಸುವವರ ಮೇಲಿನ ತಕರಾರುಗಳನ್ನು ಆಡಳಿತದ ಗುರುತರ ಹೊಣೆಗಾರಿಕೆಯನ್ನು ಮನಗಾಣುವ ಮೂಲಕ ಹೊಟ್ಟೆಯಲ್ಲಿ ಹಾಕಿಕೊಂಡು, ದಯಾಶೀಲರಾಗುವಾ. ತಪ್ಪು ತಡೆಯಾಗುವುದು ಮಾನವ ಸಹಜ ಸ್ವಭಾವವೆಂಬುದನ್ನು ಯಾವ ಕ್ಷಣಕ್ಕೂ ಮರೆಯದಿರೋಣ-ನಮ್ಮ ಹಿತಸಂಬಂಧಗಳನ್ನು ಶ್ವಾನ ಮಾರ್ಗದಿಂದ ಸಾಧಿಸಿಕೊಳ್ಳುವ ಹತ್ಯಾಯುಧದಲ್ಲಿ ಸಹಕಾರ ತೋರಿಸ ಭಾವನೆ ನಮ್ಮಲ್ಲಿರದಾಗಲಿ. ಅದಕ್ಕೆ ದೇಶದ ಬೆಂಬಲವೂ ಸಿಗಲಿ!

Regd.No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪನೆ
31 ನೆಯ ವರ್ಷ

15-5-1952

Founder: Sri A. B. Shetty

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಸಾರ್ವಜನಿಕ
ಆರೋಗ್ಯ ಮಂತ್ರಿ
ಶ್ರೀ.ಎ.ಬಿ.ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೩೬

NAVAYUGA WEEKLY Post Box No. 22 UDIPI. Vol 31 No. 36

ಮಧುಪರ್ಕ

ಚಕ್ರವರ್ತಿ ನೆಪೋಲಿಯನ್ ಮದಾಂ ಕ್ಯಾಂಪನ್‌ಳೊಂದಿಗೆ ಮಾತನಾಡುತ್ತಾ "ಜನರ ವಿಚಾರ, ಬುದ್ಧಿ ತಿದ್ದಲಿಕ್ಕೆ ಯೋಗ್ಯವಾದ ವಿದ್ಯೆಯು ಸ್ವಲ್ಪವೇ ತಿಳಿಯುವೊಲ್ಲದು. ಸದ್ಯದ ಶಿಕ್ಷಣ ಜನರ ಮನಃ ಪರಿವರ್ತನೆಗೆ ಪೋಷಕವಿಲ್ಲ" ಎಂದು ದೂರಿಕೊಂಡ. ಥಟ್ಟನೆ ಮದಾಂ "ತಾಯಂದಿರಿದ್ದಾರೆ-" ಎಂದಳು. ಈ ಒಂದು ಶಬ್ದ ಚಕ್ರವರ್ತಿಗೆ ಇಲ್ಲದ ಸ್ಫೂರ್ತಿಯನ್ನು ತಂದಿತು; ಅದರಲ್ಲಿ ಗೂಢಾರ್ಥ ತುಂಬಿ ತುಳುಕುತ್ತಿರುವಂತೆ ಕಂಡಿತು— "ಅದೇ ಸರಿ—ತಾಯಂದಿರೇ ಈ ಕೆಲಸ ಮಾಡಬಲ್ಲರು. ಮುಂದಿನ ಜನಾಂಗದ ಪಥದರ್ಶನ ಮಾಡಬೇಕಾದವರೇ ತಾಯಂದಿರು. ಆದುದರಿಂದ ಅಂಥವರನ್ನು ತರಬೇತಿಗೊಳಿಸುವುದು ನಿನ್ನ ಅದ್ಯಕರ್ತವ್ಯ" ಎಂದ.

ತಾಯಿ:ದೇವರ ಆದರ್ಶ ಆಚರಣೆ ಅನುಕರಣೀಯ— ಸಲಹೆ ಅತ್ಯಮೂಲ್ಯ

ಪಥದರ್ಶನ

ವ್ಯಕ್ತಿತ್ವದ ವಿಕಾಸವು ಸರ್ವಾಂಗೀಣವಾಗಬೇಕಾದರೆ, ಮೂಲ ಪ್ರವೃತ್ತಿಗಳಿಗೆ ಸಮರ್ಪಕವಾದ ಮಾರ್ಗದರ್ಶನ ದೊರೆಯಬೇಕೆಂದು ಬಲ್ಲವರು ಹೇಳಿರೆ. ಕುಟುಂಬದ ಒಳ್ಳಿತಿಗಾಗಲೀ ಸಮಾಜದ ಸಮುದಾಯಕ್ಕಾಗಲೀ ಅಥವಾ ರಾಷ್ಟ್ರದ ಐಕ್ಯಕ್ಕೇ ಇರಲಿ— ವ್ಯಕ್ತಿ ಸಮೂಹಗಳು ಹಾರ್ದಿಕವಾದ ಸ್ನೇಹ ಬಂಧದಲ್ಲಿರುವುದು ಅವಶ್ಯ. ಈ ಸ್ನೇಹ, ಮೈತ್ರಿ ಕಥವಾ ಕಲುಗಿ ಬೇಡಿದರೆ ಬರುವಂಥದಲ್ಲ— ಹುಟ್ಟಿನಿಂದಲೇ ನಮ್ಮಲ್ಲಿ ವಿದ್ಯಮಾನವಿರುವ ಪ್ರವೃತ್ತಿಗೆ ಸರಿಯಾದ ಚಾಲನೆ ದೊರೆತರೆ ಅದು ಚಟುವಟಿಕೆಯಿಂದ ಅರಳುವುದು— ಸ್ನೇಹ ಪುಷ್ಪದ ಸುಗಂಧ ಬೀರುವುದು. ಸಹಜ ಪ್ರವೃತ್ತಿಗೆ ತಪ್ಪು ರೀತಿಯಿಂದ ಪ್ರಚೋದನೆ ದೊರೆತರೆ ಮಾತ್ರ ಪರಿಣಾಮ ವಿಪರೀತವಾಗುವುದು. ಸಮಾಜ ವ್ಯವಸ್ಥೆಯಲ್ಲಿ ಬಿಕ್ಕಟ್ಟು ತಲೆದೋರಿ ದೇಶದ ಏಕಸೂತ್ರತೆಗೆ ಭಂಗ ಬಂದೀತು— ಸ್ನೇಹದ ಮಧುರ ಸೌಂಭದ ಬದಲು ದ್ವೇಷದ ಹೊಗೆ ಉಕ್ಕಿ ಬಂದು ಕವಿದೀತು.

ಇದರಿಂದ ಮನಗಾಣಬಹುದಾದ ಸಂಗತಿ ಏನು— ರಾಷ್ಟ್ರದ ಉನ್ನತಿಯಾಗುವುದಿದ್ದರೆ, ಅದು ವ್ಯಕ್ತಿಗತ ಯೋಗ್ಯತೆಯ ಹೆಚ್ಚಳದಿಂದಲೇ ಕೈಗೂಡಬೇಕು. ವ್ಯಕ್ತಿಯನ್ನುಳಿದು ಸಮಾಜವಿಲ್ಲ— ರಾಷ್ಟ್ರವಿಲ್ಲ. ವ್ಯಕ್ತಿಯ ಸುಶೀಲ— ಸದ್ಗುಣಗಳು,ಒಳ್ಳೆಯ ನಡವಳಿಕೆ ಮತ್ತು ಉತ್ತಮ ಚಾರಿತ್ರ್ಯಗಳು ಸಮಾಜ ಹಾಗು ರಾಷ್ಟ್ರದ ಹೆಮ್ಮೆಯ ಸಂಪತ್ತು—ಅದಿಲ್ಲದೆ ಹೋದರೆ ದಿವಾಳಿ ತೆಗೆದ ವ್ಯಾಪಾರಿಯಂತೆ ಎಲ್ಲವೂ ಪೊಳ್ಳು.

ಮನೆಗೊಬ್ಬ ಯಜಮಾನ, ಹತ್ತು ಜನರ ಗುಂಪಿಗೊಬ್ಬ ಸರದಾರ, ಎಸೆಂಬ್ಲಿಗೊಬ್ಬ ಸ್ಪೀಕರ, ಹಾಗೆಯೇ ರಾಷ್ಟ್ರಕ್ಕೊಬ್ಬ ಅಧ್ಯಕ್ಷ—ಇವರೆಲ್ಲ ಏನೂ ತಮ್ಮ ಸ್ವಂತ ನಡವಳಿಕೆಯಿಂದಲೂ ಅನುಭವ ವೈಶಾಲ್ಯದಿಂದಲೂ ವಿವೇಕ ಪೂರ್ಣ ನಿರ್ಣಯದಿಂದಲೂ ಕಾಲಕಾಲಕ್ಕೆ ಮಾರ್ಗದರ್ಶನ ಮಾಡುವ ಪುಣ್ಯ ಈ ಮಹಾನುಭಾವರದು. ಈ ಜನರ ಅಂತಃಶಕ್ತಿ ಅಪಾರವಿರುತ್ತದೆ. ಅವರ ಚಾರಿತ್ರ್ಯ ಪರಿಶುದ್ಧವಿರುತ್ತದೆ. ಹೀಗಾಗಿ ಮಂದಿಗೆ ಮಾದರಿಯಾಗಿ ನಿಲ್ಲುವ ಅರ್ಹತೆ ಅವರದು.

ಪಥದರ್ಶಕರ ಪರಂಪರೆ ಬಹಳ ಉಜ್ವಲವಾದುದು—ಭಾರತದಲ್ಲಿಯಂತೂ ಕೆಲವು ಸಾವಿರ ವರ್ಷಗಳಿಂದ ಜನತೆಗೆ ಸಂಯಾದ ರೀತಿಯಲ್ಲಿ ದಾರಿ ತೋರುತ್ತಾ ಯೋಗ್ಯ ಸಲಹೆ ಮತ್ತು ಉಪದೇಶವೀಯುತ್ತಾ ಐಹಿಕಾಮುಷ್ಮಿಕ ಜೀವನ ಸಾಫಲ್ಯಕ್ಕೆ ನೆರವಾದ ಮಹನೀಯರೆಷ್ಟೋ ಆಗಿ ಹೋಗಿರುವರು. ಸಾವಿರ ಸಂಖ್ಯೆಯ ಋಷಿಮುನಿಗಳು, ದೈವಭಕ್ತರೂ ಆಶ್ರಿತ ಜನಪಾಲರೂ ಆದ ಶೂರ-ಧೀರ ಚಕ್ರವರ್ತಿಗಳು ಮೊದಲಾದವರು ಸಾಮಾಜಿಕ ಕಲ್ಯಾಣವನ್ನು ಧ್ಯೇಯವಾಗಿಟ್ಟುಕೊಂಡು ಜನಪ್ರಿಯ ಕಾರ್ಯಗಳನ್ನೆಸಗಿರುವರು. ಧರ್ಮಸಂಕಟ ಕಾಲದಲ್ಲಿ ಮನಸ್ಸು ಎರಡು ಹೋಳಾದ ಸಮಸ್ಯೆಗಳಿಂದಾಗಿ ಸಂಶಯದಿಂದ ಹೊಯ್ದಾಡಿದ ಗಳಿಗೆಯಲ್ಲಿ—ತಮ್ಮ ಸೂಕ್ಷ್ಮ ವಿಚಾರಪರ ಬುದ್ಧಿಯಿಂದಲೂ ಉಜ್ವಲವಾದ ಸ್ವಾನುಭವ ಜ್ಞಾನದಿಂದಲೂ ಉಚಿತ ಪಥದರ್ಶನ ಮಾಡಲು ಅವರಿಗೆ ಸಾಧ್ಯವಾಯಿತು.

ಮಾರ್ಗದರ್ಶನ ನಮಗೆ ಎರಡು ರೀತಿಯಿಂದ ದೊರೆಯಬಹುದು—ವ್ಯಕ್ತಿ ತನ್ನ ವರ್ತನೆಯಿಂದ ಉಳಿದವರನ್ನು ಆಕರ್ಷಿಸಿ, ಅವರ ಮನಸ್ಸಿನಮೇಲೆ ಅಚ್ಚಳಿಯದ ಪ್ರಭಾವವನ್ನುಂಟುಮಾಡಬಹುದು— ಇದು ಮಹಾತ್ಮಾ ಗಾಂಧೀಯ ರೀತಿ. ಹಾಗೆಯೇ ಆಯಕಟ್ಟಿನ ಪ್ರಸಂಗಗಳಲ್ಲಿ ಚಾಣಾಕ್ಷ ಬುದ್ಧಿಯಿಂದ ವಿಷಯವನ್ನು ಪರ್ಯಾಲೋಚಿಸಿ, ಸಮಾಧಾನಕರವಾದ ರೀತಿಯಲ್ಲಿ ಸಮಸ್ಯಾ ಪರಿಹಾರಕ್ಕೆ ಸಲಹೆನೀಡಬಹುದು—ಮಹಾಭಾರತದ ಶ್ರೀಕೃಷ್ಣ ಅನುಸರಿಸಿದ ದಾರಿ ಇದು. ಮೊದಲಿನದು ಪ್ರತ್ಯಕ್ಷ ಪಥದರ್ಶನ. ವ್ಯಕ್ತಿ ಸಮೂಹ ಮಾಡಬೇಕಾದುದೇನು ಎಂಬುದನ್ನು ಕಣ್ಣಿಂದ ನೋಡಿದನ್ನಕ್ಕೆ ತಿಳಿಯುವಷ್ಟು ಸುಲಭ ರೀತಿ ಇಲ್ಲಿದೆ. ಇನ್ನೊಂದು ಪರೋಕ್ಷ ಪಥದರ್ಶನ. ತನ್ನ ಮುಂದಿನ ಹೆಜ್ಜೆಯ ಸ್ವರೂಪ ಹೇಗಿರಬೇಕೆಂಬುದನ್ನು ತನಗೆ ದೊರೆತ ಸಲಹೆಯ ನೆಲೆಗಟ್ಟಿನಲ್ಲಿ ಸ್ವಂತ ಬುದ್ಧಿಯಿಂದ ಯೋಚಿಸಿ, ನಡೆಯಬೇಕಾಗಿದೆ. ಇದು ಬುದ್ಧಿವಂತರಿಗಷ್ಟೆ ಸಾಧ್ಯವಾದುದರಿಂದ ಸಾಮೂಹಿಕ ಜನಮನೋಭಾವದ ಮೇಲೆ ಅಪೇಕ್ಷಿತ ಪರಿಣಾಮ ಮಾಡಲು ತುಂಬ ಕಷ್ಟವಾಗಬಹುದು.

ಸಲಹೆ—ಉಪದೇಶಗಳಿಗಿಂತ ಸಾವಿರ ಪಾಲು ಹಿತಕರವಾದ ಮಾರ್ಗವು ಅನುಕರಣೀಯ ಆಚರಣೆಯಲ್ಲಿದೆ ಎಂದು ಪ್ರಾಜ್ಞ" ಅಭಿಮತ ಆದರೆ, ಪ್ರತ್ಯಕ್ಷ ಕಾರ್ಯಾಚರಣೆಯಾಗಲೀ ಪರೋಕ್ಷ ಸಲಹೆಯಾಗಲೀ ತಮ್ಮಷ್ಟಕ್ಕೆ ಅವು ಸ್ವತಂತ್ರವಿಲ್ಲ— ಒಂದರೊಡನೊಂದು ಹೊಂದಿಕೊಂಡೇ ಇವೆ. ಅವುಗಳ ಮಿಶ್ರ ಸಾಮರ್ಥ್ಯದಲ್ಲಿ, ಬರಿಯ ಪ್ರಮಾಣದಲ್ಲಿ ಸಾಕಷ್ಟು ಅಂತರವಿದ್ದೀತು ಮಾತ್ರ. ಆದುದರಿಂದ ಯಾವನೇ ಮುಂದಾಳಿನಲ್ಲಿ— ಯೋಗ್ಯ ಚಾರಿತ್ರ್ಯ ಮತ್ತು ಪ್ರಾಮಾಣಿಕವಾದ ಸಲಹೆ— ಈ ಎರಡೂ ವಿಶಿಷ್ಟ ಗುಣಗಳ ಸುಂದರ ಸಮನ್ವಯ ಅವನಲ್ಲಿರಬೇಕೆಂದು ಬಯಸುವುದು ಸ್ವಾಭಾವಿಕ. ಗಾಂಧೀ ಪ್ರತಿಯೊಂದೂ ಸಂಗತಿಯನ್ನು ಮಾಡಿ ತೋರಿಸಿದನೆನ್ನುವುದು ಎಂದಿಗೂ ಪರೋಕ್ಷ ಸಲಹೆ ಅಥವಾ ಉಪದೇಶಗಳನ್ನು ನೀಡಲಿಲ್ಲವೆನ್ನುವುದು. ಸತ್ಯಕ್ಕೆ ಹೊಂದಿಕೊಳ್ಳಲಿಕ್ಕಿಲ್ಲ. ಹಾಗೆಯೇ ಶ್ರೀಕೃಷ್ಣನದೆಲ್ಲವೂ ಬಾಯಿ ಬಡಾಯಿ—ನಿಜ ಜೀವನದಲ್ಲಿ ಅವನ ಯಾವ ಮಾತೂ ಕೃತಿಯಾಗಿ ಒಡಮೂಡಲಿಲ್ಲ ಎನ್ನುವುದೂ ದುಸ್ಸಾಹದ ಪರಮಾವಧಿ. ಅವರ ಬದುಕಿನಲ್ಲಿ ಒಂದರ ಪ್ರಾಧಾನ್ಯವೂ ಇನ್ನೊಂದಕ್ಕೆ ಗೌಣಸ್ಥಾನವೂ ಇತ್ತು ಎಂಬುದು ಮಾತ್ರ ಸ್ಪಷ್ಟ.

ಭಾರತೀಯ ರಾಜಕಾರಣದ ಭವಿತವ್ಯದತ್ತ ದೃಷ್ಟಿಕ್ಷೇಪ ಮಾಡಿದಾಗ ಜನತೆಗೆ ಸಂಯಾದ ಮಾರ್ಗದರ್ಶನ ಮಾಡುವವರ ಕೊರತೆ ಬಹಳವಿರುವುದು ಗೋಚರಿಸುತ್ತದೆ. ಉಚ್ಚ ಧ್ಯೇಯ ಹಾಗು ಉದಾತ್ತ ಕಾರ್ಯಾಚರಣೆಯ ಪರಂಪರೆಯಿಂದ ಹೆ

Our Pigmy Deposit Scheme

.... brings our bank to your door You may save as small a sum as annas two Our collector will call on you every day to receive it.

At the rate of annas two per day you save Rs. 550 in 7 years because we allow interest at 3⅛% per annum At the rate of Rs. 1/- per day your Savings are Rs 2,800/- in 7 years At the rate of Rs. 10/- it is Rs. 28,000/-. Come in to-day and join the band of **Prudent Prosperous Pigmy People.**

The Canara Industrial & Banking Syndicate Ltd.

Estd: 1925. H. O: UDIPI.

ಸರಾದ ಸಂಘಟನೆ ತುಂಬ ವಿರಳ. ಕ್ಷಣಿಕ ಕ್ಷೇಮವೊಂದನ್ನೆ ಧ್ಯೇಯವಾಗಿಟ್ಟುಕೊಂಡು ಏನಕೇನ ಪ್ರಕಾರೇಣ ಅದನ್ನು ಕೈಗೂಡಿಸುವ ಹುಚ್ಚು ಹಂಬಲವು ನಮ್ಮಲ್ಲಿನ ಕೆಲವು ಪಥದರ್ಶಕರದ್ದಿರುತ್ತದೆ. ಕೆಲವರು ಉದಾತ್ತ ಉದ್ದೇಶಗಳನ್ನಿಟ್ಟುಕೊಂಡಿದ್ದರೂ ಅದರ ಸಾಧನೆಗಾಗಿ ಅನುಸರಿಸುವ ಮಾರ್ಗ ಹೊಲಸಿನದು. ದುಷ್ಪರಿಣಾಮ ಉಂಟುಮಾಡುವಂಥದು. ಉಚ್ಚ ವಿಚಾರವನ್ನು ಕೈಗೂಡಿಸಬೇಕೆಂಬ ನ್ಯಾಯವಾದ ಹಂಬಲಕ್ಕೆ ಯೋಗ್ಯ ಮಾರ್ಗದರ್ಶನ ದೊರೆಯದಿದ್ದುದು ಈ ವೈಪರೀತ್ಯಕ್ಕೆ ಕಾರಣವೆನ್ನಬಹುದು. ಸದ್ಯದ ಪರಿಸ್ಥಿತಿಯಲ್ಲಿ ವಿದ್ಯಾವಿಹೀನರಾದ ನಮ್ಮ ಜನಕ್ಕೆ ಅನುಕರಣೀಯ ಆಚರಣೆಯ ಮೂಲಕವೇ ಪಥದರ್ಶನ ಮಾಡಬೇಕಾಗಿದೆ. ಆದುದರಿಂದ ನಾವು ಈ ವಿಷಯದಲ್ಲಿ ಪ್ರಗತಿಪರವಾದ ಹೆಜ್ಜೆಯನ್ನಿಡುವುದು ಅವಶ್ಯ. ಮೊದಲಿನಿಂದಲೇ ಈ ಕುರಿತು ನಾವು ಜಾಗರೂಕತೆ ವಹಿಸಿ ಕೆಲಸಮಾಡದಿದ್ದರೆ,ಉಚ್ಚ ಆದರ್ಶಸಾಧನೆಯ ನೆವದಿಂದ ಹೇಯ ನಡವಳಿಕೆ ಗಂಟುಬಿದ್ದೀತು.

ಸಾಮಾನ್ಯ ಉದಾಹರಣೆಯಾಗಿ— ಕಮ್ಯೂನಿಸ್ಟ್ ಆಂದೋಲನವನ್ನು ಹೆಸರಿಸಬಹುದು. ಸರ್ವರಿಗೂ ಸಮ ಪಾಲು, ಸರ್ವರಿಗೂ ಸಮ ಬಾಳು, ಸರ್ವರಿಗೂ ಸಮಾನಾವಕಾಶ ಎಂದು ಮುಂತಾಗಿ ಸಮತಾವಾದವನ್ನು ಅವರು ಸಾರುತ್ತಿರುವರು. (ನಮ್ಮ ಪ್ರಾಚೀನ ವೇದಗಳಲ್ಲಿ ಕೂಡ ಇದೇ ಆಶಯವನ್ನು ಬಿಂಬಿಸುವ ಶ್ಲೋಕಗಳಿವೆ ಎಂಬುದನ್ನು ಇಲ್ಲಿ ಅವಶ್ಯ ಸ್ಮರಿಸಿಕೊಳ್ಳಬಹುದು.) ಹಾಗೆಂದು ಮನುಷ್ಯನ ಸತ್ವಗುಣಕ್ಕೆ ರಣಾಹ್ವಾನವನ್ನು ಕೊಟ್ಟು ಸ್ವಾಭಾವಿಕವಾದ ರೀತಿಯಲ್ಲಿ ಸಮಾಜ ವ್ಯವಸ್ಥೆಯನ್ನು ಬದಲಿಸಲು ಕಮ್ಯೂನಿಸ್ಟರು ನೋಡುವುದಿಲ್ಲ. ಸ್ನೇಹ ಸೌಜನ್ಯಗಳಿಗಾಗಿ ಅವರು ಪ್ರಯತ್ನಿಸುವುದಿಲ್ಲ— ಇದು ಸುಳ್ಳದ್ದರೆ ಹಿಂಸೆಯ ಮಾರ್ಗವನ್ನವರು ಅವಲಂಬಿಸುತ್ತಿರಲೂ ಇಲ್ಲ. ಅವರು ಪ್ರಚೋದನೆ ಕೊಡುತ್ತಿರುವುದು ಮನುಷ್ಯನ ತಮೋಭಾವನೆ— ಮತ್ತು ಇದೇ ಕಮ್ಯೂನಿಸ್ಟರು ಮಾಡುತ್ತಿರುವುದು ತಪ್ಪು ಎಂಬುದಾಗಿ ಆಚಾರ್ಯ ವಿನೋಬಾ ಭಾವೆ ಹೇಳುತ್ತಾರೆ. ಆಚಾರ್ಯರು ಪ್ರತಿಪಾದಿಸುವ ಸರ್ವೋದಯ ಸಿದ್ಧಾಂತದ ಆತ್ಯಂತಿಕ ಧ್ಯೇಯ ಕಮ್ಯೂನಿಸ್ಟ್ ದರ್ಶವನ್ನು ಮುಟ್ಟುವುದಾದರೂ ಅದರ ವ್ಯಾಪ್ತಿ ಬಹಳ ಹೆಚ್ಚು ಮತ್ತು ವೈಶಿಷ್ಟ್ಯ ಅನ್ಯಾದೃಶ. ದುಷ್ಟ ತಮೋ ಭಾವವನ್ನು ಕೂಡ ಇಷ್ಟವಾದ ಸಾತ್ವಿಕ ರೂಪಕ್ಕೆ ಪರಿವರ್ತಿಸುವ ಮಹಾ ಚಳುವಳಿ ಈಗಿನ ಕಾಲಕ್ಕೆ ಅನುಪಮ. ಮನುಷ್ಯನಲ್ಲಿರುವ ದೈವಿಕ ಚೈತನ್ಯವನ್ನು ಪೋಷಿಸಿ, ಬೆಳೆಸುವುದೂ ದೈತ್ಯ ಪ್ರವೃತ್ತಿಗಳನ್ನು ಸ್ನೇಹ ಸಿಂಚನದಿಂದ ಕಣಿಸಿ, ಬಲಿಸಿ ದೈವಿಕ ಮಟ್ಟಕ್ಕೆ ಪರಿವರ್ತಿಸುವುದೂ ಸರ್ವೋದಯ ಸಂಸ್ಕೃತಿಯ ಹೆಗ್ಗುರುತು. ಮನೋಮಯವಾದ ಭೂಮಿಕೆಯಲ್ಲಿಯೇ ಸರ್ವಜನಾದರಣೀಯವಾದ ಕಲ್ಯಾಣಕಾರಿ ಸುಧಾರಣೆಗಳಿಗಾಗಿ ಹೆಣಗುವುದು ನಿಜವಾದ ಕ್ರಮ. ದ್ವೇಷ-ಮಾತ್ಸರ್ಯಗಳನ್ನ ಸ್ನೇಹ ವಾತ್ಸಲ್ಯಗಳಾಗಿ ರೂಪಾಂತರಿಸಲು ವಿನಿಯೋಗವಾಗುವ ಚಾರಿತ್ರ್ಯ ಹಾಗೂ ಸಾಮರ್ಥ್ಯ ಸಂಪನ್ನ ನಿಜವಾದ ಪಥದರ್ಶಕ:- ಜೀವನ ಕಾರ್ಯ ಮಾರ್ಗ ಆನಂದದಾಯಕ-ಬಾಳ್ವೆ ಧನ್ಯ! —ಓಂ ತತ್ಸತ್.

ನಿಯಂತ್ರಣಗಳು

ಪ್ರತಿಕೂಲ ಜನಾಭಿಪ್ರಾಯ?

ಅವಶ್ಯಕತೆ ಎಂದು ಬಂದ ನಿಯಂತ್ರಣ ಧೋರಣೆ ಈಗ ಅನಿವಾರ್ಯವಾಗಿ ಬಿಟ್ಟಿದೆ. ಯುದ್ಧ ಕಾಲದಲ್ಲಿ ಶತ್ರುಗಳ ಕೈವಾಡದಿಂದ ಸಾವಿರಾರು ಟನ್ನುಗಳ ಆಹಾರ ಸಾಮಾಗ್ರಿ ನಷ್ಟಕ್ಕೀಡಾಗುತ್ತಿತ್ತು. ಉತ್ಪಾದಿತ ವಸ್ತುಗಳೂ ಧ್ವಂಸಗೊಳ್ಳುತಿದ್ದುವು. ಪರಿಣಾಮವಾಗಿ ಜನರಿಗೆ ಬೇಕಾಗುವ ಅಗತ್ಯದ ಸಾಮಾಗ್ರಿಗಳ ಪೂರೈಕೆಯಲ್ಲಿ ಕೊರತೆ ಕಂಡು ಬಂತು. ಆದುದರಿಂದ ಆಂತರಿಕ ಬೇಡಿಕೆಯನ್ನು ಗಮನಿಸಿ, ಪ್ರತಿಯೊಬ್ಬ ವ್ಯಕ್ತಿಗೂ ಸಮಾನ ರೀತಿಯಲ್ಲಿ ವಸ್ತುಗಳ ವಿತರಣೆಯಾಗಬೇಕೆಂಬ ಇರಾದೆಯಿಂದ ಸರಕಾರವು ಅವಶ್ಯಕ ಪದಾರ್ಥಗಳ ನಿಯಂತ್ರಣಕ್ಕೆ ಕೈ ಹಾಕಿತು.

ಅನಾವಶ್ಯಕ ಮಧ್ಯಸ್ಥಿಕೆ

ಆಹಾರ ಸಾಮಾಗ್ರಿಗಳಿಂದ ತೊಡಗಿ ಬಟ್ಟೆ ಬರೆ, ಕಬ್ಬಿಣ ಉಕ್ಕು, ಕಾಗದ ಸಿಮೆಂಟು-ಮುಂತಾಗಿ ಪ್ರತಿಯೊಂದೂ ವಸ್ತುವಿನ ವಿತರಣೆಯಲ್ಲಿ ನಿಯಂತ್ರಣ ಕಾಲಿಟ್ಟಿತು. ಸರಕುಗಳ ಪೂರೈಕೆಯಲ್ಲಿ ಸರಕಾರ ನಡುವೆ ಬಂದುದರಿಂದ ವ್ಯಾಪಾರೀ ಕೌಶಲ್ಯಕ್ಕೆ ಧಕ್ಕೆ ಬಂತು. ಅನುಭವ ಸಾಲದ, ಮುಂಧೋರಣೆ ಇಲ್ಲದ ಅಧಿಕಾರಿಗಳು ನಿಯಂತ್ರಣ ಚಲಾಯಿಸ ಹತ್ತಿದುದರಿಂದ ವಸ್ತುಗಳ ಉತ್ಪಾದನೆಯಲ್ಲಿ ಮತ್ತು ವಿತರಣೆಯಲ್ಲಿ ಕೊಡಕುಗಳು ಉದ್ಭವಿಸಿದುವು. ದಕ್ಷರಾದ ವ್ಯಾಪಾರಿಗಳು— ಸ್ವಾರ್ಥ ದೃಷ್ಟಿಯಿಂದಲೇ ಆದರೂ— ತಮ್ಮ ಸರಕುಗಳಿಗೆ ಗ್ರಾಹಕರು ದೊರೆಯಬೇಕೆಂದು ವಸ್ತುಗಳ ಸ್ವರೂಪದಲ್ಲಿ ವೈವಿಧ್ಯತರುವ ಮೂಲಕ ಅದರ ಆಕರ್ಷಣೆ ಹೆಚ್ಚಿಸುವರು. ಜೊತೆಗೆ ಜನರ ಅವಶ್ಯಕತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪೂರೈಕೆಯನ್ನು ತ್ವರೆಗೊಳಿಸುವ ಮತ್ತು ಬೆಲೆಯನ್ನು ಮಿತಗೊಳಿಸುವ ಕೆಲಸವನ್ನೂ ಮಾಡುವರು. ನಿಯಂತ್ರಣಗಳು ಬಂದುದರಿಂದ ಅವರ ವ್ಯವಹಾರಕ್ಕೆ ಕಲ್ಲು ಬಿತ್ತು. ಸರಕಾರದ ಅವ್ಯವಸ್ಥಿತ ಹಾಗೂ ಅನವಶ್ಯಕ ಮಧ್ಯಸ್ಥಿಕೆಯಲ್ಲಿ ಮೊದಲಿನಿಂದ ನಡೆದುಕೊಂಡು ಬಂದ ತತ್ಸಂಪ್ರದಾಯಗಳು ಮೂಲೆಪಾಲಾದುವು. ವರಮಾನದ ಅಧಿಕಾಂಶವೆಲ್ಲ ಸರಕಾರೀ ಮೇಲ್ವಿಚಾರಕ ಸಿಬಂಧಿಯ ಸಂಬಳ ಮತ್ತು ಭತ್ಯೆಗೆ ವಿನಿಯೋಗವಾದುದರಿಂದ ವ್ಯಾಪಾರಿಗಳಿಗೆ ದೊರೆಯುವ ಲಾಭದ ಪ್ರಮಾಣ ಇಳಿಯಿತು. ಇದರಿಂದ ಉದಾಸೀನತೆಯ ಜೊತೆಗೆ ಲಾಭದ ಹಾನಿಯನ್ನು ಭ್ರಷ್ಟಾಚಾರದಿಂದ ತುಂಬಿಕೊಳ್ಳುವ ಅನುಚಿತ ಮನೋವೃತ್ತಿಗೆ ಪ್ರಚೋದನೆ ದೊರೆಯಿತು. ಈ ಹಿಂದೆ ಜನ ಕಂಡು ಕೇಳರದ "ಕಾಳಸಂತೆ" ಕಾರ್ಮೋಡದಂತೆ ವ್ಯಾಪಾರೀ ಕ್ಷೇತ್ರದಲ್ಲಿ ಕವಿದುಕೊಂಡಿತ.

ಕೊರತೆ ಇದೆಯೇ?

ದೇಶದಲ್ಲಿ ಆವಶ್ಯಕ ವಸ್ತುಗಳ ಸಂಗ್ರಹ ಮಿತವಾಗಿದೆ ಎಂದೂ ಉತ್ಪಾದನೆಯನ್ನು ಹೆಚ್ಚಿಸಿದ ಹೊರತು ನಿಯಂತ್ರಣ ತೆಗೆಯಲು ಬರುವುದಿಲ್ಲವೆಂದೂ ಧುರೀಣರ ಹೇಳಿಕೆ ಇದೆ. ಸದ್ಯ ಪರಿಸ್ಥಿತಿಯಲ್ಲಿ ನಂಡಕ್ಕೆ ಹತ್ತರಷ್ಟಾದರೂ ಪೂರೈಕೆ ಹೆಚ್ಚಿದರೆ ನಿಯಂತ್ರಣ ಸಡಲಿಸುವುದರಿಂದ ಬಾಧೆ ಇಲ್ಲ ಎಂದವರ ಅಭಿಪ್ರಾಯ. ಈ ಅಂಕೆ ಸಂಖ್ಯೆಗಳು ಸರಕಾರೀ ಪುಸ್ತಕದಲ್ಲಿ ನಮೂದಿಸಲ್ಪಟ್ಟಿದೆ— ಇಂತಿಷ್ಟು ಮುಡಿ ಅಕ್ಕಿಯು ರೈತರಿಂದ ವಸೂಲಾಗುವುದೆಂದು ಊಹಿಸಿದುದಕ್ಕಿಂತ, ನಿಜವಾಗಿ ವಸೂಲಾದ ಅಕ್ಕಿಯ ಪ್ರಮಾಣ ಬಹಳ ಕಡಿಮೆ ಇರುತ್ತದೆ ಎಂದು ಸ್ವತಃ ಸಿದ್ಧವಾಗಿದೆ. ಇದಕ್ಕೆ ಸರಕಾರೀ ತಜ್ಞರ ಊಹನಾ ಸಾಮರ್ಥ್ಯದ ಕೊರತೆ ಕಾರಣವಲ್ಲ— ಜನರಿಂದ ವಸೂಲು ಮಾಡಿಕೊಳ್ಳುವ ದಕ್ಷತೆ ಇಲ್ಲದಿರುವುದೇ ಇದಕ್ಕೆ ಹೇತು. ಅಧಿಕಾರಿಗಳ ಕೈ ಸೇರದ ಅಕ್ಕಿ ಮುಡಿ ಕಾಳಸಂತೆಯಲ್ಲಿ ಮಾರಲ್ಪಡುತ್ತದೆ. ಏಳೆಂಟು ವರ್ಷಗಳ ನಿಯಂತ್ರಣ ಧೋರಣೆಯನ್ನು ವಿಮರ್ಶಿಸಿದರೆ ಅದು ಪ್ರತಿಯೊಂದೂ ಕ್ಷೇತ್ರದಲ್ಲಿ ಅಯಶಸ್ವಿಯಾಗಿದೆ ಎಂಬುದು ನಿರ್ವಿವಾದ. ರಾಷ್ಟ್ರದ ನೈತಿಕ ಸತ್ವವನ್ನು ಕೆಡಿಸಲಿಕ್ಕೆ ಅನಾವಶ್ಯಕವಾದ ಹತೋಟಿಯ ಕ್ರಮವೇ ಪ್ರಬಲ ಕಾರಣವೆಂದರೆ ತಪ್ಪಾಗದು. ಲಂಚಗುಳಿತನ ಹೆಚ್ಚಾಗಲೂ, ಮೋಸ ವಂಚನೆಗಳು ದಿನದಿಂದ ದಿನಕ್ಕೆ ಬಲಿತು ಉಲ್ಬಣಾವಸ್ಥೆ ಮುಟ್ಟಲೂ ತೆರೆದ ಸಂತೆಯಲ್ಲಿ ವಸ್ತುಗಳ ಮಾರಾಟಕ್ಕೆ ನಿರ್ಬಂಧವಿರುವುದೇ ಮೂಲ. ವಸ್ತುಗಳ ಪೂರೈಕೆ ಕಡಿಮೆ ಇದೆ ಎಂದು ಹೇಳುತಿದ್ದರೂ ಅವುಗಳ ಉಪಯೋಗ ಕಡಿಮೆಯಾಗಿಲ್ಲ. ರೇಶನ್ ಡಿಪ್ಪೋದ ಅಕ್ಕಿ ಸಾಲದಿದ್ದರೆ, ರೈತರಿಂದ ಗುಟ್ಟಿನಲ್ಲಿ ಅದನ್ನು ಕೊಳ್ಳಲಾಗುತ್ತಿದೆ. ಯೋಗ್ಯ ಬಟ್ಟೆ ಓಪನ್ ಮಾರ್ಕೆಟಿನಲ್ಲಿ ಬಂದೀದಿದ್ದರೆ, ಸೀಕ್ರೆಟ್ ಮಾರ್ಕೆಟಿನಲ್ಲಿ ಅದಕ್ಕೆ ಕೊರತೆಯಿಲ್ಲ. ನಮ್ಮ ದಾಕ್ಷಿಣ್ಯಕ್ಕೆ ಕಟ್ಟುಬಿದ್ದೇ ಆದರೂ ನಮ್ಮ ಬೇಡಿಕೆ ಪುರಸ್ಕರಿಸಲ್ಪಡುತ್ತದೆ. ಬೆಲೆ ಹೆಚ್ಚು ಕೊಡಬೇಕಾಗುತ್ತದೆ ಎಂಬುದಕ್ಕೆ ಮಾತ್ರ ಗ್ರಾಹಕ ನರಳಬಹುದು.

ಮನುಷ್ಯತ್ವಕ್ಕೆ ರಣಾಹ್ವಾನ

ಹೀಗೆ ಸರಕಾರದ ನಿಯಂತ್ರಣ ಧೋರಣೆಯೇ ವಸ್ತುಗಳ ಕೊರತೆ ಎಂಬ ಕಲ್ಪನಾ ಭೂತಕ್ಕೆ ಜನ್ಮ ಕೊಟ್ಟಿದೆ. ವಾಸ್ತವವಾಗಿ ಎಲ್ಲಿಯೂ ಅಸಾಮಾನ್ಯ ಕೊರತೆ ಏನೂ ಇಲ್ಲ. ಈ ಸಂಗತಿಯನ್ನು ವಿಶದವಾಗಿ ಚರ್ಚಿಸಿ ಮನವರಿಕೆ ಮಾಡಿಕೊಡಬಹುದು. ಆದರೆ ಸದ್ಯ ಇದು ಅನಗತ್ಯ. ಏಕೆಂದರೆ ಸ್ವಾನುಭವ ಸಿದ್ಧಾಂತವಾಗಿ ಅದು ರೂಢಿಸಿದೆ. ಕಾರಣ— ನಿಯಂತ್ರಣ ಹೋದರೆ ಹಾನಿಯೇನೂ ಆಗಲಾರದು. ಹೆಚ್ಚೆಂದರೆ ಮೊದಲಿನ ಕೆಲವು ತಿಂಗಳು ಸ್ವಲ್ಪ ಗೊಂದಲ ತಲೆದೋರೀತು. ಇದು ಪ್ರತಿಯೊಂದೂ ಪರಿವರ್ತನೆಯ ಮಧ್ಯಂತರ ಕಾಲದಲ್ಲಿ ನಡೆಯುವ ಸಂಗತಿಯೇ. ಆದುದರಿಂದ ಇದಕ್ಕೆ ಹೆದರಬೇಕಿಲ್ಲ. ಮನುಷ್ಯನ ಸತ್ವಗುಣವನ್ನು ಅಲಕ್ಷಿಸಿದರೆ, ಇಷ್ಟು ದಿನಗಳ ಬಳಿಕ ಈ ಪ್ರಗತಿಪರ ಹೆಜ್ಜೆಯನ್ನಿಡಲು ಹೆದರಿಕೆ ಉಂಟಾದೀತು. ಆದರೆ ಈ ಅಂಜಿಕೆಗೆ ನಡುಗುವುದು ಬೇಡ- ವ್ಯಾಪಾರಿಗಳೂ ನಮ್ಮಂತೆಯೇ ಮನುಷ್ಯರು, ನಾಲ್ಕೇ ದಿನಗಳಲ್ಲಿ ಮೊದಲಮಟ್ಟಕ್ಕೆ ಅವರೂ ಇಳಿಯುತ್ತಾರೆ.

—ಕಾರ್ತಿಕೇಯ.

ಚತುರ್ಥ ವಿಮಾಗಣನೆಯ ಫಲಿತಾಂಶ

(1947ರಿಂದ 1950ರ ವರೆಗೆ)

* * * * * *

ತಾರೀಕು 31-12-1950ಕ್ಕೆ ನಡೆಸಿದ ವಿಮಾಗಣನೆಯಲ್ಲಿ ಆಜೀವ ಮತ್ತು ಉಂಬಳಿ ವಿಮಾ ಪೋಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ ಅನುಕ್ರಮವಾಗಿ ರೂ. 12/ ಮತ್ತು ರೂ. 9/-ರಂತೆ ಬೋನಸನ್ನು ಘೋಷಿಸಿದೆ.

The Canara Mutual Assurance Co. Ltd.

Head Office: **UDIPI**, S. INDIA.

ಸ್ಥಾಪನೆಯಿಂದಲೂ ಎಲ್ಲಾ ಗಣನೆಗಳಿಗೆ

ಬೋನಸು ಹಂಚಿದ ಕಂಪೆನಿ.

ZANDU PHARMACEUTICAL WORKS LTD.

Manufacturers of Ayurvedic and Alopathic Medicines BOMBAY, 14.

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯಾಷಧ. 1 ಕೊಲೆಗೆ ರೂ 3/- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ.
2 ಶ್ರೀ ವಿ. ವಿ. ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್ ಎನ್ ಶರ್ಮ, ಹುಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

DAMODAR & CO.,

Nainiappa Naicken Street, Park Town—**MADRAS** 3.

[illegible] ೨

ಉತ್ಪಾದನೆ ಹೆಚ್ಚಿಸುವ ಉದ್ಯಮಗಳ ಅಗತ್ಯ

ಜನಪದ ಅಭಿವೃದ್ಧಿ ಯೋಜನೆಗಳು

ಈಚೆಗೆ ಭಾರತ ಮತ್ತು ಅಮೇರಿಕೆಯ ಸಂಯುಕ್ತ ರಾಜ್ಯಗಳ ನಡುವೆ ನಡೆದೊಂದು ತಾಂತ್ರಿಕ ಸಹಾಯ ಒಡಂಬಡಿಕೆಯ ಪ್ರಕಾರ ಯೋಜನಾ ಆಯೋಗವು ಹೊಸ ಉಪಕ್ರಮವೊಂದನ್ನು ಕೈಗೊಳ್ಳಲು ಹವಣಿಸಿದೆ. ಜನಪದ ಅಭಿವೃದ್ಧಿ ಯೋಜನೆಗಳೆಂದು ಕರೆಯಲಾದ ನೂತನ ಉದ್ಯಮವನ್ನು ಯಶಸ್ವಿಯಾಗಿ ಕಾರ್ಯಗತಮಾಡುವುದು ಅದರ ಉದ್ದೇಶವಿದೆ. ಭಾರತದಲ್ಲಿ ಉತ್ತರ ಪ್ರದೇಶದ ನೀಲೋಖೇರಿ, ಫರೀದಾಬಾದ ಮತ್ತು ಇಟವಾಗಳಲ್ಲಿ ಕಳೆದ ೩-೪ ವರ್ಷಗಳಿಂದ ಪ್ರಾಯೋಗಿಕ ರೂಪದಲ್ಲಿ ನಡೆಸಿದ ಯೋಜನೆಯ ಸದ್ಯದ ಪ್ರಯತ್ನಗಳಿಗೆ ತಳಹದಿಯಾಗಿದ್ದು ಗ್ರಾಮೀಣ ಅರ್ಥ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಪುನರ್ಘಟಿಸುವ ಮತ್ತು ಜನರ ಜೀವನ ಮಟ್ಟದ ಸರ್ವಾಂಗೀಣ ಅಭಿವೃದ್ಧಿಯನ್ನೂ ಸ್ವಾವಲಂಬನವನ್ನೂ ಸಂಪಾದಿಸುವ ಮಹತ್ವದ ಧ್ಯೇಯ ಈ ಯೋಜನೆಗಳದಾಗಿದೆ.

ಯೋಜನೆಯ ರೂಪರೇಷೆ

ಯೋಜನಾ ಆಯೋಗವು ಮುಂದಿನ ಮೂರು ವರ್ಷಗಳಲ್ಲಿ ಒಟ್ಟು ೨೫೦ ಕೋಟಿ ರೂಪಾಯಿಯನ್ನು ಈ ಯೋಜನೆಗಳಿಗಾಗಿ ವೆಚ್ಚ ಮಾಡುವುದು. ಸಂಯುಕ್ತ ರಾಜ್ಯ ಅಮೇರಿಕವು ಈ ವರ್ಷ ಜೂನಿನೊಳಗಾಗಿ ೨೫ ಕೋಟಿ ರೂಪಾಯಿಗಳನ್ನು ಕೊಡಮಾಡಿದೆ. ಇಷ್ಟೇ ಮೊತ್ತವನ್ನು ಕೇಂದ್ರ ಸರಕಾರವೂ ಕೊಟ್ಟು ಈ ವರ್ಷದ ಹಣವನ್ನು ರಾಜ್ಯ ಸರಕಾರಗಳಿಗೆ ದೀರ್ಘಾವಧಿಯ ಸಾಲವಾಗಿ ಒದಗಿಸುವುದು. ಜನಪದ ಅಭಿವೃದ್ಧಿ ಯೋಜನೆಗಳನ್ನು ಕಾರ್ಯರೂಪಕ್ಕೆ ಇಳಿಸುವ ಹೊಣೆಯು ರಾಜ್ಯ ಸರಕಾರಗಳ ಮೇಲಿದೆ. ಈಗಾಗಲೇ ಬೇರೆ ಬೇರೆ ರಾಜ್ಯಗಳಲ್ಲಿ ಯೋಜನಾ ಕೇಂದ್ರಗಳ ಆಯ್ಕೆ ನಡೆದಿದೆ. ಕೆಲವು ಕಾರ್ಯಾರಂಭವನ್ನೂ ಮಾಡಿವೆ. ಮೊನ್ನೆ ತಾನೆ, ಪ್ರಧಾನಿ ನೆಹರೂ ಅಭಿವೃದ್ಧಿ ಯೋಜನೆಗಳ ಶಮೀಶನರುಗಳನ್ನು ಉದ್ದೇಶಿಸಿ ಭಾಷಣ ಮಾಡಿದರು. ಜನರ ಸಹಕಾರವಂತೂ ಅಗತ್ಯ ಬೇಕು- ಅದರ ಜೊತೆಗೆ ಅಧಿಕಾರಿಗಳೂ ಪ್ರತ್ಯಕ್ಷ ಕಾರ್ಯಾಚರಣೆಯಲ್ಲಿ ಆಸಕ್ತಿ ವಹಿಸಿ ದುಡಿಯುವುದವಶ್ಯ ಎಂದವರು ಉಪದೇಶಿಸಿದರು.

ಭಾರತದಲ್ಲಿ ಒಟ್ಟಿಗೆ ೫೫ ಜನಪದ ಅಭಿವೃದ್ಧಿ ಯೋಜನಾ ಕ್ಷೇತ್ರಗಳನ್ನೂ ೧೫ ಕೇಂದ್ರಗಳನ್ನೂ ಈ ಉದ್ದೇಶಕ್ಕೆ ಒಳಪಡಿಸುವರು. ಅವುಗಳ ಮೂಲಕ ಉತ್ಪಾದನೆಯನ್ನು ಸಮಗ್ರವಾಗಿ ಹೆಚ್ಚಿಸಲು ಪ್ರಯತ್ನ ಮಾಡಲಾಗುವುದು. ಪ್ರತಿಯೊಂದೂ ಅಭಿವೃದ್ಧಿ ಯೋಜನಾ ಕ್ಷೇತ್ರವು ಸುಮಾರು ೫೦೦ ಚದರ ಮೈಲು ವಿಸ್ತೀರ್ಣದ ೩೦೦ ಹಳ್ಳಿಗಳನ್ನು ಒಳಗೊಳ್ಳುವುದು. ಸಾಮಾನ್ಯವಾಗಿ ಈ ಕ್ಷೇತ್ರದ ಒಟ್ಟು ಜನಸಂಖ್ಯೆ ಎರಡು ಲಕ್ಷವಿರಬಹುದು—ಕೃಷಿ ಭೂಮಿಯು ೧೫೦ ದೂವರೆ ಲಕ್ಷ ಎಕರೆಯಷ್ಟಾದೀತು. ಒಟ್ಟಾರೆ—ಭಾರತದ ಆರುಲಕ್ಷ ಹಳ್ಳಿಗಳಲ್ಲಿ ನೆಲಸಿರುವ ಇಪ್ಪತ್ತೇಳೂವರೆ ಕೋಟಿ ಜನರಲ್ಲಿ ಒಂದೂಕಾಲು ಕೋಟಿ ಜನರಿಂದ ಕೂಡಿದ ೧೬,೫೦೦ ಗ್ರಾಮಗಳು ಈ ಯೋಜನೆಯ ಕಕ್ಷೆಯಲ್ಲಿ ಬರುತ್ತವೆ. ಯೋಜನೆಗಳ ದಿಗ್ದರ್ಶನ ಮಾಡಲೂ ಕಾಲಕಾಲಕ್ಕೆ ಸಲಹೆ ನೀಡಲೂ ಕೇಂದ್ರದಲ್ಲಿ ಒಂದು ಮಂಡಳವಿದೆ. ಪ್ರತಿಯೊಂದೂ ರಾಜ್ಯದಲ್ಲಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಮಂತ್ರಿ ಮಹೋದಯರಿಂದೊಡಗೂಡಿದ ಉಪಮಂಡಳಗಳಿವೆ.

ಅಭಿವೃದ್ಧಿಯ ಸ್ವರೂಪ

ಅನ್ನೋತ್ಪಾದನೆಯ ಸಮಸ್ಯೆಯನ್ನು ಬಗೆಹರಿಸುವುದೊಂದೇ ಸದ್ಯಕ್ಕೆ ನಮ್ಮ ಆದ್ಯ ಕರ್ತವ್ಯವಿರುವುದರಿಂದ ಈ ಅಭಿವೃದ್ಧಿ ಯೋಜನೆಗಳೂ ಇದಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡುತ್ತವೆ. ಆದುದರಿಂದ ಯೋಜನೆಯನ್ನು ಪ್ರಾಯೋಗಿಕವಾಗಿ ಕೈಗೊಳ್ಳಲು ಹಳ್ಳಿಗಳನ್ನು ಆರಿಸುವಾಗ ನೀರಾವರಿಯ ಅನುಕೂಲತೆಯಾದಾಗಲೀ ನಿಶ್ಚಿತ ರೂಪದಲ್ಲಿ ಬರುವ ಮಳೆಯಿಂದಾಗಲೀ ಸ್ವಲ್ಪ ಮಾತ್ರ ಹೆಚ್ಚು ಪ್ರಯತ್ನದಿಂದ ಅಧಿಕ ಆಹಾರ ಬೆಳೆಯಲು ಅನುಕೂಲವೆನಿಸಿದ ಸ್ಥಳಗಳನ್ನು ಯೋಜನಾ ಆಯೋಗವು ಲಕ್ಷ್ಯದಲ್ಲಿಟ್ಟುಕೊಂಡಿದೆ. ಈ ಕಾರಣದಿಂದ ಈ ಕ್ಷೇತ್ರಗಳು ಭಾರತದಲ್ಲೆಲ್ಲ ಹಂಚಿಹೋಗಿವೆ. ಮದ್ರಾಸು ಮತ್ತು ಉತ್ತರ ಪ್ರದೇಶಗಳಿಗೆ ಪ್ರತಿಯೊಂದಕ್ಕೂ ಆರು, ಮುಂಬಯಿ, ಬಿಹಾರ, ಮಧ್ಯಪ್ರದೇಶ ಮತ್ತು ಪಂಜಾಬುಗಳಿಗೆ ಪ್ರತಿಯೊಂದಕ್ಕೂ ನಾಲ್ಕು, ಒರಿಸ್ಸಾಕ್ಕೆ ಮೂರು, ಮಧ್ಯ ಭಾರತ, ಅಸ್ಸಾಮ, ಹೈದರಾಬಾದ, ರಾಜಸ್ಥಾನ ಮತ್ತು ತಿರುವಾಂಕೂರು ಕೊಚ್ಚಿನ್‌ಗಳಿಗೆ ಪ್ರತಿಯೊಂದಕ್ಕೂ ಎರಡು— ಹೀಗೆ ಅಭಿವೃದ್ಧಿ ಯೋಜನಾ ಕ್ಷೇತ್ರಗಳು ದೊರೆತಿವೆ. ಉಳಿದ ರಾಜ್ಯ ಸರಕಾರಗಳಿಗೆ ಪ್ರತಿಯೊಂದಕ್ಕೂ ಒಂದೊಂದ ಕ್ಷೇತ್ರವನ್ನು ಕೊಡಲಾಗಿದೆ. ಪಶ್ಚಿಮ ಬಂಗಾಲ ಪಟ್ಟಿಗೆ ನಿರಾಶ್ರಿತ ಜನರ ಆವಶ್ಯಕತೆಯನ್ನು ವಿಶೇಷ ರೂಪದಿಂದ ಪೂರೈಸುವುದಕ್ಕಾಗಿ, ಎಂಟು ಅಭಿವೃದ್ಧಿ ಕ್ಷೇತ್ರಗಳು ದೊರೆತಿವೆ. ಕೃಷಿ ಕ್ಷೇತ್ರ ವಿಸ್ತರಣೆಯಲ್ಲದೆ, ಈ ಯೋಜನೆಯ ಸ್ವಯ ಗುಡಿ ಕೈಗಾರಿಕೆಗಳನ್ನೂ ಸಣ್ಣ ಪಟ್ಟ ಗೃಹೋದ್ಯಮಗಳನ್ನೂ ಅಭಿವೃದ್ಧಿಗೊಳಿಸುವುದು, ಶಿಕ್ಷಣ ಪ್ರಸಾರ, ಆರೋಗ್ಯ ಸೌಕರ್ಯಗಳು ಮುಂತಾದವುಗಳಲ್ಲದೆ, ದಾರಿ ಸಂಪರ್ಕ, ಗ್ರಾಮೀಣ ಕಲೆ ಮತ್ತು ಸಂಸ್ಕೃತಿಗಳಿಗೆ ಪ್ರೋತ್ಸಾಹ, ಪಡು ಭೂಮಿಯ ಸಾಗುವಳಿ, ಸಾರಿಗೆ ಸೌಕರ್ಯಗಳನ್ನು ಹೆಚ್ಚಿಸುವುದು—ಮುಂತಾದ ವಿವಿಧ ರಂಗಗಳಲ್ಲಿ ಪ್ರೋತ್ಸಾಹವಾದ ಜ್ಞಾನ ಪ್ರಸಾರ ಈ ಯೋಜನೆಗಳ ಕಾರ್ಯಾಚರಣೆಯಿಂದ ನೆರವೇರುವುದು.

ಸಹಕಾರ ಯಾಚನೆ

ಸರಕಾರದ ಪ್ರತಿಯೊಂದೂ ಅಭಿವೃದ್ಧಿಯ ಪ್ರಯತ್ನದಲ್ಲಿ ಜನತೆಯ ನೆರವು ಮತ್ತು ಸಹಕಾರ ಬೇಕೇಬೇಕು. ಇಷ್ಟು ದೊಡ್ಡ ಪ್ರಮಾಣದಲ್ಲಿ ಕೈಗೊಂಡಿರುವ ಯೋಜನೆಗಳ ಉದ್ದೇಶವನ್ನೂ ಸ್ವರೂಪವನ್ನೂ ಜನರು ಸರಿಯಾಗಿ ಅರ್ಥಮಾಡಿಕೊಂಡು, ತಮ್ಮಿಂದ ಕೂಡಿದ ಸಹಾಯವನ್ನು ಸಲ್ಲಿಸದೆ ಹೋದಲ್ಲಿ—ಈ ಯೋಜನೆಗಳ ಏನನ್ನೂ ಸಾಧಿಸಲಾರವು. ಹೊಸ ಉಪಕ್ರಮಗಳೆಂದಮಾತ್ರಕ್ಕೆ ನಮ್ಮಲ್ಲಿ ಅವುಗಳ ಯಶಸ್ವೀ ಪರಿಣಾಮದ ಬಗ್ಗೆ ಸಂಶಯವೇಳುವುದುಂಟು. ಆದರೆ ಸಮ್ಯಕ್ಕೆ ಇಟವಾದಂಥ ಸಂಸ್ಥೆಗಳು ಕಡೆ ಕಳೆದ ಸಾಧಿಸಿದ ಅಪಾರ ಪ್ರಗತಿಯ ಮೇಲಿಂದ, ಈ ಶಂಕೆಗಳಿಗೆ ಎಡೆದೊರೆಯದು.

ಜನತೆ ಬಿಚ್ಚು ಮನಸ್ಸಿನಿಂದ ಸರಕಾರದೊಡನೆ ಸಹಕರಿಸಲು ಉತ್ಸಾಹದಿಂದ ಮುಂದೆ ಬಂದರೆ ದಾರಿದ್ರ್ಯದ ಕಳಕಳಿಯಿಂದ ಬಿಡುಗಡೆ ಹೊಂದುವುದರಲ್ಲಿ ಸಂಶಯವಿಲ್ಲ—ಭಾರತವು ದುಡ್ಡಿನ ದೃಷ್ಟಿಯಿಂದ ಬಡರಾಷ್ಟ್ರವಾದರೂ ನಿಜವಾಗಿ ನಮ್ಮ ಭೂಸಂಪತ್ತು ಮತ್ತು ಜನಸಂಪತ್ತು ಅಪಾರ. ಜನಸಂಪತ್ತನ್ನು ಸಮುಚಿತ ರೀತಿಯಲ್ಲಿ ಉಪಯೋಗಿಸಿ, ಭೂಸಂಪತ್ತನ್ನು ಯಥೇಚ್ಛವಾಗಿ ಉಪಭೋಗಿಸುವ ಹವಣಿಕೆ ಈಗ ನಡೆಯಬೇಕಾಗಿದೆ. ಈ ವಿಷಯದಲ್ಲಿ ನಮಗೆ ತಾಂತ್ರಿಕ ಸಹಾಯ ಅಗತ್ಯವೆನಿಸಿದೆ. ಯಾರ ಪುಣ್ಯವೋ—ಅದೀಗ ನಮಗೆ ಸಾಕಷ್ಟು ಹೆಚ್ಚು ಪ್ರಮಾಣದಲ್ಲಿಯೇ ಸಿಗುತ್ತದೆ. ಸಂಯುಕ್ತ ರಾಷ್ಟ್ರ ಸಂಘ ಮತ್ತು ಅಮೇರಿಕಾದಿಂದ ಅಲ್ಲದೆ ಕೊಲೊಂಬೋ ಯೋಜನೆಯನ್ವಯ ಕಾಮನವೆಲ್ತ್ ರಾಷ್ಟ್ರಗಳಿಂದಲೂ ತಾಂತ್ರಿಕ ನೆರವು ದೊರೆಯುತ್ತದೆ. ಸ್ವಾವಲಂಬನದ ಬಗ್ಗೆ ಸ್ವಲ್ಪವಾದರೂ ನಮ್ಮಲ್ಲಿ ಶ್ರದ್ಧೆ ಇದ್ದಲ್ಲಿ—ನಮ್ಮ ಪರಾವಲಂಬಿತನವನ್ನು ಕಳೆಯುವುದಕ್ಕೆ ಇಷ್ಟು ಸಾಕು. ನಮ್ಮ ಜನರ ಬುದ್ಧಿ ಸಾಮರ್ಥ್ಯವಾಗಲೀ ಶಕ್ತಿಸಾಮರ್ಥ್ಯವಾಗಲೀ ಯಾವ ಕ್ಷೇತ್ರದಲ್ಲೂ ಕಡಿಮೆ ಇಲ್ಲ ಎಂಬುದನ್ನು ಜಗತ್ತಿನ ಸರ್ವಶ್ರೇಷ್ಠ ತಜ್ಞರೇ ಪ್ರಾಮಾಣಿಕವಾಗಿ ಒಪ್ಪಿಕೊಂಡವರು. ಕಾರಣ—ಆಲಸ್ಯವನ್ನು, ಸಂಶಯಾತ್ಮಕ ಪ್ರವೃತ್ತಿಯನ್ನು ತೊರೆಯೋಣ. ಉತ್ಪಾದನೆಯ ಹೆಚ್ಚಳದ ಜೊತೆಗೆ ಜನರ ಜೀವನ ಮಟ್ಟವನ್ನೂ ಉತ್ತರಿಸುವ ಉಚ್ಚ ಧ್ಯೇಯದಿಂದ ಕೂಡಿದ ಜನಪದ ಅಭಿವೃದ್ಧಿ ಯೋಜನೆಗಳಿಗೆ ನಮ್ಮ ಸರ್ವ ನೆರವಿಂದ ನೆರವಾಗೋಣ, ಧನ್ಯರಾಗೋಣ!—ಅ ದ

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತಿದೆ, ಬಕ್ಕ ವಾಸಿಯಾಗುತ್ತವೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಜಿ ಐ. ಪಿ) ಮುಂಬಯಿ, ೧೪

For Protection and Provision

Consult

The New Guardian of India Life Insurance Co., Ltd.

Estd] Head office' **MADRAS** [1934

A Policy in this rogressive Life Office is good investment, its Agency is valuable business connection

Applications for representation are invited from influential persons

Please apply to:

The Branch Manager.
Diamond Building, Hampankatta,
MANGALORE, S. K.

ಲಿಮಿಟೆಡ್ ಕಂಪನಿ ಶೇರುಗಳು ಮಾರಾಟಕ್ಕಿವೆ

ದ. ಕ. ಜಿಲ್ಲೆಯ ಲಿಮಿಟೆಡ್ ಕಂಪೆನಿಗಳಿಗೆ ಸಂಬಂಧಿಸಿದ ಸುಮಾರು ರೂಪಾಯಿ ೨೦೦೦/—ಮೌಲ್ಯದ ಶೇರುಗಳನ್ನು ಈ ಪ್ರಕಟಣೆಯ ಮೂಲಕ ಮಾರುವವರಿದ್ದಾರೆ. ಖಾಯಿಸುವ ವ್ಯಕ್ತಿಗಳಾಗಲೀ ಬಲ ಲಿಗಳಾಗಲಿ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು

K. C. O ನವಯುಗ

ಮದ್ರಾಸಿನ ಪಬ್ಲಿಕ್ ಇನ್ಸ್ಟ್ರಕ್ಷನಿನ ಡೈರೆಕ್ಟರಿಂದ ನವಯುಗ ವಾರಪತ್ರಿಕೆಯು ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಸೆಕೆಂಡರಿ ಶಾಲೆಗಳು ಅದನ್ನು ತರಿಸಿಕೊಳ್ಳಬಹುದಾಗಿದೆ.

ಲೋಕದ ನಡತೆ

ಸಿಂಹಳ ಸರಕಾರವು ಸತ್ಯಾಗ್ರಹಿಗಳ ಒತ್ತಾಯವನ್ನು ಕಡೆಗಣಿಸುತ್ತಾ ಬಂದಿರುವುದು. ಮುಖ್ಯಮಂತ್ರಿ ಡಡ್ಲೀ ಸೇನಾನಾಯಿಕೆಯವರು ಚುನಾವಣಾ ಭಾಷಣಗಳಲ್ಲಿ ಸಿಲೋನಿನಲ್ಲಿ ನೆಲಸಿರುವ ಭಾರತೀಯರು ಕೇವಲ ಪರಕೀಯರೆಂಬ ಧ್ವನಿ ಹೊರಡಿಸುತ್ತಿರುವರು. ಈ ಬಿಕ್ಕಟ್ಟಿನ ಪ್ರಸಂಗದಲ್ಲಿ ಸಿಂಹಳದಲ್ಲಿರುವ ತನ್ನ ಸ್ವಕವಿಶಾಸನರಿಗೆ ನೆರವಾಗಲೆಂದು ಭಾರತ ಸರಕಾರವು ಶ್ರೀ ವಿ. ಟಿ. ಚಾರಿಯವರನ್ನು ಸಿಲೋನಿಗೆ ಕಳಿಸಿದೆ.

೦೦ ೦೦

ಕೊರಿಯಾದಲ್ಲಿ ಕಳೆದ ೧೦ ತಿಂಗಳುಗಳಿಂದ ಯುದ್ಧ ವಿರಾಮ ಮಾತುಕತೆಗಳು ನಡೆಯುತ್ತಿದ್ದರೂ ಇಕ್ಕಡೆಯವರಿಗೂ ಸಮಾಧಾನಕರವಾದ ಒಂದು ಒಡಂಬಡಿಕೆಗೆ ಬರಲು ಸಾಧ್ಯವಾಗಲಿಲ್ಲ. ಈಗ ರಹಸ್ಯಾಧಿವೇಶನ ಸೇರುವುದನ್ನು ಬಿಟ್ಟುಬಿಟ್ಟು ಬಹಿರಂಗವಾಗಿ ಮಾತುಕತೆಗಳನ್ನು ಆರಂಭಿಸಿರುವರು. ಇದರ ಜೊತೆಗೆ ರಣರಂಗದಲ್ಲಿ ಧಾಳಿ-ಪ್ರತಿಧಾಳಿಗಳೂ ಚ್ಯುತಿಯಿಲ್ಲದೆ ನಡೆಯುತ್ತಿವೆ. ಕ್ರಿಮಿಯುದ್ಧದ ಆರೋಪವನ್ನು ಕಮ್ಯುನಿಸ್ಟರು ಒಂದೇ ಸಮನೇ ಮಾಡುತಿದ್ದಾರೆ. ಆದರೂ ನಿಷ್ಪಕ್ಷಪಾತ ನಿರೀಕ್ಷಕರ ನಿಯೋಗದಲ್ಲಿ ರಶಿಯಾಕ್ಕೆ ಸ್ಥಾನಕೊಡಬೇಕೆಂಬ ಛಲವನ್ನವರು ಸದ್ಯ ಬಿಟ್ಟುಕೊಟ್ಟಿರುವದು ಒಂದ ಸಮಾಧಾನ. ಇದರಿಂದಾಗಿ, ಸಂಯುಕ್ತ ರಾಷ್ಟ್ರ ಸಂಘದ ಕಡೆಯಿಂದ ಸ್ವಿಜರ್‌ಲೆಂಡ್ ಮತ್ತು ಸ್ವೀಡನುಗಳೂ ಕಮ್ಯೂನಿಸ್ಟರ ಕಡೆಯಿಂದ ಪೋಲಂಡ ಮತ್ತು ಜೆಕೊಸ್ಲೊವೇಕಿಯಾಗಳೂ ಈಗ ನಿರೀಕ್ಷಕ ನಿಯೋಗದಲ್ಲಿರುವಂತಾಗಿದೆ. ವಿಮಾನ ನಿಲ್ದಾಣಗಳನ್ನು ರಚಿಸಿಕೊಳ್ಳಲು ಅವಕಾಶ ಕೊಡಬೇಕೆಂಬ ಕಮ್ಯೂನಿಸ್ಟರ ಬೇಳಿಕೆಗೆ ರಾಷ್ಟ್ರ ಸಂಘದ ಪರವಾಗಿ ವೈಸ್ ಆ್ಯಡ್ಮಿರಲ್ ಜಾಯ್ ಒಪ್ಪಿಕೊಂಡಿರುವರು. ಯುದ್ಧ ಕೈದಿಗಳ ವಿನಿಯಮದ ಬಗ್ಗೆ ಮಾತ್ರ ಎರಡೂ ಕಡೆಯವರ ನಿಲುವು ಬೇರೆ ಬೇರೆಯಾಗಿದೆ. ತಮ್ಮ ವಶದಲ್ಲಿರುವ ಯುದ್ಧ ಕೈದಿಗಳನ್ನೆಲ್ಲ ಇಕ್ಕಡೆಯವರೂ ವಾಪಸು ಒಪ್ಪಿಸಬೇಕೆಂದು ಕಮ್ಯೂನಿಸ್ಟರ ಹೇಳಿಕೆ ಇದ್ದರೆ—ಯುದ್ಧ ಕೈದಿಗಳನ್ನು ಸ್ವಂತ ಇಚ್ಛೆಯಿಂದಲ್ಲದೆ ಬಲಾತ್ಕಾರ ಪೂರ್ವಕವಾಗಿ ಹಾಗೆ ಒಪ್ಪಿಸಿಕೊಡಲಾರೆವು ಎಂದು ಸಂಯುಕ್ತ ರಾಷ್ಟ್ರ ಸಂಘ ಹೇಳಿದೆ. ಕಮ್ಯೂನಿಸ್ಟರ ಕೈಯಲ್ಲಿ ಸಿಕ್ಕಲು ಅಂಜುವವರನ್ನು ಒತ್ತಾಯದಿಂದ ನಾವು ಎಂದಿಗೂ ಮರಳಿ ಕೊಡಲಾರೆವು ಎಂದು ಜನರಲ್ ರಿಡ್ಜ್‌ವೇ ಸಾರಿದ್ದಾರೆ. ಆ ಘೋರಣಕ್ಕೆ ಅಮೇರಿಕೆಯಂತೆ ಬ್ರಿಟನು ಕೂಡ ಸೈಗುಟ್ಟಿದೆ. ಯುದ್ಧ ವಿರಾಮ ಮಾತುಕತೆಗಳಲ್ಲಿ—ಮುಖ್ಯವಾಗಿ ಭಿನ್ನಾಭಿಪ್ರಾಯವಿರುವ ಯುದ್ಧ ಕೈದಿಗಳ ವಿನಿಮಯದ ಬಗ್ಗೆ ತಾವು ಕೊಡ ಮಾಡಿದ ಶರ್ತಗಳು ಅಖೈರಿ ಸ್ವರೂಪದ್ದಿದ್ದು ಇದರಲ್ಲಿನ್ನು ಏನೇನೂ ರಿಯಾಯತಿಗೆ ಎಡೆಯಿಲ್ಲವೆಂದು ಜನರಲ್ ರಿಡ್ಜ್‌ವೇ ಘೋಷಿಸಿರುವರು. ಅವರೀಗ ರಾಷ್ಟ್ರ ಸಂಘದ ಸೇನಾಧಿಪತ್ಯವನ್ನು ಜನರಲ್ ಮಾರ್ಕ್ಸ್ ಕ್ಲಾರ್ಕರಿಗೆ ವಹಿಸಿಕೊಟ್ಟಿದ್ದು, ತಾವು ಯುರೋಪಿನ ಸರ್ವ ಶ್ರೇಷ್ಠ ಸೇನಾಧಿಕಾರವನ್ನು ಜನರಲ್ ಐಸನ್ ಹಾವರರಿಂದ ಪಡೆದುಕೊಳ್ಳಲು ಟೋಕಿಯೋವನ್ನು ಬಿಟ್ಟು ಅಮೇರಿಕೆಗೆ ಮರಳಿರುವರು.

೦೦ ೦೦

ಅಧ್ಯಕ್ಷ ಟ್ರೂಮನ್ನರು ಪತ್ರಿಕಾ ಪ್ರತಿನಿಧಿಗಳ ಸಭೆಯೊಂದರಲ್ಲಿ ಅಮೇರಿಕೆಯ ಧೋರಣದ ಕುರಿತು ಪ್ರಕಾಶನಮಾಡಿದರು— ಜಗತ್ತಿನ ವ್ಯವಹಾರಗಳಲ್ಲಿ ಬಿಕ್ಕಟ್ಟು ಉಂಟಾಗಿರುವಾಗ, ಮುತ್ಸದ್ದಿತನದಿಂದ ಗಂಡಾಂತರಗಳನ್ನು ದೂರೀಕರಿಸುವುದು ಜಾಗತಿಕ ಶಾಂತಿಸಾಧನೆಗೆ ಅಗತ್ಯವಿರುತ್ತದೆ. ಈ ಕಾರಣದಿಂದ ವಿಶ್ವದಲ್ಲಿ ತಾನೇ ತಾನಾಗಿ ಹಬ್ಬುತ್ತಿರುವ ಕಮ್ಯೂನಿಸ್ಟರ ಪ್ರಭಾವವು ಸ್ವತಂತ್ರ ರಾಷ್ಟ್ರಗಳನ್ನು ಆವರಿಸದಂತೆ ತಡೆಯಲು ಬಹಳ ಪರಿಶ್ರಮದಿಂದ ಕೆಲಸ ಮಾಡಬೇಕಾಗುವುದು. ಈ ದೃಷ್ಟಿಯಿಂದ ವಿದೇಶಗಳಿಗೆ ನೀಡಬೇಕಾದ ಸಹಾಯವನ್ನು ಗರಿಷ್ಠ ಪ್ರಮಾಣಕ್ಕೇರಿಸುವುದು ಇಷ್ಟವಾಗಿದೆ. ಹಾಗೆಯೇ ಆಂತರಿಕ ಸಂರಕ್ಷಣಾ ಕಾರ್ಯದಲ್ಲಿ ಸಹ ಶೀಘ್ರ ಪ್ರಗತಿಯನ್ನು ಸಾಧಿಸುವುದವಶ್ಯ. ಕಮ್ಯೂನಿಸಂ ವಿರೋಧಿ ರಾಷ್ಟ್ರಗಳೆಲ್ಲ ಒಂದುಗೂಡಿ ಪರಸ್ಪರ ಸಹಾಯ ಯೋಜನೆಗಳನ್ನು ಕಾರ್ಯಗತ ಮಾಡುವುದಲ್ಲದೆ ತಮ್ಮ ಶಕ್ತಿ ಸರ್ವಸ್ವದಿಂದ ಆಕ್ರಮಣವನ್ನೆದುರಿಸಲು ಸಿದ್ಧತೆ ನಡೆಸಬೇಕಾಗಿದೆ. ದುರ್ದೈವದಿಂದ ಅಮೇರಿಕೆಯ ಜನರಲ್ಲಿ ಆಂತರಿಕ ಬಲ ಸಂವರ್ಧಿಸಿಕೊಳ್ಳುವ ವಿಷಯದಲ್ಲಿ ಈಗೀಗ ಉಪೇಕ್ಷೆ ಕಂಡು ಬರುತ್ತಿದೆ. ವಿದೇಶಗಳಿಗೆ ನೆಂವು ನೀಡುವುದಕ್ಕೂ ಅವು ಉದಾಸೀನ ತೋರಿಸುತ್ತಿವೆ. ಯುದ್ಧ ಸಾಮಾಗ್ರಿಗಳ ಸಿದ್ಧತೆಗೆ ವಿನಿಯೋಗ ಮಾಡಲು ಬಹಳ ಹೆಚ್ಚು ಹಣ ಕೇಳುತ್ತಿರುವುದಕ್ಕೆ ಜನರು ಅಂಜಿಕೊಂಡಂತಿದೆ. ಕೆಲಸಗಾರರು ಕೂಡ ಸಂಪುಹೂಡಿ, ಉಕ್ಕು, ಎಣ್ಣೆ, ತಾಮ್ರ ಮುಂತಾದ ಆವಶ್ಯಕ ವಸ್ತುಗಳ ಉತ್ಪಾದನೆಗೆ ಕೊಡಕು ತಂದಿರುವರು

೦೦ ೦೦

ಭಾರತದ ಆಹಾರ ಪರಿಸ್ಥಿತಿಯು ಬಹಳ ಕೆಟ್ಟಿರುವುದರಿಂದ ಅಮೇರಿಕವು ಮುಂದಿನ ನಾಲ್ಕು ವರ್ಷಗಳಲ್ಲಿ ಒಟ್ಟಿಗೆ ಹತ್ತು ಮಿಲಿಯ ಟನ್ನು ಗೋಧಿಯನ್ನು ಪೂರೈಸಬೇಕೆಂದು ಈಗ ಅಲ್ಲಿ ಸಂಚರಿಸುತ್ತಿರುವ ಭಾರತದ ಸುಧೀರ ಘೋಷರು ಬಿನ್ನವಿಸಿದ್ದಾರೆ. ಫರಿದಾಬಾದ ಜನಪದ ಅಭಿವೃದ್ಧಿ ಯೋಜನಾಕ್ಷೇತ್ರದ ದಿಗ್ದರ್ಶಕರಾಗಿರುವ ಶ್ರೀ ಘೋಷರು ಕೇಳಿಕೊಂಡಂತೆ ಗೋಧಿ ಪೂರೈಸಲು ಅಮೇರಿಕೆಯು ಒಪ್ಪಿದರೆ, ಅದರ ವೆಚ್ಚವು ಸುಮಾರು ಒಂದು ಸಾವಿರ ಮಿಲಿಯ ಡಾಲರು ಆಗುವುದು. ಡೆಮಕ್ರಾಟಿಕ್ ಪಕ್ಷದ ಸಿನೇಟರ ವಿಲಿಯಂ ಬೆಂಟನರು ಈ ಸೂಚನೆಗೆ ಬೆಂಬಲವಿತ್ತಿದ್ದು ಈ ವರ್ಷ ಭಾರತಕ್ಕೆ ೧೨೫ ಮಿಲಿಯ ಡಾಲರು ಬೆಲೆಯ ಗೋಧಿ ಕಳಿಸಬೇಕೆಂಬ ಇರಾದೆಯಿಂದ ಅವರು ಹೊಸದೊಂದು ಮಸೂದೆಯನ್ನು ಮಂಡಿಸುವ ವಿಚಾರದಲ್ಲಿದ್ದಾರೆ.

೦೦ ೦೦

ಬ್ರಿಟನಿನ ಸ್ಥಾನಿಕ ಸಂಸ್ಥೆಗಳ ಚುನಾವಣೆಗಳಲ್ಲಿ ಆ್ಯಟ್ಲೀಯ ಕಾರ್ಮಿಕ ಪಕ್ಷವು ಚರ್ಚಿಲ್ಲರ ಕನ್ಸರ್ವೇಟಿವ ಪಕ್ಷವನ್ನು ಅತ್ಯಧಿಕ ಬಹುಮತದಿಂದ ಗೆದ್ದುಕೊಳ್ಳುತ್ತಿದೆ. ಬ್ರಿಟನಿನ ಮಹಾ ಚುನಾವಣೆಗಳ ಬಳಿಕ, ಈ ಕೌಂಟ ಚುನಾವಣೆಗೆ ಪ್ರಥಮ ಪ್ರಾಶಸ್ತ್ಯವನ್ನೂ ಮಹತ್ವವನ್ನು ಕೊಡುತ್ತಾರೆ.

೦೦ ೦೦

ಹಿಂದಿನ ಕಾರ್ಮಿಕರ ಸರಕಾರ ಘೋಷಣೆಯಾಗಿದ್ದ ರಾಷ್ಟ್ರೀಕರಣದ ಮೇಲೆ ಚರ್ಚಿಲ್ಲರ ಸರಕಾರವು ಬಲವಾದ ಪೆಟ್ಟನ್ನಿತ್ತಿದೆ. ಖಾಸಗಿ ಅಧಿಕಾರಿಗಳಿಗೆ ಮೋಟಾರು ಸಾಗಿಯಂಥ ಒಮ್ಮೆ ರಾಷ್ಟ್ರೀಕರಿಸಿದ ಉದ್ಯಮದ ಒಡೆತನವನ್ನು ಮರಳಿ ಒಪ್ಪಿಸಬೇಕೆಂದು ಅದು ನಿರ್ಣಯಿಸಿದ್ದು, ಇದರಿಂದ ವಾಹನ ಸೌಕರ್ಯಗಳಲ್ಲಿ ಹೆಚ್ಚು ಅಚ್ಚುಕಟ್ಟು ಮತ್ತು ಕಾರ್ಯಕ್ಷಮತೆ ಉಂಟಾಗುವುದು ಎಂದದು ಅಭಿಪ್ರಾಯ ಪಟ್ಟಿದೆ.

೦೦ ೦೦

ವಿಶ್ವದ ಎಲ್ಲ ರಾಷ್ಟ್ರಗಳಲ್ಲಿರುವ ಶಸ್ತ್ರಾಸ್ತ್ರ ಸಂಗ್ರಹವನ್ನು ಕಡಿಮೆ ಮಾಡಬೇಕೆಂದು ಅಮೇರಿಕವು ತಯಾರಿಸಿದ ಆರು ಅಂಶಗಳ ಯೋಜನೆಯೊಂದನ್ನು ರಶಿಯಾವು ನಿರ್ದಾಕ್ಷಿಣ್ಯದಿಂದ ತಿರಸ್ಕರಿಸಿದೆ. ಅಣು ಬಾಂಬಿನಂಥ ವಿಘಾತುಕ ಅಸ್ತ್ರಗಳನ್ನು ಮೊದಲಾಗಿ ಬಹಿಷ್ಕರಿಸುವುದನ್ನು ಬಿಟ್ಟುಕೊಟ್ಟು ಲೋಕದ ರಾಷ್ಟ್ರಗಳ ರಹಸ್ಯವಾದ ಶಸ್ತ್ರಾಸ್ತ್ರ ಸಂಗ್ರಹದ ಪ್ರಮಾಣವನ್ನು ಗೊತ್ತುಹಚ್ಚುವ ಕುಟಿಲ ಹಂಚಿಕೆಗೆ ಅಮೇರಿಕ ಮುಂದಾಗಿದೆ ಎಂದದು ಆರೋಪಿಸಿದೆ.

೦೦ ೦೦

ಭೂಮಧ್ಯ ಸಾಗರದಲ್ಲಿ ಮಿತ್ರರಾಷ್ಟ್ರಗಳ ನೌಕಾ ತಾಣ್ಯದ ಬಗ್ಗೆ ಸುಮಾರು ಎರಡು ವರ್ಷಗಳಿಂದ ಚರ್ಚೆ ನಡೆಯುತ್ತಿದ್ದ ಆಂಗ್ಲೋ—ಅಮೇರಿಕನ್ ಬಿಕ್ಕಟ್ಟು ಇನ್ನೂ ಉಳಿದಿದೆ. ಬ್ರಿಟಿಷರು ತಮ್ಮವನೊಬ್ಬನು ನೌಕಾಧಿಪತಿಯಾಗಬೇಕೆಂದೂ ಅದರಿಂದ ಕಾಮನ್‌ವೆಲ್ತ್ ರಾಷ್ಟ್ರಗಳ ರಕ್ಷಣೆಗೆ ಧಾವಿಸಲು ಅನುಕೂಲವಾಗುವುದೆಂದೂ ಹಟ ಹಿಡಿದಿರುವುದು. ಈ ವಿಷಯದಲ್ಲಿ ಈಜಿಪ್ತವು ಪ್ರವೇಶಿಸಿದರೆ, ಅಮೇರಿಕೆಯ ನಿಲುವೆಗೇ ಅದು ಬೆಂಬಲ ನೀಡುವುದೆಂದು "ಅಲ್ ಮಿಸ್ರಿ" ಪತ್ರಿಕೆ ಬರೆದಿದೆ.

೦೦ ೦೦

ದಿ ಈಸ್ಟ್ ಎಂಡ್ ವೆಸ್ಟ್

ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಸ್ಥಾಪನೆ:] ಈಸ್ಟ್ ಎಂಡ್ ವೆಸ್ಟ್ ಬಿಲ್ಡಿಂಗ್ಸ್, ಬೊಂಬಾಯಿ 1 [1913

ಉದಾರ ಯಾ ರಿಯಾಯತಿ ಶರ್ತಗಳಿರುವ ಪುರಾತನ ಮತ್ತು ಮುಂದುವರಿದ ಕಂಪೆನಿಗಳಲ್ಲೊಂದಾಗಿರುತ್ತದೆ.

ವಿಮೆಯ ಸಕಲ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು ಆ ಬಾಬಿನ ಎಲ್ಲಾ ಕೆಲಸಗಳಲ್ಲಿ ಭಾಗಿಯಾಗಿ ಸಹಕರಿಸಿ ಸಲಹೆಗಳನ್ನೀಯುತ್ತಾ ಜನಸೇವೆಗೈಯುವುದೇ ನಮ್ಮ ಧ್ಯೇಯ

ನಮ್ಮ ಚೀಫ್ ಏಜನ್ಸಿ ವಿಸ್ತೀರ್ಣದೊಳಗೆ ಪ್ರತೀ ಜಿಲ್ಲೆಗೊಬ್ಬರಂತೆ ಇನ್ಸ್‌ಪೆಕ್ಟರುಗಳೂ, ಸ್ಪೆಶಲ್ ಏಜಂಟರೂ, ಏಜಂಟರೂ ಬೇಕಾಗಿದ್ದಾರೆ. ಹೆಚ್ಚಿನ ವಿವರಕ್ಕೆ ಬರೆಯುವದು.

ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್,
ಚೀಫ್ ಏಜಂಟರು,
ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಮೈಸೂರು ಸ್ಟೇಟ್,
ಪೋಸ್ಟ್ ಶಿವಾರ, ದ. ಕ.

DO YOU KNOW?
THAT
THE VIJAYA BANK, LIMITED.

1. Was established in the year 1931 with Rs. Eight thousand as its Paid up Capital.
2. Has now increased its Paid up Capital and reserves to Rs. 10 lacks.
3. Has granted an average dividend of 6% to the Shareholders for the past 20 years.
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates.
6. Grants loans on easy terms to approved parties or on approved securities.
7. Does afford full protection and rich return to all your monies.

ADOPT IT AS
"MY BANK"
THE VIJAYA BANK, LIMITED,
H. O., MANGALORE.

—ಮನೆವಾರ್ತೆ

ಇಂಗ್ಲಿಷ್ ಹುಡುಗಿಯೊಬ್ಬಳನ್ನು ಮದುವೆಯಾದ ಕಾರಣಕ್ಕಾಗಿ ತನ್ನ ಊರಿಗೆ ಮರಳುವ ಅವಕಾಶವನ್ನೇ ಅನ್ಯಾಯವಾಗಿ ಕಳೆದುಕೊಂಡ ಆಫ್ರಿಕೆಯ ಬೆಮಂಗ್ ವಾಟೋ ಕುಲದ ಸೆರೆಟ್ಸೆ ಖಾಮಾನನ್ನು ಈಗ ಶಾಶ್ವತವಾಗಿ ಗಡೀಪಾರು ಮಾಡಿದಂತಾಗಿದೆ. ಬೆಮಂಗ ವಾಟೋ ಪ್ರಜೆಗಳಿಗೆ ಹೊಸತಾಗಿ ಒಬ್ಬ ಮುಖಂಡನನ್ನು ಆರಿಸಲು ಬ್ರಿಟನು ಸೂಚನೆ ಕೊಟ್ಟಿದೆ. ಅದಕ್ಕೆ ವಿರೋಧ ವ್ಯಕ್ತಪಡಿಸಲು ಒಂದು ಶಿಷ್ಟ ಮಂಡಳವು ಲಂಡನಿಗೆ ಬಂದಿದ್ದು ಸೆರೆಟ್ಸೆ ಖಾಮಾನ ಪರವಾಗಿ ತೆಗೆದುಕೊಂಡ ನಿರ್ಣಯವನ್ನು ಬದಲಿಸಲು ಕೇಳಿಕೊಂಡಿದೆ ಆದರೆ ಕಾಮನವೆಲ್ತ್ ಸಂಬಂಧ ಶಾಖೆಯ ಕಾರ್ಯದರ್ಶಿ ಈ ಕುರಿತು ಮೊದಲಿನ ಧೋರಣೆಗೆ ಅಂಟಿಕೊಂಡಿರುವರು. ಪ್ರಾಯಶಃ "ವರ್ಣ ಸಂಕರ"ದಂಥ "ಮಹಾಪಾಪ"ಕ್ಕೆ ತಕ್ಕ ದಂಡನೆ ವಿಧಿಸದಿದ್ದರೆ ದಕ್ಷಿಣ ಆಫ್ರಿಕೆಯಲ್ಲಿರುವ ತಮ್ಮ ಐರೋಪ್ಯ ಬಂಧುಗಳ ಗೌರವಕ್ಕೆ ಧಕ್ಕೆ ತಗಲುವುದು ನಿಶ್ಚಯ ಎಂದದು ಹೆದರುತ್ತಿದೆ.

೦೦ ೦೦

ಮಲಾನರು ಪಾರ್ಲಿಮೆಂಟರೀ ಹೈಕೋರ್ಟನ್ನು ಸ್ಥಾಪಿಸುವ ಬಗ್ಗೆ ಮಾಡಿರುವ ಮಸೂದೆಯು ದ್ವಿತೀಯ ವಾಚನವೂ ಮುಗಿಯಿತು. ಈ ನಡುವೆ, ಜೊಹಾನ್ಸ್‌ಬರ್ಗಿನ ಕೂಲಿಕಾರ ಸಂಘವೊಂದು ನಿರ್ಣಯದ ಮೂಲಕ ಸಂಯುಕ್ತ ರಾಷ್ಟ್ರ ಸಂಘವು ದಕ್ಷಿಣ ಆಫ್ರಿಕೆಯ ಘಟನೆಯನ್ನು ಸದ್ಯ ಆಳುತ್ತಿರುವ ಸರಕಾರವನ್ನು ಬಹಿಷ್ಕರಿಸಿ, ಹೊಸತಾಗಿ ಚುನಾವಣೆಗಳನ್ನು ನಡೆಸಬೇಕೆಂದು ಕೇಳಿಕೊಂಡಿದೆ. ಸದ್ಯದ ಘಟನೆಯನ್ನು ಅಲ್ಪಸಂಖ್ಯಾಕರಾದ ಶ್ವೇತವರ್ಣೀಯರು ಸಿದ್ಧಗೊಳಿಸಿದ್ದು, ಬಹುಸಂಖ್ಯಾಕರ ಮೇಲೆ ಅವರು ನಡೆಸುತ್ತಿರುವ ದಬ್ಬಾಳಿಕೆಯು ಪ್ರಜಾಪ್ರಭುತ್ವ ತತ್ವಕ್ಕೆ ವಿಸಂಗತವಿದೆ ಎಂದದು ಹೇಳಿದೆ.

೦೦ ೦೦

ಚೀನಾದಲ್ಲಿ ಸಂಚರಿಸುತ್ತಿರುವ ಭಾರತೀಯ ಸಾಂಸ್ಕೃತಿಕ ನಿಯೋಗವು ಪ್ರಚಂಡ ಸ್ವಾಗತವನ್ನು ಪಡೆದಿದೆ. ಚೀನಾದ ಜನತಾ ರಾಜ್ಯದ ಅಧ್ಯಕ್ಷ ಮಾವೊತ್ಸೆ ತುಂಗರು ನಿಯೋಗವನ್ನು ಆದರದಿಂದ ಸ್ವಾಗತಿಸಿ, ಸತ್ಕರಿಸಿದರು. ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಧುರೀಣತ್ವ ವಹಿಸಿರುವ ಈ ನಿಯೋಗವು ಚೀಣೀಯರೊಡನೆ ಕಳೆದ ಎರಡು ಸಾವಿರ ವರ್ಷಗಳಿಂದಲೂ ಭಾರತಕ್ಕೆ ಇದ್ದ ನಿಕಟ ಸಂಬಂಧವನ್ನು ಬಲಪಡಿಸುವುದರಲ್ಲಿ ಯಶಸ್ಸುಗಳಿಸುತ್ತಿದೆ. ವಿವಿಧ ಸಂಘ ಸಂಸ್ಥೆಗಳೂ, ವಿಶ್ವವಿದ್ಯಾಲಯಗಳೂ ನಿಯೋಗವನ್ನು ಗೌರವದಿಂದ ಕಂಡಿವೆ. ಮತ್ತು ನಿಯೋಗವಾದರೂ ಎರಡೂ ರಾಷ್ಟ್ರಗಳ ನಡುವೆ ಮೈತ್ರಿಯನ್ನೂ ಪರಸ್ಪರ ತಿಳುವಳಿಕೆಯನ್ನೂ ಹೆಚ್ಚಿಸುವುದರ ಮೂಲಕ ಎಚ್ಚೆತ್ತ ಏಶಿಯಾದ ಕಲ್ಪನೆಗೆ ಪುಟವೀಯುತ್ತಿದೆ.

೦೦ ೦೦

ಭಾರತ ಸರಕಾರವು ಒಂದು ಪ್ರಕಟಣೆಯ ಮೂಲಕ ಪಾರ್ಲಿಮೆಂಟು ಕಳೆದವರ್ಷ ಸ್ವೀಕರಿಸಿದ ಉದ್ಯಮಗಳ ಅಭಿವೃದ್ಧಿ ಮತ್ತು ನಿಯಮನಗಳ ಕಾಯಿದೆಯನ್ನು ಈಗ ಜಾರಿಗೆ ತಂದಿದೆ. ಇದರ ಪ್ರಕಾರ ಸರಕಾರವು ಒಂದು ಕೇಂದ್ರ ಸಲಹಾ ಮಂಡಳವನ್ನು ನೇಮಿಸಿದೆ. ಜೊತೆಗೇ ಕೆಲವು ಉದ್ಯಮಗಳ ಬಗ್ಗೆ ಅಭಿವೃದ್ಧಿ ಮಂಡಳಗಳನ್ನು ರಚಿಸುವ ವಿಚಾರವಿದೆ. ಮಂಡಳಗಳಲ್ಲಿ ಔದ್ಯೋಗಿಕ ಉದ್ಯಮಗಳ ಒಡೆಯರು, ದುಡಿಯುವ ಕೆಲಸಗಾರರು, ಗ್ರಾಹಕ ವರ್ಗದವರು ಮತ್ತು ಇತರ ಹಿತಸಂಬಂಧಗಳ ಪ್ರತಿನಿಧಿಗಳು ಇರುವರು. ಇವರು ಬೇಗನೇ ಸಭೆ ಸೇರುವರೆಂದು ಗೊತ್ತಾಗಿದೆ. ಆಯಾಯ ಉದ್ಯಮಗಳಲ್ಲಿ ಉತ್ಪಾದನೆಯನ್ನು ಹೆಚ್ಚಿಸುವುದು, ಸಂಶೋಧನ ನಡೆಸುವುದು, ತಾಂತ್ರಿಕ ವಿಷಯದ ಜ್ಞಾನವನ್ನು ಪರಿಮಾರ್ಜನಗೊಳಿಸುವುದು, ಬೇರೆ ಬೇರೆ ಅಂಗ ಸಂಸ್ಥೆಗಳನ್ನು ಕಲೆಹಾಕುವುದು—ಅಭಿವೃದ್ಧಿ ಮಂಡಳಗಳ ಕಾರ್ಯಕ್ಷೇತ್ರವಾಗಿದೆ. ಮುಖ್ಯವಾಗಿ ಹುಟ್ಟುವಳಿಯ ಮಿತಿಯನ್ನು ಗೊತ್ತುಪಡಿಸುವುದೂ ಉತ್ಪಾದಿತ ಸರಕುಗಳಿಗೆ ಯೋಗ್ಯ ಮಾರುಕಟ್ಟೆ ದೊರೆಯುವಂತೆ ನೋಡಿಕೊಳ್ಳುವುದೂ ಸದ್ಯಕ್ಕೆ ಸಲಹಾ ಮಂಡಳದ ಕರ್ತವ್ಯವಾಗಿದೆ. ಒಟ್ಟಿಗೆ 22 ಉದ್ಯಮಗಳಿಗೆ ಈ ಕಾಯಿದೆ ಅನ್ವಯಿಸುವುದಾದರೂ ಅಭಿವೃದ್ಧಿ ಮಂಡಳಗಳನ್ನು ಕಾಗದ, ಗೊಬ್ಬರ, ವನಸ್ಪತಿ ಎಣ್ಣೆ, ಚರ್ಮದ ಕೈಗಾರಿಕೆ ಮತ್ತು ಮೂಲ ರಸಾಯನಗಳ ಬಗ್ಗೆ ಮಾತ್ರ ಈಗ ನೇಮಿಸಲಾಗುವುದು.

೦೦ ೦೦

ಜನಪದ ಅಭಿವೃದ್ಧಿಯೋಜನೆಗಳನ್ನು ಕಾರ್ಯಗತ ಮಾಡುವಲ್ಲಿ ನೆರವು ನೀಡುವ ಕಮಿಶನರು ಸಭೆ ಸೇರಿದಾಗ ಶ್ರೀ ನೆಹರೂ ಹಲವು ಬೋಧಪ್ರದ ಮಾತುಗಳನ್ನು ಆಡಿದರು. ಸರಕಾರೀ ಅಧಿಕಾರಿಗಳಿಗೂ ಜನಸಾಮಾನ್ಯರಿಗೂ ನಡುವೆ ಕೃತಕ ರೀತಿಯಿಂದ ನಿರ್ಮಿತವಾಗಿರುವ ಕಂದಕವನ್ನು ಮುಚ್ಚಬೇಕಾದುದು ಆದ್ಯ ಕರ್ತವ್ಯ ಎಂದವರು ಸಮಯೋಚಿತವಾಗಿ ಎಚ್ಚರಿಸಿದರು. ಜನರಿಂದ ಸರಕಾರವು ತನ್ನ ವಿವಿಧ ಉದ್ಯಮಗಳಲ್ಲಿ ಸಂಪೂರ್ಣ ಸಹಕಾರವನ್ನು ಕೇಳುವುದು ನ್ಯಾಯ. ಆದರೆ ಜನರು ಸ್ವೇಚ್ಛೆಯಿಂದ ಇದಕ್ಕೆ ಮುಂದಾಗುವಂತೆ ತಿಳಿಯಾದ, ನಿರ್ಮಲವಾದ ವಾತಾವರಣವನ್ನು ನಿರ್ಮಿಸುವುದು ಅಧಿಕಾರಿಗಳ ಕೆಲಸವಾಗಿದೆ. ಜನರೊಡನೆ ಸಮರಸವಾಗಿ ಬೆರೆತು ಅವರ ಸುಖ ಕಷ್ಟಗಳಲ್ಲಿ ಪಾಲುಗೊಳ್ಳಲು ಹಿಂಜರಿಯುವ ಅಧಿಕಾರಿಗಳು ರಾಷ್ಟ್ರದ ಪುನರ್ನಿರ್ಮಾಣ ಕಾರ್ಯಕ್ಕೆ ಹೇಳಿಸಿದವರಲ್ಲ—ದೊಡ್ಡ ದೊಡ್ಡ ಕಚೇರಿಗಳಲ್ಲಿ ಆರಾಮದಿಂದ ಕುಳಿತುಕೊಂಡು ಆಜ್ಞೆಗಳನ್ನು ಹೊರಡಿಸುವುದಷ್ಟೇ ನಿಮ್ಮ ಕೆಲಸವೆಂದು ಭಾವಿಸಿದರೆ ನೀವು ಈ ಕೆಲಸಕ್ಕೆ ತಕ್ಕವರಲ್ಲ. ನೀವು ಬೇರೆ ಎಲ್ಲಿಯಾದರೂ ಕೆಲಸ ಹುಡುಕಿಕೊಳ್ಳಿರಿ. ಕಮಿಶನರೇ ಇರಲಿ, ಆಡಳಿತ ನಡೆಸುವವರೇ ಇರಲಿ-ಪ್ರತಿಯೊಬ್ಬನೂ ಗುದ್ದಲಿ ಹಿಡಿದು ಅಗೆಯಲೇ ಬೇಕು ಎಂದು ನೆಹರೂ ಆವೇಶದಿಂದ ನುಡಿದರು

೦೦ ೦೦

ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೆ ನೀಡುತ್ತಿದ್ದ ಆಹಾರ ಸಹಾಯಧನವನ್ನು ನಿಲ್ಲಿಸಿದುದರಿಂದ ಅನಿವಾರ್ಯವಾಗಿ ಆಹಾರ ಧಾನ್ಯಗಳ ಬೆಲೆ ಏರಿಕೊಂಡಿದೆ. ಇದರಿಂದ ಮಧ್ಯಮ ವರ್ಗದ ಜನರಿಗೆ ವಿಶೇಷ ಪೆಟ್ಟು ತಗಲುವುದು—[illegible] ಗಿರಣಿಗಳು ಮುಚ್ಚಿರುವುದರಿಂದ ಮುಂಬಯಿಯಂಥ ಔದ್ಯಮಿಕ ಕೇಂದ್ರಗಳಲ್ಲಿ ನಿರುದ್ಯೋಗಿಗಳಾಗಿರುವ ಕೂಲಿಕಾರ ಕುಟುಂಬಗಳಿಗೆ ಜೀವನ ಯಾಪನ ಮಾಡುವುದು ಬಹಳ ಕಷ್ಟಕ್ಕಿಟ್ಟುಕೊಂಡಿದೆ. ಇದನ್ನು ಸರಕಾರಕ್ಕೆ ಮನವರಿಕೆ ಮಾಡಿಕೊಟ್ಟು ಆಹಾರ ಬೆಲೆಯನ್ನು ತಗ್ಗಿಸಲು ದೇಶದಲ್ಲಿ ಸತ್ಯಾಗ್ರಹ ಆಂದೋಲನವು ನಡೆಯತೊಡಗಿದೆ ಮುಖ್ಯವಾಗಿ ಸೋಶಲಿಸ್ಟರು ಸತ್ಯಾಗ್ರಹವನ್ನು ಬಲವಾಗಿ ಸಂಘಟಿಸುತ್ತಿದ್ದಾರೆ. ಹೈದರಾಬಾದು ರಾಜ್ಯದಲ್ಲಿ ಕೂಡ ಅವರ ಚಟುವಟಿಕೆಗಳಿಗೆ ಆಸ್ಪದ ದೊರೆಯುವ ಸೂಚನೆಗಳಿವೆ. ತಿರುಕೊಚ್ಚಿಯ ವಿಶೇಷ ಪರಿಸ್ಥಿತಿಯನ್ನು ಅನುಲಕ್ಷಿಸಿ ಕೇಂದ್ರ ಸರಕಾರವು ಅಲ್ಲಿಗೆ ಸಹಾಯ ಕೊಟ್ಟಂತೆ ತಮ್ಮ ರಾಜ್ಯಕ್ಕೂ ನೆರವಾಗಬೇಕೆಂದು ಮೈಸೂರು ಸರಕಾರ ಕೇಳಿಕೊಂಡಿದೆ. ಈಗ ತಾನೆ ಕೆಂಜೋಳದ ಬೆಲೆಯನ್ನು ಮಣಕ್ಕೆ ಎರಡು ರೂಪಾಯಿಯಷ್ಟು ತಗ್ಗಿಸಲಾಗಿದೆಯಾದರೂ ಇದರಿಂದ ಬಡಜನರ ಕಷ್ಟ ತೊಲಗಿಲ್ಲ. ಮೊದಲು ವಾರಕ್ಕೆ ಒಂದು ರೂಪಾಯಿ ಬೇಕಿರುವಲ್ಲಿ ಈಗ ಒಂದು ಕಾಲು ರೂಪಾಯಿ ಸಹ ಸಾಲುವುದಿಲ್ಲ. ಕೇಂದ್ರ ಸರಕಾರವೇ ಈ ಸಮಸ್ಯೆಗೆ ಹೆಗಲುಕೊಟ್ಟು, ಜನರ ವಿಪತ್ತನ್ನು ಒಗೆಹರಿಸಲು ಹಿಂದಿನಂತೆ ಮುಂದೆಯೂ ಸಹಾಯಧನ ನೀಡುತ್ತಿರಬೇಕೆಂದು ಜನರು ಒಕ್ಕೊರಲಿನಿಂದ ಮನವಿ ಮಾಡಿಕೊಳ್ಳುತ್ತಿರುವರು.

"ಆದರೆ ನೀನು ಏತಕ್ಕಾಗಿ ಬ್ರೂಕ್ ಬಾಂಡ್ ಚಹವನ್ನೇ ಒತ್ತಿಕೇಳುವೆ, ಎಂಬುದನ್ನು ನನಗೆ ತಿಳಿಸು"

"ನಾನು ಅದನ್ನು ಏತಕ್ಕಾಗಿ ಕೊಂಡುಕೊಳ್ಳುವನೆಂದರೆ ಅದು ನನ್ನ ಹಣಕ್ಕೆ ಉತ್ತಮ ಪ್ರತಿಫಲವನ್ನು ಕೊಡುತ್ತದೆ ಒಂದು 2 ಔನ್ಸ್ ಪೊಟ್ಟಣದಲ್ಲಿ 30 ಕಪ್ಪುಗಳಿಗಾಗುವಷ್ಟು ಚಹವನ್ನು ಮಾಡಬಹುದು. ಇವಲ್ಲದೆ ಬ್ರೂಕ್ ಬಾಂಡ್ ಚಹದ ಶುದ್ಧತೆ ಮತ್ತು ಗುಣದ ಬಗ್ಗೆ ನನಗೆ ಯಾವಾಗಲೂ ನಂಬಿಕೆ ಇದೆ."

ಬ್ರೂಕ್ ಬಾಂಡ್ ಚಹಾ

THE CANARA BANKING CORPORATION LIMITED.
ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್, ಲಿಮಿಟೆಡ್
ಸ್ಥಾಪನೆ: 1906. : : ಪ್ರಧಾನ ಕಾರ್ಯಾಲಯ: ಉಡುಪಿ, (ದ.ಕ.)
ವಿಶೇಷ ಸವಲತ್ತುಗಳಿದ್ದು, ಸಾಲಿಯಾನ್ ಶೇಕಡಾ 4 ರಂತೆ ಬಡ್ಡಿ ಗಳಿಸುವ ನಮ್ಮ
"ಪಂಚವಾರ್ಷಿಕ ಸುವರ್ಣ ಠೇವಣಾತಿಗಳ"
ಮೇಲೆ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.
ವಿಶೇಷ ಮಾಹಿತಿಗೆ, ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ
ವಿ ಆರ್. ಕಾಮತ್, ಬಿ ಎ; ಎಲ್ ಎಲ್, ಬಿ;
ಜನರಲ್ ಮೆನೇಜರ್.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೧೫-೫-'೫೨

ಖಂಡತುಂಡ ಭಾಷಣ

ಕಮ್ಯೂನಿಸಂ ತತ್ವಗಳು ಯಾರಿಗೆ ಎಷ್ಟೇ ಚೆನ್ನಾಗಿರಲಿ—ಭಾರತದ ಮಟ್ಟಿಗೆ ಅದು ಅವ್ಯವಹಾರ್ಯ. ಒಂದು ರಾಷ್ಟ್ರಕ್ಕೆ ಅಚ್ಚುಕಟ್ಟಾಗಿ ಸೇರುವ ಧೋರಣೆ ಇನ್ನೊಂದು ರಾಷ್ಟ್ರದ ಸ್ಥಿತಿಗತಿಗಳಿಗೆ ಹೊಂದಿಕೊಳ್ಳಲಿಕ್ಕಿಲ್ಲ. ಭಾರತದಲ್ಲಿ ಕಮ್ಯೂನಿಸ್ಟರಿಗೆ ಸ್ಥಾನಮಾನವಿಲ್ಲ ಎನ್ನುವುದಕ್ಕೆ ದರೂ ಇಲ್ಲಿಯ ವಾತಾವರಣದ ಭಿನ್ನತೆಯೇ ಕಾರಣ. ವಿಶ್ವದ ಉಳಿದ ರಾಷ್ಟ್ರಗಳು ರಕ್ತದ ಹೊಳೆ ಹರಿಸಿ, ಸ್ವಾತಂತ್ರ್ಯ ಸಂಪಾದಿಸಿದಾಗ, ಭಾರತದ ಹೋರಾಟವು ಸಂಪೂರ್ಣ ಅಹಿಂಸಾತ್ಮಕವಾಗಿತ್ತು — ಮತ್ತು ಇದೇ ಭಾರತೀಯ ನೈತಿಕ ಮೇಲ್ಮೆಯ ದ್ಯೋತಕ. ಈ ಆದರ್ಶ ಕ್ರಮವನ್ನು ಕಾಯ್ದುಕೊಂಡು ಹೋಗುವ ರೀತಿಯಲ್ಲಿ ರಾಷ್ಟ್ರ ಪುನರ್ನಿರ್ಮಾಣದ ಕಾರ್ಯ ಸಹ ಜರಗುವುದು ಉಚಿತ. ಎಂತಲೇ— ಭಾರತದ ಮಟ್ಟಿಗೆ ಕಮ್ಯೂನಿಸಂ ತೀರ ಗಂಡಾಂತರಪ್ರಾಯವೆಂದು ನಮ್ಮ ಧುರೀಣರು ಪದೇ ಪದೇ ಎಚ್ಚರಿಕೆಯ ಮಾತುಗಳನ್ನು ಉಪದೇಶಿಸುತ್ತಾ ಬಂದಿರುವರು. ಆದರೂ ಅಜ್ಞಾನಿ ಜನತೆಯ ಪಾಲಿಗೆ ಅತ್ತ ರಶಿಯಾ— ಇತ್ತ ಚೀನಾಗಳಲ್ಲಿ ಕಮ್ಯೂನಿಸ್ಟರು ಭೂಮಿಗೆ ಸ್ವರ್ಗ ತಂದಿರುವರೆಂಬ ಕಲ್ಪನೆ ತುಂಬ ಸವಿ ಎನಿಸಿದೆ. ಹೀಗಾಗಿ, ಕಮ್ಯೂನಿಸ್ಟರು ಆಡುವ ಪೊಳ್ಳು ಮಾತಿಗೆ ಅವರು ಸುಲಭವಾಗಿ ಮರುಳುಗೊಳ್ಳುವರು. ಜನರ ಬಡತನವನ್ನು ಕಳೆದು, ಅವರ ಹಕ್ಕುಬಾಧ್ಯತೆಗಳನ್ನು ಉಳಿಸಿಕೊಂಡು, ಶಿಕ್ಷಣ ಸಂಪತ್ತನ್ನು ವೈಯಕ್ತಿಕ ಸುಖಾನುಕೂಲತೆಗಳನ್ನೂ ಒದಗಿಸಿ ಕೊಡುವೆವು — ಎಂದು ಮುಂತಾಗಿ ಕಮ್ಯೂನಿಸ್ಟರು ಸಾರುತ್ತಿರುವುದು ಬಹಳ ಆಕರ್ಷಣೀಯ ಪ್ರಚಾರವಾಗಿದೆ. "ದುಡಿಮೆಯೇ ದೇವರು" ಎಂಬ ಸತ್ಯವನ್ನು ಮೂದಲಿಸಿ, ಸರಕಾರವೇ ರಾಜ್ಯದಲ್ಲಿ "ಜೇನು ಸುರಿವ ಹಾಲು ಹರಿವ" ಪರಿಸ್ಥಿತಿ ಉಂಟು ಮಾಡಬೇಕೆಂದೂ ಅದಕ್ಕೆ ತಪ್ಪಿದ ಹೊಣೆ ಸರಕಾರದ ಮೇಲಿದೆ ಎಂದೂ ಅನ್ಯಾಯದಿಂದ ದೂರುತ್ತಿರುವುದನ್ನು ಸಹಿಸುತ್ತ ಕೂಡುವುದು ಅಸಾಧ್ಯ. ಈ ಕಾರಣದಿಂದ ಮದ್ರಾಸು ಶಾಸನ ಸಭೆಯಲ್ಲಿ ಕಳೆದ ಶುಕ್ರವಾರ ದಿನ ಶ್ರೀ ರಾಜಗೋಪಾಲಾಚಾರ್ಯರು ಮಾಡಿದ ಖಂಡತುಂಡ ಭಾಷಣವನ್ನು ನಾವು ಹೃತ್ಪೂರ್ವಕ ಸ್ವಾಗತಿಸುವುದು ಸಮಂಜಸ. ಸ್ಪಷ್ಟ ಮಾತುಗಳಲ್ಲಿ, ಬಿಚ್ಚು ಮನಸ್ಸಿನಿಂದ ಅವರು— "ಕಮ್ಯೂನಿಸ್ಟರೇ ನನ್ನ ನಿಜವಾದ ವೈರಿಗಳು. ಅವರ ಉಪಟಳದಿಂದ ರಾಜ್ಯವನ್ನು ಉಳಿಸುವುದಕ್ಕಾಗಿಯೇ ನಾನಿಲ್ಲಿ ಇದ್ದೇನೆ. ಆ ಮೂಲಾಗ್ರವಾಗಿ ನನ್ನ ಧೋರಣೆ ಇದೇ ಆಗಿದೆ" ಎಂದು ಸಾರಿರುವುದು ಸಮಯೋಚಿತವಾಗಿದೆ. ಶಾಸನ ಸಭೆಯಲ್ಲಿ ಕಮ್ಯೂನಿಸ್ಟರ "ಹಸಿಬಿಸಿ" ವಿರೋಧವನ್ನು ಎಳ್ಳಷ್ಟು ಲೆಕ್ಕಿಸದೆ ನಡೆಯುವೆನೆಂದು ರಾಜಾಜಿ ದಿಟ್ಟತನದಿಂದ ನುಡಿದಿರುವುದನ್ನು ಕಂಡರೆ, ಅವರ ಅಂತಃಶಕ್ತಿ ಮತ್ತು ಅಪ್ರತಿಮ ಸಾಮರ್ಥ್ಯದಲ್ಲಿ ನಮ್ಮೆಲ್ಲರ ಶ್ರದ್ಧೆ ಉಕ್ಕೇರುತ್ತದೆ. ಪ್ರಜಾಪ್ರಭುತ್ವ ತತ್ವಕ್ಕೆ ಸಹಜವೆನಿಸಿದ ರೀತಿಯಲ್ಲಿ ಪರಸ್ಪರ ವಿಚಾರ ವಿನಿಮಯದಿಂದಲೂ ಜನರ ಸಂಪೂರ್ಣ ಸಹಕಾರದಿಂದಲೂ ಅಹಿಂಸೆಯಿಂದಲೂ ಘಟನಾತ್ಮಕ ಮಾರ್ಗಗಳಿಂದಲೂ ಪ್ರಜಾ ಕಲ್ಯಾಣವನ್ನು ಸಾಧಿಸುವುದು ಸರಕಾರದ ಹಂಬಲವಾದರೆ—ಸರ್ವಾಧಿಕಾರತ್ವದ ಒತ್ತಾಯದಿಂದ, ಅನಾವಶ್ಯಕ ವರ್ಗಕಲಹದಿಂದ, ಹಿಂಸೆಯಿಂದ, ಜನರ ಉದ್ವೇಗಕ್ಕೆ ಕಾರಣವಾಗುವಂತೆ ನಡೆದುಕೊಂಡು ದೇಶದಲ್ಲಿ ಬಿಕ್ಕಟ್ಟಿನ ಪ್ರಸಂಗವನ್ನು ತಂದೊಡ್ಡಲು ಕಮ್ಯೂನಿಸ್ಟರು ನೋಡುತ್ತಿರುವರು. ರಾಜ್ಯದ ಬಲವಾದ ಸಂಘಟನೆ ಎನಿಸಿದ ಕಾಂಗ್ರೆಸಿನಲ್ಲಿ ಚುನಾವಣೆ ಪ್ರಕರಣಗಳಿಂದ ಉಂಟಾದ ಒಡಕು ಕಮ್ಯೂನಿಸ್ಟರ ವಿಜಯಕ್ಕೆ ಕೆಲವಟ್ಟಿನ ಸಹಾಯವನ್ನು ಮಾಡಿತೆನ್ನುವುದು ನಿಜ. ಕಾಂಗ್ರೆಸು ಸದಸ್ಯರ ನಿಷ್ಕ್ರಿಯತೆಯನ್ನು ಇದಕ್ಕೆ ದೂರಬೇಕು. ಆದರೂ ಈಗ ರಾಜ್ಯ ಹಿತೈಷಿಗಳೆಲ್ಲ ಮತ್ತೆ ಒಗ್ಗಟ್ಟಾಗಿ ಸೇರಿ, ವಿಘಾತುಕ ಶಕ್ತಿಗಳ ಆಟ ನಡೆಯುವುದನ್ನು ತಡೆಯಲು ಮನಃಪೂರ್ವಕ ಪ್ರಯತ್ನಿಸುವುದವಶ್ಯ. ಅರ್ಥ ಮಂತ್ರಿ ಶ್ರೀ ಸುಬ್ರಹ್ಮಣ್ಯಂ ಇದೇ ಸಂಗತಿಯನ್ನು ಒತ್ತಿ ಹೇಳಿರುವರು—ಕಮ್ಯೂನಿಸಂ ತತ್ವಗಳೊಡನೆ ನಮ್ಮ ಯುದ್ಧವಿರುವುದು—ಹೊರತು, ಕಮ್ಯೂನಿಸ್ಟ ಪಕ್ಷದ ಸದಸ್ಯರ ಮೇಲೆ ನಮಗೇನೂ ದ್ವೇಷವಿಲ್ಲ. ಯಾವ ಕುಂದು ಕೊರತೆಗಳ ಬಲದ ಮೇಲೆ ಕಮ್ಯೂನಿಸಂ ಬೆಳೆದು ಬಂದಿರುವುದೋ—ಅದನ್ನು ಸದ್ಯ ಅಧಿಕಾರದಲ್ಲಿರುವ ಸರಕಾರವೇ ನೀಗಿಸಲು ನೋಡುವುದು ತನ್ಮೂಲಕ ಕಮ್ಯೂನಿಸ್ಟರ ಬಲೆಗೆ ಬೀಳುವ ಜನರನ್ನು ಗಂಡಾಂತರದಿಂದ ಪಾರು ಮಾಡಲು ನೋಡುವುದು ಜ್ಞಾನ ಸಂಪತ್ತನ್ನು ಹೆಚ್ಚಿಸಿ, ದಾರಿದ್ರ್ಯವನ್ನು ಕಳೆದು, ಸೌಕರ್ಯಗಳನ್ನು ಕಲ್ಪಿಸಿ, ಜನರ ಜೀವನ ಮಟ್ಟವನ್ನು ಸುಧಾರಿಸಿ, ರಾಜ್ಯದಲ್ಲಿ ಶಾಂತಿ-ಸುಭಿಕ್ಷೆಗಳನ್ನು ಗಾಂಧೀ ತತ್ವದಂತೆ ನೆಲೆಗೊಳಿಸಿದರೆ, ಅದು ನಮಗೆ ಕ್ರೋಧ-ದ್ವೇಷ ಮಾತ್ಸರ್ಯಗಳು ತುಂಬಿದ ಹೃದಯವನ್ನೂ ಪ್ರೇಮ ಮತ್ತು ಆದರಗಳಿಂದ ಪರಿವರ್ತಿ[illegible] ಶೋಭಿಸಿತ ನಮಗೆ ಈ ಕಾರ್ಯದಲ್ಲಿ ಮಾರ್ಗತೋರುವ ಕೈಕಂಬ. ನಿಷ್ಠುರ ಸತ್ಯವನ್ನು ಬಚ್ಚಿಡುವುದು ನ್ಯಾಯವಲ್ಲ ಎಂಬುದಕ್ಕಾಗಿಯೇ ರಾಜಾಜಿ ಹೀಗೆ ಎಚ್ಚರಿಗೆ ಕೊಟ್ಟರು. ರಾಜಾಜಿಯ ಮುಂಧೋರಣೆ ಸರಕಾರದ ಕಾರ್ಯಕಲಾಪಗಳಿಗೆ ವಿಘ್ನವೆಸಗುವ ಎಡಪಕ್ಷಗಳಿಗೆ ತುಂಬ ದುಸ್ತರವೆಂದು ತೋರಬಹುದು—ಆದರೆ, ಜನಸಾಮಾನ್ಯಕ್ಕೆ ಸರಕಾರದ ಕಾರ್ಯಕ್ಷಮತೆಯ ಕುರಿತು ಹೆಚ್ಚಿನ ಆಶೆ ಅಂಕುರಿಸಲು ಇದರಿಂದ ಅನುಕೂಲ ವಾತಾವರಣ ನಿರ್ಮಾಣಗೊಂಡಿದೆ.

ದಿಲ್ಲಿಯಲ್ಲಿ ವೈಭವೋತ್ಸವ

ರಾಷ್ಟ್ರಾಧ್ಯಕ್ಷರ ಅಧಿಕಾರ ಸ್ವೀಕಾರ

ಸಮಗ್ರ ಭಾರತದಲ್ಲಿ ವಯಸ್ಕರ ಮತದಾನ ಪದ್ಧತಿಯಿಂದ ಮಹಾ ಚುನಾವಣೆಗಳು ನಡೆದಬಳಿಕ ಇದೀಗ ಪ್ರಥಮಬಾರಿ ಹೊಸದಿಲ್ಲಿಯಲ್ಲಿ ರಾಷ್ಟ್ರಾಧ್ಯಕ್ಷ ಸ್ಥಾನವನ್ನು ಡಾ| ರಾಜೇಂದ್ರ ಪ್ರಸಾದರು ಸ್ವೀಕರಿಸಿದರು. ಜೊತೆಗೆ, ಶ್ರೀ ನೆಹರೂ ಪ್ರಧಾನಿತ್ವದಲ್ಲಿ ನೂತನ ಮಂತ್ರಿಮಂಡಲ ಸಹ ಅಸ್ತಿತ್ವಕ್ಕೆ ಬಂದಿರುವುದು. ಸಂಗಡವೇ— ಪಾರ್ಲಿಮೆಂಟಿನ ಎರಡೂ ಮನೆಗಳ ಸುಮಾರು ೭೦೦ ಸದಸ್ಯರು ರಾಜ್ಯ ಘಟನೆಗೆ ನಿಷ್ಠರಾಗಿ ವರ್ತಿಸುವ ಪ್ರಮಾಣ ವಚನವನ್ನು ಸ್ವೀಕರಿಸಿದರು. ಹೀಗೆ ಭಾರತದಲ್ಲಿ ನವ ಮನ್ವಂತರವು ತೊಡಗಿತೆನ್ನಬಹುದು.

೧೩ನೇ ಮೇ, ೧೯೫೨

ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಅತ್ಯಧಿಕ ಬಹುಮತದಿಂದ ನಿರ್ವಾಚನಗೊಂಡಿದ್ದ ರಾಜೇಂದ್ರ ಪ್ರಸಾದರು ಈ ದಿನ ಬಹಳ ಮುಂಜಾನೆ ಎದ್ದರು. ಗಾಂಧೀಯ ನಿಷ್ಠಾವಂತ ಅನುಯಾಯಿಗಳೆನಿಸಿದ ಪ್ರಸಾದರು ಪ್ರಥಮತಃ ರಾಜಘಾಟಿಗೆ ಹೋಗಿ, ಗಾಂಧೀಯ ಆತ್ಮಕ್ಕೆ ಕೈ ಮುಗಿದು ಶ್ರದ್ಧಾಂಜಲಿ ಅರ್ಪಿಸಿದರು. ಬಳಿಕ ರಾಷ್ಟ್ರಪತಿ ಭವನದಲ್ಲಿ ಸ್ವಲ್ಪ ಸಮಯವನ್ನು ವೇದ ಪಠನ ಹಾಗು ನೂಲುವುದರಲ್ಲಿ ಕಳೆದರು. ಹಾಗೆಯೇ ಹೊಸದಿಲ್ಲಿಯ ಲಕ್ಷ್ಮೀನಾರಾಯಣ ಮಂದಿರಕ್ಕೆ ತೆರಳಿ, ದೇವರಿಗೆ ಪುಷ್ಪ ಗುಚ್ಛಗಳನ್ನು ಸಮರ್ಪಿಸಿ ಬಂದರು. ಮುಂದೆ, ಗಾಂಧೀ ವಿಚಾರದೋಹಕವಾದ ಪುಸ್ತಕವನ್ನು ಶ್ರದ್ಧೆಯಿಂದ ಓದಿಕೊಂಡರು.

ಇದೆಲ್ಲ ಮುಗಿದ ಬಳಿಕ ಸಕಲ ವೈಭವೋಪೇತವಾದ ಮೆರವಣಿಗೆಯಲ್ಲಿ ರಾಷ್ಟ್ರಾಧ್ಯಕ್ಷರು ಪಾರ್ಲಿಮೆಂಟು ಭವನವನ್ನು ಪ್ರವೇಶಿಸಲು, ಪ್ರಧಾನಿ ಜವಾಹರಲಾಲ ನೆಹರೂ ಅವರನ್ನು ಆದರದಿಂದ ಸ್ವಾಗತಿಸಿದರು. ಸೈನ್ಯದ ವಾದ್ಯಗೋಷ್ಠಿಯು ರಾಷ್ಟ್ರಗೀತೆಯನ್ನು ಸುಂದರವಾಗಿ ನುಡಿಸಿತು. ವರಿಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ಶ್ರೀ ಪತಂಜಲೀ ಶಾಸ್ತ್ರಿಯವರು ಅಧಿಕಾರ ವಚನವನ್ನು ಉಪದೇಶಿಸಲು, ರಾಜೇಂದ್ರ ಪ್ರಸಾದರು ಹಿಂದೀಯಲ್ಲಿ ಪ್ರತಿಜ್ಞೆಯನ್ನು ಸ್ವೀಕರಿಸಿದರು. ಒಡನೆಯೇ ಗೌರವ ಸೂಚನಾರ್ಥವಾಗಿ ೩೧ ತೋಪುಗಳು ಘರ್ಜಿಸಿದುವು ಮುಂದೆ ರಾಷ್ಟ್ರಾಧ್ಯಕ್ಷರು ಉಪರಾಷ್ಟ್ರಾಧ್ಯಕ್ಷರೆಂದು ಅವಿರೋಧ ಆಯ್ಕೆ ಹೊಂದಿದ ಶ್ರೀ ರಾಧಾಕೃಷ್ಣನ್ನರಿಂದ ಪ್ರಮಾಣ ವಚನ ಮಾಡಿಸಿದರು.

ನಮ್ರ ಭಾಷಣ

ರಾಷ್ಟ್ರಾಧ್ಯಕ್ಷರು ಈ ಸಂದರ್ಭದಲ್ಲಿ ಮಾಡಿದ ಚಿಕ್ಕದೊಂದು ಭಾಷಣದಲ್ಲಿ— ಪ್ರಜಾ ಪ್ರಭುತ್ವದ ತತ್ವಗಳಿಗನುಗುಣವಾಗಿ ಸಮಗ್ರ ದೇಶದ ಆಡಳಿತವು ರೂಪುಗೊಂಡಿರುವುದಕ್ಕೆ ಹರ್ಷವನ್ನು ವ್ಯಕ್ತಗೊಳಿಸಿದರು. ತಾನು ಒಬ್ಬ ವ್ಯಕ್ತಿಯಾಗಿ, ಒಬ್ಬ ಸಾಮಾನ್ಯ ಪ್ರಜೆಯಾಗಿ ಎಲ್ಲಕ್ಕಿಂತಲೂ ಹೆಚ್ಚು ಸ್ವಾತಂತ್ರ್ಯಾಂದೋಲನದಲ್ಲಿ ಪ್ರಾಮಾಣಿಕತೆಯಿಂದ ದುಡಿದೊಬ್ಬ ಸೇವಕನೆಂಬ ಭಾವದಿಂದ ಜನರು ತನ್ನಲ್ಲಿ ತೋರ್ಪಡಿಸಿದ ವಿಶ್ವಾಸವನ್ನು ಕಾಪಾಡಿಕೊಂಡು ಬಂದು ರಾಷ್ಟ್ರಾಧ್ಯಕ್ಷ ಸ್ಥಾನದ ಕರ್ತವ್ಯ ನಿರ್ವಹಣೆ ಮಾಡಲು ಬಯಸುವೆನೆಂದರು. ದಾರಿದ್ರ್ಯ ನಿರ್ಮೂಲನಕ್ಕೆ ಅಭಿವೃದ್ಧಿ ಯೋಜನೆಗಳ ಸಾಫಲ್ಯ ಪೋಷಕವಿದ್ದರೆ, ಸ್ವಾತಂತ್ರ್ಯವು ಇವೆಲ್ಲದಕ್ಕೂ ಮೂಲ ಭೂತ ಆವಶ್ಯಕತೆಯೆನಿಸಿದೆ. ಆದುದರಿಂದ ರಾಷ್ಟ್ರದ ಸ್ವಾತಂತ್ರ್ಯವನ್ನು ಐಕ್ಯವನ್ನೂ ಸಾಧ್ಯವಿದ್ದಷ್ಟು ರೀತಿಯಲ್ಲಿ ರಕ್ಷಿಸಿಕೊಳ್ಳುವುದು ತನ್ನ ಉತ್ತರದಾಯಿತ್ವ ಎಂದವರು ಒಪ್ಪಿಕೊಂಡರು. ವಿವಿಧ ಧ್ಯೇಯ ಧೋರಣೆಗಳ ವಿಶಾಲ ಜನಸಮುದಾಯದ ನಡುವೆ, ಪಕ್ಷಪಾತಕ್ಕೆ ಎಡೆಗೊಡದೆ, ಸರ್ವರನ್ನು ಸಮಾನ ದೃಷ್ಟಿಯಿಂದ ನೋಡಿ, ನ್ಯಾಯವನ್ನೂ ಸತ್ಯವನ್ನೂ ಎತ್ತಿ ಹಿಡಿಯುವ ತಮ್ಮ ಕಾಂಕ್ಷೆಗೆ ದೈವಿಕ ಬಲ ಒದಗಿ ಬರಲಿ—ಎಂದವರು ಹೃತ್ಪೂರ್ವಕ ಪ್ರಾರ್ಥಿಸಿದರು.

ಭಾಷಣಾನಂತರ ರಾಷ್ಟ್ರಾಧ್ಯಕ್ಷರು ರಾಷ್ಟ್ರಪತಿ ಭವನಕ್ಕೆ ಮರಳಲು ಅಲ್ಲಿ ಭೂ, ನೌಕಾ ಮತ್ತು ವಿಮಾನ ಪಡೆಗಳು ಗೌರವರಕ್ಷೆ ನೀಡಿದುವು. ಈ ಉತ್ಸವದಲ್ಲಿ ಪಾರ್ಲಿಮೆಂಟಿನ ಎರಡೂ ಮನೆಗಳ ಸದಸ್ಯರಲ್ಲದೆ ಉಚ್ಚ ಸೇನಾಧಿಕಾರಿಗಳು ರಾಯಭಾರಿ ವರ್ಗದವರು ಮತ್ತು ಅತಿಥಿಗಳು ಭಾಗವಹಿಸಿದರು.

ನಡೆಯುವ ಚಿತ್ರ
ಶ್ರೀಮಂತಿಕೆ ಬಡತನಗಳನ್ನು ದಯೆ ದಾಕ್ಷಿಣ್ಯವಿಲ್ಲದೆ ತೂಗಿ ತತ್ವಪೂರ್ಣವಾಗಿ
ತೆಗೆದಚಿತ್ರ
ರುಪಿಯಾ
ಶಶಿಕಲಾ, ಮನಮೋಹನ್ ಕೃಷ್ಣ, ಓಮ್‌ಪ್ರಕಾಶ್, ಮೊದಲಾದವರು.
ಬರುವಚಿತ್ರ.— ಬುಜ್‌ದಿಲ್
ಕಿಶೋರ್ ಸಾಹು, ಪ್ರೇಮನಾಥ್, ಮತ್ತು ನಿಮ್ಮಿ.
ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್ ಉಡುಪಿ.

ಸದಸ್ಯರ ಪ್ರತಿಜ್ಞಾ ವಿಧಿ

ಲೋಕಸಭೆಯಲ್ಲಿ ತಾತ್ಕಾಲಿಕ ಅಧ್ಯಕ್ಷರೆಂದು ರಾಷ್ಟ್ರಾಧ್ಯಕ್ಷರಿಂದ ನಿಯೋಜಿತರಾದ ಶ್ರೀ ಮಾವಳಣಕರರು ಸದಸ್ಯರಿಂದ ಪ್ರತಿಜ್ಞೆಗಳನ್ನು ಮಾಡಿಸಿಕೊಂಡರು. ಪ್ರಥಮತಃ ಸಭಾ ಧುರೀಣರಾದ ಶ್ರೀ ನೆಹರೂ ಅವರ ಬಳಿಕ ಶ್ರೀ ಅನಂತಶಯನಂ ಅಯ್ಯಂಗಾರರೂ ಪ್ರತಿಜ್ಞಾ ವಚನಗಳನ್ನು ಸ್ವೀಕರಿಸಿದರು.

ಉಪ ರಾಷ್ಟ್ರಾಧ್ಯಕ್ಷರಾದ ಹಾಗು ಪಾರ್ಲಿಮೆಂಟಿನ ಮೇಲ್ಮನೆಯ ಸಭಾಪತಿಯೆಂದು ಅಧಿಕಾರ ಹೊಂದಿದ ಶ್ರೀ ರಾಧಾಕೃಷ್ಣನ್ನರು ಕೌನ್ಸಿಲು ಸದಸ್ಯರ ಪ್ರತಿಜ್ಞಾ ವಿಧಿಯನ್ನು ನಡೆಸಿದರು. ಮೊತ್ತಮೊದಲಾಗಿ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರು ಪ್ರಮಾಣ ವಚನವನ್ನು ತೆಗೆದುಕೊಂಡರು.

ಎರಡೂ ಮನೆಗಳ ಸದಸ್ಯರಿಂದ ಪ್ರತಿಜ್ಞೆ ಮಾಡಿಸುವುದಕ್ಕೆ ಎರಡು ದಿವಸಗಳು ಹಿಡಿಯಬಹುದೆಂದು ಮೊದಲು ಅಂದಾಜು ಮಾಡಿದ್ದರೂ, ಈ ಕಾರ್ಯಕ್ರಮವು ಒಂದೇ ದಿನದಲ್ಲಿ ಮುಗಿಯಿತು. ಲೋಕ ಸಭೆಯನ್ನು ಗುರುವಾರ (ತಾ. ೧೫)ಕ್ಕೆ ಮುಂದುಮಾಡಿದ್ದು, ಅಂದು ಸಭಾಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯು ನಡೆಯುವುದು.

ನೂತನ ಸಚಿವ ಸಂಪುಟ

ಪಾರ್ಲಿಮೆಂಟಿನ ಕಾಂಗ್ರೆಸ ಪಕ್ಷವು ಆದಿತ್ಯವಾರ ಮೌಲಾನಾ ಅಝಾದರ ಅಧ್ಯಕ್ಷತೆಯಲ್ಲಿ ಸಭೆ ಸೇರಿದಾಗ, ಶ್ರೀ ನೆಹರೂ ಸರ್ವಾನುಮತದಿಂದ ಧುರೀಣರಾಗಿ ಆಯ್ಕೆಗೊಂಡರು. ಕೇಂದ್ರದಲ್ಲಿ ಕಾಂಗ್ರೆಸು ಬಹುಮತವುಳ್ಳ ಪಕ್ಷವೆಂದು ಪರಿಗಣಿಸಲ್ಪಟ್ಟಿದೆ. ಆದುದರಿಂದ, ರಾಷ್ಟ್ರಾಧ್ಯಕ್ಷರು ನೆಹರೂರ ಮಂತ್ರಿತ್ವದಲ್ಲಿ ನೂತನ ಸಚಿವ ಸಂಪುಟ ರಚಿಸಲು ಆದೇಶ ಕೊಟ್ಟ ಪ್ರಕಾರ, ಅದು ಕೂಡ ಈಗ ರೂಪುಗೊಂಡಿದೆ. ಇದರಲ್ಲಿ ೧೫ ಮಂದಿ ಮಂತ್ರಿಗಳಿದ್ದು ಅವರಲ್ಲಿ ಇವರು ಮಾತ್ರ ಹೊಸಬರು. ಮೈಸೂರಿನ ಹಿಂದಿನ ಮುಖ್ಯಮಂತ್ರಿ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ಈ ಮಂತ್ರಿ ಸಂಪುಟದಲ್ಲಿ ಸ್ಥಾನ ಗಳಿಸಿರುವರು.

ಮಂತ್ರಿಗಳಿಗೆ ವಹಿಸಿ ಕೊಟ್ಟಿರುವ ಶಾಖೆಗಳು ಹೀಗಿವೆ—

ನೆಹರೂ—ವಿದೇಶಾಂಗ.

ಅಝಾದ—ವಿದ್ಯಾಂಗ ಮತ್ತು ವೈಜ್ಞಾನಿಕ ಸಂಶೋಧನೆ.

ಎನ್. ಜಿ. ಅಯ್ಯಂಗಾರ—ರಕ್ಷಣೆ.

ಅಮೃತ ಕೌರ— ಆರೋಗ್ಯ.

ಕಟಜೂ—ಗೃಹ ಮತ್ತು ಸಂಸ್ಥಾನ ಶಾಖೆ.

ದೇಶಮುಖ—ಹಣಕಾಸು.

ಗುಲಜಾರಿಲಾಲನಂದಾ— ಯೋಜನಾ ಮಂಡಲ ಮತ್ತು ನೈಸರ್ಗಿಕ

ಅಜಿತ ಪ್ರಸಾದ ಜೈನ—ಪುನರ್ನಿವೇಶನ.

ಸಿ ಸಿ. ಬಿಸ್ವಾಸ್—ನ್ಯಾಯಾಂಗ.

ಕಿದ್ವಾಯಿ—ಆಹಾರ ಮತ್ತು ವ್ಯವಸಾಯ.

ಕೃಷ್ಣಮಾಚಾರಿ — ವ್ಯಾಪಾರೋದ್ಯೋಗ.

ಲಾಲ ಬಹದ್ದೂರ ಶಾಸ್ತ್ರೀ—ರೈಲ್ವೆ ಮತ್ತು ಸಾರಿಗೆ.

ವಿ. ವಿ. ಗಿರಿ—ಶ್ರಮವಿಭಾಗ.

ಸ್ವರ್ಣಸಿಂಹ—ಸಂಪರ್ಕ.

ಚಂಗಲರಾಯ ರೆಡ್ಡಿ—ಔದ್ಯಮಿಕ ಉತ್ಪಾದನೆ, ಪೂರೈಕೆ.

ಮದ್ರಾಸು ಶಾಸನ ಸಭೆ

ಮದ್ರಾಸು ಶಾಸನ ಸಭೆಯಲ್ಲಿ ಗವರ್ನರರ ಭಾಷಣದ ಮೇಲೆ ಶುರುಸಿನ ಚರ್ಚೆ ನಡೆಯಿತು. ಸಂಯುಕ್ತಾಧಿವೇಶನವನ್ನು ಉದ್ದೇಶಿಸಿ ಮಾತನಾಡಲು ಗವರ್ನರರಿಗೆ ಅಧಿಕಾರವಿಲ್ಲೆಂದು ಆಕ್ಷೇಪಿಸಿ ಸಭಾತ್ಯಾಗ ಮಾಡಿದ ಸಂಯುಕ್ತ ಪ್ರಜಾರಂಗದ ಸದಸ್ಯರೇ ಈ ಚರ್ಚೆಯಲ್ಲಿ ನಿರುದ್ಯೋಗ ಹಾಗು ಸಂಕಷ್ಟ ನಿವಾರಿಸಲು ಸರಕಾರವು ತಪ್ಪಿದೆ ಎಂದೂ ಭಾಷಾನುಗುಣ ಪ್ರಾಂತ ರಚನೆಯ ಬಗ್ಗೆ ಕಾರ್ಯ ಕೈಕೊಳ್ಳಲು ಉದಾಸೀನ ಮಾಡಿದೆ ಎಂದೂ ಕಮ್ಯೂನಿಸ್ಟರು ಉಗ್ರವಾಗಿ ಟೀಕಿಸಿದರು. ಸರಕಾರದ ಪಕ್ಷವನ್ನು ಬಲವಾಗಿ ಸಮರ್ಥಿಸಿಕೊಂಡಮೇಲೆ ಗವರ್ನರರ ಭಾಷಣಕ್ಕಾಗಿ ಆಭಾರ ಮನ್ನಿಸುವ ಸೂಚನೆ ಸ್ವೀಕಾರಗೊಂಡಿತು.

ಸದಸ್ಯರ ಹಕ್ಕು ಬಾಧ್ಯತೆ

ಸಂಯುಕ್ತಾಧಿವೇಶನವು ಸೇರಿದ ದಿವಸ ಮದ್ರಾಸು ಪೋಲೀಸು ಕಮಿಷನರರು ಪ್ರತಿಬಂಧಕಾಜ್ಞೆಯನ್ನು ಹೊರಡಿಸಿದುದರಿಂದ ಶಾಸನ ಸಭಾ ಸದಸ್ಯರ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ತಗುಲಿತೆಂದೂ ಈ ಕುರಿತು ವಿಚಾರಣೆ ನಡೆಸಲು ಸಮಿತಿಯೊಂದನ್ನು ನೇಮಿಸಬೇಕೆಂದೂ ವಿರೋಧಿ ಪಕ್ಷದವರು ತಂದ ಸೂಚನೆ ಬಿದ್ದು ಹೋಯಿತು. ಸಂಯುಕ್ತ ಪ್ರಜಾ ರಂಗದ ಶ್ರೀ ಟಿ. ವಿಶ್ವನಾಥರು ಈ ಸೂಚನೆಯನ್ನು ಮಂಡಿಸಿದ್ದರು. ಪೋಲೀಸ್ ಕಮಿಷನರರು ಸಂಯುಕ್ತ ಪ್ರಜಾರಂಗದವರೂ ಕಮ್ಯೂನಿಸ್ಟರೂ ಪ್ರದರ್ಶನ ಮಾಡುವವರಿದ್ದಾರೆಂದು ಕಲ್ಪಿಸಿದುದು ಸದಸ್ಯರ ಅಪಮಾನ ಮಾಡಿದಂತೆ— ಈ ಆಜ್ಞೆಯ ದೆಸೆಯಿಂದ ಎಷ್ಟೋ ಮಂದಿ ಸದಸ್ಯರು ಆ ದಿನ ಸಭೆಗೆ ಹಾಜರಾಗುವುದು ಸಾಧ್ಯವಾಗಲಿಲ್ಲ ಎಂದವರು ದೂರಿದರು. ಇದನ್ನು ರಾಜಾಜಿ ಬಲವಾಗಿ ಖಂಡಿಸಿದರು— ಈ ಸಭೆಯ ಕಾರ್ಯಕಲಾಪಗಳಿಗೆ ಆತಂಕವೊದಗದಂತೆ ನೋಡಿಕೊಳ್ಳುವುದು ಪೋಲೀಸು ಕಮಿಷನರರ ಕರ್ತವ್ಯವಿರುವುದರಿಂದ ಅವರು ಅನುಮಾನಗೊಂಡು, ಪ್ರತಿಬಂಧಕಾಜ್ಞೆಯನ್ನು ಹೊರಡಿಸುವುದರಲ್ಲಿ ತಪ್ಪೇನೂ ಇಲ್ಲ. ಅಂದು ನಡೆದ ಘಟನೆಗಳು ಅವರ ಅನುಮಾನಕ್ಕೆ ಪುಷ್ಟಿ ಕೊಡುತ್ತವೆ. ೩೭೫ ಮಂದಿ ಸದಸ್ಯರಲ್ಲಿ ಬೇರೆ ಬೇರೆ ಕಾರಣಗಳಿಂದ ಕೇವಲ ೫ ಮಂದಿ ಸಭೆಗೆ ಬಂದಿರಲಿಲ್ಲ ಎಂದರು. ಸೂಚನೆಗೆ ಅನುಕೂಲವಾಗಿ ೧೪೮ ಮತಗಳೂ ವಿರುದ್ಧವಾಗಿ ೧೬೫ ಮತಗಳೂ ಬಿದ್ದುದರಿಂದ, ರಾಜಾಜಿ ಮಂತ್ರಿ ಮಂಡಳಕ್ಕೆ ಪ್ರಥಮ ವಿಜಯ ಲಭಿಸಿತು.

ಶ್ರೀ ಟಂಗುಟೂರಿ ಪ್ರಕಾಶಂ ಘಟನೋತ್ತರ ವ್ಯವಹಾರಗಳಿಗೆ ವಿರುದ್ಧವಾಗಿ ನಡೆದುಕೊಂಡು ಗವರ್ನರ ನ್ಯಾಯಬದ್ಧ ಅಧಿಕಾರಿಗಳ ಸ್ವಸ್ಥಾನ... ಲು ಹವಣಿಸಿದರೆಂದೂ ಈ ವಿಷಯದಲ್ಲಿ ಪ್ರಕಾಶಂರಿಗೆ ಎಚ್ಚರಿಕೆ ನೀಡಬೇಕೆಂದೂ ವಿಧಾನ ಪರಿಷತ್ತಿನಲ್ಲಿ ರಾಜ ... ಒಂದು ಸೂಚನೆ ತರುವರು.

WANTED

Influential persons to act as agents and organisers on decent terms. Bright prospects.

Apply to:

The Crescent Insurance Co., Ltd.,

Mangalore Branch, **Hampankatta**, **MANGALORE-1.**

The Canara Industrial & Banking Syndicate Ltd., Byndoor

ದಿ ಕೆನರಾ ಇಂಡಸ್ಟ್ರೀಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಬೈಂದೂರು.

ಜಾಹೀರು ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಲ್ಲಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದುದರಿಂದಲೂ, ಅವರಿಗೆ ಕಟ್ಟ ರಜಿಸ್ಟ್ರಿ ನೋಟೀಸು ... ಗದೆ ವಾಪಾಸು ಬಂದಿರುವದರಿಂದಲೂ, ಈ ಮೂಲಕ ತಿಳಿಯಪಡಿಸುವದೇನೆಂದರೆ ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ತಿಂಗಳು ತಾ. 24-5-52 ಶನಿವಾರ ಮಧ್ಯಾಹ್ನ ಗಂಟೆ 2ಕ್ಕೆ ಯೂ ಅನಂತರ ಯುಕ್ತಕಂಡ ತಾರೀಕಿಗೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವವು. ಸದ್ರಿ ಏಲಂ ಮಿಗೆ ನಿಲ್ಲಲು ಅಪೇಕ್ಷಿಸುವವರು ಆ ಸಮಯಕ್ಕೆ ಸರಿಯಾಗಿ ಬೇಂಕಿನ ಆಫೀಸಿಗೆ ಬರಬೇಕಾಗಿ ಅಪೇಕ್ಷಿಸುತ್ತೇವೆ

ಜಂಜ್ರಾ ನಂಬ್ರ	ಲೋನು ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು	
1	88/49	ಎಸ್, ಮಾದವ ಶೇಟ, ನಾಗಪ್ಪ ಶೇಟರ ಮಗ ಸರಾಫ ನಾಯ್ಕನ ಕಟ್ಟೆ	35	0
2	389/49	ಕುಪ್ಪಯ್ಯ ಶೆಟ್ಟಿ ಮನೆ ವೀರಣ ಶೆಟ್ಟಿ ಸೂರ್ಯ ಶೆಟ್ಟರ ಅಳಿಯ ಶಿರೂರು	100	0
3	1264/50	ಪಟ್ಟಾಂ ಅಬ್ದುಲ್ ಕಾಧೀರ ಸಾಹೇಬ ಪಟ್ಟಾಂ ಬಾಷಾ ಸಾಹೇಬರ ಮಗ ಮಿಠಾಯಿ ವ್ಯಾಪಾರಿ ಶಿರೂರು	100	0
4	946/51	ಶಾಸನೂಡಿ ಕೃಷ್ಣ ಶೇಟ ಮಂಜುನಾಥ ಶೇಟರ ಮಗ ಜುವೆಲ್ಲರ ಉಪ್ಪುಂದ	120	0
5	1100/51	—Do—	240	0
6	1129/51	—Do—	300	0
7	1160/51	—Do—	774	0
8	1273/51	—Do—	186	0
9	1454/51	—Do—	66	0
10	559/50	ಯುಸಫ್ಪ್ಪುಡ ಕಾಸೀಮ ದಿನ್ನ ಮಿಯಾಂ ಸಾಹೇಬ ನಾಕ್ತರ ಫಟ್ಕಳ	45	0

Office Byndoor, Date 10-5-1952

B. Narasimhaya Agent.

ಉಡುಪಿ

ಉಡುಪಿ ತಾಲೂಕು ಸಾಹುಕಾರ ಸಂಘದ ಕಾರ್ಯ ನಿರ್ವಾಹಕ ಮಂಡಳಿಯ ಸಭೆಯು ಕಳೆದ ತಾ 27ರಲ್ಲಿ ಜರಗಿ ಮದ್ರಾಸಿನ ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದ ಬಗ್ಗೆ ಶ್ರೀ ಸಿ. ರಾಜಗೋಪಾಲಾಚಾರಿಯವರನ್ನು ಅಭಿನಂದಿಸುವ ಮತ್ತು ಅವರಿಗೆ ಬೆಂಬಲವೀಯುವ ನಿರ್ಣಯವಾಯಿತು. ವಿವಿಧ ರೂಪದ ಟೇಕ್ಸು ವಸೂಲಿ ಕ್ರಮದಿಂದ ಮಧ್ಯಮ ವರ್ಗದ ವ್ಯಾಪಾರಿಗಳಿಗೆ ತುಂಬಾ ಕಷ್ಟನಷ್ಟ ವಾಗುತ್ತಿರುವುದರಿಂದ ಒಂದೇ ರೂಪದ ಸೇಲ್ಸ್‌ಟೇಕ್ಸ್ ಪದ್ಧತಿಯ ಯೋಜನೆಯನ್ನು ಗಮನಿಸಬೇಕೆನ್ನುವ, ಸೇಲ್ಸ್‌ಟೇಕ್ಸ್ ವಿನಾಯತಿಗೆ ಈಗ ಇರುವ ಟರ್ನ್‌ಓವರ್ ಮಿತಿಯನ್ನು ರೂ 10,000 ದಿಂದ ರೂ 20,000ಕ್ಕೆ ಏರಿಸಬೇಕೆಂದು ಮದ್ರಾಸು ಸರಕಾರವನ್ನು ವಿನಂತಿಸುವ, ವ್ಯಾಪಾರಸ್ಥರು ಇಡುವ ವರ್ಗ ಲೋಕದ ಅಂಕೆ ಸಂಖ್ಯೆಗಳನ್ನು ಸಂಶಯಾಸ್ಪದ ರೀತಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ನೋಡುವುದರಿಂದಾಗುವ ಪರಿಣಾಮವನ್ನು ನಿವಾರಣೆ ಮಾಡುವ, ಉದ್ಯಾವರ ಮತ್ತು ಕಲ್ಯಾಣಪುರ ಹೊಳೆಗಳಿಗೆ ಸೇತುವೆಯಾಗಬೇಕೆನ್ನುವ, ಕರಾವಳಿ ಮಾರ್ಗದಲ್ಲಿಯೇ ಮಂಗಳೂರು–ಉಡುಪಿ ರೈಲ್ವೆಯಾಗಬೇಕೆನ್ನುವ, ಉಡುಪಿ ಫಯರ್ ಸ್ಟೇಶನನ್ನು ಕಾಯಮಾಗಿ ಇರಗೊಡಬೇಕೆನ್ನುವ–ನಿರ್ಣಯಗಳಾದುವು.

ತಾಲೂಕು ಮಜೂರರ ಸಮ್ಮೇಳನವು ಇದೇ ತಾ 11ರಲ್ಲು ಅಜ್ಜರಕಾಡು ಮೈದಾನದಲ್ಲಿ ಶ್ರೀ ಎನ್. ಎಲ್. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಸಿಂಪ್ಸನ್ ಸೋನ್ಸ್ ಧ್ವಜಾರೋಹಣ ಮಾಡಿದರು. ಶ್ರೀ ಶಾಂತಾರಾಂ ಪೈಗಳು ಸಮ್ಮೇಳನವನ್ನು ಉದ್ಘಾಟಿಸುತ್ತಾ ಧಂಡವಳವಾಹಿ ಹಾಗೂ ಮಧ್ಯಮವರ್ಗಗಳ ಉಪಟಳವನ್ನು ಎದುರಿಸಬೇಕಾದರೆ ಮಜೂರ ವರ್ಗದಲ್ಲಿ ಒಗ್ಗಟ್ಟು ಇರಬೇಕಾದುದು ಅತ್ಯಾವಶ್ಯಕವೆಂದರು. ಸಭಾಧ್ಯಕ್ಷರು ಮಜೂರ ವರ್ಗದ ಬೆಳವಣಿಗೆಯ ಕುರಿತು ಮಾತನಾಡಿ ಮಜೂರರ ಐಕ್ಯ ಸಾಧನೆಯಲ್ಲಿ ರಾಜಕೀಯ ವರ್ಗದ ಸೋಂಕು ಇರಬಾರದೆಂದು ಸೂಚಿಸಿದರು. ಮಂಗಳೂರು ಜಿಲ್ಲಾ ಮಜೂರ ಪರಿಷತ್ತಿನಲ್ಲಾದ ನಿರ್ಣಯಗಳ ಬೆಳಕಿನಲ್ಲಿ ಇಲ್ಲಿಯೂ ನಿರ್ಣಯಗಳಾದುವು. ಸಭಾರಂಭದಲ್ಲಿ ಶ್ರೀ ಶೀನ ನಾಯ್ಕರು ಸ್ವಾಗತಭಾಷಣಮಾಡಿದರು. ಶ್ರೀ ದಾಸ ಸೇರಿಗಾರರೂ ಮಾತನಾಡಿದರು.

ಸ್ಥಳೀಯ ಪೋಸ್ಟ್ ಮಾಸ್ತರರ ವರ್ತನೆಯ ಕುರಿತು ಆಗಾಗ ಕೆಲವೊಂದು ದೂರುಗಳು ಕೇಳಿಬರುತ್ತಿವೆ. ತಾನು ಜನಸೇವಕನೆಂಬುದನ್ನು ಮರೆತು ಆಗಾಗ ಸರ್ವಾಧಿಕಾರಿಯಂತೆ ವರ್ತಿಸುತ್ತಿರುವರೆಂದೂ ಇದರಿಂದ ಜನತೆಗೂ ಸಿಬಂದಿಗೂ ತೊಂದರೆಗಳಾಗುತ್ತಿವೆಯೆಂದೂ ಹೇಳಲಾಗುತ್ತಿದೆ. ಕಳೆದ ಸೋಮವಾರ ಅಪರಾಹ್ನ, ಸನಿನಯದ ಮಾತಂತಿರಲಿ, ಇವರು ಇತ್ತೀಚೆಗೆ ಟೆಲಿಗ್ರಾಂ ಕೊಡಲು ಬಂದಿದ್ದ ಓರ್ವ ವಿದ್ಯಾಹಸ್ತರೊಡನೆ ದೇಗಿ ಅನುಚಿತ ಹಾಗೂ ಅನಾಗರಿಕ ರೀತಿಯಲ್ಲಿ ವರ್ತಿಸಿದುದೆಂದೂ ತಿಳಿದುಬರುತ್ತದೆ. ಇಲಾಖಾಧಿಕಾರಿಗಳು ವಿಚಾರಮಾಡುವ ಕಾಲವೀಗಬಂದಿದೆ.

ಆದಿ ಉಡುಪಿ—ಸ್ಥಳೀಯ ಹಯರ್ ಎಲಿಮೆಂಟರಿ ಶಾಲೆಯ ಕಟ್ಟೋಣದ ಸಹಾಯಾರ್ಥವಾಗಿ ಹಳೆಯ ವಿದ್ಯಾರ್ಥಿಗಳೂ ಶಾಲೆಯ ಅಭಿಮಾನಿಗಳೂ ತಾ. 10 5 52ರಂದು "ಯೋಗ ಶಕ್ತಿ" ಎಂಬ ನಾಟಕವನ್ನು ಡಾ: ಕೆ ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಅಭಿನಯಿಸಿ ತೋರಿಸಿದರು.

THE CANARA BANKING CORPORATION LIMITED.
ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್, ಲಿಮಿಟೆಡ್
ಸ್ಥಾಪನೆ : 1906. : ಪ್ರಧಾನ ಕಾರ್ಯಾಲಯ: ಉಡುಪಿ, (ದ.ಕ.)
ವಿಶೇಷ ಸವಲತ್ತುಗಳಿದ್ದು, ಸಾಲಿಯಾನ್ ಶೇಕಡಾ 4 ರಂತೆ ಬಡ್ಡಿ ಗಳಿಸುವ ನಮ್ಮ
"ಪಂಚವಾರ್ಷಿಕ ಸುವರ್ಣ ಠೇವಣಾತಿಗಳ"
ಮೇಲೆ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.
ವಿಶೇಷ ಮಾಹಿತಿಗೆ, ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.
ವಿ ಆರ್. ಕಾಮತ್, ಬಿ ಎ; ಎಲ್ ಎಲ್, ಬಿ;
ಜನರಲ್ ಮೆನೇಜರ್.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೧೫-೫-'೫೨

ಖಂಡತುಂಡ ಭಾಷಣ

ಕಮ್ಯೂನಿಸಂ ತತ್ವಗಳು ಯಾರಿಗೆ ಎಷ್ಟೇ ಚೆನ್ನಾಗಿರಲಿ—ಭಾರತದ ಮಟ್ಟಿಗೆ ಅದು ಅವ್ಯವಹಾರ್ಯ. ಒಂದು ರಾಷ್ಟ್ರಕ್ಕೆ ಅಚ್ಚುಕಟ್ಟಾಗಿ ಸೇರುವ ಧೋರಣೆ ಇನ್ನೊಂದು ರಾಷ್ಟ್ರದ ಸ್ಥಿತಿಗತಿಗಳಿಗೆ ಹೊಂದಿಕೊಳ್ಳಲಿಕ್ಕಿಲ್ಲ. ಭಾರತದಲ್ಲಿ ಕಮ್ಯೂನಿಸ್ಟರಿಗೆ ಸ್ಥಾನಮಾನವಿಲ್ಲ ಎನ್ನುವುದಕ್ಕೂ ಇಲ್ಲಿಯ ವಾತಾವರಣದ ಭಿನ್ನತೆಯೇ ಕಾರಣ. ವಿಶ್ವದ ಉಳಿದ ರಾಷ್ಟ್ರಗಳು ರಕ್ತದ ಹೊಳೆ ಹರಿಸಿ, ಸ್ವಾತಂತ್ರ್ಯ ಸಂಪಾದಿಸಿದಾಗ, ಭಾರತದ ಹೋರಾಟವು ಸಂಪೂರ್ಣ ಅಹಿಂಸಾತ್ಮಕವಾಗಿತ್ತು – ಮತ್ತು ಇದೇ ಭಾರತೀಯ ಸ್ವಕೀಯ ಮೇಲ್ಮೆಯ ದ್ಯೋತಕ. ಈ ಆದರ್ಶ ಕ್ರಮವನ್ನು ಕಾಯ್ದುಕೊಂಡು ಹೋಗುವ ರೀತಿಯಲ್ಲಿ ರಾಷ್ಟ್ರ ಪುನರ್ನಿರ್ಮಾಣದ ಕಾರ್ಯ ಸಹ ಜರಗುವುದು ಉಚಿತ. ಎಂತಲೇ– ಭಾರತದ ಮಟ್ಟಿಗೆ ಕಮ್ಯೂನಿಸಂ ತೀರ ಗಂಡಾಂತರಪ್ರಾಯವೆಂದು ನಮ್ಮ ಧುರೀಣರು ಪದೇ ಪದೇ ಎಚ್ಚರಿಕೆಯ ಮಾತುಗಳನ್ನು ಉಪದೇಶಿಸುತ್ತಾ ಬಂದಿರುವರು. ಆದರೂ ಅಜ್ಞಾನಿ ಜನತೆಯ ಪಾಲಿಗೆ ಅತ್ತ ರಶಿಯಾ– ಇತ್ತ ಚೀನಾಗಳಲ್ಲಿ ಕಮ್ಯೂನಿಷ್ಟರು ಭೂಮಿಗೆ ಸ್ವರ್ಗ ತಂದಿರುವರೆಂಬ ಕಲ್ಪನೆ ತುಂಬ ಸವಿ ಎನಿಸಿದೆ. ಹೀಗಾಗಿ, ಕಮ್ಯೂನಿಸ್ಟರು ಆಡುವ ಪೊಳ್ಳು ಮಾತಿಗೆ ಅವರು ಸುಲಭವಾಗಿ ಮರುಳುಗೊಳ್ಳುವರು. ಜನರ ಬಡತನವನ್ನು ಕಳೆದು, ಅವರ ಹಕ್ಕುಬಾಧ್ಯತೆಗಳನ್ನು ಉಳಿಸಿಕೊಂಡು, ಶಿಕ್ಷಣ ಸಂಪತ್ತನ್ನು ವೈಯಕ್ತಿಕ ಸುಖಾನುಕೂಲತೆಗಳನ್ನೂ ಒದಗಿಸಿಕೊಡುವೆವು — ಎಂದು ಮುಂತಾಗಿ ಕಮ್ಯೂನಿಸ್ಟರು ಸಾರುತ್ತಿರುವುದು ಬಹಳ ಆಕರ್ಷಣೀಯ ಪ್ರಚಾರವಾಗಿದೆ. "ದುಡಿಮೆಯೇ ದೇವರು" ಎಂಬ ಸತ್ಯವನ್ನು ಮೂದಲಿಸಿ, ಸರಕಾರವೇ ರಾಜ್ಯದಲ್ಲಿ "ಜೇನು ಸುರಿವ ಹಾಲು ಹರಿವ" ಪರಿಸ್ಥಿತಿ ಉಂಟು ಮಾಡಬೇಕೆಂದೂ ಅದಕ್ಕೆ ತಪ್ಪಿದ ಹೊಣೆ ಸರಕಾರದ ಮೇಲಿದೆ ಎಂದೂ ಅನ್ಯಾಯದಿಂದ ಪ್ರಚಾರಿಸುತ್ತಿರುವುದನ್ನು ಸಹಿಸುತ್ತ ಕೂಡುವುದು ಅಸಾಧ್ಯ. ಈ ಕಾರಣದಿಂದ ಮದ್ರಾಸು ಶಾಸನ ಸಭೆಯಲ್ಲಿ ಕಳೆದ ಶುಕ್ರವಾರ ದಿನ ಶ್ರೀ ರಾಜಗೋಪಾಲಾಚಾರ್ಯರು ಮಾಡಿದ ಖಂಡತುಂಡ ಭಾಷಣವನ್ನು ನಾವು ಹೃತ್ಪೂರ್ವಕ ಸ್ವಾಗತಿಸುವುದು ಸಮಂಜಸ. ಸ್ಪಷ್ಟ ಮಾತುಗಳಲ್ಲಿ, ಬಿಚ್ಚು ಮನಸ್ಸಿನಿಂದ ಅವರು– "ಕಮ್ಯೂನಿಸ್ಟರೇ ನನ್ನ ನಿಜವಾದ ವೈರಿಗಳು. ಅವರ ಉಪಟಳದಿಂದ ರಾಜ್ಯವನ್ನು ಉಳಿಸುವುದಕ್ಕಾಗಿಯೇ ನಾನಿಲ್ಲಿ ಇದ್ದೇನೆ. ಆ ಮೂಲಾಗ್ರವಾಗಿ ನನ್ನ ಧೋರಣೆ ಇದೇ ಆಗಿದೆ" ಎಂದು ಸಾರಿರುವುದು ಸಮಯೋಚಿತವಾಗಿದೆ. ಶಾಸನ ಸಭೆಯಲ್ಲಿ ಕಮ್ಯೂನಿಸ್ಟರ "ಹಸಿಬಿಸಿ" ವಿರೋಧವನ್ನು ಎಳ್ಳಷ್ಟು ಲೆಕ್ಕಿಸದೆ ನಡೆಯುವೆನೆಂದು ರಾಜಾಜಿ ದಿಟ್ಟತನದಿಂದ ನುಡಿದಿರುವುದನ್ನು ಕಂಡರೆ, ಅವರ ಆಂತರಿಕಶಕ್ತಿ ಮತ್ತು ಅಪ್ರತಿಮ ಸಾಮರ್ಥ್ಯದಲ್ಲಿ ನಮ್ಮೆಲ್ಲರ ಶ್ರದ್ಧೆ ಉಕ್ಕೇರುತ್ತದೆ. ಪ್ರಜಾಪ್ರಭುತ್ವ ತತ್ವಕ್ಕೆ ಸಹಜವೆನಿಸಿದ ರೀತಿಯಲ್ಲಿ ಪರಸ್ಪರ ವಿಚಾರ ವಿನಿಮಯ ದಿಂದಲೂ ಜನರ ಸಂಪೂರ್ಣ ಸಹಕಾರದಿಂದಲೂ ಅಹಿಂಸೆಯಿಂದಲೂ ಘಟನಾತ್ಮಕ ಮಾರ್ಗಗಳಿಂದಲೂ ಪ್ರಜಾ ಕಲ್ಯಾಣವನ್ನು ಸಾಧಿಸುವುದು ಸರಕಾರದ ಹಂಬಲವಾದರೆ—ಸರ್ವಾಧಿಕಾರಿತ್ವದ ಒತ್ತಾಯದಿಂದ, ಅನಾವಶ್ಯಕ ವರ್ಗಕಲಹದಿಂದ, ಹಿಂಸೆಯಿಂದ, ಜನರ ಉದ್ವೇಗಕ್ಕೆ ಕಾರಣವಾಗುವಂತೆ ನಡೆದುಕೊಂಡು ದೇಶದಲ್ಲಿ ಬಿಕ್ಕಟ್ಟಿನ ಪ್ರಸಂಗವನ್ನು ತಂದೊಡ್ಡಲು ಕಮ್ಯೂನಿಸ್ಟರು ನೋಡುತ್ತಿರುವರು. ರಾಷ್ಟ್ರದ ಬಲವಾದ ಸಂಘಟನೆ ಎನಿಸಿದ ಕಾಂಗ್ರೆಸಿನಲ್ಲಿ ಚುನಾವಣೆ ಪ್ರಕರಣಗಳಿಂದ ಉಂಟಾದ ಒಡಕು ಕಮ್ಯೂನಿಸ್ಟರ ವಿಜಯಕ್ಕೆ ಕೆಲವಟ್ಟಿನ ಸಹಾಯವನ್ನು ಮಾಡಿತೆನ್ನುವುದು ನಿಜ. ಕಾಂಗ್ರೆಸು ಸದಸ್ಯರ ನಿಷ್ಕ್ರಿಯತೆಯನ್ನು ಇದಕ್ಕೆ ದೂರಬೇಕು. ಆದರೂ ಈಗ ರಾಜ್ಯ ಹಿತೈಷಿಗಳೆಲ್ಲ ಒಂದೇ ಒಗ್ಗಟ್ಟಾಗಿ ನಿಂತು, ವಿಘಾತುಕ ಶಕ್ತಿಗಳ ಆಟ ನಡೆಯುವುದನ್ನು ತಡೆಯಲು ಪುನಃ ಪೂರ್ವಕ ಪ್ರಯತ್ನಿಸುವುದವಶ್ಯ. ಅರ್ಥ ಮಂತ್ರಿ ಶ್ರೀ ಸುಬ್ರಹ್ಮಣ್ಯಂ ಇದೇ ಸಂಗತಿಯನ್ನು ಒತ್ತಿ ಹೇಳಿರುವರು—"ಕಮ್ಯೂನಿಸಂ ತತ್ವಗಳೊಡನಷ್ಟೇ ನಮ್ಮ ಯುದ್ಧವಿರುವುದು—ಹೊರತು, ಕಮ್ಯೂನಿಸ್ಟ ಪಕ್ಷದ ಸದಸ್ಯರ ಮೇಲೆ ನಮಗೇನೂ ದ್ವೇಷವಿಲ್ಲ. ಯಾವ ಕುಂದು ಕೊರತೆಗಳ ಬಲದ ಮೇಲೆ ಕಮ್ಯೂನಿಸಂ ಬೆಳೆದು ಬಂದಿರುವುದೋ—ಅದನ್ನು ಸದ್ಯ ಅಧಿಕಾರದಲ್ಲಿರುವ ಸರಕಾರವೇ ನೀಗಿಸಲು ನೋಡುವುದು ತನ್ಮೂಲಕ ಕಮ್ಯೂನಿಸ್ಟರ ಬಲೆಗೆ ಬೀಳುವ ಜನರನ್ನು ಗಂಡಾಂತರದಿಂದ ಪಾರು ಮಾಡಲು ನೋಡುವುದು ಜ್ಞಾನ ಸಂಪತ್ತನ್ನು ಹೆಚ್ಚಿಸಿ, ದಾರಿದ್ರ್ಯವನ್ನು ಕಳೆದು, ಸೌಕರ್ಯಗಳನ್ನು ಕಲ್ಪಿಸಿ, ಜನರ ಜೀವನ ಮಟ್ಟವನ್ನು ಸುಧಾರಿಸಿ, ರಾಜ್ಯದಲ್ಲಿ ಶಾಂತಿ–ಸುಭಿಕ್ಷೆಗಳನ್ನು ಗಾಂಧೀ ತತ್ವದಂತೆ ನೆಲೆಗೊಳಿಸಿದರೆ, ಅದು ನಮಗೆ ಶೋಭೆ–ದ್ವೇಷ ಮಾತ್ಸರ್ಯಗಳು ತುಂಬಿದ ಹೃದಯವನ್ನೂ ಪ್ರೇಮ ಮತ್ತು ಆದರಗಳಿಂದ ಪರಿವರ್ತಿಸಲಿಕ್ಕೆ" – ಹೀಗೆಂಬ ಸುಭಾಷಿತ ನಮಗೆ ಈ ಸಂಘರ್ಷದಲ್ಲಿ ಮಾರ್ಗತೋರುವ ಕೈಕಂಬ. ನಿಷ್ಠುರ ಸತ್ಯವನ್ನು ಬಚ್ಚಿಡುವುದು ನ್ಯಾಯವಲ್ಲ ಎಂಬುದಕ್ಕಾಗಿಯೇ ರಾಜಾಜಿ ಹೀಗೆ ಎಚ್ಚರಿಕೆ ಕೊಟ್ಟರು. ರಾಜಾಜಿಯ ಮುಂಧೋರಣೆ ಸರಕಾರದ ಕಾರ್ಯಕಲಾಪಗಳಿಗೆ ವಿಘ್ನವೆಸಗುವ ಎಡಪಕ್ಷಗಳಿಗೆ ತುಂಬ ದುಷ್ಟವೆಂದು ತೋರಬಹುದು–ಆದರೆ, ಜನಸಾಮಾನ್ಯಕ್ಕೆ ಸರಕಾರದ ಕಾರ್ಯಕ್ಷಮತೆಯ ಕುರಿತು ಹೆಚ್ಚಿನ ಆಶೆ ಅಂಕುರಿಸಲು ಇದರಿಂದ ಅನುಕೂಲ ವಾತಾವರಣ ನಿರ್ಮಾಣಗೊಂಡಿದೆ.

ದಿಲ್ಲಿಯಲ್ಲಿ ವೈಭವೋತ್ಸವ

ರಾಷ್ಟ್ರಾಧ್ಯಕ್ಷರ ಅಧಿಕಾರ ಸ್ವೀಕಾರ

ಸಮಗ್ರ ಭಾರತದಲ್ಲಿ ವಯಸ್ಕರ ಮತದಾನ ಪದ್ಧತಿಯಿಂದ ಮಹಾ ಚುನಾವಣೆಗಳು ನಡೆದಬಳಿಕ ಇದೀಗ ಪ್ರಥಮಬಾರಿ ಹೊಸದಿಲ್ಲಿಯಲ್ಲಿ ರಾಷ್ಟ್ರಾಧ್ಯಕ್ಷ ಸ್ಥಾನವನ್ನು ಡಾ| ರಾಜೇಂದ್ರ ಪ್ರಸಾದರು ಸ್ವೀಕರಿಸಿದರು. ಜೊತೆಗೆ, ಶ್ರೀ ನೆಹರೂ ಪ್ರಧಾನಿತ್ವದಲ್ಲಿ ನೂತನ ಮಂತ್ರಿಮಂಡಲ ಸಹ ಅಸ್ತಿತ್ವಕ್ಕೆ ಬಂದಿರುವುದು. ಸಂಗಡವೇ–ಪಾರ್ಲಿಮೆಂಟಿನ ಎರಡೂ ಮನೆಗಳ ಸುಮಾರು ೭೦೦ ಸದಸ್ಯರು ರಾಜ್ಯ ಘಟನೆಗೆ ನಿಷ್ಠರಾಗಿ ವರ್ತಿಸುವ ಪ್ರಮಾಣ ವಚನವನ್ನು ಸ್ವೀಕರಿಸಿದರು. ಹೀಗೆ ಭಾರತದಲ್ಲಿ ನವ ಮನ್ವಂತರವು ತೊಡಗಿತೆನ್ನಬಹುದು.

೧೩ನೇ ಮೇ, ೧೯೫೨

ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಅತ್ಯಧಿಕ ಬಹುಮತದಿಂದ ನಿರ್ವಾಚಿತರಾದ ರಾಜೇಂದ್ರ ಪ್ರಸಾದರು ಈ ದಿನ ಬಹಳ ಮುಂಜಾನೆ ಎದ್ದರು. ಗಾಂಧೀಯ ನಿಷ್ಠಾವಂತ ಅನುಯಾಯಿಗಳೆನಿಸಿದ ಪ್ರಸಾದರು ಪ್ರಥಮತಃ ರಾಜಘಾಟಿಗೆ ಹೋಗಿ, ಗಾಂಧೀಯ ಆತ್ಮಕ್ಕೆ ಕೈ ಮುಗಿದು ಶ್ರದ್ಧಾಂಜಲಿ ಅರ್ಪಿಸಿದರು. ಬಳಿಕ ರಾಷ್ಟ್ರಪತಿ ಭವನದಲ್ಲಿ ಸ್ವಲ್ಪ ಸಮಯವನ್ನು ವೇದ ಪಠನ ಹಾಗು ನೋಡುವುದರಲ್ಲಿ ಕಳೆದರು. ಹಾಗೆಯೇ ಹೊಸದಿಲ್ಲಿಯ ಲಕ್ಷ್ಮೀನಾರಾಯಣ ಮಂದಿರಕ್ಕೆ ತೆರಳಿ, ದೇವರಿಗೆ ಪುಷ್ಪ ಗುಚ್ಛಗಳನ್ನು ಸಮರ್ಪಿಸಿಬಂದರು. ಮುಂದೆ, ಗಾಂಧೀ ವಿಚಾರದೋಹಕವಾದ ಪುಸ್ತಕವನ್ನು ಶ್ರದ್ಧೆಯಿಂದ ಓದಿಕೊಂಡರು.

ಇದೆಲ್ಲ ಮುಗಿದ ಬಳಿಕ ಸಕಲ ವೈಭವೋಪೇತವಾದ ಮೆರವಣಿಗೆಯಲ್ಲಿ ರಾಷ್ಟ್ರಾಧ್ಯಕ್ಷರು ಪಾರ್ಲಿಮೆಂಟು ಭವನವನ್ನು ಪ್ರವೇಶಿಸಲು, ಪ್ರಧಾನಿ ಜವಾಹರಲಾಲ ನೆಹರೂ ಅವರನ್ನು ಆದರದಿಂದ ಸ್ವಾಗತಿಸಿದರು. ಸೈನ್ಯದ ವಾದ್ಯಗೋಷ್ಠಿಯು ರಾಷ್ಟ್ರಗೀತೆಯನ್ನು ಸುಂದರವಾಗಿ ನುಡಿಸಿತು. ವರಿಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ಶ್ರೀ ಪತಂಜಲೀ ಶಾಸ್ತ್ರಿಯವರು ಅಧಿಕಾರ ವಚನವನ್ನು ಉಪದೇಶಿಸಲು, ರಾಜೇಂದ್ರ ಪ್ರಸಾದರು ಹಿಂದೀಯಲ್ಲಿ ಪ್ರತಿಜ್ಞೆಯನ್ನು ಸ್ವೀಕರಿಸಿದರು. ಒಡನೆಯೇ ಗೌರವ ಸೂಚನಾರ್ಥವಾಗಿ ೩೧ ತೋಪುಗಳು ಘರ್ಜಿಸಿದುವು. ಮುಂದೆ ರಾಷ್ಟ್ರಾಧ್ಯಕ್ಷರು ಉಪರಾಷ್ಟ್ರಾಧ್ಯಕ್ಷರೆಂದು ಅವಿರೋಧ ಆಯ್ಕೆ ಹೊಂದಿದ ಶ್ರೀ ರಾಧಾಕೃಷ್ಣನ್ನರಿಂದ ಪ್ರಮಾಣ ವಚನ ಮಾಡಿಸಿದರು.

ನಮ್ರ ಭಾಷಣ

ರಾಷ್ಟ್ರಾಧ್ಯಕ್ಷರು ಈ ಸಂದರ್ಭದಲ್ಲಿ ಮಾಡಿದ ಚಿಕ್ಕದೊಂದು ಭಾಷಣದಲ್ಲಿ–ಪ್ರಜಾ ಪ್ರಭುತ್ವದ ತತ್ವಗಳಿಗನುಗುಣವಾಗಿ ಸಮಗ್ರ ದೇಶದ ಆಡಳಿತವು ರೂಪುಗೊಂಡಿರುವುದಕ್ಕೆ ಹರ್ಷವನ್ನು ವ್ಯಕ್ತಗೊಳಿಸಿದರು. ತಾನು ಒಬ್ಬ ವ್ಯಕ್ತಿಯಾಗಿ, ಒಬ್ಬ ಸಾಮಾನ್ಯ ಪ್ರಜೆಯಾಗಿ ಎಲ್ಲಕ್ಕಿಂತಲೂ ಹೆಚ್ಚು ಸ್ವಾತಂತ್ರ್ಯಾಂದೋಲನದಲ್ಲಿ ಪ್ರಾಮಾಣಿಕತೆಯಿಂದ ದುಡಿದೊಬ್ಬ ಸೇವಕನೆಂಬ ಭಾವದಿಂದ ಜನರು ತನ್ನಲ್ಲಿ ತೋರ್ಪಡಿಸಿದ ವಿಶ್ವಾಸವನ್ನು ಕಾಪಾಡಿಕೊಂಡು ಬಂದು ರಾಷ್ಟ್ರಾಧ್ಯಕ್ಷ ಸ್ಥಾನದ ಕರ್ತವ್ಯ ನಿರ್ವಹಣೆ ಮಾಡಲು ಬಯಸುವೆನೆಂದರು. ದಾರಿದ್ರ್ಯ ನಿರ್ಮೂಲನಕ್ಕೆ ಅಭಿವೃದ್ಧಿ ಯೋಜನೆಗಳ ಸಾಫಲ್ಯ ಪೋಷಕವಿದ್ದರೆ, ಸ್ವಾತಂತ್ರ್ಯವು ಇವೆಲ್ಲದಕ್ಕೂ ಮೂಲಭೂತ ಅವಶ್ಯಕತೆಯಾಗಿದೆ. ಆದುದರಿಂದ ರಾಷ್ಟ್ರದ ಸ್ವಾತಂತ್ರ್ಯವನ್ನೂ ಐಕ್ಯವನ್ನೂ ಸಾಧ್ಯವಿದ್ದಷ್ಟು ರೀತಿಯಲ್ಲಿ ರಕ್ಷಿಸಿಕೊಳ್ಳುವುದು ತನ್ನ ಉತ್ತರದಾಯಿತ್ವ ಎಂದವರು ಒಪ್ಪಿಕೊಂಡರು. ವಿವಿಧ ಧ್ಯೇಯ ಧೋರಣೆಗಳ ವಿಶಾಲ ಜನಸಮುದಾಯದ ನಡುವೆ, ಪಕ್ಷಪಾತಕ್ಕೆ ಎಡೆಗೊಡದೆ, ಸರ್ವರನ್ನೂ ಸಮಾನ ದೃಷ್ಟಿಯಿಂದ ನೋಡಿ, ನ್ಯಾಯವನ್ನೂ ಸತ್ಯವನ್ನೂ ಎತ್ತಿ ಹಿಡಿಯುವ ತಮ್ಮ ಕಾಂಕ್ಷೆಗೆ ದೈವಕೃಪೆ ಒದಗಿ ಬರಲಿ—ಎಂದವರು ಹೃತ್ಪೂರ್ವಕ ಪ್ರಾರ್ಥಿಸಿದರು.

ಭಾಷಣಾನಂತರ ರಾಷ್ಟ್ರಾಧ್ಯಕ್ಷರು ರಾಷ್ಟ್ರಪತಿ ಭವನಕ್ಕೆ ಮರಳಲು ಅಲ್ಲಿ ಭೂ, ನೌಕಾ ಮತ್ತು ವಿಮಾನ ಪಡೆಗಳು ಗೌರವರಕ್ಷೆ ನೀಡಿದುವು. ಈ ಉತ್ಸವದಲ್ಲಿ ಪಾರ್ಲಿಮೆಂಟಿನ ಎರಡೂ ಮನೆಗಳ ಸದಸ್ಯರಲ್ಲದೆ ಉಚ್ಚ ಸೇನಾಧಿಕಾರಿಗಳು ರಾಯಭಾರಿ ವರ್ಗದವರು ಮತ್ತು ಅತಿಥಿಗಳು ಭಾಗವಹಿಸಿದರು.

ನಡೆಯುವ ಚಿತ್ರ
ಶ್ರೀಮಂತಿಕೆ ಬಡತನಗಳನ್ನು ದಯೆ ದಾಕ್ಷಿಣ್ಯವಿಲ್ಲದೆ ತೂಗಿ ತತ್ವಪೂರ್ಣವಾಗಿ
ತೆಗೆದಚಿತ್ರ
ರುಪಿಯಾ
ಶಶಿಕಲಾ, ಮನಮೋಹನ್ ಕೃಷ್ಣ, ಓಮ್‌ಪ್ರಕಾಶ್, ಮೊದಲಾದವರು.
ಬರುವಚಿತ್ರ.– ಬುಜ್‌ದಿಲ್
ಕಿಶೋರ್ ಸಾಹು, ಪ್ರೇಮನಾಥ್, ಮತ್ತು ನಿಮ್ಮಿ.
ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್ ಉಡುಪಿ.

ಸದಸ್ಯರ ಪ್ರತಿಜ್ಞಾ ವಿಧಿ

ಲೋಕಸಭೆಯಲ್ಲಿ ತಾತ್ಕಾಲಿಕ ಅಧ್ಯಕ್ಷರೆಂದು ರಾಷ್ಟ್ರಾಧ್ಯಕ್ಷರಿಂದ ನಿಯೋಜಿತರಾದ ಶ್ರೀ ಮಾವಳಣಕರರು ಸದಸ್ಯರಿಂದ ಪ್ರತಿಜ್ಞೆಗಳನ್ನು ಮಾಡಿಸಿಕೊಂಡರು. ಪ್ರಥಮತಃ ಸಭಾ ಧುರೀಣರಾದ ಶ್ರೀ ನೆಹರೂ ಅವರ ಬಳಿಕ ಶ್ರೀ ಅನಂತಶಯನಂ ಅಯ್ಯಂಗಾರರೂ ಪ್ರತಿಜ್ಞಾ ವಚನಗಳನ್ನು ಸ್ವೀಕರಿಸಿದರು.

ಉಪ ರಾಷ್ಟ್ರಾಧ್ಯಕ್ಷರಾದ ಹಾಗು ಪಾರ್ಲಿಮೆಂಟಿನ ಮೇಲ್ಮನೆಯ ಸಭಾಪತಿಯೆಂದು ಅಧಿಕಾರ ಹೊಂದಿದ ಶ್ರೀ ರಾಧಾಕೃಷ್ಣನ್ನರು ಕೌನ್ಸಿಲು ಸದಸ್ಯರ ಪ್ರತಿಜ್ಞಾ ವಿಧಿಯನ್ನು ನಡೆಸಿದರು. ಮೊತ್ತಮೊದಲಾಗಿ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರು ಪ್ರಮಾಣ ವಚನವನ್ನು ತೆಗೆದುಕೊಂಡರು.

ಎರಡೂ ಮನೆಗಳ ಸದಸ್ಯರಿಂದ ಪ್ರತಿಜ್ಞೆ ಮಾಡಿಸುವುದಕ್ಕೆ ಎರಡು ದಿನಗಳು ಹಿಡಿಯಬಹುದೆಂದು ಮೊದಲು ಅಂದಾಜು ಮಾಡಿದ್ದರೂ, ಈ ಕಾರ್ಯಕ್ರಮವು ಒಂದೇ ದಿನದಲ್ಲಿ ಮುಗಿಯಿತು. ಲೋಕ ಸಭೆಯನ್ನು ಗುರುವಾರ (ತಾ. ೧೫)ಕ್ಕೆ ಮುಂದುವರಿಸಿದ್ದು, ಅಂದು ಸಭಾಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯು ನಡೆಯುವುದು.

ನೂತನ ಸಚಿವ ಸಂಪುಟ

ಪಾರ್ಲಿಮೆಂಟಿನ ಕಾಂಗ್ರೆಸ ಪಕ್ಷವು ಆದಿತ್ಯವಾರ ಮೌಲಾನಾ ಅಝಾದರ ಅಧ್ಯಕ್ಷತೆಯಲ್ಲಿ ಸಭೆ ಸೇರಿದಾಗ, ಶ್ರೀ ನೆಹರೂ ಸರ್ವಾನುಮತದಿಂದ ಧುರೀಣರಾಗಿ ಆಯ್ಕೆಗೊಂಡರು. ಕೇಂದ್ರದಲ್ಲಿ ಕಾಂಗ್ರೆಸು ಬಹುಮತವುಳ್ಳ ಪಕ್ಷವೆಂದು ಪರಿಗಣಿಸಲ್ಪಟ್ಟಿದೆ. ಆದುದರಿಂದ, ರಾಷ್ಟ್ರಾಧ್ಯಕ್ಷರು ನೆಹರೂರ ಮಂತ್ರಿತ್ವದಲ್ಲಿ ನೂತನ ಸಚಿವ ಸಂಪುಟ ರಚಿಸಲು ಆದೇಶ ಕೊಟ್ಟ ಪ್ರಕಾರ, ಅದು ಕೂಡ ಈಗ ರೂಪುಗೊಂಡಿದೆ. ಇದರಲ್ಲಿ ೧೫ ಮಂದಿ ಮಂತ್ರಿಗಳಿದ್ದು ಅವರಲ್ಲಿ ಐವರು ಮಾತ್ರ ಹೊಸಬರು. ಮೈಸೂರಿನ ಹಿಂದಿನ ಮುಖ್ಯಮಂತ್ರಿ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ಈ ಮಂತ್ರಿ ಸಂಪುಟದಲ್ಲಿ ಸ್ಥಾನ ಗಳಿಸಿರುವರು.

ಮಂತ್ರಿಗಳಿಗೆ ವಹಿಸಿ ಕೊಟ್ಟಿರುವ ಶಾಖೆಗಳು ಹೀಗಿವೆ—

ನೆಹರೂ—ವಿದೇಶಾಂಗ.

ಆಝಾದ—ವಿದ್ಯಾಂಗ ಮತ್ತು ವೈಜ್ಞಾನಿಕ ಸಂಶೋಧನೆ.

ಎನ್. ಜಿ. ಅಯ್ಯಂಗಾರ—ರಕ್ಷಣೆ.

ಅಮೃತ ಕೌರ—ಆರೋಗ್ಯ.

ಕಟಜೂ—ಗೃಹ ಮತ್ತು ಸಂಸ್ಥಾನ ಶಾಖೆ.

ದೇಶಮುಖ—ಹಣಕಾಸು.

ಗುಲಜಾರಿಲಾಲನಂದಾ— ಯೋಜನಾ ಮಂಡಲ ಮತ್ತು ನೈಸರ್ಗಿಕ

ಅಜಿತ ಪ್ರಸಾದ ಜೈನ—ಪುನರ್ನಿವೇಶನ.

ಸಿ ಸಿ. ಬಿಸ್ವಾಸ್—ನ್ಯಾಯಾಂಗ.

ಕಿಡ್ವಾಯಿ—ಆಹಾರ ಮತ್ತು ವ್ಯವಸಾಯ.

ಕೃಷ್ಣಮಾಚಾರಿ — ವ್ಯಾಪಾರೋದ್ಯೋಗ.

ಲಾಲ ಬಹದ್ದೂರ ಶಾಸ್ತ್ರೀ—ರೈಲ್ವೆ ಮತ್ತು ಸಾರಿಗೆ.

ವಿ. ವಿ. ಗಿರಿ—ಶ್ರಮವಿಭಾಗ.

ಸ್ವರ್ಣಸಿಂಹ—ಸಂಪರ್ಕ.

ಚೆಂಗಲರಾಯ ರೆಡ್ಡಿ—ಔದ್ಯಮಿಕ ಉತ್ಪಾದನೆ, ಪೂರೈಕೆ.

ಮದ್ರಾಸು ಶಾಸನ ಸಭೆ

ಮದ್ರಾಸು ಶಾಸನ ಸಭೆಯಲ್ಲಿ ಗವರ್ನರರ ಭಾಷಣದ ಮೇಲೆ ತುರುಸಿನ ಚರ್ಚೆ ನಡೆಯಿತು. ಸಂಯುಕ್ತಾಧಿವೇಶನವನ್ನು ಉದ್ದೇಶಿಸಿ ಮಾತನಾಡಲು ಗವರ್ನರರಿಗೆ ಅಧಿಕಾರವಿಲ್ಲೆಂದು ಆಕ್ಷೇಪಿಸಿ ಸಭಾತ್ಯಾಗ ಮಾಡಿದ ಸಂಯುಕ್ತ ಪ್ರಜಾರಂಗದ ಸದಸ್ಯರೇ ಈ ಚರ್ಚೆಯಲ್ಲಿ ನಿರುದ್ಯೋಗ ಹಾಗು ಸಂಕಷ್ಟ ನಿವಾರಿಸಲು ಸರಕಾರವು ತಪ್ಪಿದೆ ಎಂದೂ ಭಾಷಾನುಗುಣ ಪ್ರಾಂತ ರಚನೆಯ ಬಗ್ಗೆ ಕಾರ್ಯ ಕೈಕೊಳ್ಳಲು ಉದಾಸೀನ ಮಾಡಿದೆ ಎಂದೂ ಕಮ್ಯೂನಿಸ್ಟರು ಉಗ್ರವಾಗಿ ಟೀಕಿಸಿದರು. ಸರಕಾರದ ಪಕ್ಷವನ್ನು ಬಲವಾಗಿ ಸಮರ್ಥಿಸಿಕೊಂಡ ಮೇಲೆ ಗವರ್ನರರ ಭಾಷಣಕ್ಕಾಗಿ ಆಭಾರ ಮನ್ನಿಸುವ ಸೂಚನೆ ಸ್ವೀಕಾರಗೊಂಡಿತು.

ಸದಸ್ಯರ ಹಕ್ಕು ಬಾಧ್ಯತೆ

ಸಂಯುಕ್ತಾಧಿವೇಶನವು ಸೇರಿದ ದಿನ ಮದ್ರಾಸು ಪೋಲೀಸು ಕಮಿಶನರು ಪ್ರತಿಬಂಧಕಾಜ್ಞೆಯನ್ನು ಹೊರಡಿಸಿದುದರಿಂದ ಶಾಸನ ಸಭಾ ಸದಸ್ಯರ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ತಗುಲಿತೆಂದೂ ಈ ಕುರಿತು ವಿಚಾರಣೆ ನಡೆಸಲು ಸಮಿತಿಯೊಂದನ್ನು ನೇಮಿಸಬೇಕೆಂದೂ ವಿರೋಧಿ ಪಕ್ಷದವರು ತಂದ ಸೂಚನೆ ಬಿದ್ದು ಹೋಯಿತು. ಸಂಯುಕ್ತ ಪ್ರಜಾರಂಗದ ಶ್ರೀ ಟಿ. ವಿಶ್ವನಾಥರು ಈ ಸೂಚನೆಯನ್ನು ಮಂಡಿಸಿದ್ದರು. ಪೋಲೀಸ್ ಕಮಿಶನರು ಸಂಯುಕ್ತ ಪ್ರಜಾರಂಗದವರೂ ಕಮ್ಯೂನಿಸ್ಟರೂ ಪ್ರದರ್ಶನ ಮಾಡುವವರಿದ್ದಾರೆಂದು ಕಲ್ಪಿಸಿದುದು ಸದಸ್ಯರ ಅಪಮಾನ ಮಾಡಿದಂತೆ— ಈ ಆಜ್ಞೆಯ ದೆಸೆಯಿಂದ ಎಷ್ಟೋ ಮಂದಿ ಸದಸ್ಯರು ಆ ದಿನ ಸಭೆಗೆ ಹಾಜರಾಗುವುದು ಸಾಧ್ಯವಾಗಲಿಲ್ಲ ಎಂದವರು ದೂರಿದರು. ಇದನ್ನು ರಾಜಾಜಿ ಬಲವಾಗಿ ಖಂಡಿಸಿದರು— ಈ ಸಭೆಯ ಕಾರ್ಯಕಲಾಪಗಳಿಗೆ ಆತಂಕವೊದಗದಂತೆ ನೋಡಿಕೊಳ್ಳುವುದು ಪೋಲೀಸು ಕಮಿಶನರ ಕರ್ತವ್ಯವಿರುವುದರಿಂದ ಅವರು ಅನುಮಾನಗೊಂಡು, ಪ್ರತಿಬಂಧಕಾಜ್ಞೆಯನ್ನು ಹೊರಡಿಸುವುದರಲ್ಲಿ ತಪ್ಪೇನೂ ಇಲ್ಲ. ಅಂದು ನಡೆದ ಘಟನೆಗಳು ಅವರ ಅನುಮಾನಕ್ಕೆ ಪುಷ್ಟಿ ಕೊಡುತ್ತವೆ. ೩೭೫ ಮಂದಿ ಸದಸ್ಯರಲ್ಲಿ ಬೇರೆ ಬೇರೆ ಕಾರಣಗಳಿಂದ ಕೇವಲ ೫ ಮಂದಿ ಸಭೆಗೆ ಬಂದಿರಲಿಲ್ಲ ಎಂದರು. ಸೂಚನೆಗೆ ಅನುಕೂಲವಾಗಿ ೧೪೮ ಮತಗಳೂ ವಿರುದ್ಧವಾಗಿ ೧೬೫ ಮತಗಳೂ ಬಿದ್ದುದರಿಂದ, ರಾಜಾಜಿ ಮಂತ್ರಿ ಮಂಡಳಕ್ಕೆ ಪ್ರಥಮ ವಿಜಯ ಲಭಿಸಿತು.

ಶ್ರೀ ಟಂಗಟೂರಿ ಪ್ರಕಾಶಂ ಘಟನಾತ್ಮಕ ವ್ಯವಹಾರಗಳಿಗೆ ವಿರುದ್ಧವಾಗಿ ನಡೆದುಕೊಂಡು ಗವರ್ನರ ನ್ಯಾಯಬದ್ಧ ಅಧಿಕಾರ[illegible] ವ್ಯಕ್ತಿಯ [illegible] ಮಾಡಲು ಹವಣಿಸಿದರೆಂದೂ ಈ ವಿಷಯದಲ್ಲಿ ಪ್ರಕಾಶಂರಿಗೆ ಎಚ್ಚರಿಕೆ ನೀಡಬೇಕೆಂದೂ ವಿಧಾನ ಪರಿಷತ್ತಿನಲ್ಲಿ ರಾಜಾಜಿ ಒಂದು ಸೂಚನೆ ತರುವರು.

ಉಡುಪಿ

ಉಡುಪಿ ತಾಲೂಕು ಸಾಹುಕಾರರ ಸಂಘದ ಕಾರ್ಯ ನಿರ್ವಾಹಕ ಮಂಡಳಿಯ ಸಭೆಯು ಕಳೆದ ತಾ 27ರಲ್ಲಿ ಜರಗಿ ಮದ್ರಾಸಿನ ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದ ಬಗ್ಗೆ ಶ್ರೀ ಸಿ. ರಾಜಗೋಪಾಲಾಚಾರಿಯವರನ್ನು ಅಭಿನಂದಿಸುವ ಮತ್ತು ಅವರಿಗೆ ಬೆಂಬಲವೀಯುವ ನಿರ್ಣಯವಾಯಿತು. ವಿವಿಧ ರೂಪದ ಟ್ಯಾಕ್ಸ್ ವಸೂಲಿ ಕ್ರಮದಿಂದ ಮಧ್ಯಮ ವರ್ಗದ ವ್ಯಾಪಾರಿಗಳಿಗೆ ತುಂಬಾ ಕಷ್ಟನಷ್ಟ ವಾಗುತ್ತಿರುವುದರಿಂದ ಒಂದೇ ರೂಪದ ಸೇಲ್ಸ್‌ಟ್ಯಾಕ್ಸ್ ಪದ್ಧತಿಯ ಯೋಜನೆಯನ್ನು ಗಮನಿಸಬೇಕೆನ್ನುವ, ಸೇಲ್ಸ್‌ಟ್ಯಾಕ್ಸ್ ವಿನಾಯತಿಗೆ ಈಗ ಇರುವ ಟರ್ನ್‌ಓವರ್ ಮಿತಿಯನ್ನು ರೂ 10,000 ದಿಂದ ರೂ 20,000ಕ್ಕೆ ಏರಿಸಬೇಕೆಂದು ಮದ್ರಾಸು ಸರಕಾರವನ್ನು ವಿನಂತಿಸುವ, ವ್ಯಾಪಾರಸ್ಥರು ಇಡುವ ವರ್ಗ ಹೋಗದ ಅಂಕೆ ಸಂಖ್ಯೆಗಳನ್ನು ಸಂಶಯಾಸ್ಪದ ರೀತಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ನೋಡುವುದರಿಂದಾಗುವ ಪರಿಣಾಮವನ್ನು ರಿಕಾರ್ಡ ಮಾಡುವ, ಉದ್ಯಾವರ ಮತ್ತು ಕಲ್ಯಾಣಪುರ ಹೊಳೆಗಳಿಗೆ ಸೇತುವೆಯಾಗಬೇಕೆನ್ನುವ, ಕರಾವಳಿ ಮಾರ್ಗದಲ್ಲಿಯೇ ಮಂಗಳೂರು–ಉಡುಪಿ ರೈಲ್ವೆಯಾಗಬೇಕೆನ್ನುವ, ಉಡುಪಿ ಫಯರ್ ಸ್ಟೇಶನನ್ನು ಕಾಯಮಾಗಿ ಇರಗೊಡಬೇಕೆನ್ನುವ—ನಿರ್ಣಯಗಳಾದುವು.

ತಾಲೂಕು ಮಜೂರರ ಸಮ್ಮೇಳನವು ಇದೇ ತಾ 11ರಲ್ಲು ಅಜ್ಜರಕಾಡು ಮೈದಾನಿನಲ್ಲಿ ಶ್ರೀ ಎನ್. ಎಲ್. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಸಿಂಪ್ಸನ್ ಸೋಜ್ಸರು ಧ್ವಜಾರೋಹಣ ಮಾಡಿದರು. ಶ್ರೀ ಶಾಂತಾರಾಂ ಪೈಗಳು ಸಮ್ಮೇಳನವನ್ನು ಉದ್ಘಾಟಿಸುತ್ತಾ ಬಂಡವಳಶಾಹಿ ಹಾಗೂ ಮಧ್ಯಮವರ್ಗಗಳ ಉಪಟಳವನ್ನು ಎದುರಿಸಬೇಕಾದರೆ ಮಜೂರ ವರ್ಗದಲ್ಲಿ ಒಕ್ಕಟ್ಟು ಇರಬೇಕಾದುದು ಅತ್ಯಾವಶ್ಯಕವೆಂದರು. ಸಭಾಧ್ಯಕ್ಷರು ಮಜೂರ ವರ್ಗದ ಬೆಳವಣಿಗೆಯ ಕುರಿತು ಮಾತನಾಡಿ ಮಜೂರರ ಐಕ್ಯಸಾಧನೆಯಲ್ಲಿ ರಾಜಕೀಯ ವರ್ಗದ ಸೋಂಕೆ ಇರಬಾರದೆಂದು ಸೂಚಿಸಿದರು. ಮಂಗಳೂರು ಜಿಲ್ಲಾ ಮಜೂರ ಪರಿಷತ್ತಿನಲ್ಲಾದ ನಿರ್ಣಯಗಳ ಮೇಲ್ಪಂಕ್ತಿಯಲ್ಲಿ ಇಲ್ಲಿಯೂ ನಿರ್ಣಯಗಳಾದುವು. ಸಭಾರಂಭದಲ್ಲಿ ಶ್ರೀ ಶೀನ ನಾಯ್ಕರು ಸ್ವಾಗತಭಾಷಣ ಮಾಡಿದರು. ಶ್ರೀ ದಾಸ ಸೇರಿಗಾರರೂ ಮಾತನಾಡಿದರು.

ಸ್ಥಳೀಯ ಪೋಸ್ಟ್ ಮಾಸ್ತರರ ವರ್ತನೆಯ ಕುರಿತು ಆಗಾಗ ಕೆಲವೊಂದು ದೂರುಗಳು ಕೇಳಿಬರುತ್ತಿವೆ. ತಾನು ಜನಸೇವಕನೆಂಬುದನ್ನು ಮರೆತು ಅಗಾಧ ಸರ್ವಾಧಿಕಾರಿಯಂತೆ ವರ್ತಿಸುತ್ತಿರುವರೆಂದೂ ಇದರಿಂದ ಜನತೆಗೂ ಸಿಬಂದಿಗೂ ತೊಂದರೆಗಳಾಗುತ್ತಿವೆಯೆಂದೂ ಹೇಳಲಾಗುತ್ತಿದೆ. ಸೌಜನ್ಯ, ಸವಿನಯದ ಮಾತಂತಿರಲಿ, ಅವರು ಇತ್ತೀಚೆಗೆ ಟೆಲಿಗ್ರಾಂ ಕೊಡಲು ಬಂದಿದ್ದ ಓರ್ವ ಸದ್ಗೃಹಸ್ಥರೊಡನೆ ರೇಗಿ ಅನುಚಿತ ಹಾಗೂ ಅನಾಗರಿಕ ರೀತಿಯಲ್ಲಿ ವರ್ತಿಸಿರುವರೆಂದೂ ತಿಳಿದುಬರುತ್ತದೆ. ಇಲಾಖಾಧಿಕಾರಿಗಳು ವಿಚಾರಮಾಡುವ ಕಾಲವೀಗ ಬಂದಿದೆ.

ಆದಿ ಉಡುಪಿ—ಸ್ಥಳೀಯ ಹಯರ್ ಎಲಿಮೆಂಟರಿ ಶಾಲೆಯ ಕಟ್ಟೋಣದ ಸಹಾಯಾರ್ಥವಾಗಿ ಹಳೆಯ ವಿದ್ಯಾರ್ಥಿಗಳೂ ಶಾಲೆಯ ಅಭಿಮಾನಿಗಳೂ ತಾ. 10 5 52ರಂದು "ಯೋಗ ಶಕ್ತಿ" ಎಂಬ ನಾಟಕವನ್ನು ಡಾ। ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಅಭಿನಯಿಸಿ ತೋರಿಸಿದರು.

WANTED

Influential persons to act as agents and organisers on decent terms. Bright prospects.

Apply to:

The Crescent Insurance Co., Ltd.,
Mangalore Branch, **Hampankatta, MANGALORE- 1.**

The Canara Industrial & Banking Syndicate Ltd, Byndoor.

ದಿ ಕೆನರಾ ಇಂಡಸ್ಟ್ರೀಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಬೈಂದೂರು.

ಜಾಹೀರು ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನಲ್ಲಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದುದರಿಂದಲೂ, ಅವರಿಗೆ ಬಿಟ್ಟ ರಿಜಿಸ್ಟ್ರ ನೋಟೀಸು ಜಾರಿಯಾಗದೆ ವಾಪಾಸು ಬಂದಿರುವುದರಿಂದಲೂ, ಈ ಮೂಲಕ ತಿಳಿಯಪಡಿಸುವದೇನೆಂದರೆ ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ತಿಂಗಳು ತಾ- 24-5-52 ಶನಿವಾರ ಮಧ್ಯಾಹ್ನ ಗಂಟೆ 2ಕ್ಕೆ ಯಾ ಅನಂತರ ಯುಕ್ತ ಕಂಡ ತಾರೀಕಿಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವವು. ಸದ್ರಿ ಏಲಂವಿಗೆ ನಿಲ್ಲಲು ಅಪೇಕ್ಷಿಸುವವರು ಆ ಸಮಯಕ್ಕೆ ಸರಿಯಾಗಿ ಬ್ಯಾಂಕಿನ ಆಫೀಸಿಗೆ ಬರಬೇಕಾಗಿ ಅಪೇಕ್ಷಿಸುತ್ತೇವೆ.

ಜಂತ್ರಿ ನಂಬ್ರ	ಲೋನು ನಂಬ್ರ	ಹೆಸರು ಮತ್ತು ವಿಳಾಸ	ಮೊಬ್ಲಗು
1	88/49	ಎಸ್. ಮಾಧವ ಶೇಟ, ನಾಗಪ್ಪ ಶೇಟರ ಮಗ ಸರಾಪ ನಾಯ್ಕನ ಕಟ್ಟೆ	35 0
2	389/49	ಕುಪ್ಪಯ್ಯ ಶೆಟ್ಟರ ಮಗ ಸೀನ ಶೆಟ್ಟಿ ಸೂರ್ಯ ಶೆಟ್ಟರ ಅಳಿಯ ಶಿರೂರು	100 0
3	1264/50	ಪಟ್ಟಾದ ಅಬ್ದುಲ್ ಖಾದೀರ ಸಾಹೇಬ ಪಟ್ಟಾದ ಬಾಪು ಸಾಹೇಬರ ಮಗ ನಿರಾಡು ವ್ಯಾಪಾರಿ ಶಿರೂರು	100 0
4	946/51	ಬಾಕನಾಡಿ ಕೃಷ್ಣ ಶೇಟ ಮಂಜುನಾಥ ಶೇಟರ ಮಗ ಜುವೆಲ್ಲರ ಉಪ್ಪುಂದ	120 0
5	1100/51	—Do—	240 0
6	1129/51	—Do—	300 0
7	1160/51	—Do—	774 0
8	1273/51	—Do—	186 0
9	1454/51	—Do—	66 0
10	559/50	ಯಾಕಮ್ಮದ ಸಾಹೇಬ ಬಿನ್ ಮೂಸಾ ಸಾಹೇಬ ನಾಕ್ತುರ ಭಟ್ಕಳ	45 0

Office Byndoor,
Date 10-5-1952

B. Narasimhaya
Agent.

ಭಾಷಾನುಗುಣ ಪ್ರಾಂತನಿರ್ಮಾಣದ ಅವಶ್ಯಕತೆ

ಏಕೀಕರಣ ಪರಿಷತ್ತಿನಲ್ಲಿ ಶ್ರೀ ಶಾಸ್ತ್ರಿಯವರ ಸಮರ್ಥನೆ

ಇದೇ ತಾ. 11ರಲ್ಲು ಗುರುಪುರದ ಸವಿಜಾಪ ಕೈಕಂಬದಲ್ಲಿ ಕೂಡಿದ ಏಕೀಕರಣ ಪರಿಷತ್ತಿನ ಅಧ್ಯಕ್ಷಪೀಠದಿಂದ ಶ್ರೀ ಶಾಸ್ತ್ರಿ ವೆಂಕಟೇಶ ಅಯ್ಯಂಗಾರರು ಭಾಷಣ ಮಾಡುತ್ತಾ ಕನ್ನಡ ನಾಡೆಲ್ಲ ಒಂದು ಪ್ರಾಂತವಾಗಬೇಕೆಂದು ಜನರಲ್ಲಿ ಉದಯಿಸಿದ ಆಸೆಯು ಇಂದಿನದಲ್ಲ ಅದರ ಹಿಂದೆ ಬ್ರಿಟಿಷರು ಇಲ್ಲಿ ರಾಜ್ಯಭಾರ ಮಾಡಿಕೊಂಡಿದ್ದಾಗ ಆಂಗ್ಲರ ಐದು ಅತ್ರಿಕ ರಾಜರ ಹದಿನಾಲ್ಕು ಪ್ರಾಂತಗಳು—ಇವನ್ನು ಒಂದು ರಾಜಕೀಯ ಗುಂಪಾಗಿ ಕೂಡಿಸಿ—ಒಂದು ಆಡಳಿತದ ಒಳಗೆ ತರುವುದು ಅಸಾಧ್ಯವೆಂದು ತೋರುತ್ತಿದರೂ, ಇಂದು ಅದು ಅಷ್ಟೊಂದು ಕಷ್ಟತರವಾಗಿ ತೋರುವುದಿಲ್ಲ. ಜನಸಂಸ್ಕೃತಿಯ ದೃಷ್ಟಿಯಿಂದಲೂ ಈ ಒಕ್ಕಟ್ಟು ಅಗತ್ಯವೆಂದರು.

ಅವರು ಮತ್ತೂ ಹೇಳಿದ್ದೇನೆಂದರೆ ಮಹಾತ್ಮಗಾಂಧಿಯವರು ಭಾರತ ವರ್ಷದ ಸ್ವಾತಂತ್ರ್ಯವನ್ನು ಸಾಧಿಸುವುದಕ್ಕಾಗಿ ಅಸಹಕಾರದ ಚಳವಳಿಯನ್ನು ಆರಂಭಿಸಿದಾಗ ಅವರ ಭಾವನೆಗಳ ಪ್ರಸಾರ ತೀರಾ ಅವಶ್ಯಕವಾಯಿತು. ಜನತೆಗೆ ಸಂಗತಿಗಳನ್ನು ತಿಳಿಸುವುದಕ್ಕೆ ಅವರ ಭಾಷೆಗಳನ್ನು ಬಳಸಬೇಕಾಯಿತು. ಪ್ರಚಾರ ಕಾರ್ಯವನ್ನು ಆಯಾ ಭಾಷೆಗಳ ಪ್ರಮುಖರ ಕೈಗೆ ಒಪ್ಪಿಸಬೇಕಾಯಿತು. ಅದನ್ನು ವ್ಯವಸ್ಥೆಗೊಳಿಸುವುದಕ್ಕೆ ಭಾಷಾನುಗುಣವಾಗಿ ಕಾಂಗ್ರೆಸ್ ಸಮಿತಿಯನ್ನು ಏರ್ಪಡಿಸುವುದು ಅವಶ್ಯಕವಾಯಿತು. ಆಗ ಏರ್ಪಟ್ಟ ಭಾಷಾನುಗುಣ ಪ್ರಾಂತ ಕಾಂಗ್ರೆಸ್ ಸಮಿತಿಗಳು ಈಗಲೂ ವ್ಯವಹರಣೆಯಲ್ಲಿವೆ.

ಕಾಂಗ್ರೆಸ್ ಸಮಿತಿಗಳು ಭಾಷಾನುಗುಣ ಪ್ರಾಂತಗಳ ದೃಷ್ಟಿಯಿಂದ ಯಾವಾಗ ಮಾರ್ಪಟ್ಟವೋ ಆಗಲೇ ಭಾಷಾನುಗುಣ ಪ್ರಾಂತಗಳ ಕಲ್ಪನೆಯೂ ಸ್ಪಷ್ಟವಾಗಿ ರೂಪುಗೊಂಡಿತು. ಆ ಸಮಯದಲ್ಲಿ ರೂಪುಗೊಂಡ ಮುಖ್ಯವಾದ ಮೂರು ಭಾಷಾ ಪ್ರಾಂತಗಳು ಆಂಧ್ರ, ಕರ್ನಾಟಕ ಮತ್ತು ಕೇರಳ.

ಸದ್ಯದ ಸ್ಥಿತಿಯಲ್ಲಿ ಮದ್ರಾಸ್ ಮತ್ತು ಬೊಂಬಾಯಿ ಸರಕಾರದಲ್ಲಿ ಕನ್ನಡ ಪ್ರಾಂತದ ಕಷ್ಟಸುಖಗಳ ವಿಷಯ ತಕ್ಕಷ್ಟು ಗಮನ ದೊರೆಯುತ್ತಿಲ್ಲ. ಕನ್ನಡ ಪ್ರತಿನಿಧಿಗಳು ಈ ಪ್ರಾಂತಗಳ ಶಾಸನ ಸಭೆಗಳಲ್ಲಿ ಯಾವ ನಿರ್ಣಯವನ್ನೂ ಮಾಡಿಸುವಂತಿಲ್ಲ. ಕೇಂದ್ರ ಸರಕಾರದಲ್ಲಿ ಎರಡು ಕೋಟಿ ಜನದ ವರ್ಚಸ್ಸು ಪ್ರಕಟವಾಗುವಂತಿಲ್ಲ. ಮೈಸೂರಿನ ಕನ್ನಡಿಗರು ತಾವು ತಕ್ಕಷ್ಟು ಸುಖವಾಗಿದ್ದೇವೆಂದು ಏಕೀಕರಣದ ವಿಷಯದಲ್ಲಿ ಸ್ವಲ್ಪ ಉದಾಸೀನರಾಗಿರಬಹುದು. ಅವರು ಈ ಕಡೆಗಿನ ನಾಡಿನ ಈ ವಿಷಯಗಳನ್ನು ಗಮನಕ್ಕೆ ತಂದುಕೊಂಡರೆ ಏಕೀಕರಣ ಅವಶ್ಯಕವೆಂದು ಮನಗಾಣುವರು.

ಪ್ರಜಾ ಪ್ರಾತಿನಿಧ್ಯ ಸಿದ್ಧಿಸುವುದಕ್ಕೂ ಕರ್ನಾಟಕ ಏಕೀಕರಣ ಆವಶ್ಯಕ. ಪ್ರಜಾ ರಾಜ್ಯದಲ್ಲಿ ಅಧಿಕಾರದ ಮೂಲಬಿಂದು ಜನ. ಆ ಜನರು ತಮ್ಮ ಅಭಿಪ್ರಾಯವನ್ನು ತಿಳಿಯುವುದಕ್ಕೆ ಅವರ ಅಭಿಪ್ರಾಯವನ್ನು ಹೊರ ಮಾಡುವುದಕ್ಕೆ ಅವರ ಭಾಷೆಯೇ ಸಾಧನ. ಒಂದು ಭಾಷೆಯನ್ನು ಬಳಸುವ ಒಂದು ಪ್ರಾಂತವಾಗುವುದರಿಂದ ಈ ಕಾರ್ಯ ಸುಲಭವಾಗುತ್ತದೆ. ಶಾಸನ ಸಭೆಗಳ ಕೆಲಸ ಸದ್ಯ ಸ್ಥಿತಿಯಲ್ಲಿ ಭಾಷೆಗಳ ಕಾರಣದಿಂದ ಅಸಮರ್ಪಕವಾಗುತ್ತದೆ. ಭಾಷೆಯನ್ನು ಅನುಸರಿಸಿ ಪ್ರಾಂತ ಆದರೆ ಈ ಕೊರತೆ ಹರಿಯುತ್ತದೆ.

ಕರ್ನಾಟಕ ಏಕೀಕರಣವನ್ನು ಬೇಗನೆ ಸಾಧಿಸಲು ಈ ಕಾರ್ಯಕ್ರಮ ಆವಶ್ಯಕ. 1 ಕನ್ನಡದ ಗಡಿನಾಡಿನ ಮುಖ್ಯ ಸ್ಥಳಗಳಲ್ಲಿ ಆಯಾ ಭಾಗದ ಜನರನ್ನು ನೆರೆಯಿಸಿ ಕನ್ನಡ ನಾಡು ಒಡನೆ ಏರ್ಪಡಬೇಕೆಂದು ನಿರ್ಣಯ ಮಾಡಿಸಬೇಕು. 2 ಬೇರೆ ಬೇರೆ ಪ್ರಾಂತದ ಶಾಸನ ಸಭೆಗಳ ಕನ್ನಡಿಗ ಪ್ರತಿನಿಧಿಗಳನ್ನು ಈ ವಿಷಯದಲ್ಲಿ ಶ್ರದ್ಧೆ ವಹಿಸುವಂತೆ ಬೇಡಿಕೊಳ್ಳಬೇಕು. 3 ಮೈಸೂರು ಸಂಸ್ಥಾನದಲ್ಲಿ ಪ್ರಚಾರವನ್ನು ಕೈಕೊಂಡು ಮೈಸೂರಿನ ಸರಕಾರ ಈ ವಿಷಯದಲ್ಲಿ ಕಾರ್ಯೋನ್ಮುಖ ಆಗುವಂತೆ ಮಾಡಬೇಕು. ಏಕೀಕರಣಕ್ಕಿಂತ ಮುಖ್ಯವಾದ ತೀರ ಆತುರದ ಸಂಗತಿ ಈಗ ಹಲವು ಇವೆ ಎಂದೂ ಪ್ರಾಂತಗಳ ಪುನರ್ವ್ಯವಸ್ಥೆ ಅಷ್ಟು ಆತುರದ ಸಂಗತಿಯಲ್ಲವೆಂದೂ ಅದು ಮುಂದೆ ನಡೆಯಬಹುದೆಂದೂ ನಮ್ಮ ನಾಯಕರು ಕೆಲವರು ಹೇಳುತ್ತಾರೆ. ಜನತೆಯ ಏಳಿಗೆ, ಸ್ವಾತಂತ್ರ್ಯದ ಸಿದ್ಧಿ, ಪ್ರಜಾಪ್ರಭುತ್ವದ ಸಿದ್ಧಿ, ಏಕೀಕರಣವನ್ನು ಅವಲಂಬಿಸಿವೆ.

ಮದ್ರಾಸ ಪ್ರಾಂತದ ಮುಖ್ಯ ಮಂತ್ರಿ ರಾಜಾಜಿಯವರು ಇತ್ತೀಚೆಗೆ ಭಾಷಾನುಗುಣ ಪ್ರಾಂತಗಳನ್ನು ಕುರಿತು ಆಡಿದ ಮಾತುಗಳು ಗಮನಾರ್ಹವು. ಪ್ರಮುಖ ಇಂತಹ ಮಾತು ಕಾರ್ಯದಲ್ಲಿ ರೂಪುಗೊಳ್ಳಬೇಕು. ಕರ್ನಾಟಕ ಪ್ರಾಂತ ಎಷ್ಟು ಬೇಗನೆ ರೂಪುಗೊಂಡರೆ ಅಷ್ಟು ಬೇಗನೆ ಭಾರತ ವರ್ಷದ ಸಮಸ್ಯೆಗಳ ಪರಿಹಾರದಲ್ಲಿ ಕನ್ನಡ ಜನರ ಸಂಪೂರ್ಣ ಶಕ್ತಿ ವಿನಿಯೋಗವಾಗುತ್ತದೆ. ಆದುದರಿಂದ ಭಾಷಾನುಗುಣ ಪ್ರಾಂತರಚನೆ ಆತುರದಿಂದ ನಡೆಯಬೇಕಾದ ಕಾರ್ಯಗಳಲ್ಲಿ ಅತಿ ಆತುರದ ಕಾರ್ಯವೆಂದು ನಾವೆಲ್ಲ ಮನಗಾಣಬೇಕು' ಎಂದರು.

ಜಿಲ್ಲಾ ಕಿ. ಮ. ಪ್ರಜಾಪಕ್ಷದ ರಾಜಕೀಯ ಪರಿಷತ್ತು.

ಗುರುಪುರದ ಸವಿಜಾಪ ಕೈಕಂಬದಲ್ಲಿ ಬೆಳಗಾವಿಯ ಶ್ರೀ ಎಸ್. ಎನ್. ಅಂಗಡಿ, ಅವರ ಅಧ್ಯಕ್ಷತೆಯಲ್ಲಿ ಇದೇ ತಾ. 11ರಂದು ಜರಗಿತು. ಆಚಾರ್ಯ ಜೆ. ಬಿ. ಕೃಪಲಾನಿಯವರು ಪರಿಷತ್ತನ್ನು ಉದ್ಘಾಟಿಸುತ್ತಾ, 'ಇಂದು ಗಾಂಧಿ ವಾದ ಹಾಗೂ ಕಮ್ಯೂನಿಜಂ' ಇವೆರಡೂ ಜನರ ಮುಂದೆ ಇದ್ದು ಇವುಗಳಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗಿದೆ. ಗಾಂಧಿ ವಾದವು ನೈತಿಕವಾದುದಿದ್ದು ಕಮ್ಯೂನಿಜಂ ಭೌತಿಕವಾದುದಾಗಿರುವುದು. ಕಿಸಾನ ಮಜದೂರರ ಪ್ರಜಾಪಕ್ಷವು ಮಹಾತ್ಮಾಜೀಯವರ ತತ್ವ, ಧೋರಣ ಹಾಗೂ ಅರ್ಥ ಶಾಸ್ತ್ರಕ್ಕೆ ಮತ್ತು ಸರ್ವೋದಯಕ್ಕೆ ಅಂಟಿಕೊಂಡಿರುವುದು, ಕಾಂಗ್ರೆಸ್ಸು ನಿಮಗೆ ಬೆಳಕನ್ನು ತೋರಿಸುವುದೆಂದು ನೀವು ತಿಳಿದುಕೊಂಡಿದ್ದರೆ ನಿಮಗೆ ನಿರಾಶೆಯೇ ಆಗುವುದು' ಎಂದರು. ಮುಂದುವರಿಯುತ್ತಾ ಸ್ವಾತಂತ್ರ್ಯ ಸಿಗುವ ಮೊದಲು ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ತಾವು ಸಾಗಿಸಿದ ಹೋರಾಟವನ್ನು ವಿವರಿಸಿ ಸ್ವಾತಂತ್ರ್ಯ ಲಭಿಸಿದ ಮೇಲೆ ಜನತೆ ಕಾಂಗ್ರೆಸ್ ಆಡಳಿತ ಮೇಲೆ ಬೇಸರಪಟ್ಟಿದೆ ಎಂದು ಹೇಳಿ, ದುರಾಡಳಿತ, ಲಂಚಗೋರತನ, ಕಾಳಸಂತೆ ಮೊದಲಾದ ಆರೋಪಗಳನ್ನು ಹೊರಿಸಿ ಈ ಕಾರಣಕ್ಕಾಗಿ ಕಾಂಗ್ರೆಸ್ಸನ್ನು ಶುದ್ಧೀಕರಣ ಮಾಡಲು ತಾವು ಹೊರಬಂದುದಾಗಿ ಹೇಳಿದರು.

ಪರಿಷತ್ತು ಪ್ರಾರಂಭದಲ್ಲಿ ಡಾ। ಕೆ. ನಾಗಪ್ಪ ಆಳ್ವರು ಸ್ವಾಗತ ಭಾಷಣ ಮಾಡಿ ಅತಿಥಿಗಳನ್ನೂ ಪ್ರತಿನಿಧಿಗಳನ್ನೂ ಸ್ವಾಗತಿಸಿದರು. ಅವರು ತಮ್ಮ ಭಾಷಣದಲ್ಲಿ ಕಳೆದ ಮಹಾ ಚುನಾವಣೆಯಲ್ಲಿ ಕಿಸಾನ ಮಜದೂರ ಪ್ರಜಾಪಕ್ಷದವರು ಸಾಕಷ್ಟು ಆರಿಸಿ ಬಾರದ್ದಕ್ಕೆ ತಮ್ಮ ಪಕ್ಷಕ್ಕೆ ಧನಬಲವಿಲ್ಲದ್ದು ಹಾಗೂ ಅದು ಇತ್ತೀಚೆಗೆ ಹುಟ್ಟಿದ ಪಕ್ಷವಿದ್ದದ್ದು ಮತ್ತು ಕಾಂಗ್ರೆಸ್ಸೇತರ ಮತಗಳು ಹಂಗಡಿಸಲ್ಪಟ್ಟದ್ದೇ ಕಾರಣವೆಂದು ಹೇಳಿದರು.

ಸಭಾಧ್ಯಕ್ಷ ಶ್ರೀ ಎಸ್. ಎನ್. ಅಂಗಡಿಯವರು ಶ್ರೀ ಆಚಾರ್ಯ ಕೃಪಲಾನಿಯವರ ಮಾತುಗಳನ್ನು ಪುಷ್ಟೀಕರಿಸಿದರು. ದೇಶಕ್ಕೆ ದೊರೆತ ಸ್ವಾತಂತ್ರ್ಯ ಬಿರ್ಲಾ ದಾಲ್ಮಿಯಾ ಅವರಿಗಲ್ಲದೆ ಸಾಮಾನ್ಯರಿಗಲ್ಲವೆಂದು ಹೇಳಿದರು. ಕಳೆದ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ಸು ಪಾಪ ಮಾರ್ಗ ಅನುಸರಿಸಿ ವಿಜಯಿಯಾಯಿತೆಂದೂ ಕಾಂಗ್ರೆಸ್ಸಿನ ವಿರೋಧಿಗಳಿಗೆ ಕೂಡಾ ಕಾಂಗ್ರೆಸ್ ಟಿಕೇಟು ಕೊಡಲಾಯಿತೆಂದೂ ಹೇಳಿದರು.



ಮದ್ರಾಸಿನಲ್ಲಿ ಡಾ। ಯು. ರಾಮರಾಯರ ನಿಧನ

ದ. ಕ. ಜಿಲ್ಲೆಯ ಉಡುಪಿಯಲ್ಲಿ ಜನ್ಮವೆತ್ತಿ ಇಲ್ಲಿಯೇ ವಿದ್ಯಾಭ್ಯಾಸ ಮುಗಿಸಿ ಮದ್ರಾಸಿಗೆ ಹೋಗಿ ವೈದ್ಯಕೀಯ ಶಿಕ್ಷಣ ಪಡೆದು, ಅಲ್ಲಿಯೇ ವೈದ್ಯ ವೃತ್ತಿಯನ್ನು ಆರಂಭಿಸಿ, ಜನರ ಪ್ರೀತಿಯನ್ನು ಸಂಪಾದಿಸಿ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿ, ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದು ಕೌನ್ಸಿಲ್ ಒಫ್ ಸ್ಟೇಟ್ ಮೆಂಬರರಾಗಿಯೂ ಮದ್ರಾಸ್ ಕೌನ್ಸಿಲಿನ ಅಧ್ಯಕ್ಷರಾಗಿಯೂ ಇದ್ದು ತನ್ನ ಸೇವೆಯನ್ನು ಸಲ್ಲಿಸಿ ವೃದ್ಧಾಪ್ಯ ದೆಸೆಯಲ್ಲಿದ್ದ ಮಾನ್ಯ ಡಾ। ಯು. ರಾಮ ರಾಯರು ಇದೇ ತಾ. 12ರಲ್ಲು ಬೆಳಿಗ್ಗೆ ಸಾಧಾರಣ 3-30 ತಾಸಿಗೆ ತಮ್ಮ 80ನೇ ವಯಸ್ಸಿನಲ್ಲಿ ಸ್ವಗೃಹದಲ್ಲಿ ಆಕಸ್ಮಿಕ ದೈವಾಧೀನರಾದರು. ವೈದ್ಯರಾಗಿಯೂ ರಾಜಕಾರಣಿಗಳಾಗಿಯೂ ಇವರು ವಿಶೇಷ ಕೀರ್ತಿಯನ್ನು ಗಳಿಸಿದ್ದಾರೆ. ಜನತೆಯ ಆರೋಗ್ಯ ಬೋಧನೆಗಾಗಿ ಆರೋಗ್ಯ ಚಂದ್ರಿಕೆ ಮೊದಲಾದ ಪತ್ರಿಕೆಗಳನ್ನು ಬೇರೆ ಬೇರೆ ಭಾಷೆಗಳಲ್ಲಿ ನಡೆಸುತ್ತಿದ್ದರು.

ಇವರ ನಿಧನದ ಕುರಿತು ಅಂದೇ ಮದ್ರಾಸು ಶಾಸನಸಭೆಯಲ್ಲಿ ವಿಷಾದ ಸೂಚಕ ಗೊತ್ತುವಳಿಯು ಒಂದು ನಿಮಿಷ ಮೌನವ್ರತವನ್ನಾಚರಿಸಿ ಸ್ವೀಕರಿಸಲ್ಪಟ್ಟಿತು. ಶ್ರೀ ಸಿ. ರಾಜಗೋಪಾಲಾಚಾರಿಯವರು ಮಾತನಾಡುತ್ತ, ಮದ್ರಾಸಿನ ಮುಖ್ಯ ವ್ಯಕ್ತಿಗಳಲ್ಲಿ ಡಾ। ಯು. ರಾಮರಾಯರೊಬ್ಬರೆಂದು ಹೇಳಿ, ಅವರು ಮಾಡಿದ ಸೇವೆಯನ್ನು ಕೊಂಡಾಡಿದರು.

ಇವರ ಹಿರಿಯ ಪುತ್ರ ಡಾ। ಕೃಷ್ಣರಾಯರು ಈಗ ರಾಜಾಜಿ ಮಂತ್ರಿಮಂಡಲದಲ್ಲಿ ಕೈಗಾರಿಕಾ ಮಂತ್ರಿಗಳಾಗಿದ್ದಾರೆ. ಇನ್ನೊಬ್ಬ ಪುತ್ರ ಡಾ। ಮೋಹನರಾಯರು ಪ್ರಸಿದ್ಧ ಸರ್ಜನರಾಗಿದ್ದಾರೆ.

Mahatma Gandhi Memorial College,

UDIPI.

College reopens for admissions on June 16, 1952. Copies of the Prospectus and application Forms can be had from the Principal's office, and intending candidates for admission may register their applications from now

The College offers instruction in all the Science Groups and a number of Arts subjects in different combinations under Part III; and Hindi, Sanskrit and Kannada under Part II of the Intermediate course. A small Hostel is attached.

H. Sunder Rao, M. A.,
Principal.

The Catholic Bank, Ltd.

UDIPI BRANCH.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬ್ಯಾಂಕಿನಿಂದ ಚಿನ್ನಾಭರಣದ ಈಡಿನ ಮೇಲೆ ಪಡೆದ ಸಾಲವನ್ನೂ, ಅದರ ಬಡ್ಡಿಯನ್ನೂ ಸಲ್ಲಿಸದೆ ಇರುವುದರಿಂದಲೂ, ಅಲ್ಲದೆ ಕ್ರಮವಾದ ರಿಜಿಸ್ಟ್ರ ನೋಟೀಸು ಕೊಟ್ಟರೂ ಕೂಡಾ ಪಡಕೊಂಡು ಕೊಟ್ಟ ವಾಯಿದೆಗೆ ಬಿಡಿಸದೆ ಇದ್ದುದರಿಂದಲೂ ಎದುರುದಾರರಿಗೆ, ಅವರ ವಾರೀಸು ದಾರರಿಗೆ, ಈ ಡಿಪ್ಪ ನಗಗಳನ್ನು ಇದೇ ತಿಂಗಳ ತಾರೀಕ, 17ನೇ ಶನಿವಾರ ಘಂಟೆ 3ಕ್ಕೆ ಬ್ಯಾಂಕಿನ ಮಹಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು, ಅದೇ ದಿವಸ ಪೂರ್ತಿ ಆಗದಿದ್ದಲ್ಲಿ ಪುನಹಾ ನೋಟೀಸು ಕೊಡದೇನೆ ಇನ್ನಿತರ ಬ್ಯಾಂಕಿಗೆ ಯುಕ್ತ ಕಂಡ ದಿನದಲ್ಲಿ ಬ್ಯಾಂಕಿನ ಆಫೀಸಿನಲ್ಲಿ ಏಲಂ ಮಾಡಲ್ಪಡುವುದೆಂದು ಈ ಮೂಲಕ ತಿಳಿಸೋಣಾಗಿದೆ—

J. L. No	ಹೆಸರು ಮತ್ತು ವಿಳಾಸ	ಮೊಬಲಗು ರೂ.	ಆ.
26/1573 10—7—50	ಇನಾಸ್ ಪಿ. ನೇಜ್, ದಾನಿಯೇಲ್ ಮಿನೇಜರ ಮಗ ಮೂಡುಬೆಳ್ಳೆ ಪೋಸ್ಟ್.	70	0
26/1581 11—7—50	A. ವಿಶ್ವನಾಥ ಹೆಗ್ಡೆ ರಾಮಣ್ಣ ಹೆಗ್ಡೆಯವರ ಅಳಿಯ, ಅಂಜಾರು ಗ್ರಾಮ ಹಿರಿಯಡ್ಕ ಪೋಸ್ಟು.	50	0
26/1614 13—7—50	K. ಅನಂತ ಸೆಟ್ಟಿ ಅಚ್ಚಣ್ಣ ಸೆಟ್ಟಿ ಮಗ ಅಂಬಲಪಾಡಿ, ಉಡುಪಿ ಪೋಸ್ಟ್.	35	0
26/1658 19—7—50	ಜಾಕೋಬ್ ಡಿ'ಸೋಜ ಲೋರೆನ್ಸ್ ಡಿ'ಸೋಜರ ಮಗ ಶಿವಳ್ಳಿ, ಕಲ್ಯಾಣಪುರ ಪೋಸ್ಟ್.	[illegible]	[illegible]
26/1783 31—7—50	ಅಜೀಜ್ ಅಹ್ಮದ್ ಸಾಹೇಬ್, ಹಾಜಿ ಅಬ್ದುಲ್ ರಜಾಕು ಸಾಹೇಬರ ಮಗ ಮಸೀದಿ ರಸ್ತೆ ಉಡುಪಿ.	95	0

Office of the Catholic Bank Ltd., Udipi 13—5—1952.

V. J. Andrade.
Agent.

ಮಂಗಳೂರು

ಅಡಿಕೆ, ಬೆಲ್ಲಕ್ಕೆ ಲೈಸನ್ಸ್ ಬೇಕು ಜಿಲ್ಲಾ ಬೋರ್ಡಿನ ನಿರ್ಣಯ-ಅಡಿಕೆ ನಮ್ಮ ಜಿಲ್ಲೆಯ ಪ್ರಾಮುಖ್ಯ ಉತ್ಪತ್ತಿಗಳಲ್ಲೊಂದಾಗಿದೆ. ಅಡಿಕೆಯನ್ನು ರಖಂ ಅಗಿ ದಾಸ್ತಾನು ಮಾಡುವುದು ಅಥವಾ ಮಾರಾಟ ಮಾಡುವುದು ಸಾರ್ವಜನಿಕ ಆರೋಗ್ಯಕ್ಕೆ ಹಾನಿಕರವಾಗಿದೆಂಬ ಭಾವನೆಯಿಂದ ಅಂತಹ ಜನರು ಆ ಬಗ್ಗೆ ಫೀಸು ಕೊಟ್ಟು ಜಿಲ್ಲಾ ಬೋರ್ಡಿನ ಅಧ್ಯಕ್ಷರಿಂದ ಲೈಸನ್ಸು ತೆಗೆದುಕೊಳ್ಳಬೇಕೆಂಬ ನಿಯಮವಿತ್ತು. ಆದರೆ ಈಚೆಗೆ ಆ ವಿಚಾರದಲ್ಲಿ ತನಿಖೆ ನಡೆಯಿಸಿ ಯೋಗ್ಯರಿಂದ ಸಲಹೆಗಳನ್ನು ಪಡೆದು ಅಡಿಕೆಯ ರಖಂ ಮಾರಾಟ ಅಥವಾ ದಾಸ್ತಾನಿನ ಬಗ್ಗೆ ಇದೇ ತಾ. 1-5-52ರಿಂದ ಲೈಸೆನ್ಸು ಪಡೆಯುವ ಅಗತ್ಯವಿಲ್ಲವೆಂದು ಜಿಲ್ಲಾ ಬೋರ್ಡು ನಿಶ್ಚಯಿಸಿರುತ್ತದೆ. ಬೆಲ್ಲದ ಕೈಗಾರಿಕೆಯು ನಮ್ಮ ಜಿಲ್ಲೆಯ ಚಿಕ್ಕಪುಟ್ಟ ಕೈಗಾರಿಕೆಗಳಲ್ಲಿ ಅತಿ ಪ್ರಾಮುಖ್ಯವಾದುದು. ಈ ತನಕ ಬೆಲ್ಲ ತಯಾರಿಸುವ ಪ್ರತಿಯೊಬ್ಬ ವ್ಯಕ್ತಿಯೂ ನಿಯುಕ್ತ ಫೀಸು ಕೊಟ್ಟು ಜಿಲ್ಲಾ ಬೋರ್ಡಿನ ಅಧ್ಯಕ್ಷರಿಂದ ಲೈಸೆನ್ಸು ಪಡೆದುಕೊಳ್ಳಬೇಕಿತ್ತು. ಈ ವಿಚಾರವನ್ನು ಸಹ ಜಿಲ್ಲಾ ಬೋರ್ಡು ವಿಮರ್ಶಿಸಿ ಯೋಗ್ಯರ ಸಲಹೆಗನುಸಾರವಾಗಿ ಇದೇ ತಾ. 1-4-52ರಿಂದ ಬೆಲ್ಲವನ್ನು ತಯಾರಿಸುವ ಸ್ಥಳದ ಬಗ್ಗೆ ಮಾತ್ರ ಲೈಸನ್ಸು ಪಡೆಯಬೇಕಲ್ಲದೆ, ಪ್ರತಿಯೊಬ್ಬ ವ್ಯಕ್ತಿಯೂ ಲೈಸೆನ್ಸು ಪಡೆಯುವ ಅಗತ್ಯವಿಲ್ಲವೆಂದು ನಿರ್ಣಯ ಮಾಡಿರುತ್ತಾರೆ. ಈ ವಿಚಾರದಲ್ಲಿ ಆಗತ್ಯವಿರುವ ಹುಕುಂ ಹಾಗೂ ಸೂಚನೆಗಳನ್ನು ಸಂಬಂಧಪಟ್ಟ ನೌಕರರಿಗೆ ಈಗಾಗಲೇ ಕೊಟ್ಟಿರುತ್ತದೆ.

ಕೇಂದ್ರ ಅಡಿಕೆ ಸಮಿತಿಗೆ—ಅ. ಭಾ. ಅಡಿಕೆ ಫೆಡರೇಶನಿನ ಸೂಚನೆಯಂತೆ ಫೆಡರೇಶನಿನ ಅಧ್ಯಕ್ಷ ಶ್ರೀ ಎನ್. ಶ್ರೀಕಂಠಯ್ಯನವರನ್ನೂ ಒಬ್ಬ ಸದಸ್ಯರಾಗಿ ಕೇಂದ್ರ ಸರಕಾರವು ಆರಿಸಿಕೊಂಡಿದೆ ಎಂದು ತಿಳಿದು ಬರುತ್ತದೆ.

ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿ ಸಭೆಯು-ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ದಿವಂಗತ ಖಜಾನ್ಚಿ ಶ್ರೀ ಎಮ್. ವೆಂಕಟೇಶ ಪೈ ಅವರ ಸ್ಥಾನದಲ್ಲಿ ಶ್ರೀ ಎಮ್. ಅಪ್ಪುರಾಯರನ್ನು ಸಂಘದ ಖಜಾನ್ಚಿಯರನ್ನಾಗಿ ಆರಿಸಲಾಯಿತು. ಸಂಘದಲ್ಲಿರುವ ಹಣ ಕಾಸನ್ನು ಪ್ರಬುದ್ಧರ ಶಿಕ್ಷಣ ಕಾರ್ಯದಲ್ಲಿ ಉಪಯೋಗಕರವಾಗುವಂತೆ ವಿನಿಯೋಗಿಸಿ ಆ ಹಣವನ್ನು ವಯಸ್ಕರ ಶಿಕ್ಷಣ ವಾರದಲ್ಲಿ ಸಂಗ್ರಹಿಸುವಂತೆ ತೀರ್ಮಾನಿಸಲಾಯಿತು. ಈ ಶಿಕ್ಷಣ ಶಾಲೆಗಳನ್ನು ನಡೆಸುವಂತೆ ಗಿಲ್ಡ್ ಸರ್ವಿಸ್, ಭಗಿನೀ ಸಮಾಜ, ಸೈಂಟ್ ಎಲೋಶಿಯಸ್ ಕಾಲೇಜಿನ ಸೋಶಿಯಲ್ ಸರ್ವಿಸ್ ಲೀಗ್, ಗವರ್ನಮೆಂಟ್ ಕಾಲೇಜಿನ ಸಮಾಜ ಸೇವಾ ಸಂಘ, ವೈ. ಎಮ್. ಸಿ. ಎ. ಇಂಥ ಸ್ವಯಂಸೇವೆಯ ಕ್ಷೇಮಾಭಿಂತನಾ ಸಂಘಗಳನ್ನು ಕೇಳಿಕೊಳ್ಳಬೇಕು. ಮೇಜರ್ ಪಂಚಾಯತ ಬೋರ್ಡುಗಳ ಅಧ್ಯಕ್ಷರು ತಮ್ಮ ನಗರಗಳಲ್ಲಿ ಈ ಶಾಲೆಗಳನ್ನು ನಡೆಸುವಂತೆ ಏರ್ಪಾಡಾಗತಕ್ಕದ್ದು; ಚುನಾಯಿಸಿದ ದೇವಸ್ಥಾನದ ಟ್ರಸ್ಟಿಗಳು ಈ ಶಿಕ್ಷಣದ ತರಗತಿಗಳನ್ನು ನಡೆಸುವಂತೆ ಅವರಲ್ಲಿ ವಿನಂತಿಸತಕ್ಕದ್ದು; ಅಲ್ಲದೆ ಚುನಾಯಿಸಿದ ಫಿರ್ಕಗಳಲ್ಲಿ ಸಾಧ್ಯವಿರುವಷ್ಟು ಕಡೆ ಈ ಶಾಲೆ ತೆರೆದು ಈ ಶಿಕ್ಷಣದ ಪ್ರಚಾರವನ್ನು ಹೆಚ್ಚಿಸುವಂತೆ ಗ್ರಾಮಾಂತರದ ವೆಲ್‌ಫೇರ್ ಆಫೀಸರರಿಗೆ ತಿಳಿಸತಕ್ಕದ್ದೆಂದು ನಿರ್ಧರಿಸಲಾಯಿತು. ಈ ತಿಂಗಳ ತಾ. 17ರಲ್ಲು ಕಲ್ಲಿಕೋಟೆಯಲ್ಲಿ ಜರಗಲಿರುವ ವಯಸ್ಕರ ಶಿಕ್ಷಣ ಸಮ್ಮೇಳನದ ಎಂಡನೆ ಅಧಿವೇಶನಕ್ಕೆ ಈ ಸಂಘದ ಪ್ರತಿನಿಧಿಯಾಗಿ ಇಲ್ಲಿಯ ಗವರ್ನಮೆಂಟ್ ಕಾಲೇಜಿನ ಲೆಕ್ಚರರ್ ಶ್ರೀ ಕೆ. ಎ. ಜೊಸೆಫರನ್ನು ಆರಿಸಲಾಯಿತು.

ಮುನಿಸಿಪಲ್ ವರ್ಕರ್ಸ್ ಯೂನಿಯನ್ ಸಭೆಯು—ಇದೇ ತಾ 4ರಲ್ಲು ಸಂಜೆ ಶ್ರೀ ಎಂ ಕೃಷ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಮುನಿಸಿಪಲ್ ಮಜೂರರ ಮೇಲಾಗುತ್ತಿರುವ ಜುಲ್ಮಾನೆ, ಸಸ್ಪೆಂಡ್ ಮೊದಲಾದ ಅನ್ಯಾಯ ಕೂಡಲೆ ಅಂತ್ಯವಾಗಬೇಕೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿಕೊಳ್ಳುವ ನಿರ್ಣಯವಾಯಿತು.

ಶಾಸನ ಸಭಾ ಕಾರ್ಯಾಂಗ ಶಾಖೆಯೊಂದನ್ನು—ತೆರೆಯುವ ನಿರ್ಣಯವನ್ನು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ ಕಮಿಟಿಯು ಈಗಾಗಲೇ ಮಾಡಿರುವುದಲ್ಲದೆ ಆ ಬಗ್ಗೆ ಒಬ್ಬ ಜಿಲ್ಲಾ ಸಂಚಾಲಕರನ್ನು ನೇಮಿಸಲಾಗಿದೆ. ಅವರಿಗೆ ಒಂದ ಕಚೇರಿಯೂ ಸಿಬಂದಿಯೂ ಇರುವುದು. ಜನತೆಯ ದೂರುಗಳನ್ನು ಸಂಕಷ್ಟಗಳನ್ನು ಸಂಗ್ರಹಿಸಿ ಅವನ್ನು ನಿವಾರಿಸುವ ಪ್ರಯತ್ನವಾಗಿ ಜನತೆಯ ಸಂಪರ್ಕವನ್ನು ಇಟ್ಟುಕೊಳ್ಳುವುದು ಪ್ರಾಮುಖ್ಯ ಕೆಲಸವಾಗಿದೆ. ಪ್ರತಿಯೊಬ್ಬ ಶಾಸನ ಸಭಾ ಸದಸ್ಯನೂ ತಕ್ಕ ಕ್ಷೇತ್ರದಲ್ಲಿನ ಜನರ ಬೇಡಿಕೆಗಳೇನೆಂಬುದನ್ನು ಸಂಗ್ರಹಿಸಬೇಕೆಂದು ಜಿಲ್ಲಾ ಕಾಂಗ್ರೆಸ್ ಕಮಿಟಿಯು ಅವರನ್ನು ಕೇಳಿಕೊಂಡಿದೆ. ಎಂದು ತಿಳಿದುಬರುತ್ತದೆ.

ಸ್ವಸ್ತಿಕ್ ಲಾಜ್—ಎಂಬ ಆತಿಥ್ಯಯುಕ್ತ ರೀತಿಯ ಊಟ-ವಸತಿ ಗೃಹವೊಂದನ್ನು ಫಳ್ನೀರು ರಸ್ತೆಯಲ್ಲಿ ತಾ 4ರಲ್ಲಿ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂರವರು ಉದ್ಘಾಟಿಸಿದರು

ಕಾಸರಗೋಡಿನಲ್ಲಿ ಆಚಾರ್ಯ ಕೃಪಾಲಾನಿಯವರು—ತಾ. 8ರಂದು ಬಂದಿಳಿದಾಗ ಅಲ್ಲಿಯ ಪ್ರಜಾಪಾರ್ಟಿಯ ನಾಯಕರು ಶ್ರೀಗಳಾದ ಕೆ. ಸಿ ಆಳ್ವ, ಬಿ.ಎಸ್. ಕಕ್ಕಿಲ್ಲಾಯ, ಡಾ| ಪಿ. ಎನ್. ಭಟ್ ಮೊದಲಾದವರು ಅವರನ್ನು ಸ್ವಾಗತಿಸಿದರು. ಬಳಿಕ ಮಲ್ಲಿಕಾರ್ಜುನ ದೇವಾಲಯದ ಎದುರುಗಡೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತ 35 ವರ್ಷ ಕಾಂಗ್ರೆಸಿನಲ್ಲಿದ್ದ ತಾನೇಕೆ ಕಾಂಗ್ರೆಸನ್ನು ಬಿಟ್ಟೆನೆಂಬುದನ್ನು ವಿವರಿಸಿದರು. ಗಾಂಧೀಜಿಯವರು ದೇಶದ ಬಡತನ ಹೋಗಬೇಕೆಂದು ಬ್ರಿಟಿಷರನ್ನು ಈ ದೇಶದಿಂದ ತೊಲಗಿಸಿದರು. ಆದರೆ ಅವರು ಹೋದರೂ ತಮ್ಮ ಸಂಕಷ್ಟ ದೂರವಾಗಿಲ್ಲ, ಆಗಿನ ಆಡಳಿತ ರೀತಿಯೇ ಇನ್ನೂ ಇದ್ದು ನಮ್ಮ ಕಷ್ಟಗಳು ಹೆಚ್ಚುಹೆಚ್ಚಾಗುತ್ತಿವೆ. ಕಾಂಗ್ರೆಸಿನ ಈಗಿನ ರೀತಿನೀತಿ ನಿಮಗೆ ಒಪ್ಪಿಗೆಯಾದರೆ ಆ ಪಕ್ಷಕ್ಕೇ ಬೆಂಬಲ ಕೊಡಿರಿ ಹಾಗಿಲ್ಲವಾದರೆ ನಮ್ಮ ಪಕ್ಷಕ್ಕೆ ಬೆಂಬಲಕೊಡಿರಿ ಎಂದು ಕೇಳಿಕೊಂಡರು-ಸಭಾರಂಭದಲ್ಲಿ ಶ್ರೀ ಕಕ್ಕಿಲ್ಲಾಯರು ಸಭಿಕರಿಗೆ ಆಚಾರ್ಯರ ಪರಿಚಯ ಮಾಡಿಕೊಟ್ಟರು.

ಮುಂಡ್ಕೂರು—ಇಲ್ಲಿಯ ಬೋರ್ಡು ಹಾ। ಎ। ಶಾಲೆಯ ವರ್ಧಂತ್ಯುತ್ಸವವು ಕಳೆದ ತಾ. 27ರಲ್ಲು ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಬೆನಗಲ್ ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ವಕೀಲ್ ಶ್ರೀ ಎಮ್. ಶ್ರೀನಿವಾಸ ಕಾಮತರು ರಾಷ್ಟ್ರ ಧ್ವಜಾರೋಹಣ ಮಾಡಿದರು. ಗ್ರಾಮ ಸೇವಾ ಸಂಘ, ಮತ್ತು ಪಂಚಾಯತ ಬೋರ್ಡಿನ ಪರವಾಗಿ ಅಧ್ಯಕ್ಷರಿಗೆ ಭಿನ್ನವತ್ತಳೆ ಅರ್ಪಿಸಲಾಯಿತು. ಅದರಲ್ಲಿ ಸೂಚಿಸಿದ ಕೇಳಿಕೆಗಳ ಸಫಲತೆಗಳಿಗಾಗಿ ತಾನು ಕೈಲಾದಷ್ಟು ಪ್ರಯತ್ನಿಸುವೆನೆಂದು ಅಧ್ಯಕ್ಷರು ಹೇಳಿದರು. ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಪ್ರಗತಿಯನ್ನು ಪ್ರಶಂಸಿಸಿ ಈ ಶಾಲೆಯನ್ನು ಹೈಸ್ಕೂಲಾಗಿ ಮಾಡುವ ಪ್ರಯತ್ನ ನಡೆಯಬೇಕೆಂದು ಸೂಚಿಸಿದರು.

ತೆಕ್ಕಟ್ಟೆ—ಇದೇ ತಾ. 6ರಂದು ಬೆಳಗ್ಗೆ ತೆಕ್ಕಟ್ಟೆ ಪೇಟೆಯ ಮಧ್ಯಭಾಗದಲ್ಲಿರುವ ಸಾಹುಕಾರ್ ವೈಕುಂಠ ಶ್ಯಾನುಭಾಗರ ಮನೆ ಪಟ್ಟೆಯಲ್ಲಿ ಅವಿತಿದ್ದ ಚಿಟ್ಟೆಪುಲಿಯೊಂದನ್ನು ಶ್ರೀ ಕೆದೂರ ವಿಠಲ ಭಂಡಾರಿಗಳು ಅತಿ ಸಾಹಸದಿಂದ ತನ್ನ ಒತ್ತೆನಳಿಗೆ ಕೋವಿಯಿಂದ ಕೊಂದಿರುತ್ತಾರೆ

ಫಿರ್ಕಾಭಿವೃದ್ಧಿ ಕಾರ್ಯ

ಕುಂಬಳೆ—ಫಿರ್ಕಾದಲ್ಲಿ ಕಳೆದ ತಿಂಗಳಲ್ಲಿ 23 ಎಕ್ರೆ ಬಂಜರು ಭೂಮಿಯು ಸಮತಟ್ಟು ಮಾಡಲಾಯಿತು. ಒಂಭತ್ತು ಜೇನುಗೂಡು ಮತ್ತು ಹತ್ತು ಚರಕಗಳು ಇಡಲ್ಪಟ್ಟವು.

ಮಂಜೇಶ್ವರ—ಫಿರ್ಕಾದಲ್ಲಿ ಮೂರು ಜೇನುಗೂಡು ಮತ್ತು 24 ಚರಕಗಳು ಇಡಲ್ಪಟ್ಟವು ವಿದ್ಯಾರ್ಥಿಗಳ ಸಹಕಾರಿ ಸಂಘವೊಂದು ಸ್ಥಾಪಿಸಲ್ಪಟ್ಟಿತು.

ಪುತ್ತೂರು—ಫಿರ್ಕಾದಲ್ಲಿ ಕುಷ್ಠರೋಗ ನಿವಾರಣಾ ಕಾರ್ಯವು ಪ್ರಾರಂಭಿಸಲಾಯ್ತು. ಈ ಕುರಿತು ಐದು ಮಾಯಾಲಾಂದ್ರ ಪ್ರದರ್ಶನಗಳಾದುವು ನಿಡಂಬೂರು ಶಾಲೆಯ ಸಲವಾಗಿ ಎರಡು ವಿನೋದಾವಳಿಗಳು ಏರ್ಪಡಿಸಲ್ಪಟ್ಟು ಸಾಧಾರಣ ಒಂದು ಸಾವಿರ ರೂಪಾಯಿ ಸಂಗ್ರಹಿಸಲಾಯಿತು. ಹೊಸ ಪುಸ್ತಕ ಭಂಡಾರ ಮತ್ತು ಹಿಂದೀ ವರ್ಗವು ತೆರೆಯಲ್ಪಟ್ಟಿತು. ತಾಳಿಪ್ಪಾಡಿ ಹರಿಜನರ ಸಾರ್ವಜನಿಕ ಮಂದಿರದ ಉದ್ಘಾಟನೆಯನ್ನು ಜಿಲ್ಲಾ ಕಲೆಕ್ಟರು ನೆರವೇರಿಸಿದರು. 13 ಚರಕಗಳು ಮತ್ತು ಆರು ಜೇನುಗೂಡುಗಳು ಇಡಲ್ಪಟ್ಟವು

ಜಿಲ್ಲಾ ಬೋರ್ಡಿಗೆ ಕೆಮ್ಮಣ್ಣು ಗ್ರಾಮೋದ್ಧಾರಕ ಕಮಿಟಿ ಮನವಿ-ಕಲ್ಯಾಣಪುರ-ಕೆಮ್ಮಣ್ಣು ರಸ್ತೆಯು ತೀರಾ ಹಾಳಾಗಿದ್ದು, ಜನವಾಹನ ಸಂಚಾರ ಸೌಕರ್ಯಕ್ಕೆ ತುಂಬಾ ಆನಾನುಕೂಲತೆಗಳನ್ನುಂಟು ಮಾಡಿರುವುದರಿಂದ ಅದನ್ನು ದುರಸ್ತಿ ಮಾಡಬೇಕೆಂದು ಜಿಲ್ಲಾ ಬೋರ್ಡನ್ನು ವಿನಂತಿಸುವ ಮನವಿಯೊಂದನ್ನು ಜಿಲ್ಲಾ ಬೋರ್ಡಿಗೆ ಕೆಮ್ಮಣ್ಣು ಗ್ರಾಮೋದ್ಧಾರ ಕಮಿಟಿಯು ಕಳುಹಿಸಿಯದೆ. ಈ ಕುರಿತು ಜಿಲ್ಲಾ ಬೋರ್ಡು ತಕ್ಕ ನಿಗಾ ಕೊಡುವುದೆಂದು ನಂಬಲಾಗಿದೆ.

ಕುಂಬಳೆ—ಇಲ್ಲಿಯ ಗ್ರಾಮ ಸಂಘದ ಆಶ್ರಯದಲ್ಲಿ ನಡೆಯುತ್ತಿದ್ದ ಬ್ಯಾಡ್‌ಮಿಂಟನ್ ಟೂರ್ನಮೆಂಟಿನ ಕಡೇ ಆಟವು ತಾ. ೧೦ರಂದು ಕುಂಬಳೆ ಲಕ್ಕಿಸ್ಟಾರ್ ಎ. ಟೀಮ್ ಮತ್ತು ಕುಂಬಳೆ ರೋಜಸ್ ಎ. ಟೀಮ್ ಇವರೊಳಗೆ ನಡೆದು ಮೊದಲಿನವರು ಗೆದ್ದರು. ಈ ಸಂಬಂಧ ಇನಾಮು ಹಂಚುವ ಸಮಾರಂಭವು ಅಂದು ಅಪರಾಹ್ನ ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಬಿ. ನಾರಾಯಣ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ಕನ್ನಡ ಸಾಹಿತ್ಯ ಸಮ್ಮೇಳನ, ಬೇಲೂರು

ಸಂಕ್ಷಿಪ್ತ ಕಾರ್ಯಕ್ರಮ—ತಾ. 15-5-52 ಗುರುವಾರ ಸಂಜೆ ಘಂಟೆ 6-30 ಸಮ್ಮೇಳನಾಧ್ಯಕ್ಷರ ಮೆರವಣಿಗೆ

ತಾ. 16-5-52 ಶುಕ್ರವಾರ ಬೆಳಗ್ಗೆ 7-0 ಘಂಟೆಗೆ ಧ್ವಜಾರೋಹಣ, ಸಂಜೆ 4-0 ಘಂಟೆಗೆ ಸಮ್ಮೇಳನದ ಆರಂಭೋತ್ಸವ, ರಾತ್ರಿ 9-30 ಘಂಟೆಗೆ ನಾಟಕ "ಗದಾಯುದ್ಧ" ಯುನೈಟೆಡ್ ಆರ್ಟಿಸ್ಟರಿಂದ

17-5-52 ಶನಿವಾರ ಬೆಳಗ್ಗೆ 8-30 ಘಂಟೆಗೆ ಗಮಕಗೋಷ್ಠಿ ಅಧ್ಯಕ್ಷರು ಶ್ರೀ ಕೃಷ್ಣಗಿರಿ ಕೃಷ್ಣರಾಯರು, 11-0 ಘಂಟೆಗೆ ಸಾಹಿತಿಗಳ ಪರಿಚಯ, ಮಧ್ಯಾಹ್ನ 3-0 ಘಂಟೆಗೆ ಮಹಿಳಾಗೋಷ್ಠಿ-ಅಧ್ಯಕ್ಷೆಯರು ಶ್ರೀ ಹೆಚ್. ವಿ. ಸಾವಿತ್ರಮ್ಮ ಬಿ. ಎ. ರವರು, ಸಂಜೆ 5-30 ಘಂಟೆಗೆ ಸಮ್ಮೇಳನದ ಅಧಿವೇಶನ, ರಾತ್ರಿ 9-30 ಘಂಟೆಗೆ ನಾಟಕ "ಸಾಮ್ರಾಟ್ ಶಹಜಹಾಂ" ಬೇಲೂರು ಸಂಘದವರಿಂದ

ತಾ. 18-5-52 ಭಾನುವಾರ ಬೆಳಗೆ 8-30 ಘಂಟೆಗೆ ಸಮ್ಮೇಳನದ ಅಧಿವೇಶನ ಮಧ್ಯಾಹ್ನ 3-0 ಘಂಟೆಗೆ ವಿಜ್ಞಾನಗೋಷ್ಠಿ-ಅಧ್ಯಕ್ಷರು-ಶ್ರೀ ಪದ್ಮನಾಭ ಪುರಾಣಿಕ್ ಎಂ. ಎಸ್. ಸಿ. ರವರು, ಸಂಜೆ 6-0 ಘಂಟೆಗೆ ಬಹಿರಂಗ ಅಧಿವೇಶನ, ರಾತ್ರಿ 9-30 ಘಂಟೆಗೆ ನೃತ್ಯ-ಶ್ರೀ ಯು ಎಸ್. ಕೃಷ್ಣರಾವ್ ಮತ್ತು ಶ್ರೀಮತಿ ಚಂದ್ರಭಾಗಾ ದೇವಿರವರಿಂದ

ಮದುವೆ, ಉಪನಯನ ಮತ್ತಿತರ ಯಾವತ್ತೂ
ಶುಭ ಸಮಾರಂಭಗಳ ಕಾಲದಲ್ಲಿ ಏರ್ಪಡಿಸುವ
ಟೀಪಾರ್ಟಿ ಸತ್ಕಾರ ಸಮಾರಂಭಗಳು
ಎಷ್ಟೇ ದೊಡ್ಡ ಪ್ರಮಾಣದಲ್ಲಿದ್ದರೂ ತೃಪ್ತಿಕರವಾಗಿ
ಯೋಗ್ಯ ವ್ಯವಸ್ಥೆಯೊಂದಿಗೆ ನಾವು ಪೂರೈಸಿ ಕೊಡುತ್ತೇವೆ.
ಮಹಾ ಜನರು ಗಮನಿಸಬೇಕು.
ತಾಜಮಹಾಲ್. ಸಿನೆಮಾ ಥಿಯೇಟರಿನ ಬಳಿ ಉಡುಪಿ.

ಧರ್ಮದ ಮರೆಯಲ್ಲಿ ಧರ್ಮದರ್ಶಿಗಳು?

ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿಯುವುದಂತೆ! ಮನುಷ್ಯರಲ್ಲೂ ಅಂತಹ ಬುದ್ಧಿಯವರು ಇಲ್ಲದಿಲ್ಲ. 'ಯಾರಾದರೂ ನೋಡಿಯಾರು, ಹಿಡಿದುಬಿಟ್ಟಾರು' ಎಂದು ಬೆಕ್ಕು ಕಣ್ಣು ಮುಚ್ಚಿಕೊಳ್ಳುವಂತೆ, ಮನುಷ್ಯನು ಕೂಡ–ಧರ್ಮ, ನ್ಯಾಯ, ನೀತಿಯೇ ಮೊದಲಾದವುಗಳ ಮರೆಮಾಡಿ, ತನ್ನ ಬಯಕೆಯನ್ನು ಪೂರೈಸಿಕೊಳ್ಳುತ್ತಾನೆ, ತನ್ನ ಕುಯುಕ್ತಿ ಯಾರಿಗೂ ತಿಳಿಯದು ಎಂಬುದು ಅವನ ಎಣಿಕೆ. ಅದನ್ನು ಹಾಗೆ ಬಿಟ್ಟರೆ ಅದು ಬೆಳೆಯುತ್ತದೆ, ಮತ್ತೆ ಸಮಾಜವನ್ನೇ ಹಾಳು ಮಾಡೀತು.

ಇದು ಯಾರಿಗೆ ಬೇಕು? ಇದನ್ನು ಕಂಡು ಯಾವ ನಯವಿದನು ಸುಮ್ಮನಿದ್ದಾನು? ತನ್ನ ಪರಂಪರೆಯ ಸನಾತನ ತತ್ವಗಳನ್ನು ಹಾಳು ಮಾಡಿ ಕಹಿಬೆರೆಸುವುದನ್ನು ಯಾವನು ಸಹಿಸಿಯಾನು? ಸತ್ಯಕ್ಕೆ ಮುಚ್ಚುಮರೆಯಿಲ್ಲ. ಆ ಸತ್ಯದ ದುರ್ಬೀನಿನ ಸಹಾಯದಿಂದ ಇಂದಿನ 'ಧರ್ಮರಕ್ಷಕ'ರತ್ತ ನೋಡಿದರೆ ಕಣ್ಣೀರು ಬರುವುದು.

ಧರ್ಮ ಹುಟ್ಟಿಕೊಂಡುದು ಅನ್ಯಾಯಕ್ಕಾಗಿ ಅಲ್ಲ. ಮೇಲು ಕೀಳೆಂಬ ಹೇಯ ಕಲ್ಪನೆಯನ್ನು ಸೃಷ್ಟಿಸಿ, ದ್ವೇಷದೋಷವನ್ನು ಬೆಳೆಸುವುದಕ್ಕೂ ಅಲ್ಲ. ಅವೆಲ್ಲ ಧರ್ಮರಕ್ಷಕರೆಂದು ಹೇಳಿಕೊಳ್ಳುವ ಸಂಕುಚಿತ ಸ್ವಾರ್ಥಸಾಧಕರ ಕೀಳುಬುದ್ಧಿಯಿಂದ ಬಂದುವು.

ತಮ್ಮ ಧರ್ಮ ಪಂಥಗಳನ್ನು ಕಾಪಾಡಲಿಕ್ಕೆಂದು ಜನತೆಯನ್ನು ಸುಧಾರಿಸಿ ಸಂಘಟಿಸಲಿಕ್ಕೆಂದು, ತಮ್ಮ ಪಂಗಡದಿಂದ ಒಬ್ಬ ಚತುರನನ್ನು ಆರಿಸಿ, ನೇಮಿಸಿಕೊಳ್ಳುವುದು ಹಿಂದಿನಿಂದ ಬಂದ ಸಂಪ್ರದಾಯ. ಆ ಸಂಪ್ರದಾಯವೇನೋ ಈಗಲೂ ನಡೆಯುತ್ತಿದೆ. ಆಯಾಯ ಪಂಗಡಗಳಿಗೆ ಬೇಕಷ್ಟು ಆಸ್ತಿ 'ಮಠ'ಗಳೂ ಇವೆ–ಅದನ್ನು ಸ್ವಂತಕ್ಕಾಗಿ ಉಪಯೋಗಿಸಬಾರದೆಂದು ಎಲ್ಲವನ್ನು ಬಿಟ್ಟ (?) ಸನ್ಯಾಸಿಗೇ ಅದರ ಹೊಣೆಯನ್ನು ಒಪ್ಪಿಸುತ್ತಾರೆ. ಧರ್ಮ ಪ್ರಸಾರಕ್ಕೆ ಇನ್ನೇನು ಬೇಕು? ವ್ಯಕ್ತಿ ಗೆಯೋಗ್ಯತೆಯೊಂದಿದ್ದರೆ ಸರಿ!

ಆದೇನು ಹೊಸದಲ್ಲ; ಯುಗಗಳಿಂದಿವೆ.–ಇಂದು ಅಂತಹ 'ಧರ್ಮದರ್ಶಿ'ಗಳಲ್ಲಿ ಹಲವರು ಹಾದಿ ತಪ್ಪಿರಬಹುದು– ಹಲವರು ಹೊಡೆಗೆಟ್ಟಿರಬಹುದು ಮತ್ತೆ ಹಲವರಿಗೆ ಯೋಗ್ಯತೆಯೇ ಇಲ್ಲದಿರಬಹುದು– ಹಾಗಾದಲ್ಲಿ, ಶಿಷ್ಯವರ್ಗದವರಿಗೆ 'ಧರ್ಮ' ಬೇಕೆಂದಿದ್ದರೆ ಅದನ್ನೆಲ್ಲ ಸಮಜಾಯಿಸಿಕೊಂಡು ಸುಮ್ಮನಿರಬೇಕು.

'ಸನ್ಯಾಸಿ' ಎಂದ ಮೇಲೆ ಷಡ್ವೈರಿಗಳನ್ನು ಬಿಗಿಹಿಡಿದು, ಸಾಂಸಾರಿಕ ತಾಪತ್ರಯಗಳನ್ನು ತೊರೆದು ಬಿಟ್ಟು 'ಬ್ರಹ್ಮಾನಂದವೇ' ಮೊದಲಾದ ಪರಮ ಸುಖಗಳನ್ನು ಅನುಭವಿಸುವುದು. ಅಂತಹ ಪೂಜ್ಯರನ್ನು ಯಾರೂ ಮನ್ನಿಸದಿರರು. ಅವರು ಎಲ್ಲಿ ಇರುತ್ತಾರೊ ಅದೇ ಸ್ವರ್ಗ–ಅದೇ ದೀನ ದುಃಖಿಗಳ 'ಧರ್ಮ'ದ ಹೆಬ್ಬಾಗಿಲು.

ಆ ರೀತಿಯ ಸ್ಥಳದಲ್ಲಿ ಅನ್ಯಾಯಕ್ಕೆ ತಡೆಯಿರಬೇಕು. ಒಂದು ರೂಪಾಯಿಯ ದಾನವನ್ನು ನೂರೆಷ್ಟು ಕೊಟ್ಟೆವೆಂದೂ, ಹತ್ತು ಎಡೆ ಸಂತರ್ಪಣೆಯನ್ನು ಸಾವಿರದಷ್ಟು ಹಿರಿದು ಮಾಡಿಸಿದೆವೆಂದೂ, ತೋರಿಸುವುದು ಯೋಗ್ಯವಲ್ಲ. ಸಂಬಂಧಿಕರ ಮೋಹಪಾಶದಿಂದ ಮೃಗದಂತೆ, ಅವರ 'ಆಟದ ಗೊಂಬೆ'ಯಂತೆ ವರ್ತಿಸುವುದೂ ಅಪಾಯಕರವು.

ಧರ್ಮದ ಮಹತ್ವವನ್ನು ವಿಮರ್ಶಿಸಿ, ಪ್ರಚಾರ ಮಾಡುವುದೇ ಧರ್ಮಿಷ್ಠರ ಮೊದಲ ಕೆಲಸವಾಗಿರುವಾಗ, ಧರ್ಮದ ಸಾರವನ್ನು ಮನನಮಾಡಿಕೊಳ್ಳಬೇಕಲ್ಲವೆ? ಅದಕ್ಕಾಗಿ ವೇದೋಪನಿಷತ್ತುಗಳನ್ನು ತಿಳಿದುಕೊಳ್ಳಬೇಕು. ಅದನ್ನು ಅರಿತರೆಂದರೆ, ಅವುಗಳ ಅಮೂಲ್ಯ ತತ್ವವಾದ,..ವಿಶ್ವಪ್ರೇಮ, ..ಶಾಂತಿ, . ಸಮಾನತೆಯೇ ಮೊದಲಾದ ಎತ್ತರದ ಭಾವನೆಗಳು ತಲೆದೋರುವವು. ಅಗ್ಗ, ಸಂಕುಚಿತ ಕುಟುಂಬ ಪ್ರೇಮ, ಭ್ರಾಂತಿ, ಅಸಮಾನತೆಯೇ ಮೊದಲಾದ ಅವಿವೇಕತನಗಳು ಎಲ್ಲಿ ಉಳಿದೀತು?

ಮನುಷ್ಯ ಸಮಾಜ ಜೀವಿ– ಸಮಾಜದ ಆಧಾರ ಸ್ತಂಭವೇ ಧರ್ಮದರ್ಶಿಗಳು. ಸಮಾಜದ ಆಗುಹೋಗುಗಳನ್ನು ಯಾರಿಗೂ ಹೇಳದ್ದಾಗಿ ಬಿಟ್ಟಿರುವುದು ಅಸಾಧ್ಯ. ಪ್ರವಾಹದ ಎದುರು ಓಟ ಎಂದೂ ಸಲ್ಲದು. 'ರಾತ್ರಿಯಲ್ಲಿ ಹಾಗೆ ಮಾಡಿರಿ– ಹಗಲೆಲ್ಲ ದೀಪ ಹಚ್ಚಿ, ಸಿದ್ಧಿಸಿರಿ...' ಎಂದು ಬೋಧಿಸಿದರೆ ಯಾರು ಕೇಳಿಯಾರು? ಪೂಜ್ಯ 'ಧರ್ಮದರ್ಶಿ'ಗಳು ಇದನ್ನು ಮನಗಾಣಲಿ, ಸಮಯ ದೊರೆತಾಗ ಜನತಾಸೇವೆಗಿಳಿಯಲಿ– ಆಗ ಜನ ಬಂದು ಪ್ರೀತಿಸುತ್ತಾರೆ, ಅಷ್ಟೇ ಅಲ್ಲ; ಪೂಜಿಸುತ್ತಾರೆ.

ಸಿರಿಯ ಹಣವಿದ್ದಲ್ಲೂ ಜನವಿದೆ ಎಂಬುದೇನೋ ನಿಜ. ಆದರೆ ಅದು ಶಾಶ್ವತವಾದುದಲ್ಲ. ಯಥಾರ್ಥವಾದುದೂ ಅಲ್ಲ.

—ಶ್ರೀ. ವೆಂ. ಅಡಿಗ.

ಸ್ವೀಕಾರ ವಿಮರ್ಶೆ

ಬಲಿ-ವಾಮನ (ಗೀತರೂಪಕ)

ಬರೆದವರು : ಗಣಪತಿ ರಾವ್ ಪಾಂಡೇಶ್ವರ, ದೇಶಪಾಂಡೆ ನಗರ, ಹುಬ್ಬಳ್ಳಿ. ಬೆಲೆ-ಆರಾಣೆ.

"ಭೌತಿಕದ ಸಂಪದ್ವಿಲಾಸಗಳು ಅತಿರೇಕಕ್ಕೇ ಹೋಗಿ, ಆತ್ಮಿಕ, ಸಾತ್ವಿಕ, ನಿಷ್ಪಾಪ ಜೀವನವು ತುಳಿಯಲ್ಪಟ್ಟಾಗ, ಆ ಭೌತಿಕದ ಪರ್ವತಪ್ರಾಯವಾದ ಹೆಡತಲೆಯನ್ನು ಸೂಕ್ಷ್ಮರೂಪೀ ಸಾತ್ವಿಕದ ವಜ್ರಪಾದವು ಮೆಟ್ಟುವುದು. ಸಾತ್ವಿಕದ ಪಾದ ಸ್ಪರ್ಶದಿಂದ ಭೌತಿಕದ ಗಟ್ಟಿಯು ಕರಗಿ, ಜಗದ್ಹಿತಕಾರಕವಾದ ತ್ಯಾಗ– ಪ್ರೇಮಗಳ ಪ್ರವಾಹವಾಗಿ ಮಾರ್ಪಡುವುದೇ ಈ ಬಲಿ–ವಾಮನ ಕಥೆಯ ತತ್ವ" ಎಂಬುದಾಗಿ ಮುನ್ನುಡಿಯಲ್ಲಿ ಕವಿಯು ಹೇಳಿರುವರು. ಇದನ್ನು ಚಲೋದಾಗಿ ಪ್ರತಿಪಾದಿಸುವ ರೀತಿಯಲ್ಲಿ ಗೀತರೂಪಕವು ಬರೆಯಲಾಗಿದೆ. ತಮೋಧಿಕ್ಯದಿಂದ ಕೂಡಿದ ಶುಭಾವೇಶದಿಂದ ಮೆರೆಯುತ್ತಿದ್ದ ಬಲಿ ಚಕ್ರವರ್ತಿಯು "ಆರಾದೊಡಂ ಬಂದು ಏನಾದೊಡಂ ಬೇಡೆ, ಅದನೀವುದೊಂದೆಯೆ ಕೈಂಕರ್ಯ" ಆಗಿರುವ ಅಮೃತ ಯಜ್ಞದ ದೀಕ್ಷೆ ಕೈಗೊಳ್ಳುವನು. ಇದರ ಪುಣ್ಯ ಪ್ರಭಾವದಿಂದ ಹೃದಯ ಪರಿವರ್ತನೆಗೊಂಡ ಕ್ಷಣದಲ್ಲಿ "ಬೇಡಿದೆಂ ಮೂವಡಿಯ ನೆಲನ ನೀಡೆನಗೆ" ಎಂದು ವಾಮನನು ಎದುರು ನಿಲ್ಲುವನು. ಬಲಿ ಒಪ್ಪಿ ದಾನ ನೀಡುವಷ್ಟು, "ಮೊಟ್ಟಮೊದಲಡಿಗೆ ಆಕಾಶವು ತುಂಬಿತು" ಎರಡನೆ ಪಾದವು 'ಗಿರಿ ತೊರೆ ಸಕಲ ಸಮುದ್ರಾಂಬ'ತ ಧರೆ ಮುದ್ರಿಸಿತು. "ಆಗ ಬಲಿಯು "ಮೂರನೆ ಅಡಿಗೆಡೆ ಇಲ್ಲವೆ? ಈ ಶಿರ ಧರಿಸಲಿ ಶ್ರೀಪಾದ" ಎಂದು ತಲೆಯನೊಡ್ಡಲು ವಾಮನನ "ಸತ್ವ ಗುಣೋನ್ನತ ಪಾದ ತಮಶ್ಶಿರ ಮೆಟ್ಟಿತು." ಹೀಗೆ 'ಭೌತಬಲ ಪ್ರಗತಿ ಫಲಬೇಕು; ಬೇಕಾದೊಡಂ ಭೌತ ಪರಮಾರ್ಥಕ್ಕೆ ಮಣಿಯುತಿರಬೇಕು" ಎಂಬ ನೀತಿ ನೆಲೆಯಾಗುವುದು. ಗೀತದಲ್ಲಿ ಓಜಸ್ಸು, ಕಥಾನಕದಲ್ಲಿ ಹೊಸ ದೃಷ್ಟಿ ಮತ್ತು ಕಲ್ಪನೆ, ಛಂದಸ್ಸಿನಲ್ಲಿ ನಾವೀನ್ಯ ಈ ರೂಪಕಕ್ಕೆ ಮೆರುಗನ್ನಿತ್ತಿವೆ. ಉತ್ಕೃಷ್ಟ ರಸ ಭಾವಗಳಿಂದ ಓತಪ್ರೋತವಾಗಿರುವ ಈ ಚಿಕ್ಕ ಪುಸ್ತಕ ರಸಜ್ಞರ ಮೆಚ್ಚುಗೆಗೆ ಪಾತ್ರವಾಗುವುದರಲ್ಲಿ ಸಂದೇಹಕ್ಕೆಡೆ ಇಲ್ಲ.

ಅರ್ಧನಾರೀಶ್ವರ (ಸಾಮಾಜಿಕ ಕತೆ)

ಬರೆದವರು: ಬಿ. ಸದಾಶಿವಯ್ಯ. ಪ್ರಕಾಶಕರ : ಆನಂದ್ ಬ್ರದರ್ಸ್, ಬೆಂಗಳೂರು. ಬೆಲೆ: ರೂ. ೧.

ನಮ್ಮ ಸಮಾಜದಲ್ಲಿ ಮದುವೆಯ ಉದ್ದೇಶ, ಕಾಲ ಮತ್ತು ರೀತಿ ನೀತಿಗಳ ಕುರಿತು ಹಿಂದಿನಿಂದ ನಡೆದುಕೊಂಡು ಬಂದಿರುವ ಸಂಪ್ರದಾಯವನ್ನು ತುಚ್ಛೀಕರಿಸಿದ ಅರವಿಂದನ ಬಾಳು ಹೇಗೆ ಬರಡಾಯಿತು. ಎಂಬುದನ್ನು ಚಿತ್ರಿಸುವುದೇ ಇಲ್ಲಿಯ ವಸ್ತು. ಕತೆಯ ಆರಂಭದಲ್ಲಿ ಸುದೀರ್ಘ ಉಪನ್ಯಾಸವೊಂದರ ಮೂಲಕ ಶಿವದಾಸರು ತರುಣರಿಗಾಗಿ ಕೆಲವು ಉಪದೇಶದ ಮಾತುಗಳನ್ನಾಡಿ ಹೆಂಗಸು ಗಂಡಸು ಒಂದೇ ಘಟಕ ಎನ್ನುವ ಎಂಬ ಭಾರತೀಯ ತತ್ವಾದರ್ಶವನ್ನು "ಅರ್ಧನಾರೀಶ್ವರ" ಕಲ್ಪನೆಗೆ ಹೋಲಿಸುವರು. ಅದನ್ನು ಮನ್ನಿಸಿ, ಮದುವೆಯಾಗಿ, ಆದರ್ಶ ಗೃಹಸ್ಥನಾದ ಅಶೋಕನೊಂದು ಕಡೆ ಇದ್ದರೆ, ಪಾಶ್ಚಾತ್ಯದ "ಫ್ರಾಯಿಡ್, ರೋಮಾನ್ಸ್, ಮ್ಯಾಚುವಲ್ ಸ್ಟಡೀ ಮತ್ತು ಅಂಡರ್ ಸ್ಟ್ಯಾಂಡಿಂಗ್" ಮರುಳಾದ ಅರವಿಂದನ ಮತ್ತು ಆತನು ಮೋಹಿಸಿದ, ಹಾಗೂ ಗರ್ಭನಿರೋಧ ಸಾಮಗ್ರಿ ಬಳಸಿ ತಾಯಿಯಾಗುವ ಸೌಭಾಗ್ಯಕ್ಕೇನೆ ಎರವಾದ ಅವನ ಹೆಂಡತಿ ಪದ್ಮಾವತಿಯ ವಿರಸ ದಾಂಪತ್ಯದ ಗೋಳಿನ ಕತೆ ಇನ್ನೊಂದು ಕಡೆ ಇದೆ. ಕತೆಯು ಮನರಂಜನೆ ಮಾಡುವುದಲ್ಲದೆ ಬೋಧಪ್ರದವಿರುವುದು ಒಂದು ವಿಶೇಷ ಗುಣ. ಪಾತ್ರಗಳ ಚಿತ್ರಣ ಸ್ಪುಟವಾಗಿ ಮೂಡಿದೆ. ಶೈಲಿ ಕೂಡ ಸೊಗಸಾಗಿದೆ.

—ಕಾರ್ತಿಕೇಯ.

ಕೆಥೋಲಿಕ್ ಬೇಂಕ್ ಲಿಮಿಟೆಡ್, ಕಲ್ಯಾಣಪುರ.

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲಪಡಕೊಂಡು ಕ್ಲಪ್ತವಾಯದಿಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ ಸದ್ರಿಸಾಲವನ್ನು ಬರಮಾಡಿ ಕೊಳ್ಳುವರೆ ಅವರಿಗೆ ರಿಜಿಸ್ಟ್ರಿ ನೋಟೀಸು ದಿಟ್ಟರೂ ಯೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ತಾ 20-5 52ನೇ ಒಳಗೆ ಬೇಂಕಿಗೆ ಸಲ್ಲತಕ್ಕ ಅಸಲು,ಬಡ್ಡಿ,ನೋಟೀಸು ಖರ್ಚು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದ ಪಕ್ಷದಲ್ಲಿ ಸದರಿಯವರು ಈಡಿಟ್ಟ ನಗಗಳನ್ನು ತಾ- 24-5-52ನೇ ಶನಿವಾರ ಮಧ್ಯಾಹ್ನ ಗಂಟೆ 11ಕ್ಕೆಯೂ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

ಸಾಲದನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು	
		ರೂ	ಆ
26/573	ಪೀಟರ್ ಫೆರ್ನಾಂಡಿಸ್, ಲೂಯಿಸ್ ಫೆರ್ನಾಂಡಿಸರ ಮಗ, ಕೆಮ್ಮಣ್ಣು ಪೋಸ್ಟು.	85	0
26/669	ಮುತ್ತಪ್ಪ ಮಂಕಾಲ, ಅನಂತ ಮಂಕಾಲನ ಅಳಿಯ ಕುದ್ರುಬೆಟ್ಟು, ಉಪ್ಪೂರು ಪೋಸ್ಟು	90	0
27/8	ಸೆಬೆಸ್ತಿನ್ ಡಿ'ಸೋಜ, ಬಾಲ್ತಿಜಾರ್ ಡಿ'ಸೋಜರ ಮಗ, ಪೆಂಪಳ್ಳಿ ಶಿವಳ್ಳಿಗ್ರಾಮ ಕಲ್ಯಾಣಪುರ ಪೋಸ್ಟು	25	0
27/58	ಎನ್. ದಾಸಪ್ಪ, ಬೂಬ ಪೂಜಾರಿಯ ಮಗ, ನಾಯರಬೆಟ್ಟು, ಪುತ್ತೂರು, ಕಲ್ಯಾಣಪುರ ಪೋಸ್ಟ್	140	0
27/207	—Do—	32	0
27/61	ಬೂದ ಪೂಜಾರಿ, ಕೃಷ್ಣ ಪೂಜಾರಿಯ ಅಳಿಯ, ನಡುಬೆಟ್ಟು, ಮೂಡುತೋನ್ಸೆ ಗ್ರಾಮ ಪೋಸ್ಟ್	24	0
27/121	ತೇಜಪ್ಪ ಶೆಟ್ಟಿ, ಪುಟ್ಟಮ್ಮ ಸೆಡ್ತಿಯ ಮಗ, ನಡುಬೆಟ್ಟು ಉಪ್ಪೂರು ಗ್ರಾಮ, ಕೊಳಲಗಿರಿ ಪೋಸ್ಟ್	65	0
27/341	ಅನಸ್ತಿಲ್ ರೆಬೆಲ್ಲೊ, ಜೋಸೆಫ್ ರೆಬೆಲ್ಲೊರ ಹೆಂಡತಿ, ಹೇರೆಬೆಟ್ಟು, ಉಪ್ಪೂರು ಗ್ರಾಮ	22	0
27/368	ಆಗ್ನೆಸ್ ಡಿಸೋಜ, ಅಲ್ಪೋನ್ಸ್ ಡಿಸೋಜರ ಹೆಂಡತಿ, ಹೊನ್ನಪ್ಪ ಕುದ್ರು, ಕಲ್ಯಾಣ[illegible]	40	0
27/454	ಮುತ್ತು ಪೂಜಾರಿ, ಐತ ಪೂಜಾರಿ ಅಳಿಯ, ಉಪ್ಪೂರು ಕಲ್ಯಾಣಪುರ	45	0
27/457	ಮುದ್ದಣ್ಣ ಸೆಟ್ಟಿ, ಚಿಕ್ಕಯ ಸೆಟ್ರ ಮಗ, ಉಪ್ಪೂರು	32	0
27/501	ಕಂಡಿತ ಸೀತಾರಾಮ, ಸುಬ್ಬರಾಯರ ಮಗ, ನಡಂಬಳ್ಳಿ	40	0
27/555	ಮಥಾಯಿಸ್ ಸೋಜ, ಇಸಾಕ್ ಸೋಜರ ಮಗ, ಅರೂರು ಗ್ರಾಮ, ಕುಂಜಾಲ್	45	0
27/602	ಪದ್ಮೇತಿ ಪೂಜಾರಿ, ಐತ ಪೂಜಾರಿಯ ಮಗ, ಹೇರೆಬೆಟ್ಟು, ಉಪ್ಪೂರು ಗ್ರಾಮ	28	0
27/603	ಫ್ರಾನ್ಸಿಸ್ ರೋಡ್ರಿಗ್ಸ್, ಜಿ. ರೊಡ್ರಿಗ್ಸರ ಮಗ, ನಡುಬೆಟ್ಟು, ಉಪ್ಪೂರು ಪೋಸ್ಟ್	30	0
27/657	ಮಥಾಯಿಸ್ ಡಿಸೋಜ, ಅನಾಸ್ ಡಿಸೋಜರ ಮಗ, ಅಮ್ಮುಂಜೆ, ಉಪ್ಪೂರು, ಕೊಳಲಗಿರಿ P. O.	40	0
27/694	ಆಲೆಸ್ ಲಾವ್ರೊ, ಫ್ರಾನ್ಸಿಸ್ ಲಾವ್ರೊರ ಹೆಂಡತಿ, ಕಲ್ಯಾಣಪುರ, ಕಲ್ಯಾಣಪುರ ಪೋಸ್ಟ್.	40	0
27/730	ಗುರ್ವ ಉಪ್ಪಾರ, ತಿಮ್ಮ ಉಪ್ಪಾರನ ಅಳಿಯ, ಪಡುಬೈಕಾಡಿ, ಬ್ರಹ್ಮಾವರ ಪೋಸ್ಟ್	35	0
27/852	ಯು. ಗೋಪಾಲ ಮಂಕಾಲ, ಅಣ್ಣು ಮಂಕಾಲನ ಅಳಿಯ, ಜಡ್ಡುತೋಟ ಉಪ್ಪೂರು ಗ್ರಾಮ	25	0
27/938	ಲೋರೆನ್ಸ್ ಡಿಸೋಜ, ಜೋಕಿಮ್ ಡಿಸೋಜರ ಮಗ, ಕಾರ್ಕಬೈಲು, ಹಾವಂಜೆ ಗ್ರಾಮ	150	0
27/971	ಎನ್. ದಾಸಪ್ಪ, ಬೂಬ ಪೂಜಾರಿ ಮಗ, ನಾಯರಬೆಟ್ಟು, ಪುತ್ತೂರು ಗ್ರಾಮ, ಕಲ್ಯಾಣಪುರ ಪೋಸ್ಟ್	75	0
27/993	ದೇಜು ಪೂಜಾರಿ, ಬಾಬ ಪೂಜಾರಿ ಅಳಿಯ, ಉಗ್ಗೆಲ್ಬೆಟ್ಟು ಉಪ್ಪೂರು ಪೋಸ್ಟ್.	145	0

ಕಲ್ಯಾಣಪುರ, 9—5—52

S. Rebello,
Agent.

ಪ್ರವಾಸಿಯ ಪತ್ರಗಳು ೩೦

ಇಂಗ್ಲಿಷಿನಲ್ಲಿ "ನೇಪಲ್ಸ್ ನೋಡಿ ಸಾಯಬೇಕು" ಎಂಬ ಗಾದೆಯಿದೆ. (See Naples and die) ಇದರ ಸರಿಯಾದ ಅರ್ಥ ನೇಪಲ್ಸ್ ನೋಡಿದ ಕೂಡಲೆ ಸಾಯಬೇಕೆಂದಲ್ಲ. ಅದು ಎಷ್ಟು ಚೆಂದವಾದ ನಗರವೆಂದರೆ ಹುಟ್ಟಿದ ಮನುಷ್ಯನು ಅದನ್ನು ನೋಡದೆ ಸಾಯಬಾರದು ಎಂದು.

ನೇಪಲ್ಸ್‌ಗೆ ಇಟೇಲಿ ಭಾಷೆಯಲ್ಲಿ "ನೆಪೊಲಿ" (Napoli) ಅನ್ನುತ್ತಾರೆ. ಇಟೇಲಿಯ ಪಶ್ಚಿಮ ತೀರದಲ್ಲಿದ್ದು ನೇಪಲ್ಸ್ ಎಂಬ ಹೆಸರಿನ ಅರ್ಧ ಚಂದ್ರಾಕಾರದ ಕೊಲ್ಲಿಯ ಉತ್ತರ ಬದಿಯಲ್ಲಿದೆ. ಬಹುದೊಡ್ಡ ಬಂದರು. ಇಟೇಲಿಯ ಪಶ್ಚಿಮ ತೀರದಲ್ಲಿ ಎರಡು ಪ್ರಮುಖ ಬಂದರುಗಳಲ್ಲಿ ಇದು ಒಂದು. ಉತ್ತರದಲ್ಲಿ ಜಿನೋವಾ. ದಕ್ಷಿಣದಲ್ಲಿ ನೇಪಲ್ಸ್. ಅದರ ಜನಸಂಖ್ಯೆ 10 ಲಕ್ಷ. ಇಲ್ಲಿ ಅನೇಕ ಕೈಗಾರಿಕೆಗಳಿವೆ. ಮುಖ್ಯವಾಗಿ ಹಡಗು ಕಟ್ಟುವುದು, ಮಾಕರೋನಿ, ಪಾಸ್ಟಿ, ದ್ರಾಕ್ಷಾರಸ (Wine) ಒಲೀವ್ ಎಣ್ಣೆ ತಯಾರಿಸುವ ಕೈಗಾರಿಕೆಗಳು.

ರೈಲಿನಿಂದ ಇಳಿದೊಡನೆ ಅದಕ್ಕೆ ಬಹು ಸಮೀಪವಿದ್ದ ಟರ್ಮಿನಸ್ (Terminus) ಎಂಬ ಹೋಟೇಲಿಗೆ ಹೋದೆ. ಅಲ್ಲಿ 300 ಕೋಣೆಗಳಿಗಿಂತಲೂ ಮಿಕ್ಕಿ ಬಂದವರಿಗೆ ಉಳಕೊಳ್ಳಲಿಕ್ಕೆ ಇರುತ್ತವೆ. ಅದು ಉಪ್ಪರಿಗೆ ನನ್ನ ಕೋಣೆ 290ನೇಯದಾಗಿದ್ದು ಅದರ ಕಿಟಕಿಗಿಂದ ಹೊರಗಿನವಲ್ಲಿದ್ದ ಜಗಲಿಯಲ್ಲಿ ನಿಂತರೆ ಬಹಳ ಅಪೂರ್ವ ಮತ್ತು ಮನೋಜ್ಞ ದೃಶ್ಯ. ಪೂರ್ವ ದಿಕ್ಕಿನಲ್ಲಿ ಪ್ರಸಿದ್ಧವಾದ ಜ್ವಾಲಾಮುಖಿ ವೆಸುವಿಯಸ್ ಸುಮಾರು 10 ಮೈಲು ದೂರ ಇದೆ. ದಕ್ಷಿಣಕ್ಕೆ ಉರುಟಾದ ಬಂದರಿಗೆ ಬರುವ ಕೊಲ್ಲಿ ಮತ್ತು ಅದರ ಹಿಂದಿನ ಪಶ್ಚಿಮಕ್ಕೆ ಸಮುದ್ರ. ಸಮೀಪದಲ್ಲಿ ಕೆಳಗೆ ಅನೇಕ ಹೊಸತಾಗಿ ಕಟ್ಟುತ್ತಿರುವ ಕಟ್ಟೋಣಗಳ ಬಾಡಗಳು ಮತ್ತು ಬಂದರು.

ಹೋಟೇಲಲ್ಲಿ ಸಾಯಂಕಾಲ ನಾಲ್ಕು ಘಂಟೆಯ ವರೆಗೆ ವಿಶ್ರಮಿಸಿ ಸಮೀಪದಲ್ಲಿರುವ ನಗರದ ಬಸ್ಸು ನಿಲ್ದಾಣಕ್ಕೆ ಬಂದು ಸುಮಾರು 2-3 ಮೈಲು ದೂರಕ್ಕಿರುವ ಸಮುದ್ರ ತೀರಕ್ಕೆ ಬಂದೆ. ಅಲ್ಲಿ ದೊಡ್ಡ ಉದ್ಯಾನ. ಅದು ಸುಮಾರು ಅರ್ಧ ಮೈಲು ಉದ್ದ. ಅಲ್ಲಿಂದ ಸಮುದ್ರದ ಬದಿಯಲ್ಲಿ ಅಗಲವಾದ ದಾರಿ, ಅದರ ಒಂದು ಬದಿ 5-6 ಉಪ್ಪರಿಗೆ ದೊಡ್ಡ ಕಟ್ಟಡಗಳ ಸಾಲು. ಕೆಲವು ಆಫೀಸುಗಳು, ಕೆಲವು ಹೋಟೇಲುಗಳು. ಈ ಹೋಟೇಲುಗಳು ನಾನು ಇದ್ದ ಹೋಟೇಲಿಗಿಂತಲೂ ದೊಡ್ಡವಾದುವು. ಇನ್ನೊಂದು ಬದಿ ಅಗಲವಾದ ಕಾಲುದಾರಿ. ಹಾಗೆ ಸಮುದ್ರ. ಸಾಧಾರಣ ಬೊಂಬಾಯಿ ನಗರದ ಚೌಪಾಟಿಗೆ ಹೋಲಿಸಬಹುದು. ಆದರೆ ಸಮುದ್ರವು ಅಲ್ಲಿಗಿಂತಲೂ ಆಳ, ಮತ್ತು ಸ್ವಚ್ಛವಾದ ನೀರು. ಅಗ ಬೇಸಿಗೆಯಾದ ಕಾರಣ ಅನೇಕರು ಸಮುದ್ರದ ಬದಿಯಲ್ಲಿ ಸ್ನಾನಮಾಡುತ್ತಿದ್ದರು. ಹೀಗೆ ಈ ಕಾಲುದಾರಿಯಲ್ಲಿ ನಾನೊಬ್ಬನೇ ನಡೆದುಬರುತ್ತಿರುವಾಗ ಸುಮಾರು 20-22 ವರ್ಷ ಪ್ರಾಯದ ಅಲ್ಲಿಯ ನೇಪಲ್ಸ್ ವಿಶ್ವವಿದ್ಯಾಲಯಕ್ಕೆ ಸೇರಿದ ಮೆಡಿಕಲ್ ಕಾಲೇಜಿನ ಒಬ್ಬ ವಿದ್ಯಾರ್ಥಿಯು ನನಗೆ ಸಿಕ್ಕಿದ. ಅವನಿಗೆ ಸ್ವಲ್ಪ ಇಂಗ್ಲಿಷ್ ಬರುತ್ತಿತ್ತು. ಅವನು ಸುಮಾರು ಒಂದು ಗಂಟೆ ಸಮಯ ನನ್ನೊಟ್ಟಿಗೆ ನಡೆದು ಪೇಟೆಯ ವರೆಗೂ ಬಂದ. ಅವನು ಇರುವುದು ಸುಮಾರು 4-5 ಮೈಲು ದೂರ. ನಿತ್ಯವೂ ಬಸ್ ಮೂಲಕ ಕಾಲೇಜಿಗೆ ಬಂದು ಹೋಗುವುದು. ಕೆಲವು ಕಾಲ ಪೇಟೆಯಲ್ಲಿ ತಿರುಗಾಡಿ ಬಾರಿಕವ್ವಿ ಮನಃ ಹೇಗಾದರೂ ನನ್ನ ಹೋಟೇಲಿಗೇನೇ ಬಂದು ಸೇರಿದೆ. ಹೀಗೆ ಆ ದಿನದ ತಿರುಗಾಟ ಮುಗಿಯಿತು.

ಮರುದಿನ ಬೆಳಗ್ಗೆ ಆರು ಗಂಟೆಗೆ ಆ ಊರಲ್ಲಿ ಕೂಲಿಯವರು ಕಟ್ಟೋಣ ಕಟ್ಟುವ ಕೆಲಸ ತೊಡಗಿದರು. ಅದೇಕೆಂದರೆ ಸೆಕೆಗಾಗಿ ಮಧ್ಯಾಹ್ನ 12 ಗಂಟೆಯಿಂದ 3ರ ವರೆಗೆ ಎಲ್ಲಾ ಕಡೆಗಳಲ್ಲೂ ವಿಶ್ರಮದ ಸಮಯ. ಆ ದಿನ ಬಸ್ ಮೂಲಕ ಪೇಟೆಯ ವರ ಒಟ್ಟಿಗೆ ಇಡೀ ದಿನದ ತಿರುಗಾಟದ ಬಗ್ಗೆ ಒಂದು ಟಿಕೇಟು ಪಡೆದು ಬೆಳಗ್ಗೆ 9 ಗಂಟೆಗೆ ಹೊರಟು "ಪೊಂಪೇ" [Pompey] ಮತ್ತು ಸಾಯಂಕಾಲ ಮೇಲೆ ಹೇಳಿದ "ವೆಸೂವಿಯಸ್" (Vesuvies) ಜ್ವಾಲಾಮುಖಿ ಇವೆರಡರ ತಿರುಗಾಟವಾಗಿದೆ. 9 ಗಂಟೆಗೆ ಹೊರಟ ಬಸ್ಸಿನಲ್ಲಿ ಸುಮಾರು 15 ಮೈಲು ದೂರ ನೇಪಲ್ಸ್ ಕೊಲ್ಲಿಯ ಬದಿಯಲ್ಲೇ ಪ್ರಯಾಣಮಾಡಿ ಪೊಂಪೇ ಎಂಬ ಊರಿಗೆ ಬಂದೆವು.

ಪೊಂಪೇ ಊರೆಂದರೆ ಬಹಳ ವಿಶೇಷವಾದದ್ದು. ಅದು ಕ್ರಿಸ್ತಶಕದ 6ನೇ ಶತಮಾನದ ಹಿಂದೆ ಗ್ರೀಕರು ಅಲ್ಲಿಯ ಕಾಡಿನಲ್ಲಿ ಜೀವಿಸುತ್ತಿದ್ದ ಇಟೇಲಿ ಜನರನ್ನು ಸೋಲಿಸಿ ವ್ಯಾಪಿಸಿದ ವಲಸೆ ನಗರ [Settlement] ಆಗ ನೇಪಲ್ಸ್ ಕೊಲ್ಲಿಯ ಸುಹದ್ದೆಲ್ಲ ಗ್ರೀಕರ ವಶವಾಗಿತ್ತು. ಒಂದೆರಡು ಶತಮಾನ ಅವರ ಕೈಯಲ್ಲಿದ್ದು ಅನಂತರ ಅಲ್ಲಿ ಊರಿನ ಜನರೇ ಅದನ್ನು ವಶಪಡಿಸಿಕೊಂಡು ಕ್ರಿ. ಪೂ. 89ರ ವರೆಗೆ ಆಳಿ ಆ ನಗರವನ್ನು ಇನ್ನಷ್ಟು ದೊಡ್ಡದು ಮಾಡಿದರು. 89 ಕ್ರಿ. ಪೂ. ದಲ್ಲಿ ರೋಮನ್ ನಿರಂಕುಶ ಅಧಿಕಾರಿ (Dictator) ಸಲಾ [Sulla] ಎಂಬವನ ಸೈನ್ಯವು ಅದಕ್ಕೆ ಮುತ್ತಿಗೆ ಹಾಕಿದ ಮೇಲೆ ಕೆಲವು ... ತಂತ್ರವಿದ್ದರೂ ಅಪ್ಪರ 80ನೇ ಕ್ರಿ. ಪೂರ್ವದಲ್ಲಿ ಅದು ರೋಮನರ ಕೈವಶವಾಯಿತು. ಹಾಗೆ 80ನೇ ಬಿ. ಸಿ. ಯಿಂದ 63ನೇ ಎ. ಡಿ. ವರೆಗೆ ಇಲ್ಲಿ ರೋಮನ್ ಜನರು ಬಂದು ಜೀವಿಸಿದ್ದು ಅವರ ಮನೆ, ಅಂಗಡಿಗಳು, ಕೈಗಾರಿಕೆ, ಕೋರ್ಟು, ದೇವಸ್ಥಾನ ವಗೈರೆ ಕಟ್ಟಿ ನಗರವು ಇನ್ನಷ್ಟು ದೊಡ್ಡದಾಯಿತು. 63ನೇ ಎ. ಡಿ. ಯಲ್ಲಿ ಭೂಕಂಪದಿಂದ ನಡುಗಿ ಕೆಲವು ಮುಟ್ಟಿಗೆ ಹಾಳಾಯಿತು. ಆದರೆ ಪುನಹ ದುರಸ್ತಿಪಡಿಸಿ, ಪುನಹ 16 ವರ್ಷ ಜನರು ವಾಸಿಸಿದರು. ಆದರೆ 79ನೇ ಆಗೋಸ್ಟಿನಲ್ಲಿ 3-4 ಮೈಲು ಸಮೀಪವಿರುವ ವೆಸುವಿಯಸ್ ಎಂಬ ಜ್ವಾಲಾಮುಖಿಯು ಉಜ್ವಲಿಸಿ ಅದರ ಬಾಯಿಯಿಂದ ಹೊಳೆಯಂತೆ ಹರಿದ ಕುದಿಯುವ ಶಿಲಾರಸ ಮತ್ತು ಬೂದಿಯ ಪ್ರವಾಹದಲ್ಲಿ 20,000 ಜನರು ಇರುತ್ತಿದ್ದ ಈ ನಗರವು ಸಂಪೂರ್ಣ ಮುಚ್ಚಿಹೋಯಿತು. ಹಾಗೆ 1700 ವರ್ಷಗಳು ಮುಚ್ಚಲ್ಪಟ್ಟಿದ್ದ ಈ ನಗರವು ಅಕಸ್ಮಾತ್ತಾಗಿ 1748ರಲ್ಲಿ ಕೃಷಿಯ ಬಗ್ಗೆ ನೆಲ ಅಗಿಯುವಾಗ ಮನೆಗಳ ಕುರುಹು ಕಂಡು ಅಲ್ಲಿಂದ ಈ ವರೆಗೂ ಇಲ್ಲಿಯ ಸರಕಾರ ಹೇರಳ ಖರ್ಚುಮಾಡಿ ಅಗೆಸಿ ಈಗ 5ರಲ್ಲಿ 3 ಪಾಲನ್ನು ಬಿಡಿಸಿ ಇಟ್ಟಿದ್ದಾರೆ. ಅಂದರೆ ಮುಂಚೆ ಊರು, ಮನೆ, ರಸ್ತೆ, ಅಂಗಡಿ ಹೇಗೆ ಇದ್ದುವೋ ಅದನ್ನು ಮುಟ್ಟಿಗೆ ಹಾಗೆಯೇ ಮಾಡಿಟ್ಟಿದ್ದಾರೆ. ಗ್ರೀಕ್, ಸೇಮ್ನಾಟ್ ಮತ್ತು ರೋಮನ್ ಹೀಗೆ 3 ನಾಗರಿಕತೆಯ ಮಿಶ್ರವಾದ ಈ ನಗರವನ್ನು ನೋಡಲಿಕ್ಕೆ ಭೂಲೋಕದ ಅನೇಕ ಊರುಗಳಿಂದ ದಿನನಿತ್ಯವೂ ನೂರಾರು ಜನರು ಇಲ್ಲಿಗೆ ಬರುತ್ತಾರೆ. ಇಲ್ಲಿ ನಾನು ಕಂಡ ವಿಷಯ ಬರುವ ಪತ್ರದಲ್ಲಿ ಬರೆಯುತ್ತೇನೆ.

[ವಿಚಾರವಾಣಿ] —ಕೆ. ಆರ್. ಕಾರಂತ

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ... ಶೀತ, ಹಲ್ಲು ನೋವುಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ... ಮುಂತಾದವು, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಉಳುಕಿದ್ದಕ್ಕೆ, ಮದ್ದು, ನವ್ವಿಲ್ಲಿ, ...

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

● ತೃಪ್ತಿಕರವಾದ ವಸತಿ — ಹಿತಕರವಾದ ಊಟ

● ರುಚಿಕರವಾದ ಉಪಾಹಾರ ಇವುಗಳಿಗೆ

ಉಡುಪಿಯ ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಊರ ಪರವೂರ ಸನ್ಮಾನ್ಯ ಸದ್ಗೃಹಸ್ಥರಿಂದ ಮುಕ್ತಕಂಠದಿಂದ

ಹೊಗಳಿಸಿಕೊಂಡ ನಮ್ಮ ಹೋಟೆಲಿಗೆ

ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ.

ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯಾಗುವಂತ ನಗರದ ಕೇಂದ್ರ ಭಾಗದಲ್ಲಿದೆ.

WOODLANDS

Highclass Boarding & Lodging, UDIPI S. Kanara

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ಮ್ಯಾಸಾಚಾರ್ಯ,

ರಥಬೀದಿ, ಉಡುಪಿ

ಮದುವೆಯಾದ ಸ್ತ್ರೀಪುರುಷರ ಸಲುವಾಗಿ

ಬರೆಯಲ್ಪಟ್ಟ ಪುಸ್ತಕ

ಮಿತಸಂತತಿ

ಹುಟ್ಟುವ ಮಕ್ಕಳು ಆರೋಗ್ಯ ಸಂಪತ್ತು ಸೌಭಾಗ್ಯ ಮೊದಲಾದುವನ್ನು ಸಾಕಷ್ಟು ಪಡೆಯುವ ಹಾಗೆ ಹೆತ್ತವರು ಸಾಧಿಸಲಾಗುವಂತೆ ಅತ್ಯನುಕೂಲವಾದ ಸಂಸ್ಕೃತಿ ಯಾವುದೋ ಅದರಂತೆ ದಂಪತಿಗಳು ಮಕ್ಕಳನ್ನು ಹೆರುವ ಹಾಗೆ ಅವಶ್ಯವಾದ ತತ್ವಗಳನ್ನು ಬೋಧಿಸುವ ನವೀನ ಪುಸ್ತಕ ಬೆಲೆ 0-6-0

ಗುಪ್ತರೋಗ ನಿವಾರಣೆ

ಜನನೇಂದ್ರಿಯಗಳಿಗೆ ಸಂಬಂಧಿಸಿರುವ ರೋಗಗಳು ಹಳ್ಳಿಪಳ್ಳಿಗಳಲ್ಲಿ ಪಸರಿಸುತ್ತಲೇ ಇವೆ. ಇಂತಹ ರೋಗಗಳಿಂದ ನರಳುವ ಸ್ತ್ರೀಪುರುಷರ ಆರೋಗ್ಯ ರಕ್ಷಣೆಗಾಗಿ ಪ್ರಪಂಚದಲ್ಲಿನ ವಿದ್ವಾಂಸ ವೈದ್ಯರುಗಳ ಅಮೂಲ್ಯ ಸಿದ್ಧಾಂತಗಳುಳ್ಳ ಸೂಚಕ ಪುಸ್ತಕ ಬೆಲೆ 0-8-0

ಪ್ರತಿಗಳಿಗೂ, ಪುಸ್ತಕಗಳ ಯಾದಿಗೂ, ಬರೆಯಿರಿ.

ನವಭಾರತ ಪುಸ್ತಕ ಭಂಡಾರ ಉಡುಪಿ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:- ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಪೌಷ್ಟಿಕ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಚಿಕಿತ್ಸಾ ಮಾಹಿತಿಗೆ—ಡಾ! ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ವಾಧಿಕರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ವಾರದ ಭವಿಷ್ಯ

ತಾರೀಕು 15-5-52 ರಿಂದ — ತಾರೀಕು 21-5-52 ವರೆಗೆ

ಮೇಷ:—ಕಷ್ಟಸಾಧ್ಯವಾದ ಕಾರ್ಯಗಳನ್ನು ಶ್ರಮವಹಿಸಿ ಸಾಧಿಸುವ ಶಕ್ತಿಯು ನಿಮ್ಮಲ್ಲಿದ್ದರೂ ನಿಮ್ಮ ಚಂಚಲವಾದ ಮನಸ್ಸಿನ ದೆಸೆಯಿಂದಾಗಿ ಯಾವೊಂದು ಕಾರ್ಯವನ್ನು ಸಾಧಿಸಲಾರಿರಿ. ವೃಥಾವಾಕ್ಕಲಹಗಳು ದಿನದಿಂದ ದಿನಕ್ಕೆ ಹೆಚ್ಚಲಿವೆ. ಗೃಹಕಲಹದಿಂದಾಗಿ ಸಂಸಾರದಲ್ಲಿ ವಿರಕ್ತಿ ತೋರಿೀತು. ಆಪ್ತೇಷ್ಟರಲ್ಲೂ ಅವಿಶ್ವಾಸ ವುಂಟಾಗಲಿದೆ. ತಾ 19-20 ಬಿಟ್ಟುಳಿದ ದಿನಗಳ ಅಷ್ಟೊಂದು ಅನಿಷ್ಟಕಾರಿಗಳಾಗಲಾರವು.

ವೃಷಭ:—ಸನ್ಮಿತ್ರರ ಬೆಂಬಲದಿಂದಾಗಿ ನಿಮ್ಮ ಕಾರ್ಯಗಳು ಸಿದ್ಧಿಸುವವು. ಆದರೂ ಉತ್ಪತ್ತಿಗಿಂತ ದ್ವಿಗುಣ ವ್ಯಯವಾಗುವುದರಿಂದ ಆರ್ಥಿಕ ತಗಾದೆಯು ಹೆಚ್ಚಾಗಿ ಪೀಡಿಸಲಿದೆ. ಮನೆಯಲ್ಲಿನ ಸೇವಕರು ಮಕ್ಕಳು ಅವಿಧೇಯರಾಗಿ ನಡೆವುದರಿಂದಲೂ ಪಿತ್ತಕಫ ದೋಷದಿಂದ ಆರೋಗ್ಯ ಕೆಡುವುದರಿಂದಲೂ ಮನಸ್ಸು ಸದಾ ಅಶಾಂತಿಯಿಂದಿರುವುದು. ತಾ. 17ರಿಂದ 20ರ ವರೆಗಿನ ದಿನಗಳಲ್ಲಿ ನಿಮ್ಮ ಕೆಲವೊಂದು ಬಯಕೆಯು ಸಿದ್ಧಿಸುವದು.

ಮಿಥುನ:—ಹಿಂದಿನ ದಿನಗಳಂತೆ ಈ ವಾರವು ಅಷ್ಟೊಂದು ಉತ್ತಮವಲ್ಲವಾದರೂ ಖರ್ಚಿಗಾಗಿ ನೀವು ಬೇರೆಯವರನ್ನಾಶ್ರೈಸಬೇಕಾಗಿ ಬರಲೊಲ್ಲದು. ಸನ್ಮಿತ್ರರ ಸಹಾಯದಿಂದಾಗಿ ನಿಮ್ಮ ಆಶಾಕಾಂಕ್ಷೆಗಳು ಯಾವೊಂದು ತರದ ವಿಘ್ನಾತಂಕಗಳಿಗೆ ಸಿಲುಕದೆ ನೆರವೇರುವವು ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವವು. ಆದರೆ ಗೃಹಕ್ಷೇತ್ರಗಳು ಆಗಾಗ ಬಾಧಿಸಲಿವೆ. ವಾರಾಂತ್ಯದ 3 ದಿನಗಳು ಅತ್ಯುತ್ತಮವಿವೆ.

ಕರ್ಕಾಟಕ:—ಎಂತಹ ಪ್ರಯತ್ನಸಾಧ್ಯವಾದ ಕಾರ್ಯವನ್ನು ಕೂಡ ನೀವೀವಾರದಲ್ಲಿ ಅಲ್ಪಯತ್ನದಿಂದ ಸಾಧಿಸುವಿರಿ. ನಿಮ್ಮ ಬಯಕೆಯಂತೆ ಫಲವೂ ಸಿದ್ಧಿಸಲಿದೆ. ಜನರಿಂದ ಮಾನಮನ್ನಣೆಗಳನ್ನು ಪಡೆವಿರಿ. ಆದರೆ ದುರ್ಜನರ ಸಹವಾಸದಿಂದಾಗಿ ಕಷ್ಟನಷ್ಟ ಅನಿಷ್ಟ ಅಪವಾದಗಳೂ ಪ್ರಾಪ್ತವಾಗಲಿವೆ. ವೃಥಾವಾಕ್ಕಲಹಕ್ಕೆ ಗುರಿಯಾದೀರಿ. ತಾ. 15 16 26 ಈ ದಿನಗಳು ತೃಪ್ತಿಕರವಿವೆ.

ಸಿಂಹ:—ನಿಮ್ಮ ಭಾಗ್ಯರವಿಯು ಉದಯಾಚಲಕ್ಕೆ ಬಂದಿರುವನು. ಈ ಕಾಲದಲ್ಲಿ ನೀವೇನು ಮಾಡಿದರೂ ಅದು ಸಿದ್ಧಿಸಿಯೇ ತೀರುವದು ಮುಂದಿಟ್ಟ ಹೆಜ್ಜೆಯನ್ನು ಆದೆಂದಿಗೂ ಹಿಂತೆಗೆಯಲಾರಿರಿ. ನಷ್ಟವಾದ ವಸ್ತ್ರ ದ್ರವ್ಯಗಳೂ ಇಂದು ಪುನಃ ಕೈಸೇರಲಿವೆ. ಧನಧಾನ್ಯಗಳಿಂದ ಕೂಡಿದ ನಿಮ್ಮ ಗೃಹಕೃತ್ಯದಲ್ಲಿ ಅದಾವ ಕೊರತೆಯೂ ಕಾಣಿಸದು. ವಾರಾದಿಯ 4 ದಿನಗಳತ್ಯುತ್ತಮವಿವೆ.

ಕನ್ಯಾ:—ಏಳೂವರೆ ಶನಿಯು ನಿಮ್ಮ ಜನ್ಮದಲ್ಲಿದ್ದು ಇಂದು ವಾತದೋಷವನ್ನು ವೃದ್ಧಿಗೊಳಿಸುತ್ತಿರುವನು. ಉಷ್ಣಪಿತ್ತ ದೋಷದಿಂದ ದೇಹಾಲಸ್ಯ ವುಂಟಾಗಲಿದೆ. ಮಾತ್ರವಲ್ಲ ಊರೂರು ಪರ್ಯಟನ ಮಾಡುವ ಪ್ರಸಕ್ತಿಯೂ ಬರುವದು. ಆದರೆ ವ್ಯಾಪಾರ ಸೌಕರ ಭಾಗದಲ್ಲಿ ಶ್ರಮಕ್ಕೆ ತಕ್ಕ ಫಲ ಲಭಿಸುವದು. ಹಣದ ನಿಮಿತ್ತ ಕೋರ್ಟು ಕಚೇರಿಗಳಿಗೆ ಹೋಗುವ ಪ್ರಸಂಗ ಬಂದಿದೆ ತಾ. 17 18 19-20 ಸ್ವಲ್ಪ ಅನುಕೂಲ ದಿನಗಳು.

ತುಲಾ:—ತಾ. ನೆಂಬುಗೆದರೆ ದೈವವೊಂಚಿಣಿಸಿದಂತೆ ಇಂದಿನ ಪರಿಸ್ಥಿತಿಯು ತೀರಾ ಪ್ರತಿಕೂಲವಾಗಿರುವದು ಇಲ್ಲಸಲ್ಲದ ಶೋಕತಾಪಗಳಿಂದ ಪೀಡಿತರಾಗುವಿರಿ. ವ್ಯಾಪಾರ ವಹಿವಾಟುಗಳಲ್ಲಿ ಕಷ್ಟನಷ್ಟ ರಾಜಕೀಯದಲ್ಲಿ ಪರಾಭವ ಪಿತ್ತ ಪ್ರಕೋಪದಿಂದ ದೇಹಾಲಸ್ಯ ಇತ್ಯಾದಿ ಅನಿಷ್ಟ ಫಲಗಳಿಂದಾವೃತರಾದ ನಿಮಗೆ ತಾ. 19-20-21 ಈ ದಿನಗಳಲ್ಲಿ ಗುರುಗಳ ಅನುಗ್ರಹದಿಂದ ಕೊಂಚಲಾಭವಿದೆ.

ವೃಶ್ಚಿಕ:—ಪರಿಸ್ಥಿತಿಯು ಕೊಂಚ ಪ್ರತಿಕೂಲವಾಗಿರುವದು. ಶತ್ರುಜನರ ಪೀಡೆಯಿಂದ ನಿಮ್ಮ ಬಯಕೆಗಳೂ ಈಡೇರಲಾರವು. ತನುಮನೋ ರೋಗಗಳು ದಿನೇದಿನೇ ಹೆಚ್ಚುವವು. ವ್ಯಾಪಾರ ವ್ಯವಹಾರಗಳಲ್ಲಿ ಲಾಭಕ್ಕಿಂತ ಅಧಿಕ ವ್ಯಯವಾಗಲಿದೆ. ಕಾಯಕಷ್ಟ ಜೀವಿಗಳಿಗೆ ಹೆಚ್ಚಿನ ಅನಾನುಕೂಲತೆಗಳುಂಟಾಗಲಾರವು. ತಾ. 15-16-21 ಈ ದಿನಗಳು ಸ್ವಲ್ಪ ಉತ್ತಮ.

ಧನು:—ಸುಸಮಯವು ಸನ್ನಿಹಿತವಾಗಿದೆ ನೀವಾವ ಕಾರ್ಯಕ್ಕೆ ಕೈಯಿಕ್ಕಿದರೂ ನಿಮ್ಮಂತೆ ಫಲವಾಗುವುದರಲ್ಲಿ ಅಷ್ಟೂ ಸಂಶಯವಿಲ್ಲ. ನಿಮ್ಮ ಕಾರ್ಯ ಕಲಾಪಗಳು ಕಂಡ ಶತ್ರುಜನರು ನಿಮ್ಮ ಮೈತ್ರಿಯನ್ನು ಬಯಸುವರು. ರಾಜಕೀಯ ರಂಗದಲ್ಲೂ ಸಾಮಾಜಿಕ ಕ್ಷೇತ್ರದಲ್ಲೂ ಒಳ್ಳೆಯ ಸ್ಥಾನಮಾನಗಳು ಲಭಿಸುವವು. ತಾ 17-18 ಈ ದಿನಗಳು ಅತ್ಯುತ್ತಮವಿವೆ.

ಮಕರ:—ವಿನಾಕಾರಣ ಆಪ್ತೇಷ್ಟರಲ್ಲೂ ಬಂಧು ಜನತೆಯಲ್ಲೂ ಕಲಹವಾಗಲಿದೆ. ಯತ್ನಶೀಲರಿಗೆ ಫಲಪ್ರಾಪ್ತಿಯು ಉತ್ತಮವಾಗಿಯೇ ಇದೆ. ಆದರೂ ಖರ್ಚುಗಳು ಮಾತ್ರ ದಿನದಿಂದ ದಿನಕ್ಕೆ ಹೆಚ್ಚುವುದರಿಂದ ಹೆರವರ ಕೂಡೆ ಸಾಲತೆಗೆವ ಪ್ರಸಂಗ ಬರಲೀತು. ತ್ರಿಯ ಜನರ ನಿಯೋಗ ದುಃಖಿತರಾದ ನಿಮಗೆ ತಾ 15-16-19-20 ಈ ದಿನಗಳು ಕಿಂಚಿತ್ಸುಖ ಪ್ರಾಪ್ತಿಯಿದೆ.

ಕುಂಭ:—ಕಾಲವು ತೀರ ವಿಪರೀತವಸ್ಥೆಗೆ ಬಂದಿದೆ. ಮುಟ್ಟಿದ್ದು ಮಸಿ ಎಂಬಂತೆ ಯಾವ ಕಾರ್ಯಕ್ಕೆ ಕೈಹಚ್ಚಿದರೂ ಕೇವಲ ನಷ್ಟ ಮಾತ್ರ ಕಾಣಸುವದೇ ಹೊರತು ಲಸಿದ್ಧಿಯಾಗಲಾರದು. ಸದಾ ಪರ್ಯಟನದಲ್ಲಿ ಕಾಲ ಕಳೆವಿರಿ. ವಾತಪಿತ್ತ ದೋಷದಿಂದ ಆರೋಗ್ಯವು ತೀರ ಕೆಡಲಿರುವದು. ನೌಕರಜನರಿಗೆ ಅಧಿಕಾರಿಗಳ ಪೀಡೆಯು ದಿನದಿಂದ ದಿನಕ್ಕೆ ಹೆಚ್ಚುವುದು. ತಾ 17-18-21 ಈ ದಿನಗಳಲ್ಲಿ ಕೊಂಚ ಸುಖ ಕಾಣಸಲಿದೆ.

ಮೀನ:—ಸದ್ಯ ನೀವು ಕಷ್ಟದಿಂದ ಮುಕ್ತರಾಗಿ ಸುದಿನಗಳನ್ನು ಕಾಣುವ ಸಂದರ್ಭ ಬಂದಿದೆ. ಯಾವತ್ತು ನಿಮ್ಮ ಬಯಕೆಗಳು ನಿರ್ವಿಘ್ನದಿಂದ ನೆರವೇರುವವು. ಹಿಂದಿನ ಸಾಲಶೂಲಗಳಿಂದ ಮುಕ್ತರಾಗಿ ಕೈಯಲ್ಲಿ ನಾಲ್ಕು ಕಾಸು ಸದಾ ಉಳಿಯಲಿದೆ. ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ನಿಮ್ಮ ಪಂಥವೇ ಮೇಲಾಗುವದು. ಅಪ್ರಮಾದ ಕುಜನ ದೆಸೆಯಿಂದ ಕೆಲವೊಮ್ಮೆ ಶತ್ರುಗಳ ಕಾಟ ಕಾಣಿಸಬಹುದು. ಚರ್ಮರೋಗಗಳುಂಟಾಗಲಿದೆ, ತಾ 15-16-19-20 ಈ ದಿನಗಳಲ್ಲಿ ನಿಮ್ಮ ಸಂಕಲ್ಪವು ನಿರ್ವಿಘ್ನದಿಂದ ಈಡೇರುವದು.

ಕವಿರಾಜ ಯನ್. ಯನ್. ಸೇನರ

ಶಾಸ್ತ್ರೀಯ ಔಷಧಿಗಳು ಈಗಲೇ ಬಂದಿವೆ

ಬೃಹತ್ ಅಮೃತಬಳ್ಳಿ ಕಷಾಯ
ಪ್ರಸೂತಾರಿಷ್ಟ
ಕಸ್ತೂರಿ ಕಲ್ಪ ರಸಾಯನ
ನೇತ್ರಬಿಂದು
ಕರ್ಪೂರಾರಿಷ್ಟ
ದುರ್ಗಾ ಪುನರ್ನವಾಸವ
ಬಾಸಾರಿಷ್ಟ
ಕುಂಕುಮಾಸವ
ಮೃಗಾಂಕ ದ್ರಾವ

ದರವನ್ನು ವಿಚಾರಿಸುವದು.
ಏಜಂಟ್:—
ಶಾ ಕಂಪೆನಿ, ಮಂಗಳೂರು ನಂ. 1.

ಸಾರ್ವಜನಿಕರ ಉಪಯೋಗಕ್ಕಾಗಿ ಅಮೂಲ್ಯ ರತ್ನ ಪ್ರಯೋಗ!

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಓಷಧಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೮ದಿನದ ಲೇಹ್ಯ ರೂ ೫/೮, ೨೪ ದಿನದ ಲೇಹ್ಯ ರೂ ೩/೮
(ಪೋಸ್ಟೇಜು ಮಾಫ)

ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋದಿನಲ್ಲಿ ಕೇಳಿರಿ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನ ಎ. ರಾಮಸ್ವಾಮಿ ಅಯ್ಯರ್‌ರವರ

⁂ ಸಂತಾನ ಸಿಂಧೂರ ⁂

ಬಹಿಷ್ಠೆ ಸಂಬಂಧದ ಹೊಟ್ಟೆನೋವು ಉಳ್ಳ ಮಕ್ಕಳಿಲ್ಲ, [illegible] ವರಿಗೂ ಮತ್ತು ಬಹಿಷ್ಠೆ ಸಂಬಂಧದ ಹೊಟ್ಟೆನೋವಿನ ಜೊತೆಗೆ ತಲೆನೋವು, ನಡು [illegible] ಬಿಳಿಸೆರಗು, ನಿದ್ರಾಭಂಗ, ಜಿಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ-

೩ ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ೧ ಸೆಟ್ ಅನುಪಾನಪತ್ರಿಕೆ ಮೇರೆ ಇಬ್ಬರೂ ಸೇವಿಸಿರಿ ಸಾಕು. ಶೋಧಿಸಲಾದ 15 16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾ ಪತ್ರಗಳನ್ನು ಪಡೆದಿದೆ.

ಕ್ರಯ: ೧ ಸೆಟ್ 5ರೂ ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1ರೂ ವಿ ಪಿ. ಇಲ್ಲ ಕ್ಯಾಟಲಾಗ್ ಉಚಿತ 6ರೂ ಮನಿಆರ್ಡರ್ ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ:—A K ವಿಶ್ವೇಶ್ವರೈಯ್ಯ (ಎ ರಾಮಸ್ವಾಮಿ ಅಯ್ಯರ್ ಸನ್,)
Prop: ಸಂತಾನ ಸಿಂಧೂರ, ಅಂಬಳೆ ಪೋಸ್ಟು, ಯಳಂದೂರು ತಾ, ಮೈಸೂರು ಡಿ,
ಮೈಸೂರು ಶಾಖೆ: 269 ಸೋನಾರ್ ಸ್ಟ್ರೀಟ್, ದಿವಾನ್ಸ್ ರೋಡು, ಮೈಸೂರು.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದೆಕಟ್ಟಿ ಋತುಸ್ರಾವವಾಗಿ ಒಡು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3-; ಸ್ಪೆಶ್ಯಲ್ ರೂ. 5-ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ ಹಸ್ತರಡಾಕ ಪ್ರತ್ಯೇಕ]

Mrs. P. DEVEE, F. DS. (N. J.)
Tollygunge CALCUTTA.
ಸ್ಥಾನಿಕ ಸಹಾಕಂಪನಿ, ಮಂಗಳೂರು

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

ಸುಲಭದಲ್ಲಿ ಇಂಗ್ಲಿಷ್

ಅತಿ ಸುಲಭದಲ್ಲಿ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿಸಲ್ಪಟ್ಟ

ಅತಿ ಉಪಯುಕ್ತ ಪುಸ್ತಕ

ಬೆಲೆ ರೂ- 1-8-0, ವಿ. ಪಿ. ದ್ವಾರ ರೂ- 2-0-0

ವಿಳಾಸ—
ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published by K. H. Shetty at the Navayuga Press, Udipi, S. India.

Regd. No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪಿತ
31 ನೆಯ ವರ್ಷ

22—5—1952

Founder: Sri ಎ. ಬಿ. Shetty
Minister for Medical & Public Health

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಸಾರ್ವಜನಿಕ
ಆರೋಗ್ಯ ಮಂತ್ರಿ
ಶ್ರೀ ಎ. ಬಿ. ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಪೋಸ್ಟ್ ಬಾಕ್ಸ್
ನಂಬ್ರ 22
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೩೭

NAVAYUGA WEEKLY   Post Box No. 22   UDIPI.   Vol 31 No. 37

ಪ್ರಜಾಸತ್ತಾತ್ಮಕ ರಾಜ್ಯ ಪದ್ಧತಿಯಲ್ಲಿ ಸರಕಾರದ ಪಾತ್ರ ಒಂದು ಯಂತ್ರದಂತೆ. ಅದು ಕೆಲಸ ಮಾಡಲು ಬೇಕಾದ ಚೈತನ್ಯ ಪ್ರಜೆಗಳಿಂದಲೇ ಬಂದುಬರಬೇಕು....ಅದರ ಮೇಲಿನ ಸಂಪೂರ್ಣ ನಿಯಂತ್ರಣ ಇರುವುದೂ ಪ್ರಜೆಗಳ ಕೈಯಲ್ಲಿಯೇ. ಹೀಗೆ ರಾಷ್ಟ್ರದ ಅಭ್ಯುದಯದ ಕೀಲಿಕೈಯನ್ನು ಜನಸಾಮಾನ್ಯಕ್ಕೆ ಒಪ್ಪಿಸಿಕೊಟ್ಟಿರುವ ಈ ಆಡಳಿತದ ನಮೂನೆ ಈಚೆಗೆ ಬಹಳ ಆಕರ್ಷಕವೆನಿಸಿದೆ. ಒಬ್ಬನ ಅಧಿಕಾರಮಾಣೆಗಿಂತ, ಹತ್ತು ಜನರ ಸಹಮತವುಳ್ಳ ವಿಚಾರಧಾರೆಗೆ ಅಧಿಕ ಪ್ರಾಶಸ್ತ್ಯವೂ ಬೆಲೆಯೂ ಬರುತ್ತದೆ. ಕಾರಣ ಒಬ್ಬ ಸರ್ವಾಧಿಕಾರಿಯ ಕೈಯಿಂದ ರಾಜ್ಯಸೂತ್ರವು ಸಮಾಜದ ಹತ್ತು ಸಮರ್ಥರ ಪಾಲಿಗೆ ಒಪ್ಪಿಸಲ್ಪಟ್ಟಿದೆ.

ಸಮಾಜ ಘಟಕವನ್ನು ಸರ್ವ ವಿಧದಿಂದಲೂ ಬಲಪಡಿಸುವುದೂ ತನ್ಮೂಲಕ ರಾಷ್ಟ್ರಕಲ್ಯಾಣವನ್ನೂ ಲೋಕ ಹಿತವನ್ನೂ ಕೈಗೂಡಿಸುವುದೂ ಈಗ ಸಮಾಜದ ಸದಸ್ಯರೆನಿಸುವ ಸಾಮಾನ್ಯ ಜನರಿಗೇ ಸೇರಿದೆ—ಎಂದಾಯಿತು. ಉನ್ನತಿ-ಅವನತಿಗಳಲ್ಲಿ ಒಳ್ಳೆಯದನ್ನು ಆರಿಸುವ ಮತ್ತು ಕೆಟ್ಟದನ್ನು ನಿರಾಕರಿಸುವದೊಂದಮಾಡುವ ಸ್ವಾತಂತ್ರ್ಯ ಇಂದು ನಮ್ಮೆಲ್ಲರಿಗಿದೆ.

ನಾವು ಅವಿವೇಕದಿಂದ ಒಳ್ಳೆಯದನ್ನು ಕಡೆಗಣಿಸಿ, ಕೆಟ್ಟ ಸಂಗತಿಯನ್ನು ಸ್ವಾಗತಿಸ ಬಯಸಿದರೆ ಅದರಿಂದ ಸರ್ವನಾಶವನ್ನು ತಂದುಕೊಂಡಂತಾದೀತು. ಜನಸಾಮಾನ್ಯರ ಬುದ್ಧಿಯ ಮಟ್ಟ ಇನ್ನೂ ನೀಚಾವಸ್ಥೆಯಲ್ಲಿರುವಾಗ, ಮತ್ತು ಪರಿಪಕ್ವವಾದ ವಿವೇಕಜ್ಞಾನದ ಕೊರತೆಇರುವಾಗ ಇಂಥ ತಪ್ಪುಗಳಾಗುವುದು ತೀರಾ ಸ್ವಾಭಾವಿಕ. ಪ್ರಜಾ ಪ್ರತಿನಿಧಿಗಳೇ ಸರಕಾರ ಯಂತ್ರದಲ್ಲಿರುವುದರಿಂದ ಅಲ್ಲೂ ಜನರ ದೋಷಯುಕ್ತ ವಿಚಾರಗಳಿಗೆ ಸ್ಥಾನ ದೊರೆಯಬಹುದು. ಹೀಗೆ ಸಮಾಜದ ಹ್ರಾಸವನ್ನು ನಾವೇ ತಂದುಕೊಳ್ಳುವಂತಾಗುತ್ತದೆ. ಅತ್ಯುತ್ತಮ ರಾಜ್ಯಪದ್ಧತಿಯೆಂದು ಎಲ್ಲರೂ ಒಪ್ಪಿಕೊಂಡು ಹೊಗಳುವ ಪ್ರಜಾಪ್ರಭುತ್ವ ತತ್ವದಲ್ಲಿರುವ ಪ್ರಾಮುಖ್ಯ ದೌರ್ಬಲ್ಯವೆಂದರೆ ಇದೇ—ಈ ದುಷ್ಟ ಪರಿಣಾಮವನ್ನು ಉದಾರಿಸುವ ಪ್ರಸಂಗ ಬರದಿರುವಂತೆ ನಾವು ಎಷ್ಟು ಜಾಗರೂಕತೆಯಿಂದ ನಡೆದುಕೊಂಡರೂ ಕಡಿಮೆಯೇ.

ಭಾರತದಲ್ಲಿ ಕೋಟ್ಯಂತರ ಜನರು ಮತಾಧಿಕಾರ ಪ್ರಯೋಗದ ಮೂಲಕ ತಮ್ಮ ಪ್ರತಿನಿಧಿಗಳನ್ನು ಶಾಸನಾಂಗಕ್ಕೆ ಆ

ಮಧುಪರ್ಕ

ಒಬ್ಬ ಧರ್ಮೋಪದೇಶಕ ವೇಲ್ಸ್ ರಾಜ್ಯದ ಗಡಿಯಲ್ಲಿ ಸಭೆಯೊಂದನ್ನುದ್ದೇಶಿಸಿ ಹೇಳಿದ—"ಮಂಜು ಮುಸುಕಿದ ಒಂದು ಮುಂಜಾನೆ ಈ ಗುಡ್ಡಬೆಟ್ಟಗಳ ಮೇಲಿಂದ ಹೋಗುತಿದ್ದಾಗ, ಪರ್ವತದ ಕಿಬ್ಬದಿಯಲ್ಲಿ ಏನೋ ಚಲಿಸುತ್ತಿರುವುದನ್ನು ನೋಡಿದೆ. ಅದು ತುಂಬ ವಿಚಿತ್ರ ತೋರಿದುದರಿಂದ, ಬಹುಶಃ ಭೂತವಿರಬಹುದು ಎಂದುಕೊಂಡೆ. ಭಯಗೊಂಡರೂ ಮುಂದುವರಿದೆ. ಹೆಚ್ಚು ಹತ್ತಿರವಾದಂತೆ, ಅದು ಮನುಷ್ಯನಾಗಿ ಉತ್ಸಾಹದಿಂದ ಮುನ್ನಡೆದು ಆ ಮುಟ್ಟಿದಾಗ—ಏನು ಹೇಳಲಿ! ಅವನು ನನ್ನ ತಮ್ಮನೇ ಆಗಿದ್ದನು."

ದುಡಿಮೆಯ ಕುರಿತು ಅಂಜಿಕೆ ಬೇಡ: ಪರಿಶ್ರಮ ನೀಡುವ ಸತ್ಫಲದಲ್ಲಿ ಸಂಶಯ ಬೇಡ

ಹೊಸ ಸಮಾಜ ರಚನೆ

ರಿಸಿ ಕಳುಹಿಸುವುದರಲ್ಲಿ ತುಂಬ ಯಶಸ್ವಿಯಾಗಿದ್ದಾರೆ. ಜಗತ್ತಿನ ಯಾವುದೇ ಭಾಗದಲ್ಲಿ ಇಷ್ಟು ದೊಡ್ಡಪ್ರಮಾಣದಲ್ಲಿ ಹಿಂದೆಂದೂ ನಡೆಯದ ಮಹಾಪ್ರಯೋಗವೊಂದು ಅಪೇಕ್ಷಿತ ಇಷ್ಟಸಿದ್ಧಿಯನ್ನುಂಟುಮಾಡಿರುವುದಕ್ಕೆ ನಮಗೆ ಹೆಮ್ಮೆ ಎನಿಸಬೇಕು. ಇನ್ನು ಮುಂದೆ ನಾವು ರಾಷ್ಟ್ರ ಪುನರ್ನಿರ್ಮಾಣದ ಕಾರ್ಯಕ್ಕೆ ಭರದಿಂದ ಧುಮುಕುವುದವಶ್ಯ. ನಮ್ಮ ಆರ್ಥಿಕ ಸಮಸ್ಯೆಗಳು, ಸಾಮಾಜಿಕ ತೊಂದರೆಗಳು, ರಾಜಕೀಯ ಸುಧಾರಣೆಗಳು—ನಮ್ಮಲ್ಲಿ ಪ್ರತಿಯೊಬ್ಬರೂ ಇವುಗಳನ್ನು ವಿಶೇಷ ಆಸಕ್ತಿಯಿಂದ ಅಭ್ಯಸಿಸಿ, ವಿಚಾರಶೀಲರಾಗಿ ವರ್ತಿಸಿ, ಹಿತಕರ ನಿರ್ಣಯಕ್ಕೆ ಬರುವುದಷ್ಟೇ ಅಲ್ಲ; ಆ ನಿರ್ಣಯಕ್ಕೆ ಸರ್ವಥಾ ಅನುಕೂಲವೆನಿಸಿದ ಕ್ರಮದಲ್ಲಿ ಸ್ವಂತ ಆಚರಣೆಯನ್ನು ಇಟ್ಟುಕೊಳ್ಳಬೇಕು.

ಈಗ ನಾವು ಸುದೀರ್ಘವಾದ ಚರ್ಚೆಯಲ್ಲಿ ವ್ಯರ್ಥ ಸಮಯ ಕಳೆಯುವ ಸ್ಥಿತಿಯಲ್ಲಿಲ್ಲ. ದ್ವಂದ್ವ ತತ್ವಗಳ ವ್ಯಾಖ್ಯಾನದಲ್ಲಿ ಜೀವನ ಸವೆಸುವ ಹುಚ್ಚು ಮನೋವೃತ್ತಿ ನಮಗಿರಬಾರದು. ನಮ್ಮ ವಿಚಾರ ಪ್ರವೃತ್ತಿ ಸಂಕುಚಿತ ಕ್ಷೇತ್ರದಲ್ಲಿ ವಿಹರಿಸದೆ, ವಿಶಾಲ ದೃಷ್ಟಿ ತಳೆದು ಬಲಗೊಳ್ಳಬೇಕು. ಅದು ಹೃದಯ ಪರಿವರ್ತನೆಗೆ ಸಹಾಯಕವಾಗುವ ರೀತಿಯಲ್ಲಿ ಪರಿಪುಷ್ಟಗೊಳ್ಳುವುದವಶ್ಯ. ನಮ್ಮ ಅಭಿಪ್ರಾಯ ವಿರೋಧಕರನ್ನೂ ಪ್ರೇಮಪುರಸ್ಸರವಾಗಿ ಆಕರ್ಷಿಸಿಕೊಳ್ಳುವ ಅನುಭವ ಸಾಮರ್ಥ್ಯವಂತರಾಗಿ ನಾವು ಕೆಲಸಕ್ಕೆ ಭರದಿಂದ ತೊಡಗಬೇಕು.

ಬುದ್ಧಿವಂತಿಕೆ-ಮತ್ತು ಜೀವನ ಸಾಫಲ್ಯ—ಇವು ಬೇರೆ ಬೇರೆ ಸಂಗತಿಗಳು. ಬುದ್ಧಿವಂತನಿದ್ದ ವ್ಯಕ್ತಿ ಒಬ್ಬ ಮನುಷ್ಯನು ಸುಖವಾಗಿ ಬದುಕಿ ಬಾಳುವನೆನ್ನಲಾರೆವು. ಅಂಥವನ ಅತಿರೇಕ ಬುದ್ಧಿವಂತಿಕೆಯೇ ಬಾಳನ್ನು ಹಾಳುಗೆಡಹಲಿಕ್ಕೆ ಸಾಕು. ಬದುಕು ಬಂಗಾರವಾಗಬೇಕಾದರೆ-ನಮಗೆ ಬುದ್ಧಿವಂತಿಕೆಯಿಂದ ನಡೆದುಕೊಳ್ಳುವುದೇ ಏಕಮಾತ್ರಮಾರ್ಗ ಎಂಬ ಕಲ್ಪನೆ ಎಲ್ಲ ಸಮಯದಲ್ಲಿ ಸರಿ ಎನಿಸುವುದಿಲ್ಲ. ನೈತಿಕ ಸಾಮರ್ಥ್ಯ, ನಿರ್ಭಯ ಪ್ರವೃತ್ತಿ ಮತ್ತು ಕಾರ್ಯಾಚರಣೆಯ ಬಗ್ಗೆ ಬಲವಾದ ನಿಷ್ಠೆ-ಇವುಗಳಿಂದಲೇ ಕಲ್ಯಾಣ ಸಿದ್ಧಿಯಾಗುತ್ತದೆ. ಇದಕ್ಕೆ ಮೂಲ ಸ್ರೋತವು ಶುದ್ಧ ಮನಸ್ಸು ಎಂಬುದನ್ನು ಮರೆಯುವಂತಿಲ್ಲ. ಇದರಿಂದ ವ್ಯಕ್ತಿಯ ಅಂತಃಶಕ್ತಿ ಸಂವರ್ಧನೆಗೊಳ್ಳುವುದರ ಜೊತೆಗೆ, ಸಮಾಜದ ಬಲವೂ ಹೆಚ್ಚುವುದು.

ನಮ್ಮ ವೈಯಕ್ತಿಕ ಆಸೆ-ಆಕಾಂಕ್ಷೆಗಳು ಏನೇ ಇರಲಿ-ಸಾಮಾಜಿಕ ಆಚರಣೆಯೊಂದನ್ನು ನಾವು ಅಗತ್ಯವಾಗಿ ರೂಢಿಸಿಕೊಂಡರೆ ಚೆನ್ನ. ಗುರಿಯು ಅನಿಶ್ಚಿತವಿರುವಾಗ, ನಾವು ಯಾವ ಪ್ರಯತ್ನವನ್ನೂ ಶ್ರದ್ಧೆಯಿಂದ ಮಾಡುವುದು ಸಾಧ್ಯವಿಲ್ಲ. ಚಂಚಲ ಮನಸ್ಸನ್ನು ಹಿಡಿದುಕೊಂಡು ಯಾವದೇ ಸಾಧನೆಯತ್ತ ತೊಡಗುವುದಕ್ಕಾಗುವುದಿಲ್ಲ. ಆದುದರಿಂದ, ನಮ್ಮ ಧ್ಯೇಯದ ನಿಜ ಸ್ವರೂಪವನ್ನು ತಿಳಿದುಕೊಂಡು, ಆ ಕಡೆಗೆ ನಡೆಯಲು ಉತ್ಸುಕರಾಗುವಾ.

ಜಗತ್ತಿನಲ್ಲಿ ಎರಡು ಶಕ್ತಿಗಳೊಡನೆ ಯಾವಾಗಲೂ ಸೆಣಸಾಟ-ಸಂಘರ್ಷ ನಡೆದಿರುತ್ತದೆ. ಒಂದು ಸತ್—ಎಂದರೆ ಪ್ರಗತಿ ಹಾಗೂ ಮಾನವ ಚೈತನ್ಯದ ವಿಕಾಸ ಕಾರ್ಯ. ಇನ್ನೊಂದು ಅಸತ್—ಎಂದರೆ ವ್ಯಕ್ತಿಯ ಶಕ್ತಿಯನ್ನು ಕುಂದಿಸಿ ನಿಷ್ಕ್ರಿಯನನ್ನಾಗಿ ಮಾಡಿ, ಸಾಮಾಜಿಕ ಅವನತಿಯನ್ನುಂಟುಮಾಡುವ ಕೇಡು. ಅಧೋಗತಿಯ ಹೇತುವಾದ ಅಸತ್ಯದ ಮಾರ್ಗ ನಮಗೆ ಯಾವ ಕಾಲಕ್ಕೂ ಬೇಡ-ಸನ್ಮಾರ್ಗ ಗಮನವೇ ಬದುಕಿನ ಚರಮೋದ್ದೇಶ ಹಾಗೆಂದು, ಅಸತ್ಯವು ಬಹಳ ಆಕರ್ಷಕ ರೂಪಧರಿಸಿದೆ. ಅಂಗಡಿಯ

Our Pigmy Deposit Scheme

.... brings our bank to your door. You may save as small a sum as annas two. Our collector will call on you every day to receive it.

At the rate of annas two per day you save Rs. 350 in 7 years because we allow interest at 3½% per annum. At the rate of Re. 1/- per day your Savings are Rs 2,800/- in 7 years. At the rate of Rs. 10/- it is Rs 28,000/-. Come in to-day and join the band of **Prudent Prosperous Pigmy People.**

The Canara Industrial & Banking Syndicate Ltd.

ESTD: 1925. H. O: UDIPI.

ಲ್ಲಿ ಸಿಗುವ ಬಣ್ಣ ಬಣ್ಣದ ಐಸ್‌ಕ್ರೀಮುಗಳಂಥ ಮೇಜವಾದಂತೆ ಅವುಗಳ ಬಾಹ್ಯಾಡಂಬರ ಅದರೆ ನಮಗೆ ಮಾತ್ರ ಸಾತ್ವಿಕವಾದ ತಿಳಿನೀರು ಸ್ವಾದವೆನಿಸಬೇಕು. ರಾಷ್ಟ್ರ ಸ್ವಾತಂತ್ರ್ಯದ ರಕ್ಷಣೆಗೆ, ಸಮಾಜದ ಒಕ್ಕಟ್ಟಿಗೆ ಘಾತಕವಾದ ದುಷ್ಟಶಕ್ತಿಗಳನ್ನು ದಮನಿಸಬೇಕು. ಪರಸ್ಪರ ಸಹಕಾರ ಪ್ರವೃತ್ತಿಯನ್ನು ಬೆಳೆಸಿ, ಅಸಮಾನತೆಯನ್ನು ದೂರೀಕರಿಸಿ, ರಾಷ್ಟ್ರಾಭ್ಯುದಯ ಕಾರ್ಯದಲ್ಲಿ ತಲ್ಲೀನರಾಗಬೇಕಾದುದು ಇಂದಿನ ಪರಮಾವಶ್ಯಕತೆ.

ನಮಗೆ ಬಂದಿರುವ ಸ್ವಾತಂತ್ರ್ಯ ಈ ದಿಶೆಯಲ್ಲಿ ಮೊದಲ ಹೆಜ್ಜೆ ಮಾತ್ರ- ದೂರದಿಂದ ನಮಗೇನೋ ಅಸ್ಪಷ್ಟವಾಗಿ ಗೋಚರಿಸಿದೆ. ಅದನ್ನು ಸಮೀಪಿಸಿ ಗುರುತಿಸಲು, ಗುರುತಿಸಿ ಆನಂದಕ್ಕಭಾಗಿಯಾಗಲು—ನಾವು ತನ್ನು ಬಹಳ ದೂರ ಸಾಗುವುದು ಉಳಿದಿದೆ. ನಮಗೆ ತುಂಬ ಕೆಲಸ ಮಾಡಲಿಕ್ಕಿದೆ. ಪ್ರಗತಿ ಸಾಧಿಸಲು ಸುಲಭ ದಾರಿ ಎಂದಿಲ್ಲ. ಬಡತನ ಅಥವಾ ಅದರಿಂದ ಉಂಟಾಗಿರುವ ಅಧಃಪತನದಿಂದ ಚೇತರಿಸಿ, ಎದ್ದು ನಿಲ್ಲಲು ಹೆಚ್ಚು ದುಡಿಯದೆ ಬೇರೆ ಮಾರ್ಗವೇ ನಮಗೆ ತೆರೆದಿಲ್ಲ. ಜಗತ್ತಿನ ಯಾವ ರಾಷ್ಟ್ರವಾದರೂ ಆಲಸ್ಯದಿಂದ ಅಭ್ಯುದಯ ಪಡೆದಿಲ್ಲ—ಶ್ರಮ, ನಿರಂತರ ಪರಿಶ್ರಮ ಇದೇ ಸಂಪತ್ತು ಗಳಿಸುವ ನೇರಾದ ಮಾರ್ಗ. ನಮ್ಮಲ್ಲಿ ಕೆಲಸದ ಬಗ್ಗೆ ತಿರಸ್ಕಾರ ಭಾವನೆ ಇರಬಾರದು. ದುಡಿಯುವುದು ಕೀಳು ಎಂಬ ಭಾವನೆಕ್ಕೆ ಮನಸ್ಸಿನಲ್ಲಿ ಎಡೆಕೊಡಲೇ ಬಾರದು. ಶ್ರಮವಿರಿದು ದುಡಿದುಣ್ಣುವುದು, ಸುಖಪಡುವುದು, ಆಲಸಿಕೆಯ ಒಡ್ಡಟಕ್ಕಿಂತ ಸಾವಿರ ಪಾಲು ಹಿತದಾಯಕ. ಸ್ವಾತಂತ್ರ್ಯದ ಸಸಿಯಿಂದ ಸಾಧಿಸ್ಯವಾದ ಫಲ ಕೈಗೆ ಬರಬೇಕಾದರೆ, ಅತ್ಯಂತ ಪರಿಶ್ರಮ ಪೂರ್ವಕವಾಗಿ ಸಸಿಯನ್ನು ಪೋಷಿಸಿ, ಮರವಾಗಿ ಬೆಳೆಸಬೇಕು. ಈ ನಿಟ್ಟಿಗೆ, ನಾವು ಸುರಿಸುವ ಬೆವರ ಹನಿಯೇ ಸಸಿಯು ಬುಡಕ್ಕೆರೆಯುವ ನೀರು.

ಒಂದು ನಿಟ್ಟಿನಿಂದಲೂ ದೃಢ ಸಂಕಲ್ಪದಿಂದಲೂ ಪ್ರಾಮಾಣಿಕವಾಗಿಯೂ ಗುರಿಯೆಡೆಗೆ ಸಾಗುವುದಕ್ಕೆ ನಾವು ಇಷ್ಟಪಟ್ಟರೆ—ಹೊಸ ಸಮಾಜದ ರಚನಾಕಾರ್ಯವು ಶೀಘ್ರವೇ ಕಾಣಬರುವುದು. ತೊಂದರೆಗಳನ್ನು ಲೆಕ್ಕಿಸದೆ, ಕಂಟಕಗಳಿಗೆ ಭಯಗೊಳ್ಳದೆ, ಕಾರ್ಯಪ್ರವೃತ್ತರಾಗುವ ಸ್ವಾಭಾವಿಕ ಮನೋವೃತ್ತಿಯನ್ನು ಬೆಳೆಸಿಕೊಳ್ಳೋಣ— ಛಲ ಪಟುತೆಯಿಂದ, ಉತ್ಸಾಹದಿಂದ, ತುಂಬಿ ತುಳುಕೋಣ—ಬಂದ ಕಷ್ಟಗಳನ್ನು ಯಶಸ್ವಿಯಾಗಿ ನಿಭಾಯಿಸೋಣ, ಮುಂದುವರಿಯುವುದೇ ಶ್ರೇಯಸ್ಕರ. ದುಡಿಮೆ, ಉತ್ಪಾದನೆ— ಇದೇ ನಮ್ಮ ಮಂತ್ರವಾಗಬೇಕು. ನಮ್ಮ ಸಮಾಜದ ಹಿತಕ್ಕಾಗಿ, ಈ ತ್ಯಾಗಕ್ಕೆ, ಈ ಸೇವೆಗೆ— ನಾವು ಮುಂದಾಗಬೇಕು. —ಓಂತತ್ಸತ್.

ಮಂಥಾಪರ್ಣ

ಎದುರು ಪುಟದಲ್ಲಿ ಪ್ರಕಟವಾದ ಲೇಖನದ ಆರನೇ ಸಾಲಿನ ಪ್ರಾರಂಭದಲ್ಲಿ "ತೋರಿಕ್ಕೂ" ಎಂಬ ಶಬ್ದವೂ ಅನಂತರ "ಉತ್ಸಾಹದಿಂದ ಮುನ್ನಡೆದು ಆ" ಎಂದಾದಮೇಲೆ ಮುನ್ನುಡಿನ್ನು ಎಂಬ ಶಬ್ದವೂ ನಿಟ್ಟುಹೋಗಿವೆ. ವಾಚಕರು ಇದನ್ನು ಗಮನಿಸಬೇಕು.

ಸಂ. ಸ.

ಹಿಂದುಳಿದ ದೇಶಗಳಿಗೆ ಆರ್ಥಿಕ ನೆರವು

ಸ್ವೀಕರಿಸುವಲ್ಲಿ ಸ್ವತಂತ್ರ ರಾಷ್ಟ್ರಗಳ ಕರ್ತವ್ಯ

ಸಂಯುಕ್ತ ರಾಷ್ಟ್ರ ಸಂಘವು ಈಚೆಗೆ ಪ್ರಕಟಿಸಿದ ಜಾಗತಿಕ ಅರ್ಥ ಮಂಡಲದ ವಿಸ್ತಾರ ವಿಮರ್ಶೆ ಕೌತುಕವನ್ನುದಯಿಸಿದೆ—ಕಳೆದ ವರ್ಷ, ಉತ್ಪಾದಿತ ವಸ್ತುಗಳಲ್ಲಿ ಜನಸಾಮಾನ್ಯದ ಉಪಯೋಗಕ್ಕೆ ಬೀಳುವಂಥವೇ ಬಹಳ ಹೆಚ್ಚಿಗಿದ್ದುವಾದರೂ ಅನ್ತರ್ರಾಷ್ಟ್ರೀಯ ಆರ್ಥಿಕ ಪರಿಸ್ಥಿತಿಗಳ ಕಾರಣದಿಂದ ಹಿಂದುಳಿದ ರಾಷ್ಟ್ರಗಳಿಗೆ ತುಂಬ ಗಂಡಾತರಗಳನ್ನು ಇದಿರಿಸಬೇಕಾಗಿ ಬಂದಿದೆ. ಕಚ್ಚಾ ಸರಕುಗಳ ರಫ್ತಿನಿಂದಲೇ ದೇಶದ ಸಂಪಾದನೆ ಹೆಚ್ಚಿಸಿಕೊಳ್ಳಬೇಕಾಗಿರುವ ಹಿಂದುಳಿದ ರಾಷ್ಟ್ರಗಳಿಗೆ ವಿದೇಶಗಳಿಂದ ನ ಚೆನ್ನಾದ ವ್ಯಾಪಾರವನ್ನು ಕೈಗೊಳ್ಳುವುದಕ್ಕಾಗಲಿಲ್ಲ. ಈ ಸರಕುಗಳನ್ನು ತಮ್ಮಲ್ಲಿಯೇ ಹೊಂದಿಗೊಳಿಸಿ, ಸಿದ್ಧ ವಸ್ತುಗಳನ್ನು ತಯಾರಿಸುವಷ್ಟರ ಮಟ್ಟಿನ ಹಣದ ಅನುಕೂಲತೆ, ಮತ್ತು ತಂತ್ರಿಕ ನೆರವು ಅವುಗಳಿಗೆ ಲಭ್ಯವಿಲ್ಲ. ಒಂದೆಡೆ ದೊಡ್ಡ ದೊಡ್ಡ ರಾಷ್ಟ್ರಗಳು ಉತ್ಪಾದನೆಯನ್ನು ಒಂದೇ ಸಮನೆ ಹೆಚ್ಚಿಸಿಕೊಂಡು ಪೈಪೋಟಿ ನಡೆಸುತ್ತಿರುವಾಗ— ಸಣ್ಣ ಪುಟ್ಟ ರಾಷ್ಟ್ರಗಳು ಅಭಿವೃದ್ಧಿಯ ಯಾವ ಮಾರ್ಗವೂ ಇಲ್ಲದೆ ಶೋಚನೀಯವಾಗಿ ಅರ್ಥಿಕ ದುಂದಸ್ಥಿತಿಯನ್ನು ಅನುಭವಿಸುತ್ತ ಕಾಣಬೇಕಾಗಿದೆ.

ಕಾತರ ಭಾವ

ಈ ವಿಷಮ ಪರಿಸ್ಥಿತಿಯಲ್ಲಿ ಹಿಂದುಳಿದ ಎಲ್ಲ ರಾಷ್ಟ್ರಗಳ ರಕ್ಷಣೆಗೆ ಜಗತ್ತಿನ ಮಹಾ ರಾಷ್ಟ್ರಗಳು ಮುಂದಾಗಬೇಕೆಂದು,

ಸಂಯುಕ್ತ ರಾಷ್ಟ್ರ ಸಂಘದ ವಿಮರ್ಶೆ ಸೂಚ್ಯವಾಗಿ ಹೇಳಿದೆ. ಹೆಚ್ಚು ಸರಕುಗಳನ್ನೂ ಯಂತ್ರಗಳನ್ನೂ ನಿರ್ಯಾತ ಮಾಡಬಲ್ಲ ಸಮರ್ಥ ರಾಷ್ಟ್ರಗಳು ಬಡ ರಾಷ್ಟ್ರಗಳ ಆರ್ಥಿಕ ವ್ಯವಸ್ಥೆಯಲ್ಲಿ ಉಂಟಾಗುವ ಏರಿಳಿತಗಳನ್ನು ಒಂದು ಮಿತಿಯ ಲ್ಲಿ ತಪ್ಪಿಸಿ ಪ್ರಯತ್ನಿಸಬಹುದು— ಅಲ್ಲದೆ ಹಣದ ಸಹಾಯವನ್ನು ವಿಪುಲವಾಗಿ ಕೊಟ್ಟು ಹಿಂದುಳಿದ ರಾಷ್ಟ್ರಗಳ ಔದ್ಯೋಗಿಕ ಮುನ್ನಡೆಯನ್ನು ತ್ವರಿತಗೊಳಿಸಲು ತಕ್ಕ ಸೌಕರ್ಯಗಳನ್ನು ಕಲ್ಪಿಸಬಹುದು. ಈ ವಿಷಯದನ್ನು ನಿರಾತಂಕವಾಗಿಯೂ ವ್ಯವಸ್ಥಿತರೂಪದಲ್ಲಿಯೂ ನಿರ್ವಹಿಸಿಕೊಂಡು ಹೋಗಲು ಅಂತಾರಾಷ್ಟ್ರೀಯ ಪ್ರಯತ್ನ ನಡೆಯಬೇಕೆಂಬ ಒತ್ತಾಯವಿದೆ. ಜಾಗತಿಕ ಬ್ಯಾಂಕ. ಈ ದಿಶೆಯಲ್ಲಿ ತಕ್ಕಮಟ್ಟಿನ ಕೆಲಸ ಮಾಡುತ್ತಿದೆಯಾದರೂ—ಅದು ಈಗಿನ ಅವಶ್ಯಕತೆಯನ್ನು ಸಂಪೂರ್ಣ ರೀತಿಯಲ್ಲಿ ಪೂರೈಸುವ ಸ್ಥಿತಿಯಲ್ಲಿಲ್ಲ. ಅಮೇರಿಕೆಯು ಏಶಿಯದ ರಾಷ್ಟ್ರಗಳಿಗೆ ಆರ್ಥಿಕ ನೆರವನ್ನು ನೀಡಲು ತಯಾರಾಗಿದೆ. ಆದರೆ—ಅದರ ಸಹಾಯದ ಹಿಂದೆ ರಾಜಕೀಯ ಕೌಟಿಲ್ಯದ ಹೊಲಸು ಮನೆ ಮಾಡಿಕೊಂಡಿದೆ—ಎಂದು ಆರೋಪ.

ದುರುದ್ದೇಶ ಪ್ರೇರಿತವೆ?

ಇಲ್ಲಿಯೇ ಸಂದೇಹ ಮೂಡುವುದು—ಹಿಂದುಳಿದ ರಾಷ್ಟ್ರಗಳು ಕೃಷಿ ವಿಸ್ತರಣೆಯಿಂದಲೂ ಔದ್ಯೋಗಿಕವಾಗಿಯೂ ಪ್ರಗತಿ ಸಾಧಿಸಿ, ಸ್ವಾವಲಂಬನವನ್ನು ಭದ್ರವಾದ ಆರ್ಥಿಕ ನೆಲಗಟ್ಟನ್ನು ಹೊಂದಬೇಕಾದುದು ನಿಜವೇ. ಆದರೆ, ದೊಡ್ಡ ರಾಷ್ಟ್ರಗಳು ಏತಕ್ಕಾಗಿ ಸಹಾಯಕ್ಕೆ ಮುಂಬರುವುವು? ಅವುಗಳ ಮನೋವೃತ್ತಿಯು ಮೂಲದಲ್ಲಿ ದುರುದ್ದೇಶ ಪ್ರೇರಿತವಾಗಿಲ್ಲವೆ? ಮಿಲಿಯಾಂತರ ಡಾಲರುಗಳನ್ನು ಭಾರತ, ಜಪಾನು, ಇಂಡೋಚೀನಾಗಳಿಗೆ ಕೊಡಲು ಅಮೇರಿಕ ಮುಂಬಂದಿರುವುದರ ಒಳಗುಟ್ಟೇನು? ಅಧ್ಯಕ್ಷ ಟ್ರೂಮನ್ನರಂತೂ ತಮ್ಮ ವಿದೇಶ ಸಹಾಯ ಯೋಜನೆಗೆ ಕಾಂಗ್ರೆಸು ಒಪ್ಪಿಕೊಳ್ಳದಿದ್ದರೆ—ಅಮೇರಿಕ ಉಳಿಯುವುದಿಲ್ಲ ಎಂಬಂತೆ ವ್ಯಾಕುಲಗೊಂಡಿದ್ದಾರೆ. "ನಮ್ಮ ರಕ್ಷಣಾ ವೆಚ್ಚ ಮತ್ತು ವಿದೇಶ ಸಹಾಯ ಯೋಜನೆಯ ಮೇಲೆ ಕಡಿತ ಹಾಕುವ ಪ್ರಯತ್ನವನ್ನು ಮುಂದುವರಿಸಿದರೆ, ಅಮೇರಿಕೆಯು ತನ್ನ ಪ್ರಚ್ಛನ್ನ ಯುದ್ಧದ ರೀತಿಯನ್ನು" ಕಳೆದುಕೊಳ್ಳ ಬೇಕಾದೀತೆಂದು ಅವರು ತಮ್ಮ ಜನಕ್ಕೆ ಎಚ್ಚರಿಸುತ್ತಾರೆ.

ತಪ್ಪಿಸಲಾಗದ ಪೆಟ್ಟು

ಈ ಪ್ರಚ್ಛನ್ನ ಯುದ್ಧದ ರೀತಿಯು ಸುರಿತವಾಗಿಯೇ ಹಿಂದುಳಿದ ರಾಷ್ಟ್ರಗಳು ಕಳವಳ ವ್ಯಕ್ತಪಡಿಸುತ್ತವೆ. ಒಂದು ರಾಷ್ಟ್ರಕ್ಕೆ ಧಾರಾಳ ಧನ ಸಹಾಯ ಮಾಡಿ, ಅಲ್ಲಿಯ ಔದ್ಯೋಗಿಕ ಕ್ಷೇತ್ರದಲ್ಲಿ ತಮ್ಮ ಬಂಡವಾಳದ ಪ್ರಭುತ್ವ ಸ್ಥಾಪಿಸಿದರೆ—ಆ ರಾಷ್ಟ್ರ ತನ್ನ ಸ್ವಾತಂತ್ರ್ಯವನ್ನು ನೆರವಿತ್ತ ರಾಷ್ಟ್ರಕ್ಕೆ ಒತ್ತೆಯಿಟ್ಟಂತೆಯೇ ಅಲ್ಲವೆ? ಗಾಂಧೀ ಅರ್ಥ ಶಾಸ್ತ್ರ ಪ್ರವೀಣರಾದ ಶ್ರೀ ಜೆ. ಸಿ. ಕುಮಾರಪ್ಪನಂಥವರು ಭಾರತವನ್ನು ಈ ಅಪಾಯಕ್ಕಾಗಿಯೇ ಸಕಾಲದಲ್ಲಿ ಎಚ್ಚರಿಸಿದರು. ಔದ್ಯೋಗಿಕ ಪ್ರಗತಿ ಸಾಧಿಸಬೇಕೆಂಬ ತೀವ್ರ ಇಚ್ಛೆಗೆ ಕಟ್ಟು ಬಿದ್ದು, ಸಿಕ್ಕಿದ ಸಹಾಯವನ್ನು ಪ್ರಸಾದವೆಂದು ಸ್ವೀಕರಿಸುವುದು ದೊಡ್ಡದಲ್ಲ—ಆದರೆ, ಕಾಲಾನುಕ್ರಮದಲ್ಲಿ ಅದರ ಪರಿಣಾಮ ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಕೆಟ್ಟದಾಗುವುದಿಲ್ಲವೆ? ಎಂಬುದನ್ನು ಪರ್ಯಾಲೋಚಿಸುವುದಗತ್ಯ. ಔದ್ಯಮಿಕ ರಾಷ್ಟ್ರಗಳು ಹಿಂದುಳಿದ ರಾಷ್ಟ್ರಗಳಿಗೆ ತಾಂತ್ರಿಕ ಸಹಾಯವನ್ನೂ ಯಂತ್ರ ಸಲಕರಣೆಗಳನ್ನೂ ನೀಡುವುದರಿಂದ—ನಮ್ಮ ಗಿರಾಕಿ ಇಲ್ಲದೆ ಕೊಳೆಯುತ್ತಿರುವ ಕಚ್ಚಾ ಸರಕುಗಳ ಉಪಯೋಗವಾಗುತ್ತದೆ—ವಿವಿಧ ಉದ್ಯೋಗಗಳು ಬೆಳೆಯುತ್ತವೆ. ಆದರೆ, ಅನುಮಾನಾಸ್ಪದವಾಗಿ, ವಿದೇಶೀ ನೆರವಿನಿಂದ ಬೆಳೆದು ಬಂದ ಉದ್ಯೋಗಕ್ಕೆ, ಅದರ ಪೂರೈಕೆ ನಿಂತು ಬಿಟ್ಟಿತೆನ್ನಿ, ಸಹಿಸಲಸಾಧ್ಯವಾದ ರೀತಿಯಲ್ಲಿ ಪೆಟ್ಟು ತಗಲುವುದು ನಿಶ್ಚಿತ. ಈ ರೀತಿಯ ಪೆಟ್ಟು ಕೊಟ್ಟು, ತನ್ಮೂಲಕ ಒಂದು ರಾಷ್ಟ್ರದ ಮೇಲೆ ಸ್ವಂತ ಪ್ರಭುತ್ವವನ್ನು ಸ್ಥಾಪಿಸುವುದು ಅಂತಾರಾಷ್ಟ್ರೀಯ ಆರ್ಥಿಕರಂಗದ ಗತ್ಯಂತರಾಕೆ- ಮಹಾ ರಾಷ್ಟ್ರಗಳ ಪ್ರಚ್ಛನ್ನ ಯುದ್ಧದ ಮಾದರಿ. ದ್ವಿತೀಯ ಮಹಾ ಯುದ್ಧದಲ್ಲಿ ಜಪಾನು ಸೋತುದು ಅಣು ಬಾಂಬಿನ ಹೊಡೆತಕ್ಕೆ ಅಂತೆ ಅಲ್ಲ. —ತನ್ನ ಪೆಟ್ರೋಲು ಸಂಗ್ರಹ ತೀರಿದುದರಿಂದ ಯುದ್ಧ ಮುಂದುವರಿಸಲಾಗದೆ— ಎಂಬುದನ್ನು ಮರೆಯದಿರೋಣ.

(ಮುಂಬರಿಯುವುದು)

ZANDU PHARMACEUTICAL WORKS LTD.

Manufacturers of Ayurvedic and Alopathic Medicines BOMBAY, 14.

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ ,, ನಾ—

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ

2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ

3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.

4 ಎಲ್ ಎನ್ ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ

DAMODAR & CO.,

Nainiappa Naicken Street, Park Town–**MADRAS 3.**

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಅತ್ಯಂತ ದಕ್ಷತೆಯ ಜೀವವಿಮಾ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರಿಯ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.

ಡಿ. ಬ್ರಾಂಚ್ ಮೆನೇಜರ್;

ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ.

ಕನ್ನಡದ ಆವಶ್ಯಕತೆಗಳ ಸ್ಪಷ್ಟ ಕಲ್ಪನೆ.

ಕೊರತೆಗಳ ನಿವಾರಣೆಗೆ ಏಕೀಕರಣವೇ ತರಣೋಪಾಯ.

ಬೇಲೂರಿನಲ್ಲಿ ಸಾಹಿತ್ಯ ಸಮ್ಮೇಳನ

ಮೂವತ್ತೈದನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಈ ಬಾರಿ ಕರ್ನಾಟಕದ ಶಿಲ್ಪಕಲೆಯ ತವರೂರು ಎಂದು ಹೆಸರು ಪಡೆದ ಮೈಸೂರು ರಾಜ್ಯದ ಬೇಲೂರಿನಲ್ಲಿ ಶ್ರೀ ಚೆನ್ನಕೇಶವ ಸ್ವಾಮಿಯ ಕೃಪಾಛತ್ರದ ನೆರಳಲ್ಲಿ ನಡೆಯಿತು. ಸಮ್ಮೇಳನದ ಅಧ್ಯಕ್ಷಪೀಠದಿಂದ ಬಾಗಲುಕೋಟೆಯ ಡಾ। ಎಸ್. ಸಿ. ನಂದೀಮಠ, ಎಂ. ಎ., ಪಿ ಎಚ್. ಡಿ. ಅವರು ಕನ್ನಡದ ಇಂದಿನ ಅವಶ್ಯಕತೆಗಳ ಕುರಿತು ತುಂಬ ಬೋಧಪ್ರದವಾದ, ವಿಚಾರ ಪರಿಪೂರ್ಣವಾದ ಭಾಷಣವನ್ನು ಮಾಡಿದರು. ಸಮ್ಮೇಳನದ ಅಂಗವಾಗಿ ಶ್ರೀ ಕೃಷ್ಣಗಿರಿ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಗಮಕ ಗೋಷ್ಠಿಯೂ ಶ್ರೀಮತಿ ಎಚ್. ವಿ. ಸಾವಿತ್ರಮ್ಮನವರ ನೇತೃತ್ವದಲ್ಲಿ ಮಹಿಳಾ ಗೋಷ್ಠಿಯೂ, ಶ್ರೀ. ಪದ್ಮನಾಭ ಪುರಾಣಿಕ, ಎಂ. ಎಸ್. ಸಿ— ಅವರ ಅಧ್ಯಕ್ಷತೆಯಲ್ಲಿ ವಿಜ್ಞಾನ ಗೋಷ್ಠಿಯೂ ಸಾಂಗವಾಗಿ ನೆರವೇರಿದುವು. ಕರ್ನಾಟಕದ ಏಳಿಗೆಯ ದೃಷ್ಟಿಯಿಂದ, ಮತ್ತು ಸಾಹಿತ್ಯದ ಅಭಿವೃದ್ಧಿಯನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು ಈ ಮಹಾನುಭಾವರು ವ್ಯಕ್ತಗೊಳಿಸಿದ ಅಭಿಪ್ರಾಯಗಳ ಸಾರವನ್ನು ಮನನ ಮಾಡುವುದು ಕನ್ನಡಿಗರೆಲ್ಲರ ಕರ್ತವ್ಯ.

ಎಲ್ಲರೂ ಒಪ್ಪಿದ ತತ್ವ

ಸಮ್ಮೇಳನಾಧ್ಯಕ್ಷ ಡಾ. ನಂದೀಮಠರು ಕರ್ನಾಟಕ ಏಕೀಕರಣದ ಸಮಸ್ಯೆಗಿರುವ ತೊಡಕುಗಳು ಅನಿವಾರ್ಯವಲ್ಲವೆಂದು ಅಭಿಪ್ರಾಯ ಪಟ್ಟರು. ಏಕೀಕರಣ ತತ್ವವನ್ನು ನಮ್ಮ ಹಿರಿಯರು ಒಪ್ಪಿದ್ದಾರೆ ಎಂದವರು ಸ್ಪಷ್ಟ ಪಡಿಸಿದರು. ಸ್ವಾತಂತ್ರ್ಯ ದೊರೆಯುವುದಕ್ಕಿಂತ ಮೊದಲು ಕನ್ನಡ ನಾಡು ಸುಮಾರು ೨೦ ಆಡಳಿತಗಳಿಗೆ ಒಳಪಟ್ಟಿತ್ತು. ಈಗ ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಮತ್ತು ಮೈಸೂರು— ಹೀಗೆ ಐದು ಆಡಳಿತಗಳಿಗೆ ಒಳಪಟ್ಟಿದೆ. ಎಲ್ಲ ಕನ್ನಡ ಪ್ರದೇಶಗಳನ್ನು ಒಟ್ಟುಗೂಡಿಸಿದರೆ ಅದರ ಕ್ಷೇತ್ರಫಲ ೭೦,೫೫೦ ಚದರ ಮೈಲಿ ಆಗುವುದು. ಜನಸಂಖ್ಯೆ ಎರಡು ಕೋಟಿ ಆಗುವುದು. ಇಂತಹ ವಿಸ್ತೃತ ಪ್ರದೇಶವನ್ನು ಒಂದುಗೂಡಿಸಿ ಆಡಳಿತೆಯ ಮತ್ತು ಸಾಂಸ್ಕೃತಿಕ ಐಕ್ಯದ ಸೌಕರ್ಯವನ್ನು ಮಾಡಿಕೊಡುವುದು ಅವಶ್ಯ. ಕನ್ನಡ ಮಾತಾಡುವವರನ್ನೆಲ್ಲ ಒಂದೇ ಆಡಳಿತದ ತರದ ಹೊರತು ಅವರ ಕಲ್ಯಾಣವಾಗುವಂತಿಲ್ಲ; ಮತ್ತು ಕರ್ನಾಟಕದಿಂದ ಭಾರತಕ್ಕೆ ಸಲ್ಲಬೇಕಾದಷ್ಟು ಸೇವೆ ಸಲ್ಲುತ್ತಿಲ್ಲ.

ಹೆಚ್ಚು ಮಹತ್ವದ ಪ್ರಶ್ನೆ

ಪಾಕಿಸ್ತಾನದ ನಿರ್ಮಾಣದಿಂದ ಉತ್ಪನ್ನವಾದ ಅನಾಹುತವು ಭಾರತದಲ್ಲಿ ಪ್ರಾಂತಗಳನ್ನು ಭಾಷಾನ್ವಯ ತತ್ವದ ಮೇಲೆ ರಚಿಸುವುದರಿಂದ ಆಗುವುದೆಂದು ತಿಳಿಯುವುದು ತಪ್ಪು. ರಾಷ್ಟ್ರವನ್ನು ಭದ್ರವಾದ ತಳಹದಿಯ ಮೇಲೆ ನಿಲ್ಲಿಸುವ ಮಾರ್ಗದಲ್ಲಿ ಅನೇಕ ಅನಿರೀಕ್ಷಿತ ಸಮಸ್ಯೆಗಳು ಉದ್ಭವಿಸಿವೆಯಾದುದರಿಂದ ಪ್ರಾಂತ ರಚನಾ ಪ್ರಶ್ನೆಯನ್ನು ಮುಂದೆ ಹಾಕಬೇಕು ಎಂದು ಕೆಲವರ ಮತ. ಆದರೆ ಭಾರತವು ದೊಡ್ಡದೊಂದು ಖಂಡವೇ ಆಗಿರುವುದರಿಂದ ಅದು ಸ್ವಾಭಾವಿಕವಾಗಿ ದೊಡ್ಡ ದೊಡ್ಡ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಅನೇಕ ಸಮಸ್ಯೆಗಳ ನಡುವೆ ಪ್ರಾಂತರಚನಾ ಸಮಸ್ಯೆಯನ್ನು ಬಿಡಿಸುವುದು ಅತ್ಯಗತ್ಯವೆಂದು ತಿಳಿದುಕೊಳ್ಳಬೇಕಾದುದು ಜಾಣತನ. ಏಕೆಂದರೆ, ಜನತೆಯಲ್ಲಿ ಶಾಂತಿ ಸಂತೃಪ್ತಿಗಳು ನೆಲೆಸಿದಾಗ, ಸಮಸ್ಯೆಗಳನ್ನು ಬಿಡಿಸಲು ಸರಕಾರಕ್ಕೆ ಹೆಚ್ಚು ಸುಗಮವಾಗುವುದು. ಗಡಿನಾಡಿನ ಸಮಸ್ಯೆಯನ್ನು ತಜ್ಞರ ಸಮಿತಿಯ ಮುಖಾಂತರ ಬಿಡಿಸಲು ಸಾಧ್ಯವಿದೆ.

ಏಕೀಕರಣವಾದಾಗಲೇ ಕರ್ನಾಟಕದ ಎಷ್ಟೋ ಜಟಿಲ ಪ್ರಶ್ನೆಗಳನ್ನು ಬಿಡಿಸಲು ಸಾಧ್ಯವಾಗುವುದೆಂದೂ ಅಲ್ಲಿಯ ವರೆಗೆ ನಮ್ಮ ಸರ್ವತೋಮುಖ ಅಭಿವೃದ್ಧಿಯು ಕೈಗೂಡದೆಂದೂ ನಮಗೆ ಮನವರಿಕೆಯಾಗಿದೆ. ಕನ್ನಡಿಗರು ಬೇರೆ ಬೇರೆ ಆಡಳಿತಗಳಲ್ಲಿ ಹರಿದು ಹಂಚಿಹೋಗಿರುವುದರಿಂದ ಕರ್ನಾಟಕದ ಪ್ರತಿನಿಧಿಗಳು ಮೈಸೂರಿನ ಹೊರತು ಉಳಿದೆಲ್ಲಕಡೆ ಅಲ್ಪಸಂಖ್ಯಾತರಾಗಿಯೇ ಉಳಿಯುವರು. ಆದುದರಿಂದ ಅಲ್ಲಿ ಅವರ ಮಾತು ನಡೆಯುವಂತಿಲ್ಲ—ಕೇಳಿಕೆ ಆಗುವಂತಿಲ್ಲ. ಈ ಪರಿಸ್ಥಿತಿಯಲ್ಲಿ ಏಕೀಕರಣವು ಉಳಿದ ಪ್ರಾಂತಗಳಿಗಿಂತ ಕರ್ನಾಟಕಕ್ಕೆ ಹೆಚ್ಚು ಮಹತ್ವದ್ದೆನಿಸಿದೆ.

ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ

ಮುಂಬಯಿ ಕರ್ನಾಟಕದವರ ಕನಸಾದ ಕರ್ನಾಟಕ ವಿಶ್ವವಿದ್ಯಾನಿಲಯವೀಗ ನನಸಾಗಿದೆ. ಆದರೆ ಮುಂದೆ ಅನೇಕ ಪ್ರಶ್ನೆಗಳು ನಿಂತಿದ್ದು, ಅವನ್ನೆಲ್ಲ ಅದು ಧೈರ್ಯದಿಂದ ಎದುರಿಸಬೇಕಾಗಿದೆ. ಸದ್ಯಕ್ಕೆ ಧನಸಹಾಯ ಮತ್ತು ಕಟ್ಟಡಗಳು ತೀರ ಅಗತ್ಯವಿವೆ. ಮೈಸೂರು ವಿಶ್ವವಿದ್ಯಾನಿಲಯದೊಡನೆ ಅದು ಸಹಕರಿಸಿ, ಕನ್ನಡ ಭಾಷೆಯ ಪ್ರಗತಿ, ಕನ್ನಡದಲ್ಲಿ ಅಧ್ಯಯನ ಕ್ರಮ ಮೊದಲಾದುವುಗಳನ್ನು ಚರ್ಚಿಸಿ ಯೋಜನೆಯನ್ನ ಕೈಗೊಳ್ಳಲು ಸಮಿತಿಯೊಂದು ನೇಮಕಗೊಂಡಿದೆ. ಈಗ ಕನ್ನಡ ವಿಷಯವನ್ನು ಎಂ. ಎ. ವರ್ಗದ ವರೆಗೆ ಕಲಿಸುವ ವ್ಯವಸ್ಥೆ ಮುಂಬಯಿ, ಪೂನಾ, ಮೈಸೂರು, ಮದ್ರಾಸು ಮತ್ತು ಉಸ್ಮಾನಿಯಾ ವಿಶ್ವವಿದ್ಯಾನಿಲಯಗಳಲ್ಲಿ ಆಗಿದೆ. ತಜ್ಞರಾದ ಪ್ರಾಧ್ಯಾಪಕರು ಇದರಲ್ಲಿ ಕೆಲಸ ಮಾಡುತ್ತಿರುವರು. ಈ ಎಲ್ಲ ಪ್ರಾಧ್ಯಾಪಕರು ಕೂಡಿ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡದ ಮಟ್ಟವನ್ನು ಏರಿಸಬೇಕು. ನಮ್ಮ ವಿಶ್ವವಿದ್ಯಾನಿಲಯಗಳ ಪ್ರಗತಿಗಾಗಿ ಕೇವಲಸರಕಾರವನ್ನೇ ಅವಲಂಬಿಸಿದರೆ, ಆದಿಶೆಯಲ್ಲಿ ನಮ್ಮ ಆಶೆ ಆಕಾಂಕ್ಷೆಗಳು ಈಡೇರಲಾರವು. ನಾಡಿನ ಕೊಡುಗೈ ದೊರೆಗಳು ಮುಂದೆಬಂದು ಮುಕ್ತ ಹಸ್ತದಿಂದ ಸಹಾಯ ಮಾಡಬೇಕು.

ಜಗತ್ಪ್ರಸಿದ್ಧ ಆಕ್ಸ್‌ಫರ್ಡ್, ಕೇಂಬ್ರಿಜ್ ಮೊದಲಾದ ವಿಶ್ವವಿದ್ಯಾಲಯಗಳು ಜನತೆಯ ಬೆಂಬಲದಿಂದಲೇ ಅದ್ಭುತ ಕಾರ್ಯ ಮಾಡುತ್ತಿರುವುವು. ಇದನ್ನು ಕನ್ನಡಿಗರು ಲಕ್ಷ್ಯದಲ್ಲಿಡತಕ್ಕದ್ದು.

ಬೋಧ ಭಾಷೆ

ಸ್ವತಂತ್ರರಾದ ಭಾರತೀಯರೂ ಪರಕೀಯ ಭಾಷೆಯನ್ನು ತಮ್ಮ ರಾಷ್ಟ್ರಭಾಷೆಯಾಗಿ ಇಟ್ಟುಕೊಳ್ಳುವುದು ಸದಸದ್ವಿವೇಕಕ್ಕೆ ನಿಲುಕದ ಮಾತು. ಇನ್ನು ಮುಂದೆ ಭಾರತದ ಗೌರವಕ್ಕೂ ಸ್ವಾಭಿಮಾನಕ್ಕೂ ಸರಿಹೊಂದುವಂತೆ ಪರಿಸ್ಥಿತಿ ಬದಲಾವಣೆಯಾಗಬೇಕು. ಹಲವಾರು ಕಾರಣಗಳಿಗಾಗಿ ಇಂಗ್ಲಿಷ್ ಭಾಷೆಗೆ ಭಾರತದಲ್ಲಿ ಮೊದಲ ಸ್ಥಾನ ಸಲ್ಲುವುದು ಸಾಧ್ಯವಿಲ್ಲ. ಆದರೆ ಈ ಭಾಷೆ ಜಗತ್ತಿನ ಜ್ಞಾನ ಭಂಡಾರದ ಬೀಗದ ಕೈಯಾಗಿದೆ-ಪಾಶ್ಚಾತ್ಯದ ಸ್ವತಂತ್ರ ವಿಚಾರಸರಣಿಯ ಪ್ರವಾಹವಾಗಿದೆ. ಆದುದರಿಂದ ಈ ಭಾಷೆಗೆ ನಮ್ಮ ಶಾಲೆ-ಕಾಲೇಜುಗಳಲ್ಲಿ ಸ್ಥಾನವಿರತಕ್ಕದ್ದು.

ಪ್ರದೇಶಿಕ ಭಾಷೆಗಳಲ್ಲಿ [ರಾಷ್ಟ್ರಭಾಷೆ ಎಂದು ಅಂಗೀಕರಿಸಿದ ಹಿಂದೀ ಸಮೇತ] ಹನ್ನೆರಡು ಭಾಷೆಗಳು ವಿಶ್ವವಿದ್ಯಾನಿಲಯಗಳಲ್ಲಿ ಬೋಧಭಾಷೆಯಾಗುವ ಅರ್ಹತೆಯನ್ನು ಪಡೆದಿವೆ. ಈ ಮಾತನ್ನು ಸರ್. ರಾಧಾಕೃಷ್ಣನ್ ಸಮಿತಿಯು ಒಪ್ಪಿದೆ. ಆದುದರಿಂದ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡವೇ ಬೋಧ ಭಾಷೆಯಾಗಬೇಕು. ಏಕೆಂದರೆ ಕನ್ನಡಕ್ಕೆ ಬಹುಕಾಲದಿಂದ ಬಂದ ಸಂಸ್ಕೃತಿ ಇದೆ; ವಿಪುಲ ಸಾಹಿತ್ಯವಿದೆ; ಸತ್ವವಿದೆ; ಬೆಳೆಯುವ ಸಾಮರ್ಥ್ಯವಿದೆ.

ವಾಙ್ಮಯ ಕ್ಷೇತ್ರದ ಅವಶ್ಯಕತೆ

ಇನ್ನೂ ಬಯಲಿಗೆ ಬಾರದಿರುವ ಪ್ರಾಚೀನ ಗ್ರಂಥಗಳ ಹಸ್ತಪ್ರತಿಗಳು ನಾಶವಾಗುತ್ತಲಿವೆ. ಅವುಗಳನ್ನು ಪ್ರತಿ ಮಾಡಿ ಒಂದೆ ಸ್ಥಳದಲ್ಲಿ ಸಂಗ್ರಹಿಸುವ ಪ್ರಯತ್ನ ನಡೆಯಬೇಕು. ಹಾಗೆಯೇ ಈಗ ಪ್ರಕಟವಾಗಿದ್ದರೂ ಉಪಲಬ್ಧವಿಲ್ಲದ ಹಲವು ಪ್ರಾಚೀನ ಗ್ರಂಥಗಳ ಪುನರ್ಮುದ್ರಣವಾಗಬೇಕು. ಕನ್ನಡ ಭಾಷಾ ಚರಿತ್ರೆ, ಸಾಹಿತ್ಯ ಚರಿತ್ರೆ, ಕವಿ ಚರಿತ್ರೆಗಳ ಕುರಿತು ಸಂಶೋಧನಾತ್ಮಕ ಪುಸ್ತಕ ಬೇಕಾಗಿವೆ. ಶಬ್ದಕೋಶ, ವಿಶ್ವಕೋಶಗಳ ರಚನೆ, ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಳು ನಡೆಯುವುದವಶ್ಯ.

ಸಂಶೋಧನಾ ಕಾರ್ಯ

ಸಂಶೋಧನೆಯ ಕೆಲಸದಲ್ಲಿ ಕನ್ನಡ ಹಿಂದುಳಿದಿದೆ ಎಂದು ಅಧ್ಯಕ್ಷರು ವಿಷಾದ ವ್ಯಕ್ತಪಡಿಸಿದರು. ಕನ್ನಡ ನಾಡಿನಲ್ಲಿ ಸಂಶೋಧನೆಗಳಿಗೆ ಅನುಕೂಲವಾದ ಸಲಕರಣೆಗಳು ವಿಪುಲವಾಗಿವೆ. ಕರ್ನಾಟಕದ ಇತಿಹಾಸವೂ ಉಜ್ವಲವಾಗಿದೆ. ಚಾಲುಕ್ಯರು, ರಾಷ್ಟ್ರಕೂಟರು ಕರ್ನಾಟಕದ ಕೀರ್ತಿಯನ್ನು ಹಬ್ಬಿಸಿದ್ದರು. ಇವರ ಬಗ್ಗೆ ಹಾಗೂ ಇನ್ನಿತರ ಅರಸು ಮನೆತನಗಳ ಬಗ್ಗೆ ಸಾಕಷ್ಟು ಸಂಗತಿಗಳು ದೊರೆತಿಲ್ಲ. ಆದುದರಿಂದ ಕರ್ನಾಟಕದ ಪಂಡಿತರು ನಾಡಿನ ನಿಜವಾದ ಇತಿಹಾಸವನ್ನು ಬರೆಯುವ ಅವಶ್ಯಕತೆ ಬಹಳವಿದೆ. ಹಾಗೆಯೇ ಕನ್ನಡ ಭಾಷೆಯ ಹುಟ್ಟು ಬೆಳವಣಿಗೆ ಹಾಗೂ ಉಳಿದ ಭಾಷೆಗಳೊಡನೆ ಅದರ ಸಂಬಂಧ ಇವುಗಳ ಕುರಿತು ಸಂಶೋ

(೧೧ನೇ ಪುಟ ನೋಡಿರಿ.)

ಚತುರ್ಥ ವಿಮಾಗಣನೆಯ ಫಲಿತಾಂಶ
(1947ರಿಂದ 1950ರ ವರೆಗೆ)
* * * * * * *
ತಾರೀಕು 31-12-1950ಕ್ಕೆ ನಡೆಸಿದ ವಿಮಾಗಣನೆಯಲ್ಲಿ ಆಜೀವ ಮತ್ತು ಉಂಬಳಿ ವಿಮಾ ಪೋಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ ಅನುಕ್ರಮವಾಗಿ ರೂ. 12/- ಮತ್ತು ರೂ. 9/-ರಂತೆ ಬೋನಸನ್ನು ಘೋಷಿಸಿದೆ.
The Canara Mutual Assurance Co. Ltd.
Head Office: UDIPI, S. INDIA.
ಸ್ಥಾಪನೆಯಿಂದಲೂ ಎಲ್ಲಾ ವರ್ಷಗಳಿಗೂ
ಬೋನಸು ಹಂಚಿದ ಕಂಪೆನಿ.


ರಾಮತೀರ್ಥ
ಬ್ರಾಹ್ಮಿ ತೈಲ
ಸ್ಪೆಶಲ್ ನಂ ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಚಕ್ಕೆ ಪಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—3—0
ಸಣ್ಣ ಬಾಟ್ಲಿಗೆ ರೂ 2—0—0
ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ.) ಮುಂಬಯಿ, ೧೪

ದೇಶದೊಳಗೆ

ಆಶಾದಾಯಕ ವಾತಾವರಣ

ಪಾರ್ಲಿಮೆಂಟಿನ ಪ್ರಥಮಾಧಿವೇಶನದಲ್ಲಿ

ರಾಜ್ಯ ಘಟನೆಯಲ್ಲಿ ಒಪ್ಪಿಕೊಂಡ ಪ್ರಜಾಪ್ರಭುತ್ವದ ತತ್ವಗಳಿಗನುಸಾರವಾಗಿ ಭಾರತದ ಕೇಂದ್ರದ ಹೊಸ ದಿಲ್ಲಿಯಲ್ಲಿ ನೂತನ ಸರಕಾರವು ಅಸ್ತಿತ್ವಕ್ಕೆ ಬಂದಿರುವುದು. ಅದರ ಜೊತೆಗೇ ಹೊಸ ಪಾರ್ಲಿಮೆಂಟು ಸಭೆಸೇರಿ, ತನ್ನ ಕಾರ್ಯಕಲಾಪಗಳನ್ನು ತೊಡಗಿದೆ. ಪದ್ಧತಿ ಪ್ರಕಾರ ಪಾರ್ಲಿಮೆಂಟಿನ ಸಂಯುಕ್ತಾಧಿವೇಶನದಲ್ಲಿ ರಾಷ್ಟ್ರಾಧ್ಯಕ್ಷರು ಭಾಷಣಮಾಡಿ, ತಮ್ಮ ಸರಕಾರದ ಮುಂದಿನ ಧ್ಯೇಯ-ಧೋರಣೆಗಳ ಸ್ಪಷ್ಟ ಪರಿಚಯವನ್ನು ಸದಸ್ಯರಿಗೆ ಮಾಡಿಕೊಟ್ಟಿರುವರು. ಭಾಷಣದ ಮೇಲೆ ಈಗ ಹುರುಪಿನ ಚರ್ಚೆ ನಡೆಯುತ್ತಿದ್ದು, ಈ ಸಂಚಿಕೆ ತಮ್ಮ ಕೈಸೇರುವುದರೊಳಗಾಗಿ, ಮುಂಗಡ ಪತ್ರದ ಮಂಡನೆ ನಡೆಯುವ ನಿರೀಕ್ಷೆಯಿದೆ.

ಲೋಕಸಭೆಯ ಅಧ್ಯಕ್ಷರು

ಕಳೆದ ಗುರುವಾರ ಲೋಕಸಭೆಯ ಅಧ್ಯಕ್ಷರ ಚುನಾವಣೆಯು ನಡೆಯಲು, ಶ್ರೀ ಜಿ. ವಿ. ಮಾವಳಂಕರರು ಅಧ್ಯಕ್ಷಸ್ಥಾನಕ್ಕೆ ಆಯ್ಕೆ ಹೊಂದಿದರು. ಶ್ರೀಯುತರು ತಾತ್ಕಾಲಿಕ ಪಾರ್ಲಿಮೆಂಟಿನ ಅಧ್ಯಕ್ಷರಾಗಿ ಕೆಲಸಮಾಡಿದ್ದು, ನುರಿತ ಅನುಭವಿಗಳಾಗಿರುವರು. ಇವರ ಹೆಸರನ್ನು ಪ್ರಧಾನಿ ಜವಾಹರಲಾಲ ನೆಹರೂ ಅಧ್ಯಕ್ಷಪದಕ್ಕೆ ಸೂಚಿಸಿದ್ದರು. ಕಮ್ಯೂನಿಸ್ಟ ಮತ್ತು ಇತರ ಎಡಪಕ್ಷಗಳು ಶ್ರೀ ಶಂಕರ ಶಾಂತಾರಾಮ ಮೋರೆಯವರನ್ನು ಇವರ ಪ್ರತಿಸ್ಪರ್ಧಿಯಾಗಿ ನಿಲ್ಲಿಸಿದ್ದುವು.

ಲೋಕಸಭೆಯ ಅಧ್ಯಕ್ಷರ ಆಯ್ಕೆಯ ನಿಷ್ಪಕ್ಷಪಾತತನದಿಂದ ನಡೆಯಲು ಅನುಕೂಲವಾಗಬೇಕೆಂದು ರಾಷ್ಟ್ರಾಧ್ಯಕ್ಷರು ಈ ಚುನಾವಣೆಯು ನಡೆಯುವ ವರೆಗೆ ಪಾರ್ಲಿಮೆಂಟಿನ ಅತಿ ಹಿರಿಯ ಸದಸ್ಯರೆಂಬ ಗೌರವವಿರುವ ಶ್ರೀ ಬಿ. ದಾಸರನ್ನು ಅಧ್ಯಕ್ಷಸ್ಥಾನದಲ್ಲಿದ್ದು ಕೆಲಸ ನಡೆಸಲು ಅಧಿಕಾರ ಕೊಟ್ಟಿದ್ದರು. ಪ್ರಧಾನಿ ನೆಹರೂರ ಸೂಚನೆಯನ್ನು ಮೊದಲಾಗಿ ಮತಕ್ಕೆ ಹಾಕಿದಾಗ ಶ್ರೀ ಮಾವಳಂಕರರು ೩೯೪ ಮತಗಳನ್ನು ಪಡೆದು (ವಿರುದ್ಧವಾಗಿ ೫೫ ಮತಗಳು ಬಿದ್ದುವು) ಆರಿಸಿ ಬಂದರು.

ಸದಸ್ಯರ ಕರ್ತವ್ಯ

ಶ್ರೀ ಮಾವಳಂಕರರನ್ನು ಅಭಿನಂದಿಸಿ ನೆಹರೂ ಆದಿಯಾಗಿ ಪ್ರತಿಯೊಂದು ಪಕ್ಷದ ಧುರೀಣರು ಭಾಷಣ ಮಾಡಿದರು. ಸದಸ್ಯರು ತಪ್ಪು ಹಾದಿಯಲ್ಲಿ ನಡೆದಾಗ ಅದರಿಂದ ಹಿಂದೆ ಜಗ್ಗಲಿಕ್ಕೂ ಅವಶ್ಯಕರದಲ್ಲಿ ಛೀಮಾರಿ ಹಾಕಲಿಕ್ಕೂ ಯೋಗ್ಯ ಅಧ್ಯಕ್ಷರು ದೊರೆತರೆಂಬ; ಎಲ್ಲ ವ್ಯಕ್ತಿಗಳ ಮತ್ತು ಪಕ್ಷಗಳ ಹಕ್ಕು ಬಾಧ್ಯತೆಯನ್ನು ಎತ್ತಿ ಹಿಡಿಯುವರೆಂಬ; ಶ್ರೀ ಪ್ರಾತಿನಿಧ್ಯ ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದಿದ್ದರೂ ಅವರನ್ನು ಯೋಗ್ಯ ರೀತಿಯಿಂದ ನಡೆಸಿಕೊಂಡು ಹೋಗುವರೆಂಬ-ಉದ್ಗಾರಗಳು ಸದಸ್ಯರಿಂದ ಹೊರ ಹೊಮ್ಮಿದುವು.

ತಮ್ಮ ಉತ್ತರದಲ್ಲಿ ಶ್ರೀ ಮಾವಳಂಕರರು, ನಮ್ಮ ದೃಷ್ಟಿ ಎಷ್ಟೇ ಭಿನ್ನವಾಗಿದ್ದರೂ ರಾಷ್ಟ್ರದ ಎಲ್ಲ ಜನಾಂಗಗಳಿಗೆ ನ್ಯಾಯ, ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ದೊರಕಿಸಿ ಕೊಡಲಿಕ್ಕಾಗಿ ಜನತೆಯ ಪ್ರತಿನಿಧಿಗಳೆಂದು ಸದಸ್ಯರು ಪಾರ್ಲಿಮೆಂಟಿನಲ್ಲಿರುವರು ಎಂಬುದನ್ನು ಮರೆಯಲಾಗದು. ಎಲ್ಲರೂ ತಮ್ಮೊಡನೆ ಸಹಕಾರದಿಂದ ನಡೆದುಕೊಂಡು ಭಾರತದಲ್ಲಿ ಪ್ರಜಾಸತ್ತಾತ್ಮಕ ರೀತಿ-ನೀತಿಗಳನ್ನು ಜೋಪಾನದಿಂದ ಕಾಪಾಡುತ್ತ, ಯೋಗ್ಯ ಪರಂಪರೆ ಹಾಕಿಕೊಡಬೇಕು-ಎಂದು ಭಿನ್ನವಿಸಿದರು.

ರಾಷ್ಟ್ರಾಧ್ಯಕ್ಷರ ಭಾಷಣ

ಪ್ರಜಾಸತ್ತಾತ್ಮಕ ಪರಂಪರೆಯಂತೆ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು, ಸಂಯುಕ್ತ ಅಧಿವೇಶನದಲ್ಲಿ ನೆರೆದ ಸದಸ್ಯರಿಗೆ ತಮ್ಮ ಸರಕಾರದ ಮುಂದಿರುವ ಕೆಲಸಗಳ ಹಾಗೂ ಭಾವೀ ಧೋರಣೆಯ ರೂಪರೇಷೆಯ ಕುರಿತು ಜ್ಞಾನ ಮಾಡಿಕೊಟ್ಟರು. ಮುಖ್ಯವಾಗಿ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಕೈಗೊಳ್ಳಬೇಕಾಗಿರುವ ಉಪಾಯಗಳ ಮೇಲೆ ಅವರು ಜೋರು ಕೊಟ್ಟರು. ಹಾಗೆಯೇ ಈ ಅಧಿವೇಶನದಲ್ಲಿ ಚರ್ಚೆಗೆ ಬರಲಿರುವ ವಿವಿಧ ಕಾರ್ಯಕ್ರಮದ ಪರಿಚಯವನ್ನೂ ಸಣ್ಣದರಲ್ಲಿ ಮಾಡಿಕೊಟ್ಟರು.

ಸ್ಫೂರ್ತಿಯ ಸ್ರೋತ್ರ

ಜನತೆಯು ಸಾಮಾಜಿಕ ಸಮತೆಯನ್ನೂ ಆರ್ಥಿಕ ನ್ಯಾಯವನ್ನೂ ಅನುಭವಿಸಿಕೊಂಡು ಬರುವ ಉಚ್ಚ ಆದರ್ಶವನ್ನು ಕೈಗೂಡಿಸಲು ಆರ್ಥಿಕ ಉನ್ನತಿಯನ್ನು ಶೀಘ್ರಾತಿಶೀಘ್ರ ಸಾಧಿಸುವುದೇ ಶರಣೋಪಾಯವೆಂದವರು ಅಭಿಪ್ರಾಯಪಟ್ಟರು. ತಮ್ಮ ಭಾಷಣದಲ್ಲಿ ಅವರು ಮಹಾತ್ಮಾ ಗಾಂಧೀಜಿಯು ನಮಗೆ ಮಾಡಿದ ಮಾರ್ಗದರ್ಶನವನ್ನು ಉಲ್ಲೇಖಿಸಿ, ಕಮ್ಯೂನಿಸಂ ತತ್ವದರ್ಶಗಳನ್ನು ಅಲ್ಲಗಳೆಯುವ ಗಾಂಧೀ ವಿಚಾರಗಳನ್ನು ಮುಂದಿಟ್ಟರು. ಗಾಂಧೀಜಿಯು ಪರಿತಪಿಸುತ್ತಿದ್ದ ಶಾಂತಿಯು ಸ್ಮಶಾನ ಶಾಂತಿಯಾಗಿರಲಿಲ್ಲ-ಅವರು ಪ್ರತಿಪಾದಿಸುತ್ತಿದ್ದ ಅಹಿಂಸೆಯು ಹೇಡಿಗಳ ಅಂಜಿಕೆಯಲ್ಲ-ಯೋಗ್ಯವಾದ ಕೆಲಸವನ್ನು ಸರಿಯಾದ ಕ್ರಮದಲ್ಲಿ ಹೇಗೆ ಮಾಡಬೇಕೆಂಬುದಕ್ಕೆ ಗಾಂಧೀಜಿಯ ನಡವಳಿಕೆ ನಮಗೆ ಸ್ಫೂರ್ತಿಯ ಸೆಲೆಯಾಗಿರುವುದು ಎಂದವರು ಬೋಧಿಸಿದರು.

ಗ್ರಾಮೀಣ ಅಭ್ಯುದಯವನ್ನು ಉಪೇಕ್ಷಿಸತಕ್ಕುದಲ್ಲವೆಂಬ ಸತ್ಯವನ್ನು ಮನಗಂಡು, ಈಗಾಗಲೇ ರಾಷ್ಟ್ರದಾದ್ಯಂತ ಕೈಕೊಂಡಿರುವ ಜನಪದ ಅಭಿವೃದ್ಧಿ ಯೋಜನೆಗಳು ಜನರ ಸಹಕಾರದಿಂದ ಯಶಸ್ವಿಯಾಗುವುದು ನಿಶ್ಚಯವೆಂದು ಅವರು ಹಾರೈಸಿದರು. ಇದರಿಂದ ಆರ್ಥಿಕ ಉನ್ನತಿಯ ಜೊತೆಗೆ, ಜೀವನ ಮಟ್ಟ ಸುಧಾರಿಸಲೂ ಸಾಧ್ಯವಾಗುವುದು.

ಅನ್ನದ ಸಮಸ್ಯೆ

ಆಹಾರದ ಕೊರತೆಯನ್ನು ಪ್ರಸ್ತಾಪಿಸುತ್ತ, ರಾಷ್ಟ್ರಾಧ್ಯಕ್ಷರು, ಸದ್ಯಕ್ಕೆ ಅನ್ನಾಭಾವದ ಕುರಿತು ಚಿಂತಿಸುವ ಅಗತ್ಯವಿಲ್ಲವೆಂದು ಭರವಸೆಕೊಟ್ಟರು. ಅಕ್ಕಿಯೊಂದನ್ನುಳಿದು, ಉಳಿದೆಲ್ಲ ಆಹಾರ ಧಾನ್ಯಗಳ ಸಂಗ್ರಹವು ಇಷ್ಟು ಹೆಚ್ಚಿನ ಪ್ರಮಾಣದಲ್ಲಿ ಹಿಂದೆಂದೂ ಸರಕಾರದ ವಶವಿರಲಿಲ್ಲ ಎಂದವರು ಹೇಳಿದರು.

ಆದರೂ ರಾಯಲಸೀಮೆಯಲ್ಲಿ ಐದಾರು ವರ್ಷಗಳಿಂದ ಮಳೆ ಬಾರದುದರಿಂದ ಉಂಟಾಗಿರುವ ಗಂಭೀರ ಪರಿಸ್ಥಿತಿಗೆ ಶೋಕಿಸಿ, ಈಗ ಸರಕಾರವು ಅಲ್ಲಿ ಪರಿಹಾರೋಪಾಯಗಳನ್ನು ತ್ವರಿತದಿಂದ ಕೈಗೊಂಡಿದೆ ಎಂದೂ, ಗಂಡಾಂತರದ ಭೀತಿಯು ದೂರಾಗಿದೆಂದೂ ಸಾದರಪಡಿಸಿದರು.

ರಾಜ್ಯ ಸರಕಾರಗಳಿಗೆ ಕೊಡುತ್ತಿದ್ದ ಆಹಾರ ಪರಿಹಾರ ಧನವನ್ನು ಕೇಂದ್ರವು ನಿಲ್ಲಿಸಿದುದರಿಂದ, ಆಹಾರ ಧಾನ್ಯಗಳ ಬೆಲೆಯಲ್ಲಿ ಏರಿಕೆ ಉಂಟಾಗಿದೆ. ಇದರಿಂದ ಜನಸಾಮಾನ್ಯಕ್ಕೆ ಅಸಂತೋಷವಾಗಿದೆ ಎಂಬ ದೂರಿಗೆ ಎಡೆ ದೊರೆತಿರುವುದು. ಸರಕಾರವು ಭಾವೀ ಹಿತದ ಕಡೆಗೆ ಲಕ್ಷ್ಯವಿತ್ತು, ಈಗಿನ ಪರಿಸ್ಥಿತಿಯನ್ನು ಹೊಂದಿಸಿಕೊಂಡು ಹೋಗಲು ತತ್ಪರವಿದೆ. ಹೀಗಿದ್ದರೂ, ಜನರಿಗೆ ಅನುಚಿತ ಸಂಕಷ್ಟ ಒದಗಿ ಬರದಂತೆ ನೋಡಿಕೊಳ್ಳಲು ಸರಕಾರವು ಜಾಗರೂಕತೆ ವಹಿಸುವುದು. ಗಂಡಾಂತರ ಪ್ರಸಂಗಗಳನ್ನು ತಪ್ಪಿಸಲು ಪ್ರಯತ್ನಪೂರ್ವಕ ದುಡಿಯುವುದು ಎಂದು ರಾಷ್ಟ್ರಾಧ್ಯಕ್ಷರು ಆಶ್ವಾಸಿಸಿದರು.

ಉದ್ಯಮಗಳ ಪರಿಸ್ಥಿತಿ

ದೇಶದ ಆರ್ಥಿಕ ಸ್ಥಿತಿಯು ಉಬ್ಬಿದಾವಸ್ಥೆಗೆ ಮುಟ್ಟಿರುವುದರಿಂದ, ಕೆಲವು ಉದ್ಯಮಗಳಿಗೆ, ವಿಶೇಷವಾಗಿ ಜವಳಿ ಉದ್ಯೋಗಕ್ಕೆ, ಅಡಚಣೆ ಉಂಟಾಗಿದೆ ಎಂದು ರಾಷ್ಟ್ರಾಧ್ಯಕ್ಷರು ಹೇಳಿದರು. ಇದರಿಂದ ಅವಶ್ಯಕ ಸರಕುಗಳ ಉತ್ಪಾದನೆಯು ಕಡಿಮೆಯಾಗದಂತೆಯೂ ಆ ಉದ್ಯೋಗಗಳಲ್ಲಿ ತೊಡಗಿರುವ ಜನರಿಗೆ ತೊಂದರೆ ಉಂಟಾಗದಂತೆಯೂ ನೋಡಿಕೊಳ್ಳಲು ಸರಕಾರವು ಪರಿಸ್ಥಿತಿಯನ್ನು ಪ್ರಸಂಗಾವಧಾನತೆಯಿಂದ ನಿರೀಕ್ಷಿಸುತ್ತಿರುವುದು.

ಸರಕಾರಿ ಒಡೆತನದಲ್ಲಿ ತೊಡಗಿರುವ ವಿವಿಧ ಉದ್ಯಮಗಳಲ್ಲಿ ಉತ್ಪಾದನೆಯು ಕುಂಠಿತವಾಗದೆ ಸರಾಗವಾಗಿ ಮುನ್ನಡೆಯಬೇಕೆಂಬ ಇರಾದೆಯಿಂದ ಈ ವಿಷಯಗಳ ಉಸ್ತುವಾರಿ ನೋಡಿಕೊಳ್ಳಲು, ಉತ್ಪಾದನಾ ಶಾಖೆಯೊಂದನ್ನು ಮಂತ್ರಿಮಂಡಳದಲ್ಲಿ ಹೊಸತಾಗಿ ತೆರೆಯಲಾಗಿದೆ ಎಂದರು.

ವಿದೇಶ ಧೋರಣೆ

ರಾಷ್ಟ್ರಾಧ್ಯಕ್ಷರು ಸದಸ್ಯರ ಮುಂದಿಟ್ಟ ದೇಶದ ಅಂತರಿಕ ಸ್ಥಿತಿಗತಿಯ ಚಿತ್ರವು

DO YOU KNOW?
THAT
THE VIJAYA BANK, LIMITED.
1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs 10 lacks
3. Has granted an average dividend of 6% to the Shareholders for the past 20 years
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates.
6. Grants loans on easy terms to approved parties or on approved securities
7. Does afford full protection and rich return to all your monies.
ADOPT IT AS
"MY BANK"
THE VIJAYA BANK, LIMITED,
H. O., MANGALORE.

ದಿ ಈಸ್ಟ್ ಎಂಡ್ ವೆಸ್ಟ್
ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಸ್ಥಾಪನೆ:] ಈಸ್ಟ ಎಂಡ್ ವೆಸ್ಟ ಬಿಲ್ಡಿಂಗ್ಸ್, ಬೊಂಬಾಯಿ 1 [1913
ಉದಾರ ಯಾ ರಿಯಾಯತಿ ಶರ್ತಗಳಿರುವ ಪುರಾತನ ಮತ್ತು ಮುಂದುವರಿದ ಕಂಪೆನಿಗಳಲ್ಲೊಂದಾಗಿರುತ್ತದೆ.
ವಿಮೆಯ ಸಕಲ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು ಆ ಬಾಬಿನ ಎಲ್ಲಾ ಕೆಲಸಗಳಲ್ಲಿ ಭಾಗಿಯಾಗಿ ಸಹಕರಿಸಿ ತಲೆಬಗೆಗಳನ್ನೀಯುತ್ತಾ ಜನಸೇವೆಗೈಯುವುದೇ ನಮ್ಮ ಧ್ಯೇಯ
ನಮ್ಮ ಚೀಫ್ ಏಜನ್ಸಿ ವಿಸ್ತೀರ್ಣದೊಳಗೆ ಪ್ರತೀ ಜಿಲ್ಲೆಗೊಬ್ಬರಂತೆ ಇನ್ಸ್‌ಪೆಕ್ಟರುಗಳೂ, ಸ್ಪೆಶಲ್ ಏಜಂಟರೂ, ಏಜಂಟರೂ ಬೇಕಾಗಿದ್ದಾರೆ. ಹೆಚ್ಚಿನ ವಿವರಕ್ಕೆ ಬರೆಯುವದು.
ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್,
ಚೀಫ್ ಏಜಂಟರು,
ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಮೈಸೂರು ಸ್ಟೇಟ್,
ಪೋಸ್ಟ್ ಶಿವಾಜಿ, ದ. ಕ.

ವಿದೇಶಗಳೊಡನೆ

ಶಾಂತಿ ಸಹಕಾರದ ಧೋರಣ

ರಾಷ್ಟ್ರಾಧ್ಯಕ್ಷರ ಮನನೀಯ ಭಾಷಣ.

ಪ್ರಪ್ರಥಮ ಸಾರ್ವತ್ರಿಕ ಚುನಾವಣೆ ಮುಗಿದು ಪಾರ್ಲಿಮೆಂಟಿನ ... ಕುಲಕ್ಷ್ಮಿ-ವೃತ್ತದು ಅಶಾದಾಯಕವಿದೆ ಎಂಬುದೂ ನಿಜ. ಇದರಂತೆ ವಿದೇಶ ಧೋರಣದ ಕುರಿತು ಅವರಾಡಿದ ಮಾತುಗಳು ಸಹ ತೀರ ಮರ್ಮಸ್ಪರ್ಶಿಯಾಗಿವೆ. ಭಾರತವು ನೆಹರೂ ನಾಯಕತ್ವದಲ್ಲಿ ಇದುವರೆಗೆ ಅನುಸರಿಸಿಕೊಂಡು ಬಂದ ವಿದೇಶ ಧೋರಣೆಗೆ ನೈತಿಕ ಬಲವಿದೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ರಾಷ್ಟ್ರಾಧ್ಯಕ್ಷರಾದರೂ ಭಾರತದ ವಿದೇಶ ಧೋರಣೆಯನ್ನು ಲೋಕದ ಇತರ ಜನಾಂಗಗಳು ಸಾವಧಾನದಿಂದ ಮೆಚ್ಚುತ್ತ ಬಂದಿರುವುವೆಂದೂ ಅದು ಫಲಪ್ರದ ಪರಿಣಾಮವನ್ನುಂಟುಮಾಡುವ ಲಕ್ಷಣ ಗೋಚರಿಸುತ್ತಿದೆ ಎಂದೂ ಸಮಾಧಾನ ವ್ಯಕ್ತಪಡಿಸಿದರು.

ಹಕ್ಕುಗಳ ಅಕ್ಕರೆ

ಹೀಗಿದ್ದರೂ ಜಗತ್ತಿನ ಕೆಲವೆಡೆ ಉಂಟಾಗಿರುವ ರಾಜಕೀಯ ತೊಡಕುಗಳನ್ನು ಅಲಕ್ಷಿಸುವಂತಿಲ್ಲ.--ಈ ದೃಷ್ಟಿಯಿಂದ ರಾಷ್ಟ್ರಾಧ್ಯಕ್ಷರು ನಮ್ರತೆಯಿಂದಲೇ ಆದರೂ ದೃಢವಾಕ್ಯಗಳಲ್ಲಿ ವಿದೇಶಗಳ ಸಮಸ್ಯೆಯ ಕುರಿತು ಭಾರತದ ನಿಲುವೆಯನ್ನು ವರ್ಣಿಸಿದ್ದಾರೆ—ದಕ್ಷಿಣ ಆಫ್ರಿಕೆಯ ಸರಕಾರವು ಅನುಸರಿಸುತ್ತಿರುವ ವರ್ಣಭೇದ ನೀತಿಯು ವಿಷಾದಕರವಾಗಿದೆ ಎಂದೂ ಆಫ್ರಿಕದ ನಾಗರಿಕರ ಹಕ್ಕುಗಳ ಇತ್ಯರ್ಥ ಮಾಡುವಲ್ಲಿ ವಿಳಂಬವಾದರೆ, ಮನುಷ್ಯತ್ವಕ್ಕೆ ಗಂಡಾಂತರ ಒದಗಿಬಂದೀತೆಂದೂ ಅವರು ಸಾತ್ವಿಕವಾಗಿ ಎಚ್ಚರಿಸಿದರು.

ಇದೇ ಮಾತು ಸಿಂಹಳದ ಭಾರತೀಯ ನಿವಾಸಿಗಳ ಕಡೆಗೆ ಆ ಸರಕಾರವು ವಹಿಸಿದ ಧೋರಣಕ್ಕೂ ಅನ್ವಯಿಸುತ್ತದೆ. ಯುಗಾಂತರಗಳಿಂದ ಸಿಲೋನ್-ಭಾರತಗಳ ನಡುವೆ ಪ್ರೀತಿಯ ಬೆಸುಗೆ ಇದ್ದು ಅದನ್ನು ಕಾಪಾಡಿಕೊಂಡು ಬರುವುದೇ ನಮ್ಮ ಇಚ್ಛೆ. ಹಾಗೆಂದು—ನಾಗರಿಕರ ಜನ್ಮಸಿದ್ಧ ಹಕ್ಕೆನಿಸಿದ ಮತಾಧಿಕಾರವನ್ನು ಜನತೆಯ ದೊಡ್ಡ ಗುಂಪೊಂದಕ್ಕೆ ಕೊಡಲಾರೆನೆಂದು ನಿರಾಕರಿಸುವುದು ಸಮಸ್ಯೆಯನ್ನು ಮತ್ತಷ್ಟು ಬಿಕ್ಕಟ್ಟಿನದಾಗಿಸುವುದು.

ಸಂಧಾನ ಮಾರ್ಗ

ಕೊರಿಯಾ ಯುದ್ಧ ನಿಲ್ಲಿಸುವುದರ ಬಗ್ಗೆ ಇನ್ನೂ ಕೊನೆಯ ನಿಶ್ಚಯ ಕೈಗೂಡದಿದ್ದುದು ತಮಗೆ ಕಷ್ಟವೆನಿಸಿದೆ ಎಂದೂ ಯುದ್ಧವೆಂದರೇನೆಂಬುದನ್ನು ಇದು ಜಗತ್ತಿಗೆ ಸಿದ್ಧ ಮಾಡಿ ಕೊಟ್ಟಿದೆ ಎಂದೂ ರಾಷ್ಟ್ರಾಧ್ಯಕ್ಷರು ಹೇಳಿದರು.

ಕ್ಲಿಷ್ಟವಾದ ಪ್ರಶ್ನೆಯನ್ನು ಸಮಾಧಾನದಿಂದ ಬಗೆಹರಿಸಲು ಬಯಸಿ, ಅದನ್ನು ಭದ್ರತಾಮಂಡಳದಲ್ಲಿ ಚರ್ಚೆಗೆ ತರಲು ಪ್ರಯತ್ನಿಸಿದಾಗ— ಅದಕ್ಕೆ ಅವಕಾಶವನ್ನೆ ಕೊಡದುದು ಸಂಯುಕ್ತ ರಾಷ್ಟ್ರ ಸಂಘದ ಸ್ಥಾನಮಾನಕ್ಕೆ ಉಚಿತವಾಗಿರಲಿಲ್ಲ ಎಂಬ ಅವರ ವಾದಸರಣಿ ಸ್ವತಂತ್ರರಾಷ್ಟ್ರಗಳು ಕೈಗೂಡುವಂಥದೇ ಸರಿ.

ಚರ್ಚೆಗೆ ಬರುವ ಮಸೂದೆಗಳು

ಇಷ್ಟು ಹೇಳಿದ ಬಳಿಕ ರಾಷ್ಟ್ರಾಧ್ಯಕ್ಷರು ಇದು ಮುಂಗಡ ಪತ್ರದ (ಬಜೆಟ್) ಅಧಿವೇಶನವೆನಿಸಬಹುದೆಂದೂ ಅದಕ್ಕಾಗಿ ಇತರ ಮಸೂದೆಗಳೂ ಚರ್ಚೆಗೆ ಬರಲಿವೆ ಎಂದೂ ತಿಳಿಸಿದರು. ತಾತ್ಕಾಲಿಕ ಪಾರ್ಲಿಮೆಂಟಿನಲ್ಲಿ ಒಮ್ಮೆ ಮಂಡಿಸಿದ ಮಸೂದೆಗಳಲ್ಲಿ ಹಲವು ಈಗ ಮರಳಿ ಚರ್ಚೆಗೆ ಬರಲಿಕ್ಕಿವೆ. ಅಲ್ಲದೆ ಹೊಸತಾಗಿ ಅಗತ್ಯದ ಮಸೂದೆಗಳೂ ಮಂಡಿಸಲಾಗುವುವು. ಹಿಂದೂ ಕೋಡು ಮಸೂದೆಯನ್ನು ಚರ್ಚೆಗೆ ಅನುಕೂಲವಾಗಲೆಂಬಂತೆ ಕೆಲವು ಭಾಗಗಳನ್ನಾಗಿ ವಿಂಗಡಿಸಿ ಮಂಡಿಸಲಾಗುವುದೆಂದೂ ಪ್ರತಿಬಂಧಕ ಸ್ಥಾನಬದ್ಧತೆಯ ಕಾನೂನಿಗೆ ಜೀವದಾನ ಮಾಡುವ ಕೂಡದೆ ತರಲಾಗುವುದೆಂದೂ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಹೊಸತೊಂದು ಮಸೂದೆ ಬರುವುದೆಂದೂ ಅವರು ಸೂಚಿಸಿದರು.

ವಿವಿಧ ವರ್ಗಗಳ ಅಭಿಪ್ರಾಯದಂತೆ, ಒಟ್ಟಿಗೆ ೧೧ ಮಸೂದೆಗಳು ಈ ಅಧಿವೇಶನದಲ್ಲಿ ಚರ್ಚೆಗೆ ಬರಲಿವೆ. ಅವುಗಳಲ್ಲಿ ಗರ್ಣನೆಯ ಜನಗಣನೆಯ ಅಂಕಸಂಖ್ಯೆಯನ್ನು ಆಧರಿಸಿ ಜನತಾ ಪ್ರತಿನಿಧ್ಯವನ್ನು ಸರಿಪಡಿಸುವುದೂ ಈಗ ಭಕರಾ--ನಂಗಾಲ ಯೋಜನೆಯಿಂದ ಒಂದು ಮೂರಾಂಕ ಪ್ರದೇಶವನ್ನು ಕಳೆದುಕೊಂಡಿರುವ ಬಿಲಾಸಪುರವನ್ನು ನೆರೆಯ ಹಿಮಾಚಲ ಪ್ರದೇಶದಲ್ಲಿ ಲೀನಗೊಳಿಸುವುದೂ ಉಲ್ಲೇಖನೀಯವಾಗಿವೆ.

ಸೋಮವಾರ ದಿನ ಲೋಕ ಸಭೆಯಲ್ಲಿ ರಾಷ್ಟ್ರಾಧ್ಯಕ್ಷರ ಭಾಷಣದ ಬಗ್ಗೆ ಆಭಾರ ಸೂಚಿಸುವ ಗೊತ್ತುವಳಿಯನ್ನು ಕಾಂಗ್ರೆಸಿನ ಶ್ರೀ ಅನಿಲಕುಮಾರ ಚಂದಾ ಮಂಡಿಸಿದರು.. ರಾಷ್ಟ್ರಾಧ್ಯಕ್ಷರ ಭಾಷಣದ ಮೇಲೆ ಬಿಸಿ ಬಿಸಿಯಾದ ಚರ್ಚೆ ನಡೆಗರು—ಒಟ್ಟಿನಲ್ಲಿ ರಾಷ್ಟ್ರದ ಸ್ವರೂಪ ದೃಢವಾಗಿರುವುದಕ್ಕೆ ಹೆಮ್ಮೆ ಪಡಬೇಕು,

ಹೊಸ ಗವರ್ನರರ ನೇಮಕ

ಕೇಂದ್ರ ಸರಕಾರವು ನೂತನವಾಗಿ ರಚಿತವಾದೊಡನೆಯೇ ರಾಜ್ಯ ಸರಕಾರಗಳ ಶ್ರೇಷ್ಠರಾದ ಗವರ್ನರರನ್ನು ನೇಮಕ ಮಾಡುವ ಪ್ರಕಟಣೆಯನ್ನು ರಾಷ್ಟ್ರಾಧ್ಯಕ್ಷರು ಹೊರಡಿಸಿದ ಎ. ಮದ್ರಾಸಿಗೆ ಇತ್ತೀಚಿಗೆ ಬಂದಿರುವ ಶ್ರೀ. ಶ್ರೀಪ್ರಕಾಶರೊಬ್ಬರನ್ನು ಬಿಟ್ಟು, ಉಳಿದ ಎಲ್ಲ "ಎ" ವರ್ಗದ ರಾಜ್ಯಗಳ ಗವರ್ನರರು ತಮ್ಮನ್ನು ಕೆಲಸದಿಂದ ನಿವೃತ್ತಿಪಡಿಸಬೇಕೆಂದು ಕೇಳಿಕೊಂಡಿದ್ದರು. ಅವರ ರಾಷ್ಟ್ರಾಧ್ಯಕ್ಷರು ಮುಂಬಯಿಯ ರಾಜಾ ಮಹಾರಾಜ ಸಿಂಗ, ಒರಿಸಾದ ಆಸಫ್ ಅಲಿ, ಬಿಹಾರದ ಎಂ ಎಸ್ ಅಣೆ ಹಾಗು ಉತ್ತರ ಪ್ರದೇಶದ ಎಚ್. ಪಿ ಮೋದಿ-ಇವರ ರಾಜೀನಾಮೆಯನ್ನಷ್ಟೆ ಮಾನ್ಯಮಾಡಿ, ಅಲ್ಲಿಗೆ ಹೊಸ ಗವರ್ನರುಗಳನ್ನು ನೇಮಿಸಿರುವರು. ಪಶ್ಚಿಮ ಬಂಗಾಳದಲ್ಲಿ ಡಾ | ಎಚ್. ಸಿ. ಮುಖರ್ಜಿಯವರೂ, ಅಸಾಮಿನಲ್ಲಿ ಜಯರಾಮದಾಸ ದೌಲತರಾಮರೂ, ಪೂರ್ವ ಪಂಜಾಬದಲ್ಲಿ ಚಂದುಲಾಲ ತ್ರಿವೇದಿಯವರೂ ಇನ್ನು ಮುಂದೆ ಕೂಡ ಗವರ್ನರರಾಗಿ ಉಳಿಯುವರು. ಮಧ್ಯ ಪ್ರದೇಶದ ಮಟ್ಟಿಗೆ ಇನ್ನೂ ಒಂದು ನಿಶ್ಚಯಕ್ಕೆ ಬಂದಿರುವುದಿಲ್ಲ.

ದಿವಾಕರರು ಬಿಹಾರಿಗೆ

ನೂತನ ಗವರ್ನರುಗಳಲ್ಲಿ ಕರ್ನಾಟಕದ ಶ್ರೀ ರಂಗನಾಥ ರಾಮಚಂದ್ರ ದಿವಾಕರರಿಗೆ ಬಿಹಾರ ರಾಜ್ಯದ ಪರಿಸ್ಥಿತಿ ರಾಗಿ-ಸೇವೆ ಸಲ್ಲಿಸುವ ಸೌಭಾಗ್ಯ ದೊರಕಿದೆ. ಇವರು ಮೊದಲು ಕೇಂದ್ರ ಸರಕಾರದ ಸುದ್ದಿ ಮತ್ತು ಬಾನುಲಿ ಶಾಖೆಯ ರಾಜ್ಯಮಂತ್ರಿಗಳಾಗಿದ್ದರು. ಹಿಂದಿನ ಮಂತ್ರಿಮಂಡಲದ ಅನ್ನ ಮಂತ್ರಿಗಳಾಗಿದ್ದ ಶ್ರೀ ಮುನ್ಶಿಯವರು ಈಗ ಉತ್ತರ ಪ್ರದೇಶದ ಗವರ್ನರರು. ಇಷ್ಟರವರೆಗೆ ವಿದೇಶ ಖಾತೆಯ ಪ್ರಧಾನ ಕಾರ್ಯದರ್ಶಿಯಾಗಿ, ಸರಿತ ಅನುಭವಿಗಳೆಂದು ಹೆಸರು ಪಡೆದ ಶ್ರೀ ಗಿರಿಜಾಶಂಕರ ಬಾಜಪೇಯಿಯವರು ಮುಂಬಯಿಯ ಗವರ್ನರರಾಗಿ ಕೆಲಸ ಮಾಡುವರು. ಬಿದ್ದಕ್ಕೆ ಪರಿಷ್ಕ ನ್ಯಾಯಾಲಯದ ತಾತ್ಪೂರ್ತಿಕ ನ್ಯಾಯಾಧೀಶರಾದ ಸೈಯದ ಫಜಲ ಅಲಿಯವರು ಒರಿಸಾದ ನೂತನ ಗವರ್ನರರು.

SOUTH KANARA DISTRICT BOARD

Applications are invited from persons who possesses the qualifications prescribed in Rule 13 of the Madras Educational Rules for appointment to the following posts:-

1. Graduate Assistants.... [B. A., B T., Maths Science & History]
2. Physical Training Instructors .. [Y. M. C A trained]
3. Physical Trainnig Instructress....[do]
4. Secondary Grade Assistants.... [Secondary grade trained]
5. Drawing Masters....[Higher grade Trained in free hand outline drawing.
6. Craft Instructors...[Certificate holders]

Candidates should state their age, Community, details of the qualification and past experience, if any.

Applications accompanied by Treasury receipts or Money Order receipts for Rs. 2/- being the application fee in respect of item Nos 1. 2, 3 and 6 and Rupee One in respect of item Nos 4 and 5 should reach the undersigned on or before 31-5-1952.

(Sd) **B Manjaya Hegde,**
President,
District Board, South Kanara.

S K. Dt. Board Office,
Mangalore, 13-5-1952.

ಮದುವೆ, ಉಪನಯನ ಮತ್ತಿತರ ಯಾವತ್ತೂ
ಶುಭ ಸಮಾರಂಭಗಳ ಕಾಲದಲ್ಲಿ ಏರ್ಪಡಿಸುವ

ಟೀಪಾರ್ಟಿ ಸತ್ಕಾರ ಸಮಾರಂಭಗಳು

ಎಷ್ಟೇ ದೊಡ್ಡ ಪ್ರಮಾಣದಲ್ಲಿದ್ದರೂ ತೃಪ್ತಿಕರವಾಗಿ
ಯೋಗ್ಯ ವ್ಯವಸ್ಥೆಯೊಂದಿಗೆ ನಾವು ಪೂರೈಸಿ ಕೊಡುತ್ತೇವೆ.

ಮಹಾ ಜನರು ಗಮನಿಸಬೇಕು.

ತಾಜಮಹಾಲ್, ಸಿನೆಮಾ ಥಿಯೇಟರಿನ ಬಳಿ **ಉಡುಪಿ.**

THE CANARA BANKING CORPORATION LIMITED.
ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್, ಲಿಮಿಟೆಡ್
ಸ್ಥಾಪನೆ: 1906. : : ಪ್ರಧಾನ ಕಾರ್ಯಾಲಯ: ಉಡುಪಿ, (ದ.ಭಾ.)
ವಿಶೇಷ ಸವಲತ್ತುಗಳಿದ್ದು, ಶಾಲಿಯಾನ್ ಶೇಕಡಾ 4 ರಂತೆ ಬಡ್ಡಿ ಗಳಿಸುವ ನಮ್ಮ
"ಪಂಚವಾರ್ಷಿಕ ಸುವರ್ಣ ಠೇವಣಾತಿಗಳ"
ಮೇಲೆ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.
ವಿಶೇಷ ಮಾಹಿತಿಗೆ, ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.
ವಿ. ಆರ್. ಕಾಮತ್, ಬಿ.ಎ; ಎಲ್ ಎಲ್, ಬಿ;
ಜನರಲ್ ಮೆನೇಜರ್.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೨೨-೫-'೫೨

ಕಳವಳ

ರಾಷ್ಟ್ರಾಧ್ಯಕ್ಷರ ಭಾಷಣದ ಮೇಲೆ ಚರ್ಚೆ ನಡೆದಾಗ ಎಷ್ಟೋ ಸದಸ್ಯರು ಅನ್ನ ಸಮಸ್ಯೆಯ ಗೊಂದಲವನ್ನು ಕಟುವಾಗಿ ಟೀಕಿಸಿದರು. ಆಹಾರ ಪರಿಹಾರ ಧನವನ್ನು ಕೇಂದ್ರವು ಮುಂದುವರಿಸಲು ತಪ್ಪಿದುದರಿಂದ, ಬಡವರು ಕೊಂಡು ಕೊಂಡು ಬದುಕಲಾರದ ಮಟ್ಟಕ್ಕೆ ಆಹಾರ ಧಾನ್ಯಗಳ ಬೆಲೆ ಏರಿದೆ ಎಂದೂ ಇದರಲ್ಲಿ ದೇಶದಲ್ಲಿ ವಿಷಮ ಪರಿಸ್ಥಿತಿ ಉಂಟಾಗಿರುವುದೆಂದೂ ಅವರು ಕಳವಳ ವ್ಯಕ್ತಪಡಿಸಿದರು. ಭಾರತದ ವರ್ತಮಾನ ಚಟುವಟಿಕೆಗಳು ತುಂಬ ಆಶಾದಾಯಕವಿದ್ದರೂ—ರಾಷ್ಟ್ರಾಧ್ಯಕ್ಷರು ಸೂಚಿಸಿದಂತೆ ಆಹಾರದ ಅಭಾವವು ಪ್ರಕೃತ ಬಾಧಿಸುತ್ತಿಲ್ಲವೆಂದೇ ಒಪ್ಪಿದರೂ — ಒಂದೂವರೆ ಕೋಟಿ ಬಡವರ ಮಟ್ಟಿಗೆ ಬೆಲೆ ಏರಿಕೆಯಿಂದ ಉಂಟಾದ ಆತಂಕವನ್ನು ಕಡೆಗಣಿಸಲು ಬರುವುದಿಲ್ಲ. ಕಾಂಗ್ರೆಸು ಸರಕಾರದ ಲೋಪದೋಷಗಳನ್ನೆ ತಮ್ಮ ಪ್ರಚಾರ ಸಾಧನವಾಗಿ ವಿರೋಧಿ ಪಕ್ಷದವರು ಉಪಯೋಗಿಸಲು ಹಾತೊರೆಯುತ್ತಿರುವಾಗ, ಬಡವರ ಹೊಟ್ಟೆಗೆ ಪೆಟ್ಟು ಕೊಡಲು ಸರಕಾರ ಉದ್ಯುಕ್ತವಾಗಿದೆ ಎಂಬ ಅಪವಾದ ಕಲಂಕಕ್ಕೆ ಆಸ್ಪದ ಕೊಡುವುದು ಜಾಣತನವಲ್ಲ. ಅಕ್ಕಿಯೊಂದನ್ನುಳಿದು ಇತರ ಆಹಾರ ಧಾನ್ಯದ ಸಂಗ್ರಹವು ಕೇಂದ್ರದೊಡನೆ ಇಷ್ಟು ಹೆಚ್ಚಿನ ಪ್ರಮಾಣದಲ್ಲಿ ಹಿಂದೆಂದೂ ಇರಲಿಲ್ಲವೆಂದು ರಾಷ್ಟ್ರಾಧ್ಯಕ್ಷರು ಹೆಮ್ಮೆಯಿಂದ ನುಡಿದರು. ಇದು ಸಂತೋಷವೇ ಸೈ. ಈ ಭದ್ರ ಪರಿಸ್ಥಿತಿಯ ಕಾರಣಗಳನ್ನು ಸಾವಧಾನದಿಂದ ಪರ್ಯಾಲೋಚಿಸಿದಾಗ, ಕೆಲವು ಸಂಗತಿಗಳು ಎದ್ದು ತೋರುವುವು—ವಿದೇಶಗಳಿಂದ ಆಯಾತವಾದ ಆಹಾರ ಧಾನ್ಯಗಳ ಪ್ರಮಾಣ ಬಹಳ ಹೆಚ್ಚಿದೆ; ಕಳೆದ ವರ್ಷಕ್ಕಿಂತ ಈ ವರ್ಷದ ಸುಗ್ಗಿಯಲ್ಲಿ ಹೆಚ್ಚು ಫಸಲು ಕೈಗೆ ಬಂದಿದೆ; ಆಹಾರಧಾನ್ಯ ಎತ್ತುವಳಿಯು ಹೆಚ್ಚು ಸಾಫಲ್ಯಗೊಂಡಿದೆ; ಮತ್ತು ಕೇಂದ್ರದಿಂದ ಆಹಾರ ಧಾನ್ಯಗಳ ಪೂರೈಕೆಯ ಬಗ್ಗೆ ರಾಜ್ಯ ಸರಕಾರಗಳ ಬೇಡಿಕೆ ಕಡಿಮೆಯಾಗಿದೆ. ಈ ಕೊನೆಯ ಕಾರಣವು ತುಂಬ ಮಹತ್ವ ಪಡೆಯುತ್ತದೆ. ಕೊರತೆಯ ಪ್ರದೇಶಗಳಿಗೆ ಈ ಹಿಂದೆ ಎಷ್ಟು ಧಾನ್ಯ ಕಳಿಸಿದರೂ ಕಡಿಮೆಯಾಗುತಿತ್ತು—ಈಗ ಅದು ಹೇಗೆ ಒಮ್ಮೆಲೇ ಬೇಡಿಕೆ ತಗ್ಗಿತು? ರೇಶನು ಅಂಗಡಿಯಲ್ಲಿ ಧಾನ್ಯದ ಬೆಲೆಯು ಜನರ ಕೊಳ್ಳುವ ಶಕ್ತಿಗೂ ಮೀರಿನಿಂತುದರಿಂದ ಹೆಚ್ಚಿನ ಪೂರೈಕೆಯ ಅವಶ್ಯಕತೆಯೊದಗಲಿಲ್ಲವೆಂಬುದನ್ನು ಇದರಿಂದ ಅನುಮಾನಿಸಬಹುದು. ಈ ಪರಿಸ್ಥಿತಿಯ ಪ್ರತಿಭಟನೆಗೆ ಈಗ ಸಂಘಟಿತ ರೂಪವನ್ನು ತಳೆದಿದ್ದು, ಮುಂಬಯಿ, ಪೂನಾ, ದಿಲ್ಲಿ, ಮತ್ತು ಕಲಕತ್ತೆಗಳಲ್ಲಿ ಸತ್ಯಾಗ್ರಹಗಳೂ ಹರತಾಳದ ಸಿದ್ಧತೆಯೂ ನಡೆಯುತ್ತಿವೆ. ಸರಕಾರದ ನೀತಿಯನ್ನು ಪುನರ್ವಿಮರ್ಶಿಸಬೇಕೆಂಬ ಆಗ್ರಹದ ಗೊತ್ತುವಳಿಗಳೊಡನೆ ಕೇಂದ್ರ ಸರಕಾರವು ಆಹಾರ ಪರಿಹಾರದ ಧನದ ಸಂಗತಿಯಲ್ಲಿ ಔದಾರ್ಯ ತೋರಬೇಕೆಂದು ರಾಜ್ಯ ಸರಕಾರಗಳೂ ಮೊರೆ ಇಟ್ಟಿವೆ. ಮುಂಬಯಿಯ ಗವರ್ನರ ರಾಜಾ ಮಹಾರಾಜ ಸಿಂಗರು, ತಾವು ಕೇಂದ್ರ ಸರಕಾರದ ನೀತಿಯನ್ನು ಖಂಡಿಸಲು ಬರುವುದಿಲ್ಲವಾದರೂ ಜನರ ಸಂಕಟವನ್ನು ದೂರೀಕರಿಸುವ ದೃಷ್ಟಿಯಿಂದ ಆಹಾರ ಪರಿಹಾರ ಧನವನ್ನು ಮುಂದುವರಿಸಬೇಕೆಂದು ಪದೇ ಪದೇ ಒತ್ತಾಯಿಸುತ್ತಿರುವುದಾಗಿ ಹೇಳಿದರು. ಆಹಾರ ಪರಿಹಾರ ಧನವಾಗಿ ಕೂಡಿಟ್ಟ ಹಣವನ್ನು ಈಗ ಅಭಿವೃದ್ಧಿಯೋಜನೆಗಳಿಗೆ ವಿನಿಯೋಗಿಸಲಾಗುವುದೆಂಬ ಹೇಳಿಕೆ ದೂರದರ್ಶಿತ್ವದ ಪ್ರತೀಕವೆನ್ನಲಾರೆವು. ಲಕ್ಷಾಂತರ ಬಡವರ ಜೀವನ-ಮರಣ ಪ್ರಶ್ನೆಯಾಗಿ ಆಹಾರದ ಬೆಲೆ ಪರಿಣಮಿಸಿರುವಾಗ ಭಾವೀ ಹಿತಚಿಂತನೆಯೊಂದನ್ನೆ ಧ್ಯೇಯವಾಗಿಟ್ಟುಕೊಳ್ಳುವುದು ಅಸಮಂಜಸ. ಈ ವಿಷಯದಲ್ಲಿ ಮೊನ್ನೆ ಲೋಕಸಭೆಯಲ್ಲಿ ಅರ್ಥಮಂತ್ರಿ ಚಿಂತಾಮಣಿ ದೇಶಮುಖರು ಕೊಟ್ಟ ಹೇಳಿಕೆಯು ಆಶಾದಾಯಕವಿಲ್ಲ—ಪರಿಹಾರ ಧನ ಕೊಡುವುದನ್ನು ನಿಲ್ಲಿಸಿದುದರಿಂದ ಬಡ ಜನತೆಗೆ ಕಷ್ಟ ಬಂದಿದೆ ಎಂಬುದನ್ನು ಒಪ್ಪಲು ಅವರು ಸಿದ್ಧರಿಲ್ಲ. ಕೂಡಿಟ್ಟಿದ್ದ ಧಾನ್ಯ ಸಂಗ್ರಹವೆಲ್ಲ ಈಗ ಪೇಟೆಗೆ ಬಂದಿದೆ ಎಂದೂ, ಆ ಕಾರಣದಿಂದ ಬೇಡಿಕೆ ತಗ್ಗಿತೆಂದೂ ಅವರ ತರ್ಕ. ಇದು ವಸ್ತುಸ್ಥಿತಿಗೆ ಸರಿಯಲ್ಲ. ಮೊದಲೇ ೪೦-೫೦ ಕೋಟಿ ರೂಪಾಯಿಗಳ ಕೊರತೆ ಅನುಭವಿಸುತ್ತಿರುವ ಕೇಂದ್ರ ಸರಕಾರವು ಆಹಾರ ಪರಿಹಾರ ಧನದ ಬಗ್ಗೆ ಇದರ ದುಬಾರಿ ವೆಚ್ಚವನ್ನು ಮಾಡುವುದು ಮುಂಧೋರಣವಲ್ಲವೆಂಬ ಅವರ ನಿರ್ಧಾರದ ಅಭಿಪ್ರಾಯ ಜನಸಾಮಾನ್ಯಕ್ಕೆ ತೃಪ್ತಿ ತಾರದು. ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶದ ಹೊರತು ಉಳಿದೆಡೆ ಆಹಾರಾಭಾವವಿದೆ ಎಂದು ಒಪ್ಪಿಕೊಳ್ಳುವಾಗ, ಈ ರೀತಿಯ ವಾದಸರಣಿ ಯೋಗ್ಯವೆನ್ನಲು ಬರುವುದಿಲ್ಲ. ಹೊಸತಾಗಿ ಆಹಾರ ಶಾಖೆಯ ಮಂತ್ರಿಪದ ಸ್ವೀಕರಿಸಿರುವ ಶ್ರೀ ರಫಿ ಅಹಮ್ಮದ ಕಿದ್ವಾಯಿ ಈಗ ಗಂಭೀರಾಲೋಚನೆಯಲ್ಲಿ ತೊಡಗಿರುವರೆಂದೂ, ಆಹಾರದ ಮಟ್ಟಿಗೆ ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ ಎಂದೂ ವದಂತಿ. ಅವರು ಆಹಾರ ಪರಿಹಾರ ಧನವನ್ನು ಮುಂದುವರಿಸಬೇಕೆಂಬ ಅಭಿಪ್ರಾಯ ವ್ಯಕ್ತಗೊಳಿಸುತಿದ್ದು, ಮೊದಲಿನ ಅರ್ಧಾಂಶವಾದರೂ ಮುಂದೆ ಪರಿಹಾರ ದೊರೆತೀತು ಎಂಬ ಆಶೆಗೆ ಎಡೆಇದೆ. ಇದಲ್ಲದೆ, ರಾಷ್ಟ್ರದಾದ್ಯಂತ ಮಿತ ಬೆಲೆಯ ಧಾನ್ಯದ ಅಂಗಡಿಗಳನ್ನು ತೆರೆದು, ಶ್ರಮ ಜೀವಿಗಳಿಗೆ ರೇಶನು ಕಾರ್ಡಿನ ಅಕ್ಕಿಯನ್ನು ಬಿಟ್ಟು ಹೆಚ್ಚು ಆಹಾರ ದೊರೆಯುವ ವ್ಯವಸ್ಥೆ ಮಾಡುವರಂತೆ. ಇದು ಒಂದು ಬಗೆಯಿಂದ ನಿಯಂತ್ರಣದ ಲೋಪ ತಳೆಯುವುದು; ಮತ್ತು ಇದರಿಂದ ತಾತ್ಕಾಲಿಕ ಪ್ರಯೋಜನವಾದೀತು. ಜೂನು ತಿಂಗಳ ಆದಿಯಲ್ಲಿ ರಾಜ್ಯ ಸರಕಾರಗಳ ಆಹಾರ ಮಂತ್ರಿಗಳ ಪರಿಷತ್ತಿನಲ್ಲಿ ಕೂಡಿದಾಗ—ಒಂದು ನಿಶ್ಚಯಕ್ಕೆ ಅವರು ಬರುವ ನಿರೀಕ್ಷೆ ಇದೆ.

ಲೋಕವಾರ್ತೆ

ಸಿಲೋನು ಸತ್ಯಾಗ್ರಹ

ಸಿಲೋನು ಸತ್ಯಾಗ್ರಹಿಗಳಿಗೆ ನೈತಿಕ ಬೆಂಬಲದ ಜೊತೆಗೆ ಸಿಂಹಳೀಯರ ಸಹಾನುಭೂತಿ ಕೂಡ ದೊರೆತಿರುವುದು ಮೊನ್ನೆ ತಾನೆ ಮುಖ್ಯಮಂತ್ರಿ ಡಡ್ಲೆ ಸೇನಾನಾಯಿಕೆಯವರಿಗೆ ಇಪ್ಪತ್ತಂದಿ ಸಿಂಹಳೀಯರು ಒಂದು ಮನವಿ ಕಳಿಸಿ, ಭಾರತೀಯರ ಹಕ್ಕು ಬಾಧ್ಯತೆಗಳ ಪ್ರಶ್ನೆಯನ್ನು ನ್ಯಾಯ ದೃಷ್ಟಿಯಿಂದ ಪರಾಮರ್ಶಿಸಬೇಕೆಂದು ಒತ್ತಾಯಿಸಿದರು. ಬಹಿರಂಗ ಪತ್ರಗಳ ಮೂಲಕವೂ ಸಿಂಹಳೀ ಸರಕಾರದ ಮೇಲೆ ಪ್ರಭಾವ ಬೀರಲು ಯತ್ನಿಸಲಾಗಿದೆ. ನಿವೃತ್ತ ಸೈನಿಕ ಶ್ರೀ ಅಬಯಕೋನರು ಸಿಂಹಳದ ಸಂಪತ್ತಿಗೆ ಕಾರಣರಾದ ಸಿಂಹಳೀ ಭಾರತೀಯರಿಗೆ ಮತಾಧಿಕಾರ ಕೊಡದಿರುವುದು ರಾಜಕೀಯ ಅಪರಾಧ ಎಂದರು. ಭಾರತ ಸರಕಾರವೂ ಈ ವಿಷಯದಲ್ಲಿ ಆಸಕ್ತಿ ತಳೆದಿದ್ದು ಮೈತ್ರಿಯಿಂದಲೇ ಈ ಸಮಸ್ಯೆಯನ್ನು ಬಿಡಿಸುವುದಕ್ಕೆ ತಾನು ಉತ್ಸುಕವಿರುವುದಾಗಿ ಮರಳಿ ವ್ಯಕ್ತಪಡಿಸಿದೆ. ಮತಾಧಿಕಾರದ ಬಗ್ಗೆ ಹಾಕಿದ ಅರ್ಜಿಯ ವಿಚಾರಣೆ ವಿಳಂಬವಾಗಲು, ಸಿಲೋನು ಭಾರತೀಯ ಕಾಂಗ್ರೆಸಿನ ಬಹಿಷ್ಕಾರ ಕಾರಣವಲ್ಲ—ಸಿಂಹಳೀ ಸರಕಾರದ ಆಲಸ್ಯ ಮತ್ತು ಅಕರ್ಮಣ್ಯತನವೇ ಅದಕ್ಕೆ ಹೊಣೆ ಇರುವುದೆಂದು ಸಿಲೋನಿನಲ್ಲಿ ಭಾರತದ ಹೈಕಮಿಶನರು ಹೇಳಿರುವರು. ಸದ್ಯಕ್ಕೆ ಸಿಲೋನು ಸರಕಾರವು ೧೦೧ ಸದಸ್ಯರಿರುವ ರಾಜ್ಯಾಂಗ ಸಭೆಯಲ್ಲಿ ಮೂರು ಸ್ಥಾನಗಳಿಗೆ ಭಾರತೀಯರ ನಾಮಕರಣ ಮಾಡುವುದರ ಮೂಲಕ ಸರಕಾರದಲ್ಲಿ ಪ್ರಾತಿನಿಧ್ಯ ಒದಗಿಸಿಕೊಡುವ ಹಂಚಿಕೆಯಲ್ಲಿದೆ.

○○ ○○

ಟ್ಯುನೀಸಿಯಾ ಪ್ರಕರಣ

ಟ್ಯುನೀಸಿಯಾದ ಬಿಕ್ಕಟ್ಟನ್ನು ಬಗೆಹರಿಸುವಲ್ಲಿ ಅಮೇರಿಕವು ಒಂದು ದೃಢವಾದ ಹೆಜ್ಜೆ ಇಟ್ಟನೆ ಎನ್ನಬಹುದು. ಫ್ರಾನ್ಸಿಗೆ ಒಂದು ಸೂಚನೆಯನ್ನು ಅದು ಕಳುಹಿಸಿದ್ದು, ಅದರಲ್ಲಿ ಟ್ಯುನೀಸಿಯದಲ್ಲಿ ರಾಜಕೀಯ ಸುಧಾರಣೆಗಳನ್ನು ಜರೂರಾಗಿ ಕೈಗೊಳ್ಳಬೇಕೆಂದೂ, ಅನ್ಯಥಾ ಭದ್ರತಾ ಮಂಡಳದ ಮುಂದೆ ಇನ್ನೊಂದು ಸಲ ಈ ಪ್ರಶ್ನೆ ಬಂದಾಗ ತಾನು ಫ್ರಾನ್ಸಿನ ಇಚ್ಛೆಗೆ ವಿರೋಧವಾಗಿ ಚರ್ಚೆಗೆ ಸಮ್ಮತಿಸಬೇಕಾಗುವುದೆಂದೂ ಹೇಳಿದೆ. ಅಟ್ಲಾಂಟಿಕ ಒಡಂಬಡಿಕೆಯಲ್ಲಿ ಭಾಗ ವಹಿಸಿರುವ ರಾಷ್ಟ್ರವೊಂದು ತನ್ನ ಮಿತ್ರ ರಾಷ್ಟ್ರಕ್ಕೆ ಈ ರೀತಿ ನಿರ್ದಾಕ್ಷಿಣ್ಯ ರೂಪದ ಎಚ್ಚರಿಕೆ ಕೊಟ್ಟಿರುವುದನ್ನು ನೋಡಿದರೆ, ಜಗತ್ತಿನ ಚಿಕ್ಕ ರಾಷ್ಟ್ರಗಳ ಸ್ನೇಹ ಕಳಕೊಳ್ಳುವುದು ಅಮೇರಿಕೆಗೆ ಬೇಕಾಗಿಲ್ಲವೆನ್ನಬಹುದು. ಇದರ ಪರಿಣಾಮವೊ ಎಂಬಂತೆ—ಫ್ರಾನ್ಸು ಟ್ಯುನೀಸಿಯದಲ್ಲಿ ರಾಜ್ಯಾಂಗ ಸುಧಾರಣೆ ಮಾಡುವುದನ್ನು ಪರ್ಯಾಲೋಚಿಸುತ್ತಿದೆ. ಆದರೆ ಟ್ಯುನೀಶಿಯದ ರಾಷ್ಟ್ರೀಯ ಧುರೀಣರು ಮಾತ್ರ ಅದರೊಡನೆ ಸಹಕರಿಸಲು ಸಿದ್ಧರಿಲ್ಲ. ಇತ್ತ ಅರಬ ಏಶಿಯಾ ರಾಷ್ಟ್ರಗಳು ಫ್ರಾನ್ಸಿನ ಸಾಮ್ರಾಜ್ಯಶಾಹಿ ನೈಪಾದವನ್ನು ತಡೆಯಲು ಏನೊಂದೂ ಮಾರ್ಗವಿಲ್ಲವೆ? ಎಂದು ವಿಶ್ವಕ್ಕೆ ಪ್ರಶ್ನೆ ಹಾಕಿವೆ.

○○ ○○

ಅಸಫಲ ಸಂಧಾನ

ಕೊರಿಯಾ ಬಿಕ್ಕಟ್ಟಿಗೆ ಪರಿಹಾರ ಒದಗಿಬಂದಿಲ್ಲ. ಯುದ್ಧ ಕೈದಿಗಳ ರಾಜಕೀಯ ಅಭಿಪ್ರಾಯಗಳನ್ನು ಮನ್ನಿಸಿ ನಡೆಯಲು ಕಮ್ಯೂನಿಸ್ಟರು ಒಪ್ಪುವುದಿಲ್ಲ. ಅಮೇರಿಕೆಯು ಕೊರಿಯದಲ್ಲಿ ಕ್ರಿಮಿಯುದ್ಧವನ್ನು ನಡೆಸುತ್ತಿರುವುದಲ್ಲದೆ ಈಚೆಗೆ ಅಣುಶಸ್ತ್ರದ ಉಪಯೋಗವನ್ನು ಸಹ ಮಾಡಿದೆ ಎಂದೂ ಯುದ್ಧಕೈದಿಗಳನ್ನು ಕೆಟ್ಟ ರೀತಿಯಲ್ಲಿ ನೋಡುತ್ತಿರುವರೆಂದೂ ಅವರು ಬಿಡದೆ ದೂರುತ್ತಿರುವರು. ಇದರಿಂದ ಜುಗುಪ್ಸೆಗೊಂಡ ಸಂಯುಕ್ತ ರಾಷ್ಟ್ರಸಂಘದ ಪ್ರತಿನಿಧಿಗಳು ಇಂಥ ಅಪಪ್ರಚಾರವನ್ನು ನಿಲ್ಲಿಸದಿದ್ದರೆ ಮಾತುಕತೆಗಳು ಎಷ್ಟಕ್ಕೂ ಫಲದಾಯಕವೆನಿಸವು ಎಂದಿರುವರು.

ಅಮೇರಿಕೆಯ ರಾಜಕಾರಣ

ಶಾಂತಿಯ ಹೆಸರಿನಲ್ಲಿ ಯುದ್ಧದಾಹವನ್ನು ವೃದ್ಧಿಸಿಕೊಳ್ಳುವ ಉದ್ಯಮಕ್ಕೆ ಅಮೇರಿಕಾ ಮುಂದಾಗಿದೆ ಏನೋ ಎನ್ನುವಂತಿದೆ—ಟ್ರೂಮನರು ತಮ್ಮ ೭೯೦೦ ಮಿಲಿಯ ಡಾಲರುಗಳ ಸಂರಕ್ಷಣಾ ಯೋಜನೆಯು ಸದ್ಯ ಪರಿಸ್ಥಿತಿಯಲ್ಲಿ ಅತ್ಯಗತ್ಯವೆಂದೂ ಹಿಂದುಳಿದ ರಾಷ್ಟ್ರಗಳಿಗೆ ಸಹಾಯನೀಡಬೇಕಾಗಿರುವುದು ಅಮೇರಿಕೆಯು ಕೈಗೊಂಡಿರುವ "ಪ್ರಚ್ಛನ್ನಯುದ್ಧ"ಕ್ಕೆ ತೀರ ಆವಶ್ಯಕವೆಂದೂ ಜನರಿಗೆ ಬಿಟ್ಟೂ ಬಿಡದೆ ಉಪದೇಶಿಸುತ್ತಿರುವರು. ಜಪಾನಿ ಶಾಂತಿ ಒಡಂಬಡಿಕೆಯು ಕಡ್ಡವಾದ ಹಲೆಸರು ಈಗ ಕಮ್ಯೂನಿಸ್ಟ ದಾಳಿಗೆ ಪ್ರತೀಕಾರ ಮಾಡಲು ತಾನು ಸಿದ್ಧವಿದ್ದೇನೆಂಬುದನ್ನು ಅಮೇರಿಕೆಯು ತೋರಿಸಿಕೊಡದಿದ್ದುದರಿಂದಲೇ ಕೊರಿಯದಲ್ಲಿ ಯುದ್ಧ ಘಟಿಸಲು ಅಸ್ಪದವಾಯಿತು ಎಂದು ಹೇಳಿದ್ದಾರೆ. ಬ್ರಿಟನು ಸಹ ಪುನಃ ಶಸ್ತ್ರೀಕರಣದ ಬಗ್ಗೆ ಸ್ಥಿರ ಧೋರಣವನ್ನು ಅನುಸರಿಸುತ್ತಿದೆ. ಪಶ್ಚಿಮದ ಈ ಸಂಶಯ ಪ್ರವೃತ್ತಿ ರಾಷ್ಟ್ರ

ನಲು ಯುದ್ಧ ಸಿದ್ಧತೆಯು ಗೊಂದಲದಲ್ಲಿ ಬಿದ್ದಿರುವಾಗ, ಐಸನಹಾವರು ಅದಕ್ಕೆ ತಾತ್ವಿಕ ಸ್ಫೂರ್ತಿಯನ್ನು ಕೊಟ್ಟಿದ್ದಾರೆ.

೦೦ ೦೦

ಸುಡಾನು ತಂಟೆ

ಸುಡಾನು ಸಂಬಂಧವಾಗಿ ಈಜಿಪ್ತಿನೊಡನೆ ಬಹಳ ವಿಚಾರ ವಿಮರ್ಶೆಯು ಬಳಿಕ ಬ್ರಿಟನು ಮಾಡಿದ ಸೂಚನೆಗಳನ್ನು ಈಜಿಪ್ತ ಸಾರ್ವಭೌಮಾಧಿಕಾರವನ್ನು ಒಪ್ಪಲಿಕ್ಕೆ ಕೆಲವು ಸುಡಾನಿ ಧುರೀಣರು ಸಮ್ಮತಿಸುವುದಿಲ್ಲ. ಅಂಥವರಲ್ಲಿ ಸುಡಾನು ಸ್ವತಂತ್ರವಾಗಬೇಕೆನ್ನುವ ಅಬ್ದುಲ್ ರಹಮಾನ ಮಹದಿಪಾಶಾ ಎಂಬ ಧಾರ್ಮಿಕ ಧುರೀಣರನ್ನು ಸುಡಾನು ಪ್ರಶ್ನೆಯಲ್ಲಿ ತನ್ನ ಉಚಿತ ಅಭಿಪ್ರಾಯ ತಿಳಿಸಲು ಖಾರ್ಟೂಮಿನಿಂದ ಕೈರೋಗೆ ಪ್ರತಿನಿಧಿಗಳನ್ನು ಕಳಿಸಬೇಕೆಂದು ಈಜಿಪ್ತ ಸರಕಾರ ಕೇಳಿಕೊಂಡಿದೆ. ಸಾಮ್ರಾಜ್ಯವಾದಿಗಳು ಆಫ್ರಿಕೆಯಲ್ಲಿ ತಮ್ಮ ಕೈವಾಡ ನಡೆಸಲು ಹೊಂಚು ಹಾಕುತ್ತಿರುವುದಾಗಿಯೂ, ಅದಕ್ಕಾಗಿಯೇ ಸುಡಾನು ತಂಟೆ ಬಗೆಹರಿಸಲು ವಿಳಂಬವೆಂದೂ ಅರಬ ಲೀಗಿನ ಕಾರ್ಯದರ್ಶಿ ಅಜ್ಜಂ ಪಾಶಾ ದೂರಿದರು.

೦೦ ೦೦

ವರ್ಣ ದ್ವೇಷ

ದಕ್ಷಿಣ ಆಫ್ರಿಕೆಯ ಕಾಂಗ್ರೆಸು ಧುರೀಣರನ್ನು ಕುಹಕ ರೀತಿಯಿಂದ ಪ್ರತಿಬಂಧಿಸುವ ಉದ್ಯಮಗಳು ನಡೆದಿವೆ. ಕಾಂಗ್ರೆಸಾಧ್ಯಕ್ಷ ಶ್ರೀ ದಾದೂರ ಮೇಲೆ ನ್ಯಾಯಶಾಖೆಯ ಮಂತ್ರಿಗಳು ಒಂದು ಆಜ್ಞೆ ಪ್ರಯೋಗಿಸಿ, ಒಂದು ತಿಂಗಳ ಒಳಗಾಗಿ ಅವರು ರಾಜೀನಾಮೆ ಕೊಡಬೇಕೆಂದು ಹೇಳಿದ್ದಾರೆ. ಕಮ್ಯೂನಿಸಂ ವಿರೋಧಿ ಕಾನೂನಿನನ್ವಯ ಇದನ್ನು ಹೊರಡಿಸಿದ್ದು, ದಾದೂ ಅವರು ಟ್ರಾನ್ಸವಾಲನ್ನು ಬಿಟ್ಟು ಹೋಗ ಕೂಡದೆಂದೂ, ಸತ್ಯಾಗ್ರಹ ಸಮಿತಿಯಿಂದಲೂ ಹೊರ ಬೀಳಬೇಕೆಂದೂ ಅದು ನಿರ್ಬಂಧಿಸಿದೆ.

೦೦ ೦೦

ಭಾರತ ಪಾರ್ಲಿಮೆಂಟಿನಲ್ಲಿ ರಾಷ್ಟ್ರಾಧ್ಯಕ್ಷರ ಭಾಷಣದ ಮೇಲೆ ಚರ್ಚೆ ನಡೆದಾಗ ಕಮ್ಯೂನಿಸ್ಟರು ಸರಕಾರದ ಪ್ರಕೃತ ಧೋರಣವನ್ನು ಕಟುವಾಗಿ ಟೀಕಿಸಿದರು. ಮುಖ್ಯವಾಗಿ, ದೇಶದ ಆಹಾರ ಪರಿಸ್ಥಿತಿಯು ಹದಗೆಡುತ್ತಿದೆ ಎಂದೂ ಬಡಜನರ ಸಂಕಷ್ಟಗಳಿಗೆ ಎಣೆಯಿಲ್ಲವೆಂದೂ ಅವರು ಪ್ರತಿಪಾದಿಸಿದರು. ಯೋಗ್ಯಬೆಲೆಯ ಅಂಗಡಿಗಳನ್ನು ತೆರೆದು ಅನ್ನದ ಪೂರೈಕೆಯ ಬಡವರಿಗೆ ಕಡಿಮೆ ವೆಚ್ಚದಲ್ಲಿ ಆಗುವಂತೆ ನೋಡಿಕೊಳ್ಳಬೇಕೆಂದವರು ಸೂಚಿಸಿದರು. ರಾಯಲ ಸೀಮೆಯಲ್ಲಿ ನಡೆದ ಪರಿಹಾರ ಕಾರ್ಯಗಳ ಕುರಿತು ಅತೃಪ್ತಿಯನ್ನು ಕೆಲವು ಸದಸ್ಯರು ಪ್ರಕಟಿಸಿದರು- ಭಾಷಾವಾರು ಪ್ರಾಂತ ವಿಭಜನೆಯ ಬಗ್ಗೆ ಮತ್ತು ಊಸುಭಾರತೀಯರ ಕುರಿತು ರಾಷ್ಟ್ರಾಧ್ಯಕ್ಷರ ಭಾಷಣದಲ್ಲಿ ಏನೊಂದೂ ಉಲ್ಲೇಖವಿಲ್ಲದಿರುವುದಕ್ಕೆ ಕೆಲವರು ವಿಷಾದ ವ್ಯಕ್ತಪಡಿಸಿದರು. ಸಿಂಹಳ, ಕಾಶ್ಮೀರಗಳಲ್ಲಿ ಬಿಟ್ಟಿರುವ ಇನ್ನೂ ಬಗೆಹರಿಯದಿರಲು ಸರಕಾರದ ನಿಷ್ಕ್ರಿಯಾತ್ಮಕವಾದ ಕಾಟಸ್ಥ್ಯವೇ ಕಾರಣವೆಂದು ವಿದೇಶ ಧೋರಣವನ್ನು ಟೀಕಿಸಲಾಯಿತು. ಅಮೇರಿಕಾದಿಂದ ಡಾಲರು ಸಹಾಯ ಸ್ವೀಕರಿಸುವುದು, ಬ್ರಿಟಿಶ್ ಕಾಮನ್‌ವೆಲ್ತಿನಲ್ಲಿ ಇನ್ನೂ ಉಳಿದಿರುವುದು, ದೇಶದೊಳಗೆ ಜಮೀನುದಾರಿ ರದ್ದತಿಯಲ್ಲಿ ಪರಿಣಾಮಕಾರಿ ಹೆಜ್ಜೆ ಇಡದಿರುವುದು-ಇವನ್ನೆಲ್ಲ ನೋಡಿದಾಗ ಸರಕಾರವು ಪ್ರಗತಿಶೀಲ ಪ್ರವೃತ್ತಿ ತಳೆದಿಲ್ಲ ಎಂದವರು ದೂರಿದರು.

ಉತ್ತರ ಪ್ರದೇಶದಲ್ಲಿ ಪಂಡಿತಗೋವಿಂದ ವಲ್ಲಭ ಪಂತರ ಮುಖ್ಯಮಂತ್ರಿತ್ವದಲ್ಲಿ ೧೨ಮಂದಿಯ ಮಂತ್ರಿ ಮಂಡಳವು ಅಧಿಕಾರ ಸ್ವೀಕರಿಸಿದೆ.

ಶ್ರೀ ಪ್ರಕಾಶಮರು ಅಸಭ್ಯ ನಡವಳಿಕೆ ಪ್ರದರ್ಶಿಸಿದುದಕ್ಕೆ ಎಚ್ಚರಿಕೆ ಕೊಡಬೇಕೆಂದು ರಾಜಾಜಿ ತಂದ ಠರಾವನ್ನು ಹಿಂದೆಗೆದುಕೊಳ್ಳಲಾಯಿತು. ಪ್ರಕಾಶಮರು ತೀವ್ರ ಪ್ರತಿಭಟನೆಯನ್ನು ಹೂಡಿದರು. ಕೊನೆಯ ಗಳಿಗೆಯಲ್ಲಿ ರಾಜಾಜಿ ತಾನು ಠರಾವು ತಂದುದರ ಉದ್ದೇಶವು ಸದಸ್ಯರಿಗೆ ತಪ್ಪನ್ನು ಮನವರಿಕೆ ಮಾಡಿ ಕೊಡುವುದಾಗಿದ್ದು, ಅದೀಗ ಎರಡು ದಿನಗಳ ಸುದೀರ್ಘ ಚರ್ಚೆಯಿಂದ ನೆರವೇರಿತೆಂದೂ, ಪ್ರಕಾಶಮರ ಮನಸ್ಸನ್ನು ಇದಕ್ಕೂ ಹೆಚ್ಚು ನೋಯಿಸಲು ತಾನು ಇಚ್ಛಿಸದುದಿಲ್ಲವಾಗಿಯೂ ಹೇಳಿದರು-

ಮದ್ರಾಸು ಶಾಸನ ಸಭೆಯು ಜೂನು ತಿಂಗಳ ೨೬ನೇ ತಾರೀಕಿಗೆ ಮರಳಿ ಕೂಡಿದಾಗ, ಅದರಲ್ಲಿ ಮುಂಗಡ ಪತ್ರ ಮಂಡಿಸಲ್ಪಡುವ ನಿರೀಕ್ಷೆ ಇದೆ-

ಬಿಹಾರ ಗವರ್ನರ ಶ್ರೀ ಅಣೆ ಮವರು ಶಾಸನ ಸಭಾ ಸದಸ್ಯರಿಗೆ ಕೊಟ್ಟ ಭಾಷಣದಲ್ಲಿ ಭೂಧಾರಣ ಪದ್ಧತಿಯಲ್ಲಿ ಸುಧಾರಣೆ ಮತ್ತು ದಾರಿದ್ರ್ಯ ನಿರ್ಮೂಲನದಲ್ಲಿ ಸುದೃಢ ಮುನ್ನಡೆಯ ಮೂಲಕ,ಕಮ್ಯೂನಿಜಂಗೆ ಸರಕಾರ ಆಹ್ವಾನ ನೀಡುವುದೆಂದು ಸಾರಿದರು.

ಬಿಕಾನೇರುಕೈಲಿಗೆ ಜಯಪುರದಲ್ಲಿ ತಾ. ೧೯ರಂದು ಅಪಘಾತಸಂಭವಿಸಿತು. ಎರಡು ರೈಲುಗಳಲ್ಲಿ ಒಂದಕ್ಕೆ ಸಿಗ್ನಲ್ಲು ತಪ್ಪಿದುದರಿಂದೆ ಇದು ಘಟಿಸಿತೆಂದೂ 46 ಮಂದಿ ಮೃತಪಟ್ಟಿದ್ದು 50ಕ್ಕೂ ಮಿಕ್ಕಿದ ಜನರು ಗಾಯಗೊಂಡು ಶುಶ್ರೂಷೆ ಪಡೆಯುತ್ತಿರುವರಾಗಿಯೂ ಪ್ರಧಾನಿ ನೆಹರೂ ಲೋಕ ಸಭೆಯಲ್ಲಿ ಹೇಳಿದರು.

ಒಡಿಸಾದ ಗವರ್ನರರಾಗಿದ್ದ ಆಸಫ್ ಅಲಿಯವರನ್ನು ಸ್ವಿಜರಲೇಂಡಿಗೆ ಭಾರತದ ರಾಯಭಾರಿಯಾಗಿ ನೇಮಕ ಮಾಡಲಾಗಿದೆ. ಅಲ್ಲಿ ಇದುವರೆಗೆ ಈ ಸ್ಥಾನದಲ್ಲಿದ್ದ ಶ್ರೀ ಎನ್. ರಾಘವನರು ಇನ್ನು ಮುಂದೆ ಚೀನಾದಲ್ಲಿ ಭಾರತದ ರಾಯಭಾರಿಯಾಗುವರು.

ಲೋಕಸಭೆಯಲ್ಲಿ ಕಮ್ಯೂನಿಸ್ಟ ಪಕ್ಷವನ್ನು ವಿರೋಧಿ ಪಕ್ಷವೆಂಬ ರೀತಿ ಪರಿಗಣಿಸಲು ಅಧ್ಯಕ್ಷ ಮಾವಳಣಕರರು ಒಪ್ಪಿಲ್ಲ. ೫೦೦ ಮಂದಿ ಸದಸ್ಯರ ಸಭೆಯಲ್ಲಿ ೫೦ ಮಂದಿಯಾದರೂ ಇದ್ದರೆ ವಿರೋಧೀ ಪಕ್ಷವೆಂದು ಮನ್ನಿಸಲು ಬರುವುದಂತೆ. ಕಮ್ಯೂನಿಸ್ಟರ ಸಂಖ್ಯೆ ಬೆಂಬಲಿಗರ ಸಹಿತ ಮೂವತ್ತರ ಆಸುಪಾಸಿನಲ್ಲಿದೆ.

ಜಿಲ್ಲಾ ಕಾಂಗ್ರೆಸ್ ಕಮಿಟಿ-ಮಹಾ ಸಭೆಯು ತಾ 24ಕ್ಕೆ ಜರಗುವುದೆಂದಿದ್ದುದು ಮುಂದುವರಿಸಲ್ಪಟ್ಟಿರುವುದಾಗಿಯೂ,ಆದೇ ಸಮಯಕ್ಕೆ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಕಡೆಯಿಂದ ವಿಚಾರಣಾ ಸಮಿತಿಯು ಇಲ್ಲಿಗೆ ಬರಲಿರುವುದಾಗಿಯೂ ತಿಳಿದುಬರುತ್ತದೆ.

"ಕರ್ನಾಟಕ ಚೇಂಬರ್ ಒಫ್ ಎಗ್ರಿಕಲ್ಚರ್"—ಇದರ ಮುಂದರಿಸಲ್ಪಟ್ಟ ಮಹಾಸಭೆಯು ತಾ. 23-5-52ನೇ ಸಂಜೆ ಗಂಟೆ 5-30ಕ್ಕೆ ಮಂಗಳೂರು ಹಂಪನ್‌ಕಟ್ಟೆಯ, ಎಸ್. ಸಿ. ಸ್ಕೂಲ್ಸು ಇದರ ಆಫೀಸಿನಲ್ಲಿ ಚೇಂಬರಿನ ಕಾಯ್ದೆ ಕಾನೂನುಗಳನ್ನು ಅಂಗೀಕರಿಸಿಕೊಳ್ಳುವರೆಯೂ, ಅಧಿಕಾರ ವರ್ಗವನ್ನು ಆರಿಸುವರೆಯೂ ಕೂಡುವುದು.

ಕಿಸಾನ್ ಮಜದೂರ್ ಪರಿಷತ್ತಿನಲ್ಲಿ ಪಾಸಾದ ನಿರ್ಣಯಗಳು

ದ. ಕ. ಜಿಲ್ಲೆಗೊಂದು ಸರ್ವ ಋತುವಿನ ದೊಡ್ಡ ಬಂದರವು ಅಗತ್ಯವಿದ್ದು ಅದು ಮಂಗಳೂರಲ್ಲಾಗಲೀ ಮಲ್ಪೆಯಲ್ಲಾಗಲೀ ಆಗಬೇಕು. ಮಂಗಳೂರು. ಹಾಸನ ರೈಲ್ವೇ ಮಾರ್ಗವಿಲ್ಲದ್ದರಿಂದ ದಕ್ಷಿಣಕನ್ನಡ ಜಿಲ್ಲೆಯು ಹಾಗೂ ಪಶ್ಚಿಮ ಮೈಸೂರಿನ ಅಭಿವೃದ್ಧಿಗೆ ಬಹಳ ತಡೆಯಾದುದರಿಂದ ಮಂಗಳೂರು ಹಾಸನ ರೈಲ್ವೆಮಾರ್ಗ ಅತೀ ಅಗತ್ಯ ಹಾಗೂ ಜರೂರಾಗಿ ಆಗಬೇಕಾಗಿದೆ. ದ. ಕ. ಜಿಲ್ಲೆಯಲ್ಲಿ ಒಕ್ಕಲು ಧನಿಗಳೊಳಗಿರುವ ವಿಶಿಷ್ಟವಾದ ಸಂಬಂಧದಿಂದಾಗಿ ಈ ಜಿಲ್ಲೆಗಾಗಿಯೇ ಒಂದು ಒಕ್ಕಲು ಸುಧಾರಣೆ ಮಸೂದೆಯನ್ನು ತಂದು ತನ್ಮೂಲಕ ಒಕ್ಕಲುಗಳಿಗೆ ಸ್ಥಿರಾಧಿಕಾರ, ಪಟ್ಟಾದಾರನಿಗೆ ನ್ಯಾಯವಾದ ಗೇಣಿ ಸಿಗುವಂತಾಗಬೇಕು. ಕಂಟ್ರೋಲುಗಳಿಂದ ಎಲ್ಲರಿಗೂ ನ್ಯಾಯವಾಗಿ ಹಂಚಲ್ಪಡುವ ಮತ್ತು ನ್ಯಾಯವಾದ ಬೆಲೆಗಳಿರುವ ಉದ್ದೇಶಗಳು ಪೂರೈಕೆಯಾಗುವ ಬದಲು ಕಾಳಸಂತೆ, ಲಂಚಗುಳಿತನಗಳು ಹೆಚ್ಚಿರುವುದರಿಂದ ಕಂಟ್ರೋಲುಗಳನ್ನು ತೆಗೆದು ಆಹಾರಧಾನ್ಯಗಳ ಬೆಲೆ ಥಕ್ಕನೆ ಏರದಂತೆ ತಡೆಹಿಡಿಯಲು ಸರಕಾರವು ಆಹಾರ ಸಂಗ್ರಹವನ್ನು ಏರ್ಪಡಿಸಬೇಕು. ಅದಕ್ಕೆ ಮತ್ತು ನ್ಯಾಯಶಾಖೆಗಳನ್ನು ಬೇರ್ಪಡಿಸುವ ಕ್ರಮ, ಕನ್ನಡದಲ್ಲಿ ಕೂಡಲೇ ಕೈಗೊಳ್ಳಬೇಕು. 1939ರಲ್ಲಿ ಸೇಲ್ಸ್‌ಟೇಕ್ಸ್ ಕಾನೂನು ಮಾಡುವಾಗ ಇದ್ದ ಧಾರಣೆಗಳಿಗಿಂತ ಈಗ ಎಷ್ಟೋ ಪಾಲು ಹೆಚ್ಚಿರುವುದರಿಂದ ತೆರಿಗೆ ಕೊಡಬೇಕಾದವರ ವಹಿವಾಟಿನ ಕನಿಷ್ಠ ಮಿತಿಯನ್ನು ರೂಪಾಯಿ 10000 ಇರುವುದನ್ನು ರೂ. 2500ಕ್ಕೆ ಏರಿಸಬೇಕು. ಬೆಸ್ತರು ಮಾರುವ ಮೀನಿನ ಮೇಲೆ ಮ್ಯೂನಿಸಿಪಾಲಿಟಿಯವರ ಸುಂಕ ಹಾಕಬಾರದು, ಇವೇ ಮೊದಲಾದ ನಿರ್ಣಯಗಳಾದುವು.

ಉಡುಪಿ

ವಿಷಾದಕರ ಮರಣ—ಉಡುಪಿ ಬ್ರಹ್ಮಗಿರಿಯ ಆನಂದ ಸೇರಿಗಾರನೆಂಬ ಬೀಡಿ ಕೆಲಸಗಾರನಿಗೆ ಇದೇ ತಾ. 19ರಲ್ಲು ಕುಂದು ಸೆಟ್ಟಿ ಎಂಬಾತನು ಕತ್ತರಿಯಿಂದ ತಿವಿದನೆಂತೂ ಅದರ ಪರಿಣಾಮವಾಗಿ ಆತನು ಮರಣ ಪಟ್ಟನೆಂದೂ ಆತ್ಮರಕ್ಷಣೆಗಾಗಿ ತಾನು ತಿವಿದೆನೆಂಬುದಾಗಿ ಅಪಾದಿತನು ಸ್ವತಃ ಹೋಗಿ ಪೋಲೀಸ್ ಸ್ಟೇಶನಿನಲ್ಲಿ ವಾಗ್ಮೂಲ ಕೊಟ್ಟಿರುವನೆಂದೂ ತಿಳಿದು ಬರುತ್ತದೆ. ಮೃತಶರೀರವನ್ನು ಸ್ಥಳೀಯ ಆಸ್ಪತ್ರೆಗೆ ತರಲಾಗಿ ಪೋಸ್ಟ್‌ಮಾರ್ಟಮ್ ಮಾಡಲ್ಪಟ್ಟಿತು. ಆಪಾದಿತನು ಪೋಲೀಸು ಬಂದೋಬಸ್ತಿನಲ್ಲಿದ್ದು ಅವನನ್ನು ಡಾಕ್ಟರರು ಪರೀಕ್ಷಿಸುವರೆಂದು ತಿಳಿದು ಬರುತ್ತದೆ.

ಕಸಗುಪ್ಪೆಗಳ ರಾಶಿ—ನಗರ ಕ್ಷೇತ್ರದೊಳಗಿನ ಕೆಲವು ಕೇಂದ್ರಗಳಲ್ಲಿ ಇಡಲ್ಪಟ್ಟ ಕಸಗುಪ್ಪೆಗಳಲ್ಲಿ ಹೊಲಸು ರಾಶಿ ರಾಶಿಯಾಗಿ ಬಿದ್ದಿದ್ದು ಅದನ್ನು ತೆಗೆಯುವ ಕಾರ್ಯ ತಟಸ್ಥವಾದಂತಿದೆ. ಮುನಿಸಿಪಲ್ ಬಸ್ ಸ್ಟೇಂಡಿನ ಮೂತ್ರ ದೊಡ್ಡಿಯ ನೀರನ್ನು ಕೋಟಿಯು ಅಲ್ಲಿಯೇ ಸನಿಹದ ಚರಂಡಿಗೆ ದಿನಾಲೂ ಬಿಸಾಡುತ್ತಿದ್ದು ಆಸುಪಾಸಿನವರಿಗೂ ದಾರಿ ಹೋಕರಿಗೂ ತುಂಬಾ ದುರ್ವಾಸನೆಯನ್ನೀಯುತ್ತಿದೆ ತೋಟಿಗಳು ಕೆಲವು ಕಡೆಗೆ ಸರಿಯಾಗಿ ಬರುವುದಿಲ್ಲವಾಗಿಯೂ ಅನೇಕ ಬಾರಿ ಚೆನ್ನಾಗಿ ನಿರ್ಮಲ ಮಾಡದೇನೇ ಹೋಗಿಬಿಡುತ್ತಾರಾಗಿಯೂ ದೂರಿದ್ದಿದೆ. ಮುನಿಸಿಪಲ್ ಹೆಲ್ತ್ ಆಫೀಸರರು ಈ ಕಡೆ ತೀವ್ರ ಗಮನ ಕೊಡಬೇಕಾದುದು ಅತ್ಯಾವಶ್ಯಕವಾಗಿದೆ.

ನಮ್ಮ ಟಪ್ಪಾಲು ಆಫೀಸಿನಲ್ಲಿ—ಕೆಲವೊಂದು ಅಕ್ರಮಗಳುಂಟಾಗುತ್ತಿವೆಯೆಂದೂ ಪಕ್ಷಪಾತ ನಡೆಯುತ್ತಿದೆ ಎಂದೂ ತಿಳಿದು ಬರುತ್ತದೆ. 'ಕಿವಿಚುಚ್ಚ' ಇಲ್ಲವೆ 'ಮನವೊಲಿಸ' ಸ್ಥಳೀಯ ಉಚ್ಚಾಧಿಕಾರಿಗಳೊಡನೆ 'ಒಳ್ಳೆಯದು ಮಾಡಿಕೊಳ್ಳುತ್ತಿರುವ 'ಚೇಲ' ರೊಬ್ಬರ ಕೈವಾಡವೇ ಇದಕ್ಕೆ ಕಾರಣವೆನ್ನಲಾಗಿದೆ. ಸಂಬಂಧಪಟ್ಟವರು ಈ ಕುರಿತು ಸೂಕ್ಷ್ಮ ಪರಿಶೀಲನೆ ನಡೆಸುವುದು ಅತ್ಯಾವಶ್ಯಕವಿದೆ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!

ನ್ಯಾಮಾಪ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿತ್ಯ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI, S. Kanara.

● ತೃಪ್ತಿಕರವಾದ ವಸತಿ — ಹಿತಕರವಾದ ಊಟ

● ರುಚಿಕರವಾದ ಉಪಾಹಾರ ಇವುಗಳಿಗೆ

ಉಡುಪಿಯ ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಊರ ಪರವೂರ ಸನ್ಮಾನ್ಯ ಸದ್ಗೃಹಸ್ಥರಿಂದ ಮುಕ್ತಕಂಠದಿಂದ

ಹೊಗಳಿಸಿಕೊಂಡ ನಮ್ಮ ಹೋಟೆಲಿಗೆ

ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ

ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯಾಗುವಂತೆ

ನಗರದ ಕೇಂದ್ರ ಭಾಗದಲ್ಲಿದೆ.

WOODLANDS

Highclass Boarding & Lodging, UDIPI S. Kanara

ಮಂಗಳೂರು

ಪತ್ರಿಕೋದ್ಯಮಿಗಳ—ಕಾರ್ಯನಿರ್ವಾಹಕ ಕಮಿಟಿ ಸಭೆಯು ತಾ 15ರಂದು ಜರಗಿದ್ದು ಯು. ರಾಮರಾಯರ ನಿಧನದ ಬಗ್ಗೆ ದುಃಖ ಸೂಚಕ ನಿರ್ಣಯಮಾಡಲಾಯಿತು.

ಜಿಲ್ಲಾ ಅಡಿಕೆ ಮತ್ತು ತೆಂಗು ಮಾರ್ಕೆಟ್ ಕಮಿಟಿ ಸಭೆಯು—ಶ್ರೀ ಯು. ನಾರಾಯಣ ಮಲ್ಯರ ಅಧ್ಯಕ್ಷತೆಯಲ್ಲಿ ಈಚಿಗೆ ಜರಗಿತು. ತೆಂಗು ಹಾಗೂ ಅಡಿಕೆಯ ಬೆಲೆಯು ಒಮ್ಮೆಯೇ ಇಳಿದು ಹೋಗದಂತೆ ನೋಡಿಕೊಂಡು ಕೃಷಿಕರ ಹಿತ ರಕ್ಷಿಸಬೇಕು. ಹಡಗು ಮತ್ತು ರೈಲುಗಳ ಮೂಲಕ ಈ ಉತ್ಪತ್ತಿಗಳನ್ನು ಹೊರಗೆ ಕಳುಹಿಸಬೇಕಾದರೆ ಈ ಕಮಿಟಿಯ ರಹದಾರಿಯನ್ನು ತೋರಿಸುವಂತೆ ರೈಲ್ವೆ ಹಾಗೂ ಪೋರ್ಟ್ ಇಲಾಖೆಯವರು ಒತ್ತಾಯಪಡಿಸುವಂತೆ ಕೇಂದ್ರ ಸರಕಾರವು ತಿಳಿಸಬೇಕು ಇತ್ಯಾದಿ ನಿರ್ಣಯಗಳಾದುವು.

ಹಂಚು ಮಜೂರರ ಸಮ್ಮೇಳನವು—ತಾ 16ರಲ್ಲು ಕಾಮ್ರೇಡ್ ಶ್ರೀ ಕೆ. ಎನ್. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಶಾಂತಾರಾಂ ಪೈ, ಎ. ಕೃಷ್ಣ ಶೆಟ್ಟಿ ಮೊದಲಾದವರು ಮಾತನಾಡಿದರು.

ಆಚಾರ್ಯ ಕೃಪಲಾನಿಯವರು— ತಾ 15ರಲ್ಲು ಸಂಜೆ ಕೇಂದ್ರ ಮೈದಾನದಲ್ಲಿ ಭಾಷಣ ಮಾಡುತ್ತ, ಪ್ರಜಾಪಕ್ಷದ ಧ್ಯೇಯ ಧೋರಣೆಗಳನ್ನು ವಿವರಿಸಿದರು. ಸಭಿಕರು ಕೇಳಿದ ಕೆಲವು ಪ್ರಶ್ನೆಗಳಿಗೂ ಉತ್ತರವಿತ್ತರು.

ರೈಲ್ವೆ ಸಮಯದಲ್ಲಿ ಬದಲಾವಣೆ—ಮಂಗಳೂರಿನಿಂದ ಹೊರಡುವ ಹಾಗೂ ಇಲ್ಲಿಗೆ ತಲಪುವ ಸಮಯಗಳಲ್ಲಿ ಇದೇ ತಾ 15ರಿಂದ ಕೆಲವು ಬದಲಾವಣೆಗಳಾಗಿವೆ. ಅಲ್ಲದೆ ಈ ತನಕ ಕುಂಬಳೆ, ಕಾಸರಗೋಡುಗಳಲ್ಲಿ ಮಾತ್ರ ನಿಲ್ಲುತ್ತಿದ್ದ ಮಂಗಳೂರು ಎಕ್ಸ್‌ಪ್ರೆಸ್ ಹೋಗುವಾಗಲೂ ಬರುವಾಗಲೂ ಮಂಜೇಶ್ವರದಲ್ಲಿ ನಿಲ್ಲುವುದು.
ಬದಲಾದ ಸಮಯ ಹೀಗಿದೆ.

ಕೊರ್ನೂರ್ ಪೆಸೆಂಜರ್— ಮುಂಜಾನೆ 4-10 ಹೊರಟು ರಾತ್ರಿ 11-0ಕ್ಕೆ, ಮಂಗಳೂರು ಎಕ್ಸ್‌ಪ್ರೆಸ್–ಬೆಳಿಗ್ಗೆ 8-0 ಹೊರಟು ರಾತ್ರಿ 6-0ಕ್ಕೆ, ಕಲ್ಲಿಕೋಟೆ ಪೆಸೆಂಜರ್—ಮಧ್ಯಾಹ್ನ 11-55 ಹೊರಟು ಸಂಜೆ 2-45ಕ್ಕೆ, ಜನತಾ ಪೋದನೂರ್ — ಸಂಜೆ 5-5 ಹೊರಟು ಮಧ್ಯಾಹ್ನ 12-25ಕ್ಕೆ, ಜೋಲಾರ್ ಪೇಟ್ ಪೆಸೆಂಜರ್—ಸಂಜೆ 6-25 ಹೊರಟು ಬೆಳಿಗ್ಗೆ 9-0ಕ್ಕೆ ತಲುಪುವುದು.

ನಗರದ ಸಿನೆಮಾ ಥಿಯೇಟರುಗಳ—ಕೆಲಸಗಾರರ ಕೆಲವು ಕೇಳಿಕೆಗಳನ್ನು ಲೇಬರ್ ಆಫೀಸರರ ಶಿಫಾರಸಿನ ಮೇರೆಗೆ ಪರಿಶೀಲಿಸಲು ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ನೇಮಕವಾಗಿದ್ದು, ತಾ 10ರಲ್ಲು ಈ ಟ್ರಿಬ್ಯೂನಲ್ ಮಂಗಳೂರಿಗೆ ಆಗಮಿಸಿತ್ತು. ಯೂನಿಯನ್ನಿನ ಅಧ್ಯಕ್ಷರಾದ ಎಸ್. ಎ. ಸೋನ್ಸರ ಡಿಸ್‌ಮಿಸಲ್ ಆಜ್ಞೆಯನ್ನು ಹಿಂತೆಗೆದುಕೊಳ್ಳುವುದಲ್ಲದೆ ರೂ. 500 ಪರಿಹಾರ ಕೊಡುವಂತೆ ವಿಧಿಸಿದರು.

ವಾರ್ಷಿಕೋತ್ಸವ ಮಂಗಳೂರು ಆರ್ಯ ಸಮಾಜದ ಮತ್ತು ಸ್ವಾಮಿ ಶ್ರದ್ಧಾನಂದ ಸೇವಾಶ್ರಮದ ವಾರ್ಷಿಕೋತ್ಸವವು ತಾ. 11ರಂದು ಶ್ರೀ ಎಮ್. ಗೋವಿಂದ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನವಾದ ನಂತರ ಶ್ರೀಗಳಾದ ಕೇಶವ ರಾಮಚಂದ್ರ ಶೆಣೈ, ಕೆ. ಕೃಷ್ಣರಾವ್, ವೈದ್ಯ ಗುರು ಎಮ್. ಆರ್. ಭಟ್, ಮೊದಲಾದವರ ಭಾಷಣವಿತ್ತರು. ಬೆಳಿಗ್ಗೆ ಶ್ರೀ ಪಿ. ಯಂ. ತಿಂಗಳಾಯರು ವೈದಿಕ ಧ್ವಜವನ್ನರಳಿಸಿ ಅದರ ಮಹತ್ವವನ್ನು ಸಾರಿದ್ದರು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ವಿಶೇಷ ಮಹಾ ಸಭೆಯು ಇದೇ ತಾ. 24ನೆ ಶನಿವಾರ ಅಪರಾಹ್ನ 3ಗಂಟೆಗೆ ಬ್ಯಾಟ್ ಹೌಸ್ ಹಿಲ್‌ನಲ್ಲಿರುವ ಕಮಿಟಿಯ ಹೊಸಕಚೇರಿಯಲ್ಲಿ ಜರಗಲಿದ್ದು ಪದಾಧಿಕಾರಿಗಳ ಮತ್ತು ಕಾರ್ಯನಿರ್ವಾಹಕ ಮಂಡಳಿಯ ಚುನಾವಣೆ ಕುರಿತು ಆಲೋಚಿಸಲಾಗುವುದು.

ನೂತನ ದಂಪತಿಗಳಿಗೆ ಶುಭವಾಗಲಿ

ತಾ. 9-5-52ರಲ್ಲಿ, ಉಡುಪಿಯ ವಧುವಿನ ನಿವಾಸದಲ್ಲಿ ವಿವಾಹ ಸಮಾರಂಭವು ವಿಜೃಂಭಣೆಯಿಂದ ಜರಗಿತು.

ವಧೂ—
ಸೌ| ವಿಮಲಾ ಕಾಮತ್
(ಶ್ರೀ ವಿ. ಆರ್. ಕಾಮತ್, B.A.L L B ಜನರಲ್ ಮೆನೇಜರ್, ಕೆನರಾ ಬ್ಯಾಂಕಿಂಗ್ ಕೊರ್ಪರೇಶನ್ ಮತ್ತು ಶ್ರೀಮತಿ ಲೀಲಾಬಾಯಿ ಕಾಮತ್, ನಗರಸಭಾ ಸದಸ್ಯೆ, ಮತ್ತು ಮಾಜಿ ಸೆನೆಟ್ ಮೆಂಬರ್, ಇವರ ಪುತ್ರಿ)

ವರ—
ಶ್ರೀ ಬಿ ಪದ್ಮನಾಭ ಬಾಳಿಗ
(ದಿ| ಎ. ವಿ. ಬಾಳಿಗರ ಪುತ್ರ)

ದ. ಕ- ಜಿಲ್ಲಾ ಅಧ್ಯಾಪಕರ ತಲಬು ಬಟವಾಡೆ ವಿಚಾರದಲ್ಲಿ ಬೋರ್ಡಿನ ಅಧ್ಯಕ್ಷ ಶ್ರೀ ಮಂಜಯ್ಯ ಹೆಗ್ಡೆಯವರ ಸ್ಪಷ್ಟೀಕರಣ

1952ನೆ ಫೆಬ್ರವರಿ ಮತ್ತು ಮಾರ್ಚ ತಿಂಗಳುಗಳ ಬೋರ್ಡ ಶಾಲಾ ಅಧ್ಯಾಪಕರ ತಲಬು ಬಟವಾಡೆಯಾಗದ ಸಂಗತಿಯಲ್ಲಿ ಜನರು ಬಗೆಬಗೆಯಾಗಿ ಯೋಚಿಸುವುದಕ್ಕೆ ಅವಕಾಶ ಉಂಟಾಗಿ ಹಲವರಲ್ಲಿ ತಪ್ಪು ಅಭಿಪ್ರಾಯಗಳೂ ಮೂಡಲು ಆಸ್ಪದ ಉಂಟಾಗಿದ್ದು ನಿಜಸ್ಥಿತಿ ಏನೆಂಬುದನ್ನು ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಸವಿಸ್ತಾರವಾಗಿ ಸೂಚಿಸಿರುತ್ತಾರೆ. ಅದರ ಸಾರಾಂಶವು ಹೀಗಿದೆ:—

ಡಿಸ್ಟ್ರಿಕ್ಟ್ ಬೋರ್ಡ ಆಕ್ಟಿಗೆ ಒಳಪಟ್ಟು ಜಿಲ್ಲಾ ಬೋರ್ಡ ಸರಕಾರದಿಂದ ಗ್ರಾಂಟು ಇಲ್ಲವೆ ಇತರ ಸಹಾಯಧನ ಪಡೆದು ಆಡಳಿತೆ ನಡೆಸುವ ಸ್ಥಾನಿಕ ಸ್ವರಾಜ್ಯ ಸಂಸ್ಥೆ. ಆದರೆ ಸ್ವತಂತ್ರ ಧೋರಣೆಯನ್ನು ವಹಿಸಿ ಬೇರಾವ ರೀತಿಯ ವಹಿವಾಟನ್ನು ನಡೆಸಿ ತನ್ಮೂಲಕ ದ್ರವ್ಯಾನುಕೂಲತೆಯನ್ನು ಒದಗಿಸಿಕೊಳ್ಳುವ ಅಧಿಕಾರ ಜಿಲ್ಲಾ ಬೋರ್ಡಿಗೆ ಇರುವುದಿಲ್ಲ. ತಾತ್ಕಾಲಿಕ ಸಾಲ ಇಲ್ಲವೆ ಕೈಕಡದ ವ್ಯವಸ್ಥೆ ಮಾಡಿ ಹಣದ ಕೊರತೆಯನ್ನು ಕೆಲಕಾಲದ ಮಟ್ಟಿಗಾದರೂ ಹೋಗಲಾಡಿಸಿ ಕಾರ್ಯನಿರ್ವಾಹ ಮಾಡುವ ಸ್ವಾತಂತ್ರ್ಯ ಕೂಡಾ ಜಿಲ್ಲಾ ಬೋರ್ಡಿಗೆ ಇರುವುದಿಲ್ಲ ಎಂಬುದನ್ನು ಪ್ರಥಮವಾಗಿ ಗಮನಿಸಬೇಕಾಗಿದೆ.

ಇತ್ತೀಚೆಗೆ ಬೋರ್ಡಿನ ಪ್ರಾಥಮಿಕ ವಿದ್ಯಾಭ್ಯಾಸದ ಕುರಿತಾದ ಆಯವ್ಯಯ ಪಟ್ಟಿಯಲ್ಲಿ ವೆಚ್ಚದ ಅಂಶವೇ ಅಧಿಕವಾಗುತ್ತಾ ಬರುತ್ತಿದೆ. ಜಿಲ್ಲಾ ಬೋರ್ಡಿಗೆ ಸರಕಾರದಿಂದ ದೊರೆಯುವ ಗ್ರಾಂಟ್ ಇತ್ಯಾದಿ ಏಕಗಂಟಿನಲ್ಲಿ ದೊರೆಯದೆ ಹಲವು ಕಂತುಗಳಲ್ಲಿ ದೊರೆಯುವುದು. 1951-52ರ ಜಿಲ್ಲಾ ಬೋರ್ಡಿನ ಪ್ರಾಥಮಿಕ ವಿದ್ಯಾಭ್ಯಾಸದ ಮುಂಗಡ ಪತ್ರದಲ್ಲಿ ಸೂಚಿಸಲ್ಪಟ್ಟಂತೆ ಆರು ಲಕ್ಷ ರೂಪಾಯಿ ಕೊರತೆಯುಂಟಾಗಿತ್ತು. ಜಿಲ್ಲಾ ಬೋರ್ಡಿಗೆ ಸರಕಾರದವರು ಈ ಮುಂಗಡಪತ್ರವನ್ನು ಪರಿಶೀಲಿಸಿ ಸುಮಾರು ನಾಲ್ಕು ಲಕ್ಷ ಕಡಿಮೆ ಬೀಳುವುದೆಂದು ಅಂದಾಜುಮಾಡಿ ಕೆಲವು ಯೋಜನೆಗಳನ್ನು ತಟಸ್ಥಗೊಳಿಸುವಂತೆಯೂ ವೆಚ್ಚವನ್ನು ಆದಷ್ಟು ಕಡಿಮೆಮಾಡುವಂತೆಯೂ ಸೂಚಿಸಿದ್ದರು. ಇದೇ ನಾಲ್ಕು ಲಕ್ಷವನ್ನು ವರ್ಷದ ಎಲ್ಲಾ ತಿಂಗಳುಗಳಿಗೆ ಸಮಾನವಾಗಿ ಹಂಚಹಾಕಿದರೆ ಪ್ರತಿತಿಂಗಳಲ್ಲೂ ಹೆಚ್ಚುಕಡಿಮೆ ರೂ. 33,000 ಬೇಕಾದುದಕ್ಕಿಂತ ಕಡಿಮೆಯಾಗುವುದು. ಪ್ರತಿತಿಂಗಳಲ್ಲಿ ಸುಮಾರು 2056 ಮಂದಿ ಪ್ರಾಥಮಿಕ ಶಾಲಾ ಅಧ್ಯಾಪಕರಿಗೆ ತಲಬು ಬಟ್ವಾಡೆ ಮಾಡುವುದಕ್ಕೆ ಜಿಲ್ಲಾ ಬೋರ್ಡಿಗೆ ರೂ. 1,15,000 ಬೇಕಾಗುವುದು. ಈ ಕಾರಣದಿಂದಾಗಿ ಉಪಾಧ್ಯಾಯರ ತಲಬುಬಟ್ವಾಡೆಗೆ ವಿವಿಧರೀತಿಯಿಂದ ಹಣ ಒದಗಿಸಿಕೊಳ್ಳುವ ಅಗತ್ಯದೀಳುತ್ತಲೇ ಇತ್ತು. ಸರಕಾರದಿಂದ ದೊರೆತ ಮುಂಗಡವು ಜನವರಿಯೊಳಗೆನೇ ವೆಚ್ಚವಾಯಿತು.

ಹೀಗಾಗಿ ಫೆಬ್ರವರಿ ತಿಂಗಳ ಬಾಬ್ತು ಅಧ್ಯಾಪಕರ ಸಂಬಳದ ಬಿಲ್ ಬಂದಾಗ ಅಂದರೆ ತಾ 15-3-52ರಲ್ಲು ಬೋರ್ಡಿನ ಪ್ರಾಥಮಿಕ ವಿದ್ಯಾನಿಧಿಯಲ್ಲಿ ರೂ. 67,246 ಕಡಿಮೆಯೇ ಇದ್ದಿತ್ತು. ಈ ವಿಚಾರವನ್ನು ಸರಕಾರಕ್ಕೆ ಕೂಡಲೇ ತಿಳಿಸಲಾಗಿತ್ತು. ನಾಲ್ಕು ಕಡೆಗಳಿಂದಲೂ ದೂರುಗಳ ಸುರಿಮಳೆಯೇ ಬರುತ್ತಿದೆ ಎಂದು ಸರಕಾರಕ್ಕೆ ಪುನಃ ತಿಳಿಸಲಾಗಿತ್ತು. ಸಾಲದುದಕ್ಕೆ ಟೆಲಿಗ್ರಾಮುಗಳು ಕೊಡಲಾದುವು. ಅಂತೂ ಇಂತೂ ಎಲ್ಲಾ ಪ್ರಾಥಮಿಕ ಶಾಲಾ ಅಧ್ಯಾಪಕರಿಗೆ ಮಾರ್ಚ ತಿಂಗಳ ತಲಬನ್ನು ತಾ 8-5-52ರೊಳಗೆ ಕಳುಹಿಸಿಕೊಡಲಾಯಿತು. ಅದರ ಜತೆಯಲ್ಲಿಯೇ ಫೆಬ್ರವರಿ ತಿಂಗಳ ಬಾಬ್ತು ಬಾಕಿಯುಳ್ಳ ತಲಬನ್ನು ಬಟ್ವಾಡೆಮಾಡಿಯದೆ.

ಅಧ್ಯಾಪಕ ವರ್ಗದಲ್ಲಿ ಕೆಲವರು, ಬೋರ್ಡಿನ ಇತರ ನೌಕರರಿಗೆ ಸರಾಗವಾಗಿ ತಲಬನ್ನು ಕೊಟ್ಟು ತಮಗೆ ಮಾತ್ರ ಈ ರೀತಿ ಕಷ್ಟಕ್ಕೆ ಒಳಪಡಿಸುವುದು ಸರಿಯೇ ಎಂದು ಪ್ರಶ್ನಿಸುತ್ತಿರುವರು. ಆದರೆ ಬೋರ್ಡಿನ ನೌಕರರಿಗೆ ಸಂಬಳಕೊಡುವ ನಿಧಿಯೇ ಬೇರೆ, ಅಧ್ಯಾಪಕರಿಗೆ ವೇತನಕೊಡುವ ನಿಧಿಯೇ ಬೇರೆ ಎಂಬುದನ್ನು ಲಕ್ಷ್ಯಕ್ಕೆ ತಂದುಕೊಳ್ಳಬೇಕಾಗಿದೆ.

ಮೇಲೆ ಸೂಚಿಸಿದ ವಾಸ್ತವ ಸಂಗತಿಗಳಿಂದ ಜಿಲ್ಲಾ ಬೋರ್ಡ ತನ್ನ ಕರ್ತವ್ಯವನ್ನು ಮೂಲೆಗೊತ್ತಿ ಬೇಜವಾಬ್ದಾರಿ ರೀತಿಯಲ್ಲಿ ವರ್ತಿಸಲಿಲ್ಲವೆಂಬುದು ಅಧ್ಯಾಪಕ ವೃಂದಕ್ಕಾಗಲೀ ಇತರ ಮಹಾಜನರಿಗಾಗಲೀ ಖಚಿತವಾಗದೆ ಇರದು.

ಅಜ್ಜಾವರಕ್ಕೆ ಬ್ರಾಂಚ್ ಪೋಸ್ಟಾಫೀಸು ತೆರೆಯಲ್ಪಟ್ಟಿರುವುದರಿಂದ ಸದ್ರಿಗ್ರಾಮದ ಯಾವತ್ತೂ ಪತ್ರ ವಗೈರೆಗಳ ವಿಳಾಸವನ್ನು 'ಅಜ್ಜಾವರ ಪೋಸ್ಟು' ಎಂದು ಬರೆಯಬೇಕಾಗಿದೆ.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ, ಇವರ
ನವಜೀವಾತು
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಉಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ ಎಂ. ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ| ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ತಾ. 23—5—52ರಿಂದ
ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್ ಉಡುಪಿ.
ಮೊನ್ನೆ ಮೊನ್ನೆಯ ಜೀವನವನ್ನು ಬಗೆಬಗೆಯ ಬಣ್ಣಗಳಿಂದ ಚಿತ್ರಿಸಿದ ಹಾಸ್ಯಮಯ
ಹಂಗಾಮ
ದೇವಿಡ್, ಗೋಪ್, ಯಾಕೂಬ್, ಕುಕ್ಕು, ನೂತನ್, ನಸೀರ್ ಕೆ. ಎನ್. ಸಿಂಗ್ ಮೊದಲಾದವರು.
ಬರುವ ಚಿತ್ರಗಳು:— ಶಾಯರ್, (ದೇವ ಆನಂದ್, ಸೂರೈಯ್ಯಾ, ಕಾಮಿನಿಕೌಶಲ್ಯ)
ಹೌ ಗ್ರೀನ್ ವೋಸ್ ಮೈ ವೆಲ್ಲೀ. **How Green was my Valley.**

ತಾರಾನಾಥ ಆಯುರ್ವೇದ ವಿದ್ಯಾಪೀಠ,
ಬಳ್ಳಾರಿ.
(ಮದ್ರಾಸ್ ಸರಕಾರದ ಮಂಜೂರಾತಿ ಪಡೆದಿದೆ)
ಅರ್ಜಿ ಫಾರ್ಮ್ ಮತ್ತು ಪ್ರೊಸ್‌ಫೆಕ್ಟಸ್‌ಗಳಿಗೆ ಪ್ರಿನ್ಸಿಪಾಲರಿಗೆ ಬರೆಯತಕ್ಕದ್ದು. ಕನಿಷ್ಠ S. S L. C. ಓದಿದವರು ಪ್ರವೇಶಾರ್ಹರು. ಜೂನ್ ತಾ 15ರ ಒಳಗೆ ರಿಜಿಸ್ಟ್ರೇಶನ್ ಫೀ ರೂ. 5/-ರ ಜತೆಗೆ ಅರ್ಜಿಯು ವಿದ್ಯಾಪೀಠದ ಆಫೀಸಿಗೆ ಮುಟ್ಟತಕ್ಕದ್ದು.
ಬಿ. ಕೆ. ಮಾಳ್ವ,
ಕಾರ್ಯದರ್ಶಿ.

ಉದಿಯಾವರ ನದಿಗೊಂದು ಸೇತುವೆ

(ಟಿ. ಎ ಪೈ, ಎಮ್. ಎಲ್ ಎ)

ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಪಶ್ಚಿಮ ಘಟ್ಟದಿಂದ ಇಳಿದು ಬಂದು ಅರೇಬಿಯನ್ ಸಮುದ್ರಕ್ಕೆ ಹರಿಯುವ ನದಿಗಳು ಹಲವಾರು ಇವೆ. ಈ ನದಿಗಳು ಪ್ರಾಂತ್ಯದ ಇತರ ಭಾಗಗಳಲ್ಲಿ ಹರಿಯುವ ಹೆಚ್ಚಿನ ನದಿಗಳಂತಿರದೆ ವರುಷವಿಡೀ ತುಂಬಿದ ನೀರಿನಿಂದೊಡಗೂಡಿರುವುವು. ಆದುದರಿಂದ ವರುಷದ ಯಾವ ಕಾಲದಲ್ಲೂ ಈ ನದಿಗಳನ್ನು ಕಾಲ್ನಡೆಯಿಂದ ದಾಟುವಂತಿಲ್ಲ, ಅಥವಾ ವಾಹನಗಳ ಮೂಲಕ ಸರಕು ಸಾಮಾನುಗಳನ್ನು ಸಾಗಿಸುವಂತಿಲ್ಲ. ಈ ಎಲ್ಲಾ ನದಿಗಳ ಮೇಲೆ ಸೇತುವೆಯಾಗದೆ ದಕ್ಷಿಣ ಕನ್ನಡ ಸಾಗುದಾರಿಯ ಸಮಸ್ಯೆಯು ಒಂದು ಸಮಸ್ಯೆಯಾಗಿಯೇ ಉಳಿಯುವುದು.

ಪ್ರಾಂತ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ಸಾಮಾನ್ಯವಾಗಿ ಸಮತೂಕದಲ್ಲಿ ಹಣ ವಿನಿಯೋಗವಾಗಬೇಕೆಂಬ ದೃಷ್ಟಿಯಲ್ಲಿ ದಕ್ಷಿಣ ಕನ್ನಡಕ್ಕೆ ಇಷ್ಟೊಂದು ಸೇತುವೆಗಳ ನಿರ್ಮಾಣಕ್ಕಾಗಿ ವಿಶೇಷ ಹಣವನ್ನು ಒಮ್ಮೆಯೇ ಮಂಜೂರು ಮಾಡಲು ಮದ್ರಾಸು ಸರಕಾರ ಹಿಂದೆ ಮುಂದೆ ನೋಡಬಹುದು. ಆದರೆ ಈ ವಿಷಯದಲ್ಲಿ ಸರಕಾರ ಅಂತಹ ಶಂಕೆಯನ್ನಿಟ್ಟುಕೊಳ್ಳಕೂಡದು. ಏಕೆಂದರೆ, ಮೊದಲನೆಯದಾಗಿ ಪ್ರಾಯಶಃ ಮಲಬಾರನ್ನು ಬಿಟ್ಟರೆ ದಕ್ಷಿಣಕನ್ನಡದಲ್ಲಿರುವಷ್ಟು ನದಿಗಳು ಬೇರೆ ಯಾವ ಜಿಲ್ಲೆಯಲ್ಲೂ ಇರುವುದಿಲ್ಲ; ಎರಡನೆಯದಾಗಿ ಇಷ್ಟರತನಕ ಸೇತುವೆಗಳಿಗಾಗಿ ಇತರ ಜಿಲ್ಲೆಗಳಲ್ಲಿ ಖರ್ಚುಮಾಡಿರುವಷ್ಟು ಹಣವನ್ನು ಸಮತೂಕದಲ್ಲಿ ಇಲ್ಲಿ ವಿನಿಯೋಗಿಸಿರುವುದಿಲ್ಲ. ಹಿಂದಿನ ಅಲಕ್ಷ್ಯತೆಯಿಂದ ಇಂದಿನ ತನಕ ಜನರು ಪ್ರಯಾಣ ಅಥವಾ ತಮ್ಮ ವ್ಯಾಪಾರ ಉದ್ಯಮದ ಸರಕು ಸಾಗಾಟದಲ್ಲಿ ನಾನಾ ರೀತಿಯ ತೊಂದರೆಗಳನ್ನು ತಾಳ್ಮೆಯಿಂದ ಅನುಭವಿಸುತ್ತಲಿದ್ದಾರೆ. ಅಲ್ಲದೆ ದಕ್ಷಿಣಕನ್ನಡದಲ್ಲಿ ಕಟ್ಟಬೇಕಾದ ಸೇತುವೆಗಳು ಇತರ ಜಿಲ್ಲೆಗಳಂತೆ ನೀರಿಲ್ಲದ ಬತ್ತಿರುವ ಹೊಳೆಗಳ ಮೇಲಲ್ಲ. ಸದಾ ನೀರುಳ್ಳ ಹೊಳೆಗಳ ಮೇಲೆ, ಸೇತುವೆಗಳಲ್ಲದೆ ಬೇರಾವ ರೀತಿಯಲ್ಲೂ ಗತ್ಯಂತರವಿಲ್ಲದ ಜಾಗದಲ್ಲಿ, ಯಾವ ಕೋನದಿಂದ ಅಳೆದರೂ ಅತೀ ಅಗತ್ಯವೆನಿಸಿರುವ ಪ್ರದೇಶದಲ್ಲಿ, ಆಡಂಬರಕ್ಕಲ್ಲ. ಆದುದರಿಂದ ದಕ್ಷಿಣಕನ್ನಡದಲ್ಲಿ ಸೇತುವೆಗಳನ್ನು ಕಟ್ಟಲು ಪ್ರಕೃತ ಇತರ ಜಿಲ್ಲೆಗಳಿಂತ ಸ್ವಲ್ಪ ಹೆಚ್ಚು ಹಣವನ್ನು ಸರಕಾರ ವಿನಿಯೋಗಿಸಬೇಕಾದರೆ ಅದಕ್ಕೆ ಹಿಂಜರಿಯಕೂಡದು.

ಸೇತುವೆಗಳ ಅಭಾವದಿಂದ ವ್ಯಾಪಾರ ಉದ್ಯಮಕ್ಕೆ ಎಷ್ಟು ಹಾನಿಯುಂಟಾಗಿದೆ, ವಾಹನಗಳ ಜೀವಮಾನ ಅನಾವಶ್ಯಕವಾಗಿ ಎಷ್ಟು ಸವೆಯುತ್ತಿದೆ ಎಂಬುದನ್ನು ಪರಿಗಣಿಸಿದರೆ ಈ ಸಮಸ್ಯೆಯ ಗಾತ್ರವನ್ನು ತಿಳಿಯಬಹುದು. ಜಿಲ್ಲೆಯ ಪ್ರಸಿದ್ಧ ಪಟ್ಟಣಗಳಾದ ಮಂಗಳೂರು ಮತ್ತು ಉಡುಪಿಯೊಳಗಣ ದೂರ ಕರಾವಳಿ ರಸ್ತೆಯಲ್ಲಿ ಬರೇ 35 ಮೈಲ ಮಾತ್ರ. ಆದರೆ ಈ ಅಂತರದೊಳಗೆ ಅಲ್ಲಿ ನಾಲ್ಕು ನದಿಗಳು ಹಾದುಹೋಗುತ್ತಿವೆ. ಈ ನದಿಗಳಿಗೆ ಸೇತುವೆ ಇಲ್ಲದಕಾರಣ ಸರಕುಗಳನ್ನು ಒಯ್ಯಲು ಕಾರ್ಕಳದ ಮೂಲಕ ದಾರಿ ಹುಡುಕಬೇಕಾಯಿತು ಈ ದಾರಿಯಿಂದ ಮಂಗಳೂರು ಉಡುಪಿಯಿಂದ 56 ಮೈಲು ದೂರದಲ್ಲಿರುವಂತಾಯಿತು. ಕಾರ್ಕಳ ಮಾರ್ಗವಾಗಿ ಉಡುಪಿ, ಮಂಗಳೂರೊಳಗೆ ಘಂಟೆ ಘಂಟೆಗೊಂದರಂತೆ ಬಸ್ಸುಗಳು ಚಲಿಸುತ್ತಿವೆ, ನೂರಾರು ಲಾರಿಗಳು ಓಡಾಡುತ್ತಿ . ಕರಾವಳಿಯ ನಾಲ್ಕು ಹೊಳೆಗಳಿಗೆ ಸೇತುವೆಗಳಿರುತ್ತಿದ್ದರೆ ಪ್ರತಿಯೊಂದು ಪಯಣ ಅಥವಾ ವಾಹನದ ಓಟದಲ್ಲಿ ೩೦ ಮೈಲುಗಳಷ್ಟು ಉಳಿತಾಯವಾಗುತ್ತಿತ್ತು. ದಿನ ದಿನ ಇಂತಹ ಮೈಲೇಜ್ ಪೆಟ್ರೋಲ್ ಸಮಯ ಹಾಗೂ ವಾಹನಗಳ ಸವೆತದ ಉಳಿತಾಯವನ್ನು ಲೆಕ್ಕ ಹಾಕುವಲ್ಲಿ ಇಷ್ಟರ ತನಕ ದಕ್ಷಿಣ ಕನ್ನಡದಲ್ಲಿ ಆಗುತ್ತಲಿರುವ ನಷ್ಟವೆಷ್ಟು ಇದನ್ನು ತಡೆಗಟ್ಟುವುದರಿಂದ ಉಂಟಾಗುವ ಪ್ರಯೋಜನವೆಷ್ಟು ಎಂಬುದನ್ನು ಅರ್ಥ ಶಾಸ್ತ್ರಜ್ಞರು ವಿವರಿಸಬಲ್ಲರು. ಅದರ ಮೊತ್ತವನ್ನು ಕೇಳಿ ನಮಗೆಲ್ಲರಿಗೂ ಆಶ್ಚರ್ಯವಾಗಬಹುದು.

ಈ ನಾಲ್ಕು ಹೊಳೆಗಳಲ್ಲಿ ಕೂಳೂರು ನದಿಯ ಸೇತುವೆ ಈಗಾಗಲೆ ಮುಗಿಯುತ್ತಿದೆ. ಪ್ರಕೃತ ಅತೀ ಅಗತ್ಯವಿರುವುದು ಉಡುಪಿಯಿಂದ ದಕ್ಷಿಣಕ್ಕೆ 3 ಮೈಲು ದೂರದಲ್ಲಿರುವ ಉದಿಯಾವರ ಹೊಳೆಗೊಂದು ಸೇತುವೆ, ಪ್ರಾಂತೀಯ ಸರಕಾರ ಕೇಂದ್ರದ ಸಾಗುದಾರಿ ಕ್ಷೇಮನಿಧಿಯಿಂದ ಈ ಬಗ್ಗೆ ಸಹಾಯ ಕೇಳಬಹುದು. ಉದಿಯಾವರ ನದಿಗೆ ಸೇತುವೆ ಕಟ್ಟುವುದರಿಂದ ಉಡುಪಿಯಿಂದ 18 ಮೈಲು ದೂರದಲ್ಲಿರುವ ಮೂಲ್ಕಿಯ ತನಕ ನೇರವಾದ ಸಾಗುದಾರಿ ದೊರೆತಂತಾಗುವುದು. ಅಲ್ಲದೆ ಉಡುಪಿ ಮತ್ತು ತೀವ್ರವಾಗಿ ಅಭಿವೃದ್ಧಿಗೊಳ್ಳುತ್ತಿರುವ ... ಪ್ರದೇಶ ... ಗಳು ಕಟಪಾಡಿ, ಕಾಪು, ಉಚ್ಚಿಲ ಪಡುಬಿದ್ರಿ ಶಿರ್ವ, ಮೊದಲಾದ ಹಳ್ಳಿಗಳೊಳಗೆ ಉತ್ತಮ ಸಂಪರ್ಕವನ್ನು ಕಲ್ಪಿಸಿಕೊಡುವುದು. ಉದ್ಯಾವರದಿಂದ ಮೂಲ್ಕಿಯ ತನಕದ ಪ್ರದೇಶದಲ್ಲಿ ಜನಸಂಖ್ಯೆ ಸುಮಾರು ಒಂದೂವರೆ ಲಕ್ಷಕ್ಕೂ ಮಿಕ್ಕಿರುವುದು ಎಂಬುದನ್ನು ನಾವು ಮರೆಯಬಾರದು

ಉದಿಯಾವರದ ಹೊಳೆಯಲ್ಲಿ ಹೊಯಿಗೆ ಬಂದು ಸೇರುತ್ತಿರುವುದರಿಂದ ಇತ್ತೀಚೆ ಕೆಲವು ಕಾಲದಿಂದ ಈ ಹೊಳೆಯನ್ನು ಸುತ್ತು ಸುತ್ತಾಗಿ ದಾಟುವುದು ವಿಶೇಷ ತ್ರಾಸದಾಯಕವಾಗಿರುವುದು. ಇದೊಂದು ಬಿಕ್ಕಟ್ಟಿನ ಸಮಸ್ಯೆಯಾಗಿದ್ದು ಉಡುಪಿಯ ಹಾಗೂ ಜಿಲ್ಲೆಯ ಜನತೆಯು ಒತ್ತಾಯಪೂರ್ವಕವಾಗಿ ಇದೊಂದು ಹೊಳೆಗೆ ಕೂಡಲೆ ಸೇತುವೆ ಕಟ್ಟಬೇಕೆಂದು ಕೇಳುತ್ತಿದೆ. ಈ ಸೇತುವೆಯು ಪೂರೈಕೆಯಾದ ಬಜಪೆಯಲ್ಲಿ ಹೊಸತಾಗಿ ಕಟ್ಟಿಸಿರುವ ವಿಮಾನ ನಿಲ್ದಾಣಕ್ಕೂ ಪಯಣ ಬೆಳೆಸಲು ಅನುಕೂಲವಾಗುವುದು. ಆದುದರಿಂದ ಈ ಸೇತುವೆಯ ಕೆಲಸವನ್ನು ಸರಕಾರ ಶೀಘ್ರವಾಗಿ ಕೈಕೊಳ್ಳಬೇಕೆಂದೂ ತನ್ಮೂಲಕ ಈ ಭಾಗದ ಜನತೆಯ ಬಹು ಕಾಲದ ಕೇಳಿಕೆಯನ್ನು ಪೂರೈಸಿಕೊಡಬೇಕೆಂದೂ ನಾನು ಆಶಿಸುತ್ತೇನೆ.

ದಿ ಕಥೋಲಿಕ್ ಬ್ಯಾಂಕ್ ಲಿಮಿಟೆಡ್, ಕುಂದಾಪುರ.

ಯೇಲಂ ನೋಟಿಸು

ಈ ಕೆಳಗೆ ಹೆಸರು ಕಾಣಿಸಿದವರು ನಂಮ ಬೇಂಕಿನಲ್ಲಿ ಚಿನ್ನದ ನಗಗಳ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ಮ್ಯಾದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಇಟ್ಟುಕೊಂಡಿರುವುದರಿಂದಲೂ, ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೇ ಬಿಟ್ಟ ರಿಜಿಸ್ಟ್ರ್ ನೋಟೀಸು ಕೆಲವರಿಗೆ ಜ್ಯಾರಿ ಆಗಿ, ಸುಮ್ಮನಿರುವುದರಿಂದಲೂ, ಯನ್ನು ಕೆಲವರಿಗೆ ಜ್ಯಾರಿ ಆಗದೆ ವಾಪಾಸು ಬಂದಿರುವುದರಿಂದಲೂ, ಸದರಿಯವರಿಗೆ ಈ ಮೂಲಕ ತಿಳಿಯಪಡಿಸುವುದು ಏನೆಂದ್ರೆ, ಅವರ ನಗಗಳನ್ನು ಇದೇ ಮೇ ತಿಂಗಳ ತಾ 30ಕ್ಕೆ ಮಧ್ಯಾಹ್ನ ಗಂಟೆ 2ಕ್ಕೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಯೇಲಂ ಮಾಡಲಾಗುವುದು. ಯಾವ ಕಾರಣದಿಂದಲಾದರೂ ಯೇಲಂ ಅದೇ ದಿವಸ ಮಾಡಲು ಅನಾನುಕೂಲವಾದರೆ ಬ್ಯಾಂಕಿಗೆ ಯುಕ್ತವೆಂದ ದಿವಸಕ್ಕೆ ಮುಂದರಿಸಲಾಗಿ, ಪುನಃ ನೋಟಿಸು ಕೊಡದೆನೇ ಯೇಲಂ ಮಾಡೋಣಲಾದೀತು,

ಸಾಲದನಂಬ್ರ	ಹೆಸರು ಮತ್ತು ವಿಳಾಸ	ಸಾಲದ ಅಸಲು ಮೊಬ್ಲಗು
26/755	ಶೇಕ್ ಹಯ್ಯಾತ್ ಸಾಹೇಬ್ ಶೇಕ್ ಮೊಹಿದ್ದಿನ್ ಸಾಹೇಬರ ಮಗ, ಪ್ರೊಸೆಸ್ ಸರ್ವರ್ ಡಿ. ಮು ಕೋರ್ಟ್—ಕುಂದಾಪುರ—	45 0 0
26/769	V. ಸಂಜೀವ ಸೆಟ್ಟಿ, ವೆಂಕಪ್ಪ ಶೆಟ್ರ ಅಳಿಯ, ವಡೇರ ಹೋಬ್ಳಿ	60 0 0
26/914	H. ನರಸಿಂಹ ಸೆಟ್ಟಿ, ಸುಬ್ಬಣ್ಣ ಸೆಟ್ರ ಅಳಿಯ ಹಾಲಾಡಿ—	20 0 0
26/982	ಕೃಷ್ಣ ಖಾರ್ವಿ—ಮಂಜಪ್ಪ ಖಾರ್ವಿ ಮಗ, ಕುಂದಾಪುರ	27 0 0
26/1648	ನಾಸ್ತೀವ ನಾಯ್ಕ ಮಹಾಬ್ಲ ನಾಯ್ಕರ ಮಗ, ಕಾರ್ ಸ್ಟ್ರೀಟ್, ಕುಂದಾಪುರ	40 0 0
26/990	ರಾಮಕೃಷ್ಣಯ್ಯ, ತಿಮ್ಮಪ್ಪಯ್ಯನವರ ಮಗ, ಹನ್ನಾರ ಮನೆ ನಾಗೋಡಿ—	150 0 0
26/1151	A. ನಾರ್ಣ ಸೆಟ್ಟಿ, ನಂದಿಯಪ್ಪ ಸೆಟ್ಟಿ ಮಗ, ಕುಂದಾಪುರ—	20 0 0
26/1234	ಮಹಾಬ್ಲ ಆಚಾರಿ, ಪರಮೇಶ್ವರ ಆಚಾರಿ ಮಗ, ವಡೇರ ಹೋಬ್ಳಿ	10 0 0
26/1334	ರುಜಾರಿಯೊ ಬಾರೆಟ್ಟೊ, ಜೋಸೆಫ್ ಬಾರೇಟ್ಟರ ಮಗ, ಕಲ್ಲುಗುಡ್ಡೆ	20 0 0
26/1344	ತೊಗ್ಗ ಖಾರ್ವಿ, ರಾಮಯ ಖಾರ್ವಿ ಮಗ, ಕಾರ್ವಿಕೇರಿ—	15 0 0
26/1370	ಸೋಮ ಪೂಜಾರಿ, ಮಾಲಿಂಗ ಪೂಜಾರಿ ಮಗ ವಡೇರ ಹೋಬ್ಳಿ—ಕುಂದಾಪುರ—	10 0 0
26/1423	ಮಂಜಪ್ಪ ಆಚಾರಿ, ವೀರಾ ಆಚಾರಿ ಮಗ, ವಡೇರ ಹೋಬ್ಳಿ—	20 0 0
26/1460	ಯೆತಿ ಮೊಗೆರ್ತಿ—ಚಿಕ್ಕ ಮಗಳು-ಹಳೆ ಅಳಿವೆ ಕುಂದಾಪುರ	೨೯ 0 0
26/1527	ಕಳಿನ ಮನೆ ಮಂಜಿ, ಅಬ್ಬಕ್ಕ ಮೊಗೆರ್ತಿ ಮಗಳು, ಚಿಕ್ಕನ ಸಾಲು-	12 0 0
26/1541	ರತ್ನಾಬಾಯಿ, K ಮಂಜುನಾಥ ಸೇಟ್ರ ಮಗಳು, ಕುಂದಾಪುರ	45 0 0
26/1592	ಅಮ್ಮು ಪೂಜಾರ್ತಿ, ದುಗ್ಗ ಪೂಜಾರ್ತಿ ಮಗಳು, ಹಂಗ್ಳೂರು.	35 0 0
26/1701	ಮಾಧವ ಸೆರೆಗಾರ, ಮಂಜಯ್ಯ ಸೇರೆಗಾರ್ರ ಮಗ, ಕುಂದಾಪುರ	15 0 0
26/1703	ಬಾಲಯ್ಯ ನಾಯ್ಕ, ಅನಂತ ನಾಯ್ಕರ ಮಗ, ಕೋಡಿ, ಕುಂದಾಪುರ	40 0 0
26/1736	ಹಯ್ಯಾತ್ ಸಾಹೇಬ್— ಮೊಹಿದ್ದಿನ್ ಸಾಹೇಬರ ಮಗ, ಪ್ರೊಸೆಸ್ ಸರ್ವರ್—ಡಿ. ಮು. ಕೋರ್ಟ್— ಕುಂದಾಪುರ—	22 0 0
27/203	K. S. ಉಮ್ಮರ ಸಾಹೇಬ್ ಮಾಸ್ತರ ಫಕೀರ್ ಸಾಹೇಬರ ಮಗ, ಪ್ರೊಸೆಸ್ ಸರ್ವರ್ ಡಿ ಮು. ಕೋರ್ಟ್ ಕುಂದಾಪುರ	200 0 0
27/820	ಕೆ. ರಾಮಚಂದ್ರಯ್ಯ, ಸುಬ್ರಾಯರ ಮಗ, ಟೀಚರ, ವಡೇರ ಹೋಬ್ಳಿ	505 0 0
27/1021	ಲುವಿಸ್ ಡಿ ಸೋಜ, ಬಸ್ತ್ಯಾಂವ್ ಸೋಜರ ಮಗ ವಡೇರ ಹೋಬಳಿ, ಕುಂದಾಪುರ	225 0 0
27/628	ಸಂಜೀವ ಸೆಟ್ಟಿ, ಸಂಕ್ಕ ಸೆಟ್ರ ಮಗ, ಕಟ್ಕೆರೆ ಕೋಣಿ	235 0 0
27/767	S M. ಬ್ರಿಟ್ಟೊ, ಮಿಂಗೆಲ್ ಬ್ರಿಟ್ಟೋರ ಮಗ, ಅಂಕದ ಕಟ್ಟೆ.	140 0 0
27/878	H. ರಾಮಣ್ಣ ಸೆಟ್ಟಿ, ಸುಬ್ಬಕ್ಕ ಸೆಡ್ತಿ ಮಗ, ಬಿಲ್ಲಾಡಿಬೆಟ್ಟು, ಕಂಡ್ಲೂರು	370 0 0

Office of the Catholic Bank Ltd, Coondapoor, dated 17-5-1952 } I. Menezes, Agent.

ಮೀನು ವ್ಯಾಪಾರ ಕರ ರದ್ದತಿಯಾಗಬೇಕು.

ಶ್ರೀ ಟಿ. ಎ. ಪೈ, ಎಮ್. ಎಲ್. ಎ., ಅವರ ಹೇಳಿಕೆ

ಶ್ರೀ ಟಿ. ಎ. ಪೈ, ಎಮ್. ಎಲ್ ಎ, ಅವರು ಇದೇ ತಾ 13ರಂದು ಕೊಟ್ಟ ಹೇಳಿಕೆಯಲ್ಲಿ ದ. ಕ. ಜಿಲ್ಲೆಯ ರಂಪಣಿ ಬಲೆಗಳಿಂದ ಹಿಡಿಯಲ್ಪಟ್ಟ ಮೀನುಗಳ ವ್ಯಾಪಾರದ ಮೇಲಿನ ಸೇಲ್ಸ್ ಟ್ಯಾಕ್ಸನ್ನು ಕೂಡಲೇ ತೆಗೆದು ಹಾಕಬೇಕೆಂದು ಸೂಚಿಸಿರುವರು.

60 ಯಾ 70 ಮಂದಿ ಬೆಸ್ತರು ಸೇರಿಕೊಂಡು ರಂಪಣಿ ಬಲೆಯನ್ನು ನಡೆಸುವುದಿದ್ದು ವರ್ಷದಲ್ಲಿ ಸಾಧಾರಣ ಉತ್ಪತ್ತಿಯಾಗುವ ರೂಪಾಯಿ 30,000ದಲ್ಲಿ ಪ್ರತಿಯೊಬ್ಬನ ಪಾಲಿಗೆ ಸಾಧಾರಣ ರೂಪಾಯಿ 450 ದೊರೆಯುವುದು. ಆದರೆ ಪ್ರತಿಯೊಬ್ಬನೂ ರಂಪಣಿ ಬಲೆಯನ್ನು ಕೊಂಡುಕೊಳ್ಳುವರೆ ರೂ. 500 ಮತ್ತು ಅದರ ರಿಪೇರಿ ಬಗ್ಗೆ ರೂ 100ರ ಮೊತ್ತಿಗೆ ಮೊದಲೇ ಕೊಡಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ರಂಪಣಿ ಬಲೆಯ ಮೀನುಗಳ ಹಿಡಿತದ ಮೌಲ್ಯ ರೂಪಾಯಿ 30,000ದ ಮೇಲೆ ವ್ಯಾಪಾರ ಕರವನ್ನು ಹೊರಿಸಿ ಅವಿದ್ಯಾವಂತ ಬೆಸ್ತರಿಗೆ ಅನ್ಯಾಯ ಮಾಡಿದಂತಾಗುವುದರಿಂದ ಅದನ್ನು ಸೇಲ್ ಟ್ಯಾಕ್ಸಿನಿಂದ ವಿರಹಿತಗೊಳಿಸುವುದು ನ್ಯಾಯ ನೀತಿಗೆ ಸರಿಯಾದುದು. ಆದುದರಿಂದ ಕೂಡಲೇ ಬಡ ಬೆಸ್ತರಿಗೆ ನಿವೃತ್ತಿ ದೊರೆಯ ಬೇಕೆಂದು ಶ್ರೀ ಪೈಗಳು ಕಮರ್ಶಿಯಲ್ ಟ್ಯಾಕ್ಸ್ ಶಾಖೆಯ ಮಂತ್ರಿಗಳಿಗೂ ಮನವಿ ಮಾಡಿರುವರು

(ಗೋವೆಯ ರಂಪಣಿ ಎಂಬವರು ಆರಂಭದಲ್ಲಿ ಈ ಭಾಗದಲ್ಲಿ ಬಳಕೆಗೆ ತಂದ ಬಲೆಯೇ ರಂಪಣಿ ಬಲೆಯಾಗಿದೆ ಸಂ. ನ.)



[೩ನೇ ಪುಟದಿಂದ ಮುಂದುವರಿದುದು]
ಧನೆಯಾಗ ವುದು ತೀರ ಅಗತ್ಯ. ಕನ್ನಡ ಭಾಷೆಯನ್ನು ಮುಖ್ಯವಾಗಿಟ್ಟುಕೊಂಡು ಅದರ ಮೇಲೆ ಉಳಿದ ದ್ರಾವಿಡ ಭಾಷೆಗಳ ಮತ್ತು ಆರ್ಯ ಭಾಷೆಗಳ ಪ್ರಭಾವ ಎಷ್ಟರ ಮಟ್ಟಿಗೆ ಆಗಿದೆ ಎಂಬುದನ್ನು ಚರ್ಚಿಸಿ, ತೋರಿಸುವ ಗ್ರಂಥರಚನಾ ದೃಷ್ಟಿಯಿಂದ, ಕನ್ನಡಿಗರು ಅಭ್ಯಾಸ ಮಾಡಬೇಕು.

ಸಾಹಿತ್ಯ ಸೃಷ್ಟಿ ತೃಪ್ತಿಕರವಿಲ್ಲ

ಕನ್ನಡ ಸಾಹಿತ್ಯದ ಬೆಳವಣಿಗೆ ತೃಪ್ತಿಕರವಾಗಿ ನಡೆದಿಲ್ಲ ಎಂದು ಅಧ್ಯಕ್ಷರು ಉದ್ಗಾರ ತೆಗೆದರು. ನಮ್ಮ ನೆರೆಯ ಮರಾಠಿ, ಗುಜರಾತಿ ಮೊದಲಾದ ಸಾಹಿತ್ಯಗಳು ಭರದಿಂದ ಬೆಳೆಯುವಾಗ, ಕನ್ನಡ ಸಾಹಿತ್ಯ ಬಹಳ ಹಿಂದುಳಿದಿದೆ. ವಿಚಾರಪರಿಪ್ಲುತವಾದ ಗ್ರಂಥಗಳು ನಮ್ಮಲ್ಲಿ ತೀರ ಕಡಿಮೆಯಾಗಿವೆ. ಪ್ರತಿಯೊಬ್ಬನೂ ತನ್ನ ವಾರ್ಷಿಕ ಉತ್ಪನ್ನದಲ್ಲಿ ಶಕ್ಯವಿದ್ದಷ್ಟು ಕೆಲವೊಂದು ಭಾಗವನ್ನು ಕನ್ನಡ ಗ್ರಂಥಗಳನ್ನು ಕೊಳ್ಳುವುದಕ್ಕೆ ವ್ಯಯಿಸಿದರೆ, ಎಷ್ಟೋ ಪಟ್ಟು ಹೆಚ್ಚಾಗಿ ಗ್ರಂಥಗಳನ್ನು ಪ್ರಕಟಿಸಲು ಅನುಕೂಲವಾಗುವುದು.

ಕನ್ನಡ ಪಠ್ಯ ಪುಸ್ತಕಗಳ ರಚನೆಯಲ್ಲಿಯೂ ಕೆಲವು ತತ್ವಗಳನ್ನು ಲಕ್ಷ್ಯದಲ್ಲಿಡುವುದು ವಿಹಿತ. ಹಾಗೆಯೇ ಕನ್ನಡ ಭಾಷೆಯ ಪತ್ರಿಕೆಗಳ ಮಟ್ಟ ಬಹಳ ಏರಬೇಕಾಗಿರುವುದೂ ಅವಶ್ಯ. ಅವು ಜಗತ್ತಿನ ಸುಪ್ರಸಿದ್ಧ ಪತ್ರಿಕೆಗಳ ಜೊತೆಯಲ್ಲಿರಿಸಲು ಯೋಗ್ಯವೆನಿಸಬೇಕು. ಆಕಾಶವಾಣಿ ಕೇಂದ್ರಗಳು ಮನರಂಜನೆಯೊಂದನ್ನೆ ಗುರಿಯಾಗಿಟ್ಟುಕೊಳ್ಳದೆ, ಜನತೆಯಲ್ಲಿ ಜ್ಞಾನ ಪ್ರಸಾರ ಮಾಡುವ ಹೊಣೆಯನ್ನೂ ಹೊರಬೇಕು.

ಉಜ್ವಲ ಭವಿತವ್ಯ

ಸಾವೆಲ್ಲರೂ ಒಮ್ಮನಸ್ಸಿನಿಂದ ಕಾರ್ಯ ಮಾಡಿದರೆ ಎಂತಹ ಜಟಿಲ ಪ್ರಶ್ನೆಗಳನ್ನೂ ಎದುರಿಸಬಲ್ಲೆವು. ನಮ್ಮ ಭವಿತವ್ಯ ಉಜ್ವಲವಾಗಿದೆ. ನಮ್ಮ ಸಮಸ್ಯೆಗಳು ಬಹಳ ಕಠಿಣ, ಬಿಕ್ಕಟ್ಟಿನವು, ನಾವು ಬೇರೆ-ಅವರು ಬೇರೆ ಎಂಬ ಭಾವನೆ ಅಳಿಯಬೇಕು. ಕನ್ನಡಿಗರೆಲ್ಲರೂ ಒಂದುಗೂಡಬೇಕು; ಹೃದಯ ಬೆರೆಯಬೇಕು; ವಿಚಾರ ಸರಣಿ ಒಂದಾಗಬೇಕು --ಅಧ್ಯಕ್ಷರು ಹೀಗೆ ನುಡಿದು ವೇದ ಮಂತ್ರ ಉಪದೇಶಿಸಿದ ತತ್ವ ದರ್ಶನವನ್ನು ಎದುರಿಟ್ಟರು:

ಸಮಾನೀ ವ ಆಕೂತಿಃ ಸಮಾನಾ ಹೃದಯಾನಿವಃ ಸಮಾನಮಸ್ತು ವೋ ಮನೋ ಯಥಾವಃ ಸು ಸಹಾಸತಿ ॥

೦೦ ೦೦

ಗಮಕ ಕಲೆ

ರಸಿಕ ವೃಂದಕ್ಕೆ ಕಾವ್ಯಗಳಲ್ಲಿ ನಿರೂಪಿತವಾಗಿರುವ ಪಾತ್ರಗಳ ಮಾಧುರ್ಯತೆಯನ್ನು ಮನಗಾಣಿಸುವುದೇ ಗಮಕ ಕಲೆಯ ಮುಖ್ಯ ಧ್ಯೇಯ. ಸಾಹಿತ್ಯದೊಡನೆ ಹಿತವಾದ ರಾಗವನ್ನು ಮಿತವಾಗಿ ಸಮನ್ವಯ ಮಾಡಿ ಭಾವ ಸ್ಫುರಿಸುವಂತೆ ಕಾವ್ಯವಾಚನ ಮಾಡುವುದೇ ಗಮಕ ಕಲೆ. ಸಾಹಿತ್ಯವು ಗ್ರಂಥಸ್ಥವಾಗಿವೆ, ಜನಸಾಮಾನ್ಯರಲ್ಲಿ ಬಳಕೆಗೆ ಬರುವಂತೆ ಗಮಕಿಗಳು ಪ್ರಯತ್ನಿಸುವರು.

ಜನರಿಗೆ ಹೊಸ ಭಾಷೆಯಾದ ಇಂಗ್ಲೀಷಿನ ಕಡೆಗೆ ವ್ಯಾಮೋಹ ಹೆಚ್ಚಿದಂತೆಲ್ಲ ದೇಶ ಭಾಷೆಗಳ ಮತ್ತು ಲಲಿತ ಕಲೆಗಳ ಕುರಿತು ತಾತ್ಸಾರ ಭಾವನೆ ಮೂಡಹತ್ತಿತು. ಲಲಿತಕಲೆಗಳು ಕ್ಷೀಣಿಸಿದಂತೆಲ್ಲ ಜನರಲ್ಲಿ ರಸಿಕತೆಯೂ ಲೋಪವಾಗುತ್ತಿದೆ. ರಸಿಕತೆಯ ಲೋಪವೇ ಗಮಕ ಕಲೆಯ ಅಸ್ತಕ್ಕೆ ಕಾರಣ. ಈ ಪರಿಸ್ಥಿತಿಯನ್ನು ಸುಧಾರಿಸಿ, ಗಮಕ ಕಲೆಯ ಪುನರುತ್ಥಾನಕ್ಕಾಗಿ ಶ್ರಮಿಸಲು ಪಣತೊಡಬೇಕೆಂಬುದು ಕರ್ತವ್ಯ.

೦೦ ೦೦

ವೈಜ್ಞಾನಿಕ ದೃಷ್ಟಿ

ಮನುಷ್ಯನ ಮನಸ್ಸಿನಲ್ಲಿರುವ ಸಂಶೋಧನ ವೃತ್ತಿಯನ್ನು ಬೆಳೆಸುವುದರಲ್ಲಿ ಇಂದಿನ ವಿಜ್ಞಾನವು ಹಿಂದೆಂದೂ ಆಗದಷ್ಟು ಪ್ರಗತಿ ಮಾಡಿದೆ. ವಿಜ್ಞಾನವು ಬೌದ್ಧಿಕ ಹೋರಾಟದ ಒಂದು ಹಿರಿದಾದ ಪ್ರದರ್ಶನ. ವಿಜ್ಞಾನ ವಿಚಾರ ಮತ್ತು ವೈಜ್ಞಾನಿಕ ವಿಧಾನದ ಪರಿಣಾಮವು ಹೇಗೆ ಮುಂದುವರಿದಿವೆ ಎಂಬುದನ್ನು ಹೇಳುವ ಪ್ರಯತ್ನ ಕನ್ನಡದಲ್ಲಿ ನಡೆಯಬೇಕು. ಕನ್ನಡ ನಾಡಿನಲ್ಲಿ ಕನ್ನಡದ ಮುಖಾಂತರ ವೈಜ್ಞಾನಿಕ ಮತ್ತು ಶಾಸ್ತ್ರೀಯ ವಿಚಾರಗಳ ಪ್ರಚಾರವಾಗಬೇಕು. ಜನಸಾಮಾನ್ಯಕ್ಕೆ ತಿಳಿಯುವಂತೆ, ಅವರ ಮಾತಿನಲ್ಲಿ ಜಟಿಲವಾದ ವೈಜ್ಞಾನಿಕ ವಿಷಯಗಳನ್ನು ತಿಳಿಸಿ ಹೇಳುವುದು ವಿಜ್ಞಾನದ ವಿದ್ಯಾರ್ಥಿ ನಾಡಿಗೆ ಸಲ್ಲಿಸಬೇಕಾದ ಕಾಣಿಕೆ.

೦೦ ೦೦

ಸಾಹಿತ್ಯದಲ್ಲಿ ಸ್ತ್ರೀ ಶಕ್ತಿ

ಮೊದಲಿನಿಂದಲೂ ನಮ್ಮ ದೇಶದ ಸ್ತ್ರೀಯರಿಗೆ ಪೂಜಿಸಿಕೊಂಡು, ಹೊಗಳಿಸಿಕೊಂಡು ಅಭ್ಯಾಸವಾಗಿದೆ. ನಮ್ಮ ಮುಕ್ತಿ ಕಂಡುಕೊಳ್ಳಲು ದುಡಿಯಬೇಕು--ಸಮಾಜದ ಉನ್ನತಿಗಾಗಿ ಶ್ರಮಿಸಬೇಕು -ಎಂಬ ದೃಷ್ಟಿಯನ್ನೇ ಸ್ತ್ರೀಯರು ಕಳೆದುಕೊಂಡಿರುವರು- ನಮಗಿರುವ ಮುಖ್ಯ ಆತಂಕ--ಆಲಸಿಕೆ, ಅನಾಸಕ್ತಿ. ಈ ಆಲಸಿಕೆಯನ್ನು ಮೆಟ್ಟಿ ಸ್ತ್ರೀಯರು ತಮ್ಮ ಹೊಣೆಯನ್ನರಿತು ಕೆಲಸಮಾಡಿದರೆ, ಕನ್ನಡ ಸಾಹಿತ್ಯ ಜಗತ್ತಿನ ಹಿರಿಮೆ ಸಾಹಿತ್ಯವಾಗಲು ಅಡ್ಡಿಯಿಲ್ಲ. ಇದು ವಿಜ್ಞಾನಿಯುಗ--ವಿಜ್ಞಾನದ ಅಭ್ಯಾಸದಿಂದ ವಿಮರ್ಶಾಗುಣ, ಮನೋವೈಶಾಲ್ಯ ಹೆಚ್ಚುತ್ತವೆ. ಈ ಅವಕಾಶವನ್ನು ಸ್ತ್ರೀಯರಿಗೆ ತಪ್ಪಿಸುವುದು ಸರಿಯಲ್ಲ. ಸ್ತ್ರೀಯರ ಮನೋಭಾವ ಮಾರ್ಪಡಬೇಕು ತಮ್ಮಲ್ಲಿ ಸತ್ವವಿದೆ- ಕರ್ತವ್ಯ ಜ್ಞಾನವಿದೆ ಎಂಬುದನ್ನವರು ತೋರಿಸಿಕೊಡಬೇಕು.

ವಿವಿಧ ಪಾತ್ರೆಗಳು



ಯಾವತರ್ಹ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಅಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಕೆಥೋಲಿಕ್ ಬೇಂಕ್ ಲಿಮಿಟೆಡ್ ಕಲ್ಯಾಣಪುರ.

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲಪಡಕೊಂಡು ಕ್ಲುಪ್ತವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ ಸದ್ರಿ ಸಾಲವನ್ನು ಬರಮಾಡಿ ಕೊಳ್ಳುವರೆ ಅವರಿಗೆ ರಿಜಿಸ್ಟ್ರಿ ನೋಟೀಸು ದಿಟ್ಟಲ್ಲಿಯೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ತಾ 27-5 52ರ ಒಳಗೆ ಬೇಂಕಿಗೆ ಸಲ್ಲತಕ್ಕ ಅಸಲು,ಬಡ್ಡಿ,ನೋಟೀಸು ಖರ್ಚು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದ ಪಕ್ಷದಲ್ಲಿ ಸದರಿಯವರು ಈಡಿಟ್ಟ ನಗಗಳನ್ನು ತಾ- 31-5-52ನೇ ಶನಿವಾರ ಮಧ್ಯಾಹ್ನ ಗಂಟೆ 11ಕ್ಕೆ ಯಾ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲದನಂಬ್ರ	ಹೆಸರು ಮತ್ತು ವಿಳಾಸ	ಅಸ್ಲು ಮೊಬಲಗು		
26/345	ಯು. ಚಿನ್ನಯ್ಯ ಶೆರ್ವೆಗಾರ, ನಾಗಪ್ಪ ಶೆರ್ವೆಗಾರರ ಮಗ, ಕುದ್ರುಬೆಟ್ಟು ಉಪ್ಪೂರು ಗ್ರಾಮ	60	0	0
26/803	ಅಂಬು ಪೂಜಾರಿ, ತಾಡ ಪೂಜಾರಿ ಅಳಿಯ ಬೆನ್ನಲಬೈಕಾಡಿ, ಬ್ರಹ್ಮಾವರ ಪೋಸ್ಟು	35	0	0
26/1039	ರಾಜ ಪೂಜಾರಿ, ಮೆನ್ಸ ಪೂಜಾರಿ ಅಳಿಯ ಉಪ್ಪೂರು ಗ್ರಾಮ ಕೊಳಲಗಿರಿ ಪೋಸ್ಟು	25	0	0
26/1121	ಸ್ಟೆಫೆನ್ ಲೂವಿಸ್, ಸಾವೇರ್ ಲೂವಿಸರ ಹೆಂಡತಿ, ಮೂಡುತೋನ್ಸೆ ಗ್ರಾಮ, ಕೆಮ್ಮಣ್ಣು	125	0	0
26/1236	ಶೇಷ ಪೂಜಾರಿ, ಅನಂತ ಪೂಜಾರಿ ಅಳಿಯ, ನಾಯಂಪಳ್ಳಿ, ಕಲ್ಯಾಣಪುರ	55	0	0
26/1413	ಕುಪ್ಪಸ್ವ ನಾಯ್ಕ ಐತುನಾಯ್ಕರ ಮಗ, ನಾಯಂಪಳ್ಳಿ, ಕಲ್ಯಾಣಪುರ	35	0	0
26/1755	ಆಲಿಗ್ಸ ಜೆ. ಲೂವಿಸ್, ಜೆ. ಪಿ. ಲೂವಿಸರ ಮಗ, ಬೈಕಾಡಿ, ಬ್ರಹ್ಮಾವರ	125	0	0
26/1794	ಪುಟ್ಟಯ್ಯ ಆಚಾರಿ, ಎಂಕಯಾಚಾರಿಯ ಮಗ, ನರ್ನಾಡು ಉಪ್ಪೂರು ಗ್ರಾಮ	30	0	0
26/1875	ಹೊನ್ನು ಮರಕಾಲ್ತಿ, ಅಪ್ಪು ಮರಕಾಲನ ಹೆಂಡತಿ, ಕಡವಿನ ಬಾಗಿಲು, ಕಲ್ಯಾಣಪುರ	240	0	0
26/1909	ಎನ್. ದಾಸಪ್ಪ, ಗುಡ್ಡ ಪೂಜಾರಿಯ ಅಳಿಯ, ಸಂತೆಕಟ್ಟೆ, ಕಲ್ಯಾಣಪುರ	270	0	0
26/1945	ಬಾಗಿ ಪೂಜಾರ್ತಿ, ಬಾಬ ಪೂಜಾರಿ ಹೆಂಡತಿ, ಅಮ್ಮುಂಜೆ, ಕೊಳಲಗಿರಿ ಪೋಸ್ಟು	28	0	0
26/2114	ತುಂಗಮ್ಮ ಬಂಗಡಿಗಾರ್ತಿ, ಮಂಜುನಾಥ ಬಂಗಡಿಗಾರರ ಮಗಳು ಕಲ್ಯಾಣಪುರ	25	0	0
26/2246	ಸಂಜೀವ ಶೆರ್ವೆಗಾರ, ರಾಮಣ್ಣ ಶೆರ್ವೆಗಾರರ ಮಗ, ಹೇರೆ ಬೆಟ್ಟು, ಉಪ್ಪೂರು ಗ್ರಾಮ	100	0	0
27/1051	ಶೀನ ಸುವರ್ಣ, ಗುಡ್ಡ ಸುವರ್ಣನ ಅಳಿಯ, ಕುದ್ರುಬೆಟ್ಟು ಉಪ್ಪೂರು ಗ್ರಾಮ	40	0	0
27/1080	ಬಿ. ಲಿಂಗು ಗೋಪಾಲಕೃಷ್ಣರಾವ್, B. ಲಿಂಗು ಸುಬ್ಬಣ್ಣಯ್ಯನವರ ಮಗ ಬಡಾನಿಡಿಯೂರು	120	0	0
27/1083	ಬಪ್ಪ ಪೂಜಾರಿ, ಜಟ್ಟ ಪೂಜಾರಿ ಅಳಿಯ, ನೇಜಾರ್ ಕಲ್ಯಾಣಪುರ ಪೋಸ್ಟ್	40	0	0
27/1627	ಥೋಮಸ್ ಕೋಥಾ, ಮಿಸ್ಕ ಸಲೋದರ ಕೋಥರ ಮಗ, ಬೆಳ್ಮಾರು ಅರೂರು ಗ್ರಾಮ	30	0	0
27/1829	ರಾಜು ಪೂಜಾರಿ, ಬಾಬ ಪೂಜಾರಿ ಅಳಿಯ ಅಮ್ಮುಂಜೆ ಉಪ್ಪೂರು ಗ್ರಾಮ	30	0	0
27/1840	ಗ್ರೆಗೋರಿ ಲೂವಿಸ್, ಲಾರೆನ್ಸ್ ಸೆಬೆಸ್ತಿ ಲೂವಿಸರ ಮಗ, ಮಾವಿನಕುದ್ರು ಉಪ್ಪೂರು.	30	0	0
27/1845	...ಸೆಲಿಸ್ ಕೋಥಾ, ಮಿನ್ನಾ ಸಲೋದರ ಕೋಥಾರ ಮಗ, ಬೆಳ್ಮಾರು ಅರೂರು ಗ್ರಾಮ	50	0	0
26/1967	ಶಾರದಾ ಬಾಯಿ, ಶ್ರೀಪತಿ ಶೇಟರ ಹೆಂಡತಿ, ಮುಲ್ಪೆರೋಡಿನ ಬಳಿ, ಕಲ್ಯಾಣಪುರ ಪೋಸ್ಟ್	20	0	0
27/1751	ಉಗ್ಗ ಪೂಜಾರಿ, ಬಾಬ ಪೂಜಾರಿ ಅಳಿಯ, ಉಗ್ಗೆಲ್‌ಬೆಟ್ಟು, ಉಪ್ಪೂರು ಗ್ರಾಮ	20	0	0

ಕಲ್ಯಾಣಪುರ,
15—5—52

S. Rebello,
Agent

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ

ಇತರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಪೊಂಪೇ ಮತ್ತು ವೆಸೂವಿಯಸ್ ಜ್ವಾಲಾಮುಖಿ

ಈ ಪಟ್ಟಣವು ಸಮುದ್ರ ತೀರದಿಂದ ಸುಮಾರು 3 ಮೈಲು ದೂರಕ್ಕೆ ಇರುತ್ತದೆ. ಅದು ಕಟ್ಟಿದ ಜಾಗವು ಸಮುದ್ರದ ಮಟ್ಟಕ್ಕಿಂತ ಸುಮಾರು 130 ಅಡಿ ಎತ್ತರವಾದ ಗುಡ್ಡ ಸ್ಥಳದಲ್ಲಿ. ಸುತ್ತಲೂ ಸುಮಾರು 2 ಮೈಲು ಉದ್ದದ ಇಟ್ಟಿಗೆಯಿಂದ ಕಟ್ಟಿದ ಗೋಡೆ ಇದರೊಳಗೆ ಕೂಡಿದ ಪಟ್ಟಣದ ವಿಸ್ತೀರ್ಣ 161 ಎಕ್ರೆ. ಮಧ್ಯದಲ್ಲಿ ಅನೇಕ ರಸ್ತೆಗಳು ಮತ್ತು ಅವುಗಳ ಬದಿಗಳಲ್ಲಿ ಪುರಾತನದ ಕಟ್ಟೋಣಗಳು. ಮುಖ್ಯ ರಸ್ತೆಗಳು ಅಗಲವಿದ್ದು ನೆಟ್ಟಗೆ ಇರುತ್ತವೆ. ಪಟ್ಟಣವನ್ನು ನಗರ ರಚನಾತ್ಮಕ ಕ್ರಮಕ್ಕೆ ಸರಿಯಾಗಿ ಕಟ್ಟಿದ್ದಾಗಿ ಕಾಣುತ್ತದೆ. ಈ ಪಟ್ಟಣದ ಎಲ್ಲಾ ಅಂಶಗಳನ್ನು ಸರಿಯಾಗಿ ನೋಡುವುದಕ್ಕೆ ಒಂದೆರಡು ದಿವಸಗಳೇ ಬೇಕು. ಆದರೆ ನಮಗೆ ಮುಖ್ಯ ಕೆಲವು ಅಂಶಗಳನ್ನು ಮಾತ್ರ ಸುಮಾರು 3 ಘಂಟೆ ನೋಡಲಿಕ್ಕೆ ಸಾಧ್ಯವಾಯಿತು.

ಈ ನಗರಕ್ಕೆ ಪ್ರವೇಶಿಸುವಲ್ಲಿ ಒಂದು ವಸ್ತು ಸಂಗ್ರಹ ಕಟ್ಟೋಣವಿರುತ್ತದೆ. (Museum). ಮುಂಚೆಯಿದ್ದ ಕಟ್ಟೋಣಕ್ಕೆ ಕಳೆದ ಯುದ್ಧ ಕಾಲದಲ್ಲಿ ಬೋಂಬ್ ಬಿದ್ದು ನಾಶವಾದ ಕಾರಣ ಈಗ ಹೊಸತಾಗಿ ಕಟ್ಟಿದ್ದಾರೆ. ಅಲ್ಲಿ ನಮ್ಮೊಡನೆ ತಿರುಗಾಡುತ್ತಿದ್ದ ಒಳ್ಳೇ ತಿಳುವಳಿಕೆಯುಳ್ಳ ಸಂಚಾಲಕನು (Guide) ಈ ಕಟ್ಟೋಣವು "Ruin of a Ruin" ಎಂತ ಹೇಳಿದನು, ಅದರ ಅರ್ಥವೇನೆಂದರೆ ಮುಂಚಿನ ಪೊಂಪೇ ಊರು ಹಾಳಾಗಿ ಅದರ ಸಾಮಾನುಗಳನ್ನು ಇಟ್ಟ ಕಟ್ಟೋಣವು ಬೋಂಬ್‌ನಿಂದ ಹಾಳಾಗಿ ಅದರಿಂದ ಉಳಿಸಿದ ವಸ್ತುಗಳು ಇವು. ಈ ಕಟ್ಟೋಣದಲ್ಲಿ ಹಿಂದಿನ ಕಾಲದಲ್ಲಿ ಪೊಂಪೇ ಪಟ್ಟಣದಲ್ಲಿ ಅದು ಹಾಳಾಗುವ ಸಮಯ ಇದ್ದ ಅನೇಕ ತರದ ವಸ್ತುಗಳನ್ನು ತಂದು ಇಲ್ಲಿ ಸಂಗ್ರಹಿಸಿಟ್ಟಿದ್ದಾರೆ. ಬಿ. ಸಿ. 27ರಲ್ಲಿ ಆಳಲಿಕ್ಕೆ ಶುರುಮಾಡಿದ ಯೋಗ್ಯ ಅಗಸ್ಟಸ್ (Augustus) ಚಕ್ರವರ್ತಿ ಕಾಲದ ಮತ್ತು ಅವನ ನಂತರ ಒಂದನೇ ಶತಮಾನದಲ್ಲಿ ಎ. ಡಿ. 60ರಲ್ಲಿ ಸತ್ತ ಮೂರ್ಖ ನೀರೊ [Nero) ಚಕ್ರವರ್ತಿಯ ಚಿನ್ನ ಮತ್ತು ಬೆಳ್ಳಿ ನಾಣ್ಯಗಳು ಇಲ್ಲಿವೆ. ಅಗ ದೀಪ ಹಚ್ಚುತ್ತಿದ್ದ ಎತ್ತರವಾದ ಎಣ್ಣೆ ಕಾಲು ದೀಪಗಳು; ಇವುಗಳು ಸಾಮಾನ್ಯ ಈಗಲೂ ನಮ್ಮ ಹಳ್ಳಿಗಳಲ್ಲಿ ಇರುವ ಕಂಚಿನ ಕಾಲುದೀಪಗಳಂತಿವೆ. ಅಡಿಗೆ ಮಾಡಲಿಕ್ಕೆ ಕಬ್ಬಿಣದ ಒಲೆ ಮತ್ತು ಪಾತ್ರೆಗಳು. ಆಗಿನ ಕಾಲದ ವಸ್ತ್ರ ಬಟ್ಟೆಗಳು, ಕಂಚಿನ ಸಾಮಾನುಗಳು, ದ್ರಾಕ್ಷಾರಸ (Wine)ವನ್ನು ಇಡುವ ಹೂಜೆಗಳು, ಅಗ್ಗ ತಯಾರಿಸಿದ ಬ್ರೆಡ್ಡು [loaf of bread) ಸಮುದ್ರದ ಚಿಪ್ಪುಗಳು (sea shells), ನೀರನ್ನು ಬಿಸಿಮಾಡುವ ಪಾತ್ರೆ, ಮೀನು ಹಿಡಿಯಲಿಕ್ಕೆ ಗಾಳ ಮತ್ತು ಬಲೆಗಳು, ದೋಣಿಯ ಲಂಗರು (Anchor), ಮುತ್ತುಗಳು Pearls, ಕೈಬೆರಳಿಗೆ ಹಾಕುವ ಉಂಗುರ, ಗಾಜಿನ ಬಾಟ್ಲಿಗಳು, ಸಣ್ಣ ಮಕ್ಕಳ ಆಟದ ಬೊಂಬೆಗಳು, ರೋಮನರು ಮನೆಯಲ್ಲಿ ಇಟ್ಟು ಆರಾಧಿಸುತ್ತಿದ್ದ ಸುಮಾರು 3 ಇಂಚು ಎತ್ತರದ ಕಂಚಿನ ಮನೆ ದೇವರ ಪ್ರತಿಮೆಗಳು, ಚಿನ್ನದ ಕೈಬಳೆಗಳು, ಪಗಡೆ ಆಟದ ಸಾಮಾನುಗಳು-ಇವೇ ಮೊದಲಾದ ಆ ನಗರದಲ್ಲಿ ಸಿಕ್ಕಿದ ಅನೇಕ ತರದ ಸಾಮಾನುಗಳನ್ನು ಇಲ್ಲಿ ಕಾಣಬಹುದು. ಇವೆಲ್ಲಾ ಆ ನಗರವನ್ನು ಅಗೆದಾಗ ಅಲ್ಲಲ್ಲಿ ಸಿಕ್ಕಿದವುಗಳನ್ನು ತಂದು ಇಟ್ಟಿರುತ್ತಾರೆ.

ಇದಲ್ಲದೆ ಮುಖ್ಯವಾಗಿ ಇಲ್ಲಿ ಪ್ಲೇಸ್ಟರ್ ಓಫ್ ಪೇರಿಸ್ Plaster of Paris ನಿಂದ ತಯಾರಿಸಿದ 3 ಅಚ್ಚಿನ ಪ್ರತಿಮೆಗಳು. ಈ ಮುಂಚೆ ಬರೆದಂತೆ ಈ ನಗರವು ಜ್ವಾಲಾಮುಖಿಯಿಂದ ಹರಿದು ಬಂದ ಪ್ರವಾಹದಲ್ಲಿ ಸಾವಿರಾರು ಜನರು ಮತ್ತು ಪ್ರಾಣಿಗಳು ಸುಟ್ಟುಹೋಗಿದ್ದರು. ಅವರ ದೇಹದ ಸುತ್ತಲೂ

ಪ್ರವಾಸಿಯ ಪತ್ರಗಳು ೩೧

ಆ ಪ್ರವಾಹವು ಹರಡಿ ತುಂಬಿತು. ಅನಂತರ ತಂಡಿಯಾದ ಮೇಲೆ ಅದು ಗಟ್ಟಿಯಾಯಿತು. ಒಳಗಿದ್ದ ದೇಹವು ಅಲ್ಲಿ ಬೆಂದುಹೋಗಿ ಸುಟ್ಟು ಅಷ್ಟು ಜಾಗವು ಹಾಗೆ ಉಳಿಯಿತು. ಇಂಥಾ ಖಾಲಿ ಜಾಗಕ್ಕೆ ಪ್ಲೇಸ್ಟರ್ ಓಫ್ ಪೇರಿಸ್ ಹೊಯ್ದು ತುಂಬಿ ಗಟ್ಟಿಮಾಡಿ ಆ ದೇಹಕ್ಕೆ ಸರಿಯಾದ ಪ್ರತಿಮೆಗಳನ್ನು ತಯಾರಿಸಿ ಇಲ್ಲಿ ಇಟ್ಟಿರುತ್ತಾರೆ. ಅವುಗಳು ಆ ಮನುಷ್ಯನು ಯಾ ಪ್ರಾಣಿಯು ಸಾಯುವ ಕಾಲದಲ್ಲಿ ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿಯಲ್ಲಿ ತಯಾರಿಸಿದ ಪ್ರತಿಮೆ ಇರುತ್ತದೆ. ಅಲ್ಲಿಟ್ಟಿರುವ 3 ಪ್ರತಿಮೆಗಳ ಪೈಕಿ ಒಂದು ಒಬ್ಬಳು ಹೆಂಗಸಿನದ್ದು. ಸುಡುವ ಬಾಧೆಯನ್ನು ತಪ್ಪಿಸಲಿಕ್ಕೆ ತನ್ನ ಎರಡೂ ಕೈಗಳಿಂದ ಮುಖವನ್ನು ಮುಚ್ಚಿಕೊಂಡಿದ್ದಾಳೆ. ಇನ್ನೊಂದು ಒಬ್ಬ ಗುಲಾಮ (Slave)ನಾಗಿದ್ದ ಗಂಡಸಿನದ್ದು. ಅವನು ಗುಲಾಮನೆಂಬುದು ಆ ಕಾಲದಲ್ಲಿ ಅವನು ಉಪಯೋಗಿಸಿದ ಸೊಂಟದ ಪಟ್ಟಿಯಿಂದ ತಿಳಿಯುತ್ತದೆ. ಇನ್ನೊಂದು ಪ್ರತಿಮೆಯು ಸುಟ್ಟು ಬೆಂದುಹೋದ ಒಂದು ನಾಯಿ. ಅದು ಆ ಕಾಲದಲ್ಲಿ ಸರಪಣಿಯಿಂದ ಬಂಧನದಲ್ಲಿದ್ದು ಹಾಗೆಯೇ ಸತ್ತಿತು.

ಈ ವಸ್ತುಸಂಗ್ರಹ ಗೃಹವನ್ನು ನೋಡಿದ ನಂತರ ಅಲ್ಲಿಯೇ ಸಮೀಪವಿರುವ ನಗರದ ಬಾಗಿಲಿನ ಒಳಗಿನಿಂದ ನಗರವನ್ನು ಪ್ರವೇಶಿಸಿದೆವು. ಆ ಬಾಗಿಲು ಸಮುದ್ರ ಮುಖವಾಗಿದ್ದ ಕಾರಣ ಅದಕ್ಕೆ ಸಮುದ್ರದ ಬಾಗಿಲು Porta Marina ಅನ್ನುತ್ತಾರೆ. ಅಲ್ಲಿಂದಲೇ ಒಂದು ರಸ್ತೆಯು ನಗರದ ಒಳಕ್ಕೆ ಹೋಗುತ್ತದೆ. ರಸ್ತೆ ಸುಮಾರು 15 ಅಡಿ ಅಗಲ. ಎರಡೂ ಬದಿಯಲ್ಲಿ ಕಾಲುದಾರಿಗಳಿವೆ. ಅಲ್ಲಿಯೇ ಹತ್ತಿರ ಪುರಾತನದ ಒಂದು ರೋಮನ್ ಗೋಡೆಯನ್ನು ಕಾಣಬಹುದು. ಅದನ್ನು ಇಟ್ಟಿಗೆಯಿಂದ ಕಟ್ಟುತ್ತಾರೆ. ಆದರೆ ಇಟ್ಟಿಗೆಯನ್ನು ಅಡ್ಡವಾಗಿಟ್ಟು ಸಾಧಾರಣವಾಗಿ ಒಂದು ಬಲೆ ಕಟ್ಟಿದಂತೆ ಕಟ್ಟಿರುತ್ತಾರೆ. ಅಲ್ಲಿಯೇ ಸಮೀಪ ರೋಮನರು ಪ್ರಾರ್ಥಿಸುತ್ತಿದ್ದ ಕಾಮದೇವನ Venus ದೇವಸ್ಥಾನವಿದೆ, ಆ ದೇವಸ್ಥಾನದಲ್ಲಿ ಅನೇಕ ಅಮೃತ ಶಿಲೆಯ ಕೆಲಸವನ್ನು ಕಾಣಬಹುದು. ಅಲ್ಲಿಯೇ ಸಮೀಪ ಇನ್ನೊಂದು ಕಡೆಯಲ್ಲಿ ಆಗಿನ ಕೋರ್ಟು ಮತ್ತು ವರ್ತಕರ ಕಚೇರಿ ಇದೆ. ರಸ್ತೆಯಲ್ಲಿ ಮಳೆ ಬಂದಾಗ ನೀರು ಹರಿಯುವಾಗ ಒಂದು ಬದಿಯಿಂದ ಇನ್ನೊಂದು ಬದಿಗೆ ಹೋಗಲಿಕ್ಕೆ ಅಡ್ಡವಾಗಿ ಸ್ವಲ್ಪ ಎತ್ತರವಾದ ಕಲ್ಲುಗಳನ್ನು ಇಟ್ಟಿರುತ್ತಾರೆ. ಇದರ ಸಮೀಪ ಸೂರ್ಯದೇವರ Apollo or Sun God ದೇವಸ್ಥಾನ. ಅದರಲ್ಲಿ ಕೆಲವು ಭಾಗವು ಮುಂಚಿನ ಕಾಲದಲ್ಲಿ ಇದ್ದ ಹಾಗೆ ಇರುತ್ತದೆ. ಎದುರಿನಲ್ಲಿ ಒಂದು ಬದಿ ಸೂರ್ಯದೇವರ ಪ್ರತಿಮೆ, ಇನ್ನೊಂದು ಬದಿಯಲ್ಲಿ ಅವನ ತಂಗಿ ಡಾಯಾನಾ [Diana] ಇವಳ ಪ್ರತಿಮೆ. ದೇವಸ್ಥಾನದ ಮಧ್ಯದಲ್ಲಿ ಬಲಿಕೊಡಲಿಕ್ಕೆ ಇರುವ ಎತ್ತರವಾದ ಮಂಟಪ. ಅಲ್ಲಿಯೇ ಸಮೀಪ ಇರುವ ಇನ್ನೊಂದು ಕಡೆಯಲ್ಲಿ ಅಲ್ಲಿಯ ಜನರು ಆಗಾಗ ಸೇರಿ ರಾಜಕೀಯ ಮತ್ತು ವ್ಯಾಪಾರದ ವಿಷಯಗಳನ್ನು ಚರ್ಚೆಮಾಡಿ ತೀರ್ಮಾನಿಸುವ ಸ್ಥಳ. ರೋಮನ್ ನಾಗರಿಕತೆಯಲ್ಲಿ ಇದು ಒಂದು ಮುಖ್ಯ ಸಂಸ್ಥೆ. ಅದಕ್ಕೆ ಫೋರಮ್ [Forum] ಎಂತ ಕರೆಯುತ್ತಾರೆ. ಅಲ್ಲಿ ನೀರೋ, ಗುಲಿಗುಲಾ ಇವರ ಹೆಸರಿನ ಕಮಾನುಗಳಿವೆ [Arches] ಮಧ್ಯೆ ಬೃಹಸ್ಪತಿಯ [Jupiter] ದೇವಾಲಯ, ನಗರದ ಎಲ್ಲಾ ರಸ್ತೆಗಳೂ ಈ ಫೋರಮಿನಲ್ಲಿ ಸೇರುತ್ತವೆ. ಮುಖ್ಯ ರಸ್ತೆಯು ಅಗಲ 30 ಅಡಿ. ಅಲ್ಲಿಯ ಗೋಡೆಗಳ ಮೇಲೆ ಆ ಕಾಲದಲ್ಲಿ ನಡೆದ ಚುನಾವಣೆಗೆ ನಿಂತ ಉಮೇದ್ವಾರರ ಹೆಸರುಗಳನ್ನು ಕಾಣಿಸಿ ಅವರಿಗೆ ಓಟು ಕೊಡಿ ಎಂತ ಬರೆದಿದೆ. ಒಂದು ಗೋಡೆಯಲ್ಲಿ ಹೀಗೆ ಬರೆದಿದೆ. "ಓ ಗೋಡೆಯೇ, ಇಷ್ಟು ಅಸಂಬದ್ಧ ನಿನ್ನ ಮೇಲೆ ಬರೆದಾಗ ಅದರ ಬಾಧೆಯಲ್ಲಿ ನೀನು ಪುಡಿಯಾಗಿ ಬೀಳಲಿಲ್ಲವಲ್ಲಾ" [It is a wonder, O wall, that thou hast not yet crumbled under the weight of so much written nonsense.] ರಸ್ತೆಬದಿ ಒಂದು ಅಂಗಡಿ ಸುಮಾರು 14 ಅಡಿ ಅಗಲ 12 ಅಡಿ ಎತ್ತರವಾಗಿದ್ದು ಅದಕ್ಕೆ ನಮ್ಮಲ್ಲಿಯಂತೆಯೇ ಒಂದೊಂದಾಗಿಯೇ ಕಳಚಿ ತೆಗೆಯುವ ಬಾಗಿಲಿತ್ತು. ಇದು ಅದಿ ಇಟ್ಟಿರುವ ಕಲ್ಲಿನಲ್ಲಿ ಇಟ್ಟ ತೋಡಿನಿಂದ [Groove] ಕಾಣುತ್ತದೆ. ನಗರಕ್ಕೆ ಬೇಕಾದ ನೀರು ಸಮೀಪದ ಗುಡ್ಡ ಬದಿಯಲ್ಲಿ ಎತ್ತರವಾಗಿ ಕಟ್ಟಿದ ಒಂದು ಕೆರೆಯಲ್ಲಿ ದಾಸ್ತಾನುಮಾಡಿ ಸೀಸದ ನಳ್ಳಿಮೂಲಕ ನಗರದ ಎಲ್ಲಾ ಕಡೆಗಳಿಗೆ ತಂದಿರುತ್ತಾರೆ. ಆ ನಳ್ಳಿ ಮತ್ತು ಅದನ್ನು ಜೋಡಿಸುವ ಸಂಧಿಗಳು [joints] ಈಗಿನ ಕಾಲದಂತೆ ಇವೆ. 2000 ವರ್ಷದ ಹಿಂದಿನ ಇದನ್ನು ನೋಡುವಾಗ ಆ ಜನರು ಎಷ್ಟು ನಾಗರಿಕರಾಗಿದ್ದರು ಎಂತ ನಾವು ತಿಳಿಯಬಹುದು. ನಗರದ ಕೊಳಕು ನೀರು ಹರಿಯಲಿಕ್ಕೆ ರಸ್ತೆ ಬದಿ ನೆಲದ ಅಡಿ ಮುಚ್ಚಿದ ಚರಂಡಿ. ರಸ್ತೆ ಬದಿ ಕೆಲವು ಅಂಗಡಿಗಳಲ್ಲಿ ದ್ರಾಕ್ಷಾರಸ [Wine] ಮಾರುತ್ತಿದ್ದರು. ಅದನ್ನು ಇಡಲಿಕ್ಕೆ ಅಲ್ಲಿಯು ಹೂಳಿಟ್ಟ ಅಗಲಬಾಯಿಯ ಮಣ್ಣಿನ ಭರಣಿಗಳು, ನಗರದ ಜನರು ಬಂದು ಸ್ನಾನಮಾಡಲಿಕ್ಕೆ ಕೋಣೆಗಳು [Public Baths] ಅಲ್ಲಿ ಬಿಸಿನೀರಿಗೆ ಬೇರೆ, ತಣ್ಣೀರಿಗೆ ಬೇರೆ ಹೊಂಡಗಳು ಇವೆಲ್ಲಾ ಇಟ್ಟಿಗೆಯಲ್ಲಿ ಕಟ್ಟಿ ಸರಿಯಾದ ಸುಣ್ಣದ ಗಾರೆಹಾಕಿದವುಗಳು ಅಲ್ಲಿ ಸತ್ತ ಒಬ್ಬ ಮನುಷ್ಯನ ಪ್ರತಿಮೆಯನ್ನು ಪ್ಲೇಸ್ಟರ್ ಓಫ್ ಪೇರಿಸ್‌ನಲ್ಲಿ ಮಾಡಿಟ್ಟಿದ್ದಾರೆ.

[ಮುಂದರಿಯುವುದು]

ಕೆ. ಆರ್. ಕಾರಂತ. ವಿಶಾರದಸಾಣ.

THE VIJAYA BANK LIMITED, UDIPI

ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಉಡುಪಿ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲಪಡೆಕೊಂಡು ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿಮಾಡಿರುವುದರಿಂದಲೂ ಸದರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ತಾ. 7-6-52ನೇ ಶನಿವಾರ ಘಂಟೆ 2ಕ್ಕೆ ಸರಿಯಾಗಿ ಅಥವಾ ಬೇಂಕಿಗೆ ಯುಕ್ತಕಂಡ ಇತರ ಯಾವದೇ ದಿನಗಳಲ್ಲಿ ಪುನಃ ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು, ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸ್ಲು ಬಡ್ಡಿ ಸಮೇತ 31-3-52ರ ವರೆಗೆ		
316/9-50	ಶ್ರೀ ವೈ. ಗಣೇಶ ರೈ, ಸಂಕಪ್ಪ ರೈಗಳ ಅಳಿಯ, ಸಟ್ಟಬೆಟ್ಟು, ನೆರ್ಗಗ್ರಾಮ, ಪೋಸ್ಟ್ ಪರ್ಕಳ	325	8	0
388/9-50	ಶ್ರೀ ಪಿ ಸುಂದರ ಸೆಟ್ಟಿ, ಸುಬ್ಬಯ ಸೆಟ್ರ ಅಳಿಯ ಪರೀಕ ಅತ್ರಾಡಿ ಗ್ರಾಮ ಪೋಸ್ಟು ಹಿರಿಯಡ್ಕ	256	7	0
436/9-50	ಶ್ರೀ ಪಿ. ಸುಂದರ ಸೆಟ್ಟಿ, ಸುಬ್ಬಯ ಸೆಟ್ರ ಅಳಿಯ ಪರೀಕ ಅತ್ರಾಡಿ ಗ್ರಾಮ, ಪೋಸ್ಟು ಹಿರಿಯಡ್ಕ	136	8	0
447/9-50	ಶ್ರೀ ಮೋಹನ ಆಚಾರಿ, ಅಂತಪ್ಪ ಆಚಾರಿ ಮಗ, ತೆಂಕಪೇಟೆ ಉಡುಪಿ.	23	5	0
9/51	ನಾಗು, ತುಂಬೆ ಮಗಳು ಕಾಡುಬೆಟ್ಟು, ಉಡ್ಪಿ	11	8	0
152/51	ಬೊಮ್ಮಯ ಸೆಟ್ಟಿ, ಶೇಷ ಸೆಟ್ಟಿ ಅಳಿಯ, ಯಡ್ಮೇರು ಬಡಗುಮನೆ, ಪೋಸ್ಟು ಮೂಡುಬೆಳ್ಳೆ	184	2	0
179/51	ಶ್ರೀ ಬಿ. ಸಂಜೀವ, ಮಂಜುನಾಥಯ್ಯನ ಮಗ C/o C. I. & B. Sy., Ltd., Udipi	22	5	0
214/51	ಶ್ರೀ ಗಿರಿಯಪ್ಪ, ಲಕ್ಕಪ್ಪ ಸೇನವರ ಮಗ, ಕಾತ್ಯಾಡಿ ಪೋಸ್ಟು, ಉದ್ಯಾವರ	27	4	0
317/51	ಶ್ರೀ ಸೇಸು ಸೆಟ್ಟಿ, ಚಂದಯ್ಯ ಸೆಟ್ರ ಅಳಿಯ, ಸಾಣೂರು ಬಂಡಸಾಲೆ, ಪೋಸ್ಟು ಸಾಣೂರು.	201	8	0

UDIPI, 13-5-'52

B. S. S. Hegde.
Agent Udipi Branch

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಚಾಕುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಹುಳುಕಳ್ಳಿ, ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

ಮೂಲ್ಕಿ ಬೇಂಕ್

ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

ವಾರದ ಭವಿಷ್ಯ

ತಾರೀಕು 22-5-52 ರಿಂದ — ತಾರೀಕು 28-5-52 ವರೆಗೆ

ಮೇಷ: ಧನಲಾಭ ಕೀರ್ತಿಲಾಭದ ಶುಕ್ರ ಶನಿಗಳು ಅನುಕೂಲಸ್ಥಾನವನ್ನು ಹೊಂದಿರುವುದರಿಂದ ನಿಮಗೀ ವಾರದಲ್ಲಿ ಆರ್ಥಿಕ ತಾಪತ್ರಯವುಂಟಾಗದು. ಹಿಡಿದ ಕಾರ್ಯದಲ್ಲಿ ಯತ್ನಕ್ಕೆ ತಕ್ಕ ಫಲಪ್ರಾಪ್ತಿಯಿದೆ ವಿನಾ ಕಾರಣ ಜನರೊಡನೆ ಕಲಹ ನಿಷ್ಠುರಗಳಾಗುವವು. ಆಪ್ತೇಷ್ಟರೊಳು ಅವಿಶ್ವಾಸ ಮೊಳೆಯಲಿದೆ. ಗೃಹಕೃತ್ಯದಲ್ಲಿ ಮನಸ್ತಾಪ ಹುಟ್ಟಿ ಗಂಡಹೆಂಡಿರೊಳು ಜಗಳವಾದೀತು. ತಾ. 22, 26, 27 ಈ ದಿನಗಳು ಲಾಭ ಸುಖಕಾರಿಗಳಾಗಿವೆ.

ವೃಷಭ: ಅದಾಯಕ್ಕಿಂತ ದ್ವಿಗುಣವಾದ ವ್ಯಯಗಳು ಪ್ರಾಪ್ತವಾಗಿ ಹಣದ ಅಡಚಣೆಯಲ್ಲಿ ಸಿಗುವಿರಿ. ಹಿಡಿದ ಕಾರ್ಯದಲ್ಲಿ ಲಾಭವಾಗಲಿ ನಷ್ಟವಾಗಲಿ ಕೊನೆಗಾಣದೆ ದಣಿವಿರಿ. ಪುತ್ರಭೃತ್ಯಾದಿ ಸೇವಕ ವರ್ಗದವರೊಳು ಮತಭೇದದಿಂದಾಗಿ ಕಲಹಕ್ಕೆಡೆಯುಂಟಾಗುವದು. ನಿಮ್ಮ ಸ್ವಂತ ಉಪಭೋಗಕ್ಕೆ ಬೇಕಾದ ಸಾಧನಗಳು ಅನಾಯಾಸದಿಂದ ಲಭಿಸುವವು. ತಾ. 23, 24, 25, 28 ಈ ದಿನಗಳಲ್ಲಿ ಮೃಷ್ಟಾನ್ನಭೋಜನ ಮಿತ್ರಸಮಾಗಮ ವಿಜಯಾದಿಗಳು ಲಭಿಸುವವು.

ಮಿಥುನ: ಚಂಚಲವಾದ ಮನಸ್ಸನ್ನು ಬಿಗಿಹಿಡಿಯಿರಿ, ನಿಮ್ಮ ಬಯಕೆಯಂತೆ ಕಾರ್ಯಗಳು ನೆರವೇರುವವು. ಸಮಾಜದಲ್ಲಿ ಸ್ಥಾನಮಾನಗಳನ್ನು ಗಳಿಸುವಿರಿ. ಹಿಡಿದ ಕಾರ್ಯದಲ್ಲಿ ಶ್ರೇಯಸ್ಸೂ ಫಲಪ್ರಾಪ್ತಿಯೂ ಉತ್ತಮವಿದೆ. ಸಂಸಾರದಲ್ಲಿ ಆಹಿಲೆಕಗಾಲೋಳಉಂಟಾಗಿ ಚಾಕ್ಯಾರ ದೊಕ್ಕರ ತುಂಬಿಸುವ ಪ್ರಸಂಗ ಬರಲಿದೆ. ತಾ. 24, 26, 27, ಈ ದಿನಗಳಲ್ಲಿ ವಿಜಯಸ್ಥಾನ ಲಾಭ ಧನಪ್ರಾಪ್ತಿಯಾದೀತು.

ಕರ್ಕಟ: ನಿಮ್ಮ ಸಂಕಲ್ಪಗಳಿಂದು ಕಾರ್ಯರೂಪಕ್ಕೆ ಬರಲಿದೆ. ಯಾವ ಕಾರ್ಯವನ್ನು ಕೈಗೊಂಡರೂ ಅನಾಯಾಸದಿಂದ ಕೊನೆಗಾಣುವಿರಿ. ನಿರೀಕ್ಷಿಸಿದ್ದಕ್ಕಿಂತ ಅಧಿಕವಾದ ಫಲ ಲಭಿಸುವದು. ಕೃತ್ರಿಮ ಶತ್ರುಗಳಿಂದಾಗಿ ಧನಮಾನಗಳಿಗೆ ಧಕ್ಕೆ ತಾಗಲೀತು. ಜಾಗ್ರತೆ ವ್ಯಾಪಾರಿಗಳಿಗೂ ನೌಕರಿ ವರ್ಗದವರಿಗೂ ಸೇವಕ ಜನತೆಗೂ ಈ ವಾರವು ಉತ್ತಮವಿದೆ. ತಾ 22, 23, 24, 25, 28 ಅನುಕೂಲ.

ಸಿಂಹ: ಖರ್ಚಿಗೆ ತಕ್ಕ ಆದಾಯವಿರುವುದರಿಂದ ನಿಮಗೀ ವಾರದಲ್ಲಿ ಆರ್ಥಿಕ ತಾಪತ್ರಯವುಂಟಾಗದು. ಧನಭಾಗ್ಯ ಲಾಭಪತಿಗಳ ಅನುಗ್ರಹದಿಂದಾಗಿ ಹಿಂದಿನ ಸಾಲಾದಿಗಳಿಂದ ಮುಕ್ತರಾಗಿ ಕೈಯಲ್ಲಿ ಸಾಕಷ್ಟು ಹಣ ಸಂಗ್ರಹಿಸಿಕೊಳ್ಳುವಿರಿ. ಆದರೆ ವ್ಯಾಪಾರೀ ವರ್ಗದವರಿಗೆ ಆಕಸ್ಮಿಕ ನಷ್ಟ ಸಂಭವಿಸುವ ಯೋಗವಿದೆ. ರಾಜಕೀಯ ಕ್ಷೇತ್ರದಲ್ಲಿ ವಿಜಯವು ನಿಮ್ಮ ಪಾಲಿನ ಕಟ್ಟಿಟ್ಟ ಗಂಟಿನಂತಿರುವದು. ತಾ. 23 ರಿಂದ 27ರ ವರೆಗಿನ ದಿನಗಳು ಅತ್ಯುತ್ತಮವಿವೆ.

ಕನ್ಯಾ: ಸ್ವಂತಕ್ಕೆ ನಿಲ್ಲಲವಕಾಶ ದೊರೆಯದು. ಹೆಚ್ಚಿನ ಸಮಯವನ್ನು ಮಾರ್ಗದಲ್ಲೇ ಕಳೆಯಬೇಕಾಗುವದು. ದುಡಿಮೆಗಿಂತ ದ್ವಿಗುಣ ವ್ಯಯವಾಗುವುದರಿಂದ ದಿನಯಾಪನೆಯು ಕಷ್ಟಸಾಧ್ಯವಾದೀತು. ಪಿತ್ತೋದ್ರೇಕ ವಿಕಾರದಿಂದ ಆರೋಗ್ಯಕ್ಕೆ ಧಕ್ಕೆಯಿದೆ. ಹಣದ ನಿಮಿತ್ತ ಕಲಹ ನಿಷ್ಠುರಗಳಾಗುವ ಸಂಭವವಿದೆ. ವಾರಾಂತ್ಯದ 3 ದಿನಗಳು ಇತರ ದಿನಗಳಿಗಿಂತ ಉತ್ತಮ.

ತುಲಾ: ಅನಿರೀಕ್ಷಿತ ಅನರ್ಥ ಪರಂಪರೆಗಳು ಬಂದು ನಿಮ್ಮನ್ನು ಕಾಡಲಿವೆ ಶತ್ರು ಜನರ ಪೀಡೆಯು ಅಸಹನೀಯವಿರುವದು. ಪ್ರಯಾಣದಲ್ಲಿ ಆಕಸ್ಮಿಕ ಅವಘಡಗಳುಂಟಾಗುವವು. ಸ್ವಾಸರೋಗದಿಂದ ಬಳಲುವಿರಿ ಕೈಹಿಡಿದಾಕೆಯು ವಿರೋಧವಾಗಿ ವರ್ತಿಸುವಳು. ಆದರೂ ಸುರಗುರುಗಳ ಅನುಗ್ರಹ ಬಲದಿಂದ ತಾ 22-28 ಈ ದಿನಗಳಲ್ಲಿ ಹೆಚ್ಚಿನ ಸುಖವನ್ನೇ ಕಾಣಲಿರುವಿರಿ.

ವೃಶ್ಚಿಕ:— ಕೈ ಕೆಸರಾದರೆ ಬಾಯಿ ಮೊಸರಾದೀತೆಂಬಂತೆ ನೀವು ಕಷ್ಟಪಟ್ಟು ದುಡಿದರೇನೆ ನಿಮ್ಮಿಷ್ಟಾರ್ಥವು ಸಾಕಷ್ಟು ಲಭಿಸುವುದರಲ್ಲಿ ಸಂದೇಹವಿಲ್ಲ. ಗುರುಹಿರಿಯರ ಅನುಗ್ರಹಕ್ಕೊಳಗಾದ ನಿಮಗೆ ಸ್ತ್ರೀ ಜನತೆಯಿಂದ ವಿರೋಧ ಬರಲಿದೆ. ನಿದ್ರಾಭಂಗ ದುಃಸ್ವಪ್ನ ದಿಗಳಿಂದ ಪೀಡಿತರಾದ ನಿಮಗೆ ವಾರಾದಿಯ 4 ದಿನಗಳಲ್ಲಿ ದೇಹ ಮನಸ್ಸುಗಳಿಗೆ ಕಿಂಚಿತ್ಸುಖ ಶಾಂತಿ ಲಭಿಸುವದು.

ಧನು:— ನಿಮ್ಮ ಬಯಕೆಗಳು ಈ ವಾರದಲ್ಲಿ ಈಡೇರಲಿವೆ. ಸಂಪದ್ಭಾಗವೂ ಕೂಡ ಮುಂಚಿಗಿಂತ ಸುಧಾರಣೆ ಹೊಂದಲಿರುವದು ಯಾವ ಉದ್ಯಮದಲ್ಲೂ ಕೂಡ ನಿಮಗೆ ನಷ್ಟವೆಂಬುದುಂಟಾಗಲಾರದು. ಆದರೆ ಸಂಸಾರದಲ್ಲಿ ಗಂಡ ಹೆಂಡಿರೊಳು ತಂದೆ ಮಕ್ಕಳೊಳು ಕಲಹವುಂಟಾಗಲಿದೆ. ಚಂಚಲವಾದ ಮನಸ್ಸು ನಿಮ್ಮನ್ನು ಕುಕರ್ಮದತ್ತ ಸೆಳೆಯುತ್ತಿದೆ. ಬಿಗಿ ಹಿಡಿಯಿರಿ, ತಾ 23ರಿಂದ 27ರ ವರೆಗಿನ ದಿನಗಳು ಉತ್ತಮವಿವೆ.

ಮಕರ:— ನಿಮ್ಮ ಪ್ರಯತ್ನಕ್ಕೆ ತಕ್ಕ ಫಲ ಲಭಿಸದು. ಶತ್ರುಜನರ ಕಾಟವು ದಿನೇ ದಿನೇ ಹೆಚ್ಚುತ್ತಾ ಬರುವದು. ಹೆಚ್ಚೇಕೆ ನಿಮ್ಮ ಬಂಧು ವರ್ಗದವರೇ ನಿಮಗೆ ವಿಪರೀತವಾಗಿ ವರ್ತಿಸಲಿರುವರು. ಆದರೆ ಗೃಹತಾಪತ್ರಯಗಳು ಬಹು ಮಟ್ಟಿಗೆ ಕಡಿಮೆಯಾಗಲಿವೆ. ಧರ್ಮ ಕರ್ಮಗಳಲ್ಲೂ ಗುರುಹಿರಿಯರಲ್ಲೂ ಅನಾದರ ತಿರಸ್ಕಾರ ಭಾವನೆಗಳುಂಟಾಗುವವು. ವಿದ್ಯೋಪಜೀವಿಗಳಿಗೆ ಕಾಲವು ಅನುಕೂಲವಿದೆ, ವಾರಾಂತ್ಯದ 3 ದಿನಗಳು ಮಿಕ್ಕುಳಿದ ದಿನಗಳಿಗಿಂತ ಉತ್ತಮವಿವೆ,

ಕುಂಭ:— ತಾನೊಂದ ಬಗೆದರೆ ದೈವವೊಂದೆಣಿಸಿತೆಂಬಂತೆ ಈ ವಾರದಲ್ಲಿ ನಿಮ್ಮ ಪರಿಸ್ಥಿತಿಯುಂಟಾಗಲಿದೆ, ಕೈಗೊಂಡ ಕಾರ್ಯಗಳಿಗೆ ವಿಘ್ನಗಳು ಬಂದು ಅರ್ಧದಲ್ಲೇ ನಿಂತುಹೋಗುವವು. ಅಧಿಕಾರಿ ಜನರ ಪೀಡೆಯು ಹೆಚ್ಚಲಿದೆ. ಕೈಯಲ್ಲಿದ್ದ ವಸ್ತುಗಳೂ ಕೂಡ ಕಾಲಕ್ಕೆ ನಿಮಗೆ ಒದಗಲಾರವು. ಅತ್ಮೀಯರ ವಿರಹದಿಂದ ದುಃಖಿತರಾಗುವಿರಿ, ಆರೋಗ್ಯವೂ ಕೂಡ ಸರಿಯಾಗಿರದು, ತಾ 22-28 ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟ

ಮೀನ:— ಇಂದಿಗೆ ನಿಮ್ಮ ಭಾಗ್ಯೋದಯವಾಗಿರುವದು. ಪ್ರಬಲರಾದ ಶತ್ರುಗಳು ಪ್ರತೀಕಾರಾಸಕ್ತರಾದರೂ ನಿಮಗಾವ ತೆರದ ಬಾಧೆಯನ್ನೂ ಉಂಟುಮಾಡಲಶಕ್ತರಾಗಲಾರರು. ಆರ್ಥಿಕ ಭಾಗದಲ್ಲಿ ಉತ್ತಮಸ್ಥಿತಿಗೆ ಬರುವಿರಿ. ಸಾಮಾಜಿಕ ಕಾರ್ಯಗಳಲ್ಲಿ ವಿಜಯ ಕೀರ್ತಿಗಳನ್ನು ಪಡೆವಿರಿ. ನಿರಾಯಾಸವಾದ ಸಂಸಾರ ಸುಖವನ್ನು ಅನುಭವಿಸಲಿರುವಿರಿ, ತಾ 22-26-27-28 ಈ ದಿನಗಳಲ್ಲಿ ಕೊಂಚ ಅನಿಷ್ಟ ಪ್ರಾಪ್ತಿಗವಕಾಶವಿದೆ

ಕವಿರಾಜ ಯನ್. ಯನ್. ಸೇನರ

ಶಾಸ್ತ್ರೀಯ ಔಷಧಿಗಳು ಈಗಲೇ ಬಂದಿವೆ

ಬೃಹತ್ ಅಮೃತಬಳ್ಳಿ ಕಷಾಯ
ಪ್ರಸೂತಾರಿಷ್ಟ
ಕಸ್ತೂರಿ ಕಲ್ಪ ರಸಾಯನ
ನೇತ್ರಬಿಂಧು
ಕರ್ಪೂರಾರಿಷ್ಟ
ದುರ್ಗಾ ಪುನರ್ನವಾಸವ
ವಾಸಾರಿಷ್ಟ
ಕುಂಕುಮಾಸವ
ಮೃಗಾಂಕ ದ್ರಾವ

ದರವನ್ನು ವಿಚಾರಿಸುವದು.

ಏಜಂಟ್:—
ಶಾ ಕಂಪೆನಿ, ಮಂಗಳೂರು ನಂ. 1.

ಸಾರ್ವಜನಿಕರ ಉಪಯೋಗಕ್ಕಾಗಿ ಅಮೂಲ್ಯ ರತ್ನ ಪ್ರಯೋಗ!

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯದ ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಲುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೮ ದಿನದ ಲೇಹ್ಯ ರೂ ೫/೪, ೨೪ ದಿನದ ಲೇಹ್ಯ ರೂ ೩/೪
(ಪೋಸ್ಟೇಜು ಮಾಫಿ)

ನೀಲಗಿರಿ ಡಿಪೊ, ಅಕ್ಕಿಪೇಟೆ ಚಾರ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋನಿನಲ್ಲಿ ಕೇಳಿರಿ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ
ಅಂಬಳೆ ನರಸಿಂಹ ಪಂಡಿತರ ಮನೆತನ ಎ. ರಾಮಸ್ವಾಮಿ ಅಯ್ಯರ್ ರವರ

❋ಸಂತಾನ ಸಿಂಧೂರ❋

ಬಹಿಷ್ಟೆ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ... ಬಹಿಷ್ಟೆ ಸಂಬಂಧದ ಹೊಟ್ಟೆನೋವಿನ ಜೊತೆಗೆ ತಲೆನೋವು, ನಡುಕಳೆತ, ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ.

೩ ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ೧ ಸೆಟ್ ಅನುಪಾನಪತ್ರಿಕೆ ಪ್ರಕಾರ ಉಪಯೋಗಿಸಿರಿ ಸಾಕು. ಶೋಧನವಾದ 15 16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾಪತ್ರಗಳನ್ನು ಪಡೆದಿದೆ.

ಕ್ರಯ:— ೧ ಸೆಟ್ 5ರೂ ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1ರೂ ವಿ ಪಿ. ಇಲ್ಲ ಕ್ಯಾಟಲಾಗ್ ಉಚಿತ 6ರೂ ಮನಿಆರ್ಡರ್ ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ:— A. R. ವಿಶ್ವೇಶ್ವರಯ್ಯ (ಎ. ರಾಮಸ್ವಾಮಿ ಅಯ್ಯರ್ ಸನ್,)

Prop: ಸಂತಾನ ಸಿಂಧೂರ, ಅಂಬಳೆ ಪೋಸ್ಟು, ಯಳಂದೂರು ತಾ. ಮೈಸೂರು ಡಿ.
ಮೈಸೂರು ಶಾಖೆ: 269 ಸೋನಾರ್ ಸ್ಟ್ರೀಟ್, ದಿವಾನ್ಸ್ ರೋಡು, ಮೈಸೂರು.

ಋತುಸ್ರಾವ ನಿಂತಿತು

'ರುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿನಪ್ಪು ಋತುಸ್ರಾವವಾಗುವದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಶಾಸ್ತ್ರಕಾರರು ಹೇಳುವಂತೆ ತ್ವರಿತ ಗುಣವಾಗಿದೆ— ಬೆಲೆ; ರೂ. 3-। ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ, 8- [ವಿ. ಪಿ ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು ಶಹಾ ಕಂಪೆನಿ, ಮಂಗಳೂರು

ಲಗ್ನಪತ್ರಿಕೆಗಳನ್ನು

ಅಗ್ಗದರದಲ್ಲಿ ಶೀಘ್ರವಲ್ಲಿ ಮುದ್ರಿಸಿಕೊಡಲಾಗುವುದು.
ಎಲ್ಲ ತರದ ಮುದ್ರಣ ಕಾರ್ಯಗಳನ್ನು ಮಾಡಿಕೊಡಲಾಗುವುದು.
ನವಯುಗ ಪ್ರೆಸ್, ಪಾಲುಕೋಟೆ, ಉಡುಪಿ.



ಕೊರಡ್ಕಲ್ ಶ್ರೀನಿವಾಸರಾವ್ ಕೃತ
ಆಂಗ್ಲ ಸ್ವಯಂಬೋಧಿನಿ.
ಬೆಲೆ ರೂ- 1-8-0, ವಿ- ಪಿ. ದ್ವಾರ ರೂ- 2-0-0

ಡಾ| ಕೊರಡ್ಕಲ್ ವೆಂಕಟರಾವ್ ಕೃತ
ಮನೆ ಮದ್ದು
ಸುಲಭ ಚಿಕಿತ್ಸೆಗಳು.
ಬೆಲೆ ರೂ- 2-0-0, ವಿ- ಪಿ. ದ್ವಾರ ರೂ- 2-10-0
ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published by K. H. Shetty at the Navayuga Press, Udipi, S. India.

Regd.No. M. 3618
LICENCE No. 31
Licensed to Post without Prepayment

ESTD. 1921 ಸ್ಥಾಪನೆ
31ನೆಯ ವರ್ಷ

29-5-1952

Founder: [illegible] Shetty
Minister for Medical & Public Health

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಸಾರ್ವಜನಿಕ
ಆರೋಗ್ಯ ಮಂತ್ರಿ
ಶ್ರೀ ಎ. ಬಿ. ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಪೋಸ್ಟ್ ಬಾಕ್ಸ್
ನಂಬ್ರ 22
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೩೮

NAVAYUGA WEEKLY Post Box No. 22 UDIPI.

Vol 31
No. 38

ಮಧುಪರ್ಕ

ಒಂದು ಸೊಗಯಿಸುವ ಪ್ರಾಂತಾನ, ಆನಂದ ತುಂದಿಲನಾದೊಬ್ಬ ಕುರುಬಂ ಹುಡುಗ ಕುಣಿಯುತ್ತಾ ಹಾಡುತ್ತಾ ಕಣಿವೆಯಲ್ಲಿ ಕುರಿಮೇಯಿಸುತಿದ್ದ. ನೆರೆಯ ಕಾಡಿನಲ್ಲಿ ಬೇಟೆಯಾಡುತಿದ್ದ ಆ ರಾಜ್ಯದ ಅರಸು ಈ ಕಡೆ ಆಕರ್ಷಿತನಾಗಿ, ಅಲ್ಲಿಗೆ ಬಂದು, ಇಷ್ಟು ಸಂತೋಷಕ್ಕೆ ಕಾರಣವೇನಪ್ಪಾ ಎಂದು ವಿಚಾರಿಸಿದ,

"ನಮ್ಮ ರಾಜನಿಗೂ ನನಗಿಂತ ಹೆಚ್ಚಿನ ಸುಖ ದೊರೆಯುತ್ತಿಲ್ಲ- ಎಂದಮೇಲೆ ನಾನು ಕುಣಿದಾಡಬೇಡವೆ?" ಎಂದು ಕುರುಬರ ಹುಡುಗ ಪ್ರಶ್ನಿಸಿದ.

"ಅದು ಹೇಗೆ?"

ಈ ಕಣಿವೆಯಲ್ಲಿ ತಿಳಿನೀಲಿಯ ಆಕಾಶದ ನಡುವೆ ಸೂರ್ಯನು ಅರಸನಿಗೆ ಹೇಗೋ ಹಾಗೆಯೇ ನನಗೂ ಉದಯಿಸಿ ಬೆಳಕು ನೀಡುವನು. ಪರ್ವತಗಳೂ ಕಣಿವೆಗಳೂ ತಮ್ಮ ಚೆಲುವಾದ ಹಸುರಿನಿಂದ ಅರಸನಂತೆ ನನ್ನನ್ನೂ ಮುಗ್ಧನಾಗಿಸುವುವು. ಸುಗಂಧ ಪುಷ್ಪಗಳು ಅರಸನಿಗಾಗಿಯೇ ಅರಳುವುದಿಲ್ಲ-ನಾನೂ ಅವನ್ನು ನೋಡಿ ಆನಂದಿಸಬಲ್ಲೆ. ಪರಿಶ್ರಮದಿಂದ ನಾನು ಕೆಲಸ ಮಾಡುತ್ತೇನೆ: ನನ್ನ ಹೊಟ್ಟೆ ತುಂಬುವಷ್ಟು ಅನ್ನವಿದೆ; ಮೈ ಮುಚ್ಚಲು ಬಟ್ಟೆ ಇದೆ. ಇದಕ್ಕಿಂತಲೂ ಹೆಚ್ಚು ರಾಜನಿಗಿರುವ ಸೌಭಾಗ್ಯವೇನು?"

"ನೀನನ್ನುವುದೇ ಸರಿ- ಮತ್ತು ನಿನಗೆ ಈ ಮಾತನ್ನು ಈ ರಾಜ್ಯದ ದೊರೆಯೇ ಹೇಳಿದನೆಂದು ಎಲ್ಲರಿಗೂ ತಿಳಿಸು." ಎಂದು ರಾಜ ಸಂತೃಪ್ತಿಯಿಂದ ಹೇಳಿದ

ಸುಖಾನುಭವದ ಮೂಲ ಮನೋಮಯವಾಗಿದೆ. ದುಡಿಮೆ ಅದಕ್ಕೆ ಪೋಷಕವಾಗಿದೆ.

ಸುಖಾನುಭವ

ಮನುಷ್ಯನ ಜೀವನೋದ್ದೇಶ ಸುಖಾನುಭವ ಪಡೆಯುವುದಾಗಿದೆ. ಈ ಮಾತಿನಲ್ಲಿ ಭಿನ್ನಾಭಿಪ್ರಾಯಕ್ಕೆ ಎಡೆಯಿಲ್ಲ. ಸಾಮಾನ್ಯನೊಬ್ಬನಿಂದ ತೊಡಗಿ, ಮಹಾಪಂಡಿತರ ವರೆಗೂ ಎಲ್ಲರೂ ಈ ತತ್ವವನ್ನು ಒಪ್ಪುವವರೇ. ಬದುಕಿನಲ್ಲಿ ಸುಖ ಪಡೆಯಬೇಕೆಂಬುದು ಸಾಧಾರಣ ಮಟ್ಟದ ನಮ್ಮಂಥವರ ಬಯಕೆಯಾಗಿದ್ದರೆ-ವೇದಾಂತದ ಘನ ವಿದ್ವಾಂಸರು ಇದರ ಜೊತೆಗೆ ಮೋಕ್ಷ ಸಾಧನೆಯನ್ನೂ ಬಯಸಿಯಾರು. ಇಂದಿನ ವೈಜ್ಞಾನಿಕ ಪ್ರಪಂಚದ ಎಲ್ಲ ವೈಚಿತ್ರ್ಯಗಳೂ ಮನುಷ್ಯನ ಬಾಳ್ವೆಗೆ ಸುಖದ ಮೆರುಗನ್ನು ಕೊಡಲಿಕ್ಕಾಗಿಯೇ ಹುಟ್ಟಿಕೊಂಡಿವೆಯಲ್ಲವೇ? ಫ್ರಾಯಿಡ ಪ್ರಾದಿಯಾಗಿ ಎಲ್ಲ ಮನೋವಿಜ್ಞಾನಿಗಳೂ ಸುಖಾನುಭವ ಪ್ರವೃತ್ತಿಯೇ ಮನುಷ್ಯನ ವ್ಯಕ್ತಿತ್ವದ ಮೂಲದಲ್ಲಿರುವ ಪ್ರಬಲ ಚೈತನ್ಯವೆಂದು ಒಪ್ಪುವರು. ಇವರ "ಸುಖದುಃಖ ತತ್ವ"ವೆಂಬ ಮಹಾ ಸಿದ್ಧಾಂತವನ್ನು ನಮ್ಮ ಧರ್ಮದರ್ಶಿಗಳ ಮೋಕ್ಷಪ್ರಾಪ್ತಿಯ ಕಲ್ಪನೆಯೊಂದಿಗೆ ಚೆನ್ನಾಗಿ ಹೋಲಿಸಬಹುದಾಗಿದೆ

ಹೀಗೆ ಮನುಷ್ಯನ ವ್ಯಕ್ತಿತ್ವದಲ್ಲಿ ತಾನೇ ತಾನಾಗಿ ಸುಖಲಾಲಸೆ ಆಧಿಪತ್ಯ ನಡೆಸುತ್ತಿದೆ. ಸಣ್ಣಂದಿನಿಂದ ತೊಡಗಿ ದೊಡ್ಡವರಾಗಿ ಕೊನೆಯ ಗಳಿಗೆಯ ತನಕವೂ ನಮ್ಮೆಲ್ಲ ಕಾರ್ಯಕಲಾಪಗಳು ಸುಖಾನುಭವದ ಇಚ್ಛೆಯಿಂದಲೇ ಪ್ರೇರಿತಗೊಳ್ಳುತ್ತವೆ-ಮತ್ತು ಆ ಇಚ್ಛಾಪೂರ್ತಿಯಾಗದ ಗಳಿಗೆ ನಾವು ಬೇಸರಪಟ್ಟುಕೊಳ್ಳುತ್ತೇವೆ.

ಸಂಸಾರದಲ್ಲಿ ಸುಖವಿಲ್ಲ ಎಂದೆನ್ನುವ ಪ್ರಸಂಗಗಳೆಷ್ಟೋ ನಮಗೆ ಬರುವುದುಂಟು. ಅಂಥ ಗಳಿಗೆಯಲ್ಲೂ ಮರಣಾನಂತರ ಸಿಗುವ ಸ್ವರ್ಗ ಸುಖದ ಕಲ್ಪನೆ ನಮ್ಮನ್ನು ಕಾರ್ಯರಂಗಕ್ಕೆ ಇಳಿಸುತ್ತದೆ. ಭಗವಂತನು ನಮ್ಮನ್ನು ಸೃಷ್ಟಿಸಿದಾಗ ನಮ್ಮ ಹೆಗಲಮೇಲೊಂದು ಕರ್ತವ್ಯ ಭಾರವನ್ನು ಇಟ್ಟಿರುವನು-ಅದನ್ನು ಹೊತ್ತು ಮುನ್ನಡೆದು ತಕ್ಕ ಸ್ಥಳದಲ್ಲಿ, ಯೋಗ್ಯ ಸಮಯದಲ್ಲಿ ಹೊರೆ ಇಳಿಸುವುದು ನಮ್ಮ ಲಕ್ಷ್ಯವಾಗಬೇಕು. ಅಲ್ಲಿಯವರೆಗೆ ವಿರಾಮವಿಲ್ಲದ--ಕರ್ಮ ಪ್ರವೃತ್ತರಾಗಬೇಕು. ಇದೇ ಧರ್ಮ ಎಂದು ಹುಟ್ಟಿದಾರಭ್ಯ ನಮಗೆ ಹಿರಿಯರು ಹೇಳುತ್ತ ಬಂದಿರುವರು. ನಿಜವಾದ ಸುಖ ಕರ್ತವ್ಯ ನಿರ್ವಹಣೆಯಿಂದಲೇ ಅನುಭವಕ್ಕೆ ಬರುವುದು ಎಂದವರ ವಾದ. ಕರ್ತವ್ಯ ವಿಮುಖನಾದ ಮನುಷ್ಯನು ಆತ್ಮಗ್ಲಾನಿಗೆ ಗುರಿಯಾಗಿ ಸ್ವಂತ ನಾಶವನ್ನು ತಂದುಕೊಳ್ಳುವನು. ವೇದವ್ಯಾಸರು "ಪರೋಪಕಾರವೇ ಪುಣ್ಯ-ಪರಪೀಡನೆಯೇ ಪಾಪ" ಎಂದು ಹೇಳಿ, ಸುಖದುಃಖ ಸಾಧನೆಯ ವ್ಯಾವಹಾರಿಕ ಸ್ವರೂಪವನ್ನು ನಮ್ಮ ಮುಂದಿಟ್ಟಿರುವರು.

ಕರ್ತವ್ಯ ಜ್ಞಾನವನ್ನು ಮನಗಾಣಿಸುವುದೇ ಒಂದು ದೊಡ್ಡ ಕೆಲಸ-ಮತ್ತು ಬಿಗುಟಾದ ಕೆಲಸಕೂಡ, ನಮ್ಮಲ್ಲಿ ಜಾಗ್ರತವಿರುವ ಸದಸದ್ವಿವೇಕ ಬುದ್ಧಿಯು ಪ್ರತಿಯೊಂದೂ ಪ್ರಸಂಗದಲ್ಲಿ ನಮಗೆ ಈ ವಿಷಯದಲ್ಲಿ ಎಚ್ಚರಿಕೆಯನ್ನು ನೀಡುತ್ತಿರುವುದು. ಆದರೆ ವಿವೇಕಕ್ಕೂ ಉದ್ವೇಗಕ್ಕೂ ನಡುವೆ ನಡೆಯುವ ಸಂಘರ್ಷದಲ್ಲಿ ಮೇಲುಗೈ ಯಾರದಾಗುವುದೋ--ಅದಕ್ಕೆ ಜಯ ಲಭಿಸುವುದು. ಸಮಯಾವಧಾನತೆಯಿಂದ ವರ್ತಿಸುವುದು ಬಹಳ ಸುಲಭವಲ್ಲ--ಅದಕ್ಕೆ ಮನಸ್ಸಿನ ಮೇಲೆ ಬಹಳ ಕಟ್ಟುನಿಟ್ಟಾದ ಅಧಿಕಾರವಿರುವುದವಶ್ಯ. ಸತತ ಪ್ರಯತ್ನದಿಂದಲೂ ನಿರಂತರ ಅಭ್ಯಾಸದಿಂದಲೂ ಚಂಚಲ ಪ್ರವೃತ್ತಿಗಳ ಸಂಯಮದಿಂದಲೂ ನಾವು ಮನಸ್ಸನ್ನು ಪರಿಶುದ್ಧ ಮಟ್ಟಕ್ಕೆ ಪರಿವರ್ತಿಸಬಲ್ಲೆವು.

ಸುಖಾನುಭವದ ಸ್ಪಷ್ಟ ಕಲ್ಪನೆ ನಮ್ಮ ಮನಸ್ಸಿನ ಸ್ಥಿತಿಗತಿಯನ್ನು ಹೊಂದಿಕೊಂಡಿದೆ. ಕಷ್ಟ ನಿಷ್ಠುರದ ಗಳಿಗೆಯಲ್ಲಿ ತೀವ್ರ ನಿರಾಶೆಗೆ ಗುರಿಯಾಗುವುದೂ ಸುಖಪ್ರಸಂಗಗಳಲ್ಲಿ ಅನುಭವಿಸುವ ಸಂತೋಷಕ್ಕೆ ಮಿತಿಇಲ್ಲದಿರುವುದೂ-ಸರಿಯಾದ ಮನಃಸ್ಥಿತಿಯನ್ನು ಬಿಂಬಿಸುವುದೆನ್ನಲಾರೆವು. ಉತ್ಕರ್ಷದ ಹಂಬಲದಿಂದ ಕೊರಗುವುದು ಚೆನ್ನಾದುದಲ್ಲ--ಅಥವಾ ಉತ್ಕರ್ಷದ ಹಂಬಲವನ್ನೇ ತೊರೆಯುವುದೂ ಸಮನಲ್ಲ. ಉತ್ಕರ್ಷದ ಹಂಬಲವನ್ನು ಇಟ್ಟುಕೊಂಡು, ಅದನ್ನು ಸಾಧಿಸುವುದು ಕರ್ತವ್ಯ ನಿಜವಾದ ಸುಖ ಈ ಮಾರ್ಗ ಶ್ರಮದಿಂದಲೇ ಲಭಿಸುವುದು ಸಾಧ್ಯ ಅಸೂಯೆ--ದ್ವೇಷಗಳಿಂದಲೂ, ಅಸಮಾಧಾನ ಅತೃಪ್ತಿಗಳಿಂದಲೂ ನಿಜವಾದ ಸುಖ ದೊರೆಯಲಾರದು.

ಸದ್ಯ ನಮ್ಮ ದೇಶದಲ್ಲಿ ನಡೆಯುವ ವಿದ್ಯಮಾನಗಳು ನಮ್ಮ ಸತ್ವ ಪರೀಕ್ಷೆಗೆ ಯೋಗ್ಯರಂಗ ನಿರ್ಮಿಸುತ್ತಿವೆ. ಸುಖ ಲಾಲಸೆ ನಮ್ಮೆಲ್ಲರಿಗೆ ಸ್ವಾಭಾವಿಕವಾಗಿದೆ. ಚುನಾವಣೆಯ ಕಾಲದಲ್ಲಿ ವಿವಿಧ ಪಕ್ಷಗಳ ಘೋಷಣಾ ಪತ್ರಗಳಲ್ಲಿ--ಜನರಿಗೆ ಸುಖನೀಡುವ ಆಶ್ವಾಸನೆಗಳೇ ತುಂಬಿದ್ದುವು. ಸುಖ ಕಲ್ಪಿಸಿಕೊಡುವೆವೆಂಬ ಆಮಿಷವನ್ನು ತೋರಿಸಿಯೇ ಬಡ ಜನತೆಯನ್ನು ಒಲಿಸಿಕೊಳ್ಳಲು ಎಲ್ಲರೂ ಹವಣಿಸಿದವರು. ಕೈತುಂಬ ಸಂಬಳ, ಹೊಟ್ಟೆತುಂಬ ಅನ್ನ, ಮೈತುಂಬ ವಸ್ತ್ರ, ಇರಲು ಅರಮನೆ, ತಿರುಗಾಡಲು ಮೋಟರು ಕಾರು--ಇಂಥ ಭವ್ಯ ಸ್ವಪ್ನಗಳೇ ಬದುಕಿನ ಕಹಿ ಗುಳಿಗೆಯನ್ನು ಸಕ್ಕರೆಯ ಸಿಹಿಯಾವರಣದಲ್ಲಿ ಇರಿಸಿವೆ--ಮತ್ತು ಅದನ್ನು ಆಕರ್ಷಕವಾಗಿಯೂ ಆಪ್ಯಾಯಮಾನವಾಗಿಯೂ ತೋರಿಸಿವೆ.

ಜನತೆಯ ಜೀವನ ಮಟ್ಟವನ್ನು ಎತ್ತರಿಸುವಲ್ಲಿ ಕಾಂಗ್ರೆಸು ಸರಕಾರ ಅಯಶಸ್ವಿಯಾಗಿದೆ--ಎಂಬ ಸೊಲ್ಲಿನಿಂದ ರಾಷ್ಟ್ರದ ತುಂಬ ಅಲ್ಲೋಲ--ಕಲ್ಲೋಲವೆದ್ದಿದೆ. ಬಹುಸಂಖ್ಯಾತರ ಸುಖ--ಸಂತೋಷದ ಕಡೆಗೆ ಸರಕಾರದ ಲಕ್ಷ್ಯವೇ ಇಲ್ಲವೆಂದು ಅವರು ದೂರುತ್ತಿರುವರು. ಇದಕ್ಕೆ ಪ್ರತಿ

Our Pigmy Deposit Scheme

.... brings our bank to your door. You may save as small a sum as annas two. Our collector will call on you every day to receive it.

At the rate of annas two per day you save Rs. 350 in 7 years because we allow interest at 3½% per annum. At the rate of Re. 1/- per day your Savings are Rs. 2,800/- in 7 years. At the rate of Rs. 10/- it is Rs. 28,000/-. Come in to-day and join the band of **Prudent Prosperous Pigmy People.**

The Canara Industrial & Banking Syndicate Ltd.

ESTD: 1925. H. O: UDIPI.

ಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಜನರ ಮೂಲಭೂತ ಆವಶ್ಯಕತೆಗಳನ್ನು ಪೂರೈಸುವುದಾಗಿ ಹೇಳುತ್ತಿರುವುದು. ಸ್ವಾವಲಂಬನವೇ ಸುಖದ ನೇರಾದ ಮಾರ್ಗ ಎಂದದು ಪದೇ ಪದೇ ಉಪದೇಶಿಸುತ್ತಿರುವುದು. ಜನರು ಪರಿಶ್ರಮದಿಂದ ದುಡಿದರೇನೇ ಸುಖಜೀವನವನ್ನು ಬಾಳಬಲ್ಲರು ಎಂಬ ಪ್ರತಿಪಾದನೆಯನ್ನು ನಿರಾಕರಿಸುವಂತಿಲ್ಲ. "ಆಳಾಗಿ ದುಡಿದು ಅರಸನಾಗಿ ಉಣ್ಣು" -ಎಂದು ಎಲಿಮೆಂಟರಿ ಶಾಲೆಯ ಗೋಡೆಯಲ್ಲಿ ತೂಗು ಹಾಕಿರುವ ಚಾರ್ಟು ನಮಗೆ ಬಾಲ್ಯದಿಂದಲೂ ಈ ವಿಷಯದಲ್ಲಿ ಮಾರ್ಗದರ್ಶನ ಮಾಡಿದೆ.

ನಮ್ಮ ಜೀವನ ಮಟ್ಟವು ಎಷ್ಟೇ ನಿಕೃಷ್ಟವಾಗಿರಲೊಲ್ಲದೇಕೆ? – ನಮ್ಮ ಮನಸ್ಸು ಪರಿಶುದ್ಧವಾಗಿದ್ದರೆ, ನಾವದನ್ನು ಕಡೆಗಣಿಸಿ ನಿಲ್ಲಬಲ್ಲೆವು. ಮಕ್ಕಳ ಮನಸ್ಸು ಮುಗ್ಧ ಎಂಬುದಾಗಿ ಯೇಸು ಕ್ರಿಸ್ತನು ಒಪ್ಪಿಕೊಂಡಂತೆ, ಮಗುವೆಂದರೇನೆ ದೇವರು ಎಂಬುದಾಗಿ ಹಿಂದೂ ಶಾಸ್ತ್ರಗಳೂ ಸಾರುತ್ತವೆ. ಪಂಚ ಮಹಾ ಪಾತಕಗಳಲ್ಲಿ ಶಿಶುಹತ್ಯೆಗೂ ಒಂದು ಸ್ಥಾನ ಕಲ್ಪಿಸಿ, ಈ ದೈವೀ ಸ್ವರೂಪದ ಮೇಲೆ ಅನ್ಯಾಯವಾಗದಂತೆ ನಿರ್ಬಂಧ ಕಲ್ಪಿಸಿದೆ. ಮಕ್ಕಳ ಜಗತ್ತಿನಲ್ಲಿ ಸಿರಿತನ–ಬಡತನದ ಭೇದಕ್ಕೆ ಎಡೆ ಇಲ್ಲ. ಅಲ್ಲಿ ದ್ವೇಷಾಸೂಯೆಗಳಿಗೆ--ಕೋಪ ತಾಪಗಳಿಗೆ, ಆಸ್ಪದವಿಲ್ಲ. ಎಲ್ಲರೊಡನೆಯೂ ಮೈತ್ರಿ, ಮತ್ತು ನಿಷ್ಕಪಟ ಮನೋವೃತ್ತಿ ಮಕ್ಕಳ ನಡತೆಯ ವೈಶಿಷ್ಟ್ಯ. ಎಂತಲೇ--ಬಡಸ್ತಿಕೆಯಲ್ಲಿ ಬೆಳೆದ ಮಗುವೂ ಮುದ್ದಾಗಿದ್ದು, ಕಿಲುಕಿಲು ನಗುತ್ತದೆ. ಐಶ್ವರ್ಯದ ಸೋಂಕು, ಅದಕ್ಕೆ ತಾಗಿರದಿದ್ದರೂ--ನಿರ್ಮಲ ಮನಸ್ಸು ಅದರ ಬದುಕಿಗೆ ಅಂದ, ಚಂದ ತಂದಿದೆ.

ನಾವೆಲ್ಲರೂ ಮಕ್ಕಳಿಂದ ಪಾಠಕಲಿತು ಬುದ್ಧಿವಂತರಾಗೋಣ-- ಪರಸ್ಪರ ಬೈದು ಭಂಗಿಸುವುದರಲ್ಲಿ, ಕುಹಕ ವರ್ತನೆಗಳಲ್ಲಿ, ವ್ಯರ್ಥಕಲಹಗಳಲ್ಲಿ ತೊಡಗಿ ಮನಸ್ತಾಪವನ್ನುಂಟುಮಾಡಿಕೊಂಡು, ಸುಖಾನುಭವಕ್ಕೆರವಾಗುವುದು ಬೇಡ, ರಾಜಕೀಯ ರಂಗದ ಹಲವಾರು ಪಕ್ಷಗಳು ಏಕಾಗಿ ತಮ್ಮಲ್ಲಿ ಹೊಡೆದಾಡಿಕೊಂಡು, ಕೊಳೆಯಬೇಕು? ವಿವಿಧ ಆರ್ಥಿಕ ಸಿದ್ಧಾಂತಗಳನ್ನು ಪ್ರತಿಪಾದಿಸಿ, ನಮಗೆ ಯಾವುದು ಅನುಕೂಲವೆಂಬ ತರ್ಕದಲ್ಲಿಯೇ ಶಾಸನಕಾಲದ ಐದು ವರ್ಷಗಳನ್ನು ಕಳೆಯುವಂತಾದರೆ, ಒಂದು ಯೋಜನೆಯನ್ನು, ಕಾರ್ಯಕ್ರಮವನ್ನು ಅಂಗೀಕರಿಸಿ, ವಿಧಾಯಕ ಕೆಲಸಗಳಿಗೆ ಇಳಿಯುವುದು ಯಾವಾಗ? ನಮಗೆ ಪರಂಪರೆಯಿಂದ ಒಂದೊಂದು ಬಳುವಳಿ ಇದೆ- ನಮ್ಮ ವಾತಾವರಣಕ್ಕೆ ಒಗ್ಗುವ ತತ್ವಗಳವೆ. ಅವುಗಳ ಆಚರಣೆಯಿಂದಲೇ ಕಲ್ಯಾಣಸಿದ್ಧಿಯಾಗುವುದೆಂದು ನಿಸ್ಸಂದೇಹ ನಂಬಬೇಕು. ಎಲ್ಲ ಜನರವಿಚಾರಗಳೂ ಈ ಮಟ್ಟಿಗೆ ಒಂದಾಗಿ ಬೆರೆತು, ಕಾರ್ಯಪ್ರವೃತ್ತರಾಗಲಿ.

—ಓಂ ತತ್ಸತ್.

Read
'NAVAYUGA'
Weekly
Voice of the people
Excellent Media and Reading Value.

ಸಾಮಾನ್ಯ ಶಿಕ್ಷಣ ಕ್ರಮದ ಪುನರುಜ್ಜೀವನ

ಅರ್ವಾಚೀನ ಬೆಳವಣಿಗೆಯ ಇತಿಹಾಸ

ಪ್ರಾಚೀನ ನಾಗರಿಕತೆಯ ಕಾಲದಲ್ಲಿ ಜನಶಿಕ್ಷಣಕ್ಕೆ ಬಹಳ ಮಹತ್ವದ ಸ್ಥಾನವು ಪ್ರಾಪ್ತವಾಗಿತ್ತು. ಪೂರ್ವದಲ್ಲಿ ಭಾರತ-ಚೀನಾಗಳೂ ಪಶ್ಚಿಮದಲ್ಲಿ ಗ್ರೀಕ್-ರೋಮ ರಾಜ್ಯಗಳೂ ಶಿಕ್ಷಣ ಕ್ರಮವನ್ನು ಉಚ್ಛ್ರಾಯ ಸ್ಥಿತಿಗೆ ತಂದು, ಜನಸಾಮಾನ್ಯದ ವಿದ್ಯಾಬುದ್ಧಿಯನ್ನು ಹೆಚ್ಚಿಸುವುದರಲ್ಲಿ ಅಗ್ರಗಣ್ಯ ರಾಷ್ಟ್ರಗಳೆನಿಸಿ ಮೆರೆದುವು. ಆದರೆ ಇತಿಹಾಸದ ಪುಟಗಳು ಸರಿದಂತೆ, ಶಿಕ್ಷಣವು ಅವನತಿಯ ಮಾರ್ಗ ಹಿಡಿಯಿತು; ಪುರಾತನ ಸಂಸ್ಕೃತಿಗಳು ನಶಿಸುತ್ತ ಬಂದಂತೆ, ಶಿಕ್ಷಣದ ಕಡೆಗಿನ ವಾತ್ಸಲ್ಯವೂ ದೂರಾಯಿತು. ಇಂಥದರಲ್ಲಿ—ಹದಿನೆಂಟನೆ ಶತಮಾನದಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಶಿಕ್ಷಣದ ಬಗ್ಗೆ ಕ್ರಾಂತಿಯಾಗಲು—ಅದರ ಪ್ರಭಾವದಿಂದ ಲೋಕವೇ ಮರಳಿ ಎಚ್ಚರಗೊಂಡಿತೆನ್ನಬಹುದು.

ಕ್ರಾಂತಿಯ ಪಲ್ಲವಿ

ರಾಜನ ಸರ್ವಾಧಿಕಾರಕ್ಕೆ ಆಹ್ವಾನವನ್ನು ಕೊಟ್ಟ ಕಾಲ—ಹದಿನೆಂಟನೆ ಶತಮಾನ ರಾಜನ ದೈವಿಕ ವರ್ಚಸ್ಸನ್ನು ಕಡೆಗಣಿಸಿ, ಸಾಮಾನ್ಯ ಪ್ರಜೆಯ ಕಡೆಗೆ ಕಣ್ಣು ತಿರುಗಿಸಬೇಕೆಂದು ದೊಡ್ಡ ಚಳುವಳಿಯೇ ಆಗ ನಡೆಯಿತು. ಪ್ರತಿಯೊಬ್ಬನಿಗೂ ತನಗೆ ಇಚ್ಛೆ ಬಂದಂತೆ ಬದುಕುವ, ಸ್ವತಂತ್ರನಿರುವ ಮತ್ತು ಸುಖ ಅನುಭವಿಸುವ ಅಧಿಕಾರ ಇದ್ದೇ ಇದೆ ಎಂಬ ಘೋಷಣೆಯಿಂದ ದಿಗಂತ ಮೊಳಗಿತು. ಫ್ರಾನ್ಸಿನ ರಾಜ್ಯಕ್ರಾಂತಿಯ ಉಸಿರಾದ ಸ್ವಾತಂತ್ರ್ಯ-ಸಮಾನತೆ ಮತ್ತು ಸಹೋದರತೆಗಳು ಇದಕ್ಕೆ ಪಲ್ಲವಿ ಹಾಡಿದುವು.

ಪ್ರಶಿಯಾದ ಫ್ರೆಡರಿಕ ಮಹಾನುಭಾವನೇ ಜನ ಶಿಕ್ಷಣದ ಅವಶ್ಯಕತೆಯನ್ನು ಮೊದಲಾಗಿ ಮನಗಂಡವನೆನ್ನಬಹುದು. ಅವನು ತನ್ನ ಪ್ರಜೆಗಳಲ್ಲಿ ಅತಿ ಕೆಳಗಿನ ಮಟ್ಟದವರಿಗೂ ಜೀವನಾವಶ್ಯಕವೆನಿಸಿದ ಶಿಕ್ಷಣವನ್ನು ಕೊಡಬೇಕೆಂದು ಬಯಸಿ, ೧೭೬೩ರಲ್ಲಿ ಕಡ್ಡಾಯ ಶಿಕ್ಷಣದ ಕಾಯಿದೆ ಮಾಡಿದನು. ಆದರೆ ಇದನ್ನು ಜಾರಿಗೆ ತರುವ ಒತ್ತಾಯಕ್ಕೆ ಮಾತ್ರ ಇಳಿಯಲಿಲ್ಲ.

ಔದ್ಯೋಗಿಕ ವಿಪ್ಲವ

೧೯ನೆಯ ಶತಮಾನದಲ್ಲಿ ನೂತನ ಶಿಕ್ಷಣ ಕ್ರಮದ ವಿಕಾಸವಾಯಿತು. ಇದಕ್ಕೆ ಔದ್ಯೋಗಿಕ ವಿಪ್ಲವದ ಪರಿಣಾಮವೇ ಹೊಣೆ ಎನ್ನಬೇಕು. ವಿವಿಧ ಉದ್ಯಮಗಳಲ್ಲಿ ಯಶಸ್ವಿಯಾಗಿ ಕೆಲಸ ನಿರ್ವಹಿಸಲು ಸ್ವಲ್ಪ ತಿಳುವಳಿಕೆಯೂ ಕೆಲ ಮಟ್ಟಿನ ಕೌಶಲ್ಯವೂ ಆಗತ್ಯವೆನಿಸಿದುವು. ಅವುಗಳನ್ನು ಒದಗಿಸಿ ಕೊಡಲು ಶಿಕ್ಷಣವೇ ಮಾಧ್ಯಮವಾಯಿತು. ಶಿಕ್ಷಣ ಕ್ಷೇತ್ರವು ಇದರಿಂದಾಗಿ ವಿಸ್ತಾರಗೊಂಡಿತು.

ಇದಕ್ಕೆ ಪುಟವೀಯಲೆಂಬಂತೆ-ಜರ್ಮನಿಗೂ ಫ್ರಾನ್ಸಿಗೂ ನಡೆದ ಯುದ್ಧದಲ್ಲಿ, ನೆಪೋಲಿಯನನ ವಿಜಯಗಳಿಗೆ ಜನಸಾಮಾನ್ಯರಿಗೆ ಶಿಕ್ಷಣವನ್ನು ನೀಡುತ್ತಿರುವುದೇ ಕಾರಣವೆಂದು ಜರ್ಮನಿಗೆ ಮನವರಿಕೆಯಾಯಿತು. ಕಾರಣ ೧೮೦೬ರಲ್ಲಿ ಸಾರ್ವಜನಿಕ ಶಿಕ್ಷಣದಲ್ಲಿ ಪರಿಣಾಮಕಾರಿಯಾದೊಂದು ಯೋಜನೆಯನ್ನು ಕ್ರಮಪಡಿಸಲಾಯಿತು. ಇದೇ ಮುಂದೆ ಔದ್ಯಮಿಕ ಉನ್ನತಿಯ ಕಾಲದಲ್ಲಿ ಆಲದ ಮರದಂತೆ ವಿವಿಧ ವಿಭಾಗಗಳಲ್ಲಿ ಕವಲು ಕವಲಾಗಿ ವಿಸ್ತರಿಸಿ, ಬಲಿಯಿತು.

ವಿಲಾಯತಿಯಲ್ಲಿ ಔದ್ಯೋಗಿಕ ಕ್ಷೇತ್ರದ ಅವಶ್ಯಕತೆಗಳಿಂದಾಗಿ ಶಿಕ್ಷಣದ ಪುನರುಜ್ಜೀವನ ಅಗತ್ಯವೆನಿಸಿದರೂ—ಕಟ್ಟುನಿಟ್ಟಾದ ಧಾರ್ಮಿಕ ವ್ಯವಸ್ಥೆ ಮಾರ್ಗವನ್ನು ತಡೆದು ನಿಂತಿತ್ತು. ಉದ್ಯಮಗಳಲ್ಲಿ ಚಿಕ್ಕ ಮಕ್ಕಳ ದುಡಿಮೆಯ ಪ್ರಮಾಣವು ಶಿಖರಕ್ಕೇರಿದುದರಿಂದ-ಈ ವಿಷಯದಲ್ಲಿ ಕೈ ಹಾಕಿ, ಸರಕಾರವು ಕಡ್ಡಾಯ ಶಿಕ್ಷಣದ ಕಾಯಿದೆ ತರಲು ಕೆಲವು ದಶಕಗಳೇ ಸಂದವು. ಕೊನೆಗೂ ೧೮೭೦ರಲ್ಲಿ ಎಲ್ಲ ನಾಗರಿಕರಿಗೆ ಶಿಕ್ಷಣ ನೀಡಬೇಕೆಂಬ ಉದ್ದೇಶಕ್ಕೆ ಕಾಯಿದೆ ಸ್ವರೂಪ ಬಂತು.

ಬೀಜ ಮಂತ್ರ

ಇದರ ಮರು ವರ್ಷ ಪುನಃ ಫ್ರಾಂಕೊ—ಪ್ರಶಿಯನ್ ಯುದ್ಧ ಸಂಭವಿಸಿದಾಗ, ಫ್ರೆಂಚರು ಈ ಬಾರಿ ಸೋತರು. ಪ್ರಶಿಯನರು ಉಚ್ಚ ಮಟ್ಟದ ಜನ ಶಿಕ್ಷಣಾ ಪದ್ಧತಿಯೇ ತಮಗೆ ಸೋಲು ತಂದಿತೆಂಬುದನ್ನು ಮನಗಾಣಲು ಫ್ರೆಂಚರಿಗೆ ಕಠಿಣವೆನಿಸಲಿಲ್ಲ. ಒಂದು ಶತಮಾನಕ್ಕೆ ಹಿಂದೆಯೇ ಫ್ರಾನ್ಸಿನ ಮಹಾಕ್ರಾಂತಿಯು ಧರ್ಮಾರ್ಥವಾದ ಕಡ್ಡಾಯ ಶಿಕ್ಷಣ ಬೇಕೆಂದು ಗುಲ್ಲೆಬ್ಬಿಸಿದ್ದರೂ ಅದನ್ನು ಕಾರ್ಯಗತ ಮಾಡಲು ಏನೊಂದೂ ಕ್ರಮ ಕೈಗೊಂಡಿರಲಿಲ್ಲ. ಘೋಷಣೆಯೊಂದರಿಂದಲೇ ಕೆಲಸ ಸಾಗದೆಂಬುದೂ ವ್ಯವಸ್ಥಿತವಾದ ಕಾರ್ಯ ಪ್ರಣಾಳಿಯೂ ಅತ್ಯವಶ್ಯವೆಂದೂ ಇದರಿಂದ ತಿಳಿದು ಬರಲು—ಫ್ರಾನ್ಸು ಈ ದಿಶೆಯಲ್ಲಿ ಮುನ್ನಡಿ ಇಟ್ಟಿತು. ಸಾಮಾನ್ಯ ಪ್ರಜೆಯು ಗೃಹದ್ವಾರವನ್ನೂ [illegible] ಸೌಂದರ್ಯ ಪ್ರವೇಶಿಸುವಂತಾಯಿತು. ೧೮೮೧-೨ರ ಸುಮಾರಿಗೆ ಎಲ್ಲ ಪ್ರಜೆಗಳಿಗೂ ಶಿಕ್ಷಣಾಧಿಕಾರವು ಕಾನೂನಿನನ್ವಯ ಪ್ರಾಪ್ತವಾಯಿತು.

ಅಂದಿನಿಂದ ಪುರೋಗಾಮಿಯಾದ ಎಲ್ಲ ರಾಷ್ಟ್ರಗಳಲ್ಲೂ ಧರ್ಮಾರ್ಥವಾದ ಕಡ್ಡಾಯ ಶಿಕ್ಷಣ ಹಬ್ಬಿತು. ಇದು ತೀರ ನವೀನ ರೀತಿಯದಾಗಿದ್ದು, ಅಮೇರಿಕಾಧ್ಯಕ್ಷ ಥೋಮಸ್ ಜಾಫರ್‌ಸನ್ ಹೇಳಿದಂತೆ--ಕೆಲಸ ಮಾಡಲು ಕೆಲಸದಿಂದಲೇ ಕಲಿಯುವುದು--ಎಂಬುದದರ ಬೀಜ ಮಂತ್ರ ಭವಿಷ್ಯದ ಕಗ್ಗತ್ತಲನ್ನು ನವೀನ ಶಿಕ್ಷಣ ಪ್ರಣಾಳಿಯ ಬೆಳಕು ಹೊಡೆದೋಡಿಸಿತು.

ರಾಷ್ಟ್ರ ಸಂಘದ ಆಸ್ಥೆ

ಪ್ರಾಥಮಿಕ ಶಿಕ್ಷಣವು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಜನಸಾಮಾನ್ಯಕ್ಕೆ ದೊರೆಯಬೇಕಾದುದು ಅಗತ್ಯ ಮತ್ತು ನ್ಯಾಯವೆಂಬುದರಿಂದಲೂ ಸರ್ವಸಾಧಾರಣವಾಗಿ ಎಲ್ಲ ಸರಕಾರಗಳೂ ಈ ಕುರಿತು ಆಸಕ್ತಿ ತಳೆದಿರುವಾಗ ಅವುಗಳ ಉದ್ದೇಶಕ್ಕೊಂದು ಮೂರ್ತರೂಪ ಕೊಡಬೇಕೆ

For Protection and Provision
Consult
The New Guardian of India Life Insurance Co., Ltd.
Estd] Head office: **MADRAS** [1934
A Policy in this progressive Life Office is good investment; its Agency is valuable business connection.
Applications for representation are invited from influential persons.
Please apply to:
The Branch Manager,
Diamond Building, Hampankatta,
MANGALORE, S. K.

ZANDU PHARMACEUTICAL WORKS LTD.
Manufacturers of Ayurvedic and Alopathic Medicines BOMBAY, 14.

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ **3/-** ಮಾತ್ರ.

ದೊರೆಯುವ ಸ್ಥಳಗಳು:
1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ.
2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು
4 ಎಲ್. ಎಸ್. ಶರ್ಮ, ಹಜೂರು ರಸ್ತೆ ಮಂಗಳೂರು.
ಮತ್ತಿತರ ಸೇಲ್ ಏಜಂಟರಲ್ಲಿ

DAMODAR & CO.,
Nainiappa Naicken Street, Park Town–**MADRAS** 3.

ದೂ ಸಂಯುಕ್ತ ರಾಷ್ಟ್ರ ಸಂಘ ಹೇಳಿತು. ಮಾನವೀಯ ಹಕ್ಕು ಬಾಧ್ಯತೆಗಳ ಜಾಗತಿಕ ಘೋಷಣೆಯಲ್ಲಿ ಪ್ರತಿಯೊಬ್ಬನಿಗೂ ಶಿಕ್ಷಣಾಧಿಕಾರವಿದೆ. ಕನಿಷ್ಠ ಪಕ್ಷಕ್ಕೆ ಪ್ರಾಥಮಿಕ ಮತ್ತು ಮೂಲ ಭೂತ ಮಟ್ಟದಲ್ಲಿ ಶಿಕ್ಷಣವು ಧರ್ಮಾರ್ಥವೂ ಕಡ್ಡಾಯವೂ ಆಗಬೇಕು ಎಂದದು ಒಪ್ಪಿಕೊಂಡಿದೆ.

ಅನಕ್ಷರಸ್ಥರ ಸಂಖ್ಯೆ ಹೆಚ್ಚಿರುವ ರಾಷ್ಟ್ರಗಳಲ್ಲಿ ಅದನ್ನು ನಿವಾರಿಸುವ ಬಗೆ ಹೇಗೆಂಬುದನ್ನು ಲಕ್ಷ್ಯಪೂರ್ವಕ ವಿಚಾರಿಸಲಾಗುತ್ತಿದೆ. ಸಂಯುಕ್ತ ರಾಷ್ಟ್ರ ಸಂಘವು ಅಂತರರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಯ ಸಹಕಾರದೊಂದಿಗೆ, ತುಂಬ ಕೆಲಸ ಮಾಡುತ್ತಿದೆ. ಕಳೆದ ವರ್ಷ ಜಿನೀವಾದಲ್ಲಿ ಹಲ ರಾಷ್ಟ್ರಗಳ ಪ್ರತಿನಿಧಿಗಗಳು ಸೇರಿ, ಈ ಸಮಸ್ಯೆಯ ವಿಶ್ವಸ್ವರೂಪದ ವಿಮರ್ಶೆ ಮಾಡಿದರು. ಪ್ರತಿಯೊಂದೂ ದೇಶವು ರಾಷ್ಟ್ರೀಯ ಶಿಕ್ಷಣ ಯೋಜನೆಯನ್ನು ಅಲ್ಪಾವಧಿ ಮತ್ತು ದೀರ್ಘಾವಧಿ ಪ್ರಯೋಜನಗಳನ್ನು ಕಣ್ಣ ಮುಂದಿಟ್ಟುಕೊಂಡು ರೂಪಿಸಬೇಕೆಂದು ಅವರು ನಿಶ್ಚಯಿಸಿದರು. ದೇಶದ ಸಾಮಾನ್ಯ ಆರ್ಥಿಕ ಸ್ಥಿತಿ ಮತ್ತು ಸಾಮಾಜಿಕ ಅಭಿವೃದ್ಧಿಯೊಡನೆ ಶಿಕ್ಷಣ ಕ್ರಮದ ವಿಕಾಸ ಯೋಜನೆಗಳು ನಿಕಟಸಂಬಂಧವಿಟ್ಟುಕೊಳ್ಳಬೇಕೆಂದೂ ಅವರು ತೀರ್ಮಾನಿಸಿದರು.

ಶಿಕ್ಷಣದ ಸಮಸ್ಯೆ

ಕಡ್ಡಾಯ ಶಿಕ್ಷಣವು ಕಾನೂನಾಗಿರುವ ರಾಷ್ಟ್ರಗಳಲ್ಲಿ ಸಹ-ಬಡತನವು ಸರಕಾರದ ಒತ್ತಾಯಕ್ಕೆ ವಿಘ್ನ ತರುತ್ತಿದೆ. ಕೆಲವು ದೇಶಗಳಲ್ಲಿ ಒತ್ತಾಯ ತಂದಿದ್ದರೂ ನಿಜವಾಗಿ ಶಾಲೆಗೆ ಹೋಗಿ ಕಲಿಯುವ ಮಕ್ಕಳು ಶೇಕಡಾ ೧೦ ಅಥವಾ ೨೦ ಮಾತ್ರ. ಕೆಲವು ಕಡೆಗಳಲ್ಲಿ ವರ್ಣಭೇದ ನೀತಿಯೂ ಅನುಸರಿಸಲ್ಪಡುತ್ತಿದ್ದು, ಸರಕಾರದ ಅನುಗ್ರಹಕ್ಕೆ ಪಾತ್ರರಾದವರಿಗಷ್ಟೇ ಮೇಲ್ಪಟ್ಟದ ಶಿಕ್ಷಣ ದೊರೆಯುವುದು.

ಅಭಿವೃದ್ಧಿ ಕ್ಷೇತ್ರದಲ್ಲಿ ತುಂಬ ಹಿಂದುಳಿದ ರಾಷ್ಟ್ರಗಳಲ್ಲಿ—ಬಡತನದ ಭೂತಕ್ಕೆ ಬಲಿಯಾದ ಮನೆಗಳಲ್ಲಿ ಮಕ್ಕಳೇ ದುಡಿದು ಹೊಟ್ಟೆಗೊಂದಿಷ್ಟು ಹಿಟ್ಟು ಸಂಪಾದಿಸಬೇಕಾಗಿದೆ. ಇಂಥಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸಿ ಕೊಡಿರಿ ಎಂದು ಸರಕಾರ ಒತ್ತಾಯಿಸಬೇಕಾದರೆ— ಹೆತ್ತವರ ಹೊರೆ ಕಡಿಮೆ ಮಾಡುವ ಸೌಕರ್ಯಗಳ ಅವಿಷ್ಕರಣ ಬೇಕಾಗುತ್ತದೆ. ಹೀಗಿಲ್ಲದಿದ್ದಲ್ಲಿ ಮಕ್ಕಳು ಶಾಲೆಗೆ ಹೋಗುವುದೇ ಇಲ್ಲ—ಕೆಲಸ ಬೊಗಸೆಗಳಲ್ಲಿ ಮಗ್ನರಾಗುವರು. ಸರಕಾರದ ಒತ್ತಾಯ ವ್ಯರ್ಥವಾಗುತ್ತದೆ.

ಸಮಾಧಾನ

ಕೆಲವು ರಾಷ್ಟ್ರಗಳು ಈಗಾಗಲೇ ಇದಕ್ಕೆ ಸಮಾಧಾನ ಕಲ್ಪಿಸಿವೆ-ಮಕ್ಕಳಿಗೆ ಧರ್ಮಾರ್ಥವಾದ ಊಟ, ಬಟ್ಟೆಬರೆಗಳನ್ನು ಒದಗಿಸಿ, ಹೆತ್ತವರಿಗೆ ಧರ್ಮಾರ್ಥ ಸಂಚಾರಾನುಕೂಲತೆಗಳನ್ನು ಕಲ್ಪಿಸಿ, ಮಕ್ಕಳ ದುಡಿಮೆಯ ನಷ್ಟಕ್ಕೆ ಪರಿಹಾರ ಕೊಡುತ್ತಿವೆ.

ಈ ಸುಧಾರಣೆಗಳಿಗೆ ಹಿಂದುಳಿದ ದೇಶಗಳಲ್ಲಿ ಹೇಗೆ ಅವಕಾಶ ದೊರೆತೀತು? ಇವುಗಳಿಗೆ ಬೇಕಿರುವ ಹಣವೆಲ್ಲಿಂದ ಬರಬೇಕು? ಅದರೂ ಸರಕಾರವು ತನ್ನೆಲ್ಲ ಪ್ರಜೆಗಳು ಶಿಕ್ಷಣ ಪಡೆದು ಬುದ್ಧಿವಂತರಾಗಬೇಕೆಂದು ಬಯಸುವ ಪಕ್ಷದಲ್ಲಿ—ಶಿಕ್ಷಣದ ಬಗ್ಗೆ ನಿಗದಿಸಿದ ಹಣದ ಮೊತ್ತವನ್ನು ಬಹಳಷ್ಟು ಹೆಚ್ಚಿಸ ಬೇಕಾಗುತ್ತದೆ. ವಿದ್ಯಾಸಂಪನ್ನರಾದ ನಾಗರಿಕರಿರುವ ರಾಷ್ಟ್ರ ಶೀಘ್ರವಾಗಿಯೇ ತನ್ನ ಅಭ್ಯುದಯ ಸಾಧಿಸಿಕೊಳ್ಳುವುದು—ಎಂಬ ಸಮಾಧಾನವೇ ಇಂಥ ಸಾಹಸಕ್ಕೆ ಧುಮುಕುವಲ್ಲಿ ನಮಗೆ ಪ್ರೋತ್ಸಾಹವನ್ನೂ ಸ್ಫೂರ್ತಿಯನ್ನೂ ತರಬೇಕಷ್ಟೆ.

ಲೇಖಾಂಕ ೨ ಹಿಂದುಳಿದ ದೇಶಗಳಿಗೆ ಆರ್ಥಿಕ ನೆರವು

ವಿದೇಶೀ ಬಂಡವಾಳದ ಇತಿಮಿತಿ

ಆರ್ಥಿಕ ದಾಸ್ಯ

ಮೊನ್ನೆ ಭಾರತ ಪಾರ್ಲಿಮೆಂಟಿನಲ್ಲಿ ರಾಷ್ಟ್ರಾಧ್ಯಕ್ಷರ ಭಾಷಣದ ಕುರಿತು— ಅರ್ಥಾತ್, ಸರಕಾರದ ಧೋರಣದ ಬಗ್ಗೆ—ತುರುಸಿನ ಚರ್ಚೆ ನಡೆದಾಗ, ವಿರೋಧೀ ಪಕ್ಷದ ಗುಂಪು ಕಟುವಾಗಿ ಟೀಕಿಸಿದ ವಿಷಯಗಳಲ್ಲಿ ವಿದೇಶೀ ನೆರವಿಗೆ ಕೈಯೊಡ್ಡುವ ನಮ್ಮ ಸರಕಾರದ ನೀತಿಯೂ ಒಂದು. ಬಂಡವಾಳವನ್ನು ಪರದೇಶಗಳಿಂದ ಸ್ವೀಕರಿಸಿ, ಅವುಗಳ ಬಲದ ಮೇಲೆ ನಮ್ಮ ಉದ್ಯಮಗಳನ್ನು ಕಟ್ಟುವುದರಿಂದ, ನಾವು ಆರ್ಥಿಕ ದಾಸ್ಯವನ್ನು ಅನುಭವಿಸುತ್ತಿರಬೇಕು. ಸ್ವಾಭಿಮಾನಿಯಾದ ಯಾವುದೇ ರಾಷ್ಟ್ರವು ಇಂಥ ಅಪಮಾನಕರವಾದ ಕಾರ್ಯಕ್ಕೆ ಮುಂದುವರಿಯಲಾರದು. ಆದರೆ ಸರಕಾರದ ವಿಚಾರದಂತೆ—ನಾವೀಗ ವಿದೇಶಗಳಿಂದ, ಮುಖ್ಯವಾಗಿ ಅಮೇರಿಕೆಯಿಂದ, ಪಡೆಯುವ ನೆರವು, ನಮಗೆ ಬಂಧನಕಾರಿಯಾದುದಲ್ಲ. ದೇಶದ ಸಂಪತ್ತನ್ನು ಉಚಿತ ರೀತಿಯಲ್ಲಿ ವಿನಿಯೋಗಿಸಿ, ವಿವಿಧ ಉದ್ಯಮಗಳನ್ನು ಬೆಳೆಸಿ, ಆರ್ಥಿಕ ಸುವ್ಯವಸ್ಥೆಯನ್ನು ಸ್ಥಾಪಿಸುವುದೇ ನಮ್ಮ ಉದ್ದೇಶ. ಅಮೇರಿಕೆಯು ನೆರವು ನೀಡುವಲ್ಲಿ ಯಾವುದೇ ಅಪಾಯಕಾರಿ ಶರತ್ತನ್ನು ಹಾಕಿಲ್ಲ. ಅದರ ಸಹಾಯ ಸ್ವಾಭಾವಿಕವಾದ ಕನಿಕರದಿಂದಲೂ ಉಪಕಾರ ಬುದ್ಧಿಯಿಂದಲೂ ಹುಟ್ಟಿಕೊಂಡಿದೆ ಒಂದು ವೇಳೆ ನಮಗೆ ಈ ರೀತಿಯಲ್ಲಿ ಸಹಾಯ ಸಿಗುವುದೂ ಬೇಡವಾಗಿದ್ದರೆ—ನಾವದನ್ನು ನೇರಾಗಿ ನಿರಾಕರಿಸಬಲ್ಲೆವು.

ವ್ಯಾಕುಲ ಮನೋವೃತ್ತಿ

ಈ ಮಾತಿನಲ್ಲಿ ನಮಗೆ ಸರಕಾರದ ವ್ಯಾಕುಲ ಮನೋವೃತ್ತಿ ಸ್ಪಷ್ಟವಾಗಿ ಗೋಚರಿಸುತ್ತದೆ. ನಿಜವಾಗಿಯೂ ನಮ್ಮ ವಿಷಮ ಪರಿಸ್ಥಿತಿಯಲ್ಲಿ, ಬಂಡವಾಳದ ಕೊರತೆ ಬಹಳ ಕಂಡುಬರುವಾಗ, ಸಂಪತ್ತಿನಿಂದ ಸಮೃದ್ಧವಾದ ದೇಶಗಳು ಧನಸಹಾಯ ನೀಡುವೆವೆಂದು ತಾವಾಗಿ ಮುಂಬರುವಾಗ ಸ್ವೀಕರಿಸದಿರುವಷ್ಟು ಮಟ್ಟಿನ ಸ್ಥೈರ್ಯವನ್ನು ತೋರುವುದು ಬಹಳ ಕಠಿಣ ಕಾರ್ಯ. ಅದರಲ್ಲೂ ರಾಷ್ಟ್ರಾಭಿಮಾನ ಜಾಗೃತವಿರುವಾಗ ಮತ್ತು ಧ್ಯೇಯವಾದಿಯಾದ ಜನಾಂಗದ ಮಟ್ಟಿಗೆ ಇದು ದ್ವಂದ್ವ ಸ್ವರೂಪ ಧಾರಣ ಮಾಡುತ್ತದೆ. ಸಹಾಯ ಸ್ವೀಕರಿಸದಿದ್ದರೆ, ಬೇರೆ ಉಪಾಯವಿಲ್ಲ ಎಂಬ ನಿರಾಶೆ—ಸ್ವೀಕರಿಸಿದರೆ, ಎಲ್ಲಿ ತಮ್ಮ ಸರ್ವನಾಶವಾದೀತೋ ಎಂಬ ಭಯ. ಇದಕ್ಕೆ ಪರಿಹಾರವೇನು?

ಗಾಂಧೀ ವಿಚಾರ

ನಮ್ಮ ದೇಶದಲ್ಲಿ ಗಾಂಧೀ ವಿಚಾರಗಳಿಗೆ ತುಂಬ ಬೆಲೆಯುಂಟು—ಮೊನ್ನೆ ತಾನೆ ಶ್ರೀ ಶಂಕರರಾವ ದೇವರು ಅಮೇರಿಕೆಯ ಹಣದ ಕುರಿತು ಅಭಿಪ್ರಾಯಪಡುತ್ತಾ, ಮಾನಸಿಕ ಹಂಗಿನ ಭಾವನೆಯಿಂದ ಭಾರತದ ನಾಗರಿಕರು ಮುಕ್ತರಿರಬೇಕಾದರೆ, ಅಮೇರಿಕೆಯ ಹಣಕ್ಕೆ ಕೈಯೊಡ್ಡದೆ— ದೇಶದೊಳಗಿನಿಂದಲೇ ಬಂಡವಾಳವನ್ನು ಕೂಡಿಸಬೇಕ ಎಂದರು. ಪುರುಷನು ಹಣಕ್ಕೆ ದಾಸನಾಗುವನ —ಎಂದು ಧರ್ಮವಚನವಿದೆ. ಅಮೇರಿಕೆಯ ಹಣವು ಎಷ್ಟೇ ಪ್ರಾಮಾಣಿಕ ಬುದ್ಧಿಯಿಂದ ಸಿಗುತ್ತಿರಲಿ—ಮೊದಲೇ ಕೃತಜ್ಞತೆಯ ಭಾರದಿಂದ ಜರ್ಜರಿತವಾದ ಭಾರತೀಯರ ಮನಸ್ಸು ಇದರಿಂದ ಇನ್ನಷ್ಟು ದೈನ್ಯಕ್ಕೆ ಒಳಗಾಗುವುದು. ಆದುದರಿಂದ ಸ್ವಾವಲಂಬನದ ಉದ್ದೇಶಪೂರ್ತಿಗೆ ಅನುಸರಿಸಬೇಕಾದ ಮಾರ್ಗ ಕೂಡ— ನಿರಾಪದವಾಗಿರಬೇಕು ಈ ಮಟ್ಟಿಗೆ ಯೋಜನಾ ಆಯೋಗವು ತನ್ನ ಪಂಚವಾರ್ಷಿಕ ಯೋಜನೆಯನ್ನು ಕಾರ್ಯರೂಪಕ್ಕೆ ಇಳಿಸಲು ವಿದೇಶೀ ಬಂಡವಾಳದ ಬದಲಿಗೆ— ದೇಶದೊಳಗಿಂದಲೇ ಹಣ ಕೂಡಿಸುವ ಆಶೆ ವ್ಯಕ್ತಪಡಿಸಿದದನ್ನು ಅಭಿನಂದಿಸಬೇಕು. ಇದೇ ಪಂಚವಾರ್ಷಿಕ ಯೋಜನೆಯ ವೈಶಿಷ್ಟ್ಯ.

ಮಧ್ಯ ಮಾರ್ಗ

ಹೀಗಿದ್ದರೂ ನಮಗೆ ಉದ್ಯೋಗ ಕ್ಷೇತ್ರದಲ್ಲಿ—ಸ್ವಂತ ಬಂಡವಾಳ ಸಾಲುವುದಿಲ್ಲ. ಮುಖ್ಯವಾಗಿ (೧) ಸಾಕಷ್ಟು ಯಂತ್ರ ಸಲಕರಣೆಯು ಮತ್ತು ತಾಂತ್ರಿಕ

(೧೦ನೇ ಪುಟ ನೋಡಿರಿ)

ಪ್ರಕಟಣೆ

ಉಡುಪಿ ತಾಲೂಕು ಪಾರಂಪಳ್ಳಿ ಗ್ರಾಮದಲ್ಲಿರುವ ಹೊಸಮನೆ ಹೊನ್ನಮ್ಮ ಸೆಟ್ಟಿಯ ಮಗಳು ರುಕ್ಮಿಣಿ ಸೆಡ್ತಿಯು ಈ ಮೂಲಕ ತಿಳಿಯಪಡಿಸುವುದೇನೆಂದರೆ

ನಾನು ನನ್ನ ಕುಟುಂಬದಲ್ಲಿ ಎಜಮಾನ್ತಿಯಾಗಿ ಕುಟುಂಬದ ಮ, ನನ್ನ ಸ್ವಂತ ಹಕ್ಕಿನ ಆಸ್ತಿಗಳ ಆಡಳ್ತೆ ನಾನೆ ನೋಡಿ ಬರುತ್ತೇನೆ. ನನಗೆ ಮ, ನನ್ನ ಕುಟುಂಬಕ್ಕೆ ಎಷ್ಟಾನ್ನಾದರೂ ಸಾಲವಿರುವದಿಲ್ಲ. ಕುಟುಂಬಕ್ಕೆ ಸಾಲಮಾಡುವ ಗರ್ಜ ಕೂಡಾ ಇರುವದಿಲ್ಲ ನನ್ನ ಹಿರೀ ಮಗ ಅಣ್ಣಪ್ಪ ಸೆಟ್ಟಿಯು ತನ್ನ ಮಂದ ಬುದ್ಧಿಯಿಂದ ಬೇರೆಯವರ ಶಿಕಾರಿಗೆ ಸಿಕ್ಕಿಕೊಟ್ಟು ಕುಟುಂಬಕ್ಕೆ ನಷ್ಟ ಮ ತೊಂದರೆಗಳು ಮಾಡುವ ಯಂತ್ರದಲ್ಲಿರುವದಾಗಿ ನನಗೆ ತಿಳಿದು ಬರುತ್ತದೆ—ಆದಕಾರಣ ನನ್ನ ಕುಟುಂಬಕ್ಕೆ ಬಾಧಕ ಮ ಹಾನಿಯಾಗುವಂತಾ ಮತ್ತು ಯಾತರ ಯಾವ ತರದ ಲೇವಾದೇವಿಗಳೂ ವಹಿವಾಟುಗಳೂ ಸದರಿ ಅಣ್ಣಪ್ಪ ಸೆಟ್ಟಿಯು ಕೂಡೆ ಯಾರೂ ಮಾಡಬಾರದಾಗಿಯೂ— ಇದಕ್ಕೆ ವಿರೋಧವಾಗಿ ಇಷ್ಟರತನಕ ಯಾರೂ ಮಾಡಿದ್ದಲ್ಲಿ ಯಾ ಇನ್ನು ಮುಂದೆ ಮಾಡಿದ್ದೆ ಆ ವ್ಯವಹಾರವು ನನ್ನ ಮೇಲೆ ... ನನ್ನ ಕುಟುಂಬದ ಮೇಲಾಗಲೀ ಬೋಜೆ ... ದು ಎಂಬ ಖಾತ್ರಿ ಈ ಮೂಲಕ ಸರ್ವಜನರಿಗೂ ತಿಳಿಯಪಡಿಸಿಕೊಳ್ಳಲಾಗಿಯದೆ.

● ಈ ಎಡ ಹೆಬ್ಬೆಟ್ಟು ಗುರ್ತು
ರುಕ್ಮಿಣಿ ಸೆಡ್ತಿ ರುಜು.

ಹಾರಾಡಿ, ತಾ॥ 23-5-1952

ಚತುರ್ಥ ವಿಮಾಗಣನೆಯ ಫಲಿತಾಂಶ

(1947ರಿಂದ 1950ರ ವರೆಗೆ)

* * * * * * *

ತಾರೀಕು 31-12 1950ಕ್ಕೆ ನಡೆಸಿದ ವಿಮಾಗಣನೆಯಲ್ಲಿ ಆಜೀವ ಮತ್ತು ಉಂಬಳಿ ವಿಮಾ ಪೋಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ ಅನುಕ್ರಮವಾಗಿ ರೂ. 12/- ಮತ್ತು ರೂ 9/-ರಂತೆ ಬೋನಸನ್ನು ಘೋಷಿಸಿದೆ.

The Canara Mutual Assurance Co. Ltd.

Head Office: **UDIPI**, S. India.

ಸ್ಥಾಪನೆಯಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಪಾರ್ಲಿಮೆಂಟಿನ

ಸರಕಾರದ ಧೋರಣೆಗೆ ಅನುಕೂಲ ಮತ

ಹೋದಸಲ ಸೂಚಿಸಿದಂತೆ, ಪಾರ್ಲಿಮೆಂಟಿನಲ್ಲಿ ರಾಷ್ಟ್ರಾಧ್ಯಕ್ಷರ ಭಾಷಣದ ಕಾರಿತು ಆಭಾರ ಸೂಚಿಸುವ ಗೊತ್ತುವಳಿಯು ಪ್ರಚಂಡ ಬಹುಮತದಿಂದ ಸ್ವೀಕಾರಗೊಂಡಿತು. ಸರಕಾರದ ಧೋರಣವನ್ನು ಕಮ್ಯೂನಿಸ್ಟರಾದಿಯಾಗಿ ವಿರೋಧಿಗುಂಪಿನವರು ಬಾಯಿತುಂಬ ಟೀಕಿಸಿದರು. ಆದರೆ, ಸರಕಾರದ ಕಡೆಯಿಂದ ಸಮರ್ಪಕವಾದ ಮಾರುತ್ತರವು ಬಂದು, ಸಂಶಯಗಳನ್ನೆಲ್ಲ ದೂರೀಕರಿಸಿತು. ಈಗಾಗಲೇ ವಿವಿಧ ಮಸೂದೆಗಳು ಪಾರ್ಲಿಮೆಂಟಿನಲ್ಲಿ ಮಂಡಿಸಲ್ಪಡುತ್ತಿವೆ. ೧೯೫೩-೫೪ನೇ ವರ್ಷದ ರೈಲ್ವೆ ಮುಂಗಡಪತ್ರವೂ, ಸಾಮಾನ್ಯ ಮುಂಗಡ ಪತ್ರವೂ ಈಗ ಚರ್ಚೆಗೆ ಬಂದಿವೆ.

ರಾಜ್ಯ ಪರಿಷತ್ತಿನಲ್ಲಿ

ವಿರೋಧಿ ಗುಂಪಿನವರು ಮಾಡಿದ ಟೀಕೆಗಳಿಗೆ ರಾಜ್ಯ ಪರಿಷತ್ತಿನಲ್ಲಿ ಕಾಂಗ್ರೆಸ ಧುರೀಣರಾದ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರೂ ವಿದೇಶ ಧೋರಣದ ಮಟ್ಟಿಗೆ ಶ್ರೀ ಜವಾಹರಲಾಲ ನೆಹರೂ ಅವರೂ, ಸರಿಯಾದ ಸಮಾಧಾನ ಹೇಳಿದರು. ಕಾಮನವೆಲ್ತದಲ್ಲಿ ಸದಸ್ಯ ರಾಷ್ಟ್ರವಾಗಿ ಉಳಿಯಲು ಭಾರತವು ಸ್ವೇಚ್ಛೆಯಿಂದ ಬಯಸಿದೆ. ಇದರಲ್ಲಿ ಯಾವ ತರದ ನಿರ್ಬಂಧಕ್ಕೂ ಭಾರತವು ಒಳಗಾಗಬೇಕಿಲ್ಲ. ನಮಗೆ ಬೇಡವೆನಿಸಿದಾಗ ಸುಲಭದಲ್ಲಿ ಕಾಮನವೆಲ್ತನಿಂದ ಹೊರ ಬೀಳಬಲ್ಲೆವು. ಆದರೆ ಸದ್ಯಕ್ಕೆ ಅದರಿಂದ ನಮ್ಮ ಒಳ್ಳೆಯದು ಮಾಡಿಕೊಂಡಂತೆ ಆಗುವುದಿಲ್ಲ. ವಿದೇಶೀ ಬಂಡವಾಳವನ್ನು ಸ್ವಾಗತಿಸುವುದಕ್ಕೂ ಇದೇ ನೀತಿ ಅನ್ವಯಿಸುವುದು. ರಾಜಕೀಯವಾದ ಶರತ್ತುಗಳೇನೂ ಇಲ್ಲದಿರುವಾಗ—ವಿದೇಶೀ ಬಂಡವಾಳವನ್ನು ಭಾರತದ ಅಭಿವೃದ್ಧಿಗಾಗಿ ಉಪಯೋಗಿಸಿದರೆ ಕೆಡುಕಿಲ್ಲ ಎಂಬುದರಿಂದ ಹಾಗೆ ಮಾಡುತ್ತೇವೆ. ಭಾರತದ ಆಡಳಿತಾಂಗದ ಮೇಲೆ ಪ್ರಭಾವ ಬೀರಿ ಧೋರಣೆಯನ್ನು ಬದಲಿಸುವಷ್ಟರ ಮಟ್ಟಿನ ಯಾವ ಹೊಣೆಗಾರ ಸ್ಥಾನದಲ್ಲಿಯೂ ಬ್ರಿಟಿಷ ಅಧಿಕಾರಿಗಳಿರುವುದಿಲ್ಲ. ಅಮೇರಿಕೆಯ ತಂತ್ರಜ್ಞ- ನೆರವು ನಮಗೆ ಅನಗತ್ಯವೆನಿಸಿದಾಗ, ಅವರನ್ನು ಹೋಗಲಿಕ್ಕೆ ಹೇಳಬಹುದು. ಕೊರಿಯಾ ಯುದ್ಧದಲ್ಲಿ ಮಾನವೀಯ ಅಂತಃಕರಣ ಭಾವದಿಂದ ವೈದ್ಯಕೀಯ ಪಥಕವನ್ನು ಕಳಿಸಲಾಯಿತು- ಕಾಶ್ಮೀರ ಪ್ರಶ್ನೆಯನ್ನು ಪಾಕಿಸ್ತಾನದೊಡನೆ ಶಾಂತಿಯಿಂದ ಬಗೆಹರಿಸುವುದು ನಮ್ಮ ಇಷ್ಟ. ಸದ್ಯಕ್ಕೆ ಕಾಶ್ಮೀರವು ವಿದೇಶ ವ್ಯವಹಾರ, ಸಂರಕ್ಷಣೆ ಮತ್ತು ಸಾರಿಗೆ ಸಂಪರ್ಕಗಳ ಮಟ್ಟಿಗೆ ಮಾತ್ರ ಭಾರತವನ್ನು ಕೂಡಿಕೊಂಡಿದೆ. ಒಳಾಡಳಿತವನ್ನೆಲ್ಲ ಅದು ತನ್ನ ಸ್ವಂತ ಜವಾಬ್ದಾರಿಯ ಮೇಲೆ ನಡೆಸುತ್ತಿದೆ. ನಮ್ಮ ವಿಶ್ವಾಸವನ್ನು ಕಾಶ್ಮೀರ ಜನತೆಯು ಗಳಿಸಬೇಕು. ಆಗ ಮಾತ್ರ ಭಾರತಕ್ಕೆ ಕಾಶ್ಮೀರವು ಇನ್ನೂ ಹೆಚ್ಚಿನ ವಿಷಯಗಳನ್ನು ಒಪ್ಪಿಸಿಕೊಟ್ಟೀತು—ಹೀಗೆ ಶ್ರೀ ಅಯ್ಯಂಗಾರರು ಹೇಳಿದರು. ಅವರು ಕಮ್ಯೂನಿಸ್ಟ ತತ್ವಾದರ್ಶವನ್ನು ಅಲ್ಲಗಳೆಯಲಿಲ್ಲ, ತಮ್ಮ ಕಾರ್ಯಗಳಲ್ಲಿ ಹಿಂಸೆಯನ್ನು ಪ್ರದರ್ಶಿಸುತ್ತಿರುವವರೆಗ ಕಾಲ ಮತ್ತು ಹಿಂಸಾಚಾರಗಳಲ್ಲಿ ಶ್ರದ್ಧೆ ಇದ್ದವರು ಸಮಯ ಕಮ್ಯೂನಿಸ್ಟರು ನಾಗರಿಕ ಸರಕಾರದ ವೈರಿಗಳೇ ಆಗುವರು. ಆದುದರಿಂದ ಅವರೊಡನೆ ಸರಕಾರವು ಶತ್ರು ನೀತಿಯನ್ನೇ ಅನುಸರಿಸಬೇಕಾಗುತ್ತದೆ ಎಂದರು.

ನೆಹರೂ ಹೇಳಿಕೆ

ಪ್ರಧಾನಿ ನೆಹರೂ ಸರಕಾರದ ವಿದೇಶ ಧೋರಣೆ ಸಮಂಜಸವಾಗಿದೆ ಎಂದು ಮನವರಿಕೆ ಮಾಡಿ ಕೊಟ್ಟರು. ಭಾರತದಲ್ಲಿ ಬೇರೆ ಬೇರೆ ವಿಷಯಗಳ ಕುರಿತು ಭಿನ್ನಾಭಿಪ್ರಾಯಗಳಿವೆ. ಆದರೆ ವಿದೇಶ ಧೋರಣೆಯ ಮಟ್ಟಿಗೆ ಹೆಚ್ಚಿನವರು ಒಮ್ಮತವನ್ನು ವ್ಯಕ್ತಪಡಿಸುವರು. ಜಾಗತಿಕ ದ್ವೇಷವನ್ನೂ ಪರಸ್ಪರ ದೂಷಣೆಯನ್ನೂ ಕಡಿಮೆ ಮಾಡಿ, ಶಾಂತಿ ನೆಲೆಗೊಳ್ಳುವಂತೆ ನೋಡುವುದೇ ನಮ್ಮ ವಿದೇಶ ಧೋರಣೆಯ ರಹಸ್ಯ. ವಿಷಯವು ಭಾರತಕ್ಕೆ ಸಂಬಂಧಿಸಿದ್ದರೆ, ನಮ್ಮ ಅಭಿಪ್ರಾಯವನ್ನು ಖಚಿತವಾಗಿ ಹೇಳುತ್ತೇವೆ. ನಮಗೆ ಸಂಬಂಧವಿಲ್ಲದ ಸಂಗತಿಗಳಲ್ಲಿ ಪ್ರವೇಶಿಸುವುದಿಲ್ಲ. ನಮ್ಮ ಭವಿತವ್ಯದಲ್ಲಿ ವಿದೇಶೀ ಅಭಿಪ್ರಾಯಗಳ ಹಸ್ತಕ್ಷೇಪವಾಗಿ, ಸ್ವಾತಂತ್ರ್ಯಕ್ಕೆ ಕೇಡು ಉಂಟಾಗದಂತೆ ನೋಡಿಕೊಳ್ಳಲು ನಾವು ತಪ್ಪಿಲ್ಲ. ಎಂದಿಗೂ ಒತ್ತಾಯಕ್ಕಾಗಿ ಕಟ್ಟುಬಿದ್ದವರಲ್ಲ-ಆದುದರಿಂದಲೇ ನಮ್ಮಲ್ಲಿ ದೊಡ್ಡ ಸೈನ್ಯಬಲವಾಗಲೀ ದುಡ್ಡಿನ ಬಲವಾಗಲೀ ಇಲ್ಲದಿರುವಾಗಲೂ, -ಸೈನಿಕಬಲಕ್ಕೆ ಅಂಜದ ಎಂಬಂತೆ, ನಮ್ಮ ಅಭಿಪ್ರಾಯಗಳಿಗೆ ಮನ್ನಣೆ ದೊರೆಯುತ್ತದೆ. ನಮ್ಮ ಮೇಲೆ ವರ್ಚಸ್ಸು ಉಪಯೋಗಿಸಿ ಒಲಿಸಿಕೊಳ್ಳಲು ನೋಡಿದವರೆಲ್ಲ ಸಂಪೂರ್ಣ ನಿರಾಶರಾಗಿರುವರು

ಲೋಕ ಸಭೆಯಲ್ಲಿ

ಸರಕಾರವು ಸಮರ್ಪಕವಾದ ರೀತಿಯಲ್ಲಿ ಅನ್ನದ ಸಮಸ್ಯೆಯನ್ನು ಬಿಡಿಸಲು ತಪ್ಪಿದೆ ಎಂದು ಆರೋಪಿಸುವ ಪ್ರಮುಖ್ಯವಾದ ಉಪಸೂಚನೆಗೆ ಸಾಕಷ್ಟು ಬೆಂಬಲ ದೊರೆಯದೆ ಅದು ನಿರಾಕೃತವಾಯಿತು.

ಶ್ರೀ ನೆಹರೂ ಸರಕಾರದ ವಿರುದ್ಧ ಮಾತು ಮಾತಿಗೂ ಟೀಕೆ ಮಾಡುವವರ ಬಣ್ಣ ಬಯಲುಮಾಡಿದರು-ವಿರೋಧೀ ಗುಂಪಿನ ಸಲಹೆಗಳು ಪ್ರಜಾಪ್ರಭುತ್ವ ತತ್ವಕ್ಕೆ ಒಳಪಟ್ಟು ನಡೆಯುವ ರಾಜ್ಯಗಳ ಕಾರ್ಯ ಭಾರದಲ್ಲಿ ಅಗತ್ಯ ಬೇಕಾಗಿವೆ. ಅವರೂ ಜನತೆಯಿಂದಲೇ ಚುನಾಯಿತರಿರುವುದರಿಂದ, ದೇಶದ ನಾಗರಿಕರಲ್ಲಿ ಒಂದು ಪಕ್ಷದ ಮನೋವೃತ್ತಿಯನ್ನು ಅವರು ಬಿಂಬಿಸುವರು ಎಂತಲೇ—ಅದನ್ನು ಮನ್ನಿಸಬೇಕು. ಅಂಥವರಿಂದಲೂ ಸರಕಾರವು ಅನವರತ ಸಹಕಾರವನ್ನೂ ಯೋಗ್ಯ ಸಲಹೆಗಳನ್ನೂ ಸ್ವಾಗತಿಸುವುದು. ಆದರೆ ಆಡಳಿತ ಧೋರಣದ ಪ್ರಶ್ನೆ ಬಂದಾಗ—ತನ್ನ ಅಧಿಕಾರವನ್ನು ಸರಕಾರ ಬಿಟ್ಟುಕೊಡಲಾಗದು. ಕಾಂಗ್ರೆಸು ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಮಾಡಿದ ಕಾರ್ಯಗಳು ಅದ್ಭುತ. ನಮ್ಮ ದೇಶದ ಸಾಮಾಜಿಕ ಹಾಗೂ ಆರ್ಥಿಕ ಪುನರ್ನಿರ್ಮಾಣದ ಸದುದ್ದೇಶದಿಂದ ಭದ್ರವಾದ ತಳಹದಿಯನ್ನು ಈ ಕಾಲದಲ್ಲಿ ಹಾಕಿದ್ದೇವೆ. ಚೀನಾ—ರಶಿಯಾಗಳ ನಿರೀಕ್ಷಕರು ಕೂಡ ಭಾರತದಲ್ಲಿ ಇಷ್ಟು ಅಲ್ಪ ಅವಧಿಯಲ್ಲಿ ವಿದ್ಯಮಾನವಿರುವ ಪ್ರಗತಿಯನ್ನು ಪ್ರಶಂಸಿಸುತ್ತಿರುವರು. ಔದ್ಯೋಗಿಕ ಕ್ಷೇತ್ರದ ವಿಸ್ತರಣೆಯನ್ನು ಸಹ ಬಹಳ ದೊಡ್ಡ ಪ್ರಮಾಣದಲ್ಲಿ ನಡೆಸಲಾಗಿದೆ. ಇಷ್ಟಿದ್ದರೂ—ರಾಷ್ಟ್ರಕ್ಕೆ ಗಂಡಾಂತರವನ್ನುಂಟುಮಾಡಲು ಕಮ್ಯೂನಿಸ್ಟರು ಹವಣಿಸುವರು. ಆಹಾರೋತ್ಪಾದನೆ ಹೆಚ್ಚಿಸ ಬೇಕಿರುವಾಗ ಬೆಳೆ ಸುಡುವ ವಿಧ್ವಂಸಕ ಕೆಲಸಕ್ಕೆ ಪ್ರವೃತ್ತರಾದರು. ಸರಕಾರವು ಎಷ್ಟೇ ಘನವಾದ ಕೆಲಸ ಮಾಡಿದರೂ ಅದನ್ನು ಮನಬಂದಂತೆ ಟೀಕಿಸುವುದೂ—ಚೀನಾ ರಶಿಯಾಗಳು ಮಾಡಿದ ಅಲ್ಪಸ್ವಲ್ಪ ಪ್ರಗತಿ ಪರ್ವತಪ್ರಾಯ ಎಂಬ ರೀತಿಯಲ್ಲಿ ಅಭಿಪ್ರಾಯ ಪಡುವುದೂ ಸರಿಯಲ್ಲ. ಪೂರ್ವಗ್ರಹ ಪೀಡಿತ ಭಾವನೆಗೆ ಆಸ್ಪದ ಕೊಡುವುದು ಸಲ್ಲದು. "ಸೋವಿಯೆಟ ರಶಿಯಾದಲ್ಲಿ ಕಾಪಿಯರ ಅಣೆಕಟ್ಟು ತೊಡಗಿದೊಡನೆ ಇದೊಂದು ಮಹತ್ವದ ಕಾರ್ಯವೆಂದು ಎಲ್ಲರಿಂದಲೂ ಹೊಗಳಿಕೆ ಬಂತು. ನಮ್ಮ ದೇಶದಲ್ಲಿ ಅದಕ್ಕಿಂತ ಎಷ್ಟೋ ಪಟ್ಟು ದೊಡ್ಡ ಅಣೆಕಟ್ಟಿನ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಆದರೆ ಈ ಕುರಿತು ಸರಕಾರವು ಟೀಕೆಗಳ ಸುರಿಮಳೆಯನ್ನೇ ಇದಿರಿಸಬೇಕಾಗುತ್ತದೆ. ಒಂದು ವೇಳೆ ಈ ಬೃಹತ್ ಯೋಜನೆಗಳನ್ನು ಚೀನಾ ರಶಿಯಾಗಳು ಕೈಗೊಂಡಿದ್ದರೆ—ವಿರೋಧೀ ಗುಂಪಿನವರು ಅದನ್ನು ಹಾಡಿ, ಹೊಗಳಿ, ದಣಿಯುತ್ತಿದ್ದರು." ಈ ದೃಷ್ಟಿ ದೋಷ ನಿವಾರಣೆಯಾಗಬೇಕು ಎಂದು ನೆಹರೂ ಮನವಿ ಮಾಡಿ ಕೊಂಡರು.

ರೇಲ್ವೆಯ ಆಯುವ್ಯಯ

ರೇಲ್ವೆ ಮಂತ್ರಿ ಶ್ರೀ ಲಾಲಬಹದ್ದೂರ ಶಾಸ್ತ್ರಿ ಮಂಡಿಸಿದ ಮುಂಗಡ ಪತ್ರವು ೨೩ ಕೋಟಿ ೪೭ ಲಕ್ಷ ರೂ

ಡಿಪಿಐ/೩೨/೬೦೧



ಕಾರ್ಯಕಲಾಪ

ಹಣಕಾಸಿನ ತೊಂದರೆಯ ಸರಳ ವಿಮರ್ಶೆ

ವಾಯಿಗಳ ನಿವ್ವಳ ಉಳಿತಾಯ ತೋರಿಸುತ್ತವೆ. ಈಗ್ಗೆ ಕೆಲವು ತಿಂಗಳ ಹಿಂದೆ ತಾತ್ಕಾಲಿಕ ಪಾರ್ಲಿಮೆಂಟಿನಲ್ಲಿ ಇಂಥದೇ ಮುಂಗಡಪತ್ರವನ್ನು ಮಂಡಿಸಿದಾಗ ಅದರಲ್ಲಿ ೨೪ ಕೋಟಿ ೮೮ ಲಕ್ಷ ರೂಪಾಯಿಗಳ ಉಳಿತಾಯವಾಗುವುದೆಂದು ತೋರಿಸಲಾಗಿತ್ತು. ಆದಾಯದಲ್ಲಿ ಮುಖ್ಯಾಂಶವು ಪ್ರವಾಸಿಕರಿಂದಲೂ (೧೯೩.೧೯ ಕೋಟಿ ರೂಪಾಯಿ) ಸರಕು ಗಾಡಿಗಳ ಓಡಾಟದಿಂದಲೂ (೧೪೫.೪೭ ಕೋಟಿ ರೂಪಾಯಿ) ಬರುತ್ತದೆ. ಒಟ್ಟು ಕಾರ್ಯನಿರ್ವಹಣೆಯ ವೆಚ್ಚವಾಗಿ ೨೧೭.೯೩ ಕೋಟಿ ರೂಪಾಯಿ ಬೇಕಾಗುವುವು. ನಿವ್ವಳ ಆದಾಯವಾಗಿ ರೂ. ೫೭.೪೭ ಕೋಟಿ ಒದಗಿದರೂ ಆದರಲ್ಲಿ ಕೇಂದ್ರ ಸರಕಾರಕ್ಕೆ ಕೊಡಬೇಕಾದ ೩೪ ಕೋಟಿ ರೂಪಾಯಿ ಕಳೆದ ಬಳಿಕ ರೂ. ೨೩.೪೭ ಕೋಟಿ ಉಳಿತಾಯವಾಗಿ ಒದಗಿದೆ. ರೇಲ್ವೆ ಕೆಲಸಗಾರರಿಗೆ ಮನೆಕಟ್ಟಿಸಿಕೊಡಲು ಮತ್ತಿತರ ಯೋಗಕ್ಷೇಮದ ಕೆಲಸಗಳಿಗಾಗಿ ೧.೧೫ ಕೋಟಿ ರೂಪಾಯಿ ಹೆಚ್ಚುಕೊಟ್ಟದ್ದು ಕಂಡುಬರುತ್ತದೆ.

ದಕ್ಷಿಣದಲ್ಲಿ ರೇಲ್ವೆಗಳ ಪುನರ್ಗಠೀಕರಣದ ಕುರಿತು ತಕರಾರು ಇಲ್ಲದಿರುವಾಗ ಉತ್ತರದಲ್ಲಿ ಮಾತ್ರ ಈ ಅಸಮಾಧಾನಕ್ಕೆ ಎಡೆ ದೊರೆತುದು ಹೇಗೋ ತಿಳಿಯದು ಎಂದು ರೇಲ್ವೆ ಮಂತ್ರಿಗಳು ಹೇಳಿದರು. ಅಖಿಲ ಭಾರತದ ರೇಲ್ವೆಗಳನ್ನು ಆರು ಪ್ರಾದೇಶಿಕ ವಿಭಾಗಗಳಾಗಿ ವಿಂಗಡಿಸಿರುವುದನ್ನು ಅವರು ಬಲವಾಗಿ ಸಮರ್ಥಿಸಿಕೊಂಡರು. ಆಡಳಿತದಲ್ಲಿ ಅನುಕೂಲತೆ ಮತ್ತು ಕಾರ್ಯಕ್ಷಮತೆಗಳಿಗೆ ಇದು ಪೋಷಕವಿದೆ ಎಂದವರು ಹೇಳಿಕೆ ಕೊಟ್ಟರು. ಈ ರೀತಿ ಪುನರ್ಗಠೀಕರಣ ಮಾಡಿದುದರಿಂದ, ಎಷ್ಟೋ ಮಂದಿ ನೌಕರರಿಗೆ ಕೆಲಸಹೋಗುವ, ವರ್ಗಾವರ್ಗಿಯಾಗುವ ಭಯವಿದೆ ಎಂಬ ಸಂಗತಿ ನಿರಾಧಾರವೆಂದವರು ಆಶ್ವಾಸಿಸಿದರು. ನಮ್ಮ ದೇಶದ ಅತಿ ದೊಡ್ಡ ರಾಷ್ಟ್ರೀಕೃತ ಉದ್ಯಮವಾದ ಈ ರೇಲ್ವೆ ಶಾಖೆಯು ಗುರುತರವಾದ ಹೊಣೆ ಹೊತ್ತಿದೆ. ಈಗಾಗಲೇ ಸಾಧಿಸಿಕೊಂಡಿರುವ ಪ್ರಗತಿಯನ್ನು ಕಾಯ್ದುಕೊಳ್ಳಲಿಕ್ಕೂ, ಸಾರ್ವಜನಿಕರಿಗೂ ರೇಲ್ವೆ ಕೆಲಸಗಾರರಿಗೂ ಅನುಕೂಲತೆಗಳನ್ನು ಒದಗಿಸಿಕೊಡಲಿಕ್ಕೂ ಸರಕಾರ ನೋಡುವುದು ಎಂಬ ಭರವಸೆಯ ಮಾತನ್ನು ಅವರು ಹೇಳಿದರು.

ಸಾಮಾನ್ಯ ಮುಂಗಡ ಪತ್ರ

ಹೊಸ ತೆರಿಗೆಯ ಭಾರವಿಲ್ಲದ--ಇದ್ದ ತೆರಿಗೆಗಳಲ್ಲಿ ರಿಯಾಯತಿ ಇಲ್ಲದ, ಅತ್ಯಲ್ಪ ಉಳಿತಾಯವನ್ನು ತೋರಿಸುವ ಸಾಮಾನ್ಯ ಮುಂಗಡಪತ್ರವನ್ನು ಅರ್ಥಸಚಿವರಾದ ಶ್ರೀ ಚಿಂತಾಮಣಿ ದೇಶಮುಖರು ಲೋಕಸಭೆಯಲ್ಲಿ ಇಟ್ಟಿದ್ದಾರೆ. ಇದರ ಪ್ರಕಾರ ೧೯೫೨—೧೯೫೩ನೇ ವರ್ಷದಲ್ಲಿ ೪೦೪.೯೪ ಕೋಟಿ ರೂಪಾಯಿ ಆಯವೂ ೪೦೧.೨೫ ಕೋಟಿ ರೂಪಾಯಿ ವ್ಯಯವೂ ಆಗಬಹುದು. ಹೆಸರಿಗೆಂಬಂತೆ ೩.೦೩ ಕೋಟಿ ರೂಪಾಯಿ ಉಳಿತಾಯವು ಮುಂಗಡ ಪತ್ರದಲ್ಲಿ ತೋರಿ ಬಂದರೂ ಒಟ್ಟಿನ ಮೇಲೆ ಭಾರತ ಸರಕಾರದ ಬೊಕ್ಕಸದಲ್ಲಿ ೭೫.೩೫ ಕೋಟಿ ರೂಪಾಯಿಗಳ ಕೊರತೆಯೇ ನಿಜ. ಫೆಬ್ರುವರಿಯಲ್ಲಿ ಮಂಡಿಸಿದ್ದ ತಾತ್ಕಾಲಿಕ ಮುಂಗಡ ಪತ್ರದಲ್ಲಿ ೧೪.೭೩ ಕೋಟಿ ರೂಪಾಯಿಯ ಉಳಿತಾಯವಿದೆ ಎನ್ನಲಾಗಿತ್ತು. ಈಗ ಅದರ ಪ್ರಮಾಣ ಹೀಗೆ ಇಳಿಯಲು ಸರಕುಗಳ ಬೆಲೆಗಳು ಅನಿರೀಕ್ಷಿತವಾಗಿ ಕುಸಿದುದೇ ಕಾರಣವೆಂದು ಅರ್ಥ ಮಂತ್ರಿ ಸ್ಪಷ್ಟೀಕರಿಸಿದರು. ದೇಶದ ರಫ್ತು ವ್ಯಾಪಾರದ ಮೇಲೆ ಬಂದ ಪೆಟ್ಟನ್ನು ದೂರೀಕರಿಸಲು ಸರಕಾರವು ವಿಶೇಷವಾದ ಕ್ರಮಗಳನ್ನು ಕೈಕೊಂಡು ಅನುಕೂಲತೆಗಳನ್ನು ಒದಗಿಸಿ ಕೊಡಬೇಕಾಯಿತು. ಧಾರಣೆ ಕುಸಿದುದರಿಂದ ಸರಕುಗಳ ಕಡೆಗೆ ಗಿರಾಕಿಗಳು ಆಕರ್ಷಿಸಲು ತಕ್ಕ ಮಾರ್ಗಗಳನ್ನು ಅನುಸರಿಸಲಾಯಿತು. ಮುಖ್ಯವಾಗಿ ರಫ್ತು ಸುಂಕದ ಮೇಲೆ ಹೆಚ್ಚು ಪ್ರಮಾಣದಲ್ಲಿ ರಿಯಾಯತಿಯನ್ನು ತೋರಿಸಿದುದರಿಂದ, ಸರಕಾರದ ಆದಾಯಕ್ಕೆ ೨೫ ಕೋಟಿ ರೂಪಾಯಿಯ ವ್ಯತ್ಯಯ ಉಂಟಾಯಿತು. ಇದನ್ನು ವೆಚ್ಚಗಳಲ್ಲಿ ಅಲ್ಲಿ ಇಲ್ಲಿ ಕಡಿಮೆ ಮಾಡಿಕೊಂಡು ಸರಿಹೊಂದಿಸಲು ಪ್ರಯತ್ನ ನಡೆದಿದೆ. ಹೀಗಿರುವಾಗ ಈಗಾಗಲೇ ನಿಲ್ಲಿಸಿಬಿಟ್ಟಿರುವ ಆಹಾರ ಪರಿಹಾರಧನ ನೀಡುವ ಕ್ರಮವನ್ನು ಪುನರುಜ್ಜೀವನಗೊಳಿಸುವರೆಂಬ ಆಶೆಗೆ ಈ ಮುಂಗಡಪತ್ರದಲ್ಲಿ ಸ್ವಲ್ಪವಾದರೂ ಎಡೆ ದೊರೆತಿಲ್ಲ. ಔದ್ಯೋಗಿಕ ಕ್ಷೇತ್ರಗಳ ಮಟ್ಟಿಗೆ ಸೀಮಿತಗೊಳಿಸಿದರೂ ೨೫ ಕೋಟಿ ರೂಪಾಯಿ ಪರಿಹಾರಧನಕ್ಕಾಗಿ ಬೇಕಿದ್ದಾಗ, ಈ ವರ್ಷ ಕೇವಲ ೧೫ ಕೋಟಿ ರೂಪಾಯಿಗೆ ಸಹಾಯಧನದ ಮೊತ್ತವನ್ನು ಇಳಿಸಲಾಗಿದೆ. ಅಭಿವೃದ್ಧಿಯೋಜನೆಗಳಿಗೆ ಮಾಡುವ ವೆಚ್ಚದಿಂದ ಶಾಶ್ವತ ಅನುಕೂಲತೆಯಾಗುವುದರಿಂದ ಆಹಾರ ಸಹಾಯಧನವನ್ನು ಈ ಬಗ್ಗೆ ವ್ಯಯಿಸುವುದು ಸಮಂಜಸವೆಂದೂ ಆಹಾರ ಧಾನ್ಯಗಳ ಏರಿಕೆಯ ನಷ್ಟಕ್ಕೆ ಉಳಿದ ಸರಕುಗಳ ಧಾರಣೆ ತಗ್ಗಿರುವುದರಿಂದ ನಾಗರಿಕರಿಗೆ ದೊರೆತ ಲಾಭವು ತಕ್ಕ ಪರಿಹಾರ ಒದಗಿಸುತ್ತದೆ ಎಂದೂ ಒಳ್ಳೆಯ ತರ್ಕವನ್ನು ದೇಶಮುಖರು ಮುಂದಿಟ್ಟಿರುವರು. ಬೆಲೆ ಇಳಿತದಿಂದ ಉತ್ಪಾದನೆಗೆ ಧಕ್ಕೆ ತಗಲದಂತೆ ಸರಕಾರ ಜಾಗರೂಕತೆ ವಹಿಸುವುದಾಗಿ ಭರವಸೆಕೊಟ್ಟಿರು. ಕೊರಿಯಾ ಯುದ್ಧದಿಂದಾಗಿ ಕಚ್ಚಾ ಸರಕುಗಳ ಬೇಡಿಕೆ ಏರಿದ್ದರಿಂದ ೧೯೫೦ರಲ್ಲಿ ಏಣಿಕೆ ವಿನಿಮಯ ಆದಾಯ ಹೆಚ್ಚಿತು. ಆದರೆ ೧೯೫೧ರಲ್ಲಿ ೩೦ ಕೋಟಿ ರೂಪಾಯಿಯಷ್ಟು ಪ್ರತಿಕೂಲ ಶಿಲ್ಕು ಉಳಿಯಿತು. ಇದಕ್ಕೆ ಬೆಲೆಗಳು ಬಿದ್ದುಹೋದುದೇ ಕಾರಣ. ಈ ವರ್ಷದಂತೂ ಮೊದಲಿನ ನಾಲ್ಕು ತಿಂಗಳುಗಳಲ್ಲಿಯೇ ೮೧ ಕೋಟಿ ರೂಪಾಯಿಗಳಷ್ಟು ಸ್ಟರ್ಲಿಂಗ ಶಿಲ್ಕು ಕಡಿಮೆಬಿದ್ದಿದೆ. ಬ್ರಿಟಿಷ ಸರಕಾರದೊಡನಾದ ಒಪ್ಪಂದದಂತೆ ಬರಬೇಕಾದ ಸ್ಟರ್ಲಿಂಗಿನಿಂದ ಪ್ರತಿಕೂಲ ಶಿಲ್ಕನ್ನು ತುಂಬಿಸಲಾಗುವುದು. ಗೋಧಿಯ ಮತ್ತು ಹತ್ತಿಯ ಸಂಗ್ರಹವು ತೃಪ್ತಿಕರವಿರುವುದರಿಂದ ಅವುಗಳ ಆಮದು ತಗ್ಗುವ ನಿರೀಕ್ಷೆಯೂ ಇದೆ. ಇದರ ಜೊತೆಗೆ ಜಾಗತಿಕ ಬ್ಯಾಂಕಿನಿಂದ ಸಾಲ ದೊರೆತರೆ, ಡಾಲರ ಪರಿಸ್ಥಿತಿ ತೃಪ್ತಿಕರವಿರಬಹುದು. ಸಂರಕ್ಷಣಾ ವೆಚ್ಚವು ಈ ವರ್ಷ ೧೯೭.೯೫ ಕೋಟಿ ರೂಪಾಯಿಯಷ್ಟಾಗುವ ಅಂದಾಜಿದೆ. ಕಾದಿಟ್ಟ ಹಣದ ಸಂಗ್ರಹವು ಮುಗಿಯುತ್ತಿರುವುದರಿಂದ ಸರಕಾರದ ವೆಚ್ಚಗಳಿಗಾಗಿಯೂ ಸಾರ್ವಜನೋಪಯೋಗಿ ಅಭಿವೃದ್ಧಿ ಕಾರ್ಯಗಳಿಗಾಗಿಯೂ ಇನ್ನುಮುಂದೆ ಜನರಿಂದಲೇ ತೆರಿಗೆ ವಸೂಲಿಮಾಡಿ, ಆಯವ್ಯಯವನ್ನು ಅಲ್ಲಿಂದಲ್ಲಿ ಹೊಂದಿಸಿಕೊಳ್ಳಬೇಕಾಗುವ ಪರಿಸ್ಥಿತಿ ಬಂದಿದೆ. "ಹೊರಗಿನಿಂದ ಧನಸಹಾಯ ಬಂದರೂ, ದೇಶವು ಸ್ವಾವಲಂಬಿಯಾಗುವುದೇ ಶ್ರೇಯಸ್ಕರ. ನಮ್ಮ ಉತ್ಕರ್ಷದ ಕಟ್ಟಡವನ್ನು ಹೊರಗಿನವರ ದುಡ್ಡಿನ ಬಲದಿಂದ ಕಟ್ಟುವುದು ಸಮವಲ್ಲ. ಮುಂಗಡ ಪತ್ರವು ಭಾರವೆನಿಸಿದರೆ, ಅದನ್ನು ಸಹಿಷ್ಣುತೆಯಿಂದ ನೋಡಿಕೊಳ್ಳೋಣ"—ಎಂದು ಅರ್ಥ ಮಂತ್ರಿಗಳು ಕೇಳಿಕೊಂಡರು.

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs. 10 lacks
3. Has granted an average dividend of 6% to the Shareholders for the past 20 years.
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates
6. Grants loans on easy terms to approved parties or on approved securities.
7. Does afford full protection and rich return to all your monies.

ADOPT IT AS
"MY BANK"
THE VIJAYA BANK, LIMITED,
H. O., MANGALORE.

The East & West Insurance Co, Ltd,
East & West Bldgs., BOMBAY - 1.

ದಿ ಈಸ್ಟ್ ಎಂಡ್ ವೆಸ್ಟ್
ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಸ್ಥಾಪನೆ:] ಈಸ್ಟ್ ಎಂಡ್ ವೆಸ್ಟ್ ಬಿಲ್ಡಿಂಗ್ಸ್, ಬೊಂಬಾಯಿ 1. [1913

ಉದಾರ ಯಾ ರಿಯಾಯತಿ ಶರ್ತಗಳಿರುವ ಪುರಾತನ ಮತ್ತು ಮುಂದುವರಿದ ಕಂಪೆನಿಗಳಲ್ಲೊಂದಾಗಿರುತ್ತದೆ.

ವಿಮೆಯ ಸಕಲ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು ಆ ಬಾಬಿನ ಎಲ್ಲಾ ಕೆಲಸಗಳಲ್ಲಿ ಭಾಗಿಯಾಗಿ ಸಹಕರಿಸಿ ಸಲಹೆಗಳನ್ನೀಯುತ್ತಾ ಜನಸೇವೆಗೈಯುವುದೇ ನಮ್ಮ ಧ್ಯೇಯ.

ನಮ್ಮ ಚೀಫ್ ಏಜನ್ಸಿ ವಿಸ್ತೀರ್ಣದೊಳಗೆ ಪ್ರತೀ ಜಿಲ್ಲೆಗೊಬ್ಬರಂತೆ ಇನ್ಸ್‌ಪೆಕ್ಟರುಗಳೂ, ಸ್ಪೆಶಲ್ ಏಜಂಟರೂ, ಏಜಂಟರೂ ಬೇಕಾಗಿದ್ದಾರೆ. ಹೆಚ್ಚಿನ ವಿವರಕ್ಕೆ ಬರೆಯುವದು.

ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್,
ಚೀಫ್ ಏಜಂಟರು,
ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಮೈಸೂರು ಸ್ಟೇಟ್,
ಪೋಸ್ಟ್ ಶಿರ್ವಾ, ದ. ಕ.

ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳುಕು ಉಷ್ಣಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಚಾತುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷನಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD
ಯಾಳುಕಡ್ಡಿ,
ಮದ್ದು
ನಮ್ಮಲ್ಲಿ
ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

"ಮಧುವನ" "ಕಾವ್ಯಸಾಮ್ರಾಜ್ಯ" ಮೊದಲಾದ ಕರ್ನಾಟಕದ ಪ್ರಾತಿನಿಧಿಕ ಕಥಾಸಂಗ್ರಹ, ಕವನ ಸಂಗ್ರಹಗಳನ್ನು ಪ್ರಕಟಿಸಿ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕ್ರಾಂತಿಯನ್ನೆಬ್ಬಿಸಿದ ಉಡುಪಿಯ ಕಿರಿಯರ ಪ್ರಪಂಚದ ಉತ್ತಮ ಪುಸ್ತಕಗಳನ್ನು ಓದಿರಿ

THE CANARA BANKING CORPORATION LIMITED.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್, ಲಿಮಿಟೆಡ್

ಸ್ಥಾಪನೆ : 1906. : : ಪ್ರಧಾನ ಕಾರ್ಯಾಲಯ: ಉಡುಪಿ, (ದ.ಭಾ.)

ವಿಶೇಷ ಸವಲತ್ತುಗಳಿದ್ದು, ಸಾಲಿಯಾನ್ ಶೇಕಡಾ 4 ರಂತೆ ಬಡ್ಡಿ ಗಳಿಸುವ ನಮ್ಮ

"ಪಂಚವಾರ್ಷಿಕ ಸುವರ್ಣ ಠೇವಣಾತಿಗಳ"

ಮೇಲೆ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ವಿಶೇಷ ಮಾಹಿತಿಗೆ, ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿ. ಆರ್. ಕಾಮತ್, ಬಿ. ಎ; ಎಲ್ ಎಲ್, ಬಿ;
ಜನರಲ್ ಮೆನೇಜರ್.

ನವಯುಗ

ಚಂದಾ ವಿವರ

ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೨೯-೫-'೫೨

ನಾಗರಿಕ ಗುಣ ಧರ್ಮ

ಸಾಮಾನ್ಯವಾಗಿ ರಾಷ್ಟ್ರದ ಸಂಪತ್ತನ್ನು ಭೂಮಿಯ ಫಲ ಸಾರ, ಭೂಗರ್ಭದ ಖನಿಜಸಂಗ್ರಹ, ಕೈಗಾರಿಕೆಗಳ ಪ್ರಾಬಲ್ಯ- ಮುಂತಾದವುಗಳ ಮೂಲಕ ಲೆಕ್ಕಿಸುವರು. ಬಹಳ ಬೆಳೆ ಬೆಳೆದರೆ, ಬಂಗಾರದ ಖನಿಗಳೇ ತುಂಬಿದ್ದರೆ, ಕಾರಖಾನೆಗಳ ಹೊಗೆ ಮುಗಿಲೋಪಾದಿಯಲ್ಲಿ ಕವಿಯುತ್ತಿದ್ದರೆ-ರಾಷ್ಟ್ರವು ಅಭ್ಯುದಯ ಸ್ಥಿತಿಯಲ್ಲಿದೆ ಎಂದು ಪರಿಗಣಿಸುವುದು ವಾಡಿಕೆ ನಿಜ ಹೇಳಬೇಕೆಂದರೆ—ಈ ಭೌತಿಕ ಪ್ರಗತಿಯಿಂದ ರಾಷ್ಟ್ರದ ಆತ್ಮದ ಕಲ್ಪನೆಯನ್ನು ನಾವು ಮಾಡಿಕೊಳ್ಳಲು ಬರುವುದಿಲ್ಲ. ರಾಷ್ಟ್ರದ ಸಂಪತ್ತು, ಎಂಬುದಾಗಿ ಬಾಹ್ಯಾಡಂಬರವನ್ನು ಕೋರುವುದು ಯೋಗ್ಯವೆನಿಸಲಾರದು. ನಮ್ಮ ಧುರೀಣರು ಅನೇಕ ಬಾರಿ ಹೇಳಿರುವಂತೆ— ರಾಷ್ಟ್ರದ ಸಂಪತ್ತು ಉತ್ತಮ ಜನತೆ. ಜನರ ಶೀಲ ಚಾರಿತ್ರ್ಯಗಳ, ಗುಣ ಧರ್ಮಗಳ ಕಾರಣವಾಗಿಯೇ ರಾಷ್ಟ್ರದ ಉತ್ಥಾನ ಅಥವಾ ಪತನ ನಡೆಯುವುದು ಎಂಬುದನ್ನು ನೆನೆದರೆ—ನಮಗೆ ಈ ಮಾತು ಸ್ಪಷ್ಟವಾಗಿ ಮನವರಿಕೆಯಾಗುವುದು.

ಹಾಗಾದರೆ ಜನರು ಚಾರಿತ್ರ್ಯಬಲ ಸಂಪನ್ನರಾಗಬೇಕಾದುದು ರಾಷ್ಟ್ರಕಲ್ಯಾಣದ ಮೂಲ ಆವಶ್ಯಕತೆ ಎಂದಾಯಿತು. ಜನರಲ್ಲಿ ಸಂಯಮ, ಪ್ರಾಮಾಣಿಕತೆ, ಉದ್ಯಮಶೀಲತೆ ಮತ್ತು ವಿವೇಕಗಳಿಲ್ಲದಿರೆ ರಾಗ-ರಾಷ್ಟ್ರಾಭ್ಯುದಯ ಕಾರ್ಯಸಾಧಿಸಲು ಬಹಳ ಕಷ್ಟವಿದೆ. ಅಂಥಲ್ಲಿ-ಒಂದೋ ಮನುಷ್ಯನ ಆತ್ಮವನ್ನು ಕಡೆಗಣಿಸಿ, ಒತ್ತಾಯ ತರಬೇಕಾಗುತ್ತದೆ; ಅಥವಾ ದಾರಿದ್ರ್ಯ ಮತ್ತು ಅಜ್ಞಾನದ ಕೂಪದಲ್ಲಿ ಕೊಳೆಯುತ್ತಿರುವುದನ್ನೇ ನೆಚ್ಚಬೇಕಾಗುತ್ತದೆ. ಈ ಎರಡೂ ಸಂಗತಿಗಳು ಅವಾಂಛನೀಯವೇ ನಿಜ; ಮತ್ತು, ಭಾರತೀಯ ಸಂಸ್ಕೃತಿಯ ಪರಂಪರಾಗತವಾದ ವೈಶಿಷ್ಟ್ಯಕ್ಕೆ ಇವು ಕುಂದು ತರುವಂತಿವೆ. ಕಾರಣ-ಸ್ವಾಭಾವಿಕವಾದ ರೀತಿಯಲ್ಲಿ ಜನರ ಮನಸ್ಸನ್ನು ಕರ್ತವ್ಯ ಧರ್ಮದ ಕಡೆಗೆ, ನಾಗರಿಕತೆಯ ಮೂಲತತ್ವಗಳ ಕಡೆಗೆ ಆಕರ್ಷಿಸಿ-ಅವರನ್ನು ಯೋಗ್ಯ ಶಿಕ್ಷಣದ ಮೂಲಕ ತರಬೇತಿಗೊಳಿಸುವುದು ಆವಶ್ಯಕ. ಶತಮಾನಗಳಿಂದ ದಾಸ್ಯ ಭಾವದಲ್ಲಿ ಲೀನವಾಗಿದ್ದ ಬಡ ಜನತೆಗೆ ವಿವೇಕೋದಯವಾಗಬೇಕಾದರೆ, ತಿಳುವಳಿಕೆ ಉಳ್ಳವರು, ಬುದ್ಧಿವಂತರು, ಸುಶಿಕ್ಷಿತರಾದಿಯಾಗಿ ಮಾಡಬೇಕಾದ ಕೆಲಸಗಳು ತುಂಬ ಇವೆ. ಈ ಹೊಣೆಗಾರಿಕೆಯನ್ನು ಕರ್ತವ್ಯ ಭರದ ರೂಪದಲ್ಲಿ ಸ್ವೀಕರಿಸುವುದಕ್ಕೆ ಅಂಥವರು ಮುಂದಾಗಬೇಕು. ಇತರರು ಈ ವಿಷಯದಲ್ಲಿ ಅವರನ್ನು ಒತ್ತಾಯಪೂರ್ವಕವಾಗಿ ಒಡಂಬಡಿಸುವುದು ಸಫಲ ಪರಿಣಾಮ ಉಂಟುಮಾಡೀತೆಂಬ ನಿಯಮವಿಲ್ಲ. ಸ್ವಯಂ ಪ್ರೇರಣೆಯೇ ಈ ಮಟ್ಟಿಗೆ ಒಳ್ಳೆಯ ಮದ್ದು.

ಪ್ರಜಾಪ್ರಭುತ್ವದ ಕೀಲಿಕೈಯನ್ನು ತೆಗೆದುಕೊಂಡಿರುವ ನಮ್ಮ ರಾಜ್ಯ ಮಂತ್ರಿಗಳ ವರ್ತನೆಯಿಂದ ನಾವೊಂದು ವಿಷಯ ಕಲಿತುಕೊಳ್ಳಬಹುದು. ತಮ್ಮ ಸ್ಥಾನಮಹತ್ವದ ಕಾರಣದಿಂದ ಜನರ ಮನಸ್ಸನ್ನು ತಮ್ಮೆಡೆಗೆ ಸೆಳೆಯಲು ಅವರು ಸಮರ್ಥರಾಗುತ್ತಾರೆ. ಈಗ ಜನರಿಗೆ ನಾಗರಿಕ ಗುಣಧರ್ಮಗಳ ಬೋಧೆ ಮಾಡಲು ನೋಡುವುದರಿಂದ—ಮನಸಿನ ಮಾಲಿನ್ಯ ಕಳೆದು ಪ್ರಕಾಶಕ್ಕೆ ಇಂಬುಗೊಡಲು ಸಾಧ್ಯವಾಗುವುದು. ಎಷ್ಟೋ ಜನಕ್ಕೆ ನಮ್ಮ ಮಂತ್ರಿಗಳೆಲ್ಲ ಉದ್ದುದ್ದ ಭಾಷಣ ಕೊಡುವುದರಲ್ಲಿಯೇ ಕಾಲಕಳೆಯುವರು ಎಂಬ ಬೇಸರವಿದೆ. ಆದರೆ ಕರ್ತವ್ಯದ ಜ್ಞಾನವಿಲ್ಲದ ಮತ್ತು ಆಲಸ್ಯದ ಬೀಡಾದ ಮನವಿರುವ ಜನರನ್ನು ಸತ್ಪಥದಲ್ಲಿ ನಿಲ್ಲಿಸಲು ಎಷ್ಟು ಕಷ್ಟಪಡಬೇಕಾಗುವುದೆಂಬುದನ್ನು ಮನಸ್ಸಿಗೆ ತಂದುಕೊಂಡರೆ-ಅವರ ಭಾಷಣಗಳಿಂದ ಸಮಯ ಹಾಳಾಗದೆ, ಅಪ್ರತ್ಯಕ್ಷವಾಗಿ ತುಂಬ ಪ್ರಯೋಜನಕ್ಕೆ ಬರುವ ಶಿಕ್ಷಣ ದೊರೆಯುವುದೆಂಬ ಸಂಗತಿ ಗೊತ್ತಾಗುವುದು. ಸರಕಾರದ ಮುಂದಿನ ಕಾರ್ಯಕಲಾಪಗಳು, ರಾಷ್ಟ್ರಾಭ್ಯುದಯದ ಮಾರ್ಗಗಳು ಮುಂತಾಗಿ ಪ್ರತಿಯೊಂದು ವಿಷಯವೂ ನಾಗರಿಕರು ತಿಳಿದಿರಲು ಯೋಗ್ಯವಾಗಿದೆ. ಅವುಗಳ ಮಾಹಿತಿಯನ್ನು ಮಾಡಿಸಿಕೊಟ್ಟು, ಪ್ರಜಾನರ ನೈತಿಕ ಮಟ್ಟವನ್ನೂ, ಚಾರಿತ್ರ್ಯ ಬಲವನ್ನೂ, ಆತ್ಮಿಕ ಸಂಪತ್ತನ್ನೂ ಉನ್ನತಗೊಳಿಸುವುದು ಬಹಳ ಒಳ್ಳೆಯ ಕೆಲಸ. ಇದರಲ್ಲಿ ಸುಶಿಕ್ಷಿತರು ತೊಡಗಿದಾಗ, ನಾಗರಿಕರು ಉತ್ಸಾಹದಿಂದ ಸಹಕರಿಸಿ, ಪರಿಶ್ರಮದಿಂದ ಕೆಲಸಮಾಡಿದರೆ-ಹೊರಗಿನ ದುಷ್ಟಶಕ್ತಿಗಳಿಗೆ ಅಂಜಿ ಬದುಕುವ ಭಯವೂ ಉದಾಸೀನತೆಯು ಅಮಲೂ ಉಳಿಯುವುದಿಲ್ಲ.

ವಾರ್ತಾಲಾಪ

ಗ್ರಹಾಮರ ಪ್ರಯತ್ನ

ಕಾಶ್ಮೀರ ಪ್ರಶ್ನೆಯನ್ನು ಸಂಧಾನದಿಂದ ಬಿಡಿಸಲು ಸಂಯುಕ್ತ ರಾಷ್ಟ್ರ ಸಂಘದ ಮಧ್ಯಸ್ಥರಾದ ಡಾ| ಫ್ರಾಂಕ್ ಗ್ರಹಾಮರು ಈ ವಾರ ಮರಳಿ ಪ್ರಯತ್ನ ನಡೆಸುವರು. ಗುರುವಾರ ದಿನ ಅವರು ಭಾರತ ಮತ್ತು ಪಾಕಿಸ್ತಾನೀ ಸರಕಾರಗಳ ಪ್ರತಿನಿಧಿಗಳ ಸಂಯುಕ್ತ ಸಭೆಯನ್ನು ಕರೆದು ಈ ವಿಷಯದಲ್ಲಿ ವಿಚಾರ ವಿನಿಮಯವನ್ನು ಮುಂದುವರಿಸುವರು. ಹನ್ನೆರಡು ಮುದ್ದೆಗಳಿಂದ ಕೂಡಿದ ಸೈನ್ಯ ವಿಸರ್ಜನಾ ಯೋಜನೆಯಲ್ಲಿ ಭಾರತವು ಸಮ್ಮತಿಸದಿರುವ ವಿಷಯಗಳ ಬಗ್ಗೆ ಹೊಸ ಸೂಚನೆಗಳನ್ನು ಅವರು ನೀಡುವ ನಿರೀಕ್ಷೆ ಇದೆ. ಇದಕ್ಕೆ ಮೊದಲು ಮೂರು ಬಾರಿ ಮಾತುಕತೆಗಳು ಮುರಿದಿರುವುದರಿಂದ, ಈ ಸಲ ಗ್ರಹಾಮರು ಭಾರತ ಮತ್ತು ಪಾಕಿಸ್ತಾನೀ ಸರಕಾರಗಳೊಡನೆ ಚರ್ಚೆ ನಡೆಸಲು ಹೊಸದಿಲ್ಲಿ ಹಾಗು ಕರಾಚಿಗಳಿಗೆ ಬರುವುದಿಲ್ಲ—ಬದಲಿಗೆ, ನ್ಯೂಯಾರ್ಕಿನಲ್ಲಿಯೇ ಎರಡೂ ಸರಕಾರಗಳ ಪ್ರತಿನಿಧಿಗಳನ್ನು ಕಾಣುವುದರ ಮೂಲಕ ತಮ್ಮ ಕೆಲಸವನ್ನು ಸಾಗಿಸುವರು. ಕಾಶ್ಮೀರ ಸಮಸ್ಯೆಯನ್ನು ಬಿಡಿಸುವುದರಲ್ಲಿ ಗ್ರಹಾಮರಿಗೆ ಸರ್ವವಿಧದಿಂದಲೂ ನೆರವಾಗಬೇಕೆಂಬುದಾಗಿ ಇಂಗ್ಲೆಂಡೂ ಅಮೇರಿಕವೂ ಉಭಯ ರಾಷ್ಟ್ರಗಳಿಗೂ ಹಿತವಾದವನ್ನು ಹೇಳಿದೆ.

ಆಹಾರ ಸಹಾಯಧನ

ಅಮೇರಿಕೆಯ ರಾಯಭಾರಿಯಾಗಿ ಭಾರತದಲ್ಲಿರುವ ಚೆಸ್ಟರ್ ಬೌಲ್ಸರು ಭಾರತದ ಅನ್ನ ಸಮಸ್ಯೆಯ ಪರಿಹಾರಕ್ಕಾಗಿ ೧೨|| ಕೋಟಿ ಡಾಲರು ಧನಸಹಾಯ ನೀಡಬೇಕೆಂದು ತಮ್ಮ ಸರಕಾರವನ್ನು ಕೇಳಿಕೊಳ್ಳಲಿರುವರು. ಅಮೇರಿಕೆಯ ಮುಂದೆ ಈಗಾಗಲೇ ೧೧|| ಕೋಟಿ ಡಾಲರು ಪ್ರಮಾಣದ ಇನ್ನೊಂದು ಸಹಾಯಧನ ಯೋಜನೆ ಇದ್ದು, ಅದು ನಿಶ್ಚಯವಾಗಿಯೂ ಪಾಸಾಗುವುದೆಂದು ಚೆಸ್ಟರ ಬೌಲ್ಸರು ಅಭಿವ್ಯಕ್ತಪಡಿಸಿದರು. ಈ ಹಣವನ್ನು ಭಾರತದಲ್ಲಿ ಕೃಷಿ ವಿಸ್ತರಣ [illegible] ಅಭಿವೃದ್ಧಿ ಕಾರ್ಯಗಳಿಗಾಗಿ ಉಪಯೋಗಿಸಲಾಗುವುದು. ಚೆಸ್ಟರ ಬೌಲ್ಸರು ಭಾರತದ ಸಮಸ್ಯೆಗಳ ಬಗ್ಗೆ ಅಮೇರಿಕನರಿಗೆ ಸರಿಯಾದ ಮಾಹಿತಿಯನ್ನು ತಿಳಿಸಿಕೊಡಲು ತುಂಬ ಆತುರರಿರುವಂತೆ ಕಾಣುತ್ತದೆ. ಪಂಚವಾರ್ಷಿಕ ಯೋಜನೆಯ ಉದ್ದೇಶವು ಪರಿಣಾಮಕಾರಿ ಸ್ವರೂಪ ಧರಿಸಬೇಕಾದರೆ, ಅನ್ನದ ಬಿಕ್ಕಟ್ಟನ್ನು ಬಗೆಹರಿಸಬೇಕಾದುದು ಅತ್ಯಗತ್ಯ. ಈ ಕುರಿತು ಖರ್ಚಾಗುವ ಇನ್ನೂರು ಕೋಟಿ ರೂಪಾಯಿ ಹಣವನ್ನು ಅಭಿವೃದ್ಧಿ ಯೋಜನೆಗಳಿಗೆ ವಿನಿಯೋಗಿಸಲು ಭಾರತಕ್ಕೆ ಅನುಕೂಲವಾಗುವಂತೆ ಮಾಡುವುದೇ ನನ್ನ ಈ ಹೊಸ ಬೇಡಿಕೆಯ ಉದ್ದೇಶ. ಕಾಂಗ್ರೆಸು ಇದನ್ನು ಮನ್ನಿಸುವುದೋ ಇಲ್ಲವೋ ಹೇಳಲಾರೆನಾದರೂ, ಜುಲೈ ತಿಂಗಳಿಂದ ತೊಡಗುವ ಅಮೇರಿಕದ ನೂತನ ಆ. ಕೆಜ್ಜ ವರ್ಷದಲ್ಲಿ ಭಾರತಕ್ಕೆ ಸ್ವಲ್ಪಾದರೂ ಹೆಚ್ಚು ಸಹಾಯ ದೊರೆಯುವಂತೆ ಶಕ್ತಿಮೀರಿ ಪ್ರಯತ್ನಿಸುವೆ—ಎಂದವರು ಹೇಳಿದ್ದಾರೆ. ಮೊನ್ನೆ ತಾನೆ ಅಮೇರಿಕನ ಕಾಂಗ್ರೆಸು ಟ್ರೂಮನರು ವಿದೇಶಿ ಸಹಾಯ ಮತ್ತು ಸಂರಕ್ಷಣ ವೆಚ್ಚಕ್ಕೆಂದು ಮುಂದಿಟ್ಟ ಹಣದ ಮೊತ್ತವನ್ನು ನೂರಕ್ಕೆ ಹತ್ತಕ್ಕೂ ಹೆಚ್ಚು ಕಡಿಮೆ ಮಾಡಿದೆ ಎಂಬುದನ್ನು ಇಲ್ಲಿ ಸ್ಮರಿಸಬಹುದು. ಈ ರೀತಿ ಕಡಿಮೆ ಹಣವನ್ನು ಮಂಜೂರು ಮಾಡುವುದೆಂದರೆ ಗಂಡಾಂತರವನ್ನು ಮೈಮೇಲೆ ತಂದುಕೊಂಡಂತೆ ಎಂದೂ ಕಮ್ಯೂನಿಸ್ಟರು ಅಪೇಕ್ಷಿಸಿದ್ದೇ ಅವರಿಗೆ ದೊರೆತಂತಾಗುವುದೆಂದೂ ಭಯಗೊಳಿಸಿದರೂ, ಪ್ರಬಲ ರಿಪಬ್ಲಿಕನರ ವಿರೋಧ ಬಲಗುಂದಲಿಲ್ಲ.

ಜರ್ಮನಿಯೊಡನೆ ಒಪ್ಪಂದ

ಜರ್ಮನಿಯ ಐಕ್ಯಕ್ಕಾಗಿ ರಶಿಯಾ ಆಕರ್ಷಕವಾದ ಸೂಚನೆಗಳನ್ನು ಮುಂದಿಟ್ಟು ಜರ್ಮನರ ಬಾಯಲ್ಲಿ ನೀರೂರಿಸಿದ್ದರೆ, ಪಶ್ಚಿಮದ ರಾಷ್ಟ್ರಗಳು ಅವರ ಆಶೋತ್ತರಗಳಿಗೆ ನೀರೆರೆದು ತಣ್ಣಗಾಗಿಸುವ ಪ್ರಯತ್ನಕ್ಕೆ ತೊಡಗಿ ಯಶಸ್ಸು ಗಳಿಸಿವೆ. ದ್ವಿತೀಯ ಮಹಾಯುದ್ಧದ ಬಳಿಕ ಪೂರ್ವ ಮತ್ತು ಪಶ್ಚಿಮ ಜರ್ಮನಿ ಎಂಬುದಾಗಿ ಅಸ್ವಾಭಾವಿಕವಾದ ರೀತಿಯಲ್ಲಿ ಒಡೆದು ರಶಿಯಾ ಮತ್ತು ಪಾಶ್ಚಾತ್ಯ ರಾಷ್ಟ್ರಗಳ ಕೈಗೆ ಹಂಚಿಹೋದ ಜರ್ಮನಿಗೆ ಒಂದಾಗಿ ಸೇರುವ ಯೋಗ ಇನ್ನು ಮುಂದೆ ಇಲ್ಲವೆಂಬಂತೆ ಸ್ಥಿತಿಗತಿ ಬದಲಿಸಿದೆ. ಐಕ್ಯ ಜರ್ಮನಿಯ ಬಗ್ಗೆ ಚತುಃರಾಷ್ಟ್ರಗಳ ವಿದೇಶ ಮಂತ್ರಿಗಳು ಒಂದೆಡೆ ಸೇರಿ ಚರ್ಚೆ ನಡೆಸಬೇಕೆಂದೂ ಕೇವಲ ಪತ್ರವ್ಯವಹಾರದಿಂದ ಏನೂ ಉದ್ದೇಶ ಸಾಧಿಸಿದಂತಾಗುವುದಿಲ್ಲವೆಂದೂ ರಶಿಯಾವು ತುರುತಿನ ಸೂಚನೆಯನ್ನು ಫ್ರಾನ್ಸ್, ಬ್ರಿಟನು ಮತ್ತು ಅಮೇರಿಕಗಳಿಗೆ ಮುಟ್ಟಿಸಿದೆ. ಈ ಸೂಚನೆ ಬರುವಾಗ ಈಡನ ಅಚೆಸನ ಮತ್ತು ಶೂಮನ ಇವರು ಪಶ್ಚಿಮ ಜರ್ಮನಿಯೊಡನೆ ಮಾಡಿಕೊಳ್ಳಬೇಕಿರುವ ಸಂಧಿಕರಾರಿನ ಕುರಿತು ಗಂಭೀರಾಲೋಚನೆ ನಡೆಸುತ್ತಿದ್ದರು. ಈ ಮೂವರು ಪ್ರಭೃತಿಗಳೂ ಪಶ್ಚಿಮ ಜರ್ಮನಿಯ ಡಾ| ಅಡೆನೂರರೂ ಸೇರಿ ಒಡಂಬಡಿಕೆ ಮಾಡಿಕೊಂಡು ಯುರೋಪಿನ ಸಂರಕ್ಷಣಾ ವ್ಯೂಹದಲ್ಲಿ ಜರ್ಮನಿಯ ಈ ಸ್ವತಂತ್ರ ಸರಕಾರಕ್ಕೆ ಸ್ಥಾನಮಾನವನ್ನು ಕಲ್ಪಿಸಿಕೊಟ್ಟರು.

ಅಸಮಾಧಾನ

ಈ ಒಪ್ಪಂದ ಪೂರ್ವ ಜರ್ಮನಿ ಹಾಗು ಕಮ್ಯೂನಿಸ್ಟರಿಗೆ ಹೇಗೋ-ನೆರೆಯ ಫ್ರಾನ್ಸಿಗೂ ಮನಸ್ಸಿಗೆ ಬಂದಿಲ್ಲ. ಮೊದಲಿನವರಿಗೆ, ತಮ್ಮ ಬಾಂಧವ್ಯದ ಮತ್ತು ಜರ್ಮನಿಯ ಏಕೀಕರಣದ ಆಶೆಯೇ ತೊಲಗಿ ಹೋಗುವ ದುಃಖವನ್ನು ಈ ಒಪ್ಪಂದ ತಂದರೆ, ಫ್ರಾನ್ಸಿನ ಮಟ್ಟಿಗೆ ಸಶಸ್ತ್ರನಾದೊಬ್ಬ ಶತ್ರುವಿನ ನಿರ್ಮಾಣಕ್ಕೆ ಇದು ಪೀಠಿಕೆಯಾಗದೆ—ಎಂಬ ಭಯವಿದೆ. ಈ ಕಾರಣದಿಂದಲೇ ಯುರೋಪಿನ ಸೈನ್ಯದಿಂದ ಮುಂದೆ ಯಾವ ಕಾಲದಲ್ಲೂ ಜರ್ಮನಿ ಹಿಂದೆಗೆಯುವುದಿಲ್ಲೆಂದು ಬ್ರಿಟನು ಮತ್ತು ಅಮೇರಿಕೆಗಳು ತನಗೆ ಭರವಸೆ ಕೊಡಬೇಕೆಂಬುದೇ ಮೊದಲಾದ ನಾಲ್ಕು ಹೊಸ ಶರತುಗಳನ್ನು ಫ್ರಾನ್ಸು ಮುಂದಿಟ್ಟಿತು. ಹೀಗೆ, ಒಡಂಬಡಿಕೆಗೆ ಸಹಿ ಹಾಕಲಿರುವ ಕೊನೆಯ ಮಟ್ಟದಲ್ಲಿ ಸಾ

ಷ್ಟು ಗೊಂದಲ ನಿರ್ಮಿಸಿತು. ಈ ಒಪ್ಪಂದವು ಯುದ್ಧ ಸನ್ನಾಹದ ಪ್ರತ್ಯಕ್ಷ ಕೃತಿಯೆಂದೂ ಕಮ್ಯೂನಿಸ್ಟರು ಒಂದೇ ಸವನೆ ದೂಷಿಸಿದರೆ—ಜರ್ಮನಿಯ ಜನತೆಯಲ್ಲಿ ಎಂದಿಲ್ಲದ ದಿಗಿಲೆದ್ದಿದೆ. ಪಶ್ಚಿಮ ಜರ್ಮನಿಯು ಅಪ್ರೇಶ್ಯನ್ನು ಭೇಟಿಯಾಗುವುದೂ, ಬಟ್ಟೆ ಒಳ್ಳೆಣ್ಣೆ ಮುಂತಾದ ಜೀವನಾವಶ್ಯಕ ಪದಾರ್ಥಗಳನ್ನು ಸಂಗ್ರಹಿಸುವುದೂ ಜನರ ಕಳವಳದ ಗುರುತು ತಾನೆ!

ಮಧ್ಯ ಪೂರ್ವದ ಬಿಕ್ಕಟ್ಟು

ಮಧ್ಯ ಪೂರ್ವದ ಸಮಸ್ಯೆಗಳನ್ನು ಶೀಘ್ರಾತಿ ಶೀಘ್ರ ಬಗೆಹರಿಸ ಬೇಕೆಂದು ಅಮೇರಿಕೆಯು ತೀರ ವ್ಯಾಕುಲಗೊಂಡಿರುವಂತಿದೆ. ಕಳೆದ ವಾರ ಟ್ಯುನೀಸಿಯದ ಕುರಿತು ಅದು ಪರಿಣಾಮಕಾರಿ ಸೂಚನೆ ಮಾಡಿದುದರಿಂದಲೋ ಏನೋ—ಕೈದಿನಲ್ಲಿಟ್ಟಿದ್ದ ರಾಷ್ಟ್ರೀಯ ವಾದಿಗಳಲ್ಲಿ ಎಷ್ಟೋ ಮಂದಿಯನ್ನು ಟ್ಯುನೀಸಿಯದ ಫ್ರೆಂಚ ರೆಸಿಡೆಂಟರು ಬಿಡುಗಡೆಮಾಡಿದರು. ಈ ಬಿಕ್ಕಟ್ಟನ್ನು ಹಾಗೆಯೆ ಮುಂದುವರಿಯಲು ಬಿಡದೆ, ಬೇಗನೇ ಒಂದು ನೆಲೆಗಡೆಗೆ ಬರಬೇಕೆಂದು ಅಮೇರಿಕದ ಒತ್ತಾಯವಿದೆ.

ಸುಡಾನಿನ ತಂಟೆಯನ್ನು ಸಹ ಅನಿರ್ದಿಷ್ಟವಾಗಿ ಮುಂದುಹಾಕದೆ, ತ್ವರಿತವಾಗಿ ಒಂದು ಇತ್ಯರ್ಥಕ್ಕೆ ಬರಬೇಕೆಂದು ಅಮೇರಿಕ ಅಪೇಕ್ಷಿಸುತ್ತದೆ. ತನ್ನ ರಾಯಭಾರಿಯ ಮೂಲಕ ಅದರ ಪ್ರಯತ್ನಗಳು ಸಾಗುತಿದ್ದು, ಈಜಿಪ್ತದ ಮನವೊಲಿಸುವುದೇ ಅದರ ಪ್ರಥಮ ಕಾರ್ಯ. ಸುಡಾನದ ಮೇಲೆ ಅರಸ ಫಾರೂಕ ಸಾರ್ವಭೌಮಾಧಿಕಾರವನ್ನು ಒಪ್ಪದ ವಿನಃ ಯಾವ ಕ್ರಮವೂ ಈಜಿಪ್ತದ ವಿಚಾರಕ್ಕೆ ಸಂಗತವಾದುದಲ್ಲವೆಂದು ಸ್ಪಷ್ಟವಾಗಿಯೇ ಹಿಲಾಲಿ ಪಾಶಾ ನುಡಿದಿದ್ದಾರೆ. ಹೇಗಿದ್ದರೂ ಹೊಸ ಸೂಚನೆಗಳಿಗೆ ಅವರ ಸ್ವಾಗತವುಂಟು. ಅರಸ ಫರೂಕರು ರಮದಾನದ ನಿಮಿತ್ತ ಕೊಟ್ಟ ಸಂದೇಶದಲ್ಲಿ ವಿದೇಶೀ ಶಕ್ತಿಗಳ ಕೈವಾಡದಿಂದ ಈಜಿಪ್ತವು ಮುಕ್ತವಾಗಿರಲು ದೇವರು ನಮಗೆ ಬೆಂಬಲಿಗನಾಗಿ ನಿಂತು ಮಾರ್ಗದರ್ಶನ ಮಾಡಿದನು. ನನ್ನ ಸರಕಾರವು ರಾಷ್ಟ್ರದ ಸ್ವಾತಂತ್ರ್ಯವನ್ನು ಬಲಗುಂದಿಸುವ ಯಾವುದೇ ಸಂಗತಿಯನ್ನು ಸ್ವೀಕರಿಸಲು ಒಪ್ಪಲಾರದು—ಎಂದು ಹೇಳಿ ಈಜಿಪ್ತದ ನಿಜಮನೀಷೆ ವ್ಯಕ್ತಪಡಿಸಿರುವರು.

ಭಾಷಾನುಗುಣ ಪ್ರಾಂತ

ಪಾರ್ಲಿಮೆಂಟಿನಲ್ಲಿ ಕಾಂಗ್ರೆಸ ಹಾಗು ವಿರೋಧಿಗುಂಪಿನ ಸದಸ್ಯರನೇಕರು ಭಾಷಾನುಗುಣ ಪ್ರಾಂತ ರಚನೆಯ ಅವಶ್ಯಕತೆಯ ಕುರಿತು ಜೋರುಕೊಟ್ಟು ಮಾತನಾಡಿದರು. ಸರಕಾರವು ಭಾಷಾನುಗುಣ ಪ್ರಾಂತರಚನೆಯ ತತ್ವಕ್ಕೆ ಒಪ್ಪಿದೆ ಎಂದೂ, ಈ ಕುರಿತು ಸಂಬಂಧಿಸಿದ ಜನರು ಹೆಚ್ಚು ವಿಷಯಗಳಲ್ಲಿ ಒಮ್ಮತಕ್ಕೆ ಬಂದರೆ ಮುಂದಿನ ಕ್ರಮ ಕೈಗೊಳ್ಳಲು ಅನುಕೂಲವಾಗುವುದೆಂದೂ ರಾಜ್ಯಪರಿಷತ್ತಿನಲ್ಲಿ ಹಾಗು ಲೋಕ ಸಭೆಯಲ್ಲಿ ಸಭಾಧುರೀಣರು ಆಶ್ವಾಸನೆ ಇತ್ತರು. ಮೈಸೂರು, ಮದ್ರಾಸ, ಮುಂಬಯಿ ಮತ್ತು ಹೈದರಾಬಾದುಗಳ ಕರ್ನಾಟಕ ಭಾಗದ ಹದಿನೈದು ಮಂದಿ ಲೋಕಸಭಾ ಸದಸ್ಯರು ಈಚೆಗೆ ಪ್ರಧಾನಿ ನೆಹರೂ ಅವರ ಭೇಟಿ ತೆಗೆದುಕೊಂಡು ಕರ್ನಾಟಕ ಪ್ರಾಂತ ರಚನೆಯ ಬಗ್ಗೆ ಸಯುಕ್ತಿಕವಾಗಿ ಆಗ್ರಹಪಡಿಸಿದರು. ಶ್ರೀ ನೆಹರೂ ತುಂಬ ಆಸ್ಥೆಯಿಂದ ಶಿಷ್ಟಮಂಡಳದ ಹೇಳಿಕೆಯನ್ನು ಕೇಳಿಕೊಂಡರೆಂದೂ ಕೆಲವು ಸಂಗತಿಗಳ ಕುರಿತು ಪ್ರಶ್ನೆ ಹಾಕಿದರೆಂದೂ ಗೊತ್ತಾಗಿದೆ. ಒಂದು ಲಿಖಿತ ಹೇಳಿಕೆಯ ಮೂಲಕ ಈ ವಿಷಯಕ್ಕೆ ಸಂಬಂಧಿಸಿದ ಮನವಿಯನ್ನು ಕಳಿಸಿದರೆ, ವಿಚಾರ ನಡೆಸಲು ಸುಗಮವಾಗುವುದಾಗಿ ಶ್ರೀ ನೆಹರೂ ಶಿಷ್ಟಮಂಡಳಕ್ಕೆ ತಿಳಿಸಿದರು. ಭಾಷಾನುಗುಣ ಪ್ರಾಂತ ನಿರ್ಮಾಣಕ್ಕೆ ಜನಮತವು ತುಂಬ ಅನುಕೂಲವಿರುವುದು ಮಾತ್ರವಲ್ಲದೆ ಅದರಿಂದ ಜನತೆಯ ಅಭ್ಯುದಯವೂ ರಾಷ್ಟ್ರದ ಕಲ್ಯಾಣವೂ ಸಾಧಿಸಲ್ಪಡುವುದೆಂಬುದರಿಂದಲೂ—ಇದಕ್ಕೆ ಪ್ರಾಶಸ್ತ್ಯ ದೊರೆಯ ಬೇಕಾದುದು ನ್ಯಾಯ.

ಏನು ಮಾಯೆ!

ಮಳೆಗಾಗಿ ದೇವರನ್ನು ಪ್ರಾರ್ಥಿಸಿರಿ ಎಂದು ರಾಜಾಜಿ ಕೇಳಿಕೊಂಡುದು ಸಾರ್ಥಕವಾಯಿತು. ಹಿಂಗಾರು ಮಳೆಯ ಪ್ರದೇಶವಾದ ರಾಯಲ ಸೀಮೆಯಲ್ಲಿ, ಆಂಧ್ರದ ಕರಾವಳಿಯಲ್ಲ ಮತ್ತು ಮದ್ರಾಸು ನಗರದಲ್ಲಿ ಕೂಡ ಸಪ್ಟಂಬರಕ್ಕೆ ಮೊದಲು ಮಳೆಯ ಮೋಡ ಕಾಣುವ ಆಶೆ ಯಾರಿಗೂ ಇರಲಿಲ್ಲ. ಆದರೆ ಕಳೆದ ಕೆಲವು ದಿನಗಳಲ್ಲಿ ಮೂಸಲ ಧಾರೆ ಮಳೆ ಬಂದು ಸಮಾಧಾನಕ್ಕೆ ಕಾರಣವಾಯಿತು. ಕುಡಿಯುವ ನೀರಿಗೂ ತತ್ವಾರವಾಗಿದ್ದಾಗ ವರುಣ ದೇವರು ಒಲಿದುದು ಯಾರ ಪುಣ್ಯವೋ—ಮದ್ರಾಸಿನಲ್ಲಿ ನೀರಿನ ಸರಬರಾಜು ತುಂಬ ಗೊಂದಲ ಪರಿಸ್ಥಿತಿಗೆ ಮುಟ್ಟಿದಾಗ, ಮಳೆ ಬಂದು, ಕೆರೆ ತುಂಬಿದ ಸಂತೋಷವೆಂದರೆ—ಕ್ಷಾಮ ಪೀಡಿತ ಪ್ರದೇಶದವರಿಗಂತೂ ಸ್ವರ್ಗಲೋಕದ ಅವ್ಯಕ್ತ ಕೈಗೆ ಬಂದ ಆನಂದ. ಈ ಸಮಾಧಾನದ ಜೊತೆಗೆ ಸ್ವಲ್ಪ ಮಟ್ಟಿಗೆ ಹಾನಿಯೂ ಆಗಿದೆ, ನಿಜ. ಅನಿರೀಕ್ಷಿತವಾಗಿ ನೆರೆಬಂದು ಮನೆಮಾರುಗಳನ್ನು ಬಳಿದುಕೊಂಡು ಹೋಯಿತು. ವಾಹನ ಸಂಚಾರಕ್ಕೆ ಮತ್ತು ವಿಮಾನಗಳ ಓಡಾಟಕ್ಕೆ ಕೆಲವು ಸಣ್ಣ ಬಾಧೆಯಾಯಿತು. ಆದರೆ ಮೇಘರಾಜನ ಕೃಪೆಯ ಮುಂದೆ ಇದೆಲ್ಲ ಸಹ್ಯ. ಸರಕಾರವೂ ಭಾರತ ಸೇನೆಯೂ ನೀಡುತ್ತಿರುವ ಪರಿಹಾರಕಾರ್ಯ ಇನ್ನು ಕೆಲಮಟ್ಟಿಗೆ ಸುಗಮಗೊಂಡೀತು.

ವಿನಿಯಂತ್ರಣ

ಅಕ್ಕಿ ಮತ್ತು ಗೋಧಿಯನ್ನುಳಿದು ಇತರ ಧಾನ್ಯಗಳ ಮೇಲಿನ ನಿಯಂತ್ರಣವನ್ನು ತೆಗೆದೊಗೆಯಲು ಮದ್ರಾಸು ಸರಕಾರ ನಿರ್ಧರಿಸಿದೆ. ರೇಶನು ಹೋಗುವುದರ ಜೊತೆಗೆ ಬೆಲೆಯ ಹತೋಟಿಯೂ ದೂರಾಗುವುದು. ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ರೇಲ್ವೆ ಅಥವಾ ಮೋಟಾರು ವಾಹನಗಳಲ್ಲಿ ಧಾನ್ಯ ಕಳಿಸುವ ಬಗ್ಗೆ ಮಾತ್ರ ಇನ್ನೂ ನಿರ್ಬಂಧ ಉಳಿಯುವುದು. ಅಕ್ಕಿ ಮತ್ತು ಗೋಧಿಯ ನಿಯಂತ್ರಣವನ್ನು ರದ್ದುಗೊಳಿಸಲಿಕ್ಕೆ ಅನುಕೂಲ ಪರಿಸ್ಥಿತಿ ಇದೆಯೆ ಹೇಗೆಂಬುದನ್ನು ಸರಕಾರ ವಿಚಾರಿಸುತ್ತಿದೆ.

೦೦ ೦೦

ರಾಜಾಜಿಯ ನಾಮಕರಣದ ಸಂಪೂರ್ಣ ಹೊಣೆ ತನ್ನದೆಂದು ಮದ್ರಾಸಿನ ಗವರ್ನರ ಶ್ರೀ. ಶ್ರೀಪ್ರಕಾಶರು ಹೇಳಿದರು. ತನಗೆ ಸಲಹೆ ನೀಡಲು ಯಾರೂ ಇರದ ಆ ಕಾಲದಲ್ಲಿ ಸ್ವಂತ ಬುದ್ಧಿಯಿಂದಲೇ ಯೋಚಿಸಿ ರಾಜಾಜಿಯಂಥ ಮುತ್ಸದ್ದಿಗಳನ್ನು ರಾಜ್ಯದ ಮೇಲ್ಮನೆಯ ಸದಸ್ಯಸ್ಥಾನ ಸ್ವೀಕರಿಸುವಂತೆ ಮನವೊಲಿಸಲು ಯತ್ನಿಸಿದನೇ ಹೊರತು, ಸ್ವತಃ ರಾಜಾಜಿಯೇ ಆಗಲಿ, ಬೇರೆ ಯಾರೇ ಆಗಲಿ, ಆಗ್ರಹಪಟ್ಟಿದ್ದರಿಂದ ಆ ನೇಮಕ ವಾಗಲಿಲ್ಲ ಎಂದವರು ಸ್ಪಷ್ಟೀಕರಿಸಿದರು.

ಪ್ರತಿಬಂಧಕ ಸ್ಥಾನಬದ್ಧತೆಯಲ್ಲಿಟ್ಟಿರುವವರನ್ನು ಬಿಡುಗಡೆ ಮಾಡಬೇಕೆಂಬ ಕಮ್ಯೂನಿಸ್ಟರ ಕೇಳಿಕೆಗೆ ಪ್ರಧಾನಿ ನೆಹರೂ ಉತ್ತರಿಸುತ್ತ—ಬಲವಾದ ಕಾರಣಗಳಿಲ್ಲದಲ್ಲಿ ಅಂಥವರನ್ನು ಬಿಡುಗಡೆ ಮಾಡಬೇಕಾಗಿ ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೆ ಸಲಹೆಕೊಟ್ಟಿದೆ ಎಂದರು. ಸ್ಥಾನ ಬದ್ಧತೆಯಲ್ಲಿಟ್ಟ ಜನರ ಬಿಡುಗಡೆಯನ್ನು ಕುರಿತು ಸರಕಾರವು ಅವರ ವೈಯಕ್ತಿಕ ನಡವಳಿಕೆಯ ಹೊಣೆಗಾರಿಕೆಯಿಂದಲೇ ಒಂದು ತೀರ್ಮಾನಕ್ಕೆ ಬರುವುದೆಂದೂ ಇದರಲ್ಲಿ ಅವರು ಯಾವ ಪಕ್ಷಪಂಗಡಕ್ಕೆ ಸೇರಿದವರು ಎಂಬುದನ್ನು ನೋಡುವುದಿಲ್ಲವೆಂದೂ ನೆಹರೂ ತಿಳಿಸಿದರು.

ಭಾರತ ಪಾಕಿಸ್ತಾನಗಳ ನಡುವೆ "ವಿಸಾ"ಗಳ ಮೂಲಕ ಜನರು ಹೋಗಿಬರುವ ಹೊಸಕ್ರಮವನ್ನು ಆರಂಭಿಸಬೇಕೆಂಬ ಪಾಕಿಸ್ತಾನೀ ನಿಶ್ಚಯದ ಚರ್ಚೆ ನಡೆಸಲು ಕರಾಚಿಯಲ್ಲಿ ಕೂಡಿದ ಉಭಯ ರಾಷ್ಟ್ರಗಳ ಸಭೆ ಯಾವ ನಿರ್ಣಯಕ್ಕೂ ಬರಲಿಲ್ಲ.

ಜಿಲ್ಲಾ ಆಹಾರ ಸಮಿತಿ—ಸಭೆಯೊಂದು ತಾ 23ರಂದು ಕಲೆಕ್ಟರರ ಆಫೀಸಿನಲ್ಲಿ ಜಿಲ್ಲಾಧಿಕಾರಿ ಶ್ರೀ. ಎ. ಆರ್. ರಾಜರತ್ನಂ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. N. N. ಸುವರ್ಣರು ಈಗಿನ 'ಲೆವಿ' ಪದ್ಧತಿಯ ಆರ್ಡರಿನಿಂದಾಗುತ್ತಿರುವ ಅನಾನುಕೂಲತೆಗಳನ್ನು ವಿವರಿಸಿದರು. ಇಲಾಖಾಧಿಕಾರಿಗಳು ಈ ಕುರಿತು ಸಹಾನುಭೂತಿಯಿಂದ ವರ್ತಿಸುವುದಾಗಿ ಉತ್ತರಿಸಿದರು. ಶ್ರೀ. ಬಿ. ವೈಕುಂಠ ಬಾಳಿಗಾ ಶ್ರೀ. ಟಿ. ಎ. ಪೈಗಳೂ ಒಂದು ವೇಳೆ ಜಿಲ್ಲೆಯಿಂದ ಜಿಲ್ಲೆಗೆ ಅಕ್ಕಿ ಸಾಗಾಟಕ್ಕೆ ಬಿಡುವುದಿದ್ದರೆ ಅದು ನಮ್ಮ ಜಿಲ್ಲೆಗೆ ಲಗಾವಾಗಬಾರದೆಂದೂ ಏಕೆಂದರೆ ನಮ್ಮ ಜಿಲ್ಲೆಯ ಸುತ್ತಲೂ ಕೊರತೆಯ ಪ್ರದೇಶಗಳೇ ಇದ್ದು ಅಲ್ಲಿಗೆ ಅಕ್ಕಿ ಸಾಗುವ ಸಂದರ್ಭ ಬರಬಹುದೆಂದೂ ಸೂಚಿಸಿದರು. ಬಳಿಕ ಶ್ರೀ. ಟಿ. ಎ. ಪೈಗಳು ಅಧಿಕ ಆಹಾರ ಬೆಳೆಸುವ ಕಾರ್ಯವನ್ನು ಮಿತವ್ಯಯವೆಂದು ಹಿಂದಿಕ್ಕಬಾರದೆಂದೂ ಅದನ್ನು ತ್ವರೆಗೊಳಿಸಬೇಕೆಂದೂ ಜಿಲ್ಲೆಯ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಬಿಟ್ಟು ಬಿಡದೆ ಬೇಗನೆ ಕಾರ್ಯಗತ ಮಾಡುವುದರಿಂದ ಈಗಿರುವ ಜಿಲ್ಲೆಯ ಅಂದಾಜು 20 ಸಾವಿರ ಟನ್ನಿನ ಕೊರತೆಯು ಅದಷ್ಟು ಕಡಿಮೆಯಾಗಬಹುದೆಂದೂ ಸೂಚಿಸಿದ್ದನ್ನು ಶ್ರೀ. ಕೆ. ಬಿ. ಜಿನರಾಜ ಹೆಗ್ಡೆಯವರು ಸ್ಪಷ್ಟೀಕರಿಸಲಾಗಿ ಸರ್ವಾನುಮತದಿಂದ ಪಾಸಾಗಿ ಸರಕಾರಕ್ಕೆ ಬರಕೊಳ್ಳಬೇಕೆಂದಾಯಿತು. ಒಂದು ವೇಳೆ ಉಡ್ಡಿ ಹಸುಗೆಯನ್ನು ರದ್ದುಗೊಳಿಸುವುದಿದ್ದರೆ ಅದನ್ನು ಬರುವ ಕಟಾವಿನ ನಂತರವೇ ಮಾಡಬೇಕೆಂದೂ ಶ್ರೀ. ಪೈಗಳು ಸೂಚಿಸಿದರು.

ಜಿಲ್ಲಾ ಕಾಂಗ್ರೆಸ್ ಕಮಿಟಿಯ— ಕೆಲವು ಅಧಿಕಾರಿ ವರ್ಗದವರ ಮೇಲಿನ ಆರೋಪಗಳ ವಿಚಾರಣೆಗಾಗಿ ಕೆ. ಪಿ. ಸಿ. ಸಿ. ಕಡೆಯಿಂದ ಶ್ರೀ ದೊಡ್ಡಮೇಟಿಯವರು 23ರಲ್ಲಿ ಮಂಗಳೂರಿಗೆ ಬಂದ್ದರೆಂದೂ ಆರೋಪಗಳನ್ನು ಹಿಂದೆಗೆದುಕೊಳ್ಳಲಾಗಿದೆ ಎಂದೂ ತಿಳಿದುಬರುತ್ತದೆ

ಉಡುಪಿಯಲ್ಲಿ ಸ್ಕೌಟಿಂಗ್ ಚಳವಳಿ—ಭಾರತ ಸ್ಕೌಟ್ಸ ಮತ್ತು ಗೈಡ್ಸ್ ಎಸೋಸಿಯೇಶನಿನ ಕಾರ್ಯಕಾರೀ ಮಂಡಳಿಯ ಸಭೆಯು ತಾ. 26ರಲ್ಲು ಮುಕುಂದ ನಿವಾಸದಲ್ಲಿ ಡಾ। ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀ ಎಮ್. ವೆಂಕಟೇಶ ಪೈಗಳ ನಿಧನದ ಬಗ್ಗೆ ಶೋಕ ಸೂಚಿಸಲಾಯಿತು. ಮದ್ರಾಸು ಎಸೆಂಬ್ಲಿಗೆ ಈ ಎಸೋಸಿಯೇಶನಿನ ಟ್ರೆಜರರ್ ಆದ ಶ್ರೀ ಟಿ. ಎ. ಪೈಗಳು ಆರಿಸಿ ಬಂದ ಬಗ್ಗೆ ಅವರನ್ನು ಅಭಿನಂದಿಸುವ ನಿರ್ಣಯವಾಯಿತು. ಕಾರ್ಯದರ್ಶಿ ಶ್ರೀ ಕೆ. ಗೋಪಾಲ ಸೆಟ್ಟಿ ಮತ್ತು ಅಸಿಸ್ಟಂಟ್ ಡಿಸ್ಟ್ರಿಕ್ಟ್ ಕಮಿಶನರ್ ಶ್ರೀ ಟಿ. ಆರ್. ಯು. ಪೈಗಳು ಕಳೆದ 18 ತಿಂಗಳುಗಳಿಂದ ಸ್ಕೌಟ್ ಚಳವಳಿಯು ಮುಂದರಿಯದಿರಲು ಉಂಟಾದ ತೊಂದರೆಗಳನ್ನು ವಿವರಿಸಿ ಸ್ಥಳೀಯ ಸ್ಕೌಟ್ ಸಂಸ್ಥೆಗಳಿಗೆ ಸ್ವತಂತ್ರಾಧಿಕಾರವಿದ್ದರೆ ಸ್ಕೌಟಿಂಗ್ ಚಳವಳಿಯು ಜಯಪ್ರದವಾಗಿ ಬೆಳೆಸಲು ಸಾಧ್ಯವಿದೆ ಎಂದು ಸೂಚಿಸಿದರು. A.D.C. ಶ್ರೀ ಪಿ. ರಾಮದಾಸ ನಾಯ್ಕರೂ ಇದೇ ಅಭಿಪ್ರಾಯವನ್ನಿತ್ತರು. ಪಶ್ಚಿಮ ಕರಾವಳಿಯ ಅಸಿಸ್ಟಂಟ್ ಸ್ಟೇಟ್ ಕಮಿಶನರ್ ಶ್ರೀ ಎಮ್. ಎಸ್. ಮಾಧವರಾಯರು ಕಳೆದ ಎಪ್ರಿಲ್ ತಿಂಗಳಿಂದ ವಿಕೇಂದ್ರೀಕರಣ ಯೋಜನೆಯು ಕಾರ್ಯರೂಪದಲ್ಲಿ ತರಲ್ಪಟ್ಟುದರ ಪರಿಣಾಮಗಳನ್ನು ವಿವರಿಸಿದರು. ಅಲ್ಲದೆ ಸ್ಟೇಟ್ ಹೆಡ್ ಕ್ವಾರ್ಟರ್ಸ್ ಎಸೋಸಿಯೇಶನಿನೊಂದಿಗೆ ಸ್ಥಳೀಯ ಸಭೆಗಳು ನೇರಾ ಸಂಬಂಧವನ್ನಿಟ್ಟುಕೊಂಡು ಜವಾಬ್ದಾರಿಯಿಂದ ಕೆಲಸಮಾಡುವ ಸೂಚನೆಯನ್ನೂ ಕೊಟ್ಟರು. ಉಡುಪಿ ತಾಲೂಕು ಸಂಘವನ್ನು ಸ್ಟೇಟ್ ಹೆಡ್ ಕ್ವಾರ್ಟರ್ಸ್ ಸಂಘಕ್ಕೆ ಸೇರಿಸಿಕೊಳ್ಳುವುದು ಯುಕ್ತವೆಂದೂ ಜೂನ್ ತಿಂಗಳಿಂದ ಈ ತಾಲೂಕಿನಲ್ಲಿ ಸ್ಕೌಟಿಂಗ್ ಚಳವಳಿ ಬೆಳೆದು ಬರುವಂತೆ ಮಾಡಬೇಕೆಂದೂ ತೀರ್ಮಾನಿಸಲಾಯಿತು.

ಬರಗಾಲ ಸಹಾಯಕ ನಿಧಿಸಂಗ್ರಹ ಸಮಿತಿ—ಸಭೆಯು ತಾ. 20ರಲ್ಲು ಸಬ್ ಕಲೆಕ್ಟರ್ ಶ್ರೀ ಪಿ. ರಂಗನಾಥರಾವ್ ನಾಯುಡು ಬಿ. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕ್ಷಾಮ ಪೀಡಿತರಿಗೆ ಆದಷ್ಟು ಹಣವನ್ನು ಸಂಗ್ರಹಿಸಿ ಕಳುಹಿಸುವರೆ ಸಹಾಯಾರ್ಥ ಸಿನೆಮಾ ದೇಖಾವೆಗಳನ್ನು ಏರ್ಪಡಿಸಬೇಕೆಂದಾಯಿತು. ಸಮಿತಿಗೆ ಡಾ। ಸುಂದರರಾಮ ಪೈ, ಶ್ರೀಗಳಾದ ಬಿ. ಎಸ್. ಹೆಗ್ಡೆ, ಟಿ. ಎನ್. ಕೇಳು ನಂಬಿಯಾರ್, ಕೆ. ನರಹರಿ ಕಾಮತ್ ಇವರನ್ನು ಸೇರಿಸಿಕೊಳ್ಳಲಾಯಿತು. ಮಹಾಜನರು ಉದಾರ ಮನಸ್ಸಿನಿಂದ ಈ ಸಮಿತಿಗೆ ಸಹಾಯಮಾಡುವರೆಂದು ನಿರೀಕ್ಷಿಸಲಾಗಿದೆ.

ವಾಹನ ಮತ್ತು ಜನಸಂಚಾರವು: ವಿಶೇಷವಾಗಿ ಹೆಚ್ಚುತ್ತಿರುವುದರಿಂದ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ಪೋಲೀಸ ಡ್ಯೂಟಿಯು ಅವಶ್ಯಕವಿದೆ. ಇದರಿಂದ ಸ್ಪೀಡ್ ಲಿಮಿಟನ್ನು ಹತೋಟಿಗೆ ತರಲೂ ಸಹಾಯವಾಗಬಹುದು.

ಟಪ್ಪಾಲು ಕಟ್ಟೆಗಳೀಗ—ಹಳ್ಳಿ ಹಳ್ಳಿಗಳಲ್ಲಿ ಹೆಚ್ಚುತ್ತಿವೆಯಾದರೂ ಬಟವಾಡೆಯ ಕ್ಷಿಪ್ರತೆಯು ಜನಸಾಮಾನ್ಯರ ಅಪೇಕ್ಷೆಯಂತೆ ಆಗುವುದಿಲ್ಲವೆಂದೂ ಪೇಟೆಗೆ ಹೆಚ್ಚು ದಟ್ಟಿ ಭರಣಗಳು ಹೋದರೆ ಜನಹಿತವಾಗಲಾರದೆಂದೂ ಬಾತ್ಮೀದಾರರೊಬ್ಬರು ತಿಳಿಸುತ್ತಾರೆ.

ಅಂತರಂಗದ ಕಥೆ, ಕಾದಂಬರಿ, ನಾಟಕ, ಕವಿತೆ, ಚಿತ್ರ ಪ್ರಬಂಧ ಮೊದಲಾದ ನಾನಾ ಬಗೆಯ 75 ಪುಸ್ತಕಗಳನ್ನು ಒಟ್ಟಿಗೆ ರೂ. 20ಕ್ಕೆ ಕೊಡಲಾಗುವುದು.
ಕೆಟಲಾಗಿಗೆ ಬರೆಯಿರಿ:—ಅಂತರಂಗ ಆಫೀಸು ಉಡುಪಿ, ಅಥವಾ ನವಭಾರತ ಬುಕ್ ಡಿಪೋ, ಉಡುಪಿ

ಮಂಗಳೂರು

ಅಂತರಾಷ್ಟ್ರೀಯ ದರೋಡೆಗಾರ ನೈನಿಸಿದ—ಹಲವು ಕೊಲೆ ಕಳವುಗಳಿಗೆ ಕಾರಣನಾದನೆಂದು ಕಳೆದ ವರ್ಷ ಬಂಧಿಸಲ್ಪಟ್ಟು ಮಂಗಳೂರು ಸ್ಪೆಶ್ಯಲ್ ಸಬ ಜೈಲಿನಲ್ಲಿಡಲ್ಪಟ್ಟು ಅಲ್ಲಿ ಜೈಲು ವಾರ್ಡರುಗಳಿಗೆ ಮೋಸ ಮಾಡಿ ಪರಾರಿಯಾಗಿದ್ದ ಎ. ಜೆ. ಪರೀಸನ್ನು ತಾ. 24ನೇ ರಾತ್ರಿ ಮಂಗಳೂರಿಗೆ ತರಲಾಯಿತು.

ವಿದಾಯ ಸತ್ಕಾರ—ಸ್ಥಳೀಯ ಸರಕಾರಿ ಆಸ್ಪತ್ರೆಯ ಗೌರವ ಸರ್ಜನರಾದ ಡಾ| ದೇವದಾಸ ಅಡಪರು ಕಿವಿ, ಮೂಗು, ಕಂಠ, (E. N. T) ರೋಗಗಳಲ್ಲಿ ಉಚ್ಚ ಶಿಕ್ಷಣ ಪಡೆಯಲು ಅಮೇರಿಕಕ್ಕೆ ಪ್ರಯಾಣ ಬೆಳೆಸುವ ಸಂದರ್ಭದಲ್ಲಿ ತಾ. 17-5-52ರಲ್ಲಿ ಅವರನ್ನು ಜಿಲ್ಲಾ ವೈದ್ಯಕೀಯ ಸಂಘದ ಸದಸ್ಯರು ಆಮಂತ್ರಿಸಿ ವಿದಾಯ ಸತ್ಕಾರವಿತ್ತರು. ಆರಂಭದಲ್ಲಿ ಕೆಪ್ಟನ್ ಮಂಗೇಶರಾಯರು ಎಪೆಂಡಿಸೈಟಿಸ್ ರೋಗದ ಕುರಿತು ವಿಚಾರಪೂರ್ಣ ಭಾಷಣವನ್ನಿತ್ತರು. ಬಳಿಕ ಜಿಲ್ಲಾ ಮೆಡಿಕಲ್ ಆಫೀಸರ್ ಡಾ| ಎಸ್. ಜಿ. ಎ. ರಾಜು, ಡಾ| ಎ. ಎಫ್. ಕ್ವೆಲ್ಹೊ, ಡಾ| ಯು. ಪಿ. ಮಲ್ಯ ಇವರು ಡಾ| ಅಡಪರ ಶ್ರೇಯೋಭಿವೃದ್ಧಿಯನ್ನು ಹಾರೈಸಿ ಮಾತನಾಡಿದರು. ಡಾ| ಅಡಪರು ತಕ್ಕ ಉತ್ತರವಿತ್ತರು. ಮರುದಿನ ಡಾ| ಬಿ. ಆರ್. ಹೆಗ್ಡೆಯವರೂ ಡಾ| ಅಡಪರಿಗೆ ಚಹಾ ಸತ್ಕಾರವಿತ್ತು ಗೌರವಿಸಿದರು. ಡಾ| ಅಡಪರು ಈಗಾಗಲೇ ಅಮೇರಿಕಕ್ಕೆ ಹೋಗಿದ್ದು ಒಂದು ವರ್ಷಕಾಲ ಪ್ರೌಢಶಿಕ್ಷಣ ಪಡೆಯಲಿರುವರು.

ಜಿಲ್ಲಾಬೋರ್ಡಿನ ಸಭೆಯೊಂದ - ತಾ. 23ನೇ ಬೆಳಿಗ್ಗೆ ಉಪಾಧ್ಯಕ್ಷರಾದ ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಎಂ. ಎಸ್. ಅಧಿಕಾರಿಗಳ ಪ್ರಶ್ನೆಗಳಿಗೆ ಉತ್ತರವಾಗಿ ಜಿಲ್ಲಾಬೋರ್ಡಿನ ಹಿಂದುಸ್ಥಾನಿ ಶಾಲೆಗಳಿಗೆ ಮುಸ್ಲಿಮರಲ್ಲದವರಿಗೂ ಪ್ರವೇಶಕ್ಕೆ ಎಡೆಯುಂಟು, ಪುತ್ತೂರು, ಕಾಸರಗೋಡು, ಕುಂದಾಪುರ, ಉಡುಪಿ, ಅಥಮೂರು, ಬೋರ್ಡು ಹೈಸ್ಕೂಲುಗಳಲ್ಲಿ I ಫಾರ್ಮಿನಲ್ಲಿ 35 ವಿದ್ಯಾರ್ಥಿಗಳು ಸಂಸ್ಕೃತ ಕಲಿಯುತ್ತಾರೆ ಇತ್ಯಾದಿಗಳನ್ನು ತಿಳಿಸಲಾಯಿತು. ಶ್ರೀ ದೇವಪ್ಪಾಳ್ವರ ಪ್ರಶ್ನೆಗಳಿಗೂ ಉತ್ತರವೀಯಲಾಯಿತು.

ಹಿರಿಯಡ್ಕ ಎಜ್ಯುಕೇಶನಲ್ ಸೊಸೈಟಿಯು ಹೈಸ್ಕೂಲಿಗೆ ಅವಶ್ಯವುಳ್ಳ ಸಾಹಿತ್ಯ ಸಾಮಾಗ್ರಿಗಳನ್ನು ಒದಗಿಸಿ ಕೊಟ್ಟಿಲ್ಲವೆಂಬ ಅಲ್ಲಿಯ ಹೈಸ್ಕೂಲ್ ಹೆಡ್ಮಾಸ್ಟರರ ಪತ್ರದ ಕುರಿತು ಚರ್ಚೆ ನಡೆದು ಅಲ್ಲಿಗೆ ಬೇಕಾದ ಸಾಮಾಗ್ರಿಗಳನ್ನು ಒದಗಿಸಿಕೊಡಬೇಕೆಂದೂ ಆ ಶಾಲೆಯನ್ನು ಎಜ್ಯುಕೇಶನಲ್ ಸೊಸೈಟಿಯು ಬೋರ್ಡಿಗೆ ಬಿಟ್ಟುಕೊಡಬೇಕೆಂದೂ ಠರಾಯಿಸಲಾಯಿತು. ಸುಳ್ಯ ಹೈಸ್ಕೂಲಿನ ವಿಚಾರದಲ್ಲಿಯೂ ಈ ತರದ ಠರಾವನ್ನು ಮಾಡುವ ಮೊದಲು ಶ್ರೀ ಎಸ್. ನರ್ಸಪ್ಪಯ್ಯನವರು ಸುಳ್ಯದ ಶಾಲಾ ಕಟ್ಟಡವನ್ನು ಕಟ್ಟಿಸಿದ ಸಂಘವು ರಿಜಿಸ್ಟ್ರಿಯಾದುದಲ್ಲವೆಂದೂ ಅಲ್ಲಿನ ಕಟ್ಟಡದಲ್ಲಿ ಬಿರುಕು ಬಂದಿರುವುದೆಂದೂ ಹೇಳಿದ್ದರಿಂದ ಆ ಪ್ರಶ್ನೆಯು ಹಾಗೆಯೇ ಉಳಿಯಿತು. ಎಲಿಮೆಂಟರಿ ಶಾಲೆಗಳ ಕಟ್ಟಡಗಳ ಬಗ್ಗೆ ಸರಕಾರದಿಂದ | ಲಕ್ಷ 25ಸಾವಿರ ರೂ. ಸಾಲ ಪಡೆಯಬೇಕೆಂದೂ ಬಡಗ ಎಕ್ಕಾರು ಬಳ್ಳಿ, ಮೂಡುಶೆಡ್ಡೆ ಶಾಲೆಗಳನ್ನು ಹಾಯರ್ ಎಲಿಮೆಂಟರಿ ಶಾಲೆಗಳನ್ನಾಗಿ ಮಾಡಬೇಕೆಂದೂ ನಿರ್ಣಯಿಸಲಾಯಿತು. ಈಗಿನ ಪೈನೇ ರಸ್ತೆ ಮತ್ತು ಬೋರ್ಡು ರಸ್ತೆಗಳನ್ನು ಜಿಲ್ಲಾಬೋರ್ಡಿನ ವಶಕ್ಕೆ ಒಪ್ಪಿಸಬೇಕೆಂಬ ಹಾಗು ಶ್ರೀ ಸಿ. ರಾಜಗೋಪಾಲಾಚಾರ್ಯರು ಪ್ರಧಾನಿಗಳಾಗಲು ಸಮ್ಮತಿಸಿದುದಕ್ಕೆ ಅವರನ್ನು ಅಭಿವಂದಿಸಬೇಕೆನ್ನುವ ಠರಾವುಗಳು ಮಂಜೂರಾದುವು.

ಸುಳ್ಯ ಡಿಸ್ಪೆನ್ಸರಿಯನ್ನು ಊರ್ಜಿತದಲ್ಲಿರಿಸಿ ಅಲ್ಲಿಗೆ ಡಾಕ್ಟರರನ್ನು ನೇಮಿಸಬೇಕೆಂದಾಯಿತು.

ಕೀರ್ತಿಶೇಷ ಎಮ್. ಎನ್. ಕಾಮತರ ಸ್ಮಾರಕ ಕಲಾಮಂಟಪದ ನಿಧಿ ಸಂಗ್ರಹದ ಬಗ್ಗೆ ವ್ಯವಸ್ಥೆಗೊಳಿಸಲಾಗಿದ್ದ ನಾಟಕ ಸಪ್ತಾಹವು ಇದೇ ತಾ. 17ರಿಂದ 23ರ ವರೆಗೆ ಯಶಸ್ವಿಯಾಗಿ ನಡೆಯಿತು. ಪ್ರಾರಂಭ ದಿನದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮದ್ರಾಸು ಸರಕಾರದ ರೆವಿನ್ಯೂ ಬೋರ್ಡು ಮೆಂಬರ್ ಶ್ರೀ ವಿ. ಎಸ್. ಕುಡ್ವರು ವಹಿಸಿದ್ದರು. ಎರಡನೆ ದಿನದಿಂದ ಏಳನೆ ದಿನದ ವರೆಗಿನ ಕಾರ್ಯಕ್ರಮಗಳ ಅಧ್ಯಕ್ಷತೆಯನ್ನು ಶ್ರೀಗಳಾದ ಎಮ್. ಮಾಧವ ರಾವ್, ಮದ್ರಾಸು ಎಡ್ವೋಕೇಟ್ ಎ. ನಾರಾಯಣ ಪೈ, ಆರ್. ಕೆ. ಪ್ರಭು, ವಿ ಎಸ್. ಕುಡ್ವಾ, ರಾಷ್ಟ್ರಕವಿ ಗೋವಿಂದ ಪೈ ಮತ್ತು ಕೆ. ಯಶವಂತರಾಯರು ಅನುಕ್ರಮವಾಗಿ ವಹಿಸಿದ್ದರು. ಈ ಏಳು ದಿವಸಗಳಲ್ಲಿ ಮಂಗಳೂರು ಎಮೆಚ್ಯೂರ್ಸ್ ನಾಟಕ ಸಂಸ್ಥೆಗಳು ವಿವಿಧ ನಾಟಕಗಳನ್ನು ಜಯಶೀಲವಾಗಿ ಪ್ರದರ್ಶಿಸಿದ್ದರು.

ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಯಿ

ದುಃಖಸೂಚಕ ಸಭೆ- ಮಂಡಳಿಯ ಸ್ಥಾಪಕರಲ್ಲೊಬ್ಬರಾದ ಶ್ರೀ. ಕಾಡಿಪಟ್ಲ ಚಂದು ಎ. ಮಾಸ್ತರರು ತಾ. 4-5-1952ರಲ್ಲಿ ಕಾಡಿಪಟ್ಲ ತನ್ನ ಸ್ವಗೃಹದಲ್ಲಿ ಸ್ವರ್ಗಸ್ಥರಾಗಿರುವುದರಿಂದ ಮೊಗವೀರ ಸಮಾಜದ ಹಿರಿಯ ಜ್ಯೋತಿಯೊಂದು ನಂದಿಹೋದಂತಾಯಿತು. ಶ್ರೀ. ಚಂದು ಎ. ಮಾಸ್ತರರು ಮಂಡಳಿಗೂ, ಮೊಗವೀರ ಜನತೆಗೂ ಸಲ್ಲಿಸಿದ ಸೇವೆಯು ಅಪ್ರತಿಮವಾಗಿದೆ. ಮಂಡಳಿಯ ವತಿಯಿಂದ ತಾ.10-5-1952ರಲ್ಲಿ ದುಃಖಸೂಚಕ ಸಭೆಯೊಂದು ಶ್ರೀ ಬಿ. ಎ. ಕರ್ಕೇರರ ಅಧ್ಯಕ್ಷತೆಯಲ್ಲಿ ಜರಗಿತು.

ಗೌ. ಕಾರ್ಯದರ್ಶಿ ಶ್ರೀ ಎಸ್. ಎ. ಕೋಟಿಯಾನ್‌ರವರ ಭಾಷಣವಾದ ಮೇಲೆ ಅಧ್ಯಕ್ಷರು, ಶ್ರೀ ಚಂದು ಎ. ಮಾಸ್ತರರು ಮಂಡಳಿಯ ಸ್ಥಾಪನೆಯಾದಂದಿನಿಂದ ಜೀವನಾಂತ್ಯದ ತನಕ ಮಾಡಿದ ವಿವಿಧ ಕಾರ್ಯಸಾಧನೆ, ಅದರಿಂದ ಮಂಡಳಿಗಾದ ಪ್ರಯೋಜನ, ಮತ್ತು ಅವರ ಉದಾರತೆ, ಸಭ್ಯತೆ, ಕಾರ್ಯತತ್ಪರತೆಗಳನ್ನು ವಿವರಿಸಿದರು. ನೆರೆದ ಸಭಿಕರಲ್ಲಿ ಶ್ರೀಗಳಾದ ಯು. ರಾಮರಾಯರು, ಜಿ. ಟಿ ಸುವರ್ಣರು, ಮುತ್ತಪ್ಪ ಕೆ. ಕೋಟಿಯಾನ್‌ರವರು, ಸಿ. ಟಿ. ಕರ್ಕೇರರು, ವೈ. ಕಾಂತಪ್ಪ ಪಿ. ಪುತ್ರನರು, ಜೆ. ಸಿ. ಪುತ್ರನರು, ಮನ್ಸ ಮೆಂಡನರು ಮೊದಲಾದವರು ದಿವಂಗತರ ಗುಣಕಥನ ಮಾಡಿದ ಬಳಿಕ ದುಃಖಸೂಚಕ ಠರಾವುಗಳಾದುವು.

ನೀಲಗಿರಿಯಲ್ಲಿ ಮಕ್ಕಳ ಕೂಟ- ಶ್ರೀ ಕೆ. ಸೀತಾರಾಮ ರಾಯರು ಕೆಲವು ವರುಷಗಳಿಂದ ನಡೆಸಿಕೊಂಡು ಬರುವ ಮಕ್ಕಳ ಕೂಟವು ಈ ವರ್ಷ ಇದೇ 21ರಲ್ಲು ದಾಸಪ್ರಕಾಶದಲ್ಲಿ ಮೈಸೂರು ಮಹಾರಾಜರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಮಕ್ಕಳ ನಾನಾ ತರದ ಆಟ ಪಂದ್ಯಾಟಗಳು ನಡೆದು ಗೆದ್ದವರಿಗೆ ಪಾರಿತೋಷಕಗಳನ್ನು ಕೊಡಲಾಯಿತು. ಅಧ್ಯಕ್ಷ ಮಹಾರಾಜರು ನವೀನ ರೀತಿಯಲ್ಲಿ ಮಕ್ಕಳ ಕೂಟವನ್ನು ಏರ್ಪಡಿಸಿದ ಶ್ರೀ ಕೆ. ಸೀತಾರಾಮ ರಾಯರ ಸ್ವಯಂ ಬುದ್ಧಿಯನ್ನು ಕೊಂಡಾಡಿ ಮಕ್ಕಳ ಉತ್ಸಾಹವನ್ನು ಶ್ಲಾಘಿಸಿ ಸರ್ವತೋಮುಖ ಅಭಿವೃದ್ಧಿಯನ್ನು ಕೋರಿ ಭಾಷಣವಿತ್ತರು.

ಮದ್ರಾಸು ಕರ್ನಾಟಕ ಸಂಘದ- ಆಶ್ರಯದಲ್ಲಿ ತಾ. 17ರಲ್ಲು ಡಾ| ಯು. ರಾಮರಾಯರ ನಿಧನದ ಕುರಿತು ಸಂತಾಪ ಸೂಚಕ ಸಭೆಯು ಶ್ರೀ ಎ. ಬಿ ಶೆಟ್ಟರ ಅಧ್ಯಕ್ಷತೆಯಲ್ಲಿ ಗೋಖಲೆ ಭವನದಲ್ಲಿ ನೆರವೇರಿತು. ದಿವಂಗತರು ಸ್ವಯಂ ಪ್ರತಿಭೆಯಿಂದ ವೈದ್ಯಕೀಯ ಮತ್ತು ರಾಜಕೀಯ ರಂಗಗಳಲ್ಲಿ ಪ್ರಸಿದ್ಧ ವ್ಯಕ್ತಿಯಾಗಿದ್ದರೆಂಬುದನ್ನು ಅಧ್ಯಕ್ಷರು ವಿವರಿಸಿದ ಮೇಲೆ ದುಃಖ ಸೂಚಕ ಠರಾವು ಪಾಸಾಯಿತು. ಬಳಿಕ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಶ್ರೀ ಯು. ರಾಮಪ್ಪ, ಶ್ರೀ ಎಮ್. ಬಾಪಿನೀಡು, ಶ್ರೀ ಚಂಗಲರಾಯನ್, ಶ್ರೀ ಎ. ಆರ್. ವಿ. ಆಚಾರ್, ಶ್ರೀ ಕೆ. ಸಂಜೀವ ಕಾಮತ್, ಡಾ| ಎಮ್. ಆರ್. ಬೈಲ್, ಶ್ರೀ ಕೆ. ತಿರುಮಲೇಶ್ ಮೊದಲಾದವರು ಮಾತನಾಡಿದರು.

THE VIJAYA BANK LIMITED, KARKALA.

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾರ್ಕಳ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಲ್ಲಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದುದರಿಂದಲೂ, ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಜಾರಿಯಾಗದೆ ವಾಪಾಸು ಬಂದಿರುವುದರಿಂದಲೂ, ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ತಿಂಗಳು ತಾ 31-5—52ನೇ ಶನಿವಾರ ಮಧ್ಯಾಹ್ನ ಗಂಟೆ 2ಕ್ಕೆ ಯಾ ಅನಂತರ ಬೇಂಕಿಗೆ ಯುಕ್ತಕಂಡ ತಾರೀಕಿಗೆ ಪುನಃ ನೋಟೀಸು ಕೊಡದೇನೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವವು ಸದ್ರಿ ಏಲಂನಿಗೆ ನಿಲ್ಲಲು ಅಪೇಕ್ಷಿಸುವವರು ಆ ಸಮಯಕ್ಕೆ ಸರಿಯಾಗಿ ಬೇಂಕಿನ ಆಫೀಸಿಗೆ ಬರಬೇಕಾಗಿ ಅಪೇಕ್ಷಿಸುತ್ತೇವೆ.

ಲೋನು ನಂಬ್ರ.	ಹೆಸರು ಮತ್ತು ವಿಳಾಸ	ಅಸಲು ಮೊಬಲಗು
		ರೂ. ಆ. ಪೈ.
56/49-50	ಅಬ್ದುಲ್ ಖಾದಿರ್, ಕಳಂದರ ಬ್ಯಾರಿಗಳ ಮಗ ಸಾಲ್ಮರ, ಕಾರ್ಕಳ	50 0 0
77/50	ಆನಂದ ಪೂಜಾರಿ ಬಾಬು ಪೂಜಾರಿಗಳ ಮಗ, ಅತ್ತೂರು ಗ್ರಾಮ, ದೂಪದಕಟ್ಟೆ ಪೋಸ್ಟು	30 0 0
507/48–9	ಟಿ ರಾಮಕೃಷ್ಣ ಮೆನನ್. 2015 W. O. M. II I. A. F. Signels I. A F. Station Racecourse Camp. New Delhi	80 0 0
87/50	ಹರಿಶ್ಚಂದ್ರ ಪೂಜಾರಿ ಚೆಲ್ವ ಪೂಜಾರಿ ಮಗ, ಮಾರ್ಕೆಟ್ ರೋಡ್, ಕಾರ್ಕಳ	25 0 0
480/50	ಆನಂದ ನಾಯ್ಕ, ವೆಂಕಪ್ಪ ನಾಯ್ಕರ ಮಗ, ಕುಕ್ಕುಂದೂರು ಕಾರ್ಕಳ	10 0 0
789/50	ಅಂತಯ ಸುವರ್ಣ, ತೌಡ ಸುವರ್ಣನವರ ಮಗ, ಕಾರ್ಕಳ ಕಸಬೆ	50 0 0
129/51	ನಾರಾಯಣ ಶೆಟ್ಟಿಗಾರ, ಪದ್ದು ಶೆಟ್ಟಿಗಾರರ ಮಗ, ಸಾಲ್ಮರ ಕಾರ್ಕಳ	10 0 0
252/51	ಅಂತೋನಿ ಸಿಕೇರ, ಲೋರೆನ್ಸ್ ಸಿಕೇರರ ಮಗ, ಕುಂಟಲ್ಪಾಡಿ ಕಾರ್ಕಳ	185 0 0
889/51	ಯನ್. ಕುಮಾರ [illegible], ಮಂಜಪ್ಪ ಹೆಗ್ಡೆರ ಮಗ, ಈದು ಗ್ರಾಮ [illegible]	40 0 0
474/51	ಪೇದ್ರು ಮೆಂಡೋಸ್, ರೆವರೆಂಡ್ ಮೆಂಡೋಸರ ಮಗ, ಮಿಯ್ಯಾರು ಗ್ರಾಮ ಪೋಸ್ಟು ಮಿಯ್ಯಾರು	50 0 0
608&647/51	ರುಕ್ಮಿಣಿ, ಗಂಗಮ್ಮನ ಮಗಳು, ಮುರತಂಗಡಿ ಸಾಣೂರು ಗ್ರಾಮ ಪೋಸ್ಟು ಸಾಣೂರು	100 0 0 250 0 0
10[illegible]/52	ಪಿ ಮಂಜಯ್ಯ ಹೆಗ್ಡೆ; ರಾಮಯ್ಯ ಹೆಗ್ಡೆರ ಅಳಿಯ, ಪಳ್ಳಿ ಗ್ರಾಮ ಪೋಸ್ಟು ಪಳ್ಳಿ	450 0 0
119/52	ಸಾವೇರ್ ಪಿಂಟೋ, ಪೇದ್ರು ಪಿಂಟೋರ ಮಗ, ಬಾರಾಡಿ ಕಾಂತಾವರ ಗ್ರಾಮ ಪೋಸ್ಟು ಕಾಂತಾವರ	400 0 0
611/48–9	ಕೆ. ರಾಮಯ್ಯ ಹೆಗ್ಡೆ, ಪದ್ಮನಾಭ ಹೆಗ್ಡೆರ ಮಗ, ಮರ್ಚಂಟ್ ಬೈಲೂರು	450 0 0

office of the Bank, Karkala 22 5–52

K. Gopalkrishna Shetty
Agent

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್ ಉಡುಪಿ.
ತಾ. 30—5—52ರಿಂದ
ಕವಿಸಾರ್ವಭೌಮರುಗಳ ಕನಸಿಗೂ ಎಟುಕದ ಮಹಾ ಕವಿಯೊಬ್ಬನ ಕಥೆ
ಷಾಯರ್
ದೇವಾನಂದ್, ಸುರೈಯಾ, ಕಾಮಿನಿ ಕೌಶಲ್ಯ, ಕುಕ್ಕು, ಮೊದಲಾದವರು.
ಮುಂದಿನ ಚಿತ್ರ ತಮ್ಮ ನಿರೀಕ್ಷೆಯ
ಹಲ್ ಚಲ್

ತಾರಾನಾಥ ಆಯುರ್ವೇದ ವಿದ್ಯಾಪೀಠ,
ಬಳ್ಳಾರಿ.
(ಮದ್ರಾಸ್ ಸರಕಾರದ ಮಂಜೂರಾತಿ ಪಡೆದಿದೆ)
ಅರ್ಜಿ ಫಾರ್ಮ್ ಮತ್ತು ಪ್ರೋಸ್ಪೆಕ್ಟಸ್‌ಗಳಿಗೆ ಪ್ರಿನ್ಸಿಪಾಲರಿಗೆ ಬರೆಯತಕ್ಕದ್ದು. ಕನಿಷ್ಠ S. S L. C. ಓದಿದವರು ಪ್ರವೇಶಾರ್ಹರು ಜೂನ್ ತಾ 15ರ ಒಳಗ ರಿಜಿಸ್ಟ್ರೇಶನ್ ಫೀ ರೂ. 5/-ರ ಜತೆಗೆ ಅರ್ಜಿಯು ವಿದ್ಯಾಪೀಠದ ಆಫೀಸಿಗೆ ಮುಟ್ಟತಕ್ಕದ್ದು.
ಬಿ. ಕೆ. ಮಾರ್ಳ,
ಕಾರ್ಯದರ್ಶಿ.

ಶಿರೂರು— ಇಲ್ಲಿಯ ಏಡೆಡ್ ಎಲಿಮೆಂಟರಿ ಶಾಲೆಯ ರಕ್ಷಕರ ದಿನಾಚರಣೆಯು 20-5-52ರಲ್ಲಿ ಕುಂದಾಪುರ ರೇಂಜಿನ ಶಾಲೆಗಳ ಜೂನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಮಕ್ಕಳ ಯಕ್ಷಗಾನ ನಾಟಕ ಮೊದಲಾದ ಕಾರ್ಯಕ್ರಮಗಳಿದ್ದವು.

ಕಾಂತಾವರ— ಬೇದಿ ಎಯಿಡೆಡ್ ಎಲಿಮೆಂಟರಿ ಶಾಲಾ ಪ್ರವೇಶ ದಿನಾಚರಣೋತ್ಸವವು ತಾ. 16-5-52ರಲ್ಲಿ ಮೂಡಬಿದ್ರಿ ಜೈನ್ ಹೈಸ್ಕೂಲಿನ ಕನ್ನಡ ವಿದ್ವಾನ್ ಶ್ರೀಮಾನ್ ಕೆ. ಶಾಂತರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಬಾರಾಡಿ ಬೀಡಿನ ಶ್ರೀಮಾನ್ ಪಾಂಡ್ಯರಾಜ ಬಳ್ಳಾಳರು ಇನಾಮು ಹಂಚೋಣದ ಕಾರ್ಯಕ್ರಮವನ್ನು ನೆರವೇರಿಸಿದರು. ಮಕ್ಕಳಿಂದ ವಿವಿಧ ವಿನೋದಾವಳಿಗಳಾದುವು.

ಪಡುಕೋಣೆ— 14-5-52ರಲ್ಲಿ "ಶ್ರೀ ಲಲಿತಕಲಾ ಮಂಡಳಿ ಪಡುಕೋಣೆ" ಇವರು ಬೋರ್ಡ್ ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವದ ಸಲುವಾಗಿ "ಪ್ರೇಮಬಂಧನ" ಎಂಬ ಸಾಮಾಜಿಕ ನಾಟಕವನ್ನು ಆಡಿ ತೋರಿಸಿದರು.

ಹಿರಿಯಡ್ಕ— ಮಂಗಳೂರು ಗವರ್ನ್‌ಮೆಂಟ್ ಕಾಲೇಜಿನ ವಿದ್ಯಾರ್ಥಿಗಳು ಪ್ರೊಫೆಸರ್ ಒಬ್ಬರ? ಮುಂದಾಳುತನದಲ್ಲಿ ವ್ಯವಸ್ಥೆಗೊಳಿಸಿದ್ದ ವಯಸ್ಕರ ಸಮಾಜ ಶಿಕ್ಷಣ ಶಿಬಿರದ ಪ್ರಶಸ್ತಿಪ್ರದಾನ ಸಮಾರಂಭವು ಹಿರಿಯಡ್ಕ ಬೋ. ಹಾ. ಎ. ಶಾಲೆಯಲ್ಲಿ ತಾ 20ರಲ್ಲಿ ಶ್ರೀ ಟಿ. ಎ. ಪೈ, ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಿಬಿರದ 30 ದಿನಗಳ ವಂದಿವಾಚನವಾದ ಮೇಲೆ ಸಭಿಕರ ಭಾಷಣವಾಯಿತು. ಬಳಿಕ ಅಧ್ಯಕ್ಷ ಶ್ರೀ ಪೈಗಳು ವಯಸ್ಕರ ಶಿಕ್ಷಣದ ಆವಶ್ಯಕತೆ, ಅದಕ್ಕೆ ನೀಡಬೇಕಾದ ಪ್ರೋತ್ಸಾಹಾದಿಗಳ ಕುರಿತು ವಿಚಾರಪೂರ್ಣ ಭಾಷಣ ಮಾಡಿದರು. ಶ್ರೀ ಶರ್ಮರು ಅಭಿವಂದಿಸಿದರು. ಈ ಶಿಬಿರದ ಉದ್ಘಾಟನೆಯು 23-4-52ರಲ್ಲಿ ಜ...

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. No 364/1951

R E P 472/1951

T. K. ಉಸ್ಮಾನ ಸಾಹೇಬ— ಅರ್ಜಿದಾರ

ಮತ್ತು

1 ಶೀನ ಪೂಜಾರ್ತಿ 2 ಹೂವಯ ಪೂಜಾರಿ — ಯೆದ್ರಿರು

ಯಾವರೊಳಗೆ—

ಮೇಲ್ಕಂಡ ಅಮ್ಲುಜ್ಯಾರಿಯಲ್ಲಿ 1ನೇ ಯದ್ರಿಳ ಮೂಲಗೇಣಿ ಹಕ್ಕಿನ ಸ್ಥಿರಾಸ್ತಿ ಜಪ್ತಿ ಪ್ರೊಹಿಬಿಟರಿ ಆರ್ಡರ ಜ್ಯಾರಿ ತಾ 11-6-52ಕ್ಕೆ ಯಿಟ್ಟಿರುವದ್ರಿಂದ 1ನೆ ಯೆದ್ರಿಳು ಆಕ್ಷೇಪ ಹೇಳುವದಿದ್ರೆ ಆ ದಿನ ಸದ್ರಿ ಕೋರ್ಟಿನ ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು—

D. PADMANABHA RAO.
Vakil for Petitioner
Udipi Date 26-5-1952

ಕಲೆಕ್ಟರ್ ಎ. ಆರ್. ರಾಜರತ್ನಂರಿಂದ ಜರಗಿಸಲ್ಪಟ್ಟಿತು.

ಅಜೆಕಾರು:— ಬೋ. ಹಾಯರ್ ಎಲಿಮೆಂಟರಿ ಶಾಲಾ ವರ್ಧಂತಿಯು ತಾ. 17-5-52ರಲ್ಲಿ ಶ್ರೀ. ಎಚ್ ಪೈ, ಕಾರ್ಕಳ ರೇಂಜ್ ಶಾಲಾ ಸೀನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರ್, ಇವರ ಅಧ್ಯಕ್ಷತೆಯಲ್ಲಿ ಜರಗಿ, ಪ್ರಗತಿಪರ ವರದಿವಾಚನ, ಇನಾಂ ಹಂಚೋಣದ ಬಳಿಕ ಸಭಿಕರಲ್ಲಿ ಶ್ರೀ ಫಾ. ಫೆರ್ನಾಂಡಿಸ್, ಡಾ. ಯು ಕೃಷ್ಣ, ಶ್ರೀ M. ಕೃಷ್ಣಯ್ಯ ಸೆಟ್ರು ಸಂದರ್ಭೋಚಿತವಾಗಿ ಮಾತನಾಡಿದ ಮೇಲೆ ಅಧ್ಯಕ್ಷರು ಸ್ಫೂರ್ತಿದಾಯಕವಾದ ಭಾಷಣವನ್ನಿತ್ತರು. ಶಾಲಾ ಮಕ್ಕಳಿಂದ ವಿವಿಧ ವಿನೋದಾವಳಿಗಳನ್ನೂ ನಾಟಕಗಳನ್ನೂ ಪ್ರದರ್ಶಿಸಿದರು.

ಪೆರಂಪಳ್ಳಿ— ತಾ 25-5-1952ರಲ್ಲಿ ಶ್ರೀ N. ರಾಮಚಂದ್ರ ಭಟ್ ವಿದ್ವಾನ್ ಇವರ ಅಧ್ಯಕ್ಷತೆಯಲ್ಲಿ ಮೂಡು ಪೆರಂಪಳ್ಳಿ ಶಾಲಾ ಹೆತ್ತವರ ಕೂಟವು ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಕಾಸರಗೋಡು — ಮಾಯಿಪ್ಪಾಡಿ ಸರಕಾರಿ ಬುನಾದಿ ಶಿಕ್ಷಣ ತರಬೇತಿ ಶಾಲೆಯ ಮರು ತರಬೇತಿಯ ಅಧ್ಯಾಪಕರು 15-5-52ರಂದು ವಿದ್ಯಾಪ್ರವಾಸಕ್ಕೆ ಹೊರಟು ಮಂಗಳೂರು, ಬಂಟ್ವಾಳ, ಕಾಪು, ಉಡುಪಿ, ಕಾರ್ಕಳ ಮೊದಲಾದ ಸ್ಥಳಗಳನ್ನು ಸಂದರ್ಶಿಸಿದರು. ಉಡುಪಿ, ಕಾರ್ಕಳಗಳಲ್ಲಿ ವಿದ್ಯಾಪ್ರಚಾರ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಏರ್ಪಡಿಸಿದ್ದರು.

THE UDIPI BANK LIMITED, MUNDKOOR.

ದಿ ಉಡುಪಿ ಬೇಂಕ್ ಲಿಮಿಟೆಡ್, ಮುಂಡ್ಕೂರು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಈಡಿನಲ್ಲಿ ಪಡೆದ ಲೋನಿನ ಮೊಬಲಗನ್ನಾಗಲೀ, ಅವುಗಳ ಮೇಲಣ ಬಡ್ಡಿಯನ್ನಾಗಲೀ, ವಾಯಿದೆಗೆ ಕೊಡದಿರುವುದರಿಂದ, ಸದ್ರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳಲ್ಲಿ ಕೆಲವರಿಗೆ ಜ್ಯಾರಿಯಾಗಿಯೂ, ಕೆಲವರಿಗೆ ಜ್ಯಾರಿಯಾಗದೆಯೂ, ವಾಪಾಸು ಬಂದಿರುವುದರಿಂದ ಈ ಮೂಲಕ ತಿಳಿಯಪಡಿಸುವುದೇನಂದರೆ, ಸದ್ರಿ ಲೋನುಗಳ ಬಾಬ್ತು ಈಡಿಟ್ಟ ನಗಗಳನ್ನು ಇದೇ ಬರುವ ತಾ. 5-6-52ನೇ ಶನಿವಾರ ಮಧ್ಯಾಹ್ನ ಗಂಟೆ 12ಕ್ಕೆ ಬಹಿರಂಗವಾಗಿ ಸದ್ರಿ ಆಫೀಸಿನಲ್ಲಿ ಏಲಂ ಮಾಡಲಾಗುವುದು. ಅದೇ ದಿವಸ ಅನಾನುಕೂಲವಾದಲ್ಲಿ ಬೇಂಕಿನ ಯುಕ್ತಕಂಡ ದಿವಸಕ್ಕೆ ಪುನಃ ನೋಟೀಸು ಕೊಡದೇನೇ ಮುಂದರಿಸಲಾಗುವುದು. ತಿಳಿದಿರಲಿ.

ಜಂಜ್ರಾ ನಂಬ್ರ	ಲೋನು ನಂಬ್ರ.	ಹೆಸರು ಮತ್ತು ವಿಳಾಸ	ಅಸ್ಲು ರೂಪಾಯಿ
1	192/49	ಗೋವಿಂದ ಭಂಡಾರಿ, ಚಂದು ಭಂಡಾರಿ ಅಳಿಯ, ಮುದ್ದನ್ ಹೊಸಮನೆ, ಇನ್ನಾ ಗ್ರಾಮ ಮುಂಡ್ಕೂರು ಪೋಸ್ಟು	30 0 0
2	194/49	ಅಕ್ಕು ಪೂಜಾರಿ, ಜಾರು ಪೂಜಾರಿ ಅಳಿಯ, ತೋಟ ಮನೆ, ಮುಲ್ಲಡಕ ಗ್ರಾಮ, ಮುಂಡ್ಕೂರು ಪೋಸ್ಟು	70 0 0
3	351/49	ಗೋವಿಂದ ಭಂಡಾರಿ, ಚಂದು ಭಂಡಾರಿ ಅಳಿಯ, ಮುದ್ದನ್ ಹೊಸ ಮನೆ, ಇನ್ನಾ ಗ್ರಾಮ, ಮುಂಡ್ಕೂರು ಪೋಸ್ಟು	40 0 0
4	504/49	ಜೋರ್ಜ ಪಿಂಟೋ, ಇಜಾಕ್ ಪಿಂಟೋ, ಕಲ್ಲಟ್ಟ ಹೌಸ್ ಇನ್ನಾ ಗ್ರಾಮ, ಮುಂಡ್ಕೂರು ಪೋಸ್ಟು	15 0 0
5	67/50	ಶ್ಯಾಮ ಸೆಟ್ಟಿ, ಅಣ್ಣಪ್ಪ ಸೆಟ್ಟಿ ಅಳಿಯ, ಗುಂಡಿಯ ಹೌಸ್, ಕಡಂದಲೆ ಗ್ರಾಮ, ಕಡಂದಲೆ ಪೋಸ್ಟು	30 0 0
6	71/50	ಕೋಚ ಸೆಟ್ಟಿ, ಕೂಶ್ರ ಸೆಟ್ಟಿ ಅಳಿಯ ಕಪಲಿಜೆ ಹೌಸ್ ಬೇಲಾಡಿ, ಕಾಂತಾವರ ಗ್ರಾಮ, ಕಾಂತಾವರ ಪೋಸ್ಟು	40 0 0
7	33/51	ತಿಮ್ಮಪ್ಪ ಸೆಟ್ಟಿ, ಗೋಪಾಲ ಸೆಟ್ಟಿ ಅಳಿಯ, ಉಂಡಿರ್ ಗನಿ ಗುತ್ತು ಕಾಂತಾವರ ಗ್ರಾಮ ಕಾಂತಾವರ ಪೋಸ್ಟು	40 0 0
8	43/51	ಸ್ಯಾಮಸನ್ ಮಸ್ಕರೇಂಞ, ಗಾಬ್ರಿಲ್ ಮಸ್ಕರೇಂಞರ ಮಗ ಕಂಬೆಟ್ಟು ಬೆಟ್ಟ ಹೌಸ್, ಬೆಳ್ಮಣ್ಣು ಗ್ರಾಮ, ಬೆಳ್ಮಣ್ಣು ಪೋಸ್ಟು	15 0 0
9	131/51	ತುಕ್ರ ಸೆಟ್ಟಿ, ಕೋಟಿ ಸೆಟ್ಟಿ ಅಳಿಯ, ಎಳ್ಳು ಬೋಳ ಪರಾರ ಹೌಸ್, ಪೋಸ್ಟು ಮುಂಡ್ಕೂರು ಪಳ್ಳಿ, ಕಾರ್ಕಳ ತಾಲೂಕು, ದ. ಕ.	25 0 0
10	165/51	ಶ್ರೀನಿವಾಸ ಶೆಣೈ ಮಂಜುನಾಥ ಪ್ರಭು ಮಗ ಸಾಹುಕಾರ, ಮುಂಡ್ಕೂರು	45 0 0

ಮುಂಡ್ಕೂರು
24—5—1952

C. Narayana Kamath
Agent

ಕುಂಭಾಶಿ— ತಾ. 18-5-52ರಂದು ಯುವಕ ಸಂಘದವರು ಸಂಘದ ವರ್ಧಂತಿ ಉತ್ಸವದಲ್ಲಿ "ರಕ್ತ ಮೆಚ್ಚಿದ ಗಂಡು" ಎಂಬ ನಾಟಕವನ್ನು ಆಡಿ ತೋರಿಸಿದರು. ಸಂಗೀತ, ಕವಿತಾ ವಾಚನ ಮೊದಲಾದ ಅನೇಕ ಮನರಂಜನೆಯ ಕಾರ್ಯಕ್ರಮಗಳೂ ಜರಗಿದವು.

ಸೆಲ್ರ— ತಾ 18-5-52ರಲ್ಲಿ ವಕೀಲ್ ಉಮೇಶರಾಯರ ಅಧ್ಯಕ್ಷತೆಯಲ್ಲಿ ಏವಾತು ಗ್ರಾಮದ ರೈತರ ಸಭೆಯೊಂದು ಜರಗಿತು. ಶ್ರೀಗಳಾದ ದೇವಪ್ಪಾಳ್ವ, ಎಸ್. ಎನ್. ಹೊಳ್ಳ, ಬಿ. ಆರ್. ಕರ್ಕೇರ, ಕೆ. ಎಂ. ಭಂಡಾರಿ, ಎಡ್ವೋಕೇಟ್ ಇವರು ಸಂದರ್ಭೋಚಿತ ಭಾಷಣವಿತ್ತರು.

ಒಕ್ಕಲು ಹಿತ ಮಸೂದೆ ಕೂಡಲೇ ಬರಬೇಕೆಂದು ಠರಾವು ಮಾಡಲ್ಪಟ್ಟಿತು. ಪಟೇಲ್ ನಾರಾಯಣ ರೈಗಳು ಧನ್ಯವಾದ ಅರ್ಪಿಸಿದರು. ಕನ್ವೀನರರಾದ ಎಂ. ಸಿ. ಖಂಡಿಗೆಯವರು ಉಪಹಾರವಿತ್ತು ಸತ್ಕರಿಸಿದರು.

ಕುಂಬಳೆ— ಏಳ್ಕಾನ ಬಂಗ್ರಿ ಶಾಲೆಯಲ್ಲಿ ವಿದ್ಯಾ ಪ್ರಚಾರಾರ್ಥ ಒಂದು ಸಾರ್ವಜನಿಕ ಸಭೆಯು ಶ್ರೀ ವೈ. ಮಹಾಲಿಂಗ ಭಟ್ಟರ ಅಧ್ಯಕ್ಷತೆಯಲ್ಲಿ ಸೇರಿ, ಜೆ. ಇಬ್ರಾಹಿಂ, ರಾಮಕೃಷ್ಣ ಭಟ್ಟ ಮುಂತಾದವರು ಭಾಷಣ ಕೊಟ್ಟರು.

ಹೆಗ್ಗುಂಜೆ— ಇಲ್ಲಿಯ ಬಿ. ಟಿ. ಹಾ. ಎ. ಶಾಲೆಯಲ್ಲಿ ಜೂನ್ ತಿಂಗಳಾರಂಭದಿಂದ ಏಳನೆ ತರಗತಿಯನ್ನು ತೆರೆಯಲು ಸರಕಾರದ ಅನುಮತಿ ದೊರೆತಿದೆ.

ಮೂಡಬಿದ್ರೆ ಜೈನ್ ಹೈಸ್ಕೂಲಿನ ಸಹಾಯಾರ್ಥವಾಗಿ— ಅಲ್ಲಿಯ ಮಹಾವೀರ ಕಲಾವೃಂದದವರು ಮಂಗಳೂರಲ್ಲಿ ತಾ 17ರಲ್ಲಿ ಡೋನ್‌ಬೊಸ್ಕೊ ಥಿಯೇಟರಿನಲ್ಲಿ 'ವಿಷಕನ್ಯೆ' ಎಂಬ ನಾಟಕವನ್ನು ಗ. ಕಾಲೇಜಿನ ಪ್ರಿನ್ಸಿಪಾಲ್ ಮಿ। ಯಂ. ಐ. ಹಾಶಿಮಿಯವರ ಅಧ್ಯಕ್ಷತೆಯಲ್ಲಿ ಅಭಿನಯಿಸಿ ತೋರಿಸಿದರು.

ಮೂಡಿಗೆರೆ— ದ. ಕ. ಜಿಲ್ಲೆಯವರಾದ ಡಾ| ಪಿ ಎ. ಅಡ್ಯಂತಾಯರು ಚಿಕ್ಕಮಗಳೂರಿನ ಮೂಡಿಗೆರೆಯಲ್ಲಿ ಸುಮಾರು 14 ವರ್ಷಗಳಿಂದ ವೈದ್ಯಕೀಯ ವೃತ್ತಿ ನಡಿಸಿಕೊಂಡಿದ್ದು ಜನಪ್ರಿಯರಾಗಿರುವರಲ್ಲದೆ ಇತ್ತೀಚೆಗೆ ಮೂಡಿಗೆರೆ ಟೌನ್ ಮುನ್ಸಿಪಲ್ ಕೌನ್ಸಿಲಿನ ಅಧ್ಯಕ್ಷರಾಗಿ ಅವಿರೋಧವಾಗಿ ಆರಿಸಲ್ಪಟ್ಟಿರುತ್ತಾರೆ. ಇವರು ಈ ವರೆಗೆ ಅಲ್ಲಿ ವೈಸ್ ಪ್ರೆಸಿಡೆಂಟರಾಗಿದ್ದು ಹೊಸ ಕಾನೂನು ಪ್ರಕಾರ ಪ್ರಥಮ ನೇಮಕಗೊಂಡ ಪ್ರೆಸಿಡೆಂಟರಾಗಿರುವುದು ಸಂತೋಷಕರ.

ಮದುವೆ, ಉಪನಯನ ಮತ್ತಿತರ ಯಾವತ್ತೂ
ಶುಭ ಸಮಾರಂಭಗಳ ಕಾಲದಲ್ಲಿ ಏರ್ಪಡಿಸುವ
ಟೀಪಾರ್ಟಿ ಸತ್ಕಾರ ಸಮಾರಂಭಗಳು
ಎಷ್ಟೇ ದೊಡ್ಡ ಪ್ರಮಾಣದಲ್ಲಿದ್ದರೂ ತೃಪ್ತಿಕರವಾಗಿ
ಯೋಗ್ಯ ವ್ಯವಸ್ಥೆಯೊಂದಿಗೆ ನಾವು ಪೂರೈಸಿ ಕೊಡುತ್ತೇವೆ.
ಮಹಾ ಜನರು ಗಮನಿಸಬೇಕು.
ತಾಜಮಹಾಲ್, ಸಿನೆಮಾ ಥಿಯೇಟರಿನ ಬಳಿ ಉಡುಪಿ.

(೩ನೇ ಪುಟದಿಂದ ಮುಂದರಿಸಿದ್ದು)

ಜ್ಞಾನದ ಕೊರತೆ ಕಂಡು ಬರುವ ಕ್ಷೇತ್ರದಲ್ಲಿ (೨) ನಮಗೆ ಏನೇನೂ ಅನುಭವವಿಲ್ಲದ ತೀರ ಹೊಸತೊಂದು ಉದ್ಯಮವನ್ನು ತೊಡಗುವಲ್ಲಿ ಮತ್ತು (೩) ಭಾರತಕ್ಕಷ್ಟೆ ಅಲ್ಲ—ಜಗತ್ತಿನ ಇತರ ದೇಶಗಳಿಗೂ ಪೂರೈಸುವಷ್ಟು ಮಟ್ಟಿನ ದೊಡ್ಡ ಪ್ರಮಾಣದ ಉದ್ಯಮಗಳಲ್ಲಿ—ನಮಗೆ ವಿದೇಶೀ ಬಂಡವಾಳದೊಡನೆ, ತಾಂತ್ರಿಕ ಸಹಾಯ ಕೂಡ ಅಗತ್ಯವಾಗಿದೆ ಇದರಿಂದ ಉದ್ಯೋಗಪತಿಗಳ ಧಂಧೆಗೆ ಪೆಟ್ಟು ಬೀಳುವುದಿಲ್ಲ—ನಾಗರಿಕರ ಆವಶ್ಯಕತೆಗಳು ಪೂರೈಸಲ್ಪಡುತ್ತವೆ—ಮತ್ತು ರಾಷ್ಟ್ರದ ಔದ್ಯೋಗೀಕರಣದ ಸಮಸ್ಯೆ ಬಿಡಿಸಿದಂತಾಗುತ್ತದೆ—ಎಂಬುದರಿಂದ ಎಲ್ಲರೂ ಈ ವ್ಯವಸ್ಥೆಯ ಸ್ವಾಗತ ಬಯಸುತ್ತಾರೆ. ಇಂಥ ಸಹಾಯವನ್ನು ಸಾಲರೂಪದಲ್ಲಿ ಪಡೆದು, ಉದ್ಯಮದ ಮುಂದಿನ ಹುಟ್ಟುವಳಿಯಿಂದ, ಆ ಸಾಲ ತೀರಿಸುವುದು ಶ್ರೇಯಸ್ಕರ; ಅಥವಾ ರಾಷ್ಟ್ರದ ಸ್ವಾತಂತ್ರ್ಯ ಸಾರ್ವಭೌಮ ಮಟ್ಟದಲ್ಲಿರುವಂತೆ—ಅದರೂ ವಿದೇಶಗಳ ಸಹಾಯ ತಪ್ಪಿ ಹೋಗದಂತೆ—ಉದ್ಯಮಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಮ್ಮ ಬಂಡವಾಳವನ್ನೂ ಸ್ವಲ್ಪ ಮಾತ್ರ ವಿದೇಶಗಳ ಬಂಡವಾಳವನ್ನೂ ಹಾಕಬೇಕು. ತಾಂತ್ರಿಕ ನೆರವನ್ನು ಸಹ ಇದೇ ಮಾದರಿಯಲ್ಲಿ ಪಡೆಯಬಲ್ಲೆವು. ಆಡಳಿತ ಧೋರಣೆ ಭಾರತೀಯರದು. ತಾಂತ್ರಿಕ ಕೌಶಲ್ಯ ವಿದೇಶಿಗರದು. ಇವರೊಡನೆ, ಭಾರತೀಯರೂ ಕಲಿತು ಸಹಕರಿಸುತ್ತಿದ್ದರೆ, ಕೆಲವೇ ದಿನಗಳಲ್ಲಿ ನಮ್ಮವರೂ ಬುದ್ಧಿವಂತರಾಗಿ, ವಿದೇಶೀ ತಂತ್ರಜ್ಞರ ನೆರವು ಅನಗತ್ಯವೆನಿಸೀತು. ಆದರೆ ಒಂದು ಮಾತ್ರ ತೊಡಕು--ನಮ್ಮ ಸರಕುಗಳ ನಾಜೂಕು ಕಡಮೆ ಮತ್ತು ಬೆಲೆ ಹೆಚ್ಚು ಎಂಬ ಕಾರಣದಿಂದ--ಈಗಾಗಲೇ ನೆಲೆಗೊಂಡಿರುವ ಭಾರತೀಯ ಉದ್ಯಮಗಳೊಡನೆ ಪೈಪೋಟಿ ನಡೆಸಲು ವಿದೇಶೀ ಬಂಡವಾಳಕ್ಕೆ ಅವಕಾಶಕೊಡಕೂಡದು. ಇನ್ನೂ ಎಳೆಯದಿರುವ ನಮ್ಮ ಉದ್ಯಮದ ಬಳ್ಳಿ ಬಾಡಿ, ಬಳಲದಂತೆ-ಸಂರಕ್ಷಣೆ, ಪ್ರೋತ್ಸಾಹ ಮತ್ತು ಸೌಕರ್ಯ ಕಲ್ಪಿಸಬೇಕಾದುದು ನ್ಯಾಯ.

ಸ್ವೀಕಾರ ವಿಮರ್ಶೆ

ವಿಶಾಲಾಗ್ರಿಸ್ ಹೈಸ್ಕೂಲಿನ ವಾರ್ಷಿಕಾಂಕ—ನಮ್ಮ ಕೈ ಸೇರಿದೆ. ದಕ್ಷಿಣ ಕನ್ನಡ ಕಲ್ಯಾಣಪುರದಲ್ಲಿ ಪ್ರಸಿದ್ಧ ವಿದ್ಯಾಕೇಂದ್ರವಾಗಿರುವ ಈ ಹೈಸ್ಕೂಲು ತನ್ನ ಚಟುವಟಿಕೆಗಳ ಪರಿಚಯವನ್ನು ಇಂಥದೊಂದು ಸಚಿತ್ರ ಸಂಚಿಕೆ ಹೊರಡಿಸುವುದರ ಮೂಲಕ ಮಾಡಲು ಪ್ರಯತ್ನಿಸಿರುವುದು ಒಳ್ಳೆಯದೇ. ಶಾಲಾ ಸಂಬಂಧವಾದ ಲೇಖನಗಳಲ್ಲದೆ ಕೆಲವು ಕವಿತೆಗಳು, ಕತೆ, ಪ್ರಬಂಧ ನಾಟಕಗಳು ಇಂಗ್ಲೀಷು ಹಾಗು ಕನ್ನಡದಲ್ಲಿ ವಿದ್ಯಾರ್ಥಿಗಳಿಂದ ಬರೆಯಲಾಗಿವೆ.

ಶ್ರೀ ಸ್ವಾಮಿ ವಿವೇಕಾನಂದ— ಬರೆದವರು: ಕೃಷ್ಣಕುಮಾರಿ, ಪ್ರಕಾಶಕರು—ವಿವೇಕ ಪಬ್ಲಿಷರ್ಸ್, ಬೆಂಗಳೂರು ಬೆಲೆ: ರೂ. ೧/-

ಧರ್ಮಬೋಧೆ ಮಾಡುತ್ತ ಹಳ್ಳಿಹಳ್ಳಿಯನ್ನು ತಿರುಗುವ ಸನ್ಯಾಸಿಗಳು ಸಾವಿರಾರು ಮಂದಿ ನಮ್ಮ ದೇಶದಲ್ಲಿದ್ದಾರೆ. ಅವರಲ್ಲಿ ಕೆಲವರಾದರೂ ಲೌಕಿಕ ವಿಷಯಗಳನ್ನು ಬೋಧಿಸಬಲ್ಲ ಬೋಧಕರನ್ನಾಗಿ ಸಂಘಟನೆ ಮಾಡಿದರೆ, ಅವರು ಧರ್ಮಬೋಧೆಯೊಂದಿಗೆ ವಿದ್ಯೆಯನ್ನೂ ಕಲಿಸಬಹುದು. ಹೀಗೆ ಬಡವರ ನಷ್ಟವಾದ ವ್ಯಕ್ತಿತ್ವವನ್ನು ಹೀಗೆ ನಾವು ಬೆಳೆಸಬೇಕು. ಅವರಿಗೆ ನಾವು ಭಾವನಾ ಸಂಪತ್ತನ್ನು ಕೊಡಬೇಕು; ಅವರ ಕಣ್ಣು ತೆರೆಯುವಂತೆ ಮಾಡಬೇಕು. ಇಷ್ಟು ಮಾಡಿದರೆ ಅವರು ತಮ್ಮ ಮೋಕ್ಷವನ್ನು ತಾವೇ ಸಾಧಿಸಿಕೊಳ್ಳುವರು.

—ಮೇಲಿನ ಮಾತುಗಳು ಸ್ವಾಮಿ ವಿವೇಕಾನಂದರವು. ಅವರ ನುಡಿಗಳ ಮೇಲಿಂದ, ಗಂಭೀರವಾಣಿಯ ಮೇಲಿಂದ, ನಾವು ಆ ಮಹಾವ್ಯಕ್ತಿ ಭಾರತದ ಮೋಕ್ಷ ಯಾವರೀತಿಯಿಂದ ನೆರವಾದನೆಂಬುದನ್ನು ಊಹಿಸಬಹುದು. ಉಜ್ವಲ ಚರಿತ್ರೆ, ಉತ್ತುಂಗ ವಿಚಾರ, ಸೂಕ್ಷ್ಮ ಪ್ರತಿಭೆ, ದಯಾರ್ದ್ರ ಹೃದಯಗಳಿಂದ ಅಲೌಕಿಕ ತೇಜಸ್ಸನ್ನೂ ಆಧ್ಯಾತ್ಮಿಕ ಓಜಸ್ಸನ್ನೂ ಪಡೆದು, ದಿಗ್ದಿಗಂತದ ತನಕವೂ ಭಾರತದ ಕೀರ್ತಿ ಹರಿಯಿಸಿ, ಮೆರೆದ ಸ್ವಾಮಿಜಿ ಲೋಕವಂದ್ಯರು. ಅವರ ಜೀವನದಿಂದ ಸ್ಫೂರ್ತಿಪಡೆದು, ಜನ್ಮ ಸಾರ್ಥಕ ಮಾಡಿಕೊಂಡವರೆಷ್ಟೋ. ಅವರ ಬೋಧೆಗಳಿಗೆ ಮನಸೋತು, ಬದುಕಿನ ಬಗೆಯನ್ನು ಮಾರ್ಪಡಿಸಿಕೊಂಡವರೆಷ್ಟೋ. ಮಾತೃಧರ್ಮದ ಛಾಯೆಯಲ್ಲಿ ರಾಷ್ಟ್ರೀಯ ಮನೋಭಾವವನ್ನು ಬೆಳೆಸಿಕೊಂಡು, ಅವರು ಭಾರತದ ಜಡತ್ವವನ್ನು ಕಳೆಯಲು ಹೆಣಗಿದರು. ಇಂಥವರ ಸಂದೇಶವನ್ನು ಬಾಲ್ಯದಲಿಯೇ ತಿಳಿದುಕೊಂಡು, ಬಾಳ್ವೆಯ ಮಾರ್ಗವನ್ನು ಅವಕ್ಕೆ ಅನುಕೂಲಮಾಡಿಕೊಂಡು ನಡೆದರೆ, ಕ್ಷೇಮ ಭಾಜನರಾಗುವೆವು. ಈ ಪುಟ್ಟ ಪುಸ್ತಕ ಬಹಳ ತಿಳಿಯಾದ ಭಾಷೆಯಲ್ಲಿ ಸೊಗಸಾಗಿ ಬರೆಯಲ್ಪಟ್ಟಿದೆ. ಸಣ್ಣ ಮಕ್ಕಳೂ ಓದಿ ಗ್ರಹಿಸುವಷ್ಟು ಶೈಲಿ ಸರಳವಾಗಿದೆ. ತೆಲುಗು ಭಾಷೆಯ ಮೂಲವನ್ನು ಕನ್ನಡಕ್ಕೆ ಶ್ರೀ ಎಂ.ವಿ. ಸೀತಾರಾಮಯ್ಯ ಇಷ್ಟು ಮುದ್ದಾಗಿ ಕೊಟ್ಟಿದ್ದಾರೆ.

—ಕಾರ್ತಿಕೇಯ.

ಉಡುಪಿ ಡಿ. ಮು. ಕೋರ್ಟಿನಲ್ಲಿ
O. P. No. 12/1952

1) ಸಾವಿತ್ರಿ ಅಂಮ-ಶಂಕರ ನಾರಾಯಣ ರಾಯರ ವಿಧವೆ, 2) ಕೃಷ್ಣಮೂರ್ತಿ, 3) ಶ್ರೀಪತಿ- ಇವರು ಇಬ್ಬರು 1ನೇಯವಳ ಪ್ರಾಯಸ್ಥರ ಮಕ್ಕಳು- ಉಡುಪಿ ತಾಲ್ಲೂಕು ತೆಂಕನಿಡಿಯೂರು ಗ್ರಾಮಸ್ಥರು ... ...

—ಅರ್ಜಿದಾರರು

ಮತ್ತು

1) ಅಕ್ಕಮ್ಮ ಯಾನೆ ಕೃಷ್ಣವೇಣಿ ಅಮ್ಮ- ಅನಂತಯ್ಯನವರ ವಿಧವೆ- 2) ಕೆ. ರಾಮರಾವ್, 3) ಕೆ. ನಾರಾಯಣರಾವ್, 4) ಕೆ. ಗೋವಿಂದ ರಾವ್-ಅನಂತಯ್ಯನವರ ಮಕ್ಕಳು- 1 ಮತ್ತು 4ನೇಯವರು ಉಡುಪಿ ಕಸ್ಬಾ ಬಡಗಪೇಟೆ; 2ನೇಯವರು ಮಂಗಳೂರು ತಾಲ್ಲೂಕು ಉಳ್ಳಾಲ; 3ನೇಯವರು ಉಡುಪಿ ತಾಲ್ಲೂಕು ಕಾಪು ಕಸ್ಬದಲ್ಲಿರುವವರು...

—ಎದುರು

ಯವರೊಳಗೆ

ಸದ್ರಿ ವಾದಿಗೆ ಮತ್ತು ಸಮಸ್ತ ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ:-

ಉಡುಪಿ ತಾಲೂಕು ತೆಂಕನಿಡಿಯೂರ ಗ್ರಾಮದಲ್ಲಿ ತಾ. 7-2-1952ರಲ್ಲಿ ಮೃತಪಟ್ಟಿರುವ 1ನೇ ಅರ್ಜಿದಾರಳ ಗಂಡನ, 2 & 3ನೇ ಅರ್ಜಿದಾರ್ರ ತಂದೆ ಕೆ. ಶಂಕರನಾರಾಯಣ ರಾಯರ ಬಾಬ್ತು "ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಬೊಂಬಾಯಿ" ಯಿದರ ಉಡುಪಿ ಅಫೀಸಿನಲ್ಲಿರುವ ನಂಬ್ರ 34995 ಮತ್ತು 55120ನೇ ಪೋಲಿಸಿಗಳ ಬೋನಸ್ ಸಹಿತವಾದ ಐವೇಜುಗಳನ್ನು ವಸೂಲು ಪಡಿಯುವರೆ ಅರ್ಜಿದಾರ್ರ ಹೆಸರಲ್ಲಿ ಒಂದು ವಾರೀಸು ಹಕ್ಕು ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರ್ರು ಕೊಟ್ಟ ಮೇಲ್ಕಂಡ ಅರ್ಜಿಯು ತಾ. 4-6-1952ಕ್ಕೆ ಯಿಟ್ಟಿರುವದರಿಂದ ಆಕ್ಷೇಪವುಳ್ಳವರು ಆ ದಿನ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪಣೆಯ ಮಾಡಿಕೊಳ್ಳತಕ್ಕದ್ದು-

K. Ramakrishna Rao,
Vakil for Petitioners

ಉಡುಪಿ, ತಾ. 23-5-1952

THE VIJAYA BANK LIMITED, BYNDOOR.
ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಬೈಂದೂರು. ದ. ಕ.
ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲಪಡೆದುಕೊಂಡು ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿಮಾಡಿರುವುದರಿಂದಲೂ ಸದರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಜೂನ್ ತಿಂಗಳ ತಾ. 6ನೇ ಶುಕ್ರವಾರ ಮಧ್ಯಾಹ್ನ ಘಂಟೆ 2ಕ್ಕೆ ಅಥವಾ ಬೇಂಕಿಗೆ ಯುಕ್ತಕಂಡ ಇತರ ಯಾವದೇ ದಿನಗಳಲ್ಲಿ ಪುನಃ ನೋಟೀಸು ಕೊಡದನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು, ತಿಳಿದಿರಲಿ.

ಸಾಲದ ಜಂಜಾತ್ರ ನಂ.	ಹೆಸರು ಮತ್ತು ವಿಳಾಸ	ಮೊಬಲಗು ರೂ.	ಆ.
167/50	ಜನಾಬ್ ತುಕ್ಕಿದಾರ್ ಬಾಷಾ ಸಾಹೇಬ, ಮಹ್ಮದ್ ಗೌಸರ ಮಗ, ಮಡಿಕಲ್, ಉಪ್ಪುಂದ.	190	3
525/50	ಶ್ರೀಮತಿ ಮೇರಿ ಫೆರ್ನಾಂಡಿಸ್, ಜೋನ್ ರಿಬೆಲ್ಲೊನ ಹೆಂಡತಿ, ದೀಯಸಾರ ಬೈಂದೂರು	12	13
561/50	ಶ್ರೀ ದೊಂಬೆ ವೆಂಕಟ್ರಮಣ ಸೇಟ್, ಅನಂತ ಸೇಟರ ಮಗ, ಪಡುವರಿ	6	10
588/50	ಮಿ. ಪೇದ್ರು ಲಾದ್ರಿಕ್, ಜುಜೆ ಲಾದ್ರಿಕರ ಮಗ, ಬ್ಯಾಣದ ಹಿತ್ಲು ಯಡ್ತರೆ ಬೈಂದೂರು	12	9
601/50	ಜನಾಬ್ ಕೆ. ಮಹ್ಮದ್ ಪಿರಾ ಸಾಹೇಬ್, ಮಹ್ಮದ್ ಸಾಹೇಬರ ಮಗ, ಬೇಲೆ ಹಿತ್ಲು ಪಡುವರಿ.	21	8
723/50	ಶ್ರೀ ಕೃಷ್ಣ ಸೇಟ್, ಬಾಬಯ್ಯ ಸೇಟರ ಮಗ, ಉಪ್ಪುಂದ	30	3
803/50	ಶ್ರೀ ಬಿಂದು ಅಣ್ಣಪ್ಪ ಮೊಗೇರ, ಕಸ್ಮರ್ ಮರ್ಲನ ಅಳಿಯ, ಪಡುವರಿ	42	0
835/50	ಶ್ರೀ ತುಂಬಿನ ಹಿತ್ಲು ಮಂಜಯ್ಯ, ಮಂಜಯ್ಯನ ಅಳಿಯ ತಾರಾಪತಿ ಪಡುವರಿ,	12	7
1008/50	ಶ್ರೀ ಸೋಬಳಿದಾರ ಮಂಜುನಾಥ ಸೇರುಗಾರ, ನಾರಾಯಣ ಸೇರುಗಾರರ ಮಗ, ಪಡುವರಿ.	65	5
1124/50	M. ಶಂಕರ ಸೇಟ್, ನಾರಾಯಣ ಸೇಟರ ಮಗ, ಮಯ್ಯಾಡಿ ಬೈಂದೂರು.	14	12
1197/50	ಜನಾರ್ಧನ ಭಟ್ಟ, ಗೋಪಾಲ ಭಟ್ಟರ ಮಗ, ನ್ಯಾನಕಟ್ಟೆ ಕೆರ್ಗಾಲು	227	11
1302/50	ಕೊಟ್ಲೆ ಕೃಷ್ಣ ಸೇಟ್, ಸುಬ್ರಾಯ ಸೇಟರ ಮಗ, ಸೊನಗಾರ ಕೇರಿ, ಬೈಂದೂರು	8	6
1310/50	ದೊಡ್ಡ ನ್ಯಾಕರ ತಿಮ್ಮಪ್ಪ ಸೇರುಗಾರ, ಮಂಜಪ್ಪ ಸೇರುಗಾರರ ಮಗ, ಪಡುವರಿ	15	7
1315/50	ನಾಗಪ್ಪ ಮೇಸ್ತ, ಸುಬ್ಬಣ್ಣ ಮೇಸ್ತನ ಮಗ, ಕಳಿಹಿತ್ಲು, ಶಿರೂರು	23	4
1319/50	ಮಂಡ್ಸೆ ಅಲ್ಲಿ ಸಾಹೇಬ್, ಅಬ್ದುಲ್ ಖಾದೀರ್ ಸಾಹೇಬರ ಮಗ, ಕೇರಿ, ಬೈಂದೂರು	24	6
1340/50	ಮಾಚ ಖಾರ್ವಿ, ಕನ್ನನ ಮಗ, ತಾರಾಪತಿ, ಉಪ್ಪುಂದ ಗ್ರಾಮ, ಬೈಂದೂರು	346	4
1436/50	ತೆಕ್ಕೆ ಹಿತ್ಲು ತಿಮ್ಮ, ಚಿಕ್ಕ ಮಗ, ನಾಕಟ್ಟೆ, ಬೈಂದೂರು	9	4
78/51	ಮಂಗ ದೇವಾಡಿಗ, ಹೊಳ್ಳರ ಹಿತ್ಲು ನಾಗಪ್ಪನ ಅಳಿಯ, ಬೈಂದೂರು	74	4
[illegible]/51	—Do—	13	4
1 94/50	ಮಹಾದೇವ ಸೇಟ್, ಮಂಜಪ್ಪ ಸೇಟರ ಮಗ, ನ್ಯಾಕನ ಕಟ್ಟೆ, ಕೆರ್ಗಾಲು	15	0
1499/50	ನಾರಾಯಣ ಕರಿನ ಗಣಪನ ಮಗ, ಕೊಡಿಯೇರಿ, ಕಂಬದ ಕೋಣೆ	20	13
1502/50	ಜನಾಬ್ M. A ಮೈದಿನ್ ಸಾಹೇಬ್, ಕಾದಿರ್ ಸಾಹೇಬರ ಮಗ, ಕೇರಿ, ಬೈಂದೂರು	20	13
1509/50	ಶ್ರೀ M. G. ರಾಮ ಸೇಟ್, ನಾರಾಯಣ ಸೇಟರ ಮಗ, ಗಡ್ಡೆ ಮನೆ, ಮಯ್ಯಾಡಿ, ಬೈಂದೂರು	34	7
1520/50	M. G. ಶಂಕರ ಸೇಟ್, ನಾರಾಯಣ ಸೇಟರ ಮಗ, ಗಡ್ಡೆ ಮನೆ, ಮಯ್ಯಾಡಿ ಬೈಂದೂರು.	21	15
1526/50	ಶ್ರೀ ವೆಂಕ್ಟ, ನಾಗೂರು ಅಂತನ ಅಳಿಯ, ಬಾಡ ಬೈಂದೂರು.	18	5
1548/50	ಶ್ರೀ ಸೋಕನದುರ್ಗ ಅಳಿವೆಕೋಡಿ ಪಾರನ ಮಗ, ತಾರಾಪತಿ ಪಡುವರಿ	68	13
1557/50	ಶ್ರೀ ಮುಡೂರ, ಮಂಜನ ಅಳಿಯ ಗಂಚಿಮನೆ ತಾರಾಪತಿ ಪಡುವರಿ,	11	9
1571/50	ಜನಾಬ್ ಅಬೂಬಕರ್ ಇಮಾಮ್ ಸಾಹೇಬ್, ಇಮಾಮ್ ಸಾಹೇಬರ ಮಗ, ಕಳಿಹಿತ್ಲು ಶಿರೂರು.	68	13
1606/50	ಶ್ರೀ ರಾಮ, ದೊಟ್ಟಿಯ ಮಗ, ಮೂರಿಮನೆ ಕೊಡಿಯೇರಿ ಕಂಬದಕೋಣೆ	21	12
1611/50	ಶ್ರೀ ಯು. ದೇವಣ್ಣ ಭಟ್ಟ, ಬಾಬ ಭಟ್ಟರ ಮಗ, ಪಂ[illegible] ಬೋರ್ಡ್ ಪ್ರೆಸಿಡೆಂಟ್, ಉಪ್ಪುಂದ.	307	0

ಬೈಂದೂರು,
23 MAY 1952

ಎಚ್. ರಾಜೀವ ಶೆಟ್ಟಿ,
ಏಜಂಟ್.

ಇನ್ನೆಲ್ಲಕ್ಕೂ ಮಿಗಿಲಾಗಿ ಆಗಿನ ಕಾಲದ ಕೆಲವು ಮನೆಗಳು. ಅವುಗಳು ಕೂಡಾ ಇಟ್ಟಿಗೆಯಲ್ಲಿ ಕಟ್ಟಿ ಗಾರೆಮಾಡಿದವು. ಅವುಗಳು ಹಿಟ್ಟಿನ ಮಟ್ಟಿಗೆ ಆ ಕಾಲದಲ್ಲಿ ಇದ್ದಂತೆಯೇ ಇವೆ. ಅವುಗಳಲ್ಲಿ ಕೆಲವನ್ನು ನೋಡುವಾಗ ನಿನ್ನೆ ವರೆಗೆ ಅದರಲ್ಲಿ ಜನರ ವಾಸ್ತವ್ಯವಿದ್ದು ಈಗ ಮಾತ್ರ ಖಾಲಿ ಆಯಿತೇ ಎಂಬ ಸಂದೇಹ ಮನಸ್ಸಿಗೆ ಬರುತ್ತದೆ. ಅದರಲ್ಲಿ ಒಂದು ಮುಖ್ಯವಾದ ಮನೆ "ವೆಟ್ಟಿ" ಸಹೋದರರದ್ದು (Vetti Brothers). ಅವರು ವೆಟ್ಟಿ ಎಂಬ ಹೆಸರಿನ ಲಗ್ನವಾಗದಿದ್ದ ಇಬ್ಬರು ಸಹೋದರರಂತೆ. ಅವರ ಮನೆಯನ್ನು ನೋಡಿದರೆ ಸಾಧಾರಣ ರೋಮನ್ ಮನೆ ಹೇಗಿದೆ ಎಂದು ತಿಳಿಯಬಹುದು. ಅವರು ಐಶ್ವರ್ಯವಂತರಾಗಿರಬೇಕು. ಮನೆ ಹೊರಗೆ ಜಗಲಿಯಿಲ್ಲ; ಚಳಿಯಿರುವ ಉತ್ತರ ಪ್ರದೇಶಗಳಲ್ಲಿ ಹೊರಗೆ ಜಗಲಿ ಇರುವುದಿಲ್ಲ. ಮನೆಯೊಳಗೆ ಹೋಗುವ ಬಾಗಿಲಿನ ಎರಡೂ ಬದಿ ಎರಡು ದೊಡ್ಡ ಕೋಣೆಗಳು. ಅವುಗಳ ಗೋಡೆ ಮೇಲೆ ಬಣ್ಣಬಣ್ಣದ ಚಿತ್ರಗಳು. ಅವಕ್ಕೆ ತಾಗಿ ಹಿಂದೆ ಮಲಗುವ ಎರಡೆರಡು ಕೋಣೆಗಳು. ಇವೆಕ್ಕೆಲ್ಲಾ ಎತ್ತರವಾದ ಮಾಡು. ಮಧ್ಯೆ ಬೆಳಕು ಮತ್ತು ಗಾಳಿಗೆ ಚೌಕವಾದ ಖಾಲಿ ಸ್ಥಳ. ಮಳೆ ನೀರು ಬಿದ್ದು ಹೊರಗೆ ಹೋಗಲಿಕ್ಕೆ ಅಲ್ಲಿ ತಗ್ಗು. ಹಿಂದೆ ಸುಮಾರು 40 ಅಡಿ ಉದ್ದ 20 ಅಡಿ ಅಗಲದ ಹೂವಿನ ತೋಟ. ಅದರ ಸುತ್ತಲೂ ಎತ್ತರವಾದ ಕಂಬವಿರುವ ಜಗಲಿ (Verandah). ಒಂದು ಬದಿಯಲ್ಲಿ ಅಗಲವಾದ ದೊಡ್ಡ ಕೋಣೆಗಳು; ಬಹುಶಃ ಹೆಂಗಸರದಲ್ಲಿಕ್ಕೆ. ಅಲ್ಲಿ ಗೋಡೆಯಲ್ಲಿ ಬಹಳ ಚಂದವಾದ ಚಿತ್ರಗಳು. ಈ ಚಿತ್ರಗಳು ಎಷ್ಟು ಚಲೋದಾಗಿವೆ ಎಂದರೆ ಅಲ್ಲಿ ಕೂತು ಎಂದು ಈಗ ಕೂಡಾ ಬೇರೆ ಬೇರೆ ಚಿತ್ರಗಾರರು ಅವುಗಳನ್ನು ನಕಲು ತೆಗೆದು ಅಲ್ಲಿಯೇ ಮಾರುತ್ತಾರೆ. ಹಾಗೆ ಒಬ್ಬನು ತಯಾರಿಸಿದ ಒಂದು ಸಣ್ಣ ಚಿತ್ರವನ್ನು ನಾನು 500 ಲೀರಾ (ಸುಮಾರು 4 ರೂಪಾಯಿ) ಕೊಟ್ಟು ಪಡೆದೆ. ಅಲ್ಲಿ ಅಡಿಗೆ ಮನೆಯಲ್ಲಿ ಲಂಪಟ ಚಿತ್ರಗಳು ಅಲ್ಲಿಗೆ ಗಂಡಸರು ಮಾತ್ರ ಹೋಗಬಹುದಾಗಿ ಅಲ್ಲಿಯ ಸರಕಾರದವರ ಅಜ್ಞೆ. ಆದ ಕಾರಣ ನಮ್ಮೊಟ್ಟಿಗೆ ಇದ್ದ ಇಬ್ಬರು ಅಮೇರಿಕದ ಹೆಂಗಸರು ಹೊರಗೆ ನಿಲ್ಲಬೇಕಾಯಿತು.

ಹೀಗೆ ಇವುಗಳನ್ನೆಲ್ಲಾ ನೋಡಿ ಮುಗಿದ ಮೇಲೆ ಒಂದು ಸಮೀಪದ ಹೊಟೇಲಿನಲ್ಲಿ ಸ್ವಲ್ಪ ವಿರಾಮ ತೆಗೆದುಕೊಂಡೆವು. ಆ ಸಮಯ ಇಟೇಲಿ ದೇಶದ ಒಂದು ಹೊಸ ಮಾದರಿ ಏನೆಂದರೆ 3, 4 ಗಾಯಕಗಾರರು ಬಂದು ಹಿಟೇಲ್ ಹತ್ತಿರ ಗಾಯನ ಮಾಡಿದರು. ಬೇಡವೆಂದರೂ ಕೇಳುವುದಿಲ್ಲ. ಅನಂತರ ಇನಾಮು. ಅಲ್ಲಿಂದ ಹೊಸತಾಗಿ ಕಟ್ಟಿದ ಪೊಂಪೇ ಪಟ್ಟಣಕ್ಕೆ ಹೋದೆವು. ಅದಕ್ಕೆ ಅಲ್ಲಿಂದ ½ ಮೈಲು ದೂರ. ಇಲ್ಲಿರುವ ಒಂದು ಇಗರ್ಜಿಯು ಹೊಸತಾಗಿ ಕಟ್ಟಲ್ಪಟ್ಟದ್ದು ಅದರಲ್ಲಿ ಬಹಳ ಚಂದವಾದ ತೈಲಚಿತ್ರಗಳನ್ನು ಬಿಡಿಸಿರುತ್ತಾರೆ.

ಮಧ್ಯಾಹ್ನ 3, 4 ಮೈಲು ಹಿಂದೆ ಬಂದು

ಪ್ರವಾಸಿಯ ಪತ್ರಗಳು ೩೧

ಅಲ್ಲಿ ಒಂದು ಹೊಟೇಲಿನಲ್ಲಿ ಊಟಮಾಡಿ ವಿಶ್ರಾಂತಿ ತೆಗೆದುಕೊಂಡು 2 ಗಂಟೆ ನಂತರ ವೆಸುವಿಯೆಸ್ ಪರ್ವತದ ಕಡೆ ನೋಡಲಿಕ್ಕೆ ಹೊರಟೆವು. ಅಲ್ಲಿ ಸಮೀಪ ಒಂದು ಹವಳದ ದೊಡ್ಡ ಕಾರ್ಖಾನೆ ಇದೆ. ಅಲ್ಲಿ ಹವಳ ಮತ್ತು ಮುತ್ತಿನ ಚಿಪ್ಪಿ ಮೇಲೆ ಬಹಳ ಸೊಗಸಾದ ಕೆತ್ತಿಗೆ ಕೆಲಸ ಮಾಡುತ್ತಾರೆ. ಅವುಗಳಿಗೆ ಬಹಳ ಕ್ರಯ. ಅವುಗಳನ್ನು ಅಲ್ಲಿಯೇ ಕೊಂಡುಕೊಳ್ಳಬಹುದು. ಅಲ್ಲಿಂದ ಹೊರಟು ಬಸ್ಸಿನಲ್ಲಿ 2, 3 ಮೈಲು ಹೋಗಿ ಅಲ್ಲಿಂದ ಮುಂದೆ ವಿದ್ಯುಚ್ಛಕ್ತಿಯ ರೈಲು ಮೂಲಕ ಗುಡ್ಡೆಯನ್ನು ಹತ್ತಬೇಕು. ಎತ್ತರ, ಎತ್ತರ ಹೋದ ಹಾಗೆ ರೈಲನ್ನು 2 ಸಾರಿ ಬದಲು ಮಾಡಿ ಮೇಲಕ್ಕೆ ಹೋಗುತ್ತಿವೆ. ಈ ರೈಲನ್ನು 1880ರಲ್ಲಿ ಕಟ್ಟಿರುತ್ತಾರೆ. ಅಷ್ಟರಿ ಅದಕ್ಕೆ ½ ಒಂದೇ ಗಾಡಿ. ಸಾಧಾರಣ ಟ್ರಾಮಿನಂತೆ ಇರುತ್ತದೆ. ಹೀಗೆ ಹೋಗುವಾಗ ಗುಡ್ಡೆಯ ಎರಡೂ ಬದಿ ಕಾಡುಗಳು, ಒಲೀವ್ ಮತ್ತು ಇತರ ಮರಗಳು, ದ್ರಾಕ್ಷೆ ಬಳ್ಳಿಗಳು ಇವೆ. ಹೀಗೆಯೇ ಸುಮಾರು ಮುಕ್ಕಾಲುವಾಸಿ ಹತ್ತಿದ ಮೇಲೆ ಮುಂದಿನ ದಾರಿ ನಡೆದೇ ಹೋಗಬೇಕು. ಅಲ್ಲಿ ಮುಂಚೆ ವೆಸುವಿಯಸ್ಸಿನ ಬಾಯಿಯವರೆಗೆ ಇದ್ದ ರೈಲು 1944ರಲ್ಲಿ ಜ್ವಾಲಾಮುಖಿಯು ಪುನಃ ಉಜ್ವಲಿಸಿ ಅದರ ಬಾಯಿಯಿಂದ ಬಂದ 'ಲಾವಾ' ಪ್ರವಾಹದಲ್ಲಿ ರೈಲುಪಟ್ಟಿಯೆಲ್ಲಾ ಮುರಿದು ಹಾಳಾಗಿಯದೆ. ಆದ ಕಾರಣ ಕಡೇ ಸ್ಟೇಶನಿನಲ್ಲಿ ಇಳಿದು ಮೇಲಕ್ಕೆ ಹತ್ತಿದೆವು ನಾವು ಒಟ್ಟಿಗೆ ಸುಮಾರು 15 ಜನರಿದ್ದೆವು. ಹೆಚ್ಚಿನವರು ಬೇರೆ ಬೇರೆ ದೇಶದ ಹೆಂಗಸರು. ಆ ಪೈಕಿ ಇಬ್ಬರು ಅಮೇರಿಕದವರು. ಅವರಲ್ಲಿ ಒಬ್ಬಳಿಗೆ ಮೇಲೆ ಹತ್ತಲಿಕ್ಕೆ ಬಹಳ ಕಷ್ಟವಾಯಿತು. ನಮಗೆ ಮೇಲೆ ಹತ್ತಲಿಕ್ಕೆ ಸರಿ 1½ ಗಂಟೆ ಹತ್ತುವ ಭಾಗ 'ಲಾವಾದ' ಕಪ್ಪು ಶಿಲೆಕಲ್ಲಿನ ಮತ್ತು ಬೂದಿಯ ಹುಡಿ-ಇದರದ್ದೇ ಗುಡ್ಡೆ. ಅಲ್ಲಲ್ಲಿ ಕಾಲು ಜಾರುತ್ತಿತ್ತು. ಮೇಲಕ್ಕೆ ಹೋಗುವಾಗ ಸುತ್ತಲೂ ಇಳಿದಿದ್ದ ಬೇರೆ ಬೇರೆ ಕಾಲದ 'ಲಾವಾ'ದ ಬಣ್ಣವು ಬೇರೆ ಬೇರೆಯಾಗಿ ಕಾಣುತ್ತಿತ್ತು. ಹಳೆ ಲಾವಾದ ಮೇಲೆ ಗಿಡಗಳು ಹುಟ್ಟಿವೆ. ಹೊಸತು ಅಂದರೆ 1944ರಲ್ಲಿ ಹೊರಟದ್ದು ಕಪ್ಪಾಗಿದೆ. ಅದರ ಮೇಲೆ ಇನ್ನೂ ಗಿಡ ಹುಟ್ಟಲಿಲ್ಲ. ಕೆಲವು ಕಡೆ ನಮ್ಮ ಊರಲ್ಲಿ ನೀರನ್ನು ಅಡ್ಡಕಟ್ಟಲಿಕ್ಕೆ ಕಟ್ಟುವ ದೊಡ್ಡ ಕಟ್ಟವುಣಿಯಂತೆ ಮೇಲಿನ ಲಾವಾ ಕೆಳಗೆ ಬಂದು ಗದ್ದೆತೋಟ ಹಾಳಾಗದಂತೆ ಬಲವಾದ ಶಿಲೆಕಲ್ಲಿನ ಕಟ್ಟವುಣಿಯನ್ನು ಗುಡ್ಡೆಬದಿಗೆ ಅಲ್ಲಲ್ಲಿ ಕಟ್ಟಿರುತ್ತಾರೆ. ಆದರೂ ಅದನ್ನು ಕೆಲವು ಕಡೆ ಧುಮುಕಿ ಅದರ ಮೇಲಕ್ಕೆ ಕೂಡಾ ಲಾವಾ ಹರಿದು ಕೆಲವು ಹಳ್ಳಿ, ಊರುಗಳು ನಾಶವಾಗಿದ್ದವು. ಗುಡ್ಡೆ ಮೇಲಕ್ಕೆ ಹತ್ತುವಾಗ ದೂರದ ಗುಡ್ಡೆಗಳು, ಒಂದು ಬದಿ ನೇಪಲ್ಸ್ ನಗರ, ಇನ್ನೊಂದು ಬದಿ ಹೊಸ ಮತ್ತು ಹಳೇ ಪೊಂಪೇ, ಮತ್ತು ಅಲ್ಲಲ್ಲಿ ಹಳ್ಳಿಗಳು, ಪಶ್ಚಿಮಕ್ಕೆ ನೇಪಲ್ಸ್ ಕೊಲ್ಲಿ, ಇನ್ನೂ ದೂರ ಸಮುದ್ರ, ಇವುಗಳೆಲ್ಲಾ ರಮ್ಯವಾಗಿ ಕಾಣುತ್ತಿದ್ದವು. ನಾವು ಹತ್ತಿದ ಗುಡ್ಡೆಯ ಕೆಲವು ಭಾಗವು ಪುರಾತನದಲ್ಲಿ ಈ ಜ್ವಾಲಾಮುಖಿಯ ಬಾಯಿಯಾಗಿತ್ತಂತೆ ನಮ್ಮ ನಮ್ಮ ಸಂಚಾಲಕನಿಂದ ತಿಳಿಯಿತು. ನಾವು ಹೀಗೆಯೇ ಮೇಲಮೇಲಕ್ಕೆ ಹತ್ತಿ ಕಡೆಗೆ ಅದರ ಈಗಿರುವ ಬಾಯಿಗೆ ಬಂದೆವು ಅಲ್ಲಿ ಅದರ ಎತ್ತರ, ಸಮುದ್ರದ ಮಟ್ಟಕ್ಕಿಂತ 3984 ಅಡಿ. ಬಾಯಿಯು ಭಯಂಕರವಾಗಿದ್ದು ಉದ್ದ ಉರೂಟಾಕಾರ-ವಾಗಿ (Oblong), ಸುಮಾರು 200 ಗಜ ಉದ್ದ, ಮಧ್ಯದಲ್ಲಿ 100 ಗಜ ಅಗಲ ಮತ್ತು ಒಳಗೆ 100 ಗಜ ಆಳವಿದೆ. ಬಾಯಿಯ ಒಳಬದಿಯು ಬಾವಿಯಂತೆ ನೇರ ಇಳಿದಿರುವ, ಕೆಳಗೆ ಆಕಸ್ಮಾತ್ತಾಗಿ ಯಾರಾದರೂ ಬಿದ್ದರೆ ಉಳಿಯುವ ಮಾತೇ ಇಲ್ಲ. ಈಗ ಜ್ವಾಲಾಮುಖಿಯು ಶಾಂತಸ್ಥಿತಿಯಲ್ಲಿದೆ. ಈ ಮುಂಚೆ ನಾನು ಬರೆದ ಸ್ಟ್ರಾಂಬೋಲಿಯಂತೆ 'ಲಾವಾ' ಕಾರುವುದಿಲ್ಲ. ಆದರೆ ಅದರ ಬಾಯಿಯ ಕೆಳಗೆ ಮತ್ತು ಬಾಯಿಯ ಬದಿಯಲ್ಲಿ ಬಿಸಿಯಾದ ಗಂಧಕದ ಹೊಗೆ [Sulphurous fumes] ತೆಳ್ಳಗಾಗಿ ಅಲ್ಲಲ್ಲಿ ಬರುತ್ತದೆ.

ಅರ್ಧ ಘಂಟೆ ಸಮಯ ಅಲ್ಲಿ ನಿಂತು ಅನಂತರ ಕೆಳಗೆ ಇಳಿದೆವು ಇಳಿಯುವಾಗ ಮೆಲ್ಲಮೆಲ್ಲಕ್ಕೆ ಇಳಿಯಬೇಕು, ಏಕೆಂದರೆ ಶಿಲೆ ಹುಡಿಯಲ್ಲಿ ಕಾಲು ಜಾರುತ್ತದೆ ಸರಿ 1 ಘಂಟೆ ಸಮಯ ಇಳಿಯಲಿಕ್ಕೆ ನಮ್ಮ ವಸ್ತ್ರವೆಲ್ಲಾ ಕಪ್ಪು ಧೂಳಿನ ಹುಡಿ. ಇಳಿದ ಮೇಲೆ ನಾವು ಹೊರಟ ರೈಲನ್ನು ಪುನಃ ಹತ್ತಿ ಗುಡ್ಡೆ ಕೆಳಗೆ ಇಳಿದು ನಮ್ಮ ಬಸ್ ಹತ್ತಿ ಸಾಯಂಕಾಲ 7 ಘಂಟೆಗೆ ನನ್ನ ಹೋಟೆಲಿಗೆ ಹಿಂತಿರುಗಿ ಬಂದೆ ಈ ದಿನದ ಅಪರಾಹ್ನದ ತಿರುಗಾಟದಲ್ಲಿ ನನ್ನೊಟ್ಟಿಗೆ ಸುಮಾರು 26-28 ವರ್ಷ ಪ್ರಾಯದ ನೋರ್ವೆಯ ಒಬ್ಬರು, ಅನೇಕ ಗಂಟೆ ಸಮಯ ನನ್ನೊಡನೆ ಇದ್ದರು. ಅವರು ಪಿ. ಎಚ್. ಡಿ. ಪಾಸಾಗಿದ್ದು ಅಮೇರಿಕದಲ್ಲಿ ಅಯೋವಾ ಸ್ಟೇಟಿನ ಡೆಕೋರಾ ಎಂಬ ನಗರದಲ್ಲಿ ಲೂಥರ್ ಕಾಲೇಜಿಗೆ ಪ್ರೊಫೆಸರಾಗಿ ಹೋಗುವವರು. ಅವರು ಬಹಳ ತಿಳುವಳಿಕೆಯುಳ್ಳ ಸಭ್ಯಗೃಹಸ್ಥರು. ಅವರು ನನ್ನೊಡನೆ ಪುಸ್ತಕಗಳ ವಿಚಾರ ಮಾತನಾಡುವಾಗ ನೋರ್ವೆಯ ನೋಬಲ್ ಇನಾಮು ಪಡೆದ ಸಿಗ್ರಿಡ್ ಉನಸೆಟಳ [Sigrid Undset] "ಕ್ರಿಸ್ಟಿನ್ ಲೆವ್‌ರೆನ್ಸ್‌ಡೆಟರ್" [Kristin Lavransdatter] ಎಂಬ ಪುಸ್ತಕವನ್ನೂ ಮತ್ತು ನಟ್ ಹೇಮ್‌ಸನ್ [Knut Hamsun] ನ "ಗ್ರೋಥ್ ಅಫ್ ದಿ ಸೊಯ್ಲ್" (Growth of the soil) ಎಂಬ ಎರಡು ಪುಸ್ತಕಗಳನ್ನು ಬಹಳವಾಗಿ ಹೊಗಳಿದರು ಅದರಲ್ಲಿ ಮೊದಲನೆಯದು ಬಹಳ ಚಲೋದಾಗಿದೆ. ಇನ್ನೊಂದು ನನಗೆ ಸಿಕ್ಕಲಿಲ್ಲ. ನಾವು ಅಗಲುವಾಗ ನಾನು ಅವರಿಗೆ ಕಾಗದ ಬರೆಯಲಿಕ್ಕೆ ಅವರ ಅಮೇರಿಕದ ವಿಳಾಸ ಕೊಟ್ಟಿದ್ದರು. ಆದರೆ ಇನ್ನೂ [ತಾರೀಕು 1-4-52] ಬರೆಯಲಿಕ್ಕೆ ಆಗಲಿಲ್ಲ. ಹೀಗೆಯೇ ಈ ತಿರುಗಾಟದಲ್ಲಿ ನನಗೆ ಸಿಕ್ಕಿದ ಬೇರೆ ಬೇರೆ ದೇಶದ ಕೆಲವು ಜನರಿಗೆ ಬರೆಯಲಿಕ್ಕೆ ಬಾಕಿಯಿದೆ. ಆದಷ್ಟು ಬೇಗನೇ ಬರೆಯಬೇಕು.

ಅದೇ ದಿನ ಸಾಯಂಕಾಲ 8ಗಂಟೆಗೆ ರೈಲುಹತ್ತಿ 11 ಗಂಟೆಗೆ ರೋಮ್ ನಗರಕ್ಕೆ ಹಿಂದೆಬಂದೆ. ಮುಂಚಿನ ನಸ್‌ರಿನೋ ಹೋಟೆಲಲ್ಲೇ ಇನ್ನೂ 2ದಿವಸವಿದ್ದು ಲೋಕ ಪ್ರಸಿದ್ಧವಾದ ಈ ನಗರವನ್ನು ಸಂಚರಿಸಿ ನೋಡಿದೆ. ರೋಮಿಗೆ ಇಂಗ್ಲಿಷಿನಲ್ಲಿ "ಅನಂತ ನಗರ" (Eternal City) ಅನ್ನುತ್ತಾರೆ. ಅದರ ವಿಚಾರ ಬರುವ ಪತ್ರದಲ್ಲಿ.

[ವಿಚಾರವಾಣಿ] —ಕೆ. ಆರ್. ಕಾರಂತ,

ತೃಪ್ತಿಕರವಾದ ವಸತಿ — ಹಿತಕರವಾದ ಊಟ

ರುಚಿಕರವಾದ ಉಪಾಹಾರ ಇವುಗಳಿಗೆ

ಉಡುಪಿಯ ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಊರ ಪರವೂರ ಸನ್ಮಾನ್ಯ ಸದ್ಗೃಹಸ್ಥರಿಂದ ಮುಕ್ತಕಂಠದಿಂದ ಹೊಗಳಿಸಿಕೊಂಡ ನಮ್ಮ ಹೋಟೆಲಿಗೇ

ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ.

ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯಾಗುವಂತೆ ನಗರದ ಕೇಂದ್ರ ಭಾಗದಲ್ಲಿದೆ.

WOODLANDS

Highclass Boarding & Lodging, UDIPI S. Kanara

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೂಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ ನವಜೀವಾತು ಎಂಬ ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ. ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಥಾನಿಕರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ವಿವಿಧ ಪಾತ್ರೆಗಳು



ಯಾವತರೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಅಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪಡಕಟ್ಟಿ ಋತುಸ್ರಾವವಾಗುವುದು. ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾಧಾರಣ ಮುಂದಿಗೆ ಶಾಸ್ತ್ರಿ ಗುಣವಾಗಿದೆ- ಷೆಲ್ಫ್ ರೂ. 3-) ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ. ಖರ್ಚು ರಹಿತ ಪ್ರತ್ಯೇಕ]

Mrs. D. DEVEE, F DS. (N. J.)
Tollygunge CALCUTTA.
ಸ್ಥಾನಿಕರು ಕಮಾಕಂಪೆನಿ, ಮಂಗಳೂರು

ತಾರೀಕು 29-5-52 ರಿಂದ

ವಾರದ ಭವಿಷ್ಯ

ತಾರೀಕು 4-6-52 ವರೆಗೆ

ಮೇಷ— ಕಂದ ಹೋದ ದಿನಗಳಿಗಿಂತಲೂ ಇಂದಿನ ದಿನವು ನಿಮಗೆಷ್ಟೋ ಆನಂದದಾಯಿಯಾಗಿರುವುದು. ಹೆಚ್ಚಿನ ನಿಮ್ಮ ಪ್ರಯತ್ನಗಳು ಸಫಲಗಳಾಗುವವು. ಹಣದ ತಾಪತ್ರಯದಿಂದ ಮುಕ್ತರಾಗುವಿರಿ. ವ್ಯಾಪಾರ ವ್ಯವಹಾರಗಳಿಗೂ ಭೃತ್ಯ ಜನತೆಗೂ ಈ ಕಾಲವು ಅನುಕೂಲವಿದೆ. ಕೆಲವೊಮ್ಮೆ ಹಿಂದು ಮುಂದಿನ ವಿಚಾರ ಮಾಡದೆ ದುಡುಕಿ ನಷ್ಟ ಕಲಹಗಳಿಗೆ ಗುರಿಯಾಗುವಿರಿ. ವಾರಾಂತ್ಯದ 3 ದಿನಗಳು ಅತ್ಯುತ್ತಮವಿರುವವು.

ವೃಷಭ—ಆಯಕ್ಕಿಂತ ಅಧಿಕ ವ್ಯಯವಾಗುವದಾದರೂ ಅದರಲ್ಲಿನ ಹೆಚ್ಚಿನ ಭಾಗವು ಸತ್ಕಾರ್ಯಗಳ ಸಲುವಾಗಿ ಈ ವಾರದಲ್ಲಿ ಪರ್ಯಟನವಧಿಕವಾಗುವದು. ಹೆಚ್ಚಿನ ಕಷ್ಟ ನಷ್ಟಗಳಿಗೀಡಾಗುವಿರಿ. ತನುಮನಗಳಿಗೆ ಸುಖ ಶಾಂತಿಯು ಲಭಿಸದು, ಆದರೂ ಪ್ರಬಲರಾದ ಶತ್ರುಗಳನ್ನು ದಮನಿಸುವುದರಲ್ಲಿ ಸಮರ್ಥರಾದ ನಿಮಗೆ ತಾ. 29-30-4 ಈ ದಿನಗಳಲ್ಲಿ ನೆನೆದ ಕಾರ್ಯಗಳು ಸಿದ್ಧಿಸುವವು.

ಮಿಥುನ—ಕಾಲವು ಕೊಂಚ ವಕ್ರವಾಗಿರುವದು. ನಿಮ್ಮ ವ್ಯಯಸ್ಥಾನದಲ್ಲಿ ಗ್ರಹತ್ರಯರ ಸಮಾಗಮವಾಗಿರುವುದರಿಂದ ನೀವೆಷ್ಟೇ ದುಡಿದರೂ ಕೈಯಲ್ಲಿ ಕಾಸೊಂದೂ ಉಳಿಯಲಾರದು. ತನುಸುಖ ಸತಿಯುಮ ವ್ಯಯಗಳನಾಗಿದ್ದರಿಂದ ನಿಮ್ಮದೇಹಕ್ಕೆ ಸುಖವೂ ಮನಸ್ಸಿಗೆ ಶಾಂತಿಯೂ ಇರಲಾರದು. ಆದರೂ ಗುರುವು ಲಾಭಗತನಾಗಿರುವುದರಿಂದ ಹೆಚ್ಚಿನ ಅನಿಷ್ಟಗಳು ದೂರ ತೊಲಗಿ ಆರ್ಥಿಕ ಭಾಗವು ಸುಧಾರಿಸಲಿದೆ.

ಕರ್ಕಾಟ—ನಿಮ್ಮ ಅದೃಷ್ಟವಿಂದು ಸುಧಾರಿಸಿರುವುದು. ನಿಮ್ಮ ಯಾವತ್ತೂ ಆಕಾಂಕ್ಷೆಗಳು ನಿರ್ವಿಘ್ನದಿಂದ ನೆರವೇರುವವು. ಜನತೆಯ ಬೆಂಬಲ ಧನದ ಬಲ ಇವುಗಳಿಂದಾಗಿ ಪ್ರತಿಯೊಂದು ಕಾರ್ಯಗಳಲ್ಲೂ ನೀವು ವಿಜಯಿಗಳಾಗಲಿರುವಿರಿ. ಸಾಂಸರ್ಗಿಕ ದೋಷದಿಂದಾಗಿ ಕೆಲವೊಮ್ಮೆ ಕಷ್ಟ ನಷ್ಟ ನಿಷ್ಠ ಅಪವಾದಗಳಿಗೆ ಸಿಲುಕುವ ಸಂಭವವಿದೆಯಾದ್ದರಿಂದ ತಾ. 31-1-4ರಲ್ಲಿ ಜಾಗರೂಕರಾಗಿ ವರ್ತಿಸಿರಿ.

ಸಿಂಹ—ನಿಮಗಾವ ಭಾಗದಲ್ಲೂ ಕೊರತೆ ಕಾಣದು ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾಗಿ ಸುಖದಿಂದ ಕಾಲಯಾಪನೆ ಮಾಡುವಿರಿ. ನಿಮ್ಮ ಸಂಕಲ್ಪದಂತೆ ಪ್ರತಿಯೊಂದು ಕಾರ್ಯಗಳೂ ಏನೊಂದೂ ವಿಘ್ನ ವಿಡ್ಡೂರಗಳಿಲ್ಲದೆ ಜರಗುವವು. ಆದಾವ ದುರ್ವಿಧಿಯಿಂದಲೋ ನೀವು ಮಾತನಾಡದರೊಡನೆ ಜಗಳವಾಗಲಿಬಿಟ್ಟಿಯಾದ್ದರಿಂದ ತಾ. 29-2-3ರಲ್ಲಿ ಬಹಳ ಜಾಗ್ರತೆಯಿಂದ ವರ್ತಿಸಿರಿ.

ಕನ್ಯಾ—ಶುಕ್ರರನ್ನು ಹೊರತಾಗಿ ಇತರ ಎಲ್ಲಾ ಗ್ರಹರೂ ನಿಮ್ಮ ಭಾಗಕ್ಕೆ ಪ್ರತಿಕೂಲರಾಗಿರುವರು. ಅದೆ ಕಾರಣ ನಿಮ್ಮ ಹೆಚ್ಚಿನ ಬಯಕೆಗಳು ಈ ವಾರದಲ್ಲಿ ಈಡೇರಲಾರವು. ಮಾತ್ರವಲ್ಲ ವಿಶೇಷವಾದ ದೇಹಾಲಸ್ಯಕ್ಕೆ ಗುರಿಯಾಗುವಿರಿ. ಆಕಸ್ಮಿಕ ಪರ್ಯಟನವೂ ಸಂಭವಿಸಲಿದೆ. ಅದರಲ್ಲೊಂದು ತೃಪ್ತಿ ಏನೆಂದರೆ ನಿಮ್ಮ ಧನ ಭಾಗ್ಯಪತಿಯು ಅನುಕೂಲನಾಗಿ ಸ್ವಸ್ಥಾನದಲ್ಲಿರುವುದರಿಂದ ಏನೇ ಗಂಡಾಂತರ ಬಂದರೂ ಹಣದ ಅಡಚಣೆಯಾಗದು. ತಾ. 29-30-2-3 ಈ ದಿನಗಳು ಬೇರೆ ದಿನಗಳಿಗಿಂತ ಉತ್ತಮ.

ತುಲಾ—ಈ ವಾರದಲ್ಲಿ ನಿಮ್ಮ ಪರಿಸ್ಥಿತಿಯು ಮುಂಚಿಗಿಂತ ಅದೆಷ್ಟೋ ಸುಧಾರಿಸಲಿದೆ ಹತ್ತಾಪಿ ನಿಮ್ಮ ಹಣದ ಭಾಗವು ವೃದ್ಧಿ ಹೊಂದಲಿದೆ ಜನತೆಯಲ್ಲಿ ಗೌರವಾದರಗಳನ್ನು ಪಡೆವಿರಿ. ಹೆಚ್ಚಿನವರ ಮೈತ್ರಿಯನ್ನು ಸಂಪಾದಿಸುವಿರಿ. ಆಕಸ್ಮಿಕವಾಗಿ ಶೋಕ ತಾಪಗಳು ಬರಲಿವೆ. ತಾ. 2-3ರಲ್ಲಿ ಜಾಗರೂಕರಾಗಿ ವರ್ತಿಸಿರಿ.

ವೃಶ್ಚಿಕ—ಇಂದೀಗೆ ನಿಮ್ಮ ಅದೃಷ್ಟವು ಕೃಷ್ಣ ಪಕ್ಷದ ಚಂದ್ರನಂತೆ ದಿನೇ ದಿನೇ ಹ್ರಾಸವಾಗುತ್ತಾ ಬಂದಿರುವದು. ಸ್ವಜನರಲ್ಲಿ ವಿರೋಧವುಂಟಾಗುವದು. ಪಿತ್ತ ಪ್ರಕೋಪದಿಂದ ಆರೋಗ್ಯಕ್ಕೆ ಹಾನಿಯುಂಟಾದೀತು. ಹಣದ ಅಡಚಣೆಯಿಂದ ಮಾನವುಳಿಸಿಕೊಳ್ಳುವುದು ಕಷ್ಟವೆನಿಸುವದು. ತನುಮನೋರೋಗಗಳು ಪ್ರಬಲವಾಗುವವು. ಸಾಂಸಾರಿಕ ತಾಪತ್ರಯಗಳಿಂದ ಪೀಡಿತರಾದ ನಿಮಗೆ ತಾ. 29-30-4 ಅತೀವ ದುಃಖದಾಯಿಗಳಾಗಿ ಪರಿಣಮಿಸಲಿವೆ.

ಧನು—ದೈವವಿಂದು ನಿಮಗನುಕೂಲವಾಗಿರುವದು. ಯಾವ ಕಾರ್ಯವನ್ನು ಮಾಡಿದರೂ ಅದರಲ್ಲಿ ಯಶಸ್ವಿಗಳಾಗುವಿರಿ. ಗುರುಹಿರಿಯರ ಅನುಗ್ರಹ ಬಂಧುಗಳ ನೆರವಿನಿಂದಾಗಿ ನಿಮಗಾವ ಮಹತ್ ಕಾರ್ಯಗಳೂ ತೃಣಸಮವೆನಿಸುವವು. ಹಲವಾರು ತೆರದಿಂದ ಧನಾಗಮವಾಗುವದು. ಆದರೆ ವ್ಯಾಪಾರೀ ಭಾಗದಲ್ಲಿ ನಷ್ಟವಾಗುವ ಸಂಭವವಿದೆ. ತಾ. 2 3 4 ಈ ದಿನಗಳಲ್ಲಿ ನಿಮ್ಮ ಬಯಕೆಯು ನಿರ್ವಿಘ್ನದಿಂದ ನೆರವೇರುವವು.

ಮಕರ—ಗ್ರಹಬಲವು ತೀರ ದುರ್ಬಲವಿರುವದು. ಯಾವ ಕಾರ್ಯವನ್ನು ಕೈಗೊಳ್ಳಲು ನಿಮ್ಮಲ್ಲಿ ಧೈರ್ಯ ಸಾಹಸಗಳಿರಲಾರವು. ಜನತೆಯಲ್ಲಿ ವಿನಾ ಕಾರಣ ಕಲಹ ನಿಷ್ಠುರಗಳಾಗುವವು. ಹಣದ ಅಡಚಣೆಯಿಂದಾಗಿ ದಿನಯಾಪನೆಯು ಕಠಿಣವೆನಿಸುವದು. ಹೃದ್ರೋಗದಿಂದ ಪೀಡಿತರಾದ ನಿಮಗೆ ತಾ. 29-30-4 ಈ ದಿನಗಳು ಕೊಂಚ ಸುಖಕಾರಿಗಳಾದಾವು.

ಕುಂಭ—ಸಾಂಸಾರಿಕ ತಾಪತ್ರಯಗಳಿಂದ ಪೀಡಿತರಾದ ನಿಮಗೆ ಕೆಲವೊಮ್ಮೆ ಸಂಸಾರದಲ್ಲಿ ವಿರಕ್ತಿ ಕಾಣಿಸಬಹುದು. ಪತ್ನೀ ಪುತ್ರರ ವಿರಹಕ್ಕೆ ಗುರಿಯಾದೀರಿ. ಪಿತ್ತ ವಾತ ಪ್ರಕೋಪದಿಂದಾಗಿ ಆರೋಗ್ಯಕ್ಕೆ ಧಕ್ಕೆ ತಗಲುವದು. ಕೈಗೊಂಡ ಕಾರ್ಯಗಳು ಅರ್ಧದಲ್ಲೇ ನಿಂತು ಹೋಗುವವು. ಸ್ಥಾನ ಚಲನೆಯ ಯೋಗವು ಕಂಡುಬರುವುದು. ವಾರಾದಿಯ 3 ದಿನಗಳು ಉಳಿದ ದಿನಗಳಿಗಿಂತ ಸುಗಮವೆನಿಸುವವು.

ಮೀನ—ನಿಮ್ಮ ಪರಿಸ್ಥಿತಿಯು ಈ ವಾರದಲ್ಲಿ ಸಾಕಷ್ಟು ಉತ್ತಮವಿರುವದು. ಯಾವ ಕಾರ್ಯದಲ್ಲೂ ನಷ್ಟವೆಂಬುದಿರಲಾರದು. ಸನ್ಮಿತ್ರರ ಬೆಂಬಲ ಬಂಧುಗಳ ನೆರವು ಚೆನ್ನಾಗಿರುವುದರಿಂದ ಕಾರ್ಯದಲ್ಲಿ ವಿಜಯವನ್ನೂ ಸಮಾಜದಲ್ಲಿ ಸ್ಥಾನಮಾನಗಳನ್ನೂ ಪಡೆವಿರಿ. ಶತ್ರುಗಳು ನಿಮ್ಮ ಧನ ಮಾನಗಳಿಗೆ ಹಾನಿ ತರಲು ವಿಶೇಷ ಯತ್ನಿಸುತ್ತಿರುವರು. ವಾರಾಂತ್ಯದ 4 ದಿನಗಳಲ್ಲಿ ವಿಶೇಷ ಜಾಗರೂಕತೆಯಿಂದ ವರ್ತಿಸಿರಿ.

ಕವಿರಾಜ ಯನ್. ಯನ್. ಸೇನರ

ಶಾಸ್ತ್ರೀಯ ಔಷಧಿಗಳು ಈಗಲೇ ಬಂದಿವೆ

ಬೃಹತ್ ಅಮೃತಬಳ್ಳಿ ಕಷಾಯ
ಪ್ರಸೂತಾರಿಷ್ಟ
ಕಸ್ತೂರಿ ಕಲ್ಪ ರಸಾಯನ
ನೇತ್ರಬಿಂದು
ಕರ್ಪೂರಾರಿಷ್ಟ
ದುರ್ಗಾ ಪುನರ್ನವಾಸವ
ಬಾಸಾರಿಷ್ಟ
ಕುಂಕುಮಾಸವ
ಮೃಗಾಂಕ ದ್ರಾವ

ದರವನ್ನು ವಿಚಾರಿಸುವದು.

ಏಜಂಟ್:—
ಸಾ ಕಂಪೆನಿ, ಮಂಗಳೂರು ನಂ. 1.

ಸಾರ್ವಜನಿಕರ ಉಪಯೋಗಕ್ಕಾಗಿ ಅಮೂಲ್ಯ ರತ್ನ ಪ್ರಯೋಗ!

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮಾಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ನಾಯುವಿಸಿದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೪ ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩/೪
(ಪೋಸ್ಟೇಜು ಮಾಫಿ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನ ಎ. ರಾಮಸ್ವಾಮಿ ಅಯ್ಯರ್‌ರವರ

✳ ಸಂತಾನ ಸಿಂಧೂರ ✳

ಬಹಿಷ್ಠೆ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಠೆ ಸಂಬಂಧದ ಹೊಟ್ಟೆನೋವಿನಜೊತೆಗೆ ತಲೆನೋವು, ... ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ.

೩ ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ೧ ಸೆಟ್ ಅನುಪಾನಪತ್ರಿಕೆ ಮೇರೆ ಉಪಯೋಗ ಸೇವಿಸಿರಿ ಸಾಕು. ಶೋಭನವಾದ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾಪತ್ರಗಳನ್ನು ಪಡೆದಿದೆ.

ಕ್ರಯ:—೧ ಸೆಟ್ 5 ರೂ ಪ್ಯಾಕಿಂಗ್ ಮತ್ತು ಟಪಾಲು ಖರ್ಚು ೧ರೂ ವಿ. ಪಿ. ಇಲ್ಲ ಕ್ಯಾಟಲಾಗ್ ಉಚಿತ ೬ರೂ ಮನಿಆರ್ಡರ್ ಮಾಡಿರಿ ಕೂಡಲೆ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ:—A. R. ವಿಶ್ವೇಶ್ವರಯ್ಯ (ಎ. ರಾಮಸ್ವಾಮಿ ಅಯ್ಯರ್ ಸನ್,)

Prop: ಸಂತಾನ ಸಿಂಧೂರ, ಅಂಬಳೆ ಪೋಸ್ಟ್, ಯಳಂದೂರು ತಾ. ಮೈಸೂರು ಡಿ.
ಮೈಸೂರು ಶಾಖೆ: 269 ಸೋನಾರ್ ಸ್ಟ್ರೀಟ್, ದಿವಾನ್ಸ್ ರೋಡು, ಮೈಸೂರು.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

ಕೊರಡ್ಕಲ್ ಶ್ರೀನಿವಾಸರಾವ್ ಕೃತ
ಆಂಗ್ಲ ಸ್ವಯಂಬೋಧಿನಿ.
ಬೆಲೆ ರೂ- 1-8-0, ವಿ. ಪಿ. ದ್ವಾರ ರೂ- 2-0-0

ಡಾ| ಕೊರಡ್ಕಲ್ ವೆಂಕಟರಾವ್ ಕೃತ
ಮನೆ ಮದ್ದು
ಸುಲಭ ಚಿಕಿತ್ಸೆಗಳು.
ಬೆಲೆ ರೂ- 2-0-0, ವಿ. ಪಿ. ದ್ವಾರ ರೂ- 2-10-0

ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published By K. H. Shetty at the Navayuga Press, Udipi, S. India.

Regd. No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪನೆ
31 ನೆಯ ವರ್ಷ

5-6-1952

Founder: Sri A. B. Shetty
Minister for Medical & Public Health

ನವಯುಗ

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಸಾರ್ವಜನಿಕ
ಆರೋಗ್ಯ ಮಂತ್ರಿ
ಶ್ರೀ ಎ. ಬಿ. ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ
ಪೋಸ್ಟ್ ಬಾಕ್ಸ್
ನಂಬ್ರ 22
ಉಡುಪಿ ದ. ಕ

ವಾರ್ಷಿಕ ಚಂದಾ
ರೂ 5-12-0
6 ತಿಂಗಳಿಗೆ
ರೂ 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೩೯

NAVAYUGA WEEKLY Post Box No. 22 UDIPI.

Vol 31
No 39

ಮಧುಕರ

ಲಂಡನಿನಲ್ಲಿ ಪ್ಲೇಗು ಹಾವಳಿ ನಡೆಸುವ ಸಮಯ ಲಾರ್ಡ್ ಕ್ರಾವೆನ್ ಆತ್ಮರಕ್ಷಣೆಗಾಗಿ ಹಳ್ಳಿಗೆ ಹೋಗಲು ಉದ್ಯುಕ್ತನಾದ. ಕುದುರೆ ಗಾಡಿ ಬಾಗಿಲ ಬಳಿ ಬಂದು ನಿಲ್ಲಲು ಈ ಭದ್ರಮನುಷ್ಯ ಆ ಕಡೆ ಹೆಜ್ಜೆ ಹಾಕಿದ. ಒಬ್ಬ ನೀಗ್ರೋ ಗುಲಾಮ ಇದನ್ನು ಕಂಡು ಇನ್ನೊಬ್ಬ ಆಳಿನೊಡನೆ ಹೇಳಿದ—

"ಪ್ರಾಯಶಃ ನಮ್ಮ ಯಜಮಾನರ ದೇವರು ಗ್ರಾಮಾಂತರದಲ್ಲಿರಬೇಕು—ಇಲ್ಲದಿದ್ದರೆ ಹೀಗೆ ಹೆದರಿ ಓಡಿಹೋಗುತ್ತಿರಲಿಲ್ಲ."

ಈ ಮಾತು ಕ್ರಾವೇನನ ಮನಸ್ಸನ್ನು ಕಲಕಿತು. "ದೇವರೇ! ನೀನು ಎಲ್ಲೆಲ್ಲಿಯೂ ಇರುವಿ. ನಗರದಲ್ಲಿಯೇ ನಾನಿದ್ದರೂ ಪ್ಲೇಗಿನ ಬಾಯಿಂದ ನೀನು ನನ್ನನ್ನು ಉಳಿಸಬಲ್ಲಿ. ನನ್ನ ಕರ್ತವ್ಯವನ್ನು ಮರೆತುದಕ್ಕೆ ಕ್ಷಮಿಸು, ದೇವಾ!"

ಹೀಗೆಂದು ಪ್ರಾರ್ಥಿಸಿ ಗಾಡಿಯನ್ನವನು ಹಿಂದಕ್ಕಟ್ಟಿದನು. ನಗರದಲ್ಲಿ ಪ್ಲೇಗಿನ ಪಿಡುಗಿಗೆ ಬಲಿಯಾದ ನೆರೆಹೊರೆಯವರ ನಡುವಿದ್ದು, ಚೆನ್ನಾಗಿ ಶುಶ್ರೂಷೆ ಮಾಡಿ ಧನ್ಯನಾದನು, ಅವನಿಗೆ ಪ್ಲೇಗು ತಗುಲಲೇ ಇಲ್ಲ.

ಕರ್ತವ್ಯ ಭಾರಕ್ಕೆ ಕಳೆಮೂಣೆಯಾಗಿ ಹೃದಯೋದ್ವೇಗ ಕಳೆದು, ಸಮಾಧಾನ ತುಂಬಲಿ!

ಕರ್ತವ್ಯ ಜ್ಞಾನ

ಹುಟ್ಟಿನೊಡನೆ ಮನುಷ್ಯನ ಹೆಗಲೇರಿ ಬಂದೊಂದು ಹೊರೆ ಇದೆ. ನಮಗೆ ಭಾರವಾಗುವುದೆಂದು ತೋರಿದಷ್ಟಕ್ಕೆ ಅದನ್ನು ಅಲ್ಲಿಯೇ ಇಳಿಸಿ ಬಿಡಲು ಬರುವುದಿಲ್ಲ. ಹಾಗೆಂದು ಏರುಪೇರುಗಳಿರುವ ನಮ್ಮ ಬದುಕಿನಲ್ಲಿ ಈ ಕರ್ತವ್ಯಭಾರವನ್ನು ಸಹಿಸಿಕೊಂಡು ನಡೆಯುವುದೇನು ಸುಲಭಸಾಧ್ಯವಲ್ಲ. ಬಹಳ ಇಕ್ಕಟ್ಟಾದ ಪರಿಸ್ಥಿತಿಗಳಲ್ಲಿ ಬುದ್ಧಿಯು ನಿಷ್ಕ್ರಿಯವಾದಾಗ, ಚಿತ್ತವು ವಿವೇಕ ಕಳೆದುಕೊಂಡಾಗ, ಮನಸ್ಸು ಉದ್ವೇಗಕ್ಕೆ ಗುರಿಯಾದಾಗ—ಕರ್ತವ್ಯ ಜ್ಞಾನ ನಮಗಾಗುವುದೇ ಇಲ್ಲ. ಅಸಾಮಾನ್ಯ ನಡವಳಿಕೆಯನ್ನು ತೋರಿಸಿ ಇಂಥಾ ಪ್ರಸಂಗಗಳನ್ನು ಚಾಣಾಕ್ಷತೆಯಿಂದ ನಿವಾರಿಸುತ್ತ ಬರುವುದು ನಮ್ಮೆಲ್ಲರ ಪಾಲಿನ ಕೆಲಸ ಅಥವಾ ಕರ್ತವ್ಯ.

ನಾವು ದೇಹದ ಕಡೆಗೆ ಕೊಟ್ಟಷ್ಟು ಹೆಚ್ಚು ಪ್ರಮಾಣದಲ್ಲಿ ಮನಸ್ಸಿನತ್ತ ಗಮನ ಕೊಡುವುದಿಲ್ಲ—ಅಲ್ಲವೆ? ಕಾಲಿಗೊಂದು ಗಾಯವಾದರೆ, ಅದಕ್ಕೆ ಎಣ್ಣೆ ಹಚ್ಚಿ ಉಪಚರಿಸುತ್ತೇವೆ. ಜ್ವರ ಬಂದರೆ, ವೈದ್ಯರ ಬಳಿಗೆ ಓಡಿ ಹೋಗಿ, ಮದ್ದು ತಂದು ಕುಡಿಸುತ್ತೇವೆ. ದೇಹವನ್ನು ಸ್ವಚ್ಛವಿಡಬಯಸಿ, ದಿನಕ್ಕೆರಡು ಬಾರಿ ಮಿಂದು ಬರುತ್ತೇವೆ. ಸುಂದರ ಕಾಣಬೇಕೆಂದು ಬಗೆಬಗೆಯ ಬಣ್ಣ ಬಣ್ಣದ ಉಡುಪು ತೊಡುಪುಗಳನ್ನು, ಚಿನ್ನಾಭರಣಗಳನ್ನು ಧರಿಸುತ್ತೇವೆ. ಹಲ್ಲು ಉಜ್ಜುತ್ತೇವೆ—ತಲೆ ಬಾಚುತ್ತೇವೆ. ಇಂಥ ನೂರಾರು ಕೆಲಸಗಳನ್ನು ದಿನಾಲು ಮಾಡುವುದು ವಾಡಿಕೆಯಾಗಿದೆ. ಇದರ ಮೇಲಿಂದ ದೈಹಿಕ ಆರೋಗ್ಯದ ಕಡೆಗೆ, ನಾವು ನೈರ್ಮಲ್ಯ ಮತ್ತು ಪೋಷಣೆಯ ಕಡೆಗೆ, ನಾವೆಷ್ಟು ಲಕ್ಷ್ಯ ಪೂರೈಸುತ್ತಿರುವೆವೆಂದು ಅನುಮಾನಿಸಬಹುದು.

ಹಾಗಾದರೆ, ಮನಸ್ಸಿಗೆ ಇಂಥದೊಂದೂ ಪೀಡೆ ಇಲ್ಲವೆ? ಕಾಯಿಲೆ ಕಸಾರಿಕೆಯಾಗಲೀ ಮಲಿನತೆಯಾಗಲೀ ಮನಸ್ಸನ್ನು ಮುತ್ತುವುದಿಲ್ಲವೆ? ನಮ್ಮ ಮನಸ್ಸನ್ನು ಸದಾ ಸ್ವಚ್ಛವಾಗಿಡಲು ಪ್ರಯತ್ನ ಬೇಡವೇ? ಇತರರ ದೃಷ್ಟಿಗೆ ಕೂಡಾ ನಮ್ಮ ಮನಸ್ಸು ಒಳ್ಳೆಯದೆಂದು ತೋರುವುದು ಅನಗತ್ಯವೇನು?—ಈ ಎಲ್ಲ ಸಂಗತಿಗಳನ್ನು ವಿಚಾರ ಪೂರ್ವಕ ಪರಾಮರ್ಶಿಸುವುದು ಕರ್ತವ್ಯ ಜ್ಞಾನಕ್ಕಾಗಿ ಅವಶ್ಯವೆನಿಸಿದೆ.

ಇಂದಿನ ಮನೋ ವಿಜ್ಞಾನಿಗಳು ಮನುಷ್ಯನನ್ನು ದೇಹ-ಮನಸ್ಸುಗಳ ಸಂಯುಕ್ತ ಸ್ವರೂಪವೆಂದು ತಿಳಿಯುತ್ತಾರೆ. ಮನದ ಮಾಲಿನ್ಯ ದೈಹಿಕಾವಸ್ಥೆಯ ಮೇಲೆ ಪರಿಣಾಮ ಮಾಡಬಹುದು. ಹಾಗೆಯೇ ದೈಹಿಕ ರೋಗವು ಮನಸ್ಸಿನ ನೆಮ್ಮದಿಗೂ ಭಂಗ ತರದೀತು. ಇದೇ ಅಭಿಪ್ರಾಯವನ್ನು ಭಾರತೀಯ ದಾರ್ಶನಿಕರೂ ವ್ಯಕ್ತಗೊಳಿಸಿರುವರು. "ಪರಿಪುಷ್ಟವಾದೊಂದು ಶರೀರದಲ್ಲಿ ಪರಿಶುದ್ಧ ಮನಸ್ಸು ಇರಲಿ" ಎಂಬ ಇಂಗ್ಲೀಷು ಗಾದೆ ಮಾತಿಗೆ, ಅವರದೂ ಒಪ್ಪಿಗೆ ಇತ್ತು. ಪತಂಜಲಿ ಮುನಿಯಂಥ ಯೋಗ ಶಾಸ್ತ್ರವಿಶಾರದರು ಮನಸ್ಸು ಮತ್ತು ದೇಹಗಳ ಪಾರಸ್ಪರಿಕ ಸಂಬಂಧದ ಮೇಲೆ ಬಹಳ ಮಹತ್ವವನ್ನು ಕೊಟ್ಟದ್ದು ಕಂಡು ಬರುತ್ತದೆ. ಯೋಗ ವಿಧಾನದ ಅತಿ ಉಚ್ಚ ಮಟ್ಟವಾದ ನಿರ್ವಿಕಲ್ಪ ಸಮಾಧಿ ಸ್ಥಿತಿಯು ಪ್ರಾಪ್ತವಾಗಬೇಕಾದರೆ, ಸರ್ವ ಪ್ರಥಮವಾಗಿ ಆಸನ, ಪ್ರಾಣಾಯಾಮಾದಿಗಳ ಮೂಲಕ ದೈಹಿಕ ಕ್ರಿಯೆಗಳ ಮೇಲೆ ಪ್ರಭುತ್ವ ಸ್ಥಾಪಿಸುವುದು ಅವಶ್ಯಕವೆಂದು ಅವರ ಮತ.

ವಸ್ತುಸ್ಥಿತಿಯು ಹೀಗಿರುವಾಗ ನಾವು ಮನಸ್ಸಿಗೆ ಕಿಲುಬು ಹತ್ತಲು ಬಿಡಬಾರದು ಎಂಬುದು ಸ್ಪಷ್ಟವಾಗುವುದು. ದೇಹಾರೋಗ್ಯಕ್ಕಾಗಿ ಸ್ನಾನ ಮಾಡುವಂತೆ, ಒಳ್ಳೆಯ ಮನಸ್ಸು ಪಡೆಯಲು ನಿತ್ಯವೂ ಅದನ್ನು ತಿಕ್ಕಿ ತೊಳೆಯುತ್ತಿರಬೇಕು. ಉತ್ತಮ ವಿಚಾರಗಳಿಂದ ಆರೋಗ್ಯಕರವಾದ ಒಡನಾಟದಿಂದ ಮತ್ತು ಚೆಲುವಾದ ನಡವಳಿಕೆಯಿಂದ ಮನಸ್ಸಿನ ಪೋಷಣೆಯನ್ನು ನಾವು ಮಾಡಿಕೊಳ್ಳಬಲ್ಲೆವು. ಪ್ರವೃತ್ತಿಗಳ ಚಾಂಚಲ್ಯವನ್ನು ದೃಢ ಸಂಕಲ್ಪದಿಂದಲೂ ಉದ್ವೇಗವನ್ನು ಸಂಯಮದಿಂದಲೂ ಕೋಪತಾಪಗಳನ್ನು ಪ್ರೇಮಭಾವದಿಂದಲೂ ಔದಾಸೀನ್ಯವನ್ನು ಕರ್ತವ್ಯಪ್ರೇರಣೆಯಿಂದಲೂ ಗೆಲಿಸಿಕೊಂಡು ಸನ್ಮಾರ್ಗ ಪ್ರವೃತ್ತರಾಗಲು ಅವಕಾಶವಿದೆ. ಗಂಡಾಂತರದಲ್ಲಿ ಕೈಕಾಲು ಬಿಡದೆ, ಸುಖದ ಗಳಿಗೆಯಲ್ಲಿ ಗಗನಕ್ಕೆ ಹಾರದೆ ಪರಿಸ್ಥಿತಿಯನ್ನು ಗಂಭೀರವಾಗಿ ಎದುರಿಸುತ್ತಾ ಕರ್ತವ್ಯ ಕ್ಷೇತ್ರದ ಇತಿಮಿತಿಯೆಡೆಗೆ ತಿರುಗುಡುವುದು ಕ್ಷೇಮ.

ಈ ಸಂದರ್ಭದಲ್ಲಿ ಸೂರ್ಯನಿಗೂ ಭೂಮಿಗೂ ಇರುವ ಚಲನ ಸಂಬಂಧವನ್ನು ಸ್ಮರಿಸಬಹುದು—ಉತ್ತರಕ್ಕೆ ಕರ್ಕಸಂಕ್ರಾಂತಿ ವೃತ್ತದಿಂದಾಚೆ, ದಕ್ಷಿಣಕ್ಕೆ ಮಕರ ಸಂಕ್ರಾಂತಿ ವೃತ್ತದಿಂದಾಚೆ, ಸೂರ್ಯನು ನೆತ್ತಿಯ ಮೇಲೆ ಕಾಣಿಸುವುದೇ ಇಲ್ಲ. ಚಲನ ಮಾರ್ಗದಲ್ಲಿ ಇಷ್ಟು ಅಲ್ಪ ಮಿತಿ ಇಟ್ಟುಕೊಂಡರೂ ಧ್ರುವ ಪ್ರದೇಶಗಳಲ್ಲಿ ಆರು ತಿಂಗಳು ಹಗಲು, ಆರು ತಿಂಗಳು ರಾತ್ರಿ ಎಂಬ ವೈಪರೀತ್ಯಕ್ಕೆ ಎಡೆಯಾಯಿತು. ಹಾಗಾದರೆ ಈ ನಿಯಮವನ್ನು ಮೀರಿ ನಡೆದರೆ,—ಮರ್ಯಾದೆ ತಪ್ಪಿದರೆ ಕತ್ತಲೆಯೇ ಕತ್ತಲಾಗಿ ಪೇಚಿನ ಪ್ರಸಂಗ ಬರುತ್ತಿತ್ತು.

ಆದ ಕಾರಣ—ನಮ್ಮೆಲ್ಲ ಕಾರ್ಯಕಲಾಪಗಳಿಗೂ ಒಂದು ಯೋಗ್ಯ ಮಿತಿ ಹಾಕಿರುವುದು ಅನಿವಾರ್ಯ. ಅದು ತೀರ ಸಂಕುಚಿತವಾಗದಂತೆ, ಇದರ ಸೂಕ್ಷ್ಮತೆಯಲ್ಲಿಯೂ ವಿಶ್ವವ್ಯಾಪಿಯಾದ ಆತ್ಮತತ್ವ ಪ್ರವಾಹಮಾನವಿರುವಂತೆ ಕರ್ತವ್ಯವೆಂದುದಕ್ಕೆ ಅನುಸರಣ ಮಾಡಿರುವರು. ಲೋಕ ವ್ಯಾಪಾರದಲ್ಲಿ ನಮ್ಮ ಪಾಲಿ

Our Pigmy Deposit Scheme

.... brings our bank to your door. You may save as small a sum as annas two. Our collector will call on you every day to receive it.

At the rate of annas two per day you save Rs. [illegible]50 in 7 years because we allow interest at 3 1/8% per annum. At the rate of Re 1/- per day your Savings are Rs 2,800/- in 7 years. At the rate of Rs 10/- it is Rs 28,000/-. Come in to-day and join the band of **Prudent Prosperous Pigmy People.**

The Canara Industrial & Banking Syndicate Ltd.

ESTD: 1925. H. O: UDIPI.

ನ ಕೆಲಸವೇನೆಂಬುದನ್ನು ಕ್ಷಣಕ್ಷಣಕ್ಕೂ ತಿಳಿದುಕೊಂಡು ಆತ್ಮಗ್ಲಾನಿಗೆಡೆದೊರೆಯದಂತೆ, ಮನಃಪೂರ್ವಕವಾಗಿಯೂ ಪ್ರಾಮಾಣಿಕತೆಯಿಂದಲೂ ಸತತ ಕಾರ್ಯಶೀಲರಾಗುವುದು ಕರ್ತವ್ಯನಿರ್ವಹಣೆಯ ರೀತಿ. ಒಳ್ಳೆಯ ಉದ್ದೇಶಕ್ಕಾಗಿ ಒಳ್ಳೆಯ ಮಾರ್ಗವನ್ನು ಅವಲಂಬಿಸಿ, ಒಳ್ಳೆಯ ಕೆಲಸ ಮಾಡುವುದು ಇದರ ನಿಯಮ. ನಮ್ಮ ಅಂತರಾತ್ಮನ ಎಚ್ಚರಿಕೆ ಮಾತನ್ನು ಆದರಿಸಿ, ಪರಿಸ್ಥಿತಿಯನ್ನು ಅನುಸರಿಸಿ ಜಾಣ್ಮೆಯಿಂದ ಹೊಂದಿಕೊಂಡು ಹೋಗುವುದೇ ಸಿದ್ಧಿ. ಕವಿ ಹೇಳಿದಂತೆ—"ಎದೆಯುದನಿ ಧರ್ಮನಿಧಿ; ಕರ್ತವ್ಯ ವದುವೆ ವಿಧಿ" ಎಂಬುದೇ ನಮ್ಮ ಸೂತ್ರವಾಕ್ಯ.

ಇದನ್ನು ನಮ್ಮ ಬದುಕಿನ ಪ್ರತಿಯೊಂದೂ ಅಂಗದಲ್ಲಿ ಆಚರಣೆಗೆ ತರುವುದೂ ಕೈಯದು. ಸ್ವತಂತ್ರ ಭಾರತದ ಸಾರ್ವಭೌಮಾಧಿಕಾರವನ್ನು ನಮ್ಮಲ್ಲಿ ಪ್ರಾಯಪ್ರಬುದ್ಧರಾದವರು ಓಟಿನ ಹಕ್ಕಿನ ಮೂಲಕ ಪಡೆದಿರುವರು. ಸ್ವರಾಜ್ಯ ಸುರಾಜ್ಯವಾಗಬೇಕಾದರೆ, ಹೀಗೆ ಅಧಿಕಾರ ಹೊಂದಿದ ಹದಿನೇಳು ಕೋಟಿ ಭಾರತೀಯರು ಕರ್ತವ್ಯ ನಿರ್ವಹಣೆಯನ್ನು ಚೆನ್ನಾಗಿ ಪೂರೈಸಬೇಕಾಗುವುದು. ಮತದಾನದ ಸಮಯದಲ್ಲಿಯಷ್ಟೆ ಓಟಿನ ಉಪಯೋಗವಾದರೆ—ದೇಶದ ನಾಗರಿಕನೆಂದು ಪ್ರೌಢ ವ್ಯಕ್ತಿ ಉಳಿದ ಪ್ರತಿಕ್ಷಣದಲ್ಲಿ ಮಾಡಬೇಕಾದ ನೂರಾರು ಕೆಲಸಗಳಿವೆ. ರಾಷ್ಟ್ರದ ಸುರಕ್ಷಿತತೆಗಾಗಿಯೂ ಸಾಮಾಜಿಕ ಸುಖಶಾಂತಿಗಾಗಿಯೂ ವೈಯಕ್ತಿಕ ಕಲ್ಯಾಣಕ್ಕಾಗಿಯೂ ಅನುಸರಿಸಬೇಕೆಂದು ವಿಧಿಸಿದ ಕಾಯಿದೆ ಕಾನೂನುಗಳಂತೆ ನಡೆದುಕೊಳ್ಳುವುದೂ ದೇಶೋದ್ಧಾರಕ್ಕೆ ತನ್ನಿಂದ ಸಾಧ್ಯವಿದ್ದ ಎಲ್ಲ ರೀತಿಯಲ್ಲಿ ನೆರವಾಗುವುದೂ ನಾಗರಿಕನ ಗುಣಧರ್ಮ. ಈ ಮೂಲ ಭೂತ ತತ್ವವನ್ನು ತಿಳಿದುಕೊಳ್ಳಲು ನಾವು ಅಸಮರ್ಥರಾದೆವೆಂದರೆ—ಸ್ವರಾಜ್ಯದ ಸ್ವರೂಪವನ್ನೆ ನಾವು ಅರಿತಿಲ್ಲವೆಂದು ಸಿದ್ಧವಾಗುವುದು. ಆಗ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಹಳ ಬೇಗನೇ ಬಂತೋ—ಎಂದು ಚಿಂತಿಸಲು ಅವಕಾಶವಾಗುತ್ತದೆ.

ಆದರೆ ಹೀಗೆ ಕೊರಗುವ ಕಾರಣವಿಲ್ಲ- ಲಂಚ ರುಷುವತ್ತುಗಳೂ ಕಳ್ಳಪೇಟೆ—ಮೋಸಗಾರಿಕೆಗಳೂ ಸಾರ್ವಜನಿಕ ವ್ಯವಹಾರದಲ್ಲಿ ಕೇಳಿಬರುತ್ತಿವೆ, ನಿಜ. ಈ ಪರಿಸ್ಥಿತಿ ಇನ್ನು ಹೆಚ್ಚು ಸಮಯ ಮುಂದುವರಿಯಲಾರದು. ಜನ ನಾವೆಣಿಸಿದಷ್ಟು ಮೂರ್ಖರಿಲ್ಲ—ಅಥವಾ ನಿರ್ದಯರೂ ಇರುವುದಿಲ್ಲ. ಕ್ಷಣಿಕ ಸುಖಕ್ಕಾಗಿ ಬಾಯಿಬಿಟ್ಟು ಕರ್ತವ್ಯ ಪರಾಙ್ಮುಖರಾದುದರಿಂದಲೇ ಇಷ್ಟೆಲ್ಲಾ ಕಷ್ಟ—ನಷ್ಟಕ್ಕೆ ಭಾಗಿಗಳಾಗಬೇಕಾಯಿತೆಂಬುದನ್ನು ಎಲ್ಲರೂ ಈಗ ಮನವರಿಕೆ ಮಾಡಿಕೊಳ್ಳುತ್ತಿರುವರು. ಇದನ್ನು ಶುಭಚಿಹ್ನವೆಂದು ಆದರಿಸೋಣ. ದೇಶದ ವಿಷಮ ಪರಿಸ್ಥಿತಿಯಲ್ಲಿ ಧೈರ್ಯದಿಂದ ಮುನ್ನಡೆಯುವುದೇ ನಾಗರಿಕನ ಆದ್ಯ ಕರ್ತವ್ಯ. ಇದರಿಂದ ಬಿಡುಗಡೆ ಹೊಂದಲು ಓಡಿಹೋಗುವವರು ಮುಂದಕ್ಕೆ ಆತ್ಮಗ್ಲಾನಿಗೂ ಪಶ್ಚಾತ್ತಾಪಕ್ಕೂ ಗುರಿಯಾಗುವುದು ನಿಶ್ಚಯ.

— ಓಂತತ್ಸತ್.

ಮರುಭೂಮಿಯ ಮೇಲೆ ಬೆಳೆ ಬೆಳೆಯುವ ಸಾಹಸ

ಸುಂದರ ಬನವಾಗಿ ರೂಪಾಂತರಿಸುವ ಸವಿಗನಸು

ಮರುಭೂಮಿಯ ಕುರಿತು ತುಂಬ ಬೇಸರಪಡುವುದೇ ರೂಢಿಯಾಗಿದೆ. ಮನುಷ್ಯ ಜೀವನವನ್ನು ಸುಖಮಯವಾಗಿಸಲು ಏನೊಂದೂ ಸೌಕರ್ಯಕ್ಕೆ ಎಡೆಇಲ್ಲದ ಬರಡು ನಾಡಾಗಿ ಮರುಭೂಮಿ ಈಗಲೂ ಉಳಿದಿದೆ. ಆದರೆ, ವಿಜ್ಞಾನಿಗಳೊಡನೆ ಕೇಳಿದರೆ—ಅವರು ಚಮತ್ಕಾರದ ಸುದ್ದಿ ತಿಳಿಸುತ್ತಾರೆ: ಇನ್ನೊಂದು ನೂರು ವರ್ಷಗಳಲ್ಲಿ ಗಾಳಿ ಸೇವನೆಗೋ ಹವೆ ಬದಲಾವಣೆಗೋ ಸಿಮ್ಲಾ, ಕಾಶ್ಮೀರ ಅಥವಾ ಸ್ವಿಜರ್‌ಲೇಂಡುಗಳಿಗೆ ಹೋಗುವುದಿಲ್ಲ; ಸಹಾರಾ ಅಥವಾ ರಾಜಸ್ಥಾನದ ಈಗಿನ ಮರುಭೂಮಿಯೇ ನಮ್ಮ ಆಗಿನ ವಿಹಾರಸ್ಥಾನ!

ಬೆಳೆಯುವ ರೋಗ

ಯೋಜನಾ ಆಯೋಗದ ವರದಿಯಂತೆ, ರಾಜಸ್ಥಾನದ ಥಾರ್ ಮರುಭೂಮಿಯು ಫಿರೋಜಪುರ, ಪಾಟಿಯಾಲಾದಿಂದ ಆಗ್ರಾಕ್ಕಾಗಿ ಅಲೀಗಢ ಮತ್ತು ಕಾಸಗಂಜದ ಕಡೆಗೆ ಭರದಿಂದ ವಿಸ್ತರಿಸುತ್ತದೆ. ಕಳೆದ ೫೦ ವರ್ಷಗಳಿಂದ ಪ್ರತಿವರ್ಷ ಅರ್ಧ ಮೈಲಿ ವೇಗದಲ್ಲಿ ಈ ಮರುಭೂಮಿಯು ಭಾರತದ ಫಲವತ್ತಾದ ಕ್ಷೇತ್ರಗಳನ್ನು ನುಂಗುತ್ತ ಮುಂಬರುತ್ತಿದೆ. ಈ ರೀತಿ ವರ್ಷಂಪ್ರತಿ ೫೦ ಚದರ ಮೈಲಿನಷ್ಟು ಬಯಲು ಭೂಮಿ ಉಸುಬಿನ ಬೀಡಾಗುತ್ತದೆ. ಇದನ್ನು ಸಫಲತಾ ಪೂರ್ವಕ ತಡೆಗಟ್ಟಲು ಉಪಾಯ ಕೈಗೊಳ್ಳದಿದ್ದರೆ, ಉತ್ತರ ಪ್ರದೇಶದ ಎಲ್ಲ ಫಲವತ್ತಾದ ಕ್ಷೇತ್ರವೂ ಮರುಭೂಮಿಯಾಗಿ ಮಾರ್ಪಡುವ ಭಯವಿದೆ.

ಇಂದಿನ ವರೆಗೆ, ಮರುಭೂಮಿಯು ಮನುಷ್ಯ ನಿರ್ಮಿತವಾದುದಲ್ಲವೆಂಬ, ಮತ್ತು ಈ ಕಾರಣದಿಂದ, ಮರುಭೂಮಿಯ ಸ್ವರೂಪವನ್ನು ಪರಿವರ್ತಿಸುವುದೂ ಅಸಾಧ್ಯವೆಂಬ-ಕಲ್ಪನೆ ಇತ್ತು. ಆದರೆ ವಿಜ್ಞಾನಿಗಳು ಆಫ್ರಿಕಾದ ಸಹಾರಾ ಮರುಭೂಮಿಯಲ್ಲಿ ಮಾಡಿದ ಪ್ರಯೋಗಗಳು ನಮ್ಮ ವಿಚಾರಗಳನ್ನು ಬದಲಾಯಿಸಿವೆಯಲ್ಲದೆ-ಆಶಾತೀತ ಫಲವನ್ನೂ ಕೊಟ್ಟಿವೆ.

ಮನುಷ್ಯನೇ ದೋಷಿ

ಭೌಗೋಲಿಕ ಕಾರಣಗಳಿಂದಾಗಿ ಮರುಭೂಮಿ ಉಂಟಾಗುವುದೇನೋ ನಿಜ. ಆದರೆ, ಮನುಷ್ಯನ ಕೈವಾಡವೇ ಮರುಭೂಮಿಯ ನಿರ್ಮಾಣದಲ್ಲಿ ಹೆಚ್ಚೆಂದು ವಿಜ್ಞಾನಿಗಳು ನಿಷ್ಠುರ ರೀತಿಯಿಂದ ತಿಳಿಸುತ್ತಾರೆ. ಈಗಲೂ ಮರುಭೂಮಿಯಲ್ಲಿ ಅಲ್ಲಿ ಇಲ್ಲಿ ಕಂಡುಬರುವ ಕುರುಚಲು ಗಿಡಗಳನ್ನು ಗಂಡಸರು ಬೇಕೆಂತ ಕಡಿದು ಉರಿಸಿ ಬಿಡುತ್ತಾರೆ-ಹೆಂಗಸರು ಒಂಟೆಯ ಮೇಲೋ ಕತ್ತೆಯ ಮೇಲೋ ಕುಳಿತು, ಕಟ್ಟಿಗೆಯನ್ನು ಅರಸುತ್ತಾ ವಾರಗಟ್ಟಳೆ ಕಾಲ ಬಹುದೂರ ಪ್ರಯಾಣಿಸುತ್ತಾರೆ. ಹೀಗೆ ಮನುಷ್ಯನ ಮೂರ್ಖತನದಿಂದ ಮರುಭೂಮಿಯ ಕೀಟಾಣುಗಳನ್ನು ತಡೆಯಬಲ್ಲ ಪೈರುಪಚ್ಚೆಗಳನ್ನು ನಾಶಗೊಳಿಸಲಾಗುತ್ತಿದೆ. ರಾಜಸ್ಥಾನದಲ್ಲಿ ಈ ಮೊದಲು ಹಸುರುಗೊಳಿಸುವ ಉದ್ಯಾನಗಳೂ ವನಪ್ರದೇಶಗಳೂ ಇದ್ದುವು. ಆದರೆ, ಈಗ?

ಲೋಕದ ಒಂದು ಮೂರಾಂಶಭಾಗವನ್ನು ಆವರಿಸಿರುವ ಮರುಭೂಮಿಯನ್ನು ಮನುಷ್ಯನ ಉಪಯೋಗಕ್ಕೆ ಹೇಗೆ ಬಳಸಿಕೊಳ್ಳಬಹುದೆಂಬುದನ್ನು ಸಂಯುಕ್ತ ರಾಷ್ಟ್ರ ಸಂಘದ ಆರ್ಥಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಮಿತಿಯು ವಿಚಾರಿಸುತ್ತಿದೆ. ಅದು ಶ್ರೀ ಕೆಲ್ಲರರ ನೇತೃತ್ವದಲ್ಲಿ ನಡೆಸಿದ ಅನೇಕ ಸಂಶೋಧನೆಗಳು ಉಪಯುಕ್ತವೆನಿಸಿವೆ.

ಕೂಲಂಕಷ ಅಧ್ಯಯನ

ಅಲ್ಜೀರಿಯಾ, ಟ್ಯುನೀಸಿಯಾ, ಟ್ರಿಪೊಲಿಟಾನಿಯಾ, ಸಿರೋನಿಕಾ, ಈಜಿಪ್ತ, ಇರಾನ ಮುಂತಾದೆಡೆ ಮರುಭೂಮಿಯ ಕೂಲಂಕಷ ಅಧ್ಯಯನವನ್ನು ಶ್ರೀ ಕೆಲ್ಲರ್ ನಡೆಸಿದರು. ಈ ಕ್ಷೇತ್ರಗಳಲ್ಲಿ ನೆಲಸಿದ ಜನರು, ದೊರೆಯುವ ಸೌದೆ ಮತ್ತು ಇತರ ಶಕ್ತಿ ಸಲಕರಣೆಗಳು, ಸಾಮಾನ್ಯ ಹವಾಮಾನ, ನೀರು ಲಭಿಸುವ ಸಾಧನಗಳು ಇತ್ಯಾದಿ ಅವರು ವಿಚಾರಿಸಿದರು. ಇವೆಲ್ಲದರ ಮೇಲಿಂದ, ಪ್ರಯತ್ನ ಪೂರ್ವಕವಾಗಿ ದುಡಿದರೆ--ಮರುಭೂಮಿಯ ಮೇಲೂ ಬೆಳೆ ಬೆಳೆಯಲು ಬರುವುದೆಂಬ ಸಾಹಸದ ನಿರ್ಣಯಕ್ಕೆ ಅವರು ಬಂದರು. ಮರುಭೂಮಿಯ ತಳದಲ್ಲಿ ಅಪಾರ ನೀರಿನ ಪ್ರವಾಹವಿದೆ. ಹಾಗೆಯೇ ಮರುಭೂಮಿಯಲ್ಲಿ ಅತ್ಯುತ್ತಮ ಮಣ್ಣು ಕೂಡ ಲಭ್ಯವಿದೆ. ಒಂದೆಡೆಯಲ್ಲಂತೂ--ಮನುಷ್ಯ ಪ್ರಯತ್ನವಿಲ್ಲದೆನೇ ಬೆಳೆದ ಸುಂದರ ತೋಟವು ಅವರ ಕಣ್ಣಿಗೆ ಬಿತ್ತು: ಅದರಲ್ಲಿ ಮರುಭೂಮಿಯ ವೃಕ್ಷಸಂಪತ್ತಲ್ಲದೆ—ಅಂಜೂರವೇ ಮುಂತಾದ ಹಣ್ಣು ಬಿಡುವ ಗಿಡಮರಗಳೂ, ಆಲೂ ಇತ್ಯಾದಿ ಗಡ್ಡೆಗಳೂ ಇದ್ದುವು.

ಮರುಭೂಮಿಯನ್ನು ಕೃಷಿಯೋಗ್ಯ ಮಾಡಬೇಕಾದರೆ— ಬಾವಿಗಳನ್ನು ತೋಡಿ ನೀರೆತ್ತಬೇಕು. ಮರಗಿಡಗಳನ್ನು ಸ್ವಲ್ಪವೂ ನಷ್ಟಗೊಳಿಸಬಾರದು. ಹೆಚ್ಚು ಹೆಚ್ಚು ವೃಕ್ಷಾರೋಪಣವಾಗಬೇಕು. ಉರುವಲಿಗಾಗಿ ಸೌದೆಯನ್ನು ಬೇರಾವರೀತಿಯಿಂದಲಾದರೂ ದೊರಕಿಸಬೇಕು. ಇದ್ದ ನೀರು ಆವಿಯಾಗಿ ಹೋಗುವುದೂ ಉಪ್ಪು ತಯಾರಿಯಾಗುವುದೂ ನಿಲ್ಲಬೇಕು--ಎಂದು ಶ್ರೀ ಕೆಲ್ಲರರ ಅಭಿಪ್ರಾಯ.

ಅದ್ಭುತ ಸಿದ್ಧಿ

ಇದರೊಂದಿಗೆ ಕ್ರಿಲಿಯಂ ಎಂಬ ಹೆಸರಿನ ನವೀನ ರಾಸಾಯನಿಕ ದ್ರವ್ಯದ ನೆರವಿನಿಂದ ಮರುಭೂಮಿಯನ್ನು ಸುಂದರವನವಾಗಿ ರೂಪಾಂತರಿಸುವ ಕಾರ್ಯದಲ್ಲಿ ಹೆಚ್ಚಿನ ಸಾಫಲ್ಯ ಪಡೆಯಬಲ್ಲೆವು. ಏನೇನೂ ಪ್ರಯೋಜನಕ್ಕೆ ಬಾರದ ಬಂಜರು ಪ್ರದೇಶವನ್ನೂ ಕೃಷಿಗೆ ತಕ್ಕುದಾದ ಭೂಮಿಯನ್ನಾಗಿ ಪರಿವರ್ತಿಸುವಲ್ಲಿ ಈ ಹೊಸ ದ್ರವ್ಯ ಅಭೂತಪೂರ್ವ ಸಿದ್ಧಿ ಪಡೆದಿದೆ. ಈ ವರೆಗೆ ವಿಪುಲವಾಗಿ ಬಳಸಲು ಬರುವಷ್ಟು ದೊಡ್ಡ ಪ್ರಮಾಣದಲ್ಲಿ ಕ್ರಿಲಿಯಂ ಉತ್ಪಾದನೆಯಾಗುತ್ತಿಲ್ಲ. ಆದರೂ ಸಂಶೋಧನೆಗಳ ಪರಿಣಾಮದ ನಿರೀಕ್ಷಣೆಯಿಂದ, ಉಪಯೋಗಿಸಿದ ಕೆಲವೇ ತಾಸುಗಳಲ್ಲಿ ಭೂಪೃಷ್ಠದ ಸ್ವರೂಪದಲ್ಲಿ

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs. 10 lacks.
3. Has granted an average dividend of 6% to the Shareholders for the past 20 years.
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates.
6. Grants loans on easy terms to approved parties or on approved securities
7. Does afford full protection and rich return to all your monies.

ADOPT IT AS
"MY BANK"
THE VIJAYA BANK, LIMITED,
H. O., MANGALORE.

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ
ಲೈಫ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಠೇವಣಾತಿ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರೀತ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.

ದಿ. ಬ್ರಾಂಚ್ ಮೆನೇಜರ್;
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ.

ಅದ್ಭುತ ವ್ಯತ್ಯಾಸವಾಗಿ, ಕೃಷಿ ಸಮೃದ್ಧಿಗೆ ಪೋಷಕವಾದ ಭೂಮಿಯುಂಟಾಗುವುದು ತಿಳಿದು ಬಂದಿದೆ.

ಭೂಮಿಯ ಫಲವತ್ತತೆಯನ್ನು ಗೊಬ್ಬರಗಳ ಮೂಲಕವೇ ಹೆಚ್ಚಿಸಲು ಪ್ರಯತ್ನ ನಡೆಯುತ್ತಿದೆ. ಈ ಗೊಬ್ಬರದ ಪ್ರಭಾವವು ಸ್ವಲ್ಪ ಕಾಲದವರೆಗೆ ಮಾತ್ರ ನಿಲ್ಲುವುದು. ಆದರೆ; ಕ್ರಿಲಿಯಂ ಉಪಯೋಗದಿಂದ ಭೂಮಿಯು ಬಹುಕಾಲದವರೆಗೆ ಫಲವತ್ತತೆಯನ್ನು ಕಳೆದುಕೊಳ್ಳುವುದಿಲ್ಲ. ಭೂಮಿಯನ್ನು ಬಂಜರಾಗಿಸುವ ಕೀಟಾಣುಗಳಿಂದ ರಕ್ಷಣೆಯನ್ನು ಕ್ರಿಲಿಯಂ ನೀಡುವುದು. ಒಂದು ರಾತಲು ಕ್ರಿಲಿಯಂ 700 ರಾತಲು ಮಿಶ್ರ ಗೊಬ್ಬರದ ಮತ್ತು ೫೦೦ ರಾತಲು ಕಂಪೋಸ್ಟು ಗೊಬ್ಬರದ ಕೆಲಸ ಮಾಡುತ್ತದೆ. ಕಾರಣ, ಕ್ರಿಲಿಯಂ ಉಪಯೋಗದಿಂದ ಮರುಭೂಮಿಯನ್ನು ಸುಂದರ ಬನವಾಗಿಸುವ ಸಾಹಸ ಸಫಲವಾಗಬಹುದೆಂದು ವಿಜ್ಞಾನಿಗಳು ಪೂರ್ಣ ವಿಶ್ವಾಸವಿಟ್ಟಿದ್ದಾರೆ. ಯುರೋಪು ಅಮೇರಿಕಾಗಳಲ್ಲಿ ಈ ಕುರಿತು ಪ್ರಯೋಗ ಮುನ್ನಡೆಯುತ್ತದೆ. ೧೯೫೩ನೇ ವರ್ಷಾಂತ್ಯದೊಳಗೆ ಕ್ರಿಲಿಯಂ ಉತ್ಪಾದನೆಯನ್ನು ಸಮೃದ್ಧಿಯಾಗಿ ಕೈಗೊಳ್ಳುವ ಹವಣಿಕೆ ನಡೆಯಬಹುದು.

ರೂಪಾಂತರದ ಯೋಜನೆ

ಮರುಭೂಮಿಯ ತಳದಲ್ಲಿರುವ ಅಪಾರ ನೀರಿನ ಪ್ರವಾಹವನ್ನು ಯೋಜನಾಬದ್ಧವಾಗಿ ಉಪಯೋಗಿಸಿಕೊಳ್ಳುವ ಪ್ರಯತ್ನಗಳು ಫಲಪ್ರದವೆನಿಸಿವೆ. ಸಹಾರಾದಲ್ಲಿ ಈಗಾಗಲೇ ಈ ಕ್ರಮಗಳನ್ನು ಕೈಗೊಳ್ಳಲಾಗಿದೆ. ೨೦೦ ಮೈಲು ಉದ್ದವೂ ಆರು ಮೈಲು ಅಗಲವೂ ಆದ ಕ್ಷೇತ್ರದಲ್ಲಿ ನೀರನ್ನು ಎತ್ತಲಾಗಿದ್ದು, ಒಂದುನೂರು ಕೃತಕ ವಸತಿಗಳನ್ನು ನಿರ್ಮಿಸುವ ಯೋಜನೆ ಇದೆ. ಪ್ರತಿಯೊಂದೂ ವಸತಿಯಲ್ಲಿ ಒಂದು ಸಾವಿರ ಜನ ಸುಖದಿಂದ ಇರಬಲ್ಲರು. ರೇಲ್ವೆ ಮೋಟಾರುಗಳ ಮೂಲಕ ಈ ವಸತಿಗಳನ್ನು ಪರಸ್ಪರ ಜೋಡಿಸಲಾಗುವುದು. ಇಸ್ರಾಯೇಲ, ಲಿಬಿಯಾ, ಕೆಲಿಫೋರ್ನಿಯಗಳಲ್ಲಿ ಈ ಕೆಲಸ ತುಂಬ ಆಶಾದಾಯಕ ಫಲನೀಡಿದೆ.

ಇವೆಲ್ಲ ದೇಶಗಳ ಪ್ರಯತ್ನದ ಪರಿಣಾಮವನ್ನು ಲಕ್ಷ್ಯದಲ್ಲಿಟ್ಟುಕೊಂಡು, ಭಾರತ ಸರಕಾರವೂ ಯೋಗ್ಯ ಹೆಜ್ಜೆ ಇಡುವುದೊಳ್ಳೆಯದು. ಮೊದಲೇ ಅನ್ನ ಸಮಸ್ಯೆಯು ಬೃಹದಾಕಾರವಾಗಿರುವಾಗ, ಇದ್ದ ಬಯಲು ಭೂಮಿಯನ್ನು ಬಂಜರಾಗಿಸಿ, ವ್ಯರ್ಥಗೊಳಿಸುವುದು ವಿವೇಕವಲ್ಲ.

ಮರುಭೂಮಿಯು ಮನುಷ್ಯನ ಶತ್ರುವಾಗಿದೆ. ವಿಜ್ಞಾನಿಗಳ ಸಂಶೋಧನಾಸ್ತ್ರದಿಂದ ಮರುಭೂಮಿಯು ಅಸ್ತಿತ್ವವನ್ನು ಕೊನೆಗೊಳಿಸುವುದು ಸಾಧ್ಯ. ಸ್ವಲ್ಪನೇ ಕಾಲಾವಧಿಯಲ್ಲಿ ಎಲ್ಲ ಮರುಭೂಮಿಯೂ ಮನುಷ್ಯ ಪ್ರಯತ್ನದ ಸುಂದರ ಸ್ವಪ್ನವೆಂಬಂತೆ—ಪೈರುಪಚ್ಚೆಗಳಿಂದ ಕಂಗೊಳಿಸುವುದನ್ನು ಕಾಣುವ ಸೌಭಾಗ್ಯ ನಮ್ಮದಾಗಬಹುದು.

ಭೂಮಿಯ ಪರಮಾವಧಿ ಉಪಯೋಗ

ಬೆಳೆಯುತ್ತಿರುವ ಜನಸಂಖ್ಯೆಗೆ ಅನ್ನ ಒದಗಿಸುವ ಪ್ರಯತ್ನ

ವಿಜ್ಞಾನಿಗಳು ಪ್ರಯೋಗಶಾಲೆಗಳಲ್ಲಿ ರಾತ್ರಿಂದಿವ ದುಡಿಯುತ್ತಿರುವರು. ಹೊಸ ಹೊಸ ಸಂಶೋಧನೆಗಳು ಆಗುತ್ತಿವೆ. ಉತ್ಪಾದನೆಯನ್ನು ಹೆಚ್ಚಿಸುವ ಕಲ್ಪನಾತೀತ ಪ್ರಯತ್ನಗಳೂ ನಡೆಯುತ್ತಿವೆ. ಆದರೆ ಬೆಳೆಯುತ್ತಿರುವ ಜನಸಂಖ್ಯೆಗೆ ಅನ್ನವನ್ನು ಒದಗಿಸುವುದು ಕಷ್ಟಸಾಧ್ಯವಾಗಿದೆ. ಜನಸಂಖ್ಯೆ ಅಭಿವೃದ್ಧಿ ಹೊಂದಿದ ಪ್ರಮಾಣದಲ್ಲಿ ಕೃಷಿ ಉತ್ಪಾದನೆಯು ಹೆಚ್ಚುವುದಿಲ್ಲ. ಭೂಮಿ ಸಾಕಷ್ಟಿಲ್ಲದಿರುವುದೇ ಇದಕ್ಕೆ ಕಾರಣ ಎನ್ನೋಣವೇ?—ಎಂದರೆ, ನಮ್ಮ ಅಭಿಪ್ರಾಯವು ತಪ್ಪಾಗುವುದು. ಸಾಕಷ್ಟು ಭೂಮಿ ಇದ್ದರೂ ಉತ್ಪಾದನೆಯನ್ನು ಹೆಚ್ಚು ಪ್ರಮಾಣದಲ್ಲಿ ಪಡೆಯುವ ಕೆಲಸ ಮುಂದುವರಿದಿಲ್ಲ ಎಂಬ ನಿರ್ಣಯಕ್ಕೆ ಇಂದು ಪುಷ್ಟಿ ದೊರೆತಿದೆ.

ಬಗೆಹರಿಯದ ತೊಡಕು

ಲೋಕದ ಜನಸಂಖ್ಯೆಯು ೨೩೫ ಕೋಟಿ. ಪ್ರತಿದಿನಕ್ಕೂ ಇದು ಸುಮಾರು ಅರುವತ್ತು ಸಾವಿರದಷ್ಟು ಹೆಚ್ಚುತ್ತಿದೆ. ಭಾರತದಲ್ಲಿ ನೆಲಸಿರುವ ೩೫,೬೮,೭೯,೩೯೪ ಜನರಲ್ಲಿ ಕೃಷಿಯಿಂದ ಜೀವನಯಾಪನ ಮಾಡುವವರು ೨೪,೯೧,೨೨,೪೦೦ ಮಂದಿ. ಇಷ್ಟು ಜನ ಭೂಮಿಯಲ್ಲಿ ಗೇಯ್ದರೂ ನಮಗೆ ಆಹಾರ ಸಾಕಾಗುವುದಿಲ್ಲ. ಆಹಾರದ ಉತ್ಪಾದನೆಯನ್ನು ಹೆಚ್ಚಿಸುವುದು ಸಾಧ್ಯವಾಗಿದ್ದರೂ, ಜನಸಂಖ್ಯೆಯು ಬೆಳೆಯುತ್ತಿರುವ ದಾಮಾಶಯದಲ್ಲಿ ಈ ಪ್ರಯತ್ನ ಬಲಗೊಂಡಿಲ್ಲ. ಒಂದು ಬೆಳೆ ಬರುವಲ್ಲಿ ಎರಡನ್ನು ಬೆಳೆಸುತ್ತೇವೆ. ಪ್ರತಿ ಎಕರೆಯಲ್ಲಿ ಮೊದಲಿಗಿಂತ ಅಧಿಕ ಉತ್ಪಾದಿಸುತ್ತೇವೆ. ಕೊಳೆ ರೋಗಗಳಿಂದ ಕೃಷಿಯನ್ನು ಹೆಚ್ಚು ಯೋಗ್ಯ ರೀತಿಯಿಂದ ಸಂರಕ್ಷಿಸುತ್ತೇವೆ. ಜಾನುವಾರುಗಳ ಆರೋಗ್ಯ ರಕ್ಷಣೆಯಲ್ಲಿ ದಕ್ಷತೆ ವಹಿಸುತ್ತೇವೆ. ಪೈರು ನಷ್ಟವಾಗದಂತೆ ಹೆಚ್ಚು ಪರಿಶ್ರಮದಿಂದ ಕಾಯುತ್ತೇವೆ— ಆದರೂ ನಮಗೆ ಅನ್ನದ ಸಮಸ್ಯೆ ಬಿಡಿಸುವುದಾಗಿಲ್ಲ.

ಕೃಷಿ ಯೋಗ್ಯ ಕ್ಷೇತ್ರ

ಭೂಪೃಷ್ಠದಲ್ಲಿ ಪ್ರತಿಯೊಬ್ಬನಿಗೂ ಸಮಾನಾಧಿಕಾರವಿದೆ ಎಂದು ತಿಳಿದರೆ ಒಬ್ಬೊಬ್ಬನ ಪಾಲಿಗೂ ಹದಿನಾಲ್ಕು ಎಕರೆ ಜಮೀನು ಸಿಗುವುದು. ಆದರೆ ಭೂವಲಯದ ಸ್ಥಿತಿ ಎಲ್ಲಕಡೆ ಒಂದೇಯಾಗಿಲ್ಲ— ಅದು ಪರ್ವತ ಪ್ರದೇಶಗಳಿಂದ ತುಂಬಿರಬಹುದು. ಕಾಡುಗಳಿಂದ ನಿಬಿಡವಿರಬಹುದು, ಹಿಮದಿಂದ ಮುಚ್ಚಿ ಹೋಗಿರಬಹುದು, ಮರುಭೂಮಿ ಇರಬಹುದು—ಹೀಗೆ ಎಲ್ಲಕಡೆ ಕೃಷಿಯ ಪ್ರಯತ್ನಕ್ಕೆ ಇಂಬು ದೊರೆಯುವುದಿಲ್ಲ. ಅಂಥದರಲ್ಲೂ ಸ್ವಲ್ಪ ಅಧಿಕ ಪರಿಶ್ರಮದಿಂದ ವ್ಯವಸಾಯ ಮಾಡಿದರೆ, ಕೃಷಿ ಯೋಗ್ಯ ಭೂಮಿಯಾಗಿ ಪರಿವರ್ತಿಸಿ, ಆಹಾರ ಧಾನ್ಯ ಬೆಳೆಯಲು ಶಕ್ಯವಾದ ಭೂಮಿ ಪ್ರತಿಯೊಬ್ಬನಿಗೂ ನಾಲ್ಕು ಎಕರೆಯಷ್ಟಿದೆ. ಜಾನುವಾರಗಳಿಗೆ ಬೇಕಾದ ಹುಲ್ಲುಗಾವಲು ಮತ್ತು ಉಪಯುಕ್ತ ಕಚ್ಚಾ ಸರಕುಗಳನ್ನು ನೀಡುವ ಉಷ್ಣವಲಯದ ಗೊಂಡಾರಣ್ಯಗಳು ಈ ಲೆಕ್ಕದಲ್ಲಿ ಸೇರಿವೆ.

ಸೋಜಿಗದ ಸಂಗತಿ

ಸಾಮಾನ್ಯವಾಗಿ ಒಬ್ಬ ಮನುಷ್ಯನ ಜೀವನ ಯಾಪನಕ್ಕೆ ಒಂದು ಎಕರೆ ಭೂಮಿ ಇದ್ದರೆ ಧಾರಾಳವಾಯಿತು. ಅದರಲ್ಲೂ ಉಷ್ಣವಲಯದ ಪ್ರದೇಶಗಳಲ್ಲಿ (ಉದಾ: ಭಾರತ) ಬಹಳ ಹೆಚ್ಚು ಮಳೆ ಬರುವುದರಿಂದ, ಸಸ್ಯದ ಶೀಘ್ರ ಬೆಳವಣಿಗೆಗೆ ಹೆಚ್ಚಿನ ನೆರವು ದೊರೆಯುತ್ತದೆ. ಈ ಕಾರಣದಿಂದ ಒಂದು ವರ್ಷದಲ್ಲಿ ಎರಡು-ಮೂರು ಬಾರಿ ಬೆಳೆ ತೆಗೆಯಲು ನಮಗೆ ಅನುಕೂಲವುಂಟು. ಇದರಿಂದ ಒಂದು ಎಕರೆ ಭೂಮಿಯ ಉತ್ಪನ್ನ ಒಂದು ಕುಟುಂಬದ ಹೊಟ್ಟೆಬಟ್ಟೆಗೆ ಸಾಲುವಷ್ಟಾಗಬಲ್ಲುದು. ಶೀತವಲಯಗಳಲ್ಲಿ ಸಸ್ಯಗಳ ತ್ವರಿತ ಬೆಳವಣಿಗೆಗೆ ತಕ್ಕ ವಾತಾವರಣವಿಲ್ಲದಿರುವುದರಿಂದ ನೈಸರ್ಗಿಕವಾಗಿ ಬೆಳೆ ಹೆಚ್ಚಿಸಲು ಬರುವುದಿಲ್ಲ. ಆದರೂ ಅಲ್ಲಿ ಇಲ್ಲದ ಅನ್ನಾಭಾವ ಉಷ್ಣ ವಲಯದ ದೇಶಗಳಲ್ಲಿ ಕಂಡು ಬರುತ್ತಿರುವುದು ಪರಮಾಶ್ಚರ್ಯ!

ಹೊಸ ಹಂಚಿಕೆ

ಕೃಷಿ ಸಂಬಂಧವಾದ ಅಂಕೆ ಸಂಖ್ಯೆಗಳನ್ನು ತಲೆ ಹಾಕಿ, ತನ್ಮೂಲಕ ದೇಶದ ಉತ್ಪಾದನಾ ಸಮಸ್ಯೆಯ ಸಮಗ್ರ ಸ್ವರೂಪವನ್ನು ತಿಳಿದುಕೊಳ್ಳಲು ಪ್ರತಿಯೊಂದೂ ರಾಷ್ಟ್ರವು ಕ್ರಮಗಳನ್ನು ಕೈಗೊಂಡಿದೆ. ನಮ್ಮ ದೇಶದಲ್ಲಿ ಸಹ ಕೃಷಿ ಸಂಶೋಧನಾ ವಿಭಾಗವು ಸರಕಾರದ ಆಹಾರ ಖಾತೆಯೊಂದಿಗೆ ಸಹಕರಿಸಿ ದುಡಿಯುತ್ತಿದೆ. ಈ ಅಂಕೆ ಸಂಖ್ಯೆಗಳು, ಹೆಚ್ಚಿನ ದೇಶಗಳಲ್ಲಿ "ಕೃಷಿ ಯೋಗ್ಯವಾದ ಬಂಜರು ಭೂಮಿ." ಬಹಳ ಅಧಿಕವಿದೆ ಎಂದು ಸಿದ್ಧ ಮಾಡಿವೆ. ಇದರ ಅರ್ಥವೇನು? ಸಾಕಷ್ಟು ಫಲವತ್ತಾದ ಭೂಮಿ ಇದ್ದರೂ ಅದನ್ನು ಉಪಯೋಗಿಸುವ ಹಂಚಿಕೆ ನಡೆದಿಲ್ಲವೆಂದು ತಾನೆ! ಹಾಗಾದರೆ, ಈ ಭೂಮಿ ಎಲ್ಲಿದೆ? ಅದು ಬಂಜರು ಬೀಳಲು ಏನು ಕಾರಣ? ಯಾವ ಉಪಾಯಗಳಿಂದ ಅದನ್ನು ಗುರುತಿಸಿ, ಹೆಚ್ಚು ಉತ್ಪಾದನೆಯನ್ನು ಪಡೆಯಲು ಪ್ರಯತ್ನಿಸಬಹುದು?—ಎಂಬಿತ್ಯಾದಿ ಪ್ರಶ್ನೆಗಳಿಗೆ ತಕ್ಕ ಸಮಾಧಾನವನ್ನು ಹುಡುಕಬೇಕಾದುದು ಆಹಾರಾಭಾವವನ್ನು ದೂರೀಕರಿಸಲು ಹೆಣಗುವವರ ಪ್ರಥಮ ಕಾರ್ಯ.

ವಿಶ್ವರಾಷ್ಟ್ರಗಳ ಪ್ರಯತ್ನ

ಭೂಮಿಯ ಪರಮಾವಧಿ ಉಪಯೋಗದ ಪರಿಶೀಲನಾ ಕಾರ್ಯವನ್ನು ಜಾಗತಿಕ ಮಟ್ಟದಲ್ಲಿ ನೆರವೇರಿಸಲು ಒಂದು ಸಮಿತಿಯು ಕಂಕಣಬದ್ಧವಾಗಿದೆ. ಪೋರ್ತುಗಾಲಿನ ಲಿಸ್ಬನ ನಗರದಲ್ಲಿ ೧೯೪೯ರಲ್ಲಿ ಸೇರಿದ ಅಂತರಾಷ್ಟ್ರೀಯ ಸಮ್ಮೇಳನದ ಫಲವಾಗಿ ಈ ಸಮಿತಿ ಜನ್ಮವೆತ್ತಿತು. ಸಂಯುಕ್ತ ರಾಷ್ಟ್ರ ಸಂಘದ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಸಹಕಾರದಿಂದ ಈ ಸಮಿತಿಯು ಪ್ರತಿಯೊಂದೂ ರಾಷ್ಟ್ರದ ಭೂವಲಯಗಳ ಪರಿಶೀಲನೆಯನ್ನೂ ಭೂಮಿಯ ಉಪಯೋಗದಲ್ಲಿ ಕಂಡು ಬರುವ ನ್ಯೂನತೆ ಮತ್ತು ತೊಡಕುಗಳ ಪರೀಕ್ಷೆಯನ್ನೂ ನಡೆಸಲು ಉದ್ಯುಕ್ತವಾಗಿದೆ.

ಈ ಕೆಲಸ ಹೇಳಿದಷ್ಟು ಸುಲಭದಲ್ಲಿ ಮಾಡಿ ಮುಗಿಸುವಂಥದಲ್ಲ. ಬ್ರಿಟನು ಮತ್ತಿತರ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಇಂಥ ಪ್ರಯತ್ನಗಳು ಮೊದಲಿನಿಂದಲೂ ನಡೆಯುತ್ತಿದ್ದುವು. ಭಾರತದಲ್ಲಿಯೂ ಯೋಜನಾ ಆಯೋಗ ಮತ್ತು ಬೇರೆ ಕೆಲವು ಸಂಸ್ಥೆಗಳು ಪ್ರಾಯೋಗಿಕ ರೂಪದಿಂದ ಈ ಕಾರ್ಯದಲ್ಲಿ ತೊಡಗಿವೆ. ಸಿಂಹಳ, ಮಲಯಾಗಳಲ್ಲಿ ವಿಶ್ವವಿದ್ಯಾಲಯಗಳು ಇದರಲ್ಲಿ ಆಸಕ್ತಿ ವಹಿಸಿವೆ. ಎಲ್ಲ ರಾಷ್ಟ್ರಗಳೂ ಸ್ವಯಂಪ್ರೇರಣೆಯಿಂದ ಸಹಕರಿಸಿ, ಪ್ರಾಮಾಣಿಕವಾಗಿ ದುಡಿದರೆ, ಈ ಮಹಾಕಾರ್ಯವು ಅತ್ಯುತ್ತಮ ಫಲವನ್ನು ನೀಡಬಹುದು.

ZANDU Mahayogaraja Guggula

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ 3- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.
2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು
4 ಎಲ್ ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಪ್ರತಿನಿಧಿಗಳು ಬೇಕಾಗಿದ್ದಾರೆ, ವ್ಯಾಪಾರ ಶರತ್ತು ವಗೈರೆಗಳಿಗೆ ಬರೆಯಿರಿ.

DAMODAR & CO.,

Nainiappa Naicken Street, Park Town–**MADRAS** 3.

ಅಂತರಂಗದ ಕಥೆ, ಕಾದಂಬರಿ, ನಾಟಕ, ಕವಿತೆ, ಚಿತ್ರ ಪ್ರಬಂಧ ಮೊದಲಾದ ನಾನಾ ಬಗೆಯ 75 ಪುಸ್ತಕಗಳನ್ನು ಒಟ್ಟಿಗೆ ರೂ. 20ಕ್ಕೆ ಕೊಡಲಾಗುವುದು.

ಕೆಟಲಾಗಿಗೆ ಬರೆಯಿರಿ:—ಅಂತರಂಗ ಆಫೀಸು ಉಡುಪಿ, ಅಥವಾ ನವಭಾರತ ಬುಕ್ ಡಿಪೊ, ಉಡುಪಿ

ಆಹಾರ ಧೋರಣೆಯ ಹೊಸ ರೂಪ

ಕ್ರಮಪ್ರಾಪ್ತ ಹೆಜ್ಜೆ

ಕೇಂದ್ರ ಸರಕಾರವು ಈ ವರೆಗೆ ಅನುಸರಿಸಿಕೊಂಡು ಬರುತ್ತಿದ್ದ ಆಹಾರ ಧೋರಣೆ ಈಗ ಗತಿ ಪರಿವರ್ತನೆಯಾಗುವ ಮಟ್ಟಕ್ಕೆ ಬಂದಿದೆ. ಆಹಾರ ಧಾನ್ಯಗಳ ಬೆಲೆಯನ್ನು ಒಂದು ಮಿತಿಯೊಳಗೆ ಇಡಲು ಕೊಡುತ್ತಿದ್ದ ಸಹಾಯಧನವನ್ನು ನಿಲ್ಲಿಸಿದ ಕ್ಷಣದಿಂದ ಈ ಕುರಿತು ಉದ್ವೇಗ ಹುಟ್ಟಿಕೊಂಡಿದೆ. ೧೯೫೨-೫೩ನೇ ವರ್ಷದ ಸಾಮಾನ್ಯ ಮುಂಗಡಪತ್ರದಲ್ಲಿ ಆಹಾರ ಸಹಾಯಧನಕ್ಕೆ ಪುನರವಕಾಶವೀಯುವ ಲಕ್ಷಣ ಕಾಣದಿರುವುದನ್ನು ಸದಸ್ಯರು ಟೀಕಿಸಿದರೂ, ಸರಕಾರ ಈ ಕುರಿತು ಏನೂ ಮಾಡುವಂತಿಲ್ಲ ಎಂಬ ಸ್ಪಷ್ಟ ಪ್ರತ್ಯುತ್ತರ ಬಂದಿದೆ. ಕೆಲವು ಸದಸ್ಯರು ರಾಜ್ಯ ಸರಕಾರಗಳು ಆಹಾರ ಧಾನ್ಯದ ಸಂಗ್ರಹವನ್ನು ತಮ್ಮ ಸ್ವಂತ ಪ್ರಯತ್ನದಿಂದ ಹೆಚ್ಚಿಸಿಕೊಳ್ಳಲಿಕ್ಕೂ ಯೋಗ್ಯವಾದ ಎತ್ತುವಳಿ ಕ್ರಮವನ್ನು ಅನುಸರಿಸಿ ಸ್ವಯಂಪೂರ್ಣತೆಯನ್ನು ಸಾಧಿಸಲಿಕ್ಕೂ ಇದರಿಂದ ಅನುವಾಯಿತು ಎಂಬ ಅಭಿಪ್ರಾಯ ಪಟ್ಟಿದ್ದಾರೆ.

ಅರ್ಥಸಚಿವ ಶ್ರೀ ದೇಶಮುಖರು ಕೂಡ ಇದೇ ಮಾತನ್ನು ಎತ್ತಿಹಿಡಿದು ಕೇಂದ್ರ ಸರಕಾರದ ಆಹಾರ ಧೋರಣೆಯ ಪ್ರಕಾಶ ಬೀರಿದವರು—ಆಹಾರ ಧಾನ್ಯಗಳಿಗೆ ಸಹಾಯಧನವನ್ನು ಕೊಡಲು ನೋಡುವುದಕ್ಕಿಂತ ದೇಶದೊಳಗಿನ ಧಾನ್ಯೋತ್ಪಾದನೆಯಿಂದಲೇ ಹೆಚ್ಚು ಎತ್ತುವಳಿಯನ್ನು ಕೈಗೊಳ್ಳಲು ತಕ್ಕ ಹೆಜ್ಜೆ ಇಡುವುದು ಕ್ರಮಪ್ರಾಪ್ತವೆಂಬುದಾಗಿ ಸರಕಾರವು ಭಾವಿಸಿದೆ. ಹೊರಗಿನಿಂದ ಆಹಾರ ಧಾನ್ಯವನ್ನು ತರಿಸಿ, ಅವರ ಬೆಲೆಯನ್ನು ಮಿತಿಯಲ್ಲಿಡಲು ದ್ರಾವಿಡ ಪ್ರಾಣಾಯಾಮ ಮಾಡುವ ಬದಲಿಗೆ ದೇಶದೊಳಗೇ ಸಮರ್ಪಕವಾದ ಎತ್ತುವಳಿ ಕ್ರಮಕ್ಕೆ ಅಂಟಿಕೊಳ್ಳುವುದು ಹಿತಕರ. ಆಹಾರದ ಮಟ್ಟಿಗೆ ವಿದೇಶೀ ನೆರವಿಗಿಂತ ಸ್ವದೇಶೀ ಉತ್ಪಾದನೆಯ ಮೇಲೆ ಭರವಸೆ ಇಡುವುದು ಒಳ್ಳೆಯದೆಂದು ಸರಕಾರದ ಭಾವನೆ ಇರುವುದಾಗಿ ಶ್ರೀ ದೇಶಮುಖರು ತಿಳಿಸಿದರು. ಸಹಾಯ ಧನವನ್ನು ಕೊಡುವ ಪರಿಪಾಟಿಯಿಂದ ವೆಚ್ಚವು ಮಿತಿಮೀರಿ ಬೆಳೆಯಿತು ಮತ್ತು ರಾಜ್ಯಸರಕಾರಗಳ ಎತ್ತುವಳಿ ಕ್ರಮದಲ್ಲಿ ಆಲಸ್ಯ ತಲೆದೋರಿತು. ಅಧಿಕ ಆಹಾರೋತ್ಪಾದನೆಯ ಚಳವಳಿಯು ಅಶಕ್ತವೆಂದು ಸಿದ್ಧವಾಯಿತು. ಈ ಪರಿಸ್ಥಿತಿ ಇನ್ನೂ ಮುಂದುವರಿಯಲಾಗದು.

ಅನ್ನ ಸಮಸ್ಯೆಗೆ ಮದ್ದು

ನೂತನ ಆಹಾರ ಮಂತ್ರಿ ಶ್ರೀ ರಫಿ ಅಹಮ್ಮದ ಕಿಡ್ವಾಯಿ ಈಗ ಆಹಾರ ಸಮಸ್ಯೆಗೆ ಮದ್ದು ತಿಳಿಯಲು ಪರಿಣಾಮಕಾರಿ ಯೋಜನೆಗಳನ್ನು ಆಲೋಚಿಸುತ್ತಿರುವರು. ಆದಷ್ಟು ಹೆಚ್ಚು ಆಹಾರ ಧಾನ್ಯವನ್ನು ದೇಶದೊಳಗಿಂದಲೇ ಸಂಗ್ರಹಿಸಿ, ಅದನ್ನು ಕಡಿಮೆ ಬೆಲೆಯಲ್ಲಿ ಜನರಿಗೆ ಒದಗಿಸುವ ಬಗೆ ಹೇಗೆ ಎಂಬುದನ್ನು ಅವರು ವಿಚಾರಿಸುತ್ತಿದ್ದಾರೆ. ದೇಶದೊಳಗೆ ಆಹಾರಧಾನ್ಯದ ಉಳಿತಾಯ ಪ್ರದೇಶಗಳಿಂದ ಉಳಿದ ಕೆಲವು ಕೊರತೆ ಪ್ರದೇಶಗಳಿಗೆ ಆಹಾರ ಧಾನ್ಯದ ಪೂರೈಕೆ ಯುಕ್ತ ರೂಪದಲ್ಲಿ ಆಗುವಂತೆ ನೋಡುವುದೇ ಮುಂದಿನ ಹೆಜ್ಜೆ. ಹೀಗೆ, ರಾಜ್ಯಗಳ ಜನರಿಗೆ ಅನ್ನ ಪೂರೈಸುವ ಜವಾಬ್ದಾರಿಯನ್ನು ಪರಸ್ಪರ ಹಂಚಿಕೊಳ್ಳುವುದರಿಂದ ಹೆಚ್ಚಿನ ಸತ್ಪರಿಣಾಮವನ್ನು ನಿರೀಕ್ಷಿಸಬಹುದೆಂದೂ ಉಳಿಕೆಯ ಪ್ರದೇಶಗಳಲ್ಲಿ ನಿಯಂತ್ರಣವನ್ನು ತೆಗೆದು ಹಾಕುವುದರಿಂದ ಅಧಿಕ ಪ್ರಯೋಜನವಾದೀತೆಂದೂ ಶ್ರೀ ಕಿಡ್ವಾಯಿಯ ಅಭಿಪ್ರಾಯ.

ಈಚೆಗೆ ಅವರು ಮುಂಬಯಿ ಮತ್ತು ಮದ್ರಾಸುಗಳಿಗೆ ಭೆಟ್ಟಿಕೊಟ್ಟು—ರಾಜ್ಯದ ಆಹಾರ ಮಂತ್ರಿಗಳನ್ನೂ ಮದ್ರಾಸು ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರಿಯನ್ನೂ ಕಂಡು ತಮ್ಮ ಹೊಸವಿಚಾರದ ವಿಮರ್ಶೆ ನಡೆಸಿದರು. ಮದ್ರಾಸು ಸರಕಾರವು ಅಕ್ಕಿ ರೇಶನಿನ ಪ್ರಮಾಣವನ್ನು ಏರಿಸಲು ಬಯಸುವುದಾದರೆ— ತನ್ನ ಸ್ವಂತ ಸಾಮರ್ಥ್ಯದ ಮೇಲೆ ಹಾಗೆ ಮಾಡುವುದಕ್ಕೆ ಕೇಂದ್ರದ ಆಕ್ಷೇಪವಿಲ್ಲ—ಎಂದವರು ಸಾರಿದರು. ಆದರೆ ಕೇಂದ್ರವು ಅಕ್ಕಿಯನ್ನು ಎಲ್ಲ ರಾಜ್ಯಗಳಿಗೂ ಹಂಚುವ ಧೋರಣೆಯನ್ನು ಬಿಟ್ಟುಕೊಟ್ಟಿಲ್ಲವೆಂದೂ ಆ ಕಾರಣದಿಂದ ಗೋಧಿಯ ಉಪಯೋಗವನ್ನು ಮದ್ರಾಸು ರಾಜ್ಯದಲ್ಲಿ ಕಡಿಮೆ ಮಾಡಲು ಹವಣಿಸುವುದು ಅಸಾಧ್ಯವೆಂದೂ ಅವರು ಹೇಳಿದರು. [illegible]ವರ್ಗದಿಂದ ಅಕ್ಕಿಯನ್ನು ಬಹಿರಂಗವಾಗಿ ಎಲ್ಲಾ ಹಾಕುವ ಪರಿಪಾಟಿಯಿದೆ—ಯಾರೂ ಅದನ್ನು ವಹಿಸಿಕೊಳ್ಳಬಲ್ಲರು. ಆದರೆ, ಹಾಗೆ ಕೊಂಡುಕೊಂಡ ಅಕ್ಕಿಯ ಬೆಲೆ ಸರಕಾರದ ನಿಯಂತ್ರಿತ ದರಕ್ಕಿಂತ ಕಡಿಮೆ ಇರುವುದು ಮಾತ್ರ ಹೇಗೋ. ಒಂದುವೇಳೆ ಅಗ್ಗದರದಲ್ಲಿ ಹೀಗೆ ಅಕ್ಕಿ ತರಿಸಿ ಪೂರೈಸುವುದು ಸಾಧ್ಯವಾದರೆ—ಅದನ್ನು ತರಿಸಲು ರಾಜ್ಯಸರಕಾರಗಳ ಒಪ್ಪಿಗೆ ಇದ್ದರೆ— ಖಾಸಗಿ ಜನರಿಗೆ ಕೇಂದ್ರವು ಅಧಿಕಾರವೀಯಲು ಹಿಂಜರಿಯದು.

ಮದ್ರಾಸು ಸರಕಾರವು ಗೋಧಿಯ ಮೇಲಿನ ನಿಯಂತ್ರಣವನ್ನು ತೆಗೆದುಹಾಕಬೇಕೆಂದು ವಿಚಾರಿಸುತ್ತಿದೆ. ಗೋಧಿಯ ಉಪಯೋಗವು ಬಹಳ ಕಡಿಮೆ ಇರುವುದೇ ಇದಕ್ಕೆ ಕಾರಣ. ಮುಕ್ತ ಪೇಟೆಯಲ್ಲಿ ಅಗ್ಗ ದರದಲ್ಲಿ ಗೋಧಿ ಸಿಗುವುದಾದರೆ ಅದರ ಬಳಕೆ ಹೆಚ್ಚಾದೀತೆಂದು ಸರಕಾರದ ಯೋಚನೆ. ಶ್ರೀ ಕಿಡ್ವಾಯಿ ಈ ಕುರಿತು ಅಭಿಪ್ರಾಯ ವ್ಯಕ್ತಪಡಿಸುತ್ತಾ ಇದರಿಂದ ಉಂಟಾಗುವ ಹಣ ನಷ್ಟಕ್ಕೆ ರಾಜ್ಯ ಸರಕಾರವೇ ಹೊಲುಕೊಡಬೇಕಾಗುವುದು ಎಂದರು. ಗೋಧಿಯ ಬಳಕೆ ಕಡಿಮೆಯಾಗಲು ಅದರ ಬೆಲೆ ಹೆಚ್ಚಿರುವುದು ಕಾರಣವಲ್ಲವೆಂದೂ—ಕಾಳ ಸಂತೆಯಲ್ಲಿ ಕಡಿಮೆ ಬೆಲೆಗೆ ಅಕ್ಕಿ ದೊರೆಯುವುದೇ ಹೇತುವೆಂದೂ ಅವರು ತಿಳಿಸಿದರು. ಎಂಟು ಚಟಾಕು ಅಕ್ಕಿ ತಿನ್ನುವಷ್ಟೇ ಪ್ರಯೋಜನವು ನಾಲ್ಕು ಚಟಾಕು ಗೋಧಿಯಿಂದ ಬರುವುದು.—ಎಂದ ಮೇಲೆ ಅಕ್ಕಿ ದೊರೆಯದಿದ್ದಾಗ ಜನರು ತಾವಾಗಿ ಗೋಧಿಯ ಕಡೆಗೆ ಒಲಿದು ಬರುವರು.

ಕೆಲವು ಸಲಹೆಗಳು

ಕಳೆದ ವಾರ ಮಂಡಿಸಿದ ರೇಲ್ವೆ ಅಂದಾಜು ಆಯವ್ಯಯ ಪಟ್ಟಿ ಮತ್ತು ಸಾಮಾನ್ಯ ಮುಂಗಡ ಪತ್ರದ ಮೇಲೆ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆದುವು. ಸದಸ್ಯರು ಮುಖ್ಯವಾಗಿ ಮೂರನೇ ವರ್ಗದ ಪ್ರಯಾಣಿಕರ ಕಡೆಗೆ ಸರಕಾರವು ಅಲಕ್ಷ್ಯ ತೋರಿಸಿದೆ ಎಂದೂ ರೇಲ್ವೆಗಳ ಪುನರ್ಗಣೀಕರಣದಿಂದ ಹಾನಿಯೇ ಹಾನಿಯಾಗಿದೆ ಎಂದೂ ದೂರಿಕೊಂಡರು. ರೇಲ್ವೆ ಆದಾಯದಲ್ಲಿ ಹತ್ತರಲ್ಲಿ ಒಂಭತ್ತು ಪಾಲು ಮೂರನೇ ವರ್ಗದ ಪ್ರಯಾಣಿಕರಿಂದ ಬರುತ್ತದೆ. ಆದರೆ ಅವರು ಪ್ರಯಾಣಿಸುವ ಕಷ್ಟ—ನಿಷ್ಠುರಗಳನ್ನು ನೋಡಿದರೆ ನಾಚಿಕೆನಿಸುತ್ತದೆ. ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿಕೊಟ್ಟು, ಈ ಕನಿಷ್ಠ ವರ್ಗದ ಪ್ರಯಾಣಿಕರ ಕಷ್ಟಗಳನ್ನು ದೂರೀಕರಿಸಬೇಕು ಎಂದು ಬೇಡಿಕೆ ಮುಂದಿಡಲಾಯಿತು. ರೇಲ್ವೆಗಳಲ್ಲಿ ಹೆಚ್ಚಿನ ಸ್ಥಳಾವಕಾಶವು ಸಿಗಬೇಕೆಂದೂ ಅವಶ್ಯವೆನಿಸಿದರೆ ಮೇಲ್ತರಗತಿಯ ಡಬ್ಬಿಗಳನ್ನು ಮೂರನೇ ವರ್ಗದ ಪ್ರಯಾಣಿಕರಿಗೆ ಒದಗಿಸಲು ಹಿಂಜರಿಯಬಾರದೆಂದೂ ಸೂಚನೆಗಳು ಬಂದುವು. ಮುಂಬಯಿಯ ಹಿಂದಿನ ಮುಖ್ಯ ಮಂತ್ರಿ ಶ್ರೀ ಬಿ. ಜಿ. ಖೇರರು ಮಾತನಾಡುತ್ತಾ—ರೇಲ್ವೆ ಪ್ರಯಾಣಿಕರಲ್ಲಿ ವರ್ಗ ಭೇದ ಮಾಡುವ ಪದ್ಧತಿಯೇ ಹೋಗಬೇಕು ಎಂದು ವಾದಿಸಿದರು. ಇದರಿಂದ ಮೂರನೇ ವರ್ಗವೊಂದೇ ಉಳಿದು—ಅವರ ಹಿತ ಸಂಬಂಧಗಳನ್ನು ವರ್ಧಿಸಲು ಆಸ್ಪದ ದೊರೆಯುವುದೆಂದು ಅವರು ಅಭಿಪ್ರಾಯ ಪಟ್ಟರು.

ರೇಲ್ವೆ ಕೆಲಸಗಾರರ ಯೋಗಕ್ಷೇಮದ ಕುರಿತು ಸಾಕಷ್ಟು ಗಮನ ಕೊಡಲಾಗುತ್ತಿಲ್ಲ. ಸುಮಾರು ಆರು ಲಕ್ಷಕ್ಕೂ ಮಿಕ್ಕಿದ ಜನರಿಗೆ ಮನೆಯಿಲ್ಲ. ಯೋಗ್ಯ ವೈದ್ಯಕೀಯ ಸಹಾಯ ದೊರೆಯುವುದಿಲ್ಲ ಎಂದು ಮುಂತಾದ ತಕರಾರುಗಳು ಚರ್ಚೆಯ ಕಾಲದಲ್ಲಿ ಹೊರ ಹೊರಟುವು. ರೇಲ್ವೆ ಪುನರ್ಗಣೀಕರಣದ ಪರಿಣಾಮವನ್ನು ಪರೀಕ್ಷಿಸಲು ಒಂದು ತಜ್ಞ ಸಮಿತಿಯನ್ನು ನೇಮಿಸಬೇಕೆಂದೂ ರೇಲ್ವೆ ಆಡಳಿತ ಕ್ಷೇತ್ರದಲ್ಲಿ ಈ ದೆಸೆಯಿಂದ ಉಂಟಾಗಿರುವ ಕಾರ್ಯಕ್ಷಮತೆಯ ಹ್ರಾಸವನ್ನು ತಡೆಗಟ್ಟುವುದವಶ್ಯವೆಂದೂ ಕೆಲವು ಸದಸ್ಯರು ಅಭಿಪ್ರಾಯಪಟ್ಟರು. ಅಸಾಮಿನೊಡನೆ ಮತ್ತು ಜಮ್ಮು-ಕಾಶ್ಮೀರಗಳೊಡನೆ ಸುದೃಢ ರೇಲ್ವೆ ಸಂಬಂಧವನ್ನು ಸ್ಥಾಪಿಸುವುದು ಸಂರಕ್ಷಣೆ ಮತ್ತು ಅಭಿವೃದ್ಧಿಯ ದೃಷ್ಟಿಯಿಂದ ಮಹತ್ವವಿದೆ ಎಂಬ ಅಂಶವನ್ನೂ ಬಿಂಬಿಸಲಾಯಿತು.

ಟೀಕೆಗಳಿಗೆ ಸಮಾಧಾನ

ಈ ಟೀಕಾಟೊಕೆಗಳಿಗೆ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರೂ ರೇಲ್ವೆ ಮಂತ್ರಿ ಶ್ರೀ ಲಾಲ ಬಹಾದುರ ಶಾಸ್ತ್ರಿಯವರೂ ಸಮರ್ಪಕವಾದ ಸಮಾಧಾನವನ್ನು ಕೊಟ್ಟರು. ಶ್ರೀ ಅಯ್ಯಂಗಾರರು (ಹಿಂದೆ ರೇಲ್ವೆ ಮಂತ್ರಿಯಾಗಿದ್ದರು) ತಾನು ರೇಲ್ವೆಗಳ ಪುನರ್ಗಣೀಕರಣದಿಂದ ಕಾರ್ಯಕ್ಷಮತೆಗೆ ಕುಂದುಂಟಾಗಿದೆ ಎಂಬ ವಾದವನ್ನು ಒಪ್ಪುವುದಿಲ್ಲವಾಗಿ ನುಡಿದರು. ರೇಲ್ವೆ ಕಾರ್ಯಾಲಯಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಮತ್ತು ಕಾರ್ಯಕ್ಷಮತೆಯನ್ನು ಹೆಚ್ಚಿಸುವುದಕ್ಕಾಗಿ ಈ ಯೋಜನೆಯನ್ನು ಅವಲಂಬಿಸಲಾಯಿತೆಂದೂ, ಇನ್ನು ಮುಂದೆ ಇದರಲ್ಲಿ ಸುಧಾರಣೆಗಳನ್ನು ಮಾಡಬಹುದೇ ಹೊರತು, ಮೂಲಭೂತ ಯೋಜನೆಯನ್ನೆ ತ್ಯಜಿಸುವುದು ಇಷ್ಟವಿಲ್ಲವೆಂದೂ ಹೇಳಿದರು.

The East & West Insurance Co, Ltd,
East & West Bldgs., BOMBAY - 1.

ದಿ ಈಸ್ಟ್ ಎಂಡ್ ವೆಸ್ಟ್
ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಸ್ಥಾಪಿತ] ಈಸ್ಟ್ ಎಂಡ್ ವೆಸ್ಟ್ ಬಿಲ್ಡಿಂಗ್ಸ್, ಬೊಂಬಾಯಿ 1. [1913

ಉದಾರ ಯಾ ರಿಯಾಯತಿ ಶರ್ತಗಳಿರುವ ಪುರಾತನ ಮತ್ತು ಮುಂದುವರಿದ ಕಂಪೆನಿಗಳಲ್ಲೊಂದಾಗಿರುತ್ತದೆ.

ವಿಮೆಯ ಸಕಲ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು ಆ ಬಾಬಿನ ಎಲ್ಲಾ ಕೆಲಸಗಳಲ್ಲಿ ಭಾಗಿಯಾಗಿ ಸಹಕರಿಸಿ ಸಲಹೆಗಳನ್ನೀಯುತ್ತಾ ಜನಸೇವೆಗೈಯುವುದೇ ನಮ್ಮ ಧ್ಯೇಯ

ನಮ್ಮ ಚೀಫ್ ಏಜನ್ಸಿ ವಿಸ್ತೀರ್ಣದೊಳಗೆ ಪ್ರತೀ ಜಿಲ್ಲೆಗೊಬ್ಬರಂತೆ ಇನ್ಸ್‌ಪೆಕ್ಟರುಗಳೂ, ಸ್ಪೆಶಲ್ ಏಜಂಟರೂ, ಏಜಂಟರೂ ಬೇಕಾಗಿದ್ದಾರೆ. ಹೆಚ್ಚಿನ ವಿವರಕ್ಕೆ ಬರೆಯುವದು.

ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್,
ಚೀಫ್ ಏಜಂಟರು,
ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಮೈಸೂರು ಸ್ಟೇಟ್,
ಪೋಸ್ಟ್ ಶಿರ್ವಾ, ದ. ಕ.

FOR SALE
1) Projector Pathe Baby
2) Films Christus, 3 spools large, 3 small
3) Accumulator Battery car type, 6 volt
4) Battery Charger
5) Hand-worked dynamas, 6 volt
6) Bulbs, accessories and screens
7) Portable type-writer, second-hand, Rs. 110/-

The above whole set is available at K. Rama Nayak Melody House, Near Bus Stand, Hampankatta, Mangalore.

ಟೀಕಾಟೂಕೆಗಳಿಗೆ ಸಮಾಧಾನ

ಮೂರನೇ ವರ್ಗದ ಪ್ರಯಾಣಿಕರ ತೊಂದರೆಗಳನ್ನು ನಿವಾರಿಸಲು ಸರಕಾರವು ಕಂಕಣಬದ್ಧವಾಗಿದೆ. ರೇಲ್ವೆ ಆದಾಯದ ಬಹುಭಾಗವನ್ನು ಪ್ರಯಾಣಿಕರ ಮತ್ತು ರೇಲ್ವೆ ಕೆಲಸಗಾರರ ಯೋಗಕ್ಷೇಮಗಳ ಅಭಿವೃದ್ಧಿಗಾಗಿ ವಿನಿಯೋಗಿಸುವುದು ಸರ್ವಸಮ್ಮತವಾದ ತತ್ವ. ಮೂರನೇ ವರ್ಗಗಳಲ್ಲಿ ಜನದಟ್ಟಣೆ ವಿಶೇಷವಾಗಿ ಕೂಡದಂತೆ—ನಡುನಡುವೆ ಹತ್ತಿರವತ್ತು ಮೈಲುಗಳ ಅಂತರದಲ್ಲಿ ಜನತಾ ರೇಲ್ವೆಯನ್ನು ಓಡಿಸುವ ಮತ್ತು ಹೆಚ್ಚು ಡಬ್ಬಿಗಳನ್ನು ಒದಗಿಸುವ ವಿಚಾರವಿದೆ. ಮೂರನೇ ವರ್ಗದ ಪ್ರಯಾಣಿಕರಿಗೆ ಸಾಧ್ಯವಿದ್ದ ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಡಲು ಸರಕಾರವು ತತ್ಪರವಿದೆ- ಎಂಬ ಭರವಸೆಯನ್ನು ಶ್ರೀ ಶಾಸ್ತ್ರಿ ಕೊಟ್ಟರು. ರೇಲ್ವೆ ನೌಕರರಿಗೆ ಮನೆ ಕಟ್ಟಿಸಿಕೊಡಬೇಕೆಂಬುದಕ್ಕಾಗಿ ಚಿತ್ತರಂಜನದಲ್ಲಿ ಕಟ್ಟಿಸಿರುವ ಗೃಹಗಳನ್ನು ಮಾದರಿಯಾಗಿ ತೆಗೆದುಕೊಳ್ಳುವುದು ಸರಕಾರದ ಇಚ್ಛೆ. ಸುಮಾರು ಒಂದೂವರೆ ಲಕ್ಷ ಮನೆಗಳನ್ನು ಕಟ್ಟಿಸಿ ಕೊಡಲು ಸರಕಾರವು ಉದ್ಯುಕ್ತವಾಗಿದೆ ಎಂದೂ ಅವರು ತಿಳಿಸಿದರು.

ರೇಲ್ವೆ ನೌಕರರ ವೇತನ ಪ್ರಮಾಣದಲ್ಲಿ (ಮುಖ್ಯವಾಗಿ ತುಟ್ಟಿಭತೆಯಲ್ಲಿ) ಹೆಚ್ಚಿಗೆ ಆದಂದಿನಿಂದ ದರಗಳನ್ನು ೧೯೪೮ರಲ್ಲಿ ಪುನರ್ವಿಮರ್ಶಿಸುವುದು ಅಗತ್ಯ ಬಿತ್ತು. ಯಾವ ಕಾರಣಗಳಿಗಾಗಿ ಆಗ ದರ ಏರಿಸಲಾಯಿತೋ ಆ ಪರಿಸ್ಥಿತಿ ಇಂದಿಗೂ ಬದಲಾಗಿಲ್ಲ. ಆದುದರಿಂದ ದರ ಇಳಿಸುವ ಸೂಚನೆಯು ಅವ್ಯವಹಾರ್ಯ. ಅಲ್ಲದೆ ಈಗ ರೇಲ್ವೆ ಪ್ರಯಾಣಿಕರ ಸುಖ ಸೌಲಭ್ಯಗಳನ್ನು, ರೇಲ್ವೆ ಕೆಲಸಗಾರರ ಹಿತಸಂಬಂಧವನ್ನು ರೇಲ್ವೆಗಳ ಅಭಿವೃದ್ಧಿಯನ್ನು ಸಾಧಿಸುವುದು ತೀರ ಅಗತ್ಯವಿದೆ. ಕಾರಣ, ದರ ಇಳಿಸಲು ನೋಡುವುದು ಏನೇನೂ ಚೆನ್ನಾಗದು. ಇನ್ನು ಪುನರ್ಗಠೀಕರಣದಿಂದ ತೊಂದರೆ ಇದೆ ಎಂದು ಹೇಳುವುದು ಸರಿಯಲ್ಲ—ಕಾರ್ಯಾಚರಣೆಯಲ್ಲಿ ಕಂಡು ಬರುವ ವಿಘ್ನಗಳ ಪರಿಹಾರಕ್ಕಾಗಿ ಯುಕ್ತಿ ಸಬಹುದೇ ಹೊರತು ಗುಣಾವಗುಣಗಳ ಸಂಪೂರ್ಣ ವಿಮರ್ಶೆ ಮಾಡದೆ ಯೋಜನೆಯನ್ನು ತಳ್ಳಿ ಹಾಕುವಂತಿಲ್ಲ ಎಂಬುದಾಗಿ ಶ್ರೀ ಶಾಸ್ತ್ರಿ ಸಮಾಧಾನ ಹೇಳಿದರು.

ಸಂರಕ್ಷಣಾ ವೆಚ್ಚ

ಸಾಮಾನ್ಯ ಮುಂಗಡ ಪತ್ರದ ಚರ್ಚೆಯು ರಾಜ್ಯ ಪರಿಷತ್ತಿನಲ್ಲಿ ತೊಡಗಿದಾಗ ಸಂರಕ್ಷಣಾ ವೆಚ್ಚವನ್ನು ಬಹಳ ಕಡಿಮೆ ಮಾಡಬೇಕೆಂದು ಸೂಚನೆ ಬಂತು. ಹಿಂದೆ ನ್ಯಾಯಾಂಗ ಸಚಿವರಾಗಿದ್ದ ಅಂಬೇಡ್ಕರರು ಈ ವಿಷಯದಲ್ಲಿ ಬಲವಾದ ಪ್ರತಿಪಾದವನ್ನು ಹೂಡಿದರು. ಕಾಶ್ಮೀರ ಸಮಸ್ಯೆಯನ್ನು ಬೇಗನೇ ಬಗೆಹರಿಸುವುದು ಸಾಧ್ಯವಾದರೆ, ಈಗ ಅಲ್ಲಿ ಮಿಲಿಟರಿಯನ್ನು ಇಡುವ ಬಗ್ಗೆ ವ್ಯಯವಾಗುವ ಹಲಕೋಟಿ ರೂಪಾಯಿ ರಾಷ್ಟ್ರಾಭಿವೃದ್ಧಿ ಕಾರ್ಯಗಳಿಗೆ ವಿನಿಯೋಗವಾಗಲು ಅನುಕೂಲ ಎಂದವರು ಹೇಳಿದರು. ವಿರೋಧಿ ಗುಂಪಿನ ಸದಸ್ಯರು ಸಂರಕ್ಷಣ ವೆಚ್ಚವನ್ನು ಒಟ್ಟು ಆದಾಯದ ಒಂದು ಮೂರಾಂಶದಷ್ಟಕ್ಕಾದರೂ ಇಳಿಸಬೇಕೆಂದೂ—ಉಳಿದುದರಲ್ಲಿ ಸರಿ ಅರ್ಧವನ್ನು ರಾಷ್ಟ್ರಾಭಿವೃದ್ಧಿ ಯೋಜನೆಗಳಿಗೂ, ಇನ್ನೊಂದರ್ಧವನ್ನು ಸಾಮಾಜಿಕ ಕಲ್ಯಾಣ ಕಾರ್ಯಗಳಿಗೂ ವ್ಯಯಿಸಬೇಕು ಎಂದರು. ಆಹಾರ ಸಹಾಯ ಧನವನ್ನು ನಿಲ್ಲಿಸಿದ್ದು ನಿರ್ದಯ ಕಾರ್ಯವೆಂದೂ ನದೀಕೊಳ್ಳದ ಯೋಜನೆಗಳಲ್ಲಿ ಎಷ್ಟೋ ಹಣವು ದುರ್ವ್ಯಯವಾಗುತ್ತಿದೆ ಎಂದೂ ಸರಕಾರವನ್ನು ಟೀಕಿಸಲಾಯಿತು. ವಿದ್ಯಾರ್ಥಿಗಳಿಗೆ ನಾಗರಿಕ ಶಿಕ್ಷಣವನ್ನು ಕೊಟ್ಟು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಶಾಂತಿಪಥಗಳನ್ನು ಸ್ಥಾಪಿಸಿ ರಾಷ್ಟ್ರದ ಅಂತಃ ಶಕ್ತಿಯನ್ನು ಹೆಚ್ಚಿಸುವುದರ ಕಡೆಗೆ ಮುಂಗಡಪತ್ರದಲ್ಲಿ ಹೆಚ್ಚು ಅವಕಾಶವೀಡುವುದು ಅಪೇಕ್ಷಣೀಯವೆಂದು ಡಾ| ಜೆ. ಎಂ. ಕುಮಾರಪ್ಪ, ಕಾಕಾಕಾಲೇಲಕರರಂಥವರು ಸೂಚಿಸಿದರು. ಪಂಡಿತ ಹೃದಯನಾಥ ಕುಂಝ್ರುರೂ ಸಂರಕ್ಷಣ ವ್ಯವಸ್ಥೆಯಲ್ಲಿ ಹೆಚ್ಚು ಸಮರ್ಪಕತೆ ಕಂಡುಬರಬೇಕೆಂದೂ ನಮ್ಮ ಸೈನ್ಯವು ಬಲಿಷ್ಠವಿರುವಂತೆ ನೋಡಿಕೊಳ್ಳಬೇಕೆಂದೂ ಕೇಳಿಕೊಂಡರು.

ಸಂರಕ್ಷಣ ವೆಚ್ಚವನ್ನು ಇಳಿಸಬೇಕೆಂಬ ಸೂಚನೆಯು ರಾಷ್ಟ್ರ ಸ್ವಾತಂತ್ರ್ಯ ರಕ್ಷಣೆಯ ದೃಷ್ಟಿಯಿಂದ ಗಂಡಾಂತರ ಪ್ರಾಯವೆಂಬುದಾಗಿ ಸಂರಕ್ಷಣಾ ಮಂತ್ರಿ ಶ್ರೀ ಅಯ್ಯಂಗಾರರು ಎಚ್ಚರಿಸಿದರು. ಎಲ್ಲ ರಾಷ್ಟ್ರಗಳೊಡನೆ ಮೈತ್ರಿಯ ಧೋರಣವಿದ್ದರೂ ಒಕ್ಕಟ್ಟಿನ ಪರಿಸ್ಥಿತಿಯಲ್ಲಿ ರಾಷ್ಟ್ರದ ಸಂರಕ್ಷಣೆಯನ್ನು ಮಾಡಿಕೊಳ್ಳಲು ಸಮರ್ಥವಾದ ಸೈನ್ಯವನ್ನು ಕಾಯ್ದಿಡುವುದು ಪ್ರಥಮ ಕರ್ತವ್ಯವಾಗಿದೆ. ನಮ್ಮ ಸೈನ್ಯ ಬಲವು ಹೆಚ್ಚುವುದರ ಜೊತೆಗೆ—ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಸಂಗ್ರಹಣೆ ನಡೆಯಬೇಕಾದುದೂ ಅಗತ್ಯವಿದೆ. ಭಾರತದಲ್ಲಿಯೇ ಇಂಥ ಶಸ್ತ್ರಗಳನ್ನು ಉತ್ಪಾದಿಸಬೇಕೆಂಬುದು ಸರಕಾರದ ಮನೋಬಯಕೆ. ನಾಗರಿಕರಿಗೆ ಸೈನಿಕ ತರಬೇತಿ ಕೊಡುವುದು ಒತ್ತಾಯದಿಂದಾಗುವ ಕೆಲಸವಲ್ಲ. ಮಕ್ಕಳಿಗೆ ಶಾಲೆಯಲ್ಲಿ ನೀಡಲಾಗುವ ಶಾರೀರಿಕ ಶಿಕ್ಷಣವನ್ನೆ ಸೈನಿಕ ಶಿಕ್ಷಣದ ಶಿಸ್ತು-ಸಂಯಮಗಳ ಮಟ್ಟಕ್ಕೆ ಪರಿವರ್ತಿಸುವುದರಿಂದ ಹಿತವಾಗುವುದಾದರೆ- ಅದನ್ನು ರಾಜ್ಯ ಸರಕಾರಗಳು ಆಲೋಚಿಸುವುದು ಒಳ್ಳೆಯದು. ಈ ಕುರಿತು ಈಗಾಗಲೇ ಸೂಚನೆಯನ್ನು ಕೇಂದ್ರ ಸರಕಾರವು ಕಳಿಸಿದೆ ಎಂದು ಶ್ರೀ ಅಯ್ಯಂಗಾರರು ಹೇಳಿದರು.

ಅತೃಪ್ತ ಭಾವನೆ

ದಕ್ಷಿಣ ಕನ್ನಡದ ಪ್ರತಿನಿಧಿ ಶ್ರೀ ಬಿ. ಶಿವರಾಯರು ಲೋಕ ಸಭೆಯಲ್ಲಿ ಮುಂಗಡ ಪತ್ರದ ಚರ್ಚೆಯನ್ನು ಆರಂಭಿಸುತ್ತಾ ಭಾರತದ ವಿಶಾಲ ಕರಾವಳಿ ಪ್ರದೇಶಗಳ ಸುರಕ್ಷಿತತೆಗೆ ಹೆಚ್ಚು ಗಮನ ಕೊಡಬೇಕೆಂದರು. ಶ್ರೀ ಎ. ಕೆ. ಗೋಪಾಲನ್ನರು ದರಗಳ ಇಳಿತದಿಂದ ಜನರು ಸುಖಿಗಳಾಗಿರುವರೆಂಬುದು ತಪ್ಪು. ಹೆಚ್ಚಿನವರು ನಿರುದ್ಯೋಗದಿಂದ ಬಳಲುತ್ತಿರುವರು. ಉತ್ಪಾದನೆಯು ಮಟ್ಟವು ಕುಸಿದುದೇ ಇದಕ್ಕೆ ಕಾರಣ. ನಮ್ಮ ಜನರಲ್ಲಿ ಕೊಳ್ಳುವ ಶಕ್ತಿಯು ಉಳಿದಿಲ್ಲ. ಭಾರತವು ರಫ್ತಿನ ವ್ಯಾಪಾರ ಮಾಡಿದರೆ ಗಂಡಾಂತರ ತಪ್ಪಿದ್ದಲ್ಲ. ಇಂಥ ವಿಷಮ ಪರಿಸ್ಥಿತಿಯಲ್ಲಿ ಜನರ ಕೊಳ್ಳುವ ಶಕ್ತಿ ಹೆಚ್ಚಿಸಲು ಅಧಿಕ ಆಹಾರೋತ್ಪಾದನೆಗಾಗಿಯೂ ಉದ್ಯೋಗೀಕರಣ ಮತ್ತು ಭೂ ಸುಧಾರಣೆಗಳನ್ನು ಅನುಸರಿಸಬೇಕು ಎಂದರು. ದೊಡ್ಡ ದೊಡ್ಡ ಯೋಜನೆಗಳು ಸರಕಾರದ ಮುಂದಿದ್ದರೂ ಅವುಗಳಿಗಾಗಿ ಕೇವಲ ಹತ್ತು ಕೋಟಿ ರೂಪಾಯಿ ವ್ಯಯವು ಸಾಲದೆಂದು ಶ್ರೀ ವೇಲಾಯುಧನರು ಹೇಳಿದರು. ಚಿಕ್ಕ ನೀರಾವರಿ ಯೋಜನೆಗಳು, ನದೀ ಕೊಳ್ಳದ ಯೋಜನೆಗಳು ಮುಂತಾದುವು ನಿಜಕ್ಕೂ ಸ್ವಾಗತಾರ್ಹವಿವೆ. ಆದರೂ ಜನತೆ ವಿಶ್ವಾಸವನ್ನು ಪಡೆಯಲಿಕ್ಕಾಗಿ ತಕ್ಕ ಪರಿಹಾರವನ್ನು ಒದಗಿಸುವುದು ಇಷ್ಟವಾಗಿದೆ.

ಅನುಕರಣೀಯ ಆಂದೋಲನ

ಆಹಾರ ಸಮಸ್ಯೆಯ ನಿವಾರಣೆಯಲ್ಲಿ ಭೂಮಿಯ ಪ್ರಶ್ನೆ ಬಹಳ ಪ್ರಾಮುಖ್ಯಸ್ಥಾನವನ್ನು ಪಡೆದಿದೆ. ಪಡುಬಿದ್ದ ಭೂಮಿಯನ್ನೂ, ಬಂಜರು ಪ್ರದೇಶವನ್ನೂ ನೀರಾವರಿ ಮತ್ತು ಯಾಂತ್ರಿಕ ಬೇಸಾಯವೇ ಮುಂತಾದ ಕ್ರಮಗಳಿಂದ ಸಮೃದ್ಧಿಯಾದ ಹೊಲಗಳನ್ನಾಗಿ ಪರಿವರ್ತಿಸುವುದು ನಮ್ಮ ಕರ್ತವ್ಯವಾಗಬೇಕು. ಪಂಚವಾರ್ಷಿಕ ಯೋಜನೆಯನ್ನು ಆಹಾರ ಸ್ವಾವಲಂಬನದ ಸದುದ್ದೇಶದಿಂದಲೇ ರೂಪಿಸಲಾಗಿದೆ. ಆದರೂ ಸರಕಾರದ ಪ್ರಯತ್ನಗಳೊಂದು ಮಿತಿಯಿದೆ ತಾನೆ? ಭೂ ಸಮಸ್ಯೆಯನ್ನು ಉಚಿತರೀತಿಯಲ್ಲಿ ಬಿಡಿಸಿಕೊಳ್ಳಲು ಉಪಾಯಗಳೇನೆಂಬುದನ್ನು ವಿಚಾರಿಸಲಿಕ್ಕೆ ಕಾಂಗ್ರೆಸು ತುಂಬ ಆತುರನಾಗಿದೆ. ಆರ್ಥಿಕ ಪುನರ್ರಚನೆಗೂ ಕೃಷಿ ಕ್ರಮ, ಭೂಸುಧಾರಣೆಗೂ ಕಾಂಗ್ರೆಸು ಸಂಸ್ಥೆ ಮತ್ತು ಸರಕಾರವು ಮುಂದಾಗಬೇಕಾದುದು ನಿರ್ವಿವಾದ ವಿಷಯ. ಭೂಧಾರಣಾ ಪದ್ಧತಿ ಮತ್ತು ಭೂ ಸುಧಾರಣಾ ಯೋಜನೆಗಳ ಕುರಿತು ಕಾಯದೆ ಪಾಸಾಗಿರುವ ಕಡೆ ಅದನ್ನು ವಿಳಂಬವಿಲ್ಲದೆ ಜಾರಿಗೆ ತರುವುದೂ, ಹಾಗೆ ಕಾಯಿದೆ ಇನ್ನೂ ಮಾಡದಿರುವಲ್ಲಿ ಕೂಡಲೇ ತಕ್ಕ ಕ್ರಮ ಕೈಗೊಳ್ಳುವುದೂ ಕಾಂಗ್ರೆಸು ಸರಕಾರದ ಕರ್ತವ್ಯವಾಗಬೇಕೆಂಬ ಮಹತ್ವದ ಸೂಚನೆ ಮುಂಬಂದಿದೆ. ಆಹಾರದ ಉತ್ಪಾದನೆಯನ್ನು ಹೆಚ್ಚಿಸಲು ಶಕ್ಯವಿದ್ದ ಎಲ್ಲ ಪ್ರಯತ್ನಗಳನ್ನು ಮಾಡಿ ನೋಡಬೇಕೆನ್ನುವುದು ನ್ಯಾಯವೆಂದು ಒಪ್ಪಬೇಕು.

ಆಚಾರ್ಯ ವಿನೋಬಾ ಭಾವೆ ಕೈಗೊಂಡಿರುವ ಭೂದಾನ ಯಜ್ಞದ ಆಂದೋಲನವು ನಮ್ಮ ಜನರ ಮಾನಸಿಕ ತ್ರಿಕೋಣದಲ್ಲಿ ಕ್ರಾಂತಿಮಯ ಸುಧಾರಣೆಗೆ ಇಂಬುಕೊಟ್ಟಿದೆ. ಈಚೆಗೆ ವಾಂಚಾಮರಿಯಲ್ಲಿ ಸಮಾಜವಾದಿ ಕಾರ್ಯಕರ್ತರು ಸಭೆ ಸೇರಿದಾಗ— ಈ ಶಾಂತಿಪೂರ್ಣ ಚಳುವಳಿಯನ್ನು ಅವರು ಹೃತ್ಪೂರ್ವಕ ಸ್ವಾಗತಿಸಿದುದಲ್ಲದೆ ತಮ್ಮ ಹಾರ್ದಿಕ ಬೆಂಬಲವಿರುವುದನ್ನೂ ಬಹಿರಂಗಗೊಳಿಸಿದರು. ಶ್ರೀ ಜಯ ಪ್ರಕಾಶ ನಾರಾಯಣರು ಈಗಾಗಲೇ ವಿನೋಬಾ ಭಾವೆಯವರನ್ನು ಕಂಡು ತಮ್ಮ ಪಕ್ಷವು ಯಾವ ರೀತಿಯಿಂದ ಈ ಆಂದೋಲನವನ್ನು ಯಶಸ್ವಿಯಾಗಿಸುವಲ್ಲಿ ಸಹಕರಿಸಬಹುದು ಎಂಬುದನ್ನು ವಿಚಾರಿಸಿದರು.

ಚತುರ್ಥ ವಿಮಾಗಣನೆಯ ಫಲಿತಾಂಶ
(1947ರಿಂದ 1950ರ ವರೆಗೆ)
* * * * * * *
ತಾರೀಕು 31-12-1950ಕ್ಕೆ ನಡೆಸಿದ ವಿಮಾಗಣನೆಯಲ್ಲಿ ಆಜೀವ ಮತ್ತು ಉಂಬಳಿ ವಿಮಾ ಪೋಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ ಅನುಕ್ರಮವಾಗಿ ರೂ. 12/- ಮತ್ತು ರೂ. 9/-ರಂತೆ ಬೋನಸನ್ನು ಘೋಷಿಸಿದೆ.
The Canara Mutual Assurance Co. Ltd.
Head Office: UDIPI, S. INDIA.
ಸ್ಥಾಪನೆಯಿಂದಲೂ ಎಲ್ಲಾ ವರ್ಷಗಳಿಗೂ
ಬೋನಸು ಹಂಚಿದ ಕಂಪೆನಿ.



ರಾಮತೀರ್ಥ
ಬ್ರಾಹ್ಮಿ ತೈಲ
ಸ್ಪೆಶಲ್ ನಂ. ೧ [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0
ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಜಿ. ಐ. ಪಿ.) ಮುಂಬಯಿ, ೧೪

THE CANARA BANKING CORPORATION LIMITED.
ದಿ ಕೆನರಾ ಬೇಂಕಿಂಗ್ ಕೋಪೊರೇಶನ್, ಲಿಮಿಟೆಡ್
ಸ್ಥಾಪನೆ: 1906. : : ಪ್ರಧಾನ ಕಾರ್ಯಾಲಯ: ಉಡುಪಿ, (ದ.ಕ.)
ವಿಶೇಷ ಸವಲತ್ತುಗಳಿದ್ದು, ಸಾಲಿಯಾನ ಶೇಕಡಾ 4 ರಂತೆ ಬಡ್ಡಿ ಗಳಿಸುವ ನಮ್ಮ
"ಪಂಚವಾರ್ಷಿಕ ಸುವರ್ಣ ಠೇವಣಾತಿಗಳ"
ಮೇಲೆ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.
ವಿಶೇಷ ಮಾಹಿತಿಗೆ, ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.
ವಿ. ಆರ್. ಕಾಮತ್, ಬಿ. ಎ; ಎಲ್ ಎಲ್, ಬಿ;
ಜನರಲ್ ಮೆನೇಜರ್.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೫-೬-'೫೨

ವಿನಿಯಂತ್ರಣದ ಲಾಭಹಾನಿ

ಅನ್ನದ ಸಮಸ್ಯೆಯಿಂದ ಕಂಗೆಟ್ಟ ಭಾರತವು ಉಳಿದಾವ ವಿಷಯದಲ್ಲಿಯೂ ಕಷ್ಟ ಅನುಭವಿಸಿಲ್ಲವೇನೋ ಎಂಬಂತಿದೆ. ಪಾಶ್ಚಾತ್ಯ ರಾಷ್ಟ್ರಗಳಿಗೆ ತಿಂದುಣ್ಣಲೂ ವಿಲಾಸ ಜೀವನ ನಡೆಸಲೂ ಬೇಕಾದಷ್ಟು ಸಂಪತ್ತಿನ ಸಮೃದ್ಧಿ ಇದ್ದರೂ ಅದರೊಡನೆಯೇ ಮತ್ತಷ್ಟರ ಬಂದ ಹಾಗೆ ಯುದ್ಧ ಪ್ರವೃತ್ತಿಯೂ ಬಲವಾಗುತ್ತಿದೆ. ಇದರಿಂದ ಎಷ್ಟು ಅನುಕೂಲತೆ ಇದ್ದರೂ ಯುದ್ಧ ವೆಚ್ಚಕ್ಕಾಗಿ ಎಲ್ಲವನ್ನೂ ಬಲಿಗೊಡುವ ವ್ಯರ್ಥ ತ್ಯಾಗಕ್ಕೆ ಅವರು ನಿರುಪಾಯರಾಗಿ ಮುಂದಾಗುತ್ತಾರೆ. ಆದರೆ ಭಾರತಕ್ಕೆ ಯುದ್ಧದ ಪ್ರತ್ಯಕ್ಷ ಗಂಡಾಂತರವನ್ನು ಇದಿರಿಸುವ ಸಂದರ್ಭ ಕಳೆದ ಒಂದು ಶತಕದಿಂದಲೇ ಬರಲಿಲ್ಲ. ಎರಡೆರಡು ಮಹಾಯುದ್ಧಗಳು ಇತ್ತೀಚೆಗೆ ಘಟಿಸಿದರೂ ಭಾರತಕ್ಕೆ ಯುದ್ಧ ಧಾಳಿಯಿಂದ ಜನ ನಷ್ಟವೂ ದ್ರವ್ಯ ಹಾನಿಯೂ ಸೊತ್ತಿನ ನಾಶವೂ ಕಟುವಾದ ಅನುಭವವನ್ನು ತರಲಿಲ್ಲ. ಆ ಮಟ್ಟಿಗೆ ನಾವು ನಿಜವಾಗಿಯೂ ಅದೃಷ್ಟವಂತರು. ಆದರೆ ಇದಾವುದರಿಂದಲೂ ಆಗದೊಂದು ಭಾರೀ ಪತನವು ನಮ್ಮ ವ್ಯಕ್ತಿತ್ವದಲ್ಲಿ ಯುದ್ಧ ಪರಿಣಾಮದಿಂದ ರೂಪುಗೊಂಡಿತು. ನೈತಿಕ ಮಟ್ಟವು ಪಾತಾಳಕ್ಕೆ ಕುಸಿದು ಹೋಗಿದೆ. ಮತ್ತೀಗ ಅದನ್ನು ಎತ್ತರಿಸಲು ಇನ್ನು ಎಷ್ಟು ಬಲವಾದ ಚಳುವಳಿ ನಡೆಸಿದರೂ ಸಾಲದೋ ಎಂಬ ಅಂಜಿಕೆಗೆ ಎಡೆದೊರೆತಿದೆ. ವಿನಿಯಂತ್ರಣದ ಕುರಿತು ದೃಷ್ಟಿ ಹರಿಯಿಸುವಾಗ ವಿವೇಕಿಯಾದವನ ಮನಸ್ಸಿಗೆ ಮೊದಲಾಗಿ ಹೊಳೆಯುವ ವಿಚಾರವೆಂದರೆ ಇದೇ—ಸರಕುಗಳ ಕೊರತೆಯು ಯುದ್ಧದಿಂದ ಕೃತಕವಾಗಿ ನಿರ್ಮಾಣಗೊಂಡಿತು. ದೇಶದಲ್ಲಿ ವಿತರಣೆಯ ವ್ಯವಸ್ಥೆಯಲ್ಲಿ ವೈಪರೀತ್ಯ ಉಂಟಾಯಿತು. ಅಗತ್ಯಬಿದ್ದವರೂ ಅನುಕೂಲವಂತರೂ ಸರಕುಗಳನ್ನು ಪಡೆಯಲು ತಮ್ಮ ಶಕ್ತಿ ಮೀರಿ, ಸರಕಿನ ಯೋಗ್ಯತೆಮೀರಿ ಬೆಲೆ ಕೊಡಲು ಮುಂದಾದರು. ಇದರೊಂದಿಗೆ ಏರಲು ತೊಡಗಿದ ಧಾರಣೆಯು ಇಂದಿನವರೆಗೂ ಏರುತ್ತಲೇ ಇದೆ. ಈಚೆಗೆ ಬೆಲೆ ಇಳಿಕೆಯುಂಟಾಗಿದೆ ಎಂದರೂ, ಅದು ಭರವಸೆಯ ಮಾತಾಗಿ ಕಾಣುವುದಿಲ್ಲ. ಹೀಗೆ ಏರಿದ ಧಾರಣೆಯಿಂದ ಲಾಭ ಬಡುಕತನವೂ ಸಂಗ್ರಹ ಪ್ರವೃತ್ತಿಯೂ ಬೆಳೆದು—ಲಂಚ ಗುಳಿತನ, ಕಳ್ಳಪೇಟೆ, ಮೋಸ ಮತ್ತು ಸುಳ್ಳುಗಾರಿಕೆಗಳ ಪ್ರಾಬಲ್ಯಕ್ಕೆ ಪ್ರೋತ್ಸಾಹ ನೀಡಿದುವು. ಐದಾರು ವರ್ಷಗಳಲ್ಲಿ ಇವುಗಳಿಂದ ಆದ ದುಷ್ಪರಿಣಾಮವನ್ನು ನಮ್ಮ ಜನಾಂಗದ ರಕ್ತದಲ್ಲಿ ಸೇರಿದ ವಿಷವನ್ನು—ಇನ್ನು ಮುಂದಿನ ಐದಾರು ದಶಕಗಳ ಕಾಲ ನಿರಂತರ ಪ್ರಯತ್ನ ನಡೆಸಿದರೂ ದೂರೀಕರಿಸುವುದು ಕಷ್ಟಸಾಧ್ಯ. ಇಂಥದರಲ್ಲಿ ಒಂದೆಡೆ ಅನಾವಶ್ಯಕವಾದ ಹತೋಟಿಯು ಹೊರೆ—ಇನ್ನೊಂದೆಡೆ ಜನಸಾಮಾನ್ಯರಿಗೆ ಎಲ್ಲಿ ಇಲ್ಲದ ತೊಡಕುಗಳನ್ನು ಎದುರಿಸಬೇಕಾಗಿತ್ತೋ ಎಂಬ ಕಳವಳ— ಇವುಗಳನ್ನು ಹೇಗೆ ಸಮಂಜಸವಾಗಿ ಹೊಂದಿಸಿಕೊಳ್ಳಬಹುದು? ಆಹಾರಮಂತ್ರಿ ಶ್ರೀ ಕಿದ್ವಾಯಿಯವರು ಅನ್ನಸಮಸ್ಯೆಗೆ ಹೊಸತಾದ ರೂಪವನ್ನು ಕೊಟ್ಟು, ಸರಕಾರದ ಧೋರಣವನ್ನು ಬದಲಿಸಲು ನೋಡುತ್ತಿರುವರು. ಅವರಿಗೆ ನಿಯಂತ್ರಣಗಳಿಂದ ಅಪ್ರತ್ಯಕ್ಷ ಕೆಡುಕಾಗಿದೆ ಎಂಬುದರ ಸ್ಪಷ್ಟ ಕಲ್ಪನೆ ಇದೆ ಎಂಬುದು ನಿಚ್ಚಳವಾಗಿ ಗೋಚರಿಸುತ್ತಿದೆ. ಆಹಾರ ಧಾನ್ಯಗಳ ಸಾಗಾಟದ ಮೇಲಿನ ನಿರ್ಬಂಧವನ್ನು ಸಡಲಿಸುವುದರಿಂದ ಮತ್ತು ತನ್ಮೂಲಕ ಮುಕ್ತ ಪೇಟೆಗೆ ಅವಕಾಶ ಕೊಡುವುದರಿಂದ—ಈಗ ಕಳ್ಳಪೇಟೆಯಲ್ಲಿ ಹೆಚ್ಚು ಬೆಲೆಗೆ ಮಾರಿಹೋಗುವ ಸಂಗ್ರಹವು ಬೆಳಕಿಗೆ ಬರುತ್ತದೆಂದೂ ಆಗ ಅದರ ಬೆಲೆ ಸ್ವಾಭಾವಿಕವಾಗಿ ಕಡಿಮೆಯಾಗುವುದೆಂದೂ ಅವರು ಯೋಚಿಸಿರುವುದು ನಿಜವಾಗಿಯೂ ವಸ್ತುಸ್ಥಿತಿಗೆ ಹೊಂದಿಕೊಂಡಿದೆ. ಕೊರತೆ ಎಂಬುದಾಗಿ ಮರುಗುತ್ತ ಕುಳಿತರೆ ಕೆಲಸ ಸಾಗುವಂತಿಲ್ಲ— [illegible] ವ್ಯಾಪಾರಿಗಳು ಹೇಗೆ ಬೇರೆ ದೇಶಗಳಿಂದ ಅಗ್ಗದರದಲ್ಲಿ ಆಯಾತ ಮಾಡಿಕೊಳ್ಳುವರೋ ಹಾಗೆಯೇ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಲು ಆಸ್ಪದ ಕೊಡುವುದು ಹಿತ. ಸರಕಾರದ ನಿಯಂತ್ರಿತ ಬೆಲೆಗಿಂತ ಕಡಿಮೆಗೆ-ಜನಸಾಮಾನ್ಯರ ಕೈಯಳವಿನಲ್ಲಿ ಬರುವಂತೆ ಆಹಾರ ಧಾನ್ಯವನ್ನು ಪೂರೈಸಲು ಅವರು ಸಾಧ್ಯವಾಗುವದಾದರೆ ಇದಕ್ಕೇಕೆ ಅವಕಾಶ ಕೊಡಬಾರದು? ಒಂದು ವೇಳೆ ಇದರಿಂದ ಲಾಭವಿಲ್ಲವೆಂದಿದ್ದರೆ—ವ್ಯಾಪಾರಿ ವರ್ಗವೇ ಅದಕ್ಕೆ ಮುಂದಾಗದು. ಪ್ರತಿಯೊಂದೂ ಕೆಲಸಕ್ಕೆ ಸರಕಾರವೇ ಹೆಗಲು ಕೊಡುವುದು ಕರ್ತವ್ಯದ ಹೊರೆಯನ್ನು ಬೇಕೆಂದೇ ಹೆಚ್ಚಿಸಿದಂತೆ. ಕೇವಲ ಮೇಲ್ತನಿಖೆಯಿಂದ ತೃಪ್ತರಾಗುವ ಕೆಲಸಗಳನ್ನು ಸರಕಾರವು [illegible]ರಾಗಿ ನೋಡಬೇಕು. ಸರಕಾರಿ ಅಂಕೆ ಸಂಖ್ಯೆಗಳ ಲೆಕ್ಕದಲ್ಲಿ ಕೊರತೆ ಎಂಬುದಾಗಿ ನಮೂದಿಸಲ್ಪಟ್ಟ ಮಾತ್ರಕ್ಕೆ ಅದನ್ನು ನಂಬಿ ಕೊಡಬೇಕೆಂಬುದಕ್ಕೆ ಅನುಭವವು ಒಪ್ಪುವುದಿಲ್ಲ. ಈ ಅಂಕೆ ಸಂಖ್ಯೆಗಳು ಅಜ್ಞಾನಿ ಜನತೆಯೇ ತುಂಬಿರುವ ಭಾರತದಲ್ಲಿ ಎಂದಿಗೂ ಸರಿಯಾದ ಚಿತ್ರವನ್ನು ಕೊಡಲಾರವು. ಭಯಕ್ಕೆ ಒಳಪಟ್ಟು, ಅಥವಾ ಸರಿಯಾದ ತಿಳುವಳಿಕೆ ಇಲ್ಲದೆ, ಅಥವಾ ಕೇವಲ ಕಲ್ಪಿತ ರೀತಿಯಿಂದ ಅಂದಾಜಾಗಿ ಸಂಗ್ರಹಿಸಿದ ಅಂಕೆಗಳು ತೋರಿಸುವ ಉಳಿಕೆಯಾಗಲೀ ಕೊರತೆಯಾಗಲೀ—ಭಾರತದ ಅತಿ ಸ್ಥೂಲ ಚಿತ್ರಣಕ್ಕೆ ನೆರವಾದಾವೇ ಹೊರತು, ವಿವರಗಳಲ್ಲಿ ಅದರ ಸ[illegible] ಉಳಿಯಲಿಕ್ಕಿಲ್ಲ. ವಿನಿಯಂತ್ರಣಕ್ಕಾಗಿ ಜನ ಆತುರರಾದರೆ—ಏಕಾಗಿ ಅದರ ಕಡೆಗೆ ಸರಕಾರ ಲಕ್ಷ್ಯ ಪೂರೈಸಬಾರದು ಎನ್ನುತ್ತೇವೆ.

ವಿಶ್ವಚಕ್ರ

ಸಿಂಹಳದ ಚುನಾವಣೆ

ಸಿಂಹಳದಲ್ಲಿ ಶ್ರೀ ಡಡ್ಲೆ ಸೇನಾನಾಯಿಕೆಯವರ ಮಂತ್ರಿಮಂಡಳವು ರಾಜೀನಾಮೆಯನ್ನು ಒಪ್ಪಿಸಿದೆ. ಆದರೆ ಮರಳಿ ಅವರೇ ಹೊಸ ಮಂತ್ರಿಮಂಡಳವನ್ನು ರಚಿಸಿರುವರು. ಹೀಗಾಗಿ ಸರಕಾರದ ಸೂತ್ರವು ಹಿಂದಿನ ಸಂಯುಕ್ತ ರಾಷ್ಟ್ರೀಯ ಪಕ್ಷಕ್ಕೇನೇ ಮರಳಿ ದೊರೆತಂತಾಗಿದೆ. ೧೯೪೮ರಲ್ಲಿ ಸ್ವಾಯತ್ತಾಧಿಕಾರವು ಪ್ರಾಪ್ತವಾದ ಬಳಿಕ ಮೇ ತಿಂಗಳಾಂತ್ಯದಲ್ಲಿ ಅಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದುವು. ಒಟ್ಟು ೯೫ ಸ್ಥಳಗಳಿಗೆ ಪ್ರತಿನಿಧಿಗಳನ್ನು ಆರಿಸಬೇಕಿತ್ತು. ಇವುಗಳಲ್ಲಿ ೫೪ ಸ್ಥಳಗಳನ್ನು ಪಡೆದು ಶ್ರೀ ಸೇನಾನಾಯಿಕೆ ಪುನಃ ಅಧಿಕಾರಾರೂಢರಾದರು. ಶಾಸನ ಸಭೆಯಲ್ಲಿ ಒಟ್ಟು ೧೦೧ ಸ್ಥಳಗಳಿವೆ. ಉಳಿದ ಆರು ಸ್ಥಳಗಳಿಗೆ ಪ್ರತಿನಿಧಿಗಳನ್ನು ನಾಮಕರಣ ಮಾಡಿರುವರು. ಸಿಲೋನಿನ ನಾಗರಿಕರಲ್ಲವೆಂಬ ತತ್ವದ ಮೇಲೆ ಮತಾಧಿಕಾರವನ್ನು ಕಳೆದುಕೊಂಡ ಭಾರತೀಯರನ್ನು ಪ್ರತಿನಿಧೀಕರಿಸುವುದಕ್ಕಾಗಿ ಮೂವರು ಸದಸ್ಯರೂ ಯುರೋಪಿಯನರಿಗಾಗಿ ಇರ್ವರೂ ಯುರೇಶಿಯಾದವರ ಪ್ರತಿನಿಧಿ ಎಂದು ಒಬ್ಬರೂ ನಾಮಕರಣ ಹೊಂದಿರುವರು.

ಪರಮಾಧಿಕಾರದ ಕಾಯಿದೆ

ದಕ್ಷಿಣ ಆಫ್ರಿಕೆಯಲ್ಲಿ ಕಪ್ಪು ಬಣ್ಣದವರಿಗೆ ಪ್ರತ್ಯೇಕ ಮತದಾರರ ಯಾದಿಯನ್ನು ತಯಾರಿಸಿದ್ದು ಸರಿಯಲ್ಲ ಎಂದು ವರಿಷ್ಠ ನ್ಯಾಯಾಲಯ ವಿಹಿತ ತೀರ್ಪನ್ನು ಕಡೆಗಣಿಸಿ, ಸರ್ವಾಧಿಕಾರಿತ್ವವನ್ನೂ ವರ್ಣದ್ವೇಷವನ್ನೂ ಬಿಗಿಗೊಳಿಸಲು ನೋಡಿದ ಮಲಾನ ಸರಕಾರಕ್ಕೆ ಜಯವಾಗಿದೆ. ನ್ಯಾಯಾಲಯದ ಪರಮಾಧಿಕಾರವನ್ನು ಅಲ್ಲಗಳೆದು ಪಾರ್ಲಿಮೆಂಟಿನಲ್ಲಿ ಪಾಸಾದ ಕಾಯಿದೆಗಳ ಮಟ್ಟಿಗೆ ಅವಕ್ಕೇ ಘಟನೆಯ ಅರ್ಥ ವಿವರಣೆ ಮಾಡುವ ದೊಡ್ಡ ಹಕ್ಕು ಇರುವುದೆಂದು ಘೋಷಿಸುವ ಕಾಯಿದೆಯು ಪಾಸಾಗಿದೆ. ಇದರಿಂದ ಇನ್ನು ಮುಂದೆ ವರಿಷ್ಠ ನ್ಯಾಯಾಲಯವು ಸರಕಾರ ಮಾಡಿದ ಯಾವುದೇ ಘಟನಾತ್ಮಕ ಕಾಯಿದೆಯನ್ನು ತಳ್ಳಿಹಾಕಲು ಬರುವಂತಿಲ್ಲ.

ಮಲಾನರ ಟೀಕೆ

ಮಲಾನರು ರಾಜಕೀಯ ನಿರಂಕುಶತ್ವ ಹಾಗೂ ನಿಷ್ಕರುಣ ಧೋರಣವನ್ನು ಅನುಸರಿಸುತ್ತಿರುವರೆಂದೂ ವಿಶ್ವದ ಸ್ವಾತಂತ್ರ್ಯಪ್ರಿಯ ರಾಷ್ಟ್ರಗಳ ಸ್ನೇಹಕ್ಕೆ ಎರವಾಗುತ್ತಿರುವರೆಂದೂ ಸೂಚಿಸುವ, ಮತ್ತು ಈ ಕಟು ನಡವಳಿಕೆಯನ್ನು ಬಲವಾಗಿ ಖಂಡಿಸುವ ಗೊತ್ತುವಳಿಯನ್ನು ಬ್ರಿಟಿಷ್ ಕೂಲಿಕಾರ ಪಕ್ಷವು ಸರ್ವಾನುಮತದಿಂದ ಸ್ವೀಕರಿಸಿದೆ. ರಾಷ್ಟ್ರೀಯ ಕ್ರಿಯಾ ಸಮಿತಿಯು ಸಭೆಸೇರಿ ಪಕ್ಷದ ಧುರೀಣರಾದ ಶ್ರೀ ಕ್ಲೆಮೆಂಟ ಅಟ್ಲಿ, ಅನೆರಿನ ಬೇವನ, ಹರ್ಬರ್ಟ ಮಾರಿಸನ್ ಮುಂತಾದವರ ಸಮ್ಮುಖದಲ್ಲಿ ಈ ನಿಶ್ಚಯವನ್ನು ಕೈಗೊಂಡಿತು. ಈ ಗೊತ್ತುವಳಿಯು ಬಹಳ ಅವಸರದ್ದು ಮಾತ್ರವಲ್ಲ—ಇದರಿಂದ ಬ್ರಿಟಿಷ ಸರಕಾರದೊಡನೆ ಮತ್ತು ಕಾಮನವೆಲ್ತ ರಾಷ್ಟ್ರಗಳೊಡನೆ ದಕ್ಷಿಣ ಆಫ್ರಿಕೆಯು ಇಟ್ಟುಕೊಂಡಿರುವ ಸಂಬಂಧಕ್ಕೆ ಧಕ್ಕೆ ಉಂಟುಮಾಡುವಂತಿದೆ ಎಂಬುದಾಗಿ ಮಲಾನರು ಪ್ರತಿಟೀಕಿಸಿರುವರು. ಕಾಮನವೆಲ್ತ ರಾಷ್ಟ್ರದ ಅಂತರಿಕ ವ್ಯವಹಾರದಲ್ಲಿ ಈ ರೀತಿ ಹಸ್ತಕ್ಷೇಪ ಮಾಡುವುದು ಗೌರವಾರ್ಹ ಕಾರ್ಯವಲ್ಲೆಂದು ಅವರು ನುಡಿದರು.

ಚಳುವಳಿಯ ನಿರ್ಧಾರ

ಬಿಳಿಯರ ಧೋರಣವು ಕೃಷ್ಣವರ್ಣೀಯರನ್ನು ದಾಸ್ಯದಲ್ಲಿಡುವುದೇ ಆಗಿರುವುದರಿಂದ ಅದನ್ನು ಪ್ರತಿಭಟಿಸಿ ಚಳುವಳಿಯನ್ನು ಹೂಡಲು ಸಿದ್ಧರಾಗಬೇಕೆಂದು ದಕ್ಷಿಣ ಆಫ್ರಿಕನರ ರಾಷ್ಟ್ರೀಯ ಪರಿಷತ್ತು ನಿರ್ಧರಿಸಿದೆ. ತಮ್ಮೊಡನೆ ಶಸ್ತ್ರಾಸ್ತ್ರಗಳಿಲ್ಲ. ಶಾಸನ ಸಭೆಗಳಲ್ಲಿ ಪ್ರಾತಿನಿಧ್ಯವೂ ಇಲ್ಲ—ಆದುದರಿಂದ ಸರಕಾರದ ಧೋರಣದೊಡನೆ ಅಸಮ್ಮತಿ ಪ್ರಕಟಿಸುವುದಕ್ಕೆ ಶಾಂತಿಪೂರ್ಣವಾದ ಆಂದೋಲನವೊಂದೆ ಯೋಗ್ಯ ಕ್ರಮವೆಂದು ಪರಿಷತ್ತು ಕಂಡುಕೊಂಡಿದೆ. ಆಫ್ರಿಕನರ ಮಿತ್ರತ್ವವನ್ನು ಸಂಪಾದಿಸಿಕೊಳ್ಳಲು ಸಾಧ್ಯವಾಗುವಂಥ ಒಂದೇ ಒಂದು ಕೃತಿಯನ್ನು ಸಹ ಸರಕಾರ ಮಾಡಿಲ್ಲ. ಆದುದರಿಂದ ನಮ್ಮ ಉದ್ದೇಶ ಸಾಧನೆಯಾಗುವವರೆಗೆ ವಿರಮಿಸಲಾರೆವು ಎಂಬುದಾಗಿ ಮೂರುಸಾವಿರ ಆಫ್ರಿಕನರು ಒಕ್ಕೊರಲಿನಿಂದ ಪ್ರತಿಜ್ಞೆ ಸ್ವೀಕರಿಸಿದರು. ಕಮ್ಯೂನಿಸಂ ಪ್ರತಿಬಂಧಕ ಕಾಯಿದೆಯನ್ವಯ ಕೆಲವು ಮುಖಂಡರ ಮೇಲೆ ನಿರ್ಬಂಧವನ್ನೂ ಹೇರಿ ಮತ್ತು ಇನ್ನು ಕೆಲವರ ದಸ್ತಗಿರಿಯನ್ನು ಮಾಡಿ ಸರಕಾರವು ಅಪ್ರಿಯವೆನಿಸಿಕೊಳ್ಳುತ್ತಿದೆ.

ಅಣುಶಕ್ತಿಗಾಗಿ ವೆಚ್ಚ

ಅಮೇರಿಕೆಯ ಸಿನೇಟು ಸಂರಕ್ಷಣಾ ವೆಚ್ಚ ಮತ್ತು ವಿದೇಶ ಸಹಾಯ ಯೋಜನೆಗಳಿಗೆ ಕಡಿತ ಉಂಟುಮಾಡುವ ಸೂಚನೆಯನ್ನು ತಿರಸ್ಕರಿಸಿ, ಟ್ರೂಮನರ ಮೂಲ ಬೇಡಿಕೆಯನ್ನು ಮಂಜೂರು ಮಾಡಿದೆ. ಈಗ ಅಧ್ಯಕ್ಷ ಟ್ರೂಮನರು ಅಣುಶಕ್ತಿಯ ಸಂಶೋಧನಾ ಕಾರ್ಯಗಳಿಗಾಗಿ ೩,೩೪೧ ಮಿ.ಲಿಯ ಡಾಲರುಗಳ ಇನ್ನೊಂದು ಬೇಡಿಕೆಯನ್ನು ಮುಂದಿಟ್ಟಿರುವರು. ಶಸ್ತ್ರಾಸ್ತ್ರಗಳ ಮೇಲೆ ಅಂತಾರಾಷ್ಟ್ರೀಯ ಹತೋಟಿಯನ್ನು ಕಾಯ್ದುಕೊಳ್ಳಬೇಕೆಂಬ ಸೂಚನೆಯನ್ನು ಸೋವಿಯೆ

ಟ ರಶಿಯಾವು ನಿರ್ಲಕ್ಷತನದಿಂದ ನೋಡುತ್ತಿರುವುದರಿಂದ ಅಣುಶಕ್ತಿಯ ಉತ್ಪಾದನೆಯಲ್ಲಿ ಹೆಚ್ಚಿನ ಅಭಿವೃದ್ಧಿ ಸಾಧಿಸುವುದು ಅಗತ್ಯ ಬಿದ್ದಿದೆ ಎಂದವರು ಸೂಚಿಸಿರುವರು.

ಫ್ರಾನ್ಸಿನಲ್ಲಿ ಗೊಂದಲ

ಐಸನ ಹಾವರರ ಸ್ಥಾನವನ್ನು ಜನರಲ್ ರಿಜ್ವೇಯವರು ಗ್ರಹಿಸಿಕೊಂಡಿರುವರು. ಉತ್ತರ ಅಂಟ್ಲಾಂಟಿಕ ಪ್ರದೇಶದಲ್ಲಿ ಮಿತ್ರ ರಾಷ್ಟ್ರಗಳ ಸರ್ವ ಸೇನಾಧಿಪತಿಯಾಗಿ ಜನರಲ್ ರಿಜ್ವೇ ಬರುವುದನ್ನು ವಿರೋಧಿಸುವ ಪ್ರದರ್ಶನವನ್ನು ಈ ಸಂಧರ್ಭದಲ್ಲಿ ಪೇರಿಸಿನ ಕಮ್ಯೂನಿಸ್ಟರು ನಡೆಸಿದರು. ಮತ ಪ್ರದರ್ಶನವನ್ನು ಪ್ರತಿಬಂಧಿಸುವ ಆಜ್ಞೆಯನ್ನು ಕಮ್ಯೂನಿಸ್ಟರು ಲೆಕ್ಕಿಸದಿದ್ದುದರಿಂದ ಹಲವರನ್ನು ಸೈದುಮಾಡಲಾಗಿದೆ. ಜನರಲ್ ರಿಜ್ವೇಯವರು ಅಧಿಕಾರ ಸ್ವೀಕಾರ ಮಾಡುವಾಗ ಹೀಗೆಲ್ಲ ಗಲಭೆಯಾದೀತೆಂದು ಮೊದಲೇ ಊಹಿಸಿದ್ದರಿಂದ

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 55/52 O. S. 38/51

ಕೋಟ ದುರ್ಗಾದೇವಿ ದೇವಸ್ಥಾನ ಮೊಳಹಳ್ಳಿ ಗ್ರಾಮ–

ಅರ್ಜಿದಾರ

ಕೊರಾಲ ರಾಮಯ್ಯ ಶೆಟ್ಟಿ ಸಹಾ, ಎದ್ರಿರು

ಅರ್ಜಿದಾರನ ಕಡೆಯಿಂದ ಈ ಮೂಲಕ ಜಾಹೀರು ಮಾಡಿಕೊಳ್ಳುವದೇನೆಂದ್ರೆ

4 ನಂದಮ್ಮ ಶೆಡ್ತಿ- ಸಂಕಮ್ಮ ಶೆಡ್ತಿ ಮಗಳು,

ಕುಂದಾಪುರ ತಾಲ್ಲೂಕು ಅಚ್ಚಲಾಡಿ ಗ್ರಾಮ, ಮೇಲ್ಕಂಡ ಅಮ್ಮಜ್ಜಿಯಲ್ಲಿ ಎದ್ರಿರ ಬಾಬ್ತು ಸ್ಥಿರಾಸ್ತಿಯನ್ನು ಯೇಲಂ ಮಾಡಿಸುವ ಗೋಸ್ಕರ ಅರ್ಜಿದಾರನು ದಾಖಲ್ಲು ಮಾಡಿದ ಯಿಸ್ತಿ ಹಾರಿನ ಶರ್ತ ನಿರ್ಣಯಿಸುವಗೋಸ್ಕರ ತಾ 18–6-52ಕ್ಕೆ ಅಖೈರಿ ತಸ್ತಿಗೆ ಯಿಟ್ಟಿದೆ. ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ದರೆ ಸದ್ರಿ ದಿವಸ ಹಗಲು 11 ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು. ಎಂಬ ಸಂಗ್ತಿ ಅರ್ಜದಾರನ ಕಡೆಯಿಂದ ಈ ಮೂಲಕ ತಿಳಿಯಪಡಿಸಿದೆ,

G. Sanjiva Rao.
Pleader

Coondapur Date 31 5 52

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S 196/1952.

ವಾದಿ– B. ಶಾರದಮ್ಮ.

ಪ್ರತಿವಾದಿ– ಶೇಶಿಟ್ಟಿ ಕೂಡಾ.

ಸದ್ರಿ ದಾವೆಯಲ್ಲಿ 2ನೇ ಪ್ರತಿವಾದಿಯಾದ ಕುಂದಾಪುರ ತಾಲ್ಲೂಕು ಅಂಪಾರು ಗ್ರಾಮದಲ್ಲಿರುವ ಅಂತಮ್ಮ ಸೆಡ್ತಿಯ ಮಗ ಸೀನಪ್ಪ ಸೆಟ್ಟಿಗೆ ಈ ಮೂಲಕ ತಿಳಿಯಪಡಿಸುವುದೆನೆಂದ್ರೆ:–

ವಾದಿಳ ಮೂಲಿಪಕ್ಕಿನ ಆಸ್ತಿಗಳ ಪೈಕಿ ನೀವು ಕೂಡಾ 1, 3, 4ನೇ ಪ್ರತಿವಾದಿರ ಮೂಲಗೇಣಿ ಪಕ್ಕಿನ ಸ್ಥಳಗಳ ಬಾಬ್ತು ವಿಕ್ರಿ ಮತ್ತು ಖರ ಸಂವತ್ಸರಗಳ ಗೇಣಿ ಬಾಕಿ ಬಗ್ಗೆ ಸದ್ರಿ ಕೋರ್ಟಿನಲ್ಲಿ ವಾದಿಳು ದಾವೆ ಮಾಡಿರುತ್ತಾಳೆ. ಸದ್ರಿ ದಾವೆಯು ತಾ. 24-6-52ಕ್ಕೆ ತನ್ಸಿಗೆ ಇದೆ, ನಿಮ್ಮ ಆಕ್ಷೇಪಣೆ ಇದ್ದಲ್ಲಿ ನೀವು ಆ ದಿವಸ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

(By order)

Halsnad Laxminarayanaiya

Coondapoor 3-6-52

ಇಪ್ಪತ್ತು ಸಾವಿರ ಪೋಲೀಸರು ಮತ್ತು ಹತ್ತು ಸಾವಿರ ಸೈನಿಕರ ಸಹಾಯ ಯೋಜನೆ ಮಾಡಲಾಗಿತ್ತು. ರಶಿಯಾವು ಯುದ್ಧಪ್ರವೃತ್ತನಾಗಬಹುದೇ ಹೇಗೆ ಎಂಬ ಬಗ್ಗೆ ತಪ್ಪು ಅಭಿಪ್ರಾಯ ತಿಳಿಸುತ್ತಾ ಜನರಲ್ ರಿಜ್ವೇ "ರಶಿಯಾಕ್ಕೆ ಆ ಸಾಮರ್ಥ್ಯವಿದೆ" ಎಂದರು. ಅಮೇರಿಕೆಯ ಕಾಂಗ್ರೆಸು ಇನ್ನೂ ಕೊನೆಯ ನಿರ್ಣಯಕ್ಕೆ ಬಂದಿಲ್ಲವಾದುದರಿಂದ ಸಂರಕ್ಷಣಾ ವೆಚ್ಚದ ಕಡಿತದ ಸೂಚನೆಯ ಕುರಿತು ಅಭಿಪ್ರಾಯ ವ್ಯಕ್ತಪಡಿಸುವುದು ಅಗತ್ಯವಿಲ್ಲ ಎಂದರು.

ಜರ್ಮನಿಯ ಕುರಿತು ಆಪಾದನೆ

ಪಶ್ಚಿಮ ಜರ್ಮನಿಯು ಹೊಸದಾಗಿ ಒಪ್ಪಂದವನ್ನು ಮಾಡಿಕೊಂಡು ಪರಮಾಧಿಕಾರವನ್ನು ಪಡೆದಿರುವುದು ದೊಡ್ಡ ಮೋಸಗಾರಿಕೆ ಎಂದು ರಶಿಯಾವು ಆಪಾದಿಸಿದೆ. ಇದು ಪೋಟ್ಸ್ ಡ್ಯಾಮ್ ಒಪ್ಪಂದಕ್ಕೆ ವಿರುದ್ಧವಾಗಿರುತ್ತದೆಂದೂ ಪಶ್ಚಿಮ ರಾಷ್ಟ್ರಗಳಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಫ್ರಾನ್ಸಿನ ಸ್ವಾತಂತ್ರ್ಯಕ್ಕೆ ಜರ್ಮನಿಯ ಪುನಃಶಸ್ತ್ರೀಕರಣದಿಂದ ಭಯವುಂಟೆಂದೂ ಅದು ಹೇಳಿದೆ. ಪಶ್ಚಿಮ ಯುರೋಪಿನ ಸಂರಕ್ಷಣಾವ್ಯೂಹದಲ್ಲಿ ಪಶ್ಚಿಮ ಜರ್ಮನಿಗೆ ಕೂಡ ಸ್ಥಾನ ದೊರಕಿಸಿ ಕೊಡಲಾಗಿದೆ. ಈಗ ಪೂರ್ವ ಜರ್ಮನಿಯು ತನ್ನ ಗಡಿ ಪ್ರದೇಶವನ್ನು ಭದ್ರವಾಗಿಟ್ಟುಕೊಳ್ಳಲು (ತನ್ನೊಳಗಿನ ಅಮೇರಿಕೆಯ ದುಡ್ಡಿನಾಸೆಗೆ ಬಲಿಬಿದ್ದ ದಾಸರು ಪೂರ್ವ ಜರ್ಮನಿಯಲ್ಲಿ ಕಾಲಿಡದಂತೆ ನೋಡಲು) ತಕ್ಕ ಹೆಜ್ಜೆಯನ್ನು ಮುಂದಿಟ್ಟಿದೆ.

ಸುಡಾನು ತಂಟೆ

ಸುಡಾನು ಪ್ರಕರಣದಲ್ಲಿ ಇಜಿಪ್ಟ ಸರಕಾರದೊಡನೆ ವಿಚಾರ ವಿನಿಮಯ ನಡೆಸಲು ಉಮ್ಮಾ ಪಕ್ಷದ ಸರ್ ಅಬ್ದೆಲ್ ಮಹದಿ ಪಾಶಾರ ಧುರೀಣತ್ವದೊಂದಿಗೆ ಒಂದು ಶಿಷ್ಟ ಮಂಡಳವು ಕ್ಯಾರೋಗೆ ಬಂದಿರುವುದು. ಸುಡಾನಿಗೆ ಸಾರ್ವಭೌಮಾಧಿಕಾರ ಬೇಕೆಂಬುದಾಗಿ ಈ ಪಕ್ಷದ ಬೇಡಿಕೆ ಇದೆ. ಕಾರಣ, ಇಜಿಪ್ತು ನೈಲ ನದೀ ಕೊಳ್ಳದ ಏಕೀಕರಣ ಸಾಧಿಸಬೇಕು ಎನ್ನುವ ತತ್ವದ ನಿಜ ಸ್ವರೂಪ ಹೇಗೆಂಬುದನ್ನು ತಿಳಿದುಕೊಳ್ಳಲು ಅವರು ಪ್ರಯತ್ನಿಸುತ್ತಿರುವರು.

ಮಧ್ಯಸ್ತರ ಪ್ರಯತ್ನ

ಕಾಶ್ಮೀರ ವಿಷಯದಲ್ಲಿ ಮಧ್ಯಸ್ತರಾದ ಡಾ. ಫ್ರಾಂಕ ಗ್ರಹಾಮರು ನ್ಯೂಯಾರ್ಕ ನಲ್ಲಿ ಭಾರತ—ಪಾಕಿಸ್ತಾನಗಳ ಪ್ರತಿನಿಧಿಗಳನ್ನು ತಮ್ಮ ಕಾರ್ಯಾಲಯಕ್ಕೆ ಕರೆಸಿಕೊಂಡು ವಗತುಕತೆಯನ್ನು ಮುಂದುವರಿಸುವ ಪ್ರಯತ್ನಕ್ಕೆ ತೊಡಗಿದ್ದಾರೆ. ನಿಃಸೈನೀಕರಣದ ಕುರಿತು ಉಳಿದಿರುವ ವಿವಾದವನ್ನು ಬಗೆಹರಿಸಲು ಏನು ಹೊಸ ಸೂಚನೆ ಮುಂದಿಡುವರೋ ಇನ್ನೂ ತಿಳಿದಿಲ್ಲ. ಮಾತುಕತೆಗಳು ಎಷ್ಟು ಸಮಯದ ತನಕ ಮುಂದುವರೆಯಬಹುದೆಂದೂ ಹೇಳಲು ಬರುವುದಿಲ್ಲ. ಒಂದು ತಿಂಗಳ ಅವಧಿಯನ್ನು ಪಾಕಿಸ್ತಾನ ಕೊಟ್ಟಿರುವುದೆಂಬ ಹೇಳಿಕೆಗೆ ಗ್ರಹಾಮರು ಅಂಟಿಕೊಳ್ಳುವ ಲಕ್ಷಣವಿಲ್ಲ.

ಕೊರಿಯಾದ ಕೋಲಾಹಲ

ಕೊರಿಯಾ ಸಂಧಾನವಿರಾಮ ಮಾತುಕತೆಗಳು ತಿಲಾಂಶವೂ ಪ್ರಗತಿಯನ್ನು ತೋರಿಸಿಲ್ಲ. ಕಮ್ಯೂನಿಸ್ಟರು ಬೇಕೆಂದೇ ಸಮಯ ಹಾಳುಗೆಡುವುದರ ಬದಲು ಒಂದು ನಿರ್ಣಯಕ್ಕೆ ಬಂದ ಬಳಿಕವೇ ಈ ಮಾತುಕತೆಗಳ ಸಮ್ಮೇಳನವನ್ನು ಮುಂದುವರಿಸುವುದುತ್ತಮ ಎಂಬ ಸಂಯುಕ್ತ ರಾಷ್ಟ್ರ ಸಂಘದ ಚಿನ್ನಹವನ್ನು ಅನುನಯ ವಿನಯದಿಂದ ಹಿಂದೆಗೆಯಬೇಕೆನ್ನುತ್ತಿರುವರು. ಮಾತುಕತೆಗಳು ನಿತ್ಯವೂ ನಡೆಯುತ್ತಿರಬೇಕೆಂಬುದು ಕಮ್ಯೂನಿಸ್ಟರ ಅಪೇಕ್ಷೆ! ದಿನವೂ ಕೆಲವು ನಿಮಿಷಗಳಲ್ಲಿ ಏನೊಂದೂ ಪರಿಣಾಮಕಾರಿ ನಿರ್ಣಯಕ್ಕೆ ಬಾರದೆ—ಕೇವಲ ಆರೋಪ–ಪ್ರತ್ಯಾರೋಪಗಳಷ್ಟಕ್ಕೇ ಮುಗಿದು ಹೋಗುವ ಸಂಧಾನ ಮಾತುಕತೆಗಳು ತೃಪ್ತಿಕರವಾಗಿ ಫಲಿಸುವ ಆಶೆ ಉಳಿದಿಲ್ಲವೆಂದು ಸಂಯುಕ್ತ ರಾಷ್ಟ್ರ ಸಂಘದ ಪ್ರಧಾನ ಕಾರ್ಯದರ್ಶಿ ಟ್ರಿಗ್ವೆಲೀ ಹೇಳಿರುವರು. ಬ್ರಿಟಿಷ ಪ್ರಧಾನಿ ಚರ್ಚಿಲರು ಸಂಧಾನ ಮುರಿದೊಡನೆಯೇ ಪ್ರಚಂಡ ಧಾಳಿಯಾಗುವ ಆಶಂಕೆ ವ್ಯಕ್ತಪಡಿಸಿರುವರು.

ಈ ಅನುಮಾನಾಧಾನದ ನಡುವೆ ಕೊರಿಯಾದಲ್ಲಿ ಇನ್ನೊಂದು ಕೋಲಾಹಲವೆದ್ದಿದೆ—ಕಮ್ಯೂನಿಸ್ಟ ಯುದ್ಧ ಕೈದಿಗಳು ಶಿಬಿರಗಳಲ್ಲಿ ಆಗಾಗ್ಗೆ ದಂಗೆ ಏಳುತ್ತಿದ್ದಾರೆ. ಮೇ ತಿಂಗಳಂದಿಯಲ್ಲಿ ಕೋಜೇ ದ್ವೀಪದಲ್ಲಿ ಯುದ್ಧ ಕೈದಿಗಳು ತಮ್ಮ ಕಾವಲಿನ ಅಧಿಕಾರಿ ಬ್ರಿಗೇಡಿಯರ್ ಜನರಲ್ ಫ್ರಾನ್ಸಿಸ್ ಡಾಡರನ್ನು ಆಕ್ರಮಿಸಿ ತಮ್ಮವಶ ಇಟ್ಟುಕೊಂಡರು. ಇವರನ್ನು ಬಿಡಿಸಿಕೊಳ್ಳಲು ಅಸಾಮಾನ್ಯ ಶರತಗಳನ್ನು ಸ್ವೀಕರಿಸಿ, ಸಂಯುಕ್ತ ರಾಷ್ಟ್ರಸಂಘದ ಮುಖಕ್ಕೆ ಮಸಿ ಬಳಿದ ಅಧಿಕಾರಿಯನ್ನು ವರಿಷ್ಠ ಸೇನಾಪತಿ ಮಾರ್ಕ ಕ್ಲಾರ್ಕರು ಕೆಲಸದಿಂದ ತೆಗೆದುಹಾಕಿದ್ದರು. ಈಗ ಮರಳಿ ಯುದ್ಧ ಕೈದಿಗಳು ಖಂಡಾಯ ಹೂಡುತ್ತಿದ್ದು, ಅವರನ್ನು ಮಣಿಸಲು ಅಮೇರಿಕನ್, ಕೆನಾಡಿಯನ್, ಬ್ರಿಟಿಷ ಪಡೆಗಳು ಹೋಗುತ್ತಿವೆ. ಈ ಪರಿಸ್ಥಿತಿಯೊಂದಿಗೆ ದಕ್ಷಿಣಕೊರಿಯಾ ಸರಕಾರದೊಡನೆ ಸಂಯುಕ್ತ ರಾಷ್ಟ್ರ ಸಂಘಕ್ಕೆ ಮನಸ್ತಾಪಹುಟ್ಟುವ ಘಟನೆಗಳೂ ನಡೆದಿವೆ. ಅಧ್ಯಕ್ಷ ಸಿಂಗಮನರೀ ಸರಕಾರವು ಸಂಯುಕ್ತ ರಾಷ್ಟ್ರ ಸಂಘದ ಹಸ್ತಕ್ಷೇಪವು ದಕ್ಷಿಣ ಕೊರಿಯಾದ ವ್ಯವಹಾರದಲ್ಲಿ ಮಿತಿಮೀರುತ್ತಿದೆ ಎಂದು ಆರೋಪಿಸಿದೆ. ಇದನ್ನು ನಿಲ್ಲಿಸದಿದ್ದರೆ ಸಂಯುಕ್ತ ರಾಷ್ಟ್ರ ಸಂಘದ ಎಲ್ಲ ಕಾರ್ಯಸಮಿತಿ ಮತ್ತು ಸಂಸ್ಥೆಗಳನ್ನು ಹಿರುಪಾಜುವಾಗಿ ಹೊರಡಬೇಕಾಗುವುದೆಂಬ ಎಚ್ಚರಿಕೆ ಮಾತನ್ನೂ ದಕ್ಷಿಣಕೊರಿಯಾ ಹೇಳಿದೆ. ಸಾವಿಗೆ ಪಾಲಿರಿದೇನು ಫಲ ಎನ್ನುವಂತಾಗಿದೆ ಪರಿಸ್ಥಿತಿ!

೦೦ ೦೦

ಸಕ್ಕರೆ ನಿಯಂತ್ರಣ ರದ್ದು

ವಿನಿಯಂತ್ರಣ ಧೋರಣದ ಪ್ರಥಮ ಸೋಪಾನವೆಂಬಂತೆ ಕೇಂದ್ರಸರಕಾರವು ಸಕ್ಕರೆಯ ವಿತರಣ ಸಂಬಂಧದ ಹತೋಟಿಯನ್ನು ತೆಗೆದು ಹಾಕಿದೆ. ಸಕ್ಕರೆಯು ಅಗತ್ಯವಿದ್ದವರಿಗೆ ಬೇಕಾದಷ್ಟು ಹೆಚ್ಚು ಪ್ರಮಾಣದಲ್ಲಿ ರೇಶನು ಅಂಗಡಿ ಅಥವಾ ಯೋಗ್ಯ ದರದ ಅಂಗಡಿಗಳಲ್ಲಿ ನಿಯಂತ್ರಿತ ಬೆಲೆಗೆ ಇನ್ನು ದೊರಕುವುದು. ದೇಶದೊಳಗಿನ ಸಕ್ಕರೆ ಉತ್ಪಾದನೆಯು ಹೆಚ್ಚಿರುವುದು ಮತ್ತು ವಿದೇಶಗಳಲ್ಲಿ ಅದಕ್ಕೆ ಗಿರಾಕಿ ಇಲ್ಲದಿರುವುದು ಈ ರೀತಿ ಮುಕ್ತ ಪೇಟೆಗೆ ಅವಕಾಶಕೊಟ್ಟಿದೆ.

ಸಂಕ್ಷಿಪ್ತ ಸುದ್ದಿ

ಸರಪಳಿ ತಯಾರಿ, ರೇಶಿಮೆ ಹುಳ ಸಾಕುವಿಕೆ, ಮಿಶ್ರ ಲೋಹ, ವಿಶೇಷ ತರಗತಿಯ ಉಕ್ಕು, ಅಲ್ಯುಮಿನಿಯಂ, ಸ್ಲ್ಯಾಕಲು ಮುಂತಾದ ಉದ್ದಿಮೆಗಳಿಗೆ ಸಂರಕ್ಷಣೆ ನೀಡಬೇಕೆಂಬ ಉದ್ದೇಶದಿಂದ ಮಂಡಿಸಿದ ಭಾರತೀಯ ಸಂಕದ ತಿದ್ದುಪಡಿ ಮಸೂದೆಯನ್ನು ಲೋಕ ಸಭೆಯು ಸ್ವೀಕರಿಸಿದೆ.

ಪಾರ್ಲಿಮೆಂಟಿನ ಸಂಯುಕ್ತ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಇಂಡೋನೇಶಿಯದ ಹಿಂದಿನ ಮುಖ್ಯ ಮಂತ್ರಿ ಡಾ. ನಸಶೀರರು—ರಾಷ್ಟ್ರೀಯ ಭಾವನೆಯೂ ಮಾನವೀಯ ಆಶೆ ಆಕಾಂಕ್ಷೆಗಳೂ ಸ್ವಾತಂತ್ರ್ಯಾಭಿಲಾಷೆಯೂ ಏಶಿಯಾದ ಜನಜಾಗೃತಿಯ ದ್ಯೋತಕವೆಂಬುದಾಗಿಯೂ ಪರದೇಶವೂ ಯಾವುದೇ ಏಶಿಯಾ-ಆಫ್ರಿಕಾ ಜನಾಂಗಗಳನ್ನೀಗ ತನ್ನ ಇಚ್ಛೆಯಂತೆ ನಡೆಸಿಕೊಳ್ಳಬಾರದೆಂದೂ ಹೇಳಿದರು.

ಲೋಕಸಭೆಯ ಉಪಾಧ್ಯಕ್ಷ ಪದಕ್ಕೆ ಶ್ರೀ. ಅನಂತಶಯನಂ ಅಯ್ಯಂಗಾರರೂ ರಾಜ್ಯ ಪರಿಷತ್ತಿನ ಉಪ ಸಭಾ ಪತಿತ್ವಕ್ಕೆ ಮೈಸೂರಿನ ಶ್ರೀ ಎಸ್ ವಿ. ಕೃಷ್ಣಮೂರ್ತಿರಾಯರೂ ಅವಿರೋಧವಾಗಿ ಆಯ್ಕೆ ಹೊಂದಿದರು.

ಹಿಂದೂ ಹುಡಿಗೆ ಕುಮಾರಿ ಶಮಾ ಎಂಬಾಕೆ ಧಿಲ್ಲಿ ರಾಜ್ಯದ ಮುಖ್ಯ ಮಂತ್ರಿಗಳ ಕಾರ್ಯದರ್ಶಿ ಸಿಕಂದರ ಬಖತನ್ನು ವ ದುವೆಯಾಗಲಿರುವಳೆಂಬ ಸಂಬಂಧದಲ್ಲಿ ಧಿಲ್ಲಿಯಲ್ಲಿ ಮತ ಪ್ರದರ್ಶನ ನಡೆಯಿತು ಪಾರ್ಲಿಮೆಂಟಿನ ಸದಸ್ಯರೂ ಹಿಂದು ಮಹಾಸಭೆಯ ಕಾರ್ಯದರ್ಶಿಗಳೂ ಆದ ಶ್ರೀ ವಿ ಜಿ ದೇಶಪಾಂಡೆಯವರನ್ನು ಇನ್ನು ಕೆಲ ರೊಂದಿಗೆ ದಸ್ತಗಿ ಮಾಡಲಾಯಿತು.

ಮೈಸೂರು ಕಾಂಗ್ರೆಸಿನ ಅಧ್ಯಕ್ಷರಾಗಿ ಶ್ರೀ ಎಚ್. ಸಿ. ದಾಸಪ್ಪ ಆಯ್ಕೆ ಹೊಂದಿರುವರು.

ನಡಿಯುವ ಚಿತ್ರ.

ನರ್ಗಿಸ್ ಮತ್ತು ದಿಲೀಪ್ ಕುಮಾರರ ದರ್ಶನಾಪೇಕ್ಷಿಗಳಿಗೆ ದಿವ್ಯ ಪ್ರದರ್ಶನ

ಹಲ್ ಚಲ್ ಅಥವಾ **ಆಂದೋಲನ**

ಬರುವ ಚಿತ್ರ. —

ಏಕೆಡೆಮಿಯ ಬಹುಮಾನಪಡೆದ ಪ್ರಖ್ಯಾತ ಇಂಗ್ಲಿಷ್ ಚಿತ್ರ

ಸೊಂಗ್ ಒಫ್ ಬನಡೆಟ್ಟಿ

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್ ಉಡುಪಿ

ಧರ್ಮದ ಮರೆಯಲ್ಲಿ ಸುಳ್ಳು ಸ್ವಾರ್ಥಗಳು...

ಜಗತ್ತೇ ಸುಳ್ಳು! ತಂದೆ ತಾಯಿ, ಬಂಧು ಬಳಗ ಎಲ್ಲ ಸುಳ್ಳು—ಇಂದು ಇರುವವರು ನಾಳೆ ಇರಲಿಕ್ಕಿಲ್ಲ, ಶ್ರೀಮಂತಿಕೆ ಬಡತನವೂ ಸುಳ್ಳು, ಹೆಚ್ಚೇಕೆ?—ದೇಹ... ಜೀವ... ಧರ್ಮ ಕರ್ಮಗಳೂ ಸುಳ್ಳು—ಎಲೆ ಮನಸ್ಸೇ, ವಿಚಾರಮಾಡಿನೋಡು" ... ಎಂದೆಲ್ಲ ಧರ್ಮ ಸಾರುತ್ತಿದೆ. ಅಂದಮೇಲೆ ಸುಳ್ಳೇನು ಸಾಮಾನ್ಯವೇ? ಸುಳ್ಳಿನ ರಾಜ್ಯಕ್ಕೆ ಸುಳ್ಳೇ ಅಧಿಕಾರಿ!

ಮುಳ್ಳಿನಿಂದ ಮುಳ್ಳು ತೆಗೆಯುವಂತೆ ಸುಳ್ಳಿನ ಸಂಸಾರ ಸಾಗರವನ್ನು ದಾಟಲಿಕ್ಕೆ ಸುಳ್ಳುದೋಣಿಯೇ ಬೇಕು. ಇದನ್ನು ನಮ್ಮ ಹಾಗೆ ನಮ್ಮ ಪೂರ್ವಿಕರೂ ಅರಿತಿರುವರು. ಅಷ್ಟೆ ಅಲ್ಲ; ತಮ್ಮ ಮುಂದಿನವರು ಅನುಸರಿಸಲೆಂದು ಬೋಧಿಸಿರುವರು. ......ಮದುವೆ ಮಾಡಿಸುವಾಗ ಸುಳ್ಳು ಹೇಳಬಹುದು. ಸ್ವಂತ ಲಾಭಕ್ಕಾಗಿ, ಪ್ರಾಣಾಪಾಯದ ಸಂದರ್ಭದಲ್ಲಿ, ನೆಚ್ಚಿನ ಗೆಳೆಯನಿಗಾಗಿ, ಧನಾಪಹರಣದ ಸಂದರ್ಭದಲ್ಲಿ, ಸುಳ್ಳು ಹೇಳಲೂ ಅಡ್ಡಿಯಿಲ್ಲ. ಅವುಗಳು ಪಾತಕವಲ್ಲ. ಹಾಗೆ......ಹೀಗೆ ಸುಳ್ಳಿಗೆ ಹಲವು ಕಡೆಗಳಲ್ಲಿ 'ಪರ್ಮಿಟು' ದೊರೆತಿದೆ.

ಹಿರಿಯರು ಹೇಳಿದಂತೆ ಕೇಳುವುದು ಕಿರಿಯರ ಧರ್ಮ. ನಮ್ಮ ಇಂದಿನವರು ಅದನ್ನು ಮರೆತಿಲ್ಲ. ಅವರು ಹೇಳಿದ ಕಡೆಗಳಲ್ಲೆಲ್ಲ ಸುಳ್ಳಿನ ಮಳೆಗರೆಯುತ್ತಿದ್ದಾರೆ. ಸುಳ್ಳು ಹೊಳೆಯಾಗಿ, ಸಾಗರಕ್ಕೂ ಹತ್ತಿರವಾಗಿದೆ. ಹಾಗಾಗಿ ಸತ್ಯವನ್ನು ಯಾರು ಕೇಳುತ್ತಾರೆ? ಅದು ವಿಷವಿಲ್ಲದ ಹಾವಿನಂತೆ ಸೆಟೆದು ಹೆಡೆಯೆತ್ತಿನಿಂತ ಹಾವಿಗೆ ದೊರೆಯುವ ಪೂಜೆ ಪುರಸ್ಕಾರಗಳು ಅದಕ್ಕೆ ದೊರಕಲಾರವು.

ಸುಳ್ಳಿನಂತೆ, ಸ್ವಾರ್ಥವೂ ವಿಶ್ವದಲ್ಲಿ ಬೆರೆತು ಹೋಗಿದೆ. ಅದನ್ನು ಬಿಟ್ಟಿರುವುದು ಅಸಾಧ್ಯ. ತನ್ನ ಮನೆ, ತನ್ನ ಬದುಕು, ತನ್ನ ಮಡದಿ ಮಕ್ಕಳು ಎಂಬ ಚಿಂತನೆ ಯಾರಿಗಿಲ್ಲ? ತಾನು ಮೇಲೆ ಬರಬೇಕು, ತನ್ನ ಉದ್ಧಾರವಾಗಬೇಕು. ಎಂಬೆಲ್ಲ ಬಯಕೆ ಯಾರಿಗಿಲ್ಲ? ಇದು ನಮ್ಮ ಧರ್ಮದ ಮತ್ತೊಂದು ಉಪದೇಶ. ಇಲ್ಲಿ ಸುಖವಾಗಿ ಬಾಳಿ ಬದುಕಬೇಕು. ಆ ಮೇಲೆ ಸಾಕಷ್ಟು ಕೂಡಿಡಬೇಕು. ಅದು ನಮ್ಮ ತಲೆತಲಾಂತರಗಳ ಮೂಲಕ ನಮಗೇ ದೊರಕುವುದು. ನಾವು ಸತ್ತು ಸಣ್ಣವಾದ ಮೇಲೂ 'ಅಲ್ಲಿಗೆ' ಅದನ್ನು ತರಿಸಿಕೊಳ್ಳಬಹುದು. ನಮ್ಮ ಸ್ವಾರ್ಥ ಅಷ್ಟು ಮೇಲಿನದು. ಅದು ವಿಜ್ಞಾನಿಯ ವಿಚಾರದೃಷ್ಟಿಗೂ ಸುಳಿಯಲಿಕ್ಕಿಲ್ಲ.

ಸ್ವಾರ್ಥಿಗಳ ಊರಿನ ದೇವ, ಧರ್ಮ, ನೀತಿಯೂ ಸ್ವಾರ್ಥಿಯೇ. ನಾವು ಬಯಸಿದುದನ್ನೇ ದೇವ ಧರ್ಮ ಕರ್ಮವೂ ಬಯಸುವುದು. ನಮಗೆ ಹಣಬೇಕಿದ್ದರೆ ದೇವನಿಗೂ ಅದು ಬೇಕು. ನಾವು ಹಣ್ಣುಕಾಯಿ ಪಶುಪಕ್ಷಿಗಳ ಅಭಿರುಚಿಯಿಂದ ಬಯಸಿದಾಗ ದೇವನಿಗೂ ಅವುಗಳ ಬಯಕೆಯಿದೆ. ನಮಗೆ ಬೇಡವಾದ್ದು ಅವನಿಗೂ ಬೇಡ, ಹೌದು. ಅವನು ನಿಜಕ್ಕೂ ನಂಬಿದವರ ಅಧೀನ—ತಮಗೆ ಬೇಕಾದುದನ್ನು ಭಕ್ತಜನರು ಅವನ ಮುಂದಿರಿಸಿದರೆ ಸಾಕು; ತಾಯಿ ಮಗುವಿಗೆ ಹಂಚಿಕೊಡುವಂತೆ ಕೊಟ್ಟುಬಿಡುತ್ತಾನೆ.

ಹಾಗಾಗಿ, ಇಂದು ಅದೆಷ್ಟೋ ಜನ ಭಕ್ತ(ರೆನಿಸುವ)ರು ದೇವಧರ್ಮಗಳಿಗಾಗಿ ಕೂಡಿಹಾಕಲು ಹೊರಟಿದ್ದಾರೆ. ನನಗಲ್ಲ—, ಅವನಿಗೆ?—ನಮಗಲ್ಲ; ಧರ್ಮಕ್ಕೆ? ಎಂದುಕೊಂಡು ಕೈನೀಡುತ್ತಿದ್ದಾರೆ.

ಹೀಗೆ ಸ್ವಾರ್ಥಿಗಳು ಸ್ವಾರ್ಥಕ್ಕಾಗಿಯೇ, ಸ್ವಾರ್ಥಿಗಳಿಗೆ ನೆರವಾಗುವುದಕ್ಕೆ ಧರ್ಮಕರ್ಮವೆನ್ನುತ್ತಾರೆ. ಧರ್ಮದ ಪ್ರಪಂಚದಲ್ಲಿ ನಾವು ಹುಟ್ಟು ಕಂಡಾಗಲೆ ಇದಕ್ಕೆ ಮೊದಲಾಗುತ್ತದೆ. ಆ ಮೇಲೆ ಕೇಳಬೇಕೆ? ಹೇಳಿ ಮುಗಿಯುವಷ್ಟು, ಕೇಳಿ ಬೇಸರ ಬರುವಷ್ಟು ಧರ್ಮಾಚರಣೆಗಳ ಕಟ್ಟುನಿಟ್ಟುಗಳಿವೆ.

ಕಲ್ಪನಾತೀತವಾದ ಭವಿಷ್ಯದ ಸಂಶಯಾತ್ಮಕ ದೃಶ್ಯವು ಮನಸ್ಸಿಗೆ ಭಯವನ್ನು ಹುಟ್ಟಿಸುತ್ತದೆ. ಅಭಯದಿಂದಾಗಿ, ಅದ್ಭುತ ರಮ್ಯ ಅನಾದಿಯಾದುದನ್ನೆಲ್ಲ ಆಶ್ರಯಿಸಲು ಆಸ್ಪದ ದೊರೆಯಿತು. ದಾನಧರ್ಮ ಕರ್ಮಾಚರಣೆಗು ಪ್ರೋತ್ಸಾಹ ಬಂದಿತು, ಸ್ವಾರ್ಥದ ಬಯಕೆ ಅದರಿಂದ ಪರಿಪೂರ್ಣಗೊಂಡಿತು ಅನ್ನಿ.

[ಮುಂದುವರಿಯುವುದು]

—ಶ್ರೀ ವೆಂ. ಅಡಿಗ

ಮಂಗಳೂರು

ಹಿಂದೀ ಪರೀಕ್ಷೆಗಳು—ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯು ಹಿಂದೀ ಪರೀಕ್ಷಾ ದಿನಗಳನ್ನು ಮುಂದಿನ ಆಗೋಸ್ತು ತಾ. 30, 31 ಮತ್ತು ಸಪ್ಟಂಬರ ತಾ. 1 ಎಂಬುದಾಗಿ ನಿಶ್ಚಯಿಸಿರುತ್ತದೆ.

ಟೌನ್ ಕೋಪರೇಟಿವ್ ಬೇಂಕಿನ ಮಹಾಸಭೆಯು—ಕಳೆದ ತಾ. 25ರಲ್ಲು ಸೇರಿತು. ಹೊಸ ಡೈರೆಕ್ಟರರಾಗಿ ಕಳೆದ ವರುಷ ಆರಿಸಲ್ಪಟ್ಟ ಎಂಟು ಮಂದಿ ಈ ಬಾರಿಯೂ ಆರಿಸಲ್ಪಟ್ಟರಲ್ಲದೆ ಶ್ರೀ ಪದ್ಮನಾಭ ಶೆಣೈಯವರು ಇದೀಗ ಹೊಸತಾಗಿ ಒಂಭತ್ತನೆ ಡೈರೆಕ್ಟರರಾಗಿ ಆರಿಸಲ್ಪಟ್ಟರು. ಸಹಕಾರಿ ಸಂಘಗಳ ಡಿಪ್ಯೂಟಿ ರಜಿಸ್ಟ್ರಾರ್ ಶ್ರೀ ಕೆ. ಕೇಶವ ಕಿಣಿಯವರು ಸಭೆಗೆ ಆಗಮಿಸಿದ್ದರು.

ಮೊಗವೀರ ವಿದ್ಯಾರ್ಥಿ ವಾರ್ಷಿಕೋತ್ಸವವು— ಮೊಗವೀರ ಲಿಟರರಿ ಯೂನಿಯನ್ನಿನ ಕಾರ್ಯಾಲಯದಲ್ಲಿ ಜರಗಿದಾಗ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಫಿಶರೀಸ ಶ್ರೀ ಮುಕುಂದನ್ ಉಣ್ಣಿಯವರೂ, ಫಿಶರೀಸ್ ರೆಫ್ರಿಜರೆಟರ ಇಂಜಿನಿಯರ್ ಶ್ರೀ ವಿ. ಎಲ್. ಬಾರಿಯವರೂ ಶ್ರೀಗಳಾದ ಎಚ್. ಕೃಷ್ಣಪ್ಪ ತಿಂಗಳಾಯ, ಜೆ. ಎ. ಪುತ್ರನ್ ಮತ್ತು ಶ್ರೀಮತಿ ಶಾಂಭವಿ ಡಿ. ಬಂಗೇರರು ಮಾತನಾಡಿದರು.

ಕೆ. ಪಿ. ಸಿ. ಸಿ. ಉಪಚುನಾವಣೆ—ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ದ. ಕ. ಜಿಲ್ಲೆಯಿಂದ ಖಾಲಿಬಿದ್ದ ಐದು ಸ್ಥಾನಗಳಿಗೆ ಬಂದ ನಾಮಪತ್ರಗಳಲ್ಲಿ ಈ ಕೆಳಗಿನವು ಸಿಂಧುವಾಗಿವೆ. ಕಾರ್ಕಳ ಶ್ರೀ ಎಮ್. ಎಸ್. ಅಧಿಕಾರಿ ಶ್ರೀ ಬಿ. ಕೇಶವ ಕಿಣಿ, ಜನಾಬ್ ಫರೂಕಿ ಅಬ್ದುಲ್ ಸುಕೂರ್, ಡಾ| ಯು. ಕೃಷ್ಣ, ಬಂಟ್ವಾಳ ಶ್ರೀ ಬಿ. ಎಸ್. ಭಾಸ್ಕರ ರೈ ಪುತ್ತೂರು ಶ್ರೀ ಬಿ. ವಿಠಲದಾಸ ಸೆಟ್ಟಿ, ಶ್ರೀ ಕೆ. ಅಣ್ಣಪ್ಪ ಭಂಡಾರಿ, **ಕಾಸರಗೋಡು**—ಶ್ರೀ ಬಿ. ದೇವಪ್ಪ ಆಳ್ವ, **ಹೊಸದುರ್ಗ** ಶ್ರೀ ಎಚ್. ಎನ್. ಜಗನ್ನಿವಾಸ.

ಪತ್ರಿಕಾ ಪರಿಷತ್ತು—ಮೇ ತಿಂಗಳ ಪತ್ರಿಕಾ ಪರಿಷತ್ತಿನಲ್ಲಿ ಜಿಲ್ಲಾ ಕಲೆಕ್ಟರರು ಈ ಕೆಳಗಿನ ವಿಷಯಗಳನ್ನು ತಿಳಿಯಪಡಿಸಿದರು. ಎಪ್ರಿಲ್ ತಿಂಗಳ ತಾ. 21ರಿಂದ ಮೇ ತಿಂಗಳ ತಾ. 14ರ ವರೆಗೆ ಬೆಂಕಿಬಿದ್ದು ಮನೆ ಸುಟ್ಟು ಕಷ್ಟಕ್ಕೀಡಾದ ಐದುಮಂದಿಗೆ ಇಪ್ಪತ್ತು ರೂಪಾಯಿ ಸಹಾಯ ಕೊಟ್ಟಿರುತ್ತದೆ. ಎಪ್ರಿಲ್ ತಿಂಗಳ ತಾ. 25ರಿಂದ ಮೇ ತಿಂಗಳ 10ರ ವರೆಗೆ ಜಿಲ್ಲೆಯ ಆರು ತಾಲೂಕುಗಳಲ್ಲಿ 139 ಮಂದಿಗೆ ಕೋವಿ ಲೈಸೆನ್ಸು ಕೊಡಲ್ಪಟ್ಟಿತು. ಸಣ್ಣ ನೀರಾವರಿ ಯೋಜನೆಗನುಸಾರವಾಗಿ ಉಡುಪಿ ತಾಲೂಕಿನ ವಡ್ಡರಸೆಯಲ್ಲಿ ರೂ. 5615, ಕಾರ್ಕಳ ತಾಲೂಕಿನ ನೀರೆಯಲ್ಲಿ ರೂ. 5615 ಮತ್ತು ಪುತ್ತೂರು ತಾಲೂಕಿನ ಉಜ್ರೆಯಲ್ಲಿ ರೂಪಾಯಿ 14700ರ ಮೂರು ಕೆಲಸಗಳು ಮಂಜೂರಾಗಿವೆ.

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು ಕಳೆದ ತಾ. 31ರಂದು ಸಂಜೆ ಚೆರ್ಮನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿದಾಗ ಡಾ| ಯು. ರಾಮರಾಯರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವು ಮಾನ್ಯವಾಯಿತು. ಮುನಿಸಿಪಲ್ ಕಮಿಶನರ್ ಶ್ರೀ ಎ. ಎಸ್. ಡಿ. ಸೋಜರಿಗೆ ಎರಡು ತಿಂಗಳ ರಜೆ ಸೆಂಕ್ಷನ್ ಮಾಡಲಾಗಿದೆ ಎಂದೂ ಅವರ ಸ್ಥಾನದಲ್ಲಿ ಪಾಲ್ಘಾಟಿನ ಶ್ರೀ ಕೆ. ಗೋಪಾಲ ಮೆನನ್, ಅವರು ನೇಮಿಸಲ್ಪಟ್ಟಿದ್ದಾರೆಂದೂ ತಿಳಿಸಿದ ಸರಕಾರಿ ಆರ್ಡರನ್ನು ರಿಕಾರ್ಡ ಮಾಡಲಾಯಿತು. ಹಳೆ ಟಪ್ಪಾಲು ಕಟ್ಟೆ ರಸ್ತೆ ಮತ್ತು ಹನುಮಾನ್ ಆಫೀಸು ರಸ್ತೆಗಳನ್ನು ಧೂಳು ಬಾರದ ರಸ್ತೆಗಳನ್ನಾಗಿ ಮಾಡುವರೆ ರೂ. 16288-11-0 ಸಹಾಯಧನ ಕೊಡಲಾಗಿದೆ ಎಂದು ತಿಳಿಸಿದ ಜಿ. ಒ. ವನ್ನು ರಿಕಾರ್ಡ ಮಾಡಲಾಯಿತು. ಹಿಂದೂ ಶವ ಸಂಸ್ಕಾರ ಸಮಿತಿ, ಉಡುಪಿ ಇದಕ್ಕೆ ರೂ. 60/ರ ಸಹಾಯ ಕೊಡಲಾಯಿತು. ಪ್ರೊಪರ್ಟಿ ಟೇಕ್ಸ್ ಶಾಖೆಯ ಕೆಲಸವನ್ನು ಪೂರ್ಣಗೊಳಿಸುವುದಕ್ಕಾಗಿ ಎರಡು ತಿಂಗಳ ಮಟ್ಟಿಗೆ ಇಬ್ಬರು ಗುಮಾಸ್ತರನ್ನು ನೇಮಿಸುವುದೆಂದಾಯಿತು. ಮುನಿಸಿಪಲ್ ಸೌತ್ ಶಾಲಾ ಕಟ್ಟಡವನ್ನು ಪೂರ್ಣಗೊಳಿಸುವ ಸಮಯವನ್ನು ದಶಂಬರ ತಿಂಗಳ ವರೆಗೆ ಬೆಳೆಸುವಂತೆ ಸರಕಾರವನ್ನು ವಿನಂತಿಸಲಾಯಿತು. ಮುನಿಸಿಪಲ್ ಸೆನಿಟರಿ ಇನ್ಸ್ಪೆಕ್ಟರರು ಮತ್ತು ಹೆಲ್ತ್ ಅಸಿಸ್ಟೆಂಟರಿಗೆ ಡ್ರೆಸ್ ಬಗ್ಗೆ ರೂ 50/-ರಂತೆ ಕೊಡಬಹುದೆಂದಾಯಿತು. ಕಿನ್ನಿಮೂಲ್ಕಿಯ ಬಸ್‌ಸ್ಟಾಪನ್ನು ಅಂಗಡಿಯಾಗಿ ರೂಪಾಂತರಗೊಳಿಸಿ ಏಲಂ ಮಾಡಬೇಕೆಂದಾಯಿತು.

ಗೃಹ ಪ್ರವೇಶ ಸತ್ಕಾರಕೂಟ—ಶಿವಮೊಗ್ಗ ನೇಶನಲ್ ಲಾಜಿನ ಶ್ರೀ ಯು. ಬಾಬುರಾಯರು ಬುಡ್ನಾರಿನಲ್ಲಿ ಕಟ್ಟಿಸಿದ 'ಗಿರಿಜಾ ನಿಲಯ'ದ ಪ್ರವೇಶೋತ್ಸವಕ್ಕೆ ಸಂಬಂಧ ಕಳೆದ ತಾ 25ರಲ್ಲು ಚಹಾ ಸತ್ಕಾರಕೂಟವನ್ನೇರ್ಪಡಿಸಿದ್ದರು. ಹಲವು ರಾಜಕೀಯ ಸಂತ್ರಸ್ತರೂ ಆಮಂತ್ರಿತರಾಗಿದ್ದರು.

ದುಃಖಸೂಚಕ ಸಭೆ— ಸ್ಥಳೀಯ ನಗರಸಭೆಯ ಅಕೌಂಟೆಂಟರಾಗಿದ್ದ ದಿ| ಶ್ರೀ. ಯು. ಬಿ. ರಮಾನಾಥರಾಯರ ನಿಧನದ ಬಗ್ಗೆ ಸಂತಾಪ ಸೂಚಿಸುವರೆ ಮುನಿಸಿಪಲ್ ನೌಕರರ ಸಂಘದ ಸಭೆಯು ಈಚೆಗೆ ಶ್ರೀ. ಯು. ವಾಸುದೇವ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ರಾಘವೇಂದ್ರ ಎ. ಕಾಮತ್, ಡಾ| ರಾಮಚಂದ್ರರಾವ್, ವಾರ್ಕಿ ಮೊದಲಾದವರು ದಿವಂಗತರ ಗುಣಕಥನ ಮಾಡಿದರು. ದಿವಂಗತರು ನಗರಸಭೆಯಲ್ಲಿ ಮೊದಲಿನಾರಭ್ಯ ಜನಪ್ರಿಯರಿದ್ದು ಇತ್ತೀಚೆಗೆ ಏಕ್ಟಿಂಗ್ ಮೆನೇಜರರಾಗಿ ಜನಾದರಗಳಿಸಿದ್ದರು.

ಬೆಳ್ತಿಗೆ ಅಕ್ಕಿ ಯಿಲ್ಲ— ಈಗ ಸುಮಾರು ಮೂರು ವಾರಗಳಿಂದ ಉಡುಪಿ ಸೀದಾ ಕ್ಷೇತ್ರದ ಅಂಗಡಿಗಳಲ್ಲಿ ಬೆಳ್ತಿಗೆ ಅಕ್ಕಿ ವಿತರಣೆಯಾಗುವುದಿಲ್ಲ. ಇದಕ್ಕೆ ಬೆಳ್ತಿಗೆ ಅಕ್ಕಿಯ ಅಭಾವವೇ ಕಾರಣವೆನ್ನಲಾಗಿದೆ. ಬೆಳ್ತಿಗೆ ಅಕ್ಕಿ ಉಪಯೋಗಿಸುವವರಿಗೆ ತುಂಬಾ ಅನಾನುಕೂಲತೆಗಳಾಗುತ್ತವೆ.

ಹರಿಜನ ಕಮಿಟಿ ಸಭೆಯು— ತಾ. 3ರಲ್ಲಿ ಅಧ್ಯಕ್ಷ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ವಿದ್ಯಾರ್ಥಿ ಭವನವನ್ನು ತಾ. 15ಕ್ಕೆ ಆರಂಭಿಸಬೇಕೆಂದಾಯಿತು. ಅದರ ಮೊದಲು ಅವಶ್ಯವುಳ್ಳ ದುರಸ್ತಿ ಮಾಡಲು ಶ್ರೀ ಎಂ. ವಿ. ಭಟ್ಟರನ್ನು ಕೇಳಿಕೊಳ್ಳಲಾಯಿತು. ದುರಸ್ತಿ ಖರ್ಚನ್ನು ಅಧ್ಯಕ್ಷರು ವಹಿಸಿಕೊಂಡುದಕ್ಕೆ ಆಭಾರ ಸೂಚಿಸಲಾಯಿತು.

The General Investment Trust, Ltd.
UDIPI
NOTICE
Notice is hereby given that the Register of Members and Transfer Books of the Trust will remain closed from 12th June, 1952 to 7th July 1952 (both days inclusive)
(By order of the Board)
Mukund Nivas, Udipi, 1st June, 1952.
T. Ramesh U. Pai, Executive Director.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ಸಗಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕೆಲ್ಲಿಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಚಿಕ್ಕ ಮಕ್ಕಳ ಅಕ್ಕರೆಯ
ಸಚಿತ್ರ ಪದ್ಯ ಪುಸ್ತಕ—
ಕೆ. ಹೊನ್ನಯ್ಯ ಶೆಟ್ಟರಿಂದ
ರಚಿತವಾದ
ಮುಗುಳು
ಒಂದರಿಂದ ಐದನೆ ತರಗತಿ ವರೆಗಿನ ಮಕ್ಕಳಿಗೆ ಹಾಡಲಿಕ್ಕೂ, ಅಭಿನಯಿಸಲಿಕ್ಕೂ, ಅನುಕೂಲವಾದ ಪದ್ಯಗಳು! ಮಂಜೂರಾತಿ ಪಡೆದು, ಕೆಲವು ವರ್ಷಗಳಿಂದ ಜಿಲ್ಲೆಯ ಮತ್ತು ಹೊರಗಿನ ಶಾಲೆಗಳಲ್ಲಿ [illegible]
ಬೆಲೆ: 0—6—0
ಸಿಗುವ ಮುಖ್ಯ ಸ್ಥಳ:-
ನವಭಾರತ ಬುಕ್ ಡಿಪ್ಪೊ ಉಡುಪಿ

ಕಾರ್ಕಳ—ಕಳೆದ ತಾ 28ರಲ್ಲು ಕಾರ್ಕಳದ ಡಿ। ಮು। ಶ್ರೀ ಚಂದ್ರಶೇಖರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಮಹಾ ಜನರ ಸಭೆಯೊಂದು ಜರಗಿ ಕಾರ್ಕಳ ತಾಲೂಕಿನ ರೈತರಲ್ಲಿ ಅಧಿಕ ಬೆಳೆ ಬೆಳೆಯಿಸುವ ಸ್ಪರ್ಧೆಯೊಂದನ್ನು ಏರ್ಪಡಿಸಿ ಆ ಮೂಲಕ ಬೇಸಾಯಗಾರರು ಕೃಷಿಯಲ್ಲಿ ಸುಧಾರಣೆಯನ್ನುಂಟುಮಾಡಿ ಹೆಚ್ಚು ಲಾಭ ಪಡೆಯುವಂತೆ ಮಾಡುವ ಪ್ರಚಾರ ಮಾಡಿಸಬೇಕೆಂಬ ನಿರ್ಣಯವಾಯಿತು. ಆ ಬಗ್ಗೆ ಒಂದು ಕಮಿಟಿ ರಚಿಸಲಾಯಿತು.

ಕುಂದಾಪುರ—ಸ್ಥಳೀಯ ಪೋಸ್ಟು ಮಾಸ್ಟರ್ ಶ್ರೀ ದೇವದಾಸ ಪ್ರಭುಗಳು ಮೂಡಬಿದ್ರೆಗೆ ವರ್ಗಾಯಿಸಲ್ಪಟ್ಟದ್ದರಿಂದ ಅವರಿಗೆ ವಿದಾಯವನ್ನೀಯುವ ಸಮಾರಂಭವು ಕಳೆದ ತಾ 25ರಲ್ಲಿ ಯಶಸ್ವಿಯಾಗಿ ಜರಗಿತು. ಶ್ರೀಗಳಾದ ಸೋಮ ಶೇಖರ ರಾವ್ ಬಿ. ಚಿತ್ರಯ್ಯ, ಸಿ. ಅನಂತ ಭಟ್ ಮೊದಲಾದವರು ಶ್ರೀ ಪ್ರಭುಗಳ ಜಯ ಪ್ರಿಯತೆಯನ್ನೆತ್ತಿ ಮಾತನಾಡಿದರು. ಪೋಸ್ಟು ಆಫೀಸು ನೌಕರರ ಕಡೆಯಿಂದ ಶ್ರೀ ಪ್ರಭುಗಳಿಗೆ ಬೆಳ್ಳಿಯ ಕಪ್ ಕೊಡಲಾಯಿತು. ಮಾನ್ಯ ಅತಿಥಿಯ ಸಮಯೋಚಿತ ಮಾತುಗಳಾಗಿ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು.

ಕುಂಬಳೆ—ರೂರಲ್ ವೆಲ್‌ಫೇರ್ ಡಿಪ್ಯುಟಿ ಡ್ಯಾರೆಕ್ಟರ್ ಶ್ರೀ ಲಕ್ಷ್ಮೀ ರಥಂ ಭಾರತಿಯವರು ಕಳೆದ ತಾ 25ರಲ್ಲಿ ರೂರಲ್ ವೆಲ್‌ಫೇರ್ ಆಫೀಸರರೊಂದಿಗೆ ಈ ಫಿರ್ಕಾದ ಹಲವು ಗ್ರಾಮೋದ್ಧಾರ ಕಾರ್ಯಗಳನ್ನು ಪರಿಶೀಲಿಸಿದರು.

ಕೊಡವೂರು—ಕೊಡವೂರು ಗ್ರಾಮದ ಮೂಡುಬೆಟ್ಟನಲ್ಲಿ ಜನತಾ ಪುಸ್ತಕ ಭಂಡಾರ ಮತ್ತು ವಾಚನಾಲಯವೊಂದು ಇದೇ ತಾ 1ರಲ್ಲು ತೆರೆಯಲ್ಪಟ್ಟಿತು. ಬಳಿಕ ತಾತ್ಕಾಲಿಕ ಕಾರ್ಯ ಸಮಿತಿಗೆ ಶ್ರೀಗಳಾದ ಕೆ. ಶ್ರೀನಿವಾಸ ಭಟ್ಟ(ಅಧ್ಯಕ್ಷ) ಕೆ. ಯಾದವ ಭಂಡಾರಿ (ಕಾರ್ಯದರ್ಶಿ) ಕೆ. ಗೋಪಾಲಕೃಷ್ಣ ಭಟ್ಟ [ಉಪ ಕಾರ್ಯದರ್ಶಿ] ಕೆ. ಸೀತಾರಾಮ ಸೆಟ್ಟಿ, ಕೆ. ಹೈದರ್ ಸಾಹೇಬ ಕೆ. ಗಿರಿಯಪ್ಪ ಮತ್ತು ಕೆ. ಸುಂದರ ಸುವರ್ಣರು ಆರಿಸಲ್ಪಟ್ಟರು

ಸಾಲಿಗ್ರಾಮ [illegible]

ಹಾಲಾಡಿ—ತಾ 25-5-52ರಲ್ಲಿ ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವವು ಎತ್ತರೆ ಮಂಜಯ್ಯ ಸೆಟ್ಟಿ ಎಂ. ಎಲ್, ಎ. ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಡಿ. ಬೋ. ಪ್ರೆಸಿಡೆಂಟ್ ಮಂಜಯ್ಯ ಹೆಗ್ಡೆಯವರೂ ಡಿ. ಬೋ। ಮೆಂಬರರಾದ ಶ್ರೀಯುತ ನೇರಂಬಳ್ಳಿ ಪರಮೇಶ್ವರಯ್ಯನವರೂ ಶಾಲಾಪರವಾಗಿ ಹಿತೋಚಿತ ಮಾತುಗಳನ್ನಾಡಿದರು ಬಹುಮಾನ ವಿತರಣಾ ನಂತರ ವಿದ್ಯಾರ್ಥಿಗಳಿಂದ ವಿವಿಧವಿನೋದಾವಳಿ ಹಳೇ ವಿದ್ಯಾರ್ಥಿ ಯುವಕ ಸಂಘದವರಿಂದ ಮಾತಂಗ ಕನ್ಯಾ ನಾಟಕ ಪ್ರದರ್ಶನವಾಯಿತು.

ಬೆಳಕುಂಜೆ—ಕವಿ ಲಕ್ಷ್ಮೀ ನಾರಣಪ್ಪ(ಮುದ್ದಣ)ನ ಚಿಕ್ಕಂದಿನ ಸಹಪಾಠಿಯಾಗಿದ್ದ, 84ವರ್ಷ ಪ್ರಾಯದ ಶ್ರೀ ನಂದಳಿಕೆ ಮೆಟ್ಟುಕಲ್ಲು ದಂಡು ಶೆಟ್ಟಿಯವರು ಕಳೆದ ತಾ. 26ನೇ ಸೋಮವಾರ ಬೆಳಕುಂಜೆಯ ತಮ್ಮ ಮನೆಯಲ್ಲಿ ನಿಧನ ಹೊಂದಿದರು. ಇವರ ಪ್ರಾಥಮಿಕ ಶಿಕ್ಷಣವು ನಂದಳಿಕೆಯ ಕವಿ ಲಕ್ಷ್ಮೀ ನಾರಾಯಣನೊಂದಿಗೇನೆ ನಡೆದಿತ್ತು. ಶ್ರೀಯುತರು ನಂದಳಿಕೆಯ ಆಢ್ಯ ಮನೆತನದಲ್ಲಿ ಹುಟ್ಟಿ ಬೆಳೆದವರು. ತಮ್ಮ ಅಸಾಧಾರಣ ವ್ಯವಹಾರ ಕುಶಲತೆಯಿಂದ ಸರ್ವ ಜನಪ್ರೀತರಾಗಿದ್ದರು. ಸಾಯುವ ತನಕವೂ ಚಟುವಟಿಕೆಯಿಂದಿದ್ದು, ಶಾಂತರೀತಿಯಿಂದ ಅಸುವನ್ನು ನೀಗಿದರು ಶ್ರೀಯುತರ ನಿಧನದಿಂದ ಇಲ್ಲಿಯ ಆಸುಪಾಸಿನ ಜನರಿಗೆ ಒಬ್ಬ ಗಣ್ಯ ವ್ಯಕ್ತಿಯನ್ನೆ ಕಳಕೊಂಡಂತಾಗಿದೆ.

ಬೈಂದೂರು—ಸ್ಥಳೀಯ ಜನಪ್ರಿಯ ಸಬ್ ಪೋಸ್ಟ ಮಾಸ್ಟರ್ ಶ್ರೀ ಪಿ. ಭಾಸ್ಕರ ರಾಯರನ್ನು ಬೀಳ್ಕೊಡುವ ಸಮಾರಂಭವು ಬೈಂದೂರು ಕ್ಲಬ್ಬಿನಲ್ಲಿ ವಿಜೃಂಭಣೆಯಿಂದ ಜರಗಿತು. ಇವರು ಇಲ್ಲಿಯ ಜನತೆಗೆ ಸಲ್ಲಿಸಿರುವ ಸೇವೆಯ ಹಾಗೂ ಇವರ ಗುಣ ನಡತೆಯ ವಿಚಾರವಾಗಿ ಶ್ರೀಗಳಾದ ವಿ. ಸುಬ್ಬಣ್ಣ ಸೆಟ್ಟಿ, ಡಿ. ಆರ್. ಕುಂಬಳೆ, ಕೆ ಕೆ. ಭಟ್ಟ, A. R. ಸೆಟ್ಟಿ. B A. ಮತ್ತು ಬಿ. ಸಿ. ಹೊಳ್ಳರು ಮಾತಾಡಿ ಶ್ರೇಯೋಭಿವೃದ್ಧಿಯನ್ನು ಕೋರಿದರು.

ಕೊಕ್ಕಣೆ—ಇಲ್ಲಿಯ ಬೋ. ಹಾ ಎ. ಶಾಲೆಯ ವರ್ಧಂತಿಯು 24-5-52ರಲ್ಲಿ ಶ್ರೀ ಟಿ ಅನಂತ ಪೈ M. L. A ಇವರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿ ಉತ್ತರ ಶ್ರೇಣಿಯ ಡಿಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ ಸಂಜೀವ ರಾಯರು ಅಧ್ಯಕ್ಷರ ಪರಿಚಯ ಕಥನ ಮಾಡಿದರು. ಪಂಡಿ ಸ್ವಸ್ತಿ ವಾಚನಗಳ ತರುವಾಯ ಮಾಸ್ಕ ಪರೀಕ್ಷಾಧಿಕಾರಿಗಳಿಂದ ಬಹುಮಾನ ವಿತರಣೆ ಮಾಡಲಾಯ್ತು. ಹಲವು ಸಭಿಕರು ಶಾಲೆಯ ಹಿಂದಿನ ಇಂದಿನ ಮುಂದಿನ ವಿಷಯಗಳೊಂದಿಗೆ ಭಾಷಣ ಮಾಡಿದರು. ತರುವಾಯ ಅಧ್ಯಕ್ಷರು ಸುರಸವಾದ ಭಾಷಣ ಮಾಡಿದರು ಶಾಲಾ ಬಾಲ ಬಾಲಕಿಯರಿಂದ ವಿವಿಧ ವಿನೋದಾವಳಿಗಳೂ ಜರಗಿಸಲ್ಪಟ್ಟವು

ಬಂಟವಾಳ—ಕಳೆದ ತಾ. 25ರಲ್ಲು ಬಂಟ್ವಾಳ ಲೊರೆಟ್ಟೊ ಇಗರ್ಜಿಯ ಬಳಿಯಲ್ಲಿ ಶ್ರೀ ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಅಮ್ಟಾಡಿ, ಅರಳ, ಕುರಿಯಾಳ, ಬಂಟ್ವಾಳ ಕಸಬಾ, ಪಂಜಿಕಲ್, ಕೈಲಾ ಮತ್ತು ರಾಯಿ ಗ್ರಾಮಸ್ಥರ ಸಭೆಯೊಂದು ಜರಗಿತು. ಶ್ರೀಗಳಾದ ಎಸ್. ಎನ್ ಹೊಳ್ಳ ಮತ್ತು ಬಿ. ಆರ್. ಕರ್ಕೇರರು ಕಾಂಗ್ರೆಸ್ ಮೆಂಬರರಾಗಿ ಎಲ್ಲರೂ ಸೇರಿ ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಬೇಕೆಂದು ಕೇಳಿಕೊಂಡರು. ಬಳಿಕ ಈ ಕೆಳಗಿನ ನಿರ್ಣಯಗಳು ಪಾಸಾದುವು. ಅವನ್ನು ಸರಕಾರದ ಮುಂದಿಡಬೇಕೆಂದು ಶ್ರೀ ಬಿ. ವೈಕುಂಠ ಬಾಳಿಗರನ್ನು ಕೇಳಿಕೊಳ್ಳಲಾಯಿತು. 1ನೆ ವಿಚಾರದಲ್ಲಿ ಸರಕಾರದ ಕಡೆಯಿಂದ ರೈತರಿಗೆ ಪುನಃ ಡಿಮಾಂಡ್ ನೋಟೀಸು ಜಾರಿಯಾಗಿದೆ ಅಥವಾ ಆಗಲಿದೆ ಎಂಬುದಾಗಿ ತಿಳಿದುಬರುತ್ತದೆ. ಈ ರೀತಿ ಪುನಃ ಡಿಮಾಂಡ್ ನೋಟೀಸು ಕೊಡುವುದು ಅಕಾಲಿಕವೂ ರೈತರಿಗೆ ಕಷ್ಟತರವಾದುದೂ ಆಗಿರುವುದರಿಂದ ಪುನಃ ಲೆವಿಕ್ರಮವನ್ನು ಚಾಲ್ತಿ ಫಸಲಿ ಮಟ್ಟಿಗೆ ಕೈಕೊಳ್ಳಬಾರದಾಗಿ ಸರಕಾರವನ್ನು ವಿನಂತಿಸಲಾಯಿತು. ಈ ಕುರಿತು ಯೋಗ್ಯ ಪ್ರಯತ್ನ ಕೈಕೊಳ್ಳಬೇಕಾಗಿ ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರನ್ನು ಕೇಳಿಕೊಳ್ಳಲಾಯಿತು. 2 ಈಗಿನ ಧನಿ ಒಕ್ಕಲುಗಳ ಸಂಬಂಧದಲ್ಲಿ ತುಂಬಾ ನ್ಯೂನತೆಗಳಿರುವುದು ಕಂಡುಬರುವುದರಿಂದ ಯೋಗ್ಯತರದ ಒಕ್ಕಲುಹಿತ ಮಸೂದೆಯನ್ನು ಬೇಗನೆ ತರಬೇಕಾಗಿ ಸರಕಾರವನ್ನು ಈ ಸಭೆಯು ಕೇಳಿಕೊಳ್ಳುತ್ತದೆ. 3 ಕುಡಿಯುವ ನೀರಿನ ಅಭಾವ ಬಹಳವಾಗಿರುವುದರಿಂದ ಅಲ್ಲಲ್ಲಿ ಸಾರ್ವಜನಿಕ ಬಾವಿಗಳನ್ನು ತೋಡಿಸಬೇಕು 4 ಮೂಡಬಿದ್ರೆಯಿಂದ ಜಾರ್ಮಾಡಿಗೆ ಹೋಗುವ ಒಂದು ರಸ್ತೆಯನ್ನು ಮಾಡಿಸಬೇಕು.

ರೈಲ್ವೆ ಮಂತ್ರಿಗಳಲ್ಲಿ ದಕ್ಷಿಣಕನ್ನಡದ ನಿಯೋಗ—ದ. ಕ. ಜಿಲ್ಲೆಯ ಭಾರತ ಪಾರ್ಲಿಮೆಂಟಿನ ಸದಸ್ಯರು ಶ್ರೀಗಳಾದ ಬಿ. ಶಿವರಾವ್, ಯು. ಶ್ರೀನಿವಾಸ ಮಲ್ಯ ಮತ್ತು ಕೌನ್ಸಿಲ್ ಒಫ್ ಸ್ಟೇಟ್ ಮೆಂಬರ ಶ್ರೀ ಕೆ. ಸದಾನಂದ ಹೆಗ್ಡೆಯವರಿಂದ ಕೂಡಿದ ಶಿಷ್ಟಮಂಡಲವು ಭಾರತ ಸರಕಾರದ ರೈಲ್ವೆ ಮಂತ್ರಿಗಳಾದ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಗಳನ್ನು ಭೆಟ್ಟಿಯಾಗಿ, ಇತ್ತೀಚೆಗೆ ಬದಲಾವಣೆಹೊಂದಿದ ರೈಲ್ವೆ ಸಮಯಗಳಿಂದ ಪ್ರಯಾಣಿಕರಿಗೆ ಉಂಟಾದ ಅನಾನುಕೂಲತೆಗಳನ್ನು ನಿವೇದಿಸಿಕೊಂಡರು. ಮಾನ್ಯ ಮಂತ್ರಿಗಳು ರೈಲ್ವೆ ಮುಂಗಡ ಪತ್ರದ ಚರ್ಚೆ ಮುಗಿದ ಮೇಲೆ ಈ ವಿಚಾರವನ್ನು ಪರಿಶೀಲಿಸುವುದಾಗಿ ಆಶ್ವಾಸನೆ ಕೊಟ್ಟಿರುವುದಾಗಿ ತಿಳಿದು ಬರುತ್ತದೆ. ಶಿಷ್ಟಮಂಡಳವಲ್ಲದೆ ಶ್ರೀ ಬಿ. ಶಿವರಾಯರು ರೈಲ್ವೆ ಸಮಯ ವ್ಯತ್ಯಾಸದಿಂದ ದ. ಕ ಜಿಲ್ಲೆಗೆ ಉಂಟಾದ ಅನಾನುಕೂಲತೆಗಳನ್ನು ಕ್ರೋಡೀಕರಿಸಿ ಪ್ರತ್ಯೇಕ ಪತ್ರವೊಂದನ್ನು ರೈಲ್ವೆ ಮಂತ್ರಿಗಳಿಗೆ ಬರೆದಿರುವರೆಂದು ಗೊತ್ತಾಗಿದೆ.

ಕೂಳೂರು ಸಂಕದ ಕೆಲಸವು—ಇದೀಗ ಮುಗಿದಿದ್ದು ಅದನ್ನು ತೆರೆಯುವ ಸಮಾರಂಭವು ಇದೇ ತಿಂಗಳ 10ರಲ್ಲು ಜರಗಲಿರುವುದಾಗಿ ತಿಳಿದುಬರುತ್ತದೆ ಈ ಸಂಕ ಪೂರ್ಣಗೊಂಡಿರುವುದರಿಂದ ಮಂಗಳೂರಿನಿಂದ ಪಾವಂಜೆ ವರೆಗಿನ ಹದಿನಾಲ್ಕು ಮೈಲುಗಳ ಮೋಟಾರ್ ವಾಹನಗಳ ಸಂಚಾರವು ಸುಗಮವಾದಂತಾಯಿತು ಇನ್ನುಳಿದ ಪಾವಂಜೆ-ಮೂಲ್ಕಿ ಮತ್ತು ಉದ್ಯಾವರ ಹೊಳೆಗಳಿಗೂ ಬೇಗನೆ ಸಂಕಗಳಾಗುವಂತೆ ನಮ್ಮ ಜಿಲ್ಲೆಯ ಶಾಸನ ಸಭಾ ಸದಸ್ಯರು ಸರಕಾರವನ್ನು ಒತ್ತಾಯಿಸಬೇಕಾಗಿದೆ.

ಡಿಸ್ಟ್ರಿಕ್ಟ್ ರೂರಲ್ ವೆಲ್‌ಫೇರ್ ಕಮಿಟಿ ಸಭೆಯು—ಕಳೆದ ತಾ 24ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ ಇವರ ಅಧ್ಯಕ್ಷತೆಯಲ್ಲಿ ಸೀಲೇಶ್ವರ ಫಿರ್ಕಾದ ಕೋಟೆಪುರವ್ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಜರಗಿತು. ಜಿಲ್ಲಾ ಎಗ್ರಿಕಲ್ಚರಲ್ ಆಫೀಸರ್, ಜಿಲ್ಲಾ ವೆಟರ್ನರಿ ಆಫೀಸರ್ ಜಿಲ್ಲಾ ವಿದ್ಯಾಧಿಕಾರಿ, ಜಿಲ್ಲಾ ಡಿಪ್ಯುಟಿ ರಜಿಸ್ಟ್ರಾರ್ ಜಿಲ್ಲಾ ಹೆಲ್ತ್ ಆಫೀಸರ್ ಮೊದಲಾದವರು ತಂತಮ್ಮ ಇಲಾಖೆಗಳ ಮೂಲಕ ಆದ ಕೆಲಸಗಳ ವರದಿಯನ್ನೋದಿದರು. ಅವು ಪರಿಶೀಲಿಸಲ್ಪಟ್ಟು ರಿಕಾರ್ಡು ಮಾಡಲಾದುವು. ಮುಂದಿನ ತಿಂಗಳ ಕಾರ್ಯಯೋಜನೆಯ ವಿಚಾರ ವಿನಿಮಯವಾಗಿ ಕಾರ್ಯಕ್ರಮ ಗೊತ್ತುಮಾಡಲಾಯಿತು.

ಪ್ರಕಟಣೆ

ಉಡುಪಿ ತಾಲೂಕು ಹಾರಾಡಿ ಗ್ರಾಮದಲ್ಲಿರುವ ಹೊಸಮನೆ ಹೊನ್ನಮ್ಮ ಸೆಟ್ಟಿರ ಮಗಳು ರುಕ್ಮಿಣಿ ಸೆಡ್ತಿಯು ಈ ಮೂಲಕ ತಿಳಿಯಪಡಿಸುವದೇನೆಂದ್ರೆ

ನಾನು ನನ್ನ ಕುಟುಂಬದಲ್ಲಿ ಎಜಮಾನ್ತಿಯಾಗಿ ಕುಟುಂಬದ ಮ, ನನ್ನ ಸ್ವಂತ ಹಕ್ಕಿನ ಆಸ್ತಿಗಳ ಆಡಳ್ತೆ ನಾನು ನೋಡಿ ಬರುತ್ತೇನೆ. ನನಗೆ ಮ, ನನ್ನ ಕುಟುಂಬಕ್ಕೆ ಎಷ್ಟಂನ್ನಾದರೂ ಸಾಲಯಿರುವದಿಲ್ಲ- ಕುಟುಂಬಕ್ಕೆ ಸಾಲಮಾಡುವ ಗರ್ಜ ಕೂಡಾ ಯಿರುವದಿಲ್ಲ. ನನ್ನ ಹಿರೀ ಮಗ ಅಣ್ಣಪ್ಪ ಸೆಟ್ಟಿಯು ತನ್ನ ಮಂದ ಬುದ್ಧಿಯಿಂದ ಬೇರೆಯವರ ಪಿತೂರಿಗೆ ಮನಸ್ಸುಕೊಟ್ಟು ಕುಟುಂಬಕ್ಕೆ ನಷ್ಟ ಮತ್ತೊಂದರೆಗಳು ಮಾಡುವ ಯಿರಾದೆಯಲ್ಲಿ ಯಿರುವದಾಗಿ ನನಗೆ ತಿಳಿದು ಬರುತ್ತದೆ- ಆ ಕಾರಣ ನನ್ನ ಕುಟುಂಬಕ್ಕೆ ಬಾಧಕ ಮತ್ತು ಹಾನಿಯಾಗುವಂತಾ ಮಾತ್ತು ಯಿತರ ಯಾವದೇ ಲೇವಾದೇವಿಗಳೂ ವಹಿವಾಟುಗಳೂ ಸದರಿ ಅಣ್ಣಪ್ಪ ಸೆಟ್ಟಿಯ ಕೂಡೆ ಯಾರೂ ಮಾಡಬಾರದಾಗಿಯೂ- ಇದಕ್ಕೆ ವಿರೋಧವಾಗಿ ಇಷ್ಟರತನಕ ಯಾರೂ ಮಾಡಿದ್ದಿದ್ರೆ ಯಾ ಇನ್ನುಮುಂದೆ ಮಾಡಿದ್ರೆ ಆ ಶೆಗಳ್ಯಾವದೂ ನನ್ನ ಮೇಲಾಗ್ಲೀ ನನ್ನ ಕುಟುಂಬದ ಮೇಲಾಗ್ಲೀ ಹೊಣೆಯಾಗಬಾರದು ಎಂಬ ಸಂಗ್ತಿ ಯಿ ಮೂಲಕ ಸರ್ವಜನರಿಗೂ ತಿಳಿಯಪಡಿಸೋಣಾಗಿಯದೆ,

ಈ ಎಡ ಹೆಬ್ಬೆಟ್ಟು ಗುರ್ತು

ರುಕ್ಮಿಣಿ ಸೆಡ್ತಿ, ರುಜು.

ಹಾರಾಡಿ, ತಾ- 23-5-1952

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೇಳು ವರುಸಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ವಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದಲ್ಲಿ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿ ತಿನಸು, ಇವುಗಳ ರುಚಿ ರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI, S. Kanara.

ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಕೊರಂಗ್ರಪಾಡಿ

ಪ್ರಕಟಣೆ

ಉಡುಪಿ No. 76ನೇ ಕೊರಂಗ್ರಪಾಡಿ ಗ್ರಾಮದ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಪ್ರಥಮ ಟ್ರಸ್ಟಿಶಿಪ್ ಮಂಗಳೂರು ಎಂಡೋಮೆಂಟ್ ಬೋರ್ಡು ಕಮಿಶನರ್ ಆಫೀಸಿನಿಂದ O. No 152ರ ಪ್ರಕಾರ ನಿರ್ಣಯವಾಗಿರುತ್ತದೆ.

ಮುಂದಿನ 5 ವರ್ಷಕ್ಕೆ ಶ್ರೀಗಳಾದ I K P. ರಾಮಕೃಷ್ಣ ತಂತ್ರಿಗಳು, II B ವಿಠಲ ಶೆಟ್ಟಿ, III M S ಬಲ್ಲಾಳರು ಇವರುಗಳು ಪ್ರಥಮ ಟ್ರಸ್ಟಿಗಳಾಗಿ ನೇಮಿಸಲ್ಪಟ್ಟಿ...

ತಾಜಮಹಾಲ್



ನಗರದ ಕೇಂದ್ರದಲ್ಲಿದ್ದರೂ
ಧೂಳುಗದ್ದಲಗಳಿಗೆ
ದೂರವಾಗಿ ಪ್ರಶಾಂತ
ವಾತಾವರಣದಲ್ಲಿರುವುದು
ಒಂದು ವೈಶಿಷ್ಟ್ಯವಾಗಿದೆ.
ತಾಜಮಹಾಲಿನ
ಜನಪ್ರಿಯತೆಗೆ ನಿಮ್ಮ
ಅಮಿತ ಪ್ರೋತ್ಸಾಹವೇ
ಸಾಕ್ಷಿಯಾಗಿದೆ.
ಅದಕ್ಕಾಗಿ ತುಂಬು ಹೃದಯದ
ಕೃತಜ್ಞತೆಗಳನ್ನು
ಅರ್ಪಿಸುತ್ತೇವೆ.

ಸಿನೆಮಾ ಥಿಯೇಟರಿನ ಬಳಿ, ಉಡುಪಿ.

ಗಾರ್ಡನ್ ಪಾರ್ಟಿ



ಮಿಲ್ಕ್ ಬಾರ್

ತಾಜ್ ಮಹಾಲಿನ ಒಂದು ಸುಂದರ ನೋಟ.

ನಂಬಿಕೆಯೇ
ನಮ್ಮ ಧ್ಯೇಯ

ಸೇವೆಯೇ
ನಮ್ಮ ಧೋರಣೆ

ಪ್ರಚಾರದಂತೆ
ನಡೆಯುವುದೇ
ನಮ್ಮ ಕರ್ತವ್ಯ

ಪ್ರವಾಸಿಯ ಪತ್ರಗಳು ೩೨

ರೋಮ್ ನಗರ.

ರೋಮಿಗೆ ಇಟೇಲಿ ಭಾಷೆಯಲ್ಲಿ ರೋಮ (Roma) ಅನ್ನುತ್ತಾರೆ. ಕಳೆದ ಜೂನ್ 15 ಮತ್ತು 16ನೇ ತಾರೀಕುಗಳಲ್ಲಿ ನಾನು ಈ ನಗರವನ್ನು ಸಂದರ್ಶಿಸಿದೆ. ಈ ಮುಂಚೆ ನಾನು ಯುರೋಪಿನಲ್ಲಿ ನೋಡಿದ ಯಾವ ನಗರವೂ ಇಷ್ಟು ಪುರಾತನ ಮತ್ತು ಚಾರಿತ್ರಿಕವಲ್ಲ. ಇದರಲ್ಲಿ ಹಿಂದಿನ 2,500 ವರ್ಷಗಳಿಗೂ ಮಿಕ್ಕಿದ ಚರಿತ್ರೆಗೆ ಸಂಬಂಧಿಸಿದ ಕಟ್ಟೋಣಗಳು ಎಲ್ಲೆಲ್ಲಿಯೂ ಕಾಣಬಹುದು. ನಗರವು ಬಹಳ ವಿಸ್ತಾರವಾದದ್ದು. ಮಧ್ಯದಲ್ಲಿ ಈ ಮುಂಚೆ ಬರೆದ ಟ್ಯಾಬರ್ ನದಿ ಹರಿಯುತ್ತದೆ. ಅಲ್ಲಲ್ಲಿ ಗುಡ್ಡೆಗಳಿವೆ. ಒಂದು ಭಾಗವೆ 2000 ವರ್ಷದ ಹಿಂದೆ ರೋಮನರ ಅಡಳಿತೆಯ ರಾಜಧಾನಿ. ಆ ಕಾಲದ ಅನೇಕ ಕಟ್ಟೋಣಗಳನ್ನು ಈಗಲೂ ಕಾಣಬಹುದು. ಇನ್ನೊಂದು ಬದಿಯಲ್ಲಿ ಭೂಲೋಕದಲ್ಲಿ ಕೆಥೋಲಿಕರ ಮುಖ್ಯ ಗುರುವಾದ ಪೋಪರು ವಾಸಿಸುವ ವೆಟಿಕನ್. ಅದರಲ್ಲಿರುವ ಲೋಕಪ್ರಸಿದ್ಧ ಸ್ಯಾಂಟ್ ಪೀಟರರ ಇಗರ್ಜಿ ಮತ್ತು ನಗರದ ಇತರ ಕಡೆಗಳಲ್ಲಿ ಅನೇಕ ಇಗರ್ಜಿಗಳು. ಒಂದು ವಿಶ್ವವಿದ್ಯಾಲಯ ಮತ್ತು ಅನೇಕ ವಿದ್ಯಾ ಮಂದಿರಗಳು. ಪುರಾತನದ ಅರಮನೆಗಳು. ಒಳ್ಳೇ ವ್ಯಾಪಾರ ಮತ್ತು ಹಲವು ಕೈಗಾರಿಕೆಗಳಿರುವ ಸುಂದರವಾದ ನಗರ. ಒಟ್ಟು ಜನಸಂಖ್ಯೆ ಸುಮಾರು 2 ಮಿಲಿಯ.

ಮೊದಲಿನ ದಿನ ಬೆಳಿಗ್ಗೆ ನಾನಾಗಿಯೇ ಆ ನಗರದ ನಕ್ಷೆಯನ್ನು ಹಿಡಿದುಕೊಂಡು ಅದರ ಮುಖ್ಯ ಪೇಟೆಯನ್ನು ತಿರುಗಾಡಿದೆ, ಮಾರಾದಿನ (ತಾ, 16) ಸಾಯಂಕಾಲ ನಾನು ಆ ನಗರವನ್ನು ಆಕಾಶ ವಿಮಾನ ಮೂಲಕ ಬಿಡುವುದಾಗಿ ನಮ್ಮ ದೇಶದಿಂದ ಹೊರಡುವ ಕೆಲವು ತಿಂಗಳ ಮುಂಚೆಯೇ ನಿಶ್ಚಯವಾಗಿತ್ತು. ಆದಕಾರಣ ಆ ಕಂಪೆನಿಯ ಆಫೀಸು ಎಲ್ಲಿ ಎಂತ ತಿಳಕೊಂಡೆ. ಅನಂತರ ಅಲ್ಲಿಯೇ ಸಮೀಪವಿದ್ದ ತೋಮಸ್ ಕುಕ್ ಕಂಪೆನಿಯವರ ಆಫೀಸಿಗೆ ಹೋಗಿ ನನ್ನ ಖರ್ಚಿಗೆ ಬೇಕಾದ ಹಣವನ್ನು ಪಡ್ಯಾಸಿದೆ ಅನಂತರ ಹಾಗೆಯೇ ಕೆಲವು ಮುಖ್ಯ ರಸ್ತೆಗಳ ಬದಿಯ ಅಂಗಡಿಗಳನ್ನು ಸಂದರ್ಶಿಸಿ ಒಂದು ಬಸ್ಸು ಮೂಲಕ ಈ ನಗರದ ಒಳಗಿರುವ ಪೋಪರ ಸಂಸ್ಥಾನಕ್ಕೆ ಹೋದೆ. ಅದಕ್ಕೆ Vatican City ಅನ್ನುತ್ತಾರೆ ಅದು ಭೂಲೋಕದ ಎಲ್ಲಾ ರಾಜ್ಯಗಳಲ್ಲಿ ಅತೀ ಚಿಕ್ಕ ರಾಜ್ಯ (State). ಕೇವಲ 13½ ಎಕ್ರೆ. ಪೋಪರು ಇರುವ ಕಟ್ಟೋಣಗಳು, ಸ್ಯಾಂಟ್ ಪೀಟರರ ಇಗರ್ಜಿ, ಪೋಪರ ವಸ್ತು ಸಂಗ್ರಹ ಗ್ರಹಾ (Museum), ಪುಸ್ತಕ ಭಂಡಾರ ಮತ್ತು ಉಪ ಕಟ್ಟಡಗಳು ಮತ್ತು ಉದ್ಯಾನಗಳು ಇವೆಲ್ಲವಕ್ಕೆ (ಇಗರ್ಜಿಯ ಎದುರು ಮಾತ್ರ ಬಿಟ್ಟು) ಸುತ್ತಲೂ ಕೋಟೆಯಂತೆ ಎತ್ತರವಾದ ಗೋಡೆ; ಇದರ ಸಂಪೂರ್ಣ ಅಧಿಕಾರ ಪೋಪರಿಂದ್ದೆ. ಮುಸೊಲೋನಿಗೂ ಪೋಪರಿಗೂ 1929ರಲ್ಲಿ ಆದ ಒಪ್ಪಂದದ ಮೇರೆಗೆ ಈ ಚಿಕ್ಕ ರಾಜ್ಯದ ಆಡಳಿತೆ ಸಂಪೂರ್ಣ ಪೋಪರದ್ದೇ ಆಗಿರುತ್ತದೆ.

ಇದರಲ್ಲಿರುವ ಕಟ್ಟಡಗಳಲ್ಲಿ ಮುಖ್ಯವಾದ ಕಟ್ಟೋಣವು ಸ್ಯಾಂಟ್ ಪೀಟರರ ಇಗರ್ಜಿ. ಭೂಲೋಕದ ಎಲ್ಲಾ ಕಥೋಲಿಕ್ ಇಗರ್ಜಿಗಳಲ್ಲಿ ಇದು ಅತೀ ದೊಡ್ಡದು ಮತ್ತು ಅತೀ ಪ್ರಾಮುಖ್ಯ. ಇಲ್ಲಿಯೇ ಪೋಪರು ಆರಾಧಿಸುವುದು. ಇಗರ್ಜಿಯ ಎದುರು ಎರಡೂ ಭಾಗದಲ್ಲಿ ಬಹಳ ಎತ್ತರವಾದ 4 ಸಾಲಿನ ಕಂಬಗಳಿದ್ದು [colonnade] ಮುಂದಕ್ಕೆ ಆ ಕಂಬಗಳು ಚಕ್ರದಂತೆ ಉರುಟಾಕಾರವಾಗಿರುತ್ತವೆ. ಒಂದೊಂದು ಕಂಬ 64 ಅಡಿ ಎತ್ತರ. ಇಂಥವು ಒಂದೊಂದು ಸಾಲಿನಲ್ಲಿ 284. ಆ ಎದುರಿನ ಖಾಲಿ ಜಾಗದ ಮಧ್ಯಕತೆ ಸುಮಾರು 750 ಅಡಿ. ಮಧ್ಯ 39ನೇ ಇಸವಿಯಲ್ಲಿ ಈಜಿಪ್ಟ್ ದೇಶದಿಂದ ರೋಮನ್ ಅರಸ ಕಲಿಗುಲ ಎಂಬವನು ತಂದ 135 ಅಡಿ ಎತ್ತರ ಮತ್ತು 312 ಟನ್ ಭಾರದ ಒಂದು ಶಿಲೆಗಲ್ಲಿನ ಚೌಕದ ಕಂಭ. ಇದರ ಸುತ್ತಲೂ 46 ಅಡಿ ಎತ್ತರಕ್ಕೆ ನೀರು ಹಾರುವ ಅನೇಕ ನೀರಿನ ಬುಗ್ಗೆಗಳು [fountains], ಮೇಲೆ ಹೇಳಿದ ಎತ್ತರವಾದ ಕಂಬಗಳ ಸಾಲಿನ ತಲೆಯ ಮೇಲೆ 10 ಅಡಿ ಎತ್ತರದ ಕ್ರಿಸ್ತರ ಶಿಷ್ಯರ [apostels] ಪ್ರತಿಮೆಗಳು ಇಂಥವು 140 ಹೀಗೆ ಎದುರಿದ್ದು ಅದಕ್ಕೆ ಸರಿಯಾಗಿ ಹಿಂದೆ ಮೇಲೆ ಬರೆದ ಇಗರ್ಜಿ.

ಈ ಇಗರ್ಜಿಯು ಭೂಲೋಕದ ಮೊದಲನೇ ಇಗರ್ಜಿ ಎಂತ ಬರೆದಿದ್ದೆ. ಲಂಡನಿನ ಸ್ಯಾಂಟ್ ಪಾಲ್ ಇಗರ್ಜಿಯ ಒಳಗಿನ ಉದ್ದಳತೆ 520½ ಅಡಿ. ಕೊಲೋನ್ ಮತ್ತು ಮಿಲಾನ್ ಇಗರ್ಜಿಗಳು–443 ಅಡಿ–ಪೇರಿಸಿನ ನೋಟ್ರೆ ಡೇಮ್ ಇಗರ್ಜಿ 390 ಅಡಿ. ಎಂಟ್‍ವರ್ಪ್ ಇಗರ್ಜಿ 388 ಅಡಿ. ಇದು 632 ಅಡಿ. ಇದರ ಒಳ ಅಗಲ 461 ಅಡಿ. ಇದರ ಒಳಕ್ಕೆ ಒಂದೇ ಸಲ 1 ಲಕ್ಷ ಜನರು ಇರಬಹುದೆನ್ನುವಾಗ ಎಷ್ಟು ದೊಡ್ಡದೆಂತ ವಾಚಕರೇ ಆಲೋಚಿಸಬಹುದು.

ಆದರೆ ಬರೇ ದೊಡ್ಡದು ಮಾತ್ರವಲ್ಲ. ಇದರ ಒಳಗೆ ಬದಿಯಲ್ಲಿ ಅನೇಕ ಪ್ರಾರ್ಥನಾ ಮಂದಿರಗಳು [chapels]. ಮಾಡಿನಲ್ಲಿ ಮಧ್ಯ ಗುಂಬಜ [dome] ಮ್ಯೆಕೇಲ್ ಎಂಜಲೋ ಮಾಡಿದ್ದು. ನೆಲದಿಂದ ಅದರ ತಲೆ 444 ಅಡಿ ಮೇಲಕ್ಕೆ ಇದರ ಬುಡಕ್ಕೆ ಹೋಗಲಿಕ್ಕೆ ವಿದ್ಯುಚ್ಛಕ್ತಿಯ ಲಿಪ್ಟ್ [Lift] ಇದೆ. ಅಲ್ಲಿ ಹೋದಾಗ ಇಡೀ ರೋಮ್ ನಗರವನ್ನು ಕಾಣಬಹುದು. ಈ ಗುಂಬಜವಲ್ಲದೆ ಇನೂ ಸಣ್ಣದು 10 ಬೇರೆ. ಈ ಇಗರ್ಜಿಯಲ್ಲಿ 290 ಕಂಡಿಗಳು, 597 ಕಂಬಗಳು, 44 ಪ್ರಾರ್ಥನೆ ಮಾಡುವ ಸ್ಥಳಗಳು [altars], 435 ಪ್ರತಿಮೆಗಳು [statues] ಮತ್ತು ನೂರಾರು ಮೊಸೈಕ್ ಚಿತ್ರಗಳಿವೆ. ಈ ಇಗರ್ಜಿಯನ್ನು ಕಟ್ಟಲಿಕ್ಕೆ ಸುಮಾರು 100 ವರ್ಷ ತಾಗಿದೆ. ಬೆರಿನಿ [Berini] ಮೊದಲಾದ ಹಲವು ಶಿಲ್ಪಕಾರರು ಕೆಲಸ ಮಾಡಿ ಅಷ್ಟರಲ್ಲಿ 15ನೇ ಶತಮಾನದಲ್ಲಿ ಮ್ಯೆಕೆಲ್ ಎಂಜಲೋ ಮುಗಿಸಿದ್ದು.

ಮಧ್ಯಭಾಗದಲ್ಲಿ ಸ್ಯಾಂಟ್ ಪೀಟರರ ಸಮಾಧಿಯ ಮೇಲೆ ಪಾಪನಿವೇದನೆ Confession) ಮಾಡುವ ಪೀಠ. ಒಂದು ಕಡೆಯಲ್ಲಿ ಮ್ಯೆಕೆಲ್ ಎಂಜಲೋ 24 ವರ್ಷ ಪ್ರಾಯದಲ್ಲಿ ಬಿಳಿ ಅಮೃತ ಶಿಲೆಗಲ್ಲಿನಲ್ಲಿ ಮಾಡಿದ ಕನ್ನೆ ಮೇರಿಯು ಮತ್ತು ಕ್ರಿಸ್ತರ ಬಹು ಚೆಲುವಾದ ಪ್ರತಿಮೆ ಇದೆ. ಮರಣ ಹೊಂದಿದ ಕ್ರಿಸ್ತನನ್ನು ತನ್ನ ಕಾಲಿನ ಮೇಲೆ ಇರಿಸಿಕೊಂಡು ದುಃಖಿಸುತ್ತಾಳೆ. ಕ್ರಿಸ್ತರ ದೇಹವು ಸತ್ತ ಶವದಂತೆ ಕಾಣುತ್ತದೆ. ಇದು ಲೋಕಪ್ರಸಿದ್ಧವಾದ ಪ್ರತಿಮೆ.

ಇದರಂತೆಯೇ ಮೊದಲನೇ ಪೋಪರಾದ ಸ್ಯಾಂಟ್ ಪೀಟರ್ ಮತ್ತು ಇನ್ನು ಇತರ ಪೋಪರ ಅನೇಕ ಮೊಸೈಕ್ ಚಿತ್ರಗಳು ಗೋಡೆಯಲ್ಲಿ ಬರೆದಿವೆ. ಇವಲ್ಲಾ ಅನೇಕ ಶತಮಾನಗಳಲ್ಲಿ ಆಗಿನ ಕಲಾ ಪಂಡಿತರು ವರ್ಷಗಟ್ಟಲೆಯಲ್ಲಿ ಕೆಲಸಮಾಡಿ ಬಿಡಿಸಿದ್ದು.

ನಾನು ಹೋದಾಗ ಇಗರ್ಜಿಯ ಒಂದು ಬದಿಯಲ್ಲಿ ಕಳೆದ ಪೋಪರ ಶವವನ್ನು ಅಲ್ಲಿ ಇಟ್ಟಿದ್ದು ಸುತ್ತಲೂ ಶಿಬಂದಿಗಳು ಕಾಯುತ್ತಿದ್ದರು. ಮತ್ತು ಅನೇಕರು ಅಲ್ಲಿ ಬಂದು ಪ್ರಾರ್ಥಿಸುತ್ತಿದ್ದರು. ಇಗರ್ಜಿಯ ನೆಲದ ಕೆಳ ಮಾಳಿಗೆಯಲ್ಲಿ ಹಿಂದಿನ ಕಾಲದ ಪೋಪರ ಸಮಾಧಿಗಳಿವೆ.

ಇಗರ್ಜಿಯ ಬಲ ಬದಿಯ ಬಾಗಿಲಿನಿಂದ ಪೋಪರ ಚಿನ್ನಾಭರಣಗಳಿರುವ ಕೋಣೆಗಳಿವೆ. ಅಲ್ಲಿ ಚಿನ್ನ ವಜ್ರ ಮೊದಲಾದ ಪುರಾತನದ ಅನೇಕ ಅಮೂಲ್ಯವಾದ ಚಿನ್ನಾಭರಣಗಳನ್ನು ಗಾಜಿನ ಕನ್ನಡಿಯೊಳಗೆ ಇಟ್ಟಿರುತ್ತಾರೆ. ಅವುಗಳನ್ನು ಕಾಣಬಹುದು. ಅದಕ್ಕೆ ಪ್ರತ್ಯೇಕವಾಗಿ ಫೀಸು ಕೊಡಬೇಕು.

ಇಗರ್ಜಿಯ ಎಡಬದಿಗೆ ಪೋಪರು ವಾಸಿಸುವ ಅರಮನೆ ಮತ್ತು ವಸ್ತು ಸಂಗ್ರಹ [Museum] ಮತ್ತು ಪುಸ್ತಕ ಭಂಡಾರ. ಈ ಮುಂಚೆ ನಾನು ಪೇರಿಸಿನ ಲೂವರ್ ವಸ್ತು ಸಂಗ್ರಹ ಭಂಡಾರದ ವಿಷಯ ಬರೆದಾಗ ಇದರ ವಿಷಯ ಕೂಡ ಬರೆದಿದ್ದೆ. ಅದು ಪ್ರಥಮ ಇದು ಎರಡನೆಯದೆಂತ, ಇದರಲ್ಲಿ ಅನೇಕ ದೇಶಗಳ ಪುರಾತನದ ವಸ್ತುಗಳನ್ನು ಅನೇಕ ಶತಮಾನಗಳಿಂದ ಸಂಗ್ರಹಿಸಿ ಇಟ್ಟಿದ್ದಾರೆ. ಅದೇ ರೀತಿ ಲೋಕ ಪ್ರಸಿದ್ಧ ಚಿತ್ರಕಾರರ ನೂರಾರು ತೈಲ ಚಿತ್ರಗಳು ಪ್ರತಿಮೆಗಳು [Stateus] ಮತ್ತು ಚಿತ್ರವಿರುವ ಬಟ್ಟೆಗಳು [Tapestries]. ಅನೇಕ ದೊಡ್ಡ ಭಾಗಗಳಲ್ಲಿ (Halls) ಒಂದೊಂದರಲ್ಲಿ ಒಂದೊಂದು ವಿಷಯಗಳನ್ನು ಇಟ್ಟಿರುವರು ಹಾಗೆ 15 ಕೋಣೆಗಳಲ್ಲಿ ವಿಶೇಷ ಚಿತ್ರಗಾರರ ಚಿತ್ರಗಳು. 1ರಲ್ಲಿ ಬ್ಯಸೆಂಟ್ಯಾನ್ ಚಿತ್ರಕಾರರು, 8ರಲ್ಲಿ ರೆಫೇಲ್, 9ರಲ್ಲಿ ಲಿಯನಾರ್ಡ್ ಡಾ ವಿನ್ಸಿ, ಹಾಗೆಯೇ ವಿಭಾಗಿಸಿ ಇಟ್ಟಿರುತ್ತಾರೆ. ಒಂದು ಕಡೆ ಸಿಸ್ಟೈನ್ ಚೇಪಲ್ (Sistini chapel) ಎಂತ ಇದೆ. ಇದರಲ್ಲಿ ಮ್ಯೆಕೆಲ್ ಎಂಜಲೋ ಗೋಡೆಯಲ್ಲಿ ಮತ್ತು ಮುಚ್ಚಿಗೆಯಲ್ಲಿ ಬಿಡಿಸಿದ ಪ್ರಖ್ಯಾತ ಪಟ್ಟ ಚಿತ್ರಗಳಿವೆ. ಇವನು ಪ್ರತಿಮೆಗಳನ್ನು (Statues) ಮಾಡುವುದರಲ್ಲಿ ಎಷ್ಟು ಬುದ್ಧಿವಂತನೋ ಅಷ್ಟೇ ತೈಲ ಚಿತ್ರಗಳನ್ನು ಬಿಡಿಸುವುದರಲ್ಲಿ ಕೂಡಾ. ಇಲ್ಲಿ ಅಮೂಲ್ಯವಾದ ಪುಸ್ತಕ ಭಂಡಾರ ಕೂಡಾ ಇದೆ. ಇವನ್ನೆಲ್ಲಾ ಸುಮಾರು ನಾಲ್ಕು ಗಂಟೆ ಸಂದರ್ಶಿಸಿ ಸಮೀಪದ ಒಂದು ಹೋಟೇಲಿನಲ್ಲಿ ಫಲಾಹಾರ ಮಾಡಿ ನನ್ನ ಹೋಟೆಲಿಗೆ ಹಿಂತಿರುಗಿ ಬಂದೆ.

[ವಿಚಾರವಾಣಿ] —ಕೆ ಆರ್. ಕಾರಂತ.

[ಮುಂದರಿಯುವುದು.]

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳಿನ ವಿಷ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳುಕಡ್ಡಿ, ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

● ತೃಪ್ತಿಕರವಾದ ವಸತಿ — ಹಿತಕರವಾದ ಊಟ

● ರುಚಿಕರವಾದ ಉಪಾಹಾರ ಇವುಗಳಿಗೆ

ಉಡುಪಿಯ ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಊರ ಪರವೂರ ಸನ್ಮಾನ್ಯ ಸದ್ಗೃಹಸ್ಥರಿಂದ ಮುಕ್ತಕಂಠದಿಂದ ಹೊಗಳಿಸಿಕೊಂಡ ನಮ್ಮ ಹೋಟೆಲಿಗೇ

ಎಂದೆಂದೂ ನಿಮ್ಮ ಸಂದರ್ಶನವೀಯಲು ಮರೆಯದಿರಿ.

ಯಾತ್ರಿಕರಿಗೂ, ಪ್ರಯಾಣಿಕರಿಗೂ ಸರ್ವ ಅನುಕೂಲತೆಯುಳ್ಳಂತೆ ನಗರದ ಕೇಂದ್ರ ಭಾಗದಲ್ಲಿದೆ.

WOODLANDS

Highclass Boarding & Lodging, UDIPI S Kanara

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ ಎಂ.

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಶಾಖೆ:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗದ್ದು, ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಶಾಂತಿ ಗುಣವಾಗಿದೆ– ಬೆಲೆ; ರೂ. 3-; ಸ್ಪೆಶ್ಯಲ್ ರೂ. 5– ಅಧಿಕಾಧಿಕ ಸ್ಪೆಶ್ಯಲ್ ರೂ, 5-[ವಿ. ಪಿ ಹನ್ನೆರಡಾಣೆ ಪ್ರತ್ಯೇಕ]

Mrs. D. DEVEE, F. DB. (N. J.)

Tollygunge CALCUTTA.

ಸ್ಟಾಕಿಸ್ಟರು ಕಮಾಕಂಪನಿ, ಮಂಗಳೂರು

ತಾರೀಕು 5-6-52 ರಿಂದ

ವಾರದ ಭವಿಷ್ಯ

ತಾರೀಕು 11-6-52 ವರೆಗೆ

ಮೇಷ—ಸದ್ಯದ ಗ್ರಹ ಮಾನವು ನಿಮ್ಮ ಭಾಗಕ್ಕೆ ಸಾಕಷ್ಟು ಅನುಕೂಲವಿರುವದು. ನಿಮ್ಮ ಆರ್ಥಿಕ ಭಾಗವು ಬಹುಬೇಗ ವೃದ್ಧಿಗೊಳ್ಳಲಿದೆ. ಕೈಗೊಂಡ ಕಾರ್ಯಗಳಲ್ಲಿ ಶ್ರಮಸಾಧ್ಯವಾದವುಗಳು ಪರಾಪೇಕ್ಷೆಯಿಲ್ಲದೆ ಕೊನೆ ಹೊಂದುವವು. ಬಂಧು ಮಿತ್ರ ನೆರವು ಚೆನ್ನಾಗಿರುವದು. ಆದರೆ ಆರೋಗ್ಯವು ಅಷ್ಟೊಂದು ತೃಪ್ತಿಕರವಾಗಿರದು. ಗೃಹ ತಾಪತ್ರಯಗಳು ಕೆಲ ಮಟ್ಟಿಗೆ ಪೀಡಿಸಲಿವೆ. ತಾ 5-6-11 ಈ ದಿನಗಳಲ್ಲಿ ಬಯಕೆಗಳು ನಿರ್ವಿಘ್ನದಿಂದ ನೆರವೇರಲಿವೆ.

ವೃಷಭ—ಕಷ್ಟಪಟ್ಟು ದುಡಿಯಿರಿ. ಇಷ್ಟದಂತೆ ಕಾರ್ಯವು ನೆರವೇರುವದು. ಆದರೆ ಆಕಸ್ಮಿಕ ಖರ್ಚು ವೆಚ್ಚಗಳು ನಿಮ್ಮನ್ನು ರಿಕ್ತ ಹಸ್ತರನ್ನಾಗಿ ಮಾಡಲಿವೆ. ಭೃತ್ಯಾದಿಗಳು ಅವಿಧೇಯತೆಯಿಂದ ವರ್ತಿಸುವರು. ವಿನಾ ಕಾರಣ ಜನರೊಡನೆ ಕಲಹ ವಾದೀತು. ಅನಿರೀಕ್ಷಿತ ಪ್ರವಾಸಗಳೊದಗಿ ನಿಮ್ಮ ದುಡಿಮೆಯ ಬಹ್ವಂಶವನ್ನು ಆ ಸಲುವಾಗಿ ವ್ಯಯಿಸಬೇಕಾಗುವದು. ತನುಮನಗಳಿಗೆ ಶಾಂತಿಯಿರದು. ವಾರಾದಿಯ 4 ದಿನಗಳು ಹಿತಕರವಿವೆ.

ಮಿಥುನ—ಕೆಲವು ಸ್ವಲ್ಪ ಸ್ರುತಿಕೊಲಸ್ಕಿಕೆಗೆ ಬಂದಿರುವದು. ಗೃಹ ತಾಪತ್ರಯಗಳು ದಿನೇ ದಿನೇ ಹೆಚ್ಚುವವು. ಮನಸ್ಸು ಅತೀವ ಚಂಚಲವಾಗುವದು. ಆತ್ಮೀಯರ ವಿರಹದಿಂದ ಕೊರಗುವ ನಿಮಗೆ ಆರ್ಥಿಕ ಬಿಕ್ಕಟ್ಟು ಅಧಿಕವಾದೀತು. ಆದರೂ ಏಳಾದಶದಲ್ಲಿರತಕ್ಕ ಸುರಗುರುಗಳು ತಾ. 7-8 9-10 ಈ ದಿನಗಳಲ್ಲಿ ನಿಮ್ಮನ್ನು ನಿಶ್ಚಿಂತರನ್ನಾಗಿ ಮಾಡಲಿರುವರು.

ಕರ್ಕಾಟ—ಸ ದಿನವೀಗ ಸಮೀಪಿಸಿದೆ. ನಿಮ್ಮ ಯಾವತ್ತೂ ಬಯಕೆಗಳು ಅಚಿರದಲ್ಲಿ ಅನಾಯಾಸದಿಂದ ಸಿದ್ಧಿಸಲಿವೆ. ಬಲಿಯರಾದ ಶತ್ರುಗಳೂ ಕೂಡ ಶರಣಾಗತರಾಗುವರು. ನಿಮ್ಮ ಸಂಪತ್ತಾಗವು ವಿಶೇಷತಃ ಸಂಘಟಿಸಲಿದೆ. ತರುಣರು ಸದಾ ಶ್ವಾದಿಂದ ಕೆಲವೊಮ್ಮೆ ಅನಿಷ್ಟ ಅಪವಾದಗಳವಕಾಶವಿದೆಯಾದ್ದರಿಂದ ವಾರಾದಿಯ 4 ದಿನಗಳಲ್ಲಿ ಜಾಗ್ರತೆಯಿಂದಿರಿ.

ಸಿಂಹ—ಎಂತಹ ಮಹತ್ಕಾರ್ಯವನ್ನೂ ಕೂಡ ತೃಣಪ್ರಾಯವಾಗಿ ಸಾಧಿಸುವಿರಿ. ಗುರುಹಿರಿಯರೂ ಬಂಧುಮಿತ್ರರೂ ಸರ್ಕಾರ್ತನೂ ನಿಮಗೆ ನೆರವಾಗುವರು. ಯಾವ ಭಾಗದಲ್ಲೂ ನಿಮಗೆ ಚಿಂತೆಗೆ ಅವಕಾಶವಿಲ್ಲವು. ನಷ್ಟವಾದ ವಸ್ತು ಒಡವೆಗಳೂ ಅನಾಯಾಸದಿಂದ ಲಭಿಸುವವು. ತಾ- 5, 6, 11 ಈ ದಿನಗಳು ಅತೀವ ಪ್ರಶಸ್ತಗಳಾಗಿವೆ.

ಕನ್ಯಾ—ದೈವವು ಅತೀವ ದುರ್ಬಲವಾಗಿರುವುದು. ಚಿನ್ನವನ್ನು ಹಿಡಿದರೂ ಇಂದೀಗ ಮಣ್ಣಾಗುವ ಸಂಭವವಿದೆ. ನೀವೆಷ್ಟೇ ಕಷ್ಟಪಟ್ಟು ದುಡಿದರೂ ನಿಮ್ಮ ಪರಿಶ್ರಮವು ವ್ಯರ್ಥವಾಗುವುದು. ಹಣದ ಅಡಚಣೆಯಿಂದಾಗಿ ಮರ್ಯಾದೆ ಉಳಿಸಿಕೊಳ್ಳುವುದು ಕಷ್ಟವೆನಿಸುವದು. ಆದರೂ ಭಾಗ್ಯಾಧಿಪನಾದ ಶುಕ್ರನು ಆಪತ್ಕಾಲದಲ್ಲಿ ನೆರವಾದಾನು. ತಾ 7, 8 ಅನುಕೂಲ.

ತುಲಾ:-ದುರ್ದಿನಗಳು ದೂರ ಸರಿದವು. ಗುರ್ವಾನುಗ್ರಹವು ನಿಮಗೀಗ ಪ್ರಾಪ್ತವಾಗಿರುವುದರಿಂದ ಹೆಚ್ಚಿನ ಕಾರ್ಯಗಳು ನಿಮ್ಮಂತೆ ಸಿದ್ಧಿಸಲಿವೆ. ಅನಿರೀಕ್ಷಿತ ಧನಾಗಮವಾಗುವ ಯೋಗವಿದೆ, ಸಮಾಜದಲ್ಲಿ ಗಣ್ಯಸ್ಥಾನವನು ಪಡೆವಿರಿ. ಆದರೆ ಪ್ರಯಾಣಗಳಲ್ಲಿ ಜಾಗ್ರತೆಯಿಂದಿರಿ ಅಪಘಾತಗಳಿಗೆ ಅವಕಾಶವಿದೆ. ವಿದ್ಯೋಪಜೀವಿಗಳಿಗೀಕಾರವು ಉತ್ತಮವಾಗುವುದು. ತಾ 5, 6, 9, 10 ಈ ದಿನಗಳಲ್ಲಿ ನಿಮ್ಮ ಬಯಕೆಯು ಸಿದ್ಧಿಸಲಿದೆ.

ವೃಶ್ಚಿಕ—ಶನೇಶ್ವರನನ್ನು ಬಿಟ್ಟು ಇತರ ಗ್ರಹಮಂಡಲವೇ ನಿಮ್ಮ ಮೇಲೆ ವಿಮುಖನಾಗಿರುವುದರಿಂದ ಸದ್ಯ ನೀವು ಇಲ್ಲಸಲ್ಲದ ಕಷ್ಟನಷ್ಟಗಳಿಗುರಿಯಾಗಲಿರುವಿರಿ. ವಿಶೇಷತಃ ಸ್ತ್ರೀಯರ ನಿಮಿತ್ತ ಅನಿಷ್ಟ ಅಪವಾದಗಳಿಗೆ ಅವಕಾಶವಿದೆ. ವಿತ್ತಾಧಿಕ್ಯದಿಂದ ಆರೋಗ್ಯ ಕೆಡುವುದು. ಮನೋರೋಗವು ಪ್ರಬಲವಾಗುವದು. ತಾ. 7, 8, 11 ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳಿಗವಕಾಶವಿಲ್ಲ.

ಧನು—ಉದ್ಯೋಗ ನೌಕರಿ ವ್ಯಾಪಾರಾದಿಗಳಲ್ಲಿ ಸರ್ವತ್ರ ಪ್ರಗತಿಯುಂಟಾಗಲಿದೆ, ನಿಮ್ಮ ಮನೋರೋಗವು ದೂರವಾಗುವುದು. ಆರ್ಥಿಕ ದುರವಸ್ಥೆಯಿಂದ ಮುಕ್ತರಾಗಿ ನಿಶ್ಚಿಂತೆಯಿಂದಿರುವಿರಿ. ಸಮಾಜದಲ್ಲೂ ಕೂಡ ಒಳ್ಳೆಯ ಸ್ಥಾನಮಾನಗಳು ಲಭಿಸುವವು. ಗೃಹಸ್ಥರಿಗೆ ಸುತ ಮುಖದರ್ಶನ ಯೋಗವಿದೆ, ತಾ. 5, 6, 9, 10 ಈ ದಿನಗಳಲ್ಲಿ ಸುಖಭೋಜನ ವಿಜಯಲಾಭಗಳಿವೆ.

ಮಕರ—ವಿನಾಕಾರಣ ಬಂಧು ಬಳಗದವರಲ್ಲಿ ಕಲಹ ಕಚ್ಚಾಟಗಳುಂಟಾಗುವವು ಮಾತ್ರವಲ್ಲ ಮನೆಯಲ್ಲಿ ತಂದೆಮಕ್ಕಳೊಳು ಗಂಡಹೆಂಡಿರೊಳು ಜಗಳವುಂಟಾಗಲಿದೆ. ಗೃಹತ ಪತ್ರಯಗಳಿಂದ ಸತತ ಪೀಡಿಕರಾದ ನಿಮಗೆ ಹಣದ ಬಿಕ್ಕಟ್ಟು ಅಧಿಕವಾಗಿ ಬಾಧಿಸಲಿದೆ. ಶತ್ರುಜನರ ಪೀಡೆಯಿಂದಾಗಿ ಜೀವನದಲ್ಲೇ ವಿರಕ್ತಿಯುಂಟಾದೀತು. ತಾ. 9, 10 ಬಿಟ್ಟುಳಿದ ದಿನಗಳು ಹೆಚ್ಚಿನ ಕಷ್ಟದಾಯಿಗಳಾಗಲಾರವು.

ಕುಂಭ—ನಿಮ್ಮ ದೈವವಿಂದು ಬಹಳ ಹೀನಸ್ಥಿತಿಗೆ ಬಂದಿದೆ. ವ್ಯರ್ಥ ಪರಿಶ್ರಮವೇ ಹೊರತು ಫಲವೇನೂ ಕಾಣಿಸದು. ಹೆಚ್ಚಿನ ಕಾರ್ಯಗಳನ್ನು ವಿಘ್ನಗಳಿಂದಾಗಿ ಅರ್ಧದಲ್ಲೇ ಕೈಬಿಡಬೇಕಾಗಿ ಬರುವದು. ದೇಹದಲ್ಲಿ ನಿಶ್ಶಕ್ತಿ ಕ್ಷೀಣತೆ ಹೆಚ್ಚಲಿದೆ. ಶತ್ರುವರ್ಗದವರು ಪ್ರತೀಕಾರಾಸಕ್ತರಾಗಿರುವರು. ಆರ್ಥಿಕ ಭಾಗಕ್ಕೆ ಹೆಚ್ಚಿನ ಧಕ್ಕೆಯುಂಟಾಗದು. ತಾ. 7, 8, 9, 10 ಈ ದಿನಗಳಲ್ಲಿ ನಿಮ್ಮ ಸಂಕಲ್ಪ ಸಿದ್ಧಿಸಲಿದೆ.

ಮೀನ—ಬಲಿಯರಾದ ವಿರೋಧಿ ಪಕ್ಷದವರು ನಿಮ್ಮ ಧನಮಾನಗಳಿಗೆ ವಿಶೇಷ ಧಕ್ಕೆಯನ್ನು ತರಲು ಯತ್ನಿಸುವರು. ಆದರೂ ದೈವಬಲ ಸಂಪನ್ನರಾದ ನಿಮಗೆ ಕಾರ್ಯದಲ್ಲಿ ವಿಜಯವೂ ಪರಿಶ್ರಮಕ್ಕುಚಿತವಾದ ಫಲಪ್ರಾಪ್ತಿಯೂ ಇರುತ್ತದೆ. ನಿರುದ್ಯೋಗ ಸಮಸ್ಯೆಯಿಂದ ಮುಕ್ತರಾಗುವಿರಿ. ಜನತೆಯ ಮತ್ತು ಸರ್ಕಾರದ ಬೆಂಬಲ ಯುಕ್ತರಾದ ನಿಮಗೆ ವಾರಾಂತ್ಯದ 3 ದಿನಗಳು ಸುಖದಾಯಿಗಳಾಗಿವೆ.

ಕವಿರಾಜ ಯನ್ ಯನ್. ಸೇನರ

ಶಾಸ್ತ್ರೀಯ ಔಷಧಿಗಳು

ಈಗಲೇ ಬಂದಿವೆ

ಬೃಹತ್ ಅಮೃತಬಳ್ಳಿ ಕಷಾಯ
ಪ್ರಸೂತಾರಿಷ್ಟ
ಕಸ್ತೂರಿ ಕಲ್ಪ ರಸಾಯನ
ನೇತ್ರಬಿಂದು
ಕುಮಾರ್ಯಾರಿಷ್ಟ
ದುರ್ಗಾ ಪುನರ್ನವಾಸವ
ಬಾಲಾರಿಷ್ಟ
ಕುಂಕುಮಾಸವ
ಮೃಗಾಂಕ ದ್ರಾವ

ಇದರವನ್ನು ವಿಚಾರಿಸುವದು.
ಏಜಂಟ್:—
ಶಾ ಕಂಪೆನಿ, ಮಂಗಳೂರು ನಂ. 1.

ಸಾರ್ವಜನಿಕರ ಉಪಯೋಗಕ್ಕಾಗಿ ಅಮೂಲ್ಯ ರತ್ನ ಪ್ರಯೋಗ!

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯದ ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

ಆಳಿನವ ಲೇಹ್ಯ ರೂ ೫/೪, ೩೦ ದಿನದ ಲೇಹ್ಯ ರೂ ೩/೪
(ಪೋಸ್ಟೇಜು ಮಾಫಿ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನ ಎ ರಾಮ ಸ್ವಾಮಿ ಅಯ್ಯರ್ ರವರ

ಸಂತಾನ ಸಿಂಧೂರ

ಬಹಿಷ್ಠೆ ಸಂಬಂಧದ ಹೊಟ್ಟೆನೋವು ಉರಿ [illegible] ಮತ್ತು ಬಹಿಷ್ಠೆ [illegible] ಹೊಟ್ಟೆನೋವಿನ ಜೊತೆಗೆ ತಲೆನೋವು, ಸೊಂಟ, ಕುಮ್ಮನೋವು, ಅಜೀರ್ಣ, ಕಮ್ಮ, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ.

[illegible] ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ೧ ಸೆಟು ಅನುಪಾನಪತ್ರಿಕೆ ಮೇರೆ ಇಟ್ಟು ೩ ಸೇವಿಸಿರಿ ಸಾಕು. ಶೋಭನವಾದ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾ ಪತ್ರಗಳನ್ನು ಪಡೆದಿದೆ.

ಕ್ರಯ: ೧ ಸೆಟ್ 5 ರೂ ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1 ರೂ ವಿ. ಪಿ. ಇಲ್ಲ ಕ್ಯಾಟಲಾಗ್ ಉಚಿತ 6 ರೂ ಮನಿಆರ್ಡರ್ ಮಾಡಿರಿ ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ:—A R ವಿಶ್ವೇಶ್ವರಯ್ಯ (ಎ ರಾಮಸ್ವಾಮಿ ಅಯ್ಯರ್ ಸನ್,)

Prop: ಸಂತಾನ ಸಿಂಧೂರ, ಅಂಬಳೆ ಪೋಸ್ಟು, ಯಳಂದೂರು ತಾ. ಮೈಸೂರು ಡಿ ಮೈಸೂರು ರಾಜ್ಯ; 269 ಸೋನಾರ್ ಸ್ಟ್ರೀಟ್, ದಿವಾನ್ಸ್ ರೋಡು, ಮೈಸೂರು.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.
Moolky, S. K

ಕೊರಡ್ಕಲ್ ಶ್ರೀನಿವಾಸರಾವ್ ಕೃತ

ಆಂಗ್ಲ ಸ್ವಯಂಬೋಧಿನಿ.

ಬೆಲೆ ರೂ- 1-8-0, ವಿ- ಪಿ ದ್ವಾರ ರೂ- 2-0-0

ಡಾ| ಕೊರಡ್ಕಲ್ ವೆಂಕಟರಾವ್ ಕೃತ

ಮನೆ ಮದ್ದು

ಸುಲಭ ಚಿಕಿತ್ಸೆಗಳು.

ಬೆಲೆ ರೂ- 2-0-0, ವಿ- ಪಿ. ದ್ವಾರ ರೂ- 2-10-0

ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published by K H Shetty at the Navayuga Press, Udipi, S. India.

Regd. No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪನೆ
೩೧ನೆಯ ವರ್ಷ

'12-6-1952

Founder: Sri A. B. Shetty
Minister for Medical & Public Health

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಸಾರ್ವಜನಿಕ
ಆರೋಗ್ಯ ಮಂತ್ರಿ
ಶ್ರೀ ಎ. ಬಿ. ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಪೋಸ್ಟ್ ಬಾಕ್ಸ್
ನಂಬ್ರ 22
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ 5-12-0
6 ತಿಂಗಳಿಗೆ
ರೂ 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೪೦

NAVAYUGA WEEKLY Post Box No. 22 UDIPI. Vol 31 No. 40

ಮಧುಪರ್ಕ

ಒಬ್ಬ ರೋಗಿಯನ್ನು ಗಾಜಿನ ಕಿಟಕಿಯ ಎದುರು ನಿಲ್ಲಿಸಿ "ನಿಮಗೇನು ಕಾಣುತ್ತಿದೆ?" ಎಂದು ಪ್ರಶ್ನಿಸಿದರು.

"ಎಷ್ಟು ಸುಂದರವಾದ ದೃಶ್ಯ ನಿಸರ್ಗದ ರಮಣೀಯತೆಗೆ ಮೈಮರೆಯುತ್ತೇನೆ" ಎಂದು ಅವನು ಹೇಳಿದ.

ಒಡನೆಯೇ ಒಂದು ದೊಡ್ಡ ನಿಲುವುಗನ್ನಡಿ ಎದುರಿಗೆ ಅವನನ್ನು ಕರೆತಂದರು. ಈಗೇನು ಕಾಣುತ್ತಿದೆ? ಎಂದು ಕೇಳಿದರು.

"ನನ್ನ ಮುಖವೇ ನನಗೆ ತೋರುತ್ತದೆ—ಛಿ, ಎಂಥ ಕುರೂಪ ನನ್ನದು!" ಎಂದವನು ಮ್ಲಾನವದನಗೊಂಡ.

"ತಿಳಿಯಿತೇ, ಮಹಾಶಯ್ಯ? ಅದು ಸ್ವಚ್ಛವಾದ ಗಾಜು—ಸುಂದರ ಚಿತ್ರವನ್ನು ತೋರಿಸುತ್ತದೆ. ಇದೋ, ಬೆನ್ನಹಿಂದೆ ಪಾದರಸದ ಲೇಪ ಇದೆ—ಎಂತಲೇ, ನಿಮ್ಮ ದೋಷವನ್ನದು ಎತ್ತಿ ತೋರಿಸುತ್ತದೆ"

ನಾವು ಪರಿಶುದ್ಧರಾಗಿದ್ದರೆ, ನಮ್ಮ ಸಂಪರ್ಕಕ್ಕೆ ಬರುವವರೂ ನಿರ್ಮಲ ಗುಣಸಂಪನ್ನರು, ಕೆಡುಕರಾಗಿದ್ದರೆ, ಉಳಿದವರೂ ನಮಗೆ ಕೇಡುಂಟುಮಾಡುವರು.

ನೈರ್ಮಲ್ಯ ರಕ್ಷಣೆ

ದೈನಂದಿನ ಜೀವನದಲ್ಲಿ ನೈರ್ಮಲ್ಯ ರಕ್ಷಣೆಯ ಕಡೆಗೆ ನಾವು ಎಷ್ಟು ಲಕ್ಷ್ಯ ಪುರೈಸಿದರೂ ಸಾಲದು. ದೈಹಿಕ ನೈರ್ಮಲ್ಯವಷ್ಟೇ ಅಲ್ಲ—ಮಾನಸಿಕ ನೈರ್ಮಲ್ಯವೂ ನಮ್ಮ ಸೌಖ್ಯಕ್ಕೆ ಅಗತ್ಯ. ನಿತ್ಯ ವ್ಯವಹಾರದಲ್ಲಿ ಸುಗಮತೆ ಕಂಡುಬರಲಿಕ್ಕೂ ನೈರ್ಮಲ್ಯ ರಕ್ಷಣೆ ಅವಶ್ಯಕವೆನಿಸಿದೆ. ನಮ್ಮ ನಡೆನುಡಿಗಳಲ್ಲಿ ಪರಿಶುದ್ಧ ಒಡಮೂಡದಿದ್ದರೆ, ಬದುಕು ದುರಂತಮಯವಾಗುವ ಅಂಜಿಕೆ ಇದೆ.

ಪೌರತ್ವದ ಕರ್ತವ್ಯ ಜ್ಞಾನದ ಪರಿಪೂರ್ಣತೆಗೆ ನೈರ್ಮಲ್ಯ ರಕ್ಷಣೆಯ ಕೂಲಂಕಷ ವಿವೇಚನೆಯು ಪೋಷಕವಾಗಿದೆ. ನಾಡು ಶಾಂತಿಯ ಬೀಡಾಗಿ, ಜನತೆ ಸುಖಿ ಎನಿಸಬೇಕಾದರೆ— ಎಲ್ಲ ಕ್ಷೇತ್ರಗಳಲ್ಲಿಯೂ ನೈರ್ಮಲ್ಯವನ್ನು ಕಾಯ್ದುಕೊಳ್ಳಬೇಕು. ಸಾಮಾಜಿಕ ಕ್ಷೇಮಕ್ಕಾಗಲೀ, ರಾಷ್ಟ್ರೀಯ ಅಭ್ಯುದಯಕ್ಕಾಗಲೀ, ವ್ಯಕ್ತಿಗತ ಸೌಖ್ಯಕ್ಕಾಗಲೀ—ನಿರ್ಮಲ ಭಾವನೆ ಇಟ್ಟುಕೊಂಡು ದುಡಿಯುವುದು ಲೇಸು.

ಮಾರ್ಗದ ಮೇಲೆ ಅಸಡ್ಡೆಯಿಂದ ಬಾಳೆ ಹಣ್ಣಿನ ಸಿಪ್ಪೆ ಎಸೆದವನೊಬ್ಬ ಒಳ್ಳೆಯ ಕೆಲಸವನ್ನು ಮಾಡಲಿಲ್ಲ—ಅದರ ಮೇಲೆ ನೊಣಗಳು ಕೂತು, ದುರ್ಗಂಧವನ್ನು ಹುಟ್ಟಿಸಿದುವು; ಜೊತೆಗೆ ಒಬ್ಬ ಭದ್ರಮನುಷ್ಯನು ಕಣ್ಣು ತಪ್ಪಿ ಅದರ ಮೇಲೆ ಹೆಜ್ಜೆ ಇಟ್ಟಾಗ ಅವನು ಜಾರಿ ಬಿದ್ದನು. ಪರಿಣಾಮವಾಗಿ ಸೊಂಟದ ಕೀಲು ಮುರಿಯಿತು! ಒಂದು ಸಣ್ಣ ತಪ್ಪಿನಿಂದ—ತಪ್ಪು ಎನ್ನುವುದಕ್ಕಿಂತಲೂ ಅದನ್ನು ನಿರ್ಲಕ್ಷ್ಯ ಭಾವ ಎಂದು ಕರೆಯುವುದೇ ಸರಿ—ಒಂದು ವ್ಯಕ್ತಿಯ ಭವಿಷ್ಯವೇ ಕತ್ತಲುಗೂಡಿತು. ಇದು ನಾಗರಿಕರ ಕರ್ತವ್ಯ ಧರ್ಮವಾಗಲಾರದು. ಸರ್ವರ ಸುಖಾಕಾಂಕ್ಷಿಗಳಾಗಿರುವ ಜನ ಎಂದಿಗೂ ಸಣ್ಣಪುಟ್ಟ ಪ್ರಮಾದಗಳನ್ನೇ ಆದರೂ ಕಡೆಗಣಿಸುವಂತಿಲ್ಲ.

ಬೇಕೆಂದೇ ಮಾರ್ಗಗಳನ್ನು ಕೊಳಕು ಮಾಡುವವರ ಮೇಲೆ ಪಿಚಕಾರಿಯಿಂದ ನೀರು ಚಿಮ್ಮಿ—ಬಣ್ಣದ ನೀರನ್ನಲ್ಲ—ಬುದ್ಧಿ ಕಲಿಸಬೇಕು ಎಂಬ ಈಚೆಗೆ ರಾಜಾಜಿ ಹೇಳಿದ ಮಾತನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಈ ಬುದ್ಧಿವಾದವನ್ನು ರಾಜ್ಯದ ಮುಖ್ಯ ಮಂತ್ರಿ ಹೇಳಿದನೆಂಬುದಕ್ಕಾಗಿ ನಾವು ಗೌರವಿಸುವುದಲ್ಲ—ಅದರಲ್ಲಿ ಪ್ರಜಾಜನ ಹಿತದ ಅಪೇಕ್ಷೆ ಹುದುಗಿದೆ, ಮತ್ತದು ಸೌಖ್ಯಪ್ರದವಾಗಿದೆ ಎಂಬುದಕ್ಕಾಗಿ ಅದನ್ನು ಆದರಿಸಬೇಕು. ಶುದ್ಧಿಯನ್ನು ಗಡ್ಡವನ್ನಾಗಿಸಬಾರದು, ನಿಜ. ಆದರೆ ಇದರ ಸರಿಯಾದ ಅರ್ಥವನ್ನು ಮನಗಾಣಬೇಕಾದುದೂ ಅಗತ್ಯ. ಇತರರ ಸೂಕ್ಷ್ಮ ಛಿದ್ರವನ್ನು ದೊಡ್ಡದು ಮಾಡಿ ಟೀಕಿಸುವುದು, ಅದರ ಮಹಾತ್ಮ್ಯವನ್ನು ವರ್ಣಿಸುವುದು ಪುರುಷಾರ್ಥವಲ್ಲ. ಸೂಜಿಯು ವಸ್ತ್ರವನ್ನು ತೂತು ಮಾಡುತ್ತದೆ-ಆದರೆ ನೂಲು ತೂತನ್ನು ಮುಚ್ಚುತ್ತದೆ. ನಾವು ಸೂಜಿಯಂತಾಗುವುದು ಬೇಡ—ನೂಲಿನ ಆದರ್ಶವನ್ನು ಅನುಸರಿಸೋಣ.

ಇತರರ ತಪ್ಪುಗಳನ್ನು ಎಣಿಸುತ್ತಾ ಕೂಡುವ ಬುದ್ಧಿ ನಮಗೆ ಕ್ಷೇಮ ತರುವುದಿಲ್ಲ. ಒದಲಿಗೆ ಅದರಿಂದ ಇಲ್ಲದ ತಾಪತ್ರಯ ನಮಗೆ ಅಂಟಿಕೊಳ್ಳುವುದು. ನಮ್ಮ ಕರ್ತವ್ಯವನ್ನು ಮರೆತು ಕ್ಷುಲ್ಲಕ ವಿಷಯಗಳಲ್ಲಿ ನಾವು ಬದುಕನು, ಆದರ ಸವಿಯನ್ನು ಹಾಳುಗೆಡವುತ್ತೇವೆ. ಶ್ರೀ ರಾಮಕೃಷ್ಣ ಪರಮಹಂಸರು ಒಂದು ಕಥೆ ಹೇಳುತ್ತಿದ್ದರು—ಒಬ್ಬ ಸೂಳೆಯು ನಿರುಪಾಯಳಾಗಿ ದೇಹ ವಿಕ್ರಯಿಸಿ ಜೀವಿಸುತ್ತಿದ್ದಳು. ಇವಳ ಪಾಪ ಕಾರ್ಯವನ್ನು ನಿಕ್ಷಿಸಲು ಬಯಸಿ, ಒಬ್ಬ ಸನ್ಯಾಸಿಯು ಉಪದೇಶ ನೀಡಿದನು. ಸೂಳೆಗೆ ತಾನು ಮಾಡುತ್ತಿರುವ ಕೆಲಸ ಸರಿಯಲ್ಲವೆಂದು ಮನವರಿಕೆಯಾಯಿತು. ಲಕ್ಷ್ಯಾಂತರ ಯುವಕರ ಬದುಕನ್ನು ತಾನು ಹಾಳುಗೆಡವ ಬೇಕಾಯಿತೇ ಎಂದು ಅತ್ತು, ಮರುಗಿದಳು. ಆದರೆ ಜೀವನ ಯಾಪನಕ್ಕೆ ಬೇರೆ ಮಾರ್ಗ ತೆರೆದಿಡಲಿಲ್ಲವಾಗಿ, ಮರಳಿ ಉದ್ಯೋಗಕ್ಕೆ ಇಳಿದಳು. ಸನ್ಯಾಸಿಗೆ ಅವಳ ಮನೆಗೆ ಹೋಗಿ ಬರುವರ ಲೆಕ್ಕ ಇಡುವುದು ಮತ್ತು ಸಂಖ್ಯೆಯ ಪಾಪದ ಗುಡ್ಡ ಎಷ್ಟು ಬೆಳೆಯಿತಪ್ಪಾ ಎಂದು ಚಿಂತಿಸುವುದು—ಇದೇ ಕೆಲಸವಾಯಿತು. ಈ ಹಟ್ಟಿನಲ್ಲಿ ತನ್ನ ಕರ್ತವ್ಯವೇನು ಎಂಬುದನ್ನವನು ಮರೆತನು. ನಿತ್ಯದ ಪೂಜಾ ಪಾಠಗಳನ್ನು ಮಾಡಿದರೂ, ಅದರಲ್ಲಿ ಮನಸ್ಸಿರಲಿಲ್ಲ—ನೈರ್ಮಲ್ಯವಿರಲಿಲ್ಲ. ಕೊನೆಗೊಂದು ದಿನ ಪಶ್ಚಾತ್ತಾಪದಗ್ಧಳಾದ ಸೂಳೆ ಮೃತಿಹೊಂದಳು. ಅವಳಿಗೆ ಸ್ವರ್ಗ ಪ್ರಾಪ್ತಿಯಾಯಿತು. ಸನ್ಯಾಸಿಯು ನರಕಕ್ಕೆ ಹೋದನು. ಸೂಳೆಯ ನಾರುವ ದೇಹ ಬೀದಿಯ ನಾಯಿಗೆ ಆಹಾರವಾಯಿತು. ಸನ್ಯಾಸಿಯ ಹೃಷ್ಟಪುಷ್ಟ ಶರೀರಕ್ಕೆ ಭವ್ಯ ಸಂಸ್ಕಾರವಾಯಿತು. ಆದರೆ ದೇವರು ಹೊರಗನ್ನು ನೋಡುವುದಿಲ್ಲ—ಒಳಗಿನ ನಿರ್ಮಲತೆ ಕಡೆಗೆಯೇ ಅವನ ದೃಷ್ಟಿ. ಎಂತಲೇ ಪರಿಶುದ್ಧ ಮನಸ್ಸಿದ್ದ ಸೂಳೆಗೆ ಸ್ವರ್ಗ ಲಭಿಸಿತು; ಅದೇ ಮನದಲ್ಲಿ ಮಾಲಿನ್ಯಕ್ಕೆಡೆಗೊಟ್ಟ ಸನ್ಯಾಸಿ ನರಕ ಭಾಜನನಾದನು.

ಇದು ಒಳ್ಳೆಯ ನೀತಿಕಥೆಯಲ್ಲವೇ? ಪ್ರತಿಯೊಬ್ಬನೂ ತನ್ನ ಸ್ವಂತ ಜವಾಬ್ದಾರಿಯನ್ನು ಮನನ ಮಾಡಿ, ಅದರಂತೆ ವರ್ತಿಸಿದರೆ ಲೋಕ ಕಲ್ಯಾಣಕ್ಕೆ ವಿಳಂಬವಾಗುವುದೇಂತು? ಆದರೆ ಇಂಥ ಸದ್ಬುದ್ಧಿಯ ಕೊರತೆಯೇ ಇಂದು ಎತ್ತ ನೋಡಿದತ್ತ ಕಾಣಬರುತ್ತಿದೆ. ಲೋಕಕ್ಷೇಮದ ಚಿಂತನೆಗೆ ಸೊರಗುತ್ತಿದೆ. ವ್ಯರ್ಥ ಕಾಲಕ್ಷೇಪ ಎಂದು ದೂರುವವರೂ ಕಡಿಮೆಯಿಲ್ಲ—ಆದರೆ ರಾಷ್ಟ್ರಸಂಘವನ್ನು ಜನ ಇಷ್ಟು [illegible] ಏಕವೂ [illegible] ದಿಂದ ನೋಡಬೇಕೆಂಬುದನ್ನು ಮತ್ತು [illegible]

ಹೊಸ ಶಾಖೆ

ದಿನದಿನಕ್ಕೆ ಅಭಿವೃದ್ಧಿ ಹೊಂದುತ್ತಿರುವ
ಜಿಲ್ಲೆಯ ಕೇಂದ್ರಗಳಲ್ಲೊಂದಾದ
ಕಿನ್ನಿಗೋಳಿ
ಯಲ್ಲಿ ಇದೇ ಕಳೆದ ತಾ. 2-6-1952ರಂದು
ದಿ ಕೆನರಾ ಇಂಡಸ್ಟ್ರೀಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್, ಲಿ.,
ಇವರು ಹೊಸದೊಂದು ಶಾಖೆಯನ್ನು ತೆರೆದಿದ್ದಾರೆಂದು
ಸಂತೋಷಪೂರ್ವಕವಾಗಿ ತಿಳಿಸಬಯಸುತ್ತಾರೆ
ಎಲ್ಲಾತರದ ಬೇಂಕಿಂಗ್ ವ್ಯವಹಾರಗಳನ್ನು
ಕೈಕೊಳ್ಳಲಾಗುತ್ತದೆ.

The Canara Industrial & Banking Syndicate Ltd.

ESTD: 1925. H. O: UDIPI.

ಮನ್ನಿಸಿ, ಪೂಜಿಸುವರೆಂಬುದನ್ನು ನಾವು ಕಾಣುತ್ತೇವೆ, ಅಲ್ಲವೆ!

ಎಲ್ಲಿಗಾದರೂ ಹೊರಗೆ ಹೊರಡುವಾಗ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುವ ಅಭ್ಯಾಸ ನಮ್ಮಲ್ಲಿ ಹಲವರಿಗಿದೆ. ಇದರಂತೆ ನಮ್ಮ ಬುದ್ಧಿಯ ದರ್ಪಣದಲ್ಲಿ ನಡತೆಯ ಸ್ವರೂಪ ಹೇಗಿದೆ ಎಂಬುದನ್ನು ನೋಡಿಕೊಂಡರೆ ಎಷ್ಟು ಚೆನ್ನ! ನಮ್ಮ ಕಷ್ಟನಷ್ಟಗಳಿಗೆ ಇತರರನ್ನು ಹಳಿಯುತ್ತೇವೆ. ತೊಂದರೆ ತಾಪತ್ರಯಗಳು ಬೇರೆಯವರ ಕಾರಣದಿಂದ ಉಂಟಾದವು ಎಂದು ದೂರುತ್ತೇವೆ, ನಮ್ಮ ಅಸೌಖ್ಯಕ್ಕೆ ದುಃಖಕ್ಕೆ ಮೂರನೆಯವರೇ ಹೊಣೆಗಾರರೆಂದು ನಿಷ್ಠುರದ ಮಾತಾಡುತ್ತೇವೆ. ಇದೆಲ್ಲ ನಿಜವೆ?— ನಿರ್ವಿಕಲ್ಪ ಚಿತ್ತದಿಂದ ಇದನ್ನು ಪರಾಂಬರಿಸಿದಾಗ ಧರ್ಮಶಾಸ್ತ್ರ ಸಾರುವ "ಪಾಪ"ದ ಭೂತ ನಮ್ಮನ್ನು ಬಿಡದೆ ಕಾಡತೊಡಗುವುದು. ನಮ್ಮ ಪ್ರತಿಯೊಂದು ದುಃಖಕ್ಕೂ ಮೂಲದಲ್ಲಿ ನಮ್ಮಲ್ಲಿರುವ ಕೊರತೆಯೇ ಕಾರಣವೆಂಬುದರ ಜ್ಞಾನ ನಮಗಾಗುವುದು. ಈ ಕೊರತೆಯನ್ನು, ಕೊಳೆಯನ್ನು ದೂರೀಕರಿಸಿದ ಹೊರತು, ನಮ್ಮ ಬದುಕು ಸೌಖ್ಯ ಅನುಭವಿಸುವಂತಿಲ್ಲ. ಆದುದರಿಂದ ನೈರ್ಮಲ್ಯ ರಕ್ಷಣೆಯೇ ನಮ್ಮ ಪ್ರಥಮ ಕರ್ತವ್ಯವಾಗಲಿ ಎನ್ನುತ್ತೇವೆ.

ಸರಕಾರದ ಎಷ್ಟೋ ಕುಂದು ಕೊರತೆಗಳಿಗೆ ಆಡಳಿತ ಯಂತ್ರದ ಲೋಪದೋಷಗಳೇ ಕಾರಣವೆಂದು ಜನರು ದೂಷಿಸುತ್ತಿದ್ದರೆ, ಜನರು ತಮ್ಮ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುವುದಿಲ್ಲವೆಂಬುದಾಗಿ ಪ್ರತ್ಯಾರೋಪ ಸಿದ್ಧವೇ ಇದೆ. ಪರಸ್ಪರ ದೋಷ ಹೊರಿಸುವುದರಿಂದ ಸಂಘರ್ಷವೇಳಬಹುದೇ ಹೊರತು ಇಷ್ಟಸಿದ್ಧಿಯಾಗಲಾರದು. ಉದಾಹರಣೆಗೆ ಪಾನನಿರ್ಬಂಧವನ್ನೇ ನೋಡೋಣ—ಸರಕಾರದ ಹೇಳಿಕೆಯಂತೆ, ಜನತೆಯ ಸೌಖ್ಯಕ್ಕೆ ಮಾರಕವಾಗಿರುವ ಅಮಲು ಸೇವನೆಯ ಅಭ್ಯಾಸವನ್ನು ದೂರೀಕರಿಸುವುದು ಜನಹಿತಸಾಧನೆಯ ಪ್ರಥಮ ಸೋಪಾನ. ಈ ಕಾರಣಕ್ಕಾಗಿ ಕೋಟ್ಯಂತರ ರೂಪಾಯಿಯ ವರಮಾನವನ್ನು ಲೆಕ್ಕಿಸದೆ ಸರಕಾರ ಈ ಪುಣ್ಯಕಾರ್ಯಕ್ಕೆ ಕೈಹಾಕಿದೆ. ಜನರು ಹೇಳುವಂತೆ, ಇದರಿಂದ ಸರಕಾರದ ಆದಾಯಕ್ಕೆ ಸಂಚಕಾರ ಬಂದಿತೇ ವಿನಹ ಜನರು ಸ್ವರ್ಗಸುಖದ ಲೇಶಮಾತ್ರ ಅನುಭವವನ್ನು ಪಡೆಯಲಿಲ್ಲ. ಅವರ ದುಡ್ಡು ಉಳಿಯಲಿಲ್ಲ—ಬಡತನ ದೂರಾಗಲಿಲ್ಲ. ಕಳ್ಳತನ ಮತ್ತು ಭ್ರಷ್ಟಾಚಾರಕ್ಕೆ ಅಪ್ರತ್ಯಕ್ಷ ಪ್ರೋತ್ಸಾಹವೇ ದೊರೆಯಿತು.

ಇಂಥ ಪರಿಸ್ಥಿತಿ ನಿರ್ಮಾಣದ ಹೊಣೆ ಯಾರಮೇಲೆ? ಸರಕಾರದ ತಪ್ಪೋ ಅಥವಾ ಜನತೆಯ ಕರ್ತವ್ಯ ಪರಾಙ್ಮುಖತೆಯೊ?—ಇದನ್ನು ತೂಗಿ ನೋಡುವುದು, ಮತ್ತೊಂದು ನಿರ್ಣಯಕ್ಕೆ ಬರುವುದು ಸುಲಭವಲ್ಲ. ರಾಜಾಜಿ ಈಚೆಗೆ ಪತ್ರಿಕಾಪ್ರತಿನಿಧಿಗಳಿಗೆ ಉತ್ತರಿಸುತ್ತ— ಜನರು ದುಷ್ಟನಾಶಕೆಗೆ ಒಲಿಬಿದ್ದು ಕಳ್ಳಭಟ್ಟಿ ಇಳಿಸಿ, ಸೆರೆ ತಯಾರಿಸಿ, ಕಳ್ಳು ಪೂರೈಸುವ ಪಾಪಕೃತ್ಯಕ್ಕೆ ಹೋಗದಿರುತ್ತಿದ್ದರೆ, ಅಪರಾಧ ಹೆಚ್ಚುತ್ತಿರಲಿಲ್ಲ ಎಂದರು. ಜನ ಸರಕಾರದ ತಪ್ಪನ್ನು ಬೊಟ್ಟಿಟ್ಟು ತೋರಿಸುತ್ತಾರೆಯೇ ಹೊರತು ತಾವು ಅಕ್ರಮ ರೀತಿಯಲ್ಲಿ, ಕಾಯಿದೆ ಭಂಗ ಮಾಡುತ್ತಿರುವುದು ಸರಿಯಲ್ಲ ಎಂದು ಯೋಚಿಸುವುದಿಲ್ಲ. ಈ ಮನಃಪ್ರವೃತ್ತಿ ಪರಿವರ್ತನೆ ಹೊಂದುವುದು ಬಹಳ ಅಗತ್ಯ.

ರಾಷ್ಟ್ರದ ಏಳಿಗೆ ಮತ್ತು ಅಭಿವೃದ್ಧಿಗಳಿಗಾಗಿ ಜನರು ಚಾರಿತ್ರ್ಯಬಲ ಸಂಪನ್ನರಾಗಬೇಕು. ಅನುಚಿತ ಕೆಲಸಗಳಿಗೆ ಸರ್ವಥಾ ಮನಗೊಡಬಾರದು. ದೂಷಿತ ಭಾವನೆಗೆ ನಿಂದೆಯ ಕೆಲಸಕ್ಕೆ, ಮತ್ತು ಅಲ್ಲಸಲ್ಲದ ಜೊಲಸು ವ್ಯಾಪಾರಕ್ಕೆ ಜನ ಮುಂದಾಗಬಾರದು. ಸಾವಧಾನದಿಂದ ಆತ್ಮನಿರೀಕ್ಷಣೆ ಮಾಡಿಕೊಂಡಿರುವುದು ಬಹಳ ಒಳ್ಳೆಯ ಗುಣ. ಅಂತರಂಗ ಮತ್ತು ಬಹಿರಂಗ ರೂಪದಿಂದ ನೈರ್ಮಲ್ಯವನ್ನು ರಕ್ಷಿಸುತ್ತ, ನಿತ್ಯವ್ಯವಹಾರದಲ್ಲಿ ಬುದ್ಧಿಯನ್ನುಪಯೋಗಿಸಿ, ಕಾರ್ಯ ಪ್ರವೃತ್ತರಾಗುವುದು ಸಾಮಾನ್ಯ ಪ್ರಜೆಯ ಹೊಣೆಗಾರಿಕೆ. ಇದನ್ನು ತಿಳಿದುಕೊಂಡು ಬಂಗಾರದ ಬದುಕು ಬಾಳುವ ಅದೃಷ್ಟ ಎಲ್ಲರದಾಗಲಿ! ಓಂ ತತ್ಸತ್

ಮಣ್ಣಿನೊಡನೆ ಚೆನ್ನಾಟಕ್ಕೆಳಸುವ ಉದ್ಯಮ

ಕುಲಾಲ ಚಕ್ರವನ್ನು ತಿರುಗಿಸಿ, ದೇಶದ ಬಡ ಜನತೆಯ ನಿತ್ಯಾವಶ್ಯಕತೆಯೊಂದನ್ನು ಅಗ್ಗದರದಲ್ಲಿ ಪೂರೈಸುವ ಕುಂಬಾರನನ್ನು ನಾವು ಕಂಡಿಲ್ಲವೆ? ಕೊಜೆ ಮಣ್ಣನ್ನು ತನ್ನ ಸ್ವಂತ ಕೌಶಲ್ಯದ ಪರಿಣಾಮವಾಗಿ ಅಂದ ಚೆಂದದ ಪಾತ್ರೆ ಪರಡಿಗಳಲ್ಲಿ ರೂಪಾಂತರಿಸುವ ಅವನ ಕೈಚಳಕಕ್ಕೆ ನಾವು ವಿಸ್ಮಿತರಾಗಬೇಕು.. ಅವನು ಶಾಲಾ ಕಾಲೇಜುಗಳಲ್ಲಿ ಉಚ್ಚ ಶಿಕ್ಷಣ ಪಡೆಯಲಿಲ್ಲ—ಅಕ್ಷರಾಭ್ಯಾಸವಿರುವಷ್ಟು ಮಟ್ಟಿನ ವಿದ್ಯಾವಂತನೂ ಅವನಿರುವುದಿಲ್ಲ. ಒಬ್ಬ ಮಂಕನನ್ನು "ಏನೋ, ಕುಂಬಾರ—" ಎಂದು ನಾವು (ಬುದ್ಧಿವಂತರು?) ಮೂದಲಿಸುತ್ತೇವೆ. ನಿಜವಾದ ಕುಂಬಾರನ ಹಸ್ತಕೌಶಲ್ಯವಾಗಲೀ ಬುದ್ಧಿ ಮತ್ತೆಯಾಗಲೀ ನಮ್ಮಲ್ಲಿಲ್ಲ ಎಂಬುದನ್ನು ಆಗಳಿಗೆ ಮರೆಯುತ್ತೇವೆ.

ಪ್ರಥಮ ಪ್ರಾಶಸ್ತ್ಯ

ನಮ್ಮಂತೆಯೇ ಚೀನಾ ಕೂಡ ಕುಂಬಾರಿಕೆಗೆ ಹೆಸರಾದ ನಾಡು. ನಮ್ಮ ಕುಂಬಾರರು ಸಾವಿರಾರು ವರ್ಷಗಳಿಂದಲೇ ಗೃಹೋದ್ಯಮದಲ್ಲಿ ನಿರತರಾಗಿದ್ದಾರೆ. ಲೋಹದ ಪಾತ್ರೆ ಪರಡಿಗಳಿಗೂ ಹಿಂದಿನ ಕಾಲದಲ್ಲಿ ಮಣ್ಣಿನ ವಸ್ತು ಒಡವೆಗಳ ಉಪಯೋಗವಾಗುತಿತ್ತು. ಚೀನಾದಲ್ಲಂತೂ ತಾಮ್ರ ಇತ್ಯಾದಿಗಳನ್ನು ನಿತ್ಯ ಜೀವನದಲ್ಲಿ ಬಹಳ ಕಡಿಮೆ ಉಪಯೋಗಿಸುವರು. ಸೊಗಸಾದ ಚೈನಾ ಮಣ್ಣು ಅವರ ಎಲ್ಲ ನಿತ್ಯೋಪಯೋಗಿ ಪಾತ್ರೆಗಳಿಗೆ ವಿಪುಲವಾಗಿ ಉಪಯೋಗಿಸಲ್ಪಡುತ್ತದೆ, ತರತರದ ಕುಸುರಿಗಳನ್ನು ಕೆತ್ತಿ, ಬಳ್ಳಿಗಳನ್ನು ಬಿಡಿಸಿ, ಪಾತ್ರೆಯ ಬಾಹ್ಯ ಸೌಂದರ್ಯವನ್ನು ಹೆಚ್ಚಿಸುವುದರಲ್ಲಿ ಚೀನೀಯರಿಗೆ ಸರಿ ಮಿಗಿಲೆನಿಸುವ ಇನ್ನೊಂದು ಜನಾಂಗವೇ ವಿಶ್ವದಲ್ಲಿಲ್ಲ.

ಇಂದಿನ ವರೆಗೆ ಗೃಹೋದ್ಯಮವಾಗಿದ್ದ ಕುಂಬಾರಿಕೆಗೆ ಈ ಶತಮಾನದ ಆದಿಯಿಂದ ಯಾಂತ್ರಿಕ ಕೈಗಾರಿಕೆಯ ಸ್ಥಾನ ಪ್ರಾಪ್ತವಾಯಿತು. ಕೊಜೆ ಮಣ್ಣು ಮತ್ತು ಬಿಳಿದಾದ ಚೈನಾ ಮಣ್ಣುಗಳ ಉಪಯೋಗವು ದಿನ ಬಳಕೆಯ ಪಾತ್ರೆ ತಯಾರಿಗಷ್ಟೇ ಅಲ್ಲದೆ— ಇತರ ಬಗೆಯ ವೈಜ್ಞಾನಿಕ ಕಾರ್ಯಗಳಿಗೂ ಆಗತ್ಯವೆನಿಸಿತು. ಮುಖ್ಯವಾಗಿ ವಿದ್ಯುಚ್ಛಕ್ತಿಯ ಸಲಕರಣೆಗಳಲ್ಲಿ ವಿದ್ಯುನ್ನಿರೋಧಕಗಳಾಗಿ ಬಳಸಲು ಪಿಂಗಾಣಿ ಇತ್ಯಾದಿ ಅನುಕೂಲವೆನಿಸಿತು. ಹಾಗೆಯೇ ಮಿತಿಮೀರಿದ ಉಷ್ಣವನ್ನು ತಡೆಯಬಲ್ಲ ಇಟ್ಟಿಗೆ, ಹಂಚು ಮುಂತಾದವುಗಳ ಉಪಯೋಗವು ಸಿಮೆಂಟಿನೊಡನೆ ತಾನೂ ಬೆಳೆಯಿತು. ಇದರ ಜೊತೆಗೆ ಮಿನಾಯಿ ಕೆಲಸವೇ ಮೊದಲಾದುವುಗಳಿಗೆ ಪ್ರಾಶಸ್ತ್ಯ ಬಂತು.

ಭೂ ಗರ್ಭದ ಭಂಡಾರ

ಇವೆಲ್ಲ ಕುಂಬಾರಿಕೆಯನ್ನು ಈಗಿನ ಉನ್ನತ ಸ್ಥಿತಿಗೆ ಏರಿಸಿದವು. ಇಂದು ಇತರ ಔದ್ಯಮಿಕ ಕ್ಷೇತ್ರದ ಬೆಳವಣಿಗೆಗೆ ಕುಂಬಾರಿಕೆ ಎಷ್ಟು ಆಗತ್ಯ ಬಿದ್ದಿದೆ ಎಂದರೆ— ಇದನ್ನು ಮೂಲ ಕೈಗಾರಿಕೆ ಎಂದೇ ಪರಿಗಣಿಸುವರು. ಕೊಜೆ ಮಣ್ಣಿನ ಸರಕುಗಳು ಸಮಗ್ರ ಪ್ರಪಂಚದಲ್ಲಿಯೇ ಹೆಸರಾದ ಮತ್ತು ದೀರ್ಘಕಾಲ ಬಾಳಿಕೆ ಕೊಡುವ ಗೃಹನಿರ್ಮಾಣದ ಸಲಕರಣೆಗಳಾಗಿವೆ. ಸಿಮೆಂಟ್ ಸಹ ಕೊಜೆ ಮಣ್ಣು ಮತ್ತು ಸುಣ್ಣದ ಮಿಶ್ರಫಲವಾದುದರಿಂದ—ಇಟ್ಟಿಗೆ, ಹಂಚುಗಳ ಉಪಯೋಗ ತಗ್ಗಿದರೂ ಕುಂಬಾರಿಕೆಗೆ ಧಕ್ಕೆ ಬರಲಿಕ್ಕಿಲ್ಲ ಎಂಬಷ್ಟು ಜನಪ್ರಿಯವಾಗಿದೆ.

ಕೆರೆ—ನದಿಗಳ ದಂಡೆಯಮೇಲೆ ಸಿಗುವ ಸಾಮಾನ್ಯ ಕೊಜೆಮಣ್ಣು ಅಥವಾ ಚೈನಾ ಮಣ್ಣು ನಮ್ಮ ದೇಶದಲ್ಲಿ ಬೇಕೆಂದಷ್ಟು ಇದೆ. ಇದರ ಹೊರತು ಕುಂಬಾರಿಕೆಯಲ್ಲಿ ಉಪಯೋಗಕ್ಕೆ ಬೇಕಾಗಿರುವ ಜಿಪ್ಸಂ, ಕ್ವಾರ್ಟ್ಸ್, ಫೆಲ್ಸ್ಪಾರ್, ಮುಂತಾದ ಧಾತುಗಳ ವಿಪುಲ ಭಂಡಾರ ನಮ್ಮ ಭೂಗರ್ಭದಲ್ಲಿದೆ. ಬಿಳಿ ಕೊಜೆಮಣ್ಣಿನ ಉಪಯೋಗವು ಸಾಮಾನ್ಯ. ಕೊಜೆಮಣ್ಣಿನಷ್ಟು ಹೆಚ್ಚು ಇನ್ನೂ ಬಳಕೆಗೆಬಂದಿಲ್ಲ—ಆದರೆ ಅದನ್ನು ಬೆಳೆಸಲು ಅವಕಾಶವಿದೆ.

ಅಭಿವೃದ್ಧಿಗೆ ಆಸ್ಪದ

ಕೈಗಾರಿಕೆಯ ಮಟ್ಟಕ್ಕೆ ಕುಂಬಾರಿಕೆ ಬರುವಾಗ ಅದನ್ನು ವಿವಿಧ ವಿಭಾಗಗಳಾಗಿ ವಿಂಗಡಿಸುತ್ತಾರೆ—ವಿದ್ಯುತ್ತಿನ ಸಲಕರಣೆಗಳು, ರಸಾಯನ ಪ್ರಯೋಗ ಶಾಲೆಯ ಉಪಕರಣಗಳು, ಆರೋಗ್ಯರಕ್ಷಣೆಯ ಸಾಮಗ್ರಿಗಳು, ಉಷ್ಣ ನಿರೋಧಕಗಳು, ಸಾಮಾನ್ಯ ಮತ್ತು ವಿಶೇಷ ಬಗೆಯ ಹಂಚು, ಇಟ್ಟಿಗೆಗಳು ಇವೆಲ್ಲ ರೀತಿಯಲ್ಲಿ ಉದ್ಯಮವು ಅಭಿವೃದ್ಧಿ ಹೊಂದಬೇಕಾದರೆ— ಪ್ರತಿಯೊಂದೂ ವರ್ಗದ ಸಾಮಗ್ರಿಗಳನ್ನು ತಯಾರಿಸುವಾಗ ಮಣ್ಣಿನ ಗುಣಲಕ್ಷಣಗಳನ್ನು ಮತ್ತು ಅದು ವಿವಿಧ ರಾಸಾಯನಿಕ ಕ್ರಿಯೆಗಳಿಗೆ ತೋರುವ ಪ್ರತಿಕ್ರಿಯೆಯನ್ನು ಅಭ್ಯಸಿಸುವುದು ಅಗತ್ಯ. ವಸ್ತುಗಳ ವೈಶಿಷ್ಟ್ಯ ಕೆಡದಂತೆ ಸರಕುಗಳ ಸಿದ್ಧತೆ ನಡೆಯುವ ಪ್ರತಿಯೊಂದೂ ಹಂತದಲ್ಲಿ (ಉದಾ— ಮಣ್ಣನ್ನು ಹದಗೊಳಿಸುವುದು ರೂಪ ಕೊಡುವುದು, ಚಂದ ಕೊಡುವುದು, ಒಣಗಿಸುವುದು ಕಾಯಿಸುವುದು) ಯಂತ್ರದ ಬಳಕೆಯನ್ನು ಹೆಚ್ಚಿಸಲು ಪ್ರಯತ್ನಿಸಿದರೆ ಒಳ್ಳೆಯದು. ಈ ಉದ್ಯಮದಲ್ಲಿ ಹಸ್ತಕೌಶಲ್ಯಕ್ಕೆ ಇದ್ದಷ್ಟು ಪ್ರಾಧಾನ್ಯ ಬೇರಾವುದಕ್ಕೂ ಸಲ್ಲತಕ್ಕದ್ದಿರುವುದಿಲ್ಲ. ಎಷ್ಟು ಯಂತ್ರಗಳು ಬಂದರೂ, ಮಾನವನ ಸೂಕ್ಷ್ಮ ಬುದ್ಧಿಯನ್ನು ಮತ್ತು ಕಲಾದೃಷ್ಟಿಯನ್ನು ಮೀರಿ, ಅವು ಕೆಲಸಮಾಡಲಾರವು.

ಜಲವಿದ್ಯುತ್ತಿನ ಅಭಿವೃದ್ಧಿ ಯೋಜನೆಗೆ ಭಾರತದಲ್ಲಿ ಇಂಬು ದೊರೆತಿದೆ. ಅಣೆಕಟ್ಟುಗಳಿಂದ ಕೃಷಿಗೆ ನೀರಾವರಿಯ ನೆರವು ದೊರೆತಂತೆ, ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯ ಸಹಾಯವೂ ಸಿಗುತ್ತದೆ. ಆಗ ನಮಗೆ ಧಾರಾಳವಾಗಿ ವಿದ್ಯುನ್ನಿರೋಧಕ ಮತ್ತಿತರ ಸಾಮಗ್ರಿಗಳು ಬೇಕಾಗುವುವು. ಪಿಂಗಾಣಿಯಿಂದ ತಯಾರಾಗುವ ಈ ಸಲಕರಣೆಗಳಿಗೆ ಈಗಲೇ ಸಾಕಷ್ಟು ಹೆಚ್ಚು ಬೇಡಿಕೆ ಇದೆ ಎಂದ ಮೇಲೆ ಈ ಉದ್ಯಮವನ್ನು ತ್ವರಿತ ಗತಿಯಿಂದ ಅಭಿವೃದ್ಧಿಗೊಳಿಸದಿದ್ದರೆ—ಮತ್ತೆ ನಾವು ನಿರಾಶರಾಗುವ ಪ್ರಸಂಗ ಬಂದೀತು. ಹಾಗೆಯೇ ಉಷ್ಣ ನಿರೋಧಕ ಸಾಮರ್ಥ್ಯವುಳ್ಳ ಮಣ್ಣಿನ ಒಡವೆಗಳು ಕೈಗಾರಿಕೆಯಲ್ಲಿ ಪ್ರಾಮುಖ್ಯತೆ ಪಡೆದಿವೆ, ಉಗಿಯ ಗುಡಾಣವು ಬಾ

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs 10 lacks
3. Has granted an average dividend of 6% to the Shareholders for the past 20 years
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies

ADOPT IT AS
"MY BANK"
THE VIJAYA BANK, LIMITED,
H. O., MANGALORE.

...ದ ಇಟ್ಟಿಗೆ ಇಲ್ಲದೆ ಕೆಲಸ ನಡೆಸದ- ...ಧದಲ್ಲಿ ಉಪಯೋಗಿಸುವ ಸಿಲಿಮ...ಟ, ಕೀನೈಟ, ಕ್ರೋಮೈಟ, ಮಾಗ್ನೆ...ಟ, ಬೋಕ್ಸೈಟ, ಗ್ರಾಫೈಟ, ಜಿರ್ಕೋ...ಯಾ ಮುಂತಾದುವಕ್ಕೆ ನಾವೇನೂ ಹೆ...ರಬೇಕಿಲ್ಲ. ಇತರ ದೇಶಗಳಿಗೆ ನಾವು ಈ ...ದುರಗಳನ್ನು ಧಾರಾಳವಾಗಿ ಈಗ ರ...ಫ್ತು ಮಾಡುತ್ತೇವೆ-ಅದನ್ನು ನಮ್ಮ ಉ...ಯೋಗಕ್ಕೆ ಬಳಸಿಕೊಂಡರೂ ನಡೆದೀ...ತು. ಅದೇಕೆ—ರಫ್ತು ನಿಷೇಧಿಸಬೇಕೆಂಬ ಆ...ವಶ್ಯವೂ ಬಾರದಷ್ಟು ನಮ್ಮ ಭೂಗರ್ಭ...ದಲ್ಲಿ ಈ ಧಾತುಗಳ ಸಂಗ್ರಹವಿದೆ.

ಉತ್ಪಾದನೆಯ ಮಟ್ಟ

ಯುದ್ಧಕ್ಕೆ ಮೊದಲು ನಮಗೆ ಬೇಕೆನ...ದ ಮಣ್ಣಿನೊಡವೆಗಳು ವಿಲಾಯಿತಿ ಮ...ತ್ತು ಜಪಾನುಗಳಿಂದ ಆಮದಾಗುತಿದ್ದು...ವು. ಈಗ ನಮ್ಮಲ್ಲಿಯೇ ಸುಮಾರು ೫೦ ...ಕಾರಖಾನೆಗಳು ಹುಟ್ಟಿಕೊಂಡಿವೆ. ಇವು...ಗಳಲ್ಲಿ ಐದಾರು ದೊಡ್ಡ ಮಟ್ಟದವು. ...ಧುನಿಕ ಕುಲುಮೆ ಮತ್ತು ಸ್ವಯಂಗತಿ...ಯುಳ್ಳ ಯಂತ್ರಗಳಿಂದ ಸುಸಜ್ಜಿತವಾಗಿ...ವೆ. ಈಗಿನ ಉತ್ಪಾದನೆಯು ಯುದ್ಧ ಪೂ...ರ್ವಕ್ಕಿಂತ ನಾಲ್ಕು ಪಾಲಷ್ಟು ಹೆಚ್ಚಿಕೊಂ...ಡಿದೆ. ಅವುಗಳ ಲಕ್ಷಣದಲ್ಲಿ ಮತ್ತು ತಾಳಿ...ಕೆ-ಬಾಳಿಕೆಯಲ್ಲಿ ಸಹ ಅಭಿವೃದ್ಧಿಯಾಗಿ...ದೆ. ಕೆಲವು ಒಡವೆಗಳು ಆಮದಾಗುವ ವ...ಸ್ತುಗಳಷ್ಟೇ ಶ್ರೇಷ್ಠವೆಂದು ಪರಿಗಣಿಸಲ್ಪ...ಡುತ್ತವೆ. ಬಿಳಿ ಕೋಣೆ ಮಣ್ಣಿನ ವಸ್ತುಗಳ ...ಉತ್ಪಾದನೆ ೬೦೫೭ ಟನ್ನುಗಳದ್ದು ...೧೯೫೧ರಲ್ಲಿ ೯೧೯೫ ಟನ್ನಿಗೇರಿತು, ಹಾಗೆ ...ಯೇ, ಉತ್ಪಾದಿತವಾದ ಹೊಳಪಿನ ಹಂ...ಚುಗಳು ೯೨,೫೭೫ ಡಜನುಗಳಿಗಿಂತ ...೩,೧೨,೭೦೦ ಡಜನುಗಳಿಗೇರಿತು. ಉಷ್ಣ ...ನಿರೋಧಕಗಳು ೨,೩೩,೯೮೮ ಟನ್ನುಗಳಿ...ದ್ದುದು ೨,೩೭,೬೦೦ ಟನ್ನುಗಳಿಗೇರಿತು. ಈ ಬಗೆಯ ಪ್ರಗತಿ ಸಾಮಾನ್ಯವಾಗಿ ಪ್ರತಿಯೊಂದೂ ವಿಭಾಗದಲ್ಲಿ ಆಗಿರುವುದು. ಆಧುನಿಕ ಯಂತ್ರ ಸಲಕರಣೆಗಳನ್ನು ಬಳಸುವುದರಿಂದಲೂ ಈ ಉದ್ಯಮ ಬಹಳಷ್ಟು ಅಭಿವೃದ್ಧಿ ಹೊಂದಲು ಎಡೆ ಇದೆ. ಸರಕುಗಳ ತಾಳಿಕೆ-ಬಾಳಿಕೆಯು ಹೆಚ್ಚುವಂತೆ, ಅವುಗಳ ಮಟ್ಟ ಏರುವಂತೆ ಹಾಗೂ ಉತ್ಪಾದನೆ ಬಹುಮುಖವಾಗುವಂತೆ, ಬುದ್ಧಿವಂತಿಕೆ ಉಪಯೋಗಿಸಿ ಕೆಲಸ ಮಾಡಿದರೆ, ಹೆಚ್ಚಿನ ಲಾಭದ ಆಸೆ ಇಟ್ಟುಕೊಳ್ಳಬಹುದು.

ಸಂಶೋಧನೆಯ ನೆರವು

ಭಾರತ ಸರಕಾರದ ಭೂಗರ್ಭ ಸಂಶೋಧನಾ ಶಾಖೆಯೊಂದಿಗೆ ಕಲಕತ್ತೆಯ ಸಂಸ್ಥೆಯೊಂದು ಸಹ ಕಲಿಕುತ್ತಾ, ಮಣ್ಣಿನೊಡನೆ ಚಿನ್ನಾಟವಾಡುತ್ತಿರುವ ಈ ಉದ್ಯಮದ ಅಭಿವೃದ್ಧಿಗಾಗಿ ಹೆಣಗುತ್ತಿದೆ. ಉತ್ಪಾದಿತ ಸರಕುಗಳ ಯೋಗ್ಯತೆ ಹೆಚ್ಚಿಸಲಿಕ್ಕೂ ಉದ್ಯಮದಲ್ಲಿ ತೊಡಗಿದ ಕೆಲಸಗಾರರ ನೈಪುಣ್ಯ ಮತ್ತು ಕಾರ್ಯಕ್ಷಮತೆ ಏರಿಸಲಿಕ್ಕೂ ಅದು ನೋಡುತ್ತಿದೆ. ಅಲ್ಲದೆ, ಸಂಶೋಧನೆ, ತಾಂತ್ರಿಕ ನೆರವು ಮತ್ತು ಉದ್ಯಮದ ಪ್ರಗತಿಯ ರಹಸ್ಯಗಳನ್ನು ತಿಳಿಯಪಡಿಸುವುದೇ ಮುಂತಾದ ಕಾರ್ಯಕ್ರಮಗಳನ್ನೂ ಅದು ಇಟ್ಟುಕೊಂಡಿದೆ.

ಕೈಗಾರಿಕೆಯ ಮಟ್ಟಕ್ಕೆ ಈ ಉದ್ಯಮ ಬಂದಿದ್ದರೂ ಮನೆಯಲ್ಲಿ ಕುಳಿತು ಇದೇ ಕೆಲಸ ಮಾಡುವ ಜನಕ್ಕೆ ಇದರಿಂದ ಬಾಧೆ ಬರಲಾರದು. ಗುಡಿ ಕೈಗಾರಿಕೆ ಮತ್ತು ಯಾಂತ್ರಿಕ ಉತ್ಪಾದನೆಯ ಸಮನ್ವಯ ಮಾಡಿಕೊಂಡರೆ, ಅದರಿಂದ ಸರಕುಗಳ ಸಿದ್ಧತೆಯ ವೆಚ್ಚ ತಗ್ಗುವುದರ ಜೊತೆಗೆ, ಹೆಚ್ಚು ಜನರಿಗೆ ಕೆಲಸ ಒದಗಿಸಿದಂತಾಗುತ್ತದೆ. ಹೆಚ್ಚು ಶಕ್ತಿಯನ್ನು ಉಪಯೋಗಿಸಿಕೊಳ್ಳಬೇಕಾಗುವಾಗ ಮತ್ತು ತಾಂತ್ರಿಕ ಕೌಶಲ್ಯ ಪ್ರದರ್ಶಿಸಬೇಕಾಗುವಾಗ ಯಾಂತ್ರಿಕ ಮಟ್ಟದಲ್ಲಿಯೂ ಇತರ ಸಾಮಾನ್ಯ ಪ್ರಸಂಗಗಳಲ್ಲಿ ಗೃಹೋದ್ಯಮವಾಗಿಯೂ ಕುಂಬಾರಿಕೆಯನ್ನು ಕೈಗೊಳ್ಳಬಹುದು. ಈ ಮಟ್ಟಿಗೆ ಜಪಾನು ದೇಶವು ಭಾರತಕ್ಕೆ ಮಾದರಿಯಾಗಬಲ್ಲುದು. ಅದು ಯಶಸ್ವಿಯಾಗಿ ಕೈಗೊಂಡಿರುವ ಪದ್ಧತಿಯ ಅನುಕರಣೆಯೇ ನಮಗೆ ಹಿತಕರ.

ನೈತಿಕ ಧೈರ್ಯದ ಹೆಜ್ಜೆ

ಮದ್ರಾಸು ರಾಜ್ಯದ ಸ್ತುತ್ಯ ಉಪಕ್ರಮ

ನಿಯಂತ್ರಣಗಳು-ಮುಖ್ಯವಾಗಿ ಉಣ್ಣುವ ಆಹಾರ ಧಾನ್ಯಗಳ ಮೇಲಿನ ಹತೋಟಿಯು-ಮಾನವ ವರ್ಗಕ್ಕೇನೇ ಅಪಮಾನಕರವೆಂಬುದನ್ನು ನೈತಿಕ ದೃಷ್ಟಿಯಿಂದ ವಿಚಾರಿಸುವಾಗ ಪ್ರಾಂಜಲವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಅನ್ನಾಭಾವದ ಕೊರತೆ ನಿಜಕ್ಕೂ ಇದೆ, ಎಂದು ಭಾವಿಸಿದರೂ ನಿಯಂತ್ರಣಗಳು ಕೊರತೆಯನ್ನು ದೂರೀಕರಿಸಲು ನೆರವಾಗುವುದಿಲ್ಲ-ಬದಲಿಗೆ ಸರಕಾರದ ಮೇಲೆ ಇಲ್ಲದೊಂದು ಭಾರವನ್ನು ಮಾತ್ರ ಹೇರುತ್ತವೆ. ಜನರು ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕೆ ಆಲಸಿಗಳಾಗುವಂತೆ ಇದು ಅಪ್ರತ್ಯಕ್ಷ ಪ್ರೋತ್ಸಾಹವನ್ನು ನೀಡುತ್ತದೆ. ಜೊತೆಗೆ-ಭ್ರಷ್ಟಾಚಾರ, ನೈತಿಕ ಅಪನಂಬುಗೆ, ಸುಳ್ಳು ಮತ್ತು ಮೋಸಗಾರಿಕೆಯೇ ಮುಂತಾದ ಪತನದ ಮಾರ್ಗಗಳನ್ನು ತೆರೆಯುತ್ತದೆ.

ನಿಯಂತ್ರಣ ರದ್ದತಿ

ಎಂತಲೇ ನಿಯಂತ್ರಣ ರದ್ದತಿಯು ಅಗತ್ಯ ಎಂಬುದಾಗಿ ನಾವು ಪ್ರತಿಪಾದಿಸಿದ್ದೆವು. ಸರಕಾರದ ಹತೋಟಿಯು ಇಲ್ಲದಾಗ ಜನತೆಗೆ ಸರಿಯಾದ ರೀತಿಯಲ್ಲಿ ವಸ್ತುಗಳ ವಿತರಣೆಯನ್ನು ನಡೆಸಲಿಕ್ಕೆ ವ್ಯಾಪಾರಿಗಳು ಉದ್ಯುಕ್ತರಾಗಲಿಕ್ಕಿಲ್ಲ ಎಂಬ ಭಯವು ಅನಾವಶ್ಯಕವೆಂಬುದಾಗಿ ವಿವೇಕಿಗಳು ಒಪ್ಪಬೇಕು. ಪೇಟೆಯಲ್ಲಿ ಇನ್ನಿತರ ವಸ್ತುಗಳ ಪೂರೈಕೆಯಲ್ಲಿ ವ್ಯಾಪಾರಿಗಳು ದಕ್ಷತೆಯಿಂದ ವರ್ತಿಸುತ್ತಿರುವಾಗ ಆಹಾರ ಧಾನ್ಯಗಳ ಮಟ್ಟಿಗೆ ಮಾತ್ರ ಅಕೃತಕೃತ್ಯತೆ ಪಡೆಯುವುದು ಎಂಬುದು ಆಧಾರವಿಲ್ಲದ ಮಾತು. ಯುದ್ಧಕಾಲದ ಕೃತಕ ಕೊರತೆಯು ಕಳ್ಳಸಂತೆಯ ಕಳ್ಳ ವ್ಯಾಪಾರಕ್ಕೆ ಪ್ರೋತ್ಸಾಹವನ್ನು ಕೊಟ್ಟಂತೇ ಹೊರತು-ವಸ್ತುಗಳ ಅಭಾವವೇ ಇದಕ್ಕೆ ಪೂರ್ಣ ಹೊಣೆಯಾಗಲಾರದು.

ಹೊಸ ಧೋರಣೆ

ಇದನ್ನು ಮನಗಂಡೋ ಏನೋ-ಸರಕಾರವು ಆಹಾರ ಧಾನ್ಯಗಳ ನಿಯಂತ್ರಣದ ಕುರಿತು ಹೊಸಧೋರಣೆಯನ್ನು ಅನುಸರಿಸುವ ಯುಕ್ತಾಯುಕ್ತತೆಯನ್ನು ಕೆಲಸಮಯದಿಂದೀಚೆಗೆ ವಿಚಾರಿಸುತ್ತಿತ್ತು. ಈಗ ಮದ್ರಾಸು ರಾಜ್ಯವು ಆಹಾರ ಧಾನ್ಯಗಳ ಮೇಲಿನ ನಿಯಂತ್ರಣವನ್ನು ಪೂರ್ಣ ಸಡಲಿಸಿದೆ. ಮುಕ್ತ ಪೇಟೆಯಲ್ಲಿ ಬೇಕೆಂಬಷ್ಟು ದರಕ್ಕೆ ಅಕ್ಕಿಯೇ ಮೊದಲಾದ ದವಸಗಳನ್ನು ಮಾರಲು ಅಡ್ಡಿಯಿಲ್ಲ ಎಂದು ಸಾರಿದೆ. ರೈತರ ಮೇಲೆ ಇಂದಿನ ವರೆಗಿದ್ದ ಸರಕಾರದ ಒತ್ತಾಯವು ಇನ್ನು ಮುಂದೆ ದೂರಾಗುವುದು. ಅವರು ಇಷ್ಟರ ತನಕ ತಾವು ಬೆಳೆದುದರ ಮೇಲೆ ತಮಗೇನೆ ಅಧಿಕಾರ ವಿಲ್ಲವಲ್ಲ— ಎಲ್ಲವನ್ನೂ ಸರಕಾರ ಕಸಿದುಕೊಳ್ಳುವುದಲ್ಲ-ಎಂದು ಪರಿತಪಿಸುತಿದ್ದರು. ಇನ್ನು ಮುಂದೆ ಅವರಿಗೆ ತಮ್ಮ ಉತ್ಪಾದನೆಯ ಮೇಲೆ ಸಂಪೂರ್ಣ ಸ್ವಾಮ್ಯ ಬಂದಿದೆ. ಸರಕಾರವು ಲೆವ್ಹಿ ಪಾಲಿಗೆ ಕೈ ಹಚ್ಚಿದಾಗ, ಎಷ್ಟೋ ರೈತರು ದವಸವನ್ನು ಬಚ್ಚಿಟ್ಟರು. ಸುಳ್ಳು ನಟನೆಯನ್ನು ಮಾಡಿ-- ಆಹಾರದ ಕೊರತೆಯುಂಟೆಂಬ ಭೀತಿ ಹಬ್ಬಿಸಿದರು. ಇನ್ನವರು ಈ ರೀತಿ ನಾಟಕವಾಡುವ ಅಗತ್ಯವಿಲ್ಲ. ರಾತ್ರಿ ಹೊತ್ತು ಕಳ್ಳತನದಿಂದ ಮಾರುವ ಬದಲ, ಹಗಲು ಹೊತ್ತಿಗೇ ವ್ಯಾಪಾರವನ್ನು ಕೈಗೊಳ್ಳಲು ಅಡ್ಡಿಯಿಲ್ಲ.

ಅಗ್ನಿ ಪರೀಕ್ಷೆ

ಇದೇ ಮಾತು ವ್ಯಾಪಾರೀ ವರ್ಗಕ್ಕೂ ಅನ್ವಯಿಸುವುದು. ಈ ಪಂಗಡದ ಮೇಲೆ ಅಪ್ರಾಮಾಣಿಕತೆ ಮತ್ತು ವಂಚನೆಯ ಆರೋಪವನ್ನು ಜನತೆಯೂ ಸರಕಾರವೂ ಒಟ್ಟಾಗಿಯೇ ಮಾಡಿದ್ದಿತು. ಈಗ ಸರಕಾರವು ವ್ಯಾಪಾರಿಗಳ ಒಳ್ಳೆಯತನದ ಪ್ರಯೋಗಕ್ಕೆಳಸಿದೆ. ಇದರಲ್ಲಿ ಸತ್ಯನಿಷ್ಠರೆಂದೂ ನೀತಿವಂತರೆಂದೂ ಉತ್ತೀರ್ಣಗೊಳ್ಳುವುದು ವ್ಯಾಪಾರಿಗಳ ಪ್ರಥಮ ಕರ್ತವ್ಯವಾಗಿದೆ. ಮಾನವನ ದೈವೀಕಗುಣಗಳಾದ ಸಹಾನುಭೂತಿ, ಅನುಕಂಪ ಮತ್ತು ನ್ಯಾಯಗಳನ್ನು ಕೈಬಿಡದೆ ವರ್ತಿಸುವುದು ವ್ಯಾಪಾರಿಗಳ ನೈತಿಕ ವಿಜಯದ ಮೊದಲ ಹಂತ. ಇದಕ್ಕೆ ತಪ್ಪುವರೆಂಬ ವ್ಯಾಪಾರಿಗಳ ಮೇಲೆ ಸಂಶಯ ತಾಳುವುದು ಸರಿಯಲ್ಲ. ನಮ್ಮೆಲ್ಲರ ಸತ್ವಪರೀಕ್ಷೆಗೆ--ನೈತಿಕ ಧೈರ್ಯದ ಅಗ್ನಿ ಪರೀಕ್ಷೆಗೆ--ನಿಯಂತ್ರಣ ರದ್ದತಿ ಎಡೆಮಾಡಿಕೊಟ್ಟಿದೆ. ಇದರಲ್ಲಿ ಯಶಸ್ವಿಯಾಗಿ ತೇರ್ಗಡೆ ಹೊಂದೋಣ!

— ಕಾರ್ತಿಕೇಯ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 143/51 R. I. A. 188/1952

ವಾದಿ– ಗೋವಿಂದ ಉಪಾಧ್ಯ.

ಪ್ರತಿವಾದಿಗಳು– 1 ಗಿರಿಜಮ್ಮ ಸೆಡ್ತಿ, 2 ಲಕ್ಷ್ಮಮ್ಮ ಸೆಡ್ತಿ, 3 ನಾರಾಯಣ ಸೆಟ್ಟಿ.

ಕುಂದಾಪುರ ತಾಲ್ಲೂಕು ಬೇಳೂರು ಗ್ರಾಮದ ಮೊಗೆಬೆಟ್ಟಿನಲ್ಲಿರುವ ರಾಮಯ್ಯ ಸೆಟ್ರ ಅಳಿಯ ನಾರಾಯಣ ಸೆಟ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಸದ್ರಿ ವ್ಯವಹರಣೆಯಲ್ಲಿ ಡಿಕ್ರಿಗೆ ಕಾರಣವಾದ ಸ್ಥಿರಾಸ್ತಿಯನ್ನು ಲೀಲಂ ಮಾಡುವ ಬಗ್ಗೆ ಫೈನಲ್ ಡಿಕ್ರಿ ಕೊಡಿಸಬೇಕೆಂತ ವಾದಿಯು ದಾಖಲ್ಲು ಮಾಡಿದ ಮೇಲಿನ ಅರ್ಜಿಯು ತಾ. 19-6-52ಕ್ಕೆ ಮೇಲಿನ ಕೋರ್ಟಿನಲ್ಲಿ ವಿಚಾರಣೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಹಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwariah.
Advocate for Pelf.
Date 5-6-52 Coondapoor:

ZANDU Mahayogaraja Guggula

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲಿಗೆ ರೂ 3/- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ
2 ಶ್ರೀ ವಿ ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎಸ್. ಶರ್ಮ, ಹಜೂರು ರಸ್ತೆ, ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರ ಶರತ್ತು ವಗೈರೆಗಳಿಗೆ ಬರೆಯಿರಿ-

DAMODAR & CO.,

Nainiappa Naicken Street, Park Town–**MADRAS** 3

For Protection and Provision

Consult

The New Guardian of India Life Insurance Co., Ltd.

Estd] Head office: **MADRAS** [1934

A Policy in this rogressive Life Office is good investment: its Agency is valuable business connection.

Applications for representation are invited from influential persons.

Please apply to:

The Branch Manager,
Diamond Building, Hampankatta,
MANGALORE, S. K.

ಮದ್ರಾಸು ರಾಜ್ಯದ ಅನಿರೀಕ್ಷಿತ ನಿರ್ಣಯ—

ಜನಸಾಮಾನ್ಯರಿಂದ ಮೆಚ್ಚುಗೆಯ ಸ್ವಾಗತ

ಮದ್ರಾಸಿನ ಸಾಹಸ

ಸಮಸ್ತ ಭಾರತದ ಸಂಪೂರ್ಣ ಲಕ್ಷ್ಯವನ್ನು ತನ್ನೆಡೆಗೆ ಆಕರ್ಷಿಸಿದ ಒಂದು ಅನಿರೀಕ್ಷಿತ ಘೋಷಣೆಯನ್ನು ಕಳೆದ ವಾರ ರಾಜಾಜಿಯು ಹೊರಡಿಸಿದರು. ಮದ್ರಾಸು ರಾಜ್ಯದಲ್ಲಿ ಆಹಾರ ಧಾನ್ಯಗಳ ಮೇಲಿನ ನಿಯಂತ್ರಣವನ್ನು ರದ್ದುಗೊಳಿಸಿರುವುದಾಗಿಯೂ ರೇಶನು ಪದ್ಧತಿಯನ್ನು ಸಹ ತೆಗೆದುಹಾಕಿರುವುದಾಗಿಯೂ ಅವರು ಸಾರಿದರು. ರಾಜ್ಯವನ್ನು ಒಟ್ಟು ಆರು ಪ್ರಾದೇಶಿಕ ವಿಭಾಗಗಳಾಗಿ ವಿಂಗಡಿಸಿ, ಆಯಾ ಪ್ರದೇಶಗಳಲ್ಲಿರುವ ಕೊರತೆಯ ಜಿಲ್ಲೆಗಳಿಗೆ ಅದರೊಡನೆ ಹೊಂದಿಕೊಂಡಿರುವ ಉಳಿಕೆಯ ಜಿಲ್ಲೆಯಿಂದ ಆಹಾರ ಧಾನ್ಯಗಳ ಅನಿರ್ಬಂಧ ಸಾಗಾಟಕ್ಕೆ ಅನುವು ಮಾಡಿಕೊಡಲಾಗಿದೆ ಎಂದು ಶ್ರೀ ರಾಜಾಜಿ ಹೇಳಿದರು. ತನ್ನ ರೇಡಿಯೊ ಭಾಷಣದಲ್ಲಿ ಅವರು ರೈತರಿಗೂ ವ್ಯಾಪಾರೀ ವರ್ಗಕ್ಕೂ ಇದರಿಂದ ಹೊಸ ರಕ್ತಸಂಚಾರವಾದಂತೆನಿಸಿದರೆ, ಜನಸಾಮಾನ್ಯಕ್ಕೆ ಅಕ್ಕಿಯ ಪೂರೈಕೆಯು ಕುರಿತಿದ್ದ ಈ ವರೆಗಿನ ಅಸಮಾಧಾನ ಹಾಗೂ ಅತೃಪ್ತಿಗಳು ಇನ್ನು ಮುಂದೆ ಉಳಿಯಲಾರವು ಎಂದು ಸೂಚಿಸಿದರು. ಚಾಣಾಕ್ಷ ಮುತ್ಸದ್ದಿ ಎಂದು ಲೋಕವೇ ಕೊಂಡಾಡುವ ಶ್ರೀ ರಾಜಗೋಪಾಲಾಚಾರಿಯವರ ಈ ಅತ್ಯಂತ ಸಾಹಸದ ಉಪಕ್ರಮವನ್ನು ಎಲ್ಲರೂ ತೆರೆದ ಹೃದಯದಿಂದ ಸ್ವಾಗತಿಸಿರುವರು. ಮದ್ರಾಸು ರಾಜ್ಯವು ವಿನಿಯಂತ್ರಣದ ಈ ಮಹಾ ಪ್ರಯೋಗದಲ್ಲಿ ಯಶಸ್ವಿಯಾದರೆ, ಭಾರತದ ಉಳಿದ ರಾಜ್ಯ ಸರಕಾರಗಳೂ, ಈ ಅನುಭವ ಮಾದರಿಯನ್ನು ಅನುಸರಿಸಲು ಎಡೆ ಇದೆ. ಕೊಡಗಿನಲ್ಲಿ ಹೆಚ್ಚಿನ ಕಡೆ ಈಗ ಆಹಾರ ಧಾನ್ಯ... ಸಾಗಾಟ ನಿರ್ಬಂಧ ದೂರಾಗಿದೆ. ಮದ್ರಾಸದ ಪ್ರಯೋಗ ಜಯಶೀಲವೆನಿಸಿದರೆ ಪಂಜಾಬ ಮತ್ತು ಪಶ್ಚಿಮ ಬಂಗಾಳಗಳ. ಸರ್ವ ಪ್ರಥಮವಾಗಿ ಈ ನೂತನ ಧೋರಣೆಗೆ ಅಂಟಿಕೊಳ್ಳುವ ನಿರೀಕ್ಷೆ ಇದೆ.

ನಿಯಂತ್ರಣದಿಂದ ಅತೃಪ್ತಿ

ಆಹಾರದ ಕುರಿತಾದ ಗೊಂದಲಮಯ ವಾತಾವರಣವು ಜನಸಾಮಾನ್ಯಕ್ಕೆ ಎಂದಿಗೂ ತೃಪ್ತಿ ತಂದಿಲ್ಲ. ರೇಶನು ಕಾರ್ಡುದಾರರಿಗೆ ಕೊಡಲಾಗುತ್ತಿದ್ದ ಅಕ್ಕಿ ಮತ್ತಿತರ ಧವಸಧಾನ್ಯಗಳು ಅತ್ಯಂತ ಕೀಳ್ಮಟ್ಟದವೆಂದು ಎಲ್ಲರಿಂದಲೂ ಬೈಸಿಕೊಳ್ಳುತ್ತಿದ್ದುವು. ಮೊನ್ನೆ ಮೊನ್ನೆ ಲೋಕಸಭೆಯಲ್ಲಿ ಕುಮಾರಿ ಮಾಸ್ಕರೇನಸ್ ತಮಗೆ ದೊರೆತ ನುಚ್ಚು ಅಕ್ಕಿಯನ್ನು ಪ್ರದರ್ಶಿಸಿ, ಇದನ್ನು ಅಡಿಗೆಮಾಡಿ ಉಣ್ಣಬಹುದೇ? ಎಂದು ಪ್ರಶ್ನಿಸಿದರು. ಹೀಗೆ ಒಂದು ... ಅಕ್ಕಿಯು ಉಣ್ಣಲು ಯೋಗ್ಯವಾಗಿಲ್ಲೆಂಬ ದೂರಿನ ಜೊತೆಗೆ, ಆಹಾರ ಸಹಾಯಧನವನ್ನು ನಿಲ್ಲಿಸಿದುದರ ಪರಿಣಾಮವಾಗಿ ಬೆಲೆ ಏರಿದೆ ಎಂಬ ಆರೋಪವೂ ಇದೆ. ಎಷ್ಟೇ ದಕ್ಷತೆ ವಹಿಸಿದರೂ ರೈತ...

...ಯಲ್ಲಿ ಮಾಡಿಕೊಳ್ಳುವುದು ಅಧಿಕಾರಿಗಳಿಗೆ ಸಾಧ್ಯವಾಗಲಿಲ್ಲ. ಎಣಿಕೆ ಹಾಕಿದುದರ ಅರೆವಾಸಿ ಮಾತ್ರ ಸಂಗ್ರಹಕ್ಕೆ ವಸೂಲಿಯಾಗುತ್ತಿತ್ತು. ಸರಕಾರವು ರೈತರಿಗೆ ನೀಡುತ್ತಿದ್ದ ಬೆಲೆ ಬಹಳ ಕಡಿಮೆ—ಗಿರಾಕಿಗಳಿಗೆ ಮಾರುವ ಬೆಲೆಯೋ—ಅದರ ಒಂದೂವರೆ ಪಾಲಿಗೂ ಹೆಚ್ಚಿದೆ ಎಂಬ ಅಪವಾದವೂ ಸರಕಾರದ ಮೇಲಿತ್ತು. ರೈತರು ಧವಸಧಾನ್ಯಗಳನ್ನು ಬಚ್ಚಿಟ್ಟುಕೊಂಡು ಕಪ್ಪುಪೇಟೆಯಲ್ಲಿ ಯಥೇಷ್ಟವಾಗಿ ಹೆಚ್ಚು ಬೆಲೆಗೆ ವ್ಯಾಪಾರವನ್ನು ಮಾಡುವುದಕ್ಕೆ ತೊಡಗುತಿದ್ದರು. ಇದರಿಂದ ಸರಕಾರಕ್ಕೆ ಹೊಣೆಗಾರಿಕೆ ಹೆಚ್ಚಾಯಿತೇ ಹೊರತು—ಅನುಕೂಲ ಏನೇನೂ ಇರಲಿಲ್ಲ.

ಅನಿಷ್ಟ ನಿವಾರಣೆ

ಇಂಥದರಲ್ಲಿ ರಾಜಾಜಿಯ ಸೂಕ್ಷ್ಮಬುದ್ಧಿಯು ವಿನಿಯಂತ್ರಣದಿಂದಲೇ ನಿಯಂತ್ರಣದ ಅನಿಷ್ಟಗಳನ್ನು ದೂರೀಕರಿಸಲು ಸಾಧ್ಯವೆಂಬುದನ್ನು ಕಂಡುಕೊಂಡಿತು. ಕಳೆದವಾರ ಕೇಂದ್ರ ಆಹಾರ ಮಂತ್ರಿ ಜನಾಬ ರಫಿ ಅಹಮ್ಮದ ಕಿದ್ವಾಯಿ ಮದ್ರಾಸಿಗೆ ಬಂದಾಗ ತಾವು ತಮ್ಮ ವಿನಿಯಂತ್ರಣ ಯೋಜನೆಯನ್ನು ಅವರ ಮುಂದಿಟ್ಟು, ಚರ್ಚಿಸಿದೆವು ಎಂಬುದಾಗಿ ರಾಜಾಜಿ ಈಗ ಹೇಳಿದ್ದಾರೆ. ರಾಜಾಜಿಯು ಶುಕ್ರವಾರ ರಾತ್ರೆ ರೇಡಿಯೋ ಭಾಷಣ ಮಾಡುವುದಕ್ಕೆ ಮುಂಚಿತವಾಗಿ ಯಾರೊಬ್ಬರಿಗೂ ಆ ವಿಷಯದ ಗಂಧಗಾಳಿಯೂ ಹತ್ತಿದ್ದಿಲ್ಲ. ಇಂಥ ಮಹತ್ವದ ಘೋಷಣೆಯನ್ನು ಮಾಡಲಿರುವ ಸಂಗತಿಯನ್ನು ಹಸಿಬಿಸಿ ಸುದ್ದಿಯಾಗಿ ಹಬ್ಬಿಸಿದ ...

WANTED

Influential persons to act as agents and organisers on decent terms. Bright prospects-

Apply to:

The Crescent Insurance Co., Ltd.,

Mangalore Branch, **Hampankatta, MANGALORE- 1.**

...ರ—ನಿಶ್ಚಿತವಾದ ಯಾವ ತಿಳುವಳಿಕೆಯೂ ಇಲ್ಲದೆ ಜನ ಗೊಂದಲಕ್ಕೆ ಬೀಳುವರೆಂದೂ ಮತ್ತು ವ್ಯಾಪಾರಿ ವರ್ಗಗಳು ಇದರ ದುರ್ಲಾಭ ಪಡೆಯಲು ಹವಣಿಸಿಯಾರೆಂದೂ ಸಂಶಯದಿಂದ ಎಲ್ಲ ಕೊನೆಯದಾಗಿ ನಿರ್ಣಯಗೊಂಡ ಬಳಿಕ ಈ ಯೋಜನೆಯನ್ನು ಜನತೆಗೆ ಸಾದರಪಡಿಸಲು ನೋಡಿದೆನೆಂಬುದಾಗಿ ಶ್ರೀ ರಾಜಾಜಿ ಸ್ಪಷ್ಟೀಕರಿಸಿರುವರು. ತಮಗೆ ಈ ವಿಷಯದಲ್ಲಿ ಅಂತರಾತ್ಮನ ಪ್ರೇರಣೆಯೊಂದೇ ಸ್ಫೂರ್ತಿಯೊದಗಿಸಿತೆಂದೂ ಆರ್ಥಿಕ ತತ್ವಗಳ ಲಾಭ ಹಾನಿಗಿಂತಲೂ ಅಂತವಾರ್ಣಿ ಮಿಗಿಲಾಗಿ ತೋರಿತೆಂದೂ ಅವರು ತಿಳಿಸಿದರು.

ಕರ್ತವ್ಯನಿಷ್ಠೆಯ ಆಗತ್ಯ

ರಾಜಾಜಿಯ ರೇಡಿಯೋ ಭಾಷಣವು ಅಭೂತಪೂರ್ವ ನಿರ್ಣಯವನ್ನು ಬಹಿರಂಗಗೊಳಿಸಿತು. "ಬಹಳ ಸಮಯದ ವರೆಗೆ ವಿಚಾರ ವಿಮರ್ಶೆ ನಡೆಸಿದ ಬಳಿಕ ಈ ಗೊಂದು ದೃಢ ನಿರ್ಧಾರಕ್ಕೆ ನಾನು ಬಂದಿದ್ದೇನೆ. ಆಹಾರ ಧಾನ್ಯಗಳ ವಿನಿಯಂತ್ರಣವನ್ನು ಕೈಗೊಳ್ಳಲು ಒಂದು ಯೋಜನೆ ಸಿದ್ಧಪಡಿಸಿದ್ದು, ಕೇಂದ್ರ ಆಹಾರ ಶಾಖೆಯೊಡನೆ ಮತ್ತು ಆರ್ಥಿಕ ಮಂಡಳದೊಡನೆ ಪರಾಮರ್ಶಿಸಿ, ಅವರ ಒಪ್ಪಿಗೆಯನ್ನೀಗ ಪಡೆದುಕೊಂಡಿದ್ದೇನೆ. ಇನ್ನು ಮುಂದೆ ಮದ್ರಾಸು ರಾಜ್ಯದಲ್ಲಿ ಕಾಯಿದೆಬದ್ಧವಾದ ರೇಶನು ಕ್ರಮವನ್ನು ತೆಗೆದುಹಾಕಲಾಗಿದೆ. ಅಲ್ಲದೆ ಎತ್ತುವಳಿಯ ಪದ್ಧತಿಯನ್ನು ಸಹ ರದ್ದುಗೊಳಿಸಲಾಗಿದೆ. ಆಹಾರ ಧಾನ್ಯಗಳ ವಿತರಣೆಯು ಪ್ರತ್ಯೆ...

...ಯು ಬಹಳ ಕೊಡಕಿಗೆ ಕಾರಣವಾಗಿದೆ ಎಂಬುದಾಗಿ ಪ್ರತಿಯೊಂದೂ ವರ್ಗದ ಜನತೆಯ ಖಚಿತ ಅಭಿಪ್ರಾಯವಿದೆ ಎಂಬೀ ಸಂಗತಿ ನಾನು ತಿಳಿದುಕೊಂಡಿದ್ದೇನೆ. ಹೆಚ್ಚು ಆಹಾರ ಬೆಳೆಯುವ ಧೋರಣೆಗೆ ನಿಯಂತ್ರಣವು ಏನೇನೂ ಪ್ರೋತ್ಸಾಹಕವಾಗಿ ಕಂಡುಬರಲಿಲ್ಲ—ಬದಲಿಗೆ, ಅದು ಆಲಸ್ಯವನ್ನೆ ಉಂಟು ಮಾಡಿತು. ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಯನ್ನು ಜಾರಿಸಿಕೊಳ್ಳಲು ನೋಡುತ್ತಿದ್ದರು. ಇನ್ನು ಮುಂದೆ ಎಲ್ಲರೂ ಹೊಣೆಗಾರಿಕೆಯಿಂದ ವರ್ತಿಸುವುದು ಆಗತ್ಯವಿದೆ" ಎಂದು ರಾಜಾಜಿ ವಿಶದಪಡಿಸಿದರು.

ಪ್ರಾದೇಶಿಕ ವಿಭಾಗಗಳು

ರಾಜ್ಯದಲ್ಲಿ ಕೆಲವು ಕೊರತೆಯ ಜಿಲ್ಲೆಗಳೂ ಮತ್ತೆ ಕೆಲವು ಉಳಿಕೆಯ ಜಿಲ್ಲೆಗಳೂ ಇವೆ. ಅವುಗಳನ್ನು ಈ ರೀತಿ ಆರು ಪ್ರಾದೇಶಿಕ ವಿಭಾಗಗಳಾಗಿ ವಿಂಗಡಿಸುತ್ತೇವೆ.

(೧) ದಕ್ಷಿಣ ಕನ್ನಡ. (೨) ಮಲಬಾರು ಮತ್ತು ನೀಲಗಿರಿ. (೩) ತಂಜಾವೂರು, ದಕ್ಷಿಣ ಅರ್ಕಾಟು, ತಿರುಚಿನಪಳ್ಳಿ, ರಾಮನಾಥಪುರಂ, ಮಧುರೆ, ಕೊಯಮತ್ತೂರು, ಸೇಲಂ, ಮತ್ತು ತಿರುನೆಲ್ಲವೇಲಿ (೪) ಗುಂಟೂರು, ಅನಂತಪುರ, ಬಳ್ಳಾರಿ, ಕಡಪಾ ಮತ್ತು ಕರ್ನೂಲು. (೫) ಪಶ್ಚಿಮ ಗೋದಾವರಿ, ಕೃಷ್ಣ, ನೆಲ್ಲೂರು, ಮದ್ರಾಸುನಗರ, ಚಿಂಗಲ್ಪೇಟೆ, ಚಿತ್ತೂರು ಮತ್ತು ಉತ್ತರ ಅರ್ಕಾಟು. (೬) ಪೂರ್ವ ಗೋದಾವರಿ, ವಿಶಾಖಪಟ್ಟಣ, ಮತ್ತು ಶ್ರೀಕಾಕುಲಂ.

ಇವುಗಳಿಂದ ತಿಳಿಯಬಹುದಾದ ಒಂದು ಸಂಗತಿ ಸ್ಪಷ್ಟವಿದೆ—ದಕ್ಷಿಣ ಕನ್ನಡವು ಸ್ವಯಂ ಪರಿಪೂರ್ಣವಾದ ಪ್ರದೇಶವಾಗಿದೆ. ಮಲಬಾರು ಮತ್ತು ನೀಲಗಿರಿ ಜಿಲ್ಲೆಗಳೂ ದಕ್ಷಿಣ ಕನ್ನಡದ ಹೊಸದುರ್ಗ ಉಪತಾಲೂಕೂ ಭಯಂಕರ ಕೊರತೆಯ ಪ್ರದೇಶಗಳು. ಅಲ್ಲಿ ಎತ್ತುವಳಿ ನಡೆಸದಿದ್ದರೂ ಇನ್ನೂ ಕೆಲವು ಸಮಯದ ವರೆಗೆ ಕಾಯಿದೆಬದ್ಧ ಧಾನ್ಯವಿತರಣೆಯು ಕಾರ್ಯವು ಜಾರಿಯಲ್ಲಿರುವುದು. ಈಗ ಸಂಗ್ರಹದಲ್ಲಿರುವ ಮತ್ತು ಕೇಂದ್ರ ಸರಕಾರದಿಂದ ಬರಲಿರುವ ಪೂರೈಕೆಯಿಂದ ಅಲ್ಲಿ ಆಹಾರ ವಿತರಣೆಯನ್ನು ನಡೆಸಲಾಗುವುದು. ಉಳಿದ ನಾಲ್ಕು ಪ್ರದೇಶ ವಿಭಾಗಗಳಲ್ಲಿ ಪ್ರತಿಯೊಂದರಲ್ಲಿಯೂ ಒಂದೆರಡು ಉಳಿಕೆಯ ಜಿಲ್ಲೆಗಳು ಸೇರಿದ್ದು ಅವು ಕೊರತೆಯ ಪ್ರದೇಶಗಳಿಗೆ ಆಹಾರ ಪೂರೈಸುವುವು.

ಅನಿರ್ಬಂಧ ಸಾಗಾಟ

ಈ ಪ್ರದೇಶಗಳಲ್ಲಿ ಎಲ್ಲಿಂದಲ್ಲಿಗೂ ಅನಿರ್ಬಂಧವಾಗಿ ಆಹಾರ ಧಾನ್ಯದ ಸಾಗಾಟಕ್ಕೆ ಎಡೆ ಇದೆ. ಆದರೆ ಒಂದು ಪ್ರಾದೇಶಿಕ ವಿಭಾಗದಿಂದ ಇನ್ನೊಂದಕ್ಕೆ ಆಹಾರ ಧಾನ್ಯಗಳನ್ನು ಮೋಟಾರು ವಾಹನಗಳಲ್ಲಿ ಅಥವಾ ರೇಲ್ವೆಯ ಮೂಲಕ ಸಾಗಿಸಬೇಕಾದರೆ ಸರಕಾರದ ಒಪ್ಪಿಗೆ ಬೇಕು. ರೈತರು ತಲೆಹೊರೆಯ ಮೇಲಿಂದ ಅಥವಾ ...

The East & West Insurance Co., Ltd,

East & West Bldgs., BOMBAY - 1.

ದಿ ಈಸ್ಟ್ ಎಂಡ್ ವೆಸ್ಟ್

ಇನ್ಸ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಸ್ಥಾಪನೆ:] ಈಸ್ಟ್ ಎಂಡ್ ವೆಸ್ಟ್ ಬಿಲ್ಡಿಂಗ್ಸ್, ಬೊಂಬಾಯಿ 1 [1913

ಉದಾರ ರಿಯಾಯತಿ ಶರ್ತಗಳಿರುವ ಪುರಾತನ ಮತ್ತು ಮುಂದುವರಿದ ಕಂಪೆನಿಗಳಲ್ಲೊಂದಾಗಿರುತ್ತದೆ.

ವಿಮೆಯ ಸಕಲ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು ಆ ಬಾಬಿನ ಎಲ್ಲಾ ಕೆಲಸಗಳಲ್ಲಿ ಭಾಗಿಯಾಗಿ ಸಹಕರಿಸಿ ಸಲಹೆಗಳನ್ನೀಯುತ್ತಾ ಜನಸೇವೆಗೈಯುವುದೇ ನಮ್ಮ ಧ್ಯೇಯ.

ನಮ್ಮ ಚೀಫ್ ಏಜನ್ಸಿ ವಿಸ್ತೀರ್ಣದೊಳಗೆ ಪ್ರತೀ ಜಿಲ್ಲೆಗೊಬ್ಬರಂತೆ ಇನ್ಸ್‌ಪೆಕ್ಟರುಗಳೂ, ಸ್ಪೆಶಲ್ ಏಜಂಟರೂ, ಏಜಂಟರೂ ಬೇಕಾಗಿದ್ದಾರೆ. ಹೆಚ್ಚಿನ ವಿವರಕ್ಕೆ ಬರೆಯುವದು.

ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್,

ಚೀಫ್ ಏಜಂಟರು,

ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಮೈಸೂರು ಸ್ಟೇಟ್,

ಪೋಸ್ಟ್ ಶಿರ್ವಾ, ದ. ಕ.

ಆಹಾರ ನಿಯಂತ್ರಣ ರದ್ದತಿಯ ಘೋಷಣೆ

ದೇಶದಾದ್ಯಂತ ಪ್ರಶಂಸೆಯ ಉದ್ಗಾರ

ಗಬಹುದಾದ ಆಹಾರ ಧಾನ್ಯಗಳನ್ನು ಇಲ್ಲಿಯೂ ತಡೆಯುವುದಿಲ್ಲ ಎಂದು ರಾಜಾಜಿ ತಮ್ಮ ಯೋಜನೆಯನ್ನು ವಿವರಿಸಿದರು.

ಮುಕ್ತ ಪೇಟೆಗೆ ಅವಕಾಶ ಮಾಡಿಕೊಡುವುದರಿಂದ ಜನರಿಗೆ ನಿಯಂತ್ರಿತ ದರಕ್ಕಿಂತಲೂ ಕಡಿಮೆ ಬೆಲೆಗೆ ಆಹಾರ ಧಾನ್ಯಗಳು—ಮುಖ್ಯವಾಗಿ ಅಕ್ಕಿಯು—ದೊರೆಯಲು ಆಸ್ಪದವಿದೆ ಎಂದವರು ಅಭಿಪ್ರಾಯಪಟ್ಟರು. ಆದರೂ ವ್ಯಾಪಾರಿಗಳು ಈ ವಿಷಯದಲ್ಲಿ ಅಸ್ತೆವಹಿಸಿ, ಪೇಟೆಯಲ್ಲಿ ಅಕ್ಕಿ ಮುಂತಾದವುಗಳ ಮಾರಾಟಕ್ಕೆ ತೊಡಗಲು ಸ್ವಲ್ಪ ಕಾಲಾವಕಾಶ ಬೇಕಾದೀತು. ಎಂಬುದರಿಂದ ಅಲ್ಲಲ್ಲಿ ಯೋಗ್ಯ ಬೆಲೆಯ ಅಂಗಡಿಗಳಲ್ಲಿ ಧಾನ್ಯ ವಿತರಣೆಯನ್ನು ನಡೆಸಲಾಗುವುದು. ಆದರೂ ಎಲ್ಲರೂ ಸಾಧ್ಯವಿದ್ದಷ್ಟೂ ಹೆಚ್ಚು ಮುಕ್ತಪೇಟೆಯಿಂದಲೇ ಆಹಾರ ದವಸಗಳನ್ನು ಕೊಂಡುಕೊಳ್ಳಬೇಕೆಂದು ಸಲಹೆ ಮಾಡುವ—ಶಕ್ತಿ ಇದ್ದವರು ಸಹ ಯೋಗ್ಯ ಬೆಲೆಯ ಅಂಗಡಿಯನ್ನೇ ಶರಣೆಂದರೆ—ಬಡವನ ಅನ್ನವನ್ನು ಅಪಹರಿಸಿದಂತಾಗುವುದು ಎಂಬ ನೈತಿಕ ಎಚ್ಚರಿಕೆಯನ್ನೂ ರಾಜಾಜಿ ಕೊಟ್ಟರು.

ಮುಂಜಾಗ್ರತೆಯ ಕ್ರಮ

ಇಷ್ಟು ಚಲೋದಾಗಿ ವಿನಿಯಂತ್ರಣ ಜಾರಿಗೆ ಬಂದರೂ ವ್ಯಾಪಾರಸ್ಥರು ತಮ್ಮ ಜವಾಬ್ದಾರಿಯನ್ನು ಮಾನವರಿಕೆ ಮಾಡಿಕೊಳ್ಳಲಿಲ್ಲವಾದರೆ ಮತ್ತು ರೈತರು ಈ ಸಂದರ್ಭದ ದುರುಪಯೋಗ ಮಾಡಿಕೊಳ್ಳಲು ಹವಣಿಸಿದರೆ—ತಕ್ಕದಾದ ಕ್ರಮಗಳನ್ನು ಒಡನೆಯೇ ಕೈಗೊಳ್ಳಲು ಸರಕಾರವು ಸಿದ್ಧವಿದೆ. ಸುಮಾರು ನಾಲ್ಕುವರೆ ಲಕ್ಷ ಟನ್ನುಗಳಷ್ಟು ಅಕ್ಕಿಯು ಸರಕಾರದ ಸಂಗ್ರಹದಲ್ಲಿ ಈಗಾಗಲೇ ಇರುವುದಲ್ಲದೆ ಕೇಂದ್ರವು ಇನ್ನೂ ಎರಡು ಲಕ್ಷ ಟನ್ನು ಅಕ್ಕಿಯನ್ನು ಕೊಡ ಮಾಡಿರುವುದು. ಇದು ಏನಿಲ್ಲೆಂದರೂ ಕೆಲವು ತಿಂಗಳವರೆಗೆ ಜನರಿಗೆ ವಿತರಿಸಲು ಸಾಕು. ಬರುವ ವರ್ಷ ಸುಲಭ ಎಷ್ಟುವಳಿ ಪದ್ಧತಿಯ ಮೂಲಕ ಇನ್ನು ಒಂದೂವರೆ ಲಕ್ಷ ಟನ್ನು ಅಕ್ಕಿ ಸಂಗ್ರಹಿಸುವ ವಿಚಾರ ಸರಕಾರಕ್ಕಿದೆ. ಆದುದರಿಂದ ವಿನಿಯಂತ್ರಣದಿಂದ ಗಂಡಾಂತರ ಬಂದೀತೆಂಬ ಅಂಜಿಕೆ ಸ್ವಲ್ಪವೂ ಜನರಿಗೆ ಇರುವುದು ಬೇಡ ಎಂದು ಧೈರ್ಯವನ್ನು ತುಂಬಿಸಿದರು.

ಅಕ್ಕಿಯೊಡನೆ ಗೋಧಿ, ಜೋಳ ಮತ್ತಿತರ ಧಾನ್ಯಗಳ ಮೇಲಿನ ಹತೋಟಿಯನ್ನು ದೂರಗೊಳಿಸಲಾಗಿದೆ. ರಖಂ ವ್ಯಾಪಾರಿಗಳಿಗೂ ಸಹಕಾರಿ ಸಂಘಗಳಿಗೂ ಇವುಗಳ ಮಾರಾಟವನ್ನು ರಾಜ್ಯ ಸರಕಾರವು ವಹಿಸಿಕೊಡುವುದು.

ರಾಜಾಜಿಯ ಸಂದೇಶ

ಕೊನೆಯದಾಗಿ ರಾಜಾಜಿ ಜನರು ಧೈರ್ಯಗೆಡಬಾರದೆಂದು ಬೋಧಿಸಿದರು. ನಾವು ಹಾಳುಗೆಡವದಿದ್ದರೆ, ಉಣ್ಣಲು ಕೊರತೆಯಾಗದಷ್ಟು ಹೆಚ್ಚು ಆಹಾರ ನಮ್ಮ ರಾಜ್ಯದಲ್ಲಿದೆ. ಅಲ್ಲದೆ ಎಂಟು ವರ್ಷಗಳಲ್ಲಿ ನಮ್ಮ ಮೇಲೆ ಹೇರಲಾದ ನಿಯಂತ್ರಣಗಳು ನಮಗೆ ಕಡಿಮೆ ಹಾಳುಮಾಡಲು ಚೆನ್ನಾಗಿ ಕಲಿಸಿಕೊಟ್ಟಿವೆ. ಆದುದರಿಂದ ಆಹಾರ ಉಣ್ಣುವವರೂ, ಬೆಳೆಯುವ ರೈತರೂ, ಕೊಂಡುಕೊಂಡು ವ್ಯಾಪಾರ ಮಾಡುವವರೂ ಎಲ್ಲರೂ ಸಂಯಮದಿಂದ, ನ್ಯಾಯದಿಂದ ನಡೆದುಕೊಳ್ಳಬೇಕು. ನಾವು ಪ್ರಾಮಾಣಿಕರೂ ದೇಶಭಕ್ತರೂ ಎಂಬುದನ್ನ ಮತ್ತು ದೇವರ ನ್ಯಾಯಕ್ಕೆ ಬಗ್ಗುವೆವೆಂಬುದನ್ನ ಕೃತಿಯಿಂದ ತೋರಿಸಿ ಕೊಡುವ ಕಾಲವೀಗ ಬಂದಿದೆ. ನಮ್ಮಲ್ಲಿ ಇಟ್ಟಿರುವ ವಿಶ್ವಾಸಕ್ಕೆ ದ್ರೋಹಬಗೆಯಲಾರೆವೆಂದು ಸಿದ್ಧಪಡಿಸುವಾ. ಪ್ರಧಾನ ಮಂತ್ರಿ ನೆಹರೂ ಮತ್ತವರ ಸಹೋದ್ಯೋಗಿಗಳು ತಮ್ಮ ಸಂಪೂರ್ಣ ನೈತಿಕ ಬೆಂಬಲವನ್ನ ಕೊಟ್ಟು, ಯೋಜನೆ ಯಶಸ್ವಿಯಾಗಲೆಂದು ಹಾರೈಸಿರುವರು. ನನ್ನ ಸಹೋದ್ಯೋಗಿಗಳೂ ಇದಕ್ಕೆ ಒಪ್ಪಿಕೊಂಡಿರುವರು. ನಾವೆಲ್ಲರೂ ಪರಸ್ಪರ ಸಹಕರಿಸಬೇಕು—ಎಲ್ಲರೂ ನನ್ನ ಮಾನಕಾಯಬೇಕು ಎಂದು ನಮ್ರತೆಯಿಂದ ಕೇಳಿಕೊಂಡರು.

ರೈತರಿಗೆ ಸಂದೇಶ ಕೊಡುತ್ತಾ "ನಿಮ್ಮೆಲ್ಲರಿಗೆ ದೇವರು ಒಳ್ಳೆಯದು ಮಾಡಲಿ! ನಿಮಗಿಷ್ಟ ಬಂದಲ್ಲಿಗೆ ಕೊಂಡೊಯ್ದು ನಿಮಗೆ ಸರಿಕಂಡ ಬೆಲೆಗೆ ನಿಮ್ಮ ಉತ್ಪನ್ನವನ್ನು ಮಾರಲು ಇನ್ನು ಅಡ್ಡಿ ಇಲ್ಲ. ನಿಮ್ಮಲ್ಲಿ ಇದ್ದುದನ್ನು "ಇಲ್ಲ" ಎಂದು ಬಲಾತ್ಕಾರದಿಂದ ಹೇಳುವ ಮತ್ತು ಸುಳ್ಳು ಸುಳ್ಳು ನಟಿಸುವ ಅಗತ್ಯವಿಲ್ಲ. ಗುಟ್ಟಾಗಿ ವ್ಯಾಪಾರ ನಡೆಸುವುದೂ ಇನ್ನು ಮುಂದೆ ಬೇಡ ನೀವಿನ್ನ ಸಂಪೂರ್ಣ ಸ್ವತಂತ್ರರು!" ಎಂದರು.

ಯೋಗ್ಯ ಬೆಲೆಯ ಪೂರೈಕೆ

ಶನಿವಾರ ಪತ್ರಿಕಾ ಪ್ರತಿನಿಧಿಗಳೆದುರು ತಮ್ಮ ಯೋಜನೆಯನ್ನು ವಿವರಿಸುತ್ತಾ ರಾಜಾಜಿ ಕೆಲವು ಸ್ಪಷ್ಟೀಕರಣಗಳನ್ನು ಕೊಟ್ಟರು. ಜನರು ಯೋಗ್ಯ ಬೆಲೆಯ ಅಂಗಡಿಗಳಿಂದ ದವಸಗಳನ್ನು ಕೊಂಡುಕೊಂಡು ಮುಕ್ತ ಪೇಟೆಯಲ್ಲಿ ಹೆಚ್ಚು ಬೆಲೆಗೆ ಮಾರಲು ಎಡೆ ಇದೆ ಎಂಬವರು ಒಪ್ಪಿಕೊಂಡರು. ಆದರೆ ಯಾರೂ ಅಂಥ ಹೇಸಿಗೆ ಕೆಲಸಕ್ಕೆ ಕೈಹಾಕಲಾರರು ಎಂಬುದು ತಮ್ಮ ಅಂತಃಕರಣದ ಹೇಳಿಕೆ ಎಂದರು. ಮುಕ್ತ ಪೇಟೆಯಲ್ಲಿ ಹೆಚ್ಚು ಹೆಚ್ಚು ಆಹಾರ ವ್ಯಾಪಾರಕ್ಕೆ ಒದಗಿಬಂದಂತೆ, ಯೋಗ್ಯ ಬೆಲೆಯ ಅಂಗಡಿಗಳಲ್ಲಿ ನೀಡುವ ಅಕ್ಕಿಯ ಪ್ರಮಾಣವನ್ನು ಕಡಿಮೆಗೊಳಿಸಲಾಗುವುದು. ಸದ್ಯ ರೇಶನು ಇರುವಕಡೆ ಅವುಗಳನ್ನೇ ಯೋಗ್ಯ ಬೆಲೆಯ ಅಂಗಡಿಗಳೆಂದು ಪರಿವರ್ತಿಸಲಾಗುವುದು. ಸರಕಾರದ ಸಂಗ್ರಹವನ್ನು ಇಟ್ಟುಕೊಂಡಿರುವವರ ಹೊರತು ಬೇರೆ ಯಾರೇ ಆಗಲಿ—ಅಕ್ಕಿಯ ಅನಿರ್ಬಂಧ ವ್ಯಾಪಾರಕ್ಕೆ ತೊಡಗಬಹುದು. ನಮ್ಮ ಜನರಲ್ಲಿ ಇನ್ನೂ ದೇವರಿಗೆ ಹೆದರುವ ಭಾವನೆಯಿದೆ ಎಂದು ತಿಳಿದು ನಾನೀಸಾಹಸಕ್ಕೆ ಕೈಹಚ್ಚಿದ್ದೇನೆ. ನಾಗರಿಕ ಪೂರೈಕೆ ಶಾಖೆಗೆ ಇದರಿಂದ ಉಳಿತಾಯವೆನಿಸಬಹುದು. ಅದೇ ಸಮಯಕ್ಕೆ ಹಲವು ನೌಕರರನ್ನು ಮನೆಕಳಿಸಲೂ ಬೇಕಾದೀತು. ಆದರೆ ಹೀಗೆ ಕೆಲಸ ಬಿಡುವವರಿಗೆ ನಿಯಂತ್ರಣ ರದ್ದತಿಯ ಅನಂದವೇ ಹೆಚ್ಚು ಸುಖ ತಂದೀತೆಂದು ನಂಬಿದ್ದೇನೆ. ಎಂದರು.

ರೈತರಿಗೆ ಪ್ರೋತ್ಸಾಹ

ವಿನಿಯಂತ್ರಣವು ರೈತರಿಗೆ ಇನ್ನಿಲ್ಲದ ಉತ್ಸಾಹವನ್ನು ತಂದುಕೊಡುವುದಾಗಿ ತಮ್ಮ ವಿಶ್ವಾಸವೆಂದು ರಾಜಾಜಿ ತಿಳಿಯಪಡಿಸಿದರು. ಇಷ್ಟರ ವರೆಗೆ ಅವರಿಗೆ ಬಹಳ ತೊಂದರೆಗಳನ್ನು ಎದುರಿಸಬೇಕಾಗುತ್ತಿತ್ತು. ಇನ್ನು ಮುಂದೆ ಈ ಕಷ್ಟಗಳಿಂದ ಅವರು ಬಿಡುಗಡೆ ಹೊಂದುವರು. ತಮ್ಮ ಪರಿಶ್ರಮವು ಸೂರೆಯಾಗಿ ಹೋಗುವುದೆಂಬ ಅಂಜಿಕೆಗೆ ಅಸ್ಪದವಿಲ್ಲವಾದುದರಿಂದ— ಅಧಿಕ ಆಹಾರ ಬೆಳೆಸಲು ಅವರು ಸ್ವಾಭಾವಿಕವಾಗಿ ಮುಂದಾಗುವರು. ಹೆಚ್ಚು ಉತ್ಪತ್ತಿಯಾದರೆ—ಪೇಟೆಯಲ್ಲಿ ದರಗಳು ಜನಸಾಮಾನ್ಯರ ಕೈಯಳವಿನೊಳಗೆ ಬಂದೇ ಬರುವವು

ರೇಶನು ಪದ್ಧತಿಯಿಂದಾಗಿ ಜನರು ತಮಗೆ ಬೇಕೆಂದು ತೋರಿದ ಯೋಗ್ಯ ದವಸಧಾನ್ಯಗಳನ್ನೆ ಇನ್ನು ಕೊಂಡುಕೊಳ್ಳಬಹುದು. ರೈತರಾದರೂ ಇಂದಿನ ವರೆಗೆ ಸ್ಟೋರಿಗೆ ಹಾಕುವ ಅಕ್ಕಿಯನ್ನು ಅರೆಮನಸ್ಸಿನಿಂದ ಕುಟ್ಟುತ್ತಿದ್ದುದು ತಪ್ಪಿ, ಗಿರಾಕಿಗಳಿಗೆ ರುಚಿಸುವಂತೆ ಮತ್ತು ಮೆಚ್ಚುವಂತೆ ಸಿದ್ಧಪಡಿಸುವರು. ಹೀಗಾಗಿ ಅಕ್ಕಿಯು ಹೆಚ್ಚು ಯೋಗ್ಯತಾಸಂಪನ್ನವಾಗುವ ಆಶೆ ಇದೆ. ಇನ್ನು ಯೋಗ್ಯ ರೀತಿಯಲ್ಲಿ ವ್ಯಾಪಾರ ಮುಂದುವರಿಯುವುದು ನಿಶ್ಚಯವೆಂದು ಸ್ಪಷ್ಟವಾಗಿ ತಿಳಿದು ಬಂದಾಗ—ಈಗಿರುವ ಪ್ರಾದೇಶಿಕ ವಿಭಾಗಗಳನ್ನು ರದ್ದುಗೊಳಿಸುವ ವಿಚಾರ ಸರಕಾರಕ್ಕಿದೆ. ಆಗ ಇದೇ ರಾಜ್ಯವೇ ಆಹಾರದ ಮಟ್ಟಿಗೆ ಒಂದು ಘಟಕವಾಗುವುದು ಎಂದು ರಾಜಾಜಿ ಸ್ಪಷ್ಟಪಡಿಸಿದರು. ಇದಕ್ಕೆ ನನ್ನನ್ನೇನೂ ಹೊಗಳಬೇಕಾದುದಿಲ್ಲ—ಬಡವರೂ ಶ್ರೀಮಂತರೂ, ರಾಜಕೀಯ ತಜ್ಞರೂ ಜನಸಾಮಾನ್ಯರೂ ಕೂಡಿಯೇ ಈ ನಿರ್ಣಯವನ್ನು ಸ್ವಾಗತಿಸಿದ್ದಾರೆ. ಅವರಿಗೇ ಇದರ ಜಯಾಪಜಯಗಳು ಸೇರಿವೆ. ಇದು ಅಕ್ಷರಶಃ ಸತ್ಯ.

ಕೇಂದ್ರದ ಆಹಾರ ಧೋರಣೆ

ಇದಿಷ್ಟು ಮದ್ರಾಸು ರಾಜ್ಯದ ಸಂಗತಿಯಾದರೆ—ಕೇಂದ್ರ ಸರಕಾರದ ಆಹಾರ ವಿಷಯಕ ಧೋರಣೆಯು ಇನ್ನು ಕೆಲವೇ ದಿನಗಳಲ್ಲಿ ಸ್ಪಷ್ಟವಾಗಿ ತಿಳಿದುಬರುವುದು. ಕಿದ್ವಾಯಿಯವರು ಮದ್ರಾಸು ರಾಜ್ಯದ ಹೆಜ್ಜೆಯನ್ನ ಬಹಳವಾಗಿ ಪ್ರಶಂಸಿಸಿರುವರು. ಎಲ್ಲ ರಾಜ್ಯಗಳಲ್ಲಿ ವಿನಿಯಂತ್ರಣವನ್ನು ತರುವುದು ಅಷ್ಟು ಸಮಂಜಸವಾಗಲಾರದು. ಅಲ್ಲದೆ—ಆಯಾ ರಾಜ್ಯಗಳಿಗೇ ವಿನಿಯಂತ್ರಣದ ಯಶಸ್ಸಿನ ಬಗ್ಗೆ ಸಂಪೂರ್ಣ ನಂಬುಗೆ ಇಲ್ಲದಿರುವಾಗ—ಮತ್ತದು ಆಹಾರದಂಥ ಅತ್ಯಂತ ಪ್ರಾಮುಖ್ಯವಾದ ಒಂದು ವಿಷಯಕ್ಕೆ ಸಂಬಂಧಿಸಿರುವಾಗ—ಕೇಂದ್ರ ಸರಕಾರವೂ ಒತ್ತಾಯವನ್ನು ಹೇರಲು ಒಡಂಬಡುವುದಿಲ್ಲ. ಮುಂಬಯಿ ಮತ್ತು ಪಶ್ಚಿಮ ಬಂಗಾಳದಂಥ ಕೊರತೆಯ ಪ್ರದೇಶಗಳಿಗೆ ಆಹಾರ ಧಾನ್ಯದ ಪೂರೈಕೆಯನ್ನು ಹೆಚ್ಚಿಸುವುದರೊಡನೆ ಬೆಲೆಯಲ್ಲಿ ಇಳಿತವನ್ನುಂಟುಮಾಡಲು ತಕ್ಕ ಪರಿಹಾರವನ್ನು ಕೊಡುವ ಯೋಚನೆ ಕೇಂದ್ರಕ್ಕಿದೆ. ಸುಮಾರು ಹನ್ನೆರಡು ಕೋಟಿ ರೂಪಾಯಿಗಳ ವೆಚ್ಚದಿಂದ (ಇದರಲ್ಲಿ ನಾಲ್ಕು ಕೋಟಿ ರೂಪಾಯಿ ಕರ್ಚು ಮುಂಬಯಿಗೆ) ಗೋಧಿ ಮತ್ತು ಕೆಂಜೋಳ ಇತ್ಯಾದಿ ಧಾನ್ಯಗಳನ್ನು ಅಗ್ಗಮಾಗಿಸಲು ನೋಡಲಾಗುವುದು. ಇಲ್ಲದೆ ಸ್ವಾಭಾವಿಕ ರೀತಿಯಿಂದಲೂ ಬೆಲೆ ಇಳಿತವುಂಟಾಗಿದೆ. ಎಂಬ ಅಭಿಪ್ರಾಯವನ್ನು ಕಿದ್ವಾಯಿ ವ್ಯಕ್ತಪಡಿಸಿರುವರು. ರೈತರೂ ಈಗೀಗ ಹೆಚ್ಚಾಗಿ ಬಚ್ಚಿಟ್ಟ ಅಕ್ಕಿ, ಗೋಧಿ ಮುಂತಾದುವನ್ನು ಪೇಟೆಗೆ ತಂದು ಮಾರುವರೆಂದೂ, ಸಕ್ಕರೆ ಮತ್ತು ಬೆಲ್ಲದ ಬೇಡಿಕೆ ತಗ್ಗಿರುವುದರಿಂದ ಕಬ್ಬು ಬೆಳೆಯುವ ಹೊಲಗಳಲ್ಲಿ ಈಗ ಭತ್ತ ಬೆಳೆಯಲಾಗುತ್ತಿದೆ ಎಂದೂ ಸಾಮಾನ್ಯವಾಗಿ ಎಲ್ಲೆಡೆಯಲ್ಲಿಯೂ ಸರಕುಗಳ ಬೆಲೆ ಇಳಿತವುಂಟಾಗಿರುವುದು ಆಹಾರದ ಪೇಟೆಯ ಮೇಲೆ ಪರಿಣಾಮ ಬೀ[illegible]

ಅವ - ಹೇಳಿದರು.



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತವೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಜಿ. ಐ. ಪಿ.) ಮುಂಬಯಿ. ೧೪

Read

'NAVAYUGA' Weekly

Voice of the people Excellent Media and Reading Value.

THE CANARA BANKING CORPORATION LIMITED.
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್, ಲಿಮಿಟೆಡ್
ಸ್ಥಾಪನೆ : 1906. : : ಪ್ರಧಾನ ಕಾರ್ಯಾಲಯ: ಉಡುಪಿ, (ದ.ಕ.)
ವಿಶೇಷ ಸವಲತ್ತುಗಳಿದ್ದು, ಸಾಲಿಯಾನ್ ಶೇಕಡಾ 4 ರಂತೆ ಬಡ್ಡಿ ಗಳಿಸುವ ನಮ್ಮ
"ಪಂಚವಾರ್ಷಿಕ ಸುವರ್ಣ ಠೇವಣಾತಿಗಳ"
ಮೇಲೆ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.
ವಿಶೇಷ ಮಾಹಿತಿಗೆ, ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.
ವಿ. ಆರ್. ಕಾಮತ್, ಬಿ. ಎ; ಎಲ್ ಎಲ್, ಬಿ;
ಜನರಲ್ ಮೆನೇಜರ್.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೧೪-೬-'೫೧

ಸಮರ್ಪಕ ನಿರ್ಣಯ

ಶ್ರೀ ರಾಜಗೋಪಾಲಾಚಾರಿ ಮದ್ರಾಸು ರಾಜ್ಯದ ಮುಖ್ಯ ಮಂತ್ರಿ ಪದವನ್ನು ಸ್ವೀಕರಿಸಲು ಒಪ್ಪಿದಾಗ ಕಾಂಗ್ರೆಸು ಸರಕಾರವು ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರುವುದೆಂಬುದಕ್ಕಾಗಿ ಮಾತ್ರ ಸಂತೋಷವೆನಿಸಿದುದಲ್ಲ—ಒಬ್ಬ ಸಮರ್ಥ ಆಡಳಿತಗಾರನ ನೆರವು ರಾಜ್ಯದ ಇಂದಿನ ದಸ್ಥಿತಿಯಲ್ಲಿ ದೊರೆಯಿತಲ್ಲ ಎಂಬ ಭಾವನೆಯೇ ಆನಂದದಾಯಕವಾಯಿತು. ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಮದ್ರಾಸಿನ ರಾಜಕಾರಣವು ಗೊಂದಲಮಯ ವಾತಾವರಣವನ್ನು ನಿರ್ಮಿಸಿತು—ಮತ್ತು ಇದರಿಂದಲೇ ದಕ್ಷಿಣದಲ್ಲಿ ಕಮ್ಯೂನಿಸ್ಟರ ವರ್ಚಸ್ಸು ಹಬ್ಬಲು ಆಸ್ಪದವು ದೊರೆಯಿತು. ರಾಜ್ಯದ ಭದ್ರತೆಗೆ ಗಂಡಾಂತರ ಪ್ರಾಯವಾದ ಈ ಸನ್ನಿವೇಶದಲ್ಲಿ ರಾಜಾಜಿಯಂಥ ನುರಿತ ರಾಜಕಾರಣ ಪ್ರವೀಣರು ಆಡಳಿತ ಸೂತ್ರವನ್ನು ವಹಿಸಿಕೊಂಡುದರಿಂದ— ವಿರೋಧಿ ಗುಂಪಿನವರಿಗೆ ತೀವ್ರ ನಿರಾಶೆಯುಂಟಾದರೂ—ಜನಸಾಮಾನ್ಯಕ್ಕೆ ಅತೀವ ಸಮಾಧಾನವಾಯಿತು. ಇದಕ್ಕೆ ಸಾಕ್ಷಿ ಎಂಬಂತೆ ರಾಜಾಜಿಯು ಕಡಿಮೆ ವೇತನ ಪಡೆಯುವ ಸರಕಾರಿ ನೌಕರರ ಮಕ್ಕಳಿಗೆ ಶಿಕ್ಷಣ ಶುಲ್ಕದ ರಿಯಾಯತಿ ಮತ್ತು ಧರ್ಮಾರ್ಥ ವೈದ್ಯಕೀಯ ಸಹಾಯವನ್ನೂ ಬಡ ಅಧ್ಯಾಪಕರ ಮತ್ತು ಸ್ಥಾನಿಕ ಸಂಸ್ಥೆಗಳ ನೌಕರರ ಮಕ್ಕಳಿಗೆ ಶಾಲಾ ಸಂಬಳ ರಿಯಾಯತಿಯನ್ನೂ ಕೊಡುವ ನಿರ್ಣಯಮಾಡಿದರು. ಇದನ್ನು ಮಹತ್ವದ ಸುಧಾರಣೆಯೆಂದು ಹೊಗಳಲ್ಪಡಬೇಕೆಂದಿಲ್ಲ-ಎಂದುಕೊಂಡರೂ ಜನರ ಯೋಗಕ್ಷೇಮದ ಕಡೆಗೆ ಸರಕಾರ ಲಕ್ಷ್ಯ ಪೂರೈಸುತ್ತಿದೆ ಎಂಬುದಕ್ಕೆ ಇದು ತಕ್ಕುದಾದ ರುಜುವಾತು ಎಂಬಲ್ಲಿ ಸಂದೇಹ ಬೇಡ. ಇದರಂತೆಯೇ ಬಹಳ ಧೈರ್ಯದಿಂದ ಇಟ್ಟಿರುವ ಇನ್ನೊಂದು ಹೆಜ್ಜೆ ಆಹಾರ ಧಾನ್ಯಗಳ ವಿನಿಯಂತ್ರಣವಾಗಿದೆ. ಕಳೆದ ವಾರ ನಾವು ಅಗ್ರಲೇಖ ಬರೆದು, ಜನರಲ್ಲಿ ಅತೃಪ್ತಿಯನ್ನು ಹುಟ್ಟಿಸಿಗ ನಿಯಂತ್ರಣಗಳನ್ನು ಕಿತ್ತೊಗೆದರೇನು ಎಂದು ಪ್ರಶ್ನಿಸಿದ್ದೆವು. ಇಂದಿನ ವಾತಾವರಣದಲ್ಲಿ ಸರಕಾರವು ವಿನಿಯಂತ್ರಣ ಮಾಡಲು ಹಿಂಜರಿಯುವುದು ದೋಷಪೂರ್ಣ ಮನೋವೃತ್ತಿ ಎಂಬುದಾಗಿ ನಮ್ಮ ಸ್ಪಷ್ಟ ಅಭಿಪ್ರಾಯ. ಈಗ ಮುಖ್ಯಮಂತ್ರಿ ರಾಜಗೋಪಾಲಾಚಾರಿ ರಾಜ್ಯದಲ್ಲಿ ಆಹಾರ ಧಾನ್ಯಗಳ ಮೇಲಿನ ಹತೋಟಿಯನ್ನು ಕಿತ್ತುಹಾಕಿದುದಲ್ಲದೆ, ಕಾಯಿದೆ ಬದ್ಧ ರೇಶನು ಕ್ರಮವನ್ನೂ ಎತ್ತುವಳಿಯನ್ನೂ ನಿಲ್ಲಿಸಿದುದು ಚೆನ್ನಾಗಿದೆ. ಈ ನಿರ್ಣಯಕ್ಕೆ ತಾಸು ಬರಲು ಅಂತಃಸ್ಫೂರ್ತಿಯೇ ಕಾರಣವಾಯಿತೆಂದು ಅವರು ಹೇಳಿದರು-ಈ ಮಾತು ಅಕ್ಷರಶಃ ಸತ್ಯ. ಏಕೆಂದರೆ ಆಹಾರ ಧಾನ್ಯಗಳ ಅಭಾವದ ಭೀತಿಯು ಬಹಳಷ್ಟು ಹಬ್ಬಿರುವಾಗ—ಅದನ್ನು ಅಲ್ಲಗಳೆದು, ವಿನಿಯಂತ್ರಣಕ್ಕೆಳಸುವ ಸಾಹಸ ಮಾಡಬೇಕಾದರೆ, ಅಂಥ ನಿರ್ಣಯಕ್ಕೆ ಬರುವ ಮನುಷ್ಯನ ವ್ಯಕ್ತಿತ್ವ ಅಸಾಧಾರಣ ತೇಜಸ್ಸಿನಿಂದ ಕೂಡಿರಬೇಕು. ವೈಯಕ್ತಿಕವಾಗಿ ರಾಜಾಜಿ ದೈವಭಕ್ತರು—ಅವರ ಪ್ರತಿಯೊಂದೂ ಮಾತಿನಲ್ಲಿ ದೇವರಿಗೆ ಹೆದರಬೇಕೆಂಬ ಭಾವ ಹುದುಗಿದೆ. ಈ ನೈತಿಕ ಬಲದ ಮೇಲೆ ಅವರು ತಮ್ಮ ವ್ಯಕ್ತಿತ್ವದ ಶಕ್ತಿಯನ್ನು ಬೆಳೆಸಿಕೊಂಡಿರುವರು. ಉದಾತ್ತ ನಿರ್ಣಯವನ್ನು ಆದರ್ಶಪೂರ್ಣ ರೀತಿಯಿಂದ ಕಾರ್ಯಗತ ಮಾಡಲು ಬೇಕಿರುವ ದೃಢಸಂಕಲ್ಪ, ಸ್ಥೈರ್ಯ, ಟೀಕೆಗೆ ಅಳುಕದ ಮನಸ್ಸು ಮತ್ತು ಆಡಳಿತೆಯ ಬಿಗಿ ಮುಷ್ಟಿ ರಾಜಾಜಿಗಿದೆ. ಎಂತಲೇ "ನಾವು ವ್ಯರ್ಥ ಹಾಳುಮಾಡದಿದ್ದರೆ ನಮಗೆ ಉಣ್ಣಲು ಬೇಕಷ್ಟು ಆಹಾರವಿದೆ' ಎಂದು ಸ್ಪಷ್ಟವಾಗಿ ಹೇಳಲು ಅವರು ಮುಂದಾದರು. ರಾಜ್ಯವನ್ನು ಆರು ಪ್ರಾದೇಶಿಕ ವಿಭಾಗಗಳಾಗಿ ಸದ್ಯಕ್ಕೆ ಗಡಿಸಿ, ಸ್ವಯಂ ಪರಿಪೂರ್ಣತೆ ಮತ್ತು ಪೂರೈಕೆಗೆ ಅನುವು ಮಾಡಿಕೊಟ್ಟಿರುವುದು ಪ್ರಶಂಸನೀಯ. ಅಲ್ಲದೆ, ರೈತರ ಮತ್ತು ವ್ಯಾಪಾರಿಗಳ ನಡವಳಿಕೆಯು ಒಳ್ಳೆಯ ರೀತಿಯಲ್ಲಿರುವುದೆಂಬ ವಿಶ್ವಾಸದಿಂದ ಕೈಗೊಂಡ ಈ ನಿರ್ಣಯಕ್ಕೆ ಘಾತುಕವಾಗಿ ಅವರಾರಾದರೂ ವರ್ತಿಸಿದರೆ—ತತ್ಪರಿಣಾಮವಾಗಿ ಉಂಟಾಗಬಹುದಾದ ತೊಂದರೆಗಳನ್ನು ದೂರೀಕರಿಸಲು ಯೋಗ್ಯ ಬೆಲೆಯ ಅಂಗಡಿಗಳನ್ನು ತೆರೆದಿರುವುದೂ ಒಳ್ಳೆಯದು. ಸರಕಾರದೊಡನೆ ಸಾಕಷ್ಟು ಧಾನ್ಯ ಸಂಗ್ರಹವಿದೆ ಎಂದೂ, ನಿಯಂತ್ರಣ ಇಲಾಖೆಯಲ್ಲಿ ಕೆಲಸ ಮಾಡುವ ನೌಕರರು ಈಗಲೇ ಮನೆಗೆ ಹೋಗುವುದಿಲ್ಲವೆಂದೂ ತಿಳಿದುಬಂದಿದೆ. ಅದುದರಿಂದ ಅನ್ಯಾಯವಾಗಿ ಬೆಲೆ ಏರಿಸುವ ಬೆದರಿಕೆ ಹಾಕಿದರೆ—ಸರಕಾರವು ಒಡನೆಯೇ ತಕ್ಕ ಕ್ರಮವನ್ನು ಕೈಗೊಳ್ಳಲು ಸನ್ನದ್ಧವಾಗಿದೆ ಎಂಬುದು ಸ್ಪಷ್ಟವಾಗಿದೆ. ಹೀಗೆ ವಿನಿಯಂತ್ರಣವು ಯಶಸ್ವಿಯಾಗಲು ಜನರ ಸಹಕಾರದೊಡನೆ, ರೈತರ ಮತ್ತು ವ್ಯಾಪಾರಿ ವರ್ಗದ ಮನೋವೃತ್ತಿಯಲ್ಲಿ ಪರಿವರ್ತನೆಯೂ ಬೇಕಾಗಿದೆ. ಭಾರತದ ಇತರ ರಾಜ್ಯಗಳಲ್ಲಿ ಕೆಲವೆಡೆ ವಿನಿಯಂತ್ರಣದ ಪ್ರಯೋಗಗಳು ನಡೆದಿವೆಯಾದರೂ ಅವು ಇಷ್ಟು ವ್ಯಾಪಕವಾಗಿಲ್ಲ—ಮತ್ತು ಸ್ಪಷ್ಟ ರೂಪದಲ್ಲಿಲ್ಲ ಎಂಬುದರಿಂದ ಎಲ್ಲರ ದೃಷ್ಟಿಯೂ ಮದ್ರಾಸಿನ ಈ ಮಹಾಪ್ರಯೋಗದ ಕಡೆಗೆ ಹೊರಳಿದೆ. ಇಲ್ಲಿಯ ಯಶಾಪಯಶಗಳ ಪರಿಣಾಮವು ಭಾರತದಲ್ಲೆಲ್ಲ ಕಂಡುಬರುವುದು. ರಾಜಾಜಿಯ ಈ ನಿರ್ಣಯಕ್ಕೆ ಲಕ್ಷ್ಯದಿಂದ ಹೋಗೆಂದು ಹೇಳಬಹುದಾದ ಕಮ್ಯೂನಿಸ್ಟರನ್ನು ಬಿಟ್ಟು—ಉಳಿದೆಲ್ಲ ವಿರೋಧಿ ಗುಂಪಿನ ಧುರೀಣರೂ ಹೃತ್ಪೂರ್ವಕ ಸ್ವಾಗತ ತೋರಿರುವುದರಿಂದ, ಯಶಸ್ಸಿನ ಬಗ್ಗೆ [illegible]ವಿಸುವದಗತ್ಯವಿಲ್ಲ. ಕೇವಲ ಆಹಾರ ಧಾನ್ಯಗಳ ಕುರಿತು ಅನುಸರಿಸಿದ ಈ ಸಮರ್ಪಕ ನಿರ್ಣಯವನ್ನು ಬಿಟ್ಟು, ಮತ್ತಿತರ ಆವಶ್ಯಕ ಸರಕುಗಳ ಮಟ್ಟಿಗೂ ಅನ್ವಯಿಸುವುದು ಕ್ಷೇಮ. ಜನತೆಯ ಸಂಪೂರ್ಣ ಸಹಕಾರದಿಂದಲೇ ಎಲ್ಲ ನಿರ್ಬಂಧಗಳೂ ಸಡಿಲಾಗುವ ವಾತಾವರಣ ಏರ್ಪಡುವುದೆಂಬುದು ನಿಜ.-

ಕರ್ನಾಟಕ ಏಕೀಕರಣ

ಕನಸು ನನಸಾಗುವ ಹೊಸ ಆಶೆ

ಹುಬ್ಬಳ್ಳಿಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯು ಸಭೆ ಸೇರಿದಾಗ, ಕನ್ನಡ ಪ್ರಾಂತ್ಯರಚನೆಯ ಕಾರ್ಯದಲ್ಲಿ ಆದ ಪ್ರಗತಿಯನ್ನು ಪರಿಶೀಲಿಸಲಾಯಿತು. ಈಚೆಗೆ ಪಾರ್ಲಿಮೆಂಟಿನ ಕನ್ನಡ ಪ್ರತಿನಿಧಿಗಳು ಪ್ರಧಾನಿ ನೆಹರೂರಿಗೆ ಒಂದು ಮನವಿಯನ್ನು ಸಾದರಪಡಿಸಿದ್ದರು. ಮೈಸೂರು ರಾಜ್ಯದೊಡನೆ ಮುಂಬಯಿ ಮತ್ತು ಮದ್ರಾಸು ರಾಜ್ಯಗಳ ಕನ್ನಡ ಪ್ರದೇಶಗಳನ್ನು ಒಟ್ಟುಗೂಡಿಸಿದರೆ ಕನ್ನಡ ಪ್ರಾಂತ್ಯರಚನೆಯಾಗುವುದೆಂದೂ ಇದಕ್ಕೆ ಮೈಸೂರಿನ ಒಪ್ಪಿಗೆ ಇದೆಯೆಂದೂ ಮನವಿಯಲ್ಲಿ ಹೇಳಲಾಗಿದೆ. ನೆಹರೂ ಈಚೆಗೆ ಭಾಷಾವಾರು ಪ್ರಾಂತರಚನೆಯ ಮಟ್ಟಿಗೆ ಅನುಕೂಲ ಮತವನ್ನು ತೋರಿಸುತ್ತಿರುವರೆಂದೂ ಮೊನ್ನೆ ಸೇರಿದ ಕಾಂಗ್ರೆಸು ಕಾರ್ಯಸಮಿತಿಯ ಸಭೆಯಲ್ಲಿ "ಈ ಕುರಿತು ಈಗಲೇ ಒಂದು ನಿರ್ಣಯ ಮಾಡೋಣ"ವೆಂದು ಅವರು ಹೇಳಿದರಾಗಿಯೂ ವರದಿಯಾಗಿದೆ. ಮದ್ರಾಸಿನ ಮೇಲೆ ಆಂಧ್ರರು ತಮ್ಮ ಸ್ವಾಮ್ಯವನ್ನು ಬಿಟ್ಟುಕೊಟ್ಟಿರುವರು—ಮತ್ತು ಅದನ್ನುಳಿದೇ ಆಂಧ್ರ ಪ್ರಾಂತರಚನೆಯಾಗಬೇಕೆಂದಿದ್ದಾರೆ. ಮದ್ರಾಸು ಗವರ್ನರ ಶ್ರೀ ಪ್ರಕಾಶರು ಈ ತಿಂಗಳಾದಿಯಲ್ಲಿ ರಾಷ್ಟ್ರಾಧ್ಯಕ್ಷರೊಡನೆ ಮತ್ತು ನೆಹರೂರೊಡನೆ ಈ ಕುರಿತು ವಿಚಾರವಿನಿಮಯ ನಡೆಸಿದ್ದರು. ಅಂತೂ ಭಾಷಾನುಗುಣ ಘಟಕಗಳನ್ನು ನಿರ್ಮಿಸುವ ಕೆಲಸಕ್ಕೆ ಈಗ ಕಾಂಗ್ರೆಸುವರಿಷ್ಠರೂ ಲಕ್ಷ್ಯ ಪೂರೈಸುತ್ತಿರುವುದು ಅನುಕೂಲ ವಾತಾವರಣವಿದೆ ಎಂಬುದಕ್ಕೆ ಸಾಕ್ಷಿ. ಪಾರ್ಲಿಮೆಂಟಿನಲ್ಲಿ ಪ್ರಬಲ ವಿರೋಧಿ ಪಕ್ಷವೆನಿಸಿದ ಕಮ್ಯೂನಿಸ್ಟರು ಈ ಕುರಿತು ಮೇಲಿಂದ ಮೇಲೆ ಕಿಟಲೆ ಕೊಡುತ್ತಿರುವುದೂ ನೆಹರೂ ಮನಸ್ಸಿನ ಮೇಲೆ ವರ್ಚಸ್ಸು ಬೀರಿರಬಹುದು.

ಶಾಲಾ ಸಂಬಳ ರಿಯಾಯತಿ

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ದುಡಿಯುವ ಎಲ್ಲ ಅಧ್ಯಾಪಕರ ಮಕ್ಕಳಿಗೂ ಈಚೆಗೆ ಮದ್ರಾಸು ಸರಕಾರವು ಘೋಷಿಸಿದ ಶಾಲಾ ಸಂಬಳ ರಿಯಾಯತಿಯನ್ನು ಅನ್ವಯಿಸಬೇಕೆಂದು ನಿರ್ಣಯಿಸಿದೆ. ಇದರಂತೆ, ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ ಸಂಪೂರ್ಣ ಸಂಬಳ ರಿಯಾಯತಿಯೂ ಹೈಸ್ಕೂಲು ವರ್ಗಗಳಲ್ಲಿ ಅರ್ಧ ಸಂಬಳ ಮಾಫಿಯೂ ಆಗುವುದು. ಖಾಸಗಿ ಶಾಲಾ ವ್ಯವಸ್ಥಾಪಕರಿಗೆ ಇದರಿಂದುಂಟಾಗುವ ನಷ್ಟವನ್ನು ಸರಕಾರವೇ ಭರ್ತಿಮಾಡುವುದು. ಆದರೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ನಷ್ಟದಲ್ಲಿ ಅರ್ಧದಷ್ಟನ್ನು ಸರಕಾರವು ಹೊರುವುದು.

ಜನಪದ ಅಭಿವೃದ್ಧಿ ಯೋಜನೆ

ರಾಜ್ಯದಲ್ಲಿ ಜನಪದ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸಲು ತಕ್ಕ ಸಿಬಂದಿಯನ್ನು ಮದ್ರಾಸು ಸರಕಾರವು ನೇಮಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಕಾರ್ಕಳ ತಾಲೂಕುಗಳಲ್ಲಿ ಈ ವಿಶೇಷ ಮಾದರಿಯ ಗ್ರಾಮಾಭಿವೃದ್ಧಿ ಕಾರ್ಯವಾಗಬೇಕೆಂದು ನಿಶ್ಚಯಿಸಲಾಗಿದೆ. ನಮ್ಮ ಜಿಲ್ಲೆಯನ್ನು ಬಿಟ್ಟು ಈ ಯೋಜನೆಯು ಉಳಿದ ಕೆಲವೆಡೆಯಲ್ಲೂ ಕಾರ್ಯರೂಪಕ್ಕೆ ಬರುವುದು. ಭಾರತ ಸರಕಾರವು ಈ ಕುರಿತ ಒಂದು ಬೃಹತ್ ಯೋಜನೆಯನ್ನು ಸಿದ್ಧಗೊಳಿಸಿರುವುದು. ಹಳ್ಳಿಗಳ ಉದ್ಧಾರ ಕಾರ್ಯದಲ್ಲಿ ತಕ್ಕ ತರಬೇತಿಯನ್ನು ಕೊಡಲು ಕೇಂದ್ರಗಳನ್ನು ತೆರೆಯುವ ಯೋಜ

ಚತುರ್ಥ ವಿಮಾಗಣನೆಯ ಫಲಿತಾಂಶ
(1947ರಿಂದ 1950ರ ವರೆಗೆ)
* * * * * * *
ತಾರೀಕು 31-12-1950ಕ್ಕೆ ನಡೆಸಿದ ವಿಮಾಗಣನೆಯಲ್ಲಿ ಆಜೀವ ಮತ್ತು ಉಂಬಳಿ ವಿಮಾ ಪೋಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ ಅನುಕ್ರಮವಾಗಿ ರೂ. 12- ಮತ್ತು ರೂ. 9-ರಂತೆ ಬೋನಸನ್ನು ಘೋಷಿಸಿದೆ.
The Canara Mutual Assurance Co. Ltd.
Head Office: **UDIPI**, S. INDIA.
ಸ್ಥಾಪನೆಯಿಂದಲೂ ಎಲ್ಲಾ ವರ್ಷಗಳಿಗೂ
ಬೋನಸು ಹಂಚಿದ ಕಂಪೆನಿ.

ಮತ್ಸ್ಯ ವ್ಯವಸಾಯ, ರಾಸಾಗೊಬ್ಬರದ ಉಪಯೋಗ, ಕೀಟಪೈರು ಸಂರಕ್ಷಣೆ, ಬಾವಿಗಳನ್ನು ತೋಡುವುದು, ಭೂಸಂಶೋಧನೆ ಮುಂತಾದ ಇತರ ಪೂರಕ ಕಾರ್ಯಗಳಾ

ರೈಲ್ವೆ ಬೇಡಿಕೆಗೆ ಮನ್ನಣೆ

...ವೆಂಟನಲ್ಲಿ ರೇಲ್ವೆ ಶಾಖೆಯಲ್ಲಿ ಕಡಿತವನ್ನುಂಟುಮಾಡಲು ಪಕ್ಷದವರು ತಂದ ಎಲ್ಲ ಸೂಚನೆ ತಿರಸ್ಕೃತವಾಗಿ, ಬೇಡಿದ ಹಣವು ದೊರೆಯಿತು. ಕೆಲಸಗಾರರಿಗೆ ವಿಶೇಷ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದೂ ಸಂಬಳವನ್ನು ಏರಿಸಬೇಕೆಂದೂ ಸರ್ ವೈದ್ಯಕೀಯ ಸಹಾಯ ಮಕ್ಕಳಿಗೆ ಶಿಕ್ಷಣದ ಏರ್ಪಾಡಾಗಬೇಕೆಂದೂ ಸೂಚನೆಗಳು ಬಂದಿದ್ದುವು. ಗೋರಖಪುರದಲ್ಲಿ ನಡೆದ ಗೋಲಿಬಾರಿನಿಂದ ಸಂತ್ರಸ್ತಗೊಂಡ ರೇಲ್ವೆ ನೌಕರರ ಕುಟುಂಬಕ್ಕೆ ಪರಿಹಾರ ಕೊಡಬೇಕೆಂಬುದು ಪ್ರಮುಖವಾಗಿ ...ರೇಲ್ವೆಮಂತ್ರಿಗಳು ಸಮಾಧಾನ ಹೇಳುತ್ತಾ ಸರಕಾರವು ರೇಲ್ವೆ ಕೆಲಸಗಾರರ ಯೋಗಕ್ಷೇಮಕ್ಕೆ ಸದಾ ಲಕ್ಷ್ಯಕೊಡುವುದೆಂದರು. ಮೂರನೇ ವರ್ಗದ ಪ್ರವಾಸಿಕರ ಕಡೆಗೂ ಗಮನವೀಯುತ್ತೇವೆ. ಅನಗತ್ಯವೆನಿಸಿದ ಮೊದಲನೆ ವರ್ಗವನ್ನು ತೆಗೆದು ಹಾಕಲಾಗುವುದು—ಎಂದೂ ರೇಲ್ವೆ ಮಂತ್ರಿ ಹೇಳಿದರು.

ಸೈನ್ಯದ ವೆಚ್ಚ ಹೆಚ್ಚಲ್ಲ

ಭಾರತದ ಸಂರಕ್ಷಣಾ ವೆಚ್ಚವನ್ನು ಕೇಂದ್ರ ಸರಕಾರ ನಿರ್ವಹಿಸುತ್ತಿದೆ. ಇದು ಇಡೀ ದೇಶಕ್ಕೆ ಸಂಬಂಧಿಸಿದ ಖರ್ಚಾದುದರಿಂದ, ದೇಶದ ಒಟ್ಟು ಆದಾಯದೊಡನೆಯೇ ಇದರ ಪ್ರಮಾಣವನ್ನು ಹೋಲಿಸಬೇಕು ಹೀಗೆ ಮಾಡಿದರೆ ನಮ್ಮ ಸಂರಕ್ಷಣಾ ವೆಚ್ಚವು ಕೇವಲ ಅಂಶವು ಬರುವುದು. ಇದು ನಿಜಕ್ಕೂ ಬಹಳ ಕಡಿಮೆ ಇದೆ. ದೇಶದ ಭದ್ರತೆಗೆ ಇದು ಅತ್ಯಗತ್ಯ. ಸೈನಿಕರು ಉತ್ಪಾದನಾ ಕಾರ್ಯದಲ್ಲಿ ತೊಡಗಬೇಕೆಂಬ ಸೂಚನೆಯು ಗಂಭೀರವಾಗಿದೆ. ಈ ಕೆಲಸದಲ್ಲಿ ಸೈನಿಕರು ಯಶಸ್ವಿಯಾಗುವುದಿಲ್ಲವೆಂದಲ್ಲ— ಆದರೆ ಇಡೀ ಸೈನ್ಯವನ್ನು ಹೀಗೆ ದ್ವಿವಿಧ ಕಾರ್ಯಗಳಿಗೆ ಎಷ್ಟರ ಮಟ್ಟಿಗೆ ಉಪಯೋಗಿಸುವುದು ಸಾಧ್ಯವೆಂಬುದನ್ನು ಪರಾಮರ್ಶಿಸಬೇಕು. ಸದ್ಯಕ್ಕೆ ಈ ಗೊಂದಲ ಅನಾವಶ್ಯಕ ಎಂದು ಶ್ರೀ ಗೋಪಾಲ ಸ್ವಾಮಿ ಅಯ್ಯಂಗಾರರು ಹೇಳಿಕೆ ಇತ್ತರು.

ಉತ್ಪಾದನೆಯ ಹೆಚ್ಚಳವೇ ಧ್ಯೇಯ

ಲೋಕೋಪಯೋಗಿ ಯೋಜನೆಗಳಿಗೆ ಹಣವನ್ನು ವ್ಯಯಿಸುವ ಮೂಲಕ ಭೂಮಿಗೆ ಸ್ವರ್ಗವನ್ನೆ ತರುತ್ತೇವೆಂದು ನಾನೆಣಿಸುವುದಿಲ್ಲ. ನಮ್ಮ ಉದ್ದೇಶವು ಸಾವಧಾನವಾಗಿ ಜನರ ಜೀವನ ಮಟ್ಟವನ್ನು ಸುಧಾರಿಸುವುದಾಗಿದೆ. ಯೋಜನೆಗಳನ್ನು ಈ ದೃಷ್ಟಿಯಿಂದ ಕೈಗೊಳ್ಳಲಾಗಿದೆ— ಇದಕ್ಕೆ ಆಗತ್ಯವಿರುವ ಬಂಡವಾಳವನ್ನು ಒದಗಿಸಿಕೊಳ್ಳುವ ಪರಿ ಹೇಗೆಂಬುದನ್ನು ಸರಕಾರ ಮೇಲಿಂದ ಮೇಲೆ—ವಿರೋಧಿ ಪಕ್ಷದವರ ಕಳಕಳಿಗಿಂತಲೂ ಹೆಚ್ಚಾಗಿ—ವಿಚಾರಿಸುತ್ತಿದೆ. ನಾವು ಒಟ್ಟು ಉತ್ಪಾದನೆಯನ್ನು ಹೆಚ್ಚಿಸಬೇಕೇ ಹೊರತು—ಉತ್ಪಾದನೆಯ ದಾಮಾಶಯವನ್ನು ವರ್ಷಂಪ್ರತಿ ಹೆಚ್ಚು ಮಾಡಿದಷ್ಟಕ್ಕೆ ಕೆಲಸ ಮುಗಿಯಲಿಲ್ಲ. ಈ ದೃಷ್ಟಿಯಿಂದ ಆಹಾರ ಸಹಾಯಧನ ಕೊಡುವುದರಿಂದ ಅನ್ನದ ಸಮಸ್ಯೆ ಬಗೆಹರಿಯುವುದಿಲ್ಲ ಎಂಬುದು ಮನವರಿಕೆಯಾಗುತ್ತದೆ. "ಭೂಮಿ ತಾಯಿಯು ತಾನು ಬಡವನು ಎಂದು ದೂರಿಕೊಳ್ಳುತ್ತಿರುವವನನ್ನು ಕಂಡು ನಗುವಳು." ಎಂಬ ಕವಿವಾಕ್ಯ ಸತ್ಯ ಎಂದು ಶ್ರೀ ದೇಶಮುಖರು ಮುಂಗಡ ಪತ್ರದ ಚರ್ಚೆಗೆ ಉತ್ತರಿಸಿದರು.

ಉಡುಪಿ

ಹಿಂದೀ ವರ್ಗಗಳು—ರಾಷ್ಟ್ರ ಭಾಷಾ ಶಿಕ್ಷಣ ಶಿಬಿರದಲ್ಲಿ ತಾ 17ರಂದ ಹೊಸತಾಗಿ, ಆಕ್ಟೋಬ್ಬರದಿಂದ ಪ್ರಾರಂಭಿಸಿ ಹಿಂದೀ ವರ್ಗವು ತೆರೆಯಲ್ಪಡುವುದೆಂದೂ, ವರ್ಗಕ್ಕೆ ಸೇರಲಿಚ್ಛಿಸುವವರು ಸಾಯಂಕಾಲ 5 ಗಂಟೆಯ ನಂತರ ಉಡುಪಿ ಹಿಂದೂಸ್ಥಾನಿ ಶಾಲೆಯಲ್ಲಿ ಹಿಂದೀ ಅಧ್ಯಾಪಕರೊಡನೆ ವಿಚಾರಿಸಬಹುದೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಕಾಂಗ್ರೆಸ್ ಕಮಿಟಿ ಸಭೆಯು—ತಾ 7ರಂದು ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಹಾಜರಿದ್ದರು. ಪಕ್ಕಲು ಹಿತ ಮಸೂದೆಯನ್ನು ಬೇಗನೆ ಜ್ಯಾರಿಗೆ ತರಬೇಕೆನ್ನುವ, ಮೂನುಗಾರಿಕೆಯನ್ನು ಮೂರಾಟೆಕರದಿಂದ ವಿರಹಿತಗೊಳಿಸಬೇಕೆನ್ನುವ, ದ. ಕ. ಜಿಲ್ಲೆಯ ನೀರಾವರಿ ಯೋಜನೆಗಳನ್ನು ಬೇಗನೆ ಆಮಲಿನಲ್ಲಿ ತರಬೇಕೆನ್ನುವ, ಕಲ್ಯಾಣಪುರ, ಪರ್ಕಳ ಹಿರಿಯಡ್ಕ, ಉದ್ಯಾವರ, ಆಲೆವೂರು ಮೊದಲಾದ ಯಗಳಿಗೆ ವಿದ್ಯುತ್ ಸೌಕರ್ಯ ಸಿಗುವಂತಾಗಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು ಈಚೆಗೆ ಲೋಕ ಸಭೆಯಲ್ಲಿ ಶ್ರೀ ಲಾಲ್‌ಬಹದೂರ್ ಶಾಸ್ತ್ರಿಗಳವರು ಪ್ರಬುದ್ಧ ಬಂದರ ತಜ್ಞರ ವರದಿಯಲ್ಲಿ ಮಲ್ಪೆ ಬಂದರದ ಕುರಿತು ಲೋಪ ದೋಷಗಳಿವೆಯಾಗಿ ಹೇಳಿದುದರಿಂದ ಆ ಲೋಪ ದೋಷಗಳಾವುವು ಎಂಬುದನ್ನು ಸ್ಪಷ್ಟಪಡಿಸುವಂತೆ ಜಿಲ್ಲೆಯ ಪ್ರತಿನಿಧಿಗಳಾದ ಬಿ. ಶಿವರಾವ್, ಯು. ಶ್ರೀನಿವಾಸ ಮಲ್ಯ ಮತ್ತು ಕೆ. ಸದಾನಂದ ಹೆಗ್ಡೆಯವರು ಅವರನ್ನು ಪ್ರಶ್ನಿಸಿ ಜನತೆಗೆ ತಿಳಿಸುವಂತೆ ಅವರನ್ನು ವಿನಂತಿಸಲಾಯಿತು.

ಆಹಾರ ಧಾನ್ಯ ಬೆಳೆ ಹೆಚ್ಚಳಕ್ಕೆ ಪ್ರೋತ್ಸಾಹ—ರೂಪದಲ್ಲಿ ಏರ್ಪಡಿಸಲಾಗಿದ್ದ 1951—52ರ ಸ್ಪರ್ಧೆಯಲ್ಲಿ ಕುಶಲತೆಯನ್ನು ಪ್ರದರ್ಶಿಸಿದವರಿಗೆ ಬಹುಮಾನವನ್ನು ಹಂಚುವ ಸಮಾರಂಭವು ತಾ 6ರಂದು ತಾಲೂಕು ಕಚೇರಿಯಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜಪದ್ಮಂ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಎಡಿಶನಲ್ ಎಗ್ರಿಕಲ್ಚರಲ್ ಡೆಮೊನ್ ಸ್ಟ್ರೇಟರ್ ಶ್ರೀ ಪೈ. ಪಿ. ಹೆಗ್ಡೆಯವರ ಪ್ರಾರಂಭಿಕ ಭಾಷಣವಾದ ಬಳಿಕ ಅಧ್ಯಕ್ಷರು ಕೂಡಾ ಮಾತಾಡಿ ಬಹುಮಾನ ಹಂಚಿದರು ತಾಲೂಕು ಬಹುಮಾನವು ಹಾಲಾಡಿ ಪಟೇಲ್ ಶ್ರೀ ಕೆ ಕೃಷ್ಣಯ್ಯ ಸೆಟ್ಟರಿಗೂ ಉಡುಪಿ, ಕಾಪು, ಬ್ರಹ್ಮಾವರ ಫರ್ಕಾ ಪಾರಿತೋಷಗಳು ಶ್ರೀಗಳಾದ ಟಿ. ರಘುನಾಥ ಪೈ, ಕೆ ವಾಸು ಸೆಟ್ಟಿ ಮತ್ತು ಕೆ ದಯಾನಂದ ನಾಯ್ಕರಿಗೂ ಕೊಡಲಾದುವು. ಆ ಮೇಲೆ ಶ್ರೀ ಟಿ. ಎ. ಪೈ. ಎಮ್. ಎಲ್ ಎ, ಅವರು ಮಾತನಾಡುತ್ತ, ಯಾವ ಆಹಾರ ಮಂತ್ರಿಯೇ ಇರಲಿ, ಜನತೆಯು ಮನಸ್ಸು ಮಾಡದಿದ್ದರೆ ಆಹಾರ ಕೊರತೆಯನ್ನು ನೀಗಿಸಲು ಸಾಧ್ಯವಿಲ್ಲವೆಂದು ಹೇಳಿದರು. ತಹಶಿಲ್ದಾರ್ ಶ್ರೀ ಕೆ. ವೆಂಕಪ್ಪನವರು ಧನ್ಯವಾದಗಳನ್ನರ್ಪಿಸಿದರು.

ಧಾನ್ಯ ನಿಯಂತ್ರಣ ಮತ್ತು ರೇಶನಿಂಗ್ ರದ್ದತಿಗೆ ಬೆಂಬಲ—ಉಡುಪಿ ತಾಲೂಕಿನ ಅಕ್ಕಿ ವ್ಯಾಪಾರಿಗಳ ಸಭೆಯೊಂದು ತಾ 9ರಲ್ಲಿ ಮುಕುಂದ ನಿವಾಸದಲ್ಲಿ ಶ್ರೀ ಟಿ ಎ ಪೈ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು ಆಹಾರ ಧಾನ್ಯಗಳ ಕಂಟ್ರೋಲ್ ಮತ್ತು ರೇಶನಿಂಗ್ ರದ್ದತಿ ಮಾಡಿದ ಮದ್ರಾಸು ಸರಕಾರದ ಆದರಲೂ ರಾಜಾಜಿಯ ಧೋರಣೆಯನ್ನು ಉಡುಪಿ ವ್ಯಾಪಾರಸ್ಥರು ಅನುಮೋದಿಸುವುದಲ್ಲದೆ ಅದು ಕಾರ್ಯಕಾರಿಯಾಗುವಂತೆ ಬೆಂಬಲವೀಯುವುದಾಗಿ ಭರವಸೆಯೀಯುವ ನಿರ್ಣಯವಾಯಿತು ಆದಷ್ಟು ಚೌಕಸಿ ದರದಲ್ಲಿ ಜನತೆಗೆ ಅಕ್ಕಿಯನ್ನು ಒದಗಿಸುವುದರಲ್ಲಿ ವ್ಯಾಪಾರಸ್ಥರೊಡನೆ ರೈತರೂ ಭೂಮಾಲಿಕರೂ ಹಾಗೂ ಇತರರೂ ಸಹಕರಿಸಬೇಕಾಗಿ ವಿನಂತಿಸಲಾಯಿತು ಜಿಲ್ಲೆಯ ಅಕ್ಕಿಯು ಹೊರಗೆ ಹೋಗದಂತೆ ತಕ್ಕ ಬಂದೋಬಸ್ತು ಮಾಡುವಂತೆ ಜಿಲ್ಲಾಧಿಕಾರಿಗಳನ್ನು ಕೇಳಿಕೊಳ್ಳಲಾಯಿತು. ವರ್ಗದಾರರೂ, ರೈತರೂ, ಅಧಿಕಾರಿಗಳೂ ಚೌಕಸಿ ರಾಜಾಜಿ ಧೋರಣೆಗೆ ಪೂರ್ಣ ಬೆಂಬಲವೀಯುವುದು ಅತ್ಯಾವಶ್ಯಕವೆಂದು ಸಭೆಯು ಅಭಿಪ್ರಾಯಪಟ್ಟಿತು. ಸಭಾಧ್ಯಕ್ಷರು ಭಾಷಣ ಮಾಡಿ ವಂದನೆಗಳನ್ನರ್ಪಿಸಿದರು.

ದ. ಕ. ಜಿಲ್ಲೆಯಲ್ಲಿ ವಿನಿಯಂತ್ರಣದ ಕುರಿತು ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರ ಹೇಳಿಕೆಯ ಸಾರಾಂಶ—'ಸಾಹುಕಾರರ ಮತ್ತು ವರ್ಗದಾರರ ಸಹಕಾರವಿದ್ದಲ್ಲಿ ದ. ಕ ಜಿಲ್ಲೆಯಲ್ಲಿ ವಿನಿಯಂತ್ರಣವು ಯಶಸ್ವಿಯಾಗಲು ಸಾಧ್ಯವಿದೆ ಕಂಟ್ರೋಲುಗಳ ಕುರಿತು ನಾವು ಈ ಮೊದಲು ಟೀಕೆಗಳನ್ನೆಷ್ಟೊ ಮಾಡಿದ್ದೆವು ಆದರೆ ಆ ಟೀಕೆಗಳ ಯಾಥಾರ್ಥ್ಯತೆಯನ್ನು ಸ್ಫುಟಕ್ಕೆ ಹಾಕುವ ಕಾಲವೀಗ ಸನ್ನಿಹಿತವಾಗಿದೆ. ಮಲಬಾರು ಮತ್ತು ಗೋವೆಗೆ ನಮ್ಮ ಜಿಲ್ಲೆಯಿಂದ ಅಕ್ಕಿ ಹೋಗುವುದನ್ನು ನಿಲ್ಲಿಸಿ ಬಿಟ್ಟರೆ ನಮ್ಮ ಜಿಲ್ಲೆ ಸ್ವಾವಲಂಬಿಯಾಗಲು ಸಾಧ್ಯವಿದೆ. ಶಿಸ್ತಿನಿಂದ ವರ್ಗದಾರರೂ ವ್ಯಾಪಾರಸ್ಥರೂ ಜನತೆಯೂ ನಡೆದರೆ ರಾಜಾಜಿ ಧೋರಣೆಯು ಜಯಪ್ರದವಾಗುವುದರಲ್ಲಿ ಸಂದೇಹವಿಲ್ಲ. ಸರಕಾರದೊಡನೆ ಸಾಕಷ್ಟು ಅಕ್ಕಿ ಮತ್ತು ಇತರ ಧಾನ್ಯಗಳ ದಾಸ್ತಾನಿರುವುದರಿಂದಲೂ ಅಕ್ಕಿ ವಿತರಣೆ ಅಂಗಡಿಗಳ ಮೂಲಕ ಆಹಾರ ಧಾನ್ಯಗಳು ದೊರೆಯುವುದರಿಂದಲೂ ಜನತೆಯು ಗಾಬರಿಗೊಳ್ಳಬೇಕಾದ ಅವಶ್ಯಕತೆಯೇನೂ ಇಲ್ಲ. ಮುಕ್ತ ಪೇಟೆಯಲ್ಲಿ ಜಾಸ್ತಿ ಕ್ರಯದಲ್ಲಿ ಅಕ್ಕಿ ಮಾರಾಟವಾಗದಂತೆ ನೋಡಿಕೊಳ್ಳಲು ಜಿಲ್ಲೆಯ ಬೇಂಕುಗಳು ವ್ಯಾಪಾರಸ್ಥರಿಗೆ ಸಾಲದ ಸೌಕರ್ಯವನ್ನೀಯುವಾಗ ಮುಂಜಾಗ್ರತೆಯನ್ನು ವಹಿಸುವರೆಂಬುದರಲ್ಲಿ ಸಂಶಯವಿಲ್ಲ'.

ಉಡುಪಿ ಸಬ್ ಪೋಸ್ಟ್—ಆಫೀಸನ್ನು ಬರುವ ತಾ 10ರಂದ ದಕ್ಷಿಣ ವಿಭಾಗದ ಹೆಡ್ ಪೋಸ್ಟ್ ಆಫೀಸಾಗಿ ಪರಿವರ್ತಿಸಲಾಗುವುದೆಂದು ತಿಳಿದು ಬರುತ್ತದೆ

The New Karnataka Provident Insurance Co. Ltd; Udipi

NOTICE:

The Register of members and share transfer books of the Company will remain closed from the 7th June 1952 to 28th June 1952 (Both days inclusive).

CORRECTION: In the General Body meeting notice given along with the balance sheet the time day and the date of the meeting was wrongly printed as 'Sunday' the 21st June 1952" which ought to be "Saturday, the 21st June 1952 at 4 P. M" All the shareholders will please note the correction.

M. H. Shetty.
MANAGER.



ತಾರೀಕು 10—6—52ರಿಂದ

ರುಮಾಲ್

ನರ್ಗೀಸ್, ಜೈರಾಜ್, ರೆಹಮಾನ್, ಮೊದಲಾದವರು.

ಅನಂತರ ಜ್ಯುಪಿಟರ್ ಚಿತ್ರ

ಕೃಷ್ಣ ವಿಜಯಂ (ತಮಿಳು)

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ ಎಂ.

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಥಾನಿಕರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

THE CANARA BANKING CORPORATION LIMITED.
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್, ಲಿಮಿಟೆಡ್
ಸ್ಥಾಪನೆ: 1906. : : ಪ್ರಧಾನ ಕಾರ್ಯಾಲಯ: ಉಡುಪಿ, (ದ.ಭಾ.)
ವಿಶೇಷ ಸವಲತ್ತುಗಳಿದ್ದು, ಸಾಲಿಯಾನ್ ಶೇಕಡಾ 4 ರಂತೆ ಬಡ್ಡಿ ಗಳಿಸುವ ನಮ್ಮ
"ಪಂಚವಾರ್ಷಿಕ ಸುವರ್ಣ ಠೇವಣಾತಿಗಳ"
ಮೇಲೆ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.
ವಿಶೇಷ ಮಾಹಿತಿಗೆ, ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ
ವಿ. ಆರ್. ಕಾಮತ್, ಬಿ.ಎ; ಎಲ್ ಎಲ್, ಬಿ;
ಜನರಲ್ ಮೆನೇಜರ್

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೧೪-೬-'೫೧

ಸಮರ್ಪಕ ನಿರ್ಣಯ

ಶ್ರೀ ರಾಜಗೋಪಾಲಾಚಾರಿ ಮದ್ರಾಸು ರಾಜ್ಯದ ಮುಖ್ಯ ಮಂತ್ರಿ ಪದವನ್ನು ಸ್ವೀಕರಿಸಲು ಒಪ್ಪಿದಾಗ ಕಾಂಗ್ರೆಸು ಸರಕಾರವು ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರುವುದೆಂಬುದಕ್ಕಾಗಿ ಮಾತ್ರ ಸಂತೋಷಪಡಿಸಿದುದಲ್ಲ—ಒಬ್ಬ ಸಮರ್ಥ ಆಡಳಿತಗಾರನ ನೆರವು ರಾಜ್ಯದ ಇಂದಿನ ಸ್ಥಿತಿಯಲ್ಲಿ ದೊರೆಯಿತಲ್ಲ ಎಂಬ ಭಾವನೆಯೇ ಆನಂದದಾಯಕವಾಯಿತು. ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಮದ್ರಾಸಿನ ರಾಜಕಾರಣವು ಗೊಂದಲಮಯ ವಾತಾವರಣವನ್ನು ನಿರ್ಮಿಸಿತು—ಮತ್ತು ಇದರಿಂದಲೇ ದಕ್ಷಿಣದಲ್ಲಿ ಕಮ್ಯೂನಿಸ್ಟರ ವರ್ಚಸ್ಸು ಹಬ್ಬಲು ಆಸ್ಪದವು ದೊರೆಯಿತು. ರಾಜ್ಯದ ಭದ್ರತೆಗೆ ಗಂಡಾಂತರ ಪ್ರಾಯವಾದ ಈ ಸನ್ನಿವೇಶದಲ್ಲಿ ರಾಜಾಜಿಯಂಥ ನುರಿತ ರಾಜಕಾರಣ ಪ್ರವೀಣರು ಆಡಳಿತ ಸೂತ್ರವನ್ನು ವಹಿಸಿಕೊಂಡುದರಿಂದ— ವಿರೋಧಿ ಗುಂಪಿನವರಿಗೆ ತೀವ್ರ ನಿರಾಶೆಯುಂಟಾದರೂ—ಜನಸಾಮಾನ್ಯರಿಗೆ ಅತೀವ ಸಮಾಧಾನವಾಯಿತು. ಇದಕ್ಕೆ ಸಾಕ್ಷಿ ಎಂಬಂತೆ ರಾಜಾಜಿಯವರು ಕಡಿಮೆ ವೇತನ ಪಡೆಯುವ ಸರಕಾರಿ ನೌಕರರ ಮಕ್ಕಳಿಗೆ ಶಿಕ್ಷಣ ಶುಲ್ಕದ ರಿಯಾಯತಿ ಮತ್ತು ಧರ್ಮಾರ್ಥ ವೈದ್ಯಕೀಯ ಸಹಾಯವನ್ನೂ ಬಡ ಅಧ್ಯಾಪಕರ ಮತ್ತು ಸ್ಥಾನಿಕ ಸಂಸ್ಥೆಗಳ ನೌಕರರ ಮಕ್ಕಳಿಗೆ ಶಾಲಾ ಸಂಬಳ ರಿಯಾಯತಿಯನ್ನೂ ಕೊಡುವ ನಿರ್ಣಯಮಾಡಿದರು. ಇದನ್ನು ಮಹತ್ವದ ಸುಧಾರಣೆಯೆಂದು ಹೊಗಳಲ್ಪಡಬೇಕೆಂದಿಲ್ಲ—ಎಂದುಕೊಂಡರೂ ಜನರ ಯೋಗಕ್ಷೇಮದ ಕಡೆಗೆ ಸರಕಾರ ಲಕ್ಷ್ಯ ಪೂರೈಸುತ್ತಿದೆ ಎಂಬುದಕ್ಕೆ ಇದು ತಕ್ಕುದಾದ ರುಜುವಾತು ಎಂಬಲ್ಲಿ ಸಂದೇಹ ಬೇಡ. ಇದರಂತೆಯೇ ಬಹಳ ಧೈರ್ಯದಿಂದ ಇಟ್ಟಿರುವ ಇನ್ನೊಂದು ಹೆಜ್ಜೆ ಆಹಾರ ಧಾನ್ಯಗಳ ವಿನಿಯಂತ್ರಣವಾಗಿದೆ. ಕಳೆದ ವಾರ ನಾವು ಅಗ್ರಲೇಖ ಬರೆದು, ಜನರಲ್ಲಿ ಅತೃಪ್ತಿಗಾಸ್ಪದ ಹುಟ್ಟಿಸಿದ ನಿಯಂತ್ರಣಗಳನ್ನು ಕಿತ್ತೊಗೆದರೇನು ಎಂದು ಪ್ರಶ್ನಿಸಿದ್ದೆವು. ಇಂದಿನ ವಾತಾವರಣದಲ್ಲಿ ಸರಕಾರವು ವಿನಿಯಂತ್ರಣ ಮಾಡಲು ಹಿಂಜರಿಯುವುದು ದೋಷಪೂರ್ಣ ಮನೋವೃತ್ತಿ ಎಂಬುದಾಗಿ ನಮ್ಮ ಸ್ಪಷ್ಟ ಅಭಿಪ್ರಾಯ. ಈಗ ಮುಖ್ಯಮಂತ್ರಿ ರಾಜಗೋಪಾಲಾಚಾರಿ ರಾಜ್ಯದಲ್ಲಿ ಆಹಾರ ಧಾನ್ಯಗಳ ಮೇಲಿನ ಹತೋಟಿಯನ್ನು ಕಿತ್ತುಹಾಕಿದುದಲ್ಲದೆ, ಕಾಯಿದೆ ಬದ್ಧ ರೇಶನ್ ಕ್ರಮವನ್ನೂ ಎತ್ತುವಳಿಯನ್ನೂ ನಿಲ್ಲಿಸಿದುದು ಚೆನ್ನಾಗಿದೆ. ಈ ನಿರ್ಣಯಕ್ಕೆ ತಾನು ಬರಲು ಅಂತಃಸ್ಫೂರ್ತಿಯೇ ಕಾರಣವಾಯಿತೆಂದು ಅವರು ಹೇಳಿದರು—ಈ ಮಾತು ಅಕ್ಷರಶಃ ಸತ್ಯ. ಏಕೆಂದರೆ ಆಹಾರ ಧಾನ್ಯಗಳ ಅಭಾವದ ಭೀತಿಯು ಬಹಳಷ್ಟು ಹೆಚ್ಚಿರುವಾಗ—ಅದನ್ನು ಅಲ್ಲಗಳೆದು, ವಿನಿಯಂತ್ರಣಕ್ಕೆಳಸುವ ಸಾಹಸ ಮಾಡಬೇಕಾದರೆ, ಅಂಥ ನಿರ್ಣಯಕ್ಕೆ ಬರುವ ಮನುಷ್ಯನ ವ್ಯಕ್ತಿತ್ವ ಅಸಾಧಾರಣ ತೇಜಸ್ಸಿನಿಂದ ಕೂಡಿರಬೇಕು. ವೈಯಕ್ತಿಕವಾಗಿ ರಾಜಾಜಿ ದೈವಭಕ್ತರು—ಅವರ ಪ್ರತಿಯೊಂದೂ ಮಾತಿನಲ್ಲಿ ದೇವರಿಗೆ ಹೆದರಬೇಕೆಂಬ ಭಾವ ಹುದುಗಿದೆ. ಆ ನೈತಿಕ ಬಲದ ಮೇಲೆ ಅವರು ತಮ್ಮ ವ್ಯಕ್ತಿತ್ವದ ಶಕ್ತಿಯನ್ನು ಬೆಳೆಸಿಕೊಂಡಿರುವರು. ಉದಾತ್ತ ನಿರ್ಣಯವನ್ನು ಆದರ್ಶಪೂರ್ಣ ರೀತಿಯಿಂದ ಕಾರ್ಯಗತ ಮಾಡಲು ಬೇಕಿರುವ ದೃಢಸಂಕಲ್ಪ, ಸ್ಥೈರ್ಯ, ಟೀಕೆಗೆ ಅಳುಕದ ಮನಸ್ಸು ಮತ್ತು ಆಡಳಿತೆಯ ಬಿಗಿ ಮುಷ್ಟಿ ರಾಜಾಜಿಗಿದೆ. ಎಂತಲೇ "ನಾವು ವ್ಯರ್ಥ ಹಾಳುಮಾಡದಿದ್ದರೆ ನಮಗೆ ಉಣ್ಣಲು ಬೇಕಷ್ಟು ಆಹಾರವಿದೆ" ಎಂದು ಸ್ಪಷ್ಟವಾಗಿ ಹೇಳಲು ಅವರು ಮುಂದಾದರು. ರಾಜ್ಯವನ್ನು ಆರು ಸ್ಥಾನಿಕ ವಿಭಾಗಗಳಾಗಿ ಸದ್ಯಕ್ಕೆ ವಿಂಗಡಿಸಿ, ಸ್ವಯಂ ಪರಿಪೂರ್ಣತೆ ಮತ್ತು ಪೂರೈಕೆಗೆ ಅನುವು ಮಾಡಿಕೊಟ್ಟಿರುವುದು ಪ್ರಶಂಸನೀಯ. ಅಲ್ಲದೆ, ರೈತರ ಮತ್ತು ವ್ಯಾಪಾರಿಗಳ ನಡವಳಿಕೆಯು ಒಳ್ಳೆಯ ರೀತಿಯಲ್ಲಿರುವುದೆಂಬ ವಿಶ್ವಾಸದಿಂದ ಕೈಗೊಂಡ ಈ ನಿರ್ಣಯಕ್ಕೆ ಘಾತುಕವಾಗಿ ಅವರಾರಾದರೂ ವರ್ತಿಸಿದರೆ—ತತ್ಪರಿಣಾಮವಾಗಿ ಉಂಟಾಗಬಹುದಾದ ತೊಂದರೆಗಳನ್ನು ದೂರೀಕರಿಸಲು ಯೋಗ್ಯ ಬೆಲೆಯ ಅಂಗಡಿಗಳನ್ನು ತೆರೆದಿರುವುದೂ ಒಳ್ಳೆಯದು. ಸರಕಾರದೊಡನೆ ಸಾಕಷ್ಟು ಧಾನ್ಯ ಸಂಗ್ರಹವಿದೆ ಎಂದೂ, ನಿಯಂತ್ರಣ ಇಲಾಖೆಯಲ್ಲಿ ಕೆಲಸ ಮಾಡುವ ನೌಕರರು ಈಗಲೇ ಮನೆಗೆ ಹೋಗುವುದಿಲ್ಲವೆಂದೂ ತಿಳಿದುಬಂದಿದೆ. ಅದರಿಂದ ಅನ್ಯಾಯವಾಗಿ ಬೆಲೆ ಏರಿಸುವ ಬೆದರಿಕೆ ಹಾಕಿದರೆ—ಸರಕಾರವು ಒಡನೆಯೇ ತಕ್ಕ ಕ್ರಮವನ್ನು ಕೈಗೊಳ್ಳಲು ಸನ್ನದ್ಧವಾಗಿದೆ ಎಂಬುದು ಸ್ಪಷ್ಟವಾಗಿದೆ. ಹೀಗೆ ವಿನಿಯಂತ್ರಣವು ಯಶಸ್ವಿಯಾಗಲು ಜನರ ಸಹಕಾರದೊಡನೆ, ರೈತರ ಮತ್ತು ವ್ಯಾಪಾರಿ ವರ್ಗದ ಮನೋವೃತ್ತಿಯಲ್ಲಿ ಪರಿವರ್ತನೆಯೂ ಬೇಕಾಗಿದೆ. ಭಾರತದ ಇತರ ರಾಜ್ಯಗಳಲ್ಲಿ ಕೆಲವೆಡೆ ವಿನಿಯಂತ್ರಣದ ಪ್ರಯೋಗಗಳು ನಡೆದಿವೆಯಾದರೂ ಅವು ಇಷ್ಟು ವ್ಯಾಪಕವಾಗಿಲ್ಲ—ಮತ್ತು ಸ್ಪಷ್ಟ ರೂಪದಲ್ಲಿಲ್ಲ ಎಂಬುದರಿಂದ ಎಲ್ಲರ ದೃಷ್ಟಿಯೂ ಮದ್ರಾಸಿನ ಈ ಪಂಥಾಹ್ವಾನ ಪ್ರಯೋಗದ ಕಡೆಗೆ ಹೊರಳಿದೆ. ಇಲ್ಲಿಯ ಯಶಾಪಯಶಗಳ ಪರಿಣಾಮವು ಭಾರತದಲ್ಲೆಲ್ಲ ಕಂಡುಬರುವುದು. ರಾಜಾಜಿಯ ಈ ನಿರ್ಣಯಕ್ಕೆ ಲೆಕ್ಕದಿಂದ ಹೊರಗೆಂದು ಹೇಳಬಹುದಾದ ಕಮ್ಯೂನಿಸ್ಟರನ್ನು ಬಿಟ್ಟು—ಉಳಿದೆಲ್ಲ ವಿರೋಧಿ ಗುಂಪಿನ ಧುರೀಣರೂ ಹೃತ್ಪೂರ್ವಕ ಸ್ವಾಗತ ತೋರಿರುವುದರಿಂದ, ಯಶಸ್ಸಿನ ಬ[illegible]ವ್ಯವಿಲ್ಲ. ಕೇವಲ ಆಹಾರ ಧಾನ್ಯಗಳ ಕುರಿತು ಅನುಸರಿಸಿದ ಈ ಸಮರ್ಪಕ ನಿರ್ಣಯವನ್ನು ಬಿಟ್ಟು, ಮತ್ತಿತರ ಅವಶ್ಯಕ ಸರಕುಗಳ ಮಟ್ಟಿಗೂ ಅನ್ವಯಿಸುವುದು ಕ್ಷೇಮ. ಜನತೆಯ ಸಂಪೂರ್ಣ ಸಹಕಾರದಿಂದಲೇ ಎಲ್ಲ ನಿರ್ಬಂಧಗಳೂ ಸಡಿಲಾಗುವ ವಾತಾವರಣ ಏರ್ಪಡುವುದೆಂಬುದು ನಿಜ.

ಕರ್ನಾಟಕ ಏಕೀಕರಣ

ಕನಸು ನನಸಾಗುವ ಹೊಸ ಆಶೆ

ಹುಬ್ಬಳ್ಳಿಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯು ಸಭೆ ಸೇರಿದಾಗ, ಕನ್ನಡ ಪ್ರಾಂತ್ಯರಚನೆಯ ಕಾರ್ಯದಲ್ಲಿ ಆದ ಪ್ರಗತಿಯನ್ನು ಪರಿಶೀಲಿಸಲಾಯಿತು. ಈಚೆಗೆ ಪಾರ್ಲಿಮೆಂಟಿನ ಕನ್ನಡ ಪ್ರತಿನಿಧಿಗಳು ಪ್ರಧಾನಿ ನೆಹರೂರಿಗೆ ಒಂದು ಮನವಿಯನ್ನು ಸಾದರಪಡಿಸಿರುವರು. ಮೈಸೂರು ರಾಜ್ಯದೊಡನೆ ಮುಂಬಯಿ ಮತ್ತು ಮದ್ರಾಸು ರಾಜ್ಯಗಳ ಕನ್ನಡ ಪ್ರದೇಶಗಳನ್ನು ಒಟ್ಟುಗೂಡಿಸಿದರೆ ಕನ್ನಡ ಪ್ರಾಂತ್ಯರಚನೆಯಾಗುವುದೆಂದೂ ಇದಕ್ಕೆ ಮೈಸೂರಿನ ಒಪ್ಪಿಗೆ ಇದೆಯೆಂದೂ ಮನವಿಯಲ್ಲಿ ಹೇಳಲಾಗಿದೆ. ನೆಹರೂ ಈಚೆಗೆ ಭಾಷಾವಾರು ಪ್ರಾಂತರಚನೆಯ ಮಟ್ಟಿಗೆ ಅನುಕೂಲ ಮತವನ್ನು ತೋರಿಸುತ್ತಿರುವರೆಂದೂ ಮೊನ್ನೆ ಸೇರಿದ ಕಾಂಗ್ರೆಸು ಕಾರ್ಯಸಮಿತಿಯ ಸಭೆಯಲ್ಲಿ "ಈ ಕುರಿತು ಈಗಲೇ ಒಂದು ನಿರ್ಣಯ ಮಾಡೋಣ" ಎಂದು ಅವರು ಹೇಳಿದರಾಗಿಯೂ ವರದಿಯಾಗಿದೆ. ಮದ್ರಾಸಿನ ಮೇಲೆ ಆಂಧ್ರರು ತಮ್ಮ ಸ್ವಾಮ್ಯವನ್ನು ಬಿಟ್ಟುಕೊಟ್ಟಿರುವರು—ಮತ್ತು ಅದನ್ನುಳಿದೇ ಆಂಧ್ರ ಪ್ರಾಂತರಚನೆಯಾಗಬೇಕೆಂದಿದ್ದಾರೆ. ಮದ್ರಾಸು ಗವರ್ನರ ಶ್ರೀ ಪ್ರಕಾಶರು ಈ ತಿಂಗಳಾದಿಯಲ್ಲಿ ರಾಷ್ಟ್ರಾಧ್ಯಕ್ಷರೊಡನೆ ಮತ್ತು ನೆಹರೂರೊಡನೆ ಈ ಕುರಿತು ವಿಚಾರವಿನಿಮಯ ನಡೆಸಿದ್ದರು. ಅಂತೂ ಭಾಷಾನುಗುಣ ಘಟಕಗಳನ್ನು ನಿರ್ಮಿಸುವ ಕೆಲಸಕ್ಕೆ ಈಗ ಕಾಂಗ್ರೆಸುವರಿಷ್ಠರೂ ಲಕ್ಷ್ಯ ಪೂರೈಸುತ್ತಿರುವುದು ಅನುಕೂಲ ವಾತಾವರಣವಿದೆ ಎಂಬುದಕ್ಕೆ ಸಾಕ್ಷಿ. ಪಾರ್ಲಿಮೆಂಟಿನಲ್ಲಿ ಪ್ರಬಲ ವಿರೋಧಿ ಪಕ್ಷವೆನಿಸಿದ ಕಮ್ಯೂನಿಸ್ಟರು ಈ ಕುರಿತು ಮೇಲಿಂದ ಮೇಲೆ ಕೀಟಲೆ ಕೊಡುತ್ತಿರುವುದೂ ನೆಹರೂ ಮನಸ್ಸಿನ ಮೇಲೆ ವರ್ಚಸ್ಸು ಬೀರಿರಬಹುದು.

ಶಾಲಾ ಸಂಬಳ ರಿಯಾಯತಿ

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ದುಡಿಯುವ ಎಲ್ಲ ಅಧ್ಯಾಪಕರ ಮಕ್ಕಳಿಗೂ ಈಚೆಗೆ ಮದ್ರಾಸು ಸರಕಾರವು ಘೋಷಿಸಿದ ಶಾಲಾ ಸಂಬಳ ರಿಯಾಯತಿಯನ್ನು ಅನ್ವಯಿಸಬೇಕೆಂದು ನಿರ್ಣಯಿಸಿದೆ. ಇದರಂತೆ, ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ ಸಂಪೂರ್ಣ ಸಂಬಳ ರಿಯಾಯತಿಯೂ ಹೈಸ್ಕೂಲು ವರ್ಗಗಳಲ್ಲಿ ಅರ್ಧ ಸಂಬಳ ಮಾಫಿಯೂ ಆಗುವುದು. ಖಾಸಗಿ ಶಾಲಾ ವ್ಯವಸ್ಥಾಪಕರಿಗೆ ಇದರಿಂದುಂಟಾಗುವ ನಷ್ಟವನ್ನು ಸರಕಾರವೇ ಭರ್ತಿಮಾಡುವುದು. ಆದರೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ನಷ್ಟದಲ್ಲಿ ಅರ್ಧದಷ್ಟನ್ನೆ ಸರಕಾರವು ಹೊರುವುದು.

ಜನಪದ ಅಭಿವೃದ್ಧಿ ಯೋಜನೆ

ರಾಜ್ಯದಲ್ಲಿ ಜನಪದ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸಲು ತಜ್ಞ ಸಿಬಂದಿಯನ್ನು ಮದ್ರಾಸು ಸರಕಾರವು ನೇಮಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಕಾರ್ಕಳ ತಾಲೂಕುಗಳಲ್ಲಿ ಈ ವಿಶೇಷ ಮಾದರಿಯ ಗ್ರಾಮಾಭಿವೃದ್ಧಿ ಕಾರ್ಯವಾಗಬೇಕೆಂದು ನಿಶ್ಚಯಿಸಲಾಗಿದೆ. ನಮ್ಮ ಜಿಲ್ಲೆಯನ್ನು ಬಿಟ್ಟು ಈ ಯೋಜನೆಯು ಉಳಿದ ಕೆಲವೆಡೆಯಲ್ಲೂ ಕಾರ್ಯರೂಪಕ್ಕೆ ಬರುವುದು. ಭಾರತ ಸರಕಾರವು ಈ ಕುರಿತ ಒಂದು ಬೃಹತ್ ಯೋಜನೆಯನ್ನು ಸಿದ್ಧಗೊಳಿಸಿರುವುದು. ಹಳ್ಳಿಗಳ ಉದ್ಧಾರ ಕಾರ್ಯದಲ್ಲಿ ತಕ್ಕ ತರಬೇತಿಯನ್ನು ಕೊಡಲು ಕೇಂದ್ರಗಳನ್ನು ತೆರೆಯುವ ಯೋಚ

ಚತುರ್ಥ ವಿಮಾಗಣನೆಯ ಫಲಿತಾಂಶ
(1947ರಿಂದ 1950ರ ವರೆಗೆ)
* * * * * * *
ತಾರೀಕು 31-12-1950ಕ್ಕೆ ನಡೆಸಿದ ವಿಮಾಗಣನೆಯಲ್ಲಿ ಆಜೀವ ಮತ್ತು ಉಂಬಳಿ ವಿಮಾ ಪೋಲಿಸಿಗಳಿಗೆ ಸಾಲಿಯಾನ ಸಾವಿರಕ್ಕೆ ಅನುಕ್ರಮವಾಗಿ ರೂ. 12- ಮತ್ತು ರೂ 9-ರಂತೆ ಬೋನಸನ್ನು ಘೋಷಿಸಿದೆ.
The Canara Mutual Assurance Co. Ltd.
Head Office: UDIPI, S. INDIA.
ಸ್ಥಾಪನೆಯಿಂದಲೂ ಎಲ್ಲಾ ವರ್ಷಗಳಿಗೂ
ಬೋನಸು ಹಂಚಿದ ಕಂಪೆನಿ.

ನೆ ಇದೆ. ಮತ್ಸ್ಯ ವ್ಯವಸಾಯ, ರಾಸಾಯನಿಕ ಗೊಬ್ಬರದ ಉಪಯೋಗ, ಕೀಟಗಳಿಂದ ಪೈರು ಸಂರಕ್ಷಣೆ, ಬಾವಿಗಳನ್ನು ತೋಡುವುದು, ಭೂಸಂಶೋಧನೆ ಮುಂತಾದುವು ಇತರ ಪೂರಕ ಕಾರ್ಯಗಳಾಗಿವೆ.

ರೇಲ್ವೆ ಬೇಡಿಕೆಗೆ ಮನ್ನಣೆ

ಪಾರ್ಲಿಮೆಂಟಿನಲ್ಲಿ ರೇಲ್ವೆ ಖಾತೆಯ ಬೇಡಿಕೆಯಲ್ಲಿ ಕಡಿತವನ್ನುಂಟುಮಾಡಲು ವಿರೋಧಿ ಪಕ್ಷದವರು ತಂದ ಎಲ್ಲ ಸೂಚನೆಗಳೂ ತಿರಸ್ಕೃತವಾಗಿ, ಬೇಡಿದ ಹಣವು ಮಂಜೂರಾಯಿತು. ಕೆಲಸಗಾರರಿಗೆ ವಿಶೇಷ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದೂ, ಸಂಬಳವನ್ನು ಏರಿಸಬೇಕೆಂದೂ ಧರ್ಮಾರ್ಥ ವೈದ್ಯಕೀಯ ಸಹಾಯ ಮತ್ತು ಮಕ್ಕಳಿಗೆ ಶಿಕ್ಷಣದ ಏರ್ಪಾಡಾಗಬೇಕೆಂದೂ ಸೂಚನೆಗಳು ಬಂದಿದ್ದುವು. ಈಚೆಗೆ ಗೋರಖಪುರದಲ್ಲಿ ನಡೆದ ಗೋಳೀಬಾರಿನಿಂದ ಸಂತ್ರಸ್ತಗೊಂಡ ರೇಲ್ವೆ ಕೆಲಸಗಾರರ ಕುಟುಂಬಕ್ಕೆ ಪರಿಹಾರ ಒದಗಿಸಿಕೊಡಬೇಕೆಂಬುದು ಪ್ರಮುಖ ಸೂಚನೆಯಾಗಿತ್ತು. ರೇಲ್ವೆಮಂತ್ರಿಗಳು ಸಮಾಧಾನ ಹೇಳುತ್ತಾ, ಸರಕಾರವು ರೇಲ್ವೆ ಕೆಲಸಗಾರರ ಯೋಗಕ್ಷೇಮಕ್ಕೆ ಸದಾ ಲಕ್ಷ್ಯಕೊಡುವುದೆಂದರು. ಮೂರನೇ ವರ್ಗದ ಪ್ರವಾಸಿಕರ ಕಡೆಗೂ ಗಮನವೀಯುತ್ತೇವೆ. ಅನಗತ್ಯವೆನಿಸಿದ ಮೊದಲನೆ ವರ್ಗವನ್ನು ತೆಗೆದು ಹಾಕಲಾಗುವುದು- ಎಂದೂ ರೇಲ್ವೆ ಮಂತ್ರಿ ಹೇಳಿದರು.

ಸೈನ್ಯದ ವೆಚ್ಚ ಹೆಚ್ಚಲ್ಲ

ಭಾರತದ ಸಂರಕ್ಷಣಾ ವೆಚ್ಚವನ್ನು ಕೇಂದ್ರ ಸರಕಾರ ನಿರ್ವಹಿಸುತ್ತಿದೆ. ಇದು ಇಡೀ ದೇಶಕ್ಕೆ ಸಂಬಂಧಿಸಿದ ಖರ್ಚಾದುದರಿಂದ, ದೇಶದ ಒಟ್ಟು ಆದಾಯದೊಡನೆಯೇ ಇದರ ಪ್ರಮಾಣವನ್ನು ಹೋಲಿಸಬೇಕು. ಹೀಗೆ ಮಾಡಿದರೆ ನಮ್ಮ ಸಂರಕ್ಷಣಾ ವೆಚ್ಚವು ಶೇಕಡಾ ೨ರಷ್ಟು ಬರುವುದು. ಇದು ನಿಜಕ್ಕೂ ಬಹಳ ಕಡಿಮೆ ಇದೆ. ದೇಶದ ಭದ್ರತೆಗೆ ಇದು ಅತ್ಯಗತ್ಯ. ಸೈನಿಕರು ಉತ್ಪಾದನಾ ಕಾರ್ಯದಲ್ಲಿ ತೊಡಗಬೇಕೆಂಬ ಸೂಚನೆಯು ಗಂಭೀರವಾಗಿದೆ. ಈ ಕೆಲಸದಲ್ಲಿ ಸೈನಿಕರು ಯಶಸ್ವಿಯಾಗುವುದಿಲ್ಲವೆಂದಲ್ಲ. ಆದರೆ ಇಡೀ ಸೈನ್ಯವನ್ನು ಹೀಗೆ ದ್ವಿವಿಧ ಕಾರ್ಯಗಳಿಗೆ ಎಷ್ಟರ ಮಟ್ಟಿಗೆ ಉಪಯೋಗಿಸುವುದು ಸಾಧ್ಯವೆಂಬುದನ್ನು ಪರಾಮರ್ಶಿಸಬೇಕು. ಸದ್ಯಕ್ಕೆ ಈ ಗೊಂದಲ ಅನಾವಶ್ಯಕ ಎಂದು ಶ್ರೀ ಗೋಪಾಲ ಸ್ವಾಮಿ ಅಯ್ಯಂಗಾರರು ಹೇಳಿಕೆ ಇತ್ತರು.

ಉತ್ಪಾದನೆಯ ಹೆಚ್ಚಳವೇ ಧ್ಯೇಯ

ಲೋಕೋಪಯೋಗಿ ಯೋಜನೆಗಳಿಗೆ ಹಣವನ್ನು ವ್ಯಯಿಸುವ ಮೂಲಕ ಭೂಮಿಗೆ ಸ್ವರ್ಗವನ್ನೇ ತರುತ್ತೇವೆಂದು ನಾನೆಣ್ಣುವುದಿಲ್ಲ. ನಮ್ಮ ಉದ್ದೇಶವು ಸಾಧಾರಣವಾಗಿ ಜನರ ಜೀವನ ಮಟ್ಟವನ್ನು ಸುಧಾರಿಸುವುದಾಗಿದೆ. ಯೋಜನೆಗಳನ್ನು ಈ ದೃಷ್ಟಿಯಿಂದ ಕೈಗೊಳ್ಳಲಾಗಿದೆ- ಇದಕ್ಕೆ ಅತ್ಯವಿರುವ ಬಂಡವಾಳವನ್ನು ಒದಗಿಸಿಕೊಳ್ಳುವ ಪರಿ ಹೇಗೆಂಬುದನ್ನು ಸರಕಾರ ನೋಡಲಿಂದ ನೋಡಿ-ವಿರೋಧಿ ಪಕ್ಷದವರ ಕಳಕಳಿಗಿಂತಲೂ ಹೆಚ್ಚಾಗಿ- ವಿಚಾರಿಸುತ್ತಿದೆ. ಸಾಧ್ಯ ಒಟ್ಟು ಉತ್ಪಾದನೆಯನ್ನು ಹೆಚ್ಚಿಸಬೇಕೇ ಹೊರತು-ಉತ್ಪಾದನೆಯ ದಾಮಾಷೆಯನ್ನು ವರ್ಷಂಪ್ರತಿ ಹೆಚ್ಚು ಮಾಡಿದಷ್ಟಕ್ಕೆ ಕೆಲಸ ಮುಗಿಯಲಿಲ್ಲ. ಈ ದೃಷ್ಟಿಯಿಂದ ಆಹಾರ ಸಹಾಯಧನ ಕೊಡುವುದರಿಂದ ಅನ್ನದ ಸಮಸ್ಯೆ ಬಗೆಹರಿಯುವುದಿಲ್ಲ ಎಂಬುದು ಮನವರಿಕೆಯಾಗುತ್ತದೆ. -ಭೂಮಿ ಖಾಯ್ದೆ

ಉಡುಪಿ.

ಹಿಂದೀ ವರ್ಗಗಳು—ರಾಷ್ಟ್ರ ಭಾಷಾ ಶಿಕ್ಷಣ ಶಿಬಿರದಲ್ಲಿ ತಾ 17ರಿಂದ ಹೊಸತಾಗಿ, ಅಕ್ಷರಾಭ್ಯಾಸದಿಂದ ಪ್ರಾರಂಭಿಸಿ ಹಿಂದೀ ವರ್ಗವು ತೆರೆಯಲ್ಪಡುವುದೆಂದೂ, ವರ್ಗಕ್ಕೆ ಸೇರಲಿಚ್ಛಿಸುವವರು ಸಾಯಂಕಾಲ 5 ಗಂಟೆಯ ನಂತರ ಉಡುಪಿ ಹಿಂದೂಸ್ಥಾನಿ ಶಾಲೆಯಲ್ಲಿ ಹಿಂದೀ ಅಧ್ಯಾಪಕರೊಡನೆ ವಿಚಾರಿಸಬಹುದೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಕಾಂಗ್ರೆಸ್ ಕಮಿಟಿ ಸಭೆಯು—ತಾ 7ರಂದು ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಹಾಜರಿದ್ದರು. ವಕ್ಕಲು ಹಿತ ಮಸೂದೆಯನ್ನು ಬೇಗನೆ ಜಾರಿಗೆ ತರಬೇಕೆನ್ನುವ, ವಿಮಾನಗಾರಿಕೆಯನ್ನು ಮಾರಾಟಕೇಂದ್ರದಿಂದ ವಿರಹಿತಗೊಳಿಸಬೇಕೆನ್ನುವ, ದ. ಕ. ಜಿಲ್ಲೆಯ ನೀರಾವರಿ ಯೋಜನೆಗಳನ್ನು ಬೇಗನೆ ಅಮಲಿನಲ್ಲಿ ತರಬೇಕೆನ್ನುವ, ಕಲ್ಯಾಣಪುರ, ಪರ್ಕಳ ಹಿರಿಯಡ್ಕ, ಉದ್ಯಾವರ, ಅಲೆವೂರು ಮೊದಲಾದ ಊರುಗಳಿಗೆ ವಿದ್ಯುತ್ ಸೌಕರ್ಯ ಸಿಗುವಂತೆ ಮಾಡಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು. ಈಚೆಗೆ ಲೋಕ ಸಭೆಯಲ್ಲಿ ಶ್ರೀ ಲಾಲ್ ಬಹಾದೂರ್ ಶಾಸ್ತ್ರಿಗಳವರು ಪ್ರಯಾಣ ಬಂದರ ತಜ್ಞರ ವರದಿಯಲ್ಲಿ ಮಲ್ಪೆ ಬಂದರದ ಕುರಿತು ಲೋಕ ದೋಷಗಳಿವೆಯಾಗಿ ಹೇಳಿದ ವರದಿಯ ಆ ಲೋಕದ ದೋಷಗಳಾವುವು ಎಂಬುದನ್ನು ಸ್ಪಷ್ಟಪಡಿಸುವಂತೆ ಜಿಲ್ಲೆಯ ಪ್ರತಿನಿಧಿಗಳಾದ ಬಿ. ಶಿವರಾವ್, ಯು. ಶ್ರೀನಿವಾಸ ಮಲ್ಯ ಮತ್ತು ಕೆ. ಸದಾನಂದ ಹೆಗ್ಗಡೆಯವರು ಅವರನ್ನು ಪ್ರಶ್ನಿಸಿ ಜನತೆಗೆ ತಿಳಿಸುವಂತೆ ಅವರನ್ನು ವಿನಂತಿಸಲಾಯಿತು

ಆಹಾರ ಧಾನ್ಯ ಹೆಚ್ಚಳ ಚಳವಳಿಗೆ ಪ್ರೋತ್ಸಾಹ—ರೂಪದಲ್ಲಿ ಏರ್ಪಡಿಸಲಾಗಿದ್ದ 1951-52- ಸ್ಪರ್ಧೆಯಲ್ಲಿ ಹೆಚ್ಚು ಬೆಳೆಯನ್ನು ಪ್ರದರ್ಶಿಸಿದವರಿಗೆ ಬಹುಮಾನವನ್ನು ಹಂಚುವ ಸಮಾರಂಭವು ತಾ ೯ರಂದು ತಾಲೂಕು ಕಚೇರಿಯಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಎಡಿಶನಲ್ ಎಗ್ರಿಕಲ್ಚರಲ್ ಡೆಮೊನ್ ಸ್ಟ್ರೇಟರ್ ಶ್ರೀ ವೈ. ವಿ. ಹೆಗ್ಡೆಯವರ ಪ್ರಾರಂಭಿಕ ಭಾಷಣವಾದ ಬಳಿಕ ಅಧ್ಯಕ್ಷರು ಕಿರು ಮಾತಾಡಿ ಬಹುಮಾನ ಹಂಚಿದರು. ತಾಲೂಕು ಬಹುಮಾನವು ಹಾಲಾಡಿ ಪಟೇಲ್ ಶ್ರೀ ಕೆ. ಕೃಷ್ಣಯ್ಯ ಶೆಟ್ಟರಿಗೂ ಉಡುಪಿ, ಕಾಪು, ಬ್ರಹ್ಮಾವರ ಫಿರ್ಕಾ ಪಾರಿತೋಷಕಗಳು ಶ್ರೀಗಳಾದ ಟಿ. ರಮಾನಾಥ ಪೈ, ಕೆ. ವಾಸು ಸೆಟ್ಟಿ ಮತ್ತು ಕೆ. ದಯಾನಂದ ನಾಯ್ಕರಿಗೂ ಕೊಡಲಾದುವು. ಅ ಮೇಲೆ ಶ್ರೀ ಟಿ. ಎ. ಪೈ. ಎಮ್. ಎಲ್. ಎ, ಅವರು ಮಾತನಾಡುತ್ತ, ಯಾವ ಆಹಾರ ಮಂತ್ರಿಯೇ ಇರಲಿ, ಜನತೆಯು ಮನಸ್ಸು ಮಾಡದಿದ್ದರೆ ಆಹಾರ ಕೊರತೆಯನ್ನು ನೀಗಿಸಲು ಸಾಧ್ಯವಿಲ್ಲವೆಂದು ಹೇಳಿದರು. ತಹಶಿಲ್ದಾರ್ ಶ್ರೀ ಕೆ. ವೆಂಕಪ್ಪನವರು ಧನ್ಯವಾದಗಳನ್ನರ್ಪಿಸಿದರು.

ಧಾನ್ಯ ನಿಯಂತ್ರಣ ಮತ್ತು ರೇಶನಿಂಗ್ ರದ್ದತಿಗೆ ಬೆಂಬಲ—ಉಡುಪಿ ತಾಲೂಕಿನ ಅಕ್ಕಿ ವ್ಯಾಪಾರಿಗಳ ಸಭೆಯೊಂದು ತಾ 9ರಲ್ಲಿ ಮಂಡಿಯ [illegible] ಶ್ರೀ ಟಿ ಎ. ಪೈ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಆಹಾರ ಧಾನ್ಯಗಳ ಕಂಟ್ರೋಲ್ ಮತ್ತು ರೇಶನಿಂಗ್ ರದ್ದತಿ ಮಾಡಿದ ಮದ್ರಾಸು ಸರಕಾರದ ಆದರೆ [illegible] ಅನುಮೋದಿಸುವುದಲ್ಲದೆ [illegible] ಧಾನ್ಯವನ್ನು [illegible] ಜನತೆಗೆ ಅಕ್ಕಿಯನ್ನು ಒದಗಿಸುವುದರಲ್ಲಿ ವ್ಯಾಪಾರಸ್ಥರೊಡನೆ [illegible] ಸಹಕರಿಸಬೇಕಾಗಿ [illegible] ಜಿಲ್ಲೆಯ ಅಕ್ಕಿಯು ಹೊರಗೆ ಹೋಗದಂತೆ ತಕ್ಕ ಬಂದೋಬಸ್ತನ್ನು [illegible] ಜಿಲ್ಲಾಧಿಕಾರಿಗಳನ್ನು ಕೇಳಿಕೊಳ್ಳಲಾಯಿತು. ವರ್ತಕರೂ, ರೈತರೂ, ಅಧಿಕಾರಿ [illegible] ಪೂರ್ಣ [illegible] ಆವಶ್ಯಕವೆಂದು ಸಭೆಯು ಅಭಿಪ್ರಾಯಪಟ್ಟಿತು. [illegible]

ದ. ಕ. ಜಿಲ್ಲೆಯಲ್ಲಿ ನಿನಿಯಂತ್ರಣದ ಕುರಿತು ಶ್ರೀ ಟಿ ಎ. ಪೈ, ಎಮ್. ಎಲ್. ಎ, ಅವರ ಹೇಳಿಕೆ

ಯ ಸಾರಾಂಶ—"ಸಾಹುಕಾರರ ಮತ್ತು ವರ್ತಕರ ಸಹಕಾರವಿದ್ದರೆ ದ. ಕ. ಜಿಲ್ಲೆಯಲ್ಲಿ ನಿಯಂತ್ರಣ [illegible] ಈ ಬೆಳೆಗಳು [illegible] ಆದರೆ ಆ [illegible] ಮಾಗಿದೆ. ಮಲಬಾರು ಮತ್ತು ಗೋವೆಗೆ ನಮ್ಮ ಜಿಲ್ಲೆಯಿಂದ ಅಕ್ಕಿ ಹೋಗುವುದನ್ನು [illegible] ಬಿಟ್ಟರೆ ನಮ್ಮ ಜಿಲ್ಲೆ ಸ್ವಾವಲಂಬಿಯಾಗಲು ಸಾಧ್ಯವಿದೆ. ಶಿಸ್ತಿನಿಂದ ವರ್ತಕರಾದರೂ ವ್ಯಾಪಾರಸ್ಥರೂ ಜನತೆಯೂ ನಡೆದರೆ ರಾಜಾಜಿ ಧೋರಣೆಯು ಜಯಪ್ರದವಾಗುವುದರಲ್ಲಿ ಸಂದೇಹವಿಲ್ಲ. ಸರಕಾರದೊಡನೆ ಸಾಕಷ್ಟು ಅಕ್ಕಿ ಮತ್ತು ಇತರ ಧಾನ್ಯಗಳ ದಾಸ್ತಾನಿರುವುದರಿಂದಲೂ ಅಕ್ಕಿ ವಿತರಣೆ ಅಂಗಡಿಗಳ ಮೂಲಕ ಆಹಾರ ಧಾನ್ಯಗಳು ದೊರೆಯುವುದರಿಂದಲೂ ಜನತೆಯು ಗಾಬರಿಗೊಳ್ಳಬೇಕಾದ ಅವಶ್ಯಕತೆಯೇನೂ ಇಲ್ಲ. ಮುಕ್ತ ಪೇಟೆಯಲ್ಲಿ ಜಾಸ್ತಿ ಕ್ರಯದಲ್ಲಿ ಅಕ್ಕಿ ಮಾರಾಟವಾಗದಂತೆ ನೋಡಿಕೊಳ್ಳಲು ಜಿಲ್ಲೆಯ ಬೆಳೆಗಳು ವ್ಯಾಪಾರಸ್ಥರಿಗೆ ಸಾಲದ ಸೌಕರ್ಯವನ್ನೀಯುವಾಗ ಮುಂಜಾಗ್ರತೆಯನ್ನು ವಹಿಸುವರೆಂದು ನಂಬಿದ್ದೇನೆ".

ಉಡುಪಿ ಸಬ್ ಪೋಸ್ಟ್—ಆಫೀಸನ್ನು ಬರುವ ತಾ ೧೫ರಿಂದ ದಕ್ಷಿಣ ವಿಭಾಗದ [illegible] ಆಫೀಸಿನ [illegible] ಗೊಳಿಸಲಾಗುವುದೆಂದು ತಿಳಿದು ಬಂದಿದೆ

(ಮೂರನೇ ಕಾಲಮಿನ ಕೊನೆಯ ಭಾಗ:)

ಯು ತಾನು ಬಡವನು ಎಂದು ದೂರಕೊಳ್ಳುತ್ತಿರುವವನನ್ನು ಕಂಡು ನಗುವಳು." ಎಂಬ ಕವಿವಾಕ್ಯ ಸತ್ಯ ಎಂದು ಶ್ರೀ ದೇಶಪಾಂಡೆಯವರು ಮಂಗಳೂರು ಪತ್ರದ ಚರ್ಚೆಗೆ ಉತ್ತರಿಸಿದರು.

The New Karnataka Provident Insurance Co. Ltd; Udipi

NOTICE:

The Register of members and share transfer books of the Company will remain closed from the 7th June 1952 to 28th June 1952 (Both days inclusive).

CORRECTION: In the General Body meeting notice given along with the balance sheet the time day and the date of the meeting was wrongly printed as "Sunday" the 21st June 1952" which ought to be "Saturday, the 21st June 1952 at-4 P. M." All the shareholders will please note the correction-

M. H. Shetty.
MANAGER-

Applauded as the BEST Rubber Stamp Makers all over India



CROWN RUBBER STAMP CO.
Mangalore
(Estd. 1923)

ತಾರೀಕು 10—6—52ರಿಂದ

ರುಮಾಲ್

ನರ್ಗಿಸ್, ಜೈರಾಜ್, ರೆಹಮಾನ್, ಮೊದಲಾದವರು.

ಅನಂತರ ಜ್ಯೂಪಿಟರ್ ಚಿತ್ರ

ಕೃಷ್ಣ ವಿಜಯಂ (ತಮಿಳು)

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರವಾದ ರಸಾಯನ. ಅಲ್ಪ ಮೂಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ ನವಜೀವಾತು ಎಂಬ ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ। ಯಂ. ವಿ. ಶಾಸ್ತ್ರಿ, ಯಲ್. ಐ. ಎಂ. ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಟಾಕಿಸ್ಟರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಗ್ರಾಮಾಭಿವೃದ್ಧಿ ಕ್ಷೇತ್ರಗಳಲ್ಲಾದ ಕೆಲಸಗಳ ಸಾರಾಂಶ

ಕುಂಬಳೆ ಫಿರ್ಕಾದಲ್ಲಿ—ಕಳೆದ ಮೇ ತಿಂಗಳಲ್ಲಿ 3½ ಎಕ್ರೆ ಬಂಜರು ಭೂಮಿಯು ಕೃಷಿಗೆ ಯೋಗ್ಯವಾಗುವಂತೆ ಸಮತಟ್ಟು ಮಾಡಲಾಯಿತು 2016 ರಾತ್ಲು ಸುಧಾರಿತ ಬೀಜಗಳು ರೈತರಿಗೆ ಕೊಡಲಾದುವು. ಕುಂಬ್ಡಾಜೆ ಗ್ರಾಮದಲ್ಲಿ ಎರಡನೆ ಬಾರಿ ಡಿ. ಡಿ. ಟಿ. ಪ್ರಯೋಗಿಸಲ್ಪಟ್ಟಿತು. ನಾರಾಯಣ ಮಂಗಲ ಮಹಿಳೋದ್ಧಾರ ಕೇಂದ್ರದಲ್ಲೊಂದು ಉಪ ಪುಸ್ತಕ ಭಂಡಾರ ತೆರೆಯಲ್ಪಟ್ಟಿತು. ಬೇಳದ ಕೊರಗರ ವಸತಿಯಲ್ಲಿ ಮೂರು ಹೊಸಮನೆಗಳು ಕಟ್ಟಲ್ಪಟ್ಟವು.

ಮಂಜೇಶ್ವರ ಫಿರ್ಕಾದಲ್ಲಿ—1 ಎಕ್ರೆ 60 ಸೆಂಟ್ಸು ಬಂಜರು ಭೂಮಿಯು ಸಮತಟ್ಟು ಮಾಡಲ್ಪಟ್ಟಿತು. ಆರು ಎಕ್ರೆಗೆ ಬೇಕಾಗುವಷ್ಟು 378 ರಾತ್ಲು ಉತ್ತಮ ಭತ್ತದ ಬೀಜವನ್ನು ರೈತರಿಗೆ ಒದಗಿಸಿ ಕೊಡಲಾಯಿತು. ಬಾಯಾರು ಗ್ರಾಮದಲ್ಲಿ ಒಂದು ಬಾವಿಯ ಕೆಲಸವು ಪೂರ್ಣಗೊಳಿಸಲಾಯಿತು.

ಮೂಲ್ಕಿ ಫಿರ್ಕಾದಲ್ಲಿ—1 ಎಕ್ರೆ 15 ಸೆಂಟ್ಸು ಸ್ಥಳವನ್ನು ಸಮತಟ್ಟು ಮಾಡಲಾಯಿತು 2 ಮಾದರಿ ಕೃಷಿ ಕ್ಷೇತ್ರಗಳು ತೆರೆಯಲ್ಪಟ್ಟವು 376 ರಾತ್ಲು ಸುಧಾರಿತ ಬೀಜಗಳನ್ನು ರೈತರಿಗೆ ಕೊಡಲಾಯಿತು. 4 ಉತ್ತಮ ರೀತಿಯ ಪಾಯಿಖಾನೆಗಳು ಕಟ್ಟಲ್ಪಟ್ಟವು. ಕಾಪಿಕಾಡು ಬಡಜನರ ವಸತಿ ಮನೆಗಳು ಪೂರ್ಣ ಕಟ್ಟಲ್ಪಟ್ಟವು. ಮೂಲ್ಕಿ ರೇಡಿಯೋ ಮಂದಿರದ ಸಂಕುಸ್ಥಾಪನೆಯಾಯಿತು

ಪಡು ಪಣಂಬೂರು—ಕಳೆದ ತಾ 28ರಲ್ಲು ಸ್ಥಳೀಯ ಹಾ1 ಎ| ಶಾಲಾ ಹಳೆ ವಿದ್ಯಾರ್ಥಿ ಸಂಘದವರು ಒಂದು ಸಾಮಾಜಿಕ ನಾಟಕವನ್ನು ಅಭಿನಯಿಸಿದರು. ಈ ಸಂಧರ್ಭದಲ್ಲಿ ಶ್ರೀಗಳಾದ ಎಮ್. ಕೆ. ಎಲ್ಲಪ್ಪ ಮತ್ತು ಕೆ. ಭೂಪಾಲ ಸೆಟ್ಟರು ಮಾತನಾಡಿದರು. ತಾ 30ರಲ್ಲು ಮದ್ರಾಸಿನ ಗ್ರಾಮಾಭಿವೃದ್ಧಿ ಡೆಪ್ಯುಟಿ ಡೈರೆಕ್ಟರ್ ಶ್ರೀ ಎಸ್ ಲಕ್ಷ್ಮಿರತನ್ ಭಾರತಿಯವರು ಈ ಶಾಲೆಯನು ಸಂದರ್ಶಿಸಿದಾಗ, ಶಾಲಾ ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳಾದ ಶ್ರೀ ಜಿ. ಮಹಾಬಲ ಸೆಟ್ಟರು ಸ್ವಾಗತವಿತ್ತರು. ಹಳೆ ವಿದ್ಯಾರ್ಥಿ ಸಂಘದ ಕಡೆಯಿಂದ ಈ ಮೊದಲು ಈ ಬಾರಿ ಕಟ್ಟಡಕ್ಕೆ ರೂಪಾಯಿ 101 ಸಂಗ್ರಹಿಸಿ ಕೊಡಲಾಗಿತ್ತು. ಎಂದು ಹೇಳಿ, ನಾಟಕ ಪ್ರದರ್ಶನದ ಉತ್ಪತ್ತಿಯಿಂದ ರೂ 200ನ್ನು ಕಟ್ಟಡ ನಿಧಿಗೆ ಶ್ರೀ ಭಾರತಿಯವರ ಮುಂದೆ ನ ಕೊಡಿಸಲಾಯಿತು

ಮಂಕಿ—ಇಲ್ಲಿಯ ಎಯಿಡೆಡ್ ಶಾಲೆಯ ಹೆತ್ತವರ ಸಭೆಯು ಕಳೆದ ತ 31ರಲ್ಲಿ ಶ್ರೀ ಎಮ್. ಸಂಜೀವ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳ ಚಟುವಟಿಕೆಗಳ ಪ್ರದರ್ಶನವಾದೊಡನೆ ಸಭಿಕರ ಭಾಷಣಗಳಾದುವು. ಗ್ರಾಮಸ್ಥರು ಈ ಶಾಲೆಗೆ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನೀಯ ಬೇಕಾಗಿ ಅಧ್ಯಕ್ಷರು ಹೇಳಿದರು.

ಹಿರಿಯಡ್ಕ—ಕಳೆದ ತಾ 30ರಲ್ಲು ಹಿರಿಯಡ್ಕ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಮಕ್ಕಳ ಹಬ್ಬ ಮತ್ತು ಹೆತ್ತವರ ಕೂಟದ ದಿನಾಚರಣೆಗಳು ಜರಗಿದವು. ಕುಂದಾಪುರ ರೇಂಜಿನ ಶಾಲಾ ಡಿ| ಇನ್ಸ್ಪೆಕ್ಟರ್ ಶ್ರೀ ಪಿ ಕೃಷ್ಣರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ರಾಮಕೃಷ್ಣ ಅಡಿಗರು ಸ್ವಾಗತ ಭಾಷಣ ಮಾಡಿದರು.

ಸುರತ್ಕಲ್—ಸುರತ್ಕಲ್ ಮುಕ್ಕ ಮಿತ್ರ ಪಟ್ಟಣ ಮೊಗವೀರ ಧರ್ಮಾರ್ಥ ರಾತ್ರಿಶಾಲೆಯಲ್ಲಿ 1953ರ ಇ. ಎಸ್. ಎಲ್. ಸಿ. ಪರೀಕ್ಷೆಗೆ ವಯಸ್ಕರ ತರಗತಿ ತೆರೆಯಲಾಗುವುದು.

ಕೋಟ—ಗಿಳಿಯಾರು ಹ| ಎ| ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಕಳೆದ ತಾ 31ರಲ್ಲಿ ವಕೀಲ್ ಶ್ರೀ ಪಿ ಶ್ರೀನಿವಾಸ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಲಕ್ಷ್ಮೀನಾರಾಯಣ ಐತಾಳರು ವರದಿ ವಾಚನ ಮಾಡಿದರು. ಶ್ರೀ ಕೆ. ಎಲ್. ಕಾರಂತ ಎಂಬವರು ಮಾತನಾಡಿದರು. ಹಳೆ ವಿದ್ಯಾರ್ಥಿಗಳು 'ಉಂಡಾಡಿ ಗುಂಡ' ಎಂಬ ನಾಟಕವನ್ನು ಅಭಿನಯಿಸಿದರು.

THE CATHOLIC BANK LTD, UDIPI, BRANCH.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲದ ಮೊಬಲಗನ್ನಾಗಲೀ ಯಾ ಅದಕ್ಕಾಗುವ ಈ ತನಕದ ಬಡ್ಡಿಯನ್ನಾಗಲೀ ಕೊಡದೆ ಇರುವುದರಿಂದಲೂ ಅಲ್ಲದೆ ಕ್ರಮವಾದ ರಿಜಿಸ್ತ್ರ ನೋಟೀಸು ಕೊಟ್ಟಲ್ಲಿ ಕೆಲವರು ಪಡಕೊಂಡು ಕೆಲವರು ಊರಿನಲ್ಲಿ ಇಲ್ಲವೆಂತ್ತ, ವಾಪಾಸು ಬಂದಿರುವುದರಿಂದಲೂ, ನಗಗಳನ್ನು ಅವರವರು ಬಿಡಿಸಿಕೊಂಡು ಹೋಗದಿರುವುದರಿಂದಲೂ, ಸದರಿಯವರಿಗೆ ಯಾ ಸದರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದ್ರೆ ಸದರಿಯವರು ಈಡಿಟ್ಟ ನಗಗಳನ್ನು ಇದೇ ಜೂನ್ ತಿಂಗಳ ತಾರೀಕು 19ನೆ ಗುರುವಾರ ದಿವಸ ಘಂಟೆ 3ಕ್ಕೆ ಯಾ ಬ್ಯಾಂಕಿಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಪುನಹಾ ನೋಟಿಸು ಕೊಡದೆನೇ ಬ್ಯಾಂಕಿನ ವರಾಂಡದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ತಾರೀಕು	J. L. No	Name and address of the Borrowers.	Amount. Principal.
			ರೂ. ಆ.
9—6-50	26/1301	P. M. ಹುಸೇನ್ ಮಹಮ್ಮದ್, ಸಾಲಿಬಂ ಮಗ, ಹೆಡ್‌ಮಾಸ್ತರ್ ಹಿಂದುಸ್ತಾನಿ ಶಾಲೆ ಉಡುಪಿ	75 0
19—6-50	26/1393	—Do—	85 0
28—7-50	21/1759A	Y. ಕುಂಞಾಲಿ ಸಹೇಬ್, ಅಬ್ದುಲ್ ಖಾದರ್ ಸಹೇಬರ ಮಗ, ಏಣಾಗುಡ್ಡೆ ಉದಿಯಾವರ P. O.	575 0
25—8-50	26/1996	A ಶಂಕರ್ ಹೆಗ್ಡೆ, ರಾಮಣ್ಣ ಹೆಗ್ಡೆಯರ ಅಳಿಯ ತೆಂಕು ಬಯಲು ಹಿರಿಯಡ್ಕ P. O.	40 0
21-12-50	26/2778	—Do—	170 0
29—9-50	26/2274	—Do—	1030 0
17—3-52	28/452	—Do—	200 0
13—9-50	26/2139	B. ರಾಮದಾಸ್ ಮಲ್ಯ, B. ಭಗವಂತ್ ಮಲ್ಯರ ಮಗ, M/s ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡ್ಪಿ	175 0
15—2-51	27/232	—Do—	140 0
18—5-51	27/775	—Do—	75 0
14—9-50	26/2144	M ಮಣ್ಣ ಪೂಜಾರಿ, ತುಕ್ರ ಪೂಜಾರಿ ಮಗ, ಟೀಚರ್, ಕ್ರಿಶ್ಚಿಯನ್ ಹೈಸ್ಕೂಲ್ ಉಡ್ಪಿ	95 0
20—9-50	26/2197	T. ಪುತ್ತು ಯಾನೆ ವೆಂಕಟ್ರಮಣ ಕಿಣಿ, ಕೇಶವ ಕಿಣಿಯರ ಮಗ, ಕುಂಜಿಬೆಟ್ಟು ಉಡ್ಪಿ	90 0
21—9-50	26/2206	ರುಜಾರಿಯೊ ಸುವಾರಿಸ್, ಅಂತೋನ್ ಸುವಾರಿಸರ ಮಗ, ತೆಂಕ ನಿಡಿಯೂರು ತೊಟ್ಟಾಂ P. O.	250 0
2-11-50	26/2501	ಜಬ್ಬ, ಬಾಬನ ಮಗ, ಮುನಿಸಿಪಾಲಿಟಿ ಉಡುಪಿ P. O.	35 0
6-11-50	26/2523	K. ಬಾಬು, ಕುಂಞಂಬು ಮಗ, ಕಬ್ಬಿಣದ ಕೆಲಸ ಪಾಲುಕೋಟೆ ಉಡುಪಿ	25 0
10-11-50	26/2546	K S. ಕೆದ್ಲಾಯ, ರಾಮಚಂದ್ರ ಕೆದ್ಲಾಯರ ಮಗ, ಕೊಡವೂರು ಮಲ್ಪೆ P. O.	110 0
17-11-50	26/2583	M. ವಾಸುದೇವ್ ರಾವ್, ಎಮ್ ಗೋವಿಂದ ಆಚಾರ್ಯರ ಮಗ, ಅಜ್ಜರಕಾಡು ಉಡ್ಪಿ	80 0
20-11-50	26/2598	K. ಸೋಮಪ್ಪ ಸುವರ್ಣ, ದೆಮ್ಮ ಸಾಲಿಯಾನರ ಮಗ ಕಿದಿಯೂರು P. O.	40 0
10—1-51	27/53	K. ಕೊರಗ ನಾಯಕ್, ಮಂಜಪ್ಪ ನಾಯಕರ ಮಗ, ಕಲ್ಯಾಣಪುರ P. O.	85 0
21—1 51	27/121	ನಾರಾಯಣ ಸೆಟ್ಟಿ, ಸಂಕಯ್ಯ ಸೆಟ್ಟಿ ಮಗ, ಕಕ್ಕುಂಜೆ ಕಲ್ಯಾಣಪುರ P. O.	60 0
27—1-51	27/133	K. ಸಂಜೀವ, ರಾಮಪ್ಪರ ಮಗ, ಕುಂಜಿಬೆಟ್ಟು ಉಡುಪಿ P. O	75 0
29—1-51	27/140	K ಕೊರಗ ನಾಯಕ್, ಮಂಜಪ್ಪ ನಾಯಕರ ಮಗ, ಕಲ್ಯಾಣ್‌ಪುರ ಪೋಸ್ಟ್	50 0
8-2-51	27/182	B ನಿತ್ಯಾನಂದ ರಾವ್, ಅಪ್ಪಯ್ಯರ ಮಗ, ಸಂತೆಕಟ್ಟೆ ಉಡುಪಿ	80 0
25—5-50	26/1151	U. ವಾಸುದೇವ ಸೇಟ್, ಕೃಷ್ಣ ಶೇಟರ ಮಗ, ತೆಂಕಪೇಟೆ ಉಡುಪಿ	350 0
14-10-50	26/2381	— Do —	140 0
16-2-51	27/239	U. ವಾಸುದೇವ್ ಶೇಟ್ ಶ್ರೀನಿವಾಸ ಸೇಟರ ಮಗ, ಸೋದೆಮಠ ಓಣಿ ಉಡ್ಪಿ	50 0
27—2-51	27/309	K. [illegible], ಅಚ್ಚಾಂಬು ಮಗ, ಕೊರಂಗರಪಾಡಿ ಉದಿಯಾವರ P O.	32 0
27—2-51	27/310	ಮರಿಯಾನ್ ಡಿ'ಸೋಜ ಕ್ಲೆಮೆಂಟ್ ಡಿ'ಸೋಜರ ಮಗ, ಶಿಂಬ್ರ ಕಲ್ಯಾಣ್‌ಪುರ P. O.	55 0
19—3-51	27/424	ಶೇಕ್ ಫಕೀರ್ ಸಹೇಬ್, ಶೇಕ್ ಅಮ್ಮದ್ ಸಾಹೇಬರ ಮಗ, 76 ಬಡಗಬೆಟ್ಟು ಉಡ್ಪಿ	30 0
19—3-51	27/425	ಸ್ಯಾಮುಸ್ ಸಾಲಿನ್ಸ್, ಗಾಬ್ರಿಯೆಲ್ ಸಾಲಿನ್ಸರ ಮಗ, ಮಣಿಪುರ ಗ್ರಾಮ ಮಣಿಪುರ P O	30 0
30—3-51	27/499	ಪಪ್ಪು ಪೂಜಾರಿ, ದಾಸು ಪೂಜಾರಿ ಅಳಿಯ, ಕಿದಿಯೂರು P. O.	165 0
2—4-51	27/519	ಮಿಸ್ U ಮಾಲತಿ ಬಾಯಿ, V. B ಬಾಳಿಗರ ಮಗಳು, ಬೈಲೂರು ಉಡುಪಿ P. O.	85 0
11—4 51	27/563	ಮಿಸೆಸ್ ಪ್ರೇಮ ಬಾಯಿ ನಾಯಕ್, C/o R. W ನಾಯಕ್, ಅಜ್ಜರಕಾಡು ಉಡುಪಿ	501 0
12—4-51	27/572	G ಕೃಷ್ಣ ನಾಯಕ್, ಶ್ರೀನಿವಾಸ್ ನಾಯಕರ ಮಗ, ಗುಂಡಿಬೈಲು, ಉಡುಪಿ	60 0
16—4-51	27/587	ಮಂಜುನಾಥ ಸೆಟ್ಟಿ, ಕೊಗ್ಗ ಸೆಟ್ಟಿ ಮಗ, ಉದಿಯಾವರ. P. O.	25 0
21—4-51	27/619	ಮಂದರ್ ಸಹೇಬ್, ಬಾಹುದ್ದೀನ್ ಸಹೇಬರ ಮಗ, ಕೊಡವೂರು ಗ್ರಾಮ, ಮಲ್ಪೆ P. O.	65 0
3-5-51	27/694	ಜಾಫರ್ ಸಹೇಬ್, ಮಹಮ್ಮದ್ ಸಹೇಬರ ಮಗ, ಕೊಡವೂರು, ಮಲ್ಪೆ P. O	65 0
23—5-51	27/806	ಅಲ್ಬರ್ಟ್ ಮಾರ್ಟಿಸ್ I. ಮಾರ್ಟಿಸರ ಮಗ, ಮಣಿಪುರ P O.	60 0
25—5-51	27/827	U. ಚಂದಪ್ಪ, ಕುರ್ಟ ಮರಕಾಲನ ಮಗ, ಉಪ್ಪೂರು, ಕಲ್ಯಾಣಪುರ P O.	60 0
1—6-51	27/866	ಅಬ್ದುಲ್ ಗಫಾರ್ ಸಹೇಬ್, ಅಬ್ದುಲ್ ಖಾದರ್ ಸಹೇಬರ ಮಗ, C/o G. I C. C. Ltd, Udipi	30 0
8—6-51	27/917	ಅಬ್ದುಲ್ ರಜಾಕ್, ಅಬ್ದುಲ್ ಖಾದರ್ ಸಹೇಬರ ಮಗ, ಮಟಪಂಗಡಿ, ಉದಿಯಾವರ P. O.	90 0
2—7-51	27/1058	—Do—	35 0
2—7-51	27/1056	B. ಜಯರಾಮ ಹೆಗ್ಡೆ, ಬಿ. ಭೋಜರಾಜ ಹೆಗ್ಡೆ ಅಳಿಯ, ಅಜ್ಜರಕಾಡು ಉಡುಪಿ	100 0
24—7-51	27/1206	B. ನಿತ್ಯಾನಂದ ರಾವ್, ಅಪ್ಪಯ್ಯರ ಮಗ, ಸಂತೆಕಟ್ಟೆ ಉಡುಪಿ	150 0

Office of the Catholic Bank,
Udipi Date 9-6-1952

V. J. Andrade,
Agent.

ವಿವಿಧ ಪಾತ್ರೆಗಳು



ರೂಪವತ್ತು ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಜಾತಿಗಳ ಸಾಮಾನು ಯಾವಾಗಲೂ ಯೋಗ್ಯ ಬೆಲೆಯಲ್ಲಿ ರಿಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಪಾರಾಲಯ,
ರಥಬೀದಿ, ಉಡುಪಿ

ಮಂಗಳೂರು

ಮುನಿಸಿಪಲ್ ಕೌನ್ಸಿಲು ಸಭೆಯು ಕಳೆದ ತಾ. 31ರಲ್ಲಿ ಜರಗಿತು. ನಗರ ಸಭೆಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಆ ಸಭೆಯ ದಿನಗಳ ಮುಂಚಿತವಾಗಿ ಮೆಂಬರರಿಗೆ ಕಳ್ಳಿಸಬೇಕೆಂದೂ ಈ ಪೌರ ಸಭಾ ಸಮಿತಿಯ ನಿರ್ಣಯದ ಕುರಿತು, ಅದು ಅಸಾಧ್ಯವೆಂಬುದಾಗಿ ಸರಕಾರವು ತಿಳಿಸಿದ ಹುಕುಮನ್ನು ಡಿಕಾರ್ಡುಗೊಳಿಸಲಾಯಿತು. ಮಂಗಳೂರು ಭಗಿನೀ ಸಮಾಜಕ್ಕೆ ಚಾಲ್ತಿವರ್ಷಕ್ಕಾಗಿ ರೂ. 1200 ಸಹಾಯಧನ ಕೊಡುವುದೆಂದಾಯಿತು. ಮಂಗಳೂರಿನ ನೀರಿನ ಸರಬರಾಯಿ ಮತ್ತು ಚರಂಡಿ ವ್ಯವಸ್ಥೆಯ ಕುರಿತು ಕೊಯಮುತ್ತೂರಿನ ಕಾರ್ಯಕಾರೀ ಇಂಜಿನಿಯರರು ಜೂನ್ ತಿಂಗಳ 10ರೊಳಗೆ ಈ ನಗರ ಸಭೆಯು ರೂ. 5,52,000 ಕಟ್ಟಬೇಕೆಂದು ತಿಳಿಸಿದ ವಿಚಾರವು ಚರ್ಚಿಸಲಾಯಿತು. ಈಗಲೇ ರೂ. 2,57,000ವನ್ನು ಕಟ್ಟುವುದು. ಉಳಿದ ಹಣವನ್ನು ಸರಕಾರದಿಂದ ಪಡೆಯುವುದಕ್ಕಾಗಿ ಶ್ರೀಗಳಾದ ಎಲ್.ಸಿ. ಪಾಯಿಸ್, ಎನ್. ಎನ್. ಸುವರ್ಣ, ಮತ್ತು ಕೆ. ಎಸ್. ಅಡಿಗರಿಂದ ಕೂಡಿದ ಶಿಷ್ಟಮಂಡಳವೊಂದು ಮುಖ್ಯ ಮಂತ್ರಿಗಳ ಭೇಟಿ ಮಾಡುವುದೆಂಬ ನಿರ್ಣಯವಾಯಿತು.

ಜಿಲ್ಲಾ ಹಿಂದುಳಿದ ವರ್ಗಗಳ ಪರಿಷತ್ತು- ಇದೇ ತಾ. 1ರಲ್ಲಿ ಕುಲಶೇಖರದ ವೀರ ನಾರಾಯಣ ದೇವಸ್ಥಾನದಲ್ಲಿ ಶ್ರೀ ಕೆ. ರಾಮ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎನ್. ಎನ್. ಸುವರ್ಣ, ಎಮ್. ಎಲ್. ಎ. ಅವರು ಧ್ವಜವಂದನೆಯನ್ನು ಪೂರೈಸಿ ಪರಿಷತ್ತನ್ನು ತೆರೆದರು. ಡಾ। ಬಿ. ಬಿ. ಅತ್ತಾವರ, ಅವರು ಸ್ವಾಗತ ಭಾಷಣಮಾಡಿದರು, ಬಳಿಕ ಶ್ರೀ ಕೆ ವೆಂಕಟ್ರಮಣ ಗೌಡ, ಎಮ್. ಎಲ್. ಎ. ಅವರು ಹಿಂದುಳಿದವರು ಸಂಘಟಿತರಾಗಬೇಕೆಂಬ ವಿಚಾರದಲ್ಲಿ ಮಾತನಾಡಿದರು, ಸಂಘದ ಸಹಾಯಕ ಕಾರ್ಯದರ್ಶಿ ಶ್ರೀ ಕೆ. ದೇಜಪ್ಪನವರು ವರದಿವಾಚನ ಮಾಡಿದರು, ಹಿಂದುಳಿದ ವಿದ್ಯಾರ್ಥಿಗಳಿಗಾಗಿ ಮೂರುಕೋಟಿ ರೂಪಾಯಿ ಪ್ರತ್ಯೇಕಿಸಿಡಬೇಕು, ವಿದ್ಯಾರ್ಥಿಗಳಿಗೆ ಸಹಾಯ ಹಂಚುವುದಕ್ಕಾಗಿ ಒಂದು ಕಮಿಟಿ ರಚಿತವಾಗಬೇಕು, ಅದರಲ್ಲಿ ಈ ಜಿಲ್ಲೆಗೂ ಸರಿಯಾದ ಪ್ರಾತಿನಿಧ್ಯವಿರಬೇಕು, ಹಿಂದುಳಿದ ಹುಡುಗರಿಗೆ ಅರ್ಧ ಮಾಫಿಯನ್ನೂ ಹುಡುಗಿಯರಿಗೆ ಪೂರ್ಣ ಮಾಫಿಯನ್ನೂ ಎರಡನೇ ವರ್ಷಕ್ಕೂ ಕೊಡಬೇಕು. ಮಕ್ಕಳಿಗೆ ಶಾಲಾ ಸಂಬಳ ಮಾಫಿ ಮಾಡುವಾಗ ಹೈಸ್ಕೂಲುಗಳ ಬಗ್ಗೆ ಹೆತ್ತವರ ಉತ್ಪತ್ತಿಯನ್ನು ರೂಪಾಯಿ 2000 ಎಂದೂ ಕಾಲೇಜಿನ ವಿದ್ಯಾರ್ಥಿಯ ಹೆತ್ತವರ ಉತ್ಪತ್ತಿ ರೂ 3000 ಎಂದೂ ಗಮನಿಸಬೇಕು. ಸರಕಾರವು ವರ್ಗ ಹಿತ ಕಾಪಾಡುವ ತರಬೇಕು ಸದ್ಯಕ್ಕೆ ವರ್ಗ ಎದ್ದುಕಾಣದಂತೆ ನಡೆಯಬೇಕು. ಬೆಸ್ತರಿಗೆ ಮೀನುಗಾರಿಕೆ ತೆರಿಗೆ ಹೇರಬಾರದು. ಕೇಂದ್ರ ಸರಕಾರವು ಕರ್ನಾಟಕ ಪ್ರಾಂತರಚನೆ ಮಾಡಬೇಕು ಇತ್ಯಾದಿ ನಿರ್ಣಯಗಳಾದುವು. ಹಲವರ ಭಾಷಣ, ಹರಿಕಥೆ, ವಿನೋದಾವಳಿಗಳಿಂದ ಪರಿಷತ್ತು ಕೊನೆಗೊಂಡಿತು.

ಮಹಾ ಸಭೆ:- ಮಂಗಳೂರಿನ ಶೆಡ್ಯೂಲ್ಡ್ ಕ್ಲಾಸಸ್ ಎಸೋಸಿಯೇಶನಿನ ಮಹಾಸಭೆಯು ಇದೇ ತಾ. 1ರಲ್ಲಿ ಶ್ರೀ ಕೆ. ಈಶ್ವರ ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ರಘುನಾಥಯ್ಯ ಮೆಮೋರಿಯಲ್ ಹಾಲಿನಲ್ಲಿ ಜರಗಿತು. ಈ ಸಂಘವನ್ನು ಮುಚ್ಚಿಬಿಡಬೇಕೆಂದು ಕೆಲವು ಸದಸ್ಯರ ಅಭಿಪ್ರಾಯವಿದ್ದಾಗ್ಯೂ ಅದು ಹರಿಜನರ ಏಳಿಗೆಗಾಗಿ ಕೆಲಸಮಾಡಲು ಅಗತ್ಯವೆಂದು ಅಭಿಪ್ರಾಯವಾಗಿ ಸಂಘವನ್ನು ಮುಚ್ಚಬಾರದೆಂದು ಬಹುಮತದ ನಿರ್ಣಯವಾಯಿತು.

ಅಂತರ್ ಜಾತಿ ವಿವಾಹ— ದ ಕ. ಜಿಲ್ಲೆಯ ಸರಕಾರಿ ವಕೀಲರಾಗಿ ನೇಮಿಸಲ್ಪಟ್ಟ ಶ್ರೀ ಎಮ್. ಎಮ್. ಪ್ರಭುಗಳು ಕಳೆದ ತಾ, 21ರಲ್ಲಿ ಶ್ರೀಮತಿ ಪಾರ್ವತಿಬಾಯಿ, ಮಂಗಳೂರು ಸರಕಾರಿ ಕಾಲೇಜಿನ ಲೆಕ್ಚರರ್ ಅವರನ್ನು ರಿಜಿಸ್ಟರಿನಿ ವಿವಾಹವಾದರು,

ಶ್ರೀ ಎಮ್. ಆರ್. ಪೂಂಜ ಸ್ಮಾರಕ ರೇಡಿಯೋ ಮಂದಿರ- ಕಳೆದ ತಾ 29 ರಲ್ಲಿ ರೂರಲ್ ವೆಲ್‌ಫೇರ್ ಡೆಪ್ಯುಟಿ ಡೈರೆಕ್ಟರ ಶ್ರೀ ಎಸ್. ಲಕ್ಷ್ಮೀ ರತನ್ ಭಾರತಿಯವರು ಗಾಂಧಿ ಮೈದಾನಿನಲ್ಲಿ ದಿವಂಗತ ರಾಮಕೃಷ್ಣ ಪೂಂಜರ ಸ್ಮಾರಕ ಆಕಾಶವಾಣಿ ಮಂದಿರ ಶಂಕು ಸ್ಥಾಪನೆಮಾಡಿದರು. ಡಾ। ಚಂಪಾ, ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ಮಂದಿರಕ್ಕೆ ಸಾಧಾರಣ ರೂ 5000 ವೆಚ್ಚ ತಗಲಬಹುದೆಂದೂ ಈಗಾಗಲೇ ಹಣ ಸಹಾಯದ ವಾಗ್ದಾನಗಳಾಗಿವೆ ಎಂದೂ ತಿಳಿದುಬರುತ್ತದೆ,

ಫೆಕ್ಟರಿ ಮುಚ್ಚಲ್ಪಟ್ಟಿತು- ದಕ್ಷಿಣ ಕನ್ನಡ ಜಿಲ್ಲೆಯ ಅತಿ ಪ್ರಾಚೀನವೂ ಹಾಗೂ ಪ್ರಸಿದ್ಧ ಸಂಸ್ಥೆಯಾದ ಕಾಮನ್‌ವೆಲ್ತ್ ಹೆಂಚಿನ ಫೆಕ್ಟರಿಯು ಇದೇ ತಾ 1ರಿಂದ ಮುಚ್ಚಲ್ಪಟ್ಟಿದೆ ಎಂದು ತಿಳಿದುಬರುತ್ತದೆ. ಈ ಸಂಸ್ಥೆಯು ಜರ್ಮನಿಯ ಮಿಶನರಿ ದೊರೆಗಳಿಂದ ಸ್ಥಾಪಿಸಲ್ಪಟ್ಟದ್ದು ಆಗಿದೆ.

ನೇಮಕ- ಕೆನರಾ ಹೈಸ್ಕೂಲಿನ ಹೆಡ್ಮಾಸ್ತರರಾಗಿದ್ದ ಶ್ರೀ ಬಿ. ಅನಂತ ಪ್ರಭುಗಳವರು ನಿವೃತ್ತರಾದುದರಿಂದ ಅವರ ಸ್ಥಾನದಲ್ಲಿ ಶ್ರೀ ಜಿ. ವಾಸುದೇವ ಪೈಗಳವರು ಮುಖ್ಯೋಪಾಧ್ಯಾಯರಾಗಿ ನೇಮಕಹೊಂದಿರುವರು.

ಫ್ರಾನ್ಸಿಸ್ ಪ್ರಕರಣ ಮತ್ತು ಸ್ಪೆಶಲ್ ಕೋರ್ಟು— ತಲೆ ಮರೆಸಿಕೊಂಡಿದ್ದ ಪ್ರಸಿದ್ಧ ದರೋಡೆಗಾರ ಎ. ಜೆ. ಫ್ರಾನ್ಸಿಸನನ್ನು ಇತ್ತೀಚೆಗೆ ಬಂಧಿಸಿ ಮಂಗಳೂರಿಗೆ ತರಲಾಗಿತ್ತಷ್ಟೆ! ಅವನ ಪ್ರಕರಣದ ವಿಚಾರಣೆಗಾಗಿ ವಿಶಿಷ್ಟ ಕೋರ್ಟು ನಡೆಯಲಿದ್ದು ಅದಕ್ಕೆ ಸ್ಪೆಶಲ್ II ಕ್ಲಾಸ್ ಮೆಜಿಸ್ಟ್ರೇಟರಾಗಿ ಶ್ರೀ ಮಾಧವಜಿಯವರು ನೇಮಿಸಲ್ಪಟ್ಟಿದ್ದಾರೆ, ಉಡುಪಿಯ ಅಸಿಸ್ಟಾಂಟ್ ಪಬ್ಲಿಕ್ ಪ್ರೊಸಿಕ್ಯೂಟರ್ ಶ್ರೀ. ವಿ. ಕೆ. ಶೆಟ್ಟರು ಸರಕಾರ ವಕೀಲರಾಗಿ ನೇಮಕ ಹೊಂದಿದ್ದಾರೆ ಆರೋಪಿ ಕಡೆಯಿಂದ ಶ್ರೀಗಳಾದ ಎನ್. ಎನ್. ಸುವರ್ಣರೂ ಗಂಗಾಧರ ದಾಸರೂ ವಾದಿಸಲಿದ್ದಾರೆ. ಈ ಪ್ರಕರಣದಲ್ಲಿ ಸುಮಾರು 150 ಸಾಕ್ಷಿದಾರರಿದ್ದು ಕೋರ್ಟು 2-3 ತಿಂಗಳು ನಡೆಯಬಹುದಾಗಿ ತಿಳಿದು ಬರುತ್ತದೆ. ಫ್ರಾನ್ಸಿಸನು 1951 ಆಗೋಸ್ತು 15ರಲ್ಲಿ ಮಂಗಳೂರು ಸಬ್ ಜೈಲ್ ಸಿಬ್ಬಂದಿಯನ್ನು ಒಳಸಂಚಿಗೆ ತಕ್ಕೊಂಡು ಕಳ್ಳ ಬೀಗದ ಕೈ ಮಾಡಿ ಹೊರ ಬಂದು ಹಗ್ಗದ ಮೂಲಕ ಜೈಲ್ ಕಂಪೌಂಡು ಗೋಡೆ ಇಳಿದು ಪರಾರಿಯಾಗಿದ್ದನೆಂದು ಹೇಳಲಾಗಿದೆ. ಗೋವೆ ಮತ್ತು ಬೊಂಬಾಯಿ ಜೈಲುಗಳಿಂದಲೂ ತಪ್ಪಿಸಿಕೊಂಡಿದ್ದನೆಂದೂ ಕೊಯಮುತ್ತೂರಲ್ಲಿ ಪೋಲೀಸ್ ಕಾವಲಿಂದ ತಪ್ಪಿಸಿಕೊಂಡು ವಿಮಾನ ಮೂಲಕ ಪರಾರಿಯಾಗಿದ್ದನೆಂದೂ ತಿಳಿದು ಬರುತ್ತದೆ. ಈತನಿಗೆ ಮೊದಲು 11 ಸಲ ಶಿಕ್ಷೆಯಾಗಿತ್ತೆಂದು ಗೊತ್ತಾಗಿದೆ. ಈಗ ಇವನಿಕ್ಕೆ ಕಾಲುಗಳಿಗೆ ಕೋಳ ಹಾಕಿ ವಿಶೇಷ ಬಂದೋಬಸ್ತಿನಲ್ಲಿಡಲಾಗಿದೆ.

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು. (ದ.ಕ.)
THE VIJAYA BANK LIMITED, BYNDOOR
ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ವಾಪಾಸು ಮಾಡುವರೆ ರಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ, ಅಸಲು-ಬಡ್ಡಿ ಯಾವುದನ್ನೂ ಈ ವರೇಗೆ ಕೊಡದೆ ಬಾಕಿಮಾಡಿಕೊಂಡಿರುವುದರಿಂದ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಜೂನ್ ತಿಂಗಳ ತಾರೀಖು 20ನೇ ಶುಕ್ರವಾರ ಅಪರಾಹ್ನ ಗಂಟೆ 2 (1ಕ್ಕೆ-ಯಾ-ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬೇಂಕಿನ ವರಾಂಡದಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುವುದು, ತಿಳಿದಿರಲಿ,

ಸಾಲದ ಜಂಜಾಪ್ರಿ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು		
383/51	ಶ್ರೀ. M. K. ಸುಬ್ರಾಯ್, ಮಾಣಿ ಕೃಷ್ಣಯ್ಯನವರ ಮಗ, ಲೇಂಡ್ ಲೋರ್ಡ್, ಮತ್ತು ಮರ್ಚಂಟ್, ನಾಗೋಡಿ ಗ್ರಾಮ, ಕೊಲ್ಲೂರು	2025	0	0
384/51	—Do—	433	12	0
385/51	—Do—	806	6	0
386/51	—Do—	460	14	0
387/51	—Do—	779	11	0
1169/48-9	ದಾಸನಾಡಿ ಮಹಾಲಿಂಗ ಸೆಟ್ಟಿ, ನಾಗಪ್ಪ ಸೆಟ್ಟರ ಅಳಿಯ, ಪ್ರೆಸಿಡೆಂಟ್, ಪಂಚಾಯತ್ ಬೋರ್ಡ್ ಶಿರೂರು	181	1	0
1170/48-9	—Do—	685	14	0
989/48-9	ಗೋವಿಂದ ಶಾರ್ವಿ, ಭದ್ರ ಶಾರ್ವಿಯ ಮಗ, ಅಮ್ಮನವರ ತೊಪ್ಪಲು ಉಪ್ಪುಂದ	5	2	0
1614/50	ಬಾಡ ಸುಬ್ರಾಯ ಭಟ್ಟ, ಮಾಬ್ಲೇಶ್ವರ ಭಟ್ಟರ ಮಗ, ಬೈಂದೂರು	29	9	0
449/50	B. ಅಲ್ಲಿ ಅಹ್ಮದ್, ಅಹ್ಮದ್ ಸಾಹೇಬರ ಮಗ, ಕೆಸರು ಕೋಡಿ, ಶಿರೂರು	75	14	0
470/50	ಅಪ್ಪಪ್ಪ ಮೊಗೇರ, ಬೇಡು ಮೊಗೇರನ ಅಳಿಯ, ಬೇಲೆ ಹಿತ್ತಿಲು ಪಡುವರಿ	5	14	0
636/50	ಶೇಷಯ್ಯ ನಾಯ್ಕ, ಪಣಿಯಪ್ಪ ನಾಯ್ಕರ ಮಗ, ಬಿಜೂರು	13	7	0
1163/50	ಗೋವಿಂದ ಕಕ್ಕಲೆ ಕಾನು ಸುರ್ಲನ ಮಗ, ಯಡ್ತರೆ ಗ್ರಾಮ ಬೈಂದೂರು	19	6	0
1465/50	K. ಮೈದಿನ್ ಸಾಹೇಬು, ಮಹ್ಮದಾ ಸುಕ್ರಿಯರ ಮಗ, ಕೇರಿ, ಬೈಂದೂರು	11	10	0
1525/50	ಶ್ರೀನಿವಾಸ R ಹೋಬಳಿದಾರ, ರಾಮ್ಮ ಸೇರುಗಾರರ ಮಗ, ಪಡುವರಿ	23	6	0

ಬೈಂದೂರು, 5-6-1952

ಎಚ್. ರಾಜೀವ ಸೆಟ್ಟಿ, ಏಜಂಟ್.

"ಮಧುವನ" "ಕಾವ್ಯಸಾಮ್ರಾಜ್ಯ" ಮೊದಲಾದ ಕರ್ನಾಟಕದ ಪ್ರಾತಿನಿಧಿಕ ಕಥಾಸಂಗ್ರಹ, ಕವನ ಸಂಗ್ರಹಗಳನ್ನು ಪ್ರಕಟಿಸಿ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕ್ರಾಂತಿಯನ್ನೆಬ್ಬಿಸಿದ ಉಡುಪಿಯ ಕಿರಿಯರ ಪ್ರಪಂಚದ ಉತ್ತಮ ಪುಸ್ತಕಗಳನ್ನು ಓದಿರಿ

ಮದುವೆ, ಉಪನಯನ ಮತ್ತಿತರ ಯಾವತ್ತೂ
ಶುಭ ಸಮಾರಂಭಗಳ ಕಾಲದಲ್ಲಿ ಏರ್ಪಡಿಸುವ
ಟೀಪಾರ್ಟಿ ಸತ್ಕಾರ ಸಮಾರಂಭಗಳು
ಎಷ್ಟೇ ದೊಡ್ಡ ಪ್ರಮಾಣದಲ್ಲಿದ್ದರೂ ತೃಪ್ತಿಕರವಾಗಿ
ಯೋಗ್ಯ ವ್ಯವಸ್ಥೆಯೊಂದಿಗೆ ನಾವು ಪೂರೈಸಿ ಕೊಡುತ್ತೇವೆ.
ಮಹಾ ಜನರು ಗಮನಿಸಬೇಕು.
ತಾಜಮಹಾಲ್ ಸಿನೆಮಾ ಥಿಯೇಟರಿನ ಬಳಿ ಉಡುಪಿ.

ಗ್ರಾಮಾಭಿವೃದ್ಧಿ ಕ್ಷೇತ್ರಗಳಲ್ಲಾದ ಕೆಲಸಗಳ ಸಾರಾಂಶ

ಕುಂಬಳೆ ಫಿರ್ಕಾದಲ್ಲಿ—ಕಳೆದ ಮೇ ತಿಂಗಳಲ್ಲಿ 3½ ಎಕ್ರೆ ಬಂಜರು ಭೂಮಿಯು ಕೃಷಿಗೆ ಯೋಗ್ಯವಾಗುವಂತೆ ಸಮತಟ್ಟು ಮಾಡಲಾಯಿತು 2016 ರಾತ್ತಲ್ ಸುಧಾರಿತ ಬೀಜಗಳು ರೈತರಿಗೆ ಕೊಡಲಾದುವು. ಕುಂಬ್ಡಾಜೆ ಗ್ರಾಮದಲ್ಲಿ ಎರಡನೆ ಬಾರಿ ಡಿ. ಡಿ. ಟಿ. ಪ್ರಯೋಗಿಸಲ್ಪಟ್ಟಿತು. ನಾರಾಯಣ ಮಂಗಲ ಮಹಿಳೋದ್ಧಾರ ಕೇಂದ್ರದಲ್ಲೊಂದು ಉಪ ಪುಸ್ತಕ ಭಂಡಾರ ತೆರೆಯಲ್ಪಟ್ಟಿತು. ಬೇಳದ ಕೊರಗರ ವಸತಿಯಲ್ಲಿ ಮೂರು ಹೊಸಮನೆಗಳು ಕಟ್ಟಲ್ಪಟ್ಟವು.

ಮಂಜೇಶ್ವರ ಫಿರ್ಕಾದಲ್ಲಿ—1 ಎಕ್ರೆ 60 ಸೆಂಟ್ಸು ಬಂಜರು ಭೂಮಿಯು ಸಮತಟ್ಟು ಮಾಡಲ್ಪಟ್ಟಿತು. ಆರು ಎಕ್ರೆಗೆ ಬೇಕಾಗುವಷ್ಟು 378 ರಾತ್ತಲ್ ಉತ್ತಮ ಭತ್ತದ ಬೀಜವನ್ನು ರೈತರಿಗೆ ಒದಗಿಸಿ ಕೊಡಲಾಯಿತು. ಬಾಯಾರು ಗ್ರಾಮದಲ್ಲಿ ಒಂದು ಬಾವಿಯು ಕೆಲಸವು ಪೂರ್ಣಗೊಳಿಸಲಾಯಿತು.

ಮೂಲ್ಕಿ ಫಿರ್ಕಾದಲ್ಲಿ—1 ಎಕ್ರೆ 15 ಸೆಂಟ್ಸು ಸ್ಥಳವನ್ನು ಸಮತಟ್ಟು ಮಾಡಲಾಯಿತು. 2 ಮಾದರಿ ಕೃಷಿ ಕ್ಷೇತ್ರಗಳು ತೆರೆಯಲ್ಪಟ್ಟವು. 376 ರಾತ್ತಲ್ ಸುಧಾರಿತ ಬೀಜಗಳನ್ನು ರೈತರಿಗೆ ಕೊಡಲಾಯಿತು. 4 ಉತ್ತಮ ರೀತಿಯ ಪಾಯಿಖಾನೆಗಳು ಕಟ್ಟಲ್ಪಟ್ಟವು. ಕಾಪಿಕಾಡು ಬಡಜನರ ವಸತಿ ಮನೆಗಳು ಪೂರ್ಣ ಕಟ್ಟಲ್ಪಟ್ಟವು. ಮೂಲ್ಕಿ ರೇಡಿಯೋ ಮಂದಿರದ ಸಂಸ್ಥಾಪನೆಯಾಯಿತು

ಪಡು ಪಣಂಬೂರು—ಕಳೆದ ತಾ 28ರಲ್ಲು ಸ್ಥಳೀಯ ಹಾ| ಎ| ಶಾಲಾ ಹಳೆ ವಿದ್ಯಾರ್ಥಿ ಸಂಘದವರು ಒಂದು ಸಾಮಾಜಿಕ ನಾಟಕವನ್ನು ಅಭಿನಯಿಸಿದರು. ಈ ಸಂಧರ್ಭದಲ್ಲಿ ಶ್ರೀಗಳಾದ ಎಮ್. ಕೆ. ಎಲ್ಲಪ್ಪ ಮತ್ತು ಕೆ. ಭೂಪಾಲ ಸೆಟ್ಟರು ಮಾತನಾಡಿದರು. ತಾ 30ರಲ್ಲು ಮದ್ರಾಸಿನ ಗ್ರಾಮಾಭಿವೃದ್ಧಿ ಡೆಪ್ಯುಟಿ ಡೈರೆಕ್ಟರ್ ಶ್ರೀ ಎಸ್ ಲಕ್ಷ್ಮಿರತನ್ ಭಾರತಿಯವರು ಈ ಶಾಲೆಯನ್ನು ಸಂದರ್ಶಿಸಿದಾಗ, ಶಾಲಾ ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳಾದ ಶ್ರೀ ಜಿ. ಮಹಾಬಲ ಸೆಟ್ಟರು ಸ್ವಾಗತವಿತ್ತರು. ಹಳೆ ವಿದ್ಯಾರ್ಥಿ ಸಂಘದ ಕಡೆಯಿಂದ ಈ ಮೊದಲು ಈ ಬಾರಿ ಕಟ್ಟಡಕ್ಕೆ ರೂಪಾಯಿ 101 ಸಂಗ್ರಹಿಸಿ ಕೊಡಲಾಗಿತ್ತು. ಎಂದು ಹೇಳಿ, ನಾಟಕ ಪ್ರದರ್ಶನದ ಉತ್ಪತ್ತಿಯಿಂದ ರೂ 200ನ್ನು ಕಟ್ಟಡ ನಿಧಿಗೆ ಶ್ರೀ ಭಾರತಿಯವರ ಮುಖೇನ ಕೊಡಿಸಲಾಯಿತು.

ಮಂಜೇಶ್ವರ—ಇಲ್ಲಿಯ ಎಯಿಡೆಡ್ ಶಾಲೆಯ ಹೆತ್ತವರ ಸಭೆಯು ಕಳೆದ ತಾ 31ರಲ್ಲಿ ಶ್ರೀ ಎಮ್ ಸಂಜೀವ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳ ಚಟುವಟಿಕೆಗಳ ಪ್ರದರ್ಶನವಾದೊಡನೆ ಸಭಿಕರ ಭಾಷಣಗಳಾದುವು. ಗ್ರಾಮಸ್ಥರು ಈ ಶಾಲೆಗೆ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನೀಯ ಬೇಕಾಗಿ ಅಧ್ಯಕ್ಷರು ಹೇಳಿದರು.

ಹಿರಿಯಡ್ಕ—ಕಳೆದ ತಾ 30ರಂದು ಹಿರಿಯಡ್ಕ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಮಕ್ಕಳ ಹಬ್ಬ ಮತ್ತು ಹೆತ್ತವರ ಕೂಟದ ದಿನಾಚರಣೆಗಳು ಜರಗಿದವು. ಕುಂದಾಪುರ ರೇಂಜಿನ ಶಾಲಾ ಡೆ| ಇನ್ಸ್‌ಪೆಕ್ಟರ್ ಶ್ರೀ ಪಿ ಕೃಷ್ಣರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ರಾಮಕೃಷ್ಣ ಅಡಿಗರು ಸ್ವಾಗತ ಭಾಷಣ ಮಾಡಿದರು.

ವಿವಿಧ ಪಾತ್ರೆಗಳು

ನಾನಾ ವಿಧದ ಕೊಳ್ಳು, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳ ಸಾಮಾನು ... ಯೋಚಿತ ಬೆಲೆಯಾಗಿ ದೊರೆಯುತ್ತವೆ.

ಕಲ್ಯಾಂಜೆ ವ್ಯಾಪಾರಾಲಯ,
ರಥಬೀದಿ, ಉಡುಪಿ

ಸುರತ್ಕಲ್—ಸುರತ್ಕಲ್ ಮುಕ್ಕದ ಪಟ್ಟಣ ಮೊಗವೀರ ಧರ್ಮಾರ್ಥ ರಾತ್ರಿಶಾಲೆಯಲ್ಲಿ 1953ರ ಇ. ಎಸ್. ಎಲ್. ಸಿ. ಪರೀಕ್ಷೆಗೆ ವಯಸ್ಕರ ತರಗತಿ ತೆರೆಯಲಾಗುವುದು.

ಕೋಟ—ಗಿಳಿಯಾರು ಹಾ| ಎ| ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಕಳೆದ ತಾ 31ರಲ್ಲಿ ವಕೀಲ್ ಶ್ರೀ ವಿ ಶ್ರೀನಿವಾಸ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಲಕ್ಷ್ಮಿನಾರಾಯಣ ಐತಾಳರು ವರದಿ ವಾಚನ ಮಾಡಿದರು. ಶ್ರೀ ಕೆ. ಎಲ್. ಕಾರಂತ ಮೊದಲಾದವರು ಮಾತನಾಡಿದರು. ಹಳೆ ವಿದ್ಯಾರ್ಥಿಗಳು 'ಉಂಡಾಡಿ ಗುಂಡ' ಎಂಬ ನಾಟಕವನ್ನು ಅಭಿನಯಿಸಿದರು.

THE CATHOLIC BANK LTD, UDIPI, BRANCH.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣ್ಸಿದ ಮಹನೀಯರು ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲದ ಮೊಬಲಗನ್ನಾಗಲೀ ಯಾ ಅದಕ್ಕಾಗುವ ಈ ವರೆಗಿನ ಬಡ್ಡಿಯನ್ನಾಗಲೀ ಕೊಡದೆ ಇರುವುದರಿಂದಲೂ ಅಲ್ಲದೆ ಕ್ರಮಪ್ರಕಾರ ರಿಜಿಸ್ಟ್ರ ನೋಟಿಸು ಕೊಟ್ಟಲ್ಲಿ ಕೆಲವರು ಪಡಕೊಂಡು ಕೆಲವರು ಊರಿನಲ್ಲಿ ಇಲ್ಲವೆಂತ್ತ, ವಾಪಾಸು ಬಂದಿರುವುದರಿಂದಲೂ, ನಗಗಳನ್ನು ಅವರವರು ಬಿಡಿಸಿಕೊಂಡು ಹೋಗದಿರುವುದರಿಂದಲೂ, ಸದರಿಯವರಿಗೆ ಯಾ ಸದರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನಂದ್ರೆ ಸದರಿಯವರು ಈಡಿಟ್ಟ ನಗಗಳನ್ನು ಇದೇ ಜೂನ್ ತಿಂಗಳ ತಾರೀಕು 19ನೆ ಗುರುವಾರ ದಿವಸ ಘಂಟೆ 3ಕ್ಕೆ ಯಾ ಬ್ಯಾಂಕಿಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಪುನಹಾ ನೋಟಿಸು ಕೊಡದನೇ ಬ್ಯಾಂಕಿನ ವರಾಂಡದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ತಾರೀಕು	J. L. No	Name and address of the Borrowers.	Amount. Principal.
			ರೂ. ಆ.
9—6-50	26/1301	P. M. ಹುಸೇನ್ ಮುಹಮ್ಮದ್, ಸಾಲಿಹರ ಮಗ, ಹೆಡ್‌ಮಾಸ್ತರ್ ಹಿಂದುಸ್ಥಾನಿ ಶಾಲೆ ಉಡುಪಿ	75 0
19—6-50	26/1393	—Do—	85 0
28—7-50	21/1759A	Y. ಕುಂಞಾಲಿ ಸಹೇಬ್, ಅಬ್ದುಲ್ ಖಾದರ್ ಸಹೇಬರ ಮಗ, ಏಣಗುಡ್ಡೆ ಉದ್ಯಾವರ P. O.	575 0
25—8-50	26/1996	A. ಶಂಕರ್ ಹೆಗ್ಡೆ, ರಾಮಣ್ಣ ಹೆಗ್ಡೆಯವರ ಅಳಿಯ ತೆಂಕು ಬಯಲು ಹಿರಿಯಡ್ಕ P. O.	40 0
21-12-50	26/2778	—Do—	170 0
29—9-50	26/2274	—Do—	1030 0
17—3-52	28/452	—Do—	200 0
13—9-50	26/2139	B. ರಾಮದಾಸ್ ಮಲ್ಯ, B. ಭಗವಂತ್ ಮಲ್ಯರ ಮಗ, M/s ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡ್ಪಿ	175 0
15—2-51	27/232	—Do—	140 0
18—5-51	27/775	—Do—	75 0
14—9-50	26/2144	M. ಮೊಣ್ಣ ಪೂಜಾರಿ, ತುಕ್ರ ಪೂಜಾರಿ ಮಗ, ಟೀಚರ್, ಕ್ರಿಶ್ಚಿಯನ್ ಹೈಸ್ಕೂಲ್ ಉಡ್ಪಿ	95 0
20—9-50	26/2197	T. ಮುಕ್ತ ಯಾನೆ ವೆಂಕಟ್ರಮಣ ಶೆಣೈ, ಕೇಶವ ಶೆಣೈಯರ ಮಗ, ಕುಂಜಿಬೆಟ್ಟು ಉಡ್ಪಿ	90 0
21—9-50	26/2206	ರುಜಾರಿಯೊ ಸುವಾರಿಸ್, ಅಂತೊಣಿ ಸುವಾರಿಸರ ಮಗ, ತೆಂಕ ನಡಿಯೂರು ತೊಟ್ಟಂ P. O.	250 0
2-11-50	26/2501	ಡಬ್ಬ, ಬಾಬನ ಮಗ, ಮುನಿಸಿಪಾಲಿಟಿ ಉಡುಪಿ P. O.	35 0
6-11-50	26/2523	K. ಬಾಬು, ಕುಂಞಂಬು ಮಗ, ಕಬ್ಬಿಣದ ಕೆಲಸ ವಾಲುಕೋಟಿ ಉಡುಪಿ	25 0
10-11-50	26/2546	K S. ಕೆದ್ಲಾಯ, ರಾಮಚಂದ್ರ ಕೆದ್ಲಾಯರ ಮಗ, ಕೊಡವೂರು ಮಲ್ಪೆ P. O.	110 0
17-11-50	26/2583	M. ವಾಸುದೇವ್ ರಾವ್, ಎಮ್ ಗೋವಿಂದ ಆಚಾರ್ಯರ ಮಗ, ಅಜ್ಜರಕಾಡು ಉಡ್ಪಿ	80 0
20-11-50	26/2598	K. ಸೋಮಪ್ಪ ಸುವರ್ಣ, ಬೆಮ್ಮ ಸಾಲಿಯಾನರ ಮಗ ಕಿದಿಯೂರು P. O.	40 0
10—1-51	27/53	K. ಕೊರಗ ನಾಯಕ್, ಮಂಜಪ್ಪ ನಾಯಕರ ಮಗ, ಕಲ್ಯಾಣಪುರ P. O.	85 0
21—1-51	27/121	ನಾರಾಯಣ ಸೆಟ್ಟಿ ಸಂಕಯ್ಯ ಸೆಟ್ಟಿ ಮಗ, ಕಲ್ಯಾಂಜೆ ಕಲ್ಯಾಣಪುರ P. O.	60 0
27—1-51	27/133	K. ಸಂಜೀವ, ರಾಮಪ್ಪರ ಮಗ, ಕುಂಜಿಬೆಟ್ಟು ಉಡುಪಿ P. O	75 0
29—1-51	27/140	K. ಕೊರಗ ನಾಯಕ್, ಮಂಜಪ್ಪ ನಾಯಕರ ಮಗ, ಕಲ್ಯಾನ್‌ಪುರ ಪೋಸ್ಟ್	50 0
8-2-51	27/182	B. ನಿತ್ಯಾನಂದ ರಾವ್, ಅಪ್ಪಯ್ಯರ ಮಗ, ಸಂಕೆಕಟ್ಟೆ ಉಡುಪಿ	80 0
25—5-50	26/1151	U. ವಾಸುದೇವ ಸೇಟ್, ಕೃಷ್ಣ ಶೇಟರ ಮಗ, ತೆಂಕಪೇಟೆ ಉಡುಪಿ	350 0
14-10-50	26/2381	— Do —	140 0
16—2-51	27/239	U. ವಾಸುದೇವ್ ಶೇಟ್ ಶ್ರೀನಿವಾಸ ಸೇಟರ ಮಗ, ಸೋದೆಮಠ ಓಣಿ ಉಡ್ಪಿ	50 0
27—2-51	27/309	K. ... ಪ್ಪ ಆಚಾರಿಯ ಮಗ, ಕೊರಂಗರಪಾಡಿ ಉದ್ಯಾವರ P O.	32 0
27—2-51	27/310	ಮರಿಯಾನ್ ಡಿ'ಸೋಜ ಕ್ಲೆಮೆಂಟ್ ಡಿ'ಸೋಜರ ಮಗ, ಶಿಂಬ್ರ ಕಲ್ಯಾನ್‌ಪುರ P. O.	55 0
19—3-51	27 424	ಶೇಕ್ ಫಕೀರ್ ಸಹೇಬ್, ಶೇಕ್ ಅಹ್ಮದ್ ಸಾಹೇಬರ ಮಗ, 76 ಬಡಗಬೆಟ್ಟು ಉಡ್ಪಿ	30 0
19—3-51	27/425	ಸ್ಯಾಮುನ್ ಸಾಲಿನ್ಸ್, ಗಾಬ್ರಿಯೆಲ್ ಸಾಲಿನ್ಸರ ಮಗ, ಮಣಿಪುರ ಗ್ರಾಮ ಮಣಿಪುರ P O	30 0
30—3-51	27/499	ಪಪ್ಪು ಪೂಜಾರಿ, ದಾಸು ಪೂಜಾರಿ ಅಳಿಯ, ಕಿದಿಯೂರು P. O.	165 0
2—4-51	27/519	ಮಿಸ್ U. ಮಾಲಿನಿ ಬಾಯಿ, V. A. ಬಾಳಿಗರ ಮಗಳು, ಬೈಲೂರು ಉಡುಪಿ P. O.	85 0
11—4 51	27/563	ಮಿಸೆಸ್ ಪ್ರೇಮ ಬಾಯಿ ನಾಯಕ್, C/o R. W ನಾಯಕ್, ಅಜ್ಜರಕಾಡು ಉಡುಪಿ	501 0
12—4-51	27/572	G ಕೃಷ್ಣ ನಾಯಕ್, ಶ್ರೀನಿವಾಸ್ ನಾಯಕರ ಮಗ, ಗುಂಡಿಬೈಲು, ಉಡುಪಿ	60 0
16—4-51	27/587	ಮಂಜುನಾಥ ಸೆಟ್ಟಿ, ಕೊಗ್ಗ ಸೆಟ್ರ ಮಗ, ಉದ್ಯಾವರ, P. O.	25 0
21—4-51	27/619	ಮುದರ್ ಸಹೇಬ್, ದಾವೂದ್ ಸಹೇಬರ ಮಗ, ಕೊಡವೂರು ಗ್ರಾಮ, ಮಲ್ಪೆ P. O.	65 0
3-5-51	27/694	ಜಾಫರ್ ಸಹೇಬ್, ಮುಕ್ತುಮ್ ಸಹೇಬರ ಮಗ, ಕೊಡವೂರು, ಮಲ್ಪೆ P. O	65 0
23—5-51	27/806	ಆಲ್ಬರ್ಟ್ ಮಾರ್ಟಿಸ್ I. ಮಾರ್ಟಿಸರ ಮಗ, ಮಣಿಪುರ P O.	60 0
25—5-51	27/827	U. ಚಂದಪ್ಪ, ಕುರ್ಮ ಮರಕಾಲನ ಮಗ, ಉಪ್ಪೂರು, ಕಲ್ಯಾಣಪುರ P O.	60 0
1—6-51	27/866	ಅಬ್ದುಲ್ ಗಫಾರ್ ಸಹೇಬ್, ಅಬ್ದುಲ್ ಖಾದರ್ ಸಹೇಬರ ಮಗ, C/o G. I C. C. Ltd, Udipi	30 0
8—6-51	27/917	ಅಬ್ದುಲ್ ರಜಾಕ್, ಅಬ್ದುಲ್ ಖಾದರ್ ಸಹೇಬರ ಮಗ, ಮಟಪಂಗಡಿ, ಉದ್ಯಾವರ P. O.	90 0
2—7-51	27/1058	—Do—	35 0
2—7-51	27/1056	B. ಜಯರಾಮ ಹೆಗ್ಡೆ, ಬಿ. ಭೋಜರಾಜ ಹೆಗ್ಡೆ ಅಳಿಯ, ಅಜ್ಜರಕಾಡು ಉಡುಪಿ	100 0
24—7-51	27/1206	B. ನಿತ್ಯಾನಂದ ರಾವ್, ಅಪ್ಪಯ್ಯರ ಮಗ, ಸಂಕೆಕಟ್ಟೆ ಉಡುಪಿ	150 0

Office of the Catholic Bank,
Udipi Date 9-6-1952

V. J. Andrade,
Agent.

ಮಂಗಳೂರು

ಮುನಿಸಿಪಲ್ ಕೌನ್ಸಿಲು ಸಭೆಯು ಕಳೆದ ತಾ. 31ರಲ್ಲಿ ಜರಗಿತು. ನಗರ ಸಭೆಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಆ ಸಭೆಯ ದಿನಗಳ ಮುಂಚಿತವಾಗಿ ಮೆಂಬರರಿಗೆ ಕಳ್ಳಿಸಬೇಕೆಂದೂ ಈ ಪೌರ ಸಭಾ ಸಮಿತಿಯ ನಿರ್ಣಯದ ಕುರಿತು, ಅದು ಅಸಾಧ್ಯವೆಂಬುದಾಗಿ ಸರಕಾರವು ತಿಳಿಸಿದ ಹುಕುಮನ್ನು ಸಿಕಾರ್ಯವಹಿಸಲಾಯಿತು. ಮಂಗಳೂರು ಭಗಿನೀ ಸಮಾಜಕ್ಕೆ ಚಾಲ್ತಿವರ್ಷಕ್ಕಾಗಿ ರೂ. 1200 ಸಹಾಯಧನ ಕೊಡುವುದೆಂದಾಯಿತು. ಮಂಗಳೂರಿನ ನೀರಿನ ಸರಬರಾಯಿ ಮತ್ತು ಚರಂಡಿ ವ್ಯವಸ್ಥೆಯ ಕುರಿತು ಕೊಯಮುತ್ತೂರಿನ ಕಾರ್ಯಕಾರೀ ಇಂಜಿನಿಯರು ಜೂನ್ ತಿಂಗಳ 10ರೊಳಗೆ ಈ ನಗರ ಸಭೆಯು ರೂ. 5,52,000 ಕಟ್ಟಬೇಕೆಂದು ತಿಳಿಸಿದ ವಿಚಾರವು ಚರ್ಚಿಸಲಾಯಿತು. ಈಗಲೇ ರೂ. 2,57,000ವನ್ನು ಕಟ್ಟುವುದು. ಉಳಿದ ಹಣವನ್ನು ಸರಕಾರದಿಂದ ಪಡೆಯುವುದಕ್ಕಾಗಿ ಶ್ರೀಗಳಾದ ಎಲ್. ಸಿ. ಪಾಯಿಸ್, ಎನ್. ಎನ್. ಸುವರ್ಣ, ಮತ್ತು ಕೆ. ಎಸ್. ಅಡಿಗರಿಂದ ಕೂಡಿದ ನಿಷ್ಟಮಂಡಳವೊಂದು ಮುಖ್ಯ ಮಂತ್ರಿಗಳ ಭೇಟಿ ಮಾಡುವುದೆಂಬ ನಿರ್ಣಯವಾಯಿತು.

ಜಿಲ್ಲಾ ಹಿಂದುಳಿದ ವರ್ಗಗಳ ಪರಿಷತ್ತು- ಇದೇ ತಾ. 1ರಲ್ಲಿ ಕುಲಶೇಖರದ ವೀರ ನಾರಾಯಣ ದೇವಸ್ಥಾನದಲ್ಲಿ ಶ್ರೀ ಕೆ. ರಾಮ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎನ್. ಎನ್. ಸುವರ್ಣ, ಎಮ್. ಎಲ್. ಎ. ಅವರು ಧ್ವಜವಂದನೆಯನ್ನು ಪೂರೈಸಿ ಪರಿಷತ್ತನ್ನು ತೆರೆದರು. ಡಾ। ಬಿ. ಬಿ. ಅತ್ತಾವರ, ಅವರು ಸ್ವಾಗತ ಭಾಷಣಮಾಡಿದರು, ಬಳಿಕ ಶ್ರೀ ಕೆ ವೆಂಕಟ್ರಮಣ ಗೌಡ, ಎಮ್. ಎಲ್. ಎ, ಅವರು ಹಿಂದುಳಿದವರು ಸಂಘಟಿತರಾಗಬೇಕೆಂಬ ವಿಚಾರದಲ್ಲಿ ಮಾತನಾಡಿದರು. ಸಂಘದ ಸಹಾಯಕ ಕಾರ್ಯದರ್ಶಿ ಶ್ರೀ ಕೆ. ದೇಜಪ್ಪನವರು ವರದಿವಾಚನ ಮಾಡಿದರು. ಹಿಂದುಳಿದ ವಿದ್ಯಾರ್ಥಿಗಳಿಗಾಗಿ ಮೂರುಕೋಟಿ ರೂಪಾಯಿ ಪ್ರತ್ಯೇಕಿಸಿಡಬೇಕು, ವಿದ್ಯಾರ್ಥಿಗಳಿಗೆ ಸಹಾಯ ಹಂಚುವುದಕ್ಕಾಗಿ ಒಂದು ಕಮಿಟಿ ರಚಿತವಾಗಬೇಕು, ಅದರಲ್ಲಿ ಈ ಜಿಲ್ಲೆಗೂ ಸರಿಯಾದ ಪ್ರಾತಿನಿಧ್ಯವಿರಬೇಕು, ಹಿಂದುಳಿದ ಹುಡುಗರಿಗೆ ಅರ್ಧ ಮಾಫಿಯನ್ನೂ ಹುಡುಗಿಯರಿಗೆ ಪೂರ್ಣ ಮಾಫಿಯನ್ನೂ ಎರಡನೇ ವರ್ಷಕ್ಕೂ ಕೊಡಬೇಕು. ಮಕ್ಕಳಿಗೆ ಶಾಲಾ ಸಂಬಳ ಮಾಫಿ ಮಾಡುವಾಗ ಹೈಸ್ಕೂಲುಗಳ ಬಗ್ಗೆ ಹೆತ್ತವರ ಉತ್ಪತ್ತಿಯನ್ನು ರೂಪಾಯಿ 2000 ಎಂದೂ ಕಾಲೇಜಿನ ವಿದ್ಯಾರ್ಥಿಯ ಹೆತ್ತವರ ಉತ್ಪತ್ತಿ ರೂ 3000 ಎಂದೂ ಗಮನಿಸಬೇಕು. ಸರಕಾರವು ಪಕ್ಷ ಹಿತ ಮಸೂದೆ ತರಬೇಕು ಸತ್ಯಕ್ಕೆ ಪಕ್ಷ ಎದ್ದಿಸದಂತೆ ನಡೆಯಬೇಕು. ಬೆಸ್ತರಿಗೆ ಮಾರಾಟಕರ ಹೇರಬಾರದು. ಕೇಂದ್ರ ಸರಕಾರವು ಕರ್ನಾಟಕ ಪ್ರಾಂತರಚನೆ ಮಾಡಬೇಕು ಇತ್ಯಾದಿ ನಿರ್ಣಯಗಳಾದುವು. ಹಲವರ ಭಾಷಣ, ಹರಿಕಥೆ, ವಿನೋದಾವಳಿಗಳಿಂದ ಪರಿಷತ್ತು ಕೊನೆಗೊಂಡಿತು.

ಮಹಾ ಸಭೆ:- ಮಂಗಳೂರಿನ ಶೆಡ್ಯೂಲ್ಡ್ ಕ್ಲಾಸಸ್ ಎಸೋಸಿಯೇಶನಿನ ಮಹಾ ಸಭೆಯು ಇದೇ ತಾ. 1ರಲ್ಲಿ ಶ್ರೀ ಕೆ. ಈಶ್ವರ ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ರಘುನಾಥಯ್ಯ ಮೆಮೋರಿಯಲ್ ಹಾಲಿನಲ್ಲಿ ಜರಗಿತು. ಈ ಸಂಘವನ್ನು ಮುಚ್ಚಬಿಡಬೇಕೆಂದು ಕೆಲವು ಸದಸ್ಯರ ಅಭಿಪ್ರಾಯವಿದ್ದಾಗ್ಯೂ ಅದು ಹರಿಜನರ ಏಳಿಗೆಗಾಗಿ ಕೆಲಸಮಾಡಲು ಅಗತ್ಯವೆಂದು ಅಭಿಪ್ರಾಯವಾಗಿ ಸಂಘವನ್ನು ಮುಚ್ಚಬಾರದೆಂದು ಬಹುಮತದ ನಿರ್ಣಯವಾಯಿತು.

ಅಂತರ್ ಜಾತಿ ವಿವಾಹ— ದ. ಕ. ಜಿಲ್ಲೆಯ ಸರಕಾರಿ ವಕೀಲರಾಗಿ ನೇಮಿಸಲ್ಪಟ್ಟ ಶ್ರೀ ಎಮ್. ಎಮ್. ಪ್ರಭುಗಳು ಕಳೆದ ತಾ. 21ರಲ್ಲಿ ಶ್ರೀಮತಿ ಪಾರ್ವತಿಬಾಯಿ, ಮಂಗಳೂರು ಸರಕಾರಿ ಕಾಲೇಜಿನ ಲೆಕ್ಚರರ್ ಅವರನ್ನು ರಿಜಿಸ್ಟ್ರರ ವಿವಾಹವಾದರು.

ಶ್ರೀ ಎಮ್. ಆರ್. ಪೂಂಜ ಸ್ಮಾರಕ ರೇಡಿಯೋ ಮಂದಿರ- ಕಳೆದ ತಾ 29 ರಲ್ಲಿ ರೂರಲ್ ವೆಲ್‌ಫೇರ್ ಡೆಪ್ಯುಟಿ ಡೈರೆಕ್ಟರ ಶ್ರೀ ಎಸ್. ಲಕ್ಷ್ಮೀ ರತನ್ ಭಾರತಿಯವರು ಗಾಂಧಿ ಮೈದಾನಿನಲ್ಲಿ ದಿವಂಗತ ರಾಮಕೃಷ್ಣ ಪೂಂಜರ ಸ್ಮಾರಕ ಆಕಾಶವಾಣಿ ಮಂದಿರ ಶಂಕು ಸ್ಥಾಪನೆಮಾಡಿದರು. ಡಾ। ಚಂಪಾ, ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ಮಂದಿರಕ್ಕೆ ಸಾಧಾರಣ ರೂ 5000 ವೆಚ್ಚ ತಗಲಬಹುದೆಂದೂ ಈಗಾಗಲೇ ಹಣ ಸಹಾಯದ ವಾಗ್ದಾನಗಳಾಗಿವೆ ಎಂದೂ ತಿಳಿದುಬರುತ್ತದೆ.

ಫೆಕ್ಟರಿ ಮುಚ್ಚಲ್ಪಟ್ಟಿತು- ದಕ್ಷಿಣ ಕನ್ನಡ ಜಿಲ್ಲೆಯ ಅತಿ ಪ್ರಾಚೀನವೂ ಹಾಗೂ ಪ್ರಸಿದ್ಧ ಸಂಸ್ಥೆಯಾದ ಕಾಮನ್‌ವೆಲ್ತ್ ಟೈಲ್ಸ ರಿ ಫೆಕ್ಟರಿಯು ಇದೇ ತಾ 1ರಿಂದ ಮುಚ್ಚಲ್ಪಟ್ಟಿದೆ ಎಂದು ತಿಳಿದುಬರುತ್ತದೆ. ಈ ಸಂಸ್ಥೆಯು ಜರ್ಮನಿಯ ಮಿಶನರಿ ದೊರೆಗಳಿಂದ ಸ್ಥಾಪಿಸಲ್ಪಟ್ಟದ್ದು ಆಗಿದೆ.

ನೇಮಕ- ಕೆನರಾ ಹೈಸ್ಕೂಲಿನ ಹೆಡ್ಮಾಸ್ಟರರಾಗಿದ್ದ ಶ್ರೀ ಬಿ. ಅನಂತ ಪ್ರಭುಗಳವರು ನಿವೃತ್ತರಾದುದರಿಂದ ಅವರ ಸ್ಥಾನದಲ್ಲಿ ಶ್ರೀ ಜಿ. ವಾಸುದೇವ ಪೈಗಳವರು ಮುಖ್ಯೋಪಾಧ್ಯಾಯರಾಗಿ ನೇಮಕಹೊಂದಿರುವರು.

ಪ್ಯಾರಿಸ್ ಪ್ರಕರಣ ಮತ್ತು ಸ್ಪೆಶಲ್ ಕೋರ್ಟು—ಶಲೆ ಮರೆಸಿಕೊಂಡಿದ್ದ ಪ್ರಸಿದ್ಧ ದರೋಡೆಗಾರ ಎ. ಜೆ. ಪ್ಯಾರಿಸನನ್ನು ಇತ್ತೀಚೆಗೆ ಬಾಧಿಸಿ ಮಂಗಳೂರಿಗೆ ತರಲಾಗಿತ್ತಷ್ಟೆ! ಅವನ ಪ್ರಕರಣದ ವಿಚಾರಣೆಗಾಗಿ ವಿಶಿಷ್ಟ ಕೋರ್ಟು ನಡೆಯಲಿದ್ದು ಅದಕ್ಕೆ ಸ್ಪೆಶಲ್ II ಕ್ಲಾಸ್ ಮೆಜಿಸ್ಟ್ರೇಟರಾಗಿ ಶ್ರೀ ಮಾಧವಪೈಯವರು ನೇಮಿಸಲ್ಪಟ್ಟಿದ್ದಾರೆ. ಉಡುಪಿಯ ಆಸಿಸ್ಟಾಂಟ್ ಪಬ್ಲಿಕ್ ಪ್ರೊಸಿಕ್ಯೂಟರ್ ಶ್ರೀ. ವಿ. ಕೆ. ಶೆಟ್ಟರು ಸರಕಾರಿ ವಕೀಲರಾಗಿ ನೇಮಕ ಹೊಂದಿದ್ದಾರೆ. ಆರೋಪಿ ಕಡೆಯಿಂದ ಶ್ರೀಗಳಾದ ಎನ್. ಎನ್. ಸುವರ್ಣರೂ ಗಂಗಾಧರ ದಾಸರೂ ವಾದಿಸಲಿದ್ದಾರೆ. ಈ ಪ್ರಕರಣದಲ್ಲಿ ಸುಮಾರು 150 ಸಾಕ್ಷಿದಾರರಿದ್ದು ಕೋರ್ಟು 2-3 ತಿಂಗಳು ನಡೆಯಬಹುದಾಗಿ ತಿಳಿದು ಬರುತ್ತದೆ. ಪ್ಯಾರಿಸನು 1951 ಆಗೋಸ್ತು 15ರಲ್ಲಿ ಮಂಗಳೂರು ಸಬ್ ಜೈಲ್ ಸಿಬಂದಿಯನ್ನು ಒಳಸಂಚಿಗೆ ತೆಕ್ಕೊಂಡು ಕಳ್ಳ ಬೀಗದ ಕೈ ಮಾಡಿ ಹೊರ ಬಂದು ಹಗ್ಗದ ಮೂಲಕ ಜೈಲ್ ಕಂಪೌಂಡು ಗೋಡೆ ಇಳಿದು ಪರಾರಿಯಾಗಿದ್ದನೆಂದು ಹೇಳಲಾಗಿದೆ. ಗೋವೆ ಮತ್ತು ಬೊಂಬಾಯಿ ಜೈಲುಗಳಿಂದಲೂ ತಪ್ಪಿಸಿಕೊಂಡಿದ್ದನೆಂದೂ ಕೊಯಮುತ್ತೂರಲ್ಲಿ ಪೋಲೀಸ್ ಕಾವಲಿಂದ ತಪ್ಪಿಸಿಕೊಂಡು ವಿಮಾನ ಮೂಲಕ ಪರಾರಿಯಾಗಿದ್ದನೆಂದೂ ತಿಳಿದು ಬರುತ್ತದೆ. ಈತನಿಗೆ ಮೊದಲು 11 ಸಲ ಶಿಕ್ಷೆಯಾಗಿತ್ತೆಂದು ಗೊತ್ತಾಗಿದೆ. ಈಗ ಇವನ ಕೈ ಕಾಲುಗಳಿಗೆ ಕೋಳ ಹಾಕಿ ವಿಶೇಷ ಬಂದೋಬಸ್ತಿನಲ್ಲಿಡಲಾಗಿದೆ.

"ಮಧುವನ" "ಕಾವ್ಯಸಾಮ್ರಾಜ್ಯ" ಮೊದಲಾದ ಕರ್ನಾಟಕದ ಪ್ರಾತಿನಿಧಿಕ ಕಥಾಸಂಗ್ರಹ, ಕವನ ಸಂಗ್ರಹಗಳನ್ನು ಪ್ರಕಟಿಸಿ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕ್ರಾಂತಿಯನ್ನೆಬ್ಬಿಸಿದ ಉಡುಪಿಯ ಕಿರಿಯರ ಪ್ರಪಂಚದ ಉತ್ತಮ ಪುಸ್ತಕಗಳನ್ನು ಓದಿರಿ

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು. (ದ.ಕ.)

THE VIJAYA BANK LIMITED, BYNDOOR

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ತ್ರಿ ನೋಟೀಸು ದ್ವಾರಾ ಕೇಳಿಕೊಂಡಾಗ್ಯೂ, ಅಸ್ಲು-ವ-ಬಡ್ತಿ ಯಾವುದನ್ನೂ ಈ ವರೆಗೆ ಕೊಡದೆ ಬಾಕಿಮಾಡಿಕೊಂಡಿರುವುದರಿಂದ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಜೂನ್ ತಿಂಗಳ ತಾರೀಕು 20ನೇ ಶುಕ್ರವಾರ ಅಪರಾಹ್ನ ಗಂಟೆ 2.0ಕ್ಕೆ-ಯಾ-ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುವುದು. ತಿಳಿದಿರಲಿ.

ಸಾಲದ ಜಂಜ್ರಾ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು		
383/51	ಶ್ರೀ. M. K. ಸುಬ್ರಾವ್, ಮಾಜಿ ಕೃಷ್ಣಯ್ಯನವರ ಮಗ, ಲೇಂಡ್ ಲೋರ್ಡ್, ಮತ್ತು ಮರ್ಚಂಟ್, ನಾಗೋಡಿ ಗ್ರಾಮ, ಕೊಲ್ಲೂರು	2025	0	0
384/51	---Do —	433	12	0
385/51	—Do—	806	6	0
386/51	— Do -	460	14	0
387/51	— Do—	779	11	0
1169/48-9	ದಾಸನಾಡಿ ಮಹಾಲಿಂಗ ಸೆಟ್ಟಿ, ನಾಗಪ್ಪ ಸೆಟ್ಟರ ಅಳಿಯ, ಪ್ರೆಸಿಡೆಂಟ್, ಪಂಚಾಯತ್ ಬೋರ್ಡ ಶಿರೂರು	181	1	0
1170/48-9	—Do—	635	14	0
959/48-9	ಗೋವಿಂದ ಶಾರ್ವಿ, ಭದ್ರ ಶಾರ್ವಿಯ ಮಗ, ಅಮ್ಮನವರ ತೊಪ್ಪಲು ಉಪ್ಪುಂದ	5	2	0
1614/50	ಬಾಡ ಸುಬ್ರಾಯ ಭಟ್ಟ, ಮಾಬ್ಲೇಶ್ವರ ಭಟ್ಟರ ಮಗ, ಬೈಂದೂರು	29	9	0
449/50	B. ಆಲಿ ಅಹ್ಮದ್, ಅಹ್ಮದ್ ಸಾಹೇಬರ ಮಗ, ಕೆಸರು ಕೊಡಿ, ಶಿರೂರು	76	14	0
470/50	ಅಪ್ಪಪ್ಪ ಮೊಗೇರ, ಬೇಡು ಮೊಗೇರನ ಅಳಿಯ, ಬೇಲೆ ಹಿತ್ತಿಲು ಪಡುವರಿ	5	14	0
636/50	ಶೇಷಯ್ಯ ನಾಯ್ಕ, ಪಣಿಯಪ್ಪ ನಾಯ್ಕರ ಮಗ, ಬಿಜೂರು	13	7	0
1163/50	ಗೋವಿಂದ ಕತ್ತಲೆ ಕಾನು ಮರ್ಲನ ಮಗ, ಯಡ್ತರೆ ಗ್ರಾಮ ಬೈಂದೂರು	19	6	0
1465/50	K. ಮೈದಿನ್ ಸಾಹೇಬ, ಮಹ್ಮದಾ ಸುಕ್ರಿಯರ ಮಗ, ಕೇರಿ, ಬೈಂದೂರು	11	10	0
1525/50	ಶ್ರೀನಿವಾಸ R. ಹೋಬಳಿದಾರ, ರಾಮ್ಮ ಸೇರುಗಾರರ ಮಗ, ಪಡುವರಿ	23	6	0

ಬೈಂದೂರು, 5-6-1952

ಎಚ್. ರಾಜೀವ ಸೆಟ್ಟಿ, ಏಜಂಟ್.

ಮದುವೆ, ಉಪನಯನ ಮತ್ತಿತರ ಯಾವತ್ತೂ

ಶುಭ ಸಮಾರಂಭಗಳ ಕಾಲದಲ್ಲಿ ಏರ್ಪಡಿಸುವ

ಟೀಪಾರ್ಟಿ ಸತ್ಕಾರ ಸಮಾರಂಭಗಳು

ಎಷ್ಟೇ ದೊಡ್ಡ ಪ್ರಮಾಣದಲ್ಲಿದ್ದರೂ ತೃಪ್ತಿಕರವಾಗಿ

ಯೋಗ್ಯ ವ್ಯವಸ್ಥೆಯೊಂದಿಗೆ ನಾವು ಪೂರೈಸಿ ಕೊಡುತ್ತೇವೆ-

ಮಹಾ ಜನರು ಗಮನಿಸಬೇಕು.

ತಾಜಮಹಾಲ್ ಸಿನಿಮಾ ಥಿಯೇಟರಿನ ಬಳಿ ಉಡುಪಿ.

ಗ್ರಾಮಾಭಿವೃದ್ಧಿ ಕ್ಷೇತ್ರಗಳಲ್ಲಾದ ಕೆಲಸಗಳ ಸಾರಾಂಶ

ಕುಂಬಳೆ ಫಿರ್ಕಾದಲ್ಲಿ—ಕಳೆದ ಮೇ ತಿಂಗಳಲ್ಲಿ 3¾ ಎಕ್ರೆ ಬಂಜರು ಭೂಮಿಯು ಕೃಷಿಗೆ ಯೋಗ್ಯವಾಗುವಂತೆ ಸಮತಟ್ಟು ಮಾಡಲಾಯಿತು. 2016 ರಾತ್ಲು ಸುಧಾರಿತ ಬೀಜಗಳು ರೈತರಿಗೆ ಕೊಡಲಾದುವು. ಕುಂಬ್ಡಾಜೆ ಗ್ರಾಮದಲ್ಲಿ ಎರಡನೆ ಬಾರಿ ಡಿ. ಡಿ. ಟಿ. ಪ್ರಯೋಗಿಸಲ್ಪಟ್ಟಿತು. ನಾರಾಯಣ ಮಂಗಲ ಮಹಿಳೋದ್ಧಾರ ಕೇಂದ್ರದಲ್ಲೊಂದು ಉಪ ಪುಸ್ತಕ ಭಂಡಾರ ತೆರೆಯಲ್ಪಟ್ಟಿತು. ಬೇಳದ ಕೊರಗರ ವಸತಿಯಲ್ಲಿ ಮೂರು ಹೊಸಮನೆಗಳು ಕಟ್ಟಲ್ಪಟ್ಟವು.

ಮಂಜೇಶ್ವರ ಫಿರ್ಕಾದಲ್ಲಿ—1 ಎಕ್ರೆ 60 ಸೆಂಟ್ಸು ಬಂಜರು ಭೂಮಿಯು ಸಮತಟ್ಟು ಮಾಡಲ್ಪಟ್ಟಿತು. ಆರು ಎಕ್ರೆಗೆ ಬೇಕಾಗುವಷ್ಟು 378 ರಾತ್ಲು ಉತ್ತಮ ಭತ್ತದ ಬೀಜವನ್ನು ರೈತರಿಗೆ ಒದಗಿಸಿ ಕೊಡಲಾಯಿತು. ಬಾಯಾರು ಗ್ರಾಮದಲ್ಲಿ ಒಂದು ಬಾವಿಯ ಕೆಲಸವು ಪೂರ್ಣಗೊಳಿಸಲಾಯಿತು.

ಮೂಲ್ಕಿ ಫಿರ್ಕಾದಲ್ಲಿ—1 ಎಕ್ರೆ 15 ಸೆಂಟ್ಸು ಸ್ಥಳವನ್ನು ಸಮತಟ್ಟು ಮಾಡಲಾಯಿತು. 2 ಮಾದರಿ ಕೃಷಿ ಕ್ಷೇತ್ರಗಳು ತೆರೆಯಲ್ಪಟ್ಟವು. 376 ರಾತ್ಲು ಸುಧಾರಿತ ಬೀಜಗಳನ್ನು ರೈತರಿಗೆ ಕೊಡಲಾಯಿತು. 4 ಉತ್ತಮ ರೀತಿಯ ಪಾಯಿಖಾನೆಗಳು ಕಟ್ಟಲ್ಪಟ್ಟವು. ಕಾಪಿಕಾಡು ಹರಿಜನರ ವಸತಿ ಮನೆಗಳು ಪೂರ್ಣ ಕಟ್ಟಲ್ಪಟ್ಟವು. ಮೂಲ್ಕಿ ರೇಡಿಯೋ ಮಂದಿರದ ಸಂಸ್ಥಾಪನೆಯಾಯಿತು

ಪಡು ಪಣಂಬೂರು—ಕಳೆದ ತಾ 18ರಲ್ಲು ಸ್ಥಳೀಯ ಹಾ| ಎ| ಶಾಲಾ ಹಳೆ ವಿದ್ಯಾರ್ಥಿ ಸಂಘದವರು ಒಂದು ಸಾಮಾಜಿಕ ನಾಟಕವನ್ನು ಅಭಿನಯಿಸಿದರು. ಈ ಸಂಧರ್ಭದಲ್ಲಿ ಶ್ರೀಗಳಾದ ಎಮ್. ಕೆ. ಎಲ್ಲಪ್ಪ ಮತ್ತು ಕೆ. ಭೂಪಾಲ ಸೆಟ್ಟರು ಮಾತನಾಡಿದರು. ತಾ 30ರಲ್ಲು ಮದ್ರಾಸಿನ ಗ್ರಾಮಾಭಿವೃದ್ಧಿ ಡೆಪ್ಯುಟಿ ಡ್ಯಾರೆಕ್ಟರ್ ಶ್ರೀ ಎಸ್ ಲಕ್ಷ್ಮಿರತನ್ ಭಾರತಿಯವರು ಈ ಶಾಲೆಯನ್ನು ಸಂದರ್ಶಿಸಿದಾಗ, ಶಾಲಾ ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳಾದ ಶ್ರೀ ಜಿ. ಮಹಾಬಲ ಸೆಟ್ಟರು ಸ್ವಾಗತವಿತ್ತರು. ಹಳೆ ವಿದ್ಯಾರ್ಥಿ ಸಂಘದ ಕಡೆಯಿಂದ ಈ ಮೊದಲು ಈ ಬಾರಿ ಕಟ್ಟಡಕ್ಕೆ ರೂಪಾಯಿ 101 ಸಂಗ್ರಹಿಸಿ ಕೊಡಲಾಗಿತ್ತು, ಎಂದು ಹೇಳಿ, ನಾಟಕ ಪ್ರದರ್ಶನದ ಉತ್ಪತ್ತಿಯಿಂದ ರೂ 200ನ್ನು ಕಟ್ಟಡ ನಿಧಿಗೆ ಶ್ರೀ ಭಾರತಿಯವರ ಮುಖೇನ ಕೊಡಿಸಲಾಯಿತು.

ಮಣೇ—ಇಲ್ಲಿಯ ಎಯಿಡೆಡ್ ಶಾಲೆಯ ಹೆತ್ತವರ ಸಭೆಯು ಕಳೆದ ತಾ 31ರಲ್ಲಿ ಶ್ರೀ ಎಮ್. ಸಂಜೀವ [illegible] ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳ [illegible] ಪ್ರದರ್ಶನವಾದೊಡನೆ ಸಭಿಕರ ಭಾಷಣಗಳಾದುವು. ಗ್ರಾಮಸ್ಥರು ಈ ಶಾಲೆಗೆ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನೀಯ ಬೇಕಾಗಿ ಅಧ್ಯಕ್ಷರು ಹೇಳಿದರು

ಹಿರಿಯಡ್ಕ—ಕಳೆದ ತಾ 30ರಲ್ಲು ಹಿರಿಯಡ್ಕ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಮಕ್ಕಳ ಹಬ್ಬ ಮತ್ತು ಹೆತ್ತವರ ಕೂಟದ ದಿನಾಚರಣೆಗಳು ಜರಗಿದವು. ಕುಂದಾಪುರ ರೇಂಜಿನ ಶಾಲಾ ಡಿ| ಇನ್ಸ್‌ಪೆಕ್ಟರ್ ಶ್ರೀ ಪಿ ಕೃಷ್ಣರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ರಾಮಕೃಷ್ಣ ಅಡಿಗರು ಸ್ವಾಗತ ಭಾಷಣ ಮಾಡಿದರು.

ವಿವಿಧ ಪಾತ್ರೆಗಳು



ರಂಗವಲ್ಲಿ, ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಪಾರಾಲಯ,
ರಥಬೀದಿ, ಉಡುಪಿ

ಸುರತ್ಕಲ್—ಸುರತ್ಕಲ್ ಮುಖ್ಯವಿತ್ರ ಪಟ್ಟಣ ಮೊಗವೀರ [illegible] ರಾತ್ರಿಶಾಲೆಯಲ್ಲಿ 1953ರ ಇ. ಎಸ್ ಎಲ್. ಸಿ. ಪರೀಕ್ಷೆಗೆ ವಯಸ್ಕರ ತರಗತಿ ತೆರೆಯಲಾಗುವುದು.

ಕೋಟೆ—ಗಿಳಿಯಾರು ಹಿ | ಎ| ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಕಳೆದ ತಾ 31ರಲ್ಲಿ ವಕೀಲ್ ಶ್ರೀ ವಿ ಶ್ರೀನಿವಾಸ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಲಕ್ಷ್ಮೀನಾರಾಯಣ ಐತಾಳರು ವರದಿ ವಾಚನ ಮಾಡಿದರು. ಶ್ರೀ ಕೆ. ಎಲ್. ಕ [illegible] ಮೊದಲಾದವರು ಮಾತನಾಡಿದರು. ವಿದ್ಯಾರ್ಥಿಗಳು 'ಉಂಡಾಡಿ ಗುಂಡ' ನಾಟಕವನ್ನು ಅಭಿನಯಿಸಿದರು.

THE CATHOLIC BANK LTD, UDIPI, BRANCH.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣ್ಸಿದ ಮಹನೀಯರು ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲದ ಮೊಬಲಗನ್ನಾಗಲೀ ಯಾ ಅದಕ್ಕಾಗುವ ಈ ತನಕದ ಬಡ್ಡಿಯನ್ನಾಗಲೀ ಕೊಡದೆ ಇರುವುದರಿಂದಲೂ ಅಲ್ಲದೆ ಕ್ರಮವಾದ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಕೆಲವರು ಪಡಕೊಂಡು ಕೆಲವರು ಊರಿನಲ್ಲಿ ಇಲ್ಲವೆಂತ್ಲ, ವಾಪಾಸು ಬಂದಿರುವುದರಿಂದಲೂ, ನಗಗಳನ್ನು ಅವರವರು ಬಿಡಿಸಿಕೊಂಡು ಹೋಗದಿರುವುದರಿಂದಲೂ, ಸದರಿಯವರಿಗೆ ಯಾ ಸದರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನಂದ್ರೆ ಸದರಿಯವರು ಈಡಿಟ್ಟ ನಗಗಳನ್ನು ಇದೇ ಜೂನ್ ತಿಂಗಳ ತಾರೀಕು 19ನೆ ಗುರುವಾರ ದಿವಸ ಘಂಟೆ 3ಕ್ಕೆ ಯಾ ಬ್ಯಾಂಕಿಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಪುನಹಾ ನೋಟೀಸು ಕೊಡದೆನೇ ಬ್ಯಾಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ತಾರೀಕು	J. L. No	Name and address of the Borrowers.	Amount Principal. ರೂ. ಅ.
9—6-50	26/1301	P. M. ಹುಸೇನ್ ಮಹಮ್ಮದ್, ಸಾಲಿಹಂ ಮಗ, ಹೆಡ್‌ಮಾಸ್ತರ್ ಹಿಂದುಸ್ಥಾನಿ ಶಾಲೆ ಉಡುಪಿ	75 0
19—6-50	26/1393	—Do—	85 0
28—7-50	21/1759A	Y. ಕುಂಞಾಲಿ ಸಹೇಬ್, ಅಬ್ದುಲ್ ಖಾದರ್ ಸಹೇಬರ ಮಗ, ಐಣುಗುಡ್ಡೆ ಉದ್ಯಾವರ P. O.	575 0
25—8-50	26/1996	A. ಶಂಕರ್ ಹೆಗ್ಡೆ, ರಾಮಣ್ಣ ಹೆಗ್ಡೆಯವರ ಅಳಿಯ ತೆಂಕು ಬಯಲು ಹಿರಿಯಡ್ಕ P. O.	40 0
21-12-50	26/2778	—Do—	170 0
29—9-50	26/2274	—Do—	1030 0
17—3-52	28/452	—Do—	200 0
13—9-50	26/2139	B. ರಾಮದಾಸ್ ಮಲ್ಯ, B. ಭಗವಂತ್ ಮಲ್ಯರ ಮಗ, M/s ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡ್ಪಿ	175 0
15—2-51	27/232	—Do—	140 0
18—5-51	27/775	—Do—	75 0
14—9-50	26/2144	M. ಮೆಣ್ಣ ಪೂಜಾರಿ, ತುಕ್ರ ಪೂಜಾರಿ ಮಗ, ಟೀಚರ್, ಕ್ರಿಶ್ಚಿಯನ್ ಹೈಸ್ಕೂಲ್ ಉಡ್ಪಿ	95 0
20—9-50	26/2197	T. ಪುತ್ತು ಯಾನೆ ವೆಂಕಟ್ರಮಣ ಶಿಣ, ಕೇಶವ ಶಿಣಯರ ಮಗ, ಕುಂಜಿಬೆಟ್ಟು ಉಡ್ಪಿ	90 0
21—9-50	26/2206	ರುಜಾರಿಯೊ ಸುವಾರಿಸ್, ಅಂತೋನ್ ಸುವಾರಿಸರ ಮಗ, ತೆಂಕ ನಿಡಿಯೂರು ತೊಟ್ಟಂ P. O.	250 0
2-11-50	26/2501	ಜಬ್ಬ, ಬಾಬನ ಮಗ, ಮುನಿಸಿಪಾಲಿಟಿ ಉಡುಪಿ P. O.	35 0
6-11-50	26/2523	K. ಬಾಬು, ಕುಂಞಂಬು ಮಗ, ಕಟ್ಟಣದ ಕೆಲಸ ಪಾಲುಕೋಟಿ ಉಡುಪಿ	25 0
10-11-50	26/2546	K S. ಕೆದ್ಲಾಯ, ರಾಮಚಂದ್ರ ಕೆದ್ಲಾಯರ ಮಗ, ಕೊಡವೂರು ಮಲ್ಪೆ P. O.	110 0
17-11-50	26/2583	M. ವಾಸುದೇವ್ ರಾವ್, ಎಮ್ ಗೋವಿಂದ ಆಚಾರ್ಯರ ಮಗ, ಅಜ್ಜರಕಾಡು ಉಡ್ಪಿ	80 0
20-11-50	26/2598	K. ಸೋಮಪ್ಪ ಸುವರ್ಣ, ಬೆಮ್ಮ ಸಾಲಿಯಾನರ ಮಗ ಕಿದಿಯೂರು P. O.	40 0
10—1-51	27/53	K. ಕೊರಗ ನಾಯಕ್, ಮಂಜಪ್ಪ ನಾಯಕರ ಮಗ, ಕಲ್ಯಾಣಪುರ P. O.	85 0
21—1 51	27/121	ನಾರಾಯಣ ಸೆಟ್ಟಿ, ಸಂಕಯ್ಯ ಸೆಟ್ಟಿ ಮಗ, ಕಲ್ಯಾಂಜೆ ಕಲ್ಯಾಣಪುರ P. O.	60 0
27—1-51	27/133	K. ಸಂಜೀವ, ರಾಮಪ್ಪರ ಮಗ, ಕುಂಜಿಬೆಟ್ಟು ಉಡುಪಿ P. O	75 0
29—1-51	27/140	K ಕೊರಗ ನಾಯಕ್, ಮಂಜಪ್ಪ ನಾಯಕರ ಮಗ, ಕಲ್ಯಾಣ್‌ಪುರ ಪೋಸ್ಟ್	50 0
8 - 2-51	27/183	B. ನಿತ್ಯಾನಂದ ರಾವ್, ಅಪ್ಪಯ್ಯರ ಮಗ, ಸಂತೆಕಟ್ಟೆ ಉಡುಪಿ	80 0
25—5-50	26/1151	U. ವಾಸುದೇವ ಸೇಟ್, ಕೃಷ್ಣ ಶೇಟರ ಮಗ, ತೆಂಕಪೇಟೆ ಉಡುಪಿ	350 0
14-10-50	26/2381	— Do —	140 0
16 - 2-51	27/239	U. ವಾಸುದೇವ್ ಶೇಟ್ ಶ್ರೀನಿವಾಸ ಸೇಟರ ಮಗ, ಸೋದೆಮಠ ಓಣಿ ಉಡ್ಪಿ	50 0
27—2-51	27/309	K. ಗೋಪಾಲ ಆಚಾರಿ, ರಾಮಪ್ಪ ಆಚಾರಿಯ ಮಗ, ಕೊರಂಗರಪಾಡಿ ಉದ್ಯಾವರ P O.	32 0
27—2-51	27/310	ಮರಿಯಾಸ್ ಡಿ'ಸೋಜ ಕ್ಲೆಮೆಂಟ್ ಡಿ'ಸೋಜರ ಮಗ, ಶಿಂಬ್ರ ಕಲ್ಯಾಣ್‌ಪುರ P. O.	55 0
19—3-51	27 424	ಶೇಖ್ ಫಕೀರ್ ಸಹೇಬ್, ಶೇಖ್ ಅಮ್ಮದ್ ಸಾಹೇಬರ ಮಗ, 76 ಬಡಗಬೆಟ್ಟು ಉಡ್ಪಿ	30 0
19—3-51	27/425	ಸ್ಯಾಮುಸ್ ಸಾಲಿನ್ಸ್, ಗ್ಯಾಬ್ರಿಯೆಲ್ ಸಾಲಿನ್ಸರ ಮಗ, ಮಣಿಪುರ ಗ್ರಾಮ ಮಣಿಪುರ P O.	30 0
30—3-51	27/499	ಪಪ್ಪು ಪೂಜಾರಿ, ದಾಸು ಪೂಜಾರಿ ಅಳಿಯ, ಕಿದಿಯೂರು P. O.	165 0
2—4-51	27/519	ಮಿಸ್ U. ಮಾಲಿನಿ ಬಾಯಿ, V. R. ಬಾಳಿಗರ ಮಗಳು, ಬೈಲೂರು ಉಡುಪಿ P. O.	85 0
11—4 51	27/563	ಮಿಸೆಸ್ ಪ್ರೇಮ ಬಾಯಿ ನಾಯಕ್, C/o R. W ನಾಯಕ್, ಅಜ್ಜರಕಾಡು ಉಡುಪಿ	501 0
12—4-51	27/572	G ಕೃಷ್ಣ ನಾಯಕ್, ಶ್ರೀನಿವಾಸ್ ನಾಯಕರ ಮಗ, ಗುಂಡಿಬೈಲು, ಉಡುಪಿ	60 0
16—4-51	27/587	ಮಂಜುನಾಥ ಸೆಟ್ಟಿ, ಕೊಗ್ಗ ಸೆಟ್ರ ಮಗ, ಉದ್ಯಾವರ, P. O.	25 0
21—4-51	27/619	ಮಹಮ್ಮದ್ ಸಹೇಬ್, ದಾವೂದ್ ಸಹೇಬರ ಮಗ, ಕೊಡವೂರು ಗ್ರಾಮ, ಮಲ್ಪೆ P. O.	65 0
3 - 5-51	27/694	ಜಾಫರ್ ಸಹೇಬ್, ಮುಕ್ತುಮ್ ಸಹೇಬರ ಮಗ, ಕೊಡವೂರು, ಮಲ್ಪೆ P. O	65 0
23—5-51	27/806	ಆಲ್ಬರ್ಟ್ ಮಾಡ್ತೀಸ್ I. ಮಾಡ್ತಿಸರ ಮಗ, ಮಣಿಪುರ P O.	60 0
25—5-51	27/827	U. ಚಂದಪ್ಪ, ಕುರ್ಮ ಮರಕಾಲನ ಮಗ, ಉಪ್ಪೂರು, ಕಲ್ಯಾಣಪುರ P O.	60 0
1—6-51	27/866	ಅಬ್ದುಲ್ ಗಫಾರ್ ಸಹೇಬ್, ಅಬ್ದುಲ್ ಖಾದರ್ ಸಹೇಬರ ಮಗ, C/o G. I. C. C. Ltd, Udipi	30 0
8—6-51	27/917	ಅಬ್ದುಲ್ ರಜಾಕ್, ಅಬ್ದುಲ್ ಖಾದರ್ ಸಹೇಬರ ಮಗ, ಮಟಪಂಗಡಿ, ಉದ್ಯಾವರ P. O.	90 0
2—7-51	27/1058	—Do—	35 0
2—7-51	27/1056	B. ಜಯರಾಮ್ ಹೆಗ್ಡೆ, ಬಿ. ಭೋಜರಾಜ ಹೆಗ್ಡೆ ಅಳಿಯ, ಅಜ್ಜರಕಾಡು ಉಡುಪಿ	100 0
24—7-51	27/1206	B. ನಿತ್ಯಾನಂದ ರಾವ್, ಅಪ್ಪಯ್ಯರ ಮಗ, ಸಂತೆಕಟ್ಟೆ ಉಡುಪಿ	150 0

Office of the Catholic Bank,
Udipi Date 9-6-1952

V. J Andrade,
Agent.

ಮಂಗಳೂರು

ಮುನಿಸಿಪಲ್ ಕೌನ್ಸಿಲು ಸಭೆಯು ಕಳೆದ ತಾ. 31ರಲ್ಲಿ ಜರಗಿತು. ನಗರ ಸಭೆಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಆ ಸಭೆಯ ದಿನಗಳ ಮುಂಚಿತವಾಗಿ ಮೆಂಬರರಿಗೆ ಕಳ್ಪಿಸಬೇಕೆಂದೂ ಈ ಪೌರ ಸಭಾ ಸಮಿತಿಯ ನಿರ್ಣಯದ ಕುರಿತು, ಅದು ಅಸಾಧ್ಯವೆಂಬುದಾಗಿ ಸರಕಾರವು ತಿಳಿಸಿದ ಹುಕುಮನ್ನು ರಿಕಾರ್ಡ್ ಮಾಡಲಾಯಿತು. ಮಂಗಳೂರು ಭಗಿನೀ ಸಮಾಜಕ್ಕೆ ಚಾಲ್ತಿವರ್ಷಕ್ಕಾಗಿ ರೂ. 1200 ಸಹಾಯಧನ ಕೊಡುವುದೆಂದಾಯಿತು. ಮಂಗಳೂರಿನ ನೀರಿನ ಸರಬರಾಯಿ ಮತ್ತು ಚರಂಡಿ ವ್ಯವಸ್ಥೆಯ ಕುರಿತು ಕೊಯಮುತ್ತೂರಿನ ಕಾರ್ಯಕಾರೀ ಇಂಜಿನಿಯರರು ಜೂನ್ ತಿಂಗಳ 10ರೊಳಗೆ ಈ ನಗರ ಸಭೆಯು ರೂ. 5,52,000 ಕಟ್ಟಬೇಕೆಂದು ತಿಳಿಸಿದ ವಿಚಾರವು ಚರ್ಚಿಸಲಾಯಿತು. ಈಗಲೇ ರೂ. 2,57,000ವನ್ನು ಕಟ್ಟುವುದು ಉಳಿದ ಹಣವನ್ನು ಸರಕಾರದಿಂದ ಪಡೆಯುವುದಕ್ಕಾಗಿ ಶ್ರೀಗಳಾದ ಎಲ್.ಸಿ. ಪಾಯಿಸ್, ಎನ್. ಎನ್. ಸುವರ್ಣ, ಮತ್ತು ಕೆ. ಎಸ್. ಅಡಿಗರಿಂದ ಕೂಡಿದ ತ್ರಿಸ್ರಮಂಡಳವೊಂದು ಮುಖ್ಯ ಮಂತ್ರಿಗಳ ಭೇಟಿ ಮಾಡುವುದೆಂಬ ನಿರ್ಣಯವಾಯಿತು.

ಜಿಲ್ಲಾ ಹಿಂದುಳಿದ ವರ್ಗಗಳ ಪರಿಷತ್ತು- ಇದೇ ತಾ. 1ರಲ್ಲಿ ಕುಲಶೇಖರದ ವೀರ ನಾರಾಯಣ ದೇವಸ್ಥಾನದಲ್ಲಿ ಶ್ರೀ ಕೆ. ರಾಮ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎನ್. ಎನ್. ಸುವರ್ಣ, ಎಮ್. ಎಲ್. ಎ. ಅವರು ಧ್ವಜವಂದನೆಯನ್ನು ಪೂರೈಸಿ ಪರಿಷತ್ತನ್ನು ತೆರೆದರು. ಡಾ| ಬಿ. ಬಿ. ಅತ್ತಾವರ್, ಅವರು ಸ್ವಾಗತ ಭಾಷಣಮಾಡಿದರು, ಬಳಿಕ ಶ್ರೀ ಕೆ ವೆಂಕಟ್ರಮಣ ಗೌಡ, ಎಮ್. ಎಲ್. ಎ. ಯವರು ಹಿಂದುಳಿದವರು ಸಂಘಟಿತರಾಗಬೇಕೆಂಬ ವಿಷಯದಲ್ಲಿ ಮಾತನಾಡಿದರು. ಸಂಘದ ಸಹಾಯಕ ಕಾರ್ಯದರ್ಶಿ ಶ್ರೀ ಕೆ. ದೇಜಪ್ಪನವರು ವಂದಿವಾಚನ ಮಾಡಿದರು. ಹಿಂದುಳಿದ ವಿದ್ಯಾರ್ಥಿಗಳಿಗಾಗಿ ಮೂರುಕೋಟಿ ರೂಪಾಯಿ ಪ್ರತ್ಯೇಕಿಸಿಡಬೇಕು, ವಿದ್ಯಾರ್ಥಿಗಳಿಗೆ ಸಹಾಯ ಹಂಚುವುದಕ್ಕಾಗಿ ಒಂದು ಕಮಿಟಿ ರಚಿತವಾಗಬೇಕು, ಅದರಲ್ಲಿ ಈ ಜಿಲ್ಲೆಗೂ ಸರಿಯಾದ ಪ್ರಾತಿನಿಧ್ಯವಿರಬೇಕು, ಹಿಂದುಳಿದ ಹುಡುಗರಿಗೆ ಅರ್ಧ ಮಾಫಿಯನ್ನೂ ಹುಡುಗಿಯರಿಗೆ ಪೂರ್ಣ ಮಾಫಿಯನ್ನೂ ಎರಡನೇ ವರ್ಷಕ್ಕೂ ಕೊಡಬೇಕು. ಒಬ್ಬನಿಗೆ ಶಾಲಾ ಸಂಬಳ ಮಾಫಿ ಮಾಡುವಾಗ ಹ್ಯಾಕಲ್ಟಿಗಳ ಬಗ್ಗೆ ಹೆತ್ತವರ ಉತ್ಪತ್ತಿಯನ್ನು ರೂಪಾಯಿ 2000 ಎಂದೂ ಕಾಲೇಜಿನ ವಿದ್ಯಾರ್ಥಿಯ ಹೆತ್ತವರ ಉತ್ಪತ್ತಿ ರೂ 3000 ಎಂದೂ ಗಮನಿಸಬೇಕು, ಸರಕಾರವು ವಕ್ಫ ಹಿತ ಮಸೂದೆ ತರಬೇಕು ಸದ್ಯಕ್ಕೆ ವಕ್ಫ ಎಬ್ಬಿಸದಂತೆ ತಡೆಯಬೇಕು. ಬೆಸ್ತರಿಗೆ ಮಹಾರಾಷ್ಟ್ರದ ಹೇರಬಾರದು. ಕೇಂದ್ರ ಸರಕಾರವು ಕರ್ನಾಟಕ ಪ್ರಾಂತರಚನೆ ಮಾಡಬೇಕು ಇತ್ಯಾದಿ ನಿರ್ಣಯಗಳಾದುವು. ಹಲವರ ಭಾಷಣ, ಹರಿಕಥೆ, ವಿನೋದಾವಳಿಗಳಿಂದ ಪರಿಷತ್ತು ಕೊನೆಗೊಂಡಿತು.

ಮಹಾ ಸಭೆ:-ಮಂಗಳೂರಿನ ಡಿಪ್ರೆಸ್ಡ್ ಕ್ಲಾಸಸ್ ಎಸೋಸಿಯೇಶನಿನ ಮಹಾಸಭೆಯು ಇದೇ ತಾ. 1ರಲ್ಲು ಶ್ರೀ ಕೆ. ಈಶ್ವರ ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ರಘುನಾಥಯ್ಯ ಮೆಮೋರಿಯಲ್ ಹಾಲಿನಲ್ಲಿ ಜರಗಿತು. ಈ ಸಂಘವನ್ನು ಮುಚ್ಚಿಬಿಡಬೇಕೆಂದು ಕೆಲವು ಸದಸ್ಯರ ಅಭಿಪ್ರಾಯವಿದ್ದಾಗ್ಯೂ ಅದು ಹರಿಜನರ ಏಳಿಗೆಗಾಗಿ ಕೆಲಸಮಾಡಲು ಅಗತ್ಯವೆಂದು ಅಭಿಪ್ರಾಯವಾಗಿ ಸಂಘವನ್ನು ಮುಚ್ಚಬಾರದೆಂದು ಬಹುಮತದ ನಿರ್ಣಯವಾಯಿತು.

ಅಂತರ್‌ಜಾತಿ ವಿವಾಹ— ದ. ಕ. ಜಿಲ್ಲೆಯ ಸರಕಾರಿ ವಕೀಲರಾಗಿ ನೇಮಿಸಲ್ಪಟ್ಟ ಶ್ರೀ ಎಮ್. ಎಮ್. ಪ್ರಭುಗಳು ಕಳೆದ ತಾ. 21ರಲ್ಲು ಶ್ರೀಮತಿ ಪಾರ್ವತಿಬಾಯಿ, ಮಂಗಳೂರು ಸರಕಾರಿ ಕಾಲೇಜಿನ ಲೆಕ್ಚರರ್ ಅವರನ್ನು ರಿಜಿಸ್ಟ್ರಿಸಿ ವಿವಾಹವಾದರು.

ಶ್ರೀ ಎನ್. ಆರ್. ಪೂಂಜ ಸ್ಮಾರಕ ರೇಡಿಯೋ ಮಂದಿರ- ಕಳೆದ ತಾ. 29 ರಲ್ಲು ರೂರಲ್ ವೆಲ್‌ಫೇರ್ ಡೆಪ್ಯುಟಿ ಡೈರೆಕ್ಟರ ಶ್ರೀ ಎಸ್. ಲಕ್ಷ್ಮೀ ರತನ್ ಭಾರತಿಯವರು ಗಾಂಧಿ ಮೈದಾನಿನಲ್ಲಿ ದಿವಂಗತ ರಾಮಕೃಷ್ಣ ಪೂಂಜರ ಸ್ಮಾರಕ ಆಕಾಶವಾಣಿ ಮಂದಿರ ಶಂಕು ಸ್ಥಾಪನೆಮಾಡಿದರು. ಡಾ| ಚಂದ್ರಾ, ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ಮಂದಿರಕ್ಕೆ ಸಾಧಾರಣ ರೂ 5000 ವೆಚ್ಚ ತಗಲಬಹುದೆಂದೂ ಈಗಾಗಲೇ ಹಣ ಸಹಾಯದ ವಾಗ್ದಾನಗಳಾಗಿವೆ ಎಂದೂ ತಿಳಿದುಬರುತ್ತದೆ.

ಫೆಕ್ಟರಿ ಮುಚ್ಚಲ್ಪಟ್ಟಿತು- ದಕ್ಷಿಣ ಕನ್ನಡ ಜಿಲ್ಲೆಯ ಅತಿ ಪ್ರಾಚೀನವೂ ಹಾಗೂ ಪ್ರಸಿದ್ಧ ಸಂಸ್ಥೆಯಾದ ಕಾಮನ್‌ವೆಲ್ತ್ ಹೊಸನಿ ಫೆಕ್ಟರಿಯು ಇದೇ ತಾ 1ರಿಂದ ಮುಚ್ಚಲ್ಪಟ್ಟಿದೆ ಎಂದು ತಿಳಿದುಬರುತ್ತದೆ. ಈ ಸಂಸ್ಥೆಯು ಜರ್ಮನಿಯ ಮಿಶನರಿ ಬೋರ್ಡಿಗಳಿಂದ ಸ್ಥಾಪಿಸಲ್ಪಟ್ಟದ್ದು ಆಗಿದೆ.

ನೇಮಕ- ಕೆನರಾ ಹೈಸ್ಕೂಲಿನ ಹೆಡ್ಮಾಸ್ಟರಾಗಿದ್ದ ಶ್ರೀ ಬಿ. ಅನಂತ ಪ್ರಭುಗಳವರು ನಿವೃತ್ತರಾದುದರಿಂದ ಅವರ ಸ್ಥಾನದಲ್ಲಿ ಶ್ರೀ ಜೆ. ವಾಸುದೇವ ಪೈಗಳವರು ಮುಖ್ಯೋಪಾಧ್ಯಾಯರಾಗಿ ನೇಮಕಹೊಂದಿರುವರು.

ಪ್ಯಾರಿಸ್ ಪ್ರಕರಣ ಮತ್ತು ಸ್ಪೆಶಲ್ ಕೋರ್ಟು—ತಲೆ ಮರೆಸಿಕೊಂಡಿದ್ದ ಪ್ರಸಿದ್ಧ ದರೋಡೆಗಾರ ಎ. ಜೆ. ಪ್ಯಾರಿಸನನ್ನು ಇತ್ತೀಚೆಗೆ ಬಂಧಿಸಿ ಮಂಗಳೂರಿಗೆ ತರಲಾಗಿತ್ತಷ್ಟೆ! ಅವನ ಪ್ರಕರಣದ ವಿಚಾರಣೆಗಾಗಿ ವಿಶಿಷ್ಟ ಕೋರ್ಟು ನಡೆಯಲಿದ್ದು ಅದಕ್ಕೆ ಸ್ಪೆಶಲ್ II ಕ್ಲಾಸ್ ಮೆಜಿಸ್ಟ್ರೇಟರಾಗಿ ಶ್ರೀ ಮಾಧವಜಿಯವರು ನೇಮಿಸಲ್ಪಟ್ಟಿದ್ದಾರೆ. ಉಡುಪಿಯ ಅಸಿಸ್ಟಾಂಟ್ ಪಬ್ಲಿಕ್ ಪ್ರೊಸಿಕ್ಯೂಟರ್ ಶ್ರೀ. ವಿ. ಕೆ. ಶೆಟ್ಟರು ಸರಕಾರಿ ವಕೀಲರಾಗಿ ನೇಮಕ ಹೊಂದಿದ್ದಾರೆ. ಆರೋಪಿ ಕಡೆಯಿಂದ ಶ್ರೀಗಳಾದ ಎನ್. ಎನ್. ಸುವರ್ಣರೂ ಗಂಗಾಧರ ದಾಸರೂ ವಾದಿಸಲಿದ್ದಾರೆ. ಈ ಪ್ರಕರಣದಲ್ಲಿ ಸುಮಾರು 150 ಸಾಕ್ಷಿದಾರರಿದ್ದು ಕೋರ್ಟು 2-3 ತಿಂಗಳು ನಡೆಯಬಹುದಾಗಿ ತಿಳಿದು ಬರುತ್ತದೆ. ಪ್ಯಾರಿಸನು 1951 ಆಗೋಸ್ತು 15ರಲ್ಲಿ ಮಂಗಳೂರು ಸಬ್ ಜೈಲ್ ಸಿಬಂದಿಯನ್ನು ಒಳಸಂಚಿಗೆ ತೆಕ್ಕೊಂಡು ಕಳ್ಳ ಬೀಗದ ಕೈ ಮಾಡಿ ಹೊರ ಬಂದು ಹಗ್ಗದ ಮೂಲಕ ಜೈಲ್ ಕಂಪೌಂಡು ಗೋಡೆ ಇಳಿದು ಪರಾರಿಯಾಗಿದ್ದನೆಂದು ಹೇಳಲಾಗಿದೆ. ಗೋವೆ ಮತ್ತು ಬೊಂಬಾಯಿ ಜೈಲುಗಳಿಂದಲೂ ತಪ್ಪಿಸಿಕೊಂಡಿದ್ದನೆಂದೂ ಕೊಯಮುತ್ತೂರಲ್ಲಿ ಪೋಲಿಸ್ ಕಾವಲಿಂದ ತಪ್ಪಿಸಿಕೊಂಡು ವಿಮಾನ ಮೂಲಕ ಸಂಚಾರಿಯಾಗಿದ್ದನೆಂದೂ ತಿಳಿದು ಬರುತ್ತದೆ. ಈತನಿಗೆ ಮೊದಲು 11 ಸಲ ಶಿಕ್ಷೆಯಾಗಿತ್ತೆಂದು ಗೊತ್ತಾಗಿದೆ. ಈಗ ಇವನ ಕೈ ಕಾಲುಗಳಿಗೆ ಕೋಳ ಹಾಕಿ ವಿಶೇಷ ಬಂದೋಬಸ್ತಿನಲ್ಲಿಡಲಾಗಿದೆ.

“ಮಧುವನ” “ಕಾವ್ಯಸಾಮ್ರಾಜ್ಯ” ಮೊದಲಾದ ಕರ್ನಾಟಕದ ಪ್ರಾತಿನಿಧಿಕ ಕಥಾಸಂಗ್ರಹ, ಕವನ ಸಂಗ್ರಹಗಳನ್ನು ಪ್ರಕಟಿಸಿ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕ್ರಾಂತಿಯನ್ನೆಬ್ಬಿಸಿದ ಉಡುಪಿಯ ಕಿರಿಯರ ಪ್ರಪಂಚದ ಉತ್ತಮ ಪುಸ್ತಕಗಳನ್ನು ಓದಿರಿ

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು. (ದ.ಕ.)

THE VIJAYA BANK LIMITED, BYNDOOR

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ, ಅಸ್ಲು-ದ-ಬಡ್ಡಿ ಯಾವುದನ್ನೂ ಈ ವರೆಗೆ ಕೊಡದೆ ಬಾಕಿಮಾಡಿಕೊಂಡಿರುವುದರಿಂದ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಜೂನ್ ತಿಂಗಳ ತಾರೀಕು 20ನೇ ಶುಕ್ರವಾರ ಅಪರಾಹ್ನ ಗಂಟೆ 2.0ಕ್ಕೆ-ಯಾ-ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬೇಂಕಿನ ಮಠಾರದಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು. ತಿಳಿದಿರಲಿ.

ಸಾಲದ ಜಂಜ್ರಾ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು		
383/51	ಶ್ರೀ. M. K. ಸುಬ್ರಾವ್, ಮಾಣಿ ಕೃಷ್ಣಯ್ಯನವರ ಮಗ, ಲೇಂಡ್ ಲೋರ್ಡ್, ಮತ್ತು ಮರ್ಚೆಂಟ್, ನಾಗೋಡಿ ಗ್ರಾಮ, ಕೊಲ್ಲೂರು	2025	0	0
384/51	—Do—	433	12	0
385/51	—Do—	806	6	0
386/51	—Do—	460	14	0
387/51	—Do—	779	11	0
1169/48-9	ದಾಸನಾಡಿ ಮಹಾಲಿಂಗ ಸೆಟ್ಟಿ, ನಾಗಪ್ಪ ಸೆಟ್ಟರ ಅಳಿಯ, ಪ್ರಸಿಡೆಂಟ್, ಪಂಚಾಯ್ತ್ ಬೋರ್ಡ್ ಶಿರೂರು	181	1	0
1170/48-9	—Do—	685	14	0
959/48-9	ಗೋವಿಂದ ಕಾರ್ವಿ, ಭದ್ರ ಕಾರ್ವಿಯ ಮಗ, ಅಪ್ಪನವರ ತೋಪ್ಪಲು ಉಪ್ಪುಂದ	5	2	0
1614/50	ಬಾಡ ಸುಬ್ರಾಯ ಭಟ್ಟ, ಮಾಬ್ಲೇಶ್ವರ ಭಟ್ಟರ ಮಗ, ಬೈಂದೂರು	29	9	0
449/50	B. ಅಲ್ಲಿ ಅಹ್ಮದ್, ಅಹ್ಮದ್ ಸಾಹೇಬರ ಮಗ, ಕೆಸರು ಕೋಡಿ, ಶಿರೂರು	75	14	0
470/50	ಅಕ್ಕಪ್ಪ ಮೊಗೇರ, ಬೇಡು ಮೊಗೇರನ ಅಳಿಯ, ಬೇಲೆ ಹಿತ್ತಿಲು ಪಡುವರಿ	5	14	0
[illegible]	ಶೇಷಯ್ಯ ನಾಯ್ಕ, ಹಣೆಯಪ್ಪ ನಾಯ್ಕರ ಮಗ, [illegible]	13	7	0
1163/50	ಗೋವಿಂದ ಅಕ್ಕಲೆ ಕಾನು ಮರ್ಲನ ಮಗ, ಯಡ್ತರೆ ಗ್ರಾಮ ಬೈಂದೂರು	19	6	0
1465/50	K. ಮೈದಿನ್ ಸಾಹೇಬ, ಮಹ್ಮದಾ ಸುಕ್ರಿಯರ ಮಗ, ಕೇರಿ, ಬೈಂದೂರು	11	10	0
1525/50	ಶ್ರೀನಿವಾಸ R. ಹೋಬಳಿದಾರ, ರಾಮ್ಯ ಸೇರುಗಾರರ ಮಗ, ಪಡುವರಿ	23	6	0

ಬೈಂದೂರು, 5–6–1952

ಎಚ್. ರಾಜೀವ ಸೆಟ್ಟಿ, ಏಜಂಟ್.

ಮದುವೆ, ಉಪನಯನ ಮತ್ತಿತರ ಯಾವತ್ತೂ

ಶುಭ ಸಮಾರಂಭಗಳ ಕಾಲದಲ್ಲಿ ಏರ್ಪಡಿಸುವ

ಟೀಪಾರ್ಟಿ ಸತ್ಕಾರ ಸಮಾರಂಭಗಳು

ಎಷ್ಟೇ ದೊಡ್ಡ ಪ್ರಮಾಣದಲ್ಲಿದ್ದರೂ ತೃಪ್ತಿಕರವಾಗಿ

ಯೋಗ್ಯ ವ್ಯವಸ್ಥೆಯೊಂದಿಗೆ ನಾವು ಪೂರೈಸಿ ಕೊಡುತ್ತೇವೆ-

ಮಹಾ ಜನರು ಗಮನಿಸಬೇಕು.

ತಾಜಮಹಾಲ್ ಸಿನೆಮಾ ಥಿಯೇಟರಿನ ಬಳಿ **ಉಡುಪಿ.**

ಧರ್ಮದ ಮರೆಯಲ್ಲಿ ಸುಳ್ಳು ಸ್ವಾರ್ಥಗಳು...

[ಕಳೆದ ಸಂಚಿಕೆಯಿಂದ ಮುಂದುವರಿದುದು]

ಜೀವನವನ್ನು ನಿಶ್ಚ ಸಂತೃಪ್ತಗೊಳಿಸಲು ಹೆಣಗುವುದೇ ಸ್ವಾರ್ಥದ ಲಕ್ಷಣ. ಇದರಲ್ಲಿ ಪರಾಭವ ಹೊಂದಿದವರು 'ಸ್ವಾರ್ಥ'ದ ಮೇಲೆ ಮುನಿದುಬೀಳುತ್ತಾರೆ. ಅವರ ಸಿಟ್ಟು ಹೆಚ್ಚಿದಂತೆ ಸ್ವಾರ್ಥಿಗಳ ಬಣ್ಣ ಬದಲಾಗಬೇಕು- ಅದಿಲ್ಲದಿದ್ದರೆ, ಅಂತಹರನ್ನು ಸಹಜ ತ್ಯಾಗಿಗಳನ್ನಾಗಿ ಪರಿವರ್ತಿಸಲು ಪ್ರಯತ್ನಿಸಬೇಕು- ಈ ಎರಡೂ ಆಂದೋಲನಗಳಲ್ಲಿ ಧರ್ಮವು ಸಹಕರಿಸಿ, ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಸ್ವಾರ್ಥಿಗಳನ್ನು ಬದುಕಿಸಿದೆ.

ಜೀವನದ ಕುಲುಮೆಯಲ್ಲಿ ನೊಂದು ಬೆಂದ ಹೃದಯಕ್ಕೆ, ಪೂರ್ವ ಜನ್ಮದ ವಿಸ್ಮೃತಿಯಿಂದಲೊ, ಸಾವಿನಾಚೆಯ ಸುಂದರ ಸ್ವರ್ಗದ ಕಲ್ಪನೆಯಿಂದಲೊ, ಸಂತೃಪ್ತಿಗೆ ಎಡೆಯಿದೆ. ಅಂತೆಯೆ ಸ್ವಾರ್ಥದ ಹದ್ದು ಮೀರಿ ಪ್ರವರ್ತಿಸಿದ ಬಂದುಗಾರರಿಗೆ ಹುಟ್ಟು ಸಾವಿನಂತೆ ಸತ್ತಮೇಲೂ ಭಯಾನಕ ನರಕಗಳು ಸಿದ್ಧವಾಗಿವೆ. ಎಂಬ ಎಚ್ಚರಿಕೆಯಿದೆ ಬಾಳಿನ ಪರು ಪೇರಿನ ಕಣ್ಣೀರ ಗೋಳಿಗೆ 'ದಾನಧರ್ಮದ ಉಪಶಮನವಿರುವಂತೆ, ಸಂಕಟದಾಯಕ ಸಂಶಯಗಳ ಅನಿಶ್ಚಿತ ಪರಿಹಾರಕ್ಕೆ ದೈವ ನಾಮ ಕರ್ಮಗಳ ನೆರವಿದೆ. ಇವೆಲ್ಲವನ್ನು ಮೀರಿ ನಿಂತ ಪ್ರವೃತ್ತಿಗೆ ಧರ್ಮದ್ರೋಹದ ದಂಡನೆಯಿದೆ.

ವಿಪರೀತ ವಾತಾವರಣದಲ್ಲಿ ಸ್ವಾರ್ಥವು ಸಿದ್ಧಿ ಹೊಂದಬೇಕಾದರೆ ವಿಶಾಲ ಭಾವನೆಯ ಜೂಟಗಾರಿಕೆಯ ನಟನೆ ಬೇಕು. ಧರ್ಮ, ನ್ಯಾಯ, ನೀತಿಯ ಉಡುಗೆಯ ಮೇಲೆ ಪರೋಪಕಾರ 'ಬೀಜ ಮಂತ್ರ'ದ ಇಸ್ತ್ರಿ ಹಾಕಿರಬೇಕು. ಸುಳ್ಳಿನ ಊರು ಗೋಲಿಗೆ ಸತ್ಯದ ಬಲಕು ಕೊಟ್ಟಿದ್ದು, ಪರಂಪರಾಗತ ಸತ್ಕೀರ್ತಿಯನ್ನು ಪಠಿಸುತ್ತ, ಯಥಾರ್ಥತೆಯ ಮುಸುಕಿನೊಳಗಿದ್ದ ಸ್ವಾಭಿಮಾನದ ಕೈನೀಡಬೇಕು. ಅಗ್ಗ ಎಲ್ಲೆಲ್ಲು ಸ್ವಾಗತವಿದೆ!

...ಪ್ರತಿಯೊಂದು ಧರ್ಮವು ಸ್ವಾರ್ಥತ್ಯಾಗ ಮತ್ತು ಕಠಿಣ ಜೀವನಗಳಿಗೆ ಪ್ರಥಮ ಸ್ಥಾನ ಕೊಡುತ್ತದೆಂದು ಡಾ। ಎಸ್. ರಾಧಾಕೃಷ್ಣನ್ನರೇನೋ ಹೇಳಿದ್ದಾರೆ. ಅದು ತೀರ ಒಳಗಿನ ಮಾತು. ವೇದಾಂತಿಗಳಿಗೋ, ವಿಚಾರ ಭ್ರಾಂತರಿಗೊ ಹೇಳಿಸಿದ್ದು-ನಮಗಲ್ಲ! ನಮ್ಮದು, 'ಧರ್ಮ' ಅಂದರೆ ನಿಚ್ಚಳ ಸ್ವಾರ್ಥ ಮತ್ತು ಸುಖಾರ್ಥವಾದ ಬಾಳುನೆ!

ನಮ್ಮಂಥವ" ಧರ್ಮಸಾರ ಹೇಳುತ್ತಿದೆ; ಎಲ್ಲಿಯಾದರೂ ಕಷ್ಟನಿಷ್ಠುರಗಳನ್ನು ಎದುರಿಸಿಕೊಂಡು ತ್ಯಾಗಮಯ ಜೀವನವನ್ನು ಸಾಗಿಸಬೇಕೆಂದಿದ್ದರೆ ಅದು ಹೆಣ್ಣಿಗೆ ಸೇರಿದ ಧರ್ಮ...! ಎಂದು-ಗಂಡಿನ ಧರ್ಮ ಅದಲ್ಲ.

ಇದನ್ನು ಸ್ವತಃ ಹೆಂಗಸರೂ ಅಲ್ಲಗಳೆಯರು. ಹಾಗಾಗಿ ಅವರಿಗೆ ಯಾವ ಸೊತ್ತಿನ ಮೇಲೂ ಅಧಿಕಾರ ಉಳಿಯುವುದಿಲ್ಲ. ಮೊದಲೇ ಅವರು ಅಸ್ವತಂತ್ರರು; ಅಧೀನರು-ಗೋವಿನಂತೆ ದಾನರೂಪವಾಗಿ ಬರುವವರು-,ಗೋವಿನಂತೇ ಅವರು ಇರಬೇಕು.

ನಮ್ಮ ಧರ್ಮದ ನಿರ್ಮಲ (?) ನಿಯಮಗಳ ಆಜ್ಞೆಗಳಿಗೆ ಯಾರಾದರೂ ತಡೆಯೊಡ್ಡಿದರೆ ನಾವೇನು ಸುಮ್ಮನೆ ಬಿಡುವುದಿಲ್ಲ. ...ಉಪವಾಸ ಹಾಡಿಯೋ, ಅಪವಾದ ಹೊರಿಸಿಯೋ, ಹೋರಾಡಿಯೋ ತೀರುವೆವು,

ಸುಳ್ಳು ಸ್ವಾರ್ಥಗಳನ್ನು ತೊರೆಯಬೇಕೆಂದು ಶ್ರೀಕೃಷ್ಣನು ಕೂಡ ಹೇಳಿದ್ದಿಲ್ಲ. ಹೇಳಿದ್ದರೂ ಕಾರ್ಯರೂಪದಲ್ಲಿ ಅದನ್ನು ತೋರಿಸಿಲ್ಲ...? ಧರ್ಮರಾಯನು ಸಹ ಸುಳ್ಳು ಹೇಳುವಂತೆ ಮಾಡಿಸಿ, ತನ್ನವರ ಅಚ್ಚುಕಟ್ಟಿನ ಸ್ವಾರ್ಥಕ್ಕಾಗಿ, ಭೀಷ್ಮ, ದ್ರೋಣ, ಕರ್ಣನೇ ಮೊದಲಾದವರ ಇರವನ್ನೂ, ಬಹು ಚನ್ನಾಗಿ, ಚಮತ್ಕಾರಕವಾಗಿ ತೆಗೆದೊಗೆಯುವಂತೆ ಮಾಡಿಸಿದ ಅಂದ ಮೇಲೆ ನಮ್ಮ ಪಾಡೇನು?

ಹೀಗೆ ಸುಳ್ಳಿನ ಸಹಾಯದಿಂದ ಸ್ವಾರ್ಥದ ಬಯಕೆಗಳನ್ನು ಈಡೇರಿಸಿಕೊಳ್ಳುವುದು ಸುಲಭ- ಆದರೆ ಸುಳ್ಳು ಸ್ವಾರ್ಥಗಳನ್ನು ಆ ಮೇಲೆ ಮುಚ್ಚಿಡುವುದು ಸುಲಭವಲ್ಲ.

—ಶ್ರೀ. ವೆಂ. ಅಡಿಗ,

ಸ್ವೀಕಾರ ವಿಮರ್ಶೆ

ಮಾಂಗಲ್ಯ (ಸಾಮಾಜಿಕ ನಾಟಕ)

ಬರೆದವರು: ಚಿ. ಸದಾಶಿವಯ್ಯ ಪ್ರಕಾಶಕರ.: ಆನಂದ್ ಬ್ರದರ್ಸ್, ಬೆಂಗಳೂರು ೨. ಬೆಲೆ. ರೂ. ೧-೪-೦

ಪತಿಯೇ ಪರದೈವ, ಅವನೇ ಮಾಂಗಲ್ಯ ಹೊರತು ಕದ್ದು ಮುಚ್ಚಿ ತಂದ ದುಡ್ಡಿನಿಂದ ಗೌರೀ ಪೂಜೆ ಮಾಡಿದಷ್ಟಕ್ಕೆ ಭಾಗ್ಯ ದಕ್ಕುವುದಿಲ್ಲ- ಎಂಬ ತಿಳುವಳಿಕೆಯನ್ನು ಶಾಮಣ್ಣನ ಉಂಡಾಡಿ ರಕ್ಷಳಿಗೆ ಮಾಡಿಸುವುದು ಇಲ್ಲಿಯ ಕಥೆ. ಇದಕ್ಕೆ ಅನುಕೂಲವಾದ ರಂಗ, ಶಾಮಣ್ಣ, ನಂಜ, ಬಸವಯ್ಯ, ಶಾಸ್ತ್ರಿಗಳು ಶೀನಪ್ಪ-ಇತ್ಯಾದಿ ಪಾತ್ರಗಳು ಯಥೋಚಿತ ರೀತಿಯಲ್ಲಿ ಬಂದಿವೆ. ಜನಮನ ರಂಜನೆಯ ಉದ್ದೇಶದಿಂದ ಅಭಿನಯಿಸಿ ತೋರಿಸಲು ತಕ್ಕುದೆನ್ನಿಸಿದ ನಾಟಕಗಳು ಕನ್ನಡದಲ್ಲಿ ತುಂಬ ಕಡಿಮೆ ಇವೆ. ಅಂಥದರಲ್ಲಿ ಸದಾಶಿವಯ್ಯನವರು ರಮ್ಯ ಕೃತಿಗಳನ್ನು ನೀಡುತ್ತ ಬಂದಿದ್ದಾರೆ. ಪಾತ್ರಸೃಷ್ಟಿ ಮತ್ತು ರಚನಾಕ್ರಮದಲ್ಲಿ ಕೆಲವು ಕಡೆ ಅವಾಸ್ತವತೆ ಮೂಡಿದೆ. ಮುಖ್ಯವಾಗಿ ರಂಗನಾಥನ ಪಾತ್ರ ಯಥಾರ್ಥದ ಗಡಿಮೀರಿದೆ- ಹೀಗಿದ್ದರೂ ಒಟ್ಟಿನಲ್ಲಿ ಇದೊಂದು ಸುಖಪ್ರದವಾದ ನಾಟಕವೆನಲಡ್ಡಿಯಿಲ್ಲ.

ಗುಕ್ಕ, ಇತರ ಕತೆಗಳು (ಎಂಟು ಕತೆಗಳ ಸಂಗ್ರಹ)

ಬರೆದವರು: ಕುಲಕರ್ಣಿ ಬಿಂದುಮಾಧವ. ಪ್ರಕಾಶಕರು: ಶಾಂತಿ ಸಾಹಿತ್ಯಮಾಲೆ, ಬಾದಾಮಿ ಪುಟ: ೯೫ ಬೆಲೆ: ರೂ. ೧-೦-೦.

ಈ ಸಂಗ್ರಹದಲ್ಲಿ ವಿಷಯ ಜೀವನದ ೭ ವಿಧ ಮುಖಗಳಿವೆ. ಪ್ರತಿಯೊಂದರಲ್ಲೂ ಒಳ್ಳೆಯದು ಮತ್ತು ಕೆಟ್ಟದರ ನಡುವೆ ಹೊಯ್ದಾಡುವ ಮನೋವೃತ್ತಿ ಒಡಮೂಡಿದೆ. ಈ ಹೋರಾಟವನ್ನು ಬಿಂಬಿಸಲು ಮನೋಭಾವನೆಗಳ ಚಿತ್ರವನ್ನು ಲೇಖಕರು ಕೊಡುತ್ತಾರೆ. ಆದರೆ ಇವು ಅಗತ್ಯವಿದ್ದದಕ್ಕೂ ಹೆಚ್ಚಾಗಿ ತೋರುವುದರಿಂದ ಸ್ವಲ್ಪ ದೀರ್ಘವೆನಿಸುತ್ತವೆ. ಬಾಳ್ವೆಯ ದ್ವಂದ್ವವನ್ನೇ ವಸ್ತುವಾಗಿ ಆಯ್ದುಕೊಂಡುದರಿಂದ ಸಂತಾಪ ಮತ್ತು ವೇದನೆಗಳೇ ಕತೆಯ ಜೀವಾಳ. ನಿರೂಪಣಾ ಶೈಲಿಯು ಚೆನ್ನಾಗಿದ್ದರೂ ಸ್ವಲ್ಪದರಲ್ಲಿ ಹೇಳಿ ಮುಗಿಸಬಹುದಾದನ್ನು ಬೇಕೆಂದೇ ಎಳೆದೆಳೆದು ಹೇಳಲು ಹವಣಿಸಿದ ದೋಷದಿಂದ ಅದು ಮುಕ್ತವಾಗಿಲ್ಲ. "ಗುಡಿ", "ತೆರೆದ ಕಣ್ಣು" ಎಂಬ ಸ್ತ್ರೀ ಜೀವನದ ಚಿತ್ರಣಗಳು ಸಂಗ್ರಹದಲ್ಲಿ ಪ್ರಥಮ ಪಂಕ್ತಿಗೆ ಸೇರತಕ್ಕವುಗಳು. ಬಹುಮಾನಪಡೆದ ಎರಡು ಕತೆಗಳು ("ಮಾವಿನ ಮರದಡಿಯಲ್ಲಿ" ಮತ್ತು "ಗೆಲವಿನ ಸೋಲು") ಇವುಗಳಷ್ಟು ಸಂವೇದಕವಾಗಿಲ್ಲ.

ನವರತ್ನದ ಕಡಗ (ಕಥಾಸಂಗ್ರಹ)

ಬರೆದವರ.: ಸೌ. ಶಾರದಾ ಜಡೆ. ಪ್ರಕಾಶಕರು: ಸರ್ವೋದಯ ಸಾಹಿತ್ಯಮಾಲೆ ಹುಬ್ಬಳ್ಳಿ. ಪುಟ: ೭೬. ಬೆಲೆ ರೂ. ೧-೦-೦.

ಕನ್ನಡದಲ್ಲಿ ಹೆಣ್ಣು ಮಕ್ಕಳು ಸಾಹಿತ್ಯ ಕ್ಷೇತ್ರದಲ್ಲಿ ಬಹಳ ಅಪರೂಪವಾಗಿ ದುಡಿಯುತ್ತಾರೆ ಇಂಥವರಲ್ಲಿ ಶ್ರೀಮತಿ ಶಾರದಾ ಜಡೆಯವರೂ ಒಬ್ಬರು, ಹತ್ತಾರು ವರ್ಷಗಳಿಗೂ ಹಿಂದೆ ಶ್ರೀಮತಿಯವರು ಬರೆದ ಕೆಲವು ಕತೆಗಳಲ್ಲಿ ಒಂಭತ್ತನ್ನು ಆಯ್ದು ಇಲ್ಲಿ ಸಂಗ್ರಹಿಸಲಾಗಿದೆ. ಕತೆಗಳು ಸಂಸಾರದ- ಮುಖ್ಯವಾಗಿ ಸ್ತ್ರೀ ಸಂಸಾರದ-ವಿವಿಧ ಮುಖಗಳನ್ನು ಚಿತ್ರಿಸುತ್ತವೆ. ನಿರೂಪಣಾ ಶೈಲಿಯು ಸರಳವೂ ಹೃದ್ಯವೂ ಆಗಿದ್ದಂತೆ ಹೆಣ್ಣು ಬಾಳ್ವೆಯ ಚಿತ್ರಣವು ಸ್ಫುಟವಾಗಿ ಮೂಡಿದೆ. ಬರೆದು ಬಹಳ ಸಮಯವಾದುದರಿಂದ ಕಥಾವಸ್ತು ಈಗ ಅಷ್ಟು ಆಕರ್ಷಕವೆನಿಸದಿದ್ದರೂ, ಒಟ್ಟಿನಲ್ಲಿ ಬೇಸರ ಕಳೆಯಲು ಓದುವಷ್ಟು ಯೋಗ್ಯತೆ ಇವುಗಳಿಗಿದೆ. ಶೈಲಿಯು ತೀರ ಸರಳವಾದುದರಿಂದ-ಸ್ವಲ್ಪ ಲಘುತ್ವ ಬಂದಂತಿದೆ, ಇದನ್ನು ಸುಧಾರಿಸಬಹುದು. "ಅವಳಿ ಮಕ್ಕಳು", "ತೇರಿನ ಶಾಲು." ಒಳ್ಳೆಯ ಕತೆಗಳೆನ್ನಬಹುದು.

THE CATHOLIC BANK LIMITED, KALLIANPUR.
ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್, ಕಲ್ಯಾಣಪುರ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ರಿಜಿಸ್ತ್ರಿ ನೋಟೀಸು ಬಿಟ್ಟಲ್ಲಿಯೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ತಾ. 16-6-52ರ ಒಳಗೆ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿಗಳನ್ನು ಸಲ್ಲಿಸಿ ಬಿಡಿಸಿಕೊಂಡು ಹೋಗದೆ ಇದ್ದ ಪಕ್ಷದಲ್ಲಿ ಸದರಿಯವರು ಈಡಿಟ್ಟ ನಗಗಳನ್ನು ತಾ. 19-6-'52ನೇ ಗುರುವಾರ ಬೆಳಿಗ್ಗೆ ಗಂಟೆ 11ಕ್ಕೆ ಯಾ ಅನಂತರ ನಮಗೆ ಯುಕ್ತಕಂಡ ತಾರೀಕಿನಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುತ್ತದೆ.

ಸಾಲ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು		
27/1858	ಸಂತನ ಲುವಿಸ, ಉಪ್ಪೂರ್, ತೆಂಕಬೆಟ್ಟು, ಉಪ್ಪೂರು ಪೋಸ್ಟು	125	0	0
27/1869	ಸ್ಟೆಫನ್ ಲುವಿಸ್, ಸಾವೆರ ಜಾಕೋಬ ಲುವಿಸರ ಹೆಂಡತಿ, ಮೂಡುತೋನ್ಸೆ, ಬಗ್ಗರಬೆಟ್ಟು, ಕಲ್ಯಾಣಪುರ ಪೋಸ್ಟು	235	0	0
27/1878	ತಿಮ್ಮಪ್ಪ ನಾ[illegible], ಶ್ರೀನಿವಾಸ ನಾಯ್ಕರ ಮಗ, ಪುತ್ತೂರು, [illegible]	110	0	0
27/2016	ಕಾಸ್ಮೀರ್ ಡಿಸೋಜ, ಇಗ್ನೇಶಿಯಸ್ ಡಿಸೋಜರ ಮಗ, ಅರೂರು, ಕೊಳಲಗಿರಿ ಪೋಸ್ಟು	30	0	0
27/2126	ಪದ್ಮನಾಭ ಆಚಾರಿ, ಚನ್ನಯ ಆಚಾರಿಯ ಮಗ, ಬಬ್ಬುಟ್ಟು, ಮೂಡುತೋನ್ಸೆ, ಕಲ್ಯಾಣಪುರ ಪೋಸ್ಟು	28	0	0
27/2165	ವೆರೋನಿಕಾ ಲುವಿಸ, ದೇನಿಸ ಲುವಿಸರ ಹೆಂಡತಿ, ಉಪ್ಪೂರು, ತೆಂಕಬೆಟ್ಟು, ಕಲ್ಯಾಣಪುರ ಪೋಸ್ಟು	50	0	0
27/2221	ಕೆ. ಶೀನಪ್ಪ, ಕರ್ಕೇರ, ಮಂಜಯ ಮರಕಾಲರ ಮಗ, ಕಡವಿನಬಳಿ, ಕಲ್ಯಾಣಪುರ ಪೋಸ್ಟು	50	0	0
27/2241	ಗೋಪಾಲ ಉಡುಪ, ನಾರಾಯಣ ಉಡುಪರ ಮಗ, ಅರ್ಕಾಲ್‌ಬೆಟ್ಟು, ಕಲ್ಯಾಣಪುರ ಪೋಸ್ಟು	120	0	0
27/2325	ಲಿಯೋ ಡಿಸೋಜ, ಸಬೆಸ್ತಿನ್ ಡಿಸೋಜರ ಮಗ, ತಿಮ್ಮನ್ನಕುದ್ರು, ತೋನ್ಸೆ, ಕೆಮ್ಮಣ್ಣು ಪೋಸ್ಟು	55	0	0
27/2329	ನಾರಾಯಣ ಶೆಟ್ಟಿ, ಶೇಷ ಶೆಟ್ಟಿ ಅಳಿಯ, ಕೆಳ ಅರ್ಕಾಲಬೆಟ್ಟು, ಕಲ್ಯಾಣಪುರ ಪೋಸ್ಟು	22	0	0
27/2367	ನಾರಾಯಣ ಶೇರಿಗಾರ, ಚಂಕ ಶೇರಿಗಾರರ ಅಳಿಯ, ಬೈಲೂರು ಗ್ರಾಮ, ಮಿಶನ್ ಕಂಪೌಂಡು, ಉಡುಪಿ ಪೋಸ್ಟು	28	0	0
28/106	ಫ್ರಾನ್ಸಿಸ್ ರೋದ್ರಿಗಸ್, ಗುಂಡ ರೋದ್ರಿಗಸರ ಮಗ, ಮೂಡುಬೆಟ್ಟು, ಉಪ್ಪೂರು, ಕಲ್ಯಾಣಪುರ ಪೋಸ್ಟು	110	0	0
28/162	ಪೀಟರ್ ಡಿಸೋಜ, ಮತಾಯಸ್ ಡಿಸೋಜರ ಮಗ, ಆಮುಂಜೆ, ಕೊಳಲಗಿ[illegible]	20	0	0
28/287	ಮತಾಯಸ್ ಲುವಿಸ, ದೇನಿಸ ಲುವಿಸರ ಮಗ, ಮಾವಿನ ಕುದ್ರು, ಉಪ್ಪೂರು, ಕಲ್ಯಾಣಪುರ ಪೋಸ್ಟು	60	0	0
28/296	ಅಲೀಸ್ ಡಿಲಿಮಾ, ಅಬ್ರಹಾಮ ಡಿಲಿಮಾರ ಹೆಂಡತಿ, ಪಡುಕುದ್ರು, ಕೆಮ್ಮಣ್ಣು ಪೋಸ್ಟು	25	0	0

ಕಲ್ಯಾಣಪುರ, 6-6-1952

S. Rebello, Agent

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಶುಕ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳವಿಷ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಉಳುಕಿದ್ದ, ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

ಅಂತರಂಗದ ಕಥೆ, ಕಾದಂಬರಿ, ನಾಟಕ, ಕವಿತೆ, ಚಿತ್ರ ಪ್ರಬಂಧ ಮೊದಲಾದ ನಾನಾ ಬಗೆಯ 75 ಪುಸ್ತಕಗಳನ್ನು ಒಟ್ಟಿಗೆ ರೂ. 20ಕ್ಕೆ ಕೊಡಲಾಗುವುದು.

ಕೇಟಲಾಗಿಗೆ ಬರೆಯಿರಿ:—ಅಂತರಂಗ ಆಫೀಸು ಉಡುಪಿ, ಅಥವಾ ನವಭಾರತ ಬುಕ್ ಡಿಪೊ, ಉಡುಪಿ

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ ಇವುಗಳಿಗೆ

ಆದರ್ಶ ನಿಲಯವೆಂದರೆ

ಫುಡ್ ಲೇಂಡ್ಸ್

ಉಡುಪಿ

ಯಾತ್ರಿಕರಿಗೂ ಪ್ರಯಾಣಿಕರಿಗೂ ಸರ್ವ ಅನುಕೂಲವಾಗುವಂತೆ ನಗರದ ಕೇಂದ್ರ ಭಾಗದಲ್ಲಿದೆ.

ಪ್ರವಾಸಿಯ ಪತ್ರಗಳು ೩೨

ತುಂಬಿದ 1100 ಲೀರಾ ಕೊಟ್ಟು (ಅಂದಾಜು 9 ರೂಪಾಯಿ) ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆ ವರೆಗೆ ಇತರರ ಒಟ್ಟಿಗೆ ಬಸ್ಸಿನಲ್ಲಿ ತಿರುಗಾಟ ಮಾಡಿದೆ. ಪ್ರಥಮತಃ ನಾವು ನೋಡಿದ್ದು ರೋಮನರು ಕಟ್ಟಿದ Pantheon ಕಟ್ಟೋಣ. "Panthaon" ಅಂದರೆ ಅನೇಕ ದೇವತೆಗಳನ್ನು ಇಟ್ಟು ರೋಮನರು ಪೂಜಿಸಿದ ದೇವಾಲಯ. ಇದು ಬಹಳ ಸುಂದರವಾದ ಕಟ್ಟಡ. ಈಗಿನ ಕಾಲದಲ್ಲಿ ಕೂಡಾ ಇಂತಹ ಕಟ್ಟೋಣವನ್ನು ಕಟ್ಟುವುದು ಕಷ್ಟ. ಇದು ಕ್ರಿ. ಪೂ. 27ರಲ್ಲಿ ಅಗಸ್ಟಸ್ ಚಕ್ರವರ್ತಿ ಕಟ್ಟಿದ್ದು. ಅನಂತರ ಬಂದ ಕಾಲದಲ್ಲಿ ಬರ್ಬರರು ಇದನ್ನು ಸ್ವಲ್ಪಮಟ್ಟಿಗೆ ಹಾಳು ಮಾಡಿದರೂ ಅದನ್ನು ಪುನಃ ದುರಸ್ತಿ ಪಡಿಸಿದರು. 684 ಇಸವಿಯಲ್ಲಿ ಇದನ್ನು ಸೈಂಟ್ ಮೇರಿ ಇಗರ್ಜಿಯಾಗಿ ಮಾಡಿದರು. ಈಗಲೂ ಇಗರ್ಜಿ. ಈ ಕಟ್ಟೋಣದ ವಿಚಿತ್ರವೇನೆಂದರೆ ಅದು ಸಂಪೂರ್ಣ ಉರುಟಾಗಿದ್ದು ಕಲ್ಲಿನ ಗೋಡೆಯ ಮೇಲಿಂದಲೇ ಉರುಟಾದ ಮಾಡು (Cupola) ಇರುತ್ತದೆ. ಆ ಮಾಡು ಗುಂಬಜ ಅಥವಾ ಒಂದು ಬಿಡಿಸಿದ ಕೊಡೆಯ ಆಕಾರವಿರುತ್ತದೆ. ಆ ಮಾಡಿನ ಮಧ್ಯದಲ್ಲಿ ಬೆಳಕಿಗೋಸ್ಕರ ಒಂದೇ ಒಂದು ಉರುಟಾದ ಕಿಂಡಿ. ಕಟ್ಟೋಣದ ಬದಿಯ ಗೋಡೆಯಲ್ಲಿ ಕಿಟಿಕಿಗಳಿಲ್ಲ. ಈ ಮಾಡಿನಲ್ಲಿರುವ ಕಿಂಡಿಯಿಂದ ಇಡೀ ಒಳಗೆ ಬೇಕಾದಷ್ಟು ಬೆಳಕು ಬರುತ್ತದೆ. ಈ ಗುಂಬಜದ ಒಳಗಿನ ಅಗಲ (Diameter) 138 ಅಡಿ, ಎತ್ತರ 390 ಅಡಿ. ಈ ಕಟ್ಟೋಣದೊಳಗೆ ಕಳೆದ ಶತಮಾನದಲ್ಲಿ ಮರಣಪಟ್ಟ ಇಟೇಲಿ ಅರಸರ ಸಮಾಧಿಗಳು ಇವೆ. ಹಾಗೆಯೇ ಪ್ರಸಿದ್ಧ ಚಿತ್ರಕಾರನಾದ ರೆಫೆಯಲ್ (Raphael, 1483-1520) ಇವನ ಸಮಾಧಿ ಕೂಡಾ ಇಲ್ಲಿಯೇ ಇರುತ್ತದೆ.

ಇದನ್ನು ನೋಡಿದ ಅನಂತರ ಅಲ್ಲಿಯೇ ಸಮೀಪ ರಸ್ತೆ ಬದಿಯಲ್ಲಿ ಪುರಾತನ ಅಂದರೆ ರೋಮನರ ಕಾಲದ ಒಂದು ದೇವಾಲಯವನ್ನು ಕಂಡೆವು. ಅದು ರಸ್ತೆ ನೆಲಕ್ಕಿಂತ 15 ಅಡಿ ಕೆಳಕ್ಕೆ ಇತ್ತು. ಗಾರೆ ಹಾಕಿದ ಗೋಡೆ, ಎತ್ತರದ ಕಪ್ಪು ಶಿಲೆ ಕಲ್ಲಿನ ಕಂಬಗಳು, ಮತ್ತು ಮರದ ಜರಾಸಿ ಮೇಲಿನ ಹಂಚಿನ ಮಾಡು. ಇವೆಲ್ಲಾ 15 ಅಡಿ ಮಣ್ಣು ಬಿದ್ದು ಮುಚ್ಚಿ ಹೋಗಿವೆ. ಅಗೆದು ಬಿಡಿಸಿಟ್ಟಿದ್ದಾರೆ.

ಸ್ವಲ್ಪ ದೂರವಿರುವ ವೆನಿಸ್ ಚೌಕಿಯ ಒಂದು ಬದಿಯಲ್ಲಿ ಇಟೇಲಿ ದೇಶವನ್ನು ಒಂದು ಮಾಡಿಸಿದ (1871) ಇಮೆನ್ಯುವೆಲ್ [Emmanuel] ಎಂಬ ಅರಸನ ಸ್ಮಾರಕ ಕಟ್ಟಡವಿದೆ. ಅಲ್ಲಿಯೇ ಒಂದನೇ ಮಹಾಯುದ್ಧ ಕಾಲದ ತಿಳಿಯದ ಸೈನಿಕ [Unknown Soldier] ನಿಗೋಸ್ಕರವಾಗಿ ಕಟ್ಟಿದ ಸ್ಮಾರಕವಿದೆ. ಈ ಚೌಕಿಯ ಇನ್ನೊಂದು ಬದಿಯಲ್ಲಿ 14ನೇ ಶತಮಾನದಲ್ಲಿ ಕಟ್ಟಿದ ವೆನೀಸಿಯಾ ಎಂಬ ಹೆಸರಿನ ಅರಮನೆ ಇದೆ. ಇದರಲ್ಲಿ ಇಟೆಲಿಯ ನಿರಂಕುಶ ಸರ್ವಾಧಿಕಾರಿಯಾಗಿದ್ದ ಮುಸಲೋನಿಯು ವಾಸಿಸುತ್ತಿದ್ದ. ಅದರ ಉಪ್ಪರಿಗೆಯ ಮುಂಭಾಗದಿಂದ ಈ ಚೌಕಿಯಲ್ಲಿ ನಿಲ್ಲುತ್ತಿದ್ದ ಊರಿನ ಜನರಿಗೆ ಅವನು ಸಂದರ್ಶನವನ್ನೂ, ಭಾಷಣವನ್ನೂ ಕೊಡುವುದಾಗಿ ತಿಳಿಯಿತು. ಈಗ ಅದನ್ನು ವಸ್ತು ಸಂಗ್ರಹ ಗೃಹವಾಗಿ [Museum] ಮಾಡಿದ್ದಾರೆ. ಈ ಅರಮನೆಗೆ ತಾಗಿ ನೆಪೋಲಿಯನ್ನನ ಕುಟುಂಬದವರು ವಾಸಿಸುತ್ತಿದ್ದ ಅರಮನೆಯು ಇಲ್ಲಿ ಇದೆ. ಒಂದನೇ ನೆಪೋಲಿಯನ್ನನ ತಾಯಿಯು ಇಲ್ಲಿಯೇ ಜೀವಿಸಿ, ಮರಣಪಟ್ಟಳಂತೆ. ಇಲ್ಲಿಂದ ಸ್ವಲ್ಪ ದೂರದಲ್ಲಿ ರೋಮನ್ ಕಾಲದ ಅನೇಕ ಹಾಳಾದ ಕಟ್ಟಡಗಳು [Ruins] ಇರುತ್ತವೆ. ಒಂದು ಕಡಿದಾದ ಗುಡ್ಡೆ [Steep hill] ಹತ್ತಿ ಮೇಲಕ್ಕೆ ಬಸ್ಸಿನಲ್ಲಿ ಹೋದೆವು. ಅದು ರೋಮಿನ ಏಳು ಗುಡ್ಡೆಗಳ ಪೈಕಿ ಒಂದು. ಆ ಗುಡ್ಡೆಯ ಇಳಿಜಾರಿನಲ್ಲಿ ಪೂರ್ವಕಾಲದ ರೋಮನರು ರಾಜದ್ರೋಹಿಗಳನ್ನು [Traitors] ದೂಡಿ ಕೊಲ್ಲುತ್ತಿದ್ದರಂತೆ. ಆ ಗುಡ್ಡೆಯ ಕೆಯಲ್ಲಿ ರೋಮನರ ಕಾಲದ ಸೂರ್ಯದೇವರ [Jupiter] ದೇವಾಲಯವಿದೆ. ಅದರ ಎದುರಿನ ಚೌಕಿಯನ್ನು ಮೈಕಲ್ ಏಂಜಲೋ ಚಂದಗೊಳಿಸಿದ್ದು. ಆ ಚೌಕಿಯಲ್ಲಿ ಎರಡು ದೊಡ್ಡ ಪ್ರತಿಮೆಗಳಿವೆ. ಒಂದು ಈಜಿಪ್ಟ್ ದೇಶದ ನೈಲ್ ನದಿಯನ್ನು ನಿರೂಪಿಸುವುದು. ಇನ್ನೊಂದು ಊರಿನ ಟೈಬರ ನದಿಯನ್ನು. ಈ ಚೌಕಿಯ ಮಧ್ಯದಲ್ಲಿ ರೋಮನ್ ಚಕ್ರವರ್ತಿಗಳ ಪೈಕಿ ಅತೀ ಶ್ರೇಷ್ಠನಾದ ಮಾರ್ಕಸ್ ಓರೀಲಿಯಸ್ ಎಂಟೋನೈನಸ್ [Marcus Aurelius Antoninus, 121-180] ಅವನು ಕುದುರೆಯ ಮೇಲೆ ಸವಾರಿ ಮಾಡುವ ಒಂದು ದೊಡ್ಡ ಕಂಚಿನ ಪ್ರತಿಮೆಯು ಇಲ್ಲಿ ಇದೆ. ಹೀಗೆ ಇವನ ಕಂಚಿನ ಪ್ರತಿಮೆ ಇಟೇಲಿಯಲ್ಲಿ ಬೇರೆ ಎಲ್ಲಿಯೂ ಇಲ್ಲವಂತೆ.

ಇಲ್ಲಿಂದ ಸುಮಾರು ಒಂದು ಫರ್ಲಾಂಗ್ ದೂರದಲ್ಲಿ ಒಂದು ಎತ್ತರವಾದ ಗುಡ್ಡೆಯಿದೆ. ಅದರ ಹೆಸರು [Palatinate Hill] ಎಂತ. ಇದರಲ್ಲಿ ರೋಮನ್ ಅರಸರು ಇರುತ್ತಿದ್ದ ಅನೇಕ ಅರಮನೆಗಳ ಹಾಳಾದ ಅಂಶಗಳು ಕಾಣುತ್ತವೆ. ಇವೆರಡು ಗುಡ್ಡೆಗಳ ಮಧ್ಯ ತಗ್ಗು ಜಾಗದಲ್ಲಿ ರೋಮನರ ಕಾಲದ ಅನೇಕ Ruins ಇರುತ್ತವೆ. ಜೂಲಿಯಸ್ ಸೀಸರ್‌ನ ದೇವಾಲಯ, ಅವನ ಹೆಸರಿನ ರಸ್ತೆ, ಅವನ ಕಾಲದ Forum [54 B. C.]

ಇದನ್ನೆಲ್ಲ ಹೀಗೆ ನೋಡಿ ಸ್ವಲ್ಪ ಮುಂದೆ ಹೋಗುವಾಗ ಈ ಮುಂಚೆ ನಾನು ಪೋಂಪೆ ವಿಷಯ ಬರೆಯುವಾಗ ಬರೆದ ನೀರೋ ಚಕ್ರವರ್ತಿಯ ಅಮೃತ ಶಿಲೆಯಿಂದ ಮಾಡಿದ ಪ್ರತಿಮೆ ಇರುತ್ತದೆ. ಅಲ್ಲಿಂದ ಸ್ವಲ್ಪ ದೂರ ಮುಂದೆ ಹೋದಾಗ ಕೊಲಿಸಿಯಮ್ (Coleseum) ಎಂಬ ಬಹುದೊಡ್ಡ ಕಟ್ಟೋಣವಿದೆ. ಇದು ಒಂದು ಸರ್ಕಸ್ಸಿನ ಗೆಲರಿಯಂತೆ ಕಟ್ಟಿದ ಉರುಟಾದ ಕಟ್ಟೋಣ. ಅದರಲ್ಲಿ ಒಂದೇ ಸಲ 50 ಸಾವಿರ ಜನರು ಕುಳಿತುಕೊಂಡು ಅದರ ಮಧ್ಯದಲ್ಲಿ ನಡೆಯುವ ಮನುಷ್ಯರೊಳಗೆ ಅಥವಾ ಮನುಷ್ಯರಿಗೂ ಮೃಗಗಳಿಗೂ ಆಗುತ್ತಿದ್ದ ಜಗಳವನ್ನು ವಿನೋದಕ್ಕಾಗಿ ನಗರದ ಜನರು ನೋಡುತ್ತಿದ್ದರಂತೆ. ಇದರ ಸುತ್ತಲೂ, 4 ಅಂತಸ್ತಿನ ಕಮಾನುಗಳ ಮೇಲೆ ಗೋಡೆ ಕಟ್ಟಿರುತ್ತಾರೆ. ನೀರೋ ಚಕ್ರವರ್ತಿ ಕಾಲದಲ್ಲಿ ಅವನು ಮಾಡಿದ ಅತ್ಯಾಚಾರದ ಕಾರಣದಿಂದ ಜನರು ಅವನ ಮೇಲೆ ಬಹಳವಾಗಿ ಕೋಪಗೊಂಡಿದ್ದರು. ಅದಕ್ಕಾಗಿ ಅವನ ಹೂವಿನ ತೋಟ ಮತ್ತು ಕೆರೆಯನ್ನು ನಾಶಮಾಡಿ ಜನರಿಗೆ ಪ್ರೀತಿಯಾಗುವಂತೆ ಅದೇ ಜಾಗದಲ್ಲಿ ನಂತರ ಆಳಿದ ವೆಸ್ಪೇಸಿಯಸ್ [Vespasius] ಎಂಬವನು ಈ ಕಟ್ಟೋಣವನ್ನು ಕಟ್ಟಿಸಲಿಕ್ಕೆ ಸುರುಮಾಡಿದ್ದು, ಕಟ್ಟಲಿಕ್ಕೆ ಅನೇಕ ಸಾವಿರ ಗುಲಾಮರು (slaves) 8 ವರ್ಷ ಕೆಲಸ ಮಾಡಿದ್ದರಂತೆ. ಅವನ ನಂತರದ ಟೈಟಸ್ [Titus] ಎಂಬ ಅರಸನು ಪ್ರಥಮವಾಗಿ ಇದನ್ನು ಜನರ ಉಪಯೋಗಕ್ಕೆ 72ನೇ ಇಸವಿಯಲ್ಲಿ ತೆರೆದದ್ದು. ಇದರ ಮಧ್ಯ ಇರುವ ಜಾಗದಲ್ಲಿ ನೆಲದಿಂದ ಕೆಳಗೆ ಜನರನ್ನೂ ಮೃಗಗಳನ್ನೂ ತರಲಿಕ್ಕೆ ದಾರಿಗಳಿವೆ. ಸಮುದ್ರದ ಹಡಗುಗಳೊಳಗೆ ಆಗುವ ಯುದ್ಧ ಕೂಡಾ ಇಲ್ಲಿ ಮಾಡಿ ತೋರಿಸುತ್ತಿದ್ದರಂತೆ. ಈ ಕಟ್ಟೋಣದ ಕೆಲವು ಅಂಶಗಳು ಅಲ್ಲಲ್ಲಿ ಬಿದ್ದಿರುವುದಾದರೂ, ಹೆಚ್ಚಿನ ಅಂಶಗಳು ಸರಿಯಾಗಿವೆ.

(ವಿಚಾರವಾಣಿ) —ಕೆ. ಆರ್. ಕಾಮತ.

[ಮುಂದುವರಿಯುವುದು]

THE VIJAYA BANK LIMITED, BRAHMAVAR.

ದಿ ವಿಜಯಾ ಬೇಂಕ್ ಲಿಮಿಟೆಡ್, ಬ್ರಹ್ಮಾವರ

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಗದ ಈಡಿನ ಮೇಲೆ ಸಾಲಪಡೆದುಕೊಂಡು, ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿಮಾಡಿಕೊಂಡಿರುವುದರಿಂದಲೂ, ಸದರಿ ಸಾಲವನ್ನು ಬರಮಾಡಿಕೊಳ್ಳುವರೆ, ಅವರಿಗೆ ರಿಜಿಸ್ಟ್ರಿ ನೋಟೀಸು ಬಿಟ್ಟರಲ್ಲಿಯೂ, ಸದ್ರಿ ನಗಗಳನ್ನು ಬಿಡಿಸಿಕೊಂಡು ಹೋಗದಿದ್ದುದರಿಂದ, ಮತ್ತು ಕೆಲವರು ಮೃತಪಟ್ಟಿರುವುದರಿಂದ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ತಾರೀಕು 21-6-52ನೇ ಶನಿವಾರ ಅಪರಾಹ್ನ ಗಂಟೆ 2ಕ್ಕೆ ಸರಿಯಾಗಿ, ಅಥವಾ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಸಾಲದನಂಬ್ರ	ಹೆಸರು ಮತ್ತು ವಿಳಾಸ	ಅಸ್ಲು ಹಣ
36/50	ಅಂಗಾರ ಮರಕಾಲ, N/o ಕೊರಗ ಮರಕಾಲ, ಬಾಳಕುದ್ರು ಗ್ರಾಮ, ಪೋಸ್ಟ್ ಹಂಗಾರಕಟ್ಟೆ ದ.ಕ.	50 0 0
58/50	ತಮ್ಮಡ ಪೂಜಾರಿ, N/o ಕುರುಡ ಪೂಜಾರಿ, ಹಂದಾಡಿ ಗ್ರಾಮ, ಪೋಸ್ಟ್ ಬ್ರಹ್ಮಾವರ	20 0 0
113/50	ಅಂಗಾರ ಮರಕಾಲ, N/o ಕೊರಗ ಮರಕಾಲ, ಬಾಳಕುದ್ರು ಗ್ರಾಮ, ಪೋಸ್ಟ್ ಹಂಗಾರಕಟ್ಟೆ	12 0 0
334/50	ಕೆ. ಅಣ್ಣಪ್ಪ ಸೆಟ್ಟಿ, N/o ಕೃಷ್ಣಯ್ಯ ಸೆಟ್ಟಿ ಕೂರಾಡಿ ಗ್ರಾಮ, ಪೋಸ್ಟ್ ಕೊಕ್ಕರ್ಣೆ	550 0 0
352/50	ಬಚ್ಚ ಪೂಜಾರಿ, N/o ಗೋವಿಂದ ಪೂಜಾರಿ, ಹೆರಾಡಿ ಗ್ರಾಮ, ಪೋಸ್ಟ್ ಸಾಲಿಕೇರಿ	75 0 0
404/50	ಶೇಕ್ ಲಾಬುಲಾ ಸಾಹೇಬ್, S/o ಅಲಿ ಸಾಹೇಬ್ ವಾರಂಬಳ್ಳಿ ಗ್ರಾಮ, ಪೋಸ್ಟ್ ಬ್ರಹ್ಮಾವರ.	55 0 0
555/50	ಮಹಾಬಲ ಸೆಟ್ಟಿ, N/o ಗಣಪಯ್ಯ ಸೆಟ್ಟಿ, ಹಂದಾಡಿ ಗ್ರಾಮ. ಪೋಸ್ಟ್ ಸಾಲಿಕೇರಿ	15 0 0
594/50	ನಾರಾಯಣ ಸೆಟ್ಟಿ, N/o ಗಣಪಯ್ಯ ಸೆಟ್ಟಿ, ಹಂದಾಡಿ ಗ್ರಾಮ, ಮಾರ್ಜಿನಮನೆ, ಪೋಸ್ಟ್ ಬ್ರಹ್ಮಾವರ	375 0 0
606/50	ಪಿನಿಯ ಮರಕಾಲ, N/o ಕೂಸ ಮರಕಾಲ, ಮಾಬುಕಳ, ಪೋಸ್ಟ್ ಬ್ರಹ್ಮಾವರ	90 0 0
647/50	ಸಂಜೀವ ಸೆಟ್ಟಿ, N/o ಪಟೇಲ್ ಶೀನಪ್ಪ ಸೆಟ್ಟಿ, ಶೀರೂರು ಗ್ರಾಮ, ಪೋಸ್ಟ್ ಕೊಕ್ಕರ್ಣೆ	80 0 0
665 50	ಬೋಳು ಪೂಜಾರಿ N/o ಮಾಲು ಪೂಜಾರಿ ಬೇಳೂರು ಗ್ರಾಮ, ಪೋಸ್ಟ್ ಬ್ರಹ್ಮಾವರ	15 0 0
685/50	ವಾಲೆಂಟಿನ್ ಲುವಿಸ್, S/o ಸಾಲೋಮನ್ ಲುವಿಸ್ ಕುಮ್ರಗೋಡು ಗ್ರಾಮ, ಪೋಸ್ಟ್ ಬ್ರಹ್ಮಾವರ	90 0 0
701/50	ಶಂಕರ ಸೆಟ್ಟಿ, N/o ಸಂಜೀವ ಸೆಟ್ಟಿ, ಹಂದಾಡಿ ಗ್ರಾಮ, ಪೋಸ್ಟ್ ಸಾಲಿಕೇರಿ	18 0 0
745/50	ಬಿ. ರಾಘವ ಹೆಗ್ಡೆ, N/o ಅಂತಯ್ಯ ಹೆಗ್ಡೆ, ಹಂದಾಡಿ ವಳಮನೆ, ಪೋಸ್ಟ್ ಬ್ರಹ್ಮಾವರ	150 0 0
797/50	ಮಹಾಬಲ ಸೆಟ್ಟಿ, N/o ಕೊರಗ ಸೆಟ್ಟಿ, ಹಂದಾಡಿ ಮರ್ಜಿನ ಮನೆ, ಪೋಸ್ಟ್ ಬ್ರಹ್ಮಾವರ	50 0 0
843/50	ಫ್ರಾನ್ಸಿಸ್ ಸಿಲ್ವ S/o ಗಾಬ್ರಿಲ್ ಸಿಲ್ವ, ಮಟ್ಪಾಡಿ ಗ್ರಾಮ, ಪೋಸ್ಟ್ ಬ್ರಹ್ಮಾವರ	150 0 0
911/50	ನಾಗಯ್ಯ ಸೆಟ್ಟಿ, S/o ಸುಬ್ಬಯ್ಯ ಸೆಟ್ಟಿ, ವಾರಂಬಳ್ಳಿ ಗ್ರಾಮ, ಬ್ರಹ್ಮಾವರ	40 0 0
946/50	ಸಂಜೀವ ಸೆಟ್ಟಿ, N/o ಶೀನಪ್ಪ ಸೆಟ್ಟಿ, ಚಾಂತಾರು ಗ್ರಾಮ, ಪೋಸ್ಟ್ ಬ್ರಹ್ಮಾವರ	40 0 0
973/50	ಮಹಮ್ಮದ ಷಾ ಸಾಹೇಬ್ S/o ಅಬ್ದುಲ್ ಖಾದರ್ ಸಾಹೇಬ್, ಪೋಸ್ಟ್ ಬಾರಕೂರು	650 0 0
1005/50	ಶಾಂತಿರಾಜಯ್ಯ, N/o ಗುಮ್ಮಣ್ಣಯ್ಯ ಸುರಾಲ್ ಪೋಸ್ಟ್ ಕೊಕ್ಕರ್ಣೆ	50 0 0
10/51	ನಂದು, N/o ಬೆಳಿಯ ಪೂಲೆಯ, ಮಟಪಾಡಿ ಗ್ರಾಮ, ಪೋಸ್ಟ್ ಬ್ರಹ್ಮಾವರ	55 0 0
31/52	ಕೆ. ನರಸಿಂಹ ಸೆಟ್ಟಿ, S/o ಅಜ್ಜಿ ಮಹಾಲಿಂಗ ಸೆಟ್ಟಿ, ಕಾಳಾವರ ಗ್ರಾಮ, ಪೋಸ್ಟ್ ಕಾಳಾವರ	775 0 0

Brahmavar, Dt 3-6-1952 — **K. Bhujanga Hegde,** Agent.

ಮೂಲ್ಕಿ ಬೇಂಕ್.

ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Mootky, S. K

ಋತುಸ್ರಾವ ನಿಂತಿತು

ಕುಮಾರ್ ಪಿಲ್ಸ್‌ಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ. 3-8 ಸ್ಪೆಶಲ್ ರೂ. 5-8 ಅಧಿಕಾಧಿಕ ಸ್ಪೆಶಲ್ ರೂ. 8 [ವಿ. ಪಿ. ಖರ್ಚು ಪ್ರತ್ಯೇಕ]

Mrs. D. DEVEE, F R S (N. Y.)
Tollygunge CALCUTTA.
ಸ್ಟಾಕಿಸ್ಟರು ಶೆಣೈ ಕಂಪೆನಿ, ಮಂಗಳೂರು

ವಾರದ ಭವಿಷ್ಯ

ತಾರೀಕು 12-6-52 ರಿಂದ — ತಾರೀಕು 18-6-52 ವರೆಗೆ

ಮೇಷ—ನೆನೆದ ಕಾರ್ಯಗಳು ಸಿದ್ಧಿ ಸಲಿವೆ. ಪರಿಶ್ರಮಕ್ಕೆ ತಕ್ಕ ಫಲ ಲಭಿಸದಿದ್ದರೂ ಈ ವಾರದಲ್ಲಿ ನಿಮಗೆ ಹಣದ ಕೊರತೆ ಯುಂಟಾಗದು. ಗೃಹತಾಪತ್ರಯಗಳಿಂದಾಗಿ ಮನಸ್ಸಿಗೆ ನೆಮ್ಮದಿಯಿರದು, ವಿದ್ಯೋಪಜೀವಿಗಳಿಗೆ ಕಾಲವು ಸ್ವಲ್ಪ ಕಠಿಣವಾಗಿ ಕಾಣಿಸಬಹುದು. ವ್ಯಾಪಾರ ವೈದ್ಯಕೀಯಗಳಲ್ಲಿ ಫಲವು ಉತ್ತಮವಿರುವದು. ಶತ್ರುಜನರು ಶಾಂತರಾಗುವರು. ತಾ. 15, 16 ಹೊರತಾಗಿ ಉಳಿದದಿನಗಳು ಸುಖಲಾಭದಾಯಿಗಳಾಗಿವೆ.

ವೃಷಭ—ಮನಶ್ಚಾಂಚಲ್ಯವಧಿಕವಾದೀತು. ಆಪ್ತೇಷ್ಟರೊಡನೆ ಅವಿಶ್ವಾಸ ಹುಟ್ಟಲಿದೆ. ಕಿಂಕರ ವರ್ಗದವರು ಪ್ರತಿಕೂಲವಾಗಿ ವರ್ತಿಸುವರು. ಆಕಸ್ಮಿಕ ಪರ್ಯಾಟನಾದಿಗಳಿಂದ ನಷ್ಟಕಷ್ಟಗಳು ಹೆಚ್ಚಲಿವೆಯಾದರೂ ಖರ್ಚಿಗೆ ತಕ್ಕಷ್ಟು ಹಣವನ್ನು ಪರಾಪೇಕ್ಷೆಯಿಲ್ಲದೆ ಸ್ವಯಂ ದುಡಿಯುವಿರಿ. ಸಾಹಸಿಗಳಾದ ತರುಣ ಜನವೃಂದಕ್ಕೆ ಕಾಲವು ಅನುಕೂಲವಿರುವದು. ತಾ. 13, 14, 15, 16 ಈ ದಿನಗಳಲ್ಲಿ ನಿಮ್ಮ ಬಯಕೆಯು ಅನಾಯಾಸದಿಂದ ನೆರವೇರುವದು.

ಮಿಥುನ—ಇಷ್ಟಕ್ಕಿಂತ ದ್ವಿಗುಣವಾಗಿ ಅನಿಷ್ಟಗಳೊದಗುವ ಸಂಭವವಿದೆ. ವಿನಾ ಕಾರಣ [illegible]ಕ್ಕೊಳಪಡಬೇಕಾದೀತು. ಆಪ್ತೇಷ್ಟರಿಂದ ವಿರಹವುಂಟಾಗಲಿದೆ. ಸಂಸಾರದಲ್ಲಿ ಅನಾರೋಗ್ಯವು ಹೆಚ್ಚಲಿದೆ. ಕುಕರ್ಮಗಳೆಡೆಗೆ ಹೆಚ್ಚಾಗಿ ನಿಮ್ಮ ಮನಸ್ಸು ಓಡುವುದು. ಆದರೂ ಗುರುಗುರುಗಳು ಒಳ್ಳೇ ಸ್ಥಾನವನ್ನಾಶ್ರಯಿಸಿರುವುದರಿಂದ ವಾರಾಂತ್ಯದ 4 ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಕೈಗೂಡಲಿವೆ. ಮಿತ್ರಜನರ ಸಮಾಗಮವಾಗುವದು.

ಕರ್ಕಟ—ನಿಮ್ಮ ಪರಿಶ್ರಮಕ್ಕೆ ತಕ್ಕ ಫಲವನ್ನು ಕಾಣಲಾರಿರಿ [illegible] ಬಂಧುವರ್ಗದವರೂ ನಿಮ್ಮಿಂದ ದೂರವಾಗುವರು. ಕೃತ್ರಿಮ ಮಿತ್ರರ ಮೋಸದ ಜಾಲಕ್ಕೆ ಸಿಲುಗಿ ವ್ಯರ್ಥ ಕಷ್ಟನಷ್ಟಗಳನ್ನನುಭವಿಸುವಿರಿ. ಶ್ರಮಜೀವಿಗಳ ಮನೋ[illegible] ಸಿದ್ಧಿಸುವದು. ಪ್ರಬಲರಿಪ್ಪ ಶತ್ರುಗಳು ಕೂಡ ಶರಣುಬರುವರು. ತಾ. 12, 17, 18 ಜನ ಬೆಂಬಲ ಕಾರ್ಯಸಿದ್ಧಿ ಧನಲಾಭಗಳಿವೆ.

ಸಿಂಹ—ಧನಸ್ಥಾನಗತ ಶನೈಶ್ವರನೊಬ್ಬನನ್ನುಳಿದು ಇತರ ಎಲ್ಲಾ ಗ್ರಹರ ಅನುಗ್ರಹಕ್ಕೂ ಪಾತ್ರರಾಗಿರುವ ನಿಮಗೆ ಈ ವಾರವು ಅತ್ಯಂತ ಶುಭದಾಯಿಯಾಗಿದೆ. ನಿಮ್ಮ ಯಾವತ್ತೂ ಫಲಾಪೇಕ್ಷೆಗಳು ನಿರ್ವಿಘ್ನದಿಂದ ಅನಾಯಾಸವಾಗಿ ಫಲಿಸುವವು. ಸಾಮಾಜಿಕ ರಾಜಕೀಯ ಕ್ಷೇತ್ರದಲ್ಲಿ ಒಳ್ಳೇ ಕೀರ್ತಿಯನ್ನು ಸಂಪಾದಿಸುವಿರಿ. ಹಿಂದಿನ ಸಾಲ ಕಡಗಳಿಂದ ಮುಕ್ತರಾಗಿ ಸಾಕಷ್ಟು ಧನ ಸಂಗ್ರಹಿಸಿ ನಿಶ್ಚಿಂತೆಯಿಂದಿರುವಿರಿ. ವಾರಾದಿಯ 3 ದಿನಗಳಂತೂ ಸರ್ವೋತ್ಕೃಷ್ಟಗಳಿವೆ.

ಕನ್ಯಾ—ಇಂದೀಗ ನಿಮ್ಮ ಅದೃಷ್ಟವು ತೀರ ದುರ್ಬಲವಾಗಿರುವುದು. ತತ್ರಾಪಿ ಏಳೂವರೆ ಶನಿಯ ಕಾಟ. ಆದ್ದರಿಂದ ದೇಸಕ್ಕೆ ಸರ್ವಥಾ ಸುಖವಿರದು. ಮಾತ್ರವಲ್ಲ ಎಷ್ಟೇ ಹಣವನ್ನು ಕಷ್ಟಪಟ್ಟು ದುಡಿದರೂ ಸಾಲವಾದದೆ ಕಾಲ ಕಳೆಯಲಾಗದು. ಮಾತು ಮಾತಿಗೆ ಕಲಹವಾಗುವದು. ರಾಜಕೀಯ ಅಧಿಕಾರಿಗಳಿಂದ ಅನಿಷ್ಟವೊದಗಲಿದೆ. ಆದರೂ ನಿಮ್ಮ ಕರ್ಮಸ್ಥಾನಗತರಾದ ರವಿ ಬುಧರಿಂದಾಗಿ ತಾ. 13, 14 15, 16, ಈ ದಿನಗಳಲ್ಲಿ ಪರಿಶ್ರಮ ಸಾರ್ಥಕವಾದೀತು.

ತುಲಾ—ದು[illegible] ಸಂಗರಿಗಳು ಹಲವಾರು [illegible] ಬರಲಿಷ್ಟ ಲೇವಾದೇವಿ ಸಮಿತ್ರ [illegible] ಸೇವಕ ವರ್ಗದವರಿಗೂ ಶ್ರಮ ಜೀವಿಗಳಿಗೂ ಕಾಲವು ಸ್ವಲ್ಪ ಕಠಿಣವಾಗಿ ಕಾಣಬಹುದು. ಬಲ್ಲವರ ಮಾತು ಬೆಲಕ್ಕಿಂತ ಸವಿಯೆಂಬಂತೆ ನಿಮ್ಮ ಮಾತಿಗೆ ಮರುಳಾಗಿ ಹಲವರು ನಿಮ್ಮ ಅನುಯಾಯಿಗಳಾಗುವರು. ಹಣದ ಬಿಕ್ಕಟ್ಟು ಕಾಣಿಸದು. ಆರೋಗ್ಯದ ಮಟ್ಟಿಗೆ ಜಾಗ್ರತೆಯಿಂದಿರಿ. ತಾ. 15, 16, 17, 18, ಅನುಕೂಲ.

ವೃಶ್ಚಿಕ—ವಿರೋಧಿ ವರ್ಗದವರ ಪೀಡೆಯು ಅಸಹನೀಯವಾಗುವದು. ಚನ್ನಿಮಿತ್ತ ನಿಮ್ಮ ಮನೋರೋಗವು ಪ್ರಬಲವಾಗಲಿದೆ. ಕಫ ಮತ್ತು ಪಿತ್ತ ಪ್ರಕೋಪದಿಂದಾಗಿ ಆರೋಗ್ಯಕ್ಕೂ ಧಕ್ಕೆಯಿದೆ. ನೌಕರಿ ವ್ಯಾಪಾರಾದಿ ಉದ್ಯಮಗಳಲ್ಲಿ ಫಲಾಪ್ತಿಯು ತೃಪ್ತಿಕರವಿರುವದು. ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ಪರಾಭವಕ್ಕವಕಾಶವಿದೆ. ಅನಿರೀಕ್ಷಿತವಾಗಿ ಪರಧನ ಲಭಿಸುವ ಸಂಭವವಿದೆ. ತಾ. 12, 17, 18, ಈ ದಿನಗಳಲ್ಲಿ ಧನ ಸ್ಥಾನ ಮಾನಾದಿಗಳು ಲಭಿಸುವವು.

ಧನು—ಪ್ರಕೃತ ಹಲವು ಗ್ರಹರು ಒಮ್ಮೆಲೇ ನಿಮ್ಮ ಮೇಲೆ ವಕ್ರ ದೃಷ್ಟಿಯನ್ನು ಬೀರಿರುವುದರಿಂದ ಸಧ್ಯದ ದಿನಗಳು ಕೊಂಚ ಕಷ್ಟ ನಷ್ಟದಾಯಿಗಳಾಗಿ ಪರಿಣಮಿಸಲಿವೆ. ಕೈಗೊಂಡ ಕಾರ್ಯಗಳಲ್ಲಿ ನಿರೀಕ್ಷಿಸಿದ ಫಲ ಲಭಿಸದು. ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ ಕಾಣಿಸುವದು. ಆದರೆ ಆರೋಗ್ಯದ ಭಾಗ್ಯವು ಉತ್ತಮವಿದ್ದೀತು. ಹಣದ ಅಡಚಣೆಯು ಬಾಧಿಸದು. ದೇಹ ಮನಸ್ಸುಗಳಿಗೆ ಸುಖಶಾಂತಿಯಿದೆ. ತಾ. 13, 14, ಉತ್ತಮ.

ಮಕರ—ನಿಮ್ಮ ಪರಿಶ್ರಮವು ಸಫಲವಾಗುವದಾದರೂ ದಿನ ಯಾಪನೆಯು ಕಷ್ಟವಾಗಿ ಪರಿಣಮಿಸಲಿದೆ. ಆಯಕ್ಕಿಂತ ದ್ವಿಗುಣ ವ್ಯಯವಾಗುವುದರಿಂದ ಹೆದವ[illegible] ಕೂಡೆ ಸಾಲ ಕಡ ಮಾಡುವ ಪ್ರಸಂಗ ಬರಲಿದೆ ಗುರುಹಿರಿಯರಲ್ಲಿ ತಾತ್ಸಾರ ಧರ್ಮಕರ್ಮಗಳಲ್ಲಿ ಅನಾದರ ಭಾವವು ಹೆಚ್ಚುವದು. ವ್ಯಾಪಾರದಲ್ಲಿ ನಷ್ಟಕ್ಕವಕಾಶವಿದೆ. ಬಂಧು ಜನರ ವಿರಹ ತಾಪಕ್ಕೆ ಸಿಲುಕುವಿರಿ. ತಾ. 12, 15, 16, ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಕ್ಕವಕಾಶವಿರದು.

ಕುಂಭ—ಕಾಲವು ಅತೀವ ಪ್ರತಿಕೂಲ ಸ್ಥಿತಿಗೆ ಬಂದಿದೆ. ಯಾವ ಕಾರ್ಯವನ್ನು ಮಾಡಬೇಕೆಂದು ಬಯಸಿದರೂ ವಿಘ್ನಗಳು ಮುಂದಾಗಿ ಕಾಣಿಸುವವು. ಗೃಹತಾಪತ್ರಯಗಳಿಂದಾಗಿ ಕೆಲವೊಮ್ಮೆ ಸಂಸಾರದಲ್ಲಿ ವಿರಕ್ತಿಯು ತಲೆದೋರೀತು. ದೇಹಾಲಸ್ಯ ಮನೋರೋಗಗಳಿಂದ ಬಳಲುವಿರಿ, ಬಂಧು ಮಿತ್ರರ ನೆರವು ಲಭಿಸದಂತಾಗುವದು. ಆದರೂ ತಾ. 13, 14, 17, 18, ಈ ದಿನಗಳು ಇತರ ದಿನಗಳಷ್ಟು ಅನಿಷ್ಟಕಾರಿಗಳಾಗಲಾರವು.

ಮೀನ—ಶುಭ ಗ್ರಹರ ಪೂರ್ಣಾನುಗ್ರಹವು ನಿಮಗೀವಾರದಲ್ಲಿ ಲಭಿಸಿದೆ. ಉದ್ಯೋಗದಲ್ಲಿ ಪ್ರಗತಿಯುಂಟಾಗುವದು. ವಿದ್ಯೋಪಜೀವಿಗಳಿಗೆ ಸಂಕಲ್ಪದಂತೆ ಬಯಕೆಗಳು ನೆರವೇರುವವು. ಸದುದ್ಯಮಗಳಲ್ಲಿ ಒಳ್ಳೆಯ ಫಲ ಲಾಭವಿದೆ. ಶತ್ರು ಜನರು ನಿಮ್ಮ ಧನಮಾನಗಳ ಅಪಹಾರಕ್ಕೆ ವಿಶೇಷವಾಗಿ ಯತ್ನಿಸುವರಾದರೂ ದೈವಬಲ ಸಂಪನ್ನರಾದ ನಿಮಗೇನೂ ಬಾಧೆಯುಂಟಾಗದು. ತಾ. 12, 15, 16, ಈ ದಿನಗಳಲ್ಲಿ ಇಷ್ಟಾರ್ಥವನ್ನು ಅಲ್ಪಾಯಾಸದಿಂದ ಪಡೆವಿರಿ.

ಲಕ್ಷ್ಮಿ ಸಂತಾಲುಂ ಮಾತ್ರೆ

ಇದರ ಉಪಯೋಗದಿಂದ [illegible] ಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರದ ಕ್ಷಯ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅ[illegible] ಕೆಂಪು ಈ ವರ್ಣಗಳಲ್ಲಿ ಕೀವು ಹೋಗ[illegible]ವು, ತೊಡೆ ಸಂದಿನಲ್ಲಿ ಗಂಟೆ ಬರುವುದು, ಕಾಲುಗಂಟೆ ವೇದನೆ, [illegible] ಬರುವದು, ಶರೀರದಲ್ಲಿ [illegible] ದ್ರಿಯ, ಸ್ತ್ರೀಯರ ಬಿಳಿ [illegible] ಮಾತ್ರೆಯಾಗಿ ಗುಣ ಹೊಂದುವದು. ಇತರರ ಈಗಿನ [illegible] ಕಂಡುಬಂದರೆ ಈ ಮಾತ್ರೆ [illegible] ಮಾತ್ರೆ ಸೇವಿಸಿ ಹಾಲು ಕುಡಿದರೆ ಸುಖವಾಗಿ ನಿದ್ರೆ ಬಂದು ಸುಖವಿರೇಚನೆಯಾಗಿ ದೇಹದ ಸುಸ್ತು ಹೋಗುವದು.

ಶೀಸೆ 1ಕ್ಕೆ ರೂ. [illegible]-0-0

ಏಜಂಟ್:

ಷಾ[illegible]. ಕಂಪೆನಿ, ಮಂಗಳೂರು.

ಸಾರ್ವಜನಿಕರ ಉಪಯೋಗಕ್ಕಾಗಿ ಅಮೂಲ್ಯ ರತ್ನ ಪ್ರಯೋಗ!

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

[illegible] ದಿನದ ಲೇಹ್ಯ ರೂ [illegible], [illegible] ದಿನದ ಲೇಹ್ಯ ರೂ [illegible]

(ಪೋಸ್ಟೇಜು ಮಾಫ಼್)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅರಬಳೆ ನರಸಿಂಹ ಪಂಡಿತರ ಮನೆತನ ಎ. ರಾಮಸ್ವಾಮಿ ಅಯ್ಯರ್ ರವರ

ಸಂತಾನ ಸಿಂ[illegible]

ಒಡನೆ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಇಂಥವರಿಗೂ ಮುಟ್ಟು ಬಹಿಷ್ಠ ಸಂಬಂಧದ ಹೊಟ್ಟೆನೋವಿನ ಜೊತೆಗೆ ತಲೆನೋವು, ಸೊಂಟ ಸೆಳೆತ, ಬೆನ್ನು ನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ.

[illegible] ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ೧ ಸೆಟ್ ಅನುಪಾನ ಪತ್ರಿಕೆ ಪ್ರಕಾರ ಇಟ್ಟರೂ ಸೇವಿಸಿರಿ ಸಾಕು. ಬಹುದಿವಸ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾ ಪತ್ರಗಳನ್ನು ಪಡೆದಿದೆ.

ಕ್ರಯ: ೧ ಸೆಟ್ 5 ರೂ. ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1 ರೂ ವಿ. ಪಿ. ಇಲ್ಲ ಕ್ಯಾಟಲಾಗ್ ಉಚಿತ 6 ರೂ ಮನಿಆರ್ಡರ್ ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ: ಎ. ರಾಮಸ್ವಾಮಿ ಅಯ್ಯರ್ ಸನ್, (ಎ. ಆರ್. ವಿಶ್ವೇಶ್ವರಯ್ಯ)

Prop: ಸಂತಾನ ಸಿಂಧೂರ, 628 ಚಾಮರಾಜ ರೋಡ್ ಕ್ರಾಸ್,

(ಸೀತಾ ವಿಲಾಸ ಛತ್ರದ ಹಿಂದೆ) ಮೈಸೂರು.

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ

ತಿಳಿಗನ್ನಡದಲ್ಲಿ ಅನುಭವಸ್ಥರಿಂದ ಬರೆಯಲ್ಪಟ್ಟ ಇಂತಹ ಅನುವಾದ 'ಗೀತೆಯ ಕೈಗನ್ನಡಿ'ಯನ್ನು ಬಿಟ್ಟರೆ ಇನ್ನೊಂದಿಲ್ಲ. 'ಗೀತೆಯ ಕೈಗನ್ನಡಿ"ಯು ಹೊಸಕೆರೆ ಶ್ರೀ ಚಿದಂಬರಯ್ಯನವರ ಸರಳ ಭಾಷಾಂತರ. ಅತೀ ಅಗ್ಗವಾದ ಮತ್ತು ಪ್ರತಿಮನೆಯಲ್ಲೂ ಇರಬೇಕಾದ ಗೀತಾಪುಸ್ತಕ

ಬೆಲೆ: ಬರೇ 0-12-0 ಮಾತ್ರ.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ

ನವಯುಗ ಪ್ರೆಸ್, ಉಡುಪಿ

ಇವರಿಗೆ ಬರೆಯಿರಿ.

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ ಶ್ರೀನಿವಾಸರಾವ್ ಕೃತ

ಆಂಗ್ಲ ಸ್ವಯಂಬೋಧಿನಿ.

ಬೆಲೆ ರೂ- 1-8-0, ವಿ- ಪಿ. ದ್ವಾರ ರೂ- 2-0-0

ಡಾ| ಕೊರಡ್ಕಲ್ ವೆಂಕಟರಾವ್ ಕೃತ

ಮನೆ ಮದ್ದು

ಸುಲಭ ಚಿಕಿತ್ಸೆಗಳು.

ಬೆಲೆ ರೂ- 2-0-0, ವಿ- ಪಿ. ದ್ವಾರ ರೂ- 2-10-0

ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published by K. H. Shetty at the Navayuga Press, Udipi, S. India

Regd.No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪಿತ
31 ನೆಯ ವರ್ಷ

19-6-1952

Founder: Sri A. B. Shetty
Minister for Medical & Public Health

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಸಾರ್ವಜನಿಕ
ಆರೋಗ್ಯ ಮಂತ್ರಿ
ಶ್ರೀ.ಎ.ಬಿ.ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಪೋಸ್ಟ್ ಬಾಕ್ಸ್
ನಂಬ್ರ 22
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ. 5--12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೪೧

NAVAYUGA WEEKLY Post Box No. 22 UDIPI. Vol 31 No. 41

ಮಧುಪರ್ಕ

ಸುಪ್ರಸಿದ್ಧ ಗ್ರೀಕ್ ತತ್ವಜ್ಞಾನಿ ಸಾಕ್ರೆಟೀಸನನ್ನು ಒಮ್ಮೆ ತುಂಬಿದ ಸಭೆಯಲ್ಲಿ ಚೆನ್ನಾಗಿ ಬೈದು, ಭಂಗಿಸಿದರು—ಎರಡೂ ಕಿವಿಗಳಲ್ಲಿ ಬಿಸಿ ಬಿಸಿಯಾಗಿ ಏಟು ಕೊಟ್ಟು, ಅವಮಾನ ಮಾಡಿದರು!

ಸಾಕ್ರೆಟೀಸ ತನ್ನ ಉದ್ವೇಗವನ್ನು ಸಂಯಮದಿಂದ ನಿಯಂತ್ರಿಸಿಕೊಂಡು, ನಿಶ್ಚಲನಾಗಿ ಕುಳಿತ. ಇದನ್ನು ಕಂಡ ಅವನ ಪರಮಸ್ನೇಹಿತ ಕೇಳಿದ—

"ಈ ರೀತಿ ಅಪಮಾನವಾಗುವಾಗ ಹೀಗೇಕೆ ಮೌನ?"

"ನೀನೇನು ಹೇಳುವುದು?— ಒಂದು ನಾಯಿ ನನ್ನನ್ನು ಕಂಡು ಬಗುಳಿದರೆ, ಅದಕ್ಕೆ ನಾನು ಉತ್ತರಿಸಲೆ? ಅದು ಓಡಿಬಂದು ಕಾಲಿಗೆ ಕಚ್ಚಿದರೆ, ನಾನು ಮೆಜಿಸ್ಟ್ರೇಟರಿದ್ದಲ್ಲಿಗೆ ದೂರು ಕೊಂಡುಹೋಗಲೆ?"

—ಇದು ಮಹಾ ದಾರ್ಶನಿಕನ ಮೌನಕ್ಕೆ ವಿವರಣೆ. ಸ್ವನಿಯಂತ್ರಣದ ಅಗತ್ಯಕ್ಕೊಂದು ಜೀವಂತ ಉದಾಹರಣೆ.

ಸ್ವನಿಯಂತ್ರಣದ ಅಗತ್ಯ

ಮನುಷ್ಯ ತನ್ನ ಸಂಬಂಧದಲ್ಲಿ ಮೋಸಕ್ಕೊಳಗಾಗುವುದೇ ಹೆಚ್ಚು. ಸ್ವಂತ ಗುಣಲಕ್ಷಣಗಳ ಪರಿಚಯವಿರುವ ಜನರು ಬಹಳ ಕಮ್ಮಿ. ಹೆಚ್ಚಿನವರು ತಾವು ಸದ್ಗುಣ ಸಂಪನ್ನರೆಂದೂ, ನಿರ್ದೋಷಿಗಳೆಂದೂ, ಸತ್ಯ ನಿಷ್ಠರೆಂದೂ, ಬುದ್ಧಿವಂತರೆಂದೂ, ನ್ಯಾಯ ಪ್ರಿಯರೆಂದೂ ತಿಳಿದುಕೊಳ್ಳುವರು. ಇತರರಲ್ಲಿ ತಮ್ಮಲ್ಲಿರುವ ಒಂದೊಂದೂ ಶ್ರೇಷ್ಠಗುಣಗಳಿಲ್ಲವೆಂದು ಹೇಳುವವರು. ಇದು ಎಂತಹ ಕಲ್ಪನೆ!

ಸ್ವಂತ ಸದ್ಗುಣಗಳು ತಾವಾಗಿ ಬೆಳಕಿಗೆ ಬರುತ್ತವೆ—ಅವುಗಳಿಗೆ ಯಾವ ಬಂಧನವೂ ಇಲ್ಲ. ಅವುಗಳ ಸ್ಪಷ್ಟವಾದ ಜ್ಞಾನ ನಮಗಿಲ್ಲದಿದ್ದರೂ ನಡೆಯುತ್ತದೆ. ಆದರೆ ನಮ್ಮ ದುರ್ಗುಣಗಳ ಕಲ್ಪನೆ ನಮಗಿಲ್ಲದಿದ್ದರೆ—ಅವುಗಳ ಪ್ರಚಾರವೇನೋ ಅಗತ್ಯವಾಗಿ ಆಗುತ್ತದೆ; ಜೊತೆಗೆ ನಮಗೆ ನಿಂದೆಯನ್ನೂ, ಅಪಮಾನವನ್ನೂ ಅವು ಪ್ರತಿಫಲವಾಗಿ ತರುತ್ತವೆ. ಎಂತಲೇ ನಮ್ಮ ಉತ್ತಮ ಗುಣಗಳ ಮತ್ತು ಉಚ್ಚ ನಡವಳಿಕೆಗಳ ಕುರಿತು ಅಭಿಮಾನ ಪಡುವುದಕ್ಕೆ ಮುಂಚಿತವಾಗಿ ನಮ್ಮ ಅಪೂರ್ಣತೆಯ ಕಡೆಗೂ ಅಧಿಕ ಗಮನವೀಯುವುದು ಅಗತ್ಯ.

ಬಹಳ ಸಣ್ಣದೆಂದು ಉಪೇಕ್ಷಿಸಬಹುದಾದ ಪ್ರಮಾದಗಳಿಂದಲೇ ವ್ಯಕ್ತಿತ್ವದ ವಿನಾಶವಾಗುತ್ತದೆಂಬುದನ್ನು ಮರೆಯಬಾರದು. ನಾವು ಎಷ್ಟೇ ಸಣ್ಣ ತಪ್ಪು ಮಾಡಿದರೂ, ಅದರ ಪರಿಣಾಮಕ್ಕೆ ಭಾಗಿಯಾಗಲೇ ಬೇಕು. ಉತ್ತುಂಗವಾದ ಚಿತ್ರಪಟದ ಮೇಲೆ ಒಂದು ಬೊಟ್ಟು ಕಪ್ಪು ಬಿದ್ದರೆ—ಚಿತ್ರದ ಸೊಗಸೆಲ್ಲಿ ಉಳಿಯುವುದು?

ಇತರರ ಸದ್ಗುಣದ ನಡುವೆ ನಮ್ಮ ಸಣ್ಣತನ ಮುಚ್ಚಿಕೊಳ್ಳುವುದು ಎಂಬ ಭಾವನೆಯೂ ಮೂರ್ಖತನದ ಪ್ರತೀಕ. ಚೀಣಬಲನ ಕತೆಯೊಂದನ್ನು ಕೇಳಿಲ್ಲವೆ—ನಗರದ ಪ್ರತಿಯೊಬ್ಬನೂ ಒಂದು ಕೊಡ ಹಾಲನ್ನು ಗುಟ್ಟಿನಲ್ಲಿ ತಂದು ವಸ್ತ್ರ ಮುಚ್ಚಿದ ಕಡಾಯಿಯೊಳಗೆ ಸುರಿಯಬೇಕೆಂದು ಡಂಗುರ ಹೊಡೆದರು. ಪ್ರತಿಯೊಬ್ಬನೂ ಯೋಚಿಸಿದನು: "ನಾನು ಒಂದು ಕೊಡ ಹಾಲನ್ನೇಕೆ ಸುರುವಲಿ? ನೀರನ್ನೇ ಕೊಂಡುಹೋದರೆ, ಉಳಿದೆಲ್ಲರೂ ಸುರಿದ ಹಾಲಿನಲ್ಲಿ ಅದರ ಪತ್ತೆಯೇ ಗೊತ್ತಾಗದು!" ಪರಿಣಾಮ, ಕಡಾಯಿ ತುಂಬ ನೀರೇ ನೀರು—ತೊಂತು, ಹೆಸರಿಗೆ ಮಾತ್ರವಾದರೂ ಒಂದು ಬೊಟ್ಟು ಹಾಲು ಬೀಳಲಿಲ್ಲ!

ಇದು ಜನರ ಪ್ರಾಮಾಣಿಕತೆಯ ಪರೀಕ್ಷೆ ನಡೆಸಿದ ಒಂದು ಪ್ರಹಸನ. ಇಂದಿಗೂ ನಮ್ಮ ಜನರ ನಡವಳಿಕೆ ಹೀಗೆಯೇ ಇದೆ. ತಮ್ಮ ಸ್ವಂತ ಚರಿತ್ರವನ್ನು ಉಜ್ವಲಗೊಳಿಸುವುದರ ಕಡೆಗಿರುವ ಅಲಕ್ಷ್ಯ ಮತ್ತು ಉದಾಸೀನತೆಗಳೇ ನಮ್ಮ ಇಂದಿನ ದುರ್ದೆಶೆಗೆ ಹೇತು. ಆದುದರಿಂದ ದೈನಂದಿನ ಕಾರ್ಯದಲ್ಲಿ ನಮ್ಮ ಮೇಲೆಯೇ ನಿಯಂತ್ರಣವನ್ನು ಹೇರಿ, ಶಿಸ್ತುಬದ್ಧವಾಗಿ ವ್ಯವಹಾರವನ್ನು ಸಾಗಿಸುವುದು ಇಷ್ಟವಾಗಿದೆ. ಅಂಗಡಿಕಾರನು ತನ್ನ ಲೆಕ್ಕ ಪತ್ರಗಳನ್ನು ಪೈಗೆಪೈ ಸರಿಯಾಗಿ ಇಟ್ಟುಕೊಳ್ಳುವನಲ್ಲವೆ? ಇದರಂತೆ ಮನಸ್ವಿಯಾದವನು ತನ್ನ ನಿಮಿಷ ನಿಮಿಷದ ಕಾರ್ಯಕಲಾಪಗಳನ್ನು ಸುನಿಯಂತ್ರಿತ ರೂಪದಿಂದ ವ್ಯವಸ್ಥಬದ್ಧವಾಗಿ ಜೋಡಿಸಿಕೊಂಡು ಚಾರಿತ್ರ್ಯ ಶುದ್ಧಿಗೆ ಪ್ರಯತ್ನಿಸಬೇಕು.

ಪರ ಛಿದ್ರಾನ್ವೇಷಿಯಾಗುವುದಕ್ಕಿಂತ ಸ್ವಂತ ಲೋಪದೋಷಗಳನ್ನೆ ಅರಿತುಕೊಳ್ಳುವುದು ಮನುಷ್ಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲಿಕ್ಕೆ ಬಹಳ ಹಿತಕರವಾದ ಮಾರ್ಗ. ತನ್ನ ಸ್ವಭಾವ, ದೃಷ್ಟಿಕೋಣ, ವಿಚಾರ—ವ್ಯವಹಾರ ಇವುಗಳ ಸರಿಯಾದ ಪರೀಕ್ಷೆ ನಡೆಸುವುದರಿಂದ [illegible]ಗೋಚರಕ್ಕೇ ಬಾರದ ಎಷ್ಟೋ ಅಜ್ಞಾತ ತಪ್ಪುಗಳು, ಮತ್ತು ವಿಫಲತೆಯ ರಹಸ್ಯಗಳು ತಿಳಿದುಬರುವುವು. ನಮ್ಮ ಭಾವೀ ಜೀವನದ ಸುಗಮತೆಗೆ ಈ ಜ್ಞಾನವು ಪೋಷಕನಾಗುತ್ತದೆ. ಹೊರಗೆ, ಲೋಕದ ಜನರಲ್ಲಿ, ನಮಗೆ ಕಂಡುಬರುವ ಅನೇಕ ವಿಕಾರಗಳ ಮೂಲವು ನಮ್ಮ ವ್ಯಕ್ತಿತ್ವದಲ್ಲಿಯೇ ಅಂತರ್ಗತವಿದೆ—ಎಂಬ ತಿಳುವಳಿಕೆ ಆಗ ನಮಗಾಗುವುದು.

ನಮ್ಮ ಗುಣನಡತೆಗಳನ್ನು ತಿದ್ದಿಕೊಳ್ಳಲು ನಾವಾಗಿಯೇ ಪ್ರಯತ್ನಿಸಬೇಕು—ಇತರರ ಬುದ್ಧಿವಾದಗಳೂ ಉಪದೇಶಗಳೂ ನಮ್ಮ ಅಂತಃಕರಣವನ್ನು ಕೆರಳಿಸಿ, ಈ ಸತ್ಕಾರ್ಯಕ್ಕೆ ಪ್ರೇರಣೆಯನ್ನಷ್ಟೆ ಒದಗಿಸಬಲ್ಲವು—ಹೊರತು ಅದಕ್ಕಿಂತ ಮಿಗಿಲಾಗಿ, ವ್ಯಕ್ತಿತ್ವವನ್ನು ರೂಪಿಸುವ ಕಾರ್ಯ ಇನ್ನೊಬ್ಬರಿಂದಾಗದು. ನಾವು ಒಳ್ಳೆಯವರಾದರೆ ಲೋಕವೇ ನಮಗೆ ಒಳ್ಳೆಯದೆಂದು ತೋರುವುದು. ನಮ್ಮಲ್ಲಿ ಮತ್ತ ಭಾವನೆಗಳಿದ್ದರೆ—ಹೊರಗಿನ ಜಗತ್ತಿಗೂ ನಮ್ಮ ವ್ಯಕ್ತಿತ್ವಕ್ಕೂ ನಡುವೆ ಘರ್ಷಣೆಯೇಳುವುದು ಅನಿವಾರ್ಯ. ತನ್ನನ್ನು ತಾನು ಅರಿತುಕೊಂಡು, ಆತ್ಮೋನ್ನತಿಯನ್ನು ಸಾಧಿಸುವುದೇ ಉತ್ಸರ್ಗ: ಉತ್ಕರ್ಷದ ಮೊದಲಿನ ಮೆಟ್ಟಲೇ ಸ್ವನಿಯಂತ್ರಣ.

ಸರಕಾರದೊಡನಿರುವ ನಮ್ಮ ಸಂಬಂಧ ಈ ರೀತಿ ಹಾರ್ದಿಕವಾಗಬೇಕು. ಸರಕಾರದ ಕಾನೂನು ಕಾಯಿದೆಗಳನ್ನು ಸ್ವಚ್ಛಂದವಾಗಿ ಭಂಗಿಸುವುದಕ್ಕೆ ಮುಂಚೆ, ನಾವು ಏಕಾಗಿ ಇಂಥ ಹೇಸಿ ಕೆಲಸಕ್ಕೆ ಉದ್ಯುಕ್ತರಾಗುತ್ತೇವೆ ಎಂಬುದನ್ನು ವಿಚಾರಿಸಿರಿ. ಕಳ್ಳ ಪೇಟೆ ಮತ್ತು ಮೋಸಗಾರಿಕೆಗಳಿಗೆ ಕೈಹಾಕುವ ಮೊದಲು, ನಾವು ಮಾಡುತ್ತಿರುವುದು ಸರಿಯೇ ಎಂದು ವಿವೇಚಿಸುವಷ್ಟು ಸಹನೆ ನಮ್ಮಲ್ಲಿರಲಿ! ಸುಳ್ಳು ವ್ಯಾಪಾರ ವಂಚನೆ ಮತ್ತು ಅನ್ಯಾಯಗಳಿಗೆ ಶಾಶ್ವತ ಸುಖ ತರುವ ಶಕ್ತಿಯೇ ಇಲ್ಲ—ಅವುಗಳು ತರಬಲ್ಲುದು ಅನಂತರದ ದುಃಖವನ್ನು ಮಾತ್ರ ಎಂಬುದನ್ನು ಮರೆಯುವುದು ಬೇಡ.

ನಮ್ಮ ವೃತ್ತಿ ಚಾಂಚಲ್ಯದ ಮೇಲೆ ಸಂಪೂರ್ಣ ನಿಯಂತ್ರಣವನ್ನಿಟ್ಟುಕೊಂಡು ವರ್ತಿಸಿದರೆ, ಬಾಳ್ವೆಯಲ್ಲಿ ಎದುರಿಸಬೇಕಾಗುವ ಎಷ್ಟೋ ತೊಂದರೆ ಮತ್ತು ತೊಡರುಗಳನ್ನು ನಿರಪಾಯವಾಗಿ ಗೆದ್ದು ಬದುಕುವೆವು.

—ಓಂತ್ನ ಶ.

ZANDU Mahayogaraja Guggula

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ 3/- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ.
2 ಶ್ರೀ. ವಿ. ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎಸ್. ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರ ಶರತ್ತುಗಳಿಗೆ ಬರೆಯಿರಿ.

DAMODAR & CO.,
Nainiappa Naicken Street, Park Town-**MADRAS** 3.

Read
'NAVAYUGA' Weekly
Voice of the people Excellent Media and Reading Value.

ಭಾರತದ ಕೃಷಿ ಸಮಸ್ಯೆಯ ತುಲನಾತ್ಮಕ ವಿಮರ್ಶೆ

ರಾಷ್ಟ್ರಕೂಟದ ಒಟ್ಟು ಉತ್ಪಾದನೆಯಲ್ಲಿ ನಮ್ಮ ರೈತರ ಸ್ಥಾನ.

ರಾಷ್ಟ್ರ ಕೂಟದ ಎಲ್ಲ ಸದಸ್ಯ ರಾಷ್ಟ್ರಗಳ ಸಮಸ್ಯೆಯು ಒಂದೇ ತೆರನಾಗಿಲ್ಲವಾದರೂ ಭಾರತ, ಪಾಕಿಸ್ತಾನ ಮತ್ತು ಸಿಲೋನುಗಳ ಕೃಷಿ ಸಮಸ್ಯೆ ಒಂದನ್ನೊಂದು ಹೋಲುತ್ತವೆ. ಭಾರತದ ರಾಷ್ಟ್ರೀಯ ವರಮಾನದಲ್ಲಿ ಸೇಕಡಾ ೫೦ಕ್ಕೂ ಹೆಚ್ಚು ಕೃಷಿಯಿಂದ ಬರುತ್ತದೆ, ಪಾಕಿಸ್ತಾನದಲ್ಲಿ ಸೇಕಡಾ ೬೬ ಮತ್ತು ಸಿಲೋನಿನಲ್ಲಿ ಸೇಕಡಾ ೬೦ ಕೃಷಿಯ ವರಮಾನವಾಗಿದೆ. ಕಳೆದ ಒಂದು ದಶಕದ ಅವಧಿಯಲ್ಲಿ ಮೊದಲಿನ ಐದು ವರ್ಷಗಳು ಯುದ್ಧವು ಪರಿಸ್ಥಿತಿಯಲ್ಲಿ ಮತ್ತು ಆ ಬಳಿಕದ ಐದು ವರ್ಷಗಳು ಯುದ್ಧ ಪರಿಣಾಮದ ಬೇಗೆಗೀಡಾಗಿ ಕಳೆದುವು. ಹೀಗಿದ್ದರೂ ಯುದ್ಧವು ಕೃಷಿಯ ಬೆಳವಣಿಗೆಗೆ ವಿನಾಶಕರವಾಗಿತ್ತು ಎನ್ನಲಾರೆವು.

ಕೃಷಿ ಕ್ಷೇತ್ರದ ಹೆಚ್ಚಳ

ಯುದ್ಧವು ಆವಾಡುಗೊಳಿಸುವ ಪ್ರವೃತ್ತಿಯನ್ನು ನಿರುತ್ಸಾಹಗೊಳಿಸಿದುದಲ್ಲದೆ ದೇಶದೊಳಗಿನ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಬೆಂಬಲ ಕೊಟ್ಟಿತು. ಯುದ್ಧಕಾಲದಲ್ಲಿ ತೊಡಗಿದ "ಅಧಿಕ ಆಹಾರ ಬೆಳೆಯಿರಿ" ಚಳುವಳಿಯು ಈಗಲೂ ಪ್ರಾಶಸ್ತ್ಯ ಪಡೆದಿದೆ. ಕೃಷಿ ಕ್ಷೇತ್ರದಲ್ಲಿ ರಾಷ್ಟ್ರಕೂಟದ ಒಟ್ಟು ಉತ್ಪಾದನೆಯು ಯುದ್ಧಪೂರ್ವದ ಮಟ್ಟಕ್ಕಿಂತಲೂ ಹೆಚ್ಚಿದೆ—ಮತ್ತು ನಿರ್ಯಾತ ಪ್ರಮಾಣವೂ ಅಧಿಕವಾಗಿದೆ. ಬ್ರಿಟನು ಮತ್ತು ದಕ್ಷಿಣ ರೊಡೇಶಿಯಾಗಳಲ್ಲಿ ಕೃಷಿ ಉತ್ಪಾದನಾ ಸೂಚಿಯು ಯುದ್ಧಾನಂತರವೂ ಅತ್ಯಧಿಕ ಅಭಿವೃದ್ಧಿಯನ್ನು ತೋರಿಸಿದರೆ—ಕೆನಡಾವು ಯುದ್ಧ ಕಾಲದ ಉತ್ಪಾದನೆಯ ಪ್ರಮಾಣವನ್ನು ಕಾಯ್ದುಕೊಳ್ಳಲು ಸಮರ್ಥವಾಗಿದೆ. ಯುದ್ಧ ಕಾಲದಲ್ಲಿ ಆಸ್ಟ್ರೇಲಿಯಾದ ಕೃಷಿ ಉತ್ಪಾದನೆಯು ತಗ್ಗಿಕೊಂಡರೂ ಈಗದು ಮೊದಲಿನ ಸ್ಥಿತಿಗೇ ಬಂದಿದೆ. ಉಳಿದ ದೇಶಗಳಲ್ಲಿಯೂ ಕೃಷಿಯ ಉತ್ಪಾದನೆಯು ತೃಪ್ತಿಕರವಾಗಿ ಹೆಚ್ಚುತ್ತಿದೆ. ಆದರೆ ಭಾರತವೊಂದೇ ಇದಕ್ಕೆ ಅಪವಾದ—ಇಲ್ಲಿ ಒಟ್ಟಾರೆ ಕೃಷಿಯ ಉತ್ಪಾದನೆಯು ಕಡಿಮೆಯಾಗಿದೆ.

ಉತ್ಪಾದನೆಯಲ್ಲಿ ಮುನ್ನಡೆ

ಭಾರತವನ್ನುಳಿದು ಇತರ ಸದಸ್ಯ ರಾಷ್ಟ್ರಗಳ ಒಟ್ಟು ಉತ್ಪಾದನೆಯನ್ನು ಪರಿಶೀಲಿಸಿದರೆ, ಯುದ್ಧಾನಂತರ ಸಂಯುಕ್ತ ರಾಜ್ಯ ಅಮೇರಿಕವು ಸಾಧಿಸಿದಷ್ಟು ಮಟ್ಟಿನ (೪೦%) ಅಭಿವೃದ್ಧಿಯನ್ನು ದಕ್ಕಿಸಿಕೊಳ್ಳುವುದು ಸಾಧ್ಯವಾಗದಿದ್ದರೂ ಲೋಕದ ಇತರ ದೇಶಗಳೊಡನೆ ಸರಿಸಾಟಿಯಾಗಿ ರಾಷ್ಟ್ರಕೂಟವೂ ತನ್ನ ಕೃಷಿ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಮರ್ಥವಾಗಿದೆ. ಈ ಅಧಿಕ ಬೆಳೆಯು ದವಸಧಾನ್ಯಗಳು, ಸಕ್ಕರೆ, ಚಾ ಮತ್ತು ರಬ್ಬರುಗಳ [illegible]. ಆದರೆ ಇದರ ಜೊತೆಗೇ ಹತ್ತಿ, ಹೊಗೆಸೊಪ್ಪು ಮತ್ತು ಬೆಣ್ಣೆಯ ಉತ್ಪಾದನೆ ತಗ್ಗಿತೆಂಬುದನ್ನು ಮರೆಯುವಂತಿಲ್ಲ. ಇವುಗಳ ಉತ್ಪಾದನೆಯು ಯುದ್ಧ ಸಮಯದ ಮಟ್ಟವನ್ನು ಮುಟ್ಟಲು ಇನ್ನೂ ಸ್ವಲ್ಪ ಅವಧಿ ಬೇಕಾದೀತು. ಹೇಗೂ ಇರಲಿ—ಒಟ್ಟಾರೆ ಉತ್ಪಾದನೆಯನ್ನು ಲೆಕ್ಕಿಸಿದರೆ— ಲೋಕದ ನಡೆಯೊಂದಿಗೆ ರಾಷ್ಟ್ರಕೂಟವು ಹಿಂದುಳಿದಿಲ್ಲವೆನ್ನಲಡ್ಡಿಯಿಲ್ಲ.

ಪರಿಸ್ಥಿತಿಯ ಈ ವಿಪರ್ಯಾಸವು ಒಂದೊಂದು ದೇಶದಲ್ಲಿ ಒಂದೊಂದು ಕಾರಣಕ್ಕೆ ಒಳಗಾಗಿದೆ. ಉಷ್ಣ ವಲಯದ ದೇಶಗಳಲ್ಲಿ ಹವಾಮಾನದ ಸ್ಥಿತಿಗತಿಯನ್ನೇ ಕೃಷಿಯು ಅತ್ಯಧಿಕ ಅವಲಂಬಿಸಿಕೊಂಡಿದೆ. ಅದುದರಿಂದ ಭೂವ್ಯವಸ್ಥದ ಸಂಪೂರ್ಣ ಉಪಯೋಗವನ್ನು ಪಡೆಯಲು ತಕ್ಕುದಾದ ಕ್ರಮಗಳನ್ನು ಕೈಗೊಳ್ಳುವುದು ಉಷ್ಣ ವಲಯದಲ್ಲಿ ಅವಶ್ಯವಾಗಿದೆ. ನೀರಿನ ಪೂರೈಕೆಯಲ್ಲಿಯೂ ವ್ಯವಸ್ಥಾ ಬದ್ಧವಾದ ಪದ್ಧತಿಯನ್ನು ಅನುಸರಿಸುವುದು ಇಷ್ಟವಾಗಿದೆ. ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ಈ ಎರಡು ವಿಷಯಗಳಿಗೇನೇ ಪ್ರಥಮ ಪ್ರಾಶಸ್ತ್ಯವನ್ನು ಕೊಡಬೇಕಾದುದು ನ್ಯಾಯ.

ಏರುತ್ತಿರುವ ಜನಸಂಖ್ಯೆ

ಇದರೊಂದಿಗೆ, ಬೆಳೆಯುತ್ತಿರುವ ಜನಸಂಖ್ಯೆಯ ಸಮಸ್ಯೆಯೂ ಕಾಡುತ್ತಿದೆ. ಇದರ ಅರ್ಥ ಉಣ್ಣಲು ಹೆಚ್ಚು ಅನ್ನ ಬೇಕು ಎಂದು ತಾನೆ! ತಕ್ಕ ಅನುಕೂಲತೆಗಳಿಲ್ಲದೆಯೋ—ಆಲಸ್ಯಕ್ಕೊಳಗಾಗಿಯೋ ಆಫ್ರಿಕಾ ಮತ್ತು ಆಗ್ನೇಯ ಏಶಿಯಾದ ರಾಷ್ಟ್ರಗಳು ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಅಸಮರ್ಥವಾಗಿ ಉಳಿತಿವೆ. ವಿದೇಶಗಳ ಆಯಾತದ ಮೇಲೆಯೇ ಇವು ನ್ಯಧಾವಲಂಬಿಯಾಗಿರುವುದರಿಂದ, ಆರ್ಥಿಕ ಸ್ಥಿತಿಯೂ ಬಹಳ ಮಟ್ಟಿಗೆ ಕೆಟ್ಟು ಹೋಗಿದೆ. ಯಾಂತ್ರಿಕ ಸಲಕರಣೆಯನ್ನು ಮತ್ತು ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸಿ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ನೋಡಿದ ಸ್ಥಳಗಳಲ್ಲಿಯೂ—ಹಳ್ಳಿಯ ಶ್ರಮಜೀವಿಗಳ ಸಮಸ್ಯೆಯನ್ನು ಸಮಾಧಾನಕರವಾಗಿ ಬಿಡಿಸುವುದಾಗಲಿಲ್ಲ.

ಇಂಥದರಲ್ಲಿ ಸುಧಾರಣೆಯ ಯಾವ ಯೋಜನೆ ಇದ್ದರೂ ವ್ಯವಸಾಯ ಪದ್ಧತಿಯಲ್ಲಿ ಆಮೂಲಾಗ್ರ ಪರಿವರ್ತನೆ ಮತ್ತು ಭೂಧಾರಣ ವ್ಯವಸ್ಥೆಯಲ್ಲಿ ಬದಲಾವಣೆಯನ್ನೇ ಧ್ಯೇಯವಾಗಿಟ್ಟುಕೊಳ್ಳುವುದು ಅನಿವಾರ್ಯ. ಈ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತ ಮಾಡಲಿಕ್ಕೆ ಯುದ್ಧಾನಂತರದ ಈಗಿನ ಕಾಲವು ಅಷ್ಟು ಅನುಕೂಲವಾಗಿ ತೋರುವುದಿಲ್ಲ—ಯುದ್ಧದ ಪರಿಣಾಮವಾಗಿ ಕಂಡುಬರುವ ತೊಡಕುಗಳು ಬಹಳಷ್ಟು ವಿಘ್ನವನ್ನೊಡ್ಡುತ್ತವೆ. ಕೃಷಿ ಉತ್ಪಾದನೆಯ ಮೇಲಿನ ವರಮಾನವು ಹೆಚ್ಚಿಕೊಂಡಿದೆ ಎಂದು ಒಪ್ಪಿದರೂ—ಬಡತನದ ಸಮಸ್ಯೆ ಪರಿಹಾರಗೊಂಡಿಲ್ಲ.

ಕೆಲವು ತೊಡಕುಗಳು

ಸಾಮಾನ್ಯವಾಗಿ ನಿರ್ಯಾತ ಯೋಗ್ಯವಾದ ಕೃಷಿಯಲ್ಲಿಯೇ ನಿರತವಾದ ರಾಷ್ಟ್ರಗಳಿಗೆ ಈಗ ಹೆಚ್ಚು ಕಷ್ಟವಾಗುವ ಚೇತನ ಬಂದಿದೆ. ಹಾಗೆಂದು—ನಾಣ್ಯ ವಿನಿಮಯದ ತೊಡಕುಗಳಿಂದಾಗಿ, ಪರಿಸ್ಥಿತಿಯು ಬಿಕ್ಕಟ್ಟಿನದಾಗಿ ಪರಿಣಮಿಸಿದೆ. ದೇಶದ ಜನಸಂಖ್ಯೆ ಏರಿದುದರಿಂದ, ನಿರ್ಯಾತ ವ್ಯಾಪಾರ ತಗ್ಗಿದಂತೆ, ಉತ್ಪಾದನೆಯು ಮನೆಯೊಳಗೆ ತಿಂದೇ ಮುಗಿಯುತ್ತದೆ. ಒಂದೆರಡು ದೇಶಗಳು ಕಷ್ಟಪಟ್ಟು ನಿರ್ಯಾತಕ್ಕೆಳಸಿದರೂ—ಬೇರೇನಾದರೂ ಅಗತ್ಯದ ಆಯಾತವನ್ನು ಮಾಡಿಕೊಂಡು ಆಯಾತ-ನಿರ್ಯಾತ ವ್ಯಾಪಾರದ ಸಮತೋಲವನ್ನು ಕಾಯ್ದುಕೊಳ್ಳುವವು. ಯುದ್ಧ ಪೂರ್ವದಲ್ಲಿ ಆಹಾರ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳುವಲ್ಲಿ ಬ್ರಿಟನು ಮುಂದಾಗಿತ್ತು. ಈಗಲೂ ಅದು ರಾಷ್ಟ್ರಕೂಟದ ಕೃಷಿ ಉತ್ಪಾದನೆಯ ದೊಡ್ಡ ಗಿರಾಕಿ ಎಂಬುದು ನಿಜವೇ. ಆದರೆ ಮೊದಲಿನಷ್ಟು ಅಧಿಕ ಪ್ರಮಾಣದಲ್ಲಿ ಈಗ ಆಯಾತಕ್ಕೆ ಅದು ಸಿದ್ಧವಿಲ್ಲ.

ತರಣೋಪಾಯ

ಪ್ರಥಮದಲ್ಲಿಯೇ ಸೂಚಿಸಿದಂತೆ ಭಾರತ, ಪಾಕಿಸ್ತಾನ ಮತ್ತು ಸಿಲೋನುಗಳಲ್ಲಿ ಔದ್ಯೋಗೀಕರಣ ಪ್ರಬಲಗೊಳ್ಳುತ್ತಿದ್ದರೂ—ಕೃಷಿಗೆ ಕೊಡಬೇಕಾಗಿರುವ ಮಹತ್ವವು ತಗ್ಗುವಂತಿಲ್ಲ. ಔದ್ಯೋಗೀಕರಣದಿಂದಲೇ ಮುಕ್ತಿ ಎಂಬುದು ಪೂರ್ಣ ಸತ್ಯವಲ್ಲ—ಮತ್ತದನ್ನು ಕಾರ್ಯಗತ ಮಾಡಿಕೊಳ್ಳುವುದು ಸದ್ಯದ ಪರಿಸ್ಥಿತಿಯಲ್ಲಿ ನಮ್ಮ ಅಳವಿಗೆ ಮೀರಿನಂತ ಮಾತು.

ಭಾರತವನ್ನು ಎದುರಿಸಿದ ಮುಖ್ಯ ಸಮಸ್ಯೆ ಭೂಮಿಯ ಸಾಮಾನ್ಯ ಉತ್ಪಾದನೆಯನ್ನು ಹೆಚ್ಚಿಸುವುದು. ಅಕ್ಕಿ, ಗೋಧಿ, ಸಕ್ಕರೆ, ಹೊಗೆಸೊಪ್ಪು, ಹತ್ತಿ ಮುಂತಾದುವುಗಳ ಅಂಕೆ—ಸಂಖ್ಯೆಯು—ಜಗತ್ತಿನ ಇತರೆಡೆಗಳಲ್ಲಿ ಎಕರೆಯೊಂದರ ಸಾಮಾನ್ಯ ಉತ್ಪಾದನೆಗಿಂತ ಎಷ್ಟೋ ಕಡಿಮೆ ಭಾರತದ್ದು ಎಂಬುದನ್ನು ಸ್ಪಷ್ಟಗೊಳಿಸುತ್ತವೆ. ಉತ್ತಮ ಗೊಬ್ಬರಗಳ ಉಪಯೋಗವು ಇಲ್ಲಿ ಒಳ್ಳೆಯ ಫಲವನ್ನು ನೀಡಿದೆ. ಜೊತೆಗೆ ಇತರ ರೀತಿಯಲ್ಲಿ ಉತ್ಪಾದನೆಯನ್ನು ಹೆಚ್ಚಿಸುವ ಹವಣಿಕೆಯೂ ಅಗತ್ಯವಾಗಿ ನಡೆಯಬೇಕು. ಹೆಚ್ಚು ಯೋಗ್ಯವಾದ ಕೃಷಿ ಸಲಕರಣೆಗಳು, ಮಳೆಯ ನೀರನ್ನೇ ಕಾದಿಕೊಂಡಿರದ ನೀರಾವರಿಯ ವಿಸ್ತೃತ ಅನುಕೂಲತೆ, ವ್ಯವಸಾಯ ಪದ್ಧತಿಯಲ್ಲಿ ಆಮೂಲಾಗ್ರ ಬದಲಾವಣೆ ಮತ್ತು ಇಂಥ ಪರಿವರ್ತನೆಗೆ ಒಗ್ಗುವ ರೀತಿಯಲ್ಲಿ ರೈ

[೧೦ನೇ ಪುಟ ನೋಡಿರಿ]

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs. 10 lacks.
3. Has granted an average dividend of 6% to the Shareholders for the past 20 years.
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates.
6. Grants loans on easy terms to approved parties or on approved securities
7. Does afford full protection and rich return to all your monies.

ADOPT IT AS
"MY BANK"
THE VIJAYA BANK, LIMITED,
H. O., MANGALORE.

The East & West Insurance Co., Ltd.
East & West Bldgs., BOMBAY - 1.

ದಿ ಈಸ್ಟ್ ಎಂಡ್ ವೆಸ್ಟ್
ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
ಸ್ಥಾಪನೆ] ಈಸ್ಟ್ ಎಂಡ್ ವೆಸ್ಟ್ ಬಿಲ್ಡಿಂಗ್ಸ್, ಬೊಂಬಾಯಿ 1 [1913

ಉದಾರ ಮಾರಿಯಾಯತಿ ಶರ್ತಗಳಿರುವ ಪುರಾತನ ಮತ್ತು ಮುಂದುವರಿದ ಕಂಪೆನಿಗಳಲ್ಲೊಂದಾಗಿರುತ್ತದೆ.

ವಿಮೆಯ ಸಕಲ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು ಆ ಬಾಬಿನ ಎಲ್ಲಾ ಕೆಲಸಗಳಲ್ಲಿ ಭಾಗಿಯಾಗಿ ಸಹಕರಿಸಿ ಸಲಹೆಗಳನ್ನೀಯುತ್ತಾ ಜನಸೇವೆಗೈಯುವುದೇ ನಮ್ಮ ಧ್ಯೇಯ.

ನಮ್ಮ ಚೀಫ್ ಏಜನ್ಸಿ ವಿಸ್ತೀರ್ಣದೊಳಗೆ ಪ್ರತೀ ಜಿಲ್ಲೆಗೊಬ್ಬರಂತೆ ಇನ್ಸ್‌ಪೆಕ್ಟರುಗಳೂ, ಸ್ಪೆಶಲ್ ಏಜಂಟರೂ, ಏಜಂಟರೂ ಬೇಕಾಗಿದ್ದಾರೆ. ಹೆಚ್ಚಿನ ವಿವರಕ್ಕೆ ಬರೆಯುವದು.

ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್,
ಚೀಫ್ ಏಜಂಟರು,
ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಮೈಸೂರು ಸ್ಟೇಟ್,
ಪೋಸ್ಟ್ ಶಿರ್ವ, ದ. ಕ.

ಚಾ—ಅನುಪಮ ಪೇಯ

ರೊಕ್ಕದ ಪೈರಿಗೆ ಬಂದಿರುವ ಬಿಕ್ಕಟ್ಟಿನ ಪರಿಸ್ಥಿತಿ

ವಿದೇಶೀ ವಿನಿಮಯದ ಸಂಪಾದನೆಯಲ್ಲಿ ಮುಖ್ಯ ಪಾತ್ರವಹಿಸುವ ಒಂದು ಉದ್ಯಮ—ಚಾ ತೋಟಗಳು. ಭಾರತವು ಚಾದ ಮಟ್ಟಿಗೆ ಪ್ರಪಂಚದಲ್ಲಿಯೇ ದೊಡ್ಡ ಉತ್ಪಾದಕ ರಾಷ್ಟ್ರವಾಗಿದೆ. ಸಿಲೋನು, ಪಾಕಿಸ್ತಾನ ಇಂಡೋನೇಶಿಯಾ ಮತ್ತು ಈಗೀಗ ಪೂರ್ವ ಆಫ್ರಿಕಾ ಮತ್ತು ಜಪಾನುಗಳೂ ಚಾ ತೋಟಗಳಿಗೆ ಹೆಸರಾಗಿವೆ. ಸದ್ಯಕ್ಕೆ—ಉತ್ಪಾದನೆಯು ಹೆಚ್ಚಿದುದರ ಜೊತೆಗೆ ಉತ್ಪಾದನಾ ವೆಚ್ಚವೂ ಏರಿ, ಬೇಡಿಕೆ ಮಾತ್ರ ಇಳಿಮುಖವಾಗಿ ಪರಿಣಮಿಸುದುದರಿಂದ ಈ ಉದ್ಯೋಗಕ್ಕೆ ಬಿಕ್ಕಟ್ಟಿನ ಪರಿಸ್ಥಿತಿ ಉಂಟಾಗಿದೆ. ಭಾರತದ ಚಾ ತೋಟಗಳ ಭವಿಷ್ಯವು ಲೋಕದ ಇತರ ರಾಷ್ಟ್ರಗಳ ಚಾದೊಡನೆ ಹೋರಾಟವನ್ನು ಎದುರಿಸಬಲ್ಲ ಅದರ ಸಾಮರ್ಥ್ಯದ ಮೇಲೆ ಹೊಂದಿಕೊಂಡಿದೆ ಎನ್ನಬಹುದು. ದೀರ್ಘಾವಧಿಯ ಯೋಜನೆಯ ಮೂಲಕ ಬಿಕ್ಕಟ್ಟನ್ನು ಬಗೆಹರಿಸಲು—ಚಾದ ಗುಣಲಕ್ಷಣಗಳನ್ನು ಹೆಚ್ಚಿಸುವ ಮತ್ತು ಉತ್ಪಾದನಾ ವೆಚ್ಚವನ್ನು ತಗ್ಗಿಸುವ, ತನ್ಮೂಲಕ ಗಿರಾಕಿಯನ್ನೂ ಪೇಟೆಯನ್ನೂ ವಿಶಾಲಗೊಳಿಸುವ ಸೂಚನೆಗಳಿವೆ. ಆದರೆ, ಪ್ರಕೃತದ ಗಂಡಾಂತರ ನಿವಾರಣೆಗೆ ಸರಕಾರದ ತೆರಿಗೆಯ ಧೋರಣೆಯಲ್ಲಿ ಪುನರ್ವಿಮರ್ಶೆಯಾಗದೆ ಗತ್ಯಂತರವಿಲ್ಲವೆಂದಾಗಿದೆ.

ಬ್ರಿಟಿಷರ ಪ್ರಸಾದ

ಭಾರತದಲ್ಲಿ ಈ ಅನುಪಮ ಪೇಯವು ಈಸ್ಟ್ ಇಂಡಿಯಾ ಕಂಪೆನಿಯ ಕೃಪೆಯಿಂದ ಪ್ರಚಾರಕ್ಕೆ ಬಂತು. ಚೀನಾದಲ್ಲಿ ಚಾ ಸೊಪ್ಪು ವಿಶೇಷವಾಗಿ ಬೆಳೆಯುವುದು. ಮಾತ್ರವಲ್ಲ—ಇಂದಿಗೂ ಅಲ್ಲಿಯ ಉತ್ಪಾದನೆಯು ಆ ಜನರ ಸೇವನೆಗೆ ವಿಶೇಷ ಲೆಕ್ಕಿಸುವಷ್ಟು ಅದು ಜನಪ್ರಿಯತೆಗಳಿಸಿದೆ. ಚಾ ಸೇವನೆಯು ಚೀನಿಯರ ಅತ್ಯಂತ ಮೆಚ್ಚುಗೆಯ ನಿತ್ಯ ವ್ಯವಹಾರವಾಗಿದೆ. ಈಸ್ಟ ಇಂಡಿಯಾ ಕಂಪೆನಿಯು ವ್ಯಾಪಾರ ಚೀನಾದಲ್ಲಿ ಕುಸಿದು ಬೀಳಲು—ಹೆಚ್ಚು ಮಟ್ಟಿಗೆ ಚಾ ತೋಟಗಳ ಬೆಳವಣಿಗೆಗೆ ಅನುಕೂಲ ವಿದ್ದ ಭಾರತದಲ್ಲಿ ಸರಕಾರೀ ಪ್ರೋತ್ಸಾಹದ ಮೂಲಕ ಈ ಉದ್ಯಮವು ಪ್ರಾರಂಭಗೊಂಡಿತು. ಆಗಿನ ಗವರ್ನರ ಜನರಲ ಲಾರ್ಡ ವಿಲಿಯಂ ಬೆಂಟಿಂಕನು ಈ ವಿಷಯದಲ್ಲಿ ತುಂಬ ಆಸಕ್ತಿ ವಹಿಸಿದನು ಕೈತುಂಬಾ ರೊಕ್ಕ ತರುತ್ತಿದ್ದುದರಿಂದ ಈ ಉದ್ಯಮವು ಪ್ರಾಬಲ್ಯಕ್ಕೆ ಬಂತು.

ಇತ್ತೀಚಿನ ವರ್ಷಗಳಲ್ಲಿ ಈ ಉತ್ಪಾದನೆಯು ಬಹಳ ಹೆಚ್ಚಿಕೊಂಡಿತು. ಕಳೆದ ವರ್ಷ ೬೩೨ ಮಿಲಿಯ ರಾತಲು ಚಾವನ್ನು ಭಾರತ ಉತ್ಪಾದಿಸಿತು. ಇದು ೧೯೫೦ರ ಉತ್ಪಾದನೆಗಿಂತ ೬೦ ಮಿಲಿಯ ರಾತಲಿನಷ್ಟು ಹೆಚ್ಚು. ಪಾಕಿಸ್ತಾನದ ಉತ್ಪಾದನೆಯು ೫೩ ಮಿಲಿಯ ರಾತಲು. ಸಿಲೋನಿನದು ೩೨೬ ಮಿಲಿಯ ರಾತಲು. ಇಂಡೋನೇಶಿಯಾ ೧೦೧ ಮಿಲಿಯ ರಾತಲು ಪೂರ್ವ ಆಫ್ರಿಕಾ ಸಹ ಗಣನೀಯ ಪ್ರಗತಿಯನ್ನು ತೋರಿಸಿದೆ. ಹೀಗಾಗಿ ಯುದ್ಧ ಪೂರ್ವಕ್ಕೆ ಮುಂಚೆ(ಚೀನಾವನ್ನು ಬಿಟ್ಟು ಜಗತ್ತಿನಲ್ಲಿ ವರ್ಷಕ್ಕೆ ೮೩೨ ಮಿಲಿಯ ರಾತಲು ಉತ್ಪಾದನೆಯಾಗುತ್ತಿದ್ದಲ್ಲಿ ಈಗ ೧೧೪೦ ಮಿಲಿಯ ರಾತಲು ಕೈಗೆ ಬರುತ್ತದೆ

ಪ್ರತ್ಯಕ್ಷದ ಬಿಕ್ಕಟ್ಟು

ಈ ರೀತಿಯಲ್ಲಿ ಉತ್ಪಾದನೆ ಹೆಚ್ಚಿದುದರಿಂದ ಇದರ ಉಪಯೋಗವು ಸಂಗವಾಗಬೇಕಾದರೆ, ಚಾಸೇವನೆಗೆ ಜನರು ಹೆಚ್ಚು ಅಂಟಿಕೊಳ್ಳಬೇಕಾಗುತ್ತದೆ. ಸದ್ಯಕ್ಕೆ ಬ್ರಿಟನು ಚಾದ ಮುಖ್ಯ ಗಿರಾಕಿಯಾಗಿದೆ. ಜಗತ್ತಿನ ಉತ್ಪಾದನೆಯಲ್ಲಿ ನೂರಕ್ಕೆ ನಲುವತ್ತರಷ್ಟು ಅಂಶವನ್ನು ಬ್ರಿಟನು ಉಪಯೋಗಿಸಿಕೊಳ್ಳುತ್ತದೆ. ಆದರೆ ಈಗ ಉತ್ಪಾದನೆಯೇ ಒಂದು ಮೂರಂಶದಷ್ಟು ಏರಿರುವುದರಿಂದ, ಇತರ ಪಾನೀಯಗಳ ಸ್ಥಾನವನ್ನು ಚಾ ಆಕ್ರಮಿಸಿ, ಅಧಿಕ ಜನಪ್ರಿಯತೆ ಗಳಿಸುವುದು ಅನಿವಾರ್ಯವೆನಿಸಿದೆ. ಹಾಗೆಂದು ಜನರ ಅಭ್ಯಾಸದಲ್ಲಿ ಒಮ್ಮೆಲೇ ಪರಿವರ್ತನೆಯಾಗುವುದು ಸಾಧ್ಯವಿಲ್ಲ ಎಂಬುದರಿಂದ— ಮತ್ತು ಚಾ ಸೇವನೆಯು ಒಂದು ಅವಶ್ಯಕತೆಯಾಗಿ ಪರಿಣಮಿಸಲಾರದೆಂಬುದರಿಂದ ಸದ್ಯಕ್ಕೆ ಇಂಥ ಯಾವ ಉಪಾಯವೂ ಫಲಿಸಲಾರದು.

ಈ ಬಿಕ್ಕಟ್ಟನ್ನು ದೃಢ ಪಡಿಸುವುದಕ್ಕೆಂಬಂತೆ ಬೆಲೆ ಇಳಿತವು ಕಾಲಿರಿಸಿದೆ. ವಿದೇಶೀ ವಿನಿಮಯ ವ್ಯವಹಾರದಲ್ಲಿ ಜಾಗ್ರತೆಯಿಂದ ವರ್ತಿಸದಿದ್ದರೆ, ದೇಶದ ಆರ್ಥಿಕ ಸ್ಥಿತಿಯು ಸಮತೋಲ ತಪ್ಪುವುದು ನಿಶ್ಚಯ. ಆದುದರಿಂದ ಪ್ರತಿಯೊಂದೂ ರಾಷ್ಟ್ರವು ಆಮದು ಮಾಡಿಕೊಳ್ಳುವ ವಸ್ತುಗಳ ವಿಷಯದಲ್ಲಿ ಈಗ ಸತರ್ಕವಾಗಿದೆ. ಉತ್ಪಾದಕ ದೇಶಗಳಲ್ಲಿಯೇ ಬಳಕೆ ಹೆಚ್ಚುವುದಾದರೆ ಮಾತ್ರ ಉದ್ಯಮಕ್ಕೆ ಹಾನಿಬರಲಿಕ್ಕಿಲ್ಲ. ಮೊದಲೇ ಸೂಚಿಸಿದಂತೆ-ಇದೆಲ್ಲ ಪ್ರತ್ಯಕ್ಷ ಆಗುವಹೋಗುವ ಮಾತಲ್ಲ.

ಅಪರಿಮಿತ ಹೋರಾಟ

ನಿರ್ಯಾತದ ಸರಕುಗಳು ಅತಿ ಕಡಿಮೆ ಬೆಲೆಯ ಆಕರ್ಷಣೆ ತೋರಿಸಿದರೆ ಮಾತ್ರ ಅವುಗಳಿಗೆ ಗಿರಾಕಿ ಬರುವಂಥ ವಿಷಮ ಪರಿಸ್ಥಿತಿ ಈಗಿದೆ. ಇದರ ಪರಿಣಾಮವಾಗಿ ಭಾರತದ ಸಣಬು ಮತ್ತು ಹತ್ತಿಗಳ ಕ್ಷೇತ್ರದಲ್ಲಿ ಹೋರಾಟ ಕಂಡುಬರುತ್ತಿದೆ. ಚಾ ಉದ್ಯೋಗಕ್ಕೂ ಇದೇ ಗತಿ ಪ್ರಾಪ್ತವಾಗಿದ್ದು ಅತ್ಯಂತ ಕಡಿಮೆ ಬೆಲೆಗೆ ಮಾರಾಟಕ್ಕೆ ಇಷ್ಟಪಟ್ಟರೆ ಮಾತ್ರ ಪೇಟೆ ದೊರೆಯುವುದೇ ಹೊರತು-ಉತ್ಪಾದನೆಯ ವೆಚ್ಚದಷ್ಟಾದರೂ ಹುಟ್ಟುವಳಿ ಬರಬೇಕೆಂದು ಪಟ್ಟುಹಿಡಿದು ಕುಳಿತರೆ, ಕೆಲಸ ನಡೆಯದೆ, ಕೆಡುವುದು.

ಈ ಹಾನಿ ಹೇಗೆ ತುಂಬಬೇಕು? ಉತ್ಪಾದನಾ ವೆಚ್ಚವನ್ನು ತಗ್ಗಿಸುವುದು ಅಸಾಧ್ಯ. ಏಕೆಂದರೆ ಕೂಲಿಕಾರರಿಗೆ ಕೊಡುವ ಸಂಬಳ ಮತ್ತು ತುಟ್ಟಿ ಭತ್ತೆಗಳನ್ನು ಇನ್ನೂ ಕಡಿಮೆಮಾಡುವಂತಿಲ್ಲ. ಅವರ ಪರಿಸ್ಥಿತಿಯನ್ನು ಊರ್ಜಿತಗೊಳಿಸಬೇಕೆಂದು ಚಳುವಳಿಗಳು ನಡೆಯುತ್ತಿರುವಾಗ, ಇಂಥ ಕಡಿತಕ್ಕೆ ಇಂಬು ದೊರೆಯುವುದಿಲ್ಲ ಚಾ ತೋಟಗಳು ಬ್ರಿಟಿಷರ ಒಡೆತನದಲ್ಲಿದ್ದರೂ ಕೂಲಿಗಳು ಭಾರತೀಯರಾಗಿರುವುದರಿಂದ ಜಾಗ್ರತಗೊಳ್ಳುತ್ತಿರುವ ರಾಷ್ಟ್ರೀಯ ಭಾವನೆಯು ಜೀವನ ಮಟ್ಟವನ್ನು ತಗ್ಗಿಸುವ ಯಾವ ಹೆಜ್ಜೆಗೂ ಒಡಂಬಡದು. ಗಿರಾಕಿಗಳನ್ನು ಆಕರ್ಷಿಸುವ ಮೂಲಕ ಪೇಟೆಯನ್ನು ವಿಸ್ತರಿಸುವ ಕೆಲಸಕ್ಕೆ ಸಾಧಾರಣ ಮಾರ್ಗ ತೆರೆದಿಲ್ಲ. ಇಂಥದರಲ್ಲಿ ಏನಾದರೂ ಮಾಡುವುದಿದ್ದರೆ—ಅದು. ಸರಕಾರದ ಬಿಗಿ ಮುಷ್ಟಿಯಿಂದ ಮತ್ತು ಕರಭಾರದಿಂದ ಮುಕ್ತಿ ಪಡೆದು ನಷ್ಟವನ್ನು ತೊಡೆದು ಹಾಕುವುದೊಂದೇ ಸೈ.

ತೆರಿಗೆ ಇಳಿಸುವ ಸೂಚನೆ

ಈ ಸಲಹೆಯನ್ನು ಕಾರ್ಯಗತ ಮಾಡುವಲ್ಲಿ ಭಾರತ ಸರಕಾರಕ್ಕೆ ಚಿಂತೆ ಹಿಡಿದಿದೆ. ೧೯೫೦-೫೧ರಲ್ಲಿ ಈ ಉದ್ಯಮದಿಂದ ೧೨ ಕೋಟಿ ಡಾಲರು ಸಂಪಾದನೆಯನ್ನು ಕೂಡಿಸಿ, ೬೮ ಕೋಟಿ ರೂಪಾಯಿಯ ವಿದೇಶೀ ವಿನಿಮಯ ಕೈಗೂಡಿತು. ಇದರಿಂದ ಕೇಂದ್ರ ಸರಕಾರಕ್ಕೆ ನಿರ್ಯಾತಕರದ ರೂಪದಲ್ಲಿ ೧೦.೫ ಕೋಟಿ ರೂಪಾಯಿಯೂ ಅಬಕಾರಿ ಕರವಾಗಿ ೪ ಕೋಟಿ ರೂಪಾಯಿಯೂ ದೊರೆತವು. ಇದಲ್ಲದೆ, ಆದಾಯ ತೆರಿಗೆ, ಮೇಲ್ತೆರಿಗೆ, ಮಾರಾಟ ತೆರಿಗೆ, ಭೂಕಂದಾಯ ಎಂದು ಮುಂತಾಗಿ ರಾಜ್ಯ ಸರಕಾರಗಳಿಗೂ ಕೇಂದ್ರ ಸರಕಾರಕ್ಕೂ ಕೆಲವು ಲಕ್ಷ ರೂಪಾಯಿಗಳ ಗಳಿಕೆಯಾಗಿದೆ.

ಕಾರಣ, ಈ ತೆರಿಗೆಗಳಲ್ಲಿ ಕಡಿಮೆ ಮಾಡಬೇಕೆಂಬ ಸೂಚನೆಯನ್ನು ಸಹಾನುಭೂತಿಯಿಂದ ವಿಚಾರಿಸಲು ಸರಕಾರ ಹಿಂದುಮುಂದು ನೋಡುತ್ತಿದೆ. ಸಿಲೋನು ಮತ್ತು ಪಾಕಿಸ್ತಾನಗಳು ಈ ವಿಷಯದಲ್ಲಿ ಸಾಕಷ್ಟು ರಿಯಾಯತಿಯನ್ನು ಈಗಾಗಲೇ ತೋರಿಸಿವೆ. ಇಂಡೋನೇಶಿಯಾವು ನಿರ್ಯಾತಕರವನ್ನೆ ಈಗ ರದ್ದುಗೊಳಿಸಿದೆ. ಭಾರತ ಸರಕಾರವು ಈ ಮಾದರಿಯನ್ನು ಅನುಸರಿಸಬೇಕೆಂಬ ಸೂಚನೆ ಇದೆ. ಆದರೆ, ಚಾ ಉದ್ಯಮದ ಕೂಲಂಕಷ ಅಧ್ಯಯನವನ್ನು ಮಾಡಿಕೊಳ್ಳದೆ, ಒಂದು ನಿರ್ಣಯಕ್ಕೆ ಬಂದರೆ ಅದೊಂದು ಅವಸರದ ಕಾರ್ಯವಾದೀತೆಂಬ ಆಶಂಕೆ ಇದೆ. ಅಷ್ಟಾಗಿ ಅಗತ್ಯವಿಲ್ಲದ ಕ್ಷೇತ್ರದಲ್ಲಿ ಉತ್ಪಾದನೆಯು ಹೆಚ್ಚಿಕೊಂಡರೆ—ಅದೂ ಅಪಾಯಕಾರಿ ಎಂಬುದಕ್ಕೆ ಚಾ ಉತ್ತಮ ನಿದರ್ಶನ. ನಮಗೀಗ ಬೇಕಾದುದು ಅನ್ನ—ಅದಕ್ಕಾಗಿ ಪರಿಶ್ರಮ ಮಾಡಲು ಮುಂದಾದರೆ ಮಾತ್ರ ಶಾಶ್ವತ ಕ್ಷೇಮ ಪಡೆಯಬಲ್ಲೆವು.

ನಡೆಯದ ನಾಣ್ಯ

ನೀವು ಆರೋಗ್ಯವಂತರಿದ್ದಾಗ ವಿಮೆ ಇಳಿಸಬಲ್ಲಿರಿ; ಆದರೆ, ಆರೋಗ್ಯ ಕೆಟ್ಟಾಗ, ನೀವು ವಿಮೆಯ ರಕ್ಷಣೆಯನ್ನು ಪಡೆಯಲಾರಿರಿ.—ನಡೆಯದ ನಾಣ್ಯದಂತೆ ನಿಮ್ಮ ಆಗಿನ ಸ್ಥಿತಿ.

ಕಾರಣ, ನೀವು ವಿಮೆ ಇಳಿಸುವುದನ್ನು ಮುಂದೊಡಲಾಗದು ಇಂದೇ ವಿಮೆ ಇಳಿಸಿ ನಿಮ್ಮ ಮತ್ತು ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೯

ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ.

The Canara Mutual Assurance Co. Ltd.

Head Office: **UDIPI**, S. INDIA.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಜಿ. ಐ. ಪಿ.) ಮುಂಬಯಿ, ೧೪

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿಧ ಪಾತ್ರೆಗಳೂ ಸಾಮಾನುಗಳೂ ರಿಯಾಯತಿ ದರದಲ್ಲಿ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಮದ್ರಾಸು ಮುಂಗಡ ಪತ್ರದಲ್ಲಿ
ಹೊಸ ತೆರಿಗೆಗಳ ಸೂಚನೆ
ಎಲ್ಲೆಡೆ ವಿನಿಯಂತ್ರಣವಿಲ್ಲ : ಅಯಶಸ್ವಿ ಪಾನಪ್ರತಿಬಂಧ

ಆಹಾರ ಧೋರಣೆ

ಮದ್ರಾಸು ಮುಖ್ಯ ಮಂತ್ರಿ ಶ್ರೀ ರಾಜಗೋಪಾಲಾಚಾರಿ ಅತ್ಯಂತ ಧೈರ್ಯದಿಂದ ಮುಂದಿಟ್ಟ ವಿನಿಯಂತ್ರಣದ ಹೆಜ್ಜೆಗೆ ಜನ ಬೆಂಬಲ ದೊರೆತಿರುವುದು. ರೈತರೂ ವ್ಯಾಪಾರಿಗಳೂ ಜನರನ್ನು ತೊಂದರೆಗೊಳಪಡಿಸಲಾರರೆಂಬ ವಿಶ್ವಾಸದಿಂದ ರಾಜಾಜಿ ವಿನಿಯಂತ್ರಣಕ್ಕೆಳಸಿದರೆಂಬುದು ಸ್ಪಷ್ಟವಿದೆ. ಇಂಥದರಲ್ಲಿ ಎಂಟು ವರ್ಷಗಳ ಬಳಿಕ ವ್ಯಾಪಾರ ಸ್ಥಿತಿಯು ದವಸ ಧಾನ್ಯಗಳ ಮಟ್ಟಿಗೆ ಪೂರ್ವ ಪದ್ಧತಿಗೆ ಒಲಿಯಲು ಅನುಕೂಲ ಕಲ್ಪಿಸಿದುದಕ್ಕಾಗಿ ಎಲ್ಲರೂ ರಾಜಾಜಿಯನ್ನು ಹೊಗಳುವವರೇ ಆಗಿರುವರು. ವಿನಿಯಂತ್ರಣದ ಪರಿಣಾಮವಾಗಿ ಈಗಾಗಲೇ ರಾಜ್ಯದ ಹೆಚ್ಚಿನ ಕಡೆ ಕದ್ದು ಮುಚ್ಚಿ ಈ ಮೊದಲು ಮಾರಾಟವಾಗುತ್ತಿದ್ದ ಅಕ್ಕಿಯು ಮುಕ್ತ ಪೇಟೆಗೆ ಬಂದಿರುವುದು. ಸರಕಾರದವರು ಯೋಗ್ಯ ಬೆಲೆಯ ಅಂಗಡಿಗಳನ್ನು ನಡೆಸುತ್ತಿರುವುದರಿಂದ-ಸ್ವಾಭಾವಿಕವಾಗಿ ಮುಕ್ತ ಪೇಟೆಯ ಅಕ್ಕಿಯ ಮೇಲೆ ಅಪ್ರತ್ಯಕ್ಷ ನಿಯಂತ್ರಣ ನಿಂತಿದೆ. ಜನಸಾಮಾನ್ಯದ ಕೈಯಳವಿಗಿಂತ ಬೆಲೆ ಮೇಲೇರಿ ಹೋಗಲು ಆಸ್ಪದವಿಲ್ಲವಾಗಿದೆ. ನೈತಿಕ ಬೆಂಬಲವನ್ನಿತ್ತು ರಾಜಾಜಿಯನ್ನು ಪ್ರೋತ್ಸಾಹಿಸಿದ ಪ್ರಧಾನಿ ನೆಹರೂ ಪಾರ್ಲಿಮೆಂಟಿನ ಕಾಂಗ್ರೆಸು ಪಕ್ಷಕ್ಕೆ ಮದ್ರಾಸದ ಈ ಕ್ರಮವು ಅತ್ಯುಪಯುಕ್ತವಾಗಿತ್ತೆಂದು ಹೇಳಿರುವರು. ಇಂಥದೊಂದು ಪ್ರಯೋಗಕ್ಕೆ ತಕ್ಕ ಅನುಕೂಲ ವಾತಾವರಣವಿದ್ದರೆ ಅದು ಈಗ ಮಾತ್ರ- ಎಂದರವರು. ಆದರೆ ಮದ್ರಾಸಿನಲ್ಲಿ ವಿನಿಯಂತ್ರಣವನ್ನು ಜಾರಿಗೆ ತಂದಂತೆ ಉಳಿದೆಲ್ಲ ಕಡೆಯೂ ಆಹಾರ ನಿಯಂತ್ರಣವನ್ನು ತೆಗೆದೊಗೆಯಬೇಕೆಂದು ಹೇಳಲಾಗದು. ಪ್ರತಿಯೊಂದೂ ರಾಜ್ಯದ ಪರಿಸ್ಥಿತಿಯು ಭಿನ್ನವಿರುವುದರಿಂದ ಅಲ್ಲಲ್ಲಿಗೆ ಯೋಗ್ಯವೆನಿಸಿದ ಧೋರಣೆಯನ್ನು ಅನುಸರಿಸಬೇಕಾಗುವುದು.

ಹೊಸ ತೆರಿಗೆಗಳ ಸೂಚನೆ

ವಿನಿಯಂತ್ರಣವು ಅಯಶಸ್ವಿಯಾಗುವುದೆಂದು ಸದ್ಯಕ್ಕೆ ಯಾರೊಬ್ಬರೂ ಯೋಚಿಸಿಲ್ಲ—ರಾಜಾಜಿಯಂತೂ ಈ ಕುರಿತು ಸಂಪೂರ್ಣ ಆತ್ಮವಿಶ್ವಾಸವನ್ನು ತೋರಿದ್ದಾರೆ. "ನಿಯಂತ್ರಣಗಳು ಮರಳಿ ಬರಲಾರವು—ಒಂದು ವೇಳೆ ಅವು ಬರುವುದೇ ನಿಜವಾದರೆ, ನಾನು ಇಲ್ಲಿ ಉಳಿಯಲಾರೆ" ಎಂದವರು ಅನಂತಪುರದ ಭಾಷಣದಲ್ಲಿ ಹೇಳಿದರು. ರಾಜಾಜಿ ರಾಯಲಸೀಮೆಯ ಸಂಚಾರ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದು, ಅಲ್ಲಿಯ ಸ್ಥಿತಿಗತಿಯನ್ನು ಪರಿಶೀಲಿಸುತ್ತಿರುವರು. ಮುಂಗಾರು ಮಳೆಯು ಬೀಳುತ್ತಿರುವುದರಿಂದ ಕೃಷಿಕರು ಉತ್ಸಾಹದಿಂದ ಬೇಸಾಯಕ್ಕೆ ತೊಡಗಿರುವುದನ್ನು ನೋಡಿ ರಾಜಾಜಿ ಸಂತೋಷಿಸಿದರು. ಸರಕಾರವು ರಾಯಲಸೀಮೆಯ ಕಷ್ಟ ಪರಿಹಾರ ಕಾರ್ಯದಲ್ಲಿ ತತ್ಪರವಿದೆ. ಆದರೆ ಜನರು ಬೇಗನೇ ಈ ಭಾರವು ಇಳಿಯುವಂತೆ ಸಹಕರಿಸಬೇಕೆಂದು ಅವರು ಕೇಳಿಕೊಂಡರು. ಸರಕಾರದ ಮೇಲೆ ವಿಪರೀತ ವೆಚ್ಚವು ಬಂದಿದೆ—ಅದನ್ನು ಕೂಡಿಸಿಕೊಳ್ಳಲು ಬರುವ ಮುಂಗಡ ಪತ್ರದಲ್ಲಿ ಹೊಸ ತೆರಿಗೆಗಳ ಸೂಚನೆ ಇದೆ. ಜನರು ಸ್ವಸಂತೋಷದಿಂದ ಈ ಕರಭಾರವನ್ನು ಹೊರಲು ಮುಂಬರಬೇಕು. "ನೀವು ತೆರಿಗೆಗಳನ್ನು ಕೊಡದಿದ್ದರೆ, ಸರಕಾರವನ್ನು ನಾನು ಹೇಗೆ ನಡೆಸಲಿ?" ಎಂದವರು ಪ್ರಶ್ನಿಸಿದರು. ಕೇಂದ್ರ ಸರಕಾರದ ಮೇಲೆ ವೈಯಕ್ತಿಕವಾಗಿ ತನ್ನ ವರ್ಚಸ್ಸು ಹೆಚ್ಚಿದೆ—ಅದೆಲ್ಲವನ್ನೂ ಉಪಯೋಗಿಸಿ, ಹಣ ದೊರಕಿಸಲಾಗುವುದು. ಆದರೆ ಅಷ್ಟು ಸಾಲದು ಎಂದವರು ತಿಳಿಸಿದರು.

ಕುಡುಕರಿಗೆ ಕಾರ್ಡು

ಪಾನ ಪ್ರತಿಬಂಧವನ್ನು ತೆಗೆದರೆ ಅದರ ಆದಾಯದಿಂದ ಎಷ್ಟೋ ಇತರ ಸುಧಾರಣೆಗಳನ್ನು ನಡೆಸಲು ಬರುವುದೆಂಬ ಕಮ್ಯೂನಿಸ್ಟರ ಕೇಳಿಕೆಯನ್ನು ರಾಜಾಜಿ ಎಂದಿನಿಂದಲೂ ಧಿಕ್ಕರಿಸುತ್ತ ಬಂದಿರುವರು. ಜನತಾ ಕಲ್ಯಾಣ ಕಾರ್ಯಗಳನ್ನು ಮಾಡಲಿಕ್ಕಾಗಿ ಸರಕಾರ ಇರುವಾಗ ಉಳಿದ ಸೌಕರ್ಯಗಳನ್ನೊದಗಿಸಿಕೊಟ್ಟು ಮಾಡಿದ ಸುಖವನ್ನು—ಕುಡಿಯುವ ಚಟಕ್ಕೆ ಪ್ರೋತ್ಸಾಹವಿತ್ತು ನಾಶಗೊಳಿಸುವುದು ಸರಿಯಲ್ಲ ಎಂದವರ ಅಭಿಪ್ರಾಯ. ಬದಲಿಗೆ ಹಣವನ್ನು ಬೇಡುತ್ತ ಹೋದರೂ ಚಿಂತೆಯಿಲ್ಲ ಎಂದು ಅವರು ಹೇಳಿದ್ದಾರೆ. ಮದ್ರಾಸಿನಂತೆ ಮುಂಬಯಿಯೂ ಪಾನ ಪ್ರತಿಬಂಧವನ್ನು ಅವಶ್ಯವೆಂದು ಒಪ್ಪಿಕೊಂಡಿದ್ದು, ಸರ್ವಶಕ್ತಿಯಿಂದಲೂ ಅದನ್ನು ಮುಂದರಿಸಿ ಯಶಸ್ವಿಯಾಗಿಸಲು ಬದ್ಧವಿದೆ. ಆದರೆ ಈಚೆಗೆ ಮಧ್ಯ ಪ್ರದೇಶ ಸರಕಾರವು ಪಾನಪ್ರತಿಬಂಧ ಧೋರಣೆಯ ಯಶಾಪಯಶಗಳ ಬಗ್ಗೆ ವಿಮರ್ಶಾತ್ಮಕ ವರದಿಯನ್ನು ಕೊಡಬೇಕೆಂದು ನೇಮಿಸಿದ ಸಮಿತಿಯ ಸೂಚನೆಗಳು ಈ ವಿಷಯದಲ್ಲಿ ಅಷ್ಟು ಸಮಂಜಸವಾಗಿಲ್ಲ. ಉದ್ದೇಶವು ಸಾಧುವಾದುದೆಂದು ಸಮಿತಿಯು ಒಪ್ಪಿದರೂ—ಪಾನಪ್ರತಿಬಂಧವನ್ನು ಯಶಸ್ವಿಗೊಳಿಸಲು ಯಾವುದೊಂದೂ ಪರಿಣಾಮಕಾರಿ ಮಾರ್ಗ ತನಗೆ ಹೊಳೆಯಲಿಲ್ಲೆಂದು ಅದು ಹೇಳಿದೆ. ಕಳ್ಳ ರೀತಿಯ ಸೆರೆಯನ್ನು ತಯಾರಿಸುವ ಕೆಲಸವು ದ್ರುತಗತಿಯಿಂದ ಹೆಚ್ಚುತ್ತಿದೆ ಎಂದೂ ಅಬಕಾರಿ ಹಾಗೂ ಸರಕಾರಿ ನೌಕರರೇ ಈ ದುಷ್ಟ ವ್ಯವಹಾರದೊಡನೆ ಸಹಕರಿಸುತ್ತಿರುವರೆಂದೂ ಅದು ಆಪಾದಿಸಿದೆ. ಆದುದರಿಂದ ಆಹಾರದ ಕ್ರಮವಾದ ವಿತರಣೆಗೆ ಹೇಗೆ ರೇಶನು ಪದ್ಧತಿಯನ್ನು ಅನುಸರಿಸಲಾಯಿತೋ—ಅಂತೆಯೇ ಕಳ್ಳು ಮಾರಾಟವನ್ನು ಕಾರ್ಡು ಮೂಲಕ ಮಾಡಬೇಕೆಂದು ಅದು ಸೂಚಿಸಿದೆ. ಇದರಿಂದ ಕಳ್ಳಿನ ಅನಿರ್ಬಂಧ ತಯಾರಿಯ ಮೇಲೆ ಹಿಡಿತವಿಡುವುದರ ಜೊತೆಗೆ—ಕ್ರಮವಾದ ಮಾನಸಿಕ ಪರಿವರ್ತನೆಯನ್ನು ಜನರಲ್ಲಿ ಮಾಡಲು ಸಾಧ್ಯವಾಗುವುದಂತೆ.

ನೇಕಾರರಿಗೆ ನೆರವು

ಬಟ್ಟೆ ಉತ್ಪಾದನೆಯು ಈಗ ಬಹಳ ಹೆಚ್ಚಿಕೊಂಡಿದೆ. ಅದರಂತೆ ಉಪಯೋಗವೂ ಅಧಿಕಗೊಂಡಿರುವುದು ಕಂಡುಬಂದಿದೆ. ಆದರೆ ಗಿರಣಿಗಳ ಉತ್ಪಾದನೆಯ ಮುಂದೆ ಕೈಮಗ್ಗದ ಸರಕುಗಳನ್ನು ಕೇಳುವವರೇ ಇಲ್ಲದಂತಾಗಿದೆ. ನೇಕಾರರಿಗೆ ಹಲವು ಸಮಯ ನೂಲು ಸಿಗದೆ ಕಷ್ಟಪಡಬೇಕಾಯಿತು. ಈಗ ನೂಲು ಸಿಕ್ಕಿದಾಗೂ ಅವರು ಉತ್ಪಾದಿಸಿದ ಬಟ್ಟೆಗೆ ಗಿರಾಕಿ ದೊರೆಯುವುದು ದುರ್ಲಭವಾಗಿದೆ. ಜನರು ಗಿರಣಿಯ ಬಟ್ಟೆಯನ್ನೆ ಹೆಚ್ಚು ಮೆಚ್ಚುತ್ತಿರುವುದರಿಂದ ರಾಜ್ಯದ ೮೦ ಲಕ್ಷ ನೇಕಾರರು ಸಂಪಾದನೆ ಇಲ್ಲದೆ ಬಳಲಬೇಕಾಗಿರುವುದು. ಅವರಲ್ಲಿ ವಿವಿಧ ಸಹಕಾರಿ ಸಂಸ್ಥೆಗಳಲ್ಲಿ ಸಂಗ್ರಹವಿರುವ ಬಟ್ಟೆಯ ಬೆಲೆಯು ಸುಮಾರು ಮೂರು ಕೋಟಿ ರೂಪಾಯಿಗೂ ಹೆಚ್ಚು. ಇಷ್ಟಕ್ಕೂ ಪೇಟೆ ಸಿಗುವುದಿಲ್ಲವಾದುದರಿಂದ ವಿವಂಚನೆಗೆ ಎಡೆಯಾಗಿದೆ. ಈಚೆಗೆ ಸರಕಾರದವರು ಕೈಮಗ್ಗದ ಬಟ್ಟೆಯನ್ನು ಸ್ವತಃ ತಾವೇ ಕೊಂಡುಕೊಂಡು ಬಳಸುವ ನಿಶ್ಚಯವನ್ನು ಮಾಡಿ—ತನ್ಮೂಲಕ ಕೈಲಾದಷ್ಟು ಸಹಾಯವನ್ನು ನೇಕಾರರಿಗೆ ನೀಡಲು ಮುಂದಾಗಿರುವರು. ಅಲ್ಲದೆ ಇಂಡೋನೇಶಿಯಾ, ಮಲಯಾ, ಬರ್ಮಾ ಮುಂತಾದೆಡೆ ಗಿರಾಕಿಗಳನ್ನು ದೊರಕಿಸುವ ಯತ್ನವೂ ನಡೆದಿದೆ. ರಾಜಾಜಿ ಮದ್ರಾಸು ಆಕಾಶವಾಣಿಯ ಮೂಲಕ ರಾಜ್ಯದ ಜನತೆಯನ್ನುದ್ದೇಶಿಸಿ ಮಾತನಾಡುತ್ತ ನೇಕಾರರ ಕಷ್ಟಗಳನ್ನು ದೂರೀಕರಿಸಲು ಜನರು ಹೆಚ್ಚು ಹೆಚ್ಚು ಕೈಮಗ್ಗದ ಬಟ್ಟೆಯನ್ನು ಉಪಯೋಗಿಸುವ ಅಭ್ಯಾಸ ಮಾಡಬೇಕು. ಎಂದು ವಿನಂತಿಸಿದರು. ನಮ್ಮಲ್ಲಿ ಸ್ವದೇಶಿತನವು ಹೆಚ್ಚುವುದಕ್ಕೆ ಅವಕಾಶಕೊಟ್ಟು, ಪ್ರಮುಖ್ಯ ವೃತ್ತಿಪರ ಕುಟುಂಬಗಳ ರಕ್ಷಣೆ ಮಾಡಬೇಕು ಎಂದು ರಾಜಾಜಿ ಬಿನ್ನವಿಸಿದರು.

ರಾಷ್ಟ್ರೀಯ ಸ್ಫೂರ್ತಿ

ನಮ್ಮಲ್ಲಿ ರಾಷ್ಟ್ರೀಯ ಭಾವನೆಯು ಹೆಚ್ಚಬೇಕೆಂಬ ಮಾತನ್ನು ಲೋಕ ಸಭೆಯಲ್ಲಿ ಸದಸ್ಯರೊಬ್ಬರು ಒತ್ತಿಹೇಳಿದರು. ಮುಂಗಡಪತ್ರದಲ್ಲಿ ಸೂಚಿಸಿದ ವಿವಿಧ ಇಲಾಖೆಗಳ ಬೇಡಿಕೆಯ ಮೇಲೆ ಈಗ ಚರ್ಚೆಯು ತೊಡಗಿದೆ. ಸಂರಕ್ಷಣ ಖಾತೆ ವೆಚ್ಚದ ಬೇಡಿಕೆಯೇ ಅತಿದೊಡ್ಡದಾಗಿರುವುದು. ಈ ಕುರಿತು ಚರ್ಚೆ ನಡೆಯುವಾಗ ಸೈನ್ಯವೆಚ್ಚವನ್ನು ಕಡಿಮೆ ಮಾಡಬೇಕೆಂಬ ಸೂಚನೆಯನ್ನು ವಿರೋ

PLACE YOUR LIFE ASSURANCE WITH A COMPANY OF YOUR OWN - - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policyholders and Representatives. At whatever stage we welcome your association with the POPULAR.

The Popular Insurance Co. Ltd.

"Popular Buildings", MANGALORE—1.

ಒಂದು ಸರಿಯಾದ ಮತ್ತು ಮಹತ್ವದ ಹೆಜ್ಜೆ

ಇತ್ತೀಚೆಗೆ ಮದ್ರಾಸು ಸರಕಾರವು ಸರಿಮಾರ್ಗದಲ್ಲಿ ಒಂದು ಮಹತ್ತರ ಹೆಜ್ಜೆಯನ್ನಿಟ್ಟಿದೆ. ನೀವಾದರೂ ನಿಮ್ಮ ಉಳಿತಾಯದಲ್ಲಿ ಸರಿಯಾದ ಹೆಜ್ಜೆಯನ್ನಿಡಬೇಕೆಂದು ನಾವು ನಿಮ್ಮ ಲಕ್ಷ್ಯವನ್ನೆಳೆಯುತ್ತೇವೆ. ನೀವು ಅದನ್ನು ನಿಮ್ಮ ಬ್ಯಾಂಕಿನಲ್ಲಿ ಹಾಕಿದರೆ ನಾವು ಕೊಡುವ ಬಡ್ಡಿಯಿಂದ ಅದು ಬೆಳೆಯುತ್ತದೆ. ಅಲ್ಲದೆ ಅದೇ ವೇಳೆಯಲ್ಲಿ ಅದು ಭೂಪ್ರಗತಿಯನ್ನುಂಟು ಮಾಡುವ ಉತ್ಪಾದನಾ ಮತ್ತು ಉದ್ಯಮಗಳಿಗೆ ದೊರಕುವುದು. ಈ ಬ್ಯಾಂಕು ಪ್ರತಿನಿತ್ಯವೂ 50,000 ಜನರಿಗೂ ಮಿಕ್ಕಿ ಉಳಿಸಲಿಕ್ಕೆ ಸಹಕರಿಸುತ್ತಿದೆ. ದಕ್ಷಿಣ ಕನ್ನಡದ ನೀಲೇಶ್ವರ ಮತ್ತು ಕಿನ್ನಿಗೋಳಿಯಲ್ಲಿ ಇತ್ತೀಚೆಗೆ ಎರಡು ಹೊಸ ಶಾಖೆಗಳು ಇವರಿಂದ ತೆರೆಯಲ್ಪಟ್ಟವೆ.

ವಹಿವಾಟು ರೂ. 5,00,00,000 ಕ್ಕೂ ಮಿಕ್ಕಿದೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು ಉಡುಪಿ.

The Canara Industrial & Banking Syndicate Limited.

Estd: 1925 H. O: UDIPI.

ಧಿ ಜುಂವು ತಂದಿತು. ಆಂಗ್ಲೋ-ಅಮೆರಿಕನ್ ಬಣದ ವಶಕ್ಕೆ ಸೈನ್ಯವೊಳಗಾಗಿದೆ ಎಂಬ ಗಂಭೀರಾರೋಪವನ್ನು ಮಾಡಲಾಯಿತು. ತನ್ನ ಶಸ್ತ್ರಾಸ್ತ್ರಗಳಿಗೆ ಪೂರ್ಣತಃ ವಿದೇಶಗಳನ್ನೆ ಹೊಂದಿಕೊಂಡಿರುವುದರಿಂದ ಭಾರತವು ಒತ್ತಾಯದಿಂದಲೇ ಆದರೂ ಪಶ್ಚಿಮ ರಾಷ್ಟ್ರಗಳ ಕೇಳಿಕೆಯಂತೆ ತನ್ನ ಸೈನ್ಯವನ್ನು ಯುದ್ಧದಲ್ಲಿ ತೊಡಗಿಸಬೇಕಾಗಿ ಬರಬಹುದೆಂಬ ಸಂಶಯವನ್ನು ಕೆಲ ಸದಸ್ಯರು ವ್ಯಕ್ತಪಡಿಸಿದರು- ನಮ್ಮ ಸೈನ್ಯಗಳಲ್ಲಿ ಶಸ್ತ್ರಬಲವು ಬಹಳ ಕಡಿಮೆ ಇದೆ, ಇಂಥದರಲ್ಲಿ ದೇಶರಕ್ಷಣೆ ಮಾಡಬೇಕಿದ್ದರೆ ಸೈನಿಕರ ಮನಸ್ಸು ರಾಷ್ಟ್ರೀಯ ಭಾವನೆಯಿಂದ ತುಂಬಿ ತುಳುಕಬೇಕು. ಈ ಅಂತಃಸ್ಫೂರ್ತಿಯೇ ಅವರಲ್ಲಿ ನವ ಚೈತನ್ಯವನ್ನೂ ಆತ್ಮವಿಶ್ವಾಸವನ್ನೂ ತುಂಬಿಸಬಹುದು ಎಂದ. ಶ್ರೀ ಪಾಟನಾಯಕರು ಹೇಳಿದ ಮಾತನ್ನು ಎಲ್ಲರೂ ಒಪ್ಪಬೇಕು. ಸಂರಕ್ಷಣಾ ಮಂತ್ರಿ ಶ್ರೀ ಅಯ್ಯಂಗಾರರು ವಿರೋಧಿ ಪಕ್ಷದವರ ವಾದದಲ್ಲಿ ಹುರುಳಿಲ್ಲವೆಂದು ಎತ್ತಿ ತೋರಿಸಲು-೧೯೫ ಕೋಟಿ ರೂಪಾಯಿಗಳ ಬೇಡಿಕೆಯನ್ನು ಸಭೆಯು ಮಾನ್ಯಮಾಡಿತು.

ಶಾಂತಿ ಮಾರ್ಗದ ಆತಂಕಗಳು

ವಿದೇಶ ವ್ಯವಹಾರ ಶಾಖೆಯು ಬೇಡಿಕೆಯನ್ನು ಸಭೆಯು ಮುಂದಿಟ್ಟಾಗಲೂ ಇಂಥದೇ ತೊಡಕು ಉದ್ಭವಿಸಿತು. ಭಾರತವು ರಾಷ್ಟ್ರಕೂಟದ ಸದಸ್ಯ ರಾಷ್ಟ್ರವಾಗಿ ಉಳಿದುದು ಸರಿಯಲ್ಲವೆಂದೂ, ಪಾಶ್ಚಾತ್ಯ ರಾಷ್ಟ್ರಗಳ ಪ್ರಭಾವಕ್ಕೆ ಭಾರತವು ಒಳಗಾಗಿದೆ ಎಂದೂ ಆರೋಪಿಸಲಾಯಿತು. ಶ್ರೀಮತಿ ಸುಚೇತಾ ಕೃಪಲಾನಿಯವರು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗೆ ಗಾಂಧೀ ತತ್ವಗಳನ್ನಾಗಲೀ ಸರ್ವೋದಯ ಯೋಜನೆಯನ್ನಾಗಲೀ ಅಳವಡಿಸಿ ಕೊಳ್ಳದೆ ಅಮೇರಿಕನ್ ತಜ್ಞರಿಗೆ ಶರಣೆಂದುದು ಒಳ್ಳೆಯದಾಗಿಲ್ಲ ಎಂದು ಅತೃಪ್ತಿ ಸೂಚಿಸಿದರು. ...ನಸಂಘದ ಡಾ॥ ಮುಖರ್ಜಿ ಪಾಕಿಸ್ತಾನದೊಡನೆ ಬಿಗಿಯಾದ ವರ್ತನೆ ಇಟ್ಟುಕೊಳ್ಳುವುದವಶ್ಯವೆಂದರು. ಕಮ್ಯೂನಿಸ್ಟರು ರಶಿಯಾದೊಡನೆ ಇನ್ನೂ ಹತ್ತಿರದ ಸಂಪರ್ಕಕ್ಕೆ ಮುಂದಾಗಬೇಕೆಂದು ಒತ್ತಾಯಿಸಿದರು. ಪ್ರಧಾನಿ ನೆಹರೂ ಚರ್ಚೆಗೆ ಉತ್ತರಕೊಡುತ್ತ-ಭಾರತವು ಮೊದಲಿಂದಲೂ ತನ್ನದೇ ಆದ ವಿದೇಶ ಧೋರಣೆಯನ್ನು ಅನುಸರಿಸುತ್ತಾ ಬಂದಿದೆ ಎಂಬುದನ್ನು ಸ್ಪಷ್ಟಪಡಿಸಿದರು. ಭಾರತವು ಜಪಾನದೊಡನೆ ಸಾನ್ ಫ್ರಾನ್ಸಿಸ್ಕೊ ಸಂಧಿಗೆ ಒಪ್ಪಲಿಲ್ಲ—ಸಂಯುಕ್ತ ರಾಷ್ಟ್ರ ಸಂಘದಲ್ಲಿ ಚೀನಾದ ಜನತಾ ಪಕ್ಷಕ್ಕೆ ಮನ್ನಣೆ ಕೊಡಬೇಕೆಂದಿದೆ. ಕೊರಿಯಾ ಯುದ್ಧದಲ್ಲಿ ಚಟುವಟಿಕೆಯ ಪಾತ್ರವನ್ನೆದು ವಹಿಸಿಲ್ಲ—ಪಶ್ಚಾಹತು ರಾಷ್ಟ್ರಗಳ ದಾಕ್ಷ್ಯವನ್ನದು ಒಪ್ಪುವುದಿಲ್ಲ. ಯುದ್ಧ ಪ್ರಯತ್ನಗಳೆಂದರೇನೇ ಜುಗುಪ್ಸೆ. ಈ ರೀತಿ ಶಾಂತಿಯ ಆದರ್ಶವನ್ನೇ ಕಣ್ಣಮುಂದಿಟ್ಟುಕೊಂಡಿರುವ ಭಾರತಕ್ಕೆ ಸಂಯುಕ್ತ ರಾಷ್ಟ್ರ ಸಂಘದ ಈಚಿನ ಕಾರ್ಯಕಲಾಪಗಳು ಅಸಮಾಧಾನವನ್ನುಂಟುಮಾಡಿವೆ ಎಂಬುದರಲ್ಲಿ ಮುಚ್ಚುಮರೆ ಏಕೆ? ಟ್ಯುನೀಶಿಯಾದ ಪ್ರಶ್ನೆಯು ಚರ್ಚೆ ಆ ಸಂಘಕಡಲ್ಲಿ ಬರುವ ಸಂ...

ಡಿಲ್ಲಿಯ ಲೋಕಸಭೆಯಲ್ಲಿ ಬೇಡಿಕೆಗಳ ಕುರಿತು ಚರ್ಚೆ

ರಾಷ್ಟ್ರ ಸಂಘದ ಸೋಗು : ನೆರೆಯ ರಾಷ್ಟ್ರಗಳ ಕಿರುಕುಳ

ಚನೆಗೆ ಅವಕಾಶವೇ ದೊರಿಯದೆ ಹೋಯಿತು. ಇದರಿಂದ ಅಟ್ಲಾಂಟಿಕ ಸಾಗರ ಒಪ್ಪಂದಕ್ಕೆ ಸಹಿಹಾಕಿದ ಪ್ರಬಲ ರಾಷ್ಟ್ರಗಳಲ್ಲಿ ಒಂದಾದ ಫ್ರಾನ್ಸಿನ ಧೋರಣೆಗೆ ಬ್ರಿಟನ-ಅಮೇರಿಕೆಗಳೂ ಸಮ್ಮತಿಸುವುವೆಂದೇ ಅರ್ಥವಾಗುವುದು. ಕಾರಣ-ಸಂಯುಕ್ತ ರಾಷ್ಟ್ರಸಂಘವು ಶಾಂತಿಯ ಸೋಗಿನಲ್ಲಿ ಯುದ್ಧವನ್ನು ಪ್ರೋತ್ಸಾಹಿಸುವುದೇ ಎಂಬ ಅಂಜಿಕೆಯುಂಟಾಗಿದೆ. ಆದರೆ ಯಾವ ಪ್ರಸಂಗದಲ್ಲಿಯೂ ಭಾರತದ ಧೋರಣೆಯು ಸಾತ್ವಿಕ ಪಂಥವನ್ನು ಬಿಡಲಾರದು—ಎಂದು ಹೇಳಿದ ನೆಹರೂರ ಮಾತು ಗಮನಾರ್ಹವೆಂಬಲ್ಲಿ ಸಂದೇಹವಿಲ್ಲ.

ಸಂಧಾನದಿಂದ ಗೆಲವು

ಭಾರತದ ನಿಲುವೆಯು ಆರಂಭದಿಂದಲೂ ಸುಸ್ಪಷ್ಟವಾಗಿದೆ. ಅಮೇರಿಕೆಯ ಕುರಿತು ಆವರಾಡಿದ ಮಾತುಗಳಲ್ಲಿ ವಿಶೇಷವೇನಿಲ್ಲ ಎಂಬುದು ಸಂಯುಕ್ತ ರಾಜ್ಯ ಅಮೇರಿಕದ ತಿಳುವಳಿಕೆಯಾದರೆ ಟ್ಯುನೀಸಿಯಾದಲ್ಲಿ ನೆಹರೂ ಧೋರಣೆಯನ್ನು ಅತ್ಯಾನಂದದಿಂದ ಸ್ವಾಗತಿಸಲಾಗಿದೆ. ಪರರ ಕುಚಕ್ರಕ್ಕೆ ಸಿಲುಕಿ ಒದ್ದಾಡುವ ಸಂತ್ರಸ್ತ ರಾಷ್ಟ್ರಗಳಿಗೆ ನೆಹರೂ ಹೇಳಿಕೆ ಚೈತನ್ಯ ನೀಡುವುದೆಂದು ಪ್ರಶಂಸೆ ದೊರೆತಿದೆ. ಕೆಲಸಮಯದ ಹಿಂದೆ- ಭಾರತದಲ್ಲಿರುವ ಎಲ್ಲ ವಿದೇಶೀ ವಸಾಹತುಗಳೂ ಭೌಗೋಲಿಕವಾಗಿ ಮಾತ್ರವಲ್ಲ-- ಸಾಂಸ್ಕೃತಿಕವಾಗಿಯೂ ಭಾರತಕ್ಕೆ ಸೇರಿವೆ; ಅವುಗಳು ಭಾರತದೊಡನೆ ಸೇರ್ಪಡೆಯಾಗಲೇ ಬೇಕು ಎಂದು ನೆಹರೂ ಉದ್ಗರಿಸಿದಾಗ ಎಲ್ಲರಿಗೂ ಅದು ಸಂತೋಷಪ್ರದವೆನಿಸಿತು. ಭಾರತದ ಧೋರಣೆಯು ವಿಚಾರ ಕ್ರಾಂತಿಯನ್ನು ಎಬ್ಬಿಸುವಂಥದು-ಆದರೆ ಅದರ ಅನುಷ್ಠಾನ ಮಾರ್ಗ ಮಾತ್ರ ಶಾಂತ ರೀತಿಯದು. ಇದೇ ನೆಹರೂ ವ್ಯಕ್ತಿತ್ವದ ವೈಶಿಷ್ಟ್ಯ. ಆದುದರಿಂದ ಕಲಹ ಮೂಲಕವಲ್ಲ-ಸಂಧಾನದಿಂದಲೇ ಎಲ್ಲ ವಿವಾದಗಳನ್ನು ತೀರ್ಮಾನಿಸಬೇಕೆಂದು ಅವರು ಪದೇ ಪದೇ ಹೇಳುತ್ತ ಬಂದಿದ್ದಾರೆ. ಕೂಡಲೇ ಅಲ್ಲವಾದರೂ ಕಾಲಾನು ಕ್ರಮದಲ್ಲಿ ಈ ಧೋರಣೆಯು ಅತ್ಯಂತ ಯಶಸ್ವಿಯಾಗುವುದೆಂಬ ನಂಬಿಕೆ ಅವರಿಗಿದೆ. ಇದಕ್ಕೆ ಉದಾಹರಣೆಯಾಗಿ ಚಂದ್ರನಗರದ ಹಸ್ತಾಂತರವನ್ನೆ ತೆಗೆದುಕೊಳ್ಳಬಹುದು-ನಿಜವಾಗಿ ೧೯೫೦ರಷ್ಟು ಪೂರ್ವದಲ್ಲಿಯೇ ಫ್ರೆಂಚರು ಈ ತಮ್ಮ ವಸಾಹತನ್ನು ಭಾರತಕ್ಕೆ ಒಪ್ಪಿಸಿ ಕೊಟ್ಟಿದ್ದರು. ಈಗ ಶಾಸನ ಕಾಯಿದೆ ಮೂಲಕ ಅದನ್ನು ದೃಢಪಡಿಸಿದೆ.

ಆಕಾಶಯಾನಕ್ಕೆ ತಡೆ

ಪಾಕಿಸ್ತಾನದೊಡನೆ ಮಾತ್ರ ಇನ್ನೂ ಸಂಬಂಧ ಸುದೃಢವಾಗಿಲ್ಲ-ಜಗಳದ ಮೂಲಕವೇ ಬೇರೆಯಾದ ರಾಷ್ಟ್ರವು ವಿವಾದ ಮುಗಿದ ಬಳಿಕ ಮಿತ್ರತ್ವದ ವರ್ತನೆ ಇಟ್ಟುಕೊಳ್ಳಬಹುದೆಂದು ಎಣಿಸಿದ್ದರೆ-ನಮ್ಮ ಸ್ಥಿತಿ ತದ್ವಿರುದ್ಧವಾಗಿದೆ. ಸಾಧ್ಯವಿದ್ದ ಎಲ್ಲ ರೀತಿಯಲ್ಲೂ ಆತಂಕವನ್ನೊಡ್ಡಲು ಪಾಕಿಸ್ತಾನ ಆತುರವಿದೆ. ಕಾಶ್ಮೀರ ಪ್ರಶ್ನೆಯು ಇನ್ನೂ ಇತ್ಯರ್ಥಕ್ಕೆ ಬಂದಿಲ್ಲ ಈಗ ಅಂತರಾಷ್ಟ್ರೀಯ ನಾಗರಿಕ ವಿಮಾನೋಡ್ಡಾಣ ಸಮಿತಿಯು ಮುಂದೆ ಭಾರತವು ಪಾಕಿಸ್ತಾನದ ಮೇಲೆ ಇನ್ನೊಂದು ದೂರು ಹಿಡಿದುಕೊಂಡು ಹೋಗಿದೆ-ದಿಲ್ಲಿಯಿಂದ ಅಫಘಾನಿಸ್ತಾನದ ರಾಜಧಾನಿ ಕಾಬೂಲಿಗೆ ನೇರವಾಗಿ ಪಾಕಿಸ್ತಾನ ಪ್ರದೇಶವನ್ನು ಹಾರಿಹೋಗಲು ಬಿಡುವುದಿಲ್ಲವೆಂಬುದೇ ದೂರಿನ ತಿರುಳು. ಕಾಬೂಲಿಗೆ ಹೋಗುವ ವಿಮಾನಗಳು ಕರಾಚಿಯಲ್ಲಿ ಇಳಿದು, ಅಲ್ಲಿಂದ ಪಾರಬೇಕೆಂಬ ನಿರ್ಬಂಧವನ್ನು ಪಾಕಿಸ್ತಾನವು ಹೇರಿದೆ. ಇದರಿಂದ ಖರ್ಚುವೆಚ್ಚಗಳಷ್ಟೆ ಹೆಚ್ಚು ಸುತ್ತಬೇಕಾಗಿ ಬರುವುದು-ಕಾರಣ ಪ್ರವಾಸ ವೆಚ್ಚ ಮಿತಿಮೀರುವುದು ಅಲ್ಲದೆ-ಅಂತರಾಷ್ಟ್ರೀಯ ವ್ಯವಹಾರ ಸಂಬಂಧಕ್ಕೆ ಇದು ವ್ಯತಿರಿಕ್ತವಾಗಿದೆ ಎಂದು ಭಾರತದ ಹೇಳಿಕೆ. ಪಾಕಿಸ್ತಾನೀ ಸರಕಾರವು ಗಡಿನಾಡಿನ ಗುಡ್ಡಗಾಡು ಜನರು ಬೇಕಂದೇ ವಿಮಾನಗಳನ್ನು ಕೆಳಗಿಳಿಸಿ, ಭಾರತೀಯರಿಗೆ ಘಾಸಿ ಮಾಡಿಯಾರೆಂಬ ಹೆದರಿಕೆಯಿಂದ ಈ ರೀತಿ ಸುರಕ್ಷಿತ ಕ್ರಮವನ್ನು ಕೈಗೊಳ್ಳಲಾಯಿತು ಎಂದಿದೆ.

ಶಾಲೆಗಳಿಗೆ ಬೇಕಾಗುವ ರಿಜಿಸ್ಟ್ರಿ, ಫಾರ್ಮುಗಳು ಸಿಗುತ್ತವೆ.

ಮಗ್ಗಿ ಪುಸ್ತಕಗಳು

ರಖಮ ಆಗಿಯೂ, ಚಿಲ್ಲರೆಯಾಗಿಯೂ ಸೂರಲ್ಪಡುತ್ತವೆ

ಬೆಲೆ ಪ್ರತಿ 1ಕ್ಕೆ 0—1—0

" " 100ಕ್ಕೆ 5—0—0

೯೦೮/೫೩/೬೦೯/೫೧

ಆದರೆ .. ಸ್ವಚ್ಛವಾಗಿ ಪೊಟ್ಣ ಕಟ್ಟಲ್ಪಟ್ಟ ಉತ್ತಮ ತಯಾರಿಕೆಯ ತಾಜಾ ಚಹವು—ಅದು ಬ್ರೂಕ್ ಬಾಂಡ್ ಚಹವೇ ಆಗಿದ್ದಲ್ಲಿ—ಮಿತವ್ಯಯಕರವೂ ಆಗಿರುವುದೆಂದು ಲಕ್ಷ್ಮಿಯು ಒತ್ತಿ ಹೇಳಿದಳು. ನನ್ನ ಮಹದಾಶ್ಚರ್ಯಕ್ಕೆ ಅಂದಿನ ದಿನವೇ ಮೊದಲನೆ ಸಾರಿಗೆ ನಾನು ಕೊಂಡ ಬ್ರೂಕ್ ಬಾಂಡ್ ಪೊಟ್ಣದ ಚಹವು ಆ ದಿನದವರೆಗೂ ಉಪಯೋಗಿಸುತ್ತಿದ್ದ ಬೇರೆ ಚಹಾಗಿಂತ ಗುಣದಲ್ಲಿ ಅತಿ ಶ್ರೇಷ್ಠವಾಗಿದ್ದುದೂ ಅಲ್ಲದೆ, ಮೊದಲಿನಷ್ಟೇ ಬಟ್ಟಲುಗಳಷ್ಟು ಚಹಾ ಮಾಡಲು ಮೊದಲಿಗಿಂತ ಕಮ್ಮಿ ಚಹಾ ಪುಡಿ ಪೂರೈಸಿತು. ಅಂದಿನಿಂದ ಮನೆಗೆ ತಂದ ಪ್ರತಿಯೊಂದು ಬ್ರೂಕ್ ಬಾಂಡ್ ಪೊಟ್ಣವೂ ಲಕ್ಷ್ಮಿಯು ಹೇಳಿದ್ದು ಎಷ್ಟು ನಿಜವೆಂಬುದನ್ನು ಸಮರ್ಥಿಸಿದೆ.

ಬ್ರೂಕ್ ಬಾಂಡ್ ಚಹಾ

ಭಾರತದ ಅತ್ಯುತ್ತಮ ಪೊಟ್ಣಗಳಲ್ಲಿ ಭಾರತದ ಅತ್ಯುತ್ತಮ ಚಹಾ.

ಕೋಜೆಯ ಬಂಡಾಯ

ಕೊರಿಯಾದ ಕದನ ರಂಗದಲ್ಲಿ ಈಚೆಗೆ ಕೆಲವು ವಿಶೇಷ ಘಟನೆಗಳು ನಡೆದುವು— ಕೋಜೆ ದ್ವೀಪದಲ್ಲಿ ಕಮ್ಯೂನಿಸ್ಟ ಕೈದಿಗಳು ಶಿಬಿರದ ನಿಯಮಗಳನ್ನು ಉಲ್ಲಂಘಿಸಿ, ಮೇಲಧಿಕಾರಿಗಳಮೇಲೆ ಹಲ್ಲೆಯನ್ನೂ, ಸ್ವತಃ ಬಂಡಾಯವನ್ನೂ ಹೂಡುತ್ತಿರುವರು. ಈ ಕೈದಿಗಳನ್ನು ಬೇರೆ ಬೇರೆ ಗುಂಪುಗಳನ್ನಾಗಿ ಮಾಡಿ ದೂರ ದೂರ ಇಡಲು ಈಗ ಸಂಯುಕ್ತರಾಷ್ಟ್ರ ಸಂಘದ ಸೇನಾಧಿಕಾರಿಗಳು ಪ್ರಯತ್ನಿಸುತಿದ್ದಾರೆ. ಪರಿಸ್ಥಿತಿ ಒಮ್ಮೊಮ್ಮೆ ವಿಷಮಾವಸ್ಥೆ ಮುಟ್ಟಿದರೆ— ಮರುದಿನವೇ ತಣ್ಣಗಾಗುತ್ತದೆ. ಹೀಗೆ ಕುಚೋದ್ಯದ ಪ್ರಕರಣ ಒಂದೆಡೆ ನಡೆಯುತ್ತಿರುವಾಗ— ಪಾನ ಮುಂಜಾಮಿನ ಕದನ ವಿರಾಮ ಮಾತುಕತೆಗಳು ನಿಂತುಹೋಗಿವೆ. ತನ್ನ ಅಖೈರಿ ಸೂಚನೆಯಲ್ಲಿ ಯಾವುದೇ ಪರಿವರ್ತನೆ ಸಾಧ್ಯವಿಲ್ಲವೆಂದೂ— ಕೈದಿಗಳ ವಿನಿಮಯದಲ್ಲಿ ಅನುಸರಿಸಲಿರುವ ತತ್ವದ ಬಗ್ಗೆ ಮಾಡಿದ ಈ ಸೂಚನೆಯನ್ನು ಚೆನ್ನಾಗಿ ಕಮ್ಯೂನಿಸ್ಟರು ಪರಾಮರ್ಶಿಸಬೇಕೆಂದೂ— ತದನಂತರವೇ, ಮುಂದಿನ ಶನಿವಾರದಿನ, ಸಂಧಾನ ಮಾತುಕತೆಗಳು ಮುಂದರಿಯಬಹುದೆಂದೂ ಸಂಯುಕ್ತ ರಾಷ್ಟ್ರ ಸಂಘದವರು ಹೇಳಿದ್ದಾರೆ.

ಕದನ ರಂಗದ ವರ್ಣನೆ

ಕೊರಿಯಾ ಯುದ್ಧ ರಂಗದಲ್ಲಿ ಇಬ್ಬಣಗಳ ಕಾದಾಟವೂ ಅವಿರಾಮವಾಗಿ ಮುಂದರಿಯುತ್ತಿದೆ. ಇದರ ನಡುವೆ ಪರಿಷ್ಠ ಸೇನಾಧಿಪತಿ ಜನರಲ್ ಮಾರ್ಕ ಕ್ಲಾರ್ಕರ ಆಹ್ವಾನವನ್ನು ಅಂಗೀಕರಿಸಿ, ಬ್ರಿಟನಿನ ಸಂರಕ್ಷಣಾ ಮಂತ್ರಿ ಲಾರ್ಡ ಅಲೆಕ್ಝಾಂಡರ್ ಕದನ ರಂಗಕ್ಕೆ ಭೇಟಿ ಕೊಡಲು ಆಗಮಿಸಿರುವರು. ಸಾಮಾನ್ಯವಾಗಿ ಕೊರಿಯದಲ್ಲಿ ನಡೆಯುತ್ತಿರುವ ಘಟನೆಗಳು ಬ್ರಿಟನಿನ ಮನಸ್ಸಿಗೆ ಅಸಮಾಧಾನವನ್ನುಂಟುಮಾಡಿವೆ— ಈಚೆಗೆ ಕೈದಿಗಳ ಬಂಡಾಯದ ಸುದ್ದಿಯಿಂದ ಅದು ಮತ್ತಷ್ಟು ವ್ಯಾಕುಲಗೊಂಡಿದೆ. ಕಾರಣ ಪರಿಸ್ಥಿತಿಯ ಸ್ಪಷ್ಟ ಕ[illegible] ಲಿಕ್ಕಾಗಿ ತನ್ನ ರಕ್ಷಣಾ ಸಚಿವರನ್ನೆ ಕಳಿಸಿಕೊಡಲು ಅದು ಮುಂದಾಯಿತು. ಕೊರಿಯದ ಯುದ್ಧವನ್ನು ಹಬ್ಬಿಸುವುದು ಬೇಕಾಗಿಲ್ಲ— ಆದರೆ ಮಂಚೂರಿಯಾದಲ್ಲಿ ಚೀನೀಯರು ಬಹಳ ಸೈನ್ಯ ಸಂಗ್ರಹವನ್ನು ಮಾಡಿಟ್ಟಿರುವರು. ಅದಲ್ಲದೆ ಎಲ್ಲಿಯಾದರೂ ಅಣುಬಾಂಬಿನ ಧಾಳಿಯಾಗುವುದಿದ್ದರೆ, ಅದರಿಂದ ಸಂರಕ್ಷಣೆ ಪಡೆಯುವ ಉದ್ದೇಶದಿಂದ ಈಗಲೇ ಆಳವಾದ ದೊಡ್ಡ ದೊಡ್ಡ ಕಂದಕಗಳನ್ನು ತೋಡುತ್ತಿರುವರು. ಅವರ ಜನಬಲವು ಅಪಾರವಾಗಿದೆ- ಹಾಗೆಂದು ಕೊನೆಯ ಕ್ಷಣದಲ್ಲಿಯೇ ಆದರೂ ಜಯಸಂಪಾದನೆ ಸಂಯುಕ್ತ ರಾಷ್ಟ್ರ ಸಂಘಕ್ಕೇನೇ ಸೇರಿದೆ ಎಂಬಲ್ಲಿ ಸಂದೇಹ ಬೇಡ-- ಎಂದು ಬ್ರಿಟಿಷ ಸಂರಕ್ಷಣಾ ಮಂತ್ರಿಗಳ ಹೇಳಿಕೆ.

ಉಕ್ಕಿನ ಉದ್ದಿಮೆ

ಅಧ್ಯಕ್ಷ ಟ್ರೂಮನರು ಉಕ್ಕಿನ ಕಾರಖಾನೆಯನ್ನು ವಶಪಡಿಸಿಕೊಳ್ಳಲು ಅವರಿಗೆ ಘಟನಾತ್ಮಕವಾದ ಅಧಿಕಾರವಿರಲಿಲ್ಲೆಂದು ಅಮೇರಿಕದ ವರಿಷ್ಠ ನ್ಯಾಯಾಲಯವು ತೀರ್ಮಾನಿಸಿದ ಕಾರಣ, ಎಲ್ಲಾ ಕಾರಖಾನೆಗಳನ್ನು ಮರಳಿ ಅವರ ಒಡೆಯರಿಗೆ ಒಪ್ಪಿಸಲಾಗಿದೆ. ಕೆಲಸಗಾರರು ಆ ಕೂಡಲೇ ಮುಷ್ಕರವನ್ನು ತೊಡಗಿ ಇಂದಿಗೂ ಸಂಪಿನ ಮೇಲಿರುವರು. ಅಮೇರಿಕನ್ ಕಾಂಗ್ರೆಸನ್ನು ಕಾಯಿದೆ ಮೂಲಕ ತನಗೆ ಉಕ್ಕಿನ ಕಂಪೆನಿಗಳನ್ನು ವಶಪಡಿಸಿಕೊಳ್ಳುವ ಅಧಿಕಾರ ಕೊಡಬೇಕೆಂದು ಟ್ರೂಮನರು ಕೇಳಿಕೊಂಡರೂ ಅದು ವಿಫಲವಾಯಿತು.

ಶ್ರೀ ದಿವಾಕರರು

ಬಿಹಾರದ ಗವರ್ನರರಾಗಿ ನೇಮಕಗೊಂಡಿದ್ದ ಶ್ರೀ ರಂಗನಾಥ ದಿವಾಕರರು ೧೫ನೇ ತಾರೀಕಿಗೆ ಉದ್ಯುಕ್ತರಾಗಿ ತಮ್ಮ ಹೊಸ ಅಧಿಕಾರವನ್ನು ವಹಿಸಿಕೊಂಡರು.

೦೦ ೦೦ ೦೦

ಬಂಗಾಳದಲ್ಲಿ ಮುಖ್ಯ ಮಂತ್ರಿ ಶ್ರೀ ಬಿ. ಸಿ. ರೋಯ್ ಮತ್ತು ಇತರ ಹದಿಮೂರು ಮಂದಿ ಮಂತ್ರಿಗಳೂ ಹದಿನಾಲು ಮಂದಿ ಉಪ ಮಂತ್ರಿಗಳೂ ಇರುವ ನೂತನ ಮಂತ್ರಿ ಮಂಡಳ ರಚಿತವಾಗಿದೆ, ಪಶ್ಚಿಮ ಬಂಗಾಳದಂಥ ಒಂದು ಸಣ್ಣ ರಾಜ್ಯದಲ್ಲಿ ಒಟ್ಟು ಮೂವತ್ತು ಮಂದಿ ಮಂತ್ರಿಗಳಿರುವುದು ಒಂದು ಅನಿಷ್ಟ ಉಪಕ್ರಮವೆಂದು ಕೆಲವರು ಟೀಕಿಸಿರುವರು.

ಆಂಧ್ರ ಪ್ರಾಂತ

ಆಂಧ್ರ ಪ್ರಾಂತ ರಚನೆಯಾಗ ಬೇಕೆಂದು ಚಳುವಳಿಯನ್ನು ಉಪಕ್ರಮಿಸಿರುವ ಸ್ವಾಮಿ ಸೀತಾರಾಮರು ಈಚೆಗೆ ೨೧ ದಿನಗಳ ಉಪವಾಸವನ್ನು ಕೈಕೊಂಡಿದ್ದರು. ಈಗ ಅವರು ತಮ್ಮ ಉಪವಾಸವನ್ನು ಕೊನೆಗಾಣಿಸಿದ್ದಾರೆ. ಆಂಧ್ರ ಪ್ರಾಂತ ರಚನೆಯಾಗಬೇಕೆಂಬುದಕ್ಕಾಗಿಯೇ ತಾವಿನ್ನೂ ಜೀವಹಿಡಿದುಕೊಂಡಿರುವುದಾಗಿ ಅವರ ಹೇಳಿಕೆ ಇದೆ.

೦೦ ೦೦ ೦೦

ಉಡುಪಿ

ನೇಕಾರರ ಸಭೆ- ಉಡುಪಿ ಕೈಮಗ್ಗಗಳ ನೇಕಾರರ ಸಭೆಯೊಂದು ಇದೇ ತಾ 13 ರಲ್ಲು ಉಡುಪಿ ಕೊಪರೇಟಿವ್ ನೇಕಾರರ ಸಂಘದ ಆಫೀಸಿನಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಯು. ರಾಮರಾವ್, ತಮ್ಮಣ್ಣ ಸೆಟ್ಟಿಗಾರ್, ಯೋಬು ಅಮ್ಮಣ್ಣ, ಹನುಮಂತ ಸೆಟ್ಟಿಗಾರ ಮೊದಲಾದವರು ನೇಕಾರರಿಗೆ ಒದಗಿದ ಕಷ್ಟಗಳನ್ನೂ ವಿವರಿಸಿ ಮಾತನಾಡಿದರು. ಫೆಕ್ಟರಿ ಆಕ್ಟು ಮತ್ತು ಶೋಪ್ ಅಸಿಸ್ಟಾಂಟ್ಸ್ ಆಕ್ಟಿನಿಂದಾಗಿ ಬಡ ಕೈಮಗ್ಗದ ನೇಕಾರರಿಗೆ ತುಂಬಾ ತೊಂದರೆಯುಂಟಾಗಿರುವುದರಿಂದ, ಕೈಮಗ್ಗಗಳನ್ನು ಆ ಕಾನೂನುಗಳಿಂದ ವಿರಹಿತಗೊಳಿಸುವಂತೆಯೂ ಕೈಮಗ್ಗದ ವಸ್ತ್ರಕ್ಕೆ ಸೇಲ್ಸ್ ಟೇಕ್ಸ್ ವಿನಾಯಿತಿ ಮಾಡುವಂತೆಯೂ ಸರಕಾರವನ್ನು ಕೇಳಿಕೊಳ್ಳಬೇಕೆಂದಾಯಿತು. ಕಡಿಮೆ ದರದ ದೇಶೀ ನೂಲನ್ನೇ ಕೈಮಗ್ಗಗಳಿಗೆ ಒದಗಿಸಬೇಕೆನ್ನುವ, ಸೀರೆ ತಯಾರಿಸುವ ಹಕ್ಕನ್ನು ನೇಕಾರರಿಗೆ ಬಿಟ್ಟುಕೊಡಬೇಕೆನ್ನುವ ಇತರ ಠರಾವುಗಳಾದುವು. ಅಧ್ಯಕ್ಷರು ನೇಕಾರರ ಕಷ್ಟನೀಗುವುದರಲ್ಲಿ ತಾನು ಪ್ರಯತ್ನಿಸುವುದಾಗಿ ಭರವಸೆಯಿತ್ತರು.

ಪೈರಿನ ಸ್ಪರ್ಧೆ

ಅಕ್ಕಿ, ಗೋಧಿ, ಬಟಾಟೆ, ಜೋಳ ಮುಂತಾದ ಬೆಳೆಗಳ ಸ್ಪರ್ಧೆಯನ್ನು ಅಖಿಲಭಾರತ ಸ್ವರೂಪದಲ್ಲಿ ಏರ್ಪಡಿಸಲಾಗಿದೆ. ಪ್ರತಿ ಎಕರೆಗೆ ಬರುವ ಉತ್ಪತ್ತಿಯನ್ನು ಲೆಕ್ಕಹಾಕಿ, ಅತ್ಯಧಿಕ ಬೆಳೆಯನ್ನು ಬೆಳೆಯಿಸಿದ ರೈತರಿಗೆ ಬಹುಮಾನವನ್ನು ಕೊಟ್ಟು "ಕೃಷಿ ಪಂಡಿತ"ನೆಂಬ ಅಭಿಧಾನದಿಂದ ಗೌರವಿಸಲಾಗುವುದು. ಪ್ರಧಾನಿ ನೆಹರೂ ಆಕಾಶವಾಣಿ ಭಾಷಣದ ಮೂಲಕ ಸಮಸ್ತ ರೈತರೂ ಇದರಲ್ಲಿ ಭಾಗವಹಿಸಬೇಕೆಂದು ಕೇಳಿಕೊಂಡಿದ್ದಾರೆ. ತನ್ನೊಳಕ ನಾವು ೧೦೦ಕ್ಕೆ ೧೦ರಷ್ಟು ಬೆಳೆ ಹೆಚ್ಚಿಸಲು ಸಾಧ್ಯವಾದರೆ ಅನ್ನದ ಸಮಸ್ಯೆಯೇ ಉದ್ಭೂತವಾಗುವುದಿಲ್ಲ ಎಂದವರು ತಿಳಿಸಿದರು.

ಮುನಿಸಿಪಲ್ ಕೌನ್ಸಿಲು ಸಭೆಯು -ಇದೇ ತಾ. 14ರಲ್ಲು ಚೇರ್‌ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಮಾರುತಿ ವೀಥಿಕ ಮತ್ತು ಮಸೀದಿ ರಸ್ತೆಗಳಿಗೆ ಡಾಮರು ಹಾಕುವ ಸಲುವಾಗಿ ಮದ್ರಾಸು ಸರಕಾರದಿಂದ ರೂ. 25,800 ಸಾಲ ಪಡೆಯುವುದೆಂದಾಯಿತು. ಸಸಿನೆಡುವ ಸಪ್ತಾಹವನ್ನು ಜುಲಾಯಿ ತಿಂಗಳ ಕೊನೆಯ ವಾರದಲ್ಲಿ ಆಚರಿಸುವುದಕ್ಕಾಗಿ ರೂ. 100- ಖರ್ಚುಮಾಡುವುದೆಂದಾಯಿತು. ಸ್ವಾತಂತ್ರ ದಿನಾಚರಣೆ ಸ್ಮಾರಕ ನಿಧಿಯ ಬಾಬ್ತು ಬಾಲ್ರಿ ವರುಷದಲ್ಲಿ ಬಡ ವಿದ್ಯಾರ್ಥಿಗೆ ಸ್ಕಾಲರ್ ಶಿಪ್ ಕೊಡುವುದಕ್ಕಾಗಿ, ಅಂತಹ ಹುಡುಗನನ್ನು ಶಿಫಾರಸು ಮಾಡುವರೆ ಸ್ಥಳೀಯ ಹೈಸ್ಕೂಲುಗಳ ಹೆಡ್ಮಾಸ್ತರರೂ ಶ್ರೀ ಸುಖನಾಥಾಚಾರ್ಯರೂ ಇರುವ ಸಮಿತಿ ನೇಮಿಸಲ್ಪಟ್ಟಿತು. ಮುನಿಸಿಪಲ್ ಕ್ಷೇತ್ರದ ಎಲ್ಲಾ ರಸ್ತೆಗಳಿಗೂ ಹೆಸರುಗಳನ್ನಿಡಬೇಕೆನ್ನುವ ಮತ್ತು ಆಯಾಯ ರಸ್ತೆಗಳಲ್ಲಿ ಸ್ಟ್ರೀಟ್ ಬೋರ್ಡುಗಳನ್ನು ಹಾಕಬೇಕೆನ್ನುವ ಶ್ರೀ ಟಿ. ರಮೇಶ ಪೈಗಳ ನಿರ್ಣಯವು ಕೆಲವೊಂದು ದೋಷಗಳಿಂದಾಗಿ ಹಿಂದೆ ಬಿತ್ತು.

ಉಡುಪಿ ಸಾಹುಕಾರ ಸಂಘದ ಸಭೆಯು- ಇದೇ ತಾ. 15ರಲ್ಲು ಶ್ರೀ. ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ರೇಶನ್ ರದ್ದತಿ ಯೋಜನೆಯನ್ನು ಸ್ವಾಗತಿಸಿ ಅದರ ಯಶಸ್ವಿ ಬಗ್ಗೆ ಸರಕಾರದೊಡನೆ ಸಹಕರಿಸಬೇಕೆಂದಾಯಿತು. ವರ್ಗದಾರರು ಸಾಹುಕಾರರಿಗೆ ಸಹಕಾರವನ್ನೀಯಬೇಕಾಗಿ ಕೋರಲಾಯಿತು. ಅಕ್ಕಿ ವ್ಯಾಪಾರವನ್ನು ಸೇಲ್ಸ್‌ಟೇಕ್ಸಿನಿಂದ ವಿರಹಿತಗೊಳಿಸುವಂತೆ ಮದ್ರಾಸು ಸರಕಾರವನ್ನು ವಿನಂತಿಸಲಾಯಿತು. ಶ್ರೀಗಳಾದ ಎಮ್. ಆರ್. ಕಾನಾರ್ದ್, ಕೆ. ಪ್ರಭಾಕರ ಪೈ, ಯು. ಕೇಶವ ಕಾಮತ್ ಮೊದಲಾದವರು ಸಭೆಯಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಿದ್ದರು.

ಉಡುಪಿ ಚಿನ್ನ ಬೆಳ್ಳಿ ವ್ಯಾಪಾರಸ್ಥರು- ಇದೇ ತಾ. 15ರಲ್ಲು ಶ್ರೀ ರಾಯಪ್ಪ ನಾಯ್ಕರ ಅಧ್ಯಕ್ಷತೆಯಲ್ಲಿ ಸಭೆಗೂಡಿ ಈ ವ್ಯಾಪಾರಿಯವರ ಸಂಘವೊಂದನ್ನು ಸ್ಥಾಪಿಸುವುದು ಅಗತ್ಯನೆಂದು ಅಭಿಪ್ರಾಯಪಾಡಿದರು.

ಸಂಸ್ಕೃತ ದ್ವೈತ ವೇದಾಂತಕ್ಕೆ ಪ್ರೋತ್ಸಾಹ- ಮದ್ರಾಸಿನ ಮಂತ್ರಿ ಡಾ। ಯು. ಕೃಷ್ಣರಾಯರು ತನ್ನ ತಂದೆ ಡಾ। ಯು. ರಾಮರಾಯರ ಹೆಸರಲ್ಲಿ ವರ್ಷಂಪ್ರತಿಯೂ ಉಡುಪಿಯ ಸಂಸ್ಕೃತ ಕಾಲೇಜಿನ ವೇದಾಂತ ಶಿರೋಮಣಿ ಫೈನಲ್ ಪರೀಕ್ಷೆಯಲ್ಲಿ ಹೆಚ್ಚು ಮಾರ್ಕುಗಳನ್ನು ಪಡೆಯುವ ವಿದ್ಯಾರ್ಥಿಗೆ ಪಾರಿತೋಷಕವೀಯಲು ಎರಡು ಸಾವಿರ ರೂಪಾಯಿಗಳ ನಿಧಿಯನ್ನು ಕೊಟ್ಟಿರುವರು. ಈ ನಿಧಿಯ ಬಡ್ಡಿಯಿಂದ ಪಾರಿತೋಷ ಕೊಡಲಾಗುವುದು.

ಅಕ್ಕಿ ಬೆಲೆ- ಮಂಗಳೂರು ಮತ್ತು ಉಡುಪಿಯ ವಾಣಿಜ್ಯ ಸಂಘದವರು ಅಕ್ಕಿ ಮುಡಿಗೆ ರೂ. 25ಕ್ಕೆ ಮೀರದಂತೆ ಮಾರಬೇಕೆಂದು ನಿರ್ಣಯಿಸಿರುವುದರಿಂದ ರೂ 20ರಿಂದ 24ರ ವರೆಗಿನ ದರವು ನಿರಲಿಕ್ಕೆ ಅಸ್ಪದವಾಗಿದೆಯೆಂದೂ ಅದನ್ನು ರೂ 20 ಯಾ 21ಕ್ಕೆ ಮೀರದಂತೆ ಎಂದು ನಿರ್ಣಯಿಸುವುದು ಸೂಕ್ತವೆಂದೂ ಇದರಿಂದ ಬಡ ಬಗ್ಗರಿಗೂ ಅನುಕೂಲವಾಗುವುದೆಂದೂ ಬಾತ್ಮಿದಾರರೊಬ್ಬರು ಬರೆಯುತ್ತಾರೆ.

ನಡಿಯುವ ಚಿತ್ರ
ಯುನಿವರ್ಸಲ್‌ನವರ ವರ್ಣ ರಂಜಿತ ಇಂಗ್ಲಿಷ್ ಚಿತ್ರ ಸಾಹಸ ಪೂರ್ಣ
ಬಗದಾದ್
ಮುಂದಿನ ಚಿತ್ರ:— ಅಂತರಾಷ್ಟ್ರೀಯ ಖ್ಯಾತಿವೆತ್ತ
ಶಾಂತ ರಾಮರ ಅಮೋಘ ಕಲಾಕೃತಿ
ಅಮರ ಭೂಪಾಳಿ
ನೂತನ ತಾರೆ ಸಂಧ್ಯಾ, ಪಂಡಿತ ರಾವ್, ನಗರ್‌ಕರ್,
ಮತ್ತು ಲಲಿತಾ ಪವಾರ್
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಮದುವೆಯಾದ ಸ್ತ್ರೀಪುರುಷರ ಸಲುವಾಗಿ
ಬರೆಯಲ್ಪಟ್ಟ ಪುಸ್ತಕ
ಮಿತಸಂತತಿ
ಹುಟ್ಟುವ ಮಕ್ಕಳು ಆರೋಗ್ಯ ಸಂಪತ್ತು ಸೌಭಾಗ್ಯ ಮೊದಲಾದುವನ್ನು ಸಾಕಷ್ಟು ಪಡೆಯುವ ಹಾಗೆ ಹೆತ್ತವರು ಸಾಧಿಸಲಾಗುವಂತೆ ಅತ್ಯನುಕೂಲವಾದ ಪರಿಸ್ಥಿತಿ ಯಾವುದೋ ಆದರಂತೆ ದಂಪತಿಗಳು ಮಕ್ಕಳನ್ನು ಹೆರುವ ಹಾಗೆ ಅವಶ್ಯವಾದ ತತ್ವಗಳನ್ನು ಬೋಧಿಸುವ ನವೀನ ಪುಸ್ತಕ ಬೆಲೆ 0-6-0
ಗುಪ್ತರೋಗ ನಿವಾರಣೆ
ಜನನೇಂದ್ರಿಯಗಳಿಗೆ ಸಂಬಂಧಿಸಿರುವ ರೋಗಗಳು ಹಳ್ಳಿಪಳ್ಳಿಗಳಲ್ಲಿ ಪಸರಿಸುತ್ತಲೇ ಇವೆ. ಇಂತಹ ರೋಗಗಳಿಂದ ನರಳುವ ಸ್ತ್ರೀಪುರುಷರ ಆರೋಗ್ಯ ರಕ್ಷಣೆಗಾಗಿ ಪ್ರಪಂಚದಲ್ಲಿನ ವಿದ್ವಾಂಸ ವೈದ್ಯರುಗಳ ಅನುಭವ ಸಿದ್ಧಾನುಭವ ಸೂಚಕ ಪುಸ್ತಕ ಬೆಲೆ 0-8-0
ಪ್ರತಿಗಳಿಗೂ, ಪತ್ರಗಳಿಗೂ ಯಾರಿಗೂ, ಬರೆಯಿರಿ.
ನವಭಾರತ ಪುಸ್ತಕ ಭಂಡಾರ ಉಡುಪಿ.

ಅಂತರಂಗದ ಕಥೆ, ಕಾದಂಬರಿ, ನಾಟಕ, ಕವಿತೆ, ಚಿತ್ರ ಪ್ರಬಂಧ ಮೊದಲಾದ ನಾನಾ ಬಗೆಯ 75 ಪುಸ್ತಕಗಳನ್ನು ಒಟ್ಟಿಗೆ ರೂ. 20ಕ್ಕೆ ಕೊಡಲಾಗುವುದು.
ಕಟಲಾಗಿಗೆ ಬರೆಯಿರಿ:— ಅಂತರಂಗ ಆಫೀಸು ಉಡುಪಿ, ಅಥವಾ ನವಭಾರತ ಬುಕ್ ಡಿಪೋ, ಉಡುಪಿ

ಮಂಗಳೂರು

ಇಂಟರ್ ಮೀಡಿಯೆಟ್ ಪರೀಕ್ಷೆ ಫಲಿತಾಂಶ—ಸೈಂಟ್ ಎಲೋಶಿಯಸ್ ಕಾಲೇಜಿನಲ್ಲಿ ಕಳೆದ ಬಾರಿ ಇಂಟರ್ ಮೀಡಿಯೆಟ್ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳಲ್ಲಿ ನೇಕಡಾ 93ರಷ್ಟು ಪಾಸಾಗಿದ್ದಾರೆ.

ಜಿಲ್ಲಾ ವಣಿಜ ಸಂಘದ ಸಭೆಯು—ಇದೇ ತಾ. 13ರಲ್ಲು ಶ್ರೀ ಎ. ಉಪೇಂದ್ರನಾಥ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಗೆ ವ್ಯಾಪಾರಸ್ಥರಲ್ಲದೆ ಶ್ರೀಗಳಾದ ಬಿ. ವೈಕುಂಠ ಬಾಳಿಗ ಎನ್. ಎಸ್ ಸುವರ್ಣ, ಡಾ| ಯು. ಪಿ. ಮಲ್ಯ, ಕೆ. ಎಸ್. ಹೆಗ್ಡೆ, ಬಿ. ಆರ್. ಕರ್ಕೇರ ಮೊದಲಾದವರು ಬಂದಿದ್ದರು ಶ್ರೀಗಳಾದ ಎನ್. ಎಮ್. ಪಿ. ಕಾಮತ್, ಬಿ. ಆರ್. ಕಾಮತ್ ಮೊದಲಾದವರು ಸಾಹುಕಾರರ ಪರವಾಗಿ ಮಾತನಾಡುತ್ತ ಜನರಿಗೆ ಅಕ್ಕಿ ಮುಡಿಗೆ ರೂ.25 ರಂತೆಯೂ ಸೇರಿಗೆ ಹತ್ತಾಣೆಯಂತೆಯೂ ಮಾರುವಂತಾಗಬೇಕೆಂದರು.

ಶ್ರೀ ಬಿ. ವೈಕುಂಠ ಬಾಳಿಗರು ಮಾತನಾಡುತ್ತ ರಾಜಾಜಿ ಕೈಗೊಂಡ ಕಾರ್ಯವು ಯಶಸ್ವಿಯಾಗುವಂತೆ ಮಾಡುವುದು ಎಲ್ಲರ ಕರ್ತವ್ಯವಾಗಿದೆ ಎಂದರು. ಶ್ರೀ ಎಸ್. ಎನ್. ಸುವರ್ಣರು ಮಾತನಾಡುತ್ತಾ ಹೊರಪ್ರಾಂತ್ಯಕ್ಕೆ ಹೋಗುವ ಅಕ್ಕಿಯನ್ನು ನಿಲ್ಲಿಸುವ ಪ್ರಯತ್ನ ಕೂಡಲೇ ಮಾಡಬೇಕೆಂದು ಸೂಚಿಸಿದರು. ಹಸುಗೆ ಪದ್ಧತಿ ರದ್ದಾದುದು ಸಂತೋಷಕರವೆಂದು ಶ್ರೀ ಕೆ. ಎಸ್. ಹೆಗ್ಡೆಯವರು ಹೇಳಿದರು. ಶ್ರೀ ಎಮ್. ರಾಘವೇಂದ್ರ ಪೈಗಳು ಮಾತನಾಡುತ್ತ ಈಗಿನ ದಂದಲ್ಲಿ ಈಗಿನ ಪ್ರಮಾಣದಲ್ಲಿ ಅಕ್ಕಿ ದೊರೆಯುವಂತೆ ಸರಕಾರವು ಮಾಡಬೇಕೆಂದರು. ನಂತರ ಈ ಕೆಳಗಿನ ನಿರ್ಣಯಗಳು ಒಮ್ಮತದಿಂದ ಪಾಸಾದುವು:

1 ಹಸುಗೆ ಪದ್ಧತಿಯನ್ನು ರದ್ದುಗೊಳಿಸಿದ ಸರಕಾರದ ಈ ಕಾರ್ಯವು ಯಶಸ್ವಿಯಾಗುವಂತೆ ಸಹಕಾರ ನೀಡುವುದಕ್ಕಾಗಿ, ಮಂಗಳೂರಿನ ಈ ವ್ಯಾಪಾರಿಗಳ ಸಭೆಯು ಅಕ್ಕಿ ಮುಡಿಗೆ ರೂ 25 ಸೇರಿಗೆ 10 ಆಣೆಗಿಂತ ಮೀಳದಂತೆ ನೋಡಬೇಕೆನ್ನುವ ಹಸುಗೆಯನ್ನು ರದ್ದುಗೊಳಿಸಿದ ಸರಕಾರದ ನಿರ್ಣಯವನ್ನು ಸ್ವಾಗತಿಸುತ್ತೇವೆ. ಮತ್ತು ಮುಂದಿನ ದಶಂಬರವರೆಗೆ ಯೋಗ್ಯ ಬೆಲೆಯ ಅಂಗಡಿಗಳಲ್ಲಿ ಅಕ್ಕಿ ಸಿಗುವಂತೆ ಮಾಡಬೇಕೆನ್ನುವ ಜಿಲ್ಲೆಯಿಂದ ಅಕ್ಕಿಯು ಉತ್ತರ ಕನ್ನಡಕ್ಕೂ ಮಲಬಾರಿಗೂ ಬಹಳವಾಗಿ ಸಾಗುತ್ತಿರುವುದರಿಂದ ಅದನ್ನು ನಿಲ್ಲಿಸುವುದಕ್ಕಾಗಿ ಸರಕಾರವು ಜಿಲ್ಲಾ ಕಲೆಕ್ಟರರು ಕ್ರಮ ಕೈಕೊಳ್ಳಬೇಕೆನ್ನುವ ಈ ಜಿಲ್ಲೆಯ ಪ್ರದೇಶದಿಂದ ಬೇರೆಡೆಗೆ ರೈಲು, ಲೋರಿ, ದೋಣಿ, ಗಾಡಿ, ಹಾಗೂ ತಲೆ ಹೊರೆಯಾಗಿ ಅಕ್ಕಿ ಹೋಗದಂತೆ ಕೂಡಲೇ ತಕ್ಕ ಬಂದೋಬಸ್ತು ಮಾಡಬೇಕೆನ್ನುವ ಪರದೇಶದಿಂದ ಅಕ್ಕಿ ತಂದು ಸ್ವತಂತ್ರ ವ್ಯಾಪಾರ ಸಾಗುವಂತೆ ಕೇಂದ್ರ ಹಾಗೂ ಪ್ರಾಂತಿಕ ಸರಕಾರಗಳು ವ್ಯಾಪಾರಸ್ಥರಿಗೆ ಅನುಕೂಲ ಮಾಡಿಕೊಡಬೇಕೆನ್ನುವ ಅಕ್ಕಿ ಮಿಲ್ಲಿಗಾದರೂ ಮಾರಾಟ ತೆರಿಗೆಯನ್ನು ತೆಗೆದು ಹಾಕಬೇಕೆನ್ನುವ ನಿರ್ಣಯಗಳಾದುವು. ಈ ಎಲ್ಲಾ ನಿರ್ಣಯಗಳ ಕುರಿತು ಕಾರ್ಯನಿರ್ವಹಿಸಲು ಶ್ರೀಗಳಾದ ಪಂಚಮಾಲು ವಾಸುದೇವ ಪೈ, ಎನ್. ಎಮ್. ಪಾಂಡು ರಂಗ ಕಾಮತ್, ಎಮ್. ರಾಘವೇಂದ್ರ ಪೈ, ಬೈಲೂರು ಲಕ್ಷ್ಮೀನಾರಾಯಣ ರಾವ್, ಬಿ. ಆರ್. ಕಾಮತ್, ವೈ. ಕೃಷ್ಣಪ್ರಭು ಮತ್ತು ಕೆ. ಉಪೇಂದ್ರ ಪೈ, ಇವರನ್ನೊಳಗೊಂಡ ಒಂದು ಕಮಿಟಿಯನ್ನು ರಚಿಸಿತು.

ಹೊಸ ಚಿಕಿತ್ಸಾ ಭವನ—ಸ್ಥಳೀಯ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿಯ ಮಾಳಿಗೆಯಲ್ಲಿ ಡಾ| ಸತ್ಯಶಂಕರ ಮತ್ತು ಅವರ ಪತ್ನಿ ಡಾ| ವಸಂತಾ—ಇವರ ನೇತೃತ್ವದಲ್ಲಿ ಶುಶ್ರೂಷಾಭವನ ಮತ್ತು ಚಿಕಿತ್ಸಾ ಮಂದಿರವು ಈಚೆಗೆ ತೆರೆಯಲ್ಪಟ್ಟಿತು.

ದ. ಕ. ರಜತ ಕುಲೋದ್ಧಾರಕ ಸಂಘದ—ಮಹಾ ಸಭೆಯು ಕಳೆದ ತಾ. 8ರಲ್ಲು ಶ್ರೀ ಕೆ. ಎ. ಮಾಂಕು ಅವರ ಅಧ್ಯಕ್ಷತೆಯಲ್ಲಿ ಜರಗಿತು. ವಿಶಾಲ ಹಿತ ಮಸೂದೆ ಬರಬೇಕು, ಕೇಂದ್ರ ಸರಕಾರವು ಕರ್ನಾಟಕ ಪ್ರಾಂತರಚನೆಯಲ್ಲಿ ಮುಂದಾಗಬೇಕು ಮತ್ತು ಹಿಂದುಳಿದವರಿಗೆ ವಿದ್ಯಾದಿ ಸವಲತ್ತು ನೀಡಬೇಕೆನ್ನುವ ನಿರ್ಣಯಗಳಾದುವಲ್ಲದೆ ಹಸುಗೆ ಪದ್ಧತಿಯನ್ನು ಸ್ವಾಗತಿಸಲಾಯಿತು. ನಗರ ಸಭೆಯು ಮನೆಮನೆಗಳಲ್ಲಿ ಚೋಬಿ ಕೆಲಸ ಮಾಡುವವರಿಗೆ ವೃತ್ತಿತೆರಿಗೆ ಹೊರಿಸಬಾರದೆಂದು ಕೇಳಿಕೊಳ್ಳುವ ನಿರ್ಣಯವಾಯಿತು.

ಸಹಾಯಾರ್ಥ ಸಿನೆಮಾ ಪ್ರದರ್ಶನ—ಗವರ್ನರರ ಬರಗಾಲ ನಿವಾರಣಾ ನಿಧಿಯ ಮಂಗಳೂರು ಡಿವಿಜನ್ ಕಮಿಟಿಯವರು ತಾ. 24-6-52ನೇ ಬೆಳಗ್ಗೆ 10 ಗಂಟೆಗೆ ಬಲ್ಮಠ ಜ್ಯೋತಿ ಟಾಕೀಸಿನಲ್ಲಿ ಸಹಾಯಾರ್ಥ ಚಲಚ್ಚಿತ್ರ ಪ್ರದರ್ಶನವೊಂದನ್ನು ಏರ್ಪಡಿಸಿದ್ದಾರೆ. ಅದಕ್ಕೆ ಸರ್ವರೂ ಬಂದು ಸಹಕರಿಸಿ ಪ್ರದರ್ಶನವನ್ನು ಜಯಶೀಲಗೊಳಿಸಬೇಕೆಂದು ರೆವಿನ್ಯು ಡಿವಿಜನಲ್ ಆಫೀಸರ್ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರು ಕೋರುತ್ತಾರೆ.

ಕಾರ್ಕಳ ಡಿ. ಮು ಕೋರ್ಟಿನಲ್ಲಿ

O. S. No. 85/1952.

ನೂರ್ ಜಹಾನ್ —ವಾದಿಳು

ಮತ್ತು

ಎನ್. ಸಖಾರಾಮ ಅದ್ಯಂತಾಯ ಮಂಜಪ್ಪ ಅದ್ಯಂತಾಯರ ಅಳಿಯ ಕಾರ್ಕಳ ತಾಲ್ಲೂಕು ಬಡಗ ಮಿಜಾರು ಗ್ರಾಮದ ಗೀತಾಸದನದಲ್ಲಿರುವವರು —ಪ್ರತಿವಾದಿ

ತಾರೀಕು 20-12-1950ರಲ್ಲು ಸದ್ರಿ ಪ್ರತಿವಾದಿಯು ವಾದಿಳಿಗೆ ಬರೆಕೊಟ್ಟ ರೂಪಾಯಿ 1500-0-0ರ ಡಿ ಪೊ, ನೋಟಿನ ಅಸಲು ಬಡ್ಡಿ ವ್ಯವೇಜು ವಸೂಲಿ ಬಗ್ಗೆ ಮಾಡಿದ ಮೇಲಿನ ದಾವೆಯು ಸದ್ರಿ ಕೋರ್ಟಿನಲ್ಲಿ ತಾರೀಕು 28-6-1952ಕ್ಕೆ ಇಡೋಣಾಗಿಯದೆ. ಸದ್ರಿ ದಾವೆಯಲ್ಲಿ ಸದ್ರಿ ಪ್ರತಿವಾದಿಗೆ ಏನಾದರೂ ಉದಹರಿಸುವುದಿದ್ದರೆ ಆ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಸಾಕ್ಷಾಗಿ ಹಾಜರು ಮಾಡಿಕೊಳ್ಳದಿದ್ದಲ್ಲಿ ಸದ್ರಿ ದಾವೆಯು ಪ್ರತಿವಾದಿಯ ಗೈರುಹಾಜರಿಯಲ್ಲಿ ತೀರ್ಮಾನಿಸಲಾದೀತು.

[ಕೋರ್ಟ್ ಹುಕುಂ ಪ್ರಕಾರ]

ಬೈಲೂರು ವಾಸುದೇವರಾವ್

ವಾದಿಳರ ಅಡ್ವೊಕೇಟ್

ಕಾರ್ಕಳ, ತಾ. 16-6-1952

THE CATHOLIC BANK LTD, Shirva Branch

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆಕೊಂಡ ಸಾಲದ ಮೊಬಲಗನ್ನಾಗಲೀ ಯಾ ಆದಕ್ಕಾಗುವ ಈ ತನಕದ ಬಡ್ಡಿಯನ್ನಾಗಲೀ ಕೊಡದೆ ಇರುವುದರಿಂದಲೂ ಅಲ್ಲದೆ ಕ್ರಮವಾದ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಕೆಲವರು ಪಡಕೊಂಡು ಕೆಲವರು ಊರಿನಲ್ಲಿ ಇಲ್ಲವೆಂತ ವಾಪಾಸು ಬಂದಿರುವುದರಿಂದಲೂ, ನಗಗಳನ್ನು ಅವರವರು ಬಿಡಿಸಿಕೊಂಡು ಹೋಗದಿರುವುದರಿಂದಲೂ, ಸದ್ರಿಯವರಿಗೆ ಯಾ ಸದರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಜೂನ್ ತಿಂಗಳ ತಾ. 26ನೇ ಗುರುವಾರ ದಿವಸ ಗಂಟೆ 3ಕ್ಕೆ ಯಾ ಬ್ಯಾಂಕಿಗೆ ಯುಕ್ತಕಂಡ ಇನ್ನಿತರ ದಿನಗಳಲ್ಲಿ ಪುನಹಾ ನೋಟಿಸು ಕೊಡದನೇ ಸದ್ರಿ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಲಾದಿತು.

ತಾರೀಕು	J. L. No.	ಹೆಸರು ಮತ್ತು ವಿಳಾಸ	ಮೊಬ್ಲಗು ರೂ.
25- 7-50	26/1269	ಶ್ಯಾಮ ಸೆಟ್ಟಿ N/o ಸೂರು ಸೆಟ್ಟಿ, ಕಲತ್ತೂರು ಪಮ್ಮನ ಬೆಟ್ಟು, ಪಾದೂರು.	40
22- 8-50	26/1482	ಮಹಮ್ಮದ್ ಬ್ಯಾರಿ S/o ಮೈದಿನ್ ಬ್ಯಾರಿ, ಮಂಚಕಲ್ಲು, ಶಿರ್ವ.	52
1- 9-50	26/1559	ಮಹಮ್ಮದ್ ಹುಸೇನ್‌ಸಾಹೇಬ್ S/o ಅಬ್ಬಸ್‌ಅಲ್ಲಿ ಸಾಹೇಬ್, ಮಸೀದಿಬಳಿ, ಶಿರ್ವ.	45
2- 9-50	26/1572	ಎಸ್. ಅಬ್ದುಲ್ ಸಮದ್ S/o ಇಸುಬ್ ಸಾಹೇಬ್, ಸ್ಕ್ವೇರ್, ಶಿರ್ವ.	100
5- 9-50	26/1577	K. ನರಸಿಂಹ ನಾಯ್ಕ S/o N. ನಾರಾಯಣ ನಾಯ್ಕ, ಮಂಚಕಲ್ಲು, ಶಿರ್ವ.	100
6-12-50	26/2158	—Do—	75
7-12-50	26/2166	ಜೂಜೆ ಪಿಂಟೊ S/o ಬಲ್ತಜಾರ್ ಪಿಂಟೊ, ಮಜಲಕೋಡಿ, ಪಾದೂರು.	80
10- 1-51	27/73	ಜೋನ್ ಡಿಸೋಜ S/o ಅಲೆಕ್ಸ್ ಡಿಸೋಜ, ಕಟ್ಟಿಂಗೇರಿ, ಮೂಡುಬೆಳ್ಳೆ.	100
18- 1-51	27 117	ತಿಮ್ಮಪ್ಪ ಸೇರಿಗಾರ N/o ಸಿದ್ದು ಸೇರಿಗಾರ, ಪಿಂಜೂರು ಕಪಾಡಿ, ಪಿಂಜೂರು.	34
10- 2-51	27/262	ಹಿಲಾರಿ ಮಿನೇಜಸ್ S/o ಇನಾಸ್ ಮಿನೇಜಸ್, ಮೂಡುಬೆಳ್ಳೆ.	125
16- 2-51	27/304	ರೀತ ಮಿನೇಜಸ್ W/o ಲಿಯೋ ಮಿನೇಜಸ್ ಶಿರ್ವ ದಡ್ಡು, ಶಿರ್ವ.	40
23- 2-51	27/374	ಜೋನ್ ಮಿನೇಜಸ್ S/o ಲೊರೇಸ್ ಮಿನೇಜಸ್, ನಲದೂರು, ಪಾದೂರು	150
23- 4 51	27/742	ಬಪ್ತಿಸ್ತ್ ಡಿಸೋಜ S/o ಸಲ್ವದೋರ್ ಡಿಸೋಜ, ಬಬಿನಾಲ್, ಬೆಳ್ಮಣ್.	315
23- 5-51	-7/947	ಪಾಸ್ಕಲ್ ಕೋದ್ರ S/o ಫ್ರಾನ್ಸಿಸ್ ಕೋದ್ರ, ಪಾಣಿಯೂರು, ಯೆಲ್ಲೂರು.	725

Shirva
Dated 16-6-52

C. D. Souza,
ಏಜಂಟ್.

ನೋಟೀಸು

ಈ ಮೂಲಕ ಸರ್ವಜನರಿಗೂ ತಿಳಿಯಪಡಿಸುವದೇನಂದ್ರೆ—

ಮಾನ್ಯ ಮದ್ರಾಸು ಹೈಕೋರ್ಟಿನವರು ಸದ್ರಿ ಕೋರ್ಟಿನ C.M.P. No. 4932/52 & 5080/52ನೇ ಅರ್ಜಿಗಳಲ್ಲಿ, ಅದೇ ಕೋರ್ಟಿನ writ petition No. 202/52 ತೀರ್ಮಾನವಾಗುವ ತನಕ ಉಡುಪಿ ಶ್ರೀ ಕೃಷ್ಣಾಪುರ ಮಠದ ಸಕಲ ಆಡಳ್ತೆ ನಡೆಸುವ ಬಗ್ಗೆ ನನ್ನನ್ನು ರಿಸೀವರ್ ಆಗಿ ನೇಮಿಸಿದ್ದಾರೆ. ಆದುದರಿಂದ ಸದ್ರಿ ಮಠಕ್ಕೆ ಸಲುವ ಯಾವ ತೋಟ ಗೇಣಿ, ಬಾಡಿಗೆ ವ ಇತರ ಕೊಡುವಿಕೆಗಳನ್ನು ವಸೂಲುಕೊಟ್ಟು ನನ್ನ ಡುಪ್ಲಿಕೇಟ್ ರಶೀದಿ ಪಡಕೊಳ್ಳತಕ್ಕದ್ದು

ಕೆ ವಾಸುದೇವ ರಾವ್,
ಬಿ.ಎ.ಬಿ ಎಲ್.
ಎಡ್ವಕೇಟ್-ರಿಸೀವರ್,
ಶ್ರೀ ಕೃಷ್ಣಾಪುರ ಮಠ, ಉಡುಪಿ.

ಮಂಗಳೂರು, ತಾ. 11-6-52

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರಿಪ್ರವಾಸಿ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ಶಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣ ಅಡಿಗೆ, ತಿಂಡಿತಿನಿಸು, ಇವುಗಳ ರುಚಿರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI. S. Kanara.



ಚಿಕ್ಕ ಮಕ್ಕಳ ಅಕ್ಕರೆಯ
ಸಚಿತ್ರ ಪದ್ಯ ಪುಸ್ತಕ—
ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ಒಂದರಿಂದ ಐದನೆ ತರಗತಿ ವರೆಗಿನ ಮಕ್ಕಳಿಗೆ ಹಾಡಲಿಕ್ಕೂ, ಅಭಿನಯಿಸಲಿಕ್ಕೂ, ಅನುಕೂಲವಾದ ಪದ್ಯಗಳು!

ಮಂಜೂರಾತಿ ಪಡೆದು, ಕೆಲವು ವರ್ಷಗಳಿಂದ ಜಿಲ್ಲೆಯ ಮತ್ತು ಹೊರಗಿನ ಶಾಲೆಗಳಲ್ಲೆಲ್ಲಾ ಪ್ರಚಾರದಲ್ಲಿದೆ.

ಬೆಲೆ: 0—6—0

ನವಭಾರತ ಬುಕ್ ಡಿಪೊ ಉಡುಪಿ

...ಕಟ್ಟೆಕೂರು ಸೇತುವೆಯ ಉದ್ಘಾಟನೆಯು — ಜುಲೈ ತಿಂಗಳ ತಾ 1ರಲ್ಲಿ ...ಯಲಿರುವುದು. ಇದೇ ತಿಂಗಳ ತಾ 10ರಲ್ಲಿ ...ದ್ರಾಸಿನ ಸಾರ್ವಜನಿಕ ಕಾಮಗಾರಿ ಇಲಾಖೆ ಮಂತ್ರಿಗಳು ಉದ್ಘಾಟಿಸುವರೆಂದು ಪ್ರ...ಕಟಿಸಲಾಗಿತ್ತಾದರೂ ಮಂತ್ರಿಗಳ ಕಾರ್ಯ...ಕ್ರಮದ ಬದಲಾವಣೆಯಿಂದಾಗಿ ಆ ದಿನ ಆ ...ಕಾರ್ಯ ನಡೆಯಲಿಲ್ಲ.

...ವರ್ಗ — ದ. ಕ. ಜಿಲ್ಲಾ ರೀಜನಲ್ ...ಟ್ರಾನ್ಸ್ಪೋರ್ಟ್ ಆಫೀಸರರಾಗಿದ್ದ ಶ್ರೀ ...ಮಾಧವ ಮೆನನ್ ಅವರಿಗೆ ನೀಲಗಿರಿ ಜಿಲ್ಲೆಗೆ ವರ್ಗವಾಗಿದ್ದುದರಿಂದ ಅವರ ಹುದ್ದೆಗೆ ... ಕ್ಯಾದರ್ ಅಲಿಖಾನ್, ಅವರನ್ನು ನೇಮಿಸಲಾಗಿದೆ.

ಧಾರಳ ಗೋಧಿ ಮಾರಾಟದ ವ್ಯವಸ್ಥೆ — ದ. ಕ. ಜಿಲ್ಲಾ ಹೋಲ್‌ಸೇಲ್ ಕೋಆಪರೇಟಿವ್ ಸ್ಟೋರ್ಸಿನ ಅಧ್ಯಕ್ಷ ಶ್ರೀ ...ಎಮ್. ಶಿವರಾಯರು ಒಂದು ಪ್ರಕಟಣೆಯನ್ನು ಹೊರಡಿಸಿ, ಗೋಧಿ ಧಾನ್ಯವು ವಿನಿಯಂತ್ರಣವಾದುದರಿಂದ ಜನತೆಯು ಎಷ್ಟು ಪ್ರಮಾಣದಲ್ಲೂ ಯಾವ ನಿರ್ಬಂಧವೂ ಇಲ್ಲದೆ ಗೋಧಿಯನ್ನು ಪಡೆಕೊಳ್ಳ ಬಹುದಾಗಿ ಸೂಚಿಸಿರುತ್ತಾರೆ.

ಇನ್ನಂಜೆ— ಸ್ಥಳೀಯ ಹಳೆ ವಿದ್ಯಾರ್ಥಿ ಸಂಘದ ಮಹಾ ಸಭೆಯು ಈಚೆಗೆ ಶ್ರೀ. ಎಮ್. ಕರಿಯಣ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಗತವರುಷದ ವರದಿವಾಚನ, ಆಯವ್ಯಯ ಪಟ್ಟಿಯು ಮಂಜೂರಾತಿಯಾದ ಬಳಿಕ ಶಿಶು ವಿಹಾರಕ್ಕೆ ಒಂದು ನೂರ ಒಂದು ರೂಪಾಯಿ ಸಹಾಯ ಧನ ಮಂಜೂರು ಮಾಡಲಾಯಿತು. ಹೊಸ ಕಾರ್ಯಕಾರೀ ಮಂಡಳಿಯ ರಚನೆಯಾಗಿ ಸಭೆಯು ಮುಕ್ತಾಯವಾಯಿತು. ಅದೇ ದಿನ ರಾತ್ರಿ ಇನ್ನಂಜೆ ಹಳೆ ವಿದ್ಯಾರ್ಥಿ ಸಂಘ ಮತ್ತು ಗ್ರಾಮಸೇವಾ ಸಮಿತಿಗಳ ಸಂಯುಕ್ತ ವಾರ್ಷಿಕೋತ್ಸವವು ಶ್ರೀ ಎಚ್. ವೆಂಕಟ್ರಾಯ ಗಡಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ವಿನೋದಾವಳಿಗಳ ಕಾರ್ಯಕ್ರಮದೊಂದಿಗೆ ಸಮಾರಂಭ ಕೊನೆಗೊಂಡಿತು.

ಕೋಟಿ- ಶ್ರೀ. ಕೆ. ರಂಗನವರ ಮಾತೃ, ದೇಯಿ ಪೂಜಾರ್ತಿಯವರು ತಾರೀಖು 13-6-52ರಲ್ಲಿ ದೈವಾಧೀನರಾದುದು ವಿಷಾದಕರ. ಇವರ ಶವಸಮಸ್ಕಾರ ಕಾರ್ಯಕ್ರಮಗಳಲ್ಲಿ, ಸಾವಿರಾರು ಬಡಬಗ್ಗರು, ಭಾಗವಹಿಸಿದ್ದರು. ದಿವಂಗತರು ಬಡವರ ಬಂಧುವಾಗಿ ತುಂಬಾ ಸಹಾಯ ಮಾಡುತ್ತಿದ್ದವರು.

ಕಾರ್ಕಳ- ಕಳದ ವರುಷ ನಡೆದ ಅಧಿಕ ಭತ್ತದ ಬೆಳೆಯ ಸ್ಪರ್ಧೆಯಲ್ಲಿ ತಾಲೂಕು ಮತ್ತು ಜಿಲ್ಲಾ ಬಹುಮಾನವನ್ನೂ ಪಡೆದ ನಿಟ್ಟೆ ಗ್ರಾಮದ ಶ್ರೀ ದೇಜಪ್ಪ ಅಧಿಕಾರಿಗಳಿಗೆ ಆ ಬಹುಮಾನಗಳನ್ನು ಹಂಚುವ ಸಮಾರಂಭವು ಇದೇ ತಾ. 13ರಲ್ಲಿ ಶ್ರೀ ವೆಂಕಟ್ರಮಣ ಹಾ। ಎ। ಶಾಲೆಯಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಎಗ್ರಿಕಲ್ಚರಲ್ ಡೆಮೋನ್‌ಸ್ಟ್ರೇಟರ್ ಶ್ರೀ ಎಚ್. ಮುದ್ದಣ್ಣ ಸೆಟ್ಟಿ, ಶ್ರೀಗಳಾದ ಎಮ್. ಡಿ. ಅಧಿಕಾರಿ, ಎ. ಬಿ. ಸೋನ್ಸ್ ಮೊದಲಾದವರು ಭಾಷಣ ಮಾಡಿದರು. ಜಿಲ್ಲಾ ಕಲೆಕ್ಟರರು ಮಾತನಾಡುತ್ತಾ, ಕೃಷಿ ಕ್ಷೇತ್ರ ವಿಸ್ತರಣೆ ಮತ್ತು ಉತ್ತಮ ಕೃಷಿ ಮಾಡುವ ಅವಶ್ಯಕತೆಯನ್ನು ಸೂಚಿಸಿದರು.

ಇಲ್ಲಿಯ ಸರಕಾರಿ ಆಸ್ಪತ್ರೆಯಲ್ಲಿ ದಂತ ಚಿಕಿತ್ಸಾ ವಿಭಾಗವು, ಇದೇ ತಾ 1ರಲ್ಲಿ ತೆರೆಯಲಾಯಿತು. ಡಾ। ಕೆ. ಚಿ. ಕಾಮತರು ಒನೆರರಿ ಡೆಂಟಲ್ ಸರ್ಜನರಾಗಿ ನೇಮಕ ಹೊಂದಿರುವರು.

ಮೂಡಬಿದ್ರೆ— ಮೂಡಬಿದ್ರೆಯಲ್ಲಿ ಟೆಲಿಗ್ರಾಫ್ ಸೌಕರ್ಯವು ಇದೇ ತಾ 10ರಿಂದ ಆರಂಭವಾಗಿದೆ.

ತೋನ್ಸೆ ತಿಮ್ಮಣ್ಣಕುದುರು—ದಿ ತೋನ್ಸೆ ರೋಹಣಿ ಸೊಸೈಟಿಯ ವರ್ಧಂತಿ ಸಮಾರಂಭವು ಕಳದ ತಾ. 30ರಲ್ಲಿ ಶ್ರೀ ಬಿ. ನಾರಾಯಣ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಟಿ. ಇಬ್ರಾಹಿಮ್ ಹುಸೇನ್, ಟಿ. ಎಲ್. ಉಡುಪ, ಜಿ. ಶ್ರೀನಿವಾಸ ರಾವ್ ಮೊದಲಾದವರ ಶಾಲೋಚಿತ ಮಾತುಗಳಾಗಿ ಲಘು ಉಪಹಾರದೊಂದಿಗೆ ಸಭೆ ಮುಕ್ತಾಯವಾಯಿತು.

ನಾಗೂರು — ಕಳದ ತಾ. 30ರಲ್ಲಿ ನಾಗೂರು ಹರಿಜನ ವೆಲ್‌ಫೇರ್ ಶಾಲೆಯಲ್ಲಿ 'ಹರಿಜನ ದಿನಾಚರಣೆಯು' ಶ್ರೀ ಬಿ. ನಾರಾಯಣ ಹೆಬ್ಬಾರರ ಅಧ್ಯಕ್ಷತೆಯಲ್ಲಿ ಜರಗಿತು. ಆ ದಿನ ಬೆಳಿಗ್ಗೆ ಕಿರಿಮಂಜೇಶ್ವರ ಮೊದಲಾದ ಹರಿಜನ ಕೊಪ್ಪಗಳನ್ನು ಸಂದರ್ಶಿಸಿ ಅಲ್ಲಿಯ ನಿವಾಸಿಗಳಿಗೆ ಶುಚಿತ್ವದ ಕುರಿತು ಸಲಹೆಗಳನ್ನು ಕೊಡಲಾಯಿತು. ನಾವುಂದ ಗ್ರಾಮದ ಐದು ಹರಿಜನ ಕುಟುಂಬಗಳಿಗೆ ಸಾಧಾರಣ 12 ಎಕ್ರೆ ಸ್ಥಳವನ್ನು ದರಖಾಸ್ತಿಗೆ ಕೊಡಲಾಯಿತು. ಹರಿಜನ ವೆಲ್‌ಫೇರ್ ಇನ್ಸ್‌ಪೆಕ್ಟರ್ ಶ್ರೀ ಕೆ. ಚೆನ್ನಪ್ಪನವರು ಹರಿಜನ ದಿನಾಚರಣೆ ಮಹತ್ವದ ಕುರಿತು ಮಾತನಾಡಿದರು.

ಹಿರಿಯಡ್ಕ—ಹಿಂದೀ ಪ್ರೇಮಿ ಮಂಡಳದ ಪದವೀದಾನ ಸಮಾರಂಭವು ಶ್ರೀ U. ಎ. ಪೈ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ತಾ. 8ರಲ್ಲಿ ಜರಗಿ ಹಿಂದಿಯನ್ನು S. S.L.C. ಯಲ್ಲಿ [illegible] ಕಡ್ಡಾಯವಾಗಿಸಬೇಕೆನ್ನುವ, ಹಿಂದೀ ಕಲಿಸುವ ವೇಳೆಯನ್ನು ಹೆಚ್ಚಿಸಬೇಕೆನ್ನುವ ಹಿಂದೀ ಉಪಾಧ್ಯಾಯರ ಸ್ಥಿತಿಯನ್ನು ಉತ್ತಮಗೊಳಿಸಬೇಕೆನ್ನುವ ನಿರ್ಣಯಗಳಾದುವು. ಅಧ್ಯಕ್ಷರು ರಾಷ್ಟ್ರಭಾಷೆಯಾದ ಹಿಂದಿಯನ್ನು ಸರ್ವರೂ ಅಭ್ಯಸಿಸಬೇಕೆಂದೂ ದಕ್ಷಿಣ ಭಾರತದ ಮಾಧ್ಯಮಿಕ ಶಾಲೆಗಳಲ್ಲಿ ಹಿಂದಿಯನ್ನು ಉತ್ತರ ಭಾರತದ ಶಾಲೆಗಳಲ್ಲಿ ಇಲ್ಲಿಯ ತಮಿಳು ತೆಲುಗು, ಕನ್ನಡ, ಮಳಯಾಳ ಭಾಷೆಗಳಲ್ಲಿ ಒಂದನ್ನು ಕಡ್ಡಾಯವಾಗಿ ಕಲಿಸುವಂತಾದರೆ ಭಾಷಾವಾದ ವಿವಾದಗಳು ಕಡಿಮೆಯಾಗಬಹುದೆಂದೂ ಹೇಳಿದರು.

ಸರ್ವೆಂಟ್ಸ್ ಓಫ್ ಇಂಡಿಯಾ ಸೊಸೈಟಿ—ಈ ಸಭೆಯು 1905ರಲ್ಲಿ ದಿವಂಗತ ಗೋಖಲೆಯವರಿಂದ ಸ್ಥಾಪಿಸಲ್ಪಟ್ಟು ಈ ತಿಂಗಳ ತಾ12ಕ್ಕೆ47 ವರುಷದ ಗಡಿಯನ್ನು ದಾಟಿ ಇದೀಗ 48ನೆ ವರುಷದಲ್ಲಿ ಪಾದಾರ್ಪಣೆ ಮಾಡಿದೆ. ರಾಜಕೀಯ, ಸಾಮಾಜಿಕ, ಹೆಚ್ಚೇಕೆ ದೇಶಕ್ಕೂ ಜನತೆಗೂ ಸೇವೆ ಸಲ್ಲಿಸಲು ಉತ್ಸಾಹೀಯುವಕರನ್ನು ತರಬೇತುಗೊಳಿಸುವುದಕ್ಕೆ ಈ ಸಂಸ್ಥೆಯು ಮುಖ್ಯೋದ್ದೇಶವಾಗಿದೆ. ವರ್ತಮಾನಕಾಲದಲ್ಲಿ ಪಂಡಿತ ಹೃದಯನಾಥ ಕುಂಜ್ರು, ಶ್ರೀಗಳಾದ ಎಸ್. ಜಿ. ವಾಸ್, ಪಿ ಕೋದಂಡ ರಾವ್, ಎಲ್. ಎನ್. ಸಾಹು, ಹರದತ್ತ ಶರ್ಮ, ಡಿ. ವಿ. ಅಂಬೇಕರ್ ಎಸ್. ಜಿ.ಗೋಖಲೆ, ಎ. ಡಿ. ಮಣಿ, ಎಸ್. ಆರ್ ವೆಂಕಟ್ರಾಮನ್, ಆರ್ ಆರ್. ಭಕ್ಲೆ, ದಿನಕರ ದೇಸಾಯಿ, ಕಾಳಚೆ, ಆರ್. ಎಸ್. ಮಿಶ್ರಾ, ಕೆ. ಎಲ್. ಎನ್. ರಾವ್, ಕೋದಂಡರಾವ್ ಶ್ರೀ ರಾಮ ಬಾಜ್ಪೈ ಮೊದಲಾದವರು ಸೊಸೈಟಿಗೆ ಕೀರ್ತಿ ತರುವಂತಹ ಕಾರ್ಯದಲ್ಲಿ ನಿರತರಾಗಿದ್ದಾರೆ.

ಪ್ರಕಟಣೆ

ಬಿಲ್ಲವರ ಎಸೋಸಿಯೇಶನ್,
17, ರಘುನಾಥ ದಾದಾಜಿ ರಸ್ತೆ,
ಕೋಟೆ, ಮುಂಬಯಿ.

ಈ ಸಂಘವು ಬಿಲ್ಲವ ಜಾತಿಯ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡಲಿರುವುದು. ಅದ ಪ್ರಯುಕ್ತ ವೇತನ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳು ಇದರ ಸಲುವಾಗಿ ಅರ್ಜಿ ಪತ್ರಗಳನ್ನು ಜೂನ್ ತಿಂಗಳ ತಾ. 30ರೊಳಗೆ ಬರೆದು ಪಡಕೊಳ್ಳಬಹುದು.

ಬಹುಮಾನಗಳು

ಬಿಲ್ಲವ ಜಾತಿಯ ವಿದ್ಯಾರ್ಥಿಗಳಲ್ಲಿ ಮುಂಬೈ ಮೆಟ್ರಿಕ್ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲೂ, ಮದ್ರಾಸ್ S. S. L. C. ಪಬ್ಲಿಕ್ ಪರೀಕ್ಷೆಯಲ್ಲೂ ಕೂಳಿತು ಉಚ್ಚ ತರಗತಿಯಲ್ಲಿ ಪಾಸಾಗುವ ವಿದ್ಯಾರ್ಥಿಗಳಿಗೆ ಒಂದೊಂದು ಬಹುಮಾನವು ಕೊಡಲ್ಪಡುವುದು. ಆದ ಪ್ರಯುಕ್ತ ಸರ್ವ ಬಿಲ್ಲವ ಜಾತಿಯ ವಿದ್ಯಾರ್ಥಿಗಳು ಕಾರ್ಯದರ್ಶಿಯವರಿಗೆ ತಾವು ಪಡೆದಂಥ ಮಾರ್ಕು ತಿಳುಹಿಸಿಕೊಡಬೇಕಾಗಿದೆ.

ಇತಿ,
ಡಿ. ವಿ. ಕರ್ಕೇರ,
ಕಾರ್ಯದರ್ಶಿ-ವಿದ್ಯಾಶಾಖೆ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S C. 145/52

...ರ ಶೆಟ್ಟಿ, —ವಾದಿ,
...ಂಜಯ್ಯ ಶೆಟ್ಟಿ ಸಹಾ —ಪ್ರತಿವಾದಿಗಳು.

ಸದ್ರಿ ವಾದಿ ಕಡೆಯಿಂದ ಈ ಮೂಲಕ ಜಾಹೀರ ಮಾಡಿಕೊಳ್ಳುವದೇನೆಂದ್ರೆ.

1. ಮಂಜಯ್ಯ ಶೆಟ್ಟಿ, ಹೊಳೆಬಾಗಿಲು ಮನೆ ...ಕೃಷ್ಣಯ್ಯ ಶೆಟ್ರ ಮಗ ಕಾಲ್ತೋಡು ಗ್ರಾಮ ... ಕಾಫಿ ಹೊಟೆಲಲ್ಲಿರುತ್ತಾನೆ.

ವಾದಿಗೆ 1ನೇ ಪ್ರತಿವಾದಿಯು ಬರ್ಕೊಟ್ಟ ...ನಿಂದ ನೋಟಿನ ಪ್ರಕಾರ ಪ್ರತಿವಾದಿಯಿಂದ ಬರತಕ್ಕ ಅಸ್ಲು ಬಡ್ಡಿ ಖರ್ಚು ರೂ. ...-10-4 ಬರಮಾಡಿಕೊಳ್ಳುವರೆ ವಾದಿ ...ಪ್ರತಿವಾದಿರ ಮೇಲೆ ಮಾಡಿದ ದಾವೆಯು ... 26-6-52ಕ್ಕೆ ತನ್ಕಿಗೆ ಇಟ್ಟಿದೆ. ಆ ಕಾಲ... ತಮ್ಮ ದೇನಾದ್ರು ಆಕ್ಷೇಪವಿದ್ರೆ ಸದ್ರಿ ...ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಖುದ್ದಾಗಲಿ ವಕೀಲರ ದ್ವಾರಾ ...ಗಾಗಿ ಹಾಜರ ಮಾಡಿಕೊಳ್ಳತಕ್ಕದ್ದು ...ದ್ರೆ ತಮ್ಮ ಗೈರ ಹಾಜರಿಯಲ್ಲಿ ಏಕಪಕ್ಷ ... ತೀರ್ಮಾನಿಸಲ್ಪಡುವದೆಂಬ ಸಂಗ್ತಿ ...ದಿ ಕಡೆಯಿಂದ ಈ ಮೂಲಕ ತಿಳಿಯಪಡಿಸಿದೆ.

M. Anthaya Shetty,
Advocate for Plff.
...ndapur, Date 10-6-52

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ

ಇವರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್, ಸಾಲಿಗ್ರಾಮ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬ್ಯಾಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ವ ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಸರಿಯಾಗಿ ಕೊಡದೆ ಇರುವುದರಿಂದ, ಸದ್ರಿಯವರಿಗೆ ರಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಅದನ್ನು ಕೆಲವರು ಪಡೆಯದೆ ಹಣ ವಾಪ್ತಿ ಮಾಡದೆಯೂ ಮತ್ತು ವೃತಪಟ್ಟಿರುವುದರಿಂದಲೂ, ಸದ್ರಿಯವರಿಗೆ ವ ಅವರ ವಾರಿಸುದಾರರಿಗೆ ಈ ಮೂಲಕ ತಿಳಿಸುವುದೇನೆಂದ್ರೆ ಅವರು ಅಸಲು ಬಡ್ಡಿ ವಗೈರೆ ಐವೇಜನ್ನು ಇದೇ ತಾ. 25-6-52ರೊಳಗೆ ವಾಪತಿಮಾಡದಿದ್ದಲ್ಲಿ ಇದೇ ತಾ. 28-6-52ನೇ ಶನಿವಾರ ಮಧ್ಯಾಹ್ನ ಗಂಟೆ 3ಕ್ಕೆ ಯಾ ಬ್ಯಾಂಕಿಗೆ ಯುಕ್ತಕಂಡ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೆ ಸಾಲದ ಬಾಬ್ತು ಚಿನ್ನಾಭರಣಗಳನ್ನು ಬ್ಯಾಂಕಿನಲ್ಲಿ ಹರಾಜು ಮಾಡಲಾಗುತ್ತದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಸಾಲದ ಮೊಬಲಗು
627/50	ಎಚ್. ಆರ್. ಹಂದೆ, ಗಣಪಯ್ಯ ಹಂದೇರ ಮಗ, ಕೋಟತಟ್ಟು ಗ್ರಾಮ, ಕೋಟ ಪೋಸ್ಟು.	800 0
33/51	ನಾರಾಯಣ ಉರಾಳ್, ಚಿತ್ರಪಾಡಿ ಗ್ರಾಮದ ಪರೀಲರು, ಸಾಲಿಗ್ರಾಮ ಪೋಸ್ಟು.	150 0
352/51	—do—	75 0
40/51	ಕೆ. ನಾಗಪ್ಪ ನಕ್ಕತ್ತಿ, ಶ್ರೀನಿವಾಸ ನಕ್ಕತ್ತಿಗರ ಮಗ, ಕಾರ್ಕಡ ಗ್ರಾಮ, ಸಾಲಿಗ್ರಾಮ ಪೋಸ್ಟು.	40 0
536/51	ತೇಜಪ್ಪ ಸೆಟ್ಟಿ, ಸುಬ್ಬಕ್ಕ ಸೆಡ್ತಿರ ಮಗ, ಶಾನಡಿ ಗ್ರಾಮ, ಸ್ವಾಬರಕಟ್ಟೆ ಪೋಸ್ಟು.	100 0
602/51	ಕೆ. ಲಕ್ಷ್ಮೀನಾರಾಯಣ ಕಾಮತ್, ಕೊಗ್ಗ ಕಾಮತರ ಮಗ, ಕೋಟ ಪೋಸ್ಟು.	500 0

ಸಾಲಿಗ್ರಾಮ, 16-6-52

K. P. Urala,
ಏಜೆಂಟ್.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಸಲ್ಲು ವೇದನೆಗಳಿಗೂ, ಎದೆನೋವು, ಶ್ವಾಸಗಳು, ವಾತಕೊಳ್ಳುವುದು, ಚೇಳು ವಿಷ ಮುಂತಾದವು, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD
ಉತ್ಪತ್ತಿ
ಮಾಡ್ದು
ನಮ್ಮಲ್ಲಿ
ಸಿಗುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

ಭಾರತದ ಕೃಷಿ ಸಮಸ್ಯೆಯ ತುಲನಾತ್ಮಕ ವಿಮರ್ಶೆ

ರಾಷ್ಟ್ರಕೂಟದ ಒಟ್ಟು ಉತ್ಪಾದನೆಯಲ್ಲಿ ನಮ್ಮ ರೈತರ ಸ್ಥಾನ

(೨ನೇ ಪುಟದಿಂದ ಮುಂದರಿಸಿದ್ದು)

ತರ ಮಾನಸಿಕ ಸುಧಾರಣೆ—ಇವುಗಳಿಗೆ ಈಗ ಪ್ರಾಶಸ್ತ್ಯ ದೊರೆತರೆ ಚೆನ್ನ. ಈಗಿರುವಂತೆ, ರೈತರ ಶಕ್ತಿಯ ಪೂರ್ಣ ಉಪಯೋಗವಾಗುವುದಿಲ್ಲ--ಗುಡಿ ಕೈಗಾರಿಕೆಗಳು ಯಾಂತ್ರಿಕ ಉದ್ಯಮಗಳ ಎದುರಿಗೆ ಸ್ಪರ್ಧೆ ಹೂಡಲಾರದೆ ನಡಿಸಿರುವುದರಿಂದ ಈ ಸಮಸ್ಯೆ ಇನ್ನಷ್ಟು ಉಗ್ರರೂಪ ಧರಿಸಿದೆ. ಈ ಬೆಂಕಿಗೆ ಏರುತ್ತಿರುವ ಜನಸಂಖ್ಯಾ ಪ್ರಮಾಣವು ತುಪ್ಪವಾಗಿ ಪರಿಣಮಿಸಿದೆ. ಭೂಮಿಯಿಲ್ಲದ ರೈತರ ಸಂಖ್ಯೆಯು ಕಳೆದ ಐವತ್ತು ವರ್ಷಗಳಲ್ಲಿ ಇಮ್ಮಡಿಯಾಗಿದೆ-ಎಂದರೆ ಹೇಗೆ ನಂಬೋಣ?

ಸಮತೋಲ

ವ್ಯವಸಾಯವನ್ನು ವಿಸ್ತೃತ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿ, ಅವುಗಳಲ್ಲಿ ಈ ರೈತರನ್ನು ನೆಲೆಗೊಳಿಸುವುದೊಂದೇ ಸದ್ಯಕ್ಕೆ ತೆರೆದಿರುವ ಪರಿಹಾರ ಮಾರ್ಗ. ಇದಕ್ಕೆ ಪೂರಕವಾಗಿ ೧೯೪೯-೫೦ನೇ ವಾಣಿಜ್ಯ ಕಮಿಶನು ಸಿಫಾರಸು ಮಾಡಿದ ರೀತಿಯಲ್ಲಿ ಕೃಷಿಗೆ ಸಂಬಂಧಿಸಿದಂತೆ ಕೆಲವೊಂದು ಸಣ್ಣ ಹಾಗೂ ದೊಡ್ಡ ಪ್ರಮಾಣದ ಉದ್ಯಮಗಳಲ್ಲಿ ತೊಡಗಿದರೆ,-ಅದೂ ಈ ಜಟಿಲವಾದ ಸಮಸ್ಯೆಯ ನಿವಾರಣೆಗೆ ನೆರವಾದೀತು ಹೀಗೇ ಇದ್ದರೂ-ಅತ್ಯಂತ ಪರಿಶ್ರಮದಿಂದ ನಮ್ಮ ಕೃಷಿಯನ್ನು ಅಭಿವೃದ್ಧಿಗೊಳಿಸಿ, ಉತ್ಪಾದನೆಯ ಹೆಚ್ಚಳವನ್ನು ಸಾಧಿಸುವುದು ಅಸಾಧ್ಯವಾದರೆ-ಇನ್ನು ಎಷ್ಟೋ ವರ್ಷ ಭವಿಷ್ಯದಲ್ಲಿ ನಾವು ಪರಾವಲಂಬಿಗಳಾಗಿಯೇ ಉಳಿಯಬೇಕಾದೀತು. ರೊಕ್ಕದ ಪೈರು ಹಾಗೂ ಅನ್ನ ಕೊಡುವ ಕೃಷಿಯಲ್ಲಿ ಸಮತೋಲವನ್ನು ಸಾಧಿಸುವುದು ಸ್ವಾವಲಂಬನೆಯ ದೃಷ್ಟಿಯಿಂದ ಅಗತ್ಯ. ನಮ್ಮ ಗಿರಣಿಗಳಿಗೆ ಸಾಕಷ್ಟು ಹತ್ತಿಯು ದೊರೆಯುವುದಿಲ್ಲ- ಮತ್ತು ಸಣಬಿನ ಮಿಲ್ಲುಗಳಿಗೆ ಸಣಬು ಸಿಗುವುದಿಲ್ಲ ಎಂಬ ದೂರು ಹಾಗೆಯೇ ಉಳಿದರೂ ಅಷ್ಟು ಕೆಡಕಿಲ್ಲ—ಅನ್ನದ ಪ್ರಶ್ನೆಯೊಂದು ಮಾತ್ರ ಶೀಘ್ರಾತಿಶೀಘ್ರ ಬಗೆಹರಿಯಲೇಬೇಕು.

ನೆರೆಯ ದೇಶಗಳು

ಈ ಮಟ್ಟಿಗೆ ಪಾಕಿಸ್ತಾನವು ನಮಗಿಂತ ಅದೃಷ್ಟಶಾಲಿ ನಮಗಿಲ್ಲದ ಸೌಕರ್ಯ ಮತ್ತು ಅನುಕೂಲತೆಗಳು ಅದಕ್ಕಿರುವುದು ಈ ಸೌಭಾಗ್ಯಕ್ಕೆ ಹೇತು. ಯುದ್ಧಕ್ಕೆ ಮೊದಲು ಮತ್ತು ಯುದ್ಧ ಕಾಲದಲ್ಲಿ ವ್ಯವಸಾಯಾಭಿವೃದ್ಧಿಗಾಗಿ ದೊಡ್ಡ ಯೋಜನೆಗಳನ್ನು ಇಲ್ಲಿಯೇ ನಡೆಸಲಾಯಿತು. ಜೊತೆಗೆ ರೊಕ್ಕದ ಪೈರಾದ ಹತ್ತಿ ಮತ್ತು ಸಣಬು ಬೆಳೆಯುವ ಪ್ರದೇಶಗಳು ಅದರ ಪಾಲಿಗೆ ಬಂದಿವೆ. ಪಶ್ಚಿಮ ಪಾಕಿಸ್ತಾನದಲ್ಲಿ ರೈಲು ಮಾರ್ಗಗಳೂ ಪೂರ್ವ ಪಾಕಿಸ್ತಾನದಲ್ಲಿ ನೀರಿನ ರಹದಾರಿಯೂ ಉತ್ತಮ ಸಾರಿಗೆಯ ಸೌಕರ್ಯವನ್ನು ಒದಗಿಸಿವೆ.

ಆದರೆ ಇಷ್ಟಿದ್ದರೂ ಪಾಕಿಸ್ತಾನ ಸುಖಿಯಾಗಿಲ್ಲ—ಸಣಬು ಮತ್ತು ಹತ್ತಿಯ ಗಿರಣಿಗಳು ಭಾರತದಲ್ಲಿರುವುದರಿಂದ ಸ್ವಾವಲಂಬನೆಯನ್ನು ಸಾಧಿಸಲು ಅದಕ್ಕಾಗುವುದಿಲ್ಲ. ಔದ್ಯೋಗೀಕರಣದಲ್ಲಿ ಅದು ಬಹಳ ಹಿಂದುಳಿದಿದೆ. ಆಹಾರದ ವಿಷಯದಲ್ಲಿ ಅದು ಭಾರತಕ್ಕೆ ನಿರ್ಯಾತ ಮಾಡುವಷ್ಟು ಉಳಿಕೆ ಪಡೆದಿದ್ದರೂ-ವಿಭಜನೆಯೊಂದಿಗೆ ಉದ್ಭವಿಸಿದ ತಂಟೆಗಳ ಪರಿಣಾಮವಾಗಿ, ನಿರಾತಂಕ ವ್ಯಾಪಾರಕ್ಕೆ ಅನುಕೂಲವಿಲ್ಲ. ಸದ್ಯದ ಪರಿಸ್ಥಿತಿಯ ಗಂಭೀರತೆಯನ್ನು ಮನದಟ್ಟು ಮಾಡಿಕೊಂಡು ಪರಸ್ಪರ ಸಹಕಾರದಿಂದ ವರ್ತಿಸಿದರೆ-ಭಾರತ ಪಾಕಿಸ್ತಾನಗಳೆರಡಕ್ಕೂ ಕ್ಷೇಮ.

ಸಿಲೋನು ರೊಕ್ಕದ ಪೈರಿಗೆ ಹೇಳಿಸಿದ ದ್ವೀಪ. ಚಾ, ರಬ್ಬರು ಮತ್ತು ಕೊಬ್ಬರಿಯೇ ಅದರ ಮುಖ್ಯ ಕೃಷಿ. ಹೀಗಾಗಿ ಉಣ್ಣಲು ಬೇಕಾದ ಅನ್ನ ವಿದೇಶಗಳಿಂದ ಬರಬೇಕು (೭೦%). ಅನ್ನದ ಮಟ್ಟಿಗೆ ಸ್ವಾವಲಂಬಿಯಾಗೋಣ ಎಂದರೆ-ರೊಕ್ಕದ ಪೈರಿಗೆ ತಿಲಾಂಜಲಿಯನ್ನು ಬಿಡುವುದರ ಜೊತೆಗೆ, ಅಪಾರ ಆರ್ಥಿಕ ಸಂಪತ್ತಿಗೂ ಎರವಾಗಬೇಕು. ನೀರಾವರಿ ಮತ್ತಿತರ ತೊಡಕುಗಳಂತೂ ಇದ್ದೇ ಇವೆ ಆದುದರಿಂದ ಲೋಕದ ದುಡ್ಡಿನ ರಾಷ್ಟ್ರಗಳ ಕೃಪೆಯ ಮೇಲೆ ಭರವಸೆ ಇಟ್ಟು ಅದು ತನ್ನ ಕೃಷಿಯನ್ನು ಮಿಶ್ರಕ್ಷೇತ್ರದಲ್ಲಿಟ್ಟುಕೊಳ್ಳುವುದಕ್ಕೆ ಸದ್ಯ ಮುಂದಾಗಿದೆ. ಕೃಷಿ ಅಭಿವೃದ್ಧಿ ಯೋಜನೆಗಳು ಕಾರ್ಯರೂಪಕ್ಕೆ ಬರುತಿದ್ದರೂ--ಇನ್ನು ಹಲವು ವರ್ಷಕಾಲ ಅವುಗಳಿಂದ ಆಹಾರದ ಧೋರಣೆಯ ಮೇಲೆ ಪರಿಣಾಮವಾಗದು.

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ ಇವುಗಳಿಗೆ

ಆದರ್ಶ ನಿಲಯವೆಂದರೆ

ವುಡ್ ಲ್ಯಾಂಡ್ಸ್

ಉಡುಪಿ

ಯಾತ್ರಿಕರಿಗೂ ಪ್ರಯಾಣಿಕರಿಗೂ ಸರ್ವ ಅನುಕೂಲವಾಗುವಂತೆ

ನಗರದ ಕೇಂದ್ರ ಭಾಗದಲ್ಲಿದೆ.

ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್, ಕಲ್ಯಾಣಪುರ.

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬ್ಯಾಂಕಿನಲ್ಲಿ ನಗದ ಈಡಿನಮೇಲೆ ಸಾಲ ಪಡಕೊಂಡು ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ, ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೇ ಅವರಿಗೆ ರಿಜಿಸ್ಟ್ರೀ ನೋಟೀಸು ಬಿಟ್ಟಲ್ಲಿಯೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದ್ರಿಯರು ಈಡಿಟ್ಟ ನಗಗಳನ್ನು ಇದೇ ತಾ. 23-6-52ರ ಒಳಗೆ ಬ್ಯಾಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದ ಪಕ್ಷದಲ್ಲಿ ಸದ್ರಿಯವರು ಈಡಿಟ್ಟ ನಗಗಳನ್ನು ತಾ. 26-6-52ನೇ ಗುರುವಾರ ಬೆಳಿಗ್ಗೆ ಗಂಟೆ 11ಕ್ಕೆಯೂ ಅನಂತರ ನಮಗೆ ಯುಕ್ತಕಂಡ ತಾರೀಕಿನಲ್ಲಿ ಪುನಃ ನೋಟೀಸು ಕೊಡದೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು,

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು ರೂ.	ಅ.
26/539	ಕೆ. ಅರ್. ಮಲ್ಲಿ, ಕೆ. ಎಸ್. ಮಲ್ಲಿರ ಮಗ, ನೇಜರ್ ಕಲ್ಯಾಣಪುರ	100	0
26/1921	ಚಲ್ಲ ಪೂಜಾರಿ, ತೌಡ ಪೂಜಾರಿ ಅಳಿಯ, ಜಡ್ಡಿನ ತೋಟ ಉಪ್ಪೂರು ಕಲ್ಯಾಣಪುರ ಪೋಸ್ಟ್	50	0
26/1960	ಲೂಸಿ ಲೂವಿಸ್, ಎಡ್ವರ್ಡ್ ಲೂವಿಸರ ಹೆಂಡತಿ, ಕಲ್ಯಾಣಪುರ	275	0
27/48	ದಾಸ ಪೂಜಾರಿ, ಪುಟ್ಟಿಯ ಪೂಜಾರಿಯ ಅಳಿಯ, ಉಪ್ಪೂರು, ಉಪ್ಪೂರು ಪೋಸ್ಟ್	95	0
27/906	ಮುತ್ತಪ್ಪ ಮಂಡಕಾಲ, ಅನಂತ ಮರಕಾಲನ ಅಳಿಯ, ಕುದ್ರುಬೆಟ್ಟು ಉಪ್ಪೂರು	170	0
27/1214	ಲೋಕು ಪೂಜಾರಿ, ಬಾಬ ಪೂಜಾರಿ ಮಗ, ದೇವಣ್ಣ ತೋಟ, ಹೇರೂರು ಗ್ರಾಮ, ಬ್ರಹ್ಮಾವರ P O.	30	0
27/1275	ಕೊಡಂಚೆ ರಾಜರಾವ್, ಕೊಡಂಚೆ ವಾದಿರಾಜ ರಾವ್‌ರ ಮಗ, 76 ಬಡಗಬೆಟ್ಟು ಬೈಲೂರು ಉಡುಪಿ P O	240	0
27/1307	ಕೃಷ್ಣ ಭಟ್, ಅನಂತ ಭಟ್‌ರ ಮಗ, ಪುತ್ತೂರು ಗ್ರಾಮ, ಪುತ್ತೂರು ಪೋಸ್ಟ್	25	0
27/1311	ಮೆನ್ಯುವೆಲ್ ರೋಡ್ರಿಗ್ಸ್, ಡನಿಯಲ್ ರೋಡ್ರಿಗ್ಸರ ಮಗ, ಕುದ್ರುಬೆಟ್ಟು, ಉಪ್ಪೂರು	250	0
27/1360	ಅಲ್ಬರ್ಟ್ ಡಿಸೋಜ, ಸಂತಾನ ಡಿಸೋಜರ ಮಗ, ಆಮ್ಮುಂಜೆ, ಉಪ್ಪೂರು ಗ್ರಾಮ, ಕೊಳಲಗಿರಿ P O	45	0
27/1395	ಅಣ್ಣಯ ದಿ. ಮೆಂಡನ್, ಅಣ್ಣಪ್ಪ ಮೆಂಡನ್‌ರ ಅಳಿಯ, ಉಪ್ಪೂರು ಗ್ರಾಮ, ಉಪ್ಪೂರು P. O.	85	0
27/1398	ಅಲೆಗ್ಸ್ ಡಿಸೋಜ, ದಾವಿದ್ ಡಿಸೋಜರ ಮಗ, ಜಡ್ಡು, ಆರೂರು ಗ್ರಾಮ, ಕುಂಜಾಲ್ P O	30	0
27/1434	ಜೋನ್ ರೋಡ್ರಿಗ್ಸ್, ಇಸಾಕ್ ರೋಡ್ರಿಗ್ಸರ ಮಗ, ಸಂತೆಕಟ್ಟೆ ಕಲ್ಯಾಣಪುರ	30	0
27/1533	ಉಗ್ಗ ಪೂಜಾರಿ, ಬಾಬ ಪೂಜಾರಿ ಅಳಿಯ, ಉಗ್ಗೆಲ್ಬೆಟ್ಟು ಉಪ್ಪೂರು ಗ್ರಾಮ, ಉಪ್ಪೂರು P O	45	0
27/1536	ಗ್ರೆಗರಿ ಲೂವಿಸ್, ಲೋರೆನ್ಸ್ ಸೆಬೆಸ್ತಿನ್ ಲೂವಿಸರ ಮಗ, ಮಾವಿನಕುದ್ರು, ಉಪ್ಪೂರು P O	45	0
27/1539	ಜಗನ್ನಾಥ ಶೆಟ್ಟಿ ಅಣ್ಣಯ್ಯ ಶೆಟ್ರ ಮಗ, ಮೂಡು ಬೈಕಾಡಿ, ಬ್ರಹ್ಮಾವರ ಪೋಸ್ಟ್	30	0
27/1963	ಬಿ. ವತ್ಸಲ ಹೆಗ್ಗಡ್ತಿ, ತೇಜಪ್ಪ ಹೆಗ್ಗಡೆರ ಮಗಳು, ಬೆಂಚ್ ಕೋರ್ಟಿನ ಎದುರು, ಕಲ್ಯಾಣಪುರ	22	0

ಕಲ್ಯಾಣಪುರ,
13—6—52

S. Rebello,
Agent

ಸ್ವಾಮಿಯ ಪತ್ರಗಳು ೩೨

ಇದನ್ನು ನೋಡಿ ನಗರದ ಇನ್ನೊಂದು ಕಡೆಗೆ ಬಸ್ಸಿನಲ್ಲಿ ಹೋದೆವು. ಅಲ್ಲಿ ಒಂದು ಬದಿಯಲ್ಲಿ ಮೋಟಾರು ಕಾರುಗಳನ್ನು ಜಾಗಿನಲ್ಲಿ ಓಡಿಸುವ ಜಾಗವಿದೆ. ಇನ್ನೊಂದು ಕಡೆ ಮುಸ್ಸಲೋನಿ ಕಾಲದಲ್ಲಿ ಕಟ್ಟಿದ ಒಂದು ಬಹಳ ದೊಡ್ಡದಾದ ಮತ್ತು ಸುಂದರವಾದ ಕಟ್ಟೋಣ. ಅದರಲ್ಲಿ ಈಗ ಆಹಾರದ ಮಂತ್ರಿಮಂಡಲವು ಕೆಲಸ ಮಾಡುತ್ತಿದೆ. (Food Ministry] ಅಲ್ಲಿಯೇ ಸ್ವಲ್ಪ ಮುಂದೆ ಹೋದಾಗ ನಗರದ ಸುತ್ತ ರೋಮನರು ಕಟ್ಟಿದ ಗೋಡೆಯು ಇರುತ್ತದೆ. ಅದನ್ನು ಕ್ರಿ. ಶ. ಒಂದನೇ ಶತಮಾನದಲ್ಲಿ ಕಟ್ಟಿದ್ದಂತೆ. ಅದು ಸುಮಾರು 20 ಅಡಿ ಎತ್ತರವಿದ್ದು ನಗರದ ಸುತ್ತಲೂ 12 ಮೈಲು ಉದ್ದವಿದೆ. ಅದಕ್ಕೆ ತಾಗಿ ನಗರದಿಂದ ಹೊರಗೆ ಹೋಗುವ ದೊಡ್ಡದಾದ ರಸ್ತೆಗೆ "The Appian Way" ಎಂಬ ಹೆಸರು. ಅದು ಕ್ರಿಸ್ತಪೂರ್ವ 4ನೇ ಶತಮಾನದಲ್ಲಿ ಮಾಡಿದ್ದು ಈಗಲೂ ಉಪಯೋಗದಲ್ಲಿದೆ. ಇದರಲ್ಲಿ ನಾವು 2 ಮೈಲು ಬಂದು ಕೃಷಿಯಾಗುವ ಒಂದು ಎತ್ತರವಾದ ಗುಡ್ಡಕ್ಕೆ ಬಂದೆವು. ಇಲ್ಲಿಯೇ ಪ್ರಸಿದ್ಧವಾದ 'catacombs' ಇವೆ. ಇವು ಬಹಳ ವಿಚಿತ್ರವಾದ್ದು. ಕ್ರಿ. ಶ. 1-2 ಶತಮಾನಗಳಲ್ಲಿ ಕ್ರೈಸ್ತಮತಕ್ಕೆ ಸೇರಿದವರನ್ನು ರೋಮನರು ಹಿಡಿದು ಅನೇಕ ತರದ ಶಿಕ್ಷೆಗೆ ಗುರಿಪಡಿಸುತ್ತಿದ್ದರು. ಆಗ ಅಡಗಿಕೊಳ್ಳಲಿಕ್ಕೂ ಅವರ ಶವಗಳನ್ನು ಹುಗಿಯಲಿಕ್ಕೂ ನೆಲದ ಕೆಳಗೆ ಸುರಂಗಗಳನ್ನು ತೆಗೆದು ಅದರಲ್ಲಿ ಸತ್ತವರನ್ನು ಹುಗಿಯುತ್ತಿದ್ದರು, ಈ ಸುರಂಗಗಳು ಅಲ್ಲಲ್ಲಿ ಇದ್ದು ಒಟ್ಟಿಗೆ 12 ಮೈಲು ಉದ್ದ ಇರುವುದಾಗಿ ಅಲ್ಲಿರುವ ಮತ್ತು ನಮಗೆ ಆ ಸುರಂಗವನ್ನು ತೋರಿಸಿದ ಪಾದ್ರಿಗಳಿಂದ ನಮಗೆ ತಿಳಿಯಿತು. ಒಂದರ ಕೆಳಗೆ ಒಂದು ಹೀಗೆ ಮಟ್ಟಗಳಲ್ಲಿ [layers] ಈ ಸುರಂಗಗಳನ್ನು ಮಾಡಿಸಿದ್ದಾರೆ ಕೆಳಗೆ ಇಳಿಯುವಾಗ ಒಳ ಸಂಪೂರ್ಣ ಕತ್ತಲೆ ಆದಕಾರಣ ನಾವು ಪ್ರತಿಯೊಬ್ಬರೂ ಒಂದೊಂದು ಮೇಣದ ಬತ್ತಿಯನ್ನು ಹಚ್ಚಿ ಅದರ ಬೆಳಕಿನಿಂದ ನಮ್ಮ ದಾರಿಯನ್ನು ನೋಡಿಕೊಂಡು ಹೋಗಬೇಕಾಗುತ್ತದೆ. ಸುರಂಗದ ಎತ್ತರವು 7, 8, ಅಡಿ, ಅಗಲ 3, 4 ಅಡಿ, ಅದರಲ್ಲಿ ಹೋಗುವಾಗ ಎರಡೂ ಬದಿಯಲ್ಲಿ ನೆಲದಿಂದ ಕೋಣೆಗಳಂತೆ ಸುರಂಗ ತೆಗೆದು ಸತ್ತವರನ್ನು ಹುಗಿದಿದ್ದಾರೆ. ಕೆಲವರಲ್ಲಿ ಕೆಲವು ಶವಗಳನ್ನು [embalm] ಮಾಡಿ ಇಟ್ಟಿರುತ್ತಾರೆ, ಅವುಗಳನ್ನು ಈಗಲೂ ಕಾಣಬಹುದು. ಇನ್ನು ಕೆಲವು ಕಡೆ ಶವದ ಎಲುಬುಗಳು ಇವೆ, ಆ ಕಾಲದ ಅನೇಕ ಧರ್ಮವೀರರ [Martyrs] ಸಮಾಧಿಗಳು ಇಲ್ಲಿ ಇದ್ದವುಗಳನ್ನು ಅನಂತರ ತೆಗೆದು ರೋಮಿನ ಇಗರ್ಜಿಗಳಲ್ಲಿ ಇಟ್ಟಿರುತ್ತಾರೆ ಅದೇ ರೀತಿ ಆಗಿನ ಕಾಲದ ಕುರುವಿನ ಪೋಪರ ಸಮಾಧಿ ಕೂಡ ಇಲ್ಲಿತ್ತಂತೆ. ಈ ಸುರಂಗಗಳಲ್ಲಿ ನಡೆಯುವಾಗ ಅಲ್ಲಲ್ಲಿ ಅನೇಕ ಅಡ್ಡ ಸುರಂಗಗಳಿದ್ದು ನಮ್ಮ ಜೊತೆಗೆ ದಾರಿಬಲ್ಲವರಿಲ್ಲವಾದರೆ ದಾರಿತಪ್ಪಿ ಹಿಂದೆ ಬರಲಿಕ್ಕೆ ಅಸಾಧ್ಯ. ಇವುಗಳನ್ನೆಲ್ಲಾ ನೋಡಿ ಬಸ್ಸಿನಲ್ಲಿ ಕುಳಿತು ಹೋಟೇಲಿಗೆ ಬಂದೆವು.

ಅಪರಾಹ್ನ ಪೇಟೆಯಲ್ಲಿ ಕೆಲವು ಅಂಗಡಿಗಳನ್ನು ನೋಡಿದೆ ಅವುಗಳಲ್ಲಿ ವ್ಯಾಪಾರ ಕೂಡ ಮಾಡಿದೆ. ಎಲ್ಲೆಲ್ಲೂ ಅಂಗಡಿಗಳು ಸಾಮಾನುಗಳಿಂದ ತುಂಬಿದ್ದು ಬಹಳ ವ್ಯಾಪಾರ ನಡೆಯುತ್ತಿತ್ತು. ಇಟೇಲಿಯಲ್ಲಿ ಬಟ್ಟೆಗಳು ಬಹಳ ಚಲೋದಾಗಿವೆ ಮತ್ತು ಕ್ರಯ ಕಡಿಮೆ. ಹೀಗೆ 2ನೇ ದಿನದ ಸಾಯಂಕಾಲ 5-30 ಗಂಟೆಗೆ ತಾತಾ ಕಂಪೆನಿಯ ಬಸ್ಸಿನಲ್ಲಿ ರೋಮ್ ನಗರದಿಂದ ಹೊರ ಸುಮಾರು 5,-6 ಮೈಲು ದೂರ ಅದರ ಬಳಿಯಿರುವ ವಾಯು ವಿಮಾನದ ನಿಲ್ದಾಣಕ್ಕೆ ಬಂದೆವು ಆಗ ಅಲ್ಲಿ ಲಂಡನಿನಿಂದ ಕೇಂದ್ರ ಮಾರ್ಗವಾಗಿ ಬೊಂಬಾಯಿಗೆ ಬರುವ ವಿಮಾನ ಬಂದು ಕಾದು ನಿಂತಿತ್ತು. ನಮ್ಮ ಸಾಮಾನು ಜತೆ ಕಸ್ಟಮ್ ಡಿಪಾರ್ಟ್‌ಮೆಂಟಿನ ವಿಧಿ ನಡೆದು ವಿಮಾನವು ಸರಿಯಾಗಿ ... ಗಂಟೆಗೆ ಅಲ್ಲಿಂದ ಹೊರಟಿತು. ಇದರ ವಿವರ ಇನ್ನು ಮುಂದಿನ ಮತ್ತು ಅಖೈರಿನ ಪತ್ರದಲ್ಲಿ.

(ವಿಜಾಪುರ ...) — ಕೆ. ಅರ್. ಕಾ...



ಅರ್ಬುದ (ಕೇನ್ಸರ್) ರೋಗ

ಪ್ರಾರಂಭದಶೆಯಲ್ಲಿದ್ದು ಆಧುನಿಕ ಚಿಕಿತ್ಸಾ ಪದ್ಧತಿಯನ್ನನುಸರಿಸಿದರೆ ಗುಣಪಡಿಸಬಹುದು-

ಡಾ| ಕೆ. ನಂಜುಂಡನಾಥ ರೈ, ಡೈರೆಕ್ಟರ್, ಬರ್ನಾರ್ಡ್ ಇನ್ಸ್ಟಿಟ್ಯೂಟ್ ಆಫ್ ರೇಡಿಯೋಲಜಿ ಮದ್ರಾಸು

ಅರ್ಬುದ ರೋಗ (ಕೇನ್ಸರ್) ವನ್ನು ಗುಣಪಡಿಸಬಹುದೇ? ಎಂಬುದು ಸರ್ವ ಸಾಧಾರಣವಾಗಿ ಪ್ರತಿಯೊಬ್ಬ ವ್ಯಕ್ತಿಯೂ ಕೇಳುವ ಪ್ರಶ್ನೆ. ಆದುದರಿಂದ ಇದನ್ನು ವೈಜ್ಞಾನಿಕ ದೃಷ್ಟಿಯಿಂದ ಪರಿಶೀಲಿಸಿ ಸಮರ್ಪಕವಾದ ಉತ್ತರವನ್ನು ಕೊಡುವುದು ಅಗತ್ಯವಿದೆ. ಕಳೆದ ಏಪ್ರಿಲ್ 6ಕ್ಕೆ ಇಡೀ ಭೂಲೋಕದಲ್ಲಿಯೇ ಅರ್ಬುದ ರೋಗ ದಿನಾಚರಣೆಯು ಎರಡನೆಯ ಬಾರಿ ನಡೆಯಿತು. ನಾಗರಿಕ ಜನರ ಮನವು ಅರ್ಬುದ ರೋಗವನ್ನು ಗುಣಪಡಿಸುವ ಸಾಧ್ಯತೆಗಳ ಕಡೆಗೆ ಹರಿದಿರುವುದು. ಆದುದರಿಂದ ಈ ವಿಚಾರದಲ್ಲಿ ಸರಿಯಾದ ಸಂಗತಿಗಳನ್ನು ಜನರ ಮುಂದಿಡುವುದು ಆವಶ್ಯ. ಅರ್ಬುದ ರೋಗವು ತಲೆ ಎತ್ತುವುದರ ಕಾರಣಗಳು, ಅದನ್ನು ಗುಣಪಡಿಸುವ ನವೀನ ಕ್ರಮಗಳು ಮುಂತಾದುವುಗಳ ಕುರಿತು ಯೋಚಿಸಬೇಕಾಗಿದೆ

ಜನರ ವಯಸ್ಸಿನ ಮಿತಿಯು ಬಹಳ ಹೆಚ್ಚಾಗಿರುವ ಮುಂದುವರಿದ ಕೆಲವು ಪಾಶ್ಚಾತ್ಯ ದೇಶಗಳಲ್ಲಿ ಅರ್ಬುದ ರೋಗವು ಇಂದು ಪ್ರಧಾನ ರೋಗವಾಗಿದೆ ಅಂತಹ ದೇಶಗಳಲ್ಲಿ ರೋಗಗಳಿಗೆ ತುತ್ತಾಗಿ ಮರಣ ಹೊಂದುವ ಜನರಲ್ಲಿ ಅತಿ ಹೆಚ್ಚು ಜನರ ಮರಣಕ್ಕೆ ರಕ್ತನಾಳಗಳೂ, ಹೃದಯದ ರೋಗಗಳೂ ಕಾರಣವಾಗುತ್ತವೆ. ಕೆಲವು ವರ್ಷಗಳ ಹಿಂದೆ ಕ್ಷಯರೋಗವು ಎರಡನೆಯದಾಗಿದ್ದಿತು. ಈ ಕ್ಷಯರೋಗದ ಸ್ಥಾನವನ್ನು ಅರ್ಬುದ ರೋಗವು ಆಕ್ರಮಿಸಿರುವುದು. ಅಂದರೆ ರಕ್ತನಾಳಗಳ ರೋಗಗಳು ಮತ್ತು ಹೃದ್ರೋಗಗಳನ್ನು ಬಿಟ್ಟರೆ ಅರ್ಬುದ ರೋಗವು ಅತಿ ಹೆಚ್ಚು ಜನರ ಮರಣಕ್ಕೆ ಕಾರಣವಾಗಿರುತ್ತದೆ. ಮನುಷ್ಯನ ಮರಣಕ್ಕೆ ಅರ್ಬುದ ರೋಗವೇ ಕಾರಣವಾಗಬಹುದೆಂದು ಸರ್ ಜೇಮ್ಸ್ ಪೇಜೆಟರು 50 ವರ್ಷಗಳ ಹಿಂದೆ ಹೇಳಿದ್ದರು. ಅಂದು ಅರ್ಬುದ ರೋಗವನ್ನು ಎದುರಿಸುವ ವಿಧಾನಗಳು ಇಂದಿನಷ್ಟು ಬೆಳೆದಿರಲಿಲ್ಲ ಆದುದರಿಂದ ನಾವು ಇಂದು ಅಷ್ಟೊಂದು ನಿರಾಶರಾಗಬೇಕಾದ ಕಾರಣವಿಲ್ಲ.

ಅರ್ಬುದದ ಹಾವಳಿ

ಅರ್ಬುದ ರೋಗವು ಶ್ವಾಸಕೋಶಗಳು, ಮಿದುಳು, ನಾಡಿ, ಮೇದೋಜೀರಕ ಗ್ರಂಥಿ Pancrias) ಪ್ರೊಸ್ಟೇಟ್ ಗ್ರಂಥಿ(Prostate), ಗುದನಾಳ (Rectum), ಅಂಡಾಶಯ (Ovaries) ಮುಂತಾದ ಭಾಗಗಳನ್ನು ಆಕ್ರಮಿಸುತ್ತದೆ. ಪಿತ್ತಕೋಶ, ಗರ್ಭಕೋಶ, ಪುರುಷರ ಬಾಹ್ಯ ಜನನಾಂಗ, ಆಹಾರನಾಳ ಮತ್ತು ಚರ್ಮವನ್ನು ಅರ್ಬುದವು ಬಾಧಿಸುವುದು ಇತ್ತೀಚೆಗೆ ಕಡಿಮೆಯಾಗುತ್ತ ಬರುತ್ತಿರುವುದು.

ಕಳೆದ 18 ತಿಂಗಳುಗಳಲ್ಲಿ ಮದ್ರಾಸಿನ ಜನರಲ್ ಆಸ್ಪತ್ರೆಗೆ ಬಂದ ಅರ್ಬುದ ರೋಗಿಗಳ ಒಟ್ಟು ಸಂಖ್ಯೆ 3,035. ಇವರಲ್ಲಿ 2,197 ಪುರುಷರು, 919 ಸ್ತ್ರೀಯರು ಮತ್ತು 919 ಮಂದಿ 12 ವರ್ಷ ಪ್ರಾಯಕ್ಕಿಂತಲೂ ಕೆಳಗಿನ ಮಕ್ಕಳು, 45 ಜನರು ಅರ್ಬುದ ರೋಗಕ್ಕೆ ತುತ್ತಾಗಿದ್ದರೂ ಅಪಾಯಕರ ಪರಿಸ್ಥಿತಿಗೆ ತಲುಪಿರಲಿಲ್ಲ 2,990 ಜನರು ಅಪಾಯಕರ ಪರಿಸ್ಥಿತಿಯಲ್ಲಿದ್ದರು 670 ಜನರ ರೋಗವು ಗುಣಪಡಿಸಲು ಅಸಾಧ್ಯವಾದ ಮಟ್ಟಕ್ಕೆ ತಲುಪಿದ್ದಿತು ಮೇಲೆ ಹೇಳಿದ 3,035 ರೋಗಿಗಳ ರೋಗದ ಹೆಚ್ಚಿನ ವಿವರಗಳನ್ನು ಕೆಳಗೆ ಕೊಟ್ಟಿರುತ್ತದೆ.

ದೇಹದ ರೋಗ ತಗಲಿದ ಭಾಗ.	ರೋಗ ತಗಲಿದವರ ಸಂಖ್ಯೆ.
ಬಾಯಿ	2,552
ಮೊಲೆಗಳು	244
ಪುರುಷರ ಬಾಹ್ಯ ಜನನೇಂದ್ರಿಯ	212
ಮೂಗು, ಗಂಟಲು, ಧ್ವನಿಪೆಟ್ಟಿಗೆ, ಎಲುಬಿನ ಅಥವಾ ಅಂಗಾಂಶದ ಕುಹರ ಮತ್ತು ಟೋನ್ಸಿಲ್ಸ್.	258
ಜಠರ, ಕರುಳು, ಗುದದ್ವಾರ, ಮಲನಾಳ ಮತ್ತು ಆಹಾರ ನಾಳ	141
ಯೂಟ್ರಸ್	141
ಮಾರಕ ದುರ್ಮಾಂಸ(Malignant tumour) ಮತ್ತು ಮೃದುವಾದ ಟಿಶ್ಯೂಗಳು.	119
ದುಗ್ಧರಸ ಗ್ರಂಥಿಗಳು	115
ಇತರ ಅಂಗಗಳು	253
	3,035

ಬಾಯಿ, ಮೊಲೆಗಳು, ಜನನೇಂದ್ರಿಯ, ಚರ್ಮ ಮುಂತಾದ ಭಾಗಗಳು ರೋಗಕ್ಕೆ ತುತ್ತಾದ ಜನರು 2,000 ಕ್ಕಿಂತಲೂ ಹೆಚ್ಚು ಇರುವರು. ಮದ್ರಾಸಿನ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಗರ್ಭಪಾತ್ರದ ಅರ್ಬುದ ರೋಗಕ್ಕೆ ತುತ್ತಾಗಿ ಚಿಕಿತ್ಸೆಗೆ ಬರುವ ಸ್ತ್ರೀಯರ ಸಂಖ್ಯೆ ವರ್ಷಕ್ಕೆ ಸರಾಸರಿ 1,200 ಎಂದು ತಿಳಿದು ಬರುತ್ತದೆ ಅಂದರೆ, ದೇಹದಲ್ಲಿ ವೈದ್ಯಕೀಯ ಚಿಕಿತ್ಸೆಗೆ ಸುಲಭವಾಗಿರುವ ಅಂಗಗಳಲ್ಲಿ ಅರ್ಬುದ ರೋಗವುಳ್ಳವರು ಶೇ. 5. ಅರ್ಬುದವನ್ನು ಗುಣಪಡಿಸುವುದು ವಿಶೇಷವಾಗಿ ರೋಗವು ಆಕ್ರಮಿಸಿದ ಭಾಗವನ್ನು ಹೊಂದಿಕೊಂಡಿರುವುದು.

ರೋಗದ ಕಾರಣ ದೂರವಾಗಬೇಕು

ವೈಜ್ಞಾನಿಕ ದೃಷ್ಟಿಯಿಂದ ನೋಡುವುದಾದರೆ ಒಂದು ರೋಗವನ್ನು ಗುಣಪಡಿಸಬೇಕಾದರೆ ಆ ರೋಗವು ದೇಹದಲ್ಲಿ ತಲೆ ಎತ್ತುವ ಕಾರಣಗಳನ್ನು ಅರಿತಿರಬೇಕು. ಕಾರಣವನ್ನು ದೂರೀಕರಿಸದೆ ರೋಗವನ್ನು ಗುಣಪಡಿಸುವುದೆಂದರೆ ಅರ್ಥವಿಲ್ಲ ಅರ್ಬುದ ರೋಗವು ದೇಹದಲ್ಲಿ ತಲೆ ಎತ್ತುವುದರ ಎಲ್ಲ ಕಾರಣಗಳನ್ನು ನಾವು ಅರಿತಿಲ್ಲ ಆದುದರಿಂದ ಅರ್ಬುದ ರೋಗವು ನಿವಾರಣೆಯಾಯಿತೆಂದು ಹೇಳುವುದು ವೈಜ್ಞಾನಿಕ ದೃಷ್ಟಿಯಿಂದ ಸರಿಯಲ್ಲ- ಅರ್ಬುದ ರೋಗವು 2-3 ಯಾ 5 ವರ್ಷಗಳ ಮಟ್ಟಿಗೆ ನಿವಾರಣೆಯಾಗಿರುವುದೆಂದು ಹೇಳಬೇಕಾಗುತ್ತದೆ.

ಸರ್ವಸಾಧಾರಣವಾಗಿ 35ರ ಗಡಿಯನ್ನು ದಾಟಿದ ಸ್ತ್ರೀಪುರುಷರು ಮಾತ್ರವೇ ಅರ್ಬುದ ರೋಗಕ್ಕೆ ಬಲಿಯಾಗುತ್ತಾರೆ ಅದಕ್ಕಿಂತ ಕೆಳಗಿನ ವಯಸ್ಸಿನವರಲ್ಲಿ ಅರ್ಬುದವು ತಗಲಬಾರದೆಂದಿಲ್ಲ ಅರ್ಬುದ ರೋಗ ತಗಲಿದ ವ್ಯಕ್ತಿಯು ಔಷಧವನ್ನು ಮಾಡದೆ ಹೋದರೆ ಮುಂದಕ್ಕೆ ಎಷ್ಟು ವರ್ಷ ಬದುಕುವನು? ಎಂಬ ಪ್ರಶ್ನೆಯು ಸ್ವಾಭಾವಿಕ. ಇದು ರೋಗ ತಗಲುವ ಪ್ರಾಯ ಮತ್ತು ರೋಗಕ್ಕೆ ಬಲಿಯಾದ ದೇಹದ ಅಂಗಗಳನ್ನು ಹೊಂದಿಕೊಂಡಿರುತ್ತದೆ. ಬಾಲ್ಯ ಪ್ರಾಯದಲ್ಲಿ ರೋಗವು ಅಂಟಿದರೆ ಅದು ಬಲು ಬೇಗನೆ ಬಲಗೊಳ್ಳುತ್ತದೆ. ರೋಗದ ಲಕ್ಷಣಗಳನ್ನು ಬೇಗನೆ ಕಂಡು ಹಿಡಿಯಲು ಮತ್ತು ಗುಣಪಡಿಸಲು ಸಾಧ್ಯವಾಗುವ ಅಂಗಗಳು ಅರ್ಬುದ ರೋಗಕ್ಕೆ ತುತ್ತಾದರೆ ಅದರಿಂದ ಜೀವಕ್ಕೆ ಹಾನಿ ಬರುವ ಸಂಭವಗಳು ಕಡಿಮೆ. ಹೀಗೆ ಅರ್ಬುದ ರೋಗವು ತಗಲಿದ ವ್ಯಕ್ತಿಯ ಆಯುಷ್ಯವು ಹಲವಾರು ವಿಚಾರಗಳನ್ನು ಹೊಂದಿಕೊಂಡಿದೆ.

ಚಿಕಿತ್ಸೆ ಕೈಕೊಳ್ಳದಿದ್ದರೆ

ಆದರೂ ಇದು ವರೆಗೆ ತಿಳಿದಿರುವ ವಿವರಗಳಿಂದ ಕೆಲವು ವಿಚಾರಗಳನ್ನು ತಿಳಿದುಕೊಳ್ಳಬಹುದು. ದೇಹದ ಕೆಲವು ಅಂಗಗಳಿಗೆ ಅರ್ಬುದ ರೋಗವು ತಗಲಿದ ವ್ಯಕ್ತಿಯು ಚಿಕಿತ್ಸೆಯನ್ನು ಕೈಕೊಳ್ಳದಿದ್ದರೆ ಮುಂದಕ್ಕೆ ಬದುಕಬಹುದಾದ ಸರಾಸರಿ ಸಮಯವನ್ನು ಕೆಳಗೆ ಕೊಟ್ಟಿರುತ್ತದೆ:

ದೇಹದ ಅಂಗ.	ಬದುಕಬಹುದಾದ ಸರಾಸರಿ ತಿಂಗಳು.
ಹೊಟ್ಟೆ	12.2
ದೊಡ್ಡ ಕರುಳು Colon	8·4
ಮೊಲೆ Breast	39·3
ಮಲನಾಳ Rectum	14 3
ಗರ್ಭಕೋಶ Uterus	15 2
ನಾಲಿಗೆ	13-3

ರೋಗವು ಪ್ರಾರಂಭವಾದಂದಿನಿಂದಲೂ ಚಿಕಿತ್ಸೆಯನ್ನು ಕೈಕೊಳ್ಳದ ರೋಗಿಯು ಹೆಚ್ಚು ಕಡಮೆ ಮೇಲೆ ತೋರಿಸಿದಷ್ಟು ಸಮಯ ಬದುಕಬಹುದು

ನೂತನ ಚಿಕಿತ್ಸಾ ವಿಧಾನಗಳು

ಅರ್ಬುದ ರೋಗವನ್ನು ಗುಣಪಡಿಸುವುದಕ್ಕೆ ಹಲವು ಹೊಸ ರೀತಿಗಳನ್ನು ಕಂಡು ಹಿಡಿದಿರುವರು ಸರ್ಜರಿ, ರೇಡಿಯೋ ತೆರೇಪಿ, ಹಾರ್ಮೋನ್‌ಗಳ ಉಪಯೋಗ, ಕೆಮೊ ತೆರೇಪಿ ಮುಂತಾದ ವಿಧಾನಗಳಿಂದ ಅರ್ಬುದ ರೋಗಕ್ಕೆ ಚಿಕಿತ್ಸೆ ಮಾಡಬಹುದು ಇವುಗಳಲ್ಲಿ ಒಂದೊಂದು ವಿಧಾನವನ್ನು ಪ್ರತ್ಯೇಕವಾಗಿ ಅಥವಾ ಜೊತೆಯಾಗಿ ಚಿಕಿತ್ಸೆಯಲ್ಲಿ ಉಪಯೋಗಿಸುತ್ತಾರೆ.

ಅರ್ಬುದ ರೋಗವನ್ನು ಗುಣಪಡಿಸುವುದರಲ್ಲಿ ಈ ವಿಧಾನಗಳು ಎಷ್ಟರ ಮಟ್ಟಿಗೆ ಯಶಸ್ವಿಯಾಗಿರುತ್ತವೆಂಬುದನ್ನು ಕೆಳಗಿನ ಪಟ್ಟಿಯಿಂದ ತಿಳಿಯಬಹುದು.

ರೋಗ ತಗಲಿದ ಅಂಗ	ಪ್ರಾರಂಭದಲ್ಲಿ ಚಿಕಿತ್ಸೆ ಪಡೆದರೆ ಗುಣ ಹೊಂದುವ ಸಂಭವ [ಶೇ.]	ರೋಗ ಉಲ್ಬಣಿಸಿದ ಮೇಲೆ ಚಿಕಿತ್ಸೆ ಪಡೆದರೆ ಗುಣ ಹೊಂದುವ ಸಂಭವ [ಶೇ.]
ಮೊಲೆಗಳು	75	20 ಕ್ಕಿಂತ
ಗರ್ಭಪಾತ್ರ	80	20 ಕಡಿಮೆ
ಬಾಯಿ	80	20 ,,
ತುಟಿಗಳು	85	10 ,,
ಚರ್ಮ	95	30 ,,
ಮಲನಾಳ Rectun	54	...
ಪಿತ್ತಕೋಶ bladder.	50	...

ಆಪರೇಶನ್ ಮತ್ತು ರೇಡಿಯೋ ಚಿಕಿತ್ಸೆಯನ್ನು ಕೂಡಿ ನಡೆಸುವುದರಿಂದ ಮೊಲೆಗಳಿಗೆ ತಗಲುವ ಅರ್ಬುದ ರೋಗದ ಮೇಲೆ ಹೆಚ್ಚಿನ ಪರಿಣಾಮವಿದೆಯೆಂದು 5 ವರ್ಷಗಳ ಅನುಭವದಿಂದ ತಿಳಿದು ಬರುತ್ತದೆ. ಬರಿಯ ಆಪರೇಶನ್‌ನಿಂದ ಮಾತ್ರವೇ 23% ರೋಗಿಗಳು ಗುಣಪಡುವುದಾದರೆ ಆಪರೇಶನ್ ನಡೆಸಿದ ಮೇಲೆ ರೇಡಿಯೋ ಚಿಕಿತ್ಸೆಯನ್ನು ನಡೆಸುವುದರಿಂದ 29% ರೋಗಿಗಳು ಗುಣಪಡುವರು. ಆಪರೇಶನಿನ ಮೊದಲೂ ಅನಂತರವೂ ರೇಡಿಯೋ ಚಿಕಿತ್ಸೆಯನ್ನು ನಡೆಸುವುದರಿಂದ 10% ರೋಗಿಗಳು ಗುಣಪಟ್ಟಿರುವರು.

ಕೆಲವು ಮುಖ್ಯ ವಿಚಾರಗಳು

ಅರ್ಬುದ ರೋಗವನ್ನು ಗುಣಪಡಿಸಲು ಸಾಧ್ಯವಾಗಬೇಕಾದರೆ ರೋಗವು ಪ್ರಾರಂಭಸ್ಥಿತಿಯಲ್ಲಿರಬೇಕು ಮತ್ತು ಆಧುನಿಕ ಚಿಕಿತ್ಸಾ ಪದ್ಧತಿಗಳನ್ನು ಅನುಸರಿಸಬೇಕು. ಡಾಕ್ಟರರು ಹೆಚ್ಚಿನ ಶ್ರಮವಿಲ್ಲದೆ ಪರೀಕ್ಷಿಸಲು, ಚಿಕಿತ್ಸಿಸಲು ಸಾಧ್ಯವಾಗುವ ಅಂಗಕ್ಕೆ ರೋಗವು ತಗಲಿದ್ದರೆ, ಗುಣ ಹೊಂದುವ ಸಂದರ್ಭಗಳು ಹೆಚ್ಚು. ಇಂತಹ ಯಾವುದಾದರೊಂದು ಅಂಗಕ್ಕೆ ಅರ್ಬುದವು ತಗಲಿದವರು ನಮ್ಮ ದೇಶದ ಅರ್ಬುದ ರೋಗಿಗಳಲ್ಲಿ 75% ಇರಬಹುದು ಇವರಲ್ಲಿ 80% ಜನರು ಚಿಕಿತ್ಸೆಯನ್ನು ಪಡೆದು ಗುಣ ಹೊಂದಬಹುದು. ಅಂದರೆ ಅರ್ಬುದವು ಗುಣಪಡಿಸಲು ಸಾಧ್ಯವಿರುವ ರೋಗವೆಂದೇ ತಿಳಿಯಬೇಕಾಗುತ್ತದೆ.

ಅರ್ಬುದ ರೋಗವನ್ನು ಗುಣಪಡಿಸಲು ಸಾಧ್ಯವಿಲ್ಲವೆಂಬ ನಂಬಿಕೆಯು ನಮ್ಮಲ್ಲಿ ಸರ್ವ ಸಾಧಾರಣವಾಗಿ ಬೆಳೆದು ಬಂದಿರುತ್ತದೆ ಇದಕ್ಕೆ ಕಾರಣಗಳೇ ಬೇರೆ. ರೋಗವು ತುಂಬ ಮುಂದುವರಿದಿರುವ ಪರಿಸ್ಥಿತಿಯಲ್ಲಿ ಚಿಕಿತ್ಸೆಯನ್ನು ನಡೆಸುವುದರಿಂದ ಹೆಚ್ಚಿನ ಪ್ರಯೋಜನವು ದೊರೆಯುವಂತಿಲ್ಲ. ಸರಿಯಾದ ಚಿಕಿತ್ಸಾ ವಿಧಾನಗಳನ್ನು ಕೈಕೊಳ್ಳದಿರುವುದೂ ಚಿಕಿತ್ಸೆಯು ಯಶಸ್ವಿಯಾಗದಿರುವುದರ ಕಾರಣವಾಗಿರಬಹುದು.

"ಗೋಪಾಲ ಭೇಷಜಾಶ್ರಮ" ಮಂಗಳೂರು-
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ ಎಂ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ವಾತಿಕ್ಷರು:—ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ವಾರದ ಭವಿಷ್ಯ

ತಾರೀಕು 19-6-52 ರಿಂದ ತಾರೀಕು 25-6-52 ವರೆಗೆ

ಮೇಷ:—ಸುಖದುಃಖ ಲಾಭ ನಷ್ಟಗಳು ನಿಮಗೀವಾರದಲ್ಲಿ ಸಮನಾಗಿವೆ. ಬಾಲ್ಯ ಮಿತ್ರರ ಸಹಾಯದಿಂದಾಗಿ ನಿಮ್ಮ ಹಲವಾರು ಕಾರ್ಯಗಳು ಸಫಲಗಳಾಗುವವು. ಮಹತ್ಕಾರ್ಯವೂ ಕೂಡ ನಿಮ್ಮ ಭಾಗ್ಯಕ್ಕೆ ಕ್ರಮಾನವಾವೆನಿಸುವದು. ಸೇವಕ ವರ್ಗದವರಿಗೆ ಜೀವನವು ಸುಗಮವಾಗಲಿದೆ. ವ್ಯಯಕ್ಕೆ ತಕ್ಕ ಆಯವಿರುವುದರಿಂದ ಹಣದ ಅಡಚಣೆಗೆ ಸಿಲುಕಲಾರಿರಿ. ತಾ. 19-22-23 ಈ ದಿನಗಳಲ್ಲಿ ನಿಮ್ಮ ಸಂಕಲ್ಪವು ಸಿದ್ಧಿಸಲಿದೆ.

ವೃಷಭ—ಎಂತಹ ಪ್ರಾಣಾಪಾಯವೇ ಸಂಭವಿಸುವದಾದರೂ ನೀವು ಪರರ ಸಹಾಯವನ್ನು ಯಾಚಿಸದೆ ಸ್ವಯಮೇವ ಹೋರಾಡುವಿರಿ. ನಿಮ್ಮ ಪ್ರಯತ್ನವು ಸಫಲವಾಗುವದು. ಶತ್ರುಗಳು ಶರಣು ಬರುವರು. ಆರ್ಥಿಕ ಪರಿಸ್ಥಿತಿಯು ಸುಧಾರಿಸುವದು. ಆಕಸ್ಮಿಕ ಪ್ರವಾಸದಿಂದಾಗಿ ಕಷ್ಟ ನಷ್ಟಗಳುಂಟಾಗುವವು. ದೇಹ ಮನಸ್ಸುಗಳಿಗೆ ಸುಖ ಶಾಂತಿಗಳು ದುರ್ಲಭವೆನಿಸುವವು. ತಾ 20 21-24-25 ಈ ದಿನಗಳಲ್ಲಿ ನಿಮ್ಮ ಮನೋರಥಗಳು ನೆರವೇರುವವು.

ಮಿಥುನ—ಬಂದದ್ದೆಲ್ಲಾ ಬರಲಿ ಗೋವಿಂದನ ದಯೆಯೊಂದಿರಲಿ ಎಂಬ ಲೋಕೋಕ್ತಿಯಂತೆ ನೀವೆಷ್ಟೇ ವಿಪತ್ತುಗಳು ಬಂದರೂ ಇಂದೀಗ ಗೋವಿಂದನ ದಯೆಯಿಂದಾಗಿ ಆ ವಿಪತ್ತುಗಳಿಂದ ಪಾರಾಗುವಿರಿ. ನಿಮ್ಮ ಸ್ವಂತ ಸುಖಭೋಗಗಳಿಗೆ ಯಾವ ತರದ ನ್ಯೂನತೆಯೂ ಉಂಟಾಗಲಾರದು, ಆದರೆ ಚಂಚಲವಾದ ಮನಸ್ಸು ನಿಮ್ಮನ್ನು ಯಾವ ಉದ್ಯಮವನ್ನೂ ಕೊನೆತನಕ ಸಾಧಿಸಲು ಬಿಡಲೊಲ್ಲದು. ತಾ. 19-22-23 ಈ ದಿನಗಳಲ್ಲಿ ಧನಲಾಭ ಮಿತ್ರ ಸಮಾಗಮ ಸುಖ ಭೋಗಗಳು ಲಭಿಸುವವು.

ಕರ್ಕಾಟಕ:—ಎಷ್ಟೇ ಪರಿಶ್ರಮಪಟ್ಟು ದುಡಿಯುವಿರಾದರೂ ಕೈ ಬರಿದಾಗುವದು. ಕೃತ್ರಿಮ ಮಿತ್ರರು ನಾನಾ ರೀತಿಯಿಂದ ನಿಮ್ಮ ಧನಮಾನಗಳನ್ನಪಹರಿಸಲು ಯತ್ನಿಸುವರು. ಸಾಂಸಾರಿಕ ತಾಪತ್ರಯಗಳು ದಿನೇ ದಿನೇ ಹೆಚ್ಚುವವು. ದೇಹಾರೋಗ್ಯವು ತೃಪ್ತಿಕರವಿರಲಾರದು. ಪ್ರಬಲರಾದ ಶತ್ರುಗಳೂ ತತ್ಕಾಲದಲ್ಲಿ ಮಿತ್ರರಾಗುವರು. ತಾ. 19-20-21 24-25 ಈ ದಿನಗಳು ನಿಮಗೆ ಹೆಚ್ಚಿನ ತ್ರಾಸದಾಯಕವಾಗಲಾರವು.

ಸಿಂಹ—ನಿಮ್ಮ ಭಾಗ್ಯೋದಯಕಾಲವಿರುವದು. ಬಯಕೆಯಂತೆ ಸಕಲ ಕಾರ್ಯಗಳೂ ನೆರವೇರುವವು. ಯಾವೊಂದು ತಾಪತ್ರಯಗಳಿಗೂ ಸಿಲುಕದೆ ಸುಖದಿಂದ ಕಾಲಯಾಪನೆ ಮಾಡುವಿರಿ. ಉದ್ಯೋಗ ವ್ಯಾಪಾರ ವ್ಯವಹಾರಾದಿಗಳಲ್ಲಿ ದಿನೇ ದಿನೇ ಅಭಿವೃದ್ಧಿಯುಂಟಾಗುವದು. ವಾರಾಂತ್ಯದ 2 ದಿನಗಳಲ್ಲಿ ವ್ಯರ್ಥಖರ್ಚುಗಳು ಹೆಚ್ಚುವವು.

ಕನ್ಯಾ—ನಿಮ್ಮ ಪರಿಶ್ರಮವು ವ್ಯರ್ಥವಾಗದಾದರೂ ಆರ್ಥಿಕ ತಗಾದೆಯಿಂದ ಮುಕ್ತರಾಗಲಾರಿರಿ. ಪಿತ್ತೋಷ್ಣ ಪ್ರಕೋಪದಿಂದ ದೇಹಾರೋಗ್ಯ ಕೆಡಲಿದೆ. ಅಧಿಕಾರಿ ವರ್ಗದವರ ಪೀಡೆಗೆ ಸಿಲುಕುವಿರಿ. ಆತ್ಮೀಯರ ವಿರಹ ವುಂಟಾಗಲಿದೆ. ವಿನಾಕಾರಣ ವಾಕ್ಕಲಹಕ್ಕೆ ಸಿಲುಕುವಿರಿ. ವಾರಾದಿಯ 3 ದಿನಗಳು ಹೆಚ್ಚಿನ ಅನಿಷ್ಟಕರಗಳಿವೆ.

ತುಲಾ—ಜನತೆಯ ಬೆಂಬಲವು ನಿಮಗಿರುವುದಾದರೂ ವಿರೋಧಿಗಳ ಕಾಟವು ಬೇರೆ ಕಡಿಮೆಯಾಗುವಂತಿಲ್ಲ. ಆಕಸ್ಮಿಕ ಅನರ್ಥಕೋಶ ಪರಂಪರೆಗಳು ಸದಾ ಪೀಡಿಸುವವು. ವ್ಯವಹಾರ ನಿಮಿತ್ತ ನಿಜಾತಿಯ ಜನರೊಡನೆ ಕಲಹವಾದೀತು. ಆದರೂ ಗುರ್ವನುಗ್ರಹದಿಂದ ಕೂಡಿದ ನಿಮಗೆ ತಾ. 19, 24, 25 ಸುಖದಾಯಿಯಾಗಲಿದೆ.

ವೃಶ್ಚಿಕ—ಕಷ್ಟಪಟ್ಟು ದುಡಿದ ಧನವು ಸ್ವಪ್ರಯೋಜನವಿಲ್ಲದೆ ವ್ಯರ್ಥ ಪರಾರ್ಥಕ್ಕಾಗಿ ವ್ಯಯವಾಗುವುದು. ಗೃಹಕಲಹದಿಂದ ಪೀಡಿತರಾಗುವಿರಿ. ಮುಂಗೋಪದ ದೆಸೆಯಿಂದಾಗಿ ಹಲದರೊಡನೆ ಕಲಹವಾದೀತು. ಖರ್ಚಿಗೆ ತಕ್ಕಷ್ಟು ದುಡಿಮೆಯಿರುವುದರಿಂದ ಹಣದ ಕೊರತೆಯುಂಟಾಗದು. ನೌಕರಿ ಜನರೂ ವ್ಯಾಪಾರಿಗಳೂ ಸೇವಕವರ್ಗದವರೂ ಸುಖದಿಂದ ಕಾಲಕಳೆವರು. ತಾ. 19, 20, 21 ಈ ದಿನಗಳು ಅನುಕೂಲವಾಗಿವೆ.

ಧನು:—ದೇಹಸುಖವಶಿಗಳಾದ ಬೃಹಸ್ಪತ್ಯಾಚಾರ್ಯ ಪೂರ್ಣಾನುಗ್ರಹಕ್ಕೆ ಪಾತ್ರರಾದ ನಿಮಗೆ ಈ ವಾರದಲ್ಲಿ ಯಾವ ತರದ ದೋಷಗಳೂ ಹೆಚ್ಚಾಗಿ ಬಾಧಿಸಲಾರವು. ತತ್ರಾಪಿ ಲಾಭಸ್ಥಾನಗತನಾದ ಕುಜನು ಹಲವಾರು ತರದಿಂದ ಧನವನ್ನು ಕೊಡಲಿರುವನೆಂದಮೇಲೆ ನಿಮಗಾವ ತೆರನಾದ ಚಿಂತೆಯೂ ಉಳಿಯಲಾರದು. ಆದರೆ ಸ್ತ್ರೀಜನರಿಂದಾಗಿ ಕಷ್ಟಾನಿಷ್ಟಗಳೊದಗುವ ಸಂಭವವಿರುವುದರಿಂದ ತಾ. 19, 24, 25ರಲ್ಲಿ ಜಾಗರೂಕರಾಗಿರಿ.

ಮಕರ—ಆತ್ಮೀಯರಿಂದುಂಟಾದ ಅವಹೇಳನವು ಅಸಹನೀಯವಾಗುವುದು. ಶತ್ರುಜನರೂ ವಿಶೇಷತಃ ಪೀಡಿಸಲಿರುವರು. ಉದ್ಯೋಗದಲ್ಲಿ ಫಲಾಪ್ತಿಯು ತೃಪ್ತಿಕರವಿರುವುದರಿಂದ ದಿನಯಾಪನೆಯು ಕಷ್ಟವಾಗಲಾರದು. ಆಪ್ತೇಷ್ಟರ ವಿರಹ ದುಃಖಯುಕ್ತರಾದ ನಿಮಗೆ ವಾರಾಂತ್ಯದ 4 ದಿನಗಳು ಸ್ವಲ್ಪ ಸುಖಸಂತಸದಾಯಿಗಳಾಗಲಿವೆ.

ಕುಂಭ—ನಿಮ್ಮ ದೈವವಿಂದು ಅತಿ ವ ದುರ್ಬಲಾವಸ್ಥೆಗೆ ಬಂದಿರುವುದು. ಆದರೂ "ವಿಪದಿ ಧೈರ್ಯಂ" ಎಂಬ ಹಿರಿಯ ವಚನದಂತೆ ಕಷ್ಟಕಾಲದಲ್ಲಿ ಧೈರ್ಯವನ್ನು ತಾಳಿ ಸ್ವೋದ್ಯಮ ಪ್ರವೃತ್ತರಾಗಿರಿ. ನಿ[ಮ್ಮ] ಪರಿಶ್ರಮವು ಇಂದಿಲ್ಲವಾದರೆ ಮುಂದಾದರೂ ಫಲವೀಯದಿರದು. ಸಾಂಸಾರಿಕ ತಾಪತ್ರಯಗಳು ಹೆಚ್ಚಾಗಿ ಬಾಧಿಸಲಿವೆ. ಸನ್ಮಿತ್ರರ ಬಲದಿಂದ ಕೂಡಿದ ನಿಮಗೆ ತಾ. 19, 2[…] 25 ಈ ದಿನಗಳಲ್ಲಿ ಕಿಂಚಿತ್ಸುಖ ಲಾಭಾದಿಗಳು ಲಭಿಸಲಿವೆ.

ಮೀನ—ಧನಭಾಗ್ಯಪತಿಯಾದ [ಗು]ರು ಗಾರಕನು ಅನಿಷ್ಟಸ್ಥಾನವಾದ ಅಷ್ಟಮ[…] ನಿಂತಕಾರಣ ವಿಶೇಷತಃ ಶತ್ರುವರ್ಗದವರಿಂ[ದ] ನಿಮ್ಮ ಸಂಪತ್ತಿಗೆ ತುಂಬಾ ಬಾಧಕವಿದೆ. [ಮಾ]ತ್ರವಲ್ಲ ದೇಹದಲ್ಲಿ ಕಜ್ಜಿ ಹುಣ್ಣು ವಗೈರೆ ದೋಷಗಳು ಕಾಣಿಸಬಹುದು. ಬಂಧುಗ[ಳ] ನೆರವು ಮಿತ್ರಜನರ ಬೆಂಬಲವು ಇವುಗಳಿಂ[ದ] ಕೂಡಿದ ನಿಮಗೆ ನೌಕರಿ ವ್ಯಾಪಾರಾದ್ಯವ[ಹಾರಗ]ಳಲ್ಲಿ ಫಲಾಪ್ತಿಯು ಉತ್ತಮವಿರುವದು. [19,] 20, 21 ವಾರದಲ್ಲಿ ಉತ್ತಮ ದಿನಗಳು.

ಲಿಕ್ವಿಡ್ ಸಂತಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರದ ಕೃಚ್ಛ್ರ, ಮೂತ್ರದೊಡನೆ ಕೀವು ಮುಂದಾಗಿ ಬಳಿಯು, ಅಂಗಿನ ಕಂಪು ಈ ವರ್ಣಗಳಲ್ಲಿ ಕೀವು ಹೋಗುವದು, ತೊಡೆ ಸಂದಿನಲ್ಲಿ ಗರಳೆ ಬರುವದು. ಕಾಲುಗಂಟು ವೇದನೆ, ಕಣ್ಣಿನಲ್ಲಿ ಕೀವು ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ, ಸ್ತ್ರೀಯರ ಬಿಳಿ ಸೆರಗು ಇವಲ್ಲಿ ಮಾತ್ರೆಯಿಂದಾಗಿ ಗುಣ ಹೊಂದುವದು. ಇತರರು ಈಗಿನ ಉಷ್ಣಕಾಲದಲ್ಲಿ ಗರ್ಮಿ ಕಂಡುಬಂದರೆ ರಾತ್ರೆ ಮಲಗುವಾಗ್ಯ ಒಂದು ಮಾತ್ರೆ ಸೇವಿಸಿ ಹಾಲು ಕುಡಿದರೆ ಸುಖವಾಗಿ ನಿದ್ರೆ ಬಂದು ಸುಖವಿರೇಚನೆಯಾಗಿ ದೇಹದ ಉಷ್ಣ ಹೋಗುವದು.

ಶೀಸೆ 1ಕ್ಕೆ ರೂ. 2-0-0

ಏಜಂಟ್ಸ್:

ಷಾ. ಕಂಪೆನಿ, ಮಂಗಳೂರು.

ಸಾರ್ವಜನಿಕರ ಉಪಯೋಗಕ್ಕಾಗಿ ಅಮೂಲ್ಯ ರತ್ನ ಪ್ರಯೋಗ!

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೦ ದಿನದ ಲೇಹ್ಯ ರೂ ೫/೪, ೨೦ ದಿನದ ಲೇಹ್ಯ ರೂ ೩/೪

(ಪೋಸ್ಟೇಜು ಮಾಫಿ)

ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನ ಎ. ರಾಮಸ್ವಾಮಿ ಅಯ್ಯರ್‌ರವರ

ಸಂತಾನ . . . . .

ಜನನ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಟೆ ಸಂಬಂಧದ ಹೊಟ್ಟೆನೋವಿನಜೊತೆಗೆ ತಲೆನೋವು, ನಡುಕಳಿತ, ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ.

೩ ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ೧ ಸೆಟ್ ಅನುಪಾನಪತ್ರಿಕೆ ಪ್ರಕಾರ ಉಪಯೋಗಿಸಿರಿ. ಶೋಧನವಾದ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾ ಪತ್ರಗಳನ್ನು ಪಡೆದಿದೆ.

ಕ್ರಯ:—೧ ಸೆಟ್ 5ರೂ ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1ರೂ ವಿ.ಪಿ. ಇಲ್ಲ ಕ್ಯಾಟಲಾಗ್ ಉಚಿತ 6ರೂ ಮನಿಆರ್ಡರ್ ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ: ಎ. ರಾಮಸ್ವಾಮಿ ಅಯ್ಯರ್ ಸನ್, (ಎ. ಆರ್. ವಿಶ್ವೇಶ್ವರಯ್ಯ)

Prop: ಸಂತಾನ ಸಿದ್ಧೌಷಧ, 628 ಚಾಮರಾಜ ರೋಡ್ ಕ್ರಾಸ್, (ಸೀತಾ ವಿಲಾಸ ಛತ್ರದ ಹಿಂದೆ) ಮೈಸೂರು.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋ[ಗಿ]ಗಿಸಿದರೆ ಹದಿನಾರು ಋತುಸ್ರಾವವಾಗ[…]ದು, ಹಕೋಟೆಗೆ ಬರುವುದು, ಈ ಔಷ[ಧ] ಸೇವನೆಯಿಂದ ತೀವ್ರ ಗುಣಹೊಂದ[…]ಹುದು, ಯಾವ ಬಾಧಕವೂ ಇಲ್ಲ. ಸಾ[…]ರಾಣ ಮುಂದಿಗೆ ಖಾತ್ರಿ ಗುಣವಾಗಿದೆ[…] ಬೆಲೆ; ರೂ. 3-; ಸ್ಪೆಶಲ್ ರೂ. 5[…] ಅಧಿಕಾಧಿಕ ಸ್ಪೆಶಲ್ ರೂ. 8-] ವಿ[…] ಹನ್ನೆರಡಾಣೆ ಪ್ರತ್ಯೇಕ]

Mrs. D. DEVEE, F. DS. (N. J[…]

Tollygunge CALCUTTA,

ಸ್ಟಾಕಿಸ್ಟರು ಕಹಾ ಕಂಪೆನಿ, ಮಂಗಳೂ[ರು]

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿ[ತ]ಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾ[…]ಯವಾದ ಬಡ್ಡಿಯಿಂದಲೂ, ಸಾ[ಲ]ದ ಹಣಕ್ಕೆ ಅತೀ ಕಡಿಮೆ ದರ[ದ] ಬಡ್ಡಿಯಿಂದಲೂ ಜನ ಹಿತಸಾಧ[ನೆ]ಯನ್ನು ಮಾಡುತ್ತಿರುವುದು

The Moolky Bank Ltd.

Moolky, S. K

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ ಶ್ರೀನಿವಾಸರಾವ್ ಕೃ[ತ]

ಆಂಗ್ಲ ಸ್ವಯಂಬೋಧಿನಿ.

ಬೆಲೆ ರೂ- 1-8-0, ವಿ- ಪಿ. ದ್ವಾರ ರೂ- 2-

ಡಾ| ಕೊರಡ್ಕಲ್ ವೆಂಕಟರಾವ್

ಮನೆ ಮದ್ದು

ಸುಲಭ ಚಿಕಿತ್ಸೆಗಳು.

ಬೆಲೆ ರೂ- 2-0-0, ವಿ- ಪಿ. ದ್ವಾರ ರೂ- 2-1

ನವಭಾರತ ಪುಸ್ತಕ ಭಂಡಾರ, ಉಡು[ಪಿ]

Edited, Printed & Published by K. H. Shetty at the Navayuga Press, Udipi, S. India.

Regd.No. M. 3616
LICENCE No. 31
Licensed to Post without Prepayment

ESTD. 1922 ಸ್ಥಾಪನೆ
31ನೆಯ ವರ್ಷ

26-6-1952

Founder: Sri. A. B. Shetty
Minister for Medical & Public Health

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಸಾರ್ವಜನಿಕ
ಆರೋಗ್ಯ ಮಂತ್ರಿ
ಶ್ರೀ.ಎ.ಬಿ.ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಪೋಸ್ಟ್ ಬಾಕ್ಸ್
ನಂಬ್ರ 22
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೪೨

NAVAYUGA WEEKLY Post Box No. 22 UDIPI.

Vol. 31
No. 42

ಮಧುಪರ್ಕ

ಒಂದು ಭವ್ಯವಾದ ಭವನ ನಿರ್ಮಾಣಕಾರ್ಯ ನಡೆಯುತ್ತಿರುವಾಗ ಜಿಜ್ಞಾಸುವೊಬ್ಬನು ಅಲ್ಲಿಗೆ ಹೋಗಿ ಪ್ರತಿಯೊಂದೂ ಕೆಲಸವನ್ನು ನಿರೀಕ್ಷಿಸ ತೊಡಗಿದನು.

ಕಲ್ಲು ಕುಟ್ಟಿಗನನ್ನು ಕಂಡು "ನೀನೇನು ಮಾಡುತಿದ್ದೀಯಾ?" ಎಂದು ಕೇಳಿದನು.

"ಹೊಟ್ಟೆಗೊಂದಿಷ್ಟು ಹಿಟ್ಟು ಕಾಣಿಸಬೇಕಲ್ಲವೆ? ಅದಕ್ಕೆ ಈ ವೇಷ ಕಟ್ಟಿಕೊಂಡಿದ್ದೇನೆ" ಎಂದನವ.

ಈ ಉತ್ತರ ಮೋಜಿನದೆನಿಸಲು ಬಡಗಿಯಿದ್ದಲ್ಲಿಗೆ ಹೋಗಿ "ಏನು ಮಾಡುತ್ತಿರುವಿ?" ಎಂದವನು ಪ್ರಶ್ನಿಸಿದ. "ದಿನಕ್ಕೆ ಮೂರು ರುಪಾಯಿ ಸಂಬಳ ಕೊಡುತ್ತಾರೆ-ಪ್ರತಿಯಾಗಿ ಕೆಲಸ ಮಾಡುತ್ತೇನೆ" ಎಂಬ ಹೆಚ್ಚು ಸಮಾಧಾನದ ಜವಾಬು ಸಿಕ್ಕಿತು.

ಕೊನೆಗೆ ಒಳ್ಳೆಯ ಕುಸುರಿಗಳನ್ನು ಕೆತ್ತುತಿದ್ದ ವಿಶ್ವಕರ್ಮನನ್ನು ಕೇಳಲು "ಓ, ನಾನೇ-ಒಂದು ಚಲೋ ಬಂಗಲೆ ಕಟ್ಟುತಿದ್ದೇನೆ, ಸ್ವಾಮಿ. ಸುತ್ತಣ ನಾಲ್ಕು ಊರುಗಳಲ್ಲಿಯೇ ಅಷ್ಟು ಸೊಗಸಾದ ಭವನ ಬೇರೊಂದಿರಲಾರದು" ಎಂದವನು ಉತ್ತರಿಸಿದ. ಜಿಜ್ಞಾಸುವು ಅದಮ್ಯ ಉತ್ಸಾಹದ ಉತ್ತುಂಗ ದರ್ಶನವನ್ನು ಈ ಬಡಗಿಯಲ್ಲಿ ಕಂಡ.

ಅದಮ್ಯ ಉತ್ಸಾಹ

ಉಲ್ಲಾಸಮಯವಾದ ಜೀವನವು ನೀಡುವ ಸುಖ ಸಮಾಧಾನಗಳು ಅನುಭವ—ನೋವು ಬೇಸರಿಕೆಗಳ ಸೋಂಕೂ ತಗುಲದ ಬದುಕು ನಿತ್ಯಾನಂದಮಯವಾಗಿರುವುದು. ಮನಸ್ಸು ನೆಮ್ಮದಿಯಿಂದಿರುವುದೂ ದೇಹವು ಸದಾ ಚಟುವಟಿಕೆಯಿಂದ ಕಾರ್ಯ ನಿರ್ವಹಿಸುವುದೂ ಆರೋಗ್ಯದ ಮುಖ್ಯ ಲಕ್ಷಣ. ನಮ್ಮ ಮುಖದ ಮೇಲೆ ಮಿಂಚುತ್ತಿರುವ ಉತ್ಸಾಹ ಮತ್ತು ನಲಿಯುತ್ತಿರುವ ಮುಗುಳುನಗು ಚಿರಂಜೀವಿತ್ವವನ್ನು ತಂದುಕೊಡಬಲ್ಲುದು.

ಕರ್ತವ್ಯವನ್ನು ನಿರ್ವಹಿಸುವಾಗ ದೊರಕುವ ಆನಂದವು ಮನಸ್ಸಿಗೆ ಶಾಂತಿಯನ್ನು ತರುವುದು. ಉತ್ಸಾಹಪೂರ್ಣರಾಗಿ ಒಂದು ಸತ್ಕಾರ್ಯವನ್ನು ಪೂರೈಸಿದರೆ-ದೇಹದ ದಣಿವು ದೂರಾಗುವುದು. ನಮ್ಮ ಪ್ರತಿಯೊಂದೂ ಕೆಲಸದಲ್ಲಿ ಶ್ರದ್ಧೆಯೂ, ಅದು ಸತ್ಫಲ ನೀಡುವುದೆಂಬ ವಿಶ್ವಾಸವೂ, ಪರಿಣಾಮವಾಗಿ ಜೀವನ ಪುನೀತವಾಗುವುದೆಂಬ ನಿರ್ಮಲ ಭಾವನೆಯೂ ಉತ್ಕರ್ಷ ಉತ್ಸರ್ಗಗಳೆರಡನ್ನೂ ನಮಗೆ ತರಬಲ್ಲವು; ನಮ್ಮ ಕಲ್ಯಾಣಸಿದ್ಧಿಗೆ ಕಾರಣವಾಗುವುವು.

ಮನದಲ್ಲಿ ದುಗುಡ ತುಂಬಿದ್ದರೆ ಅದರ ದುಷ್ಟ ಪರಿಣಾಮವನ್ನು ದೇಹದ ಮೇಲೂ ನಾವು ಕಾಣಬಹುದಾಗಿದೆ. ದೇಹ ಮತ್ತು ಮನಸ್ಸುಗಳೆರಡೂ ಪರಸ್ಪರವಾಗಿ ಹತ್ತಿರದ ಸಂಬಂಧವಿಟ್ಟುಕೊಂಡಿರುವುದರಿಂದ ದೇಹಾರೋಗ್ಯವನ್ನು ಬಯಸುವವರು ಮನಸ್ಸಿನ ಉತ್ಸಾಹವನ್ನು ಹೆಚ್ಚಿಸಿಕೊಂಡಿರುವ ಪ್ರಯತ್ನ ಮಾಡಬೇಕು. ಅಪರಿಮಿತ ಮೇಲಾಟದಲ್ಲಿ ಧುಮುಕಿ, ಒಳ್ಳೆಯ ಕೆಲಸಗಳಲ್ಲಿ ಪ್ರವೃತ್ತರಾಗುವುದರಿಂದ ಚಿರನೂತನವಾದ ಉತ್ಸಾಹವು ಮನಮಂದಿರದಲ್ಲಿ ಕಾರಂಜಿಯಂತೆ ಪುಟಿಯುತ್ತಿರಲು ಸಹಕಾರಿಯಾಗುವುದು.

ಮುಪ್ಪಿನ ಮುದುಕರು ಸಹ ಎಳೆಯ ಬಾಲಕರ ಉತ್ಸಾಹ ಮತ್ತು ಚಟುವಟಿಕೆಗಳನ್ನು ತೋರಿಸುತ್ತಿರುವುದುಂಟು—ಬಾಯಿಯ ಚಾಪಲ್ಯದೊಡನೆ ಹಗುರಾದ ಮನಸ್ಸು ಕೂಡ ಅವರ ಪಾಲಿನ ಸಂಪತ್ತು. ಚಿಂತೆ ಬೇಸರಗಳಿಂದ ಮನಸ್ಸಿಗೆ ದೊರೆಯುವುದು ಜಡತ್ವದ ಭಾರ ಮಾತ್ರ. ಬದಲಿಗೆ ಅದಮ್ಯ ಉತ್ಸಾಹವು ಹೆಜ್ಜೆ ಹೆಜ್ಜೆಗೂ ಆನಂದದಾಯಕ ವಿರುವುದಲ್ಲದೆ, ನಮ್ಮ ಧೈರ್ಯ ಸ್ಥೈರ್ಯಗಳನ್ನು ಹೆಚ್ಚಿಸುವುದು, ಆತ್ಮ ವಿಶ್ವಾಸವನ್ನು ಬಲಗೊಳಿಸುವುದು; ಎಲ್ಲಾ ಒಳ್ಳೆಯ ಕೆಲಸಗಳಲ್ಲಿ ಯಶಸ್ಸನ್ನು ತಂದುಕೊಟ್ಟು ನಮಗೆ ಸನ್ಮಾನವನ್ನೂ ಸನ್ಮಂಗಳವನ್ನೂ ಉಂಟುಮಾಡುವುದು.

ಎಪ್ಪತ್ತರ ಗಡಿ ದಾಟಿದ್ದರೂ ಗಾಂಧಿಜಿ ಕಾರ್ಯಕ್ಷೇತ್ರದಲ್ಲಿ ಹತೋತ್ಸಾಹವನ್ನು ತೋರಲಿಲ್ಲ. ಪ್ರಾಯ ಸಂದುದರ ಕುರುಹನ್ನೂ ಅವರಲ್ಲಿ ನಾವು ಕಾಣುವುದಕ್ಕಾಗುತ್ತಿರಲಿಲ್ಲ-ದೇಹ ಮುಪ್ಪನ್ನು ಅಪ್ಪಿಕೊಂಡಿದ್ದರೂ, ಮನಸ್ಸಿನ ಉತ್ಸಾಹ ಕುಂಠಿತವಿರಲಿಲ್ಲ. ಆದುದರಿಂದ, ಅವರು ಕಾಲ್ನಡಿಗೆಯಲ್ಲಿ ನೌಖಾಲಿ ಪ್ರವಾಸವನ್ನು ಕೆಚ್ಚೆದೆಯಿಂದ ನಿರ್ವಹಿಸಲು ಸಮರ್ಥರಾದರು-ಮದ್ರಾಸು ಮುಖ್ಯಮಂತ್ರಿ ರಾಜಾಜಿಯನ್ನೆ ನೋಡಬಹುದು-ವಿಶ್ರಾಂತಿಗೆಂದು ಕೇಂದ್ರ ಮಂತ್ರಿಮಂಡಳಕ್ಕೆ ರಾಜೀನಾಮೆ ಕೊಟ್ಟರೂ ಈಗ ಕರ್ತವ್ಯ ಭಾರವನ್ನು ಹೊರಲು ಅವರು ಒಪ್ಪಿದರು. ಅದೇ ಉತ್ಸಾಹ, ಅದೇ ಜಿಜ್ಞಾಸೆ-ಇಂದಿಗೂ ಅವರನ್ನು ಬಿಟ್ಟಿಲ್ಲ. ಇದು ದೊಡ್ಡವರು ದೊಡ್ಡವರೆನಿಸಿದ ಗುಟ್ಟು.

ಬುದ್ಧಿ ಬೆಳೆದಂತೆ ಮತ್ತು ಪ್ರಾಯ ಸಂದಂತೆ—ಮನಸ್ಸು ಉತ್ಸಾಹವನ್ನು ಹೆಚ್ಚಿಸಿಕೊಂಡರೆ ಅದರಿಂದ ತುಂಬ ಲಾಭವಿದೆ. ಬದಲಿಗೆ ನಮ್ಮ ಶಕ್ತಿ—ಸಾಮರ್ಥ್ಯಗಳನ್ನು ಮನಗಂಡೂ, ಉತ್ಸಾಹದ ಪ್ರೇರಣೆಗೆ ಒಳಗಾಗಲಿಲ್ಲವಾದರೆ—ನಾವು ಅಲಸಿಗಳೆನಿಸುವೆವು. ನಮ್ಮಿಂದ ಯಾರಿಗೂ ಏನೊಂದೂ ಉಪಕಾರವಾಗಲಿಲ್ಲ-ದೇವರು ಕೊಟ್ಟರೂ ಪೂಜಾರಿಬಿಡನೆಂಬಂತೆ-ಪ್ರಕೃತಿಯೇ ಶಕ್ತಿ ಸರ್ವಸ್ವವನ್ನು ಕೊಟ್ಟರೂ ಮನದ ಉತ್ಸಾಹವನ್ನು ತಂದುಕೊಳ್ಳದೆ ನಾವು ನಿಷ್ಕ್ರಿಯರಾಗಿ ಉಳಿಯುವೆವು. ಇದು ಕರ್ತವ್ಯ ಪರಾಙ್ಮುಖತೆಯಲ್ಲದೆ ಬೇರೇನು?

ಬಾಯಲ್ಲಿ ಚಿರೂಟಿನ ಕೊಳವೆ ಸಿಕ್ಕಿಸಿಕೊಂಡು ಚರ್ಚಿಲ್ ಈಗಲೂ ಕಾಮನ್ಸ್ ಸಭೆಯಲ್ಲಿ ಒಂದೇ ಸಮನೆ ಹೇಳಿಕೆ ಕೊಡಲು ಸಮರ್ಥ-ಅಂಧ್ರ ಕೇಸರಿ ಪ್ರಕಾಶಂ ಈಗಲೂ ದೊಡ್ಡ ಮಕ್ಕಳ್ಳ ನೆಹರೂ ಮಗುವಿಗಿಂತಲೂ ಮೃದು-ಅವರ ನಡೆನುಡಿಯಲ್ಲಿ ಚೈತನ್ಯ ಪ್ರವಾಹ ಸೂಸಿ ಹರಿಯುತ್ತಿದೆ-ನೆಗೆದು ನೆಗೆದು ಅವರು ನಡೆಯುವುದನ್ನು ನೋಡುವಾಗ ಅವರ ದೈಹಿಕ ಬಲವು ಕಣ್ಣಿಗೆ ಗೋಚರಿಸಿದರೆ, ಜೊತೆಗೇ ಆ ವ್ಯಕ್ತಿಯ ಮನದಲ್ಲಿ ತುಂಬಿ ತುಳುಕುವ ಉತ್ಸಾಹವು ಅಂತಃ ದೃಷ್ಟಿಗೆ ಗೋಚರಿಸುತ್ತದೆ- ಅನುಕರಣೀಯವೆನಿಸುವ ಹಲವಾರು ಸಂಗತಿಗಳಲ್ಲಿ ಇಂಥ ಸತತ ಉತ್ಸಾಹವು ಒಂದು.

ರಾಷ್ಟ್ರದ ಪುನರ್ನಿರ್ಮಾಣದ ಕಾರ್ಯ ನಮ್ಮ ಮುಂದಿರುವಾಗ—ಉತ್ಸಾಹದ ಚಟುವಟಿಕೆಗಳಿಗೆ ಸ್ವಾಭಾವಿಕವಾಗಿಯೇ ಒಂದು ನೂತನ ಪ್ರೇರೇಪಣೆ ಲಭ್ಯವಾಗುತ್ತದೆ. ನಮ್ಮ ರಾಷ್ಟ್ರದ ಬಡತನವನ್ನು ಕಂಡು ಅನಿಕರಪಡುವವರಿಗೆ ಉತ್ಸಾಹದ ಮನಸ್ಸು ಇರುತಿದ್ದರೆ—ನಾಡು ನಂದನವಾಗಬಹುದಲ್ಲವೆ ಎಂಬ ಆಶೆಯೂ ಜೊತೆಗೆ ಮೂಡುತ್ತದೆ. ರಾಜಾಜಿ ಈಚೆಗೆ ರಾಯಲಸೀಮೆಯ ಸಂಚಾರ ಕೈಕೊಂಡಾಗ, ರೈತರು ಉತ್ಸಾಹದಿಂದ ಹೊಲಗಳನ್ನು ಉಳುತ್ತಿರುವ ದೃಶ್ಯವನ್ನು ಕಂಡು ಸಂತುಷ್ಟಗೊಂಡರು. "ಮಳೆಯು ಬಂದು ನನ್ನ ಭಾಷಣ ನಿಂತುಹೋದರೆ—ಅದು ನನಗೆ ನೀಡಬಹುದಾದ ಸಂತೋಷಕ್ಕೆ ಎಣೆಇಲ್ಲ" ಎಂದು ರಾಜಾಜಿ ಹೇಳಿದರು. ಇದು ಅವರ ಉತ್ಸಾಹವು ನೂರ್ಮಡಿ ಹೆಚ್ಚಿದ ಎಂಬುದಕ್ಕೆ ಉದಾಹರಣೆ. ದೇಶದಲ್ಲಿ ಸುಭಿಕ್ಷ ನೆಲಸಿದರೆ-ಅದಕ್ಕಾಗಿ ಆನಂದಪಡದ ಮನುಷ್ಯನಿರುವನೇ? ನಾವು ಉತ್ಸಾ

[೧೦ನೇ ಪುಟ ನೋಡಿರಿ.]

ಒಂದು ಸರಿಯಾದ ಮತ್ತು ಮಹತ್ವದ ಹೆಜ್ಜೆ

ಇತ್ತೀಚೆಗೆ ಮದ್ರಾಸು ಸರಕಾರವು ಸರಿಮಾರ್ಗದಲ್ಲಿ ಒಂದು ಮಹತ್ತರ ಹೆಜ್ಜೆಯನ್ನಿಟ್ಟಿದೆ. ನೀವಾದರೂ ನಿಮ್ಮ ಉಳಿತಾಯದಲ್ಲಿ ಸರಿಯಾದ ಹೆಜ್ಜೆಯನ್ನಿಡಬೇಕೆಂದು ನಾವು ನಿಮ್ಮ ಲಕ್ಷ್ಯವನ್ನೆಳೆಯುತ್ತೇವೆ. ನೀವು ಅದನ್ನು ನಿಮ್ಮ ಬ್ಯಾಂಕಿನಲ್ಲಿ ಹಾಕಿದರೆ ನಾವು ಕೊಡುವ ಬಡ್ಡಿಯಿಂದ ಅದು ಬೆಳೆಯುತ್ತದೆ. ಅಲ್ಲದೆ ಅದೇ ವೇಳೆಯಲ್ಲಿ ಅದು ಭೂಪ್ರಗತಿಯನ್ನುಂಟು ಮಾಡುವ ಉತ್ಪಾದನಾ ಮತ್ತು ಉದ್ಯಮಗಳಿಗೆ ದೊರಕುವುದು. ಈ ಬ್ಯಾಂಕು ಪ್ರತಿನಿತ್ಯವೂ 50,000 ಜನರಿಗೂ ಮಿಕ್ಕಿ ಉಳಿಸಲಿಕ್ಕೆ ಸಹಕರಿಸುತ್ತಿದೆ. ದಕ್ಷಿಣ ಕನ್ನಡದ ನೀಲೇಶ್ವರ ಮತ್ತು ಕಿನ್ನಿಗೋಳಿಯಲ್ಲಿ ಇತ್ತೀಚೆಗೆ ಎರಡು ಹೊಸ ಶಾಖೆಗಳು ಇವರಿಂದ ತೆರೆಯಲ್ಪಟ್ಟವೆ.

ವಹಿವಾಟು ರೂ. 5,00,00,000 ಕ್ಕೂ ಮಿಕ್ಕಿದೆ.

ದಿ ಕೆನರಾ ಇಂಡಸ್ಟ್ರಿಯಲ್
ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ.

The Canara Industrial &
Banking Syndicate Limited.

ESTD: 1925 H. O: UDIPI.

ನರಬೇಟೆಯಾಡುವ ನಾಗಾ ಜನರು

ಅಸಾಮಿನ ಭೀಷಣ ವಂಶದ ನಾಗರಿಕ ಚಳುವಳಿ

— ೧ —

ಭಾರತದ ಈಶಾನ್ಯಗಡಿಯಲ್ಲಿ ಬ್ರಹ್ಮಪುತ್ರ ನದಿಯ ತಪ್ಪಲಿನಲ್ಲಿ ನಾಗಾ ಜಾತಿಯ ಜನರು ನೆಲಸಿರುವರು. ನಮ್ಮ ನೆರೆಯ ನೀಲಗಿರಿಯಲ್ಲಿ ವಾಸಿಸುತ್ತಿರುವ ತೊದವರಂತೆ, ಅಥವಾ ರಾಜಪುತಾನದ ಭಿಲ್ಲರು ಮತ್ತು, ಛೋಟಾ ನಾಗಪುರದ ಪೀಠಭೂಮಿಯ ಸಂತಾಲರು—ಇವರಂತೆ ನಾಗಾ ಜನರೂ ಪ್ರಾಚೀನ ವಂಶಜರು: ನಾಗರಿಕತೆಯ ಸೋಂಕು ಅಷ್ಟಾಗಿ ತಗಲದವರು. ಆದರೆ ಈಗ ತಾನೆ ಸರಕಾರದ ಲಕ್ಷ್ಯ ಈ ಜನರ ಸುಧಾರಣೆಯ ಕಡೆಗೆ ಮತ್ತು ಅವರಿಗೆ ನಾಗರಿಕ ತರಬೇತಿಯನ್ನು ಕೊಡುವತ್ತ ಹರಿದಿದೆ. ದೇಶದ ಇತರೆಡೆಯ ಜನರೊಡನೆ ಈ ಆನಾದಿಕಾಲವೂ ಹೊಂದಿಕೊಂಡು ಮುನ್ನಡೆಯಬೇಕೆಂದು ಸರಕಾರದ ಮನೀಷೆ. ಇದಕ್ಕಾಗಿ ಶಾಲೆಗಳು, ನೀರಿಗೆ ಸೌಕರ್ಯಗಳು, ಚಿಕಿತ್ಸಾಲಯಗಳು ಮುಂತಾದುವನ್ನು ಒದಗಿಸುವ ಮೂಲಕ ಪುರಾತನ ಕ್ರಮ. ನಿಯಮಗಳಿಗೇ ಅಂಟಿಕೊಂಡಿರುವ ಜನರನ್ನು ಅರ್ವಾಚೀನ ಶೀಲ, ಸಂಪ್ರದಾಯಗಳ ಕಡೆಗೆ ಒಲಿಸುವ ಪ್ರಯತ್ನ ನಡೆದಿದೆ. ನೀಲಗಿರಿಯ ತೊದವರಲ್ಲಿ ಈಗ ಗುಪ್ತರೋಗಗಳು ಹೆಚ್ಚಿರುವ ಕಾರಣ-ವರ್ಷಂಪ್ರತಿ ಸಾಯುವ ಜನರು ಹುಟ್ಟುವ ಮಕ್ಕಳಿಗಿಂತ ಹೆಚ್ಚಾಗತೊಡಗಿರುವರು. ಸ್ತ್ರೀಯರ ಗರ್ಭನಿಲ್ಲಲು ತಕ್ಕ ಉಪಾಯಗಳನ್ನು--ಮುಖ್ಯವಾಗಿ ವೈದ್ಯಕೀಯ ನೆರವನ್ನು--ಕೈಗೊಳ್ಳಬೇಕಾದುದು ಅತ್ಯಗತ್ಯವೆಂದು ಈಗ ಸಿದ್ಧವಾಗಿದೆ. ಮದ್ರಾಸು ಗವರ್ನರ ಶ್ರೀ ಪ್ರಕಾಶರು ಈಗ ಈ ವಿಷಯದಲ್ಲಿ ಹೆಚ್ಚು ಆಸಕ್ತಿಯನ್ನು ತಳೆದಿರುವರು.

— ೨ —

ಆದರೆ ಅಸಾಮಿನ ನಾಗಾ ಜನರು ನೀಲಗಿರಿಯ ತೊದವರಿಗಿಂತ ಹೆಚ್ಚು ಮಹತ್ವಕ್ಕೆ ಪಾತ್ರರು—ವಿಭಜನೆಯ ಪೂರ್ವದಲ್ಲಿ ವಾಯವ್ಯ ಸರಹದ್ದಿನ ಪಠಾಣರ ಮೇಲೆ ಕಣ್ಣಿಡುವುದು. ದೇಶ ರಕ್ಷಣೆಯ ಹಿತದೃಷ್ಟಿಯಿಂದ ಹೇಗೆ ಅಗತ್ಯವಿತ್ತೋ, ಈಗ ಈಶಾನ್ಯ ಗಡಿಯಲ್ಲಿರುವ ನಾಗಾ ಜನರ ಚಟುವಟಿಕೆಗಳ ಮೇಲೆ ನಿಯಂತ್ರಣವಿರುವುದು ಅಗತ್ಯವೆನಿಸಿದೆ. ಚಿನಾ ಮತ್ತು ಬರ್ಮಾಗಳ ಗಡಿ ಪ್ರದೇಶದಲ್ಲಿರುವ ನಾಗಾ ಜನರ ವಸತಿಯು ಈಗ ಆಯಕಟ್ಟಿನ ಸ್ಥಳವಾಗಿದೆ. ಭಾರತದ ಐಕ್ಯವು ಸ್ಥಿರವೆನಿಸಬೇಕಾದರೆ-ಈ ನರಬೇಟೆಯಾಡುವ ಭೀಷಣ ವಂಶದ ಮೇಲೆ ಕೇಂದ್ರದ ಹತೋಟಿಯೂ ಇರಬೇಕು. ಈಚೆಗೆ-ಎಂದರೆ ಒಂದು ನೂರು ವರ್ಷಕ್ಕೆ ಮುಂಚೆ—ಮನುಷ್ಯನ ಬಿಸಿನೆತ್ತರು ಕುಡಿದು ನಾಗಾ ಜನರು ತಮ್ಮ ನೀರಡಿಕೆ ಹಿಂಗಿಸಿಕೊಳ್ಳುತ್ತಿದ್ದರು. ನರ ರುಂಡಗಳ ಮಾಲೆಯನ್ನು ಕೊರಳೊಳಗೆ ಧರಿಸಿ ತಿರುಗುತ್ತಿದ್ದರು. ಆದರೆ ಕ್ರಿಶ್ಚಿಯನ್ ಪಾದರಿಗಳ ಸಾಹಸವೆಂದೇ ಹೇಳಬೇಕು—ಈ ಭಯಂಕರರಿಗಳ ನಡುವೆಯೂ ಅವರು ಧರ್ಮೋಪದೇಶಕರಾಗಿ ಬಂದು ಸೇರಿದರು ವಿದ್ಯಾ ಸಂಸ್ಥೆಗಳನ್ನು ತೆರೆದರು—ಬೇಟೆಯ ಬದಲಿಗೆ ನುಸ್ಥಿರ ವ್ಯವಸಾಯವನ್ನೂ, ಕೃಷಿಯನ್ನೂ ಕಲಿಸಿದರು. ಬಟ್ಟೆ ನೇಯುವುದನ್ನು ತೋರಿಸಿ ಕೊಟ್ಟರು- ಹೀಗೆ ಇಂದು ನಾಗಾ ಜನರು ಮೊದಲಿನಷ್ಟು ಭೀಕರರಲ್ಲ--ಅವರು ನಾಗರಿಕತೆಯ ಕಡೆಗೆ ಹೆಚ್ಚು ಹೆಚ್ಚು ಒಲಿಯುತೊಡಗಿರುವರು. ಅಲ್ಲದೆ ರಾಜಕೀಯ ರಂಗದಲ್ಲಿ ಕೂಡ ಪ್ರವೇಶಿಸಿ ಚಳುವಳಿ ನಡೆಸುವಷ್ಟು ಮುಂಬಂದಿರುವರೆಂಬುದು ಸಂತೋಷ.

— ೩ —

ಸುಮಾರು ಐವತ್ತುಸಾವಿರ ಚದರ ಮೈಲಿ ಪ್ರದೇಶದಲ್ಲಿ ಎರಡುಲಕ್ಷ ಜನ ನಾಗಾ ನಿವಾಸಿಗಳಿದ್ದಾರೆ. ೧೮೮೦ರಲ್ಲಿ ಬ್ರಿಟಿಷ್ ಸರಕಾರವು ಈ ಪ್ರದೇಶವನ್ನು ತನ್ನ ಸಾಮ್ರಾಜ್ಯದಲ್ಲಿ ಸೇರಿಸಿಕೊಂಡಿತು. ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಭಾರತದ ಅಧಿಕಾರವು ಇಲ್ಲಿ ಪ್ರಸ್ಥಾಪಿತವಾಯಿತು. ಈ ಪರ್ವತ ಪ್ರದೇಶದಲ್ಲಿ ಈಗಲೀಗ ನಾಗಾ ಜನರು ಅಕ್ಕಿ ಬೆಳೆಯುತ್ತಿರುವುದನ್ನು ಮತ್ತು ಮೀನು ಹಿಡಿಯುತ್ತಿರುವುದನ್ನು ಕಾಣಬಹುದು. ಯುದ್ಧಕಾಲದಲ್ಲಿ ಈ ಜನರು ಅತ್ಯಂತ ಶೌರ್ಯದಿಂದ ಹೋರಾಡುತ್ತಿದ್ದರು. ಬ್ರಿಟಿಷ ರಾಜ್ಯದ ಕಡೆಯಿಂದ ಜಪಾನೀಯರ ಮತ್ತು ಸುಭಾಷ್ ಬೋಸರ ಆಜಾದ್ ಹಿಂದ್ ಸೈನಿಕರ ವಿರುದ್ಧ ಪರಾಕ್ರಮದಿಂದ ಯುದ್ಧ ಮಾಡಿದ್ದರು. ಕೋಹಿಮಾ ಮತ್ತು ಇಂಫಾಲ್ ಪ್ರದೇಶಗಳಲ್ಲಿ ಇವರು ತೋರಿಸಿದ ಶೌರ್ಯವು ಬ್ರಿಟಿಷ ಸೇನಾಧಿಕಾರಿಗಳಿಂದ ಪ್ರಶಂಸೋದ್ಗಾರಗಳನ್ನು ತಂದಿತು. ಯುದ್ಧದಲ್ಲಿ ಮರಣಕ್ಕೆ ಅಂಜದ ಧೀರರು ಎಂದು ಇವರನ್ನು ಸಿಟವೆಲ್ ಸೇನಾಧಿಪತಿ ಹೊಗಳಿರುವನು. ಈಟಿಯೇ ಈ ಜನರ ಪ್ರಮುಖ ಶಸ್ತ್ರ. ಶತ್ರುಗಳೊಡನೆ ಕಾದುವುದರಲ್ಲಿ ಇವರು ನಿಸ್ಸೀಮರು. ಹಗೆತನದ ಸೇಡು ತೀರಿಸದೆ ಬಿಡಲು ಇವರು ಸಿದ್ಧರಿಲ್ಲ.

— ೪ —

ಸ್ವಾತಂತ್ರ್ಯವೆಂದರೇನೆಂಬುದರ ಸರಿಯಾದ ಅರ್ಥ ತಿಳಿಯದೆಯೋ ಎಂಬಂತೆ—ಭಾರತವು ಸ್ವಾತಂತ್ರ್ಯ ಪಡೆದ ದಿನದಿಂದ ನಾಗಾ ಜನರೂ ತಾವು ಸ್ವತಂತ್ರರೆಂದು ತಿಳಿಯಹತ್ತಿದರು. ಸ್ವತಂತ್ರ ನಾಗಾ ಪ್ರದೇಶವನ್ನು ನಿರ್ಮಿಸುವ ಆಂದೋಲನವನ್ನು ಕೆಲವು ಮಂದಿ ಸರದಾರರು ಈಗ ಹೂಡಿರುವರು. ಪರ್ವತೀಯ ಪ್ರದೇಶವಾದ ಇಲ್ಲಿ ಕೇಂದ್ರ ಸರಕಾರದ ಕೈ ಸಡಿಲು ಮಾಡಬೇಕೆಂಬ ಕುತ್ಸಿತ ಬಯಕೆಯಿಂದ ದೇಶದ್ರೋಹಿ ಚಳುವಳಿಯನ್ನೆತ್ತಲು ಕೆಲವು ಜನರು ಮುಂದಾದುದು ಶೋಚನೀಯ. ಇವರಲ್ಲಿ ಶ್ರೀ ಎ. ಜಡ್ ಫಿಜೊ ಎಂಬವರು ಉಲ್ಲೇಖನೀಯರು. ನಾಗಾ ರಾಷ್ಟ್ರೀಯ ಸಮಿತಿಯ ಅಧ್ಯಕ್ಷರಾಗಿ ಇವರು ಕೆಲಸ ಮಾಡುತ್ತಿರುವರು. ಪಠಾಣರ ಧುರೀಣರಾದ ಖಾನ್ ಅಬ್ದುಲ್ ಗಫರ್ ಖಾನರು "ಸರಹದ್ದಿನ ಗಾಂಧೀ" ಎಂದು ಹೆಸರು ಪಡೆದಂತೆ--ತಾವೂ ಕೀರ್ತಿ ಭಾಜನರಾಗಬೇಕೆಂಬುದು ಫಿಜೋರ ಆಂತರಿಕ ಅಭಿಲಾಷೆ. ಅದಕ್ಕಾಗಿ ಈಗ ಗಾಂಧೀಯು ಅನುಸರಿಸಿದ ಅಹಿಂಸಾತ್ಮಕ ಚಳುವಳಿ ಮತ್ತು ಅಸಹಕಾರ ಆಂದೋಲನದ ಮೂಲಕ ಸ್ವಾತಂತ್ರ್ಯ ತರಲು ಹೆಣಗುತ್ತಿರುವರು. ಭಾರತದಲ್ಲಿ ಮಹಾ ಚುನಾವಣೆಗಳು ನಡೆದಾಗ--ನಾಗಾ ಜನರಿಗೆ ೪ ಸ್ಥಾನಗಳು ಇದ್ದರೂ--ಅಲ್ಲಿ ಚುನಾವಣೆ ನಡೆಸಲು ಸಾಧ್ಯವಾಗಲಿಲ್ಲ ಎಂಬುದನ್ನು ಗಮನಿಸಬೇಕು. ರಕ್ತ ಪಿಪಾಸುಗಳಾದ ಪಠಾಣರು ಅಹಿಂಸಾ ಭಕ್ತರಾದಂತೆ ತಾನೂ ನಾಗಾ ಜನರನ್ನು ಶಾಂತ ಚಳುವಳಿಗೆ ಪ್ರೇರಿಸುವೆನೆಂದು ಫಿಜೊ ಹೇಳುತ್ತಾರೆ.

— ೫ —

ನೆಹರೂ ಈಚೆಗೆ ಈಶಾನ್ಯ ಗಡಿಪ್ರದೇಶದ ಪ್ರವಾಸವನ್ನು ಮಾಡಿದಾಗ ಈ ಜನರ ಆಂದೋಲನ ಸರಿಯಲ್ಲವೆಂದು ಉಪದೇಶಿಸಿದರು.— "ನಿಮ್ಮ ಸ್ವಾತಂತ್ರ್ಯ ಭಾವನೆಗೆ ನನ್ನ ಸಹಾನುಭೂತಿ ಇದೆ. ಆದರೆ ನಿಮ್ಮ ಸಣ್ಣ ಜಿಲ್ಲೆಯೊಂದೇ ಸ್ವತಂತ್ರ ರಾಜ್ಯವಾಗಿರಲು ಭೌಗೋಲಿಕ ಸ್ವರೂಪದ ಅತಂಕಗಳಿವೆ. ಭಾರತದ ಇತರೆಡೆಯ ಜನರು ಎಷ್ಟರ ಮಟ್ಟಿಗೆ ಸ್ವತಂತ್ರರೋ—ನೀವೂ ಕೂಡ ಹಾಗೆ ಸ್ವತಂತ್ರರಬಲ್ಲಿರಿ.' ಆದರೆ ಈ ಹಿತೋಕ್ತಿಯ ಪ್ರಭಾವ ಚಳುವಳಿಗಾರರ ಮೇಲಾಗಲಿಲ್ಲ—ಮೂರು ತಿಂಗಳ ಹಿಂದೆ ಒಂದು ಶಿಷ್ಟಮಂಡಳವು ದಿಲ್ಲಿಗೆ ಬಂದು, ಭಾರತ ಸರಕಾರದೊಡನೆ ವಾರ್ತಾಲಾಪ ನಡೆಸಿತು. ಸಂಧಾನವು ಅಸಫಲ ಆಗಲು ಕುಪಿತಗೊಂಡ ಫಿಜೋ ಹೀಗೆಂದರು—"ನಾಗಾ ಜನರ ರಾಷ್ಟ್ರೀಯತಾ ಭಾವನೆಯನ್ನು ಭಾರತವು ಮೆಟ್ಟಿ ಮುಚ್ಚಲು ಹವಣಿಸುತ್ತಿದೆ. ಲೋಕದ ಯಾವ ಶಕ್ತಿಯೂ ನಾಗಾ ಜನರು ಸ್ವತಂತ್ರರಾಗುವುದನ್ನು ತಡೆಯಲಾರದು." ಹೀಗೆ ಆಹ್ವಾನವನ್ನೇ ಕೊಟ್ಟಿರುವ ಫಿಜೋಗೆ ನಾಗ ಜಾತಿಯ ಇತರ ಸರದಾರರ ಬೆಂಬಲವಿಲ್ಲದಿರುವುದು ಸ್ವಲ್ಪ ಮಟ್ಟಿಗೆ ಸಮಾಧಾನ ತಂದಿದೆ. ಮಣಿಪುರದ ನಾಗಾ ಜನರು ತಾವು ಅಸಾಮಿನೊಡನೆ ಸೇರಲು ಇಚ್ಛೆವುಳ್ಳವರೆಂದು ಈ ಮೊದಲೇ ನುಡಿದಿರುವರು. ಭಾರತದ ಸೇನಾಧಿಪತಿ ಜನರಲ್ ಕರಿಯಪ್ಪನವರು ಈಚೆಗೆ ಇಲ್ಲಿ ಸುತ್ತಾಡಿ ಬಂದಬಳಿಕ-ಹೆಚ್ಚಿನ ನಾಗಾ ಸರದಾರರು ಭಾರತದೊಳಗೆ ಸೇರಿರಲು ಉತ್ಸುಕರಿರುವ ಸಂಗತಿ ತಿಳಿಸಿದ್ದಾರೆ.

— ೬ —

ಇನ್ನೂ ಅಶಿಕ್ಷಿತರಾಗಿ ಉಳಿದಿರುವ ಗುಡ್ಡಗಾಡು ಪ್ರದೇಶದ ಜನರ ಅಭ್ಯುದಯವನ್ನು ಸಾಧಿಸಲು ಯೋಜನೆ ಮಾಡಬೇಕೆಂದು ಹೊಸದಿಲ್ಲಿಯಲ್ಲಿ ಈಚೆಗೆ ಒಂ

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs. 10 lacks.
3. Has granted an average dividend of 6% to the Share-holders for the past 20 years.
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates.
6. Grants loans on easy terms to approved parties or on approved securities.
7. Does afford full protection and rich return to all your monies.

ADOPT IT A*
"MY BAN*"
THE VIJAYA BANK, LIMITED,
H. O., MANGALORE.

The East & West Insurance Co, Ltd,
East & West Bldgs., BOMBAY - 1.

ದಿ ಈಸ್ಟ್ ಎಂಡ್ ವೆಸ್ಟ್
ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್-

ಸ್ಥಾಪನೆ:] ಈಸ್ಟ್ ಎಂಡ್ ವೆಸ್ಟ್ ಬಿಲ್ಡಿಂಗ್ಸ್, ಬೊಂಬಾಯಿ 1 [1913

ಉದಾರ ಯಾ ರಿಯಾಯತಿ ಶರ್ತಗಳಿರುವ ಪುರಾತನ ಮತ್ತು ಮುಂದುವರಿದ ಕಂಪೆನಿಗಳಲ್ಲೊಂದಾಗಿರುತ್ತದೆ.

ವಿಮೆಯ ಸಕಲ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು ಆ ಬಾಬಿನ ಎಲ್ಲಾ ಕೆಲಸಗಳಲ್ಲಿ ಭಾಗಿಯಾಗಿ ಸಹಕರಿಸಿ ಸಲಹೆಗಳನ್ನೀಯುತ್ತಾ, ಜನಸೇವೆಗೈಯುವುದೇ ನಮ್ಮ ಧ್ಯೇಯ.

ನಮ್ಮ ಚೀಫ್ ಏಜನ್ಸಿ ವಿಸ್ತೀರ್ಣದೊಳಗೆ ಪ್ರತೀ ಜಿಲ್ಲೆಗೊಬ್ಬರಂತೆ ಇನ್ಸ್‌ಪೆಕ್ಟರುಗಳೂ, ಸ್ಪೆಶಲ್ ಏಜಂಟರೂ, ಏಜಂಟರೂ ಬೇಕಾಗಿದ್ದಾರೆ. ಹೆಚ್ಚಿನ ವಿವರಕ್ಕೆ ಬರೆಯುವದು.

ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್,
ಚೀಫ್ ಏಜಂಟರು,
ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಮೈಸೂರು ಸ್ಟೇಟ್,
ಪೋಸ್ಟ್ ಶಿವಾರ್, ದ. ಕ.

ಸ್ವಾವಲಂಬನೆಯ ಪ್ರಯತ್ನದಲ್ಲಿ ಅಪೂರ್ವ ಯಶಸ್ಸು

ರಾಷ್ಟ್ರೀಯ ರಾಸಾಯನಿಕ ಪ್ರಯೋಗ ಶಾಲೆ

ಕಲಕತ್ತೆಯ ವ್ಯಾಪಾರಿಯೋರ್ವರಿಗೆ ಒಂದು ತೊಡಕು ಉಪಸ್ಥಿತವಾಯಿತು. ಒಂದು ಹೊಸ ಕೈಗಾರಿಕೆಯನ್ನು ಸ್ಥಾಪಿಸುವುದು ಅವರ ಬಯಕೆ. ಆದರೆ ಇದಕ್ಕೆ ಬೇಕಾದ ಪೊಟಾಶಿಯಂ ಫ್ಲೂರೈಡ್, ಬೊರಾಕ್ಸ್ ಮತ್ತು ಸಿಲಿಕೊಫ್ಲೋರಿಕ್ ಆಮ್ಲಗಳನ್ನು ತರಿಸುವುದರಲ್ಲಿಯೇ ತನ್ನೆಲ್ಲ ಬಂಡವಾಳ ವೆಚ್ಚವಾಗುವುದೆಂದವರಿಗೆ ಹೆದರಿಕೆಯಾಯಿತು. ಅದೃಷ್ಟವಶವೆಂಬಂತೆ, ಅವರು ಪುಣೆಯಲ್ಲಿರುವ ಭಾರತೀಯ ರಾಷ್ಟ್ರೀಯ ರಾಸಾಯನಿಕ ಪ್ರಯೋಗಶಾಲೆಯೊಡನೆ ಈ ಕುರಿತು ಮಾಹಿತಿ ಕೇಳಿದರು. ತನಗೆ ಬೇಕಾದುದೆಲ್ಲವೂ ಭಾರತದಲ್ಲಿಯೇ ಲಭ್ಯವಿದೆ ಎಂದವರು ತಿಳಿದುಕೊಂಡಾಗ ಅತ್ಯಂತ ಆಶ್ಚರ್ಯಪಟ್ಟರು. ಪರಿಣಾಮವಾಗಿ ವಿದೇಶಗಳಿಗೆ ಹರಿಯುತ್ತಿದ್ದ ಹಣವು, ದೇಶದೊಳಗೇನೇ ನಿಲ್ಲುವಂತಾಯಿತು.

ಹೆಚ್ಚು ಸಮಯವಾಗಲಿಲ್ಲ—ಕೆಲವು ನೂರು ರೂಪಾಯಿಯ ಬಂಡವಾಳದ ಮೇಲೆ ಕಿರ್ಕೀಯ ಮಹಿಳೆಯರೊಬ್ಬರು ರಬ್ಬರು ಕೈಗಾರಿಕೆಯನ್ನು ತೊಡಗಬಯಸಿದರು, ಆದರೆ ಈ ಉದ್ಯಮದಲ್ಲಿ ಅಡಕವಾಗಿರುವ ರಾಸಾಯನಿಕ ರೀತಿ-ನೀತಿಗಳ ಜ್ಞಾನ ಅವರಿಗಿರಲಿಲ್ಲ. ಭಾರತದ ರಾಷ್ಟ್ರೀಯ ಪ್ರಯೋಗ ಶಾಲೆಯು ಬಹಳ ಸುಲಭದ ತಂತ್ರವನ್ನು ಹೇಳಿಕೊಟ್ಟುದರಿಂದ-ಇಂದು ಅವರು ಇಪ್ಪತ್ತು ಲಕ್ಷ ರೂಪಾಯಿಗೂ ಹೆಚ್ಚು ವಾರ್ಷಿಕಾದಾಯ ಪಡೆಯುವ ಗೃಹಸ್ಥರಾಗಿರುವರು. ರಬ್ಬರು ಗೊಂಬೆಗಳನ್ನು ತಯಾರಿಸಿ—ಸಂಯುಕ್ತರಾಜ್ಯ ಅಮೇರಿಕೆಗೆ ಕಳಿಸುವಷ್ಟರ ಮಟ್ಟಿನ ಸಾಮರ್ಥ್ಯ ಪಡೆದಿರುವರು.

ವಿಜ್ಞಾನ—ಕೈಗಾರಿಕೆ

ಭಾರತದಲ್ಲಿ ಸರ್ವತ್ರ ವ್ಯಾಪಿಸಿರುವ ಹನ್ನೊಂದು ರಾಷ್ಟ್ರೀಯ ಪ್ರಯೋಗ ಶಾಲೆಗಳಲ್ಲಿ ಇದೊಂದು-ಭಾರತದಲ್ಲಿ ವಿಜ್ಞಾನದ ಬೆಳವಣಿಗೆಯಾಗಲೆಂದೂ, ತನ್ಮೂಲಕ ಭಾರತೀಯ ಉದ್ಯಮಗಳ ಅಭಿವೃದ್ಧಿಯಾಗಬೇಕೆಂದೂ ಇವು ಕೈಲಾದ ಸಹಾಯವನ್ನು ಕೊಡುತ್ತವೆ. ಕೈಗಾರಿಕೆಗಳ ಮೇಲ್ಮೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ವಿಜ್ಞಾನದ ಪ್ರಗತಿಯಾಗಿಲ್ಲವೆಂಬ ಅಭಿಪ್ರಾಯ

ದು ಪಥಿ ಸೇರಿತ್ತು. ಅನಾದಿ ಕುಲದವರೊಡನೆ ಹೊಂದಿಕೊಂಡು, ಅವರ ಹೃದಯವನ್ನು ಒಲಿಸಿಕೊಂಡು, ತನ್ಮೂಲಕ ನಾಗರಿಕತೆಯ ಪೂರ್ಣ ಶಿಕ್ಷಣವನ್ನು ವಿವಿಧ ಹಂತಗಳಲ್ಲಿ ನೀಡಬೇಕೆಂದು ನೆಹರೂ ಈ ಸಂದರ್ಭದಲ್ಲಿ ಹೇಳಿದರು. ಶಿಕ್ಷಣ ಸೌಕರ್ಯಗಳು, ಚಿಕಿತ್ಸಾಲಯಗಳು ಗ್ರಾಮೋದ್ಯೋಗಗಳು, ಸುಧಾರಿತ ವ್ಯವಸಾಯ ಮತ್ತು ಸಾರಿಗೆ ಸಂಪರ್ಕದ ಅನುಕೂಲತೆಗಳನ್ನು ಒದಗಿಸುವ ಮೂಲಕ ನಾಗಾ ಜನರ ಹಿತವನ್ನು ಸಾಧಿಸುವುದು ಸಾಧ್ಯ. ಆದರೆ ಒಳ್ಳೆಯ ಅಭ್ಯಾಸಗಳಿಗೆ ಯಾರೂ ಬೇಗನೇ ಆಕರ್ಷಿತರಾಗುವುದಿಲ್ಲವಲ್ಲವೆ? ನಾಗಜನರಲ್ಲಿ ಗಂಡಸರಿಗೂ ಹೆಚ್ಚು ಹೆಂಗಸರೇ ಸಿಗರೇಟು ಸೇದುತ್ತಿರುವರು ಎಂಬ ಹುಚ್ಚು ಹವ್ಯಾಸದ ಮಂದಿಯ ಉಪಪತ್ತಿ ಬೇರೆ ಹೇಗೆ ಸಾಧ್ಯ?

ವನ್ನು ಪರಿವರ್ತಿಸುವುದೇ ಎರಡುವರ್ಷಗಳ ಕೆಳಗೆ ಸ್ಥಾಪಿಸಿದ ರಾಸಾಯನಿಕ ಪ್ರಯೋಗ ಶಾಲೆಯ ಉದ್ದೇಶ.

ನವನವೀನವಾದ ರಾಸಾಯನಿಕ ವಿಧಿ-ವಿಧಾನಗಳ ಜ್ಞಾನವನ್ನು ಮಾಡಿಕೊಳ್ಳಲು ಬಯಸಿ ಬರುವವರ ದಟ್ಟಣೆಯಿಂದ ಇಂದು ಪ್ರಯೋಗ ಶಾಲೆ ತುಂಬಿ ಹೋಗಿದೆ. ಕೆಲವು ಕೈಗಾರಿಕಾ ಸಂಸ್ಥೆಗಳು ತಮ್ಮ ತಾಂತ್ರಿಕ ಸಹಾಯಕರನ್ನು ಅಲ್ಪಾವಧಿಯ ತರಬೇತಿಗಾಗಿ ಇಲ್ಲಿ ಕಳುಹಿಸುವುದುಂಟು. ಹೊಸ ಉದ್ಯಮಗಳನ್ನು ತೊಡಗಬಯಸುವ — ಆದರೆ ಪ್ರಾಯೋಗಿಕವಾಗಿ ಬಹಳ ಹೆಚ್ಚು ವ್ಯಯ ಮಾಡಲು ಮುಂದಾಗದ ಸಂಸ್ಥೆಗಳಿಗೆ ಈ ಪ್ರಯೋಗ ಶಾಲೆಯೇ ಸೌಲಭ್ಯಗಳನ್ನೊದಗಿಸುತ್ತದೆ.

ಮೂಲ ವಿಚಾರ

ಇಂಥದೊಂದು ವ್ಯಾಪಕ ಪ್ರಯೋಗ ಶಾಲೆಗಳ ಮೂಲ ವಿಚಾರವನ್ನು ೧೯೪೦ರಲ್ಲಿ ಡಾ| ಎಸ್. ಎಸ್. ಭಟ್ನಾಗರ ಮಾಡಿದರು, ೧೯೫೦ರಲ್ಲಿ ರಾಷ್ಟ್ರೀಯ ರಾಸಾಯನಿಕ ಪ್ರಯೋಗಶಾಲೆಯ ಉದ್ಘಾಟನೆಯನ್ನು ನೆರವೇರಿಸುವಾಗ "ನಾನು ವಿಜ್ಞಾನಿಗಳ ದೊಡ್ಡ ಗುಂಪುಗಳು ಭಾರತದ ಅಭಿವೃದ್ಧಿಗಾಗಿ ಪರಿಶ್ರಮಿಸುವ ಮತ್ತು ಭಾರತೀಯರ ಬದುಕಿನಲ್ಲಿ ವೈಜ್ಞಾನಿಕ ದೃಷ್ಟಿಯ ಕಡೆ ಆಸ್ಥೆ ಉಂಟಾಗುವ ಕನಸು ಕಾಣುತ್ತಿದ್ದೆ.... ವರ್ಷಗಳಿಂದ ನಾನು ಈ ಕನಸನ್ನು ಕಾರ್ಯಗತವಾಗಿಸಲು ಹೆಣಗುತ್ತಿದ್ದೆ — ಮತ್ತೀಗ ಅದು ಸಫಲಗೊಳ್ಳುವುದೇನೋ...." ಎಂಬ ಆಶೆ ವ್ಯಕ್ತಪಡಿಸಿದರು.

ನೀರಿನ ಕಾರಂಜಿಗಳು ಚಿಮ್ಮುವ ಮತ್ತು ಸಣ್ಣ ಪುಟ್ಟ ಗುಡ್ಡ ಬೆಟ್ಟಗಳಿರುವ ಸುಮಾರು ೪೭೫ ಎಕ್ರೆ ವಿಶಾಲವಾದ ಮೈದಾನಿನಲ್ಲಿ ಮುನ್ನೂರು ಕೋಣೆಗಳಿರುವ ಈ ಪ್ರಯೋಗ ಶಾಲೆ ನೆಲಸಿದೆ. ಪೂನೆಯ ಸರಕಾರಿ ಭವನಕ್ಕಿಂತ ಇದು ಹೆಚ್ಚಿಗೆ ದೂರವಿಲ್ಲ. ನಾಲ್ಕು ಮಹಿಳೆಯರನ್ನೊಳಗೊಂಡು— ಒಟ್ಟು ೧೨೭ ವಿಜ್ಞಾನಿಗಳು ಇಲ್ಲಿ ಕೆಲಸದಲ್ಲಿದ್ದಾರೆ.

ಕಾರ್ಯ ಕಲಾಪ

ಪ್ರಯೋಗ ಶಾಲೆಯಲ್ಲಿ ಎಂಟು ಶಾಖೆಗಳಿವೆ—ಪ್ರತಿಯೊಂದು ಶಾಖೆಯು ಯೋಜನಾ ಮಟ್ಟದಿಂದಲೂ ಮುಂದರಿದು ಕ್ರಿಯಾತ್ಮಕ ಸ್ವರೂಪವನ್ನು ತಾಳಲು ಬಹಳ ಕಷ್ಟಪಡಬೇಕಾಯಿತೆಂಬುದು ನಿಜವೇ. ಈ ಯಶಸ್ಸು ಗಳಿಸಿದವರು ಪ್ರತಿಭಾನ್ವಿತರಾದ ಭಾರತೀಯ ವಿಜ್ಞಾನಿಗಳೇ-ಇವರ ಮುಖ್ಯಸ್ಥರಾಗಿ ಭಾರತ ಸರಕಾರದ ವಿನಂತಿಯಂತೆ ಅಮೇರಿಕದಿಂದ ಬಂದಿರುವ ಪ್ರೊಫೆಸರ್ ಜೇಮ್ಸ್ ಮ್ಯಾಕ್ ಬೇನ್ ಇದ್ದಾರೆ. ಪ್ರಾಕೃತಿಕ ರಸಾಯನ ಶಾಸ್ತ್ರಜ್ಞರೆಂದು ಇವರು ಕೀರ್ತಿಹೊಂದಿರುವರು. ಫ್ಯಾರಡೆ ಸಂಘದ ಉಪಾಧ್ಯಕ್ಷರಾಗಿ, ಅಮೇರಿಕದ ರಾಸಾಯನಿಕ ಸಂಘದ ಶಾಖೆಯ ಅಧ್ಯಕ್ಷರಾಗಿ—ಕೊನೆಗೆ ೧೯೨೩ರಲ್ಲಿ ರಾಯಲ್ ಸೊಸೈಟಿಯ ಸದಸ್ಯರಾಗಿ ದುಡಿದ ಶ್ರೇಯಸ್ಸು ಪ್ರೊ. ಮ್ಯಾಕ್ ಬೇನರಿಗಿದೆ.

ಮೂರು ವರ್ಷಗಳಿಂದ ಪ್ರಯೋಗ ಶಾಲೆಗಾಗಿ ದುಡಿದ ಮ್ಯಾಕ್ ಬೇನರು ಸದ್ಯದಲ್ಲಿಯೇ ಸ್ವದೇಶಕ್ಕೆ ಹಿಂತಿರುಗುವರು. ಈ ಅವಧಿಯಲ್ಲಿ ಭಾರತದ ಕೈಗಾರಿಕೆಗಳಿಗೆ ಸಂಶೋಧನಾ ಸಮಸ್ಯೆಗಳಲ್ಲಿ ನೆರವಾಗುವ ಮತ್ತು ಸ್ವತಃ ಮೂಲ ಭೂತ ಸಂಶೋಧನೆಗಳಲ್ಲಿ ನಿರತವಾಗುವ ಯೋಗ್ಯ ಯೋಜನೆಯನ್ನು ರಾಷ್ಟ್ರೀಯ ರಾಸಾಯನಿಕ ಪ್ರಯೋಗ ಶಾಲೆ ನೆರವೇರಿಸಲು ಸಮರ್ಥವಾಯಿತು—ಏನಿಲ್ಲೆಂದರೂ, ಅದು ಪ್ರತ್ಯಕ್ಷಕ್ಕೆ ಇಟ್ಟಿರುವ ಹೆಜ್ಜೆ ಮಹತ್ವದ್ದು ಎಂದವರು ಹೇಳುತ್ತಾರೆ.

ನೆರವಿನ ಬಗೆ

ಉದಾಹರಣಾರ್ಥವಾಗಿ--ಭಾರತದ ಸಹಕಾರೀ ಸಂಘವೆಂಬುದು ಫರಿದಾಬಾದಿನಲ್ಲಿದೆ. ಅಲ್ಲಿ ತಿರುಕೊಟ್ಟೆಯ ವಿ. ಪಾವುಲ್ ಎಂಬ ಕೈಗಾರಿಕಾ ರಸಾಯನ ಶಾಸ್ತ್ರಜ್ಞ ಕೆಲಸಮಾಡುತ್ತಾರೆ, ಈ ಸಹಕಾರಿ ಸಂಘವು ಸರಕಾರದ ದ್ರವ್ಯ ಸಹಾಯವನ್ನು ಪಡೆಯುತ್ತದೆ. ನಿರಾಶ್ರಿತರನ್ನು ಪುನರ್ನಿವೇಶನಗೊಳಿಸಲು ಅನುಕೂಲತೆ ಕಲ್ಪಿಸುವ ಉದ್ದೇಶದಿಂದ ಒಂದು ಸಣ್ಣ ಮಟ್ಟಿನ ರಾಸಾಯನಿಕ ಉದ್ಯಮವನ್ನಾರಂಭಿಸುವುದು ಅದರ ಮನೀಷೆ. ಇದರ ಮಾಹಿತಿಯನ್ನೂ ತರಬೇತಿಯನ್ನೂ ಪಡೆಯಲೆಂದು ಶ್ರೀ. ಪಾವುಲರನ್ನು ಎರಡೂವರೆ ತಿಂಗಳಿಗೆ ಹಿಂದೆ ಸಂಘವು ಪ್ರಯೋಗಶಾಲೆಗೆ ಕಳಿಸಿತು. ಇಲ್ಲಿ ಶ್ರೀ ಪಾವುಲರು ವಿಶೇಷ ರೀತಿಯಲ್ಲಿ ಅಂಗಾರದ ಗುಣ ಲಕ್ಷಣಗಳ ಪ್ರಯೋಗ ನಡೆಸುತ್ತಿರುವರು. ಸುಮಾರು ಹತ್ತುಸಾವಿರ ರೂಪಾಯಿಗೂ ಕಡಿಮೆ ಬಂಡವಾಳದಲ್ಲಿ ಆರಂಭಿಸಬಹುದಾದ ಶಾಯಿ ಮುಂತಾದ ಕೆಲವು ಉದ್ಯಮಗಳಿಗೆ ಇದರಿಂದ ಪ್ರೋತ್ಸಾಹದೊರೆಯುವುದು ನಿಶ್ಚಯ.

ಸರಕಾರದ ಸುದ್ದಿ ಮತ್ತು ಬಾನುಲಿ ಶಾಖೆಯು ಈ ಮೊದಲು ಕಚ್ಚಾ ಫಿಲ್ಮಿನ ಬಗ್ಗೆ ಬೇಕಿರುವ ಹೆಚ್ಚಿನ ಸಾಮಗ್ರಿಗಳನ್ನು ಆಮದು ಮಾಡುತ್ತಿತ್ತು. ರಾಷ್ಟ್ರೀಯ ರಾಸಾಯನಿಕ ಪ್ರಯೋಗಶಾಲೆಯು ಭಾರತದಲ್ಲಿಯೇ ಫಿಲ್ಮ್ ಸಾಮಗ್ರಿಗಳನ್ನು ತಯಾರಿಸಲು ಬರುವುದೆಂದು ಕಂಡುಕೊಂಡಿತು. ಕೆಲವೇ ಸಮಯದಲ್ಲಿ ದಿನದ ಇಪ್ಪತ್ತನಾಲ್ಕು ತಾಸೂ ಕೆಲಸ ಮಾಡುವ ದೊಡ್ಡ ಸಾಹಸವೇ ತೊಡಗಿ, ಗೆಲಟಿನ್ ತಯಾರಿ ವಿಸ್ತೃತ ಪ್ರಮಾಣದಲ್ಲಿ ನಡೆಯಿತು. ಇದನ್ನು ಚಿತ್ರವೇತ್ತರು ಉಪಯೋಗವಾದ ಫಿಲ್ಮಿನ ರೂಪದಲ್ಲಿ ರಸಾಯನ ಶಾಸ್ತ್ರಜ್ಞರು ಪರಿಷ್ಕರಿಸಿದರು. ಹೀಗೆ ವಿದೇಶದಿಂದ ಬರುವ ವಸ್ತುವೊಂದು ಕಡಿಮೆಯಾಯಿತು.

ಬಾಂಧವ್ಯ ಸ್ಥಾಪನೆ

ಆಗಿಂದಾಗ್ಗೆ ಕೈಗಾರಿಕಾತಜ್ಞರು, ವಿಜ್ಞಾನಿಗಳು ಮತ್ತು ಸರಕಾರಿ ಅಧಿಕಾರಿಗಳು ಗೋಷ್ಠಿಯಲ್ಲಿ ಸೇರಿ ಯೋಜನೆಗಳನ್ನು ವಿಮರ್ಶಿಸುವ— ವಿಚಾರವಿನಿಮಯ ನಡೆಸುವರು. ಈಚೆಗೆ ಸೇರಿದ ಒಂದು ಗೋಷ್ಠಿಯ ಪರಿಣಾಮವಾಗಿ— ರಬ್ಬರು ಕೈಗಾರಿಕೆಗೆ ನೆರವಾಗುವಂತೆ ಪ್ರಯೋಗ ನಡೆಸುವ ನಿಬಂಧನೆಯನ್ನು ಹೆಚ್ಚಿಸುವ ಮತ್ತು ಸೌಕರ್ಯಗಳನ್ನು ವಿಸ್ತರಿಸುವ ಕಾರ್ಯ ಈಗ ನಡೆದಿದೆ.

[೪ನೇ ಪುಟ ನೋಡಿರಿ]

ನಡೆಯದ ನಾಣ್ಯ

ನೀವು ಆರೋಗ್ಯವಂತರಿದ್ದಾಗ ವಿಮೆ ಇಳಿಸಬಲ್ಲಿರಿ; ಆದರೆ, ಆರೋಗ್ಯ ಕೆಟ್ಟಾಗ, ನೀವು ವಿಮೆಯ ರಕ್ಷಣೆಯನ್ನು ಪಡೆಯಲಾರಿರಿ.—ನಡೆಯದ ನಾಣ್ಯದಂತೆ ನಿಮ್ಮ ಆಗಿನ ಸ್ಥಿತಿ.

ಕಾರಣ, ನೀವು ವಿಮೆ ಇಳಿಸುವುದನ್ನು ಮುಂದೂಡಲಾಗದು ಇಂದೇ ವಿಮೆ ಇಳಿಸಿ ನಿಮ್ಮ ಮತ್ತು ನಿಮ್ಮ ಕುಟುಂಬದ ಭದ್ರತೆಯನ್ನು [illegible] ಕೊಳ್ಳಿರಿ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ: **ಉಡುಪಿ, ದ. ಭಾರತ.** ಸ್ಥಾಪನೆ: ೧೯೩೯

ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ

The Canara Mutual Assurance Co. Ltd.

Head Office: **UDIPI**, S. India.



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಜಿ. ಐ. ಪಿ.) ಮುಂಬಯಿ, ೧೪

ದೇಶದ ಮುಂದಿರುವ
ನಿವಾರಣಾ ಕಾರ್ಯದಲ್ಲಿ

ಬಿಹಾರದ ನಿರ್ಣಯ

ಮದ್ರಾಸ ರಾಜ್ಯವು ಆಹಾರ ವಿನಿಯಂತ್ರಣದ ಧೋರಣೆಯನ್ನು ಅನುಸರಿಸಿ ಇತರ ರಾಜ್ಯಗಳಿಗೂ ಒಂದು ಮಾದರಿಯನ್ನು ಹಾಕಿಕೊಟ್ಟಿದೆ. ಈ ಮೊದಲೊಮ್ಮೆ ಹೇಳಿದಂತೆ ಉತ್ತರ ಪ್ರದೇಶ, ಮಧ್ಯ ಪ್ರದೇಶ, ಬಿಹಾರ ಮುಂತಾದೆಡೆ ಮದ್ರಾಸಿನಲ್ಲಿದ್ದಂತೆ ಬಿಗಿಯಾದ ನಿಯಂತ್ರಣ ಪದ್ಧತಿ ಇದ್ದಿರಲಿಲ್ಲ. ಅಲ್ಲಿ ಬಹಳ ಉದಾರ ರೀತಿಯಿಂದ ನಿಯಂತ್ರಣಗಳನ್ನು ಹೇರಲಾಗಿದೆ—ಕಾರಣ ಒಂದು ಬಗೆಯ ವಿನಿಯಂತ್ರಣ ಪರಿಸ್ಥಿತಿಯೇ ತತ್ಕಾಲಕ್ಕೆ ಅಲ್ಲಿದೆ ಎನ್ನಬಹುದೋ ಏನೋ— ಹೇಗೇ ಇರಲಿ, ಈಗ ಬಿಹಾರದಲ್ಲಿ ಒಂದೆರಡು ಅಪವಾದದ ಪ್ರದೇಶಗಳನ್ನು ಬಿಟ್ಟು ಉಳಿದೆಲ್ಲ ಕಡೆ ವಿನಿಯಂತ್ರಣವನ್ನು ಘೋಷಿಸಲಾಗಿದೆ. ಅಲ್ಲದೆ ಅಕ್ಕಿ ಮತ್ತು ಗೋಧಿಯ ಎತ್ತುವಳಿಯನ್ನು ಒಡನೆಯೇ ನಿಲ್ಲಿಸುವ ಸಂಕಲ್ಪವನ್ನೂ ಬಿಹಾರ ರಾಜ್ಯವು ಮಾಡಿದೆ. ಸರಕಾರದೊಡನೆ ಸಾಕಷ್ಟು ಸಂಗ್ರಹವಿದೆ ಮತ್ತು ಅನುಕೂಲ ಪರಿಸ್ಥಿತಿಯೂ ಇದೆ ಎಂಬುದರಿಂದ ಕೇಂದ್ರ ಸರಕಾರವು ಇದಕ್ಕೆ ಅನುಮತಿಯನ್ನು ಕೊಟ್ಟಿತು. ರಾಜ್ಯದಲ್ಲಿ ಆಹಾರ ಧಾನ್ಯಗಳ ಬೆಲೆ ಏರದಂತೆ ಯೋಗ್ಯ ದರದ ಅಂಗಡಿಗಳನ್ನು ತೆರೆಯುವ ಯೋಜನೆಯನ್ನೂ ಕೈಗೊಳ್ಳಲಾಗುವುದು. ಹೀಗೆ ರಾಜಾಜಿ ಇಟ್ಟ ಅತ್ಯಂತ ಧೈರ್ಯದ ಹೆಜ್ಜೆಯನ್ನು ಅನುಸರಿಸಿ ನಡೆಯಲು ಸ್ವಲ್ಪ ಸಮಯಕ್ಕೆ ಮೊದಲು ಬರಗಾಲ ಪ್ರದೇಶವೆಂದು ಹೆಸರಾದ ಬಿಹಾರ ಪ್ರಯತ್ನಿಸುತ್ತಿರುವುದು ಕೆಚ್ಚನ್ನು ದರ್ಶಿಸುವುದಲ್ಲವೆ?

ವಿನಿಯಂತ್ರಣಕ್ಕೆ ಯಶಸ್ಸು

ಮದ್ರಾಸ ರಾಜ್ಯದಲ್ಲಿ ವಿನಿಯಂತ್ರಣವು ಯಶಸ್ವಿಯಾಗುವ ಲಕ್ಷಣಗಳು ತೋರುತ್ತಿವೆ. ಆಹಾರ ಮಂತ್ರಿ ಶ್ರೀ ಸುಬ್ರಹ್ಮಣ್ಯಂ ಆಕಾಶವಾಣಿ ಭಾಷಣದಲ್ಲಿ ಬೆಲೆ ಇಳಿತವು ಎಲ್ಲೆಡೆಯಿಂದಲೂ ವರದಿಯಾಗುತ್ತಿದೆ ಎಂದೂ ಕೆಲವೆಡೆಗಳಲ್ಲಿ ನಿಯಂತ್ರಿತ ದರದಷ್ಟಕ್ಕೆ ಮುಕ್ತಪೇಟೆಯ ಬೆಲೆ ಇಳಿದಿದೆ ಎಂದೂ ಸರಕಾರಕ್ಕೆ ತಿಳಿದುಬಂದಿರುವುದಾಗಿ ಹೇಳಿದರು. ಆದರೆ ಈಸಿಗೆ ಗೋದಾವರಿ, ಕಾಕಿನಾಡ ಮುಂತಾದೆಡೆ- ಇವು ಉಳಿಕೆಯ ಪ್ರದೇಶ—ಅಕ್ಕಿಯು ಜನರಿಗೆ ಮುಕ್ತಪೇಟೆಯಲ್ಲಿ ಲಭ್ಯವಾಗಲಿಲ್ಲವೆಂಬ ದೂರು ಬಂದುದರಿಂದ ಅಲ್ಲಿ ಒಡನೆಯೇ ಯೋಗ್ಯ ದರದ ಅಂಗಡಿಗಳನ್ನು ತೆರೆಯುವ ವ್ಯವಸ್ಥೆ ನಡೆದಿದೆ ಎಂದು ಅವರು ಹೇಳಿದರು. ಉಳಿಕೆಯ ಪ್ರದೇಶದಿಂದ ಕೊರತೆಯ ಪ್ರದೇಶಕ್ಕೆ ಆಹಾರ ಧಾನ್ಯದ ಸರಬರಾಜನ್ನು ಕೈಗೊಳ್ಳಲಿಕ್ಕೆ ಸರಕಾರವು ನಾಗರಿಕ ಪೂರೈಕೆ ಖಾತೆಯ ವಶವಿರುವ ವಾಹನಗಳನ್ನು ಒದಗಿಸುವ ಯೋಚನೆ ಮಾಡುವುದು. ತಕ್ಕ ವಾಹನ ಸೌಕರ್ಯವಿಲ್ಲದಿರುವುದರಿಂದ ಆಹಾರ ಸಾಗಾಟವು ನಿರಾತಂಕವಾಗಿ ನಡೆಯಲು ತಡೆಯಾಗಿದೆ.

ನೆರೆಯವರ ಆತುರ

ವಿನಿಯಂತ್ರಣದ ಆತುರವು ನೆರೆಯ ರಾಜ್ಯಗಳಲ್ಲಿಯೂ ಕಂಡುಬರುತ್ತಿದೆ. ಮೈಸೂರಿನಲ್ಲಿ ಶಾಸನ ಸಭೆಗಳ ಸಂಯುಕ್ತ ಅಧಿವೇಶನವನ್ನು ರಾಜಪ್ರಮುಖರು ಉದ್ದೇಶಿಸಿ ಮಾತನಾಡಿದಾಗ ಆಹಾರ ಧಾನ್ಯಗಳ ವಿನಿಯಂತ್ರಣದ ವಿಷಯದಲ್ಲಿ ಬಹಳ ಜಾಗ್ರತೆಯಿಂದ ವರ್ತಿಸಬೇಕಾದುದು ಅಗತ್ಯವಿದೆ ಎಂದರು. ವಿನಿಯಂತ್ರಣದ ಕಡೆಗೆ ಜನರೊಲವು ಹರಿಯುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆಯಾದರೂ— ನಿಯಂತ್ರಣಗಳನ್ನು ತೆಗೆದು ಹಾಕುವುದರ ಅನುಚಿತ ಲಾಭವನ್ನು ವ್ಯಾಪಾರಿಗಳು ಮಾಡಲಾಗದ ಪರಿಸ್ಥಿತಿ ನಿರ್ಮಾಣವಾಗಬೇಕಾಗಿದೆ. ಆದುದರಿಂದ ಸಾವಕಾಶವಾಗಿ-ಸಮಸ್ಯೆಯ ವಿವಿಧ ಮುಖಗಳನ್ನು ಪೂರ್ಣರೂಪದಿಂದ ಪರ್ಯಾಲೋಚಿಸಿದ ಬಳಿಕ— ಈ ಕುರಿತು ಒಂದು ನಿಶ್ಚಿತ ನಿಲುಮೆಯನ್ನು ತಳೆಯಬಹುದು ಎಂದು ರಾಜಪ್ರಮುಖರು ಉಪದೇಶಿಸಿದರು. ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಶಾಸನ ಸಭೆಯ ಪ್ರಕೃತ ಅಧಿವೇಶನವು ಮುಗಿಯುವುದರೊಳಗೆ, ಆಹಾರ ಧೋರಣೆಯನ್ನು ಸ್ಪಷ್ಟೀಕರಿಸಲಾಗುವುದು ಎಂದರು. ಮೈಸೂರಿನ ಆಹಾರ ಮಂತ್ರಿಗಳು ಶ್ರೀ ಕಿದ್ವಾಯಿಯವರೊಡನೆ ಮಾತುಕತೆ ನಡೆಸಿದ ಬಳಿಕವೇ ಸರಕಾರ ಒಂದು ನಿಶ್ಚಯಕ್ಕೆ ಬರಬೇಕು.

ಭೂಸುಧಾರಣೆ

ದೇಶದಲ್ಲಿ ಒಂದೊಂದೂ ರಾಜ್ಯದ ಪರಿಸ್ಥಿತಿಯು ಭಿನ್ನವಾಗಿರುವುದರಿಂದ ಅಲ್ಲಲ್ಲಿಯ ಪರಿಸ್ಥಿತಿಯನ್ನು ಅವಲೋಕಿಸಿದ ಬಳಿಕವೇ ಯೋಗ್ಯ ನಿರ್ಣಯಗಳನ್ನು ಕೈಗೊಳ್ಳಲಾಗುವುದೆಂದೂ-ಮೂಲತಃ ಕೇಂದ್ರ ಸರಕಾರವು ವಿನಿಯಂತ್ರಣದ ಧೋರಣೆಗೆ ಅಂಟಿಕೊಂಡಿಲ್ಲವೆಂದು ಶ್ರೀ ನೆಹರೂ ಪತ್ರಿಕಾ ಪ್ರತಿನಿಧಿಗಳೆದುರು ಸ್ಪಷ್ಟೀಕರಿಸಿದರು. ಕೇಂದ್ರದ ಆಹಾರ ಮಂತ್ರಿ ಶ್ರೀ ಕಿದ್ವಾಯಿಯವರು ಕೊರತೆಯ ಪ್ರದೇಶವಾದ ದಿಲ್ಲಿ ರಾಜ್ಯವನ್ನು ಪೆಪ್ಸು ಮತ್ತು ಪಂಜಾಬು ರಾಜ್ಯಗಳ ಒಂದು ಗುಂಪಿನೊಂದಿಗೆ ಸೇರಿಸಿ—ಆಹಾರ ವಿಷಯದಲ್ಲಿ ಅವು ಮೂರೂ ಸಹಕರಿಸಿ ಸ್ವಾವಲಂಬಿಯಾಗುವ ಸಾಧ್ಯಾಸಾಧ್ಯತೆಯನ್ನು ವಿಚಾರಿಸುತ್ತಿರುವರು. ಅಂತೆಯೇ ತಿರು—ಕೊಚ್ಚಿ, ಮಧ್ಯ ಪ್ರದೇಶ, ಹೈದರಾಬಾದುಗಳೂ ಆಹಾರದ ಮಟ್ಟಿಗೆ ಯಾವ ಧೋರಣೆ ಅನುಸರಿಸಬೇಕೆಂದು ಯೋಚನಾಮಗ್ನವಾಗಿವೆ.

ಹೀಗೆ ಸಮಗ್ರ ದೇಶವೇ ಆಹಾರ ಪ್ರಶ್ನೆಯನ್ನು ನವದೃಷ್ಟಿಕೋಣದಿಂದ ವಿಚಾರಿಸುತ್ತಿರುವಾಗ—ಇತ್ತ ಯೋಜನಾ ಆಯೋಗವು ಕೃಷಿ ಸಮಸ್ಯೆಯ ಮೂಲಭೂತ ತೊಡಕಾಗಿರುವ ಭೂಸುಧಾರಣೆಯ ರೀತಿ—ನೀತಿಯನ್ನು ಪರಿಶೀಲಿಸುತ್ತಿದೆ. ಭೂ ಧಾರಣಾ ಪದ್ಧತಿಯ ಕುರಿತು ಧಾರಾಳವಾದ ಟೀಕೆಗಳು ಎಂದಿನಿಂದಲೂ ಬರುತ್ತಿರುವುದರಿಂದ ಜರೂರಾಗಿ ತೀರ್ಮಾನ ಕೊಡಬೇಕಾಯಿತು. ಈ ಜಟಿಲವಾದ ಪ್ರಶ್ನೆಯಲ್ಲಿ ಎರಡು ಮುಖ್ಯಾಂಶಗಳಿವೆ. (೧) ಭೂಸುಧಾರಣೆಯಿಂದ ಸಾಮಾಜಿಕ ನ್ಯಾಯಕ್ಕೆ ಭಂಗ ಬರಲಾಗದು (೨) ಉತ್ಪಾದನಾ ಮಟ್ಟವು ಎಷ್ಟು ಮಾತ್ರಕ್ಕೂ ಕುಗ್ಗಲಾಗದು. ಇವೆರಡೂ ಉದ್ದೇಶಗಳು ನೆರವೇರುವಂತೆ ಹೇಗೆ ಭೂಸುಧಾರಣೆಯನ್ನು ಕಾರ್ಯಗತ ಮಾಡಬಹುದೆಂಬುದನ್ನು ಎಷ್ಟು ಬುದ್ಧಿವಂತಿಕೆಯಿಂದ ನಿರ್ಣಯಿಸಿದರೂ— ಅದು ನಿರ್ದೋಷವೆನಿಸುವುದು ಸಂಶಯವೇ.

ಶಿಕ್ಷಣ ಶಾಖೆಯ ದೈನ್ಯ

ಸರಕಾರದ ನಿರ್ಣಯವು ದೋಷಪೂರ್ಣವಿದ್ದರೂ.. ಅದರ ಸದ್ಗುಣಗಳನ್ನು ಮನಗಂಡು— ಕೊಳೆ ತೆಗೆಯುವ ಬುದ್ಧಿಯು ಜನರಲ್ಲಿದ್ದರೆ, ಅದು ತುಂಬ ಒಳ್ಳೆಯದು. ಆದರೆ ಮುಖ್ಯವಾಗಿ ನಮ್ಮವರು ಅವಿದ್ಯಾವಂತರಿರುವುದರಿಂದ ನೂತನವಾಗಿ ಅಳವಡಿಸಿಕೊಂಡಿರುವ ಪ್ರಜಾಪ್ರಭುತ್ವ ರಾಜ್ಯ ಪದ್ಧತಿಯು ಅವರಿಗೆ ಒಗ್ಗುವುದಿಲ್ಲ. ವ್ಯಕ್ತಿಯು ತನ್ನ ಜವಾಬ್ದಾರಿಯನ್ನು ಸ್ಪಷ್ಟ ರೀತಿಯಲ್ಲಿ ಮನಗಾಣದ ಹೊರತು—ಪ್ರಜಾಪ್ರಭುತ್ವವು ಯಶಸ್ವಿಯಾಗಲಾರದು. ಜನತೆಗೆ ತಕ್ಕ ತರಬೇತಿಯನ್ನು, ಶಿಕ್ಷಣವನ್ನೂ ಕೊಡುವುದರ ಮೂಲಕ ಭದ್ರವಾದ ನೆಲಗಟ್ಟನ್ನು ಹಾಕಬಲ್ಲೆವು—ಆದುದರಿಂದ ಶಿಕ್ಷಣ ವಿಧಾ

[೩ನೇ ಪುಟದಿಂದ ಮುಂದುವರಿದುದು]

ಭಾರತದ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಳವು ಈ ಎಲ್ಲ ಪ್ರಯೋಗ ಶಾಲೆಗಳ ಕೇಂದ್ರ. ಭಾರತ ಸರಕಾರ, ವಿಜ್ಞಾನ, ತಾಂತ್ರಿಕ ಕ್ಷೇತ್ರ, ಮತ್ತು ಕೈಗಾರಿಕೋದ್ಯಮಗಳ ನಡುವೆ ನಿಕಟ ಬಾಂಧವ್ಯ ಸ್ಥಾಪನೆಯಲ್ಲಿ ಇದು ಮಹತ್ವದ ಪಾತ್ರ ವಹಿಸಿದೆ. ಅಭಿವೃದ್ಧಿಯ ವಿವಿಧ ಯೋಜನೆಗಳನ್ನದು ಕಾರ್ಯರೂಪಕ್ಕೆ ತರುತ್ತಿದೆ. ಸ್ವಾವಲಂಬನೆಗೂ, ಕೈಗಾರಿಕಾಭಿವೃದ್ಧಿಗೂ ಇದರಿಂದ ತುಂಬ ಯಶಸ್ಸುಂಟಾಗುವುದು ನಿಶ್ಚಯ.

ಬಗೆಬಗೆಯ ತೊಡಕು

ಸರಕಾರದ ಪ್ರಯತ್ನ

ಗಬೇಕಾದುದು ಅಪೇಕ್ಷಣೀಯವಿದ್ದಂತೆ ಅತ್ಯಂತ ಆಗತ್ಯವೂ ಹೌದು. ಲೋಕ ಸಭೆಯಲ್ಲಿ ವಿದ್ಯಾಂಗದ ಬೇಡಿಕೆಯ ಮೇಲೆ ಚರ್ಚೆ ನಡೆದಾಗ ಈ ಎಲ್ಲ ವಿಷಯಗಳಲ್ಲಿ ಸರಕಾರವು ಪ್ರಗತಿಪರ ಮಾರ್ಗ ಅನುಸರಿಸಿಲ್ಲವೆನ್ನಲಾಯಿತು. ಸುಮಾರು ೪೦೦ ಕೋಟಿ ರೂಪಾಯಿಗಳ ವೆಚ್ಚವನ್ನು ತೋರಿಸುವ ಮುಂಗಡ ಪತ್ರದಲ್ಲಿ, ಕೇವಲ ಆರು ಕೋಟಿ ರೂಪಾಯಿಗಳನ್ನು ಶಿಕ್ಷಣಕ್ಕಾಗಿ ಮೀಸಲಿರಿಸಿದುದು ವಿಡಂಬನೆಯಲ್ಲವೆ? ಮೌಲಾನಾ ಆಜಾದರು ಸರಕಾರದೊಡನೆ ಶಿಕ್ಷಣ ಪದ್ಧತಿ ಸುಧಾರಿಸುವ ಬಗ್ಗೆ ಯೋಜನೆಗಳ ಕೊರತೆ-ಇರದೆ ಹಣ ದೊರೆಯದಿರುವುದೇ ಈಗಿನ ಪ್ರಶ್ನೆ ಎಂದರು. ಹೀಗಿದ್ದರೂ ಕಿಸೆ ಖಾಲಿಯಾಗಿರುವುದರಿಂದ ಅಸಹಾಯರಾಗಿ ಕುಳಿತಿರಬೇಕಾಗಿದೆ ಎಂದವರು ನುಡಿದಾಗ-ನಾವೆಷ್ಟು ಬೇಸರಪಟ್ಟುಕೊಳ್ಳಬೇಡ?

ಉಗ್ರ ಟೀಕೆಗಳಿಗೆ ಉತ್ತರ

ಸರಕಾರದ ಬಂಡವಾಳವೆಲ್ಲ ಅನ್ನ ಸಮಸ್ಯೆಯನ್ನು ಬಿಡಿಸುವ ಮತ್ತು ಅದಕ್ಕೆ ಪೂರಕವೆನಿಸಿದ ಔದ್ಯೋಗಿಕ ಪ್ರಗತಿಯನ್ನು ಸಾಧಿಸುವ ಉದ್ಯಮಗಳಲ್ಲಿ ಮುಳುಗಿರುತ್ತದೆ. ಶಿಕ್ಷಣದಂಥ ಸಾವಧಾನವಾಗಿ ಫಲಕೊಡುವ ಸುಧಾರಣೆಗಳ ಕಡೆಗೆ ಪ್ರತ್ಯಕ್ಷ ಉದಾಸೀನತೆ ಕಂಡು ಬರುವುದಕ್ಕೆ ಇದೊಂದು ಮುಖ್ಯ ಕಾರಣ. ಆದರೆ ಅಂಥ ಉದ್ಯಮಗಳಲ್ಲಿಯೂ— ಉದಾ: ನೀರಾವರಿ ಮತ್ತು ವಿದ್ಯುಚ್ಛಕ್ತಿಯ ಯೋಜನೆಗಳು-- ಸರಕಾರವು ದಕ್ಷತೆಯಿಂದ ವರ್ತಿಸುತ್ತಿಲ್ಲ ಎಂಬ ಆರೋಪವನ್ನು ಈ ಶಾಖೆಯ ಬೇಡಿಕೆಯ ಕುರಿತು ಚರ್ಚೆನಡೆದಾಗ ಮಾಡಲಾಯಿತು. ಲಂಚಗುಳಿತನ, ಪಕ್ಷಪಾತತನ, ಸಾರ್ವಜನಿಕ ಹಣದ ದುರುಪಯೋಗ ಮತ್ತು ಆಡಳಿತದಲ್ಲಿ ಅವ್ಯವಸ್ಥೆ ಮತ್ತು ಅದೂರದೃಷ್ಟಿಯ ಕಡೆಗೆ ಸರಕಾರದ ಗಮನವನ್ನು ಸೆಳೆಯಲು ಸದಸ್ಯರು ಪ್ರಯತ್ನಿಸಿದರು. ಯೋಗ್ಯ ಮುಂಜಾಗ್ರತೆಯನ್ನು ತೆಗೆದುಕೊಳ್ಳದೆ ಮತ್ತು ದಕ್ಷ ನಿರ್ದೇಶನವಿಲ್ಲದೆ—ಎಷ್ಟೋ ಯೋಜನೆಗಳು ವಿಳಂಬವಾಗುತ್ತಿವೆ ಎಂದೂ, ಅಧಿಕಾರಿಗಳು ತಿಂದು ತೇಗುವಷ್ಟು ಸಂಬಳ ಪಡೆದರೂ ಕೆಲಸಮಾಡದೆ ಕೇವಲ ಗುಂಯ್‌ಗುಡುತ್ತಿರುವರೆಂದೂ ಉಗ್ರ ಟೀಕೆಯನ್ನು ಡಾ| ಮೇಘನಾದ ಶಹಾ ಮಾಡಿದರು. ಹಿಂದೆ ಕೇಂದ್ರ ಸರಕಾರದಲ್ಲಿ ಈ ಶಾಖೆಯ ಮಂತ್ರಿಯಾಗಿದ್ದ ಗಾಡಗೀಳರು ಕೆಲವೊಂದೆಡೆ ಅಲ್ಪಸ್ವಲ್ಪ ಅನ್ಯಾಯ ನಡೆದಿದ್ದರೆ-- ಆದಕ್ಕಾಗಿ ಯೋಜನೆಯನ್ನು ಮತ್ತು ಆಡಳಿತವನ್ನು ಟೀಕಿಸುವುದು ಸರಿಯಲ್ಲ ಎಂದರು. ಔದ್ಯೋಗಿಕ ಮುನ್ನಡೆಗೂ ಭರದಿಂದ ಸಾಗಬೇಕಾದ ಕೆಲಸವಿರುವುದರಿಂದ, ಈಗ ಕೈಗೊಂಡಿರುವ ಯೋಜನೆಗಳನ್ನು ಎಷ್ಟು ಮಾತ್ರಕ್ಕೂ ಅಲಕ್ಷ್ಯಿಸುವಂತಿಲ್ಲ ಎಂದವರು ನುಡಿದರು.

ನೈತಿಕ ಮೇಲ್ಮೆಯಿಂದ ಶ್ರೇಯಸ್ಸು

ಇದು ಒಪ್ಪತಕ್ಕ ಮಾತು ಎಂಬುದನ್ನು ಎಲ್ಲರೂ ಬಲ್ಲರು—ಆದರೆ, ಸಾರ್ವಜನಿಕ ಹಣದ ಅಪವ್ಯಯಕ್ಕೆ ಆಸ್ಪದಕೊಡುವುದು ಹಾಗೂ ಲಂಚಗುಳಿತನವೇ ಮೊದಲಾದ ದುಷ್ಟ ಪದ್ಧತಿಗಳ ಬೆಳವಣಿಗೆಯನ್ನು ತಡೆಯದಿರುವುದು ಎಷ್ಟು ಮಾತ್ರಕ್ಕೂ ಚೆನ್ನಾಗದು. ಆಸ್ಸಾಮು ರಾಜ್ಯದ ನೂತನ ಸೆಕ್ರೆಟೇರಿಯೆಟ್ ಭವನದ ಉದ್ಘಾಟನಾ ಸಮಾರಂಭಕ್ಕೆ ಕಳಿಸಿದ ಸಂದೇಶದಲ್ಲಿ ಪ್ರಧಾನಿ ನೆಹರೂ ಸರಕಾರಿ ಅಧಿಕಾರಿಗಳ ಕರ್ತವ್ಯನಿಷ್ಠೆಯ ಕ್ರಮವನ್ನು ನಿರ್ದೇಶಿಸಿರುವರು. ಸರಕಾರಿ ಅಧಿಕಾರಿಗಳು ತಮ್ಮ ವರ್ತನೆಯ ಪರಿಣಾಮವು ಕೋಟ್ಯಾಂತರ ಜನರ ಜೀವನದ ಮೇಲೆ ಪ್ರಭಾವವುಂಟುಮಾಡುವುದೆಂಬ ಮಹತ್ವದ ಸಂಗತಿಯನ್ನು ಮರೆಯತಕ್ಕದ್ದಲ್ಲ ಎಂದು ನೆಹರೂ ಎಚ್ಚರಿಸಿರುವರು. ಮಾನವರಲ್ಲಿ ಸೌಹಾರ್ದತೆಯಿಂದ ನಡೆದುಕೊಳ್ಳಬೇಕಾದುದು ಅಧಿಕಾರಿಗಳ ಕರ್ತವ್ಯ. ಸರಕಾರೀ ಕಚೇರಿಯ ದಂತಮಂಚಗಳಿಂದ ಇಳಿದು ಬಂದು ಜನತೆಯೊಡನೆ ಹೊಂದಿಕೊಂಡು ದುಡಿಯಬೇಕಾದುದು ಅಗತ್ಯ. ಅರಮನೆಯೋಪಾದಿಯ ಕಚೇರಿಗಳಲ್ಲಿ ದೊಡ್ಡದೊಡ್ಡ ಫಾಯಿಲುಗಳನ್ನು ತಿರುಗಿಸುತ್ತಾ ಕೂಡುವಾಗ-ಆ ಫಾಯಿಲುಗಳ ಹಿಂದೆ ಮಾನವತೆಯ ದರ್ಶನವನ್ನು ಪಡೆಯಿರಿ ಎಂದು ಪ್ರಧಾನಿ ನೆಹರೂ ಉಪದೇಶಿಸಿದರು. ಇಂಥ ಬುದ್ಧಿಯ ಮಾತುಗಳನ್ನು ಕೇಳಿ- ಅದರಂತೆ ನಡತೆಯನ್ನು ತಿದ್ದಿಕೊಳ್ಳುವ ಜನರು ಎಷ್ಟು ಮಂದಿ ಇದ್ದಾರೋ. ಆದರೆ, ಮಾನವ್ಯದ ಲಕ್ಷಣಗಳನ್ನು ಮರೆತ ಜನಾಂಗ ಎಂದಿಗೂ ಅಭಿವೃದ್ಧಿಯನ್ನು ಸಾಧಿಸದೆಂಬುದರಿಂದ-ಆಗಿಂದಾಗ್ಗೆ ಇಂಥ ಬೋಧಪ್ರದ ಮಾತುಗಳಿಗೆ ಕಿವಿಗೊಡಬೇಕು. ಲಂಚಗುಳಿತನದಂಥ ಅಪರಾಧ ನಿರ್ಮೂಲನೆಗೂ ಮಾನವನ ಮನಸ್ಸು ಪರಿಶುದ್ಧವಾಗಬೇಕಾದುದು ಅಗತ್ಯ. ಆದರೂ ಕಾನೂನಿನ ಭಯ ತೋರಿಸಿಯೂ ಸ್ವಲ್ಪ ಕೆಲಸ ಮಾಡಬಹುದಾದುದರಿಂದ ತೇಕಚಂದ ಸಮಿತಿಯು ಈ ಬಗ್ಗೆ ಮಾಡಿದ ಶಿಫಾರಸುಗಳು ಸ್ವಾಗತಾರ್ಹ. ಲಂಚ ಸ್ವೀಕರಿಸುವವನಂತೆ ಲಂಚ ಕೊಡುವವನೂ ಅಪರಾಧಿ ಎಂದು ಪರಿಗಣಿಸಬೇಕಾಗಿ ಸಮಿತಿ ಹೇಳಿದೆ. ಸಾಮಾಜಿಕ ಕಲ್ಯಾಣಕ್ಕಾಗಿ ಹಾತೊರೆಯುವವರು ಆತ್ಮಶುದ್ಧಿಗಾಗಿ ವ್ಯಾಕುಲರಾಗಿಲ್ಲವೆ?

ಔದ್ಯಮಿಕ ಕ್ಷೇತ್ರದ ಸಮಸ್ಯೆ

ನಮ್ಮ ಮನೋವೃತ್ತಿಯಲ್ಲಿರುವ ದೋಷಗಳೆ ಸರಕಾರದ ವರ್ತನೆಯ ಬಗ್ಗೆ ಅವಿಶ್ವಾಸವನ್ನು ಹುಟ್ಟಿಸುವುವು-- ಈಚೆಗೆ ರಶಿಯಾ-ಚೀನಾಗಳ ಸಂದರ್ಶನವನ್ನು ಮಾಡಿ ಬಂದವರು ಅಲ್ಲಿ ಅಭ್ಯುದಯ ಉಂಟಾಗಲು ಜನತೆಗೆ ಧುರೀಣರಲ್ಲಿರುವ ಪೂಜ್ಯ ಭಾವನೆಯೇ ಕಾರಣವೆಂದು ಸ್ಪಷ್ಟೋಕ್ತಿಯನ್ನಾಡಿರುವರು. ಪುರುಷರೂ ಸ್ತ್ರೀಯರೂ ಕೂಡಿಯೇ ಅಮಿತ ಉತ್ಸಾಹದಿಂದ ದುಡಿಯುತ್ತಿರುವುದಾಗಿ ಅವರು ಹೇಳಿರುವರು. ಆದರೆ ನಮ್ಮಲ್ಲಿ ಜನ ಆಲಸ್ಯಕ್ಕೆ ತುತ್ತಾಗಿರುವುದರ ಜೊತೆಗೆ—ಹೆಜ್ಜೆ ಹೆಜ್ಜೆಗೂ ಸರಕಾರವನ್ನು ಟೀಕಿಸುವುದು ಮತ್ತು ಸಣ್ಣ ಪುಟ್ಟ ಕೆಲಸಗಳಿಗೂ ಸರಕಾರದ ಮುಖ ನೋಡುವುದು ವಾಡಿಕೆಯಾಗಿದೆ. ಉತ್ಪಾದನೆಯ ಅಭಿವೃದ್ಧಿಯಿಂದಲೇ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುವುದೆಂದು ಎಲ್ಲರೂ ಒಪ್ಪುವರು. ಇಂಥದರಲ್ಲಿ ಸರಕಾರವು ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಿ, ಹೆಚ್ಚು ಹೆಚ್ಚು ಜನರು ಅವುಗಳಲ್ಲಿ ಸೇರುವಂತೆ ಅನುಕೂಲ ವಾತಾವರಣವನ್ನುಂಟುಮಾಡುತ್ತಿರುವುದು. ಈಗಿನ ಉದ್ಯಮಗಳಲ್ಲಿ ಎಷ್ಟೋ ಖಾಸಗಿ ಬಂಡವಳಿಗರ ಕೈಯಲ್ಲಿದೆ. ಮತ್ತೆಷ್ಟು ಬ್ರಿಟಿಷರಾದಿಯಾಗಿ ವಿದೇಶಿಗಳ ಕೈಯಲ್ಲಿದೆ. ಇದರಿಂದ ದೇಶದ ಔದ್ಯಮಿಕ ಪ್ರಗತಿಗೆ ಹಿತವಾಗಿದೆಯೇ ಹೊರತು—ಬಾಧಕ ಸಂಭವಿಸಲಿಲ್ಲ. ಆದುದರಿಂದ ಅವುಗಳನ್ನು ರಾಷ್ಟ್ರೀಕರಿಸುವ ವಿಚಾರ ಮಾಡುವುದು ಮೂರ್ಖತನ "ರಾಷ್ಟ್ರಕ್ಕೆ ವಿಘಾತಕವಿದ್ದರೆ ಮಾತ್ರ ಅಂಥ ಉದ್ದಿಮೆಗಳನ್ನು ಸರಕಾರದ ವಶತೆಗೆದುಕೊಳ್ಳಬೇಕೆಂದು ಪ್ರಧಾನಿಗಳಿಗೆ ಸಲಹೆ ಮಾಡುವೆ" ಎಂದು ವಾಣಿಜ್ಯ ಮಂತ್ರಿ ಶ್ರೀ ಕೃಷ್ಣಮಾಚಾರಿ ಹೇಳಿದುದು ಸಮಂಜಸ. ನಿಜ ಹೇಳಬೇಕೆಂದರೆ—ಬ್ರಿಟಿಷ ಉದ್ದಿಮೆಗಳ ಮಟ್ಟವು ಉಚ್ಚವಿದೆ—ಅವರು ತೆರಿಗೆಯನ್ನು ತಪ್ಪಿಸುವುದಿಲ್ಲ—ಮೋಸಕ್ಕೆಳಸುವುದಿಲ್ಲ. ಅಕಸ್ಮಾತ್ ನಷ್ಟ ಬಂದರೂ ದೇಶದ ಆವಶ್ಯಕತೆಯನ್ನು ಲಕ್ಷಿಸಿ, ಉತ್ಪಾದನೆಯನ್ನು ಮುಂದುವರಿಸುವರು. ಇಂಥ ಉದ್ಯಮಗಳೇ ನಮಗೆ ಬೇಕಾಗಿವೆ.

ಪೂರ್ವಾಪರ ವಿಚಾರ

ನಿರಾಶ್ರಿತರ ಪುನರ್ನಿವೇಶನದ ಸಮಸ್ಯೆಯ ಭೀಕರತೆಯನ್ನು ಲೋಕ ಸಭೆಯಲ್ಲಿ ಸದಸ್ಯರು ಮನಗಾಣಿಸಲು ಪ್ರಯತ್ನಿಸುವಾಗ—ವಿರೋಧಿ ಗುಂಪಿನೊಡನೆ ಕಾಂಗ್ರೆಸಿಗರೂ ಸೇರಿಕೊಂಡರು. ಡಾ| ಶಾಮ ಪ್ರಸಾದ ಮುಖರ್ಜಿ ಬಂಗಾಳದಲ್ಲಿ ನಿರಾಶ್ರಿತರಿಗಿರುವ ತೊಂದರೆಗಳನು ಆವೇಶಯುಕ್ತ ಭಾಷಣದ ಮೂಲಕ ವಿವರಿಸಿದರು. ಪಾಕಿಸ್ತಾನದೊಡನೆ ಬಿಗುತನದಿಂದ ನಡೆದುಕೊಳ್ಳಬೇಕೆಂಬುದೇ ಅವರ ಕೇಳಿಕೆ. "ಅವಮಾನದ ಒದೆತಗಳನ್ನು ಎಲ್ಲಿಯವರೆಗೆ ಸಹಿಸುತ್ತ ಕೂಡಬೇಕು?" ಎಂದವರು ರಣಾಹ್ವಾನವನ್ನೀಯಲು ಮಂತ್ರಿ, ಅಜಿತ ಪ್ರಸಾದ ಜೈನರು "ಖಡ್ಗ ಝಳಪಿಸುವುದರಿಂದ ಪ್ರಶ್ನೆ ಬಗೆ ಹರಿಯುವುದಿಲ್ಲ" ಎಂದು ನಮ್ರತೆಯ ಉತ್ತರ ಕೊಡಬೇಕಾಯಿತು. ಸರಕಾರ ಮಾಡಿದ ಕೆಲಸಗಳ ಕಡೆಗೆ ನೋಡಿರಿ—ಅದರ ಮೇಲಿಂದ ಈ ಸಮಸ್ಯೆ ಬಗೆಹರಿದಿದೆಯೋ ಇಲ್ಲವೊ ಎಂಬುದನ್ನು ವಿಮರ್ಶಿಸಿರಿ. ಪಾಕಿಸ್ತಾನದೊಡನೆ ಬಿಗುವಿನ ಧೋರಣೆ ಅನುಸರಿಸುವುದು ಸಮಸ್ಯಾ ನಿವಾರಣೆಯ ಪ್ರಶಸ್ತ ಉಪಾಯವಲ್ಲ. ಮಿಸ್ ಮೇಯೊಳಂತೆ ವ್ಯರ್ಥ ಟೀಕಿಸಬಾರದು ಎಂದವರು ಸಮಾಧಾನ ಹೇಳಿದರು. ಲೋಕ ಸಭೆಯ ಪ್ರಕೃತ ಅಧಿವೇಶನದಲ್ಲಿ ಸರಕಾರಿ ಬೇಡಿಕೆಗಳ ಕುರಿತು ಮಂಡಿಸಿದ ಎಲ್ಲ ಕಡಿತದ ಸೂಚನೆಗಳೂ ನಿರಾಕೃತವಾಗುತ್ತ ನಡೆದು—ಮೂಲ ಬೇಡಿಕೆ ಸ್ವೀಕೃತಗೊಳ್ಳುತಿದ್ದುವು.

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ
ಇವುಗಳಿಗೆ
ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಉಡುಪಿ
ಯಾತ್ರಿಕರಿಗೂ ಪ್ರಯಾಣಿಕರಿಗೂ
ಸರ್ವ ಅನುಕೂಲವಾಗುವಂತೆ
ನಗರದ ಕೇಂದ್ರ ಭಾಗದಲ್ಲಿದೆ.

ZANDU Mahayogaraja Guggula
ಝಂಡೂ ಮಹಾಯೋಗರಾಜ ಗುಗ್ಗುಳ
ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯಾಷಧ. 1 ತೊಲೆಗೆ ರೂ 3/- ಮಾತ್ರ.
ದೊರೆಯುವ ಸ್ಥಳಗಳು:
1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ
2 ಶ್ರೀ. ವಿ. ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.
ಮತ್ತಿತರ ಸೇಲ್ ಏಜಂಟರಲ್ಲಿ
ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತು ವಗೈರೆಗಳಿಗೆ ಬರೆಯಿರಿ.
DAMODAR & CO.,
Nainiappa Naicken Street, Park Town-MADRAS 3.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಂಜಿ ನ್ಯಾಸಾಚಾರ್ಯ,
ರಥಬೀದಿ, ಉಡುಪಿ

THE CANARA BANKING CORPORATION LIMITED.
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್, ಲಿಮಿಟೆಡ್
ಸ್ಥಾಪನೆ : 1906. : : ಪ್ರಧಾನ ಕಾರ್ಯಾಲಯ: ಉಡುಪಿ, (ದ.ಕ.)
ವಿಶೇಷ ಸವಲತ್ತುಗಳಿದ್ದು, ಸಾಲಿಯಾನ್ ಶೇಕಡಾ 4 ರಂತೆ ಬಡ್ಡಿ ಗಳಿಸುವ ನಮ್ಮ
"ಪಂಚವಾರ್ಷಿಕ ಸುವರ್ಣ ಠೇವಣಾತಿಗಳ"
ಮೇಲೆ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.
ವಿಶೇಷ ಮಾಹಿತಿಗೆ, ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.
ವಿ. ಆರ್. ಕಾಮತ್, ಬಿ.ಎ; ಎಲ್ ಎಲ್, ಬಿ;
ಜನರಲ್ ಮೆನೇಜರ್.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೨೬-೬-'೫೨

ಜನತಾ ಸಹಕಾರ

ವಿನಿಯಂತ್ರಣವನ್ನು ಜಾರಿಗೆ ತಂದುದರಿಂದ ದೇಶದಲ್ಲಿ ನೆಲಸಿದ ಅಸ್ವಾಭಾವಿಕವಾದ ಪರಿಸ್ಥಿತಿಗೆ ಒಂದು ಕೊನೆ ತೋರಿಸಿದಂತಾಯಿತು. ನಿಯಂತ್ರಣವನ್ನು ಆಧರಿಸಿಕೊಂಡು ವಿಸ್ತಾರವಾಗಿ ಬೆಳೆದ ಸಾಮಾಜಿಕ ಪಾಪ ಮತ್ತು ಅನ್ಯಾಯಗಳಿಗೆ ಇನ್ನು ಆಸ್ಪದವಿಲ್ಲ ಎಂಬಂತಾಯಿತು. ಈ ಲಾಭಗಳು ಅತ್ಯಮೂಲ್ಯ ಎಂಬುದರಿಂದ ಮತ್ತು ಮನುಷ್ಯನ ಪ್ರಾಮಾಣಿಕ ಬುದ್ಧಿಯ ಮೇಲೆ ವಿಶ್ವಾಸವಿಡಬೇಕು ಎಂಬುದರಿಂದ—ವಿನಿಯಂತ್ರಣವನ್ನು ಸ್ವಾಗತಿಸಿದೆವು. ರಾಜಾಜಿಗೆ ಆತ್ಮಪ್ರೇರಣೆಯೊದಗಲಿಕ್ಕೂ ವಿನಿಯಂತ್ರಣದ ಈ ಮುಖವೇ ಕಾರಣವೆನ್ನಲಡ್ಡಿಯಿಲ್ಲ. ಆದುದರಿಂದ ಅವರು ವ್ಯಾಪಾರಿ ವರ್ಗಕ್ಕೂ ರೈತ ಬಾಂಧವರಿಗೂ ಒಟ್ಟಾಗಿಯೇ ಕರೆ ಇತ್ತು—ಜನರು ನಿಮ್ಮ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ದ್ರೋಹ ಬಗೆಯದಿರಿ—ಅನ್ಯಾಯಕ್ಕೆ ಇಳಿಯದೆ ಸರಕಾರದೊಡನೆ ಸಹಕರಿಸಿರಿ ಎಂಬುದಾಗಿ ಬೋಧಿಸಿದರು. ಇದರ ಪರಿಣಾಮವೆಂಬಂತೆ—ಈಗ ಪೇಟೆಯಲ್ಲಿ ಅಕ್ಕಿಯ ದರಗಳು ಇಳಿದಿವೆ. ಕೆಲವೆಡೆ ನಿಯಂತ್ರಿತ ದರಕ್ಕೂ ಕಡಿಮೆಗೆ ಅಕ್ಕಿ ದೊರೆಯುವುದೆಂದು ಸರಕಾರಕ್ಕೆ ವರದಿ ಬಂದಿದೆಯಾಗಿ ಶ್ರೀ ಸುಬ್ರಹ್ಮಣ್ಯಂ ಹೇಳಿದ್ದಾರೆ. ಇದು ಸಂತೋಷಪ್ರದವೆಂಬುದು ನಿಜ; ಮತ್ತು ಮುಂದಕ್ಕಾದರೂ ಈ ಶುಭ ಲಕ್ಷಣ ಇನ್ನೂ ತೇಜೋವಂತವಾಗುವುದೆಂದು ಆಶಿಸೋಣ. ಹೀಗೆನ್ನುವಾಗ ನಮಗೆ ಸಂಶಯದ ಲವಲೇಶವೂ ಉಳಿದಿಲ್ಲವೆನ್ನಲಾರೆವು—ಸರಕಾರವು ರೈತರ ಮತ್ತು ವ್ಯಾಪಾರಿಗಳ ಮೇಲೆ ವಿಶ್ವಾಸವಿಟ್ಟದ್ದರೂ, ಅಪ್ರಾಮಾಣಿಕ ಬುದ್ಧಿಗೆ ಅವರು ಒಲಿದರೆ, ಒಡನೆಯೇ ಜನರನ್ನು ರಕ್ಷಿಸಲು ಧಾವಿಸುವುದಾಗಿ ಆಶ್ವಾಸನವಿತ್ತಿದೆ. ಆದುದರಿಂದ ಸಂಶಯದ ಸ್ವಲ್ಪ ಪಾಲು ಇನ್ನೂ ಉಳಿದಿದೆ ಎಂಬುದು ಸ್ಪಷ್ಟ: ಏಕೆಂದರೆ ನಿಯಂತ್ರಿತ ದರವು ನಮ್ಮ ಜಿಲ್ಲೆಯಲ್ಲಿ ಮುಡಿಗೆ ಸುಮಾರು ೧೯ ರೂಪಾಯಿಯ ಹಿಂದುಮುಂದಿದೆ. ಇಂತಿರುವಾಗ, ವ್ಯಾಪಾರಿ ವರ್ಗದವರು ಸಭೆಸೇರಿ, ೨೫ ರೂಪಾಯಿಗಾದರೂ ಒಂದು ಮುಡಿ ಅಕ್ಕಿ ಸಿಗುವಂತಾಗಲು ಪ್ರಯತ್ನಿಸಬೇಕೆಂದೂ, ಇದು ಸಾಧ್ಯವಿಲ್ಲವಾದರೆ, ಅಕ್ಕಿಯ ವ್ಯಾಪಾರವನ್ನೆ ಕೈಗೊಳ್ಳಕೂಡದೆಂದೂ ನಿರ್ಣಯಿಸಿದರು. ಈ ನಿರ್ಣಯವು ಹೊರಪಟ್ಟಿಗೆ ಬಡಜನರ ಹಿತವನ್ನನುಲಕ್ಷಿಸಿಯೇ ಮಾಡಲ್ಪಟ್ಟಿದೆ ಎಂಬ ಆಭಾಸವನ್ನುಂಟುಮಾಡಿದೆ. ಸೇರಿಗೆ ಹತ್ತಾಣೆಯಲ್ಲಾದರೂ ಅಕ್ಕಿಯನ್ನು ಬಡವರಿಗೊದಗಿಸಿ ಕೊಡುವಂತಾಗಬೇಕೆಂದು ನಮ್ಮ ಶಾಸನ ಸಭಾ ಸದಸ್ಯರು ಬಿನ್ನವಿಸಿದರು. ಇದನ್ನು ನಿಷ್ಪಕ್ಷಪಾತ ಪೂರ್ಣ ಹಾಗೂ ನ್ಯಾಯಬದ್ಧ ಹೇಳಿಕೆ ಎಂದು ತಿಳಿಯೋಣವೇ ಹೇಗೆ ಎಂಬುದರ ಬಗ್ಗೆ ಜನತೆಯು ಹಿಂದು ಮುಂದು ನೋಡುತ್ತಿದೆ. ನಿಜವಾಗಿಯೂ ಸೇರಿಗೆ ಹತ್ತಾಣೆ (ಅಥವಾ ಮುಡಿಗೆ ೨೫ ರೂಪಾಯಿ) ಕೊಟ್ಟು ಅಕ್ಕಿಯನ್ನು ಕೊಂಡುಕೊಳ್ಳುವುದಕ್ಕೂ, ನಿಯಂತ್ರಣವಿರುವಾಗ ಕಳ್ಳಪೇಟೆಯಿಂದ ಪಡೆಯುವ ಅಕ್ಕಿಯ ಬೆಲೆಗೂ ಏನು ವ್ಯತ್ಯಾಸವಿದೆ? ವ್ಯಾಪಾರಿಗಳು ಬಹಿರಂಗವಾಗಿ ಪರಮಾವಧಿ ಬೆಲೆಯನ್ನು ರೂ. ೨೫ ಎಂಬುದಾಗಿ ನಿಷ್ಕರ್ಷಿಸಿದುದರಿಂದ, ಈ ಮಳೆಗಾಲದ ದುರ್ದಿನಗಳಲ್ಲಿ ಅದು ಅಗತ್ಯಕ್ಕೆ ಕಟ್ಟು ಬಿದ್ದು ಎಂಬಂತೆ ಏರದಿರಲಾರದು. ಎಂದು ಹಿಂದಿನ ಅನುಭವದಿಂದ ನುಡಿಯಬಹುದು. ಹೀಗಾದರೆ ವಿನಿಯಂತ್ರಣದಿಂದ ಜನಹಿತವಾಯಿತೆಂದು ಈಗ ತೋರಿರುವ ಭಾವನೆಗೆ ಕುಠಾರಾಘಾತವಾದೀತು. ರಾಜಾಜಿ ಎಂದಿಗೂ ವ್ಯಾಪಾರಿಗಳು ಈ ೨೫ ರ ಬೆಲೆ ನಿರ್ಧರಿಸಿಯಾರೆಂದು ಕೊಂಡಿರಲಿಕ್ಕಿಲ್ಲ. ಸರಕಾರದ ನಿಯಂತ್ರಣವಿರುವಾಗ ಕೊಡುತ್ತಿದ್ದ ಅಕ್ಕಿಯ ಮಟ್ಟ ಈಗ ಮುಕ್ತಪೇಟೆಯಲ್ಲಿ ದೊರೆಯುವ ಅಕ್ಕಿಗಿಂತ ಎಷ್ಟೋ ಹೀನಾಯವೆಂದು ಭಾವಿಸಿದರೂ—ಈಗ ಅದಕ್ಕೆ ತೆರಬೇಕಾಗಿರುವ ಬೆಲೆ ನ್ಯಾಯವಾದುದಲ್ಲ. ಜನತೆಯೂ ಸರಕಾರವೂ ಸಹಕರಿಸಿದರೆ ಮಾತ್ರ ವಿನಿಯಂತ್ರಣದಂಥ ಮಹತ್ವದ ಹೆಜ್ಜೆ ಯಶಸ್ವಿಯಾದೀತು. ಬದಲಿಗೆ—ವ್ಯಾಪಾರಿಗಳು ಕಳ್ಳಸಾಗಾಟಕ್ಕೆ ಪ್ರೋತ್ಸಾಹವನ್ನಿತ್ತು ಬೆಲೆ ಏರಲಿಕ್ಕೂ ಆಸ್ಪದಕೊಟ್ಟು, ವಂಚಿಸಲು ಮುಂದಾದರೆ, ಅದು ನಿಜಕ್ಕೂ ದುರ್ದೈವ. ಜಿಲ್ಲೆಯ ದಕ್ಷಿಣಭಾಗದಿಂದ ಹೊರಗೆ— ಮಲಬಾರುಗಳಿಗೂ ಉತ್ತರದಿಂದ ಗೋವೆ ಆದಿ ಪ್ರದೇಶಗಳಿಗೂ ಅಕ್ಕಿಯ ಸಾಗಾಟಕ್ಕೆ ಇಲ್ಲಿಯ ವ್ಯಾಪಾರಿಗಳು ಉತ್ತೇಜನವಿತ್ತರೆ, ಅದರಿಂದ ಕಲ್ಯಾಣವಿಲ್ಲ. ಸರಕಾರಕ್ಕೆ ಜನತಾ ಸಹಕಾರವೆಂಬುದೇ ಅನ್ನ- ನೀರು; ಗಾಳಿ-ಬೆಳಕು.

ಕ್ರಿಮಿ ಯುದ್ಧದ ಪ್ರಶ್ನೆ

ಕೊರಿಯಾದಲ್ಲಿ ಬಿಡಿಸಲಾರದ ಬಿಕ್ಕಟ್ಟು

ಜಾಗತಿಕ ರಂಗದಲ್ಲಿ ಈಗ ಮರಳಿ ಕೊರಿಯಾದ ಚಿತ್ರವೇ ದೃಷ್ಟಿಗೋಚರವಾಗುತ್ತಿದೆ—ಅಮೇರಿಕನರು ಯುದ್ಧರಂಗದಲ್ಲಿ ರಾಸಾಯನಿಕ ಮತ್ತು ಕ್ರಿಮಿಯುದ್ಧದ ಪ್ರಯೋಗ ಮಾಡುತ್ತಿರುವರೆಂದು ಕಳೆದಾರು ತಿಂಗಳುಗಳಿಂದ ಮಾಡಲಾಗುತ್ತಿರುವ ಆಪಾದನೆಗೆ ಈಗ ಹೊಸ ಸ್ವರೂಪ ಬಂದಿದೆ. ಮೊದಲಿಂದಲೂ ಅಮೇರಿಕವು ಕ್ರಿಮಿಯುದ್ಧದ ಆರೋಪವನ್ನು ಅಸಂಬದ್ಧವೆಂದು ಅಲ್ಲಗಳೆದಿದೆ—ಮಾತ್ರವಲ್ಲದೆ ತನ್ನ ದೇಶದ ವಿದ್ವಾಂಸ-ವಿಜ್ಞಾನಿಗಳಿಂದ ಚೀನೀಯರು ದೊರಕಿಸಿಕೊಂಡಿರುವ ಸಾಕ್ಷಿಗಳು ಸುಳ್ಳಿನ ಕಂತೆಗಳೆಂದು ಪ್ರಕಟಣೆ ಹೊರಡಿಸುತ್ತಿದೆ. ಇದರ ಜೊತೆಗೆ ರಶಿಯಾ ಮತ್ತು ಚೀನಾಗಳ ಹೊಸ ಗತ್ತುಗಾರಿಕೆಯೇ ಕ್ರಿಮಿಯುದ್ಧದ ಆರೋಪವೆಂದೂ ಅಮೇರಿಕನರ ಮೇಲೆ ಆಪಾದನೆಯನ್ನು ಸ್ಥಾಪಿಸಿ, ಇದರ ಸೇಡು ತೀರಿಸುವ ನೆವದಲ್ಲಿ ಸ್ವತಃ ಕ್ರಿಮಿ ಯುದ್ಧವನ್ನು ಆರಂಭಿಸಬೇಕೆನ್ನುವುದೇ ಈ ಕಮ್ಯೂನಿಸ್ಟ ರಾಜ್ಯಗಳ ದುರಾಲೋಚನೆ ಎಂದೂ ಅಮೇರಿಕ ಹೇಳುತ್ತಿದೆ.

ಕ್ರಿಮಿ ಯುದ್ಧ

ಈ ಹಿನ್ನೆಲೆಯನ್ನು ಕಣ್ಣ ಮುಂದಿಟ್ಟುಕೊಂಡು ಪರಿಸ್ಥಿತಿಯ ಸಿಂಹಾವಲೋಕನ ಮಾಡುವಾಗ—ಭಾರತದಂಥ ತಟಸ್ಥ ರಾಷ್ಟ್ರವು ಏನೊಂದೂ ನಿಶ್ಚಿತಾಭಿಪ್ರಾಯಕ್ಕೆ ಬರುವುದು ಸಾಧ್ಯವಿಲ್ಲ. ಕೊರಿಯಾದ ಕದನ ರಂಗದಲ್ಲಿ ನಿಜವಾಗಿಯೂ ಕ್ರಿಮಿಯುದ್ಧ ನಡೆಯುತ್ತಿದ್ದರೆ, ಅಂತರ್‌ರಾಷ್ಟ್ರೀಯ ರೆಡ್‌ಕ್ರಾಸ್ ಸಂಸ್ಥೆಯಂಥ ನಿಷ್ಪಕ್ಷಪಾತ ಸಂಸ್ಥೆಗೆ ಅದನ್ನು ಪರೀಕ್ಷಿಸಲು ಬಿಡಬಾರದೇಕೆ? ಎಂಬ ಅಮೇರಿಕನ್ ಪ್ರಶ್ನೆಗೆ ರೆಡ್‌ಕ್ರಾಸ್ ಸಂಘವು ಅಮೇರಿಕದ ದಾಸಸಂಘ ಸ್ವೀಡಿಷ್ ಜನರ ಕೂಟ ಎಂದು ಕಮ್ಯೂನಿಸ್ಟರು ಹೇಳಿ, ಬಾಯಿ ಮುಚ್ಚಿಸುವರು. ಹೀಗೆ ಜಗತ್ತಿನೆಲ್ಲ ರಾಷ್ಟ್ರಗಳು ಗೌರವಿಸುವ ಒಂದು ಮಹಾಸಂಸ್ಥೆಗೆ ಇಂಥ ಬಿರುನುಡಿಯ ಅಪವಾದವನ್ನು ಹೊರಿಸುವುದು ಭೂಷಣವೇ ಎಂಬ ಪ್ರಶ್ನೆಯ ವಿಚಾರಕ್ಕಿಂತಲೂ—ಕೊರಿಯಾದಲ್ಲಿ ಅಂಥ ವಿಚಾರಣೆ ನಡೆಯಗೊಡಲಾರದು ಎಂಬ ತವಕವೇ ಅಧಿಕವೆಂದು ಅನುಮಾನಿಸಬಹುದೇನೊ. ಇಂಥದರಲ್ಲಿ ನೆಹರೂ ಈಚೆಗೆ ಹೇಳಿದಂತೆ—ವಿಜ್ಞಾನಿಗಳೇ ಈ ಕಗ್ಗಂಟನ್ನು ಬಿಡಿಸಬಲ್ಲರು— ನಿಮ್ಮ ನಮ್ಮಂಥ ಸಾಮಾನ್ಯ ಪ್ರಜೆಗಳಲ್ಲ.

ಮಧ್ಯಸ್ಥಿಕೆಯ ಪ್ರಯತ್ನ

ಆದರೆ ಇಷ್ಟು ಮಾತ್ರಕ್ಕೆ ತೆಪ್ಪಗಿರುವಂತಿಲ್ಲ—ದೊಡ್ಡ ರಾಷ್ಟ್ರಗಳ ಜಗಳದಲ್ಲಿ ಸಣ್ಣ ರಾಷ್ಟ್ರಗಳ ಮಧ್ಯಸ್ಥಿಕೆಯನ್ನು ಕೇಳುತ್ತಿರುವ ಒಂದು ಅಣಕ ಇದರ ನಡುವೆ ನಡೆದಿದೆ. ಕೊರಿಯಾದಲ್ಲಿ ಮಿಲಿಟರಿ ನಿರೀಕ್ಷಕರನ್ನು ಕಳುಹಿಸಬೇಕೆಂದು ಭಾರತ-ಪಾಕಿಸ್ತಾನವೇ ಮೊದಲಾದ ಐದು ಸಣ್ಣ ರಾಷ್ಟ್ರಗಳಿಗೆ ಅಮೇರಿಕವು ಆಹ್ವಾನ ಕೊಟ್ಟಿದೆ. ಆದರೆ ದೊಡ್ಡ ರಾಷ್ಟ್ರಗಳು ತಮ್ಮ ಸ್ವಾರ್ಥಕ್ಕೋಸ್ಕರವಾಗಿಯೇ ಇಷ್ಟೆಲ್ಲ ಕುತಂತ್ರಗಳನ್ನು ಹೂಡುತ್ತಿರುವರು—ಮತ್ತು ಲೋಕದ ಕಣ್ಣಿಗೆ ಮಣ್ಣೆರಚಲು ಹೀಗೆ ಸಾಮಾನ್ಯ ಬುದ್ಧಿಯ ರಾಷ್ಟ್ರಗಳನ್ನು ತಮ್ಮೊಡನೆ ಸೆಳೆದುಕೊಳ್ಳುತ್ತಿರುವರು ಎಂಬುದನ್ನು ಮರೆಯುವಂತಿಲ್ಲ. ಕಾರಣ—ಭಾರತವು ಈ ಆಮಂತ್ರಣವನ್ನು ಸ್ವೀಕರಿಸಲು ಒಪ್ಪುವುದು ಕಷ್ಟ. ನೆಹರೂ ಈ ವಿಷಯದಲ್ಲಿ ಕೆಲವೊಂದು ಸ್ಪಷ್ಟೀಕರಣವನ್ನು ಕೇಳಿದ್ದಾರೆ ಮಿಲಿಟರಿ ನಿರೀಕ್ಷಕರು ಕೊರಿಯಾದಲ್ಲಿ ಮಾಡಬಹುದಾದರೂ ಏನು ಎಂಬ ಮೂಲಭೂತ ಪ್ರಶ್ನೆಯನ್ನೆ ಅವರು ಮುಂದು ಮಾಡಿದ್ದಾರೆ.

ಆರೋಪ ಪ್ರತ್ಯಾರೋಪ

ಭಾರತದ ನಿಲುಮೆಯಂತೆ- ಕೈದಿಗಳ ವಿನಿಮಯ ಪ್ರಶ್ನೆಯೊಂದೇ ಸದ್ಯಕ್ಕೆ ಕದನ ವಿರಾಮ ಮಾತುಕತೆಗಳ ಬಗ್ಗೆ ಇರುವ ತೊಡಕಾಗಿರುವುದರಿಂದ, ಅಲ್ಲಿ ಪೂರ್ಣ ಪ್ರಗತಿ ಸಾಧಿಸಬೇಕು. ಸಂಯುಕ್ತರಾಷ್ಟ್ರ ಸಂಘವು ಈಗ ಕೈದಿಗಳ ವೈಯಕ್ತಿಕ ಅಭಿಪ್ರಾಯವನ್ನು—ಎಂದರೆ, ಅವರು ಮರಳಿ ಉತ್ತರ ಕೊರಿಯಾದ ಕಮ್ಯೂನಿಸ್ಟರಿದ್ದಲ್ಲಿಗೆ ಹೋಗ ಬಯಸುವರೋ—ಅಥವಾ ಸಂಭಾವಿತರಾದ ಅಮೇರಿಕನರೊಂದಿಗೇ ಉಳಿಯಲು ಇಷ್ಟಪಡುವರೋ ಎಂಬುದನ್ನು – ರೆಡ್‌ಕ್ರಾಸ್ ಸಂಸ್ಥೆಯನ್ನು ಸಾಕ್ಷಿಯಾಗಿಸಿಕೊಂಡು- ಸಂಗ್ರಹಿಸುತ್ತಿರುವರು. ಅತ್ತ ಭದ್ರತಾ ಮಂಡಳದಲ್ಲಿ ಈ ತಿಂಗಳ ಅಧ್ಯಕ್ಷ ರಶಿಯಾದ ಜೇಕಬ ಮಲಿಕರು ಕ್ರಿಮಿಯುದ್ಧವನ್ನು ಪ್ರತಿಬಂಧಿಸುವ ಜಿನೇವಾ ಸದಾಚಾರ ಒಡಂಬಡಿಕೆ (೧೯೨೫)ಯನ್ನು ಎಲ್ಲ ರಾಷ್ಟ್ರಗಳೂ ಒಪ್ಪಬೇಕೆಂದು ಕೇಳಿಕೊಂಡಿರುವರು, ರಶಿಯಾವೇ ಮೊದಲಾದ ಹೆಚ್ಚಿನ ರಾಷ್ಟ್ರಗಳು ಇದಕ್ಕೆ ಸೈಗುಟ್ಟಿರುವಾಗ ಅಮೇರಿಕವು ಇನ್ನೂ ಇದಕ್ಕೆ ಒಪ್ಪಿರುವುದಿಲ್ಲ ಎಂದವರು ಹೇಳಿದರು. ಮಲಿಕರ ಭಾಷಣದಲ್ಲಿ ಒಮ್ಮೆಯಾದರೂ ಅಮೇರಿಕವು ಕೊರಿಯಾದಲ್ಲಿ ಕ್ರಿಮಿಯುದ್ಧ ನಡೆಸಿದೆ ಎಂಬ ಮಾತು ಬರಲಿಲ್ಲವಾಗಿ—ಎಲ್ಲರೂ ಆಶ್ಚರ್ಯಾನ್ವಿತಗೊಂಡರು. ಅಮೇರಿಕವು ಕ್ರಿಮಿ ಯುದ್ಧದ ಪ್ರಶ್ನೆಯನ್ನು ನಿಃಸ್ತ್ರೀಕರಣ ಮಂಡಳಕ್ಕೆ ಒಪ್ಪಿಸಿಕೊಡಬೇಕೆಂದೂ ಅಲ್ಲಿಯೇ ಅದರ ತೀರ್ಮಾನವಾಗಬೇಕೆಂದೂ ಮುಖ್ಯ ಸೂಚನೆ ತಂದಿದೆ. ಮಾತ್ರವಲ್ಲ—ಬ್ರಿಟನು ಅಮೇರಿಕಾ ಎರಡೂ ಕೂಡಿ ರಶಿಯವು ಕ್ರಿಮಿ ಯುದ್ಧವನ್ನು ಹೆಸರಿಗೆ ಮಾತ್ರ ತ್ಯಜಿಸಿದೆ ಎಂದೂ, ಆದರೆ ಅಂಥದೊಂದು ಅಕ್ರಮಣ ತನ್ನ ಮೇಲೆ ನಡೆದರೆ, ಮುಯ್ಯಿಗೆ ಮುಯ್ಯಿ ತೀರಿಸಲು ತಾನು ಇದೇ ಉಪಾಯ ಕೈಗೊಳ್ಳುವೆನೆಂದು ಘಂಟಾ ಘೋಷವಾಗಿ ಹೇಳಿರುವುದರಿಂದ—ಅದರ ದುಷ್ಟ ಬುದ್ಧಿ ತಾನಾಗಿ ಬಯಲಾಗಿದೆ ಎಂದೂ ದೂರಿವೆ. ಕ್ರಿಮಿ ಯುದ್ಧದಂಥ ಹೇಯ ಕ್ರಮವನ್ನು ಪ್ರತಿಬಂಧಿಸುವುದಕ್ಕೆ ತತ್ವತಃ ಭಾರತದ ಒಪ್ಪಿಗೆ ಇದೆ—ಆದರೆ, ಇದೆಲ್ಲ ಸಮಯವನ್ನು ಕೊಲ್ಲುವ ಹೊಸ ಹೊಸ ಉಪಾಯಗಳೆಂಬುದರಿಂದ, —ಬೇಕೆಂದೇ ಸ

ಮಸ್ಯೆಗಳನ್ನು ಸೃಷ್ಟಿಸಿ, ಅವುಗಳ ಸುಳಿಗಾಳಿಯಲ್ಲಿ ಬೀಳುವ ಹವಣಿಕೆಗಳಿವೆ ಎಂಬುದರಿಂದ—ನಾವು ತಲೆಕೆಡಿಸಿಕೊಳ್ಳುವ ಅಗತ್ಯ.

ವಸಾಹತುಗಳ ಮುಂದೆ—

ಟ್ಯುನಿಸಿಯಾ ಪ್ರಕರಣದಲ್ಲಿ ಏಶಿಯಾ ಆಫ್ರಿಕನ್ ರಾಷ್ಟ್ರಗಳು ಸಂಯುಕ್ತ ರಾಷ್ಟ್ರ ಸಂಘದ ಮಹಾ ಕಾರ್ಯದರ್ಶಿ ಟ್ರಿಗ್ವೆಲೀ ಗೆ ಒಂದು ಮನವಿ ಕಳಿಸಿ, ಶೀಘ್ರಾತಿ ಶೀಘ್ರ ಸಾಮಾನ್ಯಾಧಿವೇಶನವನ್ನು ಕರೆಯಬೇಕೆಂದು ಕೇಳಿವೆ. ಇತ್ತ ಫ್ರಾನ್ಸ್ ಟ್ಯುನಿಸಿಯಾದ ಸುಧಾರಣೆಗಳನ್ನು ಯಾವ ರೀತಿ ಕೈಗೊಳ್ಳಬೇಕೆಂಬುದರ ಬಗ್ಗೆ ಒಂದು ಯೋಜನೆ ತಯಾರಿಸಿದೆ-ಫ್ರೆಂಚರು ಸಿದ್ಧಗೊಳಿಸಿದ ಈ ಯೋಜನೆ ಟ್ಯುನಿಸಿಯದಾದ ರಾಷ್ಟ್ರೀಯ ಆಕಾಂಕ್ಷೆಯನ್ನು ಪೂರೈಸುವ ಮಾದರಿಯಲ್ಲಿಲ್ಲ ಎಂಬುದಂತೂ ಸ್ಪಷ್ಟ: ವಸಾಹತು ರಾಜ್ಯಗಳ ಮೇಲಿನ ಕಪಿಮುಷ್ಟಿಯನ್ನು ತೆಗೆಯಲು ಬಯಸದ ಈ ಸಹಾನುಭೂತಿಯಿಂದ ಮತ್ತೇನು ನಿರೀಕ್ಷಿಸಬಹುದು. ಅಮೇರಿಕವು ತನ್ನ ಸ್ವಾರ್ಥಾವಿಕವಾದ ಸ್ವಾತಂತ್ರ್ಯಾಭಿಮಾನವನ್ನು ತೊರೆದು, ಇಂಡೋ ಚೀನಾದ ಹೋರಾಟದಲ್ಲಿ ಫ್ರಾನ್ಸಿನೊಡನೆ ಎಂದಿನಿಂದಲೂ ಸಹಕರಿಸುತ್ತ ಬಂದಿದೆ. ಟ್ಯುನೀಸಿಯಾದ ಬಗ್ಗೆಯೂ ಇದೇ.

ಈಜಿಪ್ತದ ಬಿಕ್ಕಟ್ಟು

ಬ್ರಿಟನು ಈಜಿಪ್ತದೊಡನೆ ಮಾತುಕತೆಯಾಡಿ ಇಷ್ಟು ಸಮಯ ಸಂದರೂ-ಒಂದು ನಿರ್ಣಯಕ್ಕೆ ಬರುವುದಾಗಲಿಲ್ಲ-ನೈಲ ನದೀ ಕಣಿವೆಯ ಐಕ್ಯ ಪ್ರಶ್ನೆಯೊಂದು ಕಡೆ ಇದ್ದರೆ, ಇನ್ನೊಂದೆಡೆ ಸುಯೇಜ ಕಾಲುವೆ ಪ್ರದೇಶದಿಂದ ಬ್ರಿಟನರು ಹಿಂದೆಗೆಯುವುದೂ ಈಜಿಪ್ತವು ಮಧ್ಯಪೂರ್ವ ರಕ್ಷಣಾ ಯೋಜನೆಯಲ್ಲಿ ಸಹಕರಿಸುವುದೂ ಇದೆ. ಈಜಿಪ್ತವು ನಿಷ್ಕ್ರಿಯತೆಯಿಂದ ವರ್ತಿಸಿದರೂ-ಬ್ರಿಟನು ಇನ್ನು ಸಂಧಾನದ ಪ್ರಯತ್ನದಲ್ಲಿದೆ. ಈ ನಡುವೆ ಮಧ್ಯಪೂರ್ವ ರಕ್ಷಣಾ ಯೋಜನೆ ಎಂದರೆ, ರಶಿಯಾದ ಮೇಲೆ ಆಕ್ರಮಣದ ಸಿದ್ಧತೆ ಎಂದಾಗುವ ಕಾರಣ, ಈಜಿಪ್ತವು ಜಾಗ್ರತೆಯಿಂದಿರಬೇಕೆಂದು ರಶಿಯಾ ಎಚ್ಚರಿಸಿದೆ.

ಭಾರತೀಯರ ಚಳುವಳಿ

ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರೂ ಸ್ಥಳೀಯರಾದ ಆಫ್ರಿಕಾನರೂ ಈ ಗುರುವಾರದಿಂದ ತೀವ್ರ ಸತ್ಯಾಗ್ರಹ ಚಳುವಳಿಯಲ್ಲಿ ಧುಮುಕುವ ನಿರ್ಣಯ ಮಾಡಿರುವರು. ವರ್ಣದ್ವೇಷದ ಕಾನೂನುಗಳನ್ನು ವಿರೋಧಿಸಿ, ಸಮಾನತೆ ಮತ್ತು ನ್ಯಾಯಗಳಿಗಾಗಿ ಅವರು ಹೋರಾಡುವರು. ಸಿಲೋನು ಭಾರತೀಯರ ಪ್ರಶ್ನೆಯನ್ನು ಬೇಗನೇ ಸಹಾನುಭೂತಿಯಿಂದ ವಿಚಾರಿಸಲಾಗುವುದೆಂದು ಮುಖ್ಯ ಮಂತ್ರಿ ಸೇನಾ ನಾಯಕೆ ಆಶ್ವಾಸನ ಕೊಟ್ಟಿದ್ದಾರೆ. ಅಲ್ಲಿರುವ ಭಾರತೀಯರ ಪರಿಸ್ಥಿತಿಯನ್ನು ಅಭ್ಯಸಿಸಲು ಒಂದು ನಿಯೋಗವನ್ನು ಕಳಿಸಿಕೊಡಬೇಕೆಂಬ ಸೂಚನೆ ಅನಗತ್ಯವೆಂದು ಪ್ರಧಾನಿ ನೆಹರೂ ಸ್ಪಷ್ಟಗೊಳಿಸಿರುವರು. ಸಿಂಹಳೀಯರಾದ ಭಾರತೀಯರ ಸಮಸ್ಯೆಯ ಸಂಪೂರ್ಣ ಜ್ಞಾನ ಭಾರತಕ್ಕಿದೆ ಎಂದು ನೆಹರೂರ ಹೇಳಿಕೆ.

ಎಣ್ಣೆಯ ವ್ಯಾಮೋಹ

ಜಾಗತಿಕ ನ್ಯಾಯಾಲಯದಲ್ಲಿ ಇರಾಣದ ಪಕ್ಷವನ್ನು ಮಂಡಿಸಿ, ವಾದಿಕರು ಹಿಂದಿರುಗಿದ್ದಾರೆ. ನ್ಯಾಯಾಲಯದ ನಿರ್ಣಯವು ಬೇಗನೇ ಬೀಳುವುದಾದರೂ—ಈ "ಬೇಗನೇ" ಎಷ್ಟೆಂದರೂ ತಿಂಗಳುಗಳ ಲೆಕ್ಕವನ್ನು ಸೂಚಿಸೀತು. ಎಣ್ಣೆಯ ಪ್ರಶ್ನೆಯು ಹೀಗೆ ನನೆಗುದಿಗೆ ಬಿದ್ದಿರುವಾಗ, ಇರಾಣದಿಂದ ೮೦೦ ಟನ್ನು ಕ್ರೂಡಾಯಿಲನ್ನು ಸಾಗಿಸಿಕೊಂಡು ಬಂದ ಒಂದು ವ್ಯಾಪಾರಿ ನೌಕೆಯ ಮೇಲೆ ಏಡನಿನಲ್ಲಿ ಕೋರ್ಟು ಹುಕುಮಿನನ್ವಯ ಪ್ರತಿಬಂಧ ಹೇರಲಾಗಿದೆ. ಎಣ್ಣೆಯು ಇರಾಣದ್ದಿರದೆ ಆಂಗ್ಲೋ--ಇರಾಣಿಯನ್ ಕಂಪೆನಿಗೆ ಸೇರಿದೆ ಎಂಬುದಕ್ಕಾಗಿ ಈ ತಡೆಯಾಜ್ಞೆ. ಈ ತೊಂದರೆಗಳ ಮಧ್ಯದಲ್ಲಿ ರಶಿಯಾವು ಸ್ವೀಡನಿನ ವಿಮಾನವೊಂದನ್ನು ಬಾಲ್ಟಿಕ್ ಸಮುದ್ರ ಪ್ರದೇಶದಲ್ಲಿ ಹೊಡೆದು ಕೆಡವಿತು. ರಶಿಯಾದ ಗಡಿಯನ್ನು ಅಕ್ರಮ ಪ್ರವೇಶ ಮಾಡಿಸುದಕ್ಕೆ ಈ ಶಿಕ್ಷೆಯಂತೆ. ಒಂದು ಪ್ರಬಲ ರಾಷ್ಟ್ರದೊಡನೆ-ಅದೂ ನೆರೆಕರೆ-ವೈರ ಕಟ್ಟಿಕೊಳ್ಳ ಬಯಸದೆ—ಸ್ವೀಡನು ಕ್ಷಮಾಪಣೆ ಕೇಳಿದೆ.

ಸಂಕ್ಷಿಪ್ತ ಸುದ್ದಿಗಳು

ಡಾ| ಪಟ್ಟಾಭಿ ಸೀತಾರಾಮಯ್ಯನವರನ್ನು ಮಧ್ಯಪ್ರದೇಶದ ಗವರ್ನರರೆಂದು ನೇಮಿಸಲಾಗಿದೆ.

ಆಂಧ್ರ ಪ್ರಾಂತರಚನೆಯಲ್ಲಿ ತೊಡಕಾಗಿ ನಿಂತಿರುವ ರಾಜಧಾನಿಯ ಪ್ರಶ್ನೆಯನ್ನು ಪ್ರಧಾನಿ ನೆಹರೂ ಬಿಡಿಸಬೇಕೆಂದು ಡಾ. ಸೀತಾರಾಮಯ್ಯ ಹೇಳಿದ್ದಾರೆ.

ಮುಂಬಯಿಯ ಮಾಜಿಮುಖ್ಯಮಂತ್ರಿ ಶ್ರೀ ಬಿ. ಜಿ. ಖೇರರನ್ನು ಲಂಡನಿನಲ್ಲಿ ಭಾರತದ ರಾಯಭಾರಿಯಾಗಿ ನೇಮಿಸಲಾಗಿದೆ- ಹಾಗೆಯೇ ಯೋಜನಾ ಆಯೋಗದ ಸದಸ್ಯರಲ್ಲೊಬ್ಬರಾದ ಶ್ರೀ ವೈಕುಂಠಲಾಲ ಮೆಹ್ತಾ ಅಮೇರಿಕದಲ್ಲಿ ಭಾರತದ ರಾಯಭಾರಿಯಾಗುವರು.

ಪಂಚವಾರ್ಷಿಕ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಆಂದೋಲನವನ್ನು ಹೂಡುವುದಕ್ಕಾಗಿ ಭಾರತ ಸೇವಕ ಸಮಾಜವೆಂಬ ಸಂಘಟನೆ ನಡೆಯುವುದು. ವಿಧಾಯಕ-ಕಾರ್ಯಕರ್ತರೂ ಸಮಾಜ ಕಲ್ಯಾಣ ಕಾಂಕ್ಷಿಗಳೂ ಇದರ ಸದಸ್ಯ

ಕಾಲೇಜಿನಲ್ಲಿ ಮಹಿಳೆಯರಿಗೆ ಪ್ರವೇಶ?

ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಮಹಿಳೆಯರಿಗೆ ಪ್ರವೇಶ ಕೊಡಬೇಕೆಂಬ ಚಳವಳ ಇಂದು ನಿನ್ನೆಯದಲ್ಲ. ಸಾವಿರಾರು ಜನರ ಹಾರ್ದಿಕ ಸಹಾಯದಿಂದ ಕಟ್ಟಲ್ಪಟ್ಟ ಕಾಲೇಜಿನಲ್ಲಿ ಹೆಣ್ಣು ಮಕ್ಕಳನ್ನು ಸೇರಿಸಿಕೊಳ್ಳಲಾಗದಿರುವಲ್ಲಿ ಸಹಾಯವಿತ್ತ ಹೆತ್ತವರು ಆಕ್ಷೇಪಿಸುವುದು ಸಹಜ. ಹೆಣ್ಣು ಮಕ್ಕಳನ್ನು ಸೇರಿಸಿಕೊಳ್ಳಲು ತಡೆ ಹಾಕಿದುದು ಮದ್ರಾಸು ವಿಶ್ವವಿದ್ಯಾಲಯ. ಈ ವಿಚಾರದಲ್ಲಿ ವಿಶ್ವವಿದ್ಯಾಲಯ ಹೊತ್ತ ಧೋರಣೆ ವಿಚಿತ್ರವೂ, ಸಹನಾತೀತವೂ ಆಗಿರುವುದು. ತಡೆಯ ಮುಖ್ಯ ಉದ್ದೇಶ ಹೆಚ್ಚು ಹೆಚ್ಚು ಹೆಣ್ಣು ಮಕ್ಕಳ ಕಾಲೇಜು ಹುಟ್ಟಿಬರಲಿ ಎಂದಲ್ಲವೆ? 'ಸಹ ಶಿಕ್ಷಣ' ಪದ್ಧತಿಗೆ ವಿಶ್ವವಿದ್ಯಾಲಯ ವಿರೋಧವಿದೆಯೆಂದಲ್ಲವಂತೆ! ಉಡುಪಿಯಲ್ಲಿ ಒಂದು ಕಾಲೇಜನ್ನು ಸ್ಥಾಪಿಸಲು ಕಷ್ಟವಷ್ಟಾಯಿತು ಎಂದು ಇಲ್ಲಿ ಎಲ್ಲರಿಗೂ ತಿಳಿದ ವಿಷಯವೆ. ಅದಿನ್ನೂ ಒಂದನೆಯ ಗ್ರೇಡ್ ಕಾಲೇಜಾಗಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಇಲ್ಲಿ ಹೆಣ್ಣುಮಕ್ಕಳಿಗಾಗಿ ಇನ್ನೊಂದು ಕಾಲೇಜು ತೆರೆಯುವ ಸಾಹಸ ಯಾರಿಗೆ ಬರಬಹುದು? ಹಾಗೆ ತೆರೆಯದಿರುವಲ್ಲಿ ಸಮಾಜದಲ್ಲಿ ಮಧ್ಯಮ ಮತ್ತು ಕನಿಷ್ಠ ವರ್ಗದ ಎಷ್ಟು ಜನ ಮಹಿಳೆಯರಿಗೆ ಪರಊರಿಗೆ ಹೋಗಿ ಕಲಿತು ಬರುವ ಸಾಮರ್ಥ್ಯವಿದೆ? ಹೆತ್ತವರೊಡನೆ "ನಿಮ್ಮ ಮಗನು ನೆರೆಕರೆಯ ಕಾಲೇಜಿಗೆ ಹೋಗಲಿ, ಮಗಳು ಮಾತ್ರ ಕಾಲೇಜು ಶಿಕ್ಷಣಕ್ಕೆ ಪರಊರಿಗೆ ಹೋಗಬೇಕು" ಎಂದು ಹೇಳುವುದು ಇದೆಂತಹ ಅವಹೇಳನ! ಇದರಲ್ಲೂ ವಿಶ್ವವಿದ್ಯಾಲಯ ನಿಷ್ಪಕ್ಷಪಾತ ಧೋರಣೆ ವಹಿಸಿರುವುದೆ? ಮಂಗ್ಳೂರಿನಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಕಾಲೇಜಿದ್ದರೂ, ಅಲ್ಲಿಯ ಹುಡುಗರ ಕಾಲೇಜೆನಿಸಿರುವ ಗವರ್ನಮೆಂಟ್ ಕಾಲೇಜಿನಲ್ಲಿ ಮಹಿಳೆಯರಿಗೆ ಪ್ರವೇಶವಿದೆ. ಮಂಗ್ಳೂರಲ್ಲಿ ಹಾಗೆ ಮಾಡಿದುದು ತಪ್ಪು ಎಂದು ನಮ್ಮ ಅಭಿಪ್ರಾಯವಲ್ಲ. ಅಲ್ಲಿ ಹಾಗೆ ಮಾಡಲು ವಿಶ್ವವಿದ್ಯಾಲಯ ಸಂತೋಷಪಟ್ಟಿದ್ದರೆ, ಮಹಿಳೆಯರ ಕಾಲೇಜಿಲ್ಲದ ಉಡುಪಿಯಲ್ಲಿ ನ್ಯಾಯವಾಗಿ ಸಕಾರಣವಾಗಿ ವಿಶ್ವವಿದ್ಯಾಲಯ ಅಂತಹ ಒಂದು-ರಿಯಾಯಿತಿಯನ್ನು ತೋರಿಸಬೇಕೆಂದೇ ನಮ್ಮ ಆಗ್ರಹ. ಎಸ್. ಎಸ್. ಎಲ್. ಸಿ ಯವರೆಗೆ, ಆ ಮೇಲೆ ಡಿಗ್ರಿ ಕ್ಲಾಸುಗಳಲ್ಲಿ ಗಂಡು ಹೆಣ್ಣೆಂಬ ಭೇದವಿಲ್ಲದೆ ಸಹಶಿಕ್ಷಣ ನಡೆಯುತ್ತದೆ. ಮಧ್ಯದ ಎರಡು ವರುಷಗಳಲ್ಲಿ ಮಾತ್ರ ಅಧ್ಯಾಪಕರ ಕಣ್ಣೆದುರು, ಪ್ರತ್ಯೇಕ ಆಸನಗಳಲ್ಲಿ ಹಗಲು ನಾಲ್ಕೈದು ಘಂಟೆಗಳ ಕಾಲ ಹುಡುಗ ಹುಡುಗಿಯರು ಒಂದೇ ದ

ರಾಗಿ ಸೇರಿ ದುಡಿಯಬೇಕೆಂದು ಬಿನ್ನವಿಸಲಾಗಿದೆ.

ಕಾಶ್ಮೀರದಲ್ಲಿ ಘಟನಾ ಸಮಿತಿಯು ಕೈಗೊಂಡಿರುವ ಅರಸೊತ್ತಿಗೆಯ ನಿರ್ಮೂಲನದ ನಿರ್ಣಯ ಸಾಧುವಾದುದೆಂದೂ-ಈಗ ಭಾರತದ ರಾಜ್ಯಾಂಗ ಘಟನೆಗನುಗುಣವಾಗಿ ಅದನ್ನು ಹೇಗೆ ಕಾರ್ಯಕಾರಿಗೊಳಿಸಬಹುದೆಂಬುದೇ ಪ್ರಶ್ನೆ ಎಂದೂ ಹೇಳಲಾಗಿದೆ.

ಜೆಯಲ್ಲಿ ಪಾಠ ಕಲಿತರೆ ಆದರಿಂದ ಗಂಡಾಂತರವಾಗುವುದೆಂದು ವಿಶ್ವವಿದ್ಯಾಲಯ ಹೇಗೆ ಬಗೆಯಿತೊ ನಮಗೆ ತಿಳಿಯುವುದಿಲ್ಲ. ಇಂಡಿಯಾ ದೇಶದಲ್ಲಿ ಬೇರಾವ ವಿಶ್ವವಿದ್ಯಾಲಯವೂ ಈ ರೀತಿಯ ಪ್ರತಿಗಾಮಿ ತಡೆಯನ್ನು ಹಾಕಿಲ್ಲ. ಹಿಂದಿನ ಅದೆಷ್ಟೋ ತರದ ಸಳೆಯ ಕಟ್ಟಳೆ, ಸಂಪ್ರದಾಯ ಮತ್ತು ತಿಳುವಳಿಕೆಗಳು ಮಾಯವಾಗಿ ಹೊಸ ಉತ್ಕ್ರಾಂತಿಯು ಮೊಳೆಯುತ್ತಿರುವ ಈ ಕಾಲದಲ್ಲೂ ಮದ್ರಾಸು ವಿಶ್ವವಿದ್ಯಾಲಯ ಹೆಜ್ಜೆ ಮುಂದಿಡುವ ಬದಲು ಹಿಂದೆ ಇಡುತ್ತಿದೆ ಎಂಬುದು ಆಶ್ಚರ್ಯವೇ ಸರಿ! ಹೇಗಿದ್ದರೂ ವಿಶ್ವವಿದ್ಯಾಲಯ ಇನ್ನಾದರೂ ಈ ವಿಚಾರವನ್ನು ಪುನರ್ವಿಮರ್ಶಿಸಿ ಮಹಿಳೆಯರ ವಿದ್ಯಾಭ್ಯಾಸಕ್ಕೆ ಈ ವರ್ಷದಿಂದಲೇ ಅನುವುಮಾಡಿ ಕೊಡುವಂತಾಗಲೆಂದು ಹಾರೈಸುತ್ತೇವೆ.

ಉಡುಪಿ ಸ್ಯೆಂಟ್ ಸಿಸಿಲೀಸ್ ಹೈಸ್ಕೂಲಲ್ಲಿ—ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಹೋದ 40 ವಿದ್ಯಾರ್ಥಿನಿಯರಲ್ಲಿ 35 ಮಂದಿ (ಸೇಕಡಾ 88) ತೇರ್ಗಡೆ ಹೊಂದಿರುವರು.

ರಾಷ್ಟ್ರೀಯ ಸಸಿ ಸಪ್ತಾಹವು— ವಾಡಿಕೆಯಂತೆ ಈ ವರ್ಷ ಜುಲಾಯಿ ೧೦ರಿಂದ ೭ರ ವರೆಗೆ ಆಚರಿಸಲ್ಪಡುವುದು. ಈ ವನ ಮಹೋತ್ಸವದಲ್ಲಿ ಜನರು ಉತ್ಸಾಹ ತೋರಿಸಿ ಹೆಚ್ಚೆಚ್ಚು ಮರಗಳನ್ನು ನೆಟ್ಟು ಸಹಕರಿಸಿ ಅದನ್ನು ಯಶಸ್ವಿಯಾಗಿಸಬೇಕು. ಅಧಿಕ ಸಸಿಗಳನ್ನು ನೆಟ್ಟು ಸಂರಕ್ಷಿಸಿದವರಿಗೆ ಅಖಿಲ ಭಾರತ, ಪ್ರಾಂತಿಕ ಮತ್ತು ಜಿಲ್ಲೆಯ ಬಹುಮಾನಗಳು ಇರುತ್ತವೆ. ಸಸಿಗಳನ್ನು ಧರ್ಮಾರ್ಥವಾಗಿ ಇಲ್ಲವೆ ಸುಲಭ ದರದಲ್ಲಿ ಯಾಯ ತಾಲೂಕು ಕೃಷಿ ಇಲಾಖೆ ಕಚೇರಿಗಳಲ್ಲಿ ಪಡೆಯಬಹುದು. ದರ್ಖಾಸ್ತು ನಿಯಮಗಳಂತೆ ಕೊಡಲು ಅಸಾಧ್ಯವಾದ ಸರಕಾರಿ ಸ್ಥಳಗಳಲ್ಲಿ ಕೂಡಾ ಸಂಬಂಧಪಟ್ಟ ತಹಸೀಲ್ದಾರರು ಯಾ ಡೆಪ್ಯುಟಿ ತಹಸೀಲ್ದಾರರಿಂದ ಅವಶ್ಯವುಳ್ಳ ಅನುಮತಿ ಪಡೆದು ಹತ್ತು ವರ್ಷಗಳಿಗಿಂತ ಮೇಲಾಗಿ ಬಂಜರಾಗಿದ್ದ ಸರಕಾರಿ ಭೂಮಿಯನ್ನು ಕಾಲು ಕ್ರಮಗಳಂತೆ ಮರನೆಡಲು ಪಡಕೊಳ್ಳಬಹುದು. ಎಂದು ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜಕೃಷ್ಣಂ ಅವರು ಪ್ರಕಟಿಸಿದ್ದಾರೆ.

ಎಡಿಷನಲ್ ಪಬ್ಲಿಕ್ ಪ್ರೊಸಿಕ್ಯೂಟರರಾಗಿ—ಮಂಗಳೂರಿನ ಎಡ್ವೊಕೇಟ್ ಶ್ರೀ ಕೆ. ನಾರಾಯಣ ಶೈಗಳು ನೇಮಕ ಹೊಂದಿರುವರೆಂದು ತಿಳಿದುಬರುತ್ತದೆ.

ವಿನಿಯಂತ್ರಣವು—ಯಶಸ್ವಿಯಾಗುವುದು ಅಕ್ಕಿ ಮುಡಿಗೆ ರೂ. 25 ಕ್ರಯ ನಿರ್ಧರಿಸಿದುದರಿಂದಲ್ಲವೆಂದೂ ಮುಡಿ.. ಪ ಮಾಹದಿ 20; ಸೇರಿಗೆ 0-8-0ಯಲ್ಲಿ ಅಕ್ಕಿಯು ಮುಕ್ತಪೇಟೆಯಲ್ಲಿ ಸರಾಗವಾಗಿ ಸಿಗುವಂತಾಗಬೇಕೆಂದೂ ಅಕ್ಕಿಯನ್ನು ಬೋರಿಟ್ಟು ಹೊರಗೆ ಕಳಿಸುವುದನ್ನು ಒಡನೆ ಕಟ್ಟುನಿಟ್ಟು ಮಾಡಬೇಕೆಂದೂ 'ನಿಷ್ಪಕ್ಷಪಾತಿ' ಕೊಬ್ಬರು ಬರೆಯುತ್ತಾರೆ.



ತಾರೀಖು 24—6—52ರಿಂದ
ಕಾನನ್ ದೇವಿ, ಅಶೋಕ್ ಕುಮಾರ್, ಭಾರತಿ ದೇವಿ ನಟಿಸಿರುವ
◎ ಚಂದ್ರಶೇಖರ್ ◎
ಬರುವ ಚಿತ್ರ—ಯುನಿವರ್ಸಲ್‌ನವರ ವರ್ಣರಂಜಿತ ಚಿತ್ರ—
ಬುಕೆನಿಯರ್ಸ್ ಗರ್ಲ್
ಅನಂತರ— ಸಗಾಯಿ, ಝುಲ್‌ಝುಲಾ, ಅಮರ ಭೂಪಾಲಿ ಇತ್ಯಾದಿ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

Navayuga Enterprise Limited, Udipi

NOTICE

The Register of members and share transfer books of the Company will remain closed from the 10th July 1952 to 30th July. 1952 (both days inclusive).

(By order of the Board)

K. Honnayya Shetty
Managing Director
Office of the Company,
Palakote, Udipi
Dated 12-6-1952.

ಉಡುಪಿ

ಭೂಮ್ಯಾಲಿಕರ ಸಭೆ:— ಸರಕಾರದ ಪಿನಿಯಂತ್ರಣ ಯೋಜನೆಯು ಯಶಸ್ವಿಯಾಗುವಂತೆ ಸಹಕರಿಸುವ ಕುರಿತು ಆಲೋಚಿಸುವರೆ ಉಡುಪಿ ತಾಲೂಕು ಭೂಮ್ಯಾಲಿಕರ ಸಭೆಯೊಂದು ಇದೇ ತಾ 29-6-52ನೆ ಆದಿತ್ಯವಾರ ಸಾಯಂಕಾಲ 3 ಗಂಟೆಗೆ ಬಡಗಬೆಟ್ಟು ಸಹಕಾರ ಸಂಘದ ಆಫೀಸಿನಲ್ಲಿ [ಕ್ರಿಶ್ಚಿಯನ್ ಹೈಸ್ಕೂಲ್ ಎದುರು] ಜರಗುವುದು. ಸದ್ರಿ ಸಭೆಗೆ ತಾಲೂಕಿನ ಭೂಮ್ಯಾಲಿಕರೆಲ್ಲರೂ ತಪ್ಪದೆ ಬರಬೇಕಾಗಿ ಶ್ರೀಗಳಾದ ಕೆ. ಜೆ. ಬಲ್ಲಾಳರೂ, ಬಿ. ವಾಸುದೇವ ರಾಯರೂ, ವಿನಂತಿಸುತ್ತಾರೆ.

ಸಿನೆಮಾ ಥಿಯೇಟರಿನಲ್ಲಿ ಸಭೆ— ಸ್ಥಳೀಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಹೆಮ್ಮಕ್ಕಳಿಗೆ ಪ್ರವೇಶವೀಯಬೇಕೆಂದೂ ಆ ಬಗ್ಗೆ ಇರುವ ಪ್ರತಿಬಂಧಕವನ್ನು ತೆಗೆದು ಹಾಕಬೇಕೆಂದೂ ಮದ್ರಾಸು ಯೂನಿವರ್ಸಿಟಿಯನ್ನು ಕೇಳಿಕೊಳ್ಳುವ ನಿರ್ಣಯವು ಇದೇ ತಾ 20ರಲ್ಲು ಸ್ಥಳೀಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಜರುಗಿದ ಸಭೆಯಲ್ಲಿ ಸರ್ವಾನುಮತದಿಂದ, ಪಾಸಾಯಿತು. ಶ್ರೀ ಸಿ. ರಾಯಬಲ್ಲಾಳರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಎ. ಜೆ. ಆಳ್ವಯವರು ಸಂದರ್ಭೋಚಿತ ಮಾತುಗಳನ್ನಾಡಿದರು. ಶ್ರೀ ಟಿ. ಎ. ಪೈ ಎಮ್. ಎಲ್. ಎ. ಮತ್ತು ಮದ್ರಾಸು ಸಿನೇಟ್ ಮೆಂಬರ್ ಶ್ರೀ ಟಿ. ಆರ್. ಯು. ಪೈಗಳವರು ಮದ್ರಾಸು ಸರಕಾರ ಮತ್ತು ಯೂನಿವರ್ಸಿಟಿಯೊಡನೆ ಉಡುಪಿ ಜನತೆಯ ಈ ಸಂಕಷ್ಟವನ್ನು ನಿವೇದಿಸಿ ಬಂದ ವಿಘ್ನವನ್ನು ಪರಿಹರಿಸಬೇಕೆಂದು ಅವರೋರ್ವರನ್ನು ವಿನಂತಿಸುವ ನಿರ್ಣಯವಾಯಿತು.

ಸಿವಿಲ್ ಸಪ್ಲೈಸ್ ಕಮಿಶನರ್ ಶ್ರೀ ಎಮ್. ಎ. ಸುಬ್ರಹ್ಮಣ್ಯಂನವರು ಜಿಲ್ಲಾ ಕಲೆಕ್ಟರ್ ಶ್ರೀ ರಾಜಂತ್ನಂ, ಅವರೊಡನೆ ಇದೇ ತಾ. 23ರಲ್ಲು ಉಡುಪಿಗೆ ಬಂದು ಇಲ್ಲಿಯ ಆಹಾರ ಪರಿಸ್ಥಿತಿಯನ್ನು ಅವಲೋಕಿಸಿದರು. ಕೆಲವು ಸಾಹುಕಾರರನ್ನು ಕಂಡು ವಿಚಾರವಿನಿಮಯ ನಡೆಸಿ, ಕೆಲವು ರೇಶನ್ ಅಂಗಡಿಗಳನ್ನು ಸಂದರ್ಶಿಸಿದರು. ತಹಶಿಲ್ದಾರ್ ಶ್ರೀ ಕೆ. ವೆಂಕಪ್ಪ ಮತ್ತು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಕೂಡಾ ಕಮಿಶನರಿಗೆ ಇಲ್ಲಿಯ ಆಹಾರ ಪರಿಸ್ಥಿತಿಯನ್ನು ತಿಳಿಸಿದರು.

ಉದ್ಯಾವರ ಮೆಂಕೆಪ್ಪುರ್ದೆಲ್ಲಿ — ಕಾಶ್ಮೀರ ಡಿ'ಸೋಜನೆಂಬಾತನು ಶಾಬಿಯಾನೆ ಲೋರೆನ್ಸ್ ಡಿ'ಸೋಜಗೆ ಕತ್ತಿಯನ್ನಿರಿದುದರ ಪರಿಣಾಮವಾಗಿ ಲೋರೆನ್ಸ್ ಡಿಸೋಜನು ಮರಣಪಟ್ಟನು. ಮೃತ ಶರೀರವನ್ನು ಉಡುಪಿಗೆ ಆಸ್ಪತ್ರೆಗೆ ತರಲ್ಪಟ್ಟಿತು. ಡಾ। ಸಂಜೀವನ ಸೆಟ್ಟರು ಪೋಸ್ಟ್‌ಮಾರ್ಟೆಮ್ ನಡೆಸಿದರು. ಕಾಶ್ಮೀರ ಡಿ'ಸೋಜನು ಸ್ವತಃ ಪೋಲೀಸ್ ಸ್ಟೇಶನಿಗೆ ಬಂದು ನಡೆದ ವಿಷಯಗಳನ್ನು ತಿಳಿಸಲ್ಪಟ್ಟು ದಸ್ತಗಿರಿಗೊಳಗಾದನೆಂದೂ ಪೋಲೀಸ್ ತನಿಖೆ ನಡೆಯುತ್ತಿದೆ ಎಂದೂ ತಿಳಿದುಬರುತ್ತದೆ.

ಬೋರ್ಡ್ ಹೈಸ್ಕೂಲಿನಲ್ಲಿ ಈ ಸಲ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತ ೯೮ ವಿದ್ಯಾರ್ಥಿಗಳಲ್ಲಿ [ಸೇಕಡಾ 68ರಷ್ಟು] 67 ಪಾಸಾಗಿರುವರು.

ಬೆಳ್ಳಿ ಬಂಗಾರ ವ್ಯಾಪಾರಸ್ಥರು ಇದೇ ತಾ. 22ರಲ್ಲು ವಕೀಲ್ ಶ್ರೀ ಕೆ. ನಿವಲ ನಾಯ್ಕರ ಅಧ್ಯಕ್ಷತೆಯಲ್ಲಿ ಸಭೆಸೇರಿ "ಬುಲಿಯನ್ ಮರ್ಚಂಟ್ಸ್ ಎಸೋಸಿಯೇಶನ್" ಎಂಬ ಹೆಸರಿನಿಂದ ತಮ್ಮ ಸಂಘವೊಂದನ್ನು ಸ್ಥಾಪಿಸಿದರು. ಸಂಘದ ನಿಬಂಧನೆ ಮೊದಲಾದುವು ಸದ್ಯವೇ ತಯಾರಾಗಲಿರುವುದು.

ದಿ ಸ್ಯೌತ್ ಕನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿಯ— ಮಹಾಸಭೆಯು ಇದೇ ತಾ. 21ರಲ್ಲು ರಜಿಸ್ಟರ್ಡ್ ಆಫೀಸಿನಲ್ಲಿ ಚೇರ್‌ಮೆನ್ ಶ್ರೀ ಬಿ. ಬಿ. ಸೆಟ್ಟಿ, ಎಡ್ವಕೇಟ್, ಅವರ ಅಧ್ಯಕ್ಷತೆಯಲ್ಲಿ ಜರಗಿ, ಗತವರುಷದ ಲೆಖ್ಖಪತ್ರಗಳ ಮಂಜೂರಾತಿ, ನಿವೃತ್ತರಾದ ಡ್ಯಾರೆಕ್ಟರರಾದ ಬಿ. ಎನ್. ಶೇಕ, ಕೆ. ಎಚ್. ಶೆಟ್ಟಿ ಮತ್ತು ಬಿ ವಿ. ಆಚಾರ್ಯರ ಪುನರಾಯ್ಕೆ ನಡೆದು ಒಡಿಟರ್ ಶ್ರೀ ಶಾಂತಾರಾಮರಾಯರ ನೇಮಕವಾಗಿ ಸಭಾಂತ್ಯವಾಯಿತು.

ಮುಲ್ಕಿ—ಯೂನಿಯನ್ ಕ್ಲಬ್ಬಿನ 37ನೇ ವಾರ್ಷಿಕ ಮಹಾ ಸಭೆಯೂ ಡಾ। ಟೋಳ ಶ್ಯಾಮ ರಾಯರ ಜನ್ಮ ದಿನಾಚರಣೆಯೂ ತಾ 16-6-1952ರಲ್ಲು ಬಹು ವಿಜೃಂಭಣೆಯಿಂದ ಜರಗಿತು. ಚಾಲ್ತಿ ವರ್ಷಕ್ಕೆ ಡಾ। ಯಂ. ಆರ್. ಸೆಟ್ಟರು ಅಧ್ಯಕ್ಷರಾಗಿಯೂ ಶ್ರೀ ಎಲ್. ಪಿ. ಫೆರ್ನಾಂಡೀಸರು ಉಪಾಧ್ಯಕ್ಷರಾಗಿಯೂ, ಶ್ರೀ ಯಂ. ಉಮೇಶ ರಾಯರು ಖಜಾಂಚಿಯರಾಗಿಯೂ ಶ್ರೀ ಜಿ. ಎಸ್. ಮುಲ್ಕಿಯವರು ಕಾರ್ಯದರ್ಶಿಯರಾಗಿಯೂ ಶ್ರೀ. ಬಿ. ಮಂಗೇಶ ರಾಯರು ಉಪಕಾರ್ಯದರ್ಶಿಯರಾಗಿಯೂ ಆರಿಸಲ್ಪಟ್ಟಿದ್ದಾರೆ.

ಕುಂಬಳೆ— ಇಲ್ಲಿನ ರೈಲ್ವೆ ಸ್ಟೇಶನ್ ಮಾಸ್ಟರ್ ಶ್ರೀ ಕೆ ಪಿ. ಸುಕುಮಾರನ್ ಇಂದೂರ್ ಸ್ಟೇಶನಿಗೂ, ಅಸಿಸ್ಟಂಟ್ ಸ್ಟೇಶನ್ ಮಾಸ್ಟರ್ ಶ್ರೀ ಕೆ ಯಂ. ಶಿವದಾಸ್ ತಿಕ್ಕೋಟಿಗೂ ವರ್ಗವಾಗಿ ಹೋಗುವ ನಿಮಿತ್ತ ಅವರನ್ನು ಬೀಳ್ಕೊಡುವ ಸತ್ಕಾರ ಸಭೆಯು ತಾ 14 ಮತ್ತು 15ರಂದು ಇಲ್ಲಿ ನಡೆಯಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರು ತಾ. ೨೧ರಂದು ಇಲ್ಲಿಗೆ ಚಿತ್ತೈಸಿ, ಇಲ್ಲಿನ ಎಚ್. ಇ. ಬೋರ್ಡ್ ಶಾಲೆಗೆ ಸಂಬಂಧಿಸಿ ಕಟ್ಟಿಸಿದ ಬ್ಲೋಕಿನ ಉದ್ಘಾಟನೆಯನ್ನು ಮಾಡಿರುವರು. ಈ ಸಮಾರಂಭಕ್ಕೆ ಹಲವು ಮಹನೀಯರುಗಳು ನೆರೆದಿರುವರು.

ಕಾರ್ಕಳ:— ಸ್ಥಳೀಯ ಬೋರ್ಡ್ ಹೈಸ್ಕೂಲಿನಿಂದ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಈ ಬಾರಿ ಕುಳಿತ 82 ವಿದ್ಯಾರ್ಥಿಗಳಲ್ಲಿ 60 ಮಂದಿ ಪಾಸಾಗಿರುವರು, ಅಂದರೆ ಸೇಕಡಾ 76ರಷ್ಟು ಮಂದಿ ಪಾಸಾದುದು ಉತ್ತಮ ಪರೀಕ್ಷಾ ಫಲಿತಾಂಶವಾಗಿದೆ.

ಬೊಂಬಾಯಿ— ವಿದ್ಯಾದಾಯಿನಿ ಸಭೆಯು ಬಿಲ್ಲವ ಜಾತಿಯ ಬಡವಿದ್ಯಾರ್ಥಿಗಳಿಗೆ ವರ್ಷಂಪ್ರತಿ ಕೊಡುವಂತೆ ಈ ವರ್ಷವೂ ವಿದ್ಯಾರ್ಥಿವೇತನ ಕೊಡಲಾಗುವುದು. ವೇತನವನ್ನು ಪಡೆಯಲಿಚ್ಛಿಸುವ ವಿದ್ಯಾರ್ಥಿಗಳು ಅರ್ಜಿಪತ್ರಕ್ಕಾಗಿ, ಸಭೆಯ ಕಾರ್ಯಾಲಯಕ್ಕೆ [31 ರಘುನಾಥ ದಾದಾಜಿ ರಸ್ತೆ, ಬೊಂಬಾಯಿ-1] ತಾ. 7-7-52ರೊಳಗಾಗಿ ಬರೆಯಬೇಕೆಂದು ಸಭೆಯ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಬಂಟರ ಯಾನೆ ನಾಡವರ ಸಂಘ,

ಈ ಸಂಘದ ೨೪ನೇ ವಾರ್ಷಿಕ ಮಹಾಸಭೆಯು ತಾ 6-7-52ನೇ ಆದಿತ್ಯವಾರ ಅಪರಾಹ್ನ ಘಂಟೆ 3ಕ್ಕೆ ಶ್ರೀ ಬಸ್ರೂರು ಜಗನ್ನಾಥ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಫ್ರೀ ನೈಟ್ ಹೈಸ್ಕೂಲು ಮಂದಿರದಲ್ಲಿ (17 ಕಾಮ್ಪ್ ಸ್ಟ್ರೀಟ್) ಜರಗುವುದಾಗಿ ನಿಶ್ಚಯಿಸಿರುವುದರಿಂದ ಎಲ್ಲರೂ ದಯವಿಟ್ಟು ಸಭೆಗೆ ಬರಬೇಕಾಗಿ ವಿನಂತಿ.

ಕೆ. ಚಂದ್ರಶೇಖರ ಹೆಗ್ಡೆ.
ಗೌರವ ಕಾರ್ಯದರ್ಶಿ.

ಮುಂಬಾಯಿ, 16-6-52.

ಅಂತರಂಗದ ಕಥೆ, ಕಾದಂಬರಿ, ನಾಟಕ, ಕವಿತೆ, ಚಿತ್ರ ಪ್ರಬಂಧ ಮೊದಲಾದ ನಾನಾ ಬಗೆಯ 75 ಪುಸ್ತಕಗಳನ್ನು ಒಟ್ಟಿಗೆ ರೂ. 20ಕ್ಕೆ ಕೊಡಲಾಗುವುದು.
ಕಟಲಾಗಿಗೆ ಬರೆಯಿರಿ:—ಅಂತರಂಗ ಆಫೀಸು ಉಡುಪಿ, ಅಥವಾ ನವಭಾರತ ಬುಕ್ ಡಿಪೋ, ಉಡುಪಿ

THE CATHOLIC BANK LIMITED, COONDAPOOR.

ದಿ ಕಥೊಲಿಕ್ ಬ್ಯಾಂಕ್ ಲಿಮಿಟೆಡ್, ಕುಂದಾಪುರ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ಚಿನ್ನದ ನಗಗಳ ಈಡಿನ ಮೇಲೆ ಸಾಲಪಡೆಕೊಂಡು ಕ್ಲಪ್ತವ್ಯಾದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿಮಾಡಿರುವುದರಿಂದ ಸದರಿ ಸಾಲವನ್ನು ಬರಮಾಡಿಕೊಳ್ಳುವರೇ ಅವರಿಗೆ ಬಿಟ್ಟ ರಜಿಸ್ಟ್ರಿ ನೋಟೀಸು ಕೆಲವರಿಗೆ, ಹಲವಾರು ಕಾರಣಗಳಿಂದ ಜ್ಯಾರಿ ಆಗದೆ ವಾಪಾಸು ಬಂದಿರುತ್ತಿಯನ್ನು ಕೆಲವರಿಗೆ ನೋಟೀಸು ಜ್ಯಾರಿ ಆದರೂ ಸುಮ್ಮನಿರುವುದರಿಂದ, ಸದ್ರಿಯವರು ಈಡಿಟ್ಟ ಚಿನ್ನಾಭರಣಗಳನ್ನು ಇದೇ ಜುಲಾಯಿ ತಿಂಗಳ ತಾರೀಕು 4ರಲ್ಲು [ಶುಕ್ರವಾರ] ಮಧ್ಯಾಹ್ನ ಗಂಟೆ 2ಕ್ಕೆ ಸರಿಯಾಗಿ ಅಥವಾ ಬೇಂಕಿಗೆ ಯುಕ್ತಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದವೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಸಾಲದ ಅಸಲು ಬಾಬ್ತು ರೂ. ಆ. ಪೈ.
26/691	ಸಾವೆರ್ ಮೆಂಡೋನ್ಸಾ, ಮನುವೆಲ್ ಮೆಂಡೋನ್ಸರ ಮಗ, ಕಲ್ಲೂರು	125 0 0
26/730	ನಾಗ್ಯಯ್ಯ ಸೆಟ್ಟಿ, ಗೋವಿಂದ ಹೆಗ್ಗಡೆಯವರ ಅಳಿಯ, ಮೂಡ ಬೈಲೂರು, ಶಂಕರ ನಾರಾಯಣ ಪೋಸ್ಟ್	200 0 0
26/742	ಉದ್ಯಾವರ ಶೇಕ್ ಯಿಬ್ರಾಹಿಮ್ ಸಾಹೇಬ್, ಅಬ್ದುಲ್ ರೈಮನರ ಮಗ, ಮದ್ದುಗುಡ್ಡೆ ರೋಡ್, ಕುಂದಾಪುರ	100 0 0
26/839	G ವಾಸುದೇವ ನಾಯ್ಕ, ವಾಮನ್ ನಾಯ್ಕರ ಮಗ, ಮರ್ಚಂಟ್, ಗಂಗೊಳ್ಳಿ	75 0 0
26/1756	ಹೊಳಮಗೆ ಮಂಜ್ಯ ಸೆಟ್ಟಿ, ಹೆರಿಯಂಣ ಸೆಟ್ರ ಅಳಿಯ, ಹಕ್ಲಾಡಿ ಗ್ರಾಮ	100 0 0
27/22	ಬಿ. ಸಿವರಾಮ ಸೆಟ್ಟಿ, ಸುಬ್ಬಣ ಸೆಟ್ರ ಮಗ, ಮೊಳಹಳ್ಳಿ ಗ್ರಾಮ	75 0 0
27/66	ಮಂಜಾ ಪೂಜಾರಿ, ವೆಂಕಟ ಪೂಜಾರಿ ಅಳಿಯ, ಕೋಣಿ	55 0 0
27,87	ಇಸೂಫ್ ಸಾಹೇಬ್, ಅಬ್ದುಲ್ಲಾ ಸಾಹೇಬರ ಮಗ, ಕುಂದಾಪುರ	15 0 0
27/97	ಶೇಕ್ ಹೈದರ್ ಸಾಹೇಬ್, ಅಬ್ದುಲ್ ರೈಮನ್ ಸಾಹೇಬರ ಮಗ, ಕಸ್ಟಮ್ಸ್ ಪಿಯೊನ್, ಗಂಗೊಳ್ಳಿ	75 0 0
27/195	ವಾಸು ಯಾನೆ ರಾಮಚಂದ್ರ ಹೊಳ್ಳ, ಸುಬ್ರಾಯ ಹೊಳ್ಳರ ಮಗ, ವಡೇರ ಹೋಬಳಿ	35 0 0
27/197	ನಾಗಪ್ಪ ಖಾರ್ವಿ-ಕುಷ್ಟ ಖಾರ್ವಿ ಮಗ, ಖಾರ್ವಿಕೇರಿ, ಕುಂದಾಪುರ	15 0 0
27/200	ಶ್ರೀನಿವಾಸ ಸೆರೆಗಾರ, ಪುರ್ಸಯ್ಯ ಸೆರೆಗಾರರ ಮಗ, ಮೂಡು ಹಂಗ್ಳೂರು	150 0 0
27/206	ಕೃಷ್ಣ ಖಾರ್ವಿ-ಮಂಜ್ನಾಥ ಖಾರ್ವಿ ಮಗ, ಪ್ರೊಹಿಬೀಶನ್‌ಗಾರ್ಡ್ ಬೈಂದೂರು	30 0 0
27/212	A. ಮಹಾಬ್ಲ ಸೆಟ್ಟಿ, ಚಿಕ್ಕಮ್ಮ ಸೆಡ್ತಿ ಮಗ, ಆನಂಗಳ್ಳಿ ಗ್ರಾಮ-ಕುಂದಾಪುರ	40 0 0
27/255	ಅಬ್ರಹಾಮ್ ರೆಬೆಲ್ಲೊ, ಪೇದ್ರು ಸಂತಾನ ರೆಬೆಲ್ಲರ ಮಗ, ಹೇರಿಕುದ್ರು	100 0 0
27/301	ಫೆಲಿಕ್ಸ್ ಡಿ ಸೋಜಾ, ಸಂತಾನ್ ಡಿ ಸೋಜರ ಮಗ, ವಡೇರ ಹೋಬಳಿ ಕುಂದಾಪುರ	35 0 0
27/311	ಕೆ. ಮಂಜ್ನಾತ ಸೆರೆಗಾರ, ನಾರ್ಣ ಸೆರೆಗಾರರ ಮಗ, ಕಾರ್ತಿಕೇರಿ, ಕುಂದಾಪುರ	15 0 0
27/340	ಪಿಲಿಪ್ ರೆಬೆಲ್ಲೊ, ಅಬ್ರಹಾಮ್ ರೆಬೆಲ್ಲರ ಮಗ, ಹೇರಿಕುದ್ರು-ಆನಂಗಳ್ಳಿ	60 0 0
27/343	ಮಹಾಬ್ಲ ಸೆಟ್ಟಿ, ಮಂಜ್ಯ ಸೆಟ್ರ ಅಳಿಯ, ತಾಲ್ಲೂರು ಗ್ರಾಮ-ಕುಂದಾಪುರ	60 0 0
27/387	ರಾಮಯ್ಯ ಸೆರೆಗಾರ, ದಾಸಪ್ಪ ಸೇರೆಗಾರರ ಮಗ, ಉಪ್ಪಿನಕುದ್ರು, ಕುಂದಾಪುರ	60 0 0
27/404	B. ಲಿಂಗಪ್ಪಯ್ಯ, ವೆಂಕಟ್ರಮಣಯ್ಯನವರ ಮಗ, ರಿಟಾಯರ್ಡ್ ಹೆಡ್ ಕೊನ್‌ಸ್ಟೇಬಲ್, ಕುಂದಾಪುರ	110 0 0
27/422	ಗಣಪ ಪೂಜಾರಿ, ಚಿಕ್ಕ ಪೂಜಾರಿ ಅಳಿಯ, ನಂದಿಬೆಟ್ಟು, ವಡೇರಹೋಬಳಿ	12 0
27/432	ಪೇದ್ರು ಮೆಂಡೊನ್ಸಾ, ಪಾವ್ಲು ಮಂಡೊನ್ಸರ ಮಗ, ತಲ್ಲೂರು ಗ್ರಾಮ	12 0
27/510	ಇಸೂಫ್ ಸಾಹೇಬ್, ಅಬ್ದುಲ್ ಸಾಹೇಬರ ಮಗ, ಕುಂದಾಪುರ	55 0
27/511	ಮಹಾಬ್ಲ ಸೆಟ್ಟಿ, ವೆಂಕ್ಟ ಸೆಟ್ರ ಮೊಮ್ಮಗ, ಕಾವ್ರಾಡಿ, ಕಾವ್ರಾಡಿ, ಪೋಸ್ಟ್	100 0
27/540	ಕೃಷ್ಣ ಖಾರ್ವಿ, ಮಂತಿ ಖಾರ್ವಿ ಮಗ, ಪೋಲ್‌ಕೇರಿ, ಖಾರ್ವಿ ಕೇರಿ, ಕುಂದಾಪುರ	50 0
27/560	K. ಶೀನ, ರಾಮ ಮೊಗೇರ್ ಅಳಿಯ, ಕಾರ್ತಿಕೇರಿ, ಕುಂದಾಪುರ	70 0
27/657	ಗೋಪಾಲಕೃಷ್ಣ ಸೆಟ್ಟಿ, ಮಂಜ್ಯ ಸೆಟ್ಟಿ ಅಳಿಯ, ಕೇಶನಮಕ್ಕಿ ಮನೆ, ಆನಂಗಳ್ಳಿ	65 0
27/682	ಜಿ. ವಾಸುದೇವ ನಾಯ್ಕ, ವಾಮನ ನಾಯ್ಕರ ಮಗ, ಮರ್ಚಂಟ್ ಗಂಗೊಳ್ಳಿ	100 0
27/822	ಗಂಪು ಖಾರ್ವಿ, ದೇವ್‌ಪಟೇಲರ ಮಗ, ಖಾರ್ವಿಕೇರಿ, ಕುಂದಾಪುರ	15 0

Coondapoor,
Date 21-6-52

I. Menezes,
Agent.

ಡಿದ.
ದವ

ಮಂಗಳೂರು

ನಗರ ಸಭೆಯ ಉಪಾಧ್ಯಕ್ಷರಾಗಿದ್ದ– ಶ್ರೀ ಬಿ. ಗಂಗಾಧರ ದಾಸರು ಸರಕಾರೀ ವಕೀಲರಾಗಿ ನೇಮಕಹೊಂದಿದ ಕಾರಣ ಅವರು ತನ್ನ ಉಪಾಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ಕೊಟ್ಟಿದ್ದರು. ಇತ್ತೀಚೆಗೆ ಸೇರಿದ ಕೌನ್ಸಿಲು ಸಭೆಯಲ್ಲಿ ಶ್ರೀ ದಾಸರ ಸ್ಥಾನದಲ್ಲಿ ಶ್ರೀ ಕೆ. ಎಸ್. ಅಡಿಗ, ಎಡ್ವೋಕೇಟ್, ಅವರು ಸರ್ವಾನುಮತದಿಂದ ಆರಿಸಲ್ಪಟ್ಟರು.

ನಳ್ಳಿ ನೀರಿನ ವಿಚಾರ– ಮಂಗಳೂರು ನಗರಕ್ಕೆ ನಳ್ಳಿ ನೀರು ಮತ್ತು ಮುಚ್ಚಿದ ಚರಂಡಿಗಳ ವ್ಯವಸ್ಥೆ ಕುರಿತು ಮುನಿಸಿಪಾಲಿಟಿಯಿಂದ ನೇಮಕವಾದ ಶಿಷ್ಟಮಂಡಲವೊಂದು ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರನ್ನು ಭೆಟ್ಟಿಯಾಗಬೇಕೆಂದು ಈ ಮೊದಲು ನಿರ್ಣಯವಾಗಿತ್ತಷ್ಟೆ. ಈ ಕುರಿತು ಮುಖ್ಯ ಮಂತ್ರಿಗಳಿಗೆ ಬರೆದುಕೊಂಡಾಗ, ತಾನು ಸಂಚಾರ ಹೊರಡುವ ಕಾರಣ, ಶಿಷ್ಟಮಂಡಲದವರು ಆರೋಗ್ಯ ಇಲಾಖಾ ಮಂತ್ರಿ ಮತ್ತು ಅರ್ಥ ಇಲಾಖಾ ಮಂತ್ರಿಗಳನ್ನು ಕಂಡು ಮಾತನಾಡಬಹುದೆಂದು ಉತ್ತರಿಸಿರುವರಾಗಿ ತಿಳಿದು ಬರುತ್ತದೆ.

ಸೂಲಗಿತ್ತಿಯರ ವರದಿ– ಮುನಿಸಿಪಲ್ ಸೂಲಗಿತ್ತಿಯರು ತಮ್ಮ ಸಂದರ್ಶನಗಳ ವಿವರವನ್ನು ತಿಂಗಳಿಗೊಮ್ಮೆ ಮುನಿಸಿಪಲ್ ಕೌನ್ಸಿಲಿಗೆ ವರದಿಯೊಪ್ಪಿಸಬೇಕೆಂದು, ಕಳೆದ ಮುನಿಸಿಪಲ್ ಸಭೆಯಲ್ಲಿ ಗೊತ್ತುವಳಿಯಾಗಿದೆ.

ವಾಣಿಜ್ಯ ನೌಕರರ ಸಂಘ— ಇದರ ವರ್ಷಾವಧಿ ಮಹಾ ಸಭೆಯು ತಾ 15ರಲ್ಲಿ ಶ್ರೀ ಕೆ. ಶಶಿಧರ ರಾಯರ ಅಧ್ಯಕ್ಷತೆಯಲ್ಲಿ ಜರಗಿದಾಗ, ವಾಣಿಜ್ಯ ನೌಕರರ ಪರಿಸ್ಥಿತಿ ಪರಿಶೀಲನೆಗೆ ಸರಕಾರವು ಒಂದು ಕಮಿಟಿಯನ್ನು ರಚಿಸಬೇಕೆಂದು ಒತ್ತಾಯಪಡಿಸುವ, ವಾಣಿಜ್ಯ ನೌಕರರಿಗೆ ಪ್ರಾವಿಡೆಂಟ್ ಫಂಡು ಏರ್ಪಾಡು ಬೇಕೆನ್ನುವ, ಸರಕಾರಿ ನೌಕರರ ಮತ್ತು ಶಾಲಾ ಅಧ್ಯಾಪಕರ ಮಕ್ಕಳಿಗೆ ಧರ್ಮಾರ್ಥ ಶಿಕ್ಷಣ ಸಿಗುವಂತೆ ವಾಣಿಜ್ಯ ನೌಕರರ ಮಕ್ಕಳಿಗೂ ದೊರೆಯ ಬೇಕೆನ್ನುವ, ಜಿಲ್ಲೆಯಲ್ಲಿ ಅಕ್ಕಿಯ ಕ್ರಯವು ಮುಡಿಗೆ ರೂ. 21/–ಕ್ಕಿಂತ ಹೆಚ್ಚಿಗಿರಬಾರದೆನ್ನುವ, ಇತ್ಯಾದಿ ನಿರ್ಣಯಗಳಾದುವು. ಚಾಲ್ತಿ ವರುಷಕ್ಕೆ ಶ್ರೀಗಳಾದ ಕೆ. ಶಶಿಧರ ರಾವ್, (ಅಧ್ಯಕ್ಷ), ಎಲ್. ಪಿ. ಪಿಂಟೊ (ಉಪಾಧ್ಯಕ್ಷ) ಕೆ. ಸುಬ್ರಾಯ ಪೈ (ಕೋಶಾಧಿಕಾರಿ), ಯು. ಎನ್. ಶ್ರೀನಿವಾಸ ಭಟ್ ಪ್ರಧಾನ ಕಾರ್ಯದರ್ಶಿ) ಮತ್ತು ಪಿ. ಎನ್. ಕಾರಂತ (ಉಪ ಕಾರ್ಯದರ್ಶಿ)ರು ಆರಿಸಲ್ಪಟ್ಟರು.

ನಿಧನ— ಇದೇ ತಾ 18ರಲ್ಲಿ ಮಂಗಳೂರಿನ ಸಾರಸ್ವತ ಸಮಾಜದ ಪ್ರಸಿದ್ಧ ಸಾಹುಕಾರ್ ಶ್ರೀ ಉಳ್ಳಾಲ ದೇವರಾಯರು ದೈವಾಧೀನರಾದರೆಂದು ತಿಳಿಸಲು ವಿಷಾಧಪಡುತ್ತದೆ.

ಕೆರಿಗೆದಾರರ ಸಂಘದ ಸಭೆಯು– ಶ್ರೀ ಟಿ. ವೆಂಕಟ್ರಮಣ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ, ನಗರದ ಹಲವು ರಸ್ತೆಗಳು ನಾದುರುಸ್ತಿಯಿಂದಾಗಿ ಬಸ್ಸುಗಳಿಗೂ ಜನರಿಗೂ ಚಲಾವಣೆಗೆ ಉಂಟಾಗಿರುವ ತೊಂದರೆಗಳನ್ನು ಎಮ್. ಎಲ್. ಎ. ಗಳಿಗೂ ಮಂತ್ರಿಗಳಿಗೂ ವಿವರಿಸಿ ಬರೆಯಬೇಕೆಂದು ಠರಾವಾಯಿತು.

ನಿವೃತ್ತ ಸೈನಿಕರ ಬೋರ್ಡಿನ ಸಭೆಯು– ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ, ಅವರ ಅಧ್ಯಕ್ಷತೆಯಲ್ಲಿ ಜರಗಿದಾಗ ಕೊಪರೇಟಿವ್ ಡಿಪ್ಯುಟಿ ರಿಜಿಸ್ಟ್ರಾರ್ ಶ್ರೀ ಕೇಶವ ಕಿಣಿಯರು ನಿವೃತ್ತ ಸೈನಿಕರ ಸಹಕಾರಿ ಮೋಟಾರ್ ಟ್ರಾನ್ಸ್‌ಪೋರ್ಟ್ ಸೊಸೈಟಿಯ ಪ್ರಗತಿಯ ವರದಿಯನ್ನೊಪ್ಪಿಸಿದರು. ನಿವೃತ್ತ ಸೈನಿಕರಿಗೆ ಭೂಮಿಯನ್ನು ಕೊಡುವ ಕಾರ್ಯವನ್ನು ಬೇಗನೆ ಮುಂದೊತ್ತಲು ಪ್ರತ್ಯೇಕ ರೆವಿನ್ಯೂ ಇನ್ಸ್‌ಪೆಕ್ಟರರನ್ನು ನೇಮಿಸಲಾಗುವುದೆಂದೂ, ನಿವೃತ್ತ ಸೈನಿಕರಿಗೆ ಭೂಮಿಯ ಸರ್ವೆ ಮತ್ತು ಸಬ್ ಡಿವಿಜನ್ ನಂಬರುಗಳು ಸುಲಭವಾಗಿ ದೊರಕುವಂತೆ ತಾವೂ ತನ್ನ ಸಿಬಂಧಿಯೂ ಸಹಕರಿಸುವುದಾಗಿ ಕಲೆಕ್ಟರರು ಆಶ್ವಾಸನೆ ಇತ್ತರು.

ಕೊಬ್ಬರಿ ಮತ್ತು ಅಡಿಕೆ ಬೆಲೆ— ಜೂನ್ ತಿಂಗಳ ತಾ 16ಕ್ಕೆ ಬೆಲೆಯು ಹೀಗಿತ್ತು: ಸುಪಾರಿ (ಅಡಿಕೆ) 112 ಪೌಂಡುಗಳ ಹಂಡ್ರೆಡ್ ವೈಟಿಗೆ. ಕೋಕಾ–ರೂ 65ರಿಂದ 100. ಚೋಲ್...ಸ್ಟಾಕ್ ಇಲ್ಲ. ಹೊಸ ಸುಪಾರಿ–ರೂ 120ರಿಂದ 140- ಬೊಂಬಾಯಿಯಿಂದ ಕೇಳಿಕೆಯು ಹೆಚ್ಚಾಗಿದ್ದುದರಿಂದ ಈ ವಾರ ಬೆಲೆ ಏರಿದೆ. ಕೊಬ್ಬರಿ–660 ಪೌಂಡುಗಳ ಖಂಡಿ 1ಕ್ಕೆ ರೂ 325ರಿಂದ 330–ಬೆಲೆಯು ಸ್ಥಿರವಾಗಿದೆ. 1000 ತೆಂಗಿನ ಕಾಯಿಗಳಿಗೆ ರೂ 150ರಿಂದ 181–ಬೆಲೆಯು ಸ್ಥಿರವಾಗಿದೆ.

ಬೇಂಕುಗಳು ಅಕ್ಕಿಯ ಮೇಲೆ ಸಾಲವೀಯಬಾರದಾಗಿ– ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರು ಎಲ್ಲಾ ಬೇಂಕುಗಳಿಗೂ ವಿನಂತಿಸಿಕೊಂಡಂತೆ ಜಿಲ್ಲೆಯ ಬೇಂಕುಗಳೆಲ್ಲ ಅವರ ಸೂಚನೆಯನ್ನು ಒಪ್ಪಿರುತ್ತವೆಂದು ತಿಳಿದುಬರುತ್ತದೆ. ವಿನಿಯಂತ್ರಣದಿಂದಾಗಿ ವ್ಯಾಪಾರಿಗಳು ಅಧಿಕ ಬೆಲೆಗೆ ಅಕ್ಕಿಯನ್ನು ಕೊಂಡು ಸಂಗ್ರಹಿಸಿಡದಂತೆ ಮಾಡುವುದೇ ಈ ಸೂಚನೆಯ ಉದ್ದೇಶ.

ಬಿ. ಎ. ಪರೀಕ್ಷೆಗೆ– ಸೈಂಟ್ ಎಲೋಸಿಯಸ್ ಕಾಲೇಜಿನಿಂದ ಕುಳಿತ 74 ಮಂದಿ ವಿದ್ಯಾರ್ಥಿಗಳಲ್ಲಿ 59 ಮಂದಿ ಪೂರ್ಣ ಪಾಸಾಗಿರುತ್ತಾರೆ.

ಮಾಜಿ ಸೈನಿಕರಿಗೆ ಭೂಮಿ – ಒದಗಿಸುವ ಯೋಜನೆಯಂತೆ ಭೂಮಿ ಪಡೆಯಲು ಇಚ್ಛಿಸುವ ಮಾಜಿ ಸೈನಿಕರು ಜುಲಾಯಿ ತಿಂಗಳ ದಿನಾಂಕ ಒಂದರೊಳಗೆ ತಮ್ಮ ಅರ್ಜಿಗಳನ್ನು ಒಪ್ಪಿಸಬೇಕು. ಅದರೊಡನೆ ಅವರು ಭೂಮಿ ಪಡೆಯಲು ತಕ್ಕವರೆಂದು ತೋರಿಸಲು ಬೇಕಾದ ಸರ್ಟಿಫಿಕೇಟುಗಳನ್ನು ಸೈನಿಕರ ಬೋರ್ಡ ಕಚೇರಿಯಲ್ಲಿ ಪಡೆದುಕೊಂಡು ಲಗ್ತೀಕರಿಸಬೇಕು. ಅದರೊಂದಿಗೆ ಅವರು ಸೈನ್ಯದಿಂದ ಬಿಡುಗಡೆಯಾದಾಗ ಪಡೆದ ಡಿಸ್ಚಾರ್ಜ ಸರ್ಟಿಫಿಕೇಟನ್ನು ಅಧಿಕಾರಿಗಳಿಗೊಪ್ಪಿಸಲು ಸಿದ್ಧರಿರಬೇಕು.

ಅಸಮಾರಿಷ್ಟರಗಳ ಸಮಸ್ಯೆ— ಸರಕಾರವು ಆಸವಾರಿಷ್ಟಗಳನ್ನು ಮಧ್ಯದ ಸ್ಥಾನದಲ್ಲಿರಿಸಿ ವೈದ್ಯರು ಅವುಗಳ ದಿನವಹಿ ಲೆಕ್ಕವಿಟ್ಟು, ಕಲೆಕ್ಟರರಿಗೆ ಮೂರು ತಿಂಗಳಿಗೊಮ್ಮೆ ಬೇರೆಬೇರೆ ಪಟ್ಟಿಗಳನ್ನು ಕಳುಹಿಸುತ್ತಿದ್ದು ಅವುಗಳ ಮೇಲೆ ಮದ್ಯಕ್ಕಿದ್ದಂತೆ ಸುಂಕ ಕಟ್ಟುತ್ತಿರಬೇಕೆಂದು ಮಾಡಿರುವ ಹೊಸ ನಿರ್ಬಂಧಗಳನ್ನು ವಿರೋಧಿಸಿ, ಆಸವಾರಿಷ್ಟಗಳು ನಿಜ ಔಷಧಗಳಾಗಿರುತ್ತವೆ ಎಂದೂ ಅವುಗಳ ಮೇಲೆ ಇಂತಹ ನಿರ್ಬಂಧಗಳನ್ನು ಹಾಕಬಾರದಾಗಿ ದ. ಕ. ನಿ. ಭಾರತೀಯ ವೈದ್ಯ ಸಂಘವು ಮುಖ್ಯಮಂತ್ರಿಗಳಿಗೂ, ಪ್ರೊಹಿಬಿಶನ್ ಮಂತ್ರಿಗಳಿಗೂ ತಂತಿ ಕಳುಹಿಸಬೇಕೆಂದೂ, ಈ ಕುರಿತು ಪಟ್ಟಿನ ವಿಚಾರದ ಬಗ್ಗೆ ಜುಲಾಯಿ ತಾ. 6ಕ್ಕೆ ಸಂಘದ ಮತ್ತು ಇತರ ವೈದ್ಯರ ಮಹಾಸಭೆಯೊಂದನ್ನು ಮಂಗಳೂರಲ್ಲಿ ಕರೆಯಬೇಕೆಂದೂ ತೀರ್ಮಾನಿಸಿರುತ್ತದೆ.

ಮಣಿಪಾಳ— ಹಾಯಿಸ್ಕೂಲಿನಲ್ಲಿ ಶಿವಳ್ಳಿ, ಬಡಗಬೆಟ್ಟು ಮತ್ತು ಹೆರ್ಗ ಗ್ರಾಮದ ಹಿತ್ತವರ ಸಭೆಯು ಶ್ರೀ ಪ್ರಸಾದ ಟಿ. ಜತ್ತನ್ನರವರ ಅಧ್ಯಕ್ಷತೆಯಲ್ಲಿ ತಾ ೧೬ರಲ್ಲಿ ನೆರೆದು ಉಡುಪಿ ಮಹಾತ್ಮಾ ಗಾಂಧೀ ಸ್ಮಾರಕ ಕೋಲೇಜಿಗೆ ಹುಡುಗಿಯರಿಗೆ ಪ್ರವೇಶ ಕೊಡದ ವಿಶ್ವ ವಿದ್ಯಾಲಯದ ಧೋರಣೆಯನ್ನು ಖಂಡಿಸುವ ಮತ್ತು ಆದಷ್ಟು ಬೇಗ ಹುಡುಗಿಯರಿಗೆ ಪ್ರವೇಶ ದೊರೆಯುವಂತೆ ವ್ಯವಸ್ಥೆ ಪಡಿಸಬೇಕೆಂದು ಕೇಳಿಕೊಳ್ಳುವ ಠರಾವು ಸರ್ವಾನುಮತದಿಂದ ಮಂಜೂರಾಯಿತು.

ಉಡುಪಿಯ ಮಹಾತ್ಮಾ ಗಾಂಧಿ ಸ್ಮಾರಕ ಕಲಾ ಶಾಲೆಗೆ ಕನ್ನಡ ಶಿಕ್ಷಕರಾಗಿ ನೇಮಕ ಹೊಂದಿದ ಮಣಿಪಾಲ ಪ್ರಾಥ ಶಾಲೆಯ ಕನ್ನಡ ಪಂಡಿತರಾದ ವಿದ್ವಾನ್ ಎಸ್. ಕೆ. ಶ್ರೀಪತಿ ಆಚಾರ್ಯ ರಾ. ಭಾ. ಪ್ರವೀಣರವರ ವಿದಾಯಕ ಸತ್ಕಾರ ಕೂಟವು ತಾ 19 ಸೇರಿಸ ಡಾ. ಟಿ. ಮಾಧವ ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ಯು. ಪುಂಡಲೀಕ ಶೆಣೈ ಶ್ರೀಗಳಾದ ಬಿ. ರಘುನಾಥ ಹೆಗ್ಡೆ, ಎಲ್. ಎಮ್. ಡೇಸ್, ಮತ್ತು ಟಿ. ವಿಠಲ ಪೈಯವರು ಶ್ರೀಯುತರ ಶ್ರೇಷ್ಠ ಗುಣವತ್ತೆ, ಕರ್ತವ್ಯ ದಕ್ಷತೆಗಳ ಪ್ರಶಂಸೆ ಮಾಡಿದರು. ಅಧ್ಯಕ್ಷರು ಶ್ರೀ ಆಚಾರ್ಯರ ಆದರ್ಶವನ್ನು ಇತರರು ಅನುಸರಿಸಬೇಕೆಂದು ಹೇಳಿ ಭಾಷಣ ಮಾಡಿದ ಮೇಲೆ ಆಚಾರ್ಯರು ಕಾಲೋಚಿತ ಉತ್ತರವಿತ್ತರು. ಲಘು ಉಪಹಾರವು ಇತ್ತು.

ಮೂಡಬಿದ್ರೆ— ಸ್ಥಳೀಯ ಮ. ಹಾತ್ಮಾಗಾಂಧಿ ಸೇವಾ ಸಮಾಜದ ವರ್ಧಂತ್ಯುತ್ಸವವು ಇದೇ ತಾ. 14ರಲ್ಲಿ ಮೂಡಬಿದ್ರೆ ಹರಿಜನ ವೆಲ್‌ಫೇರ್ ಶಾಲಾ ವಠಾರದಲ್ಲಿ ಉಡುಪಿ ಸ್ಪೆಶಲ್ ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ಕೆ. ಚೆನ್ನಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ ಶಾಮನವರು ಕಾಲೋಚಿತ ಮಾತುಗಳನ್ನಾಡಿದರು. ನಂತರ ಚಾಲ್ತಿ ವರುಷಕ್ಕೆ ಶ್ರೀಗಳಾದ ಎಮ್. ಶುಕ್ರ, ಎಮ್. ಬಿ. ದಾಸ್, ಎಮ್. ದೋಗು–ಇವರು ಅಧ್ಯಕ್ಷ, ಕಾರ್ಯದರ್ಶಿ, ಮತ್ತು ಖಜಾನ್ಜಿಯರಾಗಿ ಆರಿಸಲ್ಪಟ್ಟರಲ್ಲದೆ ಕಾರ್ಯಕಾರಿ ಮಂಡಳಿಗೆ ಹನ್ನೆರಡು ಮಂದಿ ಸದಸ್ಯರು ಚುನಾಯಿಸಲ್ಪಟ್ಟರು.

ಕನ್ನಡ ಸಾಹಿತ್ಯ ಪರಿಷತ್ತು— ಈಗ 13 ವರ್ಷಗಳಿಂದ ಕನ್ನಡ ಸಾಹಿತ್ಯ ಪರೀಕ್ಷೆಗಳನ್ನು ನಡೆಸುತ್ತಾ ಬಂದು ಕಳೆದ ವರುಷ 18 ಕೇಂದ್ರಗಳಲ್ಲಿ ಪರೀಕ್ಷೆಗಳನ್ನು ನಡೆಸಿತು. ಚಾಲ್ತಿ ವರುಷದಲ್ಲಿ ಸಾಹಿತ್ಯ ಪರೀಕ್ಷೆಗಳನ್ನು ಇನ್ನು ಹೆಚ್ಚು ಕೇಂದ್ರಗಳಲ್ಲಿ ನಡೆಸಿ ಹೆಚ್ಚು ಜನರಿಗೆ ಈ ಪರೀಕ್ಷೆಗಳ ಲಾಭ ದೊರಕುವಂತೆ ಮಾಡಬೇಕೆಂಬ ಆಶೆ ಪರಿಷತ್ತಿಗಿದೆ. ಕರ್ನಾಟಕದ ಎಲ್ಲಾ ಭಾಗದ ವಿದ್ವಾಂಸರು, ಅಧ್ಯಾಪಕರು ತಂತಮ್ಮ ಸ್ಥಳಗಳಲ್ಲಿ ಶಾಲೆಗಳಲ್ಲಿ ಸಾಹಿತ್ಯ ತರಗತಿಗಳನ್ನು ನಡೆಸಿ ಪರಿಷತ್ತಿಗೆ ನೆರವು ನೀಡಬೇಕಾಗಿ ಅಪೇಕ್ಷಿಸಲಾಗಿದೆ. 15 ಜನ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳುವ ಸ್ಥಳಗಳಿಗೆ ಕೇಂದ್ರಗಳನ್ನು ಕೊಡಲು ಸಾಧ್ಯವಾಗುತ್ತದೆ. ಪಠ್ಯಪುಸ್ತಕಗಳ ಹಾಗೂ ಇತರ ನಿಯಮಾವಳಿಗಳ ವಿವರವನ್ನು ಗೌ। ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-2 ಅವರಿಂದ ಪಡೆಯಬಹುದು.

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಸೇವಾಪ್ರಾಪ್ತಿ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರೀತ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ,

ದಿ. ಬ್ರಾಂಚ್ ಮೆನೇಜರ್;
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ಶಿಸ್ತು, ಶುಚಿ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding
ROYAL MAHAL,
UDIPI, S. Kanara.

ಚಿಕ್ಕ ಮಕ್ಕಳ ಅಕ್ಕರೆಯ
ಸಚಿತ್ರ ಪದ್ಯ ಪುಸ್ತಕ—
ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ಒಂದರಿಂದ ಐದನೆ ತರಗತಿ ವರೆಗಿನ ಮಕ್ಕಳಿಗೆ ಹಾಡಲಿಕ್ಕೂ, ಅಭಿನಯಿಸಲಿಕ್ಕೂ, ಅನುಕೂಲವಾದ ಪದ್ಯಗಳು! ಮಂಜೂರಾತಿ ಪಡೆದು, ಕೆಲವು ವರ್ಷಗಳಿಂದ ಜಿಲ್ಲೆಯ ಮತ್ತು ಹೊರಗಿನ ಶಾಲೆಗಳಲ್ಲೆಲ್ಲಾ ಪ್ರಚಾರದಲ್ಲಿದೆ.

ಬೆಲೆ: 0—6—0

ನವಭಾರತ ಬುಕ್ ಡಿಪೊ ಉಡುಪಿ

[೧ನೇ ಪುಟದಿಂದ ಮುಂದುವರಿದುದು]

ಅದಮ್ಯ ಉತ್ಸಾಹ

ವನ್ನು ಬಿಟ್ಟುಗೊಡದೆ, ಒಬ್ಬರಿಗಿಂತೊಬ್ಬರು ಮೇಲಾಗಿ ದುಡಿಯಬೇಕೆಂಬ ಆಶಾದೆಯಿಂದ ಮುಂಬರಿದರೆ ಅವರ ಪರಿಣಾಮ ಎಷ್ಟೊಂದು ಉತ್ತಮವಾಗಬಹುದು!

ಆದರ್ಶವನ್ನು ನಮ್ಮ ಕಣ್ಣಮುಂದೆ ಇಡುವಾಗ ಅಲ್ಲಿಯ ಜನರು ಕಡ್ಡಾಯ ಪದ್ಧತಿಗೊಳಗಾಗಿಯೆಂಬಂತೆ ಅನವರತ ದುಡಿಯುತ್ತಿರುವುದನ್ನು ಹೇಗೆ ಕಾಣದಿರಬಲ್ಲೆವು? ಚೀನಾವನ್ನು ಸಂದರ್ಶಿಸಿ ಬಂದ ಭಾರತೀಯ ಶಿಷ್ಟ ಮಂಡಳಿಯು ನವ ಚೀನದಲ್ಲಿ ಪುರುಷರೂ ಸ್ತ್ರೀಯರೂ ನೂರ್ಮಡಿ ಉತ್ಸಾಹದಿಂದ ದುಡಿಯುತ್ತಿರುವರೆಂದು ಹೇಳಿದೆ. ನಮ್ಮ ಜನರ ಒತ್ತಾಯಕ್ಕೆ ದುಡಿಯುವುದಲ್ಲ—**ಸ್ವಂತ ಅಭ್ಯುದಯವನ್ನು ಸಾಧಿಸಿಕೊಳ್ಳಲು ಪರಿಶ್ರಮ ನಿರಂತರಾಗುವುದು ಎಂಬುದನ್ನು ಮನವರಿಕೆ ಮಾಡಿಕೊಂಡರೆ ಕ್ಷೇಮ.**

ಕೆಲಸದಲ್ಲಿ ಆತ್ಮೀಯತೆಯನ್ನು ತೋರಿಸದಿದ್ದರೆ—ಆ ಕೆಲಸವು ಹೃದ್ಯವಾಗುವುದಿಲ್ಲ. ಅದನ್ನು ಕೊರತೆ ಇಲ್ಲದೆ ಪೂರೈಸಲು ಮನಸ್ಸು ಉದ್ಯುಕ್ತವಾಗುವುದಿಲ್ಲ. "ಇದು ನನ್ನದು ಕೆಲಸ—ಇದರಿಂದ ನನಗೆ ಒಳ್ಳೆಯದಾಗುವುದು" ಎಂಬ ಭಾವನೆ ಮೂಡದಿರುವವರೆಗೆ—ನಮ್ಮೆಲ್ಲ ಕಾರ್ಯಗಳೂ ವ್ಯರ್ಥ. ಧುರ್ಯೋಧನನು ಕ್ಷತ್ರಿ ಧರ್ಮಾನುಯಾಯಿಯಾಗಿದ್ದು ಎಲ್ಲ ಧರ್ಮಾಚಾರವನ್ನು ನಿಷ್ಠೆಯಿಂದ ಅನುಸರಿಸುತ್ತಿದ್ದನು. ಪೂಜೆ ಪುನಸ್ಕಾರ ಮತ್ತು ಜಪತಪಗಳಲ್ಲಿ ಅವನು ಎಂದೂ ತಪ್ಪಿರಲಿಲ್ಲ. ಆದರೆ ಭಗವಂತನ ಪ್ರೀತಿಗಾಗಿ ಅವನ್ನೆಲ್ಲ ಮಾಡದೆ, ಸ್ವಂತ ಅಹಂಕಾರ ಬುದ್ಧಿಯಿಂದ ಅವುಗಳಲ್ಲಿ ಪ್ರವೃತ್ತನಾದುದರಿಂದ, ಸಿಗಬೇಕಿದ್ದ ಸತ್ಫಲಗಳಿಗೆ ಎರವಾದನು. ನಮ್ಮ ಎಲ್ಲ ಕಾರ್ಯಗಳೂ ಉತ್ಕರ್ಷದ ಹಂಬಲದಿಂದ ಪ್ರೇರಿತವಾಗಬೇಕೇ ಹೊರತು—ಅವುಗಳಲ್ಲಿ ಉದಾಸೀನತೆಯಾಗಲೀ ಅಹಂಕಾರವಾಗಲೀ ಇರಬಾರದು. ಹೆಜ್ಜೆ ಹೆಜ್ಜೆಗೂ ಉತ್ಸಾಹವುಟದು ಬರಬೇಕು—ಉತ್ಸಾಹದ ಒರತೆ ಎಂದಿಗೂ ಬತ್ತದೆ—ಕಾರಂಜಿಯಂತೆ ಚಿಮ್ಮುತ್ತಿರಬೇಕು.

ವ್ಯವಹಾರಗಳು ಸಡಿಲುಗೊಂಡು, ಚಿಂತೆಯ ಭಾರವನ್ನು ಕಳೆದುಕೊಂಡು, ಸದಾ ಆನಂದಾನುಭವದಲ್ಲಿ ಲೀನವಾಗಬೇಕಾದರೆ—ಉತ್ಸಾಹ ಮತ್ತು ಉಲ್ಲಾಸಗಳ ಅಭ್ಯಾಸವು ನಮಗೆ ಅಗತ್ಯ. ರಾತಿಯ ಪೆಡಂಭೂತಕ್ಕೆ ಬಲಿಯಾಗದೆ—ಆಶಾಮಯ ಜ್ಯೋತಿಯನ್ನೆ ಲಕ್ಷ್ಯವಾಗಿಟ್ಟುಕೊಂಡು ದೃಢ ಹೆಜ್ಜೆಯನ್ನಿಟ್ಟು ಮುಂದುವರೆಯಲು—ಮನಸ್ಸಿನ ಉತ್ಸಾಹ ಮತ್ತು ದೇಹದ ಲವಲವಿಕೆ ಮುಖ್ಯವಾಗಿದೆ. ನಮ್ಮ ದೈನಂದಿನ ಕಾರ್ಯಗಳಲ್ಲಿ ಉತ್ಸಾಹವೂ ಉಲ್ಲಾಸವೂ ಸ್ಪಷ್ಟವಾಗಿ ಒಡಮೂಡಲಿ—ಅದರಿಂದ ನಮ್ಮ ಜೀವನ ಪಾವನವಾಲಿ ಎಂದು ಆಶಿಸೋಣ. —ಓಂ ತತ್ಸತ್

ಸ್ವೀಕಾರ ವಿಮರ್ಶೆ

ಮಹಾ ಯುದ್ಧ (ಬಹುಮಾನಪಡೆದ ಖಂಡ ಕಾವ್ಯ) ಬರೆದವರು: ಕೆ. ಎ. ಎನ್. ರಾವ್. ಪ್ರಕಾಶಕರು: ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ. ಪುಟ: ೯೦. ಬೆಲೆ: ರೂ. ೧-೮-೦

ದ್ವಿತೀಯ ಮಹಾ ಯುದ್ಧದ ಕುರಿತು ಬರೆದೊಂದು ಖಂಡ ಕಾವ್ಯ ಇದು. ಮನೋಹರ ಗ್ರಂಥಮಾಲೆಯವರು ಏರ್ಪಡಿಸಿದ ಕಾವ್ಯ ಸ್ಪರ್ಧೆಯಲ್ಲಿ ಇದಕ್ಕೆ ಬಹುಮಾನಕೊಟ್ಟು ಮನ್ನಿಸಿದರೆಂದು ತಿಳಿಯುತ್ತದೆ. ಆದರೆ ಕಾವ್ಯದ ಯಾವ ಅನುಕೂಲ್ಯ ಗುಣಕ್ಕೆ ಮೆಚ್ಚಿ ಈ ಬಹುಮಾನವನ್ನು ನೀಡಲಾಯಿತೋ—ಭಗವಂತನಿಗೇ ಗೊತ್ತು! ಮಹಾಯುದ್ಧದಂಥ ಒಂದು ಕ್ರೀಷ್ಮ ವಸ್ತುವನ್ನು ತೆಗೆದುಕೊಂಡು ಕಾವ್ಯ ರಚಿಸುವ ಪ್ರೌಢಿಮೆ ಸಾಹಸ, ಮುಟ್ಟಿನೊಳ್ಳ ಕವಿಯಲ್ಲಿ ಎಂದಿಗೂ ಇರಲಿಕ್ಕಿಲ್ಲ. ಶ್ರೀ ಕೆ. ಎ. ಎನ್. ರಾಯರ ಇತರ ಸಾಹಿತ್ಯ ಕೃತಿಗಳು ರಸಾಸ್ವಾದ ಸೆಗೆಯೋಗ್ಯವಿದ್ದರೂ ಸಾಹಿತ್ಯದ ಕಾವ್ಯ ಮಾರ್ಗದಲ್ಲಿ ಅವರ ಪಂತ್ರವು ಎಷ್ಟು ಮಾತ್ರವೂ ಸಾಲದು ಎಂದು ವಿಷಾದಿಸಬೇಕು. ಕೇವಲ ಯುದ್ಧ ಘಟನೆಗಳ ವರದಿಯನ್ನು ಒಡಾರಗಳೆಯ ಛಂದಸ್ಸಿನಲ್ಲಿ ಕೊಟ್ಟಮಾತ್ರಕ್ಕೆ ಅದನ್ನು ಕಾವ್ಯವೆಂದು ಕರೆಯುವುದಕ್ಕೆ ಮನಸ್ಸು ಒಡಂಬಡುವುದಿಲ್ಲ. ಕಾವ್ಯದ ಸಂವೇದನಾ ಶಕ್ತಿ, ಭಾವವೇಗ ಮತ್ತು ರಸಭರಿತ ಕಲಾವಂತಿಕೆ—ಯಾವವೂ—ಇದರಲ್ಲಿ ಎದೆತೋರಿಲ್ಲ. ಕಾವ್ಯದ ದೃಷ್ಟಿಯಿಂದ ಇದು ವ್ಯರ್ಥವಾಗಿರದೇಕು—ಆದರೆ ಈ ಖಂಡಕಾವ್ಯ ಶುಷ್ಕವಾಗಿದೆ.

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು (ದ. ಕ.)

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ, ಅಸ್ಲು-ವ-ಬಡ್ಡಿ ಯಾವುದನ್ನೂ ಈ ವರೇಗೆ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಜುಲೈ ತಿಂಗಳ ತಾರೀಖು ೪ನೇ ಶುಕ್ರವಾರ ಅಪರಾಹ್ನ ಗಂಟೆ 2ಕ್ಕೆ—ಯಾ—ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ, ಬೇಂಕಿನ ಆವಾರದಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು. ತಿಳಿದಿರಲಿ.

ಸಾಲದ ಚಂಚ್ಯಾ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ರೂ.	ಆ.
134/50	ವಿ. ವಂಜೇರಿ ರೆಬೆಲ್ಲೊ, ಸೆಬಾಸ್ಟಿನ್ ರೆಬೆಲ್ಲೊರ ಮಗ, ಬ್ಯಾಣದ ಹಿತ್ಲು, ಯಡ್ತರೆ ಗ್ರಾಮ, ಬೈಂದೂರು	31	4
367/50	ಶ್ರೀಮತಿ ಲಕ್ಷ್ಮಿ, ಸುಬ್ಬಣ್ಣ ಆಚಾರಿಯ ಹೆಂಡತಿ, ಬಂಕೇಶ್ವರ, ಬೈಂದೂರು	12	11
850/50	ಕೊಸೀ ನಾಗ್ಯೆ ಸೆಟ್ಟಿ, ವೆಂಕಪ್ಪ ಸೆಟ್ಟರ ಅಳಿಯ, ಕಾಲ್ತೋಡು ಗ್ರಾಮ, ಕಾಲ್ತೋಡು	105	13
894/50	ಗಣಪಯ್ಯ ಸೇರುಗಾರ, ನ್ಯಾಕನ ಕಟ್ಟೆ ಹನುಮಂತ ಸೇರುಗಾರರ ಮಗ, ಮಯ್ಯಾಡಿ, ಬೈಂದೂರು	18	1
393/48 9	— do —	43	0
1250/50	ವೆಂಕಟ್ರಮಣ ಸೇರುಗಾರ, ಪೇಟೆ ಸಣ್ಣಯ್ಯ ಸೇರುಗಾರರ ಮಗ, ಮಯ್ಯಾಡಿ, ಬೈಂದೂರು	114	8
228/51	ಜನಾಬ್ M. A. ಮೈದಿನ್ ಸಾಹೇಬ್, ಕಾದಿರ್ ಸಾಹೇಬರ ಮಗ, ಕೇರಿ, ಬೈಂದೂರು	15	1?
96/51	ಶ್ರೀಮತಿ ಕಾರ್ಮಿನ್ ಫೆರ್ನಾಂಡಿಸ್, ಡಿಯೋಗ್ ಸೋಜರ ಹೆಂಡ್ತಿ, ಸಂಕದ ಬಾಗಿಲು, ಯಡ್ತರೆ ಗ್ರಾಮ, ಬೈಂದೂರು.	23	5
140/51	ಗ. ದೇವಣ್ಣ ಸೇಟ್, ಅಚ್ಯುತ ಸೇಟರ ಮಗ, ಬೈಂದೂರು	39	5
194/51	ಯು. ರಘುನಾಥ ಸೇಟ್, ನಾಗಪ್ಪ ಸೇಟರ ಮಗ, ಉಪ್ಪುಂದ	177	0
197/51	ಶ್ರೀಮತಿ ಕಾರ್ಮಿನ್ ಬೆರೆಟ್ಟೊ, ಪಿಯಾ ನಜ್ರೆತರ ಹೆಂಡ್ತಿ, ಹಸಿಹಿತ್ಲು, ಪಡುವರಿ	20	5
310/51	ಸುಬ್ಬಯ್ಯ ಗಾಣಿಗ, ನಾಗಪ್ಪನ ಮಗ, ಶಿರೂರು	41	4
357/51	M. ವಾಸುದೇವ ಸೇರುಗಾರ, ಕೃಷ್ಣಪ್ಪ ಸೇರುಗಾರರ ಮಗ, ಹೋಟೇಲು ವ್ಯಾಪಾರಿ, ಬೈಂದೂರು	16	10
368/51	ಜನಾಬ್ S. ಅಬೂಬಕರ್ ಸಾಹೇಬ್, ಟೀಚರ್ ಬೋರ್ಡ್ ಹಿಂದುಸ್ಥಾನಿ ಶಾಲೆ, ಬೈಂದೂರು	38	8
417/51	ಕೃಷ್ಣಪ್ಪ ಸೆಟ್ಟಿ, ರಾಮ್ಯ ಸೆಟ್ಟರ ಅಳಿಯ, ಹಳೆಕಾಲ್ತೋಡು ಸೊನಗಾರ ಅಂಗಡಿಯಲ್ಲಿರುವವರು, ಕಾಲ್ತೋಡು ಗ್ರಾಮ, ಕಾಲ್ತೋಡು	94	4
700/51	ಸಂಜೀವ ರಾವ್, R. K. ಲೇಂಡ್‌ಲೋರ್ಡ್ ಕಂಬದ ಕೋಣೆ	218	5
755/51	ಪುತ್ತು ಶೇಷಯ್ಯ ಸೇರುಗಾರ, ನಾರಾಯಣ ಸೇರುಗಾರರ ಮಗ, ಕೋಟೆ ಬಾಗಿಲು, ಪಡುವರಿ	42	15
754/51	ದಾಗ ಉಪ್ಪಾರ, ಪುಟ್ಟನ [illegible] ಗ್ರಾಮ, ಬೈಂದೂರು	13	1
747/51	ದುರ್ಗ ಕಾಮ್ತಿ, ಮಾಸ್ತಿಯ ಮಗ, ಕರ್ಕಿಕಳಿ, ಉಪ್ಪುಂದ	8	12
746/51	ಕೆ. ಮಂಜಪ್ಪ ಸೇರುಗಾರ, ಸುಬ್ಬಯ್ಯ ಸೇರುಗಾರರ ಮಗ, ಕೋಟೆ ಬಾಗಿಲು, ಪಡುವರಿ	69	15
36?/51	ಮೌಲಾನಾ ಅಬ್ದುಲ್ ಖಾದಿರ್ ಸಾಹೇಬ್, ಇಬ್ರಾಹಿಮ್ ಸಾಹೇಬರ ಮಗ, ಶಿರೂರು	105	9
4?1/51	ಹೊನ್ನಯ್ಯನ ಮಲ್ಲಯ್ಯ ಸೇರುಗಾರ, ಅಣ್ಣಪ್ಪ ಸೇರುಗಾರರ ಮಗ ಕೋಟೆ ಬಾಗಿಲು, ಪಡುವರಿ	5	11
742/51	ಹೊನ್ನಯ್ಯನ ಮಂಜುನಾಥ ಸೇರುಗಾರ, ಅಣ್ಣಪ್ಪ ಸೇರುಗಾರರ ಮಗ, ಕೋಟೆ ಬಾಗಿಲ, ಪಡುವರಿ	14	2
425/51	D K. ಸುಬ್ರಾಯ ನ್ಯಾಕ, D K. ರಾಮ್ಯ ನ್ಯಾಕರ ಮಗ, ಕೋಟೆ ಬಾಗಿಲು, ಪಡುವರಿ	20	11
1072/51	— do —	45	3
446/51	ದೊಂಬೆ ರಾಮ್ಯ ಸೇರುಗಾರ, ಸುಬ್ಬಯ್ಯ ಸೇರುಗಾರರ ಮಗ, ಕೋಟೆ ಬಾಗಿಲು, ಪಡುವರಿ	8	14
452/51	ಮಂಜ ತಮ್ಮಣ್ಣನ ಮನೆ, ಸುಬ್ಬನ ಮಗ, ತಾರಾಪತಿ, ಪಡುವರಿ	19	13
489/51	ಸುಬ್ಬ, ರುಕ್ಕ್ಯ ಮನೆ, ಸುಕ್ರನ ಅಳಿಯ, ದೊಂಬೆ, ಪಡುವರಿ	16	7
564/51	ಹೋಬಳಿದಾರ, ಮಂಜುನಾಥ ಸೇರುಗಾರ, ನಾರಾಯಣ ಸೇರುಗಾರರ ಮಗ, ಕೋಟೆ ಬಾಗಿಲು, ಪಡುವರಿ	108	4
665/51	ವೆಂಕಟ್ರಮಣ ಸೇರುಗಾರ, ಬೇಲೆ ಮನೆ, ದಾಸಪ್ಪ ಸೇರುಗಾರರ ಮಗ, ಕೋಟೆ ಬಾಗಿಲು, ಪಡುವರಿ	6	1[illegible]
703/51	ಗೋವಿಂದ, ಚಣ್ಣಪ್ಪನ ಮಗ, ತಾರಾಪತಿ, ಪಡುವರಿ	53	1[illegible]
450/51	ಬೆಳ್ಳಿ ವೆಂಕಟ್ರಮಣ ಸೇರುಗಾರ, ಸುಬ್ರಾಯ ಸೇರುಗಾರರ ಮಗ, ಬಾಡ, ಬೈಂದೂರು	43	1[illegible]
502/51	ಶಾಬಾನ್ ಸಾಹೇಬ್, ಖಾದಿರ್ ಸಾಹೇಬರ ಮಗ, ನಾವುಂದ	97	1[illegible]
550/51	ನಾಗ, ಗೋವಿಂದನ ಅಳಿಯ, ಹೊಳ್ಳರ ಹಿತ್ಲು, ಉಪ್ಪುಂದ	24	[illegible]
551 51	ಶಂಕರ ಸೆಟ್ಟಿ, ಕುದ್ರುಕೋಡು [illegible] ಕೃಷ್ಣ [illegible] ಸೆಟ್ಟರ ಅಳಿಯ, ನಾವುಂದ ಗ್ರಾಮ, ನಾವುಂದ	215	[illegible]
641/51	ಶ್ರೀಮತಿ ಜುಲೆಟ್ಟಿನ್ ಫೆರ್ನಾಂಡಿಸ್, ಸಲಾಧರ ಫೆರ್ನಾಂಡಿಸರ ಹೆಂಡತಿ, ಬೀಯಾರ, ಬೈಂದೂರು	6	1[illegible]
648/51	ಶ್ರೀಮತಿ ಸುಬ್ಬಿ, ಕಳ ಹಿತ್ಲು ದುರ್ಗಿಯ, ಮಗಳು, ಉಪ್ಪುಂದ	30	[illegible]

ಬೈಂದೂರು;
19—6—1952

ಎಚ್. ರಾಜೀವ ಸೆಟ್ಟಿ,
ಏಜಂಟ್

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
S U 721/51

ವಾದಿಳು:-ಲಿಂಗಮ್ಮ ಸೆಡ್ತಿ ಪ್ರಾಜಿದೈಲ್ ಮಾದಯ್ಯ ಸೆಟ್ಟಿ ಮಗಳು ಕುಂದಾಪುರ ತಾಲ್ಲೂಕು ಕಿರ್ಗಂಜಿ ಗ್ರಾಮದ ಮೂಡಿ ಬೈಲ ಲ್ಲಿ ಇದ್ದವಳು.

ಪ್ರತಿವಾದಿ:-ನಾರಾಯಣ ಸೆಟ್ಟಿ, ನಾಲ್ಲೂರು ಕೆಳಮನೆ ನಾಗಮ್ಮ ಸೆಟ್ಟಿ ಅಳಿಯ ಕುಂದಾಪುರ ತಾಲ್ಲೂಕು ಕಿರ್ಗಂಜಿ ಗ್ರಾಮದ ಹುಂತಿನ ಬೆಟ್ಟು ಅಡಿಯಲ್ಲಿರುವವ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ

ಪ್ರತಿವಾದಿಯು ಆತನ ಕುಟುಂಬದ ಪ್ರಯೋಜನದ ಬಗ್ಗೆ ವಾದಿಳಿಂದ ಸಾಲವಾಗಿ ಪಡೆದ ಬಾಬ್ತು ವಾದಿಗೆ ಸಲ್ಲತಕ್ಕದ್ದಾದ ರುಪ್ಯಾ 97-8-0ಕ್ಕೆ ಪ್ರತಿವಾದಿಯು ತಾರೀಖು 16-10-48ರಲ್ಲಿ ಬರಕೊಟ್ಟಿರುವ ಸದ್ರಿ ದಿವಸದಿಂದು ನೋಟು ಪ್ರಕಾರ ಬರತಕ್ಕ ಹಣ ಬಡ್ಡಿಗಳ ಬಗ್ಗೆ ವಾದಿಯು ದಾಖಲ್ಲು ಮಾಡಿದ ಮೇಲಿನ ದಾವೆಯು ತಾರೀಖು 0 6-52ಕ್ಕೆ ಸದ್ರಿ ಕೋರ್ಟಿನಲ್ಲಿ ತನ್ನಿಗೆ ಬಿಟ್ಟದೆ ಆ ಕುರಿತು ಆಕ್ಷೇಪಗಳಿದ್ದರೆ, ಆ ತಾರೀಕಿಗೆ ಹಗಲು 11 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜರು ಆಗಿ ಜ ಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ನಿಮ್ಮ ಗೈರ್ಹಾಜರಿಯಿಂದ ದಾವೆಯನ್ನು ತೀರ್ಮಾನಿಸಲಾಗುತ್ತದೆಯೆಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ತಿಳಿಸಲಾಗುತ್ತದೆ.

S. S. Kolkebail
Advocate for plaintiff.

Coondapoor, 11-6-1952

ಪ್ರಯಾಣದ ಅಂತ್ಯ

ಕಳೆದ ವರ್ಷ ಜೂನ್ 16ನೇ ತಾರೀಕಿನ ಸಾಯಂಕಾಲ 7 ಗಂಟೆಗೆ ನಮ್ಮ ವಿಮಾನವು ರೋಮಿನ ವಾಯು ನಿಲ್ದಾಣವನ್ನು ಬಿಟ್ಟಿತು, ಬರುವಾಗ ಹೊರಗೆ ಕತ್ತಲೆಯಾಗಿರಲಿಲ್ಲ. ಚೆನ್ನಾದ ಬೆಳಕೇ ಇತ್ತು. ವಿಮಾನವು Constellation ಎಂಬ ತರಗತಿಯದು. ಬಹಳ ಎತ್ತರದಲ್ಲಿ ಮತ್ತು ಬಹಳ ವೇಗದಲ್ಲಿ ಹೋಗುವಂಥಾದ್ದು. ನಮ್ಮ ದೇಶದಲ್ಲಿ ತಿರುಗಾಡುವ ವಿಮಾನಗಳು ಸಾಮಾನ್ಯ ನೆಲದಿಂದ 10,000 ಅಡಿ ಎತ್ತರಕ್ಕೆ ಮತ್ತು ಗಂಟೆಗೆ ಅಂದಾಜು 150 ಮೈಲು ವೇಗದಲ್ಲಿ ಹಾರುವವು. ಆದರೆ ಇದು ಸಾಮಾನ್ಯ 20,000 ಅಡಿ ಎತ್ತರಕ್ಕೆ ಗಂಟೆಗೆ 300 ಮೈಲು ವೇಗದಲ್ಲೂ ಹಾರುತ್ತದೆ. ಅಷ್ಟು ಎತ್ತರ ಹೋಗುವಾಗ ಅಲ್ಲಿರುವ ವಾಯುವು ತೆಳ್ಳಗಾಗಿ ಮನುಷ್ಯರಿಗೆ ಶ್ವಾಸಬಿಡಲಿಕ್ಕೆ ಕಷ್ಟವಾಗುವ ಕಾರಣ ಅದರ ಕೋಣೆಯೊಳಗೆ ವಾಯುವನ್ನು ತುಂಬಿಸಿ ಸರಿಯಾಗಿ ಶ್ವಾಸ ಆಡುವಂತೆ ಮಾಡುತ್ತಾರೆ. ಅದು ಬೊಂಬಾಯಿಯ ಟಾಟಾ ಕಂಪೆನಿಯದು. ಅದರ ವೇಗದಂತೆ ಅದರ ಚಾರ್ಜು ಕೂಡಾ ಜಾಸ್ತಿ. ಸ್ಟೀಮರಲ್ಲಿ ಬೊಂಬಾಯಿಂದ ಲಂಡನಿಗೆ 17 ದಿವಸಗಳ ಪ್ರಯಾಣಕ್ಕೆ ಎಲ್ಲ ಊಟ ತಿಂಡಿ ಖರ್ಚು ಸೇರಿ ಬರೀ 50 ಪೌಂಡು ಅಂದರೆ ಸುಮಾರು 650 ರೂಪಾಯಿ ಆಗಿತ್ತು. ಇದಕ್ಕೆ ರೋಮಿನಿಂದ ಬೊಂಬಾಯಿಗೆ 3 ಪಾಲಷ್ಟು ಅಂದರೆ ರೂ. 1650.

ಅದರ ಒಳಗೆ ಸುಮಾರು 20 ಜನರಿಗೆ ಸೀಟುಗಳು—ಅವುಗಳು ಮೆತ್ತಗಾಗಿದ್ದು ಒರಗುವ ಬೆನ್ನನ್ನು ಹಿಂದೆ ಮುಂದೆ ಮಾಡಬಹುದು. ಆದಕಾರಣ ನಾವು ಪ್ರಯಾಣ ಮಾಡುವುದು ರಾತ್ರಿ ಕಾಲವಾದ್ದರಿಂದ ಸಂಪೂರ್ಣವಲ್ಲವಾದರೂ ಅರ್ಧ ಒರಗಿಕೊಂಡು ಮಲಗಿ ನಿದ್ರೆ ಮಾಡಬಹುದು. ಬರುವಾಗ ಅರ್ಧ ಸೀಟುಗಳಲ್ಲಿ ಮಾತ್ರ ಜನರಿದ್ದರು. ಬಾಕಿ ಖಾಲಿ.

ಹೊರಟ ನಂತರ ಬೇಗನೇ ಕತ್ತಲೆಯಾಯಿತು. ಇಟೇಲಿ ದೇಶದ ಬದಿಯಲ್ಲೇ ಸಮುದ್ರದ ಮೇಲೆ ಉತ್ತರದಿಂದ ದಕ್ಷಿಣ ಮುಖವಾಗಿ ವಿಮಾನವು ಚಲಿಸಿತು. ಅನಂತರ ಮಧ್ಯ ಸಮುದ್ರದ (Mediterranean Sea) ಮಧ್ಯದಲ್ಲಿ ಹಾಗೆಯೇ ದಕ್ಷಿಣಕ್ಕಿರುವ ಈಜಿಪ್ಟ್ ಮುಖವಾಗಿ ಬಂತು. ಸಮುದ್ರವು 20,000 ಅಡಿ ಕೆಳಗಿರುವ ಕಾರಣ ಕೆಳಗೆ ಒಂದು ಕೆರೆಯಂತೆ ಶಾಂತವಾಗಿ ಕಾಣುತಿತ್ತು. ಚಂದ್ರನ ಬೆಳಕಿತ್ತು. ಅಪರೂಪದಲ್ಲಿ ಒಂದೊಂದು ಹಡಗು ಸಮುದ್ರದಲ್ಲಿ ಸಣ್ಣದಾಗಿ ಕಾಣುತ್ತಿತ್ತು. ಹೀಗೆ ನಾವು ಬರುತ್ತಿರುವಾಗ ನಮ್ಮ ವಿಮಾನವು ಸಮುದ್ರದ ಮೇಲೆ 19,000 ಅಡಿ ಎತ್ತರವಾಗಿ ಗಂಟೆಗೆ 8 ಮೈಲು ವೇಗದಲ್ಲಿ ಬರುವುದಾಗಿ ಅದನ್ನು ನಡೆಸುವ Pilotನಿಂದ ನಮಗೆ ಒಂದು ಚೀಟಿನಲ್ಲಿ ಬರೆದು ತಿಳಿಯಿತು. ಅನಂತರ ಮಧ್ಯರಾತ್ರಿಗೆ ಸರಿಯಾಗಿ ಈ ಸಮುದ್ರ ಕರೆ ದಾಟಿ ಈಜಿಪ್ಟ್ ದೇಶದ ದಡವು ಕಂಡಿತು. ಸಮುದ್ರದ ತೆರೆಗಳು ದಡವನ್ನು ಬಡಿಯುತ್ತಿದ್ದವು. ನಂತರ ಸಾಧಾರಣ ನ್ಯಾಲ್ ನದಿಯ ಮೇಲೆ ವಿಮಾನವು ಚಲಿಸಿ ವಿದ್ಯುತ್ ಬೆಳಕಿರುವ ಕೈರೋ (Cairo) ಪಟ್ಟ-

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಕ್ಕೆ ಋತುಸ್ರಾವವಾಗುವು. ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. [ಆರ್ಡಿನರಿ ರೂ. 3-] ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8-] ವಿ. ಪಿ. ಖರ್ಚು ಪ್ರತ್ಯೇಕ]

MRS. P. DEVEE, P. DR. (N. J.)
Tollygunge CALCUTTA.
ಪ್ರತಿನಿಧಿ ಕರ್ನಾಟಕ ಮಂಗಳೂರು.

ಪ್ರವಾಸಿಯ ಪತ್ರಗಳು ೩೩

ಣದ ಮೇಲೆ ಬಂದು ರಾತ್ರಿ 12 ಗಂಟೆಯ ಮೇಲೆ 40 ಮಿನಿಟಿಗೆ ಸರಿಯಾಗಿ ಅಲ್ಲಿಯ ವಾಯು ನಿಲ್ದಾಣದಲ್ಲಿ ನಿಂತು ನಾವು ಇಳಿದೆವು. ಈ ವಿಮಾನ ನಿಲ್ದಾಣವು ಬಹಳ ದೊಡ್ಡದು. ಎಲ್ಲಾ ಕಡೆ ಬೆಳಕು ಹಾಕಿತ್ತು. 8-10 ದೊಡ್ಡ ದೊಡ್ಡ ವಿಮಾನಗಳು ಅಲ್ಲಲ್ಲಿ ನಿಂತಿದ್ದವು. ಒಂದು ವಿಮಾನ ಬರುವುದು ಇನ್ನೊಂದು ಹೊರಡುವುದು. ಹೀಗೆ ಲೋಕದ ಅನೇಕ ಕಡೆಗಳಿಂದ ಇಲ್ಲಿ ರಾತ್ರಿ ವಿಮಾನಗಳು ಬಂದು ಪ್ರಯಾಣಿಕರನ್ನು ಮತ್ತು ಪೆಟ್ರೋಲ್ ತೆಗೆದುಕೊಂಡು ಹೋಗುವ ಇದು ಬಹಳ ದೊಡ್ಡ ನಿಲ್ದಾಣ.

ಇಳಿದ ನಮ್ಮನ್ನು ಕಂಪೆನಿಯ ಒಬ್ಬ ಸಂಚಾಲಕನು 1 ಫರ್ಲಾಂಗ್ ದೂರವಿರುವ ಒಂದು ಹೋಟೇಲಿಗೆ ಕರೆದುಕೊಂಡು ಹೋಗಿ ಅಲ್ಲಿ ನಾವು ಬೇಕಾದ ಫಲಾಹಾರ ಮಾಡಿ ಸುಮಾರು 1 ಗಂಟೆ ಸಮಯ ಕಳೆಯಿತು. ಆ ಹೋಟೇಲು ಮಾಲಿಕರು, ಕೆಲಸಗಾರರೆಲ್ಲ ಈಜಿಪ್ಟ್ ದೇಶದವರೇ. ಪುನಹಾ ನಮ್ಮ ವಿಮಾನಕ್ಕೆ ಬಂದು ಸರಿ 2 ಗಂಟೆಗೆ ವಿಮಾನವು ಹೊರಟಿತು. ಮುಂಚಿನ ದಿನ ಅಲ್ಲಿಗೆ ಊರು ನೋಡಲಿಕ್ಕೆ ಬಂದಿದ್ದ 2, 3 ಪ್ರಯಾಣಿಕರು ಅಲ್ಲಿ ಹೊಸತಾಗಿ ಹತ್ತಿದರು.

ಅಲ್ಲಿಂದ ಹೊರಟು ವಿಮಾನವು ಪೂರ್ವ ದಕ್ಷಿಣಕ್ಕೆ ಅರೇಬಿಯಾ ದೇಶದ ಮೇಲೆ ಬಂತು. ಹೀಗೆ ಬರುವಾಗ ನನ್ನ ಗಡಿಯಾರದಲ್ಲಿ 5 ಗಂಟೆಯಾಗಿದ್ದರೂ ಅಲ್ಲಿ ಸೂರ್ಯನ ಬೆಳಕು ಬಿದ್ದು ಭೂಮಿಯು ಸರಿಯಾಗಿ ಕಾಣುತ್ತಿತ್ತು. ಇದಕ್ಕೆ ಕಾರಣವೇನೆಂದರೆ ನನ್ನ ಗಡಿಯಾರದ ಸಮಯವು ರೋಮಿನ ಸಮಯ ಅದು ನಮ್ಮ ದೇಶದ ಸಮಯಕ್ಕಿಂತ $4\frac{1}{2}$ ಗಂಟೆ ಹಿಂದೆ. ಅದಕ್ಕೆ ಮಧ್ಯ ಯುರೋಪಿನ ಸಮಯ (Central European Time) ಎಂತಲೂ ಹೇಳುತ್ತಾರೆ. ಹಾಗೆಯೇ ಲಂಡನಿನ ಸಮಯವು ಗ್ರೀನ್ ವಿಚ್‌ನ (G. M. T.) ಸಮಯ. ಅದು ಇನ್ನೂ 1 ಗಂಟೆ ಹಿಂದೆ. ನಾವು ಪೂರ್ವ ಪೂರ್ವಕ್ಕೆ ಬಂದ ಹಾಗೆ ಸಮಯವು ಹಿಂದೆ ಬೀಳುತ್ತದೆ. ಹಾಗೆ ನಾವು ಅರೇಬಿಯಾ ಮೇಲಕ್ಕೆ ಇರುವಾಗ ನನ್ನ ಗಡಿಯಾರದಲ್ಲಿ 5 ಗಂಟೆಯಾದರೂ ಆ ಊರಲ್ಲಿ ಸುಮಾರು 7 ಗಂಟೆಯಾಗಿರಬಹುದು.

ನಾನು ನೋಡಿದ ಯಾವ ದೇಶವೂ ಈ ಅರಬಿ ದೇಶದಷ್ಟು ದಾರಿದ್ರ್ಯ ಭೂಮಿಯಲ್ಲ. ಎಲ್ಲಿ ನೋಡಿದರೂ ಹೊಗೆಯ ಮರಳು ಭೂಮಿ (Desert). ನದಿಗಳು ಇಲ್ಲ. ಮರಗಳು ಇಲ್ಲ. ಊರುಗಳು ಕೂಡ ಇಲ್ಲ. ಎಲ್ಲೆಲ್ಲೂ ಹೊಗೆ ಭೂಮಿಯೇ ಕಾಣುತ್ತಿತ್ತು. ಹಾಗೆಯೇ ಬಂದು ನಮ್ಮ ವಿಮಾನವು ಆ ದೇಶದ ಪೂರ್ವ ದಕ್ಷಿಣಕ್ಕಿರುವ ಪರ್ಶಿಯಾ ಕೊಲ್ಲಿಯ [Persan Gulf] ಕೆಳಗಿರುವ ಮಸ್ಕತ್ [Muscat] ಎಂಬ ಊರಿನ ಮೇಲೆ ಸರಿ $7\frac{1}{2}$ ಗಂಟೆಗೆ ಬಂತು. ಅನಂತರ ಪರ್ಶಿಯಾ ದೇಶದ ಮೇಲೆ ಪೂರ್ವ ದಕ್ಷಿಣಕ್ಕೆ ಬರುತ್ತದೆ. ಅಲ್ಲಿ ಕೂಡಾ ಸ್ವಲ್ಪ ದೂರ ಹಾಗೆ ಮರಳು ಭೂಮಿ. ನಂತರ ಅನೇಕ ಗುಡ್ಡಗಳಿರುವ ಪ್ರದೇಶ. ಅಪರೂಪಕ್ಕೆ ಆ ಗುಡ್ಡಗಳ ಮಧ್ಯೆ ಒಂದೊಂದು ಸಣ್ಣ ಹಳ್ಳಿ—ಇಲ್ಲಿಯೂ ನೀರು ನದಿಗಳು ಮರಗಳು ಯಾವುದೂ ಕಾಣುವುದಿಲ್ಲ.

ಹಾಗೆ ಈ ಗುಡ್ಡ ಪ್ರದೇಶವನ್ನು ದಾಟಿ ನಮ್ಮ ದೇಶದ ಪಶ್ಚಿಮಕ್ಕಿರುವ ಅರಬೀ ಸಮುದ್ರದ ಮೇಲೆ ಪೂರ್ವ ದಕ್ಷಿಣ ಮುಖವಾಗಿ ಬಂದೆವು. ಆ ದಿನ ಜೂನ್ 17ನೇ ತಾರೀಕು ನಮ್ಮ ದೇಶದಲ್ಲಿ ಮಳೆಗಾಲ ಸುರು ಆಗಿತ್ತು. ಆದರೂ ಸಮುದ್ರವು ಶಾಂತವಾಗಿತ್ತು. ಅಲ್ಲಲ್ಲಿ ಕೆಳಗೆ ಮೋಡಗಳ ಹಿಂಡು ನಮ್ಮ ಎದುರಾಗಿ ಹಾರುತ್ತಿದ್ದವು. ನಾವು ಬರುವಷ್ಟು ಎತ್ತರದಲ್ಲಿ ಮೋಡಗಳಿರಲಿಲ್ಲ. ಅವುಗಳು ಸುಮಾರು ಹತ್ತು ಸಾವಿರ ಅಡಿಗಳಿಗಿಂತ ಕೆಳಗೆ. ಅನಂತರ ನಮ್ಮ ದೇಶವು ಸಮೀಪಿಸಿದಂತೆ ವಿಮಾನವು ಕೆಳಕ್ಕೆ ಬಂತು. ನನ್ನ ಗಡಿಯಾರದಲ್ಲಿ ಸರಿ 11 ಗಂಟೆಗೆ ಬೊಂಬಾಯಿಯ ಉತ್ತರಕ್ಕಿರುವ ಸಾಂಟಾಕ್ರೂಸ್ ವಿಮಾನ ನಿಲ್ದಾಣಕ್ಕೆ ಮುಟ್ಟಿತು. ಆಗ ನಮ್ಮ ದೇಶದ ಸಮಯ ಸರಿ ಅಪರಾಹ್ನ $3\frac{1}{2}$ ಗಂಟೆ. ಕೈರೋ ಬಿಟ್ಟ ಮೇಲೆ ಗಂಟೆಗೆ 300 ಮೈಲಂತೆ 9 ಗಂಟೆಯಲ್ಲಿ ಸುಮಾರು 2700 ಮೈಲು ನಾವು ಬಂದೆವು. ರೋಮಿನಿಂದ ಒಟ್ಟಾರೆ ಅಂದಾಜು 4000 ಮೈಲು

ಅನಂತರ ಸುಮಾರು 1 ಗಂಟೆ ಅಲ್ಲಿ ಕಸ್ಟಮ್ ಆಫೀಸಿನಲ್ಲಿ ನಮ್ಮ ಸಾಮಾನು ಚಕ್ತಿ ನಡೆಯಿತು. ಈ ಮುಂಚೆ ನಾನು ಇಂಗ್ಲೆಂಡು ಮುಟ್ಟಿದಾಗ ಜನರಲ್ಲಿ ಯಾವ ರೀತಿ ನಂಬಿಕೆಯಲ್ಲಿ ಅಲ್ಲಿಯ ಕಸ್ಟಮ್ ನೌಕರರು ವರ್ತಿಸುತ್ತಿದ್ದರೆಂತ ಬರೆದಿದ್ದೆ. ಇಲ್ಲಿ ನಾವು ಇಳಿಯುವ ಮುಂಚೆಯೇ ಬರಹ ಮೂಲಕ ನಾವು ಎಲ್ಲೆಲ್ಲಿ ಯಾವ ಯಾವ ಮಾಲು ಎಷ್ಟೆಷ್ಟು ಕ್ರಯಕ್ಕೆ ತಕ್ಕೊಂಡದ್ದೆಂತ ದೃಢ ಪತ್ರಿಕೆಯನ್ನು ಬರೆಯಿಸಿ ದಸ್ಕತು ಮಾಡಿಕೊಡಬೇಕು. ನಾನು ಸಂಚರಿಸಲಿಕ್ಕೆ ಹೊರಟಾಗ ಇಲ್ಲಿ ಮದ್ರಾಸಿನ ತೋಮಸ್ ಕೂಕ್ ಕಂಪೆನಿಯವರು ಕಸ್ಟಮ್ ಕಾನೂನಿಗೆ ಅನುಸಾರವಾಗಿ ತೆರಿಗೆಯಿಲ್ಲದೆ ಏನೇನು ತರಬಹುದೆಂದು ಬರಹ ಮೂಲಕ ಅನುಭವಕೊಟ್ಟಿದ್ದರು. ಅದರಲ್ಲಿ ನಮ್ಮ ಕುಟುಂಬದವರಿಗೆ ಚಿಲ್ಲರೆ ಕೆಲವು ಸಾಮಾನುಗಳನ್ನು ಇನಾಮಾಗಿ ತರಬಹುದೆಂತಲೂ ಅವುಗಳಿಗೆ ಸುಂಕ ಇಲ್ಲವೆಂತಲೂ ತಿಳಿಸಿದ್ದರು. ಹಾಗೆಯೇ ನಾನು ಕೆಲವು ಸಾಮಾನುಗಳನ್ನು ತಂದಿದ್ದೆ. ಆದರೆ ಆ ಅನುಭವಕ್ಕೆ ವಿರೋಧವಾಗಿ ಅವುಗಳ ಮೇಲೆ ಸುಮಾರು 250 ರೂಪಾಯಿ ಅಂದಾಜು ಸುಂಕ ಕೊಡಬೇಕಾಯಿತು. ಅವರ ಹತ್ತಿರ ವಿವಾದ ಬೆಳೆಸಿದರೆ ಅಲ್ಲಿಯೇ 2 ದಿನ ನಿಲ್ಲಬೇಕಾದೀತು. ಅನಂತರ ಕೆಲವು ಸ್ಟೀಮರಲ್ಲಿ ಬಂದ ಸುಂಕ ಹಾಕಬಾರದ ಸಾಮಾನುಗಳ ಮೇಲೆ ಸುಂಕ ಹಾಕಿ ಈಗ 8 ತಿಂಗಳಾದರೂ ಇನ್ನೂ ತೀರ್ಮಾನವಾಗಲಿಲ್ಲ. ಆದರೆ ಆ ಬಗ್ಗೆ ಕಾಗದ ಪತ್ರವು ನಡೆಯುತ್ತದೆ. ಅದು ನಮ್ಮ ದೇಶದ ಪಾಡು. ಯಾವ ಕೆಲಸಕ್ಕೂ ನಿರ್ಧಿಷ್ಟ ಇಲ್ಲ ಸುಸೂತ್ರವೂ ಇಲ್ಲ.

ವಿಚಾರವಾಣಿ] [ಕೆ. ಆರ್. ಕಾರಂತ.

ಮದುವೆಯಾದ ಸ್ತ್ರೀಪುರುಷರ ಸಲುವಾಗಿ

ಬರೆಯಲ್ಪಟ್ಟ ಪುಸ್ತಕ

ಮಿತಸಂತತಿ

ಹುಟ್ಟುವ ಮಕ್ಕಳು ಆರೋಗ್ಯ ಸಂಪತ್ತು ಸೌಭಾಗ್ಯ ಮೊದಲಾದುವನ್ನು ಸಾಕಷ್ಟು ಪಡೆಯುವ ಹಾಗೆ ಹೆತ್ತವರು ಸಾಧಿಸಲಾಗುವಂತೆ ಅತ್ಯನುಕೂಲವಾದ ಪರಿಸ್ಥಿತಿ ಯಾವುದೋ ಅದರಂತೆ ದಂಪತಿಗಳು ಮಕ್ಕಳನ್ನು ಹೆರುವ ಹಾಗೆ ಅವಶ್ಯವಾದ ತತ್ವಗಳನ್ನು ಬೋಧಿಸುವ ನವೀನ ಪುಸ್ತಕ ಬೆಲೆ 0-6-0

ಗುಪ್ತರೋಗ ನಿವಾರಣೆ

ಜನನೇಂದ್ರಿಯಗಳಿಗೆ ಸಂಬಂಧಿಸಿರುವ ರೋಗಗಳು ಹಳ್ಳಿಪಳ್ಳಿಗಳಲ್ಲಿ ಪಸರಿಸುತ್ತಲೇ ಇವೆ. ಇಂತಹ ರೋಗಗಳಿಂದ ನರಳುವ ಸ್ತ್ರೀಪುರುಷರ ಆರೋಗ್ಯ ರಕ್ಷಣೆಗಾಗಿ ಪ್ರಪಂಚದಲ್ಲಿನ ವಿದ್ವಾಂಸ ವೈದ್ಯರುಗಳ ಅಮೂಲ್ಯ ಸಿದ್ಧಾನುಭವ ಸೂಚಕ ಪುಸ್ತಕ ಬೆಲೆ 0-8-0

ಪ್ರತಿಗಳಿಗೂ, ಪುಸ್ತಕಗಳ ಯಾದಿಗೂ, ಬರೆಯಿರಿ.

ನವಭಾರತ ಪುಸ್ತಕ ಭಂಡಾರ ಉಡುಪಿ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ ಎಂ.

ಕೊಡಿಯಾಲಬೈಲ ನೋಡ್ಸು, (ಮಂಗಳೂರು)

ಸ್ವಾಕಿಸ್ಟರು:—ಡಾ: ಐ. ಕೆ ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ನೊಡಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

ವಾರದ ಭವಿಷ್ಯ

ತಾರೀಕು 26-6-52 ರಿಂದ — ತಾರೀಕು 2-7-5[illegible] ವರೆಗೆ

ಮೇಷ—ಶದ್ಯದ ದಿನಗಳು ನಿಮಗೆ ತುಂಬಾ ಅನುಕೂಲ ಪರಿಸ್ಥಿತಿಯುಳ್ಳವುಗಳಾಗಿವೆ. ನಿಮ್ಮ ಪ್ರತಿಯೊಂದು ಉದ್ಯಮದಲ್ಲೂ ಯಶಸ್ಸೂ ಫಲಪ್ರಾಪ್ತಿಯೂ ಉತ್ತಮ ರೀತಿಯಲ್ಲಿ ಲಭಿಸುವದು. ಅಪರೆ ರಾಜಕೀಯದಲ್ಲಿ ನಕ್ಷತ್ರ ಅಷ್ಟೊಂದು ಉತ್ತಮವಿರದು. ಗೃಹಕೃತ್ಯದಲ್ಲಿ ಗಂಡ ಹೆಂಡಿರೊಳು ಜಗಳವಾದೀತು. ಬಂಧು ಮಿತ್ರರ ಸಹಕಾರದಿಂದ ಕೂಡಿದ ನಿಮಗೆ ವಾರಾಂತ್ಯದ 4 ದಿನಗಳು ಸುಖದಾಯಕಗಳಾಗಿವೆ.

ವೃಷಭ—ಈ ವಾರವು ನಿಮ್ಮ ಭಾಗಕ್ಕೆ ಹಿಂದಿನಿಂತ ಸ್ವಲ್ಪ ಅನಿಷ್ಟದಾಯಿಯಾಗಿ ಕಂಡುಬರುತ್ತದೆ. ನಿಮ್ಮ ಆರ್ಥಿಕ ಪರಿಸ್ಥಿತಿಯು ಕೆಡುವದಲ್ಲದೆ. ದೇಹದಲ್ಲೂ ಆಲಸ್ಯ ಕಂಡುಬಂದೀತು. ಮನಸ್ಸಿಗೆ ನೆಮ್ಮದಿಯಿರದು. ಗೃಹ ತಾಪತ್ರಯಗಳು ಕೆಲಮಟ್ಟಿಗೆ ಕಡಿಮೆಯಾಗುವವು. ವ್ಯಾಪಾರ ವ್ಯವಹಾರಗಳಲ್ಲೂ ಸಾಹಸ ಕಾರ್ಯಗಳಲ್ಲೂ ನಿಮ್ಮ ಬಯಕೆಯು ನೆರವೇರಲಿದೆ. ವಾರದ ಆದ್ಯಂತ ದಿನಗಳಲ್ಲಿ ಕಾರ್ಯ ಜಯ ಧನಲಾಭ ಸುಖಸೌಖ್ಯದಿಗಳಿವೆ.

ಮಿಥುನ—ಶುಭ ಗ್ರಹರ ಅನುಗ್ರಹಕ್ಕೆ ಪಾತ್ರರಾಗಿರುವಿರಿ ನೀವೀವಾರದಲ್ಲಿ ಆದಕಾರಣ ನಿಮ್ಮ ತನುಮನಗಳಿಗೆ ಈಪತ್ತು ಅಶಾಂತಿಗಳು ಕಾಣಸಲಾರವು ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆವಿರಿ. ನಿಶ್ಚಿಂತೆಯಿಂದ ಕಾಲ ಕಳೆವುದು. ಆದರೆ ರಾಜಕೀಯ ಕ್ಷೇತ್ರದಲ್ಲಿ ಪ್ರಕೃತ ನಿಮಗೆ ಕಾಲವು ಪ್ರತಿಕೂಲ ವಿದ್ದುದರಿಂದ ಅನಿಷ್ಟಗಳೊದಗಬಹುದು. ತಾ. 27-28 ಈ ದಿನಗಳು ಶುಭಪ್ರದಗಳಿವೆ.

ಕರ್ಕಟಿ—ಶುಕರ್ಮಗಳೆಡೆಗೆ ನಿಮ್ಮ ಮನವು ಓಡುತ್ತಿರುವುದು. ಜನತೆಯಲ್ಲಿ ನಿಮ್ಮ [illegible] ಕಲಹನಿಂದಾದಿಗಳು ಹೆಚ್ಚುವವು. ದುರ್ಜನರ ಸಹವಾಸದಿಂದ ವಿಶೇಷತಃ ಧನನಾಶ ಮಾನಹಾನಿಗಳೊದಗುವ ಸಂಭವವಿದೆ. ಕಷ್ಟ ಸಹಿಷ್ಣುಗಳಾದ ನಿಮಗೆ ದಿನಮಾನದ [illegible] ಸಲುವಾಗಿ ಅನ್ಯರನ್ನಾಶ್ರಯಿಸಬೇಕಾಗಿ ಬಲೋಂದು ತಾ 26-29 30-1 ಈ ದಿನಗಳು ಶುಭೇಷ್ಟ ಪ್ರದಗಳಿವೆ.

ಸಿಂಹ—ನಿಮಗಾವ ತೊಂದರೆ ಕಂದು ಕೊರತೆಗಳು ಕಾಣಿಸದೆ ಹೋದರೂ ಈ ವಾರದಲ್ಲಿ ಸ್ವಲ್ಪ ಖರ್ಚು ಮಿತಿಯನ್ನು ಮೀರಿ ಸಂಭವಿಸಲಿದೆ. ಕಳೆದುಹೋದ ವಸ್ತು ವಡವೆಗಳೂ ಧನಾದಿಗಳೂ ಪುನಃ ನಿಮ್ಮ ಕೈ ಸೇರುವ ಸಂಭವವಿದೆ. ಎಂದೂ ನಿರುದ್ಯೋಗದಿಂದ ಕಾಲ ಕಳೆಯಬೇಕಾಗಿ ಬರದು. ವಿದ್ಯಾಭಾಗದಲ್ಲಿ ಪ್ರಗತಿಯೂ ಸಮಾಜದಲ್ಲಿ ಸ್ಥಾನ ಮಾನಗಳೂ ಲಭಿಸುವವು. ತಾ 27-28-2 ಈ ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಕಾರ್ಯ ರೂಪಕ್ಕೆ ಬರಲಿವೆ.

ಕನ್ಯಾ—ದೈವಾನು ಗೃಹವು ನಿಮಗೆ ಕೊಂಚ ಕಡಿಮೆಯಾಗಿರುವದಾದರೂ ಕರ್ಮರತರಾದ ನಿಮಗೆ ಪ್ರಯತ್ನಕ್ಕೆ ತಕ್ಕುದಾದ ಫಲ ಲಭಿಸಲಿದೆ ಆದರೇನು ನೀವೆಷ್ಟೇ ದುಡಿದರೂ ದಿನಾಂತ್ಯದಲ್ಲಿ ಬರಿಗೈಯಿಂದ ಮನೆಗೆ ತೆರಳಬೇಕಾದ ಪ್ರಸಂಗ ಬರುವದು. ಎಷ್ಟೇ ಮಿತಭಾಷಿಗಳಾಗಿದ್ದರೂ ಕೂಡ ಜನತೆಯೊಡನೆ ಕಲಹವಾದೀತು. ಅಪ್ತೇಷ್ಟರ ವಿರಹ ವೇದನೆಗೆ ಸಿಲುಕುವಿರಿ. ತಾ. 26-29-30 1 ಈ ದಿನಗಳು ಉಳಿದ ದಿನಗಳಿಗಿಂತ ಉತ್ತಮವೆನಿಸುವವು

ತುಲಾ—ದಿನದಿಂದ ದಿನಕ್ಕೆ ನಿಮ್ಮ ಪರಿಸ್ಥಿತಿಯು ಸುಧಾರಿಸುತ್ತಾ ಬರುತ್ತಿದೆ. ನೌಕರಿ ವ್ಯಾಪಾರಾದಿ ಉದ್ಯಮಗಳಲ್ಲಿ ಪ್ರಗತಿಯನ್ನಿದುವಿರಿ ಸನ್ಮಿತ್ರರ ಮತ್ತು ಬಂಧು ವರ್ಗದವರ ಸಹಕಾರದಿಂದಾಗಿ ನಿಮ್ಮ ಸಂಕಲ್ಪಗಳೆಲ್ಲವೂ ನೆರವೇರುವವು. ರಾಜಕೀಯದಲ್ಲಿ ಕೊಂಚ ಅಕ್ಕ [illegible] ಅತಂಕಗಳು ಸಂಭವಿಸಲಿದೆ. ಆಕಸ್ಮಿಕ ಪರ್ಯಟನಗಳೊದಗಬಹುದು. ತಾ 26-27-28-2 ಈ ದಿನಗಳು ಶುಭಲಾಭ ಪ್ರದಗಳಿವೆ.

ವೃಶ್ಚಿಕ—ನಿಮ್ಮ ಧೈರ್ಯ ಸಾಹಸಗಳು ಶ್ಲಾಘನೀಯ ವಿರುದ್ಧವಾದರೂ ಪ್ರಬಲರಾದ ವಿರೋಧಿಗಳಿಂದಾಗಿ ನಿಮ್ಮ ಯಾವತ್ತು ಪ್ರಯತ್ನಗಳು ವಿಫಲಗಳಾಗುವವು. ಆರ್ಥಿಕ ತಗಾದೆಯಿಂದ ಪೇಚಾಟಕ್ಕೆ ಸಿಲುಕುವಿರಿ. ದೇಹಾಲಸ್ಯದಿಂದಲೂ ಪೀಡಿತರಾಗುವಿರಿ ಗೃಹ [illegible]ತ್ಯದಲ್ಲಿ ಮನಸ್ಸಿಗೆ ಶಾಂತಿಯಿರದು. ಶ್ರಮಜೀವಿಗಳಿಗೆ ವಾರದ ಆದ್ಯಂತ ದಿನಗಳನ್ನುಳಿದು ಇತರ ದಿನಗಳು ಸ್ವಲ್ಪ ಉತ್ತಮವೆನಿಸುವವು.

ಧನು—ಕಳೆದ ದಿನಗಳಿಗಿಂತ ಈ ಸಮಯವು ನಿಮಗೆ ಉತ್ತಮವಿರುವುದು. ಸುಖದುಃಖ ಲಾಭನಷ್ಟಗಳು ಸಮನಾಗಿರುವವಾದರೂ ನಿಮ್ಮ ಮನೋರಥವು ನಿರ್ವಿಘ್ನದಿಂದ ನೆರವೇರಲಿದೆ. ಸ್ತ್ರೀಯರ ದೆಸೆಯಿಂದಾಗಿ ಕೆಟ್ಟ ಮಾತುಗಳನ್ನು ಕಷ್ಟನಷ್ಟಗಳನ್ನು ಹೊಂದುವ ಸಂಭವವಿದೆ. ಗೃಹ ತಾಪತ್ರಯಗಳು ಮಾಯವಾಗುವವು. ವಾರಾಂತ್ಯದ 4 ದಿನಗಳಲ್ಲಿ ಇಷ್ಟ ಸಿದ್ಧಿ ಮಿತ್ರ ಸಮಾಗಮ ಹಲವಾರು ಕಡೆಯಿಂದ ಧನಾಗಮವೂ ಆಗಲಿದೆ.

ಮಕರ—ದೈವಸ್ಥ ಅತೀವ ದುರ್ಬಲಾವಸ್ಥೆಗೆ ಬಂದಿರುವುದರಿಂದ ನೀವೀವಾರವನ್ನು ಬಹಳ ಕಷ್ಟದಿಂದ ಕಳೆಯಬೇಕಾಗುವ ಪ್ರಸಂಗ ಬರಲಿದೆ. ಆಪ್ತೇಷ್ಟ ವರ್ಗದವರೂ ಸಹ ವಿರೋಧಿಗಳ ಗುಂಪನ್ನು ಸೇರುವರು. ಯಾವದೇ ಉದ್ಯೋಗಕ್ಕೆ ಕೈಯಿಕ್ಕಿ ಅದರಲ್ಲಿ ದಿನೇ ದಿನೇ ನಷ್ಟವಧಿಕವಾಗುತ್ತ ಹೋಗಲಿದೆ. ವಿಜಾತಿಯವರೊಡನೆ ಮತ್ತು ಬಂಧುಗಳೊಡನೆ ಕಲಹವಾಗಲಿದೆ. ವಾರದ ಆದ್ಯಂತ ದಿನಗಳು ಮಿಕ್ಕ ದಿನಗಳಿಗಿಂತ ಲೇಸು.

ಕುಂಭ—ಸುಸಮಯವು ಸನ್ನಿಹಿತವಾಗದಿದ್ದರೂ ಕಳೆದ ವಾರಕ್ಕಿಂತ ಈ ವಾರವು ನಿಮಗೆ ಉತ್ತಮವೆನಿಸುವದು. ವಿದ್ಯೋಪಜೀವಿಗಳಿಗೆ ಹೆಚ್ಚಿನ ಸುಖಸೌಕರ್ಯಗಳು ಲಭಿಸಲಿವೆ. ವಿರೋಧಿ ವರ್ಗದವರ ಪ್ರತೀಕಾರ ಕ್ರಿಯೆಯಿಂದಾಗಿ ಹೆಚ್ಚಿನ ನಿಮ್ಮ ಕಾರ್ಯಕ್ರಮಗಳು ವಿಫಲಗಳಾಗುವವು. ದೇಹಾಲಸ್ಯವು ನಿಶ್ಶಕ್ತಿಯೂ ಕಾಣಿಸಿಕೊಳ್ಳಲಿದೆ. ವಾರದ [illegible]ದಿಯ 3 ದಿನಗಳಲ್ಲಿ ನಿಮ್ಮ ಬಂಧುಮಿತ್ರರ [illegible]ನವು ಲಭಿಸುವುದರಿಂದ ದಿನಗಳು ಸುಖವಾಗಿ ಕಳೆಯಲಿವೆ.

ಮೀನ—ಸದಾ ಪರ್ಯಟನದಿಂದಾಗಿ ನಿಮಗೆ ಒಂದೆಡೆ ಸ್ಥಿರವಾಗಿ ನಿಲ್ಲಲು ಅವಕಾಶ ಲಭಿಸದು. ಮನೆಯಲ್ಲಂತೂ ಸದಾ ಜಗಳ ಮನಸ್ತಾಪಗಳೇಳುವ ಪ್ರಸಂಗವಿದೆ. ಶತ್ರುಜನರ ಕಾರಸ್ಥಾನದಿಂದಾಗಿ ಧನ ನಾಶ ಮಾನಹಾನಿಗಳೊದಗುವ ಸಂಭವವಿದೆ. ಆದರೆ ಗುರ್ವನುಗ್ರಹದಿಂದಾಗಿ ನಿಮ್ಮ [illegible] ಸ ಖಚಿರುವದು. ಹೆಚ್ಚಿನ ನಿಮ್ಮ ಕಾರ್ಯಗಳು ಫಲಿಸಲಿದೆ. ತಾ 27ರಿಂದ ಈವರೆಗಿನ ದಿನಗಳಲ್ಲಿ ನಿಮ್ಮ ಬಯಕೆಗಳು ಸಫಲಗಳಾಗಲಿವೆ.

ಲಿಕ್ವಿಡ್
ಸಂತಾಲ್ ಮಾತ್ರೆ

ಇದರ ಉಪಯೋಗದಿಂದ [illegible] ಮೂತ್ರದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರದ ಕೃಚ್ಛ್ರ, ಮೂತ್ರದೊಡನೆ [illegible] ಯಾ ಕೆಂಪಾಗಿ ಬಿಳುವು, [illegible] ಈ ವರ್ಣಗಳಲ್ಲಿ ಕೀವು ಹೋಗುವದು, ತೊಡೆ ಸಂದಿನಲ್ಲಿ ಗಂಟೆ ಬರುವದು, ಕಾಲುಗಂಟು ವೇದನೆ, ಕಣ್ಣಲ್ಲಿ ಕೀವು ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ, ಸ್ತ್ರೀಯರ ಬಿಳಿ ಸೆರಗು ಇವೆಲ್ಲಾ ಖಾತ್ರಿಯಾಗಿ ಗುಣ ಹೊಂದುವದು ಇತರರು ಈಗಿನ ಉಷ್ಣಕಾಲದಲ್ಲಿ ಗರ್ಮಿ ಕಂಡುಬಂದರೆ ರಾತ್ರಿ ಮಲಗುವಾಗ ಒಂದು ಮಾತ್ರೆ ಸೇವಿಸಿ ಹಾಲು ಕುಡಿದರೆ ಸುಖವಾಗಿ ನಿದ್ರೆಬಂದು ಸುಖವಿರೇಚನೆಯಾಗಿ ದೇಹದ ಸುಸ್ತು ಹೋಗುವದು.

ಶೀಸೆ 1ಕ್ಕೆ ರೂ. [illegible]-0-0

ಏಜಂಟ್ಸ್:
[illegible]. ಕಂಪೆನಿ, ಮಂಗಳೂರು

ಸಾರ್ವಜನಿಕರ ಉಪಯೋಗಕ್ಕಾಗಿ ಅಮೂಲ್ಯ ರತ್ನ ಪ್ರಯೋಗ!
ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ, ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹ ಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
[illegible] ದಿನದ ಲೇಹ್ಯ ರೂ [illegible]/[illegible], [illegible] ದಿನದ ಲೇಹ್ಯ ರೂ [illegible]/[illegible]
(ಪೋಸ್ಟೇಜು ಮಾಫಿ)
ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನ ಎ. ರಾಮಸ್ವಾಮಿ ಅಯ್ಯರ್ ರವರ
ಸಂತಾ[illegible]

ಬಹಿಷ್ಠೆ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಠೆ ಸಂಬಂಧದ ಹೊಟ್ಟೆನೋವಿನಜೊತೆಗೆ ತಲೆನೋವು, ನಡುಶಕೆತ, ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ.

[illegible] ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ [illegible] ಸೆಟ್ ಅನುಪಾನಪತ್ರಿಕೆ ನೋಡಿ ಇಬ್ಬರೂ ಸೇವಿಸಿರಿ ಸಾಕು. ಶೋಭನವಾದ 15 16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾ ಪತ್ರಗಳನ್ನು ಪಡೆದಿದೆ.
ಕ್ರಯ:—[illegible] ಸೆಟ್ 5ರೂ ಪ್ಯಾಕಿಂಗ್ ಮತ್ತು ಟಪಾಲು ಖರ್ಚು [illegible] ರೂ ವಿ. ಪಿ. ಇಲ್ಲ ಕ್ಯಾಟಲಾಗ್ ಉಚಿತ 6ರೂ ಮನಿಆರ್ಡರ್ ಮಾಡಿರಿ ಕೂಡ್ಲೆ ರಿಜಿಸ್ಟರ್ ಪಾರ್ಸಲ್ ಮೂಲಕ [illegible]
ವಿಳಾಸ: ಎ. ರಾಮಸ್ವಾಮಿ ಅಯ್ಯರ್ ಸನ್ಸ್, (ಎ. ಆರ್. ವಿಶ್ವೇಶ್ವರೈಯ್ಯ)
Prop: ಸಂತಾನ ಸಿಂಧೂರ, 628 [illegible] ರೋಡ್ ಕ್ರಾಸ್,
(ಸೀತಾ ವಿಲಾಸ ಛತ್ರದ ಹಿಂದೆ) ಮೈಸೂರು.

Read
'NAVAYUGA' Wee[illegible]
Voice of the people Excelle[illegible]
Media and Reading Val[illegible]

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ
1929ರಲ್ಲಿ ಸ್ಥಾಪಿತವಾಗಿ 2[illegible] ವರುಷಗಳಿಂದ ಊರ ಜನರ ಹಿ[illegible]ಕ್ಕಾಗಿ ಡಿಪೋಸಿಟ್ ಹಣಕ್ಕೆ [illegible]ಯವಾದ ಬಡ್ಡಿಯಿಂದಲೂ, ಸಾ[illegible]ದ ಹಣಕ್ಕೆ ಅತೀ ಕಡಿಮೆ ದರ[illegible] ಬಡ್ಡಿಯಿಂದಲೂ ಜನ ಹಿತಸಾಧ[illegible]ಯನ್ನು ಮಾಡುತ್ತಿರುವುದು
The Moolky Bank Ltd
Moolky, S. K.

ಸುಲಭದಲ್ಲಿ ಇಂಗ್ಲೀಷ್

[illegible] ಶ್ರೀನಿವಾಸರಾವ್ [illegible]
ಇಂಗ್ಲೀಷ್ ಸ್ವಯಂಬೋಧಿನಿ.
ಬೆಲೆ ರೂ - 1-8-0, ವಿ. ಪಿ. ದ್ವಾರ ರೂ- 2[illegible]
ಡಾ. [illegible] ಟರಾವ್
ಮನೆ ಮದ್ದು
ಸುಲಭ ಚಿಕಿತ್ಸೆಗಳು.
ಬೆಲೆ ರೂ- 2-0-0, ವಿ- ಪಿ. ದ್ವಾರ ರೂ- 2-[illegible]
ನವಭಾರತ ಪುಸ್ತಕ ಭಂಡಾರ, ಉ[illegible]

Edited, Printed & Published By K. H. Shetty at the Navayuga Press, Udipi, S. India.

Regd.No. M. 3618

ESTD. 1921 ಸ್ಥಾಪನೆ
31ನೆಯ ವರ್ಷ

3-7-1952

LICENCE No. 31
Licensed to Post without Prepayment

Founder: Sri A. B. Shetty
Minister for Medical & Public Health

ನವಯುಗ
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ

ಸಾರ್ವಜನಿಕ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿತವಾದುದು.

ನವಯುಗ

ನವಯುಗ
ಪೋಸ್ಟ್, ಬಾಕ್ಸ್ ನಂಬ್ರ 22
ಉಡುಪಿ, ದ. ಕ.

ವಾರ್ಷಿಕ ಚಂದಾ ರೂ. 5-12-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ 0-2-0

ವರ್ಷ ೩೧
ವಾರ ೪೩

NAVAYUGA WEEKLY Post Box No. 22 UDIPI.

Vol. 31
No. 43

ಮಧುಪರ್ಕ

ರೋಮನ ಸಾಮ್ರಾಜ್ಯದ ಮೇಲೆ ಮೂರು ಸಲ ವೈರಿಗಳು ಪ್ರಬಲ ದಾಳಿ ನಡೆಸಿದಾಗ—ಮಹಾ ಸೇನಾಧಿಪತಿ ಅವರನ್ನು ಹೊಡೆದಟ್ಟಿದ. ಆರು ಸಲ ತಾನೇ ದಿಗ್ವಿಜಯಕ್ಕಾಗಿ ಯುರೋಪನ್ನು ಸುತ್ತಿ ಬಂದ.

ಮುಂದೆ ತನ್ನ ಹಳ್ಳಿಯ ಹೊಲಮನೆಯಲ್ಲಿ ಉಳಿದು, ವಿಶನಿಷ್ಠೆಯಿಂದ ಭೂಮಿತಾಯಿಯನ್ನು ಸೇವಿಸಲು ಸಂಕಲ್ಪಿಸಿದ.

ವಿಜಯೋನ್ಮಾದದಿಂದ ಉಬ್ಬಿದ ರಾಜನು ಸೇನಾಧಿಪತಿಗೆ ಸಾವಿರ ಕುದುರೆಗಳ ಮೇಲೆ ಹೊನ್ನನ್ನು ಹೇರಿ ಉಡುಗೊರೆ ಎಂದು ಕಳಿಸಿದ.

ದೂತರು ಬರುವಾಗ ಈ ವೀರ ಮನೆ ಹೊಲದ ದಂಡೆಯ ಮೇಲೆ ಕುಳಿತು, ಬಟಾಟೆ ಬೇಯಿಸಿ, ತಿನ್ನುತ್ತಿದ್ದ. ಅರಸನ ಬಹುಮಾನಕ್ಕೆ ಕೈಕೊಡಲು ಅವನು ಒಪ್ಪಲಿಲ್ಲ.

"ಅನ್ನಕೊಡುವ ಮಣ್ಣಿನೆದುರು ಈ ಹೊನ್ನಿಗೇನು ಬೆಲೆ? ಎಂದವನು ಕೇಳಿದ.

—ಆ ಕಾಲದಲ್ಲಿ ಹೊಲವನ್ನು ಮಹಾದಂಡನಾಯಕರೂ ಉಳುತ್ತಿದ್ದರು: ಧಾನ್ಯದ ಕಣಜದೆದುರು ಮೊಣಗಾಲೂರಿ ಪ್ರಾರ್ಥಿಸುತ್ತಿದ್ದರು. ಈ ಕಾಲದಲ್ಲಿ?

ದುಡಿಮೆಯೇ ದೇವರು

"ಕೂತುಂಡರೆ ಕುಡಿಕೆ ಹಣ ಸಾಲದು" ಎಂಬುದಾಗಿ ಕೇಳಿದ್ದೇವೆ. ಅದೇ ಗಾದೆ ಮಾತು ಹೀಗೂ ಹೇಳುತ್ತದೆ—"ಕೈ ಕೆಸರಾದರೆ ಬಾಯಿ ಮೊಸರು". ಇವೆಲ್ಲ ನಿತ್ಯ ಸತ್ಯವನ್ನು ಸಾರುವ ನುಡಿಮುಡಿಗಳು. ಅನುಭವ ಜನ್ಯವಾದುವಷ್ಟೇ ಅಲ್ಲ—ಮಾರ್ಗದರ್ಶನವೂಡುವ ಸೂತ್ರ ವಾಕ್ಯಗಳೂ ಹೌದು. ಆದರೆ, ಇಂದು ನಮ್ಮಲ್ಲಿ ಎಷ್ಟು ಜನರು ಈ ಸತ್ಯವನ್ನು ಮನಗಂಡಿದ್ದೇವೆ? ಅದೆಷ್ಟು ಮಂದಿ ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ದುಡಿಮೆಯನ್ನು ಶಿರಸಾವಹಿಸಿರುವರು? ನೋಡುವುದಕ್ಕೇನೋ, ನಮ್ಮಲ್ಲಿ ಎಲ್ಲರೂ ದಿನವಿಡೀ ಗೇಯುತ್ತೇವೆ. ಆದರೆ, ಅದರಲ್ಲಿ ಗೆಲವಿಲ್ಲ, ಉತ್ಸಾಹವಿಲ್ಲ ಮತ್ತು ಪ್ರಾಮಾಣಿಕತೆ ಇಲ್ಲ. ದುಡಿಯದೆ ಬೇರೆಗತಿ ಇಲ್ಲವಲ್ಲ—ಹೊಟ್ಟೆ ತುಂಬಬೇಕಾದರೆ ಗೇಯಲೇ ಬೇಕಾಗಿದೆಯಲ್ಲ—ಎಂಬುದಕ್ಕಾಗಿ ಪರಿಶ್ರಮದ ವ್ರತಕ್ಕೆ ಗಂಟು ಬಿದ್ದಿದ್ದೇವೆಯೇ ಹೊರತು—ಪರಿಶ್ರಮದಿಂದಲೇ ಮುಕ್ತಿ ಎಂಬ ಬೋಧೆಗೆ ಒಳಗಾಗಿ ದುಡಿಯುವುದಿಲ್ಲ.

ನಾಗರಿಕತೆ ಜನರ ಬುದ್ಧಿ ವಿಕಾಸವನ್ನುಂಟುಮಾಡಲು ಬಹು ವಿಧದಿಂದ ನೆರವಾಯಿತೆಂಬುದು ನಿಜವೇ—ಬೌದ್ಧಿಕ ಬೆಳವಣಿಗೆಯ ಪರಿಣಾಮವಾಗಿ, ನಮ್ಮ ನಿತ್ಯ ವ್ಯವಹಾರದಲ್ಲಿ ದೈಹಿಕ ಬಲದ ಕುರಿತಾಗಿ ತಿರಸ್ಕಾರವು ಜನಿಸಿತು. ಬುದ್ಧಿವಂತನೇ ಶ್ರೇಷ್ಠ—ಪರಿಶ್ರಮ ಮಾಡಿ ಕೂಲಿ ಸಂಪಾದಿಸುವಾತನು ಕನಿಷ್ಠನೆಂಬ ತಪ್ಪು ನಿರ್ಣಯಕ್ಕೆ ನಾಗರಿಕತೆಯು ನಮ್ಮನ್ನು ಪ್ರೇರಿಸಿತು. ಇಂದು ನಮ್ಮ ಎಲ್ಲ ಕುಟಿಗಳಿಗೂ ಪರಿಶ್ರಮದ ಮೇಲಿನ ಶ್ರದ್ಧೆಯು ನಾಶವಾಗಿರುವುದೇ ಕಾರಣ. ಬೌದ್ಧಿಕವಾಗಿಯಾದರೂ ನಾವು ಮೇಲ್ಮಟ್ಟದಲ್ಲಿದ್ದಾದರೆ—ಅದು ಕೊಡುವ ಕಲ್ಪಿತ ಸುಖದಿಂದಲಾದರೂ ತೃಪ್ತಿಗೆಡೆ ಇರುತಿತ್ತು. ಪರಿಸ್ಥಿತಿ ಮಾತ್ರ ತದ್ವಿರುದ್ಧವಾಗಿದೆ. ನಮಗೆ ಕೂಲಿ ಎನಿಸಲು—ಮತ್ತು [illegible]ಗೆ ಹೇಳಿ ಕೆಲಸಮಾಡಲು ನಾಚಿಕೆಯಾಗುತ್ತಿದೆ. ಆದರೆ ಕೂತು ತಿನ್ನಲು ನಮ್ಮ ಹತ್ತಿರ ಏನು ಉಳಿದಿದೆ?

ಮುಖ್ಯವಾಗಿ ಮಧ್ಯಮ ವರ್ಗವನ್ನು ಕಾಡುವ ಪ್ರಶ್ನೆ—ಅಥವಾ ಸಮಸ್ಯೆ ಎಂದರೆ ಇದೇ: ಬೌದ್ಧಿಕ ಪರಿಶ್ರಮವೇ ಸರ್ವಶ್ರೇಷ್ಠವೆಂದು ಹೇಗೋ ಅವರು ನಿರ್ಣಯಿಸಿಯಾಗಿದೆ. ಭಾರತದಲ್ಲಿ ವಿದ್ಯಮಾನವಿರುವ ಅನೇಕ ಕುಸಂಪ್ರದಾಯಗಳಲ್ಲಿ ಈ ಭಾವನೆಯೂ ಒಂದು. ಯಾವುದೋ ಒಂದು ಕಾಲದ ತಪ್ಪು ಕಲ್ಪನೆಯೊಂದಿಗೆ ಸತ್ಯದ ಆಭಾಸವಾಗಿ ಇಂದು ಪರಿಣಮಿಸಿದೆ. ಪರಂಪರೆಯಿಂದ ನಮಗೆ ಸಾಂಸ್ಕೃತಿಕ ಬಳುವಳಿಯ ರೂಪದಲ್ಲಿ ಬಂದಿರುವ "ದುಡಿಯುವುದು ಹೇಯ" ಎಂಬ ರೂಢ ಮೂಲಕಲ್ಪನೆಯನ್ನು ಬೇರು ಸಹಿತ ಕಿತ್ತೊಗೆಯುವುದೆಂದರೆ ಕಷ್ಟಸಾಧ್ಯ.

ನಮ್ಮ ದೇಶವನ್ನಾಳಿಹೋದ ಬ್ರಿಟಿಷರು—ನಮ್ಮ ಅಜ್ಞಾನದ ಪೂರ್ಣ ದುರುಪಯೋಗ ಮಾಡಿಕೊಂಡು, ನಮಗೆ ಅಮಲೇರಿಸಿರುವರು. ಕುರ್ಚಿಯಲ್ಲಿ ಕುಳಿತುಕೊಂಡು ಅಧಿಕಾರ ನಡೆಸುವುದರಲ್ಲಿಯೇ ಮನುಷ್ಯನ ಪುರುಷಾರ್ಥವಿದೆ ಎಂದವರು ನಮ್ಮ ಮನಸ್ಸಿನಲ್ಲಿ ಸ್ಪಷ್ಟವಾಗಿ ಬಿಂಬಿಸಿರುವರು—ಆಳಾಗಿ ದುಡಿದು ಅರಸಾಗಿ ಉಣ್ಣುವುದು ಎಷ್ಟೋ ಯೋಗ್ಯ ಸಲಹೆ ಇದ್ದರೂ, ನಾವು ಇಂದು ಅದನ್ನು ಲಕ್ಷಿಸುವುದಿಲ್ಲ. ಕುರ್ಚಿಯ ಮೇಲಿನ ವ್ಯಾಮೋಹವನ್ನು ಸುಲಭದಲ್ಲಿ ತೊರೆಯಲು ನಾವೀಗ ಸಿದ್ಧರಿಲ್ಲ.

ಇದಕ್ಕೆ ಕೆಲಮಟ್ಟಿಗೆ ನಮಗೆ ದೊರೆತಿರುವ ಶಿಕ್ಷಣವು ಹೊಣೆಗಾರವಿರಬಹುದು. ಮೆಕಾಲೆ ಹೇಳಿದಂತೆ ಇಂಗ್ಲೀಷು ಜನರು ನಮಗೆ ನೀಡಿದ ಶಿಕ್ಷಣದ ಪರಮೋದ್ದೇಶ ಗುಮಾಸ್ತರನ್ನು ತಯಾರಿಸುವುದು. ಭಾರತೀಯರಿಗೆ ಅದಕ್ಕಿಂತ ಹೆಚ್ಚಿನ ವಿದ್ಯೆ ಅನಗತ್ಯವೆಂದವನು ಸಲಹೆ ಮಾಡಿದ್ದ. ಇಂದಿಗೂ ಅನೂಚಾನವಾಗಿ ಈ ಪದ್ಧತಿ ಅನುಸರಿಸಲ್ಪಡುತ್ತಿದೆ. ಎಂತಲೇ—ಶಾಲೆ ಕಾಲೇಜುಗಳಿಂದ ವರ್ಷಂಪ್ರತಿ ಹೊರಬರುವ ನಮ್ಮ ಮಕ್ಕಳು, ಪೇಟೆಯ ಕಾರ್ಯಾಲಯಗಳ ಬಾಗಿಲು ಬಡಿಯುವುದಕ್ಕೆ ಮುಂದಾಗುವರೇ ಹೊರತು, ಹಳ್ಳಿಯ ಹೊಲಗಳಿಗೆ ಮರಳಲು ಒಡಂಬಡುವುದಿಲ್ಲ. ಹೆತ್ತವರು ಕುಟುಂಬಾಗತವಾದ ಉದ್ಯೋಗದಲ್ಲಿ ನಿರತವಾಗಿದ್ದರೂ—ತಮ್ಮ ಮಗನು ಈ ಕೆಲಸಕ್ಕೆ ಇಳಿಯಬಾರದು ಎಂಬ ಆಂತರಿಕ ಬಯಕೆಯಿಂದ ಅವನನ್ನು ಶಾಲೆಗೆ ಕಳುಹಿಸುವರು. ಅವನು ಬುದ್ಧಿವಂತನಾಗಿ, ಪರೀಕ್ಷೆ ಪಾಸು ಮಾಡಿ, ದೊಡ್ಡ ಹುದ್ದೆ ಸಂಪಾದಿಸಿ, ನಾಲ್ಕು ಜನರ ಮೇಲೆ ಅಧಿಕಾರ ನಡೆಸಬೇಕೆಂಬುದು ಅವರ ಒಳ ಮನದ ಬಯಕೆ. ಆದರೆ—ಯಾರು ಸ್ವಂತ ನೆಲಗಟ್ಟನ್ನು ಬಿಟ್ಟುಕೊಟ್ಟು ಗಗನವಿಹಾರಿಗಳಾಗುವರೋ—ಒಂದಲ್ಲ ಒಂದು ದಿನ ಅವರು ಭೂಪೃಷ್ಠದ ಮೇಲೆ ಕಾಲೂರಿಯೇ ತೀರಬೇಕೆಂಬುದು ಸ್ವತಃ ಸಿದ್ಧ.

ಭಾರತವೀಗ ಆ ಕೊನೆಯ ಹಂತದಲ್ಲಿದೆ—ಶತಮಾನಗಳ ದಾಸ್ಯಾನುಭವದ ಬಳಿಕ ಇದೀಗ ಸ್ವತಂತ್ರರೆಂದು ಉಸಿರೆಳೆದುಕೊಳ್ಳುತ್ತೇವೆ. ರಾಜಕೀಯ ಸ್ವಾತಂತ್ರ್ಯಕ್ಕೂ ಮಿಗಿಲಾದುದು ಆರ್ಥಿಕ ಸ್ವಾತಂತ್ರ್ಯ ಎಂಬ ತತ್ವವನ್ನು ಒಪ್ಪಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಆರ್ಥಿಕ ದೃಷ್ಟಿಯಿಂದ—ಸಂಪೂರ್ಣ ಸ್ವಾವಲಂಬನೆಗಿರುವ ನೇರದಾರಿ—ಮತ್ತು ಒಂದೇ ಒಂದಾದ ಮಾರ್ಗವು ಪರಿಶ್ರಮ—ಹಾಗೂ ಉತ್ಪಾದನೆ. ಇದರ ಹೊರತು ಇನ್ನೊಂದು ದಾರಿ ತೆರೆದಿದೆ ಎಂದು ಯೋಚಿಸುವುದೇ ತಪ್ಪು. ಪಾಶ್ಚಾತ್ಯ ದೇಶಗಳು—ಉದಾ: ಬ್ರಿಟನು, ಅಮೇರಿಕೆ, ರಶಿಯಾಗಳು—ಇಂದು ಸಮೃದ್ಧಿ ಸಂಪನ್ನವಾಗಿರುವುದಕ್ಕೆ ಅಲ್ಲಿಯ ಜನರು ಸಮಯವನ್ನು ಸ್ವಲ್ಪವೂ ಹಾಳುಗೆಡವದೆ ದುಡಿದು ಸಂಪಾದಿಸುವುದೇ ಕಾರಣ. ಹಿಂದೆ ನಾವು ದ.[illegible]

(೧೦ನೇ ಪುಟ ನೋಡಿರಿ.)

ಸರಿಯಾದ ಹೆಜ್ಜೆ! ಮಹತ್ವದ ಹೆಜ್ಜೆ!

ಇತ್ತೀಚೆಗೆ ಮದ್ರಾಸು ಸರಕಾರವು ಸರಿಮಾರ್ಗದಲ್ಲಿ ಒಂದು ಮಹತ್ತರ ಹೆಜ್ಜೆಯನ್ನಿಟ್ಟಿದೆ. ನೀವಾದರೂ ನಿಮ್ಮ ಉಳಿತಾಯದಲ್ಲಿ ಸರಿಯಾದ ಹೆಜ್ಜೆಯನ್ನಿಡಬೇಕೆಂದು ನಾವು ನಿಮ್ಮ ಲಕ್ಷ್ಯವನ್ನೆಳೆಯುತ್ತೇವೆ. ನೀವು ಅದನ್ನು ನಿಮ್ಮ ಬ್ಯಾಂಕಿನಲ್ಲಿ ಹಾಕಿದರೆ ನಾವು ಕೊಡುವ ಬಡ್ಡಿಯಿಂದ ಅದು ಬೆಳೆಯುತ್ತದೆ. ಅಲ್ಲದೆ ಅದೇ ವೇಳೆಯಲ್ಲಿ ಅದು ಭೂಪ್ರಗತಿಯನ್ನುಂಟುಮಾಡುವ ಉತ್ಪಾದನಾ ಮತ್ತು ಸಾಹಸೋದ್ಯಮಗಳಿಗೆ ದೊರಕುವುದು. ಈ ಬ್ಯಾಂಕು ಪ್ರತಿನಿತ್ಯವೂ 50,000 ಜನರಿಗೂ ಮಿಕ್ಕಿ ಉಳಿಸಲಿಕ್ಕೆ ಸಹಕರಿಸುತ್ತಿದೆ. ದಕ್ಷಿಣ ಕನ್ನಡದ ನೀಲೇಶ್ವರ ಮತ್ತು ಕಿನ್ನಿಗೋಳಿಯಲ್ಲಿ ಇತ್ತೀಚೆಗೆ ಎರಡು ಹೊಸ ಶಾಖೆಗಳು ಇವರಿಂದ ತೆರೆಯಲ್ಪಟ್ಟಿವೆ.

ವಹಿವಾಟು ರೂ. 5,00,00,000 ಕ್ಕೂ ಮಿಕ್ಕಿದೆ.

ದಿ ಕೆನರಾ ಇಂಡಸ್ಟ್ರಿಯಲ್
ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925   ಹೆಡ್ ಆಫೀಸ್: ಉಡುಪಿ

The Canara Industrial &
Banking Syndicate Limited.

Estd: 1925   H. O: UDIPI.

ಗೊಂಡಾರಣ್ಯದ ಪ್ರಕೃತಿ ಪುತ್ರರು

ಮಧ್ಯ ಭಾರತದ ಸ್ವದೇಶಪ್ರೇಮಿ ಭಿಲ್ಲರು

— ೧ —

ಭಾರತದ ಮಧ್ಯ ಪ್ರದೇಶದಲ್ಲಿ ದಟ್ಟವಾದ ಕಾಡು ಮೇಡುಗಳ ನಡುವೆ-ಬೆಟ್ಟಗಳ ಎಡೆಯಲ್ಲಿ ಆರು ಲಕ್ಷ ಭಿಲ್ಲರು ನೆಲಸಿದ್ದಾರೆ. ಈ ಜನರು ಮೂಲ ನಿವಾಸಿಗಳ ವಂಶಜರು. ಇಂದು ಪ್ರಕೃತಿಯ ಕೋಪಕ್ಕೆ ಗುರಿಯಾದ ಈ ಮಕ್ಕಳು ತಮ್ಮ ಉಳಿವಿಗಾಗಿ ಹೋರಾಟ ನಡೆಸಬೇಕಾಗಿ ಬಂದಿದೆ. ಸ್ವಾಭಾವಿಕವಾಗಿ ವೀರರೂ, ಸಾಹಸಿಗಳೂ ಆದ ಭಿಲ್ಲರನ್ನು ಕ್ಷಾಮ ದೇವತೆಯು ಹತವೀರ್ಯರನ್ನಾಗಿ, ನಿರ್ಬಲರನ್ನಾಗಿ ಮಾಡಿದೆ. ಹಸಿವೆಯಿಂದ ಕಂಗೆಟ್ಟ ಭಿಲ್ಲರು ತಮ್ಮ ಹಸುಳೆಗಳನ್ನೆತ್ತಿಕೊಂಡು ಹೊಟ್ಟೆಯ ತುಣುಕನ್ನು ಹುಡುಕುತ್ತಾ ಅಲ್ಲಿಂದಿಲ್ಲಿಗೆ ಸುತ್ತಾಡುತ್ತಿರುವರು. ತಮ್ಮ ಭಾಗ್ಯವನ್ನು ಶಪಿಸಿ ನೋಯುತಿರುವರು.

ರಾಜಪುತಾನದ ಅನೇಕ ಚರಿತ್ರಾರ್ಹ ಘಟನೆಗಳಲ್ಲಿ ಭಿಲ್ಲರ ಪಾತ್ರ ಮಹತ್ವದ್ದು. ರಾಣಾ ಪ್ರತಾಪ ಸಿಂಹನಂಥ ದೇಶಭಕ್ತನ ಕೈಂಕರ್ಯವನ್ನು ವಹಿಸಿ ಪ್ರಾಮಾಣಿಕತೆಯಿಂದ ಸೇವೆ ಮಾಡಿದ ಉಜ್ವಲ ಪರಂಪರೆ ಭಿಲ್ಲರ ಸಂಪತ್ತು. ನಮ್ಮ ರಾಷ್ಟ್ರೀಯ ಭಾವನೆಯನ್ನು ಜಾಗ್ರತಗೊಳಿಸಿದವರೇ ಈ ಆದಿವಾಸಿಗಳೆನ್ನಬಹುದೋ ಏನೋ-ತಮ್ಮ ಪ್ರಾಣವನ್ನು ಬಲಿಕೊಟ್ಟು ಮಾನಕ್ಕಾಗಿ ಹೋರಾಡಿದ ವೀರರು ಇವರು. ದುಷ್ಟರ ಗೋಣು ಮುರಿದು, ನಿರ್ಬಲ ಹಾಗೂ ಅಸಹಾಯಕರಾದ ಸ್ತ್ರೀ ಮತ್ತು ಬಾಲಿಕೆಯರ ಮರ್ಯಾದೆ ಕಾಪಾಡಿದ ಸಾಹಸಿಗಳು ಇವರು. ಇಂದು ಅದೇ ಜನ—ಸಭ್ಯರ ಪಾಶವಿಕ ಕೃತ್ಯಗಳಿಗೆ ಬಲಿಯಾಗಿರುವರೆಂಬುದನ್ನು ಹೇಗೆ ನಂಬೋಣ?

— ೨ —

ಸರದಾರಪುರ, ಧಾರ ಸೈಲಾನಾ ರತಲಾಮ, ಇಂದೋರ, ಝಾಬುವಾ, ಅಲೀರಾಜಪುರ, ಜೋಬಟ ಮುಂತಾದೆಡೆ ಭಿಲ್ಲ ಜಾತಿಯ ಜನರು ನೆಲಸಿರುವರು. ಈ ಪ್ರದೇಶ ಕಲ್ಲು ಕುಂಟೆಗಳಿಂದ ಮತ್ತು ಏರುತಗ್ಗುಗಳಿಂದ ಕೂಡಿರುವ ಕಾರಣ-ವರ್ಷದಲ್ಲಿ ಒಂದೇ ಬೆಳೆ ಕೈಗೆ ಬರುವುದು. ಅದೂ ಮಳೆಯ ನೀರನ್ನೇ ಹೊಂದಿಕೊಂಡಿದೆ. ಬರುವ ಮಳೆಯೂ ಬಹಳ ಕಡಮೆ ಇರುವುದರಿಂದ ಒಂದು ಬೆಳೆಯು ಇಡೀ ವರ್ಷದ ಹಸಿವನ್ನು ಹಿಂಗಿಸಲು ಸಾಲುವುದಿಲ್ಲ. ಇತರ ನೂರಾರು ಉಪಾಯಗಳಿಂದ ಹೊಟ್ಟೆ ಹೊರೆಯುವುದು ಅನಿವಾರ್ಯವಾಗಿದೆ. ಈಗ್ಗೆ ಎರಡು ವರ್ಷಗಳಿಂದ ಮಳೆಯ ಹನಿಯೂ ಬಿಂದಿಲ್ಲ-ಹೀಗಾಗಿ ಪೈರು ನಷ್ಟಪ್ರಾಯವಾಗಿದೆ. ಪೈರನ್ನು ಬಿಟ್ಟರೆ ವನ್ಯ ಉತ್ಪತ್ತಿಗಳೇ ಭಿಲ್ಲರ ಜೀವನಾಧಾರ. ಈಗ-ಅರಣ್ಯ ಸಂಪತ್ತಿನ ಮೇಲೆ ಭಿಲ್ಲರಿಗೆ ಮೂಲಭೂತ ಅಧಿಕಾರ ಇದ್ದುದನ್ನು ಸರಕಾರವು ಕಸಿದುಕೊಂಡು--ಗುತ್ತಿಗೆದಾರರಿಗೆ ವಹಿಸಿಕೊಟ್ಟಿದೆ ಎಂದು ದೂರುವರು. ಮೊದಲು ಸೌದೆ ಕಡಿದು, ಕಟ್ಟಿಗೆ ಮಾರುತಿದ್ದ ಭಿಲ್ಲರು ತೆರಿಗೆ ಮುಂತಾದುವುಗಳನ್ನು ಕೊಡಲು ಸಾಮರ್ಥ್ಯವಿಲ್ಲದೆ ಈಗ ನಿರುದ್ಯೋಗಿಗಳಾಗಿದ್ದಾರೆ. ಬೇರೆ ಕೆಲಸ-ಕಾರ್ಯಗಳೂ ಭಿಲ್ಲರಿಗೆ ದೊರೆಯುತ್ತಿಲ್ಲ. ಆದುದರಿಂದ ಹೊರಗಿನಿಂದ ಅನ್ನ ತರಿಸಿ ತಿನ್ನಲೂ ಅವರಲ್ಲಿ ಕ್ರಯಶಕ್ತಿ ಉಳಿದಿಲ್ಲ. ಅರಣ್ಯಗಳಲ್ಲಿ ಸಿಗುವ ಗಡ್ಡೆಗೆಣಸು ಮತ್ತು ಮರದ ಸವಿಯಾದ ತೊಗಟೆಗಳನ್ನು ಕದ್ದು ಮುಚ್ಚಿ ತಿಂದು ಜಠರಾಗ್ನಿಯನ್ನು ಹೇಗೋ ತಣಿಸುತ್ತಿರುವರು. ಮಾಂಸಕ್ಕಾಗಿ ಬೇಟೆಯಾಡುವರು. ಎಷ್ಟೋ ಕಡೆ ರೈತರು ಉಳುಮೆಗೆ ಉಪಯೋಗಿಸುವ ಎತ್ತುಗಳನ್ನು ಮತ್ತು ಹಾಲುಕರೆಯುವ ಹಸುಗಳನ್ನು ಮಾಂಸದಾಶೆಗಾಗಿ ಕೊಂದು ತಿಂದ ದೂರುಗಳು ಈಗ ಬರುತ್ತಿವೆ.

— ೩ —

ಸರಕಾರವು ನಿರುದ್ಯೋಗ ಪೀಡಿತರಾದ ಭಿಲ್ಲರಿಗೆ ಕೆಲಸ ಒದಗಿಸಿಕೊಡಲು ಪ್ರಯತ್ನಿಸುತ್ತಿದೆ. ರಸ್ತೆಗಳ ದುರಸ್ತಿ ಮುಂತಾದ ಸಾರ್ವಜನಿಕ ಕೆಲಸಗಳಲ್ಲಿ ಕೂಲಿಯಾಗಿ ಭಿಲ್ಲರನ್ನು ತೆಗೆದುಕೊಳ್ಳುವರು. ಗಂಡಸರಿಗೆ ದಿನಕ್ಕೆ ೧೨ ಆಣೆ, ಹೆಂಗಸಿಗೆ ೧೦ ಆಣೆ ಮತ್ತು. ಹನ್ನೆರಡು ವರ್ಷ ಪ್ರಾಯ ಮೀರಿದ ಹುಡುಗರಿಗೆ ೮ ಆಣೆ ದಿನಗೂಲಿ ಕೊಡುವರು. ಕೆಲಸ ಬೇಕೆನ್ನುವವರೇ ಅಧಿಕ ಹೊರತು ಅವರೆಲ್ಲರನ್ನೂ ತೃಪ್ತಿಪಡಿಸುವಷ್ಟು ಕೆಲಸ ಇಲ್ಲ. ಇದೂ ಒಂದು ವಿಡಂಬನೆ-ಪರಿಣಾಮವಾಗಿ ಅಸಂಖ್ಯ ಭಿಲ್ಲರು ನಿರಾಶರಾಗಿ, ಬತ್ತಲೆ ತಿರುಗುತ್ತಿರುವರು.

ಸಾಮಾನ್ಯವಾಗಿ ಭಿಲ್ಲರು ನೆಲಸಿದ ಎಲ್ಲೆಡೆಯೂ ಕ್ಷಾಮದ ಭೀತಿ ತಪ್ಪಿದ್ದಲ್ಲ--ಈಗ ನೀರಿನ ಅಭಾವವೂ ಈ ಹುಣ್ಣಿಗೆ ಬರೆ ಎಳೆದಿದೆ. ಎಷ್ಟೋ ಮೈಲು ದೂರ ಹೋಗಿ, ನೀರನ್ನು ಸ್ತ್ರೀಯರು ಹೊತ್ತು ತರಬೇಕಾಗಿದೆ. ಸರಕಾರದವರು ಪರಿಹಾರ ಕಾರ್ಯವನ್ನು ತತ್ಪರತೆಯಿಂದ ಮಾಡುತ್ತಿರುವರು--ಆದರೇನು? ಖರ್ಚಾದ ಹಣದ ಸದುಪಯೋಗವಾಗುವುದಿಲ್ಲ. ಮಧ್ಯಸ್ಥಿದಾರರು ಹೆಚ್ಚಿನ ಹಣವನ್ನು ತಿಂದು ಹಾಕಿ, ಹೆಸರಿಗೆ ಮಾತ್ರ ಭಿಲ್ಲರ ಯೋಗಕ್ಷೇಮಕ್ಕೆ ವೆಚ್ಚವಾದ ಪಟ್ಟಿಯನ್ನು ಮುಂದಿಡುತ್ತಾರೆ. ಭಾರತಕ್ಕೆ ಅಂಟಿರುವ ಜಾಡ್ಯ ಇದೇ.

— ೪ —

ಭಿಲ್ಲರು ಸಾಹಸಿಗಳು--ಅಷ್ಟೇ ಸರಳ ಸ್ವಭಾವದವರು. ಧೈರ್ಯ ಸ್ಥೈರ್ಯಗಳಿಂದ ಸುಶೋಭಿತರಾಗಿರುವುದರಿಂದ-ಎಂಥ ವಿಪತ್ ಪ್ರಸಂಗದಲ್ಲಿಯೂ ಕರ್ತವ್ಯ ವಿಮುಖರಾಗುವುದಿಲ್ಲ. ಇವರು ಭಯ ರಹಿತರು-ಆತ್ಮ ವಿಶ್ವಾಸವುಳ್ಳವರು ಮತ್ತು ಪುರುಷಾರ್ಥ ಸಾಧಕರು. ಕಾರಣ, ತಾವು ಕೊಟ್ಟ ವಚನವನ್ನು ಮುರಿಯುವುದಿಲ್ಲ-ಹಿಡಿದ ಕೆಲಸ ಬಿಡುವುದಿಲ್ಲ. ಅತಿಥಿಗಳ ಆದರ ಸತ್ಕಾರಗಳೆಂದರೆ ದೊಡ್ಡ ಪುಣ್ಯದ ಕೆಲಸವೆಂದು ಭಾವಿಸುತ್ತಾರೆ. ಸ್ತ್ರೀಯರೂ ತುಂಬ ಸೌಜನ್ಯವಂತೆಯರು-ಪರಿಶ್ರಮಿಗಳು.

ನಾಟ್ಯ ಮತ್ತು ಸಂಗೀತದ ಪ್ರಭಾವ ಭಿಲ್ಲವರನ್ನು ವಿಲಾಸಿಗಳನ್ನಾಗಿಸಿದೆ. ತಮ್ಮ ಹರಕು ಗುಡಿಸಲಿನ ಮುಂದೆ ರಾತ್ರಿ ಹೊತ್ತು ಭಿಲ್ಲ ಸ್ತ್ರೀ-ಪುರುಷರು ಮಧುರ ಕಂಠದಿಂದ ಗೀತಗಳನ್ನು ಹಾಡುತ್ತಾ ಉನ್ಮಾದ ವಶರೆಂಬಂತೆ ವರ್ತಿಸುವಾಗ, ಅದರ ಸೊಬಗನ್ನೇನು ವರ್ಣಿಸಲಿ! ಸಾಮೂಹಿಕ ನೃತ್ಯದಲ್ಲಿ ತರುಣ-ತರುಣಿಯರು, ಹುಡುಗರು, ಮುದುಕರು ಎಲ್ಲರೂ ಉತ್ಸಾಹದಿಂದ ಭಾಗವಹಿಸುವರು. ಕಲಾತ್ಮಕ ಮುದ್ರೆಯಿಂದ ನೃತ್ಯ ಮಾಡುವಾಗ—ದರ್ಶಕರು ಸಮ್ಮೋಹಿತರಾಗಿ, ಮೈಮರೆಯುವುದು ನಿಶ್ಚಯ. ಈ ಬಗೆಯ ಮನೋರಂಜನೆಯು ಹಬ್ಬ ಹರಿದಿನಗಳಲ್ಲಿ, ಮದುವೆ ಅಥವಾ ಮಗುವಿನ ಜನ್ಮಕಾಲದಲ್ಲಿ ವಿಜೃಂಭಣೆಯಿಂದ ನಡೆಯುವುದು ವಾಡಿಕೆ.

— ೫ —

ಸಹಗೋತ್ರ ವಿವಾಹವು ಭಿಲ್ಲರಿಗೆ ನಿಷಿದ್ಧ. ಯೋಗ್ಯ ವರ-ವಧುವನ್ನು ಅರಿತು ಗೋತ್ರಾದಿಸಂಬಂಧವನ್ನು ಪರಿಶೀಲಿಸಿ ಬಳಿಕವೇ ಮದುವೆ ನೆರವೇರುವುದು. ಹುಡುಗನ ಕಡೆಯವರು ಹುಡುಗಿಯ ಅಣ್ಣನಿಗೋ, ತಂದೆಗೋ ಒಂದು ನಿಶ್ಚಿತ ಮೊತ್ತವನ್ನು ದಕ್ಷಿಣೆಯಾಗಿ ಕೊಡಬೇಕು. ವಿಧವಾ ವಿವಾಹ ಭಿಲ್ಲರಿಗೆ ಸೇರುತ್ತದೆ. ಹಾಗೆಯೇ ಮದುವೆಯಾದ ಬಳಿಕ ಹೆಂಗಸು ತಮ್ಮ ವಿವಾಹಸಂಬಂಧವನ್ನು ಕಡಿದುಕೊಂಡು, ಬೇರೊಬ್ಬ ಪ್ರಿಯನೊಡನೆ ಒಗೆತನ ಮಾಡುವುದುಂಟು.

ಶಿಕ್ಷಣದ ಸುದ್ದಿಯನ್ನೇ ಭಿಲ್ಲರು ತಿಳಿಯರು. ಹಾಗೆಂದು—ಅಶಿಕ್ಷಿತರಾದರೂ ಅವರ ನಾಗರಿಕ ಕಳೆಗುಂದಿಲ್ಲ. ಪಂಚಾಯತಿ ಪದ್ಧತಿಯ ಶಿಸ್ತನ್ನು ಬಹಳ ನಿಷ್ಠೆಯಿಂದ ಇಂದಿಗೂ ಕಾಪಾಡಿರುವರು. ಜಾತೀಯ ನಿಯಮಗಳ ಉಲ್ಲಂಘನೆ ಮಾಡಿದವರಿಗೆ ಶಿಕ್ಷೆ ಮತ್ತು ಬಹಿಷ್ಕಾರಗಳನ್ನು ಈ ಪಂಚಾಯತಿ ಮೂಲಕವೇ ಘೋಷಿಸುತ್ತಾರೆ. ಅವರ ಪರಸ್ಪರ ಸಹಕಾರದ ಭಾವನೆ ತುಂಬಿ ತುಳುಕಿದೆ.

ತುಂಬ ಸರಳ ಜೀವಿಗಳು—ಸ್ತ್ರೀಯರು ಕೈಗೆ ಬಳೆಗಳನ್ನು, ಕಿವಿಗೆ ಬೆಂಡೋಲೆಯನ್ನು ಧರಿಸಿ ಸುಂದರಿಯರಾಗಿ ಕಾಣುವರು. ಭಿಲ್ಲರು ಸಾಂಸ್ಕೃತಿಕ ವೈಶಿಷ್ಟ್ಯವನ್ನು ತಮ್ಮದೇ ಆದ ರೀತಿಯಲ್ಲಿ ಕಾಪಾಡಿಕೊಂಡು ಬಂದಿರುವರು. ಇವರ ಜನಪದ ಹಾಡುಗಳು ಮತ್ತು ನೃತ್ಯಗಳು ಅಭ್ಯಾಸಯೋಗ್ಯವಾಗಿವೆ. ಸಭ್ಯ ಸಮಾಜದಲ್ಲಿ ಚಲಿತವಿರುವ ಎಷ್ಟೋ ದುರಾಭ್ಯಾಸಗಳಿಂದ ಭಿಲ್ಲರು ಮುಕ್ತರಾಗಿದ್ದಾರೆ.

ಸ್ವಾತಂತ್ರ್ಯದ ಕಲ್ಪನೆಯು ಇನ್ನೂ ಭಿಲ್ಲರಿಗೆ ಸ್ಪಷ್ಟ ರೂಪದಲ್ಲಿ ಆಗಿಲ್ಲದಿರುವುದೊಂದು ಕೊರತೆ—ಯೋಜನಾಬದ್ಧ ಉಪಾಯಗಳಿಂದ ಸರಕಾರವು ಭಿಲ್ಲರ ಸರ್ವಾಂಗೀಣ ಉನ್ನತಿಗಾಗಿ ಪ್ರಯತ್ನಿಸುವುದು ಅಪೇಕ್ಷಣೀಯ. ಇದರೊಡನೆ ತುತ್ತು ಅನ್ನದ ಪ್ರಶ್ನೆಯನ್ನು ಬಗೆಹರಿಸುವಲ್ಲಿ—ಸಮಾಜ ಸೇವಕರು, ರಚನಾತ್ಮಕ ಕಾರ್ಯಕರ್ತರು ಸಂತೋಷ ಕಾಣುವಂತಾದರೆ ಕ್ಷೇಮ.

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs. 10 lacks.
3. Has granted an average dividend of 6% to the Shareholders for the past 20 years.
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies.

AD… AS
"MY BANK
THE VIJAYA BANK, LIMITED,
H. O., MANGALORE.

The East & West Insurance Co., Ltd.
East & West Bldgs. BOMBAY - 1.

ದಿ ಈಸ್ಟ್ ಎಂಡ್ ವೆಸ್ಟ್
ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್-

ಸ್ಥಾಪನೆ:] ಈಸ್ಟ್ ಎಂಡ್ ವೆಸ್ಟ್ ಬಿಲ್ಡಿಂಗ್ಸ್, ಬೊಂಬಾಯಿ 1 [1913

ಉದಾರ ಹಾಗೂ ರಿಯಾಯತಿ ಶರ್ತಗಳಿರುವ ಪುರಾತನ ಮತ್ತು ಮುಂದುವರಿದ ಕಂಪೆನಿಗಳಲ್ಲೊಂದಾಗಿರುತ್ತದೆ.

ವಿಮೆಯ ಸಕಲ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು ಆ ಬಾಬಿನ ಎಲ್ಲಾ ಕೆಲಸಗಳಲ್ಲಿ ಭಾಗಿಯಾಗಿ ಸಹಕರಿಸಿ ಸಲಹೆಗಳನ್ನೀಯುತ್ತಾ ಜನಸೇವೆಗೈಯುವುದೇ ನಮ್ಮ ಧ್ಯೇಯ.

ನಮ್ಮ ಚೀಫ್ ಏಜನ್ಸಿ ವಿಸ್ತೀರ್ಣದೊಳಗೆ ಪ್ರತೀ ಜಿಲ್ಲೆಗೊಬ್ಬರಂತೆ ಇನ್ಸ್‌ಪೆಕ್ಟರುಗಳೂ, ಸ್ಪೆಶಲ್ ಏಜಂಟರೂ, ಏಜಂಟರೂ ಬೇಕಾಗಿದ್ದಾರೆ. ಹೆಚ್ಚಿನ ವಿವರಕ್ಕೆ ಬರೆಯುವದು.

ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್,
ಚೀಫ್ ಏಜಂಟರು,
ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಮೈಸೂರು ಸ್ಟೇಟ್,
ಪೋಸ್ಟ್ ಶಿರ್ವ, ದ. ಕ.

ಔದ್ಯೋಗಿಕ ಕ್ಷೇತ್ರದ ಮುಖ್ಯ ಸಮಸ್ಯೆ

ಮಾಲಕ-ಮಜೂರರ ಸಂಬಂಧ ಬೆಳೆಸುವ ಬಗೆ.

ನಮ್ಮದು ಕೃಷಿ ಪ್ರಧಾನ ದೇಶವೇ ನಿಜ--ಹೀಗಿದ್ದರೂ ಔದ್ಯೋಗಿಕ ಕ್ಷೇತ್ರದಲ್ಲಿ ನಾವು ತೀರ ಹಿಂದುಳಿದೀವೆವೆನ್ನಲಾರೆವು. ಪಾಶ್ಚಾತ್ಯ ದೇಶಗಳಲ್ಲಿ ಕೆಲವು ಸಾಧಿಸಿರುವ ಅದ್ಭುತ ಪ್ರಗತಿಯ ಮುಂದೆ ನಮ್ಮದು ಇನ್ನೂ ಎಳೆಯ ಪ್ರಯತ್ನವಾಗಿ ಕಂಡುಬಂದೀತೆಂಬುದು ನಿಶ್ಚಯ ವಾಕ್ಯ. ಹಾಗೆಂದು— ಹಿಂದುಳಿದ ಆಗ್ನೇಯ ಏಶಿಯಾದ ರಾಷ್ಟ್ರಗಳನ್ನು ಭಾರತದೊಡನೆ ಹೋಲಿಸಿದರೆ—ನಮ್ಮ ಔದ್ಯೋಗಿಕ ಮುನ್ನಡೆಯು ಪ್ರಶಂಸನೀಯವೆನ್ನಲಡ್ಡಿಯಿಲ್ಲ. ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗಿದಂದಿನಿಂದ-ನಮ್ಮಲ್ಲಿ ಸ್ವಯಂಪೂರ್ಣತೆ ಮತ್ತು ಸ್ವಾವಲಂಬನೆಯ ಪ್ರವೃತ್ತಿ ಬಹಳಷ್ಟು ಬೆಳೆದು ವಿಸ್ತರಿಸಿದೆ--ಪರಿಣಾಮವಾಗಿ ರಾಷ್ಟ್ರೀಯ ಅಭ್ಯುದಯವನ್ನು ಸರ್ವಾಂಗೀಣವಾಗಿಸುವುದಕ್ಕೆ ನಮ್ಮ ಉದ್ಯೋಗ ಪತಿಗಳೂ ಸರಕಾರವೂ ಕೂಡಿ ಹೆಣಗುತ್ತಿರುವರು.

ವೆಚ್ಚದ ಪ್ರಮಾಣ

ಉದ್ಯೋಗವು ಬೆಳೆದು ನಾಡಿನಲ್ಲಿ ಸಮೃದ್ಧಿ ಉಂಟಾಗ ಬೇಕಾದರೆ--ಮೊದಲಾಗಿ, ಅದಕ್ಕೆ ಸಾಕಷ್ಟು ಬಂಡವಾಳ ಬೇಕು. ನಮ್ಮ ದೇಶದ ಆವಶ್ಯಕತೆಗಳನ್ನು— ಲೋಕದ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಮತ್ತು ಸುಲಭದಲ್ಲಿ ಲಭ್ಯವಿರುವ ಕಚ್ಚಾ ಸಾಮಗ್ರಿ ಮತ್ತು ದೊರೆಯುವ ಇತರ ಅ[illegible] ಲತೆಗಳನ್ನು ದೃಷ್ಟಿಯಲ್ಲಿಟ್ಟು [illegible] ದ್ಯೋಗ ವಿಸ್ತರಣ ಕಾರ್ಯವು ನಡೆಯುತ್ತದೆ ಉತ್ಪಾದನ ಸರಾಗವಾಗಿ ನಡೆಯಬೇಕಾದರೆ ಕಚ್ಚಾ ಸರಕಿನ ನಿಯತಂಕ ಪೂರೈಕೆಯಂತೆ ಶಕ್ತಿಯೂ ಅಗ್ಗದರದಲ್ಲಿ ದೊರೆಯುತ್ತಿರಬೇಕು. ಆದುದರಿಂದ ಎಲ್ಲಿಬೇಕೆಂದರಲ್ಲಿ ಒಂದು ಉದ್ಯಮವನ್ನು ಸ್ಥಾಪಿಸಲಾರೆವು ಜಾಗತಿಕ ಪೈಟಿಯ ಸಂಗಡ ಅಥವಾ ದೇಶದೊಳಗಿನ ಪೂರೈಕೆಯೊಡನೆ ಮೇಲಾಟ ಮಾಡಿಕೊಂಡು–ಉದ್ಯಮವು ಬದುಕ ಬೇಕಾದುದರಿಂದ, ವೆಚ್ಚದ ಪ್ರಮಾಣವನ್ನು ಅನಾವಶ್ಯಕ ಕಾರಣದಿಂದ ಏರಿಸಲು ಬರುವುದಿಲ್ಲ.

ಪ್ರಾರಂಭಿಕ ವ್ಯವಸ್ಥೆ

ಸಾಧ್ಯವಿದ್ದ ಎಲ್ಲ ರೀತಿಯಿಂದಲೂ ಮಿತವ್ಯಯವನ್ನು ಸಾಧಿಸಬೇಕೆಂಬುದು ನಮ್ಮ ನಿತ್ಯ ಜೀವನಕ್ಕೆ ಅನ್ವಯಿಸಿದಂತೆ--ಒಂದು ಔದ್ಯೋಗಿಕ ಸಂಸ್ಥೆಗೂ ಸರಿಯಾಗುವುದು. ಕಾರಣ ಹೊಸತಾಗಿ ಉದ್ಯಮವನ್ನು ತೊಡಗುವವರು ತಮ್ಮ ಸ್ಥಳದ ಆಯ್ಕೆಯನ್ನು ಯೋಗ್ಯ ರೀತಿಯಲ್ಲಿ ಮಾಡುವರು. ಬಳಿಕ--ತಾವು ಉತ್ಪಾದಿಸಬೇಕೆಂದಿರುವ ವಸ್ತುವಿನ ಬಗ್ಗೆ ಒಂದು ಯೋಜನಾಬದ್ಧ ವ್ಯವಸ್ಥೆಯನ್ನು ಕೈಗೊಳ್ಳುವರು- ಯಾವುದೇ ವಸ್ತುವಿನ ಉತ್ಪಾದನೆಯಲ್ಲಿ ಅನೇಕ ಬಗೆಯ ಯಂತ್ರಗಳು--ನುತ್ತಿತರ ಸಾಮಗ್ರಿಗಳು ಅವಶ್ಯವಿವೆ. ಆದುದರಿಂದ ಅವೆಲ್ಲವನ್ನೂ ಅಳವಡಿಸಿಕೊಳ್ಳುವುದು ಎರಡನೆಯ ಕೆಲಸ. ಮೊರನೆಯದೇ ಉತ್ಪಾದನೆ. ಯಂತ್ರಯುಗದ ಈ ಕಾಲದಲ್ಲಿ ಸಾಮಾನ್ಯವಾಗಿ ಹೆಚ್ಚಿನ ಕೆಲಸಗಳೆಲ್ಲವೂ ಯಂತ್ರಗಳ ಮೂಲಕ ನಿರ್ವಹಿಸಲ್ಪಟ್ಟರೂ--ಕೆಲಸಗಾರರು ನಡುನಡುವೆ ಕೈಹಾಕದಿದ್ದರೆ, ಕಾರ್ಯ ಮುಂದೆ ಸಾಗುವುದಿಲ್ಲ ಎಂತಲೇ-ಉತ್ಪಾದನೆಯಲ್ಲಿ ಕೆಲಸಗಾರರ ಪಾತ್ರ ಬಹಳ ಮಹತ್ವದ್ದು.

ಯಂತ್ರವಲ್ಲ—ಮನಸ್ಸು

ಔದ್ಯೋಗಿಕ ಕ್ಷೇತ್ರದ್ದಮುಖ್ಯ ಸಮಸ್ಯೆಯೇ ಒಡೆಯರು–ಕೆಲಸಗಾರರು ಇವರೊಳಗಿನ ಸಂಬಂಧ. ಇತರ ಸಮಸ್ಯೆಗಳು--ಉದಾ: ಬಂಡವಾಳ, ಸೌಕರ್ಯ, ಸಾಧನ ಸಾಮಗ್ರಿ ಇತ್ಯಾದಿ–ಸ್ಥೂಲ ರೂಪದವು. ಆದರೆ ಮಾಲಕ-ಮಜೂರ ಸಂಬಂಧವೆಂಬುದು ಸೂಕ್ಷ್ಮತಮವಾದುದಾಗಿದೆ. ಉಳಿದೆಲ್ಲೆಡೆ ನಾವು ದೃಷ್ಟಿ ಗೋಚರವಾದ ಹಾಗೂ ಸುಲಭ ವೇದ್ಯವಾದ ಸಂಗತಿಯೊಡನೆ ವ್ಯವಹರಿಸುತ್ತೇವೆ. ಆದರೆ ಕೆಲಸಗಾರರೊಡನೆ ಒಡೆಯರು ನಡೆದುಕೊಳ್ಳುವಾಗ--ಯಾಂತ್ರಿಕ ಪ್ರತಿಕ್ರಿಯೆ ಉಂಟಾಗದೆ, ಮಾನಸಿಕ ಪರಿಣಾಮಕ್ಕೆ ಎಡೆ ಇರುತ್ತದೆ. ಮನುಷ್ಯನ ಮನಸ್ಸು ಅತ್ಯಂತ ಸೂಕ್ಷ್ಮ ಭಾವಾವೇಗಗಳ ಮತ್ತು ಪ್ರವೃತ್ತಿಯ ನೆಲೆವೀಡಾಗಿರುವುದರಿಂದ ಅದನ್ನು ಸಂಪೂರ್ಣ ತಿಳಿದುಕೊಂಡು, ಅನುಕೂಲ ರೀತಿಯಲ್ಲಿ ನಡೆದುಕೊಳ್ಳುವುದು ಕಷ್ಟಸಾಧ್ಯ. ಹೀಗಾಗಿ—ಮಾಲಕ, ಮಜೂರ ಸಂಬಂಧದ ಪ್ರಶ್ನೆ ಬಂದಾಗಲೆಲ್ಲ ನಾವು ಉದಾಸೀನಗೊಳ್ಳುವಂತಾಗಿದೆ.

ಅನ್ಯೋನ್ಯ ಸ್ನೇಹ

ಇದು ಸರಿಯಲ್ಲ ಎಂಬುದನ್ನು ಎಲ್ಲರೂ ಬಲ್ಲರು. ಎಷ್ಟೋ ವೇಳೆ ಕೆಲಸಗಾರರ ಬೇಡಿಕೆ ನ್ಯಾಯವಿರುತ್ತದೆ- ಹಲವೆಡೆ ಒಡೆಯರು ಮನುಷ್ಯತ್ವಕ್ಕೆ ಒಗ್ಗದ ರೀತಿಯಲ್ಲಿ ಕೆಲಸಗಾರರನ್ನು ದುರವಸ್ಥೆಗೀಡುಮಾಡುತ್ತಿರಲೂ ಬಹುದು. ಹಾಗೆಂದು—ಸಾಮಾನ್ಯ ನಿಯಮಾವಳಿಯೊಂದನ್ನು ಅನುಸರಿಸ ಬೇಕಾದುದು ಅನಗತ್ಯವೆಂದು ಹೇಳಲು ಎಡೆಯಿದೆಯೆ? ನಮ್ಮ ಕೂಲಿಕಾರ ಮಂತ್ರಿ ಶ್ರೀ ಗಿರಿ ಹೇಳುವಂತೆ--ಪರಸ್ಪರ ಸಂಪರ್ಕವನ್ನು ಅನ್ಯೋನ್ಯವಾಗಿಸಿಕೊಂಡು, ತಿಳುವಳಿಕೆಯನ್ನು ಹೆಚ್ಚಿಸಿಕೊಂಡು ಸ್ನೇಹಪೂರ್ವಕ ತೊಂದರೆಗಳನ್ನು ವಿಮರ್ಶಿಸಿ ಒಂದು ಉಚಿತ ನಿರ್ಣಯಕ್ಕೆ ಬರುವುದು ಯಾವಾಗಲೂ ಕ್ಷೇಮ. ಇದರಿಂದ ಅಸಮಾಧಾನ, ಬೇಸರ ಮತ್ತು ದ್ವೇಷ ಉದ್ಭವಿಸುವುದನ್ನು ತಪ್ಪಿಸಲು ಸಾಧ್ಯವಿದೆ.

ಕಲ್ಯಾಣ ಸಿದ್ಧಿ

ಇಂಗ್ಲೆಂಡ ಮುಂತಾದ ದೇಶಗಳಲ್ಲಿ ಕೆಲಸಗಾರರು ಮತ್ತು ಒಡೆಯರ ನಡುವಣ ಸಂಬಂಧ ನಮ್ಮಲ್ಲಿಯಷ್ಟು ಕೆಟ್ಟಿಲ್ಲ. ಅಲ್ಲಿ ಔದ್ಯೋಗಿಕ ಕ್ಷೇತ್ರದ ಬೆಳವಣಿಗೆ ಕಳೆದ ಒಂದೂವರೆ ಶತಕದ ಅವಧಿಯಲ್ಲಿ ಮಾಗಿ ಬಂದಿರುವುದೂ--ಹೀಗಾಗಿ ಉದ್ಯಮಗಳ ಕಷ್ಟಸುಖಗಳ ಪೂರ್ಣಾನುಭವ ಇವ್ವರಲ್ಲಿಯೇ ಅವರಿಗಾಗಿರುವುದೂ ಈಗಿನ ಸೌಮ್ಯ ಪರಿಸ್ಥಿತಿಗೆ ಸಹಕಾರಿಯಾಗಿರಬಹುದು. ಇನ್ನು ಭವಿಷ್ಯದಲ್ಲಿ ಒಂದು ಕಾಲ ನಮ್ಮ ಸ್ಥಿತಿಯೂ ಅಷ್ಟೇ ಚೆನ್ನಾದೀತು. ಅದಕ್ಕೆ ಈಗಿಂದೀಗಲೇ ಯೋಗ್ಯ ಕ್ರಮಗಳನ್ನು ಕೈಗೊಳ್ಳುವುದೊಳ್ಳೆಯದು. ಕೆಲಸಗಾರರ ಕಲ್ಯಾಣವನ್ನು ಹಾರೈಸಿ ಬಗೆಬಗೆಯ ಸೌಕರ್ಯಗಳನ್ನು ಒದಗಿಸಿಕೊಟ್ಟರೆ-ಅದರಿಂದ ಬಹಳ ಲಾಭವುಂಟು.

ಸೌಜನ್ಯ—ಸೌಹಾರ್ದ

ವಿದೇಶಗಳಲ್ಲಿ ವಸ್ತುಗಳ ಉತ್ಪಾದನೆಯಲ್ಲಿ ಕೆಲಸಗಾರರ ಚಮತ್ಕಾರವಿದೆ–ಹಾಗೆಂದು, ಆ ವಸ್ತುವನ್ನೇ ಏಕೆ ಉತ್ಪಾದಿಸಬೇಕೆಂಬ ಆಡಳಿತ ಧೋರಣೆಯನ್ನು ಟೀಕಿಸುವ ಅಧಿಕಾರ ಕೆಲಸಗಾರರಿಗಿಲ್ಲ. ಒಡೆಯರು ಪ್ರತಿಯೊಬ್ಬನ ವೈಯಕ್ತಿಕ ಕ್ಷೇಮಚೇತನೆಯಲ್ಲಿ ಆಸ್ಥೆವಹಿಸುತ್ತಾರೆ. ಉದಾ: ಒಬ್ಬನಿಗೆ ಆರುಗಂಟೆಗೆ ಕಾರಖಾನೆಯಿಂದ ಹೊರಬೀಳುವಾಗ ಸರಿಯಾಗಿ ಬಸ್ಸು ಸಿಗುವುದಿಲ್ಲ. ಏಳುಗಂಟೆಯವರೆಗೆ ಅವನು ಸುಮ್ಮನೆ ಕಾಯುತ್ತಿರಬೇಕು--ಇಂಥದರಲ್ಲಿ ಅವನನ್ನು ಒಂದು ತಾಸು ಹೆಚ್ಚು ದುಡಿಸಿ, ಆ ಸಂಬಳಕೊಡಲು, ತನ್ಮೂಲಕ ಅವನೊಡನೆ ಸಹಕರಿಸಲು ಒಡೆಯರು ಮುಂದಾಗುತ್ತಾರೆ. ಊಟ-ಉಡಿಗೆಗಳ ಮಟ್ಟಿಗೆ ಔದಾರ್ಯ ಮತ್ತು ಒಳ್ಳೆಯ ಉಪಚಾರಗಳಿಂದ, ಕೆಲಸಗಾರರ ಪ್ರೇಮ ಸಂಪಾದಿಸುತ್ತಾರೆ. ತೀಕ್ಷ್ಣ ಬುದ್ಧಿಯುಳ್ಳವರನ್ನು ಮತ್ತು ತಮಗಿಂತ ಮೇಧಾವಿಗಳಾದವರನ್ನು ಕೆಲಸಕ್ಕೆ ಇಟ್ಟುಕೊಳ್ಳುವುದಪಾಯಕರ ಎಂದು ಒಡೆಯರ ಅಭಿಪ್ರಾಯ. ಸಾಧಾರಣ ಬುದ್ಧಿಯುಳ್ಳವರನ್ನು ಯೋಗ್ಯರೀತಿಯಲ್ಲಿ ತರಬೇತಿಗೊಳಿಸಿ-ಚೆನ್ನಾಗಿ ದುಡಿಸಿದಂತೆ, ನಡೆಸಿಯೂ ಕೊಳ್ಳುತ್ತಾರೆ. ಮುಖ್ಯವಾಗಿ ಕೆಲಸಗಾರರು ಮನುಷ್ಯರೆಂಬುದನ್ನು ಮರೆಯುವುದಿಲ್ಲ

ನಡೆಯದ ನಾಣ್ಯ

ನೀವು ಆರೋಗ್ಯವಂತರಿದ್ದಾಗ ವಿಮೆ ಇಳಿಸಬಲ್ಲಿರಿ; ಆದರೆ, ಆರೋಗ್ಯ ಕೆಟ್ಟಾಗ, ನೀವು ವಿಮೆಯ ರಕ್ಷಣೆಯನ್ನು ಪಡೆಯಲಾರಿರಿ.—ನಡೆಯದ ನಾಣ್ಯದಂತೆ ನಿಮ್ಮ ಆಗಿನ ಸ್ಥಿತಿ.

ಕಾರಣ, ನೀವು ವಿಮೆ ಇಳಿಸುವುದನ್ನು ಮುಂದೂಡಲಾಗದು ಇಂದೇ ವಿಮೆ ಇಳಿಸಿ ನಿಮ್ಮ ಮತ್ತು ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪನೀ ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೩

ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ

The Canara Mutual Assurance Co. Ltd.

Head Office: **UDIPI**, S. India.



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ಪಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3--8—0
ಸಣ್ಣ ಬಾಟ್ಲಿಗೆ ರೂ. 2--0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಜಿ. ಐ. ಪಿ.) ಮುಂಬಯಿ, ೧೪

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ

ಇವುಗಳಿಗೆ

ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಉಡುಪಿ

ಯಾತ್ರಿಕರಿಗೂ ಪ್ರಯಾಣಿಕರಿಗೂ ಸರ್ವ ಅನುಕೂಲವಾಗುವಂತೆ

ನಗರದ ಕೇಂದ್ರ ಭಾಗದಲ್ಲಿದೆ.

ಶಾಲೆ, ಕಾಲೇಜುಗಳಿಗೂ ಸಹಕಾರಿ ಸಂಘ, ಮುನ್ಸಿಪಲ್ ಕೋರ್ಟುಗಳಿಗೂ ಕೃಷಿಕ, ವರ್ಗದಾರ, ವ್ಯಾಪಾರಿಗಳಿಗೂ ಬೇಕಾಗುವ ಉತ್ತಮ ಕಾಗದದಲ್ಲಿ ತಯಾರಿಸಿದ

ತರತರದ ಫಾರ್ಮುಗಳು, ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಜನರ ಮೇಲೆ ಕರಭಾರ-

ಮದ್ರಾಸಿನ ಕೊರತೆಯ ಮುಂಗಡಪತ್ರ-

ಮುಂಗಡ ಪತ್ರಗಳು

ಕಳೆದ ವಾರವು ಮುಖ್ಯವಾಗಿ ಮುಂಗಡ ಪತ್ರಗಳ ಸುದ್ದಿಯಿಂದ ಕೂಡಿತ್ತು. ಮದ್ರಾಸು, ಮುಂಬಯಿ, ಮೈಸೂರು ಮತ್ತು ಪಶ್ಚಿಮ ಬಂಗಾಲ ರಾಜ್ಯದ ಸರಕಾರಗಳಲ್ಲಿ ಪ್ರತಿಯೊಂದೂ ಕೊರತೆಯ ಮುಂಗಡ ಪತ್ರವನ್ನು ಮಂಡಿಸಿದುವು. ಮುಂಬಯಿ ಮತ್ತು ಮದ್ರಾಸುಗಳು ಹೊಸತಾಗಿ ಕರಭಾರವನ್ನು ಹೇರಿ ಕೊರತೆಯನ್ನು ಬಾಯಿಗೂಡಿಸಲು ಯತ್ನಿಸಿದರೆ- ಉಳಿದೆರಡು ರಾಜ್ಯಗಳು ಏನನ್ನೂ ಮಾಡಲು ಸಿದ್ಧವಿಲ್ಲ. ಮದ್ರಾಸು ರಾಜ್ಯದ ಮುಂಗಡ ಪತ್ರವನ್ನು ಮಂಡಿಸುವಾಗ ಅರ್ಥಸಚಿವರಾದ ಶ್ರೀ ಸಿ. ಸುಬ್ರಹ್ಮಣ್ಯಂ ಐದು ಬಗೆಯ ಹೊಸ ತೆರಿಗೆಗಳನ್ನು ಹೂರಿಸುವುದು ಸರಕಾರದ ಇಚ್ಛೆ ಎಂದು ಹೇಳಿದರು. ಶ್ರೀ ಸಿ. ರಾಜಗೋಪಾಲಾಚಾರಿ ಈ ಮೊದಲೇ ಹೊಸ ತೆರಿಗೆಗಳ ಸೂಚನೆಯನ್ನು ತಮ್ಮ ರಾಯಲಸೀಮೆಯ ಪ್ರವಾಸ ಕಾಲದಲ್ಲಿ ಕೊಟ್ಟು ಬಿಟ್ಟದ್ದರಿಂದ ಇದು ಯಾರನ್ನೂ ಚಕಿತಗೊಳಿಸಲಿಲ್ಲ. ಇಷ್ಟೇ ಅಲ್ಲ—ಪತ್ರಿಕೆಗಳಲ್ಲಿ ಮುಂಗಡ ಪತ್ರದ ರಹಸ್ಯಗಳು ಸುಮಾರು ಒಂದು ವಾರಕ್ಕೆ ಮೊದಲೇ ಪ್ರಕಟವಾಗಿಯೂ ಇದ್ದುವು. ನಿಜ ಹೇಳಬೇಕೆಂದರೆ- ಪೆಟ್ರೋಲು ಮಾರಾಟದ ಕರವನ್ನು ಪ್ರತಿ ಗೆಲನ್ನಿಗೆ ನಾಲ್ಕಾಣೆ ಇದ್ದುದನ್ನು ಆರಾಣೆಗೇರಿಸುವರೆಂಬ ಸುದ್ದಿಯನ್ನು ಪತ್ರಿಕೆಗಳು ಪ್ರಕಟಿಸಿದುದನ್ನು ನೋಡಿಯೇ, ಸರಕಾರವು ಗವರ್ನರರ ಆರ್ಡಿನೆನ್ಸ್ ಮೂಲಕ ಈ ಕರವನ್ನು ಮುಂದಾಗಿ ಜಾರಿ ಮಾಡಿತು. ಹೀಗೆ ಮುಂಗಡ ಪತ್ರದ ಮುಖ್ಯಾಂಶಗಳು ಸದಸ್ಯರಿಗೆ ತಿಳಿಯುವುದಕ್ಕೆ ಮುಂಚಿತವಾಗಿಯೇ ಬಹಿರಂಗಗೊಂಡುದು, ಹಕ್ಕುಬಾಧ್ಯತೆಗಳಿಗೆ ವ್ಯತಿರಿಕ್ತವಾಗಿದೆ ಎಂದೂ-ಅಲ್ಲದೆ, ಮಂತ್ರಿ ಮಂಡಳದಲ್ಲಿ ಇಂಥ ಹೊಣೆಗೇಡಿ ಕೆಲಸಕ್ಕೆ ಕಾರಣರಾದವರು ಒಡನೆಯೇ ರಾಜೀನಾಮೆ ಕೊಡಬೇಕೆಂದೂ ವಿರೋಧಿ ಪಕ್ಷದವರು ಒತ್ತಾಯಿಸಿದ್ದರೆ,

ರಾಜಾಜಿಯ ಉಗ್ರ ಕ್ರಮ

ಹೀಗೆ ಕೋಲಾಹಲವೆಬ್ಬಿಸುವುದೇ ಧ್ಯೇಯವಾಗಿರುವ ವಿರೋಧಿ ಗುಂಪಿನ ಕೇಳಿಕೆಯನ್ನು ಮಾನ್ಯಮಾಡಲು ರಾಜಾಜಿ ಒಪ್ಪಲಿಲ್ಲ. ಪತ್ರಿಕಾಕರ್ತರು ಅತ್ಯಂತ ಚಾಣಾಕ್ಷರಿರುವುದರಿಂದ, ಊಹಾಪೋಹಗಳಿಂದ ಕತೆ ಕಟ್ಟಿ ಪ್ರಕಟಿಸಿದ್ದಾರೆ-ಮತ್ತೀಗ ಅದು ನಿಜವೆಂದು ತೋರಹತ್ತಿದೆ. ಮಂತ್ರಿ ಮಂಡಳದ ಸದಸ್ಯರಲ್ಲಿ ಇದಕ್ಕೆ ಯಾರೂ ಹೊಣೆಗಾರರಿದ್ದಂತೆ ತೋರುವುದಿಲ್ಲ. ಮಂತ್ರಿಗಳೇ ಈ ಸುದ್ದಿಯನ್ನು ಹೊರಗೆಡವಿದರೆಂಬುದಕ್ಕೆ ಸಾಕ್ಷಿ ಇಲ್ಲವಾಗಿ-ಏನು ಮಾಡಲೂ ಬರುವುದಿಲ್ಲ. ಹೀಗೆ ಮುಖ್ಯ ಮಂತ್ರಿಗಳು ಸಮಾಧಾನ ಹೇಳಿದರೂ ಸದಸ್ಯರು ಸಂತುಷ್ಟರಾಗಿಲ್ಲ.

ಈ ನಡುವೆ, ಎಂದಿನಂತೆ ಗವರ್ನರರು ಶಾಸನಸಭೆಗಳ ಸಂಯುಕ್ತಾಧಿವೇಶನವನ್ನು ಉದ್ದೇಶಿಸಿ ಮಾತನಾಡುವಾಗ ಸಂಯುಕ್ತ ಪ್ರಜಾಸತ್ತಾತ್ಮಕ ರಂಗದ ಸದಸ್ಯರು ಗೈರುಹಾಜರಾದರು. ಮಂತ್ರಿಮಂಡಳವು ಮುಂಗಡ ಪತ್ರದ ಕೆಲವೊಂದು ಮುಖ್ಯಾಂಶಗಳನ್ನು ಅಕಾಲದಲ್ಲಿ ಹೊರಗೆಡವಿದುದರ ನಿಶೇಧಾರ್ಥವಾಗಿ ಈ ಬಹಿಷ್ಕಾರವೆಂದು ಅವರು ಹೇಳಿದ್ದಾರೆ. ರಾಜಾಜಿ ಇದರಿಂದ ಕುಪಿತಗೊಂಡೋ ಎಂಬಂತೆ—ಉಗ್ರ ಕ್ರಮ ಕೈಗೊಂಡಿದ್ದಾರೆ. ತಾವು ಮುಖ್ಯ ಮಂತ್ರಿಪದದಲ್ಲಿದ್ದುಕೊಂಡು ಕೆಲಸ ಮಾಡುವ ಮಂತ್ರಿಮಂಡಳದ ಮೇಲೆ ಸದಸ್ಯರಿಗೆ ವಿಶ್ವಾಸವಿರುವುದೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಲು ಬಯಸುವೆನಾಗಿ ಅವರು ಹೇಳಿದ್ದಾರೆ. ಒಂದನೆಯದಾಗಿ, ವಿರೋಧಿ ಗುಂಪಿನವರು ತಮ್ಮೊಡನೆ ಸಹಕರಿಸುತ್ತಿಲ್ಲ—ಎರಡನೆಯದಾಗಿ, ಈಚೆಗೆ ಅರಪ್ಪುಕೋಟೆ ಉಪಚುನಾವಣೆಯಲ್ಲಿ ಕಾಂಗ್ರೆಸು ಉಮೇದ್ವಾರರ ಸೋಲು ಸರಕಾರಕ್ಕೆ ಜನ ಬೆಂಬಲವಿದೆ ಎಂಬುದನ್ನು ತೋರಿಸುತ್ತಿಲ್ಲ ಎಂದು ರಾಜಾಜಿಯ ಹೇಳಿಕೆ.

ಆಕಸ್ಮಿಕ ವಿಸ್ಮಯ

ವಿಶ್ವಾಸ ಸೂಚಕ ಠರಾವನ್ನು ಆಕಸ್ಮಿಕವಾಗಿ ತಂದುದರಿಂದ ಎಲ್ಲರಿಗೂ ಆಶ್ಚರ್ಯವಾಗಿದೆ. ಸಾಮಾನ್ಯವಾಗಿ ಮುಂಗಡ ಪತ್ರದಲ್ಲಿ ಹೊಸ ತೆರಿಗೆಗಳ ಸೂಚನೆ ಇರುವುದಕ್ಕೆ ವಿಸ್ಮಯಗೊಳ್ಳಬೇಕಾದವರು—ಈಗ ರಾಜಾಜಿಯ ಠರಾವಿನಿಂದ ಮೈ ಜುಮ್ಮೆಂದುಕೊಳ್ಳುವಂತಾಗಿದೆ. ಮಂತ್ರಿಮಂಡಳವು ಹೊಣೆಗಾರಿಕೆಯನ್ನು ವಹಿಸಿ ಇನ್ನೂ ಮೂರು ತಿಂಗಳೇ ಸಂದಿಲ್ಲ-ಜನರು ರಾಜಾಜಿ ಕೈಗೆದುಕೊಂಡ ವಿನಿಯಂತ್ರಣವೇ ಮೊದಲಾದ ಧೈರ್ಯ ಹೆಜ್ಜೆಯನ್ನು ಉತ್ಸಾಹದಿಂದ ಸ್ವಾಗತಿಸಿರುವರಾದರೂ ಇನ್ನೂ ಒಂದು ನಿಶ್ಚಿತಾಭಿಪ್ರಾಯಕ್ಕೆ ಅವರು ಬಂದಿಲ್ಲ. ಹೀಗಿರುವಾಗ-ಸದಸ್ಯರೊಡನೆ ತನ್ನಲ್ಲಿ ವಿಶ್ವಾಸವಿದೆಯೇ ಹೇಗೆ ಎಂದು ಪ್ರಶ್ನೆಕೇಳುವುದು ಉಚಿತವೇ ಎಂಬ ಬಗ್ಗೆ ಸಂದೇಹವಿದೆ.

ಏನೇ ಇರಲಿ-ಜೂನ್ 20ನೇ ತಾರೀಕಿನಿಂದ ಇಂದಿನವರೆಗೆ-ಎಂದರೆ ನಾಲ್ಕು ದಿನಗಳ ಕಾಲ ಇದರ ಕುರಿತು ಚರ್ಚೆ ನಡೆದು, ಇಷ್ಟರಲ್ಲಿಯೇ ಒಂದು ನಿರ್ಣಯವಾಗಬೇಕು. ಆ ಬಳಿಕವೇ ಈಗ ಮಂಡಿಸಲ್ಪಟ್ಟಿರುವ ಮುಂಗಡ ಪತ್ರದ ಕುರಿತು ಚರ್ಚೆ ನಡೆಯುವುದು.

ಕರಭಾರದ ವಿವರ

ಈ ಚರ್ಚೆಯ ಕಾಲವು ಇನ್ನೂ ಬಿಸಿಯಾಗಲು ಸಾಧ್ಯವುಂಟು-ಮುಖ್ಯವಾಗಿ ಹೊಸ ತೆರಿಗೆಗಳ ಸೂಚನೆ ಇರುವುದರಿಂದ, ವಿರೋಧೀ ಗುಂಪಿನವರ ಟೀಕೆಗೆ ಇದು ಒಳ್ಳೆಯ ಗ್ರಾಹವಾಗುವುದೆಂಬಲ್ಲಿ ಸಂದೇಹ ಬೇಡ. ಕಟುವಾದ ಟೀಕಾ ಟಿಪ್ಪಣಿಗಳಿಗೊಳಗಾದ ಬಳಿಕ-ಅಲ್ಪ ಬಹುಮತದಿಂದ ಈ ತೆರಿಗೆಗಳು ಮಂಜೂರಾತಿ ದೊರಕಿಸಿಕೊಳ್ಳಬಹುದೋ ಏನೋ. ಈಗ ಸದಸ್ಯರ ಮುಂದಿಟ್ಟಿರುವ ಅಂದಾಜಿನ ಪ್ರಕಾರ ಸುಮಾರು ೨೫೦ ಲಕ್ಷ ರೂಪಾಯಿಯ ಕೊರತೆಯನ್ನು ಮುಂಗಡಪತ್ರ ತೋರಿಸುತ್ತದೆ. ಹೊಸ ತೆರಿಗೆಗಳ ರೂಪದಲ್ಲಿ ಸುಮಾರು ೨೭೦ ಲಕ್ಷ ರೂಪಾಯಿಗಳನ್ನು ನಿರೀಕ್ಷಿಸಲಾಗಿದೆ. ಮತ್ತೂ ಉಳಿಯುವ ಕೊರತೆಯನ್ನು ಈಚೆಗೆ ವಿನಿಯಂತ್ರಣದ ಪರಿಣಾಮವಾಗಿ ನಾಗರಿಕ ಪೂರೈಕೆ ಖಾತೆಯಲ್ಲಿ ವೆಚ್ಚ ಕಡಿಮೆಯಾದ ಮೂಲಕ ಮತ್ತಿತರ ಮಿತವ್ಯಯಗಳಿಂದ ಮತ್ತು ಕಾದಿಟ್ಟ ನಿಧಿಯಿಂದ ತುಂಬಿಕೊಳ್ಳಲಾಗುವುದು. ಹೊಸ ಕರಭಾರದಲ್ಲಿ- ೧) ಮೋಟಾರು ಪ್ರವಾಸಿಕರ ಮೇಲೆ ಮೈಲಿಗೆ ಒಂದು ಪೈಯಂತೆ ಹೆಚ್ಚು ವಸೂಲು ಮಾಡಲಾಗುವುದು. ಇದರಿಂದ ಒಂದು ವರ್ಷದಲ್ಲಿ ಎರಡು ಕೋಟಿ ರೂಪಾಯಿ ಆದಾಯ ಬರುವುದು. ೨) ಪೆಟ್ರೋಲಿನ ಮಾರಾಟದ ಕರವನ್ನು ಗೆಲನ್ನಿಗೆ ನಾಲ್ಕಾಣೆಯಿಂದ ಆರಾಣೆಗೇರಿಸುವ ಮೂಲಕ ೩೦ ಲಕ್ಷ ರೂಪಾಯಿ ಆದಾಯ. ೩) ದೊಡ್ಡ ದೊಡ್ಡ ಭೂಕ್ಷೇತ್ರಗಳ ಮೇಲೆ ಹೆಚ್ಚಿನ ಕಂದಾಯ ಹೇರಿಸುವುದರ ಮೂಲಕ ೭೫ ಲಕ್ಷ ರೂಪಾಯಿ. ೪) ಹೊಸತಾಗಿ ನೀರಾವರಿ ಮೂಲಕ ಕೃಷಿ ಯೋಗ್ಯವಾಗಿ ಪರಿವರ್ತಿಸಿದ ಭೂಮಿಯ ಮೇಲೆ ತೆರಿಗೆ ಹೇರಿಸುವುದರಿಂದ ೩೦ ಲಕ್ಷ ರೂಪಾಯಿ; ಮತ್ತು ೫) ವಿದೇಶದಿಂದ ಬರುವ ಮದ್ಯದ ಮೇಲೆ ವಿಶೇಷ ತೆರಿಗೆಯಿಂದ ೧೫ ಲಕ್ಷ ರೂಪಾಯಿ.

ಸರಕಾರದ ಸುಖ-ದುಃಖ

ಸರಕಾರದ ಹೇಳಿಕೆಯಂತೆ ಈ ಹೊಸ ತೆರಿಗೆಗಳು ಒಂದು ವರ್ಷಕ್ಕೆ ನಾಲ್ಕು ಕೋಟಿ ರೂಪಾಯಿ ಆದಾಯವನ್ನು ತರುತ್ತವೆ. ಈ ಮುಂಗಡ ಪತ್ರದ ಮಟ್ಟಿಗೆ ೨೭೦ ಲಕ್ಷ ರೂಪಾಯಿಯ ಆದಾಯ ಬರಬಹುದು. ಮುಂಗಡ ಪತ್ರದಲ್ಲಿ ವಿವಿಧ ಲೋಕೋಪಯೋಗಿ ಕೆಲಸಗಳಿಗೆ ಹಣವನ್ನು ಮೀಸಲಿರಿಸಿದುದರಿಂದ, ಹೀಗೆ ತೆರಿಗೆ ಎತ್ತಿ ವೆಚ್ಚವನ್ನು ಹೊಂದಿಸಿಕೊಳ್ಳಬೇಕಾಯಿತು. ಸರಕಾರವು ಹೊಸತಾಗಿ ಯೋಜನೆಗಳನ್ನು ತೊಡಗದಿದ್ದರೂ, ಇಷ್ಟರಲ್ಲೇ ಫಲವನ್ನು ಕೊಡಲಿರುವ ಈ ಮೊದಲೇ ಕೈಗೊಂಡ ನೀರಾವರಿ ಮತ್ತು ವಿದ್ಯುತ್ ಯೋಜನೆಗಳನ್ನು ಪೂರೈಸಲು ಹಣ ಅತ್ಯಗತ್ಯವಾಗಿದೆ. ಸುಮಾರು ೨೦ ಕೋಟಿ ರೂಪಾಯಿ ಬಂಡವಾಳವನ್ನು ಇಂಥ ಸಾರ್ವಜನಿಕ ಉಪಯೋಗದ ಕೆಲಸಗಳಿಗೆ ವಿನಿಯೋಗಿಸಲಾಗುವುದು. ಪಂಚವಾರ್ಷಿಕ ಯೋಜನೆಯನ್ವಯ ತೊಡಗಬೇಕಿರುವ ಉಪಕ್ರಮಗಳಿಗೂ ಹಣ ಬೇಕು. ಸಾರ್ವಜನಿಕರಿಂದ ಈ ವರ್ಷವೂ ಸುಮಾರು ನಾಲ್ಕು ಕೋಟಿ ರೂಪಾಯಿ ಸಾಲವನ್ನು ಎತ್ತಲಾಗುವುದು. ರಾಯಲಸೀಮೆಯಲ್ಲಿ ಪರಿಹಾರ ಕಾರ್ಯಗಳು ಇನ್ನೂ ಮುಂದುವರಿದಿವೆ. ಇದರ ವೆಚ್ಚದಲ್ಲಿ ಸಹಭಾಗಿಯಾಗಬೇಕೆಂದು ಕೇಂದ್ರವನ್ನು ಒತ್ತಾಯಿಸಲಾಗಿದೆ. ಎರಡು ಕೋಟಿ ರೂಪಾಯಿಗಳ ನ್ಯಾಯವಾದ ಬೇಡಿಕೆಯನ್ನು ಮುಂದಿಡಲಾಗಿದೆ. ಇದರ ಹೊರತು ಶಾಲಾ ಸಂಬಳದಲ್ಲಿ ಈಚೆಗೆ ತೋರಿದ ಕೆಲವು ರಿಯಾಯತಿಯ ಕಾರಣದಿಂದ ಸರಕಾರಕ್ಕೆ ಒಂದು ಕೋಟಿ ರೂಪಾಯಿ ವೆಚ್ಚ ಹೆಚ್ಚಾಗಿದೆ. ವಿವಿಧ ಶೈಕ್ಷಣಿಕ ಸಂಸ್ಥೆಗಳಿಗೆ ಮತ್ತು ಗ್ರಾಮಾಭಿವೃದ್ಧಿ ಪ್ರಯತ್ನಗಳಿಗೆ ಸಹಾಯವನ್ನು ಕೊಡಲು ನಿಶ್ಚಯಿಸಲಾಗಿದೆ.

ರಾಜ ಮಾರ್ಗಗಳು

ಮದ್ರಾಸಿನ ಮುಂಗಡ ಪತ್ರದ ಸ್ವರೂಪ ಹೀಗಿದ್ದರೆ-ಮುಂಬಯಿ ರಾಜ್ಯದಲ್ಲಿ

PLACE YOUR LIFE ASSURANCE WITH A COMPANY OF YOUR OWN - - - -

Established in 1929, the POPULAR is progressing on sound lines It has built up for itself a record of efficient service, sound investment and a personal touch with its Policyholders and Representatives At whatever stage we welcome yo[ur] association with the POPULAR.

The Popular Insurance Co. Ltd.
"Popular Buildings", MANGALORE—1.

ZANDU Mahayogaraja Guggula

ಝಾಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯಾಷಧ. 1 ತೊಲೆಗೆ ರೂ 3/- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.
2 ಶ್ರೀ ವಿ. ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು
4 ಎಲ್. ಎನ್ ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸ್ಥಳ ಗಳಲ್ಲಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಪ್ರಾತಿನಿಧಿಗಳು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತುಗಳಿಗೆ ಬರೆಯಿರಿ-

DAMODAR & CO.,
Nainiappa Naicken Street, Park Town-**MADRAS** 3.

-ಹೊಸತೊಂದು ತಲೆಸಿಡಿತ

-ಲೋಕಸಭೆಯಲ್ಲಿ ಕಾಶ್ಮೀರ ಪ್ರಶ್ನೆ

ಹೊಸ ಕರಭಾರದ ಸೂಚನೆ ಇದೆ. ಪೆಟ್ರೋಲು ಮತ್ತು ಭೂಕಂದಾಯದ ಮೇಲೆ ಅಲ್ಲಿಯೂ ಹೆಚ್ಚಿಗೆ ತೆರಿಗೆ ಬೀಳುವ ಸೂಚನೆ ಇದೆ. ಜನರು ತ್ಯಾಗಕ್ಕೆ ಸಿದ್ಧರಾಗದ ಹೊರತು ಕಲ್ಯಾಣಪ್ರದ ಯೋಜನೆಗಳಲ್ಲಿ ಸರಕಾರವು ತೊಡಗಲಾರದೆಂದು ರಾಜಾಜಿ ನುಡಿದಂತೆ, ಡಾ. ಜೀವರಾಜ ಮೆಹತಾ ಕೂಡ ಹೇಳಿದ್ದಾರೆ. ತೆರಿಗೆಗಳನ್ನು ಹೊಸ ಹೊಸ ರೂಪದಿಂದ ಹೇಗೆ ಹೊರಿಸಬಹುದೆಂಬುದನ್ನು ವಿವೇಚಿಸುವುದೇ ಅರ್ಥ ಮಂತ್ರಿಗಳ ಬುದ್ಧಿವಂತಿಕೆ ಇರಬಹುದು. ಸರಕಾರದೊಡನೆ ಜನರು ಸಹಕರಿಸಿದರೆ ಮಾತ್ರ ರಾಷ್ಟ್ರಾಭ್ಯುದಯದ ಕಾರ್ಯಗಳು ಪೂರ್ಣವಾಗಬಹುದೆಂಬುದರಿಂದ--ಈ ಅಲ್ಪ ತ್ಯಾಗಕ್ಕೆ ಸಿದ್ಧರಿರಬೇಕಾದುದು ನ್ಯಾಯವೆನ್ನೋಣ. ಸರಕಾರ ಸಹ ಬೇಕೆಂದೇ ಕರಭಾರವನ್ನು ಹೊರಿಸುವುದು ಸರಿಯಲ್ಲ. ವಸೂಲುಮಾಡಿದ ತೆರಿಗೆಯನ್ನು ಸದ್ವಿನಿಯೋಗಿಸಬೇಕು. ಉದಾ: ಮುಂಬಯಿ ರಾಜ್ಯದಲ್ಲಿ ವಾಹನ ಸಾರಿಗೆಯ ಮೇಲೆ ಹೊಸ ಕರವನ್ನು ಹೇರಿ, ಬಂದ ಮೊತ್ತವನ್ನು ರಸ್ತೆಗಳ ದುರಸ್ತಿಗಾಗಿ ವಿನಿಯೋಗಿಸುವರೆಂಬ ಸೂಚನೆ ಇದೆ. ಇದು ಒಳ್ಳೆಯದೇ. ಲೋಕಸಭೆಯಲ್ಲಿ ಸಾರಿಗೆ ಮತ್ತು ಸಂಪರ್ಕ ಶಾಖೆಯ ಬೇಡಿಕೆಯ ಮೇಲೆ ಚರ್ಚೆ ನಡೆದಾಗಲೂ ಈ ಕುರಿತು ಒತ್ತಾಯ ತರಲಾಯಿತು. ರಸ್ತೆಗಳು ವಾಹನ ಸಂಚಾರಕ್ಕೆ ಅನುಕೂಲವಿರಬೇಕೆಂದೂ, ಮಾರ್ಗ ನಿರ್ಮಾಣ ಕಾರ್ಯವು ಭರದಿಂದ ಮುಂದುವರಿಯುವದಗತ್ಯವೆಂದೂ ಸದಸ್ಯರು ಸೂಚಿಸಿದರು. ಸರಕಾರದವರು ರಾಜ ಮಾರ್ಗಗಳನ್ನು ರಚಿಸುವ ಪಂಚವಾರ್ಷಿಕ ಯೋಜನೆಯನ್ನು ಸಿದ್ಧಗೊಳಿಸಿದ್ದು ೨೫ ಕೋಟಿ ರೂಪಾಯಿಯ ವೆಚ್ಚದಿಂದ ಅದನ್ನು ಕಾರ್ಯರೂಪಕ್ಕೆ ತರಲಾಗುವುದು. ಈಗಾಗಲೇ ಮಹತ್ವದ ಹೆದ್ದಾರಿಗಳನ್ನು ಪರಸ್ಪರ ಜೋಡಿಸುವ ಕಾರ್ಯಕ್ರಮ ನಡೆದಿದೆ. ರಾಜ್ಯ ಸರಕಾರಗಳಿಗೆ ಸಣ್ಣ ಸಣ್ಣ ರಸ್ತೆಗಳ ಬಗ್ಗೆ ಸಹಾಯ ಪೂರೈಸಲು ಸರಕಾರವು ಸಿದ್ಧವಿದೆ. ರಸ್ತೆಗಳ ರಾಷ್ಟ್ರೀಕರಣ ಧೋರಣವನ್ನು ಬದಲಾಯಿಸುವುದು ಸರಕಾರದ ಇಚ್ಛೆಯಿಲ್ಲ ಎಂದು ತಿಳಿಸಲಾಯಿತು.

ಸಂಪರ್ಕ ಸಾಧನ

ರಸ್ತೆಗಳ ಅನುಕೂಲತೆ ಮತ್ತು ಮಿತವ್ಯಯ ಸೃಷ್ಟಿಯು ಹಳ್ಳಿಹಳ್ಳಿಗೂ ಟಪ್ಪಾಲು ಸಂಪರ್ಕವನ್ನು ವಿಸ್ತರಿಸುವುದಕ್ಕೆ ಆಗತ್ಯವೆಂದು ಸಂಪರ್ಕ ಶಾಖೆಯ ಮಂತ್ರಿ ಜಗಜೀವನ ರಾಮರು ಹೇಳಿದರು. ಇದು ನಿಜವೇ. ಇಂದು ದೇಶದಲ್ಲಿ ಸ್ವಲ್ಪ ಮಟ್ಟಿಗಾದರೂ ಸಮರ್ಪಕವೆನಿಸುವ ರೀತಿಯಲ್ಲಿ ಕೆಲಸ ಮಾಡುವ ಖಾತೆಗಳು ಎರಡೇ- ೧)ಅಂಚೆ ಮತ್ತು ತಂತಿ ಇಲಾಖೆ ೨) ರೈಲು. ಹಳ್ಳಿಹಳ್ಳಿಗೂ ಅಂಚೆ ಸೌಕರ್ಯವನ್ನು ವಿಸ್ತರಿಸುವುದವಶ್ಯವಿದ್ದಂತೆ- ಮಿತವ್ಯಯದ ಕಡೆಗೂ ದೃಷ್ಟಿ ಇಡಬೇಕು. ಸುಮಾರು ೨೦೦೦ ಜನವಸತಿಯುಳ್ಳ ಪ್ರತಿಯೊಂದು ಹಳ್ಳಿಗೂ ಟಪ್ಪಾಲು ವ್ಯವಸ್ಥೆಯನ್ನೂ ಜಿಲ್ಲಾ ಕೇಂದ್ರಗಳಿಗೆಲ್ಲ ಟೆಲಿಫೋನು ಸಂಬಂಧವನ್ನು ಕಲ್ಪಿಸಲು ಸರಕಾರ ತತ್ಪರವಿದೆ ಎಂದು ಮಂತ್ರಿಗಳು ಆಶ್ವಾಸನೆ ಕೊಟ್ಟರು. ಮುಖ್ಯವಾಗಿ ಹಿಂದಿನ ಸಂಸ್ಥಾನಗಳಲ್ಲಿ ಇಂಥ ಸೌಲಭ್ಯಗಳು ದುರ್ಲಭವಿವೆ ಎಂಬುದನ್ನು ಮಂತ್ರಿವರ್ಯರು ಸ್ಪಷ್ಟೀಕರಿಸಿದರು. ಈಗ ಸಂಸ್ಥಾನಗಳು ಭಾರತದ ಒಕ್ಕೂಟದಲ್ಲಿ ಸೇರ್ಪಡೆ ಹೊಂದಿರುವುದರಿಂದ– ಅವುಗಳಿಗೆ ಘಟನಾತ್ಮಕವಾಗಿ "ಬಿ" ಸ್ಥಾನವನ್ನು ಕೊಡಲಾಗಿದ್ದರೂ—ಅವುಗಳ ಸರ್ವಾಂಗೀಣ ಉನ್ನತಿಯನ್ನು ಮರೆಯುವುದು ಧರ್ಮವಲ್ಲ. ಸಂಸ್ಥಾನ ಶಾಖೆಯ ಮೂಲಕ ಭಾರತದ ಒಕ್ಕೂಟವನ್ನು ಸಾಧಿಸುವುದರಲ್ಲಿ ಯಶಸ್ಸು ದೊರೆಯಿತು. ಈಗ ಅದರ ಎಷ್ಟೋ ಕಾರ್ಯಗಳು ಹೆಚ್ಚು ಕಡಿಮೆ ಮುಗಿದಂತಾಗಿವೆ. ಕಾರಣ ಇನ್ನು ಮುಂದೆ ಗೃಹ ಶಾಖೆಯೊಂದಿಗೆ ಸಂಸ್ಥಾನಗಳ ಶಾಖೆಯು ಲೀನವಾಗುವುದೆಂದು ಡಾ। ಕಟಜೂ ಲೋಕ ಸಭೆಯಲ್ಲಿ ತಿಳಿಸಿದರು. ಇದನ್ನು ಹರ್ಷೋದ್ಗಾರಗಳಿಂದ ಸದಸ್ಯರು ಸ್ವಾಗತಿಸಿದರು.

ಪ್ರಚಾರ ಕೇಂದ್ರ

ಸಂಸ್ಥಾನಗಳ ಹಿಂದಿನ ಅಧಿಪತಿಗಳಿಗೆ ಕೊಡುವ ಖಾಸಗಿ ಖರ್ಚನ್ನು ಘಟನೆಯಲ್ಲಿ ಬದಲಾವಣೆ ಮಾಡದೆ ನಿಲ್ಲಿಸಲು ಬರುವುದಿಲ್ಲವೆಂದು ಸದಸ್ಯರಿಗೆ ಮನವರಿಕೆ ಮಾಡಿಕೊಡಲಾಯಿತು. ಗೃಹ ಶಾಖೆಯ ಬೇಡಿಕೆಯು ಕಾಲಕ್ಕೆ ಘಟನಾತ್ಮಕ ರೀತಿಯಲ್ಲಿ ಕೆಲಸ ಮಾಡದೆ, ಕಮ್ಯೂನಿಸ್ಟರೇ ಮುಂತಾದವರು ಕಾಯಿದೆ ಭಂಗಮಾಡುವುದು ಶೋಭಿಸುವುದಿಲ್ಲ ಎಂದು ಹೇಳಿದರು. ಪ್ರಜಾಸತ್ತಾತ್ಮಕ ರಾಜ್ಯದಲ್ಲಿ ರಾಷ್ಟ್ರನಿಷ್ಠೆ ಇರಬೇಕಾದುದು ಅಗತ್ಯ. ದೇಶದ ಕಾಯಿದೆ--ಕಾನೂನುಗಳನ್ನು ದುರ್ಲಕ್ಷಿಸಿದರೆ–ಒಳ್ಳೆಯದಾಗದು. ಸರಕಾರವು ಸ್ವಾರ್ಥಾಧಿಕಾರಿಯಾಗಿದ್ದಿತೆಂಬ ಮಾತಿನಲ್ಲಿ ಹುರುಳಿಲ್ಲ. "ನಾವು ಸರ್ವಾಧಿಕಾರಿಗಳಿದ್ದರೆ ನೀವು ಇಲ್ಲಿರಲು ಎಡೆಯಿರುತ್ತಿದ್ದಿಲ್ಲ–" ಎಂದು ಡಾ. ಕಟಜೂ ಖಂಡತುಂಡವಾಗಿ ನುಡಿದುದನ್ನು ಇಲ್ಲಿ ಉಲ್ಲೇಖಿಸಬಹುದು.

ಬಾನುಲಿ ಶಾಖೆಯನ್ನು ವ್ಯಾಪಾರೀ ದೃಷ್ಟಿಕೋಣದಿಂದ ನಡೆಸಬೇಕೆಂಬುದನ್ನು ಕೆಲವು ಸದಸ್ಯರು ಸೂಚಿಸಿದರು. ಈ ಶಾಖೆಯಲ್ಲಿ ಕುಂಟ ಮಿತವ್ಯಯಕ್ಕೆ ಆಸ್ಪದವಿದೆ ಎಂದು ಬಲವಾಗಿ ಪ್ರತಿಪಾದಿಸಲಾಯಿತು. ಸುದ್ದಿ ಮತ್ತು ಬಾನುಲಿ ಶಾಖೆಯು ಅತ್ಯಂತ ಮಹತ್ವದ್ದಿದೆ ಎಂಬುದನ್ನು ಎಲ್ಲರೂ ಒಪ್ಪಿಕೊಂಡರು. ಇವು ಸರಕಾರದ ಚಟುವಟಿಕೆಗಳ ಪ್ರಚಾರ-ಸಾಧನಗಳಾಗಿವೆಯೇ ಹೊರತು–ಜನ ಶಿಕ್ಷಣದ ನಿಜ ಕೇಂದ್ರಗಳಾಗಿಲ್ಲವೆಂಬ ಕಮ್ಯೂನಿಸ್ಟರ ದೂರನ್ನು ಕೊಂಗ್ರೆಸಿಗರು ಅಲ್ಲಗಳೆದರು. ಕಳೆದ ಚುನಾವಣೆಯಲ್ಲಿ ನಿಷ್ಪಕ್ಷಪಾತತನದಿಂದ ವರ್ತಿಸಿ, ಆಕಾಶವಾಣಿಯು ತನ್ನ ಒಳ್ಳೆಯತನವನ್ನು ತೋರಿಸಿದೆ ಎಂದು ಪ್ರಶಂಸೆಯನ್ನು ಕೆಲವರು ಮಾಡಿದರು. ಪ್ರತಿಯೊಂದೂ ಶಾಖೆಯ ಬೇಡಿಕೆಯು ಇದ್ದುದಿದ್ದಂತೆ ಮಾನ್ಯವಾಯಿತು. ಕಡಿತದ ಸೂಚನೆಗಳು ತಿರಸ್ಕೃತವಾದುವು.

ಸಲ್ಲದ ಉಪದ್ವ್ಯಾಪ

ಕಾಶ್ಮೀರ ವಿಷಯದ ಪ್ರಶ್ನೆಯು ಲೋಕ ಸಭೆಯಲ್ಲಿ ತೀಕ್ಷ್ಣ ಟೀಕೆಗೆ ಒಳಗಾದುದನ್ನು ಕಾಣುವಾಗ— ಈ ಹಿಂದೆ ನಾವು ಸೂಚಿಸಿದಂತೆ— ಭಾರತವು ಮಾನಗೇಡಿಯಾಗಿ ಉಳಿಯುವ ಪ್ರಸಂಗದ ಮುನ್ಸೂಚನೆ ಇದೋ ಎಂಬ ಅಂಜಿಕೆ ಬರುವುದು. ಶೇಖ ಅಬ್ದುಲ್ಲಾ ಈದ್ ಸಂದೇಶದಲ್ಲಿ ಕಾಶ್ಮೀರವು ಭಾರತಕ್ಕೆ ದ್ರೋಹ ಬಗೆಯುತ್ತಿದೆ ಎಂಬ ಅಭಿಪ್ರಾಯವು ಸರ್ವಥಾ ತಪ್ಪು ಎಂದಿದ್ದರೂ--ಲೋಕಸಭೆಯ ಸದಸ್ಯರೊಬ್ಬರು ಹೇಳಿದಂತೆ, ಗಣರಾಜ್ಯದೊಳಗೊಂದು ಸ್ವತಂತ್ರ ಗಣರಾಜ್ಯವನ್ನು ಕಟ್ಟಿಕೊಳ್ಳುವ ಪ್ರವೃತ್ತಿಗೆ ಏನು ಸಮಾಧಾನ ಹೇಳಬಹುದು? ಭಾರತದ ರಾಜ್ಯ ಘಟನೆಯ ೩೭೦ನೇ ಕಲಮು ಮಾತ್ರ ಕಾಶ್ಮೀರಕ್ಕೆ ಅನ್ವಯಿಸುವುದೆಂದು ಶೇಖ ಅಬ್ದುಲ್ಲಾ ಹೇಳಿದುದು ಎಷ್ಟರ ಮಟ್ಟಿಗೆ ಸಮಂಜಸವೆಂಬುದನ್ನು ಘಟನಾತಜ್ಞರು ಹೇಳಬೇಕು. ಪ್ರಧಾನಿ ನೆಹರೂ ಲೋಕ ಸಭೆಯಲ್ಲಿ ಹೇಳಿಕೆ ಕೊಟ್ಟು--ಕಾಶ್ಮೀರಿಗಳನ್ನು ಅರಿತುಕೊಳ್ಳಲು ಯೋಗ್ಯ ದೃಷ್ಟಿಕೋಣವು ಅಗತ್ಯವೆಂದೂ, ಸ್ನೇಹ ಸೌಹಾರ್ದದಿಂದಲೇ ಅವರ ಮನವೊಲಿಸಬೇಕಲ್ಲದೆ, ಉಗ್ರೋಪಾಯಗಳು ಅನುಚಿತವೆಂದೂ ಹೇಳಿದರು. ನೆಹರೂರ ಸಮರ್ಥನೆ ತರ್ಕಬದ್ಧವಿರದೆ— ಕೇವಲ ನೋವಿಗೆ ಲೇಪ ಹಚ್ಚುವ ತಾತ್ಕಾಲಿಕ ಉಪಶಮನ ಮಾರ್ಗವಾಗಿದೆ ಎಂಬುದು ಸ್ಪಷ್ಟ. ಸಂಯುಕ್ತ ರಾಷ್ಟ್ರ ಸಂಘಕ್ಕೆ ಕಾಶ್ಮೀರ ಪ್ರಶ್ನೆಯನ್ನು ತೆಗೆದುಕೊಂಡು ಹೋಗಿ ದೊಡ್ಡ ತಪ್ಪು ಮಾಡಿದೆವೆಂಬುದನ್ನು ನೆಹರೂ ಈಗ ಮನಗಾಣುತ್ತಿರುವರು. ಅಲ್ಲದೆ ನ್ಯಾಯವಾಗಿ ನೋಡಿದರೂ–ಕಾಶ್ಮೀರದ ಪರಿಸ್ಥಿತಿ ಹದಗೆಟ್ಟಿದೆ. ಅದಕ್ಕೂ ಭಾರತಕ್ಕೂ ಇರುವ ಸಂಬಂಧ ಮತ್ತು ಕಾಶ್ಮೀರದ ನಿಜವಾದ

ಅನೇ ಪುಟ ನೋಡಿರಿ.

ಸಕಲ ಪುಸ್ತಕ ಭಂಡಾರಗಳಿಗೆ ಬೇಕಾಗುವ ಸರ್ವವಿಧದ ಪುಸ್ತಕಗಳು!

ಕಥೆ, ಕಾದಂಬರಿ, ನಾಟಕ, ಕವಿತೆ, ಚಿತ್ರ, ಪ್ರಬಂಧ ಮೊದಲಾದ

ನಾನಾ ಬಗೆಯ ಅಮೂಲ್ಯ ಕೃತಿಗಳು

ಅಂತರಂಗದ ಪ್ರಕಟಣೆಗಳು:

ಬಿರುದಾವಳಿ	0	3	0
ಹೈದರಾಬಾದ್ ವಿಜಯ	0	4	0
ಗಾದೆಯ ಗಾಂಧಿ	0	3	0
ಶಾಂತಿಯ ಮಡಿಲಿನಲ್ಲಿ	0	3	0
ಬಲಿಪೀಠದಲ್ಲಿ	0	5	0
ಅಗಲಿದ ಅಕ್ಕ ಸರೋಜಿನಿ	0	3	0
ಸಣ್ಣ ಹೆಂಡತಿ	0	3	0
ಪುಣ್ಯಫಲ	0	4	0
ಸುಖದದಾರಿ	0	3	0
ಸುಕ[illegible]	0	3	0
ಪಂಚಮುಖಿ	0	4	0
ಜಾತೀಭೂತಕ್ಕೆ ಬಲಿ	0	3	0
ಜನಸೇವೆಯ ಸೋಗಿನಲ್ಲಿ	0	3	0
ನಾ ಕಂಡ ಅವಳು	6	3	0
ತ್ರಿವೇಣಿ	0	3	0
ನಿಲುವಂಗಿ	0	4	0
ಬಾಡಿಗೆಯ ಮನೆ	0	3	0
ವರ್ತಮಾನಕಾಲದ ನಾಲ್ವರು ಮಹಾನುಭಾವರು	0	4	0
ದೇವರ ನಾಮ ಮತ್ತು ಸಾಧನೆ	0	3	0
ಎರಡು ಕತೆಗಳು	0	4	0
ಸರಸ–ವಿರಸ	0	3	0
ಹೃದಯೇಶ್ವರಿ	0	4	0
ವಿವಿಧ ವಿಷಯ ಕೋಶ ಭಾಗ ೧,೨	0	6	0
ನುಡಿಮುತ್ತುಗಳು ೧, ೨, ೩	0	12	0
ಕಾಲವಿಲ್ಲದ ಹೆಣ್ಣು	2	0	0
ತವರು ಮನೆಯಿಂದ	0	4	0
ಭಾಗ್ಯಲಕ್ಷ್ಮಿ	1	4	0
ಯುಗವಾಣಿ	0	8	0
ಸ್ತ್ರೀ ಹೃದಯ	0	4	0
ದ್ವೇಷ	0	3	0
ಎರಡು ಏಕಾಂಕ ನಾಟಕಗಳು	0	4	0
ಪ್ರಜಾಪ್ರಭುತ್ವವನ್ನು ಕುರಿತು	0	8	0
ಕಲಾವಿದನ ದಿನಚರಿ	0	3	0
ಆಧುನಿಕ ಭಾರತ	0	4	0
ಕಾಲವೇ ಬದಲಾಗಿದೆ	0	4	0
ಭಾರತದ ಸಾಹಿತ್ಯ ಕಲೆಗಳು	0	4	0
ಸ್ತ್ರೀಸ್ವಾತಂತ್ರ್ಯ ಬೇಕೆ?	0	4	0
ಹಂಬಲ	0	4	0
ಭಾರತಚಕ್ರದ ಅಂಚೆಚೀಟುಗಳು	0	3	0
ತ್ರಿಶೂಲ	0	5	0

ಪುಸ್ತಕಪುರಾಣ	0	4	0
ಹಳ್ಳಿಯಲ್ಲಿ ನಡೆದ ನಾಟಕ	0	3	0
ನೆರೆಯ ಗಾಂಧಾರ	0	3	0
ಮಾತಿನಯುಗದ ಮಹಾಪ್ರಭಾವ	0	3	0
ವಿಜ್ಞಾನದ ಬೆಳವಣಿಗೆ	0	4	0
ಡಾ। ಪರ್ಡೀಕರ್	0	5	0
ತೆಂಗಿನ ತವರು	0	6	0
ಪ್ರಾಯಶ್ಚಿತ್ತ	0	3	0
ಪ್ರಭಾ	0	3	0
ಶವಗಳ ಸಾಗಾಟ	0	12	0
ಸ್ವಪ್ನಲೋಕ	0	6	0
ಮನೆಹೊರಗಿನ ಮಹಾಜೀವಿಗಳು	0	5	0
ಘಂಟಿಮಾರಾ ೪ ಭಾಗಗಳು	2	0	0
ಮೂಪರ್ಟ	0	4	0
ಭಾರತದ ರಾಷ್ಟ್ರಗೀತ	0	3	0
ನ[illegible] ದೊಡ್ಡ ತಪ್ಪು	0	4	0
ಕೈಲಾಸ	0	3	0
ಚೌತಿ	0	4	0
ತಪ್ಪು ಕೊಯ್ದವರಾರು?	0	5	0
ಸಮಾಜದ ಅಗ್ನಿಕುಂಡ	0	4	0
ಬೆಳ್ಳಿಹಬ್ಬ	0	4	0
ಉಷಾ	0	4	0
ವಿಧಿಲೀಲೆ	C	4	0
ಪರಮಾಣು ಪ್ರಪಂಚ	0	4	0
ನೀತಿ ವಿನೋದ ಕತೆಗಳು	0	12	0
ಸಾಹಸ ಭೀಮ ವಿಜಯ	0	8	0
ಭಾರತದ ಗುರುಕುಲ	0	6	0
ಲತ್ತಪಗಡೆ	0	6	0
ಭರತೇಶ ದಿಗ್ವಿಜಯ	0	8	0
ಮನೋಪದೇಶ	0	8	0
ಜೀವನ ಕಲೆ	0	10	0
ಸೇನಾಪಥ	0	8	0
ಪ್ರತಿಜ್ಞಾ ಪೂರ್ತಿ	0	12	0
ಮುಕ ಸಂತತಿ	0	6	0
ಗುಪ್ತರೋಗ ನಿವಾರಣೆ	0	8	0
ಸೌಂದರ್ಯ	0	5	0
ಸುಧಾ	0	8	0
ವಸಂತಕಾಲ	0	6	0
ನವೀನ ನಾಟಕಗಳು	0	7	0

ವಿಳಾಸ:

ನವಭಾರತ ಬುಕ್ ಡಿಪೋ, ಉಡುಪಿ.

ನವಯುಗ ಪ್ರೆಸ್, ಉಡುಪಿ.

ಎಲ್ಲಾ ಪುಸ್ತಕಗಳನ್ನು ಒಮ್ಮೆಯೇ ಪಡಕೊಳ್ಳುವವರಿಗೆ ರೂ. ೨೪—0—0ಕ್ಕೆ (ಟಪ್ಪಾಲು ಖರ್ಚಿಲ್ಲದೆ) ಕೊಡಲಾಗುವುದು.

THE CANARA BANKING CORPORATION LIMITED.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್, ಲಿಮಿಟೆಡ್

ಸ್ಥಾಪನೆ: 1906. : : ಪ್ರಧಾನ ಕಾರ್ಯಾಲಯ: ಉಡುಪಿ, (ದ.ಕ.)

ವಿಶೇಷ ಸವಲತ್ತುಗಳಿದ್ದು, ಸಾಲಿಯಾನ್ ಶೇಕಡಾ 4 ರಂತೆ ಬಡ್ಡಿ ಗಳಿಸುವ ನಮ್ಮ

"ಪಂಚವಾರ್ಷಿಕ ಸುವರ್ಣ ಠೇವಣಾತಿಗಳ"

ಮೇಲೆ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ವಿಶೇಷ ಮಾಹಿತಿಗೆ, ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿ. ಆರ್. ಕಾಮತ್, ಬಿ. ಎ; ಎಲ್ ಎಲ್, ಬಿ;
ಜನರಲ್ ಮೆನೇಜರ್.

ನವಯುಗ

ಚಂದಾ ವಿವರ

ವರ್ಷಕ್ಕೆ ರೂ. 5—12—0

6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೬-೭-'೫೦

ಸ್ಫೂರ್ತಿಯ ರಹಸ್ಯ

ಮಳೆಗಾಲದ ಆರಂಭದೊಡನೆ ವನಮಹೋತ್ಸವದ ನೆನಪು ಮರುಕಳಿಸುತ್ತದೆ. ಸದ್ಯ ಉತ್ತರ ಪ್ರದೇಶದ ಗವರ್ನರ್— ಹಿಂದೆ ಭಾರತ ಸರಕಾರದ ಆಹಾರ ಸಚಿವ—ಶ್ರೀ ಮುನ್ಷಿಜಿಯವರ ಕಲ್ಪನಾ ಕೂಸೇ ವನಮಹೋತ್ಸವ. ಎರಡು ವರ್ಷಗಳಿಂದ ರಾಷ್ಟ್ರದಾದ್ಯಂತ ವನಮಹೋತ್ಸವವು ವಿಜೃಂಭಣೆಯಿಂದ ನೆರವೇರಿ— ಈಗ ತೃತೀಯ ಉತ್ಸವವು ಜರುಗುತ್ತಿದೆ. ಕಳೆದ ವರ್ಷ ವನಮಹೋತ್ಸವವನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ ಬಗ್ಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಶಸ್ತಿಯೂ ದೊರೆತಿದೆ. ಇದು ತುಂಬ ಅಭಿಮಾನದ ಸಂಗತಿ— ನಾವು ಗಿಡ ಮರಗಳನ್ನು ನೆಟ್ಟು ಬೆಳೆಸುವುದರಲ್ಲಿ ಭಾರತಕ್ಕೆ ಮಾದರಿಯಾಗಿದ್ದೇವೆಂದು ಹೆಮ್ಮೆಪಟ್ಟುಕೊಳ್ಳಲು ಅಡ್ಡಿಯಿಲ್ಲ. ಈ ವರ್ಷ ಕೂಡ ವನಮಹೋತ್ಸವವನ್ನು ಆಚರಿಸಬೇಕೆಂದು ಸಾರ್ವಜನಿಕರನ್ನು ಬಿನ್ನವಿಸಲಾಗಿದೆ.

ತಾತ್ವಿಕವಾಗಿ ಹೇಳುವುದಾದರೆ— ಭಾರತಕ್ಕೆ ವನಮಹೋತ್ಸವದಂಥ ಉಪಕ್ರಮಗಳು ಬಹಳ ಅಗತ್ಯವೆಂಬುದು ನಿಜ. ಗಿಡ ಮರಗಳನ್ನು ಹೆಚ್ಚುವುದರಿಂದ ಭೂ ಸಾರವು ಹೆಚ್ಚುವುದರ ಜೊತೆಗೆ—ಮಣ್ಣು ಸಡಿಲುಗೊಂಡು ಹೆಚ್ಚು ಪೈರು ಬೆಳೆಯಲು ಅನುಕೂಲವಾಗುತ್ತದೆ. ಮಳೆಯನ್ನುಂಟುಮಾಡುವುದರ ಮೂಲಕ ಅದು ದೇಶದಲ್ಲಿ ಸುಭಿಕ್ಷೆಯನ್ನು ನೆಲೆಗೊಳಿಸುತ್ತದೆ. ಅಮೇರಿಕ-ರಶಿಯಾದಂಥ ಔದ್ಯಮಿಕ ಪ್ರಗತಿಯನ್ನು ಕೃಷಿ ವಿಸ್ತರಣೆಯ ಕಾರ್ಯವನ್ನು ಸಾಧಿಸುವ ರಾಷ್ಟ್ರಗಳು ವನಮಹೋತ್ಸವದ ಮಾದರಿಯಲ್ಲಿ ಗಿಡ ಮರಗಳನ್ನ ನೆಟ್ಟು ಬೆಳೆಸುವುದು ಸುಯೋಗ್ಯವೆಂದು ತೋರಿಸಿಕೊಟ್ಟಿವೆ. ಭಾರತಕ್ಕೂ ವನಮಹೋತ್ಸವವು ಪುರಾತನ ಸಂಪ್ರದಾಯದ ದ್ಯೋತಕವೇ ಸೈ. ಗಿಡ ಮರಗಳನ್ನು ನೆಟ್ಟು ಬೆಳೆಸುವುದು ಪುಣ್ಯ ಸಂಪಾದನೆಯ ಪ್ರಥಮ ಸೋಪಾನವೆಂದು ಆಸ್ತಿಕರ ನಂಬುಗೆ ಇದ್ದರೆ—ಅಭ್ಯುದಯ ಮಾರ್ಗವೆಂದು ಸಾಮಾನ್ಯ ಜನ ತಿಳಿದುಕೊಳ್ಳುವುದಕ್ಕೆ ಅಡ್ಡಿ ಇಲ್ಲ.

ವನಮಹೋತ್ಸವದ ಆಚರಣೆಯಲ್ಲಿರುವ ತೊಡಕುಗಳೇ—ಶಾಶ್ವತ ಲಾಭದ ದಾರಿಯಲ್ಲಿರುವ ಕಂಟಕಗಳಾಗಿವೆ. ಒಂದು ತತ್ವವನ್ನು ಅನುಷ್ಠಾನಕ್ಕೆ ತರುವುದೇ—ತತ್ವದ ಯೋಗ್ಯತೆಗೆ ಹಿಗ್ಗುಲುತು. ಮಾತಿನಲ್ಲಿ ಹೇಳುವುದಕ್ಕಿಂತ—ಕೃತಿಯಲ್ಲಿ ಮಾಡಿ ತೋರಿಸುವುದು ಶ್ರೇಷ್ಠವೆಂಬುದರಿಂದ—ವನಮಹೋತ್ಸವವು ಆಡಂಬರದ ಆಟವಾಗಿದೆಯೇ ಹೊರತು—ಫಲಪ್ರದವಾದ ಉದ್ಯಮವಾಗಿ ಕೈಗೂಡಿಲ್ಲ. ಕಳೆದ ಎರಡು ವರ್ಷಗಳ ಅನುಭವದ ಮೇಲಿಂದ ಹೇಳುವುದಾದರೆ-ನಮ್ಮ ಜಿಲ್ಲೆಯಲ್ಲಿ ಬದುಕುಳಿದಿವೆ ಎನ್ನುವ ಗಿಡಮರಗಳೂ ಕೇವಲ ಸರಕಾರದ ಲೆಕ್ಕಪುಸ್ತಕಗಳಲ್ಲಿವೆಯೇ ಹೊರತು-ನಿಜವಾಗಿ ಅವುಗಳ ಸ್ಥಿತಿ ಉತ್ತಮವಿರಲಿಕ್ಕಿಲ್ಲ. ಒಮ್ಮೆ ನಟ್ಟ ಸಸಿಗಳನ್ನು ನೀರೆರೆದು ಪೋಷಿಸುವ ಉತ್ಸಾಹವಾಗಲೀ, ಲವಲವಿಕೆಯಾಗಲೀ ಸಾರ್ವಜನಿಕರಲ್ಲಿ ಕಾಣುವುದಿಲ್ಲ. ಒಂದು ಸಮಯ ಸ್ಫೂರ್ತಿಯ ಸೆಳೆಗೆ ಕಟ್ಟುಬಿದ್ದು ನೆಟ್ಟ ಸಸಿಗಳ ಯೋಗಕ್ಷೇಮವನ್ನು ವಿಚಾರಿಸಲು ಆ ಬಳಿಕ ನಟ್ಟವರಿಗೆ ಪುರಸೊತ್ತು ಸಿಗುವುದೇ ಇಲ್ಲವೇನೊ. ಅವುಗಳ ರಕ್ಷಣೆಯಲ್ಲಿ ದಕ್ಷತೆಯಾಗಲೀ-ಅವುಗಳನ್ನು ನೆಟ್ಟುದು ಸಾರ್ಥಕವಾಗಬೇಕೆಂಬ ಆರ್ದ್ರಿಕ ಬಯಕೆಯಾಗಲೀ ಇಲ್ಲದ ಜನರೇ-ವನಮಹೋತ್ಸವದಲ್ಲಿ ಪಾಲುದಾರರಾಗುವುದು ಇದಕ್ಕೆ ಕಾರಣ.

ಹಳ್ಳಿಗಳೇ ವನಮಹೋತ್ಸವದ ಕೇಂದ್ರಗಳಾಗಬಲ್ಲವು. ವನಮಹೋತ್ಸವದ ಹೆಸರಿನಲ್ಲಿ ನಮ್ಮ ಚಟುವಟಿಕೆಗಳೇನಿದ್ದರೂ ಹಳ್ಳಿಯ ರೈತರಲ್ಲಿ ಸ್ಫೂರ್ತಿಯನ್ನು ಕೆರಳಿಸುವುದರ ಮೂಲಕವೇ—ಅವು ಪರಿಣಾಮಕಾರಿಯಾಗಬಲ್ಲುವು. ಇಂದು ರೈತರಿಗೆ ವನಮಹೋತ್ಸವ ಒಳಗುಟ್ಟು ತಿಳಿದಿಲ್ಲ. ನಮ್ಮ ಸಮಾಜ ಸೇವಕರು ಅಥವಾ ರಚನಾತ್ಮಕ ಕಾರ್ಯಕರ್ತರು ಹಳ್ಳಿಯ ರೈತರೊಡನೆ ಬೆರೆತು ಕೆಲಸಮಾಡುತ್ತಿಲ್ಲ. ಮಾಡಿದರೂ ಭಾರತದ ಏಳುಲಕ್ಷ ಹಳ್ಳಿಗಳ ಅಜ್ಞಾನಿ ಬಾಂಧವರನ್ನು ಹೊಡೆದೆಬ್ಬಿಸುವ ಅದ್ಭುತ ಸಾಮರ್ಥ್ಯ ಅವರಲ್ಲಿಲ್ಲ. ಇದರ ಜೊತೆಗೆ-ಒಕ್ಕಲಿಗರಿಗೆ ತಮ್ಮ ಪ್ರಯತ್ನದ ಫಲವಾಗಿ ಗಿಡ ಮರಗಳಿಂದ ಪ್ರತ್ಯಕ್ಷ ಲಾಭವೇನೂ ಕಾಣದಿರುವುದು ಒಂದು ಕೊರತೆಯಾಗಿದೆ. ಭೂಮಿಯ ಮೇಲೆ ಅಧಿಕಾರವಿಲ್ಲದ ರೈತರು—ಯಾರಿಗಾಗಿ, ಏತಕಾಗಿ ಬೆಮರಿಳಿಸಿ ಗಿಡಮರಗಳನ್ನು ನಟ್ಟು ಪೋಷಿಸಬೇಕು ಎಂದು ಉದಾಸೀನರಾಗಿರುವಂತೆ ಇಂದಿನ ಪರಿಸ್ಥಿತಿ ಇದೆ. ಸರಕಾರವು ರೈತರಿಗೆ ಭೂಮಿಯ ಮೇಲೆ ಶಾಶ್ವತ ಅಧಿಕಾರ ನಿಲ್ಲುವಂತೆ—ತೀವ್ರವಾದ ಭೂ ಸುಧಾರಣಾ ಯೋಜನೆಗಳಲ್ಲಿ ಆಸಕ್ತಿ ವಹಿಸಿದರೆ ಮಾತ್ರ ಕಾಲ—ವನಮಹೋತ್ಸವಕ್ಕಿಂದು ವೆಚ್ಚವಾಗುವ ಹಣ ದುರ್ವ್ಯಯವೆನ್ನಿಸುವ ಅಂಜಿಕೆ ಇದೆ. ರೈತರಿಗೆ ಸ್ಫೂರ್ತಿಯೊದಗುವ ರಹಸ್ಯವನ್ನು ಮನಗಂಡು—ಸರಕಾರ ಯೋಗ್ಯ ದಿಶೆಯಲ್ಲಿ ಕಾರ್ಯೋನ್ಮುಖವಾಗಲಿ ಎಂಬುದು ನಮ್ಮ ಬಯಕೆ.

ಕೊರಿಯಾದ ಭಯಸೂಚಕ ಗಂಟೆ

—ಜಾಗತಿಕ ಶಾಂತಿಗೆ ಗಂಡಾಂತರದ ಭಯ—

ಕೊರಿಯಾ ಯುದ್ಧ ಸಂಧಾನದ ಮಾತುಕತೆಗಳು ಇನ್ನು ಒಂದು ನಿಶ್ಚಿತ ಸ್ವರೂಪಧಾರಣ ಮಾಡದಿದ್ದಾಗಲೇ— ಕೊರಿಯಾದ ಕದನ ರಂಗದಲ್ಲಿ ಒಮ್ಮೆಗೇ ಬದಲಾವಣೆ ಕಂಡುಕೊಂಡಿದೆ. ಕೈದಿಗಳ ವಿನಿಮಯದ ಪ್ರಶ್ನೆಯೇ ಸಂಧಾನ ಮಾತುಕತೆಗಳಲ್ಲಿ ಮುಖ್ಯ ತೊಡಕಾಗಿತ್ತು— ಮತ್ತೀಗಲೂ ಈ ಪ್ರಶ್ನೆ ಇತ್ಯರ್ಥವಾಗದೆ ಉಳಿದಿದೆ. ಈಯೊಂದೇ ಮಹತ್ವದ ವಿಷಯದಲ್ಲಿ ಒಪ್ಪಂದ ಬಾಕಿ ಉಳಿದಿರುವುದರಿಂದ, ಯುದ್ಧ ಕೈದಿಗಳನ್ನೆಲ್ಲ ಭಾರತಕ್ಕೆ ಕಳಿಸಿಬಿಟ್ಟು— ಆ ಬಳಿಕ ಅದರ ತೀರ್ಮಾನವನ್ನು ನಡೆಸಬೇಕೆಂಬುದಾಗಿ ಸೂಚನೆ ತರುವರು ಎಂಬ ವದಂತಿ ದಟ್ಟವಾಗಿ ರಾಜಕೀಯಾಕಾಶದಲ್ಲಿ ಕೆಲ ದಿನಗಳ ಹಿಂದೆ ಹಬ್ಬಿತ್ತು. ಆದರೆ ಭಾರತ ಸರಕಾರ ಇದನ್ನು ಅಲ್ಲಗಳೆದು— ಅಂಥದೊಂದೂ ಸೂಚನೆ ಬಂದಿಲ್ಲವೆಂದು ಸ್ಪಷ್ಟೀಕರಿಸಿದೆ.

ಭಾರತದ ಮಧ್ಯಸ್ಥಿಕೆ

ಹೀಗೆ ಭಾರತದ ಮಧ್ಯಸ್ಥಿಕೆಯನ್ನು ಕೊರಿಯಾ ಯುದ್ಧದ ಪ್ರಶ್ನೆ ಮತ್ತು ಕೈದಿಗಳ ವಿನಿಮಯದ ಮುದ್ದೆಯಲ್ಲಿ ಸ್ವೀಕರಿಸಬೇಕೆಂಬುದಾಗಿ ಎಷ್ಟೊ ರಾಷ್ಟ್ರಗಳು ಸಿದ್ಧವಿವೆಯಾಗಿ ಗೋಚರಿಸುತ್ತದೆ. ಕಡೆಗೆ ಏನಿಲ್ಲೆಂದರೂ ಭಾರತಕ್ಕೆ ಇಂಥ ಮಹತ್ವದ ಪ್ರಸಂಗದಲ್ಲಿ ಮಧ್ಯಸ್ಥಿಕೆ ವಹಿಸಿ ಕೆಲಸ ಮಾಡುವ ಸಾಮರ್ಥ್ಯವಿದೆ ಎಂಬುದಾಗಿ ಲೋಕಾಭಿಪ್ರಾಯ— ಎಂಬೀ ಸಂಗತಿಯಾದರೂ ಇದರಿಂದ ವ್ಯಕ್ತವಾಗುತ್ತದೆ. ಸಿಂಗಾಪೂರದ ಸಂಡೇ ಟೈಮ್ಸ್" ಎಂಬ ಪತ್ರಿಕೆಯು ನೆಹರೂ ಇರುವ ಭಾರತವೊಂದೇ ಸದ್ಯದ ಬಿಕ್ಕಟ್ಟನ್ನು ಬಗೆಹರಿಸುವಲ್ಲಿ ಯೋಗ್ಯ ಮಾರ್ಗದರ್ಶನ ಮಾಡಬಲ್ಲುದು ಎಂದು ಹೇಳಿದೆ. ಇದನ್ನು ಕಾಣುವಾಗ—ಭಾರತವು ತನ್ನ ನೈತಿಕ ಬಲದ ಮೇಲಿಂದ ಲೋಕದ ಜನತೆಯ ಮೇಲೆ ಅತ್ಯಂತ ಪ್ರಭಾವಶಾಲಿಯಾದ [illegible] ಬೀರುವ ಅತ್ಯಾಸಾಮರ್ಥ್ಯವನ್ನು ಪಡೆದುದಕ್ಕೆ ಅಭಿಮಾನವೆನಿಸುತ್ತದೆ. ಪ್ರಧಾನಿ ನೆಹರೂರ ವಿದೇಶ ಧೋರಣೆಗೇ ಈ ಕೀರ್ತಿ ಸಲ್ಲಬೇಕೆಂಬುದು ಸತ್ಯ.

ಯುದ್ಧ ವಿಸ್ತರಣ ಭಯ

ಆದರೆ—ನೆಹರೂ ಈ ರೀತಿ ಮಧ್ಯಸ್ಥಿಕೆಗೆ ಮುಂದಾಗಲು ಎಡೆಇದೆಯೆ? ಕೊರಿಯಾದ ಕದನರಂಗದಲ್ಲಿ ಭಾರತದಂಥ ತಟಸ್ಥ ಹಾಗೂ ನ್ಯಾಯಪ್ರಿಯ ಮತ್ತು ಶಾಂತಿಪ್ರಿಯ ರಾಷ್ಟ್ರಗಳ ಇಚ್ಛೆ ಅನಿಚ್ಛೆಗಳಿಗೇನಾದರೂ ಬೆಲೆ ಇದೆಯೆ? ಎಂಬುದು ಸಂಶಯ ಭರಿತ ಪ್ರಶ್ನೆ. ಕಳೆದವಾರ ಸಂಯುಕ್ತ ರಾಷ್ಟ್ರಸಂಘದ ವಿಮಾನಗಳು ಉತ್ತರ ಕೊರಿಯಾದ ಉತ್ತರ ಗಡಿಯಲ್ಲಿರುವ ವಿದ್ಯುತ್ ಕೇಂದ್ರಗಳ ಮೇಲೆ ಮಾಡಿದ ಭಯಂಕರ ದಾಳಿಯು ಈ ಸಂಶಯವನ್ನು ಇನ್ನಷ್ಟು ದೃಢೀಕರಿಸುತ್ತದೆ. ಚೀನಾದ ಅಧಿಕಾರದಲ್ಲಿರುವ ಮಂಚೂರಿಯಾ ಮತ್ತು ಉತ್ತರ ಕೊರಿಯಾವನ್ನು ಪ್ರತ್ಯೇಕಿಸುವ ಯಾಲೂ ನದಿಯ ದಕ್ಷಿಣ ದಂಡೆಯ ಮೇಲೆ ಈ ವಿದ್ಯುತ್ ಕೇಂದ್ರಗಳಿವೆ. ಚೀನಾ ಹಾಗೂ ಕೊರಿಯಾದಲ್ಲಿ ಈ ವಿದ್ಯುತ್ ಕೇಂದ್ರಗಳಿಗೆ ಬಹಳ ಮಹತ್ವವಿದೆ. ಹತ್ತಿರದ ಎಲ್ಲೆಡೆಗೂ ಇಲ್ಲಿಂದಲೇ ವಿದ್ಯುತ್ತಿನ ಪೂರೈಕೆಯಾಗಬೇಕಾಗಿದೆ. ಚೀನೀ ಕಮ್ಯೂನಿಸ್ಟರಿಗೆ ಈ ವಿದ್ಯುತ್ ಕೇಂದ್ರಗಳ ಪೂರೈಕೆಯು ನಿಂತುಹೋದ ಪಕ್ಷದಲ್ಲಿ ಬಹಳ ತೊಂದರೆ ಉಂಟಾಗುವುದು ನಿಶ್ಚಯ. ಇದರಿಂದ ರೊಚ್ಚಿಗೆದ್ದು ಹೀಗೆ ತೊಂದರೆಗೆ ಕಾರಣರಾದವರನ್ನು ಶಿಕ್ಷಿಸಲು ಅವರು ಸನ್ನದ್ಧರಾಗಿ ಹೊರಟರೆ-ಕೊರಿಯಾದ ಯುದ್ಧ ವಿಸ್ತರಣೆಹೊಂದುವುದು. ಅದೂ ಅಲ್ಲದೆ, ಗಡಿ ಪ್ರದೇಶದ ಮೇಲೆ ಸಂಯುಕ್ತ ರಾಷ್ಟ್ರಸಂಘದ ವಿಮಾನಗಳು ಧಾಳಿಮಾಡಿದುದರಿಂದ-ಅವುಗಳು ಸ್ವಲ್ಪ ಮುನ್ನುಗ್ಗಿ ಮಂಚೂರಿಯಾದ ಮೇಲೆ ಆಕ್ರಮಣ ನಡೆಸಲೂಬಹುದೇ ಎಂದು ಸಂಶಯಗೊಂಡು-ಅದನ್ನು ತಡೆಯಲು ಈಗಿಂದೀಗಲೇ ನೋಡುವ ಹಂಬಲದಿಂದ ಚೀನೀ ಕಮ್ಯೂನಿಸ್ಟರು ಕಾದಾಟಕ್ಕೆ ತೊಡಗಿದರೂ— ಅದನ್ನು ದೂರಲಿಕ್ಕೆ ಬರುವಂತಿಲ್ಲ. ಯುದ್ಧದ ಗತ್ತುಗಾರಿಕೆಯಲ್ಲಿ ಗಡಿ ಪ್ರದೇಶದ ಮೇಲೆ ದಾಳಿ ಮಾಡುವುದೆಂದರೆ ಬಹಳ ಅಪಾಯಕಾರಿ ಉದ್ಯಮ.

ಬ್ರಿಟನಿನ ಖೇದ

ಕಾರಣ—ಯುದ್ಧ ವಿಸ್ತರಣೆಯ ಸಂಶಯವಿರುವ ಏನಾದರೊಂದು ಹೊಸ ಉಪಕ್ರಮವನ್ನು ಕೈಕೊಳ್ಳುವಾಗ ಸಂಬಂಧಪಟ್ಟ ಎಲ್ಲರೊಡನೆ ಮಾತುಕತೆ ನಡೆಸಿ, ಎಲ್ಲರ ಅಭಿಪ್ರಾಯವನ್ನು ತಿಳಿದುಕೊಂಡು— ಮುನ್ನಡೆಯಬೇಕಾದುದು ಸಮಂಜಸ ಹಾಗೂ ಅಪೇಕ್ಷಣೀಯ. ಆದರೆ ಈ ಬಾರಿಯ ಯಾಲೂ ಧಾಳಿಯನ್ನು ಅಮೇರಿಕನರೇ ಯೋಜಿಸಿದ್ದರು ಹೊರತು— ಅವರ ಅತ್ಯಂತ ಮಿತ್ರರಾದ ಬ್ರಿಟಿಷರಿಗೂ ಇದರ ಸೂಚನೆ ಕೊಟ್ಟಿರಲಿಲ್ಲ. ದಾಳಿಗೆ ಸ್ವಲ್ಪ ದಿನದ ಹಿಂದೆ ಬ್ರಿಟನಿನ ಸಂರಕ್ಷಣ ಮಂತ್ರಿ, ಲಾರ್ಡ್ ಅಲೆಕ್ಸಾಂಡರ್ ಕೊರಿಯಾದ ಕದನ ಕ್ಷೇತ್ರ ನಿರೀಕ್ಷಿಸುತ್ತಿದ್ದರೂ— ಯಾಲೂ ನದಿಯ ಮೇಲೆ ಘೋರ ಆಕ್ರಮಣ ನಡೆಯುವ ಹೊಂಚು ಇದೆ ಎಂಬ ಸುಳಿವೇ ಅವರಿಗಾಗಿದ್ದಿಲ್ಲ. ತಮ್ಮೊಡನೆ ವಿಶ್ವಾಸವಿದೆ ಎಂಬಂತೆ ನಟಿಸುತ್ತಿದ್ದ ನಿಕಟ ಸ್ನೇಹಿತರು ಇಂಥದೊಂದು ಉಗ್ರಕ್ರಮಕ್ಕೆ ಮೊದಲು ಒಂದೂ ಮಾತೂ ವಿಚಾರಿಸಲಿಲ್ಲವಲ್ಲ— ಎಂಬ ಖೇದ ಬ್ರಿಟಿಷರಿಗಿದೆ. ದಾಳಿಯ ಕಾಲದಲ್ಲಿ ಅಮೇರಿಕದ ವಿದೇಶಾಂಗ ಸಚಿವ ಡೀನ್ ಅಚೆಸನ ಬ್ರಿಟನಿನಲ್ಲಿದ್ದರು. ಅವರು ಬ್ರಿಟನನ್ನು ವಿಚಾರಿಸದೆ ಸಂಯುಕ್ತ ರಾಷ್ಟ್ರಸಂಘವು ವಿಮಾನದಾಳಿ ನಡೆಸಿದುದು ಅಚಾತುರ್ಯವೆಂದು ಹೇಳಿ ಕ್ಷಮೆ ಕೇಳಿಕೊಂಡರಂತೆ.

ಯಾಲೂ ದಾಳಿಯ ಚರ್ಚೆ

ಇದರಿಂದ ಸಮಾಧಾನಗೊಂಡು ಕುಳಿತಿರಲು ಕಾಮನ್ಸ್ ಸಭೆ ಒಪ್ಪಲಿಲ್ಲ. ಅದೂ ಅಲ್ಲದೆ-ಪ್ರಬಲ ವಿರೋಧ ಪಕ್ಷಕ್ಕೆ ಮಂತ್ರಿಮಂಡಳದ ಮೇಲಿನ ಸೇಡು ತೀರಿಸಿಕೊಳ್ಳಲು ಇದೊಂದು ಸುಸಂಧಿಯಲ್ಲವೆ? ಹಿಂದಿನ ಮುಖ್ಯಮಂತ್ರಿ ಮಿ. ಅಟ್ಲೀ ಕಾಮನ್ಸಿನಲ್ಲಿ ಈ ಕುರಿತು ಚರ್ಚೆ ನಡೆಯಬೇಕೆಂದು ಸೂಚನೆ ತಂದರು. ಚರ್ಚಿಲರೂ ಈಡನರೂ ಅಮೇರಿಕನರು ತಮ್ಮ ಅಭಿಪ್ರಾ

ಯು ತಿಳಿದುಕೊಳ್ಳಲು ಪ್ರಯತ್ನಿಸದಿದ್ದ ನಕ್ಕೆ ವಿಷಾದಿಸಿದರೂ-ಈಗ ಕಜ್ಜೆ ಮುಂದಿಟ್ಟಾಗಿದೆಯಾದುದರಿಂದ, ತಾವು ಅವರೊಡನೆ ಸಹಕರಿಸುವುದೇ ಈಗ ಸೂಕ್ತ ಎಂಬ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು. ಭಾರತದಲ್ಲಿಯೂ ಯಾಲೂ ದಾಳಿಯ ಮೇಲೆ ಚರ್ಚೆ ನಡೆಯಬೇಕೆಂದು ಕಮ್ಯೂನಿಸ್ಟ್ ಧುರೀಣರಾದ ಶ್ರೀ. ಗೋಪಾಲನ್ ಲೋಕಸಭೆಯಲ್ಲಿ ಸೂಚನೆ ತಂದರು. ಸದಸ್ಯರಿಗೆ ಪ್ರತ್ಯಕ್ಷಾನುಭವವಿಲ್ಲ-ಕೇವಲ ಪತ್ರಿಕಾ ವರದಿಗಳ ಮೇಲಿಂದ ಈ ಕುರಿತು ಚರ್ಚೆ ನಡೆಸಲು ಬಗುವುದಿಲ್ಲ ಎಂಬ ಕಾರಣದಿಂದ ಅಧ್ಯಕ್ಷರು ಚರ್ಚೆಗೆ ಅವಕಾಶ ಕೊಡಲಿಲ್ಲ. ಆದರೂ ನೆಹರೂರು ಭಾರತದ ನಿಲುವೇನೆಂಬುದನ್ನು ಸ್ಪಷ್ಟ ಮಾತಿನಲ್ಲಿ ತಿಳಿಸಿದ್ದಾರೆ:

ನೆಹರೂ ನಿಲುವು

ಲೋಕಸಭೆಯಲ್ಲಿ ಅಲ್ಪಾವಧಿ ಪ್ರಶ್ನೆಯೊಂದನ್ನು ಉತ್ತರಿಸುತ್ತಾ ಅವರು ಸಂಯುಕ್ತ ರಾಷ್ಟ್ರಸಂಘವು ಕದನ ವಿರಾಮ ಮಾತುಕತೆಗಳನ್ನು ನಡೆಸುತ್ತಿದ್ದಂತೆಯೇ ಈ ಭೀಕರ ಧಾಳಿಗೆಳಸಿದುದ. ಸರಿಯಾಗಲಿಲ್ಲವೆಂದು ದುಃಖತೋರಿಸಿದರ. ಭಾರತವು ಕೊರಿಯಾ ಯುದ್ಧದಲ್ಲಿ ಪ್ರತ್ಯಕ್ಷ ಭಾಗವಹಿಸಿಲ್ಲ. ಆದರೆ ಸಂಯುಕ್ತರಾಷ್ಟ್ರ ಸಂಘದ ಸದಸ್ಯ ರಾಷ್ಟ್ರವೆಂಬದರಿಂದ, ಕೊರಿಯಾದಲ್ಲಿ ರಾಷ್ಟ್ರಸಂಘದ ಹೆಸರಲ್ಲಿ ಏನೇ ನಡೆದರೂ ಅದರ ಔಚಿತ್ಯವನ್ನು ವಿವೇಕಿಸುವ ಹೊಣೆಗಾರಿಕೆ ಅದರ ಮೇಲಿದೆ ಎಂಬುದಂತೂ ನಿಶ್ಚಯ ಇದರ ಮೇಲಿಂದ ಹೇಳುವುದಾದರೆ-ಯುದ್ಧ ವಿಸ್ತರಣೆಗೆ ಅವಕಾಶ ಕೊಡುವ ಯಾಲೂ ಧಾಳಿಯಂಥ ಕ್ರಮವು ಎಂದಿಗೂ ಸಾಧುವೆಂದು ಪರಿಗಣಿಸಲಾಗದು. ಸಂಧಾನ ಪ್ರಯತ್ನಗಳನ್ನು ಮುಂದುವರಿಸಿ, ಶಾಂತಿ ಪ್ರಸ್ಥಾಪಿಸುವುದು ಅಪೇಕ್ಷಣೀಯವಿತ್ತು. ಈಗಲಾದರೂ ಶಾಂತಿ ಪಾಠಕ್ಕೇನೇ ಭಾರತ ಅಂಟಿಕೊಂಡಿದೆ. ಶ್ರೀ ನೆಹರೂರ ಈ ಹೇಳಿಕೆಯನ್ನು ರಶಿಯಾವು ಇದ್ದುದಿದ್ದಂತೆ ಮೊಸ್ಕೋ ರೇಡಿಯೋದಲ್ಲಿ ಪ್ರಸಾರ ಮಾಡಿದೆ.

ಅಮೇರಿಕದ ಆತುರ

ಅಮೇರಿಕದ ವಿದೇಶಾಂಗ ಸಚಿವ ಡೀನ ಅಚೆಸನರು ಬ್ರಿಟನಿಗೆ ಬಂದ ಕಾರಣ ಬೇರೆಯೇ- ಬಂದಲ್ಲಿ ಅವರಿಗೆ ಯಾಲೂ ಧಾಳಿಯ ಬಗ್ಗೆ ಅಮೇರಿಕದ ಪತಿಯಿಂದ ಪ್ರತ್ಯಕ್ಷ ವಿವರಣೆ ಕೊಡುವ ಸಂದಿಗ್ಧ ಪರಿಸ್ಥಿತಿ ಬಂತು. ಕೆಲವು ದಿನಗಳ ಹಿಂದೆ ಸಂಯುಕ್ತ ರಾಷ್ಟ್ರ ಸಂಘದ ಸರ್ವೋಚ್ಚ ಸೇನಾಧಿಪತಿ ಜನರಲ್ ಮಾರ್ಕ್ ಕ್ಲಾರ್ಕರು ಶಾಂತಿಯಿಂದ ಕೊರಿಯಾದ ಸಮಸ್ಯೆ ಬಗೆಹರಿಯುವುದಿಲ್ಲವಾದರೆ ರಕ್ತದ ಕಾಲುವೆ ಹರಿಸಿ ಉಗ್ರಸಂಗ್ರಾಮಕ್ಕೆ ಮುಂದಾಗಲು ರಾಷ್ಟ್ರ ಸಂಘ ಸಿದ್ಧವಿದೆ ಎಂದು ಹೇಳಿದ್ದರು. ಈಗ ಹಾಗೆ ಮಾಡಿಯೂ ತೋರಿಸಿದರು. ಹದಿಮೂರೂ ವಿದ್ಯುತ್ ಕೇಂದ್ರಗಳೂ ಸಮೂಲ ನಾಶಗೊಂಡಿವೆ. ಈಗ ಬ್ರಿಟನನ್ನು ಸಮಾಧಾನಗೊಳಿಸುವ ಹೊಂಚೇ ಎಂಬ ಹಾಗೆ- ಜನರಲ್ ಮಾರ್ಕ ಕ್ಲಾರ್ಕರ ಕೈಕೆಳಗೆ ಒಬ್ಬ ಬ್ರಿಟಿಷ್ ಮುಖ್ಯಾಧಿಕಾರಿಯನ್ನು ನೇಮಿಸುವರಂತೆ. ಆಗ ಅಮೇರಿಕನರು ತಮಗೆ ಏನನ್ನೂ ತಿಳಿಸದೆ ಚಟುವಟಿಕೆ ನಡೆಸುತ್ತಿರುವರು ಎಂದು ಆರೋಪಿಸಲು ಸಾಧ್ಯವಿಲ್ಲವಷ್ಟೆ.

ಉಕ್ಕಿನ ಉದ್ದಿಮೆ

ಪಶ್ಚಿಮ ಜರ್ಮನಿಯ ಬಗ್ಗೆ ಫ್ರಾನ್ಸು, ಬ್ರಿಟನು ಮತ್ತು ಅಮೇರಿಕದ ವಿದೇಶಾಂಗ ಸಚಿವರು ಒಟ್ಟಾಗಿ ಸಮಾಲೋಚನೆ ನಡೆಸಿ-ರಶಿಯಾದ ಈಚಿನ ಪತ್ರಕ್ಕೆ ಉತ್ತರವನ್ನು ಹೇಗೆ ಕೊಡಬೇಕೆಂದು ನಿರ್ಧರಿಸಿದರು. ಈ ಕೆಲಸವನ್ನು ಮುಗಿಸಿ, ಡೀನ್ ಅಚೆಸನರು ಪಶ್ಚಿಮ ಬರ್ಲಿನಿಗೆ ಭೇಟಿ ಕೊಟ್ಟರು. ಜರ್ಮನಿಯು ಒಂದಾಗುವ ದಿನವನ್ನು ಕಾಣುವುದೇ ತಮ್ಮೆಲ್ಲರ ಇಚ್ಛೆ ಎಂದವರು ಹೇಳಿದರೂ—ಅದೇ ಸಮಯ ರಶಿಯಾದ ಧೋರಣೆಯ ಬಗ್ಗೆ ಎಚ್ಚರಿಸಿದರು ಪಶ್ಚಿಮ ಜರ್ಮನಿ ಈಗ ಮರಳಿ ಬಲಹೊಂದುತ್ತಿದೆ. ಆದರ ಈ ವರ್ಷದ ಉಕ್ಕಿನ ಉತ್ಪಾದನೆಯು ಬ್ರಿಟನಿನಕ್ಕಿಂತಲೂ ಹೆಚ್ಚು. ಮುಂದಿನ ವರ್ಷ—ಯುರೋಪು ರಾಷ್ಟ್ರಗಳಲ್ಲೆಲ್ಲ ಪಶ್ಚಿಮ ಜರ್ಮನಿಯೇ ಅತಿ ಹೆಚ್ಚು ಪ್ರಮಾಣದಲ್ಲಿ ಉಕ್ಕನ್ನು ತಯಾರಿಸುವುದು. ಯುದ್ಧೋಪಯೋಗಕ್ಕೆ ಅಗತ್ಯ ಬೇಕಿರುವ ಉಕ್ಕು ಸಂಯುಕ್ತರಾಜ್ಯ ಅಮೇರಿಕದಲ್ಲಿ ಅತ್ಯಧಿಕ ಸಿದ್ಧಗೊಂಡರೂ-ಈ ವರ್ಷ ಉಕ್ಕಿನ ಕೆಲಸಗಾರರ ಸಂಪಿನ ಪರಿಣಾಮವಾಗಿ ಕಾರಖಾನೆಗಳನ್ನು ಮುಚ್ಚುವ ಪ್ರಸಂಗ ಬಂದಿದೆ. ಜಗತ್ಪ್ರಸಿದ್ಧ ಫೋರ್ಡ ಹಾಗೂ ಜನರಲ್ ಮೋಟರ್ಸ ಕಂಪೆನಿ ಕೆಲವು ಕಾರಖಾನೆಗಳನ್ನು ಮುಚ್ಚಲು ನಿರ್ಧರಿಸಿದೆ. ಭಾರತದಲ್ಲಿ ಈಗ ಬಾಗತಿಕ ಬ್ಯಾಂಕಿನ ನಿಯೋಗವೊಂದು ಬಂದಿದ್ದು--ಸರಕಾರೀ ನೆರವಿನ ಮೂಲಕ ಭಾರತದಲ್ಲಿ ಉಕ್ಕಿನ ಕಾರಖಾನೆಯನ್ನು ತೆರೆದು ವಿಸ್ತರಿಸಲು ಅವಕಾಶವಿದೆಯೇ ಎಂಬ ಸಂಗತಿಯನ್ನು ಪರಿಶೀಲಿಸುತ್ತಿದೆ. ಈ ನಿಯೋಗವು ಉಕ್ಕಿನ ಉದ್ಯಮವನ್ನು ಪ್ರಾರಂಭಿಸುವ ಸರಕಾರದ ಬಯಕೆ ಸಾಧುವಾದುದಾಗಿ ಅಭಿಪ್ರಾಯಪಟ್ಟು ಶಿಫಾರಸು ಮಾಡಿದರೆ-ಜಾಗತಿಕ ಬ್ಯಾಂಕು ಹಣವನ್ನು ಸಾಲರೂಪದಲ್ಲಿ ಮಂಜೂರು ಮಾಡುವ ಸಂಗತಿ ವಿಚಾರಿಸುವುದು

ವಿದೇಶದ ಭಾರತೀಯರು

ಸಿಂಹಳದಲ್ಲಿ ಭಾರತೀಯರು ಮತಾಧಿಕಾರವನ್ನು ಪಡೆಯುವ ಬಗ್ಗೆ ಹಾಕಿದ ಅರ್ಜಿಗಳ ವಿಚಾರಣೆಯು ಶೀಘ್ರವೇ ತೊಡಗಲಿದೆ. ಮುಖ್ಯಮಂತ್ರಿ, ಡಡ್ಲಿ ಸೇನಾನಾಯಕೆ ಅವರೇ ಈ ಕುರಿತು ಭರವಸೆಯಿತ್ತಿದ್ದಾರೆ. ನಾಗರಿಕ ಹಕ್ಕನ್ನು ರುಜುವಾತು ಮೂಲಕ ಸಮರ್ಥಿಸುವಲ್ಲಿ ಕೆಲವೊಂದು ರಿಯಾಯತಿಯನ್ನವರು ತೋರಿಸಿದ್ದಾರೆ. ಉಳಿದ ತೊಂದರೆಗಳನ್ನೂ ದೂರಮಾಡಿದರೆ ಈಗಿನ ಸತ್ಯಾಗ್ರಹವನ್ನು ನಿಲ್ಲಿಸಿಬಿಡುವುದಾಗಿ ಸಿಂಹಳ ಭಾರತೀಯ ಕಾಂಗ್ರೆಸು ಹೇಳಿದೆ. ಆದರೆ-ದಕ್ಷಿಣ ಅಫ್ರಿಕಾದ ಘಟನೆಗಳು ಇದಕ್ಕೆ ವಿಪರೀತವಾಗಿವೆ ಅಲ್ಲಿಯ ಕಾಯಿದೆಗಳನ್ನು ಭಂಗಿಸುತ್ತಾ ಭಾರತೀಯ ಕಾಂಗ್ರೆಸು ಮತ್ತು ಅಫ್ರಿಕನ್ ಕಾಂಗ್ರೆಸು ಸತ್ಯಾಗ್ರಹವನ್ನು ಕೈಗೊಂಡಿದೆ. ಶಾಂತರೀತಿಯಲ್ಲಿ ಅಹಿಂಸಾತ್ಮಕವಾಗಿ ಈ ಚಳುವಳಿ ನಡೆದಿದ್ದು—ಸರಕಾರದ ಪೋಲೀಸರು ಸತ್ಯಾಗ್ರಹಿಗಳನ್ನು ಬಂಧಿಸಿರುವರು.

೨೦ ೮೦

ಭೂಕಂದಾಯದ ಸರಚಾರ್ಜು

ಮದ್ರಾಸು ಸರಕಾರವು ಭೂಕಂದಾಯದ ಮೇಲೆ ಸರ್ ಚಾರ್ಜನ್ನು ಹೊರಿಸುವ ಬಗ್ಗೆ ಬೇಗನೆ ಮಸೂದೆ ತರಲಿದೆ. ಪ್ರಥಮದ ೫೦ ರೂಪಾಯಿ ಮೇಲೆ ಏನೂ ಸರ್ ಚಾರ್ಜ ಇಲ್ಲ. ಆ ಬಳಿಕದ ೫೦ ರೂಪಾಯಿಗೆ ಪ್ರತಿ ರೂಪಾಯಿಗೆ ನಾಲ್ಕಾಣೆ. ಆ ಮೇಲಿನ ೪೦೦ ರೂಪಾಯಿ ವರೆಗೆ ಪ್ರತಿ ರೂ.ಗೆ ಎಂಟಾಣೆ ಮುಂದಿನ ೫೦೦ ರೂಪಾಯಿ ವರೆಗೆ ರೂ.ಗೆ ಹನ್ನೆರಡಾಣೆ. ಇವಕ್ಕೂ ಹೆಚ್ಚಿನ ಕಂದಾಯಕ್ಕೆ ರೂಪಾಯಿಗೆ ಹದಿನಾರಾಣೆಯಂತೆ ಸರ ಚಾರ್ಜನ್ನು ಹೊರಿಸುವರು.

ಕಾಂಗ್ರೆಸ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಭೂಸುಧಾರಣೆಯ ಬಗ್ಗೆ ವಿಚಾರ ವಿನಿಮಯ ನಡೆಯಿತು. ಗ್ರಾಮ ಸಹಕಾರಿ ಸಂಸ್ಥೆಗಳನ್ನು ಸೃಷ್ಟಿಸಬೇಕೆಂದೂ ಉತ್ಪಾದನೆಯನ್ನು ಹೆಚ್ಚಿಸುವುದೇ ಭೂಸುಧಾರಣೆಯ ಪ್ರಥಮ ಧ್ಯೇಯವಾಗಬೇಕೆಂದೂ ಸರ್ವರೂ ಸಮ್ಮತಿಸಿದರು.

ಅಧಿಕ ಆಹಾರ ಬೆಳೆಯುವ ಆಂದೋಲನವನ್ನು ಆಮೂಲಾಗ್ರ ಪರಿವರ್ತನೆಗೊಳಪಡಿಸಬೇಕೆಂದು ಶ್ರೀ ಕೃಷ್ಣಮಾಚಾರಿ ಸಮಿತಿ ಶಿಫಾರಸು ಮಾಡಿದೆ. ಈ ಆಂದೋಲನವು ಅಸಫಲಗೊಂಡಿದೆ ಎಂದು ಹೇಳಲು ಬರುವುದಿಲ್ಲ. ನಿರೀಕ್ಷಿತ ಫಲವನ್ನದು ಕೊಟ್ಟಿಲ್ಲ ಎಂದಷ್ಟೆ ಹೇಳಬಹುದು ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

ಸರಕಾರವು ನಿಧಾನವಾಗಿ ಆಹಾರ ಧಾನ್ಯಗಳ ವಿನಿಯಂತ್ರಣ ಕಾರ್ಯಕ್ರಮವನ್ನು ಇಟ್ಟುಕೊಂಡಿದೆ ಎಂದೂ ವ್ಯಾಪಾರಸ್ಥರು ದೇಶದ ಯಾವುದೇ ಭಾಗದಲ್ಲಾದರೂ ಆಹಾರ ಪದಾರ್ಥಗಳ ಬೆಲೆಯನ್ನು ಹೆಚ್ಚಿಸುವ ಇರಾದೆಯಿಂದ ಕೃತ್ರಿಮ ತುಟ್ಟಿಯನ್ನು ಉಂಟುಮಾಡಿದ್ದೇ ಆದರೆ ಸರಕಾರವೇ ತನ್ನ ಸ್ವಾಧೀನದಲ್ಲಿರುವ ಧಾರಾಳ ಆಹಾರ ವಸ್ತುಗಳನ್ನು ವಿಕ್ರಯಿಸಲು ತಮ್ಮದೇ ಅಂಗಡಿಗಳನ್ನು ತೆರೆದು ಕಡಿಮೆ ಕ್ರಯದಲ್ಲಿ ಅವುಗಳನ್ನು ಮಾರಲಾಗುವುದೆಂದೂ ಪಂ| ನೆಹರೂಗಳು ವ್ಯಾಪಾರಸ್ಥರನ್ನು ಎಚ್ಚರಿಸಿದ್ದಾರೆ.

ಉತ್ತರ ಪ್ರದೇಶದಲ್ಲಿ ಬಹುಕಾಲದಿಂದ ನಡೆದು ಬಂದಿದ್ದ ಜಮೀನ್ದಾರಿ ಪದ್ಧತಿಯು ಕಳೆದ ತಾ ೩೦ರಿಂದ ನಿರ್ಮೂಲವಾಗಿದೆ. ಇದರಿಂದ ನಮ್ಮದೇಶದ ಅಧಿಕ ಜನಸಂಖ್ಯೆಯ ಪ್ರಾಂತ್ಯದಲ್ಲಿ ಉಳುವವನೇ ಹೊಲದ ಅಧಿಪತಿಯಾಗಿ ಸಾಮಾಜಿಕ-ಆರ್ಥಿಕ ಕ್ಷೇತ್ರದಲ್ಲಿ ನವಕ್ರಾಂತಿ ಉಂಟಾಗುವುದು. ನಮ್ಮ ಪ್ರಧಾನಿ ನೆಹರೂಗಳು ಇದನ್ನು ಸ್ವಾಗತಿಸಿದ್ದಾರೆ.

ಚೈನಾಕ್ಕೆ ಹೋದ ಸಾಂಸ್ಕೃತಿಕ ಶಿಷ್ಟಮಂಡಲಕ್ಕೆ ಸುಮಾರು ಒಂದೂಕಾಲು ಲಕ್ಷ ರೂಪಾಯಿ ವೆಚ್ಚವಾಗಿರಬಹುದೆಂದು ತಿಳಿದು ಬಂದಿದೆ.



ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ

ತಿಳಿಗನ್ನಡದಲ್ಲಿ ಅನುಭವಸ್ಥರಿಂದ ಬರೆಯಲ್ಪಟ್ಟ ಇಂತಹ ಅನುವಾದ 'ಗೀತೆಯ ಕೈಗನ್ನಡಿ'ಯನ್ನು ಬಿಟ್ಟರೆ ಇನ್ನೊಂದಿಲ್ಲ. 'ಗೀತೆಯ ಕೈಗನ್ನಡಿ"ಯು ಹೊಸಕೆರೆ ಶ್ರೀ ಚಿದಂಬರಯ್ಯನವರ ಸರಳ ಭಾಷಾಂತರ. ಅತೀ ಅಗ್ಗವಾದ ಮತ್ತು ಪ್ರತಿಮನೆಯಲ್ಲೂ ಇರಬೇಕಾದ ಗೀತಾಪುಸ್ತಕ

ಬೆಲೆ: ಬರೇ 0-12-0 ಮಾತ್ರ.

ಪ್ರತಿಗಳು ಸಮೀಪದ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದಾಗ

ನವಯುಗ ಪ್ರೆಸ್, ಉಡುಪಿ ಇವರಿಗೆ ಬರೆಯಿರಿ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. 18/52

1) ದೇವದಾಸ ಪ್ರಭು, 2) ಗುಲಾಬಿ ಬಾಯಿ, 3) ಸದಾನಂದ ಪ್ರಭು, 4) ಉಪೇಂದ್ರ ಪ್ರಭು.

5) ನಾಗೇಶ 6 ಸುರೇಶ, 7 ದಿನೇಶ 8 ಚಂದ್ರಕಾಂತ 9 ಚಂದ್ರಕಲಾ-ಮ್ಯಾನರರು ಕ್ಷೇಮ ಚಿಂತಕಳು ತಾಯಿ 2ನೇ ಅರ್ಜಿದಾರಳು, 1-3ರಿಂದ 9ನೇಯವರು ಗುಂಡಪ್ಪಯಾನೆ ರಾಮಕೃಷ್ಣ ಪ್ರಭು ಮಕ್ಕಳು 2ನೇಯವಳು ಸದ್ರಿ ಗುಂಡಪ್ಪ ಯಾನೆ ರಾಮಕೃಷ್ಣ ಪ್ರಭು ವಿಧವೆ, 1ನೇಯವನು ಮೂಡನಿಡಂಬೂರು ಗ್ರಾಮದ ಶಿರಿಬೀಡು ಬಳಿಯಲ್ಲಿಯೂ, 2ರಿಂದ 9ನೇಯವರು ಶಿವಳ್ಳಿ ಗ್ರಾಮದ ಕಲ್ಸಂಕದ ಬಳಿ Door No- 1-2-27ನೇ ಮನೆಯಲ್ಲಿಯೂ ಯಿರುವವರಾಗಿರುತ್ತಾರೆ

—ಅರ್ಜಿದಾರರು.

ಈ ಮೂಲ್ಕ ಯಾವತ್ತೂ ಜನರಿಗೆ ತಿಳಿಯಪಡಿಸುವದೇನೆಂದ್ರೆ:-

1-3ರಿಂದ 9ನೇ ವರೆಗಿನ ಅರ್ಜಿದಾರರ ತಂದೆ ವ 2ನೇ ಅರ್ಜಿದಾರಳ ಗಂಡ ಹಾಲಿ ಉಡ್ಪಿ ಕಸಬಾ ಕಲ್ಸಂಕದ ಬಳಿ ತಾರೀಖು 20 3-52ರಲ್ಲಿ ಮೃತಪಟ್ಟಿರುವ ಗುಂಡಪ್ಪ ಯಾನೆ ರಾಮಕೃಷ್ಣ ಪ್ರಭುರಿಗೆ ದಿ ಬೊಂಬೇ ಲೈಫ್ ಎಶ್ಯುರನ್ಸ್" ಕಂಪೆನಿಯಿಂದ ನಂಬ್ರ 1u9607ನೇ ಪೋಲಿಸಿಯ ಬಾಬ್ತು ಬರತಕ್ಕ ರೂಪಾಯಿ 154-1-4ನ್ನು ವಸೂಲು ಪಡಿಯುವರೇ ಕುಟುಂಬದ ಈಗಿನ ಯಜಮಾನನಾದ 1ನೇ ಅರ್ಜಿದಾರನ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಅಪೇಕ್ಷಿಸಿ ಅರ್ಜಿದಾರರು ಮೇಲ್ಕಂಡ ಅರ್ಜಿಕೊಟ್ಟಿರುತ್ತಾರಾಗಿಯೂ ಸದ್ರಿ ಅರ್ಜಿಯು ತಾ. 23-7-52ಕ್ಕೆ ತನಿಖೆಗೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುತ್ತಾದಾಗಿಯೂ, ಆ ಬಾಬಿನಲ್ಲಿ ಆಕ್ಷೇಪವುಳ್ಳವರು ಸದ್ರಿ ದಿವಸ ಹಗಲು 10ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಜ್ಯಾಹೀರುಮಾಡಿಕೊಳ್ಳತಕ್ಕದೆಂಬಲ್ಲಿ ಇದಾ ಈ ಮೂಲ್ಕ ತಿಳಿಸೋಣಾಗುತ್ತದೆ

P. N. Krishnamoorthy Rao.
Advocate for Petitioners.
Udipi Dated 1-7-52

ಉಡುಪಿ

ವನ ಮಹೋತ್ಸವ ಸಪ್ತಾಹವು— ಇದೇ ತಾ 1ರಿಂದ 7ರ ತನಕ ಈ ಕೆಳಗೆ ಸೂಚಿಸಿದ ದಿವಸಗಳಲ್ಲಿಯು ಕಾರ್ಯಕ್ರಮಗಳಿಂದ ಆಚರಿಸಲಾಗುವುದು. ತಾ 1ರಲ್ಲು ಸಂಜೆ 4 ಗಂಟೆಗೆ ಬೋರ್ಡ್ ಹೈಸ್ಕೂಲಿನ ಜನತಾ ಭವನದಿಂದ ಸಾರ್ವಜನಿಕ ಮೆರವಣಿಗೆಯು ಹೊರಟು ತಾಲೂಕು ಕಚೇರಿಗೆ ಬಂದು ಅಲ್ಲಿ ಸಾರ್ವಜನಿಕ ಸಭೆ ಜರಗಿ ಸಸಿ ನೆಡುವುದು ತಾ 2ರಲ್ಲು ಸಂಜೆ 5 ಗಂಟೆ ಬೋರ್ಡ್ ಹೈಸ್ಕೂಲಲ್ಲಿ, ತಾ 3ರಲ್ಲು ಸಂಜೆ 5 ಗಂಟೆಗೆ ಕ್ರಿಶ್ಚಿಯನ್ ಹೈಸ್ಕೂಲಲ್ಲಿ ತಾ 4ರಲ್ಲು ಸಂಜೆ 5 ಗಂಟೆಗೆ ಸ್ಯಾಂಟ್ ಸಿಸಿಲೀಸ್ ಹೈಸ್ಕೂಲ್ ಮತ್ತು ತೆಂಗಿನ ಟ್ರೈನಿಂಗ್ ಶಾಲೆಯಲ್ಲಿ ತಾ 5ರಲ್ಲು ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ತಾ 6ರಲ್ಲು ಮುನಿಸಿಪಲ್ ನರ್ಸರಿ ಹಾ. ಎ. ಶಾಲೆಯಲ್ಲಿ ತಾ 7ರಲ್ಲು ಮುನಿಸಿಪಲ್ ಮುಸಾಫರಿ ಬಂಗ್ಲೆಯ ವಠಾರದಲ್ಲಿ ಸಸಿಗಳು ನೆಡಲಾಗುವವು. ಅದೇ ದಿನ ಸಂಜೆ 5-30 ಗಂಟೆಗೆ ಬೋರ್ಡ್ ಹೈಸ್ಕೂಲ್ ಜನತಾ ಭವನದಲ್ಲಿ ಸಾರ್ವಜನಿಕ ಸಭೆ ಮತ್ತು ವಿವಿಧ ವಿನೋದಾವಳಿಗಳಾಗಿ ಸಪ್ತಾಹವು ಮುಕ್ತಾಯವಾಗುವುದು.

ತಾಲೂಕು ಭೂ ಮಾಲಿಕರ ಸಭೆಯು— ತಾ 29ರಲ್ಲು ಸಂಜೆ ಒಡಗಬೆಟ್ಟು ಸಹಕಾರ ಸಂಘದ ಆಫೀಸಿನಲ್ಲಿ ವಕೀಲ್ ಶ್ರೀ ಕೆ. ಜೆ. ಬಲ್ಲಾಳ್ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ವಾಸುದೇವ ರಾವ್, ಎಡ್ವೊಕೇಟ್, ಅವರು ಸಭೆ ಕರೆದುದರ ಉದ್ದೇಶವನ್ನು ತಿಳಿಸಿದರು. ಕಂಟ್ರೋಲ್ ಮತ್ತು ರೇಶನಿಂಗ್ ರದ್ದತಿಯನ್ನು ಸ್ವಾಗತಿಸಿ ರಾಜಾಜಿ ಧೋರಣೆಗೆ ಭೂ ಮಾಲಿಕರು ಬೆಂಬಲವೀಯಬೇಕೆನ್ನುವ ನಿರ್ಣಯವಾಯಿತು. ಜನತೆಗೆ ಕುಚ್ಚಿಗೆ ಅಕ್ಕಿಯನ್ನು ಸೇರಿಗೆ ಎಂಟಾಣೆ ಮತ್ತು ಬೆಳ್ತಿಗೆ ಅಕ್ಕಿ ಸೇರಿಗೆ ಒಂಬತ್ತಾಣೆ ವರಕ್ಕೆ ಮೀರದ ಕ್ರಯದಲ್ಲಿ ಭೂ ಮಾಲಿಕರು ವಿತರಣೆ ಮಾಡುವಂತೆ ಜಾಹೀರು ವಿನಂತಿ ಮಾಡಲಾಯಿತು. ಮಂಗಳೂರಲ್ಲಿ ಶ್ರೀಗಳಾದ ಕೆ. ಬಿ. ಜಿನರಾಜ ಹೆಗ್ಡೆ, ಬಿ. ಜಿ. ಸಟ್ಟಿ, ಬೊಳಹಳ್ಳಿ ಶಿವರಾವ್ ಮೊದಲಾದವರು ಅಲ್ಲಿಯ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ, ಅಕ್ಕಿ ಸಂಗ್ರಹ ಮತ್ತು ವಿವರಣೆಯನ್ನು ಕಮಿಶನ್ ಏಜನ್ಸಿ ಸಂಸ್ಥೆಯ ಮೂಲಕ ಮಾಡಿಸುವ ನಿರ್ಧಾರವನ್ನು ವಿಮರ್ಶಿಸಲಾಯಿತು. ಆ ಯೋಜನೆಗೆ ಈ ಸಭೆಯು ಸಹಾನುಭೂತಿಯುಳ್ಳವೆಂದು ನಿರ್ಣಯಿಸಲಾಯಿತು.

(ಇನೇ ಪುಟದಿಂದ ಮುಂದುವರಿದುದು)

ಸಾಧನ-ವಾಹನ ಏನೊಂದು ಶಿಕ್ಷೆಯಿಲ್ಲ. ಸಂಯುಕ್ತ ರಾಷ್ಟ್ರ ಸಂಘದ ಸೇನೆಯು ನಿರ್ಣಯ ಮತ್ತು ಕಾಶ್ಮೀರ ಜನಾಭಿಪ್ರಾಯ ಇವು ತಿಳಿದುಬರುವ ವರೆಗೆ ಈ ಅನಿರ್ದಿಷ್ಟ ಪರಿಸ್ಥಿತಿ ಉಳಿಯುತ್ತದೆ. ಇಂಥದರಲ್ಲಿ ಶೇಖ ಅಬ್ದುಲ್ಲ ಹೆಜ್ಜೆ ಹೆಜ್ಜೆಗೂ ಸರ್ವತಂತ್ರ ಸ್ವತಂತ್ರರಂತೆ ನೆಗೆದು ನೆಗೆದು ಹಾರುತ್ತಿರುವುದನ್ನು ನೋಡುವಾಗ— ಭಾರತದ ಎಲ್ಲ ತ್ಯಾಗ ಮತ್ತು ಕಷ್ಟ ಸಹಿಷ್ಣುತೆಗಳು ನೀರ ಮೇಲಿನ ಹೋಮದಂತೆ ವ್ಯರ್ಥಗೊಳ್ಳುವುದೇ ಸ್ವ. ನುಂಗಲಾರದ ತುತ್ತಾಗಿ ಕಾಶ್ಮೀರವು ಭಾರತದ ಪಾಲಿಗೆ ಒದಗಿದೆ. ಗರಳವನ್ನು ನುಂಗಲು ಹವಣಿಸಿ ಗಂಟಲಿನಲ್ಲಿಯೇ ಅದನ್ನು ಸ್ಥಿರೀಕರಿಸಿದ ಪರಶಿವನ ಅಸಾಧಾರಣ ತಾಕತ್ತನ್ನು ಭಾರತ ತಾಳಬೇಕೇ ಹೇಗೆ? ಲೋಕವೇ ಈ ಕುಚೋದ್ಯವನ್ನು ಕಂಡು ನಗುವ ವಾತಾವರಣ ನಿರ್ಮಾಣಗೊಂಡುದು ನಿಜಕ್ಕೂ ಶೋಚನೀಯ.

ಕರ್ನಾಟಕ ಸಂಘದ ಮಹಾಸಭೆಯು ಡಾ। ಕೆ. ಎಲ್. ಶಂಕರ ಕಾರಂತರ ನಿವಾಸದಲ್ಲಿ ಶ್ರೀ ಕೆ ನಾರಾಯಣ ಐಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಧಾನ ಕಾರ್ಯದರ್ಶಿ ಶ್ರೀ ಕು. ಶಿ. ಹರಿದಾಸಭಟ್ಟರು ಸಂಘದ ಗತವರುಷದ ಲೆಕ್ಕಪತ್ರಗಳನ್ನು ಸಭೆಯು ಮುಂದಿಡಲು ಅದು ಮಂಜೂರಾಯಿತು. ಹೊಸ ವರುಷಕ್ಕೆ ಕಾರ್ಯಕಾರಿ ಮಂಡಳಿಯ ಸದಸ್ಯರ ಚುನಾವಣೆ ನಡೆದು ಡಾ। ಶಂಕರರ ಚಹಾಸತ್ಕಾರದೊಂದಿಗೆ ಸಭೆ ಮುಕ್ತಾಯವಾಯಿತು.

ಮುನಿಸಿಪಲ್ ಕೌನ್ಸಿಲು ಸಭೆಯು— ಕಳೆದ ತಾ 28ರಲ್ಲು ಚೆಯರ್‌ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಅಲೆವೂರು-ಬಟ್ವಾಡಿ ರಸ್ತೆಗಳನ್ನು ಒಂದಾಗಿಸುವ ಬಗ್ಗೆ ಮತ್ತು ಪಣಿಯಾಡಿ ಹೊಸ ರಸ್ತೆ ಬಗ್ಗೆ ರೂ 495ರಂತೆ ಎರಡು ರಸ್ತೆಗಳಿಗೆ ವೆಚ್ಚ ಮಂಜೂರು ಮಾಡಲಾಯಿತು. ಶ್ರೀ ಎ. ಮಂಜುನಾಥರಾಯರು ಗೈರು ಹಾಜರಿದ್ದುದರಿಂದ ಅವರ ನಿರ್ಣಯವನ್ನು ಮುಂದೊತ್ತಲು ಹಾಜರಿದ್ದ ಮೆಂಬರರಾರೂ ಮುಂದೆ ಬಾರದಿದ್ದುದರಿಂದ ನಿರ್ಣಯ ಬಿದ್ದು ಹೋಯಿತು. ಸಭಾರಂಭದಲ್ಲಿ ಶ್ರೀ ಟಿ ರಮೇಶ ಪೈಗಳ ಪ್ರಶ್ನೆಗಳಿಗೆ ಚೆಯರ್‌ಮೇನರು ಉತ್ತರವಿತ್ತರು.

ಹೆಡ್ ಪೋಸ್ಟಾಫೀಸು— ಉದ್ಘಾಟನೆ ಸಮಾರಂಭವನ್ನು ಇದೇ ತಾ 1ರಂದು ಶ್ರೀ ಕೆ. ಎನ್. ಪ್ರಭು, ಡಿಪ್ಯೂಟಿ ಡೈರೆಕ್ಟರ್ ಒಫ್ ಪೋಸ್ಟ್‌ಫೀಸಸ್ ಮದ್ರಾಸು ಅವರು ನೆರವೇರಿಸುತ್ತಾ, ಜನತೆಗೆ ಹೆಚ್ಚಿನ ಸೌಕರ್ಯಗಳನ್ನು ಕೊಡುವ ಬಗ್ಗೆ ಇಲಾಖೆಯ ಕಡೆಯಿಂದ ಉಡುಪಿ ಆಫೀಸನ್ನು ಹೆಡ್ ಪೋಸ್ಟಾಫೀಸಾಗಿ ಮಾಡಲಾಯಿತು. ಈ ಸೌಕರ್ಯವನ್ನು ಜನರು ಮುಖ್ಯವಾಗಿ ವ್ಯಾಪಾರಿ ವೃಂದದವರು ಹೆಚ್ಚು ಹೆಚ್ಚಾಗಿ ಪಡೆಯಬೇಕೆಂದು ಅಪೇಕ್ಷಿಸಿದರು. ಡಿಪ್ಯುಟಿ ಡ್ಯಾರೆಕ್ಟರ್ ಒಫ್ ಟೆಲಿಗ್ರಾಫ್ಸ್ ಶ್ರೀ ಚೋಪ್ರ ಮಂಗಳೂರು ಡಿವಿಜನ್ ಸುಪರಿಂಟೆಂಡೆಂಟ್ ಶ್ರೀ ಜೆ. ಆರ್. ದಾಸನ್ ಹಾಜರಿದ್ದರು. ಈ ಸಮಾರಂಭಕ್ಕೆ ಊರ ಮಹನೀಯರನೇಕರು ಆಮಂತ್ರಿತರಿದ್ದರು. ಉಪಾಹಾರವಾದ ಬಳಿಕ ಶ್ರೀ ಡಬ್ಲ್ಯು. ಎ. ಸುಟಿಕರು ಇಲಾಖೆಯವರ ಕೆಲಸವನ್ನು ಸ್ತುತಿ ಮಾತನಾಡಿದರು. ಪೋಸ್ಟಲ್ ಇನ್ಸ್‌ಪೆಕ್ಟರ್ ಶ್ರೀ ಕೆ. ಎಸ್. ಎಸ್. ರಾಜನ್ ಅವರು ಧನ್ಯವಾದಗಳನ್ನರ್ಪಿಸಿದರು.

ಎಮ್. ಜಿ. ಎಮ್. ಕಾಲೇಜಿನಲ್ಲಿ ಹೆಣ್ಮಕ್ಕಳಿಗೆ ಪ್ರವೇಶ

ಆಸುಪಾಸಿನಲ್ಲಿ ಹೆಣ್ಮಕ್ಕಳ ಕಾಲೇಜುಗಳಿಲ್ಲದ ಕೇಂದ್ರಗಳಲ್ಲಿ ಅಲ್ಲಿಯ ಗಂಡುಮಕ್ಕಳ ಕಾಲೇಜಿಗೆ ಹೆಣ್ಣುಮಕ್ಕಳನ್ನು ಸೇರಿಸಿಕೊಳ್ಳಬಹುದಾಗಿ ಮದ್ರಾಸು ಯೂನಿವರ್ಸಿಟಿಯವರು ತಮ್ಮ ಧೋರಣೆಯನ್ನು ಸಡಿಲಿಸಿರುವರಾಗಿ ತಿಳಿದುಬರುತ್ತದೆ. ಇದರಿಂದಾಗಿ ಉಡುಪಿಯ ಎಂ. ಜಿ ಯಂ ಕಾಲೇಜಿನಲ್ಲಿ ಈ ವರ್ಷದಿಂದಲೇ ಹೆಣ್ಮಕ್ಕಳಿಗೆ ಪ್ರವೇಶವು ದೊರೆಯುವುದ ಹಾಗಾಗಲೇ ಹಲವು ಹೆಣ್ಮಕ್ಕಳು ಪ್ರವೇಶ ಅರ್ಜಿಗಳನ್ನು ಸಲ್ಲಿಸಿರುವರೆಂದು ತಿಳಿದುಬರುತ್ತದೆ.

ಕುಂಬಳೆ— ಅಸಿಸ್ಟೆಂಟ್ ಬುನಾದಿ ವಿದ್ಯಾಭ್ಯಾಸ ಆಫೀಸರರಾದ ಶ್ರೀ ಸಿ. ಐ. ಉಪಾಧ್ಯಾಯರು ಕಳೆದ ತಾ. ೨೪ ಮತ್ತು ೨೫ರಲ್ಲು ಮಜಿಬೈಲು ವಿಭಾಗದಲ್ಲಿ ಮೊಕ್ಕಾಂ ಮಾಡಿದ್ದು ಅಲ್ಲಿನ ತರಬೇತು ಶಾಲೆಯ ವಿದ್ಯಾರ್ಥಿಗಳ ಯಕ್ಷಗಾನ ನಾಟಕ ಸಭೆಯಲ್ಲಿ ಅಧ್ಯಕ್ಷತೆ ವಹಿಸಿದರು.

ತಾ. ೨೫ರಂದು ಬುನಾದಿ ತರಬೇತು ಶಾಲೆಯಲ್ಲಿ ಪೆರುನಾಳ್ ಹಬ್ಬದ ಕುರಿತು ಯು. ಅಬ್ದುಲ್‌ರಹಿಮಾನ್ ಬಿ. ಕೆ. ಮುಹಮ್ಮದ್, ಬಿ. ಮೊಯ್ದೀನ್ ಕುಂಞ, ನಾರಾಯಣ ಭಟ್, ಬಾಬು ನಾಯಕ್, ಶಂಭು ಭಟ್, ವಿಶ್ವನಾಥ ರಾವ್, ಗುರುವಪ್ಪ ಮುಂತಾದವರು ಭಾಷಣ ಮಾಡಿದರು.

ಕಟಪಾಡಿ— ಕಳೆದ ತಾ 25ರಲ್ಲಿ ಕೋಟೆ ದೇವಿ ಪೂಜಾರ್ತಿಯವರ ಉತ್ತರಕ್ರಿಯೆಯ ಸಂಬಂಧ ಸುಮಾರು 2500/ಕ್ಕೆ ಮಿಕ್ಕಿದ, ಮಹಾಜನ, ಮತ್ತು ಹರಿಜನರಿಗೆ ಕೂಡಾ, ಭೂರಿ ಭೋಜನ ಸಂತರ್ಪಣೆ ನಡೆಯಿತು.

ಎಸ್. ಎಸ್. ಎಲ್. ಸಿ ಪರೀಕ್ಷೆ ಫಲಿತಾಂಶಗಳು— ಕುಂದಾಪುರ ಹೈಸ್ಕೂಲಲ್ಲಿ 98ರಲ್ಲಿ 57 ಮಂದಿ (ಸೇಕಡಾ 58), ಮೂಡಬಿದ್ರೆ ಜೈನ್ ಹೈಸ್ಕೂಲಲ್ಲಿ 80ರಲ್ಲಿ 46 ಮಂದಿ (ಸೇ. 58), ಕಲ್ಯಾಣಪುರ ಮಿಲಾಗ್ರಿಸ್ ಹೈಸ್ಕೂಲಲ್ಲಿ 102ರಲ್ಲಿ 45 ಮಂದಿ (ಸೇ. 44) ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿಲ್ಲಿ 97ರಲ್ಲಿ 50 ಮಂದಿ (17 ಮಂದಿಯ ಫಲಿತಾಂಶ ಇನ್ನೂ ಬರಬೇಕಷ್ಟೆ) ಪುತ್ತೂರು ಬೋರ್ಡ್ ಹೈಸ್ಕೂಲಲ್ಲಿ 108ರಲ್ಲಿ 70 [ಸೇ. 65], ಸ್ಯಾಂಟ್ ವಿಕ್ಟರ್ಸ್ ಗರ್ಲ್ಸ್ ಹೈಸ್ಕೂಲನಲ್ಲಿ 22ರಲ್ಲಿ 15 [ಸೇ. 68], ಬಂಟವಾಳ ಎಸ್. ವಿ. ಎಸ್. ಹೈಸ್ಕೂಲಿನಿಂದ 105ರಲ್ಲಿ 81 [ಸೇ. 77], ಕಾರ್ಕಳ ಬೋರ್ಡ್ ಹೈಸ್ಕೂಲಿನಲ್ಲಿ 82ರಲ್ಲಿ 62 [ಸೇ. 76], ಎಸ್. ವಿ. ಟಿ ಗರ್ಲ್ಸ್ ಹೈಸ್ಕೂಲಿನ 30ರಲ್ಲಿ 20 [ಸೇ. 66], ಇನ್ನಂಜೆ ಎಸ್. ವಿ ಎಚ್. ಹೈಸ್ಕೂಲಿನ 45ರಲ್ಲಿ 24 [ಸೇ. 53], ಕಟಪಾಡಿ ಎಸ್. ವಿ. ಎಸ್. ಹೈಸ್ಕೂಲಿನ 78ರಲ್ಲಿ 34 [ಸೇ. 44].

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 752/51 O S. 614/51

ಅರ್ಜಿದಾರ:— P. ಹರಿಕೃಷ್ಣ ಹಂದೆ.

ಎದ್ರಿರು:— ವೆಂಕಮ್ಮ ಯಾನೆ ನಾಗಮ್ಮ ಸೆಟ್ಟಿ ಕೂಡಾ.

ಎದ್ರಿಳು:— ಸಂಜೀವತಿ ಸೆಟ್ಟಿ, ವೆಂಕಮ್ಮ ಯಾನೆ ನಾಗಮ್ಮ ಸೆಟ್ಟಿರ ಮಗಳು ಉಡುಪಿ ತಾಲ್ಲೂಕು, ಬನ್ನಾಡಿ ಗ್ರಾಮದ ಉಪ್ಲಾಡಿಯಲ್ಲಿರುವವಳು.

ಸದ್ರಿ ಎದ್ರಿಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ಅರ್ಜಿದಾರನು ಡಿಕ್ರಿಗೆ ಒಳಪಟ್ಟ ಆಸ್ತಿಗಳ ಮಾರಾಟದ ಬಗ್ಗೆ ಸದ್ರಿ ಅಮಲ್ಜಾರಿಯನ್ನು ದಾಖಲ್ಲು ಮಾಡಿರುತ್ತಾನೆ. ಸದ್ರಿ ಅರ್ಜಿಯು ತಾ. 21-7-52ಕ್ಕೆ ತನ್ನಿಗೆ ಇದೆ. ಆ ಕುರಿತು ನಿಮ್ಮ ದೈನಾವಹೇನೂ ಆಕ್ಷೇಪಗಳಿದ್ದಲ್ಲಿ ಸದ್ರಿ ದಿವಸ 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಎಕ್ಸಪಾರ್ಟಿಯಿಂದ ಸದ್ರಿ ಅರ್ಜಿಯನ್ನು ತೀರ್ಮಾನಿಸಲಾಗುತ್ತದೆಂಬ ಸಂಗ್ತಿಯನ್ನು ಕೋರ್ಟಿನ ಹುಕುಂ ಪ್ರಕಾರ ತಿಳಿಯಿಸಲಾಗುತ್ತದೆ.

Holsnad Loxminarayanaiya.
Advocate.
Coondapoor.

ತಾರೀಕು 3—7—52ರಿಂದ ರಣಜಿತ್ ಚಿತ್ರ

ಚೀನ್-ಲೆ-ಅಜಾದಿ

ಮೀನಾ ಮತ್ತು ಗುಲಾಮ್ ಮಹಮ್ಮದ್

ಅನಂತರ:— **ಝಲ್ ಝಾಲಾ**

ಬರುವುದು:— ಸ್ಪ್ರೀಟ್ಸ್ ಆಫ್ ಲಾಡ್ರಿಲ್ (ವರ್ಣಚಿತ್ರ) ಅಮರ್ ಬೋಪಾಲಿ, ಶೀಷ್ ಮಹಲ್, ಜೈ ಮಹಾಕಾಳಿ ಇತ್ಯಾದಿ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

For Protection and Provision

Consult

The New Guardian of India Life Insurance Co., Ltd.

Estd] Head office: **MADRAS** 1934

A Policy in this rogressive Life Office is good investment; its Agency is valuable business connection.

Applications for representation are invited from influential persons.

Please apply to:

The Branch Manager,
Diamond Building, Hampankatta,
MNGALORE, S. K.

ರಾಷ್ಟ್ರಕವಿ ಎಮ್. ಗೋವಿಂದ ಪೈಗಳವರಿಂದ ಉದ್ಘಾಟಿಸಲ್ಪಟ್ಟ ಕೊರಡ್ಕಲ್ ಸ್ಮಾರಕ ಸಮಿತಿಯವರಿಂದ
(ದಿವಂಗತ ಕೊರಡ್ಕಲ್ ಶ್ರೀನಿವಾಸ ರಾಯರ ನೆನಪಿಗಾಗಿ)

ಪ್ರಕಟಿಸಲ್ಪಟ್ಟ ನೆನಪಿಗಾಗಿ ನಾವೀನ್ಯಪೂರ್ಣ ಪುಸ್ತಕ

ಕರ್ನಾಟಕದ ಹೆಸರಾಂತ ಲೇಖಕರನೇಕರ ವಿವಿಧ ಬರಹಗಳಿಂದ ಕೂಡಿದೆ.
ಬೆಲೆ ರೂ. 2—0—0 ಮಾತ್ರ ರೂ 2—6—0 ಕಳುಹಿಸಿದರೆ ಒಂದು ಪ್ರತಿಯನ್ನು ಟಪ್ಪಾಲು ದ್ವಾರಾ ಕಳುಹಿಸಬಹುದು.

ಕೊರಡ್ಕಲ್ಲರ ಶಿಷ್ಯ ವೃಂದವೂ ಮಿತ್ರಮಂಡಳಿಯೂ ಈ ಗ್ರಂಥವನ್ನು ಕೊಂಡುಕೊಂಡು ಸ್ಮಾರಕ ಸಮಿತಿಗೆ ನೆರವು ನೀಡಬೇಕಾಗಿ ವಿಶೇಷತಃ ಕೋರಲಾಗಿದೆ.

ಪ್ರತಿಗಳು ಸಿಗುವ ಸ್ಥಳಗಳು:—
1) ಕೊರಡ್ಕಲ್ ಸ್ಮಾರಕ ಸಮಿತಿ, ಉಡುಪಿ 2) ನವಯುಗ ಪ್ರೆಸ್, ಉಡುಪಿ. 3) ಸ್ಕೂಲ್‌ಬುಕ್ ಕಂಪೆನಿ, ಮಂಗಳೂರು, 4) ನವಭಾರತ ಬುಕ್‌ಡಿಪ್ಪೊ, ಉಡುಪಿ,

ಮಂಗಳೂರು

ಕಲೆಕ್ಟರರ ಪತ್ರಿಕಾ ಪರಿಷತ್ತು— ಕಳೆದ ತಾ. 20ರಲ್ಲಿ ಜರಗಿತು. ಕಳೆದ ಮೇ ತಿಂಗಳ ತಾ. 14ರಿಂದ ಬೆಂಕಿಯಿಂದ ಮನೆ ನಷ್ಟವಾದ ಏಳು ಮಂದಿಗೆ ರೂ. 90 ಸಹಾಯಕೊಡಲಾಗಿದೆ. ಎಪ್ರಿಲ್ ತಿಂಗಳ ತಾ 10ಕ್ಕೆ ಅಂತ್ಯವಾಗುವ ಒಂದು ತಿಂಗಳಲ್ಲಿ ಜಿಲ್ಲೆಯಲ್ಲಿ ಒಟ್ಟು 49ಮಂದಿಗೆ ಕೋವಿ ಲೈಸೆನ್ಸು ಕೊಡಲಾಗಿತ್ತು. ಈ ಜಿಲ್ಲೆಗೆ ಕೆರೆ ದುರಸ್ತಿಗಾಗಿ ಜೂನ್ ತಿಂಗಳಲ್ಲಿ ರೆವಿನ್ಯೂ ಬೋರ್ಡು ರೂ. 2145 ಮಂಜೂರುಮಾಡಿದೆ.

ಕೂಳೂರು ಸೇತುವೆ— ಇದೇ ತಾ. 1ರಿಂದ ಸಾರ್ವಜನಿಕ ಉಪಯೋಗಕ್ಕೆ ತೆರೆಯಲಾಗಿದೆ. ತಾತ್ಕಾಲಿಕವಾಗಿ ಸೇತುವೆಯನ್ನು ಕಟ್ಟಿಸುವ ಬಗ್ಗೆ ಖರ್ಚುಮಾಡಿದ ಮೊಬಲಗು ಮತ್ತು ಆ ಮೇಲೆ ಸೇಕಡಾ 3½ ದರದಲ್ಲಿ ಬಡ್ಡಿ ತುಂಬುವ ವರೆಗೆ ಕರವನ್ನು ವಸೂಲು ಮಾಡಲಾಗುವುದು ಎಂದು ಜಿಲ್ಲಾ ಕಲೆಕ್ಟರು ಪ್ರಕಟಿಸಿದ್ದಾರೆ. 10 ಯಾ 10ಕ್ಕಿಂತ ಕಡಿಮೆ ಜನ ತೆಗೆದುಕೊಂಡು ಹೋಗುವ ವಾಹನಗಳಿಗೆ ರೂ 1. ಪ್ರತಿ ಮೋಟಾರ್ ಲಾರಿಗೆ 3, ಮೋಟಾರ್ ಸ್ಯಾಕಲ್ 8ಆಣೆ, ಬೇರೆತರದ ಸ್ಯಾಕಲ್ ಯಾ ಟ್ರಿಸಿಕಲ್ 1ಆಣೆ, ಪ್ರತಿಯೊಂದು ಗಾಡಿಗೆ 4 ಆಣೆ, ಕುದುರೆ, ಕತ್ತೆ ಹೇಸರ ಕತ್ತೆ, ಕೋಣ ಮತ್ತು ಎತ್ತು 2ಆಣೆ.

ಮದ್ರಾಸು ಪ್ರಾಂತಿಕ ಸಪ್ಲೈ ಅಧಿಕಾರಿಗಳಾದ— ಶ್ರೀ ಏಚ್ ವಿ. ಸುಬ್ರಹ್ಮಣ್ಯಂ, ಅವರು ಕಳೆದ 21ರಲ್ಲಿ ಮಂಗಳೂರಿಗೆ ಬಂದಿದ್ದು ಜಿಲ್ಲೆಯಲ್ಲಿ ನಿಸಿಯಂತ್ರಣದಿಂದಾದ ಪರಿಸ್ಥಿತಿಯನ್ನರಿತುಕೊಂಡು ತಾ 24ರಲ್ಲಿ ಮದ್ರಾಸಿಗೆ ಹಿಂತೆರಳಿರುತ್ತಾರೆ.

ಜಿಲ್ಲಾ ಆಹಾರೋತ್ಪತ್ತಿ ಸಲಹಾ ಸಮಿತಿ ಸಭೆಯು ಕಳೆದ ತಾ. 20ರಂದು ಜಿಲ್ಲಾ ಕಲೆಕ್ಟರ್ ಶ್ರೀ ರಾಜರತ್ನಂ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕೆಲಸಗಳನ್ನು ಹೆಚ್ಚು ಮಾಡಬೇಕು, ತೋಡು-ಹೊಳೆಗಳಿಗೆ ರೈತರು ಹಾಕುವ ಕಟ್ಟಗಳೆಲ್ಲ ಸ್ಥಿರವಾಗಿರುವಂತೆ ಮಾಡಬೇಕೆಂದು ಶ್ರೀ ಎಸ್. ಎಲ್. ಕೊಳ್ಳೆಟ್ರೈಲ್, ಎಮ್. ಎಲ್. ಎ. ಅವರು ತಂದ ಸೂಚನೆಯನ್ನು ಒಪ್ಪಲಾಯಿತು. ಕಟ್ಟದ ವಿಚಾರದಲ್ಲಿ ಮಂಡಾರಿನಿಂದ ಬನ್ನಾಡಿ ವರೆಗೆ ಇರುವ 16 ಕಟ್ಟಗಳ ಖರ್ಚು ಎಷ್ಟೆಂದು ಅಂದಾಜುಮಾಡಲಾಗುವುದೆಂದು ಜಿಲ್ಲಾ ಕಲೆಕ್ಟರವರು ತಿಳಿಸಿದರು. ಸರಕಾರಿ ಸ್ಥಳವನ್ನು ಹರಿಜನ, ನಿವೃತ್ತ ಸೈನಿಕ, ರಾಜಕೀಯ ಸಂತ್ರಸ್ತ ಎಂಬ ಭೇದವಿಲ್ಲದೆ ಕೃಷಿ ಮಾಡುವ ಎಲ್ಲರಿಗೂ ದರಖಾಸ್ತಿಗೆ ಕೊಡಬೇಕೆನ್ನುವ ಮತ್ತು ವಿನಿಯಂತ್ರಣವನ್ನು ಸ್ವಾಗತಿಸುವ ಮತ್ತು ಯೋಗ್ಯ ಬೆಲೆಯ ಅಂಗಡಿಗಳು ಹೆಚ್ಚಾಗಬೇಕೆನ್ನುವ ಶ್ರೀ ಜತ್ತಪ್ಪ ರೈಗಳ ನಿರ್ಣಯವು ಪಾಸಾಯಿತು. ಹೊಸದುರ್ಗ ಸಬ್ ತಾಲೂಕಿಗೆ ಅಕ್ಕಿ ಹೋಗದಂತೆ ಮಾಡಬೇಕು. ಅದನ್ನು ಮಲಬಾರಿನೊಂದಿಗೆ ಸೇರಿಸಬೇಕು ಎನ್ನುವ ಶ್ರೀ ಎನ್. ಎಸ್. ಸುವರ್ಣರ ನಿರ್ಣಯ ಮಂಜೂರಾಯಿತು.

ಜಿಲ್ಲಾಬೋರ್ಡು ಅಧ್ಯಕ್ಷ— ಶ್ರೀ ಬಿ. ಮಂಜಯ್ಯ ಹೆಗ್ಡೆಯರು ಒಂದು ಪ್ರಕಟಣೆಯ ಮೂಲಕ ಜಿಲ್ಲೆಯಲ್ಲಿ ವಿದ್ಯಾ ಪ್ರಸಾರಕ್ಕೆ ನೆರವಾದ ಮಹಾ ಜನರನ್ನು ಅಭಿನಂದಿಸಿದ್ದಾರೆ. ಕುಂಟಲೆ ಶಾಲಾ ಕಮಿಟಿಯವರು 10,000 ಬೆಲೆಯ ಕಟ್ಟಡವನ್ನು ಬೋರ್ಡಿಗೆ ಕೊಟ್ಟಿರುತ್ತಾರೆ. ಕುಂದಾಪುರ ತಾಲೂಕಿನ ಅಗಲ್ಪಾಡಿಯಲ್ಲಿರುವ, ಕಾರ್ಕಳ ತಾಲೂಕಿನ ನಾರಾವಿಯಲ್ಲಿರುವ ಮತ್ತು ಮತ್ತು ಮಿಯಾರಿನಲ್ಲಿರುವ ಎಲಿಮೆಂಟರಿ ಶಾಲೆಗಳನ್ನು ಹಾ। ಎ। ಶಾಲೆಗಳನ್ನಾಗಿ ಮಾಡಲು ಆ ಊರಿನವರು ರೂಪಾಯಿ 600 ರೇವಣಾತಿ ಇಟ್ಟಿರುತ್ತಾರೆ. ಅಲ್ಲದೆ ಕಟ್ಟಡದ ಕೆಲಸವನ್ನು ಮುಂದರಿಸುತ್ತಿದ್ದಾರೆಂದು ತಿಳಿಸಿದ್ದಾರೆ. ಇತರ ಸ್ಥಳಗಳ ಮಹಾ ಜನರೂ ಇದರಂತೆ ಮುಂದೆ ಬಂದು ವಿದ್ಯಾ ಪ್ರಸಾರದಲ್ಲಿ ಸಹಕರಿಸಬೇಕಾಗಿ ಅಪೇಕ್ಷಿಸಿದ್ದಾರೆ.

ಕರ್ನಾಟಕ ರೈತ ಸಂಘದ ಕಾರ್ಯ ನಿರ್ವಾಹಕ ಕಮಿಟಿಯು— ತಾ 23ರಲ್ಲಿ ಸೇರಿ ರಾಜಾಜಿಯವರ ವಿನಿಯಂತ್ರಣ ಕಾರ್ಯಕ್ರಮವನ್ನು ಸ್ವಾಗತಿಸಿತು. ಅಲ್ಲದೆ ಇದರಿಂದಾಗಿ ರೈತರ ಸಂಕಷ್ಟ ನಿವಾರಣೆಯಾಗಬಹುದೆಂದು ಅಭಿಪ್ರಾಯ ಪಟ್ಟಿತು. ರೈತರೂ ವ್ಯಾಪಾರಿಗಳು ಅಕ್ಕಿಯ ಮುಡಿಗೆ ರೂ 21ರಂತೆ ಸಿಗುವಂತೆ ಮಾಡಬೇಕಾಗಿ ಅವರನ್ನು ಕೇಳಿಕೊಂಡಿತು. ರೈತ ಮಹಾ ಜನರು ಅಕ್ಕಿ ದಾಸ್ತಾನು ಇಡದೆ ಉಪಯೋಗಿಸುವವರಿಗೆ ದೊರೆಯುವಂತೆ ಮಾಡಬೇಕೆಂದು ಅವರನ್ನು ವಿಶೇಷವಾಗಿ ಕೇಳಿಕೊಳ್ಳಲಾಯಿತು.

ಮಜೂರರಿಗೆ ಕಡಿಮೆ ದರದಲ್ಲಿ ಅಕ್ಕಿ— ಒದಗಿಸುವುದಕ್ಕಾಗಿ ಮಂಗಳೂರಿನ ಮಾಲಿಕರ ಸಭೆಯೊಂದು ಕಳೆದ ತಾ 23ರಲ್ಲಿ ಶ್ರೀ ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಮುಂದಿನ ಬೆಳೆಯುವರೆಗೆ ಮಾಲಿಕರೆಲ್ಲರು ತಮ್ಮ ಮಜೂರರಿಗೆ ಸೇರಿಗೆ ಏಳಾಣೆಯಂತೆ ಅಕ್ಕಿಯೊದಗಿಸಬೇಕೆಂದು ನಿರ್ಣಯವಾಯಿತು.

ಆಹಾರ ಸರಬರಾಯಿ ಮತ್ತು ಕ್ರಯ ನಿರ್ಧಂತ ತಡೆಗಟ್ಟುವ ಕುರಿತು ಪತ್ರಿಕಾ ಪರಿಷತ್ತು— ರಾಜಾಜಿಯವ ವಿನಿಯಂತ್ರಣ ಧೋರಣವನ್ನು ಯಶಸ್ವಿಗೊಳಿಸುವ ಉದ್ದೇಶದಿಂದ ಜಿಲ್ಲೆಯ ಕೆಲ ಮಂದಿ ಮಹನೀಯರು ಹೊರಡಿಸಿದ ಯೋಜನೆಯನ್ನು ವಿವರಿಸುವುದಕ್ಕಾಗಿ ಕಳೆದ ತಾ 26ರಲ್ಲಿ ಸಂಜೆ ಸೆಂಟ್ರಲ್ ಬೇಂಕಿನ ಕಟ್ಟಡದಲ್ಲಿ ಕರೆಯಲಾದ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಶ್ರೀಗಳಾದ ಮೊಳಹಳ್ಳಿ ಶಿವರಾವ್, ಕೆ ಬಿ. ಜಿನರಾಜ ಹೆಗ್ಡೆ, ಎ ಬಿ ಶೆಟ್ಟಿ ಮೊದಲಾದವರು ಯೋಜನೆಯನ್ನು ವಿವರಿಸಿ ಮಾತನಾಡಿದರು. ನಗರ ಹಾಗೂ ಗ್ರಾಮಾಂತರಗಳಲ್ಲಿ ಈಗ ಇರುವ ಎಲ್ಲಾ ಮಿತ ಧಾರಣೆಯ ಅಂಗಡಿಗಳು ಈಗಿನ ಮಿತಿಯಲ್ಲಿ ಅಕ್ಕಿ ವಿತರಣೆಯನ್ನು ಮುಂದಿನ ಬೆಳೆಯ ತನಕ ಮುಂದುವರಿಸುವವು ಎಂದು ಶ್ರೀ ಎನರ್. ಶಿವರಾಯರು ಪ್ರಾರಂಭದಲ್ಲೇ ಹೇಳಿದರು. ಈ ಬಗ್ಗೆ 'ಲೆವಿ' ಪದ್ಧತಿಯಿಂದ ಎತ್ತಿದ ಅಕ್ಕಿ ಹಾಗೂ ತಾಡಪಳ್ಳಿ ಗುಡಂ ಎಂಬಲ್ಲಿಂದ ಸರಕಾರವು ಈ ಮೊದಲೇ ಕಳುಹಿಸಿಕೊಡಲೊಪ್ಪಿದ 6000ಟನ್ ಅಕ್ಕಿ ಸಾಕಾಗುವುದೆಂದರು.

ಮಿತ ಧಾರಣೆಯ ಅಂಗಡಿಗಳಿರುವಲ್ಲಿ ಅಕ್ಕಿಯ ಸಂಕಷ್ಟ ತಲೆದೋರಲಾರದು. ಜಿಲ್ಲೆಯ ಒಳ ಪ್ರದೇಶಗಳಲ್ಲಿ ಈ ವರ್ಷ ಅಕ್ಕಿಯ ದಾಸ್ತಾನು ಇರಲೇ ಬೇಕೆಂದು ಶ್ರೀ ಶಿವರಾಯರು ವಿವರಿಸಿದರು. ರಿಕ್ವಿಜಿಶನ್ ನೋಟೀಸಿನಂತೆ ನಮ್ಮ ಜಿಲ್ಲೆಯಲ್ಲಿ ಅಕ್ಕಿಯ ತೀವ್ರ ಸಂಗ್ರಹಣವಾಗುತ್ತಿದ್ದಾಗ ಪ್ರತಿವರ್ಷ 45,000ಟನ್‌ಗಳಷ್ಟು ಅಕ್ಕಿಯನ್ನು ಸರಕಾರ ಸಂಗ್ರಹಿಸುತ್ತಿತ್ತು. ಈ ವರ್ಷ ಲೆವಿ ಕ್ರಮದಂತೆ ಕೇವಲ 15,000 ಟನ್‌ಗಳಷ್ಟು ಮಾತ್ರ ಸಂಗ್ರಹಿಸಲಾಗಿದೆ. ಎಂದರೆ 30,000 ಟನ್‌ಗಳಷ್ಟು ರೈತರ ವಶದಲ್ಲೇ ಬಿಡಲಾಗಿದೆ. ಈ ಅಕ್ಕಿಯು ಅತಿ ಲಾಭದಾಸೆಯಿಂದ ಜಿಲ್ಲೆಯ ಹೊರಗೆ ಹೋಗದಿದ್ದರೆ ನಮಗೆ ಅಕ್ಕಿಯ ಕೊರತೆಯಾಗಲಾರದು ಎಂದರು. ವಿನಿಯಂತ್ರಣವು ಜಯಪ್ರದವಾಗಬೇಕೆಂದು ಪ್ರತಿಯೊಬ್ಬ ರೈತನೂ ಪ್ರಾಮಾಣಿಕವಾಗಿ ಸಹಕರಿಸಿದರೆ ಯಾವ ಸಂಕಷ್ಟವೂ ಬರಲಾರದು ಎಂದರು.

ನಿರುದ್ಯೋಗ ವಿರೋಧ ದಿನಾಚರಣೆ— ಸೌತ್ ಕೆನರಾ ಟ್ರೇಡ್ ಯೂನಿಯನ್ ಕೌನ್ಸಿಲಿನ ಆಶ್ರಯದಲ್ಲಿ ಕಳೆದ ತಾ 22ರಲ್ಲಿ ರಘುನಾಥಯ್ಯ ಸ್ಮಾರಕ ಮುಂದಿಂದಲ್ಲಿ ನಿರುದ್ಯೋಗ ವಿರೋಧ ದಿನಾಚರಣೆಯು ಶ್ರೀ ಕೆ ಮೋನಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎ. ಶಾಂತಾರಾಂ ಪೈ, ಸಿಂಪ್ಸನ್ ಸೋನ್ಸ್ ಮೊದಲಾದವರು ಉಚಿತ ಮಾತುಗಳನ್ನಾಡಿದರು

'ಕರ್ನಾಟಕ ಚೇಂಬರ್ ಒಫ್ ಎಗ್ರಿಕಲ್ಚರ್'ನ ಮಹಾಸಭೆ.

ಕರ್ನಾಟಕ ಚೇಂಬರ್ ಒಫ್ ಎಗ್ರಿಕಲ್ಚರ್ ಇದರ ಮಹಾ ಸಭೆಯು ತಾ 23-5-1952ರಲ್ಲಿ ಎಮ್. ಸಿ. ಸ್ಟೋರ್ಸ್, ಲಿಮಿಟೆಡಿನ ಆಫೀಸಿನಲ್ಲಿ ಜರಗಿ ಡ್ರಾಫ್ಟ್ ಕಮಿಟಿಯಿಂದ ತಯಾರಿಸಲ್ಪಟ್ಟ ಚೇಂಬರ್‌ನ ಘಟನೆ ನಿಯಮ, ನಿಬಂಧನೆಗಳನ್ನು ಸರ್ವಾನುಮತದಿಂದ ಅಂಗೀಕರಿಸಿ, ಚೇಂಬರಿಗೆ ಶ್ರೀಗಳಾದ ಎ. ಶಂಕರ ಆಳ್ವ, (ಅಧ್ಯಕ್ಷ) ಬಿ. ಆರ್ ಕರ್ಕೇರ (ಉಪಾಧ್ಯಕ್ಷ) ಬಿ. ಬಿ. ಶೆಟ್ಟಿ, ಮತ್ತು ಬಿ. ಎಸ್ ಭಾಸ್ಕರ ರೈ, (ಜತೆ ಕಾರ್ಯದರ್ಶಿಗಳು) ಕೆ ಎಸ್ ಎಸ್ ಅಡಿಗ, (ಕೋಶಾಧಿಕಾರಿ)ಗಳಾಗಿಯೂ ಮೆನೇಜಿಂಗ್ ಕಮಿಟಿಗೆ ಈ ಕೆಳಗಿನ ಇತರ ಸದಸ್ಯರನ್ನೂ ಆರಿಸಲಾಯಿತು. ಶ್ರೀಗಳಾದ ಕೆ. ಎಲ್. ಆಚಾರ್, ಕೆ ಬಿ. ಜಿನರಾಜ ಹೆಗ್ಡೆ, ಕೆ. ಕೆ ಶೆಟ್ಟಿ, ಬಿ. ದೇವಪ್ಪ ಆಳ್ವ, ಕೈದೇಲ್ ಸಂಜೀವ ಶೆಟ್ಟಿ, ಎ ಎಸ್ ಮಹಾಬಲ ರೈ, ಎಮ್. ಎಸ್ ಅಧಿಕಾರಿ, ಎಂ. ಕೃಷ್ಣಯ್ಯ ಶೆಟ್ಟಿ, ಬಿ. ಸುಬ್ಬಯ್ಯ ಹೆಗ್ಡೆ, ಪಿ ನಾರಾಯಣ ಶೆಟ್ಟಿ, ಬಿ. ಮಹಾಬಲ ಶೆಟ್ಟಿ, ಬಿ ರಾಜೀವ ಭಂಡಾರಿ.

ಚೇಂಬರಿಗೆ ಸದಸ್ಯರಾಗಿ ಸೇರಿದವರಲ್ಲಿ ಅನೇಕರು ಸಭೆಯ ಕಾಲದಲ್ಲಿ ಜೀವಾವಧಿ ಸದಸ್ಯರಾಗಿ ಸೇರಿರುತ್ತಾರೆ. ಸಭೆಯಲ್ಲಿ ಕರ್ನಾಟಕದ ಸಮಸ್ತ ಪ್ರಾಂತ್ಯಗಳಿಂದಲೂ ಸದಸ್ಯರನ್ನು ಲಭ್ಯದಿಂದ ಸೇರಿಸ ಬೇಕೆಂಬ ನಿರ್ಧಾರವೂ ಆಗಿತ್ತು.

ದಿ ಮುಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ನೋಟೀಸು.

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಕಾಣಿಸಿದ ಮಹನೀಯರು ಈ ಮೇಲಿನ ನಮ್ಮ ಬೇಂಕಿನಿಂದ ಚಿನ್ನಾಭರಣದ ಆಡವಿನಲ್ಲಿ ಸಾಲ ಪಡಕೊಂಡು, ದೀರ್ಘ ಕಾಲದಿಂದ ಅಸಲು_ಬಡ್ಡಿಯನ್ನು ಬಾಕಿ ಮಾಡಿರುವುದರಿಂದ, ಸದ್ರಿಯವರಲ್ಲಿ ಕೆಲವರು ವ್ಯತಿಪಟ್ಟುಹೋಗಿ ಅವರ ವಾರಿಸುದಾರರು ನಗಗಳನ್ನು ಬಿಡಿಸಿಕೊಳ್ಳದಿರುವುದರಿಂದಲೂ, ಮಿಕ್ಕವರಿಗೆ ರಿಜಿಸ್ತ್ರಿನೋಟಿಸು ಕೊಟ್ಟರೂ ಆಡವಿಟ್ಟ ನಗಗಳನ್ನು ಬಿಡಿಸಿಕೊಳ್ಳದಿರುವುದರಿಂದಲೂ, ಸದ್ರಿಯವರ ನಗಗಳನ್ನು ತಾ 15-7-1952ನೇ ಮಂಗಳವಾರ ಅಪರಾಹ್ನ ಗಂಟೆ 12ಕ್ಕೆ ಯಾ ತದನಂತರ ಯುಕ್ತ ಕಂಡ ದಿವಸ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು, ತಿಳಿದಿರಲಿ.

ಲೋನು! ನಂ	ಹೆಸರು ಮತ್ತು ವಿಳಾಸ.	ಅಸಲು ಮೊಬ್ಲಗು
95/46	ಯಂ ಸೋಮಪ್ಪ, S/o ನಾರ್ಣ ಪೂಜಾರಿ, ಮುಲ್ಕಿ	100/-
116 50	ಉಮ್ಮರು, S/o ಇದ್ದಿ ಬ್ಯಾರಿ, ಫಲಿಮಾರು.	60/-
123/50	ಶಶಿಕಾಂತ ಎ. ಸುವರ್ಣ, ಕಡಪುರಮನೆ, ಪಸಿಹಿತ್ಲು.	600/-
153/50	ನಾಗಪ್ಪ ಶೆಟ್ಟಿ S/o ಐತು ಶೆಟ್ಟಿ, ಪಂಜಿನಡ್ಕ	150/
174/50	ಜೊಸೆಫ್ ಸುವಾರಿಸ್, S/o ಸಾವಿಲ್ ಸುವಾರಿಸ್ ಪಾವಂಜೆ	200/-
300/50	ಅನಂತು ಭಂಡಾರಿ, S/o ರಾಮುಭಂಡಾರಿ, ಕವತಾರು	60/-
323/50	ಲಕ್ಷ್ಮಣ ಸಿ. ಕಾಂಚನ್, ತ್ಯಾಂಪಪೂಜಾರಿ ಮನೆ, ಸಸಿಹಿತ್ಲು	100/-
436/50	ಕೂಕ್ರ ಮಡಿವಾಳ, ಕಾರ್ನಾಡು	30/-
450/50	ವೈ. ಮಹಮ್ಮದ ಗೌಸ್, S/o ಮಹಮ್ಮದ್ ಹಸನ್ ಸಾಹೇಬ್, ಎರ್ಮಾಳು	500/-
54/51	ಶಿವಪ್ಪ ಪೂಜಾರಿ, N/o ನಕ್ರ ಪೂಜಾರಿ, ಉಚ್ಚಿಲ	50/-
116/51	ಗಣಪತಿ ಭಟ್, S/o ರಾಘುಭಟ್, ಚಿತ್ರಾಪು	50/-
182/51	ಯಂ. ಶ್ರೀನಿವಾಸ ಭಟ್, S/o ರಾಘವೇಂದ್ರ ಭಟ, ಮಾನಂಪಾಡಿ	125/-
187/51	—do	25/-
194/51	ಸುಲೈಮಾನ್ ಬ್ಯಾರಿ, ಮಮ್ಮು ಬ್ಯಾರಿ, S o ಮಮ್ಮು ಬ್ಯಾರಿ ಒಡೆಯರಬೆಟ್ಟು ಮುಲ್ಕಿ	35/-
236/51	ರಾಮ ಜಿ.ಎಂ. ಅಮೀನ್, S/o ಮುಂಜಪ್ಪ ಮೋನಪ್ಪ, ಸಸಿಹಿತ್ಲು	70/-
419/51	ಗುಲಾಂ ಮೈದಿನ್, S o ಹಸನ್ ಬ್ಯಾರಿ ಬಂದರು ಪೇಟೆ ಮುಲ್ಕಿ	10/-
496,51	ಇಸ್ಮಾಯಿಲ್ ಸಾಹೇಬ್, S o ಇಬ್ರಾಹಿಮ್ ಸಾಹೇಬ್ ಬಂದರು ಪೇಟೆ ಮುಲ್ಕಿ	11/-
512/51	ನಾಗಣ್ಣ ಶೆಟ್ಟಿ, S/o ಬಾಬಪ್ಪ ಶೆಟ್ಟಿ, ತಿಮಂತೂರು	25.-
620/51	ಪಿ. ರಾಮಚಂದ್ರಯ್ಯ, S/o ದಾಸಪ್ಪಯ್ಯ ಶ್ಯಾನುಭೋಗ್, ಏಳಿಂಜೆ	35/-

ಮೂಲ್ಕಿ
ತಾ. 28-6-1952

ಯಂ ಆರ್. ಯಚ್ ಪೂಂಜ,
ಮೆನೇಜರ್.

In the Court of the District Munsiff of Kasaragod.

S. C. No. 16/1952

T Hassan Kutty Hajee son of Thevethi Abokra Hajee residing at Perambale village— Plaintiff.

Muthu Nair, nephew of Odavath Raman Nair alias Kunhappe Nair and son of Ithe Amma residing at Perambale village, Kasaragod Taluq— Defendant.

NOTICE

Please take notice that the plaintiff has filed a suit against the defendant for the plaint claim and the suit is posted to 15-7-52 for appearence of the defendant failing which the defendant will be declared exparte.

K. Narayana Nayak,
Advocate for Pltf

Kasaragod, 30-6-52.

ಪ್ರವಾಸಿಯ ಪತ್ರಗಳು ೩೩

ಪ್ರಯಾಣದ ಅಂತ್ಯ

ಈಗ ನನ್ನ ಪ್ರಯಾಣವು ಮುಗಿಯಿತು. ಬೊಂಬಾಯಿಗೆ ಮುಟ್ಟಿ ಅಲ್ಲಿ 1 ದಿನವಿದ್ದು ನಂತರ 2 ದಿವಸಗಳಲ್ಲಿ ನನ್ನ ಊರಿಗೆ ಬಂದು ಸೇರಿದೆ. ಬೊಂಬಾಯಿ ಬಹು ದೊಡ್ಡ ಪಟ್ಟಣ. ಅದರಲ್ಲಿ ನಾನು ಸಣ್ಣ ಪ್ರಾಯದಲ್ಲಿ 2 ವರ್ಷ ವಿದ್ಯಾರ್ಥಿಯಾಗಿದ್ದೆ. ಅದರಲ್ಲಿರುವ ಕಟ್ಟೋಣಗಳು ಬಹು ದೊಡ್ಡದು ಎಂತ ನನಗನಿಸಿತ್ತು. ಆದರೆ ಈ ಪ್ರಯಾಣದಲ್ಲಿ ಲಂಡನ್, ಪೇರಿಸ್, ಬರ್ಲಿನ್, ರೋಮ್, ಮುಂತಾದ ಅನೇಕ ದೊಡ್ಡ ಪಟ್ಟಣಗಳು ಮತ್ತು ಅವುಗಳಲ್ಲಿರುವ ವಿಪರೀತ ದೊಡ್ಡ ಕಟ್ಟೋಣಗಳನ್ನು ಕಂಡ ಮೇಲೆ ಬೊಂಬಾಯಿ ಸಣ್ಣದಾಗಿಯೇ ಕಂಡಿತು. ಅಲ್ಲಿ ನನ್ನ ಮೂವರು ಮಿತ್ರರೂ ನಾನೂ ಅಲ್ಲಿಯ ಹೊರ್ನ್‌ಬೀ (Hornby Road) ರಸ್ತೆಯಲ್ಲಿನ ಒಂದು ಕಾಫೀ ಹೊಟೇಲಿಗೆ ಹೋದೆವು. ಅಲ್ಲಿ ನಾವು ತಿನ್ನಲಿಕ್ಕೆ ಕೂತ ಕೂಡಲೇ ಸುತ್ತಲೂ ನಾವು ಯಾವಾಗ ಏಳುತ್ತೇವೆಂತ ಕಾದು 3, 4 ಜನರು ನಿಂತರು. ಈ ಮುಂಚೆ ನನ್ನ ಪ್ರವಾಸದಲ್ಲಿ ಆ ಅನುಭವ ಎಲ್ಲಿಯೂ ಬರಲಿಲ್ಲ. ಅರ್ಧ, ಒಂದು ತಾಸು ಕೂತ ತಿಂಡಿ ತಿಂದು ಕಾಲಕಳೆದರೂ ಆಕ್ಷೇಪಿಸುವವರಿಲ್ಲ. ಇಲ್ಲಿ ಸಾವಧಾನದಲ್ಲಿ ತಿನ್ನಲಿಕ್ಕೂ ಅವಕಾಶ ಇಲ್ಲ. ಹಾಗೆಯೇ ನಾವು ತಿನ್ನುವ ಪಾತ್ರ ಬಟ್ಟಲುಗಳನ್ನು ಸರಿಯಾಗಿ ಕುದಿಯುವ ಬಿಸಿ ನೀರಲ್ಲಿ ಯೂರೋಪಿನಂತೆ ಇಲ್ಲಿ ತೊಳೆಯುವುದಿಲ್ಲ. ಒಬ್ಬರು ತಿಂದ ತಟೆಯನ್ನೇ ಇನ್ನೊಬ್ಬರು ತಿನ್ನುವುದು. ಅಲ್ಲಿಯಂತೆ ಒಳ್ಳೆ ಆಹಾರ, ತಿಂಡಿ, ಹಾಲು, ಹಣ್ಣು ಕೂಡಾ ಇಲ್ಲಿ ಸಿಕ್ಕುವುದಿಲ್ಲ. ಇವೆಲ್ಲಾ ವ್ಯತ್ಯಾಸಗಳು ಥಕ್ಕನೆ ಕಣ್ಣಿಗೆ ಮತ್ತು ಮನಸ್ಸಿಗೆ ಬೀಳುತ್ತವೆ. ಆದರೆ ಸ್ವಲ್ಪ ಸಮಯ ಕಳೆದ ನಂತರ ಎಲ್ಲೆಲ್ಲಿಯೂ ಹಾಗೆಯೇ ಇರುವ ಕಾರಣ ಆ ಚಿತ್ರಗಳು ನೆನಪು ಹೋಗಿ ಈ ಚಿತ್ರಗಳೇ ನಮ್ಮ ಮನಸ್ಸಿನಲ್ಲಿ ನೆಲೆಯಾಗುತ್ತವೆ.

ಹಾಗೆಯೇ ಇಲ್ಲಿಯ ದರಿದ್ರಾವಸ್ಥೆ, ಎಲ್ಲೆಲ್ಲಿಯೂ ಬೇಡುವವರು. ರಸ್ತೆಯ ಚರಂಡಿ ಬದಿಯಲ್ಲಿ ಒಂದು ಮಡಕೆಯಲ್ಲಿ ಅನ್ನ ಬೇಯಿಸುವುದು, ಇನ್ನೊಂದು ಬದಿ ವಸ್ತ್ರ ಇಲ್ಲದ ಮಗು ಓಡಾಡುವುದು, ಹರಕು ವಸ್ತ್ರದ ಮನೆ ಮಾರಿಲ್ಲದ ತಂದೆ ತಾಯಿ. ಇನ್ನೊಂದು ಬದಿಯಲ್ಲಿ ಯಾವ ಕಷ್ಟವನ್ನೂ ಕಾಣದ ಹಣವನ್ನು ಯಾವ ರೀತಿ ವೆಚ್ಚಮಾಡುವುದು ಎಂತ ತಿಳಿಯದ ಐಶ್ವರ್ಯ. ಈ ಎರಡು ತರಗತಿಯವರ ಮಧ್ಯ ಕಣ್ಣಿಗೆ ಕಾಣದ ಆದರೆ ಸರ್ವಾಂತರ್ಯಾಮಿಯಾದ ಸರಕಾರ. ನಮ್ಮ ದೇಶದ ನಿಜವಾದ ಅವ್ಯವಸ್ಥೆ, ಇಲ್ಲಿಯ ವಿಪರೀತ ಬಡತನ ಇವುಗಳನ್ನು ಚೆನ್ನಾಗಿ ತಿಳಿಯಬೇಕಾದರೆ ನಾನು ಈ ಮುಂಚೆ ಬರೆದಂಥ ಪರದೇಶಗಳಿಗೆ ಹೋಗಿಯೇ ಆ ವ್ಯತ್ಯಾಸಗಳನ್ನು ತಿಳಿಯಬೇಕು. ಈಗಿರುವ ರೀತಿಯಲ್ಲಿಯೇ ನಮ್ಮ ದೇಶವು ಇದ್ದು ಅದನ್ನು ಕಂಡರೂ ಕಾಣದಂತೆ ನಮ್ಮನ್ನು ಆಳುವವರು ನಟಿಸುವುದಾದರೂ ಬೇರೆ ದೇಶಗಳಲ್ಲಿ ಬಂದಂತೆಯೇ ಇಲ್ಲಿಗೆ ಕೂಡಾ ಕಮ್ಯೂನಿಸಮ್ ಬಂದೇ ಬರುವುದು. ಅದನ್ನು ತಡೆಯಬೇಕಾದರೆ ನಾನು ಸಂಚರಿಸಿದ ಪಾಶ್ಚಾತ್ಯ ದೇಶಗಳ ಸರಕಾರಗಳಂತೆ ಪ್ರಜಾಪ್ರಭುತ್ವ ಸರಕಾರಗಳೂ ಜನರೂ ಎಡಬಿಡದೇ ಬಡಜನರಿಗೆ ಯೋಗ್ಯ ಜೀವನವನ್ನು ಒದಗಿಸಿ ಕೊಡತಕ್ಕದ್ದು.

ನನ್ನಂತೆಯೇ ಈ ದೇಶಗಳನ್ನು ಸಂಚರಿಸಬೇಕೆಂಬ ಕುತೂಹಲವಿರುವವರಿಗೆ ಒಂದೆರಡು ನನ್ನ ಅನುಭವವನ್ನು ಕೊಡಬಹುದು. ಮೊದಲಾಗಿ ನೆನಪಿಟ್ಟುಕೊಳ್ಳುವ ವಿಷಯವೇನೆಂದರೆ, ಹಾಕಿದ ಒಂದು ಇಜಾರು ಅಂಗಿ ದುಸ್ತಿಲ್ಲದೆ ಕೈಯಲ್ಲಿ ಹಗುರವಾಗಿ ಸಾವಾಗಿಯೇ ಹಿಡಕೊಳ್ಳುವ ಒಂದು ಕೈಪೆಟ್ಟಿಗೆ (Suit Case) ಮಾತ್ರ ತೆಗೆದುಕೊಳ್ಳಬೇಕು. ಹೆಚ್ಚು ಸಾಮಾನುಗಳು ನಮ್ಮೊಡನೆ ಇರಲೇಬಾರದು. ಅನೇಕ ಕಡೆ ಅವುಗಳನ್ನು ಹೊರಲಿಕ್ಕೆ ಜನರೇ ಸಿಕ್ಕುವುದಿಲ್ಲ. ಸಿಕ್ಕಿದರೂ ಹೆಚ್ಚಿನ ಚಾರ್ಜು. ಯೂರೋಪ್ ತಿರುಗಲಿಕ್ಕೆ ಉಣ್ಣೆಬಟ್ಟೆ ಅಗತ್ಯ. ಆದ ಕಾರಣ ಉಣ್ಣೆಯ ಒಂದು ಸೂಟ್ ಮತ್ತು ಎಲ್ಲಿಯಾದರೂ ಮಳೆಯಿಂದ ತಂಡಿಯಾದರೆ ಒಂದು ಜಾಸ್ತಿ ಇಜಾರು ಮಾತ್ರ. ಒಂದು ಉಣ್ಣೆಯ ಒಳಗೆ ಧರಿಸುವ ವಸ್ತ್ರ (Underwear). ಹಾಗೆಯೇ ಒಂದೇ ರಾತ್ರಿ ಧರಿಸಲಿಕ್ಕೆ ವಸ್ತ್ರ (Pyjama suit) ಹಾಕಿದ್ದು ಕೂಡಾ ಮೂರು ಶರ್ಟು ಇದ್ದರೆ ಸಾಕು. ಆ ದೇಶಗಳಲ್ಲಿ ಬೆವರು ಕಡಿಮೆ. ಧೂಳು ಇಲ್ಲ ಹೀಗಾಗಿ ಆಗಾಗ ವಸ್ತ್ರ ಬದಲು ಮಾಡುವ ಅಗತ್ಯವಿಲ್ಲ. ಮತ್ತು ಹೊದಿಕೆ ಹಾಸಿಗೆ ವಗೈರೆ ಏನೂ ತೆಗೆದುಕೊಳ್ಳಬಾರದು. ಏಕೆಂದರೆ ಯಾವ ಹೋಟೇಲಿಗೆ ಹೋದರೂ ಸ್ವಚ್ಛವಾದ ಹಾಸಿಗೆ ಹೊದಿಕೆಗಳು ಸಿಕ್ಕುತ್ತವೆ.

ಸಾಧಾರಣವಾಗಿ II ನೇ ತರಗತಿಯ ಹೋಟೇಲುಗಳು ದಿನ ಒಂದರ 15 ರೂಪಾಯಿ ಖರ್ಚಿನಲ್ಲಿ ಸಿಕ್ಕುತ್ತವೆ. ಫಲಾಹಾರ ತಿಂಡಿ ತಿರುಗಾಟದ ಖರ್ಚು ಬೇರೆ. ಅಂದರೆ ದಿನಕ್ಕೆ ಇನ್ನು 15 ರೂಪಾಯಿ ಇದ್ದರೆ ಸಾಕು. ಅಂತು ದಿನ 1ರ 30 ರೂಪಾಯಿಯಂತೆ ಎಲ್ಲೆಲ್ಲಿಯೂ ತಿರುಗಾಡಬಹುದು. ಹಾಗೆ ತಿಂಗಳಿಗೆ ರೂ. 1000 ಪ್ರಕಾರ 3 ತಿಂಗಳ ತಿರುಗಾಟಕ್ಕೆ 3000 ರೂಪಾಯಿ, ಇನ್ನು ಸ್ಟೀಮರಿನಲ್ಲಿ ಹೋಗಿ ಬರಲಿಕ್ಕೆ ರೂ. 1500. ಇನ್ನೂ ಜಾಸ್ತಿಯಾಗಿ ರೂಪಾಯಿ 1500 ಒಟ್ಟಾರೆ ರೂಪಾಯಿ 6000ದಲ್ಲಿ ಸೌಖ್ಯದಲ್ಲಿ 3, 4 ತಿಂಗಳ ತಿರುಗಾಟ ಮಾಡಬಹುದು. ಅಲ್ಲಿಯ ರೈಲುಗಳ ವಿಷಯ ಈ ಮುಂಚೆಯೇ ಅಲ್ಲಲ್ಲಿ ಬರೆದಿದ್ದೆ. ಇಂಗ್ಲಾಂಡಿನಲ್ಲಿ I ಮತ್ತು III ನೇ ಕ್ಲಾಸ್ ಮಾತ್ರ. II ನೇ ಕ್ಲಾಸ್ ಇಲ್ಲ. ಆದರೆ ಅಲ್ಲಿಯ III ನೇ ಕ್ಲಾಸು ನಮ್ಮ ದೇಶದ I ಕ್ಕೂ ಮಿಕ್ಕಿದ್ದು. ಸಾಧಾರಣ ಒಳ್ಳೆತರದ ಕಾರಿನ ಸೀಟಿನಂತೆ ಮೆತ್ತಗಾದ ಸೀಟು. ಪ್ರಯಾಣಕ್ಕೆ ಸೀಟನ್ನು ಮುಂಚೆಯೇ ರಿಸರ್ವ್ ಮಾಡಿಸಬಹುದು. ಇತರ ದೇಶದಲ್ಲಿ ಸಾಧಾರಣವಾಗಿ II ನೇ ಕ್ಲಾಸ್ ಸಾಕು. ಅಲ್ಲಿ ಹಗಲು ತಿರುಗಾಟಕ್ಕೆ III ನೇದು ಕೂಡಾ ಸಾಕು.

ಇನ್ನು ಆಹಾರದ ವಿಚಾರ ಈ ಮುಂಚೆಯೇ ಬರೆದಂತೆ ಸಂಪೂರ್ಣ ಸಸ್ಯ ಆಹಾರದಲ್ಲೇ ಬಹು ಸುಖದಿಂದ ಜೀವಿಸಬಹುದು. ಒಳ್ಳೆ ಬ್ರೆಡ್ಡು, ಹಾಲು, ಹಣ್ಣು ಹಂಪಲು, ಕಾಫಿ, ಚಾ ಬೇಕಾದಷ್ಟು ಸಿಕ್ಕುತ್ತದೆ. ಆ ದೇಶಗಳ ಹವೆ ಕೂಡಾ ತಂಡಿಯಾಗಿದ್ದು ಒಳ್ಳೇ ಹಸಿವೆ ಇರುತ್ತದೆ. ನನ್ನ 2½ ತಿಂಗಳ ತಿರುಗಾಟದಲ್ಲಿ ಒಂದು ದಿನವಾದರೂ ಅಸ್ವಸ್ಥವಿರಲಿಲ್ಲ.

ಈ ಪತ್ರಗಳನ್ನು ನಾನು ಕಳೆದ ವರ್ಷ ಏಪ್ರಿಲ್ 9ರಲ್ಲಿ ಬೊಂಬಾಯಿ ಬಿಟ್ಟು ಏಡನಿಗೆ ಸಮೀಪಿಸುವಾಗ ಪ್ರಥಮ ಶುರುಮಾಡಿದ್ದು. ಅನಂತರ ಯುರೋಪಿನಲ್ಲಿ ತಿರುಗಾಟ ಮಾಡುವಾಗಲೂ ಹಿಂದೆ ಬಂದ ಮೇಲೆ ಈ ವರೆಗೂ ಬರೆದು ಈಗ ಮುಗಿಸಿದೆ. ಮಧ್ಯ ಮಧ್ಯ ನಾನಾ ಮತ್ತು ಇತರ ತಾಪತ್ರಯಗಳಿಂದ ಒಂದೊಂದು ವಾರ ಬರೆಯಲಿಕ್ಕೆ ಆಗಲಿಲ್ಲ. ಶುರು ಮಾಡುವಾಗ ಕನ್ನಡದ ಹೆಚ್ಚಿನ ಮಾಹಿತಿಯೂ ಯಾವ ತರದ ಪಾಂಡಿತ್ಯವಿಲ್ಲದೆ ಮನೆಯಲ್ಲಿ ಮಾತನಾಡುವಂತೆಯೇ ಬರೆದದ್ದು. ತಿರುಗಾಡುವಾಗ ನೋಡಿದ್ದನ್ನು ಕೇಳಿದ್ದನ್ನು ಆಗಾಗಲೇ ನನ್ನ ನೋಟು ಪುಸ್ತಕದಲ್ಲಿ ಬರೆದ ಕಾರಣ ಅದರ ಸಹಾಯದಿಂದಲೂ ನೆನಪಿನಿಂದಲೂ ಈ ವರೇಗೆ ಬರೆಯಲಿಕ್ಕೆ ಸಾಧ್ಯವಾಯಿತು. ಭಾಷೆಯಲ್ಲಿ ಅನೇಕ ತಪ್ಪುಗಳಿರಬಹುದು. ಅವುಗಳನ್ನೆಲ್ಲಾ ವಾಚಕರು ಉದಾರಮನಸ್ಸಿನಿಂದ ಕ್ಷಮಿಸಬೇಕಾಗಿ ನನ್ನ ವಿನಂತಿ.

ಈ ಪತ್ರಗಳನ್ನು ಓದಿದ ಕೆಲವು ಮಿತ್ರರು ಅವುಗಳು ಒಂದು ಹೊಸ ಮಾದರಿಯಲ್ಲಿದ್ದು ಅವುಗಳಿಂದ ನಮ್ಮ ಜನರಿಗೆ ಹಲವು ಮಾಹಿತಿ ಸಿಕ್ಕುವ ಕಾರಣ ಅವುಗಳನ್ನು ಒಂದು ಪುಸ್ತಕವಾಗಿ ಛಾಪಿಸಬೇಕಾಗಿ ಪ್ರೋತ್ಸಾಹಿಸಿರುತ್ತಾರೆ. ಸಾಧ್ಯವಾದರೆ ನಾನು ಕಂಡ ಕೆಲವು ಊರುಗಳ ಚಿತ್ರಗಳನ್ನು ಸೇರಿಸಿ ಈ ಪತ್ರಗಳನ್ನು ಒಂದು ಪುಸ್ತಕವಾಗಿ ಛಾಪಿಸಬೇಕೆಂದು ಇದ್ದೇನೆ.

[ವಿಚಾರವಾಣಿ] —ಕೆ. ಆರ್. ಕಾರಂತ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗದಿದ್ದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾಧಾರಣ ಮುಂದಿಗೆ ಜಾಸ್ತಿ ಗುಣವಾಗಿದೆ— [ಬೆಲೆ; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ, 8-]ವಿ. ಪಿ. ಪೋಸ್ಟೇಜು ಪ್ರತ್ಯೇಕ]

Mrs. P. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು ಶಹಾ ಕಂಪನಿ, ಮಂಗಳೂರು.

Read
'NAVAYUGA' Weekly
Voice of the people Excellent Media and Reading Value.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿ ...

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding
ROYAL MAHAL,
UDIPI, S. Kanara.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ, ಇವರ

ನವಜೀವಾತು
ಎಂಬ
ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ! ಯಂ. ಸಿ. ಶಾಸ್ತ್ರೀ, ಯಲ್. ಐ ಎಂ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಮದುವೆಯಾದ ಸ್ತ್ರೀಪುರುಷರ ಸಲುವಾಗಿ
ಬರೆಯಲ್ಪಟ್ಟ ಪುಸ್ತಕ

ಮಿತಸಂತತಿ

ಹುಟ್ಟುವ ಮಕ್ಕಳು ಆರೋಗ್ಯ ಸಂಪತ್ತು ಸೌಭಾಗ್ಯ ಹೊಂದಲಾದುದನ್ನು ಸಾಗಷ್ಟು ಪಡೆಯುವ ಹಾಗೆ ಹೆತ್ತವರು ಸಾಧಿಸಲಾಗುವಂತೆ ಅತ್ಯನುಕೂಲವಾದ ಪದ್ಧತಿ ಯಾವುದೋ ಅದರಂತೆ ದಂಪತಿಗಳು ಮಕ್ಕಳನ್ನು ಹೆರುವ ಹಾಗೆ ಅವಶ್ಯವಾದ ತತ್ವಗಳನ್ನು ಬೋಧಿಸುವ ನವೀನ ಪುಸ್ತಕ ಬೆಲೆ 0-6-0

ಗುಪ್ತರೋಗ ನಿವಾರಣೆ

ಜನನೇಂದ್ರಿಯಗಳಿಗೆ ಸಂಬಂಧಿಸಿರುವ ರೋಗಗಳು ಹಳ್ಳಿಹಳ್ಳಿಗಳಲ್ಲಿ ಪಸರಿಸುತ್ತಲೇ ಇವೆ. ಇಂತಹ ರೋಗಗಳಿಂದ ನರಳುವ ಸ್ತ್ರೀಪುರುಷರ ಆರೋಗ್ಯ ರಕ್ಷಣೆಗಾಗಿ ಪ್ರಪಂಚದಲ್ಲಿನ ವಿದ್ವಾಂಸ ವೈದ್ಯರುಗಳ ಅನುಭವ ಸಿದ್ಧಾನುಭವ ಸೂಚಕ ಪುಸ್ತಕ ಬೆಲೆ 0-8-0

ಪ್ರತಿಗಳಿಗೂ, ಪುಸ್ತಕಗಳ ಯಾದಿಗೂ, ಬರೆಯಿರಿ.

ತಾರೀಕು 3-7-52 ರಿಂದ

ವಾರದ ಭವಿಷ್ಯ

ತಾರೀಕು 9-7-52 ವರೆಗೆ

ಮೇಷ—ನಿಮ್ಮ ಖರ್ಚಿಗೆ ಬೇರಾವುದಕ್ಕಿಂತಲೂ ಅಧಿಕವಾಗಿ ದುಡಿಯುವಿರಿ. ಸಕಲರೂ ನಿಮಗೆ ನೆರವಾಗುವರು. ಸೇವಕ ವರ್ಗದವರಿಂದ ವಿಶೇಷ ಲಾಭವನ್ನು ಪಡೆವಿರಿ. ಆದರೆ ನಿಮ್ಮ ತನುಮನಗಳಿಗೆ ಮಾತ್ರ ಸುಖಶಾಂತಿ ಲಭಿಸದು. ಕಾರಣ ಕಷ್ಟಪಟ್ಟು ದುಡಿದ ಧನವು ವ್ಯರ್ಥವಾಗಿ ಹಾಳಾಗುವ ಅನೇಕ ಪ್ರಸಂಗಗಳುಂಟಾಗುವವು. ಮನೋಧೈರ್ಯವು ಕುಗ್ಗುವದು, ಗೃಹಕೃತ್ಯದಲ್ಲಿ ಅಶಾಂತಿಯು ತಲೆದೋರುವದು. ತಾ. 3, 8, 9 ಈ ದಿನಗಳು ಕೊಂಚ ಸುಖದಾಯಿಗಳಾಗಿವೆ.

ವೃಷಭ—ಪೌರುಷವು ನಿಮ್ಮಲ್ಲಿ ನಾಶವಾಗಿರುವುದಾದರೂ ದೈವವು ಸ್ವಲ್ಪ ವಿಮುಖವಾಗಿರುವುದರಿಂದ ನಿಮ್ಮ ಪರಿಶ್ರಮಕ್ಕೆ ತಕ್ಕ ಫಲವು ಲಭಿಸದು. ಚಂಚಲವಾದ ನಿಮ್ಮ ಮನಸ್ಸು ಆಪ್ತಜನರಲ್ಲೂ ಅವಿಶ್ವಾಸವನ್ನು ತಳೆವುದು. ಸೇವಕರು ಮಕ್ಕಳು ಮೊದಲಾದವರು ನಿಮ್ಮ ಹಿಡಿತದಿಂದ ತಪ್ಪಿ ನಿಮ್ಮ ಆಜ್ಞೆಯನ್ನು ಅತಿಕ್ರಮಿಸಿ ವರ್ತಿಸುವುದರಿಂದ ಮನಸ್ಸಿಗೆ ತುಂಬಾ ಖೇದವಾಗಲಿದೆ. ವಾರಾಂದಿಯ 3 ದಿನಗಳಲ್ಲಿ ನಿಮ್ಮ ಸಂಕಲ್ಪವು ಜಮುವಟ್ಟಿಗೆ ಸಫಲವಾಗಲಿದೆ.

ಮಿಥುನ—ಚಂಚಲವಾದ ಮನಸ್ಸನ್ನು ಬಿಗಿಹಿಡಿಯಿರಿ. ವಿಷಯಾದಿಗಳ ಕಡೆಗೆ ಹರಿದು ನಿಮಗೆ ಕಷ್ಟನಷ್ಟಾದಿ ಅನೇಕ ಅನರ್ಥಗಳನ್ನು ತಂದೊಡ್ಡಲಿರುವುದು. ಮಕ್ಕಳು ಮರಿಗಳ ಆರೋಗ್ಯದ ಕಡೆಗೆ ವಿಶೇಷ ಗಮನ ಕೊಡಿರಿ. ನಿಮ್ಮ ಇಂದಿನ ಆಯವು ಖರ್ಚನ್ನಾಕ್ರಮಿಸಿರುವುದರಿಂದ ಆರ್ಥಿಕ ತಗಾದೆಗೆ ಸಿಲುಕಲಾರಿರಿ. ಜನತೆಯಿಂದ ಗೌರವಾದರಗಳನ್ನು ಹೊಂದುವಿರಿ. ನಿಮ್ಮ ಸ್ವಂತಕ್ಕೆ ಯಾವುದೂ ಕೊರತೆಯಾಗದು ತಾ 4, 5, 6, 7 ಈ ದಿನಗಳಲ್ಲಿ ಸುಖಯಾನ ಮಾನಲಾಭಗಳು ಲಭಿಸುವವು.

ಕರ್ಕಾಟ—ಕಷ್ಟಪಟ್ಟು ದುಡಿಯುವಿರಿ ಆದರೆ ನಿಮ್ಮ ಶ್ರಮವು ಬಟ್ಟಂತ ನೀರಿನ ೬ ಮಾಡಿದ ಹೋಮದಂತೆ ವ್ಯರ್ಥವಾಗಲಿದೆ. ಯಾರೊಬ್ಬರೂ ಸದ್ಯ ನಿಮಗೆ ಸಹಾಯಕ್ಕೆ ಬರಲಾರರು ವಿಶೇಷತಃ ಶತ್ರುಜನರ ಪ್ರತೀಕಾರಕ್ಕೆ ಸಿಲುಕಿ ಕಷ್ಟನಷ್ಟಗಳನ್ನನುಭವಿಸಬೇಕಾಗಿ ಬರಲಿವೆ ವಿನಾಕಾರಣ ವಾಕ್ಕಲಹಗಳು ಗಂಟುಬೀಳಲಿವೆ ಆದರೂ ವಾರಾಂತ್ಯದ 4 ದಿನಗಳಲ್ಲಿ ಸನ್ಮಿತ್ರರ ಸಹಕಾರದಿಂದಾಗಿ ಶ್ರಮವನ್ನು ಸಾರ್ಥಕಗೊಳಿಸುವಿರಿ.

ಸಿಂಹ—ಧನಲಾಭಪತಿಯಾದ ಬುಧನು ವ್ಯಯಕ್ಕೆ ಬಂದಿರುವನು. ಈ ವಾರದಲ್ಲಿ ನಿಮ್ಮ ಪ್ರತಿಯೊಂದು ಉದ್ಯಮಗಳೂ ನಿರೀಕ್ಷೆಗಿಂತಲೂ ಅಧಿಕವಾದ ಫಲವನ್ನೀಯಲಿವೆ. ಆದರೆ ಅದರೊಟ್ಟಿಗೆ ಖರ್ಚು ಅತಿಯಾಗುವುದು. ಗೃಹಕೃತ್ಯದ ಪರಿಸ್ಥಿತಿ ಪ್ರಶಾಂತವಿರುವುದು ಶತ್ರುಜನರೂ ಕೂಡ ನಿಮಗೆ ಶರಣು ಬರುವ ಪ್ರಸಂಗವಿದೆ. ತಾ. 3, 8, 9 ಈ ದಿನಗಳಲ್ಲಿ ನಿಮ್ಮ ಕಾರ್ಯಕಲಾಪಗಳು ಅಧಿಕ ಫಲವೀಯಲಿವೆ.

ಕನ್ಯಾ—ಆರೋಗ್ಯದ ಕಡೆಗೆ ಹೆಚ್ಚಿನ ಗಮನವನ್ನಿರಿ ಕಫ ಪ್ರಕೋಪದಿಂದಾಗಿ ಬಹಳ ಕಷ್ಟಕ್ಕೆ ಸಿಲುಕುವ ಯೋಗವಿದೆ ಮಾತ್ರವಲ್ಲ ಅಕಸ್ಮಿಕವಾಗಿ ಪಿತ್ತೋದ್ರೇಕಗಳ ಪ್ರಕೋಪವುಂಟಾಗಬಹುದು, ಅಧಿಕಾರಿ ಜನರು ಸದಾ ಉಪದ್ರವ ಕೊಡಲಿರುವರು ಆದರೂ ನಿಮ್ಮ ಕರ್ತವ್ಯವನ್ನು ನೀವು ನಿಷ್ಠೆಯಿಂದ ಮಾಡಿರಿ ತಕ್ಕ ಪ್ರತಿಫಲವು ಲಭಿಸದಿರದು ತಾ. 4, 5 ಈ ದಿನಗಳಲ್ಲಿ ಲಾಭವಿಜಯ ಸನ್ಮಾನಾದಿಗಳು ಲಭಿಸುವವು.

ತುಲಾ—ಗುರ್ವನುಗ್ರಹಕ್ಕೆ ಪಾತ್ರರಾದ ನೀವು ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆಯಲು ಶಕ್ತರಿರುವಿರಿ. ನಿಮ್ಮ ತನುಮನಗಳಿಗೆ ಇಂದೀಗ ಸುಖಶಾಂತಿ ಲಭಿಸುವುದು ನಿಮ್ಮ ಚಾತುರ್ಯ ವಾಗ್ಮಿತ್ವಕ್ಕೆ ಜನತೆಯು ನಿಮ್ಮ ವಶವಾಗಲಿದೆ. ಹಣದ ವ್ಯವಹಾರದಲ್ಲಿ ಸ್ವಲ್ಪ ಬಿಗುವಿನಿಂದಿರಿ. ಕೆಲವೊಮ್ಮೆ ಕೋರ್ಟಿಗೂ ಹೋಗಬೇಕಾದ ಪ್ರಸಂಗ ಬಂದೀತು. ತಾ. 3, 6, 7 ಈ ದಿನಗಳಲ್ಲಿ ಸುಖಭೋಜನ ಲಾಭ ವಿಜಯಗಳನ್ನು ಪಡೆವಿರಿ.

ವೃಶ್ಚಿಕ—ಅನಿರೀಕ್ಷಿತ ಅನರ್ಥಗಳೊದಗುವ ಸಂಭವವಿದೆ. ಜಾಗ್ರತೆಯಾಗಿರಿ. ಆರೋಗ್ಯಕ್ಕೆ ಕಫ ಪ್ರಕೋಪದಿಂದ ಹಾನಿಯುಂಟಾದೀತು. ಕೈಯಲ್ಲಿನ ಹಣವು ಕುಕರ್ಮಗಳ ಸಲುವಾಗಿ ವ್ಯರ್ಥ ಹಾಳಾಗಲಿವೆ. ಸ್ತ್ರೀಯರಿಂದ ಕಲಹ ಅನಿಷ್ಟ ಅಪಮಾನಗಳೂ ಕೆಲವರಿಂದ ಒದಗಬಹುದು. ಕೆಲವೊಮ್ಮೆ ಅವರಿಂದ ಧನವೂ ಕೂಡ ಪ್ರಾಪ್ತವಾಗುವ ಸಂಭವವಿದೆ. ಮನೋರೋಗವು ದಿನೇ ದಿನೇ ಪ್ರಜ್ವಲಿಸಿದೀತು. ತಾ. 4, 5, 8, 9 ಈ ದಿನಗಳಲ್ಲಿ ನಿಮ್ಮ ಸಂಕಲ್ಪವು ಕೆಲವಂಶ ನೆರವೇರಲಿದೆ.

ಧನು—ಯಾವ ಕಾರ್ಯಕ್ಕೆ ಕೈಯಿಕ್ಕಿದರೂ ನಿಮಗೆ ನಷ್ಟವುಂಟಾಗದು. ನಾನಾ ತರದಿಂದ ಧನವು ನಿಮ್ಮನ್ನು ಸೇರುವ ಯೋಗವಿದೆ. ಹೆಚ್ಚೇಕೆ ಸಟ್ಟಾ ಲಾಟ್ರಿ ಜೂಜು ಇತ್ಯಾದಿಗಳಲ್ಲಿ ಸಕ್ತರಾದವರಿಗೆ ಈ ವಾರವು ಉತ್ತಮ ಫಲವೀವುದು ಕೆಲವೊಮ್ಮೆ ಉದರಶೂಲೆ ಕಾಣಿಸೀತು. ಸ್ತ್ರೀಯರ ದೆಸೆಯಿಂದ ಕಷ್ಟ ಅನಿಷ್ಟಗಳನ್ನು ಅನುಭವಿಸಬೇಕಾದೀತು. ತಾ. 3, 6, 7 ಈ ದಿನಗಳನ್ನು ಸುಖದಿಂದ ಕಳೆವಿರಿ.

ಮಕರ—ದೈವವು ತೀರಾ ಕೆಟ್ಟಿರುವುದರಿಂದ ನೀವೀಕಾಲದಲ್ಲಿ ಎಷ್ಟೇ ಶ್ರಮವಹಿಸಿ ದುಡಿದರೂ ಫಲವು ಶೂನ್ಯವಾಗಿ ಪರಿಣಮಿಸುವುದು. ನಿಮ್ಮವರೇ ನಿಮಗೆ ವಿಮಂಚನೆಯನ್ನುಂಟುಮಾಡಲಿರುವರು. ಆಕಸ್ಮಿಕ ಅನರ್ಥಗಳು ಮೇಲಿಂದ ಮೇಲೆ ಬರಲಿವೆ. ಗುರುಹಿರಿಯರೊಡನೆ ಕಲಹ ಧರ್ಮಕರ್ಮಗಳಲ್ಲಿ ನಾದರಗಳುಂಟಾಗುವವು. ತಾ. 6, 7 ಅತೀವ ಅನಿಷ್ಟ ದಿನಗಳಾಗಿವೆ.

ಕುಂಭ—ಶತ್ರುಗಳ ಉಪಟಳದಿಂದಾಗಿ ಆರಂಭಿಸಿದ ಹೆಚ್ಚಿನ ಕಾರ್ಯಗಳನ್ನು ಅರ್ಧದಲ್ಲೇ ನಿಲ್ಲಿಸುವ ಸಂಭವ ಬರಲಿದೆ. ಆರ್ಥಿಕ ದಿಕ್ಕಟ್ಟಿನಿಂದಾಗಿ ಬಹಳ ಪೇಚಾಟಕ್ಕೆ ಸಿಲುಕುವಿರಿ. ಆದರೂ ಕೆಲವೊಮ್ಮೆ ಬಂಧುಗಳು ಮಿತ್ರರು ಶಕ್ತಿಮೀರಿ ಸಹಾಯ ಸಲ್ಲಿಸಲಿರುವರು. ಗೃಹಕಾಪತ್ರಯಗಳು ಅಧಿಕವಾಗಲಿವೆ. ಆರೋಗ್ಯವೂ ಕೆಡುವುದು. ತಾ. 4ರಿಂದ 7ರ ವರೆಗಿನ ದಿನಗಳು ಅಷ್ಟೊಂದು ಹಾನಿಕಾರಿಗಳಲ್ಲ.

ಮೀನ—ಬೇಕುಬೇಕಾದ ಸುಖಭೋಗ ಸಾಧನಗಳಿದ್ದರೂ ನಿಮಗವು ಕಾಲಕ್ಕೆ ಒದಗಲಾರವು. ಮನೆಯಲ್ಲಿ ಪರಸ್ಪರ ಕಲಹ ಕಚ್ಚಾಟಗಳುಂಟಾಗಿ ಕೆಲವೊಮ್ಮೆ ಮನಸ್ಸಿಗೆ ಅತೀವ ಜಿಗುಪ್ಸೆಯುಂಟಾಗಲಿದೆ. ಆರ್ಥಿಕ ಸಂಬಂಧವಾದ ಸಂಕಟವು ಬಹುಮಟ್ಟಿಗೆ ದೂರಾದಂತೆಯೇ. ಶತ್ರುಗಳು ಆಗಾಗ ಕಿರುಕುಳಗಳನ್ನು ತಂದೊಡ್ಡುತ್ತಿರುವರು. ವಾರಾಂತ್ಯದ 4 ದಿನಗಳು ಸುಖಸಾಧಕಗಳಾಗಿವೆ.

ಉತ್ಕೃಷ್ಟ ಸಂತಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರದ ಕೃಚ್ಛ್ರ, ಮೂತ್ರದೊಡನೆ ಕೀವು ಮುಂದಾಗಿ ಬೀಳುವುದು. ಅರಸಿನ ಬಣ್ಣವು ಈ ಮಣಿಗಳಲ್ಲಿ ಕೀವು ಹೋಗುವದು, ತೊಡೆ ಸಂದಿನಲ್ಲಿ ಗರಳೆ ಬರುವದು. ಕಾಲುಗಂಟೆ ವೇದನೆ, ಕಣ್ಣಿನಲ್ಲಿ ಕೀವು ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ, ಸ್ತ್ರೀಯರ ಬಿಳಿ ಸೆಂಗು ಇವೆಲ್ಲಾ ಖಾತ್ರಿಯಾಗಿ ಗುಣ ಹೊಂದುವದು. ಇತರರು ಈಗಿನ ಉಷ್ಣಕಾಲದಲ್ಲಿ ಗಮಿರ್ಕಂಡು ಬಂದರೆ ರಾತ್ರಿ ಮಲಗುವಾಗ್ಯೆ ಒಂದು ಮಾತ್ರೆ ಸೇವಿಸಿ ಹಾಲು ಕುಡಿದರೆ ಸುಖವಾಗಿ ನಿದ್ರೆಬಂದು ಸುಖವಿರೇಚನೆಯಾಗಿ ದೇಹದ ಸುಸ್ತು ಹೋಗುವದು.

ಶೀಸೆ 1ಕ್ಕೆ ರೂ. 2-0-0

ಏಜಂಟ್ಸ್:

ಷಾ ಕಂಪೆನಿ, ಮಂಗಳೂರು.

ಸಾರ್ವಜನಿಕರ ಉಪಯೋಗಕ್ಕಾಗಿ ಅಮೂಲ್ಯ ರತ್ನ ಪ್ರಯೋಗ!

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ, ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮುಕ್ತ ಪಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೧೪ ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩/೪ (ಪೋಸ್ಟೇಜು ಮಾಫ)

ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನ ಎ. ರಾಮಸ್ವಾಮಿ ಅಯ್ಯರ್‌ರವರ

⁂ ಸಂತಾನ ಸಿಂಗೂರ ⁂

ಬಹಿಷ್ಟೆ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಟೆ ಸಂಬಂಧದ ಹೊಟ್ಟೆನೋವಿನಜೊತೆಗೆ ತಲೆನೋವು, ಸೊಂಟಶೂಲೆ, ಬೆನ್ನುನೋವು, ಅಜೀರ್ಣ, ಕೆಮ್ಮು, ಗರ್ಭಪಾತ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ.

೩ ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ೧ ಸೆಟ್ ಅನುಪಾನಪತ್ರಿಕೆ ಮೇರೆ ಇಬ್ಬರೂ ಸೇವಿಸಿರಿ ಸಾಕು ಶೋಧನವಾದ 15 16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾಪತ್ರಗಳನ್ನು ಪಡೆದಿದೆ.

ಕ್ರಯ:— ೧ ಸೆಟ್ 5ರೂ ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1ರೂ ವಿ ಪಿ.ಇಲ್ಲ ಕ್ಯಾಟಲಾಗ್ ಉಚಿತ 6ರೂ ಮನಿಆರ್ಡರ್ ಮಾಡಿ ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ: ಎ. ರಾಮಸ್ವಾಮಿ ಅಯ್ಯರ್ ಸನ್, (ಎ ಆರ್. ವಿಶ್ವೇಶ್ವರೈಯ್ಯ)

Prop' ಸಂತಾನ ಸಿಂಧೂರ, 628 ಚಾಮುಂಡ ರೋಡ್ ಕ್ರಾಸ್, (ಸೀತಾ ವಿಳಾಸ ಛತ್ರದ ಹಿಂದೆ) ಮೈಸೂರು.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾಹುಕೊಳ್ಳುವುದು, ಚೇಳಿನ ವಿಷ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳುಕಡ್ಡಿ

ಮದ್ದು

ನಮ್ಮಲ್ಲಿ

ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

ಸುಲಭದ ಇಂಗ್ಲಿಷ್

ಕೊರಡ್ಕಲ್ ಶ್ರೀನಿವಾಸರಾವ್ ಕೃತ

ಆಂಗ್ಲ ಸ್ವಯಂಬೋಧಿನಿ.

ಬೆಲೆ ರೂ- 1-8-0, ವಿ- ಪಿ. ದ್ವಾರ ರೂ- 2-0-0

ಡಾ| ಕೋಡ್ಕಲ್ ವೆಂಕಟರಾವ್ ಕೃತ

ಮನೆ ಮದ್ದು

ಸುಲಭ ಚಿಕಿತ್ಸೆಗಳು.

ಬೆಲೆ ರೂ- 2-0-0, ವಿ- ಪಿ. ದ್ವಾರ ರೂ- 2-10-0

ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published By K. H. Shetty at the Navayuga Press, Udipi. S. India.

Regd. No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪನೆ
31 ನೆಯ ವರ್ಷ

10-7-1952

Founder: Sri A. B. Shetty
Minister for Medical & Public Health

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಸಾರ್ವಜನಿಕ
ಆರೋಗ್ಯ ಮಂತ್ರಿ
ಶ್ರೀ ಎ. ಬಿ. ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಪೋಸ್ಟ್ ಬಾಕ್ಸ್
ನಂಬ್ರ 22
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ 5-12-0
6 ತಿಂಗಳಿಗೆ
ರೂ 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೪೪

NAVAYUGA WEEKLY Post Box No. 22 UDIPI. Vol. 31 No. 44

ಒಂದು ವಸ್ತುವನ್ನು ಉಪಯೋಗಿಸುವ ವೈವಿಧ್ಯವನ್ನು ಅನುಸರಿಸಿ, ಅದರ ಪರಿಣಾಮದಲ್ಲಿಯೂ ಬದಲಾವಣೆಯಾಗುತ್ತದೆ. ಒಬ್ಬ ಸೈನಿಕನು ಕೈಯಲ್ಲಿನ ಖಡ್ಗವನ್ನು ಹಿಡಿದು, ವೈರಿದಳದ ಸಿಪಾಯಿಯೊಡನೆ ಹೋರಾಡಿ, ಅವನ ರುಂಡ ಹಾರಿಸಿದರೆ, ಭೇಷ್, ಶಾಭಾಸ್ ಎಂದು ಮೆಚ್ಚುತ್ತೇವೆ. ಅದೇ ಒಬ್ಬನು ದ್ವೇಷದಿಂದ ತನ್ನೊಬ್ಬನ ಕುತ್ತಿಗೆ ಕಡಿದರೆ ಗಲ್ಲಿನ ಶಿಕ್ಷೆ ಇತ್ತು ದಂಡಿಸುತ್ತೇವೆ. ಒಬ್ಬ ಕೂಲಿಕಾರನು ತನ್ನ ಪರಿಶ್ರಮದಿಂದ ರಾಜ ಭವನವನ್ನು ಕಟ್ಟಲು ಸಮರ್ಥನಿದ್ದಂತೆಯೇ— ಸ್ವಲ್ಪ ಅಜಾಗರೂಕತೆಗೆ ಒಳಗಾಗಿ ಇಡಿ ಭವನವೇ ಕುಸಿದು ಬೀಳುವಂತೆ ಮಾಡಬಲ್ಲನು. ಅಥವಾ ಭವ್ಯವಾದ ಮಹಲನ್ನು ಕಟ್ಟಿದ ಕೈಯಿಂದಲೇ—ಬಡ ಗುಡಿಸಲಿನ ಪಂಚಾಂಗವನ್ನೂ ಹಾಕ ಬಲ್ಲನು.

ಪ್ರತಿಯೊಂದೂ ಕೆಲಸಕ್ಕೆ ಹಿಂದೆ-ಅದಕ್ಕೆ ಪ್ರೇರಕಾರ್ಥವಾದ ಸಂಗತಿಗಳಿವೆ. ಕಾರ್ಯದ ಹಿಂದೆ ಕಾರಣವೆನ್ನುವುದು ಇದಕ್ಕಾಗಿಯೇ. ಮನುಷ್ಯನು ಒಳ್ಳೆಯದನ್ನೆ ಸದಾಕಾಲ ಮಾಡುತ್ತಿರಲಾರ— ಅಥವಾ ಕೆಟ್ಟದರಲ್ಲಿಯೇ ಬಿದ್ದಿರಲೂ ಆರ. ಒಳ್ಳೆಯದು—ಕೆಟ್ಟದರ ನಡುವಿನ ಸಂಘರ್ಷದಲ್ಲಿ ಹೆಜ್ಜೆ ಹೆಜ್ಜೆಗೂ ಒಳ್ಳೆಯದರ ಕಡೆಗೆ ಒಲಿಯುತ್ತಿರಬೇಕೆಂಬುದು ನಿಸರ್ಗನಿಯಮ. ಇದು ಸ್ವರ್ಗ ಸೋಪಾನ. ತದ್ವಿರುದ್ಧ ಪಥಗಾಮಿಗಳಾದರೆ, ಪ್ರಕೃತಿಗೆ ಪ್ರತಿಕೂಲರಾದೆವೆಂದರೆ, ದೈವಗೇಡಿಗಳಾಗಿ, ಅಧೋಗತಿಹೊಂದುವುದು ನಿಶ್ಚಯ.

ವಿಜ್ಞಾನಯುಗದ ಈ ಕಾಲದಲ್ಲಿ ಮಾನವೀಯ ನಾಗರಿಕತೆ ಬಹಳ ವಿಸ್ತರಿಸಿದೆ- ಸಂಹಾರಕ್ಕಾಗಿ ಅಣುಶಕ್ತಿಯಂಥ ಮಹಾ ಸಾಮರ್ಥ್ಯವನ್ನು ಉಪಯೋಗಿಸುವುದರಲ್ಲಿ ವಿಜ್ಞಾನಿಗಳು ಬೇಗನೇ ಸಾಫಲ್ಯವನ್ನು ಪಡೆದುದು ಕೆಟ್ಟದರ ಕಡೆಗೆ ನಾವು ಎಷ್ಟು ಬೇಗನೆ ವಾಲುತ್ತೇವೆ ಎಂಬುದಕ್ಕೆ ಯೋಗ್ಯ ನಿದರ್ಶನ. ಅದೇ ಅಣುಶಕ್ತಿಯನ್ನು ಮಾನವಕೋಟಿಯ ಹಿತಕ್ಕಾಗಿ ಬಳಸಲು ಬರುತ್ತದೆ ಎಂಬ ಭವಿಷ್ಯವನ್ನು ವಿಜ್ಞಾನಿಗಳು ಹೇಳುವರಾದರೂ—ಇನ್ನೂ ಅವರಿಗೆ ಅದರ ಸಾಧನವನ್ನು ಕಂಡು ಹಿಡಿಯುವ ಬುದ್ಧಿ ಅವರಿಗಾಗಿಲ್ಲ-ಆಯೋಗ್ಯತೆ ಪ್ರಾಪ್ತವಾಗಿಲ್ಲ. ಕಾರಣ—ದುಷ್ಪ್ರವೃತ್ತಿಗಳಿಗೆ ಬಲಿಬೀಳುವುದು ಸುಲಭ ಸಾಧ್ಯ. ಹಾಗೆಂದು ಅವುಗಳ ಹಿಡಿತದಿಂದ

ಮಧುಪರ್ಕ

ಒಂದು ರಾಜಹಂಸ ಕಮಲಗಳು ಅರಳಿ ಘಮಘಮಿಸುವ ತಿಳಿನೀರಿನ ಸುಂದರ ಸರೋವರವನ್ನು ಅರಸುತ್ತಾ ಆಕಾಶದಲ್ಲಿ ಹಾರಿಹೋಯಿತು.

ಅದೇ ಸಮಯಕ್ಕೆ ದೊಡ್ಡದೊಂದು ರಣಹದ್ದು ಕೊಳೆತು ನಾರುತ್ತಿದ್ದ ಕೋಣದ ಹೆಣದ ಮೇಲೆ ಅತಿ ಎತ್ತರದಿಂದ ಬಂದೆರಗಿ ಕಡಿದು, ಕುಕ್ಕಿತು.

ರಾಜಹಂಸದ ಗಾಂಭೀರ್ಯ- ರಣಹದ್ದಿನ ಚಾಪಲ್ಯಗಳಲ್ಲಿ ಒಳ್ಳೆಯದು- ಕೆಟ್ಟದರ ನಡುವಣ ಸಂಘರ್ಷ ಕಂಡವನೊಬ್ಬ ಮೂಗಿನ ಮೇಲೆ ಬೆರಳೇರಿಸಿದ.

ಚಟಗಳ ಚಪಲ

ಪಾರಾಗುವುದು ಅಷ್ಟೆ ಕಷ್ಟಸಾಧ್ಯ-ಎಂಬುದನ್ನು ಮರೆಯದಿರೋಣ

ನಮಗೆ ಅಂಟಿಕೊಂಡಿರುವ ದುರ್ವ್ಯಸನಗಳನ್ನು ಲೆಕ್ಕ ಹಾಕಿದರೆ ಮೇಲಿನ ಹೇಳಿಕೆಯ ಯಥಾರ್ಥತೆ ಮನವರಿಕೆಯಾಗುವುದಿಲ್ಲವೇ?—ಒಂದು ಒಳ್ಳೆಯ ಕೆಲಸವನ್ನು ಮಾಡಲಿಕ್ಕೆ ನಮಗೆ ಮನಸ್ಸು ಬರುವುದಿಲ್ಲ ದಾರಿಯಲ್ಲಿ ಕಾಲುಜಾರಿ ಬಿದ್ದೊಬ್ಬನನ್ನು ಎತ್ತಿ ಉಪಚರಿಸುವಾ ಎಂಬ ಧರ್ಮ ಬುದ್ಧಿ ನಮಗಿಲ್ಲ—ಬದಲಿಗೆ ಬೇಕೆಂದೇ ಕಾಲು ಕೆರೆದು ಜಗಳ ಮಾಡಿ ಇದಿರಾಳಿಯನ್ನು ಭೂಶಾಯಿಯಾಗಿಸುವುದರಲ್ಲಿ ನಮ್ಮ ಕೈ ಮೇಲೆ. ಉಪಕಾರ ಮಾಡುವ ಪ್ರಸಂಗ ಬಂದಾಗಲೆಲ್ಲ – ನಿರುಪಾಯರಿದ್ದೇವೆಂದು ಢೋಂಗು ಮಾಡುತ್ತೇವೆ ಅಪಕಾರವನ್ನು ಮಾಡಬೇಡಿರೆಂದು ಕಾಲು ಹಿಡಿದರೂ— ಉದ್ವೇಗ ವಶರಾಗಿ, ಸೇಡು ತೀರಿಸುತ್ತೇವೆ. ಇದು ಕೆಟ್ಟ ಚಾಳಿಯಲ್ಲವೇ?

ಪ್ರವೃತ್ತಿಗಳು ಚಂಚಲ-ಅವನ್ನು ಉಪಯೋಗಿಸಿದಂತೆ ಅವುಗಳಿಂದ ಲಾಭ-ಹಾನಿಗಳುಂಟಾಗುವುವು. ನಾವು ಯಾವಾಗಲೂ ಕೆಟ್ಟ ವಿಷಯಗಳಲ್ಲಿ ಆಸಕ್ತಿ ವಹಿಸಿದರೆ—ನಮ್ಮ ಆಚಾರ-ನಡವಳಿಕೆಗಳಲ್ಲಿ ಕೂಡ ಕೆಟ್ಟತನದ ಛಾಯೆಯೇ ಒಡಮೂಡುವುದು. ನಮಗೆ ಅಂಟಿಕೊಂಡಿರುವ ಚಟಗಳು [illegible]-ಇವನ್ನೆಲ್ಲ ನಿವಾರಿಸುವುದು ಧರ್ಮಶಾಸ್ತ್ರಕ್ಕೆ ಸೇರಿದ ಕೆಲಸವೇ ಅಥವಾ ಸ್ವಂತ ಪ್ರಯತ್ನದಿಂದಲೇ ಅವುಗಳ ಪ್ರಭಾವದಿಂದ ಮುಕ್ತಿ ಪಡೆಯಬೇಕೇ?

ರಾಜಾಜಿ ಈಚೆಗೊಂದು ಸಲ—ಸರಕಾರಿ ನೌಕರರ ಸಂಬಳ ಬಡತಿಯ ವಿಷಯ ಮಾತನಾಡುವಾಗ—ಸರಕಾರದ ಕಷ್ಟಸುಖವನ್ನು ಹೇಳಲೇನೋ ಹೇಳಿದರು—ಅದರ ಜೊತೆಗೆ, ನಮ್ಮಲ್ಲಿ ನೆಲಸಿರುವ ಚಟಗಳ ಚಪಲದ ಕುರಿತೂ ಬೋಧೆ ಮಾಡಿದರು. ನಾಲ್ಕು ರುಪಾಯಿ ಸಂಬಳ ಏರಿದರೆ—ನಾವು ಮಾಡುವುದೇನು? ಎರಡು ಸಿನೆಮಾ ಹೆಚ್ಚು ನೋಡುತ್ತೇವೆ. ದಿನಕ್ಕೊಂದು ಕಾಫಿ ಹೆಚ್ಚು ಕುಡಿಯುತ್ತೇವೆ. ಇಲ್ಲಿಗೆ ಬಡತಿಯ ನಾಲ್ಕು ರೂಪಾಯಿಗೆ, ಕೈಯಿಂದ ನಾಲ್ಕು ರೂಪಾಯಿ ಹೆಚ್ಚಿಗೆ ಹಾಕಿದರೆ ಸರಿ. ಈಗ ಇದ್ದಂತೆ—ನಮಗೆ ಬಡತನ ತಪ್ಪಿದ್ದಲ್ಲ ನಿತ್ಯ ದರಿದ್ರರಾದ ನಮಗೆ, ಹೊಟ್ಟೆತುಂಬ ತಿಂದುಣ್ಣಲು ಬೇಕಾದುದನ್ನು ಕೊಳ್ಳುವ ಶಕ್ತಿ ಇಲ್ಲ. ಹೀಗಿದ್ದರೂ ಚಾ ಕುಡಿಯುವುದನ್ನು ನಿಲ್ಲಿಸಲು, ಸಿಗರೇಟು ಸೇವನೆಯಿಂದ ಮುಕ್ತರಾಗಲು, ಸಿನೆಮಾ ಥೇಟರಿನಿಂದ ದೂರವಿರಲು ಒಡಂಬಡುವುದಿಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವೆಚ್ಚ ಮಾಡಲು ದುಡ್ಡಿಲ್ಲವೆಂದು ತಾಪತ್ರಯ ಪಟ್ಟುಕೊಳ್ಳುತ್ತೇವೆ. ಅದೇ ಕೆಟ್ಟ ಚಟಗಳಿಗಾಗಿ ವ್ಯಯಿಸುವುದನ್ನು ನಿಲ್ಲಿಸಿ-ಹಣದ ಸದ್ವಿನಿಯೋಗ ಮಾಡೋಣವೆಂದು ಮಾತ್ರ ನಮಗೆ ತೋರುವುದಿಲ್ಲ.

ಮದ್ಯಪಾನ ಪ್ರತಿಬಂಧವು ಇಂಥದೊಂದು ಮಹತ್ವದ ಚಟವನ್ನು ನಿಲ್ಲಿಸಲು ಕೈಗೊಂಡ ಹೆಜ್ಜೆ. ಆದರೆ ಜನರ ಮನಃಪ್ರವೃತ್ತಿಯಲ್ಲಿ ಬದಲಾವಣೆಯಾಗದೆ ಈ ಮಾದರಿಯ ಪ್ರಯತ್ನಗಳು ಸಾಫಲ್ಯ ಪಡೆಯಲಾರವು ಎಂಬುದು ಸ್ವತಃಸಿದ್ಧ—ಮನುಷ್ಯನಾದವನು ಮನುಷ್ಯನಂತೆ ಬದುಕಿರಬೇಕೆಂಬುದನ್ನು ಸದಾ ನೆನಪಿನಲ್ಲಿಟ್ಟುಕೊಂಡರೆ— ಅಸ್ವಾಭಾವಿಕ ರೀತಿಯಲ್ಲಿ ನಮಗೆ ಅಂಟಿಕೊಂಡಿರುವ ಚಟಗಳನ್ನು ಬಿಟ್ಟುಗೊಡಬೇಕೆಂದು ಮನಸ್ಸಾಗಬಹುದು. ನಮ್ಮ ಆರೋಗ್ಯ ಹ್ರಾಸವಾಗಿ, ಬುದ್ಧಿಮತ್ತೆಯನ್ನು ಕುಗ್ಗಿಸಿ, ದೈಹಿಕ ಶಕ್ತಿಯನ್ನು ತಗ್ಗಿಸುವ ಅನುಚಿತ ಮತ್ತು ಹಾನಿಪ್ರದ ಚಟಗಳಿಗೆ ಕೊನೆಯ ನಮಸ್ಕಾರ ಹಾಕುವುದೊಳ್ಳೆಯದು

ರಾಷ್ಟ್ರೀಯ ಪುನರ್ರಚನೆಯ ಈ ದಿನಗಳಲ್ಲಿ ಮಿತವ್ಯಯ ಮತ್ತು ಕರ್ತವ್ಯ ಧರ್ಮದ ಪಾಲನೆಗೆ ಎಂದಿಲ್ಲದ ಮಹತ್ವ ಬಂದಿದೆ. ಚಟಗಳ

[೨ನೇ ಪುಟ ನೋಡಿರಿ]

ಸರಿಯಾದ ಹೆಜ್ಜೆ! ಮಹತ್ವದ ಹೆಜ್ಜೆ!!

ಇತ್ತೀಚೆಗೆ ಮದ್ರಾಸು ಸರಕಾರವು ಸರಿಮಾರ್ಗದಲ್ಲಿ ಒಂದು ಮಹತ್ತರ ಹೆಜ್ಜೆಯನ್ನಿಟ್ಟಿದೆ. ನೀವಾದರೂ ನಿಮ್ಮ ಉಳಿತಾಯದಲ್ಲಿ ಸರಿಯಾದ ಹೆಜ್ಜೆಯನ್ನಿಡಬೇಕೆಂದು ನಾವು ನಿಮ್ಮ ಲಕ್ಷ್ಯವನ್ನೆಳೆಯುತ್ತೇವೆ ನೀವು ಅದನ್ನು ನಿಮ್ಮ ಬ್ಯಾಂಕಿನಲ್ಲಿ ಹಾಕಿದರೆ ನಾವು ಕೊಡುವ ಬಡ್ಡಿಯಿಂದ ಅದು ಬೆಳೆಯುತ್ತದೆ ಅಲ್ಲದೆ ಅದೇ ವೇಳೆಯಲ್ಲಿ ಅದು ಭೂಪ್ರಗತಿಯನ್ನುಂಟುಮಾಡುವ ಉತ್ಪಾದನಾ ಮತ್ತು ಸಾಹಸೋದ್ಯಮಗಳಿಗೆ ದೊರಕುವುದು. ಈ ಬ್ಯಾಂಕು ಪ್ರತಿನಿತ್ಯವೂ 50,000 ಜನರಿಗೂ ಮಿಕ್ಕಿ ಉಳಿಸಲಿಕ್ಕೆ ಸಹಕರಿಸುತ್ತಿದೆ. ದಕ್ಷಿಣ ಕನ್ನಡದ ನೀಲೇಶ್ವರ ಮತ್ತು ಕಿನ್ನಿಗೋಳಿಯಲ್ಲಿ ಇತ್ತೀಚೆಗೆ ಎರಡು ಹೊಸ ಶಾಖೆಗಳು ಇವರಿಂದ ತೆರೆಯಲ್ಪಟ್ಟಿವೆ

ವಹಿವಾಟು ರೂ. 5,00,00,000 ಕ್ಕೂ ಮಿಕ್ಕಿದೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ. 1925 ಹೆಡ್ ಆಫೀಸು. ಉಡುಪಿ

The Canara Industrial & Banking Syndicate Limited.

Estd: 1925 H. O: UDIPI.

ಭಾರತದ ನೀರಾವರಿ ಯೋಜನೆಗಳು

ಬಾವಿ ಹಾಗೂ ಕೆರೆನೀರುಗಳ ಉಪಯೋಗ

ಕೃಷಿಯು ಲಾಭಪ್ರದವೆನಿಸಬೇಕಾದರೆ—ಸಾಕಷ್ಟು ಪ್ರಮಾಣದಲ್ಲಿ ಕ್ರಮವಾದ ನೀರಿನ ಪೂರೈಕೆ ಇರುವುದು ಅಗತ್ಯವಿದೆ. ಭಾರತದಲ್ಲಿ ಹವಾಮಾನ ಮತ್ತು ಭೂಗುಣಗಳ ಮಟ್ಟಿಗೆ ಕೆಲವೊಂದು ಲಾಭದಾಯಕವಾದ ಪರಿಸ್ಥಿತಿ ಇದೆ. ಹೀಗಿದ್ದರೂ—ಉಳಿದೆಡೆಯಲ್ಲಿ ಸಾಮಾನ್ಯವಾಗಿ ಪಡೆಯುವ ಉತ್ಪಾದನೆಯನ್ನು ನಮ್ಮದರೊಡನೆ ಹೋಲಿಸುವಾಗ—ಅಲ್ಪ ಉತ್ಪಾದನೆಯ ಜಾಡ್ಯ ನಮ್ಮ ಕೃಷಿಗೆ ಅಂಟಿಕೊಂಡಿರುವ ಸಂಗತಿ ವ್ಯಕ್ತವಾಗುವುದು. ಇದಕ್ಕೆ ಕೆಲವು ಮಟ್ಟಿಗೆ ನೀರಿನ ಅಭಾವ, ಅಥವಾ ನೀರಿನ ಪೂರೈಕೆಯು ಸಕಾಲದಲ್ಲಿ ಆಗದಿರುವುದು, ಅದರೂ ಅತಿ ಹೆಚ್ಚು ಪ್ರಮಾಣದಲ್ಲಿ ಆಗುವುದು—ಇವನ್ನು ಕಾರಣವಾಗಿ ಹೇಳಬಹುದು. ನಮ್ಮಲ್ಲಿ ಕೃಷಿಗೆ ಮಳೆಯ ನೀರನ್ನೇ ಮುಖ್ಯವಾಗಿ ಅವಲಂಬಿಸುತ್ತೇವೆ. ಮೌಸಮಿನ ಮಾರುತಗಳ ಕೃಪೆಯಿಂದ ವರ್ಷವರ್ಷವೂ ನಿಯತ ಕಾಲದಲ್ಲಿ ಮಳೆಯು ಬರುತ್ತದೆ—ಹೀಗಾಗಿ ನಮ್ಮ ರೈತರಿಗೆ ಹೆಚ್ಚಿನ ತೊಂದರೆಯಾಗುವುದಿಲ್ಲ.

ವಿಶಿಷ್ಟ ಪ್ರೇರಣೆ

ಈ ಮಳೆಯು ಸಾಕಷ್ಟು ಹೆಚ್ಚಾಗಿಯೇ ಇದೆ. ಹಾಗೆಂದು ಎಲ್ಲೆಡೆ ಸಮ ಪ್ರಮಾಣದಲ್ಲಿ ವಿತರಿತವಾಗಿಲ್ಲದಿರುವುದು ಕೊರತೆ. ಅಸಾಮಿನ ಚಿರಾಪುಂಜಿಯಲ್ಲಿ ೪೬೦ ಇಂಚು ಮಳೆ ಬೀಳುವಾಗ ರಾಜಪುತಾನದಲ್ಲಿ ೧೦ ಇಂಚಿಗೂ ಕಡಿಮೆ ಮಳೆಯಿದೆ. ಸಾಧಾರಣವಾಗಿ ಮದ್ರಾಸಿನ ಪೂರ್ವ-ದಕ್ಷಿಣ ಕರಾವಳಿಯನ್ನು ಬಿಟ್ಟು ಭಾರತದ ಉಳಿದೆಲ್ಲ ಕಡೆ ಜೂನಿನಿಂದ ಅಕ್ಟೋಬರದ ಅವಧಿಯಲ್ಲಿ ಮಳೆಯಾಗುತ್ತದೆ. ಉಳಿದ ಸಮಯ ನೀರೇ ಇಲ್ಲ. ಕಾರಣ—ಬರಗಾಲದ ಹಾವಳಿಯು ಹಿಂದಿನ ಕಾಲದಲ್ಲಿ ತಪ್ಪಿದ್ದಲ್ಲ. ರೈಲುಗಳೂ, ಕಾಲುವೆಗಳೂ ನಿರ್ಮಾಣವಾಗುವುದಕ್ಕೆ ಮುಂಚೆ "ಕಾಲಕಾಲಕ್ಕೆ ಕ್ಷಾಮದ ಬಾಧೆಯಿಂದ ಜನರು ಬಳಲುತ್ತಿದ್ದರು. ಅನ್ನಾಭಾವವೆಂಬುದು ವರ್ಷಂಪ್ರತಿ ಜನರನ್ನು ಕಾಡುತಿತ್ತು." ಮಳೆಗಾಲದಲ್ಲಿ ಧಾರಾಳ ಮಳೆ ಬಿದ್ದರೂ, ಉಳಿದ ಸಮಯ ಬೇಸಾಯಕ್ಕೆ ಅದನ್ನು ಉಪಯೋಗಿಸುವಂತಿರಲಿಲ್ಲ. ಕ್ಷಾಮಕ್ಕೆ ಇದೊಂದು ಕಾರಣವಾಯಿತು—ಅತಿವೃಷ್ಟಿಯಿಂದ ಮಹಾಪೂರವೆದ್ದು, ಈ ನದಿಯಲ್ಲಿ ಮನೆಮಾರು, ಸಮೃದ್ಧವಾದ ಹೊಲ ಬಳಿದು ಹೋಗುತಿದ್ದುದು ಇನ್ನೊಂದು ಕಾರಣ. ಈ ದುಷ್ಟ ಪರಿಣಾಮವು ಬೇಸಾಯಗಾರರಿಗೆ ಬೇಕೆಂದಾಗ ಕೃತಕ ರೀತಿಯಿಂದ ನೀರನ್ನೊದಗಿಸುವ ಉದ್ಯಮವನ್ನು ತೊಡಗಲು ಪ್ರೇರಣೆಯಾಯಿತು. ಇದಲ್ಲದೆ—ಕೆಲವು ವಿಶಿಷ್ಟ ಬೆಳೆಗಳಿಗೆ (ಉದಾ: ಭತ್ತ, ಕಬ್ಬು) ಹೆಚ್ಚು ನೀರು ಬೇಕು. ಜನಸಂಖ್ಯೆ ಹೆಚ್ಚಾಗುತ್ತಿದೆಯಾಗಿ, ಒಂದೇ ಬೆಳೆಯಿಂದ ದೊರೆಯಬಹುದಾದ ಆಹಾರದಷ್ಟಕ್ಕೆ ತೃಪ್ತಿಗೊಂಡು ನಿಲ್ಲುವ ಪರಿಸ್ಥಿತಿ ಈಗಿಲ್ಲ. ಇವೆಲ್ಲ ನೀರಾವರಿ ಕೆಲಸಗಳಾಗಬೇಕೆಂದು ಒತ್ತಾಯಿಸುವ ಇತರ ಸಂಗತಿಗಳು.

ದ್ವಿಮುಖ ಪ್ರಾಶಸ್ತ್ಯ

ಭಾರತದ ಭೌಗೋಲಿಕ ಸ್ಥಿತಿಯು ಇಲ್ಲಿಯ ವಿಶಿಷ್ಟ ನೀರಾವರಿ ಕ್ರಮಗಳನ್ನು ರೂಪಿಸಿದೆ ಎನ್ನಬಹುದು. ಉತ್ತರದ ಮಹಾನದಿಗಳು ಹಿಮಾಚ್ಛಾದಿತವಾದ ಪರ್ವತ ಪ್ರದೇಶದಿಂದ ಉದ್ಭವಿಸಿ ಹರಿಯುವುದರಿಂದ ಸದಾಕಾಲ ನೀರಿನಿಂದ ತುಂಬಿರುತ್ತವೆ-ಜೊತೆಗೆ ಫಲವತ್ತಾದ ಮಣ್ಣನ್ನು ಹೊತ್ತು ತರುತ್ತವೆ. ಭೂಮಿಯು ಕ್ರಮವಾಗಿ ಇಳಿಜಾರಾಗಿ ಸಮುದ್ರದೆಡೆಗೆ ಸರಿಯುವುದರಿಂದ ನದಿಯ ಮೇಲ್ಭಾಗದಲ್ಲಿ ಕಾಲುವೆ ತೋಡಿದರೆ ಕೆಳಗಿನ ಸಾಲ್ಯಾರುಗಳಿಗೆ ನಿರಾತಂಕವಾಗಿ ಅದನ್ನು ವಿಸ್ತರಿಸಲು ಎಡೆ ಇದೆ. ಉತ್ತರದ ಬಯಲುಗಳಲ್ಲಿ ಬಂಡೆಗಲ್ಲು ಕಾಣಸಿಗುವುದೇ ಇಲ್ಲ-ಕಾರಣ, ಕಾಲುವೆ ತೋಡುವ ಕೆಲಸ ಸುಲಭದಲ್ಲಿ ಮುಗಿಯುತ್ತದೆ. ಮಣ್ಣು ಅತ್ಯಂತ ಫಲವತ್ತಾಗಿರುವುದರಿಂದ ನೀರಾವರಿಯ ಅತ್ಯಧಿಕ ಪ್ರಯೋಜನವನ್ನು ಪಡೆಯಲು ಸಾಧ್ಯವಾಗಿದೆ.

ಮುಖ್ಯವಾಗಿ ಭಾರತದಲ್ಲಿ ಮೂರು ಬಗೆಯ ನೀರಾವರಿ ಕ್ರಮಗಳು ಕಂಡು ಬರುತ್ತವೆ-(೧) ಕಾಲುವೆಗಳು. (೨) ಬಾವಿಗಳು. (೩) ಕೆರೆಗಳು. ಇವು ಮೂರು ವಿಧಾನಗಳಿಂದ ಒಟ್ಟಿಗೆ ಐದು ಕೋಟಿ ಎಕರೆ ಜಾಗವು ವರ್ಷಂಪ್ರತಿ ನಮ್ಮ ದೇಶದಲ್ಲಿ ನೀರಾವರಿಗೊಳಪಡುತ್ತದೆ. ಕಾಲುವೆ ನೀರಿನಿಂದ ೫೦%, ಬಾವಿ ನೀರಿನಿಂದ ೩೦%, ಕೆರೆಗಳು ಮತ್ತಿತರ ರೀತಿಯಿಂದ ೨೦%. ಈ ಪ್ರಮಾಣವು ಲೋಕದ ಇತರ ದೇಶಗಳಲ್ಲಿ ನೀರಾವರಿಗೊಳಗಾದ ಪ್ರದೇಶಗಳಿಗಿಂತ ಬಹಳ ಹೆಚ್ಚು. ಪಾಕಿಸ್ತಾನ ಹಾಗೂ ಅಮೇರಿಕದ ಎರಡೂವರೆ ಪಾಲಷ್ಟು ಹೆಚ್ಚು ಭೂಮಿ ನಮ್ಮಲ್ಲಿ ನೀರಾವರಿಯ ಪ್ರಯೋಜನ ಪಡೆಯುತ್ತದೆ. ನಮ್ಮ ನೀರಾವರಿ ಕಾಲುವೆಗಳ ಉದ್ದವು ೬೦,೦೦೦ ಮೈಲು. "ಭಾರತದಲ್ಲಿ ಭೂಮಿಗಿಂತಲೂ ನೀರು ಹೆಚ್ಚು ಉಪಯೋಗಿಯೂ ಅಮೂಲ್ಯವೂ ಆಗಿದೆ. ಭೂಮಿಗೆ ನೀರುಣಿಸಿದಾಗ ಉತ್ಪಾದನೆಯು ಕಡಿಮೆ ಎಂದರೂ ಆರು ಪಾಲಷ್ಟು ಹೆಚ್ಚುತ್ತದೆ." ಭೂಮಿಯ ಸಾರವನ್ನು ವರ್ಧಿಸಿ ಉತ್ಪಾದನೆಯನ್ನು ಹೆಚ್ಚಿಸುವುದರ ಜೊತೆಗೆ—ಬರಗಾಲದ ಭಯವನ್ನು ನೀರಾವರಿ ಯೋಜನೆಗಳು ದೂರಮಾಡುವುದರಿಂದ ಇದಕ್ಕೆ ದ್ವಿಮುಖ ಪ್ರಾಶಸ್ತ್ಯ.

ಸುಲಭ ನೀರಾವರಿ

ಬಾವಿಯಿಂದ ನೀರು ಮೊಗೆದು ಹೊಲಗದ್ದೆಗಳಿಗೆ ಪೂರೈಸುವುದು ಭಾರತದ ವಿಶಿಷ್ಟ ಪದ್ಧತಿ. ನಮ್ಮ ಬಡ ರೈತರ ಆರ್ಥಿಕ ಸ್ಥಿತಿಗೆ ಇದು ಬಹಳ ಅನುಕೂಲ. ದೊಡ್ಡ ಕಾಲುವೆಗಳನ್ನು ತೋಡುವ, ಕೆರೆಗಳನ್ನು ರಚಿಸುವ ಸಾಮರ್ಥ್ಯ ಇಲ್ಲದಿರುವಾಗ—ಬಾವಿಗಳನ್ನು ಅಲ್ಪ ವೆಚ್ಚದಲ್ಲಿ, ತಾಂತ್ರಿಕ ತೊಡಕುಗಳ ಗಂಧಗಾಳಿಯೂ ಇಲ್ಲದೆ ನಿರ್ಮಿಸಲು ಬರುತ್ತದೆ. ಉತ್ತರ ಪ್ರದೇಶದ ಪಶ್ಚಿಮ ಭಾಗವು ಬಾವಿ ನೀರಿನ ಉಪಯೋಗಕ್ಕೆ ಬಹಳ ಹೆಸರಾಗಿದೆ. ಕಾಶಿಯಿಂದ ಡಿಲ್ಲಿಯ ವರೆಗಿನ ದಾರಿಯಲ್ಲಿ ಹತ್ತರಿಂದ ಹದಿನೈದು ಅಡಿ ಆಳದ ಭಾವಿಗಳಿಂದಲೇ ಹೊಲಗಳಿಗೆ ನೀರುಣಿಸುತ್ತಾರೆ. ದಕ್ಷಿಣದ ಕಪ್ಪು ಮಣ್ಣಿನ ಪ್ರದೇಶದಲ್ಲಿಯೂ ಅಸಾಮು ಬಿಹಾರಗಳಲ್ಲಿಯೂ ಬಾವಿಗಳ ಉಪಯೋಗ ಹೆಚ್ಚು. ಪಶ್ಚಿಮ ಘಟ್ಟದ ಪೂರ್ವ ಮಗ್ಗುಲಿಗೆ ಬಾವಿ ನೀರಿನಿಂದ ತುಂಬ ಪ್ರಯೋಜನವುಂಟು. ಮದ್ರಾಸಿನಲ್ಲಿ ಕೊಯಮುತ್ತೂರು, ಮಧುರೆ ಮತ್ತು ರಾಮನಾಡ ಜಿಲ್ಲೆಗಳು ಬಾವಿಗೆ ತುಂಬ ಹೆಸರಾಗಿವೆ. ಒಟ್ಟಾರೆ ಹೇಳುವುದಾದರೆ ನೀರಾವರಿಗೆ ಬಳಸುವ ಭೂಮಿಯಲ್ಲಿ ಬಾವಿ ನೀರಿನ ಉಪಯೋಗಕ್ಕೆ ಒಳಗಾದವುಗಳು ಉತ್ತರ ಪ್ರದೇಶದಲ್ಲಿ ೫೨%, ಪಂಜಾಬದಲ್ಲಿ ೨೫%, ಬೊಂಬಾಯಿಯಲ್ಲಿ ೧೪%, ಮದ್ರಾಸಿನಲ್ಲಿ ೧೮%. ಬಿಹಾರ, ಒರಿಸ್ಸಾಗಳಲ್ಲಿ ೧೨%.

ಬಾವಿ ನೀರಿನ ಉಪಯೋಗವನ್ನು ಹೆಚ್ಚಿಸಿಕೊಂಡು ಕೃಷಿಯನ್ನು ವಿಸ್ತರಿಸಲು ಅಪಾರ ಅವಕಾಶವಿದೆ. ಸಹಕಾರಿ ಸಂಸ್ಥೆಗಳ ಮೂಲಕ ಭಾರತದಲ್ಲಿ ಹೊಲಗಳಿಗೆ ಭಾವಿನೀರಿನ ಉಪಯೋಗವನ್ನು ಮಾಡುವ ಉದ್ದೇಶದಿಂದ ಬಾವಿ ಕಟ್ಟಿಸಲು ಪ್ರೋತ್ಸಾಹ ಕೊಡಬೇಕೆಂದು ಸರಕಾರಕ್ಕೆ ಸಲಹೆ ಮಾಡಲಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ತಗಾವಿ ಸಾಲಗಳನ್ನು ಕೊಟ್ಟು, ರೈತರಿಂದ ಬಾವಿಗಳನ್ನು ಕಟ್ಟಿಸುವುದಕ್ಕೆ ಸರಕಾರ ನಿಶ್ಚಯಿಸಿದೆ. ಭಾರತದ ವಿಶಿಷ್ಟ ಪರಿಸ್ಥಿತಿಯಿಂದಾಗಿ—ಬಾವಿ ನೀರನ್ನು ಹೊಲಗಳಿಗೆ ಉಪಯೋಗಿಸುವ ಉದ್ಯಮವು

[೧೦ನೇ ಪುಟನೋಡಿರಿ]

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs. 10 lacks.
3. Has granted an average dividend of 6% to the Shareholders for the past 20 years.
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich … n to all your monies.

ADOPT IT AS
"MY BANK"
THE VIJAYA BANK, LIMITED,
H. O., MANGALORE.

The East & West Insurance Co, Ltd.,
East & West Bldgs. BOMBAY - 1.

ದಿ ಈಸ್ಟ್ ಎಂಡ್ ವೆಸ್ಟ್
ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ:] ಈಸ್ಟ್ ಎಂಡ್ ವೆಸ್ಟ್ ಬಿಲ್ಡಿಂಗ್ಸ್, ಬೊಂಬಾಯಿ 1 [1913

ಉದಾರ ಯಾ ರಿಯಾಯತಿ ಶರ್ತಗಳಿರುವ ಪುರಾತನ ಮತ್ತು ಮುಂದುವರಿದ ಕಂಪೆನಿಗಳಲ್ಲೊಂದಾಗಿರುತ್ತದೆ.

ವಿಮೆಯ ಸಕಲ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು ಆ ಬಾಬಿನ ಎಲ್ಲಾ ಕೆಲಸಗಳಲ್ಲಿ ಭಾಗಿಯಾಗಿ ಸಹಕರಿಸಿ ಸಲಹೆಗಳನ್ನೀಯುತ್ತ ಜನಸೇವೆಗೈಯುವುದೇ ನಮ್ಮ ಧ್ಯೇಯ.

ನಮ್ಮ ಚೀಫ್ ಏಜನ್ಸಿ ವಿಸ್ತೀರ್ಣದೊಳಗೆ ಪ್ರತೀ ಜಿಲ್ಲೆಗೊಬ್ಬರಂತೆ ಇನ್ಸ್‌ಪೆಕ್ಟರು ಗಳೂ, ಸ್ಪೆಶಲ್ ಏಜಂಟರೂ, ಏಜಂಟರೂ ಬೇಕಾಗಿದ್ದಾರೆ. ಹೆಚ್ಚಿನ ವಿವರಕ್ಕೆ ಬರೆಯುವದು.

ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್,
ಚೀಫ್ ಏಜಂಟರು,
ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಮೈಸೂರು ಸ್ಟೇಟ್,
ಪೋಸ್ಟ್ ಶಿರ್ವ, ದ. ಕ.

[೧ನೇ ಪುಟದಿಂದ ಮುಂದುವರಿದುದು]

ಶಕ್ತಿಗೆ ಒಳಗಾಗಿ ಬೇಕೆಂದೇ ಅನ್ಯಾಯ ಮಾಡುವ ಹಣವನ್ನು ಉಳಿಸಿ—ಸತ್ಕಾರ್ಯಗಳಿಗೆ ವಿನಿಯೋಗಿಸುವುದು ಸಂಪತ್ತನ್ನು ಅನುಭೋಗಿಸುವ ಯೋಗ್ಯ ಕ್ರಮ.—ದೈಹಿಕ, ಮಾನಸಿಕ ಹಾಗೂ ಆತ್ಮಿಕ ಬಲ ಸಂಪನ್ನರಾಗಿ—ರಾಷ್ಟ್ರಾಭ್ಯುದಯವನ್ನು ಹಾರೈಸುತ್ತ ಅಳಿಲಸೇವೆ ಸಲ್ಲಿಸಬೇಕೆಂದರೆ- ಚಟಗಳ ದುಷ್ಫಲವನ್ನು ಸಂಯಮದಿಂದ ತೊರೆಯಬೇಕಾದುದು ಅಗತ್ಯ. ತ್ಯಾಗವಿಲ್ಲದೆ ತಪಸ್ಸು ಸಿದ್ಧಿಸದು. ತಪಸ್ಸು ಪೂರ್ಣವಾಗದೆ—ಫಲ ದೊರೆಯದು. ಅಲ್ಪ ತ್ಯಾಗದಿಂದ ಮಹಾಲಾಭವನ್ನು ಪಡೆಯಲು ಮುಂದಾಗುವುದು ಶ್ರೇಯೋಕಾಂಕ್ಷಿಯಾದವನಿಗೆ ಲೇಸುಂಟು ಮಾಡುತ್ತದೆ.

—ಓಂ ತತ್ಸತ್.

ಹಿಮಾಲಯದ ರಾವತರು

ರಾಜಮನೆತನದ ಅಭಿಮಾನ: ಉಡುಗೆ ಮಾತ್ರ ಕೌಪೀನ!

— ೧ —

ಅರ್ವಾಚೀನ ಸಭ್ಯತೆಯ ಗಂಧಗಾಳಿಯೂ ಸುಳಿಯದ ಕೆಲವು ಸ್ಥಾನ ಹಿಮಾಲಯದ ತಪ್ಪಲಿನಲ್ಲಿವೆ. ಇಲ್ಲಿಯ ನಿವಾಸಿಕರ ಆಚಾರ ವಿಚಾರ, ಉಡುಗೆ ತೊಡುಗೆ, ನಡೆ-ನುಡಿಗಳು ಉಳಿದ ಭಾರತೀಯರದಕ್ಕಿಂತ ಭಿನ್ನವಾಗಿವೆ. ಅಸ್ಕೋಟ ಎಂಬುದು ಇಂಥದೊಂದು ವಿಚಿತ್ರಸ್ಥಳ. ಇಲ್ಲಿ ರಾವತ ಅಥವಾ "ರಾಜೀ" ಎಂಬ ಜಾತಿಯ ಕಾಡು ಮನುಷ್ಯರು ನೆಲಸಿರುವರು. ನಿಜವಾಗಿ ಇವರು ಪುರಾಣ ಕಾಲದ ವನ್ಯಮನುಷ್ಯಜಾತಿಯಲ್ಲ-ಈಗಿನ ಸಭ್ಯತೆಯ ಸೋಂಕು ಅವರಿಗೆ ತಗುಲಿಲ್ಲ ಎಂಬುದರಿಂದ ಹೀಗೆ ಕರೆಯುತ್ತೇವೆ.

ಅಲ್ಮೋರಾ ಜಿಲ್ಲೆಯಲ್ಲಿ ಅಸ್ಕೋಟಾ ಇದೆ. ಅಲ್ಮೋರಾದಿಂದ ಕೈಲಾಸಕ್ಕೆ ಹೋಗುವ ಯಾತ್ರಾ ಮಾರ್ಗದಲ್ಲಿ ೭೦ ಮೈಲು ಅಂತರದಲ್ಲಿ ಈ ಸ್ಥಳ ಸಿಗುತ್ತದೆ. ಇಲ್ಲಿಯ ಸಕಲ ಸುರಮ್ಯವೆಂಬುದಂತೂ ನಿಶ್ಚಯ. ಅದಕ್ಕೂ ಮಿಗಿಲಾದುದು ಇಲ್ಲಿ ವಾಸಿಸುವ ರಾವತರ ಜೀವನ. ಘನವಾದ ಬೆಟ್ಟದ ತಪ್ಪಲುಗಳಲ್ಲಿ ಇವರು ಬೀಡು ಬಿಟ್ಟಿರುವರು. ಇವರ ಭಾಷೆ ತಿಬೇಟು-ಬರ್ಮೀಯರ ಭಾಷೆಯನ್ನು ಕೆಲಮಟ್ಟಿಗೆ ಹೋಲುವುದರಿಂದ, ಹಾಗೂ ಮಂಗೋಲಿಯರ ಛಾಯೆ ಅವರಲ್ಲಿ ಒಡಮೂಡಿರುವುದರಿಂದ ಮಧ್ಯ ಏಶಿಯದ ನಿವಾಸಿಗಳಾಗಿ ಇವರ ಪೂರ್ವಜರಿದ್ದಿರಬೇಕೆಂದು ಊಹಿಸಲು ಎಡೆ ಇದೆ. ಇವರ ಮುಖ ಹಾಗೂ ಗಲ್ಲದ ಎಲುಬುಗಳು ನಮ್ಮವರ ಹಾಗೆ ಒತ್ತೊತ್ತಾಗಿರದೆ, ಬಹಳ ವಿರಳವಿವೆ. ಇದೇ ಜಾತಿಯ ಜನರು ನೇಪಾಳದಲ್ಲಿ ಕೂಡ ಕಂಡು ಬರುವರು. ಅಲ್ಲಿ ತಮ್ಮ ಬಂಧು ಬಳಗದವರು ಇದ್ದಾರೆಂದು ರಾವತರೂ ಒಪ್ಪುತ್ತಾರೆ.

— ೨ —

ರಾವತರು ಒಂದು ಕತೆ ಹೇಳುತ್ತಾರೆ. ಭೂಲೋಕದ ಸೃಷ್ಟಿಯ ಕಾಲದಲ್ಲಿ ಇಬ್ಬರು ರಾಜಪೂತ ಸಹೋದರರಿದ್ದರು. ದೊಡ್ಡವನಿಗೆ ಬೇಟೆಯಾಡುವ ಹುಚ್ಚು. ಅದಕ್ಕಾಗಿ, ಕಿರಿಯವನಿಗೆ ರಾಜಕಾರ್ಯವನ್ನೊಪ್ಪಿಸಿ ಹೋದನು. ಸಣ್ಣವನು ಒಳ್ಳೆಯ ರೀತಿಯಲ್ಲಿ ರಾಜ್ಯಭಾರ ನಿರ್ವಹಿಸಿದುದರಿಂದ, ಅಣ್ಣನು ಕಾಡಿನಲ್ಲಿಯೇ ಉಳಿದನು. ಅವನ ವಂಶಜರೇ ತಾವೆಂದು ರಾವತರು ಹೆಮ್ಮೆಪಟ್ಟುಕೊಳ್ಳುವರು. ಅಸ್ಕೋಟದ ಶಾಸನಾಧಿಕಾರಿಯನ್ನು ತಮ್ಮ ತಮ್ಮನೆಂದೇ ಭಾವಿಸುವರು. ಪುರಾಣ ಕಾಲದ ಕಿರಾತರೆಂದರೇನೆ ಈ ಜನರು ಎಂಬುದಾಗಿ ಸಂಶೋಧಕರ ಅಭಿಪ್ರಾಯ.

ಈ ಜನರಲ್ಲಿ ಒಬ್ಬ ಹೆಂಗಸಿಗೆ ಅನೇಕ ಮಂದಿ ಗಂಡಂದಿರು ಇರುವುದುಂಟು. ಇದು ಮಹಾಭಾರತದ ದ್ರೌಪದಿಯ ಕತೆಯನ್ನು ನೆನಪಿಗೆ ತರುತ್ತದೆ. ಹುಡುಗಿಯು ವಿವಾಹ ಯೋಗ್ಯ ವಯಸ್ಸಿನವಳಾದಾಗಲೇ ಅವಳ ಮದುವೆ ನಡೆಯುತ್ತದೆ. ಬಾಲ್ಯವಿವಾಹದ ಪ್ರಶ್ನೆ ಇಲ್ಲವೇ ಇಲ್ಲ. ಮದುವೆಯು ಆಡಂಬರ ರಹಿತವಾಗಿ ನೆರವೇರುವುದು. ನಿಶ್ಚಿತ ದಿನದಂದು ಮದುಮಗನು ತನ್ನ ಕೆಲವು ಸಂಗಾತಿಗಳೊಂದಿಗೆ ವಧುವಿನ ಮನೆಗೆ ಬಂದು, ಅವಳನ್ನು ತನ್ನಲ್ಲಿಗೆ ಕರಕೊಂಡು ಹೋಗುತ್ತಾನೆ. ವಿವಾಹ ಭೋಜನ ಸಮಾರಂಭವಿಲ್ಲ; ಪುರೋಹಿತರಿಗೂ ಮದುವೆಯಲ್ಲಿ ಸ್ಥಾನವಿಲ್ಲ. ಹುಡುಗಿಯ ತಂದೆ ಮದುವೆಯಾಯಿತೆಂದು ಘೋಷಿಸುತ್ತಾನೆ, ಅಷ್ಟೆ.

ಇವರ ಪುರೋಹಿತರನ್ನು ಧಾಮಿ ಎಂದು ಕರೆಯುತ್ತಾರೆ. ಪೌರೋಹಿತ್ಯವನ್ನು ಇವರಲ್ಲಿಯೇ ಒಂದು ಕಲೆವಾರಿನವರು ಕುಟುಂಬಾಗತವಾಗಿ ನಡೆಸಿಕೊಂಡು ಬರುತ್ತಾರೆ. ಇಲ್ಲಿಯ ಹಿಂದೂ ಜನರ ದೇವತೆಗಳು ಇವರಿಗೂ ಮಾನ್ಯವಾಗಿವೆ. ಆದರೆ ವರ್ಷಕ್ಕೆ ಒಮ್ಮೆ ಮಾತ್ರ ಈ ದೇವತೆಗಳ ಪೂಜೆಯಾಗುತ್ತದೆ. ಭಾರತದ ಅತ್ಯುನ್ನತ ಶಿಖರದಲ್ಲಿ ನೆಲಸಿರುವ ನಂದಾ ದೇವಿಯ ಉತ್ಸವದ ಸಮಯ, ರಾವತರೂ ಅಲ್ಲಿಗೆ ಹೋಗಿ, ಇಡೀ ರಾತ್ರಿ ಕುಣಿಯುವುದು, ಹಾಡುವುದರಲ್ಲಿ ಕಳೆಯುತ್ತಾರೆ. ಒಂದು ಕೋಟೆಯಾಕಾರದಲ್ಲಿ ನಿಂತು ಒಬ್ಬರಿಗೊಬ್ಬರು ಮುಖಮಾಡಿ ನರ್ತಿಸುತ್ತಾರೆ.

— ೩ —

ಮಗುವಿನ ಜನನ ಕಾಲದಲ್ಲಿ ಹೆಂಗಸಿನ ಸೇವಾ ಶುಶ್ರೂಷೆಗಳಿಗಾಗಿ ಯಾರನ್ನೂ ಬಳಿಯಲ್ಲಿಡಗೊಡುವುದಿಲ್ಲ. ಪ್ರಸವ ವೇದನೆ ತೊಡಗಿದೊಡನೆಯೇ-ಮಗುವಿನ ತಾಯೊಬ್ಬಳನ್ನೆ ಒಂದೆಡೆ ಇರಗೊಡುವರು. ಅಪರೂಪ ಸಂದರ್ಭದಲ್ಲಿ ಮದುವೆಯಾದ ಬೇರೆ ಹೆಂಗಸರು ಬಳಿಯಲ್ಲಿರುವುದುಂಟು. ಮಗು ಹುಟ್ಟಿದ ಎರಡು ತಿಂಗಳು ಕಾಲ ಸ್ತ್ರೀಯು ಅಪವಿತ್ರಳೆಂಬ ಭಾವನೆ ರಾವತರದು. ಈ ಸಮಯದಲ್ಲಿ ಅವಳು ಮುಟ್ಟಿದ ಯಾವ ವಸ್ತುವನ್ನೂ ತಿನ್ನುವಂತಿಲ್ಲ.

ನಾಮಕರಣ ಸಂಸ್ಕಾರವನ್ನೂ ವಿಚಿತ್ರ ಕ್ರಮದಲ್ಲಿ ಮಾಡುವರು. ಮಗುವಿನ ಜನನದ ಐದನೇ ದಿನ ಪುರೋಹಿತರು ಬಂದು ಎಲ್ಲ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳನ್ನು ನೆರವೇರಿಸುವರು. ಐದು ದಿನಗಳ ವರೆಗೆ ಮಗುವು ದೇವರ ಪ್ರತಿರೂಪವೆಂದು ಅವರ ನಂಬುಗೆ. ಐದನೇ ದಿನ ದೇವರೂಪಿಯಾದ ಮಗುವು ಮನುಷ್ಯನಾಗುವುದು. ಮಗುವಿಗೆ ಸಾಮಾನ್ಯವಾಗಿ ಎರಡೆರಡು ಹೆಸರನ್ನು ಇಡುವರು. ಒಂದು ಹಿಂದೂ ಹೆಸರಿನಂತೆ--ಮೋಹನಸಿಂಹ, ದೇವಸಿಂಹ ಇತ್ಯಾದಿ. ಇನ್ನೊಂದು ನಡೆದು ಬಂದ ಸಂಪ್ರದಾಯದಂತೆ-ಮೋಹನಿಯಾ ಇತ್ಯಾದಿ.

— ೪ —

ಮೊದಲು ರಾವತರು ತಿಬೇಟಿನ ಜನರಂತೆ ಶವಗಳನ್ನು ಹೂಳುತ್ತಿದ್ದರು. ಈಗ ಈ ಪದ್ಧತಿಯೇ ನಿಂತಿದೆ ಎನ್ನಬಹುದು. ಶವವನ್ನು ನದಿಯ ದಂಡೆಗೆ ಹೊತ್ತುಕೊಂಡು ಹೋಗಿ, ಅಲ್ಲಿ ದಹಿಸುತ್ತಾರೆ. ಸತ್ತವರ ಶ್ರಾದ್ಧ ಇತ್ಯಾದಿಗಳನ್ನೇನೂ ಅವರು ಮಾಡುವುದಿಲ್ಲ. ಆದರೂ ಮನೆಯಲ್ಲಿ ಯಾರಾದರೊಬ್ಬರು ಮರಣಗೊಂಡರೆ, ಎಲ್ಲರೂ ಉಪವಾಸ ಮಾಡುತ್ತಾರೆ. ಹತ್ತು ದಿನಗಳ ತನಕ ಸತ್ತವರ ಹೆಸರಿನಲ್ಲಿ ಸ್ವಲ್ಪ ಅನ್ನ ಮತ್ತು ನೀರನ್ನು ಹೊರಗಿಡುತ್ತಾರೆ. ಇದನ್ನು ಬಿಟ್ಟರೆ ಸತ್ತವರ ಹೆಸರಲ್ಲಿ ಮತ್ತೇನೂ ನಡೆಯುವುದಿಲ್ಲ.

ಕುಡಿಯುವ ನೀರಿನ ಕುರಿತು ರಾವತರು ಬಹಳ ಜಾಗರೂಕತೆ ವಹಿಸುತ್ತಾರೆ. ಮರೆತಾದರೂ ಅವರು ನೀರಿನ ಬುಗ್ಗೆಯನ್ನು ಬಿಟ್ಟು, ಉಳಿದೆಡೆಯಿಂದ ನೀರನ್ನುಪಯೋಗಿಸುವುದಿಲ್ಲ. ನದಿಯ ನೀರು ಕೊಳಕ್ಕೆಂದು ಇವರ ಅಭಿಪ್ರಾಯ. ಕಾರಣ, ಕುಡಿಯುವುದಕ್ಕೆ ಅದನ್ನು ಉಪಯೋಗಿಸುವುದಿಲ್ಲ. ಆದರೆ, ಇವರ ನಿವಾಸಸ್ಥಾನವನ್ನು ಕಂಡರೆ, ಅಲ್ಲಿ ನೈರ್ಮಲ್ಯಕ್ಕೆ ಎಡೆಯೇ ಇಲ್ಲ! ಅಲ್ಲಿಯ ಕೊಳಕು ಎಷ್ಟಿದೆ ಎಂದರೆ-ನಮ್ಮಂಥವರು ಯಾರೂ ಅಲ್ಲಿ ಹೆಚ್ಚು ಸಮಯ ನಿಲ್ಲಲಾರರು. ಅವರ ಶರೀರವನ್ನು ಕಂಡರೆ-ತಮ್ಮ ಇಡೀ ಆಯುಷ್ಯದಲ್ಲಿ ಒಮ್ಮೆಯಾದರೂ ಸ್ನಾನ ಮಾಡಿರುವರೋ ಎಂಬ ಸಂದೇಹ ಬರುವುದು ನಿಶ್ಚಯ.

— ೫ —

ಕಲ್ಲಿನಿಂದ ಮಾಡಿದ ಮನೆಗಳಲ್ಲಿ ಇವರು ವಾಸಮಾಡುವರು. ಬೇಟೆಯೇ ಜೀವನಯಾಪನೆಯ ಮುಖ್ಯ ಸಾಧನ ಇದಕ್ಕಾಗಿ ಬಿಲ್ಲು ಬಾಣಗಳು ಅವರಬಳಿ ಇವೆ. ಹಾಗೆಂದು-ಅದರ ಉಪಯೋಗ ಮಾತ್ರ ಬಹಳ ಕಡಿಮೆ ಸಂದರ್ಭದಲ್ಲಿ ಆಗುತ್ತದೆ. ಮೀನು ಹಿಡಿಯುವುದರಲ್ಲಿ ಇವರು ಭಾರಿ ನಿಪುಣರು. ಬಲೆಯನ್ನುಪಯೋಗಿಸದನೇ-ಕೇವಲ ಕೈಯ ಚಮತ್ಕಾರದಿಂದ ಕಲ್ಲೆಡೆಯಲ್ಲಿ ಅಡಗಿಕುಳಿತಿರುವ ಮೀನುಗಳನ್ನು ನುಣುಚಿ ಹೊರ ತೆಗೆಯುವರು. ಪ್ರಾಣಿಗಳ ಬೇಟೆಗೆ ಇವರು ನಮ್ಮಹಳ್ಳಿಗಳಲ್ಲಿ ಉಪಯೋಗಿಸುವ "ಅಣಕಿಲು" ಮಾದರಿಯನ್ನು ಅನುಸರಿಸುವರು. ಪ್ರಾಣಿಗೆ ಇಷ್ಟವಾದ ಖಾದ್ಯ ವಸ್ತುವನ್ನು ಗೂಡಿನಾಕಾರದ ಈ ವ್ಯವಸ್ಥೆಯಲ್ಲಿ ಒಂದೆಡೆ ಇಡುವರು. ತಿಂಡಿಯ ಆಶೆಗೆ ಪ್ರಾಣಿ ಗೂಡನ್ನು ಪ್ರವೇಶಿಸಿದೊಡನೆಯೇ ಅದರ ಬಾಗಿಲು ಬಿದ್ದು ಬಿಡುವುದು. ಜೊತೆಗೆ ಸಲಿಕೆಗಳನ್ನು ಆಧರಿಸಿ ನಿಂತ ದೊಡ್ಡ ಬಂಡೆಗಲ್ಲು ಪ್ರಾಣಿಯ ಮೇಲೆ ಬಿದ್ದು, ಅದು ಸತ್ತುಹೋಗುವುದು. ಜಿಂಕೆ ಮುಂತಾದ ಸಾಧು ಪ್ರಾಣಿಗಳ ಮಟ್ಟಿಗಷ್ಟೇ ಅಲ್ಲ—ದೊಡ್ಡ ಮಟ್ಟದ ಹುಲಿ ಬೇಟೆ ಮೊದಲಾದುವಕ್ಕೂ ಈ ಯುಕ್ತಿಯನ್ನು ಪ್ರಯೋಗಿಸುವುದುಂಟು.

— ೬ —

ಮರದ ಒಳ್ಳೆಯ ಪಾತ್ರೆಗಳನ್ನು ತಯಾರಿಸುವುದರಲ್ಲಿ ರಾವತರು ಕುಶಲಿಗರು. ತಮ್ಮ ಬಳಿಯಿಂದ ಹಾದು ಹೋಗುವ ಯಾತ್ರಿಕರಿಗೆ ಮಾರಿ, ಹಣವನ್ನು ಸಂಪಾದಿಸುತ್ತಾರೆ. ಅಲ್ಪ ಕ್ಷೇತ್ರದ ಮಿತಿಯಲ್ಲಿ ಇವರು ತಮ್ಮ ಮನೆ ಬದಲಾಯಿಸುತ್ತಿರುತ್ತಾರೆ. ರಾವತರು ಯಾವಾಗ ಎಲ್ಲಿಗೆ ಹೋಗುವರೆಂಬುದನ್ನು ಯಾರೊಬ್ಬರೂ ಮುಂಚಿತವಾಗಿ ಹೇಳಲಾರರು. ಅಸ್ಕೋಟಿನ ಕಾಡುಗಳಲ್ಲಿ ಇವರು ಪೂರ್ಣ ಸ್ವತಂತ್ರರು.

ವಲ್ಕಲಗಳನ್ನುಟ್ಟು ಇವರು ಮಾನ ಕಾಪಾಡಿಕೊಳ್ಳುವರು. ಹೆಂಗಸರು ನಾರು ಬಟ್ಟೆಯನ್ನು ಹೊಲಿದು ಉಟ್ಟುಕೊಳ್ಳುವಂತಾದರೆ—ಗಂಡಸು ಕೌಪೀನ ಮಾತ್ರದಿಂದ ತೃಪ್ತನಾಗುವನು. ಇಲ್ಲಿ ಸೆಖೆ ಹೆಚ್ಚು ಇರುವುದರಿಂದ-ಇದಕ್ಕೂ ಮಿಕ್ಕಿದ ವಸ್ತ್ರದ ಸೌಭಾಗ್ಯ ಬೇಕೆನಿಸುವುದಿಲ್ಲ.

ತಮ್ಮ ಸ್ಥಾನದಲ್ಲಿ ಸರ್ವತಂತ್ರ ಸ್ವತಂತ್ರವೆನಿಸಿದ ರೀತಿಯಲ್ಲಿ ಬದುಕು ನೀಗುವ

ನಡೆಯದ ನಾಣ್ಯ

ನೀವು ಆರೋಗ್ಯವಂತರಿದ್ದಾಗ ವಿಮೆ ಇಳಿಸಬಲ್ಲಿರಿ; ಆದರೆ, ಆರೋಗ್ಯ ಕೆಟ್ಟಾಗ, ನೀವು ವಿಮೆಯ ರಕ್ಷಣೆಯನ್ನು ಪಡೆಯಲಾರಿರಿ — ನಡೆಯದ ನಾಣ್ಯದಂತೆ ನಿಮ್ಮ ಆಗಿನ ಸ್ಥಿತಿ.

ಕಾರಣ, ನೀವು ವಿಮೆ ಇಳಿಸುವುದನ್ನು ಮುಂದೊಡಲಾಗದು ಇಂದೇ ವಿಮೆ ಇಳಿಸಿ ನಿಮ್ಮ ಮತ್ತು ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ.

ದಿ ಕೆನರಾ ಮ್ಯೂಚುವಲ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೬

ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ.

The Canara Mutual Assurance Co. Ltd.

Head Office: **UDIPI**, S. INDIA.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ವಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಜಿ. ಐ. ಪಿ.) ಮುಂಬಯಿ, ೧೪

ರಾಜಾಜಿಯ ಧುರೀಣತೆಗೆ ಬೆಂಬಲ

ವಿಶ್ವಾಸಸೂಚಕ ಗೊತ್ತುವಳಿಯ ಸ್ವೀಕಾರ

ಚಾಣಕ್ಯ ಬುದ್ಧಿ

ಪರಿಸ್ಥಿತಿಯ ಒತ್ತಡವನ್ನನುಸರಿಸಿ ಕೆಲವೊಮ್ಮೆ ಸಂಪ್ರದಾಯಗಳನ್ನೂ ಪ್ರಚಲಿತ ರೂಢಿ ನಿಯಮಗಳನ್ನೂ ಕಡೆಗಣಿಸಿ ನಡೆದುಕೊಳ್ಳಬೇಕಾಗಿ ಬರುತ್ತದೆ. ಮದ್ರಾಸು ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟ ವಿಶ್ವಾಸ ಸೂಚನೆಯ ಠರಾವು ಇದಕ್ಕೊಂದು ನಿದರ್ಶನ. ರಾಜ್ಯದ ಈ ವರ್ಷದ ಮುಂಗಡ ಪತ್ರವನ್ನು ಸಾದರಗೊಳಿಸಿದ ಬೆನ್ನಿಗನೇ ಈ ವಿಶ್ವಾಸಸೂಚಕ ಗೊತ್ತುವಳಿಯನ್ನು ತಂದು, ಜನರಲ್ಲಿ ವಿಸ್ಮಯವನ್ನುಂಟುಮಾಡಲಾಯಿತು. ಇದರ ಉಚಿತಾನುಚಿತ ಪ್ರಶ್ನೆಗಳೇನಿದ್ದರೂ—ಈಗ ಎಲ್ಲವೂ ಒಳ್ಳೆಯದರಲ್ಲಿ ಕೊನೆಗೊಂಡುದರಿಂದ ಉದ್ವೇಗಕ್ಕೆಡೆಯಿಲ್ಲ. ನಾಲ್ಕು ದಿನಗಳಷ್ಟು ಸುದೀರ್ಘ ಸಮಯವನ್ನು ಇದರ ಮೇಲಿನ ಚರ್ಚೆಗೆ ಮೀಸಲಿಡಲಾಯಿತು. ಇಷ್ಟೂ ದಿನವೂ ವಿರೋಧಿ ಪಕ್ಷದ ಸದಸ್ಯರ ಭಾಷಣವೇ ನಡೆಯಿತು. ಕಾಂಗ್ರೆಸ್, ಅಥವಾ ಸರಕಾರದ ಕಡೆಯಿಂದ ಮಾತನಾಡಿದವರು ಇಬ್ಬರೇ: ಒಂದು, ಮುಖ್ಯ ಮಂತ್ರಿ ಶ್ರಿ ರಾಜಗೋಪಾಲಾಚಾರಿ ಮತ್ತು, ಎರಡನೆಯವರು, ಸಭಾ ಧುರೀಣರಾದ (ಅರ್ಥಸಚಿವ) ಶ್ರೀ ಸುಬ್ರಹ್ಮಣ್ಯಂ. ಕಾಂಗ್ರೆಸು ಸದಸ್ಯರು ತಾವಾಗಿ ಶ್ರೀ ರಾಜಗೋಪಾಲಾಚಾರಿಯವರ ಮುಖಂಡತ್ವವನ್ನು ಬಯಸಿ ಬಂದವರಾದುದರಿಂದ ಅವರಿಗೆ ವಿಶ್ವಾಸ ಸೂಚಿಸುವ ಪ್ರಶ್ನೆ ಇಲ್ಲ. ಸರಕಾರದೊಡನೆ ಒಳ್ಳೆಯ ವಿಷಯಗಳಲ್ಲಿಯೂ ಸಹಕಾರ ನೀಡದ ವಿರೋಧಿ ಗುಂಪಿನವರ ಮನದೊಲವನ್ನು ತಿಳಿಯಬೇಕೆಂಬುದೇ ರಾಜಾಜಿಯ ಮನದಿಚ್ಛೆಯಾಗಿತ್ತು. ನಾಲ್ಕು ದಿನಗಳ ಚರ್ಚೆಯಿಂದ ಕಮ್ಯೂನಿಸ್ಟ್, ಪ್ರಜಾಪಕ್ಷ ಮುಂತಾದ ವಿರೋಧಿಗುಂಪಿನ ನಿಜವಾದ ಇಚ್ಛೆಯೇನೆಂಬುದರ ಸ್ಪಷ್ಟ ಪರಿಚಯವು ಸರಕಾರಕ್ಕೆ ಆದಂತಾಯಿತು. ಇದೂ ಚಾಣಕ್ಯ ಬುದ್ಧಿಯ ದ್ಯೋತಕವೇ ಸೈ. ತಮ್ಮ ಪಕ್ಷದ ಸದಸ್ಯರಿಗೆ ಮಾತನಾಡಲು ಅವಕಾಶ ಕೊಡದೆ, ಕೇವಲ ವಿರೋಧಿ ಗುಂಪಿನವರ ಭಾಷಣಗಳನ್ನು ಏರ್ಪಡಿಸಿದ ಮೂಲಕ—ಕಮ್ಯೂನಿಸ್ಟರ ಬಾಯಿತಟಿಗೆ ಆಸ್ಪದ ದೊರೆಯಿತಾದರೂ, ಸರಕಾರದ ಅಂತರ್ಯವನ್ನು ಸದಸ್ಯರಲ್ಲಿ ಪ್ರತಿಯೊಬ್ಬರ ಮನಸ್ಸಿನ ಭಾವನೆಗಳನ್ನು, ಅವರು ತಿಳಿಯುವ ಸಂದರ್ಭ ತಪ್ಪಿತು. ಈ ಮಾತನ್ನು ಒಬ್ಬ ಕಮ್ಯುನಿಸ್ಟ ಸದಸ್ಯರು ಹೇಳಿ ಕೂಡ ತೋರಿಸಿದರು.

ಮನಸ್ಸಿನ ಉಮ್ಮಳ

ಶ್ರೀ ಸುಬ್ರಹ್ಮಣ್ಯಂ ಮಂಡಿಸಿದ ವಿಶ್ವಾಸ ಸೂಚನೆಯ ಠರಾವಿಗೆ ವಿರುದ್ಧವಾಗಿ ೧೫೧ ಮತಗಳೂ ಪರವಾಗಿ ೨೦೦ ಮತಗಳೂ ಬಿದ್ದು, ರಾಜಾಜಿಗೆ ಅಪೂರ್ವ ಬೆಂಬಲವಿದೆ ಎಂದು ಸಿದ್ಧಗೊಂಡಿತು- ಜೊತೆಗೆ ಮದ್ರಾಸು ರಾಜ್ಯದಲ್ಲಿ ಇಂದಿನ ವರೆಗಿದ್ದ ಅನಿಶ್ಚಿತ ಪರಿಸ್ಥಿತಿಯು ಇನ್ನು ಮುಕ್ತಾಯವಾಗುವುದೆಂಬುದಕ್ಕೆ ಇದು ಪ್ರಮಾಣವಾಯಿತು. ಕುಟಿಲೋಪಾಯಗಳಿಂದ ಕಾಂಗ್ರೆಸು ರಚಿಸಿದ ಸರಕಾರವನ್ನು ಉರುಳಿಸಿ, ತಾವು ಅಧಿಕಾರ ಸೂತ್ರ ವಹಿಸಬೇಕೆಂದು ಬಯಸಿದ ಪ್ರಜಾಸತ್ತಾತ್ಮಕ ಐಕ್ಯರಂಗದ ಮಟ್ಟಿಗೆ ವಿಶ್ವಾಸ ಸೂಚನೆಯ ಠರಾವು ಒಂದು ರಣಾಹ್ವಾನವಾಗಿತ್ತು. ಠರಾವನ್ನು ಮಂಡಿಸುವ ಮೊದಲು ರಾಜಗೋಪಾಲಾಚಾರಿ ಮಾಡಿದ ಚಿಕ್ಕ ಭಾಷಣದಲ್ಲಿ "ಈ ಸಭೆಯು ಸಂಪೂರ್ಣ ಸಹಕಾರವಿದೆ ಎಂದು ಸಿದ್ಧವಾಗದ ಹೊರತು, ನಾನಾಗಲೀ ನನ್ನ ಮಂತ್ರಿ ಮಂಡಳವಾಗಲೀ ಕೆಲಸ ಮುಂದುವರಿಸುವಂತಿಲ್ಲ. ಸರಕಾರದ ಉಪಕ್ರಮಗಳ ಒಳಿತು-ಕೆಡುಕುಗಳನ್ನು ಗಮನಿಸದೇ—ಪ್ರತಿಯೊಂದನ್ನು ವಿರೋಧಿಸುವ ಪ್ರವೃತ್ತಿ ನಶಿಸುವುದೆಂದು ನಾನು ಎಣಿಸುವುದಿಲ್ಲ. ಆದುದು, ಕೊಟ್ಟಾಯದ ಮತದಾನವು ನಾನು ಬೇಡವೆಂದು, ನನ್ನ ಸರಕಾರ ಬೇಡವೆಂದು ಸೂಚಿಸಿತು. ಆದರೆ, ಆರಿಸಿಕೊಟ್ಟಾಯದ ಮತದಾರರ ನಿರ್ಣಯ ಇಡೀ ರಾಜ್ಯದ ೬ ಕೋಟಿ ಜನತೆಯನ್ನು ಪ್ರತಿನಿಧೀಕರಿಸಲಾರದೆಂಬುದರಿಂದ—ನಿಮ್ಮೊಡನೆ ನೇರಾಗಿ ಪ್ರಶ್ನಿಸುತ್ತೇನೆ: ನಾನು ಅಧಿಕಾರದಲ್ಲಿ ಉಳಿಯಬೇಕೆ, ಬೇಡವೆ?" ರಾಜಾಜಿಯ ಮಾತು ಎಷ್ಟು ತಿಳಿಯಾಗಿ, ಮರ್ಮಭೇದಿಯಾಗಿತ್ತೆಂದರೆ, ಸದಸ್ಯರ ಅಂತರ್ಯವನ್ನು ಒಳಹೊಕ್ಕು ಪರೀಕ್ಷಿಸುವ ತೀಕ್ಷ್ಣತೆ ಆ ಶಬ್ದಗಳಲ್ಲಿತ್ತು. "ಈ ಗೊತ್ತುವಳಿಯ ಮಟ್ಟಿಗೆ ಕಾಂಗ್ರೆಸು ಸದಸ್ಯರು ತಮ್ಮ ಪಕ್ಷದ ಶಿಸ್ತನ್ನು ಪಾಲಿಸಬೇಕಾಗಿಲ್ಲ. ಎಲ್ಲರೂ ಅವರವರ ಮನಸ್ಸಿಗೆ ಬಂದಂತೆ, ದೇವರು ಬುದ್ಧಿಕೊಟ್ಟಂತೆ ಮತದಾನ ಮಾಡಬೇಕು" ಎಂದು ರಾಜಾಜಿ ಕೇಳಿಕೊಂಡುದರಲ್ಲಿ, ಅವರ ಮನಸ್ಸಿನ ನೋವು ಮತ್ತು ಉತ್ಕಂಠತೆಯನ್ನು ಕಾಣಬಹುದು.

ರಾಜಾಜಿಯ ವಿಜಯ

ಮಂತ್ರಿಮಂಡಲದ ಮೇಲೆ ಉಗ್ರಟೀಕೆ ನಡೆಸಿದವರು ಮುಖ್ಯವಾಗಿ ಪಾನ ಪ್ರತಿಬಂಧ ಧೋರಣೆ, ಅಧಿಕ ಕರಭಾರವನ್ನು ಹೇರುವುದು ಮುಂತಾದವುಗಳ ಕುರಿತು ತೀವ್ರ ಅಸಮಾಧಾನ ಸೂಚಿಸಿದರು. ಆಂಧ್ರ ಪ್ರಾಂತ ರಚನೆಯಲ್ಲಿ ಮದ್ರಾಸು ಸರಕಾರವು ಅನಾವಶ್ಯಕ ವಿಳಂಬವನ್ನುಂಟು ಮಾಡುತ್ತಿದೆ ಎಂದೂ ಆರೋಪಿಸಲಾಯಿತು. ಬಂಡವಾಳಗಾರರ ಹಾಗೂ ಭೂಮಾಲಿಕರ ಹಿತಾನುವರ್ತಿಯಾಗಿ ಸರಕಾರ ನಡೆಯುತ್ತಿದೆ ಎಂದು ದೂರಲಾಯಿತು. ವಿರೋಧಿಪಕ್ಷದವರೆಲ್ಲರೂ ಹೀಗೆ ಸರಕಾರವನ್ನು ದೂರಿದ್ದರೆಂದಲ್ಲ. ಕೃಷಿಕಲೋಕ ಪಕ್ಷ, ಮುಸ್ಲಿಂ ಲೀಗು ಇವು ಕಾಂಗ್ರೆಸ್ಸಿನ ಬೆಂಬಲಕ್ಕಿದ್ದುವು. "ದೇವರಲ್ಲಿ ನಂಬುಗೆ ಇಲ್ಲದ ಕಮ್ಯುನಿಸ್ಟರು ಅಧಿಕಾರಕ್ಕೆ ಎಂದೆಂದಿಗೂ ಬಾರದಂತಾಗಲಿ" ಎಂದು ಮುಸ್ಲಿಂ ಲೀಗು ಸದಸ್ಯರೊಬ್ಬರು ಹಾರೈಸಿದರು. ಸಮಾಜವಾದಿಗಳು ತಮಗೆ ಕಾಂಗ್ರೆಸು ಸರಕಾರದ ಧೋರಣೆ ಮೆಚ್ಚುಗೆಯಾಗಿಲ್ಲವೆಂದೂ, ಆದರೆ ಕಮ್ಯೂನಿಸ್ಟರೊಡನೆ ಕೂಡಿಕೊಳ್ಳುವುದು ಸಾಧ್ಯವಿಲ್ಲವೆಂದೂ ತಮ್ಮ ಪರಿಸ್ಥಿತಿ ವಿವರಿಸಿದರು. ವಿಶ್ವಾಸ ಸೂಚಕಗೊತ್ತುವಳಿಯ ವಿರುದ್ಧ ತಾವುಕೊಡುವ ಮತದಾನವು ಕಮ್ಯೂನಿಸ್ಟರ ಕಡೆಗಿನ ಒಲವಿನ ದ್ಯೋತಕವಲ್ಲ ಎಂದವರು ಸ್ಪಷ್ಟೀಕರಿಸಿದರು. ಚರ್ಚೆಗೆ ಮುಕ್ತಾಯ ಸ್ವರೂಪ ಕೊಡುತ್ತಾ ಮುಖ್ಯಮಂತ್ರಿ ರಾಜಗೋಪಾಲಾಚಾರಿ ಹೀಗೆ ಹೇಳಿದರು-"ನಾನು ಈ ಮೊದಲೇ ಮಾಡಿದ ಕೆಲಸಗಳಿಗಾಗಿ ನನ್ನಲ್ಲಿ ವಿಶ್ವಾಸ ಸೂಚಿಸಬೇಕೆಂದು ಈ ಗೊತ್ತುವಳಿಯನ್ನು ಸಭೆಯ ಮುಂದಿಡದೆ, ಇನ್ನು ನಡೆಸಬೇಕೆಂದಿರುವ ಕರ್ತವ್ಯಗಳಲ್ಲಿ ನಿಮ್ಮೆಲ್ಲರ ಸಹಕಾರ ಬೇಕೆಂದು ತನ್ಮೂಲಕ ಕೇಳಿಕೊಳ್ಳಲಾಗಿದೆ. ನಿಮಗೆ ನನ್ನ ಮೇಲೆ ವಿಶ್ವಾಸವಿದ್ದರೆ, ಆಗ ನಾನು ನಿಶ್ಚಿಂತೆಯಿಂದ ನನ್ನ ಕರ್ತವ್ಯವನ್ನೂ ಹೊಣೆಗಾರಿಕೆಯನ್ನೂ ನಿರ್ವಹಿಸಲು ಸಾಧ್ಯ. ಕಮ್ಯೂನಿಸ್ಟರು ಅಧಿಕಾರಕ್ಕೆ ಬರುವುದು ಗಂಡಾಂತರಪ್ರಾಯ. ದೇವರನ್ನು ಸ್ಮರಿಸಿ ಮತದಾನ ಮಾಡಿರಿ ಎಂದು ನಾನು ಬಿನ್ನವಿಸಿದಾಗ— ನಾನೇ ದೇವರೆಂದು ಕೊಳ್ಳುವ ಪಾಪಿಯಂತೆ ನಡೆದುಕೊಳ್ಳಲಿಲ್ಲ. ನಿಮ್ಮ ಆತ್ಮಸಾಕ್ಷಿಗೆ ಸರಿಯಾಗಿ ವರ್ತಿಸಿರಿ ಎಂಬುದೇ ನನ್ನ ಬಿನ್ನಹದ ಆಶಯ"

ಮುಂಗಡ ಪತ್ರದ ಚರ್ಚೆ

ಹೀಗೆ ಕೊನೆಯದಾಗಿ ಮದ್ರಾಸದ ಅನಪೇಕ್ಷಿತ ಗೊಂದಲವು ಮುಕ್ತಾಯಗೊಂಡುದರಿಂದ ನಮಗೆ ಸಂತೋಷವಾಗಬೇಕು. ಮುಂಗಡ ಪತ್ರದ ಚರ್ಚೆಯು ಇದೀಗ ಶಾಸನ ಸಭೆಯಲ್ಲಿ ತೊಡಗಿದೆ. ಸುಮಾರು 211 ಕೋಟಿ ರೂಪಾಯಿಗಳ ವರಮಾನವನ್ನು ತರುವ ಹೊಸ ತೆರಿಗೆಗಳಿರುವುದರಿಂದ, ಸ್ವಾಭಾವಿಕವಾಗಿ ವಿರೋಧೀ ಪಕ್ಷದ ಉಗ್ರಟೀಕೆಗೆ ಇಂಬು ದೊರೆತಿದೆ. ಕಾಂಗ್ರೆಸ್ ಸದಸ್ಯರಲ್ಲಿಯೂ ಕರಭಾರದ ಉಚಿತಾನುಚಿತತೆಗಳ ಬಗ್ಗೆ ಒಮ್ಮತವಿಲ್ಲ. ರಾಜಾಜಿ ಈ ನಡುವೆ ಒಂದು ಬುದ್ಧಿವಂತಿಕೆ ನಡೆಸಿದ್ದಾರೆ—ಕಾಂಗ್ರೆಸು ಪಕ್ಷದ ಸಭೆಯಲ್ಲಿ ಉಪಸ್ಥಿತರಿರಲು ಕೆಲವು ವಿರೋಧಿ ಪಕ್ಷಗಳ ಪ್ರತಿನಿಧಿಗಳಿಗೂ ಆಹ್ವಾನವನ್ನಿತ್ತು, ಹೊಸ ತೆರಿಗೆಗಳ ಕುರಿತು ಖಾಸಗಿ ಚರ್ಚೆಯನ್ನು ಮಾಡಿದರು. ರಾಜ್ಯದ ಇಂದಿನ ಪರಿಸ್ಥಿತಿಯಲ್ಲಿ ಕರಭಾರವನ್ನು ಹೇರುವುದು ಅನಿವಾರ್ಯವೆಂಬ ಸಂಗತಿಯನ್ನವರು ಬಿಂಬಿಸಿದರೆಂದು ವರದಿ. ಆದರೆ ಸದಸ್ಯರಲ್ಲಿ ಕೆಲವರು ಭೂಕಂದಾಯದ ಮೇಲೆ, ಸರ್ಚಾರ್ಜ ಹಾಗೂ ಬಸ್ಸು ಪ್ರಯಾಣಿಕರ ಮೇಲಿನ ತೆರಿಗೆಗಳ ಕುರಿತು ಅಸಮಾಧಾನ ಸೂಚಿಸಿದರು. ಎರಡನೆಯ ತೆರಿಗೆ ವಸೂಲಿ ಕ್ರಮವು ಬಹಳ ತ್ರಾಸದಾಯಕವಿದೆ. ಹಾಗೆಂದು ಇದರಿಂದ ಅರೆವಾಸಿಗೂ ಮಿಕ್ಕಿದ ಅಂಶ (ಸುಮಾರು ಎರಡು ಕೋಟಿ ರೂಪಾಯಿ) ವರಮಾನವಿದೆಯಾಗಿ, ಅದನ್ನು ಬಿಟ್ಟುಗೊಡುವ ಪ್ರಶ್ನೆಯೇ ಸರಕಾರಕ್ಕಿಲ್ಲ. ಈ ಸಂಚಿಕೆ ತಮ್ಮ ಕೈಸೇರುವಷ್ಟರಲ್ಲಿ ಈ ತೆರಿಗೆಗಳ ಬಗ್ಗೆ ಕೊನೆಯ ನಿರ್ಣಯವಾಗುವುದು.

ನಿಷ್ಠುರ ಶಬ್ದ ಪ್ರಯೋಗ

ಲೋಕಸಭೆಯಲ್ಲಿ ಸರಕಾರದ ಎಲ್ಲ ಹಣಕಾಸಿನ ಬೇಡಿಕೆಗಳೂ ಸ್ವೀಕೃತವಾಗಿ

ZANDU Mahayogaraja Guggula

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ 3/- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ
2 ಶ್ರೀ. ವಿ. ವಿ ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರ ಶರತ್ತು ವಗೈರೆಗಳಿಗೆ ಬರೆಯಿರಿ-

DAMODAR & CO.,
Nainiappa Naicken Street, Park Town–**MADRAS** 3.

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ
ಲೈಫ್ ಇನ್ಶ್ಯೂರೆನ್ಸ ಕಂಪೆನಿ ಲಿಮಿಟೆಡ್.
ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಜೀವನಾತಿ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರೀತಿ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.

ದಿ. ಬ್ರಾಂಚ್ ಮೆನೇಜರ್;
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ.

ವಿರೋಧಿಗಳಿಗೆ ನೆಹರೂರ ಕರೆ

ಬುದ್ಧಿಗೇಡಿತನಕ್ಕೆ ಸ್ಪಷ್ಟ ಎಚ್ಚರಿಕೆ

ವೆ. ಕಡಿತದ ಸೂಚನೆಗಳಲ್ಲಿ ಒಂದೂ ಅಂಗೀಕಾರ ಪಡೆಯದಿರುವುದು ವೈಶಿಷ್ಟ್ಯ. ಶಿಸ್ತಿನ ಬಹುಮತವನ್ನು ಕಾಂಗ್ರೆಸು ಪಕ್ಷವೇ ಕೇಂದ್ರದಲ್ಲಿ ಪಡೆದಿದೆಯಾಗಿ ಅಲ್ಲಿಯ ಕಾರ್ಯಭಾರ ಹೆಚ್ಚು ಸುಗಮವಾಗಿ ನಡೆಯುತ್ತಿದೆ, ಆದರೂ ಕವ ಮ್ಯುನಿಸ್ಟರ ಪ್ರಬಲ ವಿರೋಧ ಮಾತ್ರ ಮಾತಿಗೂ ಪುಟಿದೇಳುತ್ತಿದೆ. ಈ ಮಾತಿನ ಚಳವಳಿಯು ಹಣ ವಿನಿಯೋಗ ಮಸೂದೆಯ ಚರ್ಚಾ ಕಾಲದಲ್ಲಿ ಉಗ್ರ ಸ್ವರೂಪ ಪಡೆದು, ಪ್ರಧಾನಿ ನೆಹರೂರ ನಿಷ್ಠುರ ಶಬ್ದಗಳಿಂದ ವಿರೋಧಿಗಳನ್ನು ಬಾಯಿ ಮುಚ್ಚಿ ಕೂಡುವಂತೆ ಮಾಡುವ ಪರಿಸ್ಥಿತಿಯೊದಗಿತು "ವಿರೋಧಿ ಪಕ್ಷದ ಸದಸ್ಯರಲ್ಲಿ ಕಾಳ್ಗಿಚ್ಚ—ಸಹನೆಗಳು ಹೆಸರಿಗೂ ಇಲ್ಲ—ಹಾಗಿದ್ದರೂ, ಅವರು ವಿವೇಕದಿಂದ ನಡೆದುಕೊಳ್ಳಬಾರದೆ?" ಎಂದು ಕಟುವಾಗಿಯೇ ನೆಹರೂ ನುಡಿದರು. ಸತ್ಯ ಸಂಗತಿ ಏನೆಂಬುದನ್ನು ತಿಳಿದುಕೊಳ್ಳದೆ ಸುಳ್ಳನ್ನೆ ಸತ್ಯವೆಂದು ಪ್ರತಿಪಾದಿಸುವುದು ಸಂಯಮ ವಿರಹಿತ ಬುದ್ಧಿಗೇಡಿತನವಾಗುವುದೆಂದು ನೆಹರೂ ಎಚ್ಚರಿಕೆ ಕೊಟ್ಟರು. ಸರಕಾರವು ಯಾವುದೇ ವಿದೇಶದ ಒತ್ತಾಯಕ್ಕೆ ಅಥವಾ ಪ್ರಭಾವಕ್ಕೆ ಒಳಗಾಗಿ ನಡೆದುಕೊಂಡ ಒಂದಾದರೂ ಕಾರ್ಯವನ್ನು ತೋರಿಸಿಕೊಡಿರಿ ಎಂದು ಪ್ರಧಾನಿ ಆಹ್ವಾನವನ್ನು ಕೊಟ್ಟರು. ಇದಕ್ಕೆ ಸದಸ್ಯರು ಮರುಮಾತಿಲ್ಲದೆ ತೆಪ್ಪಗೆ ಕುಳಿತರು. ಸರಕಾರವು ಭಾರತದ ಜನತೆಗೆ ಮೋಸ ಮಾಡಿ, ಮತ್ತು ಸಾರ್ವಭೌಮಾಧಿಕಾರವಿರುವ ಈ ಸಭೆಯ ತಿಳುವಳಿಕೆಗೆ ಬಾರದಂತೆ, ಹೊರದೇಶಗಳೊಡನೆ ರಹಸ್ಯ ಒಪ್ಪಂದ ಮಾಡಿಕೊಂಡಿಲ್ಲ. ಹಾಗೆ ಮಾಡಿದ್ದಾದರೆ—ಈ ಸರಕಾರ ಅಸ್ತಿತ್ವದಲ್ಲಿರಲು ತಕ್ಕುದಲ್ಲ ಎಂದು ನೆಹರೂ ಸಾರಿದರು. ಹೊಸತಾಗಿ ಸಂಘಟಿಸಬೇಕಾಗಿರುವ ಭಾರತ ಸೇವಕ ಸಮಾಜವು ಕಾಂಗ್ರೆಸ ಪ್ರಚಾರದ ಸಂಘವಲ್ಲವೆ—ಸಮಗ್ರ ದೇಶದಲ್ಲಿ ನವ್ಯ ಸ್ಫೂರ್ತಿಯನ್ನುಂಟು ಮಾಡುವ, ಪಂಚವಾರ್ಷಿಕ ಯೋಜನೆಯ ಕಡೆಗೆ ಜನರ ಚಿತ್ತವನ್ನಾಕರ್ಷಿಸುವ ಮಹಾ ಉದ್ಯಮವೆಂದು ನೆಹರೂ ಸ್ಪಷ್ಟಪಡಿಸಿದರು. ಸರಕಾರದ ಎಲ್ಲ ಕಾರ್ಯಗಳಲ್ಲಿಯೂ ಜನರ—ಹಾಗೂ ಮಾನ್ಯ ಸದಸ್ಯರೆಲ್ಲರ ರಚನಾತ್ಮಕ ಸಹಕಾರ ಅತ್ಯಗತ್ಯವೆಂದೂ ನೆಹರೂ ಮರಳಿ ಮರಳಿ ಒತ್ತಿ ಹೇಳಿದರು.

ಸದಸ್ಯರ ಕರ್ತವ್ಯ

ಪ್ರಧಾನಿ ನೆಹರೂರ ಈ ಹೇಳಿಕೆಯು ಸಾಮಾನ್ಯ ಜನವರಿಗೆ ಸ್ಫೂರ್ತಿಪ್ರದವೂ ಉತ್ಸಾಹಜನಕವೂ ಆಗದೆ ಎನ್ನಬಹುದು. ಕಮ್ಯೂನಿಸ್ಟರಾದಿಯಾಗಿ ಕೆಲವರು ಮಾಡುವ ಆರೋಪಗಳು ಹುರುಳಿಲ್ಲದವು. ಅವುಗಳ ಮೂಲದಲ್ಲಿ ದುರುದ್ದೇಶವಿದೆ—ಜನರಲ್ಲಿ ಗೊಂದಲ ಮತ್ತು ಕಳವಳವನ್ನು ಹಬ್ಬಿಸುವುದೇ, ಅರಾಜಕತೆ ನೆಲೆಗೊಳ್ಳುವಂತೆ ನೋಡುವುದೇ ವಿರೋಧಿ ಗುಂಪಿನ ಚಟುವಟಿಕೆಯಾಗಿ ಪರಿಣಮಿಸಿದೆ. ಕಾರಣ—ಏನಾದರೊಂದು ರೀತಿಯಲ್ಲಿ ಸರಕಾರವನ್ನು ಟೀಕಿಸುವುದು ಅವರ ಸಾಮಾನ್ಯ ಕಾರ್ಯವಾಗಿದೆ. ಆಂಗ್ಲೋ-ಅಮೆರಿಕನ್ ಬಣದವರೆಂದು ಕಾಂಗ್ರೆಸನ್ನು ದೂರುವುದು ನಿತ್ಯದ ಪ್ರಸಂಗ. ಆದರೆ ಇದಕ್ಕೇನು ಸಾಕ್ಷ್ಯ ಒದಗಿಸಬಲ್ಲಿರಿ ಎಂದು ಬಹಿರಂಗವಾಗಿ ಕೇಳಿದಾಗ—ಮಾನ್ಯ ಸದಸ್ಯರು ಮೌನವ್ರತ ತೈಗೊಳ್ಳುವರು. ಇದು ಅವರ ಮಾತು ಅಸತ್ಯ ಪ್ರೇರಿತವೆಂಬುದನ್ನು ಸಿದ್ಧಪಡಿಸುವುದು. ಸರಕಾರದ ಒಳ್ಳೆಯ ಹಾಗೂ ಕೆಟ್ಟ ಕೆಲಸಗಳ ಅಂತರವನ್ನು ಜ್ಞಾನವಿಲ್ಲದೆ ಮಾಡುವ ಟೀಕೆಗಳು ಬೆಲೆ ಇಲ್ಲದಾಗುವುವು. ಸರಕಾರವು ಎಲ್ಲ ಕಡೆ ಸರಿಯಾಗಿಯೇ ನಡೆದುಕೊಳ್ಳುತ್ತಿದೆ ಎಂದು ಯಾರೂ ಹೇಳುವಂತಿಲ್ಲ. ಉದಾಹರಣೆಗೆ ನದಿ ಯೋಜನೆಗಳಲ್ಲಿ ಉಂಟಾದ ಅವ್ಯವಸ್ಥೆ ಮತ್ತು ಮತ್ತು ದುಂದುಗಾರಿಕೆಯನ್ನು ಲೋಕ ಸಭೆಯಲ್ಲಿ ಸಕಾಲದಲ್ಲಿ ಟೀಕಿಸಿದುದರಿಂದ ಸಾರ್ವಜನಿಕ ಹಣದ ದುರುಪಯೋಗವು ನಿಂತು, ಒಳ್ಳೆ ಶಿಸ್ತುಬದ್ಧವಾದ ವ್ಯವಸ್ಥೆ ನೆಲೆಗೊಳ್ಳಲಿಕ್ಕೆ ಆಸ್ಪದವುಂಟಾಯಿತು. ಹಿರಾಕುಡ ಯೋಜನೆಯಲ್ಲಿ ಕರ್ತವ್ಯ ವಿಮುಖನಾದನೆಂಬುದಕ್ಕಾಗಿ ಮುಖ್ಯ ಇಂಜಿನಿಯರನನ್ನು ಹಿಂಬಡತಿ ಮಾಡಿ—ಬೇರೆ ದಕ್ಷರಾದ ಅಧಿಕಾರಿಗಳನ್ನು ಅಲ್ಲಿ ನೇಮಿಸಲಾಗಿದೆ. ದಾಮೋದರ ಕೊಳ್ಳದ ಯೋಜನೆಯು ವ್ಯವಸ್ಥಿತವಾಗಿ ಮುನ್ನಡೆಯುತ್ತಿದೆ. ಇತರ ಎಲ್ಲ ಅಣೆಕಟ್ಟು ಹಾಗೂ ಜಲ ವಿದ್ಯುತ್ತಿನ ಯೋಜನೆಗಳು ಸುಸೂತ್ರವಾಗಿ, ಮೊದಲೇ ಸಿದ್ಧಗೊಳಿಸಿದ ಕಾರ್ಯಕ್ರಮದಂತೆ ಮುಂದರಿಯುತ್ತಿದೆಯಾಗಿ ಮಂತ್ರಿ ಶ್ರೀ ಗುಲಜಾರಿಲಾಲ ನಂದಾ ತಿಳಿಸಿದರು.

ಅನಪೇಕ್ಷಿತ ಉಪೇಕ್ಷೆ

ಆರೋಗ್ಯ ಖಾತೆಯ ಬೇಡಿಕೆಯ ಕಾಲದಲ್ಲಿ ಸರಕಾರದ ಕಡೆಗೆ ಸದಸ್ಯರಿಂದ ಉತ್ತಮವಾದ ಹಲವು ಸೂಚನೆಗಳು ಬಂದುವು. ಇವುಗಳು ವಿಚಾರಣೀಯವಿದ್ದುವು. ಆದರೆ ಮಂತ್ರಿ, ರಾಜಕುಮಾರಿ ಅಮೃತ ಕೌರರು ಈ ಕಡೆ ಲಕ್ಷ್ಯವನ್ನೇ ಪೂರೈಸಲಿಲ್ಲ. ಇದು ಸರಿ ಎಂದು ಹೇಳುವುದು ಕಷ್ಟ. ಹಳ್ಳಿಗಳಲ್ಲಿ ವೈದ್ಯಕೀಯ ಸಹಾಯದ ಅಗತ್ಯ ಬಹಳಷ್ಟಿದೆ ಎಂದೂ—ಆಯುರ್ವೇದ ಮುಂತಾದ ಸರಳ ಔಷಧಿ ಕ್ರಮಗಳ ಬಗ್ಗೆ ಯೋಗ್ಯ ಸಂಶೋಧನೆ ನಡೆಯಬೇಕೆಂದೂ ಸದಸ್ಯರು ಸೂಚಿಸಿದರು. ಇದು ನಿಜಕ್ಕೂ ಮಹತ್ವದ ಸಂಗತಿ. ಹಳ್ಳಿಗಳ ಪುನರ್ನಿರ್ಮಾಣದ ಪ್ರತಿಯೊಂದು ಚಳುವಳಿಯಲ್ಲಿ ಆರೋಗ ಹಾಗೂ ನೈರ್ಮಲ್ಯ ರಕ್ಷಣೆಯ ಕಡೆಗೆ ವಿಶಿಷ್ಟ ಗಮನ ಕೊಡಲಾಗುವುದು ನಮಗೆಲ್ಲರಿಗೂ ವಿದಿತವಿದೆ. ಪೇಟೆಯ ದೊಡ್ಡ ದೊಡ್ಡ ಡಾಕ್ಟರರು ಔಷಧೋಪಚಾರವು ಹಳ್ಳಿಯ ಜನರಿಗೆ ಲಭ್ಯವಿರುವುದಿಲ್ಲ. ಡಿಗ್ರಿ ಪಡೆದ ಡಾಕ್ಟರರು ಅಂರೂಪಾಯಿ ಸಂಬಳದ ಮೇಲೆ ಗ್ರಾಮಗಳಿಗೆ ಹೋಗಿ ನೆಲಸಿರಲು ಕೇಳುವುದಿಲ್ಲವೆಂದು ಸರಕಾರವೇ ಒಪ್ಪುತ್ತಿದೆ. ಇಂಥದರಲ್ಲಿ ಸುಲಭ ಔಷಧಿಗಳನ್ನು ಕೊಟ್ಟು, ಜನರ ಆರೋಗ್ಯ ರಕ್ಷಣೆಗೆ ನೆರವಾಗುವ ಆಯುರ್ವೇದಾಭ್ಯಾಸಿಗಳಾದ ವೈದ್ಯರಿಗೆ ತಕ್ಕ ಪ್ರೋತ್ಸಾಹ ದೊರೆಯಬೇಕಾದುದು ಅಗತ್ಯ. ಇದರಂತೆ ವೈದ್ಯಕೀಯ ಶಿಕ್ಷಣವನ್ನು ವಿಸ್ತರಿಸಲು ಸರಕಾರಕ್ಕೆ ಸಾಧ್ಯವಿಲ್ಲದಿದ್ದಲ್ಲಿ—ಖಾಸಗಿ ಸಂಸ್ಥೆಗಳು ಈ ವಿಷಯ ಆಸಕ್ತಿ ತೋರುವಂತೆ ಯೋಗ್ಯ ವಾತಾವರಣ ಕಲ್ಪಿಸಬೇಕೆಂಬ ಸೂಚನೆಯೂ ಗಮನಾರ್ಹವಿದೆ. ಉಡುಪಿಯಲ್ಲಿ ಒಂದು ವೈದ್ಯಕೀಯ ಕಾಲೇಜ ತೆರೆಯುವ ಯೋಜನೆಯನ್ನು ಇಲ್ಲಿಯ ಗಣ್ಯ ಮಹನೀಯರಾದ ಡಾ. ಟಿ. ಮಾಧವ ಪೈಯವರು ತಯಾರಿಸಿದಂತೆ—ದೇಶದ ಉಳಿದ ಕಡೆಯೂ ಇಂಥ ಪ್ರಯತ್ನಗಳು ನಡೆಯಲು ಆಸ್ಪದವಿದೆ. ಇದಕ್ಕೆಲ್ಲ ಸರಕಾರದ ನೆರವಿನ ಕೈ ಬೇಕು. ಅದನ್ನು ಧಾರಾಳವಾಗಿ ಕೊಡುವುದನ್ನು ಬಿಟ್ಟು—ಸಂಚಾರಿ ಕಾರ್ಯಕ್ರಮಗಳನ್ನಿಟ್ಟುಕೊಂಡ ವಾಹನಗಳ ಮೂಲಕ ಹಳ್ಳಿಗರಿಗೆ ವೈದ್ಯಕೀಯ ನೆರವನ್ನೀಯಲಾಗುವುದು ಎಂದು ಮಂತ್ರಿಗಳು ಹೇಳಿದುದು ವ್ಯವಹಾರ್ಯವೆನಿಸದು. ಸಾರಿಗೆ ಸೌಕರ್ಯಗಳ ತೀವ್ರ ಕೊರತೆ ಇರುವಾಗ, ಈ ವಾಹನಗಳ ಓಡಾಟಕ್ಕೆ ಧಾರಾಳವಾದ ಅವಕಾಶವಿದೆಯೆ? ಎಂಬ ಮೂಲಭೂತ ಪ್ರಶ್ನೆಗೆ ನಕಾರಾತ್ಮಕ ಉತ್ತರವೇ ಸಿಗುವುದು.

ಭದ್ರ ಆರ್ಥಿಕ ಪರಿಸ್ಥಿತಿ

ಹೀಗೆ ಸರಕಾರದ ಸಾಧನೆಗಳ ಜೊತೆಗೆ ಕೊರತೆಗಳನ್ನೂ ತೂಗಿ ನೋಡಬೇಕಾದುದು ನಮ್ಮ ಕರ್ತವ್ಯ. ಕೇಂದ್ರ ಸರಕಾರವು ಹಣಕಾಸಿನ ಕ್ಷೇತ್ರದಲ್ಲಿ ಬಹಳ ಗಟ್ಟಿಮುಟ್ಟಾದ ಪಂಚಾಂಗವನ್ನೆ ಹಾಕಿದೆ ಎಂದ ಶ್ರೀ ದೇಶಮುಖರ ಹೇಳಿಕೆಯಿಂದ ಗೊತ್ತಾಗುವುದು. ಆಸ್ಸಿದೆ ರಾಜ್ಯ ಸರಕಾರಗಳು ಯಾವಾಗಲೂ ದ್ರವ್ಯಾಭಾವವನ್ನು ಅನುಭವಿಸುತ್ತಿದ್ದು, ಸಹಾಯಕ್ಕಾಗಿ ಕೇಂದ್ರದ ಮುಖ ನೋಡುತ್ತಿರುವುವು. ಇವನ್ನು ತಪ್ಪಿಸಲೆಂಬಂತೆ, ಕೆಲವು ಆದಾಯಗಳ ಪಾಲನ್ನು ರಾಜ್ಯ ಸರಕಾರಗಳಿಗೆ ವರ್ಗಾಯಿಸಲು ಹಣಕಾಸಿನ ಆಯೋಗ ಸೂಚಿಸಿದರೆ, ಅದನ್ನು ಮಾನ್ಯ ಮಾಡಬಹುದು ಎಂಬ ಸಂಗತಿಯಿಂದ ಆಗ ಎಡೆ ದೊರೆತಿದೆ. ವಿವಿಧ ಯೋಜನೆಗಳಿಗೆ ಹಾಕಿದ ದುಡ್ಡು ವ್ಯರ್ಥವಲ್ಲ—ಯೋಜನಾ ಆಯೋಗದವರು ನಿರೀಕ್ಷಿಸಿದಷ್ಟು ಆದಾಯ ಒಡನೆ ಕೆಂದು ಈಗಲೇ ಹೇಳಲು ಬಾರದಿದ್ದರೂ, ಮುಳುಗಿಯೇ ಹೋಗದು ಎಂದು ನಂಬಲಾಗಿದೆ.

THE CATHOLIC BANK, LTD, UDIPI BRANCH.

ದಿ ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್, ಉಡುಪಿ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣ್ಸಿದ ಮಹನೀಯರು ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಆಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಆದಕ್ಕಾಗುವ ಈ ತನಕದ ಬಡ್ಡಿಯನ್ನಾಗಲೀ ಕೊಡದೆ ಇರುವುದರಿಂದಲೂ ಅಲ್ಲದೆ ಕ್ರಮವಾದ ರಜಿಸ್ಟ್ರಿ ನೋಟಿಸು ಬಿಟ್ಟರೂ ಕೂಡಾ, ಕೆಲವರು ಊರಿನಲ್ಲಿ ಇಲ್ಲವೆಂತ ವಾಪಾಸು ಬಂದಿರುವುದರಿಂದಲೂ, ಇನ್ನಿತರರು ಪಡಕೊಂಡು, ಕೊಟ್ಟ ವಾಯಿದೆಗೆ ಬಿಡಿಸಿಕೊಳ್ಳದೆ ಇರುವುದರಿಂದಲೂ ಸದರಿಯವರಿಗೆ ಮತ್ತು ಅವರ ವಾರೀಸುದಾರರಿಗೆ ಸದರಿಯವರ ನಗಗಳನ್ನು, ಇದೇ ತಿಂಗಳ ತಾರೀಕು 19 7-1952ನೇ ಶನಿವಾರ ಗಂಟೆ 3 P, M.ಕ್ಕೆ ಯೂ, ಬ್ಯಾಂಕಿಗೆ ಯುಕ್ತಕಂಡ ಇನ್ನಿತರ ದಿನಗಳಲ್ಲಿ ಪುನಹಾ ನೋಟಿಸು ಕೊಡದೇನೇ ಬ್ಯಾಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದೆಂಬುದನ್ನು ತಿಳಿಸೋಣವಾಗಿಯದೆ.

J L No	ಹೆಸರು ಮತ್ತು ವಿಳಾಸ.	ಅಸಲು ಮೊಬಲಗು
26/2405	W. A. ಸಂಚೀತ, L D. ಸಂಚೀತರ ಮಗ, ಮಿಶ್ಶನ್ ಕಂಪೌಂಡ್ ಉಡ್ಪಿ	115 0 0
27/ 851	K. ಸಂಜೀವ ಹೆಗ್ಡೆ, ಶೇಷ ಹೆಗ್ಡೆಯವರ ಅಳಿಯ, ಪಟೇಲ್, ಕುಕ್ಕೆಹಳ್ಳಿ ಪೆರ್ಡೂರು ಪೋಸ್ಟ್	190 0 0
27/1098	—Do—	[illegible]25 0 0
27/ 897	B ರಘುರಾಮ್ ಸೆಟ್ಟಿ, ಪದ್ಮ ಸೆಟ್ರ ಮಗ, ವಾರಂಬಳ್ಳಿಗ್ರಾಮ, ನಾಲಿಕೆರೆ ಪೋಸ್ಟ್	100 0 0
27/1334	—Do—	100 0 0
27, 874	ಅಬ್ದುಲ್ ಖಾದರ್, ಉಸ್ಮಾನ್ ಸಾಹೇಬರ ಮಗ, ಸಂತೆಕಟ್ಟೆ ಉಡುಪಿ	30 0 0
27/1827	K ರಘುನಾಥ K. ಬಾಲಯ್ಯರ ಮಗ, ಕೋರ್ಟ ರಸ್ತೆ ಉಡುಪಿ	100 0 0
27 1916	—Do—	85 0 0
27,1911	ಲಾಜರ್ ಜತ್ತನ್ನ, ಫಿಲೆಮೊನ್ ಜತ್ತನ್ನರ ಮಗ, ಮೂಡುಬೆಟ್ಟು ಕಟಪಾಡಿ ಪೋಸ್ಟ್	155 0 0
27/1467	ಲುವಿಸ್ ಮಥಾಯಸ್, ಸಾವೇರ್ ಮಥಾಯಸರ ಮಗ, ಮೂಡುಬೆಳ್ಳೆ ಪೋಸ್ಟ್.	65 0 0
27/1951	ಮಾರ್ಕಸ್ ಮಥಾಯಸ್, ಸಾವೇರ್ ಮಥಾಯಸರ ಮಗ, ಮೂಡುಬೆಳ್ಳೆ ಪೋಸ್ಟ್	175 0 0
27/1961	A. ವಿಠಲ ಹೆಗ್ಡೆ, ಮೊನಪ್ಪ ಹೆಗ್ಡೆಯವರ ಅಳಿಯ, ಹಿರಿಯಡ್ಕ ಪೋಸ್ಟ್	85 0 0
27/1432	ಡಾವಿದ್ ಡಿ'ಸೋಜ, ಲೊರೆನ್ಸ್ ಡಿ'ಸೋಜರ ಮಗ, ಶಿವಳ್ಳಿ, ಶಿಂಬ್ರ, ಕಲ್ಯಾನ್‌ಪುರ ಪೋಸ್ಟ್	110 0 0
27/2054	ಪೆಲಿಕ್ಸ್ ಡಿ'ಸೋಜ, ಅಂತೋನ್ ಡಿ'ಸೋಜರ ಮಗ, ಕೊಡವೂರು ತೊಟ್ಟಮ್ ಪೋಸ್ಟ್	210 0 0
28/ 194	K. ನಾರಾಯಣ ಸೆಟ್ಟಿ, M. ದೇರಪ್ಪ ಸೆಟ್ಟಿ ಮಗ, ಕೊಂಚಾಡಿಬೆಟ್ಟು, ಉಡ್ಪಿ ಪೋಸ್ಟ್	200 0 0
28/ 256	ಲಕ್ಷ್ಮೀನಾರಾಯಣ ಹೆಗ್ಡೆ, ಬುಜಂಗ ಹೆಗ್ಡೆಯವರ ಅಳಿಯ, ಕುಕ್ಕೆಹಳ್ಳಿ, ಪೆರ್ಡೂರು ಪೋಸ್ಟ್	120 0 0
27/1311	ಬುಜಂಗ R. ಸೆಟ್ಟಿ ಶೀನಪ್ಪ ಸೆಟ್ಟಿ ಅಳಿಯ C/o H. ನಾಗಪ್ಪ ಸೆಟ್ಟಿ, ಬ್ರಹ್ಮಾವರ ಪೋಸ್ಟ್	180 0 0

Office of the Catholic Bank Ltd., UDIPI. } (Sd.) **V. J Andrade.** Agent at Udipi.

THE CANARA BANKING CORPORATION LIMITED.
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್, ಲಿಮಿಟೆಡ್
ಸ್ಥಾಪನೆ : 1906. : : ಪ್ರಧಾನ ಕಾರ್ಯಾಲಯ: ಉಡುಪಿ, (ದ.ಕ.)
ವಿಶೇಷ ಸವಲತ್ತುಗಳಿದ್ದು, ಸಾಲಿಯಾನ್ ಶೇಕಡಾ 4 ರಂತೆ ಬಡ್ಡಿ ಗಳಿಸುವ ನಮ್ಮ
"ಪಂಚವಾರ್ಷಿಕ ಸುವರ್ಣ ಠೇವಣಾತಿಗಳ"
ಮೇಲೆ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.
ವಿಶೇಷ ಮಾಹಿತಿಗೆ, ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ
ಸಿ. ಆರ್. ಕಾಮತ್, ಬಿ. ಎ; ಎಲ್ ಎಲ್, ಬಿ;
ಜನರಲ್ ಮೆನೇಜರ್.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೧೦-೭-'೪೧

ವೈದ್ಯಕೀಯ ಸೌಲಭ್ಯ

ಹಳ್ಳಿಯ ಆರೋಗ್ಯದ ಕುರಿತು ಎಷ್ಟು ಗಮನವನ್ನು ಹೊರೈಸಿದರೂ ಕಡಿಮೆ ಎಂಬುದನ್ನು ಎಲ್ಲರೂ ಒಪ್ಪುವರು. ಭಾರತದಲ್ಲಿ ರೋಗರುಜಿನಗಳ ಹಾವಳಿಯು ಕಲ್ಪನಾತೀತ ಪ್ರಮಾಣದಲ್ಲಿದೆ ಎಂದು ಇಲ್ಲಿ ನಡೆಸಿದ ಸಂಶೋಧನಾ ವರದಿಗಳಿಂದ ಗೊತ್ತಾಗುವುದು. ಬಡತನ ಮತ್ತು ಅಜ್ಞಾನಗಳು ರೋಗದ ಹಾವಳಿಗೆ ಜನರನ್ನು ಗುರಿಯಾಗಿಸುವ ಕಾರಣಗಳಾಗಿವೆ ಎಂಬುದೂ ಸ್ವತಃಸಿದ್ಧ. ಇಂಥದರಲ್ಲಿ ಬಲಿಷ್ಠವಾದ ಜನಾಂಗವನ್ನು ನಿರ್ಮಿಸಿ, ರಾಷ್ಟ್ರಾಭ್ಯುದಯವನ್ನು ಸಾಧಿಸಬೇಕೆಂಬ ಮಹತ್ವಾಕಾಂಕ್ಷೆಗೆ ಅವಕಾಶವಿದೆಯೆ ಎಂಬುದು ಸಂಶಯದ ಪ್ರಶ್ನೆ. ನಮ್ಮಲ್ಲಿನ ಶಿಶು ಮರಣಗಳ ಹಾಗೂ ತಾಯಂದಿರ ಮೃತ್ಯು ಸಂಖ್ಯೆಯು ಅಪಾಯಕರ ಪ್ರಮಾಣವನ್ನು ಮುಟ್ಟಿದೆ. ಕ್ಷಯರೋಗ ಕುಷ್ಠರೋಗ, ಮತ್ತು ಮಲೇರಿಯಾದಂಥ ಅತಿಸಾಮಾನ್ಯ ಪಿಡುಗಿಗೆ ಬಲಿಗೊಂಡು ಸಾಯುವ ಜನರು ಲಕ್ಷಗಟ್ಟಳೆ ಇದ್ದಾರೆ. ಇದೇ ಸ್ಥಿತಿ ಹೆಚ್ಚು ಸಮಯ ಮುಂದುವರಿಯುವುದು ಹಿತವಲ್ಲವೆಂಬುದನ್ನು ಎಲ್ಲರೂ ಒಪ್ಪುವರು. ಸ್ವಾತಂತ್ರ್ಯಾಂದೋಲನವನ್ನು ಕಾಂಗ್ರೆಸು ಹೂಡಿದ ಆರಂಭದಲ್ಲಿ ಹಳ್ಳಿಯ ಆರೋಗ್ಯದ ಕಡೆಗೆ ಸರಕಾರವು ಅತಿ ಹೆಚ್ಚಿನ ಗಮನಕೊಡುವಂತೆ ನೋಡಬೇಕಾಗುವುದೇ ದಿಕ್ಕು. ಈಗಲೂ ಈ ವಚನಗಳಿಗೆ ಸರಕಾರ ಬದ್ಧವಿದೆ. ಆದರ ಕಾರ್ಯಾಚರಣೆಯಲ್ಲಿ—ಮುಖ್ಯವಾಗಿ ಜನರಿಗೆ ಉಪಕಾರವಾಗುವಂಥ ಹಾಗೂ ಜನರ ತೊಂದರೆಗಳನ್ನು ಪರಿಹರಿಸುವಂಥ ಉಪಕ್ರಮಗಳಲ್ಲಿ, ಸರಕಾರಕ್ಕೆ ತೋರಿಬರುವುದು ಹಣದ ಕೊರತೆಯೊಂದೇ. ಇತರ ಆವಶ್ಯಕತೆಗಳು ಬಹಳಷ್ಟು ಬಲಿತಿರುವುದರಿಂದ, ಶಿಕ್ಷಣ, ಆರೋಗ್ಯದಂಥ ನಿಧಾನವಾಗಿ ಫಲಕೊಡುವ ಉದ್ಯಮಗಳ ಕಡೆಗೆ ಸರಕಾರವು ತಕ್ಷಣ ಲಕ್ಷ್ಯ ಪೂರೈಸಲು ಹಿಂಜರಿಯುತ್ತಿದೆ. ಲಕ್ಷಾಂತರ ಹಳ್ಳಿಗಳ ವೈದ್ಯಕೀಯ ಸೌಲಭ್ಯವನ್ನು ಒದಗಿಸುವಷ್ಟು ಧರ್ಮಾರ್ಥ ಚಿಕಿತ್ಸೆಗಳು ನಡೆಯುವಂತೆ ಏರ್ಪಾಡು ಮಾಡಬೇಕಾದುದು ಸರಕಾರದ ಬಯಕೆ ಇದ್ದರೂ—ಹಣಕಾಸಿನ ಪ್ರಶ್ನೆಯನ್ನು ಬಗೆಹರಿಸಲು ಅಸಮರ್ಥವಾಗಿ, ಸರಕಾರ ನಿರುಪಾಯವೆನಿಸಿದೆ. ಹಳ್ಳಿಗಳಲ್ಲಿ ಈಗಿರುವ ಆಸ್ಪತ್ರೆಗಳನ್ನು ಯೋಗ್ಯರೀತಿಯಲ್ಲಿಟ್ಟುಕೊಂಡು, ಉಚಿತವಾದ ಚಿಕಿತ್ಸೆಯನ್ನು ಪೂರೈಸುವುದಕ್ಕೂ ಸರಕಾರವು ಬಹಳ ಕಷ್ಟಗಳನ್ನು ಎದುರಿಸಬೇಕಾಗಿದೆ. ಮುಖ್ಯವಾಗಿ ಡಾಕ್ಟರ್ ಡಿಗ್ರಿ ಪಡೆದ ಜನರು ಹಳ್ಳಿಗಳಲ್ಲಿ ಅಲ್ಪವೇತನಕ್ಕೆ ಕೆಲಸಕ್ಕಿರಲು ಒಡಂಬಡುವುದಿಲ್ಲ. ಹಳ್ಳಿಯ ಜನರಲ್ಲಿ ದುಡ್ಡಿನ ದಾರಿದ್ರ್ಯವಿರುವುದೂ, ತಿಳುವಳಿಕೆಯ ಕೊರತೆ ಇರುವುದೂ, ಡಾಕ್ಟರು ಜನರ ಉತ್ಸಾಹವನ್ನು ಕುಂಠಿತಗೊಳಿಸುತ್ತಿದೆ. ಪೇಟೆಯ ವಿಪುಲ ಸಂಪಾದನೆಯು ಹಳ್ಳಿಯಲ್ಲಿ ಎಂದಿಗೂ ಲಭ್ಯವಿಲ್ಲವೆಂಬ ಕಾರಣದಿಂದ ವೈದ್ಯಕೀಯಾಭ್ಯಾಸವನ್ನು ಬಹಳ ಖರ್ಚುವೆಚ್ಚದಿಂದ ಮುಗಿಸಿ ಬಂದವರು ನಗರಗಳಲ್ಲಿಯೇ ನೆಲೆಯೂರುತ್ತಾರೆ. ಹೀಗೆ—ಹಳ್ಳಿಯ ಆರೋಗ್ಯವನ್ನು ರಕ್ಷಿಸಬೇಕೆಂಬ ಪ್ರಾಮಾಣಿಕ ಮನಸ್ಸಾಗಲೀ, ಜನರಲ್ಲಿ ಆರೋಗ್ಯ ಜಾಗ್ರತಿಯನ್ನು ಉಂಟುಮಾಡುವ ಬಗ್ಗೆ ಚಳುವಳಿಯನ್ನು ತೊಡಗಬೇಕೆಂಬ ರಚನಾತ್ಮಕ ವಿಚಾರವಾಗಲೀ—ಜನರಿಗೆ ಇನ್ನೂ ಬಂದಿರುವುದಿಲ್ಲ. ವಿಜ್ಞಾನದ ನವ್ಯ ಸಂಶೋಧನೆಗಳ ಪ್ರಯೋಜನವು ಪೇಟೆಗಷ್ಟೇ ಸೀಮಿತವಾಗಿದೆ. ಇಂಥದರಲ್ಲಿ- ಹಳ್ಳಿಯ ರೈತರಿಗೆ ಆಪತ್ತಿಗಾಗುವ ಜನರು ಅಲ್ಲಿ ನೆಲಸಿರುವ ಆಯುರ್ವೇದ ಪಂಡಿತರೇ ಸೈ. ಅವರು ವಂಶಪರಂಪರಾಗತವಾಗಿ ಅಥವಾ ಇನ್ನೊಬ್ಬ ವೈದ್ಯರಲ್ಲಿ ಕಲಿತು ಬಂದು ಈ ಉದ್ಯೋಗವನ್ನು ಕೈಗೊಂಡಿರುವರು. ಯಾವ ತರದ ಪ್ರಶಸ್ತಿ ಪತ್ರಗಳಿಲ್ಲದಿದ್ದರೂ—ಬಡ ಜನರ ಕಷ್ಟ ನಿವಾರಣೆಯಲ್ಲಿ ಈ ವೈದ್ಯರು ಸಾಕಷ್ಟು ಮಟ್ಟಿಗೆ ಭಾಗವಹಿಸುತ್ತಾರೆ. ಸರಕಾರದವರು ಬಹಳ ದುಡ್ಡು ವೆಚ್ಚಮಾಡಬೇಕಾಗಿ ಬರುವ ಅಲೋಪೆಥಿಕ್ ವೈದ್ಯಕೀಯಾಭ್ಯಾಸದ ಜೊತೆಗೆ—ಭಾರತದ ಪ್ರಾಚೀನ ಔಷಧಿಗಳ ಬಗ್ಗೆ ಸಂಶೋಧನೆಗಳನ್ನು ನಡೆಸುವ ಮೂಲಕ ಮತ್ತು ಆಯುರ್ವೇದ ವೈದ್ಯರಿಗೆ ಪ್ರೋತ್ಸಾಹವನ್ನು ಕೊಡುವುದರಿಂದ- ಹಳ್ಳಿಹಳ್ಳಿಗೂ ವೈದ್ಯಕೀಯ ಸೌಲಭ್ಯ ದೊರೆಯುವಂತೆ ಮಾಡಬಹುದಾಗಿದೆ. ವಾಹನಗಳ ಮೂಲಕ ಹಳ್ಳಿಹಳ್ಳಿಗೂ ಔಷಧೋಪಚಾರವನ್ನು ಒದಗಿಸಿಕೊಡುವ ಸಂಪ್ರದಾಯವು ಪಶ್ಚಿಮದ ರಾಷ್ಟ್ರಗಳಲ್ಲಿ ಈಗ ಬೆಳೆಯುತ್ತಿದ್ದರೂ- ಭಾರತದ ಪ್ರಕೃತ ಸ್ಥಿತಿಗತಿಯಲ್ಲಿ ಅದು ಯಶಸ್ವಿಯಾದೀತೆಂದು ಎಣಿಸಲು ಬರುವುದಿಲ್ಲ. ಅದಕ್ಕೆ ತಕ್ಕ ವ್ಯವಸ್ಥೆಯಾಗಲೀ ಅನುಕೂಲತೆಯಾಗಲೀ ಇಲ್ಲ. ಇದರ ಬದಲು ವೈದ್ಯಕೀಯಾಭ್ಯಾಸಿಯು ಕಡ್ಡಾಯವಾಗಿ ಹಳ್ಳಿಗಳಲ್ಲಿ ಕೆಲವು ವರ್ಷಗಳ ವರೆಗೆ ಕೆಲಸ ಮಾಡುತ್ತಿರಬೇಕೆಂದು ವಿಧಿಸಿದರೆ ಹೆಚ್ಚು ಉಪಕಾರವಾದೀತು.

ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ

ವರ್ಣಭೇದ ಕಾನೂನಿನ ವಿರುದ್ಧ ಹಿಂದೀಯರ ಚಳುವಳಿ

ಮಾನವೀಯ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡಬೇಕಾಗಿ ಬಂದುದು ದಕ್ಷಿಣ ಆಫ್ರಿಕೆಯ ಭಾರತೀಯರ ದುರ್ದೈವವೆನ್ನಬೇಕು. ಅಲ್ಲಿಯ ಮಲಾನ ಸರಕಾರದ ವರ್ಣಭೇದ ಕಾನೂನು ಮೂಲಭೂತ ಹಕ್ಕುಗಳಿಗೆ ಕುಠಾರಾಘಾತವಾಗಿದೆಯೆಂದು ಸ್ವತಃಸಿದ್ಧ. ಸಂಯುಕ್ತ ರಾಷ್ಟ್ರಸಂಘದ ಮಾನವೀಯ ಹಕ್ಕು ಬಾಧ್ಯತೆಗಳನ್ನೂ ವಿಚಾರಿಸದೆಯೂ ಈ ವರ್ಣದ್ವೇಷದ ನೀತಿ ಗಡೆಯುರುವುದಿಲ್ಲ ಅಂಥದರಲ್ಲಿ ಅಲ್ಲಿ ನೆಲಸಿರುವ ಬಿಳಿಯರಲ್ಲದ ಜನರು—ಎಂದರೆ, ಭಾರತೀಯರೂ ಅಲ್ಲಿಯ ಮೂಲ ನಿವಾಸಿಗಳಾದ ಆಫ್ರಿಕನರೂ ಒಟ್ಟಾಗಿಕೊಂಡು ಸರಕಾರದ ಕಾಯಿದೆಗಳನ್ನು ಸವಿನಯ ಕಾನೂನುಭಂಗಿಸುವ ಸತ್ಯಾಗ್ರಹಕ್ಕೆ ಧುಮುಕಿದ್ದಾರೆ. ಐರೋಪ್ಯರಿಗಾಗಿ ಮೀಸಲಿಟ್ಟ ರೈಲುಗಳಲ್ಲಿ ಪ್ರವೇಶಿಸುವುದು, ಭಾರತೀಯರು ಅಡ್ಡಾಡಕೂಡದೆಂದು ಆಜ್ಞೆ ವಿಧಿಸಿದಲ್ಲಿ—ಅದನ್ನು ಮುರಿದು ತಿರುಗಾಡುವುದು ಇವೇ ಮೊದಲಾಟದ ಕಾಯಿದೆಭಂಗದ ರೀತಿಗಳಾಗಿವೆ. ಪೋಲೀಸರು ಹೀಗೆ ಕಾನೂನು ಮುರಿದವರನ್ನು ಬಂಧಿಸಿ, ಶಿಕ್ಷಿಸುತ್ತಿದ್ದಾರೆ. ಬಂಧನಕ್ಕೊಳಗಾದವರ ಸಂಖ್ಯೆ ದಿನಂಪ್ರತಿ ಏರುತ್ತಿರುವುದಾಗಿ ವರದಿ. ಸತ್ಯಾಗ್ರಹವು ನಿಶ್ಚಿತ ಕಾರ್ಯಕ್ರಮಕ್ಕೆ ಸರಿಯಾಗಿ ಈಗ ಮುಂದುವರಿಯುತ್ತಿದೆ.

ಈಜಿಪ್ತದಲ್ಲಿ ಹೊಸ ಮಂತ್ರಿಮಂಡಲ

ಆಫ್ರಿಕದ ಇನ್ನೊಂದು ತುದಿಯಲ್ಲಿ—ಎಂದರೆ ಈಜಿಪ್ತದಲ್ಲಿ, ಹಿಲಾಲಿ ಪಾಶಾರ ಮಂತ್ರಿಮಂಡಳವು ರಾಜೀನಾಮೆಯನ್ನು ಕೊಟ್ಟಿದೆ. ಕಳೆದ ಮಾರ್ಚ್ ತಿಂಗಳಲ್ಲಿ ಜನವರಿಯ ದೊಂಬಿಯ ಬಳಿಕ ಅಧಿಕಾರಕ್ಕೆ ಬಂದ ಈ ಮಂತ್ರಿಮಂಡಳವು ಈಜಿಪ್ತದ ಆಸೆ ಆಕಾಂಕ್ಷೆಗಳನ್ನು ತಣಿಸಲು ಹೆಣಗಿತೆಂಬುದು ನಿಜ. ಆದರೆ ದೇಶದ್ರೋಹ ದಂಡಿನ ಕಾಯಿದೆಯನ್ನು ಸಾರಿದುದು, ವಫ್ದ್ ಪಕ್ಷದ ಗಣ್ಯ ವ್ಯಕ್ತಿಯಾಗಿದ್ದ ಫೌದ್ ಸೆರಾಗ್ ಎಲ್‌ದಿನ್ ಪಾಶಾರನ್ನು ಜನವರಿಯ ದಂಗೆಯ ನೆವಕ್ಕೆ ಜೈಲಿನಲ್ಲಿಟ್ಟದ್ದು ಮುಂತಾಗಿ ಜನತೆಯ ಮನಸ್ಸಿಗೆ ಬಂದಿರಲಿಲ್ಲ. ಕಾರಣ—ಈ ರಾಜೀನಾಮೆಯ ಕುರಿತು ಮಿಶ್ರ ಪ್ರತಿಕ್ರಿಯೆಗಳು ಬಂದಿವೆ. ಅರಸ ಫರೂಕರು ಒಡನೆಯೇ ಹೊಸ ಮಂತ್ರಿಮಂಡಲವನ್ನು ರಚಿಸಬೇಕೆಂದು ಸ್ವತಂತ್ರ ಸದಸ್ಯರಾದ ಹುಸೇನ ಸಿರ್ರಿ ಪಾಶಾರನ್ನು ಆಮಂತ್ರಿಸಿದ ಪ್ರಕಾರ, ಈಗ ನೂತನ ಮಂತ್ರಿಮಂಡಲವು ಅಧಿಕಾರ ವಹಿಸಿದೆ. ಸಿರ್ರಿಪಾಶಾ ಈ ಹಿಂದೆ ನಾಲ್ಕು ಬಾರಿ ಈಜಿಪ್ತದಲ್ಲಿ ಮಂತ್ರಿಮಂಡಳ ರಚಿಸಿ ಕೆಲಸ ಮಾಡಿದ್ದಾರೆ. ಸ್ವತಃ ದೊಡ್ಡ ಅರ್ಥಶಾಸ್ತ್ರಜ್ಞ ಹಾಗೂ ಉದ್ಯೋಗಪತಿಗಳಾಗಿರುವುದರಿಂದ ಅವರ ಅನುಭವದ ಲಾಭ ನಿಶ್ಚಯವಾಗಿಯೂ ಈಜಿಪ್ತಿಗೆ ದೊರಕುವುದು. ಇವರು ಮಾಡಿದ ಮೊದಲನೆಯ ಕೆಲಸವೆಂದರೆ- ವಫ್ದ್ ಧುರೀಣ ಸೆರಾಗ್ ಪಾಶಾರನ್ನು ಬಿಡುಗಡೆ ಮಾಡಿದುದೇ. ಅರಸ ಫರೂಕರ ಆಜ್ಞೆಯನ್ವಯ ಸಿರ್ರಿ ಪಾಶಾ ಈಜಿಪ್ತದ ಪಟ್ಟಂ ಗವರ್ನರರು ಹೌದಾದರೂ- ದಂಡನ ಕಾಯಿದೆಯನ್ನು ಬೇಗನೆ ಕೊನೆಗಾಣಿಸಬೇಕೆಂದು ಈಗ್ಗೆ ಕೆಲದಿನಗಳ ಹಿಂದೆ ಇವರೇ ಪ್ರತಿಪಾದಿಸಿದ್ದರಿಂದ, ಅದು ಶೀಘ್ರದಲ್ಲಿಯೇ ಅಂತ್ಯಗೊಂಡೀತು. ಆಂಗ್ಲೋ-ಈಜಿಪ್ಶಿಯನ್ ತಂಟೆಯ ಕುರಿತು, ಸೂಡಾನಿನ ಸಂಬಂಧದ ಕುರಿತು, ಮಧ್ಯಪೂರ್ವ ರಕ್ಷಣಾ ಯೋಜನೆಯಲ್ಲಿ ಈಜಿಪ್ತ ಭಾಗವಹಿಸುವ ಕುರಿತು ಹೊಸ ಸರಕಾರದ ಅಭಿಮತ ಹೇಗಿದೆ ಎಂದು ಈಗ ಊಹಿಸಲು ಬರುವಂತಿಲ್ಲ- ಆದರೆ, ಜನತೆಯ ಅಭಿಲಾಷೆಯನ್ನು ವಿರೋಧಿಸುವ ಧೈರ್ಯವಾಗಲೀ ಸಾಮರ್ಥ್ಯವಾಗಲೀ ಮಂತ್ರಿಮಂಡಳಕ್ಕೆ ಇಲ್ಲವೆಂಬುದು ನಿಶ್ಚಯ. ಬೇಗನೇ ಚುನಾವಣೆಗಳಿಗೆ ವ್ಯವಸ್ಥೆ ಮಾಡಬೇಕೆಂದು ಜನರ ಬೇಡಿಕೆ ಇರುವುದರಿಂದ—ಆ ಕಡೆಗೂ ಸಾಕಷ್ಟು ಗಮನ ಕೊಡಬೇಕಾಗುತ್ತದೆ.

ಮುಸಾದಿಕರ ರಾಜೀನಾಮೆ

ಇನ್ನೊಂದು ಮುಸ್ಲಿಂ ರಾಜ್ಯವಾದ ಇರಾಣದಲ್ಲಿ ಮುಖ್ಯಮಂತ್ರಿ ಡಾ| ಮುಸಾದಿಕರು ರಾಜೀನಾಮೆ ಕೊಟ್ಟರು. ಇವರ ರಾಜೀನಾಮೆಯಲ್ಲಿ ವಿಶೇಷವೇನಿಲ್ಲ. ಸಂಪ್ರದಾಯಾನುಸಾರವಾಗಿ ರಾಜೀನಾಮೆ ಸಲ್ಲಿಸಲ್ಪಟ್ಟಿತು ಅಷ್ಟೆ. ರಾಜೀನಾಮೆ ಕೊಟ್ಟ ದಿನ ಮಾಡಿದ ಆಕಾಶವಾಣಿ ಭಾಷಣದಲ್ಲಿ ಡಾ| ಮುಸಾದಿಕರು "ನಾನು ಬಳಲಿದ್ದೇನೆ ಅಥವಾ ಕೆಲಸಕ್ಕೆ ಬಾರದವನಾಗಿದ್ದೇನೆ ಎಂಬುದಕ್ಕಾಗಿ ರಾಜೀನಾಮೆ ಕೊಟ್ಟಿಲ್ಲ. ಪಾರ್ಲಿಮೆಂಟು ಇಚ್ಛಿಸಿದರೆ ನಾನು ಪುನಃ ಅಧಿಕಾರಕ್ಕೆ ಬಂದು ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಲು ಸಿದ್ಧನಿದ್ದೇನೆ" ಎಂದು ಹೇಳಿದರು. ಪಾರ್ಲಿಮೆಂಟು ಇದರ ಪೂರ್ಣ ಲಾಭವನ್ನು ತೆಗೆದುಕೊಂಡಿದೆ. ಗುಪ್ತಾಧಿವೇಶನದಲ್ಲಿ ಡಾ| ಮುಸಾದಿಕರನ್ನೇ ಪುನಃ ಮುಖ್ಯಮಂತ್ರಿಯನ್ನಾಗಿ ಪ್ರಚಂಡ ಬಹುಮತದಿಂದ ಆರಿಸಿದೆ. ಡಾ| ಮುಸಾದಿಕರೇ ಮರಳಿ ಅಧಿಕಾರಕ್ಕೆ ಬರಬೇಕೆಂದು ಜನರ ಅಪೇಕ್ಷೆಯೂ ಬಹಳವಿತ್ತು- ಆಂಗ್ಲೋ ಇರಾಣಿಯನ್ ಎಣ್ಣೆಗಣಿಗಳಲ್ಲಿ ಕೆಲಸ ಮಾಡುತ್ತಿದ್ದ ಕಾಮಗಾರರಿಂದ ಈ ಬಗ್ಗೆ ಬಂದ ತಂತಿಗಳಿಗೆ ಲೆಕ್ಕವಿದ್ದಿಲ್ಲ.

ಇರಾಣ ಎಣ್ಣೆ ತಂಟೆ

ಇರಾಣದಿಂದ ಎಣ್ಣೆಯನ್ನು ತುಂಬಿಕೊಂಡು ಬಂದ ರೋಜ್ ಮೇರಿ ಎಂಬ ನಾವೆಯನ್ನು ಏಡನಿನಲ್ಲಿ ಹಿಡಿದು ನಿಲ್ಲಿಸಿದುದರ ವಿರುದ್ಧ ಕೋರ್ಟಿನಲ್ಲಿ ಜುಲೈ ೧೭ರಿಂದ ವಾದ ನಡೆಯಲಿದೆ. ಇರಾಣ ಸರಕಾರಕ್ಕೆ ಆಂಗ್ಲೋ-ಇರಾಣಿಯನ್ ಎಣ್ಣೆ ಕಂಪೆನಿಯ ಸರಕಾರದ ಎಣ್ಣೆಯನ್ನು ಮಾರುವ ಅಧಿಕಾರವಿಲ್ಲ ಎಂಬುದರಿಂದ, ನಾವೆಯ ಮೇಲೆ ಏಡನಿನ ವರಿಷ್ಠ ನ್ಯಾಯಾಲಯವು ತಡೆಯಾಜ್ಞೆ ವಿಧಿಸಿತು. ಇಟಲಿಯ ಕಂಪೆನಿಯೊಂದು ಈ ಎಣ್ಣೆಯನ್ನು ಕರಿಸಿಕೊಂಡಿದೆ. ಈಗ ಇಟೆಲಿಯ ಸುಪ್ರಸಿದ್ಧ ವಕೀಲರೊಬ್ಬರನ್ನು ತನ್ನ ಪರ ವ್ಯವಹ

ರಿಸಲು ಅದು ನೇಮಿಸ ವುದಂತೆ. ಈ ವಕೀಲರ ವಾದವು ಎರಡು ವಿಷಯಗಳನ್ನು ಅವಲಂಬಿಸಿದೆ (೧) ಇರಾಣದ ಎಣ್ಣೆ ರಾಷ್ಟ್ರೀಕರಣದ ಕಾಯಿದೆಯನ್ನು ಆಂಗ್ಲೋ ಇರಾಣಿಯನ್ ಕಂಪೆನಿಯ ಎಣ್ಣೆಯ ಮೇಲೆ ಸರಕಾರದ ಅಧಿಕಾರವೇ ನಡೆಯುವುದು. (೨) ಬ್ರಿಟನು ರಾಷ್ಟ್ರೀಕರಣದ ತತ್ವವನ್ನೊಪ್ಪಿದೆ ಯೆಂಬುದಾಗಿ ಇರಾಣಿಗೆ ಬರೆದ ಪತ್ರದನ್ವಯ ಎಣ್ಣೆ ಸಂಬಂಧದಲ್ಲಿ ಇತರರ ಹಸ್ತಕ್ಷೇಪಕ್ಕೆ ಎಡೆಯೇ ಇಲ್ಲ.

ಟ್ಯುನೀಸಿಯಾ ಪ್ರಕರಣ

ಟ್ಯುನೀಸಿಯಾದ ಬಗ್ಗೆ ಸಂಯುಕ್ತ ರಾಷ್ಟ್ರ ಸಂಘದ ವಿಶೇಷ ಸಾಮಾನ್ಯಾಧಿವೇಶನವನ್ನು ಕರೆಯಬೇಕೆಂದು ಸೂಚಿಸಿದ ಏಶಿಯಾ-ಆಫ್ರಿಕನ್ ರಾಷ್ಟ್ರಗಳು, ಈಗ ಮರಳಿ ಸ್ವಾತಂತ್ರ್ಯಪ್ರಿಯ ರಾಷ್ಟ್ರಗಳಿಗೆ ಇನ್ನೊಂದು ಪ್ರಾರ್ಥನೆ ಕಳಿಸಿದೆ. ಜುಲೈ ೨೦ನೇ ತಾರೀಖಿಗೆ ಮುಂಚಿತವಾಗಿ ಎಲ್ಲ ರಾಷ್ಟ್ರಗಳೂ ತಮ್ಮ ಅಭಿಮತವನ್ನು ತಿಳಿಸಬೇಕೆಂದು ಮಹಾಕಾರ್ಯದರ್ಶಿ ಟ್ರಿಗ್ವೆಲೀ ಹೇಳಿದುದಕ್ಕೆ ಇನ್ನೂ ಹಲವು ರಾಷ್ಟ್ರಗಳಿಂದ ಜವಾಬು ಬಂದಿರುವುದಿಲ್ಲ. ಕನಿಷ್ಠ ಪಕ್ಷ ೩೧ ರಾಷ್ಟ್ರಗಳ ಒಪ್ಪಿಗೆ ಇಲ್ಲದೆ ವಿಶೇಷ ಅಧಿವೇಶನವನ್ನು ಸೇರಿಸಲು ಬರುವುದಿಲ್ಲವಾದುದರಿಂದ-- ಲ್ಯಾಟಿನ್ ಅಮೇರಿಕೆಯ ಮುಂತಾದ ಸಣ್ಣ ರಾಷ್ಟ್ರಗಳು ಈ ಕುರಿತು ಹೆಚ್ಚು ಆಸಕ್ತಿ ವಹಿಸಬೇಕೆಂದು ಈಗ ಕೇಳಿಕೊಳ್ಳಲಾಗಿದೆ. ಫ್ರೆಂಚ ಸರಕಾರವು ಟ್ಯುನೀಸಿಯಾದಲ್ಲಿ ಕೈಗೊಳ್ಳಬೇಕೆಂದಿರುವ ಸುಧಾರಣೆಗಳ ಬಗ್ಗೆ ಅಲ್ಲಿಯ ನಿವಾಸಿಗರಿಗೆ ಏನೂ ಆಸ್ಥೆ ಉಳಿದಿಲ್ಲ—ಇದರ ಜೊತೆಗೆ ಅಲ್ಲಿ ವಲಸೆ ಬಂದು ನೆಲಸಿದ ಫ್ರೆಂಚರು ತಮ್ಮ ಅಧಿಕಾರ ಕ್ಷೇತ್ರಕ್ಕೆ ಕಂಟಕಪ್ರಾಯವಾಗಿ ಈ ಸುಧಾರಣೆಗಳ ಸ್ವರೂಪವಿದೆ ಎಂದು ಸರಕಾರದ ಧೋರಣೆಯನ್ನು ಟೀಕಿಸಿರುವರ.

ಅಡೆನೂರರ ಆತಂಕ

ಜರ್ಮನಿಯ ಕುರಿತು ರಶಿಯಾದ ಪತ್ರಕ್ಕೆ ಉತ್ತರ ಕಳಿಸಬೇಕೆಂದು ತ್ರಿರಾಷ್ಟ್ರಗಳ ಪ್ರತಿನಿಧಿಗಳು ಸೇರಿ ನಿರ್ಣಯಿಸಿದ ಒಕ್ಕಣೆಯ ಕುರಿತು ಪಶ್ಚಿಮ ಜರ್ಮನಿಯ ಚಾನ್ಸಲರ್ ಡಾ. ಅಡೆನೂರರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಈ ಕಾರಣಕ್ಕಾಗಿ ರಶಿಯಾಕ್ಕೆ ಕಳಿಸಬೇಕಿದ್ದ ಉತ್ತರವು ಒಂದು ವಾರದಷ್ಟು ವಿಳಂಬವನ್ನು ಅನುಭವಿಸಬೇಕಾದೀತು. ಉತ್ತರ ಬರೆಯುವಾಗ ತಮ್ಮನ್ನು ವಿಚಾರಿಸಲಿಲ್ಲ ಎಂಬುದು ಅಡೆನೂರರ ಒಂದನೇ ಅಸಮಾಧಾನವಾದರೆ— ಫ್ರಾನ್ಸು ಪಶ್ಚಿಮ ಜರ್ಮನಿಯ ಬಗ್ಗೆ ತಳೆದಿರುವ ಧೋರಣೆಯ ಕುರಿತು ಜಿಗುಪ್ಸೆ ಇನ್ನೊಂದು ಕಾರಣ. ಪಶ್ಚಿಮ ರಾಷ್ಟ್ರಗಳಿಗೆ ಇದರಿಂದ ವಿಸ್ಮಯ ಉಂಟಾಗಿದೆ. ಇನ್ನು ಮುಂದೆ ಜರ್ಮನಿಯ ಭವಿತವ್ಯದ ಕುರಿತಾದ ಯಾವ ವಿಷಯದಲ್ಲಿಯೂ ತಾವು ಮೂವರೇ ಕೂಡಿ ಒಂದು ನಿರ್ಣಯಕ್ಕೆ ಬರುವಹಾಗಿಲ್ಲವೆಂದು ಅವುಗಳಿಗೀಗ ಮನವರಿಕೆಯಾಗಿದೆ.

ಅಮೇರಿಕದ ಚುನಾವಣೆಗಳು

ಚುನಾವಣೆಗಳ ಬಿಸಿಯು ಅಮೇರಿಕದಲ್ಲಿ ಈಗ ಕಂಡುಬರುತ್ತಿದೆ. ರಿಪಬ್ಲಿಕನ ಪಕ್ಷದ ಕಡೆಯಿಂದ ಯಾರನ್ನು ಅಧ್ಯಕ್ಷ ಪದಕ್ಕೆ ಸ್ಪರ್ಧಿಸಲು ನಿಲ್ಲಿಸಬೇಕೆಂಬ ವಿಷಯವನ್ನು ಚರ್ಚಿಸಿ ನಿರ್ಣಯಿಸಲು ಚಿಕಾಗೋದಲ್ಲಿ ಒಂದು ಸಮ್ಮೇಳನ ಕೂಡಿದೆ- ಪ್ರಾಸ್ತಾವಿಕ ಭಾಷಣ ದಿಗಳು ಮುಗಿದಿದ್ದು, ಇವಷ್ಟು ಅಧ್ಯಕ್ಷಪದಕ್ಕೆ ಸ್ಪರ್ಧಿಸುವ ಉಮೇದುವಾರರ ಹೆಸರು ನಿರ್ಣಯವಾಗುವುದು. ಮುಖ್ಯವಾಗಿ ಜನರಲ್ ಐಸನ್‌ಹೋವರ್, ಸಿನೇಟರ್ ಟ್ಯಾಫ್ಟ ಇವರು ಹುರಿಯಾಳುಗಳು. ಕಳೆದ ೨೦ ವರ್ಷಗಳಿಂದ ಬಿಟ್ಟೂ ಬಿಡದೆ ಡೆಮೊಕ್ರಾಟಿಕ ಪಕ್ಷದವರ, ಅಧಿಕಾರಕ್ಕೆ ಬಂದಿರುವುದರಿಂದ ರಿಪಬ್ಲಿಕನ ಪಕ್ಷದ ಚಳುವಳಿ ಬಹಳ ಜೋರಾಗಿದೆ. ಅಮೇರಿಕವು ವಿದೇಶ ಸಹಾಯಗಳಿಗೆಂದು ಹಾಗೂ ತನ್ನ ಚತುರ್ಭಾಗ ಯೋಜನೆಯನ್ವಯ ಮತ್ತು ಆರ್ಥಿಕ ಹಾಗೂ ಯುದ್ಧ ಸಹಾಯಗಳ ಬಗ್ಗೆ ೬೦೦೧ ಮಿಲಿಯ ಡಾಲರುಗಳನ್ನು ನೀಡಲು ನಿರ್ಧರಿಸಿದೆ.

ಚರ್ಚಿಲರ ವಿಜಯ

ಆದರೆ ಇವೆಲ್ಲವನ್ನೂ ಮೀರಿಸಿದ ಮಹತ್ವದ ಸಂಗತಿ ಬ್ರಿಟನಿನಲ್ಲಿ ನಡೆಯಿತು. ಬಾಂಬುದಾಳಿಯ ಕುರಿತು ಸರಕಾರವು ವಹಿಸಿದ ಧೋರಣೆಯಿಂದ ಅತೃಪ್ತಿಗೊಂಡ ಕೂಲಿಕಾರ ಪಕ್ಷವು ಚರ್ಚಿಲ ಸರಕಾರದ ವಿರುದ್ಧ ಅವಿಶ್ವಾಸ ಸೂಚಿಸುವ ಗೊತ್ತುವಳಿಯನ್ನು ತಂದಿತು. ಆದರೆ ಚರ್ಚಿಲರ ಪಾಲಿಗೆ ಮೂವತ್ತು ಮತಗಳು ಹೆಚ್ಚು ಬಿದ್ದುದರಿಂದ—ಬಂದ ಗಂಡಾಂತರ ನಿವಾರಣೆಯಾಯಿತು. ಅಮೇರಿಕನರು ತಮ್ಮನ್ನು ಬಾಂಬುದಾಳಿಗೆ ಮುಂಚೆ ವಿಚಾರಿಸಲಿಲ್ಲವಾದರೂ—ಕೊರಿಯಾ ಯುದ್ಧಕ್ಷೇತ್ರದ ಮಿತಿಯೊಳಗೆನೇ ಈ ದಾಳಿ ನಡೆದುದರಿಂದ ಆಕ್ಷೇಪಾರ್ಹವಾದ ಸಂಗತಿ ನಡೆದಿಲ್ಲವೆಂದು ಚರ್ಚಿಲರು ತಮ್ಮ ಪಕ್ಷವನ್ನು ಸಮರ್ಥಿಸಿಕೊಂಡರು. ಈಚೆಗೆ ಅಲ್ಲಿಯ ಕೂಲಿಕಾರ ಧುರೀಣರು ಮಾಡಿದ ಭಾಷಣದಲ್ಲಿ ಕೊರಿಯಾ ಯುದ್ಧದಲ್ಲಿ ಮಧ್ಯಸ್ಥಿ ವಹಿಸಿ ಕೆಲಸಮಾಡಲು ಭಾರತದ ಪ್ರಧಾನಿ ನೆಹರೂ ಸಿದ್ಧರೆಂಬ ಸಂಗತಿ ವ್ಯಕ್ತವಾಗಿದೆ. ಕೊರಿಯಾ ಯುದ್ಧರಂಗಕ್ಕೆ ಮೊನ್ನೆ ತಾನೆ ಭೇಟಿಇತ್ತ ಬ್ರಿಟನಿನ ರಕ್ಷಣ ಮಂತ್ರಿ ಲಾರ್ಡ ಅಲೆಕ್ಸಾಂಡರ ಹಾಗೂ ರಾಜ್ಯ ಮಂತ್ರಿ ಶೆಲ್ವಿನ್ ಲಾಯ್ಡ್‌ರು ಹೊಸದಿಲ್ಲಿಯಲ್ಲಿ ನೆಹರೂರನ್ನು ಕಂಡಾಗ ಯುದ್ಧ ವಿರಾಮ ಮಾತುಕತೆಗಳು ಸಫಲಗೊಳ್ಳುವಂತೆ ತಾವು ಶಾಂತಿ ಸಂಧಾನ ನಡೆಸಲು ಒಪ್ಪುವುದಾಗಿ ನೆಹರೂ ಹೇಳಿದ್ದರೆಂಬುದೂ ತಿಳಿದ ಬಂದಿದೆ.

ಆಂಧ್ರಪ್ರಾಂತದ ಪ್ರಶ್ನೆ

ಭಾಷಾನುಗುಣ ಪ್ರಾಂತರಚನೆಯ ಬಗ್ಗೆ ಲೋಕ ಸಭೆಯಲ್ಲಿ ಖಾಸಗಿ ಗೊತ್ತುವಳಿಯೊಂದನ್ನು ಕಮ್ಯೂನಿಸ್ಟ ಸದಸ್ಯರಾದ ಶ್ರೀ ಕುಮಾರ ಚಟರ್ಜಿ ಮಂಡಿಸಿದಾಗ—ಪ್ರಧಾನಿ ನೆಹರೂ ಈಗಿನ ಕಾಲವು ಭಾರತದಲ್ಲೆಲ್ಲ ಭಾಷಾವಾರು ಪ್ರಾಂತ ರಚಿಸಲು ಅನುಕೂಲವಿಲ್ಲವೆಂದು ಹೇಳಿದರು. ಪಾರ್ಲಿಮೆಂಟಿನ ಕಾಂಗ್ರೆಸು ಪಕ್ಷವು ಆದಕ್ಕೆ ಮೊದಲು ಸಭೆ ಸೇರಿದ್ದಾಗ್ಗ, ಸಮಯಾನುಕೂಲತೆ ಇಲ್ಲವೆಂಬ ಕಾರಣಕ್ಕಾಗಿ ಈ ಗೊತ್ತುವಳಿಯನ್ನು ವಿರೋಧಿಸಬೇಕೆಂದು ನಿರ್ಣಯಿಸಿತ್ತು. ಹೈದರಾಬಾದನ್ನು ಭಾಷಾನುಗುಣ ಪ್ರಾಂತ್ಯದಲ್ಲಿ ವಿಭಜಿಸುವುದು ಗಂಡಾಂತರಪ್ರಾಯವೆಂದು ನೆಹರೂ ಹೇಳಿದರು. ಆಂಧ್ರ ಪ್ರಾಂತ

ಪ್ರಶ್ನೆಯೊಂದಕ್ಕೆ ಅವರು ಮಹತ್ವ ಕೊಟ್ಟಂತಿದೆ. ಅಲ್ಲೂ ಇಕ್ಕಟ್ಟಿನ ಪ್ರಯೋಗವಿದ್ದೇ ಇದೆ— ಆಂಧ್ರರು ಒಮ್ಮತಕ್ಕೆ ಬಂದು, ಪ್ರಾಂತರಚನೆಯ ಕಷ್ಟವನ್ನು ಬಗೆಹರಿಸಿದರೆ, ಆಗ ಅದನ್ನು ರಚಿಸಲಾಗುವುದೆಂದ. ನೆಹರೂ ಹೇಳಿದರು. ಈಗ ಮದ್ರಾಸು ನಗರದ ಕುರಿತು ಆಂಧ್ರ ಧುರೀಣರಲ್ಲಿ ಭಿನ್ನಾಭಿಪ್ರಾಯವಿದೆ. ಜೊತೆಗೆ ರಾಯಲಸೀಮೆಯ ಪ್ರತಿನಿಧಿಗಳು ಆಂಧ್ರ ಪ್ರಾಂತರಚನೆಯೇ ಬೇಡವೆಂದಿದ್ದಾರೆ ಈ ತಿರುಬೊಬ್ಬೆಗಳ ನಡುವೆ, ನಮ್ಮ ಕರ್ನಾಟಕದ ಪ್ರತಿನಿಧಿಗಳು ಪಂಡಿತ ನೆಹರೂರಿಗೆ ಮಾಡಿದ ಮನವಿಯ ಗತಿ ಏನೋ ಗೊತ್ತಿಲ್ಲ.

ಮಾಲಕ—ಮಜೂರ ಸಂಬಂಧ

ಕೇಂದ್ರದ ಕೂಲಿಕಾರ ಖಾತೆಯು ಒಂದು ಪ್ರಶ್ನಾವಳಿಯ ಮೂಲಕ ಮಾಲಕ ಮಜೂರ ಸಂಬಂಧವನ್ನು ಹಾರ್ದಿಕಗೊಳಿಸುವ ಬಗ್ಗೆ ಇತ್ತಂಡಗಳ ಅಭಿಪ್ರಾಯವನ್ನು ತಿಳಿಯಲು ಪ್ರಯತ್ನಿಸಿದೆ.

ಮಾಧ್ಯಮಿಕ ಶಿಕ್ಷಣ ಕ್ರಮದಲ್ಲಿ ಸುಧಾರಣೆಗಳನ್ನು ಕೈಗೊಳ್ಳುವ ಕುರಿತು ವರದಿಮಾಡಲ ಒಂದು ಸಮಿತಿ ನೇಮಕಗೊಂಡಿದೆ- ಮದ್ರಾಸು ವಿಶ್ವವಿದ್ಯಾಲಯದ ಉಪಕುಲಪತಿ ಎ. ಲಕ್ಷ್ಮಣ ಸ್ವಾಮಿ ಮೊದಲಿಯಾರರು ಇದರ ಅಧ್ಯಕ್ಷರು.

ಅ. ಭಾ. ಕಾಂಗ್ರೆಸ್ ಕಾರ್ಯಸಮಿತಿಗೆ ಶ್ರೀಗಳಾದ ಎನ್. ವಿ ಗಾಡಗೀಲ್, ಬಲವಂತ ರಾಯ್ ಮೆಹತಾ, ಖಂಡೂ ಬಾಯಿ ದೇಸಾಯಿ, ಎಸ್. ನಿಜಲಿಂಗಪ್ಪ ಮತ್ತು ಸ್ವಾಮಿ ರಮಾನಂದತೀರ್ಥ ಇವರು ಹೊಸ ಸದಸ್ಯರಾಗಿ ನೇಮಕವಾಗಿದ್ದಾರೆ. ಇವರಲ್ಲಿ ಶ್ರೀ ಬಲವಂತ ರಾಯ್ ಮೆಹತಾರು ಶ್ರೀನಿವಾಸ ಮಲ್ಯರೊಂದಿಗೆ ಪ್ರ. ಕಾರ್ಯದರ್ಶಿಗಳು.

ಪ್ರತಿಯೊಬ್ಬ ಬೇಸಾಯಗಾರ ಕುಟುಂಬಕ್ಕೆ ಕನಿಷ್ಠ ೫ ಎಕರೆ ಭೂಮಿಯನ್ನು ಬೇಸಾಯಕ್ಕೆ ಕೊಡಬೇಕೆಂದು ಆ ವಿನೋಬಾ ಭಾವೆಯವರು ಅಭಿಪ್ರಾಯಪಟ್ಟಿದ್ದಾರೆ.

ಉಡುಪಿ

ವನಮಹೋತ್ಸವ:- ತಾ. 1ರಲ್ಲು ತಾಲೂಕು ಕಚೇರಿಯಲ್ಲಿ ಡಿ। ಮುನ್ಸಿಫ್ ಶ್ರೀ ಟಿ.ವಿ.ಬಿ.ಸಿ. ಕುಲಾಸೊರವರಿಂದ ಪ್ರಾರಂಭಿಸಲ್ಪಟ್ಟು ತಾ. 7ರಂದು ಮುನಿಸಿಪಲ್ ಕೌತ್ ಶಾಲೆಯಲ್ಲಿ ಗಿಡಗಳನ್ನು ನೆಡುವಿಕೆಯಿಂದ ಕೊನೆಗೊಂಡಿತು. ಈ ದಿನ ಪಂಡಿತ ಟಿ. ಎಸ್. ಕೇಳು ನಂಬಿಯಾರರ ಅಧ್ಯಕ್ಷತೆಯಲ್ಲೊಂದು ಸಭೆಸೇರಿ ಶ್ರೀ ಎ ಬಿ. ಕೃಷ್ಣ ರಾಜ ಮತ್ತು ಡಾ। ಎಸ್. ಆರ್. ಪೈಗಳ ಭಾಷಣಗಳಾದುವು. ಮುನಿಸಿಪಲ್ ಕಮಿಶನರ್ ಶ್ರೀ ಗೋಪಾಲ ಮೆನೋನ್ನರು ಧನ್ಯವಾದಗಳನ್ನರ್ಪಿಸಿದರು.

ಜಿಲ್ಲಾ ವಿದ್ಯಾಧಿಕಾರಿ ಉದ್ಯೋಗಕ್ಕೆ ಆಯ್ಕೆ—ಉಡುಪಿ ಬೋರ್ಡ್ ಹೈಸ್ಕೂಲಿನಲ್ಲಿ ಜನಪ್ರಿಯ ಅಧ್ಯಾಪಕರಾಗಿದ್ದು ಮೊನ್ನೆ ತಾನೆ ಬೆಳ್ವಾರೆ ಬೋರ್ಡ್ ಹೈಸ್ಕೂಲಿಗೆ ಹೆಡ್ಮಾಸ್ತರರಾಗಿ ವರ್ಗಾಯಿಸಲ್ಪಟ್ಟ ಸ್ಥಳೀಯ ಸಾಹಿತಿಗಳಲ್ಲೊಬ್ಬರಾದ ಶ್ರೀ ಕೆ. ವಿಠಲ ಶೆಣೈ, ಬಿ ಎ ಎಲ್. ಟಿ, ಅವರೂ ಕುಂದಾಪುರ ಬೋರ್ಡ್ ಹೈಸ್ಕೂಲಿನಲ್ಲಿ ಜನಪ್ರಿಯ ಉಪಾಧ್ಯಾಯರಾಗಿದ್ದು ಈಗ ಆ ಧರ್ಮಾರ ಬೋರ್ಡ್ ಹೈಸ್ಕೂಲಿನಲ್ಲಿ ಹೆಡ್ಮಾಸ್ತರರಾಗಿರುವ ಶ್ರೀ ಮಂಜುನಾಥ ಕುಡುವ ಬಿ. ಎ. ಎಲ್. ಟಿ. ಅವರು ಮದ್ರಾಸು ಸರ್ವೀಸ್ ಕಮಿಶನಿನಿಂದ ಜಿಲ್ಲಾ ವಿದ್ಯಾಧಿಕಾರಿ ಉದ್ಯೋಗಕ್ಕೆ ಆರಿಸಲ್ಪಟ್ಟಿರುವುದು ಅಭಿನಂದನೀಯ.

ಉಪಾಹಾರ ಸತ್ಕಾರ ಕೂಟ—ಮದ್ರಾಸು ಪೋಸ್ಟಲ್ ಇಲಾಖೆಯ ಡಿಪ್ಯುಟಿ ಡೈರೆಕ್ಟರ್ ಶ್ರೀ ಕೆ. ಎನ್. ಪ್ರಭು ಮತ್ತು ಜಿಲ್ಲಾ ವಿದ್ಯಾಧಿಕಾರಿ ಉದ್ಯೋಗಕ್ಕೆ ಆಯ್ಕೆ ಹೊಂದಿದ ಶ್ರೀ ಕೆ. ವಿಠಲ ಶೆಣೈಯವರೂ ಇದೇ ತಾ. 6ರಲ್ಲು ಸಂಜೆ ಡಾ॥ ಪಿ. ಆರ್. ನಾಯ್ಕರ ನೇತೃತ್ವದಲ್ಲಿ ಗೌಡಸಾರಸ್ವತ ಸಮಾಜದವರಿಂದ ಉಪಾಹಾರ ಕೂಟದಿಂದ ಸತ್ಕರಿಸಲ್ಪಟ್ಟರು. ಸಭಾರಂಭದ ಅಧ್ಯಕ್ಷತೆಯನ್ನು ಶ್ರೀ ಪಿ. ಎನ್. ಪ್ರಭುಗಳು ವಹಿಸಿದ್ದರು. ಶ್ರೀಗಳಾದ ವಕೀಲ್ ರಮಾನಾಥ ಪೈ ಮತ್ತು ಟಿ. ಸಂಜೀವ ಪೈಗಳು ಸಂದರ್ಭೋಚಿತವಾಗಿ ಮಾತನಾಡಿದರು, ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳು ಧನ್ಯವಾದಗಳನ್ನರ್ಪಿಸಿದರು.

ನಿಧನ—ಉಡುಪಿಯಲ್ಲಿ ಬಹು ಸಮಯ ಜೂನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರರಾಗಿದ್ದು ನಿವೃತ್ತಿ ಹೊಂದಿದ ಶ್ರೀ ಎಮ್. ಪದ್ಮನಾಭಯ್ಯನವರು ಕಳೆದ ತಾ 14ರಲ್ಲು ಬೊಂಬಾಯಿಯಲ್ಲಿ ತಮ್ಮ ಮಗನ ನಿವಾಸದಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ.

ಚಿನ್ನ, ಬೆಳ್ಳಿ ವ್ಯಾಪಾರಿಗಳ ಸಭೆಯ.—ಇದೇ ತಾ ೧ರಲ್ಲು ಬೆಳಿಗ್ಗೆ ಶ್ರೀ ಕೆ ವರದರಾಯ ಪೈ ಎಡ್ವೊಕೇಟ್ ಅವರ ಅಧ್ಯಕ್ಷತೆಯಲ್ಲಿ ಜರಗಿ ಕಾರ್ಯ ನಿರ್ವಾಹಕ ಮಂಡಳಿಯ ಚುನಾವಣೆ ನಡೆಯಿತು, ಶ್ರೀ ಪಾಂಗಾಳ ರಾಮಪ್ಪ ನಾಯ್ಕರು ಅಧ್ಯಕ್ಷರಾಗಿಯೂ ಶ್ರೀ ರಾಘವೇಂದ್ರ ಭಟ್ಟರು ಉಪಾಧ್ಯಕ್ಷರಾಗಿಯೂ ಶ್ರೀ ಜಿ. ಅನಂತ ಕೃಷ್ಣಾಚಾರ್ಯರು ಕಾರ್ಯದರ್ಶಿಗಳಾಗಿಯೂ ಶ್ರೀ ಎಸ್. ರಾಮಚಂದ್ರ ರಾಯರು ಖಜಾಂಚಿಯರಾಗಿಯೂ ಆರಿಸಲ್ಪಟ್ಟರು.

ಪರ್ಕಳ—ತಾ 7ರಲ್ಲಿ ವನಮಹೋತ್ಸವವು ಗಾಂಧಿ ಮೈದಾನದಲ್ಲಿ ಶ್ರೀ. ಬಿ. ಕರುಣಾಕರ ಹೆಗ್ಡೆಯರ ಅಧ್ಯಕ್ಷತೆಯಲ್ಲಿ, ಶ್ರೀಗಳಾದ ರಾಜೀವ ಕೋಟ್ಯಾನ್, ಕೆ. ಆನಂದ ಹೆಗ್ಡೆ ಮಂಜುನಾಥ ಭಕ್ತ, ಉದ್ಯಾನಿಕರ ರೆವಿನ್ಯೂ ಇನ್ಸ್‌ಪೆಕ್ಟರರ ಭಾಷಣದೊಂದಿಗೆ ಯಥಾಸಾಂಗವಾಗಿ ನೆರವೇರಿತು.

ಬೆಂಗಳೂರಲ್ಲಿ ಡಾ। ಟಿ. ಎಮ್. ಎ. ಪೈಗಳಿಗೆ ಸತ್ಕಾರ—ಬ್ಯಾಂಕಿಂಗ್ ವ್ಯವಹಾರದಲ್ಲಿ ನಿರತನಾಗಿರುವ ಸಂಸ್ಥೆಗಳು ಜನರಿಗೆ ಸೇವೆ ಸಲ್ಲಿಸುವುದಾಗಿದ್ದು ನಂಬಿಕೆ, ವಿಶ್ವಾಸವನ್ನು ಹುಟ್ಟಿಸುವಂತಹುದಾಗಿರಬೇಕಲ್ಲದೆ ಜನರ ಸಂಪರ್ಕವನ್ನು ಹೊಂದಿ ಅವರ ಇಂಗಿತವನ್ನು ಅರಿತು ಪ್ರಗತಿದಾಯಕವಾದ ಕಾರ್ಯಗಳನ್ನು ಎಸಗಬೇಕು, ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ (ಉಡುಪಿ) ಇವರ ಕಾರ್ಯ ಪ್ರಗತಿ ಆದರಲ್ಲೂ ಅದರ ಪಿಗ್ಮಿ ಡಿಪಾಜಿಟ್ ಯೋಜನೆಯು ಜನಪ್ರಿಯವಾಗಿದೆ ಎಂದು ಮೈಸೂರು ಚೇಂಬರ್ ಒಫ್ ಕಾಮರ್ಸಿನ ಅಧ್ಯಕ್ಷರಾದ ಡಾ।ಬಿ।ಕೆ.ಕುಪ್ಪುಸ್ವಾಮಿ ನಾಯುಡುರವರು ಇದೇ ತಾ.2ರಲ್ಲು ಸಂಜೆ ಸಿಂಡಿಕೇಟಿನ ಚೇರ್ಮೆನ್ ಮತ್ತು ಮೆನೇಜಿಂಗ್ ಡೈರೆಕ್ಟರರಾಗಿರುವ ಡಾ। ಟಿ. ಎಮ್. ಎ. ಪೈಗಳ ಗೌರವಾರ್ಥವಾಗಿ ಬೆಂಗಳೂರು ನಗರದಲ್ಲಿ ಏರ್ಪಡಿಸಿದ ಸ್ವಾಗತ ಸಮಾರಂಭದ ಅಧ್ಯಕ್ಷಪೀಠದಿಂದ ಭಾಷಣಮಾಡಿ ಸಿಂಡಿಕೇಟಿನ ಅಭಿವೃದ್ಧಿ ಕಾರ್ಯಗಳನ್ನು ಪ್ರಶಂಸಿಸಿದರು. ಡಾ। ಪೈಗಳಿಗೆ ಮಾನಪತ್ರಗಳೂ ಅರ್ಪಿಸಲಾದುವು. ಡಾ। ಪೈಗಳ ಸಾಹಸ, ವ್ಯವಹಾರ ಕುಶಲತೆಗಳನ್ನು ಹಲವರು ಕೊಂಡಾಡಿ ಭಾಷಣವಿತ್ತರು. ಡಾ। ಪೈಗಳು "ನಾಳ್ಮೆ ನಿಲುವಾಗ ಉಳಿಸಿಕೊಳ್ಳಬೇಕು; ಸೌಖ್ಯವಿರುವಾಗ ಬಿಮೆ ಮಾಡಿಕೊಳ್ಳಬೇಕು" ಎಂದು ಬೋಧಿಸಿ, ವ ಭಾಷಣಮಾಡಿ ತನ್ನನ್ನು ಗೌರವಿಸಿದ್ದಕ್ಕೆ ಆಭಾರ ಸೂಚಿಸಿದರು.

ಎಸ್. ಎಸ್. ಎಲ್. ಸಿ. ಪರೀಕ್ಷೆಯ ಫಲಿತಾಂಶಗಳು—ಗಂಗೊಳ್ಳಿ ಹ್ಯಾಸ್ಕೂಲಿನ 34 ಮಂದಿ ವಿದ್ಯಾರ್ಥಿಗಳಲ್ಲಿ 23 ಮಂದಿ (67.6%) ಪಿರ್ಡಾಲ ನವಜೀವನ ಹ್ಯಾಸ್ಕೂಲಿನ 63 ಮಂದಿಯಲ್ಲಿ 44 (70%) ಮತ್ತು ಬೋರ್ಡು ಹ್ಯಾಸ್ಕೂಲಿನ 85 ಮಂದಿಯಲ್ಲಿ 37 ಮಂದಿ ಪಾಸಾಗಿರುತ್ತಾರೆ.

ಕಾರ್ಕಳ—ಇಲ್ಲಿಯ ಬೋರ್ಡು ಹ್ಯಾಸ್ಕೂಲಿನ ವಿದ್ಯಾರ್ಥಿ ಶ್ರೀ ನೈ. ವಿಠಲ ಪೈ ಎಂಬಾತನು ಈ ಬಾರಿಯ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಒಟ್ಟು 500 ಮಾರ್ಕುಗಳಲ್ಲಿ 422 ಮಾರ್ಕುಗಳನ್ನು ಪಡೆದಿರುವುದು ಅಭಿನಂದನೀಯವಿದೆ.

ಹಂಗಾರಕಟ್ಟೆ ಬೆಂಗ್ರೆ—ಪ್ರಾಚೀನ ಕಾಲದಲ್ಲಿ ವ್ಯಾಪಾರೀ ಸ್ಥಳವೆಂದು ಹೆಸರು ಪಡೆದ ಹಂಗಾರ ಕಟ್ಟೆಯ ಅಳಿವೆಯು ಇದೀಗ ಮೂರು ವರುಷಗಳಿಂದ ಕೊರೆಕೊರೆದು ದೊಡ್ಡದಾಗಿ ಬರುತ್ತ, ಸಮುದ್ರ ಕಿನಾರೆಯ ತೋಟ, ಮನೆ ಗುಡಿಸಲುಗಳೆಲ್ಲ ನಮುವ ಸಾಧ್ಯತೆಗಳಿರುವುದು. ಈ ವರುಷವು ಕೂಡಾ ಈಗಿನ ಬಂದ ಜಡಿಮಳೆಯ ಪೆಂಡ ಅಳಿವೆ ಬಾಗಿಲು ಭೀಕರವಾಗಿ ಸಮುದ್ರವು ಉಕ್ಕಿಬಂದು ಮನೆಮಾರುಗಳು ನೀರು ಪಾಲಾದವೆಂದೂ ಪರಿಹಾರವಾಗಿ ಹಲವರು ನಿರ್ಗತಿಕರಾಗಿದ್ದಾರೆಂದೂ ತಿಳಿದು ಬರುತ್ತದೆ.

ಮಣಿಪಾಲ—ದಲ್ಲಿ ಸಸಿದಿನಾಚರಣೆಯು ಇದೇ ತಿಂಗಳ ಮೊದಲನೆಯ ದಿನ ಸ್ಥಳೀಯ ಪ್ರಾಥಮಿಕ ಶಾಲೆಯಲ್ಲಿ ಯಶಸ್ವಿಯಾಗಿ ಜರಗಿತು. ವಿವಿಧ ಘೋಷಣೆಗಳೊಂದಿಗೆ ಹೊರಟ ಮಕ್ಕಳ ಮೆರವಣಿಗೆಯು ಅಲ್ಲಲ್ಲಿ ಸಸಿಗಳನ್ನು ನೆಡುತ್ತಾ ಶಾಲೆಗೆ ಮರಳಿತು. ಬಳಿಕ ಶಾಲೆಯಲ್ಲಿ ಶ್ರೀ ಉಪೇಂದ್ರ ಪೈಯವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ, ಹಲವರು ಈ ದಿನಾಚರಣೆಯ ಮಹತ್ವ ಮತ್ತು ಅವಶ್ಯಕತೆಯ ಕುರಿತು ಭಾಷಣಗಳನ್ನಿತ್ತರು. ಕೊನೆಗೆ ಸಸಿ ನೆಡುವಿಕೆಯನ್ನು ಪ್ರೋತ್ಸಾಹಿಸಲು ಒಂದು ಸ್ಪರ್ಧೆಯನ್ನೇರ್ಪಡಿಸಲು ಸಮಿತಿಯೊಂದನ್ನು ನೇಮಿಸಲಾಯಿತು.

ಸ್ಪರ್ಧೆಯ ನಿಯಮಗಳು— ೧. ಈ ಸ್ಪರ್ಧೆಯಲ್ಲಿ ಮಣಿಪಾಲದಿಂದ ಮೂರು ಮೈಲುಗಳೊಳಗಿನ ಎಲ್ಲ ವಿದ್ಯಾರ್ಥಿ ಹಾಗೂ ಸಾರ್ವಜನಿಕರು ಭಾಗವಹಿಸಬಹುದು. ೨. ನೆಟ್ಟ ಸಸಿಗಳಲ್ಲಿ ಪರ್ಸಂಟೇಜ್ ವಿದ್ಯಾರ್ಥಿಯದ್ದಾದರೆ ೫, ಇತರರದ್ದಾದರೆ ೧೫, ಸಸಿಗಳಾದರೂ ಉಳಿದಿರಬೇಕು. ೩. ವಿದ್ಯಾರ್ಥಿಗಳಿಗೆ ೧೫, ಮತ್ತು ಇತರರಿಗೆ ೧೫ ಮತ್ತು ೧೦ ರೂಪಾಯಿಯ ಮೂರು ಪಾರಿತೋಷಕಗಳಿರುವುವು ೪. ಉಕ್ತ ಪಾರಿತೋಷಕವು ವಿಜೇತರಿಗೆ ಬರುವ ವರುಷದ ಸಸಿ ದಿನಾಚರಣೆಯಲ್ಲಿ ಕೊಡಲ್ಪಡುವುದು. ೫. ಸ್ಪರ್ಧಾಳುಗಳು ಆದಷ್ಟು ಶೀಘ್ರದಲ್ಲಿ ತಮ್ಮ ಹೆಸರು ಮತ್ತು ವಿಳಾಸವನ್ನು ಸಮಿತಿಯ ಕಾರ್ಯದರ್ಶಿಯಾದ ಮಣಿಪಾಲ ಹಾಯಿಸ್ಕೂಲಿನ ಮುಖ್ಯೋಪಾಧ್ಯಾಯರಿಗೆ ತಿಳಿಸಬೇಕು.

ಗುರುಕಂಬಳ — ಜುಲಾಯಿ ತಾ. 16ನೇ ಮಂಗಳವಾರ ಪಾಡಿಕೆಯಂತೆ ಗುರುಕಂಬಳ ಅಸ್ಸಾರುದ್ದೀನ್ ವಲೀಯವರ ಈ ವರುಷದ ಸಂದಲ್ ಮತ್ತು ಉರೂಸ್ ಜರಗಿಸಲ್ಪಡುವುದು.

ಕೊಟ್ಟಾರ:—ಶ್ರೀ ಕೋದಂಡರಾಮ ಹೊಳ್ಳರಿಂದ ನೂತನವಾಗಿ ಕಟ್ಟಿಸಲ್ಪಟ್ಟ ಬೋರ್ಡ್ ಎಲಿಮೆಂಟರಿ ಶಾಲೆಯ ಉದ್ಘಾಟನೆಯು 2-7-52ರಲ್ಲು ರೆವರೆಂಡ್ ಫಾದರ್ ಡಿ' ಸೋಜಾರವರ ಅಧ್ಯಕ್ಷತೆಯಲ್ಲಿ ಶ್ರೀ ಯು. ಬಿ. ಆಚಾರ್ಯರಿಂದ ಜರಗಿಸಲ್ಪಟ್ಟಿತು.

ಕಡಂದಲೆ—ಇಲ್ಲಿಯ ಬೋ|ಹಾ|ಎ| ಶಾಲೆಯಿಂದ ಸರಕಾರಿ ಪರೀಕ್ಷೆಗೆ ಕುಳಿತ 19 ಮಂದಿಯಲ್ಲಿ ಇಂಗ್ಲಿಷ್ ಸಮೇತ 18ಮಂದಿ ಪಾಸಾಗಿರುವರು.

ಉಪ್ಪೂರು- ಇದೇ ತಾ 5ರಲ್ಲು ಶ್ರೀ ಯು. ಕೆ ಕೃಷ್ಣಯ್ಯ ಸೆಟ್ಟರ ಎರಡು ವರುಷದ ಹರ್ಷಲತಾ ಎಂಬ ಮಗು ಮನೆಯಲ್ಲೇ ಆಡುತ್ತಿರುವಾಗ ಒಂದು ಸಣ್ಣ ಗೋಡೆ ಕುಸಿದುಬಿದ್ದು ಆಕಾಲ ಮೃತ್ಯುವಿಗೆ ತುತ್ತಾದುದು ಅತ್ಯಂತ ವಿಷಾದಕರ.

ದ| ಯು. ಬಿ ನಾರಾಯಣ ರಾಯರ ವಿದೇಶ ಪ್ರಯಾಣ—ಡಾ| ಯು. ಬಿ. ನಾರಾಯಣ ರಾಯರು ಪಶ್ಚಿಮದ ಅಂತರ ರಾಷ್ಟ್ರೀಯ 'ಡೆರ್ಮಟಲೋಜಿಕಲ್' ಪರಿಷತ್ತಿಗೆ ಹಿಂದೂದೇಶದ ಪ್ರತಿನಿಧಿಗಳಲ್ಲೊಬ್ಬರಾಗಿಯೂ, ಭಾರತದ ಶಾಖೆಯ ಕಾರ್ಯದರ್ಶಿಗಳಾಗಿಯೂ ಕಳೆದ ತಾ. 26 ರಂದು ಲಂಡನಿಗೆ ಸಮುದ್ರಮಾರ್ಗವಾಗಿ ಹೋಗಿರುತ್ತಾರೆ. ಪರಿಷತ್ತು ಇದೇ ತಾ. 21 ರಿಂದ 26ರ ತನಕ ಲಂಡನಿನಲ್ಲಿ ಜರಗುವುದು. ಡಾ। ರಾಯರು ಪರಿಷತ್ತು ಮುಗಿದ ನಂತರ ಸಾಧಾರಣ ಮೂರು ತಿಂಗಳ ಕಾಲ ಯುರೋಪದ ಇತರ ಪ್ರಾಮುಖ್ಯ ಸ್ಥಳಗಳನ್ನು ಸಂದರ್ಶಿಸಲಿರುವರು. ದ. ಕ. ಜಿಲ್ಲೆಯವರೂ ಬೊಂಬಾಯಿಯ ಜನಪ್ರಿಯ ಡಾಕ್ಟರರೂ ಆದ ರಾಯರಿಗೆ ಬೊಂಬಾಯಿಯ ಮಿತ್ರರೂ ಹಿತಚಿಂತಕರೂ ಕಳೆದ ತಾ. 24ರಲ್ಲು ಚಹಾ ಸತ್ಕಾರವನ್ನಿತ್ತು ಗೌರವಿಸಿದರು.

ಮಂಗಳೂರು

ಆತ್ಮಹತ್ಯೆ- ಮಂಗಳೂರಿನ ಸಿಟಿಬಸ್ ಕಂಡಕ್ಟರ್ ಶ್ರೀ ಗುಂಡುರಾವ್, ಅವರ ಹೆಂಡತಿ ಮನೋರಮಾ ಎಂಬವಳು ತನ್ನ ಮೂರು ತಿಂಗಳ ಅಂಬಿಕಾ ಎಂಬ ಶಿಶುವನ್ನು, ಸುಧಾಕರ್, ಮತ್ತು ಸುಧಾಕರ ಎಂಬ ಮಕ್ಕಳನ್ನು ಇದೇ ತಾ 4ರಲ್ಲು ರಾತ್ರಿ ಮನೆಯ ಸಮೀಪದ ಒಂದು ಕೆರೆಗೆ ದೂಡಿ, ಜಯಂತಿ ಎಂಬ ಹುಡುಗಿಯೊಂದಿಗೆ ಸ್ವಲ್ಪ ದೂರದಿರುವ ಇನ್ನೊಂದು ಕೆರೆಯಲ್ಲಿ ಹಾರಿದಳೆಂದು ವರದಿಯಾಗಿದೆ. ಇತ್ತೀಚೆಗೆ ಅವಳ ಗಂಡನು ರಿಜಿಸ್ಟ್ರಿ ಮೂಲಕ ಮತ್ತೊಂದು ಮದುವೆ ಮಾಡಿಕೊಂಡಿದ್ದು ಇವಳನ್ನೂ ಮಕ್ಕಳನ್ನೂ ದುರ್ಲಕ್ಷಿಸುತ್ತಿದ್ದನೆಂದೂ ಅದರಿಂದ ಜಿಗುಪ್ಸೆಗೊಂಡು ಅವಳು ಈ ರೀತಿ ಮಾಡಿದಳೆಂದೂ ಹೇಳಲಾಗುತ್ತಿದೆ.

ಶ್ರೀ. ಎಂ. ಎಸ್. ಶ್ರೇಷ್ಠರ ನಿಧನ- ದ. ಕ. ಜಿಲ್ಲೆಯ ರೋಮನ್ ಕಥೋಲಿಕ್ ಸಮಾಜದ ಗಣನೀಯ ವಯೋವೃದ್ಧ ವ್ಯಕ್ತಿಗಳಾದ ಶ್ರೀ ಎಮ್. ಎಸ್. ಶ್ರೇಷ್ಠ ಅವರು ತಮ್ಮ ಸಾಧಾರಣ 80 ವರ್ಷ ಪ್ರಾಯದಲ್ಲಿ ತಮ್ಮ ಮನೆಯಲ್ಲಿ ಇದೇ ತಾ 6ರಲ್ಲು ಬೆಳಿಗ್ಗೆ ಪರಲೋಕ ವಾಸಿಗಳಾದರೆಂದು ತಿಳಿಸಲು ತುಂಬಾ ವಿಷಾದವೆನಿಸುತ್ತದೆ. ದಿವಂಗತರು ಬಾರ್-ಎಟ್-ಲಾ ಪದವೀಧರರಿದ್ದು ನಗರದ ಪಿತಾ ಮಹರಾಗಿದ್ದರು ಅಲ್ಲದೆ ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರರಾಗಿದ್ದುಕೊಂಡು ಜಿಲ್ಲೆಗೆ ಸೇವೆ ಸಲ್ಲಿಸಿದ್ದರು. ಇವರು ಕಾಂಗ್ರೆಸ್ ಅಭಿಮಾನಿಗಳಿದ್ದು ಸತತ ಖಾದಿಧಾರಿಗಳಾಗಿದ್ದರು. ಇವರ ಅಗಲುವಿಕೆಯಿಂದ ಕ್ರಿಸ್ತ ಸಮಾಜವು ಓರ್ವ ಗಣನೀಯ ಮುಂದಾಳುವನ್ನು ಕಳಕೊಂಡಂತಾಯಿತು. ಇವರ ಸಮಾಧಿ ಯಾತ್ರೆಯಲ್ಲಿ ಎರಡು ಸಾವಿರಕ್ಕೂ ಮಿಕ್ಕಿ ಜನರು ಬಂದಿದ್ದು ತಮ್ಮ ಕೊನೆಯ ಗೌರವವನ್ನು ಸಲ್ಲಿಸಿದರು.

ದೇಶೀಯ ವೈದ್ಯರ ಸಭೆಯು ಇದೇ ತಾ. 6ರಲ್ಲು ಡಾ। ಎಸ್. ಸಿ. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಮಿಲಾಗ್ರಿಸ್ ಶಾಲೆಯಲ್ಲಿ ಜರಗಿತು. ಡಾಕ್ಟರುಗಳಾದ ಎ. ವೆಂಕಪ್ಪಯ್ಯ, ಬಿ. ಆರ್. ಹರಿದಾಸ್, ಎ. ಕೆ. ಹಿ. ಶರ್ಮ ಎಮ್. ಎಸ್. ಎ. ಶರ್ಮ ಪಿ ಎನ್. ಭಟ್ ಮೊದಲಾದವರು ಮಾತನಾಡುತ್ತಾ ಆಸವಾರಿಷ್ಟಗಳು ಮಾದಕಗಳಲ್ಲವೆಂದು ಸೂಚಿಸಿದರು. ಬಳಿಕ ಈ ಕೆಳಗಿನ ನಿರ್ಣಯಗಳು ಪಾಸಾದುವು. [1] ಸರಕಾರದವರು ಆಯುರ್ವೇದ ಔಷಧಗಳ ಮೇಲೆ ಹೊರಿಸುವ ತೆರಿಗೆಗಳು ನ್ಯಾಯವಾದುವುಗಳಲ್ಲ. ಆಸವಾರಿಷ್ಟಗಳು ಮಾದಕಗಳಲ್ಲವಾದುದರಿಂದ ಅವುಗಳ ಮೇಲೆ ತೆರಿಗೆ ಹೊರಿಸಿದುದು ನ್ಯಾಯ ಮತ್ತು ಜನ ಹಿತದ ದೃಷ್ಟಿಯಿಂದ ಸರಿಯಲ್ಲ 2. ಅದ ಪ್ರಯುಕ್ತ ಜಿ. ಎಮ್. ಎಸ್. ನಂಬ್ರ 1505ರ ಪ್ರಕಾರ ಈ ಔಷಧಗಳ ಮೇಲೆ ಹೊರಿಸಬೇಕೆಂದಿರುವ ತೆರಿಗೆಯು ಸರಿಯಾದುದಲ್ಲ. ಬಡವರಿಗೆ ಈ ಔಷಧಿಗಳ ಪ್ರಯೋಜನವಿಲ್ಲದಂತೆ ಮಾಡುವುದಾದ್ದರಿಂದ ಹಾಗೆ ತೆರಿಗೆ ಹೊರಿಸಿದುದಕ್ಕೆ ಈ ಸಭೆಯು ನಿಷೇಧ ವ್ಯಕ್ತಪಡಿಸುತ್ತದೆ. (3) ನಿಲುಜನರಿರುವ ಒಂದು ಶಿಷ್ಟಮಂಡಲವನ್ನು ಮದ್ರಾಸಿಗೆ ಕಳುಹಿಸಿ ಸರಕಾರಕ್ಕೆ ದೇಶೀಯ ವೈದ್ಯರ ಅಭಿಪ್ರಾಯವನ್ನು ತಿಳಿಸಬೇಕೆಂದು ಗೊತ್ತುಮಾಡಲಾಯಿತು. ಸರಕಾರದ ಉತ್ತರ ಬರುವವರೆಗೆ 'ಸ್ಟಾಂಪಲ'ಗಳನ್ನು ಕಳುಹಿಸುವುದನ್ನು ಪ್ರಕೃತ ನಿಲ್ಲಿಸಬೇಕೆಂದು ಅಭಿಪ್ರಾಯಪಾಯಿತು.

ಅಕ್ಕಿಯ ಬೆಲೆಯ ಕುರಿತು ವಿ... ಯೊಂದರಲ್ಲಿ ಮಂಗಳೂರಿನ ಎಡ್ವೊಕೇಟ್ ಶ್ರೀ ಬಿ. ಬಿ. ಸೆಟ್ಟರು, ಅಕ್ಕಿ ಸಂಗ್ರಹವು ಕಮಿಶನ್ ಏಜನ್ಸಿ ಮೂಲಕವಾಗುವುದು ಉತ್ತಮವೆಂದೂ ಯಾರು ಬೇಕಾದರೂ ಕಮಿಶನ್ ಏಜನ್ಸಿ ಸ್ಥಾಪಿಸಿ ಅಕ್ಕಿಯನ್ನು ವಿಕ್ರಯಿಸಬಹುದೆಂದೂ ಹೇಳಿ ಎವರಲ್ಲದೆ ಈ ಪದ್ಧತಿಯಿಂದ ಯಾರಿಗೂ ಯಾವ ರೀತಿಯ ಮಿತಿಮೀರಿದ ಲಾಭಕ್ಕೆ ಎಡೆ ಇರಲಾರದೆಂದೂ ಅಕ್ಕಿಯ ಕ್ರಯ ಏರದಂತೆ ನೋಡಲು ಈ ಏಜನ್ಸಿಗಳೆಂದೂ ಸೂಚಿಸಿರುವರು ಸ್ವಾಭಾವಿಕವಿದ್ದ ಅದನ್ನು ಪ್ರಾರ್ಥಿಯಾಗಿ ಪ್ರಕಟಿಸಲಿಲ್ಲ, ಸಂ. ನ.

ಉಡುಪಿ ಡಿ. ಮು. ಕೋರ್ಟಿನಲ್ಲಿ.

R E P. 61/1952 O. S. 351/1949

ಜನಾರ್ಧನ ಪೋತಿ, ಯವರ ಜನರಲ್ ಏಜಂಟ್, ಕೆ ಕೃಷ್ಣಯ್ಯ —ಅರ್ಜಿದಾರ

ಮತ್ತು

ಅೃತಪ್ಪ ಕೂಡಾ —ಎದುರು

ಇವರೊಳಗೆ

1ನೇ ಎದ್ರಿ, ಅೃತಪ್ಪ ಬಾಬ ಪೂಜಾರಿ ಮಗ ಉಡುಪಿ ತಾಲ್ಲೂಕು ಉದಿಯಾವರ ಗ್ರಾಮ. ಮೋಟರ್ ಡ್ರೈವರ್ ಹಾಲಿ. Fakiru Rustomji & Sons Carnac Bridge Goods Station Bomday, ಇವರಿಗೆ. ಸದ್ರಿ ಅರ್ಜಿದಾರನು ಡಿಕ್ರಿಯಿಂದ ಶಾಬುವ ಜವಾಬ್ದಾರಿಯಿರುವ ಸ್ಥಿರಾಸ್ತಿಗಳ ವಿಕ್ರಯದ ಬಗ್ಗೆ ಅರ್ಜಿಮಾಡಿದ್ದಾನೆ ಅದುದರಿಂದ ವಿಕ್ರಯದ ಪ್ರಸ್ತಾವನ ಶರ್ತಗಳನ್ನು ನಿರ್ಣಯಿಸಲಿಕ್ಕೆ 1952ನೇ ಜುಲಾಯಿ ತಿಂಗಳ 25ನೇ ತಾರೀಕು ನಿಶ್ಚಯಿಸಲಾಗಿರುತ್ತದೆಂತ ಈ ಮೂಲಕ ತಿಳಿಸಲಾಗುತ್ತದೆ.

V R. Kidyur,
Advocate for Petitioner.
ಉಡುಪಿ, ತಾರೀಕು 7-7-1952.

ಋತುಸ್ರಾವ ನಿಂತಿತು

'ಋತುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹನ್ನೆರಡು ಗಂಟೆಗಳಲ್ಲಿ ಋತುಸ್ರಾವವಾಗುವುದು. ಹಕೋಟೆಗೆ ಬರುವುದು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಶಾಶ್ವತ ಗುಣವಾಗಿದೆ. ಬೆಲೆ: ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- |ವಿ ಪಿ ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, F. DS. (N. J.)
Tollygunge CALCUTTA
ಸ್ಟಾಕಿಸ್ಟ್ಸ: ಗುರುಜಾಕೆಂಪೆನಿ, ಮಂಗಳೂರು.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಜೆಲ್ಲಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಂಜೆ ವ್ಯಾಸಾಚಾರ್ಯರ್,
ರಥಬೀದಿ, ಉಡುಪಿ

CONSULT

FOR excellent, efficient and reliable service
in the matter of
ELECTRICAL INSTALLATIONS
for residences, offices, factories, etc
at very competitive and attractive rates
Repairs, renewals, new installations, fitting of
Electric Motors, Fans, etc also undertaken
for prompt and quick service

THE UDIPI ELECTRICAL STORES
ESTD: 1938.
Electrical Engineers & Contractors, Church Road, **UDIPI.**

ನಡೆಯುವ ಚಿತ್ರ
ಸಾಹಸ ಸನ್ನಿವೇಶಗಳಿಂದ ಸಂಪೂರ್ಣತೆ ಹೊಂದಿದ
ಇಂಗ್ಲಿಷ್ ವರ್ಣಚಿತ್ರ
ಸ್ಪ್ರೀಟ್ಸ್ ಓಫ್ ಲಾರೆಡೊ
ತಾ. 11-7-52ರಿಂದ
ಈ ಬರುವುದ ಅಖಿಲ ಭಾರತ ಚಲಚಿತ್ರ ಜಾತ್ರೆಯಲ್ಲಿ ಸರ್ವೋತ್ಕೃಷ್ಟವೆಂದು
ಸಾರಲ್ಪಟ್ಟ ಶಾಂತಾರಾಮರ:— ಅಮರ ಭೂಪಾಳಿ
ನವತಾರೆ ಸಂಧ್ಯಾ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಡವಾಗಿ ಮುಟ್ಟಾಗುವಿಕೆಗಾಗಿ ಗಾಬರಿಯಾಗಬೇಡಿರಿ

'ಋತುರಾಜ'ವನ್ನು ಸೇವಿಸಿರಿ. ನಾಲ್ಕೈದು ತಿಂಗಳು ಮುಟ್ಟಾಗದಿದ್ದರೂ, ಒಡನೆಯೇ ಋತುಸ್ರಾವವಾಗುವುದು. ಮುಟ್ಟು ದೋಷದ ಇತರ ಗಂಡಾಂತರಗಳು ಕೂಡಾ 24 ತಾಸುಗಳೊಳಗೆ ಆಶ್ಚರ್ಯಕರವಾಗಿ ಉಪಶಮನವಾಗುವುವು. ಇದಕ್ಕೆ ಸಂಶಯ ಬೇಡ.

ಕಿಮ್ಮತ್ತು—ರೂ. 7-3-0, ವಿ. ಪಿ. ರೂ. 1.
ಸ್ಪೆಶಲ್ ರೂ. 24 ವಿ ಪಿ ರೂ. 1-12-0

Binapani Oushadhalaya
151 Mooris Avenue, Calcutta-35.
Stockist. Vaidya C. R. Kamath
MANGALORE.

ಮಂಗಳೂರು

ಟೆಲಿಫೋನ್ ಸೌಕರ್ಯ—ದ. ಕ. ಜಿಲ್ಲೆಯ ಕಾರ್ಕಳ, ಪುತ್ತೂರು, ಗಂಗೊಳ್ಳಿ, ಬಂಟ್ವಾಳ ಸ್ಥಳಗಳಿಗೂ ಟೆಲಿಫೋನ್ ಸೌಕರ್ಯವನ್ನು ಒದಗಿಸಬೇಕೆಂದು ಜಿಲ್ಲಾ ವಾಣಿಜ್ಯಸಂಘದ ಅಧ್ಯಕ್ಷ ಶ್ರೀ ಎ ಉಪೇಂದ್ರನಾಥ ರಾಯರೂ ಕೌನ್ಸಿಲು ಓಫ್ ಸ್ಟೇಟ್ ಮೆಂಬರ್ ಶ್ರೀ ಕೆ. ಸದಾನಂದ ಹೆಗ್ಡೆಯವರೂ ಮಂಗಳೂರಿಗೆ ಬಂದಿದ್ದ ಟೆಲಿಗ್ರಾಫ್ ಇಲಾಖಾ ಡೈರೆಕ್ಟರರನ್ನು ಈಚೆಗೆ ಭೇಟಿಯಾಗಿ ನಿವೇದಿಸಿಕೊಂಡರು.

ಮುಕ್ತ ಪೇಟೆಯಲ್ಲಿ ಮೈದಾ ಹಿಟ್ಟು—ದ. ಕ ಜಿಲ್ಲಾ ಸೆಂಟ್ರಲ್ ಕೋಆಪರೇಟಿವ್ ಹೋಲ್ ಸೇಲ್ ಸ್ಟೋರ್ಸಿನಲ್ಲಿ ಮೈದಾ ಹಿಟ್ಟು ಮಾರುವದಿದೆ. 1½ ಮಣದ ಚೀಲಕ್ಕೆ ರೂ 53-5-4 ಕ್ರಯ ಇದೆ. ಸೇಲ್ಸ್ ಟೇಕ್ಸ್ ಪ್ರತ್ಯೇಕ. ಬಾಯಿಸಿ ಉಳ್ಳವರು ಮಂಗಳೂರು ಎ. ಡಿಪೋವಿನಲ್ಲಿ ಪಡೆಯಬಹುದು. ಪರ್ಮಿಟು ಇತ್ಯಾದಿಗಳ ಅವಶ್ಯಕತೆಯಿಲ್ಲ.

ಅಕ್ಕಿ ಧಾರಣೆ ಒಮ್ಮೆ ಸ್ವಲ್ಪ ಏರಿದ್ದ ದರ ಕ್ರಮೇಣ ಇಳಿಯುತ್ತಾ ಬರುತ್ತಿದೆ. ಕಳ್ಳಸಾಗಾಟವಾಗದಂತೆ ಸರಕಾರವು ವಿಶೇಷ ನಿಗಾ ತೆಗೆದುಕೊಂಡರೆ ಇನ್ನೂ ದರ ಇಳಿಯಬಹುದು.

ಮಾದರಿ ತೋಟ ಪಶ್ಚಿಮ ಕರಾವಳಿಯಲ್ಲಿ ಹಣ್ಣು ಹಂಪಲುಗಳ ಬೆಳೆಯನ್ನು ಪ್ರೋತ್ಸಾಹಿಸುವುದಕ್ಕಾಗಿ ಮಂಗಳೂರಿನಲ್ಲೊಂದು ಮಾದರಿ ತೋಟವನ್ನು ಸ್ಥಾಪಿಸುವ ಯೋಜನೆಯನ್ನು ಮದ್ರಾಸು ಸರಕಾರವು ಮಾಡಿರುವುದು.

ಕಾಶ್ಮೀರ ದಿನಾಚರಣೆಯು ಕಳೆದ ತಾ 29ರಲ್ಲು ಜನಸಂಘದ ಆಶ್ರಯದಲ್ಲಿ ಡಾ. ಎಮ್. ಎಸ್. ಎ. ಶರ್ಮರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಆಚರಿಸಲಾಯಿತು. ಶ್ರೀ ಯು. ರಾಜಾರಾಮ ಮಲ್ಯರು ಸ್ವಾಗತ ಮಾತುಗಳನ್ನಾಡಿದರು. ಶ್ರೀಗಳಾದ ಕೆ. ಸಂಜೀವ ಶೆಟ್ಟಿ, ಕೆ. ಶ್ಯಾಮ ಭಟ್, ಕೆ. ಮಧ್ವಾಚಾರ್ಯ ಮೊದಲಾದವರು ಮಾತನಾಡಿದ ಬಳಿಕ ಈ ಕೆಳಗಿನ ನಿರ್ಣಯವು ಸ್ವೀಕೃತವಾಯಿತು. "ಕಾಶ್ಮೀರವು ಭಾರತದ ಒಂದು ಅವಿಭಾಜ್ಯ ಭಾಗವಾಗಿದೆ. ಮತ್ತು ಭಾರತ ಒಕ್ಕೂಟದೊಳಗೆ ಅದರ ವಿಲೀನವು ಇತರ ಸಂಸ್ಥಾನಗಳಂತೆ ಸಂಪೂರ್ಣವಾಗಿರುತ್ತದೆ. ಆದುದರಿಂದ ಕಾಶ್ಮೀರದ ಘಟನಾ ಸಮಿತಿಗೆ, ಅಲ್ಲಿನ ಅರಸೊತ್ತಿಗೆಯನ್ನು ಕೊನೆಗೊಳಿಸುವುದಕ್ಕೂ, ಸ್ವತಂತ್ರ ಧ್ವಜವನ್ನು ನಿರ್ಮಿಸುವುದಕ್ಕೂ, ಘಟನೆಯಲ್ಲಿ ಅಧಿಕಾರವಿರಲಿಲ್ಲ. ಆದ್ದರಿಂದ ಘಟನಾ ವಿರೋಧವಾದ ಹಾಗೂ ಪ್ರಜಾಪ್ರಭುತ್ವಕ್ಕೂ ವಿರೋಧವಾದ ಕಾಶ್ಮೀರ ಘಟನಾ ಸಮಿತಿಯ ನಿರ್ಣಯಗಳನ್ನು ಜಾರಿಗೆ ತರಲು ಬಿಡಬಾರದೆಂದೂ ನಮ್ಮ ಘಟನೆಯನ್ನು ತಿದ್ದುಪಡಿ ಮಾಡಬಾರದೆಂದೂ ಈ ಸಭೆಯು ಭಾರತ ಸರಕಾರವನ್ನು ಪಾರ್ಲಿಮೆಂಟನ್ನೂ ವಿನಂತಿಸುತ್ತದೆ.

ಜಿಲ್ಲಾ ಸಮಾಜವಾದಿ ಪಕ್ಷದ—ಕಾರ್ಯಸಮಿತಿಯ ಸಭೆಯು ಕಳೆದ ತಾ 29ರಲ್ಲು ಜರಗಿತು. ಮದ್ರಾಸು ಸರಕಾರವು ನಿಯಂತ್ರಣವನ್ನು ತೆಗೆದುಹಾಕಿದ ನಂತರ ಅಕ್ಕಿಯ ಬೆಲೆ ಏರತೊಡಗಿದುದನ್ನು ನಿಲ್ಲಿಸುವರೆ ವ್ಯಾಪಾರಸ್ಥರೂ ಭೂ ಮಾಲಿಕರೂ ಜಾಗರೂಕರಾಗಬೇಕೆನ್ನುವ, ಜಿಲ್ಲೆಯಲ್ಲಿ ಪ್ರಾರಂಭವಾಗಲಿರುವ ಸಾಮಾಜಿಕಾಭಿವೃದ್ಧಿ ಯೋಜನೆಯ ಕೆಲಸಗಳಲ್ಲಿ ಈ ಪಕ್ಷದ ಮೆಂಬರರು ಪ್ರಚಾರಕಾರ್ಯ ಕೈಕೊಳ್ಳಬೇಕೆನ್ನುವ, ಜಿಲ್ಲೆಯಲ್ಲಿ ಪಕ್ಷ ಎದ್ದಿಕುವ ಮತ್ತು ಆಸ್ತಿ ಸ್ವಾಧೀನತೆಯ ದಾವೆಗಳು ಹೆಚ್ಚುತ್ತ ಬರುತ್ತಿರುವುದರಿಂದ ವಕ್ಕಲುಹಕ್ಕ ಮಸೂದೆ ಬೇಗನೇ ಬರಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು. ಮಂಗಳೂರು ತಾಲೂಕಿನ ಮುನ್ನೂರು ಗ್ರಾಮದಲ್ಲಿ ನೂರಾರು ವರುಷಗಳಿಂದಲೂ ಇರುವ ಐದು ವಕ್ಕಲುಗಳನ್ನು, ಗೇಣಿ ಸಂಪೂರ್ಣ ಕೊಟ್ಟಿದ್ದರೂ, ಆಸ್ತಿ ಸ್ವಾಧೀನತೆಯ ದಾವೆ ಹೂಡಲಾದುದರಿಂದ ಅದರ ವಿರೋಧವಾಗಿ ಸತ್ಯಾಗ್ರಹ ಹೂಡುವ ಸಿದ್ಧತೆ ಮಾಡಬೇಕು ಮತ್ತು ಆ ಬಗ್ಗೆ ಸತ್ಯಾಗ್ರಹ ಸಮಿತಿಯೊಂದನ್ನು ರಚಿಸಬೇಕೆಂದೂ ನಿರ್ಧಾರವಾಯಿತು. ಪಕ್ಷದ ಜಿಲ್ಲಾ ಸಮ್ಮೇಳನವನ್ನು ಸಪ್ಟಂಬರು ತಿಂಗಳಲ್ಲಿ ಜರಗಿಸಬೇಕೆಂದು ತೀರ್ಮಾನವಾಯಿತು.

ಮಂಗಳೂರಿನಿಂದ ಹಾಸನ ಮಲ್ಪೆಗಳಿಗೆ ರೈಲ್ವೆಮಾರ್ಗ. ಮದ್ರಾಸು ಕೈಗಾರಿಕಾ ಮಂತ್ರಿಗಳೆದ್ದೆಡೆ ಜಿಲ್ಲಾ ಪ್ರತಿನಿಧಿಗಳ ಶಿಷ್ಟ ಮಂಡಲದ ನಿವೇದನೆ—ಮಂಗಳೂರಿನ ಶ್ರೀ ಕೆ. ಸದಾನಂದ ಹೆಗ್ಡೆ, ಮೆಂಬರ್ ಕೌನ್ಸಿಲ್ ಒಫ್ ಸ್ಟೇಟ್, ಇವರ ನಾಯಕತ್ವದಲ್ಲಿ ಶ್ರೀಗಳಾದ ಎ. ಉಪೇಂದ್ರನಾಥ ರಾವ್, ಎಲ್. ಸಿ. ಪಾಯಸ, ಡಾ। ಯು. ಪಿ. ಮಲ್ಯ, ಎಸ್. ನರ್ಸಪ್ಪಯ್ಯ, ಬಿ. ವೈಕುಂಠ ಬಾಳಿಗ, ಎಸ್. ಎಸ್. ಸುವರ್ಣ, ಕೆ. ವೆಂಕಟರಮಣ ಗೌಡ ಮತ್ತು ವೈ. ಮಂಜಯ್ಯ ಶೆಟ್ಟರಿರುವ ದ. ಕ ಜಿಲ್ಲೆಯ ಶಿಷ್ಟಮಂಡಲವೊಂದು ಇದೇ ತಾ 5ರಲ್ಲು ಮದ್ರಾಸು ಸರಕಾರದ ಕೈಗಾರಿಕಾ ಮಂತ್ರಿ ಡಾ। ಯು. ಕೃಷ್ಣರಾಯರನ್ನು ಭೇಟಿಯಾಗಿ ಮಂಗಳೂರಿನಿಂದ ಹಾಸನಕ್ಕೂ, ಮಲ್ಪೆಗೂ, ರೈಲ್ವೆ ಮಾರ್ಗಗಳನ್ನು ಬೇಗನೆ ನಿರ್ಮಿಸುವ ಆವಶ್ಯಕತೆಯನ್ನು ಸೂಚಿಸಿತು. ಮಾನ್ಯ ಮಂತ್ರಿಗಳು ಆ ಕುರಿತು ತಾವು ಯೋಚಿಸುವುದಾಗಿ ಆಶ್ವಾಸನೆ ಇತ್ತರೆಂದು ತಿಳಿದು ಬರುತ್ತದೆ.

ಮಂಗಳೂರು-ಹಾಸನ ರೈಲ್ವೆ ಮಾರ್ಗವನ್ನು ತೆರೆಯುವ ಕುರಿತು 1875ನೆ ಇಸವಿಯಿಂದಲೂ ಮದ್ರಾಸು ಮತ್ತು ಮೈಸೂರು ಸರ್ಕಾರಗಳು ಯೋಚಿಸುತ್ತಿದ್ದುವು ಎಂಬ ವಿಷಯವನ್ನು ಮಂತ್ರಿಗಳ ಗಮನಕ್ಕೆ ತರುತ್ತಾ ವ್ಯಾಪಾರ ಹಾಗೂ ಸಂಪರ್ಕ ದೃಷ್ಟಿಯಿಂದ ಜನತೆಯು ಈ ಮಾರ್ಗದ ಆವಶ್ಯಕತೆಯನ್ನು ಹೆಚ್ಚು ಹೆಚ್ಚಾಗಿ ಅನುಭವಿಸುತ್ತಿರುವುದೆಂದು ಶಿಷ್ಟ ಮಂಡಲದವರು ತಿಳಿಸಿದರು. ಮಂಗಳೂರು—ಮಲ್ಪೆ ರೈಲ್ವೆ ಮಾರ್ಗದ ವಿಷಯವನ್ನು 1932ರಲ್ಲೇ ಪರಿಶೀಲಿಸಲಾಗಿತ್ತಾದರೂ ಆರ್ಥಿಕ ಕೊರತೆಯಿಂದ ಅದನ್ನು ಹಿಂದಿಡಲಾಗಿತ್ತು. ಈ ಮಾರ್ಗವು ಬಹಳ ಜನಸಂಖ್ಯೆಯುಳ್ಳ ಪ್ರದೇಶದಿಂದ ಹಾದು ಹೋಗುವುದಲ್ಲದೆ ಈ ಪ್ರದೇಶವು ಕೃಷಿ ಉತ್ಪಾದನೆಗೆ ಪ್ರಖ್ಯಾತಿಪಟ್ಟಿರುವುದರಿಂದ ಮಾಲುಗಳ ಚಲಾವಣೆಯೂ ಹೆಚ್ಚಾಗಬಹುದೆಂದೂ ಅವರು ತಿಳಿಸಿದರು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. P. 38/52

ಶೀನಪ್ಪ ಶೆಟ್ಟಿ —ಅರ್ಜಿದಾರ

ಬಸವ ಶೆಟ್ಟಿ —ಎದ್ರಿ

ಅರ್ಜಿದಾರನ ಕಡೆಯಿಂದ ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದ್ರೆ–

ಅರ್ಜಿದಾರನ ಎದ್ರಿಯ ತಂದೆ ಗುಳಾಡಿ ಹೊಸಮನೆ ಮಹಾಲಿಂಗ ಸೆಟ್ರು 8-6-1951ರಲ್ಲು ರಜಿಸ್ಟ್ರಿ ಸಹಿ ಬರೆದಿಟ್ಟ ವೀಲು ಪ್ರಕಾರ ಅವರು ಮೃತಪಟ್ಟ ತರುವಾಯ ಅವರ ಸ್ವಂತ ಹಕ್ಕಿನ ಬಾಬ್ತು ವಿಶಿಷ್ಟ ಸ್ಥಿರ ಚರಸೊತ್ತುಗಳಿಗೆ ಮತ್ತು ಹೊರಗಿನಿಂದ ಬರತಕ್ಕ ಹಣಗಳಿಗೆ ಅರ್ಜಿದಾರನು ಹಕ್ಕುದಾರನಾಗುವುದರಿಂದ ಸದ್ರಿ ಮಹಾಲಿಂಗ ಶೆಟ್ರು 8-4-52ರಲ್ಲು ಉಡ್ಪಿ ತಾಲ್ಲೂಕು ಪಾಂಡೇಶ್ವರ ಗ್ರಾಮದಲ್ಲಿ ಮೃತಪಟ್ಟಿರುವಲ್ಲಿ ಮೃತ ಮಹಾಲಿಂಗ ಶೆಟ್ರಿಗೆ ಬರಬೇಕಾದ ಮೋಲ್ಯಾಣ್ಸದ ಅರ್ಜಿಯ A ಶೆಡ್ಯೂಲಿನಲ್ಲಿ ಕಾಣ್ಸದ ಹಣಗಳನ್ನು ವಸೂಲು ಮಾಡುವ ಬಗ್ಗೆ ತನಗೆ ವಾರಿಸ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರನು ದಾಕ್ಲು ಮಾಡಿದ ಮೋಲ್ಯಾಣ್ಸದ ಅರ್ಜಿಯು ಮೋಲ್ಯಾಣ್ಸದ ಕೋರ್ಟಿನಲ್ಲಿ 24-7-52ನೇ ದಿವ್ಸ ಹಗಲು ಗಂಟೆ 11ಕ್ಕೆ ತನ್ಕಿಗೆ ಇಡಲ್ಪಟ್ಟಿದೆ. ಅದ್ರಿಂದ ಈ ಕುರಿತು ಯಾರಾದ್ರೂ, ಆಕ್ಷೇಪ ಹೇಳುವವರಿದ್ರೆ ಅವರು ಸದ್ರಿ ದಿವ್ಸ ಸದ್ರಿ ಕೋರ್ಟು ಮುಂದೆ ಹ್ಯಾಜರು ಮಾಡಿಕೊಳ್ಳತಕ್ಕದ್ದು.

By order of the Court.

K. Soorappa Shetty.

Advocate for Petitioner.

Camp, Coondapoor.

Date 7-7-1952.

The Pangal Nayak Bank Ltd., Katapadi, S. K.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಕಟಪಾಡಿ, ದ. ಕ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡಕೊಂಡ ಈ ಕೆಳಗೆ ಕಾಣಿಸಿದ ಸಾಲಗಳ ಮರುಪಾವತಿ ಬಗ್ಗೆ ಸದ್ರಿಯವರಿಗೆ ಈ ನೋಟೀಸುಗಳ ಪೈಕಿ ಕೆಲವು ನೋಟೀಸುಗಳ ವಿಳಾಸದಾರರು ಮೃತಪಟ್ಟಿರುವ ಕಾರಣ, ಕೆಲವು ಇನ್ನಿತರ ಕಾರಣಗಳಿಂದಲೂ ವಾಪಾಸು ಬಂದಿರುವುದರಿಂದಲೂ, ಉಳಿದವುಗಳು ವಿಳಾಸದಾರರಿಗೆ ಸಿಕ್ಕಿಯೂ ಈ ತನಕ ಸದ್ರಿಯವರು ಸಾಲಗಳನ್ನು ಮರುಪಾವತಿ ಮಾಡದೆ ಇರುವುದರಿಂದಲೂ ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ ಸದರಿ ಸಾಲಗಳ ಬಾಬ್ತು ಬೇಂಕಿಗೆ ಬರಾ ಬ್ಯಾಲೇನುಗಳು ತಾ. 16-7-1952ನೇ ಬುಧವಾರದ ಒಳಗೆ ಮರುಪಾವತಿ ಆಗದೆ ಇದ್ದರೆ ಸದರೀ ಸಾಲಗಳ ಭದ್ರತೆಗೆ ಈಡಿಟ್ಟ ನಗಗಳನ್ನು ಇದೇ ಬರುವ ತಾ. 19-7-1952ನೇ ಶನಿವಾರ ಅಪರಾಹ್ನ ಗಂಟೆ 2ಕ್ಕೆ ಬೇಂಕಿನ ಇದೇ ಯಾ ಇತರ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು, ಏಲಂ ಕಾರಣಾಂತರದಿಂದ ಅದೇ ದಿನ ಆಗದಿದ್ದಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿಗೆ ಯುಕ್ತತೋರುವ ಇತರ ದಿನಗಳಲ್ಲಿ ಮಾಡಲಾದೀತು, ತಿಳಿದಿರಲಿ.

ಸಾಲದನಂಬ್ರ	ಈಡಿಟ್ಟವರ ಹೆಸರು ಮತ್ತು ವಿಳಾಸ	ಅಸಲು ರೂ
1543/49	ಚಂದು ಪೂಜಾರಿ, ಚಲ್ಲ ಪೂಜಾರಿ ಮಗ, ಕೋಟಿ ಗ್ರಾಮ, ಕಟಪಾಡಿ, ದ. ಕ.	15 0 0
1695/49	Y ಶಂಕರ ಪೂಜಾರಿ, Y ಪೋಂಕ್ರ ಪೂಜಾರಿ ಅಳಿಯ, ಏಣಗುಡ್ಡೆ, ಕಟಪಾಡಿ.	15 0 0
403/50	—do—	70 0 0
812/50	M ಸಂಜೀವ, M. ಅಪ್ಪಣ್ಣರ ಮಗ, ಮಣಿಪುರ ದ ಕ	25 0 0
876/51	ಬೆಮ್ಮರ್ ಪೂಜಾರಿ, ಚಂದು ಪೂಜಾರಿ ಮಗ, ಕೋಟೆ ಗ್ರಾಮ, ಕಟಪಾಡಿ,	20 0 0
2094/50	ಚಂದು ಮರಕಾಲ, ಮೊಣ್ಣ ಮರಕಾಲರ ಅಳಿಯ ಕೋಟೆಗ್ರಾಮ, ಕಟಪಾಡಿ ದ. ಕ.	90 0 0
1445/51	ಅಬ್ಬಾಸ್ ಸಾಹೇಬ, ಅಬ್ದುಲ್ ಖಾದರ ಸಾಹೇಬರ ಮಗ, ಕೋಟೆಗ್ರಾಮ, ಕಟಪಾಡಿ	85 0 0
2583/50	ಹಿಲಾರಿ ಮಿನೇಜಸ್, ಇನಾಸ್ ಮಿನೇಜಸರ ಮಗ, ಬೆಳ್ಳೆಗ್ರಾಮ, ಮೂಡುಬೆಳ್ಳೆ ದ. ಕ.	200 0 0
59/51	ರಮೊಣಾ ಮೆಂಡೋನ್ಸ್, ಆಗೊಸ್ತಿನ್ ಡಿ'ಸೋಜರ ಹೆಂಡತಿ, ಶಂಕರಪುರ, ದ. ಕ.	170 0 0
1117/51	ಶೀನ ಸೇರಿಗಾರ, ದಾಸು ಸೇರಿಗಾರರ ಅಳಿಯ, ಗಾಣದಕೊಟ್ಟ, ಪಾಂಗಾಳ ದ. ಕ.	40 0 0
1834/50	M ಇಬ್ರಾಹಿಂ ಬ್ಯಾರಿ, ಹುಸೈನ್ ಬ್ಯಾರಿರ ಮಗ, Narvey Post, ಕೊಪ್ಪ ತಾಲೂಕು, ಮೈಸೂರ್ ಸ್ಟೇಟ್.	15 0 0
1491/51	ಭಾಗಿ ಮರಕಾಲ್ತಿ, ಸೀತು ಮರಕಾಲ್ತಿಯ ಮಗಳು, ಮಟ್ಟು ಗ್ರಾಮ, ಕಟಪಾಡಿ	30 0 0
374/50	ಜೆರೋಮ್ ಡಿ'ಸೋಜ, ನಿಕೋಲಸ್ ಡಿ'ಸೋಜರ ಮಗ, ಸಡಾಡಿ, ಪಾಂಗಾಳ ದ. ಕ.	225 0 0
823/50	—do—	120 0 0
975/50	—do—	100 0 0
1985/50	—do—	60 0 0
134/51	ಪಿಯಾದ್ ಕಾಸ್ತಲಿನೋ, ಫ್ರಾನ್ಸಿಸ್ ಕಾಸ್ತಲಿನೊರ ಮಗ, ಶಂಕರಪುರ ದ. ಕ.	15 0 0
1262/51	ಕೆ. ಶಿವರಾಮ ಶೆಟ್ಟಿ, ಚಂದಯ್ಯ ಶೆಟ್ಟಿ ಮಗ, ಕುಕ್ರು ಬೆಟ್ಟು, ಕೋಟೆ ಗ್ರಾಮ, ಕಟಪಾಡಿ	40 0 0
1490/51	—do—	20 0 0
1051/51	P. H ಮಹಾಬಲ ಶೆಟ್ಟಿ, ಲಚ್ಚ ಶೆಟ್ಟಿ ಅಳಿಯ, ಪಾಂಗಾಳ ಗ್ರಾಮ ಪಾಂಗಾಳ ದ. ಕ.	100 0 0
2013/50	ಅಬ್ದುಲ್ ಖಾದರ್ ಸಾಹೇಬ, ಯಾಕೂಬ್ ಸಾಹೇಬರ ಮಗ, ಬೊಕ್ಕಾಡಿ, ಕಟಪಾಡಿ	16 0 0
39/50	ಮಾದು ಪೂಜಾರಿ, ದೇವಣ್ಣ ಪೂಜಾರಿ ಅಳಿಯ, ಕೋಟೆ ಗ್ರಾಮ, ಕಟಪಾಡಿ ದ. ಕ.	20 0 0
314/50	ಫ್ರಾನ್ಸಿಸ್ ಫಿರೇರ, ಅಬ್ರಹಾಂ ಫಿರೇರರ ಮಗ, ಕುತ್ಯಾರು, ಕುಂಜಾರುಗಿರಿ, ದ. ಕ.	200 0 0
877/51	ಮುದು ಪೂಜಾರಿ ಅಂತಯ್ಯ ಪೂಜಾರಿ ಅಳಿಯ, ಕೋಟೆಗ್ರಾಮ, ಕಟಪಾಡಿ, ದ ಕ.	20 0 0

Office of the Bank, KATAPADI, S. K. }
3rd July 1952 }

P. S. Nayak.
Agent.

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ

ಇವುಗಳಿಗೆ

ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಉಡುಪಿ

ಯಾತ್ರಿಕರಿಗೂ ಪ್ರಯಾಣಿಕರಿಗೂ

ಸರ್ವ ಅನುಕೂಲವಾಗುವಂತೆ

ನಗರದ ಕೇಂದ್ರ ಭಾಗದಲ್ಲಿದೆ.

ವಿನಿಯಂತ್ರಣವೂ ನಿಯಂತ್ರಣವೂ

ವಿನಾದರೊಂದು ಹೊಸ ಕಾನೂನಾದೊಡನೆ ಒಮ್ಮೆ ಗಡಿಬಿಡಿಯಾಗುವುದು ಸ್ವಾಭಾವಿಕ. ಅಂತೆಯೇ ನಿಯಂತ್ರಣದಂತಹ ದೊಡ್ಡದೊಂದು ಕಾನೂನು ರದ್ದಾಗಿ ವಿನಿಯಂತ್ರಣವು ಜಾರಿಗೆ ಬಂದ ಈ ಕಾಲದಲ್ಲೂ ಕೆಲಮಟ್ಟಿನ ಗಡಿಬಿಡಿಯಾಯಿತು. ಹಲವರು ನಿಯಂತ್ರಣವನ್ನು ರದ್ದುಗೊಳಿಸಿ ವಿನಿಯಂತ್ರಣವನ್ನು ಜಾರಿಗೆ ತಂದ ರಾಜಾಜಿಯವರನ್ನು ಹೊಗಳಿದರೆ ಕೆಲವರು ತಮ್ಮ ತುತ್ತಿಗೆ ಅಡ್ಡ ಬಂದನೆಂದು ಒಳಗಿಂದೊಳಗೆ ಶಪಿಸುತ್ತಿದ್ದಾರೆ.

ವಿನಿಯಂತ್ರಣವು ಕಾಳಸಂತೆಯಿಂದ ಲಾಭಗಳಿಸಿ ಹೊಟ್ಟೆ ಬೆಳೆಸಿಕೊಂಡವರಿಗೆ ಅಜೀರ್ಣವಾದರೆ ಲಂಚಕ್ಕಾಗಿ ಹೊಂಚು ಹಾಕುವವರಿಗೆಲ್ಲಾ ವಂಚಿಸಿಬಿಟ್ಟಿತು.

ವಿನಿಯಂತ್ರಣವನ್ನು ರಾಜಕೀಯ ಪಟುಗಳಾದ ರಾಜಾಜಿಯವರು ಜಾರಿಗೆ ತಂದು ಕೀರ್ತಿಗಳಿಸಿದರೆ ನಿಯಂತ್ರಣವನ್ನು ತಯಾರಿಸಿದ ಹಿಂದಿನ ಸರಕಾರವಾಗಲೀ ಇನ್ನೂ ನಿಯಂತ್ರಣದಿಂದಲೇ ಉಳಿದ ಇತರ ಪ್ರಾಂತ್ಯಗಳಾಗಲೀ ಅರಿಯದ ಸರಕಾರವೆಂದರ್ಥವಲ್ಲ. ಯಾವ ಸರಕಾರವೂ ಜನರಿಗೆ ಉಪದ್ರವವನ್ನುಂಟುಮಾಡುವ ಕಾನೂನನ್ನು ತಯಾರಿಸುವುದಿಲ್ಲ ಯುದ್ಧದ ದೆಸೆಯಿಂದಲೂ ಯುದ್ಧ ಮುಗಿದರೂ ಅದರ ನಷ್ಟ ಭರ್ತಿಯಾಗುವ ತನಕ ಪ್ರತಿಯೊಂದು ರಾಷ್ಟ್ರದಲ್ಲೂ ಕ್ಷಾಮವು ತಲೆದೋರುವುದೇ ಸ್ವಾಭಾವಿಕ. ಅಂತೆಯೇ ರೈತರ ತವರೂರಿಂದು ಪ್ರಖ್ಯಾತಿ ಪಡೆದ ನಮ್ಮ ಹಿಂದೂದೇಶಕ್ಕೂ ಈ ಪೆಟ್ಟು ತಗಲದೆ ಉಳಿಯಲಿಲ್ಲ. ಆ ಕಾಲದಲ್ಲಿ ಆಹಾರದ ಕೊರತೆಯುಂಟೆಂತ ತಜ್ಞರು ಅಭಿಪ್ರಾಯ ಪಟ್ಟುದರಿಂದ ನಿಯಂತ್ರಣವನ್ನು ಕೈಕೊಳ್ಳಬೇಕಾಯಿತು. ಆದರೆ ಸರಕಾರವು ಗ್ರಹಿಸಿದ್ದೊಂದಾದರೆ ಆದದ್ದು ಬೇರೊಂದಾಯಿತು ಅನ್ನ ಬಟ್ಟೆಗಳು ಪ್ರತಿಯೊಬ್ಬರಿಗೂ ಸರಿಯಾದ ರೀತಿಯಲ್ಲಿ ಸಿಗಬೇಕೆಂಬ ಸರಕಾರದ ಸೀದಾ ಪದ್ಧತಿಯು ಕಳ್ಳಸಂತೆಗೈಯುವ ಲಾಭಕೋರರ ಔತಣವಾಯ್ತು. ಸೀದಾ ಪದ್ಧತಿಯು ಸರಿಯಾಗಿ ನಡೆಯಲು ನೌಕರರನ್ನು ನೇಮಿಸಿದರೆ ಬೇಲಿ ಹೊಲ ಮೇದ್ದ ಗಾದೆಯಾಯಿತು. ಇದನ್ನರಿತ ಸರಕಾರವು ಸೀದಾ ಪದ್ಧತಿಯನ್ನು ತೆಗೆದು ಲೆವಿ ಪದ್ಧತಿಯನ್ನು ಜಾರಿಗೆ ತಂದಿತು. ಯಾವ ಸರಕಾರವಾದರೂ ಕಾನೂನಿಗೆ ಸರಿಯಾಗಿ ಜನರ ಸಹಕಾರವಿದ್ದರೆ ಮಾತ್ರ ಫಲ ಬಂದೀತಲ್ಲದೆ ಸಹಕಾರವಿಲ್ಲದೆ ಯಾವ ಕಾನೂನೂ ಫಲಿಸದು. ಇದನ್ನರಿತೇ ರಾಜಾಜಿಯವರು ನಿಯಂತ್ರಣವನ್ನು ರದ್ದುಗೊಳಿಸಿದರು. ಈಗ ಮಾತ್ರ ಹಿಂದೆ ಲಾಭಗಳಿಸಿಯೂ ಉಪಕಾರ ಮಾಡಿದ ಮಹನೀಯರಿಗೆ ಅಂದರೆ ಅಕ್ಕಿ ಮುಡಿಗೆ ಐವತ್ತು ರೂಪಾಯಿ ಮೇಲ್ಪಟ್ಟು ಕೊಂಡು ಕೊಂಡೂ ಕೊಳ್ಳುವವನ ಸ್ನೇಹವನ್ನು ಬಿಡಲಾರದೆ ಕೊಟ್ಟು ಉಪಕಾರ ಮಾಡಿದವರೂ ತೆಂಗಿನ ಕಾಯಿಯನ್ನೂ ಬೆಲ್ಲವನ್ನೂ ತಗೆದುಕೊಂಡು ಹತ್ತು ಮುಡಿಗೆ ಹನ್ನೆರಡು ಮುಡಿ ರಿಕ್ವಿಶನ್ ಮಾಡಿ ಉಪಕಾರ ಮಾಡಿದ ಧಾನ್ಯಭಾಗರೂ ಏಳೆಂಟು ರೂಪಾಯಿ ಕ್ರಯದ ಕೋಳಿಯನ್ನು ತೆಗೆದುಕೊಂಡು ರೇಶನ್ ಕಾರ್ಡು ಕೊಡಿಸಿದ ಪಟೇಲರೂ ಈಗ ಬಾಯಿಬಾಯಿ ಬಿಡುವ ಅವಸ್ಥೆಯಾಯಿತು. ಇವರೆಲ್ಲರಿಗೂ ರಾಜಾಜಿಯ ವಿನಿಯಂತ್ರಣವು ತಾಯಿ ತೀರಿದ ಮಗುವಿನ ಅವಸ್ಥೆಗೆ ತಂದಿತು. ಇಷ್ಟಾದರೂ ಮುಡಿಗೆ ಇಪ್ಪತ್ತೈದರಲ್ಲಿ ಮಾರಬಹುದೆಂದು ಕೆಲವರು ನಿರ್ಧರಿಸಿದರೂ ಹಳ್ಳಿಯಲ್ಲಿ ಮೂವತ್ತರ ಗಡಿಯನ್ನೂ ದಾಟುವುದರಲ್ಲಿದೆ. ನಿಯಂತ್ರಣವು ಹೋಗಿ ಒಳ್ಳೆಯದಾಯಿತೆಂಬ ಸಂತೋಷದ ವಾರ್ತೆಯನ್ನು ಕೇಳಿದ ಮರುಕ್ಷಣದಲ್ಲಿಯೇ ಸೇರಿಗೆ ಹತ್ತಾಣೆಯನ್ನೂ ಸಹ ಕೊಡಲು ಸಾಧ್ಯವಿಲ್ಲದ ಬಡವರ ಗೋಳು ಕರ್ಣಕಠೋರವಾಗುತ್ತಿದೆ.

ಆದುದರಿಂದ ಮಾನ್ಯ ಮೂವತ್ತರ ಪಂಥೀಯರೇ ನಿಮ್ಮ ಮೂವತ್ತರ ಆಸೆ ಬಿಟ್ಟು ಇಪ್ಪತ್ತೈದಕ್ಕಾದರೂ ಬನ್ನಿರಿ, ಇಲ್ಲವಾದಲ್ಲಿ ರಾಜಾಜಿಯವರು ಈ ದುರಂತವನ್ನು ಕೇಳಿದರೆ ಎಂದಿಗೂ ಸುಮ್ಮನಿರಲಾರರು ಪರವೂರುಗಳಿಂದಾದರೂ ಅಕ್ಕಿಯನ್ನು ತರಿಸಿ ಅಧಿಕೃತ ಅಂಗಡಿಗಳಲ್ಲಿಯೇ ಇಪ್ಪತ್ತಕ್ಕೂ ಕಡಿಮೆ ದರದಲ್ಲಿ ಬೇಕಾದಷ್ಟು ಅಕ್ಕಿಯನ್ನು ಹಂಚದೆ ಇರಲಾರರು. ಆಗ ಮಾತ್ರ ನೀವು ಬಾಯಿಬಿಟ್ಟು ಪ್ರಯೋಜನವಿಲ್ಲ. ಹಿಂದೆ ಕಾಳಸಂತೆ ಮಾಡಿದವರೆಲ್ಲಾ ಈಗ ಬಾಯಿಬಿಡುವಂತೆಯೆ ನೀವೂ ನಾಳೆ ಬಾಯಿಬಿಡಬೇಕಾದೀತು. ಸರಕಾರವು ಕೈಹಾಕಿ ಸಹಕರಿಸುವ ಮೊದಲೇ ನೀವೇ ಯೋಗ್ಯ ಬೆಲೆಗೆ ಮಾರಿದರೆ ಬಡವರಿಗೆ ಉಪಕಾರ ಮಾಡಿದ ಪುಣ್ಯವಲ್ಲದೆ ನಿಮಗೂ ಚಿಟ್ಟಿನ ನಷ್ಟವಾಗದು.

ಆದುದರಿಂದ ನಿಯಂತ್ರಣ ಕಾಲದಲ್ಲಿ ಜನರು ವಂಚಿಸಿ ನಡೆದುದರಿಂದಲೇ ವಿನಿಯಂತ್ರಣವಾಯಿತೆಂಬುದನ್ನು ನೆನಪಿಟ್ಟುಕೊಂಡು ಇನ್ನಾದರೂ ವಿನಿಯಂತ್ರಣವು ಯಶಸ್ವಿಯಾಗುವಂತೆ ಸರಕಾರದೊಡನೆ ಸಹಕರಿಸೋಣ.

ಎಚ್. ಶ್ರೀನಿವಾಸ ಅಡಿಗ, ಹೇರೂರು.

[೨ನೇ ಪುಟದಿಂದ ಮುಂದುವರಿದುದು]

ನಿಜಕ್ಕೂ ಫಲಪ್ರದವಾಗುವುದೆಂದು ಭಾರತೀಯ ನೀರಾವರಿ ಯೋಜನೆಗಳ ಸಮಿತಿ ಅಭಿಪ್ರಾಯ ಪಟ್ಟಿದೆ. ಈಚೆಗೆ ಅಧಿಕ ಆಹಾರ ಬೆಳೆಯುವ ಚಳುವಳಿಗೆ ವಿಶೇಷ ಬೆಂಬಲ ದೊರಕಿರುವುದರಿಂದ, ರೈತರು ಹೆಚ್ಚು ಹೆಚ್ಚು ಜಾಗ್ರತಿಗೊಂಡು, ಬಾವಿ ನೀರಿನ ಪೂರೈಕೆಯ ಕಡೆ ಅಧಿಕ ಮನಸ್ಸುಗೊಡುತ್ತಿರುವರು.

ಕೆರೆ ಕುಂಟೆಗಳು

ದಕ್ಷಿಣದ ಪೀಠಭೂಮಿಯ ವಿಶಿಷ್ಟ ಪರಿಸ್ಥಿತಿಯೇ ಕೆರೆಗಳ ಉಗಮಕ್ಕೆ ಕಾರಣ. ಕಠಿಣವಾದ ಬಂಡೆಗಲ್ಲು ಭೂತಳದಲ್ಲಿರುವುದರಿಂದ ಅಲ್ಲಿ ಬಾವಿ ತೋಡಲು ಸಾಧ್ಯವಿಲ್ಲ; ಇದ್ದರೂ ಬಹಳ ಕಷ್ಟ. ಮಳೆಗಾಲದ ನಾಲ್ಕು ತಿಂಗಳ ಕಾಲ ನದಿಗಳಲ್ಲಿ ನೀರು ತುಂಬಿ, ನೆರೆಯಾಗಿ ಹರಿದು, ಉಳಿದ ಸಮಯ ಹೊಳೆಯ ಹೊಂಡವಾಗಿ ಬಿದ್ದಿರುವುದರಿಂದ ಕಾಲುವೆ ನೀರಿಗಾಗಿ ನದಿಯನ್ನುಪಯೋಗಿಸಲಾರೆವು. ಇಂಥದರಲ್ಲಿ ಅಲ್ಲಿ ಇಲ್ಲಿ ಸೇರಿನಿಂತ ಧಾರಾಳ ನೀರು ಕೆರೆಯಾಗಿ ಕಂಗೊಳಿಸುವುದು. ದಕ್ಷಿಣದಲ್ಲಿ—ಮುಖ್ಯವಾಗಿ ಮದ್ರಾಸು ರಾಜ್ಯದಲ್ಲಿ—ಕೆರೆ ನೀರಿನ ಉಪಯೋಗವು ಬಹಳಷ್ಟು ಕಂಡು ಬರುತ್ತಿದೆ.

ಕೆರೆ ನೀರಿನ ಸಾಮರ್ಥ್ಯವು ಒಂದೊಂದು ಕಡೆ ಒಂದೊಂದು ತೆರನಾಗಿದೆ. ಸಾವಿರಗಟ್ಟಲೆ ಎಕರೆಗಳಿಗೆ ನೀರುಣಿಸುವ ಮಹಾ ಸರೋವರಗಳಿದ್ದಂತೆ—ಐದಾರು ಎಕರೆಗಷ್ಟೆ ನೀರನ್ನು ಪೂರೈಸುವ ಸಣ್ಣ ಕೆರೆ ಇರಬಹುದು. ದೊಡ್ಡ ದೊಡ್ಡ ಕೆರೆಗಳನ್ನು ತೋಡಿ, ಅವುಗಳ ಯೋಗಕ್ಷೇಮವನ್ನು ನೋಡಿಕೊಳ್ಳಲು ಗ್ರಾಮ ಪಂಚಾಯತಿಗೊಪ್ಪಿಸಿದರೆ—ಸರಕಾರವು ಜನರಿಗೆ ತುಂಬ ಹಿತಕರವಾದ ಕೆಲಸವನ್ನು ಮಾಡಿದಂತಾಗುವುದು.

(ಮುಂದಿನ ವಾರ ಕಾಲುವೆ ನೀರು, ಹಾಗೂ ಭಾರತ ಸರಕಾರದ ನೀರಾವರಿ ಯೋಜನೆಗಳ ವಿವರ ಓದುವಿರಿ)

ಸ್ವೀಕಾರ—ವಿಮರ್ಶೆ

ಮಹಾನುಭಾವ ಶ್ರೀ ಸ್ವಾಮಿ ರಾಮ ತೀರ್ಥ—

(ಜೀವನ ಚರಿತ್ರೆ) ಬರೆದವರು: ಟಿ. ಸದಾಶಿವಯ್ಯ ಪ್ರಕಾಶಕರು: ಆನಂದ್ ಬ್ರದರ್ಸ್, ಬೆಂಗಳೂರು. ೨ ಪುಟ: ೧೩೨. ಬೆಲೆ: ರೂ. ೧-೧೨-೦.

ಪಂಜಾಬದಲ್ಲಿ ಜನ್ಮವೆತ್ತಿ ಭಾರತಕ್ಕೆ—ಏಕೆ, ಸಮಸ್ತ ವಿಶ್ವಕ್ಕೆನೇ ಮಹತ್ವದ ಅಧ್ಯಾತ್ಮ ಸಂದೇಶ ಬೀರಿದ ಮಹಾನುಭಾವ ಶ್ರೀ ಸ್ವಾಮಿ ರಾಮತೀರ್ಥರ ಬಗೆಗೆ ಬರೆದ ಪರಿಚಯ ಗ್ರಂಥವಿದು. ಬಾಲ್ಯದಿಂದಲೂ ಪರಮಾರ್ಥದ ಕಡೆಗೆ ಬಲವಿದ್ದ ತೀರ್ಥರಾಮ ವಿದ್ಯಾರ್ಥಿದಸೆಯಲ್ಲಿ ಪ್ರತಿಭಾನ್ವಿತ ಬಾಲಕನಾಗಿದ್ದ. ಧರ್ಮದ ಬಗ್ಗೆ ತುಂಬ ಪ್ರೇಮವನ್ನೂ ಆಸಕ್ತಿಯನ್ನೂ ಹೊಂದಿದ ಈ ಬಾಲಕನು ಆಂಗ್ಲ ಶಿಕ್ಷಣ ಪಡೆದರೂ—ಧರ್ಮನಿಷ್ಠೆಯನ್ನು ಕಳೆದುಕೊಳ್ಳಲಿಲ್ಲ. ಉಜ್ವಲವಾದ, ದಿವ್ಯವಾದ ಜೀವನದಲ್ಲಿ ಆತ್ಮೋನ್ನತಿಯನ್ನು ಸಾಧಿಸಿಕೊಂಡು—ಪರರಿಗೂ ಮಾರ್ಗದರ್ಶಕನಾಗಿ ಮೆರೆದ ಮಹನೀಯರ ಜೀವನ ಚರಿತ್ರೆ ಉದ್ಬೋಧಕವಾಗಿದೆ ಎಂಬಲ್ಲಿ ಸಂದೇಹಬೇಡ.

ಪುರಂದರ ದಾಸರ ಕೀರ್ತನೆಗಳು— ಪ್ರಕಾಶಕರು, ಉಪಾಧ್ಯಾಯ ಪ್ರಿಂಟನಾಲಯ, ಚಿಕ್ಕಪೇಟೆ, ಬೆಂಗಳೂರು ಸಿಟಿ. ಬೆಲೆ 0—6—0

ಪ್ರಕಾಶಕರು ಲೋಕ ಪ್ರಸಿದ್ಧವಾದ ಪುರಂದರದಾಸರ ಕೀರ್ತನೆಗಳನ್ನು ಭಾಗ ಭಾಗಗಳಾಗಿ ಪ್ರಕಟಿಸುವ ಕಾರ್ಯಕ್ರಮವನ್ನಿಟ್ಟುಕೊಂಡಿದ್ದು ಮೊದಲಭಾಗವನ್ನು ಈಮೊದಲೇ ಪ್ರಕಟಿಸಿದ್ದಾರೆ. ಇದು ಎರಡನೇ ತರಂಗವಾಗಿದೆ. ಉಳಿದ ಭಾಗಗಳೂ ಬೇಗನೇ ಬೆಳಕಿಗೆ ಬರಲೆಂದು ಹಾರೈಕೆ.

(೯ನೇ ಪುಟದಿಂದ ಮುಂದರಿಸಿದ್ದು.)

ರಾವತರು ಯಾರಿದ್ದುರಿಗೂ ತಲೆಬಾಗುವುದನ್ನು ಅರಿತವರಲ್ಲ. ತಮ್ಮನ್ನು ರಾಜಮನೆತನದವರೆಂದು ಅಭಿಮಾನಪಟ್ಟುಕೊಳ್ಳುವುದು ಇವರ ಶೋಭೆ. ಮೊದಮೊದಲು ನಮ್ಮ—ನಿಮ್ಮಂಥ ಸಭ್ಯರು ಆ ಕಡೆ ಸುಳಿದರೆ, ಇವರಿಗೆ ತುಂಬ ನಾಚಿಕೆಯಾಗಿ, ಓಡಿಹೋಗಿ ಎಲ್ಲಿಯಾದರೂ ಮರೆಯಾಗುತ್ತಿದ್ದರು. ಈಗೀಗ ಹಾಗೆ ಮಾಡುವುದು ನಿಂತಿದೆ. ಆಸ್ಫೋಟದ ಶಾಸನಾಧಿಕಾರಿಯ ಬಳಿಗೆ ಇವರ ಮುಖಂಡರಲ್ಲಿ ಯಾರಾದರೂ ಈಗ ಹೋದರೆ—ಅವನ ಮಗ್ಗುಲಿಗೆ ಕುಳಿತುಕೊಳ್ಳುವ ಧೈರ್ಯ ಅವರಿಗೆ ಬಂದಿದೆ. ನೆರೆಹೊರೆಯ ಪ್ರದೇಶಗಳಲ್ಲಿಯೂ ರಾವತರ ಜಾತಿಗೆ ಸೇರಿದ ಜನರು ಇದ್ದಾರೆ. ಆದರೆ, ಜನಸಂಪರ್ಕದೊಡನೆ ಹೆಚ್ಚು ಮಿಳಿತಗೊಂಡಿರುವುದರಿಂದ, ಅವರು ಸ್ವಲ್ಪಮಟ್ಟಿಗೆ ಸಭ್ಯರಂತೆ ಕಾಣಿಸುತ್ತಾರೆ.

ಉಡುಪಿಗೆ ಹೋಗುತ್ತೀರಾ! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈಶಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಿಸು, ಅವುಗಳ ರುಚಿರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI. S. Kanara.

ಮದುವೆಯಾದ ಸ್ತ್ರೀಪುರುಷರ ಸಲುವಾಗಿ

ಬರೆಯಲ್ಪಟ್ಟ ಪುಸ್ತಕ

ಮಿತಸಂತತಿ

ಹುಟ್ಟುವ ಮಕ್ಕಳು ಆರೋಗ್ಯ ಸಂಪತ್ತು ಸೌಭಾಗ್ಯ ಪಡೆಯಲಾರದುವನ್ನು ಸುಗಮ್ಯ ಪಡೆಯುವ ಹಾಗೆ ಹೆತ್ತವರು ಸಾಧಿಸಲಾಗುವಂತೆ ಅತ್ಯನುಕೂಲವಾದ ಪದ್ಧತಿ ಯಾವುದೋ ಅದರಂತೆ ದಂಪತಿಗಳು ಮಕ್ಕಳನ್ನು ಹೆರುವ ಹಾಗೆ ಅವಶ್ಯವಾದ ತತ್ವಗಳನ್ನು ಬೋಧಿಸುವ ನವೀನ ಪುಸ್ತಕ ಬೆಲೆ 0-6-0

ಗುಪ್ತರೋಗ ನಿವಾರಣೆ

ಜನನೇಂದ್ರಿಯಗಳಿಗೆ ಸಂಬಂಧಿಸಿರುವ ರೋಗಗಳು ಹಳ್ಳಿಪಳ್ಳಿಗಳಲ್ಲಿ ಪಸರಿಸುತ್ತಲೇ ಇವೆ. ಇಂತಹ ರೋಗಗಳಿಂದ ನರಳುವ ಸ್ತ್ರೀಪುರುಷರ ಸಂರಕ್ಷಣೆಗಾಗಿ ಪ್ರಪಂಚದಲ್ಲಿನ ವಿದ್ವಾಂಸ ವೈದ್ಯರುಗಳ ಅನುಕೂಲ್ಯ ಸಿದ್ಧಾಂತಭರಿತ ಸಚಿತ್ರ ಪುಸ್ತಕ ಬೆಲೆ 0-8-0

ಪ್ರತಿಗಳಿಗೂ, ಪುಸ್ತಕಗಳ ಯಾದಿಗೂ, ಬರೆಯಿರಿ.

ನವಭಾರತ ಪುಸ್ತಕ ಭಂಡಾರ ಉಡುಪಿ.

ಅಖಿಲ ಭಾರತ ಚರಖಾ ಸಂಘದ
ಕಳೆದ ಐದು ತಿಂಗಳ ಪ್ರಚಾರಕಾರ್ಯ

(ಚರಖಾ ಸಂಘದ ಕತಾಯಿ ಮಂಡಲಗಳಿಂದಲೂ ಅವುಗಳ ಶಾಖೆ, ಉಪಶಾಖೆಗಳ ಮೂಲಕವೂ ನಡೆಸಲ್ಪಡುವ ಬೇರೆ ಬೇರೆ ಕಾರ್ಯಗಳ ವಿಸ್ತೃತ ವಿವರಣೆಯು "ಕತಾಯಿ ಮಂಡಲ ಪತ್ರಿಕಾ"ದಲ್ಲಿ ಆಗಾಗ್ಗೆ ಪ್ರಕಟಿಸಲ್ಪಡುತ್ತದೆ. ಕಳೆದ ಐದು ತಿಂಗಳುಗಳ ಪ್ರಚಾರ ಕಾರ್ಯಗಳ ಸಂಕ್ಷಿಪ್ತ ವಿವರಣವಿದು.

೧ **30ನೇ ಜನವರಿ**— ಬಾಪೂಜಿಯವರ ನಿರ್ವಾಣ ತಿಥಿ, 30ನೇ ಜನವರಿಯು ಪ್ರತ್ಯ ದಿನವೆಂದೆನಿಸಲ್ಪಡುತ್ತಿದೆ. ಅಂಥಾ ಶುಭ ಸಂದರ್ಭದಲ್ಲಿ ಭಾರತವಾಸಿಗಳೆಲ್ಲರು ಏಕಾಗ್ರ ಚಿತ್ತದಿಂದ ಆತ್ಮನಿರೀಕ್ಷಣೆ ಮಾಡಬೇಕು ಹಾಗೂ ಬಾಪೂಜಿಯವರ ಕಾರ್ಯಗಳನ್ನು ಮಾಡಿ ತೋರಿಸಬೇಕೆಂಬ ಉದ್ದೇಶದಿಂದ ಕಳೆದ ವರ್ಷಾರಂಭ ನಾವು ಒಂದು ಕಾರ್ಯಕ್ರಮವನ್ನನುಸರಿಸುತ್ತಿದ್ದೇವೆ. ಮುಂಜಾನೆ ಸ್ವಚ್ಛತೆ, ಸಂಜೆಗೆ ಸೂತ್ರಯಜ್ಞ, ಪ್ರಾರ್ಥನೆಗಳಿರುತ್ತವೆ. ಪ್ರಾರ್ಥನೆಯ ಬಳಿಕ, ಪೂಜ್ಯ ವಿನೋಬಾಜಿಯವ 'ಭೂಮಿದಾನಯಜ್ಞ'ದ ನಿಜಸ್ಥಿತಿಯು ಜನರಿಗೆ ತಿಳಿದುಬರುವಂತೆ ಪೂಜ್ಯ ವಿನೋಬಾಜಿಯವರ ಶಬ್ದಗಳಲ್ಲಿ, "ಭೂದಾನಯಜ್ಞ ಒಂದು ಐತಿಹಾಸಿಕ ಆವಶ್ಯಕತೆ" ಎಂಬ ಲೇಖವೊಂದನ್ನು ತಯಾರಿಸಿ ಚರಖಾ ಸಂಘದ ಎಲ್ಲಾ ಕೇಂದ್ರಗಳಿಗೂ ಕತಾಯಿ ಮಂಡಲಗಳಿಗೂ ಮಾನ್ಯತೆಯನ್ನು ಪಡೆದಿರುವ ಇತರ ಸಂಸ್ಥೆಗಳಿಗೂ ಕಳುಹಿಸಿರುತ್ತೇವೆ.

ಈ ವರ್ಷ ಜನರೆಲ್ಲ ಚುನಾವಣೆಯ ಕಾರ್ಯಗಳಲ್ಲಿ ಮಗ್ನರಾಗಿದ್ದರೂ ಅವರು ಈ ಕಾರ್ಯಕ್ರಮವನ್ನು ಚೆನ್ನಾಗಿಯೇ ಪಾಲಿಸಿರುವರು. ಭಾರತ ವರ್ಷದ ಸುಮಾರು ಆರುನೂರ ಐವತ್ತು ಹಳ್ಳಿಗಳಲ್ಲೂ ಈ ಕಾರ್ಯಕ್ರಮವು ನಡೆದಿರುವುದು.

೨ **ಸರ್ವೋದಯ ಪಕ್ಷ**— 30ನೇ ಜನವರಿಯಿಂದ 12ನೇ ಫೆಬ್ರವರಿ ತನಕ 'ಸರ್ವೋದಯ ಪಕ್ಷ'ವನ್ನಾಚರಿಸುವ ರೂಢಿಯು ಜಾರಿಯಲ್ಲಾಗಿದೆ. ಈ ಪಕ್ಷದಲ್ಲಿ ಹಳ್ಳಿಯ ಜನರ ಬಳಿಗೆ ಹೋಗಿ ಅವರ ಸಂಪರ್ಕವನ್ನು ಬೆಳೆಸಲು ಚರಖಾ ಸಂಘವು ಯತ್ನಿಸುತ್ತಿದೆ. ಈ ವರ್ಷ ಮೂರು ಮೂರು ಕಾರ್ಯಕರ್ತರು ಒಟ್ಟಾಗಿ ಹಳ್ಳಿಗಳಿಗೆ ಪಾದಯಾತ್ರೆಯನ್ನು ಮಾಡುತ್ತ ಸರ್ವೋದಯ ಯಾತ್ರಾ ಸ್ಥಳಗಳಿಗೆ ತಲ್ಪಬೇಕೆಂಬ ಸೂಚನೆಯನ್ನು ಕಾರ್ಯಕರ್ತರುಗಳಿಗೆಲ್ಲ ಕೊಟ್ಟಿತ್ತು. ಅಂಥಾ ಕಾರ್ಯಕರ್ತರ ಚಿಕ್ಕ ಗುಂಪುಗಳು ಭೂದಾನಕ್ಕೆ ಸಂಬಂಧಿಸಿದ ಲಿಖಿತ ಪ್ರವಚನವನ್ನು ಜನರಿಗೆ ಓದಿ ತಿಳಿಸುವುದು, ಸೂತ್ರಾಂಜಲಿಯನ್ನು ಪಡೆಯುವುದು ಮತ್ತು ಗಿರಣಿ ಉದ್ಯೋಗಗಳನ್ನು ಬಹಿಷ್ಕರಿಸುವ ಚಳವಳವನ್ನು ಕುರಿತು ಹಳ್ಳಿಯ ಜನರಿಗೆ ತಿಳಿಸುವುದು ಮೊದಲಾದುವೇ ಆ ಸಂಗಡಗಳ ಮುಖ್ಯ ಕಾರ್ಯಕ್ರಮಗಳಾಗಿದ್ದವು.

ಮೇಲೆ ಉಲ್ಲೇಖಿಸಿದ ಕಾರ್ಯಕ್ರಮದ ಸೂಚನೆಯು ಜನರಿಗೂ ಚರಖಾ ಸಂಘದ ಕಾರ್ಯಕರ್ತರಿಗೂ ಪತ್ರ, ಪತ್ರಿಕೆಗಳ ಮೂಲಕ ಕೊಡಲ್ಪಟ್ಟಿತು. ಅದರಿಂದಾಗಿ ಭಾರತ ವರ್ಷದಲ್ಲಿ 393 ಸಂಗಡಗಳು ಹೊರಟು, 4193 ಗ್ರಾಮಗಳಲ್ಲಿ ಪರ್ಯಟನೆ ಮಾಡಿರುವವು. ಚರಖಾ ಸಂಘದ ಕಾರ್ಯಕ್ರಮದಲ್ಲಿ 2,56,592 ಸಹೋದರ ಸಹೋದರಿಯರು ಭಾಗವಹಿಸಿದರು. ಒಟ್ಟು 59,756 ಅಡಿ ನೂಲು, 683 ಎಕ್ರೆ ಭೂದಾನವೂ ದೊರೆತವು.

3 **ಗಿರಣಿ ಉದ್ಯೋಗ ಬಹಿಷ್ಕಾರ**—ಇತ್ತೀಚೆಗೆ ಕೆಲವು ತಿಂಗಳುಗಳ ಮೊದಲು, ಗಿರಣಿಗಳಲ್ಲಿ ಉತ್ಪನ್ನವಾಗುವ ಆಹಾರ, ವಸ್ತ್ರಗಳಿಗೆ ಸಂಬಂಧಿಸಿದ ವಸ್ತುಗಳನ್ನೂ ಬಹಿಷ್ಕರಿಸಬೇಕೆಂದು ಶ್ರೀ ಧೀರೇಂದ್ರ ಭಾಯಿ ಮಜುಮುದಾರರು ತನ್ನ ಬಿಹಾರು ಮತ್ತು ಗುಜರಾತಿನ ಪರ್ಯಟನ ಕಾಲದಲ್ಲಿ ಜನರಿಗೆ ಉಪದೇಶವನ್ನಿತ್ತಿದ್ದರು. ಆ ಕುರಿತು 'ಹರಿಜನ', 'ಸರ್ವೋದಯ', 'ಕತಾಯಿಮಂಡಲ ಪತ್ರಿಕೆ' ಮೊದಲಾದ ಪತ್ರಿಕೆಗಳಲ್ಲಿ ಲೇಖನಗಳೂ ಬರೆಯಲ್ಪಟ್ಟವು. ಅದರ ಫಲ ಸ್ವರೂಪವಾಗಿ ವಾತಾವರಣವು ನಿರ್ಮಾಣವಾಯಿತು; ಅಂಥಾ ಪ್ರತಿಜ್ಞೆಯನ್ನು ಕೈಕೊಂಡಿರುವ ಅನೇಕ ಸಹೋದರ ಸಹೋದರಿಯರ ಹೆಸರುಗಳು ಎಲ್ಲಾ ಶಾಖೆಗಳಿಂದ ಬರುತ್ತಿವೆ. ಇಷ್ಟರ ತನಕ ಅಂಥಾ 130 ಜನರ ಹೆಸರನ್ನು ನಾವು 'ಕತಾಯಿ ಮಂಡಲ ಪತ್ರಿಕೆ'ಯಲ್ಲಿ ಪ್ರಕಟಿಸಿರುತ್ತೇವೆ.

4 **ಕತಾಯಿ ಮಂಡಲಗಳಲ್ಲಿ ವಸ್ತ್ರ ಸ್ವಾವಲಂಬನೆಯು** — ಮೇಲಿನ ಕಾರ್ಯಕ್ರಮಗಳೊಡನೆ ಕತಾಯಿ ಮಂಡಲಗಳು ತಮ್ಮ ವಸ್ತ್ರ ಸ್ವಾವಲಂಬನೆಯ ಕಾರ್ಯಕ್ರಮವನ್ನೂ ಮುಂದುವರಿಸುತ್ತಿವೆ. ಎಲ್ಲ ಕತಾಯಿ ಮಂಡಲಗಳಿಂದ ನಮಗೆ ವರದಿಯು ಸಿಕ್ಕಿಲ್ಲವಾದರೂ ನಮ್ಮ ಕೈ ಸೇರಿರುವ ವರದಿಗಳಿಂದ ಜುಲಾಯಿ 1951ರಿಂದ ಡಿಸೆಂಬ್ರ 1951ರ ತನಕ 58,265 ಚದರ ಗಜ ಖಾದಿಯು ತಯಾರಾಯಿತು, ಅದರ ಕ್ರಯವು ರೂ. 90,347 ಆಗುತ್ತದೆ. ಆ ಬಳಿಕ ಜನವರಿ 1952ರಿಂದ ಎಪ್ರಿಲ್ 1952ರ ತನಕ 14,230 ಚದರ ಗಜ ಖಾದಿಯು ತಯಾರಾಯಿತು. ಅದರ ಕ್ರಯವು ರೂ. 21420 ಆಗುತ್ತದೆ ಎಂದು ತಿಳಿದು ಬಂತು. ಎಲ್ಲ ಕತಾಯಿ ಮಂಡಲಗಳ ವರದಿಯು ದೊರೆಯುತ್ತಿದ್ದರೆ, ಹೇಳುವ ಮಾತೇ ಬೇರೆ ಇರುತ್ತಿತ್ತು.

5 **ಶಿಬಿರಗಳು**— ಜನವರಿ 1951ರಿಂದ ಮೇ 1952ರ ತನಕ ಶಿಬಿರಗಳು ಈ ಕೆಳಗೆ ನಮೂದಿಸಿದಂತೆ ಏರ್ಪಡಿಸಲ್ಪಟ್ಟವು. (ಕೆಲವು ಪ್ರಾಂತಗಳಲ್ಲಿ ಖಾದೀ ಶಿಬಿರಗಳಲ್ಲಿ ಬಿದಿರು ಚರಖಾಗಳ ಶಿಬಿರಗಳೂ ಸೇರಿದವು. ಆದಕಾರಣ ಈ ಕೆಳಗಿನ ಪಟ್ಟಿಗಳಲ್ಲಿ ಎರಡೂ ಜಾತಿಯ ಶಿಬಿರಗಳು ಪ್ರತ್ಯ ಪ್ರತ್ಯೇಕವಾಗಿ ತೋರಿಸಲ್ಪಟ್ಟಿವೆ.)

(ಅ) ಬಿದಿರ ಚರಖಾ ಶಿಬಿರ:-

	ಪ್ರಾಂತಗಳ ಹೆಸರು	ಶಿಬಿರಗಳ ಸಂಖ್ಯೆ	ಭಾಗವಹಿಸಿದವರು	ತಯಾರಾದ ಬಿದಿರ ಚರಖಾಗಳು
1	ಗುಜರಾತು	10	151	161
2	ಅಸ್ಸಾಮು	8	96	95
3	ರಾಜಸ್ಥಾನ	1	55	47
4	ಬಿಹಾರು	5	40	16
5	ಛತ್ತೀಸಗಢ	1	9	3
	ಜುಮ್ಲಾ	25	351	392

(ಆ) ಖಾದೀ ಶಿಬಿರಗಳು:-

	ಪ್ರಾಂತಗಳ ಹೆಸರು	ಶಿಬಿರಗಳ ಸಂಖ್ಯೆ	ಭಾಗವಹಿಸಿದ ಜನರ ಸಂಖ್ಯೆ	ಕಾರ್ಯಕ್ರಮ
1	ಬಿಹಾರು	2	40	41 ಮೂತ್ರದೊಡ್ಡಿ, 1 ಕೋಡಿನ ಪಾಯಿಖಾನೆ 2 ಮಗನ್ ಒಲೆಗಳು ತಯಾರಿಸಲ್ಪಟ್ಟವು. ಮಾತ್ರವಲ್ಲದೆ ಹಂಜಿ ತಯಾರಿಸುವುದೂ ನೂಲುವುದೂ, ಚರಖಾಗಳನ್ನು ದುರುಸ್ತು ಮಾಡುವುದೂ ಇತ್ತು.
2	ಛತ್ತೀಸಗಢ	1	23	65 ಅಡಿ ನೂತದ್ದು, 2 ಸೇರು (4 ರಾತ್ತಲು) ಹತ್ತಿಯಿಂದ ಹಂಜಿ ತಯಾರಿಸಿದ್ದು, 5 ಸೇರು [10 ರಾತ್ತಲು] ಹತ್ತಿಯ ಬೀಜ ತೆಗೆದದ್ದು. ಶರೀರ ಶ್ರಮಕ್ಕಾಗಿ ಭೂಮಿಯನ್ನು ಅಗೆದದ್ದು.
3	ಗುಜರಾತು	1	1	224 ಅಡಿ ನೂತದ್ದು.
4	ಮಹಾರಾಷ್ಟ್ರ	1	8	ಹತ್ತಿಯಿಂದಾರಭ್ಯ ನೂಲು ತೆಗೆಯುವ ಸಂಪೂರ್ಣ ಕ್ರಿಯೆಯು ನಡೆಯಿತು.
5	ಪಂಜಾಬು	1	22	ಹತ್ತಿಯ ಬೀಜ ತೆಗೆಯುವುದು, ಹಂಜಿ ತಯಾರಿಸುವುದು ನೂಲುವುದು, ಇವುಗಳ ಶಿಕ್ಷಣವು ಕೊಡಲ್ಪಟ್ಟಿತು.
	ಜುಮ್ಲಾ	6	115	

6. **ಬಿದಿರ ಚರಖಾಕ್ಕೆ ಮಾನ್ಯತೆಯು**—ಅಸ್ಸಾಮು ಸರಕಾರದಿಂದ ನಡೆಸಲ್ಪಡುವ ಬುನಾದಿ ಪಾಠಶಾಲೆಗಳಲ್ಲಿ ಮೊದಲಿನ ಚರಖಾಗಳ ಬದಲಿಗೆ ಇನ್ನು ಬಿದಿರ ಚರಖಾಗಳನ್ನೇ ಉಪಯೋಗಿಸಬೇಕೆಂದು ಅಲ್ಲಿಯ ಬುನಾದಿ ಶಿಕ್ಷಣ ವಿಭಾಗದ ಸಂಚಾಲಕರು ನಿಶ್ಚಯಿಸಿ, ತನ್ನ ಆ ನಿರ್ಣಯವನ್ನು ಒಂದು ಸುತ್ತೋಲೆ ಹೊರಡಿಸಿ ಟಿಟಾಬರ್, ರೋಹಾ, ದುಭಿ ಮತ್ತು ಸೂತಿಯಾ ಎಂಬಲ್ಲಿಯ ಉಪಾಧ್ಯಾಯರುಗಳಿಗೆಲ್ಲ ತಿಳಿಸಿರುವರು.

7. **ಮರಹತ್ತಿ**—ಕಳೆದ ವರ್ಷ, ಸೇವಾಗ್ರಾಮದಲ್ಲಿರುವ ಚರಖಾ ಸಂಘದ ಕೇಂದ್ರ ಕಚೇರಿಯಿಂದ ಮರಹತ್ತಿಯ ಬೀಜದ ವಿತರಣೆಯಾಯಿತು. ಆ ಹತ್ತಿಯ ಬೆಳೆಯನ್ನು ಮಾಡುವ ಕ್ರಮವೆಲ್ಲ 'ಕತಾಯಿ ಮಂಡಲ ಪತ್ರಿಕೆ'ಯಲ್ಲಿ ಹಲವು ಲೇಖಗಳ ಮೂಲಕ ತಿಳಿಸಲ್ಪಟ್ಟಿತು. ಈ ವರ್ಷವೂ ಯಾವ ಯಾವ ಭೂಮಿಯಲ್ಲಿ ಯಾವ ಯಾವ ಜಾತಿಯ ಹತ್ತಿಯು ಎಂಥಾ ಮಳೆಯಲ್ಲಿ ಬೆಳೆಸಬಹುದು ಇತ್ಯಾದಿಗಳ ಸೂಚನೆಯು ಕೊಟ್ಟಿರುತ್ತದೆ. ಹಾಗೂ ಸೇವಾಗ್ರಾಮದಿಂದ ಸಾಧ್ಯವಾದಷ್ಟು ಮರಹತ್ತಿಯ ಬೀಜವನ್ನು ಧರ್ಮಾರ್ಥವಾಗಿ ಕೊಡುವ ಏರ್ಪಾಡು ಮಾಡಿರುತ್ತದೆ.

8. **ಪ್ರಯೋಗ**—ಖಾದಿಯ ಅನೇಕ ಅಂಶಸ್ತ್ರಗಳನ್ನು ಕುರಿತು ವಿಚಾರಿಸಿ ಪ್ರಯೋಗಗಳನ್ನು ನಡಿಸುವುದು ಸೇವಾಗ್ರಾಮದಲ್ಲಿ ಜಾರಿಯಲ್ಲಿದೆ. ನೂಲುವುದೂ ನೇಯುವುದೂ ಒಡನೆಯೇ ಮುಂದುವರಿದರೆ ಸ್ವಲ್ಪ ಸಮಯದಲ್ಲೇ ಖಾದಿಯ ಉತ್ಪಾದನೆಯು ಹೆಚ್ಚಬಹುದು. ಪ್ರಯೋಗ ಶಾಲೆಗಳಿಂದ ದೊರೆತ ಅಂಕಗಳಿಗನುಸಾರವಾಗಿ ಈಗ ಎಂಟೂ ಮುಕ್ಕಾಲು ತಾಸಿನಲ್ಲಿ ಒಂದು ಚದರ ಗಜ ಖಾದಿಯು ತಯಾರಾಗಿದೆ. ಈ ರೀತಿಯಲ್ಲಿ ಅಂಥಾ ಪ್ರಕ್ರಿಯೆಗಳನ್ನೆಲ್ಲ ಒಂದಕ್ಕೊಂದು ಜೋಡಿಸಿ ಕೆಲಸ ಮಾಡಿದರೆ ಗಂಟೆ ಒಂದು ವರೆ ಆಣೆ ಲೆಕ್ಕ ಪ್ರಕಾರ ಕಡಿಮೆಯೆಂದರೆ ಹನ್ನೆರಡಾಣೆ ಮಜೂರಿ ಸಿಗಬಹುದಾಗುತ್ತದೆಂದು ಈ ಪ್ರಯೋಗವು ತೋರಿಸುತ್ತದೆ.

9. **'ಸೊಲಾರ್ ಕುಕರ್'**—ಸೇವಾಗ್ರಾಮದ ಸರಂಜಾಮು ಯಾ ಉಪಕರಣ ಕಾರ್ಯಾಲಯದಲ್ಲಿ ಇನ್ನೊಂದು ಪ್ರಯೋಗವು ನಡೆಯಿತು. ಸೂರ್ಯ ನಾರಾಯಣನ ಅಮಿತ ಉಷ್ಣತೆಯನ್ನು ಅಡಿಗೆಗಾಗಿ ಉಪಯೋಗಿಸಿದರೆ ಕಟ್ಟಿಗೆಯ ಸಮಸ್ಯೆಯೂ ನಿವಾರಣೆಯಾದೀತು. ಈ ದೃಷ್ಟಿಯಿಂದ ಟಾಟಾ ನಗರದ ಶ್ರೀ ಮಣೀ ಭಾಟುರವರ ಸೂಚನೆಯ ಮೇರೆಗೆ 'ಸೋಲಾರ್ ಕುಕರ್' [ಸೂರ್ಯಕಿರಣದಿಂದ ಅಡಿಗೆ ಮಾಡಲಾಗುವ ಒಲೆ] ತಯಾರಿಸಲ್ಪಟ್ಟಿದೆ. ಎರಡು ತಾಸುಗಳಲ್ಲಿ ಅನ್ನ, ಸಾರು, ಪಲ್ಯಗಳು ತಯಾರಾಗುತ್ತವೆ. ಆ ಒಲೆಯು ಹಳ್ಳಿಯ ಕೆಲಸಗಾರರು ತಯಾರಿಸಬಹುದಾದಷ್ಟು ಸುಲಭವೂ ಇದೆ.

[ಸಂಚಾಲಕ, ಕತಾಯಿಮಂಡಲ ವಿಭಾಗ. ಸೇವಾಗ್ರಾಮ.]

ಶಾಲೆ, ಕಾಲೇಜುಗಳಿಗೂ ಸಹಕಾರಿ ಸಂಘ, ಮುನ್ಸಿಫ್ ಕೋರ್ಟುಗಳಿಗೂ ಕೃಷಿಕ, ವರ್ಗದಾರ, ವ್ಯಾಪಾರಿಗಳಿಗೂ
ಬೇಕಾಗುವ ಉತ್ತಮ ಕಾಗದದಲ್ಲಿ ತಯಾರಿಸಿದ
ತರತರದ ಫಾರ್ಮುಗಳು, ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

"ಗೋಪಾಲ ಭೇಷಜಾಶ್ರಮ" ಮಂಗಳೂರು
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ සಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸಾ. ಕಿ. ಸ. ರು:—ಡಾ। ಬಿ. ಕೆ. ಶಿವರಾಮರಾವ್ ...

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ
1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.,
Moolky, S. K

ತಾರೀಕು 10-7-52 ರಿಂದ | **ವಾರದ ಭವಿಷ್ಯ** | ತಾರೀಕು 16-7-52 ವರೆಗೆ

ಮೇಷ— ಇಷ್ಟಮಿತ್ರರು ಬಂಧು ಭಾಂಧವರು ಇವರ ಸಹಕಾರವು ನಿಮಗೆ ಸಾಕಷ್ಟಿರುವುದರಿಂದ ಹೆಚ್ಚಿನ ನಿಮ್ಮ ಕಾರ್ಯಗಳು ಸಫಲಗಳಾಗುವವು ಗೃಹ ತಾಪತ್ರಯಗಳು ಬಹ್ವಂಶ ದೂರವಾದರೂ ಸತಿಪತಿಗಳಲ್ಲಿನ ಮನಸ್ತಾಪವು ಅಂತೆಯೇ ಉಳಿದೀತು. ಕೆಲವೊಮ್ಮೆ ಅನಿರೀಕ್ಷಿತ ಪ್ರವಾಸಗಳಿಂದಾಗಿ ಆರ್ಥಿಕ ದಿಕ್ಕಟ್ಟಿಗೂ ಕಷ್ಟಕ್ಕೂ ನಿಮ್ಮನ್ನು ಗುರಿಮಾಡಲಿವೆ. ತಾ 10, 11, 15, 16 ಲಾಭ ಸುಖಕಾರಿಗಳಾಗಿವೆ.

ವೃಷಭ— ಕಾರ್ಯ ಸಾಹಸ ಸಾಧ್ಯಗಳಾದ ಕಾರ್ಯಗಳಲ್ಲಿ ನೀವು ವಿಜಯಿಗಳಾಗುವಿರಿ, ರಾಜಕೀಯ ಕ್ಷೇತ್ರದಲ್ಲಿನ ನಿಮ್ಮ ಕಾರ್ಯಕಲಾಪಗಳು ನಿರ್ವಿಘ್ನದಿಂದ ನೆರವೇರಲಿವೆ. ದುಡಿಮೆಯು ಸಾಕಷ್ಟಿದ್ದರೂ ಕೈಯಲ್ಲಿ ಕಾಸುಳಿಯದು. ಕನಮಾನಗಳಿಗೆ ಸುಖ ನೆಮ್ಮದಿಗಳಿಲ್ಲವು. ಕಫ ದೋಷವು ಆಗಾಗ್ಗೆ ಕಾಣಸೀತು. ಪುತ್ರ ಭೃತ್ಯಾದಿಗಳ ವಿರಹಿತರಾದ ನಿಮಗೆ ವಾರಾದಿಯ 5 ದಿನಗಳು ಸ್ವಲ್ಪ ಸುಖದಾಯಿಗಳಾದಾವು.

ಮಿಥುನ— ನಿಮ್ಮ ವ್ಯಾಪಾರ ವ್ಯವಹಾರ ಉದ್ಯೋಗಾದಿಗಳಲ್ಲಿ ದಿನೇ ದಿನೇ ಪ್ರಗತಿಯ ಚಿಹ್ನೆಗಳು ಕಾಣಿಸುವವು. ಸಾಂಪತ್ತಿಕ ಪರಿಸ್ಥಿತಿಯು ಉತ್ತಮಗೊಳ್ಳಲಿದೆ ಆದರೆ ಚಂಚಲವಾದ ನಿಮ್ಮ ಮನಸ್ಸು ಯಾವ ಕಾರ್ಯವನ್ನೂ ಕೊನೆ ತನಕ ಸಾಧಿಸಲೊಲ್ಲದು. ಸಂಸಾರಿಕ ತಾಪತ್ರಯಗಳು ಪೀಡಿಸಲಿವೆ, ವಾರಾಂತ್ಯದ 4 ದಿನಗಳಲ್ಲಿ ಸಂಕಲ್ಪವು ಸಫಲವಾಗುವದು.

ಕರ್ಕಾಟ— ಪರಿಶ್ರಮಕ್ಕೆ ತಕ್ಕ ಫಲ ಲಭಿಸದು. ಆದಾಯವು ಕಡಿಮೆಯಿದ್ದು ಖರ್ಚಿನ ಭಾಗವು ಹೆಚ್ಚುವುದರಿಂದ ಬೇರೆ ಕಡೆ ಸಾಲ ಮಾಡುವ ಪ್ರಸಂಗ ಬಂದೀತು. ವಾಕ್ಕಲಹವು ಅನಿವಾರ್ಯವೆನಿಸುವದು. ಪಟ್ಟೇಕೆ ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ನಿಮಗೆ ಗೆಲುವಿರದು. ಆದರೂ ವಾರಾಂತ್ಯದ 2 ದಿನಗಳಲ್ಲಿ ಸುಖ ಲಾಭ ಇಷ್ಟ ಪ್ರಾಪ್ತಿಗಳಿವೆ.

ಸಿಂಹ— ಕಳೆದ ದಿನಗಳಂತಲ್ಲವಾದರೂ ಸಧ್ಯದ ದಿನಗಳು ನಿನಗೆ ಹೆಚ್ಚಿನ ಅನಿಷ್ಟಕಾರಿಗಳಾಗಲಾರವು. ಮುಂದಿಟ್ಟ ಹೆಜ್ಜೆಯನ್ನು ನೀವೆಂದೂ ಹಿಂದಿಡಲಾರಿರಿ. ಮಿತ್ರವರ್ಗದವರ ಸಂಪೂರ್ಣ ಬೆಂಬಲ ಲಭಿಸುವದು. ಸೇವಕ ಜನರಿಂದ ಹೆಚ್ಚಿನ ಫಲವನ್ನು ಪಡೆವಿರಿ. ಶ್ರಮಜೀವಿಗಳಿಗೀಗ ಕಾಲವು ಚೆನ್ನಾಗಿಲ್ಲವು. ವಾರಾದಿಯ 2 ದಿನಗಳಲ್ಲಿ ನಿಮ್ಮ ಬಯಕೆಯು ಸಿದ್ಧಿಸಲಿದೆ.

ಕನ್ಯಾ— ಸುರಗುರುಗಳು ನಿಮಗಿಂದು ಅಷ್ಟಮದಲ್ಲಿ ನಿಂತಿದ್ದರೂ ಲಾಭ ಸ್ಥಾನದಲ್ಲಿ ಗ್ರಹತ್ರಯರ ಗಮನಾಗಮನವಾದುದರಿಂದ ನಿಮ್ಮ ಪ್ರಯತ್ನಕ್ಕಿಂತ ಹೆಚ್ಚಿನ ಫಲವು ಅನಾಯಾಸದಿಂದ ಲಭಿಸುವದು. ಆತ್ಮೀಯರ ವಿರಹ ದೇಶಾಲಸ್ಯ ಅಧಿಕಾರಿ ವರ್ಗದವರ ಉಪದ್ರವಗಳಿಂದ ಪೀಡಿತರಾದ ನಿಮಗೆ ವಾರಾದಿಯ 5 ದಿನಗಳು ಸುಖಪ್ರದಗಳಿವೆ.

ತುಲಾ— "ಉದ್ಯೋಗಂ ಪುರುಷ ಲಕ್ಷಣಂ" ಎಂಬ ಗಾದೆಯಂತೆ ನೀವು ಆಲಸಿಗರಾಗದೆ ಕರ್ತವ್ಯ ನಿಷ್ಠರಾಗಿರಿ. ನಿಮ್ಮ ಪರಿಶ್ರಮವು ಸಧ್ಯ ಉತ್ತಮ ಫಲ ಕೊಡಲು ಶಕ್ತವಾಗಿದೆ. ಜನಧನ ಬೆಂಬಲಯುಕ್ತರಾದ ನಿಮಗೆ ಜನತೆಯಲ್ಲಿ ಒಳ್ಳೇಯ ಸ್ಥಾನಮಾನಗಳು ಲಭಿಸುವವು. ಕೆಲವೊಮ್ಮೆ ಆಕಸ್ಮಿಕರೋಗಕಷ್ಟಗಳು ಪ್ರಾಪ್ತವಾಗುವ ಸಂಭವವಿದ್ದರೂ ದೈವಾನುಗ್ರಹದಿಂದ ವಾರಾಂತ್ಯದ 4 ದಿನಗಳು ಸುಖದಾಯಿಗಳಾಗುವವು.

ವೃಶ್ಚಿಕ— ಆರೋಗ್ಯದ ಕಡೆ ಹೆಚ್ಚಿನ ಗಮನವನ್ನಿಡಿರಿ. ಕಫ ಮತ್ತು ಪಿತ್ತ ಪ್ರಕೋಪಗಳಿಗೆ ಸಿಲುಕಲಿರುವಿರಿ. ಸ್ತ್ರೀಯರ ಆಗ್ರಹಕ್ಕೆ ಗುರಿಯಾಗದಿರಿ, ಹಣದ ನಿಮಿತ್ತ ಜಗಳಗಳುಂಟಾಗುವವು, ಸೇವಕ ವರ್ಗದವರಿಗೂ ವ್ಯಾಪಾರೀ ಜನತೆಗೂ ಸಧ್ಯ ಶ್ರಮಕ್ಕುಚಿತವಾದ ಫಲ ಸಿಗಲಿದೆ. ಶಾಲಾ ಜನರಿಗೆ ದಿನಯಾಪನೆಯು ದುಸ್ತರವಾದೀತು. ವಾರಾಂತ್ಯದ 2 ದಿನಗಳು ಉತ್ತಮವಿವೆ.

ಧನು— ಇಂದೀಗ ನಿಮ್ಮ ಭಾಗ್ಯೋದಯವಾಗಿದೆ ಯೆಂದರೂ ತಪ್ಪಾಗದು, ನಿಮ್ಮ ಬಯಕೆಯಂತೆ ಸಕಲ ಕಾರ್ಯಗಳೂ ನೆರವೇರುವವು. ಆರೋಗ್ಯ ಮತ್ತು ಆರ್ಥಿಕ ಭಾಗವೂ ಉತ್ತಮಗೊಳ್ಳುವದು, ಬಂಧು ಮಿತ್ರರಿಂದ ಕೂಡಿದ ನಿಮಗೆ ದಿನಗಳು ಸುಖದಿಂದ ಕಳೆವವು. ಗೃಹಕೃತ್ಯದಲ್ಲಿ ಸತಿಪತಿಗಳೊಳು ಕಲಹವಾಗುವ ಯೋಗವಿದೆ, ವಾರಾದಿಯ 2 ದಿನಗಳಲ್ಲಿ ಸುಖ ವಿಜಯ ಲಾಭಗಳನ್ನು ಪಡೆವಿರಿ.

ಮಕರ— ವಿಪತ್ಪರಂಪರೆಗಳು ನಿಮ್ಮನ್ನು ಸುಲಭದಲ್ಲಿ ಬಿಡದು ಮುತ್ತಲಿವೆ. ಇಂದೀಗ ನಿಮ್ಮಲ್ಲಿ ದೈವಬಲವು ತೀರಾ ಕಡಿಮೆಯಾಗಿರುವುದರಿಂದ ಕೇವಲ ಪೌರುಷದಿಂದ ನೀವಾವ ಕಾರ್ಯವನ್ನು ಸಾಧಿಸಲೂ ಸಮರ್ಥರಾಗಲಾರಿರಿ. ಬಂಧುಗಳೂ ಮಿತ್ರರೂ ಕೂಡ ಸಧ್ಯ ನಿಮ್ಮ ಸಮೀಪವಿರಲೊಲ್ಲರು. ಆರ್ಥಿಕ ಪರಿಸ್ಥಿತಿಯು ಬಹಳವಾಗಿ ಪೀಡಿಸಲಿದೆ. ಮರ್ಯಾದೆಯಿಂದ ದಿನಗಳೆವುದು ಕಷ್ಟವಾದೀತು. ತಾ. 13, 14 ಈ ಎರಡು ದಿನಗಳು ಇತರ ದಿನಗಳಿಗಿಂದ ಸ್ವಲ್ಪ ಉತ್ತಮವೆನಿಸುವವು.

ಕುಂಭ— ಕೈಗೊಂಡ ಕಾರ್ಯಗಳಿಗೆ ಶತ್ರುಗಳಿಂದ ವಿಘ್ನಗಳು ಸನ್ನಿಹಿತವಾಗಿ ಹೆಚ್ಚಿನದನ್ನು ಮಧ್ಯದಲ್ಲೇ ನಿಲ್ಲಿಸುವ ಪ್ರಸಂಗ ಬರಲಿದೆ. ಆಯಕ್ಕಿಂತ ದ್ವಿಗುಣವಾಗಿ ವ್ಯಯವಾಗುವುದರಿಂದ ಕಷ್ಟದಿಂದ ದಿನಗಳನ್ನು ಕಳೆಯಬೇಕಾಗುವದು. ಹೆಚ್ಚಿನ ಸಮಯವನ್ನು ಪರ್ಯಟನದಲ್ಲಿ ಕಳೆವಿರಿ. ಶ್ರಮಜೀವಿಗಳಿಗೂ ಸೇವಕವರ್ಗದವರಿಗೂ ಬಯಕೆಯಂತೆ ಫಲಲಭಿಸದು. ತಾ. 10, 11, 15, 16 ಈ ದಿನಗಳು ಸ್ವಲ್ಪ ಉತ್ತಮ.

ಮೀನ— ಉಕ್ಕಿದ್ದು ಬಿಕ್ಕಿದ್ದು ಕಮ್ಮಿಟ್ಟು, ಆಗೋದು ಹೋಗೋದು ದೈವೇಚ್ಛೆ, ಎಂಬಂತೆ ನಿಮ್ಮ ಪ್ರಯತ್ನವನ್ನು ನೀವು ಮಾಡಿರಿ, ಫಲವು ಸಧ್ಯಕವಾದುದಲ್ಲವಾದರೂ ಸಾಕಷ್ಟು ಲಭಿಸಿಯೇ ತೀರುವದು. ಗೃಹತಾಪತ್ರಯಗಳು ನಿಮ್ಮನ್ನು ನೆಮ್ಮದಿಯಿಂದಿರಲು ಬಿಡಲೊಲ್ಲವು. ಶತ್ರು ಜನರಿಂದ ವಿಶೇಷವಾಗಿ ಧನಮಾನಗಳಿಗೆ ಹಾನಿಯಾದೆ, ಚರ್ಮರೋಗಗಳಿಗವಕಾಶವಿದೆ, ತಾ. 13, 14 ಈ ದಿನಗಳಲ್ಲಿ ಕಿಂಚಿತ ಸುಖಲಾಭಗಳು ಕಾಣಿಸುವವು.

Read

'NAVAYUGA' Weekly

Voice of the people Excellent Media and Reading Value.

ಲಕ್ಷ್ಮಿ ಸಂತಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರದ ಕಟ್ಟು, ಮೂತ್ರದೊಡನೆಯೂ ಮುಂದಾಗಿ ಬಿಳುಪು, ... ಈ ವರ್ಣಗಳಲ್ಲಿ ಕೀವು ಹೋಗುವದು, ಕೂಡೆ ಸಂದಿನಲ್ಲಿ ..ರಲೆ ಬರುವದು, ಕಾಲುಗಂಟು ವೇದನೆ, ಕಣ್ಣಿನಲ್ಲಿ ನೀರು ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ, ಸ್ತ್ರೀಯರ ಬಿಳೆ ಸೆರಗು ಇವೆಲ್ಲಾ ಖಾತ್ರಿಯಾಗಿ ಗುಣ ಹೊಂದುವದು. ಇತರರು ಈಗಿನ ಉಷ್ಣಕಾಲದಲ್ಲಿ ಗರ್ಮಿ ಕಂಡುಬಂದರೆ ರಾತ್ರೆ ಮಲಗುವಾಗ್ಗೆ ಒಂದು ಮಾತ್ರೆ ಸೇವಿಸಿ ಹಾಲು ಕುಡಿದರೆ ಸುಖವಾಗಿ ನಿದ್ರೆಬಂದು ಸುಖವಿರೇಚನೆಯಾಗಿ ದೇಹದ ಸುಸ್ತು ಹೋಗುವದು.

ಸೀಸೆ 1ಕ್ಕೆ ರೂ. 2-0-0

ಏಜಂಟ್ಸ್:

ಷಾ . ಕಂಪೆನಿ, ಮಂಗಳೂರು.

ಸಾರ್ವಜನಿಕರ ಉಪಯೋಗಕ್ಕಾಗಿ ಅಮೂಲ್ಯ ರತ್ನ ಪ್ರಯೋಗ!

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅಸ್ತಮಾ ಸೀಂದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೮ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩/೪

(ಪೋಸ್ಟೇಜು ಮಾಫಿ)

ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಮೈಸೂರ. ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಆಂಟಳ ನರಸಿಂಹ ಪಂಡಿತರ ಮನೆತನ ಎ. ರಾಮಸ್ವಾಮಿ ಅಯ್ಯಂಗಾರ್‌ರವರ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಟೆ ಸಂಬಂಧದ ಹೊಟ್ಟೆನೋವಿನ ಜೊತೆಗೆ ತಲೆನೋವು, ನಡುಕಳೆತ, ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ-

೩ ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ೧ ಸೆಟ್ ಅನುಪಾನಪತ್ರಿಕೆ ಮೇರೆ ಇಬ್ಬರೂ ಸೇವಿಸಿರಿ ಸಾಕು. ಶೋಭನವಾದ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾ ಪತ್ರಗಳನ್ನು ಪಡೆದಿದೆ.

ಕ್ರಯ:— ೧ ಸೆಟ್ 5ರೂ. ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1ರೂ ವಿ. ಪಿ. ಇಲ್ಲ ಕ್ಯಾಟಲಾಗ್ ಉಚಿತ. 6ರೂ ಮನಿಆರ್ಡರ್ ಮಾಡಿರಿ ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ: ಎ. ರಾಮಸ್ವಾಮಿ ಅಯ್ಯಂಗಾರ್ ಸನ್, (ಎ. ಆರ್. ವಿಶ್ವೇಶ್ವರಯ್ಯ)

Prop: ಸಂತಾನ ಸಿಂಧೂರ, 628 ಚಾಮರಾಜ ರೋಡ್ ಕ್ರಾಸ್,

(ಸೀತಾ ವಿಲಾಸ ಛತ್ರದ ಹಿಂದೆ) ಮೈಸೂರು.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳಿನ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ ಶ್ರೀನಿವಾಸರಾವ್ ಕೃತ

ಆಂಗ್ಲ ಸ್ವಯಂಬೋಧಿನಿ.

ಬೆಲೆ ರೂ. 1-8-0, ವಿ. ಪಿ. ದ್ವಾರ ರೂ. 2-0-0

ಡಾ| ಕೊರಡ್ಕಲ್ ವೆಂಕಟರಾವ್ ಕೃತ

ಮನೆ ಮದ್ದು

ಸುಲಭ ಚಿಕಿತ್ಸೆಗಳು.

ಬೆಲೆ ರೂ- 2-0-0, ವಿ- ಪಿ. ದ್ವಾರ- ರೂ 2-10-0

ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published By K. H. Shetty at the Navayuga Press, Udipi, S. India.

Regd. No. M. 3616

LICENCE No. 31
Licensed to Post without Prepayment

ESTD. 1921 ಸ್ಥಾಪನೆ
31 ನೆಯ ವರ್ಷ

17-7-1952

Founder: **Sri A. B. Shetty**
Minister for Medical & Public Health

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಸಾರ್ವಜನಿಕ
ಆರೋಗ್ಯ ಮಂತ್ರಿ
ಶ್ರೀ.ಎ.ಬಿ. ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ

ನವಯುಗ
ಪೋಸ್ಟ್ ಬಾಕ್ಸ್
ನಂಬ್ರ 22
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೪೫

NAVAYUGA WEEKLY Post Box No. 22 **UDIPI.**

Vol. 31
No. 45

ಮಧುಪರ್ಕ

ಮಹಮ್ಮದ ಪೈಗಂಬರ ಒಂದು ರಾತ್ರಿ ಹಗ್ಗದ ಮಂಚದ ಮೇಲೆ ಮಲಗಿ, ನಿದ್ರಿಸಿದರು. ಬಹತನದಿಂದ ಬಳಲುತಿದ್ದ ಅವರಿಗೆ ಇದಕ್ಕಿಂತ ಮಿಕ್ಕಿದ ಅನುಕೂಲತೆ ಇರಲಿಲ್ಲ.

ಮುಂಜಾನೆ ಎದ್ದಾಗ ಮೈತುಂಬ ಹಗ್ಗದ ಮತ್ತು ಹಗ್ಗದ ಗಂಟಿನ ಗುರುತುಗಳು ಒಡಮೂಡಿದ್ದವು. ಇದನ್ನು ಕಂಡ ಅವರ ಶ್ರೀಮಂತ ಮಿತ್ರನು ದೈನ್ಯದಿಂದ ನುಡಿದ–"ಮಹನೀಯರೇ, ಇದೇನು ಮಾಡಿದಿರಿ! ನನಗೆ ಹೇಳಿರುತ್ತಿದ್ದರೆ, ತಮಗಾಗಿ ಒಂದು ಕುಸುಮ ಕೋಮಲವಾದ ಹಾಸುಗೆಯನ್ನು ಸಿದ್ಧಪಡಿಸಿ ಕೊಡುತ್ತಿದ್ದೆನಲ್ಲ! ಇದರಿಂದ ತಮ್ಮ ನಿದ್ದೆ ಅತ್ಯಂತ ಸುಖಕಾರಕವಾಗುತಿತ್ತು."

ಪೈಗಂಬರರು ಮುಗುಳು ನಕ್ಕರು–"ತಮ್ಮಾ, ನನಗೆ ಕೋಮಲವಾದ ಶಯ್ಯೆ ಏಕೆ? ಈ ಲೋಕದಲ್ಲಿ ನನಗೆ ತುಂಬ ಕೆಲಸ ಮಾಡಲಿವೆ. ನನ್ನ ಶರೀರಕ್ಕೆ ವಿಶ್ರಾಂತಿ ಅಗತ್ಯವಿದ್ದಾಗ, ನಾನು ವಿರಮಿಸುತ್ತೇನೆ. ಆದರೆ ಈ ವಿರಾಮ ಕ್ಷಣಿಕ. ಕುದುರೆ ಸವಾರನು ಕುದುರೆಯು ದಣಿದು ಬಸವಳಿದುದನ್ನು ಕಂಡು, ಒಂದು ಗಳಿಗೆ ಕಾಲ ಮರದ ನೆರಳಲ್ಲಿ ಅದನ್ನು ಕಟ್ಟಿ, ಮರಳಿ ಮುನ್ನಡೆಯುತ್ತಾನಲ್ಲವೆ, ಹಾಗೆ!"

ಬದುಕಿನ ರೀತಿ-ನೀತಿ ಹೀಗಿರಲಿ!

ಬದುಕಿನ ರೀತಿನೀತಿ

ಲೋಕ ಈಗ ಒಳ್ಳೆಯತನಕ್ಕೆ ಒಲಿದಿರುವುದು ಎನ್ನೋಣವೇ ಎಂಬ ಭ್ರಾಂತಿ ನಮಗಾಗುತ್ತದೆ–ಸರಳ ಜೀವನ ಮತ್ತು ಶುಂಠು ಗಾಂಭೀರ್ಯಕ್ಕೆ ಸಿಗುವ ಮನ್ನಣೆಯನ್ನು ಕಂಡರೆ ಇದು ಸಿದ್ಧವಾಗುವುದು. ಬಹುಶಃ ಎಲ್ಲರ ಮನಸ್ಸಿಗೂ ವ್ಯರ್ಥ ವೆಚ್ಚದ, ಮಿಥ್ಯಾಭಿಮಾನದ, ಬಾಹ್ಯಾಡಂಬರದ, ಪರಾವಲಂಬಿಯಾದ ಬದುಕಿಗಿಂತ ಸಾದಾ ಜೀವನವು ಸಾವಿರ ಪಾಲು ಮೇಲೆಂದು ಖಚಿತವಾಗಿದೆ. ಎಂತಲೇ–ಇಂದಿನ ಜನರು ಬಹುಮೂಲ್ಯವಾದ ವಸ್ತು ಒಡವೆಗಳಿಗೆ ಹಣ ಸುರುವಲು ಬೇಕಾದಷ್ಟು ಸಾಮರ್ಥ್ಯವಿದ್ದರೂ ಅದಕ್ಕಿಂತ ಹೆಚ್ಚು ಪ್ರಯೋಜನಕ್ಕೆ ದುಡ್ಡನ್ನು ವಿನಿಯೋಗಿಸಲು ಬಾರದೇ? ಎಂದು ಯೋಚಿಸುವರು. ಪೀತಾಂಬರಗಳನ್ನುಡುವ ಬದಲಿಗೆ ಸ್ತ್ರೀಯರು ಸಾದಾ ಸೀರೆಗಳಲ್ಲಿ ತೃಪ್ತರಾಗುವರು. ಜರತಾರಿಯ ಪೇಟವನ್ನು ಸುತ್ತಿಕೊಳ್ಳುವ ಬದಲಿಗೆ ಗಂಡಸರು ಗಾಂಧೀ ಟೋಪಿಯಲ್ಲಿ ಆನಂದಗೊಳ್ಳುವರು. ಇದು ನಮ್ಮ ಮನಃಪರಿವರ್ತನೆಯ ದ್ಯೋತಕವಲ್ಲವೆ?

ಯೋಗ್ಯರಾದವರು ಎಂದಿಗೂ ಬಾಹ್ಯಾಡಂಬರದ ಬದುಕನ್ನು ಮೆಚ್ಚುವುದಿಲ್ಲ. ಊಟದ ತಟ್ಟೆಗಳು ಚಿನ್ನದವಾಗಬೇಕೆಂದು ಬಯಸುವವರಿಗೆ, ಊಟದ ಮಹತ್ವವೇ ತಿಳಿಯದು. ದುಡ್ಡಿನ ಧಂಭ ಮಾತ್ರ ಅವರನ್ನು ಕಾಡುವುದು. ಲೋಕವನ್ನು ನೋಡಿಕೊಳ್ಳುವುದರ ಜೊತೆ ತನ್ನ ಬದುಕನ್ನು ಉತ್ಸರ್ಗ ಪಥದಲ್ಲಿ ನಡೆಸುವ ಉತ್ಸಾಹಿಯು ಸದಾಗಲೂ ಶಾಂತಿ-ಸಹನೆಯಿಂದಲೂ ಮಿತವ್ಯಯತೆಯಿಂದಲೂ ಬದುಕನ್ನು ಸಾಗಿಸುವ ಕುರಿತು ಆಸ್ಥೆ ವಹಿಸುವನು. ಸರಳವಾದ ಜೀವನವು ಶಾರೀರಿಕ ಸ್ವಾಸ್ಥ್ಯವನ್ನು ಕಾಪಾಡುವುದರ ಒಟ್ಟಿಗೆ–ಮನುಷ್ಯನನ್ನು ಸರ್ವಹಿತಕಾರಿಯಾದ ಇತರ ಕೆಲಸಗಳಲಿ ಅಧಿಕಾಧಿಕ ಭಾಗ ತೆಗೆದುಕೊಳ್ಳಲು ಅನುಕೂಲತೆಯನ್ನೂ ಕಲ್ಪಿಸಿಕೊಡುತ್ತದೆ. ಇಂಥವರ ಉದಾಹರಣೆಯನ್ನು ಸಮ್ಮುಖದಲ್ಲಿ ಕಂಡಾಗ–ವ್ಯರ್ಥ ವಸ್ತುಗಳ ಉಪಯೋಗದಿಂದ ಬದುಕಿನ ರೀತಿ ಕೆಡಿಸಿಕೊಂಡವರ ಮಸ್ತಕ ನಾಚಿಕೆಯಿಂದ ತಗ್ಗುವುದು. ಏಕೆಂದರೆ-ಅವರ ಬದುಕು ಸ್ವತಂತ್ರವಲ್ಲ; ಅದೊಂದು ಬಂಧನ. ತಮ್ಮ ವಸ್ತ್ರ ಉಡುಪುಗಳ, ಮನೆಯ ಆಡಂಬರ ವಸ್ತುಗಳ, ತಮ್ಮ ನೌಕರ–ಚಾಕರರ ಗುಲಾಮರಾಗಿ ಸಾಗುವ ಜೀವನ ಅವರದು ಪಾಪ!

ಹೊಂದವನ್ನು ಆಗೆಯದೆ ಗೋಡೆ ಏರಿಸಲು ಬರುವುದಿಲ್ಲವಷ್ಟೆ: ಒಬ್ಬನ ಧನ ಐಶ್ವರ್ಯವು ಇತರರ ದುರ್ದೆಶೆ ಕಾರಣವಾಗುತ್ತದೆ. ಲೋಕದಲ್ಲಿ ನಮಗೆ ಎಷ್ಟೋ ಯೋಗ್ಯವಾದ, ಪ್ರಯೋಜನಕ್ಕೆ ಬರುವ ಮಹತ್ವದ ಹಾಗೂ ಜನೋಪಯೋಗದ ಕೆಲಸಗಳನ್ನು ಮಾಡಲಿಕ್ಕಿದೆ ಎಂಬುದನ್ನು ಕ್ಷಣಮಾತ್ರಕ್ಕೂ ಮರೆಯಬಾರದು. ಬುದ್ಧಿಯ ಹಿಡಿತದಿಂದ ತಪ್ಪಿಸಿಕೊಂಡು ಚಿತ್ತ ಚಾಂಚಲ್ಯದಿಂದ ತಮ್ಮ ಸಮಯವನ್ನೂ ದುಡ್ಡನ್ನೂ ವಿಚಾರವನ್ನೂ ಅನುಪಯೋಗಿಯಾದ ಕೆಲಸಗಳಲ್ಲಿ ವ್ಯರ್ಥಗೊಳಿಸಲು ಯಾರೊಬ್ಬರೂ ಮುಂದಾಗಬಾರದು.

ಸತ್ಯಜೀವನ ಪ್ರಚಾರವೇ ಧ್ಯೇಯವಾಗುಳ್ಳ ಸಂತನೊಬ್ಬನಿದ್ದನು. ಹಣದ ಲೋಭದಿಂದ ಈ ಕೆಲಸವನ್ನು ಅವನು ಕೈಗೊಂಡಿದ್ದಿಲ್ಲ. ಸ್ವಯಂ ಸರಳ ಜೀವನವನ್ನು ನಡೆಸುತಿದ್ದುದರಿಂದ–ಜನರಿಗೆ ಅವನು ನೀಡಿದ ಉಪದೇಶವು ಸಾರ್ಥಕವಾಗುತ್ತಿತ್ತು. ತನಗೆ ಊಟಕ್ಕೆಂದು ಏನು ಸಿಕ್ಕಿತೋ, ಅಷ್ಟರಲ್ಲೇ ತೃಪ್ತನಾಗುವ ಮನೋಭಾವ ಅವನದಿತ್ತು.

ಒಂದು ದಿನ ತನ್ನ ಸಂಗಾತಿ ಮಾಲೀಕನೊಡನೆ ಸಂತನು ನಗರದಲ್ಲಿ ಭಿಕ್ಷೆಗಾಗಿ ಹೋದನು. ಇಬ್ಬರೂ ಬೇರೆ ಬೇರೆ ಮಾರ್ಗವನ್ನು ಹಿಡಿದು, ಸಂಜೆಗೆ ಒಟ್ಟಾದರು. ಜುಳುಜುಳು ಹರಿಯುವ ನದಿಯ ದಡದಲ್ಲಿ ಕುಳಿತು ಭಿಕ್ಷಾನ್ನವನ್ನು ಪರಸ್ಪರ ತೋರಿಸಿದರು. ಸಂತನಮುಖ ಸಾಹಸದಿಂದ ಪ್ರಫುಲ್ಲಿತಗೊಂಡಿತು. "ತಮ್ಮಾ, ಇಷ್ಟು ಚೆನ್ನಾದ ಭೋಜನ ದೊರೆಯುವ ಆಶೆಯೇ ನನಗಿದ್ದಿಲ್ಲ" ಎಂದು ದೊರಕಿದ ಅಲ್ಪ ಅನ್ನದ ಕಡೆಗೆ ಬೊಟ್ಟು ಮಾಡಿ ಸಂತನು ಹೇಳಿದ. ಇದು ಗೆಳೆಯನಿಗೆ ರುಚಿಸಲಿಲ್ಲ– "ಅಯ್ಯೊ, ಇದೂ ಒಂದು ಊಟವೇ! ನಮಗೆ ಊಟದ ಮೇಜಿಲ್ಲ, ಚೂರಿ ಇಲ್ಲ, ಅಡುಗೆ ಬಳಸಲು ಒಬ್ಬ ನೌಕರನಿಲ್ಲ, ಸೊಗಸಾದ ಮನೆಯಿಲ್ಲ–" ಎಂದು ಮಾತೇಪ್ರೊ ದೂರಿಕೊಂಡ.

ಅದಕ್ಕೆ ಸಂತನ ಸಮಾಧಾನ ಹೀಗೆ– "ತಮ್ಮ ಹಸಿವು ಚೆನ್ನಾಗಿದ್ದರೆ, ಕಲ್ಲಿನ ಮೇಲಿಟ್ಟ ರೊಟ್ಟಿಯ ತುಣುಕೇ ಪಕ್ವಾನ್ನ ಸಮಾನವಾಗುವುದು. ಬಾಯಾರಿ ಬಳಲಿದವನಿಗೆ, ಸುರಾಪಾನವಿಲ್ಲದಿದ್ದರೂ, ತಿಳಿನೀರಿನಿಂದ ಸಂತೃಪ್ತಿಯೊದಗುವುದು."

ಇದರ ಮರ್ಮವೇನು?–ಬಡವರಾದವರು ಸದಾ ಕಾಲ ದಾರಿದ್ರ್ಯದಲ್ಲಿಯೇ ಸಂತೋಷಿಸಿ, ಅನುಭವ ಪಡೆಯುತ್ತಿರಲಿ ಎಂಬುದಂತೂ ಅಲ್ಲ: ಮನುಷ್ಯನು ಬಾಹ್ಯ ಜಗತ್ತಿನಲ್ಲಿ ದೊರೆಯುವ ಸಾಧನ ಸಲಕರಣೆಗಳ ಕೊರತೆ ಇದ್ದರೂ, ಹಣದ ಅಭಾವವಿದ್ದರೂ – **ಅಂತರಂಗಿಕವಾದ ತೃಪ್ತಿಯಿಂದ ಮನಸ್ಸಿನ ಸಂತೋಷ ಭಾವದಿಂದ, ಆತ್ಮಿಕ ಪ್ರಸನ್ನತೆಯಿಂದ ಹೊರಗಿನ ಸ್ಥೂಲ ಕೊರತೆಗಳನ್ನು ಲಕ್ಷ್ಯಕ್ಕೆ ತರದಿರಬಲ್ಲನು!**

ಸರಳ ಜೀವನವನ್ನು ನಡೆಸುವುದರಿಂದ ಯಾರಿಗೂ ನಾವು ಹಾನಿ ಮಾಡಿದಂತಾಗುವುದಿಲ್ಲ. ಆದರೆ ಸಮೃದ್ಧಿಯಾದ ಐಶ್ವರ್ಯವಿದ್ದರೆ, ಆಗ ನಮ್ಮ ಮನಃಸ್ಥಿತಿ ಇಷ್ಟು ಒಳ್ಳೆಯದಾಗಿ ಉಳಿಯುವುದೆಂದು ಹೇಳಲಾರೆವು. ನಿರರ್ಥಕ ವಸ್ತುಗಳನ್ನು ಸಂಗ್ರಹಿಸಿ ಜೋಪಾನ ಮಾಡುವ ಪ್ರವೃತ್ತಿ ಬೆಳೆದರೆ, ಅದು ಮನುಷ್ಯನನ್ನು ಕ್ಲೇಶಕ್ಕೆ ಗುರಿಯಾಗಿಸುವುದು. ಪ್ರಸಿದ್ಧ ನೇಗಲ ಬಾದಶಹ ಅಕ್ಬರನಿಗೆ ಒಬ್ಬ ಬಡ ಪಂಡಿತನು ಎಂಥ ಮಾತು ಹೇಳಿದ್ದನಂತೆ–(ನಿನ್ನ ಭೋಜನವು ಸರ್ವಥಾ ಪರಿಶುದ್ಧವೂ ಪವಿತ್ರವೂ ಆಗಿರಲಿ.

ಸರಿಯಾದ ಹೆಜ್ಜೆ! ಮಹತ್ವದ ಹೆಜ್ಜೆ!!

ಇತ್ತೀಚೆಗೆ ಮದ್ರಾಸು ಸರಕಾರವು ಸರಿಮಾರ್ಗದಲ್ಲಿ ಒಂದು ಮಹತ್ತರ ಹೆಜ್ಜೆಯನ್ನಿಟ್ಟಿದೆ. ನೀವಾದರೂ ನಿಮ್ಮ ಉಳಿತಾಯದಲ್ಲಿ ಸರಿಯಾದ ಹೆಜ್ಜೆಯನ್ನಿಡಬೇಕೆಂದು ನಾವು ನಿಮ್ಮ ಲಕ್ಷ್ಯವನ್ನೆಳೆಯುತ್ತೇವೆ. ನೀವು ಅದನ್ನು ನಿಮ್ಮ ಬ್ಯಾಂಕಿನಲ್ಲಿ ಹಾಕಿದರೆ ನಾವು ಕೊಡುವ ಬಡ್ಡಿಯಿಂದ ಅದು ಬೆಳೆಯುತ್ತದೆ. ಅಲ್ಲದೆ ಅದೇ ವೇಳೆಯಲ್ಲಿ ಅದು ಭೂಪ್ರಗತಿಯನ್ನುಂಟುಮಾಡುವ ಉತ್ಪಾದನಾ ಮತ್ತು ಸಾಹಸೋದ್ಯಮಗಳಿಗೆ ದೊರಕುವುದು. ಈ ಬ್ಯಾಂಕು ಪ್ರತಿನಿತ್ಯವೂ 50,000 ಜನರಿಗೂ ಮಿಕ್ಕಿ ಉಳಿಸಲಿಕ್ಕೆ ಸಹಕರಿಸುತ್ತಿದೆ. ದಕ್ಷಿಣ ಕನ್ನಡದ ನೀಲೇಶ್ವರ ಮತ್ತು ಕನ್ನಿಗೋಳಿಯಲ್ಲಿ ಇತ್ತೀಚೆಗೆ ಎರಡು ಹೊಸ ಶಾಖೆಗಳು ಇವರಿಂದ ತೆರೆಯಲ್ಪಟ್ಟಿವೆ.

ವಹಿವಾಟು ರೂ. 5,00,00,000 ಕ್ಕೂ ಮಿಕ್ಕಿದೆ.

ದಿ ಕೆನರಾ ಇಂಡಸ್ಟ್ರಿಯಲ್
ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ 1925 ಹೆಡ್ ಆಫೀಸ್ ಉಡುಪಿ

The Canara Industrial &
Banking Syndicate Limited.

Estd: 1925 H. O.: **UDIPI.**

ಓರ್ವ ಮಹಿಳೆಯ ಮಹಾಸೇವೆ

ಕುಂಟು ಮಕ್ಕಳ ಕ್ಷೇಮಕ್ಕಾಗಿ ಆಸ್ಪತ್ರೆ

ಆಕಸ್ಮಿಕವಾಗಿ ಓದಿದೊಂದು ಪತ್ರಿಕಾ ಲೇಖನ, ಇಂದು ಭಾರತಕ್ಕೆಲ್ಲ ಒಂದೇ ಒಂದಾದ, ಊನಗಳನ್ನು ಸರಿಪಡಿಸುವ ಆಸ್ಪತ್ರೆಗೆ ಸ್ಫೂರ್ತಿಯನ್ನಿತ್ತಿತು ಎಂದರೆ ನಂಬುವಿರಾ? ನಮ್ಮ ಕುಂಟು ಮಕ್ಕಳಿಗೆ ಹೊಸ ಹುರುಪನ್ನೂ ಅಮಿತ ಶಕ್ತಿಯನ್ನೂ ನೀಡುವ ಈ ಪ್ರಯತ್ನದ ಕತೆ ಕೇಳಬೇಕೆನಿಸುವುದಿಲ್ಲವೆ?

ಮುಂಬಯಿಯ ಸುಪ್ರಸಿದ್ಧ ಸಾಮಾಜಿಕ ಕಾರ್ಯಕರ್ತೆ ಫಾತಿಮಾ ಇಸ್ಮಾಯೀಲ ೧೯೪೭ರಲ್ಲಿ ಅಮೇರಿಕೆಯ ಒಂದು ಪತ್ರಿಕೆಯಲ್ಲಿ ಲೇಖನವೊಂದನ್ನು ಓದಿದರು. ಅದರ ಹೆಸರು: "ಸೀಯಾಟಲ್‌ನ ಪ್ರಥಮನಾಗರಿಕನೆಂದರೆ ಆಸ್ಪತ್ರೆ."

ಈ ಲೇಖನದಲ್ಲಿ ಒಬ್ಬಳು ಸ್ತ್ರೀಯ ಪ್ರಯತ್ನದಿಂದ ಮತ್ತು ಕುಂಟರಾದ ಮಕ್ಕಳ ಕಡೆಗಿನ ಸಹಾನುಭೂತಿಯ ಫಲವಾಗಿ ವಾಷಿಂಗ್‌ಟನ್ ರಾಜ್ಯದ ಸೀಯಾಟಲ್‌ನಲ್ಲಿ ಮಕ್ಕಳ ಊನಗಳನ್ನು ಗುಣಪಡಿಸುವ ಆಸ್ಪತ್ರೆ ತಲೆ ಎತ್ತಿದ ವರ್ಣನೆ ಇತ್ತು. ಅಲ್ಲಿಯ ಉಳಿದ ಹೆಂಗಸರು ಈ ವರದಾನದಂಥ ಉಪಕ್ರಮವನ್ನು ಪ್ರಶಂಸಿಸಿ, ಆ ಸ್ತ್ರೀಯ ಬಳಿಬಂದು ಹೇಗೆ ಮುತ್ತಿಗೆ ಹಾಕುತ್ತಿದ್ದರು, ಮತ್ತು ಅವಳ ಆಸ್ಪತ್ರೆ ಬೆಳೆದುಬಂದು ಭವ್ಯವಾದ ಸಂಸ್ಥೆಯಾಗುವಂತೆ ಹೇಗೆ ನೋಡಿಕೊಂಡರು, ಎಂಬುದರ ಉಲ್ಲೇಖವೂ ಬರಹದಲ್ಲಿತ್ತು. ೧೯೦೭ರಲ್ಲಿ ಸ್ಥಾಪಿತವಾದ ಆಸ್ಪತ್ರೆ ಈ ತನಕ ೪೩೦೦೦ ಕುಂಟರ ಉಪಚಾರ ಮಾಡಿ, ಧನ್ಯವಾದುದು ಹೇಗೆ ಎಂಬ ವಿಸ್ತೃತ ವಿವರವನ್ನು ಅದರಲ್ಲಿ ಓದಬಹುದಿತ್ತು.

— ೨ —

ಇಂಥ ಸ್ಫೂರ್ತಿ ಪ್ರಬಲವಾದ ಲೇಖನವನ್ನು ಓದುವ ಕೆಲವು ತಿಂಗಳ ಹಿಂದೆಯೇ ಫಾತಿಮಾ ಇಸ್ಮಾಯೀಲ ಹೆಚ್ಚು ಕಡಿಮೆ ಇದೇ ಮಾದರಿಯ ನೂತನ ಉಪಕ್ರಮಕ್ಕೆ ಧೈರ್ಯದಿಂದ ಅಡಿ ಇಟ್ಟಿದ್ದರು. ಆರು ಮಂದಿ ವೈದ್ಯರಿಂದೊಡಗೂಡಿದ ಚಿಕ್ಕದಾದ ಸ್ವಯಂಸೇವಕರ ಪಂಗಡದ ನೆರವಿನಿಂದ ಕುಂಟುತನ ನಿವಾರಣೆಗೆಂದು ಒಂದು ಸಣ್ಣ ಆಸ್ಪತ್ರೆ ತೆರೆದರು. ಸ್ವತಃ ತನ್ನ ಮಗಳಿಗೆ ಈ ಊನ ಅಂಟಿದುದು ಕಂಡು—ಮತ್ತದನ್ನು ಬಹಳ ಪ್ರಯತ್ನದ ಬಳಿಕ ಸರಿಪಡಿಸಿದ ಸಮಾಧಾನದಿಂದ ತೃಪ್ತಿಗೊಂಡು—ಹೀಗೆ ಬಳಲುವ ಸಾವಿರಾರು ಉಳಿದ ಮಕ್ಕಳಿಗೆ ಸಹಾಯ ಮಾಡುವ ಮನಸ್ಸು ಫಾತಿಮಾಗೆ ಬಂತು.

ಕುಂಟರಿಗೆ ನೆರವಾಗುವ ಯಾವುದೇ ಪ್ರಯತ್ನ ನಮ್ಮ ದೇಶದಲ್ಲಿ ಅದಕ್ಕೆ ಮೊದಲು ಆಗಿದ್ದಿಲ್ಲ. ಇದರಿಂದ ಧೈರ್ಯಗೆಡುವ ಬದಲು ಇನ್ನಷ್ಟು ಉತ್ಸಾಹವೇ ಫಾತಿಮಾಗೆ ಆಯಿತು. ಸಾಮಾಜಿಕ ಸಹಾಯ ಮತ್ತು ಸಹಾನುಭೂತಿಯಿಂದ ಏನು ಸಾಧಿಸಬಹುದೆಂಬುದನ್ನು ಪತ್ರಿಕಾ ಲೇಖನವು ಸ್ಪಷ್ಟವಾಗಿ ಅವರಿಗೆ ತಿಳಿಸಿತ್ತು. ಆದುದರಿಂದ ತನ್ನ ಪುಟ್ಟ ಆಸ್ಪತ್ರೆಯನ್ನು ವಿಸ್ತರಿಸಿ, ದೊಡ್ಡ ಪ್ರಮಾಣದಲ್ಲಿ ಮಕ್ಕಳ ಕುಂಟು ರೋಗವನ್ನು ನಿವಾರಿಸುವ ಉದ್ಯಮಕ್ಕೆ ತೊಡಗುವ ಮನಸ್ಸು ಅವರಿಗಾಯಿತು.

— ೩ —

ಅಂಗ ಊನಗೊಂಡ ಮಕ್ಕಳ ಚಿಕಿತ್ಸೆಯೇ ಧ್ಯೇಯವಿರುವ ಕುಂಟು ಮಕ್ಕಳ ಮರು ವಸತಿಯ ಸಂಘದ ಸ್ಥಾಪನೆಯು ಸಪ್ತಂಬರ ೧೯೪೭ರಲ್ಲಿ ನಡೆದು, ಕಾರ್ಯಾರಂಭವೂ ತೊಡಗಿತು- ಮೊದಲಿಗೆ ಊನದ ಕಾರಣಗಳನ್ನು ಪರಿಶೀಲಿಸಿ ಯೋಗ್ಯ ಜಾಗ್ರತೆಯನ್ನು ತೆಗೆದುಕೊಂಡು, ಉಪಚರಿಸುವುದು ನಡೆಯಿತು. ಜೊತೆಗೇ ಬೇನೆಗೀಡಾದ ಈ ಮಕ್ಕಳ ಸಮಸ್ಯೆಗಳ ಕುರಿತು ಜನಾಭಿಪ್ರಾಯವನ್ನು ಜಾಗೃತಗೊಳಿಸುವ ಹಾಗೂ ಬೇಕಾದ ಅಂಕೆ ಸಂಖ್ಯೆಗಳನ್ನು ಕಲೆ ಹಾಕುವ ಕೆಲಸವನ್ನೂ ಮಾಡಿದರು.

ಚಟುವಟಿಕೆಗಳನ್ನು ನಡೆಸಲು ಸ್ಥಳಾಭಾವವಿದ್ದುದರಿಂದ, ಮುಂಬಯಿ ಸರಕಾರದವರು ಕೊಡ ಮಾಡಿದ ಮಿಲಿಟರಿ ವಸತಿಯೊಂದನ್ನು ಆನಂದದಿಂದ ಸ್ವೀಕರಿಸಲು ಸಂಘವು ನಿಶ್ಚಯಿಸಿತು. ಇಷ್ಟು ಹೊತ್ತಿಗಾಗಲೇ ಈ ಸಂಘವು ಎಣಿಸಿದುದಕ್ಕಿಂತ ಎಷ್ಟೊ ಹೆಚ್ಚು ಯಶಸ್ಸನ್ನು ಸಂಪಾದಿಸಿತ್ತು. ಪ್ರಥಮದ ಒಂದೂವರೆ ವರ್ಷದಷ್ಟು ಅಲ್ಪ ಅವಧಿಯಲ್ಲಿ ಸುಮಾರು ೫೦೦ಕ್ಕೂ ಮಿಕ್ಕಿ ಮಕ್ಕಳನ್ನು ಚಿಕಿತ್ಸೆ ಮಾಡಿ ಧನ್ಯವಾಗಿತ್ತು.

— ೪ —

ಇದರೊಡನೆ ಸೋಲಿಗೂ ಎದುರಾಳಿಯಾಗುವ ಪ್ರಸಂಗ ಸಂಘಕ್ಕೆ ಬಂತು:— ನಿರಾಶೆಯ ಗಳಿಗೆಗಳು ಅದರ ಹಣೆಯಲ್ಲೂ ಬರೆದಿದ್ದುವು. ಹಣದ ಅಭಾವ, ಶಸ್ತ್ರ ಸಾಧನ ಸಾಮಗ್ರಿಗಳ ಕೊರತೆ, ಯೋಗ್ಯ ಸಾರಿಗೆ ಸೌಕರ್ಯದ ಅನುಕೂಲತೆ ಇಲ್ಲದಿರುವುದು—ಇವು ನಿಜಕ್ಕೂ ಚಿಂತೆಗೆ ಕಾರಣವಾಗುತ್ತಿದ್ದುವು. ಆದರೆ ಕ್ರಮೇಣ ಕಾಣಿಕೆಗಳೂ ಸಹಾಯಗಳೂ ಬರತೊಡಗಿದುದರಿಂದ ಕೆಲಮಟ್ಟಿಗೆ ಭಾರ ಕಳೆದು, ಕಾರ್ಯಕರ್ತರ ಮನಸ್ಸು ಹಗುರಾಯಿತು. ಸಾಮಾನು ಸರಂಜಾಮುಗಳ, ವಿದ್ಯುತ್ತಿನ ಸಲಕರಣೆಗಳ, ಮಕ್ಕಳ ಉಪಚಾರಕ್ಕೆ ಅಗತ್ಯವೆನಿಸಿದ ವಸ್ತುವಿಶೇಷಗಳ ಉಡುಗೊರೆಯಿಂದ ಸಂಘದ ಕಾರ್ಯ ಸುಲಭವಾಯಿತು. ಅಕ್ಟೋಬರ, ೧೯೪೮ರಲ್ಲಿ ಯಾರೋ ಅಜ್ಞಾತ ಮನುಷ್ಯರು ೩೫ ಸ್ಥಳಗಳಿರುವ ಒಂದು ಮೋಟಾರು ಬಸ್ಸನ್ನು ಕೊಟ್ಟು, ಸಾರಿಗೆಯ ಕಷ್ಟವನ್ನೂ ಸ್ವಲ್ಪ ಮಟ್ಟಿಗೆ ನೀಗಿಸಿದರು.

ಮೇ, ೧೯೪೯ರಲ್ಲಿ ಸಂಘಕ್ಕೆ ಇನ್ನೊಂದು ತೊಡಕನ್ನು ಎದುರಿಸಬೇಕಾಯಿತು. ಕೈಬದಲಾದ ಕಾರಣದಿಂದ, ಈಗಿನ ಸ್ಥಳವನ್ನು ಬಿಡುವ ಪ್ರಸಂಗ ಬಂತು. ಮುಂಬಯಿಯ ಇನ್ನೊಂದು ಆಸ್ಪತ್ರೆಯ ಕೃಪೆಯಿಂದ ಕೆಲವು ತಿಂಗಳ ಕಾಲ ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ಸ್ಥಳ ಬದಲಾಯಿಸುತ್ತ ಹೇಗೋ, ಕೆಲಸವನ್ನು ಮುಂದುವರಿಸಿದರು.

— ೫ —

ಇದು ಸ್ವತಂತ್ರ ಕಟ್ಟಡದ ಅವಶ್ಯಕತೆಯನ್ನು ಸ್ಪಷ್ಟವಾಗಿ ಒತ್ತಿ ಹೇಳಿತು. ಸಾರ್ವಜನಿಕರ ಉದಾರದಾನ ಮತ್ತು ಮುಂಬಯಿ ಸರಕಾರದ ಸಹಾಯದಿಂದ ತನ್ನ ಯೋಜನೆಗಳಿಗೆ ಮೂರ್ತ ಸ್ವರೂಪ ಕೊಡುವಲ್ಲಿ ಫಾತಿಮಾ ಇಸ್ಮಾಯೀಲ ಸಮರ್ಥರಾದರು. ಕಟ್ಟಡದ ಅಡಿಗಲ್ಲು ಡಿಸಂಬರ, ೧೯೪೯ರಲ್ಲಿ ಇಡಲ್ಪಟ್ಟಿತು. ಒಂದು ವರ್ಷಕ್ಕೂ ಕಡಿಮೆ ಅವಧಿಯಲ್ಲಿ, ಎಂದರೆ ಸಪ್ಟಂಬರ್, ೧೯೫೦ರಲ್ಲಿ ಅದರ ಪ್ರವೇಶೋತ್ಸವ ನೆರವೇರಿತು. ಇಂದು ಸಮಗ್ರ ಭಾರತದಲ್ಲಿ ಇರುವುದು ಈ ಮಾದರಿಯ ಆಸ್ಪತ್ರೆ ಇದೊಂದೇ.

ಹಾಜಿ ಅಲಿಪಾರ್ಕಿನ ಈ ಒಂದು ಮಾಳಿಗೆಯ ಸುಂದರ ಕಟ್ಟಡದಲ್ಲಿ ೫೦ ಹಾಸಿಗೆಗಳ ವ್ಯವಸ್ಥೆ ಇದೆ. ಹೊರಗಿನ ೧೫೦ ಮಕ್ಕಳಿಗೆ ಚಿಕಿತ್ಸೆ ನಡೆಸುವ ಏರ್ಪಾಟು ಕೂಡ ಇದೆ. ಇಲ್ಲಿಯ ಸಿಬ್ಬಂದಿಗೆ ವಾಸಯೋಗ್ಯವಾದ ಕಟ್ಟಡಗಳೂ ಇದಕ್ಕೆ ಹೊಂದಿಕೊಂಡಿವೆ. ಕುಂಟುತನವನ್ನು ಗುಣಪಡಿಸುವಲ್ಲಿ ನಿಷ್ಣಾತರಾದ ಜನರ ಹಾಗೂ ದೈಹಿಕ ವೈಕಲ್ಯಗಳ ಚಿಕಿತ್ಸೆಯಲ್ಲಿ ಪ್ರಾವೀಣ್ಯ ಪಡೆದವರ ಸೇವೆಯನ್ನು ಆಸ್ಪತ್ರೆ ಪಡೆದಿರುವುದು ಸೌಭಾಗ್ಯದ ಮಾತು, ಉಪಚಾರ ವ್ಯವಸ್ಥೆಯಲ್ಲಿ ನಿರತರಾಗಿರುವವರಿಗೆ ಸೈನ್ಯದಲ್ಲಿ ದುಡಿದ ಅಪಾರ ಅನುಭವವಿದೆ. ಶಸ್ತ್ರ ಚಿಕಿತ್ಸೆಗೆ ಬೇಕಾದ ಚಲೋದಾದ ಕೋಣೆಯಿದೆ. ಪ್ರಕಾಶಮಾನವಾದ, ತಂಗಾಳಿ ಬೀಸಿ, ಉಲ್ಲಾಸ ಹುಟ್ಟಿಸುವ ವಿಶಾಲ ಕೋಣೆಗಳಲ್ಲಿ ಮಕ್ಕಳು ಇರುತ್ತಾರೆ.

— ೬ —

ಈ ಸಂಘದಲ್ಲಿ ಜಾತಿಮತಭೇದವಿಲ್ಲದೆ ಬಡವ ಬಲ್ಲಿದರೆಂಬ ತಾರತಮ್ಯವಿಲ್ಲದೆ ಎಲ್ಲ ಮಕ್ಕಳ ಯೋಗ ಕ್ಷೇಮವನ್ನೂ ವಿಚಾರಿಸುವರು. ಮುಖ್ಯವಾಗಿ ಬಡ ಹಾಗೂ ಮಧ್ಯಮ ತರಗತಿಯ ಕುಟುಂಬದ ಮಕ್ಕಳಿಗೆ ಇದರ ಉಪಯೋಗ ಹೆಚ್ಚು. ದೊಡ್ಡವರ ಮಕ್ಕಳೂ ಬರುತ್ತಾರೆ— ಇಲ್ಲಿನ ಚಿಕಿತ್ಸೆಗೆ ಹೆತ್ತವರ ದೊಡ್ಡಸ್ತಿಕೆ, ಬಡಸ್ತಿಕೆಗನುಸಾರ ದುಡ್ಡು ವಸೂಲು ಮಾಡುವರು.

ಯಾವುದೇ ಕಾರಣವಿರಲಿ- ಕುಂಟುತನದ ಎಲ್ಲ ಬಗೆಗೂ ಚಿಕಿತ್ಸೆ ಮಾಡಲಾಗುವುದು ಇಲ್ಲಿಯ ವೈಶಿಷ್ಟ್ಯ. ಆಸ್ಪತ್ರೆಯನ್ನು ಒಂದು ಸಲ ಸುತ್ತಿ ಬಂದರೆ— ಪಕ್ಷಪಾತಕ್ಕೀಡಾಗಿ ಕುಂಟಾದ, ಎಲುಬಿನ ಕ್ಷಯದಿಂದ ಕಾಲಿನ ಪ್ರಯೋಜನಕ್ಕೆ ಎರವಾದ, ಹುಟ್ಟಿನಿಂದಲೇ ಹೆಳವರೆನಿಸಿದ, ಅಥವಾ ಆಕಸ್ಮಿಕ

(೧೦ನೇ ಪುಟ ನೋಡಿರಿ)

DO YOU KNOW?
THAT

THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs. 10 lacks.
3. Has granted an average dividend of 6% to the Shareholders for the past 20 years.
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies

ADOPT

"MY BANK"

THE VIJAYA BANK, LIMITED,
H. O., MANGALORE.

The East & West Insurance Co, Ltd.,
East & West Bldgs. BOMBAY - 1.

ದಿ ಈಸ್ಟ್ ಎಂಡ್ ವೆಸ್ಟ್
ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ:] ಈಸ್ಟ್ ಎಂಡ್ ವೆಸ್ಟ್ ಬಿಲ್ಡಿಂಗ್ಸ್, ಬೊಂಬಾಯಿ 1 [1913

ಉದಾರ ಯಾ ರಿಯಾಯತಿ ಶರ್ತಗಳಿರುವ ಪುರಾತನ ಮತ್ತು ಮುಂದುವರಿದ ಕಂಪೆನಿಗಳಲ್ಲೊಂದಾಗಿರುತ್ತದೆ.

ವಿಮೆಯ ಸಕಲ ಪ್ರಯೋಜನವನ್ನು ಜನರಿಗೆ ಒದಗಿಸಿಕೊಟ್ಟು ಆ ಬಾಬಿನ ಎಲ್ಲಾ ಕೆಲಸಗಳಲ್ಲಿ ಭಾಗಿಯಾಗಿ ಸಹಕರಿಸಿ ಸಲಹೆಗಳನ್ನೀಯುತ್ತಾ, ಜನಸೇವೆಗೈಯುವುದೇ ನಮ್ಮ ಧ್ಯೇಯ.

ನಮ್ಮ ಚೀಫ್ ಏಜನ್ಸಿ ವಿಸ್ತೀರ್ಣದೊಳಗೆ ಪ್ರತೀ ಜಿಲ್ಲೆಗೊಬ್ಬರಂತೆ ಇನ್ಸ್‌ಪೆಕ್ಟರುಗಳೂ, ಸ್ಪೆಶಲ್ ಏಜಂಟರೂ, ಏಜಂಟರೂ ಬೇಕಾಗಿದ್ದಾರೆ. ಹೆಚ್ಚಿನ ವಿವರಕ್ಕೆ ಬರೆಯುವದು.

ಮೆಸ್ಸರ್ಸ್ ಹೆಗ್ಡೆ ಎಂಡ್ ರಾವ್,
ಚೀಫ್ ಏಜಂಟರು,
ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಮೈಸೂರು ಸ್ಟೇಟ್,
ಪೋಸ್ಟ್ ಶಿರ್ವಾ, ದ. ಕ.

ಕಾಲುವೆ ನೀರಿನ ಬಹುಮುಖ ಉಪಯೋಗ

ಉತ್ಪಾದನೆ ಹೆಚ್ಚುವುದಲ್ಲದೆ ಕ್ಷಾಮಭಯ ತಪ್ಪುವುದು.

ಕಾಲುವೆಗಳು ಭಾರತದ ನೀರಾವರಿ ಕ್ರಮಗಳಲ್ಲಿ ಅತ್ಯಂತ ಪ್ರಾಮುಖ್ಯದ ಪಾತ್ರ ವಹಿಸುತ್ತವೆ. ಬಹಳ ಅಗ್ಗದದಲ್ಲಿ ನೀರನ್ನೊದಗಿಸುವುದಲ್ಲದೆ, ಸುಲಭವಾಗಿಯೂ ಸಕಾಲದಲ್ಲಿಯೂ ನೀರು ದೊರೆಯುವುದು ಕಾಲುವೆಗಳ ಇನ್ನೊಂದು ವೈಶಿಷ್ಟ್ಯ. ಉತ್ತರ ಭಾರತದ ಸಿಂಧೂ-ಗಂಗಾ ನದಿಗಳ ಬಯಲು ಪ್ರದೇಶವು ಈಗಿನಷ್ಟು ಫಲವತ್ತಾಗಿರಲು ಅಲ್ಲಿ ಕೈಕೊಂಡಿರುವ ಅನೇಕ ನೀರಾವರಿ ಯೋಜನೆಗಳೇ ಕಾರಣ. ಜಗತ್ತಿನಲ್ಲಿಯೇ ಮಹತ್ವದ ಇಂಜನಿಯರಿಂಗ್ ಕೌಶಲ್ಯವನ್ನಿಲ್ಲಿ ಕಾಣಬಹುದು.

ವರ್ಗ ಪ್ರಭೇದ

ಭಾರತದಲ್ಲಿ ಎರಡು ಬಗೆಯ ಕಾಲುವೆಗಳಿವೆ—(೧) ನೆರೆನೀರಿನ ಕಾಲುವೆಗಳು (೨) ಸತತ ನೀರಿನ ಕಾಲುವೆಗಳು. ನದೀ ನೀರಿನ ಹರಿವನ್ನು ಯಾವ ರೀತಿಯಲ್ಲಿಯೂ ತಡೆಯದೆ, ಅದರ ದಂಡೆಗಳನ್ನು ಕಡಿದು ಕಾಲುವೆಗಳನ್ನು ಒಳನಾಡಿಗೆ ಒಯ್ಯುವುದರ ಮೂಲಕ ಮೊದಲನೆ ವರ್ಗದ ಕಾಲುವೆ ನಿರ್ಮಿಸುತ್ತಾರೆ. ಇದರಿಂದ ನೆರೆಯಿಂದ ನದಿಯು ತುಂಬಿ ಹರಿದಾಗ—ಈ ಕಾಲುವೆಗಳ ಮುಖಾಂತರ ನೀರು ದೂರದ ಪ್ರದೇಶಗಳಿಗೆ ಹರಿದು ಬರುವುದು, ಮತ್ತದನ್ನು ಕೃಷಿಗಾಗಿ ಬಳಸಬಹುದು. ಆದರೆ ನೆರೆನಿಂತ ಮರುಗಳಿಗೆಗೆ ಈ ಕಾಲುವೆಗಳಲ್ಲಿಯೂ ನೀರು ಹರಿಯುವುದು ನಿಂತುಬಿಡುವುದು. ಹೀಗೆ ಅನಿಶ್ಚಿತತೆಯ ಕಾರಣದಿಂದ ಕೃಷಿಗೆ ಈ ಕಾಲುವೆಗಳಿಂದ ಬಹಳ ಅನುಕೂಲತೆ ಒದಗುವುದೆನ್ನಲಾರೆವು; ಆದರೂ ಮಳೆಗಾಲದಲ್ಲಿ ದೂರದ ಒಳನಾಡುಗಳಲ್ಲಿ ಮಳೆಬೀಳದಾಗ—ಈ ತುಂಬಿದ ಕಾಲುವೆಗಳಿಂದ ಕೃಷಿಯನ್ನು ಮಾಡುವುದು ಸಾಧ್ಯವಾಗುತ್ತದೆ.

ಇದಕ್ಕೆ ವಿಪರೀತವಾಗಿ ಸತತ ನೀರಿನ ಕಾಲುವೆಗಳನ್ನು ಹರಿಯುವ ನದಿಗೆ ಅಡ್ಡವಾಗಿ ಅಣೆಕಟ್ಟನ್ನು ಹಾಕಿ, ಪ್ರವಾಹ ಮುಖವನ್ನು ಬದಲಿಸಿ ಯಾವಾಗಲೂ ನೀರಿನ ಪೂರೈಕೆ ಇರುವಂತೆ ಸೃಷ್ಟಿಸುತ್ತಾರೆ. ಇವುಗಳು ನದಿಯ ನೀರಿನ ಸ್ವಾಭಾವಿಕ ಮಟ್ಟವನ್ನು ಹೊಂದಿಕೊಂಡಿರಬೇಕಾದ ಅಗತ್ಯವಿಲ್ಲ. ವಿಶಾಲವಾದ ಜಲಾಶಯದ ನಿರ್ಮಾಣವು ಅಣೆಕಟ್ಟಿನ ಬುಡದಲ್ಲಿ ಗಾನಾಗಿ ಉಂಟಾಗುವುದು. ವರ್ಷದ ಹನ್ನೆರಡೂ ತಿಂಗಳು ಕಾಲುವೆಗಳಲ್ಲಿ ನೀರು ಹರಿಯುವುದು. ಉತ್ತರ ಪ್ರದೇಶದಲ್ಲಿ ಬಲೆಯಂತೆ ಹರಡಿರುವ ನೀರಾವರಿ ಯೋಜನೆಗಳೆಲ್ಲ ಇದೇ ಮಾದರಿಗೆ ಸೇರಿವೆ.

ನೀರಾವರಿ ತೆರಿಗೆ

ನೀರಾವರಿಯ ಪ್ರಯೋಜನವನ್ನು ರೈತರಿಗೆ ಒದಗಿಸಿಕೊಡುವುದರಲ್ಲಿ ಸರಕಾರಕ್ಕೆ ವಿಪರೀತ ವೆಚ್ಚ ಬರುವುದರಿಂದಲೂ ನೀರಾವರಿಯಿಂದಾಗಿ ರೈತರ ಆದಾಯವು ಸ್ವಾಭಾವಿಕವಾಗಿ ಹೆಚ್ಚುವುದರಿಂದಲೂ—ನೀರಾವರಿ ತೆರಿಗೆಯನ್ನು ಸರಕಾರಕ್ಕೆ ಕೊಡಬೇಕಾಗುವುದು. ಭಾರತದಲ್ಲಿ ಒಂದೊಂದು ರಾಜ್ಯದಲ್ಲಿ ಒಂದೊಂದು ಬಗೆಯ ತೆರಿಗೆಯ ವಿಧಾನ ಬಳಕೆಯಲ್ಲಿದೆ. ಮುಂಬಯಿ ಮದ್ರಾಸು ರಾಜ್ಯಗಳಲ್ಲಿ ನೀರಾವರಿಯ ಉಪಯೋಗಕ್ಕೆ ಅರ್ಹವಾದ ಭೂಮಿ ಮತ್ತು ಪ್ರಯೋಜನಕ್ಕೆ ಹೊರತಾದ ಭೂಮಿ ಎಂದು ಇಬ್ಬಗೆಯಾಗಿ ವಿಂಗಡಿಸಿ, ಬೇರೆ ಬೇರೆ ಕಂದಾಯವನ್ನು ಹೊರಿಸುವರು. ಇನ್ನು ಕೆಲವೆಡೆ ನೀರಿನ ಉಪಯೋಗವನ್ನು ರೈತನು ಎಷ್ಟರ ಮಟ್ಟಿಗೆ ಪಡೆದಿದ್ದಾನೆಂದು ನೋಡಿ, ಆ ಪ್ರಮಾಣವನ್ನನುಸರಿಸಿ ನೀರಿನ ತೆರಿಗೆ ಹೊರಿಸುವರು. ನೀರಾವರಿಯ ಪ್ರಯೋಜನದಿಂದ ಭೂಮಿಯಲ್ಲಿ ಬೆಳೆದ ಪೈರಿನ ವೈವಿಧ್ಯವನ್ನನುಸರಿಸಿಯೂ ಈ ಕರದಲ್ಲಿ ಬದಲಾವಣೆಯಾಗುವುದು. (ಉದಾ: ಕಬ್ಬು ಬೆಳೆಯುವ ಪ್ರದೇಶಕ್ಕೆ ರೂ 12ರಷ್ಟು ಕರ ಬಿದ್ದರೆ, ಗೋಧಿ ಬೆಳೆಗೆ ರೂ 5ರಷ್ಟು ಮಾತ್ರ—ಮದ್ರಾಸು ರಾಜ್ಯ). ಏನೇ ಇದ್ದರೂ, ನೀರಿನ ಅಭಾವವನ್ನು ದೂರೀಕರಿಸಿ, ರೈತರಿಗೆ ಅತ್ಯಧಿಕ ಲಾಭವನ್ನುಂಟು ಮಾಡುವುದೇ ನೀರಾವರಿಯ ಮುಖ್ಯ ಧ್ಯೇಯವಿರುವುದರಿಂದ— ಕರಭಾರವು ಕಡಮೆಯಾದಷ್ಟು ಲಾಭ ಹೆಚ್ಚುವುದು.

ಪ್ರಗತಿ ಸೂಚನೆ

೧೯೨೧ಕ್ಕೂ ಮುಂಚೆ ಕಾಲುವೆಗಳನ್ನು ೧) ಅನುತ್ಪಾದಕ ಮತ್ತು ೨) ಸಾಮಾನ್ಯ ವರ್ಗದವುಗಳೆಂದು ವಿಂಗಡಿಸುತ್ತಿದ್ದರು. ನೀರಾವರಿಯ ಪೂರೈಕೆಯನ್ನುಂಟುಮಾಡಲು ವೆಚ್ಚ ಮಾಡಿದ ಮೂಲ ಬಂಡವಾಳದ ಮೇಲೆ ಹತ್ತು ವರ್ಷಗಳೊಳಗಾಗಿ ಬಡ್ಡಿಯು ಶಾಶ್ವತ ರೂಪದಲ್ಲಿ ಬರುವಂತಿದ್ದರೆ ಅದು ಉತ್ಪಾದಕ ಯೋಜನೆ. ಭಾರತದ ಹೆಚ್ಚಿನ ಕಾಲುವೆಗಳು ಈ ಜಾತಿಗೆ ಸೇರಿವೆ. ಅನುತ್ಪಾದಕ ಕಾಲುವೆ ಯೋಜನೆಗಳಿಂದ ನೇರಾಗಿ ಯಾವ ಲಾಭವನ್ನೂ ಆದಾಯವನ್ನೂ ಅಪೇಕ್ಷಿಸಲಾರೆವು: ಬರಗಾಲದಂಥ ಗಂಡಾಂತರ ಪ್ರಸಂಗಗಳಲ್ಲಿ ಈ ಕಾಲುವೆಗಳು ತುಂಬ ಸಹಾಯವನ್ನು ಕೊಡುವುದರಿಂದ, ಉಳಿದ ಸಮಯ ಅವುಗಳ ರಕ್ಷಣೆ ಮಾಡಬೇಕು. ಇದಕ್ಕೆ ಬೇಕಾದ ಬಂಡವಾಳವನ್ನು ಕ್ಷಾಮ ನಿವಾರಣಾ ನಿಧಿಯಿಂದ ಒದಗಿಸುವರು. ಸಾಮಾನ್ಯ ವರ್ಗದ ಕಾಲುವೆಗಳು ಸಮಯಾನುಕೂಲತೆಗನ್ನು ನೋಡಿಕೊಂಡು ರಚಿಸಲ್ಪಡುತ್ತವೆ. ವರ್ಷದ ಆದಾಯ ವ್ಯಯವನ್ನು ತೂಗಿಕೊಂಡು ಸರಕಾರವು ಇವುಗಳನ್ನು ಕೈಗೊಳ್ಳುತ್ತದೆ. ೧೯೪೫-೪೬ನೇ ವರ್ಷದಲ್ಲಿ ಭಾರತದಲ್ಲಿ ಈ 3 ವರ್ಗಗಳಿಂದ ಕ್ರಮವಾಗಿ (೧) ೧೪೯೦೭೪೫೩ ಎಕ್ರೆ (೨) ೪೧೪೧೬೩೬ ಎಕ್ರೆ ಮತ್ತು (೩) ೨೦೨೭೪೪೫ ಎಕ್ರೆ ಭೂಮಿ ಸಾಗುಗೊಂಡಿತು.

ವಿವಿಧ ಯೋಜನೆಗಳ ವಿವರ

ಕಳೆದ ಅರುವತ್ತು ವರ್ಷಗಳಲ್ಲಿ ನೀರಾವರಿಯು ಅಸಾಮಾನ್ಯ ಪ್ರಗತಿಯನ್ನು ಸಾಧಿಸಿದೆ. ೧೮೭೮-೭೯ರಲ್ಲಿ ಭಾರತದಲ್ಲಿ ಒಟ್ಟಿಗೆ ನೀರಾವರಿಗೊಳಗಾದ ಭೂಮಿ ೧೦೫ ಲಕ್ಷ ಎಕ್ರೆ. ಅದು ೧೯೧೯-೨೦ರಲ್ಲಿ ೨೮೧ ಲಕ್ಷ ಎಕ್ರೆಗೇರಿತು. ೧೯೨೯-೩೦ರಲ್ಲಿ ೩೧೬ ಲಕ್ಷ ಎಕ್ರೆಗೆ, ೧೯೩೬-೩೭ರಲ್ಲಿ ೩೨೫ ಲಕ್ಷ ಎಕ್ರೆಗೆ, ಮತ್ತು ಇಲ್ಲಿಂದ ೧೯೪೫-೪೬ರಲ್ಲಿ ೪೮೩ ಲಕ್ಷ ಎಕ್ರೆಗೆ ಏರಿತು.

ಸ್ವಾತಂತ್ರ್ಯ ಪ್ರಾಪ್ತಿಯಿಂದೀಚೆಗೆ ಹೊಸತಾಗಿ ನೀರಾವರಿ ಹಾಗೂ ಜಲವಿದ್ಯುತ್ತಿನ ಯೋಜನೆಗಳಲ್ಲಿ ಸರಕಾರ ಆಸ್ಥೆ ವಹಿಸಿದೆ. ಇವುಗಳಲ್ಲಿ ಕೆಲವು ಕೇವಲ ನೀರಿನ ಪೂರೈಕೆಗಷ್ಟೇ ಇದ್ದರೆ, ಮತ್ತೆ ಕೆಲವು ಜಲವಿದ್ಯುತ್ತಿನ ನಿರ್ಮಾಣಕ್ಕಾಗಿಯೇ ಇವೆ. ಇನ್ನು ಕೆಲವನ್ನು ವಿವಿಧೋದ್ದೇಶಗಳಿಂದ ಕಟ್ಟಲಾಗುತ್ತಿದೆ. ಹೀಗೆ ಇಂದು ಸುಮಾರು ೫೫೦ ಕೋಟಿ ರುಪಾಯಿ ಬಂಡವಾಳವನ್ನು ನುಂಗುವ ೧೬೫ ಯೋಜನೆಗಳು ಸರಕಾರದ ಮುಂದಿವೆ. ಇವುಗಳಲ್ಲಿ ೧೨ ಯೋಜನೆಗಳು ಬೃಹತ್ ಪ್ರಮಾಣದವು: ಇವುಗಳಲ್ಲಿ ಪ್ರತಿಯೊಂದಕ್ಕೂ ಕನಿಷ್ಠಪಕ್ಷ ೧೦ ಕೋಟಿ ರೂಪಾಯಿ ವೆಚ್ಚ ಬರುವುದು: ಈ ಹನ್ನೆರಡು ಯೋಜನೆಗಳಿಗಾಗಿ ಒಟ್ಟಿಗೆ ಆಗುವ ವೆಚ್ಚ ೪೩೯ ಕೋಟಿ ರೂಪಾಯಿ! ಇದಲ್ಲದೆ ಸಾಧಾರಣ ಮಟ್ಟದ ಪ್ರತಿಯೊಂದಕ್ಕೂ ೨ರಿಂದ ೧೦ ಕೋಟಿ ರೂಪಾಯಿ ವೆಚ್ಚ ಬರುವ, ಮತ್ತು ಒಟ್ಟಿನಲ್ಲಿ ೧೦೩ ಕೋಟಿ ರೂಪಾಯಿ ಬಂಡವಾಳ ಬೇಡುವ—೨೪ ಯೋಜನೆಗಳಿವೆ. ಇನ್ನು ಪ್ರತಿಯೊಂದಕ್ಕೂ ೨ ಕೋಟಿ ರುಪಾಯಿಗೂ ಕಡಿಮೆ ವೆಚ್ಚದ, ಒಟ್ಟಿಗೆ ೪೮ ಕೋಟಿ ರುಪಾಯಿ ಬಂಡವಾಳದ, ೯೯ ಸಣ್ಣ ಮಟ್ಟದ ನೀರಾವರಿ ಯೋಜನೆಗಳಿವೆ. ಇವೆಲ್ಲವೂ ದೇಶದಲ್ಲೆಲ್ಲ ಚದರಿಕೊಂಡಿದ್ದು, ಕೆಲವೇ ವರ್ಷಗಳಲ್ಲಿ ನಮ್ಮ ರಾಷ್ಟ್ರವನ್ನು ಸಂಪೂರ್ಣ ಸಮೃದ್ಧಿಗೊಳಪಡಿಸುವವು

ಉತ್ಪಾದನೆಯಲ್ಲಿ ವೃದ್ಧಿ.

ನೀರಾವರಿಯ ಒಂದು ಮುಖ್ಯ ಉಪಯೋಗ ಬಂಜರು ಭೂಮಿಯನ್ನು ಸಾಗು ಮಾಡುವುದಾದರೆ— ಅದಕ್ಕೂ ಮಿಗಿಲಾದುದು ಸಾಗು ಭೂಮಿಯ ಉತ್ಪಾದನಾಶಕ್ತಿಯನ್ನು ಹೆಚ್ಚಿಸುವ ಅದರ ಗುಣ. ಮಳೆನೀರಿನಿಂದ ಬೆಳೆಯುವ ಪೈರಿನ ಒಂದೂವರೆ ಪಾಲಷ್ಟು ಹೆಚ್ಚು ನೀರಾವರಿಯಿಂದ ಸಾಗುಮಾಡಿದ ಭೂಮಿಯಿಂದ ಉತ್ಪಾದನೆಯಾಗುವುದು. ಜನಸಂಖ್ಯೆ ಬೆಳೆಯುತ್ತಿರುವ ಈ ದುರ್ದಿನಗಳಲ್ಲಿ ಯಾವುದೇ ಉಪಾಯಗಳಿಂದ ಉತ್ಪಾದನೆ ಹೆಚ್ಚಿಸುವುದಕ್ಕೆ ನಾವು ಆತುರಪಡಲೇಬೇಕಾದೀತು! ಕಾಲುವೆಗಳು ಯೋಗ್ಯ ನೀರಿಗೆ ಸೌಕರ್ಯವನ್ನು ಒದಗಿಸಿಕೊಡುವುದರಿಂದ ಈ ಮಟ್ಟಿನಲ್ಲೂ ತುಂಬ ಪ್ರಯೋಜನವಿದೆ.

ನಡೆಯದ ನಾಣ್ಯ

ನೀವು ಆರೋಗ್ಯವಂತರಿದ್ದಾಗ ವಿಮೆ ಇಳಿಸಬಲ್ಲಿರಿ; ಆದರೆ, ಆರೋಗ್ಯ ಕೆಟ್ಟಾಗ, ನೀವು ವಿಮೆಯ ರಕ್ಷಣೆಯನ್ನು ಪಡೆಯಲಾರಿರಿ — ನಡೆಯದ ನಾಣ್ಯದಂತೆ ನಿಮ್ಮ ಆಗಿನ ಸ್ಥಿತಿ.

ಕಾರಣ, ನೀವು ವಿಮೆ ಇಳಿಸುವುದನ್ನು ಮುಂದೂಡಲಾಗದು. ಇಂದೇ ವಿಮೆ ಇಳಿಸಿ ನಿಮ್ಮ ಮತ್ತು ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೫

ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ.

The Canara Mutual Assurance Co. Ltd.

Head Office: **UDIPI**, S. INDIA.



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಪೆನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಶಾಲೆ, ಕಾಲೇಜುಗಳಿಗೂ
ಸಹಕಾರಿ ಸಂಘ, ಮುನ್ಸಿಫ್
ಕೋರ್ಟುಗಳಿಗೂ ಕೃಷಿಕ,
ವರ್ಗದಾರ, ವ್ಯಾಪಾರಿಗಳಿಗೂ
ಬೇಕಾಗುವ ಉತ್ತಮ ಕಾಗದದಲ್ಲಿ
ತಯಾರಿಸಿದ

ತರತರದ ಫಾರ್ಮುಗಳು,
ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಪ್ರಜಾ ಪ್ರಭುತ್ವದ ತತ್ವಗಳಲ್ಲಿ

ಅಭ್ಯುದಯ ಯೋಜನೆಗಳ ಪೂರೈಕೆಗೆ ಹೊಸ ತೆರಿಗೆಗಳು ಅಗತ್ಯ

ಮುಂಗಡ ಪತ್ರದ ಚರ್ಚೆ

ಸಾಮಾನ್ಯ ಮುಂಗಡಪತ್ರದ ಕಾಲದಲ್ಲಿ ಸದಸ್ಯರು ಮದ್ರಾಸು ಸರಕಾರದ ಹೊಸ ತೆರಿಗೆಯ ಧೋರಣೆಯನ್ನು ಕಟುವಾಗಿ ಟೀಕಿಸಿದರೇ ಹೊರತು:–ಸರಕಾರದ ಬೊಕ್ಕಸ ತುಂಬುವುದಕ್ಕೆ ಬೇರೇನು ಯೋಗ್ಯ ಉಪಾಯವಿದೆ ಎಂಬುದನ್ನಾಗಲೀ, ತಮ್ಮ ಬೇಡಿಕೆಗಳನ್ನು ಆದಾಯದ ಮಿತಿಯೊಳಗೆನೇ ಇಡಬೇಕೆನ್ನುವ ಪ್ರವೃತ್ತಿಯನ್ನಾಗಲೀ ತೋರಿಸಲಿಲ್ಲ. ಸರಕಾರವು ಪಾನಪ್ರತಿಬಂಧ ಧೋರಣೆಯನ್ನು ಅನುಸರಿಸಿದ ಪರಿಣಾಮವಾಗಿಯೇ ಈಗಿನ ಆರ್ಥಿಕ ಮುಗ್ಗಟ್ಟನ್ನು ರಾಜ್ಯವು ಎದುರಿಸಬೇಕಾಗಿ ಬಂದಿದೆ ಎಂಬಂತೆ ಶಾಸನ ಸಭೆಯಲ್ಲಿ ಸದಸ್ಯರು ಪಾನ ಪ್ರತಿಬಂಧವನ್ನು ರದ್ದುಪಡಿಸುವ ಬಗ್ಗೆ ಒತ್ತಾಯ ಮಾಡಿದರು. ಬಸ್ಸು ಪ್ರಯಾಣಿಕರ ಮೇಲೆ ಹಾಕಬೇಕೆಂದಿರುವ ತೆರಿಗೆಯನ್ನು ಅವ್ಯವಹಾರಿಕವೆಂದೂ ಜನರಿಗೆ ತ್ರಾಸ ಕೊಡುವಂಥದೆಂದೂ ದೂರಿದರು. ರಾಜ್ಯ ಶಾಸನ ಪರಿಷತ್ತಿನಲ್ಲಿ ಶ್ರೀ ಟಿ. ಪ್ರಕಾಶಮರು ಮಾತನಾಡುತ್ತಾ ಕಳೆದ ಆರು ವರ್ಷಗಳಲ್ಲಿ ಮದ್ರಾಸು ರಾಜ್ಯದಲ್ಲಿ ಕರಭಾರವು ಇಮ್ಮಡಿಯಾಗಿದೆ ಎಂದು ತಿಳಿಸಿದರು. ಜನರ ಮೇಲೆ ವ್ಯರ್ಥವಾಗಿ ಹೆಚ್ಚಿನ ಹೊರೆ ಹೇರುವುದು ನಿಲ್ಲಬೇಕೆಂದು ಅಧಿಕ ಸದಸ್ಯರು ಅಪೇಕ್ಷೆಪಟ್ಟರು. ರಾಯಲಸೀಮೆಯ ಬರಗಾಲದ ನೆವದಿಂದ ಅನಿರೀಕ್ಷಿತವಾದ ವೆಚ್ಚ ಸಂಭವಿಸಿದುದನ್ನು ಕೇಂದ್ರ ಸರಕಾರದ ಸಹಾಯ ಕೇಳಿ ಹೊಂದಿಸಿಕೊಳ್ಳಬೇಕೆಂಬ ಸೂಚನೆಬಂದಿತು. ಆದಾಯ ಕರದಲ್ಲಿ ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೆ ಪಾಲು ಕೊಡುವ ಕ್ರಮವು ಚೆನ್ನಾಗಿಲ್ಲವೆಂದೂ-- ಮದ್ರಾಸಿಗೆ ಸ್ವಾಭಾವಿಕವಾಗಿ ಬೇಕಿರುವ ಕೊರತೆಯ ಹಣವನ್ನು ಕೇಂದ್ರದೊಡನೆ ಈ ಮಟ್ಟಿಗೆ ಚರ್ಚಿಸಿ ಪಡೆಯಬೇಕೆಂದೂ ಸದಸ್ಯರು ಮಾಡಿದ ಸೂಚನೆಯೊಂದೇ ಸಮಂಜಸವಾದುದೆನ್ನಬಹುದು.

ಅಧಿಕ ಕರಭಾರವೇ?

ತೆರಿಗೆಗಳು ಹೆಚ್ಚಿವೆ ಎಂಬುದೇನೋ ಸ್ವತಃಸಿದ್ಧ. ಆದರೆ ಜನೋಪಯೋಗಿ ಕಾರ್ಯಕ್ರಮಗಳಿಗಾಗಿಯೇ ಈಗಿನ ರಾಷ್ಟ್ರ ಪುನರ್ನಿರ್ಮಾಣದ ದಿನಗಳಲ್ಲಿ ಹೆಚ್ಚಿನ ವೆಚ್ಚ ಬರುತ್ತದೆ. ಭಾರತದ ಯಾವದೇ ರಾಜ್ಯ ಸರಕಾರವು ಉಳಿಕೆಯ ಮುಂಗಡ ಪತ್ರವನ್ನು ಮಂಡಿಸಲು ಸಮರ್ಥವಾಗಿಲ್ಲ. ಮೊನ್ನೆ ಮೊನ್ನೆ ಮದ್ರಾಸಿಗಿಂತಲೂ ದೊಡ್ಡದಾದ ಉತ್ತರ ಪ್ರದೇಶ ಶಾಸನ ಸಭೆಯಲ್ಲಿ ಸಾದರಪಡಿಸಿದ ಮುಂಗಡ ಪತ್ರವು ನಾಲ್ಕೂವರೆ ಕೋಟಿಗೂ ಮಿಕ್ಕಿದ ಕೊರತೆಯನ್ನು ತೋರಿಸಿತು. ಇದನ್ನು ತುಂಬಿಸಲು ಹೊಸ ತೆರಿಗೆಗಳನ್ನು–ಮುಖ್ಯವಾಗಿ ನೀರಾವರಿ ತೆರಿಗೆಯನ್ನೂ ಸ್ಟ್ಯಾಂಪು ಚಾರ್ಜನ್ನು ಹೆಚ್ಚಿಸುವುದೇ ಮುಂತಾದ ರೀತಿಯಲ್ಲಿ– ಹೊರಿಸುವ ವಿಚಾರವಿದೆ. ಅಲ್ಲಿಯ ಮುಖ್ಯಮಂತ್ರಿ ಪಂಡಿತ ವಲ್ಲಭಪಂತರು "ಉತ್ತರ ಪ್ರದೇಶದಲ್ಲಿ ಎಷ್ಟು ಕರಭಾರವು ಸರಕಾರಿ ಕಲಾಖಾಲ ಕಮಿಯಾಯಿತ್ತೇ. ಇಷ್ಟು ಕಡಿಮೆ ತೆರಿಗೆ ಇರುವ ಬೇರೊಂದು ರಾಜ್ಯವೇ ಭಾರತದಲ್ಲಿಲ್ಲ" ಎಂದುದು ಗಮನಾರ್ಹವಾಗಿದೆ. ಉಳಿದ ರಾಜ್ಯಗಳಲ್ಲಿ ಈ ಕರಭಾರವು ತಲಾ ಮುಂಬಯಿಯಲ್ಲಿ ರೂ. ೧೧, ಮಧ್ಯಪ್ರದೇಶದಲ್ಲಿ ರೂ. ೬-೪, ಪಶ್ಚಿಮ ಬಂಗಾಲದಲ್ಲಿ ರೂ. ೯, ಮತ್ತು ಮದ್ರಾಸದಲ್ಲಿ ರೂ. ೬-೬ ಇರುತ್ತದೆ ಭಾರತ ಸರಕಾರದ ಅಂಕೆಸಂಖ್ಯೆಗಳ ಲೆಕ್ಕದಂತೆ ನಮ್ಮ ವಾರ್ಷಿಕಾದಾಯವು ಸುಮಾರು ೨೫೦ ಎನ್ನಬಹುದು. ಜನಕಲ್ಯಾಣಕ್ಕೆ ಉದ್ಯೋಗಿಸುವ ಮಹಾ ಯೋಜನೆಗಳಿಗಾಗಿ ಸರಕಾರವು ಹೆಚ್ಚು ಹಣವು ಬೇಡುವುದರಿಂದ ಹೆಚ್ಚಿದ ಕರಭಾರವನ್ನು ಹೊರಲು ಸಾರ್ವಜನಿಕರು ಮುಂದಾಗಬೇಕೆಂದು ಕೇಳಿಕೊಳ್ಳುವುದು ಸಹಜವೇ.

ಬಡವರ ಮೇಲೆ ದಯೆ

ದಕ್ಷಿಣ ಕನ್ನಡದ ಪ್ರತಿನಿಧಿಗಳು ಮದ್ರಾಸು ಶಾಸನಸಭೆಯಲ್ಲಿ ಜಿಲ್ಲೆಯ ಆವಶ್ಯಕತೆಗಳ ಕಡೆಗೆ ಗಮನ ಹರಿಸಬೇಕೆಂದು ಹೇಳಿದರು. ಮುಂಗಡ ಪತ್ರದ ಬಗ್ಗೆ ಅಭಿಪ್ರಾಯ ಸೂಚಿಸುವಾಗ ಇದು ಅತ್ಯಂತ ಜಾಗರೂಕತೆಯಿಂದ ನಿರ್ಮಿತವಾಗಿದೆ ಎಂದು ಅವರು ಹೇಳಿದರು. ಪ್ರಜಾಪಕ್ಷದ ಸದಸ್ಯರು ಆರ್ಥಿಕ ಹಾಗೂ ಅಭಿವೃದ್ಧಿ ಇಲಾಖೆಗಳಲ್ಲಿ ಆಂಧ್ರರೂ ತಮಿಳರೂ ಪ್ರಾಶಸ್ತ್ಯ ಪಡೆದಿರುವುದರಿಂದ ಈ ಜಿಲ್ಲೆಯನ್ನು ನಿರ್ಲಕ್ಷ್ಯತನದಿಂದ ನೋಡಲಾಗುತ್ತಿದೆ ಎಂದು ದೂರಿಕೊಂಡರು. ಮುಂಗಡ ಪತ್ರದ ಮೇಲಿನ ಎಲ್ಲ ಟೀಕೆಗಳಿಗೂ ಉತ್ತರಕೊಡುವಾಗ ಅರ್ಥ ಮಂತ್ರಿ ಶ್ರೀ ಸುಬ್ರಹ್ಮಣ್ಯಂ ಸರಕಾರವು ಚಾ ಮತ್ತು ಇತರ ತೋಟಗಳ ಉತ್ಪಾದನೆಯ ಮೇಲೆ ಆದಾಯ ತೆರಿಗೆಯನ್ನು ಹೊರಿಸುವ ಬಗ್ಗೆ ಯೋಚಿಸುತ್ತಿದೆ ಎಂಬ ಹೊಸ ಸೂಚನೆಯನ್ನು ಮುಂದಿಟ್ಟರು. ಸದಸ್ಯರಲ್ಲಿ ಕೆಲವರು ಭೂಕಂದಾಯವನ್ನು ಹೆಚ್ಚಿಸುವ ಬದಲಿಗೆ ಕೃಷಿಯ ಉತ್ಪನ್ನದ ಮೇಲೆ ಆದಾಯಕರವನ್ನೇಕೆ ಹೊರಿಸಬಾರದು ಎಂದು ಪ್ರಶ್ನಿಸಿದ್ದರು. ಸಾಮಾನ್ಯವಾಗಿ ರೈತರು ತಮ್ಮ ಉತ್ಪಾದನೆಯ ಲೆಕ್ಕಪತ್ರಗಳನ್ನು ಸರಿಯಾಗಿ ಇಡುವುದಿಲ್ಲ—ಮತ್ತದನ್ನು ಪರೀಕ್ಷಿಸುತ್ತಾ ಕೂಡುವುದೂ ಸಾಧ್ಯವಿಲ್ಲ ಎಂಬುದರಿಂದ ಇದು ಅವ್ಯವಹಾರ್ಯವಾದ ಸೂಚನೆ. ಪಾನಪ್ರತಿಬಂಧವನ್ನು ಹಣಸಂಪಾದನೆಗಾಗಿ ಒತ್ತರಿಸಿ ಬಿಡುವುದು ಯೋಗ್ಯ ಮಾರ್ಗವಲ್ಲ ಎಂದು ಅರ್ಥಮಂತ್ರಿಗಳು ತಿಳಿಸಿದರು. ಬಡವರ ಮೇಲಿನ ಕರಭಾರವನ್ನು ಕಡಿಮೆ ಮಾಡಬೇಕೆಂದು ವಿರೋಧ ಗುಂಪಿನವರು ಹೇಳುವಾಗ—ಕಳ್ಳು ಕುಡಿಯುವ ಅಭ್ಯಾಸವು ಬಡವರಿಗೇ ಹೆಚ್ಚು ಅಂಟಿಕೊಂಡಿರುವುದರಿಂದ ಅವರ ಮೇಲೆ ಅಬಕಾರಿ ಸುಂಕ ಬೀಳುವುದನ್ನು ನಾನು ಮೆಚ್ಚಲಾರೆ ಎಂದರು. ಸರಕುಗಳ ಬೆಲೆ ಇಳಿತದ ಪರಿಣಾಮವಾಗಿ ಈ ವರ್ಷ ಒಂದೂವರೆ ಕೋಟಿ ರೂಪಾಯಿ ಮಾರಾಟ ತೆರಿಗೆಯ ಮೇಲಿನ ಆದಾಯ ಕಡಿಮೆಯಾಗುವುದೆಂಬುದರಿಂದ ಇಷ್ಟು ಹೆಚ್ಚು ಕೊರತೆ ಕಾಣಿಸಿತು ಎಂದವರು ಸ್ಪಷ್ಟೀಕರಣ ಕೊಟ್ಟರು.

ಪೋಲೀಸು ಪಡೆ ಬೇಕು

ಬಡವರ ಮೇಲೆ ತೆರಿಗೆ ಹೊರಿಸುವುದು ಸರಕಾರಕ್ಕೆ ಬೇಕಿಲ್ಲ. ಶ್ರೀಮಂತರನ್ನು ಹಿಂಡಿಹಿಪ್ಪೆ ಮಾಡಬೇಕೆಂಬ ಕಮ್ಯೂನಿಸ್ಟ ವಾದದಲ್ಲಿಯೂ ಹುರುಳಿಲ್ಲ. ಜನರಿಗೆ ಬೇಕಾದುದನ್ನು ಅವರಿಂದಲೇ ಹಣ ಒದಗಿಸಿಕೊಂಡು ಸುವ್ಯವಸ್ಥಿತವಾಗಿ ಪೂರೈಸುವುದು ಸರಕಾರದ ಲಕ್ಷಣ. ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಲ್ಲದ ಕಮ್ಯೂನಿಸ್ಟರು ಜನರಲ್ಲಿ ಸಹನೆ-ಸಂತುಷ್ಟಿಗಳನ್ನು ಸ್ಥಾಪಿಸುವುದಕ್ಕೆ ಬದಲು ಉದ್ವೇಗವನ್ನು ಅತೃಪ್ತಿಯನ್ನೂ ಬೇಕೆಂದೇ ಉಂಟುಮಾಡುವರು. ಪ್ರತಿಪಕ್ಷದವರು ನ್ಯಾಯ ಮಾರ್ಗದಲ್ಲಿ ನಡೆಯಬೇಕೆಂದು ಸಭಾಧುರೀಣರು ಕೇಳಿಕೊಂಡರು. ಇದೇ ಮಾತನ್ನು ಶಾಸನ ಪರಿಷತ್ತಿನಲ್ಲಿ ರಾಜಾಜಿ ಕೂಡ ಹೇಳಿದರು. ಮುಂಗಡಪತ್ರದ ಚರ್ಚೆಗೆ ಮುಕ್ತಾಯ ಸ್ವರೂಪ ಕೊಡುತ್ತಾ, ರಾಜಾಜಿ ಮಾತಾಡಿದಾಗ ಕಮ್ಯೂನಿಸ್ಟರ ಈಗಿನ ಪ್ರಜಾ ಪ್ರಭುತ್ವ ಧೋರಣೆಯ ಪ್ರಾಮಾಣಿಕತನದ ಬಗ್ಗೆ ಸಂಶಯ ವ್ಯಕ್ತಗೊಳಿಸಿದರು. ಪೋಲೀಸ ಪಡೆಯ ಮೇಲೆ ಕಮ್ಯೂನಿಸ್ಟರು ಕಣ್ಣಿಟ್ಟು, ಅದರ ವೆಚ್ಚವು ಮಿತಿಮೀರಿದೆ ಎಂದು ಹೇಳಿದ್ದರು. ಇಷ್ಟು ದೊಡ್ಡ ಪ್ರಮಾಣದಲ್ಲಿ ಪೋಲೀಸು ದಳಗಳು ಇರುವ ಬಗ್ಗೆ ಆವಶ್ಯಕತೆ ಏನಿದೆ ಎಂದವರು ಪ್ರಶ್ನಿಸಿದ್ದರು. ರಾಜಾಜಿ ಇದಕ್ಕೆ ಉತ್ತರಿಸುವಾಗ "ಕಮ್ಯೂನಿಸ್ಟರು ಪ್ರಜಾಪ್ರಭುತ್ವ ತತ್ವಕ್ಕೆ ಶಾಶ್ವತ ರೂಪದಲ್ಲಿ ಒಗ್ಗಿಕೊಂಡು ನಡೆಯುವರೆಂಬುದು ಸ್ಪಷ್ಟ ಕಂಡು ಬಂದ ಮೇಲೆ ಈ ಪೋಲೀಸು ದಳದ ಪ್ರಮಾಣವನ್ನು ಕಡಿಮೆ ಮಾಡಬಹುದು." ಎಂದರು. ಅಲ್ಲಿಯವರೆಗೆ ಜನತೆಯಲ್ಲಿ ಭೀತಿಯನ್ನೂ, ಪ್ರಕೋಪವನ್ನೂ ಹಬ್ಬಿಸಿದಾಗ, ಶಾಂತಿ ಮತ್ತು ಸುವ್ಯವಸ್ಥೆಗಳನ್ನು ಕಾಪಾಡಲು ಸಾಕಷ್ಟು ಬಲವಾದ ಪೋಲೀಸು ಪಡೆ ಬೇಕೆಂದವರು ಅಭಿಪ್ರಾಯಪಟ್ಟರು.

ಅಧಿಕ ಆದಾಯದ ಉಪಾಯ

ರಾಜ್ಯದ ಆದಾಯವನ್ನು ಹೆಚ್ಚಿಸಲು ಹೊಸ ತೆರಿಗೆಗಳು ಅಗತ್ಯವೆಂದವರು ಪ್ರತಿಪಾದಿಸಿದರು. ಮಾರಾಟಕರವೊಂದೇ ರಾಜ್ಯದ ಆದಾಯದ ಬಾಬುಗಳಲ್ಲಿ ಹಿಂಡುವ ಆಕಳಿನಂತಿದೆ. ಉಳಿದೆಲ್ಲ ಬರಡು ದನಗಳು. ತನಗೆ ಸಲ್ಲತಕ್ಕ ಅಂಶವನ್ನು ಕೇಂದ್ರದಿಂದ ಅಧಿಕ ಪ್ರಮಾಣದಲ್ಲಿ ಪಡೆಯಬೇಕೆಂದು ಮದ್ರಾಸು ಸರಕಾರ ಯೋಚಿಸುತ್ತಿದೆ. ಜನಸಂಖ್ಯೆಯ ಪ್ರಮಾಣದ ಮೇಲೆ ಆದಾಯ ತೆರಿಗೆಯಲ್ಲಿ ಪಾಲು ದೊರೆಯಬೇಕೆಂಬುದು ಮದ್ರಾಸು ಸರಕಾರದ ಅಭಿಪ್ರಾಯ. ಆದರೆ ಪಶ್ಚಿಮ ಬಂಗಾಲ, ಮುಂಬಯಿಯಂಥ ರಾಜ್ಯಗಳು ಆಯಾ ರಾಜ್ಯಗಳಲ್ಲಿ ವಸೂಲಾದ ಮೊತ್ತದ ದಾಮಾಶಯ

ZANDU Mahayogaraja Guggula

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ 1 **ತೊಲೆಗೆ ರೂ 3/- ಮಾತ್ರ.**

ದೊರೆಯುವ ಸ್ಥಳಗಳು.

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ ಉಡುಪಿ

2 ಶ್ರೀ ವಿ ವಿ ಶೆಣ್ಯೈ, ಕೆಮಿಸ್ಟ್, ಕಾರ್ಕಳ.

3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು

4 ಎಲ್. ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಕರತ್ತು ವಗೈರೆಗಳಿಗೆ ಬರೆಯಿರಿ

DAMODAR & CO.,

Nainiappa Naicken Street, Park Town-**MADRAS** 3.

ದಿ ಉಡುಪಿ ಇಲೆಕ್ಟ್ರಿಕಲ್ ಸ್ಟೋರ್ಸ್

ಚರ್ಚರೋಡು (ಸ್ಥಾಪನ 1938) ಉಡುಪಿ

ಮನೆ, ಮಠ, ಆಫೀಸು, ಕಾರ್ಖಾನೆ ಮೊದಲಾದುವುಗಳಿಗಾಗಿ ಅತ್ಯಂತ ಕಡಿಮೆ ಹಾಗೂ ಆಕರ್ಷಕ ದರದಲ್ಲಿ

ವಿದ್ಯುದ್ದೀಪ ಸಲಕರಣಾ ಜೋಡಣೆಯನ್ನು

ದಕ್ಷತೆಯಿಂದ ಉತ್ತಮವಾಗಿಯೂ, ಶೀಘ್ರವಾಗಿಯೂ, ವಿಶ್ವಾಸನೀಯವಾಗಿಯೂ ಮಾಡಿಕೊಡಲಾಗುವುದು.

ಸರಿಪಡಿಸುವ, ನವೀಕರಿಸುವ, ಹೊಸತಾಗಿ ಸಂಯೋಜಿಸುವ, ಇಲೆಕ್ಟ್ರಿಕ್ ಮೋಟರು ಫ್ಯಾನು ಇತ್ಯಾದಿಗಳನ್ನು ಜೋಡಿಸುವ ಕೆಲಸಗಳನ್ನು ನಿಯಮಿತ ಕಾಲದಲ್ಲಿ ಶೀಘ್ರವಾಗಿ ಮಾಡಿಕೊಡಲಾಗುವುದು.

THE UDIPI ELECTRICAL STORES

Church Road, (ESTD : 1938) **UDIPI.**

ಕಮ್ಯೂನಿಸ್ಟ್ ನಿಷ್ಠೆಯ ಪರೀಕ್ಷೆ

ಭಾಷಾನುಗುಣ ಪ್ರಾಂತ ನಿರ್ಮಾಣಕ್ಕೆ ಪ್ರಕೃತ ಸಂದಿಗ್ಧ ಪರಿಸ್ಥಿತಿ.

ವನ್ನು ತೋರಿಸಿ ಇದನ್ನು ಹಂಚಬೇಕೆನ್ನುವೆವು. ಜನಸಂಖ್ಯಾ ಪ್ರಮಾಣವನ್ನು ಅನುಸರಿಸಿದರೆ ಮದ್ರಾಸಿಗೆ ಈಗ ೧೭.೫ ಕೋಟಿ ರೂಪಾಯಿ ದೊರೆಯುತ್ತಿದ್ದುದು ೨೦.೫ ಕೋಟಿ ರೂಪಾಯಿಗೇರುವುದು. ಹಾಗೆಯೇ ಸುಂಕದ ಆದಾಯದಿಂದಲೂ ಸಾಕಷ್ಟು ಪಾಲು ದೊರೆತರೆ ರಾಜ್ಯ ಸರಕಾರಗಳ ಸಾಮಾನ್ಯ ಆರ್ಥಿಕ ಸ್ಥಿತಿಯು ನಿಕೃಷ್ಟವಾಗಿ ಉಳಿಯದು. ಮುಖ್ಯಮಂತ್ರಿಗಳು ಸರಕಾರದ ಆಡಳಿತ ವೆಚ್ಚವನ್ನು ಕಡಿಮೆ ಮಾಡುವ ಬಗ್ಗೆಯೂ ತಾವು ಆಸಕ್ತಿ ವಹಿಸಿರುವುದಾಗಿ ಹೇಳಿದರು. ಸರಕಾರವು ಲಂಚಗುಳಿತನವನ್ನೂ ಭ್ರಷ್ಟಾಚಾರವನ್ನೂ ನಿರ್ಮೂಲಗೊಳಿಸಲು ಆತುರವಿದೆ ಎಂದು ರಾಜಾಜಿ ಆಶ್ವಾಸನೆ ಕೊಟ್ಟರು: "ನಾನು ಈ ಬಗ್ಗೆ ಅಲಕ್ಷ್ಯ ಭಾವಿತನಿರುವೆನೆಂದು ಇಟ್ಟುಕೊಳ್ಳಬೇಡಿರಿ. ಸರಕಾರಕ್ಕೆ ಬರುವ ಜ್ಞಾತಾಜ್ಞಾತ ದೂರುಗಳನ್ನೆಲ್ಲ ವಿಚಾರಿಸಲು ನಾನು ಹೇಗಾದರೂ ಸಮಯ ತೆಗೆದುಕೊಳ್ಳುತ್ತೇನೆ. ಲಂಚ ನಿರ್ಮೂಲನೆಯು ಸರಕಾರದ ತುರ್ತಿನ ಗಮನವನ್ನು ಪಡೆದಿದೆ. ಯಾವುದೇ ಪ್ರಸಂಗದಲ್ಲಿ ಈ ರೀತಿಯಲ್ಲಿ ಇದರ ಭ್ರಷ್ಟಾಚಾರ ಉಳಿಯದಂತೆ ಸರಕಾರ ಜಾಗ್ರತೆವಹಿಸುವುದು.

ಆಂಧ್ರ ಪ್ರಾಂತದ ಪ್ರಶ್ನೆ

ವಿಶಿಷ್ಟ ಉದ್ದೇಶಗಳಿಗಾಗಿ ಈಗ ಹಣದ ಬೇಡಿಕೆಯನ್ನು ಶಾಸನ ಸಭೆಯು ಮಂಡಿಸಲಾಗುತ್ತಿದೆ. ಕ್ಷಾಮ ಭಯವನ್ನು ತಪ್ಪಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳುವ ಆಶ್ವಾಸನೆಯನ್ನು ಸರಕಾರ ಕೊಟ್ಟಿದೆ. ಹಾಗೆಯೇ ಹೊಸದಾದ ಯೋಜನೆಗಳನ್ನು ಕೈಗೊಳ್ಳದಿದ್ದರೂ-ಇದ್ದ ಯೋಜನೆಗಳನ್ನು ತ್ವರಿತ ಮುಗಿಸುವ ಬಗ್ಗೆ ಸರಕಾರ ಸತರ್ಕವಾಗಿದೆ. ಅಧ್ಯಾಪಕರಿಗೆ ಪ್ರಾವಿಡೆಂಟ ಫಂಡು ಹಾಗೂ ವಿಮಾ ಸೌಕರ್ಯಗಳನ್ನು ಒದಗಿಸುವ [illegible] ಸರಕಾರ ಒಂದು ಮಸೂದೆ ತಂದಿದೆ. ಹೀಗೆ ಜನಹಿತಕ್ಕಾಗಿ ಸರಕಾರವು ಆಸ್ಥೆವಹಿಸಿ ದುಡಿಯುತ್ತಿದೆ ಎಂಬ ಸಂಗತಿ ಸುಸ್ಪಷ್ಟ.

ಇಂಥದರಲ್ಲಿ ಪ್ರಜಾ ಸತ್ತಾತ ರಂಗದವರು ಆಂಧ್ರ ಪ್ರಾಂತರಚನೆಯ ಪ್ರಶ್ನೆಯನ್ನು ಮುಂದುಮಾಡಿಕೊಂಡು ಜನರ ಭಾವನೆಯನ್ನು ಕೆರಳಿಸಿ, ಸರಕಾರದ ವಿರುದ್ಧ ಜನಾಭಿಪ್ರಾಯವನ್ನು ಸಂಘಟಿಸುವ ದೂಷಿತ ಮನೋವೃತ್ತಿಯನ್ನು ತೋರಿಸುತ್ತಿರುವುದು ಸರಿಯಲ್ಲ - ಎಂದು ಮುಖ್ಯಮಂತ್ರಿ ಹೇಳಿದರು. "ಆಂಧ್ರ ಪ್ರಾಂತ ರಚನೆಯ ಬಗ್ಗೆ ನಾನು ಎಂದಿನಿಂದಲೂ ಅನುಕೂಲಾಭಿಪ್ರಾಯವನ್ನು ಇಟ್ಟುಕೊಂಡಿದ್ದೇನೆ, ಏಕೆಂದರೆ ಅಣ್ಣ ತಮ್ಮಂದಿರು ಒಟ್ಟಿಗೆ ಇರಲಾರರಾದರೆ- ಅವರು ಬೇರೆಬೇರೆಯಾಗಿ ಹೋಗುವುದೇ ಒಳ್ಳೆಯದು. ಈ ಎಲ್ಲ ವಿಷಯಗಳಲ್ಲಿ ರಾಷ್ಟ್ರಾಧ್ಯಕ್ಷರ ಅಭಿಮತದಂತೆ-ಮತ್ತವರ ಸಂಗಡಿಗರ ಇಷ್ಟದಂತೆ ನಡೆದುಕೊಳ್ಳುವುದೊಳ್ಳೆಯದು-

ಲೋಕ ಸಭೆಯಲ್ಲಿ ಚರ್ಚೆ

ಭಾಷಾನುಗುಣ ಪ್ರಾಂತರಚನೆಯ ಬಗ್ಗೆ ದಿಲ್ಲಿಯ ಪ್ರತಿಕ್ರಿಯೆಗಳೇನು ಎಂಬುದೀಗ ಸ್ಪಷ್ಟವಾಗಿದೆ- ಕಮ್ಯೂನಿಸ್ಟ ಸದಸ್ಯರಾದ ಶ್ರೀ ಹ ಪಾರ ಚಟರ್ಜಿ ಮಂಡಿಸಿದ ಗೊತ್ತುವಳಿಯು ಬಹಳ ವಿಸ್ತೃತ ಸ್ವರೂಪದ್ದಿದ್ದು, ಅದರಲ್ಲಿ ಸ್ವಾಭಾವಿಕವಾಗಿಯೇ ತೊಡಕುಗಳಿದ್ದುವು. ನಿರ್ದಿಷ್ಟವಾದ ಯಾವದೇ ಸೂಚನೆ ಅದರಲ್ಲಿರದೆ ಕೇವಲ ಭಾಷಾವಾರ ತಳಹದಿಯ ಮೇಲೆ ಪ್ರಾಂತಗಳ ಪುನರ್ರಚನೆಯಾಗಬೇಕೆಂದು ಮತ್ತು ಸದ್ಯದ ರಾಜ್ಯಗಳ ಗಡಿಯನ್ನು ಇದಕ್ಕನುಗುಣವಾಗಿ ಸರಿಪಡಿಸಬೇಕೆಂದು ಕೇಳುವ ಗೊತ್ತುವಳಿ ಅದಾಗಿತ್ತು. ಇದರ ಮೇಲಿಂದ ಸಮಗ್ರ ಭಾರತದ ಸ್ವರೂಪವನ್ನೆ ಬದಲಾಯಿಸಬೇಕೆಂಬ ಆಶಂಕೆ ಒಡಮೂಡುವುದು ಸಹಜ. ಈಗಿದ್ದಂತೆ ಭಾಷಾನುಗುಣ ಪ್ರಾಂತರಚನೆ ಬೇಡುವವರು ಆಂಧ್ರರು, ಕನ್ನಡಿಗರು ಮತ್ತು ಮಹಾರಾಷ್ಟ್ರೀಯರು ಮಾತ್ರ. ತಮಿಳರು ಇನ್ನೂ ಪ್ರತ್ಯೇಕ ಪ್ರಾಂತಬೇಕೆಂದಿಲ್ಲ. ಕೇರಳದ ಕೇಳಪ್ಪನ್ ಕನ್ಯಾಕುಮಾರಿಯಿಂದ ಗೋಕರ್ಣದ ವರೆಗಿನ ಕರಾವಳಿಯನ್ನು ತೆಗೆದುಕೊಂಡು ಹೊಸ ರಾಜ್ಯ ನಿರ್ಮಿಸಬೇಕೆಂಬ ವಿಚಿತ್ರ ಸೂಚನೆ ಕೊಟ್ಟಿರುತ್ತಾರೆ. ಹಾಗೆಯೇ ಬಿಹಾರದಲ್ಲಿ ಬಂಗಾಳಿ ಮಾತನಾಡುವ ಕೆಲಪ್ರದೇಶಗಳನ್ನು ಪಶ್ಚಿಮ ಬಂಗಾಲಕ್ಕೆ ಸೇರಿಸಬೇಕೆಂಬ ಬೇಡಿಕೆಯನ್ನೂ ಕೇಂದ್ರ ಲೋಕಸಭೆಯಲ್ಲಿ ಬಹಿರಂಗಗೊಳಿಸಲಾಗಿದೆ. ಇನ್ನು ಪಂಜಾಬ ಪ್ರಾಂತ ಗುಜರಾತ ಪ್ರಾಂತ ಎಂದು ಮುಂತಾಗಿ ಪ್ರತ್ಯೇಕ ಪ್ರಾಂತರಚನೆಗಳ ಬಗ್ಗೆ ಉತ್ತರೀಯರೂ ಈಗ ನಿಧಾನವಾಗಿ ಯೋಚಿಸುತ್ತಿರುವರು.

ಕರ್ನಾಟಕದ ಬೇಡಿಕೆ

ಇಂಥ ಪ್ರಸಂಗದಲ್ಲಿ ಸರಕಾರದ ನಿಲುಮೆ ಏನಿರಬೇಕು? ಪ್ರಧಾನ ನೆಹರೂ ಭಾರತದ ನಕ್ಷೆಯನ್ನೆ ಬದಲಾಯಿಸುವ ಬಗ್ಗೆ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸಿದರೂ ನಿರ್ದಿಷ್ಟ ಬೇಡಿಕೆ ಬಂದರೆ (ಉದಾ:-- ಆಂಧ್ರ ಪ್ರಾಂತರಚನಾ ಪ್ರಶ್ನೆ) ಅದನ್ನು ವಿಚಾರಿಸುವುದಾಗಿ ಹೇಳಿದ್ದಾರೆ. ಗಡಿ ಪ್ರದೇಶದಲ್ಲಿ--ಇಂದಿನ ಪರಿಸ್ಥಿತಿಯಲ್ಲಿ-ಭಾಷಾವಾದದ ಕಲಹವನ್ನೆಬ್ಬಿಸಿ ಚಿನ್ನಾಟವಾಡಲು ತಾನು ಸಿದ್ಧನಿಲ್ಲೆಂಬುದನ್ನು ಅವರು ಸ್ಪಷ್ಟವಾಗಿ ಹೇಳಿದರು. ಲೋಕಸಭೆಯ ಕಾಂಗ್ರೆಸು ಸದಸ್ಯರು ಭಾಷಾನುಗುಣ ಪ್ರಾಂತರಚನೆಯಾಗಬೇಕೆಂಬ ದಕ್ಷಿಣ ಭಾರತದ ಬೇಡಿಕೆಯನ್ನು ಮಾನ್ಯಮಾಡಬೇಕೆಂದು ಬಲವಾಗಿ ಒತ್ತಾಯಿಸಿದರೂ ಶ್ರೀ ಚಟರ್ಜಿ ಈಗ ತಂದಿರುವ ಗೊತ್ತುವಳಿಯನ್ನು ತಿರಸ್ಕರಿಸಿದರು. ಶ್ರೀ ಎಸ್. ನಿಜಲಿಂಗಪ್ಪನವರು ಕರ್ನಾಟಕದ ಬೇಡಿಕೆಯನ್ನು ಸಭೆಯ ಮುಂದಿಡುತ್ತಾ ದೇಶದ ಮುಂದೆ ಒಂದಲ್ಲ ಒಂದು ಬಗೆಯ ಕಠಿಣ ಸಮಸ್ಯೆಗಳು ಸದಾ ಕಾಲ ಇರುವಂಥವೇ ಆದುದರಿಂದ, ಭಾಷಾನುಗುಣ ಪ್ರಾಂತರಚನೆಯ ಪ್ರಶ್ನೆಯನ್ನು ಮುಂದೂಡುವುದು ಚೆನ್ನಾಗದು ಎಂದರು- ಮೈಸೂರು ರಾಜಪ್ರಮುಖರನ್ನು ಇಟ್ಟುಕೊಂಡು, ಬೆಂಗಳೂರು ರಾಜಧಾನಿಯನ್ನಾಗಿಸಿ, ಕರ್ನಾಟಕ ಪ್ರಾಂತ ನಿರ್ಮಾಣವಾಗಬೇಕೆಂದು ಮೈಸೂರಿನ ಮತ್ತು ಕರ್ನಾಟಕದ ಪ್ರದೇಶ ಕಾಂಗ್ರೆಸ ಸಮಿತಿಗಳು ಅಭಿಪ್ರಾಯಪಟ್ಟಿವೆ ಎಂದು ತಿಳಿಸಿದರು. ಇತರತಃ ಸದಸ್ಯರ ಹೃತ್ಪೂರ್ವಕ ಬೆಂಬಲವಿದ್ದರೂ ಗೊತ್ತುವಳಿಯು ಸುದೀರ್ಘ ಚರ್ಚೆಯ ಬಳಿಕ ೭೭ ಅನುಕೂಲ ಹಾಗೂ ೨೬೧ ವಿರುದ್ಧ ಮತಗಳಿಂದ ಬಿದ್ದುಹೋಯಿತು- ಗೃಹಮಂತ್ರಿ ಡಾ! ಕಟಜೂ ಚರ್ಚೆಗೆ ಚುಟುಕಿನ ಉತ್ತರ ಕೊಟ್ಟು, ಸದಸ್ಯರು ಕೆಲವರ್ಷಗಳವರೆಗೆ ಸಹನೆಯಿಂದಿರಲಾರರೇ — ಎಂದು ಕೇಳಿದರು.

ಆಕ್ಷೇಪ-ಆಕ್ರೋಶ

ಭಾಷಾನುಗುಣ ಪ್ರಶ್ನೆಯಲ್ಲಿ ತಾತ್ವಿಕವಾದ ಒಮ್ಮತವು ಕಾಂಗ್ರೆಸ ಹಾಗೂ ವಿರೋಧಿ ಪಕ್ಷಗಳಲ್ಲಿ ಕಂಡುಬಂದರೆ, ಪ್ರತಿಬಂಧಕ ಸ್ಥಾನಬದ್ಧತೆಯ ಮಸೂದೆಯನ್ನು ಮಂಡಿಸಿದಾಗ ವಿರುದ್ಧಪಕ್ಷದ ಕಡೆಯಿಂದ ಹೆಜ್ಜೆಹೆಜ್ಜೆಗೂ ಆತಂಕಗಳು ಉಪಸ್ಥಿತಿಗೊಂಡವು. ಡಾ- ಶ್ಯಾಮ ಪ್ರಸಾದ ಮುಕರ್ಜಿಯವರು ಪರಂಪರೆಯನ್ನುಲ್ಲಂಘಿಸಿ ಪ್ರಾರಂಭದಲ್ಲಿಯೇ ಮಸೂದೆ ಚರ್ಚೆಗೆ ಬರಕೂಡದೆಂದು ವಾದಿಸಿದರು. ದೇಶದಲ್ಲಿ ಶಾಂತಿ ಸುವ್ಯವಸ್ಥೆಗಳನ್ನು ನೆಲೆಗೊಳಿಸಲು ಪ್ರತಿಬಂಧಕ ಸ್ಥಾನಬದ್ಧತೆಯು ಅತ್ಯಗತ್ಯವಿದೆ ಎಂದೂ ಅದರ ಅವಧಿಯನ್ನು ೧೯೫೩ನೇ ದಸಂಬರದ ವರೆಗೆ ಬೆಳೆಸಬೇಕೆಂದೂ ಸರಕಾರದ ಮತ. ಸದ್ಯದ ಸ್ಥಿತಿಯಲ್ಲಿ ಈ ಬಗೆಯ ವಿಧ್ವಂಸಕ ಕೃತ್ಯಗಳು ತಗ್ಗಿವೆ. ಹೀಗಿದ್ದರೂ ಕಾಯಿದೆಗಳನ್ನು ಉಲ್ಲಂಘಿಸಿ ನಡೆಯುವ ಚಟುವಟಿಕೆಗಳಿಗೆ ಆಸ್ಪದ ಕೊಡುವುದು ಹಿತವಾಗಲಾರದು ಎಂದು ಗೃಹಮಂತ್ರಿ ಹೇಳಿದರು.

ಇದೇ ಬಗೆಯ ವಿರೋಧವು ಆಕ್ರಮ ಸಭೆಗಳನ್ನು ಚದರಿಸಲು ಸಾಕಾಹಾ

[೨೧ನೇ ಪುಟ ನೋಡಿರಿ]



ಭಾರತದ ಅತ್ಯುತ್ತಮ ಪೊಟ್ಟಣಗಳಲ್ಲಿ ಭಾರತದ ಅತ್ಯುತ್ತಮ ಚಹಾ.

You Cannot But Choose
The Canara Banking Corporation Ltd.
for Ideal Banking
in the States of Madras, Mysore, Bombay, Coorg & U. S. T. C.
Estd: 1906. H. O.: **UDIPI (S 1)**

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಉಡುಪಿ, ಗುರುವಾರ ೧೭-೭-'೫೨

ಸದಾಚಾರ

ಲೋಕ ಸಭೆಯಲ್ಲಿ ಲಂಚಗುಳಿತನವನ್ನು ಮಹಾಪರಾಧವೆಂದು ಪರಿಗಣಿಸಬೇಕಾಗಿ ತಂದ ಸೂಚನೆಯ ಮೇಲೆ ಚರ್ಚೆ ನಡೆದ ಕಾಲಕ್ಕೆ ಸದಸ್ಯರು ಕೇವಲ ಕಾಯಿದೆಗಳನ್ನು ಮಾಡುವುದರಿಂದ ಲಂಚಗುಳಿತನವು ನಿರ್ಮೂಲ ಹೊಂದುವುದಿಲ್ಲವೆಂದೂ ಬಿಗಿಯಾದ ಕಾರ್ಯಾಚರಣೆಯು ಅದಕ್ಕಿಂತ ಎಷ್ಟೋ ಮುಖ್ಯವೆಂದೂ ಸ್ಪಷ್ಟಪಡಿಸಿದರು. ಮದ್ರಾಸು ಶಾಸನ ಸಭೆಯಲ್ಲಿ ಪ್ರಜಾ ಸತ್ತಾತ್ಮಕ ರಂಗದ ಧುರೀಣ ಶ್ರೀ ಟಿ. ವಿಶ್ವನಾಥಂ, ರಾಜಾಜಿಯವ ಸರಕಾರವು ಆಡಳಿತ ಯಂತ್ರದಲ್ಲಿ ಕಂಡುಬರುವ ಲಂಚಗುಳಿತನವೇ ಮೊದಲಾದ ದುಷ್ಪ್ರವೃತ್ತಿಗಳನ್ನು ತಡೆಯಲು ಸಮರ್ಥರಾಗುವುದಾಗಿ ಆಶಿಸಿ ಮಾತನಾಡಿದರು. ಚುನಾವಣೆಗಳ ಕಾಲದಲ್ಲಿ ವಿವಿಧ ಪಕ್ಷದವರ ಕಾಂಗ್ರೆಸು ವಿರೋಧಿ ಘೋಷಣೆಗಳಲ್ಲಿ ದೇಶದಲ್ಲಿ ಹಬ್ಬಿದ ನೈತಿಕ ಅಧಃಪತನ ಮತ್ತು ಸುಳ್ಳು ಭ್ರಷ್ಟಾಚಾರಗಳ ವರ್ಣನೆಗೇ ಪ್ರಥಮ ಪ್ರಾಶಸ್ತ್ಯ ಸಲ್ಲಬೇಕು. ಯಾಕೇ ಇರಲಿ—ಕಾಂಗ್ರೆಸು ಸರಕಾರವು ಲಂಚಗುಳಿತನವನ್ನೂ, ಭ್ರಷ್ಟಾಚಾರವನ್ನೂ, ವಂಚನೆ, ಮೋಸಗಳನ್ನೂ ನಿರ್ಮೂಲಗೊಳಿಸಲು ಅಸಮರ್ಥವಾಗಿದೆ ಎಂದರೆ ಸಾಕು ಜನರ ಮೆಚ್ಚುಗೆಯನ್ನು ಪಡೆದೇ ತೀರುವರು. ಇಂದಿನ ವಾತಾವರಣ ಇಂಥ ಆಕ್ಷೇಪಗಳನ್ನು ಎತ್ತಿ, ಬಹಿರಂಗವಾಗಿ ಆಡಳಿತ ಯಂತ್ರವನ್ನು ದೂರುವುದಕ್ಕೆ ಅನುಕೂಲವಿದೆ. ಇದರಲ್ಲಿ ಕಾಂಗ್ರೆಸಿಗರದೇನೂ ತಪ್ಪು ಇಲ್ಲವೆಂದಲ್ಲ. ಆದರೆ, ಜನತೆಯೂ ಕಾಂಗ್ರೆಸು ವಿರೋಧಿಗಳೂ ಕೂಡಿಯೇ ಇದಕ್ಕೆ ಹೊಣೆಗಾರರಿರುವರೇ ಹೊರತು— ಕೇವಲ ಸರಕಾರ ಮಾತ್ರ ಅಲ್ಲ ಎಂಬುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡರೆ ಒಳಿತು. ಭ್ರಷ್ಟಾಚಾರಗಳು ಅನಾದಿಯಿಂದಲೂ ಇದ್ದುವೆಂಬುದನ್ನು ಮತ್ತು ಮನುಷ್ಯನ ನೈತಿಕ ಮಟ್ಟವು ಉನ್ನತಿಗೇರದ ಹೊರತು— ದುರಾಚಾರಗಳ ಸಂಪೂರ್ಣ ನಿರ್ಮೂಲನವಾಗುವುದು ಸಾಧ್ಯವಿಲ್ಲವೆಂಬುದನ್ನು ಸಾತ್ವಿಕ ಮನೋಭಾವದವರೂ ನಿಷ್ಪಕ್ಷಪಾತಿ ವಿಮರ್ಶಕರೂ ಒಪ್ಪುವರು. ಹಾಗೆಂದು—ಸದಾಚಾರವು ಕಾಲಧರ್ಮಾನುಗುಣವಾಗಿ ಪುನಃ ಸ್ಥಾಪಿತವಾಗಬೇಕೆಂಬ ಅಪೇಕ್ಷೆಗೆ ಒಳಗಾಗಬೇಕೆಂದು ಅವರಾರೂ ಹೇಳುವುದಿಲ್ಲ ಎಂಬುದನ್ನು ನಾವು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಸತ್ ಮತ್ತು ಅಸತ್‌ಗಳ ನಡುವಣ ಸಂಘರ್ಷದಲ್ಲಿ ನಾವು ಸತ್ ಪಕ್ಷದ ಕಡೆಗೆ ಅಧಿಕಾಧಿಕ ಒಲವು ತೋರಿಸಿದರೆ— ಆಗ ಭ್ರಷ್ಟಾಚಾರದ ಆರೋಪಕ್ಕೆ ಆಸ್ಪದ ಕಡಿಮೆಯಾಗುವುದು ನಿಶ್ಚಯ. ಲಂಚಗುಳಿತನವಿದೆ ಎನ್ನುವಾಗ, ಲಂಚ ಸ್ವೀಕರಿಸುವವನಿಗಿಂತಲೂ ಲಂಚ ಕೊಡಲು ಮುಂದಾಗುವವನ ಅಪರಾಧವೇ ಹೆಚ್ಚಿನದಲ್ಲವೆ? ಎಂಬುದನ್ನು ನಾವು ಮರೆಯುತ್ತೇವೆ. ನಮ್ಮಿಂದ ಘಟಿಸುವ ಮೊದಲನೆಯ ಪ್ರಮಾದವೆಂದರೆ ಇದೇ. ಸಲ್ಲದ ಮಾರ್ಗಗಳನ್ನು ಸೃಷ್ಟಿಸಿಕೊಂಡು, ಇಲ್ಲದ ಅವಸರಗಳನ್ನು ತೋರಿಸಿ, ಅನ್ಯಾಯಕ್ಕೆ ಪ್ರೋತ್ಸಾಹ ಕೊಡುವ ಪ್ರವೃತ್ತಿಯು ಜನಸಾಮಾನ್ಯರಲ್ಲಿ ನಶಿಸಿಹೋದರೆ—ಆಗ ಎಲ್ಲ ಭ್ರಷ್ಟಾಚಾರಗಳೂ ಹೇಳ ಹೆಸರಿಲ್ಲದಾಗುವುವು. ಸರಕಾರಿ ಅಧಿಕಾರಿಗಳು ಪ್ರತಿಯೊಂದೂ ಚಿಕ್ಕ ಪುಟ್ಟ ಕೆಲಸಗಳಿಗಾಗಿ ಲಂಚದ ಮುಖ ನೋಡುತ್ತಿರುವರು ಎಂದೀಗ ಆಪಾದಿಸಲಾಗುತ್ತಿದೆ. ಇದರಿಂದ ಲಂಚ ಕೊಡದೆ ನ್ಯಾಯ ಮಾರ್ಗದಿಂದಲೇ ಕೆಲಸ ನಡೆಯಬೇಕೆಂದು ಬಯಸುವ ಸದಾಚಾರಿಗಳಿಗೆ ತುಂಬ ತೊಂದರೆಗಳನ್ನು ಸಹಿಸಬೇಕಾಗಿ ಬಂದಿದೆ ಎಂದೂ ಹೇಳುವರು. ಜನರು ಅಧಿಕಾರಿಗಳಿಗೆ ತಾವಾಗಿ ಹಿಡಿಸಿದ ಲಂಚದ ರುಚಿಯನ್ನು ಹೇಗೆ ಒಮ್ಮೆಲೇ ಅಳಿಸಿ ಬಿಡಬಹುದು? ಎಷ್ಟು ಉಗ್ರ ಕಾಯಿದೆ ಮಾಡಿದರೂ, ಆ ಕಾಯಿದೆಯ ಹಿಡಿತದಿಂದ ತಪ್ಪಿಸಿಕೊಂಡು ಹೋಗುವ ದುಷ್ಟ ಪದ್ಧತಿಯನ್ನು ಯೋಚಿಸಲಿಕ್ಕೆ ಲಂಚಗುಳಿಗಳು ಸದಾ ತತ್ಪರರಿರುವುದು ನಿಶ್ಚಯ. ಇಂಥದರಲ್ಲಿ ಸರಕಾರವು ಕಣ್ಣಿಗೆ ಎಣ್ಣೆ ಹಾಕಿಕೊಂಡು, ತನ್ನಲ್ಲಿಗೆ ಬಂದ ಸತ್ಯ ದೂರುಗಳನ್ನು ಸಾವಧಾನದಿಂದ ಪರಿಶೀಲಿಸಿ, ತಕ್ಕ ಕ್ರಮ ಕೈಗೊಳ್ಳುತ್ತದೆ ಎಂದಿಟ್ಟುಕೊಂಡರೂ, ಮರೆಯಲ್ಲಿ ನಡೆಯುವ ಈ ಭ್ರಷ್ಟಾಚಾರದ ಮೇಲೆ ಪೂರ್ಣ ಪಹರೆ ಇಡಲು ಅದಕ್ಕೆ ಸಾಧ್ಯವಾಗಲಿಕ್ಕಿಲ್ಲ. ರಾಜಾಜಿ ತಾನು ಲಂಚಗುಳಿತನದ ನಿರ್ಮೂಲನಕ್ಕೆ ಪಣತೊಟ್ಟಿರುವೆನೆಂದು ಹೇಳಿದ್ದರೆ—ಇದು ಜನರೂ ತಮ್ಮ ಕರ್ತವ್ಯ ಧರ್ಮವನ್ನು ಮರೆತು, ಇಂಥ ದುರಾಚಾರಕ್ಕೆ ಪ್ರೋತ್ಸಾಹ ಕೊಡಲಾರದು ಎಂಬ ಸದಾಶಯ ಇಟ್ಟುಕೊಂಡೇ ಎನ್ನಬಹುದು. ಅಧಿಕಾರಿಗಳ ಸಂಬಳ ಕಡಿಮೆ, ಮತ್ತವರಿಗೆ ಹೆಚ್ಚಿನ ಸೌಕರ್ಯಗಳಿಲ್ಲದಿರುವುದು ಲಂಚಗಳಿಗೆ ಕೈಯೊಡ್ಡಲೂ, ಭ್ರಷ್ಟಾಚಾರಗಳಿಂದ ದುಡ್ಡು ಸಂಪಾದಿಸಲು ಕಾರಣವೆಂದು ಹೇಳುತ್ತಾರೆ. ಆದರೆ ಸಂಬಳ ಏರಿಸ್ಲಿದರೂ ಲಂಚಕೊಡುವ ಬುದ್ಧಿಯಿಂದ ಜನಸಾಮಾನ್ಯರು ಪರಾವೃತ್ತರಾಗದಿದ್ದರೆ, ಆಗಲೂ ಅಧಿಕಾರಿಗಳು ಅದನ್ನು ಮರೆಯಲ್ಲಿ ಸ್ವೀಕರಿಸಲಿಕ್ಕೆ ಹಿಂದಾಗಲಿಕ್ಕಿಲ್ಲ. ದುಡ್ಡು ಯಾರಿಗೂ ಕಹಿಯಾಗದ! ಇದಕ್ಕೆ ಏಕಮಾತ್ರ ಪರಿಹಾರವೆಂದರೆ, ಜನರ ನೈತಿಕ ಮಟ್ಟವನ್ನು ಉತ್ತರಿಸಲು ಯೋಗ್ಯ ಶಿಕ್ಷಣ ಕೊಡುವುದು. ಪ್ರಾರಂಭದಲ್ಲಿಯೇ ಸಚ್ಚರಿತ್ರವನ್ನೂ ಸಶ್ಶೀಲವನ್ನೂ, ಸದಾಚಾರವನ್ನೂ ನಮ್ಮವರೆಲ್ಲ [illegible] ಅನುಕೂಲ ವಾತಾವರಣ ಕಲ್ಪಿಸಬೇಕು. ಈಚೆಗೆ ನೇಮಕಗೊಂಡ ಮಾಧ್ಯಮಿಕ ಶಿಕ್ಷಣ ಆಯೋಗ ಈ ಕುರಿತು ಲಕ್ಷ್ಯ ಪೂರೈಸೀತೆಂದು ಹಾರೈಸುವೆವು.

ಅಮೆರಿಕದಲ್ಲಿ ಅಧ್ಯಕ್ಷಪದ ಸ್ಪರ್ಧೆ

ಜನರಲ್ ಐಸೆನ್ ಹೋವರ್ ರಿಪಬ್ಲಿಕನ್ ಹುರಿಯಾಳು

ಜಗತ್ತಿನ ಪ್ರಬಲ ಶಕ್ತಿಗಳಲ್ಲಿ ಒಂದಾದ ಅಮೇರಿಕದಲ್ಲಿ ಈ ವರ್ಷ ಅಧ್ಯಕ್ಷ ಪದಕ್ಕೆ ಚುನಾವಣೆಗಳು ನಡೆಯಲಿವೆ. ಸದ್ಯದ ಅಧ್ಯಕ್ಷರಾಗಿರುವ ಟ್ರೂಮನರು ತಾವು ಮುಂದಿನ ಚುನಾವಣೆಗೆ ನಿಲ್ಲುವುದಿಲ್ಲವೆಂಬುದನ್ನು ಈ ಹಿಂದೆಯೇ ಸ್ಪಷ್ಟಗೊಳಿಸಿದ್ದರಿಂದ—ಟ್ರೂಮನರ ಬಳಿಕ ಯಾರು? ಎಂಬ ಬಗ್ಗೆ ಎಲ್ಲರೂ ಕುತೂಹಲದಿಂದ ನಿರೀಕ್ಷಿಸುತ್ತಿದ್ದರು. ಈ ಸಮಯ ಪಶ್ಚಿಮ ಯುರೋಪಿನ ಮಿತ್ರ ಸೇನಾಧಿಕಾರಿಯಾಗಿದ್ದ ಜನರಲ್ ಡ್ವೈಟ್ ಐಸೆನ್ ಹೋವರ್ ತಮ್ಮ ಹುದ್ದೆಗೆ ರಾಜಿನಾಮೆ ಕೊಟ್ಟು ಅಧ್ಯಕ್ಷ ಪದದ ಬಗ್ಗೆ ಸ್ಪರ್ಧಿಸಲು ನಿರ್ಧರಿಸಿದುದರಿಂದ, ಈ ಯುದ್ಧ ಕುಶಲಿಯೇ ಮುಂದಿನ ನಾಲ್ಕು ವರ್ಷಕಾಲ ಅಮೇರಿಕದ ಶ್ವೇತ ಭವನದಲ್ಲಿ ಉಳಿಯಬಹುದೆಂದು ತರ್ಕಿಸಲಾಯಿತು. ಆದರೆ ಐಸೆನ್ ಹೋವರರು ರಿಪಬ್ಲಿಕನ್ ಪಕ್ಷದ ಹುರಿಯಾಳು—ಮತ್ತು ಅದೇ ಪಕ್ಷದಿಂದ ಸಿನೇಟರ್ ಟ್ಯಾಫ್ಟರ ಪ್ರಚಂಡ ವಿರೋಧ ಅವರಿಗಿದ್ದುದರಿಂದ ಬೆಕ್ಕು ಯಾವ ಕಡೆಗೆ ನೆಗೆದೀತೆಂಬುದು ನಿಶ್ಚಯವಿರಲಿಲ್ಲ. ಎಂತಲೇ ಚಿಕಾಗೋ ನಗರದಲ್ಲಿ ಪ್ರಾಸ್ತಾವಿಕ ಚುನಾವಣೆಗೆಂದು ಸಭೆ ಸೇರಿದಾಗ ಅಮೇರಿಕನರೇ ಏಕೆ, ಜಗತ್ತಿನ ಎಲ್ಲ ಜನಾಂಗಗಳ ದೃಷ್ಟಿ ಅಲ್ಲಿ ನಟ್ಟಿತ್ತು. ಈಗ ಐಸೆನ್ ಹೋವರರು ಪ್ರಚಂಡ ಬಹುಮತದಿಂದ ಅಧ್ಯಕ್ಷಸ್ಥಾನಕ್ಕೆ ರಿಪಬ್ಲಿಕನ್ ಹುರಿಯಾಳು ಎಂಬುದಾಗಿ ಚುನಾಯಿತರಾಗಿರುವರು. ಪಕ್ಷದ ಉಮೇದುವಾರನಿಗೆ ತಾವು ಹೃತ್ಪೂರ್ವಕ ಬೆಂಬಲ ಕೊಡುವುದಾಗಿ ಸಿನೇಟರ್ ಟ್ಯಾಫ್ಟರು ಸಾರಿದ್ದಾರೆ. ಕಾರಣ ಐಸೆನ್ ಹೋವರರ ವಿಜಯಕ್ಕೆ ಇನ್ನಷ್ಟು ಶಕ್ತಿ ತುಂಬಿದೆ.

ಡೆಮೊಕ್ರೆಟಿಕ್ ಪ್ರತಿಸ್ಪರ್ಧೆ

ಆದರೆ ಇನ್ನೊಂದು ಪ್ರತಿಸ್ಪರ್ಧಿ ದಳವಾದ ಡೆಮೊಕ್ರೆಟಿಕ್ ಪಕ್ಷದ ಹುರಿಯಾಳನ್ನು ಸೋಲಿಸಲು ಜನರಲ್ ಐಸೆನ್ ಹೋವರರಿಗೆ ಸಾಧ್ಯವಿದೆಯೆ ಎಂಬ ಮಹತ್ವದ ಪ್ರಶ್ನೆ ಈಗ ಬಗೆಹರಿದಿಲ್ಲ. ಆ ಪಕ್ಷವು ಈಗ ಕಳೆದ ೨೦ ವರ್ಷಗಳಿಂದಲೂ ಅಧ್ಯಕ್ಷಸ್ಥಾನದಲ್ಲಿ ತನ್ನವನೊಬ್ಬನನ್ನು ನಿಲ್ಲಿಸಿಕೊಂಡು— ಅಮೇರಿಕದ ಅರ್ವಾಚೀನ ಧೋರಣವನ್ನು ರೂಪಿಸಿಕೊಂಡು ಬಂದಿದೆ. ಟ್ರೂಮನರು ಸ್ವತಃ ಚುನಾವಣೆಯನ್ನು ಸ್ಪರ್ಧಿಸದಿದ್ದರೂ ಇನ್ನೊಬ್ಬ ಮುತ್ಸದ್ದಿ ಎವರೆಲ್ ಹ್ಯಾರಿಮಾನ್‌ಗೆ ತನ್ನ ಸಂಪೂರ್ಣ ಬೆಂಬಲ ನೀಡುವುದಾಗಿ ಹಿಂದೆ ಹೇಳಿದ್ದರು. ಇವರ ಜೊತೆಗೆ ಸಿನೇಟರ್ ಕೆಫವರ್ ಸ್ಪರ್ಧಿಸುವರಾಗಿ ತಿಳಿದಿದೆ. ಆದುದರಿಂದ ಈ ಮುಖ್ಯ ಉಮೇದ್ವಾರರಲ್ಲಿ ಈಗ ಯಾರನ್ನು ಆರಿಸಬೇಕೆಂದು ಡೆಮೊಕ್ರಾಟಿಕ್ ಪಕ್ಷವು ಚಿಂತಿಸುತ್ತಿದೆ. ಈ ತಿಂಗಳಾಂತ್ಯದಲ್ಲಿ ಪ್ರಾಸ್ತಾವಿಕ ಚುನಾವಣೆ ನಡೆಯುವುದು. ರಿಪಬ್ಲಿಕನ್ ಪಕ್ಷದ ಉಮೇದ್ವಾರರೆಂದು ಐಸೆನ್ ಹೋವರ್ ನಿಯುಕ್ತರಾದುದರಿಂದ, ಅವರನ್ನು ಸೋಲಿಸುವ ಸಾಮರ್ಥ್ಯ ಯಾರಲ್ಲಿದೆ? ಸಾಮಾನ್ಯವಾಗಿ ಐಸೆನ್ ಹೋವರ್ ಕಡೆಗೆ ಜನರು ಸಿನೇಟರ್ ಟ್ಯಾಫ್ಟರಿಗಿಂತಲೂ ಹೆಚ್ಚು ಒಲಿಯಲಿಕ್ಕೆ ಅಮೇರಿಕೆಯ ಇಂದಿನ ಒಳ ಅಸಂತುಷ್ಟಿಯೇ ಕಾರಣ. ತಮ್ಮ ಧ್ಯೇಯೋದ್ದೇಶಗಳೇನೆಂಬುದನ್ನು ವಿವರಿಸುತ್ತಾ, ಐಸೆನ್ ಹೋವರರು "ನಾವು ತೀರ ಸ್ಪಷ್ಟವಿವೆ: ನಮ್ಮೆಲ್ಲರನ್ನು ವ್ಯರ್ಥಶ್ರಮಕ್ಕೀಡುಮಾಡುವ ಪಕ್ಷವನ್ನು ಅಧಿಕಾರದಿಂದ ನಿವೃತ್ತಿಪಡಿಸುವುದು, ಉನ್ನತಸ್ಥಾನದಲ್ಲಿ ಕೂಡ ಇರುವ ಲಂಚಗುಳಿತನ ಮತ್ತು ಅಸಂತುಷ್ಟಿಯನ್ನು ದೂರೀಕರಿಸುವುದು, ಬಹಳ ಕಾಲದಿಂದ ಅಧಿಕಾರದಲ್ಲಿ ಒಂದೇ ಪಕ್ಷ ಇದ್ದುದರಿಂದ ಉಂಟಾಗಿರುವ ಕಹಿ ಉದ್ವೇಗವನ್ನು ಉಪಶಮನಗೊಳಿಸುವುದು" ಎಂದರು. ಇದು ಮನೆಯೊಳಗಿನ ರಾಜಕೀಯವನ್ನೇ ಸ್ಪಷ್ಟ ಚಿತ್ರಿಸುತ್ತದೆಯಲ್ಲವೆ?

ಸಮಾಧಾನದ ವಾತಾವರಣ

ಹಾಗೆಂದು ಐಸೆನ್ ಹೋವರರು ಗೆದ್ದು ಬಂದರೆ, ಜಗತ್ಕರಂಗದಲ್ಲಿ ಅಮೇರಿಕದ ಧೋರಣೆಯು ತೀವ್ರ ಬದಲಾವಣೆಯನ್ನೇನೂ ಹೊಂದುವುದಿಲ್ಲ. ವಿಶ್ವದೃಷ್ಟಿಯಿಂದ ಪ್ರತಿಯೊಂದೂ ಘಟನೆಗಳ ಸಮೀಕ್ಷಾವಲೋಕನ ನಡೆದರೂ—ಅದರ ಪರಿಣಾಮ ಈಗಿನ ಡೆಮೊಕ್ರಾಟಿಕ್ ಮಾರ್ಗ ಬಿಟ್ಟು ಬೇರೆಯಾಗಲಾರದೆಂದು ಊಹಿಸಲಾಗಿದೆ. ಸಂಯುಕ್ತ ರಾಷ್ಟ್ರಸಂಘದ ವರ್ಗಗಳಲ್ಲಿ ಐಸೆನ್ ಹೋವರರ ವಿಜಯದ ಬಗ್ಗೆ ವಿವಂಚನೆಯೇನೂ ಕಂಡುಬರಲಿಲ್ಲ.

ಭೀಷಣ ದಾಳಿ

ಕೊರಿಯಾದ ರಣರಂಗದಲ್ಲಿ ಈಚೆಗೆ ನಡೆದ ಘಟನೆಗಳು ಪರಿಸ್ಥಿತಿಯನ್ನು ಉಲ್ಬಣಾವಸ್ಥೆಗೆ ತಂದು ಮುಟ್ಟಿಸಿವೆ. ಸಂಧಾನ ಮಾತುಕತೆಗಳು ರಹಸ್ಯ ರೂಪದಲ್ಲಿ ಮುನ್ನಡೆಯುತ್ತಿದ್ದಂತೆಯೇ ಯಾಲೂ ನದಿ ದಂಡೆಯ ವಿದ್ಯುದಾಲಯಗಳ ಮೇಲೆ ಭೀಕರ ಧಾಳಿಯನ್ನು ಅಮೇರಿಕನ್ ವೈಮಾನಿಕ ಪಡೆ ನಡೆಸಿ, ಯುದ್ಧ ವಿಸ್ತಾರದ ನಾಂದಿ ಹಾಕಿತು. ಈಚೆಗೆ ಉತ್ತರ ಕೊರಿಯಾದ ಪ್ರದೇಶಗಳ ಮೇಲೆ ಸತತ ದಾಳಿಯನ್ನವು ತೊಡಗಿವೆ. ಅವುಗಳಲ್ಲಿ ಪ್ಯೊಂಗ್ ಯಾಂಗ್ ಪಟ್ಟಣದ ಮೇಲಾದ ಹಲ್ಲೆ ಕೊರಿಯಾದ ಯುದ್ಧ ಚರಿತ್ರೆಯಲ್ಲಿಯೇ ಮಹಾ ಭೀಷಣವೆಂದು ಪರಿಚಿತ ವರ್ಗಗಳು ಹೇಳುತ್ತಿವೆ. ನಗರನಿವಾಸಿಗಳಿಗೆ ಅಚ್ಚಿನ ಪತ್ರಗಳ ಮೂಲಕ

ಮೊದಲಾಗಿ ಎಚ್ಚರಿಕೆ ಕೊಟ್ಟು ಅಮೇರಿಕದ ವಿಮಾನಗಳು ಭಯಂಕರ ಬಾಂಬು ಮಳೆಗರೆದುವು. ಆ ಸ್ಫೋಟಕ ದ್ರವ್ಯಗಳನ್ನು ಲೆಕ್ಕವಿಲ್ಲದಷ್ಟು ಹೆಚ್ಚು ಪ್ರಮಾಣದಲ್ಲಿ ಸುರಿದು, ನಗರವನ್ನು ಧ್ವಂಸಗೊಳಿಸಲು ಪ್ರಯತ್ನ ನಡೆಯಿತು. ಉತ್ತರ ಕೋರಿಯದ ಶಕ್ತಿ ತಗ್ಗಿಸಲು ವಾಯುಮಾರ್ಗದಿಂದ ಬಲವಾದ ಆಕ್ರಮಣ ನಡೆಯಿಸುವುದೊಂದೇ ನೇರವಾದ ಹಾಗೂ ಪರಿಣಾಮಕಾರಿಯಾದ ದಾರಿ ಎಂಬ ತೀರ್ಮಾನಕ್ಕೆ ಸಂಯುಕ್ತರಾಷ್ಟ್ರಸಂಘದ ಸೇನಾಧಿಕಾರಿಗಳು ಬಂದಿರುವಂತೆ ಕಾಣುತ್ತದೆ. ಅಮೇರಿಕವು ಕೊರಿಯಾ ಯುದ್ಧರಂಗಕ್ಕೆ ಹೆಚ್ಚುಹೆಚ್ಚು ಜೆಟ್ ಫೈಟರ್ ವಿಮಾನಗಳನ್ನು ಪೂರೈಸಬೇಕೆಂಬ ಇತ್ತೀಚಿನ ಕೇಳಿಕೆ ಇದಕ್ಕೊಂದು ನಿದರ್ಶನ.

ನವು ಸಂಧಾನ ಮತ್ತು ಶಾಂತಿಗಾಗಿ ಸದಾ ಆತುರವಿರುವುದೆಂದು ಈವರು ರಾಯಭಾರಿಗಳೂ ಹೇಳಿದ್ದಾರೆ. ಯುದ್ಧ ವಿಸ್ತರಣ ಭಯವನ್ನು ತಡೆಗಟ್ಟಲು ಶಾಂತಿ ಮಾರ್ಗದಿಂದ ಮತ್ತು ಪರಸ್ಪರ ತಿಳುವಳಿಕೆಯಿಂದ ಕೆಲಸ ಮಾಡುವುದು ಕ್ಷೇಮ ಎಂದ. ಎಲ್ಲರೂ ಒಪ್ಪುವರು, ಆದರೆ, ಈ ಶಾಂತಿಯ ಪಾಠ ಕಲಿಯುವವರು ಯಾರೆಂಬುದೇ ಚಿಂತೆ: ಉತ್ತರ ಕೋರಿಯದ ಮೇಲೆ ದಾಳಿ ನಡೆಸಿದ ಅಮೇರಿಕನ್ ವಿಮಾನಗಳು ಮಂಚೂರಿಯದ ಎರಡು ನಗರಗಳ ಮೇಲೆಯೂ ಹಲ್ಲೆ ನಡೆಸಿದವೆಂದು ಚೀನಾದ ಮುಖ್ಯಮಂತ್ರಿ ಚೌ ಎನ್ ಲಾಯರು ಗಂಭೀರಾರೋಪವನ್ನು ಮಾಡಿದ್ದಾರೆ. ಅಮೇರಿಕದ ಆಕ್ರಮಣ ಮನೋವೃತ್ತಿಯು ದ್ಯೋತಕವಿದೆಂದು ಅವರು ಆಪಾದಿಸಿದ್ದಾರೆ.

ಧೋರಣೆ ಏನು?—

ಇಲ್ಲಿಯ ಸೇನಾಧಿಕಾರಿ ಮಾರ್ಕ ಕ್ಲಾರ್ಕರೊಡನೆ ಈ ಎಲ್ಲ ವಿಷಯಗಳಲ್ಲಿ ವಿಚಾರ ವಿನಿಮಯ ನಡೆಸಲೂ ಯುದ್ಧರಂಗದ ಪ್ರತ್ಯಕ್ಷ ನಿರೀಕ್ಷಣೆ ಮಾಡಲೂ ಅಮೇರಿಕದ ಯುದ್ಧಖಾತೆಯ ಮುಖ್ಯಾಧಿಕಾರಿ ಜನರಲ್ ಲಾಟನ್ ಕೋಲಿನ್ಸ್ ಕೊರಿಯಾಕ್ಕೆ ಆಗಮಿಸಿದ್ದಾರೆ. ಅಮೇರಿಕದೊಡನೆ ಪೂರ್ವ ಸಲಹೆಯನ್ನು ಕೇಳಿಕೊಳ್ಳದೆ ಜನರಲ್ ಮಾರ್ಕ ಕ್ಲಾರ್ಕರು ತೆಗೆದುಕೊಳ್ಳಬಹುದಾದ ಯುದ್ಧ ಕ್ರಮಗಳ ಸಾಮಾನ್ಯ ಸ್ವರೂಪವೇನಿರಬಹುದೆಂಬುದನ್ನು ಇವರು ಸ್ಥೂಲವಾಗಿ ತಿಳಿದುಕೊಳ್ಳುವರು- ಮಂತ್ರಿ ಸೇನಾಧಿಪತಿಯ ಕೇಂದ್ರದಲ್ಲಿ, ಸಂಯುಕ್ತ ರಾಷ್ಟ್ರಸಂಘದ ಆಶಯಗಳಿಗೆ ವಿರೋಧ ಬರುವ ಘಟನೆಗಳೇನೂ ಸಂಭವಿಸದಂತೆ, ಯೋಗ್ಯ ಮಾಹಿತಿ ನೀಡಲು ಒಬ್ಬ ರಾಜಕೀಯ ಸಲಹೆಗಾರರನ್ನು ನೇಮಿಸಬಹುದೆಂಬ ಊಹಾಪೋಹ ಇದೆ. ಆದರೆ, ಜನರಲ್ ಮಾರ್ಕ ಕ್ಲಾರ್ಕರು ಇಂಥ ಸಲಹೆಗಾರರ ನೇಮಕಕ್ಕೆ ಅನುಕೂಲರಿಲ್ಲ. ಹಾಗೆಂದು ಒಬ್ಬ ಬ್ರಿಟಿಷ ಅಧಿಕಾರಿಯನ್ನು ತಮ್ಮ ಕೈ ಕೆಳಗೆ ಇಟ್ಟುಕೊಳ್ಳಲು ಅವರದು ಆಕ್ಷೇಪಣೆಯಿಲ್ಲ. ಈ ವಿಷಯದಲ್ಲಿ ಕೂಡ ಹೆಚ್ಚಿಗೆ ಮಾತುಕತೆ ನಡೆದೀತ,

ಮಧ್ಯಸ್ಥಿಕೆ ಪ್ರಯತ್ನವೇ?

ಕೊರಿಯಾದ ಕುರಿತು ಈಚೆಗೆ ನಡೆದ ಇನ್ನೊಂದು ಮುಖ್ಯ ಘಟನೆ-ಭಾರತದ ಮಧ್ಯಸ್ಥಿಕೆಯ ಬಗ್ಗೆ ಬ್ರಿಟನು ಆತುರವಿದೆಯೇ ಎಂಬುದು- ಈಚೆಗೆ ಚೀನಾದಲ್ಲಿನ ನಮ್ಮ ರಾಯಭಾರಿಯಾದ ಪಣಿಕ್ಕರರು ದಿಲ್ಲಿಗೆ ಬಂದ ಸಮಯ ನೋಡಿ, ಬ್ರಿಟನಿನ ನಮ್ಮ ರಾಯಭಾರಿ ಕೃಷ್ಣ ಮೆನನರು ಕೂಡ ಹೊಸದಿಲ್ಲಿಗೆ ದಾರಿ ಬಂದರು. ಅಲ್ಲಿ ಇಬ್ಬರೂ ರಾಯಭಾರಿಗಳೊಡನೆ ಪಂಡಿತ ನೆಹರೂರ ಸಮ್ಮುಖದಲ್ಲಿ ವಿಚಾರ ವಿನಿಮಯ ನಡೆಯಿತು: ಒಡನೆಯೇ ಮೆನನ್ ಲಂಡನಿಗೆ ಹಿಂದೆ ಹೋದರು. ಮತ್ತು ಬ್ರಿಟನಿನ ರಾಜ್ಯ ಮಂತ್ರಿ ಸೆಲ್ವಿನ್ ಲಾಯ್ಡರನ್ನು ಕಂಡರು. ಈ ಎಲ್ಲ ಘಟನೆಗಳೂ ಈಚೆಗೆ ಬ್ರಿಟನಿನ ಮಂತ್ರಿದ್ವಯರು ನೆಹರೂರನ್ನು ಕಂಡು ವಿಚಾರ ವಿನಿಮಯ ಮಾಡಿಕೊಂಡ ಸಂಗತಿಯ—ಕೊರಿಯಾದ ಬಿಕ್ಕಟ್ಟಿನಲ್ಲಿ ಭಾರತದ ಮಧ್ಯಸ್ಥಿಕೆಗಾಗಿ ಬಹಳ ವಿಧದಿಂದ ಪ್ರಯತ್ನ ನಡೆಯುತ್ತಿದೆ ಎಂಬುದಕ್ಕೆ ಸಾಕ್ಷಿಗಳು ಚೇ

ಸಲ್ಲದ ಉಪೇಕ್ಷೆ

ಕ್ರಿಮಿಯುದ್ಧದ ಆರೋಪಗಳೂ ಬಲವಾಗಿವೆ. ಹಾಗೆಂದು ಇದರ ಸತ್ಯಾಸತ್ಯತೆಯ ವಿಮರ್ಶೆ ನಡೆಸುವುದು ಮಾತ್ರ ಕಠಿಣವೆನಿಸಿದೆ. ಕ್ರಿಮಿಯುದ್ಧದ ಪ್ರಶ್ನೆ ವಿಚಾರಿಸುವಾಗ ಚೈನಾ ಮತ್ತು ಉತ್ತರ ಕೊರಿಯಾದ ಪ್ರತಿನಿಧಿಗಳನ್ನು ಆಹ್ವಾನಿಸಬೇಕೆಂಬ ತನ್ನ ಸೂಚನೆಗೆ ಭದ್ರತಾ ಮಂಡಳವು ಒಡಂಬಡಲಿಲ್ಲೆಂಬ ಕಾರಣಕ್ಕಾಗಿ ರಶಿಯಾ ಪ್ರತಿಬಂಧಾಧಿಕಾರವನ್ನು ಉಪಯೋಗಿಸಿತು. ಈ ಸಾಕ್ಷ್ಯವನ್ನು ಕೇಳಿಕೊಳ್ಳಲು ಅಮೇರಿಕ ಏಕೆ ಸಿದ್ಧವಾಗಿಲ್ಲ ಎಂಬುದು ಸಂಶಯಕ್ಕೆಡೆಗೊಡುತ್ತದೆ. ಹಾಗೆಯೇ ರಶಿಯಾದ ಕುಟಿಲ ನೀತಿಯೂ ನಿಚ್ಚಳವಾಗಿ ಕಂಡುಬರುತ್ತಿದೆ. ಬೇಕೆಂದೇ ಕ್ರಿಮಿಯುದ್ಧದ ಆಪಾದನೆಯನ್ನು ಅಮೇರಿಕದ ಮೇಲೆ-ಸಂಯುಕ್ತ ರಾಷ್ಟ್ರಸಂಘದ ಮೇಲೆ-ಹೊರಿಸಿ, ಜನಾಂಗಗಳೊಳಗೆ ದ್ವೇಷ ಹಬ್ಬಿಸಲು ರಶಿಯಾ ನೋಡುತ್ತಿರುವುದನ್ನು ಖಂಡಿಸಬೇಕೆಂಬ ಸೂಚನೆಯನ್ನು ಅಮೇರಿಕ ತಂದಾಗ, ಆಗಲೂ ರಶಿಯಾ ಐವತ್ತನೆಯ ಬಾರಿ ಪ್ರತಿಬಂಧಾಧಿಕಾರವನ್ನು ಪ್ರಯೋಗಿಸಿತು. ಬ್ರಿಟನಿನ ಪಾದ್ರಿಯೊಬ್ಬ ಈ ನಡುವೆ ಕ್ರಿಮಿಯುದ್ಧದ ಕುರಿತು ನಿಜವಾದ ಮಾಹಿತಿ ತನ್ನೊಡನೆ ಇರುವುದೆಂದೂ, ಕ್ರಿಮಿಯುದ್ಧ ನಡೆಯುತ್ತಿರುವುದೇ ನಿಜವೆಂದೂ ಹೇಳಿದ್ದನ್ನು ಖಂಡಿಸಲು, ಲೇಬರ್ ಪಕ್ಷವು ಪಾರ್ಲಿಮೆಂಟಿನಲ್ಲಿ ಒಂದು. ಗೊತ್ತುವಳಿ ತರಲಿದೆ.

○○ ○○ ○○

ಕಾಶ್ಮೀರ ಪ್ರಶ್ನೆ

ಕಾಶ್ಮೀರದ ಕುರಿತಾದ ಮಾತುಕತೆಗಳು ಯಾವುದೇ ಪರಿಣಾಮಕಾರಿ ಮಟ್ಟಕ್ಕೆ ಬಂದಿಲ್ಲ. ಡಾ| ಫ್ರಾಂಕ ಗ್ರಹಾಮರು ಅಮೇರಿಕದಲ್ಲಿ ಭಾರತ-ಪಾಕಿಸ್ತಾನಗಳ ಪ್ರತಿನಿಧಿಗಳೊಡನೆ ನಡೆಸಿದ ಮಾತುಕತೆಗಳು ಎಷ್ಟರ ಮಟ್ಟಿಗೆ ಸಮಸ್ಯೆಯ ಪರಿಹಾರಕ್ಕೆ ನೆರವಾದುವೆಂಬುದು ತಿಳಿದಿಲ್ಲ. ಯಾವುದೇ ಪ್ರಗತಿಪರ ಸೂಚನೆಯನ್ನು ಗ್ರಹಾಮರು ಮುಂದಿಟ್ಟಿಲ್ಲವೆಂದೂ ವ್ಯರ್ಥ ವಿಳಂಬವೊಂದೇ ಈಗಾಗುತ್ತಿದೆಯೆಂದೂ ಪಾಕಿಸ್ತಾನದ ವಿದೇಶ ಮಂತ್ರಿ ಜಾಫರುಲ್ಲಾ ಖಾನ ಹೇಳಿದ್ದಾರೆ. ಒಂದು ತಿಂಗಳೊಳಗಾಗಿ ಈ ಸಂಧಾನ ಮಾತುಕತೆಗಳು ಮುಕ್ತಾಯವಾಗಬೇಕೆಂದು ಪಾಕಿಸ್ತಾನವು ಈ ಹಿಂದೆ ಸೂ

ಉಡುಪಿ

ಡಾ| ಟಿ. ಎಮ್. ಎ. ಪೈಗಳಿಗೆ ಸತ್ಕಾರ ಮತ್ತು ಮಾನಪತ್ರ ಸಮರ್ಪಣೆ—ಪಂಚವಾರ್ಷಿಕ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಬ್ಯಾಂಕಿಂಗ್ ಸಂಸ್ಥೆಗಳು ಯಾವರೀತಿ ಸಹಾಯ ಮಾಡಬಹುದೆಂಬುದನ್ನು ಇದೇ ತಾ. 5ರಲ್ಲು ಬೆಂಗಳೂರಿನ ಗ್ರೈನ್ ಮರ್ಚಂಟ್ಸ್ ಕೊಓಪರೇಟಿವ್ ಬ್ಯಾಂಕ್ ಕಟ್ಟಡದಲ್ಲಿ ಏರ್ಪಡಿಸಲಾಗಿದ್ದ ಸತ್ಕಾರ ಕೂಟದಲ್ಲಿ ಉಡುಪಿಯ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಮೆನೇಜಿಂಗ್ ಡೈರೆಕ್ಟರರಾದ ಡಾ| ಟಿ. ಎಮ್. ಎ. ಪೈಗಳು ಮಾತನಾಡುತ್ತಾ ಹೇಳಿದರು.

ಹೊಸ ತರಗುಪೇಟೆ ಮಂಡಿ ವರ್ತಕರ ಪರವಾಗಿ ಡಾ| ಪೈಗಳಿಗೆ ಮಾನಪತ್ರ ಅರ್ಪಿಸಲಾಯಿತು, ಸಮಾರಂಭದ ಅಧ್ಯಕ್ಷ ಸ್ಥಾನವನ್ನು ವಹಿಸಿದ ಮೈಸೂರು ಎಸೆಂಬ್ಲಿ ಮೆಂಬರ್ ಶ್ರೀ ಆರ್. ಅನಂತರಾಮನ್, ಅವರು ಡಾ| ಪೈಗಳ ದೇಶಸೇವಾ ಮನೋಭಾವವನ್ನು ಕೊಂಡಾಡಿದರು.

ತುಮಕೂರಲ್ಲಿಯೂ ಡಾ| ಪೈಗಳಿಗೆ ಸತ್ಕಾರ ಕೂಟವೊಂದು ರಾಜಸೇವಾಸಕ್ತ ಶ್ರೀ ಎಚ್. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಉಪಾಹಾರಾನಂತರ ಡಾ| ಪೈಗಳು ಮಾತನಾಡುತ್ತಾ ಬ್ಯಾಂಕಿನ ಬೆಳವಣಿಗೆಗೆ ಸಾರ್ವಜನಿಕರೇ ಕಾರಣರೆಂದರು. ಸಾಮಾನ್ಯ ಮನುಷ್ಯನೂ ಕನಿಷ್ಠ ಉಳಿತಾಯ ಮಾಡಲು ಮನಸ್ಸುಮಾಡುವುದು ಅತ್ಯಾವಶ್ಯಕವೆಂದು ಹೇಳಿದರು. ಸಭಾಧ್ಯಕ್ಷರು ಡಾ| ಪೈಗಳ 'ಪಿಗ್ಮಿ' ಯೋಜನೆಯನ್ನು ಪ್ರಶಂಶಿಸಿ ಮಾತನಾಡಿದರು.

ಚಿಸಿದ್ದುದನ್ನು ಇಲ್ಲಿ ಸ್ಮರಿಸಬಹುದು. ಗ್ರಹಾಮರು ಮಿಲಿಟರಿ ಸಲಹೆಗಾರರಾದ ಡೇವಿಸ್ ರೊಡನೆಯಾದ ಚರ್ಚೆಯಲ್ಲೂ ಹೇಳಿಕೊಳ್ಳುವಂಥದೇನೂ ನಡೆಯಲಿಲ್ಲ. ಕಾರಣ, ಪಾಕಿಸ್ತಾನದ ಪ್ರತಿನಿಧಿಯನ್ನು ಇನ್ನೂ ಅಲ್ಲಿಡುವುದು ಅಪೇಕ್ಷಣೀಯವಲ್ಲ ಎಂಬ ಸಿದ್ಧಾಂತಕ್ಕೆ ಜಾಫರುಲ್ಲಾ ಖಾನ ಬಂದಿರುವರು.

ಘಟನಾತ್ಮಕ ಬಿಕ್ಕಟ್ಟು

ಭಾರತದಲ್ಲಿ ಕಾಶ್ಮೀರ ; ಘಟನಾತ್ಮಕ ಸ್ಥಾನಮಾನದ ಬಗ್ಗೆ ಉಂಟಾಗಿರುವ ಬಿಕ್ಕಟ್ಟು ಉದ್ವೇಗಕ್ಕೆ ಎಡೆಕೊಟ್ಟಿದೆ ಲೋಕಸಭೆಯ ಸದಸ್ಯರೂ ಜನಸಾಮಾನ್ಯರೂ ಈ ಸಮಸ್ಯೆಯ ಸ್ಪಷ್ಟ ಮಾಹಿತಿಯಿಲ್ಲದೆ ಅಸಂತುಷ್ಟಿ ತೋರಿಸುತ್ತಿರುವರೆಂದು ಹೊರಗಿನ ವರ್ಗಗಳು ಟೀಕಿಸಿದ್ದರೂ, ಅವರ ಮೇಲೆ ಕೂಡ ಚಿಂತೆಯ ಛಾಯೆ ಕವಿದಿದೆ ಎಂಬುವಂತೂ ನಿಶ್ಚಯ. ಶೇಖ ಅಬ್ದುಲ್ಲಾ ತಾನಾಗಿ ದಿಲ್ಲಿಗೆ ಮಾತುಕತೆಗೆ ಬಂದೆ, ಕೇವಲ ಪ್ರತಿನಿಧಿಗಳ ಮೂಲಕವೇ ಭಾರತ ಸರಕಾರದ ಸಲಹೆ ಪಡೆಯುತ್ತಿರುವುದು ಚೆನ್ನಾದ ಮಾರ್ಗವಲ್ಲವೆಂದೂ ಇದರಿಂದ ಉನ್ನತಮಟ್ಟದ, ಸ್ಪಷ್ಟ ಸ್ವರೂಪದ ತಿಳುವಳಿಕೆಯಾಗಲಾರದೆಂದೂ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ. ಇದನ್ನು ಮನವರಿಕೆಮಾಡಿಕೊಂಡೋ ಏನೋ—ಶೇಖ ಅಬ್ದುಲ್ಲಾ ಇದೀಗ ದಿಲ್ಲಿಗೆ ಬಂದಿರುವರು. ಕಾಶ್ಮೀರದ ಸ್ಥಾನಮಾನವು ವಿಶಿಷ್ಟ ತರಗತಿಯದೆಂದು ಒಪ್ಪಿದರೂ ಕಾಶ್ಮೀರವು ಭಾರತದ ಘಟನೆಯ ಆದೇಶವನ್ನು ಮೀರಿಹೋಗದಂತೆ ನೋಡಿಕೊಳ್ಳುವುದು ಅತ್ಯಗತ್ಯ. ಕಾಶ್ಮೀರದ ಮೇಲೆ ಭಾರತದ ವರಿಷ್ಠ ನ್ಯಾಯಾಲಯಕ್ಕಿರುವ ಅಧಿಕಾರ ಮಿತಿಯೂ ವಿವಾದಿತ ಪ್ರಶ್ನೆಗಳಲ್ಲೊಂದು.

ಸಂಕ್ಷಿಪ್ತ ಸುದ್ದಿ

ಕೇಂದ್ರ ಸರಕಾರವು ನಿಯಂತ್ರಣ ಜ್ಯಾರಿಯಲ್ಲಿರುವ ಪ್ರದೇಶಗಳಲ್ಲಿ ಆಹಾರ ಧಾನ್ಯಗಳನ್ನು ಮಾರಾಟ ಮಾಡುವವರು ಲೈಸೆನ್ಸ್ ಪಡೆದುಕೊಳ್ಳಬೇಕೆಂದು ವಿಧಿಸಿದೆ.

ಸಮಾಜವಾದಿ ಧುರೀಣ ಶ್ರೀ ಜಯಪ್ರಕಾಶ ನಾರಾಯಣರು ತಮ್ಮ ಮೂರು ವಾರಗಳ ಆತ್ಮಶುದ್ಧಿಯ ಉಪವಾಸವನ್ನು ಕೊನೆಗೊಳಿಸಿರುವರು, ಅಂಚೆ ಕೆಲಸಗಾರರು ಮುಷ್ಕರದ ನೋಟೀಸು ಕೊಡಬಾರದೆಂದು ತಾವು ಸಲಹೆ ಮಾಡಿರುವುದಾಗಿಯೂ, ಗಳಿಗೆಯಲ್ಲಿ ಸಂಸತ್ತಿನ ಅವಧಿಯು ಸಂಬಳದ ಮಾತುಕತೆಗಳ ಬಗ್ಗೆ ಕಿವಿಗೊಟ್ಟಿ ಹೇಳಿಕೆ ಯಥಾರ್ಥವಾದುದೆಂದೂ, ತನ್ನಿಂದ ತಪ್ಪು ಸಂಭವಿಸಿತೆಂದೂ ಅವರು ಹೇಳಿದರು.

ಮುನಿಸಿಪಲ್ ಕೌನ್ಸಿಲು ಸಭೆಯು

ಇದೇ ತಾ 12ರಂದು ವೈಸ್ ಚೇರ್‌ಮೇನ್ ಶ್ರೀ ಎ. ಬಿ. ಕೃಷ್ಣರಾಜರ ಅಧ್ಯಕ್ಷತೆಯಲ್ಲಿ ಜರಗಿತು. ಡಿಪ್ರೆಸ್ಡ್ ಕ್ಲಾಸಸ್ ಮಿಶನಿನ ಜಾಗಗಳನ್ನು ಪ್ರೊಪರ್ಟಿ ಟ್ಯಾಕ್ಸಿನಿಂದ ಹೊರತುಪಡಿಸಬಹುದೆಂದು ಸೂಚಿಸಿದ ಸರಕಾರಿ ಮೆಮೊರಾಂಡಮನ್ನು ರಿಕಾರ್ಡು ಮಾಡಲಾಯಿತು, ಪ್ರೊಪರ್ಟಿ ಟ್ಯಾಕ್ಸ್‌ಖಾತೆಗೆ ಒಬ್ಬ ಗುಮಾಸ್ತನನ್ನು ತಾತ್ಕಾಲಿಕವಾಗಿ ಪುನಃ ನೇಮಕ ಮಾಡಬಹುದೆಂದಾಯಿತು. ಮುನಿಸಿಪಲ್ ಚೇರ್‌ಮೇನರ ಚೇಂಬರಿಗೆ ರೂ 50/- ಸಹಾಯಧನ ಕೊಡುವುದೆಂದಾಯಿತು. ಮುನಿಸಿಪಾಲಿಟಿಯ ರಸ್ತೆಗಳಿಗೆ ಹೆಸರುಗಳನ್ನು ಸೂಚಿಸಲು ರಿಪೋರ್ಟು ಮಾಡುವುದಕ್ಕೆ ಕಮಿಟಿಯೊಂದರ ನೇಮಕವಾಯಿತು. ಇಲೆಕ್ಟ್ರಿಕ್ ಸರ್‌ಚಾರ್ಜನ್ನು ಈಗ ತೆಗೆಯಲು [illegible]ವೆಂದು ಸೂಚಿಸಿದ ಸರಕಾರಿ ಯಾದಾಸ್ತನ್ನು ರಿಕಾರ್ಡು ಮಾಡಲಾಯಿತು. ಕಟ್ಟಿಗಾದ ಕವಾಟು ಮತ್ತು ಸರಾಫರ ಕೌಂಟರಿಗೆ ಪೆನ್ಷನ್ ಮಾಡಲಾಯಿತು.

ನಿಧನ- ಉಡುಪಿ ಮುನಿಸಿಪಲ್ ಕೌನ್ಸಿಲರಾಗಿದ್ದ ಶ್ರೀ ಎಚ್. ಎನ್. ನಾಯ್ಕರು ಇದೇ ತಾ 13ನೆ ರಾತ್ರಿ ಹೃದಯಸ್ತಂಭನದಿಂದ ವಿಧಿವಶರಾದರೆನ್ನಲು ವಿಷಾದವೆನಿಸುತ್ತದೆ. ಶ್ರೀ ನಾಯ್ಕರು ಬೊಂಬೆಲೈಫ್ ಇನ್ಸೂರೆನ್ಸ್ ಕಂಪೆನಿಯ ಉಡುಪಿ ಆಫೀಸಿನಲ್ಲಿ ಜನಪ್ರಿಯ ಮೆನೇಜರರಾಗಿದ್ದರು.

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಉಡುಪಿ ಮುನ್ಸಿಪಲ್ ಬಸ್ ಸ್ಟೇಂಡಿನಲ್ಲಿರುವ ಬುಕ್ಕಿಂಗ್ ಆಫೀಸನ್ನು ಮತ್ತು ಪಾರ್ಸೆಲ್ ಕೋಣೆಯನ್ನು ತಾರೀಕು 1-8-52ರಿಂದ 31-3-53ರ ತನಕ ಬಾಡಿಗೆಗೆ ಉಪಯೋಗಿಸಿಕೊಳ್ಳುವ ಹಕ್ಕನ್ನು ಮುನ್ಸಿಪಲ್ ಕಮಿಶನ್‌ರವರು ಆ ಕುರಿತು ಜ್ಯಾರಿಯಲ್ಲಿರುವ ನಿಯಮಗಳಿಗನುಸಾರವಾಗಿ ತಾ. 21-7-52 ನೇ ಸೋಮವಾರ ಅಪರಾಹ್ನ ಗಂಟೆ 3ಕ್ಕೆ ಬಹಿರಂಗವಾಗಿ ಮುನ್ಸಿಪಲ್ ಆಫೀಸಿನಲ್ಲಿ ಏಲಂ ಮೂಲಕ ಮಾರಾಟಮಾಡುವರು. ಲಾಯಿಸ್ ಉಳ್ಳವರು ಏಲಂನಲ್ಲಿ ಸಹಿಸಿಕೊಳ್ಳಬಹುದು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಅಗತ್ಯವಿದ್ದಲ್ಲಿ ಆಫೀಸು ದಿನಗಳಲ್ಲಿ ಆಫೀಸು ಸಮಯದಲ್ಲಿ ಮುನ್ಸಿಪಲ್ ಆಫೀಸಿಗೆ ಬಂದು ತಿಳಿದುಕೊಳ್ಳಬಹುದು.

ಕೆ ಗೋಪಾಲ ಮೆನನ್,
ಕಮಿಶನರ್.

ಮುನ್ಸಿಪಲ್ ಆಫೀಸು, ಉಡುಪಿ,
ತಾರೀಖು 12-7-1952.

[೫ನೇ ಪುಟದಿಂದ ಮುಂದರಿಸಿದ್ದು]

ಗೂ ವಿಮಾನ ಪಡೆಗಳನ್ನು ಉಪಯೋಗಿಸಬಹುದೆಂಬ ಕ್ರಿಮಿನಲ್ ಪ್ರೊಸೀಜರ ಕೋಡಿನ ತಿದ್ದುಪಡಿಯು ಚರ್ಚೆಯ ಕಾಲದಲ್ಲಿ ವ್ಯಕ್ತಗೊಂಡಿತು:- ಜನರು ಇಂಥ ಅಧಿಕಾರದ ಹೆಸರು ಕೇಳಿದೊಡನೆಯೇ ನಡುಗಿ ಕಂಗಾಲಾಗುವರು ಎಂದು ಶ್ರೀ ಎ. ಕೆ. ಗೋಪಾಲನ್ ಹೇಳಿದರು. ಪಾಪದ ಜನರ ಮೇಲೆ ಆಕಾಶದಿಂದ ಬಾಂಬು ದಾಳಿಯಾಗುವುದಕ್ಕೆ ಅವಕಾಶ ಕೊಡುವ ಈ ತಿದ್ದುಪಡಿಗೆ ಬೆಂಬಲ ಕೊಡುವುದೇ ಸಾಧ್ಯವಿಲ್ಲ ಎಂದು ಪ್ರತಿಪಕ್ಷದ ಪ್ರಮುಖ ಸದಸ್ಯರು ಸಾರಿದರು. ಗೃಹ ಮಂತ್ರಿಗಳು ಹಾಗೆ ಮಾಡುವುದಿಲ್ಲವೆಂದೂ ವೈಮಾನಿಕ ಹಾಗೂ ನೌಕಾ ಪಡೆಗಳನ್ನು ಭೂದಳಗಳನ್ನಾಗಿಯೇ ಉಪಯೋಗಿಸಲಾಗುವುದೆಂದೂ ಆಶ್ವಾಸನೆ ಕೊಟ್ಟರು:- ಇಷ್ಟರ ಮೇಲೆಯೂ ವಿರೋಧಿ ಗುಂಪಿನವರಿಗೆ ಸಮಾಧಾನವಾಗಲಿಲ್ಲ. ತಕ್ಕ ಸಂರಕ್ಷಣೆಯನ್ನು ತಿದ್ದುಪಡಿಯಲ್ಲಿ ಕೊಟ್ಟಿಲ್ಲವಾದುದರಿಂದ ಆಶ್ವಾಸನೆಯು ಉಲ್ಲಂಘನೆಯಾಗುವುದಿಲ್ಲೆಂಬುದು ವಿಶ್ವಸನೀಯವಲ್ಲ ಎಂದು ಡಾ| ಶಾಮ ಪ್ರಸಾದ ಮುಕರ್ಜಿ ಸಂಶಯಪಟ್ಟರು. ಕಾಂಗ್ರೆಸಿಗರು ಕಮ್ಯೂನಿಸ್ಟರ ಹಿಂಸಾಚಾರಗಳ ಭಯವನ್ನು ವ್ಯಕ್ತಪಡಿಸಿ, ಈ ತಿದ್ದುಪಡಿಗೆ ಬೆಂಬಲಕೊಟ್ಟರೂ ವಾಸ್ತವದಲ್ಲಿ ಅದರ ಉಪಯೋಗವಾಗಲಾರದೆಂದು ಆಶೆ ತಳೆದರು. ಕಮ್ಯೂನಿಸ್ಟ ಸದಸ್ಯರಾದ ಶ್ರೀ ಹಿರೇನ ಮುಕರ್ಜಿಯವರು ಘಟನಾತ್ಮಕ ರೀತಿಯಿಂದ ರಾಜ್ಯದ ಹಿತ ಬಯಸುವ ಸರಕಾರದೊಡನೆ ಹೊಂದಿಕೊಂಡು ಹೋಗುವ ಇಚ್ಛೆಯಿಂದ ನಾವು ರಾಜ್ಯಾಂಗ ಸಭೆಗಳಲ್ಲಿ ಇದ್ದೇವೆ ಎಂದು ಸಾರಿದರು. ಕೊನೆಗೆ ಶ್ರೀ ವಿ. ಜಿ. ದೇಶಪಾಂಡೆ ಮಂಡಿಸಿದ, ಅಗತ್ಯದ ಪ್ರಸಂಗಗಳಲ್ಲಷ್ಟೆ ನೌಕಾ ಮತ್ತು ವೈಮಾನಿಕ ಪಡೆಗಳನ್ನು ಭೂದಳಗಳಾಗಿ ಉಪಯೋಗಿಸಬಹುದೆಂಬ ತಿದ್ದುಪಡಿಯೊಂದಿಗೆ, ಮಸೂದೆ ಸ್ವೀಕೃತವಾಯಿತು.

ತರಬೇತಿಗಾಗಿ

14 ವರ್ಷಕ್ಕೆ ಮೇಲ್ಪಟ್ಟ ಕೆಲವು ಹುಡುಗರನ್ನು ತೆಗೆದುಕೊಳ್ಳಲಾಗುವುದು. ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕಾಸ್ತ್ರಿಗೆ, ಭುಜ-ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಗೆಳವಿಷ ಮುಂತಾದವು, ಪಕ್ಷವಾತ, ನೋಡಿದೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳುಕಡ್ಡಿ

ಮದ್ದು

ನಮ್ಮಲ್ಲಿ

ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ

ಕಾಣಿಯೂರಿಗೆ ಟಪ್ಪಾಲುಕಟ್ಟೆ— ಪುತ್ತೂರು ತಾಲೂಕು ಕಾಣಿಯೂರು ಗ್ರಾಮದಲ್ಲಿ ಪೋಸ್ಟಾಫೀಸೊಂದು ತೆರೆಯಲ್ಪಡುವುದಾಗಿ ಇಲಾಖೆಯವರಿಂದ ಸುಮಾರು ಆರು ತಿಂಗಳ ಲಾಗಾಯ್ತು ವರ್ತಮಾನ ಹರಡಿ ಈ ಊರ ಹಾಗೂ ನೆರೆಕರೆಯ ಗ್ರಾಮಸ್ಥರು ಬಹಳ ಸಂತೋಷಪಟ್ಟು ನಿರೀಕ್ಷಿಸುತ್ತಿದ್ದರೂ ಈ ವರೆಗೆ ಪೋಸ್ಟಾಫೀಸು ತೆರೆಯಲ್ಪಡಲಿಲ್ಲ. ಟಪ್ಪಾಲು ಸೌಕರ್ಯ ಸರಿಯಾಗಿ ಇಲ್ಲದ ಈ ಊರಿಗೆ ಸಂಬಂಧಪಟ್ಟ ಇಲಾಖೆಯವರು ಈಗಿನ ವಾತಾವರಣಕ್ಕನುಸರಿಸಿ ಪೋಸ್ಟಾಫೀಸು ತೆರೆಯಲ್ಪಟ್ಟರೆ ಇಲ್ಲಿಯ ನಿವಾಸಿಗಳಿಗೆ ತುಂಬಾ ಉಪಕಾರವಿತ್ತು. ಇಲ್ಲಿಗೆ ಸುಮಾರು ಐದು ಮೈಲು ದೂರದ ಬೆಳ್ಳಾರೆ ಪೋಸ್ಟಾಫೀಸಿನಿಂದ ಕಾಗದ ಪತ್ರಗಳ ವಾರಕೊಂದಾವರ್ತಿ ಬಟವಾಡೆಯಾಗುತ್ತಿದೆ ಮಳೆಗಾಲದಲ್ಲಿ ಹೊಳೆ ತೋಡುಗಳಲ್ಲಿ ನೀರು ತುಂಬಿ ಹೋದರೆ ಬಟವಾಡೆ ಆಗುವುದೇ ಇಲ್ಲ. ಆದುದರಿಂದ ದಯಾಳು ಖಾತೆಯವರು ಕೂಡಲೇ ಪೋಸ್ಟಾಫೀಸು ತೆರೆಯುವರಾಗಿ ನಿರೀಕ್ಷಿಸಲಾಗಿದೆ.

ಪಡುಪಣಂಬೂರ — ಇಲ್ಲಿಯ ಜೋರ್ಡ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ 8ರಂದು ವನಮಹೋತ್ಸವವು ಶ್ರೀ ಕೆ. ಭೂಪಾಲ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀಗಳಾದ ಎಮ್. ಕೆ. ಎಲ್ಲಪ್ಪ ಅಂತೋಣಿ ಸೋಜ, ಲಿಂಗಪ್ಪ ಶೆಟ್ಟಿಗಾರ, ಚಂದ್ರ ಶೇಖರ ರಾವ್ ಮತ್ತು ಶ್ರೀಮತಿ ಪೌಲಿನ್ ಲೋಬೊ ಇವರ ಭಾಷಣಗಳಾದ ಬಳಿಕ ಸಭಾಂತ್ಯದಲ್ಲಿ ಶಾಲಾ ತೋಟದಲ್ಲಿ ಸಸಿಗಳನ್ನು ನೆಡಲಾಯಿತು.

ಎಕ್ಕಾರು— 7–7–1952ರಲ್ಲಿ ರೆವಿನ್ಯೂ ಡಿವಿಜನಲ್ ಆಫೀಸರವರ ನೇತೃತ್ವದಲ್ಲಿ ತೆಂಕ ಎಕ್ಕಾರು ಮ ಬಡಗ ಎಕ್ಕಾರು ಗ್ರಾಮಗಳ ಗ್ರಾಮಸ್ಥರ ಸಭೆ ಜರಗಿಸಲ್ಪಟ್ಟು ವನಮಹೋತ್ಸವವನ್ನು ಸಾಂಗವಾಗಿ ಆಚರಿಸಲಾಯಿತು.

ಗ್ರಾಮದ ಕೃಷಿ ವೃದ್ಧಿಯ ಕುರಿತು ಪಟೇಲ್ ಶ್ರೀ ಬಿ. ಹಿರಿಯಣ್ಣ ಹೆಗ್ಡೆರು ಅಧ್ಯಕ್ಷರಾಗುಳ್ಳ 7 ಜನರನ್ನೊಳಗೊಂಡ ಸಮಿತಿಯೊಂದನ್ನು ಏರ್ಪಡಿಸಲಾಯಿತು. ಗ್ರಾಮದಲ್ಲಿ ಈ ವರುಷ ಅತ್ಯಧಿಕ ಸಸಿಗಳನ್ನು ನೆಟ್ಟು ಕಾಪಾಡುವ ರೈತರಿಗೆ ರೂಪಾಯಿ 2 -0-0 ಮೌಲ್ಯದ 1ನೇ ಮತ್ತು 2ನೇ ಬಹುಮಾನವನ್ನು ಈ ಕಮಿಟಿಯವರು ಕೊಡುವುದಾಗಿ ಸಾರಲಾಯಿತು.

ಮುಲ್ಕಿ—ಗವರ್ನ್‌ಮೆಂಟ್ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ ವಿ. ಗೋವರ್ಧನ ಕಾಮತರು ಉದ್ಯೋಗದಿಂದ ನಿವೃತ್ತಿಹೊಂದಿದುದರಿಂದ ಅವರನ್ನು ಬೀಳ್ಕೊಳ್ಳುವರೆ ಒಂದು ಸತ್ಕಾರ ಕೂಟವು 9-7-1952 ರಲ್ಲು ಶ್ರೀ ಯಂ. ಪಿ. ದೇವರಾವ್, ಬಿ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಶೀನ ಸೆಟ್ಟರು ಸಂದರ್ಭೋಚಿತ ಭಾಷಣ ಮಾಡಿದರು.

ಶ್ರೀ ವಿ. ಗೋವರ್ಧನ ಕಾಮತರ ಶಿಷ್ಯವೃಂದದವರು 8-7-1952ರಲ್ಲು ಒಂದು ವಿದಾಯ ಕೂಟವನ್ನು ಜರಗಿಸಿ ಅವರಿಗೆ ಒಂದು ಮಾನಪತ್ರವನ್ನು ಸಮರ್ಪಿಸಿದರು. ನೆರೆದ ಸಭಿಕರಲ್ಲಿ ಶ್ರೀಗಳಾದ ಎ. ಕಾಂತಪ್ಪ ಮತ್ತು ಪಿ. ಎಲ್. ರಾಘವೇಂದ್ರ ರಾಯರು ಶ್ರೀ ಕಾಮತರ ಗುಣ ಕಥನವನ್ನು ಮಾಡಿದರು. ಶ್ರೀ ಯಂ. ಪಿ. ದೇವರಾಯರು ತಮ್ಮ ಅಧ್ಯಕ್ಷ ಭಾಷಣದಲ್ಲಿ ನಿವೃತ್ತರಾಗುವವರು ವಿದ್ಯಾಲಯಕ್ಕೆ ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿ ಮಾತಾಡಿ ಅವರಿಗೆ ಶುಭವನ್ನು ಕೋರಿದರು.

ಬಂಟರ ಯಾನೆ ನಾಡವರ ಸಂಘ

ಮುಂಬಾಯಿ — ಇದರ 24ನೇ ವಾರ್ಷಿಕ ಮಹಾ ಸಭೆಯು ಶ್ರೀ ಬಸ್ರೂರು ಜಗನ್ನಾಥ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ತಾ. 6-7-1952ರಲ್ಲು ಕರ್ನಾಟಕ ಫ್ರೀ ನೈಟ್ ಹೈಸ್ಕೂಲಿನಲ್ಲಿ ಬಹು ವಿಜೃಂಭಣೆಯಿಂದ ಜರಗಿತು.

ಗತವರ್ಷದ ವರದಿಯನ್ನು ಓದಿ ಸರ್ವಾನುಮತದಿಂದ ಮಂಜೂರಾದುದಲ್ಲದೆ, ಹೊಸ ವರ್ಷದ ಕಾರ್ಯಕಾರೀ ಸಮಿತಿಗೆ ಈ ಕೆಳಗೆ ಕಾಣಿಸಿದವರನ್ನು ಸರ್ವಾನುಮತದಿಂದ ಆರಿಸಲಾಯಿತು. ಡಾ|| ಪಡುಬಿದ್ರೆ ಜಗನ್ನಾಥ ಶೆಟ್ಟಿ (ಅಧ್ಯಕ್ಷ) ಶ್ರೀ ಕೆ. ಕೃಷ್ಣ ಅಜಿಲ (ಉಪಾಧ್ಯಕ್ಷ) ಶ್ರೀ ಶಿರ್ವಕೋಡು ಚಂದ್ರಶೇಖರ ಹೆಗ್ಡೆ (ಗೌರವ ಕಾರ್ಯದರ್ಶಿ) ಶ್ರೀ ಕೆ. ಆನಂದ ಹೆಗ್ಡೆ (ಗೌರವ ಜೊತೆ ಕಾರ್ಯದರ್ಶಿ) ಶ್ರೀ ಕಡೆಕಾರು ಕೃಷ್ಣಯ್ಯ ಶೆಟ್ಟಿ (ಗೌರವ, ಕೋಶಾಧಿಕಾರಿ) ಶ್ರೀ ಸೂಡ ಸುಂದರ ಶೆಟ್ಟಿ [ಗೌರವ, ಉಪ ಕೋಶಾಧಿಕಾರಿ] ಈ ವರ್ಷ ಸಂಘದ ರಜತ ಮಹೋತ್ಸವದ ಸಲುವಾಗಿ ಎಲ್ಲರೂ ಹುರುಪಿನಿಂದ ಕೆಲಸ ಮಾಡಬೇಕೆಂದೂ, ಸಂಘಕ್ಕೆ ಸ್ವಂತ ಒಂದು ಸ್ಥಳವನ್ನು ಪಡಕೊಳ್ಳುವಂತೆ ಪ್ರಯತ್ನಿಸಬೇಕೆಂದೂ ಅಧ್ಯಕ್ಷರೂ, ಇತರ ಸಭಿಕರೂ ಆಲೋಚಕ ಭಾಷಣಮಾಡಿದರು.

ಕಥೆ, ಕಾದಂಬರಿ, ನಾಟಕ, ಕವಿತೆ, ಚಿತ್ರ, ಪ್ರಬಂಧ, ಹರಟೆ ಮೊದಲಾದ ಸರ್ವವಿಧದ ಸಾಹಿತ್ಯಾಭಿರುಚಿಯನ್ನು ತಣಿಸುವ ನೂರಾರು ಕೃತಿಗಳು ಎಲ್ಲ ಪುಸ್ತಕಗಳಿದ್ದರೆ ಒಂದು ಪುಸ್ತಕಭಂಡಾರ ವಿದ್ದಂತೆ, ಅಂತರಂಗದ ಸುಮಾರು 30 ರೂಪಾಯಿಗಳ ನೂರಾರು ಪ್ರಕಟನೆಗಳನ್ನು ಒಮ್ಮೆಯೇ ಪಡಕೊಳ್ಳುವವರಿಗೆ ರೂ. 25ಕ್ಕೆ ಕೊಡಲಾಗುವುದು.

ವಿವರದ ಕೆಟಲಾಗಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಮದ್ರಾಸಿನ ಪಬ್ಲಿಕ್ ಇನ್‌ಸ್ಟ್ರಕ್ಷನ ಡೈರೆಕ್ಟರರಿಂದ ನವಯುಗ ವಾರಪತ್ರಿಕೆಯು ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಸೆಕೆಂಡರಿ ಶಾಲೆಗಳು ಅದನ್ನು ತರಿಸಿಕೊಳ್ಳಬಹುದಾಗಿದೆ.

WANTED

THE POPULAR INSURANCE COMPANY LIMITED,

"Popular Buildings" MANGALORE 1.

Invites applications from experienced and influential insurance men for the appointment of an INSPECTOR for UDIPI and COONDAPOOR area.

Apply with details of insurance experience and New Business undertaking

The Managing Director

ತಾರೀಕು 16-7-52ರಿಂದ

ರಣಜಿತ್ ಚಿತ್ರ— ಫುಲ್ ರಾಣಿ

ಜೈರಾಜ್ ಮತ್ತು ರಾಗಿಣಿ ದೇವಿ.

ಅನಂತರ: — ಮಿನರ್ವಾಚಿತ್ರ—

ಶೀಶ್ ಮಹಲ್

ಸೋಹರಾಬ್ ಮೋದಿ, ಸಿಗಾರ್, ಪೃಥ್ವಿರಾಜ್, ನಾಸೀರ್ ಮೊದಲಾದವರು.

ಬರುತ್ತದೆ:— ವನ್ ಮಿಲಿಯನ್ ಬಿ. ಸಿ, ಚೋಟಿ ಬಾಬಿ, ನಿರಾಲಾ, ಜೈಮಹ ಕಾಳಿ ಇತ್ಯಾದಿ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ರಾಷ್ಟ್ರಕವಿ ಎಮ್. ಗೋವಿಂದ ಪೈಗಳವರಿಂದ ಉದ್ಘಾಟಿಸಲ್ಪಟ್ಟ

ಕೊರಡ್ಕಲ್ ಸ್ಮಾರಕ ಸಮಿತಿಯವರಿಂದ

(ದಿವಂಗತ ಕೊರಡ್ಕಲ್ ಶ್ರೀನಿವಾಸ ರಾಯರ ನೆನಪಿಗಾಗಿ)

ಪ್ರಕಟಿಸಲ್ಪಟ್ಟ ನೆನಪಿಗಾಗಿ ನಾವೀನ್ಯಪೂರ್ಣ ಪುಸ್ತಕ

ಕರ್ನಾಟಕದ ಹೆಸರಾಂತ ಲೇಖಕರನೇಕರ ವಿವಿಧ ಬರಹಗಳಿಂದ ಕೂಡಿದೆ.

ಬೆಲೆ ರೂ. 2—0—0 ಮಾತ್ರ. ರೂ 2—6—0 ಕಳುಹಿಸಿದರೆ ಒಂದು ಪ್ರತಿಯನ್ನು ಟಪ್ಪಾಲು ದ್ವಾರಾ ಕಳುಹಿಸಬಹುದು.

ಕೊರಡ್ಕಲ್ಲರ ಶಿಷ್ಯ ವೃಂದವೂ ಮಿತ್ರಮಂಡಳಿಯೂ ಈ ಗ್ರಂಥವನ್ನು ಕೊಂಡುಕೊಂಡು ಸ್ಮಾರಕ ಸಮಿತಿಗೆ ನೆರವು ನೀಡಬೇಕಾಗಿ ವಿಶೇಷತಃ ಕೋರಲಾಗಿದೆ.

ಪ್ರತಿಗಳು ಸಿಗುವ ಸ್ಥಳಗಳು:–

1) ಕೊರಡ್ಕಲ್ ಸ್ಮಾರಕ ಸಮಿತಿ, ಉಡುಪಿ 2) ನವಯುಗ ಪ್ರೆಸ್, ಉಡುಪಿ 3) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು, 4) ನವಭಾರತ ಬುಕ್ ಡಿಪೊ, ಉಡುಪಿ.

ತಡವಾಗಿ ಮುಟ್ಟಾಗುವಿಕೆಗಾಗಿ ಗಾಬರಿಯಾಗಬೇಡಿರಿ

'ಋತುರಾಜ'ವನ್ನು ಸೇವಿಸಿರಿ. ನಾಲ್ಕೈದು ತಿಂಗಳ ಮುಟ್ಟಾಗದಿದ್ದರೂ, ಒಡನೆಯೇ ಋತುಸ್ರಾವವಾಗುವುದು. ಮುಟ್ಟಿನ ದೋಷದ ಇತರ ಗಂಡಾಂತರಗಳು ಕೂಡಾ 24 ತಾಸುಗಳೊಳಗೆ ಆಶ್ಚರ್ಯಕರವಾಗಿ ಪಾರಾಗುವುವು. ಇದಕ್ಕೆ ಸಂಶಯ ಬೇಡ.

ಕಿಮ್ಮತು—ರೂ. 7 8 0, ವಿ. ಪಿ. ರೂ. 1. ಸ್ಪೆಶಲ್ ರೂ. 24 ವಿ. ಪಿ ರೂ. 1-12-0.

Binapani Oushadabalaya
15/1 Moore Avenuel, Callcutta-33,

ಏಜಂಟ್:–ವೈದ್ಯ ಸಿ. ಆರ್. ಕಾಮತ್, ಮಂಗಳೂರು.

ಮಂಗಳೂರು

ಜಿಲ್ಲಾ ತೆಂಗು ಕಂಗು ಕಮಿಟಿ ಸಭೆಯು– ಇದೇ ತಾ. 10ರಲ್ಲಿ ಕಮಿಟಿ ಅಧ್ಯಕ್ಷ ಶ್ರೀ ಯು. ನಾರಾಯಣ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ವ್ಯವಸಾಯದ ಯಾವ ರೀತಿಯಲ್ಲಿ ಅಡಿಕೆ ಮಾರಾಟದ ವ್ಯವಸ್ಥೆ ನಡೆಯುತ್ತಿದೆ ಎಂಬುದನ್ನು ಪರಿಶೀಲಿಸುವುದಕ್ಕಾಗಿ ಉಪಾಧ್ಯಕ್ಷರನ್ನೂ ಕಾರ್ಯದರ್ಶಿಗಳನ್ನೂ ಶಿವಮೊಗ್ಗಕ್ಕೆ ಕಳುಹಿಸುವುದೆಂದು ತೀರ್ಮಾನಿಸಿತು. ಕಮಿಟಿಯು ತೆರೆದಿರುವ ಮಾರ್ಕೆಟ್ ಯಾರ್ಡ್ ಕೆಲವು ತೋಟಗಾರರ ಉತ್ಪತ್ತಿಯನ್ನು ಕೊಡಿದೆ. ಅಡಿಕೆ ತೋಟಕ್ಕೆ ಬೇಕಾದ ಗಂಧಕವನ್ನು ಒದಗಿಸುವ ಪ್ರಯತ್ನಗಳಾಗುತ್ತಿವೆ.

ಜಿಲ್ಲೆಯ ಭೂ ಸಂಶೋಧನೆ— ದಕ್ಷಿಣ ಕನ್ನಡ ಭೂಗರ್ಭ ಸಂಪತ್ತುಗಳ ಸಂಶೋಧನೆಗಾಗಿ ಕೇಂದ್ರ ಸರಕಾರವು ಭೂಗರ್ಭ ಸಂಶೋಧಕರನ್ನು ಈ ಜಿಲ್ಲೆಗೆ ಕಳುಹಿಸುವ ನಿರ್ಧಾರ ಮಾಡಿರುವುದು. ಈ ಶೋಧಕರ ಮಂಡಳಿಯು ಮಳೆಗಾಲ ಮುಗಿದೊಡನೆ ಇಲ್ಲಿಗೆ ಬರಬಹುದೆಂದು ಜಿಲ್ಲೆಯ ವಾಣಿಜ್ಯ ಸಂಘಕ್ಕೆ ಸುದ್ದಿ ಬಂದಿರುತ್ತದೆ. ಈ ಮಂಡಳಿಯು ಬಂದಾಗ ಜಿಲ್ಲೆಯವರೆಲ್ಲ ಸಹಕರಿಸಿ ಅವರ ಶೋಧನೆಯು ಫಲಪ್ರದವಾಗುವಂತೆ ಮಾಡಬೇಕೆಂದು ವಾಣಿಜ್ಯ ಸಂಘದ ಅಪೇಕ್ಷೆಯಾಗಿದೆ.

ಹುಡುಗಿಯ ಅಪಹಾರ– ಬೋಳರದಲ್ಲಿರುವ ಬಿಲ್ಲವ ಜಾತಿಯ ಸಾಧಾರಣ 14 ವರ್ಷ ಪ್ರಾಯದ ಹುಡುಗಿಯೊಬ್ಬಳನ್ನು ಒಬ್ಬ ಮಂತ್ರವಾದಿಯು ಅಪಹರಿಸಿಕೊಂಡು ಮೂಡಬಿದ್ರೆಯಲ್ಲಿ ರಿಜಿಸ್ಟ್ರಿ ಸಹಿ ಮದುವೆಯಾಗಿ ತನ್ನ ಸಂಬಂಧಿಕರ ಮನೆಯಲ್ಲಿದ್ದನು. ಹುಡುಗಿ ಕಾಣೆಯಾದ ವಿಚಾರದಲ್ಲಿ ಹೆತ್ತವರು ಪೋಲೀಸರಿಗೆ ದೂರುಕೊಟ್ಟಿದ್ದರು. ಪೋಲೀಸರು ಪತ್ತೆಹಚ್ಚಿ, ಹುಡುಗಿಯನ್ನೂ ಮಂತ್ರವಾದಿಯನ್ನೂ ಬಂಧಿಸಿ ಮಂಗಳೂರಿಗೆ ತಂದಿರುವರೆಂದೂ ಮುಂದಿನ ವಿಚಾರಣೆ ನಡೆಯುತ್ತಿದೆ ಎಂದೂ ತಿಳಿದುಬರುತ್ತದೆ.

ಜಿಲ್ಲಾ ಪೋಸ್ಟ್‌ಮೆನ್ ಮತ್ತು ಕೆಳತರಗತಿ ನೌಕರರ ಮಹಾ ಸಭೆಯು– ಇದೇ ತಾ. 6ರಲ್ಲಿ ಮಂಗಳೂರು ಹೆಡ್ ಪೋಸ್ಟಾಫೀಸಿನಲ್ಲಿ ಶ್ರೀ ಬಿ. ಎಸ್. ಭಾಸ್ಕರ ರೈ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ವಾರ್ಷಿಕ ವರದಿಯನ್ನು ಕಾರ್ಯದರ್ಶಿ ಶ್ರೀ ಸಿಕೇರರು ಓದಿದ ಬಳಿಕ ಅದು ಮಂಜೂರಾಯಿತು. ಸಂಘವನ್ನು ಬಲಗೊಳಿಸಲು ಹಾಗೂ ಪೋಸ್ಟ್‌ಮೆನ್ ಮತ್ತು ಪೇಕರರ ಸ್ಥಿತಿಗತಿ ಕುರಿತು ಶ್ರೀಗಳಾದ ಎಸ್. ಪಿರೇರಾ, ಕುಟ್ಟಪ್ಪ, ಪಿ. ಡಿ. ಬಂಗೇರ, ಎಮ್. ವಿ. ನಾಯರ್, ಬಿ. ವಿ. ಜನಾರ್ದನ ಮೊದಲಾದವರು ಮಾತನಾಡಿದರು. ನಾಲ್ಕೈದು ವರ್ಷ ಸರ್ವಿಸ್ ಇದ್ದ ನೌಕರರನ್ನು ಖಾಯಂ ಮಾಡಬೇಕಾಗಿಯೂ ಪೋಸ್ಟ್‌ಮೆನ್ ಪೆ ಕರುಗಳಿಗೆ ಉಡುಗೆ, ಚಪ್ಪಲ್, ಕೊಡೆ ಇತ್ಯಾದಿ ಸರಿಯಾಗಿ ಕೊಡಬೇಕಾಗಿ ಕೇಳಿಕೊಳ್ಳಲಾಯಿತು. ಶ್ರೀಗಳಾದ ಬಿ. ಎಸ್. ಬಾಸ್ಕರ ರೈ ಅಧ್ಯಕ್ಷ, ಆರ್. ಸಿ. ಕೇರಾ ಉಪಾಧ್ಯಕ್ಷ, ರಿ. ವೆಂಕಟ್ರಮಣ ಮ

ತ್ತು ಎಮ್. ವಿ. ನಾಯರ್ ಜತೆ. ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ವಿದಾಯ ಸತ್ಕಾರ– ಕಳೆದ ಐದು ವರ್ಷಗಳಿಂದ ಭಾರತ ಸೇವಕ ಸಂಘದ ಸದಸ್ಯರಾಗಿ ಜಿಲ್ಲೆಯಲ್ಲಿ ಹರಿಜನ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಲಿದ್ದು ಇದೀಗ ಬೊಂಬಾಯಿಗೆ ವರ್ಗಾಯಿಸಲ್ಪಟ್ಟ ಶ್ರೀ ಕೆ. ಎಲ್. ಎಸ್. ರಾಮಯರನ್ನು ಬೀಳ್ಕೊಡುವ ಸಮಾರಂಭವು ಇದೇ ತಾ 10ರಲ್ಲಿ ಸಂಜೆ ಶ್ರೀಗಳಾದ ಕೆ. ಎಸ್. ಕಾರಂತ, ಬಿ. ಶಂಕರ ಭಟ್ ಮತ್ತಿತರ ಗೆಳೆಯರಿಂದ ಏರ್ಪಡಿಸಲಾಗಿತ್ತು. ಶ್ರೀಗಳಾದ ಶ್ರೀನಿವಾಸ ಉಡುಪ, ಕೆ. ಸೂರ್ಯನಾರಾಯಣ ಅಡಿಗ, ಎನ್. ಎಸ್. ಕಿಲ್ಲೆ, ಎಚ್. ಭೀಮರಾವ್, ಡಾ| ಕೆ. ನಾಗಪ್ಪ ಆಳ್ವ, ಎಸ್. ಮುಕುಂದರಾವ್ ಮೊದಲಾದವರು ಶ್ಲಾಘನೀಯ ಮಾತುಗಳನ್ನಾಡಿದರು. ಶ್ರೀ ರಾಯರು ಉತ್ತರವೀಯುತ್ತಾ ಕೆಲಸ ಕಾರ್ಯಗಳ ಹಿನ್ನಲೆಯಲ್ಲಿ ತಾವು ಯಾರಿಗಾದರೂ ಕಹಿಮಾತು ಆಡಿದ್ದರೆ ಕ್ಷಮಿಸಬೇಕೆಂದೂ, ಹಿರಿಯರ ಹಾರೈಕೆಯಂತೆ ಕಾರ್ಯವೆಸಗುವ ಶಕ್ತಿ ತನಗೆ ಬರಲಿ ಎಂದೂ ಹೇಳಿ ಗೆಳೆಯರನ್ನೂ ಹಿರಿಯರನ್ನೂ ವಂದಿಸಿದರು ಶ್ರೀ ಕೆ ಎಸ್. ಕಾರಂತರು ಶ್ರೀ ರಾಯರಿಗೂ ಅತಿಥಿಗಳಿಗೂ ಧನ್ಯವಾದಗಳನ್ನರ್ಪಿಸಿದರು.

ಜಿಲ್ಲಾ ಬಂಟರ ಯಾನೆ ನಾಡವರ ಸಂಘದ– ಕಾರ್ಯಕಾರೀ ಸಮಿತಿಯ ಸಭೆಯು ಇದೇ ತಾ 6ರಲ್ಲಿ ಜರಗಿತು. ಶ್ರೀ ಕೆ. ಶ್ಯಾಮಸೆಟ್ಟರ ಸ್ಮರಣಾರ್ಥವಾಗಿ ಈ ತನಕ ಸಂಗ್ರಹಿಸಲಾದ ರೂ 2,500ನ್ನು ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್‌ನಲ್ಲಿ ಒಂದು ವರ್ಷದ ಅವಧಿಗೆ ಇಡಲು ಕೋಶಾಧಿಕಾರಿಗಳಿಗೆ ಅಧಿಕಾರವೀಯಲಾಯಿತು. ಈ ನಿಧಿಗೆ ಹೆಚ್ಚಿನ ಧನಸಹಾಯವನ್ನೀಯಲು ಸಮಾಜದವರನ್ನು ವಿನಂತಿಮಾಡಲು ಕಾರ್ಯದರ್ಶಿಯರಿಗೆ ಅಧಿಕಾರವೀಯಲಾಯಿತು. ಸಂಘದ ನಿಧಿಯು ಶಿಥಿಲವಾಗಿರುವುದರಿಂದ ಅದನ್ನು ಬಲಪಡಿಸಲು ಸಮಾಜದವರ ಮನೆ ಮನೆಗೆ ಹೋಗಿ ಹಣ ಸಂಗ್ರಹಿಸುವುದು ಅತ್ಯಾವಶ್ಯಕವೆಂದು ಕಮಿಟಿಯು ಅಭಿಪ್ರಾಯಪಟ್ಟು ಆ ಕಾರ್ಯವನ್ನು ನಿರ್ವಹಿಸಲು ನೇಮಿಸಲಾದ ಗುಮಾಸ್ತರಿಗೆ ಅಧಿಕಾರವೀಯಲಾಯಿತು.

ಜಿಲ್ಲಾ ಬೋರ್ಡ್ ಸಭೆಯು— ಇದೇ ತಾ. 22ನೇ ಬೆಳಿಗ್ಗೆ 11 ಗಂಟೆಗೆ ಜರಗಲಿದೆ.

ತಂಪಾದ ಚಹಾ (Iced Tea)

ಬೇಸಿಗೆ ಕಾಲದಲ್ಲಿ ತಂಪಾದ ಪಾನೀಯಗಳನ್ನು ಅನೇಕರು ಬಯಸುತ್ತಾರೆ. ಆದರೆ ತಂಪಾದ ಪಾನೀಯಗಳು ನಿಜವಾಗಿಯೂ ಬಾಯಾರಿಕೆಯನ್ನು ಹೋಗಲಾಡಿಸುವುದಿಲ್ಲ. ಪ್ರಸ್ತೀವಂದಿ ಬಾಯಾರಿಕೆಯನ್ನು ನೀಗಲು ಬಿಸಿ ಚಹವನ್ನೇ ಕುಡಿಯುತ್ತಾರೆ.

ಬಾಯಾರಿಕೆಯನ್ನು ಕಳೆಯುವ ವಿಶಿಷ್ಟ ಗುಣದಿಂದ ಕೂಡಿದ ಚಹವನ್ನು ಬೇಸಿಗೆಯ ತಂಪಾದ ಪಾನೀಯವನ್ನಾಗಿಯೂ ಸಹಜವಾಗಿ ಮಾರ್ಪಡಿಸಬಹುದಾಗಿದೆ ತಂಪಾದ ಚಹ ಎಂದರೆ ಬಿಸಿ ಚಹದಲ್ಲಿ ಬರ್ಫ ಹಾಕಿ ತಣ್ಣಗೆ ಮಾಡಿದ ಚಹವಲ್ಲ. ಅದನ್ನು ತಯಾರಿಸುವ ರೀತಿಯೇ ಬೇರೆ ಇದೆ. ಥಂಡಿಯ ಹವೆಯಲ್ಲಿ ಬಿಸಿ ಚಹವು ಎಷ್ಟು ಹಿತಕರವಾಗಿದೆಯೋ ಬೇಸಿಗೆ ಕಾಲದಲ್ಲಿ ಈ ಚಹವು ಅಷ್ಟೇ ಒಳ್ಳೆಯದಾಗಿದೆ.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಈ ತಂಪಾದ ಚಹವು ಬೇಸಿಗೆಯ ಲೋಕಪ್ರಿಯ ಪಾನೀಯವಾಗಿದೆ ಉಷ್ಣ ಟಬಂಧದ ಪ್ರದೇಶವಾದ ಭಾರತದಲ್ಲಿಯೇ ಅದರ ಪ್ರಚಾರವು ಇನ್ನೂ ಆಗಿಲ್ಲ ಈ ಪಾನೀಯಕ್ಕೆ ನಿಜವಾಗಿಯೂ ಭಾರತದಲ್ಲಿ ಸ್ವಾಗತ ಸಿಗುವುದು.

ಅದನ್ನು ತಯಾರಿಸುವ ವಿಧಾನ:- ಸಾದಾ ಚಹಕ್ಕೆ ಹಾಕುವ ಹುಡಿಯ 1½ ಪಾಲು ಚಹಾ ಹುಡಿಯನ್ನು ಕುದಿಯುವ ನೀರಿನಲ್ಲಿ ಹಾಕಿ 3ರಿಂದ 5 ನಿಮಿಷಗಳ ತನಕ ಇಡಬೇಕು. ಬಳಿಕ ಸೋಸಿ ಅರ್ಧಗಂಟೆಯವರೆಗೆ ಅದನ್ನು ಆರಿಸಬೇಕು. ಹಾಲನ್ನು ಅದರಲ್ಲಿ ಹಾಕತಕ್ಕದ್ದಲ್ಲ. ಸಕ್ಕರೆಯನ್ನು ಎಷ್ಟು ಬೇಕೊ ಅಷ್ಟು ಹಾಕಿಕೊಳ್ಳಬಹುದು. ಬಳಿಕ ಅದನ್ನು ಬರ್ಫದ ತುಣುಕುಗಳುಳ್ಳ ಗಾಜಿನ ಪಾತ್ರೆಗಳಲ್ಲಿ ಸುರಿಸಬೇಕು. ಆ ಮೇಲೆ ಅದರಲ್ಲಿ ಎಷ್ಟು ಬೇಕಾಗುವುದೊ ಅಷ್ಟು ನಿಂಬೆಹಣ್ಣಿನ ರಸವನ್ನು ಹಿಂಡಿಕೊಳ್ಳಲು ನಿಂಬೆಹಣ್ಣಿನ ತುಂಡುಗಳ ಸಮೇತ ಅದನ್ನು ಕುಡಿಯಲು ಕೊಡಬೇಕು.

ಈ ಪಾನೀಯವು ಭಾರತದಲ್ಲಿ ಪ್ರಚಾರವಾದರೆ ಬೇಸಿಗೆಯಲ್ಲಿ ವಿಶೇಷ ವೆಚ್ಚವಿಲ್ಲದೆ ತಂಪಾದ ಪಾನೀಯವು ದೊರೆತು ಬೇಸಿಗೆ ಕಾಲವು ಸಂತೋಷ ಕಾಲವಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ.

ಡಿ ಉಡುಪಿ ಬೇಂಕ್ ಲಿಮಿಟೆಡ್, ಉಡುಪಿ.

The Udipi Bank Ltd, Udipi

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನ ಉಡುಪಿ ಮತ್ತು ಕಲ್ಯಾಣಪುರ ಶಾಖೆಗಳಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಲೋನಿನ ಹಣಬಾಬ್ತುಗಳನ್ನಾಗಲೀ ಅದರ ಮೇಲಣ ಬಡ್ಡಿ ವಗೈರೆಯನ್ನಾಗಲೀ ಕ್ಲುಪ್ತ ಮ್ಯಾದೆಗೆ ಸರಿಯಾಗಿ ಸಲ್ಲಿಸದೆ ಇರುವುದರಿಂದಲೂ, ಸದ್ರಿಯವರಿಗೆ ಆ ಬಗ್ಗೆ ರಿಜಿಸ್ಟ್ರಿ ನೋಟೀಸುಗಳನ್ನು ಬಟವಾಡೆ ಮಾಡಿದರೂ ಪ್ರಯೋಜನವಾಗದೆ ಇರುವುದರಿಂದಲೂ, ಸದ್ರಿ ಸಾಲಗಳ ಬಾಬ್ತು ಅಸಲು, ಬಡ್ಡಿ ವಗೈರೆಯ ಬಗ್ಗೆ ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ತಾ. 23-7 1952 ನೇ ಬುಧವಾರ ಹಗಲು ಗಂಟೆ 11ಕ್ಕೆ ಸರಿಯಾಗಿ ಸದ್ರಿ ಬೇಂಕಿನ ಉಡುಪಿ ಆಫೀಸಿನಲ್ಲಿ ಏಲಂ ಮಾಡಲಾಗುವುದು. ಯಾವುದೇ ಕಾರಣದಿಂದ ಏಲಂ ಅದೇ ದಿವಸ ಮಾಡಲು ಅನಾನುಕೂಲವಾದಲ್ಲಿ ಪುನಃ ನೋಟೀಸು ಕೊಡದೇನೇ ಏಲಂ ಮುಂದರಿಸುವ ಹಕ್ಕು ಬೇಂಕಿಗೆ ಕಾದಿರಿಸಲ್ಪಟ್ಟಿದೆ. ತಿಳಿದಿರಲಿ.

ಸಾಲದ ನಂ	ಹೆಸರು ಮತ್ತು ವಿಳಾಸ	ಬರಬೇಕಾದ ಅಸಲು ರೂ
180/49 K	ಕೆ. ಆರ್. ಮಲ್ಲಿ, ಕೆ. ಯಸ್. ಮಲ್ಲಿಯವರ ಮಗ, ಕಲ್ಯಾಣಪುರ	15 0 0
23/51 K	ಬೂದ ಪೂಜಾರಿ, ಪರಮೇಶ್ವರನ ಮಗ, ಗುಜ್ಜರ್ ಬೆಟ್ಟು ಕೆಮ್ಮಣ್ಣು.	55[illegible] 0 0
41 50	ವೈ ಯಂ ನಾಗಪ್ಪ ಸೆಟ್ಟಿ, ರಾಮಯ್ಯ ಸೆಟ್ಟಿ ಅಳಿಯ, ತೆಂಕ ಗ್ರಾಮ, ಯರ್ಮಾಳು ಪೋಸ್ಟು.	490 0 0
51/50	ಯು. ದಾಮೋದರ ರಾವ, ಅಣ್ಣಯ್ಯನವರ ಮಗ, ನಾಗುಮಳಿದಾರರು, ಬಡಾ ಗ್ರಾಮ, ಯರ್ಮಾಳು ಪೋಸ್ಟು	80 0 0
68/50	ಅಂಜಾರ್ ಬೆಂಕಬೈಲ್ ಶಂಕರ ಹೆಗ್ಡೆ, ರಾಮಯ್ಯ ಹೆಗ್ಡೆಯವರ ಅಳಿಯ, ಅಂಜಾರು ಗ್ರಾಮ, ಹಿರಿಯಡ್ಕ P O.	175 0 0
11/51	ಬರ್ನಾರ್ಡ್ ಫೆರ್ನಾಂಡಿಸ್, ಯುಸ್. ಫೆರ್ನಾಂಡಿಸರ ಮಗ, ಉದ್ಯಾವರದಲ್ಲಿ ವಾಸಿಸುವವರು ಉಡುಪಿ ತಾಲೂಕು	150 0 0
70/51	ಯು. ಗೋಪಾಲ ನಾರಿಕಾಲು, ಅಣ್ಣು ನಾರಿಕಾಲರ ಅಳಿಯ, ಹಿರೆಬೆಟ್ಟು, ಉಪ್ಪೂರು	22 0 0
116/51	ಪಕ್ಕೀರ್ ಉದ್ರಿಕ, ಗುಂಡ ಉದ್ರಿಕರ ಮಗ, ನಡುಬೆಟ್ಟು, ಉಪ್ಪೂರು	40 0 0

ಉಡುಪಿ 12-7-52 } ಪಿ ಪುರುಷೋತ್ತಮ ಪ್ರಭು, ಏಜಂಟ್.

For Protection and Provision

Consult

The New Guardian of India Life Insurance Co., Ltd.

Estd] Head office: MADRAS 1934

A Policy in this progressive Life Office is good investment: its Agency is valuable business connection

Applications for representation are invited from influential persons.

Please apply to:

The Branch Manager.
Diamond Building, Hampankatta,
MNGALORE, S. K.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹಡಕಟ್ಟಿ ಋತುಸ್ರಾವವಾಗುವುದು. ಹೊಟ್ಟೆಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾಧಾರಣ ಮಂದಿಗೆ ಶಾಸ್ತ್ರಿ ಗುಣವಾಗಿದೆ–ಶೀಲ್ರ ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ ಪಿ ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು ಶಹಾ ಕಂಪನಿ, ಮಂಗಳೂರು.

ಕುಂದಾಪುರ ಡಿ. ಮು ಕೋರ್ಟಿನಲ್ಲಿ

O. P. 39 1952

ಅರ್ಜಿದಾರಳು ಇಂದಿರಮ್ಮ, ಮಹಾಬಲ ಬ್ಯಾರಿ ವಿಧವೆ, ಉಡುಪಿ ತಾಲೂಕು ಕಾರ್ಕಡ ಗ್ರಾಮದಲ್ಲಿರುವವಳು, ಸಾಲಿಗ್ರಾಮ P O.

ಮತ್ತು

ಎದ್ರಿ–ಸೀತಾರಾಮ ಬ್ಯಾರಿ, ದ್ಯಾವ ಬ್ಯಾರಿ ಮಗ, ಕುಂದಾಪುರ ತಾಲೂಕು ರಟ್ಟಾಡಿ ಗ್ರಾಮದಲ್ಲಿರುವ, ಹಾಲಾಡಿ P. O

ಇವರಿಬ್ಬರಿಗೆ

ಸದ್ರಿ ಎದ್ರಿಗೆ ಮತ್ತು ಸರ್ವ ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ

ಅರ್ಜಿದಾರಳ ಗಂಡ ಸದ್ರಿ ಮಹಾಬಲ ಬ್ಯಾರಿಯು ತಾ.23-11-1950ರಲ್ಲಿ ಗಂಡು ಯಾ ಹೆಣ್ಣು ಸಂತತಿಯಿಲ್ಲದೆ ಮೃತಪಟ್ಟ ಬಾಬಿನಲ್ಲಿ ಅವರಿಗೆ ಇರುತ್ತಿದ್ದ ಅವರ ಸ್ವಂತ ಹಕ್ಕಿನ ಬಾಬ್ತು The Canara Mutual Assurance Co., Ltd, Udipi ಮತ್ತು Hindusthan Co-operative Insurance Society, Ltd, Bangalore Branch ಕಂಪೆನಿಗಳಲ್ಲಿದ್ದ ಪೊಲಿಸಿಗಳ ಬಾಬ್ತು ಬರತಕ್ಕ ರೂಪಾಯಿ 2500-0-0 ವಗೈರೆ ಹಣಗಳನ್ನು ಸದರಿ ಕಂಪೆನಿಗಳಿಂದ ಪಡೆಯುವರೆ ತನಗೆ ಸಾಕ್ಸೆಸ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರಳು ಕೊಟ್ಟ ಸದ್ರಿ ಅರ್ಜಿಯನ್ನು ಮೇಲ್ಕಂಡ ಕೋರ್ಟಿನಲ್ಲಿ ತಾ. 7-8-1952ಕ್ಕೆ ತನಿಖೆಗೆ ಇಡಲಾಗಿರುವದು. ಆ ಕುರಿತು ಯಾರದ್ದಾದರೂ ಆಕ್ಷೇಪವಿದ್ದಲ್ಲಿ ಸದ್ರಿ ದಿವಸ ಪೂರ್ವಾಹ್ನ 11 ಘಂಟೆಗೆ ಕೋರ್ಟಿಗೆ ಹಾಜರು ಆಗಿ ಜ್ಯಾಹೀರು ಮಾಡಿಕೊಳ್ಳಬಹುದು.

A. V N Hebbar.
Pleader for Petitioner

ತಾರೀಕು 14-7-52 ಕುಂದಾಪುರ.

ಓರ್ವ ಮಹಿಳೆಯ ಮಹಾಸೇವೆ-

[೩ನೇ ಪುಟದಿಂದ ಮುಂದರಿಸಿದ್ದು]

ಅಪಘಾತಗಳಿಗೆ ಬಲಿಬಿದ್ದು ಕಾಲು ಕಳೆದುಕೊಂಡ ಇನ್ನೂ ಇತರ ಬಗೆಯಿಂದ ನೋವುಗೊಂಡ ಮಕ್ಕಳನ್ನು ಕಾಣುವೆವು.

ಚಿಕಿತ್ಸೆಯ ಕ್ರಮವು ಜಗತ್ತಿನ ಇತರೆಡೆಯಲ್ಲಿ ನಡೆಯುತ್ತಿರುವಷ್ಟೇ ಪ್ರಭಾವಿ ಹಾಗೂ ಅತ್ಯಾಧುನಿಕ ರೀತಿಯದು: ಜಲ ಚಿಕಿತ್ಸೆಯಿಂದ, ಬೆಳಕಿನ ಚಿಕಿತ್ಸೆಯಿಂದ, ಮತ್ತಿತರ ಚಿಕಿತ್ಸಾ ಗುಣವುಳ್ಳ ದೈಹಿಕ ಅಭ್ಯಾಸಗಳಿಂದ ಮಕ್ಕಳನ್ನು ಗುಣಪಡಿಸುವರು. ಇದಕ್ಕೆ ಬೇಕೆನಿಸಿದ ಬಿದಿರಿನ ದಬ್ಬೆಗಳು, ಸೊಂಟಪಟ್ಟಿ ಮುಂತಾದವುಗಳನ್ನು ಇಲ್ಲಿಯೇ ಸಿದ್ಧಗೊಳಿಸುವರು. ವಿದೇಶಗಳ ತಯಾರಿಕೆಯಷ್ಟೇ ಯೋಗ್ಯತೆಯು ಈ ಸ್ಥಳೀಯ ಸಲಕರಣೆಗಳಲ್ಲಿಯೂ ಇದೆ.

— ೭ —

ದೈಹಿಕ ಸ್ವಾಸ್ಥ್ಯವೊಂದೇ ಮಕ್ಕಳನ್ನು ಚೆನ್ನಾಗಿಡದೆಂಬುದನ್ನು ಇಲ್ಲಿಯ ವ್ಯವಸ್ಥಾಪಕರು ಬಲ್ಲರು. ಶೈಕ್ಷಣಿಕ ಚಿಕಿತ್ಸಾ ಪದ್ಧತಿಗೆ ಈ ಸಂಸ್ಥೆಯಲ್ಲಿ ಯೋಗ್ಯ ಆಸ್ಪದವನ್ನು ಕಲ್ಪಿಸಿಕೊಟ್ಟದು ಇದಕ್ಕಾಗಿಯೇ. ಚಿತ್ರಗಳಿಂದಲೂ, ಚಾರ್ಟುಗಳಿಂದಲೂ ತುಂಬಿದ ಕಾಲಾರಂಗದಲ್ಲಿ ನುರಿತ ಅಧ್ಯಾಪಕರಿಂದ ಮಕ್ಕಳಿಗೆ ವಿದ್ಯೆ ನೀಡುವರು. ಮನೋರಂಜನೆಗೂ ಅವಕಾಶವಿದೆ- ಸಾಮೂಹಿಕ ಗೋಷ್ಟಿಗಳು, ಉಪಾಹಾರ, ಸಿನೆಮಾ ಪ್ರದರ್ಶನ ಮುಂತಾದ ಕಾರ್ಯಕ್ರಮಗಳಿಂದಾಗಿ ಮಕ್ಕಳು ಭಾಗ್ಯಹೀನರು ತಾವೆಂದು ಮರುಗುವುದಕ್ಕೆ ಎಡೆ ಇಲ್ಲ.

ಹೆತ್ತವರಿಗಾಗಿ ಏರ್ಪಡಿಸುವ ಕಾರ್ಯಕ್ರಮವೊಂದಿದೆ—ಇದರ ಮೂಲಕ ಸಾಮೂಹಿಕವಾದ ಹಾಗೂ ವೈಯಕ್ತಿಕವಾದ ಸುಲಭ-ಸರಳ ಚಿಕಿತ್ಸಾ ವಿಧಾನಗಳಲ್ಲಿ ತರಬೇತಿಯನ್ನು ಅವರಿಗೆ ಕೊಡುವರು. ಈ ಸಮಸ್ಯೆಯ ಕಡೆಗೆ ಜನರು ತೋರುವ ಅನಾಸ್ಥೆಯನ್ನು ದೂರೀಕರಿಸುವುದಕ್ಕೂ, ಸ್ಪಷ್ಟವಾದ ಜ್ಞಾನದ ಪ್ರಸಾರಕ್ಕಾಗಿಯೂ—ಆಸ್ಪತ್ರೆಯ ಆರೋಗ್ಯ ಶಿಕ್ಷಣ ಸಂಸ್ಥೆಯು ಪರಿಶ್ರಮ ವಹಿಸಿ ದುಡಿಯುತ್ತಿದೆ.

— ೮ —

ಪ್ರಾಯೋಗಿಕ ಸ್ವರೂಪವನ್ನಷ್ಟೆ ಪಡೆದು ತೊಡಗಿದ್ದ ಈ ಸಂಘ ಈಗ ಬಾಲ್ಯಾವಸ್ಥೆಯನ್ನು ಕಳೆದು, ಮುನ್ನಡೆದಿದೆ. ಸ್ಥಾಪನೆಗೊಂಡ ನಾಲ್ಕು ವರ್ಷಗಳಲ್ಲಿ ಸುಮಾರು ೩೦೦೦ ಮಕ್ಕಳನ್ನು ಉಪಚರಿಸಿ, ಕೀರ್ತಿಭಾಜನವಾಗಿದೆ.

ಕಳೆದ ೨೦ ವರ್ಷಗಳಿಂದ ಫಾತಿಮಾ ಇಸ್ಮಾಯೀಲ ಸಾಮಾಜಿಕ ಕಾರ್ಯದಲ್ಲಿ ಮಗ್ನರು. ಅವರ ವಿದ್ಯಾಭ್ಯಾಸವು ಮುಂಬಯಿಯಲ್ಲಿ ನಡೆಯಿತು. ಮುಂದೆ ವಿಯೆನ್ನಾದಲ್ಲಿ ವೈದ್ಯಕೀಯಾಭ್ಯಾಸದಲ್ಲಿ ತೊಡಗಿದರೂ—ಕುಟುಂಬದ ಆರ್ಥಿಕ ಅನಾನುಕೂಲತೆಗಳಿಂದ ಅದನ್ನು ಅರ್ಧದಲ್ಲಿ ತ್ಯಜಿಸಿ ಬರಬೇಕಾಯಿತು. ಮದುವೆಯಾದ ಬಳಿಕ ಪರದೆಯೊಳಗಿನೇ ಆರು ವರ್ಷ ಕಾಲ ಒತ್ತಾಯದಿಂದಿರಬೇಕಾದರೂ—ಮುಂದೆ ಬುರುಖೆಯ ಬಂಧನವನ್ನು ಕಿತ್ತೊಗೆದು ಸಾಮಾಜಿಕ ರಂಗವನ್ನು ಫಾತಿಮಾ ಉತ್ಸಾಹದಿಂದ ಪ್ರವೇಶಿಸಿದರು.

ಬದುಕಿನ ರೀತಿನೀತಿ

[೧ನೇ ಪುಟದಿಂದ ಮುಂದುವರಿದುದು]

೩) ಕುಡಿಯುವ ವಸ್ತುವಿನ ಕಡೆಗೆ ವಿಶೇಷ ಗಮನವಿರಲಿ. ಇದನ್ನು ಹೇಳುವ ಕಾರಣವೇನು? ಮನಸ್ಸು ಮತ್ತು ಶರೀರಕ್ಕೆ ಅಪಥ್ಯವಾದವುಗಳ ಉಪಯೋಗವನ್ನು ತಪ್ಪಿಸುವುದೇ ಪಂಡಿತನ ಹೇಳಿಕೆಯು

ಈಚೆಗೆ ನಾಲ್ಕುವರೆ ತಿಂಗಳು ಕಾಲ ಸಂಯುಕ್ತ ರಾಜ್ಯ ಅಮೇರಿಕೆಯಲ್ಲಿ ಪ್ರವಾಸಮಾಡಿಬಂದು ಫಾತಿಮಾ ಇಸ್ಮಾಯೀಲ ತುಂಬ ಅನುಭವಸಂಪನ್ನರಾಗಿದ್ದಾರೆ. ಸರಕಾರದ ಆಹ್ವಾನದ ಮೇರೆಗೆ ಆ ಪ್ರಯಾಣ ನಡೆಯಿತು. ಎಷ್ಟೋ ಆಸ್ಪತ್ರೆಗಳನ್ನು, ಪುನರ್ವಸತಿಯ ಕೇಂದ್ರಗಳನ್ನು, ಕಾಂಟರಿಗಾಗಿ ನಡೆಸಲ್ಪಡುವ ವಿಶಿಷ್ಟ ವರ್ಗಗಳನ್ನು, ದೈಹಿಕ ಕುಂದು ಕೊರತೆಗಳನ್ನು ನಿವಾರಿಸಿ, ಮೊದಲಿನ ಸ್ಥಿತಿಗೇ ತರಲು ನೋಡುವ ಉಪಚಾರ ಗೃಹಗಳನ್ನು, ಇನ್ನು ಇವಕ್ಕೆಲ್ಲ ಆಗತ್ಯವಿರುವ ಸಲಕರಣೆಗಳನ್ನು ತಯಾರಿಸುವ ಸ್ಥಳಗಳನ್ನು—ಎಲ್ಲವನ್ನೂ ಇವರು ಪ್ರತ್ಯಕ್ಷ ಕಂಡುಬಂದರು.

ಮುಂಬಯಿಗೆ ಮರಳಿಬಂದ ಮೇಲೆ—ಈಗ ಇನ್ನಷ್ಟು ಉತ್ಸಾಹದಿಂದ ತನ್ನ ಹೃದಯಕ್ಕೆ ಅತ್ಯಂತ ಪ್ರಿಯವಾದ, ಕುಂಟು ಮಕ್ಕಳ ಊನವನ್ನು ಸರಿಪಡಿಸಿ, ಸಂತೋಷ ಜೀವನವನ್ನು ಅವು ನಡೆಸಲು ಅನುಕೂಲತೆ ಕಲ್ಪಿಸುವ, ಅಸಾಮಾನ್ಯ ಪುಣ್ಯದ ಕೆಲಸದಲ್ಲಿ ಫಾತಿಮಾ ಇಸ್ಮಾಯೀಲ ನಿರತರು. ಹೆಣ್ಣು ಜೀವದ ಕೆಲಸವನ್ನು ನೋಡಿ, ನಾಲಿಗೆ ಕಚ್ಚಿಕೊಳ್ಳದವನಾವ್ಯಾರ?—ಎಷ್ಟೊಂದು ಘನವಾದ ಮಾನವಸೇವೆ ಇದು!

ಸಾರ. ಚೆನ್ನಾಗಿಲ್ಲದ ಊಟದಿಂದ, ಅನೇಕಾನೇಕ ವ್ಯಾಧಿಗಳು ಉತ್ಪನ್ನವಾಗುವುವೆಂದು ಎಲ್ಲ ವೈದ್ಯರೂ ಹೇಳುತ್ತಾರೆ. ತಿಳಿದು ತಿಳಿದೂ ಉತ್ತಮವಲ್ಲದ ಭೋಜ್ಯ ಪದಾರ್ಥಗಳನ್ನು ವಿಕ್ರಯಿಸುವವರು ನಾಗರಿಕ ಜನತೆಯ ಮಟ್ಟಿಗೆ ಮಹಾಪರಾಧವನ್ನು ಮಾಡುತ್ತಾರೆ. ದೇಹಾರೋಗ್ಯವನ್ನು ಕೆಡಿಸುವ ವಸ್ತುಗಳ ಬಗ್ಗೆ ಮಾತ್ರ ಈ ಎಚ್ಚರಿಕೆಯಿರದೆ, ಮನಸ್ಸಿನ ನೆಮ್ಮದಿಗೆ ಭಂಗ ತರುವ ಪೇಯ ಪದಾರ್ಥಗಳ ಮಾರಾಟಕ್ಕೂ ಇದೇ ಮಾತು ಅನ್ವಯಿಸವುದು.

ಹೊಳಪಿನ ಲೋಟಗಳು ನೇತ್ರಾನಂದದಾಯಕವಿವೆ ಎಂಬುದು ನಿಜ. ಅದರಲ್ಲಿ ತುಂಬಿದ ಪೇಯವೂ ಅಷ್ಟೇ ಶುದ್ಧವಿರಬೇಕಾದುದು ಅಗತ್ಯ. ಸತ್ಯ ಹೇಳುವುದಾದರೆ—ಹೀಗಿಲ್ಲವಲ್ಲ! ಹಾನಿಕಾರಕವಾದ ಟೀ-ಕಾಫಿಗಳು ನಮಗೆ ಕುಡಿಯಲು ದೊರೆಯುವುವು. ಇಂಥ ದುರಾಚಾರಗಳ ವಿರುದ್ಧ ಶತಮಾನಗಳಿದ ಉತ್ತಮ ವ್ಯಕ್ತಿಗಳು ಎಚ್ಚರಿಕೆ ನೀಡುತ್ತ ಬಂದಿರುವರು. ಮದಿರಾ ಪಾನವೂ ದ್ಯೂತಾಸಕ್ತಿಯೂ ಪತನಕ್ಕೆ ಹೇತುವೆಂದು ಅವರು ಉಪದೇಶಿಸಿರುವರು. ಸುರಾಪಾನವು ಒಳ್ಳೆಯದೆಂದು ವಾದಿಸುವವರು ಇದ್ದಾರೆ. ಕೆಟ್ಟದೆಂದು ತ್ಯಜಿಸುವವರೂ ಇದ್ದಾರೆ. ಇವರ ಉಪಯೋಗದ ಬಗ್ಗೆ ಇಪ್ಪತ್ತನೇ ಶತಮಾನದ ವಿಜ್ಞಾನಿಗಳ ಸಂಶೋಧನೆಯೂ ಸ್ಪಷ್ಟವಾಗಿ ಏನನ್ನೂ ಹೇಳುವ ಸ್ಥಿತಿಗೆ ಬಂದಿಲ್ಲ. ಹೀಗಿದ್ದರೂ- ಒಂದು ಮಾತನ್ನು ನೆನಪಿನಲ್ಲಿಟ್ಟುಕೊಳ್ಳಬಹುದು. —ಕುಡಿಯದಿರುವುದು ಹಾನಿಕರವೆಂದು ಯಾರಾದರೂ ಆಕ್ಷೇಪ ತೆಗೆದಿರುವರೇ? ಕುಡಿಯುವುದನ್ನು ಬಿಟ್ಟುಕೊಟ್ಟರೆ ದುಡ್ಡು ಉಳಿಯುವುದೆಂಬುದನ್ನು ಯಾರೂ ಪ್ರತ್ಯೇಕ ಹೇಳಬೇಕಾಗಿಲ್ಲ.

ನಮಗೆ ಒಳ್ಳೆಯ ಕೆಲಸಗಳನ್ನು ಮಾಡಲಿಕ್ಕಿದೆ. ದೇಶಾಭ್ಯುದಯವು ವ್ಯಕ್ತಿಗತ ನೀತಿಯಿಂದಲೇ ಸಾಧಿಸಲ್ಪಡುವ ವಿಷಯ. ಈ ಕಾರಣಕ್ಕಾಗಿ ನಮ್ಮ ಬದುಕಿನ ಗಾಂಭೀರ್ಯವನ್ನು ಕಾಯ್ದುಕೊಳ್ಳಬೇಕು. ಸರಳತನ ಜೀವನದ ರೀತಿನೀತಿಯಲ್ಲಿ ಒಡಮೂಡಬೇಕು. ವಿನೋದ-ಪ್ರಮೋದಕ್ಕೆ ಈಗಿನ ಕಾಲವು ಪ್ರಾಯಶಃ ಹೇಳಿಸಿದುದಲ್ಲ. ನಿರತ ಕಾರ್ಯಾಸಕ್ತಿಯಿಂದಲೇ, ನಮ್ಮ ಬಡಮೋಲಾದ ಪರಿಸ್ಥಿತಿಯನ್ನು ಮರಳಿ ಸಮತೂಕಕ್ಕೆ ತರಬಲ್ಲೆವು.

—ಓಂ ತತ್ಸತ್.

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O. P. 7/52

ನಾರಾಯಣ ಶೆಟ್ಟಿ —ವಾದಿ.

ಗೋಪಿ ಕೂಡಾ —ಪ್ರತಿವಾದಿರು.

D2: ಪರಿಯಪ್ಪ (ಶ್ರೀ) ಸಂಜೀವ ಶೆಟ್ಟಿ 1ನೇ ಪ್ರ॥ ಮಗ, ಬೆಂಗಳೂರು ಸಿಟಿ, Dt. Bd. Compound. B T. Ramayya' Restaurent.

ಪುಟ್ಟವಳ್ಳಿಗೆ ವಾದಿಯು ಮಾಡಿದ ಪದರೀ ಪಾಪರ ವಾಜವೆಯು 1-8-52ಕ್ಕೆ ಬಿಟ್ಟಿದೆ. ಆ ದಿನ ನೀವು ಹಾಜರಾಗದಿದ್ದ್ರೆ ನಿಂಮನ್ನು ಶಿಷ್ಟಾ ಮಾಡಿ ತೀರ್ಮಾನಿಸಲಾದೀತು.

S/d H. P Bhat,
Vakil for Plff.

Puttur, 4-7-52

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 201/1952

P. ಕೃಷ್ಣರಾವ್ —ವಾದಿ.

ಮತ್ತು

P. ನರಸಿಂಗ್ರಾವ್-ರಾಮಚಂದ್ರ ರಾಯರ ಮಗ-ಉಡುಪಿ ತಾಲ್ಲೂಕು ಕೊಡವೂರು ಗ್ರಾಮ, —ಪ್ರತಿವಾದಿ.

ಇವರೊಳಗೆ—

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನೆಂದರೆ—

ವಾದಿಗೆ ಪ್ರತಿವಾದಿಯು ಬರಕೊಟ್ಟ ದಿಮಾಂಡು ನೋಟಿನ ಅಸಲು ಬಡ್ಡಿಗೆ—ವಾದಿಯು ದಾಖಲ್ಮಾಡಿದ—ಸದ್ರಿ ನಂಬ್ರದಲ್ಲಿ ಪ್ರತಿವಾದಿಯು ನೋಟೀಸ ಬಗ್ಗೆ ತಾ. 4 8 1952 ಕ್ಕೆ ವಿಚಾರಣೆಗಿಯದೆ ಪ್ರತಿವಾದಿಗೆ ಆಕ್ಷೇಪ ಹೇಳತಕ್ಕದ್ದು ಯಿದ್ರೆ ಆ ದಿವ್ಸ 10 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂಗೆ ಸ್ವಾತ್ರಾಗಿ ಹಾಜರುಮಾಡಿಕೊಳ್ಳತಕ್ಕದ್ದು ಯೆಂಬ ಸಂಗ್ತಿ ತಿಳಿಸೋಣಾಗಿಯದೆ.

N. Y. Kamath,
Advocate for Plaintiff.

ಉಡುಪಿ, 11-7-52.

THE BOMBAY LIFE ASSURANCE COMPANY, LTD.
ದಿ ಬೊಂಬೆ ಲ್ಯಾಫ್ ಎಶ್ಶೂರೆನ್ಸ್ ಕೋ., ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್, ಲಿಮಿ[illegible]
ಇವರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಉಡುಪಿಗೆ ಹೋಗಬೇಕೆ! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ವಿಮ್ಮ ಸ್ನಾನ, ಊಟ, ಉಪಹಾರ, ಬ್ರೆಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಸರಿದರಿ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿ [illegible]
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ
For up-to-date Lodging & Boarding
ROYAL MAHAL,
UDIPI. S. Kanara.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ
1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.,
Moolky, S. K

ಗ್ರಾಮಜೀವನದಲ್ಲಿ ಸ್ವಯಂಪೂರ್ಣತೆ

ಲೇಖಕರು: ಶ್ರೀ ಅ ವಾ. ಸಹಸ್ರಬುದ್ಧೆ,
ಮಂತ್ರಿ, ಅ. ಭಾ. ಚ ಸಂಘ, ಸೇವಾಗ್ರಾಮ.

ಕಳೆದ ಮೂರು ನಾಲ್ಕು ವರ್ಷಗಳಿಂದ ಕತಾಯಿ ಮಂಡಲ ಚಳವಳವು ಪ್ರಾರಂಭವಾಗಿದೆ. ಸಾಧಾರಣವಾಗಿ ಒಂದುವರೆ ಸಾವಿರ ಕತಾಯಿ ಮಂಡಲಗಳು ಭಾರತ ವರ್ಷದಲ್ಲೀಗ ಕೆಲಸ ಮಾಡುತ್ತಿವೆ. ಅವುಗಳ ಕಾರ್ಯಕ್ಷೇತ್ರವು ಮೆಲ್ಲಮೆಲ್ಲನೆ ವಿಸ್ತಾರಗೊಳ್ಳುತ್ತಿದೆ. ಕತಾಯಿ ಮಂಡಲಗಳಲ್ಲಿ ಸೇರುವವರೆಲ್ಲ ವಸ್ತ್ರಸ್ವಾವಲಂಬಿಗಳಾಗಬೇಕೆಂಬುದೆ ಅವರ ಮುಖ್ಯೋದ್ದೇಶವಾಗಿರುತ್ತ ಇಂದು ಅದಕ್ಕಾಗಿಯೆ ಎಲ್ಲರು ಪ್ರಯತ್ನಿಸುತ್ತಿದ್ದಾರೆ. ವಸ್ತ್ರ ಸ್ವಾವಲಂಬನೆಯ ಪ್ರವೃತ್ತಿಯು ಒಂದು ವಿಶಿಷ್ಟ ಪ್ರಕಾರದ ಸಮಾಜರಚನೆಯು ಪಾರ್ಶ್ವ ಭೂಮಿಯಾಗಿರುತ್ತದೆ. ಏಕೆಂದರೆ ಈಗ ನಾವು 'ಗೃಹೋದ್ಯೋಗ' ವೆನ್ನುವಂಥಾದ್ದೇ ನಾಳೆ "ಗ್ರಾಮೋದ್ಯೋಗ"ವೆಂದೂ ಮುಂದೆ ಆ ಗ್ರಾಮೋದ್ಯೋಗವೇ "ಪ್ರಾದೇಶಿಕ ಉದ್ಯೋಗ"ವಾಗಿ ಪರಿವರ್ತನೆಗೊಳ್ಳುವ ವಿಚಾರವನ್ನೂ ನಾವು ಸಂಭವನೀ ಮಾಡಬೇಕಾದೀತು. ಆದಕಾರಣ ವಸ್ತ್ರಸ್ವಾವಲಂಬಿಯಾಗಿರುವುದೊಂದೇ ಮುಖ್ಯ ಕಾರ್ಯವೆಂದು ಕತಾಯಿ ಮಂಡಲಗಳ ಸದಸ್ಯರಾರೂ ಭಾವಿಸಕೂಡದು, ನಾವು ಯಾವ ರೀತಿಯ ಆರ್ಥಿಕ ರಚನೆಯನ್ನೂ ಮಾಡಲು ಪ್ರಯತ್ನಿಸುತ್ತಿದ್ದೇವೆ. ಹಾಗೂ ಸಮಾಜದಲ್ಲಿ ಯಾವ ರೀತಿಯ ಆರ್ಥಿಕ ರಚನೆಯನ್ನು ಕಟ್ಟಲು ಪ್ರಯತ್ನಿಸುತ್ತಿದ್ದೇವೆ ಇತ್ಯಾದಿವಿಷಯಗಳನ್ನು ಎಲ್ಲರೂ ಆಲೋಚಿಸಬೇಕು.

ನಾವು ಯಾವ ಸಮಾಜದ ಅಂಗವಾಗಿರುತ್ತೇವೊ ಅದರ ವಾಸ್ತವಿಕ ಸ್ಥಿತಿಯೇನಿದೆ. ನಮ್ಮ ಆರ್ಥಿಕ ಪ್ರಶ್ನೆಗಳಾವುವು ಇತ್ಯಾದಿ ವಿಷಯಗಳನ್ನೂ ನಾವು ವಿಶೇಷ ರೂಪದಿಂದ ತಿಳಿಯಬೇಕು. ಹಾಗೂ ಅದರ ಉಪಯೋಗದಿಂದ ನಮ್ಮ ವಸ್ತ್ರ ಸ್ವಾವಲಂಬನೆಯ ಉದ್ದೇಶವು ಎಷ್ಟರ ಮಟ್ಟಿಗೆ ಸಫಲವಾಗಬಹುದು ಎಂಬುದರ ವಿಚಾರ ಮತ್ತು ಆಚರಣೆಯನ್ನು ಕತಾಯಿ ಮಂಡಲಗಳು ಮಾಡಬೇಕು. ಹಾಗಾಗದಿದ್ದರೆಯೂ ಆ ಸರ್ವೋದಯ ವಿಚಾರ ಸರಣಿಯನ್ನು ನಾವು ನಮ್ಮ ದೃಷ್ಟಿಪಥವಾಗಿಟ್ಟುಕೊಂಡು ಅದನ್ನು ಸರಿಪಡಿಸಬು ವೈಯಕ್ತಿಕ ಯಾ ಸಾಮೂಹಿಕ ಶಕ್ತಿಯನ್ನೂ ಪಡೆಯಲು ಅಶಕ್ತರಾದರೆ, ಕತಾಯಿ ಮಂಡಲಗಳ ಸಕಲ ಪ್ರಯತ್ನಗಳು "ಒಂದು ಸನಾತನೀ ವಿಚಾರ ಸರಣಿ"ಯಂತೆಯೇ ಪರಿಣಮಿಸುವುದು; ಜನರು ಮಂಡಲಗಳ ಕಾರ್ಯಗಳನ್ನು ಮನ್ನಿಸಬಹುದಾದರೂ, ಅವುಗಳನ್ನು ತಾವು ಅನುಸರಿಸಬೇಕೆಂಬ ವಿಚಾರವು ಅವರ ಮನಸ್ಸಿನಲ್ಲುಂಟಾಗಲಾರದು.

ಚರಖಾವು ವಿಕೇಂದ್ರಿತ ಅರ್ಥರಚನೆಯ ಸೂಚಕವೆಂದು ನಾವು ತಿಳಿದಿರುತ್ತೇವೆ. ನಮ್ಮ ಮೂಲಭೂತ ಆವಶ್ಯಕತೆಗಳನ್ನು, ವಿಶೇಷತಃ ಅನ್ನ ವಸ್ತ್ರ ಮೊದಲುಗೊಂಡು ಗ್ರಾಮ ಸ್ವಾವಲಂಬನೆಯ ದೃಷ್ಟಿಯಿಂದ ವಿಚಾರಿಸುತ್ತಿದ್ದೇವೆ, ಹಾಗಿದ್ದರೂ ನಮ್ಮ ಇಷ್ಟರ ತನಕದ ಪ್ರಚಾರ, ಪ್ರಯತ್ನಗಳಿಂದ ನಾವಿನ್ನೂ ಸಾವಿರದಲ್ಲೊಂದಷ್ಟನ ಪರಿವರ್ತನೆಯನ್ನೂ ಮಾಡಿರುವುದಿಲ್ಲ. ಯಥಾರ್ಥವೆಂದರೆ ನಾವು ನಮ್ಮ ಮಟ್ಟಿಗೆ ಸ್ವತಂತ್ರ ಅರ್ಥಶಾಸ್ತ್ರವನ್ನೂ ನಿರ್ಮಿಸಿರುತ್ತೇವೆ, ಕೆಲವರು ಆ ಮಾರ್ಗವನ್ನನುಸರಿಸುತ್ತಲೂ ಇದ್ದಾರೆ. ಅಂಥಾ ಪರಿಸ್ಥಿತಿಯಲ್ಲಿ ನಾವು ಇತರರಲ್ಲಿ ಪ್ರಭಾವವನ್ನುಂಟುಮಾಡದಿದ್ದರೆ, ಮುಂದೆ ಅವರೆ ನಮ್ಮನ್ನು ತಮ್ಮ ಪ್ರಭಾವದಿಂದ ವಶೀಕರಣಮಾಡುವ ದಿನವೊಂದು ಒದಗಬಹುದು. ಆದಕಾರಣ ವಸ್ತ್ರಸ್ವಾವಲಂಬನೆಯ ಕೆಲಸವನ್ನು ನಾವು ಸಾಧಿಸುತ್ತಿರುವಾಗಲೇ ಸಮಾಜವು, ಮುಖ್ಯವಾಗಿ ಹಳ್ಳಿಜನರು. ಸಾಮೂಹಿಕ ದೃಷ್ಟಿಯಿಂದ ಇಡೀ ಗ್ರಾಮದ ವಿಚಾರವನ್ನು ಹೇಗೆ ಮಾಡಬಹುದು, ನಾವು ನಮ್ಮ ನಮ್ಮ ಕ್ಷೇತ್ರಗಳಲ್ಲಿ ನಮ್ಮ ಹಳ್ಳಿಗಳ ಸಮಸ್ಯೆಗಳನ್ನು ಹೇಗೆ ಸರಿಪಡಿಸಬಹುದು, ಇತ್ಯಾದಿಯ ದೃಷ್ಟಿಕೋಣವನ್ನೂ ಇಡಬೇಕು. ಆದಕ್ಕಾಗಿ ಕತಾಯಿ ಮಂಡಲಗಳು ಎಷ್ಟರಮಟ್ಟಿಗೆ ಪರಿಣಾಮವನ್ನುಂಟುಮಾಡಬಲ್ಲವು ಎಂಬ ಯೋಜನೆಯನ್ನೂ ನಾವು ಶೋಧಿಸಿಕೊಳ್ಳಬೇಕು.

(ಹಿಂದೀ 'ಕತಾಯಿ ಮಂಡಲ ಪತ್ರಿಕೆ' ಯಿಂದ ಅನುವಾದಿಸಿದ್ದು)

ಶ್ರೀ ಅಣ್ಣಾ ವಾ. ಸಹಸ್ರ ಬುದ್ಧೆಯವರ ಮೇಲಿನ ಲೇಖದಿಂದ, ನಮ್ಮ ಗ್ರಾಮ ಜೀವನದಲ್ಲಿ ಸ್ವಯಂಪೂರ್ಣತೆಯು ಏಕೆ ಆಗಬೇಕೆಂಬುದು ವ್ಯಕ್ತವಾಯಿತು. ನಮ್ಮ ದೇಶದ ಆರ್ಥಿಕ ಸ್ಥಿತಿಯು ಸುಧಾರಣೆಹೊಂದಬೇಕೆಂದು ಸರ್ವ ಪಕ್ಷದವರೂ ಯತ್ನಿಸುತ್ತಾರೆ. ಆದಕ್ಕಾಗಿ ನಮ್ಮ ದೇಶದ ಹಣಕಾಸನ್ನೂ ಹೊರದೇಶಕ್ಕೆ ಕಳುಹಿಸುವುದನ್ನು ನಿಲ್ಲಿಸುವುದೊಂದೇ ಸಾಲದು. ಭಾರತವು ಕೃಷಿ ಪ್ರಧಾನ ದೇಶ. ಅದರಲ್ಲಿ ಏಳು ಲಕ್ಷ ಹಳ್ಳಿಗಳಿವೆ. ಹಳ್ಳಿಯ ಜನರು ಕೃಷಿಯ ಹೊರತು ಅನೇಕ ಗ್ರಾಮೋದ್ಯೋಗ ಮತ್ತು ಗುಡಿ ಕೈಗಾರಿಕೆಗಳಿಂದಲೂ ನಮ್ಮ ದೇಶದಲ್ಲಿ ಜೀವನಕ್ಕೆ ಅಗತ್ಯವಿರುವ ವಸ್ತುಗಳನ್ನೂ ತಯಾರಿಸುತ್ತಾರೆ. ಅಂಥಾ ವಸ್ತುಗಳನ್ನು ಆಯಾಯ ಹಳ್ಳಿಯ ಜನರು ತಮ್ಮಲ್ಲೆ ಮೊದಲು ಉಪಯೋಗಿಸಬೇಕು. ಭಂಡವಾಳ ಶಾಹಿಯವರಿಂದ ಯಂತ್ರೋದ್ಯೋಗಗಳ ಮೂಲಕ ಪಟ್ಟಣಗಳಲ್ಲಿ ತಯಾರಾಗುವ ವಸ್ತುಗಳನ್ನೂ, ವಿಶೇಷತಃ ಆಹಾರ ಮತ್ತು ಉಡಿಗೆ ತೊಡಿಗೆಗಳ ವಸ್ತುಗಳನ್ನಾದರೂ, ಬಹಿಷ್ಕರಿಸಲಿಕ್ಕೇಯತ್ನಿಸಬೇಕು. ಅದಕ್ಕಾಗಿ ಸಂಕಲ್ಪಿಸಿದರೆ, ಒಂದು ವಾತಾವರಣವನ್ನು ನಿರ್ಮಿಸಬಹುದು; ಒಮ್ಮೆ ಲೆ ತಮ್ಮ ನಿರ್ಧಾರವನ್ನು ಕಾರ್ಯತಃ ಸಫಲಗೊಳಿಸಲು ಅವರಿಗೆ ಸುಲಭವಾಗುವುದು. ಆದಕಾರಣ ಯಾರಾದರೂ ಯಂತ್ರೋದ್ಯೋಗಗಳಿಂದಾಗುವ ಆಹಾರ ಮತ್ತು ಉಡಿಗೆಯ ವಸ್ತುಗಳನ್ನು ವರ್ಜಿಸಲು ಸಂಕಲ್ಪಿಸಿದರೆ, ಅಂಥವರು ತಮ್ಮ ವಿಳಾಸ ಇತ್ಯಾದಿ ಸಹಿತ, ಯಾವ ವಸ್ತುಗಳನ್ನೂ ಬಹಿಷ್ಕರಿಸಲು ನಿರ್ಧರಿಸಿದ್ದಾರೆಂಬುದನ್ನು ನಮಗೆ ತಿಳಿಸಿದ್ದಲ್ಲಿ, ಅವರ ಹೆಸರು 'ಕತಾಯಿ ಮಂಡಲ ಪತ್ರಿಕೆ' ಯಲ್ಲಿ ಪ್ರಕಟಿಸಲಾಗುವುದು.

ರಾಮಚಂದ್ರ ರಾವ್,
ಸಂಚಾಲಕ.

"ಗೋಪಾಲ ಭೇಷಜಾಶ್ರಮ" ಮಂಗಳೂರು-
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ ಎಂ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಪೆಶಿಯಲಿಸ್ಟರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಮದುವೆಯಾದ ಸ್ತ್ರೀಪುರುಷರ ಸಲುವಾಗಿ
ಬರೆಯಲ್ಪಟ್ಟ ಪುಸ್ತಕ

ಮಿತಸಂತತಿ

ಹುಟ್ಟುವ ಮಕ್ಕಳು ಆರೋಗ್ಯ ಸಂಪತ್ತು ಸೌಭಾಗ್ಯ ಮೊದಲಾದುವನ್ನು ಸಾಕಷ್ಟು ಪಡೆಯುವ ಹಾಗೆ ಹೆತ್ತವರು ಸಾಧಿಸಲಾಗುವಂತೆ ಅತ್ಯನುಕೂಲವಾದ ಪರಿಸ್ಥಿತಿ ಯಾವುದೋ ಅದರಂತೆ ದಂಪತಿಗಳು ಮಕ್ಕಳನ್ನು ಹೆರುವ ಹಾಗೆ ಅವಶ್ಯವಾದ ತತ್ವಗಳನ್ನು ಬೋಧಿಸುವ ನವೀನ ಪುಸ್ತಕ ಬೆಲೆ 0-6-0

ಗುಪ್ತರೋಗ ನಿವಾರಣೆ

ಜನನೇಂದ್ರಿಯಂಗಳಿಗೆ ಸಂಬಂಧಿಸಿರುವ ರೋಗಗಳು ಹಳ್ಳಿಹಳ್ಳಿಗಳಲ್ಲಿ ಪಸರಿಸುತ್ತಲೇ ಇವೆ ಇಂತಹ ರೋಗಗಳಿಂದ ನರಳುವ ಸ್ತ್ರೀಪುರುಷರ ಆರೋಗ್ಯ ರಕ್ಷಣೆಗಾಗಿ ಪ್ರಪಂಚದಲ್ಲಿನ ವಿದ್ವಾಂಸ ವೈದ್ಯರುಗಳ ಅನುಭವ ಸಿದ್ಧಾನುಭವ ಸೂಚಕ ಪುಸ್ತಕ ಬೆಲೆ 0-8-0

ಪ್ರತಿಗಳಿಗೂ, ಪುಸ್ತಕಗಳ ಯಾದಿಗೂ, ಬರೆಯಿರಿ.
ನವಭಾರತ ಪುಸ್ತಕ ಭಂಡಾರ ಉಡುಪಿ.

ಕಿರಿಯರಿಗೆ ಸ್ಪರ್ಧೆ

'ಚರಖಾ' ಎಂಬ ಹಸ್ತಲಿಖಿತ ಪತ್ರಿಕೆಯ ಸಂಚಾಲಕ ವರ್ಗದವರು ಅಖಿಲ ಕರ್ನಾಟಕದ ಕಿರಿಯರ ಸಾಹಿತ್ಯ-ಅಭಿರುಚಿಯ ಸಂಪತ್ತನ್ನು ಹೆಚ್ಚಿಸುವ ಹಾಗೂ ಪ್ರಚಾರಗೊಳಿಸುವ ಉದ್ದೇಶದಿಂದ ಒಂದು ಸ್ಪರ್ಧೆ ಏರ್ಪಡಿಸಿದ್ದಾರೆ. ಇಂತಹ ಸ್ಪರ್ಧೆಯಿಂದ ಕನ್ನಡ ಕಿರಿಯರೊಳಗೆ ಅನ್ಯೋನ್ಯ ಸ್ನೇಹ- ಸಂಘಟನಾ ಸ್ಫೂರ್ತಿಯೂ ಹೆಚ್ಚಬಹುದೆಂಬ ಆಸೆ ಇದೆ.

ತಮ್ಮ ದಿನನಿತ್ಯದ ವಿರಾಮ ವೇಳೆಯನ್ನು ಯಾವ ರೀತಿ ಕಳೆಯುವರೆಂಬುದು ಹಾಗೂ ಅವರಿಗೆ ಯಾವುದರಲ್ಲಿ ಹವ್ಯಾಸ [Hobby] ಇದೆ ಎಂಬುದನ್ನು ಕಾಲು ಕಾಸಿನ ಎರಡು ಪುಟಗಳಿಗೆ ಎಷ್ಟಕ್ಕೂ ಮೀರದಂತೆ ಜುಲೈ 31 ರೊಳಗೆ ಸುಸ್ಪಷ್ಟವಾಗಿ ಬರೆದು ಕಳುಹಿಸಬೇಕು.

ಇದಕ್ಕೆ 16 ವರ್ಷದ ಒಳಗಿನವರು ಮಾತ್ರ ಭಾಗವಹಿಸಬೇಕು. ಉತ್ತಮವೆಂದು ನಮ್ಮ ನಿರ್ಣಾಯಕರು ಕೊಡುವ ಬಹುಮಾನಕೆ ರೂ. 10/-ಮೌಲ್ಯದ ಪುಸ್ತಕಗಳನ್ನು ಕೊಡಲಾಗುವುದು. ಪ್ರವೇಶಧನವಿಲ್ಲ. ಸ್ಪರ್ಧೆಗೆ ಬಂದ ಬರಹಗಳಲ್ಲಿ ಉತ್ತಮವಾದವುಗಳನು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವದು. ಮಾತ್ರವಲ್ಲದೆ ಫಲಿತಾಂಶವನ್ನು ಕೂಡಾ ಪತ್ರಿಕೆಗಳ ಮೂಲಕ ತಿಳಿಸಲಾಗುವುದು. ಲೇಖನಗಳನ್ನು ಕಳುಹಿಸುವ ವಿಳಾಸ:-

ಕೆ. ಸತ್ಯೇಂದ್ರ ಶೆಣೈ,
"ಚರಖಾ" ಹಸ್ತಲಿಖಿತ ಪತ್ರಿಕೆ,
ಕೋರ್ಟುರಸ್ತೆ, ಉಡುಪಿ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 128/52

ವೆಂಕಟ್ರಮಣ ಬಡಕ್ಕಿಲ್ಲಾಯ —ವಾದಿ
ವ. ಕ್ತ್ರು
ರಂಗರಾಯ ಬಡಕ್ಕಿಲ್ಲಾಯ— ಪ್ರತಿವಾದಿ
ಇವರೊಳಗೆ

ಸದರಿ ಪ್ರತಿವಾದಿ ರಂಗರಾಯ ಬಡಕ್ಕಿಲ್ಲಾಯ, ಶಿವರಾಮಯ್ಯ ಬಡಕ್ಕಿಲ್ಲಾಯರ ಮಗ, ಕಾರ್ಕಳ ತಾಲ್ಲೂಕ ಕೆರೆಬೆಟ್ಟು ಗ್ರಾಮದಲ್ಲಿರುವವರೀಗೆ-

ವಾದಿಯು ಚಾಲಗೇಣಿ ಗೇಣಿ ಬಾಕಿ ಮತ್ತು ಆಸ್ತಿ ಸ್ವಾಧೀನತೆಗೆ ಕೇಳಿ ನಿಮ್ಮ ಮೇಲೆ ದಾಕಲು ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ-ತಾರೀಕು 28-7-1952ನೇ ಬೆಳಗ್ಗೆ 10 ಗಂಟೆಗೆ ತನ್ಕಿಗೆ ಇಟ್ಟಿರುವುದರಿಂದ ಸದರಿ ದಾವೆಯ ವಿಷಯದಲ್ಲಿ ನಿಮ್ಮ ಉತ್ತರವು ಇರುವದಾದರೆ ಅದನ್ನು ಸದರಿ ತಾರೀಕಿನಲ್ಲು ನೀವು ಸ್ವತಹಾ ಅಥವಾ ವಕೀಲರ ಮುಖಾಂತರ ಹಾಜರಾಗಿ ಜವಾಬುಮಾಡಿಕೊಳ್ಳಬಹುದಾಗಿಯು ತಪ್ಪಿದರೆ ಸದರಿ ದಾವೆಯು ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿಯೂ ಈ ಮೂಲಕ ನಿಮಗೆ ತಿಳಿಯಪಡಿಸಲಾಗುತ್ತದೆ.

A. N. S. Achar.
Advocate For Plaintiff.
KARKAL, 8-7-52.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

R. E. P No. 29/1952
in O. S. No 339/1918
of Udipi Dt Munsif Court

ಕುಪ್ಪ ಹೆಂಗ್ಸು —ಅರ್ಜಿದಾರಳು
ರಂಗು ಹೆಂಗ್ಸು ಕೂಡಾ 6 ಜನರು-ಎದುರು.

1. ರಂಗು ಹೆಂಗ್ಸು, ತುಂಗು ಹೆಂಗ್ಸಿನ ಮಗಳು. 2 ಲಕ್ಷ್ಮಿ ಹೆಂಗ್ಸು, 3 ಗಂಗು ಹೆಂಗ್ಸು, 4 ಶೇಷಿ ಹೆಂಗ್ಸು 1ನೇ ಎದುರಳು ರಂಗು ಹೆಂಗ್ಸಿನ ಮಕ್ಕಳು—

6 ಅಣ್ಣಯ್ಯ ಸೇರಿಗಾರ ಲಕ್ಷ್ಮಿ ಹೆಂಗ್ಸಿನ ಮಗ, ಉಡುಪಿ ತಾಲ್ಲೂಕು ಪೆರ್ಣಂಕಿಲ ಗ್ರಾಮದ ಪ್ಯಾಲಬೆಟ್ಟಿನಲ್ಲಿರುವವರು.

ಸದ್ರಿಯವರಿಗೆ ಈ ಮೂಲಕ ತಿಳಿಸುವುದೇನೆಂದ್ರೆ

ಸದ್ರಿ ಅಸ್ಲುದಾವೆಯಲ್ಲಿ ನಿಮ್ಮ ಕುಟುಂಬದ ಕಡರಿನ ಬಾಬ್ತು ಸ್ಥಿರಾಸ್ತಿ ಮತ್ತು ಸಲುವಳಿ ವಸೂಲು ಹಕ್ಕು ಯೇಲಂಗೆ ಅಪೇಕ್ಷಿಸಿ ಅರ್ಜಿದಾರಳು ದಾಖಲು ಮಾಡಿದ ಯೇಲಂ ಮುಸ್ತಿಹಾರಿನ ಶರ್ತ ನಿರ್ಣಯಿಸುವ ಕುರಿತು ಮತ್ತು ಸದ್ರಿ ಆಸ್ತಿ ನಗಲುವಳಿ ವಸೂಲು ಹಕ್ಕು ಯೇಲಂ ಸಮಯ ತನಗೆ Bid ಮ Set off ಪರ್ಮಿಶನ್ನ್ ಕೊಡಬೇಕೆಂದಾಗಿ ಕೊಟ್ಟ R. E. A. 400 1952ನೇ ಅರ್ಜಿಯರಿತು ಕೂಡಾ ಸಹ ಸರ್ವಿಸ ಪ್ರಕಾರ ನಿಮಗೆ ನೋಟೀಸು ಬಗ್ಗೆ ತಾ. 25-7-1952ಕ್ಕೆ ಇಟ್ಟಿದೆ, ಆ ಕುರಿತು ಆಕ್ಷೇಪವಿದ್ದರೆ ತಾ. 25-7 52ಕ್ಕೆ ಬೆಳಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಾಹರಣೆ ಕೊಡತಕ್ಕದ್ದು.

P. V. Upadhyaya
Vakil for Petr.

ತಾರೀಕು 17-7-52 ರಿಂದ

ವಾರದ ಭವಿಷ್ಯ

ತಾರೀಕು 23-7-52 ವರೆಗೆ

ಮೇಷ—ಕಾಲಹೋದಂತೆ ಪರಿಸ್ಥಿತಿಯು ಕನಿಷ್ಠವಾಗುತ್ತಾ ಬರುತ್ತದೆ. ಗ್ರಹ ಕಾಠಿಣ್ಯಗಳಿಂದಾಗಿ ನಿಮಗೆ ಮನೆಯು ನರಕವಾಗಿ ಕಾಣಿಸಬಹುದು. ಹೊರಗೂ ಒಳಗೂ ಕಲಹವಾದೀತು. ಯಾವ ಕಾರ್ಯವನ್ನು ಸಾಧಿಸಲೂ ನಿಮ್ಮಲ್ಲಿ ಧೈರ್ಯೋತ್ಸಾಹಗಳು ಲುಪ್ತವಾಗಿರುವವು. ಪಡಗ್ ಜನರಿಗೂ ಸೇವಕ ವರ್ಗದವರಿಗೂ ತಾ. 19-20-21 ಈ ದಿನಗಳು ಸ್ವಲ್ಪ ಸುಖದಾಯಿಗಳಾಗಿವೆ.

ವೃಷಭ—ಔದಾಸೀನ್ಯವನ್ನು ತೊರೆದು ಕಾರ್ಯರಂಗದಲ್ಲಿ ಧುಮುಕಿರಿ. ನಿಮ್ಮ ಬಯಕೆಯು ಅಲ್ಪಾಯಾಸದಿಂದ ಆದಷ್ಟು ಬೇಗ ಸಿದ್ಧಿಸಲಿದೆ. ನಿರೀಕ್ಷಿಸಿದುದಕ್ಕಿಂತಲೂ ಅಧಿಕವಾದ ಫಲವನ್ನು ಪಡೆವಿರಿ. ಜನತೆಯ ಸಹಕಾರ ದೊರೆಯದಿದ್ದರೂ ಅಸಹಾಯ ಶೂರ ಕರ್ಣನಂತೆ ನೀವು ಕಾರ್ಯ ಸಾಧಿಸಲಿರುವಿರಿ. ತಾ. 17, 18, 22, 23 ಈ ದಿನಗಳಲ್ಲಿ ನಿಮ್ಮ ಇಷ್ಟಾರ್ಥವು ಸಿದ್ಧಿಸುವದು.

ಮಿಥುನ—ಶಕ್ತಿಸಾಹಸಗಳು ನಿಮ್ಮಲ್ಲಿ ಸಾಕಷ್ಟಿಲ್ಲವಾದರೂ ಯುಕ್ತಿಯಿಂದ ಕಾರ್ಯವನ್ನು ಸಾಧಿಸಲು ಸಮರ್ಥರಿರುವಿರಿ. ನಿಮ್ಮ ಪ್ರಯತ್ನವು ವ್ಯರ್ಥವಾಗದು. ಆದರೆ ಚಂಚಲಚಿತ್ತರಾದ ನೀವು ಕರ್ತವ್ಯಮಗ್ನರಾಗುವುದು ಮಾತ್ರ ದುರ್ಲಭ. ಕುಟುಂಬದಲ್ಲಿನ ಅನಾರೋಗ್ಯದ ದೆಸೆಯಿಂದಾಗಿ ಹೆಚ್ಚಿನ ನಿಮ್ಮ ದುಡಿಮೆಯು ವೈದ್ಯರ ಕೈಸೇರುವದು. ತಾ. 19, 20, 21 ಈ ದಿನಗಳಲ್ಲಿ ಸುಖಭೋಗ ಲಾಭಗಳು ತೃಪ್ತಿಕರವಿದೆ.

ಕರ್ಕಟ—ಸಂದು ಹೋದ ದಿನಗಳಿಗಿಂತಲೂ ಇಂದಿನ ದಿನಗಳು ನಿಮಗೆ ಉತ್ತಮವಿವೆ. ಕೈಕೆಸರಾದರೆ ಬಾಯಿ ಮೊಸರಾದೀತೆಂಬಂತೆ ಶ್ರಮವಹಿಸಿ ದುಡಿಯಿರಿ. ನಿಮ್ಮ ದುಡಿಮೆಯು ಸಂಪೂರ್ಣ ಸಾರ್ಥಕವಾಗಲಿದೆ. ಕೆಲವೊಮ್ಮೆ ಕುಜನರ ಬಲೆಗೆ ಸಿಲುಕಿ ವ್ಯರ್ಥ ಧನಹಾನಿ ಜನಾಪವಾದಗಳಿಗೆ ಸಿಲುಕಲಿರುವಿರಿ. ತಾ. 17-18-22-23 ಈ ದಿನಗಳು ಅನುಕೂಲವಿವೆ.

ಸಿಂಹ—ಜನತೆಯ ಸಹಕಾರವೂ ಉತ್ತಮವಿರುವದು. ಮಾತ್ರವಲ್ಲ ನೀವೂ ಕೂಡ ಸ್ವಯಂ ಯಾವ ಕಾರ್ಯವನ್ನು ಸಾಧಿಸಲೂ ಶಕ್ತರಿರುವಿರಿ. ಹೀಗಿರುವಲ್ಲಿ ನಿಮ್ಮ ಸಂಕಲ್ಪಗಳು ಕ್ರಿಯಾರಂಭ ಮಾತ್ರದಿಂದಲೇ ಸಿದ್ಧಿಸಲಿರುವವು. ವಿನಾಕಾರಣ ವಾಕ್ಕಲಹ ಉಂಟಾಗುವ ಸಂಭವವಿದೆ. ಎಷ್ಟೇ ದುಡಿದರೂ ಖರ್ಚು ಕೂಡ ಅದರಂತೆ ಏರಲಿದೆ. ವಾರಾದಿಯ 5 ದಿನಗಳು ನಿಮಗನುಕೂಲವಿರುವವು.

ಕನ್ಯಾ—ಹಿಂದಿಗಿಂತ ನಿಮ್ಮ ಪರಿಸ್ಥಿತಿಯು ಈ ವಾರದಲ್ಲಿ ಕೊಂಚ ದಿಕ್ಕಟ್ಟಿಗೆ ಬರುವದು. ದೇಹಾಲಸ್ಯದ್ದೆಸೆಯಿಂದಲೂ ಆಕಸ್ಮಿಕ ಪ್ರವಾಸದಿಂದಲೂ ಹೆಚ್ಚಿನ ಕಷ್ಟನಷ್ಟಗಳಿಗೆ ಗುರಿಯಾಗಲಿರುವಿರಿ. ಉಷ್ಣ ಪಿತ್ತಪ್ರಕೋಪದಿಂದ ಪೀಡಿತರಾದ ನಿಮಗೆ ಆಪ್ತೇಷ್ಟರ ವಿರಹವೂ ಕೂಡ ಹೆಚ್ಚಿನ ದುಃಖದಾಯಿಯಾಗಲಿದೆ. ದಿನಯಾಪನೆಯು ಕಷ್ಟಸಾಧ್ಯವಾದೀತು. ವಾರಾಂತ್ಯದ 5 ದಿನಗಳು ಇತರ ದಿನಗಳಿಗಿಂತ ಉತ್ತಮವೆನಿಸುವವು.

ತುಲಾ—ಇಂದಿನ ಗೃಹಬಲವು ನಿಮ್ಮನ್ನು ಹಿಂದಿನ ದುಃಖಗಳಿಂದ ಮುಕ್ತರನ್ನಾಗಿ ಮಾಡುವದು. ನಿಮ್ಮ ಉನ್ನತ ಬಯಕೆಗಳು ಅಲ್ಪ ಪರಿಶ್ರಮದಿಂದ ಸಿದ್ಧಿಸಲಿದೆ. ಜನತೆಯ ಸಹಕಾರ ಆಪ್ತೇಷ್ಟರ ಸಹಾಯಗಳಿಂದ ಕೂಡಿದ ನಿಮಗೆ ಎಂತಹ ಮಹತ್ಕಾರ್ಯವೂ ಕೂಡ ತೃಣಸಮವೆನಿಸುವದು. ಆಕಸ್ಮಿಕ ಅಪಘಾತಗಳಿಗವಕಾಶವಿರುವುದರಿಂದ ವಾರಾದಿಯ 5 ದಿನಗಳನ್ನು ಜಾಗ್ರತೆಯಿಂದ ಕಳೆಯಿರಿ.

ವೃಶ್ಚಿಕ—ದೇಹಕ್ಕೆ ಸುಖವಿಲ್ಲವು ಮನಸ್ಸಿಗೆ ನೆಮ್ಮದಿಯಿಲ್ಲವು. ಇಂತಹ ಪರಿಸ್ಥಿತಿಯಲ್ಲಿ ಕಾಲ ಕಳೆಯತಕ್ಕ ನಿಮಗೆ ಯಾವ ಕಾರ್ಯವನ್ನು ಮಾಡಬೇಕು ಯಾವುದನ್ನು ಬಿಡಬೇಕೆಂಬ ವಿವೇಕ ಶಕ್ತಿಯೂ ಇಲ್ಲದಾಗುವದು. ಆದರಲ್ಲೂ ಕೂಡ ಮಿತಭಾಷಿಯಾಗಿದ್ದರೂ ಕಲಹ ಬೇರೆ ತಪ್ಪದೊಲ್ಲದು. ಹೀಗೆ ದಿನಗಳನ್ನು ಕಷ್ಟದಿಂದ ಕಳೆವಿರಾದರೂ ವಾರಾದಿಯ 2 ದಿನಗಳು ನಿಮ್ಮ ತನುಮನಗಳಿಗೆ ಸ್ವಲ್ಪ ಸುಖ ಶಾಂತಿಯನ್ನೀಯಲಿವೆ.

ಧನು—ನಿಮ್ಮ ಆದಾಯವು ಕಳೆದ ದಿನಗಳಂತಲ್ಲವಾದರೂ ಖರ್ಚಿಗಿಂತ ಹೆಚ್ಚಿನ ದುಡಿಮೆಯಿರುವುದರಿಂದ ಆರ್ಥಿಕ ಭಾಗದಲ್ಲಿ ನಿಶ್ಚಿಂತರಿರುವಿರಿ. ಸಮಾಜದಲ್ಲಿ ಸ್ಥಾನಮಾನಾದಿಗಳು ಲಭಿಸುವವು. ಗೃಹ ಕಾರ್ಯಗಳು ಬಹುಮಟ್ಟಿಗೆ ದೂರವಾಗುವವು. ಆದರೆ ಚಂಚಲವಾದ ಮನಸ್ಸು ಕುಮಾರ್ಗದತ್ತ ನಿಮ್ಮನ್ನು ಸೆಳೆವ ಸಂಭವವಿದೆ. ವಾರಾದಿಯ 5 ದಿನಗಳು ಸುಖಲಾಭ ಭೋಗದಾಯಿಗಳಿವೆ.

ಮಕರ—ಕಳೆದ ದಿನಗಳ ಪರಿಸ್ಥಿತಿಯು ಕಂಡು ನಿಮ್ಮ ಮೇಲೆ ಮುನಿಸಿಕೊಂಡಿಯೋ ಎಂಬಂತೆ ಈ ವಾರದಲ್ಲಿ ಬುಧ,ಶುಕ್ರರು ಸುಸ್ಥಾನವನ್ನು ಹೊಂದಿ ನಿಮ್ಮ ಕಾರ್ಯದಲ್ಲಿ ನೆರವಾಗಿರುವರು. ಆಕಸ್ಮಿಕ ಧನಲಾಭವಾಗುವದು. ಬಂಧು ಜನರು ನಿಮ್ಮನ್ನು ದೂರ ಮಾಡಿದರೂ ಮಿತ್ರವರ್ಗದವರು ಹತ್ತಿರ ಹಿಡಿವರು. ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ಇಂದಿನ ಪರಿಸ್ಥಿತಿಯು ನಿಮಗನುಕೂಲವಿಲ್ಲವು. ವಾರಾಂತ್ಯದ 5 ದಿನಗಳು ಕೊಂಚ ಉತ್ತಮವೆನಿಸುವವು.

ಕುಂಭ—ದಿನಯಾಪನೆಯು ಕಷ್ಟವಾಗಲಿದೆ. ಸುತ್ತಲಿಂದಲೂ ಕೂಡ ವಿಪತ್ಪರಂಪರೆಗಳು ಬರಲಿವೆ. ಹಿಂತಲ್ಲಿ ನಿಲ್ಲಲು ಅವಕಾಶ ದೊರೆಯದು. ವಿಜಾತಿಯವರಿಂದ ಕಲಹವಾಗಲಿದೆ. ಪತ್ನೀಪುತ್ರರ ವಿರಹ ದುಃಖದಿಂದ ಪೀಡಿತರಾಗುವಿರಿ. ಹಣದ ಅಡಚಣೆಯಿಂದಾಗಿ ಜನರಿಗೆ ಮುಖತೋರಿಸಲು ನಾಚುವ ಪ್ರಸಂಗ ಬರಲಿದೆ. ವಾರಾದಿಯ 5 ದಿನಗಳು ಅತೀವ ಅನಿಷ್ಟಕರಗಳಾಗಿವೆ. ಜಾಗ್ರತೆ.

ಮೀನ—ನೌಕರಿ ಜನರಿಗೂ ವಿದ್ಯೋಪಜೀವೀ ಜನತೆಗೂ ಈ ವಾರವು ತೃಪ್ತಿಕರವಾಗಿರುವುದು. ಶ್ರಮಕ್ಕೆ ತಕ್ಕ ಫಲವು ತಾನಾಗಿ ಲಭಿಸುವದು. ಇತರ ದೋಷಗಳು ಹೆಚ್ಚಿಗೆ ಬಾಧಿಸವು. ಶ್ರಮಜೀವಿಗಳಿಗೂ ವ್ಯಾಪಾರೀ ವರ್ಗಕ್ಕೆ ಆಕಸ್ಮಿಕ ನಷ್ಟ ಸೋಲುಗಳುಂಟಾಗಲಿವೆ. ಹಗೆಯುವರು ಸಮಯ ನಿರೀಕ್ಷಿಸುತ್ತಿರುವರು ಪ್ರತೀಕಾರದ ಸಲುವಾಗಿ ಆದ್ದರಿಂದ ವಾರಾಂತ್ಯದ 5 ದಿನಗಳನ್ನು ಬಲು ಜಾಗರೂಕತೆಯಿಂದ ಕಳೆಯಿರಿ.

ಲಕ್ಷ್ಮೀ ಸಂತಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರದ ಕೃಚ್ಛ್ರ, ಮೂತ್ರದೊಡನೆಯೂ ಮುಂದಾಗಿ ಬಿಳುಪು, ಅರಸಿನ ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವದು, ತೊಡೆ ಸಂದಿನಲ್ಲಿ ಗರಳೆ ಬರುವದು. ಕಾಲುಗಂಟು ವೇದನೆ, ಕಣ್ಣಲ್ಲಿ ಕೀವು ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ, ಸ್ತ್ರೀಯರ ಬಿಳಿ ಸೆರಗು ಇವೆಲ್ಲಾ ಶೀಘ್ರವಾಗಿ ಗುಣ ಹೊಂದುವದು. ಇತ... ಈಗಿನ ಉಷ್ಣಕಾಲದಲ್ಲಿ ಗರ್ಭ... ...ರೆಂತ್ರ ಮಾಲು ಪಾಗ್ಯ ಒಂದು ಮಾತ್ರೆ ಸೇವಿಸಿ ಹಾಲು ಕುಡಿದರೆ ಸುಖ... ...ದೆ ಒಂದು ಸುಖವಿರೇಚನೆಯಾಗಿ ದೇಹದ ... ಹೋಗುವದು.

ಪ್ರತೀಸ 1ಕ್ಕೆ ರೂ. 2-0-0

ಏಜಂಟ್:

ಷಾ. ಕಂಪೆನಿ, ಮಂಗಳೂರು.

ಸಾರ್ವಜನಿಕರ ಉಪಯೋಗಕ್ಕಾಗಿ ಅಮೂಲ್ಯ ರತ್ನ ಪ್ರಯೋಗ!

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯದ ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೮ ದಿನದ ಲೇಹ್ಯ ರೂ ೫/೪, ೨೪ ದಿನದ ಲೇಹ್ಯ ರೂ ೩/೪ (ಪೋಸ್ಟೇಜು ಮಾಫಿ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನ ಎ. ರಾಮಸ್ವಾಮಿ ಅಯ್ಯರ್‌ರವರ

※ಸಂತಾನ ಸಿಂಧೂರ※

ಬಹಿಷ್ಠ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಠ ಸಂಬಂಧದ ಹೊಟ್ಟೆನೋವಿನಜೊತೆಗೆ ತಲೆನೋವು, ನಡುಸೆಳೆತ, ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ.

೩ ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ೧ ಸೆಟ್ ಅನುಪಾನಪತ್ರಿಕೆ ಮೇರೆ ಇಟ್ಟರೂ ಸೇವಿಸಿರಿ ಸಾಕು. ಶೋಭನವಾದ 15 16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾ ಪತ್ರಗಳನ್ನು ಪಡೆದಿದೆ.

ಕ್ರಯ:- ೧ ಸೆಟ್ 5 ರೂ ಪ್ಯಾಕಿಂಗ್ ಮತ್ತು ಟಪಾಲು ಖರ್ಚು ರೂ ೧. ವಿ. ಪಿ. ಇಲ್ಲ ಕ್ಯಾಟಲಾಗ್ ಉಚಿತ 6 ರೂ ಮನಿಆರ್ಡರ್ ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ: ಎ. ರಾಮಸ್ವಾಮಿ ಅಯ್ಯರ್ ಸನ್, (ಎ. ಆರ್. ವಿಶ್ವೇಶ್ವರೈಯ್ಯ)

Prop: ಸಂತಾನ ಸಿಂಧೂರ, 628 ಚಾಮರಾಜ ರೋಡ್ ಕ್ರಾಸ್, (ಸೀತಾ ವಿಳಾಸ ಛತ್ರದ ಹಿಂದೆ) ಮೈಸೂರು.

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ ಇವುಗಳಿಗೆ

ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಉಡುಪಿ.

ಯಾತ್ರಿಕರಿಗೂ ಪ್ರಯಾಣಿಕರಿಗೂ ಸರ್ವ ಅನುಕೂಲವಾಗುವಂತೆ ನಗರದ ಕೇಂದ್ರ ಭಾಗದಲ್ಲಿದೆ.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ, ರಥಬೀದಿ, ಉಡುಪಿ

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ ಶ್ರೀನಿವಾಸರಾವ್ ಕೃತ

ಆಂಗ್ಲ ಸ್ವಯಂಬೋಧಿನಿ.

ಬೆಲೆ ರೂ. 1-8-0, ವಿ. ಪಿ. ದ್ವಾರ ರೂ. 2-0-0

ಡಾ| ಕೊರಡ್ಕಲ್ ವೆಂಕಟರಾವ್ ಕೃತ

ಮನೆ ಮದ್ದು

ಸುಲಭ ಚಿಕಿತ್ಸೆಗಳು.

ಬೆಲೆ ರೂ. 2-0-0, ವಿ. ಪಿ. ದ್ವಾರ ರೂ 2-10-0

ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published By K. H. Shetty at the Navayuga Press, Udipi, S. India.

Regd. No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪನೆ
31 ನೆಯ ವರ್ಷ

24-7-1952

Founder: Sri A. B. Shetty
Minister for Medical & Public Health

ನವಯುಗ
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ

ಸಾರ್ವಜನಿಕ ಆರೋಗ್ಯ ಮಂತ್ರಿ ಶ್ರೀ ಎ.ಬಿ. ಶೆಟ್ಟರಿಂದ ಸ್ಥಾಪಿತವಾದುದು.

ನವಯುಗ

ನವಯುಗ
ಪೋಸ್ಟ್ ಬಾಕ್ಸ್ ನಂಬ್ರ 22
ಉಡುಪಿ ದ. ಕ.

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧ ವಾರ ೪೬

NAVAYUGA WEEKLY Post Box No. 22 UDIPI. Vol 31 No. 46

ಮಧುಪರ್ಕ

ಸಾಧುವೊಬ್ಬನು ಮಾರ್ಗದಲ್ಲಿ ಭಿಕ್ಷೆ ಬೇಡುತ್ತಾ ಸಾಗುತ್ತಿದ್ದಾಗ, ಗೂಳಿಯೊಂದು ಇದಿರಾಯಿತು. ಮದವೇರಿದ್ದುದರಿಂದ ಗೂಳಿ ಸಾಧುವಿನ ಮೇಲೆ ಹಾಯ್ದುಬೀಳಲು ಸನ್ನದ್ಧಗೊಂಡು, ಮುಖತಗ್ಗಿಸಿ ಎರಡು ಹೆಜ್ಜೆ ಹಿಂದೆ ಸರಿಯಿತು.

ಸಾಧು ಬಡಪಾಯಿ ಆದರೂ ಮಹಾ ಪಂಡಿತ! ಎಂತಲೇ, "ಆಹಾ, ಗೂಳಿ ನನ್ನ ವಿದ್ವತ್ತಿಗೆ ಮನ್ನಣೆಕೊಟ್ಟು, ತಲೆ ಬಗ್ಗಿಸಿ, ಭಕ್ತಿ ತೋರಿಸುತ್ತಿದೆ" ಎಂದವನು ಸಂತಸಗೊಂಡ.

ಮರುಗಳಿಗೆಗೇ ಪರಿಸ್ಥಿತಿ ವಿಪರ್ಯಾಸಗೊಂಡಿತು: ಆ ಗೂಳಿ ಈ ಸಾಧು ಪಂಡಿತನ ಮೇಲೆ ನೆಗೆದು, ಮೊನಚಾದ ಕೊಂಬಿನಿಂದ ಚೆನ್ನಾಗಿ ತಿವಿದು, ನೆಲಕ್ಕೆ ಕೆಡವಿತು. ಮಹಾ ಪಂಡಿತನ ಸನ್ಮಾನವನ್ನು ಇಷ್ಟು ಚೆನ್ನಾದ ರೀತಿಯಲ್ಲಿ ಮದವೇರಿದ ಗೂಳಿ ನೆರವೇರಿಸಿತು!

ನೋಡಿ ತಿಳಿಯುವ ಬಗೆ

ಒಂದು ನೀಟಾದ ಕೋಲಿನ ತುಂಡನ್ನು ಅರ್ಧದಷ್ಟು ನೀರಿನಲ್ಲಿ ಮುಳುಗಿಸಿದರೆ—ಕೋಲು ನಡುವಿನಲ್ಲಿ ಮುರಿದು ಬಗ್ಗಿದಂತೆ ಕಾಣಿಸುವುದಿಲ್ಲವೆ? ಆದರೆ ಕೋಲಿನ ಈ ರೂಪವು ಸತ್ಯವಲ್ಲ. ನಿಜಕ್ಕೂ ಕೋಲು ಬಾಗಿರುವುದೆಂದು ನಾವು ತಿಳಿದರೆ, ಆಗ ನಮ್ಮ ವಿಚಾರವು ತಪ್ಪೆಂದು ಸಿದ್ಧವಾಗುವುದು. ಕೋಲನ್ನು ನೀರಿನಿಂದ ಹೊರಗೆ ತೆಗೆದೊಡನೆಯೇ, ಅದು ಮೊದಲಿನಂತೆಯೇ ನೀಟಾಗಿರುವುದನ್ನು ಕಾಣುತ್ತೇವೆ. ಇದರ ಬದಲಿಗೆ, ಒಂದು ಸೊಟ್ಟಾದ ಕೋಲನ್ನು ನೀರಿನಲ್ಲಿ ಮುಳುಗಿಸಿದರೆ, ಅದು ನೀಟಾಗಿ ಕಂಡುಬರುವುದೂ ಸಾಧ್ಯ.

ನಾವು ನೋಡುವ ಎಷ್ಟೋ ಜನರು ಹೀಗೆ ಕೋಲನ್ನು ಹೋಲುತ್ತಾರೆ. ಕೆಲವರು ನಿಜಕ್ಕೂ ಸತ್ಯಪ್ರಿಯರು; ಹಾಗೆಂದು ಅವರು ಕಾಣುವುದಿಲ್ಲ. ಕೆಲವರು ನೋಡಲಿಕ್ಕೆ ಸತ್ಯಪ್ರಿಯರು; ವಾಸ್ತವದಲ್ಲಿ ಮಾಯಾವಿಗಳು, ವಂಚಕರು! ಆದುದರಿಂದ ಬಾಹ್ಯ ಸ್ವರೂಪದ ಮೇಲೆ ನಾವು ವಿಶ್ವಾಸವನ್ನು ಇಡುವಾಗ ಎಷ್ಟು ಜಾಗ್ರತೆಯಿಂದಿದ್ದರೂ ಸಾಲದು. ಯಾರಾದರೊಬ್ಬನ ಕುರಿತು ಒಂದು ನಿಶ್ಚಿತಾಭಿಪ್ರಾಯಕ್ಕೆ ಬರುವ ಮುಂಚೆ ತುಂಬ ಜಾಣ್ಮೆಯಿಂದ ನಡೆದುಕೊಳ್ಳುವುದಗತ್ಯ.

ಲೋಕದ ಜನರ ನಡವಳಿಕೆಯಲ್ಲಿ ವೈವಿಧ್ಯವಿದೆ: ಯಾರು ಅಪಾತ್ರರೋ ಮತ್ತು ಅಧಿಕಾರಾನರ್ಹರೋ ಅವರೊಡನೆ ನಾವು ಬಗೆತನವನ್ನು ಬೆಳೆಸಕೂಡದು. ವಿಶ್ವಾಸ ತೋರಿಸುವುದು ಸಲ್ಲದು. ಎಷ್ಟೋ ಜನ ದಿ ಕತೆಯಲ್ಲಿ ಬರುವ, ಕುರುಬನ ಅಂಗಿಯನ್ನು ಧರಿಸಿ ಕುರಿಗಳಿಗೆ ಮೋಸಮಾಡಿದ ತೋಳದಂತೆ, ಭಯಂಕರ ಚರಿತ್ರರಿದ್ದರೂ ಸಂಭಾವಿತರಂತೆ ತೋರುವರು. ಇನ್ನೆಷ್ಟೋ ಜನರ ನಿಜಸ್ಥಿತಿ ಹುಲಿಯ ಚರ್ಮ ಹೊದ್ದುಕೊಂಡ ಕತ್ತೆಯಂತೆ ಸಾಧುವೇ ಆದರೂ, ನೋಡುವವರಿಗೆ ಭಯಂಕರ ಕಾಣುವುದು. ಇದರ ಫಲವಾಗಿ, ಬಾಹ್ಯಸ್ವರೂಪವನ್ನು ಕಂಡು ಮೋಹಿತರಾಗಿ, ವಿಶ್ವಾಸ ತೋರಿಸುವಂತೆಯೇ, ಕುಪಿತಗೊಂಡು, ಅಯೋಗ್ಯ ನಡವಳಿಕೆಗೆಳೆಸುವ ಪ್ರಸಂಗವೂ ಬರುವುದು.

ಒಬ್ಬನೊಬ್ಬ ಶ್ರೀಮಂತ ಕವಿಯನ್ನು ನೋಡುವ ಉತ್ಕಟೇಚ್ಛೆಯಿಂದ ರಾಜನೊಬ್ಬ ನಡುರಾತ್ರಿಯಲ್ಲಿದ್ದು, ಹಿಂದಿನ ಕಿಟಕಿಯಿಂದ ಕವಿಯ ಮನೆಯನ್ನು ಹೊಕ್ಕನಂತೆ: ಇದೇ ರೀತಿ ಯಾರಾದರೂ ನಮ್ಮ ಮನೆಯನ್ನು ಪ್ರವೇಶಿಸಿದರೆ, ನಾವೇನು ತಿಳಿಯುತ್ತೇವೆ. ನಿಶ್ಚಯವಾಗಿಯೂ ಆಗಂತುಕನು ಕಳ್ಳನಿರಬೇಕೆಂದು ಯೋಚಿಸಿ, ಚೆನ್ನಾಗಿ ಥಳಿಸುವುದಿಲ್ಲವೆ? ಆದರೆ ಇಲ್ಲಿಯ ಕವಿಯು ಬುದ್ಧಿವಂತನು. ರಾಜನು ಏಕಾಗಿ ಕಿಟಕಿ ಹಾರಿಬಂದನೆಂಬುದನ್ನು ವಿಚಾರಿಸಿ ನೋಡುವ ಮನಸ್ಸು ಅವನದಿತ್ತು. ಘಟನೆಯ ಬಾಹ್ಯ ಸ್ವರೂಪವನ್ನಲ್ಲ, ಆಂತರಂಗಿಕ ರಹಸ್ಯವನ್ನು ಅರಿತುಕೊಳ್ಳುವ ಅಪೇಕ್ಷೆ ಅವನಿಗಾದುದರಿಂದ—ಯಾವುದೇ ಬಗೆಯ ಅವಸರದ ನಿರ್ಣಯಕ್ಕೆ ಬಾರದೆ, ರಾಜನನ್ನು ಸತ್ಕರಿಸಿ, ಇಚ್ಛಾಪೂರ್ತಿಮಾಡಿ, ಕಳುಹಿಸಿಕೊಟ್ಟನು.

ಸಾಮಾನ್ಯವಾಗಿ ಉಳಿದ ಜನರ ಅವಗುಣಗಳ ಕಡೆಗೆ ಮಾತ್ರ ಕಣ್ಣಿಡುವುದರಿಂದ ನಾವು ಹಾಳಾಗುತ್ತೇವೆ. ಪ್ರತಿಯೊಬ್ಬನಲ್ಲಿಯೂ ಒಂದಲ್ಲ ಒಂದು ಬಗೆಯ ದೋಷ ಇದ್ದೇ ಇದೆ. ತನ್ನ ಲೋಪದೋಷಗಳನ್ನು ಇತರರು ಸ್ಪಷ್ಟವಾಗಿ ಕಂಡುಕೊಂಡಾರೇ ಹೊರತು, ತಾನಾಗಿ ಅವುಗಳನ್ನು ತಿಳಿದಿರುವುದು ಕಷ್ಟಸಾಧ್ಯ. ಯಾರಿಗಾದರೂ ನಾವು ಕಡಿಮೆ ಅನ್ಯಾಯಮಾಡಲು ಬಯಸುವುದಿದ್ದರೆ, ಅವರ ದೋಷಗಳನ್ನೆಣಿಸದೆ, ಒಳ್ಳೆಯತನವನ್ನಷ್ಟೆ ಗ್ರಹಿಸುವುದು ಮೊದಲನೆಯ ಹೆಜ್ಜೆ. ಮುಖದ ಒಂದು ಮಗ್ಗುಲಲ್ಲಿ ಸಿಡುಬಿನ ಕಲೆ ಇರುವವನನ್ನು ಇನ್ನೊಂದು ಮಗ್ಗುಲಿನಿಂದಷ್ಟೇ ನೋಡಿ, ಆನಂದಿಸುವ ಬುದ್ಧಿ ನಮಗೆ ಬಂದರೆ, ಲೋಕ ಒಳ್ಳೆಯದಾಗಿ ಕಾಣಿಸುವುದು.

ನಮ್ಮ ಸಹಪಾಠಿಗಳಲ್ಲಿ ಬುದ್ಧಿಹೀನರು ಮತ್ತು ಆಲಸಿಗಳೆಂದು ತೋರಿದವರೇ ನಾಳೆ ಅತ್ಯುತ್ತಮ ವಿಧಾಯಕ ಕಾರ್ಯಕರ್ತರೆಂದು ಕೀರ್ತಿ ಪಡೆಯುವರು. ಶಿಸ್ತು ಭಂಗಕ್ಕೆ ಎಡೆಕೊಡದ ಹಾಗೂ ಕಠೋರ ನಿಯಮಾವಳಿಯಿಂದ ಬೆದರಿಸುವ ನಿಮ್ಮ ಅಧ್ಯಾಪಕರು, ನಿಮ್ಮ ಉನ್ನತಿಗಾಗಿ ಎಷ್ಟು ಕಳಕಳಿ ಪಡುತ್ತಿರುವರೆಂಬುದನ್ನು ಮತ್ತು ನಿಮ್ಮನ್ನು ಹೇಗೆ ಪ್ರೀತಿಸುವರೆಂಬುದನ್ನು ತಿಳಿದುಕೊಳ್ಳುವುದು ಸುಲಭದಲ್ಲಿಲ್ಲ. ನಮಗೆ ಹಳ್ಳಿಗನಂತೆ, ಅಸಭ್ಯನಂತೆ, ಸಹವಾಸಕ್ಕೆ ಅಯೋಗ್ಯನಂತೆ ಕಾಣುವಾತನೇ ಒಂದು ದಿನ ನಮ್ಮ ಪರಮ ಹಿತೈಷಿಯ ರೂಪದಲ್ಲಿ ನೆರವಾಗುತ್ತಾನೆ. ಎಷ್ಟೋ ಜನರು ಕೇವಲ ದುಷ್ಟರೆಂದು ತಿಳಿದು, ನಾವು ಅವರ ಸ್ನೇಹವನ್ನೇ ತೊರೆಯುತ್ತೇವೆ. ಆದರೆ ಅಂಥವರ ಹೃನ್ಮಂದಿರದಲ್ಲೂ ಪವಿತ್ರವಾದ ಸ್ಥಾನವೊಂದಿದ್ದೇ ಇದೆ—ಅದು ನಮಗೆ ಗೋಚರಿಸದಿದ್ದರೆ, ತಪ್ಪು ನಮ್ಮದು; ಅವರದಲ್ಲ.

ಮರದ ತುಂಡೊಂದು ಎಷ್ಟೇ ಕೆಟ್ಟ ಸ್ಥಿತಿಯಲ್ಲಿರಲಿ—ಅದನ್ನು ಕಟ್ಟಿಗೆಯಾಗಿ ಉಪಯೋಗಿಸಲಿಕ್ಕೆ ಬಡವಿ ಹಿಂದುಮುಂದು ನೋಡಲಾರಳು. ಸಾಮಾನ್ಯನೊಬ್ಬನು ಒಂದು ವಸ್ತುವನ್ನು ಪ್ರಯೋಜನಕ್ಕೆ ಬಾರದುದೆಂದು ತಿಳಿದು ಎಸೆದು ಬಿಟ್ಟಾನು. ಆದರೆ ಬಾಹ್ಯ ಸ್ವರೂಪದ ಸ್ಥಾನಕ್ಕೆ ಮಹತ್ವಕೊಡದ ಅಂತರಂಗ ಜಿಜ್ಞಾಸಾಕಾಂಕ್ಷಿಯು ಹಾಗೆ ಮಾಡಲಾರನು. ಎಸೆದುಬಿದ್ದ ವಸ್ತುವನ್ನು ಹೆಕ್ಕಿ ತೆಗೆದು, ಅದರಲ್ಲಿನ ದೋಷವೇನಾದರೂ ಇದ್ದರೆ, ಅದನ್ನು ನಿವಾರಿಸಿ, ಉಳಿದ ಒಳ್ಳೆಯ ಅಂಶವನ್ನು ಚೆನ್ನಾದ ರೀತಿಯಲ್ಲಿ ಆತನು ಬಳಸುವನು.

ಮನುಷ್ಯ ಕಾನೂನಿನ ದೃಷ್ಟಿಯಲ್ಲಿ ಅಪರಾಧಿಯಾಗಿದ್ದರೂ ದೈವಿಕ ದೃಷ್ಟಿಯಲ್ಲಿ ನಿರ್ದೋಷಿಯಾಗಿರುವುದುಂಟು. ಕೈದಿಗಳ ಗುಂಪೊಂದನ್ನು ಹಡಗಿನಿಂದ ಇಳಿಸುವಾಗ, ಕಾವಲಿನ ಭಟನೊಬ್ಬ ಕಾಲುಜಾರಿ ನೀರಿಗೆ ಬಿದ್ದನು. ಜೀವ ಸಂಕಟದಿಂದ ಅವನು ಬೊಬ್ಬೆಯಿಡುತ್ತಿದ್ದರೂ, ಯಾರಿಗೂ ಸಮುದ್ರದ ಅಪ್ಪಳಿಸುವ ಅಲೆಗಳ ನಡುವೆ ಧುಮುಕಿ, ಆ ಕಾವಲು ಭಟನ ಪ್ರಾಣ ಉಳಿಸುವ ಸಾಹಸವಾಗಲಿಲ್ಲ. ಇಂಥದರಲ್ಲಿ ಕರುಣಾಕ್ರಂದನದಿಂದ ಹೃದಯ ಕಲಕಿದ ಕೈದಿಯೊಬ್ಬ, ನೀರಿಗೆ ಹಾರಿ, ಕಾವಲು ಭಟನನ್ನು ರಕ್ಷಿಸಿದ. ಏಕೆ? ಜಗತ್ತಿನಲ್ಲಿ ಸಭ್ಯ ಜನರು ಈ ಕೈದಿಯನ್ನು ತಿರಸ್ಕಾರದಿಂದ

ಸರಿಯಾದ ಹೆಜ್ಜೆ! ಮಹತ್ವದ ಹೆಜ್ಜೆ!!

ಇತ್ತೀಚೆಗೆ ಮದ್ರಾಸು ಸರಕಾರವು ಸರಿಮಾರ್ಗದಲ್ಲಿ ಒಂದು ಮಹತ್ತರ ಹೆಜ್ಜೆಯನ್ನಿಟ್ಟಿದೆ. ನೀವಾದರೂ ನಿಮ್ಮ ಉಳಿತಾಯದಲ್ಲಿ ಸರಿಯಾದ ಹೆಜ್ಜೆಯನ್ನಿಡಬೇಕೆಂದು ನಾವು ನಿಮ್ಮ ಲಕ್ಷ್ಯವನ್ನೆಳೆಯುತ್ತೇವೆ. ನೀವು ಅದನ್ನು ನಿಮ್ಮ ಬ್ಯಾಂಕಿನಲ್ಲಿ ಹಾಕಿದರೆ ನಾವು ಕೊಡುವ ಬಡ್ಡಿಯಿಂದ ಅದು ಬೆಳೆಯುತ್ತದೆ. ಅಲ್ಲದೆ ಅದೇ ವೇಳೆಯಲ್ಲಿ ಅದು ಭೂಪ್ರಗತಿಯನ್ನುಂಟುಮಾಡುವ ಉತ್ಪಾದನಾ ಮತ್ತು ಸಾಹಸೋದ್ಯಮಗಳಿಗೆ ದೊರಕುವುದು. ಈ ಬ್ಯಾಂಕು ಪ್ರತಿನಿತ್ಯವೂ 50,000 ಜನರಿಗೂ ಮಿಕ್ಕಿ ಉಳಿಸಲಿಕ್ಕೆ ಸಹಕರಿಸುತ್ತಿದೆ. ದಕ್ಷಿಣ ಕನ್ನಡದ ನೀಲೇಶ್ವರ ಮತ್ತು ಕಿನ್ನಿಗೋಳಿಯಲ್ಲಿ ಇತ್ತೀಚೆಗೆ ಎರಡು ಹೊಸ ಶಾಖೆಗಳು ಇವರಿಂದ ತೆರೆಯಲ್ಪಟ್ಟಿವೆ.

ವಹಿವಾಟು ರೂ. 5,00,00,000 ಕ್ಕೂ ಮಿಕ್ಕಿದೆ.

ದಿ ಕೆನರಾ ಇಂಡಸ್ಟ್ರಿಯಲ್
ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ.

The Canara Industrial &
Banking Syndicate Limited.

ESTD: 1925 H. O: UDIPI.

ನಂಬಲಾಗದ ನಿಜ ಸಂಗತಿಗಳು

ಮನುಷ್ಯ ಬಲವನ್ನು ಧಿಕ್ಕರಿಸುವ ಕ್ಷುದ್ರಕೀಟಗಳ ಮಹಾ ಸಾಮರ್ಥ್ಯ

ಶ್ರೇಷ್ಠರು ಸಾಮಾನ್ಯನನ್ನು ಟೀಕಿಸುವಾಗ "ನರಹುಳು" ಎಂದೆನ್ನುವರಲ್ಲವೆ? ಹುಳ ಎಂಬುದು ಅಷ್ಟು ತಾತ್ಸಾರಕ್ಕೆ ತುತ್ತಾಗಿದೆ. ಈ ಕೀಟ ಜಾತಿಗೆ ಮನುಷ್ಯನ ದೃಷ್ಟಿಯಲ್ಲಿ ಏನೇನೂ ಮನ್ನಣೆಯಿಲ್ಲ. ಅವೆಲ್ಲ ಕ್ಷುದ್ರ ಜಂತುಗಳು. ಎಲ್ಲೋ ಒಬ್ಬ ಕವಿ ದಗ್ಧ ಪ್ರಣಯಕ್ಕೆ ಉಪಮೆ ಕೊಡುವಾಗ ದೀಪಕ್ಕೆರಗುವ ಪತಂಗದ ಸ್ಮರಣೆ ಮಾಡಿಯಾನು–ಅದಕ್ಕೂ ಹೆಚ್ಚು ನಾವು ಕೀಟ ಲೋಕದ ಬಗ್ಗೆ ಸಾಮಾನ್ಯವಾಗಿ ಪರಿಚಯ ಪಡೆದಿರುವುದಿಲ್ಲ. ಹಾಗೆಂದು ವೈಜ್ಞಾನಿಕ ದೃಷ್ಟಿಯಿಂದ ಕೀಟ ಲೋಕದ ಅಧ್ಯಯನ ಮಾಡಿದಾಗ ಮನುಷ್ಯನ ಶ್ರೇಷ್ಠತ್ವವನ್ನೆ ಪ್ರಶ್ನಿಸುವ ಕೀಟಾಣುಗಳ ಸಾಹಸದ ದೃಷ್ಟಾಂತಗಳು ಕಣ್ಣಿಗೆ ಬೀಳುತ್ತವೆ. ನೋಡಲಿಕ್ಕೆ ಮನುಷ್ಯನಿಗಿಂತ ಎಷ್ಟೋ ಸಣ್ಣದಿರುವ ಈ ಕ್ಷುಲ್ಲಕ ಪ್ರಾಣಿಗಳು ಸಾಮರ್ಥ್ಯ ಹಾಗೂ ಕೌಶಲ್ಯದ ಪ್ರಮಾಣದಲ್ಲಿ ಮನುಷ್ಯನನ್ನು ಅತ್ಯಧಿಕ ಮೀರಿಸುವುದೆಂದರೆ ಆಶ್ಚರ್ಯವೇ ಸೈ!

ನಮಗಿಂತ ಸುಖಿಗಳು

ಕೀಟಗಳ ಬದುಕನ್ನು ಧ್ಯಾನ ಪೂರ್ವಕ ವಿಮರ್ಶಿಸ ಹೊರಟರೆ, ಅವು ನಮಗಿಂತ ಎಷ್ಟೋ ಹೆಚ್ಚು ಸುಂದರವಿವೆ, ಸುಖದಿಂದಿವೆ ಮತ್ತು ಶಕ್ತಿಸಾಮರ್ಥ್ಯದಿಂದ ಕೂಡಿವೆ ಎಂಬ ಸಂಗತಿ ತಿಳಿಯುವುದು. ನಮಗೆ ಇದು ಮತ್ಸರವುಂಟುಮಾಡುವುದಿಲ್ಲವೆ? ಪತಂಗದ ಸೌಂದರ್ಯ ಮತ್ತು ಮಿಡಿತೆಯ ನೆಗೆಯುವ ಕೌಶಲ್ಯ ಇದಕ್ಕೆ ಉದಾಹರಣೆ. ಒಂದೊಂದೂ ಮಿಡಿತೆಯ ಗುಂಪು ಸಾವಿರಾರು ಎಕ್ರೆ ಸ್ಥಳದಲ್ಲಿ ಪೈರನ್ನು ನಾಶಗೊಳಿಸಬಲ್ಲುದು. ಮಲೇರಿಯಾದ ಸೊಳ್ಳೆಗಳು ಒಂದು ಪ್ರದೇಶದ ಜನಕ್ಕೆಲ್ಲ ಕಂಪನ ಹುಟ್ಟಿಸಬಲ್ಲುವು. ಸಾಂಕ್ರಾಮಿಕ ರೋಗಗಳನ್ನು ಹರಡುವ ಕೀಟಾಣುಗಳ ಸಾಮರ್ಥ್ಯವನ್ನು ವರ್ಣಿಸುವುದೇ ಅಸಾಧ್ಯ.–ಇವನ್ನೆಲ್ಲ ನೋಡಿದಾಗ ಮನುಷ್ಯನಲ್ಲಿ ಇಷ್ಟು ಬುದ್ಧಿ ಇದ್ದರೂ, ಅವನು ಅಸಹಾಯನಾಗಿ ಕೈಕಟ್ಟಿ ಕೂಡುವ ಪ್ರಸಂಗ ಬರುವುದು ತಪ್ಪಲ್ಲ ಎಂದೆನಿಸುತ್ತದೆ. ನಮ್ಮ ದುಃಖವನ್ನು ಹೆಚ್ಚಿಸುವುದೇ ಕೀಟಾಣುಗಳ ಹವ್ಯಾಸವಿರಬಹುದೇ ಎಂಬ ಆಶಂಕೆ ಮಾಡುವುದು ಸಹಜ

ಭೀಮನೂ ನಾಚಬೇಕು

ನೋಡುವ ಶಕ್ತಿ, ಕೇಳುವ ಶಕ್ತಿ ಮತ್ತು ಶರೀರದ ಗಾತ್ರದ ಅನುಪಾತದಿಂದ ಮಾಂಸಖಂಡಗಳ ಶಕ್ತಿಯು ಮನುಷ್ಯನಿಗಿಂತ ಕೀಟಾಣುಗಳಲ್ಲಿ ಅತ್ಯಧಿಕ ಪ್ರಮಾಣದಲ್ಲಿದೆ. ಮನುಷ್ಯನ ಭಾರವು ಒಂದೂವರೆ ಅಥವಾ ಎರಡು ಮಣಗಳ ನಡುವೆ. ಆದರೆ ಇಷ್ಟೇ ಭಾರವನ್ನು ಹೊರಬಲ್ಲ ಸಾಮರ್ಥ್ಯ ನಮ್ಮಲ್ಲಿ ಎಷ್ಟು ಮಂದಿಗಿದೆ? "ಮೋಲ್ ಕ್ರಿಕೆಟ್" ಎಂಬ ಜಾತಿಯ ಮಿಡಿತೆಯ ತೂಕ ಅತ್ಯಲ್ಪ, ಎಂದರೆ ೬ ಗ್ರೇನ್. ಆದರೆ ಅದು ತನಗಿಂತ ೩೦೦೦ ಪಾಲು ಹೆಚ್ಚು ಎಂದರೆ ೩ ರಾತಲು ೫ ಔನ್ಸು ತೂಕದ ಭಾರವನ್ನು ಅಲ್ಲಾಡಿಸಿ ಎತ್ತಬಲ್ಲುದು! ಇನ್ನೊಂದು ಜಾತಿಯ ಕೀಟ ತನ್ನ ಎತ್ತರಕ್ಕಿಂತ ೨೦೦ ಪಾಲು ಹೆಚ್ಚು ಎತ್ತರಕ್ಕೆ ನೆಗೆಯ ಬಲ್ಲುದು. ಇದೇ ಪ್ರಮಾಣದಿಂದ ಮನುಷ್ಯ ಹಾರಬಲ್ಲನಾದರೆ–ಎಷ್ಟು ಪ್ರಶಂಸೆಗೆ ಪಾತ್ರನಾಗುತ್ತಿದ್ದ! ಮಹಾಭಾರತದ ಭೀಮನಿಗೂ ಅಸಾಧ್ಯವಾದ ಕೆಲಸವಿದು.

ಅತ್ಯದ್ಭುತ ದೃಷ್ಟಿ

ದೃಷ್ಟಿ ಶಕ್ತಿಯೂ ಕೀಟಗಳ ಅದ್ಭುತದಲ್ಲ ಒಂದು: ಇದರ ಮುಂದೆ ಮನುಷ್ಯನ ಕಣ್ಣ ದೃಷ್ಟಿ ಎಷ್ಟು ಅಲ್ಪ ಎಂದೆನಿಸುವುದು. ರಾತ್ರಿ ಚರಿಸುವ ಕೀಟಾಣುಗಳ ಕಣ್ಣುಗಳು ಅತ್ಯಲ್ಪ ಮಂದ ಪ್ರಕಾಶವನ್ನು ಕೂಡ ಗ್ರಹಿಸುವಷ್ಟು ಸೂಕ್ಷ್ಮವಾಗಿ ನಿರ್ಮಿತವಾಗಿವೆ. ನೀರಲ್ಲಿ ನೆಲೆಸುವ ಕೆಲವೊಂದು ಕೀಟಗಳಲ್ಲಿ ಕಣ್ಣುಗಳ ಕೆಲವು ಜತೆಗಳಿವೆ: ಅವುಗಳಲ್ಲಿ ಕೆಲವು ಮೇಲೆ ತೆರೆದರೆ, ಇನ್ನು ಕೆಲವು ಕೆಳಗೆ ತೆರೆಯುತ್ತವೆ. ಇದರಿಂದ ಆ ಕೀಟವು ಒಂದೇ ಕಾಲಕ್ಕೆ ಮೇಲೆ ಕೆಳಗೆ ಎರಡೂ ಕಡೆ ನೋಡಬಲ್ಲುದು. ನೀರಿನ ಮೀನುಗಳಿಂದ ರಕ್ಷಣೆ ಪಡೆಯಲು ಬಹುಶಃ ಹಾರುತ್ತವೆ; ಒಡನೆಯೇ ಗಗನ ಮಂಡಲದ ಪಕ್ಷಿಗಣದಿಂದ ಪ್ರಾಣವುಳಿಸಲು ನೀರಲ್ಲಿ ಮುಳುಗೇಳುತ್ತವೆ. ನಮ್ಮ ನದಿ, ತೋಡು, ಕೆರೆಗಳಲ್ಲಿ ಈ ಕಣ್ಣು ಮುಚ್ಚಾಲೆಯಾಟ ಪ್ರತಿನಿತ್ಯ ನಡೆಯುತ್ತಿದ್ದರೂ, ನಾಗರಿಕ ಜೀವನದ ಭವ್ಯತೆಯಲ್ಲಿ ಮೈಮರೆತಿರುವ ನಮಗೆ, ಈ ಆನಂದ ಸವಿಯುವ ಅಗತ್ಯ ಕಂಡ ಬಂದಿಲ್ಲ.

ಘ್ರಾಣಶಕ್ತಿಯ ವೈಚಿತ್ರ್ಯ

ಘ್ರಾಣಶಕ್ತಿಯೂ ಅಸಾಧಾರಣ: ಕೀಟಗಳು ವಾಸನೆ ಎಷ್ಟೇ ಕಡಿಮೆ ಇದ್ದರೂ ಅದನ್ನು ಬಹುದೂರದಿಂದಲೇ ಆಘ್ರಾಣಿಸಿ, ಅಲ್ಲಿಗೆ ಧಾವಿಸಿ ಬರಬಲ್ಲುವು. ವಿಶಾಲ ಮೈದಾನಿನಲ್ಲಿ ಅಥವಾ ತೋಟದಲ್ಲಿ ಬಗೆ ಬಗೆಯ ಹೂಗಳಿಂದ ವಿವಿಧ ಪರಿಮಳ ಏಳುತ್ತಿದೆಯಷ್ಟೆ! ಕೀಟಗಳು ಈ ಪರಿಮಳಗಳಲ್ಲಿ ತನಗೆ ಬೇಕಾದುದನ್ನೇ ಅರಿಸಿ, ಆ ಹೂವಿನ ಬಳಿ ಸಾರಬಲ್ಲುವು. ಮಾಂಸಾಹಾರಿಗಳಾದ ಕೀಟಗಳೂ ತಮ್ಮ ಆಹಾರದ ಕೊಳ್ಳೆಯಿದ್ದಲ್ಲಿಗೆ ತುಂಬ ದೂರದಿಂದಲೇ ವಾಸನೆ ಹಿಡಿದು ಬರಬಲ್ಲುವು. ಒಂದು ತುಂಡು ಮಾಂಸವನ್ನು ಅಪಾರದರ್ಶಕವಾದ ಒಂದು ಲೋಟದೊಳಗಿಟ್ಟು, ಮುಚ್ಚಿದರೂ–ಕೆಲವೇ ಕ್ಷಣದಲ್ಲಿ ಮಾಂಸಾಹಾರಿ ಕೀಟಗಳ ಗುಂಪಿಗೆ ಗುಂಪೇ ಅಲ್ಲಿ ಬಂದು ಕೂಡುವುದು. ಕೇವಲ ಘ್ರಾಣಶಕ್ತಿಯ ವೈಚಿತ್ರ್ಯದಿಂದಲೇ ಇದು ಸಂಭವ.

ಸಾಧಾರಣವಾಗಿ ಇವು ವಾಸನೆ ನೋಡುವಾಗ ತಪ್ಪುವುದೆಂದಿಲ್ಲ. ಆದರೂ–ಒಂದೇ ಬಗೆಯ ಪರಿಮಳವು ಎರಡು ವಸ್ತುಗಳಿಂದ ಹೊರಟಾಗ–ಕೀಟಗಳು ತಪ್ಪಿಬೀಳುವುದುಂಟು. ಕೊಳೆತ ಮಾಂಸದಿಂದ ಆಕೃಷ್ಟಗೊಂಡು ಬಂದ ಕೆಲವು ಕೀಟಗಳು, ಸ್ಟೆಪೇರಿಯಾ ಎಂಬ ಹೂವಿನ ಮೇಲೆ ಬಂದೆರಗುವುದುಂಟು: ಇದಕ್ಕೆ ಕಾರಣ, ಈ ಹೂವಿನ ಪರಿಮಳವು ಕೊಳೆತ ಮಾಂಸದ ದುರ್ಗಂಧವನ್ನೆ ಬಹಳ ಬಿಡದೆ ಹೋಲುವುದು. ಹೀಗೆ ಮೋಸಹೋದ ಕೀಟಗಳು ತಮ್ಮ ಪರಿವಾರವನ್ನೆಲ್ಲ ಈ ಹೂವಿನ ಮೇಲೆ ನಿಲ್ಲಿಸಿಬಿಟ್ಟು, ತಾವೂ ಅಲ್ಲಿಗಾದರೂ ಹೊರಡುತ್ತದೆ. ಈ ಪರಿವಾರ ಮಾತ್ರ ಅನ್ನಭಾವಕ್ಕೆ ತುತ್ತಾಗಿ–ಪುಷ್ಪ... ಮೇಲೆಯೇ ಪ್ರಾಣಬಿಡುತ್ತದೆ!

ಕಿವಿಗಳ ಮೇಲೆ ಹತೋಟಿ

ಇಷ್ಟು ಸೂಕ್ಷ್ಮವಾದ ಘ್ರಾಣಶಕ್ತಿಯ ಜೊತೆಗೆ–ಶ್ರವಣಶಕ್ತಿಯೂ ಇಲ್ಲದಿಲ್ಲ. ಎಷ್ಟೋ ಕೀಟಗಳು ಧ್ವನಿಯಿಂದಾಕೃಷ್ಟಗೊಂಡು ಬರುವುವು. ಅವುಗಳಿಗೆ ಕೇಳುವ ಕಿವಿಗಳು ಇರಬೇಕೆಂಬ ಸಂಗತಿ ಸ್ವಯಂಸಿದ್ಧವಾದರೂ–ನಮಗಿದ್ದಂತೆ ಎರಡು ಕಿವಿಗಳಿರದೆ ಅನೇಕವಿವೆ. ಅಲ್ಲದೆ, ನಾವು ನಮ್ಮ ಸುತ್ತುಮುತ್ತಲು ಉಂಟಾದ ಎಲ್ಲ ಶಬ್ದಗಳಿಗೂ ಕಿವಿಗೊಡಬೇಕಾಗುತ್ತದೆ. ಕೇವಲ ಧ್ಯಾನಾಸಕ್ತರಾದ ಋಷಿ ಮುನಿಗಳು ಮಾತ್ರ ಕರ್ಣೇಂದ್ರಿಯವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬಲ್ಲರೋ ಏನೋ! ಆದರೆ, ಕೀಟಗಳು ಇದಕ್ಕೂ ಒಂದು ಹೆಜ್ಜೆ ಮುಂದಿವೆ. ತಮಗೆ ಬೇಕೆನಿಸಿದ ಧ್ವನಿಗಷ್ಟೆ ಅವು ಕಿವಿಗೊಡುವುವು ಹೊರತು–ಬೇಡಾದುದು ಕೇಳಿಸುವುದೇ ಇಲ್ಲ! ಜೇನುತೊಟ್ಟಿಯ ಅಸಂಖ್ಯ ನೊಣಗಳು ರಾಣಿಯು ಕಾದಾಟಕ್ಕೆಂದು ಆಹ್ವಾನಿಸುವಾಗ ಸಣ್ಣದಾಗಿ ಎಚ್ಚರಕೊಟ್ಟರೆ, ಸಾಕು; ಎಲ್ಲ ರಾಣಿಯ ಹಿಂದೆ ಬಂದು ಸೇರುತ್ತವೆ. ಗ್ರಹಣ ಶಕ್ತಿ ಇಷ್ಟೊಂದು ಸೂಕ್ಷ್ಮವಾಗಿದೆ! ಹಾಗೆಂದು, ಜೇನು ತೊಟ್ಟಿಯ ಪಕ್ಕದಲ್ಲಿಯೇ ನೀವು ಒಂದಲ್ಲ, ನಾಲ್ಕು ಬಾರಿ ಬೇಕಾದರೆ ಗುಂಡು ಹಾರಿಸಿರಿ – ಅವು ಕೂತಲ್ಲಿಂದ ಕದಲುವುದಿಲ್ಲ!

ತಣಿಯದ ಹಸಿವು

ಕೀಟಗಳ ಹಸಿವೆ ಬಹಳ ಹೆಚ್ಚು: ಇತರ ದೊಡ್ಡ ಮೈಯಿಂತಾದ ಪ್ರಾಣಿಗಳಲ್ಲಿ ಒಂದೇ ಅನ್ನಕೋಶವಿದ್ದು, ಅದರ ಗಾತ್ರವೂ ಬಹಳ ಸಣ್ಣದು. ಆದರೆ ಕೀಟಗಳಲ್ಲಿ ಸಾಮಾನ್ಯವಾಗಿ ಮೂರು ಅನ್ನಾಶಯಗಳಿವೆ. ಹೊಟ್ಟೆ ತುಂಬಿಸುವುದೊಂದೇ ಕೀಟಗಳ ಪ್ರಥಮ ಕರ್ತವ್ಯ. ಮಿಡಿತೆಗೆ ಹಲ್ಲು ಕಡಿಮೆ ಇರುವುದರಿಂದ–ಅದರ ಪಾಚನಶಕ್ತಿ ಇನ್ನಷ್ಟು ಅಧಿಕ. ಒಂದೇ ದಿನದಲ್ಲಿ ತನ್ನ ಶರೀರ ಭಾರದ ಮೂರು-ನಾಲ್ಕು ಪಟ್ಟು ಹೆಚ್ಚು ಆಹಾರವನ್ನು ಕಬಳಿಸಿಬಿಡುವ ಮಿಡಿತೆಗಳೂ ಇವೆ! ಇದೇ ಮಾದರಿಯನ್ನನುಸರಿಸಿ ಆನೆಯು ತಿನ್ನತೊಡಗಿದರೆ–ಭೂಮಂಡಲದ ಮೇಲಿನ ಅನ್ನ ಸಂಪತ್ತು ಕೆಲವೇ ದಿನಗಳಲ್ಲಿ ನಿಃಶೇಷಗೊಂಡೀತು. ಮನುಷ್ಯನಿಗೆ ಇಂಥ ಅಭ್ಯಾಸವಿದ್ದರೆ–ಹಸಿವು ಹಿಂಗಿಸಲು ಚಂದ್ರ, ಮಂಗಳ ಗ್ರಹಗಳ ಪ್ರಯಾಣಕ್ಕೆ ಎಂದೋ ಮಾರ್ಗ ಕಂಡುಕೊಳ್ಳುತಿದ್ದ!

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

OS 332/1950, R.E P 894/1951.

ಅರ್ಜಿದಾರ—ಸುಬ್ರಾಯ ಬಾತ್ರ

ಎದುರು—ಜಗನ್ನಾಥ ಶೆಟ್ಟಿ ಕೂಡಾ.

2ನೇ ಎದುರಿಗೆ ಈ ಮೂಲಕ ತಿಳಿಸುವದೇನೆಂದರೆ: 2ನೇ ಎದುರು ತಿಮ್ಮಪ್ಪ ಸೆಟ್ಟಿಯಾನೆ ಶೀನಪ್ಪ ಸೆಟ್ಟಿ, ಆಕ್ಯಂಮ ಸದ್ರಿ ಮಗ, ಕುಂದಾಪುರ ತಾಲ್ಲೂಕು ಮಚ್ಚಟ್ಟು ಗ್ರಾಮಸ್ಥ.

ಮೇಲ್ಕಂಡ ಅಮಲ್‌ಜಾರಿಯಲ್ಲಿ ಅರ್ಜಿದಾರನು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಆದುದರಿಂದ ಸದ್ರಿ ವಿಕ್ರಯದ ಉದ್ಘೋಷಣೆಯ ಶರ್ತಗಳನ್ನು ನಿರ್ಣಯಿಸಲಿಕ್ಕೆ ತಾರೀಕು 31-7-52ಕ್ಕೆ ಮುದ್ದತಾಗಿರುತ್ತದೆಯೆಂತ ಈ ಮೂಲಕ ತಿಳಿಸಲಾಗಿದೆ.

M. Ananthaya,
Advocate for Petitioner.
ತಾರೀಕು 14-7-52

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs 10 lacks.
3. Has granted an average dividend of 6% to the Shareholders for the past 20 years
4. Has a net work of Branches in South Kanara and one each in Mercara and Fort, Bombay.
5. Offers attractive rates of interest ... Deposits and Cash Certificates
6. Grants loans on easy terms to approved parties or on approved securities
7. Does afford full protection and rich return to all your monies.

ADOPT IT AS
"MY BANK"
THE VIJAYA BANK, LIMITED,
H. O., MANGALORE.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No 22/1952.

ಶೇಷಿ ಶೆಡ್ತಿ–ಸೂರಪ್ಪ ಶೆಟ್ಟಿ ವಿಧವೆ, ಉಡುಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಪಾಡಿಗಾರದಲ್ಲಿರುವವರು ... ... ಅರ್ಜಿದಾರಳು.

ಈ ಮೂಲಕ ಸಮಸ್ತರಿಗೂ ತಿಳುಹಿಸುವದೇನೆಂದರೆ–

ಅರ್ಜಿದಾರಳ ಗಂಡನು ತಾ. 20-2-1952ರಲ್ಲು ಒಂದು ಮೀಲು ಬರೆದಿಟ್ಟು ತಾ. 27-2-1952ರಲ್ಲು ಮರಣಪಟ್ಟಿರುತ್ತಾರೆ. ಸದ್ರಿ ಮೀಲು ಪ್ರಕಾರ ಅರ್ಜಿದಾರಳ ಗಂಡನ ಸ್ವಂತ ಸ್ವಾರ್ಜಿತದ ಬಾಬ್ತು ದಿ ಕರ್ನಾಟಕ ಬೇಂಕ್, ಲಿಮಿಟೆಡ್, ಸಂಸ್ಥೆಯ ಉಡುಪಿ ಶಾಖೆಯ ನಂಬ್ರ 98/51–ತಾ. 5-4-51ರ ಫಿಕ್ಸಡ್ ಡಿಪೊಜಿಟ್‌ನ ಮೈವೇಜು ರೂ 1000/- ವ ಅದರ ಮೇಲಣ ಬಡ್ಡಿ ರೂ 30/- ಕೂಡಾ ರೂ. 1030/-ನ್ನು ವಸೂಲು ಮಾಡುವರೆ ಅರ್ಜಿದಾರಳು ಅರ್ಹಳಾಗಿರುತ್ತಾಳೆ, ವ, ಹಾಗೆ ವಸೂಲು ಮಾಡುವರೆ ತನಗೆ ಸಕ್ಸೆಶನ್ ಸರ್ಟಿಫಿಕೇಟ್ ಕೊಡಬೇಕಾಗಿ ಮೇಲ್ಕಂಡ ಅರ್ಜಿಯನ್ನು ದಾಖಲ ಮಾಡಿರುತ್ತಾಳೆ. ಈ ಬಾಬಿನಲ್ಲಿ ಯಾರಿಗಾದರೂ ಆಕ್ಷೇಪವಿದ್ದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತಾ. 9-8-1952ರಲ್ಲು ಪೂರ್ವಾಹ್ನ 10 ಗಂಟೆಗೆ ಸ್ವತಹಾ–ಯಾ–ವಕೀಲರ ಮುಖಾಂತ್ರ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಮೇಲ್ಕಂಡ ಅರ್ಜಿಯನ್ನು ಅರ್ಜಿದಾರಳ ಅಪೇಕ್ಷೆ ಮೇರೆಗೆ ತೀರ್ಮಾನಿಸಲಾದೀತು

(By order of the Court)

U. B. Krishna Rao,
Advocate for the Petitioner
Dated:- 17-7-1952.

ನಿತ್ಯ ವ್ಯವಹಾರದಲ್ಲಿ ಸ್ವಾಸ್ಥ್ಯ ದೃಷ್ಟಿ

ದುರಾಚಾರ ಪೀಡೆಯನ್ನು ಕಡಿಮೆಮಾಡುವ ಬಗೆ

ನಮ್ಮ ಸಾರ್ವಜನಿಕ ಜೀವನದಲ್ಲಿ ಇಂದು ದುರಾಚಾರ ಮತ್ತು ಭ್ರಷ್ಟ ನಡವಳಿಕೆಗಳು ಹೆಚ್ಚಿವೆ ಎಂದು ಒಲವಾದ ಗುಲ್ಲೆದ್ದಿದೆ. ಸರಕಾರವನ್ನು ನಡೆಸುವ ಪಕ್ಷವೂ ಪ್ರತಿಪಕ್ಷದವರೂ ನಮ್ಮ ಸಿನ್ಮಂಥ ಜನಸಾಮಾನ್ಯರೂ- ಎಲ್ಲರೂ ನೈತಿಕ ಮಟ್ಟ ಕುಸಿದು ಬಿಟ್ಟಿದೆ ಎಂದು ದೂರುವವರೇ. ವಿವಿಧ ಉಪಾಯಗಳಿಂದ ಮಾಡಿದ ಅಪರಾಧಗಳನ್ನು ಮುಚ್ಚುವ ಮನಃಪ್ರವೃತ್ತಿಯನ್ನು ನಾವು ಎಲ್ಲೆಲ್ಲಿಯೂ ಕಾಣಬಹುದು. ಮಾಡಿದ ತಪ್ಪನ್ನು ಇನ್ನೊಬ್ಬರ ಮೇಲೆ ಹೊರಿಸಿ ಪಾರಾಗಲು ಹವಣಿಸುವುದು, ತಪ್ಪು ಮಾಡಿದ್ದರೂ ತಮ್ಮಿಂದೇನೂ ಘಟಿಸಲಿಲ್ಲವೆಂಬಂತೆ ಢೋಂಗು ಮಾಡುವುದು- ಇಂಥವೆಲ್ಲೆಲ್ಲ ಮುಳುಗೇಳುವ ಜನರೂ ಇಲ್ಲದಿಲ್ಲ. ಈ ರೀತಿ ಸಮಾಜದಲ್ಲಿ ಸರ್ವತ್ರ ದುರಾಚಾರವು ಹಬ್ಬಿಕೊಂಡಿದ್ದರೂ ಅದು ಎಲ್ಲ ಕಡೆ ಕಣ್ಣಿಗೆ ಮಾತ್ರ ಬೀಳದೆ, ಅಡಗಿರುತ್ತದೆ. ಇದರ ಜೊತೆಗೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವೆಂಬಂತೆ- ಈಗೀಗ ನಮ್ಮ ಜನ ಕಾರ್ಯಸಿದ್ಧಿಗೇನೇ ಮಹತ್ವ ಕೊಡತೊಡಗಿರುವರೇ ಹೊರತು- ಕಾರ್ಯಪ್ರಣಾಳಿಗಲ್ಲ. ಏನೇ ಇರಲಿ, ಹೇಗೇ ಇರಲಿ- ನಮ್ಮ ಕೆಲಸವನ್ನು ಪೂರೈಸುವುದೇ ಪುರುಷಾರ್ಥ ಹೊರತು- ಅದಕ್ಕಾಗಿ ನಾವು ಅನುಸರಿಸಿದ ಮಾರ್ಗ ದೋಷ ದೂರವಿದೆಯೇ- ಅಶ್ಯಕ್ತ[?]ಮಾದುದೇ ಎಂಬ ವಿಚಾರವೇ ಅನಗತ್ಯ, ಎಂದವರ ಸಿದ್ಧಾಂತ.

ಅಪರಾಧಿಯೊಡನೆ ಸಹಯೋಗ

ಸದ್ಯ ಸಮಾಜದಲ್ಲಿ, ಮಾಡಿದ ತಪ್ಪನ್ನು ಮುಚ್ಚಿಟ್ಟುಕೊಳ್ಳಲು ಎಷ್ಟೋ ಬಗೆಯ ಉಪಾಯಗಳೂ ಇವೆ: ಈ ಉಪಾಯಗಳನ್ನು ಜನಸಾಮಾನ್ಯರಿಗೆ ತಿಳಿಸಿ ಹೇಳುವುದರಿಂದಲೇ ಅನೇಕ ಮಂದಿ ಜೀವನ ಯಾಪನ ಮಾಡುತ್ತಾರೆ. ಎಷ್ಟೇ ಅಪರಾಧವನ್ನು ಮಾಡಿದ್ದರೂ-ಒಬ್ಬ ತರ್ಕ ನಿಪುಣನಾದ ವಕೀಲನಿದ್ದಲ್ಲಿಗೆ ಹೋದರೆ ಆತನು ತನ್ನ ವಾಕ್ಚಾತುರ್ಯದಿಂದ ಅಪರಾಧಿಯನ್ನು ದಂಡಮುಕ್ತನಾಗಿಸುವುದರಲ್ಲಿ ವಕೀಲ ಯಶಸ್ವಿಯಾಗಬಲ್ಲ. ಹಣಕ್ಕಾಗಿ ಅಪರಾಧಿಗಳಿಗೆ ವಕೀಲರೇ ದೇವರು! ಪೋಲೀಸರ ಕೃಪಾದೃಷ್ಟಿಯ ಪರಿಣಾಮವಾಗಿಯೂ ಹಲಕೆಲವು ಅಪರಾಧಗಳು ಪ್ರಕಟವಾಗದೆ ಉಳಿಯುವುದುಂಟು. ಡಾಕ್ಟರ ಜನರೂ ಕೆಲವು ಅಪರಾಧಿಗಳ (ವ್ಯಭಿಚಾರಿಗಳನ್ನು ಉದಾಹರಿಸಬಹುದು) ಮಾನ ಕಾಪಾಡುವುದರಲ್ಲಿ ಸಹಯೋಗ ನೀಡುವರು. ಇಷ್ಟು ಧರ್ಮದ ಹೆಸರಿನಲ್ಲಿಯೂ ಪಾಪಕಾಲನದ ಮಂತ್ರ ಹೇಳುವ ಪುರೋಹಿತರು ಇಲ್ಲದಿಲ್ಲ-ದಕ್ಷಿಣೆಗೆ ಕೈಯೊಡ್ಡಿ ಪ್ರಾಯಶ್ಚಿತ್ತ ಮಂತ್ರಗಳನ್ನು ಪಠಿಸಿ, ಅಪರಾಧಿಯನ್ನು ನಿರ್ದೋಷಿಯನ್ನಾಗಿಸುವುದಲ್ಲದೆ- ಪುಣ್ಯ ಸಂಚಯಕ್ಕೂ ಭಾಗಿಯನ್ನಾಗಿ ಮಾಡುವ ಮಹಾ ಸಾಮರ್ಥ್ಯ ಈ ಜನರಿಗಿದೆ.

ಚಿತ್ತ ಕ್ಷೋಭೆ

ಈ ಬಗೆಯ ಬಚಾವುಗಳ ಪರಿಣಾಮವೇನು? ಅಂಥ ವಿಶ್ವಾಸಿಗಳೂ ಮುಗ್ಧ ಜನರೂ—ಮಾಡಿದ ತಪ್ಪು ಕೆಲಸವನ್ನು ಪ್ರಾಯಶ್ಚಿತ್ತದಿಂದ ಸರಿಸುಗಿಸಲು ಬರುವುದೆಂದ ತಿಳಿದುಕೊಳ್ಳುವರು. ಇದು ಒಂದು ರೀತಿಯಿಂದ ಅಪರಾಧ ಪ್ರವೃತ್ತಿಯನ್ನು ಪೋಷಿಸುವುದಲ್ಲವೆ? ಹಾಗೆಯೇ ತಿಳಿದ ಜನರೂ— ವಕೀಲ ಡಾಕ್ಟರರ ನೆರವಿನಿಂದ ಎಲ್ಲ ದುರಾಚಾರವನ್ನೂ ಬಚ್ಚಿಟ್ಟುಕೊಳ್ಳಬಹುದೆಂದು ಖಂಡಿತವಾಗಿ ನಂಬಿರುವುದರಿಂದ, ಆ ರೀತಿಯಲ್ಲೂ ಅಪರಾಧಕ್ಕೆ ಉತ್ತೇಜನ ದೊರೆತಿದೆ. ಇವೆಲ್ಲ ಒಟ್ಟುಗೂಡಿ- ಇಂದು ಸಮಾಜದಲ್ಲಿ ಪ್ರತಿಯೊಂದೂ ವ್ಯವಹಾರಾಂಗದಲ್ಲಿ ಗುಪ್ತ ಅಪರಾಧಗಳು ತಾನೇ ತಾನಾಗಿ ಮೆರೆಯುತ್ತವೆ. ವ್ಯಕ್ತಿ ಮತ್ತು ಸಮಾಜ ಇವೆರಡರ ಸ್ವಾಸ್ಥ್ಯಕ್ಕೂ ಇದರಿಂದ ಬಾಧಕವಿದೆ ಎಂಬ ಸಂಗತಿಯನ್ನು ಉಪೇಕ್ಷಿಸುವವರೇ ಅಧಿಕ. ಬಹಿರಂಗವಾಗಿ ನಾವು ನಿರ್ದೋಷಿಗಳೆಂದು ಸಾರಿಕೊಳ್ಳಬಹುದಾದರೂ—ವ್ಯಕ್ತಿಗೆ ತಾನು ಮಾಡಿದ ತಪ್ಪಿನ ಪೂರ್ಣ ಪರಿಚಯವಿರುವುದರಿಂದ, ಆತ್ಮಗ್ಲಾನಿಯ ಭಾವನೆಯೇ ಅವನನ್ನು ಚರಿತ್ರ ಭ್ರಷ್ಟನನ್ನಾಗಿ ಮಾಡುವುದು. ರಾಜದಂಡ ಅಥವಾ ಲೋಕಾಪವಾದದಿಂದ ಮುಕ್ತನಾದ ಬಳಿಕವೂ ಅಪರಾಧಿಯು ಸ್ವಸ್ಥ ಚಿತ್ತನಾಗಿ ಇರಲಿಕ್ಕೆ ಸಾಧ್ಯವಿಲ್ಲ: ತಾನು ಮಾಡಿದ ಕೆಟ್ಟ ಕೃತ್ಯದ ನೆನಪು ಅವನನ್ನು ಪ್ರತಿಯೊಂದು ಹೆಜ್ಜೆಯಲ್ಲಿಯೂ ಧುತ್ತೆಂದು ಬಂದು ಕಾಡ ಹತ್ತುವದು. ಹೀಗೆ ಚಿತ್ತ ಕ್ಷೋಭೆಗೆ ಒಳಗಾದ ಮನುಷ್ಯನ ಭವಿಷ್ಯವನ್ನು ನರಕ ಸದೃಶವೆನ್ನಬಹುದಲ್ಲದೆ, ಬೇರೆಯಲ್ಲ.

ಸುಖ ಲಾಲಸೆಗೆ ಬಲಿ

ಸುಪ್ರಸಿದ್ಧ ಐರೋಪ್ಯ ಲೇಖಕಿ ಮೇರಿ ಕರೆಲೀಯ ಅಭಿಪ್ರಾಯದಂತೆ- "ಚರಿತ್ರಹೀನರ ಮಾನಸಿಕ ವೇದನೆಯು ನರಕ ಯಾತನೆಯ ಕಲ್ಪನೆಗಿಂತಲೂ ಅತಿ ಹೆಚ್ಚಿನದು." ಕವಿ ಶೇಕ್ಸ್‌ಪಿಯರನ "ಮ್ಯಾಕ್‌ಬೆತ್" ಎಂಬ ಕೃತಿಯಲ್ಲಿ ಈ ಬಗೆಯ ಮನಸ್ಸಿನ ಭೀಭತ್ಸ ಚಿತ್ರವನ್ನು ಯಾರೂ ಕಾಣಬಹುದು. ಅಮೋಘ ವರ್ಷನ ಪ್ರಶ್ನೋತ್ತರ ಮಾಲೆಯಲ್ಲಿ ಒಂದು ಕಡೆ ಹೀಗೆ ಹೇಳಿದೆ- "ಜೀವದಿಂದಿದ್ದಂತೆಯೇ ಮರಣ ಹೇಗೆ? ಮೂರ್ಖತನದಿಂದ. ಅಮೂಲ್ಯವೆನ್ನುವುದು ಯಾವುದನ್ನು? ಸಮಯದಲ್ಲಿ ಕೊಟ್ಟ ವಸ್ತುವನ್ನು. ಜೀವನ ಪರ್ಯಂತ ಹೃದಯದಲ್ಲಿ ಮುಳ್ಳಿನಂತೆ ಚುಚ್ಚುತ್ತಿರುವುದೇನು? ಮರೆಯಲ್ಲಿ ಮಾಡಿದ ಅಪರಾಧ."

ಅಪರಾಧಿಯ ಮನೋವೇದನೆಯೇ ಅವನನ್ನು ಅನೇಕ ದಿನಗಳ ವರೆಗೆ ಪೀಡಿಸುತ್ತಿರುವುದು ಇದು ಪ್ರಾಣವನ್ನೇ ಹಿಂಡಿ ತಿನ್ನುವ ಶಿಕ್ಷೆ. ಅಪರಾಧವು ಚಿಕ್ಕದಿರಲಿ, ದೊಡ್ಡದಿರಲಿ- ಪ್ರತಿಯೊಂದೂ ಮಾಡಿದವನ ವ್ಯಕ್ತಿತ್ವದ ಮೇಲೆ ತನ್ನ ಪ್ರಭಾವವನ್ನು ಬೀರಿಯೇ ತೀರುವುದು, ಗುಪ್ತ ರೋಗದೋಪಾದಿಯಲ್ಲಿ ಅದು ಸದಾ ಕಾಲ ಕೀಟಲೆ ಕೊಡುತ್ತಲೇ ಇರುವುದು. ಹೀಗೆ ಕ್ಷಣಿಕ ಸುಖದ ಲಾಲಸೆಗೆ ಗುರಿಯಾಗಿ ಜೀವನದ ಅನಂತ ಆನಂದವನ್ನು ಬಲಿಗೊಡುವುದು ಸರಿಯೇ?

ಕಲುಷಿತ ವಾತಾವರಣ

ಸಾಮಾಜಿಕ ಸ್ವಾಸ್ಥ್ಯದ ಮೇಲೆ ದುರಾಚಾರಗಳ ಪರಿಣಾಮವು ಅತ್ಯಂತ ಹೇಯವಿರುತ್ತದೆ. ಕೆರೆಯ ನೀರನ್ನು ಮೃತ್ಯುವಶಗೊಂಡ ಮತ್ಸ್ಯವೊಂದು ಕೆಡಿಸಿಬಿಡುವಂತೆ, ಅಪರಾಧಿಯು ಸಾಮಾಜಿಕ ನೈರ್ಮಲ್ಯವನ್ನೇ ಭಂಗಪಡಿಸುವುದು ನಿಶ್ಚಯ. ಪ್ರಕಟವಾಗಿ ಒಮ್ಮೆಲೇ ದುರಾಚಾರಗಳ ಪ್ರಭಾವವು ಕಣ್ಣಿಗೆ ಬೀಳುವುದಿಲ್ಲವಾದರೂ-- ಕ್ಷಯರೋಗದಂತೆ ಸಮಾಜವನ್ನು ಅದು ಬಾಧಿಸುತ್ತಿರುವ ಸಂಗತಿ ಅಲ್ಲಗಳೆಯಲು ಬರುವುದಿಲ್ಲ. ಸಮಾಜದಲ್ಲಿ, ನಿತ್ಯ ವ್ಯವಹಾರಗಳಲ್ಲಿ, ಗುಪ್ತರೂಪದಿಂದ ಮಾಡಿದ ಅಪರಾಧಿಗಳಿಗೆ ದೊರೆತ ಸುರಕ್ಷಿತತೆಯ ಭಾವದಿಂದಲೇ ಇನ್ನಷ್ಟು ದುರಾಚಾರಗಳಿಗೆ ಪ್ರೋತ್ಸಾಹವೂ ಸಿಗುವುದು.

ಒಂದು ದೃಷ್ಟಾಂತದಿಂದ ಇದನ್ನು ಸ್ಪಷ್ಟೀಕರಿಸಬಹುದು—ಜಪಾನಿನ ಗಲ್ಲಿಯೊಂದರಲ್ಲಿ ಯಾರದೋ ಹತ್ಯೆ ನಡೆಯಿತು. ಅಲ್ಲಿಯೇ ಬಳಿಯಲ್ಲಿದ್ದ ಒಬ್ಬ ಮಿತ್ರರನ್ನು ಕಾಣಲು ಗೃಹಸ್ಥನೊಬ್ಬ ಹೋದನು. ಮಿತ್ರ ಮಹಾಶಯನು ಆ ಸಮಯ ಕೋಪಾವಿಷ್ಟರಾಗಿದ್ದುದನ್ನು ಕಂಡು, ಗೃಹಸ್ಥನು ನಕ್ಕು ನುಡಿದ— "ಈಗ ನಿನ್ನ ಹತ್ತಿರದಲ್ಲಿ ನೀವೂ ಪಾಲುಗಾರ!" "ಆಶ್ಚರ್ಯಾನ್ವಿತನಾಗಿ ಮಿತ್ರನೆಂದ- "ಇದೇನ ಹೇಳುತ್ತೀರಿ! ನನಗೆ ಆ ವಿಷಯ ಪತ್ತೆಯೇ ಇಲ್ಲ. ಆ ಕೊಲೆ ಬಗ್ಗೆ ನಾನು ಹೋಗಿಯೂ ಇಲ್ಲ. ಇದು ಹೇಗೆ ಕೊಲೆಗೆ ನಾನು ಹೊಣೆಗಾರ?" "ಮತ್ತೇನಿಲ್ಲ- ಕೋಪಾವೇಶಗೊಂಡ ನಿಮ್ಮಂಥ ಸಜ್ಜನರು ವಾತಾವರಣವನ್ನು ನೀವು ಕಲುಷಿತಗೊಳಿಸಿದ್ದೀರಿ--ಕೊಲೆಪಾತಕಿಗೆ ಈ ಬಗೆಯ ದುಷ್ಟ ವಾತಾವರಣದಿಂದ ಸ್ವಲ್ಪವಾದರೂ ನೆರವು ದೊರೆತೇ ತೀರಿದೆ--ಅದಕ್ಕೇನೇ ಹಾಗೆ ನುಡಿದೆ" ಎಂದು ಗೃಹಸ್ಥ ಸಮಾಧಾನ ಹೇಳಿದ

[೧೦ನೇ ಪುಟನೋಡಿರಿ]

ತಡವಾಗಿ ಮುಟ್ಟಾಗುವಿಕೆಗಾಗಿ ಗಾಬರಿಯಾಗಬೇಡಿರಿ

'ಋತುರಾಜ'ವನ್ನು ಸೇವಿಸಿರಿ. ನಾಲ್ಕೈದು ತಿಂಗಳು ಮುಟ್ಟಾಗದಿದ್ದರೂ, ಒಡನೆಯೇ ಋತುಸ್ರಾವವಾಗುವುದು. ಮುಟ್ಟು ದೋಷದ ಇತರ ಗಂಡಾಂತರಗಳು ಕೂಡಾ 24 ತಾಸುಗಳೊಳಗೆ ಆಶ್ಚರ್ಯಕರವಾಗಿ ಪಾರಾಗುವುವು. ಇದಕ್ಕೆ ಸಂಶಯ ಬೇಡ.

ಕಿಮ್ಮತ್ತು—ರೂ. 7-8-0, ವಿ. ಪಿ ರೂ. 1. ಸ್ಪೆಶಲ್ ರೂ. 24 ವಿ. ಪಿ ರೂ. 1-12-0.

Binapani Oushadabalaya
15/1 Mooris Avenuel, Callcutta-33,
ಏಜಂಟ್:—ವೈದ್ಯ ಸಿ. ಆರ್. ಕಾಮತ್,

ನಡೆಯದ ನಾಣ್ಯ

ನೀವು ಆರೋಗ್ಯವಂತರಿದ್ದಾಗ ವಿಮೆ ಇಳಿಸಬಲ್ಲಿರಿ; ಆದರೆ, ಆರೋಗ್ಯ ಕೆಟ್ಟಾಗ, ನೀವು ವಿಮೆಯ ರಕ್ಷಣೆಯನ್ನು ಪಡೆಯಲಾರಿರಿ — ನಡೆಯದ ನಾಣ್ಯದಂತೆ ನಿಮ್ಮ ಆಗಿನ ಸ್ಥಿತಿ.

ಕಾರಣ, ನೀವು ವಿಮೆ ಇಳಿಸುವುದನ್ನು ಮುಂದೂಡಲಾಗದು. ಇಂದೇ ವಿಮೆ ಇಳಿಸಿ ನಿಮ್ಮ ಮತ್ತು ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ ಭಾರತ. ಸ್ಥಾಪನೆ: ೧೯೩೩

ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ

The Canara Mutual Assurance Co. Ltd.

Head Office: **UDIPI**, S. India.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ. ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಿಳಿ ಕೂದಲು ಕಪ್ಪಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಟಾಕಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ಮೂಲ್ಕಿ ಬೇಂಕ್.

ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರ ಬಡ್ಡಿಯಿಂದಲೂ ಜನಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

ನಂಬಲಾಗದ ನಿಜ ಸಂಗತಿಗಳು

ಮನುಷ್ಯ ಬಲವನ್ನು ಧಿಕ್ಕರಿಸುವ ಕ್ಷುದ್ರಕೀಟಗಳ ಮಹಾ ಸಾಮರ್ಥ್ಯ

ಶ್ರೇಷ್ಠರು ಸಾಮಾನ್ಯನನ್ನು ಹೀನೈಸುವಾಗ "ನರಹುಳು" ಎಂದೆನ್ನುವರಲ್ಲವೆ? ಹುಳ ಎಂಬುದು ಅಷ್ಟು ತಾತ್ಸಾರಕ್ಕೆ ತುತ್ತಾಗಿದೆ. ಈ ಕೀಟ ಜಾತಿಗೆ ಮನುಷ್ಯನ ದೃಷ್ಟಿಯಲ್ಲಿ ಏನೇನೂ ಮನ್ನಣೆಯಿಲ್ಲ. ಅವೆಲ್ಲ ಕ್ಷುದ್ರ ಜಂತುಗಳು. ಎಲ್ಲೋ ಒಬ್ಬ ಕವಿ ದಗ್ಧ ಪ್ರಣಯಕ್ಕೆ ಉಪಮೆ ಕೊಡುವಾಗ ದೀಪಕ್ಕೆರಗುವ ಪತಂಗದ ಸ್ಮರಣೆ ಮಾಡಿಯಾನು—ಅದಕ್ಕೂ ಹೆಚ್ಚು ನಾವು ಕೀಟ ಲೋಕದ ಬಗ್ಗೆ ಸಾಮಾನ್ಯವಾಗಿ ಪರಿಚಯ ಪಡೆದಿರುವುದಿಲ್ಲ. ಹಾಗೆಂದು ವೈಜ್ಞಾನಿಕ ದೃಷ್ಟಿಯಿಂದ ಕೀಟ ಲೋಕದ ಅಧ್ಯಯನ ಮಾಡಿದಾಗ ಮನುಷ್ಯನ ಶ್ರೇಷ್ಠತ್ವವನ್ನೆ ಪ್ರಶ್ನಿಸುವ ಕೀಟಾಣುಗಳ ಸಾಹಸದ ದೃಷ್ಟಾಂತಗಳು ಕಣ್ಣ ಮುಂದೆ ನಿಲ್ಲುತ್ತವೆ. ನೋಡಲಿಕ್ಕೆ ಮನುಷ್ಯನಿಗಿಂತ ಎಷ್ಟೋ ಸಣ್ಣದಿರುವ ಈ ಕ್ಷುಲ್ಲಕ ಪ್ರಾಣಿಗಳು ಸಾಮರ್ಥ್ಯ ಹಾಗೂ ಕೌಶಲ್ಯದ ಪ್ರಮಾಣದಲ್ಲಿ ಮನುಷ್ಯನನ್ನು ಅತ್ಯಧಿಕ ಮೀರಿಸುವುದೆಂದರೆ ಆಶ್ಚರ್ಯವೇ ಸೈ!

ನಮಗಿಂತ ಸುಖಿಗಳು

ಕೀಟಗಳ ಬದುಕನ್ನು ಧ್ಯಾನ ಪೂರ್ವಕ ವಿಮರ್ಶಿಸ ಹೊಂಟರೆ, ಅವು ನಮಗಿಂತ ಎಷ್ಟೋ ಹೆಚ್ಚು ಸುಂದರವಿವೆ, ಸುಖದಿಂದಿವೆ ಮತ್ತು ಶಕ್ತಿಸಾಮರ್ಥ್ಯದಿಂದ ಕೂಡಿವೆ ಎಂಬ ಸಂಗತಿ ತಿಳಿಯುವುದು. ನಮಗೆ ಇದು ಮತ್ಸರವುಂಟುಮಾಡುವುದಿಲ್ಲವೆ? ಪತಂಗದ ಸೌಂದರ್ಯ ಮತ್ತು ಮಿಡಿತೆಯ ನೆಗೆಯುವ ಕೌಶಲ್ಯ ಇದಕ್ಕೆ ಉದಾಹರಣೆ. ಒಂದೊಂದೂ ಮಿಡಿತೆಯ ಗುಂಪು ಸಾವಿರಾರು ಎಕ್ರೆ ಸ್ಥಳದಲ್ಲಿ ಪೈರನ್ನು ನಾಶಗೊಳಿಸಬಲ್ಲದು. ಮಲೇರಿಯಾದ ಸೊಳ್ಳೆಗಳು ಒಂದು ಪ್ರದೇಶದ ಜನಕ್ಕೆಲ್ಲ ಕಂಪನ ಹುಟ್ಟಿಸಬಲ್ಲವು. ಸಾಂಕ್ರಾಮಿಕ ರೋಗಗಳನ್ನು ಪಸರಿಸುವ ಕೀಟಾಣುಗಳ ಸಾಮರ್ಥ್ಯವನ್ನು ವರ್ಣಿಸುವುದೇ ಅನಗತ್ಯ. —ಇವನ್ನೆಲ್ಲ ನೋಡಿದಾಗ ಮನುಷ್ಯನಲ್ಲಿ ಇಷ್ಟು ಬುದ್ಧಿ ಇದ್ದರೂ, ಅವನು ಅಸಹಾಯನಾಗಿ ಕೈಕಟ್ಟಿ ಕೂಡುವ ಪ್ರಸಂಗ ಬರುವುದು ತಪ್ಪಿಲ್ಲ ಎಂದೆನಿಸುತ್ತದೆ. ನಮ್ಮ ದುಃಖವನ್ನು ಹೆಚ್ಚಿಸುವುದೇ ಕೀಟಾಣುಗಳ ಹವ್ಯಾಸವಿರಬಹುದೇ ಎಂಬ ಆಶಂಕೆ ಮಾಡುವುದು ಸಹಜ

ಭೀಮನೂ ನಾಚಬೇಕು

ನೋಡುವ ಶಕ್ತಿ, ಕೇಳುವ ಶಕ್ತಿ ಮತ್ತು ಶರೀರದ ಗಾತ್ರದ ಅನುಪಾತದಿಂದ ಮಾಂಸಖಂಡಗಳ ಶಕ್ತಿಯು ಮನುಷ್ಯನಿಗಿಂತ ಕೀಟಾಣುಗಳಲ್ಲಿ ಅತ್ಯಧಿಕ ಪ್ರಮಾಣದಲ್ಲಿದೆ. ಮನುಷ್ಯನ ಭಾರವು ಒಂದೂವರೆ ಅಥವಾ ಎರಡು ಮಣಗಳ ನಡುವೆ. ಆದರೆ ಇಷ್ಟೇ ಭಾರವನ್ನು ಹೊರಬಲ್ಲ ಸಾಮರ್ಥ್ಯ ನಮ್ಮಲ್ಲಿ ಎಷ್ಟು ಮಂದಿಗಿದೆ? "ಮೋಲ್ ಕ್ರಿಕೆಟ್" ಎಂಬ ಜಾತಿಯ ಮಿಡಿತೆಯ ತೂಕ ಅತ್ಯಲ್ಪ, ಎಂದರೆ ೩.೨ಗ್ರೇನ್. ಆದರೆ ಅದು ತನಗಿಂತ [illegible] ಪಾಲು ಹೆಚ್ಚು ಎಂದರೆ ೩.೦ ತೊಲ ೫ ಔನ್ಸು ತೂಕದ ಭಾರವನ್ನು ಅಲ್ಲಾಡಿಸಿ ಎತ್ತಬಲ್ಲುದು! ಇನ್ನೊಂದು ಜಾತಿಯ ಕೀಟ ತನ್ನ ಎತ್ತರಕ್ಕಿಂತ ೨೦೦ ಪಾಲು ಹೆಚ್ಚು ಎತ್ತರಕ್ಕೆ ನೆಗೆಯ ಬಲ್ಲುದು. ಇದೇ ಪ್ರಮಾಣದಿಂದ ಮನುಷ್ಯ ಹಾರಬಲ್ಲನಾದರೆ—ಎಷ್ಟು ಪ್ರಶಂಸೆಗೆ ಪಾತ್ರನಾಗುತ್ತಿದ್ದ! ಮಹಾಭಾರತದ ಭೀಮನಿಗೂ ಅಸಾಧ್ಯವಾದ ಕೆಲಸವಿದು.

ಅತ್ಯದ್ಭುತ ದೃಷ್ಟಿ

ದೃಷ್ಟಿ ಶಕ್ತಿಯೂ ಕೀಟಗಳ ಅದ್ಭುತದಲ್ಲ ಒಂದು: ಇದರ ಮುಂದೆ ಮನುಷ್ಯನ ಕಣ್ಣ ದೃಷ್ಟಿ ಎಷ್ಟು ಅಲ್ಪ ಎಂದೆನಿಸುವುದು. ರಾತ್ರಿ ಚರಿಸುವ ಕೀಟಾಣುಗಳ ಕಣ್ಣುಗಳು ಅತ್ಯಲ್ಪ ಮಂದ ಪ್ರಕಾಶವನ್ನು ಕೂಡ ಗ್ರಹಿಸುವಷ್ಟು ಸೂಕ್ಷ್ಮವಾಗಿ ನಿರ್ಮಿತವಾಗಿವೆ. ನೀರಲ್ಲಿ ನೆಲೆಸುವ ಕೆಲವೊಂದು ಕೀಟಗಳಲ್ಲಿ ಕಣ್ಣುಗಳ ಕೆಲವು ಜತೆಗಳಿವೆ: ಅವುಗಳಲ್ಲಿ ಕೆಲವು ಮೇಲೆ ತೆರೆದರೆ, ಇನ್ನು ಕೆಲವು ಕೆಳಗೆ ತೆರೆಯುತ್ತವೆ. ಇದರಿಂದ ಆ ಕೀಟವು ಒಂದೇ ಕಾಲಕ್ಕೆ ಮೇಲೆ ಕೆಳಗೆ ಎರಡೂ ಕಡೆ ನೋಡಬಲ್ಲುದು. ನೀರಿನ ಮೀನುಗಳಿಂದ ರಕ್ಷಣೆ ಪಡೆಯಲು ಆಕಾಶಕ್ಕೆ ಇವು ಹಾರುತ್ತವೆ, ಒಡನೆಯೇ, ಗಗನ ಮಂಡಲದ ಪಕ್ಷಿಗಣದಿಂದ ಪ್ರಾಣವುಳಿಸಲು ನೀರಲ್ಲಿ ಮುಳುಗೇಳುತ್ತವೆ. ನಮ್ಮ ನದಿ, ತೋಡು, ಕೆರೆಗಳಲ್ಲಿ ಈ ಕಣ್ಣಮುಚ್ಚಾಲೆಯಾಟ ಪ್ರತಿನಿತ್ಯ ನಡೆಯುತ್ತಿದ್ದರೂ, ನಾಗರಿಕ ಜೀವನದ ಭವ್ಯತೆಯಲ್ಲಿ ಮೈಮರೆತಿರುವ ನಮಗೆ, ಈ ಆನಂದ ಸವಿಯುವ ಅಗತ್ಯ ಕಂಡ ಬಂದಿಲ್ಲ.

ಘ್ರಾಣಶಕ್ತಿಯ ವೈಚಿತ್ರ್ಯ

ಘ್ರಾಣಶಕ್ತಿಯೂ ಅಸಾಧಾರಣ: ಕೀಟಗಳು ವಾಸನೆ ಎಷ್ಟೇ ಕಡಿಮೆ ಇದ್ದರೂ ಅದನ್ನು ಬಹುದೂರದಿಂದಲೇ ಆಘ್ರಾಣಿಸಿ, ಅಲ್ಲಿಗೆ ಧಾವಿಸಿ ಬರಬಲ್ಲವು. ವಿಶಾಲ ಮೈದಾನಿನಲ್ಲಿ ಅಥವಾ ಹೂತೋಟದಲ್ಲಿ ಬಗೆ ಬಗೆಯ ಹೂಗಳಿಂದ ವಿವಿಧ ಪರಿಮಳ ಏಳುತ್ತದೆಯಷ್ಟೆ! ಕೀಟಗಳು ಈ ಪರಿಮಳಗಳಲ್ಲಿ ತನಗೆ ಬೇಕಾದುದನ್ನೇ ಆರಿಸಿ, ಆ ಹೂವಿನ ಬಳಿ ಸಾರಬಲ್ಲವು. ಮಾಂಸಾಹಾರಿಗಳಾದ ಕೀಟಗಳೂ ತಮ್ಮ ಆಹಾರದ ಕೊಳ್ಳೆಯಿದ್ದಲ್ಲಿಗೆ ತುಂಬ ದೂರದಿಂದಲೇ ವಾಸನೆ ಹಿಡಿದು ಬರಬಲ್ಲುವು. ಒಂದು ತುಂಡು ಮಾಂಸವನ್ನು ಅಪಾರದರ್ಶಕವಾದ ಒಂದು ಲೋಟದೊಳಗಿಟ್ಟು, ಮುಚ್ಚಿದರೂ—ಕೆಲವೇ ಕ್ಷಣದಲ್ಲಿ ಮಾಂಸಾಹಾರಿ ಕೀಟಗಳ ಗುಂಪಿಗೆ ಗುಂಪೇ ಅಲ್ಲಿ ಬಂದು ಕೂಡುವುದು. ಕೇವಲ ಘ್ರಾಣಶಕ್ತಿಯ ವೈಚಿತ್ರ್ಯದಿಂದಲೇ ಇದು ಸಂಭವ.

ಸಾಧಾರಣವಾಗಿ ಇವು ವಾಸನೆ ನೋಡುವಾಗ ತಪ್ಪುವುದೆಂದಿಲ್ಲ. ಆದರೂ-ಒಂದೇ ಬಗೆಯ ಪರಿಮಳವು ಎರಡು ವಸ್ತುಗಳಿಂದ ಹೊರಟಾಗ—ಕೀಟಗಳು ತಬ್ಬಿಬ್ಬಾಗುವದುಂಟು. ಕೊಳೆತ ಮಾಂಸದಿಂದ ಆಕೃಷ್ಟಗೊಂಡು ಬಂದ ಕೆಲವು ಕೀಟಗಳು, ಸ್ಟೆವೇರಿಯಾ ಎಂಬ ಹೂವಿನ ಮೇಲೆ ಬಂದೆರಗುವುದುಂಟು: ಇದಕ್ಕೆ ಕಾರಣ, ಈ ಹೂವಿನ ಪರಿಮಳವು ಕೊಳೆತ ಮಾಂಸದ ದುರ್ಗಂಧವನ್ನೆ ಬಾಚೂ ಬಿಡದೆ ಹೋಲುವುದು. ಹೀಗೆ ಮೋಸಹೋದ ಕೀಟಗಳು ತಮ್ಮ ಪರಿವಾರವನ್ನೆಲ್ಲ ಈ ಹೂವಿನ ಮೇಲೆ ನಿಲ್ಲಿಸಿಬಿಟ್ಟು, ತಾವು ಎಲ್ಲಿಗಾದರೂ ಹೊರಡುತ್ತದೆ. ಈ ಪರಿವಾರ ಮಾತ್ರ ಅನ್ನಾಭಾವಕ್ಕೆ ತುತ್ತಾಗಿ—ಪುಷ್ಪಶಯ್ಯೆಯ ಮೇಲೆ ಪ್ರಾಣಬಿಡುತ್ತದೆ!

ಕಿವಿಗಳ ಮೇಲೆ ಹತೋಟಿ

ಇಷ್ಟು ಸೂಕ್ಷ್ಮವಾದ ಘ್ರಾಣಶಕ್ತಿಯ ಜೊತೆಗೆ—ಶ್ರವಣಶಕ್ತಿಯೂ ಇಲ್ಲದಿಲ್ಲ. ಎಷ್ಟೋ ಕೀಟಗಳು ಧ್ವನಿಯಿಂದಾಕೃಷ್ಟಗೊಂಡು ಬರುವುವು. ಅವುಗಳಿಗೆ ಕೇಳುವ ಕಿವಿಗಳು ಇರಬೇಕೆಂಬ ಸಂಗತಿ ಸ್ವಯಂಸಿದ್ಧವಾದರೂ—ನಮಗಿದ್ದಂತೆ ಎರಡು ಕಿವಿಗಳಿರದೆ ಅನೇಕವಿವೆ. ಅಲ್ಲದೆ, ನಾವು ನಮ್ಮ ಸುತ್ತುಮುತ್ತಲು ಉಂಟಾದ ಎಲ್ಲ ಶಬ್ದಗಳಿಗೂ ಕಿವಿಗೊಡಬೇಕಾಗುತ್ತದೆ. ಕೇವಲ ಧ್ಯಾನಾಸಕ್ತರಾದ ಋಷಿ ಮುನಿಗಳು ಮಾತ್ರ ಕರ್ಣೇಂದ್ರಿಯವನ್ನು ನಿಯಂತ್ರಣದಲ್ಲಿಟ್ಟುಕೊಳ್ಳ ಬಲ್ಲರೋ ಏನೋ! ಆದರೆ, ಕೀಟಗಳು ಇದಕ್ಕೂ ಒಂದು ಹೆಜ್ಜೆ ಮುಂದಿವೆ. ತಮಗೆ ಬೇಕೆನಿಸಿದ ಧ್ವನಿಗಷ್ಟೆ ಅವು ಕಿವಿಗೊಡುವುವು ಹೊರತು—ಬೇರಾವುದು ಕೇಳಿಸುವುದೇ ಇಲ್ಲ! ಜೇನುತೊಟ್ಟಿಯ ಅಸಂಖ್ಯ ನೊಣಗಳು ರಾಣಿಯು ಕಾದಾಟಕ್ಕೆಂದು ಆಹ್ವಾನಿಸುವಾಗ ಸಣ್ಣದಾಗಿ ಎಚ್ಚರಕೊಟ್ಟರೆ, ಸಾಕು; ಎಲ್ಲ ರಾಣಿಯ ಹಿಂದೆ ಬಂದು ಸೇರುತ್ತವೆ. ಗ್ರಹಣ ಶಕ್ತಿ ಇಷ್ಟೊಂದು ಸೂಕ್ಷ್ಮವಾಗಿದೆ! ಹಾಗೆಂದು, ಜೇನು ತೊಟ್ಟಿಯ ಪಕ್ಕದಲ್ಲಿಯೇ ನೀವು ಒಂದಲ್ಲ, ನಾಲ್ಕು ಬಾರಿ ಬೇಕಾದರೆ ಗುಂಡು ಹಾರಿಸಿರಿ—ಅವು ಕೂತಲ್ಲಿಂದ ಕದಲುವುದಿಲ್ಲ!

ತಣಿಯದ ಹಸಿವು

ಕೀಟಗಳ ಹಸಿವೆ ಬಹಳ ಹೆಚ್ಚು: ಕುದುರೆ ಮುಂತಾದ ಪ್ರಾಣಿಗಳಲ್ಲಿ ಒಂದೇ ಅನ್ನಕೋಶವಿದ್ದು, ಅದರ ಗಾತ್ರವೂ ಬಹಳ ಸಣ್ಣದು. ಆದರೆ ಕೀಟಗಳಲ್ಲಿ ಸಾಮಾನ್ಯವಾಗಿ ಮೂರು ಅನ್ನಾಶಯಗಳಿವೆ. ಹೊಟ್ಟೆ ತುಂಬಿಸುವುದೊಂದೇ ಕೀಟಗಳ ಪ್ರಥಮ ಕರ್ತವ್ಯ. ಮಿಡಿತೆಗೆ ಹಲ್ಲು ಕಡ ಇರುವುದರಿಂದ—ಅದರ ಪಾಚನಶಕ್ತಿ ಇನ್ನಷ್ಟು ಅಧಿಕ. ಒಂದೇ ದಿನದಲ್ಲಿ ತನ್ನ ಶರೀರ ಭಾರದ ನೂರು-ನಾಲ್ಕು ಪಟ್ಟು ಹೆಚ್ಚು ಆಹಾರವನ್ನು ಕಬಳಿಸಿಬಿಡುವ ಮಿಡಿತೆಗಳೂ ಇವೆ! ಇದೇ ಮಾದರಿಯನ್ನನುಸರಿಸಿ ಮನುಷ್ಯ ತಿನ್ನತೊಡಗಿದರೆ—ಭೂಮಂಡಲದ ಮೇಲಿನ ಅನ್ನ ಸಂಪತ್ತು ಕೆಲವೇ ದಿನಗಳಲ್ಲಿ ನಿಃಶೇಷಗೊಂಡೀತು. ಮನುಷ್ಯನಿಗೆ ಇಂಥ ಅಭ್ಯಾಸವಿದ್ದರೆ—ಹಸಿವು ಸಹಿಸದೆ ಚಂದ್ರ, ಮಂಗಳ ಗ್ರಹಗಳ ಪ್ರಯಾಣಕ್ಕೆ ಎಂದೋ ಮಾರ್ಗ ಕಂಡುಕೊಳ್ಳುತ್ತಿದ್ದ!

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

OS 332/1950, R.E.P 894/1951.

ಅರ್ಜಿದಾರ—ಸುಬ್ರಾಯ ಬೌತ್ರ

ಎದುರು—ಜಗನ್ನಾಥ ಶೆಟ್ಟಿ ಕೂಡಾ.

2ನೇ ಎದುರಿಗೆ ಈ ಮೂಲಕ ತಿಳಿಸುವದೇನೆಂದರೆ: 2ನೇ ಎದುರು ತಿಮ್ಮಪ್ಪ ಸೆಟ್ಟಿ ಯಾನೆ ಶೀನಪ್ಪ ಸೆಟ್ಟಿ, ಅಕ್ಕಂಮ ಸೆಟ್ಟಿ ಮಗ, ಕುಂದಾಪುರ ತಾಲ್ಲೂಕು ಮುಚ್ಚಟ್ಟು ಗ್ರಾಮಸ್ಥ.

ಮೇಲ್ಕಂಡ ಅಮಲ್‌ಜಾರಿಯಲ್ಲಿ ಅರ್ಜಿದಾರನು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಆದುದರಿಂದ ಸದ್ರಿ ವಿಕ್ರಯದ ಯಿಸ್ತಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ ತಾರೀಖು 31-7-52ಕ್ಕೆ ಮುಂದೋಡಲಾಗಿರುತ್ತದೆಯೆಂತ ಈ ಮೂಲಕ ತಿಳಿಸಲಾಗಿದೆ.

M. Ananthaya,
Advocate for Petitioner.

DO YOU KNOW?
THAT
THE VIJAYA BANK, LIMITED.

1. Was established in the year 1931 with Rs Eight thousand as its Paid up Capital.
2. Has now increased its Paid up Capital and reserves to Rs 10 lacks.
3. Has granted an average dividend of 6% to the Shareholders for the past 20 years
4. Has a net work of Branches in South Kanara and one each in Mercara and Fort, Bombay.
5. Offers attractive rates of interest on Deposits and C[illegible] Certificates
6. Grants loans on easy terms to approved parties or on approved securities
7. Does afford full protection and rich return to all your monies.

ADOPT IT AS
"MY BANK"
THE VIJAYA BANK, LIMITED,
H. O. MANGALORE.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No 22/1952.

ಶೇಷಿ ಶೆಡ್ತಿ—ಸೂರಪ್ಪ ಶೆಟ್ರ ವಿಧವೆ, ಉಡ್ಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಪಾಡಿಗಾರದಲ್ಲಿರುವವರು ... ... ಅರ್ಜಿದಾರಳು.

ಈ ಮೂಲಕ ಸಮಸ್ತರಿಗೂ ತಿಳುಹಿಸುವದೇನೆಂದರೆ—

ಅರ್ಜಿದಾರಳ ಗಂಡನು ತಾ. 20-2-1952 ರಲ್ಲಿ ಒಂದು ವೀಲು ಬರೆದಿಟ್ಟು, ತಾ. 27-2-1952 ರಲ್ಲಿ ಮರಣಪಟ್ಟಿರುತ್ತಾರೆ. ಸದ್ರಿ ವೀಲು ಪ್ರಕಾರ ಅರ್ಜಿದಾರಳ ಗಂಡನ ಸ್ವಂತ ಸ್ವಾರ್ಜಿತದ ಬಾಬ್ತು ದಿ ಕರ್ನಾಟಕ ಬೇಂಕ್, ಲಿಮಿಟೆಡ್, ಸಂಸ್ಥೆಯ ಉಡ್ಪಿ ಶಾಖೆಯ ನಂಬ್ರ 98/51—ತಾ. 5-4-51 ರ ಫಿಕ್ಸೆಡ್ ಡಿಪೋಜಿಟ್‌ನ ಬಾಬ್ತು ರೂ. 1000/- ವ ಅದರ ಮೇಲಿನ ಬಡ್ಡಿ ರೂ. 30/- ಕೂಡಾ ರೂ. 1030/-ನ್ನು ವಸೂಲು ಮಾಡುವರೆ ಅರ್ಜಿದಾರಳು ಅರ್ಹಳಾಗಿರುತ್ತಾಳೆ. ವ, ಹಾಗೆ ವಸೂಲು ಮಾಡುವರೆ ತನಗೆ ಸಾಕ್ಸೆಸನ್ ಸರ್ಟಿಫಿಕೇಟ್ ಕೊಡಿಸಬೇಕಾಗಿ ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿರುತ್ತಾಳೆ. ಈ ಬಾಬಿನಲ್ಲಿ ಯಾರಿಗಾದರೂ ಆಕ್ಷೇಪವಿದ್ದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತಾ. 9-8-1952 ರಲ್ಲಿ ಪೂರ್ವಾಹ್ನ 10 ಗಂಟೆಗೆ ಸ್ವತಹಾ-ಯಾ-ವಕೀಲರ ಮುಖಾಂತ್ರ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಮೇಲ್ಕಂಡ ಅರ್ಜಿಯನ್ನು ಅರ್ಜಿದಾರಳ ಅಪೇಕ್ಷೆ ಮೇರೆಗೆ ತೀರ್ಮಾನಿಸಲಾಗುವುದು.

(By order of the Court)

U. B. Krishna Rao,
Advocate for the Petitioner.
Dated:- 17-7-1952.

ನಿತ್ಯ ವ್ಯವಹಾರದಲ್ಲಿ ಸ್ವಾಸ್ಥ್ಯ ದೃಷ್ಟಿ

ದುರಾಚಾರ ಪೀಡೆಯನ್ನು ಕಡಿಮೆಮಾಡುವ ಬಗೆ

ನಮ್ಮ ಸಾರ್ವಜನಿಕ ಜೀವನದಲ್ಲಿ ಇಂದು ದುರಾಚಾರ ಮತ್ತು ಭ್ರಷ್ಟ ನಡವಳಿಕೆಗಳು ಹೆಚ್ಚಿವೆ ಎಂದು ಓಲವಾದ ಗುಲ್ಲೆದ್ದಿದೆ. ಸರಕಾರವನ್ನು ನಡೆಸುವ ಪಕ್ಷವೂ ಪ್ರತಿಪಕ್ಷದವರೂ ನಮ್ಮ ನಿಷ್ಕಾಂಥ ಜನಸಾಮಾನ್ಯರೂ— ಎಲ್ಲರೂ ನೈತಿಕ ಮಟ್ಟ ಕುಸಿದು ಬಿಟ್ಟಿದೆ ಎಂದು ದೂರುವವರೇ. ವಿವಿಧ ಉಪಾಯಗಳಿಂದ ಮಾಡಿದ ಅಪರಾಧಗಳನ್ನು ಮುಚ್ಚಿಡುವ ಮನಃಪ್ರವೃತ್ತಿಯನ್ನು ನಾವು ಎಲ್ಲೆಲ್ಲಿಯೂ ಕಾಣಬಹುದು. ಮಾಡಿದ ತಪ್ಪನ್ನು ಇನ್ನೊಬ್ಬರ ಮೇಲೆ ಹೊರಿಸಿ ಪಾರಾಗಲು ಹವಣಿಸುವುದು, ತಪ್ಪು ಮಾಡಿದ್ದರೂ ತಮ್ಮಿಂದೇನೂ ಘಟಿಸಲಿಲ್ಲವೆಂಬಂತೆ ಢೋಂಗು ಮಾಡುವುದು— [illegible]ಲ್ಲೆಲ್ಲ ಮುಖಗೇಡಿನ ಜನರೂ ಇಲ್ಲದಿಲ್ಲ. ಈ ರೀತಿ ಸಮಾಜದಲ್ಲಿ ಸರ್ವತ್ರ ದುರಾಚಾರವು ಹಬ್ಬಿಕೊಂಡಿದ್ದರೂ ಅದು ಎಲ್ಲ ಕಡೆ ಕಣ್ಣಿಗೆ ಮಾತ್ರ ಬೀಳದೆ, ಅಡಗಿರುತ್ತದೆ. ಇದರ ಜೊತೆಗೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವೆಂಬಂತೆ— ಈಗೀಗ ನಮ್ಮ ಜನ ಕಾರ್ಯಸಿದ್ಧಿಗೆನೇ ಮಹತ್ವ ಕೊಡತೊಡಗಿರುವರೇ ಹೊರತು— ಕಾರ್ಯಪ್ರಣಾಳಿಗಲ್ಲ. ಏನೇ ಇರಲಿ, ಹೇಗೇ ಇರಲಿ— ನಮ್ಮ ಕೆಲಸವನ್ನು ಪೂರೈಸುವುದೇ ಪುರುಷಾರ್ಥ ಹೊರತು— ಅದಕ್ಕಾಗಿ ನಾವು ಅನುಸರಿಸಿದ ಮಾರ್ಗ ದೋಷ ದೂರವಿದೆಯೋ— ಅತ್ಯುತ್ತಮವಾದುದೇ ಎಂಬ ವಿಚಾರವೇ ಅನಗತ್ಯ, ಎಂಬವರ ಸಿದ್ಧಾಂತ.

ಅಪರಾಧಿಯೊಡನೆ ಸಹಯೋಗ

ಸದ್ಯ ಸಮಾಜದಲ್ಲಿ, ಮಾಡಿದ ತಪ್ಪನ್ನು ಮುಚ್ಚಿಟ್ಟುಕೊಳ್ಳಲು ಎಷ್ಟೋ ಬಗೆಯ ಉಪಾಯಗಳೂ ಇವೆ: ಈ ಉಪಾಯಗಳನ್ನು ಜನಸಾಮಾನ್ಯರಿಗೆ ತಿಳಿಸಿ ಹೇಳುವುದರಿಂದಲೇ ಅನೇಕ ಮಂದಿ ಜೀವನ ಯಾಪನ ಮಾಡುತ್ತಾರೆ. ಎಷ್ಟೇ ಮಹಾಪರಾಧವನ್ನು ಮಾಡಿದ್ದರೂ—ಒಬ್ಬ ತರ್ಕ ನಿಪುಣನಾದ ವಕೀಲನಿದ್ದಲ್ಲಿಗೆ ಹೋದರೆ ಬಹುಶಃ ತನ್ನ ವಾಕ್ಚಾತುರ್ಯದಿಂದ ಅಪರಾಧಿಯನ್ನು ದಂಡಮುಕ್ತನಾಗಿಸುವುದರಲ್ಲಿ ವಕೀಲ ಯಶಸ್ವಿಯಾಗಬಲ್ಲ. ಪರಿಣಾಮವಾಗಿ ಅಪರಾಧಿಗಳಿಗೆ ವಕೀಲರೇ ದೇವರು! ಪೋಲೀಸರ ಕೃಪಾದೃಷ್ಟಿಯ ಪರಿಣಾಮವಾಗಿಯೂ ಹಲ ಕೆಲವು ಅಪರಾಧಗಳು ಪ್ರಕಟವಾಗದೆ ಉಳಿಯುವುದುಂಟು. ಡಾಕ್ಟರ ಜನರೂ ಕೆಲವು ಅಪರಾಧಿಗಳ (ವ್ಯಭಿಚಾರಿಗಳನ್ನು ಉದಾಹರಿಸಬಹುದ) ಮಾನ ಕಾಪಾಡುವುದರಲ್ಲಿ ಸಹಯೋಗ ನೀಡುವರು. ಇಷ್ಟು ಧರ್ಮದ ಹೆಸರಿನಲ್ಲಿಯೂ ಪಾಪಕ್ಷಾಲನದ ಮಂತ್ರ ಹೇಳುವ ಪುರೋಹಿತರು ಇಲ್ಲದಿಲ್ಲ—ದಕ್ಷಿಣೆಗೆ ಕೈಯೊಡ್ಡಿ ಪ್ರಾಯಶ್ಚಿತ್ತ ಮಂತ್ರಗಳನ್ನು ಓದಿ, ಅಪರಾಧಿಯನ್ನು ನಿರ್ದೋಷಿಯನ್ನಾಗಿಸುವುದಲ್ಲದೆ—ಪುಣ್ಯ ಸಂಚಯಕ್ಕೂ ಭಾಗಿಯನ್ನಾಗಿ ಮಾಡುವ ಮಹಾ ಸಾಮರ್ಥ್ಯ ಈ ಜನರಿಗಿದೆ.

ಚಿತ್ತ ಕ್ಷೋಭೆ

ಈ ಬಗೆಯ ಬಚಾವಣೆಗಳ ಪರಿಣಾಮವೇನು? ಅಂಥ ವಿಶ್ವಾಸಿಗಳೂ ಮೂಢಜನರೂ—ಮಾಡಿದ ತಪ್ಪು ಕೆಲಸವನ್ನು ಪ್ರಾಯಶ್ಚಿತ್ತದಿಂದ ಸರಿಪಡಿಸಲು ಬರುವುದೆಂದು ತಿಳಿದುಕೊಳ್ಳುವರು. ಇದು ಒಂದು ರೀತಿಯಿಂದ ಅಪರಾಧ ಪ್ರವೃತ್ತಿಯನ್ನು ಪೋಷಿಸುವುದಲ್ಲವೆ? ಹಾಗೆಯೇ ತಿಳಿದ ಜನರೂ—ವಕೀಲ ಡಾಕ್ಟರರ ನೆರವಿನಿಂದ ಎಲ್ಲ ದುರಾಚಾರವನ್ನೂ ಬಚ್ಚಿಟ್ಟುಕೊಳ್ಳಬಹುದೆಂದು ಖಂಡಿತವಾಗಿ ನಂಬಿರುವುದರಿಂದ, ಆ ರೀತಿಯಲ್ಲೂ ಅಪರಾಧಕ್ಕೆ ಉತ್ತೇಜನ ದೊರೆತಿದೆ. ಇವೆಲ್ಲ ಒಟ್ಟುಗೂಡಿ— ಇಂದು ಸಮಾಜದಲ್ಲಿ ಪ್ರತಿಯೊಂದೂ ವ್ಯವಹಾರಾಂಗದಲ್ಲಿ ಗುಪ್ತ ಅಪರಾಧಗಳು ತಾನೇ ತಾನಾಗಿ ಮೆರೆಯುತ್ತವೆ. ವ್ಯಕ್ತಿ ಮತ್ತು ಸಮಾಜ ಇವೆರಡರ ಸ್ವಾಸ್ಥ್ಯಕ್ಕೂ ಇದರಿಂದ ಬಾಧಕವಿದೆ ಎಂಬ ಸಂಗತಿಯನ್ನು ಉಪೇಕ್ಷಿಸುವವರೇ ಅಧಿಕ. ಬಹಿರಂಗವಾಗಿ ನಾವು ನಿರ್ದೋಷಿಗಳೆಂದು ಸಾರಿಕೊಳ್ಳಬಹುದಾದರೂ—ವ್ಯಕ್ತಿಗೆ ತಾನು ಮಾಡಿದ ತಪ್ಪಿನ ಪೂರ್ಣ ಪರಿಚಯವಿರುವುದರಿಂದ, ಆತ್ಮಗ್ಲಾನಿಯ ಭಾವನೆಯೇ ಅವನನ್ನು ಚರಿತ್ರಭ್ರಷ್ಟನನ್ನಾಗಿ ಮಾಡುತ್ತದೆ. ರಾಜದಂಡ ಅಥವಾ ಲೋಕಾಪವಾದದಿಂದ ಮುಕ್ತನಾದ ಬಳಿಕವೂ ಅಪರಾಧಿಯು ಸ್ವಸ್ಥಚಿತ್ತನಾಗಿ ಇರಲಿಕ್ಕೆ ಸಾಧ್ಯವಿಲ್ಲ; ತಾನು ಮಾಡಿದ ಕೆಟ್ಟ ಕೃತ್ಯದ ನೆನಪು ಅವನನ್ನು ಪ್ರತಿಯೊಂದು ಹೆಜ್ಜೆಯಲ್ಲಿಯೂ ಧುತ್ತೆಂದು ಬಂದು ಕಾಡಹತ್ತುವದು. ಹೀಗೆ ಚಿತ್ತಕ್ಷೋಭೆಗೆ ಒಳಗಾದ ಮನುಷ್ಯನ ಭವಿಷ್ಯವನ್ನು ನರಕಸದೃಶವೆನ್ನಬಹುದಲ್ಲದೆ, ಬೇರೆಯಲ್ಲ.

ಸುಖ ಲಾಲಸೆಗೆ ಬಲಿ

ಸುಪ್ರಸಿದ್ಧ ಐರೋಪ್ಯ ಲೇಖಕಿ ಮೇರಿ ಕರೆಲೀಯ ಅಭಿಪ್ರಾಯದಂತೆ— "ಚರಿತ್ರಹೀನರ ಮಾನಸಿಕ ವೇದನೆಯು ನರಕಯಾತನೆಯ ಕಲ್ಪನೆಗಿಂತಲೂ ಅತಿ ಹೆಚ್ಚಿನದು." ಕವಿ ಶೇಕ್ಸ್‌ಪಿಯರನ "ಮ್ಯಾಕ್‌ಬೆತ್" ಎಂಬ ಕೃತಿಯಲ್ಲಿ ಈ ಬಗೆಯ ಮನಸ್ಸಿನ ಬೀಭತ್ಸ ಚಿತ್ರವನ್ನು ಯಾರೂ ಕಾಣಬಹುದು. ಅಮೋಘ ವರ್ಣನ ಪ್ರಶ್ನೋತ್ತರ ಮಾಲಿಯಲ್ಲಿ ಒಂದು ಕಡೆ ಹೀಗೆ ಹೇಳಿದೆ- "ಜೀವದಿಂದಿದ್ದಂತೆಯೇ ಮರಣ ಕೇಗೆ? ಮೂರ್ಖತನವೆಂದು. ಅವಗಾಲ್ಯವೆನ್ನುವುದು ಯಾವುದನ್ನು? ಸಮಯದಲ್ಲಿ ಕೊಟ್ಟ ವಸ್ತುವನ್ನು. ಜೀವನ ಪರ್ಯಂತ ಹೃದಯದಲ್ಲಿ ಮುಳ್ಳಿನಂತೆ ಚುಚ್ಚುತ್ತಿರುವುದೇನು? ಮರೆಯಲ್ಲಿ ಮಾಡಿದ ಅಪರಾಧ."

ಅಪರಾಧಿಯ ಮಾನಸಿಕ ವೇದನೆಯೇ ಅವನನ್ನು ಅನೇಕ ದಿನಗಳವರೆಗೆ ಪೀಡಿಸುತ್ತಿರುವುದು ಇದು ಪ್ರಾಣವನ್ನೆ ಹರಿದು ತಿನ್ನುವ ಶಿಕ್ಷೆ. ಅಪರಾಧವು ಚಿಕ್ಕದಿರಲಿ, ದೊಡ್ಡದಿರಲಿ—ಪ್ರತಿಯೊಂದೂ ಮಾಡಿದವನ ವ್ಯಕ್ತಿತ್ವದ ಮೇಲೆ ತನ್ನ ಪ್ರಭಾವವನ್ನು ಬೀರಿಯೇ ತೀರುವುದು. ಗುಪ್ತರೋಗದೋಪಾದಿಯಲ್ಲಿ ಅದು ಸದಾಕಾಲ ಕೀಟಲೆಕೊಡುತ್ತಲೇ ಇರುವುದು. ಹೀಗೆ ಕ್ಷಣಿಕ ಸುಖದ ಲಾಲಸೆಗೆ ಗುರಿಯಾಗಿ ಜೀವನದ ಅನಂತ ಆನಂದವನ್ನು ಬಲಿಗೊಳ್ಳುವುದು ಸರಿಯೇ?

ಕಲುಷಿತ ವಾತಾವರಣ

ಸಾಮಾಜಿಕ ಸ್ವಾಸ್ಥ್ಯದ ಮೇಲೆ ದುರಾಚಾರಗಳ ಪರಿಣಾಮವು ಅತ್ಯಂತ ಹೇಯವಿರುತ್ತದೆ. ಕೆರೆಯ ನೀರನ್ನು ಮೃತ್ಯುವಶಗೊಂಡ ಮತ್ಸ್ಯವೊಂದು ಕೆಡಿಸಿಬಿಡುವಂತೆ, ಅಪರಾಧಿಯು ಸಾಮಾಜಿಕ ನೈರ್ಮಲ್ಯವನ್ನೆ ಭಂಗಪಡಿಸುವುದು ನಿಶ್ಚಯ. ಪ್ರಕಟವಾಗಿ ಒಮ್ಮೆಲೇ ದುರಾಚಾರಗಳ ಪ್ರಭಾವವು ಕಣ್ಣಿಗೆ ಬೀಳುವುದಿಲ್ಲವಾದರೂ—ಕ್ಷಯರೋಗದಂತೆ ಸಮಾಜವನ್ನು ಅದು ಬಾಧಿಸುತ್ತಿರುವ ಸಂಗತಿ ಅಲ್ಲಗಳೆಯಲು ಬರುವುದಿಲ್ಲ. ಸಮಾಜದಲ್ಲಿ, ನಿತ್ಯ ವ್ಯವಹಾರಗಳಲ್ಲಿ, ಗುಪ್ತರೂಪದಿಂದ ಮಾಡಿದ ಅಪರಾಧಿಗಳಿಗೆ ದೊರೆತ ಸುರಕ್ಷಿತತೆಯ ಭಾವದಿಂದಲೇ ಇನ್ನಷ್ಟು ದುರಾಚಾರಗಳಿಗೆ ಪ್ರೋತ್ಸಾಹವೂ ಸಿಗುವುದು.

ಒಂದು ದೃಷ್ಟಾಂತದಿಂದ ಇದನ್ನು ಸ್ಪಷ್ಟೀಕರಿಸಬಹುದು—ಜಪಾನಿನ ಗಲ್ಲಿಯೊಂದರಲ್ಲಿ ಯಾರದೋ ಹತ್ಯೆ ನಡೆಯಿತು. ಅಲ್ಲಿಯೇ ಬಳಿಯಲ್ಲಿದ್ದ ಒಬ್ಬ ಮಿತ್ರರನ್ನು ಕಾಣಲು ಗೃಹಸ್ಥನೊಬ್ಬ ಹೋದನು. ಮಿತ್ರ ಮಹಾಶಯನು ಆ ಸಮಯ ಕೋಪಾವಿಷ್ಟನಾಗಿದ್ದುದನ್ನು ಕಂಡು, ಗೃಹಸ್ಥನು ನಕ್ಕು ನುಡಿದ— "ಈಗ ನಡೆದ ಹತ್ಯೆಯಲ್ಲಿ ನೀವೂ ಪಾಲುಗಾರ...!" "ಆಶ್ಚರ್ಯಾನ್ವಿತನಾಗಿ ಮಿತ್ರನೆಂದ- "ಇದೇನ ಹೇಳುತ್ತೀರಿ! ನನಗೆ ಏನೂ ಗೊತ್ತೆಯೇ ಇಲ್ಲ. ಈ ಕೋಣೆ ಬಿಟ್ಟು ನಾನು ಹೊರಟಿಲ್ಲ. ಅದು ಹೇಗೆ ಕೊಲೆಗೆ ನಾನು ಹೊಣೆಗಾರ?" "ಮತ್ತೇನಿಲ್ಲ- ಕೋಪಾವೇಶಗೊಂಡ. ಇಷ್ಟು ಸಮಸ್ತ ವಾತಾವರಣವನ್ನು ನೀವು ಕಲುಷಿತಗೊಳಿಸಿದ್ದೀರಿ—ಕೊಲೆಪಾತಕಿಗೆ ಈ ಬಗೆಯ ದುಷ್ಟ ವಾತಾವರಣದಿಂದ ಸ್ವಲ್ಪವಾದರೂ ನೆರವು ದೊರೆತೇ ತೀರದೆ—ಅದಕ್ಕೇನೇ ಹಾಗೆ ನುಡಿದೆ" ಎಂದು ಗೃಹಸ್ಥ ಸಮಾಧಾನ ಹೇಳಿದ.

[೧೦ನೇ ಪುಟನೋಡಿರಿ]

ನಡೆಯದ ನಾಣ್ಯ

ನೀವು ಆರೋಗ್ಯವಂತರಿದ್ದಾಗ ವಿಮೆ ಇಳಿಸಬಲ್ಲಿರಿ; ಆದರೆ, ಆರೋಗ್ಯ ಕೆಟ್ಟಾಗ, ನೀವು ವಿಮೆಯ ರಕ್ಷಣೆಯನ್ನು ಪಡೆಯಲಾರಿರಿ — ನಡೆಯದ ನಾಣ್ಯದಂತೆ ನಿಮ್ಮ ಆಗಿನ ಸ್ಥಿತಿ

ಕಾರಣ, ನೀವು ವಿಮೆ ಇಳಿಸುವುದನ್ನು ಮುಂದೂಡಲಾಗದು. ಇಂದೇ ವಿಮೆ ಇಳಿಸಿ ನಿಮ್ಮ ಮತ್ತು ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ ಭಾರತ. ಸ್ಥಾಪನೆ ೧೯೩೩

ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ

The Canara Mutual Assurance Co. Ltd.

Head Office: **UDIPI**, S. INDIA.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ತಡವಾಗಿ ಮುಟ್ಟಾಗುವಿಕೆಗಾಗಿ ಗಾಬರಿಯಾಗಬೇಡಿರಿ

'ಋತುರಾಜ'ವನ್ನು ಸೇವಿಸಿರಿ. ನಾಲ್ಕೈದು ತಿಂಗಳು ಮುಟ್ಟಾಗದಿದ್ದರೂ ಒಡನೆಯೇ ಋತುಸ್ರಾವವಾಗುವುದು. ಮುಟ್ಟು ಬಿಡುವ ಇತರ ಗಂಡಾಂತರಗಳು ಕೂಡಾ 24 ತಾಸುಗಳೊಳಗೆ ಆಶ್ಚರ್ಯಕರವಾಗಿ ದೂರಾಗುವುವು. ಇದಕ್ಕೆ ಸಂಶಯ ಬೇಡ.

ಕಿಮ್ಮತು—ರೂ. 7-8-0, ವಿ. ಪಿ. ರೂ. 1. ಸ್ಪೆಶಲ್ ರೂ. 24 ವಿ. ಪಿ. ರೂ. 1-12-0.

Binapani Oushadhalaya
15/1 Mooris Avenuel, Calcutta-33.
ಏಜಂಟ್:-ವೈದ್ಯ ಪಿ. ಆರ್. ಕಾಮತ್,

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.

ಪ್ರಜಾಪ್ರಭುತ್ವ ಪದ್ಧತಿ

ಪ್ರಜಾಪ್ರಭುತ್ವದ ತತ್ವಗಳಲ್ಲಿ ಕಮ್ಯೂನಿಸ್ಟರಿಗೆ ಎಷ್ಟರಮಟ್ಟಿಗೆ ನಿಷ್ಠೆ ಇದೆ ಎಂಬುದನ್ನು ಬಹಿರಂಗವಾಗಿ ಪರೀಕ್ಷಿಸುವ ಸಮಯ ಈಗ ಒದಗಿ ಬಂದಿದೆ. ಚುನಾವಣೆಗಳಲ್ಲಿ ಇದಿರಾಳಿಗಳಿಗಿಂತ ಅಧಿಕ ಮತವನ್ನು ಪಡೆದು, ಶಾಸನ ಸಭೆಗಳನ್ನು ಅಥವಾ ಪಾರ್ಲಿಮೆಂಟನ್ನು ಸೇರಿಕೊಂಡ ಮಾತ್ರಕ್ಕೆ ಕಮ್ಯೂನಿಸ್ಟರು ಸಾಧುಗಳಾಗಿ ಪರಿವರ್ತಿತಗೊಳ್ಳಲಿಲ್ಲವೆಂಬುದನ್ನು ಸದ್ಯ ಮರೆಯಲಾರೆವು. ಆದರೂ ಚುನಾವಣೆಗಳನ್ನು ಕಾದುವ ಕಾಲದಲ್ಲಿ ಜನರಿಗೆಕೊಟ್ಟ ಆಶ್ವಾಸನೆಗಳನ್ನು ಪೂರೈಸಲಿಕ್ಕೆ ಘಟನಾತ್ಮಕವಾದ ರೀತಿಯಲ್ಲಿ ಹೆಣಗಲಿಕ್ಕಿರುವ ಅವಕಾಶದ ಸದುಪಯೋಗ ಮಾಡಿಕೊಳ್ಳಲು ಬರುವುದೆಂಬುದನ್ನು ತಾವು ಮನಗಂಡಿರುವುದಾಗಿ ಶ್ರೀ ಎ. ಕೆ. ಗೋಪಾಲನ್ ಹಿಂದೊಮ್ಮೆ ಹೇಳಿದ್ದರು. ಈಚೆಗೆ ಡಾ. ಹೀರೇಂದ್ರ ಮುಕರ್ಜಿಯವರೂ ಇದೇ ಮಾತನ್ನು ಪುಷ್ಟಿಗೊಳಿಸಿದರು. ಆದರೆ ಲೋಕಸಭೆಯಲ್ಲಿ ಮೊನ್ನೆ ನಡೆದ ಘಟನೆಗಳನ್ನು ಪರಾಮರ್ಶಿಸಿದರೆ ಕಮ್ಯೂನಿಸ್ಟರು ಇನ್ನೂ ಪ್ರಜಾಪ್ರಭುತ್ವದ ರೀತಿ ನೀತಿಗಳಿಗೆ ಒಗ್ಗಿಕೊಂಡಿರದೆ ತಮ್ಮದೇ ಆದ ದರ್ಪ ಮತ್ತು ಅನ್ಯಾಯದ ಕ್ರಮಗಳಿಗೆ ಅಂಟಿಕೊಂಡಿರುವರೆಂಬುದನ್ನು ಯಾರೂ ತಿಳಿಯಬಹುದು. ರಾಷ್ಟ್ರದ ಸಾರ್ವಭೌಮಾಧಿಕಾರದ ಮಹತ್ವಾಂಗವಾಗಿರುವ ಪಾರ್ಲಿಮೆಂಟಿನಲ್ಲಿ, ಮುಕ್ತಟೀಕೆಯ ವಾಗ್ಯುದ್ಧವನ್ನು ಕೂಡಿ—ಶಿಸ್ತು ಗೌರವಗಳಿಗೆ ತಿಲಾಂಜಲಿಯಿತ್ತುದು ಎಷ್ಟು ಮಾತ್ರಕ್ಕೂ ಭೂಷಣವಲ್ಲ. ಅಧ್ಯಕ್ಷರು ಕೊಟ್ಟ ನಿರ್ಣಯವನ್ನು ಸ್ವೀಕರಿಸುವುದಾಗಲೀ, ಅವರು ಅನ್ಯಾಯ ಬಗೆದಿದ್ದರೆ ಘಟನಾತ್ಮಕ ರೀತಿಯಲ್ಲಿ ಆ ಅಧ್ಯಕ್ಷರನ್ನು ಸ್ಥಾನಭ್ರಷ್ಟಗೊಳಿಸುವುದಾಗಲೀ ಯೋಗ್ಯ ಮಾರ್ಗಗಳು. ಅವನ್ನು ಬಿಟ್ಟುಕೊಟ್ಟು ಸಭೆಯ ಸಾರ್ಜಂಟನಿಂದ ಹೊರ ದೂಡಿಸಿಕೊಳ್ಳುವನಕವೂ ಪ್ರಸಂಗವನ್ನು ಬೆಳೆಯಲು ಅವಕಾಶ ಕಲ್ಪಿಸಿದ ಸದಸ್ಯರ ವಿವೇಕ ಬುದ್ಧಿಯ ಬಗ್ಗೆ ಸಂದೇಹ ತೋರುವುದು.

ಅನುಚಿತ ವರ್ತನೆ

ಲೋಕಸಭೆಯಲ್ಲಿ ಗೃಹಮಂತ್ರಿ ಡಾ। ಕಟಜೂ ಪ್ರತಿಬಂಧಕ ಸ್ಥಾನಬದ್ಧತೆಯ ಮಸೂದೆಯ ಆಗತ್ಯವನ್ನು ಬಿಂಬಿಸುತ್ತಾ ಭಾಷಣ ಮಾಡಿದಾಗ ಕಮ್ಯೂನಿಸ್ಟರು ಹಿಂಸಾಚಾರಗಳ ಆದರ್ಶ ಇಟ್ಟುಕೊಂಡಿರುವರೆಂದೂ ಗುಲ್ಲೆಬ್ಬಿಸುವುದೇ ಅವರ ಧ್ಯೇಯವೆಂದೂ ಬಲವಾಗಿ ಪ್ರತಿಪಾದಿಸಿದರು. ಗೃಹಮಂತ್ರಿಯ ಭಾಷಣವನ್ನು ನಡು ನಡುವೆ ತಡೆದು ನಿಲ್ಲಿಸಲು ಕಮ್ಯೂನಿಸ್ಟ ಸದಸ್ಯರು ಕೆಲವರು ಪ್ರಯತ್ನಿಸಿದರು. ಇದನ್ನು ಕಂಡು ಅಧ್ಯಕ್ಷ ಮಾವಳಣಕರು ಹೀಗೆ ಮಾಡಿದರೆ ಸದಸ್ಯರ ಸಭೆಯನ್ನು ಬಿಟ್ಟು ಹೊರ ಹೋಗಬೇಕಾಗುವುದೆಂದರು. ಇದಕ್ಕೆ ಹೀರೇಂದ್ರ ಮುಕರ್ಜಿ ಆಕ್ಷೇಪ ತೆಗೆದ ಕೇವಲ ವಿರೋಧಿ ಗುಂಪಿಗೆ ಮಾತ್ರ ಈ ನಿರ್ಣಯ ಅನ್ವಯಿಸುವುದೇ? ಎಂದರು. ಅಧ್ಯಕ್ಷರು ತಾವು ಎಲ್ಲ ಸದಸ್ಯರನ್ನೂ ಉದ್ದೇಶಿಸಿ ಹಾಗೆ ಹೇಳಿದುದೆಂದೂ, ತಮ್ಮ ನಿರ್ಣಯವು ಇಡೀ ಸಭೆಗೆ ಅನ್ವಯಿಸುವುದಾಗಿಯೂ ಸಾರಿದರು. ಸಭೆಯ

ದನ್ ನಂಬಿಯಾರರು ಪಾರ್ಲಿಮೆಂಟಿನ ತತ್ವಗಳಿಗೆ ಅನುಚಿತ ರೀತಿಯಲ್ಲಿ ನಡೆದುಕೊಂಡರೆಂದು ಅಧ್ಯಕ್ಷರು ಹೇಳಲು—ಶ್ರೀ ನಂಬಿಯಾರರು ತಮ್ಮ ಹೆಸರು ತೆಗೆದು ಅನ್ಯಾಯ ಬಗೆದಿರಿ ಎಂದು ದೂರಿದರು. ಸದಸ್ಯರಿಗೆ ಅನ್ಯಾಯ ಬಗೆದೆನೆಂಬ ಮಾತನ್ನು ಹಿಂತೆಗೆದುಕೊಳ್ಳಬೇಕಾಗಿ ಅಧ್ಯಕ್ಷರು ಹೇಳಿದರು. ಇದಕ್ಕೆ ಒಪ್ಪದಿರಲು ಶ್ರೀ ನಂಬಿಯಾರರು ಸಭೆ ಬಿಟ್ಟು ಹೋಗಬೇಕೆಂದರು. ಇಲ್ಲಿ ಬಲವಂತವಾಗಿ ಹೊರದಬ್ಬುವ ಪ್ರಸಂಗ ಬಂತು. ಇದರಿಂದ ಅಶಾಂತಿಯ ಪರಿಸ್ಥಿತಿ ಉದ್ಭವಿಸಿತಾಗಿ, ತಮ್ಮ ಪಕ್ಷವು ಚೆನ್ನಾಗಿ ಕಾರ್ಯಕಲಾಪಗಳಲ್ಲಿ ಭಾಗವಹಿಸಲಾಗದು ಎನ್ನುತ್ತಾ ಹೀರೇಂದ್ರಮುಕರ್ಜಿ, ನಂಬಿಯಾರರನ್ನು ಮುಂದೆ ಮಾಡಿಕೊಂಡು, ತಮ್ಮೆಲ್ಲ ಪಕ್ಷದ ಸದಸ್ಯರ ಕೂಡೆ ಸಭಾತ್ಯಾಗ ಮಾಡಿದರು.

ಗೌರವದ ನಡತೆ

ಈ ರೀತಿಯ ಘಟನೆ ಭಾರತದ ಪಾರ್ಲಿಮೆಂಟಿನ ಚರಿತ್ರೆಯಲ್ಲಿಯೇ ಅಪೂರ್ವ—ಪ್ರಧಾನಿ ನೆಹರೂ ಈ ವಿಷಯವನ್ನು ಪ್ರಸ್ತಾಪಿಸಿ, ಅಧ್ಯಕ್ಷರ ಅವಹೇಳನೆಯಾಗುವ ರೀತಿಯಲ್ಲಿ ಸದಸ್ಯರೊಬ್ಬರು ವರ್ತಿಸಿದುದು ಅನುಚಿತವಾಯಿತೆಂದು ವಿಷಾದ ಪ್ರದರ್ಶಿಸಿದರು. ತಾನು ಸಭಾಧುರೀಣನಿರುವುದರಿಂದ, ಎಲ್ಲ ಸದಸ್ಯರೂ ಅಧ್ಯಕ್ಷರಿಗೆ ನಿಷೆ ತೋರುವಂತೆ ಮಾಡುವುದು ತನ್ನ ಕರ್ತವ್ಯವೆಂದೂ, ಈಗಾದ ಘಟನೆಯನ್ನು ಪರಿಶೀಲಿಸಲು ಹಕ್ಕುಬಾಧ್ಯತೆಯ ಸಮಿತಿಗೆ ಈ ವಿಷಯ ಒಪ್ಪಿಸುವುದಾಗಿಯೂ ಹೇಳಿದರು.

ಸಂಯಮ ಮೀರುವ

ಸಮಸ್ಯೆಯನ್ನು ನೋಡುವ ನಮ್ಮ ದೃಷ್ಟಿಯಲ್ಲಿ

ಹೀಗೆ ದುಡುಕಿನಿಂದ ವರ್ತಿಸಿ ಸಭಾ ಗೌರವಕ್ಕೆ ಕುಂದನ್ನುಂಟುಮಾಡುವುದು ತರವಲ್ಲವೆಂಬುದನ್ನು ಯಾರಾದರೂ ಒಪ್ಪಬೇಕು. ಶಿಸ್ತು ಮತ್ತು ಸಂಯಮ, ಸಹನೆಗಳಿಂದ ಸಮಸ್ತ ರಾಷ್ಟ್ರದ ಕಲ್ಯಾಣಾರ್ಥವಾಗಿ ತಾವಿಲ್ಲಿ ಇದ್ದೇವೆಯೇ ಹೊರತು—ಒಂದು ಪಕ್ಷದ ಉದ್ದೇಶ ಸಿದ್ಧಿಗಾಗಿಯಲ್ಲ ಎಂಬ ಸತ್ಯವನ್ನು ಸದಸ್ಯರು ಮೊದಲು ಮನವರಿಕೆ ಮಾಡಿಕೊಂಡರೆ ಈ ಬಗೆಯ ಪೀಕಲಾಟ ಉಂಟಾಗುವುದಿಲ್ಲ. ಮದ್ರಾಸು ಶಾಸನಸಭೆಯಲ್ಲಿ ಪೋಲೀಸು ಖಾತೆಯ ಬೇಡಿಕೆಯ ಮೇಲೆ ಚರ್ಚೆ ನಡೆದಾಗ ಮುಖ್ಯಮಂತ್ರಿ ರಾಜಗೋಪಾಲಾಚಾರಿ ಹೇಳಿದುದೂ ಇದನ್ನೆ—“ಈಗೀಗ ಕಮ್ಯೂನಿಸ್ಟರು ಹಿಂಸಾಮಾರ್ಗವನ್ನು ತ್ಯಜಿಸಿ, ಶಾಂತ ಜೀವನದ ಕಡೆಗೆ ಹೊಂದಿಕೊಳ್ಳುತ್ತ ಬಂದಿರುವುದನ್ನು ನಾನು ಗಮನಿಸಿದ್ದೇನೆ. ಅವರು ಮುಂದೆಯೂ ಇದೇ ರೀತಿಯಲ್ಲಿ ನಡೆದುಕೊಳ್ಳುವರೆಂಬ ಆಶ್ವಾಸನೆ ನನಗೆ ಬೇಕಾಗಿದೆ. ಹಿಂಸಾಚಾರಗಳು ಕಡಿಮೆಯಾದುದನ್ನು ಲಕ್ಷಿಸಿಯೇ ಪೋಲೀಸು ಪಡೆಯನ್ನೂ ಕಮ್ಮಿಮಾಡುವೆವು” ಎಂದು ರಾಜಾಜಿ ನುಡಿದರು. ಪೋಲೀಸು ಖಾತೆಯ ಜನ ಕೆಲವೊಮ್ಮೆ ಹೀನಾಯವಾಗಿ ವರ್ತಿಸಿದರೂ, ಸಾಮಾನ್ಯವಾಗಿ ಮದ್ರಾಸು ಪೋಲೀಸು ಅತ್ಯಂತ ದಕ್ಷವಾಗಿದೆ ಎಂದವರು ಹೊಗಳಿದರು. ಕಡಿತದ ಸೂಚನೆಯು ಬಿದ್ದುಹೋಗಿ, ಬೇಡಿಕೆ ಸ್ವೀಕಾರವಾಯಿತು.

ಪಾನ ಪ್ರತಿಬಂಧ

ಮದ್ರಾಸು ಶಾಸನ ಸಭೆಯಲ್ಲಿ ತೀರ ಮತಭೇದವೆದ್ದ ಪ್ರಮುಖ ವಿಷಯ ಪಾನ ಪ್ರತಿಬಂಧ ಘೋಷಣೆ. ವಿರೋಧಿ ಗುಂಪಿನವರು ಸರಕಾರದ ಪಾನ ಪ್ರತಿಬಂಧ ಧೋರಣೆಯು ಸಂಪೂರ್ಣ ಅಯಶಸ್ವಿಯಾಗಿದೆ ಎಂದು ದೂರಿದರೆ, ಇನ್ನು ಕೆಲವು ಸದಸ್ಯರು ಪಾನಪ್ರತಿಬಂಧ ಒಳ್ಳೆಯದನ್ನೆ ಮಾಡಿದೆ ಎಂದೂ, ಆದರೆ ಸಿಹಿಕಳ್ಳಿಗೆ (—ನೀರಾ) ಉದಾರವಾಗಿ ಪರ್ಮಿಟನ್ನು ಕೊಡುವುದಗತ್ಯವೆಂದೂ ಪ್ರತಿಪಾದಿಸಿದರು. ವಿರೋಧಿ ಗುಂಪಿನ ಧುರೀಣ ಶ್ರೀ ಟಿ. ವಿಶ್ವನಾಥಂ ಪಾನ ಪ್ರತಿಬಂಧದ ಪರಿಣಾಮಗಳನ್ನು ಪರಿಶೀಲಿಸಿ ವರದಿ ಮಾಡಲು ಒಂದು ಸಮಿತಿಯು ನೇಮಕವಾಗುವ ಅಗತ್ಯವನ್ನು ಚೆನ್ನಾಗಿ ಬಿಂಬಿಸಿದರು. ಆದರೆ ಈ ಎಲ್ಲ ಟೀಕೆಗಳಿಗೂ ಮುಖ್ಯ ಮಂತ್ರಿ ಜಗ್ಗಲಿಲ್ಲ—ಪಾನ ಪ್ರತಿಬಂಧದಿಂದ ಬಡ ಜನತೆಗೆ ಕಲ್ಯಾಣವಾಗಿಯೇ ತೀರಿದೆ ಎಂದವರು ಘಂಟಾಘೋಷವಾಗಿ ಸಾರಿದರು. ಪಾನಪ್ರತಿಬಂಧವನ್ನು ಮುಂದುವರಿಸ ಬೇಕೇ ಬೇಡವೇ ಎಂಬುದನ್ನು ವಿಚಾರಿಸಲು ಸಮಿತಿ ನೇಮಿಸುವುದೆಂದರೆ—ಪ್ರತಿಪಕ್ಷದ ಕುಹಕ ತನವೇ ಸೈ. ಘಟನೆಯಲ್ಲಿ ಕಾನೂನು ಪ್ರಕಾರವಾಗಿ ಪಾನ ಪ್ರತಿಬಂಧವನ್ನು ಸಾಧಿಸಬೇಕೆಂದಿಲ್ಲ ಎನ್ನುವ ವಾದವೂ ಹುರುಳಿಲ್ಲದ್ದು. "ಪಾನ ಪ್ರತಿಬಂಧವು ಒಳ್ಳೆಯ ಕೆಲಸವಾದುದರಿಂದ—ಜನರಿಗೆ ಒಳ್ಳೆಯದನ್ನು ಮಾಡುವ ತನ್ನ ಬಯಕೆಯನುಸಾರ ಅದನ್ನು ಇನ್ನಷ್ಟು ಬಿಗಿಗೊಳಿಸಲಾಗುವುದು. “ಪ್ರತಿಯೊಂದನ್ನು ಅದರ ಯಶಾಪಯಶಗಳ ಮಾನದ ಮೇಲಿಂದ ತೂಗಬೇಡಿರಿ. ಒಳ್ಳೆಯ ಕೆಲಸವು ಮೊದಲಿಗೆ ಅಪಯಶ ಪಡೆದರೂ ಕ್ರಮವಾಗಿ ಅದು ಉತ್ತಮ ಪರಿಸ್ಥಿತಿಯನ್ನು ನಿರ್ಮಿಸುವುದು. ಪಾನಪ್ರತಿಬಂಧದ ಒಳಿತು-ಕೆಡುಕುಗಳ ನಿರ್ಣಯಕ್ಕೆ ಎರಡು ತಲೆಮಾರುಗಳೇ ಸರಿಯಬೇಕಾದೀತು.” ಎಂದು ರಾಜಾಜಿ ಉಪದೇಶಿಸಿದರು. ಪಾನಪ್ರತಿಬಂಧ ಸಾಧಿಸಿದ್ದೇನೆಂಬುದನ್ನು ವಿಮರ್ಶಿಸಿ ವರದಿ ಮಾಡಬೇಕೆಂಬ ಕಡಿತದ ಸೂಚನೆಯನ್ನು ಮತಕ್ಕೆ ಹಾಕಿದಾಗ ಪರವಾಗಿ 147 ಸದಸ್ಯರೂ ವಿರುದ್ಧ 170 ಸದಸ್ಯರೂ ಬೆಂಬಲ ಕೊಟ್ಟು, ಸೂಚನೆ ತಿರಸ್ಕೃತಗೊಂಡಿತು. ವಿರೋಧಿಗುಂಪಿನ ಕೆಲವು ಮಂದಿ ಸರಕಾರದೊಡನೆ ಸೇರಿಕೊಂಡು ಸೂಚನೆಗೆ ವಿರುದ್ಧ ಮತಕೊಟ್ಟರು.

ಪ್ರಭಾವಿಯಾದ ಶಿಕ್ಷಣ

ರಾಜ್ಯದಲ್ಲಿ ಹೊಸ ನೀರಾವರಿ ಯೋಜನೆಗಳನ್ನು ತೊಡಗುವುದಿಲ್ಲ—ಆದರೆ ಕೈಗೊಂಡಿರುವ ಎಲ್ಲ ಯೋಜನೆಗಳನ್ನು ಬೇಗನೆ ಮುಗಿಸುವುದು ಸರಕಾರದ ಇಚ್ಛೆ ಎಂದು ಹೇಳಲಾಗಿದೆ. ಪ್ರಸ್ತುತ ಹಣದ ಕೊರತೆಯಿಂದಾಗಿ ಹೊಸತಾಗಿ ಏನನ್ನೂ ಮಾಡಲು ಬರುವುದಿಲ್ಲ ಎಂದು ಲೋಕೋಪಯೋಗಿ ಮಂತ್ರಿ ಶ್ರೀ ಎನ್. ರಂಗಾರೆಡ್ಡಿ ಹೇಳಿದರು. ಭೂಕಂದಾಯ ಹಾಗೂ ಭೂಧಾರಣ ಪದ್ಧತಿಯಲ್ಲಿ ಏನು ಸುಧಾ

ZANDU Mahayogaraja Guggula

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ಸಡುಸೋಪ್ರ ... ರೋಗಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ 3/- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ
2 ಶ್ರೀ. ವಿ. ವಿ ಶೆಣೈ, ಕೆಮಿಸ್ಟ್, ಕಾರ್ಕಳ
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು
4 ಎಲ್ ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ, ವ್ಯಾಪಾರ ಶರತ್ತುಗಳಿಗೆ ಬರೆಯಿರಿ.

DAMODAR & CO.,
Nainiappa Naicken Street, Park Town–MADRAS 3.

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ
ಲೈಫ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಸೇವೆಯಾಗಿದೆ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರಿಯ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.

ಡಿ. ಬ್ರಾಂಚ್ ಮೆನೇಜರ್;

ಅನುಚಿತ ಚಪಲ

ಪರಿಮಾರ್ಜನೆ ಅತ್ಯಂತ ಅಪೇಕ್ಷಣೀಯ

ಶೀಲಿಸುತ್ತಿರುವ ಸಂಗತಿಯೂ ತಿಳಿದು ಬಂದಿದೆ. ಅನ್ಯಾಯವಾಗಿ ಒಕ್ಕಲೆಬ್ಬಿಸುವುದನ್ನು ತಡೆಯಲು ಸರಕಾರವು ಒಂದು ಸುಗ್ರೀವಾಜ್ಞೆಯನ್ನು ಈ ಅಧಿವೇಶನ ಮುಗಿದ ಮೇಲೆ ಹೊರಡಿಸಬಹುದೆಂಬ ಸೂಚನೆಯನ್ನೂ ಮುಖ್ಯಮಂತ್ರಿ ರಾಜಾಜಿ ಕೊಟ್ಟಿದ್ದಾರೆ. ವಿದ್ಯಾ ಇಲಾಖೆಯ ಬೇಡಿಕೆಯನ್ನು ಚರ್ಚಿಸುವಾಗ ಸದಸ್ಯರು ಅಧ್ಯಾಪಕರ ವೇತನ, ಶಿಕ್ಷಣ ಪದ್ಧತಿಯಲ್ಲಿ ಮೂಲಭೂತ ಸುಧಾರಣೆ, ಒತ್ತಾಯದ ಪ್ರಾಥಮಿಕ ಶಿಕ್ಷಣದ ಆವಶ್ಯಕತೆ, ಮಾಧ್ಯಮಿಕ ಶಿಕ್ಷಣದಲ್ಲಿ ಪ್ರಗತಿ ಮುಂತಾದ ಹಲವಾರು ಉಪಯುಕ್ತ ಸೂಚನೆಗಳನ್ನು ಮಾಡಿದರು. ಹಿಂದುಳಿದ ವರ್ಗಗಳಿಗೂ ಪರಿಶಿಷ್ಟ ಜಾತಿಯವರಿಗೂ ಹೆಚ್ಚು ಅನುಕೂಲತೆಗಳು ಬೇಕೆಂದು ಸದಸ್ಯರಲ್ಲಿ ಕೆಲವರ ಅಭಿಪ್ರಾಯವಿತ್ತು. ಮಂತ್ರಿಗಳಾದ ಡಾ. ಎಂ. ವಿ. ಕೃಷ್ಣರಾಯರು ಉತ್ತರಿಸುತ್ತಾ ೧೧ ವರ್ಷ ಪ್ರಾಯದವರೆಗೆ ಎಲ್ಲ ಮಕ್ಕಳಿಗೆ ಉಚಿತವಾಗಿ ಪ್ರಾಥಮಿಕ ಶಿಕ್ಷಣವನ್ನು ನೀಡುವುದಕ್ಕೆ ಸರಕಾರ ಪ್ರಥಮ ಪ್ರಾಶಸ್ತ್ಯ ನೀಡುವುದೆಂದರು. ೫೦೦ಕ್ಕೂ ಮಿಕ್ಕಿದ ಜನ ವಸತಿಯುಳ್ಳ ಪ್ರತಿಯೊಂದೂ ಹಳ್ಳಿಗೆ ಪ್ರಾಥಮಿಕ ಶಾಲೆಯನ್ನು ಒದಗಿಸುವುದು ಸರಕಾರದ ಬಯಕೆ ಎಂದವರು ನುಡಿದರು. ಶಿಕ್ಷಣದಲ್ಲಿ ಸುಧಾರಣೆ ಮತ್ತು ಮೂಲ ಶಿಕ್ಷಣ ಪದ್ಧತಿಯ ಕುರಿತು ಸರಕಾರ ಪರಿಶೀಲಿಸುತ್ತಿದೆ. ಮಾಧ್ಯಮಿಕ ಶಿಕ್ಷಣವು ವಿದ್ಯಾರ್ಥಿಗಳಿಗೆ ಅತ್ಯಂತ ಪ್ರಯೋಜನಕಾರಿಯಾಗುವಂತೆ ಪ್ರಯತ್ನಿಸಬೇಕೆಂದು ತನ್ನ ಅಭಿಪ್ರಾಯವಿರುವುದಾಗಿ ಅವರು ಹೇಳಿದರು. ಶ್ರೀ ವಿದ್ಯಾರ್ಥಿಗಳ ಮಟ್ಟಿಗೆ ಇದು ಇನ್ನಷ್ಟು ಅಗತ್ಯ. ಇತ್ತ ಜೀವನ ರಂಗವನ್ನು ಪ್ರವೇಶಿಸುವುದಕ್ಕೇ ಆಗಲೀ, ಅತ್ತ ಉಚ್ಚ ಶಿಕ್ಷಣಕ್ಕೆ ಕಾಲಿಡುವಾಗಲೇ ಆಗಲೀ—ಮಾಧ್ಯಮಿಕ ಶಿಕ್ಷಣದ ಮೂಲಕ ಯೋಗ್ಯ ಹಿನ್ನೆಲೆಯನ್ನು ಪ್ರಾಭಾವಿಯಾದ ರೀತಿ ಕಲ್ಪಿಸಿಕೊಡುವುದು ಎಲ್ಲರಿಗೂ ಇಷ್ಟ.

ಭವ್ಯ ಕಟ್ಟಡಗಳ ಅಡ್ಡಿ

ಶಾಲೆ ಕಾಲೇಜುಗಳಿಗಾಗಿ ಭವ್ಯವಾದ ಕಟ್ಟಡಗಳಿರಬೇಕೆಂಬುದನ್ನು ತಾನು ಒಪ್ಪುವುದಿಲ್ಲವಾಗಿ ಮಂತ್ರಿ ಮಹಾಶಯರು ಹೇಳಿದುದು ಗಮನೀಯವಾಗಿದೆ.

"ಒಂದು ನೂರು ವರ್ಷ ಬಾಳುವ ಭವ್ಯವಾದ ಕಟ್ಟಡಗಳಲ್ಲಿಯೇ ಸಂಗವನ್ನು ನಡೆಸಬೇಕೆಂಬುದು ಭ್ರಮೆಯೇ ಸರಿ. ಈಚೆಗೆ ಹೊಸತಾಗಿ ಕಾಲೇಜು ವರ್ಗಗಳನ್ನು ತೆರೆಯಲು ಅನುಮತಿ ಬೇಕೆಂದು ಕೇಳಿದಾಗ—ಒಂದು ಹುಲ್ಲಿನ ಮಾಡನ್ನಾದರೂ ಕಟ್ಟಿ ಕ್ಲಾಸು ನಡೆಸಲು ಸಾಧ್ಯವಿದ್ದರೆ ಹಾಗೆ ಮಾಡಿರಿ, ಎಂದೆನು. ಕಟ್ಟಡಗಳು ಅಗತ್ಯವಿಲ್ಲವೆಂದಲ್ಲ—ಪ್ರಯೋಗಶಾಲೆಯ ಅಪೂರ್ಣ ಉಪಕರಣಗಳನ್ನೂ ಇತರ ಬೆಲೆಯುಳ್ಳ ಪದಾರ್ಥಗಳನ್ನೂ ಕೆಡದಂತೆ ರಕ್ಷಿಸಲು ಅವು ಬೇಕು. ಆದರೆ ಸಾಮಾನ್ಯ ಶಿಕ್ಷಣಕ್ಕೆ ಇಷ್ಟೆಲ್ಲ ಆಡಂಬರ ಬೇಡ."

ಇದೇ ಅಭಿಪ್ರಾಯವನ್ನು ಪ್ರಧಾನಿ ನೆಹರೂ ವಾರ್ಧಾ ಸಂಶೋಧನ ಕೇಂದ್ರದ ಉದ್ಘಾಟನೆಯನ್ನು ನೆರವೇರಿಸುತ್ತಾ ಹೇಳಿದರು—"ಈ ಕೇಂದ್ರದ ಕಟ್ಟಡಗಳು ಇನ್ನೂ ಪೂರ್ಣಗೊಂಡಿಲ್ಲ. ಆದರೆ ಅವು ಮುಗಿಯುವವರೆಗೆ ಕುಳಿತಿರಲು ಕಾರ್ಯಭಾರ ಬಿಡುವುದಿಲ್ಲ. ಗಟ್ಟಿಮುಟ್ಟಾದ ಕಟ್ಟಡಗಳಾಗುವ ವರೆಗೆ ನಾವು ಕೆಲಸ ಬಿಟ್ಟು ನಿಂತುಕೊಳ್ಳಲಾರೆವು. ನಮಗೆ ಕಾರ್ಯಾಲಯಕ್ಕೆ ಆಗಲಿ, ಆಸ್ಪತ್ರೆಗಾಗಲೀ, ಶಾಲೆಗಳಿಗಾಗಲೀ, ಯಾವುದಕ್ಕೇ ಆಗಲಿ ಕಟ್ಟಡಗಳು ಬೇಕು ಹಾಗೆಂದ ಮಾತ್ರಕ್ಕೆ ಅವು ಬಹಳ ವೆಚ್ಚದಿಂದ ಕಟ್ಟಲ್ಪಡಬೇಕೆಂದಿಲ್ಲ. ಶಿಕ್ಷಣ ಇಲಾಖೆಯು ಸುಧಾರಿತ ಮನೋವೃತ್ತಿಯನ್ನು ಬೇಗನೇ ಅನುಸರಿಸುವುದು ಹೊಸ ಕಟ್ಟಡಗಳಿಗಾಗಿ ವೆಚ್ಚ ಮಾಡುವ ದುಡ್ಡನ್ನು ವಿದ್ಯಾಪ್ರಸಾರಕ್ಕಾಗಿಯೇ ಸದ್ವಿನಿಯೋಗಿಸಲು ಸಾಧ್ಯ" ಎಂದು ನೆಹರೂ ಹೇಳಿದರು.

ದೃಷ್ಟಿಕೋಣ

ನೆಹರೂ ಹೇಳುವಂತೆ ನಮ್ಮ ದೃಷ್ಟಿಕೋಣದಲ್ಲಿ ತೀವ್ರ ಮಾರ್ಪಾಟಾಗುವುದು ಅಪೇಕ್ಷಣೀಯ. ಹೊಸ ಸಂಗತಿ ಎಂದ ಕೂಡಲೆ ಬೆರಗಾಗಬೇಡವುದು ನಮ್ಮ ನೇತ್ರರಲ್ಲಿ ಕೂಡಿ ಹೋಗಿದೆ. ಆದರೆ ಮನಸ್ಸನ್ನು ಈ ರೀತಿಯ ಅಂಚಿಕೆಯ ಜಾಲದಲ್ಲಿ ಸಿಲುಕಗೊಡದೆ ಸೆಣಗುವಾತನು ವಿವೇಕಿಯೂ ಶೂರನೂ ನಿಜ. ಕೆಸ್ಟಪರಂಪರೆಗಳನ್ನು ನಿರಾಯಾಸವಾಗಿ ದಾಟಿ ಹೋಗುವ ಹಗುರ ಮನಸ್ಸು ನಮ್ಮಾಗಿರಬೇಕು. ನೆಹರೂ ದಿಲ್ಲಿಯಲ್ಲಿ ಕುಳಿತುಕೊಂಡು ಭಾರತದ ಭವ್ಯ ದಿನಗಳ ಕನಸು ಕಾಣುವುದುಂಟಂತೆ—ಆದರೆ, ಅಷ್ಟು ಮಾತ್ರಕ್ಕೆ ಕೆಲಸವಾಗುವುದಿಲ್ಲ. ಸರಕಾರೀ ರೀತಿಯಿಂದ ಎಷ್ಟೇ ಕೆಲಸ ತೊಡಗಲಿ—ಜನತಾ ಸಹಕಾರವಿಲ್ಲದಿರುವ ವರೆಗೆ ಅವು ಜಯಪ್ರದ ಉದ್ಯಮಗಳಾಗಲಾರವು. ಜನ ಪ್ರತಿಬಂಧವೇ ಇದಕ್ಕೆ ಜೀವಂತ ಸಾಕ್ಷಿ. ದುಡಿಮೆಗೆ ಮಹತ್ವ ಕೊಡದ ರಾಷ್ಟ್ರ ಅದು ಭಂಡವಾಳಶಾಹಿಯಾದ ಅಮೇರಿಕ ವಿರಲಿ, ಕಮ್ಯೂನಿಸ್ಟ ಒಡೆತನದ ರಶಿಯಾ ವಿರಲಿ, ನಾಶಹೊಂದುವುದು ನಿಶ್ಚಯ. ಭಾರತದಲ್ಲಿ ದುಡಿಮೆಯನ್ನು ಹೀನಾದ್ಯವೆಂದು ಬಗೆಯಲಾಗಿದೆ. ಇದೇ ನಮ್ಮ ಕರುಣಾಜನಕ ಸ್ಥಿತಿಯ ಮೂಲ—ಎಂದು ನೆಹರೂ ಎಚ್ಚರಿಸಿದರು. ಸೋಮವಾರ ದಿನ ಜನಪದ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವ ಅಧಿಕಾರಿಗಳನ್ನೂ, ಸಮಸ್ತ ಜನತೆಯನ್ನೂ ಉದ್ದೇಶಿಸಿ ಮಾತನಾಡುವಾಗಲೂ ಇದೇ ಉಪದೇಶದ ಮಾತನ್ನು ನೆಹರೂ ಹೇಳಿದರು—ಭಾರತವು ಸಂಪತ್ ಸಮೃದ್ಧವಾದ ರಾಷ್ಟ್ರವಾಗಿ ಮೆರೆಯಬೇಕಾದರೆ ಜನತಾ ಸಹಕಾರ ಬೇಕು ಎಂದವರ ವಿನಂತಿ. ವಿದ್ಯಾರ್ಥಿಗಳು ಜನರೊಡನೆ ಸೇರಿಕೊಂಡು, ಅವರ ಸಮಸ್ಯೆಗಳನ್ನು ಒಂದೊಂದಾಗಿ ಬಿಡಿಸಲು ಸಹಾಯ ನೀಡಬಹುದೆಂದು ನೆಹರೂ ಸೂಚಿಸಿದರು. ಪ್ರತಿಯೊಬ್ಬನೂ ಕಡ್ಡಾಯವೆಂಬಂತೆ ಒಂದೆರಡು ವರ್ಷ ದೈಹಿಕ ಶ್ರಮದ ಕೆಲಸಗಳಲ್ಲಿ—ತಾರುಣ್ಯದಾದಿಯಲ್ಲಿಯೇ ನೌಕರಿ—ಅದರಿಂದ ಮನಸ್ಸು ಸ್ವಚ್ಛಗೊಳ್ಳುವುದು. ದೇಹಾರೋಗ್ಯವೂ ಉಳಿಯುವುದು ಎಂದು ನೆಹರೂ ಅಭಿಪ್ರಾಯಪಟ್ಟರು.

ಆರೋಗ್ಯ—ಆಹಾರ

ದೇಹಾರೋಗ್ಯ ರಕ್ಷಣೆಯ ವಿಷಯ ದರಿದ್ರ ಭಾರತದಲ್ಲಿ ಅತ್ಯಂತ ಮಹತ್ವದ ಸಂಗತಿ. ಮದ್ರಾಸು ಶಾಸನಸಭೆಯಲ್ಲಿ ಆರೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟಿ ಸರಕಾರದ ವೈದ್ಯಕೀಯ ಸಹಾಯ ಯೋಜನೆಗಳನ್ನು ವಿವರಿಸಿ ಮಾತನಾಡಿದರು. ಹಳ್ಳಿ ಹಳ್ಳಿಗೂ ಸಂಚಾರಿ ವಾಹನಗಳ ಮೂಲಕ ಹೆಚ್ಚು ಹೆಚ್ಚು ವೈದ್ಯಕೀಯ ಸಹಾಯವನ್ನು ಒದಗಿಸಲಾಗುವುದೆಂದವರು ಹೇಳಿದರು ಕಡ್ಡಾಯವಾಗಿ ವೈದ್ಯಕೀಯ ಅಭ್ಯಾಸಿಗಳು ಹಳ್ಳಿಗಳಲ್ಲಿ ಒಂದೆರಡು ವರ್ಷ ದುಡಿಯಬೇಕೆಂಬ ಸಂಗತಿ ಸರಕಾರದ ವಿಚಾರಾಧೀನವಾಗಿದೆ ಎಂದೂ ಅವರು ನುಡಿದರು. ವೈದ್ಯಕೀಯ ವಿಭಾಗದಲ್ಲಿ ಸ್ತ್ರೀಯರನ್ನು ಉಪೇಕ್ಷಿಸಲಾಗಿಲ್ಲ—ಅವರಿಗೆ ಶಿಕ್ಷಣ ಕೊಡಲು ಯೋಗ್ಯ ಸೌಕರ್ಯಗಳನ್ನು ಒದವಿಸಲಾಗಿರುವುದಲ್ಲದೆ—ಉನ್ನತ ಅಧಿಕಾರಗಳಲ್ಲಿ ಅವರನ್ನು ನೇಮಿಸುವುದೂ ನಡೆದಿದೆ ಎಂದು ಶ್ರೀ ಶೆಟ್ಟರು ತಿಳಿಸಿದರು.

ಆರೋಗ್ಯದಂತೆ ಆಹಾರವೂ ಅಗತ್ಯ ತಾನೆ—ಕೇಂದ್ರ ಆಹಾರ ಮಂತ್ರಿ ಕಿದ್ವಾಯಿ ಈಗ ಸಂಚಾರದಲ್ಲಿದ್ದು, ಮೊನ್ನೆ ಮದ್ರಾಸಿಗೂ ಬಂದರು—ಆಹಾರ ನಿಯಂತ್ರಣ ಧೋರಣೆಯು ಯಶಸ್ವಿಯಾಗುತ್ತಿರುವುದೆಂದವರು ಅಭಿಪ್ರಾಯ ಪಟ್ಟರು. ಈಗ ಕೆಲವೆಡೆ ನಿಯಂತ್ರಣದಕ್ಕಿಂತ ಬೆಲೆ ಏರಿರಬಹುದಾದರೂ—ಇದು ಸ್ವಾಭಾವಿಕ. ಮುಂದೆ ಮುಕ್ತ ಪೇಟೆಯ ದರ ಕಾನೂನಾಗಿಯೇ ಇಳಿಯುವುದು ಎಂದರವರು. ಕಲ್ಕತ್ತೆಯಲ್ಲಿ ಆಹಾರ ಧೋರಣೆಯ ನೆಪದಿಂದ ನಡೆಯುತ್ತಿರುವ ದುಷ್ಕೃತ್ಯಗಳನ್ನು ಕಂಡಾಗ—ನಮ್ಮ ಜನರಲ್ಲಿ ಇನ್ನೂ ಹೊಣೆಗಾರಿಕೆಯ ಸ್ಪಷ್ಟ ಜ್ಞಾನವಿಲ್ಲದಿರುವುದಕ್ಕಾಗಿ ವಿಷಾದಿಸಬೇಕಾಗಿದೆ. ಕೇಂದ್ರ ಸರಕಾರವು ಬೃಹತ್ ಕಲ್ಕತ್ತೆಗೆ ಆಹಾರದ ಪೂರೈಕೆಯನ್ನು ತ್ರೀಘ್ರಾತಿಶೀಘ್ರ ಮಾಡಲಿದ್ದರೂ—ಅಲ್ಲಿ ಎಸಿಸಿನವರ ಆಟೋಪವೆಂಬುದಾಗಿ ಪ್ರದರ್ಶನಗಳೂ, ಹಲ್ಲೆಗಳೂ ನಡೆಯುತ್ತಿವೆ. ಸರಕಾರದ ಕಡೆಯಿಂದ ಎಷ್ಟೋ ಮಂದಿಯನ್ನು—ಅವರಲ್ಲಿ ಮೂರು ಶಾಸನ ಸಭಾ ಸದಸ್ಯರೂ ಇದ್ದಾರೆ—ಬಂಧಿಸಲಾಗಿದೆ. ಈಶಾನ್ಯ ಮಾಲೆಯ ಅಸ್ಸಾಮಿನಲ್ಲಿ ನೆರೆಯ ಹಾವಳಿ ಜೋರಾಗಿದೆ. ಇಂಥದರಲ್ಲಿ ಸರಕಾರದ ದಕ್ಷತೆಯೊಡನೆ ಜನತಾ ಸಹಕಾರವೂ ಬೇಡವೇ ಎಂಬುದು ಪ್ರಶ್ನೆ.

ವಿನಂತಿ

ಪ್ರಪಂಚದ ಜನರಲ್ಲಿ ಹೆಚ್ಚಿನವರು ಶ್ರೀ ರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ಜೀವನ ಹಾಗೂ ಉಪದೇಶಗಳಿಗೆ ಚಿರಪರಿಚಿತರು. ಹಾಗೆಂದು ಇವರಲ್ಲಿ ಅಧಿಕಾಂಶ ಜನಕ್ಕೆ ಶ್ರೀ ಶಾರದಾ ದೇವಿಯ ಕುರಿತು ಹೆಚ್ಚಿನ ತಿಳುವಳಿಕೆ ಇಲ್ಲ. ಏಕಾಂತದಲ್ಲಿಯೇ ಕಳೆದ ಅವರ ಸರಳ ಹಾಗೂ ಪವಿತ್ರ ಜೀವನ ವಿಶ್ವದೃಷ್ಟಿಗೆ ಹೊರಗೊಂಡಿದ್ದುದಷ್ಟೆ ಅಲ್ಲ—ಮಾನವ್ಯಕ್ತಿನೇ ಆದರಿಂದ ಪಾಠ ಕಲಿಯಲಿಕ್ಕಿದೆ. ಈ ಅಪ್ರತಿಮ ಜೀವದ ಕತೆಯು ಶತಮಾನಗಳಿಂದ ನಮ್ಮ ಜನ್ಮಭೂಮಿಯ ಉನ್ನತಾದರ್ಶವಾದ ಸ್ತ್ರೀತ್ವವನ್ನು ಜನಪ್ರಿಯ ರೀತಿಯಲ್ಲಿ ಮನವರಿಕೆ ಮಾಡಿಕೊಡಲು ಸಹಾಯಕವೆನಿಸುವುದು ನಿಶ್ಚಯ. ಈ ಎಲ್ಲ ವಿಷಯಗಳ ಮಹತ್ವವನ್ನು ಮನಗಂಡು ೧೯೫೩ನೇ ಇಸವಿಯನ್ನು ಪೂಜ್ಯ ಮಾತೆಯ ಜನ್ಮಶತಾಬ್ದಿಯಾಗಿ ಆಚರಿಸುವ ಸಂಕಲ್ಪ ಮಾಡಿದ್ದೇವೆ. ಜನ್ಮ ಶತಾಬ್ದಿಯ ಉತ್ಸವ ಸಮಿತಿಯು ಶ್ರೀ ಶಾರದಾ ದೇವಿಯ ಜೀವನ ಚರಿತ್ರೆ ಮತ್ತು ಬೋಧನೆಗಳನ್ನೊಳಗೊಂಡ ಒಂದು ಗ್ರಂಥರಚನೆಯಲ್ಲಿ ತೊಡಗಿದೆ. ಇವಲ್ಲದೆ—ಇನ್ನಿತರ ಅಮೂಲ್ಯ ಕಾರ್ಯ ಪ್ರಣಾಳಿಯನ್ನೂ ಯೋಜಿಸಲಾಗಿದೆ. ಇವಕ್ಕೆಲ್ಲ ಸುಮಾರು ಒಂದು ಲಕ್ಷ ರುಪಾಯಿ ವೆಚ್ಚ ಒಂದೀತೆಂದು ಅಂದಾಜು—ಹೀಗಿರುವುದರಿಂದ ೫೦ ರೂ. ಕ್ಕಿಂತ ಹೆಚ್ಚು ಕಾಣಿಕೆ ನೀಡಿ, ಸದಸ್ಯರಾಗಿ ಸೇರಿ, ಸರ್ವ ಮಹಾಜನರೂ ನೆರವಾಗಬೇಕೆಂದು ವಿನಂತಿಸುತ್ತೇನೆ. ಸ್ತ್ರೀತ್ವ ಹಾಗೂ ಮಾತೃತ್ವದ ಪುರೋಗತಿಯಲ್ಲಿ ವಿಶ್ವಾಸವುಳ್ಳವರು ಶಕ್ತ್ಯನುಸಾರ ಸಹಾಯ ನೀಡಬೇಕೆಂದು ಕೇಳಿಕೊಳ್ಳುತ್ತೇವೆ. ಕಾಣಿಕೆಯನ್ನು ಕಾರ್ಯದರ್ಶಿ, ಪೂಜ್ಯಮಾತಾ ಜನ್ಮ ಶತಾಬ್ದಿ, ಬೇಲೂರು ಮಠ, ಹೌರಾ ಜಿಲ್ಲೆಗೆ ಕಳಿಸಿಕೊಡಿರಿ.

—ಸ್ವಾಮಿ ಅವಿನಾಶಾನಂದ

[illegible]

ಶ್ರೀ ಕೆ. ಕೆ. ಶೆಟ್ಟಿ
ಅತ್ಯಾಧುನಿಕ
ಸಾಮಾಜಿಕ
ನಾಟಕ
ಬೆಲೆ ರೂ 1 4 ಆ

ಅತ್ಯಂತ ಪರಿಣಾಮಕಾರಿ ಕ್ರಾಂತಿಕಾರಕ ನಾಟಕ
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಪ್ರಜಾಪ್ರಭುತ್ವ ಪದ್ಧತಿ

ಪ್ರಜಾಪ್ರಭುತ್ವದ ತತ್ವಗಳಲ್ಲಿ ಕಮ್ಯೂನಿಸ್ಟರಿಗೆ ಎಷ್ಟರಮಟ್ಟಿಗೆ ನಿಷ್ಠೆ ಇದೆ ಎಂಬುದನ್ನು ಬಹಿರಂಗವಾಗಿ ಪರೀಕ್ಷಿಸುವ ಸಮಯ ಈಗ ಒದಗಿ ಬಂದಿದೆ–ಚುನಾವಣೆಗಳಲ್ಲಿ ಇದಿರಾಳಿಗಳಿಗಿಂತ ಅಧಿಕ ಮತವನ್ನು ಪಡೆದು, ಶಾಸನ ಸಭೆಗಳನ್ನು ಅಥವಾ ಪಾರ್ಲಿಮೆಂಟನ್ನು ಸೇರಿಕೊಂಡ ಮಾತ್ರಕ್ಕೆ ಕಮ್ಯೂನಿಸ್ಟರು ಸಾಧುಗಳಾಗಿ ಪರಿವರ್ತಿತಗೊಳ್ಳಲಿಲ್ಲವೆಂಬುದನ್ನು ಸದ್ಯ ಮರೆಯಲಾರೆವು. ಅದರೂ ಚುನಾವಣೆಗಳನ್ನು ಕಾದುವ ಕಾಲದಲ್ಲಿ ಜನರಿಗೆಕೊಟ್ಟ ಆಶ್ವಾಸನೆಗಳನ್ನು ಪೂರೈಸಲಿಕ್ಕೆ ಘಟನಾತ್ಮಕವಾದ ರೀತಿಯಲ್ಲಿ ಹೆಣಗಲಿಕ್ಕಿರುವ ಅವ್ಪದದ ಸದುಪಯೋಗ ಮಾಡಿಕೊಳ್ಳಲು ಬಯಸುವುದೆಂಬುದನ್ನು ತಾವು ಮನಗಂಡಿರುವುದಾಗಿ ಶ್ರೀ ಎ. ಕೆ. ಗೋಪಾಲನ್ ಹಿಂದೊಮ್ಮೆ ಹೇಳಿದ್ದರು. ಈಚೆಗೆ ಡಾ. ಹೀರೇಂದ್ರ ಮುಕರ್ಜಿಯವರೂ ಇದೇ ಮಾತನ್ನು ಪುಷ್ಟಿಗೊಳಿಸಿದರು. ಆದರೆ ಲೋಕಸಭೆಯಲ್ಲಿ ಮೊನ್ನೆ ನಡೆದ ಘಟನೆಗಳನ್ನು ಪರಾಮರ್ಶಿಸಿದರೆ ಕಮ್ಯೂನಿಸ್ಟರು ಇನ್ನೂ ಪ್ರಜಾಪ್ರಭುತ್ವದ ರೀತಿ ನೀತಿಗಳಿಗೆ ಒಗ್ಗಿಕೊಂಡಿಲ್ಲ ತಮ್ಮದೇ ಆದ ದರ್ಪ ಮತ್ತು ಅನ್ಯಾಯದ ಕ್ರಮಗಳಿಗೆ ಅಂಟಿಕೊಂಡಿರುವರೆಂಬುದನ್ನು ಯಾರೂ ತಿಳಿಯಬಹುದು. ರಾಷ್ಟ್ರದ ಸಾರ್ವಭೌಮಾಧಿಕಾರದ ಮಹತ್ವಾಂಗವಾಗಿರುವ ಪಾರ್ಲಿಮೆಂಟಿನಲ್ಲಿ, ಮಕ್ಕಳಾಟಿಕೆಯ ವಾಗ್ಯುದ್ಧವನ್ನು ಹೂಡಿ—ಶಿಸ್ತು ಗೌರವಗಳಿಗೆ ತಿಲಾಂಜಲಿಯಿತ್ತುದು ಎಷ್ಟು ಮಾತ್ರಕ್ಕೂ ಭೂಷಣವಲ್ಲ. ಅಧ್ಯಕ್ಷರು ಕೊಟ್ಟ ನಿರ್ಣಯವನ್ನು ಸ್ವೀಕರಿಸುವುದಾಗಲೀ, ಅವರು ಅನ್ಯಾಯ ಬಗೆದಿದ್ದರೆ ಘಟನಾತ್ಮಕ ರೀತಿಯಲ್ಲಿ ಆ ಅಧ್ಯಕ್ಷರನ್ನು ಸ್ಥಾನಭ್ರಷ್ಟಗೊಳಿಸುವುದಾಗಲೀ ಯೋಗ್ಯ ಮಾರ್ಗಗಳು ಅವನ್ನು ಬಿಟ್ಟುಕೊಟ್ಟು ಸಭೆಯ ಸಾರ್ಜಂಟನಿಂದ ಹೊರ ದೂಡಿಸಿಕೊಳ್ಳುವನಕವೂ ಪ್ರಸಂಗವನ್ನು ಬೆಳೆಯಲು ಅವಕಾಶ ಕಲ್ಪಿಸಿದ ಸದಸ್ಯರ ವಿವೇಕ ಬುದ್ಧಿಯ ಬಗ್ಗೆ ಸಂದೇಹ ತೋರುವುದು.

ಅನುಚಿತ ವರ್ತನೆ

ಲೋಕ ಸಭೆಯಲ್ಲಿ ಗೃಹಮಂತ್ರಿ ಡಾ। ಕಟಜೂ ಪ್ರತಿಬಂಧಕ ಸ್ಥಾನಬದ್ಧತೆಯ ಮಸೂದೆಯ ಅಗತ್ಯವನ್ನು ಬಿಂಬಿಸುತ್ತಾ ಭಾಷಣ ಮಾಡಿದಾಗ ಕಮ್ಯೂನಿಸ್ಟರು ಹಿಂಸಾಚಾರಗಳ ಆದರ್ಶ ಇಟ್ಟುಕೊಂಡಿರುವರೆಂದೂ ಗುಲ್ಲೆಬ್ಬಿಸುವುದೇ ಅವರ ಧ್ಯೇಯವೆಂದೂ ಬಲವಾಗಿ ಪ್ರತಿಪಾದಿಸಿದರು. ಗೃಹಮಂತ್ರಿಯ ಭಾಷಣವನ್ನು ನಡು ನಡುವೆ ತಡೆದು ನಿಲ್ಲಿಸಲು ಕಮ್ಯೂನಿಸ್ಟ ಸದಸ್ಯರು ಕೆಲವರು ಪ್ರಯತ್ನಿಸಿದರು. ಇದನ್ನು ಕಂಡು ಅಧ್ಯಕ್ಷ ಮಾವಳಣಕರು ಹೀಗೆ ಮಾಡಿದರೆ, ಸದಸ್ಯರು ಸಭೆಯನ್ನು ಬಿಟ್ಟು ಹೊರ ಹೋಗಬೇಕಾಗುವುದೆಂದರು. ಇದಕ್ಕೆ ಹಿರೇಂದ್ರ ಮುಕರ್ಜಿ ಆಕ್ಷೇಪ ತೆಗೆದು ಕೇವಲ ವಿರೋಧಿ ಗುಂಪಿಗೆ ಮಾತ್ರ ಈ ನಿರ್ಣಯ ಅನ್ವಯಿಸುವುದೇ? ಎಂದಾಗ ಅಧ್ಯಕ್ಷರು ತಾವೆಲ್ಲ ಸದಸ್ಯರನ್ನೂ ಉದ್ದೇಶಿಸಿ ಹಾಗೆ ಹೇಳಿದುದೆಂದೂ, ತಮ್ಮ ನಿರ್ಣಯವು ಇಡೀ ಸಭೆಗೆ ಅನ್ವಯಿಸುವುದಾಗಿಯೂ ಸಾರಿದರು ಸಭೆಯ ದನ್ ನಂಬಿಯಾರರು ಪಾರ್ಲಿಮೆಂಟಿನ ತತ್ವಗಳಿಗೆ ಅನುಚಿತ ರೀತಿಯಲ್ಲಿ ನಡೆದುಕೊಂಡರೆಂದು ಅಧ್ಯಕ್ಷರು ಹೇಳಲು–ಶ್ರೀ ನಂಬಿಯಾರರು ತಮ್ಮ ಹೆಸರು ತೆಗೆದು ಅನ್ಯಾಯ ಬಗೆದಿರಿ ಎಂದು ದೂರಿದರು. ಸದಸ್ಯರಿಗೆ ಅನ್ಯಾಯ ಬಗೆದೆನೆಂಬ ಮಾತನ್ನು ಹಿಂತೆಗೆದುಕೊಳ್ಳಬೇಕಾಗಿ ಅಧ್ಯಕ್ಷರು ಹೇಳಿದರು, ಇದಕ್ಕೆ ಒಪ್ಪದಿರಲು ಶ್ರೀ ನಂಬಿಯಾರರು ಸಭೆ ಬಿಟ್ಟು ಹೋಗಬೇಕೆಂದರು. ಇಲ್ಲಿ ಬಲವಂತವಾಗಿ ಹೊರದಬ್ಬುವ ಪ್ರಸಂಗ ಬಂತು. ಇದರಿಂದ ಅಶಾಂತಿಯ ಪರಿಸ್ಥಿತಿ ಉದ್ಭವಿಸಿತಾಗಿ, ತಮ್ಮ ಪಕ್ಷವು ಚೆನ್ನಾಗಿ ಕಾರ್ಯಕಲಾಪಗಳಲ್ಲಿ ಭಾಗವಹಿಸಲಾಗದು ಎನ್ನುತ್ತಾ ಹಿರೇಂದ್ರ ಮುಕರ್ಜಿ, ನಂಬಿಯಾರರನ್ನು ಮ... ಮಾಡಿಕೊಂಡು, ತಮ್ಮೆಲ್ಲ ಪಕ್ಷದ ಸದಸ್ಯರ ಗೂಡೆ ಸಭಾತ್ಯಾಗ ಮಾಡಿದರು.

ಗೌರವದ ನಡತೆ

ಈ ರೀತಿಯ ಘಟನೆ ಭಾರತದ ಪಾರ್ಲಿಮೆಂಟಿನ ಚರಿತ್ರೆಯಲ್ಲಿಯೇ ಅಪೂರ್ವ–ಪ್ರಧಾನಿ ನೆಹರೂ ಈ ವಿಷಯವನ್ನು ಪ್ರಸ್ತಾಪಿಸಿ, ಅಧ್ಯಕ್ಷರ ಅವಹೇಳನೆಯಾಗುವ ರೀತಿಯಲ್ಲಿ ಸದಸ್ಯರೊಬ್ಬರು ವರ್ತಿಸಿದುದು ಅನುಚಿತವಾಯಿತೆಂದು ವಿಷಾದ ಪ್ರದರ್ಶಿಸಿದರು. ತಾನು ಸಭಾಧುರೀಣನಿರುವುದರಿಂದ, ಎಲ್ಲ ಸದಸ್ಯರೂ ಅಧ್ಯಕ್ಷರಿಗೆ ನಿಷ್ಠೆತೋರುವಂತೆ ಮಾಡುವುದು ತನ್ನ ಕರ್ತವ್ಯವೆಂದೂ, ಈಗಾದ ಘಟನೆಯನ್ನು ಪರಿಶೀಲಿಸಲು ಹಕ್ಕು ಬಾಧ್ಯತೆಯ ಸಮಿತಿಗೆ ಈ ವಿಷಯ ಒಪ್ಪಿಸುವುದಾಗಿಯೂ ಹೇಳಿದರು.

ಸಂಯಮ ಮೀರುವ

ಸಮಸ್ಯೆಯನ್ನು ನೋಡುವ ನಮ್ಮ ದೃಷ್ಟಿಯಲ್ಲಿ

ಹೀಗೆ ದುಡುಕಿನಿಂದ ವರ್ತಿಸಿ ಸಭಾ ಗೌರವಕ್ಕೆ ಕುಂದನ್ನುಂಟುಮಾಡುವುದು ತರವಲ್ಲವೆಂಬುದನ್ನು ಯಾರಾದರೂ ಒಪ್ಪಬೇಕು. ಶಿಸ್ತು ಮತ್ತು ಸಂಯಮ, ಸಹನೆಗಳಿಂದ ಸಮಸ್ತ ರಾಷ್ಟ್ರದ ಕಲ್ಯಾಣಾರ್ಥವಾಗಿ ತಾವಿಲ್ಲಿ ಇದ್ದೇವೆಯೇ ಹೊರತು–ಒಂದು ಪಕ್ಷದ ಉದ್ದೇಶ ಸಿದ್ಧಿಗಾಗಿಯಲ್ಲ ಎಂಬ ಸತ್ಯವನ್ನು ಸದಸ್ಯರು ಮೊದಲು ಮನವರಿಕೆ ಮಾಡಿಕೊಂಡರೆ ಈ ಬಗೆಯ ಪೀಕಲಾಟ ಉಂಟಾಗುವುದಿಲ್ಲ. ಮದ್ರಾಸು ಶಾಸನಸಭೆಯಲ್ಲಿ ಪೋಲೀಸು ಖಾತೆಯ ಬೇಡಿಕೆಯ ಮೇಲೆ ಚರ್ಚೆ ನಡೆದಾಗ ಮುಖ್ಯಮಂತ್ರಿ ರಾಜಗೋಪಾಲಾಚಾರಿ ಹೇಳಿದುದೂ ಇದನ್ನೆ– “ಈಗೀಗ ಕಮ್ಯೂನಿಸ್ಟರು ಹಿಂಸಾಮಾರ್ಗವನ್ನು ತ್ಯಜಿಸಿ, ಶಾಂತ ಜೀವನದ ಕಡೆಗೆ ಹೊಂದಿಕೊಳ್ಳುತ್ತ ಬಂದಿರುವುದನ್ನು ನಾನು ಗಮನಿಸಿದ್ದೇನೆ, ಅವರು ಮುಂದೆಯೂ ಇದೇ ರೀತಿಯಲ್ಲಿ ನಡೆದುಕೊಳ್ಳುವರೆಂಬ ಆಶ್ವಾಸನೆ ನನಗೆ ಬೇಕಾಗಿದೆ. ಹಿಂಸಾಚಾರಗಳು ಕಡಿಮೆಯಾದುದನ್ನು ಲಕ್ಷಿಸಿಯೇ ಪೋಲೀಸು ಪಡೆಯನ್ನೂ ಕಮ್ಮಿಮಾಡುವೆವು” ಎಂದು ರಾಜಾಜಿ ನುಡಿದರು, ಪೋಲೀಸು ಖಾತೆಯು ಬಹಳ ಕೆಲವೊಮ್ಮೆ ಹೀನಾಯವಾಗಿ ವರ್ತಿಸಿದರೂ, ಸಾಮಾನ್ಯವಾಗಿ ಮದ್ರಾಸು ಪೋಲೀಸು ಅತ್ಯಂತ ದಕ್ಷವಾಗಿದೆ ಎಂದವರು ಹೊಗಳಿದರು. ಕಡಿತದ ಸೂಚನೆಯು ಬಿದ್ದುಹೋಗಿ, ಬೇಡಿಕೆ ಸ್ವೀಕಾರವಾಯಿತು.

ಪಾನ ಪ್ರತಿಬಂಧ

ಮದ್ರಾಸು ಶಾಸನ ಸಭೆಯಲ್ಲಿ ತೀರ ಮತಭೇದವೆದ್ದ ಪ್ರಮುಖ ವಿಷಯ ಪಾನ ಪ್ರತಿಬಂಧ ಘೋಷಣೆ. ವಿರೋಧಿ ಗುಂಪಿನವರು ಸರಕಾರದ ಪಾನ ಪ್ರತಿಬಂಧ ಧೋರಣೆಯು ಸಂಪೂರ್ಣ ಅಯಶಸ್ವಿಯಾಗಿದೆ ಎಂದು ದೂರಿದರೆ, ಇನ್ನು ಕೆಲವು ಸದಸ್ಯರು ಪಾನಪ್ರತಿಬಂಧ ಒಳ್ಳೆಯದನ್ನೆ ಮಾಡಿದೆ ಎಂದೂ, ಆದರೆ ಸಿಹಿ ಕಳ್ಳಿಗೆ (=ನೀರಾ) ಉದಾರವಾಗಿ ಪರ್ಮಿಟನ್ನು ಕೊಡುವುದಗತ್ಯವೆಂದೂ ಪ್ರತಿಪಾದಿಸಿದರು. ವಿರೋಧಿ ಗುಂಪಿನ ಧುರೀಣ ಶ್ರೀ ಟಿ. ವಿಶ್ವನಾಥಂ ಪಾನ ಪ್ರತಿಬಂಧದ ಪರಿಣಾಮಗಳನ್ನು ಪರಿಶೀಲಿಸಿ ವರದಿ ಮಾಡಲು ಒಂದು ಸಮಿತಿಯು ನೇಮಕವಾಗುವ ಅಗತ್ಯವನ್ನು ಚೆನ್ನಾಗಿ ಬಿಂಬಿಸಿದರು, ಆದರೆ ಈ ಎಲ್ಲ ಟೀಕೆಗಳಿಗೂ ಮುಖ್ಯ ಮಂತ್ರಿ ಜಗ್ಗಲಿಲ್ಲ–ಪಾನ ಪ್ರತಿಬಂಧದಿಂದ ಬಡ ಜನತೆಗೆ ಕಲ್ಯಾಣವಾಗಿಯೇ ತೀರಿದೆ ಎಂದವರು ಘಂಟಾ ಘೋಷವಾಗಿ ಸಾರಿದರು, ಪಾನಪ್ರತಿಬಂಧವನ್ನು ಮುಂದುವರಿಸ ಬೇಕೇ ಬೇಡವೇ ಎಂಬುದನ್ನು ವಿಚಾರಿಸಲು ಸಮಿತಿ ನೇಮಿಸುವುದೆಂದರೆ–ಪ್ರತಿಪಕ್ಷದ ಕುಹಕ ತನವೇ ಸೈ. ಘಟನೆಯಲ್ಲಿ ಕಾನೂನು ಪ್ರಕಾರವಾಗಿ ಪಾನ ಪ್ರತಿಬಂಧವನ್ನು ಸಾಧಿಸಬೇಕೆಂದಿಲ್ಲ ಎನ್ನುವ ವಾದವೂ ಹುರುಳಿಲ್ಲದ್ದು. “ಪಾನ ಪ್ರತಿಬಂಧವು ಒಳ್ಳೆಯ ಕೆಲಸವಾದುದರಿಂದ–ಜನರಿಗೆ ಒಳ್ಳೆಯದನ್ನು ಮಾಡುವ ತನ್ನ ಬಯಕೆಯನುಸಾರ ಅದನ್ನು ಇನ್ನಷ್ಟು ಬಿಗಿಗೊಳಿಸಲಾಗುವುದು. “ಪ್ರತಿಯೊಂದನ್ನೂ ಅದರ ಯಶಾಪಯಶಗಳ ಮೂಲದ ಮೇಲಿಂದ ತೂಗ ಬೇಡಿರಿ. ಒಳ್ಳೆಯ ಕೆಲಸವು ಮೊದಲಿಗೆ ಅಪಯಶ ಪಡೆದರೂ ಕ್ರಮವಾಗಿ ಅದು ಉತ್ತಮ ಪರಿಸ್ಥಿತಿಯನ್ನು ನಿರ್ಮಿಸುವುದು. ಪಾನಪ್ರತಿಬಂಧದ ಒಳಿತು-ಕೆಡುಕುಗಳ ನಿರ್ಣಯಕ್ಕೆ ಎರಡು ತಲೆಮಾರುಗಳೇ ಸರಿಯಬೇಕಾದೀತು.” ಎಂದು ರಾಜಾಜಿ ಉಪದೇಶಿಸಿದರು. ಪಾನಪ್ರತಿಬಂಧ ಸಾಧಿಸಿದ್ದೇನೆಂಬುದನ್ನು ವಿಮರ್ಶಿಸಿ ವರದಿ ಮಾಡಬೇಕೆಂಬ ಕಡಿತದ ಸೂಚನೆಯನ್ನು ಮತಕ್ಕೆ ಹಾಕಿದಾಗ ಪರವಾಗಿ 147 ಸದಸ್ಯರೂ ವಿರುದ್ಧ 170 ಸದಸ್ಯರೂ ಬೆಂಬಲ ಕೊಟ್ಟು, ಸೂಚನೆ ತಿರಸ್ಕೃತಗೊಂಡಿತು. ವಿರೋಧಿಗುಂಪಿನ ಕೆಲವು ಮಂದಿ ಸರಕಾರದೊಡನೆ ಸೇರಿಕೊಂಡು ಸೂಚನೆಗೆ ವಿರುದ್ಧ ಮತಕೊಟ್ಟರು.

ಪ್ರಭಾವಿಯಾದ ಶಿಕ್ಷಣ

ರಾಜ್ಯವಲ್ಲಿ ಹೊಸ ನೀರಾವರಿ ಯೋಜನೆಗಳನ್ನು ಕೈಕೊಳ್ಳುವುದಿಲ್ಲ–ಆದರೆ ಕೈಗೊಂಡಿರುವ ಎಲ್ಲ ಯೋಜನೆಗಳನ್ನು ಬೇಗನೆ ಮುಗಿಸುವುದು ಸರಕಾರದ ಇಚ್ಛೆ ಎಂದು ಹೇಳಲಾಗಿದೆ. ಪ್ರಕೃತ ಹಣದ ಕೊರತೆಯಿಂದಾಗಿ ಹೊಸತಾಗಿ ಏನನ್ನೂ ಮಾಡಲು ಬರುವುದಿಲ್ಲ ಎಂದು ಲೋಕೋಪಯೋಗಿ ಮಂತ್ರಿ ಶ್ರೀ ಎನ್. ರಂಗರೆಡ್ಡಿ ಹೇಳಿದರು ಭೂಕಂದಾಯ ಹಾಗು ಭೂಧಾರಣ ಪದ್ಧತಿಯಲ್ಲಿ ಏನು ಸುಧ

ZANDU Mahayogaraja Guggula

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋ... ...ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 ತೊಲೆಗೆ ರೂ 3/- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ
2 ಶ್ರೀ. ವಿ. ವಿ ಶೆಣೈ, ಕೆಮಿಸ್ಟ್, ಕಾರ್ಕಳ
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು
4 ಎಲ್ ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರ ಶರತ್ತುಗಳಿಗೆ ಬರೆಯಿರಿ.

DAMODAR & CO.,
Nainiappa Naicken Street, Park Town–**MADRAS** 3.

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ಸ್ ಓಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ರಿವರ್ಷನರಿ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರೀತ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.

ಡಿ. ಬ್ರಾಂಚ್ ಮೆನೇಜರ್;

ಅನುಚಿತ ಚಪಲ

ಪರಿಮಾರ್ಜನೆ ಅತ್ಯಂತ ಅಪೇಕ್ಷಣೀಯ

ತೀರಿಸುತ್ತಿರುವ ಸಂಗತಿಯೂ ತಿಳಿದು ಬಂದಿದೆ. ಅನ್ಯಾಯವಾಗಿ ಒಕ್ಕಲೆಬ್ಬಿಸುವುದನ್ನು ತಡೆಯಲು ಸರಕಾರವು ಒಂದು ಸುಗ್ರೀವಾಜ್ಞೆಯನ್ನು ಈ ಅಧಿವೇಶನ ಮುಗಿದ ಮೇಲೆ ಹೊರಡಿಸಬಹುದೆಂಬ ಸೂಚನೆಯನ್ನೂ ಮುಖ್ಯಮಂತ್ರಿ ರಾಜಾಜಿ ಕೊಟ್ಟಿದ್ದಾರೆ. ವಿದ್ಯಾ ಇಲಾಖೆಯ ಬೇಡಿಕೆಯನ್ನು ಚರ್ಚಿಸುವಾಗ ಸದಸ್ಯರು ಅಧ್ಯಾಪಕರ ವೇತನ, ಶಿಕ್ಷಣ ಪದ್ಧತಿಯಲ್ಲಿ ಮೂಲಭೂತ ಸುಧಾರಣೆ, ಒತ್ತಾಯದ ಪ್ರಾಥಮಿಕ ಶಿಕ್ಷಣದ ಅವಶ್ಯಕತೆ, ಮಾಧ್ಯಮಿಕ ಶಿಕ್ಷಣದಲ್ಲಿ ಪ್ರಗತಿ ಮುಂತಾದ ಹಲವಾರು ಉಪಯುಕ್ತ ಸೂಚನೆಗಳನ್ನು ಮಾಡಿದರು. ಹಿಂದುಳಿದ ವರ್ಗಗಳಿಗೂ ಪರಿಶಿಷ್ಟ ಜಾತಿಯವರಿಗೂ ಹೆಚ್ಚು ಅನುಕೂಲತೆಗಳು ಬೇಕೆಂದು ಸದಸ್ಯರಲ್ಲಿ ಕೆಲವರು ಅಭಿಪ್ರಾಯಪಟ್ಟರು. ಮಂತ್ರಿ ಡಾ. ಎಂ. ವಿ. ಕೃಷ್ಣರಾಯರು ಉತ್ತರಿಸುತ್ತಾ ೧೪ ವರ್ಷ ಪ್ರಾಯದವರೆಗೆ ಎಲ್ಲ ಮಕ್ಕಳಿಗೆ ಉಚಿತವಾಗಿ ಪ್ರಾಥಮಿಕ ಶಿಕ್ಷಣವನ್ನು ನೀಡುವುದಕ್ಕೆ ಸರಕಾರ ಪ್ರಥಮ ಪ್ರಾಶಸ್ತ್ಯ ನೀಡುವುದೆಂದರು. ೫೦೦ಕ್ಕೂ ಮಿಕ್ಕಿದ ಜನ ವಸತಿಯುಳ್ಳ ಪ್ರತಿಯೊಂದೂ ಹಳ್ಳಿಗೆ ಪ್ರಾಥಮಿಕ ಶಾಲೆಯನ್ನು ಒದಗಿಸುವುದು ಸರಕಾರದ ಬಯಕೆ ಎಂದವರು ನುಡಿದರು- ಶಿಕ್ಷಣದಲ್ಲಿ ಸುಧಾರಣೆ ಮತ್ತು ಮೂಲ ಶಿಕ್ಷಣ ಪದ್ಧತಿಯ ಕುರಿತು ಸರಕಾರ ಪರಿಶೀಲಿಸುತ್ತಿದೆ. ಮಾಧ್ಯಮಿಕ ಶಿಕ್ಷಣವು ವಿದ್ಯಾರ್ಥಿಗಳಿಗೆ ಅತ್ಯಂತ ಪ್ರಯೋಜನಕಾರಿಯಾಗುವಂತೆ ಪ್ರಯತ್ನಿಸಬೇಕೆಂದು ತನ್ನ ಅಭಿಪ್ರಾಯವಿರುವುದಾಗಿ ಅವರು ಹೇಳಿದರು. ಸ್ತ್ರೀ ವಿದ್ಯಾರ್ಥಿಗಳ ಮಟ್ಟಿಗೆ ಇದು ಇನ್ನಷ್ಟು ಅಗತ್ಯ. ಇತ್ತ ಜೀವನ ರಂಗವನ್ನು ಪ್ರವೇಶಿಸುವುದಕ್ಕೇ ಆಗಲೀ, ಅತ್ತ ಉಚ್ಚ ಶಿಕ್ಷಣಕ್ಕೆ ಕಾಲಿಡುವಾಗಲೇ ಆಗಲೀ—ಮಾಧ್ಯಮಿಕ ಶಿಕ್ಷಣದ ಮೂಲಕ ಯೋಗ್ಯ ಹಿನ್ನೆಲೆಯನ್ನು ಪ್ರಭಾವಿಯಾದ ರೀತಿ ಕಲ್ಪಿಸಿಕೊಡುವುದು ಎಲ್ಲರಿಗೂ ಇಷ್ಟ.

ಭವ್ಯ ಕಟ್ಟಡಗಳು ಅಡ್ಡಿ

ಶಾಲೆ ಕಾಲೇಜುಗಳಿಗಾಗಿ ಭವ್ಯವಾದ ಕಟ್ಟಡಗಳಿರಬೇಕೆಂಬುದನ್ನು ತಾನು ಒಪ್ಪುವುದಿಲ್ಲವಾಗಿ ಮಂತ್ರಿ ಮಹಾಶಯರು ಹೇಳಿದುದು ಗಮನೀಯವಾಗಿದೆ.

"ಒಂದು ನೂರು ವರ್ಷ ಬಾಳುವ ಭವ್ಯವಾದ ಕಟ್ಟಡಗಳಲ್ಲಿಯೇ ಸಂಗವನ್ನು ನೀಡಬೇಕೆಂಬುದು ಭ್ರಮೆಯೇ ಸರಿ. ಈಚೆಗೆ ಹೊಸತಾಗಿ ಕಾಲೇಜು ವರ್ಗಗಳನ್ನು ತೆರೆಯಲು ಅನುಮತಿ ಬೇಕೆಂದು ಕೇಳಿದಾಗ—ಒಂದು ಹುಲ್ಲಿನ ಮಾಡನ್ನಾದರೂ ಕಟ್ಟಿ ಕ್ಲಾಸು ನಡೆಸಲು ಸಾಧ್ಯವಿದ್ದರೆ ಹಾಗೆ ಮಾಡಿರಿ ಎಂದೆನು. ಕಟ್ಟಡಗಳು ಅಗತ್ಯವಿಲ್ಲವೆಂದಲ್ಲ-ಪ್ರಯೋಗಶಾಲೆಯ ಅಮೂಲ್ಯ ಉಪಕರಣಗಳನ್ನೂ ಇತರ ಬೆಲೆಯುಳ್ಳ ಪದಾರ್ಥಗಳನ್ನೂ ಕೆಡದಂತೆ ರಕ್ಷಿಸಲು ಅವು ಬೇಕು. ಆದರೆ ಸಾಮಾನ್ಯ ಶಿಕ್ಷಣಕ್ಕೆ ಇಷ್ಟೆಲ್ಲ ಆಡಂಬರ ಬೇಡ."

ಇದೇ ಅಭಿಪ್ರಾಯವನ್ನು ಪ್ರಧಾನಿ ನೆಹರೂ ಮಾರ್ಗ ಸಂಶೋಧಕ ಕೇಂದ್ರದ ಉದ್ಘಾಟನೆಯನ್ನು ನೆರವೇರಿಸುತ್ತಾ ಹೇಳಿದರು—"ಈ ಕೇಂದ್ರದ ಕಟ್ಟಡಗಳು ಇನ್ನೂ ಪೂರ್ಣಗೊಂಡಿಲ್ಲ. ಆದರೆ ಅವು ಮುಗಿಯುವವರೆಗೆ ಕಾರ್ಯಾಲಯ ಕಾರ್ಯಭಾರ ಬಿಡುವುದಿಲ್ಲ. ಗಟ್ಟಿಮುಟ್ಟಾದ ಕಟ್ಟಡಗಳಾಗುವ ವರೆಗೆ ನಾವು ಕೆಲಸ ಬಿಟ್ಟು ಕುಂತುಕೊಳ್ಳಲಾರೆವು. ನಮಗೆ ಕಾರ್ಯಾಲಯಕ್ಕೆ ಆಗಲಿ, ಆಸ್ಪತ್ರೆಗಾಗಲೀ, ಶಾಲೆಗಳಿಗಾಗಲೀ, ಯಾವುದಕ್ಕೇ ಆಗಲಿ ಕಟ್ಟಡಗಳು ಬೇಕು. ಹಾಗೆಂದ ಮಾತ್ರಕ್ಕೆ ಅವು ಬಹಳ ವೆಚ್ಚದಿಂದ ಕಟ್ಟಲ್ಪಡಬೇಕೆಂದಿಲ್ಲ. ಶಿಕ್ಷಣ ಇಲಾಖೆಯು ಸುಧಾರಿತ ಮನೋವೃತ್ತಿಯನ್ನು ಬೇಗನೇ ಅನುಸರಿಸುವುದೂ ಹೊಸ ಕಟ್ಟಡಗಳಿಗಾಗಿ ವೆಚ್ಚ ಮಾಡುವ ದುಡ್ಡನ್ನು ವಿದ್ಯಾ ಪ್ರಸಾರಕ್ಕಾಗಿಯೇ ಸದ್ವಿನಿಯೋಗಿಸಲು ಸಾಧ್ಯ" ಎಂದು ನೆಹರೂರ ಹೇಳಿಕೆ.

ದೃಷ್ಟಿಕೋಣ

ನೆಹರೂ ಹೇಳುವಂತೆ ನಮ್ಮ ದೃಷ್ಟಿಕೋಣದಲ್ಲಿ ತೀವ್ರ ಮಾರ್ಪಾಟಾಗುವುದು ಅಪೇಕ್ಷಣೀಯ. ಹೊಸ ಸಂಗತಿ ಎಂದ ಕೂಡಲೆ ಹೆದರಿಬಿಡುವುದು ನಮ್ಮ ನೆತ್ತರಲ್ಲಿ ಕೂಡಿ ಹೋಗಿದೆ- ಆದರೆ ಮನಸ್ಸನ್ನು ಈ ರೀತಿಯ ಅಂಜಿಕೆಯ ಜಾಲದಲ್ಲಿ ಸಿಲುಕಗೊಡದೆ ಹೆಣಗುವಾತನು ವಿವೇಕಿಯೂ ಶೂರನೂ ನಿಜ. ಕಷ್ಟಪರಂಪರೆಗಳನ್ನು ನಿರಾಯಾಸವಾಗಿ ದಾಟಿ ಹೋಗುವ ಹಗುರ ಮನಸ್ಸು ನಮ್ಮಾಗಿರಬೇಕು. ನೆಹರೂ ದಿಲ್ಲಿಯಲ್ಲಿ ಕುಳಿತುಕೊಂಡು ಭಾರತದ ಭವ್ಯ ದಿನಗಳ ಕನಸು ಕಾಣುವುದುಂಟಂತೆ—ಆದರೆ, ಅಷ್ಟು ಮಾತ್ರಕ್ಕೆ ಕೆಲಸವಾಗುವುದಿಲ್ಲ. ಸರಕಾರೀ ರೀತಿಯಿಂದ ಎಷ್ಟೇ ಕೆಲಸ ತೊಡಗಲಿ—ಜನತಾ ಸಹಕಾರವಿಲ್ಲದಿರುವ ವರೆಗೆ ಅವು ಜಯಪ್ರದ ಉದ್ಯಮಗಳಾಗಲಾರವು ಪಾನಪ್ರತಿಬಂಧವೇ ಇದಕ್ಕೆ ಜೀವಂತ ಸಾಕ್ಷಿ. ದುಡಿಮೆಗೆ ಮಹತ್ವ ಕೊಡದ ರಾಷ್ಟ್ರ ಅದು ಭಂಡವಾಳಶಾಹಿಯಾದ ಅಮೇರಿಕವಿರಲಿ, ಕಮ್ಯೂನಿಸ್ಟ ಒಡೆತನದ ರಶಿಯಾವಿರಲಿ, ನಾಶಹೊಂದುವುದು ನಿಶ್ಚಯ. ಭಾರತದಲ್ಲಿ ದುಡಿಮೆಯನ್ನು ಹೀನಾದ್ಯವೆಂದು ಬಗೆಯಲಾಗಿದೆ. ಇದೇ ನಮ್ಮ ಕರುಣಾಜನಕ ಸ್ಥಿತಿಯ ಮೂಲ—ಎಂದು ನೆಹರೂ ಎಚ್ಚರಿಸಿದರು. ಸೋಮವಾರ ದಿನ ಜನಪದ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತವಾಗಿಸುವ ಅಧಿಕಾರಿಗಳನ್ನೂ, ಸಮಸ್ತ ಜನತೆಯನ್ನೂ ಉದ್ದೇಶಿಸಿ ಮಾತನಾಡುವಾಗಲೂ ಇದೇ ಉಪದೇಶದ ಮಾತನ್ನು ನೆಹರೂ ಹೇಳಿದರು—ಭಾರತವು ಸಂಪತ್ ಸಮೃದ್ಧವಾದ ರಾಷ್ಟ್ರವಾಗಿ ಮೆರೆಯಬೇಕಾದರೆ ಜನತಾ ಸಹಕಾರ ಬೇಕು ಎಂದವರ ವಿನಂತಿ. ವಿದ್ಯಾರ್ಥಿಗಳು ಜನರೊಡನೆ ಸೇರಿಕೊಂಡು, ಅವರ ಸಮಸ್ಯೆಗಳನ್ನು ಒಂದೊಂದಾಗಿ ಬಿಡಿಸಲು ಸಹಾಯ ನೀಡಬಹುದೆಂದು ನೆಹರೂ ಸೂಚಿಸಿದರು. ಪ್ರತಿಯೊಬ್ಬನೂ ಕಡ್ಡಾಯವೆಂಬಂತೆ ಒಂದೆರಡು ವರ್ಷ ದೈಹಿಕ ಶ್ರಮದ ಕೆಲಸಗಳಲ್ಲಿ—ತಾರುಣ್ಯದಾದಿಯಲ್ಲಿಯೇ ಸೇರಲಿ—ಅದರಿಂದ ಮನಸ್ಸು ಸ್ವಚ್ಛಗೊಳ್ಳುವುದು. ದೇಹಾರೋಗ್ಯವೂ ಉಳಿಯುವುದು ಎಂದು ನೆಹರೂ ಅಭಿಪ್ರಾಯಪಟ್ಟರು.

ಆರೋಗ್ಯ—ಆಹಾರ

ದೇಹಾರೋಗ್ಯ ರಕ್ಷಣೆಯ ವಿಷಯ ದರಿದ್ರ ಭಾರತದಲ್ಲಿ ಅತ್ಯಂತ ಮಹತ್ವದ ಸಂಗತಿ. ಮದ್ರಾಸು ಶಾಸನಸಭೆಯಲ್ಲಿ ಆರೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟಿ ಸರಕಾರದ ವೈದ್ಯಕೀಯ ಸಹಾಯ ಯೋಜನೆಗಳನ್ನು ವಿವರಿಸಿ ಮಾತನಾಡಿದರು. ಹಳ್ಳಿ ಹಳ್ಳಿಗೂ ಸಂಚಾರಿ ವಾಹನಗಳ ಮೂಲಕ ಹೆಚ್ಚು ಹೆಚ್ಚು ವೈದ್ಯಕೀಯ ಸಹಾಯವನ್ನು ಒದಗಿಸಲಾಗುವುದೆಂದವರು ಹೇಳಿದರು ಕಡ್ಡಾಯವಾಗಿ ವೈದ್ಯಕೀಯ ಅಭ್ಯಾಸಿಗಳು ಹಳ್ಳಿಗಳಲ್ಲಿ ಒಂದೆರಡು ವರ್ಷ ದುಡಿಯಬೇಕೆಂಬ ಸಂಗತಿ ಸರಕಾರದ ವಿಚಾರಾಧೀನವಾಗಿದೆ ಎಂದೂ ಅವರು ನುಡಿದರು. ವೈದ್ಯಕೀಯ ವಿಭಾಗದಲ್ಲಿ ಸ್ತ್ರೀಯರನ್ನು ಉಪೇಕ್ಷಿಸಲಾಗಿಲ್ಲ—ಅವರಿಗೆ ಶಿಕ್ಷಣ ಕೊಡಲು ಯೋಗ್ಯ ಸೌಕರ್ಯಗಳನ್ನು ಒದವಿಸಲಾಗಿದೆಯಲ್ಲದೆ—ಉನ್ನತ ಅಧಿಕಾರಗಳಲ್ಲಿ ಅವರನ್ನು ನೇಮಿಸುವುದೂ ನಡೆದಿದೆ ಎಂದು ಶ್ರೀ ಶೆಟ್ಟರು ತಿಳಿಸಿದರು.

ಆರೋಗ್ಯದಂತೆ ಆಹಾರವೂ ಅಗತ್ಯ ತಾನೆ—ಕೇಂದ್ರ ಆಹಾರ ಮಂತ್ರಿ ಕಿದ್ವಾಯಿ ಈಗ ಸಂಚಾರದಲ್ಲಿದ್ದು, ಮೊನ್ನೆ ಮದ್ರಾಸಿಗೂ ಬಂದರು—ಆಹಾರ ನಿಯಂತ್ರಣ ಧೋರಣೆಯು ಯಶಸ್ವಿಯಾಗುತ್ತಿರುವುದೆಂದವರು ಅಭಿಪ್ರಾಯಪಟ್ಟರು. ಈಗ ಕೆಲವೆಡೆ ನಿಯಂತ್ರಣದಕ್ಕಿಂತ ಬೆಲೆ ಏರಿರಬಹುದಾದರೂ—ಇದು ಸ್ವಾಭಾವಿಕ. ಮುಂದೆ ಮುಕ್ತ ಪೇಟೆಯ ದರ ತಾನಾಗಿಯೇ ಇಳಿಯುವುದು ಎಂದರವರು. ಕಲ್ಕತ್ತೆಯಲ್ಲಿ ಆಹಾರ ಧೋರಣೆಯ ನೆಪದಿಂದ ನಡೆಯುತ್ತಿರುವ ದುಷ್ಕೃತ್ಯಗಳನ್ನು ಕಂಡಾಗ—ನಮ್ಮ ಜನರಲ್ಲಿ ಇನ್ನೂ ಹೊಣೆಗಾರಿಕೆಯ ಸ್ಪಷ್ಟ ಜ್ಞಾನವಿಲ್ಲದಿರುವುದಕ್ಕಾಗಿ ವಿಷಾದಿಸಬೇಕಾಗಿದೆ. ಕೇಂದ್ರ ಸರಕಾರವು ಬೃಹತ್ ಕಲ್ಕತ್ತೆಗೆ ಆಹಾರದ ಪೂರೈಕೆಯನ್ನು ಶೀಘ್ರಾತಿಶೀಘ್ರ ಮಾಡಲಿದ್ದರೂ—ಅಲ್ಲಿ ಹಸಿವಿನ ಆಟೋಪವೆಂಬುದಾಗಿ ಪ್ರದರ್ಶನಗಳೂ, ಹರತಾಳಗಳೂ ನಡೆಯುತ್ತಿವೆ. ಸರಕಾರದ ಕಡೆಯಿಂದ ಎಷ್ಟೋ ಮಂದಿಯನ್ನು—ಅವರಲ್ಲಿ ಮೂರು ಶಾಸನ ಸಭಾ ಸದಸ್ಯರೂ ಇದ್ದಾರೆ—ಬಂಧಿಸಲಾಗಿದೆ. ಈಶಾನ್ಯ ಮೂಲೆಯ ಅಸ್ಸಾಮಿನಲ್ಲಿ ನೆರೆಯ ಹಾವಳಿ ಜೋರಾಗಿದೆ. ಇಂಥದರಲ್ಲಿ ಸರಕಾರದ ದಕ್ಷತೆಯೊಡನೆ ಜನತಾ ಸಹಕಾರವೂ ಬೇಡವೇ ಎಂಬುದು ಪ್ರಶ್ನೆ.

ವಿನಂತಿ

ಪ್ರಪಂಚದ ಜನರಲ್ಲಿ ಹೆಚ್ಚಿನವರು ಶ್ರೀ ರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ಜೀವನ ಹಾಗೂ ಉಪದೇಶಗಳಿಗೆ ಚಿರಪರಿಚಿತರು. ಹಾಗೆಂದು ಇವರಲ್ಲಿ ಅಧಿಕಾಂಶ ಜನಕ್ಕೆ ಶ್ರೀ ಶಾರದಾ ದೇವಿಯ ಕುರಿತು ಹೆಚ್ಚಿನ ತಿಳುವಳಿಕೆ ಇಲ್ಲ. ಏಕಾಂತದಲ್ಲಿಯೇ ಕಳೆದ ಅವರ ಸರಳ ಹಾಗೂ ಪವಿತ್ರ ಜೀವನ ವಿಶ್ವದೃಷ್ಟಿಗೆ ಹೊರಗೊಂಡಿದ್ದುದಷ್ಟೇ ಅಲ್ಲ — ಸಾಮಾನ್ಯವ್ಯಕ್ತಿಯೇ ಅದರಿಂದ ಪಾಠ ಕಲಿಯಲಿಕ್ಕಿದೆ. ಈ ಅಪ್ರತಿಮ ಜೀವದ ಕತೆಯು ಶತಮಾನಗಳಿಂದ ನಮ್ಮ ಜನ್ಮಭೂಮಿಯ ಉನ್ನತಾದರ್ಶವಾದ ಸ್ತ್ರೀತ್ವವನ್ನು ಜನಪ್ರಿಯ ರೀತಿಯಲ್ಲಿ ಮನವರಿಕೆ ಮಾಡಿಕೊಡಲು ಸಹಾಯಕವೆನಿಸುವುದು ನಿಶ್ಚಯ. ಈ ಎಲ್ಲ ವಿಷಯಗಳ ಮಹತ್ವವನ್ನು ಮನಗಂಡು ೧೯೫೩ನೇ ಇಸವಿಯನ್ನು ಪೂಜ್ಯ ಮಾತೆಯ ಜನ್ಮಶತಾಬ್ಧಿಯಾಗಿ ಆಚರಿಸುವ ಸಂಕಲ್ಪ ಮಾಡಿದ್ದೇವೆ. ಜನ್ಮ ಶತಾಬ್ಧಿಯ ಉತ್ಸವ ಸಮಿತಿಯು ಶ್ರೀ ಶಾರದಾ ದೇವಿಯ ಜೀವನ ಚರಿತ್ರೆ ಮತ್ತು ಬೋಧನೆಗಳನ್ನೊಳಗೊಂಡ ಒಂದು ಗ್ರಂಥರಚನೆಯಲ್ಲಿ ತೊಡಗಿದೆ. ಇವಲ್ಲದೆ- ಇನ್ನಿತರ ಅಮೂಲ್ಯ ಕಾರ್ಯ ಪ್ರಣಾಳಿಯನ್ನೂ ಯೋಜಿಸಲಾಗಿದೆ. ಇವಕ್ಕೆಲ್ಲ ಸುಮಾರು ಒಂದು ಲಕ್ಷ ರುಪಾಯಿ ವೆಚ್ಚ ಒಂದೀತೆಂದು ಅಂದಾಜು. ಹೀಗಿರುವುದರಿಂದ ರೂ. [illegible]ಕ್ಕಿಂತ ಹೆಚ್ಚು ಕಾಣಿಕೆ ನೀಡಿ, ಸದಸ್ಯರಾಗಿ ಸೇರಿ, ಸರ್ವ ಮಹಾಜನರೂ ನೆರವಾಗಬೇಕೆಂದು ವಿನಂತಿಸುತ್ತೇವೆ. ಸ್ತ್ರೀತ್ವ ಹಾಗೂ ಮಾತೃತ್ವದ ಪುರೋಗತಿಯಲ್ಲಿ ವಿಶ್ವಾಸವುಳ್ಳವರು ಶಕ್ತ್ಯಾನುಸಾರ ಸಹಾಯ ನೀಡಬೇಕೆಂದು ಕೇಳಿಕೊಳ್ಳುತ್ತೇವೆ. ಕಾಣಿಕೆಯನ್ನು ಕಾರ್ಯದರ್ಶಿ, ಪೂಜ್ಯಮಾತಾ ಜನ್ಮ ಶತಾಬ್ಧಿ, ಬೇಲೂರು ಮಠ, ಹೌರಾ ಜಿಲ್ಲೆಗೆ ಕಳಿಸಿಕೊಡಿರಿ.

—ಸ್ವಾಮಿ ಅವಿನಾಶಾನಂದ

[illegible]

ಶ್ರೀ ಕೆ. ಕೆ. ಶೆಟ್ಟಿ
ಅತ್ಯಾಧುನಿಕ
ಸಾಮಾಜಿಕ
ನಾಟಕ
ಬೆಲೆ ರೂ 1-4-0

ಅತ್ಯಂತ ಪರಿಣಾಮಕಾರಿ ಕ್ರಾಂತಿಕಾರಕ ನಾಟಕ
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಪ್ರಜಾಪ್ರಭುತ್ವ ಪದ್ಧತಿ

ಪ್ರಜಾಪ್ರಭುತ್ವದ ತತ್ವಗಳಲ್ಲಿ ಕಮ್ಯೂನಿಷ್ಟರಿಗೆ ಎಷ್ಟರಮಟ್ಟಿಗೆ ನಿಷ್ಠೆ ಇದೆ ಎಂಬುದನ್ನು ಬಹಿರಂಗವಾಗಿ ಪರೀಕ್ಷಿಸುವ ಸಮಯ ಈಗ ಒದಗಿ ಬಂದಿದೆ. ಚುನಾವಣೆಗಳಲ್ಲಿ ಇದಿರಾಳಿಗಳಿಗಿಂತ ಅಧಿಕ ಮತವನ್ನು ಪಡೆದು, ಶಾಸನ ಸಭೆಗಳನ್ನು ಅಥವಾ ಪಾರ್ಲಿಮೆಂಟನ್ನು ಸೇರಿಕೊಂಡ ಮಾತ್ರಕ್ಕೆ ಕಮ್ಯೂನಿಷ್ಟರು ಸಾಧುಗಳಾಗಿ ಪರಿವರ್ತಿತಗೊಳ್ಳಲಿಲ್ಲವೆಂಬುದನ್ನು ಸದ್ಯ ಮರೆಯಲಾರೆವು. ಆದರೂ ಚುನಾವಣೆಗಳನ್ನು ಕಾದುವ ಕಾಲದಲ್ಲಿ ಜನರಿಗೆಕೊಟ್ಟ ಆಶ್ವಾಸನೆಗಳನ್ನು ಪೂರೈಸಲಿಕ್ಕೆ ಘಟನಾತ್ಮಕವಾದ ರೀತಿಯಲ್ಲಿ ಹೆಣಗಲಿಕ್ಕಿರುವ ಅಧಿಕಾರದ ಸದುಪಯೋಗ ಮಾಡಿಕೊಳ್ಳಲು ಬರುವುದೆಂಬುದನ್ನು ತಾವು ಮನಗಂಡಿರುವುದಾಗಿ ಶ್ರೀ ಎ. ಕೆ. ಗೋಪಾಲನ್ ಹಿಂದೊಮ್ಮೆ ಹೇಳಿದ್ದರು. ಈಚೆಗೆ ಡಾ. ಹೀರೇಂದ್ರ ಮುಕರ್ಜಿಯವರೂ ಇದೇ ಮಾತನ್ನು ಪುಷ್ಟಿಗೊಳಿಸಿದರು. ಆದರೆ ಲೋಕಸಭೆಯಲ್ಲಿ ಮೊನ್ನೆ ನಡೆದ ಘಟನೆಗಳನ್ನು ಪರಾಮರ್ಶಿಸಿದರೆ ಕಮ್ಯೂನಿಷ್ಟರು ಇನ್ನೂ ಪ್ರಜಾಪ್ರಭುತ್ವದ ರೀತಿ ನೀತಿಗಳಿಗೆ ಒಗ್ಗಿಕೊಂಡಿರದೆ ತಮ್ಮದೇ ಆದ ದರ್ಪ ಮತ್ತು ಅನ್ಯಾಯದ ಕ್ರಮಗಳಿಗೆ ಅಂಟಿಕೊಂಡಿರುವರೆಂಬುದನ್ನು ಯಾರೂ ತಿಳಿಯಬಹುದು. ರಾಷ್ಟ್ರದ ಸಾರ್ವಭೌಮಾಧಿಕಾರದ ಮಹತ್ವಾಂಗವಾಗಿರುವ ಪಾರ್ಲಿಮೆಂಟನಲ್ಲಿ, ಮಕ್ಕಳಾಟಿಕೆಯ ವಾಗ್ಯುದ್ಧವನ್ನು ಹೂಡಿ—ಶಿಸ್ತು ಗೌರವಗಳಿಗೆ ತಿಲಾಂಜಲಿ ಬಿಟ್ಟದು ಎಷ್ಟು ಮಾತ್ರಕ್ಕೂ ಭೂಷಣವಲ್ಲ. ಅಧ್ಯಕ್ಷರು ಕೊಟ್ಟ ನಿರ್ಣಯವನ್ನು ಸ್ವೀಕರಿಸುವುದಾಗಲೀ, ಅವರು ಅನ್ಯಾಯ ಬಗೆದಿದ್ದರೆ ಘಟನಾತ್ಮಕ ರೀತಿಯಲ್ಲಿ ಆ ಅಧ್ಯಕ್ಷರನ್ನು ಸ್ಥಾನಭ್ರಷ್ಟಗೊಳಿಸುವುದಾಗಲೀ ಯೋಗ್ಯ ಮಾರ್ಗಗಳು. ಅವನ್ನು ಬಿಟ್ಟುಗೊಟ್ಟು ಸಭೆಯ ಸಾರ್ಜಂಟನಿಂದ ಹೊರ ದೂಡಿಸಿಕೊಳ್ಳುವನಕವೂ ಪ್ರಸಂಗವನ್ನು ಬೆಳೆಯಲು ಅವಕಾಶ ಕಲ್ಪಿಸಿದ ಸದಸ್ಯರ ವಿವೇಕ ಬುದ್ಧಿಯ ಬಗ್ಗೆ ಸಂದೇಹ ತೋರುವುದು.

ಅನುಚಿತ ವರ್ತನೆ

ಲೋಕಸಭೆಯಲ್ಲಿ ಗೃಹಮಂತ್ರಿ ಡಾ| ಕಟಜೂ ಪ್ರತಿಬಂಧಕ ಸ್ಥಾನಬದ್ಧತೆಯ ಮಸೂದೆಯ ಆಗತ್ಯವನ್ನು ಬಿಂಬಿಸುತ್ತಾ ಭಾಷಣ ಮಾಡಿದಾಗ ಕಮ್ಯೂನಿಸ್ಟರು ಹಿಂಸಾಚಾರಗಳ ಆದರ್ಶ ಇಟ್ಟುಕೊಂಡಿರುವರೆಂದೂ ಗುಲ್ಲೆಬ್ಬಿಸುವುದೇ ಅವರ ಧ್ಯೇಯವೆಂದೂ ಬಲವಾಗಿ ಪ್ರತಿಪಾದಿಸಿದರು. ಗೃಹಮಂತ್ರಿಯ ಭಾಷಣವನ್ನು ನಡು ನಡುವೆ ತಡೆದು ನಿಲ್ಲಿಸಲು ಕಮ್ಯೂನಿಸ್ಟ ಸದಸ್ಯರು ಕೆಲವರು ಪ್ರಯತ್ನಿಸಿದರು. ಇದನ್ನು ಕಂಡು ಅಧ್ಯಕ್ಷ ಮಾವಳಣಕರರು ಹೀಗೆ ಮಾಡಿದರೆ, ಸದಸ್ಯರು ಸಭೆಯನ್ನು ಬಿಟ್ಟು ಹೊರ ಹೋಗಬೇಕಾಗುವುದೆಂದರು. ಇದಕ್ಕೆ ಹಿರೇಂದ್ರ ಮುಕರ್ಜಿ ಆಕ್ಷೇಪ ತೆಗೆದು ಕೇವಲ ವಿರೋಧಿ ಗುಂಪಿಗೆ ಮಾತ್ರ ಈ ನಿರ್ಣಯ ಅನ್ವಯಿಸುವ(ದೇ)? ಎಂದರು. ಅಧ್ಯಕ್ಷರು ತಾವು ಎಲ್ಲ ಸದಸ್ಯರನ್ನೂ ಉದ್ದೇಶಿಸಿ ಹಾಗೆ ಹೇಳಿದುದೆಂದೂ, ತಮ್ಮ ನಿರ್ಣಯವು ಇಡೀ ಸಭೆಗೆ ಅನ್ವಯಿ[illegible]

ದನ್ ನಂಬಿಯಾರರು ಪಾರ್ಲಿಮೆಂಟರಿ ತತ್ವಗಳಿಗೆ ಅನುಚಿತ ರೀತಿಯಲ್ಲಿ ನಡೆದುಕೊಂಡರೆಂದು ಅಧ್ಯಕ್ಷರು ಹೇಳಲು— ಶ್ರೀ ನಂಬಿಯಾರರು ತಮ್ಮ ಹೆಸರು ತೆಗೆದು ಅನ್ಯಾಯ ಬಗೆದಿರಿ ಎಂದು ದೂರಿದರು. ಸದಸ್ಯರಿಗೆ ಅನ್ಯಾಯ ಬಗೆದೆನೆಂಬ ಮಾತನ್ನು ಹಿಂತೆಗೆದುಕೊಳ್ಳಬೇಕಾಗಿ ಅಧ್ಯಕ್ಷರು ಹೇಳಿದರು, ಇದಕ್ಕೆ ಒಪ್ಪದಿರಲು ಶ್ರೀ ನಂಬಿಯಾರರು ಸಭೆ ಬಿಟ್ಟು ಹೋಗಬೇಕೆಂದರು. ಇಲ್ಲಿ ಬಲವಂತವಾಗಿ ಹೊರದಬ್ಬುವ ಪ್ರಸಂಗ ಬಂತು. ಇದರಿಂದ ಅಶಾಂತಿಯ ಪರಿಸ್ಥಿತಿ ಉದ್ಭವಿಸಲಾಗಿ, ತಮ್ಮ ಪಕ್ಷವು ಚೆನ್ನಾಗಿ ಕಾರ್ಯಕಲಾಪಗಳಲ್ಲಿ ಭಾಗವಹಿಸಲಾಗದು ಎನ್ನುತ್ತಾ ಹಿರೇಂದ್ರಮುಕರ್ಜಿ, ನಂಬಿಯಾರರನ್ನು ಮ[illegible] ಮಾಡಿಕೊಂಡು, ತಮ್ಮೆಲ್ಲ ಪಕ್ಷದ ಸದಸ್ಯರ ಗೂಡೆ ಸಭಾತ್ಯಾಗ ಮಾಡಿದರು.

ಗೌರವದ ನಡತೆ

ಈ ರೀತಿಯ ಘಟನೆ ಭಾರತದ ಪಾರ್ಲಿಮೆಂಟರಿ ಚರಿತ್ರೆಯಲ್ಲಿಯೇ ಅಪೂರ್ವ— ಪ್ರಧಾನಿ ನೆಹರೂ ಈ ವಿಷಯವನ್ನು ಪ್ರಸ್ತಾಪಿಸಿ, ಅಧ್ಯಕ್ಷರ ಅವಹೇಳನೆಯಾಗುವ ರೀತಿಯಲ್ಲಿ ಸದಸ್ಯರೊಬ್ಬರು ವರ್ತಿಸಿದುದು ಅನುಚಿತವಾಯಿತೆಂದು ವಿಷಾದ ಪ್ರದರ್ಶಿಸಿದರು. ತಾನು ಸಭಾಧುರೀಣನಿರುವುದರಿಂದ, ಎಲ್ಲ ಸದಸ್ಯರೂ ಅಧ್ಯಕ್ಷರಿಗೆ ವಿಧೇಯರಾಗಿರುವಂತೆ ಮಾಡುವುದು ತನ್ನ ಕರ್ತವ್ಯವೆಂದೂ, ಈಗಾದ ಘಟನೆಯನ್ನು ಪರಿಶೀಲಿಸಲು ಹಕ್ಕು ಬಾಧ್ಯತೆಯ ಸಮಿತಿಗೆ ಈ ವಿಷಯ ಒಪ್ಪಿಸುವುದಾಗಿಯೂ ಹೇಳಿದರು.

ಸಂಯಮ ಮೀರುವ

ಸಮಸ್ಯೆಯನ್ನು ನೋಡುವ ನಮ್ಮ ದೃಷ್ಟಿಯಲ್ಲಿ

ಹೀಗೆ ದುಡುಕಿನಿಂದ ವರ್ತಿಸಿ ಸಭಾ ಗೌರವಕ್ಕೆ ಕುಂದನ್ನುಂಟುಮಾಡುವುದು ತರವಲ್ಲವೆಂಬುದನ್ನು ಯಾರಾದರೂ ಒಪ್ಪಬೇಕು. ಶಿಸ್ತು ಮತ್ತು ಸಂಯಮ, ಸಹನೆಗಳಿಂದ ಸಮಸ್ತ ರಾಷ್ಟ್ರದ ಕಲ್ಯಾಣಾರ್ಥವಾಗಿ ನಾವಿಲ್ಲಿ ಇದ್ದೇವೆಯೇ ಹೊರತು— ಒಂದು ಪಕ್ಷದ ಉದ್ದೇಶ ಸಿದ್ಧಿಗಾಗಿಯಲ್ಲ ಎಂಬ ಸತ್ಯವನ್ನು ಸದಸ್ಯರು ಮೊದಲು ಮನವರಿಕೆ ಮಾಡಿಕೊಂಡರೆ ಈ ಬಗೆಯ ಪೇಚಾಟ ಉಂಟಾಗುವುದಿಲ್ಲ. ಮದ್ರಾಸು ಶಾಸನಸಭೆಯಲ್ಲಿ ಪೋಲೀಸು ಖಾತೆಯ ಬೇಡಿಕೆಯ ಮೇಲೆ ಚರ್ಚೆ ನಡೆದಾಗ ಮುಖ್ಯಮಂತ್ರಿ ರಾಜಗೋಪಾಲಾಚಾರಿ ಹೇಳಿದುದೂ ಇದನ್ನೇ— "ಈಗೀಗ ಕಮ್ಯೂನಿಸ್ಟರು ಹಿಂಸಾಮಾರ್ಗವನ್ನು ತ್ಯಜಿಸಿ, ಶಾಂತ ಜೀವನದ ಕಡೆಗೆ ಹೊಂದಿಕೊಳ್ಳುತ್ತ ಬಂದಿರುವುದನ್ನು ನಾನು ಗಮನಿಸಿದ್ದೇನೆ. ಅವರು ಮುಂದೆಯೂ ಇದೇ ರೀತಿಯಲ್ಲಿ ನಡೆದುಕೊಳ್ಳುವರೆಂಬ ಆಶ್ವಾಸನೆ ನನಗೆ ಬೇಕಾಗಿದೆ. ಹಿಂಸಾಚಾರಗಳು ಕಡಿಮೆಯಾದುದನ್ನು ಲಕ್ಷಿಸಿಯೇ ಪೋಲೀಸು ಪಡೆಯನ್ನು ಕಮ್ಮಿಮಾಡುವೆವು" ಎಂದು ರಾಜಾಜಿ ನುಡಿದರು. ಪೋಲೀಸು ಖಾತೆಯ ಬಗ್ಗೆ ಕೆಲವೊಮ್ಮೆ ಹೀನಾಯವಾಗಿ ವರ್ತಿಸಿದರೂ, ಸಾಮಾನ್ಯವಾಗಿ ಮದ್ರಾಸು ಪೋಲೀಸು ಅತ್ಯಂತ ದಕ್ಷವಾಗಿದೆ ಎಂದವರು ಹೊಗಳಿದರು. ಕಡಿತದ ಸೂಚನೆಯು ಬಿದ್ದುಹೋಗಿ, ಬೇಡಿಕೆ ಸ್ವೀಕಾರವಾಯಿತು.

ಪಾನ ಪ್ರತಿಬಂಧ

ಮದ್ರಾಸು ಶಾಸನ ಸಭೆಯಲ್ಲಿ ತೀರ ಮತಭೇದವೆದ್ದ ಪ್ರಮುಖ ವಿಷಯ ಪಾನ ಪ್ರತಿಬಂಧ ಘೋಷಣೆ. ವಿರೋಧಿ ಗುಂಪಿನವರು ಸರಕಾರದ ಪಾನ ಪ್ರತಿಬಂಧ ಧೋರಣೆಯು ಸಂಪೂರ್ಣ ಅಯಶಸ್ವಿಯಾಗಿದೆ ಎಂದು ದೂರಿದರೆ, ಇನ್ನು ಕೆಲವು ಸದಸ್ಯರು ಪಾನಪ್ರತಿಬಂಧ ಒಳ್ಳೆಯದನ್ನೆ ಮಾಡಿದೆ ಎಂದೂ, ಆದರೆ ಸಿಹಿ ಕಳ್ಳಿಗೆ (=ನೀರಾ) ಉದಾರವಾಗಿ ಪರ್ಮಿಟನ್ನು ಕೊಡುವುದಗತ್ಯವೆಂದೂ ಪ್ರತಿಪಾದಿಸಿದರು. ವಿರೋಧಿ ಗುಂಪಿನ ಧುರೀಣ ಶ್ರೀ ಟಿ. ವಿಶ್ವನಾಥಂ ಪಾನ ಪ್ರತಿಬಂಧದ ಪರಿಣಾಮಗಳನ್ನು ಪರಿಶೀಲಿಸಿ ವರದಿ ಮಾಡಲು ಒಂದು ಸಮಿತಿಯು ನೇಮಕವಾಗುವ ಆಗತ್ಯವನ್ನು ಚೆನ್ನಾಗಿ ಬಿಂಬಿಸಿದರು. ಆದರೆ ಈ ಎಲ್ಲ ಟೀಕೆಗಳಿಗೂ ಮುಖ್ಯ ಮಂತ್ರಿ ಜಗ್ಗಲಿಲ್ಲ—ಪಾನ ಪ್ರತಿಬಂಧದಿಂದ ಬಡ ಜನತೆಗೆ ಕಲ್ಯಾಣವಾಗಿಯೇ ತೀರಿದೆ ಎಂದವರು ಘಂಟಾ ಘೋಷವಾಗಿ ಸಾರಿದರು, ಪಾನಪ್ರತಿಬಂಧವನ್ನು ಮುಂದುವರಿಸ ಬೇಕೇ ಬೇಡವೇ ಎಂಬುದನ್ನು ವಿಚಾರಿಸಲು ಸಮಿತಿ ನೇಮಿಸುವುದೆಂದರೆ—ಪ್ರತಿಪಕ್ಷದ ಕುಹಕ ತನವೇ ಸೈ. ಘಟನೆಯಲ್ಲಿ ಕಾನೂನು ಪ್ರಕಾರವಾಗಿ ಪಾನ ಪ್ರತಿಬಂಧವನ್ನು ಸಾಧಿಸಬೇಕೆಂದಿಲ್ಲ ಎನ್ನುವ ವಾದವೂ ಹುರುಳಿಲ್ಲದ್ದು. "ಪಾನ ಪ್ರತಿಬಂಧವು ಒಳ್ಳೆಯ ಕೆಲಸವಾದುದರಿಂದ-ಜನರಿಗೆ ಒಳ್ಳೆಯದನ್ನು ಮಾಡುವ ತನ್ನ ಬಯಕೆಯನುಸಾರ ಅದನ್ನು ಇನ್ನಷ್ಟು ಬಿಗಿಗೊಳಿಸಲಾಗುವುದು "ಕೃತಿಯೊಂದನ್ನು ಅದರ ಯಶಾಪಯಶಗಳ ಮೂಲಕ ಮೇಲಿಂದ ತೂಗಬೇಡಿರಿ. ಒಳ್ಳೆಯ ಕೆಲಸವು ಮೊದಲಿಗೆ ಅಪಯಶ ಪಡೆದರೂ ಕ್ರಮವಾಗಿ ಅದು ಉತ್ತಮ ಪರಿಸ್ಥಿತಿಯನ್ನು ನಿರ್ಮಿಸುವುದು. ಪಾನಪ್ರತಿಬಂಧದ ಒಳಿತು-ಕೆಡುಕುಗಳ ನಿರ್ಣಯಕ್ಕೆ ಎರಡು ತಲೆಮಾರುಗಳೇ ಸರಿಯಬೇಕಾದೀತು" ಎಂದು ರಾಜಾಜಿ ಉಪದೇಶಿಸಿದರು. ಪಾನಪ್ರತಿಬಂಧ ಸಾಧಿಸಿದ್ದೇನೆಂಬುದನ್ನು ವಿಮರ್ಶಿಸಿ ವರದಿ ಮಾಡಬೇಕೆಂಬ ಕಡಿತದ ಸೂಚನೆಯನ್ನು ಮತಕ್ಕೆ ಹಾಕಿದಾಗ ಪರವಾಗಿ 147 ಸದಸ್ಯರೂ ವಿರುದ್ಧ 170 ಸದಸ್ಯರೂ ಬೆಂಬಲ ಕೊಟ್ಟು, ಸೂಚನೆ ತಿರಸ್ಕೃತಗೊಂಡಿತು. ವಿರೋಧಿಗುಂಪಿನ ಕೆಲವು ಮಂದಿ ಸರಕಾರದೊಡನೆ ಸೇರಿಕೊಂಡು ಸೂಚನೆಗೆ ವಿರುದ್ಧ ಮತಕೊಟ್ಟರು.

ಪ್ರಭಾವಿಯಾದ ಶಿಕ್ಷಣ

ರಾಜ್ಯದಲ್ಲಿ ಹೊಸ ನಿರ್ಮಾಣ ಯೋಜನೆಗಳನ್ನು ತೊಡಗುವುದಿಲ್ಲ—ಆದರೆ ಕೈಗೊಂಡಿರುವ ಎಲ್ಲ ಯೋಜನೆಗಳನ್ನು ಬೇಗನೆ ಮುಗಿಸುವುದು ಸರಕಾರದ ಇಚ್ಛೆ ಎಂದು ಹೇಳಲಾಗಿದೆ. ಪ್ರಕೃತ ಹಣದ ಕೊರತೆಯಿಂದಾಗಿ ಹೊಸತಾಗಿ ಏನನ್ನೂ ಮಾಡಲು ಇರುವುದಿಲ್ಲ ಎಂದು ಲೋಕೋಪಯೋಗಿ ಮಂತ್ರಿ ಶ್ರೀ ಎನ್‌ರಂಗಾರೆಡ್ಡಿ ಹೇಳಿದರು ಭೂಕಂದಾಯ ಹಾಗೂ ಭೂಧಾರಣ ಪದ್ಧತಿಯಲ್ಲಿ ಏನು ಸುಧಾ[illegible]

ZANDU Mahayogaraja Guggula

ಝಾಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗ ವಾತ, ಪಕ್ಷವಾತ, ಗೃಧ್ರಸೀ ನಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ 1 ತೊಲೆಗೆ ರೂ 3/- ಮಾತ್ರ.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್. ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ

2 ಶ್ರೀ ವಿ. ಪಿ ಶೆಣೈ, ಕೆಮಿಸ್ಟ್, ಕಾರ್ಕಳ

3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು

4 ಎಲ್ ಎನ್. ಶರ್ಮ, ಹಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರ ಶರತ್ತುಗಳಿಗೆ ಬರೆಯಿರಿ.

DAMODAR & CO.,

Nainiappa Naicken Street, Park Town-MADRAS 3.

ಸಂರಕ್ಷಣೆ ಹಾಗೂ ಸಂಚಯಕ್ಕೆ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ ಲೈಫ್ ಇನ್ಶೂರೆನ್ಸ ಕಂಪೆನಿ ಲಿಮಿಟೆಡ್.

ಸ್ಥಾಪನೆ] ಹೆಡ್ ಆಫೀಸು: ಮದ್ರಾಸು. [1934

ವಿಚಾರಿಸಿರಿ

ಈ ಪ್ರಗತಿಪರ ಕಂಪೆನಿಯಲ್ಲೊಂದು ಪಾಲಿಸಿಯನ್ನು ಪಡೆಯುವುದು ಉತ್ತಮ ದರ್ಜೆಯ ಜೀವರಕ್ಷಾ; ಅಂತೆಯೇ ಈ ಸಂಸ್ಥೆಯ ಏಜನ್ಸಿ ಪಡೆಯುವುದು ಲಾಭದಾಯಕ ವ್ಯವಹಾರದ ಸಂಬಂಧ.

ಈ ಕಂಪೆನಿಯ ಪ್ರಾತಿನಿಧ್ಯ ಪಡೆಯಲು ಉತ್ಸಾಹೀ ಜನಪ್ರಿಯ ವ್ಯಕ್ತಿಗಳ ಅರ್ಜಿಗಳಿಗೆ ಸದಾ ಸುಸ್ವಾಗತ. ದಯಮಾಡಿ ಈ ವಿಳಾಸಕ್ಕೆ ಬರೆಯಿರಿ,

ದಿ. ಬ್ರಾಂಚ್ ಮೆನೇಜರ್;

ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು, (ದ. ಕ.

ಅನುಚಿತ ಚಪಲ

ಪರಿಮಾರ್ಜನೆ ಅತ್ಯಂತ ಅಪೇಕ್ಷಣೀಯ

ಶೀಲಿಸುತ್ತಿರುವ ಸಂಗತಿಯೂ ತಿಳಿದು ಬಂದಿದೆ. ಅನ್ಯಾಯವಾಗಿ ಒಕ್ಕಲೆಬ್ಬಿಸುವದನ್ನು ತಡೆಯಲು ಸರಕಾರವು ಒಂದು ಸುಗ್ರೀವಾಜ್ಞೆಯನ್ನು ಈ ಅಧಿವೇಶನ ಮುಗಿದ ಮೇಲೆ ಹೊರಡಿಸಬಹುದೆಂಬ ಸೂಚನೆಯನ್ನೂ ಮುಖ್ಯಮಂತ್ರಿ ರಾಜಾಜಿ ಕೊಟ್ಟಿದ್ದಾರೆ. ವಿದ್ಯಾ ಇಲಾಖೆಯ ಬೇಡಿಕೆಯನ್ನು ಚರ್ಚಿಸುವಾಗ ಸದಸ್ಯರು ಅಧ್ಯಾಪಕರ ವೇತನ, ಶಿಕ್ಷಣ ಪದ್ಧತಿಯಲ್ಲಿ ಮೂಲಭೂತ ಸುಧಾರಣೆ, ಒತ್ತಾಯದ ಪ್ರಾಥಮಿಕ ಶಿಕ್ಷಣದ ಅವಶ್ಯಕತೆ, ಮಾಧ್ಯಮಿಕ ಶಿಕ್ಷಣದಲ್ಲಿ ಪ್ರಗತಿ ಮುಂತಾದ ಹಲವಾರು ಉಪಯುಕ್ತ ಸೂಚನೆಗಳನ್ನು ಮಾಡಿದರು- ಹಿಂದುಳಿದ ವರ್ಗಗಳಿಗೂ ಪರಿಶಿಷ್ಟ ಜಾತಿಯವರಿಗೂ ಹೆಚ್ಚು ಅನುಕೂಲತೆಗಳು ಬೇಕೆಂದು ಸದಸ್ಯರಲ್ಲಿ ಕೆಲವರು ಅಭಿಪ್ರಾಯಪಟ್ಟರು. ಮಂತ್ರಿಗಳಾದ ಡಾ. ಎಂ. ವಿ. ಕೃಷ್ಣರಾಯರು ಉತ್ತರಿಸುತ್ತಾ, ೧೪ ವರ್ಷ ಪ್ರಾಯದವರೆಗೆ ಎಲ್ಲ ಮಕ್ಕಳಿಗೆ ಉಚಿತವಾಗಿ ಪ್ರಾಥಮಿಕ ಶಿಕ್ಷಣವನ್ನು ನೀಡುವುದಕ್ಕೆ ಸರಕಾರ ಪ್ರಥಮ ಪ್ರಾಶಸ್ತ್ಯ ನೀಡುವುದೆಂದರು. ೫೦೦ಕ್ಕೂ ಮಿಕ್ಕಿದ ಜನ ವಸತಿಯುಳ್ಳ ಪ್ರತಿಯೊಂದೂ ಹಳ್ಳಿಗೆ ಪ್ರಾಥಮಿಕ ಶಾಲೆಯನ್ನು ಒದಗಿಸುವುದು ಸರಕಾರದ ಬಯಕೆ ಎಂದವರು ನುಡಿದರು- ಶಿಕ್ಷಣದಲ್ಲಿ ಸುಧಾರಣೆ ಮತ್ತು ಮೂಲ ಶಿಕ್ಷಣ ಪದ್ಧತಿಯ ಕುರಿತು ಸರಕಾರ ಪರಿಶೀಲಿಸುತ್ತಿದೆ. ಮಾಧ್ಯಮಿಕ ಶಿಕ್ಷಣವು ವಿದ್ಯಾರ್ಥಿಗಳಿಗೆ ಅತ್ಯಂತ ಪ್ರಯೋಜನಕಾರಿಯಾಗುವಂತೆ ಪ್ರಯತ್ನಿಸಬೇಕೆಂದು ತನ್ನ ಅಭಿಪ್ರಾಯವಿರುವುದಾಗಿ ಅವರು ಹೇಳಿದರು. ಸ್ತ್ರೀ ವಿದ್ಯಾರ್ಥಿಗಳ ಪಾಲಿಗೆ ಇದು ಇನ್ನಷ್ಟು ಅಗತ್ಯ. ಇತ್ತ ಜೀವನ ರಂಗವನ್ನು ಪ್ರವೇಶಿಸುವುದಕ್ಕೇ ಆಗಲೀ, ಅತ್ತ ಉಚ್ಚ ಶಿಕ್ಷಣಕ್ಕೆ ಕಾಲಿಡುವಾಗಲೇ ಆಗಲೀ—ಮಾಧ್ಯಮಿಕ ಶಿಕ್ಷಣದ ಮೂಲಕ ಯೋಗ್ಯ ಹಿನ್ನೆಲೆಯನ್ನು ಪ್ರಾಥಮಿಯಾದ ರೀತಿ ಕಲ್ಪಿಸಿಕೊಡುವುದು ಎಲ್ಲರಿಗೂ ಇಷ್ಟ.

ಭವ್ಯ ಕಟ್ಟಡಗಳ, ಅಡ್ಡಿ

ಶಾಲೆ ಕಾಲೇಜುಗಳಿಗಾಗಿ ಭವ್ಯವಾದ ಕಟ್ಟಡಗಳಿರಬೇಕೆಂಬುದನ್ನು ತಾನು ಒಪ್ಪುವುದಿಲ್ಲವಾಗಿ ಮಂತ್ರಿ ಮಹಾಶಯರು ಹೇಳಿದುದು ಗಮನೀಯವಾಗಿದೆ.

"ಒಂದು ನೂರು ವರ್ಷ ಬಾಳುವ ಭವ್ಯವಾದ ಕಟ್ಟಡಗಳಲ್ಲಿಯೇ ಸಂಗವನ್ನು ನೀಡಬೇಕೆಂಬುದು ಭ್ರಮೆಯೇ ಸರಿ. ಈಚೆಗೆ ಹೊಸತಾಗಿ ಕಾಲೇಜು ವರ್ಗಗಳನ್ನು ತೆರೆಯಲು ಅನುಮತಿ ಬೇಕೆಂದು ಕೇಳಿದಾಗ-ಒಂದು ಹುಲ್ಲಿನ ಮಾಡಸ್ನಾದರೂ ಕಟ್ಟಿ ಕ್ಲಾಸು ನಡೆಸಲು ಸಾಧ್ಯವಿದ್ದರೆ ಹಾಗೆ ಮಾಡಿರಿ. ಎಂದೆನು. ಕಟ್ಟಡಗಳು ಅಗತ್ಯವಿಲ್ಲವೆಂದಲ್ಲ-ಪ್ರಯೋಗ ಶಾಲೆಯ ಪಾಲ್ಯ ಉಪಕರಣಗಳನ್ನೂ ಇತರ ಬೆಲೆಯುಳ್ಳ ಪದಾರ್ಥಗಳನ್ನೂ ಕೆಡದಂತೆ ರಕ್ಷಿಸಲು ಅವು ಬೇಕು. ಆದರೆ ಸಾಮಾನ್ಯ ಶಿಕ್ಷಣಕ್ಕೆ ಇಷ್ಟೆಲ್ಲ ಆಡಂಬರ ಬೇಡ."

ಇದೇ ಅಭಿಪ್ರಾಯವನ್ನು ಪ್ರಧಾನಿ ನೆಹರೂ ಪಾರ್ಲಿಮೆಂಟರಿ ಸಂಶೋಧಕ ಕೇಂದ್ರದ ಉದ್ಘಾಟನೆಯನ್ನು ನೆರವೇರಿಸುತ್ತಾ ಹೇಳಿದರು—"ಈ ಕೇಂದ್ರದ ಕಟ್ಟಡಗಳು ಇನ್ನೂ ಪೂರ್ಣಗೊಂಡಿಲ್ಲ. ಆದರೆ ಅವು ಮುಗಿಯುವವರೆಗೆ ಕೆಲಸಗಾರರು ಕಾರ್ಯಭಾರ ಬಿಡುವುದಿಲ್ಲ. ಗಟ್ಟಿಮುಟ್ಟಾದ ಕಟ್ಟಡಗಳಾಗುವ ವರೆಗೆ ನಾವು ಕೆಲಸ ಬಿಟ್ಟು ಕೂತುಕೊಳ್ಳಲಾರೆವು. ನಮಗೆ ಕಾರ್ಯಾಲಯಕ್ಕೆ ಆಗಲಿ, ಆಸ್ಪತ್ರೆಗಾಗಲೀ, ಶಾಲೆಗಳಿಗಾಗಲೀ, ಯಾವುದಕ್ಕೇ ಆಗಲಿ ಕಟ್ಟಡಗಳು ಬೇಕು ಹಾಗೆಂದ ಮಾತ್ರಕ್ಕೆ ಅವು ಬಹಳ ವೆಚ್ಚದಿಂದ ಕಟ್ಟಲ್ಪಡಬೇಕೆಂದಿಲ್ಲ. ಶಿಕ್ಷಣ ಇಲಾಖೆಯು ಸುಧಾರಿತ ಮನೋವೃತ್ತಿಯನ್ನು ಬೇಗನೇ ಅನುಸರಿಸುವುದು ಹಿತ. ಕಟ್ಟಡಗಳಿಗಾಗಿ ವೆಚ್ಚ ಮಾಡುವ ದುಡ್ಡನ್ನು ವಿದ್ಯಾ ಪ್ರಸಾರಕ್ಕಾಗಿಯೇ ಸದ್ವಿನಿಯೋಗಿಸಲು ಸಾಧ್ಯ" ಎಂದು ನೆಹರೂ ಹೇಳಿದರು.

ದೃಷ್ಟಿಕೋಣ

ನೆಹರೂ ಹೇಳುವಂತೆ ನಮ್ಮ ದೃಷ್ಟಿಕೋಣದಲ್ಲಿ ತೀವ್ರ ಮಾರ್ಪಾಟಾಗುವುದು ಅಪೇಕ್ಷಣೀಯ. ಹೊಸ ಸಂಗತಿ ಎಂದ ಕೂಡಲೆ ಹೆದರಿಬಿಡುವುದು ನಮ್ಮ ನೆತ್ತರಲ್ಲಿ ಕೂಡಿ ಹೋಗಿದೆ- ಆದರೆ ಮನಸ್ಸನ್ನು ಈ ರೀತಿಯ ಅಂಜಿಕೆಯ ಜಾಲದಲ್ಲಿ ಸಿಲುಕಗೊಡದೆ ಸಣ್ಣಗುಮಾನಸು ವಿವೇಕಿಯೂ ಶೂರನೂ ನಿಜ. ಕಷ್ಟಪರಂಪರೆಗಳನ್ನು ನಿರಾಯಾಸವಾಗಿ ದಾಟಿ ಹೋಗುವ ಹಗುರ ಮನಸ್ಸು ನಮಗಿರಬೇಕು. ನೆಹರೂ ದಿಲ್ಲಿಯಲ್ಲಿ ಕುಳಿತುಕೊಂಡು ಭಾರತದ ಭವ್ಯ ದಿನಗಳ ಕನಸು ಕಾಣುವುದುಂಟಂತೆ—ಆದರೆ, ಅಷ್ಟು ಮಾತ್ರಕ್ಕೆ ಕೆಲಸವಾಗುವುದಿಲ್ಲ. ಸರಕಾರೀ ರೀತಿಯಿಂದ ಎಷ್ಟೇ ಚಲಕ ಕೊಡಗಲಿ—ಜನತಾ ಸಹಕಾರವಿಲ್ಲದಿರುವ ವರೆಗೆ ಅವು ಜನಾಂಗದ ಉದ್ಯಮಗಳಾಗಲಾರವು ಮಾನ ಪ್ರತಿಬಂಧವೇ ಇದಕ್ಕೆ ಜೀವಂತ ಸಾಕ್ಷಿ. ದುಡಿಮೆಗೆ ಮಹತ್ವ ಕೊಡದ ರಾಷ್ಟ್ರ ಅದು ಬಂಡವಾಳಶಾಹಿಯಾದ ಅಮೇರಿಕ ಇರಲಿ, ಕಮ್ಯೂನಿಸ್ಟ್ ಒಡೆತನದ ರಶಿಯಾ ಇರಲಿ, ನಾಶಹೊಂದುವುದು ನಿಶ್ಚಯ. ಭಾರತದಲ್ಲಿ ದುಡಿಮೆಯನ್ನು ಹೀನಾದ್ಯವೆಂದು ಬಗೆಯಲಾಗಿದೆ. ಇದೇ ನಮ್ಮ ಕರುಣಾಜನಕ ಸ್ಥಿತಿಯ ಮೂಲ—ಎಂದು ನೆಹರೂ ಎಚ್ಚರಿಸಿದರು. ಸೋಮವಾರ ದಿನ ಜನಪದ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಮಾಗಿಸುವ ಅಧಿಕಾರಿಗಳನ್ನೂ, ಸಮಸ್ತ ಜನತೆಯನ್ನೂ ಉದ್ದೇಶಿಸಿ ಮಾತನಾಡುವಾಗಲೂ ಇದೇ ಉಪದೇಶದ ಮಾತನ್ನು ನೆಹರೂ ಹೇಳಿದರು—ಭಾರತವು ಸಂಪತ್ ಸಮೃದ್ಧವಾದ ರಾಷ್ಟ್ರವಾಗಿ ಮೆರೆಯಬೇಕಾದರೆ ಜನತಾ ಸಹಕಾರ ಬೇಕು ಎಂದವರ ವಿನಂತಿ. ವಿದ್ಯಾರ್ಥಿಗಳು ಜನರೊಡನೆ ಸೇರಿಕೊಂಡು, ಅವರ ಸಮಸ್ಯೆಗಳನ್ನು ಒಂದೊಂದಾಗಿ ಬಿಡಿಸಲು ಸಹಾಯ ನೀಡಬಹುದೆಂದು ನೆಹರೂ ಸೂಚಿಸಿದರು. ಪ್ರತಿಯೊಬ್ಬನೂ ಕಡ್ಡಾಯವೆಂಬಂತೆ ಒಂದೆರಡು ವರ್ಷ ದೈಹಿಕ ಶ್ರಮದ ಕೆಲಸಗಳಲ್ಲಿ—ತಾರುಣ್ಯದಾದಿಯಲ್ಲಿಯೇ ಸೇರಲಿ—ಅದರಿಂದ ಮನಸ್ಸು ಸ್ವಚ್ಛಗೊಳ್ಳುವುದು. ದೇಹಾರೋಗ್ಯವೂ ಉಳಿಯುವುದು ಎಂದು ನೆಹರೂ ಅಭಿಪ್ರಾಯಪಟ್ಟರು.

ಆರೋಗ್ಯ—ಆಹಾರ

ದೇಹಾರೋಗ್ಯ ರಕ್ಷಣೆಯ ವಿಷಯ ದರಿದ್ರ ಭಾರತದಲ್ಲಿ ಅತ್ಯಂತ ಮಹತ್ವದ ಸಂಗತಿ. ಮದ್ರಾಸು ಶಾಸನಸಭೆಯಲ್ಲಿ ಆರೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟಿ ಸರಕಾರದ ವೈದ್ಯಕೀಯ ಸಹಾಯ ಯೋಜನೆಗಳನ್ನು ವಿವರಿಸಿ ಮಾತನಾಡಿದರು. ಹಳ್ಳಿ ಹಳ್ಳಿಗೂ ಸಂಚಾರಿ ವಾಹನಗಳ ಮೂಲಕ ಹೆಚ್ಚು ಹೆಚ್ಚು ವೈದ್ಯಕೀಯ ಸಹಾಯವನ್ನು ಒದಗಿಸಲಾಗುವುದೆಂದವರು ಹೇಳಿದರು ಕಡ್ಡಾಯವಾಗಿ ವೈದ್ಯಕೀಯ ಅಭ್ಯಾಸಿಗಳು ಹಳ್ಳಿಗಳಲ್ಲಿ ಒಂದೆರಡು ವರ್ಷ ದುಡಿಯಬೇಕೆಂಬ ಸಂಗತಿ ಸರಕಾರದ ವಿಚಾರಾಧೀನವಾಗಿದೆ ಎಂದೂ ಅವರು ನುಡಿದರು. ವೈದ್ಯಕೀಯ ವಿಭಾಗದಲ್ಲಿ ಸ್ತ್ರೀಯರನ್ನು ಉಪೇಕ್ಷಿಸಲಾಗಿಲ್ಲ—ಅವರಿಗೆ ಶಿಕ್ಷಣ ಕೊಡಲು ಯೋಗ್ಯ ಸೌಕರ್ಯಗಳನ್ನು ಒದವಿಸಲಾಗಿದೆಯಲ್ಲದೆ—ಉನ್ನತ ಅಧಿಕಾರಗಳಲ್ಲಿ ಅವರನ್ನು ನೇಮಿಸುವುದೂ ನಡೆದಿದೆ ಎಂದು ಶ್ರೀ ಶೆಟ್ಟರು ತಿಳಿಸಿದರು.

ಆರೋಗ್ಯದಂತೆ ಆಹಾರವೂ ಅಗತ್ಯತಾನೆ—ಕೇಂದ್ರ ಆಹಾರ ಮಂತ್ರಿ ಕಿಡ್ವಾಯಿ ಈಗ ಸಂಚಾರದಲ್ಲಿದ್ದು, ಮೊನ್ನೆ ಮದ್ರಾಸಿಗೂ ಬಂದರು—ಆಹಾರ ನಿಯಂತ್ರಣ ಘೋಷಣೆಯು ಯಶಸ್ವಿಯಾಗುತ್ತಿರುವುದೆಂದವರು ಅಭಿಪ್ರಾಯ ಪಟ್ಟರು. ಈಗ ಕೆಲವೆಡೆ ನಿಯಂತ್ರಣದಕ್ಕಿಂತ ಬೆಲೆ ಏರಬಹುದಾದರೂ—ಇದು ಸ್ವಾಭಾವಿಕ. ಮುಂದೆ ಮಾರ್ಕೆಟ್ಟೆಯ ದರ ತಾನಾಗಿಯೇ ಇಳಿಯುವುದು ಎಂದರವರು. ಕಲ್ಕತ್ತೆಯಲ್ಲಿ ಆಹಾರ ಘೋಷಣೆಯ ನೆಪದಿಂದ ನಡೆಯುತ್ತಿರುವ ದುಷ್ಕೃತ್ಯಗಳನ್ನು ಕಂಡಾಗ-ನಮ್ಮ ಜನರಲ್ಲಿ ಇನ್ನೂ ಹೊಣೆಗಾರಿಕೆಯ ಸ್ಪಷ್ಟ ಜ್ಞಾನವಿಲ್ಲದಿರುವುದಕ್ಕಾಗಿ ವಿಷಾದಿಸಬೇಕಾಗಿದೆ. ಕೇಂದ್ರ ಸರಕಾರವು ಬೃಹತ್ ಕಲ್ಕತ್ತೆಗೆ ಆಹಾರದ ಪೂರೈಕೆಯನ್ನು ಶೀಘ್ರಾತಿಶೀಘ್ರ ಮಾಡಲಿದ್ದರೂ—ಅಲ್ಲಿ ಹಸಿವಿನ ಆಟೋಪವೆಂಬುದಾಗಿ ಪ್ರದರ್ಶನಗಳೂ, ಹಲ್ಲೆಗಳೂ ನಡೆಯುತ್ತಿವೆ. ಸರಕಾರದ ಕಡೆಯಿಂದ ಎಷ್ಟೋ ಮಂದಿಯನ್ನು—ಅವರಲ್ಲಿ ಮೂರು ಶಾಸನ ಸಭಾ ಸದಸ್ಯರೂ ಇದ್ದಾರೆ—ಬಂಧಿಸಲಾಗಿದೆ. ಈಶಾನ್ಯ ಮೂಲೆಯ ಅಸ್ಸಾಮಿನಲ್ಲಿ ನೆರೆಯ ಹಾವಳಿ ಜೋರಾಗಿದೆ. ಇಂಥದರಲ್ಲಿ ಸರಕಾರದ ದಕ್ಷತೆಯೊಡನೆ ಜನತಾ ಸಹಕಾರವೂ ಬೇಡವೇ ಎಂಬುದು ಪ್ರಶ್ನೆ.

ವಿನಂತಿ

ಪ್ರಪಂಚದ ಜನರಲ್ಲಿ ಹೆಚ್ಚಿನವರು ಶ್ರೀ ರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ಜೀವನ ಹಾಗೂ ಉಪದೇಶಗಳಿಗೆ ಚಿರಪರಿಚಿತರು. ಹಾಗೆಂದು ಇವರಲ್ಲಿ ಅಧಿಕಾಂಶ ಜನಕ್ಕೆ ಶ್ರೀ ಶಾರದಾ ದೇವಿಯ ಕುರಿತು ಹೆಚ್ಚಿನ ತಿಳುವಳಿಕೆ ಇಲ್ಲ ಏಕಾಂತದಲ್ಲಿಯೇ ಕಳೆದ ಅವರ ಸರಳ ಹಾಗೂ ಪವಿತ್ರ ಜೀವನ ವಿಶ್ವದೃಷ್ಟಿಗೆ ಹೆಸಗೊಂಡಿದ್ದುದಷ್ಟೆ ಅಲ್ಲ – ಮಾನವ್ಯಕ್ತನೇ ಅದರಿಂದ ಪಾಠ ಕಲಿಯಲಿಕ್ಕಿದೆ ಈ ಅಪ್ರತಿಮ ಜೀವದ ಕತೆಯು ಶತಮಾನಗಳಿಂದ ನಮ್ಮ ಜನ್ಮಭೂಮಿಯ ಉನ್ನತಾದರ್ಶವಾದ ಸ್ತ್ರೀತ್ವವನ್ನು ಜನಪ್ರಿಯ ರೀತಿಯಲ್ಲಿ ಮನವರಿಕೆ ಮಾಡಿಕೊಡಲು ಸಹಾಯಕವೆನಿಸುವುದು ನಿಶ್ಚಯ ಈ ಎಲ್ಲ ವಿಷಯಗಳ ಮಹತ್ವವನ್ನು ಮನಗಂಡು ೧೯೫೩ನೇ ಇಸವಿಯನ್ನು ಪೂಜ್ಯ ಮಾತೆಯ ಜನ್ಮ ಶತಾಬ್ದಿಯಾಗಿ ಆಚರಿಸುವ ಸಂಕಲ್ಪ ಮಾಡಿದ್ದೇವೆ ಜನ್ಮ ಶತಾಬ್ದಿಯ ಉತ್ಸವ ಸಮಿತಿಯು ಶ್ರೀ ಶಾರದಾ ದೇವಿಯ ಜೀವನ ಚರಿತ್ರೆ ಮತ್ತು ಬೋಧನೆಗಳನ್ನೊಳಗೊಂಡ ಒಂದು ಗ್ರಂಥರಚನೆಯಲ್ಲಿ ತೊಡಗಿದೆ ಇವಲ್ಲದೆ- ಇನ್ನಿತರ ಅಮೂಲ್ಯ ಕಾರ್ಯ ಪ್ರಣಾಳಿಯನ್ನೂ ಯೋಜಿಸಲಾಗಿದೆ. ಇವಕ್ಕೆಲ್ಲ ಸುಮಾರು ಒಂದು ಲಕ್ಷ ರುಪಾಯಿ ವೆಚ್ಚ ಒಂದೀತೆಂದು ಅಂದಾಜು- ಹೀಗಿರುವುದರಿಂದ ರೂ. ೫ಕ್ಕಿಂತ ಹೆಚ್ಚು ಕಾಣಿಕೆ ನೀಡಿ, ಸದಸ್ಯರಾಗಿ ಸೇರಿ, ಸರ್ವ ಮಹಾ ಜನರೂ ನೆರವಾಗಬೇಕೆಂದು ವಿನಂತಿಸುತ್ತೇವೆ ಸ್ತ್ರೀತ್ವ ಹಾಗೂ ಮಾತೃತ್ವದ ಪುರೋಗತಿಯಲ್ಲಿ ವಿಶ್ವಾಸವುಳ್ಳವರು ಶಕ್ತ್ಯಾನುಸಾರ ಸಹಾಯನೀಡಬೇಕೆಂದು ಕೇಳಿಕೊಳ್ಳುತ್ತೇವೆ. ಕಾಣಿಕೆಯನ್ನು ಕಾರ್ಯದರ್ಶಿ. ಪೂಜ್ಯಮಾತಾ ಜನ್ಮ ಶತಾಬ್ದಿ, ಬೇಲೂರು ಮಠ, ಹೌರಾ ಜಿಲ್ಲೆಗೆ ಕಳಿಸಿಕೊಡಿರಿ.

—ಸ್ವಾಮಿ ಅವಿನಾಶಾನಂದ

ಪ್ರಚಾರಿಣೀ ಯೋಧ

ಶ್ರೀ ಕೆ. ಕೆ. ಶೆಟ್ಟಿ
ಅತ್ಯಾಧುನಿಕ
ಸಾಮಾಜಿಕ
ನಾಟಕ
ಬೆಲೆ ರೂ 1 4 0

ಅತ್ಯಂತ ಪರಿಣಾಮಕಾರಿ ಕ್ರಾಂತಿಕಾರಕ ನಾಟಕ
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

You Cannot But Choose
The Canara Banking Corporation Ltd.
for Ideal Banking
in the States of Madras, Mysore, Bombay, Coorg & U. S. T. C.
ESTD: 1906. H. O.: **UDIPI (S 1)**

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಉಡುಪಿ, ಗುರುವಾರ ೨೪-೭-'೫೨

ಮೂಲಭೂತ ಬದಲಾವಣೆ

ಜನರಲ್ಲಿ ಶಿಸ್ತು ಸಂಯಮಗಳು ಬೇರೂರದೆ—ರಾಷ್ಟ್ರಾಭ್ಯುದಯವು ಚೆನ್ನಾದ ರೀತಿಯಲ್ಲಿ ಆಗುವುದು ಸಾಧ್ಯವಿಲ್ಲ. ಕ್ರಮವಾದ ನಡವಳಿಕೆ ಮತ್ತು ಸಮಯನೋಡಿ, ಸಂಯಮ ತೋರದೆ, ವರ್ತಿಸುವ ಬುದ್ಧಿ ರಾಷ್ಟ್ರದ ಉನ್ನತಿಗೆ ಅತ್ಯಾವಶ್ಯಕವಾದುದು. ಪ್ರಸಂಗದ ಅನುಚಿತ ಲಾಭವನ್ನು ಪಡೆಯುವುದಕ್ಕಾಗಿ ಆತುರಪಡದೆ—ತನ್ನ ಒಪ್ಪುಗಳ ವಿವೇಕಪೂರ್ಣ ನಿರ್ಣಯಕ್ಕನುಸಾರ ನಡೆಯುವುದು ಅಭ್ಯುದಯದ ಮಾರ್ಗ. ಇದಕ್ಕೆ ನಮ್ಮ ಮನಸ್ಸಿನಲ್ಲಿ—ವಿಚಾರದಕ್ಷ—ಮತ್ತು ದೃಷ್ಟಿಕೋನದಲ್ಲಿ ಮೂಲಭೂತ ಬದಲಾವಣೆ ಅಗತ್ಯವೆನಿಸುವುದು ನಿಶ್ಚಯ. ಹಠಮಾರಿಗಳಂತೆ ಸದಾಕಾಲ ಛಲದಂಕ ಮಲ್ಲರಾಗಿರುವ ಪ್ರವೃತ್ತಿಯ ಜನ, ಮನಸ್ಸನ್ನು ಚೆನ್ನಾದ ರೀತಿಯಲ್ಲಿ ತರಬೇತಿಗೊಳಪಡಿಸಿ, ಸಂಯಮವನ್ನೂ, ಸಹನೆಯನ್ನೂ ಅಭ್ಯಾಸ ಮಾಡುವುದೊಳ್ಳೆಯದು. ಉದ್ವೇಗ ವಶರಾಗಿ ನಾವು ಮಾಡುವ ಕೆಲಸ ಎಷ್ಟೋ ವೇಳೆ—ನಮಗೆ ಕೆಟ್ಟ ಪರಿಣಾಮ[illegible] ತಂದೊಡ್ಡುವುದು ಅನುಭವ ಜನ್ಯವಾದ ಸಂಗತಿ. ಲೋಕಸಭೆಯಲ್ಲಿ ಕಮ್ಯೂನಿಸ್ಟ ಸದಸ್ಯರಾದ ಶ್ರೀ ಆನಂದನ್ ನಂಬಿಯಾರರು ತಮ್ಮ ವರ್ತನೆಯಿಂದ ಸಭಾಗೌರವಕ್ಕೆ ಧಕ್ಕೆ ಉಂಟುಮಾಡಿದುದಷ್ಟೇ ಅಲ್ಲ— ಅನಿಷ್ಟ ಪರಂಪರೆಗೆ ಬುನಾದಿ ಕಲ್ಲನ್ನೂ ಹಾಕಿಕೊಟ್ಟರು ಎಂಬುದಕ್ಕಾಗಿ ನಮಗೆ ಬೇಸರ. ಅಧ್ಯಕ್ಷರೊಡನೆ ಕಾದುವುದು, ಶಿಸ್ತಿನ ಪರಿಪಾಲನೆಗೆ ಸದಸ್ಯರು ಒಡಂಬಡುವುದಿಲ್ಲವೆಂಬುದನ್ನು ಸ್ಪಷ್ಟೀಕರಿಸುತ್ತದೆ. ಅವರ ವೇಳೆ- ಸಭಾತ್ಯಾಗದ ನಾಟಕವಾಗುವ ವರೆಗೂ ಉದ್ಧಟತನದಿಂದ ನಡೆದುಕೊಂಡುದು ಯಾರಿಗೂ ಭೂಷಣವಲ್ಲ. ಈ ಬಗೆಯ ಛಲವಾದಿತನವನ್ನು ಯೋಗ್ಯ ಕಾರ್ಯಕ್ಕಾಗಿ, ಉಚಿತ ಸಂದರ್ಭದಲ್ಲಿ ಉಪಯೋಗಿಸಿದ್ದರೆ—ಅದು ಪ್ರಶಂಸನೀಯವಾಗುತಿತ್ತು. ಆದರೆ ಸಮಯ ತಪ್ಪಿ ವಿವೇಕಹೀನರಂತೆ ನಡೆದುದರಿಂದ ಎಲ್ಲರ ಕಣ್ಣಿನ ಮುಳ್ಳಾಗಿ ಈ ಪ್ರಸಂಗ ಪರಿಣಮಿಸಿತು. ಲೋಕಸಭೆಯ ಒಬ್ಬ ಮಾನ್ಯ ಸದಸ್ಯರಷ್ಟೆ ಉದ್ವೇಗವಶರಾಗಿ ವರ್ತಿಸುವುದಲ್ಲ ಎಂಬುದನ್ನು ನಾವೆಲ್ಲ ಒಪ್ಪಬೇಕು. ನಾವು ಕಾಣುವಂತೆ ಈ ಜಾಡ್ಯ ಸಾರ್ವತ್ರಿಕ ಸ್ವರೂಪವನ್ನು ತಳೆದಿದೆ. ಮನುಷ್ಯನ ಮೂಲಭೂತ ಪ್ರವೃತ್ತಿ ವಿಶೇಷಗಳಲ್ಲಿ—ಛಲವಾದಿತನವೂ ಒಂದಾಗಿರುವುದರಿಂದ—ಅದರ ಸ್ವಾಭಾವಿಕವಾದ, ಸಾತ್ವಿಕವಾದ ಬೆಳವಣಿಗೆಯಿಂದ ಮಾತ್ರ ಕಲ್ಯಾಣ ಸಿದ್ಧಿಸುವುದು. ಕಾರ್ಮಿಕರ ಸಂಘಗಳಿಂದ ತೊಡಗಿ, ರಾಷ್ಟ್ರಗಳೊಳಗಿನ ವ್ಯವಹಾರದ ವರೆಗೆ, ಛಲವಾದಿತನದ ಪ್ರಭಾವವು ಹರಿಯುತ್ತದೆ. ಅಡಿಗೆ ಬಿದ್ದರೂ ಮೂಗು ಮೇಲು ಎಂಬ ಮಿಥ್ಯಾವಾದವನ್ನು ಮೈಗೂಡಿಸಿಕೊಂಡು ವ್ಯರ್ಥ ಹೋರಾಟಕ್ಕೆ ಅದು ಪ್ರೇರಿಸುತ್ತದೆ. ತನ್ನನ್ನು ತಾನು ತಿಳಿದುಕೊಂಡು, ನಡೆಯುತಿದ್ದರೆ ಲೋಕದಲ್ಲಿ ಇಂದು ಕಂಡುಬರುವ ಅಶಾಂತಿ, ಗೊಂದಲ ಮತ್ತು ಕ್ಷುದ್ರ ಪರಿಸ್ಥಿತಿಗಳು ಎಷ್ಟೋ ಮಟ್ಟಿಗೆ ಕಡಿಮೆಯಾಗುತಿದ್ದವು. ಬದಲಿಗೆ, ಉದ್ವೇಗದ ಕೈಯಲ್ಲಿ, ವಿಕಾರವಶರಾಗಿ, ಬುದ್ಧಿಯನ್ನು ಕೊಟ್ಟುದರಿಂದ—ಇಷ್ಟೆಲ್ಲ ನರಳಾಟವನ್ನು ಅನುಭವಿಸಿ, ಸುಮ್ಮನುಳಿಯಬೇಕಾಗಿದೆ. ಶ್ರೀ ಜಯಪ್ರಕಾಶ ನಾರಾಯಣರು ಅಂಚೆ ಕೆಲಸಗಾರರ ಮುಷ್ಕರದಂಥ ಮಹಾ ವಿಪತ್ತಿಗೆ ದೇಶವನ್ನು ಎಂನ್ನೊಡ್ಡುತಿದ್ದರು: ಆದರೆ, ದೇವರ ದಯೆಯಿಂದ ಸಕಾಲದಲ್ಲಿ ಅವರು ಎಚ್ಚತ್ತು, ತಮ್ಮ ತಪ್ಪು ತಿಳಿದುಕೊಂಡರು. ಪರಿಣಾಮವಾಗಿ, ಈಗ ಸಂಧಾನ ಮಾತುಕತೆಗಳಿಂದ ಅಂಚೆ ಕೆಲಸಗಾರರ ಬೇಡಿಕೆ ಇತ್ಯರ್ಥವಾಗುವ ಮಟ್ಟಕ್ಕೆ ಬಂದಿದೆ. ಇದರಂತೆ ಪ್ರತಿಯೊಬ್ಬ[illegible]ಸರದಿಂದ ಒಂದು ನಿರ್ಣಯಕ್ಕೆ ಬಾರದೆ—ಕೂಲಂಕಷ ವಿಚಾರ, ವಿಮರ್ಶೆಯ ಪರಿಣಾಮವಾಗಿಯೇ, ಒಂದು ಧೋರಣವನ್ನು ತಾಳುವುದು ಹಿತಕರ. ಇದಕ್ಕೆ ಸಾಮಾನ್ಯವಾಗಿ ಮನಸ್ಥಿತಿಯು ತಾತ್ವಿಕ ಮಟ್ಟದಲ್ಲಿರುವುದು ಅಗತ್ಯ. ನಾವೆಲ್ಲರೂ ಋಷಿಮುನಿಗಳಂತೆ— ತಪೋಭಾವವನ್ನೂ ರಜೋಗುಣವನ್ನು ತ್ಯಜಿಸಿ ಬಾಳುವ ಸಾಮರ್ಥ್ಯವಿದ್ದವರಲ್ಲ ಹೌದಾದರೂ—ಸಾಧ್ಯವಿದ್ದಷ್ಟು ಮಟ್ಟಿಗೆ ಮನಸ್ಸನ್ನು ಸ್ತಿಮಿತದಲ್ಲಿಟ್ಟುಕೊಂಡು ಬದುಕು ನೀಗಲು ಪ್ರಯತ್ನಿಸಿದರೆ ಅದು ಒಳ್ಳೆಯ ಪ್ರಯತ್ನವೇ. ಇದಕ್ಕೆ ತಕ್ಕುದಾದ ಶಿಕ್ಷಣವು ಬಾಲ್ಯದಿಂದಲೇ ದೊರೆಯುವುದು ಪೋಷಕವಾಗಿದೆ. ನಮ್ಮ ಎಲ್ಲ ಮೂಲ ಪ್ರವೃತ್ತಿಗಳ ಮುಖವನ್ನು ಯೋಗ್ಯ ದಿಕ್ಕಿಗೆ ತಿರುಗಿಸಲು ಬಾಲ್ಯವು ಅತ್ಯಂತ ಸಹಾಯಕ [illegible] ಹೀಗಿರುವುದರಿಂದ—ಮದ್ರಾಸು ಸರಕಾರದ ವಿದ್ಯಾ ಮಂತ್ರಿಗಳೆಂದಂತೆ, ಪ್ರಾಥಮಿಕ ಶಿಕ್ಷಣವನ್ನು ಬದುಕು ಸರ್ವಾಂಗ ಸುಂದರವಾಗುವ ರೀತಿ ಪುನರ್ಘಟಿಸುವುದು ಬಹಳ ಅಪೇಕ್ಷಣೀಯ. ಮನುಷ್ಯನ ಬಾಳ್ವೆಯು ಸೌಖ್ಯಪ್ರದವಾಗಬೇಕೆಂದು ಎಲ್ಲರೂ ಬಯಸುವರು. ಮುಂಬಯಿಯಂಥ ರಾಜ್ಯವು ಕೈದಿಗಳ ಜೀವನದಲ್ಲಿಯೂ ಮನುಷ್ಯತ್ವದ ಕಲ್ಪನೆ ಮೂಡುವಂತೆ ಜೇಲು ಸುಧಾರಣೆಗಳನ್ನು ಕೈಗೊಂಡಿದೆ. ನಮ್ಮ ಪ್ರತಿಯೊಂದೂ ಸುಧಾರಣೆ ಮನುಷ್ಯ ವ್ಯಕ್ತಿತ್ವದ ವಿಕಾಸವೇ ಗುರಿಯಾಗಿರುವಂತೆ ಮೂಲಭೂತ ಬದಲಾವಣೆಯಿಂದ ಕೂಡಿರಬೇಕು ಎನ್ನುತ್ತೇವೆ.

ಕೊರಿಯಾದಲ್ಲಿ ಕಮ್ಯೂನಿಸ್ಟರೊಡನೆ ಒಪ್ಪಂದ?

ಯುದ್ಧವಿರಾಮ ಮಾತುಕತೆ ಯಶಸ್ವಿಯಾಗುವ ಸಂಭವ

ಅಮೇರಿಕೆಗೆ ಪ್ರತ್ಯಕ್ಷ ಯುದ್ಧಕ್ಕೆ ಇದಿರಾಗಿ ರಶಿಯಾದ ಪ್ರಚ್ಛನ್ನ ಯುದ್ಧ ಕೊರಿಯಾದ ತಂಟೆಯನ್ನು ಇಲ್ಲಿಯವರೆಗೆ ಬೆಳೆಸಿ ತಂದಿತು. ಸಂಯುಕ್ತ ರಾಷ್ಟ್ರ ಸಂಘದ ಹೆಸರಿನಲ್ಲಿ ಅಮೇರಿಕವು ಕಮ್ಯೂನಿಸ್ಟರನ್ನು ಬಗ್ಗುಬಡೆಯುವ ತನ್ನ ಧ್ಯೇಯವನ್ನು ಕೊರಿಯಾದಲ್ಲಿ ಕಾರ್ಯರೂಪಕ್ಕೆ ತರಲು ಹೆಣಗಿದೆ—ಅಂತೆಯೇ ರಶಿಯಾ ತನ್ನ ಸರ್ವ ಪ್ರಥಮ ಶತ್ರುವಿಗೆ ಸ್ವಂತ ಬಲಾಬಲದ ಹೊಲಬೇ ತಿಳಿಯದಂತೆ—ದೂರದಿಂದಲೇ ಸಿಂಹ ಪ್ರತಿಭಟನೆ ನೀಡುತ್ತಿದೆ: ಕೊರಿಯಾದಲ್ಲಿ ಸಂಧಾನ ಮಾತುಕತೆಯ ಸಭೆ ಸೇರುತಿದ್ದಂತೆಯೇ ಯುದ್ಧ ಭೂಮಿಯಲ್ಲಿ ಸಿಡಿಮದ್ದುಗಳು ಧ್ವಂಸ ಕಾರ್ಯವನ್ನೆಸಗುತ್ತವೆ. ಒಂದು ವರ್ಷಕ್ಕೂ ಮಿಕ್ಕಿದ ಸಮಯದಿಂದ ನಡೆಯುವ ಯುದ್ಧ ವಿರಾಮ ಮಾತುಕತೆಗಳು ಇನ್ನೂ ಸಾಂಪ್ರದಾಯಿಕ ಮಟ್ಟದಲ್ಲಿವೆಯೇ ಹೊರತು—ಆಶಾಪ್ರದವಾದ ನಿರ್ಣಯಾತ್ಮಕ ಘಟ್ಟವನ್ನು ಮುಟ್ಟಿಲ್ಲ. ನೋಡುವ—ನಮಗೆ ಹೀಗೆ ಕಂಡರೂ, ಈಚೆಗೆ ಬಂದಿರುವ ವರದಿಗಳಂತೆ, ಇನ್ನೇನು ಹತ್ತು ದಿನಗಳೊಳಗೆ, ಯುದ್ಧ ವಿರಾಮ ಮಾತುಕತೆಗಳು ಯಶಸ್ವಿಯಾಗಿ ಮುಕ್ತಾಯಗೊಳ್ಳುವುವೆಂದು ನಂಬಲಾಗಿದೆ. ಈ ತೆರನಾದ ವಿಶ್ವಾಸ ಇದೇ ಮೊದಲ ಬಾರಿ ಅನುಭವಕ್ಕೆ ಬಂದುದಲ್ಲ ಎಂಬುದರಿಂದ, ಈ ಹಿಂದಿನ ನಂಬುಗೆಗಳಂತೆ, ಈಬಾರಿಯದೂ ನಮ್ಮ ಕೈ ಬಿಡುವುದು ನಿಶ್ಚಯ.

ಕಾಲಿನ್ಸರ ಅರ್ಭಟೆ

ಯಾಲೂ ನದಿಯ ಜಲ ವಿದ್ಯುತ್ಕೇಂದ್ರಗಳ ಮೇಲೆ ವಿಮಾನ ಧಾಳಿಯನ್ನು ಭರದಿಂದ ಅಮೇರಿಕನರು ಮುಂದುವರಿಸುತಿದ್ದರೂ—ಅದರಿಂದ ಚೈನೀ ಕಮ್ಯೂನಿಸ್ಟರು ನಾವು ಹಿಂದೆ ಎಣಿಸಿದಂತೆ ಏಕೆ ಉದ್ರಿಕ್ತರಾಗಿಲ್ಲ ಎಂಬುದು ಪ್ರಶ್ನೆ. ಮೊನ್ನೆ ಮೊನ್ನೆ ನಾಶಹೊಂದಿದ ವಿದ್ಯುದುತ್ಪಾದನಾ ಕೇಂದ್ರಗಳನ್ನು ಉತ್ತರ ಕೊರಿಯನರು ದುರಸ್ತಿ ಪಡಿಸುತಿದ್ದಂತೆಯೇ ಮರಳಿ ಬಲವಾದ ಬಾಂಬು ಮಳೆಗರೆದು ಅವರ ಎಲ್ಲ ಪ್ರಯತ್ನವನ್ನೂ ವಿಫಲಗೊಳಿಸಲಾಯಿತು. ಚೈನಾದ ಮುಖ್ಯ ಮಂತ್ರಿ ಅಮೇರಿಕನರ ಸದಿಚ್ಛೆಯ ಕುರಿತು ಸಂಶಯವನ್ನು ವ್ಯಕ್ತಪಡಿಸಿದರೂ—ಎಣಿಸಿದಂಥ ಮಾದರಿಯಲ್ಲಿ ಉಗ್ರ ಪ್ರತಿಭಟನೆ ಕಂಡುಬಂದಿಲ್ಲ. ಇದರಿಂದ ಮದವೇರಿತೋ ಎಂಬ ಹಾಗೆ—ಅಮೇರಿಕದ ಸೈನ್ಯ ಶಾಖೆಯ ಪರಿಷ್ಠಾಧಿಕಾರಿ ಕಾಲಿನ್ಸರು ಅವಶ್ಯ ಬಿದ್ದರೆ ಕೊರಿಯಾದಲ್ಲಿ ಸರ್ವ ಶಸ್ತ್ರವನ್ನು ಉಪಯೋಗಿಸಲಾಗುವುದೆಂದು ಸಾರಿದರು. ಅಮೇರಿಕವು ಅಣುಶಕ್ತಿಯ ಶಸ್ತ್ರಾಸ್ತ್ರಗಳಲ್ಲಿ ತೀವ್ರ ಪ್ರಗತಿ ಮಾಡುತ್ತಿದೆ ಎಂದವರು ಬೆದರಿಕೆಯನ್ನು ಇನ್ನಷ್ಟು ಹೆಚ್ಚಿಸಿದರು. ಆದರೆ—ಪ್ರಕೃತಕ್ಕೆ ಅಮೇರಿಕೆಯ ಮೇಲೆ ಕ್ರಿಮಿಯುದ್ಧದ ಆರೋಪವಿದೆಯಾಗಿ, ಅದನ್ನು ಅಲ್ಲಗಳೆಯುವುದು ಅತ್ಯಂತ ಮುಖ್ಯ ಕರ್ತವ್ಯವಾದುದರಿಂದ— ಎಂದಿಗೂ ಕ್ರಿಮಿಯುದ್ಧದ ಕ್ರಮವನ್ನು ಮಾತ್ರ ಅನುಸರಿಸುವುದಿಲ್ಲ ಎಂದು ಆಶ್ವಾಸನೆ ನೀಡಿದರು.

ಚೀನಾದ ನಿರ್ಣಯ

ಇದಕ್ಕೂ ಚೀನೀಯರ ಅಥವಾ ಉತ್ತರ ಕೊರಿಯಾದ ಕಮ್ಯೂನಿಸ್ಟರ ಕಡೆಯಿಂದ ಪ್ರತ್ಯುತ್ತರವಿಲ್ಲ—ಆಶ್ಚರ್ಯದ ಸಂಗತಿ ಎಂದರೆ, ಚೈನಾದ ಮುಖ್ಯ ಮಂತ್ರಿ ಶಾಂತಿಯ ಬಗ್ಗೆ ತನ್ನ ಸರಕಾರದ ಧೋರಣೆಯನ್ನು ಇನ್ನಷ್ಟು ಸ್ಪಷ್ಟಗೊಳಿಸಿದ್ದಾರೆ. ಜಿನೀವಾದ ಅಂತರರಾಷ್ಟ್ರೀಯ ಒಪ್ಪಂದವನ್ನು ಅಮೇರಿಕೆ ಇನ್ನೂ ಒಪ್ಪಿಕೊಂಡಿಲ್ಲದಿರುವಾಗ—ಚೈನಾವು ಅದಕ್ಕೆ ಬದ್ಧವಿದೆ ಎಂದವರು ಸಾರಿದರು. ಈ ಹಿಂದೆ ಅಧಿಕಾರದಲ್ಲಿದ್ದ ಕೊಮಿಂಟಾಂಗ (ರಾಷ್ಟ್ರೀಯ) ಸರಕಾರವು ಒಪ್ಪಂದವನ್ನು ಮನ್ನಿಸಿದ್ದಕ್ಕೆ ತಮ್ಮ ಸರಕಾರದ ಕಬೂಲಿ ಇದೆ ಎಂದರವರು. ಈ ಘೋಷಣೆಯೇ ರಾಜಕೀಯ ವೃತ್ತಗಳಲ್ಲಿ ಕೊರಿಯಾದ ಘಟನೆಗಳಲ್ಲಿ ಅನಿರೀಕ್ಷಿತ ಪರಿವರ್ತನೆಗಳಾಗುವುದು ಶಕ್ಯವೆಂಬ ಊಹೆಗೆ ಪುಷ್ಟಿಕೊಟ್ಟಿದೆ. ಜಿನೀವಾದ ಒಡಂಬಡಿಕೆಯನ್ನು ಮಾನ್ಯ ಮಾಡಿದುದರಿಂದ—ಕೈದಿಗಳ ವಿನಿಮಯ ಪ್ರಶ್ನೆಯೂ ಆ ಒಪ್ಪಂದದಲ್ಲಿ ನಮೂದಿಸಿದ ಕ್ರಮಗಳಿಗೆ ಹೊಂದಿಕೊಂಡೇ ಬಗೆಹರಿಯಬೇಕಲ್ಲವೆ! ಕೊರಿಯಾದ ಯುದ್ಧ ವಿರಾಮ ಕಾರ್ಯದಲ್ಲಿ ಇಷ್ಟರವರೆಗೆ ಇದ್ದ ಜಟಿಲ ಸಮಸ್ಯೆಗೆ ಚೈನಾ ಈ ಬಗೆಯ ಮುಕ್ತ ಪರಿಹಾರವನ್ನು ಅಪ್ರತ್ಯಕ್ಷವಾಗಿ ಸೂಚಿಸಿದುದು ಇನ್ನಿಲ್ಲದ ಆಶೆಗೆ ಎಡೆ ಮಾಡಿದೆ.

ಹೊಸ ಆಶೆಗೆ ಎಡೆ

ಇದರ ಪರಿಣಾಮವಾಗಿ ಕೊರಿಯಾ ಯುದ್ಧ ಮುಕ್ತಾಯವಾಗುವುದೆಂಬ ಮನೋಭಾವ ಜಪಾನಿ ವ್ಯಾಪಾರಿ ವರ್ಗಗಳಲ್ಲಿಯೂ ಉಂಟಾಗಿದೆಯಂತೆ—ಅತಿ ಪ್ರಖರವಾದ ಬದಲು ಸರಕುಗಳ ಬೆಲೆಗಳು ಒಮ್ಮೆಗೇ ಕುಸಿದುಬಿಟ್ಟವು. ಇತ್ತೀಚೆಗೆ, ರಜೆಯ ಮೇಲೆ ರಶಿಯಾಕ್ಕೆ ಜೂಲೈ ೨೨ನೇ ತಾರೀಕಿಗೆ ಹೋಗಲಿದ್ದ, ಭದ್ರತಾ ಮಂಡಳದಲ್ಲಿ ರಶಿಯಾದ ಪ್ರತಿನಿಧಿಯಾದ, ಮಾನ್ಸರ್ ಜಾಕಬ ಮಲಿಕರು ತಮ್ಮ ಸಂಚಾರವನ್ನು ಇದ್ದುದಿದ್ದಂತೆ ರದ್ದುಗೊಳಿಸಿದರು. ಕೊರಿಯಾದಲ್ಲಿ ಯುದ್ಧ ವಿರಾಮ ಮಾತುಕತೆಗಳಿಗೆ ನಿರ್ಣಯಾತ್ಮಕ ಸ್ವರೂಪ ಬಂದರೆ—ಅಂಥ ಸಂಧಿಗೆ ಸಹಿ ಬಿದ್ದ ಹದಿನೈದು ದಿನಗಳೊಳಗೆ ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯಾಧಿವೇಶನವನ್ನು ಕರೆಯಲಾಗುವುದು. ಆಗ ರಶಿಯಾದ ಪ್ರತಿನಿಧಿಯಾಗಿ ಜಾಕಬ ಮಲೀಕರು ಇರುವುದು ತೀರ ಅವಶ್ಯವೆಂಬುದಾಗಿ ಯೋಚಿಸಿರಬೇಕು. ಉತ್ತರ ಕೊರಿಯಾ ಮತ್ತು ಚೀನಾದ ಪ್ರತಿನಿಧಿಗಳನ್ನೂ ಈ ಸಾಮಾನ್ಯಾಧಿವೇಶನಕ್ಕೆ ಆಹ್ವಾನಿಸಬಹು

ದಾದುದರಿಂದ ರಶಿಯಾದ ಪ್ರತಿನಿಧಿಯು ಉಪಸ್ಥಿತಿ ಇನ್ನಷ್ಟು ಅಗತ್ಯವೆನಿಸಿದೆ. ರಶಿಯಾದ ಪ್ರತಿಯೊಂದು ಮೌನಕ್ರಿಯೆಗಳಿಗೆ ರಾಜಕೀಯ ವೃತ್ತದಲ್ಲಿ ಇಂಥ ಒಂದಲ್ಲ ಒಂದು ಬಗೆಯ ಪ್ರತಿಕ್ರಿಯೆ ಉಂಟಾಗುವುದು ಅಪೂರ್ವದ ಸಂಗತಿಯಲ್ಲ.

ಮಧ್ಯಸ್ತಿಕೆಯ ಪ್ರಯತ್ನವಿಲ್ಲ

ನೆಹರೂ ಮಧ್ಯಸ್ತಿಕೆಯನ್ನು ಕೊರಿಯಾದ ಯುದ್ಧ ಮುಕ್ತಾಯದ ವಿಷಯದಲ್ಲಿ ಪ್ರಾರ್ಥಿಸಿಕೊಳ್ಳುವ ಬಗ್ಗೆ ಹೆಚ್ಚಿನ ವಿವರಗಳು ತಿಳಿದಿಲ್ಲ. ಪಾಶ್ಚಾತ್ಯ ರಾಷ್ಟ್ರಗಳೊಡನೆ ಮತ್ತು ಪೂರ್ವದ ಚೀನಾದೊಡನೆ– ಸ್ನೇಹ ಸಂಬಂಧದಿಂದಿರುವ ಭಾರತವು ಇಂಥ ಪ್ರಯತ್ನಕ್ಕೆ ತೊಡಗಿದರೆ, ಅದರಿಂದ ಉಪಕಾರವೇ ಎಂದು ಭಾರತದಲ್ಲಿ ಅಮೇರಿಕದ ರಾಯಭಾರಿಯಾಗಿರುವ ಚೆಸ್ಟರ್ ಬೌಲ್ಸರು ಹೇಳಿದ್ದಾರೆ. ಯುದ್ಧವನ್ನು ಕೊನೆಗಾಣಿಸಿ ಶಾಂತಿಯನ್ನು ಪ್ರಸ್ಥಾಪಿಸಬಲ್ಲ ಯಾವುದೇ ಉದ್ಯಮವು ಸ್ವಾಗತಾರ್ಹವೆಂದು ಅವರ ಅಭಿಪ್ರಾಯ. ಲಂಡನ್ನಿನ ಲಾರ್ಡ್ಸ್ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆದಾಗ–ನೆಹರೂರೊಡನೆ ಸಾಮಾನ್ಯ ರೀತಿಯಲ್ಲಿ ಮಾತುಕತೆ ನಡೆಯಿತೆಂದೂ, ಇದಕ್ಕಿಂತ ಹೆಚ್ಚಿನ ವಿವರವನ್ನು ನೆಹರೂರ ಅನುಮತಿ ಪಡೆಯದೆ ಕೊಡುವುದು ಇಷ್ಟವಲ್ಲವೆಂದೂ ಸರಕಾರದ ಪರವಾಗಿ ಹೇಳಲಾಯಿತು. ಭಾರತ ಸರಕಾರವು ಈ ವಿಷಯವನ್ನು ಸ್ಪಷ್ಟೀಕರಿಸುತ್ತಾ, ನೆಹರೂ ಮಧ್ಯಸ್ಥಿಕೆ ವಹಿಸುವ ಪ್ರಶ್ನೆಯೇ ಇಲ್ಲವೆಂದೂ ಕೇವಲ ಸ್ನೇಹಪೂರ್ವಕ ಯುದ್ಧ ವಿರಾಮವಾಗಬೇಕೆಂದು ಪ್ರಯತ್ನ ನಡೆಯುತ್ತಿದೆ ಎಂದೂ ಹೇಳಿದೆ. ಸಂಬಂಧಪಟ್ಟ ಜನರು ಶಾಂತಿಪ್ರದವಾದ ರೀತಿಯಲ್ಲಿ ನಿರ್ಣಯಕ್ಕೆ ಬರಲು ಶಕ್ಯವಿದ್ದ ಪ್ರಯತ್ನಗಳನ್ನೆಲ್ಲ ಭಾರತವು ನಡೆಸುತ್ತಿದೆ.

ಏಶಿಯಾ ಅರಬರಾಷ್ಟ್ರಗಳಿಗೆ ನಿರಾಶೆ

ಟ್ಯುನೀಶಿಯಾದ ಬಗ್ಗೆ ಸಂಯುಕ್ತ ರಾಷ್ಟ್ರಸಂಘದ ವಿಶೇಷಾಧಿವೇಶನವನ್ನು ಸೇರಿಸುವ ಏಶಿಯಾ–ಅರಬ ರಾಷ್ಟ್ರಗಳ ಪ್ರಯತ್ನ ವಿಫಲಗೊಂಡಿತು. ಹಾಗೆ ಅಧಿವೇಶನವನ್ನು ಕೂಡಿಸಲು ಬೇಕಿದ್ದಷ್ಟು ರಾಷ್ಟ್ರಗಳ ಸಮ್ಮತಿ ದೊರೆಯದಿದ್ದುದರಿಂದ, ಅಪಜಯ ಉಂಟಾಯಿತು. ಎಲ್ಲ–ರಾಜಕೀಯ ಕ್ಷೇತ್ರದಲ್ಲಿಯೂ ಕೊರಿಯಾದ ಘಟನೆಗಳ ಬಗ್ಗೆ ತೀವ್ರಾಸಕ್ತಿ ಇರುವುದು ಟ್ಯುನೀಶಿಯಾದ ಪ್ರಶ್ನೆಯನ್ನು ಹಿಂದಕ್ಕೆ ತಳ್ಳಲು ಒಂದು ಬಲವಾದ ಕಾರಣವೆಂದು ಊಹಿಸಲಾಗಿದೆ. ಹೇಗೇ ಇರಲಿ, ಅಕ್ಟೋಬರದ ಒಳಗಾಗಿ ಸಾಮಾನ್ಯ ಅಧಿವೇಶನ ಸೇರುವುದು ನಿಶ್ಚಯವಾದುದರಿಂದ– ಆಗ ಟ್ಯುನೀಶಿಯಾದ ಪ್ರಶ್ನೆಯನ್ನೆತ್ತಬಹುದು ಎಂಬ ಸಮಾಧಾನವನ್ನು ಏಶಿಯಾ–ಅರಬ ರಾಷ್ಟ್ರಗಳು ಇಟ್ಟುಕೊಂಡಿವೆ. ಇದಕ್ಕಾಗಿ ಹೆಚ್ಚು ಆಶೆ ಕಟ್ಟಿಕೊಳ್ಳಲು ಪ್ರಸ್ತುತ ಅವಕಾಶವಿಲ್ಲ.

ದಕ್ಷಿಣ ಆಫ್ರಿಕೆಯ ಬಗ್ಗೆ ಅಸಂತುಷ್ಟಿ

ದಕ್ಷಿಣ ಅಫ್ರಿಕದಲ್ಲಿ ಸರಕಾರ ಅನುಸರಿಸುತ್ತಿರುವ ವರ್ಣ ಭೇದ ನೀತಿಯನ್ನೂ ಈ ಸಾಮಾನ್ಯ ಅಧಿವೇಶನದಲ್ಲಿ ಮರಳಿ ಖಂಡಿಸುವ ನಿರ್ಣಯ ಮುಂದೆ ಬರಬಹುದು. ಭಾರತವು ಈ ಬಗ್ಗೆ ತಕ್ಕ ಪ್ರಯತ್ನಗಳಲ್ಲಿ ತೊಡಗಿದೆ ಎಂದು ವರದಿ. ಸಂಯುಕ್ತ ರಾಷ್ಟ್ರ ಸಂಘದ ಈ ಮೊದಲಿನ ನಿರ್ಣಯದಂತೆ— ಸಂಬಂಧಿಸಿದ ರಾಷ್ಟ್ರಗಳು, ಎಂದರೆ ದಕ್ಷಿಣ ಆಫ್ರಿಕಾ, ಮತ್ತು ಪಾಕಿಸ್ತಾನ ಮತ್ತು ಭಾರತ, ಒಟ್ಟಿಗೆ ಈ ವಿಷಯವನ್ನು ಚರ್ಚಿಸಿ ಒಮ್ಮತದ ನಿರ್ಣಯಕ್ಕೆ ಬರಬೇಕಾಗಿತ್ತು. ಆದರೆ, ವರ್ಣಭೇದ ಕಾನೂನಿನ ಪ್ರಶ್ನೆಯು ತನ್ನ ಆಂತರಿಕ ವ್ಯವಹಾರಕ್ಕೆ ಸಂಬಂಧಿಸಿದುದೆನ್ನುತ್ತಾ ದಕ್ಷಿಣ ಆಫ್ರಿಕೆಯು ಸಂಯುಕ್ತ ರಾಷ್ಟ್ರಸಂಘದ ಈ ನಿರ್ಣಯವನ್ನು ತಿರಸ್ಕರಿಸಿದೆಯಾಗಿ, ಏನೊಂದೂ ಪ್ರಗತಿಪರ ಹೆಜ್ಜೆಯನ್ನಿಡಲಾಗಲಿಲ್ಲ. ಮಲಾನ್ ಸರಕಾರದ ಈ ಕೃತಿಯನ್ನು ಖಂಡಿಸುವುದಕ್ಕೆ ಬಲವಾದ ಕಾರಣಗಳಿವೆ. ಎಂತಲೇ ಭಾರತೀಯರ ಸತ್ಯಾಗ್ರಹಕ್ಕೆ ಕಳೆಯೇರಿದೆ. ಕಪ್ಪು ಜನರ ವಿರೋಧಿ ಕಾಯಿದೆಯನ್ನು ಪ್ರಯೋಗಿಸಿ, ಸತ್ಯಾಗ್ರಹಿಗಳನ್ನು ಕಾರಾಗೃಹದಲ್ಲಿಡುವ ಉಪಕ್ರಮವು ನಿಂದನೀಯ ಎಂಬ ಅಭಿಪ್ರಾಯವನ್ನು ಬ್ರಿಟನ್ನಿನ ಕೆಲವು ಪಾರ್ಲಿಮೆಂಟಿನ ಸದಸ್ಯರೂ ವ್ಯಕ್ತಗೊಳಿಸಿದ್ದಾರೆ.

ಮುಸಾದಿಕರಿಗೆ ಬೆಂಬಲ

ಇರಾಣದಲ್ಲಿ ಒಂದು ನಾಟಕ ನಡೆಯುತ್ತಿದೆ– ಘಟನಾತ್ಮಕ ರೀತಿಗೆ ಅನುಗುಣವಾಗಿ ರಾಜೀನಾಮೆ ಕೊಟ್ಟ ಮುಸಾದಿಕರು ಮರಳಿ ಮುಖ್ಯ ಮಂತ್ರಿಯಾಗಬೇಕೆಂದು ಅಲ್ಲಿಯ ಮಜ್ಲಿಸು ನಿಶ್ಚಯಿಸಿತಷ್ಟೆ! ಇದರಂತೆ ಮುಸಾದಿಕರನ್ನು ಮಂತ್ರಿಮಂಡಳ ರಚಿಸಲು ಆಮಂತ್ರಿಸಿದರು. ಆದರೆ ಯುದ್ಧ ಮತ್ತು ಸಂರಕ್ಷಣ ಖಾತೆಯನ್ನು ತನ್ನ ವಶ ಇಟ್ಟುಕೊಳ್ಳಲು ಮುಸಾದಿಕರಿಗೆ ಅನುಮತಿ ಕೊಡಲಿಲ್ಲ. ಇದರಿಂದ ಅಸಂತುಷ್ಟಗೊಂಡು ಮುಸಾದಿಕರು ಮರಳಿ ರಾಜೀನಾಮೆ ಕೊಟ್ಟರು. ಮಜ್ಲೀಸಿನ ಗುಪ್ತ ಸಭೆ ಇನ್ನೊಮ್ಮೆ ಕೂಡಿ ಘವಮ ಸುಲ್ತಾನೆಯೆಂಬವರನ್ನು ಆರಿಸಿತು. ಇವರು ಒಂದು ಮಂತ್ರಿಮಂಡಳವನ್ನೂ ರಚಿಸಿದರು ಆದರೆ, ಮುಸಾದಿಕರ ಬೆಂಬಲಿಗರು ಈ ಅಯ್ಕೆಯ ಕಾಲದಲ್ಲಿ ಮಜ್ಲಿಸನ್ನು ಬಹಿಷ್ಕರಿಸಿದುದಲ್ಲದೆ, ಮುಸಾದಿಕರೇ ಮರಳಿ ಮುಖ್ಯ ಮಂತ್ರಿಯಾಗಬೇಕೆಂದು ಪ್ರಚಂಡ ಪ್ರದರ್ಶನವನ್ನು ಮಾಡಿದರು. ತೆಹರಾನ್ ರೇಡಿಯೋ ಮುಸಾದಿಕರು ಸ್ವಂತ ಇಚ್ಛೆಯಿಂದಲೇ ರಾಜೀನಾಮೆ ಕೊಟ್ಟರೆಂದು ಎಷ್ಟು ಬೊಬ್ಬಿರಿದರೂ ಮುಸಾದಿಕರ ಬೆಂಬಲಿಗರ ಆಕ್ರೋಶ ನಿಲ್ಲಲಿಲ್ಲ. ರಾಜ್ಯದಲ್ಲಿ ಈ ತೆರನಾದ ಗೊಂದಲ ಎದ್ದುದರಿಂದ ಅದನ್ನು ಅಡಗಿಸಲು ಮಿಲಿಟರಿಯನ್ನು ಪ್ರಯೋಗಿಸಲಾಯಿತು. ಗುಂಡುಗಳು ಹಾರಿದುವು— ಹಲ್ಲೆಗಳು ನಡೆದುವು. ಘವಮ ಸರಕಾರ ಗದಗುಟ್ಟಿ ನಡುಗಿತು. ಪಂಚಾಮೃತವೋ ಎಂಬಂತೆ— ಮುದುಕ ಘವಮರು ರಾಜೀನಾಮೆ ಕೊಟ್ಟರು! ಮಜ್ಲೀಸು ಮೂರನೆಯ ಬಾರಿ ಸಭೆಸೇರಿ—ಮುಸಾದಿಕರನ್ನು ಮುಖ್ಯ ಮಂತ್ರಿಯಾಗಬೇಕೆಂದು ಪ್ರಾರ್ಥಿಸಿ ಒಂದು ಠರಾವನ್ನು ಹೊರಡಿಸಿ, ಮಂತ್ರಿ ಮಂಡಳವನ್ನು ಮುಸಾದಿಕರು ರಚಿಸಬೇಕೆಂದು ಕೇಳಿದ್ದಾರೆ!

ಅನಾಯಕತ್ವದ ಭಯ

ಇದರಂತೆ ಈಜಿಪ್ತದಲ್ಲಿಯೂ ಮುಖ್ಯಮಂತ್ರಿ ಸಿರ್ರಿ ಪಾಶಾ ರಾಜೀನಾಮೆ ಕೊಟ್ಟಿರುವರು. ಸ್ವತಂತ್ರ ಸದಸ್ಯರುಳ್ಳ ಈ ಮಂತ್ರಿ ಮಂಡಳ ಕುಸಿದು ಬೀಳಲಿಕ್ಕೆ ಘಟನಾತ್ಮಕ ಸೊಡರು ಕೆಳೇ ಮೂಲವಂತೆ. ಬ್ರಿಟನ್ನಿನೊಡನೆ ಹೊಸ ಮಾತುಕತೆಗಳು ನಡೆಯುವ ಆಶೆ ಇತ್ತು—ಅಲ್ಲದೆ ಸುಡಾನಿ ಜನರೊಡನೆ ಕೂಡ ಹೊಂದಿಕೊಂಡ, ಹೋಗುವ ಆತುರವನ್ನು ಈ ಸರಕಾರ ತೋರಿಸಿತ್ತು. ಈಗ ಎಲ್ಲ ತಟಸ್ಥ: ಮುಂದೇನು ಎಂಬುದೇ ಪ್ರಶ್ನೆ. ಜನತೆಯ ವಿಶ್ವಾಸವನ್ನು ಸಂಪೂರ್ಣ ಪಡೆದುಕೊಂಡು, ರಾಷ್ಟ್ರವನ್ನು ಯೋಗ್ಯದಿಸೆಯಲ್ಲಿ ಮುನ್ನಡೆಸಬಲ್ಲ ಪ್ರತಿಭಾನ್ವಿತ ಧುರೀಣನಿರದಿದ್ದರೆ–ಈ ಬಗೆಯ ನಿತ್ಯ ಪೇಚಾಟಗಳು ತಪ್ಪುವುದು ಸಾಧ್ಯವಿಲ್ಲ. ಭಾರತ ಅಂಥ ದುರ್ಗತಿಗೆ ಇಳಿಯದಿರಲಿ!

ಕಾಶ್ಮೀರ ಪ್ರಕರಣ

ಹೊಸದಿಲ್ಲಿಯಲ್ಲಿ ಶೇಕ ಅಬ್ದುಲ್ಲಾ ಭಾರತ ಸರಕಾರದೊಡನೆ ಕಾಶ್ಮೀರದ ಸಂಬಂಧದಲ್ಲಿ ಮಾತುಕತೆಗಳನ್ನು ನಡೆಸಲು ಬಂದಿರುವರು. ಮುಖ್ಯಮಂತ್ರಿ ನೆಹರೂ, ರಕ್ಷಣಾ ಮಂತ್ರಿ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್, ಮೌಲಾನಾ ಆಜಾದ ಮತ್ತು ರಾಷ್ಟ್ರಾಧ್ಯಕ್ಷ ಪ್ರಸಾದರನ್ನು ಶೇಖ ಅಬ್ದುಲ್ಲ ಕಂಡರು. ಮಾತುಕತೆಗಳು ಯಶಸ್ವಿಯಾಗುವುದೆಂದು ಎಲ್ಲರೂ ನಂಬಿದ್ದು ಮುಖ್ಯ ವಿಷಯಗಳಲ್ಲಿ ಒಮ್ಮತವುಂಟಾಗಿದೆ ಎಂದೂ ಹೇಳಲಾಗಿದೆ. ಕಾಶ್ಮೀರಕ್ಕೆ ಮರಳುವ ತಮ್ಮ ನಿರ್ಣಯವನ್ನು ಕೊನೆಯ ಗಳಿಗೆಯಲ್ಲಿ ಶೇಖ ಅಬ್ದುಲ್ಲ ಬದಲಿಸಿದುದರಿಂದ ಈ ಊಹೆಗೆ ಇನ್ನಷ್ಟು ಪುಷ್ಟಿ ದೊರೆತಿದೆ. ವಿವರವಾದ ಸಂಗತಿ ಏನೂ ತಿಳಿದುಬಂದಿಲ್ಲ.

ಉಡುಪಿ

ಅಸಮಾರಿಷ್ಟಗಳ ಮೇಲಿನ ಪ್ರತಿಬಂಧಕಗಳನ್ನು- ಕೂಡಲೇ ತೆಗೆಯಬೇಕೆಂದು ಮದ್ರಾಸು ಸರಕಾರದ ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರಿಯವರಿಗೆ ಉಡುಪಿ ವೈದ್ಯರ ಕಡೆಯಿಂದ ಪಂಡಿತ ಟಿ. ಎಸ್. ಕೇಳುನಂಬಿಯಾರರು ಒಂದು ಮನವಿಯನ್ನು ಕಳುಹಿಸಲಿರುತ್ತಾರೆ.

ಕತಾಯಿ ಮಂಡಲ– ಉಡುಪಿ ಕತಾಯಿ ಮಂಡಲವು 1951 ಜೂನ್ ತಿಂಗಳಿಂದ 1952 ಜೂನ್ ತಿಂಗಳಾಂತ್ಯದ ವರೆಗೆ ನಡೆಸಿದ ಕಾರ್ಯಕಲಾಪಗಳ ವರದಿ ಸಾರಾಂಶ ಹೀಗಿದೆ; [1] ನೂತ ನೂಲು 1460 ಅಡಿಗಳು, ನೇಯಿಸಿದ ಖಾದಿ 353 ಚ ಗಜ ಅದರ ಬೆಲೆ ರೂ 723 [2] ಸಾಮೂಹಿಕವಾಗಿ ನೂಲುವುದು, ರಾಷ್ಟ್ರೀಯ ದಿನಗಳಲ್ಲಿ ಸೂತ್ರಾಂಜಲಿ ಪ್ರಚಾರ ಭೂದಾನ ಯಜ್ಞದ ವಿಚಾರವಾಗಿ ವ್ಯಕ್ತಿಗತ ವಿಚಾರ ವಿನಿಮಯ ಇತ್ಯಾದಿ ಚಟುವಟಿಕೆಗಳು ಅಲ್ಲದೆ ಸದಸ್ಯರನ್ನು ಚರಕಾಸಂಘಕ್ಕೆ ನೋಂದಾಯಿಸಿದ್ದು.

ಕಾಲೇಜು ವಿದ್ಯಾರ್ಥಿ ಸಂಘ ಉದ್ಘಾಟನೆ– ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ವಿದ್ಯಾರ್ಥಿ ಸಂಘದ ಉದ್ಘಾಟನೆಯು ಇದೇ ತಾ 25ನೆ ಶುಕ್ರವಾರ ಸಂಜೆ 3-45ಕ್ಕೆ ಮಂಗಳೂರಿನ ಗವರ್ನಮೆಂಟ್ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ರಾಘವ ಬಾಳಿಗರ ನೇತೃತ್ವದಲ್ಲಿ ನಡೆಯಲಿರುವುದು, ಸರ್ವರಿಗೂ ಸ್ವಾಗತವಿದೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ

ವಿಷಾದಕರ ಮರಣ— ಎಂ. ಜಿ. ಎಂ. ಕಾಲೇಜಿನ ಮೊದಲ ಯುನಿವರ್ಸಿಟಿ ಕ್ಲಾಸಿನ ಪಡುಬಿದ್ರೆಯ ವಿಟ್ಠಲದಾಸ ಶೆಣೈ ಎಂಬ ವಿದ್ಯಾರ್ಥಿಯು ಕೆಲವು ಸಮಯ ಬೇಸಿಗೆಯ ರೋಗದಿಂದಾಗಿ ಇದೇ ಸೋಮವಾರ ರಾತ್ರಿ ಮಂಗಳೂರಲ್ಲಿ ನಿಧನ ಹೊಂದಿದುದು ಅತ್ಯಂತ ವಿಷಾದಕರವಿದೆ.

ಡಾ| ಟಿ. ಎಂ. ಎ. ಪೈಗಳು— ತಮ್ಮ ಮದ್ರಾಸು, ಮೈಸೂರು ಪ್ರವಾಸವನ್ನು ಮುಗಿಸಿಕೊಂಡು ಇದೀಗ ಉಡುಪಿಗೆ ಹಿಂದಿರುಗಿರುವರು. ಅವರಿಗೆ ಹೋದಲ್ಲೆಲ್ಲ ಸಂಭ್ರಮದ ಸ್ವಾಗತ, ಸತ್ಕಾರ ದೊರಕಿರುವುದು ಜನತೆಗೆ ಅವರ ಕಾರ್ಯಪಟುತ್ವದ ಮತ್ತು ಗಣ್ಯ ವ್ಯಕ್ತಿತ್ವದ ಮೇಲೆ ಇರುವ ಗೌರವಾದರದ ದ್ಯೋತಕವಾಗಿದೆ. ಡಾ| ಪೈಗಳವರೂ ತಮಗೆ ಏರ್ಪಡಿಸಿದ ಸತ್ಕಾರ ಸಭೆಗಳಲ್ಲಿ ತಮ್ಮ ಪರಿಪಕ್ವ ಅನುಭವ ಪೂರಿತ ಭಾಷಣದಿಂದ ವಿಚಾರ ಪ್ರಚೋದನೆಯನ್ನುಂಟುಮಾಡಿ ಸರ್ವತ್ರ ಉಡುಪಿಯ ಕೀರ್ತಿ ಧ್ವಜವನ್ನೆತ್ತಿ ಹಿಡಿದಿರುವರೆನ್ನಬಹುದು.

ನೇಕಾರರ ಮುಷ್ಕರ ಮತ್ತು ಸಭೆ ಉಡುಪಿ ನೇಕಾರರು ಒಂದು ವಾರ ಬಟ್ಟೆಯ ಮೇಲೆ ಬಂದೊದಗಿದ ಅಡೆಯಂತೆ ಮಜೂರಿಯಲ್ಲಿ ಮಾಲಕರು ಕಡಿತಮಾಡಿದುದರ ಪ್ರತಿಭಟನೆಯ ಸಲುವಾಗಿ ... ಭೇದಾರ್ಥವಾಗಿ ಇದೇ ತಾ 17ರಲ್ಲಿ ಮುಷ್ಕರ ಹೂಡಿದರು. ಸಂಜೆ ಶ್ರೀ ಯು. ದಾಸ ಶೆಣೈಗಾರರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿದಾಗ ಶ್ರೀ ಯು. ಶೀನ ಸಾಲ್ಯರು ಭಾಷಣವಿತ್ತರು.

ಸಾಹುಕಾರರ ಸಂಘದ ಮಹಾಸಭೆಯು– ಇದೇ ತಾ 13ರಲ್ಲಿ ಶ್ರೀ ಯು ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ವರುಷಕ್ಕೆ ಕಾರ್ಯನಿರ್ವಾಹಕರಾಗಿ ಶ್ರೀಗಳಾದ ಯು. ಎಸ್. ನಾಯಕ್, ಅಧ್ಯಕ್ಷ, ಯು. ಗೋಪಾಲ ಶೆಣೈ, ಉಪಾಧ್ಯಕ್ಷ ಕೆ. ಪ್ರಭಾಕರ ಪೈ ಮತ್ತು ಎಮ್. ಆರ್ ಕಾಮತ್, ಜತೆ ಕಾರ್ಯದರ್ಶಿಗಳು; ಯು ಕೇಶವ ಕಾಮತ್, ಖಜಾನ್ಜಿಯಾಗಿ ಆರಿಸಲ್ಪಟ್ಟರು.

ಹಣದ ವಂಚನೆಯ ಆರೋಪ. ಉಡುಪಿ ಮುನಿಸಿಪಾಲಿಟಿಯ ಬಾಬ್ತು ರೂ 1548-4-0 ವಂಚನೆ ನಡೆದಿರುವುದಾಗಿಯೂ, ತತ್ಸಂಬಂಧ ಪೋಲೀಸ್ ಫಿರ್ಯಾದಿ ಕೊಡಲಾಗಿದೆ ಎಂದೂ ತಿಳಿದುಬರುತ್ತದೆ. ವಂಚನೆ ಕಾಲದಲ್ಲಿ ಹಂಗಾಮಿ ಸರಾಫರಾಗಿದ್ದ ಪಿಟರ್ ಡಿಸೋಜ್ಜಾ ಈಗ ಕಾಣೆಯಾಗಿರುವರು. ಪೋಲೀಸರ ಶೋಧ ನಡೆಯುತ್ತಿದೆ ಎನ್ನಲಾಗಿದೆ.

ವರ್ಗ— ಉಡುಪಿ ಸರ್ಕಲಿನ ಜನಪ್ರಿಯ ಹರಿಜನ ವೆಲ್ಫೇರ್ ಸ್ಪೆಶಲ್ ಇನ್ಸ್‌ಪೆಕ್ಟರ್ ಶ್ರೀ ಕೆ. ಚನ್ನಪ್ಪನವರು ಕಾಸರಗೋಡಿಗೆ ವರ್ಗಾಯಿಸಲ್ಪಟ್ಟರು. ಆ ಸಂಬಂಧ ಉಡುಪಿಯ ಹರಿಜನ ಬಂಧುಗಳು 13-52ರಲ್ಲಿ ಸತ್ಕಾರ ಕೂಟವನ್ನು ನೆರವೇರಿಸಿ ಬೀಳ್ಕೊಟ್ಟರು.

ಹೊಸ ಸಬ್ ಕಲೆಕ್ಟರರು– ಬಳ್ಳಾರಿ ಹೊಸಪೇಟೆಯಲ್ಲಿರುವ ಶ್ರೀ ಡೇರೆಬೈಲ್ ಕೃಷ್ಣ ಬಿ. ಎ. ಬಿ ಎಲ್ ಅವರು ಕುಂದಾಪುರ ಡಿವಿಜನಿನ ಸಬ್ ಕಲೆಕ್ಟರರಾಗಿ ನೇಮಕಹೊಂದಿರುವರು. ಶ್ರೀಯುತರು ಹರಿಜನ ವರ್ಗದವರಿದ್ದು ಮಂಗಳೂರಿನ ನಿವಾಸಿಗಳು.

Read and Advertise

IN

NAVAYUGA ANNUAL

Instructive
Interesting
Entertaining

Special features for every taste. Best medium for lasting advertisements.

Date of Publication: 4-9-1952

Further details on application to

THE MANAGER,

NAVAYUGA,

UDIPI.

ಗ್ರಾಮಾಭಿವೃದ್ಧಿ ಕೆಲಸ- ಜೂನ್ ತಿಂಗಳಲ್ಲಿ ಗ್ರಾಮಾಭಿವೃದ್ಧಿ ಕ್ಷೇತ್ರದಲ್ಲಿ ಜರುಗಿದ ಮುಖ್ಯ ಕೆಲಸಗಳು ಹೀಗಿವೆ;-

ಕುಂಬಳೆ ಫಿರ್ಕಾ- ಎರಡು ಎಕ್ರೆ ಸ್ಥಳ ಸಮತಟ್ಟು ಮಾಡಲ್ಪಟ್ಟು ಬೇಸಾಯಕ್ಕೆ ಅನುಕೂಲವಾಗಿದೆ. ರೂಪಾಯಿ 700 ತಕ್ಕಾವಿ ಸಾಲವನ್ನು ರೈತರಿಗೆ ಕೊಡಲಾಗಿದೆ. 5000 ಕ್ಕಿಂತ ಹೆಚ್ಚು ಗಿಡಗಳು ನೆಡಲ್ಪಟ್ಟಿವೆ. ಸಸಿ ಎಲೆಗೊಬ್ಬರದ ಅನೇಕ ಸಸಿಗಳು ನೆಡಲ್ಪಟ್ಟಿವೆ.

ಮಂಜೇಶ್ವರ ಫಿರ್ಕಾ- ಎಂಟು ಎಕ್ರೆ ಜಾಗೆಯು ಬೇಸಾಯಕ್ಕೆ ತರಲ್ಪಟ್ಟಿದೆ. 6000 ಕ್ಕಿಂತ ಹೆಚ್ಚು ಸಸಿ ಎಲೆ ಗೊಬ್ಬರದ ಗಿಡಗಳನ್ನೂ ನೆಡಲಾಗಿದೆ. ಚೇವಾರು ಶಾಲೆಯು ಹಾ. ಎ. ಶಾಲೆಯಾಗಿ ಮಾಡಲ್ಪಟ್ಟಿದೆ. ಮಂಜೇಶ್ವರದಲ್ಲಿ ಉತ್ತಮರೀತಿಯ ಹುರಿ ಹಗ್ಗದ ಕೆಲಸವನ್ನು ಹೆಂಗಸರಿಗೆ ಕಲಿಸುವ ಕೇಂದ್ರವನ್ನು ತೆರೆಯಲಾಗಿದೆ. ಉದ್ಯಾವರದಲ್ಲಿ ಒಂದು ಕಾಲ್ಸಂಕದ ಕೆಲಸವು ಮುಗಿಸಲ್ಪಟ್ಟಿದೆ.

ಮಂಗಲ್ಪಿ ಫಿರ್ಕಾ- 3·30 ಎಕ್ರೆ ಜಾಗೆ ಹೊಸದಾಗಿ ಕೃಷಿಗೆ ತರಲಾಗಿದೆ. 6000 ಕ್ಕಿಂತ ಹೆಚ್ಚು ಸಸಿ ಎಲೆ ಗೊಬ್ಬರದ ಗಿಡಗಳು ನೆಡಲ್ಪಟ್ಟಿವೆ. ಕಿನ್ನಿಗೋಳಿ ಕೋಳಿ ಸಾಕುವ ಕೇಂದ್ರವು ಜೂನ್ ತಾ 16ರಂದು ತೆರೆಯಲ್ಪಟ್ಟಿತು. ಐಕಳ ಗ್ರಾಮದಲ್ಲಿ ಒಂಭತ್ತು ಕೊರಗರ ಕುಟುಂಬಗಳಿಗೆ ಮನೆ ಕಟ್ಟಲು ಜಾಗೆಯು ಕೊಡಲಾಗಿದೆ.

ಮೂರು ಫಿರ್ಕಾಗಳಲ್ಲಿಯೂ ಹೊಸ ಚರಕಗಳನ್ನು ಕೊಡಲಾಗಿದೆ.

ಕುಂಬಳೆ- ವಿನಿಯಂತ್ರಣದಿಂದ ಈ ಭಾಗದಲ್ಲಿ ಆಹಾರ ಧಾನ್ಯಗಳ ಬೆಲೆ ಕಡಿಮೆಯಾದಂತೆ ತೋರುವುದಿಲ್ಲ- ವನಮಹೋತ್ಸವ ಸಂಬಂಧವಾಗಿ ಇದೇ ತಾ 7ರಲ್ಲು ಮಾಯಿಪಾಡಿ ಬುನಾದಿ ತರಬೇತಿ ಶಾಲೆಯಲ್ಲಿ 'ಜೀವನಧಾರಿ' ಎಂಬ ಸಾಮಾಜಿಕ ನಾಟಕವೂ ಯಕ್ಷಗಾನ ನಾಟಕವೂ ಶ್ರೀ ಪಿ. ತಿಮ್ಮಪ್ಪ ನಟ್ಟರ ಅಧ್ಯಕ್ಷತೆಯಲ್ಲಿ ಅಭಿನಯಿಸಲ್ಪಟ್ಟವು. ಈ ಶಾಲೆಯಲ್ಲಿ ತರಬೇತು ಹೊಂದಿದವರನ್ನು ಬೀಳ್ಕೊಡುವ ಸಮಾರಂಭವು ತಾ 8 ರಲ್ಲು ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ರಾಮಕೃಷ್ಣ ನಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ದ. ಕ. ಜಿಲ್ಲಾ ತೆಂಗು ಮತ್ತು ಅಡಿಕೆ ಮಾರ್ಕೆಟ್ ಕಮಿಟಿ-1933ನೇ ಮದ್ರಾಸು ವ್ಯಾಪಾರಿ ಬೆಳೆಗಳ ಮಾರ್ಕೆಟ್ ಆಕ್ಟು ಪ್ರಕಾರ, ಈಗಾಗಲೇ ತೆಂಗು ಮತ್ತು ಅಡಿಕೆ ಬೆಳೆಗಳನ್ನು ಈ ಜಿಲ್ಲೆಯಲ್ಲಿ ವ್ಯಾಪಾರಿ ಬೆಳೆಗಳಾಗಿ ಜ್ಯಾರಿಗೆ ತಂದು, ಅದರ ಮೇಲಿನ ಕಮಿಟಿಯನ್ನು ಸ್ಥಾಪಿಸಿ, ಅದು ಈ ಬೆಳೆಗಳ ವ್ಯಾಪಾರವು ಕ್ರಮಬದ್ಧವಾಗಿ ನ್ಯಾಯ ರೀತಿಯಿಂದ ನಡೆಯುವಂತೆ ಕೆಲಸ ಸಾಗಿಸುತ್ತಿರುವುದೂ ಇದರ ಬಗ್ಗೆ ಮಂಗಳೂರು ಬಂದರದಲ್ಲಿ ಒಂದು ಮಾರ್ಕೆಟ್ ಯಾರ್ಡನ್ನು ತೆರೆದಿರುವುದೂ ಹೆಚ್ಚಿನವರಿಗೆ ತಿಳಿದಿರುವ ಸಂಗತಿಯಾಗಿದೆ. ಈಗ ತೆಂಗು ಅಡಿಕೆಯಲ್ಲದೆ, ನಮ್ಮ ಜಿಲ್ಲೆಯಲ್ಲಿ ಬೆಳೆಯುವ ಕರಿಮೆಣಸು (Peppar) ಗೇರುಬೀಜ ಮತ್ತು ಹೊಗೆಸೊಪ್ಪು ಬೆಳೆಗಳನ್ನು ವ್ಯಾಪಾರಿ ಬೆಳೆಗಳಾಗಿ ಜ್ಯಾರಿಗೆ ತರುವುದು ಈ ಬೆಳೆಗಳನ್ನು ಬೆಳೆಯಿಸುವ ರೈತರಿಗೂ, ಅವುಗಳ ವ್ಯಾಪಾರಸ್ಥರಿಗೂ ಪ್ರಯೋಜನಕಾರಿಯಾಗುವುದೆಂದು ಅಭಿಪ್ರಾಯವಿರುವುದರಿಂದ, ಅದರ ಕುರಿತು ರೈತರ ಮತ್ತು ವ್ಯಾಪಾರಸ್ಥರ ಅಭಿಪ್ರಾಯಗಳನ್ನು ತಿಳಿಯುವುದು ಒಳ್ಳೆಯದೆಂದು ಪತ್ರಿಕೆಗಳಲ್ಲಿ ಇದನ್ನು ಪ್ರಕಟಿಸಲಾಗಿದೆ. ಆದುದರಿಂದ ಜಿಲ್ಲೆಯ ಕರಿಮೆಣಸು, (Peppar) ಹೊಗೆಸೊಪ್ಪು ಮತ್ತು ಗೇರುಬೀಜ ಬೆಳೆಯುವ ರೈತರೂ ಈ ಬೆಳೆಗಳ ವ್ಯಾಪಾರಸ್ಥರೂ ಈ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನು ಸೆಕ್ರೆಟರಿ, ತೆಂಗು ಮತ್ತು ಅಡಿಕೆ ಮಾರ್ಕೆಟ್ ಕಮಿಟಿ, ಬಂದರ, ಮಂಗಳೂರು—ಇವರಿಗೆ ಬರೆದು ತಿಳಿಸಬೇಕಾಗಿ ಸಂಬಂಧಪಟ್ಟವರ ವಿನಂತಿಯಿದೆ.

ದ. ಕ. ಜಿಲ್ಲಾ ವರ್ಗದಾರರ ಮನವಿ- ಮದ್ರಾಸು ಸರಕಾರದ ಭೂಕಂದಾಯ (ಸರ್. ಚಾರ್ಜ) ಮಸೂದೆಯ ಕುರಿತು ದ. ಕ. ಜಿಲ್ಲಾ ವರ್ಗದಾರರ ಸಂಘವು ಕೂಲಂಕುಶ ವಿಮರ್ಶಿಸಿತು. ತತ್ಫಲವಾಗಿ ಆ ಸಂಘದ ಗೌರವ ಕಾರ್ಯದರ್ಶಿ ಶ್ರೀ ಕೆ. ದಿನರಾಜ ಹೆಗ್ಡೆಯವರು ಒಂದು ಮನವಿಯನ್ನು ಮದ್ರಾಸಿನ ಹಣಕಾಸಿನ ಮಂತ್ರಿಗಳಿಗೆ ಕಳುಹಿಸಿರುವರು. ಅದರ ಮುಖ್ಯ ವಿಷಯಗಳಾವುವೆಂದರೆ ಮದ್ರಾಸು ಸ್ಟೇಟಿನ ಎಲ್ಲಾ ಜಿಲ್ಲೆಗಳಿಗಿಂತಲೂ ದ. ಕ. ಜಿಲ್ಲೆಯಲ್ಲಿ ಎತ್ತಲಾಗುವ ಭೂಕಂದಾಯವು ಅತ್ಯಧಿಕವಿದೆ. ಆಹಾರ ಉತ್ಪಾದನೆಯಲ್ಲಿ ರೈತರು ಸರಕಾರದೊಡನೆ ಸಹಕರಿಸಬೇಕೆಂದು ಹೇಳುವಾಗಲೇ ರೈತರಮೇಲೆ ಹೆಚ್ಚಿನ ಕರ ಭಾರವನ್ನು ಹೊರಿಸಿದರೆ, ರೈತರು ಮನಃಪೂರ್ತಿಯಿಂದ ಬೇಸಾಯ ಮಾಡುವುದಾದರೂ ಹೇಗೆ ಸಾಧ್ಯ. 1942ನೆ ಇಸವಿಯಿಂದ ದೊಡ್ಡ ಜಮೀನ್ದಾರರು ಹೇರಳ ಹಣ ಗಳಿಸಿರುವರೆಂಬುದು ನಿಜವಲ್ಲ. ದ. ಕ. ಜಿಲ್ಲೆಯಲ್ಲಿ ಹೆಚ್ಚು ಆಹಾರ ಉತ್ಪತ್ತಿಗೆ ನೀರಾವರಿಗಳ ಸೌಕರ್ಯವಿಲ್ಲದೆ ಮಳೆಯನ್ನೇ ಅವಲಂಬಿಸಬೇಕಾಗಿರುತ್ತದೆ. ದ. ಕ. ಜಿಲ್ಲೆಯ ಪಟ್ಟಾದಾರರು ಒಂದೇ ತೆರನಾಗಿರುವುದಿಲ್ಲ- ಸರ್ ಚಾರ್ಜ ಮಿತಿಯು ಕೂಡಾ ಜಾಸ್ತಿಯಿದೆ. ಇದರಿಂದಾಗಿ ಕೃಷಿಕರು, ರೈತರು, ಆಹಾರ ಧಾನ್ಯಗಳನ್ನು ವೃದ್ಧಿಸುವ ಕಾರ್ಯಕ್ಕೆ ವಿಘ್ನ ತಂದಂತಾಗುವುದು. ಸರಕಾರವು ಈ ವಿಷಯಗಳನ್ನೆಲ್ಲ ಪರಾಂಬರಿಸಬೇಕಾದುದು ಅವಶ್ಯ.

ಪಿಲಾರು ಮುದರಂಗಡಿ—ಸ್ಥಳೀಯ ಹಾ. ಎ. ಶಾಲೆಯಲ್ಲಿ ವಯಸ್ಕರ ಶಿಕ್ಷಣ ಶಾಖೆಯನ್ನು ತೆರೆಯುವ ಸಮಾರಂಭವು ಇದೇ ತಾ 15ರಲ್ಲು ರೆ। ಫಾ। ಜೆ. ಎಮ್. ಪಿರೇರ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಮ್. ಎಸ್. ಗೋವಿಂದಾಚಾರ್ಯ, ಸಾವೇರ ಕಾಸ್ತೆಲೀನ್, ಎ. ಡಿ. ಸೋಜ ಮೊದಲಾದವರು ಅಕ್ಷರಜ್ಞರ ಸಂಖ್ಯೆಯನ್ನು ಗ್ರಾಮದಲ್ಲಿ ಹೆಚ್ಚಿಸುವ ಅವಶ್ಯಕತೆ ಕುರಿತು ಮಾತನಾಡಿದರು.

ರಂಪಣಿ ಬಲೆಗೆ ಮಾರಾಟಕರ ವಿನಾಯತಿ:- ದಕ್ಷಿಣ ಕನ್ನಡದ ಕರಾವಳಿ ಪ್ರಾಂತ್ಯದ ಮೀನಿನ ವ್ಯವಸಾಯದಲ್ಲಿ ರಂಪಣಿ ಬಲೆಯ ಮೇಲೆ ಮಾರಾಟ ಕರಿಗೆ ವಿನಾಯತಿ ಮಾಡಬೇಕಾಗಿ ಬಹುಕಾಲದಿಂದ ಚಳವಳಿ ನಿತ್ತು. ನಮ್ಮೂರ ಎಮ್. ಎಲ್. ಎ. ಗಳು ಈ ವಿಚಾರದಲ್ಲಿ ವಿಶೇಷ ಆಸಕ್ತಿ ವಹಿಸಿದ್ದರು. ತತ್ಪರಿಣಾಮವಾಗಿ ರಂಪಣಿ ಬಲೆಯ ವಹಿವಾಟಿನ ಮೇಲೆ ಮಾರಾಟ ತೆರಿಗೆಯನ್ನು ಸರಕಾರ ತೆಗೆದು ಹಾಕಿರುವುದಾಗಿ ಅಧಿಕೃತವಾಗಿ ಇದೀಗ ತಿಳಿದು ಬಂದಿದೆ.

ಸಾಲಿಗ್ರಾಮ—ಶ್ರೀ ವಾಣೀ ವಿಲಾಸಿನಿ ಸಂಸ್ಕೃತ ಪಾಠ ಶಾಲೆಯ 31ನೆ ವರ್ಧಂತ್ಯುತ್ಸವವೂ ಸದ್ರಿ ಶಾಲಾ ಕಮಿಟಿಯ ನಾಲ್ಕನೆ ವಾರ್ಷಿಕ ಮಹಾ ಸಭೆಯೂ ಇದೇ ತಾ 13ರಲ್ಲಿ ಬ್ರಹ್ಮ ಶ್ರೀ ಸಿದ್ಧಾಂತಿ ಹಾಲಾಡಿ ಕಟ್ಟೆಪಟ್ಟು ವಾಸುದೇವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು- ಸಂಸ್ಕೃತ ಭಾಷೆಯ ಪ್ರಶಸ್ತ್ಯ ಮತ್ತು ಶಾಲೆಯ ಅಭ್ಯುದಯದ ಕುರಿತು ಶ್ರೀ ಬಾಳೆ ಕುದುರು ಶ್ರೀನಿವಾಸ ಕೆದ್ಲಾಯರೂ ವಕೀಲ್ ಶ್ರೀ ಎ. ವಿ. ಎನ್. ಹೆಬ್ಬಾರ್ ಮೊದಲಾದವರು ಮಾತನಾಡಿದರು. ಅಧ್ಯಕ್ಷರ ಭಾಷಣ, ಸಂಸ್ಕೃತ ಮತ್ತು ಕನ್ನಡ ನಾಟಕಾಭಿನಯಗಳಿಂದ ಸಭೆಯು ಕೊನೆಗೊಂಡಿತು. ಜ್ಞಾನೋಪಾಸಿನೀ ಸಭೆಯು ಇದೇ ತಾ 19ರಂದು ಶ್ರೀ ಜಿ. ಶ್ರೀ ಕಂಠ ಉಪಾಧ್ಯರ ಅಧ್ಯಕ್ಷತೆಯಲ್ಲಿ ಇದೇ ಶಾಲೆಯಲ್ಲಿ ನಡೆಯಿತು.

ಪುತ್ತೂರು—ಕೆಮ್ಮಾಯಿಯಲ್ಲಿ ಐಡೆಡ್ ಶಾಲೆಯೊಂದನ್ನು ತಾ. 14ರಂದು ತೆರೆಯಲ್ಪಟ್ಟಿದೆ- ಆಲಿವಟ್ಟಿಯಲ್ಲಿ ದನವೊಂದು ಅವಳಿ ಕರುಗಳನ್ನು ಹಾಕಿದೆ.

'ರಾಷ್ಟ್ರಬಂಧು' ಬೆಳ್ಳಿಹಬ್ಬದ ಕಥಾಸ್ಪರ್ಧೆ

೧೯೫೩ನೆಯ ಎಪ್ರಿಲ್ ತಿಂಗಳಿಗೆ 'ರಾಷ್ಟ್ರಬಂಧು'ವಿಗೆ ೨೫ ವರ್ಷಗಳು ತುಂಬುವುವು. ಆ ಸಂದರ್ಭದಲ್ಲಿ ಹೊರಡಲಿರುವ ಬೆಳ್ಳಿ ಹಬ್ಬದ ಸಂಚಿಕೆಗಾಗಿ ಕಥಾಸ್ಪರ್ಧೆಯೊಂದನ್ನು ಏರ್ಪಡಿಸಲಾಗಿದೆ. ಕಥೆಗಳು ಸ್ವತಂತ್ರವಿದ್ದು ತಾ. 15-12-52ರೊಳಗಾಗಿ 'ಸಂಪಾದಕ, ರಾಷ್ಟ್ರಬಂಧು, ಮಂಗಳೂರು 3'-ಇವರಿಗೆ ತಲುಪಬೇಕು.

ಬಹುಮಾನ:—ಪ್ರಥಮ ರೂ ೫೦; ದ್ವಿತೀಯ ರೂ. ೨೫; ತೃತೀಯ ರೂ. ೧೫.

ಹೆಚ್ಚಿನ ವಿವರಗಳಿಗೆ ರಾಷ್ಟ್ರಬಂಧು ಸಂಪಾದಕರಿಗೆ ಬರೆಯುವುದು.

ಪ್ರಕಟಣೆ

ಮಂಗ್ಳೂರು ತಾಲ್ಲೂಕು ತಾಳಿಪಾಡಿ ಗ್ರಾಮದ ಪುನಾರುಸಾಗು ಎಂಬಲ್ಲಿರುವ ಪಾಸ್ಕಲ ಸಿಕೇರರ ಮಗ ಮಾರ್ಸೆಲ್ ಸಿಕೇರಿಯು ತಿಳಿಸುವದೇನೆಂದರೆ

ನನ್ನ ಕಾಸಾ ಅಣ್ಣ ಸದ್ರಿ ಪಾಸ್ಕಲ ಸಿಕೇರರ ಮಗ ಲಿಗೋರಿ ಶಿಕೇರ ಎಂಬವನು ಈಗ ಹನ್ನೆರಡು ವರುಷಗಳಿಂದ ಬುದ್ಧಿಸ್ವಾಧೀನತೆಯಿಲ್ಲದವನಾಗಿದ್ದು ನನ್ನ ಆರೈಕೆಯಲ್ಲಿದ್ದಾನೆ ಆತನ ಜೂವತ್ತು ಖರ್ಚು ವೆಚ್ಚಗಳನ್ನು ನಮ್ಮಿಬ್ಬರ ತಂದೆಯವರ ಆಸ್ತಿ ಸ್ವಾಧೀನ ಈಗ ಸುಮಾರು 12 ವರುಷಗಳಿಂದ ಸ್ವಾಧೀನ ಹೊಂದಿದ ನಾನು ನಡಿಸಿಬರುವದಾಗಿರುತ್ತದೆ. ನನ್ನ ತಾಯಿ ನತ್ತಾಲ ಸಿಕೇರ ಬಾಯಿಯು ಆಕೆಯ 2ನೆ ಗಂಡನಲ್ಲಿ ಹುಟ್ಟಿದ ಮಕ್ಕಳ ಪ್ರೀತಿಗೆ ಪಾತ್ರಳಾಗಿ ನನ್ನಮೇಲೆ ಈಗ 1-2 ವರ್ಷಗಳಿಂದ ದ್ವೇಷದಲ್ಲಿರುತ್ತಾಳೆ. ಆವಳು ಸದ್ರಿ ನನ್ನ ಅಣ್ಣ ಬುದ್ಧಿಸ್ವಾಧೀನವಿಲ್ಲದ ಲಿಗೋರಿ ಸಿಕೇರಿ ಎಂಬವನಿಂದ ನಮ್ಮ ತಂದೆಯವ ಆಸ್ತಿಯ ಆತನ ಹಕ್ಕನ್ನು ಅವಳಿಗೆ ಬೇಕಾದರೀತಿ ಪರಾಧೀನ ಮಾಡುವದರಲ್ಲಿಯೂ, ಜವಾಬ್ದಾರಿ ಮಾಡುವದರಲ್ಲಿಯೂ ಆತನ ಹೆಬ್ಬೆಟ್ಟು ಮುದ್ರೆ ತೆಗೆದುಕೊಂಡು ನೋಟುಗಳನ್ನು ಕಲ್ಪಿಸಿಕೊಳ್ಳುವದರಲ್ಲಿ ಸಹಾ ಇದ್ದಾಳೆ. ಸದ್ರಿ ಲಿಗೋರಿ ಸಿಕೇರರಿಗೆ ವಳ್ಳೆಯ ಒದುಬರಹ ಗೊತ್ತುಂಟು ಹೀಗೆ ಸದ್ರಿ ಬುದ್ಧಿಸ್ವಾಧೀನತೆ ಇಲ್ಲದ ಲಿಗೋರಿ ಸಿಕೇರನಿಂದ ಆಸ್ತಿಗೆ ಸಂಬಂಧವಾದ ಯಾವದೇ ಜವಾಬ್ದಾರಿಯು ಸಾಲ ಎಂತ ಯಾರಾದರೂ ಯೇನಾದರೂ ರಿಕಾರ್ಡುಗಳನ್ನು ಕಲ್ಪಿಸಿಕೊಳ್ಳಬಾರದು ಹಾಗೆ ಕಲ್ಪಿಸಿಕೊಂಡಲ್ಲಿ ಆತನ ರಕ್ಷಕನಾದ ನನ್ನ ಒಪ್ಪಿಗೆಯ ಶಿವಾಯಿ ಮಾಡಿಕೊಂಡ ಅಂತಾ ಯಾವತರದ ದಾಖಲೆ ಮತ್ತು ರಿಕಾರ್ಡು ಕೂಡಾ ಅಸಿಂಧುವಾಗಿದ್ದು ಆತನ ಮೇಲಾಗಲೀ ನಮ್ಮ ತಂದೆಯವರ ಆಸ್ತಿ ಮೇಲಾಗಲೀ ಬದ್ಧೀಕೃತವಾಗತಕ್ಕದ್ದಲ್ಲ. ನಾನು ಪರಊರಿಗೆ ಹೋಗುವ ಸಂಬಂಧ ಈ ಪ್ರಕಟಣೆಯನ್ನು ಮಾಡಿದ್ದಾಗಿರುತ್ತದೆ. ಸದ್ರಿ ಲಿಗೋರಿ ಸಿಕೇರರಿಂದ ಎಂತಾ ರಿಕಾರ್ಡುಗಳನ್ನು ಕಲ್ಪಿಸಿಕೊಂಡರೂ ಯಾ ಮುಂಚಿನ ತಾರೀಕು ಹಾಕಿ ಕಲ್ಪಿಸಿಕೊಳ್ಳುವದಾದ್ರೂ ಅವುಗಳೆಲ್ಲ ಅಸಿಂಧುವಾಗಿರುತ್ತವೆ ಎಂತ ಈ ಮೂಲಕ ತಿಳಿಸಿರುತ್ತೇನೆ,

● **Marcel Sequera.**

ಮೊಕ್ಕಾಂ, ತಾಳಿಪಾಡಿ, ಪುನಾರುಸಾಗು.
ತಾರೀಕು 19-7-1952ನೇ ಇಸವಿ.

ಪ್ರತಿ ಬುಧವಾರ, ಶನಿವಾರ, ಮತ್ತು ಆದಿತ್ಯವಾರ ಘಂಟೆ 3ಕ್ಕೆ ಮೆಟಿನಿ.
ತಾರೀಕು 24-7-1952ರಿಂದ

ಜೈ ಮಹಾಕಾಳಿ

ನಿರೂಪಾ ರಾಯ್, ಉಲ್ಲಾಸ್, ಸಾಹು ಮೋಡಕ್,– ಮೊದಲಾದವರು.
ಬರುತ್ತದೆ — ಒನ್ ಮಿಲಿಯನ್ ಬಿ. ಸಿ.
ಶ್ರೀಮತಿಜಿ, ಸಿರಾಲಾ, ಸಾನಮ್, 'ಇತ್ಯಾದಿ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ರಾಷ್ಟ್ರಕವಿ ಎಮ್. ಗೋವಿಂದ ಪೈಗಳವರಿಂದ ಉದ್ಘಾಟಿಸಲ್ಪಟ್ಟ
ಕೊರಡ್ಕಲ್ ಸ್ಮಾರಕ ಸಮಿತಿಯವರಿಂದ
(ದಿವಂಗತ ಕೊರಡ್ಕಲ್ ಶ್ರೀನಿವಾಸ ರಾಯರ ನೆನಪಿಗಾಗಿ)

ಪ್ರಕಟಿಸಲ್ಪಟ್ಟ ನೆನಪಿಗಾಗಿ ನಾವೀನ್ಯಪೂರ್ಣ ಪುಸ್ತಕ

ಕರ್ನಾಟಕದ ಹೆಸರಾಂತ ಲೇಖಕರನೇಕರ ವಿವಿಧ ಬರಹಗಳಿಂದ ಕೂಡಿದೆ.
ಬೆಲೆ ರೂ. 2—0—0 ಮಾತ್ರ ರೂ 2—6—0 ಕಳುಹಿಸಿದರೆ
ಒಂದು ಪ್ರತಿಯನ್ನು ಟಪ್ಪಾಲು ದ್ವಾರಾ ಕಳುಹಿಸಬಹುದು-
ಕೊರಡ್ಕಲರ ಶಿಷ್ಯ ವೃಂದವೂ ಮಿತ್ರಮಂಡಳಿಯೂ ಈ ಗ್ರಂಥವನ್ನು
ಕೊಂಡುಕೊಂಡು ಸ್ಮಾರಕ ಸಮಿತಿಗೆ ನೆರವು ನೀಡಬೇಕಾಗಿ
ವಿಶೇಷತಃ ಕೋರಲಾಗಿದೆ.

ಪ್ರತಿಗಳು ಸಿಗುವ ಸ್ಥಳಗಳು:–
1) ಕೊರಡ್ಕಲ್ ಸ್ಮಾರಕ ಸಮಿತಿ, ಉಡುಪಿ 2) ನವಯುಗ ಪ್ರೆಸ್, ಉಡುಪಿ 3) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು, 4) ನವಭಾರತ ಬುಕ್ ಡಿಪೊ, ಉಡುಪಿ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD
ಹುಳುಕಡ್ಡಿ
ಮದ್ದು
ನಮ್ಮಲ್ಲಿ
ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು, ಬೊಂಬಾಯಿ ಮತ್ತು ಕಲ್ಕತ್ತ



ಮಂಗಳೂರು

ಕರ್ನಾಟಕ ಚೇಂಬರ್ ಒಫ್ ಎಗ್ರಿಕಲ್ಚರ್— ಇದರ ಕಾರ್ಯ ನಿರ್ವಾಹಕ ಮಂಡಳಿಯ ಸಭೆಯು ಇದೇ ತಾ 11ರಲ್ಲು ಜರಗಿ 1 ಪಟ್ಟಾದಾರರಿಗೆ ಈಗಿನ ಭೂಕಂದಾಯವನ್ನು ಕೊಡುವ ಶಕ್ತಿ ಇದೆಯೋ ಇಲ್ಲವೋ ಎಂಬುದನ್ನು ಪರಿಗಣಿಸದೆ ಸರಕಾರವು ಭೂಕಂದಾಯವನ್ನು ಏರಿಸಲು ಹೊರಟಿರುವುದು ಅನ್ಯಾಯ, ಅಲ್ಲದೆ ಕೃಷಿ ಪ್ರಗತಿಗೆ ಆತಂಕವನ್ನು ತಂದೊಡ್ಡುವುದು 2 ಅಳಿಯ ಸಂತಾನ ಕಾನೂನು ಅಥವಾ ಹಿಂದೂ ಕಾಯಿದೆಯು ಅನ್ವಯಿಸಲ್ಪಡುವ ಅವಿಭಕ್ತ ಕುಟುಂಬಗಳಿಗೆ ಪ್ರತಿಯೊಬ್ಬ ಪಾಲುದಾರನ ಪಾಲಿಗನುಗುಣವಾಗಿಯೇ ಭೂಕಂದಾಯವನ್ನು ಏರಿಸತಕ್ಕದ್ದು. ಭೂಕಂದಾಯವನ್ನು ಹೊರಿಸುವ ಕನಿಷ್ಠ ಆದಾಯವು ಒಂದುನೂರು ರೂಪಾಯಿ ಇರತಕ್ಕದ್ದು. 3 ಜ್ಯಾರಿಯಲ್ಲಿ ತರಬೇಕೆಂದಿರುವ ಭೂಕಂದಾಯವನ್ನು ಕೇವಲ ಒಂದು ವರ್ಷದ ಮಟ್ಟಿಗೆ ಪ್ರಯೋಗಾತ್ಮಕ ದೃಷ್ಟಿಯಲ್ಲಿ ಜ್ಯಾರಿಗೆ ತರಬೇಕು. 4 ಮೂಲಗೇಣಿ ಅಡವು ಒಳವರ್ಗ ಇತ್ಯಾದಿ ಪರಿಸ್ಥಿತಿಗಳಲ್ಲಿ ಯಾರ ಅಧೀನ ಭೂಮಿ ಇದೆಯೋ ಅವರೇ ಹೆಚ್ಚಿನ ಭೂಕಂದಾಯವನ್ನು ಕೊಡುವಂತೆ ಮಾಡಬೇಕು 5 ಏರಿಸ ಬಯಸುವ ಭೂಕಂದಾಯವು ಅತಿ ಹೆಚ್ಚಾಗಿದ್ದು ಅದರಲ್ಲಿ 50% ಕಡಿತಮಾಡಬೇಕು. 6 ಈ ನಿರ್ಣಯಗಳನ್ನು ಮುಖ್ಯ ಮಂತ್ರಿ ಹಾಗೂ ಹಣಕಾಸಿನ ಮಂತ್ರಿಯವರಿಗೆ ಕಳುಹಿಸಿ ಚೇಂಬರಿನ ಅಭಿಪ್ರಾಯವನ್ನು ಅವರಿಗೆ ವೈಯಕ್ತಿಕವಾಗಿ ವಿವರಿಸಿ ಹೇಳುವಂತೆ ಜತೆ ಗೌರವ ಕಾರ್ಯದರ್ಶಿ ಶ್ರೀ ಬಿ. ಎಸ್. ಭಾಸ್ಕರ ರೈಗಳನ್ನು ಮದ್ರಾಸಿಗೆ ಕಳುಹಿಸುವುದೆಂದು ಠರಾವಾಯಿತು.

ಅಕ್ಕಿ ಸಾಗಾಟಕ್ಕೆ ತಡೆ— ಮದ್ರಾಸು ಎಸೆಂಬ್ಲಿಯ ಈ ಜಿಲ್ಲೆಯ ಹರಿಜನ ಪ್ರತಿನಿಧಿ ಶ್ರೀ ಕೆ. ಈಶ್ವರ ಅವರು ನಮ್ಮ ಜಿಲ್ಲೆಯಿಂದ ಉತ್ತರ ಕನ್ನಡಕ್ಕೂ ಮಲಬಾರಿಗೂ ಅಕ್ಕಿ ಸಾಗುತ್ತಿರುವುದೆಂದು ಸರಕಾರಕ್ಕೆ ತಿಳಿಸಿದುದಕ್ಕೆ ಅವರಿಗೆ ದ. ಕ. ಜಿಲ್ಲೆಯು ಪ್ರತ್ಯೇಕ ವಲಯವಾಗಿದ್ದುದರಿಂದ ಮಲಬಾರಿಗೆ ಅಕ್ಕಿ ಹೋಗುವುದು ನಿಷೇಧಿಸಲಾಗಿದೆ ಮತ್ತು ಉತ್ತರ ಕನ್ನಡವು ಬೊಂಬಾಯಿ ಪ್ರಾಂತಕ್ಕೆ ಸೇರಿದುದರಿಂದ ಅಲ್ಲಿಗೆ ಅಕ್ಕಿ ಸಾಗಲು 1947ರಿಂದಲೇ ನಿರ್ಬಂಧವಿದೆ ಎಂಬ ಉತ್ತರ ಬಂದಿರುವುದು.

ಮಂಗಳೂರು ಶಿಕ್ಷಕರಿಗೆ ಪ್ರಶಸ್ತಿ— ಸ್ಥಳೀಯ ಕೆನರಾ ಹೈಸ್ಕೂಲಿನಿಂದ N. C. C. (National Cadet Corps) ಶಿಕ್ಷಣವನ್ನು ಪಡೆಯಲು ವೆಲ್ಲಿಂಗ್ಟನಿಗೆ ಕಳುಹಿಸಲ್ಪಟ್ಟ ಈ ಶಾಲೆಯ ಮಾಸ್ತರರಾದ ಶ್ರೀ ಕುಳಾಯಿ ರಾಧಾಕೃಷ್ಣ ಶೆಣೈಯವರಿಗೆ ('Best all rounder') ಸುವರ್ಣ ಪದಕವು ದೊರೆತಿರುವುದಾಗಿ ತಿಳಿದು ಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಇಂತಹ ಪ್ರಶಸ್ತಿ ದೊರೆತುದು ಇದೇ ಮೊದಲಬಾರಿ. ಶ್ರೀ ಶೆಣೈಯವರು ಸ್ಥಳೀಯ ಕ್ರಿಕೆಟ್ ರಂಗದಲ್ಲಿಯೂ ಸಾಕಷ್ಟು ಪ್ರಸಿದ್ಧಿ ಗಳಿಸಿರುತ್ತಾರೆ.

ಜಿಲ್ಲಾ ಕಲೆಕ್ಟರರು— ಕಡಪಾ ಡಿಸ್ಟ್ರಿಕ್ಟ ಫಮಿನ್ ಕಮಿಶನರರಾಗಿರುವ ಶ್ರೀ ಸಿ. ಎ. ರಾಮಕೃಷ್ಣನ್ ಐ. ಸಿ. ಎಸ್ ಅವರು ಆ ಹುದ್ದೆಯು ವಿಸರ್ಜನೆಯಾಗುತ್ತಲೇ ದಕ್ಷಿಣ ಕನ್ನಡ ಜಿಲ್ಲೆಯ ಕಲೆಕ್ಟರರಾಗಿ ನೇಮಕ ಹೊಂದಿರುವರು. ಶ್ರೀ ಎ. ಆರ್. ರಾಜರತ್ನಂ, ಅವರು ಕುಂಭಕೋಣದ ಸಬ್ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುವರು.

ಜಾಗತಿಕ ಆರೋಗ್ಯ ದಿನಾಚರಣೆಯು— ಇದೇ ತಾ 18ರಲ್ಲು ಆಚರಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಮುನಿಸಿಪಲ್ ಹೆಲ್ತ್ ಆಫೀಸರರು ಸಾರ್ವಜನಿಕರ ಮಾಹಿತಿ ಬಗ್ಗೆ "ಶುಚಿಯಾದ ವಠಾರವು ಮನುಷ್ಯರನ್ನು ಆರೋಗ್ಯವಂತರನ್ನಾಗಿ ಮಾಡಲು ಸಹಕರಿಸುತ್ತದೆ." ಎಂಬ ಚಿಕ್ಕ ಪತ್ರಿಕೆಯನ್ನು ಹೊರಡಿಸಿದ್ದರು.

ಸಂತಾಪ ಸೂಚಕ ಸಭೆ— ದಿವಂಗತ ಎಮ್. ಎಸ್. ಶ್ರೇಷ್ಠರ ನಿಧನಕ್ಕಾಗಿ ಸಂತಾಪ ಸೂಚಿಸುವ ಸಭೆಯು ಇದೇ ತಾ. 13ರಲ್ಲು ಸಂಜೆ ಕೆಥೋಲಿಕ್ ಕ್ಲಬ್ಬಿನಲ್ಲಿ ಶ್ರೀಯು. ಕಣ್ಣಣ್ಣನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಸೂರ್ಯ ನಾರಾಯಣ ಅಡಿಗ, ಜೆ. ಪಿ. ರೇಗೊ, ಪಿ. ಆರ್. ಆರ್. ಸುಂಜ ಮತ್ತು ಡಾ|| ಎಸ್. ಎಫ್. ಮಿನೇಜಸ್ ಮೊದಲಾದವರು ದಿವಂಗತರು ಮಂಗಳೂರಿಗೆ ಹಾಗೂ ಜಿಲ್ಲೆಗೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ ಮಾತನಾಡಿದರು. ನಂತರ ಶ್ರೀ ಶ್ರೇಷ್ಠರ ನಿಧನಕ್ಕಾಗಿ ಸಂತಾಪ ಸೂಚಿಸುವ ಅವರ ಸೇವಾ ಕಾರ್ಯವನ್ನು ಪ್ರಶಂಸಿಸುವ ಮತ್ತು ಅವರ ಬಂಧುಗಳ ದುಃಖದಲ್ಲಿ ಸಹಾನುಭೂತಿ ಪ್ರದರ್ಶಿಸುವ ನಿರ್ಣಯ ಪಾಸಾಯಿತು.

ಕಾಶ್ಮೀರ ದಿನಾಚರಣೆಯು— ಕಮ್ಯುನಿಸ್ಟ್ ಪಕ್ಷದ ಆಶ್ರಯದಲ್ಲಿ ಇದೇ ತಾ. 13ರಲ್ಲು ಶ್ರೀ ಸಿ. ಎನ್. ನಾರಾಯಣ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿ ಕಾಶ್ಮೀರ ಸುಧಾರಣೆಗಳಿಗೆ ಬೆಂಬಲ ನೀಡುವ, ಅರಸೊತ್ತಿಗೆ ನಿರ್ಮೂಲನ ಮತ್ತು ಪರಿಹಾರವಿಲ್ಲದೆ ಭೂಮಿಯನ್ನು ಉಳುವವರಿಗೆ ಹಂಚಿದ್ದು ಪುರೋಗಾಮಿಯೆನ್ನುವ ನಿರ್ಧಾರಗಳಾದುವು.

ಮುನಿಸಿಪಲ್ ಕೌನ್ಸಿಲ್ ಸಭೆಯು— ಇದೇ ತಾ. 12ರಂದು ಉಪಾಧ್ಯಕ್ಷ ಶ್ರೀ ಕೆ. ಸೂರ್ಯ ನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಕೆಳ ಬೆಂದೂರಲ್ಲಿ ನಗರ ಸಭೆಯು ನಿರ್ಮಿಸಲಿರುವ ರಸ್ತೆಯ ಕುರಿತು ಕೆಲವರು ಮಂಡಿಸಿದ ವಿರೋಧವನ್ನು ಪರಿಶೀಲಿಸಲಾಯಿತು. ಈ ಕುರಿತು ಮೊದಲು ಸಭಾಧ್ಯಕ್ಷರು ನಗರ ಸಭೆಯ ವಿಶೇಷ ಕಮಿಟಿಯು ಕೈಕೊಂಡ ಕಾರ್ಯ, ಮಾಡಿದ ವರದಿಯ ಸಾರಾಂಶವನ್ನು ತಿಳಿಸಿದರು. ಶ್ರೀಗಳಾದ ಎಸ್. ನರ್ಸಪ್ಪಯ್ಯ, ಎನ್. ಎಸ್ ಪಿಲ್ಲೆ ಮೊದಲಾದವರು ಈಗ ನಗರ ಸಭೆಯು ಕೈಕೊಂಡಿರುವ ರಸ್ತೆಯು ಕಡಿಮೆ ತೊಂದರೆಯ, ಹೆಚ್ಚಿನ ಪ್ರಯೋಜನದ ರಸ್ತೆ ಎಂದು ತಿಳಿಸಿದ್ದರಿಂದ ಆಕ್ಷೇಪವನ್ನು ತಿರಸ್ಕರಿಸಲಾಯಿತು. ಮುನಿಸಿಪಾಲಿಟಿಯು ಪೂರ್ಣ ಸರ್ವೆ ಮಾಡಲು ಇಪ್ಪತ್ತು ಸಾವಿರ ರೂಪಾಯಿ ತಗಲಬಹುದಾದರಿಂದ ವಿಸ್ತರಣದ ಭಾಗದ ಸರ್ವೆ ಮಾಡಿದರೆ ಸಾಕೆಂಬ ನಿರ್ಣಯವಾಯಿತು.

ಮದ್ರಾಸಿನಲ್ಲಿ ಬಸ್ ಮಾಲಿಕರ ಪರಿಷತ್ತು— ಇದೇ ತಾ. 15ರಲ್ಲು ಮಂಗಳೂರಿನ ಸಿ. ಪಿ. ಸಿ ಕಂಪನಿಯ ಮೆನೇಜಿಂಗ್ ಡ್ಯಾರೆಕ್ಟರ್ ಹಾಗೂ 'ನವಭಾರತ' ಪತ್ರಿಕಾ ಸಂಪಾದಕರಾದ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು, ತಮಿಳುನಾಡು ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಡಾ. ಪಿ. ಸುಬ್ಬರಾಯನರು ಸಮ್ಮೇಳನವನ್ನು ಉದ್ಘಾಟಿಸಿದರು. ಮದ್ರಾಸು ಸರಕಾರವು ಹೊಸದಾಗಿ ಹೇರಲಪೇಕ್ಷಿಸುವ ಬಸ್ ಪ್ರಯಾಣಿಕರ ತೆರಿಗೆಯಿಂದ ಬಸ್ ಸಾರಿಗೆಗೆ ಮಾತ್ರವಲ್ಲದೆ ಸಂಚಾರಕ್ಕೂ ಜನತೆಗೂ ತುಂಬಾ ಹಾನಿಯುಂಟಾಗುವುದೆಂದು ಶ್ರೀ ಕುಡ್ವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಹೇಳಿದರು

ಸರಕಾರವು ಬಸ್ ಪ್ರಯಾಣಿಕರ ಮೇಲೆ ಹೊರಿಸಬೇಕೆಂದಿರುವ ತೆರಿಗೆ ವಿಚಾರವನ್ನು ಬಿಟ್ಟುಬಿಡಬೇಕೆಂದು ಕೇಳಿಕೊಳ್ಳುವ, ಇದಕ್ಕೆ ಒಪ್ಪಿದರೆ ಪೆಟ್ರೋಲ್ ಗೆಲನು ಒಂದರ ಎರಡಾಣೆಯಂತೆ ಹೊರಿಸಿದ ಕರವನ್ನು ಕಡಿಮೆ ಮಾಡುವುದಾಗಿ ಸರಕಾರವು ಕೊಟ್ಟ ಭರವಸೆಯನ್ನು ಬಸ್ ಮಾಲಕರು ಬಿಟ್ಟುಬಿಡಲು ಸಿದ್ಧರಿದ್ದಾರೆಂದು ಸೂಚಿಸುವ ಇತ್ಯಾದಿ ನಿರ್ಣಯಗಳಾದುವು,

ಅಡಿಕೆ ಮತ್ತು ಕೊಬ್ಬರಿ ಬೆಲೆಗಳು— ತಾ. 17ಕ್ಕೆ ಅಂತ್ಯವಾದ ವಾರದಲ್ಲಿ ಅಡಿಕೆ ಮತ್ತು ಕೊಬ್ಬರಿ ಬೆಲೆಗಳು ಈ ಕೆಳಗಿನಂತಿದ್ದವು:– ಸಂಪಾರಿ [ಅಡಿಕೆ] 112 ಪೌಂಡಿನ ಒಂದು ಹಂಡ್ರೆಡ್ ವೈಟಿಗೆ–ಕೋಕಾ ರೂ. 68ರಿಂದ 105. ಚೋಲ್ [ಹೊಸದು] ರೂ. 125ರಿಂದ 140. ಹೊಸ ಸಂಪಾರಿ ರೂ. 125ರಿಂದ 136 ಬೆಲೆಯು ಕಳೆದ ವಾರಕ್ಕಿಂತ ಸ್ವಲ್ಪ ಏರಿದ್ದು ಇನ್ನೂ ಏರುವ ನಿರೀಕ್ಷೆ ಇದೆ. ಕೊಬ್ಬರಿ 660 ಪೌಂಡುಗಳ ಒಂದು ಖಂಡಿಗೆ ರೂ 335 ರಿಂದ 354 ಬೆಲೆ ಸ್ಥಿರವಾಗಿದೆ. 1000 ತೆಂಗಿನ ಕಾಯಿಗಳಿಗೆ ರೂ, 130ರಿಂದ 180 ಬೆಲೆ ಸ್ಥಿರವಾಗಿದೆ.

ದಿ ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್, ಕುಂದಾಪುರ.

ಯೇಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಲ್ಲಿ ಅಡವಿಟ್ಟ ಚಿನ್ನಾಭರಣಗಳ ಮೇಲೆ ಪಡಕೊಂಡ ಸಾಲಗಳನ್ನು ಕ್ಲಪ್ತ ಮ್ಯಾದೆಗೆ ಸಲ್ಲಿಸದೇ ಇದ್ದುದರಿಂದ, ಅವರಿಗೆ ಬಿಟ್ಟ ರಿಜಿಸ್ಟ್ರ ನೋಟೀಸುಗಳು ಕೆಲವರಿಗೆ ಜ್ಯಾರಿ ಆಗದೆ ವಾಪಾಸು ಬಂದುದರಿಂದಲೂ, ಇನ್ನು ಕೆಲವರಿಗೆ ಜ್ಯಾರಿ ಆದರೂ, ಅವೇಜು ಪಾವತಿ ಮಾಡದೇ ಇದ್ದುದರಿಂದಲೂ ಸದರಿ ಸಾಲಗಳಲ್ಲಿ ಅಡವಿಟ್ಟ ಚಿನ್ನದ ನಗಗಳನ್ನು ಬರುವ ಆಗೋಸ್ತು ತಿಂಗಳ ತಾ 7ಕ್ಕೆ (ಗುರುವಾರ) ಮಧ್ಯಾಹ್ನ ಗಂಟೆ 2ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಯೇಲಂ ಮಾಡಲಾಗುವುದು. ಯಾವ ಕಾರಣದಿಂದಲಾದರೂ ಯೇಲಂ ಅದೇ ದಿವಸ ಮಾಡಲು ಅನಾನುಕೂಲವಾದರೆ ಬ್ಯಾಂಕಿಗೆ ಯುಕ್ತಕಂಡ ದಿವಸಕ್ಕೆ ಪುನಃ ನೋಟೀಸು ಕೊಡದೇನೆ ಮುಂದರಿಸಲಾಗುವುದು ತಿಳಿದಿರಲಿ.

ಸಾಲದ ನಂಬ್ರ	ಸಾಲ ಪಡಕೊಂಡವರ ಹೆಸರು	ಸಾಲದ ಅಸಲು ಐವೇಜು ರೂ.	ಪ.
26/1736	ಹಯಾತ್ ಸಾಹೇಬ, ಮೈದೀನ್ ಸಾಹೇಬರ ಮಗ, ಪ್ರೊಸೆಸ್ ಸರ್ವರ್, ಡಿ. ಮು. ಕೋರ್ಟು, ಕುಂದಾಪುರ	22	0
27/677	ದಾರಪ್ಪ ಶೆಟ್ಟಿ, ಮಂಜಮ್ಮ ಶೆಡ್ತಿಯರ ಮಗ, ದೇವಲಕುಂದ, ಪೋಸ್ಟ್ ಬೇಳೂರು	200	0
27/698	ರಂಗಯ್ಯ ಶೆಟ್ಟಿ, ತಿಮ್ಮಪ್ಪ ಶೆಟ್ಟಿಯವರ ಅಳಿಯ, ಅಂಪಾರ ಗ್ರಾಮ, ಕಂಡ್ಲೂರ ಪೋಸ್ಟ್	135	0
27/714	ಕೆ. ರಾಮಕೃಷ್ಣ, ತಿಮ್ಮಪ್ಪ ಶೇರುಗಾರರ ಮಗ, ತಾಲೂಕು ಆಫೀಸು ಕುಂದಾಪುರ	80	0
27/752	ಕೆ. ಕೊಗ್ಗ ಖಾರ್ವಿ, ಸುಬ್ರಾಯ ಖಾರ್ವಿಯರ ಮಗ C/o ಪಂಚಾಯತ ಬೋರ್ಡ್ ಆಫೀಸು, ಕುಂದಾಪುರ	30	0
27/[illegible]	ನೆಂಕಪ್ಪ ಪೂಜಾರಿ, ಬೇಕ್ರಿ ಶೇಷ ಪೂಜಾರಿಯ ಅಳಿಯ, ಕೋಡಿ ಗ್ರಾಮ ಕೋಡಿ ಪೋಸ್ಟ್	45	0
27/790	ಬಿ. ನಾರಾಯಣ ಚೆಟ್ಟಿಗಾರ, ಕೊರಗ ಚೆಟ್ಟಿಗಾರರ ಮಗ, ಟೈಲರ್ ಪೋಸ್ಟ್ ಬಸ್ರೂರು	125	0
27/792	ಪೇದ್ರು ಮೆಂಡೊನ್ಸಾ, ಪಾವ್ಲು ಮೆಂಡೋನ್ಸರ ಮಗ, ಪೋಸ್ಟ್ ಕಲ್ಲೂರು	16	0
27/799	ತಿಮ್ಮಪ್ಪ ಶೆಟ್ಟಿ, ಗೋವಿಂದ ಶೆಟ್ರ ಅಳಿಯ, ಕೋಡಿಮನೆ, ಕಂಡ್ಲೂರು ಪೋಸ್ಟ್	75	0
27/850	ಶೇಖ ಮೊಗೇರ, ಮಂಜ ಮೊಗೇರರ ಅಳಿಯ ಹಳೆಯಂಗಡಿ, ಪೋಸ್ಟ್ ಕುಂದಾಪುರ	25	0
27/854	ಫ್ರಾನ್ಸಿ ಖಾರ್ವಿ, ಸುಬ್ಬ ಖಾರ್ವಿಯರ ಮಗ, ಖಾರ್ವಿಕೇರಿ, ಪೋಸ್ಟ್ ಕುಂದಾಪುರ	16	0
27/869	ವೆಂಕು ಹೆಂಗ್ಸು, ಚಿಕ್ಕ ಹೆಂಗ್ಸಿನ ಮಗಳು ಬೇವರು ಪಿತ್ಲ ಕುಂದಾಪುರ ಪೋಸ್ಟ್	30	0
27/961	ಗೋವಿಂದ ಪೂಜಾರಿ, ಮಹಾಲಿಂಗ ಪೂಜಾರಿಯ ಅಳಿಯ ಕೆಂಪನಕೊಪ್ಲ ಆನಗಳ್ಳಿ	40	0
27/995	ವಾಸುದೇವ ಭಟ್, ಗೋಪಾಲ ಭಟ್ಟರ ಮಗ ಅರ್ಚಕ, ವೆಂಕಟರಮಣ ದೇವಸ್ಥಾನ ಕುಂದಾಪುರ	120	0
27/1025	ಕಲ್ಲಾಡಿಕಲ್ ಹಸನಾರ, ಇಬ್ರಾಹಿಮ್ ಸಾಹೇಬರ ಮಗ, ಮರ್ಚಂಟ್, ಕೋಡಿ	110	0
27/1047	ಉಮ್ಮರ್ ಸಾಹೇಬ, ಯಿಸ್ಮಾಯಿಲ್ ಸಾಹೇಬರ ಮಗ ಕಾವರಾಡಿ, ಕಂಡ್ಲೂರು ಪೋಸ್ಟ್	100	0
27/1115	ಗೋವಿಂದ ಪೂಜಾರಿ, ಮಹಾಲಿಂಗ ಪೂಜಾರಿಯ ಅಳಿಯ ಆನಗಳ್ಳಿ ಕುಂದಾಪುರ ಪೋಸ್ಟ್	25	0
27/1149	ಸಿ. ಮಹಾಲಿಂಗ ಶೆಟ್ಟಿ, ನಾಗಮ್ಮ ಶೆಡ್ತಿಯರ ಮಗ ಟೀಚರ್, ಬೋರ್ಡ್ ಎಲಿಮೆಂಟರಿ ಸ್ಕೂಲ್ ಸಿದ್ದಾಪುರ	90	0
27/1193	ರಾಮಚಂದ್ರ ಶೇಟ್, ಲಕ್ಷ್ಮಣ ಶೇಟ್‌ರವರ ಮಗ ಸ್ವೀಟ್ ಮೀಟ್ ಮರ್ಚಂಟ್ ಕುಂದಾಪುರ	115	0
26/673	ಹಯಾತ್ ಸಾಹೇಬ, ಮೈದಿನ್ ಸಾಹೇಬರ ಮಗ ಪ್ರೊಸೆಸ್ ಸರ್ವರ್ ಡಿ. ಎಮ್. ಕೋರ್ಟು ಕುಂದಾಪುರ	20	0

Office of the Catholic Bank Ltd, Coondapoor. — I Menezes, Agent.

ಶಾಲೆ, ಕಾಲೇಜುಗಳಿಗೂ
ಸಹಕಾರಿ ಸಂಘ, ಮುನ್ಸಿಫ್
ಕೋರ್ಟುಗಳಿಗೂ ಕೃಷಿಕ,
ವರ್ಗದಾರ, ವ್ಯಾಪಾರಿಗಳಿಗೂ
ಬೇಕಾಗುವ ಉತ್ತಮ ಕಾಗದದಲ್ಲಿ
ತಯಾರಿಸಿದ
ತರತರದ ಫಾರ್ಮುಗಳು,
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

'ನವಯುಗ'ದ
ಬೆಳ್ತಂಗಡಿ ಏಜಂಟರು:–
ಕೆ. ಗೋಪಾಲಕೃಷ್ಣ ಶೆಣೈ,
ನ್ಯೂಸ್ ಏಜಂಟ್, ಬಸ್‌ಸ್ಟ್ಯಾಂಡ್,
ಬೆಳ್ತಂಗಡಿ, ದ. ಕ.

ಕಥೆ, ಕಾದಂಬರಿ, ನಾಟಕ, ಕವಿತೆ, ಚಿತ್ರ, ಪ್ರಬಂಧ, ಹರಟೆ ಮೊದಲಾದ ಸರ್ವವಿಧದ ಸಾಹಿತ್ಯಾಭಿರುಚಿಯನ್ನು ತಣಿಸುವ ನೂರಾರು ಕೃತಿಗಳು ಎಲ್ಲ ಪುಸ್ತಕಗಳಿದ್ದರೆ ಒಂದು ಪುಸ್ತಕಭಂಡಾರವಿದ್ದಂತೆ. ಆರಂಭದಿಂದ ಸುಮಾರು 30 ರೂಪಾಯಿಗಳ ನೂರಾರು ಪ್ರಕಟನೆಗಳನ್ನು ಒಮ್ಮೆಯೇ ಪಡೆಕೊಳ್ಳುವವರಿಗೆ ರೂ. [illegible]ಕ್ಕೆ ಕೊಡಲಾಗುವುದು.
ವಿವರದ ಕೆಟಲಾಗಿಗೆ ಬರೆಯಿರಿ,
ನವಭಾರತ ಪುಸ್ತಕ [illegible]

ನೋಡಿ ತಿಳಿಯುವ ಬಗೆ

[೧ನೇ ಪುಟದಿಂದ ಮುಂದುವರಿದುದು]

ಕಾಣುತಿದ್ದರು. ಕೃಪಾಪೂರ್ಣ ದೃಷ್ಟಿಗಳಾಗಲೀ, ದಯಾಪೂರ್ಣ ನುಡಿಗಳಾಗಲೀ ಅವನು ಹಕ್ಕುದಾರನಿದ್ದಿಲ್ಲ. ಇದನ್ನು ನ್ಯಾಯಯುಕ್ತವೆಂದು ಹೇಳಲು ಬುದ್ಧಿ ಒಪ್ಪಬಹುದೇ? ಇಲ್ಲ-ಏಕೆಂದರೆ, ಅವನ ಹೃದಯದಾಳದಲ್ಲಿ ದಯೆ ಎಂಬ ಅಮೂಲ್ಯವಾದ ವಸ್ತು ವಿಶೇಷ ಇದೆಯಲ್ಲವೆ! ಎಷ್ಟೇ ದೊಡ್ಡ ಅಪರಾಧಿಯಿದ್ದರೂ, ಅವನಲ್ಲಿ ಕೋಮಲಭಾವನೆಯ ಬೀಜವು ಬಿತ್ತಲ್ಪಟ್ಟಿರುತ್ತೆಂಬುದು ಸತ್ಯ.

ನಮ್ಮ ವಿಶ್ವಾಸ ಭಾವನೆಗಳು ಪ್ರೇಮದಿಂದ ಓತಪ್ರೋತವಾಗಿದ್ದರೆ—ನಮ್ಮ ಹೃದಯದ ಪಾರಿಶುದ್ಧ್ಯ ಪ್ರಭಾವದಿಂದ, ನಮ್ಮ ಸನಿಹಕ್ಕೆ ಬರುವವರೂ ಪುನೀತರಾಗುವರು. ಹೊರಗಿನ ಡೌಲನ್ನು, ಐಶ್ವರ್ಯವನ್ನು, ಆಡಂಬರವನ್ನು ಕಂಡು ಮೋಸ ಹೋಗುವ ದುರದೃಷ್ಟ ನಮ್ಮದಾಗಬಾರದು. ಒಳಗಿನ ತಿರುಳನ್ನು ಸವಿದು ನಾವು ಧನ್ಯರಾಗಬೇಕು ನಮ್ಮ ದೃಷ್ಟಿಯು ಒಳ್ಳೆಯದನ್ನು ಕಟ್ಟದರಿಂದ ಪರೀಕ್ಷಿಸಿ ತಿಳಿಯುವಷ್ಟು ಶಕ್ತಿ ಸಾಮರ್ಥ್ಯವುಳ್ಳದ್ದಾಗಬೇಕು.

ಪರಸ್ಪರ ನಿಂದೆಯನ್ನೂ ದೂಷಣೆಯನ್ನೂ ಕಾರ್ಯಕ್ರಮವಾಗಿಸಿಕೊಂಡು ಮೆರೆವ ಪಕ್ಷಪಂಗಡಗಳಿಗಿಂತ—ಒಳ್ಳೆಯ ಸಂಗತಿಗಳನ್ನೇ ಪ್ರತಿಪಾದಿಸುವವರ ಕಡೆಗೆ ಒಲಿಯುವುದು ಚಂದ. ಘೋಷಣೆಗಳ ಬಿಸಿಲುಗುದುರೆಗಳ ಹಾಗೂ ಭಾಷಣಗಳ ಪೊಳ್ಳು ಶಬ್ದಗಳ ಕಡೆಗೆ ಆಕೃಷ್ಟರಾಗದೆ—ಸ್ವಂತ ದೃಷ್ಟಿ ಮತ್ತು ಬುದ್ಧಿಯಿಂದ ಒಳ್ಳೆಯದನ್ನು ಆಯ್ದುಕೊಂಡು ಸವಿಯುವ ಭಾಗ್ಯವಂತರಾಗೋಣ.

—ಓಂಕಾರ್ತ್ಸನ್

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No 19/1952.

1 ಲಲಿತ ಶೆಟ್ತಿ, 2 ಧನಂಜಯ್ಯ 3 ಶಶಿ, 4 ಬೇಬಿ, ಮೈನರರು, ಇವರ ರಕ್ಷಕಳು ತಾಯಿ 1 ನೆಯವಳು —ಅರ್ಜಿದಾರರು.

ಮತ್ತು

ಪದ್ದು ಶೆಟ್ತಿ --ಎದುರಿಲು

ಇವರ ವಳಗೆ

ಈ ಮೂಲಕ ತಿಳಿಸುವದೇನಂದರೆ—

ಅರ್ಜಿದಾರರು ಮೃತ ನಮ್ಮ ಚಾದು ಶೆಟ್ರ ಸದ್ರಿ ಅಜಿಯಲ್ಲಿ ಕಾಣಿಸಿದ ಸೊತ್ತುಗಳಿಗೆ ವಾರಿಸ ಸರ್ಟಿಫಿಕೇಟು ಕೊಡಬೇಕೆ ದಾಖಲ್ಲು ಮಾಡಿದ ಸದ್ರಿ ಅರ್ಜಿಯು ತಾ. 11-8-1952 ಕ್ಕೆ ತನ್ನಿಗಿಟ್ಟದೆ. ಆಕ್ಷೇಪವುಳ್ಳವರು ಮೇಲ್ಕಂಡ ಕೋರ್ಟು ಮುಂದೆ ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಸ್ವತಹಾ ಯಾ ವಕೀಲು ದ್ವಾರಾ ಹಾಜರಾಗಿ ಉದಹರಿಸ ತಕ್ಕದ್ದು ಎಂತ ಈ ಮೂಲಕ ತಿಳಿಸೋಣಾಗುತ್ತದೆ,

By Order of the Court.

N M. Adyanthaya

Advocate for petitioners

Camp: Karkala, Dated 15 7.52.

ಮದ್ರಾಸಿನ ಪಬ್ಲಿಕ್ ಇನ್ಸ್ಪೆಕ್ಶನಿನ ಡೈರೆಕ್ಟರಿಂದ ನವಯುಗ ವಾರಪತ್ರಿಕೆಯು ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಸೆಕೆಂಡರಿ ಶಾಲೆಗಳು ಅದನ್ನು ತರಿಸಿಕೊಳ್ಳ

ಸ್ವೀಕಾರ ವಿಮರ್ಶೆ

ಭರತೇಶ ದಿಗ್ವಿಜಯ	0 8 0
ಸಾಹಸ ಭೀಮ ವಿಜಯ	0 8 0
ಭಾರತದ ಗುರುಕುಲ	0 6 0
ಲಕ್ಕ್ಮ ಪಗಡೆ	0 6 0

ಬರೆದವರು: ಕೆ. ಪಿ. ವೆಂಕಪ್ಪ ಶೆಟ್ಟಿ, ಪ್ರಕಾಶಕರ : ಅಂತರಂಗ ಕಾರ್ಯಾಲಯ ಉಡುಪಿ.

ಯಕ್ಷಗಾನ ಪ್ರಸಂಗಗಳು ನಮ್ಮ ಹಳ್ಳಿಹಳ್ಳಿಗಳಲ್ಲಿ ತುಂಬ ಜನಪ್ರಿಯವಾಗಿವೆ; ತಾಳ ಮದ್ದಳೆಗಳೂ ದಶಾವತಾರದ ಆಟಗಳೂ ಮೆಚ್ಚುಗೆಯನ್ನು ಪಡೆದಿವೆ. ಸಾಮಾನ್ಯವಾಗಿ ಪ್ರಸಂಗಗಳನ್ನು ರಾಮಾಯಣ, ಭಾರತ, ಭಾಗವತ ಮುಂತಾದ ಪೌರಾಣಿಕ ವಸ್ತುಗಳ ಮೇಲೆ ಕಟ್ಟುವುದು ಸಂಪ್ರದಾಯ. ಆದರೆ ಇಷ್ಟು ಮಾತ್ರದಿಂದ ತೃಪ್ತಿ ಪಡೆಯುವ ಮನೋವೃತ್ತಿ ಇಂದು ಸರಿಯಿಲ್ಲ. ಬೇರೆ ಬೇರೆ ಐತಿಹ್ಯಗಳನ್ನು ಯಕ್ಷಗಾನ ರೂಪಕಗಳಲ್ಲಿ ಚಿತ್ರಿಸುವ ಉದ್ಯಮವು ಈಗ ನಡೆದಿದೆ-ಇದು ಸ್ವಾಗತಾರ್ಹವೆಂಬಲ್ಲಿ ಸಂದೇಹವಿಲ್ಲ ಪ್ರಕೃತದ ಪುಸ್ತಕಗಳು ಇದಕ್ಕೊಂದು ನಿದರ್ಶನ. "ಭರತೇಶ ದಿಗ್ವಿಜಯ"ವು ಜೈನ ಪುರಾಣಗಳನ್ನು ಆಧರಿಸಿ, ಬರೆದ, ಚಕ್ರವರ್ತಿ ಭರತನು ಮಾತಿನಿಂದಲೇ ಭುಜಬಲಿಯನ್ನು ಗೆಲಿದ ಘಟನೆಯನ್ನು ವಿವರಿಸುವ ಪ್ರಸಂಗ. "ಸಾಹಸ ಭೀಮ ವಿಜಯ"ದಲ್ಲಿ ರನ್ನನ ಗದಾಯುದ್ಧದ ಛಾಯೆ ಇದೆ ದುರ್ಯೋಧನನನ್ನು ಛಲ ಕ್ಕಿರಿಯುವ ಆದರ್ಶವಾಗಿಯಾಗಿ, ಕಣ್ಣೀರು ಮಿಡಿಯುವ ಸ್ನೇಹಿತನಾಗಿ ರೂಪಿಸಿದ ಶ್ರೀಯನ್ನು ರನ್ನನದು ಶ್ರೀ ವೆಂಕಪ್ಪ ಶೆಟ್ಟರು ಈ ಚಿತ್ರನನ್ನೂ ಸುಂದರವಾಗಿಯೇ ಮಾಡಿಸಿರುವರು. ಇನ್ನೆರಡು ಪ್ರಸಂಗಗಳು ಮಹಾಭಾರತದ ದ್ರುಪದಗರ್ವ ಭಂಗ ಮತ್ತು ದ್ಯೂತ ವ್ಯಸನದ ಘಟನೆಯನ್ನು ಒಳಗೊಂಡಿವೆ. ಯಕ್ಷಗಾನ ಕಾವ್ಯದ ಲಕ್ಷಣಗಳನ್ನು ಈ ನಾಲ್ಕೂ ಪ್ರಸಂಗಗಳು ಚೆನ್ನಾಗಿ ಬಿಂಬಿಸಿವೆ. ಹಳ್ಳಿಯ ರಸಿಕರು ಓದಿನೋಡಿ, ಮೆಚ್ಚಿ, ಅಭಿನಯಿಸಿ, ಆನಂದಿಸಬಹುದಾದ ಪ್ರಸಂಗಗಳಿವು.

ಬಂಟರ ಯಾನೆ ನಾಡವರ ಸಂಘ

ಮುಂಬಯಿ ೧ ಇವರ 1951 ನೇ ಇಸವಿಯ 24 ನೇ ವಾರ್ಷಿಕ ವರದಿ-

ಬೇರೆ ಬೇರೆ ಉದ್ಯೋಗಗಳಿಗಾಗಿ ಮುಂಬಯಿಯಲ್ಲಿ ನೆಲೆಸಿಂತಿರುವ ದಕ್ಷಿಣ ಕನ್ನಡದ ಬಂಟರ ಯಾನೆ ನಾಡವರಲ್ಲಿ ಕೆಲವು ಸಮಾಜ ಸೇವಾಕಾಂಕ್ಷಿಗಳಿಂದ 1927ರಲ್ಲಿ ಸ್ಥಾಪಿಸಲ್ಪಟ್ಟ ಸಮಾಜೋನ್ನತಿಯ ಕಾರ್ಯದಲ್ಲಿ ನಿರತವಾಗಿರುವ ಈ ಸಂಘದ 1951 ನೇ ದಶಂಬರ 31ಕ್ಕೆ ಅಂತ್ಯವಾಗುವ ಪ್ರಗತಿಪರ ವರದಿಯನ್ನು ಸ್ವೀಕರಿಸಲು ಆನಂದವಾಗುತ್ತದೆ. ಈ ಸಂಘವು ಕೆಲವು ವರ್ಷಗಳಿಂದ ಕರ್ನಾಟಕ ಫ್ರೀ ನೈಟ್ ಹೈಸ್ಕೂಲ್ ಎಂಬ ಪ್ರೌಢ ಶಾಲೆಯೊಂದನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದು ಹಲವರ ವಿದ್ಯಾಭ್ಯಾಸಕ್ಕೆ ವಿಶೇಷ ನೆರವಾಗುತ್ತಿರುವುದು ಅಭಿನಂದನೀಯ ವಿಷಯವಾಗಿದೆ. ಸಂಘದ ಸರ್ವತೋಮುಖ ಅಭಿವೃದ್ಧಿಗಾಗಿ ಅರ್ಥಿಕವಾಗಿ ದುಡಿಯುತ್ತಿರುವ ಆಡಳಿತ ಮಂಡಳಿಯ ಸೇವಾಭಿವೃದ್ಧಿಯು ಕೊಂಡಾಡತಕ್ಕದಿದೆ. ಸಂಘವು ಇನ್ನಷ್ಟು ಬಲಗೊಂಡು ಹೆಚ್ಚಿನ ಕಾರ್ಯವನ್ನು ಮಾಡುವಂತಾಗಲೆಂದು ಹಾರೈಸುವೆವು.

ದಿ. ವಿಜಯ ಬೇಂಕ್ ಲಿಮಿಟೆಡ್, ಬೈಂದೂರು. ದ. ಕ.

THE VIJAYA BANK LTD., BYNDOOR. S. K.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮುಂ ಪಾವತಿ ಮಾಡುವರೆ ರಿಜಿಸ್ಟ್ರ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸಲ್ಲು-ವ-ಬಡ್ಡಿ. ಯಾವುದನ್ನೂ ಈ ತನಕವೂ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಆಗೋಸ್ತು ತಿಂಗಳ ತಾರೀಕು 1 ನೇ ಶುಕ್ರವಾರ ಅಪರಾಹ್ನ ಗಂಟೆ 2 0ಕ್ಕೆ ಯಾ-ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬಹಿರಂಗವಾಗಿ ಬೇಂಕಿನ ಮಾಳಿಗೆಯಲ್ಲಿ ಹರಾಜು ಮಾಡಲಾಗುವುದು, ತಿಳಿದಿರಲಿ.

ಸಾಲದ ಜಂಬ್ರಾ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ರೂ. ಆ. ಪೈ.
1099/78	ಶ್ರೀ ಬೇಕನಮಕ್ಕಿ ಮುತ್ತಯ್ಯ ಸೆಟ್ಟಿ, ಮಾದ್ದೆ ಸೆಟ್ಟರ ಅಳಿಯ ಹೇರೂರು ಗ್ರಾಮ, ಕಿರಿಮಂಜೇಶ್ವರ	153 2 0
1266/50	ಶ್ರೀ ಹೋಬಳಿದಾರ ಶ್ರೀನಿವಾಸ ಸೇರುಗಾರ, ರಾಮ್ಯ ಸೇರುಗಾರರ ಮಗ, ಪಡುವರಿ	26 11 0
727/51	ಶ್ರೀ ಮಾವಾರ ಕೃಷ್ಣಯ್ಯ ಸೇರುಗಾರ, ತಿಮ್ಮಪ್ಪ ಸೇರುಗಾರರ ಮಗ, ಪಡುವರಿ	120 5 0
851/51	ಶ್ರೀ ನಾಗ ಮೊಗೇರ, ದಾರ ಮೊಗೇರನ ಅಳಿಯ, ಗುತ್ತಿಮನೆ, ಪಡುವರಿ	8 15 0
868/51	ಶ್ರೀ ಪಂಪ್ಪೆ ಅಲ್ಲಿ ಸಾಹೇಬ, ಅಬ್ದುಲ್‌ಕಾದಿರ್ ಸಾಹೇಬರ ಮಗ, ಕೇರಿ, ಬೈಂದೂರು	38 5 0
. . 51	—do—	9 10 0
824/51	ಶ್ರೀ ಹನುಮಂತ ಸೇರುಗಾರ, ದಾನೆ ವೆಂಕಟ್ರಮಣ ಸೇರುಗಾರರ ಮಗ, ಜಾಳ ಬೈಂದೂರು	7 14 0
844 51	ಶ್ರೀ ನಾರಾಯಣ, ಅಣ್ಣಪ್ಪನ ಮಗ, ಬ್ಯಾರಿ ಕರ್ಕಿಕಳಿ, ಉಪ್ಪುಂದ	5 11 0
856/51	ಶ್ರೀ ವೆಂಕ್ಟಿ ಕನ್ನಪ್ಪ, ವೆಂಕ್ಟಿ ಮಗ, ಕರ್ಕಿಕಳಿ ಉಪ್ಪುಂದ	22 0 0
883/51	ಶ್ರೀ ಮಾಚ, ಕಾಳು (Rawlu) ಮಂಜನ ಮಗ ಕರ್ಕಿಕಳಿ, ಉಪ್ಪುಂದ	13 5 0
848/51	ಶ್ರೀ ದೀಯಾರ ಸೀನಪ್ಪ ಸೆಟ್ಟಿ, ನುಂಚ್ಚಿ ಸೆಟ್ಟರ ಅಳಿಯ ಬೈಂದೂರು	22 0 0
863/51	ಶ್ರೀ ಚಿಕ್ಕ ಉಪ್ಪಾರ, ದುಗ್ಗಿಯ ಮಗ, ಕಣ್ಣಹಿತ್ಲು, ಯಡ್ತರೆ ಗ್ರಾಮ, ಬೈಂದೂರು	5 11 0
909,51	ಶ್ರೀಮತಿ ಪುಟ್ಟಮ್ಮ, ಮಂಜಿ ಮಗಳು, ಪುಟ್ಟಮನೆ, ಪಡುವರಿ	7 14 0
968/51	ಶ್ರೀಮತಿ ಅಲ್ಲಿ ನಜ್ರತ್, ಗಿಲ್ಬ್ ಲೋಬೋರ ಹೆಂಡತಿ, ಕಲ್ಲಾಗ್ರಹಿತ್ಲು, ಪಡುವರಿ	8 14 0
974/51	ಶ್ರೀಮತಿ ಜುಜೆಫಿನ್ ಫೆರ್ನಾಂಡೀಸ್, ಸಲಾಧರ ಫೆರ್ನಾಂಡಿಸರ ಹೆಂಡತಿ, ಬೀಯಾರ ಬೈಂದೂರು	22 10 0
978/51	ಶ್ರೀ ಸುಬ್ಬಯ್ಯ ಕಾಮ್ತಿ, ಅಜ್ಜಯ್ಯ ಕಾಮ್ತಿಯ ಮಗ, ಅಮ್ಮನವರ ತೊಪ್ಲು, ಉಪ್ಪುಂದ	11 1 0
1222/51	ಶ್ರೀ K. G. ಶಿವರಾಮ ಸೇರುಗಾರ, ಗುಡೆಮನೆ ವೆಂಕಟ್ರಮಣ ಸೇರುಗಾರರ ಮಗ, ಕೋಟೆಬಾಗಿಲು, ಪಡುವರಿ	86 5 0
1245/51	ಶ್ರೀ ಹೊನ್ನಯ್ಯ ನದಾಫ ಸೇರುಗಾರ, ಅಣ್ಣಪ್ಪ ಸೇರುಗಾರರ ಮಗ, ಪಡುವರಿ	14 15 0
1266/51	ಶ್ರೀ V. ನಾರಾಯಣ ನ್ಯಾಕ್, ಹೆಡ್ ಮಾಸ್ಟರ್, ಬೋ. ಎ. ಶಾಲೆ, ಬಾಡ ಬೈಂದೂರು	79 8 0

ಬೈಂದೂರು, 18-7-1952

ಎಚ್. ರಾಜೀವ ಶೆಟ್ಟಿ.
ಏಜಂಟ್.

[೩ನೇ ಪುಟದಿಂದ ಮುಂದುವರಿದುದು]

ಸ್ವಂತ ಯೋಗ್ಯತೆ

ಸಾಮಾನ್ಯ ಮನುಷ್ಯನ ದುರ್ಭಾವನೆಯು ಪರೋಕ್ಷವಾಗಿಯೂ ಸಾಮಾಜಿಕ ಜೀವನದಲ್ಲಿ ಹಾದಿ ಮೊಳೆಯುವ ಸಂಭವವಿದೆ. ದುರಾಚಾರವನ್ನು ಮುಚ್ಚಿಡುವುದರಿಂದ ಕ್ಲೇಶವೇನೂ ಕಡಿಮೆಯಾಗುವುದಿಲ್ಲ. ಲೋಕದೊಡನಂತೂ ಸರಿಯೇ ಸ್ವಯಂ ತನ್ನೊಡನೆಯೇ ಅಂಥವರು ವಿಶ್ವಾಸ ಘಾತ ಮಾಡುವರೆಂಬುದೂ ನಿಜ. ಯಾವುದೇ ದುರಾಚಾರವನ್ನು ಮುಚ್ಚಿಡುವ ಬದಲು, ಅದನ್ನು ಬಹಿರಂಗಗೊಳಿಸಿದಲ್ಲಿ-ಇದರಿಂದ ಎಷ್ಟೋ ಮಟ್ಟಿಗೆ ಸ್ವಾಸ್ಥ್ಯ ಲಭಿಸುವುದು. ನಮ್ಮ ಧರ್ಮ ಶಾಸ್ತ್ರಗಳಲ್ಲಿ ಈ ಬಗೆಯ ಅನೇಕ ಉಪಾಯಗಳನ್ನು ಹೇಳಿದ್ದಾರೆ. ವ್ಯಾಸ ಮಹರ್ಷಿಯ ಅಭಿಪ್ರಾಯದಂತೆ, ತನ್ನ ಪಾಪವನ್ನು ಲೋಕದ ಜನರ ಮುಂದೆ ಆಡುವುದರಿಂದ, ಅದು ಕ್ಷಯಿಸುತ್ತದೆ. ಮನುವೂ ಇದೇ ಸಲಹೆ ಕೊಡುವನು ಕ್ರೈಸ್ತರ ಕ್ರಾಂತಿಕಾರಿ ಗುರು ಲೂಥರ್ ಮನುಷ್ಯ ತಾನು ದೋಷಿಯಲ್ಲ ಎನ್ನುವುದೇ ಮಹಾ ದೋಷ ಎಂದಿರುವನು. ತನ್ನ ತಪ್ಪನ್ನು ಒಪ್ಪಿಕೊಳ್ಳುವುದೇ ಮಹತ್ವದ ಗುಣ—ಇದರಿಂದ ಆತ್ಮಗ್ಲಾನಿ, ಚಿತ್ತ ಕ್ಷೋಭೆಗಳು ಮಾಯವಾದಂತೆ, ಲೋಕಾದರ್ಶದ ರಕ್ಷಣೆಯಾಗುವುದು; ಸತ್ಯ, ನ್ಯಾಯಗಳಿಗೆ ಬೆಂಬಲ ದೊರೆಯುವುದು. ಲೋಕ ಕಲ್ಯಾಣದೊಡನೆ ಸ್ವಂತ ಹಿತವನ್ನೂ ಬಯಸುವ ಧೀರರ ಕಾರ್ಲೈಯಿಲನ ವಚನವನ್ನೆಂದಿಗೂ ಮರೆಯಲಾಗದು—"ಸರ್ವ ಪ್ರಥಮ ನಿನ್ನನ್ನೊಬ್ಬ ಸಭ್ಯ ಗೃಹಸ್ಥನಾಗಿ, ಪ್ರಾಮಾಣಿಕನಾಗಿ ತಿದ್ದಿಕೊಳ್ಳಿರಿ. ಆಗ ಲೋಕದಲ್ಲಿ ಒಬ್ಬ ದುಷ್ಟ ಕಡಿಮೆಯಾದನೆಂಬ ಸಂತೋಷ ಉಂಟಾಗುವುದು."

(ಅಪೂರ್ಣ)

ತರಬೇತಿಗಾಗಿ

ಬೈಂಡಿಂಗ್, ಕಂಪೋಸಿಂಗ್, ಪ್ರಿಂಟಿಂಗ್ ಮೊದಲಾದ ಪ್ರೆಸ್ಸಿನ ಬೇರೆ ವಿಭಾಗಗಳಲ್ಲಿ 14 ವರ್ಷಕ್ಕೆ ಮೇಲ್ಪಟ್ಟ ಕೆಲವು ಹುಡುಗರನ್ನು ತೆಗೆದುಕೊಳ್ಳಲಾಗುವುದು.

ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ

ಭಾರತದ ಸಂಕಟಗಳು ಮತ್ತು ಮಹಿಳೆಯರು

ಅನ್ನ ಸಂಕಟ ನಿವಾರಣಾ ಕಾರ್ಯದಲ್ಲಿ ಮಹಿಳೆಯರ ಪಾತ್ರ

ಕೆಲವು ವರ್ಷಗಳಿಂದ ಭಾರತದ ಆಹಾರ ಸ್ಥಿತಿಯು ಉತ್ತರೋತ್ತರ ಹಾಳಾಗುತ್ತಲಿದೆ; ಭಾರತವಂತಹ ಕೃಷಿಪ್ರಧಾನ ದೇಶದ ಸಸ್ಯ ಸಂಪತ್ತು ಹಾಗೂ ಧನಧಾನ್ಯ ಪರಿಪೂರ್ಣ ಭೂಮಿಯು ಹಿಂದೆ ವಿಶ್ವದ ಸರ್ವೋತ್ತಮ ಹುಟ್ಟುವಳಿಯ ಭೂಮಿಯಾಗಿತ್ತು. ಇಂದಿನ ಸ್ಥಿತಿಯು ಲಜ್ಜಾಸ್ಪದವೇ ಸರಿ. ನಮ್ಮ ದೇಶವು ಹೊಟ್ಟೆಪೂರ್ತಿಗೆ ಸಾಕಾ ಆಹಾರವನ್ನು ಬೆಳೆಸಲು ಅಸಮರ್ಥನಾಗಿ, ಅನ್ಯದೇಶಗಳ ಸಮ್ಮುಖ, ಕೈಚಾಚಿ ನಿಲ್ಲುವುದು ಶೋಚನೀಯವಾಗಿದೆ. ರಾಷ್ಟ್ರೀಯ ಸರಕಾರದ ಪ್ರಯತ್ನಗಳು ಹೇಗಿದ್ದರೂ, ಈ ವರ್ಷ ವಿದೇಶಗಳಿಂದ 50 ಲಕ್ಷ ಟನ್ ಆಹಾರ ಧಾನ್ಯವನ್ನು ತರಿಸಬೇಕಾಗಿದೆ.

ಯಾವ ವಿಧದಿಂದಲಾದರೂ, ಈ ಸಂಕಟದಿಂದ ರಾಷ್ಟ್ರದ ಉದ್ಧಾರ ಮಾಡುವುದು ಇಂತಹ ಸ್ಥಿತಿಯಲ್ಲಿ ಪ್ರತ್ಯೇಕ ನಾಗರಿಕನ ಕರ್ತವ್ಯವಾಗಿದೆ. ಈ ದೆಸೆಯಲ್ಲಿ ಪುರುಷರು ರಾಷ್ಟ್ರದ ಬಾಕಿ ಆರ್ಥಿಕ ಅಡಚಣೆಗಳನ್ನು ನಿವಾರಿಸಿ, ಇನ್ನೂ ಅಧಿಕ ಆಹಾರ ಉತ್ಪಾದನದ ಆಂದೋಲನದಲ್ಲಿ ಸಹಕರಿಸಬೇಕಾಗಿದೆ. ಮಹಿಳೆಯರು ತಮ್ಮ ಕರ್ತವ್ಯದ ಸಾರೀಕ್ಷ್ಯದಿಂದ, ತಮ್ಮ ತಮ್ಮ ಮನೆಗಳಲ್ಲಿ ಇಡೀ ವಾತಾವರಣವನ್ನು ಬದಲಾಯಿಸಬೇಕಾಗಿದೆ.

ಒಬ್ಬ ಸಾಧಾರಣ ಗೃಹಿಣಿಯು ನೇಕಡಾ 8 ಅಥವಾ 10 ಅಂಶಗಳಿಂದ ಆಹಾರ ಉಳಿಸುವುದು ಬಹು ಸುಲಭ ವಿಷಯವಾಗಿದೆ; ಅನ್ಯ ಎಲ್ಲಾ ಯೋಜನೆಗಳು ದೀರ್ಘ ಕಾಲೀಯವಾಗಿರುವಾಗ, ಮನೆಯಲ್ಲಿನ ಈ ಯೋಜನೆಯು ತತ್ಕಾಲ ಫಲದಾಯಕವಾಗಬಲ್ಲುದು; ಈ ತಥ್ಯದಲ್ಲಿ ಬಹು ಮಹತ್ವವಿದೆ.

ಅನಾವೃಷ್ಟಿ, ಅತಿವೃಷ್ಟಿ, ಅತಿಪ್ರವಾಹ, ನೆರೆ, ಭೂಕಂಪ, ಜನಸಂಖ್ಯೆಯಲ್ಲಿ ಉತ್ತರೋತ್ತರ ವೃದ್ಧಿ, ವಿಭಜನೆ ಮುಂತಾದುವುಗಳಿಂದ ಉಂಟಾದ ಪರಿಸ್ಥಿತಿ, ದೇಶದ ಅಂಗಭಂಗ,–ಇವುಗಳ ಕಾರಣ ಭಾರತದ ಆಹಾರ ಸಮಸ್ಯೆಯು ಒಂದು ಗಂಭೀರ ರೂಪವನ್ನು ಧರಿಸಿದೆ. ಈ ಸ್ಥಿತಿಯನ್ನು ಎದುರಿಸುವುದಕ್ಕೆ ಸರಕಾರವು ಯುದ್ಧಸ್ಥಿರದ ಪ್ರಯತ್ನವೂ ಮಾಡುತ್ತಲಿದೆ ಸ್ಥಾಯೀ ಉಪಚಾರಕ್ಕೋಸ್ಕರ, ಅಧಿಕ ಆಹಾರ ಉತ್ಪಾದನದ ಆಂದೋಲನಕ್ಕೆ ಮೂರ್ತ ಸ್ವರೂಪ ಕೊಡಲು ಕೆಲವು ಅಲ್ಪ ಹಾಗೂ ದೀರ್ಘಕಾಲೀನ ಯೋಜನೆಗಳು ಯೋಚಿಸಲ್ಪಟ್ಟವೆ. ಭಾಕ್ರಾನಾಂಗಲ, ಹೀರಾಕುಂಡ ಮತ್ತು ದಾಮೋದರದಂತಹ ಅನೇಕ ದೊಡ್ಡ ಪರಿಯೋಜನೆಗಳ ನಿರ್ಮಾಣ ಕಾರ್ಯವು ಆರ್ಥಿಕ ಪರಿಸ್ಥಿತಿಗಳ ಪ್ರತಿಕೂಲತೆಗಳನ್ನು ಸಹಾ ಬೇಗನೆ ಪ್ರತಿಭಟಿಸಿ, ಯಥಾಶೀಘ್ರ ಸಂಪನ್ನತೆಯ ಕಡೆಗೆ ದೇಶವನ್ನು ಒಯ್ಯಲು, ಗಮ್ಯವನ್ನಿಟ್ಟು ಸಾಧಿಸುತ್ತಲಿದೆ. ಹೀಗಿದ್ದರೂ ಸರಕಾರವು ತನ್ನ ಯೋಜನೆಗಳನ್ನು ಕಾರ್ಯಾನ್ವಿತ ಮಾಡಲು ಪೂರ್ಣ ರೀತಿಯಿಂದ ಸಮರ್ಥವಾಗಿಲ್ಲ. ಪ್ರತ್ಯೇಕ ನಾಗರಿಕನು ಈ ಸಮಸ್ಯೆಯ ಸಮಾಧಾನಕ್ಕೋಸ್ಕರ ತನ್ನ ಪೂರ್ಣ ಸಾಮರ್ಥ್ಯಾನುಸಾರ, ನಿರತನಾಗದೆ, ನಿಕಟ ಭವಿಷ್ಯದಲ್ಲಿ ಈ ವಿಕರಾಲ ಅನ್ನಾಭಾವದ ನಾಶದಿಂದ ವಿಮೋಚನೆ ಹೊಂದುವ ಆಶೆ ಮಾಡುವುದು ವ್ಯರ್ಥ.

ಈ ಸಮಸ್ಯೆಗೆ ಮಹಿಳೆಯರೊಡನೆ ಘನಿಷ್ಠ ಸಂಬಂಧವಿದೆ. ಅನ್ನ ಉಪಯೋಗದ ಪ್ರಮುಖ ಸ್ಥಳವಾದ ಪಾಕಶಾಲೆಯ ವ್ಯವಸ್ಥೆಯ ಸಂಪೂರ್ಣ ಕಾರ್ಯಭಾರವು ಮಹಿಳೆಯರ ಹೊಣೆಯೇ ಆಗಿದೆ; ಆದುದರಿಂದ ರೋಗರಹಿತ ಹಾಗೂ ಸ್ವಸ್ಥವಾಗಿರುವ ನಮ್ಮ ಜೀವನದ ರಹಸ್ಯವು ಅವರ ಕಾರ್ಯ ಕೌಶಲ್ಯದ ಮೇಲೆ, ಹಾಗೂ ಉಪಯೋಗಿಸುವ ಭೋಜನದ ವಿಷಯ, ಬೆಳೆದು ವೃದ್ಧಿಯಾದ ಅವರ ಜ್ಞಾನದ ಮೇಲೆ ಸಹಾ ಹೊಂದಿದೆ.

ಅಡಿಗೆ ಮಾಡುವ ಸಮಯ, ಈ ಕೆಳಗಿನ ವಿಷಯಗಳನ್ನು ಮಹಿಳೆಯರು ಪರಿಪೂರ್ಣ ಪರಿಪಾಲಿಸಿದರೆ, ನಿಶ್ಚಯವಾಗಿಯೂ ಆಹಾರದ ಈ ರಾಷ್ಟ್ರವ್ಯಾಪೀ ಅಭಾವವನ್ನು ಬಹು ಮಟ್ಟಿಗೆ ಹೋಗಲಾಡಿಸಿ, ಆಹಾರದ ಪೂರ್ತಿಕೆ ಮಾಡಬಲ್ಲರು.

ಸ್ವಾಸ್ಥ್ಯಕ್ಕೋಸ್ಕರ ನಿಯಮಿತ, ಉಪಯುಕ್ತ ಮತ್ತು ಸಂತುಲಿತ ಭೋಜನವು ಆವಶ್ಯಕ. ಆದುದರಿಂದ ನಾವೊಂದು ಚಾರ್ಟ (chart) ನ್ನು ತಯಾರಿಸಬೇಕಾಗಿದೆ. ನಿಶ್ಚಯಿಸಲ್ಪಟ್ಟ ವಸ್ತುಗಳು ಆವಶ್ಯಕತೆಗಿಂತ ಅಧಿಕವಾಗಿದಿರುವುದು ಆವಶ್ಯವಿದ್ದಷ್ಟು ಆಹಾರ ಹಾಗೂ ಅನ್ನದ ವ್ಯವಸ್ಥೆ ಮಾಡುವುದು.–ಇವುಗಳನ್ನೆಲ್ಲಾ ನೆನಪಿನಲ್ಲಿಡಬೇಕು.

ಚಾರ್ಟಿನಲ್ಲಿ ಕಾಯಿಪಲ್ಲೆ ಮತ್ತು ಹಣ್ಣುಗಳಿಗೇ ಪ್ರಥಮ ಸ್ಥಾನವನ್ನು ನೀಡಬೇಕು. ಕಾಯಿಪಲ್ಲೆಗಳಲ್ಲಿ ಪ್ರೋಟೀನ, ಖನಿಜ, ಕಾರ್ಬೋಹಾಯಿಡ್ರೇಟ್ ಮುಂತಾದ ವಿಭಿನ್ನ ಖನಿಜ ಮತ್ತು ಪೌಷ್ಟಿಕ ತತ್ತ್ವಗಳು ಹೆಚ್ಚಿನ ಪ್ರಮಾಣ ಪರಿಮಾಣದಲ್ಲಿ ಇರುತ್ತವೆ. ಅವುಗಳ ಪ್ರಯೋಗದಿಂದ ಶರೀರವು ವೃದ್ಧಾವಸ್ಥೆಯ ತನಕ ಸ್ವಸ್ಥ ಮತ್ತು ನೀರೋಗವಾಗಿರುತ್ತದೆ.

ಕಾಯಿಪಲ್ಲೆಗಳನ್ನು ಅಥವಾ ಬೇಳೆಗಳನ್ನು ಮತ್ತು ಅಕ್ಕಿ ಮುಂತಾದುವುಗಳನ್ನು ನೆನೆದು ಹಾಕಿದ ನೀರಿನಲ್ಲಿಯೇ ಅವುಗಳನ್ನು ಬೇಯಿಸುವುದು ಉತ್ತಮ. ಕಾಯಿಪಲ್ಲೆ ಮತ್ತು ಬೇಳೆಗಳ ಅಧಿಕ ಸಿಪ್ಪೆ ತೆಗೆಯ ಕೂಡದು; ಕಾಯಿಪಲ್ಲೆಗಳ ಎಲೆಗಳನ್ನು ಅಧಿಕ ಕುಂದು ಮಾಡಬಾರದು. ಗಜ್ಜರಿ, ಹಸಿಮೂಲಂಗಿ, ಹಸುರು ನೀರುಳ್ಳಿ,–ಮುಂತಾದವುಗಳಲ್ಲಿ ಪ್ರೋಟೀನ, ಖನಿಜ, ಶರ್ಕರಾ ಇತ್ಯಾದಿ ತತ್ತ್ವಗಳು ಬಹುಪ್ರಮಾಣದಿಂದ ಇರುತ್ತವೆ. ಅವುಗಳ ಸಿಪ್ಪೆ ತೆಗೆಯದೇನೇ, [ಅವುಗಳಲ್ಲಿನ ಪೌಷ್ಟಿಕ ತತ್ತ್ವಗಳು ನಷ್ಟವಾಗದಂತೆ] ಕೂಡಿಸಿ, ಅವುಗಳ ಪರಿಪೂರ್ಣ ಲಾಭ ಹೊಂದಬೇಕಾಗಿದೆ.

ಪ್ರತ್ಯೇಕ ಸಾರಿ ಊಟ ಮಾಡುವಾಗ, ತುಂಡರಿಸಿದ ಕೋಸು, ಗಜ್ಜರಿ, ಮೂಲಂಗಿ, ಎರೆಸುವ ಕೀಕಾಯಿ, ಸೌತೆಕಾಯಿ, ಪಟೋಲಕಾಯಿ, ಹೀರೆಕಾಯಿ, ತೊಂಡೆಕಾಯಿ, ಬೆಂಡೆಕಾಯಿ, ಕುಂಬಳಕಾಯಿ ಮುಂತಾದವುಗಳ ಪ್ರಯೋಗವು ಸ್ವಾಸ್ಥ್ಯಕ್ಕೋಸ್ಕರ ಬಹು ಲಾಭಕಾರಿಯಾಗಿದೆ. ಹಾಗಲಕಾಯಿಯು ಸಹಾ ಸ್ವಲ್ಪ ಪ್ರಮಾಣದಲ್ಲಿ ಬಹು ಉತ್ತಮ. ಗೋದಿ ಅಥವಾ ಇತರ ಹಿಟ್ಟನ್ನು ಅಧಿಕ ಸೋಸದಿರುವುದು ಮತ್ತು ಯಂತ್ರದಿಂದ [illegible] ರುವುದು ಆರೋ[illegible] ಕಾಳುಗಳ ಪ್ರಯೋ[illegible] ಳಲ್ಲಿರುವ ಪೌಷ್ಟಿಕ [illegible] ಹಾಳುಮಾಡದಿದ್ದಲ್ಲಿ, [illegible] ರಿಮಾಣಗಳನ್ನು ಕಡಿಮೆ ಮಾಡಬಹುದು. [illegible] ಕ್ಕಿಯನ್ನು ಕಡಿಮೆ ನೀರಿನಲ್ಲಿ ಕುದಿಸಿ, ನೀರನ್ನು ಬೇಯಿಸುವಾಗಲೇ ಆರಿಹೋಗುವಂತೆ ಮಾಡಿಬಿಟ್ಟರೆ, ಪೌಷ್ಟಿಕ ತತ್ತ್ವಗಳು ನಷ್ಟವಾಗಲಾರವು.

ಅಡಿಗೆ ಮಾಡುವುದು, ತೆಗೆದಿಡುವುದು, ಮತ್ತು ಬಡಿಸುವುದು–ಇವುಗಳನ್ನೆಲ್ಲಾ ಮಹಿಳೆಯರು ಉತ್ತಮ ರೀತಿಯಲ್ಲಿ ಕಲಿತು, ಉಪಯೋಗಿಸಬೇಕು.

ಸ್ವಲ್ಪವಾದರೂ ಎಂಜಲು ಆಹಾರ ಬಿಟ್ಟುಬಿಡದಿರುವುದು; ಆಹಾರ ಪದಾರ್ಥಗಳ ಪರಿಪೂರ್ಣ ಲಾಭ ಹೊಂದುವುದು, ಇತ್ಯಾದಿಗಳನ್ನು ಪ್ರತಿಯೊಬ್ಬನು ಅಭ್ಯಾಸದಲ್ಲಿ ಕಾರ್ಯಾಂತರಿಸಲು, ಹೆಂಗಸರು ಯತ್ನಿಸಬೇಕು. ಹಸಿವಾಗದೆ, ಮತ್ತು ಹಸಿವಿಗಿಂತ ಅಧಿಕ, ತಿನ್ನುವುದು ಸಹಾ ಒಳ್ಳೇದಲ್ಲ. ಇದನ್ನು ಬಿಟ್ಟುಬಿಡಬೇಕು; ಹೀಗೆ ಮಾಡುವುದರಿಂದ ನಮ್ಮ ಪ್ರಿಯ ದೇಶವು ಅನ್ನ ಸಂಕಟದಿಂದ ವಿಮೋಚಿತವಾಗುವುದರಲ್ಲಿ ಸಮರ್ಥವಾಗುವದು; ಮಾತ್ರವಲ್ಲ, ನಮ್ಮ ಕುಟುಂಬದವರು ಸಹಾ ಸ್ವಸ್ಥರಾಗುವರು.

ಬಡವರು ಆಹಾರ ಪದಾರ್ಥಗಳ ಸ್ಥಾನದಲ್ಲಿ ಸುಲಭವಾಗಿ ಅಧಿಕ ಆಯಾಸದಿಂದ ಲಭಿಸಿದ ವಸ್ತುಗಳನ್ನು ಉಪಯೋಗಿಸುವುದು ಉತ್ತಮ.

ಹೆಚ್ಚು ಕ್ರಯದ ವಸ್ತುಗಳ ಸ್ಥಾನದಲ್ಲಿ ಅಗ್ಗ ವಸ್ತುಗಳನ್ನು ಪ್ರಯೋಜಿಸುವುದು; ಮತ್ತು ಸಾಧ್ಯವಿದ್ದಲ್ಲಿ, ಬಟಾಟೆ, [ಆಲೂಗಡ್ಡೆ,] ಗೆಣಸು ಹಿಟ್ಟು, ಬಾಳೆಹಣ್ಣು, ಕಡಲೆ ಹಿಟ್ಟು, ನೆಲಗಡಲೆ, ಪಪ್ಪಾಯಿ ಹಣ್ಣು, ಮುಂತಾದವುಗಳನ್ನು ಉಪಯೋಗಿಸುವುದು ಉತ್ತಮ.

ಕಾಲೇಜು, ಸ್ಕೂಲು ಮತ್ತು ಮಹಿಳಾ ಪ್ರಮುಖ ಆಟಗಳ ಸಮಯದಲ್ಲಿ ಆಟದ ಬದಲಿಗೆ ಖಾಲೀ ನೆಲ ಅಥವಾ ಭೂಮಿಯ ಮೇಲೆ ಅನ್ನ ಉತ್ಪಾದನದ ಕಾರ್ಯದಲ್ಲಿ ನಿರತರಾಗಿರಬೇಕು. ಇದರಿಂದ ಸ್ವಾಸ್ಥ್ಯದಲ್ಲಿ ಸ್ಫೂರ್ತಿ ಮತ್ತು ಉತ್ಸಾಹದ ಸಂಚಾರವಾದೀತು, ಮಾತ್ರವಲ್ಲ, ದೇಶದ ಅನ್ನ ಸಂಕಟವು ಸಹಾ ಕಡಿಮೆಯಾದೀತು.

ಒಂದು ವಾರದಲ್ಲಿ ಒಂದುಸಾರಿ ಉಪವಾಸ ಮಾಡಲು ಸ್ವಯಂ ಪ್ರತಿಯೊಬ್ಬನಿಗೆ ಸಾಧ್ಯವಿದೆ. ಕುಟುಂಬದ ಅನ್ಯ ಸದಸ್ಯರನ್ನು ಸಹಾ ಹಾಗೆ ಮಾಡಲು ಪ್ರೇರಿಸಬೇಕಾಗಿದೆ. ತಮ್ಮ ತಮ್ಮ ಆಹಾರ ಕಡಮೆ ಮಾಡಿಸಿ, ರಾಷ್ಟ್ರೀಯ ಸರಕಾರಕ್ಕೆ ಸಹಾಯ ನೀಡಿದರೆ, ದೇಶದ ಅನ್ನಾಭಾವದ ಸಮಸ್ಯೆಯು ನೇಕಡಾ 8 10ರಷ್ಟು, ತನ್ನಷ್ಟಕ್ಕೇ ಬಗೆಹರಿಸಲ್ಪಡುವುದು.

ಮಹಿಳೆಯರು, ಪೂರ್ಣ ಸಹಯೋಗ ನೀಡಿ, ಸಫಲ ಗೃಹಿಣಿಯರಂತೆ ಅಕ್ಕಿಯ ಪ್ರಯೋಗವನ್ನು ಸ್ವಲ್ಪ ಕಡಮೆ ಮಾಡಿದರೆ, ಮತ್ತು ಕೃಷಿಕರು ಸ್ವಲ್ಪ ಅಧಿಕ ಭತ್ತ ಉತ್ಪಾದನ ಮಾಡಿದರೆ, ನಿಶ್ಚಿತವಾಗಿಯೂ ದೇಶದ ಅನ್ನ ಸಂಕಟವು ದೂರವಾಗಬಲ್ಲುದು.

—ವೈದ್ಯಗುರು ಎಮ್. ಆರ್ ಭಟ್

In the Court of the Subordinate Judge of South Kanara.

O S No 58/52

Between-

Korapalu Hengsu & others— Plaintiffs.

and

P. Narasinga Rai— Defendant.

To

Defendant:- P. Narasinga Rai son of Ammu Shetty, and nephew of Maila Bhandary, residing in Perajeguthu House of Peraje Village of Puttur Taluk.

Please take notice that the abovenamed Plaintiff instituted the above suit against you for recovery of maintenance, and the suit is posted to 19-8 1952 for your appearance. If you fail to appear on that date, the suit will be heard and decided in your absence

By oader of the Court

(Sd) S Venkat Rao,
Vakil for Plaintiffs.

Mangalore, 17-7-1952.

"ಗೋಪಾಲ ಭೇಷಜಾಶ್ರಮ" ಮಂಗಳೂರು

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ

ನವಜೀವಾಮೃತ

ಎಂಬ

ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ! ಯಂ ಸಿ. ಶಾಸ್ತ್ರೀ, ಯಲ್. ಐ ಎಂ

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ವಾಕಿಸ್ಟರು:—ಡಾ! ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ವಿಮ್ಮ ಸ್ನಾನ, ಊಟ, ಉಪಹಾರ, ಟೈಕಲ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಬೇಕಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding

ROYAL MAHAL,

UDIPI. S. Kanara.

ಋತುಸ್ರಾವ ನಿಂತಿತು

'ಕುಮಾರಿ' ಟಿಕ್ಕಿಗಳನ್ನು ಉಪಯೋಗಿಸಿದರೆ ಪದೆಪಟ್ಟ ಋತುಸ್ರಾವವಾಗದೆ ಪುನಃ ಹಳೆಯ ಸ್ಥಿತಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾಧಾರಣ ಮುಂದಿಗೆ ಶಾಸ್ತ್ರಿ ಗುಣವಾಗಿದೆ–ಬೆಲೆ; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8-] ವಿ ಪಿ ಹಣ ಬೇರೆ ಪ್ರತ್ಯೇಕ]

Mrs. P DEVEE, F. DS. (N. J.)

Tollygunge CALCUTTA,

ಸ್ವಾಕಿಸ್ಟರು ಶಹಾ ಕಂಪೆನಿ, ಮಂಗಳೂರು.

ತಾರೀಕು 24-7-52 ರಿಂದ	ವಾರದ ಭವಿಷ್ಯ	ತಾರೀಕು 30-7-52 ವರೆಗೆ

ಮೇಷ— ಶನಿ ಶುಕ್ರರ ಬಲವಾದ ಬೆಂಬಲವು ನಿಮಗಿದ್ದರೂ ಸಮ್ಯದ ಕಾಲವು ನಿಮಗೆ ಸಾಕಷ್ಟು ಅನುಕೂಲವಿಲ್ಲದ್ದರಿಂದ ನಿಮ್ಮ ಸಂಕಲ್ಪಗಳು ಬಹುಮಟ್ಟಿಗೆ ಫಲಿಸವು. ಗೃಹ ತಾಪತ್ರಯಗಳು ಸೋದರರೊಳಗಿನ ಮನಸ್ತಾಪ ಆರ್ಥಿಕ ಬಿಕ್ಕಟ್ಟು ಇವುಗಳಿಂದ ಸಂತತ ಪೀಡಿತರಾದ ನಿಮಗೆ ವಾರಾಂತ್ಯದ 4 ದಿನಗಳಲ್ಲಿ ಸುಖ ಧನಮಾನ ವಸನಾದಿಗಳ ಲಾಭವಿದೆ

ವೃಷಭ— ನಿಮ್ಮ ಅದೃಷ್ಟವಿಂದು ಸಾಕಷ್ಟು ಉತ್ತಮ ತರನಾಗಿರುವದು ಮನದಾಶಾಕಾಂಕ್ಷೆಗಳು ಅಲ್ಪಾಯಾಸದಲ್ಲಿ ಅಲ್ಪಾವಕಾಶದಲ್ಲೇ ನೆರವೇರುವವು. ಗುರುಹಿರಿಯರ ಅನುಗ್ರಹಕ್ಕೊಳಗಾಗುವಿರಾದರೂ ರಾಜಕೀಯದಲ್ಲಿ ವಿಜಯಿಗಳಾಗಿ ಮೆರೆಯಲಿರುವಿರಿ. ಕಫವಾತ ದೋಷದಿಂದ ಮಕ್ಕಳ ಆರೋಗ್ಯ ಕೆಡಲಿರುವದು. ಪ್ರವಾಸಕ್ಕೀ ಕಾಲವು ಅನುಕೂಲವಿಲ್ಲವು. ವಾರಾಂತ್ಯದ 2 ದಿನಗಳು ಉತ್ತಮವಾಗಿವೆ

ಮಿಥುನ — ಮನಶ್ಚಾಂಚಲ್ಯವಧಿಕವಾಗುವದು. ಸನ್ಮಿತ್ರರೊಡನೆಯೂ ಕೂಡ ಮನಸ್ತಾಪವುಂಟಾಗಲಿರುವುದು. ನಿಮ್ಮ ಲಾಭದ ಮಾರ್ಗಗಳಿಗೆ ವಿಶೇಷತಃ ವಿರೋಧಿಗಳಿಂದ ತಡೆಯುಂಟಾಗುವದು. ಪತ್ನೀ ಪುತ್ರರ ವಿರಹವಾದೀತು, ಪಿತ್ತದೋಷದಿಂದಾಗಿ ಆರೋಗ್ಯಕ್ಕೆ ಹಾನಿಯುಂಟಾಗಲಿದೆ. ಆದರೂ ಬೃಹಸ್ಪತ್ಯಾಚಾರ್ಯರ ಬಲದಿಂದಾಗಿ ವಾರಾದಿಯ 3 ದಿನಗಳನ್ನು ನಿಶ್ಚಿಂತೆಯಿಂದ ಕಳೆವಿರಿ.

ಕರ್ಕಟ— ಪರಿಸ್ಥಿತಿಯು ಹಿಂದಿನ ದಿನಗಳಿಗಿಂತ ಸ್ವಲ್ಪ ಉತ್ತಮವಾಗಲಿದೆ. ಸುಖಲಾಭ ಪತಿಯ ಅನುಗ್ರಹದಿಂದಾಗಿ ದಿನಗಳು ಸುಖಮಯಗಳಾಗಲಿವೆ ವಿಶೇಷತಃ ಶ್ರಮಜೀವಿಗಳಿಗೆ ಹೆಚ್ಚಿನ ಅನುಕೂಲ್ಯವುಂಟಾಗದು, ನೌಕರಿ ಜನರೂ ವ್ಯಾಪಾರಿಗಳೂ ಸುಖಿಗಳಾಗಿರುವರು. ತಾ. 27, 28 ಈ ದಿನಗಳಲ್ಲಿ ವಿಜಯ ಧನಾಪ್ತಿ ಸ್ತ್ರೀಸುಖ ಸ್ಥಾನಮಾನಗಳೂ ಲಭಿಸುವವು.

ಸಿಂಹ—ವಿಕ್ರಮಕಾರಿಯಾದ ಕುಜನು ಸುಖಭಾಗ್ಯಾಧಿಪನಾಗಿ ವಿಕ್ರಮಸ್ಥಾನದಲ್ಲಿ ನೆಲೆನಿಂತಿರುವುದರಿಂದ ನೀವೀ ಕಾಲದಕ್ಕೆ ಕೇವಲ ಆತ್ಮಬಲದಿಂದಲೇ ಬೇಕಾದ ಸುಖಸಂಪತ್ತಿಗಳನ್ನು ಪಡೆವಿರಿ ಪ್ರಬಲರಾದ ಶತ್ರುಗಳೂ ಕೂಡ ಸದ್ಯ ಗಂಡನನ್ನು ಕಂಡ ಉರಗದಂತಾಗುವರು ಗೃಹಸ್ಥರಿಗೆ ಸುಕಲಾಭದ ಯೋಗವಿದೆ ಬೇಕಾದ ಸುಖಭೋಗಗಳು ಅನಾಯಾಸದಿಂದ ಲಭಿಸುವವು ತಾ. 24, 25, 26, 29, 30 ಈ ದಿನಗಳು ಬಯಕೆಯನ್ನು ಪೂರ್ತಿಗೊಳಿಸುವವು

ಕನ್ಯಾ—ಆದಾಯವೊಂದು ವೆಚ್ಚವೆರಡೆಂಬಂತೆ ಇಂದಿನ ನಿಮ್ಮ ಪರಿಸ್ಥಿತಿಯಾಗಿರುವದು. ಎಷ್ಟು ದುಡಿದರೂ ಸಂಸಾರದ ದಿನುದಿನದ ವೆಚ್ಚವನ್ನು ಗ್ರಹಿಸಿಕೊಳ್ಳಲಾಗದೆ ಸಾಲ ಮಾಡಬೇಕಾಗುವದು. ಜನತೆಯ ಸಹಕಾರವಿಲ್ಲ. ಬಂಧುಗಳ ನೆರವಿಲ್ಲ. ಸ್ವಯಂ ಆಪತ್ತು ಇಂತಹ ಪರಿಸ್ಥಿತಿಯಲ್ಲಿ ನೀವಾವ ಕಾರ್ಯವನ್ನೂ ಮುಂದರಿಸಲು ಶಕ್ತರಾಗಲಾರಿರಿ, ತಾ. 27, 28, ಈ ದಿನಗಳು ಬೇರೆ ದಿನಗಳಿಗಿಂತ ಉತ್ತಮವೆನಿಸುವವು

ತುಲಾ—ನಿಮ್ಮ ಚಿಂತೆಗಳೆಲ್ಲವೂ ದೂರವಾಗುವವು. ಸದ್ಯ ನೀವು ಆಡಿದ್ದೇ ಮಾತು ಮಾಡಿದ್ದೇ ಕಾರ್ಯ. ಯಾವ ಉದ್ಯಮಕ್ಕೆ ಕೈಯಿಕ್ಕಿದರೂ ನಿರೀಕ್ಷಿಸಿದುದಕ್ಕಿಂತ ಅಧಿಕ ಫಲ ಲಭಿಸುವದು. ಅಷ್ಟೇಶ್ವರ ಕೊಡುಗೆ ಬೆಂಬಲವುಳ್ಳ ನಿಮಗೆ ನೌಕರಿ ವ್ಯಾಪಾರಾದಿಗಳಲ್ಲಿ ಒಳ್ಳೆಯ ಶ್ರೇಯೋಲಾಭವಿದೆ. ಶ್ರಮಜೀವಿಗಳಿಗೀ ವಾರವು ಅನೇಕ್ಯಂದು ಉತ್ತಮವಲ್ಲವು ತಾ. 27, 28ರಕ್ಕೆ ಅಧಿಕ ವ್ಯಯ ಅನಾರೋಗ್ಯಕ್ಕವಕಾಶವಿದೆ.

ವೃಶ್ಚಿಕ—ನಿಮ್ಮ ಆಶಾಕಾಂಕ್ಷೆಗಳು ಗಗನ ಕುಸುಮಗಳಂತಾಗುವುವು. ಇಲ್ಲಸಲ್ಲದ ಅನಿಷ್ಟ ಅಪವಾದಗಳು ಬರಲಿವೆ. ಮನೋರೋಗವು ದಿನದಿಂದ ದಿನಕ್ಕೆ ಪ್ರಬಲವಾಗಲಿದೆ. ಸಿಕ್ಕ ಸಿಕ್ಕವರೊಡನೆ ಕಲಹವಾದೀತು. ಕುಟುಂಬದಲ್ಲಿನ ಅನಾರೋಗ್ಯದದೆಸೆಯಿಂದ ವಿಶೇಷ ಧನವ್ಯಯವಾಗಲಿದೆ, ಆದರೂ ಇಷ್ಟು ದರಲ್ಲಿ ತೃಪ್ತಿಯೇನೆಂದರೆ ವಾರಾದಿಯ 5 ದಿನಗಳಲ್ಲಿ ಈ ಅನಿಷ್ಟಗಳು ಸ್ವಲ್ಪಮಟ್ಟಿಗೆ ಕಡಿಮೆಯಾಗಿ ಪರಿಣಮಿಸಲಿವೆ

ಧನು—ಸ್ವಭಾವತಃ ಚಂಚಲವಾದ ಮನಸು, ಇಂದೀಗ ವಿಶೇಷತಃ ದುರ್ಮಾರ್ಗದತ್ತ ನಿಮ್ಮನ್ನು ಸೆಳೆಯುತ್ತಿದೆ, ತತ್ಪರಿಣಾಮವಾಗಿ ಜನತೆಯ ನಿಂದಾಪವಾದಗಳಿಗೆ ಗುರಿಯಾಗಲಿರುವಿರಿ, ನಿಮ್ಮ ಉದ್ಯಮವು ಸಫಲವಾಗದು ಆರೋಗ್ಯ ಆರ್ಥಿಕ ಸಂಪತ್ತುಗಳು ನಿಷ್ಕಂಟಕಗಳಾಗಿವೆ ಆಕಸ್ಮಿಕ ಪರ್ಯಟನದಿಂದಾಗಿ ನಷ್ಟ ಕಷ್ಟಗಳೊದಗಬಹುದು ವಾರಾಂತ್ಯದ 1 ದಿನಗಳು ಸುಖ ಲಾಭಕಾರಿಗಳಾಗಿವೆ.

ಮಕರ—ನಿಮ್ಮ ಶ್ರಮಕ್ಕೆ ತಕ್ಕ ಫಲ ಕಾಣಿಸದಾದರೂ ದಿನಯಾಪನೆಗಾಗಿ ನೀವು ಹೆರವನನ್ನಾಶ್ರಯಿಸಬೇಕಾಗಿಬಾರದು, ದೋಷ ತ್ರಯಗಳ ಆಧಿಕ್ಯದಿಂದಾಗಿ ದೇಹಕ್ಕೆ ಸುಖವಿರದು ಬಂಧುಜನರ ವಿರೋಧಕ್ಕೊಳಗಾದ ನಿಮಗೆ ಮಿತ್ರರ ಸಹಕಾರವೂ ಲಭಿಸಲಾರದು, ನೌಕರಿ ಜನರಿಗೂ ವ್ಯಾಪಾರೀ ವರ್ಗದವರಿಗೂ ಶ್ರಮಕ್ಕುಚಿತವಾದ ಫಲ ಪ್ರಾಪ್ತಿಯಾಗುವದು. ವಾರಾಂತ್ಯದ 2 ದಿನಗಳು ಸುಖಪ್ರದಗಳಿವೆ.

ಕುಂಭ— ದಿನದಿಂದ ದಿನಕ್ಕೇ ಕ್ಷೀಣದಶೆಯನ್ನೈಯುತ್ತಿರುವದು ನಿಮ್ಮ ಭಾಗ್ಯವು ಆಕಾಶವ ನಿಮ್ಮ ಪ್ರಯತ್ನಗಳೆಲ್ಲವೂ ನೀರಲ್ಲಿ ಮಾಡಿದ ಹೋಮದಂತೆ ವ್ಯರ್ಥ. ಪರಿಶ್ರಮದಾಯಿಗಳಾಗುವವೇ ಹೊರತು ಫಲಕಾರಿಗಳಾಗಲಾರವು. ಚಿಕ್ಕ ದೋಷದಿಂದಾಗಿ ನಿಶ್ಶಕ್ತಿ ಆಲಸ್ಯಗಳು ಹೆಚ್ಚಲಿವೆ, ಆದರೂ ವಾರಾದಿಯ 3 ದಿನಗಳಲ್ಲಿ ಸ್ತ್ರೀಸಂಬಂಧವಾದ ಧನಮಾನಾದಿಗಳ ಲಾಭವಿದೆ.

ಮೀನ—ವಿಪಕ್ಷೀಯರು ಕ್ರಿಯಲಿಸುತ್ತಿರುವರು ಮಾತ್ರವಲ್ಲ ಪ್ರತೀಕಾರಾಸಕ್ತರಾಗಿರುವರು. ವಿಪತ್ಪರಂಪರೆಗಳು ಮೇಲಿಂದ ಮೇಲೆ ಬರುವವು, ಗೃಹ ಸ್ವಾರ್ಥ್ಯಾದಿಗಳು ಲೋಪಹೊಂದಲಿವೆ. ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸುರಗುರುಗಳೊಬ್ಬರು ನಿಮ್ಮನ್ನು ಬಹುತೇಕ ವಿಪತ್ತುಗಳಿಂದ ಪಾರುಗಾಣಿಸುವರು ವಾರಾದಿಯ 5 ದಿನಗಳು ಸ್ವಲ್ಪ ಆಶಾದಾಯಕಗಳಾಗಿವೆ

ಲಕ್ಷ್ಮಿ
ಸಂತ್ರಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರದ ಕೃಚ್ಛ್ರ, ಮೂತ್ರದೊಡನೆ ಯಷ್ಟು ... ಬಿಳುಪು, ಅರಸಿನ ಕೆಂಪು ಈ ವರ್ಣಗಳಲ್ಲಿ ಕೀವು ಹೋಗದು, ಕೂಡ ಸಂದಿಸಲ್ಲಿ ಗಿರಳೆ ಬರುವದು, ಕಾಲುಗಂಟು ವೇದನೆ, ಕಣ್ಣಿನಲ್ಲಿ ಕೀವು ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ, ಸ್ತ್ರೀಯರ ಬಿಳಿ ಸೆರಗು ಇವೆಲ್ಲಾ ಮಾತ್ರೆಯಾಗಿ ಗುಣ ಹೊಂದುವದು—ಇತರರು ಈಗಿನ ಉಷ್ಣಕಾಲದಲ್ಲಿ ಗರ್ಮಿ ಕಂಡುಬಂದರೆ ರಾತ್ರಿ ಮಲಗುವಾಗ್ಯೆ ಒಂದು ಮಾತ್ರೆ ಸೇವಿಸಿ ಹಾಲು ಕುಡಿದರೆ ಸುಖವಾಗಿ ನಿದ್ರೆಬಂದು ಸುಖವಿರೇಚನೆಯಾಗಿ ದೇಹದ ಉಷ್ಣ ಹೋಗುವದು.

ಶೀಸೆ 1ಕ್ಕೆ ರೂ 2-0-0

ಏಜಂಟ್ಸ್:
ಷಾ ಕಂಪೆನಿ, ಮಂಗಳೂರು

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!
ಲಕ್ಷಾಂತರ ಜನರು ಗುಣಹೊಂದಿದ್ದಾರೆ!

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯದ ಔಷಧಿಗಳ ರಾಜ, ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.
೪೦ ದಿನದ ಲೇಹ್ಯ ರೂ ೫/೪, ೨೦ ದಿನದ ಲೇಹ್ಯ ರೂ ೩/೪
(ಪೋಸ್ಟೇಜು ಮಾಫ್)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನ ಎ. ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂಧೂರ

ಬಹಿಷ್ಠೆ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಠೆ ಸಂಬಂಧದ ಹೊಟ್ಟೆನೋವಿನ ಜೊತೆಗೆ ತಲೆನೋವು, ನಡುಕಳಿಕ, ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ **ಗ್ಯಾರಂಟೀ ಔಷಧ.**

೩ ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ೧ ಸೆಟ್ ಅನುಪಾನಪತ್ರಿಕೆ ನೋಡಿ ಇಟ್ಟರೂ ಸೇವಿಸಿರಿ ಸಾಕು. ಶೋಧನವಾದ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾ ಪತ್ರಗಳನ್ನು ಪಡೆದಿದೆ.
ಕ್ರಯ:—೧ ಸೆಟ್ 5ರೂ ಪ್ಯಾಕಿಂಗ್ ಮತ್ತು ಟಪಾಲು ಖರ್ಚು ೧ರೂ ವಿ.ಪಿ. ಇಲ್ಲ ಕ್ಯಾಟಲಾಗ್ ಉಚಿತ 6ರೂ ಮನಿಆರ್ಡರ್ ಮಾಡಿರಿ. ಕೂಡಲೆ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ: ಎ. ರಾಮಸ್ವಾಮಿ ಅಯ್ಯರ್ ಸನ್, (ಎ. ಆರ್. ವಿಶ್ವೇಶ್ವರಯ್ಯ)
Prop: ಸಂತಾನ ಸಿಂಧೂರ, 628 ಚಾಮರಾಜ ರೋಡ್ ಕ್ರಾಸ್,
(ಸೀತಾ ವಿಲಾಸ ಛತ್ರದ ಹಿಂದೆ) ಮೈಸೂರು

ತೃಪ್ತಿಕರವಾದ **ವಸತಿ**— ಹಿತಕರವಾದ **ಊಟ**— ರುಚಿಕರವಾದ **ಉಪಾಹಾರ**
ಇವುಗಳಿಗೆ

ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಉಡುಪಿ.
ಯಾತ್ರಿಕರಿಗೂ ಪ್ರಯಾಣಿಕರಿಗೂ
ಸರ್ವ ಅನುಕೂಲವಾಗುವಂತೆ
ನಗರದ ಕೇಂದ್ರ ಭಾಗದಲ್ಲಿದೆ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ
ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಕೊರಡ್ಕಲ್ ಶ್ರೀನಿವಾಸರಾವ್ ಕೃತ
ಆಂಗ್ಲ ಸ್ವಯಂಬೋಧಿನಿ.
ಬೆಲೆ ರೂ. 1-8-0, ವಿ. ಪಿ. ದ್ವಾರ ರೂ. 2-0-0

ಡಾ| ಕೊರಡ್ಕಲ್ ವೆಂಕಟರಾವ್ ಕೃತ
ಮನೆ ಮದ್ದು
ಸುಲಭ ಚಿಕಿತ್ಸೆಗಳು.

ಬೆಲೆ ರೂ- 2-0-0, ವಿ- ಪಿ. ದ್ವಾರ- ರೂ 2-10-0
ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published By K. H. Shetty at the Navayuga Press, Udipi, S. India.

Regd.No. M. 3618

LICENCE No. 31
Licensed to Post without Prepayment

ESTD. 1921 ಸ್ಥಾಪನೆ
೩೧ ನೇ ವರ್ಷ

31-7-1952

Founder: Sri A. B. Shetty
Minister for Medical & Public Health

ನವಯುಗ

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಸಾರ್ವಜನಿಕ
ಆರೋಗ್ಯ ಮಂತ್ರಿ
ಶ್ರೀ.ಎ.ಬಿ.ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ
ಪೋಸ್ಟ್ ಬಾಕ್ಸ್
ನಂಬ್ರ 22
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೪೭

NAVAYUGA WEEKLY Post Box No. 22 UDIPI. Vol 31 No. 47

ಮಧುಪರ್ಕ

ಉತ್ತರ ಫ್ರಾನ್ಸಿನಲ್ಲಿ ಒಬ್ಬ ಹುಡುಗನಿದ್ದ: ಅವನ ಮನಸ್ಸೇನೋ ಸರಳ; ಆದರೆ ಉತ್ಸಾಹ ಮಿತಿಮೀರಿತ್ತು. ಕೋಪಗೊಂಡು ಸಿಡಿಮಿಡಿಗೊಳ್ಳುವುದರಲ್ಲಿಯೇ ಅವನ ಸಮಯ ಹೋಗುತಿತ್ತು.

ಒಂದು ದಿನ ಅವನೊಡನೆ "ಆಲೋಚಿಸಿ ಹೇಳು-ಪಟ್ಟಿನ ಬದಲಿಗೆ ಪಟ್ಟು ಕೊಡುವುದು, ಇದಿರಾಳಿಯ ಮುಸುಡಿಗೆ ಬಡಿದು, ಹಲ್ಲು ಉದುರಿಸುವುದು, ಅಥವಾ ಅದೇ ಸಮಯದಲ್ಲಿ ಬಿಗಿದ ಮುಷ್ಟಿಯನ್ನು ಕಿಸೆಯೊಳಗಿಟ್ಟು, ಸುಮ್ಮನುಳಿಯುವುದು—ಈ ಮೂರರಲ್ಲಿ ಯಾವುದು ನಿನಗೆ ಅಧಿಕ ಕಠಿಣವಾದ ಕಾರ್ಯ?" ಎಂದೊಬ್ಬರು ಕೇಳಿದರು.

"ಕಿಸೆಯೊಳಗೆ ಬಿಗಿದ ಮುಷ್ಟಿಯನ್ನಿಟ್ಟು ಸುಮ್ಮನುಳಿಯುವುದೇ ಬಹಳ ಕಷ್ಟ." ಎಂದನವ.

"ಸರಿಯೇ-ನಿನ್ನಂಥ ಸಾಹಸಿಗೆ ಸುಲಭ ಕೆಲಸ ಮಾಡುವುದು ಭೂಷಣವೋ ಅಥವಾ ಕಠಿಣ ಕಾರ್ಯದಲ್ಲಿ ತೊಡಗುವುದೋ?"

ಒಂದು ನಿಮಿಷ ಯೋಚಿಸಿ ಹುಡುಗನೆಂದ- "ಎಲ್ಲಕ್ಕಿಂತಲೂ ಅತ್ಯಂತ ಕಷ್ಟದ ಕೆಲಸ ಮಾಡುವುದೇ ನನಗೆ ಶೋಭಿಸುವುದು"

"ಚೆನ್ನಾಯಿತು— ಮುಂದೆ ಸಂದರ್ಭಸಿಕ್ಕಿದಾಗಲೆಲ್ಲ ನಿನಗೆ ಉಚಿತವಾದ ಈ ರೀತಿಯಲ್ಲಿ ನಡೆದುಕೋ" ಎಂದು ಬೆನ್ನುತಟ್ಟಿ ಹುಡುಗನನ್ನು ಕಳಿಸಿಕೊಟ್ಟರು.

ಕಡಿವಾಣದ ಬಲ

ಕಾಡಿನಲ್ಲಿರುವ ಆನೆಯನ್ನಾದರೂ ನಾವು ನಮ್ಮ ವಶದಲ್ಲಿ ಇಟ್ಟುಕೊಳ್ಳಬಲ್ಲೆವು- ಆದರೆ ಒಂದು ಹುಲಿಯನ್ನು ಪಳಗಿಸುವುದು ನಮ್ಮ ಕೈಯಲ್ಲಿದೆಯೆ? ಇಲ್ಲ-ಹುಲಿಯ ಸ್ವಭಾವದಲ್ಲಿರುವ ಕ್ರೂರತ್ವವು ಯಾವ ಬಗೆಯಿಂದಲೂ ಸುಧಾರಿಸಲ್ಪಡಲು ಸಾಧ್ಯವಿಲ್ಲ. ಈ ಕಾರಣದಿಂದಲೇ ಒಳ್ಳೆಯ ವ್ಯವಹಾರವನ್ನು ಹುಲಿಯೊಡನೆ ಯಾರೊಬ್ಬರೂ ಮಾಡಲು ಅಪೇಕ್ಷಿಸುವುದಿಲ್ಲ. ಅದನ್ನು ಕೊಂದು ತೀರಿಸಲಿಕ್ಕೆ ಜನರು ಉದ್ಯುಕ್ತರಾಗುವರು; ತನ್ಮೂಲಕ ತಮಗಾಗುವ ಹಾನಿಯನ್ನು ದೂರೀಕರಿಸುವರು.

ತದ್ವಿರುದ್ಧವಾಗಿ ಕಾಡಾನೆಯನ್ನು ಉಪಾಯವಾಗಿ ಹಿಡಿದಾಗ, ಅದೆಷ್ಟೇ ಪ್ರತಿಭಟನೆ ತೋರಿಸಿದರೂ, ಉದ್ದಂಡ ವೃತ್ತಿಯನ್ನವಲಂಬಿಸಿದರೂ-- ಸ್ವಲ್ಪಮಟ್ಟಿನ ಧೈರ್ಯ ಮತ್ತು ಪ್ರಯತ್ನದ ಮೂಲಕ ನಮ್ಮ ವಶದಲ್ಲಿಟ್ಟುಕೊಳ್ಳಬಲ್ಲೆವು; ಚೆನ್ನಾಗಿ ಪಳಗಿಸಿ, ನಮ್ಮ ಆದೇಶಾನುಸಾರ ನಡೆಯುವಂತೆ ಮಾಡಬಲ್ಲೆವು. ಅದು ನಮ್ಮನ್ನು ಪ್ರೀತಿಯಿಂದ ಕಾಣುವಂತೆ ನೋಡಬಲ್ಲೆವು. ಕೊನೆಗೆ ಅದರ ಮೇಲೇರಿ ಹೋಗಬಯಸುವೆವೆಂಬುದನ್ನು ತಿಳಿದಾಕ್ಷಣ, ತಾನಾಗಿಯೇ ಆನೆ ಮುಂಗಾಲನ್ನು ಮುಂದೊಡ್ಡುವಂಥ ಪರಿಸ್ಥಿತಿ ಏರ್ಪಡುವುದು.

ಮನುಷ್ಯನಲ್ಲಿಯೂ ಕೆಲವು ಉದ್ದಂಡ ಪ್ರವೃತ್ತಿ ಮತ್ತು ಉಚ್ಛೃಂಖಲ ಭಾವಗಳಿರುತ್ತವೆ: ಬಲವಾದ, ಘಾತುಕವಾದ ಇಚ್ಛೆಗಳೂ ಇರುತ್ತವೆ. ಆದರೆ ಇವಾವುದೂ ಹುಲಿಯ ಕ್ರೂರ ಸ್ವಭಾವದಂತೆ ವಶಕ್ಕೆ ತರಲಾಗದಂಥವುಗಳಲ್ಲ. ಆನೆಯ ಹಠಮಾರಿತನದಂತೆ ಅವುಗಳ ಸ್ವರೂಪವಿರುವುದರಿಂದ-ಸ್ವಲ್ಪ ಸಂಯಮ ಮತ್ತು ಧೈರ್ಯವಿದ್ದರೆ, ಅವುಗಳನ್ನು ಸುಧಾರಿಸಿ ಒಳ್ಳೆಯ ರೀತಿಯ ಕೆಲಸಗಳಿಗೆ ಹಚ್ಚಬಲ್ಲೆವು. **ಹೀಗೆ ಮನುಷ್ಯನು ತನ್ನ ಪ್ರವೃತ್ತಿ ವಿಶೇಷಗಳ ಮೇಲೆ ಹಾಕಬಲ್ಲ ಕಡಿವಾಣಗಳಲ್ಲೆಲ್ಲ ಆತ್ಮ ಸಂಯಮವೇ ಅತ್ಯಂತ ಶ್ರೇಷ್ಠವಾದುದೆಂಬಲ್ಲಿ ಪ್ರತಿಮಾತಿಲ್ಲ. ಮಾನಸ್ಸು ಎಷ್ಟೇ ಕೆಟ್ಟದಿದ್ದರೂ, ಕಠೋರ ಬುದ್ಧಿ ಇದ್ದರೂ- ಆತ್ಮ ಸಂಯಮದಿಂದ ಅದಕ್ಕೆ ಹೊಸ ರೂಪವನ್ನೇ ಕೊಡುವುದು ಸಾಧ್ಯ.**

ಆದುದರಿಂದ ಮಕ್ಕಳು ಚಿಕ್ಕಂದಿನಲ್ಲಿಯೇ ಇದರ ಅಭ್ಯಾಸವನ್ನು ಚೆನ್ನಾದ ರೀತಿ ಮಾಡಿಕೊಳ್ಳುವುದೊಳ್ಳೆಯದು. ಇದರಿಂದ ಅವರು ಬೆಳೆದು ದೊಡ್ಡವರಾಗಿ, ದೇಶದ ಉತ್ತಮ ನಾಗರಿಕರೆಂದು ಪರಿಗಣಿಸಲ್ಪಟ್ಟಾಗ-ತಮ್ಮ ಒಳ್ಳೆಯ ನಡತೆಯಿಂದ ಲೋಕ ಕ್ಷೇಮವನ್ನು ಸ್ಥಾಪಿಸಲು ನೆರವಾಗುವರು. ಮನೆಯಲ್ಲಿ ತಾಯಿ ತಂದೆಯರು, ಶಾಲೆಯಲ್ಲಿ ಅಧ್ಯಾಪಕರು ಮನಸ್ಸನ್ನು ವಶದಲ್ಲಿಟ್ಟುಕೊಂಡು ಕೆಲಸಮಾಡ, ಎಂದು ಉಪದೇಶಕೊಡುವಾಗ-ಮಕ್ಕಳು ಅದರಂತೆ [illegible]ಬೇಕು. ದೊಡ್ಡವರಾದ ಬಳಿಕವೂ ಇಂಥ ಅಭ್ಯಾಸವನ್ನು ವೃದ್ಧಿಮಾಡಿಕೊಂಡರೆ ಅದರಿಂದ ತುಂಬ ಹಿತವುಂಟು. ಯಾರಾದರೂ ಒಳ್ಳೆಯ ಮಾತನ್ನು ಹೇಳುತ್ತಾ ತಪ್ಪು ತಿದ್ದಿದರೋ ಎಂದರೆ-ನಾವು ಮಾಡಿದ ಸಣ್ಣ ತಪ್ಪುಗಳನ್ನು ದೊಡ್ಡದಾಗಿ ಅವರು ಭಾವಿಸುವರು ಎಂದರ್ಥವಲ್ಲ: ಮೊಳಕೆ ಒಡೆಯುವಾಗಲೇ ಅಂಥ ದೋಷಗಳನ್ನು ನಿವಾರಿಸಿ, ಒಳ್ಳೆಯ ತರಬೇತಿಯನ್ನು ಕೊಟ್ಟು ಸುಧಾರಿಸುವುದು ಎಂದದಕ್ಕೆ ಅರ್ಥ.

ಒಂದು ಬಡ ಗುಡಿಸಲು ಮತ್ತೊಂದು ರಾಜಭವನಗಳಲ್ಲಿ ನಾವು ಯಾವುದನ್ನು ಪಡೆಯಲು ಇಚ್ಛಿಸುತ್ತೇವೆ-ನಿಸ್ಸಂದೇಹವಾಗಿಯೂ ರಾಜಭವನವೇ ನಮಗೆ ಪ್ರಿಯವೆನಿಸುತ್ತದೆ. ಮಹಮ್ಮದ ಪೈಗಂಬರರ ಬಗ್ಗೆ ಒಂದು ಕತೆ ಹೇಳುತ್ತಾರೆ-ಮಹಮ್ಮದರು ಸ್ವರ್ಗವನ್ನು ನಿರೀಕ್ಷಿಸಲಿಕ್ಕೆ ಹೋದಾಗ, ಅಲ್ಲಿ ಭವ್ಯವಾದ ಭವನಗಳು ಕೆಲವು ಇದ್ದುದನ್ನು ಕಂಡರು. ಅವುಗಳ ಸೌಂದರ್ಯದ ಮುಂದೆ ಸಮಸ್ತ ದೇಶದ ಸೌಂದರ್ಯ ನಾಚಿ ತಗ್ಗಬೇಕಿತ್ತು. ಸ್ವರ್ಗವನ್ನು ತೋರಿಸಿ ವರ್ಣಿಸುತ್ತಿದ್ದ ದೇವದೂತ ಜಬ್ರಾಯೀಲನೊಡನೆ ಪೈಗಂಬರ ಕೇಳಿದರು-"ಈ ಭವನಗಳನ್ನು ಯಾರಿಗಾಗಿ ಕಟ್ಟಲಾಗಿದೆ?" ದೇವದೂತನು ಉತ್ತರ ಕೊಡುತ್ತಾ "ತಮ್ಮ ಕ್ರೋಧ ಭಾವವನ್ನು ವಶದಲ್ಲಿಟ್ಟುಕೊಳ್ಳುವ ಮತ್ತು ತಮಗೆ ಹಾನಿಯುಂಟುಮಾಡಿದವರನ್ನೂ ಕ್ಷಮಿಸಿ ಬಿಡುವ ಮಹಾನುಭಾವರಿಗಾಗಿ ಇವು ಇವೆ." ನಿಜವಾಗಿಯೂ ದೋಷರಹಿತ ಮತ್ತು ಶಾಂತ ಭಾವದ ಮನಸ್ಸು ಭವ್ಯವಾದ ಭವನವನ್ನೇ ಹೋಲುತ್ತಿದೆ. ಆವೇಶಯುಕ್ತವಾದ ಮತ್ತು ಪ್ರತಿಹಿಂಸೆಯ ಪಾಪದಿಂದ ತುಂಬಿ ತುಳುಕುವ ಮನಸ್ಸಿನ ಬಗ್ಗೆ ಹೀಗೆ ಹೇಳಲಾರೆವು.

ನಮ್ಮ ಮನಸ್ಸೇ ಒಂದು ಮನೆ-ಮತ್ತದು ನಮ್ಮ ಮನೆ. ಅದನ್ನು ನಮ್ಮ ಇಚ್ಛಾನುಸಾರ ಶಾಂತವಾಗಿ, ಸುಂದರವಾಗಿ ಸ್ವಚ್ಛ ರೀತಿಯಲ್ಲಿ ಅಲಂಕರಿಸಬಲ್ಲೆವು. ಅಲ್ಲಿ ಹೃದಯಂಗಮವಾದ ಕರ್ಣಾನಂದವಾದ ಮಧುರ ಸಂಗೀತ ಪುಟಿದೇಳುವುದು ನಿಶ್ಚಯ. ನಾವು ಬಯಸಿದರೆ-ಅದೇ ಮನೆಯನ್ನು ಮಸಣವಾಗಿಸುವುದೂ ಸಾಧ್ಯ. ದುಃಖಪ್ರದವಾದ ಶಬ್ದಗಳನ್ನು ಉಪಯೋಗಿಸಿ ಬೈಯುತ್ತಲೂ ಪೊರುತ್ತಲೂ-ಸದಾ ಕಾಲ ಚೀರಾಟ ಬೊಬ್ಬೆಯಲ್ಲಿ ಮುಳುಗೇಳುತ್ತಾ ಮನೆಯನ್ನು ಭಯಾವಹವಾದ ಒಂದು ಕತ್ತಲು ಗುಹೆಯಾಗಿ ಪರಿವರ್ತಿಸಬಹುದು. ಆದರೆ ಇದನ್ನು ಯಾರಾದರೂ ಹೃತ್ಪೂರ್ವಕ ಅಪೇಕ್ಷಿಸಿದ್ದುಂಟೆ?

ನಾವು ಗಿರಣಿಯಲ್ಲಿ ಕೂಲಿಮಾಡಿಕೊಂಡಿರುವೆವೆನ್ನೋಣ. ನಾಳೆಗೆ ಮಾತು ಬೆಳೆದು ಒಬ್ಬನು ಇನ್ನೊಬ್ಬನನ್ನು ಚೆನ್ನಾಗಿ ಥಳಿಸಿದನು. ಹೊಡೆದವನು ನಿಜವಾಗಿಯೂ ಕೋಪಾವಿಷ್ಟನೂ ಕೆಟ್ಟ ಬುದ್ಧಿಯವನೂ ಸೈ. ಪೆಟ್ಟು ತಿಂದವನ ಮನಸ್ಸು

[೧೦ನೇ ಪುಟ ನೋಡಿರಿ]

ಸರಿಯಾದ ಹೆಜ್ಜೆ! ಮಹತ್ವದ ಹೆಜ್ಜೆ!!

ಇತ್ತೀಚೆಗೆ ಮದ್ರಾಸು ಸರಕಾರವು ಸರಿಮಾರ್ಗದಲ್ಲಿ ಒಂದು ಮಹತ್ತರ ಹೆಜ್ಜೆಯನ್ನಿಟ್ಟಿದೆ. ನೀವಾದರೂ ನಿಮ್ಮ ಉಳಿತಾಯದಲ್ಲಿ ಸರಿಯಾದ ಹೆಜ್ಜೆಯನ್ನಿಡಬೇಕೆಂದು ನಾವು ನಿಮ್ಮ ಲಕ್ಷ್ಯವನ್ನೆಳೆಯುತ್ತೇವೆ. ನೀವು ಅದನ್ನು ನಿಮ್ಮ ಬ್ಯಾಂಕಿನಲ್ಲಿ ಹಾಕಿದರೆ ನಾವು ಕೊಡುವ ಬಡ್ಡಿಯಿಂದ ಅದು ಬೆಳೆಯುತ್ತದೆ. ಅಲ್ಲದೆ ಅದೇ ವೇಳೆಯಲ್ಲಿ ಅದು ಭೂಪ್ರಗತಿಯನ್ನುಂಟುಮಾಡುವ ಉತ್ಪಾದನಾ ಮತ್ತು ಸಾಹಸೋದ್ಯಮಗಳಿಗೆ ದೊರಕುವುದು. ಈ ಬ್ಯಾಂಕು ಪ್ರತಿನಿತ್ಯವೂ 50,000 ಜನರಿಗೂ ಮಿಕ್ಕಿ ಉಳಿಸಲಿಕ್ಕೆ ಸಹಕರಿಸುತ್ತದೆ. ದಕ್ಷಿಣ ಕನ್ನಡದ ನೀಲೇಶ್ವರ ಮತ್ತು ಕಿನ್ನಿಗೋಳಿಯಲ್ಲಿ ಇತ್ತೀಚೆಗೆ ಎರಡು ಹೊಸ ಶಾಖೆಗಳು ಇವರಿಂದ ತೆರೆಯಲ್ಪಟ್ಟವೆ.

ವಹಿವಾಟು ರೂ. 5,00,00,000 ಕ್ಕೂ ಮಿಕ್ಕಿದೆ.

ದಿ ಕೆನರಾ ಇಂಡಸ್ಟ್ರಿಯಲ್
ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು. ಉಡುಪಿ

The Canara Industrial &
Banking Syndicate Limited.

ESTD: 1925 H. O: UDIPI.

ತಾರೀಕು 24-7-52 ರಿಂದ

ವಾರದ ಭವಿಷ್ಯ

ತಾರೀಕು 30-7-52 ವರೆಗೆ

ಮೇಷ— ಸನ್ಮಿತ್ರರ ಬಲವಾದ ಬೆಂಬಲವು ನಿಮಗಿದ್ದರೂ ಸದ್ಯದ ಕಾಲವು ನಿಮಗೆ ಸಾಕಷ್ಟು ಅನುಕೂಲವಿಲ್ಲದ್ದರಿಂದ ನಿಮ್ಮ ಸಂಕಲ್ಪಗಳು ಬಹುಮಟ್ಟಿಗೆ ಫಲಿಸವು. ಗೃಹ ತಾಪತ್ರಯಗಳು ಸೋದರರೊಳಗಿನ ಮನಸ್ತಾಪ ಆರ್ಥಿಕ ಬಿಕ್ಕಟ್ಟು ಇವುಗಳಿಂದ ಸಂತತ ಪೀಡಿತರಾದ ನಿಮಗೆ ವಾರಾಂತ್ಯದ 4 ದಿನಗಳಲ್ಲಿ ಸುಖ ಧನಮಾನ ವಸನಾದಿಗಳ ಲಾಭವಿದೆ

ವೃಷಭ— ನಿಮ್ಮ ಅದೃಷ್ಟವೀಡು ಸಾಕಷ್ಟು ಉತ್ತಮ ತೆರನಾಗಿರುವದು. ಮನದಾಶಾಕಾಂಕ್ಷೆಗಳು ಅಲ್ಪಾಯಾಸದಲ್ಲಿ ಅಲ್ಪಾವಕಾಶದಲ್ಲೇ ನೆರವೇರುವವು. ಗುರುಹಿರಿಯರ ಅಗ್ರಹಕ್ಕೊಳಗಾಗುವಿರಾದರೂ ರಾಜಕೀಯದಲ್ಲಿ ವಿಜಯಿಗಳಾಗಿ ಮೆರೆಯಲಿರುವಿರಿ. ಕಫವಾತ ದೋಷದಿಂದ ಮಕ್ಕಳ ಆರೋಗ್ಯ ಕೆಡಲಿರುವದು. ಪ್ರವಾಸಕ್ಕೀ ಕಾಲವು ಅನುಕೂಲವಿಲ್ಲವು. ವಾರಾಂತ್ಯದ 2 ದಿನಗಳು ಉತ್ತಮವಾಗಿವೆ

ಮಿಥುನ — ಮನಶ್ಚಾಂಚಲ್ಯವಧಿಕವಾಗುವದು. ಸನ್ಮಿತ್ರರೊಡನೆಯೂ ಕೂಡ ಮನಸ್ತಾಪವುಂಟಾಗಲಿರುವುದು. ನಿಮ್ಮ ಲಾಭದ ಮಾರ್ಗಗಳಿಗೆ ವಿಶೇಷತಃ ವಿರೋಧಿಗಳಿಂದ ತಡೆಯುಂಟಾಗುವದು. ಪತ್ನೀ ಪುತ್ರರ ವಿರಹವಾದೀತು, ಪಿತ್ತದೋಷದಿಂದಾಗಿ ಆರೋಗ್ಯಕ್ಕೆ ಹಾನಿಯುಂಟಾಗಲಿದೆ. ಆದರೂ ಬೃಹಸ್ಪತ್ಯಾಚಾರ್ಯರ ಬಲದಿಂದಾಗಿ ವಾರಾದಿಯ 3 ದಿನಗಳನ್ನು ನಿಶ್ಚಿಂತೆಯಿಂದ ಕಳೆವಿರಿ.

ಕರ್ಕಟ— ಪರಿಸ್ಥಿತಿಯು ಹಿಂದಿನ ದಿನಗಳಿಗಿಂತ ಸ್ವಲ್ಪ ಉತ್ತಮವಾಗಲಿದೆ. ಸುಖಲಾಭ ಪತಿಯ ಅನುಗ್ರಹದಿಂದಾಗಿ ನಿಮಗೆ ಸುಖಮಯಗಳಾಗಲಿವೆ. ವಿಶೇಷತಃ ಶ್ರಮಜೀವಿಗಳಿಗಾಗಿ ಹೆಚ್ಚಿನ ಅನುಕೂಲ್ಯವುಂಟಾಗದು, ನೌಕರಿ ಜನರೂ ವ್ಯಾಪಾರಿಗಳೂ ಸುಖಿಗಳಾಗಿರುವರು. ತಾ. 27, 28 ಈ ದಿನಗಳಲ್ಲಿ ವಿಜಯ ಧನಾಪ್ತಿ ಸ್ತ್ರೀಸುಖ ಸ್ಥಾನಮಾನಗಳೂ ಲಭಿಸುವವು.

ಸಿಂಹ—ವಿತ್ತಮಾರ್ಕರಿಯಾದ ಕುಜನು ಸುಖಭಾಗ್ಯಾಧಿಪನಾಗಿ ವಿತ್ತಮಸ್ಥಾನದಲ್ಲಿ ನೆಲೆನಿಂತಿರುವುದರಿಂದ ನೀವೀ ಕಾಲದಲ್ಲಿ ಕೇವಲ ಆತ್ಮಬಲ ಎಂಬುದರಿಂದಲೇ ಬೇಕಾದ ಸುಖಸಂಪತ್ತಿಗಳನ್ನು ಪಡೆವಿರಿ. ಪ್ರಬಲರಾದ ಶತ್ರುಗಳೂ ಕೂಡ ಸದ್ಯ ಗಂಡನನ್ನು ಕಂಡ ಉರಗದಂತಾಗುವರು ಗೃಹಸ್ಥರಿಗೆ ಸಾಕಲಾಭವಿದೆಯೋಗವಿದೆ ಬೇಕಾದ ಸುಖಭೋಗಗಳು ಅನಾಯಾಸದಿಂದ ಲಭಿಸುವವು ತಾ. 24, 25, 26, 29, 30 ಈ ದಿನಗಳು ಬಯಕೆಯನ್ನು ಪೂರ್ತಿಗೊಳಿಸುವವು.

ಕನ್ಯಾ—ಆದಾಯವೊಂದು ವೆಚ್ಚವೆರಡೆಂಬಂತೆ ಇಂದಿನ ನಿಮ್ಮ ಪರಿಸ್ಥಿತಿಯಾಗಿರುವದು. ಎಷ್ಟು ದುಡಿದರೂ ಸಂಪಾದಿಸಿದರೂ ಆಯಾ ದಿನದ ವೆಚ್ಚವನ್ನು ಗ್ರಹಿಸಿಕೊಳ್ಳಲಾಗದೆ ಸಾಲ ಮಾಡಬೇಕಾಗುವದು. ಜನತೆಯ ಸಹಕಾರವಿಲ್ಲ, ಬಂಧುಗಳ ನೆರವಿಲ್ಲ. ಸ್ವಯಂ ಅಶಕ್ತರು ಇಂತಹ ಪರಿಸ್ಥಿತಿಯಲ್ಲಿ ನೀವಾವ ಕಾರ್ಯವನ್ನೂ ಮುಂದರಿಸಲು ಶಕ್ತರಾಗಲಾರಿರಿ, ತಾ. 27, 28, ಈ ದಿನಗಳು ಬೇರೆ ದಿನಗಳಿಗಿಂತ ಉತ್ತಮವೆನಿಸುವವು

ತುಲಾ—ನಿಮ್ಮ ಚಿಂತೆಗಳೆಲ್ಲವೂ ದೂರವಾಗುವವು. ಸದ್ಯ ನೀವು ಆಡಿದ್ದೇ ಮಾತು ಮಾಡಿದ್ದೇ ಕಾರ್ಯ ಯಾವ ಉದ್ಯಮಕ್ಕೆ ಕೈಯಿಕ್ಕಿದರೂ ನಿರೀಕ್ಷಿಸಿದುದಕ್ಕಿಂತ ಅಧಿಕ ಫಲ ಲಭಿಸುವದು. ಅಪ್ತೇಷ್ಟರ ಕೊಡುಗೆ ಬೆಂಬಲವುಳ್ಳ ನಿಮಗೆ ನೌಕರಿ ವ್ಯಾಪಾರಾದಿಗಳಲ್ಲಿ ಒಳ್ಳೆಯ ಶ್ರೇಯೋಲಾಭವಿದೆ. ಶ್ರಮಜೀವಿಗಳಿಗೇ ವಾರವು ಅಷ್ಟೊಂದು ಉತ್ತಮವಲ್ಲ. ತಾ. 27, 28ರಲ್ಲಿ ಅಧಿಕ ವ್ಯಯ ಅನಾರೋಗ್ಯಕ್ಕವಕಾಶವಿದೆ.

ವೃಶ್ಚಿಕ—ನಿಮ್ಮ ಆಶಾಕಾಂಕ್ಷೆಗಳು ಗಗನ ಕುಸುಮಗಳಂತಾಗುವುವು. ಇಲ್ಲಸಲ್ಲದ ಅನಿಷ್ಟ ಅಪವಾದಗಳು ಬರಲಿವೆ. ಮನೋರೋಗವು ದಿನದಿಂದ ದಿನಕ್ಕೆ ಪ್ರಬಲವಾಗಲಿದೆ. ಸಿಕ್ಕ ಸಿಕ್ಕವರೊಡನೆ ಕಲಹವಾದೀತು. ಕುಟುಂಬದಲ್ಲಿನ ಅನಾರೋಗ್ಯದ ದೆಸೆಯಿಂದ ವಿಶೇಷ ಧನವ್ಯಯವಾಗಲಿದೆ. ಆದರೂ ಇಷ್ಟರಲ್ಲಿ ತೃಪ್ತಿಯೇನೆಂದರೆ ವಾರಾದಿಯ 5 ದಿನಗಳಲ್ಲಿ ಈ ಅನಿಷ್ಟಗಳು ಸ್ವಲ್ಪಮಟ್ಟಿಗೆ ಕಡಿಮೆಯಾಗಿ ಪರಿಣಮಿಸಲಿವೆ

ಧನು—ಸ್ವಭಾವತಃ ಚಂಚಲವಾದ ಮನಸ್ಸು, ಇದೀಗ ವಿಶೇಷತಃ ದುರ್ಮಾರ್ಗದತ್ತ ನಿಮ್ಮನ್ನು ಸೆಳೆಯುತ್ತಿದೆ. ತತ್ಪರಿಣಾಮವಾಗಿ ಜನತೆಯ ನಿಂದಾಪವಾದಗಳಿಗೆ ಗುರಿಯಾಗಲಿರುವಿರಿ, ನಿಮ್ಮ ಉದ್ಯಮವು ಸಫಲವಾಗುವದು ಆರೋಗ್ಯ ಆರ್ಥಿಕ ಸಂಪತ್ತುಗಳು ನಿಷ್ಕಂಟಕಗಳಾಗಿವೆ ಆಕಸ್ಮಿಕ ಪರ್ಯಟನದಿಂದಾಗಿ ನಷ್ಟ ಕಷ್ಟಗಳೊದಗಬಹುದು ವಾರಾಂತ್ಯದ 4 ದಿನಗಳು ಸುಖ ಲಾಭಕಾರಿಗಳಾಗಿವೆ.

ಮಕರ—ನಿಮ್ಮ ಶ್ರಮಸ್ವೈಕಲ್ಯ ಫಲಕಾಣಿಸದಾದರೂ ದಿನಯಾಪನೆಗಾಗಿ ನೀವು ಹೆಚ್ಚಾಗಿ ಶ್ರಮಿಸಬೇಕಾಗಿಬಾರದು, ದೋಷತ್ರಯಗಳ ಆಧಿಕ್ಯದಿಂದಾಗಿ ದೇಹಕ್ಕೆ ಸುಖವಿರದು. ಬಂಧುಜನರ ವಿರೋಧಕ್ಕೊಳಗಾದ ನಿಮಗೆ ಮಿತ್ರರ ಸಹಕಾರವೂ ಲಭಿಸಲಾರದು, ನೌಕರಿ ಜನರಿಗೂ ವ್ಯಾಪಾರೀ ವರ್ಗದವರಿಗೂ ಶ್ರಮಕ್ಕುಚಿತವಾದ ಫಲ ಪ್ರಾಪ್ತಿಯಾಗುವದು. ವಾರಾಂತ್ಯದ 2 ದಿನಗಳು ಸುಖಪ್ರದಗಳಿವೆ.

ಕುಂಭ— ದಿನದಿಂದ ದಿನಕ್ಕೇ ಕ್ಷೀಣದಶೆಯನ್ನೇ ಯುತ್ತಿರುವದು ನಿಮ್ಮ ಭಾಗ್ಯವು ಆಕಾಶದ ನಿಮ್ಮ ಪ್ರಯತ್ನಗಳೆಲ್ಲವೂ ನೀರಲ್ಲಿ ಮಾಡಿದ ಹೋಮದಂತೆ ವ್ಯರ್ಥ. ಪರಿಶ್ರಮದಾಯಿಗಳಾಗುವವೇ ಹೊರತು ಫಲಕಾರಿಗಳಾಗಲಾರವು. ಚಕ್ಷು ದೋಷದಿಂದಾಗಿ ನಿಶ್ಶಕ್ತಿ ಆಲಸ್ಯಗಳು ಹೆಚ್ಚಲಿವೆ, ಆದರೂ ವಾರಾದಿಯ 3 ದಿನಗಳಲ್ಲಿ ಸ್ತ್ರೀಸಂಬಂಧವಾದ ಧನಮಾನಾದಿಗಳ ಲಾಭವಿದೆ.

ಮೀನ—ವಿಪಕ್ಷೀಯರು ಪ್ರಬಲಿಸುತ್ತಿರುವರು ಮಾತ್ರವಲ್ಲ ಪ್ರತೀಕಾರಾಸಕ್ತರಾಗಿರುವರು. ವಿಪತ್ಪರಂಪರೆಗಳು ಮೇಲಿಂದ ಮೇಲೆ ಬರುವವು. ಧೈರ್ಯಸ್ಥೈರ್ಯಾದಿಗಳು ಲೋಪಹೊಂದಲಿವೆ. ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಗುರುಗುರುಗಳೊಬ್ಬರು ನಿಮ್ಮನ್ನು ಬಹುತೇಕ ವಿಪತ್ತುಗಳಿಂದ ಪಾರುಗಾಣಿಸಲಿರುವರು ವಾರಾದಿಯ 5 ದಿನಗಳು ಸ್ವಲ್ಪ ಆಶಾದಾಯಕಗಳಾಗಿವೆ

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ'
ಲಕ್ಷಾಂತರ ಜನರು ಗುಣಹೊಂದಿದ್ದಾರೆ'

ಸರ್ ಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯದ ಔಷಧಿಗಳ ರಾಜ, ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಪಲ್ಲ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೫ ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩/೪
(ಪೋಸ್ಟೇಜು ಮಾಫ್)



ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋದಲ್ಲಿ ಕೇಳಿರಿ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ
ಅಂಬಳೆ ನರಸಿಂಹ ಪಂಡಿತರ ಮನೆತನ ಎ. ರಾಮಸ್ವಾಮಿ ಅಯ್ಯರ್‌ರವರ

※ ಸಂತಾನ ಸಿಂಧೂರ ※

ಬಹಿಷ್ಠೆ ಸಂಬಂಧದ ಹೊಟ್ಟೆನೋವು ಉಂಟು ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಠೆ ಸಂಬಂಧದ ಹೊಟ್ಟೆನೋವಿನ ಜೊತೆಗೆ ತಲೆನೋವು, ನಡುಕೆಳಕ, ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಜುಗುಪ್ಸೆ ಇತ್ಯಾದಿ ಗುಪ್ತವ್ಯಾಧಿಗಳಿಗೂ **ಗ್ಯಾರಂಟೀ ಔಷಧ.**

೩ ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧಿ ೧ ಸೆಟ್ ಅನುಪಾನಪತ್ರಿಕೆ ಮೇರೆ ಇಬ್ಬರೂ ಸೇವಿಸಿರಿ ಸಾಕು. ಶೋಧನವಾದ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾ ಪತ್ರಗಳನ್ನು ಪಡೆದಿದೆ.

ಕ್ರಯ: ೧ ಸೆಟ್ 5ರೂ ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1ರೂ ವಿ ಪಿ.ಇಲ್ಲ ಕ್ಯಾಟಲಾಗ್ ಉಚಿತ. 6ರೂ ಮನಿಆರ್ಡರ್ ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ: ಎ. ರಾಮಸ್ವಾಮಿ ಅಯ್ಯರ್ ಸನ್, (ಎ. ಆರ್. ವಿಶ್ವೇಶ್ವರಯ್ಯ)
Prop: ಸಂತಾನ ಸಿಂಧೂರ, 628 ಚಾಮರಾಜ ರೋಡ್ ಕ್ರಾಸ್,
(ಸೀತಾ ವಿಲಾಸ ಛತ್ರದ ಹಿಂದೆ) ಮೈಸೂರು

ಲಕ್ಷ್ಮೀ
ಸಂತಾಲ್ ಮಾತ್ರೆ

ಇದರ ಉಪಯೋಗದಿಂದ ಒಳಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರದ ಕೃಚ್ಛ್ರ, ಮೂತ್ರದೊಡನೆ ಯಪ ... ಬಿಳುಪು, ಅರಸಿನ ಕೆಂಪು ... ಹೋಗುವದು, ಕೊಡ ಸಂದಿನಲ್ಲಿ ... ಬರುವದು. ತಾಲುಗಂಟೆ ವೇದನೆ, ಕಣ್ಣಿನಲ್ಲಿ ಕೀವು ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ, ಸ್ತ್ರೀಯರ ಬಿಳೆ ಸೆರಗು ಇವೆಲ್ಲ ಖಾತ್ರಿಯಾಗಿ ಗುಣ ಹೊಂದುವದು— ಇತರರು ಈಗಿನ ಉಷ್ಣಕಾಲದಲ್ಲಿ ಗರ್ಮಿ ಕಂಡುಬಂದರೆ ರಾತ್ರೆ ಮಲಗುವಾಗ್ಯೆ ಒಂದು ಮಾತ್ರೆ ಸೇವಿಸಿ ಹಾಲು ಕುಡಿದರೆ ಸುಖವಾಗಿ ನಿದ್ರೆ ಬಂದು ಸುಖವಿರೇಚನೆಯಾಗಿ ದೇಹದ ಸುಸ್ತು ಹೋಗುವದು.

ಶೀಸೆ 1ಕ್ಕೆ ರೂ 2-0-0

ಏಜಂಟ್:
ಷಾ ಕಂಪೆನಿ, ಮಂಗಳೂರು

ತೃಪ್ತಿಕರವಾದ **ವಸತಿ**— ಹಿತಕರವಾದ **ಊಟ**— ರುಚಿಕರವಾದ ಉಪಾಹಾರ
ಇವುಗಳಿಗೆ
ಆದರ್ಶ ನಿಲಯವೆಂದರೆ
ವುಡ್ ಲೇಂಡ್ಸ್
ಉಡುಪಿ.
ಯಾತ್ರಿಕರಿಗೂ ಪ್ರಯಾಣಿಕರಿಗೂ
ಸರ್ವ ಅನುಕೂಲವಾಗುವಂತೆ
ನಗರದ ಕೇಂದ್ರ ಭಾಗದಲ್ಲಿದೆ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಚೆಳ್ಳ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ
ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಕೊರಡ್ಕಲ್ ಶ್ರೀನಿವಾಸರಾವ್ ಕೃತ
ಆಂಗ್ಲ ಸ್ವಯಂಭೋಧಿನಿ.
ಬೆಲೆ ರೂ- 1-8-0, ವಿ- ಪಿ. ದ್ವಾರ ರೂ- 2-0-0

ಡಾ| ಕೊರಡ್ಕಲ್ ವೆಂಕಟರಾವ್ ಕೃತ
ಮನೆ ಮದ್ದು
ಸುಲಭ ಚಿಕಿತ್ಸೆಗಳು.
ಬೆಲೆ ರೂ- 2-0-0, ವಿ- ಪಿ. ದ್ವಾರ- ರೂ 2-10-0
ನವಭಾರತ ಪುಸ್ತಕ ಭಂಡಾರ, ಉಡುಪಿ

Edited Printed & Published By K. H. Shetty at the Navayuga Press, Udipi, S. India.

LICENCE No. 31
Licensed to Post without Prepayment

31 ನೆಯ ವರ್ಷ

31-7-1952

Founder: Sri A. B. Shetty
... dical & Public Health

ನವಯುಗ

ನವಯುಗ
ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ
ವಾರಪತ್ರಿಕೆ

ಸಾರ್ವಜನಿಕ
ಆರೋಗ್ಯ ಮಂತ್ರಿ
ಶ್ರೀ.ಎ.ಬಿ. ಶೆಟ್ಟರಿಂದ
ಸ್ಥಾಪಿತವಾದುದು.

ನವಯುಗ
ಪೋಸ್ಟ್ ಬಾಕ್ಸ್
ನಂಬ್ರ 22
ಉಡುಪಿ, ದ. ಕ.

ವಾರ್ಷಿಕ ಚಂದಾ
ರೂ. 5-12-0
6 ತಿಂಗಳಿಗೆ
ರೂ. 3-0-0
ಬಿಡಿ ಪ್ರತಿಗೆ
0-2-0

ವರ್ಷ ೩೧
ವಾರ ೪೭

NAVAYUGA WEEKLY Post Box No. 22 UDIPI. Vol 31 No. 47

ಮಧುಪರ್ಕ

ಉತ್ತರ ಫ್ರಾನ್ಸಿನಲ್ಲಿ ಒಬ್ಬ ಹುಡುಗನಿದ್ದ: ಅವನ ಮನಸ್ಸೇನೋ ಸರಳ; ಆದರೆ ಉತ್ಸಾಹ ಮಿತಿಮೀರಿತ್ತು. ಕೋಪಗೊಂಡು ಸಿಡಿಮಿಡಿಗೊಳ್ಳುವುದರಲ್ಲಿಯೇ ಅವನ ಸಮಯ ಹೋಗುತ್ತಿತ್ತು.

ಒಂದು ದಿನ ಅವನೊಡನೆ "ಆಲೋಚಿಸಿ ಹೇಳು—ಪೆಟ್ಟಿನ ಬದಲಿಗೆ ಪೆಟ್ಟು ಕೊಡುವುದು, ಇದಿರಾಳಿಯ ಮುಸುಡಿಗೆ ಬಡಿದು, ಹಲ್ಲು ಉದುರಿಸುವುದು, ಅಥವಾ ಅದೇ ಸಮಯದಲ್ಲಿ ಬಿಗಿದ ಮುಷ್ಟಿಯನ್ನು ಕಿಸೆಯೊಳಗಿಟ್ಟು, ಸುಮ್ಮನುಳಿಯುವುದು—ಈ ಮೂರರಲ್ಲಿ ಯಾವುದು ನಿನಗೆ ಅಧಿಕ ಕಠಿಣವಾದ ಕಾರ್ಯ?" ಎಂದೊಬ್ಬರು ಕೇಳಿದರು.

"ಕಿಸೆಯೊಳಗೆ ಬಿಗಿದ ಮುಷ್ಟಿಯನ್ನಿಟ್ಟು ಸುಮ್ಮನುಳಿಯುವುದೇ ಬಹಳ ಕಷ್ಟ." ಎಂದನವ.

"ಸರಿಯೇ—ನಿನ್ನಂಥ ಸಾಹಸಿಗೆ ಸುಲಭ ಕೆಲಸ ಮಾಡುವುದು ಭೂಷಣವೋ ಅಥವಾ ಕಠಿಣ ಕಾರ್ಯದಲ್ಲಿ ತೊಡಗುವುದೋ?"

ಒಂದು ನಿಮಿಷ ಯೋಚಿಸಿ ಹುಡುಗನೆಂದ— "ಎಲ್ಲಕ್ಕಿಂತಲೂ ಅತ್ಯಂತ ಕಷ್ಟದ ಕೆಲಸ ಮಾಡುವುದೇ ನನಗೆ ಶೋಭಿಸುವುದು."

"ಚೆನ್ನಾಯಿತು— ಮುಂದೆ ಸಂದರ್ಭಸಿಕ್ಕಿದಾಗಲೆಲ್ಲ ನಿನಗೆ ಉಚಿತವಾದ ಈ ರೀತಿಯಲ್ಲಿ ನಡೆದುಕೋ" ಎಂದು ಬೆನ್ನುತಟ್ಟಿ ಹುಡುಗನನ್ನು ಕಳಿಸಿಕೊಟ್ಟರು.

ಕಡಿವಾಣದ ಬಲ

ಕಾಡಿನಲ್ಲಿರುವ ಆನೆಯನ್ನಾದರೂ ನಾವು ನಮ್ಮ ವಶದಲ್ಲಿ ಇಟ್ಟುಕೊಳ್ಳಬಲ್ಲೆವು—ಆದರೆ ಒಂದು ಹುಲಿಯನ್ನು ಪಳಗಿಸುವುದು ನಮ್ಮ ಕೈಯಲ್ಲಿದೆಯೆ? ಇಲ್ಲ—ಹುಲಿಯ ಸ್ವಭಾವದಲ್ಲಿರುವ ಕ್ರೂರತ್ವವು ಯಾವ ಬಗೆಯಿಂದಲೂ ಸುಧಾರಿಸಲ್ಪಡಲು ಸಾಧ್ಯವಿಲ್ಲ. ಈ ಕಾರಣದಿಂದಲೇ ಒಳ್ಳೆಯ ವ್ಯವಹಾರವನ್ನು ಹುಲಿಯೊಡನೆ ಯಾರೊಬ್ಬರೂ ಮಾಡಲು ಅಪೇಕ್ಷಿಸುವುದಿಲ್ಲ- ಅದನ್ನು ಕೊಂದು ತೀರಿಸಲಿಕ್ಕೆ ಜನರು ಉದ್ಯುಕ್ತರಾಗುವರು; ತನ್ಮೂಲಕ ತಮಗಾಗುವ ಹಾನಿಯನ್ನು ದೂರೀಕರಿಸುವರು.

ತದ್ವಿರುದ್ಧವಾಗಿ ಕಾಡಾನೆಯನ್ನು ಉಪಾಯವಾಗಿ ಹಿಡಿದಾಗ, ಅದೆಷ್ಟೇ ಪ್ರತಿಭಟನೆ ತೋರಿಸಿದರೂ, ಉದ್ದಂಡ ವೃತ್ತಿಯನ್ನವಲಂಬಿಸಿದರೂ— ಸ್ವಲ್ಪಮಟ್ಟಿನ ಧೈರ್ಯ ಮತ್ತು ಪ್ರಯತ್ನದ ಮೂಲಕ ನಮ್ಮ ವಶದಲ್ಲಿಟ್ಟುಕೊಳ್ಳಬಲ್ಲೆವು; ಚೆನ್ನಾಗಿ ಪಳಗಿಸಿ, ನಮ್ಮ ಆದೇಶಾನುಸಾರ ನಡೆಯುವಂತೆ ಮಾಡಬಲ್ಲೆವು. ಅದು ನಮ್ಮನ್ನು ಪ್ರೀತಿಯಿಂದ ಕಾಣುವಂತೆ ನೋಡಬಲ್ಲೆವು. ಕೊನೆಗೆ ಅದರ ಮೇಲೇರಿ ಹೋಗಬಹುದಾದವೆಂಬುದನ್ನು ತಿಳಿದಾಕ್ಷಣ, ತಾನಾಗಿಯೇ ಆನೆ ಮುಂಗಾಲನ್ನು ಮಡಿಸಿ ಕೊಡುವಂಥ ಪರಿಸ್ಥಿತಿ ಏರ್ಪಡುವುದು

ಮನುಷ್ಯನಲ್ಲಿಯೂ ಕೆಲವು ಉದ್ದಂಡ ಪ್ರವೃತ್ತಿ ಮತ್ತು ಉಚ್ಛೃಂಖಲ ಭಾವಗಳಿರುತ್ತವೆ: ಬಲವಾದ, ಘಾತುಕವಾದ ಇಚ್ಛೆಗಳೂ ಇರುತ್ತವೆ. ಆದರೆ ಇವಾವುದೂ ಹುಲಿಯ ಕ್ರೂರ ಸ್ವಭಾವದಂತೆ ವಶಕ್ಕೆ ತರಲಾಗದಂಥವುಗಳಲ್ಲ. ಆನೆಯ ಹಠಮಾರಿತನದಂತೆ ಅವುಗಳ ಸ್ವರೂಪವಿರುವುದರಿಂದ—ಸ್ವಲ್ಪ ಸಂಯಮ ಮತ್ತು ಧೈರ್ಯವಿದ್ದರೆ, ಅವುಗಳನ್ನು ಸಾಧಿಸಿ ಒಳ್ಳೆಯ ರೀತಿಯ ಕೆಲಸಗಳಿಗೆ ಹಚ್ಚಬಲ್ಲೆವು. **ಹೀಗೆ ಮನುಷ್ಯನು ತನ್ನ ಪ್ರವೃತ್ತಿವಿಶೇಷಗಳ ಮೇಲೆ ಹಾಕಬಲ್ಲ ಕಡಿವಾಣಗಳಲ್ಲೆಲ್ಲ ಆತ್ಮ ಸಂಯಮವೇ ಅತ್ಯಂತ ಶ್ರೇಷ್ಠವಾದುದೆಂಬಲ್ಲಿ ಸ್ರತಿಪಮಾತಿಲ್ಲ. ಮಾನಸ್ಸು ಎಷ್ಟೇ ಕೆಟ್ಟದಿದ್ದರೂ, ಕಠೋರ ಬುದ್ಧಿ ಇದ್ದರೂ— ಆತ್ಮ ಸಂಯಮದಿಂದ ಅದಕ್ಕೆ ಹೊಸ ರೂಪವನ್ನೇ ಕೊಡುವುದು ಸಾಧ್ಯ.**

ಆದುದರಿಂದ ಮಕ್ಕಳು ಚಿಕ್ಕಂದಿನಲ್ಲಿಯೇ ಇದರ ಅಭ್ಯಾಸವನ್ನು ಚೆನ್ನಾದ ರೀತಿ ಮಾಡಿಕೊಳ್ಳುವುದೊಳ್ಳೆಯದು. ಇದರಿಂದ ಅವರು ಬೆಳೆದು ದೊಡ್ಡವರಾಗಿ, ದೇಶದ ಉತ್ತಮ ನಾಗರಿಕರೆಂದು ಪರಿಗಣಿಸಲ್ಪಡುವಾಗ— ತಮ್ಮ ಒಳ್ಳೆಯ ನಡತೆಯಿಂದ ಲೋಕ ಕ್ಷೇಮವನ್ನು ಸ್ಥಾಪಿಸಲು ನೆರವಾಗುವರು. ಮನೆಯಲ್ಲಿ ತಾಯಿ ತಂದೆಯರು, ಶಾಲೆಯಲ್ಲಿ ಅಧ್ಯಾಪಕರು ಮನಸ್ಸನ್ನು ವಶದಲ್ಲಿಟ್ಟುಕೊಂಡು ಕೆಲಸಮಾಡ ಎಂದು ಉಪದೇಶಕೊಡುವಾಗ—ಮಕ್ಕಳು ಅದರಂತೆ ನಡೆಯಬೇಕು. ದೊಡ್ಡವರಾದ ಒಳಿಕವೂ ಇಂಥ ಅಭ್ಯಾಸವನ್ನು ವೃದ್ಧಿಮಾಡಿಕೊಂಡರೆ ಅದರಿಂದ ತುಂಬ ಹಿತವುಂಟು. ಯಾರಾದರೂ ಒಳ್ಳೆಯ ಮಾತನ್ನು ಹೇಳುತ್ತಾ ತಪ್ಪು ತಿದ್ದಿಕೋ ಎಂದರೆ—ನಾವು ಮಾಡಿದ ಸಣ್ಣ ತಪ್ಪುಗಳನ್ನು ದೊಡ್ಡದಾಗಿ ಅವರು ಭಾವಿಸುವರು ಎಂದರ್ಥವಲ್ಲ: ಮೊಳಕೆ ಒಡೆಯುವಾಗಲೇ ಅಂಥ ದೋಷಗಳನ್ನು ನಿವಾರಿಸಿ, ಒಳ್ಳೆಯ ತರಬೇತಿಯನ್ನು ಕೊಟ್ಟು ಸುಧಾರಿಸುವುದು ಎಂದದಕ್ಕೆ ಅರ್ಥ.

ಒಂದು ಬಡ ಗುಡಿಸಲು ಮತ್ತೊಂದು ರಾಜಭವನಗಳಲ್ಲಿ ನಾವು ಯಾವುದನ್ನು ಪಡೆಯಲು ಇಚ್ಛಿಸುತ್ತೇವೆ?—ನಿಸ್ಸಂದೇಹವಾಗಿಯೂ ರಾಜಭವನವೇ ನಮಗೆ ಪ್ರಿಯವೆನಿಸುತ್ತದೆ. ಮಹಮ್ಮದ ಪೈಗಂಬರರ ಬಗ್ಗೆ ಒಂದು ಕತೆ ಹೇಳುತ್ತಾರೆ—ಮಹಮ್ಮದರು ಸ್ವರ್ಗವನ್ನು ನಿರೀಕ್ಷಿಸಲಿಕ್ಕೆ ಹೋದಾಗ, ಅಲ್ಲಿ ಭವ್ಯವಾದ ಭವನಗಳು ಕೆಲವು ಇದ್ದುದನ್ನು ಕಂಡರು. ಅವುಗಳ ಸೌಂದರ್ಯದ ಮುಂದೆ ಸಮಸ್ತ ದೇಶದ ಸೌಂದರ್ಯ ನಾಚಿ ತಗ್ಗಬೇಕಿತ್ತು. ಸ್ವರ್ಗವನ್ನು ತೋರಿಸಿ ವರ್ಣಿಸುತ್ತಿದ್ದ ದೇವದೂತ ಜಿಬ್ರಾಯೀಲನೊಡನೆ ಪೈಗಂಬರ ಕೇಳಿದರು—"ಈ ಭವನಗಳನ್ನು ಯಾರಿಗಾಗಿ ಕಟ್ಟಲಾಗಿದೆ?" ದೇವದೂತನು ಉತ್ತರ ಕೊಡುತ್ತಾ "ತಮ್ಮ ಕ್ರೋಧ ಭಾವವನ್ನು ವಶದಲ್ಲಿಟ್ಟುಕೊಳ್ಳುವ ಮತ್ತು ತಮಗೆ ಹಾನಿಯುಂಟುಮಾಡಿದವರನ್ನೂ ಕ್ಷಮಿಸಿ ಬಿಡುವ ಮಹಾನುಭಾವರಿಗಾಗಿ ಇವು ಇವೆ." ನಿಜವಾಗಿಯೂ ದೋಷರಹಿತ ಮತ್ತು ಶಾಂತ ಭಾವದ ಮನಸ್ಸು ಭವ್ಯವಾದ ಭವನವನ್ನೇ ಹೋಲುತ್ತದೆ. ಆವೇಶಯುಕ್ತವಾದ ಮತ್ತು ಪ್ರತಿ ಹಿಂಸೆಯ ಪಾಪದಿಂದ ತುಂಬಿ ತುಳುಕುವ ಮನಸ್ಸಿನ ಬಗ್ಗೆ ಹೀಗೆ ಹೇಳಲಾರೆವು.

ನಮ್ಮ ಮನಸ್ಸೇ ಒಂದು ಮನೆ—ಮತ್ತದು ನಮ್ಮ ಮನೆ. ಅದನ್ನು ನಮ್ಮ ಇಚ್ಛಾನುಸಾರ ಶಾಂತವಾಗಿ, ಸುಂದರವಾಗಿ ಸ್ವಚ್ಛ ರೀತಿಯಲ್ಲಿ ಅಲಂಕರಿಸಬಲ್ಲೆವು. ಅಲ್ಲಿ ಹೃದಯಂಗಮವಾದ ಕರ್ಣಾನಂದವಾದ ಮಧುರ ಸಂಗೀತ ಪುಟಿದೇಳುವುದು ನಿಶ್ಚಯ. ನಾವು ಬಯಸಿದರೆ—ಅದೇ ಮನೆಯನ್ನು ಮಸಣವಾಗಿಸುವುದೂ ಸಾಧ್ಯ. ದುಃಖ ಪ್ರದವಾದ ಶಬ್ದಗಳನ್ನು ಉಪಯೋಗಿಸಿ ಬೈಯುತ್ತಲೂ ದೂರುತ್ತಲೂ—ಸದಾಕಾಲ ಚೀರಾಟ ಬೊಬ್ಬೆಯಲ್ಲಿ ಮುಳುಗೇಳುತ್ತಾ ಮನೆಯನ್ನು ಭಯಾವಹವಾದ ಒಂದು ಕತ್ತಲು ಗುಹೆಯಾಗಿ ಪರಿವರ್ತಿಸಬಹುದು. ಆದರೆ ಇದನ್ನು ಯಾರಾದರೂ ಹೃತ್ಪೂರ್ವಕ ಅಪೇಕ್ಷಿಸಿದ್ದು ಉಂಟೆ?

ನಾವು ಗರಡಿಯಲ್ಲಿ ಕಾಲಿಮಾಡಿಕೊಂಡಿರುವೆವೆನ್ನೋಣ. ಮಾತಿಗೆ ಮಾತು ಬೆಳೆದು ಒಬ್ಬನು ಇನ್ನೊಬ್ಬನನ್ನು ಚೆನ್ನಾಗಿ ಥಳಿಸಿದನು. ಹೊಡೆದವನು ನಿಜವಾಗಿಯೂ ಕೋಪಾವಿಷ್ಟನೂ ಕೆಟ್ಟ ಬುದ್ಧಿಯವನೂ ಹೌದು. ಪೆಟ್ಟು ತಿಂದವನೂ ಮನ್ನ

[೧೧ನೇ ಪುಟ ನೋಡಿರಿ]

ಸರಿಯಾದ ಹೆಜ್ಜೆ! ಮಹತ್ವದ ಹೆಜ್ಜೆ!!

ಇತ್ತೀಚೆಗೆ ಮದ್ರಾಸು ಸರಕಾರವು ಸರಿಮಾರ್ಗದಲ್ಲಿ ಒಂದು ಮಹತ್ತರ ಹೆಜ್ಜೆಯನ್ನಿಟ್ಟಿದೆ. ನೀವಾದರೂ ನಿಮ್ಮ ಉಳಿತಾಯದಲ್ಲಿ ಸರಿಯಾದ ಹೆಜ್ಜೆಯನ್ನಿಡಬೇಕೆಂದು ನಾವು ನಿಮ್ಮ ಲಕ್ಷ್ಯವನ್ನೆಳೆಯುತ್ತೇವೆ. ನೀವು ಅದನ್ನು ನಿಮ್ಮ ಬ್ಯಾಂಕಿನಲ್ಲಿ ಹಾಕಿದರೆ ನಾವು ಕೊಡುವ ಬಡ್ಡಿಯಿಂದ ಅದು ಬೆಳೆಯುತ್ತದೆ. ಅಲ್ಲದೆ ಅದೇ ವೇಳೆಯಲ್ಲಿ ಅದು ಭೂಪ್ರಗತಿಯನ್ನುಂಟುಮಾಡುವ ಉತ್ಪಾದನಾ ಮತ್ತು ಸಾಹಸೋದ್ಯಮಗಳಿಗೆ ದೊರಕುವುದು. ಈ ಬ್ಯಾಂಕು ಪ್ರತಿನಿತ್ಯವೂ 50,000 ಜನರಿಗೂ ಮಿಕ್ಕಿ ಉಳಿಸಲಿಕ್ಕೆ ಸಹಕರಿಸುತ್ತಿದೆ. ದಕ್ಷಿಣ ಕನ್ನಡದ ನೀಲೇಶ್ವರ ಮತ್ತು ಕಿನ್ನಿಗೋಳಿಯಲ್ಲಿ ಇತ್ತೀಚೆಗೆ ಎರಡು ಹೊಸ ಶಾಖೆಗಳು ಇವರಿಂದ ತೆರೆಯಲ್ಪಟ್ಟಿವೆ.

ವಹಿವಾಟು ರೂ. 5,00,00,000 ಕ್ಕೂ ಮಿಕ್ಕಿದೆ.

ದಿ ಕೆನರಾ ಇಂಡಸ್ಟ್ರಿಯಲ್
ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ.

The Canara Industrial &
Banking Syndicate Limited.

ESTD: 1925 H. O: UDIPI.

ದುಷ್ಟ ಪ್ರವೃತ್ತಿಗಳನ್ನು ತಿದ್ದುವ ಮದ್ದು

ಬಾಲ್ಯದಿಂದಲೇ ಮಕ್ಕಳಿಗೆ ನೈತಿಕ ಶಿಕ್ಷಣ ಕೊಡುವುದಗತ್ಯ

"ಪಿಯರ್ ಸನ್ಸ್" ಪತ್ರಿಕೆಯಲ್ಲಿ ಪ್ರಕಟವಾದ ಒಂದು ಮೋಜಿನ ಸಂಗತಿ ಹೀಗಿದೆ- ಲಂಡನ್ನಿನ ಸಿನಿಮಾ ಮಂದಿರದ ತೆರೆಯ ಮೇಲೆ ಒಂದು ಪ್ರಕಟಣೆ ಕಾಣಿಸಿಕೊಂಡಿತು: "ಸಿನಿಮಾ ಮಂದಿರದ ರಂಗಡಿಯ ಹತ್ತಿರ ಐದು ಪೌಂಡಿನ ಒಂದು ನೋಟು ಸಿಕ್ಕಿದೆ. ಅದರ ವಾರಸುದಾರರು ದಯವಿಟ್ಟು ನಾಳೆ ರಾತ್ರಿ ಟಿಕೇಟು ಕೋಣೆಯ ಹತ್ತಿರ ಕ್ಯೂ ರಚಿಸಲಿ!" ಎಂದು ಆ ಪ್ರಕಟಣೆಯಲ್ಲಿ ತಿಳಿಸಿತ್ತು. ಇದು ವ್ಯಂಗ್ಯವೋ ಸತ್ಯವೋ ಎಂಬ ವಿಮರ್ಶೆ ನಮಗೆ ಬೇಡ—ಆದರೆ ನಿಜವಾಗಿ ವ್ಯಂಗ್ಯವೆಂಬುದೆಂದು ಕಟ್ಟಿಕೊಂಡರೂ ಮನುಷ್ಯನ ಚಾರಿತ್ರ್ಯದ ಮೇಲೆ ಅಳಿಸಲಾರದ ಕಲಂಕವನ್ನು ಇದು ತಗುಲಿಸುವುದಂತೂ ನಿಶ್ಚಯ. ಒಂದು ನೋಟು ಕಳೆದುಹೋದರೆ—ಅದು ತನ್ನದೆಂದು ಪ್ರತಿಪಾದಿಸುವ ನೂರಾರು ಜನ ಇದ್ದಾರೆ: ಆದರೆ ಒಬ್ಬನ ಹೊರತು ಉಳಿದೆಲ್ಲರೂ ಸುಳ್ಳು ಸಾಧನೆಯಲ್ಲಿ ತೊಡಗುತ್ತಾರೆ ಎಂಬ ಸತ್ಯವನ್ನು ಈ ಪ್ರಕಟಣೆ ಸಾರಿ ಹೇಳುತ್ತದೆ. ನಿಜವಾಗಿಯೂ ಇದು ನಾಚಿಕೆಗೇಡು. ಇಂಗ್ಲೆಂಡಿನಂಥ ಸುಶೀಲ ಸಂಪ್ರದಾಯಗಳಿರುವ ರಾಷ್ಟ್ರದಲ್ಲಿಯೂ ದುರಾಚಾರ ಪೀಡೆ ಸಂಪೂರ್ಣ ಅಳಿದು ಹೋಗಿಲ್ಲವೆಂಬುದಕ್ಕೆ ಇದೊಂದು ಜೀವಂತ ನಿದರ್ಶನ.

ಆದರೆ ಇದನ್ನು ಅಪವಾದದ ರೂಪದಲ್ಲಿಯೇ ನಾವು ತೆಗೆದುಕೊಂಡರೆ ಹಿತ: ಏಕೆಂದರೆ, ಭಾರತದಲ್ಲಿರುವಷ್ಟು ದುರಾಚಾರ ಮಾರ್ಗ ಮೋಸಗಳು ವಿಶ್ವದ ಇನ್ನಾವುದೇ ಸ್ವಾಭಿಮಾನಿ ರಾಷ್ಟ್ರದಲ್ಲಿ ಕಂಡುಬರುವುದಿಲ್ಲ. ದ್ವಿತೀಯ ಮಹಾ ಯುದ್ಧದ ಕಾಲದಲ್ಲಿ ಬ್ರಿಟನ್ನಿನ ಮೋಟಾರು ಸಾರಿಗೆಯ ಸಿಬ್ಬಂದಿಯಲ್ಲಿ ಅನಿವಾರ್ಯವಾಗಿ ಕಡಿತ ಸಂಭವಿಸಿತು. ಕಂಡಕ್ಟರನ್ನು ಬೇರೆ ಕೆಲಸಕ್ಕೆ ಹಚ್ಚುವುದು ಅತ್ಯಗತ್ಯವಾಯಿತು. ಅಂಥದರಲ್ಲಿ ಪ್ರಯಾಣಿಕರಿಂದ ಟಿಕೇಟಿನ ದುಡ್ಡನ್ನು ಯಾರು ವಸೂಲುಮಾಡಬೇಕು? ಕೊನೆಗೊಂದು ಉಪಾಯ ಹೂಡಿದರು: ಪ್ರತಿ ಸ್ಟೇಶನಿಗೆ ಆಗುವ ಟಿಕೇಟು ಹಣ ಎಷ್ಟು ಎಂಬುದನ್ನು ತೋರಿಸುವ ಬೋರ್ಡನ್ನು ಮೋಟಾರು ಬಂಡಿಯಲ್ಲಿ ತೂಗಿಸಿದರು. ಅದರ ಕೆಳಗೆ ಒಂದು ವಿನಂತಿ ಬರೆದರು: "ದಯವಿಟ್ಟು ಪ್ರಯಾಣಿಕರು ತಮ್ಮ ಟಿಕೇಟಿನ ಹಣವನ್ನು ಇದರಡಿ ಇಟ್ಟಿರುವ ಪೆಟ್ಟಿಗೆಯಲ್ಲಿ ಹಾಕಬೇಕು. ಕೊಂಡವರಿಗೆ ಕ್ಷಮೆ ಇರಲಿ". ಆಶ್ಚರ್ಯದ ಮಾತೆಂದರೆ—ಎಲ್ಲರೂ ಪ್ರಾಮಾಣಿಕವಾಗಿ ನಡೆದುಕೊಳ್ಳುತ್ತಿದ್ದರಂತೆ. ನ್ಯಾಯವಾಗಿ ತಾವು ಕೊಡಬೇಕಾದ ಹಣವನ್ನು ಆ ಪೆಟ್ಟಿಗೆಗೆ ಹಾಕಲು ಅವರು ಹಿಂಜರಿಯಲಿಲ್ಲ. ನಮ್ಮಲ್ಲಿಯಾದರೆ? ಟಿಕೇಟು ಚಕ್ಕರಂಗೆ "ಚಕ್ಕರು" ಕೊಟ್ಟು ಪಾರಾಗುವವರ ಸಂಖ್ಯೆ ಏನನ್ನು ಸೂಚಿಸುತ್ತದೆ?—ಸಂಭಾವಿತರೂ ಟಿಕೇಟಿಲ್ಲದೆ ಪ್ರಯಾಣಿಸುವುದು ಸಾಧ್ಯವಾದರೆ, ಅಂಥ ಯಾವ ಸಂದರ್ಭವನ್ನೂ ವ್ಯರ್ಥ ಕಳೆಯಲಾರರು.

ಲೋಕಸಭೆಯಲ್ಲಿ ಲಂಚ ಗುಳಿತನವನ್ನು ಮಹಾಪರಾಧವೆಂದು ಪರಿಗಣಿಸುವ ಬಗ್ಗೆ ಕ್ರಿಮಿನಲ್ ಪ್ರೊಸೀಜರ ಕೋಡಿನಲ್ಲಿ ತಿದ್ದುಪಡಿ ಮಾಡುವ ಮಸೂದೆ ಚರ್ಚೆಗೆ ಬಂದಿತಷ್ಟೆ: ಆಗ, ಶಿಕ್ಷಾ ಪದ್ಧತಿಯನ್ನು ಇನ್ನಷ್ಟು ಬಿಗಿಗೊಳಿಸುವುದಕ್ಕಿಂತಲೂ, ಮನುಷ್ಯನ ಚಾರಿತ್ರ್ಯಬಲವನ್ನು ಮತ್ತು ನೈತಿಕ ಮಟ್ಟವನ್ನು ಎತ್ತರಿಸುವುದೇ ದುರಾಚಾರಗಳನ್ನು ದೂರೀಕರಿಸುವ ಮೂಲಭೂತ ಹೆಜ್ಜೆ ಎಂದು ಎಷ್ಟೋ ಸದಸ್ಯರು ಪ್ರತಿಪಾದಿಸಿದರು. ನಮ್ಮ ರಾಷ್ಟ್ರದ ಮಹಾ ಮೇಧಾವಿಯೆನ್ನಿಸಿಕೊಂಡಿರುವ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯ ಕೂಡ ಇದನ್ನು ಅನುಮೋದಿಸುತ್ತಾರೆ. ಅವರು ತಮ್ಮ ಸಂಸ್ಮರಣಗಳಲ್ಲಿ ಚಿಕಾಗೋ ನಗರದ ಒಂದು ಘಟನೆ ತನಗೆ ಈ ವಿಷಯದಲ್ಲಿ ಎಂಥ ಸ್ಫೂರ್ತಿಕೊಟ್ಟಿತು ಎಂಬುದನ್ನು ಉಲ್ಲೇಖಿಸಿದ್ದಾರೆ.

"ಒಂದು ವಿಷಯದ ಬಗ್ಗೆ ಲೇಖ ಬರೆದುಕೊಡಲು ಒಬ್ಬನನ್ನು ಗೊತ್ತುಮಾಡಿದೆನು: ಸಂಭಾವನೆಯಾಗಿ ಎಂಟು ಡಾಲರು (ಎಂದರೆ ನಲುವತ್ತು ರೂಪಾಯಿ) ಕೊಡುವುದೆಂದು ನಿಗದಿಯಾಯಿತು. ಹೇಳಿದ ದಿನ, ನಾನು ಅವನಿದ್ದಲ್ಲಿ ಹೋದೆ ಅವನ ಕಾರ್ಯದರ್ಶಿ ಲೇಖವನ್ನು ನನ್ನ ಕೈಗಿತ್ತ. ಅದು ಬಹಳ ಸುಂದರವಾಗಿದ್ದುದು ಕಂಡು ನನಗೆ ಹರ್ಷವೆನಿಸಿತು. ಸಂತೋ...ದ ...ಟು ಡಾಲರಿನ ಬಿಲ್ಲು, ಒಂಭತ್ತನ್ನು ಕೊಟ್ಟು ನಾನಲ್ಲಿಂದ ಮರಳಿಬಂದೆ.

"ಮೂರುದಿನ ಮುಂಜಾನೆ ನನ್ನ ಕೆಲಸ ಬೇಗನೆ ತೀರಿಸಿ, ಚಿಕಾಗೋ ಬಿಟ್ಟು ಹೊರಡುವ ವೇಳೆಗೆ ಸಮನಾಗಿ, ಆ ಲೇಖಕ ನಾನಿದ್ದಲ್ಲಿಗೆ ಬಂದು, ವಂದಿಸಿದ. ನಾನು ಕೊಟ್ಟ ಹೆಚ್ಚಿನ ಒಂದು ಡಾಲರನ್ನು ವಾಪಸು ಮುಟ್ಟಿಸಲು ಅವನು ಬಂದಿದ್ದ. ನನ್ನ ವಿಳಾಸ ಅವನಿಗೆ ತಿಳಿದಿರಲಿಲ್ಲ: ಯಾರು ಯಾರೊಡನೆಯೋ ಕೇಳಿ, ಹೇಗೋ ನಾನಿರುವ ಹೋಟೆಲನ್ನು ಪತ್ತೆಹಚ್ಚಿ, ಕೊನೆಗೆ ನನ್ನ ಬಳಿಬಂದ. ನಾನು ಹೇಳಿದೆ-

"ಇದು ನಿಮಗೆ ಪುರಸ್ಕಾರ—ಏಕಾಗಿ ಮರಳಿ ಕೊಡುತ್ತೀರಿ?" ಅದಕ್ಕೆ ಲೇಖಕನ ಉತ್ತರ ಇದು—

"ಮಹಾಶಯರೆ! ನನ್ನ ಕೆಲಸಕ್ಕೆ ಕೂಲಿ ದೊರೆತಿದೆ—ಅದಕ್ಕಿಂತ ಹೆಚ್ಚು ಅಪೇಕ್ಷಿಸಲು ನನಗೇನೂ ಅಧಿಕಾರವಿಲ್ಲ!"

ಈ ಸತ್ಯನಿಷ್ಠೆ ಅಲ್ಲಿಯ ರಾಷ್ಟ್ರೀಯ ಚಾರಿತ್ರ್ಯದ ದ್ಯೋತಕವೇ ಸೈ. ಯಾವುದೇ ರಾಷ್ಟ್ರವಿರಲಿ- ಅದರ ಉತ್ಕರ್ಷ ಅದರ ಪ್ರಜೆಗಳ ರಾಷ್ಟ್ರೀಯ ಚಾರಿತ್ರ ಬಲವನ್ನೇ ಹೊಂದಿಕೊಂಡಿದೆ ಎಂಬುದು ನಿಸ್ಸಂಶಯ. ತಮ್ಮ ಕರ್ತವ್ಯ ಪಾಲನೆಯನ್ನು ಹೊಣೆಯರಿತು ನಿರ್ವಹಿಸುವ ನಾಗರಿಕರು ಇದ್ದ ರಾಷ್ಟ್ರವನ್ನೇ ಬಲಾಢ್ಯವುಳ್ಳದ್ದೆಂದು ಹೆಸರಿಸಬಹುದು- ರಾಷ್ಟ್ರವು ನಾಗರಿಕರಿಂದ ಒಳ್ಳೆಯ ಆಚರಣೆಯನ್ನು ಅಪೇಕ್ಷಿಸುತ್ತದೆ. ಪರಸ್ಪರ ನಂಬಿಗೆ, ವಿಶ್ವಾಸಗಳಿಂದ ನಡೆದುಕೊಳ್ಳದೆ, ದುಷ್ಪ್ರವೃತ್ತಿಗಳಿಗೆಳಸುವುದು ರಾಷ್ಟ್ರಕ್ಕೆ ಗಂಡಾಂತರ ಪ್ರಾಯ: ಪ್ರತಿಯೊಬ್ಬನೂ ತನ್ನ ಆಚಾರ ವಿಚಾರಗಳಲ್ಲಿ ಪಾರದರ್ಶಕತ್ವವನ್ನು ಹೊಂದದಿದ್ದರೆ -ಭವಿಷ್ಯದಲ್ಲಿ ಒಳ್ಳೆಯದಾಗುವುದೆಂಬ ಆಶೆಯೇ ಬೇಡ.

ಈಜಿಪ್ತದಲ್ಲಿ ಸೈನ್ಯಕ್ರಾಂತಿಯಾಗಿ, ಈಗ ಹೊಸ ಸರಕಾರ ಬಂದಿದೆ: ಅಲ್ಲಿಯ ಆಡಳಿತೆಯಲ್ಲಿ ಶೈಥಿಲ್ಯ ಮನೆಮಾಡಿಕೊಳ್ಳಲು ಅಧಿಕಾರಿಗಳ ಲಂಚಗುಳಿತನವೇ ಕಾರಣ. ಪಾಲೆಸ್ತಾನದ ಪ್ರಕರಣದಲ್ಲಿ ಈಜಿಪ್ತ ಅಪಜಯಹೊಂದಿತು; ಸೈನ್ಯದ ಉಚ್ಚಾಧಿಕಾರಿಗಳ ಲಂಚಗುಳಿತನವೇ ಕಾರಣವೆಂದು ಆರೋಪಿಸಲಾಗಿದೆ. ಈಗ ಅಲ್ಲಿಯ ಪರಿಸ್ಥಿತಿ ಜ್ವಾಲಾಮುಖಿಯ ಸ್ಫೋಟದಂತಿದೆ. ಕಾರಣ, ನಾಗರಿಕರ ಮೇಲೆ ಹೊಣೆಗಾರಿಕೆ ಇದ್ದಂತೆ, ಧನಿಕರೂ ಜವಾಬ್ದಾರಿಗೆ ಹೊರತಿಲ್ಲವೆಂಬುದನ್ನು ಮರೆಯಬಾರದು.

ಇದಕ್ಕೆ ಯೋಗ್ಯರೀತಿಯ ಶಿಕ್ಷಣವು ಬೇಕು: ಬಾಲ್ಯದಿಂದಲೇ ಪಾಪಭಯ; ಸದಾಚಾರಗಳ ಕುರಿತು ತಕ್ಕ ಉಪದೇಶಗಳನ್ನು ಕೊಟ್ಟು, ಮನಸ್ಸನ್ನು ತಿದ್ದುವುದು ಅಗತ್ಯ. ನಮ್ಮ ಪುರಾತನ ಋಷಿಮುನಿಗಳು ಧರ್ಮಶಾಸ್ತ್ರಗಳ ಸಾರ ಹೇಳುವುದರ ಮೂಲಕ, ವಿದ್ಯಾರ್ಥಿಯು ಚಾರಿತ್ರಬಲ ಸಂಪನ್ನನಾಗುವಂತೆ ನೋಡಿಕೊಳ್ಳುತ್ತಿದ್ದರು. ಆದರೆ ನಾವಿಂದು ಧರ್ಮ ನಿರಪೇಕ್ಷವಾದ ರಾಷ್ಟ್ರದ ನಾಗರಿಕರು. ಅದರಿಂದ ಧರ್ಮದ ಕಕ್ಷೆಯಲ್ಲಿ ಬರುವ ಒಳ್ಳೆಯ ಸಂಗತಿಗಳನ್ನು ಕಲಿಸುವ ಹೊಣೆ ಆಕ್ರಮವರ ಮೇಲಿದೆ—ಇದರೂ ನಾಗರಿಕ ಕಳಹದಿಯ ಮೇಲೆ, ಶರೀರಂದ ಶಾಲೆಯಲ್ಲಿಯೂ ನೈತಿಕ ಶಿಕ್ಷಣವನ್ನು ನೀಡುವುದು ಸಾಧ್ಯವಿದೆ. ಮನುಷ್ಯ ಸ್ವಭಾವವನ್ನು ತಿದ್ದಿ, ಅವನ ವ್ಯಕ್ತಿತ್ವ ವಿಕಸನವನ್ನು ಸಾಧಿಸುವುದೇ ಶಿಕ್ಷಣದ ಮೂಲಭೂತ ಧ್ಯೇಯವಾಗುವುದರಿಂದ—ಸರಕಾರ ನೈತಿಕ ಶಿಕ್ಷಣಕ್ಕೆ ಸರ್ವ ವಿಧದಿಂದಲೂ ಪ್ರೋತ್ಸಾಹ ಕೊಡಬೇಕು: ಜನತೆ ಸಹಕರಿಸಿ, ಶೀಲ ಸಂಪನ್ನರಾಗಬೇಕು.

[೩ನೇ ಪುಟದಿಂದ ಮುಂದುವರಿದುದು]

ದೊಡನೆ ಪೈಪೋಟಿಗೆಳೆಯುವುದರಿಂದ—ಈಗಿರುವ ಪಶುಸಂಪತ್ತನ್ನು ಏನು ಮಾಡೋಣ? ಈಗಿದ್ದಂತೆಯೇ ಕೆಲ ಸುಧಾರಣೆಗಳನ್ನು ಕೃಷಿ ಸಲಕರಣೆಯಲ್ಲಿ ಮಾಡಿದರೆ, ಪಶುಬಲವೂ ಯಾಂತ್ರಿಕ ಬಲದ ಮಟ್ಟವನ್ನೇ ಮುಟ್ಟಲು ಸಾಧ್ಯವುಂಟು. ಟ್ರಾಕ್ಟರುಗಳ ಉಪಯೋಗದ ಕಾಲ ಬಹಳ ಅಲ್ಪಾವಧಿಯದಾದುದರಿಂದ, ಲಾಭ ಹೆಚ್ಚಬಾರದು. ಅಲ್ಲದೆ ಮಳೆಯನ್ನೇ ಇಲ್ಲಿಯ ಕೃಷಿ ಅವಲಂಬಿಸಿರುವುದರಿಂದ ಮತ್ತು ಪಶುಬಲವನ್ನು ಒಡನೆಯೇ ಉಪಯೋಗಿಸಲು ಬಂದಂತೆ, ಟ್ರಾಕ್ಟರನ್ನು ಬಳಸಲೂ ಬರುವುದಿಲ್ಲವಾದುದರಿಂದ— ಕೈಗೆ ಬಂದ ತುತ್ತು ಬಾಯಿಗೆ ಬರದೆ ಹೋಗುವ ವಿಧಿ ಯಾಂತ್ರೀಕರಣದ ಪರಿಣಾಮವಾಗಿ ಗಂಟುಬಿದ್ದೀತು.. ಜನಸಂಖ್ಯೆ ಅತ್ಯಂತ ಹೆಚ್ಚಿಕೊಂಡಿರುವಾಗ, ಎಣ್ಣೆ ಮತ್ತು ಪೆಟ್ರೋಲು ಕರ್ಚಿನಿಂದ ನಡೆಯುವ ಟ್ರಾಕ್ಟರನ್ನು ಉಪಯೋಗಿಸುವುದು ಸರ್ವಥಾ ಅಪೇಕ್ಷಣೀಯವಲ್ಲ. ಚಿಕ್ಕ ಚಿಕ್ಕ ಹಿಡುವಳಿಗಳಲ್ಲ— ಕುಟುಂಬ ಪ್ರಮಾಣದ ಮೇಲೆ—ಈಗಿರುವ ಹಂಚಿಕೆಯೇ ಅತ್ಯಂತ ಶ್ರೇಯಸ್ಕರವು—ಇವೆಲ್ಲವನ್ನೂ ವಿಮರ್ಶಿಸಿ ಆತಂಕ, ಕೈತರಿಂದಲೇ ಮುಂಬರುವುದು: ಎಷ್ಟು ಮಾತ್ರಕ್ಕೂ ಈ ಬಗೆಯ ಮೂಲಭೂತ ಸುಧಾರಣೆಗೆ ಇವರು ಒಡಂಬಡಲಾರರು.

ಕಾರಣ—ನಾವು ಯಾಂತ್ರಿಕ ಕ್ರಮದಿಂದ ಕೃಷಿ ವಿಸ್ತರಣೆಯನ್ನು ಮಾಡುವ ಮಟ್ಟಕ್ಕೆ ಇನ್ನೂ ಬಂದಿಲ್ಲ. ಎಷ್ಟೇ ಲಾಭವಿದ್ದರೂ—ಜನರ ಮನಸ್ಸು ಬದಲಾಯಿಸದೆ ಉಗ್ರ ಸುಧಾರಣೆಗೆ ಬೆಂಬಲ ದೊರೆಯದೆಂಬುದು ನಿಶ್ಚಯ.

ನಡೆಯದ ನಾಣ್ಯ

ನೀವು ಆರೋಗ್ಯವಂತರಿದ್ದಾಗ ವಿಮೆ ಇಳಿಸಬಲ್ಲಿರಿ; ಆದರೆ, ಆರೋಗ್ಯ ಕೆಟ್ಟಾಗ, ನೀವು ವಿಮೆಯ ರಕ್ಷಣೆಯನ್ನು ಪಡೆಯಲಾರಿರಿ — ನಡೆಯದ ನಾಣ್ಯದಂತೆ ನಿಮ್ಮ ಆಗಿನ ಸ್ಥಿತಿ.

ಕಾರಣ, ನೀವು ವಿಮೆ ಇಳಿಸುವುದನ್ನು ಮುಂದೂಡಲಾಗದು ಇಂದೇ ವಿಮೆ ಇಳಿಸಿ ನಿಮ್ಮ ಮತ್ತು ನಿಮ್ಮ ಕುಟುಂಬದ ಭದ್ರತೆಯನ್ನು ಕಾಯ್ದುಕೊಳ್ಳಿರಿ

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೩೩

ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ.

The Canara Mutual Assurance Co. Ltd.

Head Office: UDIPI, S. India.



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧ [ಮೆಡಿಕೇಟೆಡ್]

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಜಿ. ಐ. ಪಿ.) ಮುಂಬಯಿ, ೧೪

ಕಾಶ್ಮೀರದ ಭವಿತವ್ಯ–

ಭಾರತದೊಡನೆ ನಿಕಟ ಸಂಬಂಧ

ಸಂಧಾನ ಮಾತುಕತೆ

ಭಾರತ ಸರಕಾರದ ತಲೆಶೂಲೆಯೋ ಆದಿಯಲ್ಲಿದ್ದ ಕಾಶ್ಮೀರ ಸಂಬಂಧದ ಪ್ರಶ್ನೆ ಈಗ ಒಂದು ನಿಲುಗಡೆಗೆ ಬಂದಿರುವುದು ಕಳೆದ ವಾರದ ಮಹತ್ವದ ಸಂಗತಿ. ಕಾಶ್ಮೀರ ಘಟನಾ ಸಮಿತಿಯು ಅರಸೊತ್ತಿಗೆಯನ್ನು ನಿರ್ಮೂಲಗೊಳಿಸಬೇಕೆಂದು ನಿರ್ಣಯಿಸಿದುದು– ಮತ್ತು ತಮಗೊಂದು ಪ್ರತ್ಯೇಕ ಧ್ವಜವಿರಬೇಕೆಂದುದು ಸ್ವಾಭಾವಿಕವಾಗಿಯೇ ಭಾರತೀಯ ಮುತ್ಸದ್ದಿಗಳನ್ನು ಕೆಣಕಿದಂತಿತ್ತು. ಭಾರತದೊಡನೆ ಸಂರಕ್ಷಣೆ, ಸಾರಿಗೆ ಸಂಪರ್ಕ ಮತ್ತು ವಿದೇಶ ವ್ಯವಹಾರಗಳೆಂಬ ಮೂರು ವಿಷಯಗಳ ಮಟ್ಟಿಗೆ ಮಾತ್ರ ಕಾಶ್ಮೀರವು ಸೇರ್ಪಡೆಹೊಂದಿದೆಯಾಗಿ–ಮತ್ತು ಕಾಶ್ಮೀರದ ಜನಾಭಿಪ್ರಾಯವೇ ಕಾಶ್ಮೀರ–ಭಾರತ ಸಂಬಂಧದ ಕೊನೆಯ ನಿರ್ಣಯದ ಘಟನೆಯಾಗಿರುವುದಾಗಿ ಹೇಳಿಕೊಂಡುದರಿಂದ ಲೋಕಸಭೆಯ ಸದಸ್ಯರಲ್ಲಿಯೂ ಈ ಬಗ್ಗೆ ಉದ್ವೇಗ ಹೆಚ್ಚಲು ಕಾರಣವಾಯಿತು. ಕಾಶ್ಮೀರದ ಮುಖ್ಯ ಮಂತ್ರಿ ಶೇಕ್ ಅಬ್ದುಲ್ಲಾ ಮಾಡಿದ ಭಾಷಣಗಳೂ–ಕೆಲವೊಂದು ವರ್ಗವನ್ನು ಕ್ಷೇಪಕ್ಕೆಳಸಲು ಕಾರಣವಾದುವು. ಹೀಗೆ ಸದ್ಯ ವಿಶ್ವ ಸಮಸ್ಯೆಯಾಗಿರುವ ಕಾಶ್ಮೀರ ಪ್ರಕರಣದಲ್ಲಿ– ಭಾರತದ ಮಾನ ಮಾರಿ ಹೋಗುವ ಪ್ರಸಂಗ ಬಂದಿತ್ತು: ಇದರ ಮಹತ್ವವನ್ನು ತಿಳಿದುಕೊಂಡು ಭಾರತದ ಪ್ರಧಾನಿ ನೆಹರೂ ಮತ್ತಿತರ ರಾಜಕಾರಣಿಗಳೊಡನೆ, ಶೇಕ್ ಅಬ್ದುಲ್ಲ ಹಾಗೂ ಕಾಶ್ಮೀರದ ಉಳಿದ ಕೆಲವು ಧುರೀಣರು ಮಾತುಕತೆಯಾಡಿ, ಇದೀಗ ಸ್ವಲ್ಪ ಮಟ್ಟಿಗೆ ಸಮಾಧಾನಕರವಾದ ಒಪ್ಪಂದಕ್ಕೆ ಬಂದಿರುವರು.

ಸಂಬಂಧದ ರೂಪರೇಷೆ

ಈ ವಿಷಯವನ್ನು ಲೋಕಸಭೆಯ ಸದಸ್ಯರಿಗೆ ಮನವರಿಕೆ ಮಾಡಿಕೊಡುತ್ತಾ, ಪ್ರಧಾನಿ ನೆಹರೂ ಭಾರತ–ಕಾಶ್ಮೀರ ಸಂಬಂಧದ ರೂಪರೇಷೆಯನ್ನು ಹೀಗೆ ಹಾಕಿಕೊಟ್ಟರು: ಕಾಶ್ಮೀರವು ಅರಸೊತ್ತಿಗೆಯನ್ನು ರದ್ದುಮಾಡಲಿಕ್ಕೆ ಆಕ್ಷೇಪವಿಲ್ಲ. ರಾಜ್ಯದ ವರಿಷ್ಠನನ್ನು ಅದು ಚುನಾಯಿಸಬಹುದು, ಅವನನ್ನು ಭಾರತದ ರಾಷ್ಟ್ರಾಧ್ಯಕ್ಷರು ಮನ್ನಿಸಬೇಕು, [illegible] ವನು ಕಾಶ್ಮೀರದ ಮುಖ್ಯಸ್ಥನಾಗಿ ಕೆಲಸ ಮಾಡಬಹುದು. ಹಾಗೆಯೇ ಕಾಶ್ಮೀರದ [illegible]ತು ದಶಕಗಳ ಹೋರಾಟದ ಪ್ರತೀಕವಾಗಿ–ಕಾಶ್ಮೀರ ಜನತೆಯ ಭಾವನಾತ್ಮಕ ಇಚ್ಛೆಯನ್ನು ಪೂರೈಸುವುದಕ್ಕಾಗಿ–ಪ್ರತ್ಯೇಕ ಧ್ವಜ ಇಟ್ಟುಕೊಳ್ಳಬಹುದು: ಆದರೆ, ಭಾರತದ ರಾಷ್ಟ್ರೀಯ ಧ್ವಜವೇ ಸರ್ವಮಾನ್ಯವೂ, ಸರ್ವೋಚ್ಚವೂ ಆಗಿರುವುದು. ಪರದೇಶಗಳಿಂದ ದಾಳಿಯಾದಾಗ, ಮತ್ತು ಗಂಡಾಂತರ ಪರಿಸ್ಥಿತಿ ಉಂಟಾದಾಗ, ರಾಷ್ಟ್ರಾಧ್ಯಕ್ಷರು ದೇಶದ ಆಡಳಿತವನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳಲಡ್ಡಿಯಿಲ್ಲ. ಆದರೆ ಆಂತರಿಕ ಪರಿಸ್ಥಿತಿಯು ಪ್ರಕೋಪಕ್ಕೇರಿದ ಸಂದರ್ಭದಲ್ಲಿ ಹಾಗೆ ಮಾಡುವ ಮೊದಲು ಕಾಶ್ಮೀರ ವಿಧಾನಸಭೆಯ ಒಪ್ಪಿಗೆ ಪಡೆಯುವುದಗತ್ಯ. ಮೂಲಭೂತ ಹಕ್ಕುಗಳ ಪ್ರಶ್ನೆಯು ಕಾಶ್ಮೀರಕ್ಕೂ ಅನ್ವಯಿಸುವುದು: ಆದರೆ ರಾಜ್ಯದ ಭದ್ರತೆಗೆಂದು ಕೈಗೊಳ್ಳುವ ಕ್ರಮಗಳಿಗೆ ಇವು ಅಡ್ಡಿಯಾಗಲಾರವು. ನ್ಯಾಯಾಂಗದಲ್ಲಿ ಭಾರತದ ವರಿಷ್ಠ ನ್ಯಾಯಾಲಯವೇ ಸರ್ವೋನ್ನತವಾಗಿರುವುದು. ಈಗಿರುವ ಅರಸರ ನ್ಯಾಯಮಂಡಲ ರದ್ದುಗೊಂಡು, ಅದರ ಅಧಿಕಾರ ವರಿಷ್ಠ ನ್ಯಾಯಾಲಯಕ್ಕೆ ಸಿಗುವುದು. ಕಾಶ್ಮೀರದ ಹೊರಗಿನ ಜನರು ಕಾಶ್ಮೀರದಲ್ಲಿ ಸ್ಥಿರಾಸ್ತಿ ಮಾಡಿಕೊಳ್ಳಲಾರರು. ಹಣಕಾಸಿನ ಮಟ್ಟಿಗೆ ಇನ್ನೂ ನಿಶ್ಚಿತವಾದ ಒಪ್ಪಂದವಾಗಿಲ್ಲ–ಅದನ್ನು ವಿವರವಾಗಿ ಭವಿಷ್ಯದಲ್ಲಿ ಚರ್ಚಿಸಿ ನಿರ್ಣಯಿಸಲಾಗುವುದು.

ಔಚಿತ್ಯದ ಪ್ರಶ್ನೆ

ಮೇಲುನೋಟಕ್ಕೆ ಈ ರೀತಿಯ ಸಂಧಾನ ಸಮರ್ಪಕವೆಂದು ತೋರೀತು: ನಾಜೂಕಿನ ಈ ಪ್ರಸಂಗದಲ್ಲಿ ಭಾರತ ರಾಜ್ಯಘಟನೆಯ ಮೂಲತತ್ವಗಳಿಗೆ ಕುಂದುಂಟಾಗದಂತೆ ಹಾಗೂ ಕಾಶ್ಮೀರ ಜನತೆಯ ಮನೋಭಾವನೆಗೆ ಭಂಗವೊದಗದಂತೆ— ಜಾಗರೂಕತೆಯಿಂದ ಈ ಬಗೆಯ ನಿರ್ಣಯಕ್ಕೆ ಬಂದುದು ಸರಿ ಎನಿಸಬಹುದು, ಆದರೆ ನೆಹರೂ ಹೇಳಿಕೆಯು ಅನೇಕ ವಿಷಯಗಳಲ್ಲಿ ಸಮಗ್ರವಾಗಿರುವುದಿಲ್ಲ. ಹಣಕಾಸಿನ ಪ್ರಶ್ನೆಯಂಥ ಮಹತ್ವದ ಸಂಗತಿಯ ಬಗ್ಗೆ ಏನೊಂದೂ ನಿರ್ಧಾರಕ್ಕೆ ಬಾರದಿರುವುದು ಅಪಾಯಕರ. ಹಾಗೆಯೇ ಸಂರಕ್ಷಣ ವಿಷಯದ ಬಗ್ಗೆ ಸೇರ್ಪಡೆಹೊಂದಿದ ಕಾಶ್ಮೀರದಲ್ಲಿ ಗಂ[illegible]ತಿಕ ಪರಿಸ್ಥಿತಿಯನ್ನು ಘೋಷಿಸುವುದಕ್ಕೆ ಮೊದಲು, ಕಾಶ್ಮೀರ ವಿಧಾನ ಸಭೆಯ ಸಮ್ಮತಿ ಪಡೆಯಬೇಕೆನ್ನುವುದರ ಔಚಿತ್ಯ ಸ್ಪಷ್ಟವಿಲ್ಲ. ಹಾಗೆಯೇ ಮೂಲಭೂತ ಹಕ್ಕುಗಳ ಸಂಬಂಧದಲ್ಲಿ ಭಾರತದ ರಾಜ್ಯಘಟನೆಯು ಕಾಶ್ಮೀರಕ್ಕೆ ಅನ್ವಯಿಸುವುದೆಂದಿದ್ದರೂ– ಭೂಸುಧಾರಣೆಯಲ್ಲಿ ಕಾಶ್ಮೀರ ಈಗಾಗಲೇ ಇಟ್ಟಿರುವ ಹೆಜ್ಜೆ ಘಟನೆಯ ತತ್ವಕ್ಕೆ ವಿರೋಧವಿದೆ ಎಂಬ ಸಂಗತಿಯನ್ನು ಉಪೇಕ್ಷಿಸಿದಂತಾಗಿದೆ. ಭಾರತದ ಘಟನೆಯಂತೆ, ಭೂಮಿಯನ್ನು ರೈತರಿಗೆ ಹಂಚಿಕೊಡುವಾಗ, ಜಮೀನುದಾರರಿಗೆ ಪರಿಹಾರ ಕೊಡಬೇಕಾಗುವುದು. ಆದರೆ ಶೇಕ್ ಅಬ್ದುಲ್ಲಾರ ಸರಕಾರ, ಏನೂ ಪರಿಹಾರ ಕೊಡದೆ, ರೈತರಿಗೆ ಭೂಮಿ ಒದಗಿಸಿದೆ. ಜಮೀನುದಾರರಿಗೆ ಸ್ವಲ್ಪ ಮಟ್ಟಿನ ಭೂಮಿಯನ್ನು ಇಟ್ಟುಕೊಳ್ಳಲು ಬಿಟ್ಟಿದೆಯಾದುದರಿಂದ ಅವರಿಗೇನೂ ಆತಂಕವಿಲ್ಲೆಂದೂ, ಅಥವಾ ಅಲ್ಲದೆ "ಒಮ್ಮೆ ಮಾಡಿದುದನ್ನು ಬದಲಾಯಿಸಲು ಬರುವುದಿಲ್ಲ"ವೆಂಬುದರಿಂದ, ಈ ಮಟ್ಟಿಗೆ ಸುಮ್ಮನುಳಿಯಬೇಕೆಂದೂ ಹೇಳುವುದು ಪೊಳ್ಳು ಸಮಾಧಾನ.

ಸಮಾಧಾನ

ಹೀಗಿದ್ದರೂ ನೆಹರೂ ಮತ್ತು ಶೇಕ ಅಬ್ದುಲ್ಲಾ ಇಬ್ಬರೂ ಒತ್ತಿಯೊತ್ತಿ ಹೇಳುವ ಒಂದು ಸಂಗತಿಯೆಂದರೆ– ಕಾಶ್ಮೀರವು ಭಾರತದ್ದೇ ಅಂಗವಲ್ಲದೆ, ಬೇರೆಯಲ್ಲ. ಕಾಶ್ಮೀರದ ವಿಶಿಷ್ಟ ಪರಿಸ್ಥಿತಿ ಮತ್ತು ಸಮಸ್ಯೆಯ ಮಹತ್ವವನ್ನು ಮನಗಂಡು–ಅದಕ್ಕೆ ವಿಶೇಷವಾದ ಸ್ಥಾನಮಾನವನ್ನು ಕೊಡಬೇಕಾದುದು ಅನಿವಾರ್ಯ. ಕಾಶ್ಮೀರ ಏಷಿಯಾದ ಕಣ್ಣು: ಅಲ್ಲದೆ ಜನರನ್ನು ಪ್ರೀತಿಯಿಂದ ಒಲಿಸಬೇಕೆ ಹೊರತು ಬಲಾತ್ಕಾರ ಪ್ರಯೋಗದಿಂದಲ್ಲ. ಹೀಗೆಲ್ಲ ಇರುವುದರಿಂದ ನಾವು ಈ ಮಾತುಕತೆ ಫಲಪ್ರದವಾಯಿತೆಂದು ಒಪ್ಪಿಕೊಂಡು ಕುಳಿತಿರುವುದೊಳ್ಳೆಯದು. ಶೇಕ ಅಬ್ದುಲ್ಲ ಪಾರ್ಲಿಮೆಂಟಿನ ಕಾಂಗ್ರೆಸು ಸದಸ್ಯರನ್ನು ಉದ್ದೇಶಿಸಿ ಮಾತನಾಡಿ "ನಾನು ಎಂದಿನಿಂದಲೂ ಭಾರತದ ನಿಷ್ಠಾವಂತ ನಾಗರಿಕ: ರಾಜ್ಯಘಟನೆಗೆ ಸಹಿ ಹಾಕಿದವರಲ್ಲಿ ನಾನೊಬ್ಬನೆಂಬುದನ್ನು ಮರೆಯದಿರಿ. ಕಾಶ್ಮೀರ ಸರಕಾರವು ಎಂದಿಗೂ ಭಾರತದ ಘಟನೆ ವಿರುದ್ಧ ನಡೆಯಲಾರದೆಂಬ ನನ್ನ ಮಾತಿನಲ್ಲಿ ವಿಶ್ವಾಸವಿಡಿ. ಭಾರತದ ಸ್ವಾತಂತ್ರ್ಯ ಹೋರಾಟದಿಂದಲೇ ಸ್ಫೂರ್ತಿ ಪಡೆದು, ಕಾಶ್ಮೀರಿಗಳೂ ಹೋರಾಡಿದರು. ಅವರ ಆಸೆ ಆಕಾಂಕ್ಷೆಗಳಿಗೆ ತಣ್ಣೀರೆರಚಬೇಡಿರಿ" ಎಂದು ಕಳಕಳಿಯಿಂದ ವಿನಂತಿಸಿದರು. ಇದರ ಮೇಲಿಂದ ಹೇಳುವುದಾದರೆ–ಕೆಲವು ಆಚರಣೆಗಳ ಮಟ್ಟಿಗೆ ಅವಾಸ್ತವ ಮಹತ್ವ ಕೊಡದೆ, ಸಮಾಧಾನದಿಂದ ಇರುವುದೇ ಮೇಲೆನ್ನಬಹುದು.

ಭೂಸುಧಾರಣೆ

ಕಾಶ್ಮೀರ ಪ್ರಕರಣದಲ್ಲಿ ಧುರೀಣರ ಪ್ರತಿಕ್ರಿಯೆ ಏನೆಂಬುದು ಇನ್ನೂ ಖಚಿತವಾಗಿಲ್ಲ––ಅಲ್ಲಿ ಭೂಸುಧಾರಣೆಯು ಜಮೀನುದಾರರಿಗೆ ಪರಿಹಾರವಿಲ್ಲದೆ ನಡೆಯುತ್ತಿದೆ ಎಂಬುದನ್ನು ಕೇಳಿದಾಗ––ಇಲ್ಲಿಯ ಕಮ್ಯೂನಿಸ್ಟ ಹಾಗೂ ಸೋಶಲಿಸ್ಟರು, ಭಾರತದಲ್ಲಿಯೂ ಈ ರೀತಿ ಭೂಸುಧಾರಣೆಯಾಗಿ, ಭೂಮಿಯ ಒಡೆತನ ರೈತರಿಗೆ ಸೇರಬಾರದೇಕೆ? ಎಂದು ಕೇಳಿದ್ದುಂಟು. ಆದರೆ ಘಟನೆಯಲ್ಲಿ ಪರಿಹಾರ ಕೊಡದೆ ಭೂಮಿ ಕಸಿದುಕೊಳ್ಳುವುದಿಲ್ಲವೆಂದು ಆಶ್ವಾಸನೆ ಕೊಟ್ಟುದರಿಂದ, ಈ ರೀತಿಯ "ಕ್ರಾಂತಿ" ನಡೆಯಲಿಲ್ಲ. ಮದ್ರಾಸು ಶಾಸನ ಸಭೆಯು ಜಮೀನುದಾರಿ ನಿರ್ಮೂಲನ ಶಾಸನವನ್ನು ಮಾಡಿದರೂ –ಅದನ್ನು ಜಾರಿಗೆ ತರುವ ಪರಿಸ್ಥಿತಿ ಇನ್ನೂ ನಿರ್ಮಾಣಗೊಂಡಿಲ್ಲ. ಭೂಸುಧಾರಣೆಗಳ ಬಗ್ಗೆ ಮೂರು ಮೂರು ಸಮಿತಿ

ಪ್ರೆಸ್ಸಿನ ತರಬೇತಿ

ಪ್ರೆಸ್ಸಿನ ಬೇರೆ ಬೇರೆ ವಿಭಾಗಗಳಲ್ಲಿ ಅಂದರೆ, ಬೈಂಡಿಂಗ್, ಕಂಪೋಸಿಂಗ್, ಪ್ರಿಂಟಿಂಗ್, ಪ್ರೂಫ್ ರೀಡಿಂಗ್‌ಗಳಲ್ಲಿ ಅವರವರ ಅಭಿರುಚಿಗನುಸಾರವಾಗಿ ತರಬೇತಿಗಾಗಿ 14 ಯಾ 15 ವರ್ಷದ ಕೆಲವು ಹುಡುಗರನ್ನು ತೆಗೆದುಕೊಳ್ಳಲಾಗುತ್ತದೆ. ಹೆಚ್ಚಿನ ವಿವರಕ್ಕೆ ಉತ್ತರಕ್ಕಾಗಿ 0–2–0 ಸ್ಟಾಂಪಿನೊಂದಿಗೆ ಬರೆಯುವುದು

ಮ್ಯಾನೇಜರ್

ನವಯುಗ ಪ್ರೆಸ್, ಉಡುಪಿ.

ಋತುಸ್ರಾವ ನಿಂತಿತು

'ಕುಸುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಕಟ್ಟಿ ಋತುಸ್ರಾವವಾಗುವುದು, ಸಕೋಟಿಗ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾಧಾರಣ ಕುಂದಿಗೆ ಶಾಸ್ತ್ರಿ ಗುಣವಾಗಿಕೆ– ತಲೆ ರೂ. 3-] ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8-] ಪಿ ಹ ಪತ್ತಿರಣಾಶ ಪ್ರತ್ಯೇಕ]

Mrs. D. DEVEE, F. DS. (N. J.)

Tollygunge CALCUTTA.

ಸ್ಟಾಕಿಸ್ಟರು: ಶಹಾ ಕಂಪನಿ, ಮಂಗಳೂರು.

ZANDU Mahayogaraja Guggula

ಝಂಡೂ ಮಹಾಯೋಗರಾಜ ಗುಗ್ಗುಳ

ನರಗಳ ಅತೀ ಹಳೆಯ ದುರ್ಬಲತೆ, ವಾತರಕ್ತ, ಸೊಂಟದ ಕೆಳಗಿನ ಅರ್ಧಾಂಗವಾತ, ಪಕ್ಷವಾತ, ಗೃಧ್ರಸೀ ಸಡುನೋವು ಮೊದಲಾದ ಬೇನೆಗಳಿಗೆಲ್ಲಾ ಅಪ್ರತಿಮ ದಿವ್ಯೌಷಧ. 1 **ತೊಲೆಗೆ ರೂ 3/- ಮಾತ್ರ.**

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ

2 ಶ್ರೀ ವಿ. ವಿ ಶೆಣೈ, ಕೆಮಿಸ್ಟ್, ಕಾರ್ಕಳ.

3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.

4 ಎಲ್. ಎಸ್. ಶರ್ಮ, ಪಜೂರು ರಸ್ತೆ ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರತಿನಿಧಿಯಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರ ಶರತ್ತು [illegible] ಬರೆಯಿರಿ.

DAMODAR & CO.,

Nainiappa Naicken Street, Park Town–**MADRAS** 3.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಕ್ರಿಮಿ ವಿಷ ಮುಂತಾದವು, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಉಳುಕಿಗೆ

ಮದ್ದು

ನಮ್ಮಲ್ಲಿ

ಸಿಕ್ಕುತ್ತ

ಅಮೃತಾಂಜನ ಲಿಮಿಟೆಡ್

ಮದ್ರಾಸು, ಬೊಂಬಾಯಿ ಮತ್ತು ಕಲ್ಕತ್ತ

—ರೈತರಿಗೆ ಆಶ್ವಾಸನೆ

ಭೂಸುಧಾರಣೆಯ ಕುರಿತು ಆಗ್ರಹ

ತಿಳು ವರದಿಯನ್ನು ಸಲ್ಲಿಸಿವೆ. ಹಾಗೆಂದು ರೈತರ ಸ್ಥಿತಿಗತಿಯನ್ನು ಸುಧಾರಿಸುವ ಬಗ್ಗೆ ಏನೂ ಕಾಯಿದೆ ರಚಿಸಲ್ಪಡಲಿಲ್ಲ. ಒಕ್ಕಲೆಬ್ಬಿಸುವುದು ನಿತ್ಯ ಘಟನೆಯಾಗಿದೆ ಎಂದು ಶಾಸನ ಸಭೆಯಲ್ಲಿ ಭೂಕಂದಾಯದ ಕುರಿತು ಬೇಡಿಕೆಯ ಚರ್ಚೆ ನಡೆಯುವಾಗ ಸದಸ್ಯರು ದೂರಿದರು. ಕಮ್ಯೂನಿಸ್ಟ ಸದಸ್ಯರಂತೂ—ಜಮೀನುದಾರರಿಗೆ ಪರಿಹಾರ ಕೊಡುವ ಪದ್ಧತಿಯನ್ನು ಕಟುವಾಗಿ ಟೀಕಿಸಿದರು. ಒಬ್ಬ ಸದಸ್ಯರು ಈ ವಿಷಯದಲ್ಲಿ— ಪ್ರಧಾನಿ ನೆಹರೂ ಕಾಶ್ಮೀರದ ಬಗ್ಗೆ ಕೊಟ್ಟ ಹೇಳಿಕೆಯನ್ನು ಎತ್ತಿಕೊಂಡರು. ಕಾಶ್ಮೀರದಲ್ಲಿ ಪರಿಹಾರ ಕೊಡದೆ ಭೂಸುಧಾರಣೆ ಜಾರಿಗೆ ಬರಬಹುದಾದರೆ— ಇಲ್ಲಿ ಏಕಿಲ್ಲ ಎಂದವರ ವಾದವಾಗಿತ್ತು. ಇನ್ನು ಕೆಲವು ಸದಸ್ಯರು ಜಮೀನುದಾರರಿಗೆ ಈಗ ತಿಂದುಣ್ಣಲು ಏನೂ ಕಡಿಮೆ ಇಲ್ಲವಾದುದರಿಂದ, ಪರಿಹಾರವನ್ನು ಸರಕಾರಕ್ಕೆ ಅನುಕೂಲವಾದಾಗ ಕೊಟ್ಟರೆ ಸಾಕೆಂದೂ— ಈಗಿನ ಹಣಾಭಾವದ ಪರಿಸ್ಥಿತಿಯಲ್ಲಿ, ಜಮೀನುದಾರರಿಗೆ ಬಹಳ ಕಷ್ಟದಿಂದ ಹಣ ಒಪ್ಪಿಸುವುದು ಅನಗತ್ಯವೆಂದೂ ಹೇಳಿದರು. ಮಲೆನಾಡಿನಲ್ಲಿ ಅಪಾರ ಸಂಪತ್ತು ಇದ್ದರೂ— ಅಲ್ಲಿಯ ಸ್ಥಿತಿ ಶೋಚನೀಯ. ಒಕ್ಕಲಿಗರಿಗೆ ಹೊಸ ಹುಮ್ಮಸ್ಸನ್ನೂ ಉತ್ಸಾಹವನ್ನೂ ಕೊಡುವ ಕಾಯಿದೆಯಾಗದಿದ್ದರೆ— ಗಂಡಾಂತರ ಸಂಭವಿಸುವುದು ನಿಶ್ಚಯ ಎಂದು ಕಾಂಗ್ರೆಸು ಸದಸ್ಯರೂ ಅಭಿಪ್ರಾಯಪಟ್ಟರು.

ಒಕ್ಕಲಿಗರಿಗೆ ಆಶ್ವಾಸನೆ

ಕೃಷಿಕರ ಕಷ್ಟ ನಷ್ಟಗಳನ್ನು ಬಣ್ಣಿಸುವಾಗ— ಮುಖ್ಯಮಂತ್ರಿ ರಾಜಗೋಪಾಲಾಚಾರಿ, ಅನ್ಯಾಯವನ್ನು ನಿಶ್ಚಯವಾಗಿಯೂ ತೊಲಗಿಸುವೆನೆಂದು ಆಶ್ವಾಸನೆ ಕೊಟ್ಟರು. ಭೂಮಾಲಿಕ ಹಾಗೂ ರೈತರೊಳಗೆ ನ್ಯಾಯವಾದ ನಡವಳಿಕೆ ಇರಬೇಕೆಂಬುದು ಸರಕಾರದ ಇಚ್ಛೆ. ಕೃಷಿಯಲ್ಲಿ ತೊಡಗಿದ ಜನರಿಗೆ ಕಷ್ಟ ಉಂಟಾದಲ್ಲಿ— ಅದನ್ನು ನಿವಾರಿಸುವುದಕ್ಕೆ ಸರಕಾರ ಸದಾ ಸಿದ್ಧವಿದೆ. "ರೈತರ ಪರಿಸ್ಥಿತಿಯನ್ನು ನಿಶ್ಚಯವಾಗಿಯೂ ಅಭಿವೃದ್ಧಿಗೊಳಿಸಲು ನಾನು ಪ್ರಯತ್ನಿಸುವೆನು" ಎಂದು ಮುಖ್ಯಮಂತ್ರಿ ಭರವಸೆಕೊಟ್ಟರು. ನ್ಯಾಯದಾನಕ್ಕಾಗಿ ಮತ್ತು ಮಾನವೀಯ ಸೌಜನ್ಯಕ್ಕಾಗಿ ಸರಕಾರ ಹೆಣಗುವುದು. ಕೃಷಿಕರ ಬಗ್ಗೆ ಒಳ್ಳೆಯದನ್ನು ಮಾಡುವ ಪ್ರಯತ್ನದಲ್ಲಿ ನಾನು ಅಯಶಸ್ವಿಯಾದರೆ ಇದನ್ನು ಈ ಸಭೆಯ ಮುಂದೆ ಒಡನೆಯೇ ಒಪ್ಪಿಕೊಳ್ಳುವೆ." ಭೂಮಾಲಿಕರಿಗೂ ನಾನು ಹೇಳುವುದು ಇದೇ—ನ್ಯಾಯ ಬಿಟ್ಟು ನಡೆಯಬೇಡಿರಿ. ಹೀಗೆ ರಾಜಾಜಿ ರೈತರಲ್ಲಿ ನವಸ್ಫೂರ್ತಿಯನ್ನು ತುಂಬಿದಂತೆ, ಅನ್ಯಾಯಿಗಳಾದ ಭೂಮಾಲಿಕರಿಗೆ ಎಚ್ಚರಿಕೆಯನ್ನು ಕೊಟ್ಟರು. ಆಹಾರೋತ್ಪಾದನೆಯ ಬೆಂಗೋಲಾಗಿರುವ ರೈತರ ಸ್ಥಿತಿ ಉತ್ತಮಗೊಳ್ಳಬೇಕೆಂದು ಎಲ್ಲರೂ ಬಯಸುವುದು ಸ್ವಾಭಾವಿಕ: ಭಾರತ ಸರಕಾರವೂ ಈ ಮಟ್ಟಿಗೆ ಅನುಕೂಲವಿದೆ: ರಾಜ್ಯಘಟನೆಯಲ್ಲಿಯೂ ಇದಕ್ಕೆ ಅವಕಾಶವಿದೆ. ಈಗ ತೊಡಗಿರುವ ಜನಪದ ಅಭಿವೃದ್ಧಿ ಯೋಜನೆಗಳೂ ಗ್ರಾಮಾಭಿವೃದ್ಧಿಯ ಧ್ಯೇಯವುಳ್ಳವುಗಳಾಗಿದ್ದರೂ— ಉತ್ಪಾದನೆಯನ್ನು ಹೆಚ್ಚಿಸುವುದು ಅವುಗಳ ಪ್ರಮುಖ್ಯ ಉದ್ಯಮವೆಂಬುದು ಸ್ವತಃ ಸಿದ್ಧ. ಪರಿಶ್ರಮ ಪೂರ್ವಕವಾಗಿ, ಅಧಿಕಾರಿಗಳೂ ಕೃಷಿಕರೂ ಜೊತೆಗೂಡಿ ದುಡಿದರೆ— ಇವು ಯಶಸ್ಸು ಪಡೆಯುವುವೆಂದು ವಿದೇಶಿ ತಜ್ಞರೂ ಅಭಿಪ್ರಾಯಪಟ್ಟಿರುವರು.

—ವಿದ್ಯುಚ್ಛಕ್ತಿಯ ವ್ಯಾಮೋಹ

ಹಳ್ಳಿ ಹಳ್ಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಿ ಕೊಡಬೇಕೆಂದು ಸದಸ್ಯರು ಶಾಸನ ಸಭೆಯಲ್ಲಿ ಬೇಡಿಕೆ ಮಂಡಿಸಿದಾಗ, ಮುಖ್ಯ ಮಂತ್ರಿ ರಾಜಗೋಪಾಲಾಚಾರಿ ರೈತರ ಸಂಪತ್ತು ಎತ್ತುಗಳು ಎಂದು ಉಪದೇಶಿಸಿದರು. ಇದು ಬಹಳ ಸರಳವಾದ ಮಾತು: ಹಾಗೆಯೇ ಮಹತ್ವದ್ದೂ ಸಹ. ನಾವು [illegible] ದಿನಕ್ಕೆ ಕೇಂದ್ರೀಕೃತ ಉದ್ಯಮಗಳ ಕಡೆಗೆ ಒಲವನ್ನು ತೋರುತ್ತ ನಡೆಯುತ್ತಿದ್ದೇವೆ. ಕೈಗಾರಿಕೆಗಳಂತೂ ದೊಡ್ಡ ದೊಡ್ಡ ಕಾರಖಾನೆಗಳಲ್ಲಿ ಕೇಂದ್ರೀಕೃತ ರೂಪದಿಂದ ಪ್ರಾಬಲ್ಯಹೊಂದುತ್ತಿವೆ. ಇನ್ನು ಮುಂದೆ ಕೃಷಿಯಲ್ಲಿಯೂ ಯಾಂತ್ರೀಕರಣದ ವ್ಯಾಮೋಹ ಬಂದು, ಅದು ಸಹ ಕೇಂದ್ರೀಕೃತ ಸ್ವರೂಪವನ್ನು ತಳೆದರೆ— ಭಾರತದ ಭವಿಷ್ಯ ಚೆನ್ನಾಗಲಾರದು. ಕೃಷಿಕ್ರಮದಲ್ಲಿ ಅನುಕರಣೀಯವಾದ ಸುಧಾರಣೆಗಳನ್ನು ಕಾರ್ಯಗತಗೊಳಿಸುವುದು ಇಷ್ಟವಾದರೂ— ವಿದ್ಯುಚ್ಛಕ್ತಿಯ ಬಲದಿಂದ ಕೆಲಸ ಹಗುರ ಮಾಡಿಕೊಳ್ಳುವ ಬಯಕೆಗೆ ನಾವು ಬಲಿಬೀಳಲಾಗದು. ಯಾಂತ್ರೀಕರಣಕ್ಕೂ ಪಶುಬಲಕ್ಕೂ ನಡುವೆ ಸಮನ್ವಯವನ್ನು ಸಾಧಿಸಿಕೊಳ್ಳಬೇಕಾದುದು ಬಹಳ ಅಪೇಕ್ಷಣೀಯ. ಸಣ್ಣ ಸಣ್ಣ ರಾಷ್ಟ್ರಗಳಲ್ಲಿ ವಿದ್ಯುಚ್ಛಕ್ತಿಯ ಬಲದಿಂದ, ಕೇಂದ್ರೀಕೃತ ರೂಪದಿಂದ, ಕೃಷಿಯನ್ನು ನಡೆಸುವುದು ಅನುಕೂಲವೆನಿಸಬಹುದು. [illegible]ದಂಥ ವಿಶಾಲ ದೇಶದಲ್ಲಿ [illegible] ಜನಬಲವೂ ಅತ್ಯಧಿಕ [illegible]ದಲ್ಲಿರುವಾಗ— ವಿಕೇಂದ್ರೀಕರಣಕ್ಕೇನೇ ಮನಸ್ಸು ಕೊಡಬೇಕು. ವಿದ್ಯುಚ್ಛಕ್ತಿಯ ತಂತಿಗಳನ್ನು ಕಡಿದುಬಿಟ್ಟರೆ ಸಾಕು—ಇಡೀ ನಗರದ ಕಾರ್ಯಕಲಾಪಗಳೇ ಸ್ಥಗಿತಗೊಳ್ಳುವುವು. ಇಂಥದರಲ್ಲಿ ಎತ್ತು ಕೋಣಗಳನ್ನು ಅಲಕ್ಷಿಸದೆ, ಪ್ರೋತ್ಸಾಹಿಸಿ ಬೆಳೆಸುವುದೇ ಯೋಗ್ಯ ಎಂದು ರಾಜಗೋಪಾಲಾಚಾರಿ ಹೇಳಿದುದು ಅಕ್ಷರಶಃ ಸತ್ಯ. ಮಹಾತ್ಮಾ ಗಾಂಧೀ ವಿಕೇಂದ್ರೀಕರಣವನ್ನು ಪ್ರತಿಪಾದಿಸುತ್ತಿದ್ದುದನ್ನು ಇಷ್ಟು ಬೇಗನೇ ನಾವು ಮರೆಯುವುದು ಬೇಡ.

ಹರಿಜನರು

ಹರಿಜನೋದ್ಧಾರದ ಬೇಡಿಕೆಯನ್ನು ಚರ್ಚಿಸುವಾಗ, ಸಮಸ್ಯೆಯ ಆರ್ಥಿಕ ಹಾಗೂ ಸಾಮಾಜಿಕ ಮುಖಗಳ ಮೇಲೆ ಸದಸ್ಯರು ಬೆಳಕು ಚೆಲ್ಲಿದರು. ಭೂಮಿ ಇಲ್ಲದ ಒಕ್ಕಲಿಗರಾಗಿಯೇ ಹರಿಜನರು ಈಗ ಉಳಿದಿರುವರು: ಅವರಿಗೆ ಭೂಮಾಲಿಕರ ಅನುಗ್ರಹ ಬಲವೊಂದೇ ಆಶ್ರಯವಲ್ಲದೆ, ನಿಶ್ಚಿತವಾದ ಕೂಲಿಯ ಪ್ರಮಾಣದ ಆಶ್ವಾಸನೆ ಏನೂ ಇಲ್ಲ. ಸಾಮಾಜಿಕ ರೂಪದಿಂದಲೂ ಅವರ ಸ್ಥಿತಿಗತಿ ಸುಧಾರಿಸಿಲ್ಲ— ಕಾಯಿದೆ ಪಾಸಾದರೂ, ಭೇದಭಾವವು ಅಳಿದುಹೋಗಿಲ್ಲ ಇದು ಕಾಯಿದೆಯಿಂದಲೇ ಜನರ ಮನಃ ಪರಿವರ್ತನೆಯನ್ನು ಮಾಡಲಾರೆವೆಂಬುದಕ್ಕೆ ಇನ್ನೊಂದು ರುಜುವಾತು. ಯೋಗ್ಯ ಶಿಕ್ಷಣದ ಮೂಲಕವೇ ಜನರಲ್ಲಿ ನೈತಿಕ ಮಟ್ಟವನ್ನು ಎತ್ತರಿಸಲು ಬರುವಂತೆ— ಸಾಮಾಜಿಕ ದೃಷ್ಟಿಯಲ್ಲಿಯೂ ಪರಿಮಾರ್ಜನೆಯಾಗುವುದು ಸಾಧ್ಯ. ಹೀಗಿರುವುದರಿಂದ ಮೊದಲು ಶಿಕ್ಷಣಕ್ಕೆ ಪ್ರಾಶಸ್ತ್ಯ ಕೊಡಬೇಕೆನ್ನುವುದಾಗಿದೆ

ರೊಕ್ಕದ ಪೈರು

ಮಲಬಾರಿನಲ್ಲಿ ಕೇಂದ್ರ ಆಹಾರ ಮಂತ್ರಿ ಕಿದ್ವಾಯಿ ಈಚೆಗೆ ಸಂಚಾರ ಕಾರ್ಯಕ್ರಮ ಇಟ್ಟುಕೊಂಡಾಗ— ಅವರಿಗೆ ಒಮ್ಮಿಂದೊಮ್ಮೆ ಸ್ಫೂರ್ತಿ ಬಂದು, ಹೊಸತೊಂದು ತೆರಿಗೆಯ ಸೂಚನೆ ಹೊಳೆಯಿತು. ಮುಖ್ಯವಾಗಿ ಶುಂಠಿ, ಮೆಣಸುಗಳೇ ಉತ್ಪನ್ನವಾಗುವ ಮಲಬಾರು ಜೀವನಾವಶ್ಯಕವಾದ ಬೆಳೆಗೆ ಹಿಂದುಳಿದು, ಅನ್ನದ ಪ್ರಶ್ನೆ ಬಗೆಹರಿಸಿಕೊಳ್ಳದಾಗಿದೆ. ಶುಂಠಿ ಮೆಣಸುಗಳು ರೊಕ್ಕದ ಪೈರುಗಳಾಗಿವೆಯಾಗಿ— ರೈತರಲ್ಲಿ ಯಾರೂ ಅಕ್ಕಿ ಬೆಳೆಯ ಕಡೆಗೆ ಹೆಚ್ಚಿನ ಲಕ್ಷ್ಯಕೊಡುವುದಿಲ್ಲ. ದೇಶದ ಇಂದಿನ ಪರಿಸ್ಥಿತಿಯಲ್ಲಿ ವಿಪರೀತ ವೆಚ್ಚ ಮಾಡಿ, ಆಹಾರ ಧಾನ್ಯಗಳನ್ನು ಆಮದು ಮಾಡಬೇಕಿರುವುದರಿಂದ, ಅದರಲ್ಲಿ ಒಂದು ಪಾಲನ್ನು ರೊಕ್ಕದ ಪೈರು ಬೆಳೆಯುವ ರೈತರು ಕೊಟ್ಟರಾಗದೇ? ಎಂಬ ಯೋಜನೆ ಕಿದ್ವಾಯಿಯವರ ಮಿದುಳನ್ನು ಸೇರಿದೆ: ಪರಿಣಾಮವಾಗಿ ಸದ್ಯದಲ್ಲಿಯೇ, ರೊಕ್ಕದ ಪೈರಿನ ಮೇಲೆ ಹೇಗೆ ತೆರಿಗೆ ಹೊರಿಸಿ, ಹಣ ಸಂಗ್ರಹಿಸಲು ಬರುವುದೆಂಬುದನ್ನು ಅವರು ಕಲಂಕಷವಾಗಿ ವಿಚಾರಿಸುವರು.

BBC/52/107/8

ಆದರೆ . ಸ್ವಚ್ಛವಾಗಿ ಪೊಟ್ಟಣ ಕಟ್ಟಲ್ಪಟ್ಟ ಉತ್ತಮ ತಯಾರಿಕೆಯ ತಾಜಾ ಚಹವು — ಅದು ಬ್ರೂಕ್ ಬಾಂಡ್ ಚಹವೇ ಆಗಿದ್ದಲ್ಲಿ — ಮಿತವ್ಯಯಕರವೂ ಆಗಿರುವುದೆಂದು ಲಕ್ಷ್ಮಿಯು ಒಪ್ಪಿ ಹೇಳಿದಳು ನನ್ನ ಮಹದಾಶ್ಚರ್ಯಕ್ಕೆ ಅಂದಿನ ದಿನವೇ ಮೊದಲನೆ ಸಾರಿಗೆ ನಾನು ಕೊಂಡ ಬ್ರೂಕ್ ಬಾಂಡ್ ಪೊಟ್ಟಣದ ಚಹವು ಅಂದಿನವರೆವಿಗೂ ಉಪಯೋಗಿಸುತ್ತಿದ್ದ ಬುದರಾ ಚಹಾಗಿಂತ ಗುಣದಲ್ಲಿ ಅತಿ ಶ್ರೇಷ್ಠವಾಗಿದ್ದುದೂ ಅಲ್ಲದೆ, ಮೊದಲಿನಷ್ಟೇ ಬಟ್ಟಲುಗಳಷ್ಟು ಚಹಾ ಮಾಡಲು ಮೊದಲಿಗಿಂತ ಕಮ್ಮಿ ಚಹಾ ಪುಡಿ ಸಾಕಾಯಿತು ಅಂದಿನಿಂದ ಮನೆಗೆ ತಂದ ಪ್ರತಿಯೊಂದು ಬ್ರೂಕ್ ಬಾಂಡ್ ಪೊಟ್ಟಣವೂ ಲಕ್ಷ್ಮಿಯು ಹೇಳಿದ್ದು ಎಷ್ಟು ನಿಜವೆಂಬುದನ್ನು ಸಮರ್ಥಿಸಿದೆ

ಬ್ರೂಕ್ ಬಾಂಡ್ ಚಹಾ

ಭಾರತದ ಅತ್ಯುತ್ತಮ ಪೊಟ್ಟಣಗಳಲ್ಲಿ ಭಾರತದ ಅತ್ಯುತ್ತಮ ಚಹಾ.

ನವಯುಗದ ಬೆಳ್ಳಾರಿ ಏಜಂಟರ:
ಬಿ. ಎಸ್. ಜೋಶಿ,
ನ್ಯೂಸ್ ಏಜಂಟ್, ಬೆಳ್ಳಾರಿ

You Cannot But Choose
The Canara Banking Corporation Ltd.
for Ideal Banking
in the States of Madras, Mysore, Bombay, Coorg & U. S. T. C.
ESTD: 1906. H. O.: **UDIPI (S 1)**

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5—12—0
6 ತಿಂಗಳಿಗೆ ರೂ. 3—0—0

ಉಡುಪಿ, ಗುರುವಾರ ೩೧-೭-'೫೨

ಅಂಕುಶ ಪ್ರಯೋಗ

ಲೋಕಸಭೆಯಲ್ಲಿ ಪ್ರತಿಬಂಧಕ ಸ್ಥಾನಬದ್ಧತೆಯ ತಿದ್ದುಪಡಿ ಮಸೂದೆಯನ್ನು ಗೃಹಮಂತ್ರಿ ಡಾ| ಕಟಜೂ ಮಂಡಿಸಿದ ಬಳಿಕ, ವಾತಾವರಣಕ್ಕೆ ಅತಿರೇಕ ಕಾವು ಬಂತು. ವಿಚಾರಣೆ ಇಲ್ಲದೆ-ಗಂಡಾಂತರ ಸಂಸ್ಥಿತಿಯಲ್ಲಿ-ನಾಗರಿಕರನ್ನು ಕಾರಾಗೃಹದಲ್ಲಿರಿಸಲು ಈ ಮಸೂದೆ ಅವಕಾಶ ಮಾಡಿಕೊಡುವುದರಿಂದ, ಸ್ವಾಭಾವಿಕವಾಗಿಯೇ ವಿರೋಧೀ ಗುಂಪಿನವರು ಮಸೂದೆಯನ್ನು ಉಗ್ರವಾಗಿ ಟೀಕಿಸಿದರು; ಮಾತ್ರವಲ್ಲ, ತೀವ್ರ ಪ್ರತಿಭಟನೆಯನ್ನೂ ಸೂಚಿಸಿದರು. ಗೃಹ ಸಚಿವರು ತಿದ್ದುಪಡಿ ಮಸೂದೆಯನ್ನು ಮಂಡಿಸುವಾಗ, ಶಾಸನದ ಅವಧಿಯನ್ನು ಈ ಸಲವೇ ಇಸವಿಯ ಡಿಸೆಂಬರಾಂತ್ಯದವರೆಗೆ ಬೆಳೆಸುವುದು ಸರಕಾರದ ಇಚ್ಛೆಯೆಂದೂ ಹೊಸಪಾರ್ಲಿಮೆಂಟಿನ ಘನತೆ ಮತ್ತು ಗೌರವವನ್ನು ಕಾಯ್ದುಕೊಳ್ಳುವ ಉದ್ದೇಶದಿಂದ, ಹಿಂದಿನ ಪಾರ್ಲಿಮೆಂಟಿನಲ್ಲಿ ಕೇವಲ ಆರುತಿಂಗಳ ಮಟ್ಟಿಗೆ (ಎಂದರೆ ಈ ವರ್ಷದ ಸಪ್ಟಂಬರಾಂತ್ಯದ ವರೆಗೆ) ಜೀವದಾನ ಮಾಡುವ ಸೂಚನೆ ತಂದುದಾಗಿಯೂ ಹೇಳಿದರು. ಅವರು ಮಸೂದೆಯ ಅಗತ್ಯವನ್ನು ಬಿಂಬಿಸುವಾಗ ಎಷ್ಟು ದುಷ್ಕರರಾಗಿದ್ದರೆಂದರೆ — ವಿರೋಧಿ ಗುಂಪಿನ ಸಹಾನುಭೂತಿಯಂತಿರಲಿ, ಸಹನೆಗೂ ಬಲವಾದ ಪೆಟ್ಟನ್ನು ಕೊಟ್ಟರು. ಇದರಿಂದ ವಾತಾವರಣವು ಉದ್ರಿಕ್ತಾವಸ್ಥೆಗೆ ಏರಿತು. ಮೂಲಭೂತವಾದ ನಾಗರಿಕ ಹಕ್ಕುಗಳಿಗೆ ಕುಠಾರಪ್ರಾಯವಿರುವ ಪ್ರಸ್ತುತ ಮಸೂದೆಯ ತಿದ್ದುಪಡಿಯು ಅಲ್ಪಕಾರ್ಯವೆಂದು ಗೃಹಸಚಿವರು ಹಗುರಾಗಿ ಭಾವಿಸಿದ್ದರು. ಆದರೆ ಅವರ ಕಲ್ಪನೆಯೇ ಬುಡಮೇಲಾಗಿ, ನಾಲ್ಕಾರು ದಿನಗಳ ವರೆಗೆ ಬಿಸಿ ಬಿಸಿ ಚರ್ಚೆ ನಡೆಯಿತು, ವಿರೋಧೀ ಗುಂಪಿನವರ ಟೀಕೆಗಳಿಗೆ ಸರಿಯಾದ ಉತ್ತರವನ್ನು ಕೊಡುವಲ್ಲಿ ಸರಕಾರದ ಕಡೆಯವರು ಸಾಕಷ್ಟು ಸಮರ್ಥರಾಗಲಿಲ್ಲ. ಮಸೂದೆಗೆ ದೀರ್ಘಾವಧಿ ಜೀವದಾನವನ್ನು ಮಾಡಿ ನಿಶ್ಚಿಂತೆಯಿಂದ ಕಾಲ ಕಳೆಯಬೇಕೆಂಬ ಮನೋವೃತ್ತಿ ಇರುವದೆಂದು ಹೇಳುವಂತಿಲ್ಲ. ಅಗತ್ಯವಿದ್ದಲ್ಲಿ ಒಂದು ವರ್ಷದ ವರೆಗೆ ಅವಧಿಯನ್ನು ವಿಸ್ತರಿಸಿ, ಮುಂದೆ ಪರಿಸ್ಥಿತಿ ಹೇಗೆ ನಿಲ್ಲುವುದೆಂಬುದನ್ನು ನೋಡಿಕೊಂಡು ಮುನ್ನಡೆಯಬಹುದಿತ್ತು. ಇದರಿಂದ ವಿರೋಧಿ ಗುಂಪಿನವರ ಅಸಹನೆಯು ಕೆಲಮಟ್ಟಿಗೆ ಕಡಿಮೆಯಾಗುವುದರ ಜೊತೆಗೆ ನಾಗರಿಕರ ಹಕ್ಕುಬಾಧ್ಯತೆಗಳನ್ನು ಸರಕಾರವು ಕಸಿದುಕೊಂಡು ಸ್ವೇಚ್ಛೆಯಿಂದ ವರ್ತಿಸುತ್ತಿದೆ ಎಂಬ ಅಪವಾದವನ್ನು ಕಾಲಕಾಲಕ್ಕೆ ಪುನರ್ವಿಮರ್ಶಿಸಲಿಕ್ಕೂ ಆಸ್ಪದವಾಗುತ್ತಿತ್ತು. ರಾಜ್ಯಘಟನೆಯಲ್ಲಿ ಇಂಥ ಮಸೂದೆಯನ್ನು ಮಾಡಲು ಸರಕಾರದ ಕಾರ್ಯರಂಗಕ್ಕೆ ಅಧಿಕಾರ ಕೊಡಲಾಗಿದೆ ಎಂದ ಮಾತ್ರಕ್ಕೆ--ಅದರ ತಾತ್ಕಾಲಿಕ ಮಿತಿಯನ್ನು ಮತ್ತು ಸ್ವರೂಪವನ್ನು ಅಲಕ್ಷಿಸಿ ನಡೆಯಬೇಕೆನ್ನುವುದು ಸಮಂಜಸವಲ್ಲ. ಇದನ್ನು ದೃಷ್ಟಿಯಲ್ಲಿ ಇಟ್ಟುಕೊಂಡೆಂಬಂತೆ-- ಪ್ರಧಾನಿ ನೆಹರೂ ಉಚಿತವಾದ ಸಲಹೆಯನ್ನು ಮುಂದಿಟ್ಟರು: ಡಾ| ಶ್ಯಾಮ ಪ್ರಸಾದ ಮುಕರ್ಜಿಯವರು ತಿದ್ದುಪಡಿಯ ಅಂಶಗಳನ್ನಷ್ಟೇ ಅಲ್ಲ--ಇಡೀ ಮಸೂದೆಯನ್ನು ಪುನರ್ವಿಮರ್ಶಿಸಬೇಕಾದುದು ಸದ್ಯ ಅಗತ್ಯವೆಂದು ಹೇಳಿದುದಕ್ಕೆ ನೆಹರೂ ಒಪ್ಪಿಕೊಂಡರು. ಇದರ ಮೇಲಿಂದ ಹೇಳುವುದಾದರೆ- ನೆಹರೂ ವಿರೋಧಿ ಗುಂಪಿನೊಡನೆ ಹೊಂದಿಕೊಂಡು ಹೋಗಿ, ಪಾರ್ಲಿಮೆಂಟಿನ ಕಾರ್ಯಕಲಾಪಗಳಲ್ಲಿ ಸಾಮಂಜಸ್ಯ ಸ್ಥಾಪಿಸಲು ಎಷ್ಟರ ಮಟ್ಟಿಗೆ ಹೆಣಗುತ್ತಿರುವರೆಂಬುದು ವ್ಯಕ್ತವಾಗುತ್ತದೆ. ನೆಹರೂ ಈ ಬಗೆಯ ನಿಲುವು ತಳೆದುದರಿಂದ, ವಿರೋಧೀ ಗುಂಪಿನವರೂ ಸಮಾಧಾನಪಟ್ಟುಕೊಂಡರು. [illegible] ಉತ್ಸಾಹಕ್ಕೆ ಇದು ತಣ್ಣೀರೆರಚಿದರೂ, ನ್ಯಾಯ ಮತ್ತು ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ನೆಹರೂ ಸಂಧಾನವು ಯೋಗ್ಯ ಹೆಜ್ಜೆ ಎಂಬುದನ್ನು ಅಲ್ಲಗಳೆಯಬಾರದು. ಈಗ ಪಾರ್ಲಿಮೆಂಟಿನ ಎರಡೂ ಸಭೆಗಳ ಸಂಯುಕ್ತ ಪರಿಶೀಲನ ಸಮಿತಿಯು ಇಡೀ ಮಸೂದೆಯ ಪುನರವಲೋಕನ ನಡೆಸುತ್ತಿದೆ. ಸದ್ಯದ ತಿದ್ದುಪಡಿಯ ಔಚಿತ್ಯವನ್ನಷ್ಟೆ ವಿಮರ್ಶಿಸದೆ, ಸಮಗ್ರ ಮಸೂದೆಯು ಕೂಲಂಕುಶ ವಿವೇಚನೆಗೆ ಅವಕಾಶ ದೊರೆಯುವುದರಿಂದ ಸಮಿತಿಯ ಮಂಡಿಸು ಬಹಳ ಮಹತ್ವವನ್ನು ಪಡೆಯುವುದು ನಿಶ್ಚಯ. ಸರಕಾರವು ಯೋಗ್ಯ ಸಂದರ್ಭದಲ್ಲಿಯಷ್ಟೆ ಈ "ಕರಾಳ ಶಾಸನ"ವನ್ನು ಉಪಯೋಗಿಸುವುದೆಂಬುದನ್ನು ಸಿದ್ಧಪಡಿಸಿ ಕೊಡಬೇಕು--ಅದಕ್ಕೆ ತಪ್ಪಿ ಅನುಚಿತ ಪ್ರಸಂಗ[illegible]ದನ್ನು ಪ್ರಯೋಗಿಸಲಿಲ್ಲ ಎಂಬುದನ್ನು ಮನಗಾಣಿಸುವ ಬಗ್ಗೆಯೂ ಇದಕ್ಕೆ ತಪ್ಪಿ ಸರಕಾರ ನಡೆದರೆ ಏನು ಮಾಡಬೇಕೆಂಬುದರ ಕುರಿತೂ ಸಮಿತಿಯ ಸಿಫಾರಸು ಅಮೂಲ್ಯವೆನಿಸಬಹುದು. [illegible] ಮುಂದಿರುವ ಪ್ರಾತಿನಿಧಿಕ ಸಮಿತಿಯಲ್ಲಿ ವಿವಿಧಾಭಿಪ್ರಾಯದ- ವಿರೋಧೀ ಗುಂಪಿನ ಸದಸ್ಯರೂ ಸಮ್ಮಿಳಿತಗೊಂಡಿರುವುದರಿಂದ--ಅವರ ಧ್ವನಿಗೂ ಬೆಲೆಬಾರದಿರದು. ಶಾಸನವನ್ನು ತಾತ್ವಿಕ ದೃಷ್ಟಿಯಿಂದ ಅಗತ್ಯವೆಂದುಕೊಂಡೇ--ತಾಂತ್ರಿಕ ತೊಡಕುಗಳ ನಿವಾರಣೆಗೆ ಯತ್ನಿಸಬೇಕೆಂದು ಸಮಿತಿಗೆ ಆದೇಶ ನೀಡಲಾಗಿದೆಯಾಗಿ, ಸರಕಾರವು ವಿಶೇಷಾಧಿಕಾರವನ್ನು ಹೊಂದದ ಪರಿಸ್ಥಿತಿಯೇನೂ ಸಮಿತಿಯ ವರದಿಯಿಂದ ನಿರ್ಮಾಣವಾಗಲಾರದು. ಸಮಿತಿಯ ಸಿಫಾರಸಿನಂತೆ ನಡೆದರೆ ಈ ಮಸೂದೆ ಕುರಿತಾದ ತಕರಾರುಗಳೂ ಮುಂದೆ ಉಳಿಯಲಾರವಾದುದರಿಂದ ಸರಕಾರಕ್ಕೆ ತೊಂದರೆ ತಪ್ಪುವುದು.

ಸಾಹಿತಿ ಕಾರಂತರ ಪ್ರವಾಸಾನುಭವ

ಐರೋಪ್ಯರ ಸೌಜನ್ಯ ಮತ್ತು ದುಡಿದುಣ್ಣುವ ಬಾಳ್ವೆ ಅನ್ಯಾದೃಶ

ಕನ್ನಡದ ಸುಪ್ರಸಿದ್ಧ ಸಾಹಿತಿ ಮತ್ತು ಕಲಾವಿದ ಶ್ರೀ ಕೋಟ ಶಿವರಾಮ ಕಾರಂತರು ಈಚೆಗೆ ಯುರೋಪು ಪ್ರವಾಸವನ್ನು ಕೈಗೊಂಡು, ಇದೀಗ ಮರಳಿಬಂದಿರುವರು. ತಮ್ಮ ಎರಡು ತಿಂಗಳ ತಿರುಗಾಟದ ಅನುಭವವನ್ನು ಅವರು ವಿವರಿಸಿ ಹೇಳುವುದರ ಮೇಲಿಂದ- ಭಾರತದಜನ ಹೊರಗಿನದೇಶದ ಜನರಿಂದ ಕಲಿಯತಕ್ಕದಾದ ಅಮೂಲ್ಯ ಅಂಶಗಳೆಷ್ಟೋ ಇವೆ ಎಂಬ ಸಂಗತಿ ವ್ಯಕ್ತವಾಗುತ್ತದೆ.

ಉಡುಪಿಯ ಕರ್ನಾಟಕ ಸಂಘದವರು ದಿನಾಂಕ ೨೮ರಂದು "ಮುಕುಂದನಿವಾಸ"ದಲ್ಲಿ ಡಾ. ಟಿ. ಮಾಧವ ಪೈಯವರ ಅಧ್ಯಕ್ಷತೆಯಲ್ಲಿ ಶ್ರೀ ಕಾರಂತರ ಸತ್ಕಾರಕೂಟವನ್ನು ಏರ್ಪಡಿಸಿದಾಗ-ಸುದೀರ್ಘ ಭಾಷಣದ ಮೂಲಕ ಕಾರಂತರು ತಮ್ಮ ಅನುಭವದ ಸಾರವನ್ನು ವಿವರಿಸಿದರು:

ಐರೋಪ್ಯ ದೇಶಗಳ ಪ್ರವಾಸವನ್ನು ತಾನು ಕಲಾವಿದನ ದೃಷ್ಟಿಯಿಂದ, ಔದ್ಯಮಿಕ ಮುನ್ನಡೆಯಲ್ಲಿ ಆಸಕ್ತಿ ಉಳ್ಳವನೆಂಬ ಭಾವನೆಯಿಂದ ಮತ್ತು ಸಾಂಸ್ಕೃತಿಕ ಪ್ರಗತಿಯಲ್ಲಿ ವಿಶ್ವಾಸ ಪ್ರಕಟಿಸುವವನೆಂಬುದರಿಂದ--ಕೈಗೊಂಡುದಾಗಿ ಕಾರಂತರು ತಿಳಿಸಿದರು. ಪ್ರವಾಸ ಕಾಲವು ಅತ್ಯಲ್ಪವಾಗಿತ್ತು: ಅನುಭವವೂ ಮಿತವಾಗಿತ್ತು. ಜನಜೀವನದೊಡನೆ ನಿಕಟ ಸಂಪರ್ಕವನ್ನು ಬೆಳೆಸಿ, ಸುಖ ದುಃಖಗಳನ್ನು ತಿಳಿದುಕೊಂಡು ವಿಮರ್ಶೆಮಾಡಿ ನಿಷ್ಕರ್ಷೆಗೆ ಬರುವ ಅವಕಾಶವಿರಲಿಲ್ಲ, ನೂರಿನ್ನೂರು ಮೈಲು ರೈಲುಸಂಚಾರದ ಕಾಲದಲ್ಲಿ, ಕಿಟಕಿಯೆಡೆಯಿಂದ ಹಳ್ಳಿಗಳನ್ನು ನೋಡಿದ್ದು, ಹೊಲ ಮನೆಗಳನ್ನು ನೋಡಿದ್ದು, ಅಲ್ಲಲ್ಲಿ ನಗರಗಳಲ್ಲಿ ಕೆಲವೇ ಜನಗಳೊಡನೆ ಸೇರಿ ಮಾತನಾಡಿದುದು- ಈ ಪ್ರವಾಸದ ಸಾಮಗ್ರಿಯಾಗಬಹುದೇ ಹೊರತು, ಅದಕ್ಕೂ ಮಿಕ್ಕಿದುದಲ್ಲ. ಹಾಗೆಂದು, ಇಷ್ಟು ಮಿತ ಅನುಭವದಿಂದಲೇ- ನಾವು ತಿಳಿದುಕೊಳ್ಳಬೇಕಾದುದು, ಮತ್ತು ಮನನಮಾಡಿ ಅನುಷ್ಠಾನಕ್ಕೆ ತರಬೇಕಾದುದು ಬಹಳವಿದೆ.

ಇಂಗ್ಲೆಂಡಿನ ಮೂಲೆ ಮೂಲೆಯನ್ನು ತಾನು ತಿರುಗಿದುದಾಗಿ ಕಾರಂತರು ಹೇಳಿದರು: ಆಕ್ಸಫರ್ಡ ವಿಶ್ವವಿದ್ಯಾಲಯ, ಲಂಡನಿನ ಬ್ರಿಟಿಷ್ ಮ್ಯೂಸಿಯಂ ಮುಂತಾದ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕೇಂದ್ರಗಳನ್ನು ಅವರು ಬಣ್ಣಿಸಿದರು. ಒಂದು ನಿರ್ದಿಷ್ಟ ಶಾಸ್ತ್ರವನ್ನು ಕಲಿಯುವ ವಿದ್ಯಾರ್ಥಿಗಳು ಇಬ್ಬರು ಮೂವರೇ ಇದ್ದರೂ-ಇಲ್ಲಿಯ ವಿಶ್ವವಿದ್ಯಾಲಯಗಳು ಆ ವಿಷಯದಲ್ಲಿ ಪ್ರಾವೀಣ್ಯ ಪಡೆದ ನಾಲ್ಕೈದು ಪ್ರಾಧ್ಯಾಪಕರನ್ನು ಇಟ್ಟುಕೊಳ್ಳುವ ಸಂಗತಿ ಕೇಳಿದರೆ- ಆ ಜನರ ಜ್ಞಾನತೃಷೆ ಎಷ್ಟು ಅಪರಿಮಿತವೆಂಬುದು ಗೋಚರಿಸುವುದು. ಅದರಂತೆಯೇ ಹಾಲೆಂಡಿನ ವಸ್ತು ಸಂಗ್ರಹಾಲಯದಲ್ಲಿ ಕಾರಂತರಿಗೆ ದೊರೆತ ಅನುಭವವೂ ಅನ್ಯಾದೃಶವಾಗಿತ್ತು. ಒಬ್ಬ ಸಾಮಾನ್ಯ ನಾಗರಿಕ, ತಮ್ಮ ಊರಿನ ಚಿತ್ರಕಾರನ ಕೃತಿಗಳನ್ನು ಕಂಡಿರಾ, ಮೆಚ್ಚಿದಿರಾ? ಎಂದು ಪ್ರಶ್ನಿಸಿದನಂತೆ. ಅವನ ದೃಷ್ಟಿಯಲ್ಲಿ ಆ ಕಲಾವಿದನ ಕೃತಿ ಕಾಣದಿದ್ದವನೆ-ಬೇರೇನು ಕಂಡರೂ ವ್ಯರ್ಥವೇ ಸೈ. ಈ ರೀತಿಯ ಅಭಿಮಾನ ನಮ್ಮ ಜನರಲ್ಲಿದೆಯೆ? ಕನ್ನಡದ ಒಬ್ಬ ಸಾಹಿತಿಯನ್ನು, ಕಲಾವಿದನನ್ನು ನಮ್ಮವನೆಂದು ಆದರದಿಂದ ನೋಡುವ ಹೃದಯ ಎಷ್ಟು ಮಂದಿಗಿದೆ?

ಪಾಶ್ಚಾತ್ಯರು ಆಳವಾದ ಅಭ್ಯಾಸದಲ್ಲಿ ಮನಸ್ಸುಳ್ಳವರು: ಅಗಾಧ ಪಾಂಡಿತ್ಯವನ್ನು ಅವರು ತೋರಿಸುತ್ತಾರೆ. ಪುಸ್ತಕಾಲಯದ ಗ್ರಂಥರಾಶಿಗಳನ್ನು ಬಿಟ್ಟು, ಸ್ವಂತ ಉಪಯೋಗಕ್ಕೆ ಕೊಂಡುಕೊಂಡ ಗ್ರಂಥಗಳ ಸಮೂಹವೇ ವಿಸ್ಮಯಮಾಡುತ್ತದೆ. ಹಾಗೆಯೇ ನೃತ್ಯ ಮತ್ತು ಜಾನಪದ ಕಲಾರಂಗದಲ್ಲಿಯೂ ಅವರು ತುಂಬ ಮುಂದಿದ್ದಾರೆ. ನಾರ್ವೆ ಮತ್ತು ಸ್ವೀಡಿಷ ನೃತ್ಯಗಳನ್ನು ಕಂಡಮೇಲೆ, ಆ ದಿಗ್ದರ್ಶನ ಚಮತ್ಕಾರಕ್ಕೆ ಮೂಗಿನ ಮೇಲೆ ಬೆರಳಿರಿಸಬೇಕಾಗುವುದು: ಅಷ್ಟು ಚೆಲುವು ಮತ್ತು ಸಮಂಜಸ.

ಇಟಲಿ ಮತ್ತು ಫ್ರಾನ್ಸು ದೇಶದ ಚಿತ್ರಪಟಗಳ ವೈಭವವೂ ಹಾಗೆಯೇ- ಅನುಪಮವೆಂದು ಒಂದೇ ಶಬ್ದದಲ್ಲಿ ಹೇಳಿಬಿಡಬಹುದು- ಮೈಕೆಲ್ ಎಂಜೆಲೋನ ಕ್ರಿಸ್ತನ ಚಿತ್ರಗಳಲ್ಲಿ ಕಂಡುಬರುವ ವೈಖರಿ, ಅವನ ಕಾಲಕ್ಕೆನೇ ಅಂತ್ಯಗೊಳ್ಳಲಿಲ್ಲ; ಇಂದಿಗೂ ಐರೋಪ್ಯರು ತಮ್ಮ ಹಿಂದಿನ ಕಲೆಯನ್ನು ಪರಂಪರಾಗತವಾಗಿ ಉಳಿಸಿಕೊಂಡು, ಬೆಳೆಸಿಕೊಂಡು ಮುನ್ನಡೆಯುತ್ತಿದ್ದಾರೆಂಬುದು ಗಮನಾರ್ಹ ವಿಷಯ. ನಮ್ಮಲ್ಲಿ ಯಾವುದೇ ಕಲೆಯಾದರೂ, ಒಂದೆರಡು ಶತಮಾನಗಳ ಗಡುಮೀರಿ ಬದುಕಿಲ್ಲ.

ಕೈಗಾರಿಕೆಯ ಮಾತು ಬಂದಾಗ-ಅಲ್ಲಿಯ ಜನರ ಪರಿಶ್ರಮದ ಬದುಕು ನಮಗೆ ಉನ್ನತಾದರ್ಶವನ್ನು ನೀಡುತ್ತದೆ. ಭೌತಿಕ ಶ್ರೇಯಸ್ಸಿಗೇ ಮಹತ್ವಕೊಡುವವರು ಪಾಶ್ಚಾತ್ಯರೆಂದು ಜರೆಯುವ ನಮಗೆ ಅವರ ಸೌಜನ್ಯ ಮತ್ತು ಸಚ್ಛೀಲಗಳ ಪ್ರತ್ಯಕ್ಷ ಅನುಭವವಾದಾಗ ನಾಲಗೆ ಕಟ್ಟಬೇಕಾಗುತ್ತದೆ. ಒಂದಿಂಚು ನೆಲವನ್ನೂ ಕೃಷಿಮಾಡದೆ ಬಿಟ್ಟವರಲ್ಲ. ದಿನಕ್ಕೆ ಹತ್ತು ತಾಸಾದರೂ ದುಡಿಯದೆ ಸೋಮಾರಿಯಾಗಿ ಕಳೆದವರಿಲ್ಲ. ನೈಸರ್ಗಿಕ ಸಂಪತ್ತನ್ನು ಬುದ್ಧಿಕೌಶಲ್ಯದಿಂದ ಪರಮಾವಧಿಲಾಭಪ್ರದಗುವ ರೀತಿ ಉಪಯೋಗಿಸಿಕೊಳ್ಳುವ ಜಾಣ್ಮೆ ಮತ್ತು ಸಾಹಸ ಅವರಿಗಿದೆ. ಜನರು ಬಹಳ ಪ್ರಾಮಾಣಿಕರು. [illegible]ಬೇಡ ಎನ್ನುವವರು ಇಲ್ಲವಾದರೂ, ವಾರಕ್ಕೆ ಎಂಟು ದಿನ ರಜೆ ದೊರೆತರಾಗದೆ? ಎನ್ನುವ ಆಲಸಿಗಳಂತೂ ಅಲ್ಲವೇ ಅಲ್ಲ. ಯುದ್ಧದಿಂದ ಜರ್ಜರಿತವಾದ ಪಶ್ಚಿಮ ಜರ್ಮನಿ, ಈ ನಾಲ್ಕಾರು ವರ್ಷಗಳಲ್ಲಿ ಸಂಪೂರ್ಣ ಚೇತರಿಸಿಕೊಂಡು ಎದ್ದಿದೆ ಎಂದರೆ- ಆ ಜನರ ಉತ್ಸಾಹ ಮತ್ತು ಕಾರ್ಯಶೀಲತೆಗೆ ಏನೆನ್ನೋಣ?

ದುಡ್ಡು ಕರ್ಚಾಗುತ್ತದೆ-ಕಾರಂತರಿಗೆ ಸುಮಾರು ಐದಾರುಸಾವಿರ ವೆಚ್ಚ ಬಂದಿತಂತೆ: ಆದರೆ, ಪಾಶ್ಚಾತ್ಯರು ದುಡ್ಡೊಂದೇ ಮಹತ್ವದ್ದೆನ್ನುವುದಿಲ್ಲ. ಬುದ್ಧಿವಿಕಾಸ ನಡೆಯಬೇಕೆಂದು ಬಯಸಿದಂತೆ, ನಮ್ಮನ್ನು ಇತರರು ಕಂಡು ಮೆಚ್ಚಬೇಕೆಂಬ ಹಂಬಲವನ್ನೂ ಇಟ್ಟುಕೊಂಡ ಆಶಾಜೀವಿಗಳು ಅವರು: ಎಂತಲೇ, ಕೈಗಾರಿಕೋದ್ಯಮಗಳಲ್ಲಿ ಪ್ರತಿಯೊಬ್ಬರದೂ ತಮ್ಮದೇ ಆದ ವೈಶಿಷ್ಟ್ಯ: ಪ್ರತಿಯೊಂದೂ ಕಡೆ ಅಚ್ಚುಕಟ್ಟು ಮತ್ತು ಓರಣ. ನೈರ್ಮಲ್ಯ ಮತ್ತು ಸದ್ಭಾವಗಳಿಗೆ ಇನ್ನಿಲ್ಲದ ಪ್ರಾಶಸ್ತ್ಯ ಪಾಶ್ಚಾತ್ಯ ದೇಶಗಳಲ್ಲಿ ದೊರೆಯುತ್ತದೆ. ಇಷ್ಟಿದ್ದರೂ ಪ್ಯಾರಿಸಿನಂಥ ನಗರಗಳಲ್ಲಿ ವಿಲಾಸಮಯವಾದ ಲಘುಜೀವನವೇ ಈಗ ವ್ಯಾಪಕವಾಗಿಹಬ್ಬುತ್ತಿದೆ- ಆದರೆ ಇದು ಕೇವಲ ಅಪವಾದವೆನ್ನಬಹುದು.

ಸಭಾಧ್ಯಕ್ಷ ಡಾ| ಪೈಯವರು ಕಾರಂತರು ಬಿಂಬಿಸಿದ ಚಿತ್ರದಿಂದ ನಮ್ಮ ಜನಕ್ಕೆ ಸ್ಫೂರ್ತಿ ಒದಗಲಿ ಎಂದು ಹಾರೈಸಿದರು. ಕಾರ್ಯದರ್ಶಿ ಶ್ರೀಪತಿ ಆಚಾರ್ಯರು ಆಭಾರಮನ್ನಿಸಿದರು.

ಈಜಿಪ್ತದಲ್ಲಿ ಜ್ವಾಲಾಮುಖಿಯ ಸ್ಫೋಟ

ಏಳುತಿಂಗಳ ಹಸುಳೆಗೆ ಸಿಂಹಾಸನಾಧಿಕಾರ!

ಇಡೀ ವಿಶ್ವದ ಕಣ್ಣು ಸೆಳೆಯುವ ಘಟನಾವಳಿಗಳು ಕಳೆದ ವಾರ ಅನಿರೀಕ್ಷಿತವಾಗಿ ಮಧ್ಯಪೂರ್ವದ ಮುಸ್ಲಿಂ ರಾಷ್ಟ್ರ-ಈಜಿಪ್ಟಿನಲ್ಲಿ ನಡೆದುವು. ಇವು ಎಷ್ಟು ವ್ಯವಸ್ಥಬದ್ಧವಾಗಿ ಮತ್ತು ತ್ವರೆಯಿಂದ ನಡೆದುವೆಂದರೆ-ಈ ಎಲ್ಲ ಸಂಗತಿಗಳಿಗೂ ಹಿನ್ನೆಲೆಯಾಗಿ ಬಹಳ ಸಮಯದಿಂದ ಸಿದ್ಧತೆಗಳು ನಡೆಯುತ್ತಿದ್ದಿರಬೇಕೆಂದು ಊಹಿಸಬೇಕಾಗುತ್ತದೆ. ಕಳೆದ ವಾರ ತಿಳಿಸಿದಂತೆ-ಈಜಿಪ್ತದಲ್ಲಿ ಸಿರ್ರಿಪಾಷಾ ಮಂತ್ರಿಮಂಡಲ ರಾಜೀನಾಮೆ ಕೊಟ್ಟ ಬೆನ್ನಿಗೇ-ಆ ಮಂತ್ರಿಮಂಡಲದಲ್ಲಿ ಯುದ್ಧ ಸಚಿವರಾಗಿದ್ದ ಜನರಲ್ ನಾಗಿಬರ ನೇತೃತ್ವದಲ್ಲಿ ಸೈನಿಕ ಕ್ರಾಂತಿ ನಡೆಯಿತು. ಫರೂಕ ಅರಸರು ನಾಗಿಬರನ್ನು ಸಿರ್ರಿಪಾಷಾರ ಮಂತ್ರಿಮಂಡಲದಲ್ಲಿ ಯುದ್ಧ ಸಚಿವರಾಗಿ ಸೇರಿಸಿಕೊಳ್ಳಲು ಅಪ್ಪಣೆ ಕೊಟ್ಟಿರಲಿಲ್ಲ; ಇದೇ ಬಿಕ್ಕಟ್ಟಿಗೆ ಕಾರಣವಾಗಿ-ಈಗ ಸ್ವತಃ ಅರಸ ಫರೂಕರೇ ಸಿಂಹಾಸನ ತ್ಯಾಗಮಾಡಿ-ಅಜ್ಞಾತ ಸ್ಥಳಕ್ಕೆ ಹೋಗಬೇಕಾಗಿ ಬಂದಿದೆ. ರಕ್ತರಹಿತವಾದ ಕ್ರಾಂತಿಯೆಂದು ಎಲ್ಲ ಪತ್ರಿಕೆಗಳೂ ಕೊಂಡಾಡುವ ಈ ಘಟನಾ ಸೂತ್ರಗಳಿಂದ ಈಜಿಪ್ತದಲ್ಲಿ ನವ್ಯ ಸ್ಫೂರ್ತಿ ಮತ್ತು ಉತ್ಸಾಹದ ವಾತಾವರಣ ಉಂಟಾಗಿದೆ. ಈಜಿಪ್ತದ ರಾಜಕೀಯದಲ್ಲಿ ಮಹತ್ವದ ಪರಿವರ್ತನೆಗಳನ್ನು ಪರೀಕ್ಷಿಸುವುದಂತೂ ತೀರ ಸ್ವಾಭಾವಿಕ.

ಸೈನಿಕ ಕ್ರಾಂತಿ

ಸಂಗತಿ ನಡೆದುದು ಹೀಗೆ--ಸಿರ್ರಿ ಪಾಷಾರ ಮಂತ್ರಿ ಮಂಡಳವು ಬಿಕ್ಕಟ್ಟಿನ ಕಾರಣದಿಂದ ರಾಜೀನಾಮೆ ಕೊಟ್ಟಿತು. ಫರೂಕ ಅರಸರು ಅದನ್ನು ಸ್ವೀಕರಿಸಿದರು, ಮತ್ತು ಈ ಹಿಂದೊಮ್ಮೆ ಮಂತ್ರಿಮಂಡಳ ರಚಿಸಿದ್ದ ಹಿಲಾಲಿ ಪಾಶರನ್ನು ಮುಖ್ಯಮಂತ್ರಿಯಾಗಿಸಿ, ಹೊಸ ಸಚಿವ ಸಂಘಟನೆಗೆ ಅಧಿಕಾರ ವಹಿಸಿಕೊಟ್ಟರು. ಆದರೆ ಒಂದು ದಿನವೂ ಕಳೆಯಲಿಲ್ಲ- ಬುಧವಾರ ದಿನ ಮುಂಜಾನೆ ಈಜಿಪ್ಟಿನಲ್ಲಿ ಸೈನ್ಯಕ್ರಾಂತಿಯು ಸಂಭವಿಸಿತು. ಜನರಲ್ ನಾಗಿಬ ಮಹಮ್ಮದರು ಈ ಉತ್ಕ್ರಾಂತಿಯ ನೇತೃತ್ವವನ್ನು ವಹಿಸಿದರು. ಟ್ಯಾಂಕುಗಳಿಂದ ವೈಮಾನಿಕ ಪಡೆಗಳಿಂದ ಮತ್ತು ಕಾಲ್ದಳಗಳಿಂದ ಸನ್ನದ್ಧವಾದ ಸೈನ್ಯವು ಕ್ಯಾರೋ ನಗರದಲ್ಲಿ ಮುನ್ನಡೆದು ಬಂದು ಅದನ್ನು ವಶಪಡಿಸಿಕೊಂಡಿತು ಅರಸ ಫರೂಕರು ನಾಗಿಬರನ್ನು ಸೈನ್ಯದ ವರಿಷ್ಠಾಧಿಕಾರಿಯಾಗಿ ಮನ್ನಿಸಿದರು; ಮತ್ತು ನಾಗಿಬರ ಹೇಳಿಕೆಯಂತೆ ನಂತರ ರಾಜಕಾರಣಿ ಅಲಿ ಮೆಹರ್ ಪಾಷಾರು ಮುಖ್ಯ ಮಂತ್ರಿತ್ವದ ಹೊಣೆಯನ್ನು ಹೊತ್ತರು. ಹಿಲಾಲಿ ಪಾಷಾರು ರಾಜೀನಾಮೆ ಕೊಟ್ಟು ಪಾರಾಗಬೇಕಾಯಿತು. ನಾಗಿಬರು ಸೈನ್ಯದ ಕ್ರಾಂತಿಯ ಬಗ್ಗೆ ಮಾತನಾಡುತ್ತಾ "ಈಜಿಪ್ಟಿನಲ್ಲಿ ಘಟನಾತ್ಮಕ ಆಡಳಿತೆಯನ್ನು ಪ್ರಸ್ಥಾಪಿಸುವುದು ಮತ್ತು ನಾಗರಿಕ ಜೀವನದಲ್ಲಿ ಹಬ್ಬಿಕೊಂಡಿರುವ ದುಷ್ಟ ಪ್ರವೃತ್ತಿಗಳಿಗೆ ತಡೆ ಹಾಕುವುದು ಉತ್ಕ್ರಾಂತಿಯ ಧ್ಯೇಯ" ಎಂದು ಸಾರಿದರು. ಎಲ್ಲ ಪಕ್ಷದವರೂ, ಸೈನ್ಯ ಮತ್ತು ಜನತೆಯೂ ಕೂಡಿ ಹೊ[illegible]ಪನ ಮುಖಂಡತ್ವದಿಂದಲೇ ಇದು ಸಾಧ್ಯವೆಂಬುದರಿಂದ, ಅಲಿ ಮೆಹರ್ ಪಾಷಾರನ್ನು ಪ್ರಧಾನಿ ಪಟ್ಟಕ್ಕೆ ಆರಿಸಲಾಯಿತೆಂದು ನಾಗಿಬರು ಹೇಳಿದರು.

ಹಿನ್ನೆಲೆಯ ಪರಿಸ್ಥಿತಿ

ಈಚೆಗೆ ಅರಸ ಫರೂಕರು ಸ್ವೇಚ್ಛಾಪ್ರವೃತ್ತರಾಗಿ ನಡೆದುಕೊಳ್ಳುತ್ತಿದ್ದರು. ಮಂತ್ರಿಮಂಡಲಗಳು ಪದೇ ಪದೇ ಉರುಳುತ್ತಿರುವುದು-ತಮ್ಮ ಕೈಗೊಂಬೆಗಳಂತೆ ಅವನ್ನು ನಡೆಸಿಕೊಳ್ಳುವ ಫರೂಕರ ಪ್ರಯತ್ನ, ಮತ್ತು ದಾರಿದ್ರ್ಯದಿಂದ ಬಳಲುವ ಜನತೆಯು ಸಹಾನುಭೂತಿ ಪಡೆಯುವ ಯಾವುದೇ ಕ್ರಮವನ್ನು ಕೈಗೊಳ್ಳುವುದಕ್ಕೆ ಪ್ರಯತ್ನಿಸದೆ, ವಿಲಾಸಮಗ್ನರಾಗಿದ್ದುದು-ಫರೂಕರ ಕಡೆಗೆ ಜನರ ಅಸಂತುಷ್ಟಿಯನ್ನು ಹೆಚ್ಚಿಸಿತು, ಸೈನ್ಯದ ಕೇಳಿಕೆಗಳಿಗೂ ಮಾನ್ಯತೆ ಕೊಡಲು ಫರೂಕರು ಬುಡಬಿಟ್ಟಿಗೆ ಒಪ್ಪಲಿಲ್ಲ. ಹೀಗೆ ದೇಶದ ಒಳಗಿನೇ ಕುದಿಯುತ್ತಿದ್ದ ಜ್ವಾಲಾಮುಖಿ ಒಮ್ಮೆಗೇ ಸ್ಫೋಟಗೊಂಡಿತು. ಸೈನ್ಯಕ್ರಾಂತಿಯ ಸುಳುವೂ ಹತ್ತದಂತೆ ಬಹಳ ಜಾಗರೂಕತೆಯಿಂದ ಈ ಕೆಲಸವು ನಡೆಯಿತು; ಸ್ವಲ್ಪಾದರೂ ರಹಸ್ಯ ಹೊರಬೀಳುತ್ತಿದ್ದರೆ, ಆಂಗ್ಲೋ-ಅಮೇರಿಕನ್ ಕೈವಾಡಕ್ಕೆ ಅಲ್ಲಿ ಪೂರ್ಣಾವಕಾಶ ದೊರೆಯುತ್ತಿದ್ದುದು ನಿಶ್ಚಯ. ಆದರೆ ಹಾಗಾಗದೆ-ಸೈನ್ಯಕ್ಕೆ ಜಯಮಾಲೆ ಲಭಿಸಿದನ್ನು ನೋಡಿದರೆ-ಬಹಳ ಸಮಯದಿಂದ ಹೊಂಚು ಹಾಕಿಕೊಂಡೇ ನಾಗಿಬರು ಕುಳಿತಿದ್ದರೆಂಬುದು ಸ್ಪಷ್ಟ. ದೇಶದೊಳಗೆ ನೈಜವಾದ ಮತ್ತು ಉತ್ತಮವಾದ ಆಳಿಕೆಯನ್ನು ತರಬೇಕೆಂಬುದೇ ಅವರ ಮುಖ್ಯ ಧೋರಣೆ ಇರುವುದರಿಂದ-ಅಂತರಂಗ ಗಲಭೆಗಳಿಗಾಗಲೀ ವಿದೇಶಿಯರ ವಿತ್ತಜೀವಿತಗಳಿಗೆ ಹಾನಿಯಾಗಲೀ ಏನೊಂದೂ ಸಂಭವಿಸಲಿಲ್ಲ. ಸೈನ್ಯದ ಆಡಂಬರವಷ್ಟೇ ಹೊರತು-ರಣಕೇಳಿಯೇನೂ ನಡೆಯಲಿಲ್ಲ ಎಂಬುದು ಸಮಾಧಾನ

ಫರೂಕರ ನಿರ್ಗಮನ

ನಾಗಿಬರೂ ಮೆಹರ್ ಪಾಶರೂ ಕೂಡಿಯೇ ಈಗ-ಹಿಂದೆ ದುರಾಡಳಿತ ನಡೆಸುತ್ತಿದ್ದ ಆರೋಪದ ಮೇಲೆ ಮುಖ್ಯಾಧಿಕಾರಿಗಳನ್ನು ಸೆರೆಹಿಡಿದಿದ್ದಾರೆ. ಅರಸ ಫರೂಕರು ಅಲೆಕ್ಝಾಂಡ್ರಿಯಾದಲ್ಲಿ ತಮ್ಮ ಬೇಸಿಗೆಯ ಅರಮನೆಯಲ್ಲಿದ್ದುದನ್ನು ಕಂಡು-ನೆಟ್ಟಗೆ ಅಲ್ಲಿ ಹೋಗಿ, ತಮ್ಮ ಏಳು ತಿಂಗಳ ಹಸುಳೆಯ ಹೆಸರಿನಲ್ಲಿ, ಈಜಿಪ್ತದ ಭವಿತವ್ಯದ ಉಜ್ವಲವಾಗಬೇಕೆಂಬ ದೃಷ್ಟಿಯಿಂದ ಸಿಂಹಾಸನ ತ್ಯಾಗಮಾಡಬೇಕೆಂದು ಕೇಳಿಕೊಂಡರು. ಈ ಬೇಡಿಕೆಗೆ ಒಪ್ಪದೆ ಬೇರೆ ಮಾರ್ಗವೇ ಫರೂಕರಿಗೆ ಉಳಿಯಲಿಲ್ಲ ಜನತೆಯ ಹೆಸರಿನಲ್ಲಿ ಮುಂದಿಟ್ಟ ಇನ್ನೊಂದು ಕೇಳಿಕೆಯಂತೆ-ಫರೂಕ ಅರಸರು ಅದೇ ದಿನ ಸಂಜೆಯೊಳಗಾಗಿ ದೇಶಬಿಟ್ಟು ಹೊರಡಬೇಕಾಯಿತು. ಹೀಗೆ ರಾಜ್ಯಭ್ರಷ್ಟರಾಗಿ ಎಲ್ಲಿಗೋ ಸಾಗುವ ವಿಧಿಯನ್ನು ಫರೂಕ ಅರಸರು ತಮ್ಮ ಮೈಮೇಲೆ ತಂದುಕೊಂಡರು. ಅವರು ಅಮೇರಿಕ ಮತ್ತು ಸ್ವಿಜರಲೆಂಡುಗಳಲ್ಲಿ ಅಪಾರ ಆಸ್ತಿ ಮತ್ತು ಸಂಪತ್ತನ್ನು ಕೂಡಿಸಿಟ್ಟಿದ್ದಾರೆ. ತಾವು ಕಳೆದ ವರ್ಷ ದಾದಿಯಲ್ಲಿ ಎರಡನೆ ಬಾರಿ ಮದುವೆಯಾದ ರಾಣಿ ನರಿಮನ ಮತ್ತು ಅವಳಿಂದ ಹುಟ್ಟಿದ-ಈಗ ಈಜಿಪ್ತದ ಪಟ್ಟದರಸನೆಂದು ಘೋಷಿಸಲಾಗಿರುವ ಏಳು ತಿಂಗಳ ಕೂಸು ಮಹಮ್ಮದ ಫೌದ, ಮತ್ತು ತನ್ನ ಮೊದಲನೆ ಹೆಂಡತಿಯಿಂದ ಜನಿಸಿದ ಇಬ್ಬರು ಹೆಣ್ಣು ಮಕ್ಕಳ ಕೂಡೆ ವಾನಪ್ರಸ್ಥಾಶ್ರಮವನ್ನು ಅವರ ಕೈಗೊಂಡರು!

ಜನತೆಗೆ ಇನ್ನಿಲ್ಲದ ಸಂತೋಷ

ಸಿಂಹಾಸನಾಧಿಕಾರಿಯಾದ ಹಸುಳೆಯು ಏಳು ವರ್ಷ ತುಂಬುವ ವರೆಗೆ ತಾಯಿ- ತಂದೆಯರ ಬಳಿಯಲ್ಲಿ ಉಳಿಯುವುದು. ಪವಿತ್ರ ಕುರಾನಿನಲ್ಲಿ ಮಗುವಿಗೆ ಏಳು ತುಂಬುವವರೆಗೆ ತಾಯಿಯೇ ಅದರ ರಕ್ಷಣೆ ಹೊರಬೇಕೆಂದಿರುವುದರಿಂದ, ಈ ರಿಯಾಯತಿ ದೊರೆತಿದೆ. ಆ ಬಳಿಕ ಮಗುವನ್ನು ಈಜಿಪ್ತಿಗೆ ತಂದೊಪ್ಪಿಸಬೇಕು. ತನ್ಮಧ್ಯೆ, ಹಸುಳೆಯ ಹೆಸರಿನಲ್ಲಿ ರಾಜ್ಯಭಾರವನ್ನು ನಿರ್ವಹಿಸಲು ಒಂದು ಮಂಡಳವು ಏರ್ಪಟ್ಟಿದೆ. ಮೆಹರ್ ಪಾಶಾರಿಗೆ ಫರೂಕರು ಕಡೆಗಣ್ಣಿನಿಂದ ನೋಡುತ್ತಿದ್ದ ವಾಫ್ದ ಪಕ್ಷದ ಧುರೀಣರಿಂದಲೂ ಮತ್ತಿತರ ಪಕ್ಷದ ಮುಖಂಡರಿಂದಲೂ ಬೆಂಬಲದ ಆಶ್ವಾಸನೆ ದೊರೆತಿದೆ. ಹೀಗೆ ಆಂತರಿಕ ಪರಿಸ್ಥಿತಿಯು ಸುಧಿಯುತ್ತಿರುವಾಗ-ಜನತೆಯ ಉತ್ಸಾಹ ಮಾತ್ರ ಇನ್ನಷ್ಟು ಹೆಚ್ಚಿಕೊಂಡಿದೆ, ಫರೂಕ ಅರಸರಿಗೆ ದೇಶ ಬಿಡುವಾಗ ಕಣ್ಣಲ್ಲಿ ನೀರು ಬಂದರೂ, ಅರಸ ಫರೂಕರ ಫೋಟೋವನ್ನು ಇಳಿಸಿ, ಕೇಕೆ ಹಾಕುತ್ತಿದ್ದ ಜನಸಮುದಾಯದ ಹರ್ಷಾತಿರೇಕವನ್ನು ಬಣ್ಣಿಸುವುದಸದಳ. ಸೈನ್ಯವು ಇಷ್ಟು ಯಶಸ್ವಿಯಾಗಿ ಕೆಲಸ ನಿರ್ವಹಿಸಿದುದರಿಂದ-ಜನತೆಯ ಪ್ರೀತಿಗೆ ಅದು ಇನ್ನಷ್ಟು ಪಾತ್ರವಾಗಿದೆ.

ಕ್ರಾಂತಿಯ ಪ್ರತಿಕ್ರಿಯೆ

ವಿದೇಶೀಯರ ಆಸ್ತಿಪಾಸ್ತಿ ಮತ್ತು ಜೀವಗಳಿಗೆ ರಕ್ಷಣೆ ನೀಡಲಾಗುವುದೆಂದು ಈಜಿಪ್ತದ ಹೊಸ ಸರಕಾರ ಹೇಳಿದ್ದರೂ-ಬ್ರಿಟನು—ಅಮೇರಿಕಗಳಿಗೆ ಇದು ಸಂಶಯಾತೀತವೆಂದು ಕಾಣುವುದಿಲ್ಲ. ಇಷ್ಟೆಲ್ಲ ಕಿತಾಪತಿ ನಡೆಸಿದ ಸೈನ್ಯವು ಮುಂದೆ ಏನು ಮಾಡಲಾರದು ಎಂಬುದನ್ನು ಈಗ ಹೇಳಲು ಬಂದೀತು? ಕಾರಣ-ಭೂಮಧ್ಯ ಸಾಗರದಲ್ಲಿರುವ ಯುದ್ಧ ನೌಕೆಗಳು ಪೂರ್ವಕ್ಕೆ ಸಾಗಬೇಕೆಂಬ ಆದೇಶ ಬಂದಿದೆ. ಅವು ಪ್ರತ್ಯಕ್ಷ ರೂಪದಲ್ಲಿ ಈಜಿಪ್ತದೊಡನೆ ಸಂಘರ್ಷಕ್ಕೆಳಸುವುದಿಲ್ಲವಾದರೂ- ಆಪತ್ಕಾಲದ ರಕ್ಷಣೆಗೆ ಸಿದ್ಧವಿವೆ.

ಮುಸಾದೆಕರ ವಕಾಲತು

ಈಜಿಪ್ತದಲ್ಲಿ ಹೀಗೆ ವಿಜಯೋನ್ಮಾದ ನಾಟ್ಯ ನಡೆಯುತ್ತಿರುವಾಗ, ಇರಾಣದಲ್ಲಿ ಎಂದಿಲ್ಲದ ಹರ್ಷಕ್ಕೆ ಇಂಬು ದೊರೆತಿದೆ-ವಿಶ್ವನ್ಯಾಯಾಲಯವು ಎಣ್ಣೆ ತಂಟೆಯ ಸಂದರ್ಭದಲ್ಲಿ ಬ್ರಿಟನು ತಂದ ದೂರನ್ನು ಪರಾಮರ್ಶಿಸಿ ತನ್ನ ತೀರ್ಪನ್ನು ಕೊಟ್ಟಿದೆ. ಇರಾಣದ ಎಣ್ಣೆ ರಾಷ್ಟ್ರೀಕರಣದ ಪ್ರಶ್ನೆಯು ಆಂತರಿಕ ವ್ಯವಹಾರಕ್ಕೆ ಸಂಬಂಧಿಸಿದ್ದೆನ್ನುವ ವಾದವನ್ನು ನ್ಯಾಯಾಲಯವು ಪುರಸ್ಕರಿಸಿ-ತನಗೆ ಈ ವಿಷಯ ವಿಚಾರಿಸಲು ಅಧಿಕಾರವಿಲ್ಲವೆಂದು ಕೈಕಟ್ಟಿ ಕುಳಿತಿದೆ. ಈಗತಾನೆ, ಸೋತು, ಮರಳಿ ಗೆದ್ದು ಬಂದಿರುವ ಡಾ| ಮುಸಾದಿಕರಿಗೆ, ನ್ಯಾಯಾಲಯದ ಈ ತೀ[illegible]ರ್ಣಯ [illegible] ಬೆಂಬಲವನ್ನು ಇನ್ನಷ್ಟು ದೃಢಗೊಳಿಸಿದೆ. ಇರಾಣದ ವಾದವನ್ನು ವಿಶ್ವನ್ಯಾಯಾಲಯದೆದುರು ಮಂಡಿಸಲು ಸ್ವತಃ ಮುಸಾದಿಕರೇ ದಿಹೇಗಕ್ಕೆ ತೆರಳಿದ್ದರು; ಮತ್ತು ಅಲ್ಲಿ-ಅವರು ತಮ್ಮ ರಾಷ್ಟ್ರದ ಮೂಲಭೂತ ಹಕ್ಕಿನ ಪ್ರಶ್ನೆಯಲ್ಲಿ ಕಣ್ಣೀರು ಮಿಡಿದು ಮಂಡಿಸಿದ ವಾದವನ್ನು ಯಾವೊಬ್ಬ ವಿವೇಕಿಯೂ ತತ್ಕಾಲದಲ್ಲಿ ಒಪ್ಪಬಹುದಿತ್ತು: ಅಂಥ ಕರುಣಾಜನಕ ರೀತಿ ಅದಾಗಿತ್ತು. ಅವರು ಇಷ್ಟು ಪರಿಶ್ರಮ ವಹಿಸಿದುದು ಈಗ ಸಾರ್ಥಕವಾಯಿತು.

ಬ್ರಿಟನಿನ ಕೊಂಕು

ಆದರೂ ಬ್ರಿಟನಿನ ಕೊಂಕು ದೂರಾಗಿಲ್ಲ-ವಿಶ್ವ ನ್ಯಾಯಾಲಯದ ನಿರ್ಣಯಕ್ಕೆ ಏನೂ ಮಹತ್ವವಿಲ್ಲ ಎಂಬ ರೀತಿಯಲ್ಲಿ ಅದು ವರ್ತಿಸುತ್ತಿದೆ. ನ್ಯಾಯಾಲಯವು ತನಗೆ ಈ ವಿಷಯ ವಿಚಾರಣೆ ನಡೆಸಲು ಅಧಿಕಾರವಿಲ್ಲವೆಂದಷ್ಟಕ್ಕೆ, ಇರಾಣವು ಎಣ್ಣೆಯ ಮೇಲೆ ಪೂರ್ಣಾಧಿಕಾರ ಪಡೆಯಿತೆಂದು ಅರ್ಥವಲ್ಲ. ಎಣ್ಣೆ ಮಾರಾಟವನ್ನು ಮನಬಂದಂತೆ ಅದು ಮಾಡಲಾರದು; ಬ್ರಿಟನಿಗೇ, ಎಂದರೆ, ಆಂಗ್ಲೋ ಇರಾಣಿಯನ್ ಕಂಪೆನಿಯ ಮೂಲಕವೇ ಇರಾಣ ಎಣ್ಣೆ ವ್ಯಾಪಾರ ಮಾಡಬೇಕು. ಈ ದುಷ್ಟ ಪ್ರವೃತ್ತಿಗೆ ಒಳಗಾಗಿಯೇ, ಕೆಲ ದಿನಗಳ ಹಿಂದೆ ಏಡೆನಲ್ಲಿ ಎಣ್ಣೆ ಒಯ್ಯುತ್ತಿದ್ದ ನೌಕೆಯ ಮೇಲೆ ವಾರಂಟು ಹೊರಡಿಸಿ, ನಿಲ್ಲಿಸಲು ಬ್ರಿಟನರು ಸನ್ನದ್ಧರಾದರು. ಇರಾಣದ ನಿಲುವು ಈ ಬಗ್ಗೆ ಸ್ಪಷ್ಟವಿದೆ-ಆಂಗ್ಲೋ ಇರಾಣಿಯನ್ ಎಣ್ಣೆ ಕಂಪೆನಿಗೆ ತಕ್ಕ ಪರಿಹಾರವನ್ನು ಕೊಡಲು ಅದು ಸಿದ್ಧವಿದೆ, ಆದರೆ ಎಣ್ಣೆಯನ್ನು ರಾಷ್ಟ್ರೀಕರಿಸುವ ಮೂಲಭೂತ ಹಕ್ಕನ್ನು ಕಳೆದುಕೊಳ್ಳಲು ಸುತರಾಂ ಒಪ್ಪಲಾರದು. ಅಬದಾನಿನ ಎಣ್ಣೆ ಕಾರಖಾನೆಗಳು ಕೆಲಸ ನಿಲ್ಲಿಸಿದುದರಿಂದ ಆರ್ಥಿಕ ರೂಪದಲ್ಲಿ ಎಷ್ಟು ಹಾನಿಯಾಯಿತೆಂದು ಹೇಳುವುದೇ ಅಸಾಧ್ಯ. ಈ ನಷ್ಟವನ್ನು ದೇಶದೊಳಗೆ ಹೆಚ್ಚು ತೆರಿಗೆ ಹೊರಿಸಿ ಭರ್ತಿ ಮಾಡುವ ಕಷ್ಟ ಸರಕಾರಕ್ಕೆ ಬಂದಿದೆ.

ಉಡುಪಿ.

ಎಂ. ಜಿ. ಯಂ. ಕಾಲೇಜಿನ- ಭಾಷಾ ಸಂಘದ ಉದ್ಘಾಟನೆಯನ್ನು ತಾ. 28ರಲ್ಲಿ ಶ್ರೀ ಶಿವರಾಮ ಕಾರಂತರು ನೆರವೇರಿಸುತ್ತ ತನ್ನ ಯೂರೋಪು ಪ್ರವಾಸದ ಅನುಭವದನ್ನು ಮನಮುಟ್ಟುವಂತೆ ವಿವರಿಸಿ ಭಾಷಣವಿತ್ತರು.

ಕಳೆದ ವಾರ ಮುಂದುವರಿಸಲಾದ ಕಾಲೇಜಿನ ವಿದ್ಯಾರ್ಥಿ ಸಂಘದ ಉದ್ಘಾಟನೆಯು 1-8-52ನೇ ಶುಕ್ರವಾರ ಸಂಜೆ ಗಂಟೆ 3-45ಕ್ಕೆ ಜರಗುವುದು.

ನಗರಸಭೆಯ ಜರೂರು ಸಭೆಯೊಂದು– ತಾ 26ರಂದು ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿದಾಗ ಈ ಕೌನ್ಸಿಲಿನ ಸದಸ್ಯರಾಗಿದ್ದ ಶ್ರೀ ಎಚ್. ಎನ್. ನಾಯ್ಕರ ನಿಧನದ ಬಗ್ಗೆ ದುಃಖ ಪ್ರದರ್ಶಿಸಲಾಯಿತು. ಬಳಿಕ ಮುನಿಸಿಪಲ್ ಹೈ ಸ್ಕೂಲು ಕಟ್ಟಡದ ಪೂರ್ಣತೆಗೆ ಇನ್ನೂ ರೂಪಾಯಿ ರೂ. 3500/- ಕೊಡಬೇಕೆಂದು ನಿರ್ಣಯವಾಯಿತು. ಅನಂತರ ಜರಗಿದ ಸಾಮಾನ್ಯ ಸಭೆಯಲ್ಲಿ G.O. ಗಳು [illegible].

ಅನ್ನ ಸತ್ಯಾಗ್ರಹ– ನೇಕಾರ ಸಂಘದ ಪರವಾಗಿ ಶ್ರೀ [illegible] ಕೆ. ವಾಸ ಸೇರಿಗಾರ ಮತ್ತು ಶೇಷಪ್ಪ ಪಾಡಿಗಾರ ತಾ 28 ರಿಂದ ಕಿನ್ನಿಮೂಲ್ಕಿಯಲ್ಲಿ ಅನ್ನ ಸತ್ಯಾಗ್ರಹ ಪ್ರಾರಂಭಿಸಿದ್ದಾರೆ. ನೇಯಿಗೆ ಮಜೂರಿ ಕಡಿತವೇ ಇದಕ್ಕೆ ಕಾರಣವೆನ್ನಲಾಗಿದೆ.

(ಇತರ ವಾರ್ತೆ ಬರುವ ವಾರ)

ಮಂಗಳೂರು

ಸುಂಕ ರದ್ದಾಗಬೇಕು— ಕೂಳೂರು ಸೇತುವೆ ಮೇಲಿಂದ ಹಾದುಹೋಗುವ ವಾಹನಗಳ ಮೇಲಿನ ಸುಂಕವನ್ನು ರದ್ದು ಮಾಡಬೇಕೆಂದು ಕೆನರಾ ಚೇಂಬರ್ ಒಫ್ ಕಾಮರ್ಸ್‌ನವರು ಮದ್ರಾಸಿನ ಸಾರ್ವಜನಿಕ ಕಾಮಗಾರಿ ಇಲಾಖಾ ಮಂತ್ರಿ ಶ್ರೀ ಎನ್. ರಂಗ ರೆಡ್ಡಿಯವರಿಗೆ ಮನವಿಯೊಂದನ್ನು ಕಳುಹಿಸಿದ್ದಾರೆ. 'ಈ ಸೇತುವೆಯನ್ನು ಕಟ್ಟುವಾಗ, ಸುಂಕ ಹೊರಿಸುವ ವಿಚಾರವೇ ಬಂದಿಲ್ಲ. ಇತ್ತೀಚೆಗೆ, ಮೋಟಾರ್ ವಾಹನಗಳ ಮೇಲೆ ಹೊಸ ತೆರಿಗೆಯನ್ನು ಹೊರಿಸಲಾಗಿದೆ. ಸಾರ್ವಜನಿಕರ ಹಣದಿಂದ ಕಟ್ಟಿದ ಈ ಸೇತುವೆಯ ಮೇಲೆ ಸುಂಕ ಹಾಕುವುದು ಸರಿಯೇ ಎಂದು ವಿಚಾರಮಾಡಿ, ಸುಂಕ ವಸೂಲಿಗೆ ಹೊರಡಿಸಿದ ಆಜ್ಞೆಯನ್ನು ಹಿಂದೆಗೆದುಕೊಳ್ಳಬೇಕು' ಎಂದು ಮನವಿಯಲ್ಲಿ ಹೇಳಲ್ಪಟ್ಟಿದೆ.

ಮಂಗಳೂರು—ಹಾಸನ ರೈಲ್ವೆ— ವಿಚಾರದಲ್ಲಿ ವಿಚಾರ ವಿನಿಮಯಮಾಡಿ, ಆ ಬಗ್ಗೆ ಚಳವಳಿಸಲು, ಹಾಸನ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ವೈ. ಧರ್ಮಪ್ಪ, ಎಮ್. ಎಲ್. ಸಿ., ಅವರು ಮಂಗಳೂರಿಗೆ ಬಂದು ಕೆನರಾ ಚೇಂಬರ್ ಒಫ್ ಕೊಮರ್ಸಿನ ಅಧ್ಯಕ್ಷ ಶ್ರೀ ಎ. ಉಮಾನಾಥರಾಯರನ್ನು ಭೇಟಿಯಾಗಿ, ಆ ರೈಲ್ವೆ ಸಂಬಂಧವಾಗಿ ಹಾಸನ ಜಿಲ್ಲಾ ಬೋರ್ಡಿನವರು ಮೈಸೂರು ಸರಕಾರದಲ್ಲೂ ಭಾರತ ಸರಕಾರದಲ್ಲೂ ನಿವೇದಿಸಿಕೊಂಡುದನ್ನು ವಿವರಿಸಿದರು. ಕೆನರಾ ಚೇಂಬರಿನವರೂ ಈ ವಿಷಯದಲ್ಲಿ ನಡೆಸಿದ ಚಳವಳಿಯನ್ನು ತಿಳಿದು ಸಂತೋಷಪಟ್ಟರು. ಅಲ್ಲದೆ ದಕ್ಷಿಣಕನ್ನಡ ಹಾಗೂ ಹಾಸನ ಜಿಲ್ಲೆಗಳವರು ಈ ಕಾರ್ಯ ಸಫಲತೆಗಾಗಿ ಹೆಚ್ಚಿನ ಪ್ರಯತ್ನಕ್ಕೆ ತೊಡಗಬೇಕೆಂದು ಸೂಚಿಸಿದರು. ಜಿಲ್ಲಾ ಬೋರ್ಡ್ ಆಫೀಸಿನಲ್ಲಿ ಅಧ್ಯಕ್ಷ ಶ್ರೀ ಬಿ ಮಂಜಯ್ಯ ಹೆಗ್ಡೆ, ಉಪಾಧ್ಯಕ್ಷ ಶ್ರೀ ಎಫ್. ಎಕ್ಸ್. ಪಿಂಟೊ ಮೊದಲಾದವರನ್ನು ಕೂಡಾ ನೋಡಿ ಮಾತುಕಥೆ ನಡೆಸಿದರು. ಎರಡೂ ಜಿಲ್ಲೆಗಳವರು ತಂತಮ್ಮ ಜಿಲ್ಲೆಗಳ ಪಾರ್ಲಿಮೆಂಟ್ ಪ್ರತಿನಿಧಿಗಳೊಡನೆ, ಭಾರತ ರೈಲ್ವೆ ಮಂತ್ರಿಗಳಲ್ಲಿಗೆ ಶಿಷ್ಟಮಂಡಲಿಯನ್ನೊಯ್ಯುತಕ್ಕದೆಂದೂ ನಿರ್ಧರಿಸಲಾಯಿತು.

ಸ್ಥಾನಗಳನ್ನು ಹೆಚ್ಚಿಸಲಾಯಿತು: ಮಂಗಳೂರು ಗವರ್ನಮೆಂಟ್ ಕಾಲೇಜಿನ ಬಿ. ಎ. ಪ್ರಥಮ ವರ್ಷದ IV-B ವಿಭಾಗ —ಅರ್ಥ ಶಾಸ್ತ್ರ ಮತ್ತು ಇತಿಹಾಸಕ್ಕೆ ಇನ್ನು ಕೆಲವು ಹೆಚ್ಚು ವಿದ್ಯಾರ್ಥಿಗಳನ್ನು ಸೇರಿಸಲು ಮದ್ರಾಸು ವಿಶ್ವವಿದ್ಯಾಲಯವು ಒಪ್ಪಿದೆ. ಆದುದರಿಂದ ಈ ವಿಭಾಗಕ್ಕೆ ಸೇರಬಿಚ್ಛಿಸುವವರು ಕೂಡಲೇ ಅರ್ಜಿಹಾಕಬೇಕಾಗಿದೆ.

ಸಂತಾಪ ಸೂಚನೆ—ದ.ಕ. ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಕಾರ್ಯಕಾರೀ ಸಮಿತಿಯು ಇದೇ ತಾ. 24ರಂದು ಸಭೆಸೇರಿ ಸಂಘದ ಹಿಂದಿನ ಸದಸ್ಯರಾಗಿದ್ದ ಶ್ರೀ ಎಮ್. ಎಸ್. ಕೃಷ್ಣ ಮತ್ತು ಮದ್ರಾಸಿನ ಪತ್ರಿಕಾ ಕರ್ತರಾಗಿದ್ದ ಶ್ರೀ ಕೆ. ಸಿ. ವಿಶ್ವನಾಥ ಐಯರರ ನಿಧನದ ಕುರಿತು ಸಂತಾಪ ಸೂಚಕ ನಿರ್ಣಯಗಳಾದುವು. ಶ್ರೀ ಡಿ. ಪುಟ್ಟಸ್ವಾಮಿಯವರು ಸಭಾಧ್ಯಕ್ಷತೆ ವಹಿಸಿದ್ದರು.

ಪ್ರಾಂತಿಕ ಶಿಕ್ಷಣ ಸಮ್ಮೇಳನ— ದ. ಕ. ಜಿಲ್ಲಾ ಟೀಚರ್ಸ್ ಗಿಲ್ಡಿನ ಕೌನ್ಸಿಲು ಸಭೆಯು ತಾ. 20ರಲ್ಲು ಉಪಾಧ್ಯಕ್ಷ ಶ್ರೀ ಯು. ಕೇಶವ ರಾಯರ ಅಧ್ಯಕ್ಷತೆಯಲ್ಲಿ ಜರಗಿದಾಗ ಮುಂದಿನ ಮೇ ತಿಂಗಳಲ್ಲಿ ಮಂಗಳೂರಲ್ಲಿ ಜರಗಲಿರುವ ಮದ್ರಾಸು ಪ್ರಾಂತಿಕ ಶಿಕ್ಷಣ ಸಮ್ಮೇಳನ ಸ್ವಾಗತ ಸಮಿತಿಯನ್ನು ನಿರ್ಮಿಸುವುದಕ್ಕಾಗಿಯೂ ಅದಕ್ಕೆ ಸದಸ್ಯರನ್ನು ಸೇರಿಸುವುದಕ್ಕಾಗಿಯೂ ಜಿಲ್ಲಾ ಬೋರ್ಡ್ ಅಧ್ಯಕ್ಷರು, ಮಂಗಳೂರು ಉಡುಪಿ ನಗರ ಸಭೆಗಳ ಅಧ್ಯಕ್ಷರುಗಳು, ಶಾಲೆಗಳ ಸಂಚಾಲಕ ಸಂಘದ ಪ್ರತಿನಿಧಿಗಳು ಮತ್ತು ಗಿಲ್ಡಿನ ಪ್ರತಿನಿಧಿಗಳೇ ಮೊದಲಾದವರಿರುವ ಒಂದು ತಾತ್ಕಾಲಿಕ ಸಮಿತಿಯನ್ನು ನೇಮಿಸಲಾಯಿತು.

ಜಿಲ್ಲಾ ಬೋರ್ಡಿನ ಸಭೆಯು— ತಾ. 22ರಂದು ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀ. ಎಮ್. ಎಸ್. ಕೃಷ್ಣರ ನಿಧನಕ್ಕಾಗಿ ಸಂತಾಪ ಸೂಚಿಸುವ ನಿರ್ಣಯವಾಗಿ ಎರಡು ನಿಮಿಷಗಳ ಮೌನವ್ರತವನ್ನಾಚರಿಸಿತು. ಬಳಿಕ ಅಧ್ಯಕ್ಷರು ಬೋರ್ಡಿನ ಆಡಳಿತ ವರದಿ ಕುರಿತು ಮಾತನಾಡುತ್ತಾ ಹೀಗೆ ಹೇಳಿದರು "ನಮ್ಮ ಜಿಲ್ಲೆಯಲ್ಲಿ ರಸ್ತೆಗಳಿಲ್ಲದಿರುವುದೊಂದು ಕೊರತೆ; ಇದ್ದ ರಸ್ತೆಗಳೂ ದಿನದಿಂದ ದಿನಕ್ಕೆ ಹಾಳಾಗುತ್ತಿರುವುದು ಇನ್ನೊಂದು ಬೇಸರದ ವಿಚಾರ. ಹೆಚ್ಚು ರಸ್ತೆಮಾಡಲು ನಮ್ಮಲ್ಲಿ ಹಣವಿಲ್ಲ. ರಸ್ತೆಯ ವಿಚಾರದಲ್ಲಿ ನಮಗೆ ಅಧಿಕಾರವಿಲ್ಲ. ಇದ್ದ ಹಣವನ್ನಾದರೂ ಬೋರ್ಡಿನ ಇಷ್ಟದಂತೆ ವೆಚ್ಚಮಾಡಲು ಅಧಿಕಾರವಿಲ್ಲ. ನಮ್ಮ ಜಿಲ್ಲೆಯಲ್ಲಿ ಮಹಾಜನರು ಶಾಲಾ ಕಟ್ಟಡಗಳಿಗೋಸ್ಕರವಾಗಿ ಎರಡು ಮೂರು ಲಕ್ಷಗಳಷ್ಟು ರೂಪಾಯಿ ಸಂಗ್ರಹಿಸಿಕೊಟ್ಟಿರುತ್ತಾರೆ. ಆದರೆ ಸರಕಾರವು ಆ ಕುರಿತು ಸಹಾಯ ನೀಡುವುದಿಲ್ಲ" ಎಂದು ವಿದ್ಯಾಭ್ಯಾಸದ ವಿಚಾರ ತಿಳಿಸಿದರು. ಜಿಲ್ಲಾ ಬೋರ್ಡಿನ ಕೈಕೆಳಗಿರುವ ಹೈಸ್ಕೂಲುಗಳ ವರ್ಷದ ಫಲಿತಾಂಶ ಸ್ವಲ್ಪಮಟ್ಟಿಗೆ ಉತ್ತಮವಿದೆ ಎಂದ... ಜಿಲ್ಲೆಯಲ್ಲಿ ಬೋರ್ಡಿನ ಕೈಕೆಳಗೆ 62 ಹಾ. ಎ. ಶಾಲೆಗಳು, 502 ಎಲಿಮೆಂಟರಿ ಶಾಲೆಗಳು. ಎಲಿಮೆಂಟರಿ ಶಾಲೆಗಳ ಹಣವು ಬೋರ್ಡಿಗೆ ಸಕಾಲದಲ್ಲಿ ದೊರೆಯದಿರುವುದರಿಂದ ಅಧ್ಯಾಪಕರಿಗೆ ಕೊಡಲಾಗುವುದಿಲ್ಲವೆಂಬುದನ್ನು ತಿಳಿದಂಲ್ಲದೆ ಬೋರ್ಡಿನ ಆಡಳಿತೆಯಲ್ಲಿಎಲ್ಲ ಕಡೆಯಲ್ಲೂ ಬೋರ್ಡಿನ ಕೈಕಟ್ಟಿದಂತಾಗಿ ಯಾವ ಕೆಲಸಮಾಡಲೂ ಸಾಧ್ಯವಾಗುವುದಿಲ್ಲವೆಂದರು. ಕೊನೆಗೆ ತನಗೆ ಸಹಕಾರ ನೀಡಿದವರನ್ನೆಲ್ಲ ಅಭಿನಂದಿಸಿದರು. ಬಳಿಕ ಶ್ರೀಗಳಾದ ಎಮ್. ಎಸ್. ಅಧಿಕಾರಿ, ದರಣಪ್ಪ ಅಧಿಕಾರಿ, ಎಫ್. ಎ. ಶುಕೂರ್ ಸಾಹೇಬ್, ಬಿ. ದೇವದಪ್ಪ ಆಳ್ವ, ಡಾ॥ ಶೇಷ ರಾವ್, ಡಾ॥ ಕೆ. ನಾಗಪ್ಪ ಆಳ್ವ, ಎಸ್. ನರಸಪ್ಪಯ್ಯನವರು ಮಾತನಾಡುತ್ತ ವರದಿಯನ್ನು ಮಂಜೂರು ಮಾಡುವಂತೆ ಸೂಚಿಸಿದರು. ಪ್ರತಿಯೊಬ್ಬರ ಮಾತಿನಲ್ಲಿ ಬೋರ್ಡಿನಲ್ಲಿ ಹಣವಿಲ್ಲದಿರುವುದೂ ಕಾರ್ಯವೆಸಗಲು ಸರಕಾರ ಸ್ವಾತಂತ್ರ್ಯ ಕೊಡದಿರುವುದೂ ಕಾರಣವೆಂದು ತಿಳಿಯುತ್ತದೆ. ಪ್ರಜೆಗಳ ಪ್ರತಿನಿಧಿಗಳಾಗಿ ಆರಿಸಿ ಬಂದವರು ಕೇಂದ್ರ ಮತ್ತು ಪ್ರಾಂತಗಳಲ್ಲಿ ಸರಕಾರ ನಡೆಸಲು ಸಮರ್ಥರೆಂದಾದ ಮೇಲೆ ಬೋರ್ಡಿನ ಆಡಳಿತೆ ನಡೆಸಲೂ ಸಮರ್ಥರೇ ಎಂದಾಗುತ್ತದೆ. ಆದುದರಿಂದ ಲೋಕಲ್ ಬೋರ್ಡುಗಳ ಆಕ್ಟನ್ನೇ ತಿದ್ದುಪಡಿ ಮಾಡಬೇಕು— ಎಂದು ಮುಂತಾಗಿ ಶ್ರೀ ನರಸಪ್ಪಯ್ಯನವರು ಮಾತನಾಡಿದರಲ್ಲದೆ ಸರಕಾರವು ಸರಿಯಾದ ಅಧಿಕಾರ ವಿತ್ತು ಬೋರ್ಡುಗಳನ್ನು ಸರಿಗೊಳಿಸಬೇಕು ಇಲ್ಲವಾದರೆ ಅಂತ್ಯಗೊಳಿಸಬೇಕು— ಎಂದು ಸ್ಪಷ್ಟವಾಗಿ ನುಡಿದರು.

ಜಿಲ್ಲಾ ಬೋರ್ಡಿನ ವರದಿ ಸಾರಾಂಶ

ರಸ್ತೆಗಳು- ಜಿಲ್ಲೆಯಲ್ಲಿ ಒಟ್ಟು 1466 ಮೈಲು 5 ಫರ್ಲಾಂಗ್ ಮತ್ತು 136 ಗಜ ರಸ್ತೆಯಿದೆ. ಈ ಪೈಕಿ ಬೋರ್ಡಿನ ಅಧಿಕಾರಕ್ಕೊಳಪಟ್ಟದ್ದು 777 ಮೈಲು 5 ಫರ್ಲಾಂಗು 136 ಗಜ ಮಾತ್ರ. ಉಳಿದುವು ಸರಕಾರದ ಸ್ವಾಧೀನವಿದೆ. ವರದಿ ವರ್ಷದಲ್ಲಿ ರಸ್ತೆಗಳನ್ನು ಸರಿಯಾಗಿ ಇಟ್ಟುಕೊಳ್ಳಲು ರೂ 2,46,002 ವೆಚ್ಚವಾಗಿದೆ, ಹಳ್ಳಿ ರಸ್ತೆಗಳಿಗಾಗಿ ರೂ. 3,225 ವೆಚ್ಚವಾಗಿದೆ, ರಸ್ತೆಗಳ ಬಡಾವಣೆಗಾಗಿ ರೂ 2,44,000 ನ್ನು ಸರಕಾರದೊಡನೆ ಕೇಳಿದ್ದರಲ್ಲಿ ರೂ, 1,01,571 ಮಾತ್ರ ಮಂಜೂರಾಗಿತ್ತು. ಬೋರ್ಡಿಗೆ ಇಂಜಿನಿಯರಿಂಗ್ ಇಲಾಖೆ ಇಲ್ಲದ್ದರಿಂದಲೂ 'ಪ್ಯಾಪ್' ಇಲಾಖೆಯವರೇ ರಸ್ತೆಗಳ ಕೆಲಸ ಮಾಡುವುದರಿಂದಲೂ ರಸ್ತೆಗಳ ಕೆಲಸ ಸರಿಯಾಗಿ ಸಕಾಲದಲ್ಲಿ ಆಗುವುದಿಲ್ಲ.

ವಿದ್ಯಾಭ್ಯಾಸ- ಸೆಕೆಂಡರಿ ಶಾಲೆಗಳ ಫಲಿತಾಂಶವು ಈ ವರ್ಷ ತಕ್ಕಮಟ್ಟಿಗೆ ತೃಪ್ತಿಕರವಾಗಿದೆ. ಪ್ರಾಥಮಿಕ ವಿದ್ಯಾಭ್ಯಾಸದ ಜವಾಬ್ದಾರಿ ಸರಕಾರದ್ದಾಗಿದೆ. ಹಣವಿಲ್ಲದೆ ತೊಂದರೆಯಾಗಿದೆ. 81 ಶಾಲೆಗಳಲ್ಲಿ ಮಾತ್ರ ಬುನಾದಿಯವಾದ ಶಿಕ್ಷಣ ನೀಡಲಾಗುತ್ತಿದೆ. ವರದಿಯಲ್ಲಿ ಸಾರ್ವಜನಿಕ ಆರೋಗ್ಯದ ವಿಚಾರದಲ್ಲೂ ಹೆಚ್ಚಿನ ಕೆಲಸವಾಗಿಲ್ಲವೆಂದು ಹೇಳಿದೆ.

ಜಿಲ್ಲಾ ಆಹಾರೋತ್ಪತ್ತಿ ಸಮಿತಿ ಸಭೆಯು ತಾ 25ರಂದು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಸಣ್ಣ ನೀರಾವರಿ ಯೋಜನೆಗನುಗುಣವಾಗಿ 173 ಕೆರೆಗಳ ದುರಸ್ತಿಯನ್ನೂ ಏಳು ನೀರಾವರಿ ಕೆಲಸಗಳನ್ನೂ ಮಂಜೂರು ಮಾಡಲಾಗಿದೆ. ಇವುಗಳಲ್ಲಿ 30 ಕೆಲಸಗಳನ್ನು ರೈತರನ್ನೂ ಖಾತೆಯವರು ಪೂರ್ಣಗೊಳಿಸಿದ್ದಾರೆ. ಆಹಾರೋತ್ಪತ್ತಿ ಉಪಶಾಖೆಯಿಂದ 35 ಕೆಲಸಗಳು ಪೂರ್ಣವಾಗಿವೆ. ಸರಕಾರದ ಹೊಸ ಧೋರಣೆಯಂತೆ ಕೆರೆ ದುರಸ್ತಿ ಕೆಲಸಗಳನ್ನು ಬಿಟ್ಟು ಕೊಡಲಾಗಿದೆ. ಈ ವರೆಗೆ ಜಿಲ್ಲೆಯಲ್ಲಿ ಒಟ್ಟು 22 ಕೆಲಸಗಳನ್ನು ಮಂಜೂರು ಮಾಡಲಾಗಿದೆ. 836 ಎಕ್ರೆಗಳಷ್ಟು ಭೂಮಿಯನ್ನು ಕೃಷಿಗೆ ಯೋಗ್ಯವಾಗಿ ಮಾಡಿದೆ. ಇವುಗಳಿಂದ 418 ಟನ್ ಅಕ್ಕಿ ಆಗಬೇಕೆಂದು ನಿರೀಕ್ಷಿಸಲಾಗಿದೆ ಎಂದು ಮುಂತಾಗಿ ಈ ವರೆಗಾದ ಕಾರ್ಯಕಲಾಪಗಳ ವರದಿಯಲ್ಲಿ ಹೇಳಲಾಗಿದೆ.

ಮುನಿಸಿಪಲ್ ಸಭೆಯು ತಾ. 26 ರಲ್ಲು ಉಪಾಧ್ಯಕ್ಷ ಶ್ರೀ ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು, ಶ್ರೀ ಎ. ಮೂಸಬ್ಬ ಇವರನ್ನು ಪಾಪಾಸು ಮುನಿಸಿಪಲ್ ಕೌನ್ಸಿಲರನ್ನಾಗಿ ಸ್ವೀಕರಿಸಲಾಯಿತು. ಈಗಿರುವ ಗೋವು ಕಡಿಯುವ ಸ್ಥಳವನ್ನು ಬೋಳೂರು ಮಲ ಹುಗಿಯುವ ಸ್ಥಳದ ವರೆಗೆ ಸ್ಥಳಾಂತರಿಸಲು ಸಭೆಯಲ್ಲಿ ಸೂಚನೆ ಬಂದುದನ್ನು ಶ್ರೀ ಆರ್. ಬಿ. ಸಿ. ಡಿ. ಅಂದ್ರಾದೆಯವರು ವಿರೋಧಿಸಿದರು.

ಬುನಾದಿ ಶಿಕ್ಷಣ ತರಬೇತಿ ಶಿಬಿರ- ಮಂಗಳೂರು ಬುನಾದಿ ಶಿಕ್ಷಣ ತರಬೇತಿ ಶಾಲೆಯಲ್ಲಿ ಈಗ ಶಾಲೆಗಳಲ್ಲಿ ಅಧ್ಯಾಪಕರಾಗಿರುವವರಿಗಾಗಿ ಮೂರು ತಿಂಗಳ ಒಂದು ತರಬೇತಿ ಶಿಬಿರವು ಕಳೆದ ಎಪ್ರಿಲ್ 21ರಂದು ಪ್ರಾರಂಭವಾಗಿ ಇದೇ ಜುಲಾಯಿ 20ರಂದು ಮುಕ್ತಾಯವಾಯಿತು, ಜಿಲ್ಲಾ ವಿದ್ಯಾಧಿಕಾರಿ ಶ್ರೀ ಟಿ. ರಾಘವನ್ ನಾಯರರು ಅಧ್ಯಕ್ಷಸ್ಥಾನದಲ್ಲಿದ್ದುಕೊಂಡು ಬುನಾದಿ ಶಿಕ್ಷಣದ ವಿಚಾರವನ್ನು ತಿಳಿಸಿ, ಅದನ್ನು ಸಫಲಗೊಳಿಸುವ ಭಾರವು ತರಬೇತಿ ಹೊಂದಿದ ಉಪಾಧ್ಯಾಯರ ಕೈಯಲ್ಲಿ ಇದೆ ಎಂದರು. ಶ್ರೀಗಳಾದ ಎನ್. ರಾಮರಾವ್, ಬಿ.ಆರ್. ಗೋಪಾಲಕೃಷ್ಣರಾವ್, ಕೆ. ಉಮಾನಾಥರಾವ್ ಎಸ್. ಮುಕುಂದರಾವ ಮೊದಲಾದವರು ಮಾತನಾಡುತ್ತಾ ಬುನಾದಿ ಶಿಕ್ಷಣವನ್ನು ಉಪಾಧ್ಯಾಯರು ಹಳ್ಳಿ ಹಳ್ಳಿಗೊಯ್ಯಬೇಕೆಂದು ಮುಂತಾಗಿ ಹೇಳಿದರು.

ಉಡುಪಿ.

ಸಾಹಿತ್ಯ ಪರೀಕ್ಷೆಗಳು—ಇದೇ ನವಂಬರದಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಪರೀಕ್ಷೆಗಳಿಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಉಡುಪಿಯನ್ನು ಕೇಂದ್ರಗಳಲ್ಲೊಂದಾದ ಸಾಹಿತ್ಯ ಪರಿಷತ್ತು ಅಂಗೀಕರಿಸಿದೆ. ತರಗತಿಗೆ ಸೇರಬಿಚ್ಛಿಸುವ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಯನ್ನು ಪರಿಷತ್ತಿಗೆ ಬರೆದು ತಿಳಿಯಬಹುದು.

ಇಲೆಕ್ಟ್ರಿಕ್ ಕಂಪೆನಿಗೆ—ಕೆಲವು ತಿಂಗಳುಗಳ ಹಿಂದೆ ಬಂದಿರುವ ಹೊಸ ಮೆಶಿನ್ ಈಗ ತಾನೆ ಜೋಡಿಸಲ್ಪಟ್ಟಿದೆ. ಮನೆ ವಾರ್ತೆಗೂ ಕೈಗಾರಿಕೆಗೂ ಹೊಸ ಸಂಬಂಧವನ್ನು ಕೊಡಲಾಗುವುದೆಂಬು ಸಂಬಂಧ ಪಟ್ಟವರು ತಿಳಿಸುತ್ತಾರೆ, ಇನ್ನು ಮುಂದಕ್ಕಾದರೂ ಸರಿಯಾಗಿ ವಿದ್ಯುತ್ ಸರಾಗವಾಗಿ ದೊರೆಯಬಹುದೆಂದೂ ಏರಿಸಲ್ಪಟ್ಟಿರುವ ಸೇಕಡಾ 50ರ ಸರ್ ಚಾರ್ಜ ಬೇಗನೆ ಹೋಗಬಹುದೆಂದೂ ಜನತೆಯು ನಿರೀಕ್ಷಿಸುತ್ತಿದೆ.

ಉಡುಪಿ ಶಹರಿನಲ್ಲಿ ಚಲೋಮನೆ ಮಾರಾಟಕ್ಕಿದೆ.

ಉಡುಪಿ ಶಹರಿನ ಮಧ್ಯವರ್ತಿ ಸ್ಥಳದಲ್ಲಿ ವಾಸ್ತವ್ಯಕ್ಕೆ ಅನುಕೂಲವಾದ ಗಾಳಿ ಬೆಳಕು ನೀರು ಇರುವ ಯೋಗ್ಯ ಉಪ್ಪರಿಗೆಯ ಮನೆ ಮಾರಾಟಕ್ಕಿದೆ. ಕೊಯಿಸು ಉಳ್ಳವರು ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆದು ಕೊಳ್ಳುವುದು.

C/O ಮೆಜೆಸ್ಟಿಕ್ ಸ್ಟೋರ್ಸ್.
ರಥಬೀದಿ, ಉಡುಪಿ.



ಗೀತೆಯ ಸಮೂಲ ಭಾಷಾಂತರ



ತಿಳಿಗನ್ನಡದಲ್ಲಿ ಅನುಭವಸ್ಥರಿಂದ ಬರೆಯಲ್ಪಟ್ಟ ಇಂತಹ ಅನುವಾದ 'ಗೀತೆಯ ಕೈಗನ್ನಡಿ'ಯನ್ನು ಬಿಟ್ಟರೆ ಇನ್ನೊಂದಿಲ್ಲ. 'ಗೀತೆಯ ಕೈಗನ್ನಡಿ"ಯು ಹೊಸಕೆರೆ ಶ್ರೀ ಚಿದಂಬರಯ್ಯನವರ ಸರಳ ಭಾಷಾಂತರ. ಅತೀ ಅಗ್ಗವಾದ ಮತ್ತು ಪ್ರತಿಮನೆಯಲ್ಲೂ ಇರಬೇಕಾದ ಗೀತಾಪುಸ್ತಕ.

ಬೆಲೆ: ಬರೇ 0-12-0 ಮಾತ್ರ.
ನವಯುಗ ಪ್ರೆಸ್, ಉಡುಪಿ

ಪ್ರತಿ ಬುಧವಾರ, ಶನಿವಾರ, ಮತ್ತು ಆದಿತ್ಯವಾರ ಘಂಟೆ 3ಕ್ಕೆ ಮೆಟನಿ ಇದೆ.

ನಡಿಯುವ ಚಿತ್ರ

ಆಪತ್ತಿನಲ್ಲಿರುವಳೆಂದು ಅಪ್ಸರೆಯಂತಹ ಯಾವ ಸ್ತ್ರೀಯಳಿಗೂ ಆಶ್ರಯ ಕೊಡಬೇಡ—ಅದು ಅಪವಾದಕ್ಕೆ ಕಾರಣ—ಇದಕ್ಕಾಗಿ ನೋಡಿರಿ:

ಅಬಿದಾ

ಸ್ವರ್ಣಲತಾ, ಮುಜೀದ್, ನಾಜಿರ್, ನೂರ್ ಜಹಾನ್ —ಮೊದಲಾದವರು

ಬರುವ ಚಿತ್ರ:— **ಸಜಾ**

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

...ಎಂ. ಎಲ್. ಎ. ಗಳ ಭಾಷಣಗಳು

ಮೆಡಿಕಲ್ ಕಾಲೇಜುಗಳ ಸ್ಥಾಪನೆಯ ...ಖಾಸಗೀ ಪ್ರಯತ್ನಕ್ಕೆ ಬೆಂಬಲ ಅತ್ಯಾವಶ್ಯಕ

ಬಿ ವೈಕುಂಠ ಬಾಳಿಗರ ಭಾಷಣ

...ದ್ರಾಸು ಎಸೆಂಬ್ಲಿಯಲ್ಲಿ ಮುಂಗಡ ಪ... ಆರೋಗ್ಯ ಖಾತೆಯ ವೆಚ್ಚ ಮಂಜೂ... ವೇಳೆ ಶ್ರೀ ಬಿ. ವೈಕುಂಠ ಬಾಳಿಗ, ಎ... ಎಲ್. ಎ. ಅವರು ಮಾತನಾಡುತ್ತಾ ...ಣ ಕನ್ನಡ ಮತ್ತು ಮಲಬಾರು ಜಿಲ್ಲೆ... ಹೆಡ್‌ಕ್ವಾರ್ಟರ್ಸ್ ಆಸ್ಪತ್ರೆಗಳ ಕಟ್ಟಡ... ...ಣೆ ಮತ್ತು ಸಲಕರಣೆ ಸರಬರಾಯಿಯ ...ವನ್ನು ವಿವರಿಸಿದರು. ಪಶ್ಚಿಮ ಕರಾ...ಗೆ ಮೆಡಿಕಲ್ ಕಾಲೇಜು ಅಗತ್ಯವಿರುವು...ದ ಅದನ್ನು ಸ್ಥಾಪಿಸಲು ಸರಕಾರಕ್ಕೆ ...ವಿಲ್ಲವಾದರೆ ಖಾಸಗಿ ಪ್ರಯತ್ನಕ್ಕಾದ...ಸಹಾನುಭೂತಿ ತೋರಿಸಬೇಕು. ಇಲ್ಲ... ಅದಕ್ಕಾಗಿ ಪ್ರತ್ಯೇಕ ಸಾಲವೆತ್ತಬೇಕೆಂ... ಸಾಧ್ಯವಿಲ್ಲವಾದರೆ ಜಿಲ್ಲೆಗೊಂದು ಅಥ... ಎರಡೆರಡು ಜಿಲ್ಲೆಗೊಂದು ಮೆಡಿಕಲ್ ಕಾ...ಲೇಜನ್ನಾದರೂ ತೆರೆಯಬೇಕಾಗಿದೆ. ಹೆಚ್ಚು ಡಾಕ್ಟರುಗಳು ಬೇಕೆಂಬುದು ನಿರ್ವಿ... ಹೆಚ್ಚು ಮೆಡಿಕಲ್ ಕಾಲೇಜುಗಳಾಗ... ...ಟ್ಟು ಡಾಕ್ಟರರು ದೊರೆಯುವುದಾದ... ...ಗೆ ವೈದ್ಯಕೀಯ ಶಿಕ್ಷಣವನ್ನು ಎರ...ಡು ವರುಷ ಪಡೆದು ಮುಂದುವರಿಸಲು ಆಶ...ದವರಿಗೆ ಆರೋಗ್ಯ ಶಿಬಂಧಿಯ ಸೆನಿ... ಇನ್ಸ್‌ಪೆಕ್ಟರರಾಗಲು ಯೋಗ್ಯತೆಯ ಕೊಡಬಲ್ಲ, ಮೂರನೇ ವರುಷದಲ್ಲಿ ...ವೈದ್ಯನಾಗಬಲ್ಲ— ಹೀಗೆಯೇ ಬೇರೆ ವರುಷಗಳಲ್ಲಿ ವಿವಿಧಾಂಗಗಳಲ್ಲಿ ಪರಿ...ಯನ್ನು ಕೊಡುವ ಶಿಕ್ಷಣಕ್ರಮವ... ...ರ್ಪಡಿಸಿಕೊಂಡು ಈಗಿನ ಪರಿಸ್ಥಿತಿಗನು... ...ಡಿಕಲ್ ಕಾಲೇಜುಗಳನ್ನು ತೆರೆಯ... ಎಂದರು.

...ಗ್ಯ ಮಂತ್ರಿಗಳಾದ ಮಾನ್ಯ ಎ.ಬಿ. ...ಉತ್ತರವೀಯುತ್ತಾ ಮೆಡಿಕಲ್ ಕಾ...ಲೇಜು ಸ್ಥಾಪನೆಗಾಗಿ ಉಡುಪಿಯಿಂದ ಆಥ... ...ಮಾಧವ ಪೈಗಳ ಪ್ರಯತ್ನವನ್ನು ...ಗಿ ಅನೇಕ ಮಹನೀಯರು ಅವರಿಗೆ ...ನೀಡಲು ಆಶ್ವಾಸನೆಯಿತ್ತ ವಿಷಯ ಪ್ರಸ್ತಾಪಿಸಿ ಈ ವಿಚಾರವ ಕುರಿತು ...ಆಲೋಚಿಸುತ್ತಿದೆ ಎಂದು ತಿಳಿಸಿದ ...ಂತ್ರಿಗಳ ಮಾತಿನಿಂದ ಅರಾಕಿರಣ ...ವಾದ ತಿದೆ.

ಪೋಲೀಸ್ ಖಾತೆಯು ...ನತೆಯ ಮೂಲಭೂತ ...ಹಕ್ಕುಗಳ ಪಾಲನೆಗೆ ಅತ್ಯಗತ್ಯ

...ಪೈಗಳ, ಭಾಷಣ.

...ಎಸೆಂಬ್ಲಿಯಲ್ಲಿ ಮುಂಗಪತ್ರ... ...ದ್ದಾಗ ಪೋಲೀಸ್ ಖಾತೆಯ... ...ವ ಥಿಕ ಶ್ರೀ ಟಿ. ಎ. ಪೈ, ...ಎ, ಅವರು ಮಾತನಾಡು... ...ರವರಾ ಸಾರ್ವಜನಿಕ ಖಾತೆಗಳಿ... ...ದ ವಿಷಯಗಳನ್ನೆಲ್ಲ ಅನಗತ್ಯ... ...ಷ ಕಷ್ಟಸಾಧ್ಯವಾದರೂ, ಪೊ... ...ಗೆ ಅಲ್ಲಿ ಇಲ್ಲಿ ನಡೆದಿರಬಹು... ...ಟ್ಟು ಘಟನೆಗಳನ್ನು ತೋರಿಸಿ ...ಕೆಯ 'ಪೋಲೀಸ್ ರಾಜ್ಯ' ಎಂ... ...ದನ್ನು ಮೋಸಗೊಳಿಸುವುದು ...ಲೀಸ್ ಖಾತೆಯಮೇಲೆ ವೆಚ್ಚ... ...ವನ್ನು ಇತರ ಪ್ರಾಂತಗಳೊಡ... ...ಸಿದರೆ, ಈ ಪ್ರಾಂತವು ಖರ್ಚು ...ಕಡಿಮೆ ಎಂದೇ ಹೇಳಬೇಕು. ...ವನ್ನು ಉಳಿಸಿಕೊಳ್ಳಲು, ಜ... ...ಗಳನ್ನು ಕಾಪಾಡಿಕೊಳ್ಳಲು ...ಲೀಸ್ ದಳವು ಅತ್ಯಗತ್ಯ. ...ಲ್ಲಾಗಳಿ, ಹೊರಗಾಗಲಿ ಪೊ... ...ದ ಪ್ರಚಾರವು ವ್ಯರ್ಥವೆಂದೂ ...ಗಳೇ ಮೊದಲಾದ ಕೆಲವು ಕ... ...ಕಾತಿಯ ಕಾರಣದಿಂದ ಪೊ...

...ಲೀಸ್ ದಳ ಹೆಚ್ಚಿಸಬೇಕಾಯಿತು, ಪೋಲೀಸ್ ದಳಕ್ಕೆ ಸೇರಿಸಿಕೊಳ್ಳುವಾಗ ಯೋಗ್ಯರನ್ನು ಆರಿಸಿಕೊಂಡು ಈ ಖಾತೆಯಲ್ಲಿ ಸುಧಾರಣೆ ತರಬಹುದು. ಪೋಲೀಸ್ ದಳವು ಜನತೆಯ ಮೂಲಭೂತ ಹಕ್ಕುಗಳನ್ನು ಕಾಯಲು ಅತೀ ಅಗತ್ಯ'ವೆಂದರು.

ಅಧ್ಯಾಪಕರ ಸಂಬಳ ಹೆಚ್ಚಿಸಿರಿ

ಶ್ರೀ ವೈ. ಮಂಜಯ್ಯ ಶೆಟ್ಟರ ಭಾಷಣ.

ತಾರೀಕು 18ರಂದು ಮದ್ರಾಸು ಎಸೆಂಬ್ಲಿಯಲ್ಲಿ ವಿದ್ಯಾ ಖಾತೆಯ ಬೇಡಿಕೆಯ ಚರ್ಚೆ ಕಾಲದಲ್ಲಿ ಶ್ರೀ ವೈ. ಮಂಜಯ್ಯ ಶೆಟ್ಟಿ, ಎಮ್. ಎಲ್. ಎ. ಯವರು ಪ್ರಾಥಮಿಕ ಮತ್ತು ಪ್ರೌಢ ಶಾಲಾ ಅಧ್ಯಾಪಕರ ಕಷ್ಟಗಳನ್ನು ವಿವರಿಸಿ ಅವರ ಸಂಬಳದಲ್ಲಿ ಹೆಚ್ಚಳವಾಗಬೇಕೆಂದು ವಾದಿಸಿದರು. ಸರಕಾರ 8 ಕೋಟಿ ರೂಪಾಯಿಯನ್ನು ವಿನಿಯೋಗಿಸಲು ನಿಶ್ಚಯಿಸಿರುವುದಾದರೂ ಬಡ ಅಧ್ಯಾಪಕರ ಸಂಬಳಹೆಚ್ಚಿಸದೆ ಏನಕೆಯಪ್ರಯೋಜನ ಅದರಿಂದ ಸಿಗದು, ವಿದ್ಯಾ ಮಂತ್ರಿಗಳು ಈ ವಿಚಾರದಲ್ಲಿ ತಮ್ಮ ಧೋರಣೆಯನ್ನು ಬದಲಾಯಿಸಬೇಕು, ಸರಕಾರೀ, ಸ್ಥಾನಿಕ ಸರಕಾರೀ ಹಾಗೂ ಖಾಸಗಿ ಶಾಲೆಗಳ ಅಧ್ಯಾಪಕರೊಳಗಣ ಸಂಬಳ ದರದ ವ್ಯತ್ಯಾಸ ಹೋಗಬೇಕು ಎಂದು ಶ್ರೀ ಶೆಟ್ಟರು ಕೇಳಿಕೊಂಡರು.

ಶಾಲಾ ಸಂಬಳದ ವಿನಾಯತಿಯಿಂದ ಅಧ್ಯಾಪಕರಿಗೆ ಸ್ವಲ್ಪ ಸಹಾಯವಾದಂತಾದರೂ ಮುಂಗಡ ಪತ್ರವನ್ನು ಮಂಡಿಸುವಾಗ ಸರಕಾರಿ ನೌಕರರಿಗೂ, ಅಧ್ಯಾಪಕರಿಗೂ, ಇನ್ನೂ ಸ್ವಲ್ಪ ಸಹಾಯ ತೋರಿಸಬಹುದೆಂಬ ನಿರೀಕ್ಷೆ ಇತ್ತು. ನಿಯಂತ್ರಣ ತೆಗೆದು ಸಾವಿರಾರು ಕುಟುಂಬಗಳಿಗೆ ಸುಖ ತಂದ ಮಾಜಿ ಮಂತ್ರಿಗಳು ಈ ಬಡ ಕುಟುಂಬಗಳಿಗೂ ಸ್ವಲ್ಪ ರಿಯಾಯತಿ ತೋರಿಸಬಹುದೆಂದು ಆಶಿಸಿದರು.

ಹಳ್ಳಿಗಳಲ್ಲಿ ಮನೆಯ ಕೆಲಸ ಅಥವಾ ಸಾಗುವಳಿಯ ಕೆಲಸಕ್ಕೆ ಹೆತ್ತವರು ಚಿಕ್ಕ ಮಕ್ಕಳನ್ನು ನಿಲ್ಲಿಸಿಗೊಳ್ಳುತ್ತಿರುವರಲ್ಲದೆ ಶಾಲೆಗೆ ಕಳುಹಿಸುತ್ತಿಲ್ಲವೆಂಬ ತನ್ನ ಸ್ವಂತ ಅನುಭವವನ್ನು ವಿಶದೀಕರಿಸಿ, ಇದಕ್ಕೆ ಹಳ್ಳಿಗಳ ಆರ್ಥಿಕ ದುಃಸ್ಥಿತಿಯೇ ಮುಖ್ಯ ಕಾರಣವಾದುದರಿಂದ, ಸರಕಾರ ಅವರ ಬಡತನ ನೀಗುವಂತೆ ಮಾಡಲು ಭೂ ಸುಧಾರಣೆಯ ಕ್ರಮವನ್ನು ಕೂಡಲೆ ಕೈಗೊಳ್ಳಬೇಕೆಂದೂ ಶ್ರೀ ಶೆಟ್ಟರು ಪ್ರತಿಪಾದಿಸಿದರು.

ದಕ್ಷಿಣ ಕನ್ನಡದ ಕುರಿತು ಮಾತನಾಡುತ್ತ ಇಲ್ಲಿಯ ಹೆಚ್ಚಿನ ಹಳ್ಳಿಗಳು ಮಲನಾಡು ಪ್ರದೇಶದಲ್ಲಿವೆ, ಅಲ್ಲಿ ರಸ್ತೆ ಇಲ್ಲ, ಆಸ್ಪತ್ರೆ ಇಲ್ಲ, ಶಾಲೆ ಇಲ್ಲ. ಮಲನಾಡು ಅಭಿವೃದ್ಧಿಗಾಗಿ ಕೆಲಕಾಲದ ಹಿಂದೆ ಸರಕಾರ ಒಂದು ವಿಚಾರಣಾ ಸಮಿತಿ ನಿಯಮಿಸಿತ್ತು, ಅದರ ವರದಿ ಬಂದಿದೆ, ಅದನ್ನು ಯಾವರೀತಿಯಲ್ಲಿ ಕೈಗೂಡಿಸಬಹುದೆಂಬುದನ್ನು ಸರಕಾರ ಪರಿಶೀಲಿಸಬೇಕು. ಹೊಸ ಶಾಲೆಗಳನ್ನು ತೆರೆಯಬಾರದಾಗಿ ಜಿಲ್ಲಾಬೋರ್ಡಿಗೆ ಸರಕಾರ ಸೂಚಿಸಿದೆಯಂತೆ; ಇದು ಹೌದಾದರೆ ಆ ಸೂಚನೆಯನ್ನು ಹಿಂತೆಗೆಯಬೇಕು ಎಂದು ಶ್ರೀ ಶೆಟ್ಟರು ಭಾಷಣವಿತ್ತರು.

ಪುತ್ತೂರು— ವಿದೇಶ ಯಾತ್ರೆಯನ್ನು ಕೈಗೊಂಡು ಪಶ್ಚಿಮ ಯುರೋಪು ದೇಶಗಳನ್ನು ಸಂದರ್ಶಿಸಿ, ಸಾಧಾರಣ ಮೂರು ತಿಂಗಳುಗಳ ಬಳಿಕ ಇದೀಗ ಶ್ರೀ ಶಿವರಾಮ ಕಾರಂತರು ತಾ 22ರಲ್ಲಿ ಮರಳಿ ಸ್ವಸ್ಥಾನಕ್ಕೆ ಬಂದಿರುವರು.

ಉಕ್ಕಿನಡ್ಕ— ಕಾಸರಗೋಡ ಉಕ್ಕಿನಡ್ಕ ವಶಿಷ್ಠಾಶ್ರಮ ಸಂಘದ ಕಾರ್ಯಕಾರೀ ಸಮಿತಿ ಸಭೆಯು ತಾ 20ರಲ್ಲಿ ಶ್ರೀ ಕೆ. ವಿಷ್ಣು ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಸಂಘ ಸ್ಥಾಪಕರಾದ ಶ್ರೀ ವೈದ್ಯ ಶಂಕರನಾರಾಯಣ ಭಟ್ಟರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು.

ಓದಿದರೆ ಆಶ್ಚರ್ಯಕರ ಪರಿಣಾಮವನ್ನುಂಟುಮಾಡುವ ಚಿರನೂತನ ಕಾದಂಬರಿ—

ಘಂಟಿಮಾರಾ

'ಅವಮಾನದಿದಿರು. ಅನ್ಯಾಯದಿದಿರು, ಯಾರೂ ತಗ್ಗಿ ನಡೆಯಬಾರದು' ಎಂಬ ನಿರ್ಮಲ ಮಾನವವಾದಿಯಾದ ಇಗ್ನೇಜಿಯೋ ಸಿಲೋನೆಯ ಪ್ರಖ್ಯಾತ ಇಟಾಲಿಯನ್ ಕಾದಂಬರಿಯ ಅನುವಾದ.

ಅನುವಾದಕರು: ಶ್ರೀ. ಕು. ಶಿ ಹರಿದಾಸ ಭಟ್ಟರು, ಎಂ. ಎ.

ಪ್ರಕಾಶಕರು. ಅಂತರಂಗ ಕಾರ್ಯಾಲಯ, ಉಡುಪಿ.

——ಕೆಲವು ಅಭಿಪ್ರಾಯಗಳು——

"ಈ ಶತಮಾನದ ಅತ್ಯಂತ ಮರ್ಮಸ್ಪರ್ಶಿ ಕಾದಂಬರಿಗಳಲ್ಲೊಂದು"—ಕರ್ಮವೀರ

"ಅಂಥಹ ಹೆಚ್ಚಿನ ಲೇಖನಿಯನ್ನು ಕನ್ನಡದ ವಾಣಿಯಲ್ಲಿ ಅದ್ದಿ ಶ್ರೀ ಭಟ್ಟರು ಅನುವಾದನನ್ನು ಮೂಲಗ್ರಂಥಕ್ಕೆ ಚ್ಯುತಿ ಇಲ್ಲದಂತೆ ಮಾಡಿದ್ದಾರೆ" —ಚಿತ್ರಗುಪ್ತ.

"ಮೂಲಗ್ರಂಥದ ವೈಶಿಷ್ಟ್ಯಗಳೆಲ್ಲ ಸಮರ್ಪಕವಾಗಿ ಕನ್ನಡಿಸಲ್ಪಟ್ಟಿರುವುದನ್ನು ನೋಡುವಾಗ ಅನುವಾದವು ಸರ್ವೋತ್ತಮವೆಂದು ಹೇಳಲು ಅಡ್ಡಿ ಇಲ್ಲ. ಅನುವಾದ ಮಾಡಿದ ಶ್ರೀ ಭಟ್ಟರೂ ಮಾಡಿಸಿದ ಪ್ರಕಾಶಕರೂ ಅಭಿನಂದನೀಯರು"

—ಇಂಡಿಯನ್ ಎಕ್ಸ್‌ಪ್ರೆಸ್.

ನೀವು ತುಂಬ ಕಾದಂಬರಿಗಳನ್ನು ಓದಿರಬಹುದು. ಆದರೆ ಇಂತಹ ಮರ್ಮಸ್ಪರ್ಶಿ ಕಾದಂಬರಿಯನ್ನು ಓದಿರಲಾರಿರಿ!

200 ಪುಟಗಳು! ಬೆಲೆ ರೂ. 2—0—0

ಇಂದೇ ಬರೆಯಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಮೂಡಬಿದೆ— ಇಲ್ಲಿಯ ಜೈನ್ ಪ್ರೌಢಶಾಲೆಯ ಕಾಂಪೌಂಡಿನ ಸ್ಕೂಲಿನ ಶಾಲಾ ಮಂಡಳಿಯ ಚುನಾವಣೆಯು ಇದೇ ತಾ 25ರಲ್ಲಿ ಜರಗಿ ಶ್ರೀ ನೇಮಿರಾಜ ಕೊಂಡೆಯವರು ಅಧಿಕ ಮತಗಳಿಂದ ವಿಜಯಿಗಳಾದರು.

ಕಲ್ಮಡ್ಕ— ಪಂಬೆತ್ತಾಡಿ ಸಹಕಾರಿ ಸಂಘದ ಮಹಾ ಸಭೆಯು ತಾ 20ರಲ್ಲಿ ಜರಗಿ ಹೊಸವರುಷದ ಬಗ್ಗೆ ಏಳುಪುರಿ ಪಂಚಾಯತರ ಚುನಾವಣೆ ನಡೆಯಿತು. ಸ್ಥಳ ಸಹಕಾರಿ ಯೂನಿಯನ್ನಿನ ಅಧ್ಯಕ್ಷ, ಕಾರ್ಯದರ್ಶಿ ಮೊದಲಾದವರು ಹಾಜರಿದ್ದು ಸಂಘದ ಬೆಳವಣಿಗೆಗೆ ಉಪಯುಕ್ತ ಸಲಹೆಗಳನ್ನಿತ್ತರು.

ಶಿರ್ವ— ಪಂಚಾಯತ್ ಬೋರ್ಡಿನ ಸಾಮಾನ್ಯ ಸಭೆಯು ಶ್ರೀ. ಯಸ್. ಅಂಣಯ್ಯ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ಕೂಡಿ ಬೋರ್ಡಿನಿಂದ ಸಾರ್ವಜನಿಕ ಸ್ನಾನ ನಿರ್ಮಿಸುವ, ಶಿರ್ವ ಪದವು ಕುಶಿನ ಅಂಗಡಿ ರಸ್ತೆ ನಿರ್ಮಿಸುವರೆ ಹಣ ಮಂಜೂರುಮಾಡುವ, ಪೇಟೆ ಶುಚಿತ್ವದ ಬಗ್ಗೆ ಹೆಚ್ಚಿಗೆ ಒಬ್ಬ ಜಾಡಮಾಲಿಯನ್ನು ನೇಮಿಸುವ, ಆಹಾರ ನಿಯಂತ್ರಣದ ಬಗ್ಗೆ ಸರಕಾರವನ್ನು ಅಭಿನಂದಿಸುವ, ಹೆಚ್ಚಿಗೆ ರಿಲೀಫ್ ಶಾಪುಗಳನ್ನು ತೆರೆಯಬೇಕೆಂದು ವಿನಂತಿಸುವ ಮೊದಲಾದ ನಿರ್ಣಯಗಳಾದವು.

ಬೇವಿಪುರ—ತಲಪಾಡಿ ವಿವಿಧ ಉದ್ದೇಶಗಳ ಸಹಕಾರ ಸಂಘದ ಮಹಾ ಸಭೆಯು ತಾ. 26ರಲ್ಲಿ ಇ. ವಿಟ್ಠಲಾಚಾರ ಅಧ್ಯಕ್ಷತೆಯಲ್ಲಿ ಶ್ರೀ ದುರ್ಗಾ ಪ್ರಸಾದಿತ ಪ್ರಾಥಮಿಕ ಶಾಲೆಯಲ್ಲಿ ಜರಗಿ, 1952-53ರ ಬಜೆಟ್ಟು-ಆಡಳಿತೆ ಮಂಡಳಿಯ ಆಯ್ಕೆ ಉಪನಿಬಂಧನೆಗಳ ತಿದ್ದುಪಡಿಗಳಾದುವು. ಸಂಘದ ಕಾರ್ಯದರ್ಶಿ ಶ್ರೀ ಟಿ ಸುಬ್ರಾಯ ಭಟ್ಟರು ಮಾತನಾಡಿ ಉಪಯುಕ್ತ ಸಲಹೆಯನ್ನು ಕೊಟ್ಟರು. ಶಾಲಾ ಮಕ್ಕಳ ವಿವಿಧ ವಿನೋದಾವಳಿಗಳೊಂದಾಗಿ ಸಭಾಂತ್ಯವಾಯಿ...

ಅಧಿಕ ಕಾಂಗ್ರೆಸ್ ಸದಸ್ಯರನ್ನು ಸೇರಿಸಿರಿ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕರೆ—ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಸಕ್ರಿಯರಿಸಿದಂತೆ ಕಾಂಗ್ರೆಸ್ ಮೆಂಬರರನ್ನು ಸೇರಿಸುವ ಅವಧಿಯನ್ನು ಇದೇ ಅಗೋಸ್ತು ತಾ. 31ರವರೆಗೆ ಮುಂದರಿಸಲಾಗಿದೆ. ಪಾರ್ಲಿಮೆಂಟ್ ಸದಸ್ಯರು ಕನಿಷ್ಠ 5000 ಮಂದಿಯನ್ನು ಪ್ರಾಂತಿಕ ಶಾಸನ ಸಭಾ ಸದಸ್ಯರ ಕನಿಷ್ಠ 1000ಮಂದಿಯನ್ನು ತಂತಮ್ಮ ಕ್ಷೇತ್ರದಿಂದ ಕಾಂಗ್ರೆಸ್ ಸದಸ್ಯರನ್ನಾಗಿ ಸೇರಿಸಲು ಮುಂದಾಗಬೇಕೆಂದು ಸೂಚಿಸಲಾಗಿದೆ. ಅಲ್ಲದೆ ಶಾಸನ ಸಭಾ ಸದಸ್ಯರು ಕಾಂಗ್ರೆಸ್ ಕಮಿಟಿಗಳೊಡನೆಯೂ ತಂತಮ್ಮ ಕ್ಷೇತ್ರದ ಮತದಾರರೊಡನೆಯೂ ನಿಕಟಸಂಬಂಧವನ್ನಿಟ್ಟುಕೊಂಡು ಜನಹಿತ ದೃಷ್ಟಿಯ ಕಾರ್ಯಗಳನ್ನೆಸಗಬೇಕೆಂದೂ ಕೂಡಾ ಸೂಚಿಸಲಾಗಿದೆ.

ನಡೂರು—26-7-52ರಂದು ಶ್ರೀ ಮಹಲಿಂಗೇಶ್ವರ ಶಾಲಾ ಹಳೆ ವಿದ್ಯಾರ್ಥಿಗಳು ಸಭೆ ಸೇರಿ, ಹಳೆ ವಿದ್ಯಾರ್ಥಿಗಳ ಸಂಘವನ್ನು ಸ್ಥಾಪಿಸಿದರು. ಕಾರ್ಯಕಾರೀ ಸಮಿತಿಗೆ ವಿ. ನಾರಾಯಣ ಸೆಟ್ಟಿ (ಅಧ್ಯಕ್ಷ) B. ವೆಂಕಪ್ಪ ಸೆಟ್ಟಿ ಮತ್ತು N. ಕೇಶವ ಸೆಟ್ಟಿ (ಕಾರ್ಯದರ್ಶಿಗಳು) N. ಸುಂದರ ಸೆಟ್ಟಿ, ಗಣಪಯ್ಯ ಸೆಟ್ಟಿ, ನಾರಾಯಣ ಸೆಟ್ಟಿ, ಶಿವರಾಮ ಸೆಟ್ಟಿ, ಮತ್ತು ಶಂಭು ಶಂಕರ ಸೆಟ್ಟಿ ಇವರು ಸದಸ್ಯರಾಗಿ ಚುನಾಯಿತರಾದರು.

'ನವಯುಗ'ದ

ಬೆಳ್ತಂಗಡಿ ಏಜಂಟರು:-

ಕೆ. ಗೋಪಾಲಕೃಷ್ಣ ಶೆಟ್ಟಿ.

ನ್ಯೂಸ್ ಏಜಂಟ್, ಬಸ್‌ಸ್ಟಾಂಡ್,

ಬೆಳ್ತಂಗಡಿ, ದ. ಕ.

ಕಡಿವಾಣದ ಬಲ

[೧ನೇ ಪುಟದಿಂದ ಮುಂದುವರಿದುದು]

ಪ್ಯನೇ; ಆದುದರಿಂದ ಸ್ವಾಭಾವಿಕವಾಗಿ ತಿರುಗಿ ಪೆಟ್ಟು ಹೊಡೆದು ಸೇಡು ತೀರಿಸಿಕೊಳ್ಳಲು ಅವನು ಮುಂದಾದನು. ಆದರೆ—ಛೆ, ಇದನ್ನೇನು ತಾನು ಮಾಡುತ್ತಿರುವುದು ಎಂದವನು ನಾಚಿಕೊಂಡು, ಎತ್ತಿದ ಕೈಯನ್ನು ಹಿಂದೆಗೆದುಕೊಂಡರೆ, ಅವನು ಎಷ್ಟು ಶ್ರಮಪಟ್ಟು ಹೀಗೆ ಮಾಡುತ್ತಿರುವನು! ಒಡನೆಯೇ ಎಲ್ಲ ಕ್ರೋಧಭಾವವೂ ಮಾಯವಾಗಿಬಿಡುವುದು ನಿಶ್ಚಯ. ತನಗೆ ಹೊಡೆದವನ ಬಗ್ಗೆ ಕನಿಕರ ಮೂಡುವುದು, ಅವನು ಮಾಡಿದ ತಪ್ಪಿಗಾಗಿ ನಾವು ಕಣ್ಣೀರು ಮಿಡಿಯುವ ಪ್ರಸಂಗ ಬರುವುದು: "ನನ್ನಲ್ಲಿ ಇದ್ದ ಸಂಯಮ ನಿನ್ನ ಈ ಮಿತ್ರನಲ್ಲಿ ಇಲ್ಲವಾಯಿತೆ?" ಎಂದು ನಾವು ಮರುಕಪಡುವೆವು. ಇದರಿಂದಾಗಿಯು ಮನಸ್ಸಿನ ಮೇಲೂ ಇದರ ಪರಿಣಾಮವು ಒಳ್ಳೆಯದಾಗುವುದು. ಅವನ ಶತ್ರುಭಾವನೆಯು ಸ್ಥಾನವನ್ನು ಮಿತ್ರ ಭಾವವು ಆಕ್ರಮಿಸುವುದು.

ಕೇವಲ ಕೋಪವೊಂದೇ ನಮಗೆ ಶತ್ರುವಲ್ಲ—ಜೊತೆಗೆ ಧೈರ್ಯ, ಪ್ರತೀಕ್ಷೆ ಬುದ್ಧಿ ಮತ್ತು ಮನಸ್ಸಿನ ಶಾಂತಿಯೂ ನಮಗೆ ಬೇಕು. ಬೇಟೆಗಾರನೊಬ್ಬನು ತೋಳದ ಹಿಂದು ಬರುತ್ತಿರುವುದರ ಸದ್ದು ತಿಳಿದು ಬಾಣಬಿಟ್ಟನು. ಬಾಣ ಒಂದು ತೋಳವನ್ನು ಭೇದಿಸಿ, [illegible] ಎದುರಿನ ಒಂದು ಬಂಡೆಕಲ್ಲಿಗೆ ತಗುಲಿ ಶಬ್ದ ಮಾಡಿತು. ಬೇಟೆಗಾರನ ತನ್ನ ಬಾಣ ವ್ಯರ್ಥವಾಯಿತು—ಎಂದುಕೊಂಡು ಎದ್ದು ಹೋದನು. ಮುಂಜಾವಿನವರೆಗೆ ಕಾದು ಕುಳಿತಿದ್ದರೆ, ಹೀಗೆ ನಿರಾಶನಾಗುವ ಪ್ರಸಂಗ ಬರುತಿದ್ದಿಲ್ಲ. ಸ್ವಲ್ಪ ಧೈರ್ಯದಿಂದ ಮುನ್ನುಗ್ಗಿ, ತೋಳಕ್ಕೆ ಬಾಣ ತಗುಲಿಲ್ಲವೇ ಎಂದು ನೋಡುತಿದ್ದರೆ, ಆಗಳಕ್ಕೆ ಸಮಾಧಾನ ಸಿಗುತ್ತಿತ್ತು. ಮನಸ್ಸಿನ ಶಾಂತಿಯನ್ನು ಕೆಡಿಸದೆ, ಮತ್ತು ಒಂದೆರಡು ಬಾಣಗಳನ್ನು ಬಿಡುತಿದ್ದರೆ, ಬೇರೆ ಯಾವುದಾದರೂ ತೋಳ ಹಿಡಿಯಬಹುದಿತ್ತು.

ಕೆಲವರು ಈ ಎಲ್ಲ ಸಂಗತಿ—ಸಹನೆ, ಶಾಂತಿ, ಮತ್ತು ಪ್ರತೀಕ್ಷೆ—ವ್ಯರ್ಥವಾದುದೆಂದು ಹೇಳುವರು. ಇದು ಸರಿಯಲ್ಲ. ಇವೆಲ್ಲ ಉತ್ತಮ ಆಯುಧಗಳು. ಚರಿತ್ರ ಬಲವನ್ನು ಹೆಚ್ಚಿಸುವುದರಲ್ಲಿ ಇವುಗಳ ಪಾತ್ರ ಅಧಿಕವಾಗಿದೆ. ಹಾಗೆಂದು ಮನುಷ್ಯನ ದೌರ್ಬಲ್ಯವನ್ನು ಪೋಷಿಸುವ ಗುಣಗಳಿಗೆ ಎಷ್ಟು ಮಾತ್ರಕ್ಕೂ ಪ್ರೋತ್ಸಾಹ ಕೊಡಕೂಡದು. ಎಷ್ಟೋ ಮಂದಿ ಜನರು ಕುರಿಗಳಂತಿದ್ದಾರೆ ನಾವು ಹೇಳಿದಂತೆ ನಡೆಯುವುದರಲ್ಲೇ ಅವರಿಗೆ ಪರಮಾನಂದ. ಇದು ಅಷ್ಟು ಒಳ್ಳೆಯದಲ್ಲ.

ಇನ್ನು ಕೆಲವರು, ಕೇವಲ ದೀನರಂತೆ, ಜಡಪ್ರವೃತ್ತಿಯವರಾಗಿದ್ದಾರೆ. ಇದೂ ಒಳ್ಳೆಯದಲ್ಲ. ಮನಸ್ಸಿನಲ್ಲಿ ದೈನ್ಯಸ್ವಭಾವವಿರಬೇಕಾದರೂ—ಅದು ಆತ್ಮ ಘಾತುಕವಾಗಿರಬಾರದು. ಆತ್ಮ ರಕ್ಷಕವಾಗಿರಬೇಕು. ನಮ್ಮ ದೌರ್ಬಲ್ಯದ ಮೇಲೆ ನಮ್ಮದೇ ಪ್ರಭುತ್ವ ವಿಲ್ಲದಿದ್ದಲ್ಲಿ—ಇತರರು ನಮ್ಮ ದೌರ್ಬಲ್ಯದ ಅನುಚಿತ ಲಾಭವನ್ನು ಮಾಡಿಕೊಂಡು, ತಮ್ಮ ಬೆರಳುಗಳ ತುದಿಯ ಮೇಲೆ ನಮ್ಮನ್ನು ಕುಣಿಸುವುದು ಖಂಡಿತ.

ಬಿಲ್ಲು ವಿದ್ಯೆಯಲ್ಲಿ ನುರಿತವನು, ವೇಗವಾಗಿ ಬಾಣಗಳನ್ನೆಸೆಯಬಲ್ಲ. ಒಬ್ಬ ನಾವಿಕನು ಬಿರುಗಾಳಿಯ ನಡುವೆಯೂ ನಾವೆಯನ್ನು ಸುರಕ್ಷಿತವಾಗಿ ಪಾರುಮಾಡಬಲ್ಲ. ಇವರೆಲ್ಲರೂ ತಮ್ಮ ಬುದ್ಧಿಬಲವನ್ನು ಎರಡನೆಯ ವಸ್ತುವಿನ ಮೇಲೆ ಪ್ರಯೋಗಿಸುವರು. ಆದರೆ ಮನುಷ್ಯನು ತನ್ನ ಮೇಲೆಯೇ ಕಡಿವಾಣ ಪ್ರಯೋಗಿಸಿದರೆ—ಅದಕ್ಕಿಂತ ಮಿಕ್ಕಿದ ಸಾಹಸ ಇನ್ನೊಂದಿಲ್ಲ. ಆತ್ಮ ಸಂಯಮಿಯನ್ನು ಹೊಗಳಿದಾಗಲೂ ಅವನ ಮನಸ್ಸು ಚಂಚಲಗೊಳ್ಳದು—ಯಾರಾದರೂ ನಿಂದಿಸಿದಾಗ, ಅದು ಸ್ಥಿರಬುದ್ಧಿಯನ್ನು ಕಳೆದುಕೊಳ್ಳದು ಸರ್ವಹಿತವಾಗಲಿ ಎಂಬ ಮಹಾ ಉದ್ದೇಶವನ್ನಿಟ್ಟುಕೊಂಡು ಈ ಮನಸ್ಸು ಕಾರ್ಯೋನ್ಮುಖವಾಗುತ್ತದೆ. ಈ ಪ್ರಕಾರ ಸದಾ ಶಾಂತಿಯಲ್ಲಿ ಮನಸ್ಸು ಇರುತ್ತದೆ.

ರಾಜಕೀಯದಲ್ಲಿಯೂ [illegible] ಸಂಯಮದ ಅಗತ್ಯ ಹೇಳತೀರದಷ್ಟಿದೆ. ಪರರನಿಂದೆ ದೂಷಣೆಗಳಿಗೆ ಉದ್ಯುಕ್ತರಾಗುವ ಮೊದಲು ಸ್ವಂತ ಗುಣಶೀಲಗಳ ಕಡೆಗೆ ಗಮನವಿಟ್ಟುಕೊಂಡರೆ ಆಗ ಪ್ರತಿಪಕ್ಷದ ತುಂಬ ದುರ್ಗುಣ ದುರಾಚಾರಗಳೇ ಇರದೆ, ಒಳ್ಳೆಯ ಸಂಗತಿಗಳೂ ಇವೆ ಎಂಬುದು ಗೋಚರಿಸುವುದು ಕಟು ನಿಂದೆ ಕಟು ಟೀಕೆಗಳನ್ನು ಮಾಡುವ ಬದಲಿಗೆ ಸಮಾಧಾನದ ದೃಷ್ಟಿಯಿಂದ ವಿಷಯದ ವಿಮರ್ಶೆ ಮಾಡಿದರೆ—ಅವಸರದ ನಿರ್ಣಯಗಳಿಂದಾಗುವ ತಪ್ಪು ತೊಲಗುವುದು.

—ಓಂತತ್ಸತ್.

Applications are invited from local influencial persons for the post of Regional Manager on Rs. 300/-P.M. plus other facilities Educated persons with good connections and organising ability and who can invest Rs 501/-need only apply. Interview at own cost Apllications must be addressed to Divisional Manager, M/S. Pu[illegible] Ltd-, Mahathma Gandhi Road Chikmagalur, (Mysore State-)

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. ನಂಬ್ರ 23/52

1 ಮತ್ತು ಬಾಯಿ 2. ದುಗ್ಗ ಮರಕಾಲ್ತಿ

—ಅರ್ಜಿದಾರರು.

1ನೆ ಅರ್ಜಿದಾರರ ಗಂಡ ವ 2ನೆ ಅರ್ಜಿದಾರರ ಮಗ ತುಕ್ರ P. ಸುವರ್ಣನು ತಾ. 18-4-51ರಲ್ಲು ಉಡುಪಿ ತಾಲ್ಲೂಕು ಪಡುಗ್ರಾಮದಲ್ಲಿ ಮೃತಪಟ್ಟಿದ್ದು, ಮೃತನ ಬಾಬ್ತು "ದಿ ಯುನೈಟೆಡ್ ಕರ್ನಾಟಕ ಇನ್ಸೂರೆನ್ಸು ಕಂಪೆನಿ, ದಾರವಾಡ ಇದರಲ್ಲಿ ನಂಬ್ರ 5241ನೆ ಪೋಲಿಸಿಯ ತಮ್ಮ ಹಕ್ಕಿನ ಐವಜು ಪಡೆಯುವರೆ ಅರ್ಜಿದಾರರ ಬಗ್ಗೆ 1ನೆ ಅರ್ಜಿದಾರಳ ಹೆಸರಿಗೆ ಸಕ್ಸೆಸ್ಸನ್ ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ ಅರ್ಜಿದಾರರು ಮಾಡಿರುವ ಅರ್ಜಿ ತಾ. 16-8-52ಕ್ಕೆ ಇಡಲಾ[illegible] ಕ್ಷೇಪವುಳ್ಳವರು ಆ ದಿವಸ ಬೆಳಗ್ಗೆ 10ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

(By order)

Narayana Rao, K

Advocate for Petitioners,

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ವಿನಂತಿ

ಪ್ರಪಂಚದ ಜನರಲ್ಲಿ ಹೆಚ್ಚಿನವರು ಶ್ರೀ ರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ಜೀವನ ಹಾಗೂ ಉಪದೇಶಗಳಿಗೆ ಚಿರಪರಿಚಿತರು. ಹಾಗೆಂದು ಇವರಲ್ಲಿ ಅಧಿಕಾಂಶ ಜನಕ್ಕೆ ಶ್ರೀ ಶಾರದಾ ದೇವಿಯ ಕುರಿತು ಹೆಚ್ಚಿನ ತಿಳುವಳಿಕೆ ಇಲ್ಲ ಏಕಾಂತದಲ್ಲಿಯೇ ಕಳೆದ ಅವರ ಸರಳ ಹಾಗೂ ಪವಿತ್ರ ಜೀವನ ವಿಶ್ವ ದೃಷ್ಟಿಗೆ ಹೆಸರ್ಗೊಂಡಿದ್ದುದಷ್ಟೆ ಅಲ್ಲ – ಮಾನವ್ಯಕ್ಕೈನೇ ಆದರಿಂದ ಪಾಠ ಕಲಿಯಲಿಕ್ಕಿದೆ ಈ ಅಪ್ರತಿಮ ಜೀವದ ಕಥೆಯು ಶತಮಾನಗಳಿಂದ ನಮ್ಮ ಜನ್ಮಭೂಮಿಯ ಉನ್ನತಾದರ್ಶವಾದ ಸ್ತ್ರೀತ್ವವನ್ನು ಜನಪ್ರಿಯ ರೀತಿಯಲ್ಲಿ ಮನವಂಕೆ ಮಾಡಿಕೊಡಲು ಸಹಾಯಕವೆನಿಸುವುದು ನಿಶ್ಚಯ ಈ ಎಲ್ಲ ವಿಷಯಗಳ ಮಹತ್ವವನ್ನು ಮನಗಂಡು ೧೯೫೩ನೇ ಇಸವಿಯನ್ನು ಪೂಜ್ಯ ಮಾತೆಯ ಜನ್ಮ ಶತಾಬ್ಧಿಯಾಗಿ ಆಚರಿಸುವ ಸಂಕಲ್ಪ ಮಾಡಿದ್ದೇವೆ ಜನ್ಮ ಶತಾಬ್ಧಿಯ ಉತ್ಸವ ಸಮಿತಿಯು ಶ್ರೀ ಶಾರದಾ ದೇವಿಯ ಜೀವನ ಚರಿತ್ರೆ ಮತ್ತು ಬೋಧನೆಗಳನ್ನೊಳಗೊಂಡ ಒಂದು ಗ್ರಂಥರಚನೆಯಲ್ಲಿ ತೊಡಗಿದೆ ಇದಲ್ಲದೆ—ಇನ್ನಿತರ ಅಮೂಲ್ಯ ಕಾರ್ಯ ಪ್ರಣಾಳಿಯನ್ನೂ ಯೋಚಿಸಲಾಗಿದೆ. ಇವಕ್ಕೆಲ್ಲ ಸುಮಾರು ಒಂದು ಲಕ್ಷ ರುಪಾಯಿ ವೆಚ್ಚ ಬಂದೀತೆಂಮ ಅಂದಾಜು. ಹೀಗಿರುವುದರಿಂದ ರೂ. ೨೦ಕ್ಕಿಂತ ಹೆಚ್ಚು ಕಾಣಿಕೆ ನೀಡಿ, ಸದಸ್ಯರಾಗಿ ಸೇರಿ, ಸರ್ವ ಮಹಾ ಜನರೂ ನೆರವಾಗಬೇಕೆಂದು ವಿನಂತಿಸುತ್ತೇವೆ ಸ್ತ್ರೀತ್ವ ಹಾಗೂ ಮಾತೃತ್ವದ ಪುರೋಗತಿಯಲ್ಲಿ ವಿಶ್ವಾಸವುಳ್ಳವರು ಶಕ್ತ್ಯಾನುಸಾರ ಸಹಾಯನೀಡಬೇಕೆಂದು ಕೇಳಿಕೊಳ್ಳುತ್ತೇವೆ. ಕಾಣಿಕೆಯನ್ನು ಕಾರ್ಯದರ್ಶಿ, ಪೂಜ್ಯಮಾತಾ ಜನ್ಮ ಶತಾಬ್ಧಿ. ಬೇಲೂರು ಮಠ, ಹೌರಾ ಜಿಲ್ಲೆಗೆ ಕಳಿಸಿಕೊಡಿರಿ.

—ಸ್ವಾಮಿ ಅವಿನಾಶಾನಂದ

ಯಕ್ಷಗಾನ ಕಲಾ ಸಂಘ ಕೋಟೆ, ಮುಂಬಾಯಿ

ತಾ 13-7-52ರಲ್ಲಿ ಮುಂಬಯಿಯ ಕೋಟೆಯೊಳಗಿನ ದೇನಾ ಬಿಲ್ಡಿಂಗ್, (17, ಬಿ. ಹೋರ್ನಿಮನ್ ಸರ್ಕಲ್) ನ ಒಂದನೇ ಮಾಳಿಗೆಯಲ್ಲಿ, ಶ್ರೀ ಯಂ. ಪಿ. ಬನನ್ ಇವರ ಅಧ್ಯಕ್ಷತೆಯಲ್ಲಿ, ಯಕ್ಷಗಾನ ಕಲಾಪ್ರೇಮಿಗಳ ಒಂದು ಸಾರ್ವಜನಿಕ ಸಭೆ ಜರಗಿತು

ಯಕ್ಷಗಾನ ಕಲೆಯ ಅಭ್ಯಾಸ, ಸಾಹಿತ್ಯ ನಿರ್ಮಾಣ, ಮತ್ತು ಉತ್ತಮ ಕಲಾಕಾರರ ಕೂಡುವಿಕೆಯ ಕಲಾ ಪ್ರದರ್ಶನದಿಂದ ಯೋಗ್ಯ ಪ್ರಚಾರ, ಇತ್ಯಾದಿ ವಿಶಾಲ ಕಾರ್ಯಕ್ಷೇತ್ರವನ್ನಿಟ್ಟುಕೊಂಡು "ಯಕ್ಷಗಾನ ಕಲಾ ಸಂಘ" ಎಂಬ ಹೆಸರಿನಿಂದ, ಒಂದು ಸಂಘವು ಸ್ಥಾಪಿಸಲ್ಪಟ್ಟಿತು.

ಹನ್ನೊಂದು ಜನ ಕಾರ್ಯಕರ್ತರನ್ನು ಈ ವರ್ಷದ ಕಾರ್ಯಕಾರೀ ಸಮಿತಿ ಸದಸ್ಯರಾಗಿ ಆರಿಸಲಾಗಿದೆ. ಕಲಾ ಪ್ರೇಮಿಗಳು, ಸಂಘದೊಡನೆ ಸಂಬಂಧ ಬೆಳೆಸಬೇಕಾಗಿ ಈ ಮೂಲಕ ಹಾರೈಸಲಾಗಿದೆ,

ಗೌರವ-ಕಾರ್ಯದರ್ಶಿಗಳು.

ಭೋಜರಾಜ ಸೆಟ್ಟಿ ಮತ್ತು ಯಂ. ಪಿ. ಬನನ್-

ವಿವಿಧ ಪಾತ್ರೆಗಳು



ಯಾವತ್ತೂ ವಿ[illegible] ದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆ[illegible] ಯೂ ಚಿಲ್ಲರೆಯಾಗಿಯೂ ದೊರೆಯುತ್ತ[illegible]

ಕಲ್ಯಾಂಜೆ ವ್ಯಾಸಾಚಾರ್ಯ, ರಥಬೀದಿ, ಉಡುಪಿ

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ಸ್ಥಾ[illegible]ಯವಾದ ಬಡ್ಡಿಯಿಂದಲೂ, ಸಾ[illegible]ದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧ[illegible] ಯನ್ನು ಮಾಡುತ್ತಿರುವುದು

The Moolky Bank Ltd.

Moolky, S. K

ಭಾರತದ ನಾರಿಯರು ಮತ್ತು ಕ್ಷಯರೋಗ

ಲೇಖಕ: ವೈದ್ಯಗುರು ಎಂ. ಆರ್. ಭಟ್

ಸರಕಾರವು ಪ್ರಕಟಿಸಿದ ಅಂಕ ಸಂಖ್ಯೆಗಳ ಅನುಸಾರ, ಭಾರತದಲ್ಲಿ ಪುರುಷರಿಗಿಂತ ಸ್ತ್ರೀಯರು ಅಧಿಕವಾಗಿ ಕ್ಷಯರೋಗಕ್ಕೆ ತುತ್ತಾಗಿರುವರು; ಸ್ತ್ರೀಯರು ಕ್ಷಯರೋಗದಿಂದ ಪೀಡಿತರಾಗಲು, ಅತ್ಯಂತ ಪ್ರಬಲ ಕಾರಣವು ಅವರ ಪ್ರಸೂತಾವಸ್ಥೆಯಲ್ಲಿ ಸಮುಚಿತ ಉಪಚಾರ ಹೊಂದದಿರುವುದೇ ಆಗಿದೆ.

ಪ್ರಸೂತಾವಸ್ಥೆಯ ಪ್ರಾಚೀನ ಭಾರತೀಯ ಪದ್ಧತಿಯ ಅನುಸಾರ, ಮೊತ್ತಮೊದಲು ಬಾಣಂತಿಗೆ ಏನನ್ನೂ ಕೊಡುತ್ತಿದ್ದಿಲ್ಲ; ಅನಂತರ, ಮರುದಿನ, ಬೆಲ್ಲವನ್ನು ಬಿಸಿನೀರಿ, ಕರಗಿಸಿ ಹಾಗೂ ಪ್ರವಿಸಿ, ಅವಳಿಗೆ ಕೊಡುವುದು ಬಹು ಲಾಭದಾಯಕವಾಗಿದೆ ಆದರೆ ಇದನ್ನು ಅತ್ಯಧಿಕ ಪರಿಮಾಣದಲ್ಲಿ ಕೊಡುವುದು ಸಹ ಹಾನಿಕರವಾಗಿದೆ; ಅಧಿಕ ತುಪ್ಪವನ್ನು ಜೀರ್ಣ ಹಾಗೂ ಪಚನ ಮಾಡುವುದು ಸಕಲರಿಗೆ ಸುಲಭ ಹಾಗೂ ಸಹಜ ಕೆಲಸವಲ್ಲ; ಶರೀರದ ಸಮಸ್ತ ಅಂಗಗಳು ಶಿಥಿಲವಾದಾಗ ಕೂಡ ಅದು ಸುಲಭದ ಕಾರ್ಯವಲ್ಲ.

ಈ ಬೆಲ್ಲದ ಕ್ರಿಯೆಯು ಮೂರು-ನಾಲ್ಕು ದಿನಗಳ ಪರ್ಯಂತ ಚಾಲು ಇರುತ್ತದೆ; ಅನಂತರ, ಪೌಷ್ಟಿಕ ವಸ್ತುಗಳ ಪರಿಮಾಣ ಪ್ರಮಾಣವು ಇನ್ನೂ ಹೆಚ್ಚಿಸಲ್ಪಡುತ್ತದೆ; ಆ ಪೌಷ್ಟಿಕ ವಸ್ತುಗಳಲ್ಲಿ ವಿಧವಿಧದ ಲಡ್ಡು (ಗುಂಡ)ಗಳೇ ಅಧಿಕವಾಗಿರುತ್ತವೆ.

ನಾರಿಯ ದೇಹದ ಮೇಲೆ ಆಘಾತವಾಗುವ ಸಮಯವು ಇದೇ. ಅಧಿಕಾಂಶ ನಾರಿಯರು ಆ ಸಮಯದಲ್ಲಿ ಅಜೀರ್ಣ, ಜ್ವರ, ಮತ್ತು ಕೆಮ್ಮುಗಳಿಂದ ಪೀಡಿತರಾಗುತ್ತಾರೆ; ಯಾಕೆಂದರೆ, ಮೊತ್ತ ಮೊದಲು ತುಪ್ಪವೇ ಶುದ್ಧವಾಗಿರುವುದಿಲ್ಲ; ಹೇಗಾದರೂ ಶುದ್ಧ ತುಪ್ಪ ಲಭಿಸಿದರೂ, ಬಾಣಂತಿಯು ಅದನ್ನು ತಿನ್ನದೆ, ಬಿಟ್ಟು ಬಿಡುವಳು; ಇಂದಿನ ವಾತಾವರಣದಲ್ಲಿ ಅವಳು ತಿಂದು, ಜೀರ್ಣ ಮಾಡುವಳೆಂದು ಖಂಡಿತ ತೋರುವುದಿಲ್ಲ.

ಆ ಕಾಲದ ಲಘು ಅಥವಾ ತೀಕ್ಷ್ಣ ಜ್ವರ, ಅಜೀರ್ಣ ಅಥವಾ ಕೆಮ್ಮು ಇವನ್ನು ಆ ಕಾಲದಲ್ಲಿ ಉಪೇಕ್ಷಿಸುತ್ತಾರೆ; ಸ್ವಲ್ಪ ಸಮಯವು ಕಳೆದಾಗ, ಲಘು ಚಿಕಿತ್ಸೆಯು ಪ್ರಾರಂಭವಾಗುತ್ತದೆ; ಕ್ಷಯವು ತನ್ನ ಏಕಾಧಿಕಾರವನ್ನು ಶ್ವಾಸಕೋಶ ಅಥವಾ ಕರುಳುಗಳ ಮೇಲೆ ಸ್ಥಾಪಿಸಿದಾಗ, ಡಾಕ್ಟರನ್ನು ಅಥವಾ ವೈದ್ಯರನ್ನು ಹುಡುಕಿ ಹೋಗಲು, ಪ್ರಾರಂಭವಾಗುತ್ತದೆ; ಇದರ ಪರಿಣಾಮವಾಗಿ, ಸೇಕಡಾ 80 ರೋಗ ಗ್ರಸ್ತ ನಾರಿಯರು ತಮ್ಮ ಪ್ರಾಣವನ್ನು ಕಳಕೊಳ್ಳುತ್ತಾರೆ.

ಡಾಕ್ಟರರು ತಮ್ಮ ಚಿಕಿತ್ಸೆಯನ್ನು ತಮ್ಮ ಪ್ರಚಲಿತ ಪರಿಪಾಠದಂತೆಯೇ ಆರಂಭಿಸುತ್ತಾರೆ; ಮತ್ತು ಸುವರ್ಣ ಅಥವಾ ಕೆಲ್ಶಿಯಮ್ ಇಂಜಕ್ಷನ್‌ಗಳನ್ನು ರೋಗಿಯ ಶರೀರದಲ್ಲಿ ಚುಚ್ಚಹುಕಲು, ಆರಂಭಿಸುತ್ತಾರೆ; ಈ ಇಂಜಕ್ಷನುಗಳನ್ನು ಎಡೆಬಿಡದೆ ಚುಚ್ಚುವುದರ ಪರಿಣಾಮವು ಅನೇಕಾವರ್ತಿ ಬಹು ಭಯಾನಕವಾಗಿ ಕಾಣಿಸುತ್ತದೆ; ರೋಗಿಯು ಸಾಯುವ ಮುಂಚಿತವಾಗಿ ವಿಕೃತ ಅಥವಾ ಒಂದು ವಿಧದ ಅಂಧನಾಗುತ್ತಾನೆ.

ಆಯುರ್ವೇದ ಚಿಕಿತ್ಸೆಯ ಸ್ಥಿತಿಯು ಕೂಡ, ಇದೇ ಆಗಿದೆ; ತೀಕ್ಷ್ಣ ಭಸ್ಮ ಮತ್ತು ಉಚ್ಚಕೋಟಿಯ ಉಷ್ಣೌಷಧಿಗಳು ಹಾಗೂ ವಸಂತ ಮಾಲತೀ, ಮಕರಧ್ವಜ, ಅಭ್ರಕಭಸ್ಮ ಮುಂತಾದವುಗಳ ಪ್ರಯೋಗವನ್ನು ಕೂಡ ಆಯುರ್ವೇದಜ್ಞರು ಹೆಚ್ಚಾಗಿ ಮಾಡುತ್ತಾರೆ; ಮತ್ತು ಅವುಗಳ ಉಷ್ಣತೆಯ ಪರಿಣಾಮವು ರಕ್ತ ಕಾರಿಸಲು ಸಹಾಯಕವಾಗುವುದೂ ಉಂಟು.

ಉತ್ತರ ಪ್ರದೇಶದ ಹಳ್ಳಿಗಳಲ್ಲಿ, ಈ ರೋಗದ ಚಿಕಿತ್ಸೆಯ ನೂತನ ರೀತಿಯು ಪ್ರಚಲಿತವಾಗಿದೆ; ಅದು 'ಸರ್ಪಗನ್ನಾ' ಎಂಬ ಔಷಧೋಪಚಾರ; 'ಸರ್ಪಗನ್ನಾ'ವನ್ನು ಸಿದ್ಧಪಡಿಸಲು, ಸರ್ಪಗಳನ್ನು ಕೊಂದು, ಒಂದು ಸ್ಥಳದಲ್ಲಿ ಕೇಂದ್ರೀಕರಿಸಿ, ನೆಲದಲ್ಲಿ ಹುಗಿದಿಟ್ಟು ಅವುಗಳ ಮೇಲೆ ಕಬ್ಬು, ಬೆಳೆಯಿಸುತ್ತಾರೆ, ಆ ವಿಷದ ಕಬ್ಬನ್ನು 'ಸರ್ಪಗನ್ನಾ' ಅನ್ನುತ್ತಾರೆ; ಅಂತಹ ವಿಷಮಯ ಕಬ್ಬನ್ನು ರೋಗಿಗೆ ತಿನ್ನಿಸುತ್ತಾರೆ; ಇಂತಹ ಕಬ್ಬು ಮೀರಠ ಜಿಲ್ಲೆಯಲ್ಲಿ ತಯಾರಾಗುತ್ತದೆ; ಆದರೆ, ಇಂತಹ ಕಬ್ಬುಗಳಿಂದ, ಇಂದಿನತನಕ ಕ್ಷಯರೋಗದ ಚಿಕಿತ್ಸೆಯಲ್ಲಿ ಸಫಲತೆಯು ಲಭಿಸಲಿಲ್ಲ.

ಸ್ತ್ರೀಯರ [illegible] ಪ್ರಧಾನವು ಅಧಿಕವಾಗಿ ಪ್ರಸೂತಾವಸ್ಥೆಯಿಂದಲೇ ಆಗುತ್ತಲಿದೆಯೆಂಬುದು ನಿಜ, ಪತಿಯು ಕ್ಷಯರೋಗ ಗ್ರಸ್ತನಾದರೆ, ಅದರಿಂದ ಕೂಡ ಅವಳು ಕ್ಷಯ ಗ್ರಸ್ತಳಾಗುತ್ತಾಳೆ ಪತ್ನಿಯ ಕ್ಷಯ ಕೀಟಾಣುಗಳು ಪುರುಷನನ್ನು ಕೊಲ್ಲಲು ಸಫಲವಾಗುವುದಿಲ್ಲ; ಪುರುಷನ ಕೀಟಾಣುಗಳು ಸೇಕಡಾ 80ರಂತೆ ಸಫಲವಾಗುತ್ತವೆ. ಈ ರೀತಿಯಲ್ಲಿ ಸ್ತ್ರೀಯರ ಮೇಲೆ ಇಮ್ಮಡಿ ಪೆಟ್ಟು ತಗಲುತ್ತದೆ.

ಪ್ರಾಚೀನ ಪರಂಪರೆಗಳ ಅನುಸಾರ, ವ್ರತಾದಿಗಳನ್ನು ಅಧಿಕವಾಗಿ ಸ್ತ್ರೀಯರು ಮಾಡುತ್ತಾರೆ ಯೆಂಬುದು ನಿಜ; ಆದರೆ, ಭಾರತದ ಬಡತನದ ಕಾರಣ, ಅವರಿಗೆ ಹಾಲು ಹಣ್ಣು ಮುಂತಾದವುಗಳು ಲಭಿಸುವುದಿಲ್ಲ; ಮತ್ತು, ಪೇರಳೆಹಣ್ಣು, ಗೌತಕಾಯಿ, ಬಾಳೆಹಣ್ಣು ಮುಂತಾದ ಅಗ್ಗ ಹಣ್ಣುಗಳನ್ನು ಆಹಾರವಾಗಿ ಸ್ತ್ರೀಯರು ತಿನ್ನುತ್ತಾರೆ.

ನಗರಗಳ ಅಶ್ಲೀಲ, ಮಲಿನ ಮತ್ತು ತಳಮಳಿಸುವ ಹಾಗೂ ಜ್ವಲಿಸುವ ವಾತಾವರಣದ ಹಸ್ತಕ್ಷೇಪವು ಭಾರತೀಯ ನಾರಿಯ ಕ್ಷಯರೋಗದ ಹೆಚ್ಚಿನ ಕಾರಣವಾಗಿ ಕಾಣುತ್ತದೆ. ಇಡೀ ದಿವಸ 24 ಘಂಟೆಗಳಲ್ಲಿಯೂ ನಗರ ಸ್ತ್ರೀಯರು ಇಕ್ಕಟ್ಟಿನ ಕೋಣೆಗಳಲ್ಲಿ ವಾಸಿಸುತ್ತಾರೆ; ಆ ಕೋಣೆಗಳಲ್ಲಿ ಪ್ರತಿ ಶಕ್ಯೋಸ್ಕರ ಪೊನ್ನೆಷ್ಟ ದೀಪಗಳು ಪ್ರಹಾಸ ರೂಪದಲ್ಲಿ ಪ್ರತ್ಯೇಕ ಕಾಲದಲ್ಲಿ ಉರಿಯುತ್ತಿರುತ್ತವೆ; ಅವುಗಳಲ್ಲಿಯೇ ಭೋಜನ, ಶಯನ ಮುಂತಾದವುಗಳು ನಡೆಯುತ್ತಿರುತ್ತವೆ, ಸಮೀಪದಲ್ಲಿ ನಾಲೆಯು ಪ್ರವಹಿಸುತ್ತಿರುತ್ತದೆ; ಕೋಣೆಯ ದ್ವಾರದಲ್ಲಿ ನಳವಿರುತ್ತದೆ; ಈ ದುರ್ದಶೆಯಲ್ಲಿ ಯಾವಾತಳು ಸ್ವಸ್ಥಳಾಗಿರಬಲ್ಲಳು?

ಇನ್ನೊಂದು ಕಾರಣವು ಅವಳ ಪ್ರದರ ರೋಗವು; ಪ್ರದರ ರೋಗವು ನಗರಗಳಲ್ಲಿ ಸೇಕಡಾ 50ಮಂದಿ ಸ್ತ್ರೀಯರಿಗಿರುತ್ತದೆ, ಉಷ್ಣ ವಾತಾವರಣ, ಅಶ್ಲೀಲ ಸಾಹಿತ್ಯ, ಮತ್ತು ತಳಮಳಿಸುವ ಹಾಗೂ ಜ್ವಲಿಸುವ ಜೀವನ ಹಾಗೂ ಚಲಚ್ಚಿತ್ರಗಳ ದೃಶ್ಯಗಳು ಇದನ್ನು ಹೆಚ್ಚಿಸುವುದರಲ್ಲಿ ಸಹಾಯಕವಾಗುತ್ತವೆ. ನಾರಿಯ ಶರೀರವನ್ನು ಬರಿದಾಗಿ ಇವುಗಳು ಮಾಡಿಬಿಡುತ್ತವೆ. ಅನಂತರವೇ, ಜ್ವರ, ಮತ್ತು ಕೆಮ್ಮುಗಳು ಕೂಡಿ, ಕ್ಷಯದ ಕಡೆಗೆ ಅವಳನ್ನು ಒಯ್ಯುತ್ತದೆ.

ಇಂದಿನ ರೋಗದ ಚಿಕಿತ್ಸೆಗೆ ಅನೇಕ ಔಷಧಿಗಳು ಅವಶ್ಯ ಸಂಶೋಧಿಸಲ್ಪಟ್ಟು ಸಿದ್ಧವಾಗಿವೆ; ಆದರೆ ಈ ರೋಗವನ್ನು ತಡೆಹಾಕಿ ನಿವಾರಿಸುವ ಉಪಾಯವು ಕಾಣುವುದಿಲ್ಲವಲ್ಲ!

All Secondary Schools may Subscribe to "Navayuga" weekly Since it has been approved by the Director of Public Instruction, Madras.

ಸಕಲ ಪುಸ್ತಕ ಭಂಡಾರಗಳಿಗೆ ಬೇಕಾಗುವ ಸರ್ವವಿಧದ ಪುಸ್ತಕಗಳು!

ಕಥೆ, ಕಾದಂಬರಿ, ನಾಟಕ, ಕವಿತೆ, ಚಿತ್ರ, ಪ್ರಬಂಧ ಮೊದಲಾದ ನಾನಾ ಬಗೆಯ ಅಮೂಲ್ಯಕೃತಿಗಳು

ಅಂತರಂಗದ ಪ್ರಕಟಣೆಗಳು:

ದಿಬುದಾವಳಿ	0	3	0
ಆ ಸುದ್ದಿ	0	4	0
ಹೈದರಾಬಾದ್ ವಿಜಯ	0	4	0
ಸೆರೆಯಾಳು	0	7	0
ಗಾದೆಯ ಗಾಂಧಿ	0	3	0
ಶಾಂತಿಯ ಮಡಿಲಿನಲ್ಲಿ	0	3	0
ಬಲಿಪೀಠದಲ್ಲಿ	0	5	0
ಅಗಲಿದ ಅಕ್ಕ ಸರೋಜಿನಿ	0	3	0
ನನ್ನ ಹೆಂಡತಿ	0	3	0
ಪುಣ್ಯಫಲ	0	4	0
ಸಾಹುಕಾರ	0	3	0
ಸುಕಾಂತ	0	3	0
ಪಂಚಮುಖಿ	0	5	0
ಜಾತೀಭೂತಕ್ಕೆ ಬಲಿ	0	3	0
ಜನಸೇವೆಯ ನೋಗಿನಲ್ಲಿ	0	3	0
ನಾ ಕಂಡ ಅವಳು	0	3	0
ತ್ರಿವೇಣಿ	0	3	0
ನಿಲುವಂಗಿ	0	4	0
ಬಾಡಿಗೆಯ ಮನೆ	0	3	0
ವರ್ತಮಾನಕಾಲದ ನಾಲ್ವರು			
ಮಹಾನುಭಾವರು	0	4	0
ದೇವರ ನಾಮ ಮತ್ತು ಸಾಧನೆ	0	3	0
ಎರಡು ಕತೆಗಳು	0	4	0
ಸರಸ-ವಿರಸ	0	3	0
ಹೃದಯೇಶ್ವರಿ	0	4	0
ವಿವಿಧ ವಿಷಯ ಕೋಶ ಭಾಗ ೧, ೨	0	6	0
ನುಡಿಮುತ್ತುಗಳು ೧, ೨, ೩	0	12	0
ಕುಲವಿಲ್ಲದ ಹೆಣ್ಣು	2	0	0
ಕವರು ಮನೆಯಿಂದ	0	4	0
ಭಾಗ್ಯಲಕ್ಷ್ಮಿ	1	4	0
ಯುಗಪಾಣಿ	0	8	0
ಸ್ತ್ರೀ ಹೃದಯ	0	4	0
ದ್ವೇಷ	0	3	0
ಎರಡು ಏಕಾಂಕ ನಾಟಕಗಳು	0	4	0
ಪ್ರಜಾಪ್ರಭುತ್ವವನ್ನು ಕುರಿತು	0	8	0
ಕಲಾವಿದನ ದಿನಚರಿ	0	3	0
ಆಧುನಿಕ ಭಾರತ	0	4	0
ಕಾಲವೇ ಬದಲಾಗಿದೆ	0	4	0
ಭಾರತದ ಸಾಹಿತ್ಯ ಕಲೆಗಳು	0	4	0
ಸ್ತ್ರೀಸ್ವಾತಂತ್ರ್ಯ ಬೇಕೆ?	0	4	0
ಹಂಬಲ	0	4	0
ಭಾರತಚಿತ್ರದ ಅಂಚೆಟಿಕೇಟುಗಳು	0	3	0
ತ್ರಿಶೂಲ	0	5	0
ಪುಸ್ತಕಪುರಾಣ	0	4	0
ಹಳ್ಳಿಯಲ್ಲಿ ನಡೆದ ನಾಟಕ	0	3	0
ನೆರೆಯ ಗಾಂಧಾರ	0	3	0
ವರ್ತಮಾನಯುಗದ ಮಹಾಪ್ರಭಾವ	0	3	0
ವಿಜ್ಞಾನದ ಬೆಳವಣಿಗೆ	0	4	0
ಡಾ। ಹರ್ಡೀಕರ್	0	5	0
ತೆಂಗಿನ ತವರು	0	6	0
ಪ್ರಾಯಶ್ಚಿತ್ತ	0	3	0
ಪ್ರಭಾ	0	3	0
ಕವಿಗಳ ಸಾಗಾಟ	0	12	0
ಸ್ವಪ್ನಲೋಕ	0	6	0
ಮನೆಹೊರಗಿನಮಹಾಜೀವಿಗಳು	0	5	0
ಘಂಟಿಮಾರಾ ೪ಭಾಗಗಳು	2	0	0
ಮಾರ್ಪಾಟ	0	5	0
ಭಾರತದ ರಾಷ್ಟ್ರಗೀತ	0	3	0
ನನ್ನ ಬಹು ದೊಡ್ಡ ಶತ್ರು	0	4	0
ಕೈಲಾಸ	0	3	0
ಜ್ಯೋತಿ	0	4	0
ಕತ್ತು ಕೊಯ್ದವರಾರು?	0	6	0
ಸಮಾಜದ ಅಗ್ನಿಕುಂಡ	0	4	0
ಬೆಳ್ಳಿಹಬ್ಬ	0	4	0
ಉಷಾ	0	4	0
ವಿಧಿಲೀಲೆ	0	4	0
ಪರಮಾಣು ಪ್ರಪಂಚ	0	4	0
ನೀತಿ ವಿನೋದ ಕತೆಗಳು	0	12	0
ಸಾಹಸ ಭೀಮ ವಿಜಯ	0	8	0
ಭಾರತದ ಗುರುಕುಲ	0	6	0
ಲತ್ತಪಗಡೆ	0	6	0
ಸೇವಾಪಥ	0	6	0
ಭರತೇಶ ದಿಗ್ವಿಜಯ	0	8	0
ಮನೋಪದೇಶ	0	8	0
ಜೀವನ ಕಲೆ	0	10	0
ಪ್ರತಿಜ್ಞಾ ಪೂರ್ತಿ	0	12	0
ಮಿತ ಸಂತತಿ	0	6	0
ಗುಪ್ತರೋಗ ನಿವಾರಣೆ	0	8	0
ಸೌಂದರ್ಯ	0	5	0
ಸುಧಾ	0	8	0
ವಸಂತಕಾಲ	0	6	0
ನವೀನ ನಾಟಕಗಳು	0	7	0
ಪರ್ಲ್ ಎಸ್. ಬಕ್	0	7	0

ಕಿರಿಯರಪ್ರಪಂಚದ ಪ್ರಕಟಣೆಗಳು.

ಸ್ವತಂತ್ರ ಜೀವನೋಪಾಯ	0	3	0
ಸಂಶಯ ಪಿಶಾಚಿ	0	10	0
ನಾಡಕತೆಗಳು	0	4	0
ಕುಶಲವ	0	8	0
ಕಾವ್ಯಸಾಮ್ರಾಜ್ಯ	1	8	0
ಮಧುವನ	3	0	0
ಮುಂದಿನ ದೇವರು	0	4	0
ವ್ಯಭಿಚಾರಿಣಿ ಯಾರು	1	4	0
ಹೆಂಡ್ತಿ ಗಂಡನಾದರೆ	0	4	0
ಪುರುಷ ವಧು	0	4	0
ನಂದಾದೀಪ	1	0	0
ದೇಶಭಕ್ತ	1	8	0
ಪ್ರೇಮವಿಜಯ	1	0	0
ಪ್ರಕಾಶ	2	8	0
ಮೂರು ಪ್ರಹಸನಗಳು	1	0	0
ಅನ್ನದೇವರು ಮತ್ತಿತರ ಕತೆಗಳು	1	0	0
ಭಾರತದಲ್ಲಿ ಜಾತಿಭೇದ	1	0	0
ವಿಷ್ಣುವಿನ ದಶಾವತಾರಗಳು	0	12	0
ಆಕಾಶ ಗಂಗೆ	2	4	0
ಸ್ವಾತಂತ್ರ್ಯವೀರ ಸಾವರಕರರು	1	4	0
ಜೀವನ ಸಂಗ್ರಾಮ	1	8	0
ಕದಂಬ	1	4	0
ಕವಿಕಾಳಿದಾಸ	2	0	0
ಸ್ವರಾಜ್ಯ ವಿಜಯ	0	8	0
ಸಪ್ತಸಾಗರ	0	12	0
ಜಮೀನ್ದಾರ	1	12	0

ಇತರ ಪುಸ್ತಕಗಳು

ಮನೆಮದ್ದು	2	8	0
ನೆನಪಿಗಾಗಿ	2	0	0
ಗೀತೆಯ ಕೈಗನ್ನಡಿ	0	12	0
ಸುಲಭದಲ್ಲಿ ಇಂಗ್ಲಿಷ್	2	0	0
ಸರಸ್ವತಿ	0	12	0
ಪ್ರತೀಕಾರ	0	8	0
ಪ್ರೇಮ ಪ್ರಪಂಚ	0	8	0
ಮುಗುಳು	0	6	0
ವತ್ಸಲಾ	0	8	0
ಚಿಗುರು	0	8	0
ಶಂಬುಕ ವಧೆ	0	3	0
ವೈಯಕ್ತಿಕ ಆರೋಗ್ಯ	0	2	0

ಸಾವಿರಾರು ಕನ್ನಡ ಪುಸ್ತಕಗಳು ದೊರೆಯುತ್ತವೆ
ಕೆಟಲಾಗಿಗೆ ಬರೆಯಿರಿ

ವ್ಯಾಪಾರಿಗಳಿಗೆ ಧಾರಾಳ ಕಮಿಶನ್

ವಿಳಾಸ:
ನವಭಾರತ ಬುಕ್ ಡಿಪ್ಪೊ, ಉಡುಪಿ.

ಲಕ್ಷ್ಮಿ ಸಂತಾನ ಮಾತ್ರೆ

ಇದರ ಉಪಯೋಗದಿಂದ ಮುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರದ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವದು, ತೊಡೆ ಸಂದಿನಲ್ಲಿ ಗರಳೆ ಬರುವದು. ಕಾಲುಗಂಟು ವೇದನೆ, ಕಣ್ಣಿನಲ್ಲಿ ಕೀವು ಬರುವದು, ಶರೀರದಲ್ಲಿ ಉಷ್ಣತೆ, ಸ್ವಪ್ನಸ್ಖಲನ, ದ್ರಿಯ, ಸ್ತ್ರೀಯರ ಬಿಳಿ ಕೆಂಗು ಇವೆಲ್ಲಾ ಮಾತ್ರೆಯಿಂದ ಗುಣ ಹೊಂದುವವು. ಇತರರು ಈಗಿನ ಉಷ್ಣಕಾಲದಲ್ಲಿ ಗರ್ಮಿ ಕಂಡುಬಂದರೆ ರಾತ್ರಿ ಮಲಗುವಾಗ್ಯ ಒಂದು ಮಾತ್ರೆ ಸೇವಿಸಿ ಹಾಲು ಕುಡಿದರೆ ಸುಖವಾಗಿ ನಿದ್ರೆ ಬಂದು ಸುಖವಿರೇಚನೆಯಾಗಿ ದೇಹದ ಸುಸ್ತು ಹೋಗುವದು.

ಶೀಸೆ 1ಕ್ಕೆ ರೂ 1-0-0

ಏಜಂಟ್:

ಷಾ ಕಂಪೆನಿ, ಮಂಗಳೂರು.

ತಾರೀಕು 31-7-52 ರಿಂದ

ವಾರದ ಭವಿಷ್ಯ

ತಾರೀಕು 5-8-52 ವರೆಗೆ

ಮೇಷ— ನಿಮ್ಮ ಶಕ್ತಿಗೆ ತಕ್ಕ ಯುಕ್ತಿಯು ನಿಮ್ಮಲ್ಲಿಲ್ಲವು. ಆದಕಾರಣ ನಿಮ್ಮ ಪರಿಶ್ರಮವು ಪೂರ್ಣ ಫಲದಾಯಿಯಾಗದು. ಹೇವರಂತಿರಲಿ ನಿಮ್ಮ ಹೆಂಡಿರು ಮಕ್ಕಳೂ ಕೂಡ ಸದ್ಯ ನಿಮ್ಮ ಭಾಗಕ್ಕೆ ಅನುಕೂಲರಾಗಿರರು. ಗೃಹಕೃತ್ಯದ ಅವ್ಯವಸ್ಥೆಯಿಂದಾಗಿ ಸದಾ ಮನಸ್ಸು ಅಶಾಂತಿಯ ಮಡುವಿನಲ್ಲಿ ಮುಳುಗಿರುವದು. ಆದರೂ ವಾರಾಂತ್ಯದ 2 ದಿನಗಳಲ್ಲಿ ನಿಮ್ಮ ಬಯಕೆಯು ಕೆಲಮಟ್ಟಿಗೆ ಸಫಲವಾಗಲಿದೆ.

ವೃಷಭ— ಲಾಭ ಪತಿಯಾದ ಸುರಗುರುವು ವ್ಯಯಗತನಾಗಿದ್ದರೂ ಇತರ ಗ್ರಹರ ಬೆಂಬಲವು ಚೆನ್ನಾಗಿದ್ದ ಕಾರಣ ಈ ವಾರವು ನಿಮಗೆ ತುಂಬಾ ಲಾಭ ಸುಖಕಾರಿಯಾಗಲಿದೆ. ಹೆಚ್ಚಿನ ದುಡಿಮೆಯನ್ನು ಸದ್ವಿನಿಯೋಗಿಸುವಿರಿ. ನಷ್ಟವಾದ ವಸ್ತು ಒಡವೆಗಳೂ ಕೈಸೇರಲಿವೆ. ಬಂಧು ಮಿತ್ರರ ಬೆಂಬಲವು ಶ್ರುತವಾದ ನಿಮಗೆ ವಾರಾದಿಯ 2 ದಿನಗಳು ವಿಶೇಷ ಸುಖದಾಯಿಗಳಾಗಿವೆ.

ಮಿಥುನ— ಸಾಧಿಸಿದರೆ ಸಬಳ ನುಂಗಬಹುದೆಂದಾಗಿದೆಯಂತೆ, ನೀವಿಂದು ಯತ್ನಿಸಿದರೆ ಯಾವ ಮಹತ್ಕಾರ್ಯವನ್ನೂ ಸಾಧಿಸಲು ಶಕ್ತರಿರುವಿರಿ. ನಿಮ್ಮ ಪರಿಶ್ರಮವು ಎಳ್ಳಷ್ಟೂ ವ್ಯರ್ಥವಾಗಲಾರದು. ಹುಚ್ಚು ಕುದುರೆಯಂತೆ ವಿಹರಿಸಕಕ್ಕ ಮನಸ್ಸನ್ನು ವಿವೇಕವೆಂಬ ಕಡಿವಾಣದಿಂದ ಬಂಧಿಸಿರಿ. ಉದ್ಯೋಗದಲ್ಲಿ ಪ್ರಗತಿಯ ಚಿಹ್ನೆಗಳು ಕಾಣುವವು ವಾರಾದಿಯ 5 ದಿನಗಳು ಅನುಕೂಲವಾಗಿರುವವು.

ಕರ್ಕಾಟಕ - ನೀವೆಷ್ಟೇ ಜಾಗರೂಕತೆಯಿಂದಿದ್ದರೂ ಜನತೆಯ ನಿಂದಾಪವಾದಗಳಿಂದ ಮುಕ್ತರಾಗಲಾರಿರಿ. ಪ್ರತಿಪಕ್ಷ ವರ್ಗವು ಪ್ರಬಲವಾಗಿ ಕಾಡಿಸುತ್ತದೆ. ಉಷ್ಣ ಪ್ರಕೃತಿಯಿಂದಾಗಿ ಜ್ವರವೂ ಉದರ ಶೂಲೆಯೂ ಕಾಣಿಸಿಕೊಳ್ಳಬಹುದು. ಕಷ್ಟಪಟ್ಟು ದುಡಿಯತಕ್ಕವರಾಗಿ ಇಷ್ಟಾರ್ಥಗಳು ಕರತಲಾಮಲಕದಂತಿರುವವು, ವಾರಾಂತ್ಯದ 5 ದಿನಗಳು ಬಹುತೇಕ ಉತ್ತಮವಿವೆ.

ಸಿಂಹ— ನಿಮ್ಮ ಪರಿಶ್ರಮಕ್ಕೆ ತಕ್ಕುದಾದ ಫಲವು ಕಟ್ಟಿಟ್ಟ ಗಂಟೆನಂತಿರುವುದು. ನೀವೀ ಕಾಲದಲ್ಲಿ ಆಲಸಿಗಳಾಗದೆ ಕಾರ್ಯರಂಗದಲ್ಲಿ ಧುಮುಕಿರಿ. ಎಂದೆಂದಿಗೂ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡುವ ಪ್ರಸಂಗ ಬರುವಂತಿಲ್ಲ. ಗಾಳಿಬಂದಾಗ ತೂರಿಕೊಂಡಷ್ಟೇ ಬಂತೆಂಬ ಮಾತಿನಂತೆ ಈ ಕಾಲದಲ್ಲಿ ನೀವು ದುಡಿದುದೇ ನಿಮ್ಮ ಆಪದ್ಧನವು. ಆದ್ದರಿಂದ ವಾರಾಂತ್ಯದ 2 ದಿನಗಳು ನಿಮ್ಮ ಬಯಕೆಯನ್ನು ಪೂರ್ತಿಗೊಳಿಸುವುದರಲ್ಲಿ ವಿಶೇಷ ಶಕ್ತಗಳಾಗಿರುವವು.

ಕನ್ಯಾ— ದೇಹದಲ್ಲಿನ ಅನಾರೋಗ್ಯದಿಂದಾಗಿ ನಿಮ್ಮ ಧೈರ್ಯ ಸಾಹಸಗಳು ಮಾಯವಾಗುವವು. ಮಾತ್ರವಲ್ಲ ಶಕ್ತಿ ಯುಕ್ತಿಗಳೂ ಹ್ರಾಸವಾಗುವವು ಆದಕಾರಣ ಆರೋಗ್ಯದ ಕಡೆಗೆ ಮುಖ್ಯ ಗಮನಕೊಡಿರಿ. ಈ ಸಂದರ್ಭದಲ್ಲಿ ನಿಮಗೆ ಸ್ನೇಹಿತವರ್ಗದವರು ಹೆಚ್ಚಿನ ಸಹಾಯ ನೀಡಲಿರುವರು. ರಾಜಸ್ಥಾನದ ಜನರಿಂದ ಕಾಡೆಗಳುಂಟಾದಾವು. ವಾರಾಂತ್ಯದ 5 ದಿನಗಳು ಅನಿಷ್ಟಕಾರಿಗಳಿವೆ.

ತುಲಾ— ಕೈಗೊಂಡ ಕಾರ್ಯಗಳು ಸಫಲಗಳಾಗುವವು. ನಿಮ್ಮ ಪರಿಶ್ರಮಕ್ಕಿಂತಲೂ ಅಧಿಕ ಫಲ ಲಭಿಸಲಿದೆ. ಜನತೆಯ ಬೆಂಬಲವೂ ಬಂಧುಗಳ ನೆರವೂ ಉತ್ತಮವಿರುವುದರಿಂದ ಉದ್ಯೋಗದಲ್ಲಿ ಪ್ರಗತಿ ಕೀರ್ತಿಗಳನ್ನು ಗಳಿಸುವಿರಿ. ಸಮಾಜದಲ್ಲಿ ಗೌರವಾದರಗಳೂ ಲಭಿಸುವವು. ತಾ 31, 1, 5, 6 ಈ ದಿನಗಳಲ್ಲಿ ಆಕಸ್ಮಿಕ ಅನಿಷ್ಟಗಳು ಕಾಣಿಸಬಹುದು.

ವೃಶ್ಚಿಕ— ದೇಹಪತಿಯು ವ್ಯಯಂಗತನಾಗಿದ್ದರೂ ಸುಖಪತಿಯು ಅನುಕೂಲನಾಗಿರುವುದರಿಂದ ದೇಹದಲ್ಲಿ ಅಲ್ಪಸ್ವಲ್ಪ ಅನಾರೋಗ್ಯವೂ ಅಶಕ್ತಿಯೂ ಕಾಣಿಸುವದು. ಇದರಿಂದ ನಿಮಗೆ ಹೆಚ್ಚಿನ ತೊಂದರೆಯುಂಟಾಗದು. ಸೇವಕವರ್ಗದವರು ವಿಶೇಷತಃ ವಿದ್ಯೋಪಜೀವಿಗಳೂ ಸುಖದಿಂದ ಕಾಲಯಾಪನೆಮಾಡುವರು. ತಾ 2, 3, 4 ಉಳಿದು ಇತರ ದಿನಗಳು ಸುಖದಾಯಿಗಳಿವೆ.

ಧನು— ಯಾವ ಉದ್ಯಮವೂ ಸದ್ಯ ನಿಮ್ಮ ಉನ್ನತಿಗೇ ಸಾಧಕವಾಗುವದು, ದೈವಾನುಗ್ರಹವು ಸದ್ಯ ನಿಮಗೆ ಪರಿಪೂರ್ಣವಿರುವುದರಿಂದ ಯಾವ ಭಾಗದಲ್ಲೂ ಕುಂದುಕೊರತೆಗಳುಂಟಾಗಲಾರವು ಗೃಹಸುಖ ಆರ್ಥಿಕ ಸಂಪತ್ತು ಸಮಾಜದಲ್ಲಿ ಮಾನಮನ್ನಣೆ ಇತ್ಯಾದಿಗಳಿಂದ ಪೂರ್ಣರಾದ ನಿಮಗೆ ವಾರದ ಅಂತ್ಯದ ದಿನಗಳಲ್ಲಿ ಮನಶ್ಚಾಂಚಲ್ಯ ಮತ್ತು ಸ್ತ್ರೀಕಲಹಕ್ಕವಕಾಶವಿದೆ.

ಮಕರ— ನಿನ್ನೆ ಸತ್ತ ಕತೆಯಂತೆ ಯಾವ ಕಾರ್ಯವೂ ಕೊನೆಗೊಂಡದು. ಆದರೆ "ಉದ್ಯೋಗಂ ಪುರುಷಲಕ್ಷಣಂ" ಎಂದಿರುವುದರಿಂದ ನಿಮ್ಮ ಕರ್ತವ್ಯದೃಷ್ಟಿಯಿಂದ ಉದ್ಯೋಗ ಮಾಡಿರಿ, ಸಾಕಷ್ಟು ಫಲವು ಸಿಕ್ಕಿಯೇ ತೀರುವದು. ನೀಚಜನರಿಂದ ಧನಲಾಭವಾಗುವ ಯೋಗವಿದೆ. ತಾ 2, 3, 4 ಹೊರತಾದ ದಿನಗಳಲ್ಲಿ ಧನ ಸುಖಲಾಭಗಳಿವೆ.

ಕುಂಭ— ಗ್ರಹರಾಜನಾದ ರವಿಯೋರ್ವನು ಉಳಿದೆಲ್ಲಾ ಗ್ರಹರೂ ಸದ್ಯ ನಿಮ್ಮಮೇಲೆ ವಕ್ರದೃಷ್ಟಿಯಿಂದಿರುವ ಕಾರಣ ಸದ್ಯದ ದಿನಗಳು ಬಹಳ ತ್ರಾಸದಾಯಿಗಳಾಗಿ ಪರಿಣಮಿಸುವವು. ನೌಕರಿ ಜನರಿಗೆ ಸ್ಥಾನಪಲ್ಲಟವಾಗುವ ಸಂಭವವಿದೆ. ವ್ಯಾಪಾರದಲ್ಲಿ ಸಫಲವಾದೀತು ಪಿತ್ತ ದೋಷದಿಂದ ಆರೋಗ್ಯ ಕೆಡುವದು. ಆದರೂ ರವ್ಯನುಗ್ರಹದಿಂದ ವಾರಾದಿಯ 5 ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳೊದಗಲಾರವು.

ಮೀನ— ಕೈ ಕೆಸರಾದರೆ ಬಾಯಿಗೆ ಮೊಸರಾದೀತೆಂಬ ನಾಣ್ಣುಡಿಯು ಸದ್ಯ ನಿಮ್ಮ ಭಾಗಕ್ಕೆ ಸುಳ್ಳಾಗಿ ಕಾಣಬಹುದ್ಯಾಕೆಂದರೆ ನಿಮ್ಮ ಪರಿಶ್ರಮವೇನೋ ಅಸಾಮಾನ್ಯವಿರುವದು. ಆದರೆ ಫಲ ಮಾತ್ರ ಸಾಮಾನ್ಯವಾದುದು. ವಿದ್ಯೋಪಜೀವಿಗಳು ಮಾತ್ರ ತಮ್ಮ ಕೆಲಸಗಳಲ್ಲಿ ಕೃತಕೃತ್ಯರಾಗುವರು. ಶತ್ರುವರ್ಗದವರು ಪ್ರತೀಕಾರಾಸಕ್ತರಿರುವುದರಿಂದ ವಾರಾದಿಯ 2 ದಿನಗಳನ್ನು ಬಲು ಜಾಗ್ರತೆಯಿಂದ ಕಳೆಯಿರಿ.

ತೃಪ್ತಿಕರವಾದ ವಸತಿ— ಹಿತಕರವಾದ ಊಟ— ರುಚಿಕರವಾದ ಉಪಾಹಾರ

ಇವುಗಳಿಗೆ

ಆದರ್ಶ ನಿಲಯವೆಂದರೆ

ವುಡ್ ಲೇಂಡ್ಸ್

ಉಡುಪಿ.

ಯಾತ್ರಿಕರಿಗೂ ಪ್ರಯಾಣಿಕರಿಗೂ ಸರ್ವ ಅನುಕೂಲವಾಗುವಂತೆ

ನಗರದ ಕೇಂದ್ರ ಭಾಗದಲ್ಲಿದೆ.

ತಡವಾಗಿ ಮುಟ್ಟಾಗುವಿಕೆಗಾಗಿ ಗಾಬರಿಯಾಗಬೇಡಿರಿ

'ಋತುರಾಜ'ವನ್ನು ಸೇವಿಸಿರಿ ನಾಲ್ಕೈದು ತಿಂಗಳ ಮುಟ್ಟಾಗದಿದ್ದರೂ, ಒಡನೆಯೇ ಋತುಸ್ರಾವವಾಗುವುದು. ಮುಟ್ಟು ದೋಷದ ಇತರ ಗಂಡಾಂತರಗಳು ಕೂಡಾ 24 ತಾಸುಗಳೊಳಗೆ ಆಶ್ಚರ್ಯಕರವಾಗಿ ವಾಸಿಯಾಗುವುವು. ಇದಕ್ಕೆ ಸಂಶಯ ಬೇಡ.

ಕಿಮ್ಮತು—ರೂ. 7-8-0, ವಿ. ಪಿ ರೂ. 1. ಸ್ಪೆಶಲ್ ರೂ. 24 ವಿ. ಪಿ, ರೂ. 1-12-0.

Binapani Ousbadahalaya
15/1 Mooris Avenue, Ca'cutta-33,
ಏಜಂಟ್:-ವೈದ್ಯ ಸಿ. ಆರ್. ಕಾಮತ್, ಮಂಗಳೂರು.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನ ಎ. ರಾಮಸ್ವಾಮಿ ಅಯ್ಯಂಗಾರ್‌ರವರ

ಸಂತಾನ ಸಿಂಧೂರ

ಬಹಿಷ್ಠೆ ಸಂಬಂಧದ ಹೊಟ್ಟೆನೋವು ಉಂಟು. ಮಕ್ಕಳಿಲ್ಲ, ಇಂಥವರಿಗೂ ಮತ್ತು ಬಹಿಷ್ಠೆ ಕಾಲದ ಹೊಟ್ಟೆನೋವಿನಜೊತೆಗೆ ತಲೆನೋವು, ನಡುಕಳೆ, ಬೆನ್ನುನೋವು, ಅಜೀರ್ಣ, ಕೆಮ್ಮು, ನಿದ್ರಾಭಂಗ, ಸ್ತ್ರೀಗುಪ್ತ ಇತ್ಯಾದಿ ಗುಪ್ತವ್ಯಾಧಿಗಳಿಗೂ ಗ್ಯಾರಂಟೀ ಔಷಧ.

[illegible] ದಿನಗಳಲ್ಲಿ ಈ ಹೊಟ್ಟೆನೋವು ಗುಣವಾಗಿ [illegible] ಮೇಲ್ಕಂಡ ಔಷಧಿ [illegible] ಅನುಪಾನ ಪತ್ರಿಕೆ ಜೋಡಿ ಇಟ್ಟಿದೆ ಸೇವಿ [illegible] ಶೋಭನವಾದ 15-16 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಅನೇಕ ಪ್ರಶಂಸಾ ಪತ್ರಗಳನ್ನು ಪಡೆದಿದೆ.

ಕ್ರಯ:— [illegible] ಸೆಟ್ 5ರೂ ಪ್ಯಾಕಿಂಗ್ ಮತ್ತು ಟಪಾಲು ಖರ್ಚು 1ರೂ ವಿ. ಪಿ. ಇಲ್ಲ ಕ್ಯಾಟಲಾಗ್ ಉಚಿತ 6ರೂ ಮನಿಆರ್ಡರ್ ಮಾಡಿರಿ. ಕೂಡಲೆ ರಿಜಿಸ್ಟರ್ ಪಾರ್ಸಲ್ ರವಾನೆ

ವಿಳಾಸ: ಎ. ರಾಮಸ್ವಾಮಿ ಅಯ್ಯಂಗಾರ್ ಸನ್, (ಎ. ಆರ್. ವಿಶ್ವೇಶ್ವರಯ್ಯ)

Prop: ಸಂತಾನ ಸಿಂಧೂರ, 628 ಚಾಮರಾಜ ರೋಡ್ ಕ್ರಾಸ್, (ಸೀತಾ ವಿಳಾಸ ಛತ್ರದ ಹಿಂದೆ) ಮೈಸೂರು.

ಸ್ತ್ರೀ ಪುರುಷ ಶಿಶುಗಳು ರೋಗದಿಂದ ನರಳಬೇಕಾಗಿಲ್ಲ!

ಲಕ್ಷಾಂತರ ಜನರು ಗುಣಹೊಂದಿದ್ದಾರೆ!

ಸಂಜೀವನ್ ಶಿಲಾಜಿತ್ ಲೇಹ್ಯ

ಶಿಲಾಜಿತ್ ಹಿಮಾಲಯದ ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ. ದೇಹಶಕ್ತಿ, ಹೊಟ್ಟೆನೋವು ಅನ್ನ ಸೇರದಿರುವಿಕೆ, ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೪ದಿನದ ಲೇಹ್ಯ ರೂ ೫/೪, ೨೨ ದಿನದ ಲೇಹ್ಯ ರೂ ೩/೪ (ಪೋಸ್ಟೇಜು ಮಾಫಿ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕಲ್ಪಿಸಿಕೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಿಸು, ಇವುಗಳ ರುಚಿಶುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಾಯಭಟ್ಟರು

For up-to-date Lodging & Boarding

ROYAL MAHAL,

UDIPI. S. Kanara

"ಗೋಪಾಲ ಭೇಷಜಾಶ್ರಮ" ಮಂಗಳೂರು

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ **ನವಜೀವಾಮೃತ** ಎಂಬ **ಸೂತಿಕಾ ರಸಾಯನ**

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಪ್ರಾಕ್ಟಿಸ್ಟರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

Edited, Printed & Published By K. H. Shetty at the Navayuga Press, Udipi, S. India.